# ಮಲೆಗಳಲ್ಲಿ ಮದುಮಗಳು

## ೧

ಸಿಂಬಾವಿ ಭರಮೈಹೆಗ್ಗಡೆಯವರ ದೊಡ್ಡ ಚೌಕಿಮನೆಯ ಹೆಬ್ಬಾಗಿಲು ದಾಟಿದ ಅವರ ಜೀತದಾಳು, ಹೊಲೆಯರ ನಾಯಿಗುತ್ತಿ, ಹೊರ ಅಂಗಳದ ಕಡೆಯ ಮೆಟ್ಟಲಲ್ಲಿ ನಿಂತು ಆಕಾಶದ ಕಡೆಗೆ ಬಿಡುಗಣ್ಣಾಗಿ ನೋಡುತ್ತಿದ್ದನು. ಮನೆಯ ಪಕ್ಕದಲ್ಲಿದ್ದ ಅಡಕೆಯ ತೋಟದಿಂದ, ಒಂದು ಕೈಯಲ್ಲಿ ಒಂದು ಕರಿಬಾಳೆಯ ಗೊನೆಯನ್ನೂ ಮತ್ತೊಂದು ಕೈಯಲ್ಲಿ ಬಾಳೆಯೆಲೆಗಳ ಕಟ್ಟೊಂದನ್ನೂ ಹಿಡಿದು, ಆರಡಿ ಎತ್ತರವಿದ್ದರೂ ಅತಿ ನಿಧಾನವಾಗಿ ಬರುತ್ತಿದ್ದ ಮನೆಗೆಲಸದ ಮರಾಟಿ ಮಂಜನು "ಏನೋ, ಗುತ್ತೀ, ಮುಗಿಲ ಕಡೆ ನೋಡ್ತಾ ನಿಂತೆ? ದೂರಾ? ಒಳ್ಳೆ ದರೋಬಸ್ತಾಗಿದ್ದೀಯಲ್ಲಾ! ಹ್ಞಾ" ಎಂದು ತನ್ನ ನಡೆಗಿಂತಲೂ ನಿಧಾನವಾಗಿ ರಾಗಧ್ವನಿಯಿಂದ ಪ್ರಶ್ನಿಸುತ್ತಾ ಹತ್ತಿರಕ್ಕೆ ಬಂದನು.

ಬಲದಲ್ಲಿ ಮಂಜನಿಗಿಂತ ಮಿಗಿಲಾಗಿದ್ದರೂ ಎತ್ತರದಲ್ಲಿ ಬಹಳ ಕುಳ್ಳಾಗಿದ್ದ ಗುತ್ತಿ ಮುಗಿಲನ್ನೂ ಮುಖವನ್ನೂ ಒಟ್ಟಿಗೆ ನೋಡುತ್ತಾ "ಹಾಳ್ ಮಳೆ ಸಾಯ್ತದೋ ಏನೋ ಅಂತ ನೋಡ್ತಾ ಇದ್ದೆ" ಎಂದು, ಸ್ವಲ್ಪ ಅವಸರದಿಂದ "ಮಳೆ ಫಕ್ಕನೆ ಬತ್ತದೇನ್ರೋ?" ಎಂದು ಪ್ರಶ್ನಿಸಿದನು.

ಮಂಜನೂ ತನ್ನ ಕುತ್ತಿಗೆಯ ನರಗಳು ಎದ್ದು ಕಾಣುವ ರೀತಿಯಲ್ಲಿ ಮುಗಿಲ ಕಡೆಗೆ ನೋಡುತ್ತಾ "ನೀನು ಎಲ್ಲಿಗೆ ಹೋಗಬೇಕು ಹೇಳು? ಹ್ಞಾ" ಎಂದನು.

"ಲಕ್ಕುಂದಕ್ಕೆ ಕಣ್ರೋ".

"ಹಾಂಗಾದ್ರೇನು ಹೋಗ್ದೇ? ನಾನಾದ್ರೆ ಒಂದು ಚಣಕ್ಕೆ ಹೋಗ್ತಿದ್ದೆ...."

ಮಂಜನಿನ್ನೂ "ಹ್ಞಾ" ಎಂದು ಮಾತು ಪೂರೈಸಿರಲಿಲ್ಲ. ಅಷ್ಟರಲ್ಲಿ ಮನೆಯೊಳಗೆ ಹಿತ್ತಲ ಕಡೆಯಿಂದ ಹೆಂಗಸರ ಬಾಯಿ ಗಟ್ಟಿಯಾಗಿ ಕೇಳಿಸಿತು.

ಗುತ್ತಿ ಸ್ವಲ್ಪ ಬೆರಗಿನಿಂದ ಹುಬ್ಬು ನಿಮಿರಿಸಿ "ಏನ್ರೋ ಅದು?" ಎಂದನು.

ಮಂಜನು ಒಂದಿನಿತೂ ಬೆರಗಾಗದೆ ಉದಾಸೀನ ಧ್ವನಿಯಿಂದ ತನ್ನಷ್ಟಕ್ಕೆ ತಾನೇ ಹೇಳಿಕೊಂಡನು; "ಮತ್ತೆ ಸುರುವಾಯ್ತುಪ್ಪಾ! ಈ ಹೆಗ್ಗಡ್ತೇರಿಂದ ಸುಖಾ ಇಲ್ಲ. ಮೂರ್ಹೊತ್ತೂ ಜಗಳಾ! ಜಗಳಾ! ಜಗಳಾ! ಜಟ್ಟಮ್ಮ ಲಕ್ಕಮ್ಮ! ಲಕ್ಕಮ್ಮ ಜಟ್ಟಮ್ಮ! ನೀ ಮುಂಡೆ ನೀ ಮುಂಡೆ! ನೀ ರಂಡೆ ನೀ ರಂಡೆ! ನಾನಾಗೋ ಹೊತ್ತಿಗೆ ಕಾಲಾ ಮಾಡ್ತೀನಿ, ಹ್ಞಾ!"

ಗುತ್ತಿ ಮಂಜನ ಕಣ್ಣನ್ನೆ ನೋಡುತ್ತಾ ಏನೋ ರಹಸ್ಯವನ್ನು ಕೇಳಬೇಕೆಂದು ಬಾಯಿ ತೆರೆಯುವುದರೊಳಗೆ ಮಂಜನು ಸೊಂಟದಿಂದ ಹರಡಿನವರೆಗೂ ದಪ್ಪವಾದ ಬಿದಿರು ಬೊಂಬಿನಂತೆ ಒಂದೇ ಸಮನಾಗಿದ್ದ ಸ್ಥೂಲಗಳೆರಡನ್ನೂ ಎತ್ತಿ ಎತ್ತಿ ಇಡುತ್ತಾ ಮನೆಯೊಳಗೆ ಹೋಗಲು ಮೆಟ್ಟಿಲೇರುತ್ತಿದ್ದನು.

"ಕಪ್ಪಾಯ್ತು ಕಣ್ರೋ: ನಾನು ಸುಮಾರು ದೂರ ಹೋರಬೇಕು" ಎನ್ನುತ್ತಾ ಗುತ್ತಿ ತನ್ನ ಕುಳ್ಳು ದೇಹದ ಕುಳ್ಳುಗಾಲುಗಳನ್ನು ಬೀಸಿ ಬೀಸಿ ಹಾಕುತ್ತಾ ತೋಟದ ದಾರಿ ಹಿಡಿದು ಹೊರಟನು.

ಅವನು ತೋಟ ದಾಟುವವರೆಗೂ ಮನೆಯಲ್ಲಾಗುತ್ತಿದ್ದ ಜಗಳದ ಸದ್ದು ಕೇಳಿಸುತ್ತಲೇ ಇತ್ತು.

ನಾಯಿಗುತ್ತಿ ಅಥವಾ ಗುತ್ತಿ ಮಂಜನೊಡನೆ ತಾನು ಲಕ್ಕುಂದಕ್ಕೆ ಹೊರಟಿದ್ದೇನೆಂದು ಸುಳ್ಳು ಹೇಳಿದ್ದನು. ಅವನು ಲಕ್ಕುಂದದ ಮೇಲೆಯೇ ಹೋಗಬೇಕಾಗಿತ್ತು. ಆದರೆ ಅದು ಅವನ ಪ್ರಯಾಣದ ಗುರಿಯಾಗಿರಲಿಲ್ಲ. ಸಿಂಬಾವಿಗೆ ಸುಮಾರು ಮೂರು ನಾಲ್ಕು ಮೈಲಿ ದೂರದಲ್ಲಿದ್ದ ಲಕ್ಕುಂದಕ್ಕೆ ಹೋಗುವುದಾಗಿದ್ದರೆ ಅವನು ಅಷ್ಟು ಅವಸರ ಪಡಬೇಕಾಗಿರಲಿಲ್ಲ. ಬೈಗಾಗಿದ್ದರೂ, ದಾರಿಯಲ್ಲಿ ಹೆಗ್ಗಾಡು ತುಂಬಿ ಎತ್ತರವಾಗಿದ್ದ ಸೀತೂರು ಗುಡ್ಡವನ್ನು ಏರಿ ದಾಟಬೇಕಾಗಿದ್ದರೂ, ಗುತ್ತಿ ಹೆದರಬೇಕಾಗಿರಲಿಲ್ಲ. ಅಂತಹ ಕಬ್ಬಿಣದಾಳು ಅವನು!

ಮತ್ತೊಂದು ವಿಷಯವೆಂದರೆ ಅವನ ಉಡುಪು! ಮಂಜನು ಅವನನ್ನು ಕಂಡೊಡನೆ "ಒಳ್ಳೇ ದರೋಬಸ್ತಾಗಿದ್ದೀಯಲ್ಲಾ" ಎಂದುದಕ್ಕೆ ಕಾರಣ, ಅವನ ಉಡುಪಿನಲ್ಲಾಗಿದ್ದ ಮಾರ್ಪಾಡು. ಸೊಂಟಕ್ಕೆ ಸುತ್ತಿದ್ದ ಮೋಟು ಪಂಚೆ ವಿನಾ ಬತ್ತಲೆಯಾಗಿದ್ದ ಮರಾಟಿಯವನ ಮುಂದೆ, ಹೊಲೆಯನು, ಕೊಳೆ ಸರ್ವವ್ಯಾಪ್ತಿಯಾಗಿದ್ದರೂ, ಷೋಕಿಯಾಗಿದ್ದನು. ತಲೆಗೆ ಒಂದು ಕೆಂಪು ವಸ್ತ್ರ ಸುತ್ತಿದ್ದನು. ಮೈಗೊಂದು ಕಸೆ ಅಂಗಿ ಹಾಕಿದ್ದನು. ಪಂಚೆಯ ತುದಿ ಮೊಳಕಾಲನ್ನು ದಾಟಿತ್ತು. ಕಿವಿಗೆ ಬೇರೆ ಒಂಟಿ! ಒಂಟಿಗಳನ್ನು ಹೊಸದಾಗಿ ಹಾಕಿರಲಿಲ್ಲವಾದರೂ ಹೊಸ ವೇಷದಿಂದ ಅವುಗಳಿಗೊಂದು ಹೊಸ ಷೋಕಿ ಬಂದಿತ್ತು. ಎಲ್ಲಕ್ಕೂ ತಿಲಕಪ್ರಾಯವಾಗಿ ಮುಖ ಕ್ಷೌರ. ಹೊಲೆಯನಾದರೂ ಬೆಳ್ಳಗಿದ್ದುದರಿಂದ ಮಲೆಯನಂತೆ ಕಾಣುತ್ತಿದ್ದನು. ಹೆಗಲ ಮೇಲೆ ಮಡಿಸಿ ಹಾಕಿಕೊಂಡಿದ್ದ ಕಂಬಳಿಕೊಪ್ಪೆ ಅವನು ಮಳೆಗೆ ತಯಾರಾಗಿ ಹೊರಟಿದ್ದನ್ನೂ, ಬಗಲಲ್ಲಿ ಇರುಕಿಕೊಂಡಿದ್ದ ಬಗನಿಯ ಮರದ ಕರಿಯ ದೊಣ್ಣೆ ಹೊಡೆದಾಟಕ್ಕೂ ಕೂಡ ಅವನು ಸಿದ್ಧನಾಗಿದ್ದಾನೆ ಎಂಬುದನ್ನೂ ಸೂಚಿಸುತ್ತಿದ್ದುವು.

ಗುತ್ತಿ ಸೀತೂರು ಗುಡ್ಡಕ್ಕೆ ಏರಲು ಮೊದಲು ಮಾಡಿದಾಗಲೆ ಬೈಗುಗಪ್ಪಿನೊಂದಿಗೆ ಮುಗಿಲುಗಪ್ಪು ಮುಸುಕಿ ಮಿಣುಕು ಹುಳುಗಳ ಮಿನುಗು ಕಾಣತೊಡಗಿತ್ತು. ಜೀರುಂಡೆಗಳ ಕೂಗು ಕಿವಿಗೆ ಚಿಟ್ಟು ಹಿಡಿಸುತ್ತಿತ್ತು. ಮಳೆಗಾಲದ ಪ್ರಾರಂಭ ಸಮಯವಾಗಿದ್ದರೂ ಮಲೆಗಾಡು ಭಯಂಕರವಾಗಿದ್ದ ಸಿಂಬಾವಿ, ಸೀತೂರು, ಲಕ್ಕುಂದ ಈ ಕಡೆಗಳಲ್ಲಿ ಇಂಬಳದ ಕಾಟವೂ ಹೆಚ್ಚಾಗಿಯೆ ಶುರುವಾಗಿತ್ತು. ಗುತ್ತಿ ಅಲ್ಲಲ್ಲಿಯೆ ನಿಂತು ಕಣ್ಣಿಗೆ ಕಂಡ ಇಂಬಳಗಳನ್ನು ಕಾಲಿನಿಂದ ಕಿತ್ತೊಗೆಯುತ್ತಾ, ಅದೇ ಕೈಯಲ್ಲಿಯೇ ಜೇಬಿನಿಂದ ಎಲೆಯಡಕೆ ಸುಣ್ಣ ಹೊಗೆಸೊಪ್ಪುಗಳನ್ನು ತೆಗೆದು ಬಾಯಿಗೆ ಹಾಕಿಕೊಳ್ಳುತ್ತಾ, ಕುಳ್ಳಗಾಲುಗಳನ್ನು ಬಿರಬಿರನೆ ಬೀಸಿ ಬೀಸಿ ಹಾಕುತ್ತಾ, ಸೀತೂರು ಗುಡ್ಡದ ಹಳುವಿಡಿದ ಕಾಡುದಾರಿಯಲ್ಲಿ ಮುಂಬರಿದನು. ಕತ್ತಲೆ ಬರುಬರುತ್ತಾ ದಡ್ಡವಾಯ್ತು. ಜೀರ್ದುಂಬಿಗಳ ಜೀರುದನಿ ಘೋರವಾಯ್ತು. ತಾನು ನಡೆಯುತ್ತಿದ್ದ ಹಾದಿಯಾಗಲಿ ತನ್ನ ಕಾಲುಗಳಾಗಲಿ ನೆತ್ತರು ಹೀರುತ್ತಿದ್ದ ಇಂಬಳಗಳಾಗಲಿ ಒಂದಿನಿತೂ

ಕಾಣಿಸುವಂತಿರಲಿಲ್ಲ. ಗುತ್ತಿ ಅಂದಾಜಿನ ಮೇಲೆ ಕಾಲು ಹಾಕುತ್ತಿದ್ದನು. ನಾಗರಿಕರಿಗೆ ಭೀಕರವಾಗಿ ಕಾಣುವ ವರ್ಷಾಕಾಲದ ಆ ಭಯಂಕರ ಪರ್ವತಾರಣ್ಯದ ರುದ್ರ ಪ್ರಕೃತಿ ಅವನಿಗೆ ಬಹುಕಾಲದ ಪರಿಚಯದಿಂದ ಸಾಧಾರಣವಾಗಿತ್ತು. ಅವನೂ ಆ ಪ್ರಕೃತಿಯ ಒಂದಂಶವಾಗಿದ್ದನು; ಬೆಟ್ಟದಲ್ಲಿ ಬಂಡೆಯಂತೆ, ಕಾಡಿನಲ್ಲಿ ಮರದಂತೆ ಅದರ ಒಂದಂಗವಾಗಿದ್ದನು.

ಗುತ್ತಿ ಯಾವುದನ್ನೂ ಲೆಕ್ಕಿಸದೆ ಕಾಲು ಹಾಕುತ್ತಿದ್ದುದಕ್ಕೆ ಮತ್ತೊಂದು ಕಾರಣವಿತ್ತು. ಅವನ ಮನಸ್ಸು ಬಹುರ್ಮುಖವಾಗಿರಲಿಲ್ಲ. ತನ್ನ ಸಂಕಲ್ಪಕಾರ್ಯವನ್ನೂ ಅದನ್ನು ಸಾಧಿಸುವ ವಿಧಾನಗಳನ್ನೂ ಉಪಾಯಗಳನ್ನು ಕಷ್ಟ ಸಾಹಸಗಳನ್ನೂ ಕುರಿತು ನಾನಾ ವಿಧವಾಗಿ ಕಲ್ಪಿಸುತ್ತಾ ನಡೆಯುತ್ತಿದ್ದನು. ಒಂದು ಸಾರಿ ಸಿಂಬಾವಿ ಹೆಗ್ಗಡೆಯವರ ಹಳೆಮನೆ ದೊಡ್ಡ ಹೆಗ್ಗಡೆಯವರಿಗೆ ಕೊಟ್ಟಿದ್ದ ಚೀಟಿಯನ್ನು ಸೊಂಟಕ್ಕೆ ಕೈ ಹಾಕಿ ಮುಟ್ಟಿ ನೋಡುವನು. ಮತ್ತೊಂದು ಸಾರಿ ಆವೊತ್ತುತಾನೆ ನೀಟಾಗಿ ಕತ್ತರಿಸಿದ್ದ ಮೀಸೆಗಳನ್ನು ನೀವಿಕೊಳ್ಳುವನು. ಒಂದೊಂದು ಸಾರಿ ತನ್ನ ಮನಸ್ಸಿನಲ್ಲಾಗುತ್ತಿದ್ದ ಹೋರಾಟವನ್ನು ಮಾತಿನಲ್ಲಿ ಹೊರಗೆಡಹುವನು.

"ಈ ಸಾರಿ ನಾನು ಅವಳನ್ನು ಹಾರಿಸಿಕೊಂಡು ಬರದೇ ಇದ್ದರೆ ನಮ್ಮ ಅಪ್ಪ ಅವ್ವಗೆ ಹುಟ್ಟಿದ ಗಂಡೇ ಅಲ್ಲ ನಾನು" ಎಂದು ತಿರಸ್ಕಾರ ಸೂಚಕವಾದ ಹೂಂಕಾರ ಮಾಡಿದಾಗ ಹಿಂದೆ ಹುಳುವಿನಲ್ಲಿ ಯಾವುದೋ ಒಂದು ಜಂತು ಸದ್ದು ಮಾಡಿದ ಹಾಗಾಯಿತು. ಗುತ್ತಿ ತಟಕ್ಕನೆ ಬೆಚ್ಚಿ, ಸಂಪೂರ್ಣವಾಗಿ ಬಹಿರ್ಮುಖಿಯಾಗಿ, ದೊಣ್ಣೆ ಬೀಸುತ್ತಾ "ಹಡ್ಡಿಡ್ಡಿಡ್ಡಿಡ್ಡೀ" ಎಂದು ಕೂಗಿದನು. ಹುಳುವಿನಲ್ಲಿ ಆ ಪ್ರಾಣಿ ಬೆದರಿ ಹಿಂದೋಡಿದ ಸದ್ದಾಯ್ತು.

ಗುತ್ತಿ ಗಟ್ಟಿಯಾಗಿ "ಇದರ ಮನೆ ಹಾಳಾಗ್ಲೋ! ಈ ನರಿಯಿಂದ ಸುಖಾ ಎಲ್ಲ!" ಎನ್ನುತ್ತಾ ಬಿರಬಿರನೆ ನಡೆದನು, ಆ ನಡಿಗೆಯಲ್ಲಿ ಭಯ ಅಷ್ಟೇನೂ ಅವ್ಯಕ್ತವಾಗಿರಲಿಲ್ಲ.

"ಈ ನರಿಯಿಂದ ಸುಖಾ ಇಲ್ಲ!" ಎಂದು ಅವನು ಹೇಳಿದ್ದರೂ ಅವನ ಮಾತು ಮನಸ್ಸಿನಂತಿರಲಿಲ್ಲ. "ಹುಲಿ" ಎನ್ನುವುದಕ್ಕೆ ಬದಲಾಗಿ "ನರಿ" ಎಂದಿದ್ದನು. ಹುಲಿಯನ್ನು ನರಿ ಎಂದು ಕೂಗಿದರೆ ಈ ಮನುಷ್ಯ ತನ್ನನ್ನು ನರಿಗೆ ಸಮಾನವಾಗಿ ಕಾಣುತ್ತಾನೆ ಎಂದು ತಿಳಿದು ಹುಲಿ ಹೆದರುತ್ತದಂತೆ, "ಹಾವು ಕಚ್ಚಿದೆ" ಎಂದರೆ ಅಪಶಕುನವಾಗುತ್ತದೆಂದು "ಬಳ್ಳಿ ಮುಟ್ಟಿದೆ" ಎನ್ನುತ್ತಾರಲ್ಲಾ ಹಾಗೆ.

ಗುತ್ತಿ ಇನ್ನೂ ಸೀತೂರು ಗುಡ್ಡದ ನೆತ್ತಿಗೇರಿರಲಿಲ್ಲ. ಗಾಳಿ ಪ್ರಾರಂಭವಾಗಿ ಹಾಡು ಹೋ ಎನ್ನತೊಡಗಿತು. ಮುಗಿಲು ಮೊಳಗಿತು; ಮಿಂಚಿತು. ಮೊದಮೊದಲು ಅಲ್ಲೊಂದಿಲ್ಲೊಂದು ತೋರ ಹನಿ ಮರದೆಲೆಯ ಮೇಲೆ ಬಿದ್ದ ಸದ್ದಾಯಿತು. ಗುತ್ತಿ ಹೆಗಲಮೇಲಿದ್ದ ಕಂಬಳಿಕೊಪ್ಪೆಯನ್ನು ಬೇಗ ಬೇಗನೆ ತೆಗೆದು ಸೂಡಿಕೊಳ್ಳುತ್ತಿದ್ದಾಗಲೆ ಮುಂಗಾರು ಮಳೆ ಕಾಡೆಲ್ಲ ಕಂಗಾಲಾಗುವಂತೆ ದನಗೋಳಾಗಿ ಸುರಿಯತೊಡಗಿತು. "ಇದರ ಕಣ್ಣಿಂಗಿ ಹೋಗಾಕೆ ನೆತ್ತಿ ದಾಟೋವರಿಗಾದ್ರೂ ತಡೀಬಾರ್ದಾಗಿತ್ತೇ?" ಎಂದು ಮಳೆಯನ್ನು ಶಪಿಸುತ್ತಾ ಕಂಬಳಿಕೊಪ್ಪೆಯನ್ನು ಮೈಗೆ ಭದ್ರವಾಗಿ ಸುತ್ತಿಕೊಂಡು ಹಳುವಿನ ನಡುವೆ ಕಗ್ಗತ್ತಲೆಯಲ್ಲಿ ತಡವುತ್ತಾ ನಡೆದನು.

ಗುತ್ತಿ ಸೀತೂರು ಗುಡ್ಡವನ್ನು ಹತ್ತಿ ಇಳಿದು ಅದರ ಬುಡದಲ್ಲಿ ಲಕ್ಕುಂದದ ಗದ್ದೆ ಕೋಗಿಗೆ ಉತ್ತರದಿಕ್ಕಿನ ಗಡಿಯಾಗಿ ಹರಿಯುತ್ತಿದ್ದ ಹಳ್ಳವನ್ನು ಸಮೀಪಿಸುತ್ತಿದ್ದಾಗಲೆ ತೊರೆಯ ನೀರಿನ ಭೋರಾಟವನ್ನು ಆಲಿಸಿ "ಆಯ್ತಾ! ಇನ್ನು ಈ ಹಳ್ಳದ ಹೆಣಾ ಬೇರೆ ಕಾಯಬೇಕು!" ಎಂದು ಗೊಣಗಿದನು.

ಹಳ್ಳದ ಅಂಚಿಗೆ ಬಂದು ನಿಂತು ನೋಡಿದಾಗ ಕತ್ತಲೆಯಲ್ಲದೆ ಮತ್ತೇನೂ ಕಾಣಿಸಲಿಲ್ಲ. ನೀರಿನ ಭೋರಾಟದಿಂದಲೆ ಹಳ್ಳದ ಏರಿಕೆಯನ್ನು ಊಹಿಸುತ್ತಾ ನಿಂತಿದ್ದಾಗ ಒಂದು ಸಾರಿ ಮಿಂಚಿತು. ವೈರಿದಳದ ಮೇಲೆ ರಭಸದಿಂದ ದಾಳಿ ನುಗ್ಗುವ ತುರಂಗ ಸೇನೆಯಂತೆ ಉನ್ಮತ್ತ ವೇಗದಿಂದ ಹರಿದೊಡುತ್ತಿದ್ದ ತೊರೆಯ ತೆರೆಗಳು ಪಳಪಳನೆ ಮಿಂಚಿದುವು. ಹೊನಲಿನ ಮಧ್ಯೆ ವೇಗವಾಗಿ ಹೋಗುತ್ತಿದ್ದ ಮರದ ತುಂಡುಗಳೂ ಕಸಕಡ್ಡಿಗಳೂ ಅದರ ರಭಸಕ್ಕೆ ಸಾಕ್ಷಿಯಾಗಿದ್ದುವು. ಬೇಸಗೆಯಲ್ಲಿ ಒಂದೆರಡು ಅಡಿಗಳಗಲವಾಗಿರುತ್ತಿದ್ದ ಆ ಹಳ್ಳ ಈಗ ಸುಮಾರು ಉಪ್ಪತ್ತೈದು ಮೂವತ್ತು ಅಡಿಗಳಷ್ಟು ಅಗಲವಾಗಿ ಹರಿಯುತ್ತಿತ್ತು.

ಗುತ್ತಿ ಕತ್ತಲೆಯನ್ನು ನೋಡುತ್ತಾ, ಮಳೆಯ ಮತ್ತು ತೊರೆಯ ನಿರ್ಮೊರೆಯನ್ನೂ ಮರಗಳಲ್ಲಾಗುತ್ತಿದ್ದ ಗಾಳಿಗರ್ಜನೆಯನ್ನೂ ಆಲಿಸುತ್ತಾ ಕೈಯಂದಾಜಿನ ಮೇಲೆ ಕಾಲಿನಲ್ಲಿ ನುಣ್ಣಗೆ ಸಿಕ್ಕಿದ ಇಂಬಳಗಳನ್ನು ತೆಗೆದು ಬಿಸಾಡಲು ಪ್ರಯತ್ನಿಸುತ್ತಾ ನಿಂತನು.

ಸ್ವಲ್ಪ ಹೊತ್ತಿನಲ್ಲಿಯೆ ಹಳ್ಳದ ಆಚೆಯ ದೂರದಲ್ಲಿ ಲಕ್ಕುಂದದ ಗದ್ದೆಕೋಗಿನ ಜಡ್ಡಿನಲ್ಲಿ, ಪದೇ ಪದೇ ಬೀಸುತ್ತಿದ್ದ ದೊಂದಿಗಳೂ ಲಾಟೀನುಗಳೂ ಕಾಣಿಸಿತು. "ಈ ಮಳೇಲಿ ಮೀನು ಕಡಿಯಾಕೆ ಹೊರಟಾರಲ್ಲಪ್ಪಾ? ಈ ದೀವರು ಮಕ್ಕಳಿಗೆ ಕಳ್ಳು ಹೆಚ್ಚಾಗಿದ್ದೇ!" ಎಂದುಕೊಂಡು ಗುತ್ತಿಗೆ ಮಳೆ ನಿಂತಿದ್ದುದು ಅನುಭವಕ್ಕೆ ಬಂತು. ಆದರೆ ಹಳ್ಳ ಇಳಿಯುವವರೆಗೂ ಅದನ್ನು ದಾಟುವ ಹಾಗಿರಲಿಲ್ಲ. ನಿಂತು ಬೇಸರವಾಗಿದ್ದದರಿಂದ ಕಂಬಳಿಕೊಪ್ಪೆಯ ಒಂದು ಭಾಗವನ್ನೆ ಹಾಸನ್ನಾಗಿ ಉಪಯೋಗಿಸಿಕೊಂಡು (ಕಂಬಳಿಕೊಪ್ಪೆ ಅವನ ಹರಡಿಗೆ ಹತ್ತಿರ ಹತ್ತಿರ ಬರುತ್ತಿತ್ತು!) ಹಸುರು ಬೆಳೆದೊಂದು ಮಣ್ಣು ದಿಬ್ಬದ ಮೇಲೆ "ಹಳ್ಳದ ಹೆಣಾ ಕಾಯ್ತಾ" ಕುಳಿತನು.

ಮಳೆ ಸಂಪೂರ್ಣವಾಗಿ ನಿಂತಿತ್ತು. ತೊರೆಯ ಮೊರೆ ಮೊದಲಿನಷ್ಟು ಇರಲಿಲ್ಲ. ಮಳೆ ತೊರೆಗಳ ಜಲಘೋಷದಲ್ಲಿ ಹಿಂದೆ ಕೇಳಿದದಿದ್ದ ಕಪ್ಪೆಗಳ ವಟಗುಟ್ಟುವಿಕೆ ಚಿತ್ರವಿಚಿತ್ರವಾಗಿ ಕೃತವಿಕೃತವಾಗಿ ಕೇಳಿಸುತ್ತಿತ್ತು. ಗಾಳಿ ಬೀಸಿದಂತೆಲ್ಲ ಮರದ ಹನಿ ತಟಪಟನೆ ಉದುರುತ್ತಿತ್ತು. ಕಾಣಿಸದಿದ್ದರೂ ತೊರೆಯ ಮೇಲೆ ಕಣ್ಣಿಟ್ಟು, ಯಾವ ಆಲೋಚನೆಯನ್ನೂ ಮಾಡದೆ, ಶೂನ್ಯ ಮನಸ್ಸಿನಿಂದ ತೊರೆಯ ಮೊರೆಯನ್ನು ಆಲಿಸುತ್ತಾ ಆಲಿಸುತ್ತಾ ಆಲಿಸುತ್ತಾ ತಾನೇ ರೊತೆಯ ಮೊರೆಯಾದನೋ ಎಂಬಂತೆ ಕುಳಿತಿದ್ದ ಗುತ್ತಿ ತಟಕ್ಕನೆ ಎಚ್ಚತ್ತು, ಮೂಗನ್ನು ಅರಳಿಸಿ, ಮೂಸಿ ಮೂಸಿ, ಗಾಳಿ ಹಿಡಿಯತೊಡಗಿದನು.

ಅವನ ಮೂಗಿಗೆ ಬಿದ್ದುದ್ದು ನಾಯಿಯ ವಾಸನೆ! ಮಳೆಯಲ್ಲಿ ತೊಪ್ಪನೆ ತೊಯ್ದು ಮೈಯಿಂದ ಆವಿ ಏರುತ್ತಿರುವ ಕಂತ್ರಿ ನಾಯಿಯ ಸಿನುಗು ವಾಸನೆ! ಗುತ್ತಿ ಸುತ್ತ ನೋಡಿದರೂ ಏನೂ ಕಾಣಿಸಲಿಲ್ಲ. ಆದರೂ ವಾಸನೆ ಸ್ಪಷ್ಟವಾಗಿತ್ತು. ಕಣ್ಣಿಗೆ ನಾಯಿ ಕಂಡಿದ್ದರೆ ಎಷ್ಟರಮಟ್ಟಿಗೆ ಅದು ನಿಜವಾಗಿರುತ್ತಿತ್ತೋ ಅಷ್ಟರಮಟ್ಟಿಗೇ ನಿಜವಾಗಿತ್ತು ಮೂಗಿಗೆ ನಾಯಿಯ ಮೈಗಂಪು.

“ಹಡಬೇಗ್ಹುಟ್ಟಿದ್ದು ದಾರಿ ಹುಡಕ್ಕೊಂಡು ಬಂತೋ ಏನೋ?” ಎನ್ನುತ್ತಾ, ನಯನೇಂದ್ರಿಯಕ್ಕೆ ಗೋಚರವಾಗದಿದ್ದರೂ ಘ್ರಾಣೇಂದ್ರಿಯದಲ್ಲಿ ತನಗಿದ್ದ ಶ್ರದ್ಧೆಯಿಂದಲೋ ಎಂಬಂತೆ “ಬಾ, ಹುಲಿಯಾ ಬಾ”! ಎಂದು ಮುದ್ದಾಗಿ ಕರೆದನು.

ಕರೆದನೋ ಇಲ್ಲವೋ, ಮಂತ್ರಸೃಷ್ಟಿಯಾದಂತೆ, ದೈತ್ಯಾಕೃತಿಯ ಅವನ ಕಂತ್ರಿ ನಾಯಿ ಬಾಣದಂತೆ ನೆಗೆದುಬಂದು ಹತ್ತಿರ ನಿಂತು ಬಾಲವಲ್ಲಾಡಿಸುತ್ತಾ ಕುಂಯ್ಯಿ ಕುಂಯ್ಯಿಗುಟ್ಟುತ್ತಾ ಗುಣಿದಾಡಿತು.

ಮಿಂಚಿನ ಬೆಳಕಿನಲ್ಲಿ ಮಿಂಚಿಗಳುಕಿ ಕತ್ತಲೆಯೆ ನಾಯಿಯಾಯಿತೆಂಬಂತೆ ಕಪ್ಪಗಿದ್ದ ಹುಲಿಯನ ದೊಡ್ಡ ಮೈ ಕಾಣಿಸಲು, ಗಿಡ್ಡನಾದ ಗುತ್ತಿಗೆ ಮುದ್ದು ಹೆಮ್ಮೆ ಸೂಸಿದಂತಾಗಿ, ಅದರ ಒದ್ದೆಯಾಗಿದ್ದ ತಲೆಯ ಮೇಲೆ ಕೈ ಸವರುತ್ತಾ “ಥೂ ಕಳ್ಳಾ, ಬರಬೇಡ ಅಂತಾ ಹೇಳಿ ಹೊಡೆದಟ್ಟಿ ಬಿಟ್ಟುಬಂದಿದ್ದರೂ ಮತ್ತೆ ಬಂದೀಯಾ? ಒಂದಿವಸ ಕುರ್ಕನ ಪಾಲಿಗೆ ಆಗ್ತೀಯ! ಥೂ ಕಳ್ಳಾ! ಇನ್ನು ಹೋದಲ್ಲಿ ತನಕ ನಾಯಿ ಬೊಗಳಿಸುತ್ತಾ ಬಾ! ಥೂಯ್, ಹಾಳು ಮುಂಡೇದು ಬಾಯಿನೂ ನೆಕ್ಕಿತಲ್ಲೋ! ಹೋಗು, ದೂರ ಹೋಗು” ಎಂದು ದಬ್ಬಿದರೂ ಹುಲಿಯನು ಹತ್ತಿರದಿಂದ ಹೋಗಲೂ ಇಲ್ಲ; ಗುತ್ತಿಗೂ ಒಬ್ಬನೇ ಕೂತು ಕೂತು ಬೇಜಾರಾಗಿ ಜೊತೆ ಬೇಕಾಗಿದ್ದುದರಿಂದ ಅದು ದೂರ ಹೋಗಲೇಬೇಕೆಂದು ಅವನೂ ಸಹ ಹಟ ಹಿಡಿಯಲೂ ಇಲ್ಲ.

ಹುಲಿಯನ ದೆಸೆಯಿಂದಲೆ ಗುತ್ತಿಗೆ “ನಾಯಿಗುತ್ತಿ” ಎಂಬ ಅಡ್ಡ ಹೆಸರು ಬಂದಿತ್ತು. ಅವನು ಎಲ್ಲಿ ಹೋಗಲಿ ಆ ನಾಯಿ ಅವನ ಜೊತೆ ಬಿಡುತ್ತಿರಲಿಲ್ಲ. ಬಿಡಾರದಲ್ಲಿ ಕಟ್ಟಿ ಹಾಕಿ ಹೋದರೆ, ಕೂಗಾಡಿ ಒದ್ದಾಡಿ ಮಿಣಿ ಕಿತ್ತುಕೊಂಡು ಬರುತ್ತಿತ್ತು. ಇಲ್ಲವೆ ಮಲಮೂತ್ರಕ್ಕೆ ಬಿಟ್ಟ ಕೂಡಲೆ ದಾರಿ ಹುಡುಕಿ ಒಡೆಯನನ್ನು ಹಿಂಬಾಲಿಸುತ್ತಿತ್ತು. ಒಂದು ವೇಳೆ ಗುತ್ತಿ ಕಲ್ಲಿನಿಂದ ಹೊಡೆದು ಹಿಂದಕ್ಕಟ್ಟಿದರೆ ಬಿಡಾರಕ್ಕೆ ಹಿಂತಿರುಗಿದಂತೆ ನಟಿಸಿ ಅಲ್ಲಿಯೇ ಎಲ್ಲಿಯಾದರೂ ಅವಿತುಕೊಂಡಿದ್ದು, ತರುವಾಯ ಕದ್ದು ಹಿಂಬಾಲಿಸುತ್ತಿತ್ತು. ಸರಿ, ಆಮೇಲೆ, ಅವನು ಹೋದ ಹಳ್ಳಿಗಳಲ್ಲಿ ಮನೆಗಳಲ್ಲಿ ನಾಯಿಯ ಬೊಬ್ಬೆ! ಹೀಗಾಗಿ ಜನರ ಮನದಲ್ಲಿ ಗುತ್ತಿಗೂ ಅವನ ನಾಯಿಗೂ ಒಂದು ಗಂಟುಬಿದ್ದು, ಅವನನ್ನು “ನಾಯಿಗುತ್ತಿ” ಎಂದೂ, ನಾಯಿಯನ್ನು “ಗುತ್ತಿನಾಯಿ” ಎಂದೂ ಕರೆದರು. ಆ ಹೆಸರು ಎಷ್ಟರಮಟ್ಟಿಗೆ ಬಳಕೆಗೆ ಬಂದು ಹೋಯಿತೆಂಗರೆ, ಯಾರಾದರೂ ಗುತ್ತಿಯ ಹೆಸರನ್ನು ಬರಿದೇ ಹೇಳಿದರೆ “ಯಾರು? ನಾಯಿಗುತ್ತಿಯೇ?” ಎಂಬ ಪ್ರಶ್ನೆ ಅನಿವಾರ್ಯವಾಗಿ ಬರುತ್ತಿತ್ತು.

ಹುಲಿಯನು (ಆ ನಾಯಿಗೆ ಗುತ್ತಿ ಇಟ್ಟಿದ್ದ ಹೆಸರು) ಇನ್ನೂ ಹೆಸರಿಲ್ಲದ ಮರಿಯಾಗಿ, ತಬ್ಬಲಿಯಾಗಿ, ಮೇಗರವಳ್ಳಿಯ ಬೀದಿಯಲ್ಲಿ ತೂರಾಡುತ್ತಿದ್ದಾಗ ಗುತ್ತಿ ಅದನ್ನು ಎತ್ತಿ ತಂದು ಸಾಕಿದ್ದನು. ಅದಕ್ಕೆ ಅವನು ಹೊಟ್ಟೆಗೆ ಹಾಕುತ್ತಿದ್ದುದು ಗಂಜೀನೀರಾದರೂ ಆ ಮರಿ ದುಮ್ಮುದುಮ್ಮಾಗಿ ಬೆಳೆಯಿತು. ಕುಳ್ಳಾಗಿದ್ದ ಗುತ್ತಿ ಎತ್ತರವಾಗಿ ಬೆಳೆಯುತ್ತಿದ್ದ ನಾಯಿಯನ್ನು ಕಂಡು ಹಿಗ್ಗಿ ಸ್ವಲ್ಪ ಹೆಚ್ಚಾಗಿ ಬಾಡು ಹಾಕಿ ಸಾಕಿದನು. ನಾಯಿಯೂ ಸ್ವಯಂ ಸಂಪಾದನೆ ಮಾಡುವುದನ್ನು ಕಲಿತು ದೈತ್ಯವಾಗಿ ಬೆಳೆಯಿತು. ಅದರ ಗಾತ್ರ, ಅದರ ಧೈರ್ಯ, ಅದರ ಮೋರೆ ಇವುಗಳನ್ನು ನೋಡಿ ಅದಕ್ಕೆ “ಹುಲಿಯ” ಎಂದು ನಾಮಕರಣ ಮಾಡಿದನು. ಕೆಲವರು ಅದರ ಬಣ್ಣವನ್ನು ನೋಡಿ, “ಕರಿಯ” ಎಂದು ಹೆಸರಿಡಲು ಸೂಚನೆ ಕೊಟ್ಟಿದ್ದರೂ, ಗುತ್ತಿ ಗುಣಕ್ಕೇ ಮರ್ಯಾದೆ ಕೊಟ್ಟು ತಾನಿಟ್ಟ ಹೆಸರನ್ನೇ ಸಮರ್ಥಿಸಿದ್ದನು.

ಗುತ್ತಿಯ ಸೊಂಟದೆತ್ತರಕ್ಕೂ ಮಿಗಿಲೆತ್ತರವಾಗಿತ್ತು ಆ ಹುಲಿಯ. ನಾಯಿಗಳ ಭಯವಿರಲಿ ಚಿರತೆಗೂ ಅದು ಹೆದರುತ್ತಿರಲಿಲ್ಲ. ಒಂದು ಸಾರಿ ಇರುಳು  ನಿದ್ದೆ ಮಾಡುತ್ತಿದ್ದಾಗ ತನ್ನನ್ನು ಹೊತ್ತುಕೊಂಡು ಹೋಗಲು ಪ್ರಯತ್ನಿಸಿದ್ದ ಚಿರತೆಗೆ ಎಲ್ಲಾ ಬರುವಂತೆ ಮಾಡಿ ಕಳುಹಿಸಿತ್ತು. ಗುತ್ತಿ ಆ ಕಥೆಯನ್ನೂ ಅದಕ್ಕೆ ಸಂಬಂಧಿಸಿದ ಇತರ ಕಥೆಗಳನ್ನೂ, ಎಷ್ಟೋ ಸಾರಿ ಕೇಳಿದವರಿಗೂ, ಬೇಜಾರಾದರೂ ಬೇಸರಪಡದೆ ಹೇಳುತ್ತಿದ್ದನು. ನಾಯಿಯ ಮತ್ತು ಹೊಲೆಯನ ಮನೋಮನ ಕೋಶಗಳೆರಡೂ ಒಂದನ್ನೊಂದು ಆಲಿಂಗಿಸಿದ್ದುವು. ಆದ್ದರಿಂದಲೇ ಹೊರಡುವಾಗ ಹಿಂದಕ್ಕಟ್ಟಿ ಬಂದಿದ್ದರೂ ಹುಲಿಯನು ಬಂದಾಗಿ ಗುತ್ತಿಗೆ ಸಿಟ್ಟಿಗೆ ಬದಲಾಗಿ ಸಂತೋಷವಾದದ್ದು.

ಸುಮಾರು ಅರ್ಧಗಂಟೆಯ ಮೇಲೆ ಹಳ್ಳ ತಕ್ಕಮಟ್ಟಿಗೆ ಇಳಿಯಿತು. ಗುತ್ತಿ ಕೊಪ್ಪೆಯ ತುದಿಯನ್ನೂ ಸೊಂಟದ ಪಂಚೆಯನ್ನೂ ಕತ್ತಲೆಯಲ್ಲಿ ನಿಸ್ಸಂಕೋಚವಾಗಿ ಎತ್ತಿಕೊಂಡು ದಾಟತೊಡಗಿದನು. ಹುಲಿಯನೂ ಹಿಂಬಾಲಿಸಿತು. ನಡುಹಳ್ಳಕ್ಕೆ ಬಂದಾಗ, ತುದಿಬೆರಳಿನಲ್ಲಿ ನಡೆಯುವ ಸರ್ಕಸ್ಸು ಮಾಡಿದರೂ ಸಫಲವಾಗದೆ, ಗುತ್ತಿಯ ಇಷ್ಟಕ್ಕೆ ವಿರೋಧವಾಗಿ ಕೆಲವು ದೇಹಭಾಗಗಳು ತೋಯ್ದು ಹೋದುವು. ಅವನಿಗೆ ತುಂಬಾ ಸಿಟ್ಟಾಗಿ ಅಸಹ್ಯವಾದ ರೀತಿಯಲ್ಲಿ ತೊರೆಯನ್ನು ಬಯ್ದನು. ನಾಯಿ ಅವನಿಗಿಂತಲೂ ಬಹಳ ಮೊದಲೆ ಆಚೆಯ ದಡವನ್ನು ಸೇರಿ ಒಡೆಯನಿಗಾಗಿ ಕಾಯುತ್ತಾ ನಡುಗುತ್ತಿತ್ತು.

ಹಳ್ಳ ದಾಟಿದ ಗುತ್ತಿ ಅರೆಪಾಲಿಗೆ ಹೆಚ್ಚಾಗಿಯೆ ಒದ್ದೆಯಾಗಿದ್ದನು. ಜೇಬಿನಲ್ಲಿದ್ದ ಎಲೆ ಅಡಕೆ ಹೊಗೆಸೊಪ್ಪು, ಹೆಗ್ಗಡೆಯವರು ಕೊಟ್ಟಿದ್ದ ಚೀಟಿ ಎಲ್ಲಾ ನೆನೆದಿದ್ದುವು. ಆ ಕೆಸರಿನಲ್ಲಿ ಆ ಕತ್ತಲೆಯಲ್ಲಿ ಶಪಿಸುವುದೊಂದು ವಿನಾ ಮತ್ತೇನನ್ನೂ ಮಾಡಲು ತೋಚದೆ, ಮಳೆಯ ಅವ್ವನನ್ನೂ ತೊರೆಯ ಅಪ್ಪನನ್ನೂ ಹಿನಾಯವಾಗಿ ಬಯ್ಯುತ್ತಾ ಗದ್ದೆಯಂಚಿನ ಮೇಲೆ ಕಾಲೂಹೆಯಿಂದ ಮುಂದುವರಿದನು. ಹಿಂದೆ ಕಾಣಿಸಿದ್ದ ಹತ್ತು ಮೀನು ಕಡಿಯಲು ಹೊರಟವರ ಕೈಬೆಳಕುಗಳೊಂದೂ ತೋರಲಿಲ್ಲ. ಮೇಗರವಳ್ಳಿಯಾಚೆ ಹಳೆಮನೆಗೆ ಹೋಗಬೇಕೆಂದಿದ್ದವನು ಲಕ್ಕುಂದದ ಹಳೆಪೈಕದವರ ಮನೆಯಲ್ಲಿ ಆ ರಾತ್ರಿ ಕಳೆಯಲು ನಿಶ್ಚಯಿಸಿದನು.

“ಈ ಗದ್ದೆಕೋಗು ದಾಟಿ, ಆ ಕರಡದ ಬ್ಯಾಣ ದಾಟಿದರೆ ಸೈ. ಸೇಸನಾಯ್ಕರ ಮನೆ ಸಿಗ್ತದೆ. ಮೊದೂಲಷ್ಟು ಮೈ ಒಣಗಿಸಿಕೊಳ್ಬೇಕು…. ಅನ್ನಾ ಇಲ್ದಿದ್ರೆ ಗಂಜೀನಾದ್ರೂ ಹಾಕ್ದೆ ಇರ್ತಾರೇನು? ಹೆಗ್ಡೇರ ಮನೆ ಆಳೂ ಅಂತಾ!…. ಕಳ್ಳಿಲ್ದೆ ಇದ್ರೆ ಒಂದು ಗಲ್ಪಾ ಹೆಂಡಾನಾದ್ರೂ ಸಿಕ್ಕಬೈದು! ಬಾ ಹುಲಿಯ, ಬಾ, ನಿನ್ನ ಹಿಡುಕೊಳ್ಳದೆ ಇದ್ರೆ ಹೋದಲ್ಲಿ ತನಕಾ ಕೊಂಬು ಹುಯ್ಲೆ!”

* * *

# ೧

ಲಕ್ಕುಂದದ ಹಳೆಪೈಕದ ಸೇಸನಾಯ್ಕನ ಮನೆಯ ಜಗಲಿಯ ತುದಿ ಕೆಸರಲಿಗೆಯ ಮೇಲೆ ಹಾಸಿದ್ದ ಕರಿಗಂಬಳಿಯ ಮೇಲೆ, ಮುಂಡಿಗೆಗೆ ಒರಗಿ ಎದುರು ಬದುರಾಗಿ ಕುಳಿತು ಸೇಸನಾಯ್ಕನೂ ಅವನ ನೆಂಟಬಾವ ಸೀತೂರು ತಿಮ್ಮನಾಯ್ಕನೂ ಗಹನ ಸಂಭಾಷಣೆಯಲ್ಲಿ ಮಗ್ನರಾಗಿದ್ದರು. ದನಗೋಳಾಗಿ ಹೊಯ್ದುದ್ದ ಮುಂಗಾರು ಮಳೆ ಅವರ ಪ್ರಜ್ಞಾವಲಯದ ನೇಮಿಯಲ್ಲಿ ಸುಳಿದಿಣಿಕಿ ಮಾಯವಾಗಿತ್ತು. ಅಡಕೆಯ ಸೋಗೆ ಗರಿ ಹೊದಿಸಿದ್ದ ಮಾಡಿನಿಂದ ಇರಿಚಲು ಬೀಸಿದಾಗ ಅಭ್ಯಾಸ ಬಲದಿಂದ ಸ್ವಲ್ಪ ದೂರ ಸರಿದು ಕುಳಿತಿದ್ದರೇ ವಿನಾ ಮಾತಿನ ಕಳ್ಳನ್ನು ಹೀರುತ್ತಿದ್ದ ಮನಸ್ಸಿನ ಬಾಯಿಗೆ ಒಂದಿನಿತೂ ವಿರಾಮ ಕೊಟ್ಟಿರಲಿಲ್ಲ.

ಕತ್ತಲಾದ ಮೇಲೆ ನೆರೆಮನೆಯ ಪುಟ್ಟನಾಯ್ಕನ ಅತ್ತೆ, ಕಾಡಿ, ಹಣತೆದೀಪ ತಂದಿಟ್ಟು ಹೋಗುತ್ತಿದ್ದಾಗ ಸೇಸನಾಯ್ಕನ ನೋಟ ಅಪ್ರಯತ್ನವಾಗಿ ಅತ್ತಕಡೆ ಹರಿದು “ಕಾಡೀ, ತಿಮ್ಮ ಬಾವಗೆ ಏನಾದರೂ ಕೊಡೂದಿಲ್ಲೇನೆ?” ಎಂದನು.

ತಿಮ್ಮನಾಯ್ಕನೂ ಕಾಡಿಯ ಕಡೆ ನೋಡುತ್ತಿದ್ದನು. ಆದರೆ ಅವನ ದೃಷ್ಟಿ ಕಳವು ಮಾಲನ್ನು ಪತ್ತೆ ಮಾಡಲು ಹೊರಟಿದ್ದ ಗುಪ್ತ ಪೊಲೀಸಿನವನಂತೆ ಕಾಡಿಯ ಮೋರೆಯ ಕಡೆಗೆ ತೆರಳದೆ ಅವಳ ಹೊಟ್ಟೆಯೆಡೆ ಸಂಚರಿಸುತ್ತಿತ್ತು. ಅದೇ ಕಾರಣವಾಗಿಯೇ ಸೀತೂರು ಸೀಮೆಯ ಹಳೆ ಪೈಕದವರ ಪ್ರತಿನಿಧಿಯೂ ಮುಖಂಡನೂ ಆಗಿದ್ದ ಅವನು ಆ ದಿನ ಲಕ್ಕುಂದಕ್ಕೆ ಬಂದಿದ್ದನು.

ಲಕ್ಕುಂದದ ಜಮೀನಿನಲ್ಲಿ ಮುಕ್ಕಾಲುಪಾಲು ಸಿಂಬಾವಿ ಭರಮೈ ಹೆಗ್ಗಡೆಯವರಿಗೆ ಸೇರಿತ್ತು. ಇನ್ನುಳಿದ ಕಾಲುಪಾಲು ಹಳೆಪೈಕದ ಸೇಸನಾಯ್ಕನ ಸ್ವಂತದ್ದಾಗಿತ್ತು. ಸಾಧಾರಣವಾಗಿ ಒಕ್ಕಲಿಗ ಒಡೆಯರ ಒಕ್ಕಲುಗಳಾಗಿದ್ದುಕೊಂಡು, ಬಗನಿಯ ಮರದಿಂದ ಕಳ್ಳು ಇಳಿಸಿ ಕುಡಿದು, ಮಾರಿ, ಜೀವನ ಮಾಡುವ ಕಳೆಪೈಕದವರಿಗೆ (ಅವರಿಗೆ “ದೀವರು” ಎಂದು ಹೆಸರೂ ಉಂಟು) ಸ್ವಂತ ಜಮೀನಿರುವುದು ಬಹಳ ಅಪೂರ್ವ; ಮಹಾ ಅನಾಚಾರವೆಂದೂ ಅನೇಕರ ಮನಸ್ಸು. ವೇದ ಕಲಿಯುವುದು ಶೂದ್ರರಿಗೆ ಹೇಗೆ ನಿಷಿದ್ಧವೋ ಹಾಗೆಯೇ ಸ್ವಂತ ಜಮೀನಿ ಮಾಡುವುದು ಹಳೆಪೈಕದವರಿಗೆ ನಿಷಿದ್ಧ ಎಂದು ಒಕ್ಕಲಿಗರಾಗಿದ್ದ ಹೆಗ್ಗಡೆ ಗೌಡ ನಾಯಕರುಗಳೆಲ್ಲ ಸೇರಿ ತೀರ್ಮಾನಮಾಡಿದ್ದರು. ಅಷ್ಟೇ ಅಲ್ಲದೆ, ಮದುವೆ ಮೊದಲಾದ ಸಂಭ್ರಮಗಳಲ್ಲಿ ಹಳೆಪೈಕದವರು ಒಕ್ಕಲಿಗರನ್ನು ಯಾವ ವಿಧದಲ್ಲಿಯೂ ಅನುಕರಿಸಕೂಡದೆಂದೂ ಮಾಮೂಲು ಕಟ್ಟಾಗಿತ್ತು. ದಿಬ್ಬಣದಲ್ಲಿ ಮದುವೆಯ ಗಂಡು ಕುದುರೆಯ ಮೇಲೆ ಸವಾರಿ ಮಾಡಬಾರದು; ದಂಡಿಗೆಯ ಮೇಲೆ ಕೂತರಂತೂ ಮದುಮಕ್ಕಳಿಗೂ ದಿಬ್ಬಣದವರಿಗೂ ಉಳಿಗತಿಯಿರಲಿಲ್ಲ. ಈ ಚರ್ಚೆ ಸರ್ಕಾರದವರೆಗೂ ಹೋಗಿ, ಅದೂ ಒಕ್ಕಲಿಗರ ಪರವಾಗಿಯೇ ತೀರ್ಮಾನ ಕೊಟ್ಟಿದ್ದರಿಂದ ಮಾಮೂಲಿಗೂ ಮಾತ್ಸಯ್ಯಕ್ಕೂ ಕಾನೂನಿನ ಮುದ್ರೆ ಬೇರೆ ಬಿದ್ದಿತ್ತು.

ಸರ್ಕಾರದ ಇತ್ಯರ್ಥಕ್ಕೆ ಕಾರಣ ನ್ಯಾಯಪಕ್ಷಪಾತವಾಗಿರಲಿಲ್ಲ; ಬಲ ಪಕ್ಷಪಾತವಾಗಿತ್ತು. ಬಲಿಷ್ಠರೂ ಬಹುಸಂಖ್ಯೆಯವರೂ ಆದವರ ಕಡೆ ಸರ್ಕಾರವಿದ್ದರೆ ಅದಕ್ಕೂ ಕ್ಷೇಮ; ನ್ಯಾಯ ರಕ್ಷಣೆಯೂ ಸುಲಭಸಾಧ್ಯ. ಅದರಲ್ಲಿಯೂ ಮೈಸೂರು ಸಂಸ್ಥಾನದ ಅಂಚಾಗಿ, ದುರ್ಗಮವಾದ ಪರ್ವತಾರಣ್ಯಗಳ ಬೀಡಾಗಿ, ಆಗತಾನೆ ನಗರ,

ಕೌಲೆದುರ್ಗ ಮೊದಲಾದ ಪಾಳೆಯ ಪಟ್ಟುಗಳ ಕಿರುಕುಳದಿಂದ ಪಾರಾಗಿದ್ದ ಮಲೆನಾಡಿಗೆ ಅಲ್ಲಿದ್ದ ಬಹುಸಂಖ್ಯೆಯ ಬಲಿಷ್ಠರ ಇಚ್ಛೆಯಂತೆ ಸರ್ಕಾರದ ಕಾನೂನಾದುದರಲ್ಲಿ ಆಶ್ಚರ್ಯವೇನಿಲ್ಲ.

ಸರ್ಕಾರದಿಂದ ಕಾನೂನಾಗಿ ಬಂದ ಮಾತ್ರಕ್ಕೇ ಅನ್ಯಾಯ ನ್ಯಾಯವಾಗುತ್ತದೆಯೇ ಎಂದು ಕೆಲವು ಸ್ವತಂತ್ರದೃಷ್ಟಿಯ ಕಳೆಪೈಕದ ನಾಯಕರು ಅದಕ್ಕೆ ವ್ಯತಿರಿಕ್ತವಾಗಿ ನಡೆಯಲು ಪ್ರಯತ್ನಿಸುತ್ತಿದ್ದರು. ಅವರ ಆ ಪ್ರಯತ್ನಕ್ಕೆ ಸರ್ಕಾರವೆಂದಿಗೂ ಅಡ್ಡಿ ಬರುತ್ತಿರಲಿಲ್ಲವೆಂದು ದೇವರಾಣೆ ಹಾಕಿ ಬೇಕಾದರೂ ಹೇಳಬಹುದು. ಆದರೆ ಒಕ್ಕಲಿಗರು ತಮ್ಮ ಹಕ್ಕಿನ ರಕ್ಷಣೆಗಾಗಿ ಪಣತೊಟ್ಟಿದ್ದರು!

ಒಕ್ಕಲಿಗ ಜಮೀನುದಾರರ ಆಳುಗಳೂ ಒಕ್ಕಲುಗಳೂ ಆಗಿದ್ದ ಹಳೆಪೈಕದವರು ಬಹಿರಂಗವಾಗಿ ಯಾವ ತಂಟೆ ತಕರಾರುಗಳ ಗೋಜಿಗೂ ಹೋಗುತ್ತಿರಲಿಲ್ಲ. ಆದರೆ ಸೇಸನಾಯ್ಕನಂತಹ ಸ್ವಂತ ಜಮೀನುದಾರರಿಗೆ "ಅವರಿಗಿಂತ ನಾವೇನು ಕಡಿಮೆ? ನಮ್ಮ ಕುದುರೆ, ನಮ್ಮ ದಂಡಿಗೆ, ನಮ್ಮ ವಾದ್ಯ, ನಮ್ಮ ಬೋವಿಗಳು! ನಮ್ಮ ದುಡ್ಡು ನಾವು ಖರ್ಚು ಮಾಡುವುದಕ್ಕೆ ಇವರದೇನು ಅಡ್ಡಿ?" ಎಂಬ ಹುಮ್ಮಸ್ಸು ಇರುತ್ತಿತ್ತು. ಮುಖಂಡರು ಸೇರಿ ಕಳ್ಳು ಕುಡಿದಾಗಲಂತೂ ಆ ಗರ್ವ ಗುಟುರುಹಾಕುತ್ತಿತ್ತು.

ಅದರಲ್ಲಿಯೂ ಒಕ್ಕಲಿಗರ ಮನೆಗಳಿರದಿದ್ದ ಲಕ್ಕುಂದದಂತಹ ಹಳ್ಳಿಗಳಲ್ಲಿ ಆ ಸೊಕ್ಕಿನ ಗೂಳಿ ನಿರ್ಭಯವಾಗಿ ಗುಟುರುಹಾಕಬಹುದಾಗಿತ್ತು.

ಲಕ್ಕುಂದದಲ್ಲಿದ್ದ ಹಳೆಪೈಕದವರ ಮನೆಗಳು ಮೂರು. ಒಂದು ಸೇಸನಾಯ್ಕನ ಮನೆ. ಮತ್ತೊಂದು ರಂಗನ ಮನೆ. ಇನ್ನೊಂದು ಪುಟ್ಟನ ಮನೆ. ಅದರಲ್ಲಿ ನಿಜವಾಗಿಯೂ ಮನೆ ಎಂಬ ಹೆಸರಿಗೆ ಅಯೋಗ್ಯವಾಗಿರದಿದ್ದುದು ಸೇಸನಾಯ್ಕನ ಮನೆ ಮಾತ್ರ. ಉಳಿದವು ಎರಡೂ ಗುಡಿಸಲು. ಆದರೆ ಗುಡಿಸಲು, ಬಿಡಾರ ಮೊದಲಾದ ಪದಗಳನ್ನು ಹೊಲೆಯರು, ಬೇಲರು, ಮಾದಿಗರು, ಬಿಲ್ಲವರು, ಹಸಲವರು ಇತ್ಯಾದಿ ಕೀಳುಜನರ ನಿವಾಸಗಳಿಗೆ ಉಪಯೋಗಿಸುತ್ತಿದ್ದುದರಿಂದ ತಮ್ಮ ನಿವಾಸಗಳಿಗೆ ಆ ಪದಗಳನ್ನು ಪ್ರಯೋಗಿಸುವುದು ಅವಮಾನಕರವೆಂದು ತಿಳಿದು, ಹಳೆಪೈಕದವರು ತಮ್ಮ ಜೋಪಡಿಗಳನ್ನು ಕೂಡ 'ಮನೆ' ಎಂದು ಕರೆದುಕೊಳ್ಳುತ್ತಿದ್ದರು. ಇತರರನ್ನೂ ಹಾಗೆಯೇ ಕರೆಯುವಂತೆ ಒತ್ತಾಯ ಪಡಿಸುತ್ತಲೂ ಇದ್ದರು.

ಸೇಸನಾಯ್ಕನ ಮನೆ ಏಳೆಂಟು ಅಂಕಣದ್ದಾಗಿತ್ತು. ಸೋಗೆ ಹೊದಿಸಿದ್ದನು. ಮಣ್ಣಿನ ಗೋಡೆ ಹಾಕಿದ್ದನು. ಮುಂಭಾಗಕ್ಕೆ ಕೆಮ್ಮಣ್ಣು ಜೇಡಿಗಳನ್ನು ಬಳಿದಿದ್ದನು.

ಸಿಂಬಾವಿ ಭರಮೈ ಹೆಗ್ಗಡೆಯವರ ಒಕ್ಕಲುಗಳಾಗಿದ್ದ ರಂಗ, ಪುಟ್ಟ ಇವರ ಮನೆಗಳು ನಿಜವಾಗಿಯೂ ಗುಡಿಸಲುಗಳಾಗಿದ್ದುವು. ಬಿಳಿಹುಲ್ಲು ಹೊದಿಸಿದ್ದರು. ಅಡಕೆ ದಬ್ಬೆಯ ತಟ್ಟಿಗೋಡೆಗಳನ್ನು ಹಾಕಿದ್ದರು.

ಕೋಳಿ, ಕುರಿ, ನಾಯಿ, ದನ, ಎತ್ತು, ಸೆಗಣಿ, ಬೂದಿ, ಗಲೀಜು ಮೊದಲಾದುವುಗಳ ವಿಚಾರದಲ್ಲಿ ಆ ಮೂರು ಮನೆಗಳೂ ಒಂದನ್ನೊಂದು ಸೆಣಸುವಂತಿದ್ದುವು. ಲಕ್ಕುಂದಕ್ಕಿಂತಲೂ ಸ್ವಲ್ಪ ಹೆಚ್ಚು ಚೊಕ್ಕಟವಾಗಿರುತ್ತಿದ್ದ

ಸೀತೂರಿನಿಂದ ಬಂದಿದ್ದ ತಿಮ್ಮನಾಯ್ಕನಿಗೆ ಲಕ್ಕುಂದದ ಹಳೆಪೈಕದವರ ಮೇಲೆ ತಮ್ಮೂರಿನ ಹಳೆಪೈಕದವರಿಗಿದ್ದ ತಿರಸ್ಕಾರದಲ್ಲಿ ಮತ್ತಷ್ಟು ಶ್ರದ್ಧೆ ಹೆಚ್ಚಿತು.

ಸುವಾಸನೆಗಿಂತಲೂ ದುರ್ವಾಸನೆ ಬೇಗ ಹಬ್ಬುತ್ತದೆ; ಬೇಗ ಮೂಗಿಗೆ ಬೀಳುತ್ತದೆ; ಅನೇಕರಿಗೆ ಬೇಗ ಗೊತ್ತಾಗುತ್ತದೆ. ಸತ್ಕೀರ್ತಿ ಹಬ್ಬುವುದು ನಿಧಾನ; ದುಷ್ಕೀರ್ತಿ ಕಾಡುಕಿಚ್ಚಿನಂತೆ ಹರಡಿಕೊಳ್ಳುತ್ತದೆ. ಪುಟ್ಟನ ಅತ್ತೆ ಕಾಡಿ ಮುಂಡೆ ಬಸುರಾಗಿದ್ದಾಳೆ ಎಂಬ ಸಿದ್ದಿ ಪಿಸುಮಾತಿನ ಕುದುರೆಯ ಮೇಲೆ ಊರೂರು ಅಲೆಯುವ ನಾಡಾಡಿಯಾಗಿತ್ತು. ಅವಳನ್ನು ಜಾತಿಯಿಂದ ಹೊರಗೆ ಹಾಕಬೇಕೆಂಬ ಚಳವಳಿಯೆದ್ದಿತು. ಅಥವಾ ತಪ್ಪೊಪ್ಪಿಕೊಂಡು ದಂಡಾಕೊಟ್ಟು, ಜಾತಿಯವರನ್ನೆಲ್ಲಾ ಸಂತೈಸುವ ಸಮಾರಾಧನೆ ಮಾಡಿದ್ದರೂ ಸಾಕಿತ್ತು. ಆದರೆ ಕಾಡಿಯ ಕೈಯಲ್ಲಾಗಲಿ ಪುಟ್ಟನ ಕೈಯಲ್ಲಾಗಲಿ ಹಣವಿರಲಿಲ್ಲ. ಒಡೆಯರಾಗಿದ್ದ ಸಿಂಬಾವಿ ಹೆಗ್ಗಡೆಯವರನ್ನು ಕೇಳುವ ಧೈರ್ಯವಿರಲಿಲ್ಲ.

ಇನ್ನು ಕಾಡಿಯ ಸ್ಥಿತಿಗೆ ಯಾರು ಕಾರಣರೊ ಅವರಿಂದ ತಪ್ಪುಗಾಣಿಕೆ ವಸೂಲು ಮಾಡಿಕೊಳ್ಳಬೇಕೆಂದು ಜಾತಿಯ ಮುಖಂಡರು ನಿರ್ಣಯಿಸಿದರು. ಆದರೆ ಆ ಕಾರಣ ಪುರುಷನನ್ನು ಕಂಡು ಹಿಡಿಯುವುದಕ್ಕೆ ಸಾಧ್ಯವಾಗಲಿಲ್ಲ. ಜಾತಿಯ ಮುಖಂಡರಿಗೆ ಸಾಧ್ಯವಾಗದಿದ್ದುದು ಹಾಗಿರಲಿ, ಕಾಡಿಗೂ ಅದನ್ನು ನಿರ್ಣಯಿಸುವುದು ಕಷ್ಟವಾಯಿತು. ವರ್ಷಗಳಲ್ಲಿಯೆ ಮಾವನನ್ನೂ ಹೆಂಡತಿಯನ್ನೂ ಕಳೆದುಕೊಂಡಿದ್ದ, ತನ್ನ ಅಳಿಯ ಪುಟ್ಟನ ಹೆಸರನ್ನು ಸೂಚಿಸುವಳು. ಬೇರೊಂದು ಸಾರಿ, ತನ್ನ ಸ್ವಂತ ಹೆಂಡತಿಯಿದ್ದರೂ ಪ್ರಣಯ ಸಾಹಸಗಳಲ್ಲಿ ಪ್ರವೀಣನೆಂದು ಹೆಸರು ಪಡೆದಿದ್ದ ನೆರೆಮನೆಯ ರಂಗನ ಹೆಸರನ್ನು ಸೂಚಿಸುವಳು. ಮತ್ತೊಂದು ಸಾರಿ, ಕೇಳಿದವರೆಲ್ಲ ಮೂಗು ಬೆರಳಾಗಿ ಬೆರಗಾಗುವಂತೆ, ಹಳೆಪೈಕದ ಮುಖಂಡರಲ್ಲೆಲ್ಲ ಅಗ್ರಗಣ್ಯನೂ ಸನ್ಮಾನ್ಯನೂ ಜಮೀನುದಾರನೂ ಆಗಿ, ನಾಲ್ವತ್ತನೆಯ ವಯಸ್ಸಿಗಾಗಲೆ ಮೂವರು ಹೆಂಡಿರನ್ನು ಕಳೆದುಕೊಂಡು ಇನ್ನು ಮೇಲೆ ಮದುವೆಯಾಗುವುದೇ ಇಲ್ಲವೆಂದು ಹಟಹಿಡಿದು ವ್ರತಿಯಾಗಿದ್ದ ಲಕ್ಕುಂದದ ಸೇಸನಾಯ್ಕನ ಹೆಸರನ್ನೂ ಸೂಚಿಸುತ್ತಾ ಬಿಕ್ಕಿ ಬಿಕ್ಕಿ ಅಳುತ್ತಿದ್ದಳು. ಅಂತೂ ಮುಖಂಡರ ಅನ್ವೇಷಣೆಯ ನೌಕೆಗೆ ಧ್ರುವತಾರೆಯೂ ಅಗೋಚರವಾಗಿ, ಉತ್ತರಮುಖಿಯೂ ಕೆಟ್ಟು ಹೋಗಿ, ನಡುಗಡಲಿನಲ್ಲಿ ದೆಸೆಗೆಟ್ಟಂತಾಯ್ತು.

ಕಡೆಗೆ ಸೇಸನಾಯ್ಕನೇ ಮುಂದೆ ಬಂದು, ಮೇಗರವಳ್ಳಿಯ ಕಣ್ಣಾ ಪಂಡಿತರಿಂದ ಮದ್ದು ತರಿಸಿಕೊಟ್ಟು, ಹೊಟ್ಟೆಯ ಹೊರೆಯಿಳಿಸಿ ಕಾಡಿಯನ್ನು ಕಷ್ಟದಿಂದ ಪಾರುಗಾಣಿಸಿದ್ದನು. ಆ ದಿನ ವಿಚಾರಣೆಗೆ ಬಂದಿದ್ದ ಮುಖಂಡರಿಗೆಲ್ಲಾ ಚೆನ್ನಾಗಿ ತುಂಡುಕಡುಬು ಕಳ್ಳುಗಳ ಹಬ್ಬ ಮಾಡಿಸಿ ಬಾಯಿಗೆ ಬೀಗಮುದ್ರೆ ಮಾಡಿ ಕಳುಹಿಸಿದ್ದನು. ಅವನ ನೆಂಟಬಾವ ತಿಮ್ಮನಾಯ್ಕನನ್ನು ಮಾತ್ರ ಒತ್ತಾಯಮಾಡಿ ಉಳಿಸಿಕೊಂಡಿದ್ದನು.

ಕಾಡಿಯ ವಿಚಾರಣೆಗಾಗಿಯೇ ಆ ದಿನ ಬೆಳಿಗ್ಗೆ ಲಕ್ಕುಂದದಲ್ಲಿ ಸೇಸನಾಯ್ಕನ ಮನೆಯಲ್ಲಿ ಸೇರಿದ್ದ ಮುಖಂಡರು ಅದೊಂದನ್ನು ಬಿಟ್ಟು ಉಳಿದ ಅನೇಕ ವಿಚಾರಗಳನ್ನು ಚರ್ಚಿಸಿದ್ದರು. ಕಾರಣವೇನೆಂದರೆ ಅನೇಕರಿಗೆ ಕಾಡಿಯ ಆ ಸ್ಥಿತಿಗೆ ಸೇಸನಾಯ್ಕನೇ ಕಾರಣನಾಗಿದ್ದಾನೆ ಎಂಬ ಒಳಗುಟ್ಟು ಹೊಳೆಯತೊಡಗಿತ್ತು. ಜೊತೆಗೆ ಸೇಸನಾಯ್ಕನೂ ಒಳ್ಳೆಯ ಉಪಾಯದಿಂದ ಬೇರೆಯ ಪ್ರಸ್ತಾಪಗಳನ್ನೆತ್ತಿ ತನಗೆ ತೊಂದರೆಯಾಗದ ರೀತಿಯಲ್ಲಿ ವಾದಮುಖವನ್ನು ತಿರುಗಿಸಿದ್ದನು.

“ನಮ್ಮ ದಂಡಿಗೆ ಹಕ್ಕಿಗೆ, ಕುದುರೆ ಹಕ್ಕಿಗೆ, ಗೌಡ ಮಕ್ಕಳು ಅಡ್ಡ ಬರುವುದು ಯಾವ ನ್ಯಾಯ? ನಾವೇಕೆ ಹೊಡೆದಾಟಕ್ಕೆ ಹೆದರಬೇಕು? ನಾಳೆ ನನ್ನ ಮಗನ ಮದುವೆ ಮಾಡುವಾಗ ದಂಡಿಗೆ ಸಿಕ್ಕದೆ ಇದ್ದರೂ ಕುದುರೆ ಮೇಲಾದರೂ ಹೆಣ್ಣೂ ಗಂಡೂ ಕೂರಿಸಿ ದಿಬ್ಬಣ ತಗೊಂಡು ಹೋಗಲೇ ಬೇಕು. ಜಾತಿಯವರು ನೀವೆಲ್ಲಾ ಸಹಾಯ ಮಾಡಿದರೆ ನಾನೊಂದು ಕೈ ನೋಡೇ ಬಿಡ್ತೀನಿ” ಎಂದು ಮೊದಲಾಗಿ ವೀರಾವೇಶದಿಂದ ಮಾತಾಡಿದ ಸೇಸನಾಯ್ಕನನ್ನು ನೋಡಿ ಎಲ್ಲರಿಗೂ ಹೆಮ್ಮೆಯಾಯಿತು. ಒಬ್ಬೊಬ್ಬರೂ ಸಹಾಯ ಮಾಡುವುದಾಗಿ ಪ್ರೋತ್ಸಾಹವಿತ್ತರು. ಕಳ್ಳನ್ನು ಚೆನ್ನಾಗಿ ಹೀರಿದರು; ಹಣ್ಣು ಹಣ್ಣಾಗಿ, ಮೀಸೆ ತಿರುವಿದರು.

ಇಳಿಹಗಲಿನಲ್ಲಿ ಇತರ ಮುಖಂಡರೆಲ್ಲ ಹೊರಟುಹೋದ ಮೇಲೆ ಸೇಸನಾಯ್ಕನಿಗೆ ಮನಸ್ಸೂ ನೆಮ್ಮದಿಯಾಗಿ ತನ್ನ ನೆಂಟಬಾವ ಸೀತೂರು ತಿಮ್ಮನಾಯ್ಕನೊಡನೆ ಮಗನ ಮದುವೆ ವಿಚಾರವಾಗಿಯೂ ಕುದುರೆಯ ಮೇಲೆ ಗಂಡನ್ನು ಕೂರಿಸಿ ದಿಬ್ಬಣ ತೆಗೆದುಕೊಂಡು ಹೋಗುವಾಗ ಮಾಡಿಕೊಳ್ಳಬೇಕಾದ ಸಲಕರಣೆಗಳ ವಿಚಾರವಾಗಿಯೂ ರಸಾವೇಶದಿಂದ ಮಾತಾಡತೊಡಗಿದನು. ಕತ್ತಲೆಯಾದುದಾಗಲಿ, ಮಳೆ ಜೋರಾಗಿ ಹೊಯ್ದುದಾಗಲಿ, ನೆರಮನೆಯ ಪುಟ್ಟ ರಂಗ ಮೊದಲಾದವರು ಬಂದು ತನ್ನ ಮಗನನ್ನು ಕರೆದುಕೊಂಡು ಹತ್ತು ಮೀನು ಕಡಿಯುವುದಕ್ಕೆ ಹೋದುದಾಗಲಿ ಅವನ ಗಮನಕ್ಕೆ ಬಂದಿರಲಿಲ್ಲ.

ಕಾಡಿ ಬಂದು ಮೊಗೆಯ ತುಂಬಾ ನೊರೆಗಳ್ಳನ್ನೂ, ಕೀಸಿ ನುಣ್ಣಗೆ ಮಾಡಿದ ಎರಡು ಗಂಡುಗರಟಗಳನ್ನೂ ತಂದು ಮುಂದಿಟ್ಟು, ನಸುನಾಚಿಗೆಯಿಂದಲೆಂಬಂತೆ, ಕುತ್ತಿಗೆಯವರೆಗೂ ಕಂಬಳಿ ಹೊದೆದು ಕುಳಿತಿದ್ದ ಇಬ್ಬರನ್ನೂ ಮಿಂಚಿನೋಡಿ ಒಳಗೆ ಹೋದಮೇಲೆ, ಇಬ್ಬರೂ ಅರ್ಥಪೂರ್ಣವಾಗಿ ಒಬ್ಬರೊಬ್ಬರನ್ನು ನೋಡಿ, ಹುಳ್ಳಗೆ ನಗುತ್ತಾ, ಕೆಲಸಕ್ಕೆ ಪ್ರಾರಂಭಿಸಿದರು. ಸೇಸನಾಯ್ಕನು ಹುಳಿಗಂಪಿನ ನರುಗಳ್ಳನ್ನು ಕರಟ ತುಳುಕುವಷ್ಟರಮಟ್ಟಿಗೆ ಬೊಗ್ಗಿಸಿ ತುಂಬಿ “ತಗಾಳಿ! ತಗಾಳಿ!  ಏನ್ ನೋಡಾದು, ಬಾವ?” ಎಂದನು.

“ಮಾರಾಯ್ರಾ, ನಂಗೇನು ಬ್ಯಾಡಾಗಿತ್ತು!” ಎಂದು ರಾಗಧ್ವನಿ ಮಾಡುತ್ತಾ ಪಿಚ್ಚನೆ ಹಲ್ಲು ಬಿಡುತ್ತಾ ರೋಮಮಯವಾಗಿದ್ದ ತನ್ನ ಬಲಗೈಯನ್ನು ಕಂಬಳಿಯಿಂದ ಹೊರಗೆ ತೆಗೆದು ನೀಡಿ ಕರಟವನ್ನೆತ್ತಿ, ನೀಳವಾಗಿ ಕೊಂಚ ಮುಂದಕ್ಕೆ ಬಾಗಿದ್ದ ಮೀಸೆಗೂದಲಿಗೆ ಮದ್ಯದಲ್ಲಿ ತೀರ್ಥಸ್ನಾನವಾಗುತ್ತಿರುವುದನ್ನು ಒಂದಿನಿತೂ ಲಕ್ಷ್ಯಕ್ಕೆ ತಾರದೆ, ಬಾಯಿಗಿಟ್ಟು, ಸೊರ್‍ರೆಂದು ಕುಡಿಯತೊಡಗಿದನು.

ಸೇಸನಾಯ್ಕನೂ ಕೂದಲಿಲ್ಲದೆ ನುಣುಪಾಗಿದ್ದ ತನ್ನ ಬಡಕಲು ಕೈಯಿಂದ ಕರಟವನ್ನೆತ್ತುತ್ತಾ ಹಣತೆಯ ಮಬ್ಬುಬೆಳಕಿನಲ್ಲಿ ಅಂಗಳದಲ್ಲಿ ನಿಂತಿದ್ದ ನೀರನ್ನು ನೋಡಿ ಬೆರಗು ದನಿಯಲ್ಲಿ “ಹೌದೇನ್ರೋ! ಘನಾಗೆ ಬಂದದೆ ಒಂದು ಮಳೆ!” ಎಂದನು.

ತಿಮ್ಮನಾಯ್ಕನು ಖಾಲಿಯಾದ ಗರಟವನ್ನು ಕೆಳಗಿಟ್ಟು, ತೊಯ್ದಿದ್ದ ಚೌರಿಮೀಸೆಗಳನ್ನು ನೀಪಿಕೊಳ್ಳುತ್ತಾ, ಗಂಟಲು ಕ್ಯಾಕರಿಸಿ ಅಂಗಳಕ್ಕೆ ತುಪ್ಪಿ “ಬರ್ಲಿ, ಮಾರಾಯ್ರಾ, ನಮ್ಮ ಅಗೋಡಿಗೆ ನೀರುಕಾಣದೆ ಕಂಗಾಲಾಗಿದ್ದೆ ನಾನು!” ಎಂದನು.

ಬಾವನ ಮಾತಿಗೆ ಮಾರ್ನುಡಿಯಾಗಿ ಸೇಸನಾಯ್ಕನು ಕರಟವನ್ನೆಲ್ಲಾ ಬರಿದು ಮಾಡಿ ಕೆಳಗಿಟ್ಟು, ತರಕಲಾದ ಗಡ್ಡಮೀಸೆಯ ಮೇಲ್ದುಟಿಗಳನ್ನು ಸವರುತ್ತಿದ್ದವನು "ಹಚಾ! ಹಚಾ!" ಎನ್ನುತ್ತಾ ಎದ್ದುನಿಂತು ದಾರಿಯ ಕಡೆ ಕಿರುಗಣ್ಣಾಗಿ ದಿಟ್ಟಿಸಿದನು.

ದದ್ದು ಹಿಡಿದು ಬಡಕಲಾದ ಬೂದಿಬುಕ್ಕಗಳಾಗಿದ್ದ ಅವನ ಮನೆಯ ನಾಯಿಗಳೂ ರಂಗ ಪುಟ್ಟರೆ ಮನೆಯ ನಾಯಿಗಳೂ ಒಟ್ಟಿಗೆ ಸೇರಿ ಬಾಯಿ ಬಡುಕೊಳ್ಳುವಂತೆ ಕೂಗತೊಡಗಿದ್ದುವು.

ಸೇಸನಾಯ್ಕನು ನೋಡುತ್ತಿದ್ದ ಹಾಗೆ ಕತ್ತಲೆಯ ಗರ್ಭದಿಂದ ಹೊಮ್ಮಿದ ನಾಯಿಗುತ್ತಿ ದೀಪದ ಬೆಳಕಿನ ಮಬ್ಬುವಲಯಕ್ಕೆ ಮೂಡಿಬಂದನು. ಬಲಗಡೆಗೆ ನಸುಬಾಗಿ ತನ್ನ ದೈತ್ಯನಾಯಿಯ ಕುತ್ತಿಗೆಯನ್ನು ಬಲಗೈಯಲ್ಲಿ ತಬ್ಬಿ ಹಿಡಿದುಕೊಂಡೇ ಬರುತ್ತಿದ್ದವನು ಸೇಸನಾಯ್ಕನ ಪ್ರಶ್ನೆಗೆ "ನಾನು ಕಣ್ರೋ-ಗುತ್ತಿ" ಎಂದನು.

"ಕಂಡ ಹಾಗೆ ಇದೆಯೆಲ್ಲಾ! ನೀನು ಹೋದಲ್ಲಿ ತನಕಾ ಆ ನಾಯಿ ಯಾಕೆ ಕರಕೊಂಡು ಹೋಗ್ತೀಯೊ, ಮಾರಾಯ?" ಎಂದನು ತಿಮ್ಮನಾಯ್ಕ.

"ಏನು ಮಾಡೋದ್ರೋ? ಹೊಡೆದಟ್ಟೆ ಬಂದೀನಿ; ನಡೂದಾರೀಲಿ ಹಿಂದಕ್ಕೆ ಬಂದದೆ" ಎಂದು ಮಾತಾಡುತ್ತಿದ್ದಾಗಲೆ ಕೈ ಸಡಿಲವಾಗಿದ್ದುದನ್ನು ಅರಿತು ಹುಲಿಯನು ಚಂಗನೆ ಒಂದು ನೆಗತ ನೆಗದು, ಕಿವಿ ಕೆಟ್ಟು ಹೋಗುವಂತೆ ಅರಚುತ್ತಿದ್ದ ಕುನ್ನಿಗಳ ಕಡೆಗೆ ನುಗ್ಗಿತು. ನುಗ್ಗಿತೋ ಇಲ್ಲವೋ, ಸತ್ತೆನೋ ಕೆಟ್ಟೆನೋ ಎಂದು ಆ ದದ್ದು ಹಿಡಿದ ಬಡಕಲು ಕಂತ್ರಿ ನಾಯಿಗಳು ದಿಕ್ಕಾಪಾಲಾಗಿ ಕೂಗಿಕೊಳ್ಳುತ್ತಾ ಓಡಿಹೋದುವು. ಒಂದಂತೂ ನಿಂತಿದ್ದ ಸೇಸನಾಯ್ಕನಿಗೆ ಡಿಕ್ಕಿ ಹೊಡೆದು ನೆಲವನ್ನು ಒದ್ದೆ ಮಾಡುತ್ತಾ ಹಿತ್ತಲ ಕಡೆಗೆ ಪರಾರಿಯಾಯಿತು.

ಅದನ್ನು ನೋಡಿದ ತಿಮ್ಮನಾಯ್ಕನು "ಅಯ್ಯಯ್ಯೋ, ಇದರ ಮನೆ ಮಂಟೆನಾಗಲ್ರೊ! ಹಚೀ! ಹಚೀ! ಹಚ್ಚೆಚ್ಚೆಚ್ಚೀ" ಎಂದು ಗದರಿಸಿದನು.

ಗುತ್ತಿ ತನ್ನ ನಾಯಿಯನ್ನು ಗದರಿಸಿ ಕರೆದನು. ಅದು ಅವನ ಪಕ್ಕಕ್ಕೆ ಸರಿದು ನಿಂತು, ಹೊಳೆವ ಕಣ್ಣುಗಳಿಂದ ನೋಡತೊಡಗಿತು.

"ಇದೇನೋ? ಈಟ್ಹೊತ್ತನಾಗೆ? ಈ ಮಳೇಲಿ?"

ಆಗಲೇ ಮಾಂಸದ ಪಲ್ಯದ ವಾಸನೆಯನ್ನೂ ಕಳ್ಳು ಹೆಂಡಗಳ ಹುಳಿಗಂಪನ್ನೂ ಮೂಗಾಳಿ ಹಿಡಿದು ಮನಸ್ಸಿನಲ್ಲಿಯೆ ಸಂತೋಷಪಡುತ್ತಿದ್ದ ಗುತ್ತಿ ಪೆಚ್ಚು ಪೆಚ್ಚಾಗಿ ನಗುತ್ತಾ, ನಿರ್ನಿಮಿತ್ತವಾಗಿ ತೊಡೆ ತುರಿಸಿಕೊಳ್ಳುತ್ತಾ "ಏನಿಲ್ಲ ಕಣ್ರೋ! ಮಳೆ ಹೊಡೀತೂ ಹೊಡೀತೂ! ಕಾದೂ ಕಾದೂ ಸಾಕಾಯ್ತು! ನೀರು ಇಳೀಲೆ ಇಲ್ಲ". ಎಂದು ಮೊದಲಾಗಿ ಪ್ರಶ್ನೆಯನ್ನೂ ಒಂದಿನಿತೂ ಲೆಕ್ಕಿಸದೆ ಮಾತನಾಡಿದನು.

ಹಳೆಪೈಕದವನಿಗೆ ಹೊಲೆಯನ ಉತ್ತರದಲ್ಲಿ ಯಾವ ನ್ಯೂನತೆಯೂ ಗೋಚರವಾಗಲಿಲ್ಲ. “ಅಂಗಳದಾಗೆ ಯಾಕೆ ನಿಂತೀಯಾ? ಮ್ಯಾಲೆ ಬಂದು ಕೂತಗಾ” ಎಂದು ಸೇಸನಾಯ್ಕನೂ ಮುಂಡಿಗೆಗೆ ಒರಗಿ ಕೂತುಕೊಂಡನು.

ಗುತ್ತಿ ನಿಂತಲ್ಲಿಂದ ಅಲುಗಾಡದೆ ಮೊದಲಿನಂತೆಯೆ ಬೆಪ್ಪುನಗೆ ನಗುತ್ತಾ “ಇಲ್ಲ, ಅಷ್ಟೇನು ಹೊಟ್ಟೆ ಹಸಿದಿಲ್ಲ. ಸ್ವಲೂಪ ದಾವಾಗದೆ” ಎಂದು, ತಟಸ್ಥವಾಗಿಯೆ ನಿಂತಿದ್ದ ನಾಯಿಯನ್ನು “ಸುಮ್ಮನಿರು, ಹುಲಿಯ!” ಎಂದು ಗದರಿಸಿದನು.

ನಾಯಿ ವಿಸ್ಮಯದಿಂದ ಒಡೆಯನ ಮುಖ ನೋಡಿತು. “ಮ್ಯಾಲೆ ಬಂದು ಕೂತುಕೊಳ್ಳೋ ಅಂದ್ರೆ ನೀರಿನಾಗೆ ನಿಂತ್ಕೊಂಡು ಪರ್ಸಂಗ ಮಾಡ್ತಾನೆ! ಒಳ್ಳೆ ಮಾರಾಯ!” ಎಂದು ತಿಮ್ಮನಾಯ್ಕ ಗಟ್ಟಿಯಾಗಿ ಹೇಳಿದ ಮೇಲೆಯೆ ಗುತ್ತಿ ಕಿರುಜಗಲಿಯ ಮೂಲೆಯಲ್ಲಿ, ಮುರುವಿನ ಒಲೆಯ ಬೆಂಕಿಗೆ ಸ್ವಲ್ಪ ಹತ್ತಿರವಾಗಿ, ಕೊಪ್ಪೆಗಂಬಳಿಯನ್ನು ಕೊಡವಿ ಗಳುವಿನ ಮೇಲೆ ಹರಡಿ, ಬೆನ್ನು ಕಾಯಿಸುತ್ತಾ ತುರಿಸಿಕೊಳ್ಳುತ್ತಾ ಮಾತಾಡುತ್ತಾ ಕುಳಿತುಕೊಂಡನು.

ಹುಲಿಯನೂ ಒಡೆಯನಿಗೆ ಸಮೀಪದಲ್ಲಿ ಬೆಚ್ಚಗೆ ಬೆಂಕಿ ಕಾಯಿಸುತ್ತಾ, ಅರೆಗಣ್ಣು ಮಾಡಿಕೊಂಡು ನೋಡುತ್ತಾ, ಹೊಟ್ಟೆಯಡಿಯಾಗಿ, ಮುನ್ನೀಡಿದ ಮುಂಗಾಲುಗಳ ಮೇಲೆ ಮೋರೆಯಿಟ್ಟು ಮಲಗಿಕೊಂಡಿತು.

* * *

## ೩

ಗುತ್ತಿ ಬಹಳ ಹೊತ್ತು ಬೆನ್ನು ಕಾಯಿಸಿರಲಿಲ್ಲ. ಪಕ್ಕದಲ್ಲಿ ಮಲಗಿದ್ದ ಹುಲಿಯ ಸೀನತೊಡಗಿತು. ಸೀನು ಒಂದರಮೇಲೊಂದು ಬರತೊಡಗಿ ಮಲಗಿದ್ದ ನಾಯಿ ಎದ್ದು ನಿಂತಿತು. ಮುಂದಿನ ಕಾಲುಗಳಿಂದ ಮೂಗಿನೆಡೆಯ ಮೋರೆಯನ್ನು ಕೆರೆದುಕೊಳ್ಳುತ್ತಾ ಮತ್ತೆ ಮತ್ತೆ ಸೀನುತ್ತಾ ಕುಣಿದಾಡತೊಡಗಿತು.

ಹುಲಿಯ ಮೊದಲು ಸೀನಿದಾಗ “ಹಚಾ ನಿನ್ನ ಹುಲಿ ಹಿಡಿಯಾ!” ಎಂದು ಉದಾಸೀನತೆಯಿಂದ ಗದರಿಸಿದ್ದ ಗುತ್ತಿ ನಾಯಿ ಕುಣಿದಾಡತೊಡಗಲು ಸ್ವಲ್ಪ ಗಾಬರಿಗೊಂಡವನಾಗಿ ಅದರ ಕಡೆಗೆ ತಿರುಗಿ “ಇದ್ಕೆನಾಗಿದೆರೋ ಹಿಂಗೆ ಕುಣಿಯಾಕೆ?” ಎಂದು ಅದನ್ನು ಹತ್ತಿರಕ್ಕೆ ಕರೆಯುತ್ತಾ ಕೈಚಾಚಿದನು.

“ಬಾ, ಇಲ್ಲಿ! ಬಾ ಇಲ್ಲಿ!”

ನಾಯಿ ಬರಲಿಲ್ಲ. ಮತ್ತೂ ಜೋರಾಗಿ ಮೂಗು ಕೆರೆದುಕೊಂಡು ಸೀನಿ ಕುಣಿದಾಡಿಕೊಳ್ಳುತ್ತಿತ್ತು.

“ಏನೋ? ದಾರೀಲಿ ಬಳ್ಳಿಗಿಳ್ಳಿ ಮುಟ್ಟಿತೇನೋ?” ಎಂದು ಗುತ್ತಿಯನ್ನು ಕುರಿತು ಪ್ರಶ್ನಿಸಿದ ತಿಮ್ಮಾನಾಯ್ಕನಿಗೆ ಸೇಸನಾಯ್ಕನು,

"ನಿಮಗೆ ಕಸಬಿಲ್ಲ, ತೆಗೀರಿ! ಬಳ್ಳಿ ಮುಟ್ಟಿದರೆ ಇಲ್ಲಿ ತನಕಾ ಬರಬೇಕಾ ಅದು?" ಎಂದು ಹಣತೆ ಎತ್ತಿಕೊಂಡ ಮುರುವಿನ ಒಲೆಯ ಬಳಿಗೆ ಹೋದನು.

ತಿಮ್ಮನಾಯ್ಕನು ತಾನು ಕೂತಲ್ಲಿಂದಲೆ ಪ್ರಶ್ನೆಗಳನ್ನು ಕೇಳುತ್ತಾ, ಸಲಹೆಗಳನ್ನು ಕೊಡುತ್ತಾ, ನಡುನಡುವೆ ತನ್ನ ಅಪ್ಪಣೆಯಂತೆ ನಡೆಯದಿದ್ದಾಗ ಭರ್ತ್ಸನೆ ಮಾಡುತ್ತಾ, ಎಲೆಯಡಿಕೆ ಹಾಕಿಕೊಳ್ಳುತ್ತಾ ವ್ಯವಹಾರ ಮಾಡುತ್ತಿದ್ದನು.

ಸೇಸನಾಯ್ಕನು ದೀಪ ತರುವಷ್ಟರಲ್ಲಿಯೆ ಗುತ್ತಿ ನಾಯಿಯ ಒದ್ದಾಟಕ್ಕೆ ಕಾರಣವನ್ನು ಅಂದಾಜಿನಿಂದಲೆ ಪತ್ತೆ ಹಚ್ಚಿದ್ದನು.

ದೀಪ ತಂದ ಸೇಸನಾಯ್ಕನನ್ನು ಉದ್ದೇಶಿಸಿ, ಅವನ ಕಡೆಗೆ ತಿರುಗದೆ, ತನ್ನ ಕೆಲಸದಲ್ಲಿಯೆ ಮಗ್ನನಾಗಿ "ಹಡಬೇಗೆ ಹುಟ್ಟಿದ್ದಕ್ಕೆ ಮೂಗಿನ ಸೊಳ್ಳೆ ಒಳೂಗೆ ಕಚ್ಚಿಬಿಟ್ಟಾದೆ ಕಣ್ರೋ ಇಂಬಳಾ! ಹಥಾ! ನಿನ್ನ ಕುರ್ಕ ಹೊತ್ತುಕೊಂಡು ಹೋಗಾ!" ಎಂದು ಒದ್ದಾಡುತ್ತಿದ್ದ ನಾಯಿಯನ್ನು ಗದರಿಸಿ ಗುದ್ದಿದನು.

ಸೇಸನಾಯ್ಕನು ಗುತ್ತಿ ಹಿಡಿದುಕೊಂಡಿದ್ದ ನಾಯಿಯ ಮೋರೆಯ ಹತ್ತಿರಕ್ಕೆ ದೀಪ ಹಿಡಿದು "ಅಯ್ಯೋ.. ಅಯ್ಯೋ.. ಎಷ್ಟು ದೊಡ್ಡ ಇಂಬಳಾನೊ? ನೆತ್ತರಾ ಕುಡ್ದು ಹಣ್ಣಾಗದಲ್ಲೋ! ಎಳದ್ದು ತೆಗೆಯೋ! ಎಂದನು.

"ತೆಗೆಯಾಕೆ ಅದು ಸಿಗಬೇಕಲ್ಲಾ ಕೈಗೆ? ಬೆಳ್ಳು ಹಾಕಾದೇ ತಡಾ ಒಳಗೆ ಹೋತದೆ!" ಎಂದು ಮತ್ತೆ ಪ್ರಯತ್ನಿಸುತ್ತಿದ್ದಾಗಲೆ ನಾಯಿ ಒದ್ದಾಡಿ ಕೊಂಡುದರಿಂದ ಆ ಕರೀ ಕೆಂಬಣ್ಣದ ಲೋಳಿಲೋಳಿಯಾದ ಇಂಬಳ ನುಣುಚಿಕೊಂಡು ಮತ್ತೆ ಮೂಗಿನೊಳಗೆ ಮಾಯವಾಯಿತು.

"ಕಾಲಾಗೆ ಒತ್ತಿ ಹಿಡುಕೊಳ್ಳೊ" ಎಂದನು ಸೇಸನಾಯ್ಕ. ಗುತ್ತಿ ಎದ್ದುನಿಂತು, ಕೆಸರು ಹಿಡಿದು ಇನ್ನೂ ಒದ್ದೆಯೊದ್ದೆಯಾಗಿದ್ದ ಆ ದೊಡ್ಡ ನಾಯಿಯ ಮೇಲೆ ಬಲಕ್ಕೊಂದು ಎಡಕ್ಕೊಂದು ಕಾಲು ಹಾಕಿ, ತೊಡೆಯ ಸಂದಿಯಲ್ಲಿ ಒತ್ತಿ ಹಿಡಿದುಕೊಂಡು, ಇಂಬಳ ತೆಗೆಯಲು ಪ್ರಯತ್ನಿಸಿದನು. ನಾಯಿ ಅವನನ್ನು ಹೊತ್ತುಕೊಂಡು ಚಲಿಸಲು ಪ್ರಯತ್ನಿಸಿದುದರಿಂದ ಹತಾಶನಾದ ಗುತ್ತಿ "ಏನಾದರೂ ಸಾಯಿ!" ಎಂದು ಶಪಿಸುತ್ತಾ ದೂರ ನಿಂತನು.

"ನೆತ್ತರಾ ಕುಡಿದ ಮೇಲೆ ಅದ್ದಾಂಗೆ ಬಿದ್ದು ಹೋಗ್ತದೋ" ಎಂದಿತು, ದೂರದಲ್ಲಿ ಕುಳಿತು ನೋಡಿ ನಗುತ್ತಿದ್ದ ತಿಮ್ಮನಾಯ್ಕನ ಸವಾರಿ.

ಪ್ರತಿಭೆ ತಟ್ಟಕನೆ ಮಿಂಚಿದವನಂತೆ ಸೇಸನಾಯ್ಕನು "ಅಲ್ಲಿ ಹೋಗೋ ಸೀತೂರು ಬಾವನ ಹತ್ತಿರ ಒಂದೀಟು ಹೊಗೆಸೊಪ್ಪು ಈಸಿಕೊಂಡು ಬಾರೋ. ನಾ ಮಾಡ್ತೀನಿ ಮದ್ದ" ಎಂದನು.

"ಹೌದು ಕಣ್ರೋ! ಹಾಂಗಂತಾ ಉಪಾಯ ಸುಲೂಬದಾಗದೆ" ಎಂದು ಗುತ್ತಿ ಎಲೆಯಡಿಕೆ ಹಾಕುತ್ತಿದ್ದ ತಿಮ್ಮನಾಯ್ಕನಿಂದ ಹೊಗೆಸೊಪ್ಪಿನ ಚೂರೊಂದನ್ನು ತೆಗೆದುಕೊಂಡು ಬಂದು, ಅಂಗೈ ಮೇಲೆ ಮಡ್ಡೀ ನಶ್ಯ ತಿಕ್ಕುವಂತೆ ತೀಡಿ, ಹುಡಿ ಹುಡಿ ಮಾಡಿ, ನಾಯಿಯ ಸೊಳ್ಳೆಗೆ ಪುಸುಕ್ಕನೆ ಹಾಕಿದನು.

ಹಾಕಿದನೊ ಇಲ್ಲವೊ, ಹುಲಿಯ ಹಾರಿ ಹಾರಿ ಕುಣಿದು ಮನೆ ಮರುದನಿ ಗುಡುವಂತೆ ಸೀನುತ್ತಾ ಮೂಲೆಯಿಂದ ಮೂಲೆಗೆ ಓಡತೊಡಗಿತು. ಮೂವರೂ ಗಟ್ಟಿಯಾಗಿ ನಗತೊಡಗಿದರು. ಇತರ ನಾಯಿಗಳೂ ಬೆಚ್ಚಿ ಕೂಗತೊಡಗಿದುವು. ಪುಟ್ಟನ ಅತ್ತೆ ಕಾಡಿ, ರಂಗನ ತಾಯಿ ಮತ್ತು ರಂಗನ ಹೆಂಡತಿ ಚೌಡಿ ಎಲ್ಲರೂ ಅಲ್ಲಿಗೆ ಬಂದು ಇಣಿಕಿ ನೋಡಿ ಹೋದರು.

ನಾಯಿಯ ಮೂಗಿನಿಂದ ಇಂಬಳವೇನೊ ನೆಲಕ್ಕೆ ಬಿತ್ತು. ಜೊತೆಗೆ ನೆತ್ತರು ಜೊಲ್ಲು ಸಿಂಬಳಗಳಿಂದಲೂ ನೆಲ ಗಲೀಜಾಯಿತು.

"ಇಂಬಳಾನ ಹಾಂಗೇ ಬಿಡಬಾರದ್ರೋ, ಸುಟ್ಟು ಹಾಕ್ಬೇಕು" ಎಂದು ತಿಮ್ಮನಾಯ್ಕನು ಸಲಹೆ ಕೂಗಿ ಹೇಳಿದಂತೆ ದೀಪದ ಬೆಳಕನ್ನೊಡ್ಡಿಯೊಡ್ಡಿ ಹುಡುಕತೊಡಗಿದರು. ಕಡೆಗೂ ಆ ಇಂಬಳ ಸಿಕ್ಕಿತು. ಗುತ್ತಿ ಅದನ್ನು ಮುರುವಿನ ಒಲೆಯ ಕೆಂಡಕ್ಕೆ ಹಾಕುತ್ತಿದ್ದಾಗಲೆ ಸೇಸನಾಯ್ಕನು ಅವನ ಹಿಮ್ಮಡಿಯನ್ನು ನೋಡಿ "ಅಯ್ಯೋ! ನಿನ್ನ ಮನೆಹಾಳಾಯ್ತಲ್ಲೊ!" ಎಂದನು.

"ಏನಾಯ್ತಿರೋ?"

"ಏನಾಯ್ತೆ ಸೈ! ನೀನು ಬಿಡೂ ನಿನ್ನ ನಾಯಿಗಿಂತ ದೊಡ್ಡ ಕತ್ತೆ! ಅಯ್ಯೊ! ಅಯ್ಯೊ! ಇಲ್ಲಿ ನೋಡೋ ಇಲ್ಲಿ! ಇಲ್ಲೀ!" ಎಂದು ಹಿಮ್ಮಡಿಯ ಬುಡಕ್ಕೆ ದೀಪ ಹಿಡಿದನು.

ಗುತ್ತಿ ನೋಡುತ್ತಾನೆ, ಇಂಬಳಗಳ ಪಿಂಡಿ! ಮೂರು ನಾಲ್ಕು ಇಂಬಳಗಳು ಸಿಡಿದೊಡೆಯುವಷ್ಟರ ಮಟ್ಟಿಗೆ ರಕ್ತ ಕುಡಿದು ಕೆಂಪೇರಿ ಕಚ್ಚಿಕೊಂಡು ಬಿದ್ದಿವೆ! ಒಂದು ಕಡೆ ನೆತ್ತರು ಕುಡಿದು ಇಂಬಳ ತನಗೆ ತಾನೆ ಬಿದ್ದುಹೋದ ತಾವಿನಿಂದ ರಕ್ತ ಹರಿಯುತ್ತಿದೆ. ಮತ್ತೂ ನೋಡುತ್ತಾನೆ; ಒಂದೆಡೆಯಲ್ಲ; ಎರಡೆಡೆಯಲ್ಲ; ಹತ್ತಾರು ಕಡೆ. ಅದೂ ಎಂತೆಂತಹ ಸ್ಥಾನಗಳಲ್ಲಿ! ಮರ್ಮ, ಗೋಪ್ಯ ಒಂದನ್ನೂ ಲೆಕ್ಕಿಸದೆ!

"ನಿನ್ನ ಮನೆ ಮಂಟೇನಾಗಲೋ! ದೀಪ ಇಲ್ಲೇ ಇಟ್ಟು ಹೋಗ್ತೀನಿ, ಬಟ್ಟೆ ಗಿಟ್ಟೇ ಬಿಚ್ಚಿ ಸರಿಯಾಗಿ ನೋಡ್ಕೋ!" ಎಂದು ವ್ಯಂಗ್ಯವಾಗಿ ನಗುತ್ತಾ ಸೇಸನಾಯ್ಕನು "ಇನ್ನೊಂದು ಗಂಟೇನೆ ಬೇಕು ಅಂತ ಕಾಣ್ತದೆ ಎಲ್ಲಾ ತೆಗೆದು ಪೂರೈಸಾಕೆ! ಹ್ಹ ಹ್ಹ! ಹೊಲೆ ಮುಂಡೇಗಂಡ!" ಎಂದು ಕಂಬಳಿ ಹೊದೆದು ಕುಳಿತನು.

ಗುತ್ತಿ ತನ್ನ ದೇಹದ  ನಾನಾ ಸ್ಥಾನಗಳಿಂದಲೂ ನೆತ್ತರು ಕುಡಿದು ಕೆಂಪಾಗಿದ್ದ ಇಂಬಳಗಳನ್ನು ಹುಡುಕಿ ತೆಗೆದು ಮುರುವಿನೊಲೆಯ ಕೆಂಡದ ರಾಶಿಯ ಮೇಲೆ ಹಾಕತೊಡಗಿದನು. ಅವು ಚಟ್ಟಪಟ್ಟೆಂದು ಸೀದು, ಹೊಗೆದೋರಿ, ಸಿನಗು ವಾಸನೆ ಹಬ್ಬಿತು.

ಅವನು ಕೆಲಸವನ್ನೆಲ್ಲಾ ಪೂರೈಸಿ ಜಗಲಿಯ ಕಡೆಗೆ ಗಮನವಿಟ್ಟಾಗ ಸೇಸನಾಯ್ಕ ತಿಮ್ಮನಾಯ್ಕರಿಬ್ಬರೂ ಮಾಯವಾಗಿದ್ದರು. ಮೂಗನ್ನು ಸೊಗಸುಗೊಳಿಸಿ ಸೊಂಪಾಗಿ ತೀಡುತ್ತಿದ್ದ ತುಂಡು ಕಡುಬು ಕಳ್ಳು ಹೆಂಡಗಳ ಗುಂಪುಗಂಪಿನಿಂದ ಅವರು ಊಟಕ್ಕೆ ಹೋಗಿದ್ದಾರೆ ಎಂಬುದನ್ನು ಅರಿತು, ಹಣತೆಯ ದೀಪವನ್ನು ತಾನೆ

ತೆಗೆದುಕೊಂಡು ಹೋಗಿ ಅಂಗಳದಲ್ಲಿ ನಿಕ್ಕುಳಿಸಿ ನಿಂತು, ತೋಳು ನೀಡಿ, ಜಗಲಿಯಂಚಿನ ಕೆಸರುಹಲಗೆಯ ಮೇಲೆ ಇಟ್ಟು, ಹಿಂತಿದುಗಿ ಬಂದು ಬೆಂಕಿಯ ಕಾಲಿನಲ್ಲಿ ಬೆನ್ನು ಕಾಯಿಸುತ್ತಾ ಎಲೆಯಡಿಕೆ ಹಾಕಿಕೊಳ್ಳುತ್ತಾ ಕುಳಿತನು.

ಬಹಳ ಹೊತ್ತಾದ ಮೇಲೆ ತೇಗುಗಳ ಸದ್ದು ಕೇಳಿಬಂತು. ಅದನ್ನು ಹಿಂಬಾಲಿಸಿ, ಬಹಳ ಹುಮ್ಮಸ್ಸಿನಿಂದಲೆಂಬಂತೆ ಮಾತನಾಡುತ್ತಾ ನಾಯ್ಕರಿಬ್ಬರೂ ಜಗಲಿಗೆ ಬಂದರು.

“ನಾಯಿಗುತ್ತೀ” ಸೇಸನಾಯ್ಕ ಕರೆದನು.

“ಹ್ಞಾ!” ಗುತ್ತಿ ನಿಡುವಾಗಿ ಓಕೊಂಡನು.

“ಎಲ್ಲಾ ಪೂರೈಸ್ತೇನೋ?”

ಗುತ್ತಿ ಉತ್ತರವಾಗಿ ನಕ್ಕನು.

“ಅಲ್ಲಾ ಇನ್ನೂ ಬಾಕಿಯಿದೆಯೊ?” ಎಂದು ತಿಮ್ಮನಾಯ್ಕ ನಗುತ್ತಾ ಕೇಳಿದನು.

“ಇಲ್ಲಾ ಏನೂ ಬಾಕಿಯಿಲ್ಲ!”

“ಹಿತ್ತಲ ಕಡೆಗೆ ಹೋಗೋ, ಅನ್ನ ಹಾಕಿ ಕೊಡ್ತಾರೆ” ಎಂದ ಸೇಸನಾಯ್ಕ.

“ತೆಣೇ ಮ್ಯಾಲೆ ಹೋಗುವಾಗ ಜಾರಿಗೀರಿ ಬಿದ್ದೀಯ?” ಎಂದು ಮತ್ತೆ ಎಚ್ಚರಿಕೆ ಹೇಳಿದನು, ಮಳೆ ಹೊಯ್ದಿದ್ದು ನೆನಪಾಗಿ.

ಆದರೆ ಅದನ್ನು ಕೇಳಲು ಗುತ್ತಿ ಅಲ್ಲಿರಲಿಲ್ಲ. ಅವನಾಗಲೆ ಹಿತ್ತಲ ಕಡೆಗೆ ಹಾಕಿದ್ದನು.

ದನದ ಹಟ್ಟಿಯ, ಕೋಳಿಯೊಡ್ಡಿಯ ಮತ್ತು ಕುರಿಯೊಡ್ಡಿಯ ನಾತವಾವುದೂ ಹೊಲೆಯನ ಮೂಗಿಗೆ ಅರಿವಾಗಲಿಲ್ಲ. ಹಣತೆಯ ಸೊಡರಿನ ಮಬ್ಬು ಬೆಳಕಿನಲ್ಲಿ, ಇರಿಚಲು ಬೀಸಿ ನಸುವೊದ್ದೆಯಾದಂತಿದ್ದ. ಕರಿಬೆರಸಿ ಸಗಣಿ ಬಳಿದು ಕರ್‍ರಗಿದ್ದ ನೆಲದ ಮೇಲೆ ಕೂತು, ತಾನು ಬಂದಿದ್ದೇನೆ ಎಂಬುದನ್ನು ಸೂಚಿಸುವ ಸಲುವಾಗಿ, ಕೃತಕವಾಗಿ, ಗಟ್ಟಿಯಾಗಿ ಕೆಮ್ಮಿ, ಗಂಟಲು ಸರಿಮಾಡಿಕೊಂಡು, ತನಗೆ ಒಂದು ಮಾರು ದೂರದಲ್ಲಿ ಕುಳಿತು, ತನ್ನ ಕಡೆಗೇ ನೋಡುತ್ತಿದ್ದ ಹುಲಿಯನ ಹೆಗ್ಗಣ್ಣುಗಳನ್ನು ನೋಡತೊಡಗಿದನು.

ಐದು ನಿಮಿಷ ಕಳೆದಿರಲಿಲ್ಲ. ಕಾಡಿ ಮೊರವೊಂದನ್ನು ಎರಡು ಕೈಯಲ್ಲಿಯೂ ಎತ್ತಿಕೊಂಡು ಬಂದಳು. ಬಾಳೆ ಎಲೆಯ ಮೇಲೆ ಹಾಕಿಟ್ಟಿದ್ದ ಎಡೆಯನ್ನು ಮೊರದಿಂದ ಜಾರಿಸಿ, ಗುತ್ತಿಯ ಮುಂದೆ ನೆಲದ ಮೇಲಿಡುತ್ತಲೇ ಮಾತಾಡತೊಡಗಿದಳು. ದನಿ ಪಿಸು ಮಾತಾಗಿರದಿದ್ದರೂ ಗಟ್ಟಿಯಾಗಿರಲಿಲ್ಲ.

"ಜಟ್ಟಮ್ಮ ಹ್ಯಾಂಗಿದಾರೋ, ಗುತ್ತಿ?"

"ಹ್ಯಾಂಗಿರಾದೇನೂ? ಹಾಂಗಿದಾರೆ!" ಎಂದ ಗುತ್ತಿಯ ಕಣ್ಣು ಬಾಳೆಯೆಲೆಯನ್ನು ಬಕಾಸುರನಂತೆ ನೋಡುತ್ತಿತ್ತು. ಮೂಗಿನ ಸೊಳ್ಳೆಗಳು ಅರಳಿ ಅರಳಿ ಗಾಳಿ ಹಿಡಿದು ಸೊಗಸುತ್ತಿದ್ದವು. ತುಂಡೂ (ಮಾಂಸದ ಪಲ್ಯ) ಕಡುಬೂ ಕಾಡಿಯ ಕಣ್ಣಿಗೆ ಯಥೇಚ್ಛವಾಗಿ ಕಾಣುತ್ತಿದ್ದರೂ ಗುತ್ತಿಗೆ ಬಹಳ ಸ್ವಲ್ಪವಿದ್ದಂತೆ ಭಾಸವಾಗಿ ಅವನಿಗೆ ಸ್ವಲ್ಪ ಅಸಮಾಧಾನವಾಗಿತ್ತು.

"ಅಲ್ಲಾ, ಅವರಿಗೆ ಯಾವಾಗಲೂ ಏನೋ ಜಡಾ ಅಂತಾ ಹೇಳ್ತಿದ್ರು, ಹೌದೇನೂ ಅಂತೆ ಕೇಳ್ದೆ." ಕಾಡಿ ಎಡೆತಂದಿದ್ದ ಮೊರವನ್ನು ಬಲಗೈಯಲ್ಲಿ ಹಿಡಿದು ನಿಂತಿದ್ದಳು.

"ಜಡಾನೂ ಇಲ್ಲ ಗಿಡಾನೂ ಇಲ್ಲ. ತುಂಡು ದೊಣ್ಣೆ ಇದ್ದ್ಹಾಂಗ ಇದಾರೆ" ಎಂದ ಗುತ್ತಿ ಮೊಗವೆತ್ತಿ ನೋಡದೆ, ಸಿಟ್ಟಿನಿಂದ ಯಾರನ್ನೊ ಕತ್ತು ನುಲಿಯುವಂತೆ ಕಡುಬು ನುರಿಯತೊಡಗಿದನು.

"ಗಸಿ ಸಾಲದು ಅಂತ ಕಾಣ್ತದೊ, ತಡಿ, ಬಂದೆ" ಎನ್ನುತ್ತಾ ಕಾಡಿ ಒಳಗೆ ಹೋದಳು. ಅವಳಿಗೂ ಗುತ್ತಿಯ ಅತೃಪ್ತಿ ಅವನ ಧ್ವನಿಯಿಂದ ಗೊತ್ತಾಗಿತ್ತು.

ಒಳಗೆ ಹೋದವಳು ಮರದ ಕೈಬಟ್ಟಲಲ್ಲಿ ರಾಶಿ ಕಡುಬನ್ನೂ ದೊಡ್ಡದೊಂದು ಮಣ್ಣಿನ ಗುಂಡಾಲದಲ್ಲಿ ತುಂಬಿ ತುಳುಕುವಷ್ಟಿದ್ದ ಮಾಂಸದ ಪಲ್ಯವನ್ನೂ ತಂದಳು. ನೋಡಿದ ಗುತ್ತಿ ಹಲ್ಲುಬಿಟ್ಟು, ಮುಖ ಅಗಲಿಸಿ "ಒಂದು ಚೂರು ಗಸಿ ಸಾಕ್ರೋ; ಹಮಾ ಬ್ಯಾಡ" ಎಂದನು.

ಕಾಡಿ ತಂದದ್ದನ್ನೆಲ್ಲಾ ಇಕ್ಕಿದಳು.

"ಸಾಕ್ರಾ! ಸಾಕ್ರಾ! ನೆಲಕ್ಕೆ ಬೀಳ್ತದೆ! ಹಾಳು ಬಳ್ಳೆ!" ಎಂದು ಗುತ್ತಿ ಗಸಿಯನ್ನು ತಡೆಗಟ್ಟಲು ಎಡಗೈಯ ಸಹಾಯವನ್ನೂ ನಿರ್ವಾಹವಿಲ್ಲದೆ ತೆಗೆದುಕೊಳ್ಳುತ್ತಾ "ಈವತ್ತೇನ್ರೋ ಹೆಚ್ಚುಗಟ್ಲೆ?" ಎಂದು ಕೇಳಿದನು.

"ನೆಂಟರು ಬಂದಿದ್ರೊ!" ಎಂದು ಉದಾಸೀನತೆಯನ್ನು ನಟಿಸಿ ಉತ್ತರವಿತ್ತ ಕಾಡಿ ಬೇಗ ಬೇಗನೆ ಎಂದಳು, "ನಿಮ್ಮ ಹೆಗ್ಗಡೇರಿಗೆ ಮತ್ತೊಂದು ಮದುವೆಯಂತೆ ಹೌದೇನೊ?"

"ನಂಗೇನ್ರೋ ಗೊತ್ತು?" ಎನ್ನುತ್ತಾ ಗುತ್ತಿ ಮಾಂಸದ ಗಡಿಯಲ್ಲಿ ಒದ್ದೆಯಾಗಿದ್ದ ನುರಿದ ಕಡುಬಿನ ದೊಡ್ಡ ಮುದ್ದೆಯೊಂದನ್ನು ತೆಗೆದು, ಬಾಯನ್ನು ಸಾಧ್ಯವಾದಷ್ಟೂ ತೆರೆದು, ಒಳಗೆ ನುಗ್ಗಿಸಿದನು.

"ನನ್ನ ಹತ್ರ ಸುಳ್ಳು ಹೇಳ್ತಿಯಲ್ಲಾ!ಸುಳ್ಳೋ ಬದ್ದೋ? ಹೇಳು!"

ಗುತ್ತಿ ಉತ್ತರವಾಗಿ ತಲೆಯಲ್ಲಾಡಿಸುತ್ತಾ, ಕೆನ್ನೆಗಳನ್ನುಬ್ಬಿಸಿ ಮೀಸೆ ಮೇಲಕ್ಕೂ ಕೆಳಕ್ಕೂ ಸರ್ಕಸ್ಸು ಮಾಡುವಂತೆ ಮುಕ್ಕುತ್ತಿದ್ದುದನ್ನು ಕಂಡು "ಪೂರ ಹುಡಿಯಾಯ್ತೇನೊ? ಸ್ವಲ್ಪ ಗಸಿ ಹಾಕ್ತೀನಿ. ಕಲಸಿಕೊ" ಎಂದು ಕಾಡಿ ಗಸಿ ಹನಿಸಿದಳು. ಹಲೆಯನೂ ಬೇಡ ಎಂದು ಸನ್ನೆ ಮಾಡುತ್ತಲೇ ಕಲಸಿಕೊಳ್ಳತೊಡಗಿದನು.

ಹಸಿದಿದ್ದ ಹುಲಿಯನೂ ಬಾಲವಲ್ಲಾಡಿಸುತ್ತಾ ಒಮ್ಮೆ ಕೂರುತ್ತಾ, ಒಮ್ಮೆ ನಿಲ್ಲುತ್ತಾ, ಒಮ್ಮೆ ಒಡೆಯನ ಕಡೆಗೂ, ಒಮ್ಮೆ ಕಾಡಿಯ ಕಡೆಗೂ ಕಣ್ಣು ಕಣ್ಣು ಬಿಡುತ್ತಾ ಅಸ್ಥಿರವಾಗಿದ್ದುದನ್ನು ಗಮನಿಸಿ ಗುತ್ತಿ "ಹಥೀ ನಿನ್ನ ಹೊಟ್ಟೆ ಕಡಿಯಾ! ಏನು ಬೇಗ್ತದೋ ಹಡಬೇಗ್ಹುಟ್ಟಿದ್ದು!" ಎಂದು ಹೆದರಿಸಿದನು. ನಾಯಿ ಸುಮ್ಮನೆ ಕುಳಿತು ಒಡೆಯನಿಗಿಂತಲೂ ಹೆಚ್ಚು ಸಂಯಮಿಯಾಯಿತು.

ಕಾಡಿಯ ಔದಾರ್ಯಕ್ಕೆ ಗುತ್ತಿಯ ಮನಸ್ಸು ಸಮಾಧಾನವಾಗಿತ್ತು. ತೃಪ್ತಿಸೂಚಕವಾದ ಧ್ವನಿಯಿಂದ "ನಿಮಗೆ ಹ್ಯಾಂಗೆ ಗೊತ್ತಾಯ್ತೂ ಆ ಇಚಾರ?" ಎಂದು, ಮಾಂಸವನ್ನೆಲ್ಲ ಸಿಗಿದು ತಿಂದು ಉಳಿದಿದ್ದ ಎಲುಬಿನ ತುಂಡೊಂದನ್ನು ನಾಯಿಯ ಕಡೆಗೆ ಎಸೆದನು. ಹುಲಿಯನು ಹಾರಿ ಅದನ್ನು ತುಡುಕಿ ಹಿಡಿದು ಕಟಕಟಕಟನೆ ಅಗಿಯತೊಡಗಿತು.

"ಹೌದೇನು ಹೇಳು!" ಎಂದಳು ಕಾಡಿ.

"ಯಾರಿಗೂ ಹೇಬ್ಯಾಡಿ ಮತ್ತೆ" ಎಂದು ಗುತ್ತಿ ವಿಷಯದ ಗಾಂಭೀರ್ಯವನ್ನು ಮುಖದಲ್ಲಿ ತೋರಿಸಲು ಯತ್ನಿಸಿದನು.

"ನಾನ್ಯಾರಿಗೆ ಹೇಳೋಕೆ ಹೋಗ್ತೀನೋ?"

"ಅಲ್ಲಾ ಮಾರಾಯ್ರು, ನಮಗ್ಯಾಕೆ ದೊಡ್ಡೋರ ಇಚಾರ ಬಡವರಿಗೆ?- ಹಾಂಗೇನೋ ವರ್ತಮಾನ ಇತ್ತಪ್ಪಾ."

ಹೊಲೆಯನ ಬಾಯಿಂದ "ವರ್ತಮಾನ" ಎಂಬ ಮಾತನ್ನು ಕೇಳಿದ ಕಾಡಿಗೆ ಅವನು ಹೆಗ್ಗಡೆಯವರ ನೆಚ್ಚಿನ ತಳವಾರ ಎಂಬುದು ಮನಸ್ಸಿಗೆ ಬಂದಿತು.

"ಹೆಣ್ಣು ಎಲ್ಲೀದಂತೆ? ನಿಂಗೆ ಗೊತ್ತೇನು?"

"ಕುಡೀಬೇಕು ಕಣ್ರೋ. ಕಡುಬು ಗಂಟಲಾಗೆ ಇಳಿಯಾದಿಲ್ಲ!"

"ಅಯ್ಯಯ್ಯೊ! ಮರ್ತಿದ್ದೆ ಕಣೊ!" ಎಂದು ಕಾಡಿ ಒಳಗೆ ಹೋಗಿ ಒಂದು ಬಳ್ಳೆ ಕೀತನ್ನೂ, ಒಂದು ದೊಡ್ಡ ತಾಲಿಯಲ್ಲಿ ಹೆಂಡವನ್ನೂ ತಂದಳು. ಬಾಳೆಯೆಲೆಯ ಕೀತನ್ನು ದೊನ್ನೆಯಾಗಿ ಮಾಡಿ, ಮುಂದಿಟ್ಟು, ಹೆಂಡ ಬೊಗ್ಗಿಸಿದಳು. ಗುತ್ತಿ ಎರಡೂ ಕೈಗಳಿಂದಲೂ ಎತ್ತಿ ಗೊಟಗೊಟನೆ ಕುಡಿದು ಕೆಳಗಿಟ್ಟನು. ಕಾಡಿ ಮತ್ತೆ ಬೊಗ್ಗಿಸಿದಳು. ಮತ್ತೆ ಕುಡಿದಿಟ್ಟನು. ಮತ್ತೆ ತಟಕ್ಕನೆ ಬೊಗ್ಗಿಸಲಿಲ್ಲ.

"ಹೆಣ್ಣು ಗೊತ್ತಾಗಿದೆಯೇನೊ?" ಎಂದಳು.

ಗುತ್ತಿ ಎಲೆಯ ಮೂಲೆಯಲ್ಲಿ ರಾಶಿ ಹಾಕಿದ್ದ ಎಲುಬನ್ನೆಲ್ಲಾ ಒಟ್ಟಿಗೆ ಒತ್ತಿ ಹುಲಿಯನ ಮುಂದೆ ಹಾಕುತ್ತಾ "ಹಳೇಮನೇ ದೊಡ್ಡ ಹೆಗ್ಗಡೇರ ಮಗಳೂ ಅಂತಾ ಕಾಣ್ತದಪ್ಪಾ!" ಎಂದನು.

"ಯಾರು? ಸಣ್ಣ ಹೆಗ್ಗಡೇರ ತಂಗೀನೇನೋ?"

"ತಿಮ್ಮಪ್ಪ ಹೆಗ್ಗಡೇರ ತಂಗಿ"

"ಮಂಜಮ್ಮೋರೇನೊ?"

"ಅವರನ್ನೇ ಅಂತಾ ಮಾತಾಡ್ತಿದ್ರು!" ಎಂದ ಗುತ್ತಿ ಕಾಡಿಯ ಮುಖದ ಕಡೆಗೆ ನೋಡುತ್ತಾ, ಆಗತಾನೆ ಹೊಸದಾಗಿ ಕಂಡುಹಿಡಿದವನಂತೆ ಬೆರಗಾಗಿ ಕೇಳಿದನು: "ನಿಮಗೇನು ಜಡಾಗಿಡಾ ಆಗಿತ್ತೇನ್ರೊ? ಬಾಳ ಬಡಕಟ್ಟೆ ಆಗಿ ಕಾಣ್ತೀರಿ!"

"ಹೌದು, ಪುಣ್ಯಾತ್ಮಾ, ಹೋದ ಗದ್ದೆ ಕೊಯಿಲಿನಿಂದ ಒಡಲಜರ, ಮೂರಕ್ಕೆ ನಾಕಕ್ಕೆ ಬರ್ತಾನೇ ಅದೆ!"

ಅವಳ ಮೋರೆಯನ್ನೇ ನೋಡುತ್ತಿದ್ದ ಗುತ್ತಿಗೆ ಇದ್ದಕ್ಕಿದ್ದಹಾಗೆ ಏನೋ ಜ್ಞಾಪಕಕ್ಕೆ ಬಂದಂತಾಗಿ, ಜುಗುಪ್ಸೆಯಿಂದ ಮುಖ ಅಸಹ್ಯ ವಿಕಾರವಾಯಿತು. ಅದನ್ನು ಕಂಡ ಕಾಡಿ "ಏನೋ? ಕಲ್ಲು ಗಿಲ್ಲು ಸಿಗ್ತೇನೋ?" ಎಂದಳು.

"ಇಲ್ಲ! ಇಲುಗಿನ ಚೂರು ಅಂತಾ ಕಾಣ್ತದೆ!" ಎಂದು ಗುತ್ತಿ ಹುಸಿನುಡಿದು ತನ್ನ ಬಾಯಿಗೆ ಬೆರಳು ಹಾಕಿಕೊಂಡು ಎಲುಬಿನ ಚೂರನ್ನು ತೆಗೆದು ಬಿಸಾಡುವವನಂತೆ ನಟಿಸಿದನು.

ಕಾಡಿ ತಾಲಿಯಲ್ಲಿ ಉಳಿದಿದ್ದ ಹೆಂಡವನ್ನೆಲ್ಲಾ ದೊನ್ನೆಗೆ ಬಗ್ಗಿಸಿ "ಏನಾರೂ ಬೇಕಾರೆ ಕರೀ" ಎಂದು ಹೇಳಿ ಬಿರುಬಿರನೆ ಹೊರಟು ಹೋದಳು.

* * *

## ೪

ಗುತ್ತಿ ತಾನೂ ಉಂಡು, ತನ್ನ ನಾಯಿಗೂ ಸಾಕಷ್ಟನ್ನು ಹಾಕಿ, ಮುಂಚೆಕಡೆಯ ಮುರುವಿನ ಒಲೆಯ ಬಳಿಗೆ ಬರುವಷ್ಟರಲ್ಲಿಯೆ ಸೀತೂರ ತಿಮ್ಮನಾಯ್ಕನು ಜಗಲಿಯ ಮೇಲೆ ಮಲಗಿಬಿಟ್ಟಿದ್ದನು. ಸೇಸನಾಯ್ಕನೂ ಒಳಗೆ ಕಾಡಿಯೊಡನೆ ಗೊಣಗೊಣನೆ ಮಾತಾಡುತ್ತಿದ್ದುದು ಕೇಳಿಬರುತ್ತಿತ್ತು. ಬಾಯಿಗೆ ಹಾಕಿಕೊಂಡಾದ ಮೇಲೆ, ಆರಲು ಹರಡಿದ್ದ ತನ್ನ ಕಂಬಳಿಯನ್ನೆ ಸುತ್ತಿಕೊಂಡು. ಒಲೆಗೆ ತುಸು ದೂರದಲ್ಲಿ ಬೆಂಕಿಯ ಶಾಖ ಅಪ್ಯಾಯಮಾನವಾಗುವಷ್ಟು ಹತ್ತಿರದಲ್ಲಿ ಮಲಗಿಕೊಂಡನು.

ಹಗಲೆಲ್ಲ ಗದ್ದೆಯುತ್ತು ಸಂಜೆಯಲ್ಲಿ ಬೆಟ್ಟ ದಾಟಿ ಬಂದು ದಣಿದಿದ್ದ ಅವನಿಗೆ ಚೆನ್ನಾಗಿ ನಿದ್ದೆ ಬರಬೇಕಾಗಿತ್ತು. ನಿದ್ದೆ ಬರುತ್ತಲೂ ಇತ್ತು. ಆದರೆ ಜಗಲಿಯ ಮೇಲೆ ಮಲಗಿದ್ದ ತಿಮ್ಮನಾಯ್ಕ ಮಾರಾಯನು ಕೊರೆಯಲು ಪ್ರಾರಂಭಿಸಿದನು. ಅವನು ಗೊರಕೆ ಹೊಡೆದರೆ ಇವನಿಗೆ ನಿದ್ದೆ ಮಾಡುವುದಕ್ಕೇನಾಗುತ್ತಿತ್ತು ಎನ್ನುವಂತಿರಲಿಲ್ಲ ಆ ಗೊರಕೆ! ಇತರ ಎಲ್ಲದರಲ್ಲಿಯೂ ಇರುವಂತೆ ಗೊರಕೆಯಲ್ಲಿಯೂ ಸಾತ್ವಿಕ ರಾಜಸ ತಾಮಸಗಳೆಂದು ಮೂರು ವಿಧವಿವೆಯಲ್ಲವೆ? ತಿಮ್ಮನಾಯ್ಕನ ಗೊರಕೆ ರಭಸದಲ್ಲಿ ರಾಜಸವಾಗಿಯೂ ರಸದಲ್ಲಿ ತಾಮಸವಾಗಿಯೂ ಇದ್ದು ಭೀಕರವಾಗಿತ್ತು. ಶ್ವಾಸೋಚ್ಛ್ವಾಸದ ಗರಗಸದಿಂದ ನಿಃಶಬ್ದತೆಯ ಗೋನಾಳಿಯನ್ನು ಘರಿಲ್ ಘರಿಲ್ ಗರಾಗರಾ ಗೊರ್ ಗೊರ್ ಎಂದು ಮೊದಲಾಗಿ ನಾನಾ ನಾದವಿನ್ಯಾಸಗಳಿಂದ ಕೊಯ್ಯುತ್ತಿತ್ತು. ಬಡ ಗುತ್ತಿಯ ನಿದ್ದೆಯ ಕುತ್ತಿಗೆಯನ್ನೇನೊ ಕೊಯ್ದೇ ಬಿಟ್ಟಿತ್ತು! ಅವನು ಎಷ್ಟು ಪ್ರಯತ್ನಪಟ್ಟರೂ ನಿದ್ದೆ ಮಾಡಲಾಗಲಿಲ್ಲ. ನಿದ್ದೆ ಹಾಳಾದದ್ದಲ್ಲದೆ ಯಾವುದೋ ಒಂದು ತೆರನಾದ ಅರ್ಥವಿಲ್ಲದ ಹೆದರಿಕೆಯೂ ಉಂಟಾಯಿತು.

ಎದ್ದು ಕೂತು "ಅಯ್ಯಾ! ಅಯ್ಯಾ! ಅಯ್ಯಾ!" ಎಂದು ಕರೆದನು. ವ್ಯರ್ಥ! ತಿಮ್ಮನಾಯ್ಕನು ಎಷ್ಟು ತಿಂದು ಕುಡಿದಿದ್ದನೆಂದರೆ, ಕಡುಬು, ತುಂಡು, ಕಳ್ಳು ಹೆಂಡ ತುಂಬಿದ ಸರಗೋಲಾಗಿ ಹೋಗಿದ್ದನು!

ಇದ್ದಕ್ಕಿದ್ದ ಹಾಗೆ ತಿಮ್ಮನಾಯ್ಕನು ಭಯಂಕರವಾಗಿ ಹೂಂಕಾರ ಮಾಡತೊಡಗಿದನು. ಗುತ್ತಿ ದಿಗಿಲುಬಿದ್ದನು. ನಾಯಿಗಳೆಲ್ಲ ಬೆಚ್ಚಿಬಿದ್ದು ಕೂಗಾಡಿದುವು. ದೀಪ ಹಿಡಿದು ಹೊರಗೆ ಓದಿ ಬಂದ ಸೇಸನಾಯ್ಕನು ಮಾತ್ರ ನಿರುದ್ವಿಗ್ನವಾಗಿ, ಹೆದರುಗಣ್ಣಾಗಿದ್ದ ಗುತ್ತಿಗೆ "ಏನೂ ಇಲ್ಲ ಕಣ್ರೋ! ಅವರಿಗೆ ಆಗಾಗ್ಗೆ ಹೀಂಗೆ ಆಗ್ತದೆ! ಮಲರೋಗ!" ಎಂದು ನೀರೆರಚುವುದೇ ಮೊದಲಾದ ಕಾರ್ಯಗಳಲ್ಲಿ ಆಸಕ್ತನಾದನು.

ಸುಮಾರು ಕಾಲು ಗಂಟೆ ಹೊಡೆಯಿತು. ತಿಮ್ಮನಾಯ್ಕನು ಸರಿಯಾದ ಸ್ಥಿತಿಗೆ ಬರಬೇಕಾದರೆ! ಹೊಟ್ಟೆಯೊಳಗಿದ್ದ ತುಂಡು ಕಡುಬು ಹೆಂಡ ಕಳ್ಳು ಎಲ್ಲ ಒಟ್ಟಿಗೆ ವಾಂತಿಯಾಯಿತು! ಆ ದುರ್ವಾಸನೆ ಹೊಲೆಯನ ಮೂಗಿಗೂ ಹೇಸಿಗೆ ಹುಟ್ಟಿಸುವಂತಿತ್ತು. ಅಂತೂ ಆಮೇಲೆ ತಿಮ್ಮನಾಯ್ಕನು ಸದ್ದು ಮಾಡಲಿಲ್ಲ. ಗುತ್ತಿ ಚೆನ್ನಾಗಿ ನಿದ್ದೆ ಮಾಡಿದನು. ಸುಮಾರು ನಡು ರಾತ್ರಿಯ ಹೊತ್ತಿಗೆ ಹತ್ತು ಮೀನು ಕಡಿಯಲು ಹೋಗಿದ್ದ ರಂಗ, ಪುಟ್ಟ, ಹಮೀರ ಮೊದಲಾದವರು ಹಿಂತಿರುಗಿ ಬಂದಾಗಲೂ ಅವನಿಗೆ ಎಚ್ಚರವಾಗಲಿಲ್ಲ.

ಸೇಸನಾಯ್ಕನ ಮಗ ಹಮೀರನಾಯ್ಕನು ಗುತ್ತಿ ಮಲಗಿದ್ದನ್ನು ಕಂಡು "ಮಲಗಿದ್ರೆ ಮಲಗ್ಬೇಕು ಹೀಂಗೆ; ಒನಕೆ ತುಂಡು ಬಿದ್ದ್ಹಾಂಗೆ!" ಎಂದನು.

ಎರಡನೆಯ ಸಲ ಕೋಳಿ ಕೂಗುವ ಹೊತ್ತಿಗೆ ಗುತ್ತಿಗೆ ಎಚ್ಚರವಾಯಿತು. ಸ್ವಲ್ಪ ಚಳಿಯೂ ಆಯಿತು. ಕಂಬಳಿಯನ್ನು ಮತ್ತಷ್ಟು ಬಲವಾಗಿ ಮೈಗೆ ಸುತ್ತಿ ಹೊದೆದು, ಮುದುರಿ, ಕಣ್ಣು ಬಿಟ್ಟುಕೊಂಡೇ ಮಲಗಿದನು. ತುಸು ಹೊತ್ತಿನಲ್ಲಿ ಮನೆಯ ಮುಂದೆ ಬೇಲಿಯ ಸಾಲಿನಲ್ಲಿ ಹಂಡಹಕ್ಕಿ ಸಿಳ್ಳು ಹಾಕತೊಡಗಿತು. ಗುತ್ತಿ ಮೇಲೆದ್ದು ಕಂಬಳಿಯನ್ನು ಹೆಗಲ ಮೇಲೆ ಹಾಕಿಕೊಂಡು ಅಂಗಳಕ್ಕಿಳಿದನು. ಬೆಳಿಗ್ಗೆ ಇನ್ನೂ ನಸುಕು ನಸುಕಾಗಿತ್ತು. ಮನೆಯಲ್ಲಿ ಯಾರೂ ಎದ್ದಿದ್ದಂತೆ ಕಾಣಲಿಲ್ಲ. ತಾನು ಅವೊತ್ತು ಮಾಡಲೇಬೇಕಾಗಿದ್ದ ಕೆಲಸಗಳನ್ನೆಲ್ಲಾ ನೆನೆದು ಗುತ್ತಿ ಬೇಗ ಬೇಗನೆ ಮುಂದುವರಿದನು.

ತಡಬೆಯನ್ನು ದಾಟಿ ಮೇಗರವಳ್ಳಿಗೆ ಹೋಗುವ ಕೊರಕಲು ಗಾಡಿದಾರಿಗೆ ಬಂದಾಗ ಹುಲಿಯನ ನೆನಪಾಯಿತು. ಮೆಲ್ಲಗೆ ಸಿಳ್ಳು ಹಾಕಿದನು. ನಾಯಿಗಳೆಲ್ಲವೂ ಹಿಂಡಾಗಿ ನುಗ್ಗಿಬಂದವು. ಹೊಲೆಯನ ನಾಯಿ ಹಳೇಪೈಕದವರ ನಾಯಿಗಳೊಡನೆ ಆಗಲೆ ಸ್ನೇಹ ಸಂಬಂಧಗಳನ್ನು ಚೆನ್ನಾಗಿ ಸಂಪಾದಿಸಿತ್ತು.

“ಬಾ ಹುಲಿಯ!” ಎಂದು ಒಂದು ಸಾರಿ ಕರೆದು ಗುತ್ತಿ ಮುಂದೆ ಮುಂದೆ ನಡೆಗೊಂಡನು. ಸುಮಾರು ಅರ್ಧ ಫರ್ಲಾಂಗು ಹೋಗಿ ನೋಡುತ್ತಾನೆ: ಹುಲಿಯನ ಸವಾರಿ ಪತ್ತೆ ಇಲ್ಲ!

ಮತ್ತೆ ಗಟ್ಟಿಯಾಗಿ ಸಿಳ್ಳುಹಾಕಿ ಕರೆದನು. ಹುಲಿಯ ದೂರದಿಂದ ಓಡಿಬಂತು. ಬೇರೆ ಯಾವ ನಾಯಿಯೂ ಜೊತೆ ಬರಲಿಲ್ಲ. ಹುಲಿಯ ಮರಳಿ ಮರಳಿ ಹಿಂದಕ್ಕೆ ತಿರುಗಿ ನೋಡುತ್ತಿತ್ತು.

ಅದನ್ನು ಕಂಡು ಗುತ್ತಿ “ಏ ನಿನ್ನ ಹುಲಿ ಹಿಡಿಯಾ! ಹೆಡಬೇಗ್ಹುಟ್ಟಿದ್ದಕ್ಕೆ ಹೋದಲ್ಲಿ ತನಕಾ ಬಾಲಾ ಮೂಸಾದೆ!” ಎಂದು “ಥ್ಥೂ! ನಿನ್ನ!” ಎಂದು ಉಗುಳಿದನು.

ಹುಲಿಯನಿಗೆ ಎಲ್ಲಿಯಾದರೂ ತನ್ನ ಯಜಮಾನನ ಮನಸ್ಸು ಗೊತ್ತಾಗಿದ್ದರೆ ಎಂತಹ ಪ್ರತ್ಯುತ್ತರ ಕೊಡಬಹುದಾಗಿತ್ತು! ಯಾಕೆಂದರೆ ಗುತ್ತಿ ಯಾವ ಉದ್ದೇಶ ಸಾಧನೆಗಾಗಿ ಸಿಂಬಾವಿಯಿಂದ ಹೊರಟ್ಟಿದ್ದನೊ ಆ ಉದ್ದೇಶವೂ ಬೇಟವೆ ಆಗಿತ್ತು! ಬೆಟ್ಟಳ್ಳಿ ಕಲ್ಲಯ್ಯ ಗೌಡರ ಜೀತದಾಳು ಹೊಲೆಯರ ದೊಡ್ಡ ಬೀರನ ಮಗಳು ತಿಮ್ಮಿಯನ್ನು ಹೇಗಾದರೂ ಮಾಡಿ ಹಾರಿಸಿಕೊಂಡು ಬರುವುದಕ್ಕಾಗಿ ಹೊರಟಿದ್ದ ಗುತ್ತಿ ಬೇಗ ಬೇಗ ನಡೆಯತೊಡಗಿದನು. ಮುಂದಿನ ಸಾಹಸದ ಆಲೋಚನೆಯಲ್ಲಿ ನಟ್ಟಮನಸ್ಸಾಗಿ ಸಾಗಿದ್ದನು ಅವನು ಹುಲಿಯ ಹಿಂತಿರುಗಿ ಪರಾರಿಯಾದುದನ್ನು ಗಮನಿಸಲಿಲ್ಲ.

ಹೋದ ರಾತ್ರಿ ಹೊಯ್ದ ಮಳೆಯಿಂದ ತಣ್ಣಗಾಗಿದ್ದ ಕಾಡಿನ ತಂಪು ಗಾಳಿಯಲ್ಲಿ ಗುತ್ತಿ ಚಟುವಟಿಕೆಯಾಗಿ ಸಾಗಿದನು. ಹಾದಿಯಲ್ಲಿ ಒಂದು ಕಡೆ ಹಂದಿಯ ಹಿಂಡು ಉತ್ತಿದ್ದುದನ್ನು ಕಂಡಾಗಲೆ ಅವನಿಗೆ ಹುಲಿಯನ ನೆನಪಾಗಿ ಕೂಗಿದನು. ನಿಃಶಬ್ದವಾದ ಕಾಡಿನಲ್ಲಿ ಆ ಕೂಗು ಮೊಳಗಿತು. ನಾಯಿ ಎಲ್ಲಿಯೂ ಕಾಣಿಸಲಿಲ್ಲ.

ಲಕ್ಕುಂದದಿಂದ ಸುಮಾರು ಎರಡು ಮೈಲಿ ದೂರದಲ್ಲಿದ್ದ ಮೇಗರವಳ್ಳಿಗೆ ಅವನು ಮುಟ್ಟಿದಾಗ ಆಗ ತಾನೆ ಬೆಳ್ಳಗೆ ಬೆಳಗಾಗಿತ್ತು. ಮರಗಳ ನೆತ್ತಿಯಲ್ಲಿ ಎಳಬಿಸಿಲು ಆಡತೊಡಗಿತ್ತು.

ತೀರ್ಥಹಳ್ಳಿಯಿಂದ ಆಗುಂಬೆಗೆ ಹೋಗುವ ಹೆದ್ದಾರಿಯಲ್ಲಿದ್ದ ಮೇಗರವಳ್ಳಿ ಗುತ್ತಿಯಂಥಾ ಹಳ್ಳಿಗರಿಗೆ ಪೇಟೆಯಾಗಿದ್ದರೂ ನಿಜವಾಗಿಯೂ ಬರಿಯ ಕೊಂಪೆಯಾಗಿತ್ತು. ರಸ್ತೆಯ ಇಕ್ಕೆಲಗಳಲ್ಲಿದ್ದ ನಾಲ್ಕಾರು ಹುಲ್ಲಿನ ಮನೆಗಳೂ ಎರಡು ಮೂರು ಹೆಂಚಿನ ಮನೆಗಳೂ ಆ ಪೇಟೆಗೆ ಪರಮಾವಧಿ. ಜನಸಂಖ್ಯೆ ಈರೈದುಮೂರೈದುಗಳಲ್ಲಿಯೆ ಮುಗಿಯುತ್ತಿತ್ತು. ಎತ್ತಿನ ಗಾಡಿಯೂ ದುರ್ಲಭವಾಗಿದ್ದ ಆಗಿನ ಸ್ಥಿತಿಯಲ್ಲಿ ಎಂಟೊಂಬತ್ತು ಮೈಲಿ ದೂರದಲ್ಲಿದ್ದ ತೀರ್ಥಹಳ್ಳಿಯನ್ನು ಖ್ಯಾತಿಯಿಂದ ಮಾತ್ರ ಅರಿತಿದ್ದ ಸುತ್ತಮುತ್ತಣ ಹಳ್ಳಿಗರಿಗೆ ಮೇಗರವಳ್ಳಿಯೆ ಪಟ್ಟಣವಾಗಿದ್ದುದರಲ್ಲಿ ಆಶ್ಚರ್ಯವೇನಿಲ್ಲ.

ಆಗಿನ ಮೇಗರವಳ್ಳಿಯಲ್ಲಿ ಆಸ್ಪತ್ರೆ, ಸ್ಕೂಲು, ಷಾಪು, ಹೋಟಲು, ಮಿಲ್ಲು ಯಾವುವೂ ಇರಲಿಲ್ಲ. ಆದರೆ ಮಲೆಯಾಳಿಯ ವೈದ್ಯರಾದ ಕಣ್ಣಾ ಪಂಡಿತರಿದ್ದರು. ಮಾಪಿಳ್ಳೆಯವರಾಗಿದ್ದ ಕರಿಮೀನು ಸಾಬರು ಅಂಗಡಿಯಿಟ್ಟಿದ್ದರು. ಒಂದು ಕಳ್ಳಿನ ಅಂಗಡಿಯೂ ಇದ್ದ ಆಟ ಊಟ ಕೂಟಗಳಿಗೆ ಒಂದು ತೆರನಾದ ಕ್ಲಬ್ಬೂ ಆಗಿತ್ತು. ಸೆಟ್ಟಿಗಿತ್ತಿ ಅಂತಕ್ಕನ ಮನೆ ತಕ್ಕಮಟ್ಟಿಗೆ ಹೋಟಲೂ ಆಗಿತ್ತು. ತೀರ್ಥಹಳ್ಳಿ ಆಗುಂಬೆಯ ಮುಖಾಂತರವಾಗಿ ದಕ್ಷಿಣ ಕನ್ನಡ ಜಿಲ್ಲೆಗೆ ಹೋಗಿ ಬರುತ್ತಿದ್ದ ವ್ಯಾಪಾರಿಗಳೂ, ಸೇರೆಗಾರರೂ, ಕೂಲಿಯಾಳುಗಳೂ, ಗಂಧದ ಮರಗಳನ್ನು ಸಾಗಿಸುತ್ತಿದ್ದ ಗುಪ್ತ ದಳ್ಳಾಲಿಗಳೂ, ಮುಂತಾದವರೂ ಆಗಾಗ ತಂಗುತ್ತಿದ್ದುದರಿಂದ ಆ ಸ್ಥಳಕ್ಕೊಂದು ಪ್ರಮುಖತೆ ಬಂದಿತ್ತು.

ಗುತ್ತಿ ಅಲ್ಲಿಗೆ ಬಂದಾಗ ಸ್ವಲ್ಪ ಪ್ರತ್ಯೇಕವಾಗಿದ್ದ ಅಂತಕ್ಕ ಸೆಟ್ತಿಯ ಹುಲ್ಲುಮನೆಯಿಂದ ಅಡುಗೆಹೊಗೆ ಏಳುತ್ತಿತ್ತು. ಅದು ವಿನಾ ಮೇಗರವಳ್ಳಿಯಲ್ಲಿ ಮತ್ತಾವ ಎಚ್ಚರದ ಸೂಚನೆಯೂ ಕಂಡುಬರಲಿಲ್ಲ. ಆದರೂ ನೇರವಾಗಿ ಕಣ್ಣಾ ಪಂಡಿತರ ಮನೆಯ ಮುಂಭಾಗಕ್ಕೆ ಹೋಗಿ, ಸ್ವಲ್ಪ ಹೊತ್ತು ನಿಂತು ಆಲೋಚನೆ ಮಾಡಿ ಕರೆದನು:

"ಕಣ್ಣಪ್ಪಯ್ಯಾ! ಕಣ್ಣಪ್ಪಯ್ಯಾ!"

ಯಾವ ಪ್ರತ್ಯುತ್ತರವೂ ಬರಲಿಲ್ಲ, ಮತ್ತೆ ಕೂಗಿ ಕರೆದನು.

ಬಾಗಿಲು ತೆರೆಯದಿದ್ದರೂ ಒಳಗಡೆಯಿಂದ ಒಂದು ದನಿ ವಿದೇಶಿಯವಾದ ಕಾಕು ಸ್ವರದಿಂದ "ಅದು ಯಾರು? ಹೊತ್ತಾರೆ ಬಂದು ಕೂಗುವವರು?" ಎಂದಿತು.

"ನಾನು ಕಣ್ರೋ, ಸಿಂಬಾವಿ ಗುತ್ತಿ. ಹೆಗ್ಗಡೇರ ಕಡೆ ಆಳು"

"ಸ್ವಲ್ಪ ಕೂತುಕೊಳ್ಳೊ ಅಲ್ಲಿ; ಬರುತ್ತೇನೆ."

ಕೂತುಕೊಳ್ಳುವುದಕ್ಕೆ ಯಾವ ಅನುಕೂಲವೂ ಇರಲಿಲ್ಲ. ಗುತ್ತಿ ತನ್ನ ಕಂಬಳಿಯನ್ನು ಹಾಸಿ, ಕೂತು, ಎಲೆಯಡಿಕೆ ಹಾಕಿಕೊಳ್ಳಲಾರಂಭಿಸಿದನು.

ಗುತ್ತಿ ಕೂತ ಜಾಗಕ್ಕೆ ಎದುರಾಗಿ, ರಸ್ತೆಯ ಆಚೆಕಡೆ ಇದ್ದ ಮನೆ ಊರು ಹೆಂಚಿನದಾಗಿತ್ತು. ವರ್ಷ ವರ್ಷವೂ ಹಳು ಹುಟ್ಟಿ ಬೆಳೆದು ಒಣಗಿ ಹೊದಿಸಿದ್ದ ಹೆಂಚುಗಳಲ್ಲಿ ಅರೆಪಾಲು ಮುಚ್ಚಿಹೋಗಿದ್ದವು. ಮನೆಯ ಮುಂಭಾಗದಲ್ಲಿ ಹಲಗೆಗಳನ್ನು ಜೋಡಿಸಿ ಮಳಿಗೆ ಮಾಡಿದ್ದರು.

ಗುತ್ತಿ ನೋಡುತ್ತಿದ್ದ ಹಾಗೆಯೇ ಮಳಿಗೆಯ ಒಣಗಣಿಂದ ಯಾರೋ ಹಲಗೆಯ ಬಾಗಿಲೊಂದನ್ನು ಎತ್ತಿ ತೆರೆಯಲು ಪ್ರಯತ್ನಿಸುತ್ತಿದ್ದುದು ಅವನ ಕಣ್ಣಿಗೆ ಬಿತ್ತು. ಹಾಗೆ ಎತ್ತಿ ತೆರೆಯುವುದಕ್ಕಾಗಿಯೆ ಮಾಡಿದ್ದ ಆ ಹಲಗೆಯ ಬಾಗಿಲಿನ ನಡುವಣ ಅರ್ಧಚಂದ್ರಾಕೃತಿಯ ರಂಧ್ರದಲ್ಲಿ ಮಡಿಸಿ ಹಿಡಿದಿದ್ದ ನಾಲ್ಕು ಕೈಬೆರಳುಗಳನ್ನು ನೋಡಿದೊಡನೆಯೆ ಗುತ್ತಿ ಸ್ವಲ್ಪ ಅಪ್ರತಿಭನಾದನು.

“ಕರಿಮೀನು ಸಾಬರ ಕೈ ಬೆಳ್ಳು! ಮತ್ತೇ? ಆ ಊರಾಗೆ ಅಷ್ಟು ಕರ್‍ರಗೆ ಯಾರಿದ್ದಾರೆ? ಸೈ, ಇನ್ನು ಕಂಡ ಕೂಡಲೆ ಹಳೆ ಸಾಲಕ್ಕೆ ತಗಾದೆ ಮಾಡುತ್ತಾರೆ! ಬೆಳಿಗ್ಗೆ ಎದ್ದು ಸನಿ ಮುಖಾ ನೋಡ್ತೀನಲ್ಲಾ!” ಎಂದು ಮೋರೆಯನ್ನು ಬೇರೆಯ ಕಡೆಗೆ ತಿರುಗಿಸಿದರೂ ಗುತ್ತಿಯ ಕಣ್ಣು ಆ ಕೈಬೆರಳಿನ ಮೇಲೆಯೇ ನೆಟ್ಟಿತ್ತು.

ಬಾಗಿಲು ತೆರೆಯಿತು. ಕರೀಂ ಸಾಬಿಯ ದೇಹ ತೂರಿ ಹೊರಗೆ ಬಂದಿತು. ಸೊಂಟದ ಕೆಳಗೆ ಕಣ್ಣು ಕಣ್ಣಿನ ಕೆಂಪು ದುಪ್ಪಟಿಯನ್ನು ಸುತ್ತಿದ್ದು, ಮೈ ಬತ್ತಲೆಯಾಗಿದ್ದ ಅವನ ಎಡಗೈಯಲ್ಲಿ ನೀರು ತುಂಬಿದ್ದ ಒಂದು ಕರಿಯ ಮಣ್ಣಿನ ಪಾತ್ರೆಯಿತ್ತು. ಬಲಗೈಯಲ್ಲಿದ್ದ ಇದ್ದಲಿನ ಚೂರನ್ನು ಹಲ್ಲಿಗೆ ತಿಕ್ಕುತ್ತಾ ಅಂಗಡಿಯ ಮುಂದೆಯೇ ಮೆಟ್ಟಲ ಮೇಲೆ ಕೂತುಕೊಂಡು ಮುಖ ತೊಳೆಯಲಾರಂಭಿಸಿದನು. ಮಸಿಯಾದ ಕಲ್ಲು ಗಡಿಗೆಯ ಬೆನ್ನಿನಂತೆ ಕರ್‍ರಗೆ ನುಣ್ಣಗಿದ್ದ ಮುಂಡೆಯನ್ನೂ ಕರಿಬಲೆಯಂತೆ ನೇತಾಡುತ್ತಿದ್ದ ಹೊದೆ ಗಡ್ಡವನ್ನೂ ಒಟ್ಟಿಗೆ ತೊಳೆದು, ಉಟ್ಟಿದ್ದ ದುಪ್ಪಟಿಯಿಂದಲೆ ಎರಡನ್ನೂ ಉಜ್ಜಿಕೊಂಡ ಮೇಲೆ, ಗುತ್ತಿಯನ್ನು ನೋಡುತ್ತಾ “ಏಯ್, ಕಂಬಳೀ, ಇಲ್ಲಿ ಬಾ!” ಎಂದು ಕೂಗಿದನು.

ಕರೀಂ ಸಾಬಿ ಗಟ್ಟದ ಮೇಲಕ್ಕೆ ಬಂದು ಬಹಳ ವರ್ಷಗಳಾಗಿತ್ತು. ಮೊದಲು ಬಂದಾಗ ಅವನು ಕರಿಮೀನು ಹೊತ್ತುಕೊಂಡು ಮನೆ ಮನೆಗೂ ತಿರುಗಿ ಅಕ್ಕಿಗೋ ಬತ್ತಕ್ಕೋ ಅಡಕೆಯೋ ವಿನಿಮಯ ವ್ಯಾಪಾರ ಮಾಡುತ್ತಿದ್ದನಾದ್ದರಿಂದಲೂ, ಹಳ್ಳಿಗರ ಕಿವಿಗೆ ಕರೀಂ ಮತ್ತು ಕರಿಮೀನು ಎಂಬ ಪದಗಳು ಸಮಪದಗಳಾಗಿ ತೋರಿದುದರಿಂದಲೂ ಅಂಕಿತನಾಮವನ್ನು ಅನ್ವರ್ಥನಾಮವನ್ನಾಗಿ ಮಾಡಿದ್ದರು. ತರುವಾಯ ಕರೀಂ ಸಾಬಿ ಇತರ ಪದಾರ್ಥಗಳನ್ನು ಮಾರತೊಡಗಿದ್ದರೂ ಅವನು ಮೊದಲಿನ ಹೆಸರು ಬದಲಾಯಿಸಲಿಲ್ಲ. ಹಾಗೆಯೇ ಮಂಗಳೂರು ನಶ್ಯಪುಡಿಯನ್ನು ತಯಾರುಮಾಡಿ ಮಾರುತ್ತಿದ್ದ ಅವನ ತಮ್ಮನಿಗೆ “ಪುಡೀ ಸಾಬಿ” ಎಂದು ಹೆಸರು ಬಂದಿತ್ತು. ಅಂತೂ ಕರಿಮೀನು ಸಾಬರು ಮತ್ತು ಪುಡಿ ಸಾಬರು ಎಂದರೆ ಗುತ್ತಿಯಂತಹ ಜನಗಳಿಗೆ ತಕ್ಕಮಟ್ಟಿಗೆ ಗೌರವ ವ್ಯಕ್ತಿಗಳೆ ಆಗಿದ್ದರು. ಅವನು ಚಿಲ್ಲರೆ ಸಾಲವನ್ನು ಕೊಡುತ್ತಿದ್ದುದರಿಂದ ಆ ಹಂಗಿಗೆ ಒಳಗಾದವರೆಲ್ಲರಿಗೂ ಅವರಲ್ಲಿ ದ್ವೇಷಮಿಶ್ರವಾದ ಭಯಭಕ್ತಿಯೂ ಇತ್ತು.

ಕರೀಂ ಸಾಬಿ ಕರೆದೊಡನೆಯೆ ಗುತ್ತಿ ನಿರುತ್ಸಾಹದಿಂದ ನಿಧಾನವಾಗಿ ಎದ್ದು ಬಂದನು. ಮುಖಸ್ತುತಿ ಮಾಡುವುದಕ್ಕಾಗಿಯೊ ಎಂಬಂತೆ ಸಾಬರಿಗೆ ಸೊಂಟ ಬಗ್ಗಿಸಿ ಸಲಾಂ ಮಾಡಿನು.

ಸಾಬಿ ಒಂದಿನಿತೂ ಪ್ರಸನ್ನನಾಗದೆ ಗಡ್ಡ ನೀವುತ್ತಾ “ಸಲಾಮು ಇರಲಿ! ನನ್ನ ಹಣ ಎಲ್ಲಿಯೋ?” ಎಂದು ವಿದೇಶೀಯ ವಿರಳಶೈಲಿಯಲ್ಲಿ ಪ್ರಾರಂಭಿಸಿದನು.

“ಇನ್ನೆಂಟು ದಿನಾ ತಡೀರಿ. ನನ್ನ ಮದೇಗೆ ಹೆಗ್ಗಡೇರ ಕೈಲಿ ದುಡ್ಡು ಕೇಳೀನಿ. ಅದರಾಗೆ ನಿಮ್ಮ ಚಿಳ್ರೇನೂ ತೀರ್ಸಿಬಿಡ್ತೀನಿ” ಎಂದು ಕುಳ್ಳಗುತ್ತಿ ತನಗಿಂತಲೂ ಬಹುಪಾಲು ಕರ್‍ರಗಿದ್ದ ಉದ್ದನೆಯ ಮಾಪಿಳ್ಳೆಯನ್ನು ನೋಡುತ್ತಾ ಹಲ್ಲು ಬಿಟ್ಟು ಸಪ್ಪೆಯಾಗಿ ನಕ್ಕನು.

“ಎಷ್ಟು ದಿನಾ ನೀನು ನನ್ನ ಸತಾಯಿಸುವುದು? ನಿಮ್ಮದು ಹೆಗ್ಗಡೇರು ಕೊಟ್ಟರೆ ಕೊಡಲಿ. ಬಿಟ್ಟರೆ ಬಿಡಲಿ, ಒಟ್ಟಾರೆ ನಮಗೆ ನಮ್ಮ ದುಡ್ಡು ಕಾಸು ಬಂದರೆ ಸೈ! ಆಗಲಿ ನೀನು ಹೇಳಿದ ಹಾಗೆ ಇನ್ನು ಎಂಟು ದಿನ ನೋಡುವಾ; ದುಡ್ಡು

ಬಡ್ಡಿ ಬರದೇ ಹೋದರೆ ನಾನು ಹೆಗ್ಗಡೆಯರ ಬಳಿಗೆ ಬರುತ್ತೇ! ನನಗೂ ಕೆಲಸವುಂಟು ಅವರಲ್ಲಿಗೆ! ಗೊತ್ತಾಯಿತೋ?"

ಅಷ್ಟು ಹೊತ್ತಿಗೆ ಕಣ್ಣಾಪಂಡಿತರು ಎದುರು ಮನೆಯಿಂದ ಬಾಗಿಲು ತೆರೆದು ಹೊರಬಂದುದನ್ನು ನೋಡಿ ಗುತ್ತಿ ಸಾಬರಿಗೆ ಸಲಾಂ ಮಾಡಿ, ಅಲ್ಲಿಂದ ಅವಸರ ಅವಸರವಾಗಿ ಜಾರಿದನು.

ಕರೀಂ ಸಾಬಿ "ಲೌಡೀ ಮಗನಿಗೆ ಏನು ದೌಲತ್ತು? ಅವನು ಎಷ್ಟು ರೂಪಾಯಿ ಕೊಡಬೇಕಾಗಿದೆ; ಅದನ್ನು ಚಿಲ್ಲರೆ ಅನ್ನುತ್ತಾನೆ! ಹೆಗ್ಗಡೇರ ಜವಾನ ಅಂತ ಮುಲಾಜು ನೋಡದೆ ಮಾತಾಡುತ್ತಾನಲ್ಲಾ!" ಎಂದುಕೊಂಡು ಕ್ಯಾಕರಿಸಿ ಉಗಿದು ಒಳಗೆ ಹೋದನು.

ಬೆಳ್ಳಗಿದ್ದ ತೆಳು ಪಂಚೆಯನ್ನುಟ್ಟು, ಅದೇ ತೆರನಾದ ಬಟ್ಟೆಯ ಒಂದು ಗೀರು ಗೀರಿನ ಷರ್ಟನ್ನೂ ಹಾಕಿ, ಮಲೆಯಾಳಿಗಳ ರೀತಿಯಲ್ಲಿ ತಲೆಯ ಹಿಂಭಾಗವನ್ನು ಬೋಳಿಸಿ, ಮುಂಭಾಗದಲ್ಲಿ ಉದ್ದವಾದ ಬೆಳೆದಿದ್ದ ಕೂದಲನ್ನೆಲ್ಲಾ ಸೇರಿಸಿ ಮುಡಿ ಕಟ್ಟಿ, ಸ್ವಲ್ಪ ಕರ್‍ರಗಿದ್ದರೂ, ಆಪಾದಮಸ್ತಕವಾಗಿ ಚೊಕ್ಕಟವಾಗಿದ್ದ ಕಣ್ಣಾಪಂಡಿತರು ಮನೆಮೊಗದಿಂದ ಬೆಳ್ಳಗೆ ಹಲ್ಲು ಬಿಟ್ಟು ಗುತ್ತಿಯನ್ನು ನೋಡಿ ಅರ್ಥಪೂರ್ವಕವಾಗಿ ನಕ್ಕರು. ಅವನು ಹತ್ತಿರಕ್ಕೆ ಬರಲು ಅಭ್ಯಾಸದಂತೆ ಹುಬ್ಬನ್ನು ನಿಮಿರಿ ಮೇಲಕ್ಕೆ ಹಾರಿಸುತ್ತಾ "ಏನೋ, ಕುತ್ತಿ, ಮತುವೆಮಕನ ಹಾಂಗೆ ಬಟ್ಟೆಯುಟ್ಟು ಹೊರಟಿದ್ದೀಯಲ್ಲವೊ!" ಎಂದರು.

ಅವರ ಹೆಣ್ಗೊರಳಿನ ಕೀಚುದನಿಯನ್ನೂ ವಿಲಕ್ಷಣವಾಗಿದ್ದ ದಕಾರ ತಕಾರಗಳ ಗಲಿಬಿಲಿಯ ಕನ್ನಡದ ಉಚ್ಚಾರಣೆಯನ್ನೂ ಹಿಂದೆ ಎಷ್ಟೋ ಸಲ ಕೇಳಿದ್ದರೂ ಗುತ್ತಿಗೆ ಸಲಸಲವೂ ಅದು ವಿನೋದಕರವಾಗಿಯೆ ತೋರುತ್ತಿತ್ತು. ಅದಕ್ಕಾಗಿಯೆ ನಗುತ್ತಿದ್ದರೂ ಪ್ರಶ್ನೆಗಾಗಿ ನಗುವನಂತೆ ನಟಿಸುತ್ತಾ "ತಮ್ಮಂಥಾ ಒಡೇರು ಕೊಟ್ಟರೆ ನಮ್ಮಂಥಾ ಬಡೋರಿಗೆ ಉಂಟು" ಎಂದನು.

"ಹೆಣ್ಣು ಕೇಳುತ್ತಿದ್ದೆಯಲ್ಲವೆ? ಬೆಟ್ಟಳ್ಳಿ ದೊಡ್ಡಬೀರನ ಮಗಳು ತಿಮ್ಮಿಯನ್ನು? ಒಪ್ಪಿಗೆಯಾಯಿತೋ?"

ಗುತ್ತಿ ಇದ್ದಕ್ಕಿದ್ದಹಾಗೆ ಗಂಭೀರವಾದನು. ಅವನ ಮುಖದಲ್ಲಿ ಏನೋ ಒಂದು ದೃಢನಿಶ್ಚಯದ ಕರಾಳ ಛಾಯೆ ಸುಳಿಯಿತು. ಹಣೆ ಸುಕ್ಕಾಯಿತು. ತುಟಿ ಸ್ವಲ್ಪ ಕೊಂಕಿತು. "ಅಯ್ಯಾ, ನೀವು ದೇವರಿಗೆ ಸಮ; ನನ್ನ ಮನಸ್ಸಿನಲ್ಲಿರೋದನ್ನ, ನಾ ಹೇಳಬೇಕಾರೆ ಮೊದಲೆ, ನೀವೆ ಕೇಳಿಬಿಟ್ಟಿರಿ. ನಿಜವಾಗಿಯೂ ನೀವು ದೇವರಂತಾ ಮನುಷ್ಯರು" ಎಂದನು.

"ಆ ಬಚ್ಚ ಏನೊ ತಂಟೆಮಾಡುತ್ತಿದ್ದ ಎಂದು ಹೇಳಿದ್ದೀಯಲ್ಲಾ ನೀನು, ತಿಮ್ಮಿಯನ್ನು ತಾನು ಮತುವೆಯಾಗಬೇಕೆಂದು".

ಗುತ್ತಿಯ ಮುಖದಲ್ಲಿ ಒಂದಿನಿತು ರೋಷ ಸಂಚಾರವಾಯಿತು. "ಬಚ್ಚನ ಹೆಣಾ, ಅವನೇನು ಮಾಡ್ತಾನೆ? ನನ್ನ ಮಾವ ದೊಡ್ಡ ಬೀರನ ಮನಸ್ಸೇ ಅತ್ತಾ ಇತ್ತಾ ಆಗ್ತಾ ಇದೆ. ಬೆಟ್ಟಳ್ಳಿ ಗೌಡ್ರೂ ಅಡ್ಡಾ ಹಾಕ್ತಾ ಇದ್ದಾರೆ. ತಿಮ್ಮಿ ಮನಸ್ಸೇನೋ

ಈ ಕಡೇನೆ ಇದೆ. ಆದ್ರೇನ್ಮಾಡೋದು-ಈವತ್ತು ನಮ್ಮ ಹೆಗ್ಗಡೇರು ಒಂದು ಕಾಗ್ದ-" ಎಂದವನು ನಾಲಿಗೆ ಕಚ್ಚಿಕೊಂಡು ಅದನ್ನು ಅರ್ಧಕ್ಕೆ ನಿಲ್ಲಿಸಿ, "ನಮ್ಮ ಹೆಗ್ಗಡೇರಿಗೆ ಏನೋ ಔಸ್ತಿ ಕೊಟ್ಟಿದ್ರಂತೆ ನೀವು. ಸೊಲ್ಪಾ ಗುಣಾ ಅದೆಯಂತೆ. ಮತ್ತೀಟು ಔಸ್ತಿ ಇಸುಕೊಂಡು ಬಾ ಅಂತ ಅಂದ್ರು" ಎಂದನು.

"ಹಿಂದಕ್ಕೆ ಹೋಗುವಾಗ ಮತ್ತೆ ಬಾ ಕೊಡುತ್ತೇನೆ"

ಗುತ್ತಿ ತಟಕ್ಕನೆ ಆಲೋಚನಾಪರನಾಗಿ "ಹಿಂದಕ್ಕೆ ಹೋಗಾಗ ಬರಾಕೆ ಹೆಂಗೆ ಆತದ್ರೋ?" ಎಂದವನು ಕಣ್ಣಾ ಪಂಡಿತರ ಹಾರು ಹುಬ್ಬಿನ ಪ್ರಶ್ನೆಚಿಹ್ನೆಗೆ ಸರಿಯಾದ ಉತ್ತರ ಹೇಳಲು ಸಾಧ್ಯವಿಲ್ಲದ್ದರಿಂದ "ಹ್ಞೂ ಆಗ್ಲಿ, ಬಂದು ತಗೊಂಡು ಹೋಗ್ತಿನಿ" ಎಂದನು.

"ಮತ್ತೆ ನೀನು ಹೊರಡಬಹುದು."

ಕಣ್ಣಾಪಂಡಿತರು ಹೊರಡಬಹುದು ಎಂದು ಹೇಳಿದರೂ ಗುತ್ತಿ ಹೊರಡಲಿಲ್ಲ. ಇನ್ನೂ ಏನೋ ಹೇಳುವವನಂತೆ ನಿಂತನು.

ಕಣ್ಣಾಪಂಡಿತರು "ಮತ್ತೆ ಏನು ನಿಂತದ್ದು?" ಎಂದನು.

ಗುತ್ತಿ ಎಂಜಲು ನುಂಗುತ್ತಾ ಗಂಟಲು ಸರಿಮಾಡಿಕೊಳ್ಳುತ್ತಾ ತಡಬಡಿಸುತ್ತಿದ್ದುದನ್ನು ನೋಡಿ ಪಂಡಿತರು ಸ್ವಲ್ಪ ರಹಸ್ಯ ಧ್ವನಿಯಿಂದಲೆಂಬಂತೆ "ಮತ್ತೆ ಜಟ್ಟಮ್ಮ ಹೆಗ್ಗಡತಿಯವರು ಏನಾದರೂ ಹೇಳಿದ್ದರೇನೋ?" ಎಂದು ಕೇಳಿದರು.

"ಹೌದೇ ಸ್ಯೆ, ಮರತೇ ಬಿಟ್ಟಿದ್ದೆ."

"ಅದನ್ನೂ ಕೊಡ್ತೀನೊ, ಆ ಮೇಲೆ ಬಾ"

"ಮಕ್ಕಳಾಗಾಕೆ ಔಸ್ತಿ ಕೊಡ್ತೀರಂತೆ ಹೌದೇನ್ರೋ?" ಎಂದು ಗುತ್ತಿ ಬೆಪ್ಪು ನಗು ನಕ್ಕನು.

"ಆಗುವುದಕ್ಕೊ, ಹೋಗುವುದಕ್ಕೊ ನಿನಗ್ಯಾತಕ್ಕೆ?"

"ಅಲ್ಲ, ಪಾಪ, ಅವರು ಮಕ್ಕಳಿಲ್ಲದೆ ನಕ್ಕಬಡೀತಿದಾರೆ. ಹೆಗ್ಗಡೇರು ಬ್ಯಾರೆ ಮತ್ತೊಂದು ಮದೇಗೆ ಗಾಣ ಹಾಕ್ತಿದಾರೆ. ಬೇಗ ಮಕ್ಕಳಾದ್ರೂ ಆದ್ರೆ-" ಎಂದು ಒಡನೆಯೆ ಕನಿಕರದ ದನಿಯನ್ನು ಉದಾಸೀನಕ್ಕೆ ಬದಲಾಯಿಸಿ "ಅಲ್ಲಾ ಹೋಗ್ಲಿ ಬಿಡೀ. ಗರೀಬನಿಗೆ ಯಾಕೆ ಆ ಇಚಾರ-" ಎಂದು ಮತ್ತೆ ಧ್ವನಿ ಬದಲಾಯಿಸಿ. "ನನಗೊಂದು ಅಂತ್ರ ಬೇಕಿತ್ತಲ್ರೋ" ಎಂದನು.

"ಯಾವುದಕ್ಕೊ?"

“ಅದೇ ನೀವು ಹೇಳಿದ್ರಲ್ಲಾ ಅದಕ್ಕೆ”

“ಅಂದರೆ?”

“ಈಗ ನೋಡಿ ತಿಮ್ಮಿನ ನಾ ಮದುವ್ಯಾಗಬೇಕು ಅಂತಾ ಸುಮಾರು ಕಾಲದಿಂದ ಕೇಳ್ತಿದ್ದೀನಿ. ಆ ಬಚ್ಚ ಮನ್ನೆ ಮನ್ನೆ ಸುರು ಮಾಡ್ಯಾನೆ. ತಿಮ್ಮಿಮನ್ಸು ನನ್ನ ಕಡೆ ಆಗಿ, ನಾ ಹೇಳ್ದ ಹಂಗೆ ಕೇಳಾಕೆ ಒಂದು ಅಂತ್ರ ಕೊಟ್ರೆ ನನ್ನ ಪರಾಣ ಇರೋ ತನಕ ನಿಮ್ಮ ಗುಲಾಮನಾಗಿರ್ತೀನಿ”.

ಗುತ್ತಿಯ ದೈನ್ಯ ಸ್ಥಿತಿಯನ್ನು ಕಂಡು ಪಂಡಿತನಿಗೆ ನಗು ಬಂದರೂ ಅದನ್ನು ತೋರಗೊಡಲಿಲ್ಲ. ಅದಕ್ಕೆ ಬದಲಾಗಿ ಮುಖಮುದ್ರೆಯನ್ನು ಅತ್ಯಂತ ಗಂಭೀರ ಮಾಡಿಕೊಂಡು ನಿಧಾನವಾಗಿ ಮಂಡೆ ಅಲ್ಲಾಡಿಸಿದನು.

ಗುತ್ತಿ ಅತಿ ದೈನ್ಯತೆಯಿಂದ “ದಮ್ಮಯ್ಯಾ ಅಂತೀನಿ. ಒಷ್ಟು ಉಪಕಾರ ಮಾಡಿ. ನಿಮ್ಮ ಕಾಲಿಗೆ ಬೀಳ್ತೀನಿ” ಎಂದು ತನ್ನ ಕುಳ್ಳನ್ನು ಮತ್ತಷ್ಟು ಕುಗ್ಗಿಸಿಕೊಂಡನು.

ಆ ಹೊಲೆಯನಿಂದ ಹಣ ವಸೂಲು ಮಾಡಿಕೊಳ್ಳುವುದೂ, ಹಸುವಿನ ಕೊಂಬಿನಿಂದ ಹಾಲು ಕರೆಯುವುದೂ ಒಂದೇ ಎಂದು ಚೆನ್ನಾಗಿ ಅರಿತಿದ್ದ ಕಣ್ಣಾಪಂಡಿತರು “ನನಗೆ ನಿನ್ನಿಂದ ದುಡ್ಡು ಕಾಸೂ ಏನೂ ಬೇಡ.”

“ಮತ್ತೇನು ಬೇಕು ಹೇಳಿ?”

“ಸ್ವಲ್ಪ ಸುಮ್ಮನೆ ನಿಲ್ಲೋ- ನಿನ್ನ ದುಡ್ಡು ಕಾಸು ನನಗೆ ಬೇಡ. ನಿನ್ನ ಹೊಟ್ಟೆಯ ಮೇಲೆ ನಾನು ಹೊಡೆಯುವುದಿಲ್ಲ....ನನಗೆ ಬೇಕಾದಾಗ ಒಂದೊಂದು ಕೋಳಿ ಕೊಟ್ಟರೆ ಸಾಕು- “

“ಬದಕಿದೆ, ನನ್ನೊಡ್ಯಾ”

“ಹೋಗಿ ಬಾ, ಆಮೇಲೆ ಕೊಡ್ತೀನಿ.”

ಗುತ್ತಿ ತಟಕ್ಕನೆ ಹತಾಶನಾದಂತೆ “ಈಗಲೆ ಕೊಟ್ಟಿದ್ರೆ....” ಎಂದನು.

“ಈಗ ಹ್ಯಾಂಗೆ ಕೊಡುವುದೊ? ಅದನ್ನು ಬರೆಯಬೇಕೋ ಬೇಡವೊ? ಸಾಬರ ಅಂಗಡಿಯ ದಿನಸಿ ಅಲ್ಲ!”

“ಇಲ್ಲೆ ಕೂತ್ಕೊತೀನಿ-ಬರ್ಕೊಡಿ” ಎಂದು ಹಲ್ಲು ಹಲ್ಲು ಬಿಟ್ಟು ಅಂಗಲಾಚ ತೊಡಗಿದ. ಗುತ್ತಿಯನ್ನು ಅಂಗಳದಲ್ಲಿಯೆ ಬಿಟ್ಟು ಕಣ್ಣಾಪಂಡಿತರು ಮನೆ ಒಳಗೆ ನುಸುಳಿದರು. ಅವನು, ಎಳಬಿಸಿಲಿನಲ್ಲಿ ಕಂಬಳಿ ಹಾಕಿಕೊಂಡು, ಅದರ ಮೇಲೆ ಕೂತು, ಎಲೆಯಡಿಕೆ ಜಗಿಯುತ್ತಾ ಅಂತ್ರದ ಆಗಮನವನ್ನೆ ನಿರೀಕ್ಷಿಸುತ್ತಾ ಕುಳಿತನು.

* * *

ಹಳೆಮನೆಗೆ ಮೇಗರವಳ್ಳಿಯಿಂದ ಸುಮಾರು ಒಂದು ಹರಿದಾರಿ. ಆಗುಂಬೆಗೆ ಹೋಗುವ ರಸ್ತೆಯ ಎಡಪಕ್ಕಕ್ಕೆ ಒಂದು ಗುಡ್ಡ ಹತ್ತಿ ಇಳಿದರೆ ಸರಿ, ಹಳೆಮನೆಯ ಗದ್ದೆಯ ಕೋಗೂ ಅಡಿಕೆ ತೋಟವೂ ಕಾಣಿಸುತ್ತವೆ. ಕಾಡು ದಟ್ಟವಾಗಿ ಬೆಳೆದ ಒಂದು ಗುಡ್ಡಕ್ಕೂ ಅಡಿಕೆ ತೋಟಕ್ಕೂ ನಡುವೆ ಹಳೆಮನೆಯ ದೊಡ್ಡದಾದ ಚೌಕಿಮನೆ. ಸಂಸ್ಕೃತಿಯ ದೃಷ್ಟಿಯಿಂದಲ್ಲ ಆಕೃತಿಯ ದೃಷ್ಟಿಯಿಂದ ನಿಜವಾಗಿಯೂ ದೊಡ್ಡ ಮನೆ.

ಮನೆ ಒಂದಾದರೂ ಅದರ ಕಾಲುಭಾಗಕ್ಕೆ ಊರು ಹೆಂಚು ಹೊದಿಸಿತ್ತು. ಉಳಿದುದಕ್ಕೆ ಅಡಿಕೆ ಸೋಗೆ, ಹೆಂಚಿನ ಮೇಲೆ ಅಲ್ಲಲ್ಲಿ ಪಾಚಿ ಬೆಳೆದು ಒಣಗಿ ಕರಿಮಚ್ಚೆಗಳು ತೋರುತ್ತಿದ್ದರೂ ಒಟ್ಟಿನಲ್ಲಿ ಅವುಗಳ ಹೊಸತನ ಸಂಪೂರ್ಣವಾಗಿ ಮಾಸಿರಲಿಲ್ಲ.

ಆ ಒಂದು ಮನೆಯಲ್ಲಿ ಎರಡು ಸಂಸಾರಗಳಿದ್ದುವು. ಅಥವಾ ಸರಿಯಾಗಿ ಹೇಳುವುದಾದರೆ, ಎರಡು ವರ್ಷದ ಹಿಂದೆ ಆ ಮನೆಯಲ್ಲಿ ಒಂದಾಗಿದ್ದ ಸಂಸಾರ ಒಡೆದು ಪಾಲಾಗಿ ಎರಡಾಗಿತ್ತು. ತರುವಾಯ ಅವರವರ ಮನಸ್ಸಿನಂತೆ ಅವರವರ ಪಾಲಿಗೆ ಬಂದ ಮನೆಯಲ್ಲಿ ಒಳಗೂ ಹೊರಗೂ ಮಾರ್ಪಾಡಾಗಿತ್ತು. ಜನರೂ ಕೂಡ ಬದಲಾಗಿ 'ಹೆಂಚಿನ ಮನೆಯವರು' ಸೋಗೆ ಮನೆಯವರು' ಎಂದು ಕರೆಯುವುದಕ್ಕೆ ತೊಡಗಿದ್ದರು. ಆದರೆ ಮನೆಯವರ ಮುಂದೆ ಹಾಗೆ ಮಾತಾಡಿಕೊಳ್ಳುತ್ತಿರಲಿಲ್ಲ. ಅದರಲ್ಲಿಯೂ ಸೋಗೆ ಮನೆಯವರ ಮುಂದೆ.

ಏಕೆಂದರೆ ದೊಡ್ಡ ಜಮೀನು ಆಳುಕಾಳು ಎಲ್ಲದರಲ್ಲಿಯೂ ಪ್ರಬಲವಾಗಿದ್ದದ್ದು ಕಾಲು ಪಾಲಿನ ಹೆಂಚಿನ ಮನೆಯಲ್ಲ, ಮುಕ್ಕಾಲು ಪಾಲಿನ ಸೋಗೆಮನೆ. ಹಿರಿಯವರೂ, ಯಜಮಾನರೂ, ಸಂಪಾದನೆಯ ಮತ್ತು ಕೂಡಿಡುವ ವಿಚಾರದಲ್ಲಿ ಅದ್ಭುತ ಕರ್ತೃತ್ವಶಾಲಿಗಳೂ ಆಗಿದ್ದ ಸುಬ್ಬಣ್ಣ ಹೆಗ್ಗಡೆಯವರಿಗೆ ಆಸ್ತಿಯಲ್ಲಿ ಬಂದಿದ್ದಂತೆ ಮನೆಯಲ್ಲಿಯೂ ಮುಕ್ಕಾಲು ಪಾಲು ಬಂದಿತ್ತು. ಬಹುಕಾಲದ ಹಿಂದೆಯೆ ಗತಿಸಿಹೋಗಿದ್ದ ಅವರ ಅಣ್ಣನ ಮಗ ಶಂಕರ ಹೆಗ್ಗಡೆಯವರಿಗೆ ಕಾಲು ಪಾಲು ಸಿಕ್ಕುವುದೂ ಶ್ರಮಸಾಧ್ಯವಾಯಿತೆಂದ ಮೇಲೆ ಸುಬ್ಬಣ್ಣ ಹೆಗ್ಗಡೆಯವರ ಇದಿರಾಗಲಿ ಅಥವಾ ಅವರ ಮಗ ತಿಮ್ಮಪ್ಪ ಹೆಗ್ಗಡೆಯವರ ಇದಿರಾಗಲಿ 'ಹೆಂಚಿನ ಮನೆ' 'ಸೋಗೆಮನೆ' ಎಂದು ಯಾರೂ ಮಾತಾಡುತ್ತಿರಲಿಲ್ಲ. ಅಂತಹ ಸನ್ನಿವೇಶಗಳಲ್ಲಿ ಅವರು ಉಪಯೋಗಿಸುತ್ತಿದ್ದ ಹೆಸರು 'ದೊಡ್ಡ ಮನೆ' 'ಸಣ್ಣ ಮನೆ'.

ಒಟ್ಟಾಗಿದ್ದ ಮನೆ ಒಡೆದುಹೋಗುವುದಕ್ಕೆ ಮುಖ್ಯ ಕಾರಣವಾಗಿದ್ದುದು ತಿಮ್ಮಪ್ಪ ಹೆಗ್ಗಡೆ. ಆತನು ಶಂಕರ ಹೆಗ್ಗಡೆಯವರಿಗಿಂತಲೂ ಬಹಳ ಕಿರಿಯವನು. ಇನ್ನೂ ಮದುವೆಯಾಗಿರಲಿಲ್ಲ. ಶಂಕರ ಹೆಗ್ಗಡೆಯವರಿಗೆ ಮದುವೆಯೂ ಆಗಿ ಮಕ್ಕಳೂ ಆಗಿತ್ತು. ಅಷ್ಟೊಂದು ಅಸಮಾನ ವಯಸ್ಕರಾಗಿದ್ದರೂ ಅವನಿಗೆ ಶಂಕರ ಹೆಗ್ಗಡೆಯವರ ಮೇಲೆ ಸಹಿಸಲಾರದ ಹೊಟ್ಟೆಕಿಚ್ಚು. ಅಚ್ಚ ಕರ್ರಗಿದ್ದ ಅವನಿಗೆ ಶಂಕರಣ್ಣಯ್ಯನ ಬಿಳಿ ಮೈ ಕಂಡರಾಗುತ್ತಿರಲಿಲ್ಲ. ತನ್ನ ತಂದೆಯಂತೆಯ ಕುಳ್ಳಾಗಿದ್ದ ಆತನಿಗೆ ದೊಡ್ಡಪ್ಪನ ಮಗನ ಎತ್ತರವನ್ನು ಕಂಡರೆ ಸಹಿಸುತ್ತಿರಲಿಲ್ಲ. ತನ್ನ ಹಲ್ಲು ಯದ್ವಾತದ್ವಾ ಹುಟ್ಟಿ ಹುಳು ಹಿಡಿದಿರುವಾಗ ಶಂಕರಣ್ಣಯ್ಯನ ಹಲ್ಲು ಬೆಳ್ಳಗೆ ಶುಚಿಯಾಗಿ ಸಾಲಾಗಿ ಏಕಿರಬೇಕು? ಸೌಮ್ಯವಾಗಿದ್ದ ಶಂಕರ ಹೆಗ್ಗಡೆಯವರ ಚೆಲುವಾದ ಕಣ್ಣುಗಳನ್ನು ನೋಡಿದಾಗಲೆಲ್ಲಾ ತಿಮ್ಮಪ್ಪ ಹೆಗ್ಗಡೆಗೆ

ಭಯಂಕರವಾಗಿ ಡೊಳ್ಳುಬ್ಬಿದಂತಿರುವ ತನ್ನ ಮೆಣ್ಣೆಗಣ್ಣಿನ ವಿಕಾರದ ನೆನಪಾಗಿ ಎದೆ ಕುದಿಯುತ್ತಿತ್ತು. ಯಾವ ತರ್ಕದಿಂದಲೊ ಏನೊ ತನಗೆ ಎಲ್ಲ ರೀತಿಯಿಂದಲೂ ಶಂಕರ ಹೆಗ್ಗಡೆಯವರಿಂದ ಅನ್ಯಾಯವಾಗಿದೆ ಎಂಬುದು ಅವನ ತಲೆಗೆ ಹೊಕ್ಕು ಹೋಗಿತ್ತು. ಶಂಕರ ಹೆಗ್ಗಡೆ ತನಗಿಂತಲೂ ಮೊದಲೆ ಹುಟ್ಟಿ ತನಗೆ ಬರಬೇಕಾಗಿದ್ದ ಸಲ್ಲಕ್ಷಣಗಳನ್ನೆಲ್ಲಾ ಸುಲಿದುಕೊಂಡುಬಿಟ್ಟಿದ್ದಾನೆ ಎನ್ನುವಷ್ಟರಮಟ್ಟಿಗೆ ಅವರನ್ನು ಕಂಡರೆ ಅವನಿಗೆ ಆಗುತ್ತಿರಲಿಲ್ಲ.

ತಿಮ್ಮಪ್ಪ ಹೆಗ್ಗಡೆಯ ಕರುಬಿಗೂ ದ್ವೇಷಕ್ಕೂ ಒಳಗಾಗಿದ್ದರೂ ಶಂಕರ ಹೆಗ್ಗಡೆ ವಾಸ್ತವವಾಗಿ ಬಹಳ ಸಾಮಾನ್ಯ ವ್ಯಕ್ತಿ. ಜೋಯಿಸರಾಗಿದ್ದ ಕಲ್ಲೂರು ಮಂಜಯ್ಯನವರ ಪ್ರಭಾವದಿಂದ ಆತನಿಗೆ ಒಂದು ವಿಧವಾದ ಅನುಕರಣದ ಸಂಸ್ಕೃತಿ ಲಭಿಸಿತ್ತು. ಉಳಿದವರು ಶನಿವಾರದ ದಿನ ಮಾತ್ರ ಮಿಂದರೆ ಅವನು ದಿನವೂ ಮೀಯುತ್ತಿದ್ದನು. ಉಳಿದವರ ಬಟ್ಟೆ ಕೊಳೆಯಿಂದ ರಟ್ಟಾಗಿದ್ದರೆ ಅವನದು ಬೆಳ್ಳಗಿರದಿದ್ದರೂ ಹಳ್ಳಿಯ ಹಾರುವರ ಪಾಣಿಪಂಚೆಯಷ್ಟರಮಟ್ಟಿಗಾದರೂ ಶುಚಿಯಾಗಿರುತ್ತಿತ್ತು. ಜೋಯಿಸರು ಹಳೆಮನೆಗೆ ಬಂದಾಗ ಅವರೊಡನೆ ಇತರರಿಂತಲೂ ಸ್ವಲ್ಪ ಹೆಚ್ಚು ಕಾಲ ಮಾತಾಡುತ್ತಿದ್ದದ್ದಲ್ಲದೆ ಅವರನ್ನು ಕಳುಹಿಸುತ್ತಾ ಸ್ವಲ್ಪ ದೂರ ಹೋಗಿ ಹಳ್ಳ ದಾಟಿಸಿ ಬರುತ್ತಿದ್ದನು. ಈ ಎಲ್ಲ ಕಾರಣಕ್ಕಾಗಿ ಜೋಯಿಸರಿಗೂ ಅವನನ್ನು ಕಂಡರೆ ವಿಶ್ವಾಸ. 'ಏನಪ್ಪಾ ಶಂಕರಪ್ಪಾ, ಹೇಗಿದ್ದೀಯಾ?' ಎಂದು ನಗೆಮೊಗದಿಂದ ಕುಶಲಪ್ರಶ್ನೆ ಮಾಡುತ್ತಿದ್ದರು.

ಇದನ್ನೆಲ್ಲಾ ಕಂಡು ಹುಡುಗನಾಗಿದ್ದ ತಿಮ್ಮಪ್ಪ ಹೆಗ್ಗಡೆಗೆ ಕರುಬು ಹೆಚ್ಚಾಯಿತು. ಜೋಯಿಸರ ವಿಶ್ವಾಸ ಸಂಪಾದನೆಗಾಗಿ ಶಂಕರ ಹೆಗ್ಗಡೆಯೊಡನೆ ಪೈಪೋಟಿ ಮಾಡಿದನು. ಅದರ ಪರಿಣಾಮ ವಿಪರೀತವಾಯಿತು. ಅವನ ಕೊಳಕು ಬಟ್ಟೆ, ಹುಳುಕು ಹಲ್ಲು, ಡೊಳ್ಳೇರಿದ ಮೆಳ್ಳೆಗಣ್ಣು, ಯಾವಾಗಲೂ ಅಸಹ್ಯವಾಗಿ ತೆರೆದಿರುತ್ತಿದ್ದ ದಪ್ಪ ತುಟಿ, ತುಟಿಯ ಮೇಲೆ ತೊನ್ನಿನಂತಿದ್ದ ಬಿಳಿಯ ಮಚ್ಚೆ, ಬೆವರಿನ ದುರ್ಗಂಧ, ಮಾತಾಡಿದರೆ ಹಲ್ಲಿನ ಸಂಧಿಗಳಿಂದ ಚಿಮ್ಮುತ್ತಿದ್ದ ಎಂಜಲು ಹನಿ- ಇವುಗಳನ್ನೆಲ್ಲಾ ಸಹಿಸಲು ಪ್ರಯತ್ನಪಟ್ಟರೂ ಸಾಧ್ಯವಾಗದೆ ಮಂಜಯ್ಯ ಜೋಯಿಸರು ಒಂದು ದಿನ ಬಹಳ ಸಂಕೋಚದಿಂದ, ಆದರೂ ಅನಿವಾರ್ಯವಾಗಿ, "ತಿಮ್ಮಪ್ಪ, ನೀನು ಸ್ವಲ್ಪ ದೂರ ನಿಂತುಕೊಂಡು ಮಾತಾಡಪ್ಪಾ" ಎಂದುಬಿಟ್ಟರು. ನಾಲ್ಕು ಮಂದಿಯ ಮುಂದೆ ತನಗಾಗಿದ್ದ ಅವಮಾನಕ್ಕಾಗಿ ಅಂದಿನಿಂದ ಅವನಿಗೆ ಜೋಯಿಸರನ್ನು ಕಂಡರೆ ಆಗುತ್ತಿರಲಿಲ್ಲ. ಜೋಯಿಸರಿಗೆ ನೇರವಾಗಿ ತಾನೇನನ್ನೂ ಮಾಡಲಾರದೆ ಅವರವನಾಗಿದ್ದ ಶಂಕರ ಹೆಗ್ಗಡೆಯ ಮೇಲೆ ಮುಯ್ಯಿ ತೀರಿಸಿಕೊಳ್ಳುತ್ತಿದ್ದನು.

ಮನೆ ಪಾಲಾಗಿ ಶಂಕರ ಹೆಗ್ಗಡೆ ಬೇರೆ ಸಂಸಾರ ಹೂಡಿದ ಮೇಲೆ ತಿಮ್ಮಪ್ಪ ಹೆಗ್ಗಡೆಯ ಮನಸ್ಸಿಗೆ ಸ್ವಲ್ಪ ತೃಪ್ತಿಯಾಯಿತು. ತಮ್ಮ ಪಾಲಿಗೆ ಬಂದಿದ್ದ ಮುಕ್ಕಾಲು ಪಾಲು ಜಮೀನು ಮನೆ ಇತ್ಯಾದಿಗಳಿಂದ ತಾವು ಶ್ರೀಮಂತರೆಂದೂ ದಾಯಾದಿಗಳು ದರಿದ್ರರೆಂದೂ ಹೆಮ್ಮೆ ಹುಟ್ಟಿ ಸಂತೋಷವಾಗಿತ್ತು. ಆದರೆ ಒಂದೇ ವರ್ಷದ ಒಳಗಾಗಿ ಆ ತೃಪ್ತಿಗೂ ದಕ್ಕೆ ತಗುಲಿತು. ಕಾರಣ: ಶಂಕರ ಹೆಗ್ಗಡೆಯ ಏಳಿಗೆ.

ಶಂಕರ ಹೆಗ್ಗಡೆಯ ಹಿಸ್ಸೆಗೆ ಬಂದಿದ್ದ ಕಾಲು ಪಾಲು ಆ ಮನೆಯ ನೀಚಾಂಶವಾಗಿದ್ದರೂ ಕೊಂಚ ಬದಲಾವಣೆಗಳಿಂದ ಅದನ್ನು ಉತ್ತಮಾಂಶವಾಗಿ ಕಾಣುವಂತೆ ಮಾಡಿಕೊಂಡಿದ್ದನು. ಆಗಲೂ ತಂಟೆ ತಕರಾರು ತಂದೊಡ್ಡಲು ಹವಣಿಸಿದ್ದನು ತಿಮ್ಮಪ್ಪ ಹೆಗ್ಗಡೆ. ತಮ್ಮ ಮನೆಗೂ ಅಪಾಯವಾಗುತ್ತದೆಂದು ಅದನ್ನು ಬಲಾತ್ಕಾರವಾಗಿ ನಿಲ್ಲಿಸಲು ಮುಂದುವರಿದಿದ್ದನು. ಸುಬ್ಬಣ್ಣ ಹೆಗ್ಗಡೆಯವರು ಅವನನ್ನು ತಡೆದು ಒಳಗೆ ಕರೆದುಕೊಂಡು ಹೋಗಿ "ನೀ

ಸುಮ್ಮನಿರೊ, ಅವ ಏನಾರೂ ಸಾಯಲಿ; ಗ್ವಾಡೆಗೆ ಕಿಡಕೀನಾದ್ರೂ ಇಡಿಸ್ಲಿ; ಮನೇಗೆ ಕಳಾಸಾನಾದ್ರೂ ಹಾಕಸ್ಲಿ; ಇನ್ನೊಂದು ವರ್ಸದೊಳಗೇ ಸಾಲಮಾಡಿ ದಿವಾಳಿ ತೆಗೆದ್ರೆ ಸೈಯಲ್ಲಾ. ಹಾರ್ರು ಮಾಡಿದ್ದಾಂಗೇ ಬಿಳೀ ಬಟ್ಟೆ ಹಾಕ್ಕೊಂಡು ಜಗಲಿಗೆ ಗಾಳಿ ಬೆಳಕು ಬಿಟ್ಟಕೊಂಡ್ರೆ ಮನೆ ಬಯಲಾಗದೆ ಏಟು ದಿನ ಇದ್ದಾತು!" ಎಂದು ಏಕಾಂತ ಹೇಳಿದ ಮೇಲೆ ಪಾಲುದಾರರ ವಿನಾಶಕ್ಕೆ ತಾನೇಕೆ ತಡೆಯಾಗಬೇಕೆಂದು ತಟಸ್ಥನಾಗಿದ್ದನು. ಆದರೆ ಶಂಕರ ಹೆಗ್ಗಡೆ ತನ್ನ ಪಾಲಿನ ಮನೆಗೆ ಸೋಗೆಗೆ ಬದಲಾಗಿ ಊರು ಹೆಂಚು ಹಾಕಿಸುತ್ತಾನೆಂದು ವಾರ್ತೆ ಹಬ್ಬಿದಮೇಲೆ ತಿಮ್ಮಪ್ಪ ಹೆಗ್ಗಡೆಗೆ ಸಹಿಸಲಾರದಷ್ಟು ಹೊಟ್ಟೆಯುರಿಯಾಯ್ತು. ಅಪ್ಪಯ್ಯನ ಹತ್ತಿರ ಹೋಗಿ "ನಾವೇನು ಕಡಿಮೆ ಅವನಿಗೆ" ಅವ ಮನೀಗೆ ಹೆಂಚು ಹಾಕಿಸೋವಾಗ ನಾವು ಸೋಂಗೆ ಹಾಕಿಸಿಕೊಂಡು ಕಾಲಮಾಡೋದು ಹ್ಯಾಂಗೆ?" ಎಂದು ತಮ್ಮ ಗೌರವಕ್ಕಾಗಿಯಾದರೂ ತಾವೂ ಹೆಂಚು ಹಾಕಿಸಬೇಕೆಂದು ಕೇಳಿಕೊಂಡನು. ಸುಬ್ಬಣ್ಣ ಹೆಗ್ಗಡೆಯವರ ಹುಟ್ಟು ಜಿಪುಣತೆಗೆ ಒದೆ ಬಿದ್ದಂತಾಗಿ, ಹಣೆ ಬಡಿದುಕೊಳ್ಳುತ್ತಾ, "ಅಯ್ಯಯ್ಯಯ್ಯಯ್ಯೊ ನೀ ಎಲ್ ಕಲಿತಪ್ಪಾ ಈ ಮನೆಹಾಳ್ ಬುದ್ದೀನಾ? ನಮ್ಮ ಅಪ್ಪ, ಅಜ್ಜ, ಮುತ್ತಜ್ಜ ಎಲ್ಲಾ ಸೋಂಗೆ ಮನೇಲೆ ಕಾಲ ಹಾಕಲಿಲ್ಲೇನೋ? ಅವರಿಗಿಲ್ದೇ ಇದ್ದ ಬಹುಮಾನಾ ನಿಮಗೆಲ್ಲ ಈಗ ಬಂದುಬಿಡ್ತಲ್ಲೇ? ಅಯ್ಯೋ, ಮನೆಹಾಳ್ ಮುಂಡೆ ಮಕ್ಕಳ್ರಾ, ನೀವು ಬಾಳಿರೇನೋ? ಬೂದಿ ಹುಯ್ಕೊಂಡು ಹೋಗ್ತೀರೋ!" ಎಂದು ಮೊದಲಾಗಿ ಆಶೀರ್ವಾದ ಮಾಡಿ ಕಳುಹಿಸಿದ್ದರು. ತಿಮ್ಮಪ್ಪ ಹೆಗ್ಗಡೆಗೆ ತಂದೆಯ ಮೇಲೆಯೂ ಬಹಳ ಬೇಜಾರಾಗಿ "ನೀನಿನ್ನೆಷ್ಟು ದಿವ್ಸ ಇದ್ದೀಯೊ? ನೀ ಹೋದ ಮೇಲಾದ್ರೂ ನಾ ಹೆಂಚು ಹಾಕ್ಸೋಕೆ ಆಗ್ತದೋ ಇಲ್ಲೋ ನೋಡ್ತೀನಿ" ಎಂದು ಮನದಲ್ಲಿಯೆ ಬುಸುಗುಟ್ಟಿದ್ದನು.

ಹೀಗಿರುತ್ತಿರುವಾಗಲೆ ಶಂಕರ ಹೆಗ್ಗಡೆಯ ಮೇಲೆ ಸೇಡು ತೀರಿಸಿಕೊಳ್ಳುವುದಕ್ಕೆ ಒಂದು ಅವಕಾಶ ಸಿಕ್ಕಿತು. ಸುಬ್ಬಣ್ಣ ಹೆಗ್ಗಡೆಯವರಿಗೆ ಬೇಕಾದಷ್ಟು ಆಸ್ತಿಪಾಸ್ತಿ ನಗನಟ್ಟುಗಳಿದ್ದರೂ ತಿಮ್ಮಪ್ಪ ಹೆಗ್ಗಡೆಗೆ ಹೆಣ್ಣು ಕೊಡುವುದಕ್ಕೆ ಹೆದರುತ್ತಿದ್ದರು. ಹಡೆದ ತಂದೆ ತಾಯಿಗಳು. ಅದಕ್ಕೆ ಕಾರಣ ತಿಮ್ಮಪ್ಪ ಹೆಗ್ಗಡೆಯ ಬಣ್ಣ, ರೂಪ ಮತ್ತು ವಿಕಾರಗಳು ಮಾತ್ರವೇ ಆಗಿರಲಿಲ್ಲ. ಅವನ ಹಿಂಸಾ ಸ್ವಭಾವ, ಕ್ರೂರಬುದ್ಧಿ, ದುಷ್ಟ ಪ್ರಾಣಿಗೆ ಸಹಜವಾದ ಕಾಡುತನ ಇವುಗಳ ಪ್ರಸಿದ್ಧಿ ಅನೇಕರ ಕಿವಿಗೆ ಬಿದ್ದಿತ್ತು. ಅದೂ ಅಲ್ಲದೆ ಸುಬ್ಬಣ್ಣ ಹೆಗ್ಗಡೆಯವರು ತಮ್ಮ ಮನೆಯ ಹೆಂಗಸರಿಗೆ ಸೋಮಾರಿತನದಿಂದಿರುವುದಕ್ಕೆ ಸ್ವಲ್ಪವೂ ಅವಕಾಶ ಕೊಡುತ್ತಿರಲಿಲ್ಲ. ಎಂದರೆ ಅಡುಗೆ ಮಾಡುವುದೇ ಮೊದಲಾದ ಮನೆಯೊಳಗಿನ ಕೆಲಸಗಳ ಜೊತೆಗೆ ಅವರ ಕೈಲಿ ಮನೆಗೆ ಕಟ್ಟಿಗೆ ಹೊರಿಸುತ್ತಿದ್ದರು; ಕೊಟ್ಟಿಗೆಗೆ ಸೊಪ್ಪು ತರಗು ಹೊರಿಸುತ್ತಿದ್ದರು; ಗದ್ದೆಗೆ ಗೊಬ್ಬರ ಹಾಕಿಸುತ್ತಿದ್ದರು; ಸಸಿ ನಡಿಸುತ್ತಿದ್ದರು; ಕಳೆ ಕೀಳಿಸುತ್ತಿದ್ದರು. ಅದೂ ಇದೂ ಏನು? ಗೃಹಿಣಿಯರಿಂದ ಗೃಹಕಾರ್ಯಗಳೆಲ್ಲವನ್ನೂ ಚಾಚೂ ತಪ್ಪದೆ ಮಾಡಿಸುತ್ತಿದ್ದರು! ಎಂಟು ದಿನಕ್ಕೊಮ್ಮೆಯಲ್ಲದೆ ಮೀಯಗೊಡುತ್ತಿರಲಿಲ್ಲ. ಕೊಡುತ್ತಿದ್ದುದು ಜಡ್ಡು ಸೀರೆ. ಅದನ್ನೂ ಹರಡು ಮುಚ್ಚುವಂತೆ ಉಟ್ಟುಕೊಂಡರೆ ಗ್ರಹಚಾರ ಬಿಡಿಸುತ್ತಿದ್ದರು. 'ಒಕ್ಕಲು ಮಕ್ಕಳಿಗೆ ಮೊಳಕಾಲು ಮುಚ್ಚಿದರೆ ಸಾಕು. ಬಿರಾಂಬರು ಉಟ್ಟ ಹಾಂಗೆ ಉಟ್ಟರೋ ಮನೆ ತೊಳೆದು ಹೋಗ್ತದೆ' ಎಂದು ಮುಖದ ಮೇಲೆ ನೀರಿಳಿಯುವಂತೆ ಬಯ್ಯುತ್ತಿದ್ದರು. ಈ ಎಲ್ಲಾ ಕಾರಣಗಳಿಗಾಗಿ ಹಳೆಮನೆಗೆ ಹೆಣ್ಣು ಕೊಡಲು ಜನ ಹೆದರುತ್ತಿದ್ದರು.

ಒಮ್ಮೆ ಸಿಂಬಾವಿ ಭರಮೈ ಹೆಗ್ಗಡೆಯವರು ತಮ್ಮ ನೆಂಟಬಾವ ಶಂಕರ ಹೆಗ್ಗಡೆಯವರ ಮನೆಗೆ ಬಂದಿದ್ದಾಗ ಸುಬ್ಬಣ್ಣ ಹೆಗ್ಗಡೆಯವರು ಅವರನ್ನು ಕಳ್ಳಿನ ಉಪಚಾರಕ್ಕೆ ಕರೆದಿದ್ದರು. ಸುಬ್ಬಣ್ಣ ಹೆಗ್ಗಡೆಯವರು ಇಳಿವಯಸ್ಸಿನವರಾಗಿದ್ದರೂ ನಡುವಯಸ್ಸಿನವಾಗಿದ್ದ ಭರಮೈ ಹೆಗ್ಗಡೆಯವರಲ್ಲಿ ಬಹಳ ಸಲಿಗೆ. ಬಹು ವಿಷಯಗಳಲ್ಲಿ ಅವರಿಬ್ಬರೂ ಸಮಪ್ರಕೃತಿಯವರಾಗಿದ್ದುದೇ ಅವರ ಸ್ನೇಹಕ್ಕೆ ಮೂಲಕಾರಣ. ಆ ಸ್ನೇಹಕ್ಕೆ ಶಾಶ್ವತ ಬಾಂಧವ್ಯದ

ಮುದ್ರೆಯನ್ನೊತ್ತುವ ಸಲುವಾಗಿಯೇ ಶಂಕರ ಹೆಗ್ಗಡೆಯ ತಂಗಿ ಜಟ್ಟಮ್ಮನನ್ನು, ಹಳೆ ಮನೆ ಪಾಲಾಗುವುದಕ್ಕೆ ಮೂರು ನಾಲ್ಕು ವರ್ಷಗಳ ಮುಂಚೆ, ಭರಮೈ ಹೆಗ್ಗಡೆಯವರಿಗೆ ಧಾರೆಯೆರೆದುಕೊಟ್ಟಿದ್ದರು.

ಕಳ್ಳು ಕುಡಿಯುತ್ತಾ ಕುಡಿಯುತ್ತಾ ಸುಬ್ಬಣ್ಣ ಹೆಗ್ಗಡೆಯವರು ತಮ್ಮ ಮಗನ ಮದುವೆಯ ಪ್ರಸ್ತಾಪವೆತ್ತಿ ಭರಮೈ ಹೆಗ್ಗಡೆಯವರ ತಂಗಿ ಲಕ್ಕಮ್ಮನನ್ನು ತಂದುಕೊಳ್ಳುವ ಇಚ್ಛೆಯನ್ನು ಸೂಚಿಸಿದರು. ಸಿಂಬಾವಿ ಹೆಗ್ಗಡೆಯವರಿಗೂ ಬಹುದಿನಗಳಿಂದ ಮನಸ್ಸಿನಲ್ಲಿ ಒಂದು ಕೊರತೆ ಕೊರೆಯುತ್ತಿತ್ತು. ಜಟ್ಟಮ್ಮಗೆ ಇದುವರಿಗೂ ಮಕ್ಕಳಾಗಿರಲಿಲ್ಲವಾದ್ದರಿಂದ ಮತ್ತೊಂದು ಮದುವೆಯಾಗುವ ಆಸೆ ಅವರಲ್ಲಿ ಆಗತಾನೆ ಕಣ್ದೆರೆಯುತ್ತಿತ್ತು. ಹಳೆಮನೆ ಹೆಗ್ಗಡೆಯವರ ಸೂಚನೆ ಅವರಿಗೆ ದೈವೇಚ್ಛೆಯಂತೆಯೇ ತೋರಿ, ತಮ್ಮ ಮನಸ್ಸನ್ನು ಬಿಚ್ಚಿ ಹೇಳಿದರು; ಸುಬ್ಬಣ್ಣ ಹೆಗ್ಗಡೆಯವರ ಕಿರಿಯ ಮಗಳೂ ತಿಮ್ಮಪ್ಪ ಹೆಗ್ಗಡೆಯ ತಂಗಿಯೂ ಆದ ಮಂಜಮ್ಮನನ್ನು ತಮಗೆ ತಂದುಕೊಂಡು ತಮ್ಮ ತಂಗಿ ಲಕ್ಕಮ್ಮನನ್ನು ತಿಮ್ಮಪ್ಪ ಹೆಗ್ಗಡೆಗೆ ಕೊಡಲು ಅಡ್ಡಿಯಿಲ್ಲ ಎಂದು. ಸುಬ್ಬಣ್ಣ ಹೆಗ್ಗಡೆಯವರು ಯಾವುದನ್ನೂ ಹಿಂದಿನಿಂದ ತಿಳಿಸುತ್ತೇನೆ ಎಂದಿದ್ದರು. ಮಗಳ ಮೇಲಿನ ಕನಿಕರದಿಂದ ಭರಮೈ ಹೆಗ್ಗಡೆಯವರಿಗೆ ಆಕೆಯನ್ನು ಬಲಿಕೊಡಲು ಅವರು ತಟಕ್ಕನೆ ಒಪ್ಪಿಕೊಳ್ಳದೆ ಅಡ್ಡಗೋಡೆಯ ಮೇಲೆ ದೀಪ ಇಟ್ಟಿದ್ದರು.

ಆದರೆ ಅಂತಹ ವಿಷಯಗಳಲ್ಲೆಲ್ಲ ವಾಡಿಕೆಯಾಗಿ ನಡೆಯುವಂತೆ ಆ ರಹಸ್ಯ ಬಹಳ ಕಾಲ ರಹಸ್ಯವಾಗಿರಲಿಲ್ಲ. ಪಿಸುಮಾತಾಗಿ ಕಿವಿಗೆ ಬಿದ್ದು ಗುಸು ಗುಸು ಹರಡುತ್ತಿತ್ತು. ಹಾಗೆ ಹರಡುವುದಕ್ಕೆ ಇತ್ತ ಕಡೆಯಿಂದ ತಿಮ್ಮಪ್ಪ ಹೆಗ್ಗಡೆಯೂ ಅತ್ತ ಕಡೆಯಿಂದ ಭರಮೈ ಹೆಗ್ಗಡೆಯವರೂ ಕಾರಣರಾಗಿದ್ದರು. ಸುದ್ದಿ ಕಿವಿಗೆ ಬಿದ್ದೊಡನೆಯೆ ಎದೆಗೆ ಸಿಡಿಲು ಬಿದ್ದಂತಾಗಿ ಜಟ್ಟಮ್ಮ ಹಳೆಮನೆಗೆ ಬಂದು ತನ್ನಣ್ಣನನ್ನು "ಏನೋ ಸುದ್ದಿ ಹಬ್ಬಿದೆಯಲ್ಲಾ ಹೌದೆ?" ಎಂದು ವಿಚಾರಿಸಿದಳು. ಶಂಕರ ಹೆಗ್ಗಡೆಯವರು "ಸುದ್ದಿಯೇನೋ ಹಬ್ಬಿದೆ. ಆದರೆ ನನಗೊಂದೂ ಗೊತ್ತಿಲ್ಲ. ಚಿಕ್ಕಪ್ಪಯ್ಯನನ್ನೇ ಹೋಗಿ ಕೇಳು" ಎಂದರು.

"ನನಗೇನು ಅಂಜಿಕೆ? ಹೋಗಿ ಕೇಳ್ತೀನಿ" ಎಂದು ಜಟ್ಟಮ್ಮ ಆಚೆಮನೆಗೆ ಹೋದಳು.

ಮನೆ ಪಾಲಾಗುವುದಕ್ಕೆ ಮೊದಲೆ ಮದುವೆಯಾಗಿ ಗಂಡನ ಮನೆಗೆ ಹೋಗಿದ್ದ ಜಟ್ಟಮ್ಮನಿಗೆ ಮನೆ ಪಾಲಾದ ಮೇಲೆಯೂ ಸುಬ್ಬಣ್ಣ ಹೆಗ್ಗಡೆಯವರಲ್ಲಿ ಮೊದಲಿನಿಂದಲೂ ತನಗಿದ್ದ ಸಲಿಗೆಗೆ ಊನ ಬಂದಿರಲಿಲ್ಲ.

ಸುಬ್ಬಣ್ಣ ಹೆಗ್ಗಡೆಯವರು ಜಟ್ಟಮ್ಮನನ್ನು ಆದರದಿಂದ ಬರಮಾಡಿಕೊಂಡರು. ಅಕ್ಕರೆಯಿಂದ ಮಾತಾಡಿಸಿದರು. ಆ ಸುದ್ದಿಯ ವಿಚಾರ ಮಾತು ಬಂದಾಗ "ಅಯ್ಯೋ ಜಟ್ಟೂ, ನಿನಗೇನು ಬಿರಾಂತೇನೆ? ಏನೋ ಮಾತಿಗೆ ಮಾತು ಬಂತು. ಅತ್ತ ಹೋಗೊ ಮಾತು ಇತ್ತ ಹೋಯ್ತು!" ಎಂದು ನಗುತ್ತಾ ಕುಟ್ಟೊರಳಲ್ಲಿ ಅಡಕೆ ಕುಟ್ಟತೊಡಗಿದ್ದರು. ಜಟ್ಟಮ್ಮನಿಗೆ ಮನಸ್ಸು ಸಮಾಧಾನವಾಗಿ ಗಂಡನ ಮನೆಗೆ ಹಿಂತಿರುಗಿದ್ದಳು.

ಹಿಂತಿರುಗಿದ ಮೇಲೆ ಬಹಳ ಆಲೋಚಿಸಿದಳು: ಇವರು ಎರಡನೆ ಮದುವೆ ಆಗುವುದೇತಕ್ಕೆ? ನನಗೆ ಮಕ್ಕಳಾಗಲಿಲ್ಲ ಎಂದಲ್ಲವೇ? ನಾನು ಸತ್ತಮೇಲಾದರೂ ರಗಳೆಯಿರಲಿಲ್ಲ. ಈಗ ನಾನೇ ಹೋಗಿ, ನಮ್ಮ ದಾಯಾದಿಗಳ ಮನೆ ಹೆಣ್ಣು

ಕೇಳಿ ಇವರಿಗೆ ಮತ್ತೊಂದು ಮದುವೆ ಮಾಡಿಸಿ, ಸವತಿಯನ್ನು ಮನೆದುಂಬಿಸಿಕೊಳ್ಳಬೇಕೆಂದರೆ ಅದಕ್ಕಿಂತಲೂ ಕೆರೆ ಬಾವಿ ತಳ ನೋಡುವುದು ಲೇಸು.

ಆಮೇಲೆ ತನಗೆ ಬೇಗನೆ ಮಕ್ಕಳಾಗುವುದಕ್ಕೆ ಧಾರ್ಮಿಕ ಕಾರ್ಮಿಕ ಉಪಾಯಗಳನ್ನೆಲ್ಲಾ ಕೈಕೊಂಡಳು. ದೇವರು ದಿಂಡರಿಗೆ ಹೇಳಿಕೊಂಡಳು. ಮತ್ತು ಮೇಗರವಳ್ಳಿಯಲ್ಲಿ ಮಲೆಯಾಳದ ಪಂಡಿತರೆಂದು ಪ್ರಸಿದ್ಧಿ ಪಡೆದಿದ್ದ ಕಣ್ಣಾ ಪಂಡಿತರಿಂದ ಔಷಧ ತರಿಸಿಕೊಂಡಳು. ಅಲ್ಲದೆ ಗಂಡನ ತಂಗಿ ಲಕ್ಕಮ್ಮನೊಡನೆ ಜಗಳವನ್ನೂ ಹೆಚ್ಚಿಸಿದಳು.

“ಹಂದೀ ಒಡ್ಡೀಗೆ ಹಾಕ್ತಾರಂತಲ್ಲೇ ನಿನ್ನಾ” ಎಂದು ಜಟ್ಟಮ್ಮ ಹೀನೈಸಿದರೆ, ಲಕ್ಕಮ್ಮ “ಹಂದೀ ಒಡ್ಡಿನಿಂದಲೇ ಬರ್ತದಂತಲ್ಲಾ ನಿನ್ನ ತವತಿ!” ಎಂದು ಅತ್ತಿಗೆಯ ಕುತಿಗೆ ಹಿಸುಕುವಂತೆ ಮಾತಾಡುತ್ತಿದ್ದಳು.

ಅವರಿಬ್ಬರ ಮಾತಿನ ತೋರುಬೆರಳೂ ಹಳೆಮನೆಯಲ್ಲಿ ಸೋಗೆ ಪಾಲಿನವರು ಸಾಕುತ್ತಿದ್ದ ಹಂದಿಗಳನ್ನು ಕುರಿತದ್ದಾಗಿತ್ತು. ಸುಬ್ಬಣ್ಣ ಹೆಗ್ಗಡೆಯವರ ಮನೆಯ ಮುಂದೆಯೇ ಹಂದಿಗಳಿಗೆ ಒಡ್ಡಿಗಳನ್ನು ಮಾಡಿದ್ದರಿಂದ ಎಲ್ಲಿ ನೋಡಿದರೂ ಗಲೀಜಾಗಿ ಗಬ್ಬುವಾಸನೆ ಸದಾ ಹಬ್ಬಿರುತ್ತಿತ್ತು. ಜನಿವಾರದವರಂತೂ ಅವರಲ್ಲಿಗೆ ಸಾಲಕ್ಕಾಗಿಯಾಗಲಿ ಇತರ ಕಾರ್ಯಗಳಿಗಾಗಲಿ ಹೋದಾಗ ಮೂಗು ಮುಚ್ಚಿಕೊಂಡು ತುದಿಗಾಲಲ್ಲಿ ನಡೆಯುತ್ತಾ ಉಗುಳುತ್ತಾ ಜಗಲಿಗೆ ಓಡುತ್ತಿದ್ದರು.

ಸುಬ್ಬಣ್ಣ ಹೆಗ್ಗಡೆಯವರಿಗೆ ಮಾತ್ರ ಸ್ವಲ್ಪವೂ ಅಸಹ್ಯವಾಗುತ್ತಿರಲಿಲ್ಲ. ಅವರಿಗೆ ಕೋಳಿ ಒಡ್ಡಿ, ಕುರಿಒಡ್ಡಿ, ಹಂದಿಒಡ್ಡಿಗಳೆಂದರೆ ಗದ್ದೆ ತೋಟಗಳಷ್ಟೆ ಮುಖ್ಯವಾಗಿದ್ದುವು; ಅಮೂಲ್ಯವಾಗಿದ್ದುವು. ಸಹಸ್ರಾರು ರೂಪಾಯಿಗಳಿಗೆ ಸ್ವಾಮಿಯಾಗಿದ್ದರೂ ಕಂಬಳಿ ಹೊದೆದುಕೊಂಡು, ಕೊಳಕಲು ಪಂಚೆಯೊಂದನ್ನು ಮೊಳಕಾಲಿನವರೆಗೆ ಸುತ್ತಿಕೊಂಡು, ಕುಟುಂಬದ ಯೋಗಕ್ಷೇಮವನ್ನು ವಿಚಾರಿಸುವುದಕ್ಕಿಂತಲೂ ಸಾವಿರ ಪಾಲು ಹೆಚ್ಚಿನ ಮಮತೆಯಿಂದಲೂ ಕುತೂಹಲದಿಂದಲೂ ಆ ಪ್ರಾಣಿಗಳ ಯೋಗಕ್ಷೇಮವನ್ನು ವಿಚಾರಿಸಿಕೊಳ್ಳುತ್ತಾ ಸೇವೆ ಮಾಡುತ್ತಿದ್ದರು. ಅವುಗಳಿರುವ ಒಡ್ಡಿಗಳು ಕಣ್ಣಿನಿಂದ ಮರೆಯಾಗಿದ್ದರೆ ಮನಸ್ಸಿನಿಂದಲೂ ಎಲ್ಲಿಯಾದರೂ ಮರೆಯಾಗಿ ಬಿಟ್ಟಾವು ಎಂಬ ಅಳುಕಿನಿಂದಲೇ ಜಗಲಿಯ ಎದುರುಗಡೆ, ನೇರವಾಗಿ ಕಾಣುವಂತೆ, ಒಡ್ಡಿಗಳನ್ನೆಲ್ಲಾ ಕಟ್ಟಿಸಿದ್ದರು.

ಜನರು ತಮ್ಮನ್ನು ನೋಡಿ ಒಳಗೊಳಗೆ ಇಸ್ಸಿ ಎಂದುಕೊಂಡರೆ, ಮುದುಕರಾಗಿದ್ದ ಸುಬ್ಬಣ್ಣ ಹೆಗ್ಗಡೆಯವರಿಗೆ ಅದು ಲಕ್ಷಕ್ಕೇ ಬರುತ್ತಿರಲಿಲ್ಲ. ಬಂದರೂ ಅಂಥವರನ್ನು ಕಂಡು ಕನಿಕರಪಡುತ್ತಿದ್ದರೇ ಹೊರತು ತಾವೇ ನಾಚಿಕೆ ಪಟ್ಟುಕೊಳ್ಳುವಷ್ಟರ ಮಟ್ಟಿಗೆ ಸೂಕ್ಷ್ಮ ರುಚಿಗಳಾಗಿರಲಿಲ್ಲ ಅವರು.

* * *

## ೬

ಮುಪ್ಪಿಗೆ ಇರುಳೆಂದರೆ ಅನಿವಾರ್ಯವಾದ ಒಂದು ಮಹಾ ಈತಿಬಾಧೆ. ಸಾವಿನ ಅನಂತ ನಿದ್ರೆ ಬಳಿಸಾರುವುದರಿಂದಲೋ ಏನೋ ಬಾಳೆಲ್ಲ ದುಃಸ್ವಪ್ನವೆಂಬಂತೆ ಆಯಾಸಕರವಾಗಿ ಪರಿಣಮಿಸುತ್ತದೆ. ಇಷ್ಟವಿರಲಿ ಬಿಡಲಿ ಮರಣಕ್ಕೆ ಮುಳುಗಲೇ ಬೇಕಾಗುತ್ತದೆ ಎಂಬ ಅರಿವಿನಿಂದ ಮೈದೋರುವ ಆತ್ಮದ ಅಶಾಂತಿ ನಿರಾಕಾರವಾಗಿದ್ದರೂ ಸಾಂಸಾರಿಕವಾದ ನೂರಾರು ಕೋಟಲೆಗಳ ಆಕಾರ ತಾಳಿ ನಿದ್ದೆಯನ್ನೆಲ್ಲಾ ಕದಡಿಬಿಡುತ್ತದೆ. ಅದರಲ್ಲಿಯೂ ದೇವರು, ಧರ್ಮ, ಕಲೆ, ಸಂಸ್ಕೃತಿ ಇತ್ಯಾದಿಗಳಿಂದ ದೂರವಾಗಿ, ಹಗಲೂ ಬೈಗೂ ಐಹಿಕ ಸಂಪತ್ತಿನ ಸಂಪಾದನೆ ಮತ್ತು ಸಂರಕ್ಷಣೆಗಳಲ್ಲಿಯೇ ಮನಸ್ಸು ಮುಳುಗಿ, ಕ್ರಿಯಾಪೂರ್ಣ ನಾಸ್ತಿಕತೆಯ ಸಜೀವ ಸಾಹಸಕ್ಕಿಂತಲೂ ಸಾವಿರ ಪಾಲು ನಿರ್ಜೀವವಾದ ಸಂಪ್ರದಾಯದ ಆಸ್ತಿಕತೆಯ ಮಂದ ಔದಾಸೀನ್ಯದ ಮೃತ್ಯುವಿಗೆ ತುತ್ತಾದ ಮುದುಕನಿಗಂತೂ ಇರುಳೆಂದರೆ ನರಕಶಿಕ್ಷೆ. ಸಹಧರ್ಮಿಣಿಯ ಸೇವೆಯೂ ಆಕೆಯ ಮರಣದಿಂದ ನಷ್ಟವಾಗಿದ್ದರಂತೂ ಮನಸ್ಸಿನ ಖಾಲಿ ಪಿಶಾಚಿಯ ಕಾರ್ಖಾನೆಯಾಗುತ್ತದೆ.

ಅಂತಹ ಪಿಶಾಚಿಯ ಕಾರ್ಖಾನೆಯಿಂದ ತಪ್ಪಿಸಿಕೊಳ್ಳಲು ಪ್ರಯತ್ನಿಸಿ ಹಳೆಮನೆ ಸುಬ್ಬಣ್ಣ ಹೆಗ್ಗಡೆಯವರು ಬೆಳಗಾಗುವುದಕ್ಕೆ ಬಹಳ ಮುಂಚೆಯೆ ಏಳುತ್ತಿದ್ದರು. ಆವೊತ್ತೂ ಕಡೆಯ ಜಾವದ ಮೊದಲ ಪಾದದಲ್ಲಿಯೆ ಎದ್ದಿದ್ದರು. ಹಿಂದಿನ ದಿನ ಬೈಗಿನಲ್ಲಿ ಬಹಳ ಜೋರಾಗಿ ಮುಂಗಾರು ಮಳೆ ಬಿದ್ದಿದ್ದರಿಂದ ಬೆಳಗಿನ ಜಾವದ ಹವಾ ಬಹಳ ತಂಪಾಗಿತ್ತು. ಮುಪ್ಪಿನ ಮೈಗೆ ಅದು ಚಳಿಚಳಿಯಾಗಿ ಕಂಡದ್ದರಿಂದ ಸುಬ್ಬಣ್ಣ ಹೆಗ್ಗಡೆಯವರು ತಮ್ಮ ಕಗ್ಗವಿ ಕೋಣೆಯಿಂದ ಜಗಲಿಗೆ ಬಂದವರು, ಅಲ್ಲಿಯೆ ಕೆಸರಲಿಗೆಯ ಮೇಲೆ, ವಾಡಿಕೆಯ ಜಾಗದಲ್ಲಿ ವಾಡಿಕೆಯಂತೆ ಮುಂಡಿಗೆಗೆ ಒಡಗಿಕೊಂಡು, ಹೊದೆದಿದ್ದ ಕಂಬಳಿಯನ್ನು ಇನ್ನೂ ಸ್ವಲ್ಪ ಬಲವಾಗಿ ಸುತ್ತಿ ಹೊದೆದು, ಕತ್ತಲೆಯಲ್ಲಿಯೆ ಕೈತಡವಿ ಕುಟ್ಟೊರಳನ್ನೂ ಎಲೆಯಡಿಕೆಯ ಚೀಲವನ್ನೂ ಹತ್ತಿರಕ್ಕೆ ಎಳೆದು, ಚೀಲದಿಂದ ಕೈಯಂದಾಜಿನ ಮೇಲೆ ಗಂಡಡಿಕೆಯೊಂದನ್ನು ಆಯ್ದು ತೆಗೆದು, ಉಫ್ ಎಂದು ಊದಿ, ಲೋಹದ ಕುಟ್ಟೊರಳಿಗೆ ಟಣಕ್ಕನೆ ಹಾಕಿ, ಕುಟ್ಟತೊಡಗಿದರು. ಬಹಿರ್ಮುಖ ಜೀವದ ಮುಪ್ಪಿನ ಭಾಗಕ್ಕೆ ಮೌನವು ಮಹಾಪಿಶಾಚಿ. ಕುಟ್ಟವ ಸದ್ದಿಗೆ ಆ ಪಿಶಾಚಿ ತೊಲಗಿದಂತಾಗಿ ಹೆಗ್ಗಡೆಯವರಿಗೆ ಎದೆ ಭಾರ ಕಡಿಮೆಯಾಗಿ ಮನಸ್ಸಿಗೆ ಧೈರ್ಯವಾಯಿತು; ನೆಮ್ಮದಿಯೂ ಆಯಿತು.

ಬೇರೆ ಇನ್ನಾವ ಸದ್ದೂ ಇರದೆ ನಿಃಶಬ್ದವಾಗಿದ್ದ ಹಳೆಮನೆಯ ಆ ವಟಾರದಲ್ಲಿ ಸುಬ್ಬಣ್ಣ ಹೆಗ್ಗಡೆಯವರ ಕುಟ್ಟೊರಳಿನ ಸದ್ದೊಂದೇ ಸಾಮ್ರಾಟವಾಗಿತ್ತು.

ತುಸುಹೊತ್ತಿನಲ್ಲಿಯೆ ಜಗಲಿಗೆ ಎದುರಾಗಿ ಅಂಗಳದಲ್ಲಿದ್ದ ಒಡ್ಡಿಗಳಲ್ಲಿಯೂ, ಒಡ್ಡಿಗಳ ಹಿಂದಿದ್ದ ಕೊಟ್ಟಿಗೆಯಲ್ಲಿಯೂ ಗೊರಸಿನ ಸದ್ದು, ಕೊಂಬಿನ ಸದ್ದು, ದೊಂಟೆಯ ಸದ್ದು, ಹೋತದ ಸೀನಿನ ಸದ್ದು, ಸಲಗನ ಗುರುಗುರು ಸದ್ದು, ಒಂದಾದ ಮೇಲೊಂದು ಕೇಳಿಸತೊಡಗಿತು. ಹಾಗೆಯೆ ತೋಟದ ಬೇಲಿಯಲ್ಲಿಯೂ ಅಥವಾ ಅಮಟೆಯ ಮರದಲ್ಲಿಯೊ ಹಂಡಹಕ್ಕಿಗಳೆರಡು ಸಿಳ್ಳು ಪಡಿಸಿಳ್ಳುಗಳಿಂದ ಪ್ರಣಯ ಸಂಭಾಷಣೆಗೆ ಮೊದಲು ಮಾಡಿದುವು.

ಅದಾದ ಸ್ವಲ್ಪ ಹೊತ್ತಿನಲ್ಲಿಯೆ, ಎಲೆಯುದುರಿ ಬರಲಾಗಿ ಕೆಂಪು ಹೂ ಮಾತ್ರ ತುಂಬಿ ಹೋಗಿದ್ದ ಹಾಲಿವಾಣದ ಮರದಲ್ಲಿ ಎಂದು ತೋರುತ್ತದೆ, ಕಾಜಾಣವೊಂದು ಆಲಾಪನೆಗೆ ತೊಡಗಿತು.

ಸುಬ್ಬಣ್ಣ ಹೆಗ್ಗಡೆಯವರ ಗಮನ ಹಂಡಹಕ್ಕಿಯ ಸಿಳ್ಳಿನ ಕಡೆಗಾಗಲಿ, ಕಾಜಾಣದ ಆಲಾಪನೆಯ ಕಡೆಗಾಗಲಿ ಒಂದಿನಿತೂ ಹೊರಳಿರಲಿಲ್ಲ. ಕುಟ್ಟುವುದನ್ನು ಸ್ವಲ್ಪ ಸಿಲ್ಲಿಸಿ, ಕತ್ತೆತ್ತಿ, ಕಿರುದಿಟ್ಟಿಯಿಂದ ಅಂಗಳದ ಕಡೆಗೆ ನೋಡಿದರು. ಮನೆಯ ಕತ್ತಲೆಯಲ್ಲಿದ್ದ ಅವರಿಗೆ ಬಯಲಿನ ಕತ್ತಲೆಯಲ್ಲಿದ್ದ ಒಡ್ಡಿಗಳ ಆಕೃತಿ ಆಹ್ವಾನಕರವಾಗಿ ಗೋಚರಿಸಿತು. ಒಡ್ಡಿಗಳೊಳಗೆ ಆಗುತ್ತಿದ್ದ ಸದ್ದುಗಳೆಂದರೆ ಹೆಗ್ಗಡೆಯವರಿಗೆ ಬಹುಕಾಲದ ಸಾಧನದಿಂದ ಸಾಕ್ಷತ್ಕಾರವಾಗಿದ್ದು ಅವರಿಗೆ ಮಾತ್ರವೇ ಸಂವೇದ್ಯವಾಗುತ್ತಿದ್ದ ಯಾವುದೋ ಗುಪ್ತ ಲಿಪಿಯ ಸಂಕೇತ ಸ್ವರ ವಿಜ್ಞಾನವಾಗಿತ್ತು. ಊರು ಹಂದಿಯ ದಡ್ಡೆಯ ಸದ್ದೊ, ಸಲಗನ ಸದ್ದೊ, ಮರಿಗಳ ಸದ್ದೊ, ಹೋತನ ಸೀನೊ, ಆಡಿನ ಸೀನೊ, ಕೆಂಪು ಹುಂಜದ ಕೂಗೊ, ತಿಮ್ಮಪ್ಪ ಹೆಗ್ಗಡೆ ಕೋಳಿ ಅಂಕದಲ್ಲಿ ಗೆದ್ದು ತಂದಿದ್ದ ಬಿಳಿ ಸಳಗದ ಕೂಗೊ, ಹೆಗ್ಗಡೆಯವರಿಗೆ ಒಂದೊಂದೂ ಅರ್ಥವಾಗುತ್ತಿತ್ತು; ಭಾವವಾಗುತ್ತಿತ್ತು. ಮಹಾಕವಿ ಮಹಾಛಂದಸ್ಸಿನ ನಾದವಿನ್ಯಾಸವನ್ನು ಸವಿಯುವಂತೆ ಸವಿದು ಸುಖಿಸುತ್ತಲೂ ಇದ್ದರು. ಅಷ್ಟರಮಟ್ಟಿಗೆ ಆ ಒಂದೊಂದು ಸದ್ದಿಗೂ ಅವರ ಭಾವಕೋಶ ಬೆಳೆದುಹೋಗಿತ್ತು.

ಬೆಳಕುಬೆಳಕಾಗಿ ಕತ್ತಲೆ ಹರಿಯತೊಡಗಿತು. ಹೆಗ್ಗಡೆಯವರು ಎಲೆಯಡಿಕೆಯನ್ನು ಜಗಿಯುತ್ತಾ ಗಂಟಲಿನೊಳಗೆ ಯಜಮಾನ ಸದ್ದು ಮಾಡುತ್ತಾ ಕೆಸರಲಿಗೆ ಬಿಟ್ಟೆದ್ದರು. ಗಂಡಲಿನೊಳಗೇ ಕೆಮ್ಮಿನ ವೇಷದಿಂದ ಅವರು ಮಾಡುತ್ತಿದ್ದ ಆ ಯಜಮಾನನ ಸದ್ದೆಂದರೆ ಹಳೆಮನೆಗೆ 'ಅಲಾರಾಂ' ಇದ್ದಂತೆ.

ಸೋಗೆ ಮನೆಯಲ್ಲಿಯೂ ಹೆಂಚಿನ ಮನೆಯಲ್ಲಿಯೂ ಮಲಗಿದ್ದವರು ಎಚ್ಚತ್ತು ಗೃಹ ಕಾರ್ಯಗಳಲ್ಲಿ ತೊಡಗುತ್ತಿದ್ದ ಸದ್ದು ಪ್ರಾರಂಭವಾದುವು. ಮುರುವಿನ ಒಲೆಯ ಬೂದಿ ಗುಡ್ಡೆಯಲ್ಲಿ ಮಲಗಿದ್ದ ಕಂತ್ರಿನಾಯಿಗಳಿಗೂ ನಿದ್ರಾಭಂಗವಾಯಿತು. ಕರೆಯುವ ಕೊಟ್ಟಿಗೆಗೆ ಮುರುಹಾಕುವ ಕರ್ತವ್ಯಕ್ಕೆ ಮರದ ಮರಿಗೆ ಹಿಡಿದು ಬಂದ ಹಳೆಪೈಕದ ಹೂವಿ ದಿನವೂ ಒದರುತ್ತಿದ್ದಂತೆ "ಹಥಾ! ಹಥಾ! ಇವಕ್ಕೇನು ಜ್ಞವನಿದ್ದೆ ಬಂದವಪ್ಪಾ?" ಎಂದು ಗದರಿದಳು. ಪಾಪ. ಒಂದು ಕಂತ್ರಿ ನಾಯಿ ಇನ್ನೂ ಆಕಳಿಸಿ, ಬೆನ್ನು ನೀಳಿ, ಮೈನುರಿದಿರಲಿಲ್ಲ! ಬಿತ್ತು ಒಂದೇಟು, ಮರದ ಮರಿಗೆಯಿಂದಲೆ! ನಾಯಿ ಬೆಚ್ಚಿತೆ ವಿನಾ ಕೂಗಲಿಲ್ಲ! ಇನ್ನೂ ಸರಿಯಾಗಿ ಎಚ್ಚರವಾಗಿರಲಿಲ್ಲ ಅದಕ್ಕೆ, ನೋವನ್ನು ಅನುಭವಿಸಿ ಕೂಗುವುದಕ್ಕೆ! ಬೆಳಗೇನೊ ಆಗಿತ್ತು.

ಸುಬ್ಬಣ್ಣ ಹೆಗ್ಗಡೆಯವರು, ತಮ್ಮ ಕುಳ್ಳಾದ ಗುಜ್ಜು ದೇಹವನ್ನು ಮೊಣಕಾಲಿನವರೆಗೂ ಕರಿಕಂಬಳಿಯಿಂದ ಸುತ್ತಿ, ಭದ್ರವಾಗಿ ಹೊದೆದುಕೊಂಡು ಅಂಗಳಕ್ಕಿಳಿದರು. ಹಿಂದಿನ ದಿನ ಚೌರಮಾಡಿಸಿದ್ದರಿಂದ ಲಾಳದಾಕಾರದಲ್ಲಿ ನುಣ್ಣಗಿದ್ದ ತಲೆಯ ಮುಂಭಾಗಕ್ಕೆ ಶೀತ ತಗುಲಿದಂತಾಗಲು ಮತ್ತೆ ಹಿಂದಕ್ಕೆ ಹೋಗಿ ಒಂದು ಪುರಾತನವಾದ ದಗಲೆತೋಪಿಯನ್ನು ಸಿಕ್ಕಿಸಿಕೊಂಡು ಬಂದರು. ಮಳೆಗೆ ಕೆಸರೇಳುವ ಅಂಗಳದಲ್ಲಿ ಕೆಸರು ತುಳಿಯದೆ ನಡೆಯಲೆಂದು ಸಾಲಾಗಿ ಹಾಕಿದ್ದ ಕಲ್ಲುಗಳ ಮೇಲೆ ನಡೆದು ಒಡ್ಡಿಗಳ ಸಮೀಪ್ಕಕೆ ಹೋದರು.

ಆ ಪ್ರಾಣಿಗಳಿಗೂ ಆ ಪ್ರಾಣಿಯನ್ನು ಕಂಡರೆ ವಿಶ್ವಾಸವೋ ಏನೊ?

ಒಡ್ಡಿಯ ಕಂಡಿಕಂಡಿಗಳಲ್ಲಿ ಗಲಿಬಿಲಿ ಮಾಡುತ್ತಾ ಕೋಳಿ ಕುಣಿದಾಡಿದುವು. ಬಾಗಿಲು ತೆಗೆಯುತ್ತಾರೆಂಬ ಸಂತಸಕ್ಕಾಗಿ ಒಂದರಮೇಲೊಂದು ನಾಮುಂದೆ ತಾಮುಂದೆ ಎಂದು ಒಡ್ಡಿಯ ಕದವಿದ್ದೆಡೆಗೆ ಕುರಿ ನುಗ್ಗತೊಡಗಿದುವು. ಹಂದಿಗಳೂ, ಸಲಗ ದಡ್ಡೆ ಮರಿ ಎಲ್ಲಾ, ಗುರುಗುರು ಗುಟ್ಟುತ್ತಾ ಓಡಾಡಲಾರಂಭಿಸಿದುವು.

ಸುಬ್ಬಣ್ಣ ಹೆಗ್ಗಡೆಯವರು ಹಿಗ್ಗಿನಿಂದಲೆಂಬಂತೆ ತಮ್ಮ ಮೂಕ ಕುಟುಂಬದ ಕಡೆಗೆ ಸ್ವಲ್ಪ ಹೊತ್ತು ನೋಡಿ, ಯಾವ ಒಡ್ಡಿಯ ಬಳಿಗೆ ಮೊದಲು ಹೋಗುವುದೆಂದು ಮನಸ್ಸು ತುಯ್ಯುತ್ತಾ ನಿಂತು, ಕೊನೆಗೆ ಮೊನ್ನೆ ಮೊನ್ನೆ ಮರಿಹಾಕಿದ್ದ ದಡ್ಡೆಯ ಬಾಣಂತಿತನದ ಯೋಗಕ್ಷೇಮವನ್ನೆ ಪ್ರಧಾನವನ್ನಾಗಿ ಭಾವಿಸಿ ಹಂದಿಒಡ್ಡಿಯ ಕಡೆಗೆ ಸರಿದರು.

ಕೆಸರು ತುಳಿಯದಿರುವುದಕ್ಕಾಗಿ ಹಾಕಿದ್ದ ಕಲ್ಲುಗಳಿಂದ ಕೆಳಗಿಳಿಯುತ್ತಲೆ ಕೋಳಿಯ, ಕುರಿಯ, ಹಂದಿಯ ಹೇಸಿಗೆಯೊಡನೆ ಕಲಬೆರಕೆಯಾಗಿದ್ದ ಕೆಸರುಮಣ್ಣು ಕಾಲ್‌ಬೆರಳು ಸಂಧಿಗಳಲ್ಲಿ ಪಿಚಕ್ಕನೆ ನುಗ್ಗತೊಡಗಿದರೂ ಅತ್ತ ಕಡೆಗೆ ಸ್ವಲ್ಪವೂ ಗಮನಕೊಡದೆ ಹೆಗ್ಗಡೆಯವರು ಹಂದಿಯೊಡ್ಡಿಯ ಬಾಗಿಲಿಗೆ ಹೋದರು. ನಿತ್ಯಪರಿಚಯದಿಂದ ಮನಸ್ಸಿನಲ್ಲಿ ಮೈತ್ರಿಯನ್ನೇ ಪ್ರಚೋದಿಸುತ್ತಿದ್ದ ಆ ಮಿಶ್ರವಾಸನೆ ಸ್ನೇಹಿತನ ಆಗಮನದಂತೆ ಸಂತೋಷಕರವಾಯಿತು. ಹೆಗ್ಗಡೆಯವರು ಒಡ್ಡಿಯ ಸುತ್ತಲೂ ಪ್ರದಕ್ಷಿಣೆಮಾಡುತ್ತಾ ಕಂಡಿಗಳಲ್ಲಿ ಕಣ್ಣಿಟ್ಟು ನೋಡತೊಡಗಿದರು. ಮೃಗಶಾಲೆಯಲ್ಲಿ ಪ್ರಾಣಿಗಳ ಗುಂಪನ್ನು ಒಟ್ಟುನೋಡುವ ಪ್ರೇಕ್ಷಕರಂತಲ್ಲ; ತನ್ನ 'ನರಮಂದೆ'ಯಲ್ಲಿ ಒಂದೊಂದು ಕುರಿಯ ಆತ್ಮಕಲ್ಯಾಣವನ್ನೂ ಗಮನಿಸುವ 'ಪಾದ್ರಿ'ಯಂತೆ! ಆಸ್ಪತ್ರೆಯಲ್ಲಿ ಒಬ್ಬೊಬ್ಬ ರೋಗಿಯನ್ನೂ ಕಣ್ಣಿಟ್ಟು ಕಾಣುವ 'ಡಾಕುದಾರ'ನಂತೆ! ಒಂದರ ಕಿವಿಚಟ್ಟೆಯ ಬುಡದ ಗಾಯ; ಇನ್ನೊಂದರ ಕಾಲ್‌ಕೊಳಗಿನ ಬಿರಕು; ಮತ್ತೊಂದರ ಬಾಯಿ ಹುಣ್ಣು; ಒಂದೊಂದನ್ನೂ ಮನಸ್ಸಿಟ್ಟು ನೋಡಿದರು. ಸಮೀಪದಲ್ಲಿ ಮನುಷ್ಯರಾರೂ ಇರದಿದ್ದರೂ ಮುಂದೆ ಆಳುಗಳಿಗೆ ಹೇಳುವುದನ್ನೆಲ್ಲಾ ಅಭ್ಯಾಸಮಾಡಿಕೊಳ್ಳುವಂತೆ ಆಗಾಗ ಬಾಯಲ್ಲಿ ಏನೇನನ್ನೊ ಹೇಳಿಕೊಳ್ಳುತ್ತಿದ್ದರು.

ಒಂದು ನಡು ವಯಸ್ಸಿನ ಮರಿಸಲಗದ ಕಾಮಚೇಷ್ಟೆಯಿಂದ ಇದ್ದಕ್ಕಿದ್ದ ಹಾಗೆ ಒಡ್ಡಿಯೊಳಗೆ ಗಡಬಿಡಿ ಮೊದಲಾಗಲು ಹೆಗ್ಗಡೆಯವರು 'ಎಲಾ ನಿನ್ನ ಸೊಕ್ಕೆ! ಅಲ್ಲಾ, ಆ ಹೂವಳ್ಳಿ ಎಂಕಟಣ್ಣ ನಿನ್ನೆ ಬತ್ತೀನಿ ಅಂದಿದ್ದ. ಬರ್ಲೇ ಇಲ್ಲಾ ಗಿರಾಸ್ತಾ. ಇದ್‌ನೊಂದು ಕೊಟ್ಟ ಹೊರ್ತೂ ಒಡ್ಡೀಗೆ ಸುಖಾ ಇಲ್ಲ" ಎಂದುಕೊಂಡು, ಮಲೆಗಾಡುಗಳ ನಡುವೆ ಕಣಿವೆಯಲ್ಲಿ ಬಹು ದೀರ್ಘವಾಗಿ ಹಬ್ಬಿದ್ದ, ಹಸುರಿನಿತೂ ಇಲ್ಲದ, ಗದ್ದೆಯ ಕೋಗಿನ ಕಡೆಗೆ ದಿಟ್ಟಿನಟ್ಟು ನೋಡತೊಡಗಿದರು.

ಬೆಳ್ಳಗೆ ಬೆಳಗಾಗಿತ್ತು. ಹಿಂದಿನ ದಿನದ ಮಳೆಯಲ್ಲಿ ತೊಯ್ದು ಅಂಚಿನ ಗೆರೆ ಬರೆ ಬರೆಯಾಗಿದ್ದ ಗದ್ದೆಯ ಕೋಗಿನ ಕಂದುಬಣ್ಣವು ಬೂದಿಗಪ್ಪಿಗೆ ತಿರುಗಿತ್ತು. ಆದರೂ ಹಾವು ಹರಿಯುವಂತೆ ಡೊಂಕುಡೊಂಕಾಗಿ ಹರಿದು, ಒಮ್ಮೆ ಅಂಚಿನ ಮೇಲೆ, ಒಮ್ಮೆ ಗದ್ದೆಯ ಮಧ್ಯೆ ಏರಿ ಇಳಿದು ಮುಂಬರಿದು ಬಹುದೂರದಲ್ಲಿ ಗಡಿಬೇಲಿಯ ಮುಂಡುಗದ ಹಿಂಡಲಿನಲ್ಲಿ ಕಣ್ಮರೆಯಾಗಿದ್ದ ಕಾಲುದಾರಿಯ ಸಮೆದ ನುಣ್ಪಿನ ಬೂದುಬಣ್ಣದ ರೇಖೆ, ಅತ್ತ ಕಣ್ಣಾದವನ ದೃಷ್ಟಿಯನ್ನು ತಟಕ್ಕನೆ ಸೆಳೆಯುವಂತೆ, ಪ್ರಧಾನವಾಗಿತ್ತು.

ಹೆಗ್ಗಡೆಯವರು ನೋಡುತ್ತಿದ್ದುದು ಅದನ್ನೆ. ಮಲೆಯ ಹಸುರನ್ನೇ ಸದಾ ನೋಡುತ್ತಿದ್ದ ಆ ಕಣ್ಣಿಗೆ ಮುಪ್ಪಾಗಿದ್ದರೂ ದೃಷ್ಟಿ ಮಂದವಾಗಿರಲಿಲ್ಲ. ಅಥವಾ ದೃಷ್ಟಿ ಸ್ವಲ್ಪ ಮಂದವಾಗಿದ್ದರೂ ಅದಕ್ಕೆ ಕಾರಣದ ಮೂಲ ಕಣ್ಣಿನ ನಿಃಶಕ್ತಿಯಾಗಿರಲಿಲ್ಲ, ಮನಸ್ಸಿನ ಮಾಂದ್ಯವಾಗಿತ್ತು. ಆ ಕಾಲುದಾರಿಯ ದೂರದ ಕೊನೆಯಲ್ಲಿ ಯಾರೋ ನಡೆದು ಬರುವಂತಿತ್ತು. ಹೆಗ್ಗಡೆಯವರು ಹುಬ್ಬು ಸುಕ್ಕಿಸಿ ಕಿರುಗಣ್ಣು ಮಾಡಿ ನೋಡಿದರೂ ಪ್ರಯೋಜನವಾಗಲಿಲ್ಲ. ಹೂವಿಯ ವಕ್ರ ಬೈತಲೆಯ ಗೆರೆಯಲ್ಲಿ ಹರಿದಾಡುವ ಹೇನು ಕೂಡ ಅಷ್ಟು ಅಸ್ಪಷ್ಟವಾಗಿರುತ್ತದೆಯೋ ಇಲ್ಲವೋ! ನೋಡಿ ನೋಡಿ, ಸಾಕಾಗಿ, ಮತ್ತೆ ಗೊಣಗುತ್ತಾ ಒಡ್ಡಿಯ ಕಡೆಗೆ ತಿರುಗಿದರು: "ಅವನೇ ಇರಬೈದು! ದುಡ್ಡಿಟ್ಟು ತಗೊಂಡು ಹೋಗು ಅಂತೀನಿ."

ಆದರೂ ಮನಸ್ಸು ತಡೆಯದೆ ಮತ್ತೆ ಅತ್ತಕಡೆ ತಿರುಗು ನೋಡಿದರು. ಬರುವವರು ಯಾರೆಂದು ಗೊತ್ತಾಗದೆ ಕಣ್ಣಿನ ಮೇಲೆ ಸಿಟ್ಟಿನಿಂದ ಎಂಬಂತೆ "ತಿಮ್ಮೂ! ಏ ತಿಮ್ಮೂ!" ಎಂದು ಕೂಗಿ ಕರೆದರು.

ಆ ಕೂಗಿಗೆ ಒಡ್ಡಿಗಳಲ್ಲಾಗುತ್ತಿದ್ದ ಸದ್ದು ಕ್ಷಣಮಾತ್ರ ನಿಂತು ಮತ್ತೆ ಮುಂಬರಿಯಿತು.

"ತಿಮ್ಮೂ! ಏ ತಿಮ್ಮೂ!" ಇನ್ನೂ ರಭಸದಿಂದ ಕೂಗಿದರು. ಈ ಸಾರಿ ಒಡ್ಡಿಗಳ ಸದ್ದು ನಿಲ್ಲುವುದಕ್ಕೆ ಬದಲಾಗಿ ಮತ್ತೂ ಹೆಚ್ಚಾಯಿತು. ಪಂಜರ ಮೋಕ್ಷಕ್ಕಾಗಿ ಪ್ರಾಣಿಗಳೆಲ್ಲಾ ಒಂದೇ ತಡವೆ ಮುಮುಕ್ಷುಗಳಾಗಿ ನುಗ್ಗತೊಡಗಿದುದರಿಂದ ಗಲಾಟೆ ನೆರೆಯೇರಿತು.

ತಿಮ್ಮಪ್ಪ ಹೆಗ್ಗಡೆ ಓಡೋಡಿ ಬಂದನು. ಮೈಗೆ ಕೆಸರು ಹಾರುತ್ತದೆಂದು ಹೆದರಿ ನೀರು ಚೆನ್ನಾಗಿ ಆರಿದ್ದ ಸ್ಥಳಗಳಲ್ಲಿಯೇ ಜಾಗರೂಕತೆಯಿಂದ ಕಾಲಿಡುತ್ತಿದ್ದುದನ್ನು ನೋಡಿ ಅವನ ತಂದೆ "ಎಲಲಲಲಾ ನಿನ್ನ ಜಂಭಾನೆ! ಹಾರುವರು ಹಾರ್ದಾಂಗೆ ತುದೀ ಬೆಳ್ಳಾಗೆ ಹಾಕ್ಕೋಂಡು ಬತ್ತೀಯಲ್ಲೋ! ಬಿಳೀ ಬಟ್ಟೆ ಕೆಸರಾಗ್ತದಲ್ಲೇನೋ ನಿಂಗೆ?" ಎಂದರು

ಅಪ್ಪ ಈ ರೀತಿ ಮಾತಾಡುವುದು ಮಗನಿಗೇನೂ ಹೊಸದಾಗಿರಲಿಲ್ಲ. ಆದ್ದರಿಂದ ಯಾವುದನ್ನೂ ಗಮನಿಸದಂತೆ ಬಳಿಗೆ ಬಂದು ನಿಂತನು.

"ಏನೋ ನಿನ್ನ ನೆರೆಮನೆ ಅಣ್ಣನಹಾಗೆ ಮಳೆಹಾಳ್ ಚಾಳೀನೆಲ್ಲಾ ಕಲೀತಾ ಬರ್ತೀಯಲ್ಲೊ? ನಿನ್ನ ಈ ಕರೀ ಬೂಲಕ್ಕೆ ಯಾಕೋ ಈ ಬಿಳೀ ಬಟ್ಟೆ?"

ತಿಮ್ಮಪ್ಪ ಹೆಗ್ಗಡೆ ಹುಲ್ಲು ಕಚ್ಚಿಕೊಂಡು ಹೇಳಿದ: "ಕರೆದದ್ದು ಯಾಕೆ?"

ದೂರದಲ್ಲಿ ಗದ್ದೆ ಕೋಗಿನ ಕಾಲುದಾರಿಯಲ್ಲಿ ಬರುತ್ತಿದ್ದ ವ್ಯಕ್ತಿ ಹೂವಳ್ಳಿ ವೆಂಕಟಣ್ಣನೋ ಯಾರೆಂದು ನೋಡಿ ಹೇಳುವುದಕ್ಕಾಗಿಯೇ ಹೆಗ್ಗಡೆಯವರು ಮಗನನ್ನು ಕರೆದಿದ್ದು. ಆದರೆ ಮಗನ ಬಟ್ಟೆಬರೆಗಳನ್ನು ಕಂಡು ಸಿಟ್ಟಿಗೇರಿದ ತಂದೆ "ಹೋಗಿ ನೋಡು, ಆರು ಕಟ್ಟಾಕೆ ಸತ್ತರೋ ಇಲ್ಲೋ ಹೊಲೆ ಮಕ್ಕಳು! ಮಳೆ ಬಂದ ಮರುದಿನಾನೂ ಬಿಸಿಲು

ಬರೋ ತನಕ ಮಲಗಿಕೊಳ್ಳೋ ನೀವು ಮನೆ ಇಟ್ಟುಕೊಂಡ್ಹಾಂಗೆ ಅಂತಾ ಕಾಣ್ತದೆ! ಏನಾದ್ರೂ ಆಗ್ಲಿ! ಅತ್ತ ಮಖಾ ಹೋಗಾ ತನಕ ಗೆಯ್ತೀನಿ! ಆಮೇಲೆ ಮನೆ ಇಟ್ಟುಕೊಂಡ್ರೆ ಇಟ್ಟುಕೋ ಬಿಟ್ರೆ ಬಿದು! ನಂಗೇನು!!"

ತಿಮ್ಮಪ್ಪ ಹೆಗ್ಗಡೆ ತಂದೆ ಕರೆದಾಗ ಬಚ್ಚಲಲ್ಲಿ ಹಲ್ಲುಜ್ಜಿಕೊಳ್ಳುತ್ತಿದ್ದನು. ಹಾಗೆಯೇ ಓಡಿಬಂದಿದ್ದ ಅವನ ತುಟಿಯೆಲ್ಲ ಮಸಿಯೆಂಜಲಿಂದ ಅಸಹ್ಯವಾಗಿತ್ತು. ಅವನು ಬಾಯಿ ತೆರೆಯದಿದ್ದುದಕ್ಕೆ ಬಹುಶಃ ಅದೂ ಒಂದು ಕಾರಣವಾಗಿತ್ತೊ ಏನೋ? ಸುಬ್ಬಣ್ಣ ಹೆಗ್ಗಡೆಯವರ ರೇಗಿಗೆ ಮಗನ ಬಿಳಿ ಬಟ್ಟೆ ಎಷ್ಟರಮಟ್ಟಿಗೆ ಕಾರಣವಾಗಿತ್ತೊ ಅವನ ಮಸೀಮಯವಾದ ಕರೀತುಟಿಯೂ ಅಷ್ಟಮಟ್ಟಿಗೇ ಕಾರಣವಾಗಿತ್ತು. ಎಂದರೆ ಅರ್ಥ: ಎರಡೂ ಕಾರಣವಾಗಿರಲಿಲ್ಲ. ನಿಜವಾದ ಕಾರಣ ಒಂದಲ್ಲ, ಎರಡಲ್ಲ: ತಂದೆಯಾದವನು ಮಗನನ್ನು ಹತೋಟಿಯಲ್ಲಿ ಇಟ್ಟುಕೊಳ್ಳಬೇಕಾದರೆ ಯಾವಾಗಲೂ ಬಿಗಿಯಾಗಿ ವರ್ತಿಸಬೇಕು ಎಂಬುದೊಂದು. ಮಗನ ವಿರೂಪದ ದೆಸೆಯಿಂದಲೆ ಜನ ತಮ್ಮ ಮನೆಗೆ ಹೆಣ್ಣು ಕೊಡಲು ಹಿಂಜರಿಯುತ್ತದೆ ಎಂಬ ನಂಬುಗೆ ಮತ್ತೊಂದು ಆ ವಿರೂಪಕ್ಕೆ ಆಗುತ್ತಿರುವ ಅವಮಾನ ಅದರ ಸೃಷ್ಟಿಗೆ ಕಾರಣನಾದ ತನಗೂ ಸಲ್ಲುತ್ತಿದೆಯಲ್ಲಾ ಎಂಬ ಒಳಗುಟ್ಟು ಇನ್ನೊಂದು. ಮಗನು ಸುರೂಪಿಯಾಗಬೇಕೆಂದು ಮಾಡುತ್ತಿರುವ ಪ್ರಯತ್ನದಿಂದ ಮನೆ ಹಾಳಾಗುವುದೆಂಬ ಭೀತಿ ಮಗುದೊಂದು. ಹೆಂಡತಿಯಿಲ್ಲದ ಮುದುಕನ ಅತೃಪ್ತಿ ಇನ್ನೊಂದು. ಇತ್ಯಾದಿಯಾಗಿ ಅಸಂಬದ್ಧವೂ ಪರಸ್ಪರ ವಿರುದ್ಧವೂ ಆದ ಅನೇಕ ನೆವಗಳೆಲ್ಲ ಒಟ್ಟುಗೂಡಿ ಹೆಗ್ಗಡೆಯವರನ್ನು ಕುದಿಸುತ್ತಿದ್ದುವು.

ಆದ್ದರಿಂದಲೆ ತಂದೆಯ ಅಪ್ಪಣೆಯಂತೆ ತಿಮ್ಮಪ್ಪ ಹೆಗ್ಗಡೆ ಮರುಮಾತಾಡದೆ ಹೊಲಗೇರಿಯ ಕಡೆಗೆ ಬಿರುಬಿರನೆ ನಡೆಯತೊಡಗಿದಾಗ, ಅವರು ಮತ್ತೂ ರೇಗಿ "ಇಲ್ಲಿ ಬಾರೊ! ಬಾರೋ!! ನಿನ್ನ ಮುಖಾ ನೋಡಿದ್ರೆ ನಿನ್ನ ಮಾತು ಕೇಳ್ತಾರೇನೋ ಹೊಲೇರು? ಥೂ! ನಿನ್ನ ಬೂಲಕ್ಕೆ ಬೆಂಕಿ ಹಾಕಾ! ಹೋಗಿ ಬಾಯಾದ್ರೂ ಸರಿಯಾಗಿ ತೊಳಕೊಂಡು ಹೋಗೋ!!" ಎಂದು ಕೂಗಿದ್ದು.

ತಿಮ್ಮಪ್ಪ ಹೆಗ್ಗಡೆಗೆ ತುಟಿ ನಡುಗಿತು; ಸಿಟ್ಟಿನಿಂದ, ದುಃಖದಿಂದ. ಬೇರೆ ಇನ್ನಾರಾದರೂ ಆಗಿದ್ದರೆ ಒರಟಾಗಿ ಹಲ್ಲು ಮುರಿಯುವಂತೆ ವರ್ತಿಸಿಬಿಡಬಹುದಾಗಿತ್ತಲ್ಲಾ, ಈಗ ಇಲ್ಲಿ ಸಾಧ್ಯವಾಗಲಿಲ್ಲವಲ್ಲಾ ಎಂಬೊಂದು ಸಂಕಟದಿಂದ ಹಲ್ಲು ಕಚ್ಚಿ, ಹುಬ್ಬು ಗಂಟಿಕ್ಕಿ, ಮುಖವೆಲ್ಲಾ ಸುಕ್ಕಾಗಿ ತಡೆದು ಕೊಂಡನು. ಆದರೆ ಕಣ್ಣು ಹನಿ ತುಂಬಿತು. ಅದು ತೊಟ್ಟಿಕ್ಕುವುದರೊಳಗೆ ಅಲ್ಲಿಂದ ಮೊಗದಿರುಹಿ ಹೊರಟನು: ಮುಖ ತೊಳೆಯುವುದಕ್ಕಾಗಿ ಬಚ್ಚಲಿಗಲ್ಲ; ಆರು ಕಟ್ಟಲು ಹೇಳುವುದಕ್ಕಾಗಿ ಹೊಲೆಗೇರಿಗೆ.

* * *

ಮಗನ ಕಣ್ಣಿನಲ್ಲಿ ನೀರು ತುಂಬಿದ್ದು ಕಂಡು ಸುಬ್ಬಣ್ಣ ಹೆಗ್ಗಡೆಯವರ ಮನಸ್ಸು ಸ್ವಲ್ಪ ಮೃದುವಾಗಿತ್ತು. ಆದರೆ ಅವನು ತಟಕ್ಕನೆ ಬೆನ್‌ದಿರುಗಿದ ಪ್ರತಿಭಟನಾ ಭಂಗಿಯನ್ನೂ ಹೊಲೆಗೇರಿಯ ಕಡೆಗೆ ರೋಷ ರಭಸದಿಂದ ಹೋದುದನ್ನೂ ಕಂಡು, ಸಿಗ್ಗುರಿದು, ಮುದುಕನ ಕುಳ್ಳ ಮೈ ಕಂಪಿಸಿತು. ಕೃತನವಾಗಿ ಗಟ್ಟಿಯಾಗಿ, ಕೆಮ್ಮಿ, ಅವನು ಹೋದ ಕಡೆಗೆ ನೋಡುತ್ತಾ ಕ್ಯಾಕರಿಸಿ ತುಪ್ಪಿದರು. ಯೌವನದಲ್ಲಿ ದರ್ಪದಿಂದ ಬಾಳು ಸಾಗಿಸಿದ್ದ ಆ ಮುದುಕನಿಗೆ ಮುಪ್ಪಿನಲ್ಲಿ ಲೋಕವೆಲ್ಲ ಅವಿಧೇಯವಾಗಿರುವಂತೆ ತೋರಿತು.

“ಕೆಡ್ತಪ್ಪಾ ಕಾಲ, ಕೆಡ್ತು! ಇನ್ ನಮ್ಮಂತೋರ್ ಕಾಲ್ ಕೀಳಾದೆ ಮೇಲು! ಇನ್ ಹೇಳ್ಸಿದ್ದಲ್ಲ ಈ ಜಲ್ಮ!” ಎಂದು ಗೊಣಗುತ್ತಾ ಮತ್ತೆ ಗದ್ದೆಯ ಕಡೆಗೆ ನಡೆದರು. ಕಾಲುದಾರಿಯಲ್ಲಿ ಬರುತ್ತಿದ್ದ ವ್ಯಕ್ತಿ ಅಂಗಗಳೆಲ್ಲಾ ತಕ್ಕಮಟ್ಟಿಗೆ ಸ್ಪಷ್ಟವಾಗುವಷ್ಟರ ಮಟ್ಟಿಗೆ ಸಮೀಪಿಸಿದ್ದನಾದರೂ ಆಗತಾನೆ ಮೂಡಿಬರುತ್ತಿದ್ದ ಎಳೆಬಿಸಲಿನ ರಶ್ಮಿ ಚಾಮರದ ದೆಸೆಯಿಂದ ಹೆಗ್ಗಡೆಯವರಿಗೆ ಅದು ಯಾರು ಎಂದು ಗೊತ್ತಾಗಲಿಲ್ಲ.

ಕೈಯೆತ್ತಿ ಹಣೆಗಿಟ್ಟು ಬಿಸಿಲಿಗೆ ಕೊಡೆ ಮಾಡಿ ನೋಡಿ “ಹಾಳ್ ಕಣ್ಣು! ಅವಕ್ಕೂ ಬ್ಯಾಡಾದೆ ನಾನು!” ಎನ್ನುತ್ತಾ ಮನೆಯ ಕಡೆಗೆ ತಿರುಗಿದಾಗ, ತೋಟದ ಬಾವಿಯಿಂದ ನೀರು ತುಂಬಿದ ಕೊಡಪಾನವನ್ನು ಸೊಂಟದ ಮೇಲಿಟ್ಟು, ಬೆಳ್ಳಿಯ ಕಡಗ ಮತ್ತು ಕಣ್ಣು ಕೊರಿಸಿದ ಗಾಜಿನ ಬಳೆಗಳನ್ನು ತೊಟ್ಟಿದ್ದ ತನ್ನ ಕೈಯಿಂದ ಆ ತಾಮ್ರದ ಕೊಡದ ಕೊರಳನ್ನು ಅವುಕಿ ಹಿಡಿದು ನಿಧಾನವಾಗಿ ಮೆಟ್ಟಲು ಹತ್ತುತ್ತಿದ್ದ ತಮ್ಮ ಮಗಳನ್ನು ಕಂಡರು. ಎತ್ತರದಲ್ಲಿ, ಬಣ್ಣದಲ್ಲಿ, ಮೈಕಟ್ಟಿನಲ್ಲಿ, ರೂಪಿನಲ್ಲಿ ಸರ್ವಾಂಶದಲ್ಲಿಯೂ ತಮ್ಮ ಗತಿಸಿದ ಸತಿಯನ್ನೇ ಹೋಲುತ್ತಿದ್ದ ಆಕೆಯನ್ನು ಕಂಡೊಡನೆ ಹೆಗ್ಗಡೆಯವರು ಮರಳಿ ಮೃದುವಾದರು. ಅವರ ಮನಸ್ಸಿಗೆ ತಂಗಾಳಿ ಬೀಸಿದಂತಾಯಿತು. ಆಗತಾನೆ ಮರುಭೂಮಿಯಾಗಿ ಕಾಣುತ್ತಿದ್ದ ಜಗತ್ತಿನಲ್ಲಿ ಫಕ್ಕನೆ ಮರುವನ ಗೋಚರಿಸಿದಂತಾಯಿತು. ಕಡಲ ನಡುವೆ ಹಡಗೊಡೆದು ತೆರೆಗಳ ತಾಡನಕ್ಕೆ ಸಿಕ್ಕಿ ತೇಲುತ್ತಾ ಬರುವಾತನು ದ್ವೀಪದ ದಡಕ್ಕೇರುವಂತೆ ಹೃದಯದ ಮೃದುತ್ವವನ್ನೂ ಮೈತ್ರಿಯನ್ನೂ ಅಕ್ಕರೆಯನ್ನೂ ಸೂಚಿಸುವ ದೀರ್ಘಸ್ವರದಿಂದ ಕರೆದರು.

“ಬುಚ್ಚೀ!”

ಮಂಜಮ್ಮ ಏರುತ್ತಿದ್ದವಳು ಹಾಗೇ ಮೆಟ್ಟಲ ಮೇಲೆ ನಿಂತು “ಏನಪ್ಪಯ್ಯಾ?” ಎಂದಳು. ಸ್ವರದಲ್ಲಿ ಆಯಾಸವಿದ್ದರೂ ಇಂಪಾಗಿತ್ತು.

“ಇಲ್ಲಿ ಬಾರಕ್ಕಾ ಸ್ವಲ್ಪ.”

“ಬರ್ತೀನಿ….”

“ಕೊಡಪಾನ ಅಲ್ಲೇ ಇಟ್ಟು ಬಾ.”

ಮಂಜಮ್ಮ ಹಾಗೆಯೇ ಮಾಡಿ, ಮೂಡು ಬಿಸಿಲಿಗೆ ಮನೆಯ ಪಕ್ಕದಲ್ಲಿದ್ದ ತೋಟದ ಅಡಕೆಯ ಮರಗಳ ನೀಳವಾದ ನೆಳಲುಗಳು ಪಟ್ಟೆಪಟ್ಟೆಯಾಗಿ ಬಿದ್ದಿದ್ದ ಅಂಗಳದಲ್ಲಿ ನಡೆದು ಬಂದಳು.

ನೆರೆಹೊರೆಯವರು ಮಗಳಿಗೆ ಮದುವೆಯ ವಯಸ್ಸು ಮೀರಿ ಹೋಯಿತೆಂದು ಹೇಳುತ್ತಿದ್ದರೂ ಸುಬ್ಬಣ್ಣ ಹೆಗ್ಗಡೆಯವರಿಗೆ ಹಾಗೇನೂ ತೋರುತ್ತಿರಲಿಲ್ಲ. ಚೆನ್ನಾಗಿ ಕೆಲಸ ಮಾಡಿ ಹೊಟ್ಟೆ ತುಂಬಾ ತಿನ್ನುವ ಹಳ್ಳಿಯ ಹೆಣ್ಣು ಬೆಳೆಯುವಂತೆ ಮಂಜಮ್ಮ ಸುಪುಷ್ಟವಾಗಿ ಬೆಳೆದಿದ್ದ ಮಾತ್ರಕ್ಕೆ ಮದುವೆಯ ವಯಸ್ಸು ಮೀರಿತೆಂದು ಹೇಳುವುದು ಯಾವ ನ್ಯಾಯ? ಮದುವೆಗೆ ವಯಸ್ಸು ಮೀರುವುದೆಂದರೆ ಅರ್ಥವಾದರೂ ಏನು? ಅವಳೇನು ಹಾರುವರ ಮನೆಯ ಹೆಣ್ಣೇ? ಮದುವೆಯಾಗುವುದಕ್ಕೆ ಮೊದಲೆ ದೊಡ್ಡವಳಾಗಿಬಿಟ್ಟರೆ ಕಾಡಿಗಟ್ಟಬೇಕೆಂಬ ಹೆದರಿಕೆಯೇನು ತಮಗೆ? ಒಂದು ವರ್ಷ ಹೆಚ್ಚು ಕಡಿಮೆ, ಸರಿಯಾದ ಮನೆಗೆ ಕೊಟ್ಟರಾಯಿತು. ಅಲ್ಲದೆ ತಾಯ ಸತ್ತ ಹುಡುಗಿ. ಸ್ವಲ್ಪ ತಿಳುವಳಿಕೆ ಬಂದ ಮೇಲೆಯೇ ಗಂಡನ ಮನೆಗೆ ಹೋದರೆ ನೆಮ್ಮದಿ. ಒಂಟಿಬಾಳು ಬಾಳುತ್ತಿರುವ ತಮಗೂ ಮಗಳನ್ನು ತಟಕ್ಕನೆ ಅಗಲಿರಬೇಕೆಂದರೆ ಸಂಕಟ: ಮಗನೇನೋ ಇದ್ದಾನೆ. ಆದರೆ ತಿಮ್ಮಪ್ಪ ಹೆಗ್ಗಡೆ ಕಂತ್ರಿ, ಸ್ವತಂತ್ರಿ. ಯಾವಾಗಲೂ ಇತರರಿಗೆ ಆಶ್ರಯಕೊಡುತ್ತಾ ಬಾಳಿದವರಿಗೆ ಆಶ್ರಿತರು ದೂರವಾದರೆ ಆಶ್ರವೆ ತಪ್ಪಿದಂತಾಗುತ್ತದೆ. ಮುಪ್ಪು ಎಳೆತನಕ್ಕೆ ಆಶ್ರಯ ಮಾತ್ರವಲ್ಲ, ಆಶ್ರಿತವೂ ಹೌದು. ಹಳೆಯ ಚಪ್ಪರಕ್ಕೆ ಹೊಸ ತೊಂಡೆಯ ಬಳ್ಳಿ ಹಬ್ಬಿದ್ದರೆ ತೊಂಡೆಯ ಕಾಯಿಯ ಆಸೆಗಾದರೂ ಚಪ್ಪರ ಬೀಳದಂತೆ, ಹಾಳಾಗದಂತೆ, ಒರಲೆ ಹಿಡಿಯದಂತೆ ನೋಡಿ ಕೊಳ್ಳುತ್ತಾರೆ. ಕೆಲಸ ಮಾಡದ ಕತ್ತಿಗೆ ತುಕ್ಕು ಹಿಡಿಯುತ್ತದೆ. ಉಪಯೋಗಿಸದೆ ಪಿಟಾರಿಯಲ್ಲಿಟ್ಟರೆ ಪೀತಾಂಬರಕ್ಕಾದರೂ ಬೂಷಲು ಬರುತ್ತದೆ. ಪ್ರವೃತ್ತಿಪ್ರೇರಕವಾದ ಆಧಾರಸ್ತಂಭಗಳೆಲ್ಲಾ ಉರುಳಿದರೆ ಮುಪ್ಪು ಬೇಸತ್ತೇ ಸತ್ತು ಹೋಗುತ್ತದೆ. ಸುಬ್ಬಣ್ಣ ಹೆಗ್ಗಡೆಯವರ ಆಲೋಚನೆಗೆ ಇಷ್ಟೆಲ್ಲಾ ಮೀರಿದ್ದರೂ ಆತ್ಮಕ್ಕೆ ಅದು ವೇದ್ಯವಾಗಿದ್ದುದರಿಂದಲೆ ಮಗಳ ಮದುವೆಗೆ ಮಗನ ಮದುವೆಯ ಅಡಚಣೆಯನ್ನೊಡ್ಡಿ ಕಾಲವಂಚನೆ ಮಾಡುತ್ತಿದ್ದುದ್ದು.

ಬಿರಾಂಬರುಡುಗೆಯ ಸಡಿಲ ಚೆಲುವು ಹಳೆಮನೆಯಂತಹ ಹಳೆತನದ ಮನೆತನಗಳಿಗೆ ಆಗಿನ್ನೂ ಸೋಂಕಿರಲಿಲ್ಲ. ಮಂಜಮ್ಮ ಗೊಬ್ಬೆ ಸೆರಗು ಬಿಗಿದು ಕಟ್ಟಿ, ಸೀರೆಯ ಬಹುಭಾಗದ ವಿಸ್ತೀರ್ಣವನ್ನೆಲ್ಲಾ ಸೊಂಡಕ್ಕೆ ಸುತ್ತಿ, ಉಳಿದಿದ್ದನ್ನು ಆದಷ್ಟು ಕೃಪಣತೆಯಿಂದ ನಿರಿಮಾಡಿ ಹರಡಿಗೆ ಮೇಲೆ ಮೊಳಕಾಲಿನ ನಡುವರೆಗೆ ನೀಡಿ ಉಟ್ಟಿದ್ದಳು. ಮೀಯುವುದರಲ್ಲಿಯೂ ಒಗೆಯುವುದರಲ್ಲಿಯೂ ಹೊತ್ತು ಕಳೆಯ ಬಾರದೆಂದು ಅಪ್ಪಯ್ಯ ಹೇಳುತ್ತಿದ್ದುದರಿಂದ ಆಕೆಯ ಸೀರೆ ಕೊಳಕಾಗಿತ್ತು. ಆ ಕೊಳಕನ್ನು ಯಾರೂ ಲೆಕ್ಕಿಸುತ್ತಿರಲಿಲ್ಲವಾದ್ದರಿಂದ ಅವಳೂ ಲೆಕ್ಕಿಸುತ್ತಿರಲಿಲ್ಲ. ತನ್ನ ಮೈಯ ಬಿಳಿಯ ಬಣ್ಣದಲ್ಲಿ ಮಾತ್ರ ಆಕೆಗೆ ಅಪಾರ ಅಭಿಮಾನವಿತ್ತು. ಆ ಅಭಿಮಾನ ಒಮ್ಮೊಮ್ಮೆ ಗರ್ವದ ಮಟ್ಟಕ್ಕೂ ಏರಿ, ಆಕೆ, ಮೇಲೆ ಹೇಗೇ ಇರಲಿ, ಅಂತರಂಗದಲ್ಲಿ ತಿಮ್ಮಪ್ಪ ಹೆಗ್ಗಡೆಯ ತಂಗಿ ಎಂಬುದನ್ನು ನೆನಪಿಗೆ ತಂದುಕೊಡುತ್ತಿತ್ತು. ಆ ಮೈಯ್ಯ ಬಣ್ಣದ ಅಭಿಮಾನವನ್ನು ಒಡವೆಯ ಸಿಂಹಾಸನದ ಮೇಲೆ ಕೂರಿಸಿ, ಆಗಾಗ, ಸಮಯ ಸಿಕ್ಕಾಗ, ಮೆರವಣಿಗೆ ಮಾಡುತ್ತಿದ್ದಳು. ಆಂತರ್ಯದ ಅಹಂಕಾರ ಬಲಿತಷ್ಟೂ ಅನಿವಾರ್ಯವಾಗಿ ಬಲಿಯುತ್ತದೆ, ಪರದಲ್ಲಿ ತಿರಸ್ಕಾರ. ತಿರಸ್ಕಾರಕ್ಕೆ ತಿರಸ್ಕಾರ ಪ್ರತೀಕಾರವಾಗುತ್ತದೆ. ಅಸೂಯೆ, ಆತ್ಮಪ್ರಶಂಸೆ, ಪರನಿಂದೆಗಳು ಇಕ್ಕೆಲಗಳಲ್ಲಿಯೂ ಮಲೆಯುತ್ತವೆ. ಹಾಗಾಗಿಯೆ ಮಂಜಮ್ಮನ ವಿಚಾರವಾಗಿ ನಂಟರಿಷ್ಟರಲ್ಲಿ ಸದಭಿಪ್ರಾಯವಿರಲಿಲ್ಲ. ಮಗಳ ಮೇಲೆ ಹೆರರ ಮಾತಿನ ಚುಚ್ಚು ಹೆಚ್ಚಾದ ಹಾಗೆಲ್ಲಾ ಅವಳ ಮೇಲೆ ಅಪ್ಪಯ್ಯನ

ಮೆಚ್ಚು ಅಷ್ಟಷ್ಟೂ ಅತಿಯಾಗುತ್ತಿತ್ತು. ಹೀಗೆ ತಂದೆ ಮಗಳಿಬ್ಬರೂ ಒಬ್ಬರಿನ್ನೊಬ್ಬರಿಗೆ ರಕ್ಷೆಯಾಗಿ ಪರಸ್ಪರ ನೆಮ್ಮದಿಗಳಾಗಿದ್ದರು.

ಮಗಳು ತೊಟ್ಟಿದ್ದ ಮೂಗುತಿ, ಬುಗುಡಿ ಎಸಳ ಸರಪಣಿ ಮೊದಲಾದ ಆಗಿನ ಕಾಲದ ಮೆಚ್ಚಿನ ಸ್ಥೂಲಾಭಿರುಚಿಯ ಭಾರಾಲಂಕಾರಗಳನ್ನು ನೋಡುತ್ತಾ ಮುದವುಕ್ಕಿ ಸುಬ್ಬಣ್ಣ ಹೆಗ್ಗಡೆಯವರು "ಬುಚ್ಚಿ, ಲಚ್ಚಾಚಾರಿ ಬಂದಿದ್ದನೇನೆ?" ಎಂದು ಕೊಟ್ಟಿದ್ದ ಅಡ್ಡಿಕೆಯ ನೆನಪಾಗಿ ಕೇಳಿದರು.

ಮಂಜಮ್ಮ "ಅವನ ಮನೆ ಹಾಳಾಗಾಕೆ ಎತ್ತ ಸತ್ತನೋ" ಎಂದು ಮೂತಿ ಮಾಡಿ, ಗದ್ದೆಯ ಕಡೆ ನೋಡಿ, "ಅದ್ಯಾರು ಅಲ್ಲಿ ಬರೋರು? ಹೂವಳ್ಳಿ ಎಂಕ್ಟಣ್ಣಬಾವನ್ನು ಕಂಡ್ಹಾಗೆ ಕಾಣ್ತದೆ?" ಎಂದಳು.

"ಹೌದು ಅಂತೀನಿ. ಮರ್ತೇಹೋಗಿತ್ತು. ಅದಕ್ಕೆ ನಿನ್ನ ಕರ್ದಿದ್ದು. ನನ್ನ ಕಣ್ಣೇ ಈಗ್ಯಾಕೋ ಸರಿಯಾಗಿ ಕಾಣ್ರೋದಿಲ್ಲಾಪ್ಪಾ." ಹೆಗ್ಗಡೆಯವರು ಸುಯ್ದು ಮುಂದೆ ಹೇಳಿದರು: "ನೀನೊಬ್ಬಳು ಮನೇಲಿ ಇರಾಹೊತ್ತಿಗೆ ನಾನೂ ಒಬ್ಬ ಮನಿಸ್ಯ ಅನಿಸಿಕೊಂಡಿದ್ದೀನವ್ವಾ. ಇನ್ನು...."

ಅಪ್ಪನ ಮಾತು ಎಲ್ಲಿಗೆ ಹೋಗುತ್ತಿದೆ ಎಂಬುದನ್ನರಿತು ಮಂಜಮ್ಮ "ಹೌದು ಎಂಕ್ಟಣ್ಣ ಬಾವನೇ!" ಎಂದಳು.

ಹೆಗ್ಗಡೆಯವರು ಅತ್ತ ನೋಡಿ "ನಿನ್ನೇನೆ ಬತ್ತೀನಿ ಅಂದಿದ್ದ. ಒಂದ ಹಂದೀಮರಿ ಬೇಕು ಅಂತಾ ಹೇಳಿದ್ದಾ. ಬಾ ಕೊಡ್ತೀನಿ ಅಂದಿದ್ದೆ."

"ಯಾವುದನ್ನ ಕೊಡ್ತೀಯಾ, ಅಪ್ಪಯ್ಯಾ?"

"ಯಾವುದ್ನಾದ್ರೂ ಕೊಡಾದಪ್ಪ. ಸುಮ್ಮನೆ ಒಡ್ಡೀಲಿಟ್ಟುಕೊಂಡು ಮಾಡಾದೇನು. ಮದೇಮನೆ ಕರ್ಚಿಗೆ ಎಷ್ಟು ಬೇಕೋ ಅಷ್ಟು ಇಟ್ಕೋಂಡು ಇಳಿದ್ನೆಲ್ಲಾ ಕೊಟ್ಟು ಬಿಡ್ತೀನಿ. ನನಗೂ ವಯಸ್ಸಾತು. ನೋಡಿಕೊಳ್ಳೋರು ಯಾರೂ ಇಲ್ಲಾ. ನಿನ್ನ ಅಣ್ಣ ಒಬ್ಬ ಇದಾನೆ ಕೂಳು ಖರ್ಚಿಗೆ. ನೀನಾದ್ರೂ ಇನ್ನೆಷ್ಟು ದಿನ ಅಂತ ಇರ್ತೀಯಾ ಇಲ್ಲಿ....?"

"ಆ ದಡ್ಡೆ ಮರಿ ನನಗಿರಲಪ್ಪಯ್ಯಾ. ಸರಿಪಾಲಿಗೆ ಸಾಕಾಕೆ ಕೊಡ್ತೀನಿ. ಹೊಲೇರ ಗುತ್ತಿ ಸಾಕ್ತೀನಿ ಅಂದಾನೆ." ಮಂಜಮ್ಮ ಗೊಬ್ಬೆಸರಗು ಸರಿಮಾಡಿಕೊಳ್ಳುತ್ತಾ ನಾಚಿಕೆಯಿಂದಲೆಂಬಂತೆ ಮಾತಾಡಿದಳು.

"ಯಾವ ಗುತ್ತೀನೆ?"

"ಆ ಜಟ್ಟಕ್ಕನ ಜತಿ ಬಂದಿದ್ದನಲ್ಲಾ...."

"ಸಿಂಬಾವಿಯವನೇನೇ?"

ಮಂಜಮ್ಮ ಮಾತಾಡಲಿಲ್ಲ. ನಸುನಾಚಿ, ಗದ್ದೆಕಡೆ ನೋಡುವವಳಂತೆ ನಟಿಸಿದಳು.

"ಯಾರು? ಆ ನಾಯಿ ಗುತ್ತೀನೇನೆ?"

"ಹ್ಞೂ ಹ್ಞೂ! ಅವನೆ, ಅವನೇ!"

"ಆ ಹೊಲಿಯ ಲೌಡಿಮಗ ಹಂದಿ ಸಾಕ್ತಾನೇನೇ? ತಿಂದು ಹಾಕ್ತಾನೆ! ತಿಂದೇ ಹಾಕ್ತಾನೆ; ನೋಡ್ತಿರು ಬೇಕಾದ್ರೆ!" ಎಂದು ಮುದಿ ದೇಹ ಕುಣಿಯುವಂತೆ ನಗತೊಡಗಿದರು ಸುಬ್ಬಣ್ಣ ಹೆಗ್ಗಡೆಯವರು.

ಅನತಿ ದೂರದಲ್ಲಿಯೆ ಕುಂಟುತ್ತಾ ಬಳಿಸಾರುತ್ತಿದ್ದ ಹೂವಳ್ಳಿ ವೆಂಕಟಣ್ಣನನ್ನು ಕಂಡು ಮಂಜಮ್ಮ "ಅಪ್ಪಯ್ಯಾ, ನಿನ್ನ ಕಸಾಯ ಮಾಡಿಟ್ಟೀನಿ, ಕುಟಕೊಂಡು ಹೋಗು ಬಾ" ಎನ್ನುತ್ತಾ ಹಿಂದಿರುಗಿ ಕೊಡಪಾನದ ಬಳಿಗೆ ಹೋದಳು.

* * *

## ೮

ಹಸುಳೆಬಿಸಿಲಿನ ಬಾಲ್ಯದ ಬೆಚ್ಚನೆಯ ಸೋಂಕಿಗೆಳಸಿ ಸುಬ್ಬಣ್ಣ ಹೆಗ್ಗಡೆಯವರು ಮುಪ್ಪಿನ ಮೆಯ್ಗೆ ಸುತ್ತಿದ್ದ ಕರಿಕಂಬಳಿಯನ್ನು ಬಿಚ್ಚಿ ಹಂದಿಯೊಡ್ಡಿಯ ಮೇಲಿಟ್ಟರು. ಸುಕ್ಕಿನ ಕಿರುದೆರೆ ನಿರಿನಿರಿಯಾಗಿದ್ದ ಅವರ ಎಣ್ಣೆಗಪ್ಪಿನ ಒಡಲಿಗೆ ಬೆಚ್ಚನೆಯ ಬಿಸಿಲು ಮುತ್ತಿಟ್ಟೊಡನೆ ಸುಪ್ತಚಿತ್ತದ ಆಳದಲ್ಲಿ ಗುಪ್ತವಾಗಿದ್ದ ನೂರಾರು ಹೋದಕಾಲದ ಮುದ್ದಾಟಗಳ ನೆನಹಿನ ಸೊಗಸು ಜಾಗ್ರಚ್ಚಿತ್ತದ ಸರೋವರದಲ್ಲಿ ಪುಲಕಿಸಿತು. ಏಕೊ ಏನೊ ಅವರಿಗೆ ಗೊತ್ತಾಗಲಿಲ್ಲ; ಅಂತೂ ಮೈಗೆ ಬಹಳ ಹಿತವಾಯಿತು; ಮನಸ್ಸಿಗೂ ಸಂತೋಷವಾಯಿತು. ತಿಮ್ಮಪ್ಪ ಹೆಗ್ಗಡೆಯಿಂದ ಉಂಟಾಗಿದ್ದ ನಿರಾಶೆಯ ಕತ್ತಲೆ ಮಂಜಮ್ಮನ ಆಗಮನದ ಉಷಃಕಾಂತಿಯಿಂದ ಹರಿದು ಹೋಗಿತ್ತು. ಈಗ ಆ ಮುಂಬೆಳಗೆ ಹೊಂಬೆಳಗಾಗಿ ಮನಸ್ಸು ಪ್ರಸನ್ನವಾಯಿತು.

ಮನುಷ್ಯನು ತಿಳಿದುಕೊಂಡಿರುವುದಕ್ಕಿಂತಲೂ ಹೆಚ್ಚಾಗಿಯೆ ಅವನ ಅತಃಪ್ರಕೃತಿ ಸೃಷ್ಟಿಯ ಬಹಿಃಪ್ರಕೃತಿಗೆ ಅನುಯಾಯಿಯಾಗಿರುತ್ತದೆ. ಆತನ ಆತ್ಮಕೋಶವು ಬಹು ಜನ್ಮಗಳ ಸಂಸ್ಕರಗಳಿಂದ ತುಂಬಿರುವಂತೆ ಆತನ ಅನ್ನಮಯಕೋಶವೂ ಪೃಥ್ವಿಯಲ್ಲಿ ಪ್ರಾಣೋತ್ಪತ್ತಿಯಾದಂದಿನಿಂದ ಮೊದಲುಗೊಂಡು ಇಂದಿನವರೆಗೆ ಜೀವವು ಕೈಕೊಂಡ ನಾನಾರೂಪದ ನಾನಾ ಪ್ರಯೋಗದ ನಾನಾ ಕಷ್ಟ ಸಂಕಟಗಳ ನಾನಾ ಸುಖ ಸಂತೋಷಗಳ ಮಹಾ ಸಾಹಸಯಾತ್ರೆಯ ಸಮಗ್ರ ಪರಿಣಾಮ ಮುದ್ರೆಯನ್ನೂ 'ಅಸ್ಮೃತಿ' ರೂಪದಲ್ಲಿ ಪಡೆದಿರುತ್ತದೆ. ಆ ಅಪಾರ್ಥಿವ ಮತ್ತು ಪಾರ್ಥಿವ ಸಂಸ್ಕಾರಕೋಶಗಳೆರಡೂ ನಮ್ಮ ಬಾಳ್ವೆಯ ಹೃದಯದ ಇಕ್ಕೆಲಗಳಲ್ಲಿ ಶ್ವಾಸಕೋಶಗಳಂತಿವೆ. ಅಪ್ರಜ್ಞಾಸೀಮೆಯಲ್ಲಿರುವ ಆ ಸಂಸ್ಕಾರಗಳಲ್ಲಿ ಯಾವುದನ್ನಾದರೂ ಮುಟ್ಟಿ ಎಚ್ಚರಿಸುವಂತಹ ಸನ್ನಿವೇಶ ಒದಗಿದರೆ ನಮಗೆ ಅಹೇತುಕ ಆನಂದವೊ ಅಕಾರಣ ಸಂಕಟವೊ ಸಂಭವಿಸಿದಂತಾಗುತ್ತದೆ. ಅಲ್ಪ ಕಾರಣದಿಂದ ಮಹತ್ತಾದ ಅನುಭವ ಉಂಟಾದಂತೆ ಭಾಸವಾಗಿ ಆಶ್ಚರ್ಯವಾಗುತ್ತದೆ. ಎಳೆಬಿಸಿಲಿನಲ್ಲಿ ಹಸುರು ಗರಿಕೆಯ ಕುಡಿಯಲ್ಲಿ

ಮಿರುಗುವ ದುಂಡು ಮುತ್ತಿನ ತೆರೆದ ಇಬ್ಬನಿ, ಪ್ರಾಣದ ಪ್ರಪ್ರಾಚೀನಾನುಭವದ ಮಹಾ ಸಾಗರದ 'ಅಸ್ಮೃತಿ'ಯನ್ನು ಕೆರಳಿಸಿ, ಸಮುದ್ರ ದರ್ಶನದ ಭೂಮಾನುಭೂತಿಯನ್ನುಂಟುಮಾಡಬಹುದು. ಕಾಡಿನಂಚಿನಲ್ಲಿ, ಬೈಗುಗಪ್ಪಿನ ಮಬ್ಬಿನಲ್ಲಿ, ಹೆಮ್ಮರದ ದಿಂಡಿನಲ್ಲಿರುವ ಮರಕುಟಿಗನ ಗೂಡಿನ ಪೊಟ್ಟರೆ, ಅತ್ಯಂತ ಪೂರ್ವಕಾಲದ ಬಾಳಿನ ಯಾವುದೊ ಒಂದು ಕಗ್ಗವಿಯನ್ನೊ ಪೆಡಂಭೂತದ ಕಣ್ಣನ್ನೊ 'ಅಸ್ಮೃತಿ'ಗೆ ತಂದು, ಅನಿರ್ವಚನೀಯವಾದ ಭೀತಿಯನ್ನುಂಟು ಮಾಡಬಹುದು. ಪರ್ವತಾರಣ್ಯಗಳ ಭಯಂಕರ ಪ್ರಕೃತಿಯ ಮಧ್ಯೆ ವಾಸಮಾಡುವವರಿಗೆ ಅರ್ಥವಾಗದ, ಆದ್ದರಿಂದ ಅರ್ಥವಿಲ್ಲದ, ಆ ಅನುಭವಗಳು ಪಿಶಾಚಿಗಳಂತೆಯೊ ದೆಯ್ಯ ದ್ಯಾವರುಗಳಂತೆಯೊ ತೋರುತ್ತವೆ. ಕತ್ತಲೆಯಲ್ಲಿ ಆಕಾಶಕ್ಕೆದುರಾಗಿ ಚಾಚಿರುವ ಭೀಮಾಕಾರದ ಕೋಡುಗಲ್ಲಿನಲ್ಲಿ ಪ್ರಾಚೀನಾನುಭವ ಸಮಷ್ಟಿರೂಪದ 'ಅಸ್ಮೃತಿ' ಆವಿರ್ಭಾವ ವಾಯಿತೆಂದರೆ ಬ್ರಹ್ಮರಾಕ್ಷಸ ದರ್ಶನವಾಗುವುದರಲ್ಲಿ ಆಶ್ಚರ್ಯವೇನಿದೆ? ಕಬ್ಬಿಣದ ಪೆಟ್ಟಿಗೆಯ ಖಜಾನೆಯನ್ನು ತೆರೆಯುವುದಕ್ಕೆ ಸಣ್ಣ ಬೀಗದ ಕೈ ಸಾಕಾಗುವಂತೆ 'ಅಸ್ಮೃತಿ'ಯ ಮಹದೈಶ್ವರ್ಯವನ್ನು ಕೆರಳಿಸಲು ಅತ್ಯಲ್ಪ ಕಾರಣಗಳೂ ಸಾಕಾಗುತ್ತವೆ.

ಮಳೆ ತೊಯ್ದ ಮಲೆನಾಡಿನ ಮೇಲೆ ಮೂಡಿದೆಳಬಿಸಿಲಿಗೆ ಮೈಯ್ಯೊಡ್ಡಿದ ಸುಬ್ಬಣ್ಣ ಹೆಗ್ಗಡೆಯವರಿಗೆ ಸಂಭವಿಸಿದ ಸಂತೋಷಕ್ಕೆ ಬಹುಮಟ್ಟಿಗೆ ಕಾರಣವಾಗಿತ್ತು ಆ 'ಅಸ್ಮೃತಿ'. ಯಾವ ಯಾವ ಕಾಲದಲ್ಲಿ, ಯಾವ ಯಾವ ದೇಶದಲ್ಲಿ, ಯಾವ ಯಾವ ರೂಪದಲ್ಲಿ, ಯಾವ ಯಾವ ಸನ್ನಿವೇಶದಲ್ಲಿ, ಯಾವ ಸಾಗರತೀರದಲ್ಲಿ, ಯಾವ ಪರ್ವತ ಶಿಖರದಲ್ಲಿ, ಯಾವ ಅರಣ್ಯಕುಂಜಸೀಮೆಯಲ್ಲಿ ಅಂತಹ ಸೂರ್ಯೋದಯದ ಸೊಂಪನ್ನು ಹಿಂದೆ ಎನಿತು ಸಾರಿ ಅನುಭವಿಸಿದ್ದರೋ ಏನೋ? ಆ ಸಂಸ್ಕಾರ ಕೋಶದ ಖಜಾನೆಗೆ ಬೀಗದ ಕೈ ಮಾತ್ರವಾಗಿತ್ತು, ಆವೊತ್ತಿನ ಸೂರ್ಯೋದಯ! ಹಳೆಮನೆಯಾದರೇನಂತೆ? ಹಂದಿಯೊಡ್ಡಿಯ ಬಳಿಯಾದರೇನಂತೆ? ಅಕ್ಷರಹೀನ ಅಸಂಸ್ಕೃತ ಒಕ್ಕಲಿಗನಾದರೇನಂತೆ? ಮುಪ್ಪಡಸಿದ್ದರೇನಂತೆ? ಸುಬ್ಬಣ್ಣ ಹೆಗ್ಗಡೆಯೂ ವಿಶ್ವಪ್ರಜೆ!.

ಬೆನ್ನಿಗೆ ಬಿದ್ದ ಬಿಸಿಲು ನಾಲಗೆಗೆ ಬೀಳುವ ಜೇನಾಗಿತ್ತು. ಹೆಗ್ಗಡೆಯವರು 'ಸ ಸ್ ಸ್ ಆಯ್' ಎನ್ನುತ್ತಾ ಮುಂಡಾಡುವ ರೀತಿಯಲ್ಲಿ ಬೆನ್ನು ನೀವಿಕೊಂಡರು. ಲೋಕವೆಲ್ಲಾ ಅಶೋಕವಾಗಿ ಸುಖಮಯವಾಯಿತು. ಮನದಲ್ಲಿ ವಿಶ್ವಮೈತ್ರಿ ಮೂಡಿತು. ಹಂದಿ, ಕೋಳಿ, ಕುರಿ, ಮರ, ಕಾಡು, ಆಕಾಶ, ಹಾಡುತ್ತಿದ್ದ ಕಾಡು ಹಕ್ಕಿಗಳ ಹಿಂಡು, ನೆರೆ ಹೊರೆ-ಎಲ್ಲದರ ಮೇಲೆಯೂ ಅಕ್ಕರೆವುಕ್ಕಿತು. ಹೆಗ್ಗಡೆಯವರ ಜೀವಮಾನ ಕಟ್ಟಡದಲ್ಲಿ ಆ ಒಂದು ಕ್ಷಣದ ಬಾಳು ಗೋಪುರದ ತುದಿಯ ಕಳಶದ ಚಿನ್ನದ ಡೆಂಕಣಿಯಾಗಿ ಸ್ವಗರಗದೊಡನೆ ಸರಸವಾಡಿತು.

ಸರಸರನೆ ಮುಂಬರಿದು ಕೋಳಿಯ ಒಡ್ಡಿಯ ಬಾಗಿಲು ತೆರೆದರು. ಹುಂಜಗಳು ಹೇಟೆಗಳು ಮರಿಗಳು ಸಳಗಗಳು, ಕೆಂಪು, ಬಿಳುಪು, ಕಪ್ಪು, ಹಂಡಹಂಡ, ಕದ್ಲೆಕದ್ಲೆ, ಚ್ಚೆಯ್ಯೊ, ಫ್ಚೆಯ್ಯೊ, ಕೊಕ್ ಕೊಕ್, ಕೊಕ್ಕೋ! ಕೋಳಿಗಳೆಲ್ಲಾ ಒಂದರಮೇಲೊಂದು ನುಗ್ಗಿ ಹೊರಬಿದ್ದುವು. ರೆಕ್ಕೆಯ ಗಾಳಿ ಬೀಸಿದ ಪೊಲ್ಗಂಪು ಹೆಗ್ಗಡೆಯವರಿಗೆ ಸ್ವಾಭಾವಿಕವಾಗಿಯೆ ಇತ್ತು. ಅವಸರ ಅವಸರವಾಗಿ ಹೊರನುಗ್ಗಿ, ಕೆಲವು ಕೆಸರು ಕೆದರಿದುವು; ಕೆಲವು ಕಸದ ರಾಶಿಯಲ್ಲಿ ಕೊಕ್ಕಾಡಿದುವು; ಕೆಲವು ಗೊಬ್ಬರದ ಗುಂಡಿಯ ಕಡೆಗೆ ಓಡಿದುವು, ಎಲ್ಲವನ್ನೂ ಯಜಮಾನ್ಯದ ಪ್ರಶಂಸನೀಯ ದೃಷ್ಟಿಯಿಂದ ನೋಡುತ್ತಾ ನಿಂತಿದ್ದ ಸುಬ್ಬಣ್ಣ ಹೆಗ್ಗಡೆಯವರು ನಗೆಮೊಗದಿಂದ "ಗೊಬ್ರಾ ಕಿದ್ರಾಕೆ ಹೋಗಾಕೆ ಇಷ್ಟೊಂದು ಅವಸರ ಇವಕ್ಕೆ!" ಎಂದು ಹಂದಿಯ ಒಡ್ಡಿಯ ಮೇಲಿಟ್ಟಿದ್ದ ಕಂಬಳಿಯನ್ನು ತೆಗೆದು,

ಇದ್ದುದರಲ್ಲಿ ಸ್ವಲ್ಪ ಅಚ್ಚುಕಟ್ಟಾಗಿ ಸ್ಥಳದಲ್ಲಿ ಹಾಕಿ, ಅದರ ಮೇಲೆ ಮೂಡಲಿಗೆ ಬೆನ್ನಾಗಿ ಕುಳಿತು, ಕುಂಟಿ ಕುಂಟಿ ಬಳಿ ಸಾರುತ್ತಾ ದಿಬ್ಬವೇರಿ ಬರುತ್ತಿದ್ದ ಹೂವಳ್ಳಿ ವೆಂಕಟಣ್ಣನನ್ನು ನೋಡುತ್ತಿದ್ದರು.

ಅವನಿನ್ನೂ ಹತ್ತಿರ ಬಂದಿರಲಿಲ್ಲ. ಬಹಳ ಹೊತ್ತಿನಿಂದ ತಡೆದುಕೊಂಡಿದ್ದ ಮಾತು ಹೆಗ್ಗಡೆಯವರ ಗಂಟಲಿನಿಂದ ತುಟಿ ಮೀರಿ ಹೊರಟಿತು.

"ನೀ ಒಳ್ಳೆ ಗಿರಾಸ್ತ ಕಣ್ರೋ! ಅಲ್ಲಾ.... ನಿನ್ನೆ ಬತ್ತೀನಿ ಅಂದಾಂವ....!"

ಹೇಳಬೇಕೆಂದಿದ್ದ ಉತ್ತರವನ್ನು ಹಾದಿಯಲ್ಲಿಯೆ ಕಡೆದು ಅಣಿ ಮಾಡಿಕೊಂಡು ಬಂದಿದ್ದ ವೆಂಕಟಣ್ಣನೂ ಹೆಗ್ಗಡೆಯವರ ಮಾತು ಮುಗಿಯುವುದರೊಳಗಾಗಿ ಹೇಳಿಯೆ ಬಿಟ್ಟನು:

"ನಾ ಏನ್ ಮಾಡಾದ್ರಾ? ಹಾಂಗ್ಯಾರೆ, ಆ ಸನಿ ಮುಂಡೇ ಮಕ್ಳು ಬತ್ತೀನಿ ಅಂದೋರು ಬರ್ಲೆ ಇಲ್ಲ. ಕಾದೆ, ಕಾದೆ.... ಹೊತ್ತಾಗಿಹೋತು. ನಿನ್ನೇನ್ ಮಾಡಾದು.... ನಾಳೆ ಬೆಳಗ್ಗೆ ಹೋಗಾನ ಅಂತ ಹೇಳಿ ನಿಂತುಬಿಟ್ಟೆ."

"ಯಾರಿಗೆ ಹೇಳಿದ್ಯೋ?"

"ನಿಮ್ಮ ಹೊಲೇರಿಗೆ ಹೇಳಿದ್ದೆ."

"ನೀ ಒಳ್ಳೆ ಗಿರಾಸ್ತ. ಅವರು ತ್ವಾಟದ ಬೇಲಿ ಮಾಡಾದ್ ಬಿಟ್ಕಂಡು ನಿನ್ನ ಹಂದಿ ಹೊರಾಕೆ ಬತ್ತಾರೆ? ನೀ ಬೇಕಾರೆ ಒಳ್ಳೆ ಗಿರಾಸ್ತ!"

"ಹಾಂಗ್ಯಾರೆ ಏನ್ ಮಾಡ್ಲಿ ಹೇಳಿ? ನಿನ್ ನಾನೆ ಹೊತ್ಕಂಡು ಹೋ'ಬೇಕು.... ಅದಕೂ ಸೈ ಅಂತಿದ್ದೆ. ಕಾಲುಂದ್ ಹೀಂಗಾತಲ್ಲ ಹೇಳಿ...." ಎಂದು ಬಟ್ಟೆ ಸುತ್ತಿದ ಮೊಳಕಾಲನ್ನು ತೋರಿಸುವಂತೆ ಅದರ ಕಡೆ ನೋಡಿದನು.

ಹೆಗ್ಗಡೆಯವರೂ ಸಹಾನುಭೂತಿಯಿಂದ ಅದನ್ನು ನೋಡುತ್ತಾ "ಏನಾತೋ?" ಎಂದು ಹೇಳಿದರು.

ವೆಂಕಟಣ್ಣನು ಊರಿಕೊಂಡಿದ್ದ ದೊಣ್ಣೆಯನ್ನು ಮೆಲ್ಲಗೆ ಕೆಳಗಿಟ್ಟು, ನಿಧಾನವಾಗಿ ಕೂತು, ಕಾಲಿಗೆ ಸುತ್ತಿದ್ದ ಕಂಬಳಿಯ ಕರೆಯನ್ನೂ ಹಾಕಿಕೊಂಡಿದ್ದ ಸರಿಗೆ ಬಳೆಯನ್ನೂ ಸಾವಧಾನವಾಗಿ ಜಾರಿಸುತ್ತಾ "ಹಾಂಗ್ಯಾರೆ, ಅವತ್ತು ಮರಸಿಗೆ ಕೂತಿದ್ದೆ; ಹೋದ ತಿಂಗಳು ಬೆಳಕಿನಾಗೆ. ಒಂದು ಮಲ ಬಂತು. ಹೊಡೆದೆ. ಇಳಿದು ಹೆರಕಿಕೊಳ್ಳಾಕೆ ಹೋಗಾಕೂ ತೆವಳಿಕೂತ ತೆವಳಿಕೂತ ಹೋಗಾಕೆ ಸುರುಮಾಡ್ತು. ಓಟು ಓಡ್ಸಾಡಿದ್ರೂ ಸಿಕ್ಕ್ಅಲ್ಲ್ದು. ಬಯ್ಲು ತುಂಬಾ ಓಡ್ಯಾಡಿ ಸಾಕಾಗಿ ಹೋತು ಅಂತೀನಿ. ಹ್ಯಾಂಗ್ಯಾರೆ, ಹಾಳು ಮುಂದೇದಕ್ಕೆ ದೊಣ್ಣೇನೆ ಸೈ ಅಂತಾ, ಒಂದು ಬಡಿಕೆ ತಗೊಂಡು ಜಪ್ಪ್‌ದೆ. ಅದರ ಕೊಡರ್ಲು ಹೊಡ್ದುಬಿಡ್ತು ನೋಡಿ. ಹಾಂಗ್ಯಂತ, ಹೆಚ್ಚಿನ ನೆತ್ರೂ ಬರ್ಲೂ ಇಲ್ಲ... ಅದೇ ಗಾಯ ದೊಡ್ಡಾಯ್ತು, ದೊಡ್ಡಾಯ್ತು, ಕಡೀಗೆ ಕುಂಟನ ಹುಣ್ಣಿಗೆ ತಿರಿಗ್ತು.... ಆ ಮೇಗ್ರೊಳ್ಳಿ ಕಣ್ಣಾ ಪಂಡಿತರು ಏನೋ ಔಸ್ತಿ ಮಾಡಿಕೊಟ್ಟಾರ... ಹಾಕಿ ಕಟ್ಟೀನಿ.... ನೋಡ್ಬೇಕು, ಹಾಂಗ್ಯಾರೆ, ಏನಾಗ್ತದೆ ಅಂತಾ...."

“ಹಂದಿ ತಗೊಂಡು ಹೋಗ್ತಿಯೋ ಬಿಡ್ತೀಯೋ, ಬಿಸಿಲು ಏರಿಹೋತು. ಅವನ್ಯಾಕೆ ಸುಮ್ಮನೆ ಒಡ್ಡಿ ಒಳಗೆ ಕೂಡಿ ಹಾಕ್‌ಬೇಕು? ಬಿಟ್ಬಾರು ಬಿಡ್ತೀನಿ,” ಎಂದು ಹೆಗ್ಗಡೆಯವರು ತಟಕ್ಕನೆ ಯೋಗಕ್ಷೇಮದ ಮಾತಿನಿಂದ ವ್ಯಾಪಾರಧ್ವನಿಗೆ ದುಮುಕಿ ಬಿಟ್ಟರು.

ವೆಂಕಟಣ್ಣ ಅದನ್ನು ಗಮನಿಸುವ ಗೋಜಿಗೆ ಹೋಗಲಿಲ್ಲ. ತಟಕ್ಕನೆ ತಲೆಯೆತ್ತಿ “ಅದ್ಯಾಕೆ ಹಾಂಗಂತೀರಿ, ಮಾರಾಯ್ರು. ನಿಮ್ಮ ಹೊಲೇರ ಕೈಲೇ ಹೊರ್ಸಿ ಕಳ್ಸಿ. ನಾ ಹ್ಯಾಂಗೆ ಹೊತ್ಕಂಡು ಹೋಗ್ಲಿ?” ಎಂದು ಮೆಲ್ಲನೆ ಎದ್ದು ಹಂದಿಯೊಡ್ಡಿಯ ಕಡೆಗೆ ಮೆಲ್ಲಗೆ ಸರಿದನು.

ಹೆಗ್ಗಡೆಯವರೂ ಎದ್ದು ಅತ್ತ ಕಡೆ ಸರಿಯುತ್ತಾ “ನೀ ಒಳ್ಳೆ ಗಿರಾಸ್ತ. ಮಳೇ ಬಂದ್ ಹದಾ ಆಗ್ಯಾದೆ. ಇವತ್ತು ಆರು ಕಟ್ಟಾಕೆ ಹೇಳಿ ಕಳ್ಸೀನಿ. ಇವತ್ತೆಲ್ಲಿ ಸಿಗ್ತಾರೆ ನಮ್ಮ ಹೊಲೇರು?”

“ಅಯ್ಯಯ್ಯೊ, ಅಷ್ಟುಂದು ಉಪಕಾರ ಮಾಡಿ. ನಿಮ್ಮ ದಮ್ಮಯ್ಯ ಅಂತೀನಿ.”

“ಸಿಗಾದಾದ್ರೂ ಮಜ್ಜಾನದ ಮ್ಯಾಲೆ ಸೈ.”

“ಹಾಂಗಾದ್ರೆ ಹಂಗೇನೆ”.

ಹೆಗ್ಗಡೆಯವರು ಸ್ವಲ್ಪ ಉದಾಸೀನದ ಧ್ವನಿಯಿಂದ: “ಮಾರಾಯ, ನಮ್ಮ ಮನೆ ಕಷ್ಟ ಹೇಳಿದ್ರೆ ತೀರದು. ಹುಡುಗಿ ಒಂದೇ ನೀರು ಹೊತ್ತು ಅಡಿಗೆ ಮಾಡಬೇಕಾಗ್ಯದೆ.”

“ಯಾಕೆ? ಮಂಜಮ್ಮನ ಅತ್ತಿಗೆ ಇಲ್ಲೇನು?”

“ಅದೆ. ಹೊರಗೆ ಕೂತದೆ.”

“ಸಣ್ಣಮನೆ ಶಂಕರಪ್ಪ ಹೇಳಿ ಕಳ್ಸಿದ್ದ, ಹೋಗಿ ಬರ್ತೀನಿ” ಎಂದು ವೆಂಕಟಣ್ಣ ಅತ್ತ ಕಡೆ ನೋಡಿದಾಗ, ಮಿಂದು ಬಂದ ಶಂಕರಪ್ಪ ಹೆಗ್ಗಡೆ ಅಂಗಳದಲ್ಲಿದ್ದ ತುಳಸಿಗೆ ನೀರು ಹಾಕಿ ಪ್ರದಕ್ಷಿಣೆ ಮಾಡುತ್ತಿದ್ದುದು ಕಣ್ಣಿಗೆ ಬಿತ್ತು.

ಅದನ್ನು ನೋಡಿದ ದೊಡ್ಡ ಹೆಗ್ಗಡೆಯವರು ವ್ಯಂಗ್ಯಹಾಸ್ಯದಿಂದಲೆಂಬಂತೆ “ಓಹೋ ನಮ್ಮ ಬಿರಾಂಬರ ಮಡಿಪೂಜೆ ಆಗ್ತಾ ಇದೆ!” ಎಂದರು.

“ಹಾಂಗ್ಯಾರೆ ಮಜ್ಜಾನ ಕಳ್ಸಿಕೊಡ್ತೀರಷ್ಟೆ?”

“ಹೋಗ್ಲಿ. ಈಗ್ಲೆ ತಗೊಂಡು ಹೋಗಿಬಿಡಪ್ಪಾ.”

“ಹಾಂಗಾದ್ರೆ ಹಂಗೆ. ನಂಗೇನಂತೆ.”

“ದುಡ್ಡು ತಂದೀಯೇನು?”

“ಈಗ ಕೈಲಿಲ್ಲ. ಲೆಕ್ಕಕ್ಕೆ ಬರ್ಕೊಂಡುಬಿಡಿ.”

“ಅದು ಮಾತ್ರ ಆಗಾದಿಲ್ಲ.... ನೀನು ಕೊಡಾದೇ ಇನ್ನೂ ಕೊಟ್ಟಿಲ್ಲ. ಸುಮಾರು ಹಣ ಬಾಕಿ ಇದೆ... ಮತ್ತೂ ಲೆಕ್ಕಕ್ಕೆ ಬರ್ಕೊಳ್ಳಿ ಅಂದ್ರೆ?” ಸುಬ್ಬಣ್ಣ ಹೆಗ್ಗಡೆಯವರ  ಮಾತು ಬಿರುಸಾಗತೊಡಗಿತು.

“ಈಗ ಎಲ್ಲಿಂದ ತರ್‌ಲಿ, ನೀವೇ ಹೇಳಿ.”

“ಎಲ್ಲಿಂದ? ಶಂಕರಪ್ಪನ್ನೇ ಕೇಳು.”

“ಅವನಿಗೇ ಬೆಟ್ಟಳ್ಳಿ ಗೌಡ್ರ ಹತ್ರ ಸಾಲ ಆಗ್ಯಾದೆ. ನನಗೆಲ್ಲಿಂದ ಕೊಟ್ಟಾನು?”

“ಮನೆಗೆ ಹೆಂಚು ಹಾಕಿಸ್ತಾ ಕೂತ್ರೆ ಸಾಲ ಆಗ್ದೆ ಬಿಡ್ತದೇನು?.... ಹೊಗ್ಲಿ ನಂಗ್ಯಾಕೆ ಆ ಇಚಾರ....”

“ನೀವೇನು ಕೆಟ್ಟದ್ದಕ್ಕೆ ಹೇಳ್ತೀರೇನು? ಎಷ್ಟಂದರೂ ಅವನಿಗೆ ಚಿಕ್ಕಪ್ಪ. ನೀವಲ್ಲದೆ ಇನ್ಯಾರು ಹೇಳ್ಬೇಕು?”

“ಹೇಳ್ತೀನಿ ನೋಡೂ, ಎಂಕ್ಟಣ್ಣ; ನೀನೂ ಹಳಬ ನಾನೂ ಹಳಬ....”

“ಸೈ ಸೈ ನಾನೆಂಥ ಹಳಬ?.... ನಿಮ್ಮ ವಯಸ್ಸಿನವರು ಈ ಪರಾಂತದಾಗೆ ಯಾರೂ ಇಲ್ಲ.... ನಮ್ಮ ಕಲ್ಲೂರು ದೋಯಿಸಲು ಒಬ್ಬರನ್ನ ಬಿಟ್ರೆ ನಿಮ್ಮಷ್ಟು ಹಳಬರು ಮತ್ಯಾರೂ ಇಲ್ಲ.”

“ಹೂವೀ! ಏ ಹೂವೀ!”

“ಹೆಗ್ಗಡೆಯವರು ಇದ್ದಕ್ಕಿದ್ದಹಾಗೆ ಕೂಗಿ ಕರೆಯತೊಡಗಿದರು. ಕೊಟ್ಟಿಗೆ ಕೆಲಸದಲ್ಲಿದ್ದ  ಹೂವಿ ಕೈಕಾಲ್ ಸೆಗಣಿಯಾಗಿ ಬೇಗ ಬೇಗ ಬಂದಳು.”

“ನಿನ್ನ ಗಂಟಲು ಕಟ್ಟಿ ಹೋಗಾ! ಓಕೊಳ್ಳಬಾರದೇನೆ?” ಎಂದು ಭರ್ತ್ಸನೆಮಾಡಿ, ಹೆಗ್ಗಡೆಯವರು “ಅಲ್ಲಿ ಓಡಿ ಹೋಗು; ನಮ್ಮ ತಿಮ್ಮೂಗೆ ಹೇಳು ಯಾರಾದ್ರೂ ಇಬ್ರು ಹೊಲೇರನ್ನ ಕಳ್ಸಬೇಕಂತೆ ಅಂತಾ.”

“ಹಾಂಗಾರೆ, ನಾನೀಗ ಬಂದು ಬಿಡ್ತೀನಿ” ಎಂದು ಹೇಳಿ ಹೂವಳ್ಳಿ ವೆಂಕಟಣ್ಣ ತೇಪೆ ಹಾಕಿದ ತನ್ನ ದಗಲೆಯನ್ನು ಸರಿಮಾಡಿಕೊಂಡು, ದೊಣ್ಣೆಯೂರಿ, ಕುಂಟುತ್ತಾ ಆಚೆ ಮನೆಗೆ ಹೋದನು.

ಕಣ್ಣಾಪಂಡಿತರ ಕಷಾಯ ಕುಡಿಯುವುದಕ್ಕಾಗಿ ಸುಬ್ಬಣ್ಣ ಹೆಗ್ಗಡೆಯವರು 'ಬುಚ್ಚಿ'ಯಿದ್ದ ಅಡಿಗೆಮನೆಗೆ ಹೋದರು. ಕಾಲಿಗೆ ಹಿಡಿದಿದ್ದ ಕೆಸರು ಒಣಗಿ ಹೋಗಿತ್ತಾದ್ದರಿಂದ ಮುದುಕನಿಗೆ ಅದನ್ನು ತೊಳೆದುಕೊಳ್ಳುವುದಕ್ಕೆ ನೆನಪೂ ಆಗಲಿಲ್ಲ.

* * *

## ೬

ಸ್ವಲ್ಪ ಹೊತ್ತಾದಮೇಲೆ ಕಣ್ಣಾಪಂಡಿತರು ಹೊರಗೆ ಬಂದು ಕರೆದರು; "ಏ ಕುತ್ತೀ!" ಗುತ್ತಿ ಎಲೆಯಡಿಕೆಯನ್ನು ಯಾಂತ್ರಿಕವಾಗಿ ಎಂಬಂತೆ ಜಗಿಯುತ್ತಾ ನೆಲದ ಕಡೆ ನೋಡುತ್ತಾ ಕುಳಿತವನು ತಲೆ ಎತ್ತಲಿಲ್ಲ. ಮರದಳಕಲಿನ ಎಳಬಿಸಿಲು ಅವನ ಸುತ್ತಲೂ ಬಲೆಬಲೆ ನೆಯ್ದಿತ್ತು

ಅಲ್ಲಾಡುತ್ತಿದ್ದ ದವಡೆಯೊಂದು ವಿನಾ ವಿಗ್ರಹದೋಪಾದಿಯಲ್ಲಿ ಕುಳಿತಿದ್ದ ಹೊಲೆಯನನ್ನು ನೋಡಿ ಮಲೆಯಾಳಿ ಪಂಡಿತನಿಗೆ ಸೋಜಿಗವಾಯಿತು. ಅರೆನಗೆಗೂಡಿ ಮತ್ತೊಮ್ಮೆ ತುಸು ಗಟ್ಟಿಯಾಗಿಯೆ ಕೂಗಿದರು: "ಏ ನಾಯೀ ಕುತ್ತೀ!" ಆದರೂ ಗುತ್ತಿ ಮೊದಲಿನಂತೆಯೆ ಕುಳಿತಿದ್ದುದನ್ನು ಕಂಡು ಪಂಡಿತರು ವಕ್ರವಕ್ರವಾಗಿ ದರಿಸಿಹೋಗಿದ್ದ ಕಲ್ಲು ಕಟ್ಟಣೆಯ ಮೆಟ್ಟಲುಗಳನ್ನು ಕಾಲು ಜಾರೀತೆಂದು ನಿಧಾನವಾಗಿ ಎಚ್ಚರಿಕೆಯಿಂದ ಇಳಿಯತೊಡಗಿದರು.

ಗುತ್ತಿ ನೆಲದ ಕಡೆ ನೋಡುತ್ತಿದ್ದುದೇನೋ ಹೌದು. ಹೋದ ರಾತ್ರಿಯ ಮಾರಿ ಮಳೆಯಲ್ಲಿ ತೇಲಿಬಂದು ಕುತ್ತುರೆಯಾದಂತಿದ್ದ ಹಲಸಿನ ತರಗಿನ ನಡುವೆ ಬಿದ್ದಿದ್ದ ಒಂದುಸ ಗಣಿ ಮುದ್ದೆಯಿಂದ ಒಂದು ಓಡುಹುಳು ಸಣ್ಣದೊಂದು ಉಂಡೆಯನ್ನು ಅದನ್ನು ಹಿಂದುಮುಂದಾಗಿ ತನ್ನ ಹಿಂಗಾಲುಗಳಿಂದ ನೂಕಿಕೊಂಡು ಹೋಗುತ್ತಿತ್ತು. ಅತ್ಯಮೂಲ್ಯವಾದ ಪದಾರ್ಥವನ್ನು ಅತಿಪ್ರಯಾಸದಿಂದ ಸಾಗಿಸುವ ಸಾಹಸದಲ್ಲಿ ತೊಡಗಿದಂತಿತ್ತು ಅದರ ದೃಢಪ್ರಯತ್ನ. ಆ ಉಂಡೆ ಒಂದು ಸಣ್ಣ ದಿಬ್ಬವನ್ನು ಹತ್ತಿ ಅದರ ನೆತ್ತಿಗೆ ಬಂದೊಡನೆ ಮತ್ತೆ ಕೆಳಕ್ಕುರುಳಿತು. ಓಡುಹುಳು ಮತ್ತೆ ಅದನ್ನು ಬಳಿಸಾರಿ ತನ್ನ ಹಿಂಗಾಲುಗಳಿಂದ ತಬ್ಬಿಹಿಡಿದು ದಬ್ಬತೊಡಗಿತು. ಹೀಗೆ ಒಂದೆರಡು ಗೇಣು ಹೋಗುವುದರೊಳಗಾಗಿ ನಾನಾ ಅಡಚಣೆಗಳಿಗೆ ಒಳಗಾದರೂ ಧೃತಿಗೆಡದೆ ನಿರಾಶವಾಗದೆ ಕಿನಿಸಿಕೊಳ್ಳದೆ ಪ್ರಶಾಂತವಾಗಿಯೆ ತನ್ನ ಕೆಲಸವನ್ನು ಸಾಗಿಸುತ್ತಿತ್ತು. ಗುತ್ತಿಯ ಕಣ್ಣೇನೋ ಅದನ್ನೆ ಕುತೂಹಲದಿಂದ ನೋಡುತ್ತಿತ್ತು. ಅವನ ಮನಸ್ಸಿನ ಹೊರ ಅಂಚು ಅದರ ದೃಢತೆಯ ವಿಚಾರವಾಗಿ ಚಿಂತಿಸಿ ಶ್ಲಾಘಿಸುತ್ತಲೂ ಇತ್ತು. ಆದರೆ ಅಷ್ಟರಿಂದಲೆ ಅವನು ಆ ಪರಿ ತಲ್ಲೀನನಾಗಿ ಕುಳಿತಿರಲು ಸಾಧ್ಯವಾಗುತ್ತಿರಲಿಲ್ಲ. ಕಣ್ಣಾಪಂಡಿತರು ಎರಡು ಸಾರಿ ಕರೆದೂ ಓಕೊಳ್ಳದಿರುವಷ್ಟು. ಅವನ ಮನಸ್ಸಿನ ಕೇಂದ್ರವನ್ನೆಲ್ಲಾ ವ್ಯಾಪಿಸಿದ್ದ ವಿಚಾರ ಬೇರೆಯಾಗಿತ್ತು. ಓಡುಹುಳುವಿನ ಸೆಗಣಿ ಉಂಡೆಯ ಸಾಹಸ ಒಳಗಿನ ಏಕಾಗ್ರತೆಗೆ ಆಲಂಬನರೂಪವಾದ ಬಹಿರಿಂದ್ರಿಯ ಘಟನೆ ಮಾತ್ರವಾಗಿತ್ತು. ಅವನ ಅಂತಃಕರಣವನ್ನೆಲ್ಲ ಆಕ್ರಮಿಸಿದ್ದ ವಿಚಾರವೆಂದರೆ ತಿಮ್ಮಿಯ ಅಪಹರಣ! ಅದರ ಸಾಧ್ಯಸಾಧ್ಯತೆ, ಅದರ ಅಪಾಯ, ಅದರಿಂದ ತಪ್ಪಿಸಿಕೊಳ್ಳುವ ಉಪಾಯ, ತಿಮ್ಮಿಯ ಅವ್ವ ಸೇಸಿಯಿಂದ

ಒದಗಬಹುದಾದ ಸಹಾಯ, ತಿಮ್ಮಿಯ ಅಪ್ಪ ದೊಡ್ಡ ಬೀರನಿಂದ ಸಂಭವಿಸಬಹುದಾದ ಅಡಚಣೆ, ಎಲ್ಲಿಯಾದರೂ ಸಿಕ್ಕಿ ಬಿದ್ದರೆ ಗೌಡರಿಂದ ತನಗೆ....

"ಏನೋ, ಕುತ್ತಿ, ಹೀಗೆ ಕೂತುಬಿಟ್ಟಿದ್ದೀಯಲ್ಲಾ?"

ಗುತ್ತಿ ದಿಗಿಲುಬಿದ್ದವನಂತೆ ಎದ್ದುನಿಂತು ಅಚ್ಚರಿಯಿಂದ "ಅಯ್ಯೋ ಯಾವ ಮಾಯಕದಾಗೆ ಬಂದುಬಿಟ್ರಿ ಈಟು ಹತ್ರ?" ಎಂದು ಹಲ್ಲುಬಿಟ್ಟನು.

"ಏನು ನೋಡುತ್ತಾ ಇದ್ದೆಯಲ್ಲಾ? ನಾನು ಎರಡು ಸಲ ಕೂಗಿದೆ; ನಿನಗೆ ಇತ್ತ ಧ್ಯಾಸವೇ ಇರಲಿಲ್ಲಾ?"

ಪಂಡಿತರು ಕೇಳಿದ ಪ್ರಶ್ನೆಯನ್ನೇ ಗಮನಿಸದೆ ಗುತ್ತಿ ಅವರ ಕೈಯಲ್ಲಿದ್ದ ಅಂತ್ರವನ್ನೆ ಬಯಸಿ ನೋಡುತ್ತಾ ತನ್ನ ಎರಡು ಕೈಗಳನ್ನೂ ಅಂಜಲಿಬದ್ಧವನ್ನಾಗಿ ಮಾಡಿ ಯಾಚಿಸುವಂತೆ ನೀಡಿದನು. ಹಾಗೆ ಮಾಡುವಾಗ ಅವನ ಕೈಯಲ್ಲಿದ್ದ ಬಗನಿ ದೊಣ್ಣೆ ಕಂಕುಳು ಸೇರಿತ್ತು.

"ಕೈಯಲ್ಲಿ ಶರಣಾರ್ತಿ ಬಗಲಲ್ಲಿ ದೊಣ್ಣೆ" ಎಂಬ ಗಾದೆ ನಿನ್ನದು.... ಮತ್ತೆ ನಾನು ಹೇಳಿದ್ದು ಮರೆಯಬೇಡ. ತಿಳಿಯಿತೇ?" ಎನ್ನುತ್ತಾ ಕಣ್ಣಾ ಪಂಡಿತರು ಅವನ ಕೈಗೆ ಅಂತ್ರ ಹಾಕಿದರು, ಕೈ ಸೋಕೀತೆಂದು ಹೆದರಿ ತುಸು ಎತ್ತರದಿಂದಲೆ!

ತುಂಬ ಗೌರವದಿಂದಲೂ ಆ ಪವಿತ್ರ ವಸ್ತುವನ್ನು ಬೊಗಸೆ ಕೈಯಲ್ಲಿ ಅಪ್ಪಿಹಿಡಿದು, ಆ ಜೋಡಿಸಿದ್ದ ಕೈಯಿಂದಲೆ ಸೊಂಟಬಗ್ಗಿ ನಮಸ್ಕಾರ ಮಾಡಿ, ಹೊರಟೇಬಿಟ್ಟನು ಗುತ್ತಿ. ಪಂಡಿತರು "ಏನೋ ಅಮಸರ? ಓಡುತ್ತಿದ್ದೀಯಲ್ಲಾ?" ಎಂದು ಕೇಳಿದರೂ ನಿಲ್ಲದೆ "ಹೊತ್ತಾಯ್ತು ಕಣ್ರಾ; ಬತ್ತೀನಿ" ಎನ್ನುತ್ತಾ ಬಿರುಬಿರನೆ ಕುಳ್ಳುಗಾಲು ಹಾಕಿದನು.

ತುಸು ವಯಸ್ಸಾಗಿದ್ದ ಕಣ್ಣಾಪಂಡಿತರು ಕುಳ್ಳಗೆ ಗಟ್ಟಿಮುಟ್ಟಾಗಿದ್ದ ತರುಣ ಗುತ್ತಿಯನ್ನೆ ನೋಡುತ್ತಾ ನಗುತ್ತಾ 'ಲವಡೀ ಮಗನಿಗೆ ಹೆಣ್ಣಿನ ಹುಚ್ಚು ಅಮರಿತ್ತಲ್ದಾ?" ಎಂದುಕೊಂಡು ಮನೆಗೆ ಹಿಂತಿರುಗಿದರು.

ಗುತ್ತಿ 'ಹೊತ್ತಾಯ್ತು ಕಣ್ರಾ' ಎಂದು ಒಡೋಡುತ್ತಲೆ ಅವಸರವಸರವಾಗಿ ಅಂತ್ರ ದಾನಮಾಡಿದ ಕಣ್ಣಾಪಂಡಿತರನ್ನು ಬೀಳುಕೊಂಡಿದ್ದರೂ ಹತ್ತುಮಾರು ಹೋಗುವುದರೊಳಗೆ ಅವನ ವೇಗ ಕಡಿಮೆಯಾಗುತ್ತಾ ಬಂದು ಅಂತಕ್ಕಸೆಟ್ತಿಯ ಮನೆಯ ಸಮೀಪದಲ್ಲಿ ನಿಂತೇ ಹೋಯಿತು. ಅಷ್ಟು ಹಿತಕರವಾಗಿ ಅವನ ಮೂಗನ್ನು ಆಹ್ವಾನಿಸುತ್ತಿತ್ತು ದೋಸೆಯ ವಾಸನೆ!" ಬೆಳಗಿನಿಂದ ಏನನ್ನೂ ತಿಂದು ಕುಡಿದು ಮಾಡದೆ ಇದ್ದ ಅವನಿಗೆ ಆ ದೋಸೆಯ ಕಂಪಿನ ಪ್ರಲೋಭನೆಯನ್ನು ಮೀರಿ ಮುಂದೆ ಅಡಿಯಿಡಲು ಆಗಲಿಲ್ಲ. ಇನ್ನೊಂದು ನಾಲ್ಕುಮಾಡು ಮುಂದುವರಿದಿದ್ದರೆ ಕೋಣೂರಿಗೆ ಹೆದ್ದಾರಿಯಿಂದ ಅಗಚುವ ಕಾಲುದಾರಿ ಸಿಕ್ಕುತ್ತಿತ್ತು. ಕಾಲುನಡಿಗೆಯಲ್ಲಿ ಹೋಗುವವರೆಲ್ಲ ಕೋಣೂರಿನ ಮೇಲೆಯೆ ಹಾದು ಹೋಗಬೇಕಾಗಿತ್ತು ಹಳೆಮನೆಗೆ. ಆದರೆ ಗುತ್ತಿಯ ಮನಸ್ಸು ಅಥವಾ ಹೊಟ್ಟೆ ಅಥವಾ ಬಾಯಿ- ಅವನ ಮಟ್ಟಿಗೆ ಅವುಗಳಲ್ಲಿ ಅಂತಹ ಭೇದವೇನಿರಲಿಲ್ಲ!- 'ಉಂದು ಚೂರು ಬಾಯಿ ಹುಳ್ಳಗೆ ಮಾಡಿಕೊಂಡೇ

ಹೋಗಾನ' ಎಂದು ವಾದಿಸಿತು. ಮನೆಯ ಎದುರು ಹೆದ್ದಾರಿಯ ಅಂಚಿಗೆ ಹಾಕಿದ್ದ ಬಿದಿರಡ್ಡೆಯ ಬೇಲಿಯನ್ನು ಉಣುಗೋಲಿನ ಬದಿಯೆ ಇದ್ದ ತಡಬೆಯ ಮೇಲೆ ಹತ್ತಿ ದಾಟಿ ಮುಂಚೆಕಡೆಯ ಅಂಗಳಕ್ಕೆ ಹೋದನು.

ಅಂತಕ್ಕಸೆಟ್ಟಿಯ ಮನೆ ಒಂದು ರೀತಿಯಲ್ಲಿ ಅರವಟ್ಟಿಗೆ, ಅನ್ನಸತ್ರ, ಭೋಜನಗೃಹ, ಕಳ್ಳಂಗಡಿ, ಜೂಜಿನ ಕಟ್ಟೆ, ಆಟದಮನೆ, ಇತ್ಯಾದಿ ಇತ್ಯಾದಿ ಸಂಸ್ಥೆಗಳ ಸಂಸ್ಕಾರಗಳನ್ನೆಲ್ಲ ಒಳಗೊಂಡ ಸಾಮೂಹಿಕ ಕ್ಷೇತ್ರವಾಗಿತ್ತು. ಆಗದವರು ಕೆಲವರು ಇನ್ನೂ ಏನೇನೋ ಆಗಿದೆ ಎಂದು ಕಿವಿ ಮಾತು ಹೇಳುತ್ತಿದ್ದರು. ಆದರೆ ಗುತ್ತಿಯ ಮಟ್ಟಿಗೆ ಅದು 'ಮೇಗ್ರೊಳ್ಳಿ ಹಲಸಿನ ಮರದ ಮನೆ', ಆ ಮನೆಯ ಎದುರಿಗಿದ್ದ ಹೆಬ್ಬಲಸಿನ ಮರವನ್ನು ಎಂದೋ ಕಡಿದುಹಾಕಿದ್ದರೂ ಅದು ಕೀರ್ತಿಶೇಷವಾಗಿ ಆ ರೀತಿ ಹೆಸರುಳಿಸಿಕೊಂಡಿತ್ತು.

ಅವನು ಸಿಂಬಾವಿಯಿಂದ ಕೋಣೂರು, ಹಳೆಮನೆ, ಹೂವಳ್ಳಿ, ಬೆಟ್ಟಳ್ಳಿ ಮೊದಲಾದೆಡೆಗಳಿಗೆ ಹೋಗಿ ಬರುವಾಗಲೆಲ್ಲ 'ಹಲಸಿನಮರದ ಮನೆಯಲ್ಲಿ' ತುಸುಕಾಲವಾದರೂ ತಂಗಿ ಬಾಯಾರಿಕೆಯನ್ನೊ ಹಸಿವೆಯನ್ನೊ ಆಯಾಸವನ್ನೊ ಪರಿಹರಿಸಿಕೊಂಡು ಹೋಗುತ್ತಿದ್ದುದು ವಾಡಿಕೆ. ಬೆಲ್ಲ ನೀರುಗಳನ್ನೊ, ಹೆಂಡ ಕರಿಮೀನು, ಚಟ್ನಿಯನ್ನೊ, ಕಳ್ಳು ಸ್ವಾರ್ಲು ಮೀನನ್ನೊ, ಕಡೆಗೆ ಮಜ್ಜಿಗೆ ಉಪ್ಪಿನಕಾಯಿಯನ್ನೊ ಸವಿದೆ ಮುಂದುವರಿಯುತ್ತಿದ್ದನು. ಅದಕ್ಕೆ ಬದಲಾಗಿ ಅವನು ಇತರ ಪ್ರಯಾಣಿಕರಂತೆ ದುಡ್ಡು ಕಾಸು ಕೊಡುತ್ತಿರಲಿಲ್ಲ. ಅವನ ಹತ್ತಿರ ಆ ಪದಾರ್ಥ ಇರುತ್ತಿದ್ದುದೂ ಅಷ್ಟಕ್ಕಷ್ಟೇ! ಜಾತ್ರೆಗೊ ತೇರಿಗೊ ಹೋಗುವಾಗ ಹೆಗ್ಗಡೇರ ಹತ್ತಿರ ಗೋಗರೆದು ಒಂದೆರಡಾಣೆ ದಕ್ಕಿಸಿಕೊಂಡರೆ ಅದೇ ಯಥೇಚ್ಛ. ಆದರೆ ಕಾಡಿನಲ್ಲಿ ಬರುವಾಗ, ಅದು ಸಮಯವಾಗಿದ್ದರೆ, ಒಳ್ಳೆಯ ಎಲೆ ಕಳಲೆ ಮುರಿದು ತಂದುಕೊಡುತ್ತಿದ್ದನು. ಪಯಣ ಕೈಕೊಳ್ಳುವ ಸಮಯದಲ್ಲಿ ತಾನು ಒಡ್ಡಿದ ಶೆಬೆಗೆ ಕಾಡುಕೋಳಿಯೊ ಚಿಟ್ಟೆಕೋಳಿಯೊ ಸಿಕ್ಕಿಬಿದ್ದರೆ ಅದನ್ನೂ ಎಷ್ಟೋ ಸಾರಿ ತಂದುಕೊಟ್ಟಿದ್ದನು. ಅಣಬೆಯ ಕಾಲದಲ್ಲಿ ಅಕ್ಕಿಅಳಿಬಿ, ಹೆಗ್ಗಾಲಳಿಬಿ, ಚುಳ್ಳಳಿಬಿ, ಕಾಸರ್ಕನಳಿಬಿ ಇವುಗಳನ್ನೂ ತಂದುಕೊಡುತ್ತಿದ್ದನು. ಒಮ್ಮೊಮ್ಮೆ ಇತರರ ಅಡಕೆ ಬಾಳೆ ತೋಟಗಳಲ್ಲಿ ಹಾದು ಬೇಲಿಯ ತಡಬೆ ದಾಟಿ ಬರುವ ಪ್ರಮೇಯ ಒದಗಿದಾಗ ಬಾಳೆಯ ಗೊನೆಗಳನ್ನೂ ತಂದುಕೊಡುತ್ತಿದ್ದುದೂ ಉಂಟು! ಅಲ್ಲದೆ ತಾನು ಅಲ್ಲಿಗೆ ಬಂದಾಗ ಅಂತಕ್ಕಸೆಟ್ಟಿಯವರಿಗೆ ಏನಾದರೂ ತುರುತ್ತಾಗಿ ಆಗಬೇಕಾದ ಸಣ್ಣಪುಟ್ಟ ಕೆಲಸಗಳನ್ನೂ ಮಾಡಿಕೊಡುತ್ತಿದ್ದನು.

ಅಂಗಳಕ್ಕೆ ಹೋದವನು ಮುಂದುಗಡೆ ನೇತುಹಾಕಿದ್ದ ಮಂತ್ರದ ತೆಂಗಿನಕಾಯಿಯನ್ನು ನೋಡಿ ದೂರದಲ್ಲಿಯೆ ನಿಂತನು. ಹುಲ್ಲಿನ ಮಾಡು ಕುಸಿಯಾಗಿದ್ದುದರಿಂದ ಜಗಲಿ ಕಿರುಜಲಿಗಳಲ್ಲಿ ಕವಿದಿದ್ದ ಅರೆ ಗತ್ತಲೆಯಲ್ಲಿ ಯಾರು ಯಾರೊ ಮೇಲುಜಾತಿಯವರು ಚಾಪೆಯ ಮೇಲೆ ಮಲಗಿಯೊ ಕಂಬಳಿಯ ಮೇಲೆ ಕುಳಿತೋ ಮೂಲೆಯಲ್ಲಿ ಕರಿಹಿಡಿದು ಕೊಳೆಯಾಗಿದ್ದ ಬೆಂಚಿನ ಮೇಲೆ ಒರಗಿಯೊ ಇದ್ದುದರಿಂದ ಅಲ್ಲಿ ತನಗೆ ಸ್ವಾಗತವಾಗಲಿ ಪ್ರವೇಶವಾಗಲಿ ಎಂದೆಂದೂ ದೊರೆಯದೆಂದು ಹುಟ್ಟಿನಿಂದಲೆ ಅರಿತಿದ್ದ ಗುತ್ತಿ ಮಾಡು ಸಂದಿಯ ಕಡೆಯಿಂದ ಮೂಗುಮುಚ್ಚಿ ಹಿಡಿದುಕೊಂಡು ಹಿತ್ತಲುಕಡೆಯ ಅಂಗಳಕ್ಕೆ ಬೇಗಬೇಗನೆ ಜಾರಿದನು. ಅಷ್ಟೊಂದು ಮಲಮೂತ್ರಾದಿ ಸಂಮಿಶ್ರಣದ ದುರ್ಗಂಧವಿತ್ತು ಅಲ್ಲಿ.

ಹಿತ್ತಲುಕಡೆಯಿದ್ದ ಒಂದು ಹುಲ್ಲು ಜೋಪಡಿ ದನದ ಕೊಟ್ಟಿಗೆಯಾಗಿತ್ತು. ಅದಕ್ಕೆ ಗೋಡೆಯಿರಲಿಲ್ಲ. ಕಂಬದಿಂದ ಕಂಬಕ್ಕೆ ಬಿದಿರಡ್ಡೆಗಳನ್ನು ಕಟ್ಟಿ ಬೇಲಿಯ ತರಹದ ಒಡ್ಡು ಹಾಕಿದ್ದರು. ಬಡಕಲು ಬಡಕಲು ಆದ ಒಂದೆರಡು ದನಗಳೂ ಒಂದು ಸುಪುಷ್ಟವೆನ್ನಬಹುದಾದ ಎಮ್ಮೆಯೂ ಇದ್ದುವು.

ಗುತ್ತಿಯ ಕಣ್ಣಿಗೆ ತಟಕ್ಕನೆ ಗೋಚರವಾದುದೆಂದರೆ ಕೊಟ್ಟಿಗೆಯ ತುಂಬಾ ತುಂಬಿದ್ದ ಬೆಳಕು. ನೋಡುತ್ತಾನೆ: ಅದರ ಹುಲ್ಲು ಮಾಡೆಲ್ಲ ಹಾರಿಹೋಗಿದೆ! ಹಾರಿದ ಹುಲ್ಲು ಅಲ್ಲಿಯೆ ಅಲ್ಲಲ್ಲಿ ಕೆದರಿ ಬಿದ್ದಿದೆ. ಕಳೆದ ರಾತ್ರಿಯ ಮಳೆಗಾಳಿಯ ಪ್ರಭಾವ ಸಿಂಬಾವಿ, ಸೀತೂರುಗುಡ್ಡ, ಲಕ್ಕುಂದಗಳಲ್ಲಿ ಮಾತ್ರವಲ್ಲದೆ ಮೇಗರವಳ್ಳಿಯಲ್ಲಿಯೂ ಪೂರಾ ಕೆಲಸ ಮಾಡಿದೆ ಎಂದುಕೊಂಡು, ತನ್ನ ಆಗಮನದ ಸೂಚನಾರ್ಥವಾಗಿ ಒಂದೆರಡು ಬಾರಿ ಕೆಮ್ಮಿದನು.

ಪರಿಣಾಮವಾಗಿ ಹಿತ್ತಲುಕಡೆ ಅಂಗಳಕ್ಕೆ ತೆರೆಯುವ ಬಾಗಿಲು ಸಶಬ್ದವಾಗಿ ಅಲ್ಲಾಡಲು ಪ್ರಾರಂಭವಾಯಿತು. ಕಿರ್ರೊ ದಡಾರ್ ಬಡಾರ್ ಎಂದು ಹಿಂದಕ್ಕೂ ಚಲಿಸಿತು. ಬಳೆ ತೊಟ್ಟಿದ್ದ ಬಿಳಿಯ ಕೈಯೊಂದು ಬಾಗಿಲನ್ನು ಸಶ್ರಮವಾಗಿ ಎತ್ತಿ, ನೂಕಿ, ಅಲುಗಿಸಿ, ದಬ್ಬುತ್ತಿದ್ದುದು ಕಾಣಿಸಿತು. ಗುತ್ತಿ ನೋಡುತ್ತಿದ್ದಂತೆ ಅಂತಕ್ಕನ ಮಗಳು ಕಾವೇರಿ ಹೊರಗೆ ತಲೆ ಹಾಕಿ ನೋಡಿದಳು.

ನೋಡಿ, ಗುರುತಿಸಿ, ನಗುಮೊಗಳಾಗಿ "ಇದೇನೋ, ಗುತ್ತೀ, ಇಷ್ಟು ಹೊತ್ತಾರೆ? ಎಲ್ಲಿಂದ ಬಂದೆಯೋ? ಹಳೆಮನೆಯಿಂದಲೋ ಬೆಟ್ಟಳ್ಳಿಯಿಂದಲೋ?" ಎಂದು ಪ್ರಾಯದ ಹೆಣ್ಣಿನ ಇನಿದನಿಯಿಂದ ಮುದ್ದಾಗಿ ಕೇಳಿದಳು. ಮತ್ತು, ತನಗಿಂತಲೂ ಕುಳ್ಳಾಗಿದ್ದರೂ ಬೆಳ್ಳಗೆ, ಜಟ್ಟಿಯಂತೆ ದೃಢಕಾಯನಾಗಿ, ಲಕ್ಷಣವಾಗಿದ್ದ ಹೊಲೆಯನನ್ನು ಪ್ರಶಂಸನೀಯ ದೃಷ್ಟಿಯಿಂದ ಈಕ್ಷಿಸಿದಳು.

ಹೊಲೆಯನಾಗಿದ್ದುದರಿಂದಲೆ ಹಾಗೆ ಈಕ್ಷಿಸುವುದರಲ್ಲಿ ಕಾವೇರಿಗೆ ಅಭ್ಯಂತರವೇನೂ ಕಾಣಲಿಲ್ಲ. ತನ್ನ ವರ್ಗಕ್ಕೆ ಸೇರದಿರುವ ಮತ್ತೊಂದು ಸ್ಫುರದ್ರೂಪಿ ಗಂಡುಪ್ರಾಣಿಯನ್ನು, ಒಂದು ಮನೋಹರವಾದ ಪಕ್ಷಿಯನ್ನೊ ಒಂದು ಸುಲಕ್ಷಣವಾದ ಅಂಕದ ಕೋಳಿ ಹುಂಜನನ್ನೊ ಒಂದು ಸುಪುಷ್ಟವಾದ ಸುಂದರ ಗೂಳಿಯನ್ನೊ ನೋಡುವುದರಲ್ಲಿ ತಪ್ಪೇನು? ಅಸ್ಪೃಶ್ಯನಾದ ಹೊಲೆಯ ಮನುಷ್ಯಜಾತಿಯವನಾಗಿದ್ದರೂ ತನ್ನ ಜಾತಿಯೂ ಅಲ್ಲದೆ, ತನಗೆ ಸರಿಸಮಾನ ಜಾತಿಯೂ ಅಲ್ಲದೆ, ಅತ್ಯಂತ ಕೊನೆಯ ಕೀಳುಜಾತಿಯವನಾಗಿದ್ದುದರಿಂದ ಹರೆಯರೆಯ ಕೊಂಬಿನ ಚೆಲುವಿನ ಹೋರಿಮಿಗವನ್ನು ಮೆಚ್ಚಿ ನೋಡುವಂತೆ ನೋಡಿದಳು. ತನಗೂ ಅವನಿಗೂ ಮಾನವೀಯವಾದ ಗಂಡು-ಹೆಣ್ಣಿನ ಸಂಬಂಧ ಭಾವನೆಯ ಸುಳಿವೂ ಸರ್ವಥಾ ಅಸಂಭವ, ನಿಸರ್ಗ ವಿರುದ್ಧ, ಅಸ್ವಾಭಾವಿಕ, ಅಸಾಧ್ಯ ಎಂಬ ಪ್ರಚ್ಛನ್ನ ಧೈರ್ಯ ಅವಳ ನೋಟಕ್ಕೆ ನಿಸ್ಸಂಕೋಚತೆಯೀಯುವ ಧರ್ಮರಕ್ಷೆಯಾಗಿತ್ತು.

ಅದೇ ಕೆಚ್ಚಿನಿಂದಲೆ ಹೊಲೆಯನೂ ಸೆಟ್ಟರ ಹೆಣ್ಣಿನ ಚೆಲುವನ್ನು ನೋಡುತ್ತಾ ಪ್ರಸನ್ನಮುಖಿಯಾಗಿ "ಸಿಂಬಾವಿಯಿಂದ್ಲೆ ಬಂದೆ ಕಣೊ; ರಾತ್ರಿ ಮಳೆ ಜಪ್ಪಿ, ಲಕ್ಕುಂದದಾಗೆ ಉಳಿದಿದ್ದೆ. ಹಳೆಮನೆ ಹೆಗ್ಗಡೇರಿಗೆ ಕಾಗದ ಕೊಟ್ಟಾರೆ ನಮ್ಮ ಹೆಗ್ಗಡೇರು. ಅದಕ್ಕೆ ಬರ್ದಂಡು ದ್ವಾಗ್ತಿದ್ದೀನಿ."

"ಯಾರ ಹತ್ರಾನೆ ಪಟ್ಟಂಗ ಹೊಡಿತಿದ್ದೀಯಾ?" ಹೆಣ್ಣು ದನಿಯೊಂದು ಒಳಗಿನಿಂದ ನೀಳವಾಗಿ ಕೇಳಿಸಿತು, ತುಳುಭಾಷೆಯಲ್ಲಿ.

ಕಾವೇರಿ ಕನ್ನಡದಲ್ಲಿಯೆ ರಾಗವಾಗಿ ಕೂಗಿದಳು: "ಆ ನಾಯಿಗುತ್ತಿ ಬಂದಿದಾನೆ, ಅಬ್ಬೇ, ಸಿಂಬಾವಿ ನಾಯಿಗುತ್ತಿ" ಎಂದವಳೆ ಗುತ್ತಿಯ ಕಡೆ ತಿರುಗಿ "ಹೌದಾ? ಎಲ್ಲಿ ಹೋಯಿತೋ ನಿನ್ನ ಹುಲಿಯ?" ಎಂದು ಪ್ರಶ್ನಿಸಿ ಗಟ್ಟಿಯಾಗಿ ನಕ್ಕುಬಿಟ್ಟಳು.

"ಅದರದ್ದು ಇದೆಯಲ್ಲಾ ಹೋದಲ್ಲಿ ತನಕಾ ಬಾಲ ಮೂಸೋದು. ಲಕ್ಕುಂದದಾಗೆ ಸಣಬಿನ ನಾಯಿ ಇತ್ತು ಅಂತ ಕಾಣ್ತದೆ. ಅಲ್ಲೇ ಕೂತು ಬಿಡ್ತು."

ಗುತ್ತಿ ಇನ್ನೂ ಮಾತು ಮುಂದುವರಿಸುತ್ತಿದ್ದನೊ ಏನೊ ಅಷ್ಟರಲ್ಲಿ ಅಂಗಳದ ಮೂಲೆಯಲ್ಲಿ, ಕೊಟ್ಟಿಗೆಯ ಹತ್ತಿರ ಇದ್ದ ನುಗ್ಗಿಮರದ ಬುಡದಲ್ಲಿ ಬಿದ್ದಿದ್ದ ದೊಡ್ಡ ಬೂದಿಯ ರಾಸಿಯಲ್ಲಿ, ಬೂದಿಬುಕ್ಕನಾಗಿ ಬೂದಿಯೊಡನೆ ಅಭೇದವೆಂಬಂತೆ ಮಲಗಿದ್ದ, ಬಿಳಿಗೆಂಪು ಬಣ್ಣಗೆಟ್ಟ ಮೂಳು ನಾಯಿಯೊಂದು ಕಂಯ್ಯಂಯ್ಯೊ ಕಂಯ್ಯಂಯ್ಯೊ ಎಂದು ಒರಲುತ್ತಾ ಅಂಗಳವನ್ನೆಲ್ಲ ಒದ್ದೆ ಮಾಡುತ್ತಾ ತೆಣೆಯ ಮೇಲೆ ಸೌದೆ ಕೂಡಿದ್ದರ ಮೇಲೆ ಹಾಕಿದ್ದ ಜಿಗ್ಗಿನಲ್ಲಿ ಹುದುಗಿತು. ಗುತ್ತಿ ನೋಡುತ್ತಾನೆ: ಹುಲಿಯ!

ನಿಡಿದಾಗ ಉಸಿರೆಳೆದು ಕೆನ್ನಾಲಗೆಯನ್ನು ಚಾಚಿ ಏದುತ್ತಿದ್ದುದರಿಂದ ತನ್ನನ್ನು ಹುಡುಕಿಕೊಂಡು ಮೂಗಾಳಿಹಿಡಿದು ಲಕ್ಕುಂದದಿಂದ ಓಡುತ್ತಲೇ ಬಂದಿರಬೇಕು ಎಂದು ಗೊತ್ತಾಗಿ ಗುತ್ತಿ: "ಅಕ್ಕಳ್ರೋ! ನೀವು ನೆನೀತಿದ್ದಹಾಂಗೆ ಹಾಜರು, ಹಡಬೇಗೆ ಹುಟ್ಟಿದ್ದು!" ಎಂದನು.

"ಹಿಡ್ಕೊಳ್ಳೋ! ಹಿಡುಕೊಳ್ಳೋ! ನಮ್ಮ ನಾಯೀನ ಮುರಿದು ಹಾಕೀತು?" ಎಂದು ಎಚ್ಚರಿಸಿದ ಕಾವೇರಿಗೆ

"ಇಲ್ಲ ಕಣ್ರೋ. ಹೆಣ್ಣುನಾಯೀನ ಹಾಂಗೆಲ್ಲಾ ಮುರಿಯಾದಿಲ್ಲ!" ಎಂದು ಗುತ್ತಿ ಹುಲಿಯನನ್ನು ಹತ್ತಿರಕ್ಕೆ ಕರೆದು ತಲೆ ಸವರತೊಡಗಿದನು.

"ಏನೆ ಅದು ಗಲಾಟೆ?" ಎನ್ನುತ್ತಾ ಹೊರಗೆ ಬಂದ ಅಂತಕ್ಕ ಮಗಳನ್ನು ತುಳುವಿನಲ್ಲಿ ಗದರಿಸಿದಳು, ಸಂಗಡ ಯಾರೂ ಇರದಿರುವಾಗ ಹೊಲೆಯನೊಡನೆ ಅಷ್ಟು ದೀರ್ಘಕಾಲ ಮಾತಿನಲ್ಲಿ ತೊಡಗುವುದು ಪ್ರಾಯಕ್ಕೆ ಬಂದ ಹೆಣ್ಣಿಗೆ ತರವಲ್ಲ ಎಂಬರ್ಥದಲ್ಲಿ. ಕಾವೇರಿಗೆ ಮುಖಭಂಗವಾದಂತಾಗಿ ಮುನಿದ ಮೋರೆಯಲ್ಲಿ ಸರಕ್ಕನೆ ಒಳಗೆ ಹೋದಳು, ಬಾಯಲ್ಲಿ ಏನನ್ನೊ ಮಿಟಿಮಿಟಿಗುತ್ತಾ.

ಅಂತಕ್ಕ ಬಂದವಳೆ ಕ್ಷಣಮಾತ್ರವೆಂಬಂತೆ ಸಮೀಕ್ಷಿಸಿ ನೋಡಿದಳು ಗುತ್ತಿಯ ಕೈಯಲ್ಲಿ ಏನಾದರೂ ಕಾಣಿಕೆಯಿದೆಯೇ ಎಂದು. ನಿರಾಶಳಾದರೂ ಅದನ್ನು ತೋರಗೊಡದೆ ಹುಸಿನಗೆ ಬೀರಿ, ಸಿಂಬಾವಿ ಹೆಗ್ಗಡಿತಮ್ಮನವರ ಯೋಗಕ್ಷೇಮ ವಿಚಾರಿಸಿದಳು. ಆ ಮಾತು ಈ ಮಾತು ಆಡಿ, ಕೊಟ್ಟಿಗೆಯ ಕಡೆ ನೋಡುತ್ತಾ

ಅರ್ಥಪೂರ್ಣವಾಗಿ ಕಿರುನಗೆದೋರಿ “ಒಳ್ಳೆ ಸಮಯಕ್ಕೆ ಕರೆಸಿದಂತೆ ಬಂದೆ, ಮಾರಾಯ. ಅಷ್ಟೊಂದು ಉಪಕಾರ ಆಗುತ್ತದೆ, ನಮ್ಮ ಕೊಟ್ಟಿಗೆಯ....” ಎನ್ನುತ್ತಿರುವಷ್ಟರಲ್ಲಿಯೆ

ಗುತ್ತಿಗೆ ಸರ್ವವೂ ವಿದಿತವಾಗಿ “ನೀವು ಹೇಳಬೇಕೆ? ಒಂದು ಒಪ್ಪೊತ್ತಿನಲ್ಲೆ ಹೊಚ್ಚಿ ಕೊಡ್ತಿದ್ದೆ. ಆದರೆ ನಾನೀಗ ಹಳೆಮನೆ ಹೆಗ್ಗಡೇರಿಗೆ ಬೇಗ ಕಾಗ್ದ ಕೊಟ್ಟು, ಅಲ್ಲಿಂದ ಬೆಟ್ಟಳ್ಳಿಗೆ ಹೋಗಬೇಕಾಗದೆ” ಎಂದು, ನಂತರ ಮನೆಗೆ ಹೋಗುವಾಗ ತಾನು ಹಾಕಿಕೊಂಡಿರುವ ವಿಶೇಷ ಉಡುಪಿನ ಕಡೆಗೆ ಅಂತಕ್ಕನ ಗಮನ ಸೆಳೆಯುವ ಸಲುವಾಗಿ ತಾನೆ ತನ್ನನ್ನು ಕೊರಳು ಬಾಗಿಸಿ ನೋಡಿಕೊಂಡನು. ಹಾಗೆ ‘ದರೋಬಸ್ತಾ’ಗಿ ಇರುವಾಗ ಹುಲ್ಲು ಹೊದಿಸುವ ಕೈಕೆಲಸ ಮಾಡುವುದಾದರೂ ಹೇಗೆ?

“ನಿನ್ನೆ ಬೆಟ್ಟಳ್ಳಿ ದೊಡ್ಡಬೀರ ಬಂದಿದ್ದ ಕಣ್ರೋ. ನಿನ್ನ ಮೇಲೆ ಬಹಳ ಸಿಟ್ಟಾಗಿದ್ದ.”

ಗುತ್ತಿಗೆ ಮೈಮೇಲೆ ಬಿಸಿನೀರು ಹೊಯ್ದಂತಾಯ್ತು. ತಟಸ್ಥವಾಗಿ ಬೇಸರಿನ ಮಟ್ಟಕ್ಕೂ ಇಳಿದಿದ್ದ ಆ ಮನೆ, ಅಂಗಳ, ಕೊಟ್ಟಿಗೆ, ನಾಯಿ, ಕೋಳಿ ಎಲ್ಲ ಇದ್ದಕ್ಕಿದ್ದ ಹಾಗೆ ಉಜ್ವಲ ಕುತೂಹಲ ವಸ್ತುಗಳಾಗಿ ಪರಿಣಮಿಸಿಬಿಟ್ಟವು.

ಸ್ವಲ್ಪ ಜೋರಾಗಿ ಉಸಿರುಬಿಡುತ್ತಲೇ ಕೇಳಿದ “ಯಾಕೆ ಬಂದಿದ್ದ? ಏನು ಹೇಳಿದ?”

“ಅವನ ಮಗಳನ್ನು ನೀನು ಕೇಳುತ್ತಿದ್ದೀಯಂತೆ. ನಿಮ್ಮ ಹೆಗ್ಗಡೇರೂ ನಿನ್ನ ಹಿಂದುಗಡೆ ನಿಂತುಕೊಂಡು ಹುನಾರು ಮಾಡುತ್ತಿದ್ದಾರಂತೆ. ‘ಅವರಿಗೇನು? ದುಡಿಯುವುದಕ್ಕೆ ಒಂದು ಹೆಣ್ಣಾಳು ಸಿಗುತ್ತದೆಯಲ್ಲಾ? ಅಷ್ಟೆ!’ ಅಂದ. ಬೆಟ್ಟಳ್ಳಿ ಗೌಡರು ಮಾತ್ರ ಬಿಲ್‌ಕುಲ್ ಆಗದು ಅಂತಾರಂತೆ. ‘ನಮ್ಮ ಕೇರಿ ಹೆಣ್ಣುಗಳನ್ನು ಹೊರಗಡೆ ಕೊಡುವುದೆಂದರೇನು? ನಾನು ಅಪ್ಪಗೆ ಹುಟ್ಟಿದ ಮಗಾ ಆದರೆ ಎಂದಿಗಾದ್ರೂ ಬಿಟ್ಟೇನೆ? ನೀನು ನಿನ್ನ ಅಪ್ಪ ನಿನ್ನ ಅಜ್ಜ ಎಲ್ಲ ಮಾಡಿರುವ ಸಾಲ ಬಿದ್ದಿದೆಯಲ್ಲಾ ಅದನ್ಯಾರೋ ತೀರಿಸೋರು?’ ಎಂದು ಉರಿದು ಬಿದ್ದರಂತೆ. ಅದಕ್ಕೇ ದೊಡ್ಡಬೀರ ಗಂಡುಗಳು ಇವೆಯಂತೆ. ಕರಿಮೀನು ಸಾಬರ ಮಳಿಗೇಲಿ ಏನೇನೊ ಯಾಪಾರ ಮಾಡಕ್ಕೆ ಬಂದಿದ್ದನಂತೆ, ಅವರ ಗೌಡ್ರಿಂದ ಸಾಬರಿಗೆ ಕಾಗ್ದ ತಗೊಂಡು.”

ಆಲೈಸುತ್ತಾ ನಿಂತಿದ್ದ ಗುತ್ತಿ ಬಹಳ ದಣಿದವನಂತೆ ಸುಯ್ದು ನೆಲ ನೋಡುತ್ತಾ ನಿಂತನು. ಮತ್ತೆ ತಟಕ್ಕನೆ ತಲೆಯೆತ್ತಿ ‘ಹಂಗಾದ್ರೆ ನಾ ಹೋಗಿ ಬರ್ತೀನಿ’ ಎಂದವನೆ ಬಗನಿದೊಣ್ಣೆಯನ್ನು ಬಗಲಿಗೆ ಹಾಕಿಕೊಂಡು ತಿರುಗಿದನು.

“ನಿಲ್ಲೊ! ನಿಲ್ಲೊ! ಹೊತಾರೆ ಬಂದವನ್ನ ಬರೀ ಹೊಟ್ಟೇಲಿ ಕಳಿಸಬಾರದು. ಪಾಪ ಬರ್ತದೆ” ಎಂದು ಅಂತಕ್ಕ ಒಳಗೆ ನಡೆದು, ಬಾಳೆಯ ಕೀತಿನಲ್ಲಿ ಸ್ವಲ್ಪ ತಂಗಳನ್ನೂ ಕರಿಮೀನು ಚಟ್ನಿಯನ್ನೂ ಹಾಳೆಕೊಟ್ಟೆ ದೊನ್ನೆಯಲ್ಲಿ ಹೆಂಡವನ್ನೂ ತಂದುಕೊಟ್ಟಳು. ನಡೆದು ದಣಿದು ಹಸಿದಿದ್ದ ಹೊಲೆಯ ಅದನ್ನೆಲ್ಲ ಬೇಗಬೇಗನೆ ಪೂರೈಸಿ, ಅಲ್ಲಿಂದ ಹೊರಟನು. ಅವನು ತಿಂದು ಕುಡಿಯುವುದನ್ನೆ ನೋಡುತ್ತಿದ್ದ ಹಲಿಯ ಅವನು ಎಸೆದ ಬಾಳೆಯ ಕೀತನ್ನು ನೆಕ್ಕಿಯೆ ನೆಕ್ಕಿತು, ಅಲ್ಲಿ ಏನೂ ಇರದಿದ್ದರೂ, ಬರಿಯ ಕಂಪಿನ ರುಚಿಗಾಗಿ! ದೋಸೆಯ ವಾಸನೆಯಿಂದಲೆ ಆಕೃಷ್ಟನಾಗಿ ಅಂತಕ್ಕನ ಮನೆಗೆ ನುಗ್ಗಿದ್ದ ಗುತ್ತಿಗೂ ಆವೊತ್ತು ದೊರತಿದ್ದುದೆಲ್ಲಾ ದೋಸೆಯ ವಾಸನೆ ಮಾತ್ರವೆ ತಾನೆ?

***

## ೧೦

ಗುತ್ತಿ ತನ್ನ ಕುಳ್ಳುಗಾಲುಗಳನ್ನೆ ಬೀಸಿ ಬೀಸಿ ಹಾಕುತ್ತಾ ಹೆದ್ದಾರಿಯಲ್ಲಿ ತುಸು ದೂರ ಹೋಗಿ ಪಕ್ಕನೆ ನಿಂತನು. ನೋಡುತ್ತಾನೆ ಕೋಣೂರಿಗೆ ಅಗಚುವ ಕಾಲುದಾರಿಯಿಂದ ಮುಂದೆ ನಡೆದು ಬಂದುಬಿಟ್ಟಿದ್ದಾನೆ! 'ಹಾಳು ದಾರೀನಾ ಬಿಸಾಕ! ಇವತ್ತೇನಾಗದೆ ನನ್ನ ಕಾಲಿಗೆ?' ಎಂದು ದಾರಿಯನ್ನೂ ತನ್ನ ಕಾಲ್ಗಳನ್ನೂ ಶಪಿಸುತ್ತಾ ಮತ್ತೆ ಹಿಂತಿರುಗಿ ನಡೆದು ಕೋಣೂರಿಗೆ ಹೋಗುವ ಕಾಲುದಾರಿ ಸೇರಿದನು. ಅವನ ನಾಯಿ ಅವನ ಹಿಂದೆ ಮುಂದೆ ಅತ್ತ ಇತ್ತ ಸುತ್ತಲೂ ಹಳುವಿನಲ್ಲಿ ನೆಲ ಮೂಸುತ್ತಾ, ಅಡ್ಡಾಡುತ್ತಾ, ಕಂಡ ಕಂಡ ಗಿಡದ ಬುಡದಲ್ಲಿ, ಹುತ್ತದ ಮೇಲೆ, ಎದ್ದುಕಾಣುವ ಕಲ್ಲುಗುಂಡುಗಳ ಮೇಲೆ ಆಗಾಗ್ಗೆ ನಿಂತು ಕಾಲೆತ್ತಿ ಪ್ರೋಕ್ಷಣೆ ಮಾಡುತ್ತಾ ಒಡೆಯನನ್ನು ಹಿಂಬಾಲಿಸುತ್ತಿತ್ತು.

ಗುತ್ತಿ ಮತ್ತೆ ಅಂತರ್ಮುಖಿಯಾಗಿ ತನ್ನ ಆಲೋಚನೆಗಳಲ್ಲಿಯೆ ಮಗ್ನನಾಗಿ ಅಭ್ಯಾಸ ಬಲದಿಂದಲೆಂಬಂತೆ ನೋಡುತ್ತಿದ್ದರೂ ಯಾವುದನ್ನೂ ಗಮನಿಸದೆ ಕಾಲುಹಾಕುತ್ತಿದ್ದನು. ಅವನು ನಡೆಯುತ್ತಿದ್ದ ದಾರಿಯ ಕಾಡು ಮೊದಮೊದಲು ತುಸು ಹೆದ್ದಳಕಲಾಗಿ ಅಷ್ಟೇನೂ ನಿಬಿಡವಾಗಿರಲಿಲ್ಲ. ಹಿಂದಿನ ರಾತ್ರಿ ಹೊಡೆದ ಮಳೆಯಲ್ಲಿ ಮಿಂದು ತೊಳೆದಂತಿದ್ದ ಪೊದೆ ಮರಗಳ ಹಸುರು, ದನಬಿಡುವ ಆ ಹೊತ್ತಿನಲ್ಲಿ ಬಿಸಿಲಿನಲ್ಲಿ, ತಂಪಾಗಿ ಮಿರುಗುತ್ತಿದ್ದುವು. ಆದರೆ ಗುತ್ತಿ ಎಂದಿನಂತೆ ಕಾಡಿನ, ಹಕ್ಕಿಯ, ಮಿಗದ ಸೊಬಗನ್ನಾಗಲಿ ವ್ಯಾಪಾರವನ್ನಾಗಲಿ ಲಕ್ಷಿಸುವ ಮನಃಸ್ಥಿತಿಯಲ್ಲಿರಲಿಲ್ಲ. ಪಿಕಳಾರಗಳ ಸಿಳ್ಳುಲಿಯಾಗಲಿ ಹೊರಸಲು ಹಕ್ಕಿಗಳ ಗುಬ್ಬಳಿಕೆಗಳಾಗಲಿ ಮರಕುಟಿಕನ ಕೊಟಾ ಕೊಟಾ ಸದ್ದಾಗಲಿ ಕಡೆಗೆ ಕಾಡುಕೋಳಿ ಹುಂಜನ ನಿಡುನೀಳ್ದ ಕೇಕೆಯಾಗಲಿ ಅವನ ಕಿವಿಗೆ ಬೀಳುತ್ತಿದ್ದರೂ ಅವನಿಗೆ ಕೇಳಿಸುತ್ತಿರಲಿಲ್ಲ; ಕಣ್ಣಿಗೆ ಬಿದ್ದರೂ ಕಾಣಿಸುತ್ತಿರಲಿಲ್ಲ.

ಬರಬರುತ್ತಾ ಮೇಲೆ  ಏರತೊಡಗಿತು. ಕಾಡು ದಟ್ಟವಾಯಿತು. ಹಕ್ಕಿಪಕ್ಷಿಗಳ ಹಾರಾಟವೂ ಉಲಿಹವೂ ವಿರಳವಾಗಿ ಕಡೆ ಕಡೆಗೆ ನಿಂತೆ ಹೋಯಿತು. ಆ ಅರಣ್ಯನಿಬಿಡತೆಯಲ್ಲಿ ಬಿಸಿಲೂ ಅಡಗಿದಂತಾಗಿ ಮರಗತ್ತಲು ಹೆಚ್ಚಾಯಿತು. ಅವನು ಕಾಡು ಭಯಂಕರವಾಗಿದ್ದ ಆ ಹುಲಿಕಲ್ಲು ಗುಡ್ಡವನ್ನೇರಿ ಇಳಿದರೆ ಆ ಕಡೆಯ ಕಣಿವೆಯಲ್ಲಿ ಕೋಣೂರ ರಂಗಪ್ಪಗೌಡರ ಮನೆ ಗದ್ದೆ ತೋಟ ಸಿಗುತ್ತಿತ್ತು.

ಆ 'ಹುಲಿಕಲ್ಲು' ಗುಡ್ಡದ ಕಾಡು ಆ ಕಡೆಯಲ್ಲೆಲ್ಲ ಅತ್ಯಂತ ದಡ್ಡವಾದುದೆಂದೂ ಜೀವಾದಿಗಳಿಗೆ ನೆಲೆಬೀಡೆಂದೂ ಹೆಸರುವಾಸಿಯಾಗಿತ್ತು. ಅದರ ಕಡಿಪೂ ನಿಬಿಡತೆಯೂ ಎಷ್ಟರಮಟ್ಟಿನದಾಗಿತ್ತೆಂದರೆ 'ದೊಡ್ಡಬೇಟೆ'ಗೆ ಹೋಗುವವರು ಆ ಕಾಡಿಗೆ ಹೋಗಲು ಹಿಂಜರಿಯುತ್ತಿದ್ದರು. ಕಡಿದಾದ ದರಿಕಂದರಗಳಿಂದ ದುರ್ಗಮವಾಗಿದ್ದ ಅದನ್ನು  ಸೋವಲು ಹಳುನುಗ್ಗಲಿಕ್ಕೇ ಕನಿಷ್ಠ ಪಕ್ಷ ನೂರು ನೂರೈವತ್ತು ಜನರಾದರೂ ಬೇಕಾಗುತ್ತಿತ್ತು. ಇನ್ನಿ ಬಿಲ್ಲಿಗೆ ಕೂರಲು ಕಡಮೆ ಎಂದರೆ ಐವತ್ತು ಅರವತ್ತು ಕೋವಿಗಾರರಾದರೂ ಬೇಕಿತ್ತು. ಎಲ್ಲಿಂದ ತರುವುದು ಅಷ್ಟು ಕೋವಿಗಳನ್ನು? ಆ ನಾಡಿನಲ್ಲೆಲ್ಲ ಕೇಪಿನ ಕೋವಿ ಇಟ್ಟುಕೊಂಡವರ ಸಂಖ್ಯೆಯೆ ಬೆರಳೆಣಿಸುವಷ್ಟಿತ್ತು. ಇನ್ನುಳಿದ ಕಂಡಿಗಳಿಗೆ ಹಂದಿಬಲೆ ಮಿಗದ ಬಲೆ ಮೊಲದ ಬಲೆಗಳೆ ಗತಿ! ಅದಕ್ಕಾಗಿಯೆ ವರುಷಕ್ಕೊಮ್ಮೆಯೊ ಎರಡು ವರುಷಕ್ಕೊಮ್ಮೆಯೊ ಹುಲಿಕಲ್ಲು ಕಾಡಿಗೆ 'ದೊಡ್ಡಬೇಟೆ'ಗೆ ಬಂದರೆ ಅದೇ ಹೆಚ್ಚು. ಬೆಟ್ಟಳ್ಳಿ ಸೇರೆಗಾರರು ಹಳೆಮನೆ

ಸೇರೆಗಾರರು ತಮ್ಮ ಕಡೆಯ ಆಳುಗಳಿಗೆಲ್ಲ ಒಂದು ದಿನ ಉಳಿ ಕೊಟ್ಟು, ಅವರಿಗೆಲ್ಲ ಧೈರ್ಯ ಹೇಳಿ, ಹಳು ಹೊಡೆಯಲು ಕಳಿಸುತ್ತಿದ್ದರು. ಕೋಣೂರಿನ ಗಟ್ಟದ ತಗ್ಗಿನವರ ಬಿಡಾರಗಳಿಂದಲೂ ಸ್ವಲ್ಪ ಹಳುವಿನವರು ಒದಗುತ್ತಿದ್ದರು. ಇನ್ನು ಬೇಲರು, ಹೊಲೆಯರು, ಮಾದಿಗರು, ಕರಾದಿಯವರೂ ಆ ಸಾಹಸದಲ್ಲಿ ಭಾಗಿಯಾಗುತ್ತಿದ್ದರು. ಅಂತಹ ಸಮಯಗಳಲ್ಲಿ ಅನೇಕರಲ್ಲಿ ಜೀವದಾಸೆಯನ್ನು ಗೆಲ್ಲುತ್ತಿತ್ತು ಬಾಡಿನಾಸೆ; ಕೆಲವರು ಬೇಟೆಯ ಸಾಹಸದ ಹುಚ್ಚಿನಿಂದಲೂ ಬಂದು ಸೇರುತ್ತಿದ್ದರು. ಬತ್ತಿಕೋವಿ, ಭರ್ಜಿ, ಈಟಿ, ಉದ್ದಗತ್ತಿ, ಬಿಲ್ಲುಬಾಣಗಳ ಸಾಹಸಿಗಳೂ ಅಲ್ಪಸ್ವಲ್ಪ ಇರುತ್ತಿದ್ದರು. ಕನ್ನಡ ಜಿಲ್ಲೆಯಿಂದ ದುಡಿಮೆಗಾಗಿ ಬಂದ ಗಟ್ಟದ ತಗ್ಗಿನವರಂತೂ ತಮ್ಮ ಮಕ್ಕಳನ್ನು ಹೆದರಿಸಿ ಸುಮ್ಮನಿರುವುಸುದಕ್ಕೂ ಆ 'ಹುಲಿಮಲೆ'ಯ ಹೆಸರನ್ನೆ ಹೆಚ್ಚಾಗಿ ಬಳಸುತ್ತಿದ್ದರು!

ಗುತ್ತಿ 'ಬೆತ್ತದ ಸರ'ದ ಹತ್ತಿರಕ್ಕೆ ಬಂದಿದ್ದನು. ಅವನು ಹೋಗುತ್ತಿದ್ದ ಕಾಲುದಾರಿಯ ಬಲಪಕ್ಕದ ಇಳಿಜಾರಿನ ತುದಿಯೆ 'ಬೆತ್ತದ ಸರ.' ಬೆತ್ತದ ಹಿಂಡಿಲು, ವಾಟೆಯ ಹಿಂಡಿಲು, ಬಿದಿರ ಹಿಂಡಿಲು, ಗುರಗಿ ಹಳು ಎಲ್ಲ ಕಿಕ್ಕಿರಿದು ಬೆಳೆದಿದ್ದು, ಯಾವಾಗಲೂ ಸರಲು ನೀರು ಹರಿಯುತ್ತಿದ್ದ ತಾಣ. ಒಂದೊಂದು ಕಡೆ ಹಳುವಿನ ಸಾಂದ್ರತೆ ಪರಮಾವಧಿ ಮುಟ್ಟಿದಂತಿತ್ತು.

ಇದ್ದಕ್ಕಿದ್ದ ಹಾಗೆ ಗುತ್ತಿಯ ಅಂತರ್ಮುಖತೆಯನ್ನು ಹರಿದು ಸೀಳುವಂತೆ ಹುಲಿಯ ಬೊಗಳತೊಡಗಿತು. ಗುತ್ತಿ ತಟಕ್ಕನೆ ಎಚ್ಚತ್ತು ಸೆಟೆದು ನಿಂತು ಆಲಿಸಿದನು; ಸುತ್ತಲೂ ಕಣ್ಣಟ್ಟಿ ನೋಡಿದನು. ಆದರೆ ನಾಯಿ ಕಾಣಲಿಲ್ಲ. ಅದರ ಕರ್ಕಶವಾದ ತೀವ್ರವಾದ ಬೊಗಳು ಮಾತ್ರ ಹೊಡೆದೆಬ್ಬಿಸುವಂತೆ ಕೇಳುತ್ತಿತ್ತು. ಹುಲಿ ಕಾಡುಹಂದಿಯಂತಹ ದೊಡ್ಡ ಪ್ರಾಣಿಗಳನ್ನು ತಡೆದು ನಿಲ್ಲಿಸಿದಾಗ ಮಾತ್ರ ನಾಯಿಗಳು ಹಾಗೆ ಬೊಗಳುವುದು. ಹೆದರಿ ಓಡಿಹೋಗುವ ಮಿಗ ಬರ್ಕ ಮೊಲ ಇಂತಹ ಪ್ರಾಣಿಗಳನ್ನು ಕಂಡಾಗ ಕಂಯ್ ಕಂಯ್ ಕಂಯ್ ಎಂದು ಕೂಗುತ್ತಾ ಅಟ್ಟುತ್ತವೆ; ಸದ್ದೂ ಬರಬರುತ್ತಾ ದೂರವಾಗುತ್ತದೆ. ಆದರೆ ದೊಡ್ಡ 'ಜೀವಾದಿ'ಗಳು ಹಾಗಲ್ಲ. ಒಡನೆಯೆ ಹೆದರಿ ಓಡುವುದಿಲ್ಲ ಮಲೆತೂ ನಿಲ್ಲುತ್ತವೆ. ಆಗ ಹುಲಿಯನಂತಹ ದೊಡ್ಡ ಬೇಟೆನಾಯಿಗಳು ಬೊವ್ ಬೊವ್ ವವ್ವವೌ ಎಂದು ಹೆದ್ದನಿಯಲ್ಲಿ ಕೂಗುತ್ತವೆ, ಒಂದೇ ಕಡೆ ನಿಂತು.

ಈ ಸೂಕ್ಷ್ಮವನ್ನೆಲ್ಲ ಅನುಭವದಿಂದ ಚೆನ್ನಾಗಿ ಅರಿತಿದ್ದ ಗುತ್ತಿ, ಹುಲಿಯ ಒಂಟಿಗ ಹಂದಿಯನ್ನೊ ಹುಲಿಯನ್ನೊ ಕಂಡೇ ಬೊಗಳುತ್ತಿದೆ ಎಂದು ನಿಶ್ಚಯಿಸಿದ. ಆದರೆ ಆ ದಟ್ಟವಾದ ಹಳುವಿನಲ್ಲಿ ಸದ್ದು ಯಾವ ದಿಕ್ಕಿನಿಂದ ಬರುತ್ತದೆ ಎಂದು ಸುಲಭವಾಗಿ ಗೊತ್ತಾಗುತ್ತಿರಲಿಲ್ಲ. ಅಂತೂ ದಾರಿಯಿಂದ ಕೆಳಗಡೆಯ ಬೊಗಳುತ್ತಿದೆ ಎಂದು ಅಂದಾಜು ಮಾಡಿ ಆ ಕಡೆಗೆ ಹಳುವಿನಲ್ಲಿ ನುಗ್ಗಿದ. ಅವನು ಹಾಗೆ ನುಗ್ಗಿದುದರ ಉದ್ದೇಶ ನಾಯಿಯ ರಕ್ಷಣೆಯಾಗಿತ್ತೆ ಹೊರತು ಪ್ರಾಣಿಯ ಬೇಟೆಯಾಗಿರಲಿಲ್ಲ. ಬೇಟೆಯಾಡುವುದಕ್ಕೆ ಗುತ್ತಿಯ ಕೈಲಿ ಕೋವಿಯಿತ್ತೇ? ಕತ್ತಿಯಿತ್ತೇ? ಭರ್ಜಿಯಿತ್ತೇ? ಕಡೆಗೊಂದು ಹಕ್ಕಿ ಹೊಡೆಯುವ ಚಿಟ್ಟು ಬಿಲ್ಲಾದರೂ ಇತ್ತೇ? ಕೆಚ್ಚೆದೆಯ ಹುಲಿಯ ಎಲ್ಲಿಯಾದರೂ ಒಂಟಿಗ ಹಂದಿಯ ಮೇಲೆಯೊ ಬೀಳಲು ಹೋಗಿ ತನ್ನ ಪ್ರಾಣಕ್ಕೆ ಹಾನಿ ತಂದುಕೊಂಡೀತು ಎಂದು ಹೆದರಿ ಅದನ್ನು ಅಪಾಯದಿಂದ ತಪ್ಪಿಸುವ ಸಲುವಾಗಿ ಹಿಂದಕ್ಕೆ ಕರೆಯಲೆಂದೇ ಅವನು 'ಹುಲಿಯಾ! ಹುಲಿಯಾ! ಬಾ ಹುಲಿಯಾ! ಕ್ರೂ! ಕ್ರೂ!' ಎಂದು ಕೂಗುತ್ತಾ ನುಗ್ಗಿ ಬೊಗಳು ಸದ್ದಿನ ಕಡೆಗೆ ಓಡಿದನು.

ಹೋಗಿ ನೋಡುತ್ತಾನೆ: ನಾಯಿಯೇನೊ ಒಂದೇ ದಿಕ್ಕಿಗೆ ನೋಡಿ ನೋಡಿ ಬೊಗಳುತ್ತಿದೆ. ಆದರೆ ಆ ದಿಕ್ಕಿನಲ್ಲಿ ಯಾವ ಜಂತುವೂ ಗುತ್ತಿಗೆ ಕಾಣಿಸುತ್ತಿಲ್ಲ. ಹಂದಿ ಹುಲಿ ಯಾವುದಾಗಿದ್ದರೂ ಗುತ್ತಿ ಹಾಗೆ ಬೊಬ್ಬೆಯಿಡುತ್ತಾ ಹತ್ತಿರಕ್ಕೆ ಬಂದಾಗ ಅಲ್ಲಿ ಎಂದಿಗೂ ನಿಲ್ಲುತ್ತಿರಲಿಲ್ಲ. ಒಂದು ವೇಳೆ ನಿಂತಿದ್ದ ಪ್ರಾಣಿ ಓಡಿಹೋಗಿದ್ದರೆ ನಾಯಿ ಅಟ್ಟದೆ ಬಿಡುತ್ತಲೂ ಇರಲಿಲ್ಲ. ಕಾಡು, ಬೇಟೆ, ಪ್ರಾಣಿಗಳ ವಿಚಾರದಲ್ಲಿ ಅನುಭವಶಾಲಿಯಾಗಿದ್ದ ಗುತ್ತಿ ನೆಲದ ಕಡೆ ನೋಡುವುದನ್ನು ಬಿಟ್ಟು, ತಲೆಯೆತ್ತಿ ದಟ್ಟೈಸಿದ್ದ ಮರಗಳ ಮೇಲೆ ನೋಡತೊಡಗಿದನು, ಕಬ್ಬೆಕ್ಕು ಎಲ್ಲಿಯಾದರೂ ಮೇಲೆ ಹತ್ತಿ ಕುಳಿತಿದೆಯೋ, ಅಥವಾ ಮುಸಿಯ ಮರದೆಲೆಗಳ ನಡುವೆ ಅಡಗಿದೆಯೋ ಎಂದು. ಹಾಗೆ ಕತ್ತೆತ್ತಿ ಮೇಲೆ ನೋಡುತ್ತಲೆ ಮುಂದುವರಿಯುತ್ತಿರುವುದನ್ನು ನೋಡಿ ಹುಲಿಯ ಇನ್ನೂ ರಭಸದಿಂದ ಬೊಗಳತೊಡಗಿತು. ಮತ್ತು, ಅವನನ್ನೇ ತಡೆಯುವಂತೆ ಅಡ್ಡಬರತೊಡಗಿತು. ಗುತ್ತಿ ನೋಡುತ್ತಾನೆ, ನಾಯಿ ತುಸುದೂರವೆ ಹಳುವಿನಲ್ಲಿ ಬಿದ್ದಿರುವ ಒಂದು ಮರದ ದಿಮ್ಮಿಯ ಕಡೆ ನೋಡಿ ಬೊಗಳುತ್ತಿದೆ! ಹಾಗಾದರೆ ಆ ದಿಮ್ಮಿಯ ಹತ್ತಿರ ಯವುದಾದರೂ ಕಾಳಿಂಗನ ಹಾವೊ ಸರ್ಪನ ಹಾವೊ ಇರಬಹುದುದೆಂದು ಗುತ್ತಿ ನೆಲವನ್ನು ಪರೀಕ್ಷಿಸುತ್ತಾ ಮುಂದುವರಿಯುವಷ್ಟರಲ್ಲಿ ನಾಯಿ ಬೊಗಳಿ ಬೊಗಳಿ ಹಾರಿ ನೆಗೆದು ಆ ದಿಮ್ಮಿಯನ್ನು ಕಚ್ಚಿಬಿಟ್ಟಿತು! ಅಯ್ಯಯ್ಯೊ! ನೋಡುತ್ತಾನೆ: ಆ ದಿಮ್ಮಿಯೆ ಜೀವಂತ ಹೆಬ್ಬಾವು! ಚಲಿಸುತ್ತಿಲ್ಲ. ಮ ಲವೊ ಬರ್ಕವೊ ಅಥವಾ ಇನ್ನಾವ ಪ್ರಾಣಿಯನ್ನೊ ಇಡೀಯೆ ನುಂಗಿ ನಿಶ್ಚಲವಾಗಿ ಬಿದ್ದಿದೆ! ಅದರ ತಲೆ ಎಲ್ಲಿದೆಯೋ ಬಾಲವೆತ್ತಕಡೆಯೋ ಅದೂ ಗೊತ್ತಾಗುತ್ತಿರಲಿಲ್ಲ ಆ ಹಳುವಿನಲ್ಲಿ!

ಕೈಯಲ್ಲಿ ಬಗನಿದೊಣ್ಣೆ ವಿನಾ ಬೇರೆಯೇನೂ ಆಯುಧವಿಲ್ಲದ ಗುತ್ತಿ, ಇನ್ನೇನು ಒಂದು ಹೆಜ್ಜೆ ಮುಂದಿಟ್ಟಿದ್ದರೆ ಹೆಬ್ಬಾವಿನ ಮೈಮೇಲೆಯೆ ಕಾಲಿಡುತ್ತಿದ್ದವನು, ಸತ್ತೆನೊ ಕೆಟ್ಟೆನೊ ಎಂದು ಚಂಗನೆ ಹಿಂದಕ್ಕೆ ನೆಗೆದು, ದೂರ ಓಡಿ ನಿಂತು, ದೀರ್ಘವಾಗಿ ಉಸಿರುಬಿಡತೊಡಗಿದನು. ಹುಲಿಯನನ್ನು ತನ್ನ ಹತ್ತಿರಕ್ಕೆ ಹೆದರಿಸಿ ಕರೆಯತೊಡಗಿದನು. ತನ್ನ ಹತ್ತಿರವಿದ್ದ ಬಹನಿದೊಣ್ಣೆಯಿಂದ ಆ ಹೆಬ್ಬಾವಿಗೆ ತಾನು ಏನನ್ನೂ ಮಾಡಲಾರೆನೆಂದು ಗುತ್ತಿಗೆ ಗೊತ್ತಿತ್ತು. ಕೋವಿ ಇದ್ದಿದ್ದರೂ ಒಂದೆರಡು ಗುಂಡುಗಳಿಂದ ಏನೂ ಪ್ರಯೋಜನವಾಗುತ್ತಿರಲಿಲ್ಲ. ಹೀಗಿರುವಾಗ ನಾಯಿಯನ್ನು ಹೇಗಾದರೂ ತನ್ನ ಹತ್ತಿರಕ್ಕೆ ಕರೆದು, ಹಿಡಿದು, ಸುರಕ್ಷತೆಗೆ ಕೊಂಡೊಯ್ಯುವುದೊಂದೆ ದಾರಿಯಾಗಿತ್ತು ಅವನಿಗೆ.

ಬೇಗಬೇಗನೆ ಒಂದು ಬಳ್ಳಿಯನ್ನು ಉಗಿದು, ಅದರ ಎರಡು ಮೂರು ಎಳೆಯನ್ನು ಉಡಿದು ಹಗ್ಗಮಾಡಿದನು. ಅವನು ಕರೆದಂತೆಲ್ಲ ಹತ್ತಿರಕ್ಕೆ ಬಂದೂ ಮತ್ತೆ ಮತ್ತೆ ಹಾವಿನ ಬಳಿಗೆ ನುಗ್ಗುತ್ತಿದ್ದ ಹುಲಿಯನನ್ನು ಒಮ್ಮೆ ಹತ್ತಿರ ಬಂದಾಗ ಎರಡು ಕೈಯಿಂದಲೂ ಅಮರಿಹಿಡಿದು, ಕೊರಳಿಗೆ ಬಳ್ಳಿಹಗ್ಗವನ್ನು ಬಿಗಿದು, ಬರಲೊಲ್ಲದೆ ಜಗ್ಗಿ ಜಗ್ಗಿ, ಎಳೆದು ಬೊಗಳುತ್ತಿದ್ದ ಅದನ್ನು ಜಗ್ಗಿಸಿ ಎಳೆಯುತ್ತಾ ಅಲ್ಲಿಂದ ಆದಷ್ಟು ಬೇಗನೆ ಕಾಲುಕಿತ್ತು ದಾರಿಗೆ ಸೇರಿಕೊಂಡನು. ಮೈ ಬೆವರುತ್ತಿತ್ತು, ತಕ್ಕಮಟ್ಟಿಗೆ!

ಗುತ್ತಿ ಸ್ವಲ್ಪ ದೂರ ಮುಂದುವರಿದಿದ್ದನು. ಬಳ್ಳಿಹಗ್ಗದಲ್ಲಿ ಕಟ್ಟಿ ಹಿಡಿದುಕೊಂಡಿದ್ದ ಹುಲಿಯ ಅವನ ಮಗ್ಗುಲಲ್ಲಿಯೆ ಅತ್ತಿತ್ತ ನೋಡುತ್ತಾ, ಕಿವಿನಿಮಿರಿ ಆಲಿಸುತ್ತಾ, ನೆಲವನ್ನು ಮೂಸುತ್ತಾ, ಒಮ್ಮೆ ಹಿಂದೆ ಬಿದ್ದು ಒಮ್ಮೆ ಮುಂದೆ ಹೋಗಿ, ಜೋಲುನಾಲಗೆಯಿಂದ ಜೊಲ್ಲು ಸುರಿಸುತ್ತ ನಡೆಯುತ್ತಿತ್ತು. ಇದ್ದಕ್ಕಿದ್ದ ಹಾಗೆ ನಾಯಿ ಮುಂದಕ್ಕೆ ದೃಷ್ಟಿಯಟ್ಟಿ ಸಣ್ಣಗೆ ಬೊಗಳಿತು. ದಟ್ಟಕಾಡಿನ ಅಂಕುಡೊಂಕು ಕಾಲುದಾರಿಯಲ್ಲಿ ಬಹುದೂರ ನೋಡಲೂ ಸಾಧ್ಯವಿರಲಿಲ್ಲ. ಕಾಣುತ್ತಿತ್ತ ದಾರಿಯಷ್ಟರಲ್ಲಿ ಗುತ್ತಿಗೆ ಏನೂ ಕಾಣಿಸಲಿಲ್ಲ. ಆದರೆ ನಾಯಿಗೆ ವಾಸನೆಯೊ ಸದ್ದೊ ಯಾವುದೊ ಗೊತ್ತಾದಂತೆ ತೋರಿತು. ಗುತ್ತಿ ಬಿರುಬಿರನೆ ಕಾಲು ಹಾಕಿದ. ಸ್ವಲ್ಪ ದೂರ ಮುಂಬರಿಯುವುದರಲ್ಲಿ ಯಾರೊ ಇಬ್ಬರು ಹೆಂಗಸರು

ಹೋಗುತ್ತಿದ್ದುದು ಕಾಣಿಸಿತು. ಹಳುವಿನ ನಡುವೆ ಇಕ್ಕಟ್ಟಾದ ಕಾಲುದಾರಿಯಲ್ಲಿ ಒಬ್ಬರ ಹಿಂದೆ ಒಬ್ಬರು ಹೋಗುತ್ತಿದ್ದುದರಿಂದ ಗುತ್ತಿಗೆ ಸರಿಯಾಗಿ ಕಾಣಿಸಿದ್ದು ಹಿಂದೆ ಹೋಗುತ್ತಿದ್ದವರು ಮಾತ್ರ.

ಕೊರಳಿಗೆ ಕಟ್ಟಿದ ವಲ್ಲಿ ಬೆನ್ನಿನ ಮೇಲೆ ಸೊಂಟದವರೆಗೂ ಬಿದ್ದಿದ್ದುದನ್ನೂ ಸ್ವಲ್ಪ ಗಿಡ್ಡಾಗಿಯೆ ಉಟ್ಟಿದ ಗೊಬ್ಬೆಸೀರೆ ಹರಡಿನ ಮೇಲಿದ್ದುದನ್ನೂ ಗಮನಿಸಿ 'ಯಾರೊ ಹೆಗ್ಗಡಿತಮ್ಮನವರು!' ಎಂದುಕೊಂಡನು. ಗುತ್ತಿ ಮನಸ್ಸಿನಲ್ಲಿಯೆ, 'ಇಷ್ಟು ಹೊತಾರೆ ನೆಂಟರಮನೆಗೆ ಹೊರಟಾರಲ್ಲಪ್ಪಾ! ಇಬ್ರೆ ಹೆಂಗಸ್ರು! ಗಟ್ಟಿ ಗುಂಡಿಗೇರಿರಬೇಕು! ಈ ಹುಲಿಕಲ್ಲು ಗುಡ್ಡದ ಕಾಡಿನಗೆ!'

ನಾಯಿ ಬೊಗಳಿದ ಸದ್ದುಕೇಳಿ ಹಿಂದೆ ಹೋಗುತ್ತಿದ್ದ ಸ್ತ್ರೀ ವ್ಯಕ್ತಿ ನಿಂತು ತಿರುಗಿ ನೋಡಿದಳು. ಮುಂದೆ ಹೋಗುತ್ತಿದ್ದಾಕೆ ಯಾವುದನ್ನೂ ಗಮನಿಸದವಂತೆ ಮುಂಬರಿಯುತ್ತಲೆ ಇದ್ದಳು.

ಹಿಂದೆ ಹೋಗುತ್ತಿದ್ದ ಸ್ತ್ರೀವ್ಯಕ್ತಿ ನಿಂತು ತನ್ನ ಕಡೆಗೆ ತಿರುಗಿದೊಡನೆಯೆ, ಗುತ್ತಿಗೆ ಗುರುತುಹತ್ತಿ, ತನ್ನೊಳಗೆ ತಾನೆ "ಓಹೊ ಈ ಬಾವಿಕೊಪ್ಪದ ಸೀರುಡಿಕೆ ಜೋಡಿಯೊ? ನಾಗತ್ತೆ! ನಾಗಕ್ಕ! ಎಂದುಕೊಂಡು, ತನ್ನಲ್ಲಿ ಮೂಡಿಬಂದ ಲಘುತ್ವಭಾವನೆಯನ್ನು ಕೊಂಕುನಗೆಯಿಂದ ಪ್ರಕಟಿಸದೆ ಇರಲಾರದವನಾದನು. ಹೊಲೆಯನ ಹಾಸ್ಯಕ್ಕೂ ಪಕ್ಕಾಗುವಷ್ಟರಮಟ್ಟಿಗೆ ಹಬ್ಬಿತ್ತು ಅವರಿಬ್ಬರ ಕೀರ್ತಿ!

ನಾಗಣ್ಣ, ನಾಗಕ್ಕ ಮತ್ತು ನಾಗತ್ತೆಯರ ಸುದ್ದಿ ಆ ನಾಡಿನವರ ಮಾತುಕತೆಗೆ ಸ್ವಾರಸ್ಯವೀಯುವ ಉಪ್ಪಿನಕಾಯಿಯಾಗಿತ್ತು. ನಾಗಣ್ಣ ಗತಿಸಿ ನಾಲ್ಕಾರು ವರುಷಗಳಾಗಿದ್ದರೂ, ನಾಗಣ್ಣನ ಬದುಕು ನಗೆಗಿಂತಲೂ ಹೆಚ್ಚಾಗಿ ಕಣ್ಣೀರಿಗೆ ಕಾರಣವಾಗುವಂತಹುದಾಗಿದ್ದರೂ, ಜನರು ನಗೆಗೆ ನಿಜವಾಗಿ ಕಾರಣವಾಗುವಂತಹ ವರ್ತನೆ ನಾಗತ್ತೆಯದೆ ಮಾತ್ರ ಆಗಿದ್ದರೂ ನಾಗಣ್ಣ, ನಾಗಕ್ಕ, ನಾಗತ್ತೆಯರ ಮೂರು ಹೆಸರುಗಳೂ ಒಂದರೊಡನೊಂದು ಹೆಣೆದುಕೊಂಡು ಸಿಕ್ಕಾಗಿಬಿಟ್ಟಿದ್ದುವು.

ಬಾವಿಕೊಪ್ಪದ ನಾಗಣ್ಣ 'ನಾಗತ್ತೆಯ ಎರಡನೆಯ ಗಂಡನಿಗೆ ಹುಟ್ಟಿದವನು. ನಾಗಣ್ಣನ ತಂದೆ ಬಾವಿಕೊಪ್ಪದಲ್ಲಿ ಸಿಂಬಾವಿ ಭರಮೈ ಹೆಗ್ಗಡೇರ ಗದ್ದೆತೋಟ ಮಾಡಿಕೊಂಡು ಒಕ್ಕಲಾಗಿ ತಕ್ಕಮಟ್ಟಿಗೆ ನೆಮ್ಮದಿಯಾಗಿಯೆ ಇದ್ದನು.' ಒಂದಾದ ಮೇಲೊಂದು ಮದುವೆಯಾಗಿ ಮೂರನೆ ಹೆಂಡತಿಯ ಇತರರಂತೆಯೆ ಹೆರಿಗೆ ಸಮಯದಲ್ಲಿ, ಹಳೆಪೈಕದವಳ ಹುಳದೌಷಧವೂ ಸೂಲಗಿತ್ತಿತನವೂ ವಿಫಲವಾಗಿ, ತೀರಿಕೊಂಡ ಮೇಲೆ, ನಾಲ್ಕನೆಯ ಮದುವೆಗೆ ಸಿಂಬಾವಿ ಹೆಗ್ಗಡೆಯವರು ಸಾಲಕೊಡಲು ಒಪ್ಪದೆ ಹೋದರು. ಒಂಟಿ ಬಾಳಿಗೆ ಬೇಸತ್ತು ಅವನು ತಪಿಸುತ್ತಿದ್ದಾಗ ಈ 'ನಾಗತ್ತೆ' ಎಲ್ಲಿಂದಲೋ ಪ್ರತ್ಯಕ್ಷವಾದಳು! ಅವಳಿಗೂ ತನ್ನ ಗಂಡ ಸತ್ತು, ಒಂಟಿ ಬಾಳು ಬೇಸರವಾಗಿ, ಜಂಟಿಬಾಳಿಗಾಗಿ ಊರಿಂದೂರಿಗೆ ಅಲೆಯುತ್ತಿದ್ದಳಂತೆ. ಆದರೆ ಅವಳನ್ನು ಚೆನ್ನಾಗಿ ತಿಳಿದಿದ್ದ ಯಾವ ಊರಿನಲ್ಲಿಯೂ ಅವಳಿಗೆ ಜಂಟಿಬಾಳು ಗಿಟ್ಟದೆ, ಬಾವಿಕೊಪ್ಪದ ನಾಗಣ್ಣನ ತಂದೆಯ ಒಂಟಿಬಾಳಿನ ಬೇಸರಿನ ವಿಚಾರವಾಗಿ ಮಾರ್ತೆಗೇಳಿ, ಅದನ್ನು ಪರಿಹರಿಸಲು ಬಾವಿಕೊಪ್ಪಕ್ಕೆ ಬಂದಳಂತೆ. ಒಂಟಿಬಾಳು ಸಾಕಾಗಿದ್ದ ಇಬ್ಬರೂ ಜಂಟಿಬಾಳಿಗೆ ಒಪ್ಪಿ 'ಸೀರುಡಿಕೆ' ಮಾಡಿಕೊಂಡರು. ಆದರೆ ಎಂತಹ ಕ್ಷೇಮವನ್ನು ತೆತ್ತು ಆ 'ಕೂಡಿಕೆ'ಯ ಸುಖದ ಬಾಳನ್ನು ಕೊಂಡುಕೊಂಡೆನೆಂಬುದು ನಾಗಣ್ಣನ ತಂದೆಗೆ ಆಮೇಲೆ ಚೆನ್ನಾಗಿ ಅನುಭವಕ್ಕೆ ಬಂತಂತೆ!

'ನಾಗತ್ತೆ'ಯನ್ನು ಕೂಡಿಕೆ ಮಾಡಿಕೊಂಡ ಆರೇಳು ವರುಷದಲ್ಲಿಯೆ ನಾಗಣ್ಣನ ತಂದೆ ತೀರಿಕೊಂಡನು. ಆಗ ನಾಗಣ್ಣ ಸಣ್ಣ ಹುಡುಗ. ನಾಗಣ್ಣ ಹದಿನೈದು ಹದಿನಾರು ವರುಷದವನಾಗುತ್ತಿದ್ದಂತೆಯೆ ಅವನ ತಾಯಿ ಅವನಿಗೆ ಬಡ ಒಕ್ಕಲೊಬ್ಬನ ಮಗಳಾಗಿದ್ದ ನಾಗಕ್ಕನನ್ನು ತಂದುಕೊಂಡು ಸೊಸೆಯನ್ನಾಗಿ ಮಾಡಿಕೊಂಡಳು. ಅಂದಿನಿಂದ ಅವಳು 'ನಾಗತ್ತೆ'ಯಾಗಿ ಮಗ ಮತ್ತು ಸೊಸೆ ಇಬ್ಬರನ್ನೂ ತನ್ನ ಅಧಿಕಾರದ ಮುಷ್ಟಿಯಲ್ಲಿ ಭದ್ರವಾಗಿಟ್ಟುಕೊಂಡಳು. ತಾಯಿಯ ಬಡಿತ ಮತ್ತು ದುಡಿತದ ಪರಿಣಾಮವಾಗಿಯೊ ಅಥವಾ ತನ್ನ ತಾಯಿಯಿಂದ ತನ್ನ ತಂದೆಗೆ ಅಂಟಿದ್ದ ರೋಗಕ್ಕೆ ತಾನು ಹಕ್ಕುದಾರನಾಗಿದ್ದರಿಂದಲೋ ಏನೋ ನಾಗಣ್ಣನಿಗೆ ಆರೋಗ್ಯ ಕೆಟ್ಟು, ಹೊಟ್ಟೆಯಲ್ಲಿ ಹುಣ್ಣಾಗಿ, ಗದ್ದೆ ತೋಟದ ಕೆಲಸ ಮಾಡಲಾರದೆ, ಅದನ್ನೆಲ್ಲ ಬಿಟ್ಟು, ಹೆಗ್ಗಡೇರ ಸಾಲ ತೀರಿಸಲು ಸಿಂಬಾವಿ ಮನೆಯಲ್ಲಿ ನಾಗಣ್ಣ ನಾಗಕ್ಕ ನಾಗತ್ತೆ ಮೂವರೂ ದುಡಿಮೆಯಾಳುಗಳಾಗಿ ನಿಂತರು. ಅನಾರೋಗ್ಯದ ನಿಮಿತ್ತ ಹೆಗ್ಗಡೆಯವರು ನಾಗಣ್ಣನಿಗೆ ಕಷ್ಟದ ಕೆಲಸ ಕೊಡದೆ, ಕೂತೇ ಮಾಡುವ ಕೆಲಸಗಳಿಗೆ ನೇಮಿಸಿದರು. ಬುಟ್ಟಿ ಮಾಡುವುದು, ವಾಟೆ ಬಿದಿರು ಬೆತ್ತ ಇವುಗಳ ಸಲಕು ಕೆತ್ತುವುದು, ಪುಂಡಿನಾರಿನ ಹಗ್ಗ ಹೊಸೆಯುವುದು, ಎತ್ತು ದನ ಕಟ್ಟುವ ದಾವಣಿ ತಿರುಪುವುದು ಇತ್ಯಾದಿ. ಆದರೆ ನಾಗಣ್ಣನ ಹೊಟ್ಟೆ ಹುಣ್ಣು ಯಾವ ಗಿಡಮೂಲಿಕೆಗಳಿಗೂ ಬಗ್ಗಲಿಲ್ಲ. ನಾಗಕ್ಕ ತನ್ನ ಗಂಡನನ್ನು ಬದುಕಿಸಿಕೊಳ್ಳುವ ಸಲುವಾಗ ಯಾವ ಪತಿವ್ರತೆಗೂ ಕಡಿಮೆಯಿಲ್ಲದಂತೆ ಶುಶ್ರೂಷೆ ಮಾಡಿದಳು; ಭೂತ ಜಕ್ಕಿಣಿ ಪಂಜ್ರೊಳ್ಳಿಗಳಿಗೆ ಹರಕೆ ಕೊಟ್ಟಳು; ತನ್ನ ಹತ್ತಿರ ಇದ್ದಬದ್ದ ಚೂರುಪಾರು ಬಂಗಾರವನ್ನೂ ತಿರುಪತಿ ಧರ್ಮಸ್ಥಳ ಮೊದಲಾದ ದೇವತೆಗಳಿಗೆ ಸುಳಿದಿಟ್ಟಳು. ಯಾರಿಗೂ ಕಾಣದಂತೆ ಏಕಾಂತದಲ್ಲಿ ಬಲ್ಲಂತೆ ಪ್ರಾರ್ಥಿಸಿ ಕಣ್ಣೀರಿಟ್ಟಳು. ಅಲಂಕಾರ ಬಿಟ್ಟಳು. ಊಟ ಬಿಟ್ಟಳು. ಆದರೆ ನಾಗಣ್ಣ ಹುಣ್ಣಿನ ಯಾತನೆಯಲ್ಲಿ ಒದ್ದಾಡಿಕೊಂಡು ಸಿಂಬಾವಿಗೆ ಬಂದ ಎರಡು ವರ್ಷಗಳಲ್ಲಿಯೆ ತೀರಿಕೊಂಡನು.

ಗಂಡ ತೀರಿಕೊಂಡಂದಿನಿಂದಲೆ ಷುರುವಾಯ್ತು ನಾಗಕ್ಕಗೆ ನಾಗತ್ತೆಯ ಪೀಡೆ! ಪ್ರಾಯದ ಹುಡುಗಿ ನಾಗಕ್ಕಗೆ ತಕ್ಕಮಟ್ಟಿನ ರೂಪವೂ ಇತ್ತು. ಕಳ್ಳು ಕುಡಿದು ಕಳ್ಳಿನಲ್ಲಿಯೆ ಕೈ ತೊಳೆಯುತ್ತಿದ್ದ ಸಿಂಬಾವಿ ಭರಮೈ ಹೆಗ್ಗಡೆಯವರು ಯಾವುದೋ ಗುಟ್ಟಾದ ಕಾಯಿಲೆಯಿಂದ ನರಳುತ್ತಿದ್ದರೂ ಗಂಡನಿಲ್ಲದ ಹರೆಯದ ಹೆಣ್ಣಿನ ರೂಪವನ್ನು ತಿರಸ್ಕರಿಸುವಂತಿರಲಿಲ್ಲ. ಅಲ್ಲದೆ ತಮಗೆ ಮಕ್ಕಳಾಗಿರಲಿಲ್ಲ ಎಂಬ ನೆವದಿಂದ ಮತ್ತೊಂದು ಮದುವೆಗೆ ಬೇರೆ ಹವಣಿಸುತ್ತಿದ್ದರು. ಇದನ್ನೆಲ್ಲ ಅರಿತಿದ್ದ ನಾಗತ್ತೆ ತನ್ನ ಸೊಸೆಗೆ ಒದಗಿರುವ ಸದವಕಾಶವನ್ನು ಉಪಯೋಗಿಸಿಕೊಳ್ಳದೆ ಬಿಡಬಾರದೆಂದು ಸೂಚನೆ ಕೊಡತೊಡಗಿದಳು. ಆ ಸೂಚನೆ ಕೆಲವೊಮ್ಮೆ ಒರಟಾಗಿಯೂ ಇರುತ್ತಿತ್ತು.

ಹೇಗಾದರೂ ಸಿಂಬಾವಿ ಹೆಗ್ಗಡೇರಿಗೆ ತನ್ನ ಸೊಸೆಯನ್ನು ಕೂಡಿಕೆ ಮಾಡಿಸಿದರೆ ತನ್ನ ಸಾಲಸೂಲಗಳೆಲ್ಲ ತೀರಿಹೋಗುತ್ತವೆ ಎಂಬುದು 'ನಾಗತ್ತೆ'ಯ ಹುನಾರು. ಒಂದು ವೇಳೆ, ಶ್ರೀಮಂತರೂ ದೊಡ್ಡ ಮನೆತನದವರೂ ಆದ ಹೆಗ್ಗಡೆಯವರಿಗೆ ಹೆಣ್ಣು ಕೊಡುವ ಸರಿಸಮಾನರು ಅನೇಕರಿದ್ದು, ತನ್ನ ಸೊಸೆಯೊಡನೆ ಸೀರುಡಿಕೆಯಂತಹ ಕೀಳು ಸಂಬಂಧಕ್ಕೆ ಅವನು ಒಪ್ಪದಿದ್ದರೂ ತನ್ನ ಸೊಸೆ ಅವದ ದೇಹಾಸಕ್ತಿಗೆ ಒಳಗಾದರೂ ಸಾಕು ತಾನು ತನ್ನ ಇಷ್ಟಾರ್ಥಗಳನ್ನೆಲ್ಲ ನೆರವೇರಿಸಿಕೊಳ್ಳುತ್ತೇನೆ ಎಂಬುದೂ ಅವಳ ಧೈರ್ಯ. ತನ್ನ ಗತಿಸಿದ ಗಂಡನನ್ನು ನೆನೆನೆನೆದು ಕೊರಗುತ್ತಿದ್ದ ನಾಗಕ್ಕಗೆ ಯಾರೊಡನೆಯೂ ಯಾವ ವಿಧವಾದ ಸಂಬಂಧದ ಆಸಕ್ತಿಯೂ ಲೇಶವೂ ಇರಲಿಲ್ಲ. ನಾಗತ್ತೆ ಅವಳ ಆ ಪತಿವ್ರತಾ ನಿಷ್ಠೆಯನ್ನು ಅಸಹ್ಯವಾದ ಮಾತುಗಳಿಂದ ಪರಿಹಾಸ್ಯಮಾಡಿ ಪ್ರಚೋದಿಸತೊಡಗಿದಳು. ಅದು ಎಷ್ಟರಮಟ್ಟಿಗೆ ಮುಂದುವರಿದು ಬಹಿರಂಗವಾಯಿತೆಂದರೆ, ನಾಗಕ್ಕನ ನಡತೆ ಸ್ವಭಾವ ವಿಧೇಯತೆ ವಿನಯ ಸಂಕೋಚ ಇವುಗಳನ್ನೆಲ್ಲ ಕಂಡು ಅವಳನ್ನು ತುಂಬ ಮೆಚ್ಚಿಕೊಂಡಿದ್ದ ಭರಮೈ

ಹೆಗ್ಗಡೆಯವರ ಹೆಂಡತಿ ಜಟ್ಟಮ್ಮ ನಾಗತ್ತೆಯೊಡನೆ ನಾಗಕ್ಕನನ್ನೂ ಮನೆಬಿಟ್ಟು ಹೊರಡುವಂತೆ ಮಾಡಬೇಕಾಯಿತು.

ಸಿಂಬಾವಿ ಮನೆ ತಪ್ಪಿ ಹೊರಹೊರಟ ನಾಗತ್ತೆಯ ಕೈಯಲ್ಲಿ ನಾಗಕ್ಕ 'ಪಂಜ್ರೊಳ್ಳಿ ಕೈಲಿ ಸಿಕ್ಕ ಜಕಣಿ'ಯಂತಾದಳು. ನಾಗಕ್ಕ ತನ್ನ ತವರನ್ನೂ ಸೇರದಂತೆ ತರತರದ ಅಶ್ಲೀಲ ದೂರುಗಳನ್ನೂ ಹಬ್ಬಿಸಿ, ನಾಗತ್ತೆ ಅವಳನ್ನು ವಿಕ್ರಯಿಸುವ ದನವನ್ನು ಗಿರಾಕಿಗಾಗಿ ಊರಿಂದೂರಿಗೆ ಸಾಗಿಸುವಂತೆ ಮನೆಯಿಂದ ಮನೆಗೆ ಕೊಂಡೊಯ್ದಳು. ನಾಗಕ್ಕನ ತವರು ಬಡ ಜಕ್ಕಲಾದುದರಿಂದಲೂ, ನಾಗಕ್ಕನ ತಂದೆ ತೀರಿಕೊಂಡು ಅಣ್ಣ ಅತ್ತಿಗೆಯರು ತಮ್ಮ ಹೊಟ್ಟಬಟ್ಟೆಗೇ ಸಾಲದೆ ಸಾಲಗಾರರಾಗಿ ಕಷ್ಟಪಡುತ್ತಲಿದ್ದುದರಿಂದಲೂ ಅವರು ಯಾರೂ ನಾಗತ್ತೆಗೆ ಎದುರಾಗಿ ನಾಗಕ್ಕನನ್ನು ರಕ್ಷಿಸುವ ಅಪಾಯವನ್ನು ಎದುರು ಹಾಕಿಕೊಳ್ಳುವ ಸ್ಥಿತಿಯಲ್ಲಿರಲಿಲ್ಲ.

ಕೆಲವು ಕಡೆಗಳಲ್ಲಿ ನಾಗಕ್ಕನ್ನು ಸೀರುಡಿಕೆ ಮಾಡಿಕೊಳ್ಳಲು ಹೆಂಡಿರನ್ನು ಹೆರಿಗೆಗೆ ಬಲಿಕೊಟ್ಟಿದ್ದ ಗಂಡುಗಳು ಸಂತೋಷದಿಂದ ಮುಂದೆ ಬಂದಿದ್ದರು. ಆದರೆ ನಾಗಕ್ಕ ಮನೆ ಬಿಟ್ಟು ಕಾಡಿಗೆ ಓಡಿ ಅವಿತುಕೊಳ್ಳುವುದರಿಂದ ಹಿಡಿದು ಕೆರೆ ಬಾವಿ ನೇಣುಗಳವರೆಗೂ ಹೋಗಿ ಪ್ರತಿಭಟಿಸಿ ಬಲಾತ್ಕಾರದ ಮರುಮದುವೆಯಿಂದ ಪಾರಾಗಿದ್ದಳು. ಆದರೆ ನಾಗತ್ತೆ 'ಇನ್ನೆಷ್ಟು ದಿನ ಹಾರಾಡ್ತಾಳೆ ಪರಾಯಕ್ಕೆ ಬಂದ ಹುಡುಗಿ? ನಾ ನೋಡ್ತೀನಿ' ಎಂದು ಪ್ರಶಾಂತತೆಯಿಂದ ತನ್ನ ದೃಢಪ್ರಯತ್ನವನ್ನು ಮುಂದುವರಿಸುತ್ತಲೆ ಇದ್ದಳು.

ಈ ಕಥೆಯೆಲ್ಲ ಕಿವಿಯಿಂದ ಕಿವಿಗೆ ಬಾಯಿಂದ ಬಾಯಿಗೆ ಬಿದ್ದು, ಒಂದಕ್ಕೆ ಎರಡಾಗಿ ಎರಡಕ್ಕೆ ಮೂರಾಗಿ ಉಪ್ಪುಕಾರ ಹಚ್ಚಿದಂತಾಗಿ ಒಗ್ಗರಣೆ ಹಾಕಿದಂತಾಗಿ ರುಚಿ ರುಚಿಯಾಗಿ ಸ್ವಾರಸ್ಯವಾಗಿ ಹಬ್ಬಿದುದರಿಂದಲೆ ಗುತ್ತಿ, ತಿರುಗಿನಿಂತ ನಾಗಕ್ಕನನ್ನು ಗುರುತಿಸಿದಾಗ, ಅವಳ ವಿಚಾರದಲ್ಲಿ ಅವನಿಗೆ ಒಂದು ತರಹದ ಕರುಣೆಗೂಡಿದ ಗೌರವಭಾವನೆಯೇ ಇದ್ದಿತಾದರೂ, ಮುಂದೆ ಹೋಗುತ್ತಿದ್ದ ನಾಗತ್ತೆಯನ್ನು ಒಳಕೊಂಡ ಅವನ ಮನಸ್ಸು ಲಘುತ್ವವನ್ನನುಭವಿಸಿ ಕೊಂಕುನಗೆ ನಕ್ಕದ್ದು!

ತುಸುದೂರ ಮುಂದೆ ಹೋಗಿದ್ದ ನಾಗತ್ತೆ ತನ್ನ ಹಿಂದೆ ನಾಗಕ್ಕನ ಹೆಜ್ಜೆ ಸಪ್ಪಳ ಕೇಳದಿದ್ದುದನ್ನು ಗಮನಿಸಿ ತಿರುಗಿನೋಡಿ "ಯಾಕೇ? ನಿಂತು ಬಿಟ್ಟೇ? ನಿಂಬಳ ಹತ್ತ್‌ತ್ತವೆ, ಬಿರಬಿರನೆ ಬಾರೆ. ಹೆಂಗಾದ್ರೂ ಬ್ಯಾಗ ಗುಡ್ಡ ಹತ್ತಿ ಕಾಡು ದಾಟಿದರೆ ಸಾಕಾಗದೆ" ಎಂದು ಸೊಂಟಗೈಯಾಗಿ ನಿಂತಳು.

"ನಾಯಿ ಬೊಗಳ್ತು. ಅದಕ್ಕೆ ನೋಡ್ತಾ ನಿಂತೆ" ಎನ್ನುತ್ತಾ ನಾಗಕ್ಕ ಬಳಿಸಾರಿ "ಆ ನಾಯಿಗುತ್ತಿ ಅಂತಾ ಕಾಣ್ತದೆ, ಬರ್ತಾ ಇದಾನೆ" ಎಂದಳು.

ಅಷ್ಟರಲ್ಲಿ ಗುತ್ತಿಯೂ ಹತ್ತಿರ ಬಂದು "ದೂರ ಹೊರಟ್ಹಂಗೆ ಕಾಣ್ತದೆ ಹೆಗ್ಗಡ್ತಮ್ಮೋರು?" ಎಂದನು. ಹುಲಿಯ ಅಪರಿಚಿತರನ್ನು ಕಂಡು ಬೊಗಳುವಂತೆ ವರ್ತಿಸದೆ ಬಾಲವಲ್ಲಾಡಿಸಿ ಸಂತೋಷ ಪ್ರದರ್ಶನ ಮಾಡುತ್ತಿತ್ತು.

"ಹುಲಿಯಗೆ ಗುರುತು ಮರೆತಿಲ್ಲ!" ಎಂದಳು ನಾಗಕ್ಕ.

“ನಾಯಿ ಆದ್ರೇನಂತೆ ಅದ್ಕೂ ಬಿದ್ದಿ ಇಲ್ಲೇನು?” ಎಂದನು ಗುತ್ತಿ.

“ಹುಲಿಕಲ್‌ನೆತ್ತಿಕಾಡು ದಾಟೋದು ಹ್ಯಾಂಗಪ್ಪಾ ಅಂತಿದ್ದೆ. ನಮ್ಮನ್ನೊಂದಿಷ್ಟು ಕೋಣೂರುವರೆಗೆ ಮುಟ್ಟಿಸಿ ಹೋಗ್ತಿಯೇನೋ, ಗುತ್ತಿ?” ನಾಗತ್ತೆ ಕೇಳಿದಳು.

“ನಾನೂ ಹಳೆಮನೀಗೆ ಹೊರಟೇನಿ, ನಿಮ್ಮ ಜತೆ ಅಲ್ಲೀವರೆಗೆ ಬಂದೇ ಹೋಗ್ತೀನಿ” ಎಂದು ತೊಯ್ದು ನೆಲದ ಕಡೆ ನೋಡಿ ಗುತ್ತಿ “ಅಯ್ಯಯ್ಯೋ! ಇಂಬಳ ಹತ್ತಾವೆ ಕಣೊ. ಬ್ಯಾಗ ಬ್ಯಾಗ ನಡೀರಿ. ಈ ನುಸಿ ಕಾಟ ಬ್ಯಾರೆ” ಎಂದ. ಹೊಲೆಯನಾದವನಿಗೆ ಹಿಂದೆ ಸ್ವಲ್ಪ ದೂರದಲ್ಲಿಯೇ ಇದ್ದುಕೊಂಡು ಅನುಸರಿಸುವುದು ಮೇಲಿಜಾತಿಯವರಿಗೆ ಅವನು ತೋರಿಸಬೇಕಾದ ಮರ್ಯಾದೆಯಲ್ಲವೆ?

“ನೀನೆ ಮುಂದೆ ಹೋಗಪ್ಪ! ಹುಲಿ ಕೂತಿರ್ತದಂತೆ ಆ ಹುಲಿಕಲ್ ಅರೇಲಿ!” ಎಂದಳು ನಾಗತ್ತೆ.

ಗುತ್ತಿ ನಾಯಿ ಸಹಿತವಾಗಿ ದಾರಿಯಿಂದ ಅಡ್ಡಕ್ಕೆ ಹಳುವಿನಲ್ಲಿ ನುಗ್ಗಿ ಹೋಗಿ ಸ್ವಲ್ಪ ದೂರ ಮುಂದೆ ಮತ್ತೆ ಕಾಲುದಾರಿಗೆ ಸೇರಿಕೊಂಡು ನಡೆಯತೊಡಗಿದನು. ಮಡಿಲು ತುಂಬ ಏನೇನನ್ನೊ ತುಂಬಿದ್ದುದರಿಂದ ಹೊಟ್ಟೆ ಉಬ್ಬಿದಂತೆ ಕಾಣುತ್ತಿದ್ದ ನಾಗತ್ತೆ ಮೆಲ್ಲಮೆಲ್ಲಗೆ ಹೆಜ್ಜೆ ಹಾಕತೊಡಗಿ “ಸ್ವಲ್ಪ ಮೆಲ್ಲಗೆ ಕಾಲು ಹಾಕೋ” ಎಂದು ಕೂಗಿ ಹೇಳಿದಳು ಗುತ್ತಿಗೆ.

ಹುಲಿಕಲ್ಲರೆ ಹತ್ತಿರವಾದಂತೆಲ್ಲ ಮಲೆ ಕಡಿದಾಗುತ್ತಾ ಬಂದಿತು. ಹೆಮ್ಮರಗಳ ಸಾಂದ್ರತೆ ಗಾತ್ರ ಔನ್ನತ್ಯಗಳು ಹೆಚ್ಚಾಗುತ್ತಿದ್ದುವಾದರೂ ಬುಡದ ಹಳುವಿನ ಕಿಕ್ಕಿರಿಕೆ ಕಡಿಮೆಯಾಗುತ್ತಿತ್ತು. ತುರಿಚೆ ಹಳುವಿನಿಂದಲಾಗಲಿ ಎತ್ತು ಬೀಳಿನಿಂದಲಾಗಲಿ ಬಾಡು ಬೆಕ್ಕಿನ ಮುಳ್ಳುಪೊದೆಯಿಂದಾಗಲಿ ತಪ್ಪಿಸಿಕೊಳ್ಳಲು ಹೆಚ್ಚೇನೂ ಪ್ರಯತ್ನಪಡಬೇಕಾಗಿರಲಿಲ್ಲ. ಅಪರ ವಯಸ್ಸಿನ ನಾಗತ್ತೆ ನಿಧಾನವಾಗಿ ಹೆಜ್ಜೆಯ ಮೇಲೆ ಹೆಜ್ಜೆಹಾಕುತ್ತಾ ಮಧ್ಯೆ ಮಧ್ಯೆ ನಿಂತು ಉಸ್ಸೆಂದು ನಿಡುಸುಯ್ದು ದಣಿವಾರಿಸಿಕೊಳ್ಳುತ್ತಾ ಹತ್ತುತ್ತಿದ್ದಳು. ಮೈ ಬಂದು, ಕಾಲುಗಳೂ ತೋಳುಗಳೂ ಅಸ್ವಾಭಾವಿಕವೆಂಬಷ್ಟು ದಪ್ಪದಪ್ಪವಾಗಿ ಬೆಳೆದಿದ್ದ ಆ ಹೆಂಗಸು ಒಂದೆರಡು ಕಡೆ ಜಾರಿ ಬೀಳುತ್ತಿದ್ದವಳನ್ನು ನಾಗಕ್ಕನೆ ಆತು ಹಿಡಿದಿದ್ದಳು. ಕಟ್ಟಿದ ವಲ್ಲಿಯಿಂದ ಕೊರಳ ಬೆವರನ್ನು ಒರೆಸಿಕೊಳ್ಳುತ್ತಾ “ನಾಗೂ, ಆ ಕಲ್ಲರೆವರೆಗೆ ಸೊಲ್ಪ ಕೈ ಹಿಡಿದುಕೊಳ್ತಿಯೇನೇ?” ಎಂದು ಅಂಗಲಾಚುವಂತೆ ಕೇಳಿಕೊಂಡ ಅತ್ತೆಯ ಕೈಯನ್ನು ತನ್ನ ಜುಗುಪ್ಸೆ ತೋರಗೊಡದ ರೀತಿಯಲ್ಲಿ ಆತುಕೊಂಡ ನಾಗಕ್ಕ ಮೆಲ್ಲಮೆಲ್ಲನೆ ಹತ್ತಿ ಏರಿ ಮುಂಬರಿದಳು.

“ಉಸ್‌ಸ್ಸಪ್ಪಾ! ಅಂತು ಕಲ್ಲರೆ ಬಂತಲ್ಲಾ. ಸೊಲ್ಪ ದಣಿವಾರಿಸಿಕೊಂಡು ಹೋಗಾನೇ! ಕರೆದು ಹೇಳೆ ಗುತ್ತೀಗೆ. ಮುಂದೆ ಹೋಗಿಬಿಟ್ಟಾನು!” ಎಂದು ನಾಗತ್ತೆ ವಿಸ್ತಾರವಾಗಿ ಹಾಸಿದಂತಿದ್ದ ಅರಯಮೇಲೆ ಕೂತುಬಿಟ್ಟಳು.

ನಾಗಕ್ಕ ಗುತ್ತಿಯನ್ನು ಕರೆದು ಹೇಳಬೇಕಾಗಲಿಲ್ಲ. ಅವನು ತಾನಾಗಿಯೆ, ನಾಗತ್ತೆ ಕುಳಿತುದನ್ನು ನೋಡಿ, ಹಿಂತಿರುಗಿ ಬಂದು, ಅವರಿಗೆ ಸ್ವಲ್ಪ ದೂರದಲ್ಲಿ, ತನ್ನ ಕಂಬಳಿ ಕೊಪ್ಪೆಯನ್ನು ಮಡಿಸಿ ಹಾಕಿಕೊಂಡು, ಬಗನಿ ದೊಣ್ಣೆಯನ್ನು ಟಣಕ್ಕನೆ ಅರೆಕಲ್ಲಿನ ಮೇಲೆ ಹಾಕಿ, ತನ್ನ ಕಾಲಿಗೆ ಹತ್ತಿದ್ದ ಇಂಬಳಗಳನ್ನು ಕೈಯಿಂದೆಳೆದು ಬಿಸಾಡುತ್ತಾ ಕುಳಿತನು.

ನಾಗತ್ತೆ ತನ್ನ ಮಡಿಲಿನಿಂದ ಒಂದು ಚೂರು ಹೊಗೆ ಸೊಪ್ಪನ್ನು ತೆಗೆದು ಅದರಿಂದ ತನ್ನ ಕಾಲಿಗೆ ಮೊಳಕಾಲಿನವರೆಗೂ ಹತ್ತಿದ್ದ ಇಂಬಳಗಳನ್ನು ಸುಲಭವಾಗಿ ಒರಸಿ ಒರಸಿ ಹಾಕಿದಳು. ಆಮೇಲೆ ಆ ಹೊಗೆಸೊಪ್ಪಿನ ತುಂಡನ್ನು, ತನ್ನ ಕಾಲಿಗೆ ಹತ್ತಿದ್ದ ಇಂಬಳಗಳನ್ನು ಒಂದು ಕಡ್ಡಿಯಿಂದ ತೆಗೆಯುವ ವಿಫಲ ಪ್ರಯತ್ನದಲ್ಲಿದ್ದ, ನಾಗಕ್ಕನಿಗೂ ಕೊಟ್ಟಳು. ಅವಳೂ ಬೆನ್ನು ತಿರುಗಿಸಿ ಕೂತು, ಕಚ್ಚಿದ್ದ ಇಂಬಳಗಳನ್ನೆಲ್ಲ ಸರಸರನೆ ಒರಸಿ ಹಾಕಿದಳು. ಆಮೇಲೆ ದೂರದಲ್ಲಿ ಕೂತು ಬಹುವಾಗಿ ಪ್ರಯತ್ನಿಸುತ್ತಿದ್ದ ಗುತ್ತಿಯ ಕಡೆಗೂ ನಾಗತ್ತೆಯ ಅಪ್ಪಣೆಯಂತೆ ಅದನ್ನು ಎಸೆದಳು.

ಗುತ್ತಿ ಅದನ್ನು ಹೆರಕಿಕೊಂಡು "ಹೌದು ಕಣ್ರೋ, ಇದೊಂದು ಒಳ್ಳೆ ಉಪಾಯ" ಎಂದು ಕೆಲಸಕ್ಕೆ ತೊಡಗಿದನು. ಆದರೆ ಗುತ್ತಿ ಇಂಬಳಗಳನ್ನೆಲ್ಲ ತೆಗೆದು ಹಾಕಿದ ಮೇಲೆ ಆ ಹೊಗೆ ಸೊಪ್ಪಿನ ತುಂಡನ್ನು ಬಿಸಾಡಲಿಲ್ಲ. ಅತ್ತ ಇತ್ತ ಕಳ್ಳಕಣ್ಣು ಹಾಯಿಸಿ ಮೆಲ್ಲಗೆ ಸೊಂಟಕ್ಕೆ ಸಿಕ್ಕಿಸಿಕೊಂಡನು! ಮುಂದೆ ಇಂಬಳ ಹತ್ತಿದಾಗ ಉಪಯೋಗಕ್ಕೆ ಬರಲಿ ಎಂದೊ? ಇಲ್ಲವೆ ಅವಶ್ಯಬಿದ್ದಾಗ ಎಲಡಕೆಗೇ ಬೇಕಾಗಬಹುದೆಂದೊ! ನಾಗಕ್ಕ ಅದನ್ನು ಗಮನಿಸಿ ಮುಖ ತಿರುಗಿಸಿಕೊಂಡು ನಕ್ಕದ್ದು ಅವನಿಗೆ ಗೊತ್ತಾಗಲಿಲ್ಲ.

ಅವರು ಕುಳಿತಿದ್ದ ಆ ಎತ್ತರದ ಸ್ಥಾನ ಹೆಸರುವಾಸಿಯಾಗಿತ್ತು. ಹುಲಿಕಲ್ಲು, ಹುಲಿಕಲ್ಲರೆ, ಹುಲಿಕಲ್ ನೆತ್ತಿ ಎಂದು ಮೊದಲಾಗಿ ಆ ಸ್ಥಳವನ್ನು ನಿರ್ದೇಶಿಸುತ್ತಿದ್ದರೂ ಹುಲಿಕಲ್ಲು ಗುಡ್ಡದ ನೆತ್ತಿ ಆ ಹುಲಿಕಲ್ಲರೆಗಿಂತಲೂ ಮೇಲೇರಿ ಇನ್ನ ಬಹಳ ಎತ್ತರದಲ್ಲಿ ಕೊನೆಗೊಂಡಿತ್ತು. ಇವರು ಕುಳಿತಿದ್ದ ಹುಲಿಕಲ್ಲರೆ ಆ ಮಲೆಯ ಓರೆಯ ಹೆಗಲಿನಂತಿತ್ತು. ಅಗಲವಾಗಿದ್ದ ಆ ಹಾಸುಬಂಡೆ ಸುತ್ತಲೂ ದಟ್ಟವಾದ ಅರಣ್ಯದಿಂದ ಪರಿವೃತವಾಗಿದ್ದೂ ಅದರ ಮೇಲೆ ಕುಳಿತವರಿಗೆ ಬಹುದೂರ ಕೆಳಗೆ ಕಣಿವೆಯಲ್ಲಿ ಕೋಣೂರು ಹೂವಳ್ಳಿಗಳ ಗದ್ದೆ ತೋಟಗಳೂ ಅಡವಿಯ ಅಂಚಿಗೆ ಸೇರಿಕೊಂಡಂತಿದ್ದ ಅಡಿಕೆ ಬಾಳೆ ತೋಟಗಳೂ ಸಣ್ಣಗೆ ಚಿತ್ರದಲ್ಲಿ ಬರೆದಂತೆ ಕಾಣುತ್ತಿದ್ದವು. ಹುಲಿ ಅಲ್ಲಿ ಯಾವಾಗಲೂ ಕುಳಿತು ಕಣಿವೆಯಲ್ಲಿ ದನಕರು ಮೇಯುವುದನ್ನು ಗೊತ್ತುಹಚ್ಚುತ್ತಿತ್ತೆಂದೂ, ಇಲ್ಲವೆ ಕಾಡಿನಲ್ಲಿ ತಿರುಗುವ ಮಿಗ, ಹಂದಿ, ಕಡ, ಕಾಡುಕುರಿ ಮೊದಲಾದ ಪ್ರಾಣಿಗಳಿಗಾಗಿ ಕಂಡಿ ಕಾಯುತ್ತಿತ್ತೆಂದೂ ಪ್ರತೀತಿ. ಅಲ್ಲಿ ತಿರುಗಾಡುವವರಿಗೆ ಎಷ್ಟೋಸಾರಿ ಹುಲಿ ಕಾಣಿಸಿದ್ದೂ ಉಂಟು. ಆದರೆ ಮನುಷ್ಯರ ತಂಟೆ ಬರುತ್ತಿರಲಿಲ್ಲ. ದೂರದಿಂದಲೆ ಸ್ವಲ್ಪ ಗಟ್ಟಿಯಾಗಿ ಕೆಮ್ಮುತ್ತಲೋ ಮಾತಾಡುತ್ತಲೋ ಹೋದರೆ ಹುಲಿ ಅಲ್ಲಿಂದ ಕಣ್ಮರೆಯಾಗಿಬಿಡುತ್ತದೆ. ಎಂದು ಬಲ್ಲವರು ಹೇಳುತ್ತಿದ್ದರು. ಅದಕ್ಕಾಗಿಯೆ ಆ ಹುಲಿಕಲ್ಲನ್ನು ದಾಟುವಾಗ ಒಬ್ಬನೆ ಹೋಗುತ್ತಿದ್ದರೂ ಅನೇಕರಿದ್ದಾರೆ ಎಂಬ ಭ್ರಾಂತಿಯನ್ನು ಹುಲಿಗೆ ತಂದು ಕೊಡಲೋಸುಗ ಎಂಬಂತೆ ಗಟ್ಟಿಯಾಗಿ ಮಾತಾಡುತ್ತಲೋ ಬಾಯಿ ಮಾಡುತ್ತಲೋ ದೂರದಲ್ಲಿರುವವರನ್ನು ಕರೆಯುವಂತೆ ಕಾಕು ಹಾಕುತ್ತಲೋ ಇಲ್ಲವೆ ಗಟ್ಟಿಯಾಗಿ ಪದ ಹೇಳುತ್ತಲೋ ಹೋಗುತ್ತಿದ್ದುದು ವಾಡಿಕೆ.

ಮಳೆಗಾಲದ ಮೊದಲ ಪಾದದ ಪೂರ್ವಾಹ್ನದ ಆಕಾಶದಲ್ಲಿ ಮೋಡ ವಿರಳವಾಗಿದ್ದು ಬಟ್ಟ ಬಯಲಾಗಿದ್ದ ಕಲ್ಲರೆಯ ಮೇಲೆ ಬಿಸಿಲು ಚೆನ್ನಾಗಿಯೆ ಬೀಳುತ್ತಿತ್ತು. ಆದರೆ ಕಾಡಿನ ಕಟ್ಟನೆರಳಿನ ಶೀತದಲ್ಲಿ ಅದುವರೆಗೂ ನಡೆದು ಬಂದಿದ್ದ ಅವರಿಗೆ ಅದು ಮೊದಮೊದಲು ಹಿತಕರವಾಗಿಯೆ ಇತ್ತು. ಗುತ್ತಿ ತನಗೊಂಡು 'ಬಾಯಿಗೆ' ಸಿಗುತ್ತದೇನೋ ಎಂದು ನಾಗತ್ತೆಯ ಮಡಿಲಿನ ಕಡೆಗೆ ನೋಡುವುದರ ಮೂಲಕ ಸೂಚನೆ ಕೊಟ್ಟರೂ ಸಫಲವಾಗದೆ ನಾಗತ್ತೆ ಸ್ವಲ್ಪಹೊತ್ತಿನಲ್ಲಿಯೆ "ಬಿಸಿಲೇರ್ತಾ ಅದೆ, ಹೋಗಾನ" ಎಂದು ಎದ್ದು ನಿಂತಳು.

ಎದ್ದುನಿಂತ ಗುತ್ತಿಗೆ ಹುಲಿಯ ಕಣ್ಮರೆಯಾದದ್ದು ಗಮನಕ್ಕೆ ಬಂದು ಸಿಳ್ಳು ಹಾಕಿ ಕರೆದನು. ಆದರೆ ಎಲ್ಲಿಯೂ ನಾಯಿಯ ಸದ್ದಾಗಲಿ ಸುಳಿವಾಗಲಿ ಕಾಣಿಸಲಿಲ್ಲ. ಗುತ್ತಿ ಹುಲಿಕಲ್ಲನ್ನು ಸಮೀಪಿಸುತ್ತಿದ್ದಾಗಲೆ ನಾಯಿಯ ಕೊರಳ ಬಳ್ಳಿಹಗ್ಗವನ್ನು ಬಿಚ್ಚಿಬಿಟ್ಟಿದ್ದನು: ಒಂದು ವೇಳೆ ಹುಲಿ ಏನಾದರೂ ಅರೆಯ ಮೇಲೆ ಕುಳಿತಿದ್ದರೆ ಮುಂದೆ ಹೋಗುವ ನಾಯಿಯನ್ನು ಕಂಡೇ ಮನುಷ್ಯರ ಆಗಮನವನ್ನು ಊಹಿಸಿ ಓಡಿಹೋಗಿ ಬಿಡಲಿ ಎಂದು! ಗುತ್ತಿಯ ಧೈರ್ಯದ ಅಂತರಾಳದಲ್ಲಿ ಎಚ್ಚರಿಕೆಯ ಪುಕ್ಕಲು ಯಾವಾಗಲೂ ಮನೆಮಾಡಿಯೆ ಇರುತ್ತಿತ್ತು!

ಕ್ರೂ ಕ್ರೂ ಕ್ರೂ ಎಂದು ಕಾಡು ಮರುದನಿ ಕೊಡುವಂತೆ ಕರೆದನು.

“ಹಡ್ಬೇಗೆ ಹುಟ್ಟಿದ್ದು ಯತ್ತಮಕ ಸತ್ತದೊ? ಎಂದು ತನ್ನ ಸಿಟ್ಟನ್ನು ಶಪಿಸುತ್ತಾ ಕಂಬಳಿಕೊಪ್ಪೆಯನ್ನೊ ಬಗನಿದೊಣ್ಣೆನ್ನೊ ಎತ್ತಿಕೊಂಡು ಹೊರಟನು.

“ಮೂಗಾಳಿ ಹಿಡುಕೊಂಡು ಬರ್ತದೆ, ಎಲ್ಲಿಗೆ ಹೋತದೆ?” ಎಂದ ನಾಗತ್ತೆಗೆ.

ಗುತ್ತಿ ಕಾಲು ಹಾಕುತ್ತಲೆ ಹೇಳಿದ: “ಬರ್ಕನ್ನೊ ಕಣ್ಣಂದೀನೊ ಗುದ್ದಿಗೆ ಕೂಡಿಕೊಂಡು ಕಾಯ್ತಾ ಕೂತು ಬಿಡ್ತದೆ ಕಣ್ರೋ. ಅವತ್ತೊಂದು ಸಲ ಎಲ್ಡುದಿನ ಮನೆಗೆ ಬರದೆ ಹೋಯ್ತು. ನನಗೆ ಅನ್ನಾನೆ ಸೇರದೆ ಹೋಯ್ತು. ಆಮ್ಯಾಲೆ ನಾನೂ ಸಣ್ಣತಿಮ್ಮ ಹುಡುಕ್ಕೊಂಡು ಹೋಗಿ ನೋಡ್ತೀವಿ, ಒಂದು ಮರದ ಬುಡದಾಗೆ ಮೇಲೆ ನೋಡ್ತಾ ಕೂತುಬಿಟ್ತಾದೆ. ಏಟು ಕರೆದ್ರೂ ಬರ ಒಬ್ಬದು. ಕಡೆಗೆ ನೋಡಿದ್ರೆ, ಬರ್ಕನ್ನ ಬೆರಸಿಕೊಂಡು ಹೋಗಿ ಆ ಮರದ ಒಟ್ಟೆಗೆ ಹತ್ತಿಸಿಬಿಟ್ಟದೆ! ಬಳಿಕೋಲು ಹಾಕಿ ನೋಡಿದಾಗ ಒಣೀಲಿ ಗೊತ್ತಾತು! ಹೊಗೆಹಾಲಿ, ದಸಿಗೇಲಿ ಇರ್ದು, ತೆಗೆದ್ವು. ದಿಂಡೆ ಬರ್ಕ! ಸಣ್ಣ ಸಿಮ್ಮನ ಕೈಮೇಲೆ ಇಳಿದುಬಿಟ್ಟಿತ್ತು ಅದರ ಹೊಟ್ಟೆಕಳ್ಳಿನ ರಸ ರಕ್ತ ಎಲ್ಲ! ಹಿಹ್ಹಿಹ್ಹಿ!”

ದಾರಿ ಗುಡ್ಡವಿಳಿದು ಹೋಗುತ್ತಿದ್ದುದರಿಂದ ನಾಗತ್ತೆಗೂ ಅಷ್ಟೇನು ಆಯಾಸಕರವಾಗಿರಲಿಲ್ಲ. ಕಗ್ಗಾಡಿನ ದಟ್ಟಹಳುವಿನಲ್ಲಿ ಹೋಗುತ್ತಿದ್ದಾಗ ಒಂದೆಡೆ ತುಸುದೂರದಲ್ಲಿ ಹಳುವಿನೊಳಗೆ ಏನೋ ಸದ್ದಾಯಿತು. ಮೂವರೂ ಬೆಚ್ಚಿ ನಿಂತರು.

ತಗ್ಗಿದ ದನಿಯಲ್ಲಿ ಗುತ್ತಿ “ಆ ಹೆಬ್ಬಲಸಿನ ಬುಡದಾಗೆ ಅರುಗಾಗಿ!” ಎಂದು ತಾನೂ ಒಂದು ಹೆಮ್ಮರದ ಹಿಂದೆ ಮರೆಯಾಗಿ ನಿಂತ.

ದೊಡ್ಡೋ? ಕಡವೊ? ಹಂದಿಯೊ? ಮಿಗವೊ? ಹುಲಿ ಅಟ್ಟುತ್ತಿದೆಯೋ ಅಥವಾ ಸಿಳ್ಳುನಾಯಿಗಳೋ? ಏನೇನನ್ನೊ ಊಹಿಸುತ್ತಾ ಗುತ್ತಿ ಬಿಡುಗಣ್ಣಾಗಿ ನೋಡುತ್ತಿದ್ದಂತೆಯೆ ಒಂದು ಹೋರಿ ಮಿಗ ಮರಗಳ ಸಂದಿ ಹಳುವಿನಲ್ಲಿ ಕವಣೆ ಕಲ್ಲೆಸೆದಂತೆ ಹಾದಿಬಂದು, ಇಪ್ಪತ್ತು ಮೂವತ್ತು ಮಾರುಗಳಿಗೊಂದು ನೆಗೆತ ಚಿಮ್ಮಿ, ಗುಡ್ಡದ ಉಬ್ಬಿನ ಕಡೆಗೆ ಮಿಂಚಿ ಏರಿ ಕಣ್ಮರೆಯಾಯಿತು. ಆ ಸದ್ದು ಅಡಗುವಷ್ಟರಲ್ಲಿಯೇ ನೋಡುತ್ತಾನೆ: ತನ್ನ ನಾಯಿ, ಹುಲಿಯ, ಅದನ್ನು ಬೆಂಬತ್ತಿ ಸಮವೇಗದಲ್ಲಿ ಎಂಬಂತೆ ಧಾವಿಸುತ್ತಿದೆ! ಗುತ್ತಿ ಅದನ್ನು ಕೂಗಿ ಕರೆಯಬೇಕು ಎನ್ನುವಷ್ಟರಲ್ಲಿಯೇ ನಾಯಿ ಓಡುವ ಸದ್ದು ಅಡಗಿ, ಕಾಡು ನಿಃಶಬ್ದವಾಗಿತ್ತು!

“ಆ ದೊಡ್ಡ ಜಾತಿ ನಾಯೀ ಹಣೇಬರಾನೆ ಹೀಂಗೆ. ಓಡೋ ಪರಾಣಿ ಕಂಡರೆ ಕೂಗೋದಿಲ್ಲ ಏನಿಲ್ಲ, ಅಟ್ಟಿಕೊಂಡು ಹೋಗೋದೊಂದೆ!” ಎಂದು ಗುತ್ತಿ ತನ್ನ ಮೃಗಯಾ ವಿಜ್ಞಾನದ ವಿಷಯಕವಾದ ಚಿಂತನೆಯನ್ನು ತನಗೇ ಗಟ್ಟಿಯಾಗಿ ಕೇಳಿಕೊಳ್ಳುತ್ತಾ ಮುನ್ನಡೆಯತೊಡಗಿದನು.

ಕೋಣೂರು ಸಮೀಪಿಸಿದಂತೆ ಕಾಡು ವಿರಳವಾಗತೊಡಗಿತು. ಗಿಳಿ ಹಿಂಡು, ಕಾಮಳ್ಳಿ ಹಿಂಡು, ಬಾಣವೇಗದಿಂದ ಇಂಚರದ ತನಿಮಳೆಯನ್ನೆ ಚಿಮುಕಿಸುತ್ತಾ ಹಾರಿಹೋಗಲಾರಂಭವಾಯಿತು. ಬರಬರುತ್ತಾ ಕಾಡಿನಂಚು ಹಕ್ಕಲಾಯಿತು. ಅಲ್ಲಲ್ಲಿ ಪೊದೆಗಳಲ್ಲಿ ವಿರಳ ವೃಕ್ಷಗಳಲ್ಲಿ ಪಿಕಳಾರ ಹೊರಸಲಕ್ಕಿ ಮೊದಲಾದ ದಟ್ಟ ಕಾಡಿನವಲ್ಲದ ಹಕ್ಕಿಗಳ ಸದ್ದು ಕೇಳಿಸತೊಡಗಿತು. ತುಸು ದೂರದಲ್ಲಿ ಕೋಣೂರಿನ ಅಡಕೆತೋಟ ಗದ್ದೆಬಯಲುಗಳೂ ಇಣುಕಿ ತೋರಿದುವು.

ಕಾಲು ದಾರಿ ಕವಲಿದೆಡೆ ಗುತ್ತಿ ನಿಂತನು: “ನಾನಿಲ್ಲೆ ಅಗಚ್ತೀನ್ರೋ ಹಳೆಮನೆಗೆ.”

ನಾಗತ್ತೆ ತನ್ನ ಮಡಿಲಿಗೆ ಕೈಹಾಕಿ ಒಂದು ಎಲೆ, ಒಂದು ಅಡಕೆ, ಒಂದು ತುಂಡು ಹೊಗೆಸೊಪ್ಪು ಹೊರತೆಗೆದು ‘ಕೊಳ್ಳೊ’ ಎಂದು ಒಂದು ‘ಬಾಯಿಗೆ’ ಕೊಟ್ಟಳು.

ಗುತ್ತಿ ಅಂಜಲಿಯೊಟ್ಟಿ, ಮೇಲಿಂದ ಬೀಳುವ ಆ ಇಷ್ಟವಸ್ತುವನ್ನು ಆತು ಹಿಡಿದು, ‘ಬತ್ತೀನ್ರೋ’ ಎಂದು ಬೀಳ್ಕೊಂಡು, ಹಿಂದಿರುಗಿ, ಅದುವರೆಗೆ ಹೆಂಗಸರಿಗಾಗಿ ಮೆಲ್ಲನೆ ನಡೆದ ಹೊತ್ತನ್ನು ಮತ್ತೆ ಗೆದ್ದು ಸಂಪಾದಿಸುವ ಉದ್ದೇಶದಿಂದಲೋ ಎಂಬಂತೆ, ಸರಸರನೆ ಕಾಲು ಹಾಕಿದನು.

* * *

## ೧೧

ನಾಗತ್ತೆ ಗುತ್ತಿಯ ಹತ್ತಿರ ತಾನು ಹೋಗುತ್ತಿರುವುದು ಕೋಣೂರಿಗೆ ಎಂಬಂತೆ ಮಾತಾಡಿದ್ದರೂ ಅವಳ ಪಯಣಕ್ಕೆ ನಿಜವಾದ ಗುರಿ ಹೂವಳ್ಳಿಯೆ ಆಗಿತ್ತು. ಕೋಣೂರಿನಲ್ಲಿ ಹಗಲೂಟ ಮುಗಿಸಿ, ಇಳಿಹಗಲಿನಲ್ಲಿ ಹೊರಟರೆ ಬೈಗಾಗುವ ಮುನ್ನ ಹೂವಳ್ಳಿಗೆ ಸೇರಬಹುದೆಂಬುದು ಅವಳ ಹರವು. ಅಲ್ಲಿ ಮುಂದೆ ನಡೆಯುವ ಕಾರ್ಯಕ್ರಮ ಅವಳಿಗೂ ಹೂವಳ್ಳಿ ವೆಂಕಟಣ್ಣನಿಗೂ ಮಾತ್ರವೆ ತಿಳಿದ ಒಳಸಂಚಾಗಿತ್ತು. ತನ್ನ ಸೊಸೆಯ ಬರಿಯ ಕಡಗದ ಕೈಗೆ ಬಳೆಯನ್ನೂ, ತೊಡಿಸಿ ಅವಳನ್ನು ಸುಮಂಗಲಿ ಮಾಡಿ ನೆಲೆಗೊಳಿಸುವ ಸಲುವಾಗಿ ನಾಗತ್ತೆ ಒಂದು ಭಯಂಕರ ವ್ಯೂಹವನ್ನೆ ಹೂಡಿದ್ದಳು. ಅಂತಹ ವ್ಯೂಹದ ವಿಚಾರವಾಗಿ ವೆಂಕಟಣ್ಣನಿಗೆ ಸ್ಪಷ್ಟ ಕಲ್ಪನೆ ಕೊಟ್ಟಿರಲಿಲ್ಲ. ವೆಂಕಟಣ್ಣನಂತಹ ‘ಪಶು’ ವಿನಂತಹ ಮನುಷ್ಯ ತಾನು ಒಡ್ಡಿದ ವ್ಯೂಹಕ್ಕೆ ಅದರ ಅರಿವಿದ್ದೂ ಕಾಲುಹಾಕಲು ಹಿಂಜರಿಯುತ್ತಾನೆಯೊ ಏನೊ ಎಂಬ ಶಂಕೆ ನಾಗತ್ತೆಯನ್ನು ಬಾಧಿಸುತ್ತಿತ್ತು. ತನ್ನ ಹುನ್ನಾರು ಗೆದ್ದರೆ ವೆಂಕ್ಟಣ್ಣನ ಬಹುದಿನದ ಇಷ್ಟಾರ್ಥ ಕೈಗೂಡಿ

ಅವನಿಗೆ ಸಂತೋಷವಾಗುತ್ತದೆ. ಎನ್ನುವುದರಲ್ಲಿ ನಾಗತ್ತೆಗೆ ಸಂದೇಹವಿರಲಿಲ್ಲ. ಆದರೆ ವೆಂಕಟಣ್ಣನಂತಹ ಸಾಧಾರಣ ಮರ್ಯಾದಸ್ಥ ಗೃಹಸ್ಥ, ತನ್ನ ಸುಖಕ್ಕಾದರೂ, ನಾಗತ್ತೆಯಂತಹ ಪ್ರಚ್ಛನ್ನ ಧೂರ್ತೆ ಕೈಕೊಳ್ಳಲು ಹಿಂಜರಿಯದ ಅಪಖ್ಯಾತಿಯ ಉಪಾಯವನ್ನು ಒಪ್ಪದಿದ್ದರೆ?

ಪ್ರಾಯದ ತನ್ನ ಸೊಸೆಯ 'ಗಂಡ ಸತ್ತ ಮುಂಡೆಯತನ'ವನ್ನು ಪರಿಹರಿಸಿ, ಅವಳನ್ನು ಉದ್ಧಾರಮಾಡಲು ನಾಲ್ಕಾರು ಕಡೆಗಳಲ್ಲಿ ತಾನು ಕೈಕೊಂಡ ಪ್ರಯತ್ನಗಳೆಲ್ಲ ನಾಗಕ್ಕನ ಹಠಮಾರಿತನದಿಂದ ವ್ಯರ್ಥವಾದುದನ್ನು ಕಂಡು ನಾಗತ್ತೆ ಎಂತಹ ಮನಃಶಾಸ್ತ್ರಜ್ಞನ ಮನೋವಿಶ್ಲೇಷಣೆಯೂ ಬೆರಗಾಗುವಂತಹ ಉಪಾಯಗಳನ್ನು ಆಲೋಚಿಸಿದ್ದಳು. ಹೇಳಲಾಗಲಿ ಬರೆಯಲಾಗಲಿ ಮುದ್ರಿಸಲಾಗಲಿ ಸಾಧ್ಯವಾಗದಂತಹ ಅಶ್ಲೀಲ ಅಸಹ್ಯೋಪಾಯಗಳನ್ನು ಪ್ರಯೋಗಿಸಿದ್ದಳು. ಸೊಸೆ ಅವುಗಳೊಂದನ್ನೂ ಅರಿಯದಿದ್ದರೂ ಅತ್ತೆಗೆ ಅವು ಮೆಲ್ಲಮೆಲ್ಲನೆ ಯಶಸ್ವಿಯಾಗುವಂತೆ ತೋರಿತ್ತು.

ಹೋದವರುಷ ಸಸಿನೆಡುವ ಸಮಯದಲ್ಲಿ ಹಿಡಿದು ಗದ್ದೆಕೊಯ್ಲು ಪೂರೈಸುವವರೆಗೂ ಅತ್ತೆ ಸೊಸೆಯರಿಬ್ಬರೂ ಹೂವಳ್ಳಿ ವೆಂಕಟಣ್ಣನ ಮನೆಯಲ್ಲಿ ಅವನ ಆರಂಭದ ಕೆಲಸಕ್ಕೆ ನೆರವಾಗಿ ಬೀಡುಬಿಟ್ಟಿದ್ದರು. ಅಲ್ಲಿಯೆ ನಾಗತ್ತೆ ತನ್ನ ರಹಸ್ಯ ಪ್ರಯೋಗಗಳನ್ನು ಪ್ರಾರಂಭ ಮಾಡಿದ್ದು. ಕೋಣೂರಿನ ಕಾಗಿನಹಳ್ಳಿ ಅಮ್ಮ ಅತ್ತೆ ಸೊಸೆಯರಿಬ್ಬರನ್ನೂ ತಮ್ಮ ಮನೆಯಲ್ಲಿಯೆ ಇದ್ದುಕೊಂಡು ಸಸಿ ನೆಡುವ ಕೆಲಸ ಮಾಡುವಂತೆ ಆಹ್ವಾನಿಸಿದ್ದರೂ ನಾಗತ್ತೆ ಏನೇನೊ ಸಬೂಬು ಹೇಳಿ ಹೂವಳ್ಳಿಗೇ ಸೊಸೆಯನ್ನು ಸಾಗಿಸಿಕೊಂಡು ಹೋಗಿದ್ದಳು. ಅದಕ್ಕೆ ನಿಜವಾದ ಕಾರಣ ಬೇರೆಯಾಗಿತ್ತು. ಹೊಟ್ಟೆಬಟ್ಟೆಯ ಸುಖದ ದೃಷ್ಟಿಯಿಂದಾಗಲಿ ಕೆಲಸ ಹಗುರವಾಗಿರುವ ದೃಷ್ಟಿಯಿಂದಾಗಲಿ ಜಾಗವನ್ನು ಗೊತ್ತು ಮಾಡುವ ಪಕ್ಷದಲ್ಲಿ ನಾಗತ್ತೆ ಖಂಡಿತ ಕೋಣೂರನ್ನೆ ಆರಿಸುತ್ತಿದ್ದಳು. ಕೋಣೂರು ರಂಗಪ್ಪಗೌಡರ ಮನೆ ಹೂವಳ್ಳಿ ವೆಂಕಟ್ಟನ ಮನೆಗಿಂತ ಎಲ್ಲದರಲ್ಲಿಯೂ ದೊಡ್ಡತನದ್ದಾಗಿತ್ತು. ವೆಂಕಟಣ್ಣನಿಗೆ ತನ್ನದೇ ಆದ ಸ್ವಂತ ಜಮೀನು ಇದ್ದುದೂ ಅಷ್ಟಕ್ಕಷ್ಟೆ. ಹಳೆಮನೆ ದೊಡ್ಡ ಹೆಗ್ಗಡೆಯವರ ಗದ್ದೆಯನ್ನೂ ಬೆಟ್ಟಳ್ಳಿ ಕಲ್ಲಯ್ಯಗೌಡರ ಅಡಕೆಯ ತೋಟವನ್ನೂ ಗುತ್ತಿಗೆಗೆ ತೆಗೆದುಕೊಂಡು ಸ್ವಲ್ಪ ಹೆಚ್ಚು ಕಡಿಮೆ ಅವರ ಒಕ್ಕಲಾಗಿಯೇ ಇದ್ದನು. ಆದರೆ ಸಜಾತಿಯವನಾಗಿ ಹೆಣ್ಣು ಕೊಟ್ಟುತಂದ ನೆಂಟಸ್ತಿಕೆಯ ಹಳೆಯ ಸಂಬಂಧದಿಂದ ಸಮಾನಸ್ಕಂಧನೆಂಬಂತೆ ನಡೆದುಕೊಳ್ಳುತ್ತಿದ್ದನು. ಆದರೆ ನಾಗತ್ತೆಗೆ ಬೇಕಾಗಿದ್ದ ಒಂದು ಸಲ್ಲಕ್ಷಣ ಕೋಣೇರು ರಂಗಪ್ಪಗೌಡರಿಗೆ ಇರಲಿಲ್ಲ. ಹೂವಳ್ಳಿ ವೆಂಕಟಣ್ಣನಿಗೆ ಹೆಂಡತಿ ತೀರಿಹೋಗಿ ಅನೇಕ ವರ್ಷಗಳಾಗಿದ್ದರೂ, ಮತ್ತೊಂದು ಮದುವೆಯಾಗಲು ಅವನು ಬಹಳ ಪ್ರಯತ್ನಪಟ್ಟಿದ್ದರೂ, ಅವನಿನ್ನೂ ಒಂಟಿಯಾಗಿಯೆ ಉಳಿದಿದ್ದ; ಅದಕ್ಕಾಗಿ ತುಂಬ ಪರಿತಪಿಸುತ್ತಲೂ ಇದ್ದ. ತನ್ನ ಮದುವೆಯ ಅನಿವಾರ್ಯ ಅವಶ್ಯಕತೆಯನ್ನು ಮನಗಾಣಿಸಲು ಅವನು ಎತ್ತುತ್ತಿದ್ದ ಸಖೇದ ಕಾರಣೋದ್ಗಾರ: 'ಒಂದು ಗಂಜಿ ನೀರು ಮಾಡಿ ಹಾಕುವುದಕ್ಕಾದರೂ ಒಬ್ಬಳು ಇಲ್ಲದೆ ಇದ್ದರೆ ಹ್ಯಾಂಗೆ?'

'ಗಂಜಿನೀರು' ಮಾಡಿಹಾಕುವುದಕ್ಕೇನೂ ಜನ ಇದ್ದರು. ಚಿನ್ನಮ್ಮನ ಅಜ್ಜಿ, ವೆಂಕಟಣ್ಣನ ಅತ್ತೆ ಎಂದರೆ ಹೆಂಡತಿಯ ತಾಯಿ, ಮೊಮ್ಮಗಳ ನೆರವಿನಿಂದ ಅನ್ನ ಕಾಣಿಸುವ ಒಗತನವನ್ನು ಯಾವ ದೂರಿಗೂ ಅವಕಾಶವೊದಗದಿರುವಷ್ಟರ ಮಟ್ಟಿಗೆ ನೆರವೇರಿಸುತ್ತಿದ್ದಳು. ಮುದುಕಿ ಕೃಶಶರೀರಿಯಾಗಿದ್ದರೂ ಮೊಮ್ಮಗಳ ಮಮತೆ ಅವಳನ್ನು ಕಷ್ಟಸಹಿಷ್ಣುವನ್ನಾಗಿ ಮಾಡಿತ್ತು. ವೆಂಕಟಣ್ಣನಿಗೆ ತನ್ನ ಮಗಳನ್ನು ಕೊಡುವಾಗಲೆ ಆಕೆ ತುಂಬ ಮೀನಮೇಷ

ಮಾಡಿದ್ದಳು. ತೆಳ್ಳಗೆ ಬೆಳ್ಳಗೆ ಚೆಲುವೆಯಾಗಿದ್ದ ತನ್ನ ಮಗಳಿಗೆ ವೆಂಕಟಣ್ಣನಂತಹ ರೂಕ್ಷ ವ್ಯಕ್ತಿ ತಕ್ಕ ವರನಲ್ಲವೆಂಧು ಅವಳು ಮೊದಮೊದಲು ಆ ಮದುವೆಗೆ ಒಪ್ಪಿರಲಿಲ್ಲ. ಅಲ್ಲದೆ ವೆಂಕಣ್ಣನ ಬಡತನಕ್ಕೆ ಚೆನ್ನಮ್ಮನ ತಾಯಿಯಂತಹ ಸೂಕ್ಷ್ಮ ಕಾಯದ ಸ್ಫುರದ್ರೂಪಿಣಿಯನ್ನು ಸಾಂಸಾರಿಕ ಕ್ಲೇಶ ಕಷ್ಟಗಳಿಂದ ದೂರವಿಟ್ಟು ರಕ್ಷಿಸಕೊಂಡು ಬರುವ ಶಕ್ತಿ ಇಲ್ಲವೆಂಬುದೂ ಚೆನ್ನಮ್ಮನ ಅಜ್ಜಿಗೆ ಚೆನ್ನಾಗಿ ಗೊತ್ತಿತ್ತು. ನೀರು, ಕಟ್ಟಿಗೆ, ದರಗು, ಗೊಬ್ಬರ ಹೊರುವುದರಿಂದ ಹಿಡಿದು ಸಸಿನೆಟ್ಟಿ, ಗದ್ದೆಕೊಯ್ಲು, ಕಳೆಕೀಳುವುದು ಮೊದಲಾದ ಎಲ್ಲ ಕೆಲಸಗಳನ್ನೂ, ಮನೆಗೆಲಸದ ಜೊತೆಗೆ, ಹೂವಳ್ಳಿಗೆ ಹೋದ ಹೆಣ್ಣು ಮಾಡಬೇಕಾದುದು ಅನಿವಾರ್ಯವಾಗಿತ್ತು. ವೆಂಕಟಣ್ಣನಿಗೆ ಇಲ್ಲದಿದ್ದುದು ಆ ಆರ್ಥಿಕ ಶಕ್ತಿ ಮಾತ್ರವಲ್ಲ; ಅದಕ್ಕೆ ಬೇಕಾದ ನಯ ನಾಜೋಕಿನ ಸಂಸ್ಕೃತಿಗೂ ಅವನು ಬಹು ದೂರವಾಗಿಯೆ ಇದ್ದನು. ಚೆನ್ನಮ್ಮನ ಅಜ್ಜಿಯ ಮನೆ ಬಡ ಒಕ್ಕಲದ್ದಾಗಿದ್ದರೂ ಚೆನ್ನಮ್ಮನ ತಾಯಿಯ ರೂಪ ಶ್ರೀಮಂತರ ಆಸೆಯನ್ನೂ ಸೆಳೆದಿತ್ತು. ಹೊಸಕೇರಿ ಬಸಪ್ಪ ನಾಯಕರು ತನ್ನ ಮಗನಿಗೆ ಅವಳನ್ನು ತಂದುಕೊಳ್ಳುವ ಮನಸ್ಸು ಮಾಡಿ, ಬಾಯಿಬಿಟ್ಟು ಕೇಳಿಯೂ ಇದ್ದರು. ಆದರೆ ಹಳೆಮನೆಯ ಸುಬ್ಬಣ್ಣ ಹೆಗ್ಗಡೆಯವರ ಹೆಂಡತಿಯ ಮಾತ್ಸರ್ಯ ಆ ಸಂಬಂಧಕ್ಕೆ ಅಡ್ಡ ಬಂದಿತ್ತು. ಆ ಹೆಗ್ಗಡತಿ ತಮ್ಮ ಒಕ್ಕಲೊಬ್ಬಳ ಮಗಳು ಬಸಪ್ಪನಾಯಕರಂತಹ ಶ್ರೀಮಂತರ ಸೊಸೆಯಾಗುವುದನ್ನು ಸಹಿಸದೆ ಹೊಟ್ಟೆಯುರಿಯಿಂದ ಅವಳನ್ನು ವೆಂಕಟಣ್ಣನಿಗೆ ಕೊಡುವಂತೆ ಸಂಚು ಮಾಡಿದ್ದಳು. ವೆಂಕಟಣ್ಣನಿಗೆ ಮದುವೆಯಾದ ಸ್ವಲ್ಪ ಕಾಲದಲ್ಲಿಯೆ ಹಳೆಮನೆ ಸುಬ್ಬಣ್ಣ ಹೆಗ್ಗಡೆಯವರ ಹೆಂಡತಿ ಇದ್ದಕ್ಕಿದ್ದಹಾಗೆ ತೀರಿಕೊಂಡಾಗ ವೆಂಕಟಣ್ಣನ ಅತ್ತೆ 'ನನ್ನ ಮಗಳನ್ನು ದೊಡ್ಡೋರ ಮನೆ ಸೇರದ ಹಾಂಗೆ ಮಾಡಿದ ಆ ಹೊಟ್ಟೆಕಿಚ್ಚಿನ ಪಾಪಕ್ಕೇ ಆ ಹೆಗ್ಗಡ್ತಿಗೆ ರಣ ಹೂಡೀತು!' ಎಂದಿದ್ದಳಂತೆ.

ವೆಂಕಟಣ್ಣನನ್ನು ಮದುವೆಯಾದ ಚೆನ್ನಮ್ಮನ ತಾಯಿ ವರುಷಕ್ಕೊಂದರಂತೆ ಮಕ್ಕಳನ್ನು ಹೆತ್ತು ಐದನೆಯ ಹೆರಿಗೆಯಲ್ಲಿ ತೀರಿಕೊಂಡಿದ್ದಳು. ಮೊದಲನೆಯ ಮಗು ಚೆನ್ನಮ್ಮ ವಿನಾ ಉಳಿದೆಲ್ಲಾ ಮಕ್ಕಲಳೂ ಸತ್ತುಹೋಗಿದ್ದುವು. ವೆಂಕಟಣ್ಣನಿಗೆ ಸಂಸ್ಕೃತಿಯ ಅಭಾವ ಯಾವ ಪರಿಮಾಣದಲ್ಲಿತ್ತೊ ಅದಕ್ಕೆ ಸಮಸ್ಪರ್ಧಿಯಾಗಿ ಪಶುಬಲಿಷ್ಠತೆಯಿದ್ದುದೂ ಚೆನ್ನಮ್ಮ ಬಹುಬೇಗ ತಬ್ಬಲಿಯಾಗಲು ಒಂದು ಮುಖ್ಯ ಕಾರಣವಾಗಿತ್ತು.

ಚೆನ್ನಮ್ಮ ತನ್ನ ತಾಯಿಯ ಚೆಲುವನ್ನೆಲ್ಲ ಪಡೆದು ಹುಟ್ಟಿದ್ದಳು. ಆದರೆ ಸುತ್ತಲೆಲ್ಲಿಯೂ ಅದನ್ನು ಗಮನಿಸುವ ಪ್ರಜ್ಞೆ ಇರಲಿಲ್ಲವಾದ್ದರಿಂದಲೂ, ಸುತ್ತಲೂ ದಟ್ಟಯಿಸಿದ್ದ ಸಂಸ್ಕೃತಿದಾರಿದ್ರ್ಯದ ದೆಸೆಯಿಂದಲೂ, ಅವಳು ಕಾಡುಕಾಡಾಗಿ ಕೊಳಕುಕೊಳಕಾಗಿ ಮಣ್ಣುಹಿಡಿದು ಕಾಂತಿ ಕುಂದಿದ ಚಿನ್ನದ ಸಲಾಕೆಯಂತಿದ್ದಳು. ಅವಳ ಅಜ್ಜಿ ಅವಳನ್ನು ಸ್ವಲ್ಪಕಾಲ ತನ್ನ ಮನೆಗೆ ಕರೆದೊಯ್ದು ಲಾಲನೆ ಪಾಲನೆ ಮಾಡಿದ್ದಳು. ಬಡ್ಡು ಹಿಡಿದು ಕೆದರಿದ್ದ ಕೂದಲನ್ನು ಮೀಯಿಸಿ ಎಣ್ಣೆ ಕಾಣಿಸಿ ಬಾಚಿ ಸರಿ ಮಾಡಿದ್ದಳು. ಮೂರು ಹೊತ್ತೂ ಇಳಿಯುತ್ತಿದ್ದ ಸಿಂಬಳ ಸುರುಕುತನಕ್ಕೆ ಮದ್ದು ಕೊಡಿಸಿ ಆರೈಕೆ ಮಾಡಿದ್ದಳು. ಚಳಿಜ್ವರದಿಂದ ಗಡ್ಡೆ ಬೆಳೆದು ಡೊಳ್ಳುಗೊಂಡು ಮಿರುಗುತ್ತಿದ್ದ ಹೊಟ್ಟೆ ಜಕ್ಕುವಂತೆ ಮಾಡಿ, ಬತ್ತಲೆಯನ್ನು ಪರಿಕಾರದಿಂದ ಮುಚ್ಚಿದ್ದಳು. ಕುಡಿವ ಹಾಲಿನಿಂದ ಹಿಡಿದು ಹೊರಳಾಡುತ್ತಿದ್ದ ಮಣ್ಣಿನವರೆಗೆ ಜೊಲ್ಲು ಅಂಟಾಗಿ ನಾರುತ್ತಿದ್ದ 'ದಿಷ್ಟಿಮಣಿ'ಸರವನ್ನು ಶುಚಿಗೊಳಿಸಿ ಹಾಕಿದ್ದಳು. ಕೈಗೆ ಕಾಲಿಗೆ ಕಿವಿಗೆ ಆಗಿನ ಕಾಲದ ಅಭಿರುಚಿಗೆ ಅನುರೂಪವಾದ ಬಡತನದ ಒಡವೆಗಳನ್ನೂ ತೊಡಿಸಿದ್ದಳು. ಕಡೆಗೆ, ಮತ್ತೊಂದು ಮದುವೆ ಮಾಡಿಕೊಳ್ಳಲು ಪ್ರಯತ್ನಿಸಿ ವಿಫಲನಾಗಿದ್ದ ವೆಂಕಟಣ್ಣನು ಗಟ್ಟದತಗ್ಗಿನವರ ಬಿಡಾರಗಳಲ್ಲಿ ಇರುಳುಬೇಟೆಗೆ ಷುರುಮಾಡಿದ್ದಾನೆಂಬ ಸುದ್ದಿ ಕೇಳಿ, ಮೊಮ್ಮಗಳ ಸಲುವಗಿಯಾದರೂ ಅವನ ಮನೆಯನ್ನು ನೆಟ್ಟಗೆ ಮಾಡಬೇಕೆಂಬ ಉದ್ದೇಶದಿಂದ ಚೆನ್ನಮ್ಮನನ್ನೂ ಕರೆದುಕೊಂಡು ಬಂದು ಹೂವಳ್ಳಿಯಲ್ಲಿಯೆ ನೆಲಸಿದ್ದಳು.

ಅಜ್ಜಿಯ ಆರೈಕೆಯಲ್ಲಿ ಚಿನ್ನಮ್ಮ ಹುಲುಸಾಗಿ ಹುಲುಸಾಗಿ ಬೆಳದಿದ್ದಳು. ಆದರೆ ತನ್ನ ಸುತ್ತಮುತ್ತಲಿದ್ದ ಇತರ ಹಳ್ಳಿಯ ಹುಡುಗಿಯರಂತೆಯೆ ನಯ ನಾಜೋಕುಗಳಿಂದ ದೂರವಾಗಿ ಒರಟುಒರಟಾಗಿಯೆ ದೊಟ್ಟವಳಾಗಿದ್ದಳು. ಅಜ್ಜಿಗೆ ಮನೆಗೆಲಸದಲ್ಲಿ ನೆರವಾಗುವುದರಿಂದ ಹಿಡಿದು ಕೊಟ್ಟಿಗೆಯಿಂದ ದನ ಬಿಟ್ಟುಕೊಂಡು ಹೋಗಿ ಹಕ್ಕಲು ಬಯಲಿನಲ್ಲಿ ಗುಡ್ಡಗಾಡಿನ ಓರೆಯಲ್ಲಿ ಮೇಯಿಸುವವರೆಗೂ ಅವಳ ಕಾರ್ಯಭಾರ ವ್ಯಾಪಿಸಿತ್ತು. ಹೂವಳ್ಳಿಗೆ ಒಂದೆರಡು ಮೈಲಿಗಳೊಳಗೇ ಇರುವ ಕೋಣೂರಿನ ಮನೆಯಲ್ಲಿಯೆ ಒಂದು ಐಗಳ ಮಠ ಇದ್ದು, ಹಳೆಮನೆ ಬೆಟ್ಟಳ್ಳಿ ಕಡೆಯ ಸಮೀಪದ ಊರು ಮನೆಯ ಕೆಲವೇ ಮಕ್ಕಳು 'ಬರಾವು' ಕಲಿಯುತ್ತಿದ್ದರಾದರೂ, ಗಂಡು ಮಕ್ಕಳಿಗೆ ಅಪೂರ್ವವೂ ಅಸಾಧ್ಯವೂ ಅತಿ ವಿರಳವೂ ಆಗಿದ್ದ ಓದುಬರಹವನ್ನು 'ಹೆಣ್ಣು ಹೆಂಗಸರಿಗೆ' ಕಲಿಸಲು ಯಾರೂ ಒಪ್ಪುತ್ತಿರಲಿಲ್ಲ. ಹೆಂಗಸರು ಓದುವುದನ್ನು ಕಂಡೂ ಇರಲಿಲ್ಲ, ಕೇಳಿಯೂ ಇರಲಿಲ್ಲ. ಹೆಂಗಸರು ಓದು ಕಲಿಯುವುದು ಗಂಡಸರು ಸೀರೆಯುಡುವುದಕ್ಕಿಂತಲೂ ಹಾಸ್ಯಾಸ್ಪದವಾಗಿತ್ತು. ಒಮ್ಮೆ ಕೋಣೂರಿನ ಹುಡುಗ ಮುಕುಂದಯ್ಯ 'ವೆಂಕ್ಟಮಾವ'ನಿಗೆ 'ಚಿನ್ನೀನ ನಮ್ಮ ಮನೆಗೆ ಬರೆಯೋಕೆ ಕಳ್ಸಿ' ಎಂದು ಯಾವುದೋ ಮಾತಿನ ಸಂದರ್ಭದಲ್ಲಿ ಹೇಳಿದಾಗ, ಹೂವಳ್ಳಿ ವೆಂಕಟಣ್ಣ ನಕ್ಕು 'ಹೌದು ಕಣ್ರೋ ಅವಳಿನ್ನು ಬರಾವು ಕಲ್ತು ಮಣೆಗಾರಿಕೆ ಮಾಡೋದೊಂದು ಬಾಕಿ!' ಎಂದು ಲೇವಡಿ ಮಾಡಿದ್ದನು.

* * *

ಮೊಮ್ಮಗಳನ್ನು ಕರೆದುಕೊಂಡು ಚಿನ್ನಮ್ಮನ ಅಜ್ಜಿ ತನ್ನ ಮನೆ ಬಿಟ್ಟು ಹೂವಳ್ಳಿಯಲ್ಲಿ ನೆಲೆಸುವುದಕ್ಕಾಗಿ ಅಲ್ಲಿಗೆ ಬಂದ ಹೊಸತರಲ್ಲಿ, ಬಾಂಧವ್ಯದ ಸಂಪ್ರದಾಯದಂತೆ ಅವರನ್ನು ಮಾತಾಡಿಸುವುದಕ್ಕಾಗಿ ಕೋಣೂರಿನ ಕಾಗಿನಹಳ್ಳಿ ಅಮ್ಮ-ದಾನಮ್ಮ ಹೆಗ್ಗಡತಿ-ತನ್ನ ಕಿರಿಮಗ (ಹತ್ತು ವರ್ಷದ ಹುಡುಗ) ಮುಕುಂದಯ್ಯನಯೊಡನೆ ಹೂವಳ್ಳಿಗೆ ಹೋಗಿದ್ದಳು. ಆರು ವರ್ಷದ ಹುಡುಗಿ ಚಿನ್ನಮ್ಮನನ್ನು ಹತ್ತಿರಕ್ಕೆ ಕರೆದು ಕೂರಿಸಿಕೊಂಡು, ತಾನು ತಂದಿದ್ದ ಕೊಬರಿ ಬೆಲ್ಲಗಳನ್ನು ಮಡಿಲಿನಿಂದ ತೆಗೆದುಕೊಡುತ್ತಾ, ಪಕ್ಕದಲ್ಲಿದ್ದ ತನ್ನ ಮಗನನ್ನು ತೋರಿಸಿ "ಇಂವ ಯಾರು? ಹೇಳು ನೋಡಾನ?" ಎಂದಾಗ, ಹುಡುಗಿ ಮುಗ್ಧ ನಯನಗಳನ್ನು ಅರಳಿಸಿ ಮೊದಮೊದಲು ಬೆಪ್ಪಾಗಿ ನೋಡುತ್ತಿದ್ದವಳು, ಕ್ರಮೇಣ ಗುರುತು ಹಿಡಿದವಳಂತೆ ಬಾಯಿ ತೆರೆದು ಮುಗುಳುನಗೆ ಬೀರಿ, ಕೊನೆಗೆ ನಾಚಿ ತಲೆಬಾಗಿ, ಕೇಳಿಸಿತೋ ಕೇಳಿಸಲಿಲ್ಲವೊ ಎನ್ನುವಂತೆ ಮೆಲ್ಲಗೆ "ಅವರು"! ಎಂದಿದ್ದಳು.

"ಅವರು ಅಂದರೆ? ಅವರು ಯಾರು ಅಂತಲೇ ನಾನು ಕೇಳಿದ್ದು." ಎಂದು ಕಾಗನಹಳ್ಳಿ ಅಮ್ಮ ವಿನೋದವಾಡಿ ಮುದ್ದುಮಾಡಲು ಚಿನ್ನಮ್ಮ ಮತ್ತೆ ಮೊದಲು ಹೇಳಿದ್ದಂತೆಯೇ "ಅವರು!" ಎಂದಳು.

ಆಗ ನಡುವೆ ಬಾಯಿ ಹಾಕಿದ ಚಿನ್ನಮ್ಮನ ಅಜ್ಜಿ ನಗುತ್ತಾ "ಅಯ್ಯೊ, ಮಗುವೇ, ಬಿರುಗಾಗದೆ ಮಾಡ್ತೀಯಲ್ಲೇ! 'ಅವರು 'ಅವರು' ಅಂದರೆ? ಅಂವ ನಿನ್ನ ಬಾವ ಕಣೇ" ಎಂದಿದ್ದಳು.

ಅಜ್ಜಿ ಹಾಗೆಂದೊಡನೆಯೆ ಹುಡುಗಿ ಮತ್ತೆ ತಲೆ ಎತ್ತಿ, ತುಸು ನಾಚಿದಂತೆ ನಗುತ್ತಾ, ತನ್ನನ್ನೆ ನೋಡುತ್ತಿದ್ದ ಮುಕುಂದನನ್ನು ಕಣ್ಣಿಗೆ ಕಣ್ಣಿಟ್ಟು ನೋಡಿ, ಆಗತಾನೆ 'ಕಂಡು' ಮತ್ತೆ ಈಗತಾನೆ ತಟಕ್ಕನೆ ಸಂಪೂರ್ಣವಾಗಿ ಅಳಿಸಿ ಹೋಗಿದ್ದುದ್ದನ್ನು ಮತ್ತೊಮ್ಮೆ ನೆನೆಯಲು ಪ್ರಯತ್ನಿಸಿ ಸೋತಂತೆ, ಮುಗ್ಧಳಾಗಿ ನಗುತ್ತಾ ತನ್ನ ಅಜ್ಜಿ

ಹೇಳಿಕೊಟ್ಟದ್ದನ್ನು ಕೋಣೂರು ಅತ್ತೆಮ್ಮನಿಗೆ ಒಪ್ಪಿಸುವಂತೆ "ಬಾಆಆವ!" ಎಂದಿದ್ದಳು, ಕೀಚಲು ಧ್ವನಿಯಲ್ಲಿ, ದೀರ್ಘವಾಗಿ!.

ಅಲ್ಲಿಗೆ ಪೂರೈಸಿತ್ತು, ಅಂದು ಹೂವಳ್ಳಿಯ ಆ ಮಾಣಿಗೆ ಒಳಗೆ ನಡೆದಿದ್ದ ಮುಗ್ಧ ಘಟನೆ. ಚಿನ್ನಮ್ಮನ ಅಜ್ಜಿಯಾಗಲಿ ಕೋಣೂರಿನ ಕಾಗಿನಹಳ್ಳಿ ಅಮ್ಮನಾಗಲಿ ಹುಡುಗಿ 'ಅವರು!' 'ಅವರು!' ಎಂದು ಹೇಳಿದ್ದ ಆ ಉತ್ತರ ರೂಪದ ಮಾತಿನಲ್ಲಿ ಯಾವ ವಿಶೇಷವನ್ನೂ ಕಂಡಿರಲಿಲ್ಲ. ಅವನು ಆ ಉತ್ತರದಲ್ಲಿ ಚಿಕ್ಕಮಕ್ಕಳ ತೊದಲುನುಡಿಯ ಪರಿಹಾಸ್ಯವನ್ನಲ್ಲದೆ ಬೇರೆ ಏನನ್ನೂ ಗಮನಿಸಿರಲಿಲ್ಲ. ಗಮನಿಸುವುದಕ್ಕೆ ತಾನೆ ಅಲ್ಲಿ ಏನಿತ್ತು? ಚಿನ್ನಮ್ಮ ತನ್ನ ಅಜ್ಜಿಯ ಸಲಹೆಯನ್ನು ಸಂಪೂರ್ಣವಾಗಿ ಅನುಮೋದಿಸಿದವಳಂತೆ 'ಬಾಆಆವ'! ಎಂದವಳೆ, ಅತ್ತೆಮ್ಮ ಕೊಟ್ಟಿದ್ದ ಕೊಬರಿ ಬೆಲ್ಲಗಳ ಯೋಗಕ್ಷೇಮ ವಿಚಾರಣೆಗೆ ತೊಡಗಿದ್ದಳು! ಮುಕುಂದ ಸ್ವಲ್ಪ ಹೊತ್ತು ಕುಳಿತಿದ್ದು, ದೊಡ್ಡವರು ಆಡಿಕೊಳ್ಳುತ್ತಿದ್ದ ಸಂವಾದಕ್ಕೆ ಬೇಸರಗೊಂಡು ಆಕಳಿಸಿ ಮೇಲೆದ್ದು, ಕಣ್ಣು ಸನ್ನೆಯಿಂದಲೆ ತನ್ನ ಹೊಸ ಪರಿಚಯದ 'ಚಿನ್ನಿಗೆ' ತನ್ನನ್ನು ಹಿಂಬಾಲಿಸುವಂತೆ ಸೂಚನೆ ಕೊಟ್ಟು, ಹೊರ ಅಂಗಳಕ್ಕೆ ಹೋಗಿದ್ದನು. ಕೊಬರಿ ಬೆಲ್ಲದ ಲಾಲಾಜಲ ಮಿಶ್ರವಾದ ಅಂಟುರುಚಿಯನ್ನು ನಾಲಗೆಗೆಂತೋ ಅಂತೆ ತುಟಿ ಕೆನ್ನೆ ಗಲ್ಲಗಳಿಗೂ ಹಂಚುತ್ತಾ, ಚಿನ್ನಮ್ಮನೂ ಎದ್ದು ಮುಕುಂದ ಬಾವನನ್ನು ಅನುಸರಿಸಿದ್ದಳು, ಸದೆಯ ನಡುವೆ ಸೆಗಣಿಗುಪ್ಪೆಯನ್ನು ಕೆದರಿ ಕೆದರಿ ತನ್ನ ಹೂಮರಿಗಳಿಗೆ ಹುಳುವುಣಿಸಿ ಆಡುತ್ತಿದ್ದ ಹೇಟೆಯನ್ನು ಮಾತನಾಡಿಸುವುದಕ್ಕಾಗಿ!

ಆದರೆ ಆ ಘಟನೆ ವಾಸ್ತವವಾಗಿ ಮುಗ್ಧವಾದದ್ದಾಗಿರಲಿಲ್ಲ. ಅಲ್ಲಿದ್ದವರ ಪ್ರಜ್ಞೆಗೆ ಅದು ಸಂಪೂರ್ಣವಾಗಿ ಅಗೋಚರವಾಗಿದ್ದರೂ ಅದ್ಭುತದ ಭೂಮಿಕೆಗೆ ಸೇರಿದುದಾಗಿತ್ತು. ಕಾಗಿನಹಳ್ಳಿ ಅಮ್ಮ 'ಇಂವ ಯಾರು? ಹೇಳು, ನೋಡಾನ?' ಎಂದು ಮುದ್ದಿಗಾಗಿ ಪ್ರಶ್ನಿಸಿದಾಗ ಚಿನ್ನಮ್ಮ ಮುಕುಂದಯ್ಯನನ್ನು ನೋಡತೊಡಗಿದ್ದಳು. ಮಕ್ಕಳಿಬ್ಬರ ಕಣ್ಣುಗಳೂ ಸಂಧಿಸಿದೊಡನೆಯೆ ಆ ಒಂದು ಕ್ಷಣದಲ್ಲಿ ಒಂದು ಅತೀಂದ್ರಿಯ ವ್ಯಾಪಾರ ನಡೆದಿತ್ತು: ಚಿಕ್ಕ ಮಗು ಚಿನ್ನಮ್ಮ ಹುಡುಗ ಮುಕುಂದಯ್ಯನಲ್ಲಿ ತನ್ನ ಹಿಂದಿನ ಜನ್ಮದ ಗಂಡನನ್ನು ಕಂಡಿದ್ದಳು! ಆ ಅನುಭವ ನೆನಪಿನ ರೂಪದ್ದಾಗಿಯೂ ಇರಲಿಲ್ಲ, ಅದೊಂದು ಕಾಣುವಿಕೆಯಾಗಿತ್ತು. ಆ ಒಂದು ಕ್ಷಣದರ್ಶನದಲ್ಲಿ ಚಿನ್ನಮ್ಮ ತಾನೂ ಮುಕುಂದಯ್ಯನೂ ತಮ್ಮ ಹಿಂದಣ ಜನ್ಮದಲ್ಲಿ ದಂಪತಿಗಳಾಗಿದ್ದುದನ್ನು 'ಆಗಿ' 'ಅನುಭವಿಸಿ' 'ಕಂಡಿದ್ದಳು!' ಅವಳು ಆಲೋಚಿಸಿ ಹೇಳಿರಲಿಲ್ಲ; ನೆನೆದೂ ಹೇಳಿರಲಿಲ್ಲ; ಅಪರೋಕ್ಷವಾಗಿ ಆಗಿ ಕಾಣುತ್ತಿದ್ದುದನ್ನೆ 'ಅವರು!' ಎಂದು ಉತ್ತರವಾಗಿ ಹೇಳಿದ್ದಳು. ಅಲ್ಲಿ 'ಅವರು! ಅವರು! ಅಂದರೆ? ಅಂವ ನಿನ್ನ ಬಾವ ಕಣೇ!' ಎಂದ ಮೇಲೆ, ಹುಡುಗಿ ಮತ್ತೆ ತಲೆಯೆತ್ತಿ ನೋಡಿದಾಗ ಅಲ್ಲಿ ಬೇರೆ ಏನೂ ಇರಲಿಲ್ಲ, ಯಾರೂ ಇರಲಿಲ್ಲ. ಕೋಣೂರಿನ ಅತ್ತೆಮ್ಮನ ಮಗ ಪುಟ್ಟ ಹುಡುಗ ಮುಕುಂದಯ್ಯ ಮಾತ್ರ ಇದ್ದ. ತುಸು ನಾಚಿದಂತೆ ತನ್ನನ್ನೆ ನೋಡುತ್ತಾ ಮುಗುಳು ನಗುತ್ತಿದ್ದ: ಒಂದು ಕ್ಷಣಕ್ಕೆ ಮುಂಚೆ ಸ್ಪಷ್ಟವಾಗಿ ಕಂಡದ್ದು, ಆಗ 'ಕಂಡಿದ್ದೆ' ಎಂಬ ಅರಿವಾಗಲಿ ನೆನಪಾಗಲಿ ಲವಲೇಶವೂ ಉಳಿಯದಂತೆ ಅಳಿಸಿ ಹೋಗಿತ್ತು. ಅದು ಎಂದೆಂದೂ ನಡೆಯದೆಯೆ ಇದ್ದಿದ್ದರೆ ಹೇಗೆ ಇರುತ್ತಿತ್ತೊ ಹಾಗೆ ಇತ್ತು. ಒಂದು ಕ್ಷಣಮಾತ್ರಕ್ಕೆ ಈ ಜನ್ಮದ ಮಾಯೆಯ ತೆರೆ ಎದ್ದು ಬಿದ್ದಂತಾಗಿತ್ತು. ಒಂದರೆ ಕ್ಷಣದಲ್ಲಿ ಹಿಂದಿನ ಜನ್ಮದ ಯಾವ ಚಿತ್ರವೊ ಸಂದರ್ಭವೊ ಸನ್ನಿವೇಶವೊ ಘಟನೆಯೊ ಸ್ಮೃತಿಯೊ ಮಿಂಚಿಣುಕಿ ವಿಸ್ಮೃತಿಯ ಕಗ್ಗತ್ತಲೆಯ ಪಾತಾಳ ಪ್ರವೇಶ ಮಾಡಿದಂತಾಗಿತ್ತು.

ತನ್ನ ಓರಗೆಯ ಸಂಗಾತಿಗಳಿಲ್ಲದೆ ದೊಡ್ಡವರೊಡನೆಯೆ ಒಂಟಿಯೆಂಬಂತೆ ಬೆಳೆಯುತ್ತಿದ್ದ ಚೆನ್ನಿಗೆ ಮುಂಕುಂದ ಒಂದು ಅಲಭ್ಯವೂ ಅಪೂರ್ವವೂ ಆಗ ಅನರ್ಘ್ಯ ವಸ್ತುವಾಗಿ ಕಂಡನು. ಆದರೆ ನಿತ್ಯವೂ ನಾಲ್ಕಾರು ಒಡನಾಡಿಗಳೊಡನೆ ಐಗಳ ಮಠದಲ್ಲಿಯೊ ದನ ಮೇಯಿಸುವ ಹಕ್ಕಲಲ್ಲಿಯೊ ಗದ್ದೆಯಲ್ಲಿಯೊ ತೋಟದಲ್ಲಿಯೊ ಕೆಲಸದ ಆಳುಗಳೊಡನೆಯೊ ಇರುತ್ತಿದ್ದ ಮುಕುಂದನಿಗೆ ಚೆನ್ನಮ್ಮನಲ್ಲಿ ಯಾವ ರೀತಿಯ ಕುತೂಹಲವಾಗಲಿ ಆಸಕ್ತಿಯಾಗಲಿ ಹುಟ್ಟಲಿಲ್ಲ. ನೆಂಟರ ಮನೆಗೆ ಬಂದಾಗ ನೆಂಟರ ಮಕ್ಕಳೊಡನೆ ದಾಕ್ಷಿಣ್ಯದಿಂದ ವರ್ತಿಸುವಂತೆ ಮಾತ್ರ ನಡೆದುಕೊಂಡಿದ್ದನು. ಸ್ವಲ್ಪ ಪ್ರಯತ್ನದಿಂದಲೆ ನಡೆದುಕೊಂಡಿದ್ದನು:

ಹೊರ ಅಂಗಳಕ್ಕೆ ತನ್ನನ್ನು ಹಿಂಬಾಲಿಸಿ ಬಂದ ಚೆನ್ನಿ ತನ್ನ ಬಾಯಲ್ಲಿದ್ದ ಕೊಬ್ಬರಿ ಬೆಲ್ಲವನ್ನು ತಿಂದು ಪೂರೈಸಿ, ತುಟಿ ಮೂಗು ಗಲ್ಲಗಳಿಗೆ ಹಿಡಿದ್ದುದನ್ನು ಒರೆಸಿಕೊಳ್ಳಲು ಪರಿಕಾರದ ಮುಂಭಾಗದ ತುದಿಯನ್ನು, ಸ್ವಲ್ಪ ಹೆಚ್ಚಾಗಿಯೆ, ಅಶ್ಲೀಲದ ಮಟ್ಟದವರೆಗೂ, ಎತ್ತಿದಾಗ ತುಸು ಡೊಳ್ಳೇರಿದ್ದ ಹೊಟ್ಟೆಯನ್ನೂ ತೊಡೆಗಳನ್ನೂ ಕಂಡು ಮುಕುಂದನು ಜಿಗುಪ್ಸೆಪಟ್ಟು ಮುಖ ತಿರುಗಿಸಿ 'ಇಸ್ಸಿ ಎಂಥ ಹುಡುಗಿಯಪ್ಪಾ!' ಎಂದುಕೊಂಡಿದ್ದನು ಮನಸ್ಸಿನಲ್ಲಿಯೆ. ತಾನು ತಮ್ಮ ಮನೆಯಲ್ಲಿರುವಾಗ ಸೊಂಟದ ಉಡಿದಾರಕ್ಕೆ ನೇತು ಹಾಕಿ ಕಟ್ಟಿದ್ದ ಲಂಗೋಟಿಯೊಂದು ವಿನಾ ಬೆತ್ತಲೆಯಾಗಿಯೆ ಇರುತ್ತಿದ್ದುದನ್ನು ಅವನು ಅಶ್ಲೀಲವೆಂದು ಭಾವಿಸಿರಲಿಲ್ಲ. 'ಗಂಡು ಹುಡುಗರು' ಸಾಮಾನ್ಯವಾಗಿ ಇರುತ್ತಿದ್ದುದೇ ಹಾಗೆ. ಆದರೆ 'ಹೆಣ್ಣು ಹುಡುಗರು'?

ಅಲ್ಲಿ ಮೇಯುತ್ತಿದ್ದ ಹೇಟೆ ಮತ್ತು ಹೂಮರಿಗಳ ವಿಚಾರವಾಗಿ ಮುಕುಂದ ಬಾವನಿಗೆ ತಿಳಿಸಲು ಕಾತರೆಯಾಗಿ ಚೆನ್ನಿ ಅಕ್ಕರೆಯ ತೊದಲು ನುಡಿಯಲ್ಲಿ 'ಮತ್ತೆ.... ಮತ್ತೆ....ಬಾವ.... ಈ ಹ್ಯಾಂಟೆ ಸುಬ್ಬಿ ಸರಿಪಾಲಿಗೆ ಸಾಕಿದ್ದು.... ನೋಡು.... ನೋಡು.... ನೋಡೀ ಮರಿ.... ಆ ಅರಿಸಿನ ಬಣ್ಣದ್ದು ಇದೆಯಲ್ಲಾ ಅದು.... ಆ ಕೊಕ್ಕಿನ ಹತ್ತಿರ ಕೆಂಪಗಿದೆಯಲ್ಲಾ ಅದು... ಅದು.... ನನಗಂತೆ! ಹೌದು, ಬಾವ, ನನಗಂತೆ!' ಎನ್ನುತ್ತಾ ಬಾವನ ಗಮನವನ್ನು ಸಂಪೂರ್ಣವಾಗಿ ಸೆಳೆಯುವ ಉದ್ದೇಶದಿಂದ ಅವನ ಅಂಗಿಯ ತೋಳನ್ನು ಹಿಡಿದು ಎಳೆಯುತ್ತಿದ್ದಾಗ ಮುಕುಂದನಿಗೆ ದಾಕ್ಷಿಣ್ಯದ ಸಂಯಮವೂ ತಪ್ಪಿಹೋಗಿ 'ಅಂಗೀ ಎಳೀ ಬೇಡೇ!' ಎಂದು ಬಿಡಿಸಿಕೊಂಡಿದ್ದನು.

ಅವನ ಅಂಗಿ ಅಷ್ಟು ಅಮೂಲ್ಯವಾದುದಾಗಿತ್ತು! ಆದರೆ ವಾಸ್ತವವಾಗಿ ಅವನ ಅಂಗಿ ಹೊಸತೂ ಆಗಿರಲಿಲ್ಲ. ಸೊಗಸಿನದೂ ಆಗಿರಲಿಲ್ಲ. ಕಸೆಕಟ್ಟುವುದಕ್ಕೆ ಬದಲಾಗಿ ಗುಂಡಿ ಹಾಕಿತ್ತು ಅಷ್ಟೆ. ಅದರಲ್ಲಿಯೂ ಇರಬೇಕಾದ ಎಲ್ಲಾ ಗುಂಡಿಗಳೂ ಇರಲೂ ಇಲ್ಲ. ಆದ್ದರಿಂದ ಅವನು ಬಾಗಿದಾಗ ಮತ್ತು ಅತ್ತಿತ್ತ ಚಲಿಸಿದಾಗ, ಅಂಗಿಗೂ ಮೈಗೂ ನಡುವೆ ಯಾವ ಉಡುಪೂ ಇಲ್ಲ ಎಂಬುದನ್ನು ನೇರವಾಗಿ ಘೋಷಿಸುವಂತೆ, ಹೊಟ್ಟೆಯ ಸಾಕ್ಷಾತ್ತಾಗಿ ಪ್ರತ್ಯಕ್ಷವಾಗುತ್ತಿತ್ತು.... ಚೆನ್ನಿ ಮುಟ್ಟಿದ ಮಾತ್ರದಿಂದಲೆ ಮೈಲಿಗೆಯಾಗುವಷ್ಟು ಮಡಿಯೂ ಅದಕ್ಕಿರಲಿಲ್ಲ. ಅವನು ಉಟ್ಟಿದ್ದೂ ಒಂದು ಮುಂಡು ಪಂಚೆ; ಅವನ ಮೊಣಕಾಲಿಗಿಂತ ಒಂದು ಅಂಗುಲ ಕೆಳಗಿತ್ತೊ ಏನೊ? ಅದನ್ನು ಅಡ್ಡಪಂಚೆಯನ್ನಾಗಿ ಸುತ್ತಿದ್ದರಿಂದ ಅದು ಆಗಾಗ ಆಯ ತಪ್ಪಿ, ಆಕಳಿಸಿ ಬಾಯಿತೆರೆದಂತಾಗಿ, ಅವನು ಒಳಗೆ ಕಟ್ಟಿದ್ದ ಕೌಪೀನವನ್ನು, ಅದರ ಅಂತಸ್ಥ ಸಮೇತ, ಸಂದೇಹಕ್ಕೆ ಆಸ್ಪದವಿಲ್ಲದಂತೆ ಪ್ರದರ್ಶಿಸುತ್ತಿದ್ದು. ಚೆನ್ನಿ ಪರಿಕಾರ ಎತ್ತಿದ್ದರಿಂದ ಏನೇನು ಅನಾಹುತವಾಯಿತೆಂದು ಭಾವಿಸಿ ಮುಖ ತಿರುಗಿಸಿದ್ದನೊ ಅಂತಹ ಅನಾಹುತ ಇವನ ಪ್ರಯತ್ನವಿಲ್ಲದೆಯೇ ಆಗಾಗ ನಡೆದು ಹೋಗುತ್ತಿದ್ದುದನ್ನು ಗಮನಿಸುವ ಪ್ರಜ್ಞೆ ಚೆನ್ನಿಗೆ ಇರಲಿಲ್ಲವಾದ್ದರಿಂದ ಮುಕುಂದಯ್ಯ ತಾನು ಮರ್ಯಾದಸ್ತ ಎಂದು ಭಾವಿಸಲು ಅನುಕೂಲವಾಗಿತ್ತು.

ಮುಕುಂದ ಅನಾಸಕ್ತಿ ತೋಡಿದಷ್ಟೂ ಚೆನ್ನಿಗೆ ಅವನಲ್ಲಿ ಆಸಕ್ತಿ ಹೆಚ್ಚುತ್ತಿತ್ತು. ಅವನು ಉದಾಸೀನನಾಗುತ್ತಿದ್ದುದನ್ನು ಇವಳು ಗಮನಕ್ಕೆ ಸ್ವಲ್ಪವೂ ತೆಗೆದುಕೊಳ್ಳಲಾರದವಳಾಗಿದ್ದಳು. ಅವನ ತಿರಸ್ಕಾರದ ಮಾತುಗಳನ್ನೂ ಅಂಗ ಭಂಗಿಯನ್ನೂ ಇವಳು ಅವನ ಆದರದ ಚರ್ಯೆಗಳೆಂದೇ ತಿಳಿದು ನಡೆಯತೊಡಗಿದಳು. ಅವನು ಹೋದಲ್ಲಿ ಹೋದಳು; ನಿಂತಲ್ಲಿ ನಿಂತಳು; ಕುಳಿತಲ್ಲಿ ಅವನ ಪಕ್ಕದಲ್ಲಿಯೆ ಮೈ ಮುಟ್ಟುವಂತೆ ಕುಳಿತಳು. ಅವನು ತುಸುದೂರ ಸರಿದರೂ ಇವಳೂ ಸರಿದಳು ಹತ್ತಿರಕ್ಕೆ! ಕಡೆಗೆ, ಮುಕುಂದ 'ಬೆಪ್ಪು ಹುಡುಗಿ' ಎಂದುಕೊಂಡು ಅವಳನ್ನು ಸಹಿಸಿಯೆ ಸೋಲಬೇಕಾಯಿತು.

ಆ ದಿನ ರಾತ್ರಿ ಚೆನ್ನಮ್ಮ ಹಟತೊಟ್ಟು ತನ್ನ ಅಜ್ಜಿಗೂ ಕಾಗಿನಹಳ್ಳಿ ಅಮ್ಮಗೂ ನಡುವೆ ಮುಕುಂದನ ಒತ್ತಿನಲ್ಲಿಯೆ ಮಲಗಿದಳು. ಬೆಳಗಾದೊಡನೆಯೆ ತನಗಿಂತಲೂ ಮೊದಲೆ ಎದ್ದು ಹೋಗಿದ್ದ ಮುಕುಂದನನ್ನು ಅರಸಿ ಅಳತೊಡಗಿದ್ದಳು. ಮುಕುಂದ ತನ್ನ ಅಮ್ಮನೊಡನೆ ಕೋಣೂರಿಗೆ ಹೊರಟು ನಿಂತಾಗಲಂತೂ 'ನಾನೂ ಬತ್ತೀನಿ' ಎಂದು ಬಿಕ್ಕಿ ಬಿಕ್ಕಿ ಅತ್ತು ರಂಪಮಾಡಿದ್ದಳು. ಅವಳನ್ನು ಸಮಾಧಾನ ಮಾಡಬೇಕಾದರೆ ಅಜ್ಜಿಗೆ ಹರ್ಮಾಗಾಲವಾಗಿತ್ತು. 'ನಾಳೆ ನಿನ್ನ ಅಪ್ಪಯ್ಯನ್ನ ಕೇಳಿ, ನಾನೂ ನೀನೂ ಮುಕುಂದ ಬಾವನ ಮನೆಗೆ ಹೋಗಾನ.... ನಿನ್ನ ಅಪ್ಪಯ್ಯನ ಕೇಳದ ನೀ ಹೋದ್ರೆ, ನಿನ್ನ ಚಮಡ ಸುಲದು ಬಿಡ್ತಾನೆ' ಎಂದೆಲ್ಲಾ ಹೇಳ, ಹೆದರಿಸಿ, ಆಸೆ ತೋರಿಸಿ ಮೊಮ್ಮಗಳನ್ನು ಸುಮ್ಮನಿರಿಸಿದ್ದಳು.

ಮುಕುಂದ ಬಂದು ಹೋದಮೇಲೆ ಚೆನ್ನಮ್ಮ ದಿನವೂ ಅಜ್ಜಿಯನ್ನು ಕೇಳತೊಡಗಿದಳು, 'ಯಾವತ್ತು ಹೋಗಾದು?' 'ಯಾವತ್ತು ಹೋಗಾದು?' ಎಂದು. ಮೊದಮೊದಲು ಅಜ್ಜಿ 'ನಾಳೆ ಹೋಗಾನ' 'ಇನ್ನೊಂದೆರಡು ದಿನದಲ್ಲಿ ಹೋಗಾನ' ಎಂದೆಲ್ಲ ನೆವ ಹೇಳಿ ದಿನ ತಳ್ಳಿದಳು. ಕಡೆಗೊಂದು ದಿನ ತಾಳ್ಮೆ ತಪ್ಪಿ 'ಏ ಸುಮ್ಮನಿರೆ! ಬಾಳ ದಿನ ಬಿಟ್ಟಿದ್ದೋರು ಗಂಡನ ಮನೆಗೆ ಹೋಗಾಕೆ ಗ್ವಾಗರೆಯೋ ಹಾಂಗೆ ಮಾಡ್ತೀಯಲ್ಲ! ನಿನ್ನೇನು ಅವಂಗೆ ಮದೇ ಮಾಡಿ ಕೊಟ್ಟಾರಾ?' ಎಂದು ಸಿಡುಕಿದಳು. ಹುಡುಗಿಗೆ ಅಜ್ಜಿಯ ಮಾತಿನ ಅರ್ಥವಾಗದಿದ್ದರೂ ಏನೋ ಭಾಸವಾದ ಹಾಗಾಗಿ, ಅಜ್ಜಿಗೆ ಸಿಟ್ಟು ಬಂದಿದೆ ಎಂದು ಸುಮ್ಮನಾಗಿದ್ದಳು.

ಒಂದೆರಡು ದಿನದ ಮೇಲೆ ಅಜ್ಜಿ ಊಟಮಾಡಿ, ಜಗಲಿಯ ಕೆಸರ್ಹಲಗೆಯ ಮೇಲೆ ಎಲೆಯಡಿಕೆ ಬುಟ್ಟಿ ಇಟ್ಟುಕೊಂಡು, ಅಡಕ್ಕತ್ತರಿಯಿಂದ ಅಡಕೆ ಚೂರು ಮಾಡುತ್ತಿದ್ದಾಗ, ಚೆನ್ನಿ ಪಕ್ಕದಲ್ಲಿ ಕೂತು ಬುಟ್ಟಿಯಿಂದ ಸುಣ್ಣದ ಡಬ್ಬಿಯನ್ನು ತೆಗೆದು ಎಲೆಗೆ ಸುಣ್ಣ ಹಚ್ಚಲು ಶುರುಮಾಡುತ್ತಿದ್ದಳು. 'ಅಯ್ಯಯ್ಯೋ ಸುಣ್ಣ ಸುಡ್ತದೆ ಕಣೇ! ಸುಮ್ಮನಿರಬಾರ್ದೇನೆ?' ಎಂದು ಅದನ್ನು ಕಸಿದಿಟ್ಟು 'ನಿನ್ನ ಉಪಟಳ ಹೆಚ್ಚಾಯ್ತು' ಎಂದಳು.

ಚೆನ್ನಮ್ಮ ಸ್ವಲ್ಪ ಹೊತ್ತು ಸುಮ್ಮನೆ ಕೂತಳು. ಏನನ್ನೊ ದೀರ್ಘವಾಗಿ ಆಲೋಚಿಸುವವರಂತೆ. ಮತ್ತೆ ಕರೆದಳು.

"ಅಜ್ಜೀ."

"ಏನೇ" ಎಲೆಅಡಿಕೆ ಜಗಿಯುತ್ತಿದ್ದ ಅಜ್ಜಿ ಕೇಳಿದಳು.

"ಮತ್ತೇ...ಮತ್ತೇ....ಮತ್ತೇ...."

“ಎಂಥದೇ ಮತ್ತೇ ಮತ್ತೇ ಮತ್ತೇ?

“ಯಾವಾಗ ಮದೇ ಮಾಡಿ ಕೊಡ್ತೀಯ, ಅಜ್ಜಿ?”

“ಯಾರಿಗೇ ಮದೇ ಮಾಡಾದು?”

“ಮತ್ತೆ ಮನ್ನೆ ನೀನೆ ಹೇಳ್ದೇ!”

“ಏನು ಹೇಳಿದ್ನೇ?”

“ಮತ್ತೆ…. ನನ್ನ…. ನನ್ನ ಮದೇ ಮಾಡಿ ಕೊಡ್ತೀನಿ ಅಂದೇ, ಅವರ ಮನೀಗೆ ಹೋಗಾಕೆ?”

“ಥೂ ನಿನ್ನ! ಹಾಂಗೆಲ್ಲಾ ಹೇಳಬ್ಯಾಡೇ! ಅಯ್ಯೋ ನಿನ್ನ ಬಿರುಗು ಮಗಳೇ….! ಅವರ ಮನೀಗೆ ಹೋಗಾಕೆ ನಿನ್ನ ಮದೇ ಬೇರೆ ಆಗಬೇಕಾ?”

ಮುದುಕಿ ಕಿಸಕ್ಕನೆ ನಕ್ಕ ಹೊಡೆತಕ್ಕೆ ಎಲೆಯಡಿಕೆಯ ಕೆಂಪು ಉಗುಳು ಹಾಕಿ ಚೆನ್ನಮ್ಮನ ಮುಖಕ್ಕೂ ಸಿಡಿಯಿತು. ಅಜ್ಜಿ ಒಡನೆಯ ಅಮಂಗಳ ಪರಿಹಾರಾರ್ಥವಾಗಿ ‘ಒಳ್ತು! ಒಳ್ತು! ಎಂದು ತನ್ನ ಸೀರೆ ಸೆರಗಿನಿಂದ ಮೊಮ್ಮಗಳ ಮೋರೆಯನ್ನು ಒರಸಿ ಮುದ್ದಿಸಿದ್ದಳು.

ಅಂತೂ ಕೊನೆಗೆ ಒಂದು ದಿನ ಅಪರಾಹ್ನ ಅಜ್ಜಿ ಮೊಮ್ಮಗಳ ನೆತ್ತಿಗೆ ಹರಳೆಣ್ಣೆ ಹಾಕಿ, ತಲೆಬಾಚಿ, ಮೋಟು ಜಡೆ ಹಾಕಿ, ಗೊರಟೆ ಹೂ ಕಟ್ಟಿ ಮುಡಿಸಿ, ಇದ್ದುದರಲ್ಲಿ ಒಂದು ಅಚ್ಚುಕಟ್ಟಿನ ಪರಿಕಾರ ಹಾಕಿ, ನೆಂಟರ ಮನೆಗೆ ಅವಳನ್ನು ಕರೆದುಕೊಂಡು ಹೋಗಲು ಸಿದ್ಧಮಾಡಿದಳು. ಚೆನ್ನಮ್ಮನ ಹೃದಯ ಹಿಗ್ಗನ್ನು ಅಳೆಯುವವರಾರು? ಅಜ್ಜಿ ಬಿಸಿಲಿಳಿದ ಮೇಳೆ ಹೊರಡೋಣ ಎಂದಿದ್ದಳು. ಚೆನ್ನಮ್ಮ ಗಳಿಗೆಗಳಿಗೆಗೂ ಅಜ್ಜಿಯ ಬಳಿಗೋಡಿ ‘ಬಿಸಿಲಿಳಿದಾಯ್ತುಅಜ್ಜೀ!’ ಎನ್ನುತ್ತಿದ್ದಳು. ಮುದುಕಿ ಹೊರಗೆ ನೋಡಿ “ಏ, ಇನ್ನೂ ಇಳಿಲಿಲ್ಲ ಕಣೇ? ಮಾಡಿನ ನೆಳ್ಳು  ತುಳಸೀಕಟ್ಟೆ ದಾಟಿ, ತೆಣೇ ಹತ್ರ ಬಂದ ಮ್ಯಾಲೆ ಹೊರಡಾನೆ” ಎಂದಿದ್ದಳು. ಚೆನ್ನಮ್ಮ ತೆಣೆಯ ಮೇಲೆ ಕೂತುಕೊಂಡು ಮಾಡಿನ ನೆರಳು ತುಳಸಿಯ ಕಟ್ಟೆಯನ್ನು ದಾಟಿ ತೆಣೆಯ ಹತ್ತಿರಕ್ಕೆ ಬರುವುದನ್ನೇ ಕಾಯುತ್ತಾ ಕುಳಿತಳು” ಏನು ನಿಧಾನ ಈ ನೆರಳಿನ ಚಲನೆ! ಸ್ವಲ್ಪ ಬೇಗ ಬೇಗ ಬರಬಾರದೇ? ನೆರಳನ್ನು ಸ್ವಲ್ಪ ಎಳೆದು ತೆಣೆ ಹತ್ತಿರಕ್ಕೆ ಸರಿಸೋಣವೇ ಎನ್ನಿಸಿತು ಅವಳಿಗೆ. ಆದರೆ ಅದನ್ನು ಎಲ್ಲಿಂದ ಹಿಡಿದು ಎಳೆಯಬೇಕೋ ಗೊತ್ತಾಗಲಿಲ್ಲ ಅವಳಿಗೆ.

ಕಡೆಗೆ ಕಾದು ಕಾದು ಸಾಕಾಗಿ, ಓಡಿ ಬಂದು “ಅಜ್ಜೀ, ಅಜ್ಜೀ, ನೆಳ್ಳು ತೆಣೇನೆಲ್ಲಾ ದಾಟಿ ಬಂದು ಬಿಡ್ತು!” ಎಂದು ಕೂಗಿಕೊಂಡಳು.

ಅಜ್ಜಿ ನಗುತ್ತಾ “ಹಂಗಾರೆ ಬಂದುಬಿಟ್ಟೆ. ಹೊಗಾನ ನಡಿ” ಎಂದಳು. ನರಳು ತುಳಸೀಕಟ್ಟೆಯನ್ನೇನೋ ದಾಟಿತ್ತು. ಆದರೆ ತೆಣೆಯ ಹತ್ತಿರಕ್ಕೆ ಬರಬೇಕಾದರೆ ಇನ್ನೂ ಅರ್ಧಗಂಟೆಯಾದರೂ ಬೇಕಾಗಿತ್ತು.

ಅದನ್ನು ನೋಡಿ ಹೊರಡಲನುವಾಗಿ ಬಂದ ಅಜ್ಜಿ “ಎಲ್ಲೇ? ಸುಳ್ಳೇ ಹೇಳ್ತೀಯಲ್ಲಾ! ತೆಣೆಹತ್ರಾನೆ ಬಂದಿಲ್ಲ ಇನ್ನೂ!” ಎಂದಳು.

“ಆವಾಗ ಬಂದಿತ್ತು, ಅಜ್ಜೀ! ಇವಾಗ ಮತ್ತೆ ಹಿಂದೆ ಬಂದದೆ ಕಳ್ಳ ನೆಳ್ಳು!” ಎಂದಳು ಮೊಮ್ಮಗಳು. ಅಂತೂ, ಕೊನೆಗೂ, ನೆರಳು ತೆಣೆಯ ಹತ್ತಿರಕ್ಕೆ ಬರುವ ಖಗೋಲ ಭೂಗೋಲದ ಮಹದ್ ಘಟನೆಗೆ ಕಾಯದೆ, ಅಜ್ಜಿ ಮೊಮ್ಮಗಳಿಬ್ಬರೂ ಹೂವಳ್ಳಿಯಿಂದ ಕೋಣೂರಿಗೆ ಹೋಗುವ ಕಾಲುಹಾದಿ ಹಿಡಿದಿದ್ದರು.

* * *

“ಅಜ್ಜೀ, ನೀನೇನು ಮೆಲ್ಲಗೆ ನಡೀತೀಯಾ?.... ಬಿರಬಿರನೆ ಬಾ!”

“ಯಾಕೇ ಹಂಗ ಓಡ್ತೀಯೇ? ಏನು ಅವಸರಾನೆ ನಿಂಗೆ?”

“ಕತ್ತಲಾಗಿಬಿಟ್ಟರೆ?”

“ಕತ್ತಲೂ ಆಗಾದಿಲ್ಲ ಗುತ್ತಲೂ ಆಗಾದಿಲ್ಲ! ಮೆಲ್ಲಗೆ ನಡಿ! ಎಡವಿ ಗಿಡವಿ ಬಿದ್ದೀಯ. ಹಾದಿ ನೋಡ್ಕಂಡ ನಡಿ. ಮುಳ್‌ಗಿಳ್ ಮುಟ್ಟೀಯ?”

“ನಾ ಮುಂದೆ ಹೋಗ್ತಾ ಇರ್ತೀನಿ, ನೀ ಮೆಲ್ಲಗೆ ಬಾ!”

“ಬ್ಯಾಡಾ ಕಣೇ, ದಾರೀ ತಪ್ಪಿ ಕಾಡುಹಾದಿ ಹಿಡ್ದೀಯಾ?”

“ಏನಿಲ್ಲ: ನಂಗೊತ್ತು ಹಾದಿ!”

“ನಿಂಗೆ ಹೆಂಗೆ ಗೊತ್ತೇ ಆ ಹಾದಿ? ನಿಲ್ತೀಯೊ ಇಲ್ಲೊ?”

“ನಾನು ಅವ್ವನ ಜೊತೇಲಿ ಹೋಗಿದ್ದೆ.”

“ಸುಳ್ಳು ಬುರುಕಿ! ನಿನ್ನ ಅವ್ವಗೆ ಹಾಂಗೆಲ್ಲ ನೆಂಟರ ಮನೆಗೆ ಹೋಗೋ ಪುಣ್ಯ ಎಲ್ಲಿತ್ತೇ?” ಎಂದಳು ಮುದುಕಿ ನಿಟ್ಟುಸಿರು ಬಿಟ್ಟು “ತವರು ಮನೆಗೆ ಹೋಗಾಕೇ ನಿನ್ನ ಅಪ್ಪ ಬಿಡ್ತಿರಲಿಲ್ಲ. ಇನ್ನು ನೆಂಟರ ಮನೆಗೆ ಹೋಗಿದ್ಲಂತೆ, ಇವಳು, ಅವ್ವನ ಜೊತೇಲಿ?”

ಅಜ್ಜಿಯ ಅಳುದನಿಗೇಳಿ ಮೊಮ್ಮಗಳು ನಿಂತು ಹಿಂತಿರುಗಿ ನೋಡುತ್ತಾಳೆ: ಅಜ್ಜಿಯ ಕಣ್ಣೀರು ಅವಳ ಸುಕ್ಕುಗೆನ್ನೆಗಳ ಮೇಲೆ ಹರಿಯುತ್ತಿದೆ!

ಚೆನ್ನಮ್ಮ ಓಡಿಹೋಗಿ ಅಜ್ಜಿಯ ಸೊಂಟ ತಬ್ಬಿಕೊಂಡು "ನಾನು ಮುಂದೆ ಹೋಗಾದಿಲ್ಲ, ಅಜ್ಜಿ, ಅಳಬ್ಯಾಡ" ಎಂದು ತಾನೂ ಬಿಕ್ಕತೊಡಗಿದಳು.

"ಅಳಬ್ಯಾಡ, ನನ್ನ ಕಂದ. ನೀನ್ಯಾಕೆ ಅಳ್ತೀಯೆ? ಬಾಳದೆ ಹೋದ ನಿನ್ನ ಅವ್ವನ ನೆನಪಾಯ್ತು. ಅದ್ಕೇ ಕಣ್ಣೀರು ಬಂತು."

ಮೊಮ್ಮಗಳು ಅಜ್ಜಿಯ ಪಕ್ಕದಲ್ಲಿಯೆ ಮೆಲ್ಲಗೆ ನಡೆದಳು. ಸ್ವಲ್ಪ ದೂರ ಕಾಡಿನ ನಡುವೆ ಕುರುಚಲು ಹಳುವಿನ ಕಾಲುದಾರಿಯಲ್ಲಿ ಹೋಗಿದ್ದರು. ಒಂಡೆದೆ ಕವಲಾಗಿದ್ದಲ್ಲಿ ಮುದುಕಿ ಬಲಗಡೆಯ ಸೀಳಿನಲ್ಲಿ ನಡೆಯತೊಡಗಿದ್ದಳು. ಚೆನ್ನಿ "ಅದಲ್ಲಾ, ಅಜ್ಜಿ, ಇಲ್ಲಿ ಬಾ" ಎಂದು ಎಡಗಡೆ ಸೀಳನ್ನು ತೋರಿಸಿದಳು.

ಮುದುಕಿ ಎಚ್ಚತ್ತವಳಂತೆ ನಿಂತು, ನೋಡಿ, ಮೊಮ್ಮಗಳನ್ನು ಮೆಚ್ಚುತ್ತಾ "ಹೌದೆ ಸೈ, ಏನೋ ಯೋಚ್ನೆ ಮಾಡ್ತಿದ್ದೆ ಕಣೇ. ಮರವು ಬಂದುಬಿಡ್ತು. ಅದೂ-ಹಾಡ್ಯಕ್ಕೆ ಹೋಗೋ ದಾರಿ. ದನ ಕಾಯೋರು, ಸೌದೆ ತರೋರು, ದರಗು ಹೊರೋರು ಹೋಗೀ ಬಂದು ಆಗ್ಯದೆ" ಎಂದು ತಿರುಗಿ ಬಂದು ಮೊಮ್ಮಗಳನ್ನು ಕೂಡಿಕೊಂಡಳು. ಎಂದೂ ಅಲ್ಲಿ ತಿರುಗಾಡದಿದ್ದ ಆ ಚಿಕ್ಕ ಹುಡುಗಿಗೆ ದಾರಿಯ ಸರಿ ತಪ್ಪು ಹೇಗೆ ಗೊತ್ತಾಯಿತು ಎಂಬ ಆಲೋಚನೆಯಾಗಲಿ ಪ್ರಶ್ನೆಯಾಗಲಿ ಮುದುಕಿಯ ತಲೆಗೆ ಹೊಳೆಯಲೆ ಇಲ್ಲ.

ಹೊತ್ತು ಆಗಲೆ ಪಡುವಣದ ಕಾಡುಮಲೆಗಳ ನೆತ್ತಿಯಾಚೆ ಇಳಿದಿತ್ತು. ಬೈಗುಗೆಂಪು ಮುಂಗಪ್ಪಿಗೆ ತಿರುಗುತ್ತಿತ್ತು. ಗೂಡಿಗೆ ಗೊತ್ತಿಗೆ ಹಾರಿ ಹೋಗುವ ಹಕ್ಕಿಗಳ ಹಾರಿಂಚರ ಅಡಗತೊಡಗಿತ್ತು. ಗುರಗಿ ಹಳುವಿನಲ್ಲಿ ಜೀರುಂಡೆಗಳ ಜೀರು ಜೀರು ಜೀರೆಂಬ ಕರ್ಕಶ ಧ್ವನಿಗೆ ಪೀಠಿಕೆಯಾಗಿತ್ತು. ಪಶ್ಚಿಮದ ಆಕಾಶದಲ್ಲಿ ಬೆಳ್ಳಿಗೆ ಅಗಲೆ ಹೊಳಪು ಬಂದಿತ್ತು.

ಕೋಣೂರಿನ ಮನೆಗೆ ಸಮೀಪದಲ್ಲಿರುವ ಮಕ್ಕಿಗದ್ದೆಯ ಅಂಚಿನದಾರಿಗೆ ಇವರು ಇಳಿಯುತ್ತಿದ್ದಾಗ ಒಡ್ಡಿಯ ಕೋಳಿಗಳ ಕೂಗೂ ನಾಯಿಗಳ ಬೊಗಳೂ ಮಲೆಯ ಹಳ್ಳಿಯ ಒಂಟಿ ಮನೆಗೆ ಸಹಜವಾದ ಇತರ ಮಾನವ ಮತ್ತು ಪ್ರಾಣಿಗಳು ಸದ್ದೂ ಕೇಳಿಸಿತು. ಆನಂತ ಕುತೂಹಲಗಳಿಂದ ಹಿಗ್ಗಿದ ಚೆನ್ನಮ್ಮ ತನಗೆ ತಾನೆ ಎಂಬಂತೆ ಗಟ್ಟಿಯಾಗಿಯೆ "ಹೋ, ಬಂತಲ್ಲಾ ನಮ್ಮನೆ"! ಎಂದಳು.

"ನಿನ್ನ ಮನೆಯೇನೇ? ನಿನ್ನ ಮುಕುಂದ ಬಾವನ ಮನೆ ಕಣೇ!" ಎಂದು ತಿದ್ದಿದಳು ಅಜ್ಜಿ.

ತಪ್ಪೊಪ್ಪಿಕೊಂಡು ತಿದ್ದಿಕೊಳ್ಳುವಂತೆ ಚೆನ್ನಮ್ಮ "ಹೌದು, ಇದೇ ಮುಕುಂದ ಬಾವನ ಮನೆ!" ಎಂದಳು, ಹಿಂದೆ ಎಂದೋ ನೋಡಿದ್ದನ್ನು ಬಹುಕಾಲದ ಮೇಲೆ ಮತ್ತೆ ಗುರುತಿಸುವವಳಂತೆ!".

* * *

ಅಂದಿನಿಂದ ತಿಂಗಳು ಎರಡು ತಿಂಗಳಿಗಾದರೂ ಒಮ್ಮೆ ಚೆನ್ನಮ್ಮ ಅಜ್ಜಿಯನ್ನು ಕಾಡಿಸಿ ಕೋಣೂರಿಗೆ ಹೋಗಿಬರತೊಡಗಿದಳು. ಮುಕುಂದಯ್ಯನೂ ತನ್ನ ತಾಯೊಯೊಡನಾಗಲಿ, ಅತ್ತಿಗೆಯೊಡನಾಗಲಿ, ಅಪೂರ್ವವಾಗಿ ಅಣ್ಣನೊಡಲಾಗಲಿ, ಆಗಾಗ ಹೂವಳ್ಳಿ ಹೋಗಿ ಒಂದೆರಡು ದಿನ ಇದ್ದು ಬರುತ್ತಿದ್ದನು.

ಚೆನ್ನಮ್ಮ ಒಂದೊಂದು ಸಲವೂ ಕೋಣೂರಿಗೆ ಬಂದಾಗಲೆಲ್ಲಾ ಮುಕುಂದ ಬಾವನೊಡನೆ ಏನಾದರೂ ಹೊಸ ಅನುಭವದಲ್ಲಿ ಅಥವಾ ಹೊಸ ಸಾಹಸದಲ್ಲಿ ಬಾಗಿಯಾಗುತ್ತಿದ್ದಳು. ಅವಳು ಆ ಮನೆಗೂ ಅದರ ಸುತ್ತಣ ಸ್ಥಾನಗಳಿಗೂ, ಮೊದಲನೆಯ ಸಾರಿ ಬಂದಾಗಲೆ, ಪರಿಚಿತಳೆಂಬಂತೆ ಹೊಂದಿಕೊಂಡು ಸಲೀಸಾಗಿ ತಿರುಗಾಡುತ್ತಿದ್ದುದನ್ನು ಕಂಡು ಹಿರಿಯರೂ ಆಶ್ಚರ್ಯಪಟ್ಟಿದ್ದರು. 'ಚುರುಕು ಹುಡುಗಿ' 'ಚಾಲೂಕಿನ ಹುಡುಗಿ' 'ಧೈರ್ಯಗಾತಿ' ಎಂದೆಲ್ಲ ಪ್ರಶಂಸಿಸಿದ್ದರು.

ಮೊದಮೊದಲು ಮುಕುಂದಯ್ಯ ಐಗಳ ಮಠದಲ್ಲಿ ತನ್ನೊಡನೆ ಕಲಿಯುತ್ತಿದ್ದ ಇತರ ಗಂಡು ಮಕ್ಕಳ ಮುಂದೆ ಚೆನ್ನಿಯನ್ನು ಆಟಕ್ಕೆ ಸೇರಿಸಿ ಕೊಳ್ಳಲು ಹಿಂಜರಿಯುತ್ತಿದ್ದನು. ಆದರೆ ಚೆನ್ನಿಯೆ ಮುಂದುವರಿದು ಅವನ ಲಜ್ಜಾ ದಾಕ್ಷಿಣ್ಯಗಳನ್ನೆಲ್ಲ ತೊಡೆದುಹಾಕಿದ್ದಳು. ಬರಬರುತ್ತಾ ಅವಳು ಹುಡುಗಿ ಎಂಬ ಭೇದಭಾವವನ್ನೆ ಮರೆತು ಹೋದಂತೆ ವರ್ತಿಸಿ ದೊಡ್ಡವರಿಂದ ಬಯ್ಯಿಸಿಕೊಂಡಿದ್ದನು.

ಒಮ್ಮೆ ಮನೆಗೆ ಸಮೀಪದಲ್ಲಿ ಹರಿಯುತ್ತಿದ್ದ ಕೋಡ್ಲು ಹಳ್ಳದ ಗುಂಡಿಯಲ್ಲಿ, ಒಂದು ಹಲಗೆ ತೆಪ್ಪ ಮಾಡಿ, ಚೆನ್ನಿಯನ್ನೂ ಹತ್ತುವಂತೆ ಧೈರ್ಯ ಹೇಳಿ ಪ್ರೇರೇಪಿಸಿದ್ದನು. ಆದರೆ ಗಳುವಿನ ಹುಟ್ಟಿನಿಂದ ಹಲಗೆಯನ್ನು ದಡದಿಂದ ತಳ್ಳಿ ತುಸು ದೂರ ಹೋಗುವುದರೊಳಗಾಗಿ ಹಲಗೆ ತಲೆಕೆಳಗಾಗಿತ್ತು. ಅಲ್ಲಿಯೆ ದನ ಬಿಟ್ಟುಕೊಂಡಿದ್ದ ಬೈರ ಓಡಿಬಂದು ನೀರಿಗಿಳಿದು ಆಗುತ್ತಿದ್ದ ಅನಾಹುತವನ್ನು ತಪ್ಪಿಸಿದ್ದನು.

ಆದರೆ ಚೆನ್ನಮ್ಮನ ಪರಿಕಾರವೆಲ್ಲ ಒದ್ದೆಯ ಮುದ್ದೆಯಾಗಿ, ಮೂಗಿಗೂ ನೀರು ನುಗ್ಗಿತ್ತು. ಈಜಲು ಬರುತ್ತಿದ್ದ ಮುಕುಂದ ಮತ್ತು ಅವನ ಜೊತೆಗಾರರು ತಮ್ಮ ಬಟ್ಟೆಗಳನ್ನೆಲ್ಲ ದಡದಮೇಲಿಟ್ಟು ಕೌಪೀನ ಮಾತ್ರ ಧಾರಿಗಳಾಗಿದ್ದುದರಿಂದ ಬಿಸಿಲಿನಲ್ಲಿ ಮೈ ಆರಿಸಿಕೊಂಡು ಬಟ್ಟೆ ಹಾಕಿಕೊಂಡಿದ್ದರು. ಅವರು ಅಂತಹ ಅನಾಹುತದಲ್ಲಿ ಭಾಗಿಯಾಗಿದ್ದರು ಎಂದು ಯಾರಿಗೂ ಗೊತ್ತಾಗುವಂತಿರಲಿಲ್ಲ. ಆದರೆ ಚೆನ್ನಮ್ಮನ ಅವಸ್ಥೆ ದಾರುಣವಾಗಿತ್ತು. ಪರಿಕಾರ ಬಿಚ್ಚಿ ಬಿಸಿಲಿಗೆ ಹರಡಿದರೆ ಬತ್ತಲೆ ಇರುವುದು ಹೇಗೆ? ಅವರೆಲ್ಲರೂ ಇರುವಾಗ? ಬಿಚ್ಚಿ ಹರಡಿದ್ದರೆ, ಚಳಿಗೆ ನಡ ನಡ ನಡುಗಬೇಕಿತ್ತು. ಇನ್ನು ಶೀತ ಜ್ವರ ಬೇರೆ ಬಂದು ದೊಡ್ಡ ಪುಕಾರಾಗುತ್ತಿತ್ತು. ಮನೆಗೆ ಓಡಿ ಹೋಗಿ ಬೇರೆ ಪರಿಕಾರ ತರಬಹುದಿತ್ತು. ಆದರೆ ಅವಿವೇಕ ಎಲ್ಲರಿಗೂ ಗೊತ್ತಾಗಿ ತಕ್ಕ ಶಾಸ್ತಿಯಾಗದೆ ಇರುತ್ತಿರಲಿಲ್ಲ. ಕಡೆಗೆ ಮುಕುಂದನೇ ಉಪಾಯ ಕಂಡುಹಿಡಿದಿದ್ದನು. ಎಲ್ಲಾ ಹುಡುಗರನ್ನೂ ಬೇರೆ ಕಡೆಗೆ ಕಳಿಸಿ, ಬೈರನಿಗೂ ದೂರ ಹಕ್ಕಲಿಗೆ ದನ ಹೊಡೆದುಕೊಂಡು ಹೋಗಲಿ ಹೇಳಿ, ಬಿಸಿಲು ಚೆನ್ನಾಗಿ ಕಾಯುತ್ತಿದ್ದ ಒಂದು ದೊಡ್ಡ ಪೊದೆಯ ಹಿಂದಣ ಬಯಲು ಸ್ಥಳಕ್ಕೆ ಅವಳನ್ನು ಕರೆದೊಯ್ದು, ತಾನು ಅಲ್ಲಿಯೆ ಆಚೆ, ಚೆನ್ನಮ್ಮನ ಮಾನಕ್ಕೆ ಅಪಚಾರವಾಗದಷ್ಟು ದೂರದಲ್ಲಿ, ಮರೆಯಲ್ಲಿ ಇರುವುದಾಗಿಯೂ, ಚೆನ್ನಮ್ಮ ಏಕಾಂತದಲ್ಲಿ ಪರಿಕಾರ ಬಿಚ್ಚಿ ಹಿಂಡಿ ಹರಡಿ, ಚಳಿಯಾಗದಂತೆಬ ಸಿಲು ಕಾಯಿಸುತ್ತಿದ್ದು, ಒಣಗಿದ ಮೇಲೆ ಅದನ್ನು ಹಾಕಿಕೊಂಡು ತನ್ನನ್ನು ಕರೆಯುವಂತೆಯೂ ಸಲಹೆಕೊಟ್ಟು ಸ್ವಲ್ಪ ದೂರ ಹೋಗಿ, ಒಂದು ಅರಮರಲು ಮಟ್ಟಿನ ಹಿಂದೆ ಕುಳಿತುಕೊಂಡನು.

ಚೆನ್ನಮ್ಮ ಬಾವ ಹೇಳಿದಂತೆ ಮಾಡ, ಬಿಸಿಲು ಕಾಯಿಸುತ್ತಾ ಕುಳಿತಿದ್ದಳು.

ಮಧ್ಯಾಹ್ನದ ಬಿಸಿಲಲ್ಲಿ ಕಾಡೆಲ್ಲ ನಿಃಶಬ್ದವಾಗಿತ್ತು. ಒಂದೆರಡು ಪಿಕಳಾರಗಳು ಇಲಾತಿ ಸೀಗೆಯ ಪೊದೆಯಲ್ಲಿ ಆಗಾಗ ಉಲಿಯುತ್ತಿದ್ದುದೂ ನಿಃಶಬ್ದತೆಯನ್ನು ಹೆಚ್ಚಿಸುವಂತಿತ್ತು. ಗಾಳಿಯ ಸುಳಿವೂ ಅಡಗಿದಂತಿತ್ತು. ಅದು ಬರಿಯ ನಿಃಶಬ್ದತೆ ಆಗಿರದೆ ಅರಣ್ಯದ ಉದ್ದೇಶಪೂರ್ವಕವಾದ ಮೌನವೊ ಎಂಬಂತಿತ್ತು. ತಾನು ಬತ್ತಲೆ ಕುಳಿತಿದ್ದುದನ್ನು ಕಂಡು ಯಾರೊ ಕಿಸಕ್ಕನೆ ಉಕ್ಕಿಬಂದ ನಗುವನ್ನು ತಡೆ ಹಿಡಿದು ಕೊಂಡಿದ್ದಂತೆ ತೋರಿತು ಚೆನ್ನಮ್ಮಗೆ. ಆ ಮೌನಕ್ಕೆ ಕಿವಿಕೊಟ್ಟಳು. ಕಾಡೆಲ್ಲ ಬಿಮ್ಮ್ ಎನ್ನುತ್ತಿತ್ತು. ಏನೋ ಹೆದರಿಕೆಯಾಗತೊಡಗಿತು. ಮುಕುಂದಬಾವ ಎಲ್ಲಿಯಾದರೂ ಹೋಗಿಬಿಟ್ಟರೆ! ಹೋಗಿಯೇ ಬಿಟ್ಟಿದ್ದಾನೆಯೊ ಏನೋ? ಹೋಗಿಯೇ ಬಿಟ್ಟಿರಬೇಕು! ಚೆನ್ನಮ್ಮ ಕೂಗಿಕೊಳ್ಳಬೇಕು ಅನ್ನಿಸಿತು. ಚೆಃ ಅಲ್ಲಿಯೆ ಇದ್ದರೆ? ಏನೆಂದುಕೊಂಡಾನು? ಹಾಗೆಯೆ ಎದೆ ಗಟ್ಟಿ ಮಾಡಿಕೊಂಡು ತುಸು ಹೊತ್ತು ಕಳೆದಳು. ಆದರೆ ತಡೆಯಲಾಗಲಿಲ್ಲ.  ಹೆದರಿಕೆ! ನೋಡೋಣ ಎಂದು ಮೆಲ್ಲಕೆ ಕರೆದಳು.

"ಬಾವಾ!"

"ಇಲ್ಲೇ ಇದ್ದೀನೇ! ಬಟ್ಟೆ ಆರ್ತೇನು? ಹಾಕಿಕೊಂಡೆಯಾ?"

"ಇಲ್ಲ. ಇದ್ದೀಯೋ ಇಲ್ಲೋ ಅಂತ ಕರೆದೆ."

ಮತ್ತೆ ತುಸು ಹೊತ್ತು ನಿಃಶಬ್ದ, ಮೌನ. ಪೊದೆಯಲ್ಲಿ ಏನೊ ಸರ ಸರ ತರಗೆಲೆಗಳ ಮೇಲೆ ಹರಿದಂತೆ ಸದ್ದಾಯಿತು. ಚೆನ್ನಮ್ಮಗೆ ಗಾಬರಿಯಾಯಿತು. ಎದ್ದು ಓಡಿಬಿಡುವಷ್ಟು ಮನಸ್ಸಾಯಿತು. ಕುಳಿತಲ್ಲಿಂದಲೆ ಬಗ್ಗಿ ನೋಡಿದಳು. ಪೊದೆಗಳ ತಳದಲ್ಲಿ ಏನೂ ಕಾಣಿಸಲಿಲ್ಲ. ಹಾವೇ ಇರಬೇಕು; ಅಲ್ಲವೇ? ಅಥವಾ ಹುಲಿಗಿಲಿಯೋ? ಹೊಂಚು ಹಾಕಿ ದನ ಹಿಡಿಯುವುದಂತೆ! ಆ ಯೋಚನೆ ಬಂದಿತೊ ಇಲ್ಲವೊ ಚೆನ್ನಮ್ಮ ಎದ್ದು ನಿಂತಳು. ಸುತ್ತಲೂ ಪೊದೆಗಳ ಹಸುರಲ್ಲದೆ ಬೇರೆ ಯಾರೂ ಕಾಣಿಸಲಿಲ್ಲ. ಅಷ್ಟರಲ್ಲಿ ಓತಿಯೊ ಹಾವುರಾಣಿಯೊ ಗುಡ್ಡದ ಕಪ್ಪೆಯೊ ಅಥವಾ ಯಾವುದಾದರೂ ನೆಲದ ಮೇಲೆ ಓಡಾಡುವ ಹಕ್ಕಿಯೊ ಸರಸರನೆ ಪೊದೆಯಲ್ಲಿ ಓಡಿದಂತಾಯಿತು. ಚೆನ್ನಮ್ಮ ಸ್ವಲ್ಪ ಗಟ್ಟಿಯಾಗಿಯೆ 'ಬಾವ! ಬಾವ!' ಎಂದು ಕೂಗಿ ಕರೆದೇ ಬಿಟ್ಟಳು. ಮುಕುಂದ ಪರಿಕಾರ ಒಣಗಿ ಅದನ್ನು ಹಾಕಿಕೊಂಡೇ ಕರೆಯುತ್ತಿರಬೇಕೆಂದು ಭಾವಿಸಿ, ತುಸು ದಿಗ್ಗನೆ ಎದ್ದು ಓಡಿಯೆ ಬಂದನು.

ನೋಡುತ್ತಾನೆ, ಚೆನ್ನಿ ಬತ್ತಲೆ ನಿಂತಿದ್ದಾಳೆ! ಕಡೆಗೆ ಕುಳಿತೂ ಇಲ್ಲ! ತುಂಬ ಅವಮಾನವಾದಂತಾಗಿ ಮುಖ ತಿರುಗಿಸಿ ನಿಂತು "ಯಾಕೇ ಕರೆದಿದ್ದು, ಪರಿಕಾರ ಒಣಗಾಕೆ ಮುಂಚೆ?" ಎಂದು ಸಿಡುಕಿದನು.

ಚೆನ್ನಿ ಬಿಡಿಬಿಡಿ ಅಕ್ಷರದಲ್ಲಿ ನಿಡುಸ್ವರದಿಂದ ನಾಚುವ ಭಂಗಿಯಲ್ಲಿ ಹೇಳಿದಳು: "ಎಂತದೋ ಸರಸರ ಅನ್ತು, ಮಟ್ಟಿನಲ್ಲಿ. ನಂಗೆ ಹೆದರಿಕೆ ಆಗ್ತದೆ. ಅದ್ಕೇ ಕರೆದೆ…. ನಿಮ್ಮನ್ನ ಬನ್ನಿ ಅಂತಾ ಯಾರು ಹೇಳ್ದೋರು?" ಬಹುವಚನ ಬೇರೆ, ಸಾಲದ್ದಕ್ಕೆ!

ಕೊನೆಯ ಪ್ರಶ್ನೆಗೆ ಮುಕುಂದಯ್ಯ ಸ್ವಲ್ಪ ಕಕ್ಕಾಬಿಕ್ಕಿಯಾಗಿ, ಮತ್ತೆ ತಪ್ಪನ್ನು ತಿದ್ದಿಕೊಳ್ಳುವಂತೆ, ಮೊದಲಿದ್ದ ಜಾಗಕ್ಕೆ ಹೋಗಲು ತಿರುಗಿದನು.

"ಹೋಗಬ್ಯಾಡ, ಇಲ್ಲೇ ಇರು. ನಾನು ಕೂತುಕೊಂಡೇ ಇರ್ತೀನಿ" ಎಂದು ಚಿನ್ನಮ್ಮ, ತಪ್ಪಿ ನಡೆದು ಹೋದುದನ್ನು ಸರಿಪಡಿಸುವಂತೆ, ಮೊಕಾಲುಗಳನ್ನು ಎದೆಗೆ ಅವುಚಿಕೊಂಡು ಮುದುರಿ ಕತಳು. ಇನ್ನೇನು ಮಾಡಲೂ ದಿಕ್ಕು ತೋಚದೆ ಮುಕುಂದಯ್ಯ ಮುಖ ಅತ್ತಕಡೆ ತಿರುಗಿಸಿಕೊಂಡು ಅಲ್ಲಿಯೆ ಕುಳಿತುಬಿಟ್ಟನು.

* * *

ಆದರೆ ಇವರು ಮಾಡಿದ್ದೊಂದೂ ಪ್ರಯೋಜನಕ್ಕೆ ಬರಲಿಲ್ಲ. ಬೈಗಿನ ಹೊತ್ತು ಕರೆಯುವ ಹಟ್ಟಿಗೆ ದನಕಟ್ಟಲು ಹೋಗಿದ್ದ ಬೈರ ಇವರ ಗುಟ್ಟೆಲ್ಲವನ್ನೂ ಬಹಿರಂಗಪಡಿಸಿಬಿಟ್ಟಿದ್ದ; ಇನ್ನೂ ಸ್ವಲ್ಪ ಉಪ್ಪುಕಾರ ಹಚ್ಚಿ, ಸಾಹಸದಲ್ಲಿ ತಾನು ವಹಿಸಿದ್ದ ಪಾತ್ರಕ್ಕೆ ಹೆಚ್ಚು ಪ್ರಾಶಸ್ತ್ಯ ದೊರೆಯುವಂತೆ: ತತ್ಫಲವಾಗಿ ಆವೊತ್ತಿನ ಬತ್ತದ ಪಡಿಯಲ್ಲಿ ಮತ್ತು ಎಲೆಅಡಿಕೆ ಹೊಗೆಸೊಪ್ಪಿನ ಪರಿಮಾಣದಲ್ಲಿ ತಕ್ಕಮಟ್ಟಿನ ವೃದ್ಧಿ ತಲೆದೋರಿತ್ತು. ಅವನ ಪಾಲೇನೊ ಅವನಿಗೆ ದಕ್ಕಿತ್ತು: ಇವರಿಗೆ ಮಾತ್ರ ತಮ್ಮ ಪಾಲಿಂದ ತಪ್ಪಿಸಿಕೊಳ್ಳಲಾಗಿರಲಿಲ್ಲ!

ಮುಕುಂದಯ್ಯ ದೊಡ್ಡವನಾದಂತೆಲ್ಲಾ ಇವರ ಸಾಹಸದ ಸ್ವರೂಪಗಳೂ ಬದಲಾಯಿಸಿದ್ದವು. ಹಕ್ಕಿಗೂಡು ಕಂಡುಹಿಡಿಯುವುದು, ಜೇನು ಕೀಳುವುದು, ಗಾಳ ಹಾಕಿ ಮೀನು ಹಿಡಿಯುವುದು, ಹೊಂಡ ತೋಣಕುವುದು, ಸೆಬೆ ಒಡ್ಡಿ ಕಾಡುಕೋಳಿ, ಚಿಟ್ಟುಕೋಳ ಹಿಡಿಯುವುದು ಇತ್ಯಾದಿ ಇತ್ಯಾದಿ.

ಒಮ್ಮೆ ಕೆಲವು ವರುಷಗಳ ಅನಂತರ ಇದ್ದಕ್ಕಿದ್ದಂತೆ ಒಂದು ದಿನ ಅಜ್ಜಿ ಚಿನ್ನಮ್ಮನಿಗೆ ಪರಿಕಾರ ಬಿಡಿಸಿ ಕಿರಿಗೆ ಉಡಿಸಿದ್ದಳು. ಚಿನ್ನಮ್ಮಗೆ ಏನೊ ಒಂದು ತರಹದ ಕಿನಸಿಗೆಯಾಗಿ ಒಂದೆರಡು ಸಾರಿ ಕಿರಿಗೆಯಿಂದ ಪರಿಕಾರಕ್ಕೆ ಪುನಃ ದಾಟಿದ್ದಳು. ಆದರೆ ಅಜ್ಜಿ ನಾನಿನ್ನು ಚಿಕ್ಕಹುಡುಗಿಯಲ್ಲ, ಸಣ್ಣ ಹೆಂಗಸು ಎಂಬ ವಿಚಾರವನ್ನು ಸೂಕ್ಷ್ಮವಾಗಿ ತಿಳಿಸಿದ್ದಳು; ತನ್ನ ಅಂಗೋಪಾಂಗಗಳ ರಚನೆಯಲ್ಲಿಯೂ ಮನೋಭಾವಗಳಲ್ಲಿಯೂ ವ್ಯತ್ಯಾಸಗಳಾಗುತ್ತಿದ್ದುದನ್ನು ಚಿನ್ನಮ್ಮ ಗಮನಿಸಿ, ಹರ್ಷಿಸಿಯೂ ಇದ್ದಳು. ಅಲ್ಲದೆ ಮುಕುಂದಬಾವನಲ್ಲಿಯೂ ಬದಲಾವಣೆಗಳನ್ನು ಗಮನಿಸಿದ್ದಳು, ದೇಹದ ಮೇಲೆ ಕಾಣುವ ವ್ಯತ್ಯಾಸಗಳಿಂದ ಮಾತ್ರವಲ್ಲದೆ ತನ್ನ ಪರವಾದ ಭಾವಭಂಗಿಗಳಲ್ಲಿಯೂ! ಇವಳ ಕೈ ಅನಿಚ್ಛೆಯಾಗಿಯೆ ಗೊಬ್ಬೆಯ ಸೆರಗನ್ನು, ಅದು ಸರಿಯಾಗಿದ್ದರೂ, ಪದೇ ಪದೇ ಸರಿಮಾಡಿಕೊಳ್ಳಲು ಕಲಿತಿತ್ತು. ಅವನ ಮೋರೆಯ ಮೇಲೆ, ಅದರಲ್ಲಿಯೂ ತುಟಿಯ ಮೆಲು ಭಾಗದಲ್ಲಿ ತುಪ್ಪುಳುಗೂದಲು ಕರಿಯ ಗೆರೆಗಳು ಮೊಳೆಯತೊಡಗಿ ಮುಖಕ್ಕೊಂದು ಮುಗ್ಧ ಮನೋಹರತೆಯನ್ನುಂಟುಮಾಡಿದ್ದುವು. ಅವರೀಗ ಮೊದಲಿನಂತೆ ಒಬ್ಬರನ್ನೊಬ್ಬರು ಮುಟ್ಟಲು ಸಂಕೋಚಪಡುತ್ತಿದ್ದರು. ಹೆಚ್ಚು ಹೊತ್ತು ಸಮೀಪಸ್ಥರಾಗಿರಲೂ ಏನೋ ಅಳುಕಿನಿಂದ ಹಿಂಜರಿಯುತ್ತಿದ್ದರು. ತಾವಿಬ್ಬರೇ ಇದ್ದಾಗ ಯಾರಾದರೂ ನೋಡಿಯಾರೆಂಬ ಗೋಪನಬುದ್ಧಿ ಪ್ರಬುದ್ಧವಾಗಿತ್ತು. ಇಬ್ಬರೇ ಇದ್ದಾಗ ಒಬ್ಬರನ್ನೊಬ್ಬರು ಕಣ್ಣಿಗೆ ಕಣ್ಣಿಟ್ಟು ದೃಷ್ಟಿಸಲೂ ಅಂಜಿಕೆಯಾಗತೊಡಗಿತ್ತು. ಮೈಯಲ್ಲಿ ಒಬ್ಬರಿಂದೊಬ್ಬರು ದಿನದಿನಕ್ಕೂ ದೂರ ದೂರ ಹೋಗುತ್ತಿದ್ದರೂ ಮನಸ್ಸಿನಲ್ಲಿ ಹತ್ತಿರ ಹತ್ತಿರವಾಗುತ್ತಿದ್ದಂತೆ ಇಬ್ಬರಿಗೂ ಅನಿಸಿತ್ತು. ಆಗೊಮ್ಮೆ ಈಗೊಮ್ಮೆ ಯಾವಾಗಲಾದರೂ ಇಬ್ಬರ ಕಣ್ಣುಗಳೂ ಸಂಧಿಸಿದಾಗ ಬಾಯಿಂದಾಡಿ

ಏಳಲಾರದ, ಮತ್ತು ಅವರಿದ್ದ ಸಮಾಜದ ಪರಿಸ್ಥಿತಿಯಲ್ಲಿ ಎಂದೂ ಹೇಳಬಾರದ ಪ್ರಣಯ ಸಂವಾದ ನಡೆದು ಹೋಗುತ್ತಿತ್ತು. ಒಂದೆರಡು ಸಾರಿ ಮುಕುಂದಯ್ಯ ಏನನ್ನೊ ಹೇಳಬೇಕೆಂದು ಬಾಯೆತ್ತಿ, ತುಟಿ ನಡುಗಿ, ಇದ್ದಕ್ಕಿದ್ದಂತೆ ಮಾತು ತೊದಲಿದಂತಾಗಿ, ಇನ್ನೇನನ್ನೊ ಅಪ್ರಕೃತವನ್ನು ಆಡಿ ಮಾತು ಮುಗಿಸುತ್ತಿದ್ದನು. ಆದರೆ ಇಂಗಿತಜ್ಞೆಯಾಗಿದ್ದ ಚಿನ್ನಮ್ಮ ಅವನ ಅತ್ಯಂತ ಅಪ್ರಕೃತ ತೊದಲಿನಲ್ಲಿಯೂ ಅಂತಃಕರಣದ ಸುಪ್ರಕೃತವನ್ನು ಚೆನ್ನಾಗಿ ಗ್ರಹಿಸಿದ್ದಳು. ಅಂತೂ ಅವರಿಬ್ಬರಿಗೂ ತಮ್ಮಿಬ್ಬರ ಋಣಾನುಬಂಧದ ವಿಷಯದಲ್ಲಿ ಅವಾಗ್ರೂಪದ ಒಂದು ಅಲ್ಲಿಖಿತ ಒಪ್ಪಂತವಾಗಿತ್ತು. ಅದು ಅತ್ಯಂತ ರಹಸ್ಯವಾದುದೆಂದು ಅವರಿಬ್ಬರೂ ಭಾವಿಸಿದ್ದರೂ ಸ್ವಲ್ಪ ಹೆಚ್ಚು ಕಡಿಮೆ ಎಲ್ಲರಿಗೂ, ರಹಸ್ಯವಾಗಿಯೆ, ತಿಳಿದಿದ್ದ ಅಂಶವಾಗಿತ್ತು! ಚಿನ್ನಮ್ಮನ ಅಜ್ಜಿ ಮೊದಲುಗೊಂಡು ಮುಕುಂದಯ್ಯನ ಅವ್ವ ಅತ್ತಿಗೆಯರೂ ಅವರನ್ನು ಆ "ಯಾರಿಗೂ ತಿಳಿಯದ ರಹಸ್ಯ"ದ ವಿಚಾರವಾಗಿ ವಿನೋದಕ್ಕಾಗಿ ಪರಿಹಾಸ್ಯಮಾಡಿಯೂ ಇದ್ದರು. ಆದರೆ....?

* * *

ಈಗ ಚಿನ್ನಮ್ಮ ತರುಣಿ: ಮದುವೆಗೆ ಬರುತ್ತಿರುವ ಹೂವಳ್ಳಿಯ ಹೆಣ್ಣು. ಮುಕುಂದಯ್ಯ ಯಾವುದಾದರೂ ಹೆಣ್ಣಿಗೆ ತಾಳಿಕಟ್ಟಲು ಸಿದ್ಧನಾಗುತ್ತಿರುವ ತರುಣ: ಕೋಣೂರಿನ ಗಂಡು.

ಹೋದ ವರುಷ ನಾಗಕ್ಕ ಮತ್ತು ಅವಳ ಅತ್ತೆ ಹೂವಳ್ಳಿಯಲ್ಲಿ ಸಸಿನೆಟ್ಟಿಯಿಂದ ಹಿಡಿದು ಗದ್ದೆಕೊಯ್ಲು ಮುಗಿಯುವವರೆಗೂ ಇದ್ದುದಕ್ಕೆ ನಾಗತ್ತೆಯ ಮೂಲೋದ್ದೇಶ ತನ್ನ ಸೊಸೆ ನಾಗಕ್ಕನ ಮನಸ್ಸನ್ನು ವೆಂಕಟಣ್ಣನ ಪರವಾಗಿ ಹಣ್ಣು ಮಾಡುವುದೇ ಆಗಿತ್ತು. ಅದಕ್ಕಾಗಿ ಅವಳು ಯಾರೊಬ್ಬರಿಗೂ ಸುಳುವು ಸಿಗದಂತೆ ಅನೇಕ ವಾಮಾಚಾರದ ಉಪಾಯಗಳನ್ನು ಕೈಗೊಂಡು ನೆರವೇರಿಸಿದ್ದಳು: ಒಬ್ಬರ ಎಂಜಲನ್ನು ಇನ್ನೊಬ್ಬರಿಗೆ ತಿನ್ನಿಸುವಂತಹ ಸಾಧಾರಣ ಹೀನವಾದ ಉಪಾಯದಿಂದ ಹಿಡಿದು ಮಲಮೂತ್ರ ಲಿಂಗಯೋನಿ ಸಂಬಂಧಿಗಳಾದ ಅತ್ಯಂತ ಅಶ್ಲೀಲ ಅವಾಚ್ಯ ಹೀನೋಪಾಯಗಳವರೆಗೂ! ತನ್ನ ಸೊಸೆ ಬೇರೆ ಯಾರ ಮನೆಯಲ್ಲಿಯೂ ಹೊಂದಿಕೊಳ್ಳದಿದ್ದ ಪ್ರಮಾಣದಲ್ಲಿ ಹೂವಳ್ಳಿ ಮನೆಗೆ ಹೊಂದಿಕೊಂಡಿದ್ದನ್ನು ಗಮನಿಸಿ ತನ್ನ ವಾಮಾಚಾರೋಪಾಯವೇ ಆ ಯಶಸ್ಸಿಗೆ ಮುಖ್ಯ ಕಾರಣವೆಂದು ನಿರ್ಣಯಿಸಿದ್ದಳು. ನಾಗಕ್ಕ ಇತರರ ಮನೆಗಳಲ್ಲಿ ಸಿಡುಕಿದಂತೆ ಸಿಡುಕಿರಲಿಲ್ಲ. ಒಳಗಿನ ಕೆಲಸವನ್ನಾಗಲಿ ಹೊರಗಿನ ಕೆಲಸವನ್ನಾಗಲಿ ಚಿನ್ನಮ್ಮನನೊಡಗೂಡಿ ತಾನೂ ಆ ಮನೆಯವಳೇ ಎಂಬ ಶ್ರದ್ಧೆಯಿಂದ ಮಾಡಿದುದನ್ನು ನೋಡಿ, ನಾಗತ್ತೆಗೆ ಆಶ್ಚರ್ಯಕ್ಕಿಂತಲೂ ಹೆಚ್ಚಾಗಿ ದಿಗ್ವಿಜಯ ಪಡೆದಷ್ಟು ಆನಂದವಾಗಿತ್ತು. ಸೊಸೆ ಹಿಂದೆಂದೂ ಗಂಡ ತೀರಿಕೊಂಡ ಮೇಲೆ ಅಷ್ಟು ಪ್ರಸನ್ನತೆಯಿಂದ ಮಧುರಭಾಷಿಣಿಯಾಗಿದ್ದುದನ್ನು ನಾಗತ್ತೆ ಕಂಡಿರಲಿಲ್ಲ. ವೆಂಕಟಣ್ಣನೊಡನೆಯೂ, ಚಿನ್ನಮ್ಮನ ತಂದೆ ಎಂಬ ಕಾರಣದಿಂದ, ಮರ್ಯಾದೆಯಿಂದಲೇ ಆತ್ಮಗೌರವಕ್ಕೆ ಚ್ಯುತಿ ಬಾರದಷ್ಟು ಸಲುಗೆಯಿಂದ ನಡೆದುಕೊಂಡಿದ್ದಳು. ಆದರೆ ಸೊಸೆಯ ಪರಿವರ್ತನೆಗೆ ಏಕಮಾತ್ರ ಪ್ರಧಾನ ಕಾರಣ, ನಾಗತ್ತೆ ಊಹಿಸಿದಂತೆ, ವಾಮಾಚಾರವೂ ಆಗಿರಲಿಲ್ಲ, ವೆಂಕಟಣ್ಣನೂ ಆಗಿರಲಿಲ್ಲ. ವೆಂಕಟಣ್ಣನ ಮಗಳು ಚಿನ್ನಮ್ಮನ ಸೌಜನ್ಯ,ಸ ನೇಹ, ವಿಶ್ವಾಸ, ಅನುಕಂಪೆ, ಸೋದರೀ ಸದೃಶ ವಾತ್ಸಲ್ಯ ಇತ್ಯಾದಿಗಳೆಲ್ಲ ಒಂದು ಗೂಡಿ ನಾಗಕ್ಕನ ಹೃದಯವನ್ನು ಸೂರೆಗೊಂಡಿದ್ದವು. ಅವಳಿಗೆ ಗದ್ದೆಕೊಯ್ಲು ಮುಗಿದ ಮೇಲೆಯೂ ಅಲ್ಲಿಂದ ಹೊರಡುವುದಕ್ಕೆ ಮನಸ್ಸಿರಲಿಲ್ಲ. ಚಿನ್ನಮ್ಮನೂ "ನಾಗಕ್ಕಯ್ಯ, ಇನ್ನೊಂದೆರಡು ದಿನ ಇದ್ದು ಹೋಗು" ಎಂದು ಮುದ್ದಿನಿಂದಲೆ ಆಹ್ವಾನಿಸಿದ್ದಳು.

ಅದೇ ಕಾರಣವಾಗಿತ್ತು, ಈಗಲೂ, ನಾಗಕ್ಕ ನಾಗತ್ತೆಯೊಡನೆ ಹೂವಳ್ಳಿಗೆ ಸಂತೋಷದಿಂದ ಹೊರಟಿದ್ದುದಕ್ಕೆ. ಆದರೆ ಸೊಸೆಯ ಆ ಸರಳ ಸಂತೋಷಕ್ಕೆ ನಾಗತ್ತೆಯ ವ್ಯಾಖ್ಯಾನ ಸ್ವರೂಪವೆ ಬೇರೆಯ ತರಹದ್ದಾಗಿತ್ತು.

* * *

೧೨

ಮಿಂದು ಮಡಿಯುಟ್ಟು ತುಳಸಿಕಟ್ಟೆಗೆ ಸುತ್ತು ಬರುತ್ತಿದ್ದ ಶಂಕರಪ್ಪ ಹೆಗ್ಗಡೆಯವರು ಹೂವಳ್ಳಿ ವೆಂಕಟಣ್ಣನು ಸುಬ್ಬಣ್ಣ ಹೆಗ್ಗಡೆಯವರೊಡನೆ ಮಾತಾಡಿ ಬೀಳ್ಕೊಂಡು ತಾನಿದ್ದ ಕಡೆಗೆ ದೊಣ್ಣೆಯೂರಿ ಕುಂಟುತ್ತಾ ಬರುತ್ತಿದ್ದುದನ್ನು ಗಮನಿಸಿ, ಬಾಯಿ ಏನೊ ದೇವರ ಹೆಸರನ್ನೊ ಮಂತ್ರವನ್ನೊ ಗೊಣಗುಟ್ಟುತ್ತಿದ್ದರೂ, ಮನಸ್ಸಿನಲ್ಲಿಯೆ ಅಂದುಕೊಂಡರು: “ಏನು ಸೈಂಧವನ ಸವಾರಿ ಇತ್ತಲಾಗಿ ಬರುತ್ತಿದೆಯಲ್ಲಾ?!”

ಸೈಂಧವ ಎಂಬುದು ಹೂವಳ್ಳಿ ವೆಂಕಟಣ್ಣನಿಗೆ ಜನ ಇಟ್ಟಿದ್ದ ಅಡ್ಡ ಹೆಸರಾಗಿತ್ತು. ಅದಕ್ಕೆ ಮುಖ್ಯ ಕಾರಣ ಅವನ ದೈತ್ಯ ಗಾತ್ರ; ಅವನ ಎತ್ತರವೂ ಆರು ಅಡಿಗಳಿಗೆ ಮೀರಿಯೆ ಇತ್ತು. ಕೈಕಾಲು ತೊಡೆಗಳೆಲ್ಲವೂ ಇದ್ದ ದಪ್ಪಗಳಲ್ಲಿ ಒಂದರೊಡನೊಂದು ಸ್ಪರ್ಧಿಸುವಂತಿದ್ದುವು. ಮುಖ ಸ್ವಲ್ಪ ಉದ್ದವಾಗಿದ್ದು ಕೆನ್ನೆ ದವಡೆಯ ಎಲುಬುಗಳು ಎದ್ದು ಕಾಣುತ್ತಿದ್ದವು. ಕರಿಯ ಮೀಸೆಗಳು ನೀಳಾಗಿ ಬೆಳೆದು ಕಿವಿಯ ಕಡೆಗೆ ಪಯಣ ಹೊರಟು ಮೇಲಕ್ಕೆ ಬಾಗಿದ್ದುವು. ಹುಬ್ಬುಗಳೆರಡೂ ಪೊದೆಗಳಾಗಿ ಮೀಸೆಗಳನ್ನು ತಲುಪಲೆಂಬಂತೆ ಕೊಂಕಿದ್ದುವು. ಭಯಂಕರತೆಯ್ನನೂ ಧೀರ ಗಾಂಭೀರ್ಯವನ್ನೂ ವದನಕ್ಕೆ ತಂದುಕೊಡಬಹುದಾಗಿದ್ದ ಈ ಎಲ್ಲಾ ಪರಿಕರಗಳಿದ್ದರೂ ಅವನ ಚಪ್ಪಟೆ ಮೂಗೂ ನಿಸ್ತೇಜದ ಕಣ್ಣುಗಳೂ ಅವನ ವ್ಯಕ್ತಿತ್ವವನ್ನು ಸಾಧಾರಣತ್ವಕ್ಕೆ ಇಳಿಸಿಬಿಟ್ಟಿದ್ದುವು. ಅವನಲ್ಲಿದ್ದ ಪಶುಬಲಕ್ಕೆ ಎಂಥವರೂ ಅಳುಕುತ್ತಿದ್ದರು; ಆದರೆ ಅವನಿಗೆ ಸಿಟ್ಟು ಬಂದಾಗ ಜನ ಹೆದರಿಕೊಳ್ಳುತ್ತಿದ್ದುದಕ್ಕಿಂತಲೂ ಹೆಚ್ಚಾಗಿ ವಿನೋದಪಟ್ಟುಕೊಂಡು ನಗುತ್ತಿದ್ದರು! ಅವನ ಹೊರ ಆಕಾರದ ಉಗ್ರತೆ ಅವನನ್ನು ತಿಳಿಯದವರಿಗೆ ಹುಲಿಯಂತೆ ಕಾಣಿಸುತ್ತಿದ್ದರೂ, ಅವನನ್ನು ತಿಳಿದಿದವರಿಗೆ ಅವನು ಒಂದು ಬೃಹತ್ಕಾಯದ ಸಾಧುಪ್ರಾಣಿಯಂತಿದ್ದನು. ಹಸುವಿನಂತಹ ಸಾಧುಪ್ರಾಣಿಯೂ ಒಮ್ಮೊಮ್ಮೆ ತನಗೆ ನೋವಾದಾಗಲೊ ಸಿಟ್ಟು ಬಂದಾಗಲೊ ತಿವಿದುಬಿಡುವಂತೆ ವೆಂಕಟಣ್ಣನೂ ತಿವಿದುಬಿಡುತ್ತಿದ್ದುದು ಉಂಟು. ಪ್ರಾಣಿ ಸಾಧುವಾಗಿದ್ದರೂ ಅದು ಬೃಹತ್ ಪರಿಣಾಮದ್ದಾಗಿದ್ದರೆ ಅದರ ಸಾಧಾರಣ ತಿವಿತವೂ ಭಯಂಕರ ಪರಿಣಾಮಕಾರಿಯಾಗುವಂತೆ ವೆಂಕಟಣ್ಣನ ಮೊಂಡಸಿಟ್ಟೂ ಅನೈಚ್ಛಿಕವಾಗಿಯೆ ಹಲವು ಅನಾಹುತಗಳಿಗೆ ಕಾರಣವಾಗಿತ್ತು. ಸ್ಫುರದ್ರೂಪಿಣಿಯೂ ಸೂಕ್ಷ್ಮಪ್ರಕೃತಿಯವಳೂ ಆಗಿದ್ದ ಅವನ ಹೆಂಡತಿ, ಹೂವಳ್ಳಿ ಚಿನ್ನಮ್ಮನ ತಾಯಿ, ಅಷ್ಟು ಎಳೆವಯಸ್ಸಿನಲ್ಲಿಯೆ ಸಾಯುವುದಕ್ಕೂ ವೆಂಕಟಣ್ಣನ ಈ ಗುಣವೇ ಕಾರಣವಾಗಿತ್ತೆಂದು ಜನ ಆಡಿಕೊಳ್ಳುತ್ತಿದ್ದರು. ಆ ಕಾರಣದಿಂದಲೆ ಅವನು ಮತ್ತೊಂದ ಮದುವೆ ಮಾಡಿಕೊಳ್ಳಲು ಪ್ರಯತ್ನಿಸಿದ್ದರೂ ಹೆಣ್ಣು ಕೊಡಲು ಯಾರೂ ಮುಂದೆ ಬಂದಿರಲಿಲ್ಲ.

ವೆಂಕಟಣ್ಣನ ಈ ಲಕ್ಷಣಗಳೆಲ್ಲ ಅನುವಂಶಿಕವಾಗಿದ್ದುವು. ಅವನ ಅಜ್ಜನೋ ಮುತ್ತಜ್ಜನೋ ದುರ್ಗದ ಪಾಳೆಯಗಾರಿಕೆಯ ಕಾಲದಲ್ಲಿ ದಂಡನಾಯಕನಾಗಿದ್ದನಂತೆ. ಅದಕ್ಕೆ ಸಾಕ್ಷಿಯಾಗಿ ಈಗಲೂ ಹೂವಳ್ಳಿ ಮನೆಯ ಅಟ್ಟದ ಮೂಲೆಯಲ್ಲಿ ಕರಿಹಿಡಿದು ಕರ್ರಗಾದ ಖಡ್ಗಗಳೂ ಈಟಿ ಭರ್ಜಿಗಳೂ ಗುರಾಣಿಗಳೂ ಇವೆ ಎಂಬ ವದಂತಿ ಇತ್ತು. ಅವನದು ನಾಯಕರ ಮನೆತನವಾದರೂ ಸರಿಸಮಾನರು ಯಾರೂ ಈಗ ಅವನನ್ನು ವೆಂಕಟಪ್ಪನಾಯಕರು ಎಂದು ಕರೆಯುತ್ತಿರಲಿಲ್ಲ. ತೀರ ಕೆಳವರ್ಗದವರೇನೊ ಹೂವಳ್ಳಿ ನಾಯಕರು ಎಂದು ಸಂಬೋಧಿಸುತ್ತಿದ್ದುದುಂಟು. ಆದರೆ ಆ 'ನಾಯಕ' ಶಬ್ದಕ್ಕೆ ಪೂರ್ವದ ಗೌರವವಾಗಲಿ ಅರ್ಥವಾಗಲಿ ಇರಲಿಲ್ಲ. ಹುಲಿ ಮುಪ್ಪಾಗಿ ಕಪ್ಪೆ ಹೆರಕುವ ಸ್ಥಿತಿಯಂತಿತ್ತು. ಅದರ ಸದ್ಯಃಸ್ಥಿತಿ! ಅವನು ದುಗ್ಗದ ಪಾಳೆಯಗಾರರ ನಾಯಕ ಮನೆತನಕ್ಕೆ ಸೇರಿದವನು ಎಂಬುದಕ್ಕೆ ಅವನ ಮಹಾಕಾಯದ ಬೃಹತ್ತೊಂದೇ ಅವಶಿಷ್ಟವಾದ ಬಹಿಃಪ್ರಮಾಣವಾಗಿತ್ತು. ಭಾಗವತರಾಟದಲ್ಲಿ ಸೈಂಧವನ ಪಾತ್ರಧಾರಿಗೆ ಇರುತ್ತಿದ್ದ ಆ ಸಮಾನ ಲಕ್ಷಣವನ್ನು ಆಧರಿಸಿ ಜನ ಅವನನ್ನು ಸೈಂಧವ ಎಂಬ ಅಡ್ಡ ಹೆಸರಿನಿಂದ ಕರೆಯುತ್ತಿದ್ದರು. ಅವನಿಗೂ ಅದು ಗೊತ್ತಿತ್ತು!

ವೆಂಕಟಣ್ಣ ಹೆಂಚಿನ ಮನೆಯ, ಇನ್ನೂ ಚೌಕಿ ಕಟ್ಟದೆ ಇದ್ದುದರಿಂದ ತೆರೆದೇ ಇದ್ದ, ಹೊರ ಅಂಗಳವನ್ನು ಪ್ರವೇಶಿಸುತ್ತಿದ್ದಾಗಲೆ ಅವನ ಮೂಗಿಗೆ ಹೂವಿನ, ಗಂಧದ ಮತ್ತು ಲೋಬಾನದ ಮಿಶ್ರ ಪರಿಮಳ ಬಂದಿತ್ತು. ಅದರಲ್ಲಿಯೂ ಆಗತಾನೆ ಸೋಗೆಮನೆಯ ಹೊರ ಅಂಗಳದಲ್ಲಿದ್ದ ಕೋಳಿ ಒಡ್ಡಿ, ಹಂದಿಒಡ್ಡಿ ದನಕೊಟ್ಟಿಗೆ ಇವುಗಳ ಸಂಮಿಶ್ರ ವಾಸನೆಯ ವಲಯದಿಂದ ಹೊರಬರುತ್ತಿದ್ದ ಅವನಿಗೆ ಆ ಪರಿಮಳ ದೇವಸ್ಥಾನ ಪ್ರವೇಶ ಮಾಡಿದ ಭಾವನೆಯನ್ನುಂಟುಮಾಡಿತ್ತು.

ಅವನ ಕೈ ಅವನಿಗೆ ತಿಳಿಯದಂತೆಯೆ ಮುಗಿಯ ತೊಡಗಿತ್ತು. ತನ್ನ ಜಿಡ್ಡು ಹಿಡಿದು ತೇಪೆಹಾಕಿದ ದಗಲೆ, ಮೊಳಕಾಲಿನ ವರೆಗಿನ ಕೊಳಕು ಪಂಚೆ, ತಲೆಗೆ ಸುತ್ತಿದ್ದ ಬಡ್ಡು ಕಂಬರು ವಸ್ತ್ರ ಇವುಗಳ ಮೈಲಿಗೆಯ ಅರಿವಾಗಿಯೊ ಎಂಬಂತೆ ವೆಂಕಟಣ್ಣ ಸ್ವಲ್ಪ ದೂರದಲ್ಲಿಯೆ ನಿಂತು ನೋಡತೊಡಗಿದನು.

ಅಂಗಳದ ನಡುವೆ ಹೊಸದಾಗಿ ಹಾಕಿದ್ದ ಮಣ್ಣಿನ ತುಳಸಿಕಟ್ಟೆ ಕೆಮ್ಮಣ್ಣು ಬಳಿದಿದ್ದರಿಂದ ಕೆಂಪಗೆ ಕಾಣುತ್ತಿತ್ತು. ಅದರ ತಲೆಯ ಮೇಲೆ ಎಲ್ಲಿಯೊ ಕೆಲದಿನಗಳ ಹಿಂದೆ ನೆಟ್ಟಿದ್ದ ತುಳಸಿಯ ಪುಟ್ಟ ಸಸಿ ಹಸುರುತನದಿಂದ ಗಮನಸೆಳೆಯುವಷ್ಟೂ ಬೆಳೆದಿರಲಿಲ್ಲ. ಕೆಂಪು ನಾಮಗಳ ನಡುವೆ ಬಿಳಿಯ ನಾಮಗಳು ತುಳಸಿಯ ನಾಲ್ಕೂ ಮೈಗಳ್ಲಲಿ ಎದ್ದು ಕಾಣುವಂತಿದ್ದವು. ಮುಡಿಸಿದ್ದ ಗೊರಟೆ ಹೂಗಳ ಹಳದಿಯ ನಡುವೆ ಕೆಂಪು ಪರ್ವತ ಬಾಳೆಯ ಹೂಗಳೂ ಭೂತಾಳಿಯ ರಕ್ತವಣ್ಣದ ಎಲೆಯ ರೂಪದ ಹೂಗಳೂ ರಂಜಿಸಿದ್ದುವು. ಕೈಮುಗಿದುಕೊಂಡು ಬಾಯಲ್ಲಿ ಏನನ್ನೊ ಹೇಳಿಕೊಳ್ಳುತ್ತಾ ದೇವರಿಗೆ ಸುತ್ತು ಬರುತ್ತಿದ್ದ ಶಂಕರಪ್ಪ ಹೆಗ್ಗಡೆಯವರು ಸೊಂಟಕ್ಕೆ ಸುತ್ತಿದ್ದ ಒಂದು ಅರೆ ಒದ್ದೆಯಾಗಿದ್ದ ಪಾಣಿಪಂಚೆ ವಿನಾ ಸಂಪೂರ್ಣವಾಗಿ ನಗ್ನರಾಗಿದ್ದರು. ಆ ಪಾಣಿ ಪಂಚೆ ಎಷ್ಟು ಜಾಳಾಗಿತ್ತೆಂದರೆ ಒಳಗೆ ಕಟ್ಟಿದ್ದ ಲಂಗೋಟಿಯ ರೂಪು ರೇಖೆ ಸ್ಪಷ್ಟವಾಗಿ ಕಾಣುತ್ತಿತ್ತು. ಅವರ ಹೊಕ್ಕುಳದ ಮೇಲ್ಭಾಗದಲ್ಲಿಯೂ ಎದೆಯ ಇಕ್ಕೆಲಗಳಲ್ಲಿಯೂ ತೋಳುಗಳ ಭುಜ ಪ್ರದೇಶದಲ್ಲಿಯೂ ತುಳಸಿಕಟ್ಟೆಗೆ ಬಳಿದಂತಹ ಬಿಳಿಯ ನಾಮಗಳ ನಡುವಣ ಕೆಂಪು ನಾಮಗಳ ತ್ರಿಪುಂಡ್ರಗಳು ಮೆರೆಯುತ್ತಿದ್ದುವು. ಹಣೆಯ ಮೇಲೆ ಮಾತ್ರ ಕೆಂಪು ನಾಮವೊಂದೇ ವಿರಾಜಮಾನವಾಗಿತ್ತು. ಲಾಳಾಕಾರವಾಗಿ ನುಣ್ಣಗೆ ಚೌರಮಾಡಿದ್ದ ಅವರ ಮುಂದಲೆಯ ಮೇಲೆಯೂ ನಾಮದ ಗುರುತು ಕಾಣುತ್ತಿತ್ತು. ಚಿನ್ನದ ಒಂಟಿಗಳಿದ್ದ ಕಿವಿಯ ಸಂಧಿಯಲ್ಲಿ ಸಿಕ್ಕಿಸಿಕೊಂಡಿದ್ದ ತುಳಸಿಯ ಕುಡಿಯ ಗೊಂಚಲೂ

ಚೆನ್ನಾಗಿ ಕಾಣುವ ಪ್ರಮಾಣದಲ್ಲಿಯೆ ಇತ್ತು. ಸುಪುಷ್ಟವಾಗಿ ಕಾಣುತ್ತಿದ್ದ ಮೈಕಟ್ಟೂ ಸ್ವಲ್ಪ ಮಟ್ಟಿಗೆ ಬೊಜ್ಜಾಗಿದ್ದ ಹೊಟ್ಟೆಯೂ ಅವರು ಸುಖಜೀವಿ ಎಂಬುದನ್ನು ಸೂಚಿಸುತ್ತಿದ್ದುವು.

ಚೆನ್ನಾಗಿ ಬೆಳಗಿ ಥಳಥಳಿಸುತ್ತಿದ್ದ ತಾಮ್ರದ ಹೂವಿನ ತಂಬಿಗೆಯಲ್ಲಿದ್ದ ನೀರನ್ನು ತುಳಸಿಯ ಗಿಡದ ಬುಡಕ್ಕೆ ಹೊಯ್ದು, ಬೆರಳ ತುದಿಯಿಂದ ಆ ತೀರ್ಥವನ್ನೆತ್ತಿ ಬಾಯಿಗೆ ಚಿಮುಕಿಸಕೊಂಡು, ದೂರದಲ್ಲಿಯೆ ನಿಂತಿದ್ದ ವೆಂಕಟಣ್ಣನ ಬೃಹನ್ಮೂರ್ತಿಯನ್ನು ನೋಡುತ್ತಾ ನಗೆಗೂಡಿ ಶಂಕರಪ್ಪ ಹೆಗ್ಗಡೆಯವರು "ಏನು ನಾಯಕರ ಸವಾರಿ ಬಹಳ ಅಪರೂಪ ಬಂದುಬಿಟ್ಟಿತಲ್ಲಾ!" ಎಂದು ವ್ಯಂಗ್ಯವಾಗಿ ಪ್ರಶ್ನಿಸಿ, ಉತ್ತರಕ್ಕೆ ಕಾಯದೆ "ಅಲ್ಲೇ ನಿಂತುಬಿಟ್ಟೆಯಲ್ಲೋ? ಬಾರೋ ಮೇಲೆ" ಎಂದು ಸಹಜವಾದ ಸಲುಗೆಯ ಏಕವಚನದಲ್ಲಿ ಕರೆಯುತ್ತಾ ತಾವೂ ಮೆಟ್ಟಲು ಏರಿ ಜಗಲಿಗೆ ಹೋದರು. ವೆಂಕಟಣ್ಣನೂ ಹೊರಗಿನಿಂದ ಕಾಲು ಕೆಸರಾಗಿ ಬರುವ ನೆಂಟರಿಗಾಗಿಯೆ ಎಂದು ಮುಂದಿಗೆಯ ಬದಿ ಇಟ್ಟಿದ್ದ ಹಿತ್ತಾಳೆ ಚೊಂಬಿನಲ್ಲಿದ್ದ ನೀರಿನಿಂದ ಕಾಲು ತೊಳೆದುಕೊಂಡು, ಕಿರುಜಗಲಿಗೆ ಏರಿ, ಜಗಲಿಯ ತುದಿಯ ಕೆಸರ್ಹಲಗೆಯ ಮೇಲೆ ಹಾಸಿದ್ದ ಕೊಳಕು ಕೊಳಕಾದ ಜಾಡಿಯ ಮೇಲೆ ಕೂತನು. ಪದ್ಧತಿಯಂತೆ ಎಲೆ ಅಡಿಕೆಯ ಹರಿವಾಣ ತಂದು ಅವನ ಮುಂದಿಡ್ಡು ಶಂಕರಪ್ಪ ಹೆಗ್ಗಡೆಯವರೂ ತುಸು ದೂರದಲ್ಲಿಯೆ ಕೂತುಕೊಂಡರು.

ಜಗಲಿಯ ಮೂಲೆಯಲ್ಲಿ ಒಂದು ಐದಾರು ತಿಂಗಳ ಕೂಸನ್ನು ಅರುವೆಯ ಮೇಲೆ ಉರುಡುಹಾಕಿಕೊಂಡು ಆಡಿಸುತ್ತಿದ್ದಳು ಬಾಲೆಯಾಡಿಸುವ ಹುಡುಗಿ. ಅವಳ ಪಕ್ಕದ್ಲಲಿ ಸುಮಾರು ಎರಡೂವರೆ ಮೂರು ವರ್ಷದ ವಯಸ್ಸಿನ ಒಂದು ಬಡಕಲು ಹುಡುಗ ಬತ್ತಲೆ ಕುಳಿತು ತಾನೂ ಬಾಲೆಯಾಡಿಸುವ ಆಟದಲ್ಲಿ ತೊಡಗಿತ್ತು. ವೆಂಕಟಣ್ಣನ ಆಕೃತಿ ಅಂಗಳದಿಂದ ಮೆಟ್ಟಲು ಹತ್ತಿ ಕಿರುಜಗಲಿಗೆ ಬಂದುದನ್ನು ಕಂಡು, ಹೊಸಬರನ್ನು ಕಂಡೋ, ಗಾತ್ರಕ್ಕೆ ದಿಗಿಲುಗೊಂಡೋ ಹೆಮ್ಮೀಸೆಗೆ ಹೆದರಿಯೋ ಬಾಲೆಯಾಡಿಸುವ ಹುಡುಗಿಯನ್ನು ಅಪ್ಪಿಕೊಂಡು ಅದು ಅಳತೊಡಗಿತ್ತು.

ವೆಂಕಟಣ್ಣ ಆ ಹುಡುಗನನ್ನು ಸಮಾಧಾನ ಮಾಡುವ ಸಲುವಾಗಿ "ಯಾಕೆ ಅಳ್ತೀಯೋ, ರಾಮು?" ಎಂದು ಮೈತಡವಲು ಕೈ ನೀಡಿದ ಕೂಡಲೆ ರಾಮು ಕಿಟಾರನೆ ಕೀರಿಕೊಂಡು ಮಾಣಿಗೆ ಒಳಗಿನಿಂದ ನುಗ್ಗಿ ಅಡುಗೆ ಮನೆಗೆ ಅಮ್ಮನನ್ನು ಕೂಗುತ್ತಾ ಓಡಿಹೋದನು. ಆ ಕೂಗಿಗೆ ಬೆಚ್ಚಿ ಕೂಸೂ ಒರಲತೊಡಗಿತು.

ಶಂಕರಪ್ಪ ಹೆಗ್ಗಡೆ ತುಸು ರೇಗಿದ್ದ ಧ್ವನಿಯಲ್ಲಿ ಗಟ್ಟಿಯಾಗಿ ಕೂಗಿ ಹೇಳಿದರು; "ಏ ಕೆಂಪೀ, ಬಾಲೇನ ಅದರ ಹತ್ರಕ್ಕೆ ಕರೆದುಕೊಂಡು ಹೋಗೆ ಅತ್ತಲಾಗಿ!"

ಅದರ ಹತ್ತಿರಕ್ಕೆ ಎಂದರೆ ತಮ್ಮ ಹೆಂಡತಿಯ ಬಳಿಗೆ ಎಂದರ್ಥ. ಸಾಮಾನ್ಯವಾಗಿ ಗಂಡಸು ತನ್ನ ಹೆಂಡತಿಯನ್ನು ಹೆಸರು ಹಿಡಿದು ಕರೆಯುತ್ತಿದ್ದಿಲ್ಲ. ಕೆಲವು ಗಂಡಂದಿರು 'ಅವಳು' ಎಂಬುದಾಗಿಯೂ ಮತ್ತೆ ಕೆಲವರು 'ಅದು' ಎಂಬುದಾಗಿಯೂ ಕರೆಯುತ್ತಿದ್ದುದೆ ಹೆಚ್ಚು ವಾಡಿಕೆ. ಅಂತೆಯೆ ಹಳೆಮನೆಯ ಶಂಕರಪ್ಪ ಹೆಗ್ಗಡೆಯವರ ಅರ್ಧಾಂಗಿ ಸೀತಮ್ಮನವರು ಗಂಡನ ಭಾಗಕ್ಕೆ 'ಅದು' ಆಗಿದ್ದರು. ಹಾಗೆ ಕರೆಯುತ್ತಿದ್ದುದರಲ್ಲಿ ಯಾವ ಬುದ್ಧಿಪೂರ್ವಕವಾದ ಇಲ್ಲವೆ ವೈಯಕ್ತಿಕವಾದ ತಿರಸ್ಕಾರ ಭಾವವೂ ಇರುತ್ತಿರಲಿಲ್ಲ ನಿಜ. ಆದರೆ ಅದು ಸಾಮಾಜಿಕವಾದ ಸಮಷ್ಟಿರೂಪದ ಒಂದು ಕೀಳುಭಾವನೆಯನ್ನು ಪ್ರತಿಬಿಂಬಿಸುತ್ತಿತ್ತು.

ಹುಡುಗಿ ಕೂಸನ್ನು ಎತ್ತಿಕೊಂಡು ಹೋದಮೇಲೆ ವೆಂಕಟಣ್ಣ "ರಾಮು ಯಾಕೆ ಪೂರಾ ಲಾಚಾರಾಗಿ ಸೋತು ಹೋದ್ಹಾಂಗೆ ಕಾಣ್ತದಲ್ಲಾ?" ಎನ್ನುತ್ತಾ ಹರಿವಾಣದಲ್ಲಿದ್ದ ಒಂದು ವೀಳೆಯದೆಲೆಗೆ ಕೈ ಹಾಕಿದನು.

"ಹುಟ್ಟಿದಾರಭ್ಯ ಅದರ ಹಣೇಬರಾನೆ ಹಾಂಗೆ. ಯಾವಾಗ್ಲೂ ವೋ್ರತೆ ತಪ್ಪದು."

"ದೋಯಿಸರ ಹತ್ರ ಉಂದು ಚೀಟಿಬೂತಿನಾದ್ರೂ ತರಿಸಿ ಕಟ್ಟಿನೋಡು."

"ಅಯ್ಯೋ ನೀನೊಬ್ಬ! ಜೋಯಿಸರ ಕೈಲಿ ಚೀಟಿಬೂತಿ ತರಿಸಿ ಆಯ್ದು; ನಿಮಿತ್ತ ನೋಡಿಸಿ ಆಯ್ತು; ಕಡೆಗೆ ಕಲ್ಲೂರು ದೇವಸ್ಥಾನದಲ್ಲಿ ಅವರು ಹೇಳಿದ ಹಾಂಗೆ ಸತ್ಯನಾರಾಯಣ ವ್ರತಾನೂ ಮಾಡಿಸಿ ಆಯ್ತು."

"ಸಿದ್ದರ ಮಠಕ್ಕೆ?"

"ಅದೂ ಆಯ್ತು.... ಅದರ ಸೊಂಟದಾಗ್ ನೇತಾಡ್ತದಲ್ಲಾ, ಸಿದ್ದರ ಮಠದ ತಾಯಿತ!"

"ಹಾಂಗ್ಯಾರೆ ಆಮೂಗೂರು ಗಣಮಗನ್ನಾದ್ರೂ ಕರ್ಸಿ, ಮನೇಲಿ ಗಣ ಬರ್ಸಿ, ಕೇಳಿ ನೋಡಬ್ಯೆದಲ್ಲಾ?"

"ಹ್ಞೂ ಅದೊಂದು ಬಾಕಿ!.... ಆದರೆ ನಮ್ಮ ಜೋಯಿಸರು ಏನೋ ಇನ್ನೊಂದು ಅನುಮಾನ ಪಡ್ತಾರೆ... ಯಾರೋ ನಮಗೆ ಆಗದವರು..."

"ನಿನ್ನ ಮ್ಯಾಲೆ ಮಾಟ ಮಾಡ್ಸೋರು ಯಾರಂತಪ್ಪಾ...?"

"ಯಾರಂದ್ರೆ? ಹೊಟ್ಟೆಕಿಚ್ಚಿನವರಿಗೆ ಏನು ಬರಗಾಲವೆ?"

"ಬಸವನಂಥಾ ಮನುಷ್ಯ; ದೇವರು ದಿಂಡರು ಪೂಜೆಗೀಜೆ ಮಾಡ್ತೀಯ; ನಿನ್ನ ಮಾಲೇಜು ಹೊಟ್ಟೆ ಕಿಚ್ಚು?"

"ಊರ ಯಾಕೆ ಹೋಗ್ಬೇಕೋ, ಎಂಕಟಣ್ಣ? ನೆರೆಮನೇನೆ ಸಾಲದೇ?"

"ಸುಳ್ಳೋ ಬದ್ದೋ?" ವೆಂಕಟಣ್ಣನ ಪ್ರಶ್ನೆ ವಿಷಾದ, ಆಶ್ಚರ್ಯ, ಸಂದೇಹ, ಆಶಂಕೆ ಎಲ್ಲಕ್ಕೂ ಪ್ರತಿಮೆಯಾಗಿತ್ತು.

"ಪಾಲಾದ ಮೇಲಾದರೂ ಸರಿಹೋಗ್ತದೆ ಅಂತಾ ಮಾಡಿದ್ದೆ. ಆದರೆ....?"

"ಯಾಕಂತೆ ನಿನ್ನ ಮ್ಯಾಲೆ ಹಟಾ?"

“ಯಾಕೆ ಅಂದರೆ? ಅವರ ಮನೆಗೆ ಸೋಗೆ ಹೊದಿಸಿರುವಾಗ ನನ್ನ ಮನೆಗೆ ಹೆಂಚು ಹಾಕ್ಸೋದೆ? ಅವರ ಮನೇಲಿ ಗಂಡಸ್ರು, ಹೆಂಗಸ್ರು ಎಲ್ಲಾ ವಾರಕ್ಕೆ ಒಂದು ಸಾರಿ, ಶನಿ ಶನಿವಾರ, ಸಾನ ಮಾಡಿದ್ರೆ, ನನ್ನ ಮನೇಲಿ ನಾನು ದಿನಾ ಸಾನ ಮಾಡೋದಲ್ಲದೆ ಅದಕ್ಕೂ ಮೀಯೋಕೆ ಹೇಳೋದೆ…?”

“ಅವರಿಗೇನು ಕಡಮೆ ಆಗ್ಯದೆ! ನೀ ಊರ ಹೆಂಚು ಹಾಕ್ಸಿದ್ರೆ ಅವರು ಮಂಗಳೂರು ಹೆಂಚೇ ಹಾಕ್ಲಿ. ಅವರ ದುಡ್ಡಿನಲ್ಲಿ ಏನಾದ್ರೂ ನೀ ಹಾಕಿಸ್ದೇನು…?”

“ಅಯ್ಯೋ…. ನನಗೆ ಕೊಡಾ ದುಡ್ಡನ್ನೇ ಇನ್ನೂ ಕೊಟ್ಟಿಲ್ಲ; ಇನ್ನು ನಾ ಹೆಂಚು ಹಾಕ್ಸೋದಕ್ಕೆ ಬ್ಯಾರೆ ದುಡ್ಡು ಕೊಡ್ತಾರ್ಯೇ? ಮನೆ ಪಾಲಾಗುವಾಗ್ಲೆ ನನಗೆ ಬರಬೇಕಾದ ಹಿಸ್ಸೇನ ‘ನಂಗೆ ಆ ಗದ್ದೆ ಬೇಕು, ನಂಗೆ ಈ ತೋಟದ ತುಂಡು ಬೇಕು, ನಂಗೆ ಅದು ಸಾಲದು, ನಂಗೆ ಇದು ಸಾಲದು’ ಅಂತಾ ನೂರೊಂದು ತಂಟೆ ತಕರಾರು ಮಾಡಿ, ತಮ್ಮ ಪಾಲಿಗೆ ಮಾಡಿಕೊಂಡರು. ತಾಳತಂತ್ರದ ಲೆಕ್ಕ ಮಾಡಿ ನನಗೆ ಇಂತಿಷ್ಟು ಕೊಡೋದು ಅಂತ ಒಪ್ಪಂದ ಆಯ್ತು. ಇಲ್ಲೀ ತನಕ ಒಂದು ಚಿಕ್ಕಾಸು ಕೊಟ್ಟಿಲ್ಲ. ಕೇಳಿದ್ರೆ ‘ನಿನ್ನ ಗಂಟೇನು ತಿಂದುಕೊಂಡು ಹೋದವನ್ನ ಹುಡುಕಿಕೊಂಡು ಬರಾಕೆ ಅಂತಾ ಆ ಕಣ್ಣಾಪಂಡಿತರಿಗೆ, ಆ ಪುಡಿ ಸಾಬ್ರಿಗೆ, ಆ ಕಿಲಸ್ತರ ಪಾದ್ರಿ ಜೀವರತ್ನಯ್ಯಗೆ, ಇನ್ನೂ ಯಾರು ಯಾರೊ ಹೆಸರನ್ನೆಲ್ಲ ಹೆಳ್ತಾರಪ್ಪಾ- ದುಡ್ಡು ಕೊಟ್ಟೂ ಕೊಟ್ಟೂ ಸಾಲ ಆಗಿದೆ ಅಂತಾರೆ!”

ವೆಂಕಟಣ್ಣಗೆ ನಗೆ ತಡೆಯುವುದಕ್ಕೆ ಆಗಲಿಲ್ಲ. ಬಾಯಲ್ಲಿದ್ದ ಎಲೆಯಡಿಕೆಯ ಉಗುಳು ಎಲ್ಲಿ ಶಂಕರಪ್ಪನ ಮುಖಕ್ಕೆ ಹಾರುತ್ತದೆಯೊ ಎಂದು ಹೆದರಿ ಬೇಗಬೇಗ ಎದ್ದುಹೋಗಿ ತೆಣೆಯ ಕೆಳಗಡೆ ಅಂಗಳದಲ್ಲಿಟ್ಟಿದ್ದ ಉಮ್ಮಿಡಬ್ಬಿಗೆ ಎಲ್ಲವನ್ನೂ ಉಗುಳಿ ಬಂದು, ದೊಡ್ಡದಾಗಿ ಅಟ್ಟಹಾಸ ಮಾಡುವಂತೆ ನಗುತ್ತಾ “ಅಂವ ಹೋಗಿ ಎಂಟ್ಹತ್ತು ವರ್ಷಾನೆ ಆಯ್ತೋ ಏನೋ? ಇನ್ನೂ ದುಡ್ಡು ಕೊಡ್ತಾನೆ ಇದ್ದಾರಂತೋ, ಅವನ್ನ ಹುಡಕ್ಕೊಂಡು ಬರಾಕೆ? ಅಂವ ದಾರಿಮೇಲೆ ವಾಂತಿಭೇದಿ ಹತ್ತಿಕೊಂಡು ಸತ್ತುಹೋದ ಅಂತಾ ಅವನ ಜೊತೆ ಹೋದೋರು, ಕಂಡೋರೆ ಹೇಳಿದ್ರೂ, ಇವರ ಆ ತೀರ್ಥಳ್ಳಿ ದಾಸಯ್ಯನ, ಅಂವ ಪಕ್ಕಾ ಕಳ್ಳ- ಅವನ ಮಾತು ಕಟ್ಟಿಕೊಂಡು ಅಂವ ಬದುಕಿದ್ದಾನೆ, ಇವತ್ತು ಬರ್ತಾನೆ, ನಾಳೆ ಬರ್ತಾನೆ, ಜೋಗೇರ ಗುಂಪಿನಲ್ಲಿ ಇದಾನಂತೆ, ಅವರು ಅಲ್ಲಿ ಕಂಡರಂತೆ, ಇವರು ಇಲ್ಲಿ ಮಾತಾಡಿಸಿದರಂತೆ. ಅಂತಾ ಏನೇನೋ ಸುಳ್ಳು ಹುಟ್ಟಿಸಿ, ಅವನ ಹೆಂಡ್ತಿ ತಲೇನೂ ಕೆಡ್ಸಿ,…. ಹಹ್ಹಹ್ಹಹ್ಹ…. ಒಟ್ಟು ನಿನ್ನ ದುಡ್ಡಿಗೆ ದುಡ್ಡಿಗೆ ಚಕ್ರ ಹಾಕಾಕೆ ಹುನಾರು ಮಾಡ್ತಿದ್ದಾರೆ!”

“ದಿನ ಬೆಳಗಾದರೆ ಆ ಪುಣ್ಯಾತಗಿತ್ತೀದೂ ಒಂದು ರಂಪ ಇದ್ದೇ ಇರ್ತದೆ. ಅದ್ಕಕೀಗ ತಲೆ ಪೂರಾ ಕೆಟ್ಟದೆ ಅಂತ ಕಾಣ್ತದೆ. ನಾವು ಒಟ್ಟಾಗಿದ್ದಾಗಲೆ ಷುರುವಾಗಿತ್ತು. ಪಾಲಾದ ಮೇಲೆ ಮತ್ತೂ ಹೆಚ್ಚಿದೆ. ನಾನು ಅದೂ ಸೇರಿ ತನ್ನ ಗಂಡಗೆ ಏನೋ ಮಂಕು ಬೂದಿ ಹಾಕಿಸಿ, ತಿರುಪತಿ ಯಾತ್ರೆಗೆ ಹೋದವ ಹಿಂದಕ್ಕೆ ಬರದೇ ಇದ್ದಹಾಂಗೆ ಮಾಡೀವಿ ಅಂತಾ!… ಅಂವ ಎಲ್ಲೊ ತಲೆಕೆಟ್ಟು, ಎಲ್ಲಾ ಮರೆತು, ಸನ್ನೇಸಿಗಳ ಹೊತೇಲಿ ತಿರುಗ್ತಾ ಅದಾನಂತೆ! ಅದಕ್ಕೀಗ ಧರ್ಮಸ್ಥಳಕ್ಕೆ ಹೋಗ, ದೇವರ ಕೇಳಿಸಿ, ಶಾಂತಿ ಮಾಡಿಸಬೇಕಂತೆ ಮರೆತು ಹೋದದ್ದೆಲ್ಲ ನೆನಪಾಗಿ ಮತ್ತೆ ಅಂವ ಮನೆಗೆ ಬರುವಂತೆ! ಅಲ್ಲೇ ನಮ್ಮ ಮನೆ ಎಲ್ಲಾ ಹಾಳಾಗಾಕೆ ಹುಯ್ಲು ಕೊಡಿಸ್ತಾರಂತೆ!”

"ಅದೊಂದು ಹುಚ್ಚು ಹೆಗ್ಗಡ್ತಿ! ತಿರುಪತೀಗೆ ಹೋದೋರು ಹಿಂದಕ್ಕೆ ಬರಾದೂ ಉಂಟೆ, ನೆರೇ ಹೊಳೀಗೆ ಬಿದ್ದೋರು ದಡ ಹತ್ತಾದೂ ಉಂಟೆ! ಅದೇನು ತೀರ್ಥಳ್ಳಿ ಎಳ್ಳಾಮಾಸೆಗೆ ಹೋಗಿ ಬಂದ ಹಾಂಗೇನು? ಎಷ್ಟು ದೂರ ಏನು ಕತೆ! ಕಳ್ಳರು ಕಾಕರು ಕಾಡು ಕಾಯಿಲೆ ಎಲ್ಲ ದಾಟಿಕೊಂಡು ಹೋದರೂ ಹಿಂದಕ್ಕೆ ಬರಾದುಂಟೇ? ತಿಮ್ಮಪ್ಪನ ಪಾದವೇ ಗತಿ!"

"ಅದೇನು, ಮಾರಾಯ, ಅಲ್ಲಿ? ಆ ಗಲಾಟೆ? ಆ ಹಂದಿ ಒಡ್ಡಿಹತ್ರ!" ಎನ್ನುತ್ತಾ ಶಂಕರಪ್ಪ ಹೆಗ್ಗಡೆ ಸೋಗೆಮನೆ ಅಂಗಳದ ಕಡೆ ನೋಡಿದರು.

"ನಂಗುಂದು ಹಂದಿಮರಿ ಬೇಕಾಗಿತ್ತೊ. ಹೇಳಿದ್ದೆ. ಅದ್ಕೇ ಹೆಗ್ಗಡೇರು ಹೊಲೇರ ಕೈಲಿ ಹಿಡಿಸಿ ಅಡ್ಡೆ ಕಟ್ಟಿಸ್ತಿದಾರೆ ಅಂತಾ ಕಾಣುತ್ತೆ."

"ಯಾಕೆ? ನೀನೂ ಹಂದಿ ಸಾಕ್ತೀಯಾ?"

"ಅಯ್ಯಯ್ಯಯ್ಯೋ ಆ ಹೇಸಿಗೆ, ಆ ಫಚೀತಿ ನಂಗೆ ಬ್ಯಾಡಪ್ಪಾ! ಏನೋ ದೆಯ್ಯದ ಹರಕೆಗೆ ಬೇಕಾದಾಗ ಯಾರ ಹತ್ರನಾದರೂ ಹೋಗಿ ತಂದರಾಯ್ತು."

ವೆಂಕಟಣ್ಣ ತಾನು ಹಂದಿಮರಿ ತೆಗೆದುಕೊಂಡು ಹೋಗುತ್ತೇನೆ ಎಂದದ್ದು ಬರಿಯ ರೂಢಿಯ ಮಾತಾಗಿತ್ತು. ಅವನಿಗೆ ಬೇಕಾಗಿದ್ದುದು ನಿಜವಾಗಿಯೂಮರಿಯಾಗಿರಲಿಲ್ಲ. ತಕ್ಕಮಟ್ಟಿಗೆ ದೊಡ್ಡ ಸಲಗವನ್ನೆ ಕೇಳಿದ್ದನು. ಅದರಂತೆ ಸುಬ್ಬಣ್ಣ ಹೆಗ್ಗಡೆಯವರು ಬೆಳಿಗ್ಗೆಯೆ ತನ್ನ ಪ್ರಾಯದ ಮದದಿಂದ ಸಣ್ಣ ಮರಿಗಳೆನ್ನದೆ ಆಗತಾನೆ ಮರಿಹಾಕಿದ್ದವೆನ್ನದೆ ಗಬ್ಬದ ದಡ್ಡೆಗಳೆನ್ನದೆ ಎಲ್ಲವುಗಳ ಮೇಲೆಯೂ ಹತ್ತಿ ಹತ್ತಿ, ಕಚ್ಚಿ ತಿವಿದು, ಗಾಯಗೊಳಿಸಿ ದೊಂಬಿ ಎಬ್ಬಿಸುತ್ತಿದ್ದ ಒಂದು ಸಲಗವನ್ನು ವೆಂಕಟಣ್ಣಗೆ ಮಾರಿಬಿಡಬೇಕೆಂದು ನಿರ್ಣಯ ಮಾಡಿಬಿಟ್ಟಿದ್ದರು. ಅಪರಾಧಿಯಾದ ಹಂದಿಗೆ ಮರಣದಂಟನೆ, ಅದನ್ನು ಮಾರುವ ತಮಗೆ ಧನಲಾಭ; ಕೊಳ್ಳುವವನಿಗೆ ಕೊಳಗ್ಗಟ್ಟಲೆ ಮಾಂಸ, ಒಡ್ಡಿಯ ಇತರ ಚತುಷ್ಪಾದಿ ಪ್ರಜೆಗಳಿಗೆ ಕ್ಷೇಮ- ಎಲ್ಲವೂ ಒಟ್ಟಿಗೆ ಸಂಘಟಿಸುವಂತೆ!

"ಈಗ ಎಂಥ ದೆಯ್ಯದ ಹರಕೇನೊ ನಿನಗೆ?" ಶಂಕರಪ್ಪ ಒಳಗೊಳಗೇ ನಗುತ್ತಾ ಕೇಳಿದರು. ಗುಸುಗುಸು ಸುದ್ದಿ ಅವರ ಕಿವಿಗೂ ಬಿದ್ದಿತ್ತು, ನಾಗತ್ತೆ ತನ್ನ ಸೊಸೆಯನ್ನು ವೆಂಕಟಣ್ಣಗೆ ಸೀರುಡಿಕೆ ಮಾಡಿಸಲು ಒಂದು ವರ್ಷದಿಂದಲೂ ಬಹಳ ಉಪಾಯ ಮಾಡುತ್ತಿದ್ದಾಳೆ ಎಂದು. ಆ ವಿಚಾರದಲ್ಲಿ ನಾಗಕ್ಕ ಇತರ ಗಂಡುಗಳೊಡನೆ ಬೇರೆ ಬೇರೆಯ ಕಡೆಗಳಲ್ಲಿ ಹೇಗೆ ನಡೆದುಕೊಂಡಿದ್ದಳು ಎಂಬುದಂತೂ ಎಲ್ಲರಿಗೂ ಗೊತ್ತಿದ್ದಂತೆ ಅವರಿಗೂ ತಿಳಿದ ವಿಷಯವಾಗಿತ್ತು. ಆದ್ದರಿಂದಲೆ ಹಿತವಲ್ಲದ ಆ ಪರಸಂಗವನ್ನು ಕುರಿತು ತಾವು ಬಾಯಿಬಿಟ್ಟು ಕೇಳಲು ಹಿಂದೆಗೆದಿದ್ದರು.

"ನಮ್ಮ ಮನೆ ಹಿಂದೆ, ಅದೇ ಆ ಹಾಡ್ಯದ ಬಲಗಡೆಗೆ, ಉಂಡು ಮಾರಿಗುಡಿ ಇದೆಯಲ್ಲಾ?.... ನೀನು ನೋಡೀಯಲ್ಲಾ?" ವೆಂಕಟಣ್ಣ ಮಾರಿ ಹರಕೆಯ ವಿಶೇಷಕ್ಕಾಗಿ ಹಂದಿ ತೆಗೆದುಕೊಂಡು ಹೋಗುತ್ತಿರುವುದೆಂದು ನಿಜವನ್ನು ಮರೆಸಿದ್ದ.

"ಹ್ಹೂ ನೋಡೀನಿ ಅಂತ ಕಾಣ್ತದೆ. ಯಾವತ್ತೊ ಒಂದು ಸಾರಿ ದೊಡ್ಡ ಬೇಟೆಗೆ ಹೋದಾಗ, ಆ ಗುಡಿ ಬದೀಲೆ ಅಲ್ಲೇನು ಮಿಣಬಲೆಗೆ ಒಂದು ಒಂಟಿಗ ಬಿದ್ದು, ನೀನು ಭರ್ಜಿಲಿ ತಿವಿದು, ಒಂದುರುಳು ಉರುಳು ಹಂದಿ ಹತ್ರಾನೆ ಬಿದ್ದದ್ದು!..." ವೆಂಕಟಣ್ಣ ಆ ಘಟನೆಯನ್ನು ನೆನೆದು ಹೊಹ್ಹೊಹ್ಹೊಹ್ಹೊ ಎಂದು ಗಟ್ಟಿಯಾಗಿ ನಗುತ್ತಿರಲು ಶಂಕರಪ್ಪ ಮುಂದುವರಿಸಿ "ನಮ್ಮ ತಿರುಪತಿಗೆ ಹೋದ ದೊಡ್ಡಣ್ಣ ಅದಕ್ಕೊಂದು ಈಡು ಹೊಡೀದಿದ್ದರೆ ನಿನ್ನ ಗತಿ ಮುಗೀತಿತ್ತು...."

"ಹೌದಲ್ಲಾ?.... ಆ ಮಾರಾಯನಿಂದ ನನ್ನ ಪರಾಣ ಉಳೀತು! ಪುಣ್ಯಾತ್ಮ! ತಿಮ್ಮಪ್ಪ ಅವನಿಗೆ ಒಳ್ಳೇದು ಮಾಡ್ಲಿ!"

"ಬದುಕಿದ್ದರೆ ತಾನೆ ಒಳ್ಳೇದು ಮಾಡಾದು? ನೀನೇ ಹೇಳ್ದೆ, ವಾಂತಿಭೇದಿ ಆಗಿ ಅಂವ ಸತ್ತಿದ್ನ ಕಂಡೋರೆ ಹೇಳಿದ್ರು ಅಂತಾ."

"ಯಾರಿಗೂ ಗೊತ್ತು ಯಾವುದು ನಿಜಾ ಅಂತ? ಕಡೀಗೆ ಆ ತೀರ್ಥಳ್ಳಿ ದಾಸಯ್ಯನ ಮಾತೇ ಸತ್ಯವಾದ್ರೂ ಆಗಬ್ಹೈದು?....

"ಅದೇನು ಗುಲ್ಲು, ಮಾರಾಯ? ಇತ್ತ ಮಖಾನೆ ಬರಾಹಾಂಗೆ ಕಾಣ್ತದೆ!"

ಅತ್ತಕಡೆಗೆ ಬೆನ್ನುಹಾಕಿ ಕುಳಿತಿದ್ದ ವೆಂಕಟಣ್ಣ ಶಂಕರಪ್ಪ ಹೆಗ್ಗಡೆಯವರು ಹೇಳಿದ್ದು ಕೇಳಿ ಆ ಕಡೆ ಮುಖ ತಿರುಗಿಸಿ ನೋಡುತ್ತಾನೆ: ಹಂದಿ, ನಾಯಿ, ಮನುಷ್ಯರು, ಬೊಬ್ಬೆ, ಕರೆ, ಕೂಗು, ಬೂಗುಳ, ಗಲಾಟೆ 'ಹಿಡಿಯೋ"', 'ಹೊಡೆಯೋ', 'ಅವರ ಮನೆ ಅಂಗಳಕ್ಕೆ ನುಗ್ತದಲ್ಲೋ', 'ಮುಂದೆ ಹೋಗಿ ಅಡ್ಡ ಹಾಕೋ', 'ತಡೆಯೋ!' 'ಓಡೋ, ಬೇಗೋಡೋ, ನಿನ್ನ ಗುಡ್ಲೀಗೆ ಬೆಂಕಿ ಬೀಳ!' ಎಂಬೆಲ್ಲ ಸದ್ದಿನ ತುಮುಲವು ಶರವೇಗದಿಂದ ನುಗ್ಗಿ ತಾವಿದ್ದ ಕಡೆಗೇ ಮೇಲ್ವಾಯುತ್ತಿದೆ!

ಶಂಕರಪ್ಪ ಹೆಗ್ಗಡೆಯವರು ಸ್ನಾನಮಾಡಿ ಕೆದರಿ ಬೆನ್ನಮೇಲೆ ಇಳಿಬಿಟ್ಟಿದ್ದ ತಮ್ಮ ಉದ್ದನೆಯ ಕೂದಲನ್ನು ಬೇಗಬೇಗನೆ ಒಟ್ಟು ಮಾಡಿ ಜುಟ್ಟು ಕಟ್ಟಿಕೊಳ್ಳುತ್ತಾ "ಅಯ್ಯಯ್ಯೋ! ಹೊಲೆಮಾದಿಗೆ ಸಾವಾಸ! ತುಳಸೀ ಮೇಲೆ ನುಗ್ಗಿಸ್ತಾರಲ್ಲೋ ಹೇಲ್ ತಿನ್ನ ಹಂದೀನ! ಥೂ!" ಎಂದು ಕೂಗುತ್ತಲೆ ಮೆಟ್ಟಲು ಹಾರಿ ಅಂಗಳಕ್ಕೆ ದುಮುಕಿದರು. ವೆಂಕಟಣ್ಣ ಆ ಉದ್ವೇಗ ಉತ್ಸಾಹ ಅವಸರಗಳಲ್ಲಿ ತನ್ನ ಕಾಲಿನ ಹುಣ್ಣನ್ನು ಮರೆತು, ಹಂದಿಗೆ ಹೇರಲೆಂದೊ, ಇಲ್ಲವೆ ಅಂಗಳಕ್ಕೆ ಧಾವಿಸುತ್ತಿದ್ದ ದಾಳಿಯನ್ನು ತಡೆಯಲೆಂದೊ, ತಟಕ್ಕನೆ ಎದ್ದು ಬಳಿಯಿದ್ದ ದೊಣ್ಣೆಯನ್ನು ತುಡುಕಿ ಶಂಕರಪ್ಪನ ಹಿಂದೆಯೆ ನುಗ್ಗಿದನು. ಆದರೆ ಮೆಟ್ಟಲಿಗೆ ಹಾರಿದವನೆ ದೊಸಕ್ಕನೆ ಕೂತು 'ಅಯ್ಯಪ್ಪಾ' ಎಂದು ಒರಲಿಬಿಟ್ಟನು! ಕಣ್ಣಾಪಂಡಿತರು ಮದ್ದು  ಹಾಕಿ ಕಟ್ಟಿದ ಬಟ್ಟೆಯೆಲ್ಲ ಕಂಪಾಗಿ, ನೆತ್ತರು ಇಳಿಯ ತೊಡಗಿತು. ಆದರೆ ಯಾರೊಬ್ಬರೂ ಅವನಿಗೆ ಒದಗಿದ್ದ ಆ ದುರವಸ್ಥೆಯನ್ನು ಗಮನಿಸುವ ಸ್ಥಿತಿಯಲ್ಲಿರಲಿಲ್ಲ. ಗಲಾಟೆಯನ್ನು ಕೇಳಿ ಕೂಸನ್ನೆತ್ತಿಕೊಂಡು ಬಂದು ಜಗಲಿಯ ಮೇಲೆ ಮಗ ರಾಮು ಮತ್ತು ಬಾಲೆ ಆಡಿಸುವ ಹುಡುಗಿ ಕೆಂಪಿ ಇವರೊಡನೆ ನಿಂತಿದ್ದ ಸೀತಮ್ಮನವರೂ ನಾಯಿಗಳೂ ಮನುಷ್ಯರೂ ತುರುಬಿಕೊಂಡು ಬರುತ್ತಿದ್ದ ಹಂದಿಯನ್ನೆ ನೋಡುತ್ತಿದ್ದರು.

* * *

# ೧೩

ತಂದೆಯ ಕೈಯಲ್ಲಿ ಬಯ್ಯಿಸಿಕೊಂಡ ಸಿಟ್ಟಿನ ಭರದಲ್ಲಿ ತಿಮ್ಮಪ್ಪ ಹೆಗ್ಗಡೆ ಮುಖ ತೊಳೆಯದೆ, ಹಲ್ಲು ತಿಕ್ಕುತ್ತಿದ್ದ ಮಸಿಯಿಂದ ತುಟಿ ಬಾಯಿ ಎಲ್ಲ ಕರ್ರಗಾಗಿ ಜೊಲ್ಲಿಳಿಯುತ್ತಿದ್ದುದನ್ನೂ ಲೆಕ್ಕಿಸದೆ ಹೊಲಗೇರಿ ಕಡೆ ಹೊರಟಿದ್ದನು. ಆದರೆ ದಾರಿಯಲ್ಲಿ ಒಂದು ಹುಳಿಚೊಪ್ಪಿನ ಮಟ್ಟಿನ ಬುಡದ ಸಣ್ಣ ಹೊಂಡದಲ್ಲಿ ನಿನ್ನೆ ಬಿದ್ದ ಭಾರಿ ಮಳೆಯ ದೆಸೆಯಿಂದ ಸ್ವಲ್ಪ ನೀರು ನಿಂತಿದ್ದುದನ್ನು ಕಂಡ ಕೂಡಲೆ ಅದರ ಬುಡಕ್ಕೆ ಹೋಗಿ ಬಗ್ಗಿ ನೋಡಿದನು.  ತುಂಬಿದ್ದ ಹೊಂಡದ ಕೊಳಕು ನೀರಿನ ಕನ್ನಡಿಯಲ್ಲಿ ತನ್ನ ಮುಖದ ಪಡಿನೆಳಲು ಕಣ್ಣಿಗೆ ಬೀಳಲು ಅವನಿಗೆ ನಾಚಿಕೆಯಾದಂತಾಯಿತು. ಸಹಜವಾಗಿಯೆ ತಾನು ಎಲ್ಲರಿಗೂ ಚೆನ್ನಾಗಿ ಕಾಣಿಸಬೇಕು ಎಂಬ ಪ್ರಾಯದ ವಯಸ್ಸಿನ ಅವನಿಗೆ ತನ್ನ ಆ ವಿಕಾರ ವೇಷ ಜಿಗುಪ್ಸೆ ಹುಟ್ಟಿಸಿತು. ತಾನು ಹೋಗುತ್ತಿದ್ದುದು ಹೊಲೆಯರ ಕೇರಿಗಾಗಿದ್ದರೂ, ಅಲ್ಲಿ ತನ್ನ ರೂಪ ಸೌಂದರ್ಯಗಳನ್ನು ಯಾರಾದರೂ ಗಮನಿಸುವುದಾಗಲಿ ಗಮನಿಸದಿರುವುದಾಗಲಿ ಎರಡೂ ಅಪ್ರಕೃತವಾಗಿದ್ದರೂ, ತಿಮ್ಮಪ್ಪ ಹೆಗ್ಗಡೆ ಆ ಹೊಂಡದ ನೀರಿನಲ್ಲಿ ಮುಖ ತೊಳೆಯಲು ಮನಸ್ಸು ಮಾಡಿದನು. ಆದರೆ ಮತ್ತೂ ಒಂದು ಯೋಚನೆ ತಲೆದೋರಿ ಅವನು ಹಿಂಜರಿದನು. 'ಯಾರಾದರೂ ಆ ನೀರಿನಲ್ಲಿ ಅಂಡು ತೊಳೆದುಬಿಟ್ಟದ್ದರೆ?' 'ನಿನ್ನೆ ರಾತ್ರಿ ಬಿದ್ದ ಮಳೆಯಲ್ಲಿ ನೀರು ನಿಂತದ್ದು. ಇಷ್ಟು ಬೆಳಿಗ್ಗೆ ಯಾರು ಬರ್ತಾರೆ ಇಲ್ಲಿಗೆ?' 'ಅಯ್ಯೋ ನಾನೆ ಎಷ್ಟು ಸಾರಿ ಹೀಗೆ ನಿಂತ ನೀರಿನಲ್ಲಿ ಹೊರಕಡೆಗೆ ಹೋಗಿ ತೊಳಕೊಂಡಿಲ್? ಅದರಲ್ಲೇನು ಅಂಥಾ ದೋಷ?' 'ಉರಿಯುವ ಬೆಂಕಿಗೂ ಹರಿಯುವ ನೀರಿಗೂ ಶಾಸ್ತ್ರ ಇಲ್ಲ ಅಂತಾರೆ. ಹರಿಯುವ ನೀರಾದರೇನು? ನಿಂತ ನೀರಾದರೇನು?' ತಿಮ್ಮಪ್ಪ ತನ್ನ ಮನಸ್ಸಿನಲ್ಲಿಯೆ ಇನ್ನೊಂದು ಅತ್ಯಂತ ಅಶ್ಲೀಲದ ಗಾದೆಯನ್ನೂ ಹೇಳಿಕೊಂಡು, ಮುಖ ತೊಳೆಯುವುದಕ್ಕೆ ಬದಲಾಗಿ ಮಸಿ ಹಿಡಿದಿದ್ದ ತುಟಿ ಬಾಯಿಗಳನ್ನು ಮಾತ್ರವೆ ತೊಳೆದುಕೊಂಡನು. ಮತ್ತೆ ನೀರಿನಲ್ಲಿ ಮುಖ ನೋಡಿಕೊಂಡು ತನ್ನ ತಿಪ್ಪುಳುಮೀಸೆಗಳನ್ನು ಗಮನಿಸಿ ತೃಪ್ತಿಪಟ್ಟುಕೊಂಡನು. ಕೇರಿ ಹೊಲೆಯರದ್ದೆ ಆಗಿದ್ದರೂ ಅಲ್ಲಿದ್ದವರೆಲ್ಲರೂ ತಾನು ಮುಟ್ಟದವರಾದ ತಮ್ಮ ಜೀತದಾಳುಗಳೆ ಆಗಿದ್ದರೂ, ಅಲ್ಲಿಯೂ ತಾನು ಕಣ್ಣಿಡಲು ಯೋಗ್ಯವಾದ ಹೆಣ್ಣಗಳಿರಬಹುದು ಎಂಬುದನ್ನು ಯುವ ಹೆಗ್ಗಡೆಯ ಅಂತಶ್ಚಿತ್ತ ಅಲಕ್ಷಿಸಿರಲಿಲ್ಲ.

ಹೊಲಗೇರಿ ಹತ್ತಿರಕ್ಕೆ ಬಂದಹಾಗೆಲ್ಲ ಅದರ ಸಮ್ಮಿಶ್ರ ಶಬ್ದ ಪ್ರಪಂಚವೂ ವಾಸನಾ ಪ್ರಪಂಚವೂ ಸ್ವಲ್ಪ ಹೆಚ್ಚು ಕಡಿಮೆ ಅಂತಹ ಪ್ರಪಂಚದಲ್ಲಿಯೆ ವಾಸಿಸುತ್ತಿದ್ದ ತಿಮ್ಮಪ್ಪ ಹೆಗ್ಗಡೆಗೂ ಮೂಗೂ ಮುಚ್ಚಿಕೊಳ್ಳುವಷ್ಟು ತೀವ್ರತರವಾಗಿ ಇಂದ್ರಿಗೋಚರವಾಗತೊಡಗಿತ್ತು. ಕೋಳಿ, ಕುರಿ, ನಾಯಿ, ಹಂದಿ, ಮನುಷ್ಯರು, ದನಕರು ಇವೆಲ್ಲ ಪ್ರಾಣಿಗಳ ದುರ್ಗಂಧದ ಅವಿಭಕ್ತ ಕುಟುಂಬದ ವಾಯುವಲಯಕ್ಕೆ ಪ್ರವೇಶಿಸಿ, ಕೇರಿ ಪ್ರಾರಂಭವಾಗುವ ಸ್ಥಳಕ್ಕೆ ಸಮೀಪದಲ್ಲಿಯೆ ಅದರ ದ್ವಾರ ರಕ್ಷಣಾ ಪ್ರದೇಶವೆಂಬಂತೆ ಎತ್ತರವಾಗಿದ್ದ 'ಒಡೇರ ದಿಬ್ಬ'ದ ಮೇಲೆ ನಿಂತು, ತಿಮ್ಮಪ್ಪ ಹೆಗ್ಗಡೆ ವೀಕ್ಷಿಸತೊಡಗಿದನು.

ಅವನು ನಿಂತಿದ್ದ ದಿಬ್ಬವನ್ನು 'ಒಡೆಯರ ದಿಬ್ಬ' ಎಂದೂ 'ಹೆಗ್ಗಡೇರ ದಿಬ್ಬ' ಎಂದೂ ಸಮಯಾನುಸಾರವಾಗಿ ಕರೆಯುತ್ತಿದ್ದರು ಆ ಕೇರಿಯವರು. ಏಕೆಂದರೆ ನೂರಾರು ವರ್ಷಗಳಿಂದ, ವಂಶಪಾರಂಪರ್ಯವಾಗಿ ಹೆಗ್ಗಡೆಯವರ ಮನೆತನಕ್ಕೆ ಗೆಯ್ಯುತ್ತಿದ್ದ ಜೀತದಾಳುಗಳು, ತಾವು ಮಕ್ಕಳಾದಂದಿನಿಂದಲೂ, ದಿನವೂ ಪ್ರಾತಃಕಾಲದಲ್ಲಿ ತಮ್ಮನ್ನು ಕೆಲಸಕ್ಕೆ ಕರೆಯಲು ಬರುತ್ತಿದ್ದ ಒಡೆಯರನ್ನು ಆ ದಿಬ್ಬದ ನೆತ್ತಿಯ ಮೇಲೆಯೆ ನೋಡುತ್ತಿದ್ದುದು ವಾಡಿಕೆಯಾಗಿತ್ತು,

ನಿಸರ್ಗ ವ್ಯಾಪಾರವೊ ಎನ್ನುವಷ್ಟರ ಮಟ್ಟಿಗೆ. ಆ 'ಒಡೇರ ದಿಬ್ಬ'ದ ಮೇಲೆ ನಿಂತು ನೋಡಿದರೆ, ಮೂವತ್ತು ನಾಲ್ವತ್ತು ಬಿಡಾರಗಳ ಆ ಹೊಲಗೇರಿಯೆಲ್ಲವೂ ಎದುರಿಗೆ ಬಿಚ್ಚಿಟ್ಟಂತೆ ಕಾಣಿಸುತ್ತಿತ್ತು. ಅಲ್ಲಿದ್ದ ಆ ಮೂವತ್ತು ನಾಲ್ವತ್ತು ಬಿಡಾರಗಳೂ ಯಾವ ಕ್ರಮವನ್ನೂ ಅನುಸರಿಸಿ ಮೂಡಿರಲಿಲ್ಲ. ಕಟ್ಟುವವನ ಅನುಕೂಲ, ಇಚ್ಛೆ, ಅವಶ್ಯಕತೆಗನುಸಾರವಾಗಿ ಒಂದೊಂದು ಬಿಡಾರವೂ ಇತರ ಯಾವ ಬಿಡಾರದ ದಯೆ ದಾಕ್ಷಿಣ್ಯಗಳಿಗೂ ಒಳಗಾಗದೆ ಹುಟ್ಟಿಕೊಂಡಿತ್ತು. ಕೆಲವು ಬಿಡಾರಗಳ ಎದುರಿನಲ್ಲಿ ಮುಂದೆ ಎತ್ತರದಲ್ಲಿದ್ದ ಬಿಡಾರಗಳ ಕೊಳಕು ನೀಡು ಮಡುಗಟ್ಟಿ, ಹಂದಿಗಳಿಗೆ ಮಗ್ಗಲು ಬೀಳುವ ಕೆಸರು ಮಡುಗಳಾಗಿ, ಕೋಳಿಗಳಿಗೆ ಕೆದರಲು ಆಹಾರದ ಗಣಿಗಳಾಗಿದ್ದುವು. ಆ ಕಡೆ ಈ ಕಡೆ ಅಕ್ರಮವಾಗಿಯೆ ಹಂಚಿಹೋಗಿದ್ದ ಗುಡುಸಲುಗಳ ಮಧ್ಯೆ ಅಂಗಳವೂ ಅಲ್ಲದ, ರಸ್ತೆಯೂ ಅಲ್ಲದ, ಅಥವಾ ಎರಡೂ ಆಗಿರುವ ಒಂದು ಹತ್ತಾರು ಮಾರು ಬಯಲು ಜಾಗವಿತ್ತು. ಅಲ್ಲಿ ಕೇರಿಯ ಬಡ್ಡು ಮೆಯ್ಯ ಬತ್ತಲೆ ಮಕ್ಕಳು ಆಟವಾಡುತ್ತಿದ್ದರೆ ಆ ಪಕ್ಕದ ಈ ಪಕ್ಕಡ ಬಿಡಾರಗಳ ಜಗಲಿಯಲ್ಲಿಯೊ ತೆಣಿಯ ಮೇಲೆಯೊ ಕೆಲಸದಿಂದ ಹಿಂದಿರುಗಿ ಬಂದು ದಣಿದ ದೊಡ್ಡವರು ಕುಳಿತು ಬಾಯಿಗೆ ಹಾಕಿಕೊಳ್ಳುತ್ತಲೊ ಹರಟೆ ಹೊಡೆಯುತ್ತಲೊ ಸಂಸಾರ ಸಾರ ಸುಖವನ್ನು ಅನುಭವಿಸಬಹುದಾಗಿತ್ತು.

'ಹೆಗ್ಗಡೇರ ದಿಬ್ಬ'ದ ಮೇಲೆ ನಿಂತಿದ್ದ ಒಡೆಯರ ಆಗಮನವನ್ನು ಮೊತ್ತ ಮೊದಲು ಗಮನಿಸಿ, ಕೇರಿಗೆ ವತರತಮಾನ ಕೊಟ್ಟದ್ದು ಮರಿಹಾಕಿದ್ದ ಒಂದು ಕರಿನಾಯಿ. ಅದರ ಸುತ್ತಲೂ ಮುಲುಮುಲು ಓಡಾಡುತ್ತಾ ತಮ್ಮ ಬಡಕಲು ತಾಯಿಯ ಸೊರಗಿದ ಜೋಲು ಮೊಲೆಗಳನ್ನು ಚೀಪಿ ಜಗ್ಗಿಸುತ್ತಿದ್ದ ಕರಿಯ ಬಿಳಿಯ ಹಂಡಹುಂಡ ಮರಿಗಳು, ತಮ್ಮ ತಾಯಿಗೆ ಮತ್ತು ತಂದೆಯವರಿಗೆ ಅನ್ನಾನೀರು ಹಾಕಿ ಸಾಕಿ ಸಲಹುತ್ತಿದ್ದ ಮುಷ್ಯ ಯಜಮಾನರ ಬದುಕು ಬಾಳು ಆಗುಹೋಗು ಜನನ ಮರಣ ಮದುವೆ ಹಬ್ಬ ಸಾಲ ಸೂಲ ಎಲ್ಲಕ್ಕೂ ಬ್ರಹ್ಮ ವಿಷ್ಣು ಮಹೇಶ್ವರರಾಗಿದ್ದ ಹೆಗ್ಗಡೆಯವರಿಗೆ ಸಲ್ಲಬೇಕಾಗಿದ್ದ ಲಕ್ಷವನ್ನಾಗಲಿ ಭಯ ಭಕ್ತಿ ಗೌರವಗಳನ್ನಾಗಲಿ ಒಂದಿನಿತೂ ಸಲ್ಲಿಸದೆ, ಜೋಲು ಮೊಲೆಗಳನ್ನು ಜಗ್ಗಿ ಸೆಳೆದು ಚೀಪುತ್ತಿದ್ದುವು, ತಾಯಿ ಬೊಗಳುತ್ತಾ ನಿಂತದ್ದು ತಮಗೆ ಅನುಕೂಲವೆ ಆಯಿತೆಂದು, ಹಿಂಗಾಲಿನ ಮೇಲೆ ನಿಂತು ಮುಂಗಾಲನ್ನು ತಾಯಿಯ ಹೊಟ್ಟೆಗೆ ಆನಿಸಿ ಮೋಟುಬಾಲಗಳನ್ನು ಲಿವಿಲಿವಿಲಿವಿ ಅಳ್ಳಾಡಿಸುತ್ತಾ. ಆ ಕರಿನಾಯಿಯ ಬೊಗಳಿಕೆ ಕಿವಿಗೆ ಬಿದ್ದುದೆ ತಡ ಒಂದೊಂದು ಬಿಡಾರದ ಮುಂದೆಯೂ ಅಲ್ಲಿ ಇಲ್ಲಿ ನಾನಾ ಕ್ರೀಡೆಗಳಲ್ಲಿ ನಾನಾ ಭಂಗಿಗಳಲ್ಲಿ ಮಲಗಿದ್ದ ಕುಳಿತಿದ್ದ ನಿಂತಿದ್ದ ನಾಯಿಗಳೆಲ್ಲ ತಮ್ಮ ಹತ್ತಿಪ್ಪತ್ತು ಗಂಟಲುಗಳನ್ನು ಒಕ್ಕೊರಲಾಗಿಸಿ ಬೊಗಳತೊಡಗಿದುವು. ನಾಯಿಗಳ ಕೂಗಾಟಕ್ಕೆ ಗಾರಾಗಿ ಕೋಳಿಗಳೂ ದಿಗಿಲುಗೊಂಡಂತೆ ಕೂಗತೊಡಗಿದುವು.

ಒಡೆಯರ ದಿಬ್ಬಕ್ಕೆ ಉಳಿದೆಲ್ಲ ಬಿಡಾರಗಳಿಗೂ ಮೊದಲನೆಯದಾಗಿ ಸಮೀಪವಾಗಿದ್ದ ಮಂಜನ ಬಿಡಾರದ ಒಳಗೆ, ಹಾಳೆ ಕೊಟ್ಟೆಯಲ್ಲಿ ಗಂಜಿ ಉಣ್ಣುತ್ತಿದ್ದ ಮಂಜ, ತಟಕ್ಕನೆ ಗಾಬರಿಗೊಂಡು ತನ್ನ ಹೆಂಡತಿ ಸಿದ್ದಿಗೆ ಪಿಸುದನಿಯಲ್ಲಿ "ಏ, ನಾಯಿ ಕೂಗ್ತವೆಯೇ! 'ಮನೆ'ಯಿಂದ ಯಾರಾದ್ರೂ ಬಂದರುಗಿಂದರೊ? ನೋಡೆ!" ಎಂದು ಆಜ್ಞಾಪಿಸಿ, ಗುಡಿಸಲಿನ ತಟ್ಟಿ ಬಾಗಿಲೆಡೆಗೆ ಹೋಗುತ್ತಿದ್ದವಳಿಗೆ ಎಚ್ಚರಿಕೆ ಕೊಟ್ಟನು: ಒಳಗಿನಿಂದಲೆ ನೋಡೇ. ಹೊರಗೆ ತಲೆ ಹಾಕಬ್ಯಾಡೇ, ಕಂಡವರ್ನೇ ಹಿಡುಕೊಂಡು ಬಿಡ್ತಾರೇ!"

ಸಿದ್ದಿ ಬಾಗಿಲಿಗೆ ತುಸು ದೂರದಲ್ಲಿಯೆ ನಸುಗತ್ತಲೆಯಲ್ಲಿ ನಿಂತು, ಬಗ್ಗಿ ನೋಡಿ, ಪಿಸುದನಿಯಲ್ಲಿಯೆ ಹೇಳಿದಳು: "ಒಡೇರ ದಿಬ್ಬದ ಮ್ಯಾಲೇ ಹೆಗ್ಗಡೇರು ನಂತಾರೆ ಕಣ್ರೋ!"

“ಬಾಗಿಲು ವಾರೆ ಮಾಡೇ, ಬ್ಯಾಗ!” ದಿಗಿಲುಗೊಂಡಂತಿತ್ತು ಮಂಜನ ಪಿಸುದನಿ.

ಸಿದ್ದಿ ಗಂಡನ ಸಲಹೆಯ ಮೇರೆಗೆ ತಟ್ಟಿ ಬಾಗಿಲನ್ನು, ಇನ್ನೇನು ಪೂರ್ತಿ ಮುಚ್ಚಿಯೆ ಬಿಟ್ಟಿತು ಎನ್ನುವಷ್ಟರ ಮಟ್ಟಿಗೆ, ಬೇಗ ಬೇಗನೆ ಓರೆಮಾಡಿದಳು.

“ನಾನು ಇವತ್ತು ಬೆಟ್ಟಳ್ಳಿಗೆ ಹೋಗಬೇಕಾಗದೆ. ಕೆಲಸಕ್ಕೆ ಬಾ ಅಂತ ಕೂತರೆ ಏನು ಮಾಡಾದು?” ಎನ್ನುತ್ತಾ ಮಂಜ ಗಂಜಿ ಉಣ್ಣತೊಡಗಿದನು.

ನಾಯಿ ಕೋಳಿಗಳ ಬೊಬ್ಬೆ ಇಳಿಮುಖವಾಗುತ್ತಿರಲು, ಹೆಸರು ಹಿಡಿದು ಕರೆಯಲು ಯಾರೂ ಕಣ್ಣಿಗೆ ಬೀಳದಿದ್ದುದಕ್ಕಾಗಿ ರೇಗಿ, ತಿಮ್ಮಪ್ಪ ಹೆಗ್ಗಡೆ “ಎಲ್ಲಿ ಸತ್ರೋ ಎಲ್ಲಾ? ನಿಮ್ಮ ಬಿಡಾರಕ್ಕೆ ಬೆಂಕಿ ಬೀಳ! ಊರಿಗೆಲ್ಲಾ ಹಗಲಾದ್ರೂ ನಿಮಗಿನ್ನೂ ಬೆಳಗಾಗಿಲ್ಲೇನ್ರೋ?” ಎಂದು ಗಟ್ಟಿಯಾಗಿ ಅಬ್ಬರಿಸಿ ಕಾಕು ಕೂಗಿದ ಹೊಡೆತಕ್ಕೆ ನಾಯಿ ಕೋಳಿಗಳೆಲ್ಲ ಮತ್ತೊಮ್ಮೆ ಬೊಬ್ಬೆ ಹಾಕತೊಡಗಿದುವು. ಒಂದೊಂದು ಬಿಡಾರದಲ್ಲಿಯೂ ಪ್ರತ್ಯೇಕ ಪ್ರತ್ಯೇಕವಾಗಿ ಜರುಗುತ್ತಿದ್ದ ವಿಶಿಷ್ಟ ವ್ಯಾಪಾರಗಳೆಲ್ಲವೂ ಕ್ಷಣಮಾತ್ರದಲ್ಲಿ ಸ್ತಂಭೀಭೂತವಾದವು.

ತನ್ನ ಬಿಡಾರದ ಬಾಗಿಲೆಡೆಯೆ ಪ್ರಾತಃ ಸೂರ್ಯಕಾಂತಿಗೆ ಬೆಂದಿರುಹಿ ಕುಳಿತು, ಸೊಂಟದ ಪಂಚೆಯನ್ನು ಅರ್ಧಅರ್ಧವಾಗಿಯೆ ಬಿಚ್ಚಿ, ಮಡಿಕೆ ಮಡಿಕೆಗಳನ್ನೂ ಒಂದೊಂದನ್ನಾಗಿ ಹುಡುಕಿನೋಡಿ, ಕೂರೆ ಹೆರಕಿ ಕುಕ್ಕುತ್ತಿದ್ದ ತಿಮ್ಮ, ಹೆರಕಿದ್ದ ಕೂರೆಯೊಂದನ್ನು ಹಾಗೆಯೆ ಹಿಡಿದುಕೊಂಡು, ನೀಳವಾಗಿ ಬೆಳೆದಿದ್ದ ತನ್ನ ಕೊಳಕಲು ತಲೆಗೂದಲಿನಲ್ಲಿ ಹೇನು ಹೆಕ್ಕುತ್ತಿದ್ದ ಹೆಂಡತಿ ಗಿಡ್ಡಿಗೆ “ಅದೇನು ಗಲಾಟೆ? ಕೆಲಸಗಿಲಸಕ್ಕೆ ಕರೆಯಾಕೆ ಬಂದಾರೇನು ನೋಡೇ?” ಎಂದನು.

ತನ್ನ ತಲೆಕೂದಲಿಗಿಂತಲೂ ಉದ್ದವಾಗಿದ್ದ ತನ್ನ ಗಂಡನ ತಲೆಕೂದಲಿನ ಕ್ಷೇಮದಲ್ಲಿ ಆಸಕ್ತಳಾಗಿದ್ದ ಗಿಡ್ಡಿ ತಿರುಗಿ ನೋಡಿ “ಒಡೇರ ದಿಬ್ಬದ ಮ್ಯಾಲೆ ಹೆಗ್ಗಡೇರು ನಿಂತಾರೆ. ಯಾರನ್ನೊ ಕೂಗ್ತಿದಾರೆ” ಎಂದಳು.

“ಯಾವ ಹೆಗ್ಗಡೇರೆ?”

“ಸಣ್ಣ ಹೆಗ್ಗಡೇರು.”

“ಅಂದರೆ? ಹೆಂಚಿನ ಮನೇರೋ? ಸೋಂಗೆ ಮನೇರೋ?”

“ನಾನು ಹೆಸರು ಹೇಳಬಾರದ ಹೆಗ್ಗಡೇರು ಅಂತೀನೀ!” ಎಂದು ತುಸು ಮುನಿದಂತೆ ನಟಿಸಿದಳು ಗಿಡ್ಡಿ. ತಿಮ್ಮನಿಗೆ ಅರ್ಥವಾಗಿ, ತನ್ನ ಹೆಂಡತಿಗೆ ತನ್ನ ಮೇಲಿರುವ ಗೌರವಕ್ಕಾಗಿ ಅವಳಲ್ಲಿ ಅಭಿಮಾನ ಉಕ್ಕಿದಂತಾಯಿತು. ಆದರೆ ಕೆಲಸಕ್ಕೆ ಕರೆಯಲು ಬಂದವರು ತಿಮ್ಮಪ್ಪ ಹೆಗ್ಗಡೆ ಎಂದು ಗೊತ್ತಾದೊಡನೆ, ತನ್ನ ಔದಾಸೀನ್ಯವನ್ನು ತಟಕ್ಕನೆ ತ್ಯಜಿಸಿ, ಸೊಂಟದ ಪಂಚೆಯನ್ನು ಸುತ್ತಿಕೊಳ್ಳುತ್ತಾ, ಹೆಂಡತಿಯ ಕೈಯಿಂದ ತಲೆಗೂದಲನ್ನು ಬಿಡಿಸಿಕೊಂಡು, ಬೇಗಬೇಗನೆ ಜುಟ್ಟು ಗಂಟುಹಾಕಿಕೊಂಡು “ಆ ಬಾಳೆಗೊನೆ ಅಲ್ಲಿಡಬ್ಯಾಡೆ, ಕಾಣದ ಹಾಗೆ ಮುಚ್ಚಿಟ್ಟುಬಿಡು!” ಎಂದು

ಕೆಲಸಕ್ಕೆ ಹೋಗುವಾಗ ತಲೆಗೆ ಸುತ್ತಿಕೊಳ್ಳುವ ಒಂದು ಕೊಳಕಿನ ಮುದ್ದೆಯಾಗಿದ್ದ ಎಲೆವಸ್ತ್ರವನ್ನು ಗೂಟದಿಂದ ತೆಗೆದು ಸರಿಮಾಡತೊಡಗಿದನು. ಒಡೆಯರ ತೋಟದಿಂದ ಅವರಿಗೆ ಹೇಳದೆ ಕೇಳದೇ ತಂದಿದ್ದ ಆ ದೊಡ್ಡ ಕರಿಬಾಳೆಯ ಗೊನೆಯನ್ನು ಗಿಡ್ಡಿ ಎತ್ತಲಾರದೆ ಎತ್ತಿ ಕೊಂಡು ಹೋಗಿ ಮರೆಯಲ್ಲಿಟ್ಟನು. ಅದೇನು ಕದ್ದುದಾಗಿರಲಿಲ್ಲ! ಅದೇನು ಕದ್ದುದಾಗಿರಲಿಲ್ಲ! ಹೋದ ಬೈಗಿನ ಭಾರಿ ಮಳೆಗಾಳಿಯಲ್ಲಿ ಬಿದ್ದುದಾಗಿತ್ತು! ಬಿದ್ದು ಹಾಳಾಗಿ ಹೋಗುತ್ತಿದ್ದುದನ್ನು ಎತ್ತಿತಂದು ರಕ್ಷಸಿದ್ದನಷ್ಟೇ! ಹಾಗೆಂದು ತಿಮ್ಮ ಸಮಾಧಾನಪಟ್ಟುಕೊಂಡಿದ್ದರೂ, ತಿಮ್ಮಪ್ಪ ಹೆಗ್ಗಡೆ ಬಂದಿದಾನೆ ಎಂದೊಡನೆ, ಏನೊ ಅಳುಕು ಮೂಡಿ, ಅದನ್ನು ಮರೆಮಾಡಲು ಹೇಳಿದ್ದನು. ಅಸ್ಪೃಶ್ಯರಾಗಿದ್ದ ಹೊಲೆಯರ ಕೇರಿಯೊಳಗೆ ಒಡೆಯರ ಮನೆಯವರಾರೂ ಕಾಲಿಡುವುದಿಲ್ಲ ಎಂಬುದು ಹೊಲೆಯರೆಲ್ಲರ ದೃಢನಂಬುಗೆಯಾಗಿದ್ದರೂ ತಿಮ್ಮಪ್ಪ ಹೆಗ್ಗಡೆಯವ ಚಾರದಲ್ಲಿ ಯಾವ ಜಾತಿ, ಮತ, ಸಂಪ್ರದಾಯದ ಕಟ್ಟೂ ನಡೆಯುವುದಿಲ್ಲ ಎಂಬುದೂ ಎಲ್ಲರಿಗೂ ಗೊತ್ತಿದ್ದ ವಿಷಯವಾಗಿತ್ತು. ಅವನಿಗೆ ಸಿಟ್ಟು ಬಂದರೆ ಕೇರಿಯೊಳಗಲ್ಲ ಬಿಡಾರದ ಒಳಗೂ ನುಗ್ಗಲು ಹೇಸುತ್ತಿದ್ದಿಲ್ಲ. ಹಿಂದೆ ಒಂದೆರಡು ಸಾರಿ ಹಾಗೆ ನುಗ್ಗಿಯೂ ನುಗ್ಗಿದ್ದುದನ್ನು ತಿಮ್ಮ ನೆನಪಿಗೆ ತಂದುಕೊಂಡೇ ಬಾಳೆಯ ಗೊನೆಯನ್ನು ಮುಚ್ಚಿಡಲು ಹೇಳಿದುದಲ್ಲದೆ, ಒಡೆಯರು ನುಗ್ಗಿಗ್ಗಿ ಬಿಡುವ ಮುನ್ನವೆ, ತಾನೆ ಹೊರಗೆ ಹೋಗಿಬಿಡುವುದು ಮೇಲೆ ಎಂದು ಸೊಂಟದ ಪಂಚೆ ಸುತ್ತಿಕೊಂಡು ತಲೆವಸ್ತ್ರ ತುಡುಕಿದ್ದನು. ಅವನ ಆ ಚಟುವಟಿಕೆಗೆ ಕಾರಣ ಮುನ್ನೆಚ್ಚರಿಕೆಯಾಗಿತ್ತೆ ಹೊರತು ಕರ್ತವ್ಯನಿಷ್ಠೆಯಾಗಿರಲಿಲ್ಲ.

ಕುಳುವಾಡಿ ಸಣ್ಣನ ಬಿಡಾರದಲ್ಲಿ ಅವನ ಮಗಳು, ಪುಟ್ಟಿ, ಗುಡಿಸಲು ಮೂಲೆಯಲ್ಲಿದ್ದ ಎಲೆಯ ಮೇಲೆ ಗಡಿಗೆಯಲ್ಲಿ ಗಂಜಿ ಬೇಯಿಸುತ್ತಿದ್ದಳು. ಕೈಯಲ್ಲಿ ಒಂದು ಬಿದಿರು ಹಿಡಿಯ ಕರಟದ ಸೌಟನ್ನು ಹಿಡಿದು, ಅರೆ ಬೆಳಕಿನಲ್ಲಿ, ಗಂಜಿ ಬೆಂದಿತೆ ಇಲ್ಲವೆ ಎಂದು ಅಗುಳನ್ನು ಹಿಸುಕಿ ನೋಡುತ್ತಿದ್ದಳು. ಒಂದು ಗೀಕಿನ ಚಾಪೆಯ ಮೇಲೆ ಕಂಬಳಿ ಹೊದೆದು ಮಲಗಿ ನರಳುತ್ತಿದ್ದ ಅವನ ಕೊನೆಯ ಮಗ, ನಾಲ್ಕೈದು ವರ್ಷದ ಹುಡುಗ, ಗಂಗನ ಬಳಿ ಕುಳಿತು ಕುಳುವಾಡಿ ಸಣ್ಣ, ತಾನೆ ಕೆಮ್ಮುತ್ತಾ ಸಿಂಬಳ ಸುರಿಯುತ್ತಾ ಮಗನಿಗೆ ಸಮಾಧಾನ ಹೇಳುತ್ತಿದ್ದ: “ಆಯ್ತು ಮಗಾ, ಆಯ್ತು... ಗಂಜಿ ಕುಡಿದು ಸುಮ್ಮನೆ ಮಲಗಬೈದಂತೆ. ಅಳಬ್ಯಾಡ ಸುಮ್ಕಿರು... ಆಯ್ತು, ಇಲ್ಲೇನು ಆಯ್ತು. ಅಲ್ಲೇನೆ, ಪುಟ್ಟೀ?” ಎಂದು ಮಗನ ಸಂತೈಕೆಗಾಗಿ ಮಗಳನ್ನು ಹತ್ತನೆಯ ಸಲವೊ ಹನ್ನೊಂದನೆಯ ಸಲವೊ ಯಾವ ನಿಷ್ಕೃಷ್ಟ ಉತ್ತರದ ಅಭಿಲಾಷೆಯೂ ಇಲ್ಲದ ಪ್ರಶ್ನೆ ಕೇಳಿದ್ದನು.

“ಆಯ್ತಪ್ಪಯ್ಯಾ, ಆಗೇ ಬಿಡ್ತು. ಈಗ ಇಳಿಸಿಬಿಡ್ತೀನಿ. ಇನ್ನೇನು ಇಳಿಸೇ ಬಿಟ್ಟೆ!” ಎಂದು ಹತ್ತನೆಯ ಸಲವೊ ಹನ್ನೊಂದನೆಯ ಸಲವೊ ಅದೇ ಉತ್ತರ ಹೇಳಿದ್ದಳು ಪುಟ್ಟಿ.

ಕುಳವಾಡಿ ಸಣ್ಣ ಆ ಕೇರಿಗೆಲ್ಲ ವಯಸ್ಸಾಗಿದ್ದ ವ್ಯಕ್ತಿ. ಮಲೆನಾಡಿನಲ್ಲಿ, ಅದರಲ್ಲಿಯೂ ಬಡತನವೆ ಬಾಳಾಗಿದ್ದ ಕೀಳುಜಾತಿಯ ಜನರಲ್ಲಿ, ಐವತ್ತನ್ನು ಕಂಡವನೇ ಅತ್ಯಂತ ದೀರ್ಘಾಯುವಾಗಿದ್ದ ಆ ಕಾಲದಲ್ಲಿ, ಕುಳವಾಡಿ ಸಣ್ಣನಿಗೆ ಅವನ ಕೇರಿಯಲ್ಲಿ ಮಾತ್ರವಲ್ಲದೆ ಸಿಂಬಾವಿ, ಕೋಣೂರು, ಬೆಟ್ಟಳ್ಳಿ ಮೊದಲಾದ ಕಡೆಯ ಕೇರಿಗಳಲ್ಲಿಯೂ ವೃದ್ಧ ಪಿತಾಮಹನಿಗೆ ಸಲ್ಲುವ ಗೌರವ ಸಲ್ಲುತ್ತಿತ್ತು. ಆ ವಯೋಧರ್ಮದಿಂದಲೆ ಅವನಿಗೆ ಕುಳವಾಡಿ ಪಟ್ಟವೂ ದೊರಕಿತ್ತು. ಜಾತಿ ಸಂಬಂಧವಾದ ವ್ಯಾಜ್ಯಗಳಲ್ಲಿ ಆಗಲಿ, ನೀತಿ ಸಂಬಂಧವಾದ ಬಹಿಷ್ಕಾರಾದಿ ವಿಷಯಗಳಲ್ಲಿ ಆಗಲಿ, ಹೆಣ್ಣು ಗಂಡು ಕೊಟ್ಟು ತರುವ ಸಂಬಂಧದಲ್ಲಿ ಉದ್ಭವಿಸುವ ಭಿನ್ನಾಭಿಪ್ರಾಯದ ಕಲಹಗಳಲ್ಲಿ ಆಗಲಿ ಕುಳವಾಡಿ ಸಣ್ಣ ತೀರ್ಪಿಗೆ ಜಾತಿಯವರು ಯಾರೂ ಸಾಮಾನ್ಯವಾಗಿ ಎದುರುಬೀಳುತ್ತಿರಲಿಲ್ಲ. ಅವನಿಗೆ ಹೆಂಡತಿ ತೀರಿ ಹೋಗಿ

ನಾಲ್ಕೈದು ವರ್ಷಗಳಾಗಿದ್ದರೂ ಅವನು ಮತ್ತೆ ಮದುವೆಯಾಗಿರಲಿಲ್ಲ. ಮದುವೆಯಾಗುವ ಯೋಚನೆಯನ್ನೂ ಇಟ್ಟುಕೊಂಡಿರಲಿಲ್ಲ. ಅವನೊಡನೆ ಸೀರುಡಿಕೆಯಾಗಲು ಆಸೆಪಟ್ಟ ಗಂಡಸತ್ತವರಿದ್ದರೂ ಅವನು ಕೂಡಿಕೆಗೂ ಒಪ್ಪಿರಲಿಲ್ಲ. ಕಡೆಗೆ ಗಂಜಿ ಬೇಯಿಸುವುದಕ್ಕಾದರೂ ಎಂದು ಹೆಣ್ಣು ಕೈ ಇರಲಿ ಎಂದು ಸಲಹೆಕೊಟ್ಟ ಹಿತೈಷಿಗಳ ಮಾತನ್ನೂ ಅವನು ಮುಗುಳುನಕ್ಕು ತಟ್ಟಿಹಾರಿಸಿದ್ದನು. ಅವನ ಹಿರಿಯ ಮಗಳು ಪುಟ್ಟಿಯೆ, ತನ್ನ ತಾಯಿ ಗಂಗನನ್ನು ಹೆತ್ತು ತೀರಿಕೊಂಡ ಮೇಲೆ, ಅಪ್ಪನ ಆರೈಕೆಯನ್ನೂ, ತಂಗಿ ತಮ್ಮಂದಿರ ಲಾಲನೆ ಪಾಲನೆಯನ್ನೂ ನೋಡಿಕೊಂಡು ಬರುತ್ತಿದ್ದಳು. ಅವಳಿಗೂ ಮದುವೆಯಾಗುವ ವಯಸ್ಸು; ಬೇಗ ಮಾಡಿಬಿಡು ಎಂದು ನಂಟರಿಷ್ಟರು ಸಣ್ಣನಿಗೆ ಸಲಹೆ ಹೇಳುತ್ತಿದ್ದರೂ ಅವನು 'ಅವಳಿನ್ನೂ ನೆರೆದು ಎರಡು ವರ್ಷವೂ ಆಗಿಲ್ಲ. ಅವಳಿಗಿಂತಲೂ ದೊಡ್ಡವರು ಕೇರಿಯಲ್ಲಿ ಮದುವೆಯಾಗದೆ ಇರುವವರು ಇಲ್ಲವೆ? ಇಷ್ಟು ಅ ವಸರ ಏಕೆ ಅವಳ ಮದುವೆಗೆ?' ಎಂದು ಸಮಧಾನ ಹೇಳುತ್ತಿದ್ದನು. ಅಲ್ಲದೆ ಮಗಳು ಮದುವೆಯಾಗಿ ಹೋದರೆ ತನ್ನ ಸಂಸಾರ ಸಾಗುವುದೂ ಕಷ್ಟವಾಗುತ್ತದೆ; ಆದ್ದರಿಂದ ಏನಾದರೂ ಮಾಡಿ ಮದುವೆಯಾದ ಮೇಲೆಯೂ ಮಗಳು ಮನೆಯಲ್ಲಿಯೆ ಉಳಿಯುವಂತೆ ಒಬ್ಬ ಮನೆ ಅಳಿಯನನ್ನು ಮಾಡಿಕೊಂಡರೆ ತನ್ನ ಇಳಿ ವಯಸ್ಸಿನಲ್ಲಿ ತನಗೂ ಒಂದು ದಿಕ್ಕಾಗುತ್ತದೆ ಎಂಬುದೂ ಅವನ ಒಳಮನಸ್ಸಾಗಿತ್ತು.

ತಿಮ್ಮಪ್ಪ ಹೆಗ್ಗಡೆಯ ಅಬ್ಬರವನ್ನಾಲಿಸಿದ ಸಣ್ಣ ತನ್ನ ಮಗಳಿಗೆ "ಏ ಪುಟ್ಟೀ, ಸಣ್ಣ ಹೆಗ್ಗಡೇರ ಸವಾರಿ ಬಂದ ಹಾಂಗೆ ಕಾಣ್ತದೇ, ಕೆಲಸಕ್ಕೆ ಕರೆಯೋಕೆ. ಎಲ್ಲರೂ ಬಿಡಾರದ ಒಳಗೇ ಇದಾರೆ. ಒಬ್ಬರೂ ಹೊರಗೆ ತಲೆ ಹಾಕಿದ್ಹಾಂಗೆ ಕಾಣಲಿಲ್ಲ. ಇನ್ನು ಅವರೇ ಕೇರಿ ಒಳಗೆ ನುಗ್ಗಿದ್ರೆ, ಇಡೀ ಕೇರಿಗೇ ಅಪಸಕುನ! ನಮ್ಮ ದೆಯ್ಯ ದ್ಯಾವರಿಗೆ ಮುಟ್ಟುಚಿಟ್ಟಾದ್ರೆ ಕೇರಿಗೆ ಕೇರಿನೇ ತೆಗೆದುಬಿಡ್ತವೆ! ಹೋಗಿ ಆ ಬೈರಗಾದ್ರೂ ಹೇಳ್" ಎಂದು ಕೆಮ್ಮತೊಡಗಿದನು.

"ಇಲ್ಲಿಂದ್ಲೆ ಕಂಡೀಲಿ ಕೂಗಿ ಹೇಳ್ತೀನಿ, ಅಪ್ಪಯ್ಯ. ಅವನ ಬಿಡಾರದ ಒಳಗೆ ನಾ ಕಾಲಿಡಾದಿಲ್ಲ?" ಎಂದು ದಬ್ಬೆ ಹೆಣೆದು ಕೆಮ್ಮಣ್ಣು ಮೆತ್ತಿದ್ದ ಗೋಡೆಯ ಬೆಳಕಂಡಿಯಲ್ಲಿ ಮುಖವಿಟ್ಟು ಕೂಗಿದಳು ಪುಟ್ಟಿ, ತಮ್ಮ ಬಿಡಾರಕ್ಕೆ ಮುಟ್ಟಿಕೊಂಡಂತೆಯೆ ಇದ್ದ ಬೈರನ ಬಿಡಾರವನ್ನು ನಿರ್ದೇಶಿಸಿ "ಓ ಬೈರಬಾವ, ಸಣ್ಣ ಒಡೇರು ಕರೀತಾರಂತೋ ಕೇಲಸಕ್ಕೆ!"

ಬಿಡಾರದ ಒಂದು ಮೂಲೆಯಲ್ಲಿದ್ದ ಕಲ್ಲುಗುಂಡಿನ ಒಲೆಯ ಬಳಿ ಹಿಂದಿನ ದಿನ ದನ ಕಾಯಲು ಹೋಗಿದ್ದಾಗ ಬಿಟ್ಟುಬಿಲ್ಲಿನಿಂದ ಹೊಡೆದು ಪಿಕಾರಿಮಾಡಿದ್ದ ಒಂದು ಪಿಟ್ಟಳಿಲನ್ನೂ, ಕುಣಿಗೆ ನೀರುಹಾಯಿಸಿ, ಹೊರ ಹೊರಡಿಸಿ, ಅಟ್ಟಿ ಬೇಟೆಯಾಡಿದ್ದ ಮೂರು ಬೆಳ್ಳಿಲಿಗಳನ್ನೂ ಸುಟ್ಟಿ ಹಸಿಗೆ ಮಾಡುವ ಕಾರ್ಯದಲ್ಲಿ ತೊಡಗಿದ್ದ ಬೈರನು ಪುಟ್ಟಿಯ ದನಿ ಕೇಳಿ ಉತ್ತೇಜಿತನಾದರೂ, ಕೆಲಸಕ್ಕೆ ಕರೆಯಲು ಬಂದಿದ್ದಾರೆ ಎಂಬುದನ್ನು ಕೇಳಿ ತೀರ ನಿರುತ್ತೇಜಿತನಾಗಿ, ತನ್ನಷ್ಟಕ್ಕೆ ತಾನೇ ಹೇಳಿಕೊಂಡನೆಂಬಂತೆ "ಕೂಗಿದ್ರೆ ಕೂಗ್ಲಿ! ಕೇಳಿಸ್ತದೆ ಗಲಾಟೆ! ಇರಾಂವ ನಾನೊಬ್ಬ, ಒಂದೀಟು ಗಂಜಿಗಿಂಜಿ ಮಾಡಿ ಕುಡಿಯಕಾದ್ರೂ ಸಮಯ ಬ್ಯಾಡೇನು? ಹೊತ್ತು ಮೂಡಾಕೆ ಮುಂಚೇನೆ ಬರ್ತಾರೆ ಕೆಲಸಕ್ಕೆ ಕರಿಯಾಕೆ!" ಎಂದು ಗಟ್ಟಿಯಾಗಿಯೆ ಗೊಣಗದನು.

ಬೈರನ ಬಿಡಾರದಲ್ಲಿ ಸದ್ಯಕ್ಕೆ ಬೇರೆ ಯಾರೂ ಇರಲಿಲ್ಲ. ಅವನೆ ತನ್ನ ಅಡುಗೆ ಗಿಡುಗೆ ಎಲ್ಲ ಮಾಡಿಕೊಂಡು ದನ ಕಾಯುವ ಕೆಲಸಕ್ಕೆ ಹೋಗುತ್ತಿದ್ದನು. ದನ ಕಾಯುವ ಕೆಲಸಕ್ಕಲ್ಲದೆ ಬೇರೆ ಕೆಲಸಕ್ಕೆ ಅವನನ್ನು ಕರೆದರು ಅವನು

ಏನಾದರೂ ನೆಪಹೇಳಿ ತಪ್ಪಿಸಿಕೊಳ್ಳುತ್ತಿದ್ದನು; ಇಲ್ಲವೆ, ಕೆಲಸಕ್ಕೆ ಹೋದರೂ, ಎಲೆ ಅಡಿಕೆ ಹಾಕುವುದು, ಹರಟೆ ಹೊಡೆಯುವುದು, ಹೊಟ್ಟೆ ಸರಿಯಿಲ್ಲ ಎಂದು ಬೈಲು ಕಡೆಗೆ ಹೋಗುವುದು, ಹೀಗೆ ಒಂದಲ್ಲ ಒಂದು ರೀತಿಯಿಂದ ತಾನೂ ಕೆಲಸ ಮಾಡದೆ ಇತರರನ್ನೂ ಕೆಲಸಮಾಡಗೊಡದೆ ಇರುತ್ತಿದ್ದುದರಿಂದ ಹೆಗ್ಗಡೆಯವರು ಅವನನ್ನು ಖಾಯಂ ಆಗಿ ದನ ಕಾಯುವ ಕೆಲಸಕ್ಕೇ ಹಾಕಿಬಿಟ್ಟಿದ್ದರು. ಬೇರೆ ಬೇರೆ ಹಳ್ಳಿಯವರೂ ದನ ಮೇಯಿಸಲು ಬಂದು, ಎಲ್ಲರೂ ಒಟ್ಟಾಗಿ ಸೇರಿ ಕಾಡು ಹಕ್ಕಲು ಬಯಲುಗಳಲ್ಲಿ ಖುಷಿಯಾಗಿರುತ್ತಿದ್ದುದೂ ಬೈರನು ಆ ವೃತ್ತಿಯನ್ನೆ ಹೆಚ್ಚಾಗಿ ಒಲಿಯಲು ಒಂದು ಕಾರಣವಾಯಿತ್ತು. ಅದರಲ್ಲಿಯೂ ಕೆಲವು ಮನೆಯವರು ಹೆಂಗಸರನ್ನೂ ಬೆಳೆದ ಹುಡುಗಿಯರನ್ನೂ ಆ ಕೆಲಸಕ್ಕೆ ಕಳುಹಿಸುತ್ತಿದ್ದುದೂ ಬೈರನಿಗೆ ಒಂದು ತಪ್ಪಿಸಿಕೊಳ್ಳಲಾಗದ ಆಕರ್ಷಣೆಯಾಗಿತ್ತು. ಬೈರ ಮದುವೆಯಾಗುವ ಮೊದಲೇ ಹಡಬೆ ಬಿದ್ದಿದ್ದನೆಂಬ ಪ್ರತೀತಿ ಇತ್ತು. ಮದುವೆಯಾದ ಮೇಲೆಯೂ ಆ ಕಾರಣಕ್ಕಾಗಿಯೆ ಅವನಿಗೂ ಅವನ ಹೆಂಡತಿಗೂ ಆಗಾಗ ಜಗಳವಾಗಿ ಹೊಡೆತ ಬಡಿತಗಳಲ್ಲಿ ಪರ್ಯವಸಾನವಾಗುತ್ತಿತ್ತು. ಅವನ ಹೆಂಡತಿ ಗರ್ಭಿಣಿಯಾಗಿದ್ದಾಗಲೆ ಅವನು ಅವಳೊಡನೆ ಜಗಳವಾಡಿ, ಕುಡಿದ ಮತ್ತಿನಲ್ಲಿ ಅವಳ ಹೊಟ್ಟೆಯ ಮೇಲೆ ಒದ್ದುದರಿಂದಲೆ ಅವಳು ತಿಂಗಳು ತುಂಬುವ ಮೊದಲೆ ಹೆಚ್ಚು ಸತ್ತುಹೋದಳೆಂದೂ ಜನ ಆಡಿಕೊಳ್ಳುತ್ತಿದ್ದರು. ಈಗ ಒಬ್ಬೊಂಟಿಗನಾಗಿ 'ಒಂಟಿಗ ಒಂಟೆಗೇಡಿ' ಎಂಬೆಲ್ಲ ಬೈಗುಳದ ಬಿರುದು ಹೊತ್ತು ಬಾಳುತ್ತಿದ್ದನು.

ಇಲಿ ಅಳಿಲು ಸುಟ್ಟ ಕೌರುವಾಸನೆಯ ಹೊಗೆಯ ನಡುವೆ ಇದ್ದ ಬೈರನ ಕಿವಿಗೂ ಕೇಳಿಸಿತು, ತಾಳ್ಮೆಗೆಟ್ಟು ಸಿಟ್ಟೇರಿದ ತಿಮ್ಮಪ್ಪ ಹೆಗ್ಗಡೆಯ ಅಬ್ಬರದ ಕೂಗು: "ಯಾರೂ ಇಲ್ಲೇನ್ರೋ ಕೇರೀಲಿ? ಎಲ್ಲ ಸುಟ್ಟು ನಾಶನೆ ಆದ್ರೇನೋ? ಏ ಮಂಜಾ! ಏ ತಿಮ್ಮಾ! ಏ ಸಿದ್ದಾ! ಏ ಸಣ್ಣಾ! ನಿಮ್ಮ ಗಂಟ್ಲೆಲ್ಲಾ ಕಟ್ಟಿಹೋಗಾ! ಓಕೊಳ್ಳಾಕೆ ಏನಗಿದ್ರೋ! ಹೊಲೆಸೂಳೆಮಕ್ಕಾ!"

ಗುಡಿಸಿಲೊಳಗಡೆ ದಿಗಲುಬಿದ್ದು ಅತ್ಯಂತ ಚಟುವಟಿಕೆಯಿಂದ ತೆಗೆದೆದ್ದು, ಹೆಂಡತಿಗೆ ಬಾಳೆಗೊನೆಯನ್ನು ಮುಚ್ಚಿಡ ಹೇಳಿ, ತಲೆ ವಸ್ತ್ರ ಸುತ್ತಿಗೊಂಡಿದ್ದ ತಿಮ್ಮನು ಬಿಡಾರದ ತಟ್ಟಿಬಾಗಿಲನ್ನು ಮೆಲ್ಲನೆ ಬಹುಮೆಲ್ಲನೆ ಓಸರಿಸಿ, ಉದ್ವೇಗಕ್ಕಾಗಲಿ ಅವಸರಕ್ಕಾಗಲಿ ಏನೊಂದೂ ವಿಶೇಷ ಕಾರಣ ನಡೆದಿಲ್ಲವೆಂಬಂತೆ ನಿರುದ್ವಿಗ್ನ ಮುಗ್ಧಭಾವವನ್ನಾರೋಪಿಸಿಕೊಂಡು, ಸಾವಧಾನವಾಗಿ ಅಂಗಳಕ್ಕಿಳಿದು ಮುಂಬರಿದನು.

ಅವನು ಕಣ್ಣಿಗೆ ಬಿದ್ದೊಡನೆಯೆ ತಿಮ್ಮಪ್ಪ ಹೆಗ್ಗಡೆ ಸಿಟ್ಟು ನೆತ್ತಿಗೇರಿತು. ಅದರಲ್ಲಿಯೂ ಅವನು ಉದಾಸೀನ ಭಾವದಿಂದ ತಣ್ಣಗೆ ನಡೆದು ಬರುತ್ತಿದ್ದುದನ್ನೂ, ಅವನ ಮೀಸೆಯ ಕೆಳಗಡೆ ಕೆಣಕುವಂತಹ ಒಂದು ರೀತಿಯ ನರಿಬುದ್ಧಿಯ ಹುಸಿನಗೆ ಹಲ್ಲು ಬಿಡುತ್ತಿದ್ದುದನ್ನು ಕಂಡು ಪಿತ್ತ ಕೆರಳಿದಂತಾಯ್ತು. ತನ್ನ ಕೂಗಾಟ, ಅಬ್ಬರ, ಸಿಟ್ಟು, ಬೈಗುಳ, ಶಾಪ, ಒಡೆತನದ ರೋಷಾಟೋಪ. ತನ್ನ ಕೂಗಾಟ, ಅಬ್ಬರ, ಸಿಟ್ಟು, ಬೈಗುಳ, ಶಾಪ, ಒಡೆತನದ ರೋಷಾಟೋಪ ಒಂದೂ ಕೆಲಸಕ್ಕೆ ಬಾರದವು ಎಂದೆನಿಸುವಂತೆ ಎಲ್ಲವನ್ನೂ ವ್ಯರ್ಥಗೊಳಿಸುತ್ತಿದ್ದ ಹೊಲೆಯದ ಧೂರ್ತ ಪ್ರಶಾಂತ ಭಂಗಿಯಂತೂ ಬೆಂಕಿಗೆ ತುಪ್ಪ ಹೊಯ್ದಂತಾಯ್ತು ಅವನ ಕೋಪಕ್ಕೆ:

"ಸೋಮಾರಿ ಸೂಳೆ ಮಕ್ಕಾ, ಎಷ್ಟು ಅಂತಾ ಕೂಗಬೇಕೋ ನಿಮ್ಮನ್ನ? ನಿಮ್ಮ ಕಿವಿ ಎಲ್ಲ ಹೊಟ್ಟಿಹಾರಿ ಹೋಗಿದೆಯೇನೋ? ಬಿಸಿಲು ನೆತ್ತಿಗೆ ಬಂದ್ರೂನೂ ನಿಮಗೆ ಮಾತ್ರ ಬೆಳಗಾಗೋದಿಲ್ಲ!"

ತಿಮ್ಮನ ನಗೆಯ ಮುಗುಳು ಮೀಸೆಯ ಕೆಳಗಡೆ ಮತ್ತಷ್ಟು ಅಗಲವಾದಂತಾಯಿತು. ಎಲೆಯಡಿಕೆ ಜಗಿದೂ, ಜಗಿದೂ, ಕೆಂಪು ಕೊಳೆ ಕೂತು, ಕಪ್ಪಿಗೆ ತಿರುಗಿದ್ದ ಹುಳುಕು ಹಲ್ಲಿನ ಸಾಲು ಅರಳಿದಂತಾಯ್ತು. ಅಭ್ಯಾಸ ಬಲದ ಮೇಲೆ ಸೊಂಟದತ್ತ ನೋಡದೆಯೆ ಕೆಲಸದ ಕತ್ತಿಯನ್ನು ಒಡ್ಯಾಣದ ಕೊಂಡಿಗೆ ಸಿಕ್ಕಿಸಿಕೊಳ್ಳುತ್ತಾ ನಿಧಾನವಾಗಿ "ಎಲ್ರೋ? ನಿಮ್ಮ ಗಂಟ್ಲು ಕೇಳಿಸ್ದ ಕೂಡ್ಲೆ ಹೊಲ್ಟು ಬಂದೀನಿ!" ಎಂದು ತುಸು ರಾಗವಾಗಿ ಎಳೆದು ಹೇಳುತ್ತಾ ಒಡೆಯರ ಮುಂದೆ ದಿಬ್ಬದ ಕೆಳಗೆ ಬಂದು ನಿಂತನು.

ಅಷ್ಟರಲ್ಲಿ ಓಡೋಡಿ ಬರುತ್ತಿದ್ದ ಹಳೆಪೈಕದ ಹೂವಿ ಮರಗಳ ಕೆಳಗೆ ಪೊದೆಗಿಡಗಳ ನಡುವೆ ಕಾಣಿಸಿದಳು.

ತಿಮ್ಮ ಆ ಕಡೆ ನೋಡಿ ಅರೆ ನಗುತ್ತಾ "ಯಾಕ್ರೋ ಹೂವಮ್ಮ ಓಡಿ ಬರ್ತಾರೆ?" ಎಂದು ಒಡೆಯರ ಗಮನವನ್ನು ಅತ್ತಕಡೆ ಸೆಳೆದನು. ಹೂವಿಯನ್ನು ನೋಡಿದ ಹೆಗ್ಗಡೆಗೆ ಇದ್ದಕ್ಕಿದ್ದ ಹಾಗೆ ಸಿಟ್ಟು ಶಮನವಾದಂತಾಗಿ, ನಸುನಗೆಗೂಡಿ ಆ ಕಡೆ ತಿರುಗಿದನು. ಅವಳೂ ತುಸು ನಾಚಿದಂತೆ ದೂರದಲ್ಲಿ ನಿಂತು "ದೊಡ್ಡ ಅಯ್ಯೋರು ಹೇಳಿದ್ರು, ಹಂದೀ ಹಸಿಗೆಗೆ ಯಾರಾದ್ರೂ ಇಬ್ಬರ್ನ ಕಳಿಸಬೇಕಂತೆ" ಎಂದವಳೆ ದೃಷ್ಟಿ ತಿರುಗಿಸಿ ಕೇರಿಯ ಕಡೆ ನೋಡತೊಡಗಿದಳು.

ತಿಮ್ಮಪ್ಪ ಹೆಗ್ಗಡೆಗೆ ಆಶ್ಚರ್ಯವಾಯಿತು, ಹಂದಿ ಷಿಕಾರಿ ಯಾರು ಮಾಡಿದರು ಎಂದು!

"ಯಾರೇ ಹಂದಿ ಹೊಡೆದಿದ್ದು?"

"ನಂಗೊತ್ತಿಲ್ಲ. ಹೇಳಿ ಬರಾಕೆ ಹೇಳಿದ್ರು" ಎಂದವಳು ಅಲ್ಲಿ ನಿಲ್ಲದೆ ಹಿಂದಿರುಗಿ ಅವಸರವಾಗಿಯೆ ನಡೆದು ಪೊದೆಗಳಲ್ಲಿ ಮರೆಯಾದಳು.

ಸಾಕಿದ್ದ ಊರು ಹಂದಿಯನ್ನು ಅಡ್ಡೆಕಟ್ಟಿ ಹೊರುವುದಕ್ಕಾಗಿ ಇಬ್ಬರು ಹೊಲೆಯರನ್ನು ಬರಹೇಳಿದ್ದರು ಸುಬ್ಬಣ್ಣ ಹೆಗ್ಗಡೆ. ಆದರೆ ಹೂವಿ ಹೇಳಿದ ರೀತಿಯಲ್ಲಿ, ಯಾರೋ ಕಾಡುಹಂದಿ ಷಿಕಾರಿ ಮಾಡಿದ್ದಾರೆ, ಅದರ ಹಸಿಗೆಗೆ ಬರಬೇಕಂತೆ ಎಂಬರ್ಥ ಸ್ಫುರಿಸಿತ್ತು.

ಆದರೆ ಆ ಸುಳ್ಳು ಅರ್ಥದಲ್ಲಿ ಎಂತಹ ಮಂತ್ರಶಕ್ತಿ ಮೈದೋರಿತ್ತು ಎಂದರೆ, ಹಂಚಿ ಮತ್ತು ಹಸಿಗೆ ಎಂಬ ಮಾತು ಬಿಡಾರದಿಂದ ಬಿಡಾರಕ್ಕೆ ಮಿಂಚಿನ ವೇಗದಿಂದ ಮುಟ್ಟಿದ್ದೇ ತಡ, ಮುಚ್ಚಿದ್ದ ತಟ್ಟಿಬಾಗಿಲುಗಳು ಸರಸರನೆ ಒಂದಾದಮೇಲೊಂದರಂತೆ ತೆರೆದುಕೊಂಡುವು. ಬೆಟ್ಟಳ್ಳಿಗೆ ಹೋಗಬೇಕೆಂದಿದ್ದ ಮಂಜ ಪುಸಕ್ಕನೆ ಕೆಲಸದ ಕತ್ತಿಯನ್ನು ಸೊಂಟಕ್ಕೆ ಸಿಕ್ಕಿಸಿಕೊಳ್ಳುತ್ತಾ ಹಾರಿಬಂದತು. ಇಲಿ ಅಳಿಲುಗಳನ್ನು ಅರ್ಧಂಬರ್ಧ ಸುಟ್ಟಂತೆಯೆ ಬಿಟ್ಟಿಯ ಅಡಿ ಮುಚ್ಚಿಟ್ಟು, ಬೈರ ಹೊರಕ್ಕೆ ನೆಗೆದನು. ಸಿದ್ದ, ಕರಿಸಿದ್ದ, ಬಚ್ಚ, ಸಣತಿಮ್ಮ, ಪುಟ್ಟ- ಅಂಗಳವೆಲ್ಲಾ ಆಳುಗಳಿಂದ ತುಂಬಿಹೋದಂತಾಯಿತು!

"ಯಾರಾದರೂ ಇಬ್ಬರನ್ನ ಕಳಿಸಬೇಕಂತ್ರೋ. ಉಳಿದೋರೆಲ್ಲ ಗದ್ದೆ ಕೆಲಸಕ್ಕೆ ಹೊರಡಿ" ಎಂದ ಹೆಗ್ಗಡೆಗೆ.

ಮಂಜ “ಇಬ್ಬರು ಎಲ್ಲಿ ಸಾಕಾಗ್ತದ್ರೋ ಹಂದಿ ಹಸಿಗೆಗೆ? ಬ್ಯಾಗ ಬ್ಯಾಗ ಎಲ್ಲ ಮಾಡಿಕೊಟ್ಟ, ಗದ್ದೆ ಕೆಲಸಕ್ಕಾದ್ರೆ ಗದ್ದೆ ಕೆಲಸಕ್ಕೆ, ಹೋಗ್ತೀವಿ” ಎಂದನು.

“ಏನಾದ್ರೂ ಸಾಯಿರಿ! ಅಲ್ಲಿ ಅಪ್ಪಯ್ಯನ ಹತ್ರ ಬೈಸಿಕೊಳ್ತೀರಿ! ನಂಗೇನು? ಬನ್ನಿ!” ಎಂದು ತಿಮ್ಮಪ್ಪ ಹೆಗ್ಗಡೆ ಅಂಗಳದಲ್ಲಿ ನೆರೆದಿದ್ದ ಹೆಂಗಸರು ಗಂಡಸರು ಮಕ್ಕಳು ಇವರ ನಡುವೆ ನಿಂತಿದ್ದ ಕುಳುವಾಡಿ ಸಣ್ಣನ ಮಗಳ ಕಡೆ ಕಣ್ಣು ಹಾಯಿಸುತ್ತಾ ಮನೆ ಕಡೆಗೆ ತಿರುಗಿ ನಡೆದನು.

ಹಂದಿ ಹಸಿಗೆಯಾದ ಮೇಲೆ ತಮಗೆ ದೊರೆಯುವ ಪಾಲಿನ ವಿಚಾರವಾಗಿ ಮಾತಾಡುತ್ತ ಆಳುಗಳೆಲ್ಲ ಒಡೆಯನ್ನು ಹಿಂಬಾಲಿಸಿದರು.

“ಎಷ್ಟು ಆಳಿಗೆ ಇದೆಯಂತೋ?”

“ಯಾರಿಗೆ ಗೊತ್ತೋ? ಆ ಹೂವಮ್ಮ ಏನೊ ಹೇಳಿ ಹೋದ್ರು.”

“ಇಬ್ಬರನ್ನೆ ಬರಾಕೆ ಹೇಳಿದ್ದು ನೋಡ್ರಿದ್ರೆ ಅಷ್ಟೇನೊ ದೊಡ್ಡದಲ್ಲಾ ಅಂತ ಕಾನ್ತದೆ.”

“ಸೈ ಬಿಡು ನೀನೊಬ್ಬ! ಆ ದೊಡ್ಡ ಹೆಗ್ಗಡೇರ ಇಚಾರ ಯಾರಿಗೆ ಗೊತ್ತಿಲ್ಲ? ಇಬ್ಬರ ಕೈಲೇ ಹಸಿಗೆ ಮಾಡಿಸಿದ್ರೆ ಏಳೆಂಟು ಪಾಲು ಕೊಡಾದು ತಮಗೇ ಉಳೀತದೆ! ಹ್ಹಹ್ಹ! ಅಲ್ಲೇನು ಹೇಳು?”

ಹಳುಬೆಳೆದ ಕಾಡುದಾರಿಯಲ್ಲಿ ಬೇಗಬೇಗನೆ ನಡೆಯುತ್ತಿದ್ದ ಏಳೆಂಟು ಆಳುಗಳ ಮಾತಿಗೆ ಅವರ ಸೊಂಟದ ಕತ್ತಿಗಳ ತಲೆದೊಗಾಟದ ಕಣಕಣ ಸದ್ದು ಹ್ಞೂಂಗುಡುವಂತೆ ತೋರುತ್ತಿತ್ತು.

* * *

## ೧೪

‘ಬುಚ್ಚಿ’ ಕೊಟ್ಟ ಕಣ್ಣಾ ಪಂಡಿತರ ಕಷಾಯ ಕುಡಿಯುತ್ತಾ ಸುಬ್ಬಣ್ಣ ಹೆಗ್ಗಡೆಯವರು ಮಗಳ ಮುಖವನ್ನು ನೋಡಿ ಕಣ್ಣು ಸನ್ನೆ ಕೈಸನ್ನೆಗಳಿಂದಲೆ ಕೇಳಿದರು: ‘ಅತ್ತಿಗೆ ಹೇಗಿದ್ದಾಳೆ?’
ಮಂಜಮ್ಮನ ಮುಖ ಇದ್ದಕ್ಕಿದ್ದಹಾಗೆ ಖಿನ್ನವಾಯಿತು. ಕನಿಕರದ ಭಾವವನ್ನು ಕಣ್ಣ ಭಂಗಿಯಿಂದಲೆ ಸೂಚಿಸುತ್ತಾ ತುಸು ಪಿಸುದನಿಯಿಂದ ಹೇಳಿದಳು: “ಮೊನ್ನೆ ಮುಟ್ಟಾದ ಮೇಲೆ ಆ ಹಿತ್ತಲು ಕಡೆ ಮೂಲೆಯಲ್ಲಿ ಚಾಪೆ ಕಂಬಳಿ

ಹಾಕಿಕೊಂಡು ಅಳ್ತಾ ಕೂತುಬಟ್ಟಾರೆ. ಊಟಾನೂ ಮಾಡ್ತಾ ಇಲ್ಲ. ಒಂದು ಹೊತ್ತು ಮಾಡಿದ್ರೆ, ಒಂದು ಹೊತ್ತು ಮಾಡಾದಿಲ್ಲ.

"ಮೀಯಾಕೆ ಮೊದಲೆ ಒಳಗ್ಗಿಳಗೆ ಬಂದು ಬಿಟ್ಟಾಳು! ದೇವರ ಕಾಣಿಕೆ ಡಬ್ಬಿ ಇಟ್ಟೇವಿ ಮ್ಯಾಲೆ. ತಿರುಪತಿ ತಿಮ್ಮಪ್ಪ ಈಗ ಕೊಟ್ಟ ಶಿಕ್ಷೇನೆ ಸಾಕಾಗದೆ. ಮತ್ತೆ ಇನ್ನೂ ಏನಾದ್ರೂ ಆದಾತು!" ಎಂದು ಮಗಳಿಗೆ ತಮ್ಮ ಹಿರಿಯ ಮಗನ ಹೆಂಡತಿ 'ಹುಚ್ಚು ಹೆಗ್ಗಡ್ತಿಯ'ಯ ವಿಚಾರವಾಗಿ ಎಚ್ಚರಿಕೆಯಿಂದಿರುವಂತೆ ತಿಳಿಸಿ, ಮೇಲೆದ್ದು ಸುಬ್ಬಣ್ಣ ಹೆಗ್ಗಡೆಯ ಜಗಲಿಗೆ ಹೋದರು.

ಕತ್ತಲೆ ಯಾವಾಗಲೂ ಬೀಡು ಬಿಟ್ಟಿರುತ್ತಿದ್ದ ಮಾಣಿಗೆಯ ಗಿಡ್ಡ ಬಾಗಿಲನ್ನು ತಲೆ ತಾಗದಂತೆ ಬಗ್ಗಿ ಎಚ್ಚರಿಕೆಯಿಂದ ಜಗಲಿಗೆ ದಾಟಿ ನೋಡುತ್ತಾರೆ: ಹೊರ ಅಂಗಳದಲ್ಲಿ ಹೊಲೆಯರ ಹಿಂಡೆ ಜಮಾಯಿಸಿದಂತಿದೆ! ಸುಬ್ಬಣ್ಣ ಹೆಗ್ಗಡೆಯವರು ಸಿಟ್ಟು ಜುಟ್ಟಿಗೂ ಏರಿತು. 'ಹಂದಿ ಹೊರುವುದಕ್ಕೆ ಇಬ್ಬರು ಹೊಲೆಯರನ್ನು ಕಳಿಸು ಎಂದರೆ, ಹೊಲಗೇರಿಯನ್ನೆ ಮನೆಗೆ ತಂದಿದ್ದಾನಲ್ಲ, ಮುಟ್ಠಾಳ ಮಗ, ಮನೆಹಳ! ಎಂದುಕೊಂಡು ಸುತ್ತಲೂ ಅವನಿಗಾಗಿ ಹುಡುಕಿನೋಡಿದರು. ಅವನು ಎಲ್ಲಿಯೂ ಗೋಚರವಾಗಲಿಲ್ಲ. ಜಗಲಿಯಿಂದ ಕಿರುಜಗಲಿಗೆ ಇಳಿದು, ಸಿಟ್ಟೇರಿದ್ದರೂ ವಯೋಧೀನರಾಗಿ ನಿಧಾನವಾಗಿಯೆ ಅಂಗಳಕ್ಕಿಳಿದರು. ಹೊಲೆಯರೆಲ್ಲ ಒಡೆಯರ ಮೆಚ್ಚುಗೆಗಾಗಿಯೂ, ಸಂತೋಷ ಪ್ರದರ್ಶನಕ್ಕಾಗಿಯೂ, ಇಷ್ಟು ಬೆಳಿಗ್ಗೆ ಮುಂಚೆಯೆ ಅವರು ಹೇಳಿ ಕಳುಹಿಸುವುದೆ ತಡ ಇಷ್ಟೊಂದು ಆಳುಗಳು ಕೆಲಸಕ್ಕೆ ಆತುರರಾಗಿ ಬಂದುಬಿಟ್ಟಿದ್ದಾರಲ್ಲಾ ಎಂದು ಹಿಗ್ಗಿ ತಮ್ಮೊಡನೆ ವಿನೋದವಾಗಿ ಸಂವಾದ ತೊಡಗುತ್ತಾರೆಂಬ ನಿರೀಕ್ಷೆಯಿಂದಲೂ ನಗುಮೊಗರಾಗಿ ನೋಡುತ್ತಾ ಹಲ್ಲುಹಲ್ಲು ಬಿಡುತ್ತಿದ್ದರು. ಅವರ ಮಾತೆಲ್ಲ ತಟಕ್ಕನೆ ನಿಂತು, ಅರೆಕ್ಷಣ ಅರ್ಥಗರ್ಭಿತ ನಿಃಶಬ್ದತೆ ವ್ಯಾಪಿಸಿತ್ತು.

"ಯಾರ ಹೆಣಾ ಹೊರಾಕಂತಾ ಎಲ್ಲಾ ಬಂದಿದ್ದೀರೋ ಇಲ್ಲಿಗೆ? ಗದ್ದೆ ಕೆಲಸಕ್ಕೆ ಹೋಗಾದು ಬಿಟ್ಟು ಯಾರೋ ಹಲ್ಲು ಹಲ್ಲು ಬಿಡ್ತಾ ನಿಂತೀರಿ? ಈಗ ಬೆಣಕು ಬಿಡ್ತೇನ್ರೋ ನಿಮಗೆ?" ಒಮ್ಮೆಗೇ ಮೈಮೇಲೆ ಬಂದವರಂತೆ ಕಾಕು ಹಾಕಿ ಕೂಗಿಬಿಟ್ಟರು ಸುಬ್ಬಣ್ಣ ಹೆಗ್ಗಡೆ.

ಹೊಲೆಯರಾರೂ ದಿಗಿಲು ಬೀಳಲೂ ಇಲ್ಲ; ಒಡೆಯರ ಬೈಗುಳವನ್ನು ಮನಸ್ಸಿಗೆ ಹಚ್ಚಿಕೊಳ್ಳಲೂ ಇಲ್ಲ. ಒಬ್ಬರ ಮುಖವನ್ನು ಒಬ್ಬರು ಇಂಗಿತವಾಗಿ ನೋಡಿಕೊಂಡರು. ಏನೋ ಅಚಾತುರ್ಯ ಸಂಭವಿಸಿರಬೇಕು ಎನ್ನಿಸಿತು ಕೆಲವರಿಗೆ.

ತಿಮ್ಮ ಧೈರ್ಯ ಮಾಡಿ "ನೀವೇ ಹೇಳಿಕಳಿಸಿದಿರಂತೆ...."

"ಯಾರೋ ಹೇಳಿ ಕಳಿಸಿದ್ದು?"

"ಹೂವಮ್ಮ ಬಂದು ಹೇಳಿದ್ರು ಸಣ್ಣಯ್ಯಗೆ...."

“ಹಂದೀ ಹಸಿಗೇಗಂತೆ.... ಎಂದು ಕೆಮ್ಮೀಸೆಯ ಮಂಜ ನಡುವೆ ಬಾಯಿ ಹಾಕಿದ್ದೆ ಹೆಗ್ಗಡೆ ಹಣೆ ಹಣೆ ಬಡಕೊಂಡು “ಮನೇಹಾಳ ಮಕ್ಕಳು! ಮನೆಹಾಳ ಮಕ್ಕಳು! ಹೂವಳ್ಳಿ ಎಂಕಟಣ್ಣಗೆ ಒಂದು ಸಲಗಾನ ಹಿಡಿದು ಹೊರಿಸಿ ಕಳಿಸಾಕೆ ಇಬ್ಬರನ್ನ ಕಳಿಸ್ಲಿ ಅಂತಾ ಹೇಳಿಕಳ್ಸಿದ್ರೆ, ಒಂದು ಹಿಂಡಿಗೆ ಹಿಂಡೇ ಬಂದು ನಿಂತಿದ್ದೀರಲ್ಲೋ!.... ಇಂದೇನು ಇಷ್ಟು ಜನ ಒಟ್ಟಿಗೇ ಕೆಲಸಕ್ಕೆ ಬಂದಾರಲ್ಲಾ ಅಂತಿದ್ದೆ? ಈಗ ಗೊತ್ತಾತು! ಬಾಡು ಸಿಗ್ತದೆ ಪಾಲಿಗೆ ಅಂತಾ ಬಿಡಾರನೆಲ್ಲಾ ಖಾಲಿ ಮಾಡಿ ಬಂದೀರಿ ಅಲ್ಲೇನ್ರೋ, ಕಣ್ಣ ಸೂಳೆ ಮಕ್ಕಳ್ರಾ?” ಎಂದು ಬಯ್ದು ಮತ್ತೆ ಗಂಭೀರವಾಗಿ ಆಜ್ಞೆ ಮಾಡಿದರು: “ಯಾರಾದ್ರೂ ಇಬ್ಬರು ಇರಿ; ಬಾಕಿಯೋರೆಲ್ಲಾ ಗದ್ದೆಗೆ ಹೊರಡಿ.

ಆಳುಗಳೆಲ್ಲ ಸ್ವಲ್ಪ ಪೆಚ್ಚಾದರು. ಹಂದಿ ಹಸಿಗೆ ಮಾಡಿ, ಪಾಲು ತೆಗೆದುಕೊಂಡು ಹೋಗುವ ಹೇರಾಸೆ ಕಟ್ಟಿಕೊಂಡು ಬಂದಿದ್ದರು. ಈಗ ಎಲ್ಲ ವ್ಯರ್ಥವಾದದ್ದು ಮಾತ್ರವೆ ಅಲ್ಲದೆ, ಕೆಲಸಕ್ಕೂ ಹೋಗಬೇಕಾಗಿಯೆ ಬಂದಿತಲ್ಲಾ ಎಂದು ತಪ್ಪಿಸಿಕೊಳ್ಳುವ ಉಪಾಯ ಆಲೋಚಿಸತೊಡಗಿದರು.

ಬೈರ “ಯಾರಾದರೂ ಇರಿ. ನನಗೆ ದನಾಬಿಡಾಕೆ ಹೊತ್ತಾಯ್ತು” ಎಂದವನು ಮನೆಗೆ ಬಳಿಯ ಕರೆಯುವ ಕೊಟ್ಟಿಗೆಯ ಕಡೆಗೆ ಹೊರಟನು.

ಬೆಟ್ಟಳ್ಳಿಗೆ ಹೋಗಬೇಕೆಂದು ಮೊದಲೇ ಕೆಲಸಕ್ಕೆ ಉಳಿಕೊಡಲು ನಿಶ್ಚಯಿಸಿದ್ದ ಮಂಜ “ನಾನೊಂದು ಚೂರು ಬಿಡಾರಕ್ಕೆ ಹೋಗಿ, ಹಾಂಗೇನೆ ಗದ್ದೆಗೆ ಬಂದು ಬಡ್ತೀನಿ” ಎಂದು ಕೇರಿಯ ಕಡೆಗೆ ಹೊರಟನು.

ಹಂದಿ ಒಡ್ಡಿನ ಹತ್ತಿರಕ್ಕೆ ಹೋಗಿ ಸುಬ್ಬಣ್ಣ ಹೆಗ್ಗಡೆಯವರು ಹಿಂದಿರುಗಿ ನೋಡುತ್ತಾರೆ, ಹೊಲೆಯರೆಲ್ಲ ಅಂಗಳದಿಂದ ಹೊರಡುತ್ತಿದ್ದಾರೆ! ಅಬ್ಬರಿಸಿ ಗರ್ಜಿಸಿದರು: “ಲೌಡಿಮಕ್ಕಳ್ರಾ, ಎಲ್ಲಿಗೆ ಹೊರಟೀರೋ ಎಲ್ಲಾ? ಬನ್ರೋ ಇಲ್ಲಿ ಎಲ್ಲರೂ! ಹಂದಿ ಹಿಡಿದು, ಅಡ್ಡೆ ಕಟ್ಟಿಕೊಟ್ಟು ಹೊರಡಿ ಕೆಲಸಕ್ಕೆ” ಎಂದವರು, ಮತ್ತೆ ದೂರದಲ್ಲಿ ಹೋಗುತ್ತಿದ್ದ ಬೈರನನ್ನು ಕಂಡು “ಕರೆಯೋ ಅವನ್ನ, ಆ ಬೈರನ್ನ. ಹೊರಟನಲ್ಲ, ದುಣ್ಣ ಮುಂಡೆಗಂಡ, ಎಲ್ಲಿಗೋ ಹಡಬೆ ತಿರಗಾಕೆ!” ಎಂದು ಗದರಿದರು.

ಮನಸ್ಸಿಲ್ಲದ ಮನಸ್ಸಿನಿಂದ ಎಲ್ಲರೂ ಹಿಂದಿರುಗಿ ಬಂದು ಒಡ್ಡಿಯ ಹತ್ತಿರ ನೆರೆದರು. ಮನೆ ಹಿಸ್ಸೆಯಾದಾಗ ಹೊಲಗೇರಿ ಆಳುಗಳನ್ನೂ ಬಿಡಾರವಾರಾಗಿ ಪಾಲುಮಾಡಿಕೊಂಡಿದ್ದರಿಂದ ಶಂಕರ ಹೆಗ್ಗಡೆಯವರ ಪಾಲಿಗೆ ಹೋಗಿದ್ದ ಬುಚ್ಚ ಮತ್ತು ಪುಟ್ಟ ಇಬ್ಬರೂ ತಮ್ಮ ಪಾಲಿಗೆ ಬಂದಿದ್ದ ಹೊಲೆಯರೊಡನೆ ನಿಂತಿದ್ದುದನ್ನು ನೋಡಿ ಸುಬ್ಬಣ್ಣ ಹೆಗ್ಗಡೆಯವರು: “ನೀವು ಯಾಕ್ರೋ ಬಂದಿದ್ದು? ಮೊದಲೇ ನಿಮ್ಮ ಒಡೇರು ‘ನಮ್ಮ ಆಳ್ಗಳನ್ನೆಲ್ಲ ನಮ್ಮ ಕೆಲಸಕ್ಕೆ ಬರದ ಹಾಂಗೆ ಮಾಡಿ, ದುರ್ಯೋಧನೆ ಆಡ್ತಾನೆ’ ಅಂತ ನನ್ನ ಮೇಲೆ ಅವರಿವರ ಹತ್ರ ದೂರು ಪುಕಾರು ಹೇಳ್ತಾನಂತೆ!” ಎಂದು ಒಡ್ಡಿ ಬಾಗಿಲು ತೆಗೆಯಲು ಸುರು ಮಾಡಿದ್ದ ತಿಮ್ಮಗೆ “ನೋಡೂ ಗುರುತಿಟ್ಟಗಾ ಆ ಹೂಬಾಲದ ಸಲಗಾನ.... ಏ ಮಂಜಾ, ನೀನೂ ಒಂದು ಕೈ ಕೂಡಿಸೋ. ಬಲವಾಗಿದೆಯೋ ಅದು!” ಎಂದರು.

“ಯಾವುದು? ಕಿವಿಚಟ್ಟೆ ಹತ್ರ ಬೆಳ್ಳಗಿದೆಯಲ್ಲಾ ಅದಾ?” ಎಂದು ಕೇಳಿದ ಮಂಜಗೆ

“ನಿನ್ನ ಅಜ್ಜಿ ತಲೆ! ಬಾಲದ ಹತ್ರ ಬೆಳ್ಳಗಿದೆಯಲ್ಲೋ ಅದು!” ಎಂದು ಹೆಗ್ಗಡೆಯವರು, ಹಂದಿಯ ಹೇಲುಗೆಸರನ್ನೂ ಲೆಕ್ಕಿಸದೆ ಮೆಟ್ಟುತ್ತಾ, ಇತರ ಅಸ್ಪೃಶ್ಯರಿಂದ ತುಸು ದೂರಸರಿದು ನಿಂತರು.

ಆಗಲೇ ಹೊತ್ತೇರಿದ್ದರಿಂದ ಎಂದಿನಂತೆ ಹೊರಗೆ ಹೋಗಲು ತವಕಿಸುತ್ತಾ ಹಂದಿಗಳೆಲ್ಲಾ ನಾ ಮುಂದೆ ತಾ ಮುಂದೆ ಎಂದು ಬಾಗಿಲ ಬಳಿಗೆ ನುಗ್ಗಲು ತೊಡಗಿದ್ದುವು. ಒಡ್ಡಿಯ ಒಳಗೆ ಜರುಗುತ್ತಿದ್ದ ಕಾಮಕ್ರೋಧಾದಿ ಅರಿಷಡ್ವರ್ಗದ ಚತುಷ್ಪಾದಿ ಪ್ರಣಿಚೇಷ್ಟೆಗಳನ್ನು ಕಂಡು ಹೊರಗೆ ನಿಂತಿದ್ದ ದ್ವಿಪಾದಿ ಪ್ರಾಣಿಗಳು ಗಟ್ಟಯಾಗಿ ನಗುತ್ತಾ “ಚಾಷ್ಟೆಮಾತು’ ಪ್ರಾರಂಭಿಸಿದರು:

“ಹಿಹ್ಹಿಹ್ಹಿಹ್ಹಿ! ಹಹ್ಹಹ್ಹಹ್ಹ! ಮರಿ ಹಾಕಿದ ದಡ್ಡೆ ಮ್ಯಾಲೇ ಸವಾರಿಗೆ ಸುರುಮಾಡ್ತಲ್ಲೋ….”

“ಹಿಹ್ಹಿಹ್ಹಿಹ್ಹೀ ಬಿತ್ತು ಕೆಳಗೆ!…. ಹಾಂಗೆ ಆಗ್ಬೇಕು ಸೊಕ್ಕಿದ ಮುಂಡೇದಕೆ….”

“ಅಯ್ಯಯ್ಯಯ್ಯೋ ಆ ಮರೀನ ಕೊಂದೇ ಹಾಕ್ತಲ್ಲೋ ತುಳಿದು….”

“ಏ ಬೈರಣ್ಣಾ, ಕಂಡೀಲಿ ಕೋಲು ಹೆಟ್ಟಿ, ಮುಸುಡಿಗೆ ಒಂದು ತಿವಿಯೋ….”

“ಥೂ ಥೂ ಥೂ! ಹೊಟ್ಟೆ ಮೆಟ್ಟಿದ ಹೊಡತಕ್ಕೆ ಒಂದು ಮಣ್ಣು ತಟ್ಟೇನೆ ಸುರಿದು ಬಿಡ್ತಲ್ಲೋ….!”

ತಿಮ್ಮ ತುಂಬ ಎಚ್ಚರಿಕೆಯಿಂದ ಮೆಲ್ಲಗೆ ಬಾಗಿಲು ತೆರೆಯ ತೊಡಗಿದ. ಒಂದರ ಮೇಲೆ ಒಂದು ನುಗ್ಗಿ ಕೆಲವು ಮರಿಗಳೂ, ನಡುಪ್ರಾಯದವೂ ಹೊರಗೆ ನೆಗೆದು ಗುರು ಗುರು ಗುಟ್ಟುತ್ತಾ, ದಿನವೂ ಬೆಳಗ್ಗೆ ಮನುಷ್ಯರು ಹೊರಕಡಗೆ ಹೋಗುವ ತೋಟದ ಮೂಲೆಯ ಕಡೆಗೆ ಧಾವಿಸಿದುವು, ಹಸಿದ ತವಕವೋ ತವಕದಿಂದ!

“ತಿಮ್ಮಣ್ಣಾ, ತಿಮ್ಮಣ್ಣಾ, ಬಂತಲ್ಲೋ ಹೂಬಾಲದ ಸಲಗ!” ಬಚ್ಚ ಕೂಗಿದ ರಭಸಕ್ಕೆ ತಿಮ್ಮ ದಢಾರನೆ ಬಾಗಿಲು ಮುಚ್ಚಿಬಿಟ್ಟ! ನಿಜಕ್ಕೂ ಆ ಸಲಗ ದಡ್ಡೆಗಳನ್ನೆಲ್ಲ ತಿವಿದು ದಾರಿ ಬಿಡಿಸಿಕೊಂಡು ಬಾಗಿಲಿಗೆ ನುಗ್ಗಿತ್ತು, ಸಕಾಲದಲ್ಲಿ ಬಾಗಿಲು ಹಾಕದಿದ್ದರೆ ಹೊರಕ್ಕೆ ಹಾರಿಯೆ ಬಿಡುತ್ತಿತ್ತು. ಆದರೆ ಬಾಗಿಲು ಹಾಕಿದ್ದನ್ನು ನೋಡಿ ಆ ಸಲಗ ಪುನಃ ಒಡ್ಡಿಯ ಹಿಂಭಾಗಕ್ಕೆ ದಢಾರನೆ ನುಗ್ಗಿ ಕಂಡಿಗಳಿಗೆಲ್ಲಾ ಮೂತಿ ಹಾಕಿ ಪರಿದಾಡತೊಡಗಿತು.

ಬೈರ, ಒಂದು ಬಿದಿರುದೊಣ್ಣೆಯಿಂದ ಒಡ್ಡಿಯೊಳಗಡೆ ದಡ ಬಡಿಸುತ್ತಿದ್ದ ಸಲಗವನ್ನು ಅದರ ಗಮನ ಬಾಗಿಲ ಕಡೆ ಹೋಗದಂತೆ ಮಾಡುವುದಕ್ಕಾಗಿ ಸತಾಯಿಸತೊಡಗಿ, ತಿಮ್ಮಗೆ ಕೂಗಿ ಹೇಳಿದನು: “ತಮ್ಮಣ್ಣಾ, ತಿಮ್ಮಣ್ಣಾ, ಈಗ ಬಾಗಿಲು ತೆಗಿ! ಬ್ಯಾಗ, ಬ್ಯಾಗ!”

ತಿಮ್ಮ ಬೇಗಬೇಗನೆ ಬಾಗಿಲು ತೆರೆದನು. ದಡ್ಡೆಗಳೂ ಕೆಲವು ಮರಿಗಳೂ ಹೊರಗೆ ನೆಗೆದೋಡಿದುವು. ಇನ್ನೂ ಕೆಲವು ಬಾಗಿಲಿಗೆ ಧಾವಿಸಿದುವು. ಅಷ್ಟರಲ್ಲಿ ಬಾಗಿಲು ತೆರೆದದ್ದನ್ನು ಅರಿತ ಸಲಗ ಕಣ್ಣು ಮುಚ್ಚಿ ಬಿಡುವುದರಲ್ಲಿಯೆ ಉಳಿದೆಲ್ಲ ಹಂದಿಗಳನ್ನೂ ಅತ್ತ ಇತ್ತ ತಳ್ಳಿ ಉರುಳಿಸಿ ಬಾಗಿಲಿಗೆ ನುಗ್ಗಿಬಿಟ್ಟಿತು! ‘ಹೋ ಹೋ ಹೋ!’ ‘ಬಂತೂ ಬಂತೂ

ಬಂತೂ!' 'ಅಯ್ಯಯ್ಯೊ ಅಯ್ಯಯ್ಯೊ! ತಪ್ಪಿಸಿಕೊಳ್ತಲ್ಲೋ!' 'ಹಿಡಿರೋ! ಹಿಡೀರೋ! ಹಿಡೀರೋ! ಥೂ ಹೊಲೆಸೂಳೆಮಕ್ಕಳ್ರಾ, ನೀವೇನು ಅನ್ನಾತಿಂತೀರೋ....?' ನಾನಾ ಕೂಗುಗಳೂ ಬೈಗುಳಗಳೂ ಅಂಗಳವನ್ನೆಲ್ಲ ಸಶಬ್ದವನ್ನಾಗಿ ಮಾಡಿದುವು. ಸುಬ್ಬಣ್ಣ ಹೆಗ್ಗಡೆಯವರು "ತ್ವಾಟದ ಕಡೆ ಹೋಗದ ಹಾಂಗೆ ತಡೀರೋ!" ಎಂದು ಕೂಗುತ್ತಾ, ತಾವೇ ಅತ್ತ ಕಡೆ ನುಗ್ಗಿ ಓಡಿದರು. ಹಿಂದಿನ ದಿನದ ಬಿರುಮಳೆಯಿಂದಾದ ಅಂಗಳದ ಕೆಲಸರು ಹೆಜ್ಜೆಹೆಜ್ಜಾಯಾಗ ಬೂದಿಗುಡ್ಡೆಯಿಂದಲೂ ಓಡಿಬಂದ ಕಂತ್ರಿನಾಯಿಗಳೂ ಸಲಗನ ಬೇಟೆಯಲ್ಲಿ ಭಾಗವಹಿಸಿದುವು. ಯಾವ ಕಡೆ ಹೋದರೂ ದಾರಿ ಕಟ್ಟಿಹೋದ ಆ ಹಂದಿಗೆ ತಲೆ ಕೆಟ್ಟಂತಾಗಿ ಸಿಕ್ಕಬಟ್ಟೆ ನುಗ್ಗಿ ಓಡಲಾರಂಭಿಸಿತು.

ಸೌದೆಕೊಟ್ಟಿಗೆಯ ಕಡೆ ನುಗ್ಗಿ ಅಲ್ಲಿ ತನಗೆ ಎದುರಾಗಿ ಕಡಿದಾಗಿ ಎದ್ದಿದ್ದ ದರೆಯನ್ನು ಕಂಡು, ಹತ್ತಲು ಎರಡು ಮೂರು ಸಾರಿ ನೆಗೆದು ಜಾರಿಬಿದ್ದು ಸೋತು, ಹಿಂದಕ್ಕೆ ಹಾರಲು ಪ್ರಯತ್ನಿಸುತ್ತಿದ್ದಾಗ ಮಂಜ ಅಲ್ಲಿಯೆ ಬಿದ್ದಿದ್ದ ಒಂದು ದೊಡ್ಡ ಬಡಿಕೆಯನ್ನೆತ್ತಿ ಹಂದಿಯ ಸೊಂಟಕ್ಕೆ ಇಕ್ಕಡಿಸಿಬಿಟ್ಟನು. ಅದು ಆ ಪೆಟ್ಟಿಗೆ ಕಿರ್ರೋ ಎಂದು ಕೂಗಿಕೊಳ್ಳಲು, ಹೆಗ್ಗಡೆಯವರು "ಅಯ್ಯೋ ಮುಂದೇಮಗನೇ, ಹೊಡೆದು ಕೊಂದೇನೊ? ಸೊಂಟಮುರಿದು ತೆವಳ್ತಿದೆಯಲ್ಲೋ! ಹಸಿಗೆ ಮಾಡಿಕೊಂಡು ತಿನ್ನಾವ ಅಂತಾ ಮಾಡೀರೇನೋ?" ಎಂದು ಮೊದಲಾಗಿ ಬೊಬ್ಬೆ ಹಾಕಿದರು.

ಹಂದಿಯನ್ನು ಮಾರುವುದರಿಂದ ಬರುವ ಹಣಕ್ಕೆ ಎಲ್ಲಿ ಸಂಚಕಾರ ಆಗುತ್ತದೆಯೋ ಎಂಬುದು ಅವರ ಹೆದರಿಕೆಯಾಗಿತ್ತು. ಆದರೆ ಸಲಗ ಸ್ವಲ್ಪವೂ ಜಗ್ಗಲಿಲ್ಲ. ಪಣತದ ಕೊಟ್ಟಿಗೆಯ ಕಡೆ ನುಗ್ಗಿತು. ಅಲ್ಲಿ ತೊಳಸಿ ಘನಮಾಡಲೆಂದು ರಾಸಿಹಾಕಿದ್ದ ಅಕ್ಕಿಯಿದ್ದುದನ್ನು ಕಂಡು ಹೆಗ್ಗಡೆಯವರು ಹುಚ್ಚೆದ್ದು ಕುಣಿದಾಡಿದರು: "ಹೋಯ್ತಲ್ಲೋ! ಹೋಯ್ತಲ್ಲೋ! ನಿಮ್ಮ ಮನೆ ಹಾಳಾಗ, ಅಕ್ಕಿನೆಲ್ಲಾ ತೆಗಿದ್ರಲ್ಲೋ..." ಎಂದು ಕೋಪ ಮಿಶ್ರವಾದ ರೋದನ ಧ್ವನಿಮಾಡತೊಡಗಿದರು. ಹೊಲೆಯರೆಲ್ಲಾ ಸೇರಿ ಹಂದಿ ಅತ್ತಕಡೆ ಹೋಗದಂತೆ ತಡೆಯಲು ಹೆಣಗಿದರು. ಆದರೆ ಸಲಗವು ಅಕ್ಕಿಯ ರಾಶಿಯ ಮೇಲೆಯೆ ನುಗ್ಗಿ, ತುಳಿದು, ಚೆನ್ನಾಪಿಲ್ಲಿ ಮಾಡಿ, ಬೊಬ್ಬೆಯ ಹೊನಲಿನಲ್ಲಿ ತೇಲಿ ನುಗ್ಗುವ ಕರಿಬಂಡೆಯಂತೆ, ಶಂಕರಪ್ಪ ಹೆಗ್ಗಡೆಯವರ ಹೆಂಚಿನ ಮನೆಯ ಅಂಗಳದತ್ತ ಧಾವಿಸಿತು.

ಜಗಲಿಯ ಮೇಲೆ ಮಾತಾಡುತ್ತಾ ಕುಳತಿದ್ದ ಶಂಕರಪ್ಪ ಹೆಗ್ಗಡೆ ಮತ್ತು ವೆಂಕಟಣ್ಣ ಇಬ್ಬರೂ ಅಂಗಳದ ಕಡೆ ನುಗ್ಗಿ ಬರುತ್ತಿದ್ದ ಹಂದಿ ನಾಯಿ ಮನುಷ್ಯರ ಬೊಬ್ಬೆಗುಂಪನ್ನು ನೋಡ, ತುಳಸೀಕಟ್ಟೆಯಿರುವ ಸ್ಥಳವನ್ನು ಅಪವಿತ್ರಗೊಳಿಸದಂತೆ ಹಂದಿಯನ್ನು ಅಡ್ಡಗಟ್ಟಿ ಹಿಂದಕ್ಕೇ ಓಡಿಸಬೇಕೆಂದು ಕೆಳಕ್ಕಿಳಿಯುವಷ್ಟರಲ್ಲಿಯೆ ಗುಂಪು ಅಂಗಳಕ್ಕೆ ನುಗ್ಗಿ ಬಿಟ್ಟಿತ್ತು. ಶಂಕರಪ್ಪ ಹೆಗ್ಗಡೆ ತುಳಸಿಕಟ್ಟೆಯ ಬಲಗಡೆಗೆ ಧಾವಿಸಿ, ಅಬ್ಬರಿಸಿ ಕೂಗಿ ಹಂದಿಯನ್ನು ಎಬ್ಬಿದೊಡನೆ ಅದು ಬಲಕ್ಕೆ ತಿರುಗಿ ನುಗ್ಗಿತು. ಕಾಲಿನ ಹುಣ್ಣು ರಕ್ತ ಸೋರುತ್ತಾ ನೆಲದ ಮೇಲೆ ನೋಯುತ್ತ ಕುಳಿತಿದ್ದ ವೆಂಕಟಣ್ಣ ಅಭ್ಯಾಸಬಲದಿಂದೆಂಬಂತೆ ತನ್ನ ದೊಣ್ಣೆಯನ್ನೆತ್ತಿ, ಬೀಸಲು ಹಂದಿ ತುಳಸಿಕಟ್ಟೆಯ ಮೇಲೇಯೆ ಹತ್ತಿ ಹಾರಿತು. ಅದರ ಹಿಂದೆ ನಾಯಿಗಳೂ ನುಗ್ಗಿದುವು. ದೇವರ ಮುಂದೆ ಹೋತ್ತಿಸಿಟ್ಟಿದ್ದ ನೀಲಾಂಜನಗಳೂ ದೇವರಿಗೆ ಮುಡಿಸಿದ್ದ ಹೂವುಗಳೂ ಉರುಳಿ ಚೆಲ್ಲಾಪಿಲ್ಲಿಯಾಯಿತು. ದೀಪಗಳೂ ಆರಿಹೋದುವು. ಹಂದಿಯ ಹಿಂದೆ ಓಡಿ ಬರುತ್ತಿದ್ದ ಹೊಲೆಯರೆಲ್ಲ ಹಂದಿ ದೇವರ ಕಡೆಗೆ ನುಗ್ಗಿದೊಡನೆ, ಹದರಿ ಗಾಬರಿಯಾಗಿ ಮರವಟ್ಟಂತೆ ದೂರದಲ್ಲಿಯೆ ನಿಂತುಬಿಟ್ಟರು. ತಾವು ಹೋಗಬಾರದ ಜಾಗಕ್ಕೆ ಹಂದಿ ಹೋಯಿತಲ್ಲಾ ಎಂದು ವಿಷಾದದಿಂದಲೂ, ಅದಕ್ಕಿಂತಲೂ ಹೆಚ್ಚಾಗಿ ತಮಗೆ ಕೇಡು ತಪ್ಪದು ಎಂಬ ಪಾಪಭೀತಿಯಿಂದಲೂ ಅವರು ಕಂಗಾಲಾಗಿದ್ದರು. ಅಷ್ಟರಲ್ಲಿ ಹಂದಿ ಅಂಗಳದ ಒಂದು ಭಾಗಕ್ಕೆ ಹಾಕಿದ್ದ ಹಳೆಯ ಬೇಲಿಯನ್ನು ಮುರಿದುಕೊಂಡು ಅವರ ಮನೆಯ ಹಿತ್ತಲು ಕಡೆಗೆ

ನುಗ್ಗಿದುದನ್ನು ಕಂಡ ಹೊಲೆಯರು ಬಳಸುದಾರಿಯಿಂದ ಅತ್ತ ಓಡಿದರು. ಅಲ್ಲಿಯೂ ಹಂದಿ ಹರುವೆ ಮಾಡಿ, ಕೊತ್ತಂಬರಿ ಮಡಿ, ಕೆಸುವಿನ ಚೇಪಿನ ಮಡಿ, ತಿಂಗಳವರೆ ಮಡಿಗಳನ್ನೆಲ್ಲ ತುಳಿದು ರಂಪ ಮಾಡಿ ಮನೆಯ ಮೇಲಣ ಹಕ್ಕಲುಹಾಡಿನ ಕಡೆಗೆ ನುಗ್ಗಿಬಿಟ್ಟಿತ್ತು.

ಸ್ವಲ್ಪ ಹೊತ್ತಿಗೆ ಮುಂಚೆ ತಾನು ಪೂಜಿಸಿ ಪ್ರದಕ್ಷಿಣೆ ಮಾಡಿದ್ದ ತನ್ನ ಮನೆದೇವರಿಗೆ ತನ್ನ ಕಣ್ಣಮುಂದೆಯೆ ಒದಗಿದ ಮೈಲಿಗೆಯ ದುಃಸ್ಥಿತಿಯನ್ನು ಎವೆಯಿಕ್ಕದೆ ನಿಟ್ಟಿಸುತ್ತಾ, ದಿಗ್‌ಭ್ರಾಂತನಂತೆ ನಿಂತಿದ್ದ ಶಂಕರ ಹೆಗ್ಗಡೆಯವರ ಕಣ್ಣುಗಳಲ್ಲಿ ನೀರು ಬಳಬಳನೆ ಇಳಿಯತೊಡಗಿತು. ನಿಟ್ಟುಸಿರುಗಳಿಂದ ಅಳ್ಳೆ ಎದತೊಡಗಿತು. ಮರ್ಮಭೇದಿಯಾದ ಅಂತರ್ದುಃಖವೊಂದು ಅವರ ಹೃದಯವನ್ನೆಲ್ಲಾ ಹಿಂಡಿದಂತಾಯಿತು. ತನಗೇನೊ ಒಂದು ಭಯಂಕರ ಅಮಂಗಳ ಕಾದಿದೆ ಎನ್ನುವುದಕ್ಕೆ ಮುನ್ಸೂಚನೆಯಾದಂತಾಗಿ ಅರೂಪ ಭೀತಿಯೊಂದು ಅವರ ಅಂತಃಕರಣದ ಅಂತರಾಳವನ್ನೆಲ್ಲ ಕಲಕತೊಡಗಿತು. ಜಗಲಿಯ ಮೇಲೆ ಕೈ ಕೂಸನ್ನೆತ್ತಿಕೊಂಡು, ಮಕ್ಕಳೊಡನೆ ನಿಂತು, ನಿಸ್ಸಹಾಯಕಳಾಗಿ, ದಿಗಿಲುಗೊಂಡು ನಡೆದುದನ್ನೆಲ್ಲ ನೋಡಿ ಸಂಕಟಪಡುತ್ತಾ ನಿಂತಿದ್ದ ಬಡಕಲೊಡಲ ತನ್ನ ಹೆಂಡತಿಯನ್ನು ನೋಡಿ, ಹಿಂದೆಂದೂ ಇತರರೆದುರು ಹೆಂಡತಿಯ ಹೆಸರು ಹಿಡಿದು ಕೂಗದಿದ್ದ ಅವರು, ತಡೆಯಲಾರದ ದುಃಖ ಭಯ ಅಮಂಗಳಾಶಂಕೆಯಿಂದ ಕಂಗೆಟ್ಟಂತೆ "ಅಯ್ಯೋ, ಸೀತೂ, ನಮ್ಮ ಮನೆಯೆ ಹಾಳಾಯಿತಲ್ಲೇ! ದೇವರಿಗೆ ಹಚ್ಚಿಟ್ಟಿದ್ದ ದೀಪಾನೆ ಆರಿಸಿದನಲ್ಲೇ ನಮ್ಮ ದಾಯಾದಿ!" ಎಂದು ಗಟ್ಟಿಯಾಗಿ ರೋದನ ಧ್ವನಿಯಲ್ಲಿ ಕೂಗಿಕೊಂಡರು.

ಅತ್ತ ಕಾಡು ಹತ್ತಿದ ಊರು ಹಂದಿ ಒಂದು ಸೀಗೆಯ ಉಡಿಯಲ್ಲಿ ಆಶ್ರಯ ಪಡೆದುದನ್ನು ಪತ್ತೆ ಹಚ್ಚಿ ಹೊಲೆಯರೆಲ್ಲ ಸುತ್ತುವರಿದು ಅದನ್ನು ಹೊರಡಿಸುವ ಯತ್ನದಲ್ಲಿದ್ದರು. ಇದ್ದಕ್ಕಿದ್ದ ಹಾಗೆ ಯಾವುದೊ ಒಂದು ದೊಡ್ಡ ನಾಯಿಯ ದೊಡ್ಡ ಗಂಟಲು ಕೇಳಿಸಿತು. ಹಂದಿ ಉಡಿಯಿಂದ ಹೊಡಗೆ ದುಮಿಕಿ ತನ್ನೆಲ್ಲ ಶಕ್ತಿಯನ್ನೂ ವಿನಿಯೋಗಿಸಿ ಓಡತೊಡಗಿತು. ನೋಡುತ್ತಾರೆ: ಅದನ್ನು ಬೆನ್ನಟ್ಟುತ್ತಿದೆ, ಹುಲಿಯ!

"ಅಯ್ಯಯ್ಯೋ ಅದ್ಯಾವುದ್ರೋ ಆ ನಾಯಿ?" ಎಂದೊರಲುತ್ತಾ ತಿಮ್ಮ ದೌಡಾಯಿಸಿದ. ಕೆಮ್ಮೀಸೆ ಮಂಜ ಹಿಂಬಾಲಿಸುತ್ತಲೇ ಕೂಗಿದ: "ಸಿಂಬಾವಿ ಗುತ್ತೀದು ಕಣ್ರೋ! ಎಲ್ಲಿಂದ ಬಂತ್ರೋ ಇಲ್ಲಿಗೆ ಆ ಸನಿ? ಕೊಂದೇ ಹಾಕ್ತದೆ ಹಂದೀನ!"

ಅಷ್ಟರಲ್ಲಿಯೆ ಒಂದು ಪೊದೆಯ ಹಿಂದೆ ಹಂದಿ ಕಿರ್ರೋ ಎಂದು ಕೂಗುತ್ತಿದ್ದ ಬೊಬ್ಬೆ ಕೇಳಿಸಿತು: ಹುಲಿಯ ಹಂದಿಯ ಕಿವಿಚಟ್ಟೆಯನ್ನು ಕಟ್ಟಿ ಹಿಡದು ಅದರ ಓಟವನ್ನು ನಿಲ್ಲಿಸಿತ್ತು. ಹೊಲೆಯರು ಸಮೀಪಿಸುವುದರೊಳಗೆ ಹಂದಿ ಕೆಳಗೆ ಬಿದ್ದಿತ್ತು. ನಾಯಿ ಅದರ ಗಂಟಲಿಗೆ ಬಾಯಿ ಹಾಕುವ ಪ್ರಯತ್ನದಲ್ಲಿತ್ತು.

"ಬಿಡಿಸ್ರೋ! ಬಿಡಿಸ್ರೋ! ಹಂದೀನಾ ಕೊಂದುಹಾಕ್ತದೆ!" ಎಂದು ಎಲ್ಲರೂ ಒಬ್ಬರಿಗೊಬ್ಬರಿಗೆ ಕೂಗಿ ಹೇಳಿದರೇ ಹೊರತು ಯಾರೂ ನಾಯಿಯ ಹತ್ತಿರಕ್ಕೆ ಹೋಗಲು ಧೈರ್ಯ ಮಾಡಲಿಲ್ಲ.

ಅಷ್ಟರಲ್ಲಿ ಕೋಣೂರಿನ ಹತ್ತಿರ ನಾಗತ್ತೆ ನಾಗಕ್ಕರನ್ನು ಅಗಚಿ, ಹಳೆಮನೆ ಸುಬ್ಬಣ್ಣ ಹೆಗ್ಗಡೆಯವರಿಗೆ ಸಿಂಬಾವಿ ಭರಮೈ ಹೆಗ್ಗಡೆಯವರಿಂದ ಕಾಗದ ತರುತ್ತಿದ್ದ ಹೊಲೆಯರ ಗುತ್ತಿ, ತಾನು ಬರುತ್ತಿದ್ದ ಕಾಲುದಾರಿಯಿಂದ ತುಸು ಮೇಲುಭಾಗದ ಕಾಡಿನ ಅಂಚಿನಲ್ಲಿ ಆಗುತ್ತಿದ್ದ ಗಲಾಟೆಯನ್ನು ಕೇಳಿ, ಕುತೂಹಲವಶನಾಯಿ ಆ ಕಡೆ ಓಡುತ್ತಲೇ ಹೋಗಿ ಕಾಣಿಸಿಕೊಳ್ಳುವುದೆ ತಡ ನಾಲ್ಕಾರು ಕೊರಳುಗಳು ಒಟ್ಟಿಗೆ "ನಿನ್ನ ನಾಯಿ ನಮ್ಮ ಹಂದೀನ ಕೊಲ್ತಲ್ಲೋ, ಗುತ್ತಿ!" ಎಂದು ಕೂಗಿಕೊಂಡವು. ಸನ್ನಿವೇಶದ ಅರ್ಥವನ್ನೆಲ್ಲ ತಟಕ್ಕನೆ ಗ್ರಹಿಸಿದ ಗುತ್ತಿ ಓಡಿಹೋಗಿ, ಕೂಗಿ ಕರೆಯುತ್ತಾ, ಹುಲಿಯನ ಬೆನ್ನ ಮೇಲೆ ಮುಷ್ಟಿಯಿಂದಲೆ ಎರಡು ಗುದ್ದು ಗುದ್ದಿ, ಅದರ ಕುತ್ತಿಗೆಯನ್ನು ಬಲವಾಗಿ ತಬ್ಬಿ ಎಳೆದು ಹಿಡಿದುಕೊಂಡನು. ತತ್ತರಿಸಿದ್ದ ಸಲಗ ಮತ್ತೆ ಬಡರಿಬಿದ್ದು ಎದ್ದು ಓಡಲು ಪ್ರಯತ್ನಿಸುತ್ತಿದ್ದಂತೆಯೇ ಮಂಜ, ಬೈರ, ತಿಮ್ಮ, ಬಚ್ಚ, ಪುಟ್ಟ ಎಲ್ಲರೂ ಒಂದೇ ನೆಗೆತಕ್ಕೆ ನುಗ್ಗಿ ಅದನ್ನು ಅದುಮಿ ಹಿಡಿದು, ಬಳ್ಳಿಗಳಿಂದ ಮುಂದಿನ ಎರಡೂ ಕಾಲುಗಳನ್ನೂ ಹಿಂದಿನವುಗಳನ್ನೂ ಬೇರೆ ಬೇರೆಯಾಗಿ ಒಟ್ಟಿಗೆ ಬಿಗಿದು ಕಟ್ಟಿ, ಒಂದು ನೇರವಾದ ಗಿಡವನ್ನು ಕಡಿದು ಬಲವಾದ ಅಡ್ಡೆಯನ್ನಾಗಿ ಮಾಡಿ ಹಂದಿಯ ಕಾಲುಗಳ ನಡುವೆ ತೂರಿಸಿ, ಎತ್ತಿ ತಲೆಕೆಳಗಾಗಿ ಕಿರ್ರೊ ಎಂದು ಕಾಡೆಲ್ಲ ಮೊರೆಯುವಂತೆ ಚೀರಿಡುತ್ತಿದ್ದ ಅದನ್ನು ಹೊತ್ತುಕೊಂಡು ಮನೆಯ ಕಡೆಗೆ ಇಳಿದರು.

ಗುತ್ತಿ ತನ್ನ ನಾಯಿಯ ಕೊರಳಿಗೆ ಮತ್ತೆ ಒಂದು ಬಳ್ಳಿ ಕುಣಿಕೆ ಬಿಗಿದು, ಅದನ್ನು ಭದ್ರವಾಗಿ ಹಿಡಿದುಕೊಂಡು ಮನೆಯ ಕಡೆಗೆ ಹೊರಟು ಎರಡು ಹೆಜ್ಜೆ ಹಾಕಿದ್ದನೊ ಇಲ್ಲವೊ ಎದುರಿಗೆ ತಿಮ್ಮಪ್ಪ ಹೆಗ್ಗಡೆ ಬರುತ್ತಿರುವುದನ್ನು ನೋಡಿ, ಪಿಚ್ಚನೆ ಹಲ್ಲುಬಿಟ್ಟು, ಅಭ್ಯಾಸಬಲದಿಂದಲೆಂಬಂತೆ ದಾರಿಯಿಲ್ಲದಿದ್ದರೂ ದಾರಿಬಿಟ್ಟು ನಿಲ್ಲುವಂತೆ ಸರಿದು ನಿಂತನು.

ಹಂದಿ ನೆರಮನೆಯ ದಾಯಾದಿಗಳ ಅಂಗಳದ ಕಡೆಗೆ ನುಗ್ಗಿದುದನ್ನು ಕಂಡ ಸುಬ್ಬಣ್ಣ ಹೆಗ್ಗಡೆಯವರು, ಕಾಲುಗೆಟ್ಟಂತಾಗಿ, ತಮಗೆ ಸೇರಿದ ಅಂಗಳದ ಭಾಗದಲ್ಲಿಯೆ ನಿಂತು, ಮಗನನ್ನು ಕೂಗಿ ಕರೆಯತೊಡಗಿದರು. ತಿಮ್ಮಪ್ಪ ಹೆಗ್ಗಡೆ ತನಗೂ ಅದಕ್ಕೂ ಏನೂ ಸಂಬಂಧವಿಲ್ಲದವನಂತೆ ಬಚ್ಚಲ ಕಡೆಯಿಂದ ಬರಲು "ನಿನ್ನ ಕಾಲಿಗೆ ಒರಲೆಹಿಡಿಯಾ! ಕಿವಿ ಕೆಪ್ಪಾಗಿದೆಯೇನೊ? ಅಲ್ಲಿ ಓಡೋ! ಓಡೋ ಬ್ಯಾಗ!" ಎಂದು ಗಂಟಲು ಕಟ್ಟಿ ಹೋಗುವಂತೆ ಕೂಗಿಕೊಂಡರು. ತಿಮ್ಮಪ್ಪ ತುಸು ಚುರುಕಾಗಿಯೆ ಗಲಾಟೆಯ ಜಾಡನ್ನು ಹಿಂಬಾಲಿಸಿ ಗುಡ್ಡವೇರಿ ಬರುತ್ತಿದ್ದನು. ಗುತ್ತಿಯಿಂದ ಹೊಲೆಯರು ಹಂದಿಯನ್ನು ಅಡ್ಡೆ ಕಟ್ಟಿ ಹೊತ್ತುಕೊಂಡು ಹೋದ ವಿಷಯ ತಿಳಿದವನು "ಅಂತೂ ನೀನು, ನಿನ್ನ ನಾಯಿ, ಹೋದಲ್ಲೆಲ್ಲಾ ಕೊಂಡು ಹುಯ್ಲು!" ಎಂದವನು, ತಟಕ್ಕನೆ ದನಿ ಬದಲಾಯಿಸಿ "ಎಲ್ಲಿಂದ ಬಂದ್ಯೊ?" ಎಂದನು.

ಗುತ್ತಿ ಇದ್ದಕ್ಕಿದ್ದಂತೆ ಪ್ರಸನ್ನನಾದವನಂತೆ ಮಂದಹಸಿತನಾದನು. ತಾನು ಎಲ್ಲಿಂದ ಬಂದದ್ದು ಎಂಬುದನ್ನು ಹೇಳಿದರೆ ಆ ಹೆಸರು ಕೇಳಿ ತಿಮ್ಮಪ್ಪ ಹೆಗ್ಗಡೆ ಒಳಗೊಳಗೆ ಹಿಗ್ಗುತ್ತಾನೆ ಎಂಬುದನ್ನು ನಿಸ್ಸಂದಿಗ್ಧವಾಗಿ ಅರಿತವನಂತೆ ಹೇಳಿದನು: "ಮನೆಯಿಂದ."

'ಮನೆಯಿಂದ' ಎಂದರೆ 'ಸಿಂಬಾವಿಯಿಂ' ಎಂದು ಎಲ್ಲರೂ ತಿಳಿದೇ ತಿಳಿದುಕೊಳ್ಳುತ್ತಾರೆ ಎಂಬುದರಲ್ಲಿ ಅವನಿಗೆ ಸುನಿಶ್ಚಯ ಬುದ್ಧಿ. ಆ ಕಡೆ ಯಾರೂ "ನಮ್ಮ ಊರಿಂದ ಬಂದೆ" ಎಂದಾಗಲಿ, ನಮ್ಮ 'ಹಳ್ಳಿ'ಯಿಂದ ಬಂದೆ ಎಂದಾಗಲಿ ಹೇಳುವುದಿಲ್ಲ. ಅಲ್ಲಿ ಊರು ಹಳ್ಳಿ ಎಲ್ಲ ಒಂದೇ: 'ಮನೆ'ಗೆ ಸೇರಿದಂತೆ ತುಸು ದೂರದಲ್ಲಿ ಹೊಲೆಯರ ಕೇರಿ, ಗಟ್ಟದವರ ಬಿಡಾ, ಇತ್ಯಾದಿ ಏನಿದ್ದರೂ ಅವೆಲ್ಲ 'ಮನೆ'ಯಲ್ಲಿ ಐಕ್ಯ. ನಮ್ಮ ಊರು, ನಮ್ಮ ಹಳ್ಳಿ- ಎಂಬ

ಮಾತುಗಳು ಗಟ್ಟದ ತಗ್ಗಿನವರಿಂದ ಬರಬಹುದು ಅಥವಾ ಬಯಲು ಸೀಮೆಯವರಿಂದ ಬರಬಹುದು. ಮಲೆನಾಡಿನವರಿಗೆ ಇರುವುದು 'ನಮ್ಮನೆ' 'ನಿಮ್ಮನೆ'.

"ಏನಾರೂ ಹೇಳಿ ಕಳಿಸಿದಾರೋ ನಿಮ್ಮ ಅಯ್ಯೋರು?" ತಿಮ್ಮಪ್ಪ ಹೆಗ್ಗಡೆ ಸುಪ್ರೀತನಾಗಿಯೆ ಪ್ರಶ್ನಿಸಿದನು.

"ಏನೂ ಇಲ್ಲಾ..." ಎಂದು ಗುತ್ತಿ ನೀಳ್ದನಿ ತೆಗೆದರೂ ಆ ದನಿ ಧ್ವನಿಪೂರ್ಣವಾಗಿದ್ದಂತೆ ತೋರಿತು ತಿಮ್ಮಪ್ಪ ಹೆಗ್ಗಡೆಗೆ. ಗುತ್ತಿ ಹಲ್ಲು ಬಿಡುತ್ತಿದ್ದುದನ್ನು ಗಮನಿಸಿ ತಾನೂ ಹಲ್ಲು ಬಿಡುತ್ತಾ "ಥೂ ಲೌಡೀ ಮಗನೇ, ನನ್ನ ಹತ್ತಿರ ದಗಲಬಾಜಿ ಮಾಡ್ತೀಯಾ?" ಎಂದನು.

"ಇಲ್ಲ ನನ್ನೊಡೆಯ, ನಾನ್ಯಾಕೆ ದಗಲಬಾಜಿ ಮಾಡಿ? ನನ್ನ ಹತ್ರ ಏನೂ ಹೇಳಿ ಕಳ್ಸಿಲ್ಲ."

"ಮತ್ತೆ? ಕಾಗದ ಗೀಗದ ಕೊಟ್ಟಾರೇನು?"

ಗುತ್ತಿಗೆ ಫಜೀತಿಗಿಟ್ಟುಕೊಂಡಿತು. ಕೊಟ್ಟ ಕಾಗದವನ್ನು ಗುಟ್ಟಾಗಿ ಸುಬ್ಬಣ್ಣ ಹೆಗ್ಗಡೆಯವರಿಗೇ ಕೊಡಬೇಕೆಂದು ಸಿಂಬಾವಿ ಭರಮಯ್ಯ ಹೆಗ್ಗಡೆಯವರು ತಮ್ಮ ನೆಚ್ಚಿನ ಆಳಿಗೆ ಆಜ್ಞಾಪಿಸಿದ್ದರು. ಬೇರೆ ಯಾರಾದರೂ ಕೈಯಲ್ಲಿ ಕೊಟ್ಟುಗಿಟ್ಟೀಯಾ? ಎಂದು ಹೆದರಿಸಿಯೂ ಇದ್ದರು. ಈಗ ಕಾಗದ ಕೊಟ್ಟಿದ್ದಾರೆ ಎಂಬ ವಿಚಾರ ತಿಮ್ಮಪ್ಪಗೆ ತಿಳಿಸಿದರೆ 'ಎಲ್ಲಿ? ಕೊಡು, ನೋಡಿ ಕೊಡುತ್ತೇನೆ' ಎಂದು ಕೇಳಿದರೆ ಏನು ಮಾಡುವುದು? ಏನನ್ನಾದರೂ ಹೇಳಿ ಕಳಿಸಿದ್ದಾರೆ ಎಂದು ತೋಟ, ಗದ್ದೆ, ಹಂದಿ, ದನ, ಕರು, ಜಮೀನು ಇಂತಹ ಯಾವುದಾದರೂ ಒಂದನ್ನು ಕುರಿತು ಏನಾದರೊಂದು ಸುಳ್ಳಂಬಳ್ಳಿ ಹೇಳಬಹುದಾಗಿತ್ತು. ಆ ಅವಕಾಶವನ್ನೂ ಮೊದಲೇ ಕಳೆದುಕೊಂಡು ಬಿಟ್ಟಿದ್ದಾನೆ, ಏನನ್ನೂ ಹೇಳಿ ಕಳಿಸಿಲ್ಲ ಎಂದು ಹೇಳಿ. ಮುಂದೇನು ಮಾಡಬೇಕು ಎಂದು ಗುತ್ತಿ ಮನದಲ್ಲಿಯೆ ತಡಕಾಡುತ್ತಿದ್ದುದನ್ನು ಗುರುತಿಸಿದ ತರುಣ ಹೆಗ್ಗಡೆ:

"ಏನೋ? ಮತ್ತೇನೋ ಠಕ್ಕು ಮಾಡಾಕೆ ಹುನಾರು ಮಾಡ್ತಿದ್ದೀಯಾ?" ಎಂದು ಮೂದಲಿಸುವಂತೆ ಪ್ರಶ್ನಿಸಿ, ಎರಡು ಹೆಜ್ಜೆ ಮುಂಬರಿದನು.

ತಿಮ್ಮಪ್ಪ ಹೆಗ್ಗಡೆಯ ಕಠೋರ ಧೂರ್ತ ಸ್ವಭಾವದ ಪರಿಚಯವಿದ್ದ ಗುತ್ತಿ "ತಡೀರಪ್ಪಾ, ಕಾಗ್ದ ಕೊಟ್ಟಿದ್ರು" ಎಂದು ದಗಲೆಯೊಳಗೆ, ಸೊಂಟದ ಸುತ್ತಿನಲ್ಲಿ ಅಲ್ಲಿ ಇಲ್ಲಿ ಹುಡುಕುತ್ತಾ "ಹಾಳು ಆ ಲಕ್ಕುಂದದ ಹಳ್ಳ ನಿನ್ನೆ ಆ ಮಳೇಲಿ ಏರಿ ಬಿಟ್ಟಿತ್ತು! ಹಾದು ಬರುವಾಗ ಸೊಂಟದ ಮ್ಯಾಲಕ್ಕೂ ನೀರು ಬಂದಿತ್ತು. ಎಲ್ಲಿ ತೇಲಿಹೋತೋ ಏನೋ?" ಎಂದು ಹುಡುಕುವುದನ್ನು ಬಿಟ್ಟು ನಿರಾಶನಾದವನಂತೆ ನಿಂತು "ಇನ್ನೇನು ಮಾಡ್ಲಪ್ಪಾ ನಾನು? ಮಗ್ಗಲು ಮುರಿಯೋ ಹಾಂಗೆ ಹೋಡೋತಾರಲ್ಲಾ ನನ್ನ!" ಎಂದು ಅಳುದನಿ ತೆಗೆದುದನ್ನು ಕಂಡ ತಿಮ್ಮಪ್ಪ ಹೆಗ್ಗಡೆ, ತುಟಿಗಚ್ಚಿ, ಕೊಂಕುನಗೆ ಬೀರಿ:

"ನೋಡೋ, ಗುತ್ತಿ, ಈ ಆಟಾನೆಲ್ಲಾ ತೆಗೀಬ್ಯಾಡ ನನ್ಹತ್ರ" ಎಂದು ಗುತ್ತಿಯ ಕಣ್ಣನ್ನೆ ನೇರವಾಗಿ ನೋಡುತ್ತಾ ಹೇಳಿದನು: "ನಿನ್ನ ಗುತ್ತೆಲ್ಲಾ ನಂಗೆ ಗೊತ್ತಿಲ್ಲಾ ಅಂತಾ ಮಾಡೀಯೇನು?"

ಗುತ್ತಿ ತಾನು ಬೆಟ್ಟಳ್ಳಿಗೆ ಹೋಗಿ ದೊಡ್ಡ ಬೀರನ ಮಗಳು ತಿಮ್ಮಿಯನ್ನು ಹಾರಿಸಿಕೊಂಡು ಹೋಗುವ ಗುಟ್ಟನ್ನೇ ಕುರಿತು ತಿಮ್ಮಪ್ಪ ಹೆಗ್ಗಡೆ ಸೂಚಿಸುತ್ತಿದ್ದಾನೆ ಎಂದು ಹೆದರಿ, ಹೇಗಾದರೂ ಮಾಡಿ ಅವನ ಕೈಯಿಂದ ನುಣುಚಿಕೊಂಡು ಹೊಗಿ ಸುಬ್ಬಣ್ಣ ಹೆಗ್ಗಡೆಯವರಿಗೆ ಕಾಗದ ತಲುಪುವಂತೆ ಮಾಡಿದರೆ ಸಾಕು ಎಂದು, ಹಿಂದುಮುಂದು ನೋಡದೆ "ಇಲ್ಲ, ನನ್ನೊಡ್ಯಾ, ಸತ್ಯವಾಗಿ, ದೇವರಾಣೆ!" ಎಂದುಬಿಟ್ಟನು.

"ದನಾ ತಿನ್ನುವನಿಗೆ ಗೊಬ್ಬರದ ಆಣೆ!.... ನೋಡೂ, ನನು ಅಪ್ಪಯ್ಯಗೆ ಕಾಗದ ಕೊಟ್ಟರೂ ಅವರು ಅದನ್ನ ನನ್ನ ಹತ್ರಾನೆ ಓದಾಕೆ ಹೇಳ್ತಾರೆ. ಅವರಿಗೆ ಕಣ್ಣೂ ಸರಿಯಾಗಿ ಕಾಣಾದಿಲ್ಲ. ಅಕ್ಷರ ಓದಾಕೆ. ಸುಮ್ಮಸುಮ್ಮನೆ ಮುಚ್ಚುಮರೆ ಮಾಡ್ತೀಯಲ್ಲಾ ಇಲ್ಲಿ ಸತ್ತಾ!" ಎಂದು ಸಾಫಲ್ಯ ದೃಢತಾಭಂಗಿಯಿಂದ ಕೈನೀಡಿದ ತಿಮ್ಮಪ್ಪ ಹೆಗ್ಗಡೆಗೆ,

ಗುತ್ತಿ ಪೆಚ್ಚಾದವನಂತೆ ಮುಗುಳುನಗುತ್ತಾ "ಅಯ್ಯೋ ದೇವರಾಣೇನೂ ಹಾಕಿಬಿಟ್ಟೆನಲ್ರೊ! ಇನ್ನು ಹ್ಯಾಂಗೆ ಕಾಗದ ಕೊಡಲಿ ಅಂತಾ ವೇಚ್ನೆ ಮಾಡ್ತಿದ್ದೀನಿ!" ಎಂದು ದಗಲೆಯ ಯಾವುದೋ ಒಂದು ಅಜ್ಞಾತ ಒಳಮೂಲೆಗೆ ಕೈಹಾಕಿದನು.

"ಅಯ್ಯೊ! ನಿನ್ನ ದೇವರಿಗೆ ಇಂಥಾ ಆಣೆ ಕೇಳಿ ಕೇಳಿ ಕಿವಿ ಕೆಪ್ಪಾಗಿ ಹೋಗಿ ಅದೆ! ಇನ್ನು ನೀನೆಷ್ಟು ಸಾರಿ ಬೇಕಾದ್ರೂ ಆಣೆ ಹಾಕು; ಅವನಿಗೇನೂ ಕೇಳ್ಸೋದಿಲ್ಲ! ಯಾಕೆ ಹೆದರ್ತೀಯಾ?"

"ಹಂಗೇನ್ರೋ?.... ಸೈ ಹಾಂಗಾರೆ ತಗೊಳ್ಳಿ; ಇಲ್ಲದೆ!" ಎಂದು ಒದ್ದೆಯಾಗಿ ಮುದುಡಿ ಹೋಗಿದ್ದ ಒಂದು ಕಾಗದದ ತುಂಡನ್ನು ಈಚೆಗೆಳದು, ಅಂಜಲಿಬದ್ಧನಾಗಿ ನೀಡಿದನು.

ತಿಮ್ಮಪ್ಪ ಹೆಗ್ಗಡೆ ತುಂಬ ಗೆಲುಮೊಗದಿಂದ ಅದನ್ನು ತೆಗೆದುಕೊಂಡು ಬಿಚ್ಚ ತೊಡಗಿದನು. ಅದು ಗುತ್ತಿ ಹೇಳಿದಂತೆ, ತೇಲಿಹೋದದ್ದು ಸುಳ್ಳಾಗಿದ್ದರೂ ಮುಳುಗಿದ್ದುದಕ್ಕೇನೊ ನಿಜವಾಗಿಯೂ ಪ್ರತ್ಯಕ್ಷ ಪ್ರಮಾಣವಿತ್ತು, ಒದ್ದೆ ಮುದ್ದೆಯಾಗಿ, ಮತ್ತೆ ಗುತ್ತಿಯ ಶರೀರದ ಬಿಸುಪಿನಿಂದಲೆ ಅರ್ಧಂಬರ್ಧ ಒಣಗಿದ್ದ ಆ ಕಾಗದವನ್ನು ಹರಿದುಹೋಗದಂತೆ ತುಂಬ ಎಚ್ಚರಿಕೆಯಿಂದಲೆ ಬಿಚ್ಚಿ ಓದತೊಡಗಿದ್ದ ತಿಮ್ಮಪ್ಪನ ಮುಖದಲ್ಲಿ ಪ್ರಾರಂಭದಲ್ಲಿದ್ದ ನಗುವಿನ ಕಳೆ ಬಾಡತೊಡಗಿತು. ನಿರಾಶೆಯೊ? ದುಃಖವೊ? ಸಿಟ್ಟೊ? ಮುಖ ಸಿಂಡರಿಸಿತು. ಕಾಗದವನ್ನು ಹಿಸುಕಿ ಮುದ್ದೆ ಮಾಡಿ ತಟಕ್ಕನೆ ಗುತ್ತಯ ಮೋರೆಯ ಕಡೆ ಎಸೆದು "ನಿನ್ನ ಹೆಣಕ್ಕೆ ಹಾಕಿಕೊ!" ಎಂದು ಸಿಡುಕಿ, ತಟಕ್ಕನೆ ತಿರುಗಿ, ಗದ್ದೆಯ ಕಡೆಗೆ ಇಳಿಜಾರಾದ ಗುಡ್ಡದಲ್ಲಿ ನಡೆದು ಪೊದೆಗಳ ನಡುವೆ ಕಣ್ಮರೆಯಾದನು.

ಗುತ್ತಿಗೆ ಒಂದೂ ಅರ್ಥವಾಗದೆ, ಬೆಪ್ಪಾಗಿ ನಿಂತು ಅವನು ಕಣ್ಮರೆಯಾಗುವುದನ್ನೆ ನೋಡುತ್ತಾ "ಒಳ್ಳೆ ಮಲಾಮತ್ತಾಯ್ತಲ್ಲಪ್ಪಾ! ಇದೇನು ಬಂತು ಗಿರಾಚಾರ ನನಗೆ?" ಎಂದುಕೊಂಡು, ಬಗ್ಗಿ, ಕಾಲ್ದೆಸೆಯಲ್ಲಿ ಮುದ್ದೆಯಾಗಿ ಬಿದ್ದಿದ್ದ ಕಾಗದವನ್ನು ಎತ್ತಿ, ಮೆಲ್ಲಗೆ ಬಿಚ್ಚಿ ನೀವಿ ಸರಿಮಾಡಿ ದಗಲೆಯೊಳಗೆ ಸೇರಿಸಿ, ಏತಕ್ಕೊ ಏನೊ ಪಕ್ಕದಲ್ಲಿದ್ದ ಹುಲಿಯನ ತಲೆಗೊಂದು ರಪ್ಪನೆ ಕೊಟ್ಟು, ಅದು ಕಂಯ್ ಎನ್ನಲು "ಹಾಳು ಮುಂಡೇದು! ಹೋದಲ್ಲಿ ಶಂಕ ಬತ್ತದೆ! ಸನಿ ಬಂದ ಹಾಂಗೆ!" ಎನ್ನುತ್ತಾ ತನ್ನ ಸಿಟ್ಟನ್ನು ಅದರ ಮೇಲೆ ಶಪಿಸುತ್ತಾ ಕೊರಳಿಗೆ ಬಳ್ಳಿ ಕುಣಿಕೆ ಬಿಗಿದಿದ್ದ ಅದನ್ನು ದರದರನೆ ಎಳೆದುಕೊಂಡು ಮನೆಯ ಕಡೆಗೆ ಗುಡ್ಡವಿಳಿದನು.

ಸೋಗೆ ಮನೆಯ ದೊಡ್ಡ ಅಂಗಳ ಪ್ರವೇಶ ಮಾಡುತ್ತಿದ್ದಂತೆಯೆ, ಅಡ್ಡೆ ಕಟ್ಟಿ ತಲೆಕೆಳಕಾಗಿ ಹೊಲೆಯರ ಹೆಗಲಮೇಲೆ ಹೂವಳ್ಳಿ ಸಗುತ್ತಿದ್ದ ಹಂದಿಯ ಕಿರ್‍ರೋ ಕೂಗು ಗದ್ದೆ ಬಯಲಿನಿಂದ ಕೇಳಿಸಿತು. ಗುತ್ತಿ ಆ ಕಡೆ ನೋಡಿದನು. ಗದ್ದೆ ಬಯಲಿನ ನಡುವೆ ಅಂಕುಡೊಂಕಾಗಿ ಹಂದಿಯನ್ನು ಹೊತ್ತು ಸಾಗುತ್ತಿದ್ದ ದೂರದೃಶ್ಯ ಕಾಣಿಸಿತು. ಯಾವುದೊ ದೂರದಾಶೆ ಅವನ ನಾಲಗೆಗೆ ನೀರು ತಂದಿತು. ಹಂದಿಯ ಕೀರುಲಿಯನ್ನು ಆಲಿಸಿ ಕಿವಿನಿಮಿರಿ ಉದ್ವೇಗಗೊಂಡು ತನ್ನ ಕೈಲಿ ಹಿಡಿದಿದ್ದ ಬಳ್ಳಿಯನ್ನು ಜಗ್ಗುತ್ತಿದ್ದ ಹುಲಿಯನನ್ನು ಹೆದರಿಸುತ್ತಿದ್ದಂತೆ ಜಗಲಿಯಿಂದ ಸುಬ್ಬಣ್ಣ ಹೆಗ್ಗಡೆಯವರ ಅಬ್ಬರದ ಕರೆ ಕೇಳಿಸಿತು: "ಏ ಗುತ್ತೀ, ಬಾರೊ ಇಲ್ಲಿ!"

ಕೆಸರ್ಹಲಗೆಯ ಮೇಲೆ ಕೂತಿದ್ದ ವೆಂಕಟಣ್ಣ "ಸೈ, ಅವನೆ ಬಂದನಲ್ಲಪ್ಪ? ಕೇಳಿ ಬೇಕಾದರೆ ಅವನ್ನೇ" ಎಂದು ಗುತ್ತಿಯ ಕಡೆ ತಿರುಗಿ "ನಿನ್ನ ನಾಯೀನೇ ಅಲ್ವೇನೋ ಸಲಗನ್ನ ಹಿಡಿದಿದ್ದು?" ಎಂದನು.

"ಮತ್ತೆ? ನನ್ನ ನಾಯಿ ಬರದೆ ಇದ್ದರೆ ಇಷ್ಟು ಹೊತ್ತಿಗೆ ಸಲಗ ಕಾಡಿನಾಗೆ ಇರ್ತಿತ್ತು" ಎಂದು ಹಲ್ಲು ಬಿಡುತ್ತಾ, ಶಿಫಾರಸು ಕೊಡುತ್ತಾರೆ ಎಂದು ಹಾರೈಸಿದವನಂತೆ, ಗುತ್ತಿ ನಿಂತಿದ್ದನು.

ಶಿಫಾರಸು ಕೊಟ್ಟರು ಹೆಗ್ಗಡೆಯವರು: "ನಿನ್ನ ಮನೆ ಮಂಟೇನಾಗ! ಯಾಕೋ? ಹೋದಲ್ಲಿ ತನಕ ಆ ನಾಯಿ ಕರಕೊಂಡು ಹೋಗ್ತೀಯಾ? ಬಾಲಂಗಚ್ಚೇನ?" ಎಂದು ಬೈದು "ಹಂದೀ ಗಂಟಲಾಗೆ ರಕ್ತ ಸುರಿತಿತ್ತೇನೋ?" ಎಂದು ಗದರಿಸಿದಂತೆ ಕೇಳಿದರು.

ಅವರ ಪ್ರಶ್ನೆಯ ಧ್ವನಿಯಿಂದಲೆ ಏನು ಉತ್ತರ ಹೇಳಬೇಕೆಂಬುದೂ ಗೊತ್ತಾಯಿತು ಗುತ್ತಿಗೆ: "ಇಲ್ಲ, ಬರೀ ಕಿವಿಚಟ್ಟೆ ಹಿಡುಕೊಂಡಿತ್ತು, ನಾನಾ ಬಿಡಿಸ್ದೆ."

ವೆಂಕಟಣ್ಣ ನಡುವೆ ಬಾಯಿಹಾಕಿ "ಗಂಟಲಿಗೇ ಬಾಯಿಹಾಕಿರಲಿಲ್ಲೇನೋ?" ಸುಳ್ಳು ಹೇಳಬ್ಯಾಡ. ನೆತ್ತರು ಸುರೀತಿತ್ತು ಅಂತಾ ತಿಮ್ಮನೇ ಹೇಳ್ದ" ಎಂದನು.

"ನನ್ನ ಕಣ್ಣಿಗೇನೂ ಕಾಣಲಿಲ್ಲಪ್ಪಾ!" ಎಂದು ಗುತ್ತಿ, ಆ ವಿಚಾರವಾಗಿ ಹೂವಳ್ಳಿ ವೆಂಕಟಣ್ಣನಿಗೂ ಹಳೆಮನೆ ಸುಬ್ಬಣ್ಣ ಹೆಗ್ಗಡೆಯವರಿಗೂ ಏನೋ ವಾಗ್ವಾದ ನಡೆದಿರಬೇಕೆಂದು ಊಹಿಸಿ, ತಾನು ಮಾತನಾಡುವುದರಲ್ಲಿ ಎಚ್ಚರಿಕೆ ವಹಿಸಬೇಕೆಂದು ನಿರ್ಧರಿಸಿದನು.

ನಾಯಿ ಹಂದಿಯ ಕುತ್ತಿಗೆಗೆ ಬಾಯಿಹಾಕಿ ಗಾಯಮಾಡಿ ರಕ್ತ ಸೋರಿಸಿರುವುದರಿಂದ ಅದು ದೈವಕ್ಕೆ ಆಯಾರ ಕೊಡಲು ಯೋಗ್ಯವಲ್ಲ ಎಂಬ ವಾದ ಹೂಡಿ, ಅದರ ಬೆಲೆ ಕಡೆಯಪಕ್ಷ ಒಂದು ರೂಪಾಯಿಯಿಂದಲಾದರೂ ಕಡಮೆ ಮಾಡಿಸಿಕೊಳ್ಳಬೇಕು ಎಂದು ವೆಂಕಟಣ್ಣ ಹವಣಿಸಿದ್ದನು. ಆದರೆ ಹೆಗ್ಗಡೆಯವರು "ನಾನು ಮೊದಲೆ ಐದು ರೂಪಾಯಿ ಹೇಳಿದ್ದೆ. ನೀನು ಕೇಳಿಕೊಂಡಿದ್ದರಿಂದ ಒಂದು ರೂಪಾಯಿ ಬಿಟ್ಟೇನಿ. ಇನ್ನೂ ಒಂದು ರೂಪಾಯಿ ಬಿಡು ಅಂದರೆ, ಯಾರ ಮನೆ ಹಾಳಮಾಡಬೇಕು ಅಂತಾ ಮಾಡೀಯಾ?" ಎಂದು ನಾಲ್ಕು ರೂಪಾಯಿಗೆ ಕಾಸ ಕಡಮೆ ಸಾಧ್ಯವಿಲ್ಲ ಎಂದು ಬಿಟ್ಟಿದ್ದರು. ಈಗ ಯಾವಾಗ ಗುತ್ತಿಯ ಸಾಕ್ಷಿ ತಮ್ಮ ಪರವಾಗಿದ್ದುದನ್ನು ಅರಿತರೊ ತಾವು ಹಿಡಿದ ಪಟ್ಟನ್ನು ಬಿಡದೆ ಕುಳಿತುಬಿಟ್ಟರು. ವೆಂಕಟಣ್ಣ ಉಪಾಯವಿಲ್ಲದೆ ದೊಣ್ಣೆಯೂರಿಕೊಂಡು ಎದ್ದು ಕುಂಟುತ್ತಾ ಎರಡು ಹೆಜ್ಜೆಯಿಟ್ಟು

ನಿಂತನು. ಆಗಲೇ ಬಿಸಿಲೇರಿದ್ದರಿಂದ “ಊಟ ಮಾಡಿಕೊಂಡು ಹೋಗು” ಎಂದು ಹೇಳುತ್ತಾರೇನೋ ಎಂದು ದೂರದ ಆಸೆ ಅವನಿಗೆ. ಆದರೆ ಹೆಗ್ಗಡೆಯವರು ಅಂತಹ ದಾಕ್ಷಿಣ್ಯಕ್ಕೆ ಒಳಗಾಗದೆ “ಹಾಂಗಾದರೆ ಬೇಗ ಹೊರಡೋ, ಎಂಕ್ಟಣ್ಣಾ, ಬಿಸಿಲೇರ್ತಾ ಇದೆ” ಎಂದು ಹೇಳಿ ಕುಂಟುತ್ತಾ, ಗದ್ದೆ ಕೋಗಿನ ಕಡೆಗೆ ಇಳಿದನು.

ಅವನು ಕಣ್ಮರೆಯಾದುದನ್ನು ಅರಿತು ಸುಬ್ಬಣ್ಣ ಹೆಗ್ಗಡೆ ತಲೆಯೆತ್ತಿ ಗುತ್ತಿಯ ಕಡೆ ನೋಡಿ ನಗುತ್ತಾ ಕೆಮ್ಮಿದರು. ತಾನು ಹೇಳಿದ ಸಾಕ್ಷಿಯಿಂದ ಒಡೆಯರು ಪ್ರೀತರಾಗಿದ್ದಾರೆಂದು ತಿಳಿದ ಗುತ್ತಿ ದಗಲೆಯೊಳಗಿಂದ ಕಾಗದ ತೆಗೆದು ಎರಡೂ ಕೈಗಳನ್ನೂ ಒಟ್ಟು ಮಾಡಿ ಸೊಂಟಬಗ್ಗಿಸಿ ನೀಡಿದನು.

ಹೆಗ್ಗಡೆಯವರು ಅದನ್ನು ತೆಗೆದುಕೊಂಡರು. ಆದರೆ ಬಿಚ್ಚಿ ನೋಡಲಿಲ್ಲ. ಎದುರುಗಡೆ ಕೆಸರ್ಹಲಿಗೆಯ ಮೇಲೆ ಹಾಕಿ, ಅದರ ಕಡೆ ನೋಡುತ್ತಾ “ಯಾಕೋ? ಮುದುರಿ ಮುದ್ದೆ ಆಗಿದೆಯಲ್ಲಾ?” ಎಂದರು. ಗುತ್ತಿ ಅವರಿಗೂ ತಿಮ್ಮಪ್ಪ ಹೆಗ್ಗಡೆಗೆ ತಾನು ಹೇಳಿದ್ದ ಲಕ್ಕುಂದದ ಹಳ್ಳ ಏರಿದ್ದ ಕಥೆಯನ್ನೆ ಮತ್ತೆ ಹೇಳಿದನು.

ಅಷ್ಟರಲ್ಲಿ ಕುಟ್ಟೊರಳಿನಲ್ಲಿ ಎಲೆಅಡಿಕೆ ಕುಟ್ಟುತ್ತಿದ್ದುದನ್ನು ನಿಲ್ಲಿಸಿ ಸುಬ್ಬಣ್ಣ ಹೆಗ್ಗಡೆಯವರು ತಲೆಯೆತ್ತಿ ಗುತ್ತಿಯ ಕಡೆ ನೋಡಿ “ಹಾಂಗಾದ್ರೆ ಒಂದು ಕೆಲಸ ಮಾಡ್ತೀಯಾ, ಗುತ್ತಿ? ನೀನು ಹಾಂಗೇ ಹೋಗಾಂವ, ಕೋಣೂರಿನ ಐಗಳು ಅನಂತಯ್ಯನ್ನ, ನಾ ಬರಾಕೆ ಹೇಳ್ದೆ ಅಂತ ಹೇಳ್ತೀಯಾ?” ಎಂದರು. ಸಿಂಬಾವಿಯಿಂದ ಬರುವ ಕಾಗದಗಳನ್ನು ಇತ್ತೀಚೆಗೆ ಮಗನ ಕೈಲಿ ಓದಿಸುತ್ತಿರಲಿಲ್ಲ. ಮನೆಯ ವಿಚಾರ ನಂಟರಿಷ್ಟರಿಗೆ ತಿಳಿಯಬಾರದೆಂದು ಐಗಳು ಅನಂತಯ್ಯನವರಿಂದ ಓದಿಸುತ್ತಿದ್ದರು.

ಗುತ್ತಿ ಕ್ಷಮೆ ಕೇಳುವ ಧ್ವನಿಯಲ್ಲಿ “ನಾ ಬೆಟ್ಟಳ್ಳಿಗೆ ಹೋಗ್ತೀನಿ, ಹೂವಳ್ಳಿ ಮೇಲಾಸಿ” ಎಂದು ಅಂಗಲಾಚುತ್ತಾ ನಿಂತನು.

“ಹೂವಳ್ಳಿ ಮೇಲಾಸಿ ಹೋದರೇನು? ಕೋಣೂರಿನ ಮೇಲಾಸಿ ಹೋದರೇನು? ಒಂದೇ ದೂರ ಅಲ್ಲೇನೋ?” ಎಂದವರು ಮತ್ತೆ ಇನ್ನೇನನ್ನೋ ನೆನಪಿಗೆ ತಂದುಕೊಂಡವರಂತೆ ಹುಸಿ ನಗೆ ನಗುತ್ತಾ “ಯಾಕೋ ಬೆಟ್ಟಳ್ಳಿಗೆ? ಕಾಗ್ದಗೀಗ್ದ ಕೊಟ್ಟಾರೇನೋ?” ಎಂದುದಕ್ಕೆ

ಗುತ್ತಿ ದೀರ್ಘವಾಗಿ “ಇಲ್ಲಾ! ನಂದೇ ಒಂದು ಚೂರು ಕೆಲಸ ಇತ್ತು” ಎಂದನು.

“ಬಾಳಾ ಗುತ್ತಿನ ಕೆಲಸನೇನೊ?”

“ಅಂತದೇನೂ ಇಲ್ಲಾ” ಎಂದ ಗುತ್ತಿ, ಒಡೆಯರಿಗೆ ತನ್ನ ಗುಟ್ಟು (ಇತರ ಹಲವರಿಗೆ ಗೊತ್ತಾಗಿದ್ದುದನ್ನು ವಿಸ್ಮಯದಿಂದ ಅರಿತಂದೆ!) ಗೊತ್ತಾಗಿರಬೇಕೆಂದೇ ಊಹಿಸಿದನಾದರೂ, ಆ ವಿಚಾರ ಅವರು ಪ್ರಸ್ತಾಪಿಸದಂತೆ ಮಾಡಲು ದಿಕ್ಕು ತಪ್ಪಿಸುವುದಕ್ಕಾಗಿ ತಟಕ್ಕನೆ ತಲೆ ಹೊಳೆದ ಮತ್ತೊಂದು ಅಷ್ಟೇನು ಮುಖ್ಯವಲ್ಲದ ವಿಚಾರ ಎತ್ತಿದನು.

“ಬೆಟ್ಟಳ್ಳಿ ಹಕ್ಕಲಾಗೆ ಇವತ್ತು ಬೈಗಿನ ಹೊತ್ತು ತೀರ್ಥಳ್ಳಿ ಕಿಲಸ್ತರ ಪಾದ್ರಿ ಅದೇನೋ ಬೀಸೆಕಲ್ಲು ಸವಾರಿ ಮಾಡ್ತಾರಂತೆ. ನಮ್ಮ ಬೆಟ್ಟಳ್ಳಿ ಸಣ್ಣಗೌಡ್ರಿಗೂ ಸವಾರಿ ಕಲಿಸ್ತಾರಂತೆ! ಎಲ್ಲರೂ ಹೋಗ್ತೀದ್ದಾರೆ ಅದನ್ನೋಡಾಕೆ.”

"ಬೀಸೆಕಲ್ಲು ಸವಾರಿ! ನಿನಗೇನು ತಲೆ ಕೆಟ್ಟಿದೆಯೊ?"

"ಹೌದೊಡೆಯಾ! ನಿಮ್ಮ ಕೇರೇರೂ ಹೊಲ್ಟಾರಂತೆ!"

"ಹ್ಞಾಃ! ನಿನಗೇನು ಕಲಿಯೋ? ಕೆಲಸಕ್ಕೆ ಹೋಗಿ ಅಂತಾ ಕೇಳಿಕಳ್ಸೀನಿ!"

"ಹೂವಳ್ಳಿಗೆ ಹಂದಿ ಹೊತ್ತುಕೊಂಡು ಹೋದೋರೂ, ಹಾಂಗೆ ಮಜ್ಜಾನದ ಮ್ಯಾಲೆ ಬೆಟ್ಟಳ್ಳಿಗೆ ಹೋಗ್ತಾರಂತೆ…. ನಾನೂ ಸಂಗಡ ಬತ್ತೀನಿ ಅಂತಾ ಹೇಳೀನಿ."

"ಅಂತೂ ಆ ಪಾದ್ರಿಯಿಂದ ಸುಖಾ ಇಲ್ಲಾ ಅಂತಾ ಕಾಣ್ತದೆ. ಬೀಸೆಕಲ್ಲು ಸವಾರಿ, ಹೊಗೇಬತ್ತಿ ಸೇದೋದು, ಮುಂಜುಟ್ಟು ಬಿಡೋದು, ಇನ್ನೂ ಏನೇನೋ ಯಕ್ಷಿಣಿಮಾಡಿ, ಜಾತಿಕೆಡಿಸಿ, ಕಿಲಸ್ತರ ಮತಕ್ಕೆ ಸೇರಿಸಕ್ಕೆ ಹುನಾರು ಮಾಡ್ತಿದಾನೆ. ನಿನ್ನ ಬೆಟ್ಟಳ್ಳಿ ಸಣ್ಣ ಗೌಡರೂ ಅವನ ಬಲೆಗೆ ಬೀಳಾಹಂಗೆ ಕಾಣ್ತದೆ!"

"ನಾವೇನು ಅವರ ಹತ್ರ ಹೋಗ್ತಿವೇನು? ದೂರದಾಗೆ ನಿಂತುಕೊಂಡು ನೋಡಿ, ಇತ್ತಮುಖಾ ಬಂದುಬಿಡ್ತೀವಿ" ಎಂದು ಗುತ್ತಿ ತಾನೂ ತನ್ನ ಜಾತಿಯವರೂ ಕಿಲಸ್ತರ ಪಾದ್ರಿಯ ಪ್ರಭಾವದಿಂದ ತಪ್ಪಿಸಿಕೊಳ್ಳುವ ರೀತಿಯನ್ನು ವಿವರಿಸಿದನು.

"ಏನಾದ್ರೂ ಸಾಯ್ಲಿ! ಹಾಳಾಗೇ ಹೋಗ್ತೀವಿ ಅನ್ನೋರ್ನ ಯರು ಉದ್ದಾರ ಮಾಡಾಕೆ ಆಗ್ತದೆ? ಅವನು ಒಬ್ಬೊಂಟಿಗ ಆಗಿದ್ರೆ, ಎತ್ಲಾಗಾದರೂ ಸಾಯಿ, ಯಾವ ಜಾತಿಗಾದರೂ ಸೇರು ಅನ್ನಬೈದಾಗಿತ್ತು. ಹೆಂಡ್ತಿ ಮಕ್ಕಳು ಬ್ಯಾರೆ ಇವೆಯಲ್ಲ. ಅವ್ರ ಗತಿ ಏನು? ಅವರಿನ್ನು ಕೆರೇನೋ ಬಾವೀನೊ ಹುಡುಕಬೇಕಲ್ಲಾ!"

ಹೆಗ್ಗಡೆಯವರು ದೀರ್ಘಚಿಂತಾಮಗ್ನರಾದಂತೆ ಅನ್ಯಮನಸ್ಕರಾಗಿ ಕುಟ್ಟೋರಳಿನ ಕಡೆಗೆ ತಮ್ಮ ಗಮನವನ್ನೆಲ್ಲ ಹರಿಸಿ, ತನ್ನನ್ನು ಮರೆತೇ ಬಿಟ್ಟಂತಾಗಲು, ಗುತ್ತಿ ಹುಲಿಯನನ್ನು ಹಿಡಿದುಕೊಂಡೇ ಅಲ್ಲಿಂದ ಸರಿದು ಹೂವಳ್ಳಿಯ ಹಾದಿ ಹಿಡಿದನು.

* * *

## ೧೫

ಕೋಣೂರಿನ ಅಡಕೆ ತೋಟದ ಒಂದು ಮೂಲೆಯಲ್ಲಿ ರಂಗಪ್ಪ ಗೌಡರ ಗಟ್ಟದಾಳುಗಳು-ಚೇಂಕ್ರ, ಪಿಜಿಣ, ಐತ, ಮೊಡಂಕಿಲ-ಹಿಂದಿನ ದಿನದ ಬಿರುಗಾಳಿ ಮಳೆಯಲ್ಲಿ ಉರುಳಿ, ಅಡಕೆ ಮರಗಳ ಮೇಲೆ ಬಿದ್ದಿದ್ದ ಒಂದು ದೊಡ್ಡ ಮುದಿ ಅತ್ತಿಯ ಮರವನ್ನು ಸವರಿ ಕುಡಿಯುವ ಕೆಲಸದಲ್ಲಿ ತೊಡಗಿದ್ದರು. ಅವರ ಹೆಣ್ಣಾಳುಗಳು-ದೇಯಿ, ಅಕ್ಕಣಿ,

ಪೀಂಚಲು, ಬಾಗಿ- ತಮ್ಮ ಗಂಡಸರಿಗೆ ನೆರವಾಗಿ, ಸವರಿದ ಸೊಪ್ಪನ್ನು ಅಡಕೆ ಮರಗಳ ಬುಡದ ಮೇಲುಸೊಪ್ಪಿನ ಜಿಗ್ಗು ಮುಚ್ಚುವಂತೆ ಹೊತ್ತು ಹಾಕುವುದರಲ್ಲಿ ನಿರತವಾಗಿದ್ದರು. ಪೂರ್ವಾಹ್ನದ ಏರುಂಬಿಸಿಲಿನಲ್ಲಿ, ಎತ್ತರವಾಗಿ ಬೆಳೆದಿದ್ದ ಅಡಕೆ ಮರಗಳ ಬುಡದಲ್ಲಿ, ಕೆಲಸ ಮಾಡುತ್ತಿದ್ದ ಅವರೆಲ್ಲರೂ ತಾರತಮ್ಯದಿಂದ ಬಹು ಸಣ್ಣ ಗಾತ್ರದ ಪ್ರಾಣಿಗಳಂತೆ ಭಾಸವಾಗಿದ್ದರು. ಸೊಂಟಕ್ಕೆ ಬಿಗಿದಿದ್ದ ಲಂಗೋಟಿ ಮಾತ್ರವೆ ಉಡುಪಾಗಿದ್ದ ಗಂಡಾಳುಗಳಲ್ಲಿ ಚೇಂಕ್ರ ಪಿಜಿಣರು ಕೊಡಲಿ ಹಿಡಿದು ಕಡಿಯುತ್ತಿದ್ದರು. ಮೊಡಂಕಿಲ ಐತರು ಕತ್ತಿಗಳಿಂದ ಸಣ್ಣ ಸಣ್ಣ ಹರೆಗಳನ್ನು ಸವರಿಹಾಕುತ್ತಿದ್ದರು. ಗಟ್ಟದ ತಗ್ಗಿನವರ ರೀತಿ ಬಡ್ಡು ಸೀರೆಗಳನ್ನು ಮೈಗೆ ಸುತ್ತಿ, ತಲೆಗೆ ಹಾಳೆ ತೋಪಿ ಹಾಕಿಕೊಂಡಿದ್ದ ಹೆಣ್ಣಾಳುಗಳು ತುಳು ಭಾಷೆಯಲ್ಲಿ ಸಣ್ಣಗೆ ಗೊಣಗೊಣ ಮಾತಾಡಿಕೊಳ್ಳುತ್ತಾ ಯಾವ ಉತ್ಸಾಹವನ್ನೂ ಪ್ರದರ್ಶಿಸದ ನಡಿಗೆಯಿಂದ ಹಿಂದಕ್ಕೂ ಮುಂದಕ್ಕೂ ಅಡಕೆ ಮರದ ಬುಡದಿಂದ ಅತ್ತಿಮರ ಬಿದ್ದಿದ್ದ ಜಾಗಕ್ಕೆ ಚಲಿಸುತ್ತಿದ್ದರು. ಎಚ್ಚತ್ತಿರಲಿಲ್ಲ. ಅಡಕೆ ಮರದ ಪೊಟರೆಗಳಿಂದ ಹಾರುವ ಗಿಣಿಗಳ ಉಲಿಹ ಅವರ ದೈಹಿಕವಾದ ಕಿವಿಗಳಿಗೆ ಅನಿವಾರ್ಯವಾಗಿ ಕೇಳಿಸುತ್ತಿದ್ದರೂ ಅವರ ಮನಸ್ಸು ಅದನ್ನು ಆಲಿಸುವ ಗೋಜಿಗೂ ಹೋಗುತ್ತಿರಲಿಲ್ಲ; ಇನ್ನು ಗ್ರಹಿಸಿ ಸವಿಯುವ ಮಾತೆಲ್ಲಿ? ಹಿಂದಿನ ದಿನ ಸಂಜೆಯ ಮಳೆಯಲ್ಲಿ ತೊಯ್ದು ತೊಳೆದಿದ್ದ ಲಕ್ಷ ಲಕ್ಷ ವಿವಿಧ ವರ್ಣಚ್ಛಾಯೆಯ ಕಾಡಿನ ತೋಟದ ಅಡಕೆಯ ಬಾಳೆಯ ಎಲೆಹಸುರನ್ನು ಅವರ ಕಣ್ಣು ಅನಿವಾರ್ಯವಾಗಿ ನೋಡುತ್ತಿದ್ದರೂ, ಅದನ್ನು ಕಾಣುವ ಮಟ್ಟಕ್ಕೆ ಅವರ ಗಮನ ಒಂದಿನಿತೂ ಬೆಳೆದಿರಲಿಲ್ಲ, ಸೊಪ್ಪು ಮೇಯುವ ಪ್ರಾಣಿಯ ಪ್ರಜ್ಞೆಯಂತೆ!
ಇದ್ದಕ್ಕಿದ್ದ ಹಾಗೆ ಮರಕಡಿಯುವ ಕೊಡಲಿಯ ಸದ್ದು ನಿಂತಿತು. ಚೇಂಕ್ರ ಪಿಜಿಣ ಇಬ್ಬರೂ ತಮ್ಮ ತಮ್ಮ ಕೊಡಲಿಯ ಕಾವಿನ ತುದಿಗೆ ಮೈ ಆನಿಸಿದಂತೆ ನಸು ಒರಗಿ ನಿಂತು ವಿಶ್ರಾಂತಿ ತೆಗೆದುಕೊಳ್ಳತೊಡಗಿದರು. ಕುತ್ತಿಗೆಯಿಂದ ಇಳಿಯುತ್ತಿದ್ದ ಬೆವರನ್ನು ಒರೆಸಿಕೊಂಡರು.

ಪೂರ್ವದ ಕಡೆಗೆ ಮುಖಮಾಡಿ, ತನ್ನ ಎಡಗಾಲನ್ನು ತುಸು ಎತ್ತಿ ಮರದ ದಿಂಡಿನ ಮೇಲಿಟ್ಟು ನಿಂತಿದ್ದ ಚೇಂಕ್ರನಿಗೆ ಎದುರಾಗಿ ಅಡಕೆ ತೋಟ, ಅದಕ್ಕೆ ಮೇಲೆ ಗುಡ್ಡವೇರಿದ್ದ ಕಾಡು, ಅದಕ್ಕೂ ಮೇಲೆ ದೂರ ಎತ್ತರದಲ್ಲಿ ಹುಲಿಕಲ್ಲು ನೆತ್ತಿಯ ದೃಶ್ಯವಿತ್ತು. ಅವನಿಗೆ ಇದಿರಾಗಿ ಪಶ್ಚಿಮದ ಕಡೆಗೆ ಮುಖವಾಗಿ ನಿಂತಿದ್ದ ಪಿಜಿಣನಿಗೆ ಕೋಣೂರಿನ ಗದ್ದೆಯ ಕೋಗು, ಅದರ ಒತ್ತಿಗೆ ಬ್ಯಾಣದ ಹಕ್ಕಲು, ಅದರಾಚೆಗೆ ಸೊಪ್ಪಿನ ಹಾಡ್ಯ ಕಣ್ಬೊಲವಾಗಿತ್ತು.

ತುಸುಹೊತ್ತು ಇಬ್ಬರೂ ದಣಿವಾರಿಸಿಕೊಳ್ಳುತ್ತಾ ಮಾತಾಡದೆ ನಿಂತಿದ್ದರು. ಏದುಸಿರು ಬರಬರುತ್ತಾ ಸಾಮಾನ್ಯಸ್ಥಿತಿಗಿಳಿದು, ಪಿಜಿಣ ಕೆಮ್ಮಿ ಕ್ಯಾಕರಿಸಿ ಪಕ್ಕಕ್ಕೆ ಉಗುಳಿದನು.

ಹಾಗೆ ಉಗುಳಿದುದೆ ಮಾತು ಶುರುಮಾಡಲು ಒಂದು ಸಂಕೇತವಾಯಿತೆಂಬಂತೆ ಚೇಂಕ್ರ "ಹೌದಾ, ಹಸಲೋರ ಬಿಡಾರದಲ್ಲಿ ಒಂದು ಸುದ್ದಿ ಹಬ್ಬಿತ್ತು, ಕೇಳ್ದ್ಯಾ?" ಎಂದನು.

ಜ್ವರಗಡ್ಡೆಯ ಪ್ರಭಾವ ಹೊಟ್ಟೆಯ ಡೊಳ್ಳಿನಲ್ಲಿ ಪ್ರಸ್ಫುಟವಾಗಿದ್ದ ಪಿಜಿಣ ದಣಿದ ದನಿಯಲ್ಲಿ "ಅವನು ಹೊತ್ತಾರೆ ಒಲೆ ಹಚ್ಚಲು ಕೆಂಡ ತರಲು ಕುದುಕನ ಬಿಡಾರಕ್ಕೆ ಹೋಗಿದ್ದನಂತೆ. ಅದನ್ನೆ ದೊಡ್ಡದು ಮಾಡಿ ಕುದುಕನ ಹೆಂಡತಿ ಮ್ಯಾಲೆ ಪುಕಾರು ಹುಟ್ಟಿಸಿದ್ದಾರಂತೆ. ಕುದುಕನ ಹೆಂಡತಿ ಅಂಥವಳೇನಲ್ಲ" ಎಂದವನು ದೂರ ಪಕ್ಕಕ್ಕೆ ಏನನ್ನೋ

ಗಮನಿಸುವಂತೆ ನೋಡಿ "ಸಣ್ಣ ಅಯ್ಯ ಬರ್ತಿದ್ದಾರೊ!" ಎನ್ನುತ್ತಾ ಕೊಡಲಿಯನ್ನೆತ್ತಿ ಮರಕಡಿಯಲು ಪ್ರಾರಂಭಿಸಿದನು. ತಟಕ್ಕನೆ ಹಿಂದಿರುಗಿ ನೋಡಿದ ಚೇಂಕ್ರನೂ ಪಿಜಿಣನನ್ನೆ ಅನುಸರಿಸಿದನು.

ಒಂದು ತೆಳು ಅಂಗಿ ತೊಟ್ಟು, ಮೊಣಕಾಲಿನಿಂದ ಇನಿತೆ ಕೆಳಗಿನವರೆಗೆ ಕೋಚು ಇಳಿಬಿದ್ದಿದ್ದ ಒಂದು ಅರೆಕೊಳಕು ಅಡ್ಡಪಂಚೆಯುಟ್ಟು, ಕೈಯಲ್ಲಿ ಬಿದಿರಿನಿಂದ ಮಾಡಿದ್ದ ಒಂದು ಚಿಟ್ಟುಬಿಲ್ಲು ಹಿಡಿದು ಕೋಣೂರು ರಂಗಪ್ಪಗೌಡರ ತಮ್ಮ, ಪ್ರಾಯಪೂರ್ವದ ತರುಣವಯಸ್ಸಿನ ಮುಕುಂದಯ್ಯ, ಆಳುಗಳು ಮರ ಸವರುತ್ತಿದ್ದಲ್ಲಿಗೆ ಬರುತ್ತಾ, ದೂರದಿಂದಲೆ, ಮಾತಾಡುತ್ತಾ ನಿಂತಿದ್ದ ಚೇಂಕ್ರ ಪಿಜಿಣರು ತಟಕ್ಕನೆ ತಾನು ಬರುತ್ತಿದ್ದುದನ್ನು ಗಮನಿಸಿ ಮರಕಡಿಯಲು ಶುರುಮಾಡಿದ್ದನ್ನು ನೋಡಿ "ಏನ್ರೋ ಮರ ಕಡಿಯಾಕೆ ಬಂದೀರೋ? ಪಂಚಾಯ್ತಿ ಹೊಡಿಯಾಕೆ ಬಂದೀರೋ?" ಎಂದು ಭರ್ತ್ಸನೆ ಮಾಡಿದನು.

ಅವರಿಬ್ಬರೂ ತುಸು ಹಲ್ಲುಬಿಟ್ಟರೇ ಹೊರತು ಯಾವ ಉತ್ತರವನ್ನೂ ಕೊಡದೆ ಕಡಿಯುವ ಕೆಲಸವನ್ನೆ ಮುಂದುವರಿಸಿದರು. ಮುಕುಂದಯ್ಯ ಹತ್ತಿರ ಬಂದುನಿಂತು "ಮಧ್ಯಾಹ್ನದೊಳಗೇ ಪೂರೈಸಿಬಿಡಬೇಕು, ಅಣ್ಣಯ್ಯ ಈಗ ಬರ್ತೀನಿ ಅಂತ ಹೇಳಿದಾನೆ. ನಿಮ್ಮ ಚಮಡ ಸುಲೀತಾನೆ, ನೀವು ಮಾತಾಡ್ತಾ ಇರೋದನ್ನ ಕಂಡರೆ!" ಎಂದವನು ಸೊಪ್ಪಿನ ಹರೆ ಕಡಿಯುತ್ತಿದ್ದ ಐತನಿಗೆ "ಏ ಐತ, ನನ್ನ ಸಂಗಡ ಬಾರೋ; ಸ್ವಲ್ಪ ಕೆಲಸ ಇದೆ" ಎಂದನು.

ಮುಕುಂದಯ್ಯನ ಹಾಗೆಯೆ ಅಣುಗನಾಗಿದ್ದ ಐತ, ಹರೆ ಕಡಿಯುತ್ತಲೇ, ತುಸು ದೂರದಲ್ಲಿ ಕೆಲಸ ಮಾಡುತ್ತಿದ್ದ ತನ್ನ ಅಣುಗಿ ಹೆಂಡತಿ ಪೀಂಚಲು ಕಡೆಗೆ ನೋಡಿದ. ಅವನು ಆ ಅಣುಗಿಯನ್ನು ಮದುವೆಯಾಗಿ ಇನ್ನೂ ಒಂದು ವರ್ಷವೂ ಆಗಿರಲಿಲ್ಲ. ಅವಳನ್ನು ಒಂದು ಅರೆಕ್ಷಣವೂ ಬಿಟ್ಟಿರಲು ಅವನ ಮನಸ್ಸು ಒಪ್ಪುತ್ತಿರಲಿಲ್ಲ. ಅವನು ಯಾವ ಕೆಲಸಕ್ಕೆ ಹೋದರೂ ಅದೇ ಕೆಲಸಕ್ಕೆ ಅವಳನ್ನು ಹೇಗಾದರೂ ಮಾಡಿ ಕರೆದೊಯ್ಯುತ್ತಿದ್ದ. ಅವಳನ್ನು ಯಾವಾಗಲೂ ತನ್ನ ಕಣ್ಣಹೊಲದಲ್ಲಿಯೆ ಇರಿಸಿಕೊಳ್ಳುತ್ತಿದ್ದ. ಕೆಲಸದ ದೆಸೆಯಿಂದ ಎಲ್ಲಿಯಾದರೂ ಸ್ವಲ್ಪ ಹೊತ್ತು ಅವಳು ಕಣ್ಣು ತಪ್ಪಿಸಿದರೂ ಅವನು ವಿಹ್ವಲನಾಗಿಬಿಡುತ್ತಿದ್ದ. ಇದನ್ನು ಕಂಡು ಎಲ್ಲರೂ ನಗೆಯಾಡುತ್ತಿದ್ದರು. ಆದರೆ ಐತ-ಪೀಂಚಲು ಮಾತ್ರ ಜೋಡಿ ತಪ್ಪಿರುತ್ತಿರಲಿಲ್ಲ.

ಇದನ್ನರಿತ ಕೆಲವು ಗಂಡಾಳುಗಳು ಐತನನ್ನು ಪೀಡಿಸುವ ಸಲುವಾಗಿ ಪೀಂಚಲು ಒಡನೆ ಮಾತಾಡುವ, ಅಥವಾ ಎಲೆಯಡಿಕೆ ಕೊಡುವ ಇಲ್ಲವೆ ಕೊಳ್ಳುವ ಸೋಗಿನಿಂದ ರಸಿಕನಗೆ ನಗುತ್ತಲೋ ಕಣ್ಣು ಮಿಟುಕಿಸುತ್ತಲೋ ವ್ಯವಹರಿಸಿದರೆ ಐತನ ಜೀವವೇ ಹೊತ್ತಿ ಉರಿಯುತ್ತಿದ್ದು. ಅವನು ಅವರ ವರ್ತನೆಯನ್ನು ಅಷ್ಟು ಲಘುವಾಗಿ ಭಾವಿಸುತ್ತಿರಲಿಲ್ಲ. ಒಮ್ಮೊಮ್ಮೆ ಅವರ ಆ ನಾಟಕದ ಹಿಂದೆ ದುರುದ್ದೇಶವೂ ಇದ್ದುದನ್ನು ಅವನು ಮನಗಂಡಿದ್ದನು. ಆ ವಿಚಾರವಾಗಿ ಪೀಂಚಲುವಿಗೂ ಗುಟ್ಟಾಗಿ ಬುದ್ಧಿ ಹೇಳಿದ್ದನು. ಅವಳು ಏನನ್ನೂ ಹೇಳದೆ ಬೆಪ್ಪುನಗೆ ನಕ್ಕಿದ್ದಳು ಅಷ್ಟೆ!

"ಬತ್ತೆ. ಹೋಪ" ಎಂದು ತನ್ನ ಸಮ್ಮತಿಯನ್ನು ಸೂಚಿಸಿದನೇ ಹೊರತು ಐತ ಸೊಪ್ಪು ಕಡಿಯುವುದನ್ನು ನಿಲ್ಲಿಸಲಿಲ್ಲ.

ಮೊಡಂಕಿಲ ಸ್ವಲ್ಪ ವಯಸ್ಸಾದವನು; ಅವನ ಕೂದಲೂ ಹಣ್ಣಾಗುತ್ತಿದೆ; ಅಲ್ಲದೆ ಅವನಿಗೆ ಗಟ್ಟಿಮುಟ್ಟಾದ ಹೆಂಡತಿ ಬಾಗಿ ಇದ್ದಾಳೆ. ಪಿಜಿಣ ಚಳಿಜ್ವರದಿಂದ ಆಗಾಗ್ಗೆ ನರಳುತ್ತಾ, ಜ್ವರಗಡ್ಡೆ ಬೆಳೆದ ಹೊಟ್ಟೆ ಡುಬ್ಬಣ್ಣನಾಗಿ ತನ್ನ ಹೆಂಡತಿ

ಅಕ್ಕಣಿಯನ್ನೆ ನಿಬಾಯಿಸಿಕೊಂಡು ಹೋಗುವ ಸ್ಥಿತಿಯಲ್ಲಿಲ್ಲ. ಇನ್ನು ಏನು ಅನುಮಾನವಿದ್ದರೂ ಅದೆಲ್ಲ ಚೇಂಕ್ರನ ಮೇಲೆ. ಅವನು ಇದ್ದುದರಲ್ಲಿ ಕಟ್ಟುಮಸ್ತಾದ ಆಳು: ಅವರೆಲ್ಲೆಲ್ಲಾ ಮರ ಕಡಿಯುವ ಕೆಲಸಕ್ಕೆ ಬಂದಾಗಲೂ! ಅವನಿಗೂ ಹೆಂಡತಿ ಇದ್ದಾಳೆ, ದೇಯಿ. ಆದರೆ ಅವಳು ಬಸಿರಿ; ಯಾವಾಗಲೂ ಏನಾದರೂ ರೋಗದಿಂದ ನರಳುತ್ತಿರುತ್ತಾಳೆ. ನೋಡುವುದಕ್ಕೂ ಇಸ್ಸಿ ಎನ್ನಿಸುವಂತಿದೆ ಅವಳ ಬಚ್ಚುಮೋರೆ. ಆದ್ದರಿಂದಲೆ ಐತನಿಗೆ ಅವನ ಮೇಲೆ ಏನೋ ಆಶಂಕೆ. ಅವನು ತನ್ನನ್ನು ಮಾತನಾಡಿಸುವಾಗಲೆಲ್ಲ ಏನೋ ಕುಹಕ ತೋರುತ್ತದೆ; ಪೀಂಚಲುವನ್ನು ಮಾತಾಡಿಸುವಾಗ ಚೇಂಕ್ರನ ಧ್ವನಿ ಮುಖ ಭಂಗಿ ಎಲ್ಲ ಅಕ್ಕರೆಮಿದುವಾದಂತೆ ಅನ್ನಿಸುತ್ತದೆ ಐತನಿಗೆ. ಚೇಂಕ್ರನ ಸನಿಹದಲ್ಲಿ ಪೀಂಚಲುವನ್ನು ಬಿಟ್ಟುಹೋಗುವುದರಲ್ಲಿ ಏನೋ ಅನಾಹುತವನ್ನು ಅನುಭವಿಸುತ್ತಿದ್ದಾನೆ ಐತ. ಅವನ ಕೈ ಸೊಪ್ಪು ಹರೆ ಸವರುತ್ತಿದ್ದರೂ ಅವನ ಮನಸ್ಸು ಇದೆಲ್ಲವನ್ನೂ ಕ್ಷಣಮಾತ್ರದಲ್ಲಿ ಆರೋಪಿಸಿ ಬಿಟ್ಟಿದೆ.

ಐತನನ್ನು ಕರೆದು ನಾಲ್ಕುಮಾರು ಮುಂಬರಿದ ಮುಕುಂದಯ್ಯ ತಿರುಗಿ ನೋಡಿದರೆ ಐತ ಸೊಪ್ಪು ಕಡಿಯುತ್ತಲೆ ಇದ್ದಾನೆ.

“ಏ, ಬೇಗ ಬಾರೋ; ಹೊತ್ತಾಗ್ತದೆ. ಆ ಹಳ್ಳದಾಗೆ ಒಂದೆರಡು ಕಾರೇಡಿ ಹಿಡುಕೊಂಡು ಬರಾನ, ಕಪ್ಪೆಗೋಲು ಹಾಕಿ. ಅತ್ತಿಗಮ್ಮಗೆ ಮೈ ಹುಷಾರಿಲ್ಲ; ನಾಲಿಗೆ ಜಡ್ಡುಗಟ್ಟಿದೆಯಂತೆ….” ಎಂದ ಮುಕುಂದಯ್ಯನ ಮಾತಿನಲ್ಲಿ ಒಡೆಯನಾದವನ ಆಜ್ಞಾವಾಣಿಗಿಂತಲೂ ಹೆಚ್ಚಾಗಿ ಆಪ್ತನಾದ ಸಂಗಾತಿಯ ಸಲುಗೆ ಎದ್ದು ಕಾಣುತ್ತಿತ್ತು. ಕಾರಣ, ಚಿಕ್ಕಂದಿನಿಂದಲೂ ಐತ ಮುಕುಂದಯ್ಯನಿಗೆ ಒಡನಾಡಿಯಾಗಿ ಹಕ್ಕಿಬೇಟೆ, ಮೀನುಬೇಟೆ, ಉರುಳುಬೇಟೆ ಮೊದಲಾದುವುಗಳಲ್ಲಿ ಸಹಾಯಕನಾಗಿದ್ದದ್ದೆ. ಅವರಿಬ್ಬರ ಒಡೆಯ ಆಳಿನ ಸಂಬಂಧ ಇತ್ತೀಚೆಗೆ ಕಣ್ಣುಬಿಡುತ್ತಿತ್ತು.

ಐತ ಈಗ ಇಕ್ಕಟ್ಟಿನಲ್ಲಿ ಸಿಕ್ಕಿದ್ದ. ಮುಕುಂದಯ್ಯ ಮೊದಲು ತನ್ನನ್ನು ಕರೆದಾಗ ‘ಏನೋ ಕೆಲಸ ಇದೆ’ ಎಂದು ಮಾತ್ರ ಹೇಳಿದ್ದ. ಕೆಲಸ ಏನು? ಅದರ ಸ್ವರೂಪ ಎಂಥಾದ್ದು? ಅದನ್ನು ಹೇಳಿರಲಿಲ್ಲ. ಆದ್ದರಿಂದ ಅದಾವುದೊ ಯಾರು ಬೇಕಾದರೂ ಮಾಡಬಹುದಾದ ಕೆಲಸಕ್ಕೆ ಮೊಡಂಕಿಲನನ್ನೆ ಕರೆದುಕೊಂಡು ಹೋಗಿ ಎಂದೂ, ತನ್ನ ಅಂಗಾಲಿಗೆ ಮುಳ್ಳು ಹೊಕ್ಕು ಕೀತು ನೋವಾಗುತ್ತಿರುವುದರಿಂದ ತನಗೆ ಕಾಡುಕೊರಕಲಿನಲ್ಲಿ ಹೆಚ್ಚಾಗಿ ತಿರುಗಾಡಲು ಆಗುವುದಿಲ್ಲ ಎಂದು ನೆಪ ಹೇಳಿ ತಪ್ಪಿಸಿಕೊಳ್ಳುವ ಯೋಜನೆ ಮಾಡಿದ್ದ. ಆದರೆ ಯಾವಾಗ ಮುಕುಂದಯ್ಯನ ಬಾಯಿಂದ ‘ಕಾರೇಡಿ’ ‘ಕಪ್ಪೆಗೋಲು’ ಎಂಬೆಲ್ಲ ರೋಮಾಂಚನಕಾರಿಗಳಾದ ಮಾತುಗಳು ಕೇಳಿ ಬಂದುವೋ ಐತನ ಮನಸ್ಸು ತೂಗಾಡತೊಡಗಿತು. ಮೊದಲನೆಯದಾಗಿ, ಬೇಟೆಗಳಲ್ಲಿ ಅದರಲ್ಲಿಯೂ ಕಪ್ಪೆಗೋಲು ಹಾಕಿ ಕಾರೇಡಿ ಹಿಡಿಯುವುದರಲ್ಲಿ ಐತ ಆ ಕಡೆ ಹಳ್ಳಿಗಳಲ್ಲೆಲ್ಲ ಸುವಿಖ್ಯಾತನಾಗಿದ್ದನು. ಚಿಕ್ಕಂದಿನಿಂದಲೂ ಮುಕುಂದಯ್ಯನ ಆಪ್ತ ಕಾರ್ಯದರ್ಶಿಯಾಗಿ ಅಂತಹ ಕಿರಾತಕಾರ್ಯಗಳಲ್ಲೆಲ್ಲ ಅವನಿಗೆ ತಪ್ಪದೆ ನೆರವಾಗುತ್ತಿದ್ದನು. ಪೀಂಚಲುವನ್ನು ಮದುವೆಯಾಗುವುದಕ್ಕೆ ಮುಂಚೆ ಐತನಿಗಿದ್ದ ಕೆಳೆಜೋಡಿ ಎಂದರೆ ವಿಶೇಷವಾಗಿ ಮುಕುದಯ್ಯನೆ! ಆದ್ದರಿಂದ ತಾನು ಯಾವ ಕಾಯ್ಯದಲ್ಲಿ ಪ್ರವೀಣನೆಂದು ಊರಿಗೆ ಊರೇ ಹೊಗಳುತ್ತಿದ್ದಿತೋ ಅಂತಹ ಕಾರ್ಯಕ್ಕಾಗಿಯೆ ತನ್ನನ್ನು ಮುಕುಂದಯ್ಯನು ಕರೆಯುತ್ತಿದ್ದಾನೆ ಎಂದ ಮೇಲೆ ಮೊಡಂಕಿಲ್ಲನ ಹೆಸರನ್ನು ಎತ್ತುವುದಕ್ಕೂ ಅವನಿಗೆ ಸಾಧ್ಯವಾಗಲಿಲ್ಲ. ಎರಡನೆಯದಾಗಿ, ಅಂತಹ ಬೇಟೆಯ ಕೆಲಸಗಳೆಂದರೆ ಐತನಿಗೆ ಜೀವವೆಲ್ಲ ಉತ್ಸಾಹ ಉಜ್ವಲವಾಗುತ್ತಿತ್ತು. ಪೀಂಚಲುವಿನ ಸಂಗರುಚಿ ಒಂದು ವರ್ಷದ್ದಾಗಿದ್ದರೆ ಕಪ್ಪೆಗೋಲು ಬೇಟೆಯ ಕಾಡುರುಚಿ ಬಾಲ್ಯದಿಂದ ಮೊದಲುಗೊಂಡು ಅನೇಕ ವರ್ಷಗಳದ್ದಾಗಿತ್ತು!

ತಟಕ್ಕನೆ ಹರೆ ಕಡಿಯುವುದನ್ನು ನಿಲ್ಲಿಸಿ "ಅಯ್ಯಾ, ಪೀಂಚಲು ನಮ್ಮ ಒಡನೆ ಬರಲಿ. ಏಡಿ ಹಿಡಿದುಕೊಳ್ಳುವುದಕ್ಕೆ ಆಳು ಬೇಕಲ್ಲ? ಒಂದು ಹಾಳೆಕೊಟ್ಟೆ ಮಾಡಿಕೊಟ್ಟರಾಯಿತು" ಎಂದು ಐತನ ಕಡೆಗೆ ಚೇಂಕ್ರನೂ ಪಿಜಿಣನೂ, ಮರಕಡಿಯುತ್ತಿದ್ದುದನ್ನು ತುಸುನಿಲ್ಲಿಸಿ, ನಗೆಮೊಗರಾಗಿ ನೋಡತೊಡಗಿದರು. ಹೆಣ್ಣಾಳುಗಳೂ ತಮ್ಮತಮ್ಮೊಳಗೆ ಏನೊ ಹೇಳಿಕೊಂಡು ಕಿಲಕಿಲನೆ ಒಳನಗೆ ನಕ್ಕರು. ಪೀಂಚಲು ನಾಚಿ ಎಲ್ಲರ ಕಡೆಗೂ ಬೆನ್ನು ಮಾಡಿಯೆ ನಿಂತುಬಿಟ್ಟಳು!

ಮನೆಯಿಂದ ಹೊರಡುವಾಗಲೆ ತಾನು ಆಲೋಚಿಸಿದ್ದಂತೆಯೆ ತನ್ನ ವ್ಯೂಹ ಸಫಲವಾಗುತ್ತಿದ್ದುದನ್ನು ಕಂಡು, ವಿನೋದ ವಿಷಯವನ್ನೆಲ್ಲ ಕ್ಷಣಾರ್ಧದಲ್ಲಿ ಗ್ರಹಿಸಿದ ಮುಕುಂದಯ್ಯ "ಹೌದೋ, ಅವಳೂ ಬರಲಿ ಮತ್ತೆ, ಏಡಿ ಕೊಟ್ಟೆ ಹೊತ್ತುಕೊಳ್ಳೋರು ಯಾರು? ಈಗ....ಒಂದಡಕೆ ಅಗಿಯೋದ್ರೊಳಗೆ ಬಂದು ಬಿಡಾನ....ಬೇಗ ಬನ್ನಿ ಮತ್ತೆ" ಎಂದು ನಟನೆಯ ಗಂಭೀರವಾಣಿಯಿಂದ ಆಜ್ಞೆಮಾಡಿದಂತೆ ಹೇಳಿ, ಅಡಕೆ ಬಾಳೆಯ ಮರಗಳೆಡೆ ತೂರಿ ಗುಡ್ಡದತ್ತ ಮರೆಯಾದನು. ಐತ ಬಾಳೆಮರದ ಹೆಡಲಿನ ಸಂಧಿಯಲ್ಲಿಟ್ಟಿದ್ದ ತನ್ನ ಸೊಂಟದ ಪಂಚೆಯನ್ನು ಸುತ್ತಿಕೊಂಡು, ಪೀಂಚಲು ನಿಂತಿದ್ದೆಡೆಗೆ ಹೋಗಿ ಏನನ್ನೊ ಹೇಳಿದನು. ಗಂಡ ಮುಂದೆ ಹೆಂಡತಿ ಹಿಂದೆ ಇಬ್ಬರೂ ಬಿರುಬಿರನೆ ನಡೆದು, ಮುಕುಂದಯ್ಯ ಹೋದ ದಾರಿಯಲ್ಲಿ ಮುಂಬರಿದು, ಮರೆಯಾದರು, ಉಳಿದವರು ಒಬ್ಬರ ಮುಖವನ್ನೊಬ್ಬರು ಇಂಗಿತಪೂರ್ಣವಾದ ದೃಷ್ಟಿಯಿಂದ ನೋಡಿ ಮತ್ತೆ ಕೆಲಸಕ್ಕೆ ಕೈ ಹಾಕಿದರು.

ಮೊಡಂಕಿಲ ತನ್ನ ವಿನೋದಭಾವದ ಹರ್ಷವನ್ನು ಅದುಮಿಡಲಾರದೆ "ನಮ್ಮ ಸಣ್ಣ ಅಯ್ಯಗೆ ಐತ ಅಂದರೆ ಬಹಳ ಪಿರೀತಿ" ಎಂದನು.

ಚೇಂಕ್ರನ ವ್ಯಂಗ್ಯಧ್ವನಿ ಕೇಳಿಸಿತು: "ಅಲ್ಲದೆ ಮತ್ತೆ? ಆ ಹೆಣ್ಣೂ ಸಂಗಡ ಇದ್ದರೆ, ಮತ್ತೂ ಪಿರೀತಿ!"

ಉಳಿದವರು ತನ್ನ ಮಾತಿಗೆ ಮೆಚ್ಚುಗೆ ಈಯುತ್ತಾರೆಂದು ಭಾವಿಸಿದ್ದ ಚೇಂಕ್ರನಿಗೆ ನಿರಾಶೆಯಾಯಿತು: ಯಾರೂ ನಗಲಿಲ್ಲ.

ಬೇಸಗೆಯಲ್ಲಿ ಮೊದಲ ಬಿರುಮಳೆ ಬಿದ್ದ ಮೇಲೆ ಮರುದಿನ ಕಂಡು ಬರುವ ತೀಕ್ಷ್ಣತರವಾದ ಬಿಸಿಲು ಏರುತ್ತಿತ್ತು. ಚೇಂಕ್ರ ಪಿಜಿಣರು ಅತ್ತಿಯ ಮರವನ್ನು ಎರಡು ಮೂರು ದೊಡ್ಡ ದೊಡ್ಡ ತುಂಡುಗಳನ್ನಾಗಿ ಮಾಡಿ, ಆ ದಿಮ್ಮಿಗಳ ಮೇಲೆಯೆ ಕುಳಿತು ದಣಿವಾರಿಸಿಕೊಳ್ಳುತ್ತಿದ್ದರು. ಮೊಡಂಕಿಲನೂ ಹೆಣ್ಣಾಳುಗಳೂ ಬಾಳೆ ಮರದ ಎಲೆನೆರಳಿನಲ್ಲಿ ಕುಳಿತು ಎಲೆ ಹಾಕಿಕೊಳ್ಳುವ ನೆವದಲ್ಲಿ ವಿರಾಮ ತೆಗೆದುಕೊಳ್ಳಲು ಪ್ರಾರಂಭಿಸಿದ್ದರು. ದೂರ ತೋಟದ ಕಾಲುದಾರಿಯಲ್ಲಿ ರಂಗಪ್ಪಗೌಡರು ಯಾರೊಡನೆಯೊ ಅವರ ವಾಡಿಕೆಯಂತೆ ಒಂದು ಮೈಲಿ ಆಚೆಗೂ ಕೇಳಿಸಬಹುದೋ ಏನೋ ಎಂಬಂತಹ ಗಟ್ಟಿದನಿಯಲ್ಲಿ ಸಂಭಾಷಿಸುತ್ತಾ ಬರುತ್ತಿದ್ದುದು ಕೇಳಿಸಿತು.

"ಈಗಲೇ ಎಲ್ಲಿ ಆಗುತ್ತದೇರಿ, ನೀವು ಊರಿಗೆ ಹೋಗಿ ಬರಾಕೆ? ಜೈಮುನಿ ಬರೆದು ಕೊಡ್ತೀನಿ ಅಂದಿರಿ, ಅದೂ ಪೂರೈಸಿಲ್ಲ. ನಮ್ಮ ಆಳುಲೆಕ್ಕ ಬ್ಯಾರೆ ಇದೆ.... ಸರಕಾರ ಬೇರೆ ಏನೇನೊ ಹೊಸ ರೂಲೀಸು ಮಾಡಿ, ಹೊಸ ಅಮಲ್ದಾರರು ಲೋಟೀಸಿನ ಮೇಲೆ ಲೋಟೀಸು ಜಾರಿ ಮಾಡ್ತಿದ್ದಾರೆ...."

“ಮಳೆ ಹಿಡಿಯುವ ಮುನ್ನ ಬಂದುಬಿಟ್ಟರಾಯ್ತುಲ್ಲಾ, ಗೌಡರೆ? ಗಟ್ಟದ ಮೇಲಕ್ಕೆ ಬಂದವ ಕೆಳಗಿಳಿಯದೆ ಎರಡು ವರ್ಷಕ್ಕೆ ಬಂದಿತ್ತಲ್ದಾ? ನನ್ನ ತಾಯಿ ಮುದುಕಿ ಸಾಯುವ ಮುನ್ನ ಒಮ್ಮೆ ಮೋರೆ ಕಂಡು ಬಂದು ಬಿಡುತ್ತೇನೆ.”

“ನಿಮಗೆ ಕೊಡಬೇಕಾದ್ದನ್ನೆಲ್ಲಾ ಕೊಡೋಕೆ ಈಗ ನನ್ನ ಹತ್ರ ಹಣ ಇಲ್ಲವಲ್ಲ. ಇನ್ನೊಂದು ನಾಲ್ಕುದಿನ ತಡೆದರೆ….”

“ಹೆಚ್ಚೇನು ಬೇಡ ನನಗೆ. ಹೋಗಿ ಬರುವ ದಾರಿಯ ಖರ್ಚು, ಆ ಮುದುಕಿಗೆ ಒಂದು ಸ್ವಲ್ಪ ಕೊಡುವುದಕ್ಕೆ ಆದರೆ ಸಾಕು….”

“ಯಾವುದನ್ನೂ ನೋಡಿ ಹೇಳ್ತೀನಿ, ಐಗಳೆ. ಒಂದೆರಡು ದಿನದಲ್ಲಿ ಕಲ್ಲೂರು ಸಾಹುಕಾರ್ರು ಮಂಜಭಟ್ಟರ ಹತ್ತಿರ ಹೋಗಿ ಬರ್ತೀನಿ; ಏನಿದ್ದರೂ ಆಮೇಲೆ ಗೊತ್ತಾಗೋದು.”

ಚೇಂಕ್ರ ಪಿಜಿಣರು ನೋಡುತ್ತಿದ್ದಂತೆಯೆ ಕೋಣೂರು ರಂಗಪ್ಪಗೌಡರೂ ಅವರ ಹಿಂದೆ ಐಗಳು ಅನಂತಯ್ಯನವರೂ ಕಾಣಿಸಿಕೊಂಡರು, ಅಡಕೆ ಬಾಳೆಯ ಮರಗಳ ಸಂಧಿಯಲ್ಲ: ನಡುಹರೆಯದ ಗೌಡರು ತಕ್ಕಮಟ್ಟಿಗೆ ಸುಪುಷ್ಟ ದೇಹದ ಬಲಿಷ್ಠ ವ್ಯಕ್ತಿಯಾಗಿದ್ದರು. ಗೌರವರ್ಣದ ಅವರ ಮುಖದ ಮೇಲಣ ಕರ್ರನೆಯ ಕೊಂಕುಮೀಸೆ ಅವರನ್ನು ಮೊದಲನೆಯ ಸಾರಿ ನೋಡಿದವರಿಗೆ  ಹೆದರಿಕೆ ಹುಟ್ಟಿಸುವಂತೆ ಕ್ಷಾತ್ರದ್ಯೋತಕವಾಗಿತ್ತು. ಅವರು ತಾವು ಹೊದೆದಿದ್ದ ಕೆಂಪು ಶಾಲನ್ನು, ಸೆಕೆಯಿಂದ ಪರಿಹಾರ ಪಡೆಯಲೆಂಬಂತೆ, ಹೆಗಲಮೇಲೆ  ಹಾಕಿಕೊಂಡಿದ್ದರಿಂದ ಅವರ ವಿಶಾಲವಾದ ಉಬ್ಬಿದೆದೆಯ ಮೇಲೆ ಬೆಳೆದಿದ್ದ ರಾಶಿ ರಾಶಿ ಕರಿಯ ರೋಮ ಬಿಳಿಮೈಯಲ್ಲಿ ಎದ್ದು ಕಾಣುತ್ತಿತ್ತು. ಎರಡು ಕಿವಿಗಳಲ್ಲಿಯೂ ಮೇಲೆ ಕೆಳಗೆ ಇದ್ದ ಎರಡೆರಡು ಚಿನ್ನದ ಒಂಟಿಗಳು ಬಿಸಿಲಿಗೆ ಆಗಾಗ ತಳಿಸುತ್ತಿದ್ದುವು. ಆ ಕಾಲದ ನಾಡಿನ ಪದ್ಧತಿಯಂತೆ ಲಾಳಾಕಾರವಾಗಿ ಕ್ಷೌರಮಾಡಿಸಿಕೊಂಡಿದ್ದ ತಲೆಯ ಮುಂಭಾಗ ಅವರ ಹಣೆಗೆ ಒಂದು ವಿಸ್ತರಣೆಯೋಪಾದಿ ಇತ್ತು. ಸೊಂಟದ ಕಚ್ಚೆಪಂಚೆ ಮೊಣಕಾಲನ್ನು ಮುಚ್ಚಿತ್ತು ಮಾತ್ರ. ಒಂದು ಚಿನ್ನದ ನೇವಳ ಉಡಿದಾರದಂತೆ, ಸುತ್ತಿದ್ದ ಪಂಚೆಯ ಮೇಲೆ, ಸೊಂಟದಲ್ಲಿ ಹಳದಿಯಾಗಿ ಹೊಳೆಯುತ್ತಿತ್ತು. ಅವರು ಕಾಲಿಗೆ ಹಾಕಿಕೊಂಡಿದ್ದ ಕೆಂಪು ಹೂ ಕೂರಿಸಿದ ಕನ್ನಡ ಜಿಲ್ಲೆಯ ಗಿರ್ಕಿಮೆಟ್ಟು ಗಿರಕು ಬರಕು ಸದ್ದು ಮಾಡುತ್ತಾ ಅವರ ಆಗಮನಕ್ಕೆ ಒಂದು ರೀತಿಯ ಪರಾಕು ಹೇಳುವಂತಿತ್ತು.

ಅವರ ಹಿಂದೆ ಬರುತ್ತಿದ್ದ ಐಗಳು ಅನಂತಯ್ಯನವರು ಗೌಡರ ಹಾಗೆ ಎತ್ತರದ ವ್ಯಕ್ತಿಯಾಗಿರಲಿಲ್ಲ. ಆದರೆ ಕುಳ್ಳು ಎಂದೂ ಯಾರೂ ಹೇಳುವಂತೆಯೂ ಇರಲಿಲ್ಲ. ಅವರು ದಪ್ಪನೆಯವರಾಗಿದ್ದರೆ ಕುಳ್ಳಾಗಿ ತೋರುತ್ತಿದ್ದರೆಂದೆ ಹೇಳಬೇಕು. ಆದರೆ ತೆಳ್ಳಗೆ ಸಣಕಲಾಗಿದ್ದುದರಿಂದ ಉದ್ದವಾಗಿರುವಂತೆ ಕಾಣಿಸುತ್ತಿದ್ದರು ಅಷ್ಟೆ. ಅವರು ಹೆಂಗಸರಂತೆ ಪೂರ್ತಿ ಕೂದಲು ಬಿಟ್ಟಿದ್ದರು. ಬೈತಲೆ ತೆಗೆಯದೆ ಬಾಚಿ ಹಿಂದಕ್ಕೆ ಜುಟ್ಟು ಗಂಟು ಹಾಕಿದ್ದರು. ಅವರ ಕಿವಿಯಲ್ಲಿಯೂ ಒಂಟಿ ಹೊಳೆಯುತ್ತಿದ್ದವು. ಒಂದು ಕಾಲಿನಲ್ಲಿ ಬೆಳ್ಳಿಯ ಸರಿಗೆಯೂ ಇತ್ತು. ಒಂದು ಜಾಳು ಪಂಚೆಯ ಕಚ್ಚೆ ಹಾಕಿ, ಬನೀನು ತೊಟ್ಟಿದ್ದರು. ಅವರ ಕಚ್ಚೆ ಮೊಣಕಾಲಿನವರೆಗೆ ಮಾತ್ರ ಇಳಿಬಿದ್ದು ರಾಮ ಲವಲೇಶವಿಲ್ಲದ ನುಣ್ಣನೆಯ ಜಂಘೆಗಳನ್ನು ಪ್ರದರ್ಶಿಸುತ್ತಿತ್ತು. ಅವರೂ ಮೆಟ್ಟು ಹಾಕಿಕೊಂಡಿದ್ದರು; ಆದರೆ ಅವು ನಿಃಶಬ್ದವಾಗಿದ್ದುವು; ಅಲ್ಲದೆ ಗೌಡರ ಮೆಟ್ಟುಗಳಂತೆ ಹೂವಿನ ಕುಚ್ಚಿನ ಅಲಂಕಾರ ಕಣ್ಣು ಸೆಳೆಯುತ್ತಲೂ ಇರಲಿಲ್ಲ. ಅವರಿಗೆ ಮೀಸೆಯೇನೊ ಇತ್ತು. ಆದರೆ ಗೌಡರ ಮೀಸೆಗಳಂತೆ ‘ನಾವು ಇದ್ದೇವೆ’ ಎಂಬ ಠೀವಿಯಿಂದಿರದೆ, ಇದ್ದರೂ

ಇಲ್ಲದಂತೆ, ಯಾರ ಕಣ್ಣಿಗೂ ಬೀಳದಿದ್ದರೆ ಸಾಕಪ್ಪಾ ಎಂಬಂತೆ ಮೈಗರೆದುಕೊಂಡಿತ್ತು. ಅವರ ಮುಖದಲ್ಲಿ ಒಂದು ಸಂಸ್ಕೃತಿಯ ಕಳೆ ಬೆಳಗುತ್ತಿದ್ದುದರಿಂದ, ಉಳಿದೆಲ್ಲ ದೃಷ್ಟಿಯಿಂದ ನಿರ್ಲಕ್ಷಿಸಬಹುದಾಗಿದ್ದ ಅವರ ವ್ಯಕ್ತಿತ್ವಕ್ಕೆ ಒಂದು ಆಕರ್ಷಣೆಯೊದಗಿಸಿ, ಅವರನ್ನು ಸಾಧಾರಣತೆಯಿಂದ ಬಹುಮಟ್ಟಿಗೆ ಪಾರುಮಾಡಿತ್ತು. ಅವರ ನಡಿಗೆಯನ್ನು ನೋಡಿದರೆ, ಒಂದು ಕಾಲು ಮತ್ತೊಂದಕ್ಕಿಂತ ತುಸು ಉದ್ದವಾಗಿರುವಂತೆ ಭಾಸವಾಗುತ್ತಿತ್ತು. ಆದರೆ ನಿಜಸ್ಥಿತಿ ಹಾಗಿರಲಿಲ್ಲ. ಅವರು ಹುಡುಗರಾಗಿದ್ದಾಗ ಕಾಲಿಗೆ ಪೆಟ್ಟು ಬಿದ್ದುದರಿಂದ ನರಹಿಡಿದು ಹಾಗೆ ಕುಂಟುತ್ತಿದ್ದು, ಅದು ಅಭ್ಯಾಸವಾಗಿ ಉಳಿದುಬಿಟ್ಟಿತ್ತು.

"ಐಗಳೆ, ಮರೆತಿದ್ದೆ ಒಂದು ಕೆಲಸಾನ.... ಆ ಬಚ್ಚಲಮನೆ ಎದುರು ಕೆಳಗರಡೀಲಿ ಒಂದು ಹೆರಿಗೆ ಅಂಕಣ ಇದೆಯಲ್ಲ ಅಲ್ಲಿಗೆ ತಟ್ಟಿಮರೆ ಕಟ್ಟಿಸಬೇಕು.... ಅವ್ವನ್ನ ಕೇಳಿ, ಜೊತಕ ಗಿತಕ ಕಟ್ಟಬೇಕು ಅಂದರೆ, ಅದನ್ನೂ ಕಟ್ಟಿಬಿಡಿ.... ಹೆರಿಗೆ ಮಾಡಿಸ್ತಾಳಲ್ಲಾ ಆ ಹಳೇಪೈಕದ ಮುದುಕಿ ಅದಕ್ಕೆ ಬರಾಕೆ ಹೇಳಿಕಳ್ಸಿದ್ದೆ. ಬಂತೊ ಇಲ್ಲೊ ನೋಡಿ, ಬೇಗ ಹೇಳಿ ಕಳ್ಸಿ, ಅದನ್ನ ಕರ್ಸೆಬಿಡಿ.... ಅದಕ್ಕೆ ಹೆರೋ ಸಮಯ. ಅವ್ವ ಹೇಳ್ತು, ಬೇನೆ ಸಂಕಟ ಸುರು ಆದ್ಹಾಂಗೆ ಕಾಣ್ತದೆ ಅಂತ. ನಾನೀಗ್ಲೆ ಗಟ್ಟದೋರ ಕೆಲಸ ನೋಡಿ, ಹೇಳೋದನ್ನೆಲ್ಲ ಹೇಳಿ, ಬ್ಯಾಗ ಬಂದುಬಿಡ್ತನಿ."

ಐಗಳ ಅನೇಕಾನೇಕ ಕರ್ತವ್ಯಗಳಲ್ಲಿ-ಹುಡುಗರಿಗೆ ಕೂಲಿಮಠದಲ್ಲಿ ಅಕ್ಷರಾಭ್ಯಾಸ ಮಾಡಿಸುವುದು, ಅಭ್ಯಂಜನಾದಿಗಳನ್ನು ಮಾಡಿಸಿ ಅವರ ಯೋಗಕ್ಷೇಮ ನೋಡಿಕೊಳ್ಳುವುದು, ಸಮಯ ಬಿದ್ದರೆ ಅವರ ಬಟ್ಟೆಗಳನ್ನು ಒಗೆಯುವುದು, ಆಳುಲೆಕ್ಕ ಇಡುವುದು, ಗದುಗಿನ ಭಾರತ, ತೊರವೆ ರಾಮಾಯಣ, ಜೈಮಿನಿ ಭಾರತ ಇತ್ಯಾದಿಗಳನ್ನು ಓಲೆಗರಿಯಲ್ಲಿ ನಕಲು ಮಾಡುವುದು ಇತ್ಯಾದಿ ಇತ್ಯಾದಿ- ತಟ್ಟಿಗಿಟ್ಟಿ ಕಟ್ಟಿಸಿ ಗೌಡರ ಹೆಂಡತಿಯ ಹೆರಿಗೆಗೆ ಅನುಕೂಲ ಮಾಡಿಕೊಡುವುದೇನು ಒಂದು ವಿಶೇಷವಾಗಿರಲಿಲ್ಲ. ಯಾವ ಕೆಲಸವನ್ನೆ ಹೇಳಿದರೂ ಅವರು ಮೇಲು ಕೀಳು ಎನ್ನದೆ ಸಂತೋಷವಾಗಿಯೆ ಮಾಡುತ್ತಿದ್ದರು. ಆದ್ದರಿಂದಲೆ ಅವರು ಸದಾ ನಗುನಗುತ್ತಲೆ ಇರುವಂತೆ ತೋರುತ್ತಿತ್ತು.

ಐಗಳನ್ನು ಹಿಂದಕ್ಕೆ ಕಳುಹಿಸಿ, ರಂಗಪ್ಪಗೌಡರು ಕಡಿದಿದ್ದ ದಿಮ್ಮಿಗಳ ಮೇಲೂ ಅಡಕೆ ಬಾಳೆಯ ಮರದ ಬುಡಗಳಲ್ಲಿಯೂ ಕುಳಿತು ಎಲೆಯಡಿಕೆ ಹಾಕಿಕೊಳ್ಳುತ್ತಿದ್ದ ಗಟ್ಟದ ತಗ್ಗಿನವರಿಗೆ ಗಟ್ಟಿಯಾದ ದನಿಯಲ್ಲಿಯೆ ಬಿರುಸಾಗಿ ಹೇಳಿದಳು:

"ಅಯ್ಯೋ ಮನೆಹಾಳ್ ಮುಂಡೇಮಕ್ಕಳ್ರಾ, ಯಾಕ್ರೋ ಕೂತೀರಿ? ಹಾಸಿಕೊಂಡು ಮನಿಕ್ಕೊಳ್ರೋ....!"

ಗೌಡರ ಆರ್ಭಟದ ನಿತ್ಯ ಪರಿಚಯವಿದ್ದ ಆ ಆಳುಗಳು ಅಷ್ಟೇನು ಗಡಿಬಿಡಿ ಮಾಡಿಕೊಳ್ಳದೆ ನಿಧಾನವಾಗಿಯೆ, ಆದರೂ ಗೌಡರಿಗೆ ಭಯಪಟ್ಟು ಅವರ ವಾಣಿಗೆ ಗೌರವ ತೋರಿಸುತ್ತೇವೆ ಎಂಬುದನ್ನು ಅವರಿಗೆ ತೋರಿಸಲು ಕಾತರರಾದವರಂತೆ, ಕೂತಲ್ಲಿಂದ ಎದ್ದು ತಮ್ಮ ತಮ್ಮ ಕೆಲಸದ ಉಪಕರಣಗಳನ್ನು ಕೈಗೆ ತೆಗೆದುಕೊಂಡರು. ಚೇಂಕ್ರ ಸ್ವಲ್ಪ ಧೈರ್ಯ ತಂದುಕೊಂಡು ಹಲ್ಲುಬಿಟ್ಟು ಸುಳ್ಳೇ ನಗುತ್ತಾ, ಆಳುಗಳೆಲ್ಲರೂ ಅದುವರೆಗೂ ಸ್ವಲ್ಪವೂ ವಿರಾಮವಿಲ್ಲದೆ ಕೆಲಸ ಮಾಡುತ್ತಲೆ ಇದ್ದರೆಂದೂ ಆಗತಾನೆ ಕೂತಿದ್ದರೆಂದೂ ಸಮಾಧಾನ ಹೇಳಿದನು.

ಗೌಡರು ಅವನಿಗೆ "ನೀನೊಬ್ಬ ದೊಡ್ಡ ಸೇರೆಗಾರ ಆಗಿಬಿಟ್ಟಿದೀಯ"…. ಎಂದು ಗದರಿಸಿ, ಸುತ್ತಲೂ ಏನನ್ನೊ ಹುಡುಕುವರಂತೆ ಕಣ್ಣು ಸುಳಿಸಿ "ನೀವು ಇಷ್ಟೇ ಜನ ಏನೋ ಕೆಲಸಕ್ಕೆ ಬಂದೋರು? ಅಂವ ಎಲ್ಲೋ ಆ ಸಿಟ್ಲುಮಿಂಚ? ಮದೇ ಆಯ್ತು ಅಂತಾ ಹೆಂಡ್ತೀನ ಹಿಡಿಕೊಂಡೇ ಕಾಡ್ನೆಲ್ಲಾ ಅಲೀತಿರ್ತಾನೊ?…. ಅಂವ ಕೆಲಸಕ್ಕೆ ಬರ್ಲಿಲ್ಲೇನೊ, ಏ….ಏ…." ಎಂದು ಪಿಜಿಣನನ್ನು ನೋಡುತ್ತಾ, ಅವನ ಹೆಸರು ನೆನಪಿಗೆ ಬರದೆ "ಸುಡಗಾಡು ಹೆಸರು…. ಎಂಥದೋ ನಿನ್ನ ಹೆಸರು?" ಎಂದರು.

"ಅವನ ಹೆಸರೇ? ಪಿಜಿಣ" ಎಂದು ಸೂಚಿಸಿ ಮೊಡಂಕಿಲ ಹರೆ ಕಡಿಯಲು ಪ್ರಾರಂಭಿಸಿದ.

"ಅವನು ಎಲ್ಲೋ, ಪಿಜಿಣಾ? ನಿನ್ನ ಬಿಡಾರದ ಬದೀಲೇ ಅಲ್ಲೇನೋ ಅವನ ಬಿಡಾರ?" ಗೌಡರ ಪ್ರಶ್ನೆಗೆ

ಪಿಜಿಣ "ಯಾರು? ಐತನಾ? ಕೆಲಸಕ್ಕೆ ಬಂದಿತ್ತು ಹುಡುಗ-"

"ಮತ್ತೆಲ್ಲಿ ಹೋದನೋ?"

"ಸಣ್ಣ ಒಡೇರು ಕರಕೊಂಡು ಹೋದರು, ಏಡಿ ಹಿಡಿಯುದಕ್ಕೆ."

"ಯಾರೋ? ಮುಕುಂದನೇನೋ?…. ಅವನ ದೆಸೆಯಿಂದ ಆಗೋದಿಲ್ಲ! ಕೆಲಸ ಮಾಡ್ತಾರೆಯೊ ಇಲ್ಲವೊ ನೋಡ್ತಾ ಇರು ಅಂತ ಕಳಿಸಿದ್ರೆ, ಕೆಲಸ ಮಾಡವನ್ನೆ ಕರಕೊಂಡು ಷಿಕಾರಿಗೆ ಎದ್ದುಬಿಡ್ತಾನಲ್ಲಾ! ಐತನ ಹೆಂಡ್ತಿ ಬರಲಿಲ್ಲೇನೊ, ಕೆಲ್ಸಕ್ಕೆ?"

"ಅದು ಅವನ್ನ ಬಿಟ್ಟು ಇರುತ್ತದಾ? ಹಿ ಹಿ ಹಿ! ಅದನ್ನೂ ಕರಕೊಂಡು ಹೋದ್ರು, ಏಡಿ ಹೊರುವುದಕ್ಕಂತೆ!"

"ಏಡಿ ಹೊರುವುದಕ್ಕೆ?! ಸೈ ಬಿಡು! ಏನು ಒಂದು ಪಾಟಿ ಚೀಲವೋ? ಮಣಗಟ್ಲೆ ಏಡಿ ಹಿಡೀತಾರೇನೋ?"

"ಅಮ್ಮಾವರಿಗೆ ಏನೋ ಹುಸಾರಿಲ್ಲವಂತೆ. ಅದಕ್ಕೆ ಜಡದ ಬಾಯಿಗೆ…." ಚೇಂಕ್ರ ಒಡೆಯರ ಮನಸ್ಸು ಪ್ರಸನ್ನವಾಗುವಂತೆ ಮಾಡಲು ಅವರ ಹೆಂಡತಿಯನ್ನೆ ಕಾರಣವನ್ನಾಗಿ ಒಡ್ಡಲು ಮಾತೆತ್ತಿದುದನ್ನು ತಡೆದು ಗೌಡರು "ಸಾಕು ಸುಮ್ಮನಿರೊ, ಸೇರೆಗಾರ!…. ಕಡಿ, ಕಡಿ, ನೀ ಮರ ಕಡಿ" ಎಂದು ಒಂದು ದಿಮ್ಮಿಯ ಮೇಲೆ ಹೆಗಲ ಮೇಲಿದ್ದ ಕೆಂಪು ಶಾಲನ್ನು ಹಾಕಿಕೊಂಡು ಅದರ ಮೇಲೆ ಕುಳಿತರು. ಸೊಂಟದಲ್ಲಿದ್ದ ಮಡ್ಡಿ ನಶ್ಯದ ಕೋಡಿನ ಡಬ್ಬಿಯನ್ನು ತೆಗೆದು ಅದರ ಮುಚ್ಚಳವನ್ನು ಹಿಡಿದುಕೊಂಡು, ಡಬ್ಬಿ ಮುಚ್ಚಳವನ್ನು ಯಥಾಪ್ರಕಾರ ಹಾಕಿ, ಅದನ್ನು ಸೊಂಟಕ್ಕೆ ಮೊದಲಿನಂತೆ ಸಿಕಕಿಸಿ, ಸಾವಧಾನವಾಗಿ ನಶ್ಯವನ್ನು ಮೂಗಿಗೆ ಏರಿಸಿ ಸವಿಯುತ್ತಾ ಕುಳಿತು ಕೊಂಡರು. ಕೊಡಲಿಯ ಪೆಟ್ಟಿನ ಸದ್ದು ತೋಟದಿಂದ ಮರುದನಿಯಾಗುವಂತೆ ತೋರುತ್ತಿತ್ತು: ಠಾಪ್! ಠಾಪ್! ಠಾಪ್! ಠಾಪ್! ಠಾಪ್!….

ಸಾವಧಾನವಾಗಿ ನಶ್ಯ ಸೇಯುವ ಬಹಿಃಕ್ರಿಯೆಯಲ್ಲಿ ತೊಡಗಿದ್ದಂತೆ ತೋರುತ್ತಿದ್ದರೂ ಗೌಡರ ಮನಸ್ಸು ತನ್ನ ಅಂತರ್ಮುಖ ಪ್ರಪಂಚದಲ್ಲಿ ಅಲೆಯತೊಡಗಿತ್ತು. ಆ ಆಲೋಚನೆಗಳಿಗೆ ಒಂದು ತರ್ಕವಾಗಲಿ ಕ್ರಮವಾಗಲಿ ಸ್ಪಷ್ಟವಾಗಿರಲಿಲ್ಲ. ತಮ್ಮದೇ ಆದ ಯಾವುದೋ ಕ್ರಮದಲ್ಲಿ, ನೀರಿನ ತಳದಿಂದ ಮೇಲು ಮೈಗೆ ಗುಳ್ಳೆಗಳೇಳುವಂತೆ, ಅವು ಎದ್ದೆದ್ದು ಒಡೆಯುತ್ತಿದ್ದುವು:

ಅವರು ಅರ್ಧ ವಿಶ್ವಾಸಕ್ಕಾಗಿಯೂ ಅರ್ಧ ವಿನೋದಕ್ಕಾಗಿಯೂ “ಸಿಟ್ಲುಮಿಂಚ” ಎಂದು ಕರೆಯುತ್ತಿದ್ದ ಐತನಿಂದ ಪ್ರಾರಂಭವಾದ ಆಲೋಚನೆ, ತಮ್ಮ ಮುಕುಂದಯ್ಯನ ಕಡೆ ತಿರುಗಿ, ಐತನ ಹುಡುಗಿ ಹೆಂಡತಿ ಪೀಂಚಲು ಕಡೆ ಹೊರಳಿ, ಗರ್ಭಿಣಿಯಾಗಿ ಹೆರಿಗೆಯ ಬೇನೆಯಲ್ಲಿದ್ದ ತಮ್ಮ ಹೆಂಡತಿಯ ಕಡೆಗೂ, ಅಲ್ಲಿಂದ ಕನ್ನಡ ಜಿಲ್ಲೆಗೆ ಹೋಗಿ ಬರುತ್ತೇನೆಂದು ಹಣ ಕೇಳಿದ ಐಗಳು ಅನಂತಯ್ಯನವರತ್ತ ಹೋಗಿ, ಸಾಹುಕಾರ ಮಂಜಭಟ್ಟರಲ್ಲಿಗೆ ಸಾಗಿತ್ತು.

ಅಷ್ಟರಲ್ಲಿ, ತುಸುದೂರದಲ್ಲಿ ಗದ್ದೆಕೋಗಿನ ಅಂಚಿನಲ್ಲಿ, ಹಾಡ್ಯದ ಪಕ್ಕದ ಹಕ್ಕಲನ್ನು ಹಾದು, ಅಗಳಿನ ಸಂಕವನ್ನು ದಾಟಲು ಪ್ರಯತ್ನಿಸುತ್ತಿದ್ದ ಇಬ್ಬರು ಸ್ತ್ರೀವ್ಯಕ್ತಿಗಳು ಅವರ ದೃಷ್ಟಿಗೆ ಬಿದ್ದು, ಅವರನ್ನು ಗುರುತಿಸಲೆಂದು ಹುಬ್ಬು ಸುಕ್ಕಿಸಿ ಕಿರಿಹಿಡಿದು ನೋಡತೊಡಗಿದರು. ಯಾರು ಎಂಬುದು ಸ್ಪಷ್ಟವಾಗದಿರಲು ತಮಗೆ ತಾವೆ ಎಂಬಂತೆ ಆಳುಗಳಿಗೂ ಕೇಳಿಸುವ ರೀತಿಯಲ್ಲಿ “ಯಾರೋ ಅದು? ಅಲ್ಲಿ ಆ ತಡಬೆ ಹತ್ತಿರ ಸಂಕ ದಾಟುತ್ತಿರೋರು?” ಎಂದರು, ಸ್ವಲ್ಪ ರಾಗವಾಗಿ, ಉದಾಸೀನ ಧ್ವನಿಯಿಂದಲೆ.

ಅವರು ಯಾರನ್ನೂ ನಿರ್ದೇಶಿಸಿ ಪ್ರಶ್ನಿಸಿರಲಿಲ್ಲ. ಆದರೂ ಆಳುಗಳೆಲ್ಲ, ಗಂಡಸರೂ ಹೆಂಗಸರೂ, ಕೆಲಸ ನಿಲ್ಲಿಸಿ, ನಿಂತು, ಆ ಕಡೆ ನೋಡತೊಡಗಿದರು.

ಪಿಜಿಣ ಗೊಬ್ಬೆಸೆರಗು ಕಟ್ಟಿ ಉಟ್ಟಿದ್ದ ಸೀರೆಯನ್ನೂ ಕುತ್ತಿಗೆಗೆ ಕಟ್ಟಿ ಬೆನ್ನಿನ ಮೇಲೆ ಇಳಿಬಿದ್ದಿದ್ದ ವಲ್ಲಿಯನ್ನೂ ಗಮನಿಸಿ “ಯಾರೋ ಹೆಗ್ಗಡಿತಮ್ಮೋರು ಕಂಡ ಹಂಗೆ ಕಾಣ್ತದೆ” ಎಂದನು.

“ಯಾರೇನು? ನೋಡಿದರೆ ಕಾಂಬುದಿಲ್ಲೇನು? ಅತ್ತೆ ಸೊಸೆ ಜೋಡಿ!” ಎಂದು ಚೇಂಕ್ರ ಹಲ್ಲುಬಿಟ್ಟು ನಗುತ್ತಾ ನಿಂತನು.

“ಓಹೋ! ನಾಗಕ್ಕ ನಾಗತ್ತೆಯರ ಸವಾರಿ ಅಂತಾ ಕಾಣ್ತದೆ! ಹೂವಳ್ಳಿಗೆ ಹೋಗೋರೇನೋ!” ಎಂದು ಗೌಡರು ಇಂಗಿತವಾಗಿ ಚೇಂಕ್ರನ ಕಡೆ ನೋಡಿದರು.

ಗೌಡರಿಗೆ ಹೇಗೋ ಹಾಗೆ ಚೇಂಕ್ರನಂತಹರಿಗೂ ಗಾಳಿಸುದ್ದಿ ಕಿವಿಗೆ ಬಿದ್ದಿತ್ತು. ನಾಗತ್ತೆ ಹೇಗಾದರೂ ಮಾಡಿ ತನ್ನ ಸೊಸೆ ನಾಗಕ್ಕನನ್ನು ಹೂವಳ್ಳಿ ವೆಂಕಟಪ್ಪ ನಾಯಕರಿಗೆ ಸೇರುಡಿಕೆ ಮಾಡಲು ಒಂದು ವರುಷದಿಂದಲೂ ಹವಣಿಸುತ್ತಿದ್ದಾಳೆ ಎಂಬ ಸಂಗತಿ. ಆದರೆ ಚೇಂಕ್ರನ ನೋಟದಲ್ಲಿದ್ದ ನಿಃಸ್ಪೃಹತಾಭಾವ ಗೌಡರ ನೋಡದಲ್ಲಿರಲಿಲ್ಲ. ಏಕೆಂದರೆ ರಂಗಪ್ಪಗೌಡರು ಹೃದಯಭ್ರಮರವೂ ನಾಗಕ್ಕನ ಪುಷ್ಪಪಾತ್ರೆಯ ಮೇಲೆ ಆಗೊಮ್ಮೆ ಈಗೊಮ್ಮೆ ಹಾರಾಡಿ, ಜೇನೀಂಟುವ ಆಶೆಯನ್ನು ತೋರಿತ್ತು; ತೋರಿಸುತ್ತಲೂ ಇತ್ತು. ಆದರೆ, ಒಂದು ವೇಳೆ ಅದು ಸಾಧ್ಯವಾದರೆ, ತಮಗೂ ನಾಗಕ್ಕಗೂ ಇರಬಹುದಾದ ಸಂಬಂಧದ ಸ್ವರೂಪವನ್ನು ನಿರ್ಣಯಿಸಲು ಅವರಿನ್ನೂ

ಸಮರ್ಥರಾಗಿರಲಿಲ್ಲ. ಒಮ್ಮೆ ಯೋಚನೆ: ಅವಳನ್ನು ಸುಮ್ಮನೆ ಇಟ್ಟುಕೊಳ್ಳಬಹುದಲ್ಲಾ ಎಂದು, ಮತ್ತೊಮ್ಮೆ: ಸೀರುಡಿಕೆ ಮಾಡಿಕೊಂಡರೇನಾಗುತ್ತದೆ ಎಂದು. ಛೆ ಛೆ! ಅದು ತಮ್ಮಂತಹ ಮನೆತನಸ್ಥರ ಅಂತಸ್ತಿಗೆ ಕೀಳು ಎಂಬ ಭಾವನೆ ಅವರನ್ನು ನಾಚಿಸುತ್ತಿದ್ದುದೂ ಉಂಟು. ಗಟ್ಟಿಮುಟ್ಟಾದ ತನ್ನ ಹೆಂಡತಿ ಲಕ್ಷಣವಾಗಿಯೇ ಇರುವಾಗ? ಅದರಲ್ಲಿಯೂ ಐಗಳು ಅನಂತಯ್ಯನವರು ಭಾರತ ರಾಮಾಯಣ ಜೈಮಿನಿ ಇವುಗಳನ್ನು ಓದಿ, ಧರ್ಮವಿಚಾರ ಸೂಕ್ಷ್ಮವನ್ನು ಹೃದಯಸ್ಪರ್ಶಿಯಾಗಿ ಬಿತ್ತರಿಸುತ್ತಿದ್ದಾಗ, ಅದ್ದನು ಗ್ರಹಿಸಿದ ತ್ಕಾಲದಲ್ಲಿ ರಂಗಪ್ಪಗೌಡರ ರಸವಶವಾದ ಮನಸ್ಸು ಎಷ್ಟೋಸಾರಿ ಧರ್ಮಾಧರ್ಮ ಪ್ರಸಂಗದ ಕುರುಕ್ಷೇತ್ರವೆ ಆಗಿಬಿಟ್ಟಿದ್ದಿತು. ಆದರೆ, 'ಮನ್ಮಥವಿಜಯವು ನೀಲಕಂಠನಿಗೂ ಸುಲಭವಾಗಲಿಲ್ಲ ಎಂದಮೇಲೆ ಬರಿಯ ಧರ್ಮಶ್ರವಣದಿಂದಲೆ ಮನುಷ್ಯ ಮಾತ್ರನಾದವನು ಉತ್ತೀರ್ಣನಾಗುತ್ತಾನೆಯೆ?' ಎಂದು ಐಗಳು ತಾಳಮದ್ದಳೆಯ ಪ್ರಸಂಗ ಸಮಯದಲ್ಲಿ ವ್ಯಾಖ್ಯಾನ ಮಾಡಿದ್ದರಲ್ಲವೆ?

ಗೌಡರು ನೋಡುತ್ತಿದ್ದಂತೆಯೆ ಆ ಇಬ್ಬರೂ ಹೂವಳ್ಳಿಗೆ ಅಗಚುವ ಗದ್ದೆಯಂಚಿನ ಕಾಲುದಾರಿಯನ್ನು ಉತ್ತರಿಸಿ ಕೋಣೂರು ಮನೆಯ ದಾರಿಯನ್ನೆ ಹಿಡಿದಿದ್ದರು. ಅದನ್ನು ಕಂಡು ಗೌಡರಿಗೆ ಸಂತೋಷವಾಯಿತು.

ಆ ಸಂತೋಷಕ್ಕೆ ಬೇರೆ ಬೇರೆ ಕಾರಣಗಳಿದ್ದಿರಬಹುದು. ಆದರೆ ಅವರ ಮನಸ್ಸು ತನಗೆ ತಾನೆ ಧೈರ್ಯವಾಗಿ ಸ್ಪಷ್ಟಪಡಿಸಿಕೊಂಡ ಕಾರಣವೆಂದರೆ ತಮ್ಮ ಹೆಂಡತಿಯ ಹೆರಿಗೆ ಮತ್ತು ತರುವಾಯದ ಉಪಚಾರದ ಸಂದರ್ಭದಲ್ಲಿ ಅನುಭವಶಾಲಿಯಾದ ನಾಗತ್ತೆ ಮತ್ತು ಉತ್ಸಾಹಿಯಾದ ನಾಗಕ್ಕ ಇವರಿಂದ ತಮ್ಮ ತಾಯಿಗೆ ದೊರೆಯಬಹುದಾದ ಸಹಾಯ.

ಹೆಂಗಸರಿಬ್ಬರೂ ಗದ್ದೆ ತೋಟಗಳನ್ನು ಬೇರ್ಪಡಿಸುವ ಬೇಲಿಯ ಬಳಿಗೆ ಸೇರಿ, ತಡಬೆಯನ್ನು ನಿಸ್ಸಂಕೋಚವಾಗಿ ಹತ್ತಿ ದಾಟಿ, ತಮ್ಮ ತಮ್ಮೊಳಗೆ ತುಸು ಗಟ್ಟಿಯಾಗಿಯೆ ಮಾತನಾಡಿಕೊಳ್ಳುತ್ತಾ ಅಡಕೆಯ ಮತ್ತು ಬಾಳೆಯ ಮರಗಳ ಸಂದಿಯಲ್ಲಿ ಮನೆಗೆ ಹೋಗುವ ಕಾಲುದಾರಿಯಲ್ಲಿ ಮುಂದುವರಿದರು. ಮುಂದೆ ಹೋಗುತ್ತಿದ್ದ ನಾಗಕ್ಕ ಇದ್ದಕ್ಕಿದ್ದಹಾಗೆ ನಿಂತು, ತನ್ನನ್ನು ದಾಟಿ ಮುಂದುವರಿದ ಅತ್ತೆಯ ಹಿಂದೆ ಮರೆಯಾಗಲೆಳಸಿದಾಗ ನಾಗತ್ತೆ ನೋಡಿದಳು, ತೋಟದಲ್ಲಿ ತುಸು ದೂರದಲ್ಲಿ ಕಡಿದ ಮರದ ದಿಮ್ಮಿಯ ಮೇಲೆ ಕುಳಿತು ನಶ್ಯ ಸೇಯುತ್ತಾ ಆಳುಗಳಿಂದ ಕೆಲಸ ಮಾಡಿಸುತ್ತಿದ್ದ ರಂಗಪ್ಪಗೌಡರನ್ನು ಹೆಂಗಸರಿಬ್ಬರೂ ಅದುವರೆಗೆ ಗಂಡಸರ ಕಣ್ಣಿಗೆ ಬೀಳದೆ, ಗಂಡಸರ ಸುಳಿವೂ ಇಲ್ಲದೆ, ತಾವು ತಾವಾಗಿಯೆ ಇದ್ದಾಗ ಇದ್ದ ರೀತಿಯನ್ನು ಸಂಪೂರ್ಣವಾಗಿ ತ್ಯಜಿಸಿ, ನಾಚಿ ಹದುಗುವಂತಹ ಭಂಗಿಯನ್ನಾರೋಪಿಸಿಕೊಂಡು, ಬೇಗಬೇಗನೆ ಮನೆಯ ಕಡೆಗೆ ನಡೆದು ಕಣ್ಮರೆಯಾದರು.

ಸ್ವಲ್ಪ ಹೊತ್ತಿನಲ್ಲಿಯೆ ಗೌಡರು ಎದ್ದುನಿಂತು, ತಾವು ಕೂತಿದ್ದ ಶಾಲನ್ನು ಎತ್ತಿ ಹೆಗಲಮೇಲೆ ಹಾಕಿಕೊಂಡು "ಏ ಸೇರೆಗಾರ" ಎಂದು ಚೇಂಕ್ರನನ್ನು ನಿರ್ದೇಶಿಸಿ "ಹಗಲು ಉಣ್ಣಕ್ಕೆ ಹೋಗಾಕೆ ಮೊದಲು ಈ ಮರ ಕಡಿಯಾ ಕೆಲಸಾನೆಲ್ಲ ಪೂರೈಸಿ ಹೋಗ್ಬೇಕು. ಗೊತ್ತಾಯ್ತಾ?" ಎಂದು ಆಜ್ಞಾಪಿಸಿ ಹೊರಾಡುವುದರಲ್ಲಿದ್ದರು. ಅಷ್ಟರಲ್ಲಿ ತೋಟದ ಮೇಲುಭಾಗದ ಹಳುವಿನಲ್ಲಿ ಏನೋ ಪ್ರಾಣಿ ಓಡುತ್ತಿರುವ ಸದ್ದಾಯಿತು. ಎಲ್ಲರೂ ಚಕಿತರಾಗಿ ಆ ಕಡೆ ನೋಡುತ್ತಾ ಆಲಿಸುತ್ತಾ ನಿಂತರು. ಏಡಿ ಹಿಡಿಯಲು ಹೋದವರು ಯಾವುದೋ ಪ್ರಾಣಿಯನ್ನು ಹೆದರೆಬ್ಬಿಸಿದ್ದಾರೆಂದು ಗೌಡರು ಊಹಿಸಿದರು. ಆ ಸದ್ದು ಕಾಡಿನ ಕಡೆಯಿಂದ ತೋಟದ ಕಡೆಗೇ ಬರುವಂತೆ ತೋರತೊಡಗಿತು.

ಹೆಣ್ಣಾಳುಗಳು ಗಾಬರಿಯಾಗಿ ಅಡಕೆ ಬಾಳೆಯಮರಗಳ ಸಂದಿಯಲ್ಲಿ ಒಟ್ಟಾದರು. ಮಿಗವೊ ಕಾಡುಕುರಿಯೊ ಒಂಟಿಗ ಹಂದಿಯೊ ಎಂಬ ಸಂದೇಹ ವಿಸ್ಮಯಗಳಿಂದ ಉಳಿದವರು ಅತ್ತಕಡೆ ಕಣ್ಣಾಗಿ ನಿಂತಿದ್ದರು.

"ಹಾಳು ಹುಡುಗ, ಆ 'ಸಿಟ್ಲುಮಿಂಚ' ಕಣೋ!" ಎಂದು ಗೌಡರು ಕೂಗಿಕೊಂಡರು. ಅಡಕೆ ಬಾಳೆ ಮರಗಳ ನಡುವೆ ಮೇಲುಸೊಪ್ಪಿನ ಜಿಗ್ಗನ್ನು ಲರಿಲರಿ ತುಳಿಯುತ್ತಾ ಕಪ್ಪಿಂದ ಕಪ್ಪಿಗೆ ನೆಗೆಯುತ್ತಾ ದೌಡಾಯಿಸಿ ಬರುತ್ತಿದ್ದ ಐತ ಗೌರದನ್ನು ಕಂಡವನೆ ಏದುತ್ತಾ ನಿಂತನು.

ಯಾರಿಗೋ ಏನೋ ಅಪಾಯವಾಗಿರಬೇಕೆಂಬ ಭಯ ಎಲ್ಲರನ್ನೂ ಆವರಿಸಿತು. ಐತನ ಮೈಯ್ಯೆಲ್ಲ ಕೆಸರು ಸಿಡಿದಿತ್ತು. ಓಡಿಬರುವ ಅವಸರದಲ್ಲಿ ಕಾಲಿಗೂ ಮೈಗೂ ಮುಳ್ಳುಗೀರಿದ ಕಲೆಗಳು ಕಾಣುತ್ತಿದ್ದುವು. ಏನು ವಿಷಯ ಎಂದು ಗೌಡರು ಕೇಳಿದ ಪ್ರಶ್ನೆಗೂ ಅವನು ತಕ್ಷಣ ಉತ್ತರಕೊಡಲು ಸಮರ್ಥನಾಗಲಿಲ್ಲ; ಉಸಿರು ಮೇಲೆ ಕೆಳಗೆ ಆಗುತ್ತಿತ್ತು.

ಅಂತೂ ಏದುತ್ತಲೇ ಹೇಳತೊಡಗಿದ:

"ಸಣ್ಣ ಅಯ್ಯ.... ಓಡು ಅಂದರು.... ಓದಿ ಬಂದೆ. ಐಗಳಿಗೆ ಹೇಳು ಅಂದರು: ಕೋವಿ ತಕ್ಕೊಂಡು ನಾಯಿ ಕರಕೊಂಡು ಬರಬೇಕಂತೆ. ಒಂದು ಹಂದಿ.... ದೊಡ್ಡ ಹಂದಿಯಂತೆ! ಇಲಾತಿ ಸೀಂಗೆಯಲ್ಲಿ ಸೇರಿಕೊಂಡಿದೆ ಅಂಬರು. ಒಂಟಿಗ ಅಂಬರು!"

ಚೇಂಕ್ರ ಪಿಜಿಣ ಮೊಡಂಕಿಲರು 'ಹಾಂಗಾರೆ ಒಂದು ಕೈ ಕಾಂಬ ಷಿಕಾರಿಗೆ!" ಎಂದು ಹರ್ಷಿಸತೊಡಗಿದ್ದರು. ಗೌಡರು ಏನು ಹೇಳುತ್ತಾರೆಯೊ ಎಂದು ಕಾತರರಾಗಿ ವರ ಮುಖ ಕಣ್ಣು ಬಾಯಿಗಳನ್ನೆ ದಿಟ್ಟಿಸುತ್ತಿದ್ದರು. ಗೌಡರು ಸ್ವಲ್ಪವೂ ಕಾತರರಾಗಲಿಲ್ಲ. ಅವರ ಮುಖದ ಮೇಲೆ ಒಂದು ಮಂದಸ್ಮಿತ ಆಡತೊಡಗಿತು. ಅವರಿಗೆ ತಟಕ್ಕನೆ ತಮ್ಮ ಪ್ರಾಯಾಂಕುರಕಾಲದ ಪ್ರಣಯದ ಆಟಗಳ ನೆನಪಾಯಿತು. ಪೀಂಚಲು ಹತ್ತಿರದಿಂದ ಐತನನ್ನು ದೂರ ಕಳುಹಿಸುವ ಸಲುವಾಗಿಯೆ ಮುಕುಂದಯ್ಯ ಈ ಹೂಟ ಹೂಡಿರಬೇಕೆಂದು ಊಹಿಸಿ ಗದರಿಸಿದರು:

"ಥೂ, ಹುಚ್ಚು ಮುಂಡೆಗಂಡ? ನಿನಗೆ ಬುದ್ಧಿಯಿಲ್ಲ. ಬೇಗ ಓಡಿ ಹೋಗಿ ಹೇಳು, ಐಗಳಿಗೆ ಪುರಸತ್ತಿಲ್ಲವಂತೆ, ಈಗ ಬರಾಕೆ ಆಗಾದಿಲ್ಲ ಅಂದ್ರು ಅಂತಾ. ಏಡಿ ಹಿಡುಕೊಂಡು ಬೇಗ ಬರಾಕೆ ಹೇಳಿದ್ರು ಅನ್ನು. ಹೂಂ ನಡಿ! ಓಡು!!"

ಐತ ನಿರಾಶನಾಗಿ ಹಿಂದಿರುಗಿ ಓಡುತ್ತಲೆ ಹೋಗಿ ಕಣ್ಮರೆಯಾದನು. ಬರುವಾಗ ಅವನಲ್ಲಿ ಇದ್ದ ಆತುರದ ವೇಗ ಹೋಗುವಾಗ ಇರಲಿಲ್ಲ.

* * *

# ೧೬

ಆ ದಿನವೆ ಬೆಳಿಗ್ಗೆ, ಹೊತ್ತು ಚೆನ್ನಾಗಿ ಮೂಡಿದ ಮೇಲೆ, ಸಿಂಬಾವಿ ಹೊಲೆಯರ ಗುತ್ತಿ ನಾಗತ್ತೆ ನಾಗಕ್ಕರನ್ನು ಹಾದಿಯಲ್ಲಿ ಸಂಧಿಸಿ ಹುಲಿಕಲ್ಲು ನೆತ್ತಿಗೆ ಏರುತ್ತಿದ್ದ ಸಮಯವಿರಬಹುದು, ಕೋಣೂರು ಮುಕುಂದಯ್ಯ ಕೈಯಲ್ಲಿ ಎಂದಿನಂತೆ ಚಟ್ಟುಬಿಲ್ಲು ಹಿಡಿದು ಮನೆಯಿಂದ ಗುಡ್ಡದ ಕಡೆಗೆ ಅವಸರವಸರವಾಗಿ ಹೊರಡುತ್ತಿದ್ದನು. ಅವನ ಅಣ್ಣ ರಂಗಪ್ಪಗೌಡರ ಮಗ ತಿಮ್ಮು, ಓದುಬರಹ ಕಲಿಯಲೆಂದು ಕೋಣೂರಿನಲ್ಲಿರುತ್ತಿದ್ದ, ತಿರುಪತಿಗೆ ಹೋಗಿ ಕಣ್ಮರೆಯಾಗಿದ್ದ ಹಳೆಮನೆ ಸುಬ್ಬಣ್ಣ ಹೆಗ್ಗಡೆಯವರ ಹಿರಿಯ ಮಗ ದೊಡ್ಡಣ್ಣ ಹೆಗ್ಗಡೆಯವರ ಮಗ ಧರ್ಮು ಮತ್ತು ಬೆಟ್ಟಳ್ಳಿ ಕಲ್ಲಯ್ಯಗೌಡರ ಕಿರಿಯ ಮಗ ಕಾಡು, ಇನ್ನೂ ಮೂರು ನಾಲ್ಕು ಹತ್ತಿರದ ಹಳ್ಳಿಯ ಹುಡುಗರೂ ಒಟ್ಟಾಗಿ ಕೋಣೂರು ಮನೆಯ ಕೆಳಗರಡಿಯಲ್ಲಿದ್ದ ಐಗಳು ಅನಂತಯ್ಯನವರ ಕೂಲಿ ಮಠದಲ್ಲಿ ಕುಳಿತಿದ್ದರು, ತಮ್ಮ ಮುಂದೆ ಅಕ್ಷರ ತಿದ್ದಲು ಗೋಡೆಗೆ ಒತ್ತಿ ನೆಲದ ಮೇಲೆ ಹರಡಿದ್ದ ಮಳಲಿನ ಮುಂದೆ! ಚಿಕ್ಕಯ್ಯ ಕಾಡಿಗೆ ಹೊರಡುತ್ತಿದ್ದುದನ್ನು ನೋಡಿ ತಿಮ್ಮು ತಿದ್ದುವುದನ್ನು ನಿಲ್ಲಿಸಿ ಎದ್ದು ಓಡಿಬಂದನು. ಒಡನೆಯೆ ಧರ್ಮು ಕಾಡು ಇಬ್ಬರೂ ಅವನನ್ನು ಹಿಂಬಾಲಿಸಿದರು. ದೂರದ ಸಂಬಂಧಿಗಳಾಗಿ ಮುಕುಂದಯ್ಯನೊಡನೆ ಅಷ್ಟು ಸಲುಗೆ ಇರದಿದ್ದ ಇತರ ಬಾಲಕರು ಹತ್ತಿರಕ್ಕೆ ಓಡಿಬರದಿದ್ದರೂ ಮಾಡುತ್ತಿದ್ದ ಕೆಲಸವನ್ನೆಲ್ಲ ನಿಲ್ಲಿಸಿ, ಓಡಿಹೋದ ಮಿತ್ರರ ಕಡೆ ನೋಡಹತ್ತಿದ್ದರು. ಅಷ್ಟರಲ್ಲಿ ಮುಕುಂದಯ್ಯ ಗಟ್ಟಿಯಾಗಿ "ಐಗಳೇ" ಎಂದು ಕರೆದನು. ಒಡನೆಯೆ ಹುಡುಗರೆಲ್ಲ ಹಿಂದಕ್ಕೆ ಓಡಿಹೋಗಿ ಮೊದಲಿನಂತೆ ಕುಳಿತು ಕಾರ್ಯಮಗ್ನರಾದಂತೆ ತೋರಿಸಿಕೊಂಡರು. "ಹೋಯ್, ಯಾರು? ಮುಕುಂದ ಕರೆದದ್ದಾ?" ಎನ್ನುತ್ತಾ ಅನಂತಯ್ಯ ಮನೆಯೊಳಗಿನಿಂದ ಬಂದರು. ಮುಕುಂದಯ್ಯ ನಗುತ್ತಾ "ಏನಿಲ್ಲ. ಐಗಳೇ, ಅವರೆಲ್ಲ ನನ್ನ ಜೊತೆ ಬರೋದಕ್ಕೆ ಎದ್ದು ಬಿಟ್ಟಿದ್ದರು! ಅದಕ್ಕೆ ಕೂಗಿದೆ" ಎಂದನು. "ಎಲ್ಲಿಗೆ ಹೊರಟೆ, ಚಟ್ಟುಬಿಲ್ಲು ಹಿಡುಕೊಂಡು?" ಎಂದ ಅನಂತಯ್ಯನವರ ಪ್ರಶ್ನೆಗೆ ಉತ್ತರವನ್ನೂ ಕೊಡದೆ ಮುಕುಂದಯ್ಯ ಗುಡ್ಡವೇರಿ ಹಳುವಿನಲ್ಲಿ ಅಡಗಿ ಹೋಗಿದ್ದನು.

ಚಿಕ್ಕಂದಿನಿಂದ ಮುಕುಂದಯ್ಯನಿಗೂ ಅಕ್ಷರಾಭ್ಯಾಸ ಮಾಡಿಸಿ, ಭಾರತ ರಾಮಾಯಣ ಜೈಮಿನಿಗಳನ್ನು ಓದಿ ಅರ್ಥ ಹೇಳುವಷ್ಟರ ಮಟ್ಟಿನ ವಿದ್ವತ್ತನ್ನೂ ಅವನಿಗೆ ದಯಪಾಲಿಸಿದ್ದ ಅನಂತಯ್ಯಗಳಿಗೆ ತಮ್ಮ ಶಿಷ್ಯನ ವಿಚಾರದಲ್ಲಿ ಅಪಾರ ಮಮತೆಯಿತ್ತು. ಹೆಮ್ಮೆಯೂ ಇತ್ತು. ಪ್ರಶಂಸೆಯಿಂದ ಅವನು ಹೋದ ದಿಕ್ಕಿನ ಕಡೆಗೆ ನೋಡುತ್ತಾ ನಿಂತಿದ್ದು, ಸ್ಮೃತಿತರಂಗಮಯವಾದ ಅನೇಕ ಆಲೋಚನಾಪ್ರವಾಹವನ್ನು ಮನಸ್ಸು ದಾಟಿದ ಅನಂತರವೆ ಅವರು ಶಾಲೆಯ ಹುಡುಗರ ಕಡೆಗೆ ತಿರುಗಿದರು.

ಕೋಣೂರಿನಿಂದ ಹಳೆಮನೆಗೆ ಹೋಗುವ ದಾರಿಯಲ್ಲಿ ಅಡ್ಡಲಾಗಿದ್ದ ಕಾಡಿನ ಒಂದು ಸರಲಿನಲ್ಲಿ ತಾನು ಒಡ್ಡಿದ್ದ ಉರುಳನ್ನು ನೋಡಿಕೊಂಡು ಬರುವ ಸಲುವಾಗಿಯೆ ಮುಕುಂದಯ್ಯ ಗುಡ್ಡ ಹತ್ತಿದ್ದನು. ನ್ಯಾಯವಾಗಿ ಹಿಂದಿನ ದಿನವೇ ಅದನ್ನು ನೋಡಿಕೊಂಡು ಬರಬೇಕಾಗಿತ್ತು. ಆದರೆ ಗರ್ಭಿಣಿಯಾಗಿ ಈಗಲೊ ಆಗಲೊ ಹೆರಿಗೆಯಾಗುವಂತಿದ್ದ ಅತ್ತಿಗೆಯ ಅಸ್ವಸ್ಥತೆಯ ದೆಸೆಯಿಂದ ಅವನಿಗೆ ಪುರುಸೊತ್ತೆ ದೊರಕಲಿಲ್ಲ.

ಮುಕುಂದಯ್ಯನ ಶೈಶವಪ್ರಜ್ಞೆ ಬಹಿರ್ವಸ್ತುಗಳನ್ನು ಗ್ರಹಿಸಲೂ ಗುರುತಿಸಲೂ ಕಲಿತಂದಿನಿಂದಲೂ ಅವನ ಚಿತ್ತವನ್ನೆಲ್ಲ ಆಕ್ರಮಿಸಿ ತುಂಬಿಬಿಟ್ಟಿದ್ದ ಮಹದ್ ವಸ್ತುವೆಂದರೆ ಮಲೆ, ಕಾಡು! ಅರಣ್ಯಾಚ್ಛಾದಿತವಾಗಿ

ಮೇಘಚುಂಬಿಗಳಾಗಿ ನಿಂತಿರುವ ಗಿರಿ ಶಿಖರ ಶ್ರೇಣಿಗಳ ಮಲೆನಾಡಿನಲ್ಲಿ ಎಲ್ಲಿಯೋ ಕೆಳಗೆ ಒಂದು ಕಣಿವೆಯ ಮೂಲೆಯಲ್ಲಿ ಹೆದರಿ ಹದುಗಿದಂತೆ ಮರಗಳ ನಡುವೆ ಹುದುಗಿರುವ ಮನೆಗಳಲ್ಲಿ ಹುಟ್ಟಿ ಕಣ್ಣು ಬಿಡುವ ಮಕ್ಕಳ ಪಾಲಿಗೆ ಆಕಾಶ ಕೂಡ ಕಾಡಿನಷ್ಟು ವಿಸ್ತಾರಭೂಮವಾಗಿ ಕಾಣಿಸುವುದಿಲ್ಲ. ಆಕಾಶಕ್ಕಿಂತಲೂ ಕಾಡೆ ಸರ್ವವ್ಯಾಪಿಯಾಗಿ ತನ್ನ ಅಧಿಕಾರವನ್ನು ಸ್ಥಾಪಿಸಿ ಭೂಮಂಡಲವನ್ನೆಲ್ಲ ವಶಪಡಿಸಿಕೊಂಡಂತಿರುತ್ತದೆ. ಪೃಥ್ವಿಯನ್ನೆಲ್ಲ ಹಬ್ಬಿ ತಬ್ಬಿ ಆಳುವ ಕಾಡಿನ ದುರ್ದಮ್ಯ ವಿಸ್ತೀರ್ಣದಲ್ಲಿ ಎಲ್ಲಿಯೊ ಒಂದಿನಿತಿನಿತೆ ಅಂಗೈಯಗಲದ ಪ್ರದೇಶವನ್ನು ಮನುಷ್ಯ ಗೆದ್ದುಕೊಂಡು ತನ್ನ ಗದ್ದೆ  ತೋಟ ಮನೆಗಳನ್ನು ರಚಿಸಿಕೊಂಡಿದ್ದಾನೆ, ಅಷ್ಟೆ. ಅದೂ ಕೂಡ ಅವನು ನಿಚ್ಚವೂ ಜಾಗರೂಕನಾಗಿ ತಾನು ಗೆದ್ದುಕೊಂಡಿದ್ದನ್ನು ನಿರಂತರವೂ ರಕ್ಷಿಸಿಕೊಳ್ಳುತ್ತಾ ಹೋಗುವುದನ್ನು ಮರೆತನೆಂದರೆ, ಬಹುಬೇಗನೆ ಹಳು ಬೆಳೆದು ಮತ್ತೆ ಅದು ಕಾಡಿನ ವಶವಾಗಿ ಬಿಡುತ್ತದೆ. ಮುಕುಂದಯ್ಯನಿಗಂತೂ ಕಾಡು ಎಂದರೆ ದೇವರಿಗೆ ಸರಿಸಮಾನವಾಗಿತ್ತು. ಅಷ್ಟೊಂದು ಭಯಮಿಶ್ರಿತ ಭಕ್ತಿ ಅದರಲ್ಲಿ. ಅವನಿಗೆ ಅದರ ಮುಳ್ಳು, ಕಲ್ಲು, ಕೊರಕಲು, ಏರು, ಇಳಿತ, ಹುಲಿ, ಹಂದಿ, ಹಾವು, ಚೇಳು, ನುಸಿ, ಇಂಬಳ ಇವೆಲ್ಲದರಿಂದ ಒದಗುವ ತೊಂದರೆಯ ಅನುಭವವಿತ್ತು. ಹಾಗೆಯೆ ಹಕ್ಕಿ, ಹೂವು, ಹಣ್ಣು, ಚಿಟ್ಟೆ, ಜೇನು, ಬೇಟೆ ಇತ್ಯಾದಿಗಳಿಂದ ಒದಗುವ ಆನಂದದ ಅರಿವೂ ಇತ್ತು. ಮಲೆಕಾಡಿನ ಭವ್ಯತೆಯ ಅವನ ಅನುಭವವನ್ನು ಹೆದರಿಕೆ ಎಂದು ವರ್ಣಿಸಲಾಗುತ್ತಿರಲಿಲ್ಲ. ಅವನು ಚಿಕ್ಕಂದಿನಲ್ಲಿ ಐತ ಮೊದಲಾದವರೊಡನೆ ಚಿಟ್ಟುಬಿಲ್ಲು ಹಿಡಿದು ಕಾಡಿನಲ್ಲಿ ತಿರುತ್ತಿದ್ದಂತೆ ತರುಣನಾದ ಮೇಲೆಯೂ ಕೋವಿ ಹಿಡಿದು ಒಬ್ಬನೆ ದಟ್ಟ ನಡುಗಾಡಿನಲ್ಲಿಯೂ ಧೈರ್ಯದಿಂದಲೆ ಅಲೆದಾಡಿದ್ದನು ಮತ್ತು ಅಲೆದಾಡುತ್ತಲೂ ಇದ್ದನು.

ಕೋಣೂರು ಹಳೆಮನೆಗಳ ನಡುವೆ ಇದ್ದ ಕಾಡಿನ ಸರಲನ್ನು, ತಾನು ಕಾಡಿನಲ್ಲಿ ಹೋಗುತ್ತಿದ್ದೇನೆ ಎಂಬ ವಿಶೇಷ ಪ್ರಜ್ಞೆ ಏನೂ ಇಲ್ಲದೆ, ಸೇರಿದ ಅವನಿಗೆ ತಾನು ಒಡ್ಡಿದ್ದ ಉರುಳಿನ ಜಾಗ ಥಕ್ಕನೆ ಗೊತ್ತು ಸಿಕ್ಕಲಿಲ್ಲ. ಅಲ್ಲಿಯೆ ಎಲ್ಲಿಯೊ ಹಳುವಿನ ನಿಬಿಡತೆಯಲ್ಲಿ ಕಣ್ಣು ತಪ್ಪಿರಬೇಕೆಂದು ಭಾವಿಸಿ ಹುಡುಕಿದನು. ಒಂದು ಕಡೆ ತಿಪ್ಪುಳು ಉದುರಿದ್ದು ಕಾಣಿಸಿತು. ಮತ್ತೊಂದು ಕಡೆ ದೊಡ್ಡ ಗರಿಗಳೆ ಬಿದ್ದಿವೆ! ಇನ್ನೂ ಮುಂದೆ ಹೋಗು ನೋಡುತ್ತಾನೆ: ತಾನು ಒಡ್ಡಿದ್ದ ಉರುಳೆ ಸ್ಥಳಾಂತರ ಹೊಂದಿ ಬಿದ್ದಿದೆ! ಉರುಳಿಗೆ ಸಿಕ್ಕಿದ್ದ ಒಂದು ಚಿಟ್ಟುಗೋಳಿಯ ತಲೆ, ಕಾಲು, ರೆಕ್ಕೆಯ ತುದಿ ಭಾಗಗಳು ಮಾತ್ರ ಬಿದ್ದಿವೆ! "ಅಯ್ಯೋ ನಿನ್ನೆಯೆ ಬಂದಿದ್ದರೆ! ಹಾಳು ನರಿಯೊ, ಮುಂಗುಸಿಯೊ, ಕಬ್ಬೆಕ್ಕೊ ರಾತ್ರಿ ತಿಂದುಹಾಕಿಬಿಟ್ಟಿದೆ! ಕುಲನಾಶನಾಗಾಕೆ, ನನ್ನ ಉರುಳನ್ನೂ ಕಡಿದು ತುಂಡು ಮಾಡಿದೆಯಲ್ಲಾ" ಎಂದು ಶಪಿಸಿದನು, ಸಿಟ್ಟಿನಲ್ಲಿ.

ಇದ್ದಕ್ಕಿದ್ದಂತೆ ನಾಯಿ ಬೊಗಳಿದಂತಾಗಿ ಮುಕುಂದಯ್ಯ ತಟಕ್ಕನೆ ಎಚ್ಚೆತ್ತವನಂತೆ ನಿಮಿರಿನಿಂತನು. ಕಾಡಿನ ನಡುವೆ ನಾಯಿಯ ಬೊಗಳಿಕೆ ಎಂದರೆ ಸಾಹಸಕ್ಕೆ ನಾಂದಿ ಹಾಡಿದ ಅನುಭವ, ಬೇಟೆಗಾರರಿಗೆ. ಅವನ ಮೈಯೆಲ್ಲ ಬಿಸಿಯಾಯಿತು. ಅಭ್ಯಾಸಬಲದಿಂದ. ಚಿಟ್ಟುಬಿಲ್ಲಿಗೆ ಕಲ್ಲುಹರಳು ಹೂಡಿ ನಿಮಿರಿ ನಿಂತು, ಕಣ್ಣರಳಿಸಿ ನೋಡತೊಡಗಿದನು. ಬೊಗಳುತ್ತಿದ್ದ ನಾಯಿ ಹಳು ಅಲ್ಲಾಡಿಸುತ್ತಾ ತಾನಿದ್ದ ಕಡೆಗೆ ಇಳಿದು ಬರುತ್ತಿದ್ದುದು ಗೊತ್ತಾಯಿತು. ಆದರೆ ಯಾವ ನಾಯಿ? ಯಾರ ನಾಯಿ? ತಾನು ಬರುವಾಗ ತಮ್ಮ ಮನೆಯ ಯಾವ ನಾಯಿಯೂ ತನ್ನನ್ನು ಹಿಂಬಾಲಿಸದಂತೆ ತನಗಿಂತಲೂ ಎಚ್ಚರಿಕೆಯಿಂದ ಬಂದಿದ್ದನು. ಏಕೆಂದರೆ ಜೊತೆ ಬಂದ ನಾಯಿಗಳು ತನಗಿಂತಲೂ ಮುಂದಾಗಿ ಹಳು ನುಗ್ಗಿ ಹೋಗಿ ಉರುಳಿಗೆ ಸಿಕ್ಕಿದ್ದ ಕೋಳಿಗಳನ್ನು ಕಚ್ಚಿಕೊಂಡು ಓಡಿಹೋಗಿದ್ದ ಪೂರ್ವಾನುಭವ ಅವನಿಗೆ ಸಾಕಷ್ಟಿತ್ತು.

ನಾಯಿ ಹಳುವಿನಲ್ಲಿ ಸಾಕಷ್ಟು ಸಮೀಪಕ್ಕೆ ಮುಂದುವರಿದು ತುಸು ಬಯಲಾಗಿದ್ದ ಜಾಗದಲ್ಲಿ ಕಾಣಿಸಿಕೊಂಡಾಗ ನೋಡುತ್ತಾನೆ: ಸಿಂಬಾವಿ ಗುತ್ತಿಯ ನಾಯಿ-ಹುಲಿಯ! ಅದರ ಗುರುತು ಎಲ್ಲಿದ್ದರೂ ಸಿಕ್ಕುತ್ತಿತ್ತು ಮುಕುಂದಯ್ಯನಿಗೆ. ಮುಕುಂದಯ್ಯನ ಗುರುತೂ ಅದಕ್ಕೆ ಎಲ್ಲಿದ್ದರೂ ಸಿಕ್ಕುತ್ತಿದ್ದುದರಲ್ಲಿ ಸಂಶಯವಿಲ್ಲ. ಆದ್ದರಿಂದಲೆ ಅವನು ಅದರ ಹೆಸರು ಹಿಡಿದು ಕರೆದೊಡನೆಯೆ ತನ್ನ ರೋಷವನ್ನೆಲ್ಲ ತೆಕ್ಕನೆ ತ್ಯಜಿಸಿ, ತಟಕ್ಕನೆ ಸಂತೋಷಕ್ಕೆ ಮುಗ್ಗರಿಸಿದಂತೆ ಮುನ್ನುಗ್ಗಿ ಹಳು ಮುರಿಯುವಂತೆ ನೆಸೆನೆಸೆದು ಬಂದು, 'ಹಚೀ ಹಚೀ ಏ ಹುಲಿಯಾ!' ಎಂದು ಗದರಿಸುತ್ತಿದ್ದರೂ ಲೆಕ್ಕಿಸದೆ ಮುಕುಂದಯ್ಯನ ಎದೆಯವರೆಗೂ ತನ್ನ ಮುಂಗಾಲು ಹಾಕಿ ಹಿಂಗಾಲ ಮೇಲೆ ನಿಂತು ಕುಂಯಿಗುಡುತ್ತಾ ತನ್ನ ಮೂತಿಯಿಂದ ಅವನ ಮುಖದವರೆಗೂ ಬಾಗಿ ಅವನ ಬಾಯನ್ನೆ ನೆಕ್ಕಿಬಿಟ್ಟಿದ್ದು! ಮುಕುಂದಯ್ಯ ಆ ದೈತ್ಯಗಾತ್ರದ ಬಲಿಷ್ಠ ಪ್ರಾಣಿಯ ಸ್ನೇಹಾಘಾತಕ್ಕೆ ಸ್ವಲ್ಪ ತತ್ತರಿಸಿಯೆ ನಿಲ್ಲಬೇಕಾಯಿತು.

"ಥೂ! ನಿನ್ನ ಹಾಳಾಗ!" ಎಂದು ಎರಡು ಕೈಯಿಂದಲೂ ಅದರ ಕುತ್ತಿಗೆ ಹಿಡಿದು ದಬ್ಬಿ ತಳ್ಳಿದಾಗ ಅದು ಹಿಂದಕ್ಕೆ ಬೀಳುವಂತಾಗಿ ನಿಂತು ಅವನ ಮೋರೆಯನ್ನೇ ನೋಡುತ್ತಾ ರಭಸದಿಂದ ಬಾಲವಳ್ಳಾಡಿಸತೊಡಗಿತು. ಮುಕುಂದಯ್ಯನ ಎದೆಯ ಮೇಲೆ ಬಟ್ಟೆ ತುಂಬಾ ನಾಯಿಯ ಹೆಜ್ಜೆಯ ಕೆಸರುಮುದ್ರೆ ಒತ್ತಿತ್ತು. ನಾಯಿ ನೆಕ್ಕಿದ್ದ ಬಾಯನ್ನು ಒರಸಿಕೊಂಡು, ಎದೆಯ ಮೇಲಿದ್ದ ಹೆಜ್ಜೆಯ ಕೆಸರನ್ನು ತಿಕ್ಕಿದನು. ಅದು ಮತ್ತಷ್ಟು ಹಸರಿಸಿತಷ್ಟೆ! ಥಕ್ಕನೆ ನೋಡಿಕೊಳ್ಳುತ್ತಾನೆ: ತನ್ನ ಕೈಯಲ್ಲಿ ರಕ್ತದ ಕಲೆ! ಮತ್ತೆ ನೋಡಿದರೆ, ನಾಯಿಯ ಮೂತಿಯಲ್ಲೂ ರಕ್ತ ಹಿಡಿದಿದೆ. ಕತ್ತಲೆ ಹೆಪ್ಪುಗಟ್ಟಿ ಕಗ್ಗಲ್ಲಾದ ಇರುಳನ್ನೆ ಕಡೆದು ಮಾಡಿದಂತೆ ಕರ್ರಗೆ ನಿಂತಿದ್ದ ನಾಯಿಯ ಬಾಯಿಯ ನಸು ಬಿಳುಪಾದ ಜಾಗದಲ್ಲಿ ಪ್ರಾರಂಭವಾದ ನೆತ್ತರಿನ ಕಲೆಗಳು, ಕಣ್ಣಿಟ್ಟು ನೋಡಿದಾಗ, ಅದರ ಕಿವಿಯ ಹತ್ತಿರವೂ ಕುತ್ತಿಗೆಯ ಮೇಲೆಯೂ ಕಾಣಿಸಿಕೊಂಡುವು. ಹುಲಿಯ ಬರ್ಕವನ್ನೊ ಮೊಲವನ್ನೊ ಕಬ್ಬೆಕ್ಕನ್ನೊ ಮುಂಗಿಸಿಯನ್ನೊ ಬೇಟೆಯಾಡಿ ಹಿಡಿದು ತಿಂದಿರಬೇಕೆಂದು ಮುಕುಂದಯ್ಯ ಊಹಿಸಿ, ಮೆಚ್ಚಿಗೆಯಿಂದ ಅದರ ತಲೆ ಸವರಿದನು. ಪಾಪ! ಅವನಿಗೆ ಹೇಗೆ ಗೊತ್ತಾಗಬೇಕು, ಕೋಣೂರು ಕಾಡಿನಲ್ಲಿ ತಾನು ಒಡ್ಡಿದ್ದ ಉರುಳಿಗೆ ಸಿಕ್ಕಿಬಿದ್ದ ಚಿಟ್ಟುಗೋಳಿಯನ್ನು ದೂರದೂರಿನ ಸಿಂಬಾವಿಯ ನಾಯಿ ಅಷ್ಟು ಹೊತ್ತಾರೆಮುಂಚೆ ಬಂದು ತಿನ್ನುತ್ತದೆ ಎಂದು?

ಮುಕುಂದಯ್ಯನಿಗೂ ಹುಲಿಯನಿಗೂ ಇದ್ದ ಪರಸ್ಪರ ಪರಿಚಯ ಇಂದು ನಿನ್ನೆಯದಾಗಿರಲಿಲ್ಲ. ಹುಲಿಯ ತನ್ನ ಮರಿಯತನವನ್ನು ದಾಟಿ ಬೇಟೆಗಾರರೊಡನೆ ಕಾಡಿಗೆ ಹೋಗಲು ಪ್ರಾರಂಭ ಮಾಡಿದಾಗಲೆ ಅದರ ಶಕ್ತಿ, ಯುಕ್ತಿ, ಧೈರ್ಯ, ವೇಗ, ಬುದ್ಧಿವಂತಿಕೆ ಇವುಗಳ ವಿಚಾರವಾಗಿ ಕಥೆ ಕಥೆಗಳೆ ಹಳ್ಳಿಯಿಂದ ಹಳ್ಳಿಗೆ ಹಬ್ಬಿಬಿಟ್ಟಿತ್ತು. ಸಿಂಬಾವಿ ಗುತ್ತಿ ಸ್ವತಃ ಹಳು ನುಗ್ಗಿ ಭಾಗವಹಿಸಿದ್ದ ದೊಡ್ಡ ಬೇಟೆಗಳಲ್ಲಿ ಬಿಲ್ಲಿಗೆ ನಿಂತಿದ್ದ ಮುಕುಂದಯ್ಯನಿಗೆ ಹುಲಿಯನ ಹೆಚ್ಚುಗಾರಿಕೆಯ ಅನುಭವ ಪ್ರತ್ಯಕ್ಷವಾಗಿಯೆ ದೊರಕಿತ್ತು. ಒಮ್ಮೆ ಒಂದು ಒಂಟಿಗ ಹಂದಿಯನ್ನು ಕಾಡಿನಲ್ಲಿ ಅತ್ತ ಇತ್ತ ಹೋಗದಂತೆ ತಡೆದೂ ತಡೆದೂ ಅಟ್ಟಿಅಟ್ಟಿ ತಾನು ನಿಂತಿದ್ದ ಬಿಲ್ಲಿಗೆ ಸರಿಯಾಗಿ ಸೋವಿ ಎಬ್ಬಿದುದರಿಂದಲೆ ತಾನು ಅದಕ್ಕೊಂದು ಗುಂಡು ಹೊಡೆಯಲು ಸಾಧ್ಯವಾಗಿತ್ತು. ಆ ಒಂಟಿಗನ ಹಿಂಗಾಲ ತೊಡೆಗೆ ಗುಂಡು ಬಿದ್ದು ಗಾಯಗೊಂಡರೂ ಅದು ಮುನ್ನುಗ್ಗಿ ಮುಂದಿನ ಕಾಡಿಗೆ ತಪ್ಪಿಸಿಕೊಂಡು ಹೋಗುತ್ತಿದ್ದುದನ್ನು ಅಡ್ಡಗಟ್ಟಿ ಹಸಲವರು ಮಿಣಿಬಲೆ ಒಡ್ಡಿದ್ದ ಕಂಡಿಗೇ ಅದನ್ನು ಎಬ್ಬಿತ್ತು. ಆ ದಡಿಗಬಲೆಗೆ ಸಿಕ್ಕಿದ್ದ ಒಂಟಿಗನನ್ನು ಭರ್ಜಿಯವರು ಓಡಿಬಂದು ತಿವಿಯುವ ಮುನ್ನವೆ ಹುಲಿಯ ಅದರ ಮೇಲೆ ಬಿದ್ದು ಕೋರೆಯಿಂದ ತಿವಿಸಿಕೊಂಡು ಹಲವು ದಿನಗಳವರೆಗೆ, ಸಿಂಬಾವಿಗೆ ಹಿಂತಿರುಗಲು ಸಾಧ್ಯವಾಗದೆ, ಕೋಣೂರಿನಲ್ಲಿಯೆ ಮುಕುಂದಯ್ಯನ ಶುಶ್ರೂಷೆಗೆ ಋಣಿಯಾಗಿತ್ತು. ಗಾಯವೆಲ್ಲ ಮಾಯ್ದಮೇಲೆ ಗುತ್ತಿ ಅದನ್ನು ಕರೆದುಕೊಂಡು ಹೋಗಲು ಬಂದಾಗ ಅದು ಅವನ ಮೇಲೆ ತೋರಿದ

ಅಕ್ಕರೆ ವಿಶ್ವಾಸ ಸ್ವಾಮಿಭಕ್ತಿಯನ್ನು ಕಂಡು ಎಲ್ಲರೂ ಬೆರಗಾಗಿದ್ದರು. ಆದರೆ ಮುಕುಂದಯ್ಯನಿಗೆ ಹುಲಿಯನ ಮೇಲೆ ಭಾರಿ ಮಮತೆ ಹುಟ್ಟಿಬಿಟ್ಟಿದ್ದರಿಂದ ಅದನ್ನು ತನಗೇ ಕೊಟ್ಟು, ಕೋಣೂರಿನಲ್ಲಿಯೆ ಬಿಟ್ಟ ಹೋಗಬೇಕೆಂದು ಗುತ್ತಿಯನ್ನು ಪರಿಪರಿಯಾಗಿ ಪೀಡಿಸಿದನು. ಹೊಲೆಯ ತುಂಬ ಇಕ್ಕಟ್ಟಿಗೆ ಸಿಕ್ಕಿಕೊಂಡನು. ಮೇಲುಜಾತಿಯವರೂ ಒಡೆಯರೂ ದೊಡ್ಡ ಮನುಷ್ಯರೂ ಆದ ಕೋಣೂರು ರಂಗಪ್ಪಗೌಡರ ತಮ್ಮ ಹುಡುಗನಾಗಿದ್ದರೇನಂತೆ? ಅವನ ಮಾತಿಗೆ ಯಃಕಶ್ಚಿತ ಹೊಲೆಯ ಬೆಲೆ ಕೊಡದಿರುವುದಕ್ಕಾಗುತ್ತದೆಯೆ? ಗೌರವದಿಂದ ನಡೆದುಕೊಳ್ಳದಿರಲು ಸಾಧ್ಯವೆ? ಅದರಲ್ಲಿಯೂ ಮುಕುಂದಯ್ಯನಂತಹ ಸರಳನ್ನೂ ಸ್ನೇಹಪರನೂ ಆದ ವ್ಯಕ್ತಿಯ ವಿಚಾರದಲ್ಲಿ? ಆತನೇನು ಆಜ್ಞೆ ಮಾಡುತ್ತಿಲ್ಲ; ಬೇಡುತ್ತಿದ್ದಾನೆ? ಹೊಲೆಯನ ಮುಂದೆ ಅಂಗಲಾಚುತ್ತಿದ್ದಾನೆ! ಒಂದು ಕರಿಯ ನಾಯಿಗಾಗಿ!

ಗುತ್ತಿ ಕಣ್ಣೀರು ತುಂಬಿ ಗದ್ಗದಸ್ವರದಿಂದ ಒಪ್ಪಿಕೊಳ್ಳಬೇಕಾಯಿತು. ಅದು ನಾಯಿಗೆ ಹೇಗೆ ಗೊತ್ತಾಗಬೇಕು? ಕಂಬಕ್ಕೆ ಕಟ್ಟಿದ್ದ ಹುಲಿಯನನ್ನು ತಲೆ ಸವರಿ ಮುದ್ದಾಡಿ ಗುತ್ತಿ ಸಿಂಬಾವಿಯ ಕಡೆಗೆ ಹೊರಟನು, ಮುಕುಂದಯ್ಯ ಅವನು ಬೇಡವೆಂದರೂ ಕೊಟ್ಟಿದ್ದ ಒಂದು ಹೊಸ ಹೆಗ್ಗಂಬಳಿ, ಒಂದು ಹಳೆಯದಾದರೂ ಚೆನ್ನಾಗಿದ್ದ ಕಸೆ ಅಂಗಿ, ಒಂದಷ್ಟು ಎಲೆ ಅಡಿಕೆ ಹೊಗೆಸೊಪ್ಪು, ಒಂದು ರೂಪಾಯಿ-ಇವುಗಳನ್ನು ಹೊತ್ತು.

ಒಂದು ಮೈಲಿ ಹೋಗುವುದರೊಳಗೆ ಗುತ್ತಿಗೆ ಮುಂದಕ್ಕೆ ಅಡಿಯಿಡಲಾಗಲಿಲ್ಲ. ಏನೋ ಸುಸ್ತು! ಏನೋ ಸಂಕಟ! ಯಾರನ್ನೋ ಅತ್ಯಂತ ಪ್ರಿಯತಮರನ್ನು ಅಗಲಿದಂತೆ ಎದೆ ಬೇಗೆ! ಹಾದಿಯ ಪಕ್ಕದಲ್ಲಿ ಉಸ್ಸೆಂದು ಕುಳಿತು, ಕಾಡಿನ ನಡುವೆ ಯಾರೂ ನೋಡುವುದಿಲ್ಲವೆಂದು ಧೈರ್ಯ ಮಾಡಿಕೊಂಡು, ಬಿಕ್ಕಿ ಬಿಕ್ಕಿ ಅತ್ತುಬಿಟ್ಟನು.

ಮುಕುಂದಯ್ಯನಿಗೆ ಯಾರೋ ಹೇಳಿದ್ದರು, ನೆಲ ಸುಟ್ಟು, ಆ ಸುಟ್ಟ ಸ್ಥಳದಲ್ಲಿಯೆ ಬೆಲ್ಲ ಬೆರಸಿದ ಅನ್ನ ಹಾಕಿ ತಿನ್ನುವಂತೆ ಮಾಡಿದರೆ, ಎಂತಹ ನಾಯಿಯಾದರೂ ತನ್ನ ಹಳೆಯ ಒಲವನ್ನೆಲ್ಲಾ ಮರೆತುಬಿಡುತ್ತದೆ, ಮನೆ ಬಿಟ್ಟು ಹೋಗುವುದಿಲ್ಲ ಎಂದು. ಗುತ್ತಿ ಒಪ್ಪಿ, ಹುಲಿಯನನ್ನು ತನಗೊಪ್ಪಿಸಿ ಹೋದ ಮೇಲೆ, ಕಟ್ಟಿದ್ದ ಸರಪಳಿಯನ್ನು ತುಯ್ದು ಜಗ್ಗಿಸಿ ಎಳೆದು, ಗುತ್ತಿ ಹೋದಕಡೆ ಮುಖಮಾಡಿ ರೋದಿಸುವಂತೆ ಊಳಿಡುತ್ತಿದ್ದ ಹುಲಿಯನನ್ನು ನಾನಾ ರೀತಿಯಿಂದ ಸಮಾಧಾನಪಡಿಸಿ, ಕೊನೆಗೆ ನೆಲ ಸುಟ್ಟು ಬೆಲ್ಲದನ್ನ ಹಾಕುವ ಉಪಾಯವನ್ನು ಯೋಚಿಸಿದನು. ಅಷ್ಟರಲ್ಲಿ ನೋಡುತ್ತಾನೆ: ಗುತ್ತಿ! ಮತ್ತೆ ಹಿಂತಿರುಗಿ ಬಂದಿದ್ದಾನೆ! 'ಯಾಕೆ?' ಎಂದು ಕೇಳಿದರೆ ಮಾತಾಡದೆ, ಉತ್ತರರುಪವಾಗಿ, ಮುಕುಂದಯ್ಯ ಕೊಟ್ಟಿದ್ದ ಸಾಮಾನುಗಳನ್ನೆಲ್ಲ, ರೂಪಾಯಿಯೂ ಸೇರಿ, ಹುಲಿಯನ ಮುಂದೆ ಇಟ್ಟು ಕೈಮುಗಿದು ನಿಂತುಬಿಟ್ಟನು. ರಂಗಪ್ಪಗೌಡರಾದಿಯಾಗಿ ಐಗಳೂ ಮನೆಯವರೂ ಎಲ್ಲರೂ ಮನಕರಗಿ ನಾಯಿಯನ್ನು ಗುತ್ತಿಗೆ ಕೊಟ್ಟು ಬಿಡುವಂತೆ ಮುಕುಂದಯ್ಯನಿಗೆ ಹೇಳಿದರು. ಆದರೆ ಮುಕುಂದಯ್ಯನಿಗೆ ಮನಸ್ಸಿಲ್ಲ. ಅವನ ಕಣ್ಣು ತೇವವಾಗತೊಡಗಿತ್ತು. ಅದನ್ನು ಗಮನಿಸಿದ ಗುತ್ತಿ ಒಡೆಯರ ದೈನ್ಯಕ್ಕೆ ಮನಸೋತು, 'ನನಗೆ ನಾಯಿಯನ್ನು ಕೊಡದಿದ್ದರೂ ಚಿಂತೆಯಿಲ್ಲ, ಅದನ್ನು ಮಾರಿಬಿಟ್ಟೆ ಎಂದು ನನ್ನ ಮನಸ್ಸಿಗೆ ಇಸ್ಸಿ ಆಗಬಾರದು; ಆದ್ದರಿಂದ ನಿಮ್ಮ ಕಾಲಿಗೆ ಬಿದ್ದು ಬೇಡಿಕೊಳ್ಳುತ್ತೇನೆ; ಈ ಸಾಮಾನನ್ನೆಲ್ಲ ಹಿಂದಕ್ಕೆ ತೆಗೆದುಕೊಳ್ಳಿ!' ಎಂದು ತಟಕ್ಕನೆ ಹಿಂದಿರುಗಿ ಅಲ್ಲಿ ನಿಲ್ಲದೆ ಹುಲಿಯನ ಊಳನ್ನೂ ಗೋಳನ್ನೂ ಇನಿತೂ ಗಮನಿಸದವನಂತೆ ನಡೆದೇ ಬಿಟ್ಟನು.

ಗುತ್ತಿ ಹೋದ ಮೇಲೆ ಮುಕುಂದಯ್ಯನ ಮನಸ್ಸಿಗೆ ಸಮಾಧಾನವಾಯಿತು. ನಾಯಿ ಇನ್ನು ಶಾಶ್ವತವಾಗಿ ತನ್ನದಾಯಿತು ಎಂದು. ಆದರೆ ತುಸು ಹೊತ್ತಿನಲ್ಲಿಯೆ ನಾಯಿ ಮೌನವಾಗಿ ಚಿಂತಾಕ್ರಾಂತವಾಗಿ ದುಃಖಿಸುವಂತೆ,

ಗುತ್ತಿ ಹೋದಕಡೆಯೆ ಕಣ್ಣಾಗಿ ಕುಳಿತಿದ್ದುದನ್ನು ಕಂಡಾಗ, ಹೊಲೆಯನ ವರ್ತನೆ ತನ್ನ ವರ್ತನೆಗಿಂತಲೂ ಉದಾತ್ತವಾಗಿ ತೋಡತೊಡಗಿ, ಮನಸ್ಸು ಚುಚ್ಚದಂತಾಯಿತು. ಒಲಿದ ಹೃದಯಗಳನ್ನು ಬಲಾತ್ಕಾರವಾಗಿ ಬೇರ್ಪಡಿಸುವಷ್ಟು ವ್ಯಥೆಯಾಯಿತು. ಸರಪಳಿ ಬಿಚ್ಚಿ ಬಿಟ್ಟುಬಿಡಲು ಮನಸ್ಸಾಯಿತು. ಗುತ್ತಿಯ ಹಿಂದೆ ಹೋದರೆ ಹೋಗಲಿ ಎಂದುಕೊಂಡನು. ಆದರೆ ಅವನ ಮೋಹ ಇನ್ನೂ ಪೂರ್ತಿಯಾಗಿ ವಿವೇಕವಶವಾಗಿರಲಿಲ್ಲ. ನೆಲ ಸುಟ್ಟು ಬೆಲ್ಲ ಹಾಕಿದರೆ ಎಲ್ಲ ಮರೆತುಹೋಗಿ ಸೇರಿದ ಮನೆಯನ್ನು ಬಿಡುವುದಿಲ್ಲವಂತೆ; ಅದನ್ನೂ ಮಾಡಿ ನೋಡುತ್ತೇನೆ. ಆಮೇಲೆ ತಾನಾಗಿ ನಿಂತರೆ ನಿಲ್ಲಲಿ, ಹೋದರೆ ಹೋಗಲಿ ಎಂದು ನಿಶ್ಚಯಿಸಿ, ಒಂದು ಕಡೆ ಬಿಳಿಹುಲ್ಲು ಹಾಕಿ, ಬೆಂಕಿ ಹೊತ್ತಿಸಿ, ಆ ಬಿಸಿಜಾಗದಲ್ಲಿ ಬೆಲ್ಲದ ಜೋನಿಯನ್ನು ಇಟ್ಟು, ನಾಯಿಯನ್ನು ಕಂಬದಿಂದ ಬಿಚ್ಚಿ ಅದರ ಬಳಿಗೆ ಕಟ್ಟಿದನು. ಆದರೆ ನಾಯಿ ಅದನ್ನು  ಮೂಸಿನೋಡಿತೇ ಹೊರತು ನೆಕ್ಕಲಿಲ್ಲ. ಏನಾಶ್ಚರ್ಯ! ಅಂತಹ ಸೊಗಸಾದ ಬೆಲ್ಲ! ಏನು ಸುವಾಸನೆ ಬರುತ್ತಿದೆ, ತನ್ನ ಮೂಗಿಗೇ? ತನಗೇ ತಿಂದು ಬಿಡೋಣ ಎನ್ನಿಸುತ್ತಿದೆ! ಆದರೆ ನಾಯಿ ಮುಟ್ಟಲಿಲ್ಲ! ಮುಕುಂದಯ್ಯನಿಗೆ ಮತ್ತೆ ಆಶಾಭಂಗವಾಯಿತು.

ಸ್ವಲ್ಪ ಹೊತ್ತಾದ ಮೇಲೆ, ಹಸಿವೆಯಾಗಿ ತಿಂದರೂ ತಿನ್ನಬಹುದು ಎಂದು ಕೊಂಚ ಅನ್ನವನ್ನೂ ತಂದು ಆ ಬೆಲ್ಲಕ್ಕೆ ಕಲಸಿದನು. ಆಗಲೂ ನಾಯಿ ಸುಮ್ಮನೆ ಕೂತಿತ್ತು. ನೊಣಗಳು ಮಾತ್ರ ಬೆಲ್ಲದನ್ನಕ್ಕೆ ಗೊಂಯ್ಯೆಂದು ಮುತ್ತಿದ್ದುವು!

ಇನ್ನೂ ಸ್ವಲ್ಪ ಹೊತ್ತು ಬಿಟ್ಟು ಬಂದು ನೋಡಿದಾಗ ಬೆಲ್ಲ ಅಲ್ಲಿರಲಿಲ್ಲ. ಹುಲಿಯನೇ ತಿಂದಿತೋ ಅಥವಾ ಇನ್ನಾವುದಾದರೂ ತಮ್ಮ ನಾಯಿಗಳಲ್ಲಿ ಒಂದು ಅದನ್ನು ಕಬಳಿಸಿತೋ ಎಂದು ಸಂದೇಯವಾಯಿತು, ಮುಕುಂದಯ್ಯನಿಗೆ. 'ಇನ್ನಾವ ನಾಯಿಗೆ ಹುಲಿಯನ ಹತ್ತಿರ ಹೋಗಲು ಎದೆ ಬಂದೀತು? ಹುಲಿಯನ್ನೇ ತಿಂದಿರಬೇಕು' ಎಂದು ನಿಶ್ಚಯಿಸಿ, ಅವನಿಗೆ ಹರ್ಷವಾಗಿ ಹುಲಿಯನ ತಲೆ ನೇವರಿಸಿ ಮುದ್ದು ಮಾಡಿದನು. ಅದೂ ಅವನ ಕಡೆ ನೋಡಿ ಕೃತಜ್ಞತೆಗೆ ಎಂಬಂತೆ ಬಾಲವಲ್ಲಾಡಿಸಿತು. "ಗೆದ್ದೆ!" ಎಂದುಕೊಂಡನು ಮುಕುಂದಯ್ಯ. ತನ್ನ ಧೈರ್ಯವನ್ನು ಒರೆಗೆ ಹಚ್ಚಲು ಸಿದ್ಧನಾಗಿ, ಹುಲಿಯನ ಕೊರಳು ಬಿಚ್ಚಿದನು. ನಾಯಿ ಸಂತೋಷಕ್ಕೆ ಅವನ ಮೈಮೇಲೆ ನೆಗೆದಾಡಿತು. ಅಲ್ಲಿಯೆ ಸುತ್ತಮುತ್ತ ಓಡಾಡಿತು. ಒಂದು ಸಾರಿ ಮನೆಯ ಒಳಜಗಲಿಗೂ ಹೋಗಿಬಂತು. ಮುಕುಂದಯ್ಯನಿಗೆ ಖುಷಿಯೋ ಖುಷಿ! ಅಂತೂ ನೆಲ ಸುಟ್ಟ ಬೆಲ್ಲದನ್ನ ಹಾಕಿ ಮಾಡಿದ 'ಮುಷ್ಟ' ಸುಳ್ಳಾಗಲಿಲ್ಲ!.... ಅರೆ! ಇದೇನು ನಾಯಿ ಓಡುತ್ತಿದೆ!

"ಹುಲಿಯಾ! ಏ ಹುಲಿಯಾ! ಬಾ ಬಾ ಹುಲಿಯಾ! ಹುಲಿಯಾ! ಹುಲಿಯಾ!.... ಥೂ ಹೊಲೆಯ!" ಎಂದುಬಿಟ್ಟನು ತಡೆಯಲಾರದೆ. ಮುಕುಂದಯ್ಯ ನೋಡುತ್ತಿದ್ದಂತೆಯೆ, ಕಣ್ಣುಬಿಟ್ಟು ಮುಚ್ಚುವುದರಲ್ಲಿ ಅವನ ಕರೆಯನ್ನು ಇನಿತೂ ಲೆಕ್ಕಿಸದೆ ನಾಯಿ ಗುತ್ತಿ ಹೋದ ಕಡೆ ಧಾವಿಸಿ ಕಣ್ಮರೆಯಾಗಿದ್ದಿತು:....

ಗುತ್ತಿ ಖಿನ್ನಮನನಾಗಿ, ಲಕ್ಕುಂದದ ಹತ್ತಿರ ಹಳ್ಳ ದಾಟುತ್ತಿದ್ದಾಗ, ಹಿಂದಕ್ಕೆ ಸದ್ದಾಗಿ, ತಿರುಗಿ ನೋಡುವುದರಲ್ಲಿಯೆ ಹುಲಿಯ ಅವನ ಮೈಮೇಲೆ ನೆಗೆದಾಡುತ್ತಿತ್ತಂತೆ!!

* * *

ಇಂತಹ ಹಲವಾರು ನೆನಪುಗಳಿಂದ ಭಾವಕೋಶ ತುಂಬಿದ್ದ ಮುಕುಂದಯ್ಯ ಕಾಡಿನಿಂದ ತಮ್ಮ ಮನೆಯ ಕಡೆಗೆ ಹೊರಟು, ಹಳೆಮನೆಯ ಕಡೆಗೆ ಹೋಗುತ್ತಿದ್ದ ಕಾಲುದಾರಿಯನ್ನು ಸೇರಿ, ಅಕ್ಕಪಕ್ಕದ ಮರಗಳಲ್ಲಿ ಕಂಡು ಬಂದ ಕಾಜಾಣ, ಮರಕುಟಿಗ, ಮಂಗಟ್ಟೆ ಮೊದಲಾದ ಕಾಡಿನಲ್ಲಿಯೆ ವಿಶೇಷವಾಗಿ ವಾಸ ಮಾಡುವ, ತಾವು ತಿನ್ನದ ಹಕ್ಕಿಗಳಿಗೆ ವಿನೋದಕ್ಕೆಂಬಂತೆ ಚಿಟ್ಟುಬಿಲ್ಲಿನಿಂದ ಕಲ್ಲು ಹೊಡೆಯುತ್ತಾ ನಡೆಯುತ್ತಿರಲು, ಹಳುವಿನಲ್ಲಿ ಕಣ್ಮರೆಯಾಗಿ ಎತ್ತೆತ್ತಲೋ ಹೋಗುತ್ತಿದ್ದ ನಾಯಿ ಮತ್ತೆ ತನಗೆ ಅಭಿಮುಖವಾಗಿ ಓಡಿಬರುತ್ತಿದ್ದುದು ಕಾಣಿಸಿತು. ಹೊಗೆಯಿದ್ದಲ್ಲಿ ಬೆಂಕಿಯಿರುವಂತೆ ಹುಲಿಯ ಕಂಡಲ್ಲಿ ಗುತ್ತಿಯೂ ಇರಬೇಕೆಂದು ಮುಕುಂದಯ್ಯ ಮೊದಲೇ ಊಹಿಸಿದ್ದನು. ಹಾಗೆಯೇ ನಿರೀಕ್ಷಿಸಿ ನೋಡುತ್ತಾನೆ: ನಾಯಿಗೆ ಸ್ವಲ್ಪದೂರದಲ್ಲಿ ಹಿಂದೆ ಗುತ್ತಿಯ ಸವಾರಿ ತನಗೆ ಅಭಿಮುಖವಾಗಿ ಬರುತ್ತಿದ್ದುದು ಕಾಣಿಸಿತು! ಮುಕುಂದಯ್ಯನಿಗೆ ಗುತ್ತಿಯನ್ನು ಕಂಡು, ಮೊದಲು ಹುಲಿಯನನ್ನು ಕಂಡಷ್ಟೆ ಸಂತೋಷವಾಯಿತು; ಅಂತಹ ಅಭೇದ ಸಂಬಂಧವಿತ್ತು, ಅವನ ಮನಸ್ಸಿನಲ್ಲಿ, ನಾಯಿಗೂ ಹೊಲೆಯನಿಗೂ!

"ಏನ್ರಯ್ಯಾ ಚಿಟ್ಟಿಲ್ಲು ಹಿಡ್ಕುಂಡು ಷಿಕಾರಿಗೆ ಹೊಲ್ಟ್ ಬಿಟ್ಟೀರಲ್ಲಾ? ಕೋವಿನಾದ್ರೂ ತರಬೈದಿತ್ತಲ್ಲಾ!" ಎಂದು ತನ್ನ ಕೆಂಬರು ಬಣ್ಣದ ಹಲ್ಲೆಲ್ಲ ಕಾಣುವಂತೆ ವಿಶಾಲವಾಗಿ ನಗುತ್ತಾ ಕೇಳಿದನು.

ಅಂತಹ ಖಚಿತ ಉತ್ತರಾಪೇಕ್ಷೆಯಿಲ್ಲದ ಗುತ್ತಿಯ ಲೋಕಾಭಿರಾಮ ಪ್ರಶ್ನೆಗೆ ಉತ್ತರಕೊಡುವ ಗೋಜಿಗೆ ಹೋಗದೆ ಮುಕುಂದಯ್ಯನೂ ಸ್ವಲ್ಪ ಲೋಕಾಭಿರಾಮವಾಗಿಯೆ "ಏನು? ಎತ್ತಮುಖ ಹೊರಡ್ತು ಗುತ್ತಿ ಸವಾರಿ?" ಎಂದು ಪ್ರತಿಪ್ರಶ್ನೆ ಹಾಕಿದನು, ಸ್ವಲ್ಪ ಪರಿಹಾಸ್ಯಧ್ವನಿಯಿಂದಲೆ.

"ಈಲ್ಲೇ ಹಳೇಮನೀಗೆ ಹೋಗ್ತೀನಿ...."

"ಸಿಂಬಾವಿಯಿಂದ ಬಂದೆಯೇನೋ?"

ಗುತ್ತಿ ತಲೆಯಾಡಿಸಲು ಮುಕುಂದಯ್ಯ "ಏನೋ? ನಿಮ್ಮ ಹೆಗ್ಡೇರ ಎರಡನೆ ಮದುವೆ ಏನಾಯ್ತೋ? ಹಳೇಮನೆ ಹೆಣ್ಣನ್ನ ಕೇಳ್ತಿದ್ರಂತೆ?"

"ಮೊದ್ಲು ಮದೇ ಆದ ಹಳೇಮನೆ ಹೆಣ್ಣು ಬಿಟ್ಟರಷ್ಟೆ?"

"ಹಾಂಗಾದ್ರೆ ಮದುವೆ ನಿಂತಂತೇ ಅನ್ನು"

"ಅಯ್ಯೋ ನಮ್ಮ ಹೆಗ್ಡೇರು ಬಿಟ್ಟಾರಾ?"

"ಬಿಡದೆ ಮತ್ತೇನು ಮಾಡ್ತಾರೋ? ಏನು ಹಿಡಿದು ಎಳಕೊಂಡು ಹೋಗಿ ಮದುವೆ ಆಗ್ತಾರೇನೋ?"

"ಆಗ್ಲೆ ಬ್ಯಾರೆಕಡೆ ಇಚಾರ್ಸಿ ಆಗಿದೆಯಂತೆ!"

“ಅವರಿಗೆ ಯಾರೋ ಹೆಣ್ಣು ಕೊಡೋರು? ಕುಡ್ಡೊ ಕುಡ್ಡೊ ಕಾಯಿಲೆ ಬೇರೆ ಹಿಡಿದಿದೆಯಂತೆ!”

“ಏನ್ರಯ್ಯಾ ಹೆಣ್ಣು ಕೊಡೋರಿಗೇನು ಬರಗಾಲ? ದುಡ್ಡೊಂದಿದ್ರೆ? ಕೈತುಂಬಾ ತೆರಾ ಕೊಟ್ರೆ ದಮ್ಮಯ್ಯ ಅಂತ ಕೊಡ್ತಾರೆ?....!! ಅವರೂ ಇವರೂ ಅಂತ ದೂರ ಯಾಕೆ ಹೋಗ್ಬೇಕು? ಹೂವಳ್ಳಿ ಹೆಣ್ಣನ್ನೇ ಇಚಾರಿಸ್ತಾರಂತೆ-ಅಂತಾ ವರ್ತ್ಮಾನ”.... ಮನ್ನೆ ನನ್ನವ್ವ ಹಿಟ್ಟು ಬೀಸಾಕೆ ಹೋಗಿದ್ಲಂತೆ ಮನೆಗೆ. ಹಳೆಮನೆ ಅಮ್ಮನೂ ನಮ್ಮ ಹೆಗ್ಡೇರ ತಂಗೀನೂ ಜಗಳ ಆಡ್ತಾ ಆಡ್ತಾ ಏನೇನೋ ಅಂದುಕೊಂಡರಂತೆ ಒಬ್ಬರಿಗೊಬ್ಬರು. ನಮ್ಮ ಕೇರೀಲೂ ಹಂಗೆ ಬೈಕೊಳ್ಳೋದಿಲ್ಲಂತೆ! ಹಿತ್ತಲುಕಡೆ ಚೌಕೀಲಿ ಹಿಟ್ಟು ಬೀಸ್ತಾ ಕೂತಿತ್ತಂತೆ ನನ್ನವ್ವ. ಅಡಿಗೆ ಮನೇಲಿ ಸುರುವಾಯಿತಂತೆ.... ಹಳೇಮನೆ ಜಟ್ಟಮ್ಮ ಲಕ್ಕಮ್ಮಗೆ “ನಿನ್ನ ಕೊಡ್ತಾರಲ್ಲಾ ಹಂದಿ ಒಡ್ಡಿಗೆ!” ಅಂದರಂತೆ. ಅದಕ್ಕೆ ಲಕ್ಕಮ್ಮ 'ಬರ್ತಾಳಲ್ಲಾ ನಿನ್ನ ಸವ್ತಿ ಹಂದಿ ಒಡ್ಡಿಯಿಂದ್ಲೆ!' ಅಂದರಂತೆ. ಅದಕ್ಕಿವ್ರು 'ನನ್ನ ಹೆಣ ಬೀಳ್ಬೇಕು ಆ ತಾಟಗಿತ್ತಿ ಈ ಮನೆಗೆ ಕಾಲಿಡಬೇಕಾದ್ರೆ. ನಾನು ಮಾಡಾದ್ನೆಲ್ಲಾ ಮಾಡೀನಲ್ಲ: ಇನ್ನೆಲ್ಲಿ ಬರ್ತಾಳೆ ಅವ್ಳು?' ಅಂದರಂತೆ. 'ಬರದಿದ್ರೇ.... ಈ ಬಂಜೆಮುಂಡೇನ ಕಟ್ಟಿಕೊಂಡೂ.... ಗುಂಡಿಹಾರ್ತಾನೇನು ಅಣ್ಣಯ್ಯ?' ಅಂದೇಬಿಟ್ರಂತೆ ನಮ್ಮ ಹೆಗ್ಡೇರ ತಂಗಿ ಲಕ್ಕಮ್ಮೋರು! 'ನಿನ್ನ ಮಿಂಡನ ತಂಗಿ ಅಲ್ಲದಿದ್ರೆ ಇನ್ಯಾರೂ ಇಲ್ಲೇನು-ಹೆಣ್ಣು? ನಿನ್ನ ಮಂಜಿ ಏನು ರತಿ ಅಂತಾ ಮಾಡೀಯಾ? ನಿನ್ನ ಗಂಡ ಅಗಾಂವ್ನ ಕರೀಹಂದಿ ಮುಸುಡಿಗೂ ಅವನ ತಂಗಿ ಅವಳ ಮುಸುಡಿಗೂ ಏನೂ ಇಲ್ಲ ಯತ್ಯಾಸ? ಆ ಹೂವಳ್ಳಿ ಹೆಣ್ಣು, ಚೆನ್ನದಂಥಾ ಹೆಣ್ಣು, ಚೆನ್ನಮ್ಮನೇ ತರ್ತೀನಿ?” ಅಂದರಂತೆ ಹಳೇಮನೆ ಅಮ್ಮ. ಅದಕ್ಕೆ ಲಕ್ಕಮ್ಮ 'ತಂದ್ಯಾ ಆ ದದ್ದುಹಿಡುಕ ಕುನ್ನೀನೆ! ಯಾರು ಬ್ಯಾಡ ಅಂತಾರೆ?' ಅಂದ್ರಂತೆ. 'ಥೂ ನಿನ್ನ ಬಾಯಲ್ಲಿ ಹುಳು ಬಿದ್ದುಹೋಗ! ಅವಳು ಹೇತು ಬಂದಲ್ಲಿ ನಿಂಗೆ ಕೂತು ಬರಾ ಯೋಗ್ತೇ ಇದ್ಯೇನೆ?' ಅಂತ ಏನೇನೋ ಬಯ್ದು, ಉಗ್ದು ಬಿಟ್ರಂತೆ ಜಟ್ಟಮ್ಮ. ಜಟಾಪಟೀನೆ ಸುರುವಾಯ್ತಂತೆ. ಕಡೀಗೆ, ಅಡಿಗೆ ಮಾಡಾಕೆ ಇದಾರಲ್ಲ ಆ ಮರಾಟೆ ಮಂಜಯ್ಯ?-ಅವರು ಕೈಕೈ ಮುಗ್ದು, ನಡೂ ಬಂದು, ಜಗಳ ಬಿಡಿಸಿದ್ರಂತೆ....”

ಗುತ್ತಿ ಇನ್ನೂ ಹೇಳಬೇಕಾದ ಸ್ವಾರಸ್ಯವಿವರ ಇದೆ ಎನ್ನುವಂತೆ ಮಾತು ನಿಲ್ಲಿಸಿ ಮತ್ತೆ ಮುಂದುವರಿಯುವ ಮುನ್ನ ಮುಕುಂದಯ್ಯನ ಮುಖದ ಕಡೆ ನೋಡಿ ಬೆಚ್ಚಿ ಬೆರಗಾಗಿ “ಯಾಕ್ರಯ್ಯಾ? ಹಿಂಗೆ ನೋಡ್ತಾ ಇದೀರಿ? ಮಾತೇ ಆಡ್ದೆ?” ಎಂದನು.

ಮುಕುಂದಯ್ಯ ಸಂಪೂರ್ಣ ಅನ್ಯಮನಸ್ಕನಾಗಿದ್ದನು. ಗುತ್ತಿ ಹೇಳಿದ್ದರಲ್ಲಿ ಎಷ್ಟು ಅವನ ಕಿವಿಗೆ ಬಿತ್ತೋ? ಎಷ್ಟು ಬೀಳಲಿಲ್ಲವೋ? ಆದರೆ ಗುತ್ತಿಯ ಪ್ರಶ್ನೆಗೆ ಎಚ್ಚತ್ತಂತೆ ದೀರ್ಘವಾಗಿ ಉಸಿರೆಳೆದುಕೊಂಡು “ನನಗೆ ಕೆಲಸ ಇದೆಯೋ: ಹೊತ್ತಾಯ್ತು. ನೀ ಹೋಗೊ!” ಎಂದು ಕ್ಷಣವೂ ಅಲ್ಲಿ ನಿಲ್ಲದೆ, ಏನನ್ನೊ ಮರೆತದ್ದನ್ನು ಜ್ಞಾಪಿಸಿಕೊಂಡವನಂತೆ ವೇಗವಾಗಿ ಕಣ್ಮರೆಯಾದನು.

“ಇದ್ಯಾಕೆ ಹಿಂಗೆ ಮಾಡ್ತಾರೆ ಇವತ್ತು ನಮ್ಮ ಮುಕುಂದಯ್ಯ?” ಆಶ್ಚರ್ಯಚಕಿತನಾಗಿ ನಿಂತು ನೋಡುತ್ತಿದ್ದ ಗುತ್ತಿ, ಮುಕುಂದಯ್ಯ ಕಾಡಿನ ತಿರುಗಣೆಯಲ್ಲಿ ಕಣ್ಮರೆಯಾದ ಮೇಲೆ, ಹಳೆಮನೆಯ ಹಾದಿ ಹಿಡಿದನು, ಇಬ್ಬರ ಸಂವಾದವನ್ನೂ ಅರಿತು ಆಲಿಸುವಂತೆ ನಿಂತು ಬಾಲವಾಡಿಸುತ್ತಿದ್ದ ಹುಲಿಯ ನೊಡಗೂಡಿ.

* * *

ತಾನು ಒಡ್ಡಿದ್ದ ಉರುಳಿಗೆ ಸಿಕ್ಕ ಕಾಡುಕೋಳಿಯನ್ನು ನೋಡಲು ಹೋದ ಮುಕುಂದಯ್ಯ, ತಾನೆಯೆ ಮತ್ತೊಂದು ರೀತಿಯ ಉರುಳಿಗೆ ಸಿಕ್ಕಿ, ಮನದಲ್ಲಿಯೆ ವಿಲಿವಿಲಿ ಒದ್ದಾಡಿಕೊಳ್ಳುತ್ತಾ, ಗುತ್ತಿಯನ್ನು ನಿರ್ದಾಕ್ಷಿಣ್ಯವಾಗಿ ಬೀಳುಕೊಂಡು, ಕಾಡಿನಿಂದ ಮನೆಗೆ ಧಾವಿಸಿದ್ದನು. ತನ್ನ ಹೃದಯಭೂಮಿಯಲ್ಲಿ ಮೊಳೆಯತೊಡಗಿದ್ದ ಬಿರುಗಾಳಿಯ ಸುಳಿಯನ್ನು ಯಾರಿಗೂ ತೋರಗೊಡಲಿಲ್ಲ. ಗುತ್ತಿ ಹೇಳಿದ್ದುದನ್ನು ನಂಬುವುದಕ್ಕೂ ಸಾಧ್ಯವಾಗಲಿಲ್ಲ; ಅಷ್ಟು ಅನಿರೀಕ್ಷಿತವಾಗಿತ್ತು, ವಿಲಕ್ಷಣವಾಗಿತ್ತು, ಅವನಿಗೆ ವಿಕಾರವಾಗಿತ್ತು ಆ ವಾರ್ತೆ. ಸಿಂಬಾವಿ ಹೆಗ್ಗಡೆಯೇನೊ ಎರಡನೆಯ ಮದುವೆಯ ಹಟ ತೊಟ್ಟಿದ್ದ ವಿಚಾರ ಅವನಿಗೆ ಗೊತ್ತಿತ್ತು. ಆ ಚಟ ಹಳೆಮನೆಯ ದಿಕ್ಕಿಗೆ ಸೊಂಡಿಲು ಚಾಚುತ್ತಿದ್ದುದು ಎಲ್ಲರಿಗೂ ತಿಳಿದ ವಿಷಯವೆ ಆಗಿತ್ತು. ಆದರೆ ಯಾವ ಖಚಿತ ಉದ್ದೇಶವೂ ಇಲ್ಲದೆ, ಏನೊ ಮಾತಿನ ನಡುವೆ, ಗುತ್ತಿ ಅಕಸ್ಮಾತ್ತಾಗಿ ಬಿಟ್ಟುಕೊಟ್ಟಿದ್ದ ಸುದ್ದಿ ಮುಕುಂದಯ್ಯನ ಮೇಲೆ ಸಿಡಿಲಿನಂತೆ ಎರಗಿತ್ತು. ಅದು ಎಂದಾದರೂ ನಿಜವಿರಬಹುದೆ? ಆ ವಯಸ್ಸಾದವನಿಗೆ, ಕುಡುಕನೂ ರೋಗಿಷ್ಠನೂ ವೃದ್ಧಪ್ರಯಾನೂ ಆಗಿ ಜುಗುಪ್ಸಾರ್ಹನಾದವನಿಗೆ ಹೂವಿನಂತಹ ಹುಡುಗಿ ಹೂವಳ್ಳಿ ಚಿನ್ನಮ್ಮನನ್ನು, ತನ್ನ ಚಿನ್ನಿಯನ್ನು, ಮದುವೆ ಮಾಡಿಕೊಳ್ಳಲು ಒಪ್ಪುತ್ತಾರೆಯೆ? ಹೆಗ್ಗಡೆಯ ಶ್ರೀಮಂತಿಕೆಯ ಹಾಳುಬಾವಿಗೆ ತೆರದ ಆಸೆಗಾಗಿ ಆ ಹೆಣ್ಣನ್ನು ತಳ್ಳುತ್ತಾರೆಯೆ? ಸುಳ್ಳಿರಬೇಕು. ಜಟ್ಟಮ್ಮ ಲಕ್ಕಮ್ಮ ಜಗಳ ಆಡಿಕೊಳ್ಳುವಾಗ ಒಬ್ಬರನ್ನೊಬ್ಬರು ಮೂದಲಿಸುವ ಸಿಟ್ಟಿನಲ್ಲಿ, 'ಚೆನ್ನದಂಥ ಹುಡುಗಿ ಚಿನ್ನಮ್ಮನ್ನೇ ತರ್ತೀನಿ' ಎಂದು ಜಟ್ಟಮ್ಮ ಹೇಳಿರಬಹುದಾದ ಮಾತಿಗೆ ನಿಜದ ಬೆಲೆಯನ್ನೇಕೆ ಕೊಡಬೇಕು? ಇದುವರೆಗೆ ಯಾರ ಬಾಯಲ್ಲಾಗಲಿ ಇಂಗಿತವಾಗಿಯೂ ಸುಳಿಯದಿದ್ದ ಆ ಸುದ್ದಿ ಎಷ್ಟು ಅಸಹ್ಯವಾಗಿತ್ತೊ ಅಷ್ಟೇ ಹುಸಿಯೂ ಆಗಿ ತೋರಿತು ಮುಕುಂದಯ್ಯನಿಗೆ. ಆದರೂ ಆ ವಿಚಾರದಲ್ಲಿ ಮುನ್ನೆಚ್ಚರಿಕೆಯ ರೂಪವಾಗಿಯೆ ಕ್ರಮ ಕೈಕೊಳ್ಳುವ ನಿರ್ಧಾರ ಮಾಡಿದನು.

ಅವನ ಅಂತಃಕರಣದಲ್ಲಿ ಈ ನಿರ್ಧಾರದ ವ್ಯಾಪಾರ ನಡೆಯುತ್ತಿದ್ದಾಗ ಅವನ ಬಹಿಃಕರಣಗಳೆಲ್ಲ ಚಿಟ್ಟುಬಿಲ್ಲಿನ ಹಗ್ಗವನ್ನು ಸರಿಮಾಡುವ ಚೇಷ್ಟಿತದಲ್ಲಿ ತೊಡಗಿದ್ದುವು. ಅಷ್ಟರಲ್ಲಿ ಅಲ್ಲಿಗೆ ಬಂದ ಅವನ ಅಣ್ಣ ರಂಗಪ್ಪಗೌಡರು ತೋಟದಲ್ಲಿ ಹಿಂದಿನ ದಿನದ ಬಿರುಗಾಳಿ ಮಳೆಗೆ ಉರುಳಿದ್ದ ಅತ್ತಿಯ ಮರವನ್ನು ಕಡಿಯುವ ಆಳುಗಳಿದ್ದಲ್ಲಿಗೆ ಹೋಗಲು ಹೇಳಿದ್ದರು. ತನ್ನ ಉದ್ದೇಶ ಸಾಧನೆಗೆ ಕರ್ತವ್ಯದ ಅನುಕೂಲತೆಯೂ ಒದಗಿದಂತಾಗಿ ಮುಕುಂದಯ್ಯ ತೋಟದ ಆ ಮೂಲೆಗೆ ಹೋಗಿದ್ದನು.

ಅಲ್ಲಿ ಏಡಿ ಹಿಡಿಯುವ ನೆಪಹೇಳಿ ಐತನನ್ನು ಕರೆದಿದ್ದರೂ ಅವನ ಉದ್ದೇಶ ಐತನ ಹೆಂಡತಿ ಪೀಂಚಲು ಒಡನೆ ವ್ಯವಹರಿಸುವುದೆ ಆಗಿತ್ತು. ಅವನಿಗೆ ಗೊತ್ತಿತ್ತು ಐತನನ್ನು ಎಳೆದೆಡೆಗೆ ಪೀಂದಲು ಬರುತ್ತಾಳೆ ಎಂದು.

ಐತ ಪೀಂಚಲು ಇಬ್ಬರೂ ತಾವು ಮಾಡುತ್ತಿದ್ದ ಕೆಲಸ ಬಿಟ್ಟು ಮುಕುಂದಯ್ಯನ ಅಣತಿಯಂತೆ ಅವನ ಹಿಂದೆ ಹೊರಡುವ ಮುನ್ನವೆ, ಅವನು ಮುನ್ನಡೆದು ತೋಟದ ಅಡಕೆ ಬಾಳೆಯ ಮರಗಳ ಮಧ್ಯೆ ಮರೆಯಾಗಿದ್ದನು. ತೋಟದ ಎಲ್ಲೆಯನ್ನು ದಾಟಿ 'ಭೂತದ ಬನ'ದ ಮಾರ್ಗವಾಗಿ ನಡೆದು, ಕಾಡಿನಿಂದ ತೋಟದ ಅಂಚಿಗೆ ಇಳಿದು ಬರುತ್ತಿದ್ದ ಸರಲಿಗೆ ತಲುಪಿದ್ದನು. ದೊಡ್ಡ ಸಣ್ಣ ಉಂಡೆಗಲ್ಲು ಮತ್ತು ಬಂಡೆಗಳ ನಡುವೆ ಅಲ್ಲಲ್ಲಿ ನಿಂತೂ ನಿಂತೂ ಹಿಂದಿನ ದಿನದ ಸಂಜೆಯ ಮಳೆಯ ದೆಸೆಯಿಂದ ಮೆಲ್ಲಗೆ ಜುಳು ಜುಳು ಮರ್ಮರದಿಂದ ಹರಿಯುತ್ತಿದ್ದ ಬೇಸಗೆಯ

ಹಳ್ಳದ ನೀರು, ಇಕ್ಕೆಲದಲ್ಲಿಯೂ ಬೆಳೆದಿದ್ದ ದೈತ್ಯಾಕಾರದ ನಿಬಿಡಪರ್ಣದ ಮರಗಳ ನೆರಳಲ್ಲಿ, ಬಿಸಿಲನ್ನೆ ಕಾಣದೆ, ಕಾಲಿಟ್ಟರೆ ಚಳಿಯಾಗುವಂತೆ, ತಣ್ಣಗೆ ಹರಿಯುತ್ತಿತ್ತು. ಅಲ್ಲಿಂದಲೆ ಪ್ರಾರಂಭವಾಗುತ್ತಿತ್ತು ಅವರ ಏಡಿ ಹಿಡಿಯುವ ತಾಣ. ಐತ ಮುಕುಂದಯ್ಯರಿಗಂತೂ ಆ ತಾಣ ಅತ್ಯಂತ ಸುಪರಿಚಿತವಾದುದಾಗಿತ್ತು. ಚಿಕ್ಕಂದಿನಿಂದಲೂ ಅವರಿಬ್ಬರೂ ಜೊತೆಗೂಡಿ ಅದೆಷ್ಟೊ ಸಾರಿ ಅಲ್ಲಿ ಕಪ್ಪೆಗೋಲು ಹಾಕಿ ಏಡಿ ಹಿಡಿದಿದ್ದರು. ಪೀಂಚಲುವಿಗೆ ಮಾತ್ರ ಅದು ಸ್ವಲ್ಪ ಹೊಸ ಸ್ಥಾನವೆ ಆಗಿತ್ತು. ಐತನನ್ನು ಮದುವೆಯದ ಮೊದಲಲ್ಲಿ ಅವನೊಡನೆ, ತಾವಿಬ್ಬರೆ, ತನ್ನ ಬಿಡಾರದ ಅಡುಗೆಯ ಪ್ರಯೋಜನಾರ್ಥವಾಗಿ, ಒಂದೆರಡು ಸಾರಿ ಅಲ್ಲಿಗೆ ಏಡಿ ಹಿಡಿಯಲು ಬಂದಿದ್ದರು. ಆದರೆ ಆ ಜಾಗ ಎಷ್ಟು ಏಕಾಂತವಾಗಿತ್ತು ಎಂದರೆ, ಹೊಚ್ಚ ಹೊಸ ಗಂಡಹೆಂಡಿರ ಶೃಂಗಾರ ಜೀವನವನ್ನೂ ಅದರ ಪ್ರಣಯ ಚೇಷ್ಟಿತನಗಳನ್ನೂ ಉದ್ದೀಪಿಸಿದಷ್ಟು ಉದಾರವಾಗಿ ಅದು ಅವರಿಗೆ ಏಡಿ ಹಿಡಯುವುದಕ್ಕೆ ನೆರವಾಗಿರಲಿಲ್ಲ. ಆದರೂ ಅವರು ತಮಗೆ ದೊರೆತಿದ್ದ ಒಂದೆರಡು ಏಡಿಗಳಿಂದಲೆ ಸಂಪೂರ್ಣ ತೃಪ್ತರಾಗಿ ಹಿಂದಿರುಗಿದ್ದರು, ತಮ್ಮ ಪ್ರಣಯ ಚೇಷ್ಟೆಗಳಿಂದಲೆ ಅಲ್ಲಿ ತಮಗೆ ಒದಗಿದ್ದ ಸುಖಕ್ಕೆ ಆ ಸ್ಥಾನಮಹಿಮೆಯೆ ಕಾರಣವೊ ಎಂಬಂತೆ.

ಮೊದಲೆ ಅಲ್ಲಿಗೆ ಸೇರಿದ್ದ ಮುಕುಂದಯ್ಯನಿಗೆ, ಅನೇಕ ಮಧುರ ಸುಂದರ ಸಾಹಸಮಯ ಪೂರ್ವಾನುಭವಗಳಿಗೆ ಕಾರಣವಾಗಿದ್ದ ಆ ತಾಣದ ಮಹಾತ್ಮ್ಯೆಯಿಂದಲೊ ಏನೊ, ಭಾವಕೋಶ ತುಂಬಿ ಅರಳಿದಂತಾಗಿ, ಸಂಸ್ಕಾರ ರೂಪದಲ್ಲಿದ್ದ ಅವನ ಬಾಲಕತ್ವ ಹೊರಕ್ಕೆ ಹಾರಿತು. ಏನೊ ಒಂದು ವಿನೋದವನ್ನು ನೆನೆದು ಹಳ್ಳದ ದಂಡೆಯಲ್ಲಿದ್ದ ಒಂದು ಮಟ್ಟಿನ ಹಿಂದೆ ಅವಿತು ಕುಳಿತನು.

ಕೀಳುಜಾತಿಯವರಾಗಿ ಮುಟ್ಟಾಳು ಎಂದರೆ ಅಸ್ಪೃಶ್ಯರಾಗಿದ್ದ ಐತ ಪೀಂಚಲು ತಾನು ಬಂದ 'ಭೂತದ ಬನ'ದ ದಾರಿಯಲ್ಲಿ ಬರುವುದಿಲ್ಲವೆಂಬುದು ಅವನಿಗೆ ಗೊತ್ತಿತ್ತು. ಏಕೆಂದರೆ ಭೂತದ ಬನದೊಳಕ್ಕೆ ಮುಟ್ಟಾಳುಗಳು ಕಾಲಿಟ್ಟರೆ ಅವರಿಗೆ ಏನಾದರು ಕೇಡು ತಪ್ಪದು ಎಂಬ ನಂಬುಗೆ ಬಲವಾಗಿತ್ತು; ಅದರಲ್ಲಿಯೂ ಕನ್ನಡಜಿಲ್ಲೆಯಿಂದ ಬಂದವರಿಗೆ ಗಟ್ಟದ ಮೇಲಣ ದೆಯ್ಯಗಳೆಂದರೆ ಮಹಾಭಯ. ಆ ಭಯದ ಬೇಲಿಕಟ್ಟಿ ಮಲೆನಾಡಿನ ಜಮೀನುದಾರರು ತಮ್ಮ ತೋಟ, ಗದ್ದೆ, ಹಿತ್ತಲುಗಳ ಫಸಲು ರಕ್ಷಣೆ ಮಾಡಿಕೊಳ್ಳುತ್ತಿದ್ದರು, ಎಂತಹ ಕಾವಲೂ ಪೋಲೀಸೂ ಕಾನೂನೂ ಮಾಡಲಾರದಷ್ಟು ಸಮರ್ಪಕವಾಗಿ.

ಗಟ್ಟದ ತಗ್ಗಿನ ಹೆಣ್ಣಾಳುಗಳಂತೂ ಅಡಕೆ ತೋಟಕ್ಕೆ ಕೆಲಸಕ್ಕೆ ಬರುವುದಕ್ಕೆ ಹೆದರಿ ಸಾಯುತ್ತಿದ್ದರು. ಏಕೆಂದರೆ, ತೋಟವೇ ಭೂತರಾಯನ ವಿಶೇಷ ಅಧಿಪತ್ಯಕ್ಕೆ ಸೇರಿ, ಅವನ ಮಡಿಪ್ರದೇಶವಾಗಿದೆ ಎಂಬುದು ಪ್ರತೀತಿ. ಮುಟ್ಟಾದ ಹೆಂಗಸರು, ಮರೆತಾದರೂ ಸರ, ಆ ಮಡಿನೆಲಕ್ಕೆ ಪ್ರವೇಶಿಸಿದರೆ ಅವರು ರಕ್ತಕಾರಿ ಸಾಯುತ್ತಾರೆ ಎಂಬ ಶಾಸ್ತ್ರವಾರ್ತೆ ಅನೇಕ ನಿದರ್ಶನಸಹಿತವಾಗಿ ಪ್ರಚಲಿತವಾಗಿತ್ತು. ಆದ್ದರಿಂದ ಹೆಂಗಸು ತಾನು ಹೊರಗಾಗಿದ್ದಾಗ ತೋಟಕ್ಕೆ ಹೋಗದೆಯೆ ಇರುವುದು ಪ್ರಜ್ಞಾಪೂರ್ವಕವಾಗಿಯೆ ಸಾಧ್ಯವಾಗಿತ್ತು; ಆದರೆ ತೋಟದಲ್ಲಿ ಕೆಲಸಕ್ಕೆ ಹೋಗಿ, ಕೆಲಸ ಮಾಡುತ್ತಿದ್ದಾಗಲೆ ಅಕಸ್ಮಾತ್ತಾಗಿ ಎಲ್ಲಿಯಾದರೂ ಮುಟ್ಟಾಗಿಬಿಟ್ಟರೆ ಏನು ಗತಿ? ಆದ್ದರಿಂದಲೆ ಮುಂಜಾಗ್ರತೆಯ ಕ್ರಮವಾಗಿ ಅವರು ಮಿಂದ ಮೊದಲು ದಿನಗಳಲ್ಲಿ ಮಾತ್ರವೆ ತೋಟಕ್ಕೆ ಕೆಲಸಕ್ಕೆ ಹೋಗುತ್ತಿದ್ದುದು ರೂಢಿ. ಆ ದಿನ ಬೆಳಿಗ್ಗೆ ಕೆಲಸಕ್ಕೆ ಹೊರಡುವ ಮುನ್ನ, ತೋಟದಲ್ಲಿ ಮರ ಕಡಿಯುವುದೆ ಕೆಲಸ ಎಂದು ಗೊತ್ತಾದಾಗ, ಗಂಡಾಳುಗಳೆಲ್ಲ ಆ ವಿಚಾರದಲ್ಲಿ ತಮ್ಮ ತಮ್ಮ ಹೆಣ್ಣುಗಳನ್ನು ಪ್ರಶ್ನಿಸಿ, ತನಿಖೆ ನಡೆಸಿ, ಸಮಾಧಾನ ಮಾಡಿಕೊಂಡೆ ಕೆಲಸಕ್ಕೆ ಬಂದಿದ್ದರು. ತನಿಖೆಯಲ್ಲಿ ಸಂಶಯಾಸ್ಪದವಾಗಿ ಕಂಡ ಮೂರು ನಾಲ್ಕು ಹೆಣ್ಣುಗಳನ್ನು ಕೆಲಸಕ್ಕೆ ಬೇರೆಯ

ಕಡೆ ಕಳುಹಿಸಲಾಗಿತ್ತು. ಆ ಅನಿವಾರ್ಯದಿಂದಲೆ, ಮೈ ಸರಿಯಾಗಿಲ್ಲದಿದ್ದರೂ, ಕೆಲಸಕ್ಕೆ ಆಳು ಬೇಕಾಗಿದ್ದುದರಿಂದ, ಸೇರೆಗಾರ ಚೇಂಕ್ರನು ತನ್ನ ಬಸುರಿ ಹೆಂಡತಿ ದೇಯಿಯನ್ನು ಕೆಲಸಕ್ಕೆ ಬಾ ಎಂದು ಬಲಾತ್ಕಾರದಿಂದ ಕರೆತಂದಿದ್ದನು. ಅವಳೂ ಕಣ್ಣೀರೊರಸುತ್ತಾ ಬಂದಿದ್ದಳು. ಅಕ್ಕಣಿ ಪೀಂಚಲು ಇಬ್ಬರೂ ಅವಳಿಗೆ ಸಂತೈಕೆ ಹೇಳಿ, ಅವಳ ಕೆಲಸವನ್ನೆಲ್ಲ ತಾವೇ ನಿರ್ವಹಿಸಿ, ಅವಳಿಗೆ ಸಾಕಷ್ಟು ವಿರಾಮ ಕೊಟ್ಟು, ದಣಿವು ಆಗದ ಹಾಗೆ ನೋಡಿಕೊಳ್ಳುವುದಾಗಿ ಭರವಸೆ ಇತ್ತಿದ್ದರು....

ಮಟ್ಟಿನ ಹಿಂದೆ ಅಡಗಿ ಕುಳಿತಿದ್ದ ಮುಕುಂದಯ್ಯನಿಗೆ ಸ್ವಲ್ಪ ಹೊತ್ತು ಕಾಯುವುದರೊಳಗೆ ಬೇಜಾರಾಯಿತು. ತಾನು ನಿರೀಕ್ಷಿಸಿದ್ದಕ್ಕಿಂತಲೂ ಅವರು ಬಹಳ ತಡವಾಗಿ ಬರುವಂತೆ ತೋರಿತು. ಹೊಸದಾಗಿ ಮದುವೆಯಾಗಿ, ಇನ್ನೂ ರಸಿಕತೆ ದಣಿದು, ಸೋತು, ಸಾಮಾನ್ಯತೆಯ ಧೂಳಿಗೆ ಬೀಳದಿದ್ದ ಐತನೇನಾದರೂ ಶೃಂಗಾರ ಚೇಷ್ಟೆಗೆ ತೊಡಗಿದನೊ ಏನೊ ಎಂಬ ಶಂಕೆಯೂ ಮೂಡಿ, ಮುಕುಂದಯ್ಯ ಸಸ್ನೇಹಸರಸವಾಗಿಯೆ 'ಬರಲಿ, ಮಾಡ್ತೀನಿ ಆ ಮುಂಡೆಕುರುದೆಗೆ!' ಎಂದು ಬೈದನು.

ತುಸು ಹೊತ್ತಿನಲ್ಲಿಯೆ ಗೊಣಗೊಣ ಮಾತಾಡುವ ಸದ್ದು ಕಿವಿಗೆ ಬಿದ್ದು ಮುಕುಂದಯ್ಯ ತಾನು ಆಲೋಚಿಸಿದ್ದ ವಿನೋದವನ್ನು ಗುರುತಪ್ಪದಂತೆ ಎಸಗಲು ನಿಶ್ಚಯಿಸಿ, ಜಾಗ್ರತನಾಗಿ, ಆ ದಿಕ್ಕನ್ನೆ ಅವಲೋಕಿಸುತ್ತಾ ಕುಳಿತನು. ನೋಡುತ್ತಿದ್ದಂತೆ ಹಳ್ಳದ ದಂಡೆಯ ಹಳು ಅಲುಗಾಡಿತು. ಐತ ಪೀಂಚಲು ಒಬ್ಬರ ಹಿಂದೆ ಒಬ್ಬರು ಹಳ್ಳದ ಪಾತ್ರದಲ್ಲಿದ್ದ ಹಾಸುಗಲ್ಲಿಗೆ ನೆಗೆದು ನಿಂತು ಸುತ್ತಲೂ ನೋಡಿದರು. ತನಗಾಗಿಯೆ ಹುಡುಕುತ್ತಿದ್ದಾರೆ ಎಂಬದೂ ಮುಕುಂದಯ್ಯನಿಗೆ ಗೊತ್ತಾಯಿತು.

ಅಲ್ಲದೆ ಅವರು ಬರುವುದು ಏಕೆ ತಡವಾಯಿತು ಎಂಬುದಕ್ಕೂ ಕಾರಣ ತಿಳಿಯಿತು: ಪೀಂಚಲು ಕೈಲೊಂದು ಹಾಳೆಕೊಟ್ಟೆ ಇತ್ತು; ಐತನ ಕೈಯ್ಯಲ್ಲಿ ಒಂದು ಸೊಗಸಾದ ಹೊಂಬಾಳೆ ಮುಕುಂದಯ್ಯನ ಆಶೆಯನ್ನು ಕೆರಳಿಸುವಂತೆ ಕಂಗೊಳಿಸುತ್ತಿತ್ತು. ತೋಟದಲ್ಲಿ ಉದುರಿ ಬಿದ್ದಿದ್ದ ಅಡಕೆಯ ಹಾಳೆಯನ್ನು ಕೊಯ್ದು, ಕೊಟ್ಟೆ ಮಾಡಿ, ಬಿದಿರ ಕಣೆಯಿಂದ ಕೊಟ್ಟೆ ಕಡ್ಡಿ ತಯಾರಿಸಿ, ಅದನ್ನು ಸೆಟ್ಟು, ತರುವುದಕ್ಕೆ ಸ್ವಲ್ಪ ಸಮಯ ಹಿಡಿಯದಿರುತ್ತದೆಯೆ? ಇನ್ನು ಹೊಂಬಾಳೆ? ಬಿದ್ದಿದ್ದಾದರೂ ಇರಬಹುದು; ಅಥವಾ ಮರವನ್ನು ಒರಕಿ ಕಿತ್ತದ್ದಾದರೂ ಇರಬಹುದು.

"ಎಲ್ಲಿ ಹ್ವಾಯಿತು ಈ ಅಯ್ಯ? ಚೆಟ್ಟುಬಿಲ್ಲು ಹಿಡುಕೊಂಡು ಹಕ್ಕಿ ಹೊಡೆಯಲು ಹೊರಟಿತೋ?" ಎಂದು ಮುಕುಂದಯ್ಯ ಕಾಣದಿದ್ದುದಕ್ಕೆ ತನ್ನ ಅಸಮಾಧಾನವನ್ನು ಸೂಚಿಸುತ್ತಾ ಐತ ಮುಂದೆ, ಪೀಂಚಲು ಅವನ ಹಿಂದೆ, ಹಳ್ಳದ ಪಾತ್ರದಲ್ಲಿ ಕಲ್ಲಿಂದ ಕಲ್ಲಿಗೆ ನೆಸೆಯುತ್ತಾ ಮುಂಬರಿದರು.

ಮುಟ್ಟಿನ ಹಿಂದೆ ಅವಿತು ಅವರನ್ನೇ ಗಮನಿಸಿ ನೋಡುತ್ತಿದ್ದ ಮುಕುಂದಯ್ಯ ಬೆರಗಾದನು: ಆ ಕಾಡಿನ ಹಿನ್ನೆಲೆಯಲ್ಲಿ, ಆ ಏಕಾಂತದಲ್ಲಿ, ಆ ವಿರಳ ವನ್ಯ ಪಕ್ಷಿಕೂಜನದ ಸನ್ಮೋಹಕತೆಯಲ್ಲಿ ಅವರಿಬ್ಬರೂ ಗಟ್ಟದ ತಗ್ಗಿನಿಂದ ಹೊಟ್ಟಪಾಡಿಗಾಗಿ ದುಡಿಯಲು ಬಂದಿದ್ದ ಬಿಲ್ಲವರ ಜಾತಿಯ ತಮ್ಮ ಬಡ ಕೂಲಿಯಾಳುಗಳಂತೆ ಕಾಣಿಸುತ್ತಿರಲಿಲ್ಲ. ಆ ತರುಣ ದಂಪತಿ ಪ್ರಪ್ರಾಚೀನ ಕಾಲದಲ್ಲಿ ಪೌರಾಣಿಕ ಯುಗದಲ್ಲಿ ದಂಡಕಾರಣ್ಯಕ್ಕೊ ನೈಮಿಶಾರಣ್ಯಕ್ಕೊ ಕಾರ್ಯಾರ್ಥವಾಗಿ ಅವತರಿಸಿ ಅಲೆಯುತ್ತಿದ್ದಿರ ಬಹುದಾದ ಭಿಲ್ಲವೇಷದ ಶಿವ ಶಿವಾಣಿಯರಂತೆ ತೋರಿದರು!

ಐಗಳು ಅನಂತಯ್ಯನವರ ಆಶೀರ್ವಾದದಿಂದ ಮುಕುಂದಯ್ಯ ಸಂಪಾದಿಸಿದ್ದ ಪೌರಾಣಿಕ ಕಲ್ಪನಾಶಕ್ತಿಯ ಪ್ರಭಾವವೋ? ಅಥವಾ ಮೇಲು ಕೀಳು ಬಡವ ಬಲ್ಲಿದ ಅರಸ ತಿರುಕ ಎಂಬ ತಾರತಮ್ಯವಿಲ್ಲದೆ ಅಡವಿ ನಗರ ಮಂಚ ನೆಲ ಚಾಪೆ ಸುಪ್ಪತ್ತಿಗೆ ಎಂಬ ಭೇದವಿಲ್ಲದೆ ಸರ್ವರಲ್ಲಿಯೂ ಸಮಾನವಾಗಿ ಸಮಪ್ರಮಾಣದಲ್ಲಿ ಆವಿರ್ಭೂತವಾಗುವ ರತಿಮನ್ಮಥ ಪ್ರೇಮಾನುಗ್ರಹದ ಪ್ರಣಯ ಪರಿವೇಷದ ಮಹಿಮೆಯೋ? ಅಥವಾ ತನ್ನಲ್ಲಿಯೂ ಸಾವಿರ ಹೆಡೆಯೆತ್ತಿ ರತಿಮನ್ಮಥರನ್ನೂ ಹೆತ್ತಯ್ಯ ಅಮ್ಮರನ್ನು ಹೊತ್ತು ಮರೆಯಲು ಅಣಿಯಾಗುತ್ತಿದ್ದ ಶೃಂಗಾರ ಶೇಷನೊಂದು ಪ್ರಸ್ಥಾನಪೂರ್ವ ವೈಭವದ ನಿಗೂಢ ಪರಿಣಾಮವೋ? ಮುಕುಂದಯ್ಯ ತನಗೆ ತಾನೆ ಗೊಣಗಿಕೊಂಡನು. “ಅಃ ಏನು ಚೆನ್ನಾಗಿದ್ದಾರೆ  ಅವರಿಬ್ಬರೂ!”

ಅದರಲ್ಲಿಯೂ ಮಿಗದ ಪಡ್ಡೆಕರುವಂತೆ, ತೆಳ್ಳಗಿದ್ದರೂ ಬಲಿಷ್ಠವಾದ ಅಂಗೋಪಾಂಗದಿಂದ ಕೂಡಿ, ಕಲ್ಲಿಂದ ಕಲ್ಲಿಗೆ ನೆಸೆದು ಬರುತ್ತಿದ್ದ ಐತನಿಗಿಂತಲೂ ಅವನ ಹೆಂಡತಿ ಮುಕುಂದಯ್ಯನ ಮನವನ್ನೆಲ್ಲ ಸೂರೆಗೊಳ್ಳುವಷ್ಟು ಚೆಲುವೆಯಾಗಿ ಕಂಡಳು: ಮಲೆನಾಡಿನವರಂತೆ ಸೊಂಟಕ್ಕೆ ಸೀರೆ ಸುತ್ತಿ, ಗೊಬ್ಬೆಸೆರಗು ಹಾಕಿ ಕಟ್ಟಿ, ವಲ್ಲಿ ಹೊದ್ದು, ಹಣೆಗೆ ಕುಂಕುಮವಿಟ್ಟು, ಕಿವಿಗೆ ಬುಗುಡಿ, ಕೊರಳಿಗೆ ಅಡ್ಡಿಕೆ, ಕೈಗೆ ಬಳೆ ಕಡಗ, ಕಾಲುಬೆರಳಿಗೆ ಸುತ್ತುಗಾಲುಂಗುರ ಹಾಕಿ ಸಿಂಗರಿಸಿದರೆ-ಪೀಂಚಲು ಯಾವ ಮಲೆಯ ಹೆಣ್ಣಿಗೂ ಬಿಟ್ಟುಕೊಡುವುದಿಲ್ಲ ಎಂದುಕೊಂಡನು! ಬಣ್ಣ ತುಸು ಬೆಳ್ಳಗಿದ್ದರೆ ತಾನು ಒಲಿದಿರುವ ಹೂವಳ್ಳಿ ಚಿನ್ನಮ್ಮಗೆ ಸಮಸ್ಪರ್ಧಿಯಾಗಿ ಬಿಡುತ್ತಿದ್ದಳಲ್ಲವೆ?….

ಇನ್ನೂ ಏನೇನೊ ಆಲೋಚನೆಗಳು ನುಗ್ಗಿ ಬರುತ್ತಿದ್ದುವೊ? ಅಷ್ಟರಲ್ಲಿ ಐತ ಅವನು ಅಡಗಿ ಕುಳಿತಿದ್ದ ಪೊದೆಯನ್ನು ದಾಟಿ, ತನ್ನ ಹಿಂದುಗಡೆ ಆ ಪೊದೆಗೆ ಸಮೀಪಿಸುತ್ತಿದ್ದ ಪೀಂಚಲು ಕಡೆಗೆ ತಿರುಗಿದನು. ಸುಸಮಯವೆಂದು ಭಾವಿಸಿ ಮುಕುಂದಯ್ಯ ಕಾಡು ಮರುದನಿ ಕೊಡುವಂತೆ ಗಟ್ಟಿಯಾಗಿ, ಹುಲಿ ಅಬ್ಬರಿಸುವಂತೆ, ‘ಆಆಮ್!’ ಎಂದು ಕೂಗಿ ಇಬ್ಬರ ಮಧ್ಯೆ ಹಾರಿದನು.

“ಅಯ್ಯಪೋ!” ಎಂದು ಚೀರಿಬಿಟ್ಟಳು ಪೀಂಚಲು!

“ಎಂಥ ಭರ ಹೆದರಿಬಿಟ್ಟೆ ನಾನು! ಹಹ್ಹಹ” ಎಂದು ಐತ ನಗತೊಡಗಿದನು.

ಪೀಂಚಲುಗೆ ಸಿಟ್ಟುಬಂದು ತುಳುಮಾತಾಡುವ ಗಟ್ಟದವರ ಕನ್ನಡದ ವಿರಳಾಕ್ಷರ ರೀತಿಯಲ್ಲಿ “ಮದುವೆಯಾಗಿದ್ದರೆ ಎರಡು ಮಕ್ಕಳ ಅಪ್ಪಯ್ಯ ಆಗುತ್ತಿದ್ದಿರಿ ನೀವು! ಇನ್ನೂ ಮಕ್ಕಳಾಟಿಕೆ ಬಿಟ್ಟಿಲ್ಲ!” ಎಂದು ಮುಕುಂದಯ್ಯನನ್ನು ನೇರವಾಗಿ ನೋಡುತ್ತಾ, ತನಗೂ ನಗೆ ತಡೆಯಲಾರದ ನಕ್ಕುಬಿಟ್ಟಳು.

“ನನ್ನ ಮದುವೆ, ಮಕ್ಕಳು ಹಾಗಿರಲಿ. ನಿನಗೀಗ ಮದುವೆಯಾಗಿ ಒಂದು ವರ್ಷದ ಹತ್ತಿರಕ್ಕೆ ಬಂತಲ್ಲ? ಎಲ್ಲಿ ನಿನ್ನ ಮಕ್ಕಳು? ಎಲ್ಲೂ ಕಾಣೋದಿಲ್ಲ!” ಎಂದು ನಗು ನಗುತ್ತಲೆ ವಿನೋದವಾಡಿ ಕುಡುಕುವಂತೆ ಸುತ್ತ ಕಣ್ಣಾಡಿಸಿದನು.

ಕರಿ ಮೊಗವೂ ನಸು ಕೆಂಪಾಗುವಂತೆ ನಾಚಿ ಪೀಂಚಲು “ಇಸ್ಸಿ! ಏನ್ರಯ್ಯಾ? ಏನೆಲ್ಲ ಹೇಳ್ತೀರಿ!” ಎನ್ನುತ್ತಾ ದೂರ ಸರಿದು ಐತನ ಮರೆಗೆ ಹೋದಳು.

"ಎಲ್ಲಿತ್ತೊ ಈ ಹೊಂಬಾಳೆ? ಬಿದ್ದಿತ್ತೊ? ಹತ್ತಿ ಉದುರಿಸಿದಿರೊ?" ಐತನ ಕೈಲಿದ್ದ ಹೊಂಬಾಳೆಯನ್ನು ಕರುಬಿನ ಕಣ್ಣಿನಿಂದ ನೋಡುತ್ತಾ ಕೇಳಿದನು ಮುಕುಂದಯ್ಯ. "ಬಿದ್ದಿತ್ತು." ಉತ್ತರಿಸಿದ ಐತನ ಮುಖದ ನಗೆಯ ಭಂಗಿಯನ್ನು ನೋಡಿ, ಮುಕುಂದಯ್ಯ "ಸುಳ್ಳೋ ಬದ್ದೊ? ನಿಜ ಹೇಳು" ಎಂದನು.

ಐತನ ಹಿಂದುಗಡೆಯಿಂದ ಪೀಂಚಲು ನಗುತ್ತಾ "ಇಲ್ಲಯ್ಯ, ಹತ್ತಿ ತೆಗೆದದ್ದು!"

"ಯಾರು ಹತ್ತಿದ್ದು? ನೀನೋ ಅವನೋ?"

"ಇಸ್ಸಿ, ಅಯ್ಯ, ಏನು ಹೀಂಗೆ ಎಲ್ಲಾ ಹೇಳುತ್ತೀರಿ? ನಾನು ಯಾಕೆ ಹತ್ತಲಿ ಅವನೆ ಹತ್ತಿ ಕುಯ್ದದ್ದು."

ಪೀಂಚಲು ಐತನೊಡನೆ ಬಾಲ್ಯದಿಂದಲೂ ಆಡಿದ್ದ ಏಕವಚನವನ್ನೆ ಸ್ವಾಭಾವಿಕವಾಗಿ ಉಪಯೋಗಿಸುತ್ತಿದ್ದಳು. ಅವರ ಸಂಬಂಧ ಇನ್ನೂ ಬಹುವಚನಕ್ಕೇರುವಷ್ಟು ಕೃತಕವೂ ದೂರವೂ ಆಗಿರಲಿಲ್ಲ.

"ಓಹೋ, ಮದುವೆಯಾದ ಮೇಲೆ ನೀನೀಗ ದೊಡ್ಡ ಹೆಗ್ಗಡ್ತಿ ಆಗಿಬಿಟ್ಟಿದ್ದೀಯ! ಆಗೆಲ್ಲ ನೀನೇ ಮರ ಹತ್ತಿ ಹೊಂಬಾಳೆ ಕಿತ್ತುಕೊಟ್ಟಿದ್ದೆ ನಮಗೆ?"

ಪೀಂಚಲು ತನ್ನ ವಿವಾಹಪೂರ್ವದ ಬಾಲ್ಯಸಾಹಸಗಳ ವಿಚಾರವಾಗಿ ಮುಕುಂದಯ್ಯ ಆಡಿದ ಮಾತಿಗೆ ಸ್ವಲ್ಪ ಮಟ್ಟಿಗೆ ಪ್ರಹರ್ಷಿತಳಾಗಿ, ಆದರೂ ಭರ್ತ್ಸನೆಯ ಧ್ವನಿಯಿಂದ ಹೇಳಿದಳು, ಮುಕುಂದಯ್ಯನ ಪ್ರಶಂಸನೀಯ ನೇತ್ರಗಳನ್ನು ತನ್ನ ನೇತ್ರಗಳು ನೇರವಾಗಿ ಸಂಧಿಸುವಂತೆ ದೀರ್ಘಾಪಾಂಗದಿಂದ ನೋಡುತ್ತಾ "ಈ ಅಯ್ಯ ಏನೆಲ್ಲ ನೆನಪು ಇಟ್ಟುಕೊಂಡಿದ್ದಾರೆ!"

"ಒಳ್ಳೆ ಚೆನ್ನಾಗಿದೆ ಹೊಂಬಾಳೆ. ಇತ್ತಕೊಡು ನನಗೆ. ಇವತ್ತು ಅವ್ವನ ಹತ್ರ ನಂಗೆ ಬಳ್ಳೆ ಹಾಕಬ್ಯಾಡ ಅಂತಾ ಹೇಳ್ತೀನಿ. ಇದರಲ್ಲೇ ಉಣ್ತೇನಿ" ಎಂದು ಮುಕುಂದಯ್ಯ ಕೈ ನೀಡಿದನು.

ಐತ ಅದನ್ನು ಅವನು ಮುಟ್ಟದಂತೆ ಸ್ವಲ್ಪ ಹಿಂದಕ್ಕೆ ಎಳೆದುಕೊಂಡು "ಬ್ಯಾಡ ಅಯ್ಯ, ಇವಳು ಮುಟ್ಟಿಬಿಟ್ಟಿದ್ದಾಳೆ" ಎಂದನು.

"ಮುಟ್ಟಿದರೆ ಏನಾಯ್ತೊ? ಕೊಡೊ."

ತಾನು ಹೇಳಿದುದು ಅರ್ಥವಾಗದಿದ್ದ ತನ್ನ ಹುಡುಗ ಒಡೆಯನ ದಾಂಪತ್ಯಾನುಭವವಿಲ್ಲದ ಅಜ್ಞಾನಕ್ಕೆ ನಸು ಕಿನಿಸಿದಂತೆ "ನಿಮಗೆ ಅದೆಲ್ಲಾ ಗೊತ್ತಾಗದಿಲ್ಲ, ಅಯ್ಯಾ" ಎಂದ ಐತ ಹೊಂಬಾಳೆಯನ್ನು ಪೀಂಚಲು ಕೈಗೆ ಕೊಟ್ಟು, ಹೆಗಲ ಕಂಬಳಿಯನ್ನು ಹಳ್ಳದ ದಂಡೆಗೆ ಎಸೆದು, ಕಪ್ಪೆ ಹಿಡಿಯಲು ಹಳ್ಳದ ಬಂಡೆಸಂದಿಯ ನಡುವೆ ನಿಂತಿದ್ದ ನೀರಿಗೆ ಬಾಗಿದನು. ತುಸು ತೇಜೋಭಂಗವಾದಂತೆ ಮುಖಮ್ಲಾನನಾಗಿ ನಿಂತಿದ್ದ ಮುಕುಂದಯ್ಯನನ್ನು ಕಿರಿನಗೆವೆರಸಿ ನಸುನಿಟ್ಟಿಸಿ, ತನ್ನ ಗಂಡನ ಮಾತನ್ನು ಸಂಪೂರ್ಣವಾಗಿ ಸಮರ್ಥಿಸುವ ರೀತಿಯಿಂದ ಪೀಂಚಲು

ಹೊಂಬಾಳೆಯನ್ನೂ ಹಾಳೆಕೊಟ್ಟೆಯನ್ನೂ ಐತನ ಕಂಬಳಿಯ ಪಕ್ಕದಲ್ಲಿ ದಡದ ಮೇಲಿಟ್ಟು, ಕಪ್ಪೆ ಹಿಡಿಯಲು ಪ್ರಯತ್ನಿಸುತ್ತಿದ್ದ ತನ್ನ ಗಂಡನೆಡೆಗೆ ಹೋದಳು.

ಮುಕುಂದಯ್ಯ ನಿಂತಲ್ಲಿಯೆ ನಿಂತು, ಕಪ್ಪೆ ಹಿಡಿಯುವುದರಲ್ಲಿ ಮಗ್ನರಾಗಿದ್ದ ಅವರಿಬ್ಬರನ್ನೂ ನೋಡುತ್ತಿದ್ದನು, ಯಾವುದರಲ್ಲಿಯೊ ಏನೊ, ತನಗೆ ಅಗೋಚರವಾಗಿದ್ದ ಒಂದು ವಿಷಯದಲ್ಲಿ ಅವರಿಬ್ಬರಿಂದಲೂ ಪರಾಜಿತನಾದವನಂತೆ.

ತಾನು ಓದು ಬರಹ ಬಲ್ಲವನು. ಐಗಳ ಕೃಪೆಯಿಂದ ಇತರ ತನ್ನಂತಹರಿಗಿಂತಲೂ ಹೆಚ್ಚು ಕಾವ್ಯ ಸಾಹಿತ್ಯ ಸಂಸ್ಕಾರ ಪಡೆದಿದ್ದಾನೆ. ಐಗಳೂ ತನ್ನನ್ನು ಎಲ್ಲರಿಗಿಂತ ಬುದ್ದಿವಂತನೆಂದು ಮೆಚ್ಚಿಕೊಂಡಿದ್ದಾರೆ. ತಾನು ಮನೆತನಸ್ಥರಾದ ಗೌಡರ ಕುಲದವನು. ತಮ್ಮ ಮನೆಯವರು ಕಲ್ಲೂರು ಮಂಜಭಟ್ಟರಂತೆ ಅಜ್ಞರನ್ನೂ ಬಡಬಗ್ಗರನ್ನೂ ನಾನಾ ರೀತಿಯಿಂದ ಸುಲಿದು ಸಾಹುಕಾರರು ಎನ್ನಿಸಿಕೊಳ್ಳದಿದ್ದರೂ, ಯಾರೂ ತಮ್ಮನ್ನ ಬಡವರೆಂದು ಹೇಳುವ ಸ್ಥಿತಿಯಲ್ಲಿರಲಿಲ್ಲ. ಅಲ್ಲದೆ ತಾನು ಅನೇಕ ಗಟ್ಟದ ತಗ್ಗಿನವರನ್ನೂ ಕೂಲಿಯಾಳುಗಳನ್ನಾಗಿ ಇಟ್ಟುಕೊಂಡಿರುವ ಒಡೆಯರ ವರ್ಗಕ್ಕೆ ಸೇರಿದವನು. ತನ್ನನ್ನು ಕಂಡರೆ ಇತರರಿಗೆಂತೊ ಅಂತೆ ಐತ ಪೀಂಚಲುಗಳಿಗೂ ಗೌರವ. ತಾನು ಐತ ಪೀಂಚಲು ಮೂವರೂ ಸ್ವಲ್ಪ ಹೆಚ್ಚು ಕಡಿಮೆ ಸಮವಯಸ್ಸಿನವರು. ಅನೇಕ ವರ್ಷಗಳಿಂದಲೂ ಒಡನಾಡಿದವರು. ತನ್ನನ್ನು ಕಂಡರೆ ಹತ್ತಿರದ ಗೆಳೆಯನನ್ನು ಕಂಡಂತೆ ಅಕ್ಕರೆ ಪೀಂಚಲು ಐತರಿಗೆ. ಅವರು ಮದುವೆಯಾಗುವ ಮೊದಲು ತಾನು ಹೇಳಿದುದಕ್ಕೆ ಎದುರು ಹೇಳಿದವರಲ್ಲ. ತನ್ನನ್ನು, ಅವರಿಗೆ ತಿಳಿಯದೆಯೆ, ಒಂದು ರೀತಿಯ ಗುರುಭಾವದಿಂದ ಕಂಡು, ತನ್ನ ನಿರ್ಣಯಗಳಿಗೆ ಶಿಷ್ಯರಂತೆ ಶರಣಾಗಿ ಆಜ್ಞಾನುವರ್ತಿಗಳಾಗಿದ್ದರು. ಈಗಲೂ ಅವರಿಗೆ ತನ್ನ ಮೇಲೆ ವಿಶ್ವಾಸ, ಗೌರವ, ಸ್ನೇಹಭಾವ ಎಲ್ಲ ಅಚ್ಚಳಿಯದಿವೆ. ಆದರೂ ಮದುವೆಯಾದ ಮೇಲೆ ಅವರು ಅನೇಕ ವಿಚಾರಗಳಲ್ಲಿ ತಾನು ಅರಿಯದವನೆಂಬಂತೆ ಮಾತಾಡುತ್ತಾರೆ, ವರ್ತಿಸುತ್ತಾರೆ, ಎದುರುತ್ತರ ಕೊಡುತ್ತಾರೆ. 'ನಿಮಗೆ ಅದೆಲ್ಲ ಗೊತ್ತಾಗದಿಲ್ಲ, ಅಯ್ಯಾ!' ಎಂದು ಒಬ್ಬರ ಕಣ್ಣನ್ನು ಒಬ್ಬರು ನೋಡಿ, ಏನೊ ಇಂಗಿತಸಂವಾದ ಮಾಡಿಕೊಳ್ಳುತ್ತಾರೆ. ಏನೊ ತಮಗೆ ಮಾತ್ರ ಲಭಿಸಿರುವ ಗುಪ್ತಾನುಭವದಿಂದ ತಾವಿಬ್ಬರೂ ನನಗಿಂತಲೂ ಹೆಚ್ಚು ತಿಳಿದವರು ಎಂಬಂತೆ ನಡೆದುಕೊಳ್ಳುತ್ತಾರೆ. ಕೆಲವು ವಿಷಯಗಳಲ್ಲಂತೂ ಅನುಭವಶಾಲಿಗಳಾದ ವೃದ್ಧರು ಅನುಭವವಿಲ್ಲದ ಮಕ್ಕಳೊಡನೆ ದಾಕ್ಷಿಣ್ಯದಿಂದಲೊ ಕನಿಕರದಿಂದಲೊ ವ್ಯವಹರಿಸುವಂತೆ ಅರೆಪಾಲು ಮೂದಲಿಕೆಯಂತೆಯ ತೋರುವ ವ್ಯಂಗ್ಯವ್ಯಾಪಾರದಲ್ಲಿ ತೊಡಗುತ್ತಾರೆ. ಅವಿಧೇಯತೆಯೂ ಅಲ್ಲ, ಅವಜ್ಞೆಯೂ ಅಲ್ಲ ಎಂಬ ಅಸ್ಪಷ್ಟ ನಿಲುವಿನಿಂದ ಮನಸ್ಸಿಗೆ ಕೀಟಲೆ ಕೊಡುತ್ತಾರೆ. ತನಗಿಲ್ಲದ ಅದಾವ ವಿಶೇಷಾನುಭವ ಒದಗಿಬಿಟ್ಟಿದೆ ಇವರಿಗೆ, ಮದುವೆಯಾದ ಮೇಲೆ? ಇದ್ದಕ್ಕಿದ್ದಂತೆ ಹಾಗೆ ಕೋಡುಮೂಡಿದವರ ಹಾಗೆ ವರ್ತಿಸುತ್ತಾರಲ್ಲಾ?

"ಅಯ್ಯಾ, ಬನ್ನಿ ಕಪ್ಪೆಗೋಲು ಆಗಿದೆ. ನಿಮಗೊಂದು ನನಗೊಂದು" ಐತನ ಕರೆ ಕೇಳಿ ಮುಕುಂದಯ್ಯ ತನ್ನ ಚಿಂತನಧಾರೆ ತುಂಡಾದವನಂತೆ ತೆಕ್ಕನೆ ಹಗಲುಗನಸಿನಿಂದ ಎಚ್ಚತ್ತು ಕೆಲಸಕ್ಕೆ ಮುಂದುವರಿದನು.

ಮೂವರೂ ಕಪ್ಪೆಗೋಲು ಹಾಕುತ್ತಾ ಸರಲಿನಲ್ಲಿ ಮೇಲೆ ಮೇಲೆ ಹೋದರು. ನಾಲ್ಕಾರು ಕಾರೇಡಿಗಳೂ ಕೊಂಬುಕಾಲು ಮುರಿಸಿಕೊಂಡು ಪೀಂಚಲು ಹಿಡಿದಿದ್ದ ಹಾಳೆಕೊಟ್ಟೆಗೆ ಬಿದ್ದವು. ಏಡಿ ಹಿಡಿಯುವುದೆ ಮುಖ್ಯ

ಉದ್ದೇಶವಾಗಿ ಬರದಿದ್ದ ಮುಕುಂದಯ್ಯನ ಕಪ್ಪೆಗೋಲಿಗೆ ಒಂದೂ ಕಚ್ಚದಿರಲು ಬಿಲ್ಲವನಾದ ಐತ ಅದಕ್ಕೆ ಕಾರಣ ಹೇಳಿದನು, ಸಮಾಧಾನ ಮಾಡುವಂತೆ: "ಆ ಹಸಲವರ ಬಿಡಾರದವರು ಇದಾರಲ್ಲಾ ಅವರು, ಕೆಲಸಕ್ಕೆ ಬರದೆ ಉಳಿ ಕೂತಾಗಲೆಲ್ಲ, ಈ ಹಳ್ಳಕ್ಕೇ ಬಂದು ಕಲ್ಲು ಮುಗುಚುತ್ತಾರಲ್ದಾ? ಏಡಿ ಎಲ್ಲಾ ಅವರ ಪಾಲಿಗೆ ಆಗಿಹೋಯಿತ್ತು. ಮೊದಲು ಸಿಕ್ಕಿದ ಹಾಂಗೆ ಎಲ್ಲಿ ಸಿಕ್ಕುತ್ತವೆ ಈಗ?"

ತನ್ನ ಕಪ್ಪೆಗೋಲಿಗೆ ಏಡಿ ಕಚ್ಚದೆ ಬೇಸತ್ತವನ ಹಾಗೆ ಮುಕುಂದಯ್ಯ "ಏಡಿ ಹಿಡೀತಾ ಇರೋ ನೀನು. ನಾನು ಇಲ್ಲೆ ಕೆಳಗೆ, ಆ ಹಕ್ಕಲಿನಲ್ಲಿ, ಬಿದಿರುಹಿಂಡಿಲು ಮೇಲೆ ಹೊರಸಲ್ಹಕ್ಕಿ ಇವೆಯೇನೊ ನೋಡಿ ಬರ್ತೇನೆ, ಚೆಟ್ಟುಬಿಲ್ಲು ತಗೊಂಡು ಹೋಗಿ" ಎಂದು ತುಸು ಕಾದನು.

ಐತ ಕಪ್ಪೆಗೋಲು ಹಾಕುವುದನ್ನೆ ಆಸಕ್ತಿಯಿಂದ ಮುಂದುವರಿಸುತ್ತಿದ್ದನು. ಮುಕುಂದಯ್ಯ ನಿರೀಕ್ಷಿಸಿದ್ದಂತೆ, ತಾನೆ ಚೆಟ್ಟುಬಿಲ್ಲು ತೆಗೆದುಕೊಂಡು ಹೋಗುತ್ತೇನೆ, ಎಂದು ಅವನು ಮುಂದೆ ಬರಲಿಲ್ಲ. ಚೆಟ್ಟುಬಿಲ್ಲಿನಿಂದ ಹಕ್ಕಿ ಹೊಡೆಯುವುದರಲ್ಲಿ ಮುಕುಂದಯ್ಯ ಎಷ್ಟು ಪ್ರವೀಣನೋ ಅಷ್ಟೇ ಪ್ರವೀಣನಾಗಿದ್ದನು ಐತನೂ. ಅಲ್ಲದೆ ಹಕ್ಕಿಬೇಟೆಯ ಆಸಕ್ತಿಯಲ್ಲಿ ಮುಕುಂದಯ್ಯನಿಗಿಂತಲೂ ಒಂದು ಕೈ ಮೇಲಾಗಿತ್ತು ಐತನದು. ಆದ್ದರಿಂದ ಐತ ತಾನೇ ಚೆಟ್ಟುಬಿಲ್ಲು ಬೇಟೆಗೆ ಹೋಗಲು ಮುಂದೆ ಬರುತ್ತಾನೆ; ಹಾಗೆ ಮುಂದೆ ಬಂದರೆ ಅವನನ್ನು ಹಕ್ಕಿ ಬೇಟೆಗೆ ಹೋಗಲು ಹಕ್ಕಲಿಗೆ ಕಳಿಸಿ, ತಾನು ಏಕಾಂತದಲ್ಲಿ ಪೀಂಚಲುವೊಡನೆ ತನ್ನ ಉದ್ದೇಶ ಸಾಧನೆ ಮಾಡಿಕೊಳ್ಳಬಹುದು ಎಂದು ಹವಣಿಸಿದ್ದನು.

"ಹೊತ್ತು ಮಾಡಬೇಡಿ, ಬೇಗ ಬನ್ನಿ" ಐತನ ಸಲಹೆಯಂತೆ ಮುಕುಂದಯ್ಯ ಪೀಂಚಲುವನ್ನೆ ನೋಡುತ್ತಾ ಹಳುವಿನಲ್ಲಿ ಮರೆಯಾದನು.

ಪೀಂಚಲು ಅವನು ಹೋದತ್ತ ಕಡೆಯೆ ಎವೆಯಿಕ್ಕದೆ ನೋಡುತ್ತಾ "ಇವತ್ತು ಯಾಕೆ ಅಯ್ಯ ನನ್ನ ಕಡೆ ಮತ್ತೆ ಮತ್ತೆ ನೋಡುತ್ತಾರಲ್ಲಾ?" ಎಂದುಕೊಂಡು ಮುಗುಳುನಕ್ಕಳು.

ಮುಕುಂದಯ್ಯನಿಗೂ ಹಾಗೆಯೆ ಅನ್ನಿಸಿತ್ತು. ಮೂವರೂ ಕಪ್ಪೆಗೋಲು ಹಾಕುತ್ತಾ ಮುಂದುವರಿಯುತ್ತಿದ್ದಾಗ ಮುಕುಂದಯ್ಯ ಪೀಂಚಲು ಕಡೆ ನೋಡಿದಾಗಲೆಲ್ಲ ಅವಳೂ ತನ್ನನ್ನೆ ನೋಡುತ್ತಿರುವಂತೆ ಭಾಸವಾಗಿ "ಇವಳು ಯಾಕೆ ಇವತ್ತು ನನ್ನ ಕಡೇನೆ ನೋಡ್ತಾಳಲ್ಲಾ?" ಎಂದು ಸೋಜಿಗಪಟ್ಟಿದ್ದನು.

ಅಕ್ಷಿಪ್ರಸರಣದ ಅನೇಕಾರ್ಥವು ಅನುಭವಿಯಾಗಿದ್ದ ಪೀಂಚಲುಗೆ ಸ್ಫುರಿಸಿದಂತೆ ಮುಕುಂದಯ್ಯಗೆ ಆಗಲುಸಾಧ್ಯವೆ? ಅವನು ಮುಗುಳು ನಕ್ಕರೆ, ಇವನು ಸೋಜಿಗ ಪಡಬಲ್ಲ ಅಷ್ಟೆ!

ನಾಲ್ಕೈದುನಿಮಿಷಗಳೂ ಕಳೆದಿರಲಿಲ್ಲ. ಮುಕುಂದಯ್ಯ ಏದುತ್ತಾ ಓಡಿ ಬಂದ. ಐತ ಪೀಂಚಲು ಗಾಬರಿಯಿಂದ ಎದ್ದುನಿಂತು ಅವನ ಕಡೆ ನೋಡಿದರು.

ಏದುತ್ತಲೆ ಕೂಗಿದನು ಮುಕುಂದಯ್ಯ: 'ಐತ, ಓಡು! ಬೇಗೋಡು! ಒಂಟಿಗ ಹಂದಿ ಒಂದು ಆ ಇಲಾತ್‌ಸೀಂಗೇಲಿ ಮಲಗಿಕೊಂಡದೆ. ಕೋವಿ ತಗೊಂಡು, ನಾಯಿ ಕರಕೊಂಡು ಬರಾಕೆ ನಾ ಹೇಳ್ದೆ ಅಂತಾ ಹೇಳು ಐಗಳಿಗೆ. ಓಡ್ಹೋಗಿ ಹೇಳು! ಬೇಗ ಓಡು! ಸುಲಭದಲ್ಲಿ ಹೊಡೀಬ್ಹೈದು!"

ಕಪ್ಪೆಗೋಲನ್ನು ಕೆಳಕ್ಕೆಸೆದು, ಕಲ್ಲಿಂದ ಕಲ್ಲಿಗೆ ಹಾರಿ ನೆಗೆದು, ಒಂದೇ ಸಮನೆ ನಿಟ್ಟೋಟದಿಂದ ಓಡುತ್ತಾ ತೋಟದ ಕಡೆಗೆ ನುಗ್ಗಿ ಐತ ಕಣ್ಮರೆಯಾದನು.

ಫಕ್ಕನೆ ಸುತ್ತಲೂ ನಿಃಶಬ್ದವಾದಂತಾಯಿತು: ಕಾಗೆಗಳಂತೆ ಕೋಗಿಲೆಗಳೂ ವಿರಳವಾಗಿದ್ದ ಆ ಕೋಣೂರಿನ ಹಾಡ್ಯದಲ್ಲಿ ಅಪರೂಪಕ್ಕೆಂಬಂತೆ ಕೂಗುತ್ತಿದ್ದ ಒಂದು ಕೋಗಿಲೆಯ ಇಂಚರ ಅಲೆಅಲೆಯಾಗಿ ತೇಲಿಬರುತ್ತಿತ್ತು. ಒಂದು ಕಾಮಳ್ಳಿಯ ಹಿಂಡು ಉಲಿಯುತ್ತಾ ರೆಕ್ಕೆಸದ್ದೂ ಕಿವಿಗೆ ಬರುವಷ್ಟು ಸಮೀಪದಲ್ಲಿ ಹಾರಿಹೋಯಿತು. ದೂರ ತೋಟದ ಮೂಲೆಯಲ್ಲಿ ಮರ ಕಡಿಯುತ್ತಿದ್ದ ಸದ್ದು ಮಂದವಾಗಿ ಬರುತ್ತಿದ್ದು. ಪೀಂಚಲು ಏನೋ ಒಂದು ರೀತಿಯ ಸಂಕೋಚಭಾವವನ್ನು ಮರೆಮಾಡುವ ಪ್ರಯತ್ನದಲ್ಲಿ ತಾನು ಹಿಡಿದಿದ್ದ ಹಾಳೆಕೊಟ್ಟೆಯಲ್ಲಿದ್ದ ಏಡಿಗಳನ್ನು ಪರಿಶೀಲಿಸುವ ನೆವ ಹೂಡಿದ್ದಳು.

ಆ ಮೌನ ಮತ್ತು ಸಂಕೋಚಭಾವದ ಎರಡು ಮೂರು ನಿಮಿಷಗಳ ಕಾಲ ಗಂಟೆಗಳಷ್ಟು ದೀರ್ಘವಾಗಿ ತೋರಿ, ಮುಕುಂದಯ್ಯನಿಗೆ ಮನಸ್ಸಿಗೆ ಹೊರಲಾರದಷ್ಟು ಭಾರವಾಯಿತು. ವ್ಯರ್ಥವಾಗಿ ಕಳೆಯಲು ಸಮಯವಿರಲಿಲ್ಲ. ಐತ ಹಿಂದಿರುಗುವುದರೊಳಗೆ ಎಲ್ಲವನ್ನೂ ಪೂರೈಸಿಬಿಡಬೇಕಿತ್ತು! ಏನನ್ನೋ ಮಾತು ಪ್ರಾರಂಭಿಸಲು ತವಕಿಸುತ್ತಾ ನಿಂತ ಪೀಂಚಲು ಹಾಳೆಕೊಟ್ಟೆಯಿಂದ ತಲೆ ಎತ್ತುವುದನ್ನೆ ಕಾಯುತ್ತಿದ್ದನು. ಆದರೆ ಅವಳು ತಲೆ ಎತ್ತುವಂತೆಯೇ ತೋರಲಿಲ್ಲ.

"ಇವಳು ಯಾಕೆ ಇವತ್ತು ಹೀಗೆ?" ಮುಕುಂದಯ್ಯ ಮನಸ್ಸಿನಲ್ಲಿಯೆ ಅಂದುಕೊಂಡನು. ಮದುವೆಯಾದ ಮೇಲೆ ಬೇರೆಯೆ ಆಗಿಬಿಟ್ಟಿದ್ದಾಳೆ! ಹಿಂದೆಲ್ಲ ಎಷ್ಟು ಸರಸದಿಂದ, ಸಲಿಗೆಯಿಂದ, ಮುಗ್ಧಳಾಗಿ ಸಂಕೋಚವಿಲ್ಲದೆ ವರ್ತಿಸುತ್ತಿದ್ದಳು?"

ಪೀಂಚಲು ಮತ್ತು ಐತ ಇಬ್ಬರೂ ದಂಪತಿಗಳಾಗುವ ಮೊದಲು ಆರೇಳು ವರ್ಷಗಳಿಂದಲೂ ಮುಕುಂದಯ್ಯನ ಸಹಪಾಂಶುಗಳಾಗಿ ಒಡನಾಡಿಗಳಾಗಿದ್ದರು. ಪೀಂಚಲು ಹೆಣ್ಣುಜಾತಿಗೆ ಸೇರಿದವಳೆಂಬುದು ಅವನಿಗೆ ಜ್ಞಾನವಿಷಯವಾಗಿದ್ದಿತೆ ಹೊರತು ಭಾವವಿಷಯವಾಗಿಯೆ ಇರಲಿಲ್ಲ. ಬಾಲ್ಯಾನಂತರ ಅವನಲ್ಲಿ ಹೂವಳ್ಳಿ ಚಿನ್ನಮ್ಮನ ಪರವಾಗಿ ಯಾವ ಭಾವಪರಿವರ್ತನೆಯನ್ನು ಅನುಭವಿಸಿದ್ದನೊ ಅಂತಹ ಯಾವ ಭಾವವನ್ನೂ ಪೀಂಚಲು ಪರವಾಗಿ ಅನುಭವಿಸಿರಲಿಲ್ಲ. ತನ್ನೊಡನೆ ಬೇಟೆಗೆ ಬರುವ ತಮ್ಮ ಮನೆಯ ಒಂದು ಒಳ್ಳೆಯ ಜಾತಿಯ ಮತ್ತು ರೂಪದ ಹೆಣ್ಣು ನಾಯಿಯ ವಿಚಾರವಾಗಿ ಯಾವ ಮೋಹ ಮಮತೆ ಪ್ರೀತಿ ಪ್ರಶಂಸೆಗಳಿರಬಹುದಾಗಿತ್ತೋ ಹಾಗೆಯೆ ಮುಟ್ಟದವಳೂ ಕೀಳು ಜಾತಿಯವಳೂ ತಮ್ಮ ಕೂಲಿಯಾಳುಗಳ ಕುರುದೆಯೂ ಆಗಿದ್ದ ಪೀಂಚಲು ವಿಚಾರದಲ್ಲಿಯೂ ಒಂದು ವಿಶ್ವಾಸಪೂರ್ವಕವಾಗಿದ್ದ ಆಸಕ್ತಿ ಇರುತ್ತಿತ್ತು. ಕೆಲವು ವಿಷಯಗಳಲ್ಲಿ ಪೀಂಚಲು ಗಂಡುಹುಡುಗರಂತೆಯೆ ನಡೆಯುತ್ತಿದ್ದಳು. ತನ್ನವರಾದ ಒಕ್ಕಲಿಗ ಮನತನಸ್ಥರ ಹೆಣ್ಣುಮಕ್ಕಳಿಗೆ ಅಸಾಧ್ಯವಾದ ಸಾಹಸಗಳನ್ನೆಲ್ಲ ಮಾಡಿ

ಮುಕುಂದಯ್ಯನ ಬೆರಗಿಗೂ ಮೆಚ್ಚುಗೆಗೂ ಪಾತ್ರಳಾಗಿದ್ದಳು. ಅಡಕೆ ಮರಕ್ಕೆ ಹತ್ತಿ, ಕೆಳಗೆ ಬೀಳಲಾರದೆ ಹಿಂಗಾರಕ್ಕೆ ಸಿಕ್ಕಿಕೊಂಡು ಹೊಂಬಾಳೆಗಳನ್ನು ಅದೆಷ್ಟೋ ಸಾರಿ ಲೀಲಾಜಾಲವಾಗಿ ಕಿತ್ತುಕೊಟ್ಟಿದ್ದಳು. ತಾನೂ ಐತನೂ ಹುಳುಗಳಿಗೆ ಹೆದರಿ ಓಡಿಹೋದಾಗ ಅವಳು ಕಚ್ಚಿಸಿಕೊಂಡೂ ಹೆದರದೆ ಹುತ್ತದಲ್ಲಿದ್ದ ತುಡುವೆ ಜೇನನ್ನು ಕಿತ್ತುಕೊಟ್ಟಿದ್ದಳು. ಮರುದಿ ಮುಖ ಊದಿಕೊಂಡು ವಿಕಾರವಾಗಿ ತನ್ನವರಿಂದ ಬಯ್ಯಿಸಿಕೊಳ್ಳುತ್ತಿದ್ದುದನ್ನೂ ಲೆಕ್ಕಿಸದೆ. ಅಷ್ಟೆ ಅಲ್ಲದೆ, ಇತ್ತೀಚೆಗೆ ತನಗೂ ಹೂವಳ್ಳಿ ಚಿನ್ನಮ್ಮಗೂ ನಡುವಣ ಬಾಯಿಪತ್ರ ವ್ಯವಹಾರವನ್ನೂ ನಡೆಸಿ, ಗೋಪ್ಯವನ್ನು ಯಾರಿಗೂ ಬಿಟ್ಟುಕೊಡದೆ, ಯಾರಿಗೂ ತಿಳಿಯದಂತೆ ನೋಡಿಕೊಳ್ಳುವುದರಲ್ಲಿ ಯಶಸ್ವಿಯಾಗಿದ್ದಳು. ಆ ವಿಚಾರದಲ್ಲಿ ಅವಳು ತನ್ನ ಗಂಡ ಐತನಿಗಿಂತಲೂ ಸಾವಿರ ಪಾಲು ನಂಬಿಕೆಗೆ ಅರ್ಹಳಾಗಿದ್ದಳು. ಐತ ಸರಳ, ಶಕ್ತ, ಜಾಣ, ಶ್ರಮಸಹಿಷ್ಣು; ಆದರೆ ಬಾಯಾಳಿ. ಅವನ ಹತ್ತಿರ ಯಾವ ಗುಟ್ಟೂ ಒಂದು ದಿನವಾದರೂ ಸುರಕ್ಷಿತವಾಗಿರುವುದು ಅಸಾಧ್ಯವಾಗಿತ್ತು. ಒಮ್ಮೆ ಹುಡುಗರೆಲ ಸೇರಿ ಕದ್ದು, ಬಾಳೆಮರದ ಬುಡದಲ್ಲಿ ಹೂಳಿಟ್ಟ ಐಗಳ ಮಂಗಳೂರು ನಶ್ಯದ ಬೆಳ್ಳಿಯ ಪುಡಿ ಡಬ್ಬಿಯನ್ನು, ಅವರು ತುಸು ಪುಸಲಾಯಿಸಿದ್ದೆ ತಡ, ಅದನ್ನು ಕದಿಯುವಾಗ ಅವರ ಅವಸರ ಆಸಕ್ತಿಗಳನ್ನು ತೋರಿದ್ದನೋ ಅದೇ ಅವಸರ ಆಸಕ್ತಿಗಳಿಂದಲೆ, ಕದ್ದಿಟ್ಟ ಜಾಗವನ್ನೂ ಹೇಳಿಕೊಟ್ಟುದಲ್ಲದೆ ಡಬ್ಬಿಯನ್ನೂ ಅಗೆದು ತೆಗೆದುಕೊಟ್ಟು, ರಂಗಪ್ಪಗೌಡರಿಂದ ಎಲ್ಲರೂ ಚಡಿಏಟು ತಿನ್ನುವಂತೆ ಮಾಡಿದ್ದನು. ಗಟ್ಟದ ತಗ್ಗಿನವರ ಹರಕಲು ತಟ್ಟಿ ಗೋಡೆಯ ಬಿಡಾರಗಳಲ್ಲಿ ಗಂಡು ಹೆಣ್ಣುಗಳೊ ಗಂಡ ಹೆಂಡಿರೊ ಗೋಪ್ಯಕಾರ್ಯಗಳಲ್ಲಿ ಸಾಕಷ್ಟು ಮುಚ್ಚುಮರೆಯಿಲ್ಲದೆ ತೊಡಗಿದ್ದುದನ್ನು ಇವನು ಬೇಕೆಂದು ಹಣಿಕಿಯೊ, ಅಕಸ್ಮಾತ್ತಾಗಿ ಇಳಿಕಿಯೋ ಕಂಡಾಗ ಅದನ್ನೆಲ್ಲೆ ಹಾಗೆ ಹಾಗೆಯೆ, ಹಸಿಹಸಿಯಾಗಿಯೇ ಮುಕುಂದಯ್ಯನಿಗೆ ವಿನೋದ ವಿಷಯವನ್ನು ಹೇಳುವಂತೆ ಹೇಳಿ, ಹೊಟ್ಟೆ ಹಿಡಿದುಕೊಂಡು ಕುಮ್‌ಚೆಟ್ ಹೊಡೆದು ನಕ್ಕಿದ್ದನು! ಆ ವಿಚಾರದಲ್ಲಿ ಅವನಿಗೆ ತನ್ನದು ಪರರದು ಎಂದು ಎಗ್ಗೂ ಇರಲಿಲ್ಲ. ತಾನೆ, ಮದುವೆಯಾದ ಹೊಸದರಲ್ಲಿ, ಹೆಂಡತಿಯ ಮಗ್ಗುಲಲ್ಲಿ ಮೊತ್ತಮೊದಲು ಮಲಗಿದಾಗ ನಡೆದ ಗೋಪನೀಯವೂ ಅವಾಚ್ಯವೂ ಆದ ಸಂಗತಿಗಳನ್ನು ತನಗೆ ಲಭಿಸಿದ ಮೊದಲನೆಯ ಅವಕಾಶದಲ್ಲಿಯೆ, ಆಲಿಸಿದ ಮುಕುಂದಯ್ಯ ನಾಚಿ ಥೂಗೊಳ್ಳುವವರೆಗೂ ಬಹಿರಂಗಪಡಿಸಿ ಗಳಪಿದ್ದನು! ಆದ್ದರಿಂದಲೆ ಮುಕುಂದಯ್ಯ ತಾನು ಕೈಗೊಳ್ಳಲಿರುವ ರಹಸ್ಯ ಕಾರ್ಯಸಾಧನೆಗೆ ಐತನನ್ನು ಆರಿಸದೆ ಅವನ ಹೆಂಡತಿಯನ್ನು ಆರಿಸಿ, ಉಪಾಯದಿಂದ ಅವಳನ್ನು ತನ್ನ ಏಕಾಂತಕ್ಕೆ ಪ್ರತ್ಯೇಕಿಸಿದ್ದನು.

ಆದರೆ ಪೀಂಚಲು ಅನುಭವಿಸುತ್ತಿದ್ದ ಭಾವದ ಸ್ವರೂಪ ಬೇರೆಯದಾಗಿತ್ತು.

ಐತನನ್ನು ಮದುವೆಯಾಗುವುದಕ್ಕೆ ಮೊದಲು, ಅವಳು ಹುಡುಗಿಯಾಗಿ ಹೊರೆ ಹೊಣೆಹೆಚ್ಚೇನೂ ಇಲ್ಲದೆ, ಗದ್ದೆ ತೋಟ ಹಕ್ಕಲು ಹಾಡ್ಯ ಕಾಡುಗಳಲ್ಲಿ, ಹುಡುಗರ ಗುಂಪಿನೊಡನೆ ಅಥವಾ ಅವರ ಹಿಂದೆ, ಇತರ ತನ್ನಂತಹ ಗಟ್ಟದ ತಗ್ಗಿನ ಕುರುದೆಗಳೊಡನೆ ಅಲೆಯುತ್ತಿದ್ದಾಗ ಬಾಲಕರಲ್ಲೆಲ್ಲ ಮುಕುಂದಯ್ಯನನ್ನೆ ಬಹಳವಾಗಿ ಮೆಚ್ಚಿಕೊಂಡಿದ್ದಳು. ಜಾತಿ ಮತ್ತು ಸಾಮಾಜಿಕ ನೀತಿನಿಷ್ಠೆಗಳಿಗೆ ಅನುಗುಣವಾಗಿ ತನಗಿಂತಲೂ ತುಂಬ ಎತ್ತರದಲ್ಲಿ, ತಾನೆಂದೂ ಮುಟ್ಟಲಾರದಷ್ಟು ಮತ್ತು ಮುಟ್ಟಬಾರದಷ್ಟು ದೂರದಲ್ಲಿಯೆ ಇರುತ್ತಿದ್ದ ಮುಕುಂದಯ್ಯನನ್ನು ಆರಾಧ್ಯ ಭಾವದಿಂದಲೆ ಪೂಜಿಸುತ್ತಿದ್ದಳೆಂದರೆ ಅವನ ಪರವಾಗಿ ಅವಳಲ್ಲಿದ್ದ ಪ್ರಶಂಸೆಯ ಭಾವವನ್ನೇನು ತಪ್ಪಾಗಿ ವರ್ಣಿಸಿದಂತಾಗುವುದಿಲ್ಲ. ಇತರ ಎಲ್ಲ ಗೌಡರು ಹಳೆಪೈಕದವರು ಸೆಟ್ಟರು ಹಸಲವರು ಬಿಲ್ಲವರು ಕರಾದಿಗರು ಬೇಲರು ಹೊಲೆಯರು ಇವರ ಮಕ್ಕಳಿಗಿಂತ ಮುಕುಂದಯ್ಯ ರೂಪದಲ್ಲಾಗಲಿ ಬಣ್ಣದಲ್ಲಾಗಲಿ ಬುದ್ಧಿಯಲ್ಲಾಗಲಿ ಚಟುವಟಿಕೆಯಲ್ಲಾಗಲಿ ಸಾಹಸದಲ್ಲಾಗಲಿ ಮೇಲಾಗಿ ಮುಂದಾಗಿ ಕಾಣಿಸಿದ್ದನು, ಪೀಂಚಲು ಕಣ್ಣಿಗೆ. ಸ್ವಲ್ಪ ಬೆಳೆದ ಮೇಲೆ, ಬಾಲೆ

ತರಳೆಯಾದ ಮೇಲೆ, ಅವಳು ಮುಕುಂದಯ್ಯನನ್ನು ಯಾವ ಹೆಣ್ಣಾದರೂ ಲಕ್ಷಣವಾದ ಯಾವ ಗಂಡನ್ನಾದರೂ ಮೆಚ್ಚಿ ಬಯಸಿಕಾಣುವಂತೆ ಕಾಣುತ್ತಿದ್ದಳು. ಅವಳ ಆ ಭಾವಸಮೂಹದ ಎಳೆಗಳಲ್ಲಿ ಶೃಂಗಾರದ ಅಪೇಕ್ಷೆಯೂ ಒಂದು ಎಳೆಯಾಗಿತ್ತು ಎಂದರೆ ಅದು ಅವಳ ಮುಗ್ಧತೆಯನ್ನೇನೂ ಕಲುಷಿತಗೊಳಿಸುವಂತಿರಲಿಲ್ಲ. ಮುಕುಂದಯ್ಯನನ್ನು ತಾನು ಸುಮ್ಮನೆ ಮುಟ್ಟುವಷ್ಟಾದರೂ ಆಗಿದ್ದರೆ ಅವಳಿಗೆ ಸ್ವರ್ಗವೆ ಪ್ರಾಪ್ತವಾದಷ್ಟು ಆನಂದವಾಗುತ್ತಿತ್ತು. ಅದಕ್ಕೆ ಅವಳಿಗೆ ತಡೆಯಾಗಿದ್ದುದೆಂದರೆ ಜಾತಿ, ಸಮಾಜ, ವರ್ಗತಾರತಮ್ಯ. ಐತನನ್ನು ಮದುವೆಯಾದ ಮೇಲೆ, ಪೀಂಚಲುಗೆ ಗಂಡು ಹೆಣ್ಣುಗಳ ಸಂಬಂಧದ ಸ್ವರೂಪದಲ್ಲಿ ಅತ್ಯಂತ ವಿಸ್ಮಯದ ಮತ್ತು ಸುಖದ ಹೊಸ ಅನುಭವವುಂಟಾಗಿ, ಮುಕುಂದಯ್ಯನ ಪರವಾಗಿ ಅವಳ ನಡತೆ ಸಾಮಾಜಿಕ ಮತ್ತು ಜಾತಿಯ ನೀರಿಯ ಚೌಕಟ್ಟಿನ ಕಟ್ಟಿಗೊಳಗಾಯಿತು. ಹೊಸದಾಗಿ ಪಡೆದ ಶಾರೀರಿಕ ಸಂಬಂಧದಿಂದ ತನ್ನ ಗಂಡನ ಮೇಲೆ ಹಿಂದೆ ಅವಳಿಗಿದ್ದ ಪ್ರೀತಿ ಮೆಚ್ಚುಗೆಗಳು ನೂರರಷ್ಟಾಗಿ ಹೊಸ ಮೋಹಪಾಶದಿಂದ ಕಟ್ಟುಗೊಂಡು ಸುಭದ್ರವಾಗಿದ್ದುವು. ಆದರೆ ಆ ಪ್ರೇಮ ವ್ರತಸ್ವರೂಪದ್ದಾಗಿರಲಿಲ್ಲ. ದೃಢಕಾಯದ ಅರೋಗಿಯಾದ ಪ್ರಾಯದ ಪ್ರಾಣಿಯಲ್ಲಿರಬಹುದಾದ ಪ್ರಣಯದಂತೆ ರತಸ್ವರೂಪದ್ದಾಗಿತ್ತು ಎಂದರೆ ಅವರ ಸಂಬಂಧವನ್ನು ಅವಹೇಳನ ಮಾಡಿದಂತೆಯೂ ಆಗುವುದಿಲ್ಲ, ಕೀಳುಗೈದಂತೆಯೂ ಆಗುವುದಿಲ್ಲ. ಅದು ಸಹಜವಾಗಿತ್ತು, ಅಕೃತಕವಾಗಿತ್ತು ಎಂದಂತೆ ಮಾತ್ರ ಆಗುತ್ತದೆ. ತನ್ನ ಗಂಡನ ಸಂಬಂಧವಾದ ಅವಳ ನಡೆಯನ್ನು 'ಪಾತಿವ್ರತ್ಯ' ಎಂದು ಕರೆಯುವಂತಿರಲಿಲ್ಲ. ಏಕೆಂದರೆ ಅದಕ್ಕೆ ಸಮಾಜದ ನೀತಿಯ ಭೀತಿಯಾಗಲಿ, ಪಾಪ ನರಕಾದಿ ಧರ್ಮ ಭಯದ ಭಿತ್ತಿಯಾಗಲಿ, ಆದರ್ಶಸಾಧನೆಯ ಸಾಣೆಯಾಗಲಿ, ಆಕರ್ಷಣೆಯಾಗಲಿ ಇರಲಿಲ್ಲ. ಅದು ತೀರ ನೈಸರ್ಗಿಕವಾಗಿತ್ತು. ಐತನಲ್ಲದ ಮತ್ತಾವ ಗಂಡನ್ನಾಗಲಿ, ಮುಕುಂದಯ್ಯ ವಿನಾ, ಅದು ತಿರಸ್ಕರಿಸುವುದಿರಲಿ ಆಲೋಚಿಸುವ ಗೋಜಿಗೂ ಹೋಗಿರಲಿಲ್ಲ; ವ್ರತಪಾಲನೆಗಾಗಿ ಅಲ್ಲ, ನೈಸರ್ಗಿಕವಾಗಿ. ಅವಳ ಪ್ರಣಯಕ್ಕೆ ಅಂಗರಕ್ಷಕರಾರೂ ಇರಲಿಲ್ಲ; ಸಮಾಜ ನೀತಿಯ ಇಲಾಖೆಯಿಂದ ನೇಮಕವಾದವರಾಗಲಿ, ಧಾರ್ಮಿಕ ಭೀತಿಯ ಇಲಾಖೆಯಿಂದ ನೇಮಕವಾದವರಾಗಲಿ! ಆದ್ದರಿಂದಲೆ ಮದುವೆಗೆ ಮೊದಲು ಅವಳಿಗೆ ಮುಕುಂದಯ್ಯನ ಮೇಲಿದ್ದ ಅಭಿಮಾನ ಇಂದಿಗೂ ಅಕ್ಷತವಾಗಿಯೆ ಉಳಿದಿತ್ತು. ಐತ ಅಪೇಕ್ಷಿಸಿದ್ದನ್ನು ಮುಕುಂದಯ್ಯ ಅಪೇಕ್ಷಿಸಿದ್ದರೆ ಅವಳು 'ಇಲ್ಲ' ಎನ್ನುವ ಸ್ಥಿತಿಯಲ್ಲಿರಲಿಲ್ಲ; ಒಲ್ಲೆ ಎನ್ನುತ್ತಿರಲಿಲ್ಲ. ತನಗಿಂದಲೂ ಮಹತ್ತಾದುದಕ್ಕೆ ತನ್ನನ್ನು ಅರ್ಪಿಸಿಕೊಳ್ಳಲು ಅವಳು ಹಿಂಜರಿಯುತ್ತಿರಲಿಲ್ಲ. ತಾನು ಬಹುಪೂರ್ವದಿಂದಲೂ ಮೆಚ್ಚಿಕೊಂಡೇ ಬಂದಿರುವ ತನ್ನ ಒಡೆಯನಿಗೆ ತೋರುವ ಗೌರವವೆಂದೂ, ವಿಧೇಯತೆಯ ಅಂಗವೆಂದೂ, ಅವಳು ತನ್ನನ್ನು ಸಮರ್ಪಣ ಭಾವದಿಂದಲೇ, ಸಂತೋಷವಾಗಿಯೆ, ಪಾಪಭಯ ಲೇಶವಿಲ್ಲದ ಆತ್ಮನೈವೇದ್ಯ ರೂಪದಿಂದಲೇ ಒಪ್ಪಿಸಿಕೊಂಡುಬಿಡುತ್ತಿದ್ದಳು. ಹಾಗೆ ಒಪ್ಪಿಸಿಕೊಂಡೂ, ಐತನಿಗೆ, ತನ್ನ ಕೈ ಹಿಡಿದ ಗಂಡನಿಗೆ, ವಂಚನೆ ಮಾಡುತ್ತಿದ್ದೇನೆ ಎಂಬ ಭಾವನೆ ಅವಳಲ್ಲಿ ಇನಿತೂ ಇರಲಿಲ್ಲ. ಆ ಭಾವನೆ ಇದ್ದೂ ಒಂದು ವೇಳೆ ಅವಳು ಒಪ್ಪಿಸಿಕೊಂಡಿದ್ದರೆ, ಅವಳು ಮೋಸಗಾರ್ತಿಯಾಗುತ್ತಿದ್ದಳು; ಜಾರೆಯಾಗುತ್ತಿದ್ದಳು; ಕುಟಿಲೆಯಾಗುತ್ತಿದ್ದಳು.

ಏಡಿಕೊಟ್ಟೆಯ ಕಡೆಗೆ ಕಣ್ಣಾಗಿ, ಕೊಟ್ಟೆಯೊಳಕ್ಕೆ ಕೈಹಾಕಿಕೊಂಡು, ಮಿಟಿಮಿಟಿಗುಡುತ್ತಿದ್ದ ಏಡಿಗಳೊಡನೆ ಏನನ್ನೊ ಮಾಡುವವಳಂತೆ ತಲೆ ಬಾಗಿಸಿದ್ದ ಪೀಂಚಲುಗೆ ಅವಳು ತಲೆ ಎತ್ತುವುದನ್ನೆ ಕಾದು ಕಾದು ಸಾಕಾದ ಮುಕುಂದಯ್ಯ "ಏನೇ ಇದು? ಏಡಿ ಸಂಗಡ ಮಾತಾಡ್ತಿದ್ದೀಯಾ?" ಎಂದು ತುಸು ಹತ್ತಿರಕ್ಕೆ ಸರಿದನು.

ಹಿಂದಿನ ದಿನ ಬಿದ್ದ ಮಳೆಯ ದೆಸೆಯಿಂದಾಗಿ ಸ್ವಲ್ಪ ಹೆಚ್ಚಾಗಿಯೆ ನೀರು ಸುತ್ತಿದ್ದ ಒಂದು ಸಣ್ಣ ಬಂಡೆಗುಂಡಿನ ಮೇಲೆ ಕುಕ್ಕುರುಗಾಲಿನಲ್ಲಿ ಕೂತು ಮುಖ ಬಾಗಿದ್ದ ಬಿಲ್ಲವರ ಹುಡುಗಿ, ಪೀಂಚಲು, ಮೇಲು ಜಾತಿಯ ಸಣ್ಣ ಅಯ್ಯನನ್ನು

ಮುಟ್ಟುಚಿಟ್ಟು ಮಾಡಿಬಿಡುತ್ತೇನಲ್ಲಾ ಎಂಬು ಹುಟ್ಟಿದಂದಿನಿಂದ ಬಂದ ಅಭ್ಯಾಸಬಲದಿಂದ, ದಾಡಿಬಿಡುವ ಅವಸರದ ಔತ್ಸುಕ್ಯದಲ್ಲಿ ತಟಕ್ಕನೆ ಎದ್ದು ಹಿಂದಕ್ಕೆ ಸರಿದು, ಒಂದು ಕಾಲು ಬಂಡೆಯಿಂದ ಜಾರಿ, ಹೊಂಗಿ ನೀರಿಗೆ ಬೀಳುವಂತಾಗಿ ತತ್ತರಿಸುತ್ತಿರುವಷ್ಟರಲ್ಲಿ ಮುಕುಂದಯ್ಯ ಅವಳನ್ನು ರಟ್ಟೆ ಹಿಡಿದು, ಬೀಳದಂತೆ ನಿಲ್ಲಿಸಿಬಿಟ್ಟನು!

ಅವನು ಅವಳ ಬತ್ತಲೆಯ ತೋಳನ್ನು ಹಿಡಿಯುವ ಗಡಿಬಿಡಿಯಲ್ಲಿ, ಕುಪ್ಪಸವಾಗಲಿ ರವಕೆಯಾಗಲಿ ಇಲ್ಲದೆ ಬರಿಯ ಸೀರೆಯ ಸೆರಗಿನಿಂದ ಮಾತ್ರ ಮರೆಯಾಗಿದ್ದ ಅವಳ ಎದೆಗೂ ಅವನ ಕೈ ನಸು ತಾಗಿತ್ತು. ನೀರಿಗೆ ಬೀಳದಂತೆ ಅವಳನ್ನು ಹಿಡಿದು ನಿಲ್ಲಿಸುವ ಏಕಮಾತ್ರ ಉದ್ದೇಶದಿಂದ ಅವಳ ಮೈಯನ್ನು, ಮುಟ್ಟಬಹುದಾದವಳು ಮುಟ್ಟಬಾರದವಳು ಎಂಬ ಯಾವ ತಾರತಮ್ಯಕ್ಕೂ ಆಲೋಚನೆಗೂ ಅವಕಾಶವಿಲ್ಲದೆ, ಮುಟ್ಟಿದ್ದನು. ಅವಳನ್ನು ನೀರಿಗೆ ಬೀಳದಂತೆ ರಕ್ಷಿಸುವ ಆತುರದಲ್ಲಿ ಅವಳ ಮೈಯ ಆ ಭಾಗ ಈ ಭಾಗ ಎಂದು ಮೀನ ಮೇಷ ಮಾಡುವ ಅನುಚಿತಕ್ಕೆ ಅಲ್ಲಿ ಅವಕಾಶವಿರಲಿಲ್ಲ. ಆದ್ದರಿಂದ ಅವನ ಮನಸ್ಸಿನಲ್ಲಿ ಯಾವ ಭಾವ ಸಂಚಾರವೂ ಆಗಿರಲಿಲ್ಲ.

ಆದರೆ ಪೀಂಚಲು ಅವನ ಕ್ರಿಯೆಗೆ ಶ್ಲೇಷಾರ್ಥ ಆರೋಪಿಸಲು ಇಷ್ಟವುಳ್ಳವಳಾಗಿದ್ದಂತೆ ತೋರಿತು. ಅವನ ಹಿಡಿತ ಮತ್ತು ಸ್ಪರ್ಶ ಎರಡೂ, ಎರಡು ದೃಷ್ಟಿಯಿಂದಲೂ, ತನ್ನನ್ನು ನೀರಿಗೆ ಬೀಳದಂತೆ ರಕ್ಷಿಸುವ ದೃಷ್ಟಿ ಮತ್ತು ಅನ್ಯೋದ್ದೇಶದಿಂದ ತನ್ನನ್ನು ಸ್ಪರ್ಶಿಸಿದ ದೃಷ್ಟಿ, ಮನಸ್ಸಿಗೆ ಹಿತವಾಗಿತ್ತು, ಆಪ್ಯಾಯಮಾನವಾಗಿತ್ತು. ಆಪ್ಯಾಯಮಾನವಾಗಿದ್ದ ಒಂದು ದೃಷ್ಟಿಯಿಂದ ಮುಕುಂದಯ್ಯನ ಕ್ರಿಯೆ ಮುಂದುವರಿಯಬಹುದೆಂದೆ ಅವನ ಕಡೆಗೆ ಕಣ್ಣರಳಿಸಿ ನಿಡುನೋಡುತ್ತಾ “ನನ್ನ ಮುಟ್ಟಿಬಿಟ್ರಲ್ಲಾ, ಅಯ್ಯಾ!” ಎಂದಳು, ಮುಗುಳುನಗೆ ಬೀರಿ.

“ಮುಟ್ಟಿದರೇನು ನಿನ್ನ ಜಾತಿ ಹೋಗ್ಲಿಲ್ಲ” ಅವಳ ತೋಳಿನ ಹಿಡಿತವನ್ನು ಸಡಿಲಿಸಿ, ಬಿಟ್ಟು, ಹಿಂದಕ್ಕೆ ಸರಿದು ನಿಂತು, ಮುಕುಂದಯ್ಯ ಕೈದೋರಿದನು “ನೋಡಲ್ಲಿ, ನಿನ್ನ ತಳಾಲೆ ತೇಲಿ ಹೋಗ್ತಾ ಇದೆ.”

ತೇಲಿಹೋಗುತ್ತಿದ್ದ ತನ್ನ ಹಾಳೆ ಟೋಪಿಯನ್ನು ಹಿಡಿದೆತ್ತಿಕೊಳ್ಳಲೆಂದು ಪೀಂಚಲು ಒಂದು ಹಾಸುಬಂಡೆಗೆ ಹಾರಿ, ಮೊಳಕಾಲೆತ್ತರದ ನೀರಿಗೂ ಇಳಿದು, ಸೀರೆಯ ಬಹುಭಾಗ ಒದ್ದೆಯಾದುದನ್ನೂ ಗಮನಿಸದೆ ತಳಾಲೆಯನ್ನು ತಂದಳು.

“ಅದ್ಯಾಕೇ, ಅಷ್ಟು ಗಡಿಬಿಡಿ ಗಾಬರಿ ನಿನಗೆ?” ಮುಕುಂದಯ್ಯ ಕೇಳಿದನು. ನಿರ್ಭಾವವಾಗಿ, ಅವಳು ಭಾವೋದ್ವೇಗದ ಮತ್ತು ಅಸ್ಥಿರತೆಯ ಉಸಿರಾಟವನ್ನು ಗಮನಿಸಿ.

ಪೀಂಚಲು ಅವನ ಧ್ವನಿಯ ಧೈರ್ಯಕ್ಕೂ ಸ್ಥೈರ್ಯಕ್ಕೂ ಎಚ್ಚತ್ತುಕೊಂಡು ಮುಕುಂದಯ್ಯನ ಮುಖದ ಕಡೆ ನೇರವಾಗಿ ನೋಡಿದಳು, ಅವನ ಕಣ್ಣಿಗೆ ಕಣ್ಣಿಟ್ಟು. ಅವನ ಕಣ್ಣಿನಲ್ಲಿ ಒಂದಿನಿತೂ ಅಸ್ಥಿರತೆ ತೋರಲಿಲ್ಲ. ನೂರು ಮಾತು ತಿಳಿಸಲಾರದ ಏನನ್ನೊ ಅವನ ಒಂದು ನೋಟ ತಿಳಿಸಿದಂತಾಗಿ, ತರುಣಿಯ ಚಂಚಲ ಮನಸ್ಸು ಮಂತ್ರದಿಂದೆಂಬಂತೆ ತಿಳಿಯಾಯಿತು!

ಇದ್ದಕ್ಕಿದ್ದಹಾಗೆ ಮುಕುಂದಯ್ಯ ಕೇಳಿದನು “ಪೀಂಚ್ಲು, ನನಗೊಂದು ಉಪಕಾರ ಆಗಬೇಕಾಗಿದೆಯಲ್ಲಾ! ಮಾಡ್ತೀಯಾ?”

“ಕೇಳ್ತೀರಲ್ಲ ನನ್ನ?.... ಏನು? ಹೇಳಿರಿ, ಅಯ್ಯಾ” ತುಂಬ ಕೃತಜ್ಞತೆಗೆಂಬಂತೆ ಉತ್ತರಿಸಿದಳು ಪೀಂಚಲು.

“ಮಾಡ್ತೀನಿ ಅಂತ ಭಾಷೆ ಕೊಟ್ಟರೆ....” ಮುಕುಂದಯ್ಯನ ದನಿಯಲ್ಲಿ ದೈನ್ಯವಿತ್ತು.

“ನಿಮ್ಮ ಪಾದದಾಣೆ, ಆಳಾಗಿ ಮಾಡ್ತೀನಿ, ಹೇಳಿ!” ಹುಡುಗಿಯ ಮಾತು ಅವಳ ಮನಸ್ಸು ಏರಿದ್ದ ಮಟ್ಟವನ್ನು ಸೂಚಿಸುವಂತಿತ್ತು.

“ಯಾರಿಗೂ ಗೊತ್ತಾಗಬಾರದು.”

“ಇಲ್ಲ, ಯಾರಿಗೂ ಹೇಳುವುದಿಲ್ಲ.”

“ಐತಗೂ ಗೊತ್ತಾಗಬಾರದು.”

ಹುಡುಗಿ ‘ಹ್ಞೂ’ ಎನ್ನದೆ ಸ್ವಲ್ಪ ಹಿಂದು ಮುಂದು ನೋಡುತ್ತಿದ್ದುದನ್ನು ಗಮನಿಸಿ ಮುಕುಂದಯ್ಯ ವಿವರಿಸಿದನು: “ನಿನ್ನ ಗಂಡಗೆ ಹೇಳಬಾರದ್ದೇನಲ್ಲ. ಆದರೆ ಅಂವ ಪೂರಾ ಬಾಯಾಳಿ. ನಿನಗೇ ಗೊತ್ತಿದೆ, ಅವನ ಹತ್ತಿರ ಯಾವ ಗುಟ್ಟೂ ಇಟ್ಟುಕೊಳ್ಳಾಕೆ ಸಾಧ್ಯ ಇಲ್ಲ....”

“ಆಗಲಿ, ಒಡೆಯ!” ಅತ್ಯಂತ ಹೃದಯಪೂರ್ವಕವಾದ ಸಹಾನುಭೂತಿಯ ವಾಣಿಯಿಂದ ಭರವಸೆ ಇತ್ತಳು ಪೀಂಚಲು, ಒಡೆಯನ ದನಿ ತುಸು ನಡುಗತೊಡಗಿದ್ದುದನ್ನೂ ಕಣ್ಣು ತೇವಗೊಳ್ಳುತ್ತಿದ್ದುದನ್ನೂ ಅರಿತು, ಅನುಭವಿಸಿ.

ಮುಕುಂದಯ್ಯ ತಾನು ಆವೊತ್ತು ಹೊತ್ತಾರೆ ಗುತ್ತಿಯಿಂದ ಕೇಳಿದ್ದ ದುರ್ವಾರ್ತೆಯನ್ನು ಸಂಕ್ಷೇಪವಾಗಿ, ಶೀಘ್ರವಾಗಿ ತಿಳಿಸಿ, ಹೂವಳ್ಳಿ ಚಿನ್ನಮ್ಮನ ಬಳಿಗೆ ತಾನು ಹೇಳಿ ಕಳಿಸುವುದನ್ನು ಹೋಗಿ ಹೇಳಬೇಕೆಂದೂ, ಏನಾದರೂ ಮಾಡಬೇಕಾಗಿ ಬಂದರೆ ಮಾಡಬೇಕೆಂದೂ ಹೃದಯಸ್ಪರ್ಶಿಯಾಗುವಂತೆ ತಿಳಿಸಿದನು.

‘ಹೂವಳ್ಳಿ ಅಮ್ಮ,’ ‘ಚಿನ್ನಕ್ಕ’ ಎಂದೆಲ್ಲ ಪೀಂಚಲು ಕರೆಯುತ್ತಿದ್ದ ಚಿನ್ನಮ್ಮನ ಪರಿಚಯ ಅವಳಿಗೆ ಮುಕುಂದಯ್ಯನ ಪರಿಚಯದಷ್ಟೆ ಹಳೆಯದಾಗಿತ್ತು. ಅಲ್ಲದೆ ಇತ್ತೀಚೆಗೆ ಮುಕುಂದಯ್ಯನ ‘ಹಂಸದೂತಿ’ಯಾಗಿಯೂ ಚಿನ್ನಮ್ಮನ ಬಳಿಗೆ ಹೋಗಿ ಬಂದಿದ್ದಳು. ತಾನು ಹೂವಳ್ಳಿಗೆ ಹೋದಾಗಲೆಲ್ಲ ತನ್ನನ್ನು ಕಾಣುತ್ತಿದ್ದ ಅಕ್ಕರೆಯ ರೀತಿಯಿಂದಲೂ ಪೀಂಚಲು ಚಿನ್ನಮ್ಮನ ಪ್ರೀತಿಗೆ ಮಾರುಹೋಗಿದ್ದಳು. ಈಗ ಮುಕುಂದಯ್ಯನಿಗೆಂತೊ ಅಂತೆ ಚಿನ್ನಮ್ಮನಿಗೂ ಬಂದೊದಗಬಹುದಾದ ಅನಿಷ್ಟವನ್ನು ತಪ್ಪಿಸುವ ಮಹತ್ಕಾರ್ಯದಲ್ಲಿ ಭಾಗಿಯಾಗುವ ತನ್ನ ಕರ್ತವ್ಯ ಮಾತ್ರವಲ್ಲದೆ ಪುಣ್ಯವೆಂದು ಭಾವಿಸಿ, ಅವಳ ಚೇತನ ತನ್ನ ಸಾಹಸದ ರೆಕ್ಕೆ ಕೆದರಲು ಉತ್ಸಾಹದಿಂದಲೆ ಅನುವಾಯಿತು.

“ಇವತ್ತು ಬೈಗಿನ ಹೊತ್ತು ಆ ವಾಟೆ ಹಿಂಡಲಿನ ಹತ್ತಿರ ಬಾ. ಮರೀಬ್ಯಾಡ.”

“ಹ್ಞೂ ಬರ್ತೀನಿ.”

“ಯಾರಾದರೂ ಕಂಡರೆ?”

“ಇಲಿಕಿವಿ ಸೊಪ್ಪು ಕುಯ್ಯಾಕ್ಕೆ ಹೋಗ್ತೀನಿ ಅಂತೀನಿ.”

“ಐತ ಬಂದಾ ಅಂತ ಕಾಣ್ತದೆ!” ಹಳ್ಳದ ಪಾತ್ರದ ದಾರಿಯಲ್ಲಿ, ಕೆಳಗೆ, ದೂರದಲ್ಲಿ, ಹಳು ಅಲುಗುತ್ತಿದ್ದುದನ್ನೂ ಕಲ್ಲುಹರಳು ಸದ್ದಾಗುತ್ತಿದ್ದುದನ್ನೂ ಗಮನಿಸಿ ಹೇಳಿದನು ಮುಕುಂದಯ್ಯ.

ಪೀಂಚಲು ತಳಾಲೆಯನ್ನು, ನೀರು ಸಿಡಿಯುವಂತೆ ಕೊಡಹಿ, ತಲೆಗೆ ಹಾಕಿಕೊಂಡು, ಏಡಿಯಿದ್ದ ಹಾಳೆಕೊಟ್ಟೆಯ ಬಳಿಗೆ ಹೋಗಿ ತುದಿಗಾಲ ಮೇಲೆ ಕೂತಳು. ಮುಕುಂದಯ್ಯ, ಐತ ಕೆಳಗೆ ಹಾಕಿದ್ದ ಕಪ್ಪೆಗೋಲನ್ನು ಕೈಗೆ ತೆಗೆದುಕೊಂಡು, ಒಂದು ಕಲ್ಲಿನ ಸಂಧಿಯ ಪೊಟರೆಗೆ ಇಳಿಬಿಟ್ಟು ಕೂತನು.

ಐತ ನಡೆದ ಸಂಗತಿಯನ್ನು ರಂಗಪ್ಪಗೌಡರು ಹೇಳಿದುದನ್ನೂ ಹೇಳಿದನು, ಹೀಗಾಗಿ ಹೋಯಿತಲ್ಲಾ ಎಂಬ ನಿರಾಶೆಯ ಭಂಗಿಯಲ್ಲಿ. ಆದರೆ ಮುಕುಂದಯ್ಯ ತಾನು ಏತಕ್ಕಾಗಿ ಐತನನ್ನು ಅಟ್ಟಿದ್ದೆ ಎಂಬುದನ್ನೆ ಮರೆತಂತೆ ಅಲಕ್ಷ್ಯಭಾವದಿಂದ ಉದಾಸೀನನಾಗಿದ್ದುದನ್ನು ಕಂಡು ಐತನಿಗೆ ಬೆರಗಾಯಿತು. ಪೀಂಚಲು ಕಡೆಗೆ ನೋಡಿದನು. ಅವಳೂ ನಿರ್ಲಕ್ಷವಾಗಿ, ಪ್ರಯತ್ನಪೂರ್ವಕವಾಗಿ ಮೌನವಾಗಿರುವಂತೆ ತೋರಿತು. ಅವಳ ತಳಾಲೆ ಹಿಂದುಮುಂದಾಗಿ ವಕ್ರವಕ್ರವಾಗಿದ್ದುದನ್ನೂ ಕೂದಲು ಕೆದರಿ ಹೊರಗೆ ಹೊರಟಿರುವುದನ್ನೂ ಗ್ರಹಿಸಿದನು. ಅವಳ ಸೀರೆ ಸೊಂಟದವರೆಗೂ ಒದ್ದೆಯಾಗಿದ್ದುದು ಕಣ್ಣಿಗೆ ಹೊಡೆಯುವಂತೆ ಕಾಣುತ್ತಿತ್ತು. ಹಳ್ಳಕ್ಕೆ ಏತಕ್ಕೊ ಇಳಿಯಬೇಕಾಯಿತೆಂದು ತೋರುತ್ತದೆ; ಅದಕ್ಕೇ ಸೀರೆ ಒದ್ದೆಯಾಗಿರಬೇಕು ಎಂದು ಊಹಿಸಿ ಬೇರೆಯ ವಿಚಾರವಾಗಿ ಮಾತೆತ್ತಿದನು.

ತನ್ನ ಪುಟ್ಟ ಹೆಂಡತಿಯನ್ನು ಒಂದು ಕ್ಷಣವೂ ಬಿಟ್ಟಿರಲು ಒಪ್ಪುತ್ತಿರಲಿಲ್ಲ ಅವನ ಮನಸ್ಸು. ಅದರಲ್ಲಿಯೂ ಇತರ ಗಂಡಸರು ಇದ್ದಾಗಲಂತೂ ಅವನು ಅವಳನ್ನು ಬಿಟ್ಟು ಹೋಗುತ್ತಲೇ ಇರಲಿಲ್ಲ. ಹೋಗಲೇಬೇಕಾಗಿ ಬಂದರೆ ಅವಳನ್ನೂ ಏನಾದರೂ ಉಪಾಯ ಮಾಡಿ ನೆವಹೇಳಿ ಕರೆದುಕೊಂಡೆ ಹೋಗುತ್ತಿದ್ದುದು ರೂಢಿ. ಆದರೆ ಮುಕುಂದಯ್ಯನೊಡನೆ ಅವಳನ್ನು ಬಿಟ್ಟುಹೋಗುವುದಕ್ಕೆ ಅವನು ಸ್ವಲ್ಪವೂ ಹಿಂದು ಮುಂದು ನೋಡಿರಲಿಲ್ಲ. ಮುಕುಂದಯ್ಯನನ್ನು ಚೆನ್ನಾಗಿ ಅರಿತಿದ್ದ ಅವನಿಗೆ, ಅವನಲ್ಲಿ ಅಚಲವಾದ ನಂಬುಗೆ ಇತ್ತು. ಅದಕ್ಕೆ ಬೆಂಬಲವಾಗಿ ಕೀಳು ಜಾತಿಯವರಾಗಿದ್ದ ತಾವು, ಪ್ರತ್ಯೇಕವಾದ ಪ್ರಾಣಿವರ್ಗಕ್ಕೆ ಸೇರಿದವರೋ ಎಂಬಂತೆ, ಮೇಲು ಜಾತಿಯ ಮನುಷ್ಯ ವರ್ಗಕ್ಕೆ ಸೇರಿದ ಮುಕುಂದಯ್ಯನ ಮೋಹಕ್ಕೆ ಪಕ್ಕಾಗುವುದೂ ಸಾಧ್ಯವಿರಲಿಲ್ಲ ಎಂಬುದೂ ಅವನ ರಕ್ತಗತ ಬುದ್ಧಿಯಾಗಿತ್ತು. ಜಿಂಕೆ ನಾಯಿಯ ಮೇಲೆ ಮೋಹಗೊಳ್ಳುವುದು ಹೇಗೆ ಅಸಂಭವವೋ ಹಾಗೆ.

ಎಲ್ಲರೂ ಮನೆಗೆ ಹಿಂದಕ್ಕೆ ಹೊರಟಾಗ ಮುಕುಂದಯ್ಯ ಭೂತದ ಬನದ ಹತ್ತಿರದ ಹಾದಿಯ ಮೇಲಾಗಿ ಹೋಗುವುದಕ್ಕೆ ಬದಲು ಐತ ಪೀಂಚಲು ಅವರ ಸಂಗಡವೇ ತೋಟದ ಬಳಸುದಾರಿಯಲ್ಲಿ ಹೊರಟಿದ್ದುದನ್ನು ನೋಡಿ ಐತನಿಗೆ ತುಸು ಸೋಜಿಗವೆ ಆಯಿತು. ಐತನು ಕೇಳಿದ ಪ್ರಶ್ನೆಗೆ ಮುಕುಂದಯ್ಯ ಕೊಟ್ಟ ಉತ್ತರ ‘ಈ ರಣ ಬಿಸಿಲಿನಲ್ಲಿ ಒಬ್ಬನೆ ಹೋಗುವುದಕ್ಕೆ ಬೇಜಾರಾಗಿ’ ಎಂದು. ಅದನ್ನು ಕೇಳಿದ ಪೀಂಚಲು ಸಣ್ಣಗೆ ನಕ್ಕಿದ್ದನ್ನೂ ಐತನು

ಗಮನಿಸದೆ ಇರಲಿಲ್ಲ. ತನಗರಿಯದುದು ಏನೊ ತನ್ನ ಹೆಂಡತಿಗೆ ಗೊತ್ತಾಗಿದೆ ಎಂಬ ಭಾವನೆ ಮೂಡತೊಡಗಿತ್ತು ಐತನ ಮನಸ್ಸಿನಲ್ಲಿ. ಪೀಂಚಲುವನ್ನು ಮುಟ್ಟಿದ್ದರಿಂದ ಮುಟ್ಟುಚಿಟ್ಟಾಗಿದ್ದ ಮುಕುಂದಯ್ಯ ಭೂತನ ಬನದ ಒಳಗಣಿಂದ ಹೇಗೆ ತಾನೆ ಹೋದಾನು ಎಂಬುದು ಐತನಿಗೆ ತಾನೆ ಹೇಗೆ ಗೊತ್ತಾಗಬೇಕು? ಪೀಂಚಲುಗೆ ಗೊತ್ತಾಗಿದ್ದಂತೆ!

* * *

## ೧೮

ಇನ್ನೂ ಬೈಗಾಗಿರಲಿಲ್ಲ: ಮಲೆನೆತ್ತಗೆ ಮೂರು ನಾಲ್ಕು ಮಾರು ಮೇಲೆಯ ಎತ್ತರದಲ್ಲಿತ್ತು ಹೊತ್ತು, ಹಿಂದಿನ ದಿನದ ಮಳೆಯಲ್ಲಿ ತೊಯ್ದು ತೊಳೆದು ಕಾಡಿನ ಹಸುರಿನ ಪ್ರಭಾವದಿಂದ ಎಂದಿಗಿಂತಲೂ ತಂಪಾಗಿ ಬೀಸತೊಡಗಿತ್ತು ಮೆಲುಗಾಳಿ.

ಸುದೀರ್ಘವಾದ ಗದ್ದೆಕೋಗಿನ ಒಡ್ಡಿನ ಪಕ್ಕದಲ್ಲಿ, ಕಾಡಿನ ಅಂಚಿನಲ್ಲಿ, ಬೆಟ್ಟಳ್ಳಿಯ ಕಡೆಗೆ ಹೋಗುತ್ತಿದ್ದ ಕಾಲುದಾರಿಯಲ್ಲಿ, ಅಲ್ಲಿ ಇಲ್ಲಿ ಮೂಸುತ್ತಾ, ಒಮ್ಮೊಮ್ಮೆ ಹಿಂಗಾಲೊಂದನ್ನು ತುಸು ಎತ್ತಿ ಕುಕ್ಕೋಟ ಓಡುತ್ತಾ, ಏತಕ್ಕೊ ಏನೊ ತಾನು ಮೂಸಿ ಆರಿಸಿದ ಅಲ್ಲೊಂದು ಇಲ್ಲೊಂದು ಪೊದೆಗೋ ಮರದ ತುಂಡಿಗೋ ಕಲ್ಲಿಗೋ ಕಾಲೆತ್ತಿ ಅಭಿಷೇಕಮಾಡುತ್ತಾ ಹೋಗುತ್ತಿದ್ದ ಹುಲಿಯ, ಆಗಾಗ ನಿಂತು ಹಿಂದಕ್ಕೆ ನೋಡಿ, ತನ್ನ ಯಜಮಾನ ತನ್ನನ್ನು ಹಿಂಬಾಲಿಸುತ್ತಿದ್ದಾನೆ ಎಂಬುದನ್ನು ಪ್ರತ್ಯಕ್ಷ ಪ್ರಮಾಣದಿಂದ ಗೊತ್ತುಮಾಡಿಕೊಂಡು, ಬೆಟ್ಟಳ್ಳಿಯ ಕಡೆಗೆ ಸಾಗುತ್ತಿತ್ತು. ಹುಲಿಯನ ದೃಷ್ಟಿಯಿಂದಲೆ ಹೇಳುವುದಾದರೆ, ಅದು ಸಾಗುತ್ತಿದ್ದುದು ಬೆಟ್ಟಳ್ಳಿ ಜಮಿನುದಾರರು ಕಲ್ಲಯ್ಯಗೌಡರ ಮನೆಗಲ್ಲ, ಅಲ್ಲಿಂದ ತುಸು ದೂರದಲ್ಲಿಯೇ ಇದ್ದ ಬೆಟ್ಟಳ್ಳಿಯ ಹೊಲೆಗೇರಿಗೆ.

ಹುಲಿಯನಿಗೆ ಬೆಟ್ಟಳ್ಳಿಯ ದಾರಿ ಮತ್ತು ಹೊಲೆಗೇರಿಗಳು ಮಾತ್ರವಲ್ಲ ಅಲ್ಲಿಯ ಸುತ್ತಮುತ್ತಣ ಪ್ರದೇಶವೆಲ್ಲ ಪರಿಚಯದ್ದೆ ಆಗಿತ್ತು. ಗುತ್ತಿಯ ಸವಾರಿ ಬೆಟ್ಟಳ್ಳಿ ಹೊಲೆಗೇರಿಗೆ ಸಿಂಬಾವಿಯಿಂದ ದಯಮಾಡಿಸಿದಾಗಲೆಲ್ಲ, ನಾಲ್ಕೈದು ವರ್ಷಗಳಿಂದಲೂ, ಅದು ಅವನನ್ನು ಬಿಡದೆ ಹಿಂಬಾಲಿಸುತ್ತಿತ್ತು, ಸ್ವಾಮಿಭಕ್ತನಾದ ಅಂಗರಕ್ಷಕನಂತೆ. ಬೇರೆ ಕಡೆಗಳಿಗೆ ತಾನು ಹೋದಾಗ ಅಲ್ಲಿಯ ನಾಯಿಗಳ ದೆಸೆಯಿಂದ ಗುಲ್ಲೋಗುಲ್ಲು ಏಳುವಂತೆ ಬೆಟ್ಟಳ್ಳಿ ಹೊಲಗೇರಿಯಲ್ಲಿ ಆಗುತ್ತಿರಲಿಲ್ಲ. ಬೆಟ್ಟಳ್ಳಿ ಹೊಲೆಗೇರಿಯ ನಾಯಿಗಳೆಲ್ಲ, ಹಿಂದೆ ವೈಸ್ ರಾಯನ್ನು ಕಂಡ ದೇಶೀಯ ರಾಜುರುಗಳಂತೆ, ಹುಲಿಯನ್ನು ಕಂಡೊಡನೆ ಬಾಲ ಮುದುರಿ, ತಮ್ಮ ವಿನಯ ವಿಧೇಯತೆಗಳನ್ನು ಪ್ರದರ್ಶಿಸಿ, ಒಳಗೊಳಗೆ ಹೆದರಿದರೂ ಹರ್ಷಾತಿರೇಕಕ್ಕೆಂಬಂತೆ ಬಿರುಸಿನಿಂದಲೆ ಬಾಲವಳ್ಳಾಡಿಸಿ, ಲಿಂಗ ಭೇದಾನುಗುಣವಾಗಿ ನೆಕ್ಕುವ ಅಥವಾ ನೆಕ್ಕಿಸಿಕೊಳ್ಳುವ ಕ್ರಿಯಾರೂಪದ ಕಪ್ಪಕಾಣಿಕೆಗಳನ್ನೂ ತಪ್ಪದೆ ಸಲ್ಲಿಸುತ್ತಿದ್ದುವು. ಆದ್ದರಿಂದ ಹುಲಿಯನಿಗೆ ಬೆಟ್ಟಳ್ಳಿ ಹೊಲೆಗೇರಿಗೆ ಹೋಗುವುದೆಂದರೆ ಖುಷಿ, ಸಂಭ್ರಮ, ಗುತ್ತಿಗೆಂತೊ ಅಂತೆ!

ಆದರೆ ಇಂದೇಕೆ ಯಜಮಾನ ಬೇಗ ಬೇಗ ಬರುತ್ತಿಲ್ಲ? ಏನಾದರೂ ದೀರ್ಘಾಲೋಚನೆ ಇರಬಹುದೆ? ಇರಬಹುದು! ಆದರೆ ಇನ್ನೂ ಒಂದು ವಿಶೇಷ ಸಂಗತಿ, ಹುಲಿಯ ಗಮನಿಸಿದ್ದು: ಹಿಂದಿನಂತಲ್ಲದೆ ಇಂದು ದಾರಿ ನಿರ್ಜನವಾಗಿದೆ ಅನೇಕರು ಬೆಟ್ಟಳ್ಳಿಗೆ ಅಭಿಮುಖವಾಗಿ ಹೋಗುತ್ತಿದ್ದಾರೆ. ಗುತ್ತಿ ಅವರನ್ನು ಸಂಧಿಸಿದಂತೆಲ್ಲ ಮಾತಿನಲ್ಲಿ ಸಿಕ್ಕಿಕೊಂಡು ನಿಧಾನವಾಗಿ ನಡೆಯಬೇಕಾಗಿದೆ, ಅನಿವಾರ್ಯವಾಗಿ. ಹುಲಿಯನಿಗೆ ಮನುಷ್ಯರ ಮಾತು ಗೊತ್ತಿದ್ದರೆ ಅದರ ಕಿವಿಗೆ ಬೀಳುತ್ತಿದ್ದುದು ಈ ಶಬ್ದ ಸಮೂಹ: ಬೀಸೆಕಲ್ಲು ಸವಾರಿ, ತೀರ್ಥಳ್ಳಿ, ಪಾದ್ರಿ, ಕಿಲಸ್ತರ ಜಾತಿ, ದ್ಯಾವೇಗೌಡ್ರು ಇತ್ಯಾದಿ.

ಹುಲಿಯ ನೋಡುತ್ತದೆ ಆ ಸುಪರಿಚಿತ ಅರೆಕಲ್ಲು ಬಳಿಸಾರುತ್ತಿದೆ. ಆ ಅರೆಕಲ್ಲಿನ ಹತ್ತಿರವೆ ಹೊಲೆಗೇರಿಗೆ ಅಗಚುವ ದಾರಿ. ತಾನು ಆ ದಾರಿಯಲ್ಲಿ ಹೋಗುವಾಗಲೂ ಬರುವಾಗಲೂ ಯಾವಾಗಲೂ ತಪ್ಪದೆ ಒದ್ದೆ ಮಾಡುತ್ತಿದ್ದ ಅರೆಕಲ್ಲಿನ ಮೇಲೆ ಎದ್ದಂತೆ ಕಾಣಿಸುತ್ತಿರುವ ಕಲ್ಲುಗುಂಡೂ ತೋರುತ್ತಿದೆ. ಅದರ ಪಕ್ಕದಲ್ಲಿಯೆ ಕಲ್ಲುಸಂಧಿಯಲ್ಲಿ ಬೆಳೆಯಲಾರದ ಬೆಳೆದು ಗುಜ್ಜಾಗಿರುವ ಕಾರೆಯ ಮಟ್ಟೂ ಇದೆ.

ಹುಲಿಯ ಕಾರೆಮಟ್ಟಿನ ಅರೆಕಲ್ಲುಗುಂಡಿಗೆ ಕಾಲೆತ್ತಿ ಅಭಿಷೇಕ ಮಾಡುವ ತನ್ನ ಸಂಪ್ರದಾಯದ ಕರ್ತವ್ಯವನ್ನು ಪೂರೈಸಿ, ಹೊಲೆಗೇರಿಗೆ ಹೋಗುವ ದಾಯಿಲ್ಲಿಯ ಸ್ವಲ್ಪ ದೂರ ಮುಂದುವರಿದು, ನಿಂತು, ಹಿಂದಿರುಗಿ ನೋಡಿತು: ಇದೇನು? ಯಜಮಾನ ತಾನು ಬಂದ ದಾರಿಯಲ್ಲಿ ಬರದೆ ಬೆಟ್ಟಳ್ಳಿ ಗೌಡರ ಮನೆಯ ಕಡೆಗೆ ಹೋಗುವ ದಾರಿಯಲ್ಲಿ ಇತರರೊಡನೆ ಹರಟುತ್ತಾ ಮುಂಬರಿಯುತ್ತಿದ್ದಾನೆ. ಯಜಮಾನನಿಗೆ ಅವನ ತಪ್ಪನ್ನು ತಿಳಿಸಿಕೊಡುವ ಉದ್ದೇಶದಿಂದಲೊ ಏನೊ ಅವನತ್ತ ಮುಖ ಮಾಡಿ, ಒಂದೆರಡು ಸಾರಿ, ತಾನು ಕಾಡಿನಲ್ಲಿ ಹಂದಿಗಿಂದಿ ತಡೆದಾಗ ಬೇಟೆಗಾರರನ್ನು ಎಚ್ಚರಿಸಿ ಅವರಿಗೆ ತಿಳುವಳಿಕೆ ಕೊಡವ ಸಲುವಾಗಿಯೆ ಕೂಗುವ ರೀತಿಯಲ್ಲಿ ಕೂಗಿತು. ಆದರೆ ಗುತ್ತಿ ತಿರುಗಿಯೂ ನೋಡಲಿಲ್ಲ. ಹುಲಿಯನ ಮನಸ್ಸು ಒಂದು ಕ್ಷಣ ಇಬ್ಬಗೆಯಾಯಿತು: ಯಜಮಾನನನ್ನು ಅನುಸರಿಸುವುದೆ? ಹೊಲೆಗೇರಿಗೆ ಹೋಗುವುದೆ? ಕಡೆಗೆ ಹೊಲಗೇರಿಯ ಆಕರ್ಷಣೆಯ ಸುಮನೋಹರವಾಗಿ, ಅತ್ತಕಡೆಯ ಓಡಿತು.

ಕಿಲಸ್ತರ ಪಾದ್ರಿ ಜೀವರತ್ನಯ್ಯನ 'ಬೀಸೆಕಲ್ಲಿನ ಸವಾರಿ' ಮತ್ತು ಆತ ಬೆಟ್ಟಳ್ಳಿ ಕಲ್ಲಯ್ಯಗೌಡರ ಹಿರಿಯ ಮಗ ದೇವಯ್ಯಗೌಡರಿಗೂ ಅದನ್ನು ಕಲಿಸುವ ಅದ್ಭುತದ ವೈಖರಿ-ಎರಡೂ ಗುತ್ತಿಯ ಮನಸ್ಸನ್ನು ಆಕರ್ಷಿಸಿದ್ದರೂ, ಅವನು ಮೂದಲು ಹೊಲೆಗೇರಿಗೆ ಹೋಗಿ, ಅನಂತರವೆ ಬೆಟ್ಟಳ್ಳಿ ಹಕ್ಕಲಿಗೆ ಹೋಗುವುದು ಎಂದು ನಿಶ್ಚಯಿಸಿದ್ದನು. ಆದರೆ ದಾರಿಯಲ್ಲಿ ಹಳೆಮನೆ ಹೊಲೆಯರ ಕೆಲವರೂ ಕೋಣೂರಿನ ಗಟ್ಟದವರಲ್ಲಿ ಕೆಲವರೂ ಸಿಕ್ಕಿದ್ದರಿಂದ ಮಾತು ಮಾತಾಡುತ್ತಾ, ಸಂಗದ ಹೊನಲಿಗೆ ಸಿಕ್ಕಿದವನಂತೆ, ಹೊಲೆಗೇರಿಗೆ ಅಗಚುವೆಡೆ ಮರೆತು ಬೆಟ್ಟಳ್ಳಿ ಮನೆಗೆ ಹೋಗುವ ದಾರಿಯಲ್ಲಿ ಸಂಗಾತಿಗಳ ಜೊತೆ ಮುಂಬರಿದಿದ್ದನು, ಹುಲಿಯ ಬೊಗಳಿದ್ದನ್ನೂ ಆಲಿಸಿಯೂ ಆಲಿಸದವನಂತೆ, ಸಂವಾದಾಸಕ್ತನಾಗಿ:

"ಬೀಸೆಕಲ್ಲಿನ ಮೇಲೆ ಹ್ಯಾಂಗೋ ಸವಾರಿ ಮಾಡಾದೂ?"

"ಆ ಪಾದ್ರಿಗೆ ಏನೋ ಹಸುರು ಗೊತ್ತಿರಬೈದೊ!"

“ಮತ್ತೆ? ಹಸರು ಗೊತ್ತಿರೋಕೆ, ಸಣ್ಣಗೌಡರ ಮ್ಯಾಲೆ ಮಂಕುಬೂದಿ ಎರಚಿ, ಕಿಲಸ್ತರ ಜಾತಿಗೆ ಸೇರಿಸೋಕೆ ಮಾಡ್ಯಾನಂತೆ!”

“ಬೀಸೆಕಲ್ಲು ಮ್ಯಾಲೆ ಹತ್ತಿ ಕೂತ್ಗೂತಾನಂತೆ. ಗೂಟ ಹಿಡಿದು ನಾವೆಲ್ಲ ಬೀಸೋ ಹಾಂಗೆ ಗಿರ್ರನೆ ‘ತಿರುಗಿಸ್ತಾನಂತೆ. ಬೀಸೆಕಲ್ಲು ಅನಾಮತ್ತು ಮೇಲೆದ್ದು ಎಲ್ಲಿಗಂದ್ರೆ ಅಲ್ಲಿಗೆ ಕಣ್ಣುಮುಚ್ಚಿ ಬಿಡೋದರ ಒಳಗೆ ಹೋಗ್ತದಂತೆ”.

“ಅಂತೂ ನಮ್ಮ ಬೆಟ್ಟಳ್ಳಿ ಒಡೇರು ಏನಾರೂ ಒಂದು ಹೊಸ ಹೊಸದು ಮಾಡ್ತಾನೆ ಇರತಾರೆ! ಈ ಪಾಸಲೆಗೆಲ್ಲ ಅವರೇ ಮೊದೂಲು ಗಾಡಿ ತರಿಸ್ದೋರು. ಒಂದು ಕುದುರೆ ಬ್ಯಾರೆ ತರ್ಸಿದ್ರು….ಅದು ಅಲ್ಲೆಲ್ಲೊ ತ್ವಾಟದ ಅಗಳಿಗೆ ಬಿದ್ದು ಸೊಂಟ ಮುರುಕೊಂಡು ಸತ್ತುಹೋತಂತೆ…..!”

“ಆ ಗಾಡಿ ಬರೀ ಬಂಡಿ ಚಕ್ಕಡಿ ಅಲ್ಲ ಕಣೋ; ಕಮಾನು ಗಾಡಿ! ಎಂಥ ಮಳೆ ಇರಲಿ, ಬಿಸ್ಲು ಇರಲಿ, ಒಳಗೆ ಕೂತ್ರೆ ಮನೇಲಿ ದಿಂಬು ಒರಗಿಕೊಂಡು ಕೂತ್ಹಾಂಗೆ ಇರ್ತದೆ…”

“ನೀನೇನು ಗಾಡೀಲಿ ಕೂತ್ಹಾಂಗೆ ಮಾತಾಡ್ತೀಯಲ್ಲಾ?”

“ಅವತ್ತೊಂದು ತೀರ್ಥಳ್ಳಿಗೆ ಹೋಗ್ತಿದ್ರು. ಮೇಗ್ರಳ್ಳಿ ಹತ್ತಿರ, ಹಳೇ ಹೆದ್ದಾರಿ ಇನ್ನೂ ದುರಸ್ತಾಗಿರಲಿಲ್ಲ, ಗಾಡಿ ಚಕ್ರ ಕಣಿಗೆ ಬಿದ್ದು, ನಾವೆಲ್ಲ ದಾರೀಲಿ ಹೋಗೋರು ಚಕ್ರಕ್ಕೆ ಕೈಕೊಟ್ಟು ಎತ್ತಿ, ನೂಕಿ, ದಾರೀಗ ತರಬೇಕಾಯ್ತು ಆವಾಗ್ಲೆ ನಾನು ಒಳಗೆಲ್ಲ ಹಣಕಿ ನೋಡ್ದೆ! ಹ್ಹಿಹ್ಹಿಹ್ಹಿ! ಕೈಹಾಕಿ ಮುಟ್ಟಿಯೂ ನೋಡಿಬಿಟ್ಟೆ! ದಿಂಬುಹಾಕಿದ್ಹಾಂಗೆ ಮೆತ್ತೆ ಹಾಕಿದ್ರೋ ಒರಗಿಕೊಳ್ಳಾಕ್ಕೆ…..!”

“ಎತ್ತಿನ ಕೊಳ್ಳೀಗೆ ಗಂಟೆಸರ ಹಾಕಿರ್ತಾರೊ; ಗಾಡಿ ಬರ್ತಿದ್ರೆ ಏಸು ಪಸಂದಾಗಿರ್ತದೆ? ಗ್ಯೈಲ್, ಗ್ಯೈಲ್, ಗ್ಯೈಲ್, ಗ್ಯೈಲ್ ಅಂತಾ!”

“ಕೋಡಿಗೂ ಫಳಾ ಫಳಾ ಹೊಳೆಯೇ ಹಿತ್ತಾಳೆ ಕುಂಚ ಹಾಕಿ, ಬಣ್ಣದ ಕುಚ್ಚು ನೇತು ಬಿಟ್ಟಿರುತ್ತಾರೊ!….. “

“ಅಲ್ಲಾ…. ಅದೆಲ್ಲಾ ಸರಿ. ಆದರೆ ಗಾಡಿ ಹೊಡೆಯೋಕೆ ಆ ಬಚ್ಚನ್ನ ಇಟ್ಕೊಂಡಿದಾರಂತಲ್ಲೋ? ಗೌಡರ ಮನೇಲಿ ಹೊಲೇರನ್ನ ಒಳಂಗಳಕ್ಕೆ ಕಾಲಿಡೋಕೆ ಬಿಡಾದಿಲ್ಲ. ಅಂತಲ್ಲಿ ಇವರು ಅವನ್ನ ಗಾಡಿ ಹೊಡಿಯೋಕೆ ಇಟ್ಟುಕೊಂಡೂ, ಅವನ ಕೈಲಿ ಮುಟ್ಟಿಸ್ಕೊಂಡೂ….ಥೂ ಥೂ ಥೂ ಕಿಲಸ್ತರು ಮಾಡಿದ್ಹಾಂಗೆ ಮಾಡ್ತೀದಾರಲ್ಲೋ….”

“ಅದೆಲ್ಲ ಆ ಪಾದ್ರಿ ಹಾಕಿರೋ ಮಂಕುಬೂದಿ ದೆಸೆ ಕಾಣೋ! ಅವರನ್ನ ತೀರ್ಥಳ್ಳಿ ಪ್ಯಾಟೆಗೆ, ಶಿಮೂಗ್ಗಾ ಷಹರಿಗೆ ಕರಕೊಂಡು ಹೋಗಿ, ಕುಣಿಸಿ, ಆ ಯೂರೋಫೇನ್ ಬಿಳಿದೊರೆ ಪಾದ್ರಿ ಇದಾನಂತಲ್ಲಾ ಅವನ ಹತ್ರಾನು ಬೋದ್ನೆ ಮಾಡ್ಸಿ, ಕುಡಿಸಿ, ಕುಣಿಸಿ, ಅವರ ಬುದ್ಧೀನೆ ಕೆಡಿಸಿಬಿಟ್ಟಿದಾನಂತೆ….”

“ಸೈ ಬಿಡು, ಅದಕ್ಕೇ ಮತ್ತೆ? ಅವರ ಮನೆ ದೇವರ ತುಳಿಸಿಕಟ್ಟೇನೆ ಕಿತ್ತುಹಾಕಾದಕ್ಕೆ ಹಾರೆ ಸಮೆಗೋಲು ತಗೊಂಡು ಹೋಗಿದ್ರಂತೆ! ದೊಡ್ಡಗೌಡ್ರು `ನಿನ್ನ ಗುಂಡಿನಾಗೆ ಹೊಡೆದುಬಿಡ್ತೀನಿ' ಅಂತ ಹೆದರಿಸಿ ತಡೆದರಂತೆ....!”

“ಪಾಪ, ಅವರ ಹೆಂಡ್ತೀನೂ ಅಳ್ತಳ್ತಾ ಬಂದು ಗಂಡನ್ನ ಕಾಲು ಹಿಡ್ಕೊಂಡರಂತೆ, ತುಳಸಿಕಲ್ಲು ಒಡೆದು ಹಾಕಬ್ಯಾಡಿ ಅಂತಾ!”

“ಯಾರು ಅಂತೀಯಾ ಅವರ ಹೆಂಡತಿ? ನಮ್ಮ ಕೋಣೂರು ಸಣ್ಣಗೌಡ್ರು ಮುಕುಂದಯ್ಯ ಇದ್ದಾರಲ್ಲ ಅವರ ಅಕ್ಕ, ಖಾಸಾ ಅಕ್ಕ!”

“ಗಂಡ ಜಾತಿಗೆ ಸೇರಿದ ಮೇಲೆ ಹೆಂಡ್ತೀನೂ ಕಿಲಸ್ತರೆ ಆದ್ಹಾಂಗೆ ಆಯ್ತಲ್ಲಾ!”

“ಅದ್ಯಾಕೆ ಹಾಂಗೆ? ಇವರೇನು ಹೋಗಿ ಆ ಪಾದ್ರಿಹತ್ರ ತೀರ್ಥ ತಗೊಂಡು ಜಾತಿ ಕೆಡಸಿಕೊಳ್ತಾರೇನು....?”

“ಹೆಂಡ್ತೀನೂ ತಮ್ಮ ಜೊತೇಲಿ ಕಿಲಸ್ತರ ಜಾತಿಗೆ ಸೇರಿದ ಇದ್ರೆ, ಅವರು ಕಿಲಸ್ತರವಳನ್ನೆ ಒಬ್ಬಳನ್ನ ಮದುವೆ ಆಗ್ತಾರಂತೆ!...”

“ಅದೇ ಅಂತೆ ಕಣೊ, ಕುಶಾಮತ್ತು! ಆ ಪಾದ್ರಿಗೆ ಎಂಟೋ ಹತ್ತೊ ಜನ, ಒಂದು ಹಿಂಡೇ, ಹೆಣ್ಣು ಮಕ್ಕಳು ಅವೆಯಂತೊ! ಅದೂ ದಿಂಡೇ ದಿಂಡೇಹೆಣ್ಣಳಂತೆ! ಈ ಗೌಡ್ರನ್ನ ಕರಕೊಂಡು ಹೋಗಿ, ಅವರ ಕೈಲಿ ಊಟಗೀಟ ಹಾಕ್ಸಿ, ಮೆಹನತ್ತ ಮಾಡಿದಾನಂತೆ. ಅದೂ ಒಂದು ಕತೇನೆ ಆಗಿಬಿಟ್ಟದಂತೆ!....”

“ಅಂತೂ ಒಳ್ಳೆ ಕಿಸಾಗೊಳ್ಳೀನೆ ಆಗ್ಯದೆ ಅನ್ನು! ಪಾಪ, ಆ ಕೋಣೂರು ಅಮ್ಮಗೆ ಒಂದೊ ಎಲ್ಡೋ ವರ್ಷದ ಒಂದು ಮಗು ಬ್ಯಾರೆ ಅದೆ ಕಣೋ!”

“ಗಂಡೋ? ಹೆಣ್ಣೊ? “

“ಗಂಡೋ!”

“ಮೊಮ್ಮಗನ್ನ ಎಲ್ಲಿ ಬಿಟ್ಟಾರು ನಮ್ಮ ದೊಡ್ಡಗೌಡ್ರ? ಆ ಪಾದ್ರೀನ ಸೀಳಿಸೀಳಿ ಹಾಕ್ಬಿಟ್ಟಾರು!... “

“ಓಹೋಹೋ! ಏನು ಗಲಾಟೆ ಕೇಳಿಸ್ತಾ ಇದೆಯೋ ಹಕ್ಕಲಾಗೆ? ಆಗ್ಲೆ ಬೀಸೆಕಲ್ಲು ಸವಾರಿ ನೋಡಾಕೆ ಜನ ಗೇರ್‍ರೈಸಿಬಿಟ್ಟದೆ ಅಂತಾ ಕಾಣ್ತದೆ. “

ಗುತ್ತಿ ಸಂಗಾತಿಗಳೊಡನೆ ಬೆಟ್ಟಳ್ಳಿ ಹಕ್ಕಲನ್ನು ತಲುಪಿದಾಗ ಇನ್ನೂ `ಬೀಸೆಕಲ್ಲು ಸವಾರಿ' ಪ್ರಾರಂಭವಾಗಿರಲಿಲ್ಲ. ಆದರೆ ಸಮೀಪದ ಹಳ್ಳಿ ಮನೆಗಳ ಆಳುಕಾಳು, ಮಕ್ಕಳೂ ಮರಿಗಳೆಲ್ಲ ಸೋಜಿಗೆ ನೋಡುವ ಕಾತರದಿಂದ ಪ್ರೇರಿತರಾಗಿ, ಹೊತ್ತಿಗೆ ಮೊದಲೆ ನೆರೆದಿದ್ದುದರಿಂದ ಸಂತೆ ಜಾತ್ರೆಗಳಲ್ಲಾಗುವಂತೆ ಸದ್ದು ಮೊಳಗತೊಡಗಿತ್ತು.

ತೀರ್ಥಹಳ್ಳಿಯ ಪಾದ್ರಿ ಜೀವರತ್ನಯ್ಯ ಉತ್ಸಾಹೀ ಯುವಕನಾಗಿದ್ದ ಬೆಟ್ಟಳ್ಳಿ ದೇವಯ್ಯನಿಗೆ ಬೈಸಿಕಲ್ಲು ಕಲಿಸಲು ಮಾತುಕೊಟ್ಟಿದ್ದು ವಾರತ್ತೆ ವಿವಿಧ ರೂಪ ಧರಿಸಿ, ಸುತ್ತಮುತ್ತಣ ಹಳ್ಳಿಗಳಲ್ಲಿ ಹಬ್ಬಿ, ಬೆಟ್ಟಳ್ಳಿಯ ಹಕ್ಕಲಿಗೆ ಜನರನ್ನು ಆಕರ್ಷಿತ್ತು. ಎತ್ತಿನಗಾಡಿಯೇ ಅಪೂರ್ವವೂ ಆಶ್ಚರ್ಯಕರವೂ ಆಗಿದ್ದ ಈ ಕಾಲದ ಹಳ್ಳಿಗರಿಗೆ ಬೈಸಿಕಲ್ ಎಂಬ ವಿದೇಶೀಯ ಪದವೂ ಆ ಹೆಸರಿನ ವಸ್ತುವೂ ಅದರ ಸವಾರಿಯೂ ಒಂದು ಅದ್ಭುತವಾದ ಅತೀಂದ್ರಿಯ ವ್ಯಾಪಾರಸದೃಶವಾಗಿದ್ದುದರಲ್ಲಿ ಆಶ್ಚರ್ಯ ವೇನಿಲ್ಲ. ಬೈಸಿಕಲ್ ಎಂಬ ಪದ ಸರಿಯಾಗಿ ಉಚ್ಚಾರಣ ಮಾಡಲಾರದ ಹಳ್ಳಿಗರ ಬಾಯಲ್ಲಿ ತಮಗೆ ಚೆನ್ನಾಗಿ ಪರಿಚಯವಿದ್ದು ದಿನಬಳಕೆಯಲ್ಲಿದ್ದ 'ಬೀಸೆಕಲ್ಲು' ಎಂಬ ಪದಕ್ಕೆ ಮತಾಂತರವಾಗಿತ್ತು. ಬೈಸಿಕಲ್ ಎಂಬ ವಸ್ತುವನ್ನು ಕಂಡರಿಯಲಿಲ್ಲವಾದ್ದರಿಂದಲೂ ಬೀಸೆಕಲ್ಲನ್ನು ಹುಟ್ಟಿದಂದಿನಿಂದಲೂ ಕಂಡಿದ್ದರಾದ್ದರಿಂದಲೂ ಬೈಸಿಕಲ್ ಸವಾರಿಯನ್ನು ಬೀಸೆಕಲ್ಲಿನ ಸವಾರಿ ಎಂದು ಕರೆದು, ಪಾದ್ರಿ ಬೀಸೆಕಲ್ಲಿನ ಮೇಲೆ ಸವಾರಿ ಮಾಡುತ್ತಾನೆಂದೂ ದೇವಯ್ಯಗೌಡರಿಗೂ ಅದನ್ನು ಹೇಳಿ ಕೊಡುತ್ತಾನೆಂದೂ ವದಂತಿ ಹಬ್ಬಿತ್ತು. ಜನರ ಕಲ್ಪನೆಯಲ್ಲಿ ಕುದುರೆಯ ಮೇಲೆಯೋ ಜಮಖಾನೆಯ ಮೇಲೆಯೋ ಕುಳಿತು ಆಕಾಶದಲ್ಲಿ ಸಂಚಾರ ಮಾಡುವಂತೆ, ಪಾದ್ರಿ ಬೀಸೆಕಲ್ಲಿನ ಮೇಲೆ ಕುಳಿತು ಮಂತ್ರಶಕ್ತಿಯಿಂದ ಸಂಚರಿಸುತ್ತಾನೆ ಎಂಬು ಚಿತ್ರಿಸಿಕೊಂಡಿದ್ದರು.

ಇದ್ದಕ್ಕಿದ್ದಂತೆ ಜನರ ಗುಜುಗುಜು ಇಳಿದ ಹಾಗಾಯಿತು. ಅಲ್ಲಿ ಇಲ್ಲಿ ಗುಸುಗುಸು ಮಾತು ಮೂದಲಾಯಿತು. ನೋಡುತ್ತಿದ್ದಂತೆ ಪೊದೆಗಳ ನಡುವಣಿಂದ ಪಾದ್ರಿ ಜೀವರತ್ನಯ್ಯನೂ ಬೆಟ್ಟಳ್ಳಿ ದೇವಯ್ಯನೂ ಕಾಣಿಸಿಕೊಂಡು ಹಕ್ಕಲ ಕಡೆಗೆ ಬಂದರು. ಇದ್ದಲಿನಷ್ಟು ಕರ್‍ಗಿದ್ದು ಪಾದ್ರಿ ಮಲ್ಲಿಗೆ ಹೂವಿನಂತಹ ಬಿಳಿಯ ಬಟ್ಟೆಗಳನ್ನು ಧರಿಸಿದ್ದನು. ಒಂದು ಅಂಚಿಲ್ಲದ ಬಿಳಿಯ ರುಮಾಲು ತಲೆಯನ್ನಲಂಕರಿಸಿತ್ತು. ಗುಂಡಿ ಹಾಕದೆ ತೆರೆದಿದ್ದ ಬಿಳಿಯ ಕೋಟಿನ ಒಳಗೆ ಧರಿಸಿದ್ದ ಶರಟಿನ ಗುಂಡಿಗಳನ್ನು ಬಿಸಿಲಿಗೆ ಹೊಳೆಯುತ್ತಿದ್ದುವು. ಉತ್ತರೀಯವೊಂದು, ಅದೂ ಬಿಳಿಯದೆ, ಕೊರಳನ್ನು ಸುತ್ತಿ, ಬೆನ್ನ ಮೇಲೊಂದು ತುದಿಯಾಗಿಯೂ ಎದೆಯ ಮೇಲೊಂದು ತದಿಯಾಗಿಯೂ ಮೆರೆಯುತ್ತಿತ್ತು. ಹಳ್ಳಿಗರ ಬೆರಗಿಗೆ ಕಾರಣವಾಗಿದ್ದು ಗಡಿಯಾಖುದ ಸರಪಣಿ ಕೋಟಿನ ಗಡಿಯಾರದ ಜೇಬಿನಿಂದ ಇಳಿಬಿದ್ದಿತ್ತು. ಒಂದು ತೆಳ್ಳನೆಯ ಬಿಳಿಯ ಪಂಚೆಯನ್ನು ಕಚ್ಚೆ ಹಾಕಿ ಉಟ್ಟಿದ್ದನು. ಮೆಟ್ಟುಗಳನ್ನೇ, ಅಪರೂಪವಾಗಿ, ಯಜಮಾನ ಗೌಡರುಗಳ ಕಾಲಿನಲ್ಲಿ ಮಾತ್ರ ನೋಡುತ್ತಿದ್ದ ಹಳ್ಳಿಗರ ಕುತೂಹಲ ಗೌರವಕ್ಕೆ ತಿರುಗುವಂತೆ ಕಾಳಿಗೆ ಬೂಟೀಸು ಹಾಕಿದ್ದನ್ನು. ತೆಳ್ಳಗೆ ಎತ್ತರವಾಗಿದ್ದ ಆ ವ್ಯಕ್ತಿಯನ್ನು ನೋಡಿ ಅವರ ಜಾತಿ ನೀತಿ ಮತ್ತು ಅವನು ಮಾಡುತ್ತಿದ್ದನೆಂದು ಹೇಳಲಾಗುತ್ತಿದ್ದ ಮತಾಂತರದ ಹಾವಳಿ ಇವುಗಳಿಂದ ಅವನ ವಿಚಾರದಲ್ಲಿ ಅತ್ಯಂತ ತಿರಸ್ಕಾರದ ಭಾವನೆ ಇದ್ದವರೂ ಕೂಡ ತುಸು ಹೆದೆ ಮುಚ್ಚುವಂತಾದರು.

ಪಾದ್ರಿಯ ಪಕ್ಕದಲ್ಲಿದ್ದ ದೇವಯ್ಯ ಮೈಕಟ್ಟಿನಲ್ಲಿ ಪಾದ್ರಿಗಿಂತಲೂ ಒಂದು ಕೈ ಮೇಲಾಗಿದ್ದನು. ಬಣ್ಣದಲ್ಲಿಯೂ ಪಾದ್ರಿ ಯಾವ ಪ್ರಮಾಣದಲ್ಲಿ ಕಪ್ಪಾಗಿದ್ದನೋ ಅದೇ ಪ್ರಮಾಣದಲ್ಲಿ ಅವನು ಕೆಂಪಗಿದ್ದನು. ಆ ಬಣ್ಣ ಮತ್ತು ಮೈಕಟ್ಟು ಅವರ ಮನೆತನದ ಲಕ್ಷಣಗಳಾಗಿದ್ದುವು. ಉಡುಪು ಅಲಂಕಾರಗಳಲ್ಲಿ ಅವನ ಗೌಡತನ ತುಸುತುಸುವೆ ಕಿಲಸ್ತರತನಕ್ಕೆ ತಿರುಗಲು ಶುರುವಾಗಿತ್ತು. ಅವನು ತಲೆಗೆ ಯಾವ ಉಡುಪನ್ನೂ ಹಾಕಿರಲಿಲ್ಲ. ಕ್ರಾಪು ಬಿಟ್ಟಿದ್ದನು. ಗೀರಿನ ಶರಟು, ಕರಿಯ ಕೋಟು ಹಾಕಿ, ಕೆಂಪಂಚಿನ ಕಚ್ಚೆಪಂಚೆ ಉಟ್ಟು ಸಾಧಾರಣವಾಗಿ ಅತ್ತಕಡೆ ಬಳಕೆಯಲ್ಲಿ ಕನ್ನಡ ಜಿಲ್ಲೆಯವಲ್ಲದ, ಶಿವಮೂಗ್ಗಾದ ಕಡೆಯಿಂದ ಆಮದಾದ, ಬಯಲು ಸೀಮೆಯ ಮೆಟ್ಟುಗಳನ್ನು ಹಾಕಿದ್ದನು. ಆದರೆ

ಕಿವಿಗಳಲ್ಲಿ ಇನ್ನೂ ಒಂಟಿಗಳು ಮಾಯವಾಗಿರಲಿಲ್ಲ: ಹುಟ್ಟಿನಲ್ಲಿ ಆತನು ಗೌಡರ ಕುಲಕ್ಕೆ ಸೇರಿದವನು ಎಂಬುದಕ್ಕೆ ಅವು ಮಾತ್ರವೆ ಸಾಕ್ಷಿಯಾಗಿದ್ದುವು!

`ಹಕ್ಕಲು' ಕಾಡು ವಿರಳವಾಗುತ್ತಾ ಬಂದಿದ್ದ ಅದರಂಚಿನ ಭಾಗವಾಗಿತ್ತೆ ಹೊರತು `ಬಯಲು' ಆಗಿರಲಿಲ್ಲ. ಅದರ ನಡುನಡುವೆ ದೂರ ದೂರದಲ್ಲಿ ಹುಳಿಚೊಪ್ಪಿನ ಪೊದೆಗಳೂ ಬೆಮ್ಮಾರಲ ಮಟ್ಟುಗಳೂ ಅರಮರಲ ಗಿಜರುಗಳೂ ಇದ್ದುವು. ಅದು ಧನಗಳು ಮೇಯುವ ಕಾವಲಾಗಿಯೂ ಕರುಗಳ `ಒಳಕಡೆ' ಯಾಗಿಯೂ ಉಪಯೋಗದಲ್ಲಿತ್ತು. ಬಯಲು ಸೀಮೆಯಲ್ಲಿ `ಬಯಲು' ಎಂದು ಕರೆಸಿಕೊಳ್ಳುವಂತಹ ಜಾಗ ಮಲೆನಾಡಿನಲ್ಲಿ ಪ್ರಾಯಶಃ ಇಲ್ಲವೆ ಇಲ್ಲ. ಏಕೆಂದರೆ ಅಂತಹ ಸಮತಟ್ಟಿನ ಪ್ರದೇಶವೆ ಅಲ್ಲಿ ದುರ್ಲಭ. ಆದ್ದರಿಂದಲೆ ಪಾದ್ರಿ ಬೈಸಿಕಲ್ಲನ್ನು ತಾನೆ ನೂಕಿಕೊಂಡೊ ಹತ್ತಿಕೊಂಡೊ ಬರುವುದಕ್ಕೆ ಬದಲಾಗಿ, ಅದನ್ನು ಹೊತ್ತು ತರುವಂತೆ ಗಾಡಿ ಹೊಡೆಯುವ ಬಚ್ಚನಿಗೆ ಆಜ್ಞೆಮಾಡಿ ಬಂದಿದ್ದನು. ಪಾದ್ರಿಯಿಂದಲೂ ಪಾದ್ರಿಯ ಪ್ರಭಾವಕ್ಕೊಳಗಾಗಿದ್ದ ಸಣ್ಣಗೌಡರಿಂದಲೂ ಆಗ ತಾನೆ ನವನಾಗರಿಕತೆಗೆ ಪ್ರವೇಶದೀಕ್ಷೆ ಪಡೆಯುತ್ತಿದ್ದೇನೆಂದು ಭಾವಿಸಿಕೊಂಡು, ತನ್ನ ಕೇರಿಯವರನ್ನೂ ಇತರ ಆಳುಕಾಳುಗಳನ್ನೂ ತಿರಸ್ಕಾರಭಾವದಿಂದ ನೋಡತ್ತಾ ಅವರ ದ್ವೇಷಾಸೂಯೆಗಳಿಗೂ ಪಕ್ಕಾಗಿದ್ದ ಬಚ್ಚ ತುಂಬ ಸಂತೋಷ ಹೆಮ್ಮೆಗಳಿಂದ ಬೈಸಿಕಲ್ಲನ್ನು ಹೊರುವ ಕೆಲಸಕ್ಕೆ ಒಪ್ಪಿದ್ದನು: ಅಂತಹ ಪಳಪಳ ಹೊಳೆಯುವ, ಕೈ ತೊಳೆದುಕೊಂಡೆ ಮುಟ್ಟಬೇಕು ಎಂಬಷ್ಟು ರಮ್ಯವಾಗಿರುವ, ಅದುವರೆಗೂ ಅಲ್ಲಿ ಯಾರೂ ಕಾಣದಿರುವ ಹೊಸ ವಾಹನವನ್ನು ಹೊರುವ ಅರ್ಹತೆ ತನ್ನಂತಹ ಮುಂದುವರಿದವರಿಗಲ್ಲದೆ ಇನ್ನಾರಿಗೆ ಸಲ್ಲುತ್ತದೆ? ಆದರೂ ಅದನ್ನು ಎತ್ತಿಕೊಳಲು ಕೈ ಹಾಕುವ ಮುನ್ನ ಅವನಲ್ಲಿ ಭಯ ಸಂಚಾರವಾಯಿತು! ಅದನ್ನು ಯಾವ ಭಾಗದಲ್ಲಿ ಹೇಗೆ ಎತ್ತಬೇಕು ಎನ್ನುವುದು ಅವನಿಗೆ ಸಮಸ್ಯೆಯೆ ಆಗಿಬಿಟ್ಟಿತು. ಒಮ್ಮೆ ಹಿಡಿದೆತ್ತಲು ಪ್ರಯತ್ನಿಸಿದಾಗ ಹಠತ್ತಾನೆ ಟ್ರಿಣ್ ಟ್ರಿಣ್ ಸದ್ದಾಗಿ, ಹೆದರಿ, ಅದನ್ನು ಬಿಟ್ಟು ದೂರ ಸರಿದು ನಿಂತನು! ಇನ್ನೊಮ್ಮೆ ಚಕ್ರ ತಿರುಗಿ ಕೈ ಬೆರಳು ಸಿಕ್ಕಿತು! ಮತ್ತೊಮ್ಮೆ ಅದರ ಕಾಲುಸರಪಣಿಯ ಮುಳ್ಳಿಗೆ ಬಟ್ಟೆ ಸಿಕ್ಕಿ ಹರಿದೆಹೋಯಿತು! ಅಯ್ಯೋ ಗ್ರಹಚಾರವೆ! ಹೆಬ್ಬುಬ್ಬೆಗೆ ಎತ್ತಿಕೊಂಡು ಬರುತ್ತೇನೆ ಎಂದು ಒಪ್ಪಿಕೊಂಡದ್ದೇನೊ ಅಯಿತು! ಈಗೇನು ಮಾಡುವುದು?

ಎಷ್ಟು ಹೊತ್ತಾದರೂ ಬೈಸಿಕಲ್ ಹೊತ್ತ ಬಚ್ಚ ಕಾಣದಿರಲು, ದೇವಯ್ಯನೆ ಒಬ್ಬ ಆಳಿನೊಡನೆ ಮನೆಗೆ ಓಡಿ ಬಂದನು. ನೋಡುತ್ತಾನೆ: ಬಚ್ಚ ಇನ್ನೂ, ದೇವತೆಯ ಬಳಿ ಆರಾಧಕನಂತೆ, ದೂರನಿಂತು ಯಂತ್ರಾವಲೋಕನದಲ್ಲಿಯೆ ಮಗ್ನನಾಗಿದ್ದಾನೆ!

"ಏನು ನೋಡ್ತಾ ನಿಂತೀಯ, ಬೆಪ್ಪುಮುಂಡೇದೆ?" ಎಂದು ಬೈದು, ತಾನು ಕರೆತಂದ ಆಳನ್ನೂ ಬಚ್ಚನಿಗೆ ನೆರವಾಗಲು ಹೇಳಿ, ಅದನ್ನು ಹೇಗೆ ಎಲ್ಲಿ ಹಿಡಿದೆತ್ತಬೇಕೆಂಬುದನ್ನೂ ಹೇಳಿಕೊಟ್ಟು, ದೇವಯ್ಯ ಗೌಡರು ಅದನ್ನು ಹಕ್ಕಲಿಗೆ ಹೊರಸಿಕೊಂಡು ಬಂದರು!

ದೇವಯ್ಯಗೌಡರ ಹಿಂದೆ ಬೈಸಿಕಲ್ಲನ್ನು ಹೊತ್ತ ಇಬ್ಬರು ಆಳುಗಳು ಬರುತ್ತಿದ್ದುದನ್ನು ಕಂಡು ಹಕ್ಕಲಿಗೆ ಹಕ್ಕಲೆ ಏದುಸಿರಾಗಿ ನೋಡಿತು. ಪ್ರಶಂಸಾರೂಪದ ನಿರಾಶಾರೂಪದ ಆಶ್ಚರ್ಯರೂಪದ ತಾತ್ಸಾರರೂಪದ ನಾನಾ ವ್ಯಾಖ್ಯಾನಗಳೂ ಗುಜಿಗುಜಿಸತೊಡಗಿದುವು:

"ಬಂತೋ! ಬಂತೋ! ಬೀಸೆಕಲ್ಲು!"

"ಅದೆಂಥಾ ಬೀಸೆಕಲ್ಲೊ? ಪಳಪಳ  ಹೊಳೀತಿದೆಯಲ್ಲೊ?"

"ಅಯ್ಯೋ, ಬೀಸೆಕಲ್ಲಿಗೆ ಎರಡು ಹೋಳಿರ್ತವೆ. ಇದಕ್ಕೆ ಎರಡು ಚಕ್ರ ಇದ್ದಾಂಗಿದೆಯಲ್ಲೋ!"

"ಏ ಬೀಸೆಕಲ್ಲಲ್ಲೋ! ಬೈಸಿಕಲ್ಲಂತೋ!"

"ನೋಡ್ನೋಡು, ಕೆಳಗೆ ಇಳಿಸ್ತಾರೆ…. ನೋಡಿದ್ಯಾ?ಈಗ ಹ್ಯಾಂಗೆ ಹಿಡುಕೊಂಡಾನೆ!…. "

"ಅಲ್ಲೋ, ಗಾಡೀಲಿ ಇದ್ದಾಂಗೆ ಒಂದರ ಒತ್ತಿನಲ್ಲಿ ಒಂದು ಚಕ್ರ ಇರಾದುಬಿಟ್ಟು ಒಂದರ ಹಿಂದೆ ಒಂದು ಚಕ್ರ ಇರಾದುಬಿಟ್ಟು ಒಂದರ ಹಿಂದೆ ಒಂದು ಚಕ್ರ ಇದ್ರೆ, ಹೆಂಗೆ ನಡೀತದ್ಯೋ ಹತ್ತಿದ್ರೆ ನಿಲ್ಲೋದು ಹ್ಯಾಂಗೋ? ಮಗ್ಲೀಗೆ ಮಗುಚಿಕೊಳ್ತದೆ, ನೋಡ್ತಿರು!"

"ಹ್ಹಿಹ್ಹಿಹ್ಹಿ! ಅದೇನ ಟ್ರಿಣ್ ಟ್ರಿಣ್ ಟ್ರಿಣ್ ಟ್ರಿಣ್ ಅಂತದೆ?"

"ದಾರಿ ಬಿಡ್ಸಾಕೆ ಗಂಟೆ ಬಾರಿಸೋದು ಕಣೋ!"

"ಹಂಗಾರೆ, ಟ್ರಿಣ್ ಟ್ರಿಣ್ ಮಾಡ್ತಾ ಇದ್ರೆ, ಅದರಷ್ಟಕ್ಕದೇ ದಾರಿ ಆಗ್ತಾ ಹೋಗ್ತದಾ?"

"ಅಲೇಲೇಲೇಲೆ! ಅವನ್ನೋಡೋ ಆ ಬಚ್ಚನ್ನ! ಹೊಲೇರ ಕುರುದೆಗೆ ಏನು ದೌಲತ್ತು ಬಂದುಬಿಟ್ಟಾದೆ?….ತಲೀಗ ಕೆಂಪುವಸ್ತ್ರೇನು? ಅಂಗಿ ಏನು? ಹ್ಹಹ್ಹಹ್ಹ! ಪಂಚೆ ಮೂಣಕಾಲು ದಾಟೇ ಬಿಟ್ಟದಲ್ಲೋ!"

"ಮತ್ತೇನಂತಾ ಮಾಡೀಯಾ? ನಾಡ್ದೋ ಆಚೆನಾಡ್ದೋ ಮದುವಣಿಗ ಆಗೋನು? ದೊಡ್ಡಬೀರನ ಮಗಳು ತಿಮ್ಮಮ್ಮನ ಮಗ್ಗಲಾಗೆ…."

"ಅಗೊಳ್ಳೊ! ಅಗೊಳ್ಳೊ! ಹತ್ತೇಬಿಟ್ಟ ಪಾದ್ರಿ!"

ಆಶ್ಚರ್ಯ ಆನಂದ ಉತ್ಸಾಹ ಉಕ್ಕಿದಂತಾಗಿ ಸುತ್ತಣ ಕಾಡು ಮರುದನಿಕೊಡುವಂತೆ ಗೆಲ್ಲುಲಿ ಎದ್ದಿತು. ರುಮಾಲು ಕೋಟುಗಳನ್ನು ತೆಗೆದಿಟ್ಟು, ಬೈಸಿಕಲ್ ಕಚ್ಚೆ ಬಿಗಿದು, ಬೂಟೀಸನ್ನು ತೆಗೆಯದೆಯೆ ಜೀವರತ್ನಯ್ಯ, ಹಕ್ಕಲಿನ ಒರಟೊರಟು ನೆಲದಲ್ಲಿಯೆ ಒಂದೆರಡು ಸುತ್ತು ತಿರುಗಿ ಬೈಸಿಕಲ್ಲಿನಿಂದ ಇಳಿದನು. ಹಕ್ಕಲಿನ ಅಂಚಿನಲ್ಲಿ ಸುತ್ತಿದ್ದ ಅಡವಿಗೆ ಒತ್ತಿ ನಿಂತಿದ್ದ ಜನಸಮೂಹ, ಸುತ್ತನಾಲ್ಕು ದಿಕ್ಕಿನಿಂದಲೂ, ಪಾದ್ರಿ ಹಿಡಿದಿದ್ದ ಬೈಸಿಕಲ್ಲಿನ ಬಳಿಗೆ ನುಗ್ಗಿತು. ಆ ನೂಕುನುಗ್ಗಲಿನಲ್ಲಿ ಮುಟ್ಟಬಹುದಾದವರು ಮುಟ್ಟಬಾರದವರು ಎಂಬ ಭೇದಭಾವಕ್ಕೆ ರಿಯಾಯಿತಿ ಒದಗಿದಂತಾಗಿ, ಪಾದ್ರಿಯ ವೃತ್ತಿಬುದ್ಧಿ ತನಗೆ ತಾನೆ ಹೇಳಿಕೊಂಡಿತು: ಮತಪ್ರಚಾರಕ್ಕೆ ಬೈಬಲ್ಲು ಏಸುಕ್ರಿಸ್ತನಿಗಿಂತಲೂ ಬೈಸಿಕಲ್ಲೆ ಹೆಚ್ಚು ಪ್ರಭಾವ ಶಾಲಿ!

ಗುತ್ತಿ ಬೈಸಿಕಲ್ಲಿನ ಚಕ್ರದ ಟಯರನ್ನು ಹೆದರಿಹೆದರಿ ಮುಟ್ಟಿನೋಡಿ, ಗಾಡಿ ಚಕ್ರಕ್ಕಿರುವಂತೆ ಅದಕ್ಕೆ ಕಬ್ಬಿಣದ ಹಳಿ ಇಲ್ಲದೆ ಏನೊ ಮೆತ್ತಗಿರುವಂತಿರುವ ಕರಿವಸ್ತು ಸುತ್ತಿರುವುದನ್ನು ನೋಡಿ, ಸೋಜಿಗೆ ಪಡುತ್ತಿದ್ದನು. `ಕಾಳಿಂಗನ ಹಾಂವು ಸುತ್ತಿದ ಹಾಂಗಿದೆಯಲ್ಲಾ! ' ಎಂದುಕೊಳ್ಳುತ್ತಿರುವಷ್ಟರಲ್ಲಿಯೆ, ಯಾರೊ ಹಿಂದಿನಿಂದ ನುಗ್ಗಿದವರು ಅವನ ಹಿಮ್ಮಡಿಯನ್ನು ಬಲವಾಗಿ ಮೆಟ್ಟಿಬಿಟ್ಟರು.

"ಯಾವನೊ ಅದು? ನಿಂಗೇನು ಮುಖದ ಮೇಲೆ ಕಣ್ಣದೆಯೋ ಇಲ್ಲೋ?" ಎಂದು ರೇಗಿ, ತಿರುಗಿ ನೋಡಿದ ಗುತ್ತಿಯ ಮೋರೆ, ಕೋಪ ಮುದ್ರೆಯನ್ನು ತಟಕ್ಕನೆ ತ್ಯಜಿಸಿ, ಪರಿಚಿತವಾದ ಸ್ನೇಹಮುಖವನ್ನು ಗುರುತಿಸಿದಂತೆ ಮುಗುಳುನಗುತ್ತಾ " ಅಯ್ಯೋ! ನೀನೇನು? ನಾನು ಯಾರೋ ಅಂತಾ ಮಾಡಿದ್ದೆ!" ಎಂದನು.

ಅದಕ್ಕೆ ಉತ್ತರವಾಗಿ ಐತ ಪೆಚ್ಚನೆ ಹಲ್ಲು ಬಿಡುತ್ತಾ " ನಾನೂ ಒಂದು ಚೂರು ಮುಟ್ಟಿ ನೋಡ್ತೀನೋ!" ಎಂದು ಅಂಗಲಾಚಲು, ಗುತ್ತಿ, ಅವನಿಗೂ ಸ್ವಲ್ಪ ಜಾಗ ಬಿಟ್ಟುಕೊಟ್ಟನು.

ಐತ ಆ ಬೈಸಿಕಲ್ಲಿನ ನಾನಾ ಭಾಗಗಳನ್ನು, ತಾನು ಮದುವೆಯಾದ ಮೊದಲಲ್ಲಿ ಪೀಂಚಲುವಿನ ಕೋಮಲವಾದ ಅಂಗೋಪಾಂಗಗಳನ್ನು ಏಕಾಂತದಲ್ಲಿ ಸ್ಪರ್ಶಿಸಿ ಸುಖಿಸಿದಂತೆ, ಮುಟ್ಟಿ ಮುಟ್ಟಿ ನೋಡಿ, ತೃಪ್ತಿಯ ಅತಿಶಯಕ್ಕೆಂಬಂತೆ, ನಿಡಿದಾಗಿ ಉಸಿರೆಳೆದುಕೊಂಡು ಸುಯ್ದನು.

ಗುತ್ತಿ ನೋಡುತ್ತಾನೆ, ತನ್ನ ಹೆಗಲ ಮೇಲುಗಡೆಯಿಂದ ಇನ್ನೂ ಒಂದು ಕೈ, ಚಾಚಿ, ಬೈಸಿಕಲ್ಲನ್ನು ಮುಟ್ಟಲು ಪ್ರಯತ್ನಿಸುತ್ತಿದೆ: ತಿರುಗಿ ನೋಡಿದರೆ, ಸೇರೆಗಾರ ಚೀಂಕ್ರ! ತಲೆಬಾಚಿ, ಮುಂಡೆಕಟ್ಟಿ, ಹೂ ಸಿಕ್ಕಿಸಿ ಕೊಂಡಿದ್ದಾನೆ! ಎಲೆಯಡಿಕೆ ಹಾಕಿ ತುಟಿ ರಂಗಾಗಿದೆ!

ಅಷ್ಟರಲ್ಲಿ ಪಾದ್ರಿ ದೇವಯ್ಯಗೆ ಬೈಸಿಕಲ್ಲು ಸವಾರಿ ಕಲಿಸಲಿಕ್ಕಾಗಿ ಜನರನ್ನೆಲ್ಲ ದೂರ ಹೋಗ ಹೇಳಿದನು. ಆದರೆ ಅವರಿನ್ನೂ ಬೈಸಿಕಲ್ಲನನ್ನು ಮುಟ್ಟಿನೋಡಿ ತಣಿದಂತೆ ತೋರದಿರಲು, ಹಠಾತ್ತನೆ ಎರಡು ಮೂರು ನಿಮಿಷ ಬಿಡದೆ ಬೆಲ್ ಬಾರಿಸಿಬಿಟ್ಟನು! ಜನ ಹೆದರಿ, ಬೆದರೆ, ಹಿಗ್ಗಿ, ನುಗ್ಗಿ, ಒಂದೇ ಏಟಿಗೆ ಹಿಮ್ಮೆಟ್ಟಿ ಓಡಿಬಿಟ್ಟರು ಹಕ್ಕಲಿನ ಅಂಚಿಗೆ!

ಸರಿ, ಶುರುವಾಯ್ತು ಅಭ್ಯಾಸ!

ಬಚ್ಚ ಒಂದು ಕಡೆ, ಪಾದ್ರಿ ಒಂದು ಕಡೆ, ಹ್ಯಾಂಡ್ಲ್ ಹಿಡಿದುಕೊಂಡರು. ದೇವಯ್ಯ ಬೈಸಿಕಲ್ ಕಚ್ಚೆ ಹಾಕಿ, ಕೋಟು ಬಿಚ್ಚಿಟ್ಟು, ಮೆಟ್ಟುಗಳನ್ನು ಕಳಚಿಟ್ಟು. ಪಾದ್ರಿಯ ನಿರ್ದೇಶನದಂತೆ ಪೆಡ್ಲಿನ ಬುಡಕ್ಕೆ ಕಾಲಿಟ್ಟು, ತನ್ನ ಭಾರವನ್ನೆಲ್ಲ ಎತ್ತಿ ಸೀಟಿನ ಮೇಲೆ ಕೂತನು. ಅವನ ಭಾರ ತುಯ್ದು ಹೊಡೆತಕ್ಕೆ ಬಚ್ಚನ ಕೈ ಹೊಂಗಿ, ಬೈಸಿಕಲ್ ಅವನತ್ತ ಬಾಗಿ, ಬೀಳುವುದರಲ್ಲಿತ್ತು. ಪಾದ್ರಿ ಬಲವಾಗಿ ಎಳೆದು ನಿಲ್ಲಿಸಿ, ಬಚ್ಚನಿಗೆ ಎಚ್ಚರಿಕೆ ಹೇಳಿದನು. ಆದರೆ ಸೀಟಿನ ಮೇಲೆ, ಶೂಲದ ಮೇಲೆಯೊ ಎಂಬಂತೆ, ಕೂತಿದ್ದ ದೇವಯ್ಯಗೌಡರ ಬೃಹತ್ಕಾಯ ಅತ್ತಿತ್ತ ಹೊಂಗಿದುದನ್ನು ಕಂಡ ಜನ `ಹಿಹ್ಹಿಹ್ಹಿ' `ಹ್ಹೊಹ್ಹೊಹ್ಹೊ' `ಅಹ್ಹಹ್ಹ' ಎಂದು ಅಟ್ಟಹಾಸಮಾಡಿ, ನಕ್ಕು, ಕೈಚಪ್ಪಾಳೆ ತಟ್ಟಿತು! ಮೊದಲೆ ತುಸು ದಿಗಿಲುಗೊಂಡು ವಿಲಕ್ಷಣಭಾವವನ್ನು ಅನುಭವಿಸುತ್ತಿದ್ದ ದೇವಯ್ಯನಿಗೆ ಅವಮಾನವಾದಂತಾಗಿ ಸಿಟ್ಟುಬಂದಿತು. ಬರಿಯ ಉದ್ವೇಗದಿಂದಲೆ ಆಯಾಸಗೊಂಡಂತೆ ಅವನ ಮುಖದ ಮೇಲೆ ಬೆವರಿಳಿಯತೊಡಗತ್ತು. ಅವನ

ಇಚ್ಛೆಯಂತೆ ಅಂಚಿನಲ್ಲಿ ನೆರೆದಿದ್ದ ಜನರಿಗೆ ಪಾದ್ರಿ ಸಂದೇಶ ಕಳಿಸಿದನು: ಗೌಡರು ಗಾಬರಿಯಾಗ್ತಾರೆ; ಯಾರೂ ಕೂಗಬಾರದು, ನಗಬಾರದು, ನಿಃಶಬ್ದವಾಗಿರಬೇಕು ಎಂದು:ಒಡನೆಯೆ ಎಲ್ಲ ಮನುಷ್ಯ ಸದ್ದೂ ಅಡಗಿತು. ಪೊದೆಗಳಲ್ಲಿ ಪಿಕಳಾರಗಳು ಕೂಗುತ್ತಿದ್ದುದೂ, ಹಾರಿ ಹೋಗುತ್ತಿದ್ದ ಗಿಳಿ ಕಾಮಳ್ಳಿಗಳ ಹಿಂಡು ಉಲಿಯುತ್ತಿದ್ದುದೂ, ಮಿಂಚುಳ್ಳಿಯೊಂದು ಮೀಮೀಮೀ ಎಂದು ಕರೆಯುತ್ತಿದ್ದುದೂ ಕೇಳಿಸಿತು.

ಹಕ್ಕಲಿನ ಅಸಮ ನೆಲದಲ್ಲಿ ಬಚ್ಚನೂ ಪಾದ್ರಿಯೂ ಬೈಸಿಕಲ್ಲನ್ನು ತಳ್ಳುತ್ತಿದ್ದರು, ಕಷ್ಟಪಟ್ಟು, ಎಚ್ಚರಿಕೆಯಿಂದ. ಪೆಡ್ಲುಗಳ ಮೇಲೆ ಕಾಲಿಟ್ಟು, ಅವು ಚಲಿಸಿದಂತೆಲ್ಲಾ ಅನೈಚ್ಛಿಕವಾಗಿಯೆ ದೇವಯ್ಯನ ಕಾಲು, ಮೇಲೆ ಕೆಳಗೆ ಹೋಗಿಬರುತ್ತಿದ್ದುವು. ಆದರೆ ತುಸು ಇಳಿಜಾರು ಇದ್ದ ಒಂದೆಡೆ, ಪಾದ್ರಿಯ ನಿರ್ದೇಶನದಂತೆ, ಬಚ್ಚ ಕೈಬಿಟ್ಟೊಡನೆ, ಪಾದ್ರಿಯ ಆತುಕೊಳ್ಳುವ ಪ್ರಯತ್ನವೂ ವಿಫಲವಾಗಿ, ದೇವಯ್ಯನ ಭಾರಕ್ಕೆ ಬೈಸಿಕಲ್ಲು ಮುಂದಕ್ಕೆ ತುಸುದೂರ ವೇಗವಾಗಿ ಉರುಳಿ, ನೆರೆದವರೆಲ್ಲ ಹೋ ಹೋ ಹೋ ಎಂದು ಬೊಬ್ಬೆಯಿಡುತ್ತಿದ್ದಂತೆಯೆ ಒಂದು ಅರಮರಲ ಮಟ್ಟಿನೊಳಕ್ಕೆ ನುಗ್ಗಿಬಿಟ್ಟಿತು! ದೇವಯ್ಯ ಮುಳ್ಳಿನ ಮೇಲೆ ಮುಖ ಅಡಿಯಾಗಿ ಮುಂದಕ್ಕೆ ಬಿದ್ದು, ಮುಳ್ಳುಗೀರಿದ ಗಾಯಗಳು ಕೆನ್ನೆ, ಗಲ್ಲ, ಮೂಗಿನ ಮೇಲೆ ಕೆಂಪಗೆ ಕಾಣಿಸಿಕೊಂಡುವು. ನುಗ್ಗಿ ಬಂದ ಜನರನ್ನೆಲ್ಲ ಹಿಂದಕ್ಕೆ ಅಟ್ಟಿ, ಪಾದ್ರಿ ಬಚ್ಚನೊಬ್ಬನ ನೆರವಿನಿಂದಲೆ ಬೈಸಿಕಲ್ಲನ್ನೂ ದೇವಯ್ಯನನ್ನೂ ಮುಳ್ಳಿನ ಮಟ್ಟಿನಿಂದ ಹಿಂದಕ್ಕೆಳೆದು ಎತ್ತಿ ನಿಲ್ಲಿಸಿದನು.

“ಏ ಬಚ್ಚ, ಒಂದು ಬಿದಿರುಗಳು ತಗೊಂಡು ಬಾರ”.

ದೇವಯ್ಯನ ಆಜ್ಞೆಯಂತೆ ಏಳೆಂಟು ಮಾರು ಉದ್ದದ ಒಂದು ಗಳುವನ್ನು ತಂದು ಬೈಸಿಕಲ್ಲಿನ ಹ್ಯಾಂಡ್ಲಿಗೆ ಜೋಡಿಸಿ, ಬಳ್ಳಿಗಳಿಂದ ಬಿಗಿದು ಸುತ್ತಿದರು. ದೂರನಿಂತು ನೋಡುತ್ತಿದ್ದವರಲ್ಲಿ ಐದಾರು ಆಳುಗಳನ್ನೂ ಬಳಿಗೆ ಕರೆದರು. ತಿಮ್ಮಿಯ ಅಪ್ಪ ದೊಡ್ಡಬೀರನಾದಿಯಾಗಿ ನಾ ಮುಂದೆ ತಾ ಮುಂದೆ ಎಂದು ತವಕಿಸಿ ಬಂದವರನ್ನು, ಗಾಡಿಯ ನೊಗಕ್ಕೆ ಎತ್ತು ಕಟ್ಟುವಂತೆ, ಆ ಕಡೆ ಮೂವರನ್ನೂ ಈ ಕಡೆ ಮೂವರನ್ನೂ ಗಳುವಿಗೆ ಕೈಗೂಡುವಂತೆ ಮಾಡಿದರು. ಅತ್ತಿತ್ತ ಅಳ್ಳಾಡದೆ ನೆಟ್ಟಗೆ ನಿಂತ ಬೈಸಿಕಲ್ಲಿನ ಸೀಟಿಗೆ ದೇವಯ್ಯ ಧೈರ್ಯವಾಗಿ ಹತ್ತಿ ಕೂತನು. ಗಳು ಹಿಡಿದವರು ಬೈಸಿಕಲ್ಲನ್ನು ಎಳೆದುಕೊಂಡು ಹೊರಟರು. ಗಳುವಿಗೆ ಭದ್ರವಾಗಿ ಕಟ್ಟಿದ್ದ ಹ್ಯಾಂಡ್ಲ್ ತಿರುಗುವ ಸಂಭವವೇ ಇರಲಿಲ್ಲ. ಅದು ಗಳು ಹಿಡಿದವರ ವಶವಾಗಿ ಅವರು ಎಳೆದಷ್ಟೆ ವೇಗದಲ್ಲಿ, ಅವರು ಎಳೆದತ್ತ ಹೋಗುತ್ತಿತ್ತೇ ವಿನಾ ದೇವಯ್ಯನ ವಶದಲ್ಲಿರಲಿಲ್ಲ. ಆದರೆ ಬೈಸಿಕಲ್ಲು ಹೊಂಗುವ ಅಥವಾ ಬೀಳುವ ಭಯ ಒಂದಿನಿತೂ ಇರದ ಅವನು ದಂಡಿಗೆಯ ಮೇಲೆ ಕುಳಿತಂತೆ ಖುಷಿಯಾಗಿ ಸವಾರಿ ಮಾಡುತ್ತಿದ್ದನು. ಆದರೆ ಪಾದ್ರಿಗೆ ಗೊತ್ತಿತ್ತು: ಅದರ ಪ್ರಯೋಜನ ಬರಿಯ ನಲಿಯುವಿಕೆಯಾಗಿತ್ತೆ ಹೊರತು ಕಲಿಯುವಿಕೆ ಆಗಿರಲಿಲ್ಲ!

ಗುತ್ತಿ ನೋಡಿದ, ಬೆಟ್ಟಳ್ಳಿ ಹೊಲಗೇರಿಯ ಜನರಲ್ಲಿ ಮುಕ್ಕಾಲು ಪಾಲು ಹಕ್ಕಲಿನಲ್ಲಿ ನೆರೆದಿತ್ತು, ಹೆಂಗಸರೂ ಮಕ್ಕಳೂ ಸೇರಿ. ತಿಮ್ಮಿಯನ್ನು ಮದುವೆಯಾಗಲಿರುವ ಬಚ್ಚನಂತೂ ಕಾರ್ಯಕಲಾಪದ ಕೇಂದ್ರದಲ್ಲಿಯೆ ಇದ್ದನು. ತಿಮ್ಮಿಯ ಅಪ್ಪ ದೊಡ್ಡಬೀರನೂ ಬೈಸಿಕಲ್ ನೊಗಕ್ಕೆ ಹೆಗಲು ಕೊಟ್ಟಿದ್ದನು. ಹೆಂಗಸರ ಗುಂಪಿನಲ್ಲಿ ತಿಮ್ಮಿಯಾಗಲಿ, ತಿಮ್ಮಿಯ ತಾಯಿ ಸೇಸಿಯಾಗಲಿ ಕಾಣಿಸಲಿಲ್ಲ. ತಾನು ಬಂದ ಕೆಲಸಕ್ಕೆ ಆ ಬೈಸಿಕಲ್ ಸವಾರಿಯು ಅಭ್ಯಾಸವು ದೇವರೇ ಒದಗಿಸಿಕೊಟ್ಟು ಸದವಕಾಶದಂತೆ ಭಾಸವಾಯಿತು ಗುತ್ತಿಗೆ. ತನ್ನ ಸಮೀಪದಲ್ಲಿಯೆ ನಿಂತು

ತದೇಕಚಿತ್ತದಿಂದ ಬೈಸಿಕಲ್ ಮೆರವಣಿಗೆಯನ್ನು ಈಕ್ಷಿಸುತ್ತಿದ್ದ ಐತನ ಹೆಗಲಮೇಲೆ ಕೈಯಿಟ್ಟು, ಕಣ್ಣು ಮಿಟಿಕಿನಿಂದಲೆ ಅವನನ್ನು ಪಕ್ಕಕ್ಕೆ ಕರೆದು, ಪಿಸುಮಾತಿನಲ್ಲಿ ಹೇಳಿದನು:

“ನಂಗೆ ಸ್ವಲ್ಪ ಕೆಲಸ ಇದೆಯೊ. ನಾ ಹೋಗ್ತೀನಿ, ಹಳೆಮನೆ ದೊಡ್ಡ ಹೆಗ್ಡೇರು `ಹೋಗ್ತಾ ಕೋಣೂರಿ ಮೇಲಾಸಿ ಹೋಗಿ, ಐಗಳನ್ನು ನಾ ಬರಾಕೆ ಹೇಳ್ದೆ ಅಂತ ಹೇಳು' ಅಂದಿದ್ರು. ನನಗೆ ಕೋಣೂರಿನ ಹೋಗಾಕೇ ಆಗ್ಲಿಲ್ಲ. ಹೂವಳ್ಳಿ ಮೇಲಾಸಿ ಬಂದ್ಬಿಟ್ಟೆ. ನೀನು ಹೋದವನೆ ಐಗಳಿಗೆ ಹೇಳ್ತೀಯಾ?'

ಐತ `ಆಗಲಿ' ಎಂದು ತಲೆಯಲ್ಲಾಡಿಸಿ ಬೈಸಿಕಲ್ ಸರ್ಕಸ್ಸಿಗೆ ಅವಸರದಿಂದ ಹಿಂದಿರುಗುವುದರೊಳಗೆ ಗುತ್ತಿ ಮತ್ತೆ ವ್ಯಂಗ್ಯವಾಗಿ ನಕ್ಕು “ನಿನ್ನ ಹೆಂಡತಿ ಬರಲಿಲ್ಲೇನೊ? ನೀ ಒಬ್ಬನೇ ಬಂದುಬಿಟ್ಟೇಯಲ್ಲಾ!” ಎಂದನು.

ಐತನು ನಗೆಯಾಡುತ್ತಲೇ “ಬಾ ಅಂತ ಕರೆದ. ಇಲಿಕಿವಿಸೊಪ್ಪು ಕುಯ್ತೀನಿ ಅಂತ ಹೋದ್ಲು ಅವಳಿಗೆ ದಿನಾ ಹೊತಾರೆ, ವಾಕರಿಕೆ ಆದ್ಹಂಗಾಗಿ, ವಾಂತಿ ಆಗ್ತದಂತೆ! ಅದಕ್ಕೇ ಕಣ್ಣಾಪಂಡಿತರು ಹೇಳಿದ್ರು, ಇಲಿಕಿವಿ ಸೊಪ್ಪಿನ ಹಸಾಳೆ ಮಾಡಿಕೊಂಢು ಕುಡಿಯಾಕೆ!!” ಎನ್ನುತ್ತಾ ಓಡಿದನು, ಇದ್ದಕ್ಕಿದಂತೆ ಸದ್ದು ಹೊನಲುಕ್ಕಿದ್ದ ಹಕ್ಕಲೆಡೆಗೆ.

ಕೋಲಾಹಲಕ್ಕೆ ಕಾರಣವಾಗಿದ್ದು, ದೊಡ್ಡಬೀರನು ಮುಗ್ಗರಿಸಿ ಬಿದ್ದದ್ದ! ಬೈಸಿಕಲ್ ನೊಗಕ್ಕೆ ತೋಳುಕೊಟ್ಟಿದ್ದ ಆರು ಜನರನ್ನೂ ಓಡಲು ಹೇಳಿದನು ಪಾದ್ರಿ. ಏಕೆಂದರೆ ಬೈಸಿಕಲ್ ಸ್ವಲ್ಪವಾದರೂ ವೇಗವಾಗಿ ಚಲಿಸಿದಿದ್ದರೆ ದೇವಯ್ಯ ಪೆಡ್ಲು ಹೊಡೆಯುವುದನ್ನಾದರೂ ಕಲಿಯುವುದು ಹೇಗೆ? ಆರು ಜನರೂ ಓಡತೊಗಿದ್ದರು. ಜನರು ಚಪ್ಪಾಳೆ ಹೊಡೆದು ಶ್ಲಾಘಿಸಿ ಪ್ರೋತ್ಸಾಹಿಸಿದ್ದರು. ಅಷ್ಟರಲ್ಲಿ ಕೊರಕಲೊಂದನ್ನು ಎಡವಿದ ಮುದುಕ ದೊಡ್ಡಬೀರ ಮುಗ್ಗರಿಸಿ ಬಿದ್ದ, ಬಿದ್ದವನು ಬಿದಿರು ಗಳುವನ್ನೂ ಬಿಡಲಿಲ್ಲ. ಜೋತಾಡುತ್ತಲೆ ಒಂದು ಮಾರು ಮುಂದಕ್ಕೆ ಸರಿದು ದೊಪ್ಪನೆ ಉರುಳಿದ್ದನು. ಉತ್ಸಾಹದಿಂದ ಕೂಗುತ್ತಿದ್ದ ಜನಕ್ಕೆ ಪರಿಹಾಸ್ಯ ಕಾರಣವೂ ದೊರೆತಂತಾಗಿ ಕೋಲಾಹಲವೆದ್ದಿತ್ತು. ಐತನು ಓಡಿ ಜನಜಂಗುಳಿಗೆ ಸೇರುವಷ್ಟರಲ್ಲಿ ದೇವಯ್ಯನೂ ಬೈಸಿಕಲ್ಲಿಂದ ಇಳಿದು, ದೊಡ್ಡಬೀರನ ಶುಶ್ರೂಷೆಗೆ ಪ್ರಾರಂಭವಾಗಿತ್ತು.

ಹೊತ್ತು ಆಗಲೆ ಇಳಿಯತೊಡಗಿ ಕುಂದದ ಹೆಗ್ಗುಡ್ಡದ ನೆತ್ತಿಯ ನೆರಳು ಕಣಿವೆಯ ಕಾಡುಗಳು ಮೇಲೆ ಬಿದ್ದಿತ್ತು. ಹಿಂದಿನ ದಿನದ ಹೆಮ್ಮಳೆಯಲ್ಲಿ ತೊಯ್ದ ಕಾಡಿನ ಹಸುರು ಅಲ್ಲಲ್ಲಿ ಕೆಂಬಿಸಿಲಿನ ರಂಗಿನಲ್ಲಿ ಸುಮನೋಹರವಾಗಿ ಮನಮೋಹಿಸುವಂತಿತ್ತು. ಹಗಲಿಗೂ ಇರುಳಿಗೂ ನಡುವಣ ಸಂಧಿಸಮಯದ ಸೌಂದರ್ಯಶಾಂತಿ ಮಲೆನಾಡನ್ನು ಅಪ್ಪಿಕೊಂಡಂತಿತ್ತು. ಕತ್ತಲೆ ದಟ್ಟಯಿಸುವುದರೊಳಗೆ ತಮ್ಮ ತಮ್ಮ ಮನೆಗಳನ್ನು ಸೇರಿಕೊಳ್ಳುವ ಸಲುವಾಗಿ ದೂರದ ಹಳ್ಳಿಗಳಿಂದ ಬಂದಿದ್ದವರೆಲ್ಲ ಹೊರತೊಡಗಿದರು.

ಸಮಯ ಸಂದರ್ಭ ದೊರೆತಾಗಲೆಲ್ಲ ತನ್ನ ಮತದ ಧಾರ್ಮಿಕತೆಯನ್ನು ಅನ್ಯಮತಸ್ಥರ ಮನಸ್ಸಿನ ಮೇಲೆ ಮುದ್ರಿಸುವ ಕುಶಲತೆಯನ್ನು ಚೆನ್ನಾಗಿ ಪ್ರಯೋಗಿಸಲು ಕಲಿತಿದ್ದ ಪಾದ್ರಿ ಜನರನ್ನು ಉದ್ದೇಶಿ, ಮುಖ್ಯವಾಗಿ ದೇವಯ್ಯನನ್ನು ಕುರಿತೆ ಹೇಳುತ್ತಿರುವಂತೆ, ಭಾವಪೂರ್ಣಧ್ವನಿಯಿಂದ, ಸೃಷ್ಟಿಸೌಂದರ್ಯವನ್ನು ವೀಕ್ಷಿಸುತ್ತಾ “ ಗೌಡರೆ, ದೇವರ ಸೃಷ್ಟಿ ಎಷ್ಟು ಸುಂದರ! ಈ ಸ್ಥಳ ಮತ್ತು ಸಮಯ ಎರಡೂ ಪ್ರಶಸ್ತವಾಗಿವೆ, ಪ್ರಾರ್ಥನೆಗೆ!

ದಯಾಮಯನಾದ ಭಗವಂತನಿಗೆ ಪ್ರಾರ್ಥನೆ ಸಲ್ಲಿಸೋಣ!" ಎಂದು ಮೊಳಕಾಲೂರಿ ಕೈಮುಗಿದುಕೊಂಡು ಅರೆಗಣ್ಣಾಗಿ ಕುಳಿತೇಬಿಟ್ಟನು.

"ಮತ್ತೆ ಎಂಥದನ್ನೋ ಸುರುಮಾಡಿದ್ನಲ್ಲೋ ಈ ಪಾದ್ರಿ!" ಎಂದು ತನ್ನ ಟೀಕೆ ತಿರಸ್ಕಾರಗಳನ್ನು ಪ್ರಕಟಿಸುತ್ತಾ ಹಳೆಮನೆಯ ಹೊಲೆಯರ ಮಂಜ ತನ್ನ ಕೇರಿಯವರನ್ನು ಕರೆದುಕೊಂಡು ಹೊರಟನು.

"ಅಯ್ಯೋ ನಮ್ಮ ಬೆಟ್ಟಳ್ಳಿ ಸಣ್ಣಗೌಡರೂ ಮಂಡೀ ಊರೇಬಿಟ್ರಲ್ಲೋ!" ಎಂದು ಚೀಂಕ್ರ ಐತನನ್ನೂ ಕರೆದುಕೊಂಡು ಹೊರಡುತ್ತಿರಲು, ಪಾದ್ರಿ ರಾಗಧ್ವನಿ ಕೇಳಿಸಿತು:

"ಪರಲೋಕದಲ್ಲಿರುವ ನಮ್ಮ ತಂದೆಯೇ, ನಿನ್ನ ನಾಮವು ಪರಿಶುದ್ಧವಾಗಲಿ! ನಿನ್ನ ರಾಜ್ಯವು ಬರಲಿ!...."

"ಇದು ಎಂಥಾದ್ದೋ ಇವರು ಹೇಳುವುದು? ಕಾಡಿಗೆ ಕೈಮುಗಿದು! ಒಂದು ದೇವರಿಲ್ಲ! ಒಂದು ಗುಡಿಯಿಲ್ಲ! ನಮ್ಮ ಪೆರಡೂರು ಮೇಳದವರು ಇದಕ್ಕಿಂತಲೂ ಚೆನ್ನಾಗಿ ಹೇಳುತ್ತಾರಲ್ಲಾ ಭಾಗವತರಾಟದಲ್ಲಿ? ಈ ಗೌಡರಿಗೆ ಯಾಕೆ ಈ ಹುಚ್ಚು, ಆ ಪಾದ್ರೀನ ಕಟ್ಟಿಕೊಂಡು?" ಕನ್ನಡ ಜಿಲ್ಲೆಯ ಸೆಟ್ಟರಾಳೊಬ್ಬನು ನಕ್ಕು ನುಡಿದುದನ್ನು ಕೇಳಿ,

ಐತ, ಹೊಟ್ಟೆಹಿಡಿದುಕೊಂಡು ನಗುತ್ತಾ, ಚೀಂಕ್ರನಿಗೆ ತೋರಿಸಿದನು: " ಅಲ್ಲಿ ನೊಡೋ! ನೋಡೋ! ಆ ಹೊಲೆಯ ಬಚ್ಚನೂ ಮಂಡಿಊರಿ ಕೂತುಬಿಟ್ಟಿದ್ದಾನಲ್ಲೋ! ಹಿಹ್ಹಿಹ್ಹಿ!"

"ಮಂಡಿನಾರೂ ಊರಿಲಿ, ಕುಂಡಿನಾರೂ ಊರಿಲಿ! ನೀ ಬಾ, ಹೋಗುವ ನಾವು! ಕಪ್ಪಾಗ್ತಾ ಇದೆ; ಅಲ್ರೂ ಮೂಡಿ ಆಯಿತ್ತು!"

ಐತ ನೋಡುತ್ತಾನೆ: ಹೌದು! ಕುಂದದ ಗುಡ್ಡದ ಮೇಲೆ ಹೊಂಬಣ್ಣದ ಪಶ್ಚಿಮ ಆಕಾಶದಲ್ಲಿ ಬೆಳ್ಳಿ ಆಗಲೆ ಮೂಡಿಬಿಟ್ಟಿತ್ತು!

* * *

## ೧೯

ಐತನಿಗೆ ಅವನ ಹೆಂಡತಿಯನ್ನು ಬಿಟ್ಟು ಅವನೊಬ್ಬನೆ ಬಂದಿದ್ದ ಅಪೂರ್ವಘಟನೆಯ ವಿಚಾರದಲ್ಲಿ ವ್ಯಂಗ್ಯಪ್ರಶ್ನೆ ಹಾಕಿ, ಹಕ್ಕಲಿನಿಂದ ಹೊಲಗೇರಿಯ ಕಡೆಗೆ ಬೇಗಬೇಗನೆ ಕಾಲು ಹಾಕಲು ತೊಡಗಿದ್ದ ಗುತ್ತಿಯ ಮನದಲ್ಲಿ ನಾನಾ ಭಾವತರಂಗಗಳು ಏಳತೊಡಗಿದುವು:

“ಎಲಾ ಇವನ್ನ! ಗಟ್ಟದ ತಗ್ಗಿನಿಂದ ಬಂದ ಈ ಬಿಲ್ಲೋರ ಕುರುದೆ, ನನಗಿಂತಲೂ ಸಣ್ಣವನಾಗಿ ಕಾಣ್ತಾನೆ, ಇನ್ನೂ ಮೀಸೆ ಹುಟ್ಟದ ಬೋಳ, ಆಗಲೆ ಆ ಹುಡುಗೀನ ಕಟ್ಟಿಕೊಂಡು ಏನು ದಿಂಗಾಗಿದಾನೆ! ಅವಳನ್ನ ಒಂದು ನಿಮಿಸಾನೂ ಬಿಟ್ಟಿರ ಒಲ್ಲನಂತೆ!….”

ಗುತ್ತಿಗೆ ಒಳಗಣ್ಣಿಗೆ ತಿಮ್ಮಿಯ ಚಿತ್ರ ಮೋಹಕವಾಗಿ ಕಟ್ಟಿ ನಿಂತಿತು. ಅವಳ ಆಕಾರ ರತಿಯ ಮುಂದೆ ಅವನ ಆಶಾಮನ್ಮಥ ಸೋತುಹೋದನು. ಆ ಕಣ್ಣು, ಆ ಹುಬ್ಬು, ಆ ಮೂಗು, ಆ ಕೆನ್ನೆ, ಆ ತುಟಿ, ಆ ಹಣೆ, ಅವಳ ನಿಲುವಿನ ಭಂಗಿ, ಅವಳ ಮಾತಿನ ಇಂಪು,…. ಇದುವರೆಗೆ ಉಗುರುಬೆಚ್ಚಗಿದ್ದ ಅವನ ಸಾಹಸೋತ್ಸಾಹ ಅವಳನ್ನು ಭಾವಿಸುತ್ತಾ ಭಾವಿಸುತ್ತಾ ಕುದಿನೀರಿನ ಮಟ್ಟಕ್ಕೇರಿತು. ಆ ದಿನವೆ ಯಾವುದಾದರೊಂದು ರೀತಿಯಲ್ಲಿ ನಿರ್ಣಾಯಕವಾಗಿ ವಿಸ್ತರಿಸಿಯೇ ಬಿಡುವ ದೃಢಹಠ ರಾಗೋದ್ರೇಕದಿಂದ ವೇಗ ವೇಗವಾಗಿ ಕಾಲುಹಾಕಿದನು: “ ಎಲಾ ನಾನೇನು ಈ ಐತ ಹುಡುಗನಿಗಿಂತ ಕಳಪೆಯಾಗಿ ಹೋದೆನೆ?”

ಗುತ್ತಿ ಹೊಲೆಗೇರಿಯ ವಲಯದೊಳಗೆ ಪ್ರವೇಶಿಸುತ್ತಿದ್ದಂತೆಯೆ, ತನ್ನ ಹೆಣ್ಣು ಗಂಡು ಶುನಕ ಪರಿವಾರ ಸಮೇತನಾಗಿ ಹುಲಿಯ ಅವನನ್ನು ಎದುರುಗೊಂಡಿತು. ಆದರೆ ಎಷ್ಟು ಬಾಲ ಅಳ್ಳಾಡಿಸಿದರೂ ಮಲಗಿಸಿದರೂ ಯಜಮಾನನಿಂದ ಯಾವ ವಿಶ್ವಾಸದ ಅಥವಾ ಮುದ್ದಿನ ಸೂಚನೆಯೂ ಹೊರಹೊಮ್ಮಲಿಲ್ಲ. ಅವನ ಮುಖದ ಕಡೆ ನೋಡಿ, ಅದರ ಉಗ್ರಗಭೀರ ಮುದ್ರೆಯಿಂದ ಏನನ್ನೊ ಅರ್ಥಮಾಡಿಕೊಂಡಂತೆ ತನ್ನ ಉಲ್ಲಾಸಭಂಗಿಯನ್ನೆಲ್ಲ ತ್ಯಜಿಸಿ, ಪಕ್ಕಕ್ಕೆ ಸರಿದು, ಹಿಂಬಾಲಿಸತೊಡಗಿತ್ತು ಆ ಸ್ವಾಮಿನಿಷ್ಠ ಪ್ರಾಣಿ?

ಹೊಲೆಗೇರಿಯ ಅಗ್ರಸ್ಥಾನದಲ್ಲಿದ್ದು, ಎದ್ದುಕಾಣುವಂತಿದ್ದ, ತಳವಾರ ದೊಡ್ಡಬೀರನ ಗುಡಿಸಲು ಸಾಲಕೃತವಾಗಿದ್ದುದನ್ನು ತಟಕ್ಕನೆ ಗ್ರಹಿಸಿತು ಗುತ್ತಿಯ ದೃಷ್ಟಿ. ಎಂದಿನಂತೆ ಬಿಡಾರದ ಸುತ್ತ ಕಸ ಕೊಳಕು ಇರದೆ, ಸೆಗಣಿಹಾಕಿ ಸಾರಿಸಿ ಗುಡಿಸಿ ಚೊಕ್ಕಟವಾಗಿತ್ತು. ಅದಕ್ಕಿಂತಲೂ ಅತಿಶಯವಾಗಿ ಕಣ್ಣಿಗೆ ಹೊಡೆಯುವಂತೆ ಕಂಡಿದ್ದೆಂದರೆ ಬಿಡಾರದ ಗೋಡೆಗಳಿಗೆ ಬಳಿದಿದ್ದ ಜೇಡಿ, ಮತ್ತು ತೆಣೆಗೂ ತೆಣೆಯ ಕಂಬಗಳಿಗೂ ಬಳಿದಿದ್ದ ಕೆಮ್ಮಣ್ಣಿನ ಮತ್ತು ಜೇಡಿಯ ಪಟ್ಟೆಗಳು! ತಿಮ್ಮಿಯ ಲಗ್ನದ ನಿಶ್ಚಯದ ವಿಚಾರವಾಗಿ ಗುತ್ತಿಯ ತಲೆಯಲ್ಲಿದ್ದಿರಬಹುದಾದ ಕೊಟ್ಟ ಕೊನೆಯ ಸಂದೇಹದ ಛಾಯೆಯೂ ಅಳಿಸಿಹೋಯಿತು.

ನೆಟ್ಟಗೆ ಗುಡಿಸಿಲಿಗೆ ನಡೆದು, ತೆಣೆಗೆ ಹತ್ತಿ, ಕೈಯಲ್ಲಿದ್ದ ಬಗನಿಯ ದೊಣ್ಣೆಯನ್ನು ಸೊಂಟದ ಒಡ್ಯಾಣದಲ್ಲಿದ್ದ ಕೆಲಸದ ಕತ್ತಿಯನ್ನೂ ಹೆಗಲ ಮೇಲಿದ್ದ ಕಂಬಳಿಯನ್ನೂ ಜಗಲಿಯ ಹೆಸರು ಪಡೆದಿದ್ದು ಆ ಗುಡಿಸಿಲಿನ ತೆರೆದ ಮುಂಭಾಗದಲ್ಲಿ ಎಂದಿನಂತೆಯೆ ಇಡುವಲ್ಲಿ ಇಟ್ಟು, ಆಯಾಸಗೊಂಡವನಂತೆ ಉಸ್ಸೆಂದು ಕುಳಿತನು.

ಜನ ಖಾಲಿಯಾಗಿ, ಕೇರಿಯೇ ನಿಃಶಬ್ದವಾಗಿತ್ತು. ಆದರೆ ಗುತ್ತಿಯ ಅತ್ತೆಯ ಬಿಡಾರದಲ್ಲಿ ಸದ್ದಿಲ್ಲದಿರುವಿಕೆ ಶಕುನಪೂರ್ಣವಾಗಿತ್ತು.

“ ಅತ್ತೇ, ಮನೇಲಿ ಇದ್ದೀಯಾ?” ಕರೆದನು ಗುತ್ತಿ.

ಸೇಸಿ ಒಳಗಣಿಂದಲೆ “ಯಾರೂ?” ಎಂದು ಕೇಳಿ, ತನ್ನ ಮಗಳಿಗೆ “ಯಾರು? ಹೋಗಿ ನೋಡೆ” ಎಂದದ್ದೂ ಗುತ್ತಿಗೆ ಕೇಳಿಸಿ, ಆ ಕಡೆಯೆ ಕಣ್ಣಾಗಿದ್ದನು.

ತಿಮ್ಮಿ ಯಾವ ವಿಶೇಷ ವ್ಯಕ್ತಿಯನ್ನೂ ನಿರೀಕ್ಷಿಸದೆ, ಯಾರಾದರೂ ಕೇರಿಯವರನ್ನೇ ಕಾಣುತ್ತೇನೆ ಎಂಬ ದೈನಂದಿನ ಸಾಧಾರಣ ಪ್ರಜ್ಞೆಯಿಂದ ಜಗಲಿಗೆ ದಾಟಿ, ಎರಡು ಹೆಜ್ಜೆ ಮುಂಬರಿದವಳು, ತನ್ನನ್ನೆ ನಟ್ಟದಿಟ್ಟಿಯಿಂದ ನೋಡುತ್ತಿದ್ದ ಗುತ್ತಿಯ ಕಣ್ಣಿಗೆ ತನ್ನ ಕಣ್ಣು ತಗುಲಿ, ಕಲ್ಲಾದಂತೆ ಬೆರಗುಹೊಡೆದು ನಿಂತುಬಿಟ್ಟಳು! ಅವಳಿಗೆ ಒಂದು ಕ್ಷಣ ಉಸಿರೇ ಕಟ್ಟಿದಂತಾಯ್ತು. ಅಲ್ಲಿ ಕುಳಿತಿದ್ದವನು ತನ್ನ ತಾಯಿಯ ಅಣ್ಣನ ಮಗ ಸಿಂಬಾವಿ ಬಾವ, ಗುತ್ತಿ ಎಂಬುದನ್ನು ಅವಳ ಪ್ರಜ್ಞೆ ಗ್ರಹಿಸಿ, ಬುದ್ಧಿ ಒಳಕೊಂಡು, ಭಾವ ಸ್ಥಿಮಿತಕ್ಕೆ ಬರಬೇಕಾದರೆ ಒಂದೆರಡು ನಿಮಿಷಗಳ ಬೇಕಾಯಿತು. ಖೇದ, ಪಶ್ಚಾತ್ತಾಪ, ಮರುಕೊಳಿಸಿದ ಆಶೆ, ಬಹುಶಃ ಪಾರಾರಬಹುದು ಎಂಬ ಧೈರ್ಯ, ಅಯ್ಯೋ ಅದೆಲ್ಲ ಎಲ್ಲಿ ಸಾಧ್ಯ ಎಂಬ ಸರ್ವನಾಶಭಾವದ ನಿರಾಶೆ-ಇವೆಲ್ಲವೂ ಮಿಂಚುಗಳು ಸಂಚರಿಸುವಂತೆ ಅವಳ ಹೃದಯ ಮನಸ್ಸುಗಳಲ್ಲಿ ಹಾಸುಹೊಕ್ಕಾಗಿ ಚಲಿಸಿ, ಒಂದು ವಿಸ್ಮರತಿ ಸದೃಶ ಜಾಲವಸ್ತುವನ್ನೆ ನೆಯ್ದು, ಅವಳ `ಗ್ಯಾನ'ವನ್ನೆಲ್ಲ ಮುಸುಗಿ ಮಬ್ಬುಗೊಳಿಸಿದುವು.

ಮಗಳು ಏನನ್ನೂ ಕೂಗಿ ಹೇಳದಿದ್ದುದನ್ನೂ ಹಿಂತಿರುಗಿಯೂ ಬಾರದಿದ್ದುದನ್ನೂ ನೋಡಿ, ಸೇಸಿ “ಯಾರೇ ಅದೂ? ಎಲ್ಲಿ ಹೋದೆಯೆ, ತಿಮ್ಮೀ?” ಎಂದು ತನ್ನ ಅವ್ವ ಕೂಗಿದ ಮೇಲೆಯೆ ಅವಳಿಗೆ ಎಚ್ಚರವಾದಂತಾಗಿ, ಹಿಂತಿರುಗಿ ಒಳಗೆ ಓಡಿ, ಏದುತ್ತಾ ಬಾಯಾರಿದವಳಂತೆ ಎಂಜಲು ನುಂಗುತ್ತಾ, ತುಟಿಯನ್ನು ನಾಲಗೆಯಿಂದ ಸವರಿಕೊಳ್ಳುತ್ತಾ ತೊದಲಿದಳು “ಅವನೆ! ಅವನೆ ಬಂದಾನೆ! ಸಿಂಬಾವಿ ಬಾವ!”

“ಯಾರೇ? ಗುತ್ತಿ ಏನೇ?”

ಮಗಳು ತಲೆದೂಗಿ ಹೌದೆಂದು ಸೂಚಿಸಲು, ಸೇಸಿ ತಟಕ್ಕನೆ ತನ್ನ ಕೈಲಿದ್ದ ಕೆಲಸ ನಿಲ್ಲಿಸಿ, ಒಂದು ಕ್ಷಣ ಆಲೋಚನಾಮಗ್ನಳಾದಂತೆ ಕುಳಿತು, ಸುಯ್ಯುತ್ತಾ ಮೇಲೆದ್ದಳು, ಸೊಂಟಗೈಯಾಗಿ ಬಾಗಿ ಮೆಲ್ಲಗೆ ಜಗಲಿಗೆ ಹೋದಳು, ಮಗಳಿಗೆ ಕಣ್ಣಿನಲ್ಲಿಯೇ ಸನ್ನೆಮಾಡಿ.

“ಮನೇಕಡೆ ಎಲ್ಲ ಹ್ಯಾಂಗಿದ್ದಾರೋ?” ಅತ್ತೆಯ ದನಿಯಲ್ಲಿ ಏನೊ ಅಂಜಿಕೆ,

“ಇದಾರೆ…. ಹಾಂಗೆ!” ಗುತ್ತಿ ಉದಾಸೀನದಿಂದ ಉತ್ತರಿಸಿ, ಮತ್ತೆ ಉಪಚಾರದ ವ್ಯಂಗ್ಯಭಂಗಿಯಲ್ಲಿ “ ಹ್ಯಾಂಗಿದೀರಿ….ನೀವೆಲ್ಲ?” ಎಂದನು.

“ಕಾಣ್ತದಲ್ಲ; ಇರೋದಪ್ಪಾ ಹೀಂಗೆ”.

“ಹ್ಞೂ ಕಾಣ್ತಾ ಇದೆಯಲ್ಲಾ!” ಗುತ್ತಿ ಮನೆಯ ಗೋಡೆ ತೆಣೆಗಳಿಗಾಗಿದ್ದ ಜೇಡಿ ಮಣ್ಣಿನ ಅಲಂಕಾರವನ್ನೂ ಅಂಗಳಕ್ಕೆ ಸಾರಿಸಿದ್ದ ಸೆಗಣೆಯ ಚೊಕ್ಕತನವನ್ನೂ ಗುಡಿಸಿಲಿಗೆ ಹೊದೆಸಿ, ಅಂಚನ್ನು ಬಟ್ಟಗೆ ಕತ್ತರಿಸಿದ್ದ ಹೊಸ ಹುಲ್ಲನ್ನೂ ಕಣ್ಣಿಂದಲೆ ನಿರ್ದೇಶಿಸಿದನು. ತನ್ನ ಮಗಳ ಮದುವೆಯ ಪೂರ್ವಸಿದ್ಧತೆಯನ್ನು ಕುರಿತು ವ್ಯಂಗ್ಯವಾಡಿದ

ಸೋದರಳಿಯನಿಗೆ ಅತ್ತೆ ಕ್ಷಮೆ ಕೇಳುವಂತೆ "ಧಣೇರು ಹಿರೇರು ಸೇರಿ ನಿಶ್ಚಯ್ಸಿಬಿಟ್ಟಾರೆ! ನಾವು ಹೆಣ್ಣು ಹೆಂಗಸರು ಏನು ಮಾಡಾಕಾಗ್ತದಪ್ಪಾ? ನಮ್ಮನ್ನೇನು ಕೇಳ್ತಾರಾ? ಕೋಳಿ ಕೇಳಿ ಕಾರಾ ಕಡೀತಾರಾ?" ಎಂದು ಹೇಳುತ್ತಲೆ ಗೊಬ್ಬೆಸೆರಗಿನಿಂದ ಕಣ್ಣೊತ್ತಿಕೊಂಡಳು. ಗುತ್ತಿಗೆ ಗೊತ್ತಿತ್ತು, ಅತ್ತೆಗೆ ತನ್ನ ಮಗಳನ್ನು ಬಚ್ಚನಿಗೆ ಕೊಡುವುದಕ್ಕೆ ಸ್ವಲವೂ ಮನಸ್ಸಿರಲಿಲ್ಲ ಎಂದು, ಅಲ್ಲದೆ ತಿಮ್ಮಿಯನ್ನು ತನಗೇ ಕೊಡುವುದಕ್ಕೆ ಮನಸ್ಸಿದ್ದುದನ್ನೂ ನಾನಾ ರೀತಿಗಳಿಂದ ವ್ಯಕ್ತಪಡಿಸಿಯೂ ಇದ್ದಳು. ತಾನು ತಿಮ್ಮಿಗಾಗಿ ತಂದುಕೊಟ್ಟು ಸಣ್ಣಪುಟ್ಟ ಕಾಣಿಕೆಗಳನ್ನೂ ಹೆಮ್ಮೆಯಿಂದ ಸ್ವೀಕರಿಸಿದ್ದಳು. ಆದರೆ ಗೌಡರ ಜೀತದಾಳಾಗಿ, ಅವರಲ್ಲಿ ಸಾಲಮಾಡಿ, ಅವರಿಗೆ ತನ್ನನ್ನು ಸಂಪೂರ್ಣವಾಗಿ ಮಾರಿಕೊಂಡಿದ್ದ ದೊಡ್ಡಬೀರ ಆ ವಿಚಾರದಲ್ಲಿ ನಿರುಪಾಯನಾಗಿ ಒಡೆಯರ ಆಜ್ಞೆಗೆ ತಲೆಬಾಗಿದ್ದನು.

ಒಡೆಯರಿಗೆ ಬೇಕಾಗಿದ್ದುದು ಜೀತಮಾಡಲು ಒಂದು ಆಳು. ತಮ್ಮ ಹೊಲೆಗೇರಿಯ ಒಂದು ಹೆಣ್ಣನ್ನು ಹೊರಗೆ ಕೊಟ್ಟರೆ ತಮ್ಮ ಕೆಲಸಕ್ಕೆ ಒಂದಾಳು ಖೋತ ಬೀಳುತ್ತದೆ. ಆದ್ದರಿಂದ ಕೇರಿಯ ಹೆಣ್ಣನ್ನು ಕೇರಿಯ ಗಂಡೇ ಮದುವೆಯಾಗಬೇಕು ಎಂಬುದು ಅವರ ಕಟ್ಟಪ್ಪಣೆ. ಬೇರೆ ರೀತಿಯಿಂದ ವರ್ತಿಸಿದರೆ, ಆ ಹೆಣ್ಣು ಇನ್ನೊಬ್ಬ ಬೇರೆ ಹಳ್ಳಿಯ ಕೇರಿಯವನಿಂದ ತಾಳಿಕಟ್ಟಿಸಿಕೊಂಡಿದ್ದರೂ ಸರಿ, ಅವಳನ್ನು ಎಳೆದು, ತರಿಸಿ, ತಾಳಿ ಕೀಳಿಸಿ, ತಮ್ಮ ಕೇರಿಯವನಿಗೇ ಮದುವೆ ಮಾಡಿಸುತ್ತಿದ್ದರೆಂಬುದರಲ್ಲಿ ಸಂದೇಹವಿರಲಿಲ್ಲ. ಅಪ್ಪಿ ತಪ್ಪಿ ಒಡೆಯರ ಇಚ್ಛೆಗೆ ವಿರೋಧವಾಗಿ ನಡೆದವರಿಗೆ ಹಿಂದೆ ಅಂತಹ ಗತಿಯೇ ಒದಗಿತ್ತು. ಕೀಳುಜಾತಿಯವರಿಗೆ ಅವರ ಇಚ್ಛಾನುಸಾರ ಒಲವು ಅಕ್ಕರೆ ಇರುವುದೆಂದರೇನು? ಒಲವು ಅಕ್ಕರೆ ಏನಿದ್ದರೂ ಎಲ್ಲ ಒಡೆಯರ ಲಾಭದ ವಲಯದೊಳಗಿದ್ದು, ಅವರ ಇಚ್ಛಾಧೀನವಾಗಿರಬೇಕು. ಅವರ ಆಜ್ಞೆಯ ಗೆರೆ ದಾಟುವಂತಿರಲಿಲ್ಲ.

"ಕಡೀಗೆ ನೆಂಟರಿಷ್ಟರಿಗೆ ಒಂದು ಮಾತು ತಿಳಿಸಬಾರದಾಗಿತ್ತೆ?" ವ್ಯಂಗ್ಯವನ್ನು ಬಿಟ್ಟು ಅನುಕಂಪೆಗೆ ತಿರುಗಿತ್ತು ಗುತ್ತಿಯ ಸ್ವರ.

"ಎಲ್ಲ ಏನೊ ಗುಟ್ಟುಗುಟ್ಟಾಗಿ ಅವಸರವಸರವಾಗಿ ಮಾಡ್ತಿದಾರಪ್ಪಾ! ನಂಗೊಂದು ತಿಳೀದು. ತಿಮ್ಮಿ ಕಣ್ಣೀರು ಹಾಕ್ತಾ ಕೂತದೆ! ಅಂವ ಬ್ಯಾರೆ, ಸಣ್ಣಗೌಡ್ರು ಸಂಗಡಾನೆ, ಆ ಪಾದ್ರಿ ಜಾತಿಗೆ ಸೇರತಾನೆ ಅಂತಾ ಕೇರೀಲೆಲ್ಲ ಗುಸುಗುಸು! ಜಾತಿಕೆಟ್ಟೋವನಿಗೆ ಕೊಡಾಕೆ ಬದಲಾಗಿ ಬಾವಿಗೆ ಹಾಕಾದು ಲೇಸು. ನೀನು ಬರಲಿ ಇಲ್ಲಾ ಅಂತಾ ತಿಮ್ಮು ಏನು ಮಾಡಾಕೂ ತಿಳೀದೆ…" ಸುಯ್ದು ಹೇಳಿದಳು ಸೇಸಿ "ಏನೇನೋ ಕೆಟ್ಟ ವೇಚ್ನೆ ಮಾಡ್ತಿದ್ಲು….ಅಂತೂ ಸ್ವಾಮಿ ನಿನ್ನೂ ಕಳಿಸಿದ್ಹಾಂಗಾತು! ಇನ್ನು ನೀವುನೀವೆ ಏನು ಮಾಡ್ತೀರೋ ಮಾಡಿ."

ಸೇಸಿ ಗುತ್ತಿಯನ್ನು ಒಳಗೆ ಕರೆದಳು. ಅವನು, ಹೊಸತನದ ಬಟ್ಟೆ ವಾಸನೆ ಇನ್ನೂ ಹೊಮ್ಮುತ್ತಿದ್ದು, ಗೊಬ್ಬೆಸೆರಗು ಕಟ್ಟಿ ಉಟ್ಟಿದ್ದ ಹೊಸಸೀರೆಯ ಬರ್ ಬರ್ ಬರ್ ಸದ್ದಿನೊಡನೆ ಕೈ ಬಳೆಗಳ ನಾದವೂ ಸೇರುವಂತೆ, ತುಸು ಸಡಗರದಿಂದಲೆ ತಿಮ್ಮಿ ತಂದಿಟ್ಟ ಚೊಂಬಿನ ನೀರಿನಿಂದ ಅಂಗಳಕ್ಕೆ ಹಾಕಿದ್ದ ಮೆಟ್ಟಲು ಕಲ್ಲಮೇಲೆ ಕಾಲು ತೊಳೆದುಕೊಂಡು ಒಳಗೆ ಹೋದನು.

ತಿಮ್ಮಿ ಒಂದು ಕರಟಕ್ಕೆ ಮಡಕೆಯಲ್ಲಿ ತುಂಬಿಟ್ಟಿದ್ದ ಹೆಂಡ ಬೊಗ್ಗಿಸಿದಳು. ಒಂದು ಬಾಳೆಯ ಕೀತಿನಲ್ಲಿ ಜೀರಿಗೆ ಮೆಣಸಿನಕಾಯಿಯ ಖಾರ ಹಾಕಿ ಹುರಿದಿದ್ದ ಉಪ್ಪು ತುಂಡನ್ನು ನೆಂಚಿಕೊಳ್ಳಲು ತಂದಿಟ್ಟಳು.

ಆ ಉಪ್ಪುತುಂಟು ದನದ ಮಾಂಸದ್ದು. ಗೌಡರ ಮನೆಯ ಒಂದು ದನವನ್ನು ಹುಲಿ ಹಿಡಿದು, ಅದರ ಗಂಟಲನ್ನು ಮುರಿದು ರಕ್ತ ಕುಡಿದು, ಬಡುವನ್ನು ಕಾಡಿಗೆ ಎಳೆದುಕೊಂಡು, ಹೋಗಿ, ಗುರಗಿ ಹುಳುವಿನಲ್ಲಿ ಮುಚ್ಚಿಟ್ಟಿತ್ತು. ತರುವಾಯ ಸಾವಕಾಶವಾಗಿ ಬಂದು ಮಾಂಸಭಕ್ಷಣೆ ಮಾಡುವ ಉದ್ದೇಶದಿಂದ, ಅದನ್ನು ಪತ್ತೆಹಚ್ಚಿದ ಬೆಟ್ಟಳ್ಳಿ ಹೊಲಗೇರಿಯವರು ಆ ಬಡುವಿನ ಬಾಡನ್ನೆಲ್ಲ ಕೊಯ್ದು ತಮ್ಮ ತಮ್ಮ ಕಂಬಳಿಗಳಲ್ಲಿಯೇ ತುಂಬಿ ಹೊತ್ತು ತಂದು, ಹುಲಿಗೆ ತಾವು ಕಡಿದು ತರಲಾದಿದ್ದ ದೊಡ್ಡದೊಡ್ಡ ಎಲುಬುಗಳನ್ನು ಮಾತ್ರ ಬಿಟ್ಟಿದ್ದರು! ಗೋಮಾತೆಯ ಚರ್ಮವನ್ನಂತೂ ವಾಡಿಕೆಯಂತೆ ಕುದರೆ ತಟ್ಟಿನ ಮೇಲೆ ಸವಾರಿ ಮಾಡಿಕೊಂಡು ಬಂದ ಮೇಗರವಳ್ಳಿ `ಕರ್ಮಿನು ಸಾಬರ' ಕಡೆಯ `ಅಜ್ಜೀ ಸಾಬರಿಗೆ' ಮಾರಿದ್ದರು!

ಅದರ ಪೂರ್ವೇತಿಹಾಸದ ಅರಿವಾಗಲಿ ಪ್ರಜ್ಞೆಯಾಗಲಿ ಒಂದಿನಿತೂ ಗಮನಕ್ಕೆ ಬಾರದ ಗುತ್ತಿ ನಾಲಗೆಗೆ ಚುರುಗುಟ್ಟುತ್ತಿದ್ದ ಹುಳಿಹೆಂಡವನ್ನು ಹೀರಿ, ಉಪ್ಪು ತುಂಡುಗಳನ್ನು ಜಗಿದು ಚಪ್ಪರಿಸತೊಡಗಿದನು. ಅತ್ತೆ ಅಳಿಯರ ಮಾತು ಮಾತ್ರ ಗುಸುಗುಸು ಸಾಗಿತ್ತು. ತಿಮ್ಮಿ ಗುತ್ತಿಗೆ ತುಸು ದೂರದಲ್ಲಿ ಹಿಂದುಗಡೆ, ತನ್ನ ಮುಖ ಅವನಿಗೆ ಕಾಣದಂತೆ, ತಾನು ಮಾತ್ರ ಅವನ ಮುಖವನ್ನು ಗಮನಿಸುವಂತೆ, ತನ್ನ ತಾಯಿಯ ಮುಖಕ್ಕೆ ನೇರ ಎದುರಾಗಿರುವಂತೆ ನಿಂತಿದ್ದಳು. ಮಾತಿನ ನಡು ನಡುವೆ ಕಣ್ಣುಮಿಟುಕಿಸಿಯೊ, ತುಟಿ ಊದಿಸಿಯೊ. ಕೈ ಅಳ್ಳಾಡಿಸಿ ಬಳೆ ಸದ್ದು ಮಾಡಿಯೊ, ತನ್ನ ತಾಯಿಗೆ ಸನ್ನೆ ಸಲಹೆ ನೀಡುತ್ತಿದ್ದಳು.

ಸಂವಾದ ಮುಂದುವರಿದಂತೆಲ್ಲ ಮೂವರ ರಕ್ತಪರಿಚಲನೆಯಲ್ಲಿ ವೇಗೋತ್ಕರ್ಷವಾಗತೊಡಗಿತ್ತು. ಅದರ ಪರಿಣಾಮ ಒಮ್ಮೊಮ್ಮೆ ದೃಗ್ಗೋಚರವಾಗುವ ಬಹಿಃಕ್ರಿಯೆ ಮತ್ತು ಅಂಗವ್ಯಾಪಾರಾದಿಗಳಲ್ಲಿಯೂ ಹೊರದೋರುತ್ತಿತ್ತು. ತಿಮ್ಮಿ ಒಮ್ಮೆ ತನ್ನ ಮೂಕಸಂದೇಶದ ಸಾಮರ್ಥ್ಯ ಸೋತು ಬಿಕ್ಕಿಬಿಟ್ಟಿದ್ದಳು; ಒಮ್ಮೆ ಒಲ್ಲೆ ಎಂದು ತನ್ನಪ್ಪನಿಗೆ ತನ್ನ ನಿರ್ಧಾರವನ್ನು ಸೂಚಿಸಲು ತಲೆ ಕೊಡಹಿ, ಅವಳು ಮದುಮಗಳಾಗುವ ಪೂರ್ವಚಿನ್ಹೆಯಾಗಿ ತೊಟ್ಟಕೊಂಡಿದ್ದ, ಬಹುಪಾಲು ಕಡ ತಂದಿದ್ದ, ಸರಗಳೆಲ್ಲ ಸದ್ದಾಗಿದ್ದುವು; ಒಂದು ಸಾರಿಯಂತೂ, ತಾನು ಗುತ್ತಿಯೊಡನೆ ಓಡಿಹೋಗಿಯೆ ಹೋಗುತ್ತೇನೆ ಎಂಬ ದೃಢ ಹಠವನ್ನು ತನ್ನ ಬಾಯಲ್ಲಿಯೆ ಮೆಲ್ಲಗೆ ಹೇಳಿಕೊಳ್ಳುತ್ತಿರಲು. ಆ ವಾಕ್ಯದ ಕೊನೆಯ ಭಾಗಕ್ಕೆ ಬರುವ ಹೊತ್ತಿಗೆ ತಾಳ್ಮೆ ತಪ್ಪಿ ಮೈಮರೆತು '....ಗ್ತೀನಿ!' ಎಂಬುದನ್ನು ಗಟ್ಟಿಯಾಗಿ ಉಚ್ಚರಿಸಿ, ಗುತ್ತಿ ತಿರುಗಿನೋಡುವಂತೆ ಮಾಡಿದ್ದಳು. ಸೇಸಿಯ ಬಹಿರ್ವ್ಯಾಪಾರ ಅಷ್ಟು ರಭಸವಾಗಿ ಪ್ರಕಟಿತವಾಗಿರಲಿಲ್ಲ. ಆದರೆ ಸುಯ್ಲು, ಕಣ್ಣೊರಸಿಕೆ, ಎದೆಯ ಏರಿಳಿತ, ಸಿಂಬಳ ಸುರಿಯುವಿಕೆ, ಹಣೆ ಚಚ್ಚಿಕೊಳ್ಳುವಿಕೆ, ಕಿವಿಯ ಅಲೆಯನ್ನು ಅನಾವಶ್ಯಕವಾಗಿ ಉಜ್ಜಿಕೊಳ್ಳುವಿಕೆ, ಬೆವರೊರಸಿಕೊಳ್ಳುವಿಕೆ ಇವು ಅವಳ ಹೃದಯದ ಸಂಕಟಕ್ಕೂ ಮನಸ್ಸಿನ ತುರ್ಯಾಟಕ್ಕೂ ಕನ್ನಡಿ ಹಿಡಿದಿದ್ದುವು. ಬಾಡು ತಿನ್ನುವ ಮತ್ತು ಹೆಂಡ ಕುಡಿಯುವ ಒಂದು ಬಹಿಃಕ್ರಿಯೆಯಲ್ಲಿ ಆಗಲೆ ತೊಡಗಿದ್ದ ಗುತ್ತಿ, ಹೊಸದಾಗಿ ಬೇರೆಯ ತರಹದ ಕ್ರಿಯೆಯಿಂದ ತನ್ನ ಆಂತರ್ದ ಆಂದೋಲಗಳನ್ನು ಪ್ರಕಟಪಡಿಸಲಾರದೆಯೊ ಮತ್ತು ಹಾಗೆ ಪ್ರಕಟಪಡಿಸುವ ಗೋಜಿಗೆ ಹೆಚ್ಚಾಗಿ ಹೋಗದೆಯೂ, ತಾನು ಕೈಕೊಂಡಿದ್ದ ಕ್ರಿಯೆಯ ತೀವ್ರ ಮಂದಾದಿ ಗತಿಯ ರಭಸತಾರತಮ್ಯದಿಂದಲೆ ತನ್ನ ಭಾವಗಳಿಗೆ ಅಭಿವ್ಯಕ್ತಿ ನೀಡಿದ್ದನು. ತಿಂದೂ

ಕುಡಿದೂ ಪೂರೈಸಿದೊಡನೆ ಕರಟವನ್ನಲ್ಲಿಯೆ ಪಕ್ಕಕ್ಕೆ ಸರಿಸಿಟ್ಟು, ಸೇಸಿ ಬೇಡಬೇಡವೆಂದರೂ ಬಾಳೆಯ ಕೀತನ್ನು ಎತ್ತಿಕೊಂಡು ತನಗೆ ಸುಪರಿಚಿತವಾಗಿದ್ದ ಕೈಬಾಯಿ ತೊಳೆದುಕೊಂಡು ಉಟ್ಟಬಟ್ಟೆಗೇ ಒರೆಸಿಕೊಂಡನು.

ತಿಮ್ಮಿಗೆ ಹೇಳುವುದನ್ನೆ ಸೇಸಿಯ ಕಡೆಗೆ ತಿರುಗಿ ಹೇಳಿದನು: "ಹಾಂಗಾರೆ ನಾ ಬರತಿನಿ. ಆ ಅರೆಕಲ್ಲಿನ ಹತ್ರ ಕಾರೇಮಟ್ಟಿನ ಬದೀಲಿ, ಹೊಂಡ ಇದೆಯಲ್ಲಾ? ಅಲ್ಲಿರಾ ಕ್ಯಾದಿಗೆ ಹಿಂಡ್ಲ ಹತ್ರ ಮರೇಲಿ ಕೂತಿರತಿನಿ." ಎಂದವನು 'ಆಗಬಹುದೇ?' ಎಂದು ಪ್ರಶ್ನಿಸುವ ರೀತಿಯಲ್ಲಿ ತಿಮ್ಮಿಯನ್ನು ಕಣ್ಣಿಗೆ ಕಣ್ಣಿಟ್ಟು ನೋಡಿದಳು. ಅವಳೂ ಹಾಗೆಯೆ ನೋಡುತ್ತಿದ್ದಳು, ಗುತ್ತಿಯ ಕಣ್ಣನ್ನಲ್ಲ, ಹೃದಯಾಂತರಾಳವನ್ನೆ, ಜೀವವನ್ನೆ! ಎಂಥ ನೋಟಗಳೂ ಅವು? ಗಂಡು ಹೆಣ್ಣು ಘಟಸರ್ಪಗಳು ಎಣೆಯಾಡುವಾಗ ಒಂದನ್ನೊಂದು ಸರಪಣಿ ಸುತ್ತುವಂತೆ ಸುತ್ತಿ ಬಿಗಿಯುವ ಪ್ರಣಯಫಣಿಬಂಧನವೂ ಸಪ್ಪೆಯಾಗುವಂತೆ ಒಂದನ್ನೊಂದು ಆಲಿಂಗಿಸಿದ್ದುವು. ಕೆಂಪಗೆ ಕರಗಿ ದ್ರವವಾದ ಜೀವಗಳೆರಡರ ಚೈತನ್ಯವೆ ಅತ್ತಿಂದಿತ್ತ ಇತ್ತಿಂದತ್ತ ಹೃದಯದಿಂದ ಹೃದಯಕ್ಕೆ ಹರಿಯುವ ಬೇಟದ ಒದಗೆಗಳಾಗಿದ್ದುವು ಆ ನೋಟಗಳು! ಸಮರ್ಪಣೆ, ಆಶ್ವಾಸನೆ, ವಿನ್ಯಾಸ ಧೈರ್ಯ, ಪ್ರತಿಜ್ಞಾಸ್ಥೈರ್ಯ, ಆಮರಣಪರ್ಯಂತ ತ್ಯಾಗಭಾವ, ದುರ್ದಮ್ಯ ಸಾಹಸೋಲ್ಲಾಸ-ಇವೆಲ್ಲವನ್ನೂ ಒಬ್ಬರಿಂದೊಬ್ಬರಿಗೆ ಸಾಗಿಸುವ ಜೀವಂತ ವಿದ್ಯುನ್ಮಯ ತ್ಯಾಗಪ್ರಣಾಳಗಳಾಗಿದ್ದುವು ಆ ದೃಷ್ಟಿದ್ವಯ!

ತನ್ನ ದೊಣ್ಣೆ ಕತ್ತಿ ಕಂಬಳಿಗಳನ್ನು ಎತ್ತಿಕೊಂಡು ಹೊರಡುತ್ತಿದ್ದ ಗುತ್ತಿಗೆ ತಿಮ್ಮಿ ನಾಚಿಕೆಯಿಂದ ಮೃದುವಾಗಿ ಎಚ್ಚರಿಕೆ ಹೇಳಿದಳು: " ಆ ಕ್ಯಾದಿಗೆ ಹಿಂಡ್ಲ ಹತ್ರಾನೆ ಕೂತುಕೊಬ್ಯಾಡಿ, ನಾ ದನಾಕಾಯಕ್ಕೆ ಹೋದಾಗ ನೋಡೀನಿ, ಸರ್ಪನ ಹಾಂವು ಇರ್ತವೆ! ಸ್ವಲ್ಪ ದೂರಾನೆ ಕೂತ್ಕೊಳ್ಳಿ!"

ಎಷ್ಟಾದರೂ ಆ ಪ್ರದೇಶದ ನಿಕಟ ಪರಿಚಯ ಗುತ್ತಿಗಿಂತಲೂ ಹೆಚ್ಚಾಗಿರುವುದು ಆ ಜಾಗದ ಹುಟ್ಟುಮಗುವಾದ ತಿಮ್ಮಿಗೆ ತಾನೆ? ಆದರೆ ಒಂದನ್ನು ಮಾತ್ರ ಗುತ್ತಿ ಗಮನಿಸುವ ಸ್ಥಿತಿಯಲ್ಲಿರಲಿಲ್ಲ. ಕೊನೆಯ ಸಾರಿ ತನ್ನನ್ನೆ ನೇರವಾಗಿ ನಿರ್ದೇಶಿಸಿ ಮಾತನಾಡಿದಾಗ ತಿಮ್ಮಿಯ ರೂಢಿಯ ಏಕವಚನ ಬಹುವಚನಕ್ಕೆ ತಿರುಗಿತ್ತು! ಸೇಸಿ ಮಾತ್ರ ಅದನ್ನು ಗಮನಿಸಿ ಆ ಉತ್ಕಟಸ್ಥಿಯಲ್ಲಿಯೂ ಮುಗುಳುನಗದೆ ಇರಲು ಸಾಧ್ಯವಾಗದೆ ನೆಲಕ್ಕೆ ಮೋರೆ ತಿರುಗಿಸಿದ್ದಳು.

ಇಬ್ಬರೂ ಒಟ್ಟಿಗೆ ಹೊರಡುವುದು ಚೆನ್ನಾಗಿ ಕಾಣಿಸುವುದಿಲ್ಲವೆಂದೂ, ಯಾರಾದರೂ ಕಂಡರೆ ಅನುಮಾನಕ್ಕೆ ಆಸ್ಪದವಾಗಿ ತೊಂದರೆಗೀಡಾಗಬಹುದೆಂದೂ, ಗುತ್ತಿ ಹೊರಟ ತುಸು ಹೊತ್ತಿನ ಮೇಲೆ ತಿಮ್ಮಿ ಬಯಲು ಕಡೆಗೆ ಹೋಗುವ ರೀತಿಯಲ್ಲಿ ಹಾಡ್ಯಕ್ಕೆ ಹೋಗಿ, ಅಲ್ಲಿಂದ ಗುತ್ತಿ ಹೇಳಿದ್ದ ಗೊತ್ತಿಗೆ ಹೋಗುವುದೆಂದೂ ಸಂಚುಹೂಡಿದ್ದರು.

ಗುತ್ತಿ ಕಣ್ಮರೆಯಾದೊಡನೆ ತಿಮ್ಮಿ ಬೇಗಬೇಗನೆ ಹೋಗಿ, ತನ್ನ ಮದುವಣ ಗಿತ್ತಿಯ ಲಕ್ಷಣದ ಒಡವೆಗಳೆಲ್ಲವನ್ನೂ ತೆಗೆದು, ಗಂಟು ಕಟ್ಟಿ, ಅವ್ವ ಹೇಳಿದ ಮಡಕೆಯೊಳಗಿಟ್ಟಳು. ದಾರಿಗೆ ಬೇಕಾಗಬಹುದೆಂದು ಅವ್ವ ಕಟ್ಟಿಕೊಟ್ಟ ಸಣ್ಣದೊಂದು ಬುತ್ತಿಯನ್ನು ನೀರು ತೆಗೆದುಕೊಂಡು ಹೋಗುವ ನೆವದ ಮಡಕೆಯಲ್ಲಿಟ್ಟುಕೊಂಡಳು. ಅವರು ಮನೆದೇವರೆಂದು ಮೊಲೆಯಲ್ಲಿಟ್ಟು ಪೂಜೆಮಾಡುತ್ತಿದ್ದ ಒಂದು ಕುಂಕುಮ ಹಚ್ಚಿ ಕಾಣಿಕೆ ಕಟ್ಟಿದ್ದ ಒನಕೆ

ತುಂಡಿನಂತಹ ಪ್ರತಿಮೆಯ ಮುಂದೆ ಅಡ್ಡಬಿದ್ದು, ಅವ್ವನ ನಿಷ್ಕ್ರಿಯಾ ಮೌನದ ಮತ್ತು ಆರ್ದ್ರನಯನದ ಆಶೀರ್ವಾದಪಡೆದು ಬೀಳ್ಕೊಂಡಳು.

ಮಗಳು ಕಣ್ಮರೆಯಾದ ಮೇಲೆಯೊ ಆ ದಿಕ್ಕಿಗೇ ಕಣ್ಣಾಗಿ ಸ್ವಲ್ಪ ಹೊತ್ತು ನಿಂತಿದ್ದ ಸೇಸಿ ಸುಯ್ದು ಸೆರಗಿನಿಂದ ಕಣ್ಣೊರಸಿಕೊಂಡಳು. ಅವಳ ಎದೆ ಏನೋ ತನಗರಿಯದೊಂದು ಪುಕ್ಕಲನ್ನನುಭವಿಸಿ ಡವಡವಿಸತೊಡಗಿತು. ಮಗಳ ಸಂತೋಷಾರ್ಥವಾಗಿ, ಅಳಿಯನ ಇದಿರಿನ ಧೈರ್ಯಲ್ಲಿ, ಈ ಸಾಹಸಕ್ಕೆ ಒಪ್ಪಿಗೆ ಕೊಟ್ಟಿದ್ದಳು. ಆದರೆ ಈಗ ತಾನೊಬ್ಬಳೆ ಬಿಡಾರದ ಜಗಲಿಯಲ್ಲಿ ಒಂಟಿಯಾಗಿ ನಿಂತಾಗ ಜೀವ ತಲ್ಲಣಿಸತೊಡಗಿತ್ತು. ತಾನೇನು ಮಾಡಿಬಿಟ್ಟೆ? ನಡೆದ ನಿಜಾಂಶ ಗೊತ್ತಾದರೆ, ತನ್ನ ಗತಿ ಏನಾಗುತ್ತದೆ? ಗೌಡರ ಕೋಪ, ಗಂಡನ ರೌದ್ರತೆ, ಅಳಿಯನಾಗಲಿದ್ದವನ ಕ್ರೋಧ ಮಾತ್ಸರ್ಯ, ಕೇರಿಯವರ ನಿಂದೆ, ಸರ್ವರ ತಿರಸ್ಕಾರ-ನೆನೆದಂತೆಲ್ಲ ಘೋರವಾಗತೊಡಗಿತು ಸೇಸಿಯ ಮನಸ್ಸಿನಲ್ಲಿ, ತನಗೆ ಒದಗುವ ಗತಿ ಇರಲಿ, ಮಗಳಿಗೂ ಸೋದರಳಿಯನಿಗೂ ಏನಾದೀತು, ಏನಾಗಿದಿದ್ದೀತು, ಸಿಕ್ಕಿಬಿದ್ದರೆ? ದಿಕ್ಕು ತೋಚದೆ "ಸ್ವಾಮಿ, ಕಾಪಾಡಪ್ಪಾ!" ಎಂದು ಕೈ ಮುಗಿದಳು, ಆಕಾಶಕ್ಕೊ, ಭೂಮಿಗೊ, ಕಾಡಿಗೊ, ಸಹ್ಯಾದ್ರಿಶ್ರೇಣಿಗಳಿಗೊ?

ಬೇಗಬೇಗ ಓಡಿಹೋಗಿ ಮಗಳನ್ನು ಹಿಂದಕ್ಕೆ ಕರೆಯುವ ಮನಸ್ಸೂ ಆಯಿತು. ಆದರೆ ಅವಳು ಹೋಗಿಬಿಟ್ಟಿದ್ದಳು. ತಾನು ಕರೆದರೂ ಅವಳು ಹಿಂದಿರುಗುತ್ತಾಳೆಯೆ? ಮಗಳು ಈ ಮದುವೆ ಗೊತ್ತಾದಂದಿನಿಂದಲೂ ಹೊಟ್ಟೆಯಲ್ಲಿಯೆ ಅನುಭವಿಸುತ್ತಿದ್ದ ಬೆಂಕಿಯ ಕಾವು ತಾಯಿಗೂ ಚೆನ್ನಾಗಿ ಮುಟ್ಟಿತ್ತು. ಅಲ್ಲದಿದ್ದರೆ ಗುತ್ತಿ ಅಷ್ಟು ಬೇಗನೆ ಅಷ್ಟು ಸುಲಭದಲ್ಲಿ ಜಯಶೀಲನಾಗುತ್ತಿದ್ದನೇ ತನ್ನ ಸಂಚಿನಲ್ಲಿ? ಸೇಸಿ ಒಳಗೆ ನಡೆದು, ಒಂದು ಬಿಲ್ಲೆಯನ್ನು ತೊಳೆದು, ಕಲ್ಲೂರು ಗಣಪನಿಗೆ ಹಣ್ಣುಕಾಯಿ ಮಾಡಿಸುವುದಾಗಿ ಹೇಳಿಕೊಂಡು, ಅದನ್ನು ಮೂಲೆಯ ಒನಕೆ ದೇವರಿಗೆ ಸುತ್ತು ಬರಿಸಿ, ಒಂದು ಬಟ್ಟೆಯಲ್ಲಿ ಸುತ್ತಿ, ಆಗಲೆ ಕಟ್ಟುಗೊಂಡು ನೇತಾಡುತ್ತಿದ್ದ ಇತರ ಕಾಣಿಕೆಗಳ ಸಾಲಿಗೆ ಇದನ್ನೂ ಜೋತುಹಾಕಿದಳು.

ಕೇರಿಯ ಕೋಳಿಗಳೆಲ್ಲ ಆಯಾ ಬಿಡಾರಗಳಲ್ಲಿರುವ ತಮ್ಮ ತಮ್ಮ ಬುಟ್ಟಿಯಡಿಯನ್ನೊ ಒಡ್ಡಿಯನ್ನೊ ಸೂರಿನ ಬಿದಿರಟ್ಟಣೆಯನ್ನೊ ಸೇರಿ, ಕಪ್ಪು ಕವಿಯತೊಡಗಿತ್ತು, ಬಿಡಾರದ ಎದುರಿಗಿದ್ದ ಹಾಡ್ಯದ ಮರಗಳ ಪ್ರತ್ಯೇಕತೆಯೂ ವಿವರವೂ ಅಡಗಿ ಎಲ್ಲ ಮುದ್ದೆಯಾಗತೊಡಗಿದ್ದುವು. ಅಷ್ಟು ಹೊತ್ತಿಗೆ, ಬೀಸೆಕಲ್ಲು ಸವಾರಿ ನೋಡಲು ಹಕ್ಕಲಿಗೆ ಹೋಗಿದ್ದ ಜನ ಒಬ್ಬೊಬ್ಬರಾಗಿ ಇಬ್ಬಿಬ್ಬರಾಗಿ ಹಿಂದಿರುಗತೊಡಗದಿದ್ದರು. ದೊಡ್ಡಬೀರನ ಎರಡನೆ ಮಗ ಪುಟ್ಟಬೀರನ ಹೆಂಡತಿ ಚಿಕ್ಕಪುಟ್ಟಿಯೆ ಸೇಸಿಗೆ ಮೊದಲು ಸುದ್ದಿ ತಿಳಿಸಿದ್ದು, ತನ್ನ ಮಾವಗೆ ಬೈಸಿಕಲ್ಲು ಎಳೆಯುತ್ತಿದ್ದಾಗ ಎಡವಿಬಿದ್ದು ಪೆಟ್ಟಾಗಿದೆ ಎಂದು. ಸೇಸಿ ತನ್ನ ಗಂಡನಿಗಾದ ಪೆಟ್ಟಿನ ಗಾತ ತಿಳಿಯದೆ ತಳಮಳಿಸುತ್ತಿರಲು, ತನ್ನ ಗಂಡುಮಕ್ಕಳಿಬ್ಬರೂ ಸೇರಿ ದೊಡ್ಡಬೀರನನ್ನು ಮೆಲ್ಲಗೆ ನಡೆಸಿಕೊಂಡು ಬರುತ್ತಿದ್ದುದನ್ನು ಕಂಡಳು. ಹಿರಿಯ ಮಗ ಸಣ್ಣಬೀರ ತನ್ನ ತಂದೆಯಾಗಿರುವ ಪೆಟ್ಟು ಅಷ್ಟೇನೂ ದೊಡ್ಡದಲ್ಲ ಎಂದು ಹೇಳಿ ತಾಯಿಯನ್ನು ಸಮಾಧಾನಗೊಳಿಸಿದನು. ಎರಡನೆ ಮಗ ಪುಟ್ಟಬೀರ ಜಗಲಿಯ ಮೇಲೆ ಒಂದು ಗೀಕಿನ ಚಾಪೆಹಾಕಿ ಅಪ್ಪನನ್ನು ಮಲಗಿಸಿದನು. ದೊಡ್ಡಬೀರನ ಗಾಯಗಳಿಗೆ ಪಾದ್ರಿಯೂ ದೇವಯ್ಯಗೌಡರೂ ಸೇರಿ ಇಲಾಜುಮಾಡಿ ಬಟ್ಟೆಕಟ್ಟಿದ್ದರು.

ತಮ್ಮ ತಮ್ಮ ಬಿಡಾರಗಳಿಗೆ ಹೋಗುವ ಮೊದಲು ಸಣ್ಣಬೀರನೂ ಪುಟ್ಟಬೀರನೂ

ಅಪ್ಪ ಮಲಗಿದ್ದ ಚಾಪೆಯ ಪಕ್ಕದಲ್ಲಿಯೆ ಕುಳಿತು ಅವ್ವ ಕೊಟ್ಟ ಹೆಂಡ ಕುಡಿಯುತ್ತಿದ್ದರು, ಅದು ಇದು ಮಾತಾಡುತ್ತಾ.

“ತಂಗಿ ಎಲ್ಲವ್ವಾ? ಕಾಣಾದಿಲ್ಲಾ?” ಎಂದನು ಸಣ್ಣಬೀರ. ಬಚ್ಚನನ್ನು ಮದುವೆಯಾಗುವ ಇಷ್ಟವಿಲ್ಲದೆ ತಿಮ್ಮಿ ಕುದಿಯುತ್ತಿದ್ದುದು ಅವನಿಗೆ ಗೂತ್ತಿದ್ದುದರಿಂದ ಆ ಪ್ರಶ್ನೆಯ ಧ್ವನಿಯಲ್ಲಿ ಅಸಹಾಯಕತೆಯ ಅನುಕಂಪೆ ತೋರುತ್ತಿತ್ತು.

“ಎಲ್ಲೋ ಮೂಲೇಲಿ ಅಳ್ತಾ ಕೂತಿರ್ಬೈದು” ಎಂದನು ಪುಟ್ಟಬೀರ, ಬಚ್ಚನ ವಿಚಾರದಲ್ಲಿ ತನಗಿದ್ದ ವಿರುದ್ಧಾಭಿಪ್ರಾಯವನ್ನು ರೂಪಿಸುವ ರೀತಿಯಲ್ಲಿ.

ಮಲಗಿದ್ದ ಮುದುಕ ದೊಡ್ಡಬೀರ ತುಸು ಗಡಸುದನಿಯಲ್ಲಿ “ಅದಕ್ಕೇನಾಗದೆ, ಅಳ್ತಾ ಕೂರಕ್ಕೆ?” ಎಂದು ತಾನು ಕೈಗೊಂಡ ನಿರ್ಣಯವನ್ನು ಸಮರ್ಥಿಸಿ ತೋರುವಂತೆ “ತಿಮ್ಮೀ, ಇಲ್ಲಿ ಬಾರೆ. ನಿನ್ನ ಅಣ್ಣಾರು ನೋಡಬೇಕಂತೆ!” ಎಂದು ಗಟ್ಟಿಯಾಗಿ ಕರೆದನು.

ಸೇಸಿ ಏನೂ ಹೇಳದೆ ದೂರ ಗೋಡೆಗೆ ಒರಗಿ ಚಿಂತಾಕ್ರಾಂತಳಾಗಿ ಕೂತಿದ್ದಳು. ಒಂದು ಹರಳೆಣ್ಣೆ ಹಾಕಿದ್ದ ದೊಡ್ಡಹಣತೆಯ ದೀಪ ಅದಕ್ಕಾಗಿ ಮಾಡಿದ್ದ ಗೂಡಿನಲ್ಲಿ ಉರಿಯುತ್ತಿತ್ತು. ಸುತ್ತಲೆಲ್ಲ ಆಗಲೆ ಕತ್ತಲೆ ದಟ್ಟಯಿಸಿತ್ತು.

ಸ್ವಲ್ಪಹೊತ್ತಾದರೂ ತಿಮ್ಮಿ ಬಾರದಿರಲು ಮುದುಕ ತನ್ನ ಹೆಂಡತಿಗೆ ಮಗಳನ್ನು ಕರೆತರಲು ಹೇಳಿದನು. ಅದರಲ್ಲಿ ಅವಳನ್ನು ಸಂತೈಸುವ ಒಳ ಉದ್ದೇಶವೂ ಇತ್ತು ಅವನಿಗೆ.

ಸೇಸಿ ಒಳಗೆ ಹೋಗಿ ಬಂದು “ಹೊರಕಡೆಗೆ ಹೋಗ್ಯದೆ ಅಂತಾ ಕಾಣ್ತದೆ, ಹಾಡ್ಯಕ್ಕೆ” ಎಂದಳು.

ಹೊಲೆಯರ ಹುಡುಗಿ, ಹುಟ್ಟಿದಂದಿನಿಂದಲೂ ಮೂರುಹೊತ್ತೂ ಕಾಡುಗಡ್ಡೆಗಳಲ್ಲಿ ಹೆದರಿಕೆಯನ್ನೆ ಕಾಣದೆ ತಿರುಗಿ ರೂಢಿಯಾಗಿರುವ ತಿಮ್ಮಿ, ಕತ್ತಲೆಯಲ್ಲಿ ಬಿಡಾರದ ಮುಂದಣ ಹಾಡ್ಯಕ್ಕೆ ಹೊರಕಡೆಗೆ ಹೋಗಿರುವುದು ಯಾರಿಗೂ ಆತಂಕದ ವಿಷಯವಾಗಲಿಲ್ಲ. ತುಸು ಹೊತ್ತಾದ ಮೇಲೆ ಸಣ್ಣಬೀರ ಪುಟ್ಟಬೀರರು ಅಲ್ಲಿಯೆ ಬಳಿಯಿದ್ದ ತಮ್ಮ ತಮ್ಮ ಬಿಡಾರಗಳಿಗೆ ಹೋದರು.

ಅವರು ಹೋಗಿ ಸ್ವಲ್ಪ ಹೊತ್ತಾದ ಮೇಲೆ ದೊಡ್ಡ ಬೀರ ವ್ಯಗ್ರನಾಗಿ “ನಿಂಗೇನು ತಲೆ ನೆಟ್ಟಗದೆಯೇನೆ? ಮದುವೆಗೆ ತಂದ ಒಡವೆನೆಲ್ಲ ಹಾಕಿ, ಈ ಕತ್ತಲೇಲಿ ಹುಡುಗಿ ಒಬ್ಬಳನ್ನೆ ಹಾಡ್ಯಕ್ಕೆ ಕಳ್ಸಾಕೆ, ಹೊರಕಡೆಗೆ? ಹೋಗಿ ಕೃತಿಯೊ ಇಲ್ಲೊ?” ಎಂದು ಮಲಗಿದ್ದವನು ಅಸ್ಥಿರನಾದಂತೆ ಎದ್ದು ಕೂತನು.

ಸೇಸಿ ಕತ್ತಲೆಯಲ್ಲಿಯೆ ಹಾಡ್ಯದ ಕಡೆಗೆ ಹೋಗಿ ಬಂದು “ಅಲ್ಲೆಲ್ಲೊ ಕಾಣ್ಲೆಲ್ಲ; ಕರೆದ್ರೂ ಓಕೊಳ್ಳಿಲ್ಲ! ಇಲ್ಲೆ ಎಲ್ಲೊ ನೆರೆಮನೆ ಕಡೆ ಹೊಗ್ಯದೆಯೋ ಏನೊ? ನೋಡಿ ಬರ್ಲೇನು?” ಎನ್ನುತ್ತಾ ಹೊರಟುಹೋದಳು.

ಮುದುಕನಿಗೆ ಏಕೋ ಏನೊ ದಿಗಿಲಾಗತೊಡಗಿತು. ಕಾಲು ಪೆಟ್ಟಾಗಿ ಉಳುಕಿರದಿದ್ದರೆ ಅವನು ಕೂತಿರುತ್ತಿರಲಿಲ್ಲ. ತಂದೆಯಾಗಿದ್ದ ಅವನಿಗೆ ಮಗಳ ಮನಸ್ಸಿನಂತೆ ನಡೆಯಲು ಅನೇಕ ಕಾರಣಗಳಿಂದ ಸಾಧ್ಯವಾಗದೆ, ಅನಿವಾರ್ಯಕ್ಕೆ ಸಿಕ್ಕಿ, ಬಚ್ಚನಿಗೆ ಅವಳನ್ನು ಲಗ್ನ ಮಾಡಿಕೊಡಲು ಒಪ್ಪಿದ್ದಳು. ಆದರೆ ತನ್ನ ತಳವಾರತನದ ಪ್ರತಿಷ್ಠೆಗೆ ಕೊಂದು ಬರಬಾರದೆಂದು, ತಾನೆ ತನ್ನ ಸ್ವಂತ ಇಚ್ಛೆಯಿಂದ ಒಪ್ಪಿಗೆ ಕೊಟ್ಟಿದ್ದೇನೆ ಎಂಬಂತೆ ವರ್ತಿಸುತ್ತಿದ್ದನು. ಈಗ ಇದ್ದಕ್ಕಿದ್ದಂತೆ ಮಗಳು ಎಲ್ಲಿ (ಅವಳು ಹಾಗೆ ಹೇಳಿದ್ದಳು ಎಂಬುದೂ ಅವನಿಗೆ ಗೊತ್ತಿತ್ತು.) 'ಪಾರಾಣ ತೆಗೆದುಕೊಂಡು ಬಿಡ್ತಾಳೋ!' ಎಂದು ಹೆದರಿಕೆ ಹುಟ್ಟಿಬಿಟ್ಟಿತ್ತು. ಹೆಂಡತಿ ಹಿಂದಿರುಗಿ ಬರುವವರೆಗೂ ಕಾಯುವ ತಾಳ್ಮೆಯಿಲ್ಲದೆ ಗಟ್ಟಿಯಾಗಿ ಕೂಗಿ ಕರೆಯತೊಡಗಿದನುಃ "ಏ ಸಣ್ಣಾ, ಏ ಪುಟ್ಟಾ, ಬನ್ರೋ ಬೇಗ ಬನ್ರೋ"

ದೊಡ್ಡಬೀರನ ಗಂಟಲು ಕೇಳಿಸಿ ಸೇಸಿಯೊಡಗೂಡಿಯೆ ಓಡಿ ಬಂದರು, ಸಣ್ಣಬೀರ ಪುಟ್ಟಬೀರನು.

ಕೇರಿಗೆ ತಳವಾರನ ಬಿಡಾರದ ಮುಂದೆ ನೆರೆಯಿತು. ಹತ್ತಾರು ಊಹಾಪೋಹಗಳಾಗಿ ತಮತಮಗೆ ಹೊಳೆದಂತೆ ಹೇಳಿದರುಃ ಕೆರೆಗೆ ಬಿದ್ದಳೊ? ನೇಣುಹಾಕಿಕೊಂಡಳೊ? ಹಾವು ಕಚ್ಚಿ ಸತ್ತಳೊ ಹುಲಿ ಹಿಡಿಯಿತೊ? ಕೊನೆಯದಾಗಿ ಕಲ್ಲೂರು ಸಾಹುಕಾರ ಮಂಜಭಟ್ಟರು ಪ್ರಮುಖವಾಗಿಯೂ ಮತ್ತು ಇತರ ರೀತಿಯ ಬಲಾತ್ಕಾರದಿಂದ ದವಸ ಧಾನ್ಯ ಜಮೀನು ಇವುಗಳ ಸಂಪಾದನೆಗಾಗಿಯೂ, ಹೊನ್ನಾಳಿಯಿಂದ ಕರೆಯಿಸಿ ಮೇಗರವಳ್ಳಿಯಲ್ಲಿ ಜಮಾಯಿಸಿಕೊಂಡಿರುವ ಪುಂಡ ಸಾಬರ ತಂಡದವರಿಂದ, ಆಭರಣಕಾರಣಕ್ಕಾಗಿಯೋ ಅಥವಾ ಅತ್ಯಾಚಾರಕ್ಕಾಗಿಯೋ, ಅಪಹರಿಸಲ್ಪಟ್ಟಳೊ…….?

ಅಡಕೆ ದಬ್ಬೆ ಸೀಳಿ, ಕಟ್ಟಿ, ಹತ್ತಿಪ್ಪತ್ತು ದೊಂದಿ ಮಾಡಿ, ಒಬ್ಬೊಬ್ಬರು ಒಂದೊಂದನ್ನು ಹೊತ್ತಿಸಿಕೊಂಡು, ಅದರ ಬೆಳಕಿನಲ್ಲಿ ತಿಮ್ಮಿಯನ್ನು ಹುಡುಕಲು ಹಾಡ್ಯದ ಕಾಡಿಗೆ ಹೊರಟರು. ಬೀಸಿ ಬೀಸಿ ಹೊತ್ತಿಸಿಕೊಳ್ಳುತ್ತಿದ್ದ ಆ ಕೆಂಡಬೆಳಕುಗಳು ದೂರ ದೂರ ಹೋಗಿ ಹಳುವಿನಲ್ಲಿ ಮರೆಯಾಗುವುದನ್ನೆ ನೋಡುತ್ತಾ ಜಗಲಿಯ ಮೇಲೆ ಕುಳಿತಿದ್ದ ದೊಡ್ಡಬೀರ "ಅಯ್ಯೋ ದೇವರೆ! ನನಗೀ ವಯಸ್ಸಿನಲ್ಲಿ ಹೀಂಗಾಗ ಬೇಕೇ?…." ಎಂದೆಲ್ಲ ನಾನಾ ವಿಧವಾಗಿ ನರಳುತ್ತಿದ್ದನು.

ಸೇಸಿ ಕೇರಿಯ ಇತರ ಹೆಂಗಸರ ಸಮಾಧಾನದ ಮತ್ತು ಧೈರ್ಯದ ಮಾತುಗಳನ್ನು ಕೇಳಿಯೂ ಕೇಳದಂತೆ ತಲೆಬಾಗಿ ನೆಲನೋಡುತ್ತಾ ಅವರ ನಡುವೆ ಅಂಗಳದಲ್ಲಿ ಕುಳಿತಿದ್ದಳು. ಹೊತ್ತು ಮೆಲ್ಲಗೆ, ಬಹುಮೆಲ್ಲಗೆ, ಸುದೀರ್ಘವಾಗಿ, ತುದಿಮೊದಲಿಲ್ಲದ ಕರಿಯ ಹೆಬ್ಬಾವಿನಂತೆ ಹರಿಯುತ್ತಿತ್ತು. ಜಗಲಿಯ ಮೇಲೆ ಗೂಡಿನಲ್ಲಿ ಉರಿಯುತ್ತಿದ್ದ ಹಣತೆ ಎಣ್ಣೆತೀರಯೋ ಗಾಳಿಬೀಸಿಯೋ ಇದ್ದಕ್ಕಿದ್ದಂತೆ ಆರಿಹೋಯಿತು. ಅದನ್ನು ಮತ್ತೆ ಹೊತ್ತಿಸಬೇಕೆಂದು ಯಾರಿಗೂ ಅನ್ನಿಸಲೂ ಇಲ್ಲ.

ಹುಡುಕುವವರು ಹೋಗಿ ಅರ್ಧಗಂಟೆ ಆಗಿತ್ತು ಏನೊ, ಹಾಡ್ಯದ ಕಡೆಯಿಂದ ಒಂದು ದೊಂದಿ ಬೆಳಕು ತಮ್ಮ ಬಿಡಾರದ ಕಡೆಗೆ ವೇಗದಿಂದ ಚಲಿಸುತ್ತದ್ದುದು ಜಗಲಿಯ ಮೇಲೆ ಕಗ್ಗತ್ತಲೆಯಲ್ಲಿ ಕುಳಿತಿದ್ದ ದೊಡ್ಡಬೀರನ ಕಣ್ಣಿಗೆ ಬಿತ್ತು. ಅವವನ ಜೀವವೆ ಬಾಯ್ಗೆ ಬಂದಂತಾಯಿತು, ತನ್ನ ಮಗಳಿಗೆ ನಡೆದಿರುವ ಏನೊ ಒಂದು ಅನಾಹುತವನ್ನು ತಿಳಿಸಲು ಯಾರೊ ಓಡಿಬರುತ್ತಿದ್ದಾರೆ ಎಂದು.

ಬಂದವನು ದೊಂದಿ ಬೀಸಿ ಬೆಳಕು ಮಾಡಿ, ಒಂದು ಮಡಕೆ ಯನ್ನು ತೋರಿ "ಅವ್ವಾ, ಇದೇ ಏನು, ತಂಗಿ ಹೊರಕಡೆಗೆ ತಗೊಂಡು ಹೋದ ಮಡಕೆ?" ಎಂದನು.

ಸೇಸಿ ನೋಡಿ ಸಂಕಟದ ಸ್ವರದಿಂದ "ಹೌದಪ್ಪಾ" ಎಂದಳು.

"ಎಲ್ಲಿ ಬಿದ್ದಿತ್ತೊ ಅದು, ಪುಟ್ಟಬೀರ?" ಜಗಲಿಯಿಂದ ಬಂತು ದೊಡ್ಡಬೀರನ ಆರ್ತಧ್ವನಿ.

ಆ ಮಡಕೆ ತಿಮ್ಮಿ ತೆಗೆದುಕೊಂಡು ಹೋದದ್ದು ಎಂಬುದನ್ನು ಖಾತ್ರಿ ಮಾಡಿಕೊಂಡ ಪುಟ್ಟಬೀರ, ಕೊಲೆಪಾತಕನನ್ನು ಹಿಡಿಯಲು ತನಗೆ ಬೇಕಾಗಿದ್ದ ಮುಖ್ಯ ವಸ್ತುವೆ ದೊರಕಿದೆ ಪತ್ತೇದಾರನ ಠೀವಿಯಿಂದ, ದೊಂದಿ ಬೀಸುತ್ತಾ ಬಂದ ಹಾದಿಯಲ್ಲಿಯೆ ಹಿಂದಿರುಗಿ ಓಡಿ ಕಣ್ಮರೆಯಾದನು. ಆ ಮಡಕೆ ಕಗ್ಗತ್ತಲೆಯಲ್ಲಿ ಯಾರ ಕಣ್ಣಿಗೂ ಬೀಳದೆ ಅಂಗಳದಲ್ಲಿ ಬಿದ್ದಿತ್ತು, ಕುರುಡು ಸಾಕ್ಷಿಯಾಗಿ!

ಪುಟ್ಟಬೀರ ಹೋಗಿ ಇನ್ನೂ ಐದು ನಿಮಿಷವೂ ಕಳೆದಿರಲಿಲ್ಲ. ಹಠಾತ್ತನೆ ಅಂಗಳದಲ್ಲಿ ನೆರೆದಿದ್ದ ಹೆಂಗಸರ ನಡುವಣಿಯಿಂದ ಒಂದು ವಿಕಾರವಾದ ಹುಹೂಂಕಾರದ ಸದ್ದು ಎದ್ದಿತು. ಎಲ್ಲರೂ ಚಕಿತಗೊಂಡರಾದರೂ ಯಾರೂ ಹೆದರಲಿಲ್ಲ. ಆ ಹೂಂಕಾರ ಅಭ್ಯಾಸವಾಗಿದ್ದ ಅವರೆಲ್ಲರಿಗೂ ಅದರ ಅರ್ಥ ಗೊತ್ತಾಯಿತುಃ ಸೇಸಿಯ ಮೈಮೇಲೆ ಜಕಣಿ ಬಂದಿತ್ತು!

ಇನ್ನೇನು ತಿಮ್ಮಿಯ ಅಂತರ್ಧಾನ ರಹಸ್ಯದ ಮೇಲೆ ಸತ್ಯದ ಬೆಳಕು ಬಿದ್ದೇ ಬೀಳುತ್ತದೆಂದು ಸರ್ವರೂ ಆಲಿಸಿದರುಃ ಆ ಅತೀಂದ್ರಿಯ ಭಾಷೆಯನ್ನೆಲ್ಲ ಅಳೆದು ತೂಗಿ ಕೇರಿ ತೂರಿ ನೆರೆದಿದ್ದರು ಹೀಗೆಂದು ಅದರ ಸಾರ ಸಂಗ್ರಹ ಮಾಡಿಕೊಂಡರುಃ

"ಹ್ಞೂಂ ಹ್ಞೀಂ ಹೂಂ.... ಜಾತಿಕೆಟ್ಟು ನೀತಿಕೆಟ್ಟು ಕೇರಿಗೆಲ್ಲ ಮುಟ್ಟುಚಿಟ್ಟು! ಹಲಸಿನ ಮರದ ಮೇಲೆ ನನ್ನ ಜುಟ್ಟು! ನಾನೆ ಅಡಗಿಸಿದ್ದೇನೆ! ಹೆದರಬೇಡಿ, ನನಗೆ ಆಯಾರ ಕೊಟ್ಟು ಪೂಜೆಮಾಡಿ! ಹೋದ ಹೆಣ್ಣು ಕೋದಲು ಕೊಂಕದೆ ಬರುತ್ತದೆ ಹ್ಞೂ ಹ್ಞೂ ಹ್ಞೂ... "

ಕತ್ತಲೆಯಲ್ಲಿ ಒಂದು ಪಿಸುಮಾತು ಕೇಳಿಸಿತುಃ "ಹೌದು ಮತ್ತೆ? ಕಿಲಸ್ತರ ಜಾತಿಗೆ ಹೆಣ್ಣು ಕೊಟ್ರೆ ಆಗ್ದೆ ಬಿಡ್ತದೆಯೆ.... ಮುಟ್ಟುಚಿಟ್ಟು..... ಕೇರಿಗೆ?"

* * *

ಗುತ್ತಿ ಆ ಅರೆಕಲ್ಲನ್ನು ಸೇರಿ, ಅದರ ಮೇಲೆಯೆ ಕಲ್ಲುಸಂಧಿಯಲ್ಲಿ ಬೆಳೆದಿದ್ದ ಕಾರೆಮಟ್ಟಿನ ಕೆಳಗಡೆಗೆ ಹೊಂಡದಲ್ಲಿದ್ದ ದಟ್ಟ ಕೇದಿಗೆ ಹಿಂಡಲಿನ ಸಮೀಪದಲ್ಲಿ, ತಿಮ್ಮಿ ತಾನು ಹೊರುಡುವಾಗ ಕೊಟ್ಟಿದ್ದ ಎಚ್ಚರಿಕೆಯನ್ನು ನೆನೆದು ತೀರ ಹತ್ತಿರಕ್ಕೆ ಹೋಗದೆ, ಕೇರಿಗೆ ಹೋಗುತ್ತಿದ್ದ ಕಾಲುದಾರಿಗೂ ಒಡೆಯರಮನೆಗೆ ಅಗಚಿ ಹೋಗುತ್ತಿದ್ದ ಕಾಲುದಾರಿಗೂ ನಡುವೆ ಒಂದು ಸಣ್ಣ ಹಾಸುಬಂಡೆಯ ಮೇಲೆ ಕಾದು ಕುಳಿತನು. ಬೆಟ್ಟಳ್ಳಿ ಕಡೆಗೆ ಹೋಗುವವರಿಗಾಗಲಿ ಅಥವಾ ಅತ್ತಿಂದ ಬರುವವರಿಗಾಗಲಿ ಯಾರಿಗೂ ಗುತ್ತಿ ಅಲ್ಲಿರುವುದು ಗೊತ್ತಾಗುವಂತಿರಲಿಲ್ಲ. ಆದರೆ ಗುತ್ತಿಗೆ ಅವರಾಡುವ ಮಾತು ಚೆನ್ನಾಗಿ ಕೇಳಿಸುವಂತಿತ್ತು.

ಬೈಸಿಕಲ್ಲಿನ ಪ್ರಸಂಗವನ್ನು ಮುಗಿಸಿಕೊಂಡು ಹೂವಳ್ಳಿ, ಕೋಣೂರು, ಹಳೆಮನೆಗಳಿಗೆ ಬೆಟ್ಟಳ್ಳಿಯ ಹಕ್ಕಲಿನಿಂದ ಹಿಂದಿರುಗುತ್ತಿದ್ದ ಜನರು ಸಣ್ಣಸಣ್ಣ ದೊಡ್ಡದೊಡ್ಡ ಗುಂಪುಗಳಾಗಿ ನಾನಾ ವಿಧವಾಗಿ ಹರಟುತ್ತಾ ಹೋದರು. ನಸುಗಪ್ಪು ಕವಿಯುತ್ತಿದ್ದಾಗ ಗುತ್ತಿಯ ಕಿವಿಗೆ ಯಾರದೋ ಪರಿಚಿತಧ್ವನಿ ಬಿದ್ದ ಹಾಗಾಯಿತು, ಮಾತನಾಡುತ್ತಿದ್ದವರು ಐತ ಚೇಂಕ್ರ ಹೇಳಿದ “ನಿಂತೂ ನಿಂತೂ ಸಾಕಾಯ್ತೆ.... ಒಂದು ಬಾಯಿಗೆ ಹಾಕ್ಕೊಂಡು ಹೋಪ.”

ಗುತ್ತಿ ನೋಡುತ್ತಿದ್ದಂತೆಯೆ ಅವರಿಬ್ಬರೂ ಕಾರೇಮಟ್ಟಿನ ಆವೆ ಅರೆಕಲ್ಲಿನ ಮೇಲೆ ಕುಳಿತಕೊಂಡರು. ಅವರು ಕೂತ್ತಿದ್ದ ಜಾಗ ಎತ್ತರದಲ್ಲಿತ್ತಾದ್ದರಿಂದ ಗುತ್ತಿಗೆ ಆ ಬೈಗುಗುಪ್ಪಿನಲ್ಲಿ ಅವರು ಸ್ಪಷ್ಟವಾಗಿ ಕಾಣಿಸದಿದ್ದರೂ ಅವರ ಸುಸ್ಪಷ್ಟವಾಗಿ ಕೇಳಿಸುತ್ತಿತ್ತು.

ಆದರೆ ಗುತ್ತಿಗೆ ತಾನಿದ್ದ ಮನಃಸ್ಥಿತಿಯಲ್ಲಿ ಅವರ ಸಂವಾದ ಆಲಿಸುವುದು ಬೇಕಿರಲಿಲ್ಲ... ಅದಕ್ಕೆ ಬದಲಾಗಿ, ಅವರಿಬ್ಬರೂ ಅಲ್ಲಿ ಕೊತದ್ದು ಅವನ ಮನಸ್ಸಿಗೆ ತುಂಬ ಆತಂಕವಾಗಿತ್ತು. ತನ್ನನ್ನು ಹುಡುಕಿಕೊಂಡು ತಿಮ್ಮಿ ಗುಟ್ಟಾಗಿ ಬಂದಾಗ, ಇವರು ಇಲ್ಲಿಯೆ ಕುಳಿತಿದ್ದರೆ, ಏನುಗತಿ? ಆ ಕತ್ತಲೆಯಲ್ಲಿ ಅವರನ್ನೆ ನಾನು ಎಂದು ತಿಳಿದು ಏನು ಆಚಾತುರ್ಯಕ್ಕೆ ಎಡೆಯಾಗುವುದೊ? ದೇವರ ದಯದಿಂದ ಅವಳು ಬರುವುದಕ್ಕೆ ಮುನ್ನವೆ ಇವರಿಬ್ಬರೂ ಎಲೆಅಡಿಕೆ ಪೂರೈಸಿ ಇಲ್ಲಿಂದ ತೊಲಗಿದ್ದರೆ!....ಇದ್ದಕ್ಕಿದ್ದಹಾಗೆ ಗುತ್ತಿಯ ಕಿವಿ ನೆಟ್ಟಗಾಯಿತು. ಅವರಿಬ್ಬರ ಸಂವಾದ ಏನೊ ಸ್ವಾರಸ್ಯಕ್ಕೆ ತಿರುಗಿದಂತಿತ್ತು.

“ನೋಡೂ, ಐತಾ, ನೀನು ಹುಡುಗ. ನಿನಗೆ ಏನೂ ತಿಳಿಯೂದಿಲ್ಲ. ಆದರೆ ಹಮಾ ತಿಳಿದವನ ಹಾಂಗೆ ಎಲ್ಲದರ ಮೇಲೂ ದೊಡ್ಡ ದೊಡ್ಡ ಮಾತಾಡ್ತೀಯಾ!” ಚೇಂಕ್ರನ ಗಡಸುಧ್ವನಿ ಎಂದಿತು.

ಐತನ ಎಳಸುಗಂಟಲು ಉತ್ತರಿಸಿತು “ನಾನೇನು ಹೆಳಿದ್ದೋ ನಿಂಗೆ? ಸಣ್ಣಯ್ಯ ಹೇಳದ್ದನ್ನೆ ಹೇಳ್ದೆ: ‘ಈ ಸಾರಿ ಚೇಂಕ್ರ ಅವನ ಹೆಂಡ್ತೀನ ಕೊಲ್ತಾನೆ. ಈಗಾಗ್ಲೆ ಆರು ಮಕ್ಕಳಾಗಿ, ನಾಕು ಸತ್ತು ಬದುಕಿದ್ದು; ಎಲ್ದು ಬದುಕ್ಯಾ ಸಾಯ್ತಾ ಅವೆ. ಈಗ ಏಳನೇದೊಂದು ಹುಟ್ಟಾಕೆ ಹತ್ರ ಬಂದದೆ. ಅಂವ ಮಾತ್ರಾ ಕುಡ್ಕೊಂಡು ಬಂದು ಹೆಂಡ್ತಿಗೆ ಒದೆಯಾದು, ಮಕ್ಕಳಿಗೆ ಬಡಿಯಾದು ಬಿಡ್ಲಿಲ್ಲ!’ ಅಂದ್ರು. ಅದನೆ ನಾ ನಿಂಗೆ ಹೇಳಿದ್ದು. ಗೊತ್ತಾತೆ?”

“ಯಾರು? ಆ ಮುಕುಂದಯ್ಯನಾ?” ಚೇಂಕ್ರನ ಧ್ವನಿಯಲ್ಲಿ ಸಿಟ್ಟುಕ್ಕು ವಂತಿತ್ತು.

“ಹೌದೊ, ಅವರ ಹೇಳಿದ್ದು, ನಿನ್ನ ಒಳ್ಳೇದಕ್ಕೆ!” ಐತನ ವಾಣಿಯಲ್ಲಿ ಸಮರ್ಥನೆ ಇತ್ತು.

ಮೂದಲಿಸುವ ದನಿಯಲ್ಲಿ ಚೇಂಕ್ರ ಬೈದ “ಓಹೋಹೊ! ನಿನ್ನ ಕೂಳು ಹೊತ್ತಿ ಹೋಯ್ತು! ಗೌಡರ ಮಕ್ಕಳ ನಂಬಿ, ನಿನ್ನ ಬಾಯಿಗೆ  ಮಣ್ಣು! ಏಳೇಳ್! ಎಲ್ರಿಗೂ ಬುದ್ಧಿ ಹೇಳೋರು ಆ ಮುಕುಂದಯ್ಯನೋರ ಗುಟ್ಟು, ಬೆಪ್ಪಾ, ನಿಂಗೆ ಗೊತ್ತಿಲ್ಲ ಅಂದ್ರೆ, ಮತ್ತೆ ಯಾರಿಗೂ ಗೊತ್ತಿಲ್ಲ ಅಂತಾ ಮಾಡೀಯಾ?”

“ಸುಮ್ಮಸುಮ್ನೆ ಒಬ್ಬರ ಮ್ಯಾಲೆ ಹೇಳಬಾರ್ದು, ನಾಲಗೇಲಿ ಹುಳಾ ಬಿದ್ದಾತು!”

ಐತನ ಕಟುಧ್ವನಿ.

“ಹಾಂಗಾರೆ ಹೇಳ್ಲಾ?” ಚೇಂಕ್ರನ ಸವಾಲು.

“ಹೇಳು”

“ಖಂಡಿತಾ?”

“ಖಂಡಿತ!”

“ಇವತ್ತು ಬೆಳ್ಳಿಗ್ಗೆ ತೋಟದಾಗೆ…. ಹೇಳ್ಲಾ? ಹೇಳೇಬಿಡ್ಲಾ?”

“ಹೇಳೋ! ಯಾರು ಬ್ಯಾಡ ಅಂತಾರೆ?”

“ಏಡಿ ಹಿಡಿಯಾಕೆ ಅಂತ ನಿನ್ನೂ ಹೆಂಡ್ತೀನೂ ಕರಕೊಂಡು ಹೋಗಿ, ನಿನ್ನ ಒಬ್ಬನ್ನೆ ಉಪಾಯ ಮಾಡಿ ಹಿಂದಕ್ಕೆ ಕಳ್ಸಿದ್ರಲ್ಲಾ?….. ದೊಡ್ಡಗೌಡ್ರು ‘ಹುಚ್ಚು ಮುಂಡೇಗಂಡ, ಓಡು ಬೇಗ’ ಅಣತ ನಿನ್ನ ವಾಪು ಕಳಿಸಿದ್ರಲ್ಲಾ? ಯಾಕೆ ಅಂತ ಮಾಡೀಯಾ?…. “

ಐತ ಉತ್ತರ ಕೊಡಲಿಲ್ಲ. ಅವನ ಮನಸ್ಸು ರಂಗಪ್ಪಗೌಡರಿಂದ ಬೈಸಿಕೊಂಡು ತಾನು ಮುಕುಂದಯ್ಯ ಪೀಂಚಲು ಇದ್ದಲ್ಲಿಗೆ ಹೋದಾಗ, ತಾನು ಕಂಡದ್ದನ್ನೂ ಅನುಭವಸಿದ್ದನ್ನೂ ಮೆಲುಕು ಹಾಕುವಂತಿತ್ತು. ಆಗ ತನ್ನಿಂದ ತೆರೆಯಲಾಗದಿದ್ದರ ಬೀಗ, ಈಗ ಚೇಂಕ್ರ ಒದಗಿಸಿದ್ದ ವ್ಯಾಖ್ಯಾನ ಧ್ವನಿಯ ಬೀಗದ ಕೈಯಿಂದ ತೆರೆಯುವಂತೆ ತೋರತೊಡಗಿತ್ತು. ಅವನ ಹೃದಯದ ತಿಳಿಗೊಳಕ್ಕೆ ಚೇಂಕ್ರ ಕಲ್ಲೆಸೆದಿದ್ದ!

ಆ ತೀವ್ರಮೌನದ ತರುವಾಯ ಏನು ಸಂವಾದ ಯಾವ ಕಡೆಗೆ ತಿರುಗುತಿತ್ತೊ? ಅಷ್ಟರಲ್ಲಿ ಒಂದು ನಾಯಿ ಬೊಗುಳಿದ ಸದ್ದಾಯಿತು. ಆ ಕತ್ತಲೆಯಲ್ಲಿಯೂ ಐತ ಅದನ್ನು ಧ್ವನಿಯಿಂದಲೆ "ಹಛೀ ಇದೆಲ್ಲಿ ಬಂತೋ ಇಲ್ಲಿ ಆ ಗುತ್ತಿ ನಾಯಿ?" ಎಂದೊಡನೆ ಹುಲಿಯ ಪರಿಚಿತಧ್ವನಿ ಕೇಳಿ ಬಾಲವಾಡಿಸುತ್ತಾ ಅವರ ಬಳಿಗೆ ಬಂದಿತು.

ಗುತ್ತಿ ಕುಳಿತಲ್ಲೆ ಹಲ್ಲುಕಡಿದುಕೊಂಡನುಃ " ಹಾಳು ಮುಂಡೇದು! ಹೋದಲ್ಲಿತನಕಾ ಕೊಂಬುಹುಯ್ಲು! ಎಲ್ಲಿ ಹೋದ್ರೂ ಸಾಯ್ತದೆ, ನನ್ನ ಹಿಂದೆ, ಬಾಲಂಗಚ್ಚೆ!"

ಆದರೇನು ಪ್ರಯೋಜನ? ಘ್ರಾಣಕ್ಕೆ ಅಷ್ಟೇನೂ ಸೂಕ್ಷ್ಮವಾಗಿರದಿದ್ದ ಗುತ್ತಿಯ ಸ್ಥೂಲ ವಾಸನೆ, ಮನುಷ್ಯರ ಮೂಗಿಗೂ ಗ್ರಾಹ್ಯವಾಗುವಷ್ಟರಮಟ್ಟಿಗೆ ಇರುವಾಗ, ಅವನ ಸ್ವಂತ ನಾಯಿಗೆ ದುರ್ಗ್ರಾಹ್ಯವಾಗುತ್ತದೆಯೆ? ತನ್ನ ನೆಚ್ಚಿನ ಒಡೆಯನ ಕಂಪು ಮೂಗಿಗಾದೊಡನೆಯೆ, ಯಾವ ದಿಕ್ಕಿನಿಂದ ಬರುತ್ತದೆ ಎಂಬುದನ್ನು ಅರಿಯುವುದಕ್ಕಾಗಿ ಮೊಗವೆತ್ತಿ ಆಕಾಶವನ್ನು ಅತ್ತ ಇತ್ತ ಮೂಸಿ, ಹುಲಿಯ ನೇರವಾಗಿ ಗುತ್ತಿ ಅವಿತು ಕುಳಿತಡೆಗೆ ನುಗ್ಗಿ, ತಾನು ಅವನನ್ನೂ ಕಂಡುಹಿಡಿದುದಕ್ಕೆ ಸಂತೋಷವುಕ್ಕಿ, 'ಗುಲ್ಲೋರಿಯಾ!' ಮಾಡುತ್ತದೆಯೊ ಎಂಬಂತೆ, ಅವನ ಮೈಮೇಲೆ ಹಾರಿಬಿಟ್ಟಿತು! ತಾನು ತುತ್ತರಾಟಿನ ಮೇಲೆ ಕೂತ್ತಿದ್ದ ಬಂಡೆಯಿಂದ ಉರುಳುವುದನ್ನು ಹೇಗೊ ತಡೆದುಕೊಂಡು, ಅದನ್ನು ತಳ್ಳಿ 'ಹಛೀ! ನಿನ್ನ ಹಾಳಾಗ' ಎಂದೇಬಿಟ್ಟನು.

ಗುತ್ತಿ ಬಹು ಮೆಲ್ಲಗೆ ಶಪಿಸಿದನೆಂದು ತಿಳಿದಿದ್ದರೂ ಚೀಂಕ್ರನ ಧ್ವನಿ ಕೇಳಿಸಿತು "ಯಾರೋ ಅದು ಹೊಂಡದಾಗೆ?"

ಗುತ್ತಿ ಅಡಗಿದ್ದಲ್ಲಿಂದ ಎದ್ದು ಮೇಲಕ್ಕೆ ಬರುತ್ತಾ "ನಾನೋ! ಇಲ್ಲೇ ನೀರ ಕಡೆ ಹೋಗಿದ್ದೆ! ಹಾಳು ನಾಯಿ ಮೈಮೇಲೆ ಬಿದ್ದುಬಿಡ್ತು!" ಎಂದು ಹತ್ತಿರ ಬಂದು "ಇಲ್ಲಿ ಯಾಕ್ರೋ ಕೂತ್ರೀ? ರಣಾ ತಿರುಗೋ ಜಾಗದಲ್ಲಿ?" ಎಂದನು.

"ಹ್ಞಾ! ಹೌದಾ? ಅಯ್ಯೊ ಮಾರಾಯ ನಮಗೆ ಗೊತ್ತಿಲ್ಲ!" ಎನ್ನುತ್ತಾ ಇಬ್ಬರೂ ಎದ್ದು ಹೊರಡಲನುವಾದರು.

ಗುತ್ತಿ ಸುತ್ತ ನೋಡಿ ಏನನ್ನೊ ನಿರ್ಣಯಿಸಿಃ " ಬನ್ನಿ, ಬನ್ನಿ, ಬ್ಯಾಗ ಹೋಗಾನ!" ಎಂದು ಬಿರುಬಿರನೆ ಹೊರಟನು.

ಮೂವರೂ ಯಾವುದೊ ಸನ್ನಿಹಿತವಾಗಿದ್ದ ಅಪಾಯದಿಂದ ದೂರ ಹೋಗುವವರಂತೆ ಸ್ವಲ್ಪ ದೌಡಾಯಿಸಿಯೆ ತುಸುದೂರ ನಡೆದಿದ್ದರು. ಯಾರೂ ಮಾತಾಡಿಲಿಲ್ಲ.

ಇದ್ದಕ್ಕಿದ್ದ ಹಾಗೆ ಗುತ್ತಿ ನಿಂತು "ಅಯ್ಯೊ ಮಾರಾಯ, ಎಂಥಾ ಕೆಲಸ ಆಯ್ತು? ಹೊರಕಡೆಗೆ ಕೊತಲ್ಲೆ ಬಿಟ್ಟು ಬಂದುಬಿಟ್ಟೆನಲ್ಲ! ನೀವು ಹೋಗ್ತಾ ಇರಿ; ನಾ ಬಿರಬಿರನೆಬಂದುಬಿಡ್ತೀನಿ!" ಎಂದು ಏನನ್ನೊ ಮರೆತು ಬಿಟ್ಟು ಬಂದುದನ್ನು ತರುವವನಂತೆ ಹಿಂದಕ್ಕೆ ಓಡಿದನು. ನಾಯಿಯೂ ಜೊತೆಯಾಗಿ.

ಐತ ಚೀಂಕ್ರರು ವೇಗವಾಗಿಯೆ ಮುಂದೆ ಸಾಗಿದ್ದರು. ಒಂದೆರಡು ಸಲ ಹಿಂದಕ್ಕೆ

ನೋಡಿದರು, ಗುತ್ತಿಗಾಗಿ. ಆದರೆ ಅವನ ಸುಳಿವೇ ಇರಲಿಲ್ಲ.

ಚೇಂಕ್ರ ಹೇಳಿದ “ಆ ಕಮ್ಮಾರಸಾಲೆ ಹತ್ರ ಕಳ್ಳಂಗಡೀಲಿ ಏನಾದ್ರೂ ಕುಡುಕೊಂಡು ಹೋಗಾನೊ. ಬಾಳ ಆಕರ ಆಗ್ತದೆ.”

ಕೋಣೂರಿಗೂ ಬೆಟ್ಟಳ್ಳಿಗೂ ಮಧ್ಯೇ, ಮೇಗರವಳ್ಳಿ ಹೂವಳ್ಳಿ ಹಳೆಮನೆಗಳಿಗೂ ಸಮದೂರವಾಗಿದ್ದ ಒಂದು ಜಾಗದಲ್ಲಿ, ಕಾಡಿನ ನಡುವೆ, ಒಂದು ಕಮ್ಮಾರ ಸಾಲೆ, ಒಂದು ಕಳ್ಳಂಗಡಿ, ಮೂರು ನಾಲ್ಕು ಜೋಪಡಿಗಳಿದ್ದು ಅನೇಕ ರೀತಿಗಳಲ್ಲಿ ಕುಪ್ರಸಿದ್ಧವಾಗಿತ್ತು, ಕುಡಿತ, ಕೋಳಿಅಂಕ, ಜೂಜು, ಜುಗಾರಿ, ಇಸ್ಪೀಟು, ಹಾದರ, ಅತ್ಯಾಚಾರ ಇತ್ಯಾದಿಗಳಿಗೆಲ್ಲ. ಆದರೆ ಅದನ್ನು ಎಲ್ಲರೂ ‘ಕಮ್ಮಾರಸಾಲೆ’ ಎಂದೇ ಕರೆಯುತ್ತಿದ್ದರು. ಆ ಹೆಸರಿನ ಮರೆಯಲ್ಲಿ ಉಳಿದೆಲ್ಲ ಸಂಸ್ಥೆಗಳೂ ತಮ್ಮ ಕಾರುಬಾರನ್ನು ನಿರಾಂತಕವಾಗಿ ಸಾಗಿಸುತ್ತಿದ್ದುವು, ಎಲ್ಲರಿಗೂ ಗೊತ್ತಿದ್ದರೂ ಗುಟ್ಟಾಗಿ!

ಎಲ್ಲಾ ಆಟಗಳಲ್ಲಿಯೂ ಚೆನ್ನಾಗಿ ನುರಿತಿದ್ದ ಚೇಂಕ್ರನ ಜೊತೆ ಸಿಕ್ಕ ಐತ ಸ್ವಲ್ಪ ಕಂಗಾಲಾಗಿ ಹೇಳಿದ: “ನಾ ಹೋಗ್ತಾ ಇ....ನೀ ಕುಡುಕೊಂಡು ಬಾ ಬಿಡಾರದಲ್ಲಿ ಅದು ಒಂದೇ....ಹೆದರಿಕೊಳ್ತದೆ.”

“ಹೆಡ್ತಿ ಬಿಟ್ಟು ಬಂದಾವ, ನೀನು ಒಬ್ಬನೇ ಕಣೋ, ಬಿಡಾರದಲ್ಲಿ? ನಾ ಕಂಡೀನೊ! ಬಾ ಬಾ ಸುಮ್ನೆ! ಒಂದು ದರಾಮು ಕೊಡಸ್ತೀನಿ ನಿಂಗೂ. ಒಂದೀಟು ಮೈ ಬಿಸಿ ಮಾಡ್ಕೊಂಡು ಹೋಗಾನ “ಮುಖ ಕಾಣದ ಆ ಕತ್ತಲಲ್ಲಿ ಐತನ ಪಕ್ಕೆಯನ್ನು ಇಂಗಿತವಾಗಿ ತಿವಿದು ನಕ್ಕು ಮುಂದುವರಿಸಿದನು ಚೇಂಕ್ರ ಮಹಾಶಯ, ತನ್ನ ವಾತ್ಸಾಯನ ಕಾಮಸೂತ್ರೋಪದೇಶವನ್ನು:” ಹೊಟ್ಟೆಗೆ ಒಂದು ದರಾಮ್ ಬಿತ್ತು  ಅಂದ್ರೆ, ಒಳ್ಳೆ ಸಕ್ತಿ ಬರ್ತದೊ! ಆ ಮ್ಯಾಲೆ ಬಿಡಾರಕ್ಕೆ ಹೋಗಿ ಮಜಾ ಮಾಡಿದ್ರೆ ಹ್ಯಾಂಗಿರ್ತದೆ!” ಎಂದು ಐತನ ಕಿವಿಯ ಹತ್ತಿರಕ್ಕೆ  ಬಾಗಿ, ಅತ್ಯಂತ ಅಸಹ್ಯವೂ ಅಶ್ಲೀಲವೂ ಅದುದನ್ನೆ  ಹೇಳಿಬಿಟ್ಟನು, ಸವಿದು ಚಪ್ಪರಿಸುವಂತೆ.

ಐತ ದೂರ ಸರಿದು “ ಇಸ್ಸಿ! ನೀನು ಎಂಥ ಪೋಲಿ ಆಡ್ತೀಯೊ? “ ಎಂದನು.

“ಪೋಲಿ ಅಂತೆ ಪೋಲಿ? ಮಾಡುವುದಕ್ಕೆ ಪೋಲಿಯಲ್ಲ; ಆಡುವುದಕ್ಕೆ ಮಾತ್ರ ಪೋಲಿ? ಹುಡುಗಮುಂಡೇದು, ನಿನಗೇನು  ಗೊತ್ತು?”....

ಕಮ್ಮಾರ ಸಾಲೆಯಲ್ಲಿ ಉರಿಯುತ್ತಿದ್ದ ಬೆಂಕಿ ಕಾಣಿಸಿತು: ಅಡಿಗಲ್ಲಿನ ಮೇಲೆ ಕೆಂಪಗೆ ಕಾದ ಕುಳವನ್ನಿಟ್ಟು ಬಡಿಯುತ್ತಿದ್ದ ಪುಟ್ಟಾಚಾರಿಯ ಆಕಾರವೂ, ಚರ್ಮದ ತಿದಿಯನ್ನು ಒತ್ತುತ್ತಿದ್ದವನ ಬೆನ್ನೂ ಸೇರಿ! ಚೇಂಕ್ರನಿಂದ ಪಾರಾಗಲು ಉಪಾಯ ಹುಡುಕುತ್ತಿದ್ದ ಐತನಿಗೆ  ಏಕೋ ಧೈರ್ಯವಾದಂತಾಯಿತು. ತಾನೊಬ್ಬನೆ ಮುಂದೆ ಹೋಗುತ್ತೇನೆ ಎಂದು ಹೇಳಿದ್ದರೂ ಆಗತಾನೆ ಗುತ್ತಿಯಿಂದ ರಣ ತಿರುಗುವ ವಾರ್ತೆಯನ್ನು ಕೇಳಿದ್ದ ಅವನಿಗೆ ದೆವ್ವದ ಹೆದರಿಕೆ. ಆದ್ದರಿಂದ  ಚೇಂಕ್ರ ತನ್ನ  ಕೆಲಸ ಮುಗಿಸಿ ಅರುವ ತನಕ ಕಮ್ಮಾರ ಸಾಲೆಯಲ್ಲಿ ರಕ್ಷೆಪಡೆಯಲು ನಿಶ್ಚಯಿಸಿ, ನೆರವಾಗಿ ಅಲ್ಲಿಗೇ  ನಡೆದುಬಿಟ್ಟನು, ಚೇಂಕ್ರನಿಗ “ನಾ ಅಲ್ಲಿ ಕಾಯ್ತಾ ಇರ್ತೆ. ನೀ ಕೆಲಸ ಪೋರೈಸಿ ಬರಲಕ್ಕು!” ಎಂದು ಹೇಳಿ.

ಕುಳ ಬಡಿಯುತ್ತಿದ್ದ ಪುಟ್ಟಾಚಾರಿ, ಕತ್ತಲೆಯಿಂದದ ಬೆಳಕಿಗೆ ಪ್ರವೇಶಿಸಿದವನ ಕಡೆಗೆ ತಿರುಗಿ, ಗುರುತಿಸಿ, ಸ್ವಾಗತಿಸುವಂತೆ ನಗೆಯಾಡಿದನು" ಏನೋ, ಐತಣ್ಣಾ, ನಿನ್ನ ಹೆಂಡ್ತಿ ಎಲ್ಲಿ ಬಿಟ್ಟು ಬಂದೆಯೋ?

* * *

ತಾಯಿಯಿಂದ ಬೀಳ್ಕೊಂಡು ಹಾಡ್ಯವನ್ನು ಹೊಕ್ಕ ತಿಮ್ಮಿ ಸ್ವಲ್ಪ ದೂರ ಹೋದ ಮೇಲೆ, ಬುತ್ತಿಯನ್ನು ಅಡಗಿಸಿಟ್ಟುಕೊಂಡು ಬಂದಿದ್ದ ಮಡಕೆಯನ್ನು ಒಂದು ಮರದ ಬುಡದಲ್ಲಿದ್ದಟ್ಟು, ಬತ್ತಿಯೊಡನೆ ಗುತ್ತಿ ನಿರ್ದೇಶಿಸಿದ್ದ ಜಾಗಕ್ಕೆ ಬಂದು ನೋಡುತ್ತಾಳೆ, ಗುತ್ತಿಯ ಸುಳಿವೇ ಇಲ್ಲ. ಗಟ್ಟಿಯಾಗಿ ಕರೆಯುವ ಹಾಗೂ ಇಲ್ಲ. ಗಂಟಲೂ ಕಟ್ಟಿಬಂದ ಹಾಗಾಯಿತು. ಕಣ್ಣೀರು ಬರತೊಡಗಿದವು. ಭಯ ನಿರಾಸೆ ಹೃದಯವನ್ನಾಕ್ರಮಿಸಿ ಕಂಗೆಟ್ಟಂತೆ ನಿಂತಳು: 'ಏನಾದರಾಗಲಿ? ಹಿಂದಕ್ಕಂತೂ ಹೋಗುವುದಿಲ್ಲ. ಗುತ್ತಿ ಕೈ ಬಿಟ್ಟರೆ ಕೆರೆಯೇ ಗತಿ!"

ಅಷ್ಟರಲ್ಲಿ ಯಾರೊ ಓಡಿಬರುತ್ತಿದ್ದ ಸದ್ದು! ತನ್ನ ಕಡೆಗೇ? ತಾನು ನಿಂತಿದ್ದ ಕಡೆಗೇ ಬರುವಂತಿದೆ! ತಿಮ್ಮಿ ಬೇಗಬೇಗನೆ ಒಂದು ಪೊದೆಯ ಹಿಂದೆ ಅವಿತುಕೊಂಡಳು.

ಐತ ಚೇಂಕ್ರರನ್ನು ಉಪಾಯವಾಗಿ ಅರೆಕಲ್ಲಿನಿಂದ ಹೊರಡಿಸಿ, ಸ್ವಲ್ಪದೂರ ಹೋದ ಮೇಲೆ, ತಾನು ಮರೆತುಬಿಟ್ಟದ್ದನ್ನು ಹಿಂತೆಗೆದುಕೊಂಡು ಬರುತ್ತೇನೆಂದು ಅವರನ್ನು ಮುಂದುವರಿಯುತ್ತಿರುವಂತೆ ಹೇಳಿ ಹಿಂದಕ್ಕೆ ಓಡುತ್ತಲೆ ಬಂದು ನೋಡುತ್ತಾನೆ, ಎಲ್ಲಿಯೂ ತಿಮ್ಮಿಯ ಸುಳಿವಿಲ್ಲ. ಬಂದು ಹೋಗಿಬಿಟ್ಟಳೊ? ಅಥವಾ ಇನ್ನೂ ಬರಲೆ ಇಲ್ಲವೊ? ಎಂದು ಚಿಂತಿಸುತ್ತಾ ನಿಂತಿರಲು, ಹುಲಿಯ ಒಂದು ಪೊದೆಯ ಹತ್ತಿರ ಪರಿಚಿತರನ್ನು ಕಂಡಂತೆ ಕುಂಯಿ ಕುಂಯಿಗುಡುತ್ತಿರುವುದನ್ನೂ ಪೊದೆ ಸದ್ದಾಗುತ್ತಿರುವುದನ್ನೂ ಕಂಡು ಮುಂಬರಿಯುವಷ್ಟರಲ್ಲಿ, ಹುಲಿಯನನ್ನು ಗುರುತಿಸಿದ ತಿಮ್ಮಿ, ಓಡಿಬಂದುವನು ಸಿಂಬಾವಿ ಭಾವನೆ ಇರಬಬೇಕೆಂದು ಧೈರ್ಯಮಾಡಿ, ತನ್ನ ಕಡೆಗೆ ಬರುತ್ತಿರುವುದನ್ನು ಕಂಡನು.

ಇಬ್ಬರೂ ಏನನ್ನೂ ಮಾತಾಡದೆ ಸರಸರ ಹೊರಟರು. ಅವರಿಬ್ಬರ ತಲೆಯಲ್ಲಿಯೂ ಈಗ ಇದ್ದುದು ಒಂದೇ ಯೋಚನೆ ಸಿಕ್ಕಿಬೀಳದೆ ಹೇಗೆ ಯಾವ ದಾರಿಯಿಂದ ತಪ್ಪಿಸಿಕೊಂಡು ಹೋಗುವುದು? ಗುತ್ತಿ ಬೆಟ್ಟಳ್ಳಿ ಹಕ್ಕಲಿಗೂ ಅಲ್ಲಿಂದ ಕೇರಿಗೂ ಬಂದಿದ್ದ ಸಮಾಚಾರ ಗೊತ್ತಾದೊಡನೆ, ಬೇಟೆಯಲ್ಲಿ ನಾಯಿ ಮೂಗಾಳಿ ಹಿಡಿದು ಮಿಗವನ್ನಟ್ಟುವಂತೆ ತಮ್ಮನ್ನು ಹುಡುಕಿ ಹಿಡಿಯಲು ಪ್ರಯತ್ನಿಸದ ಬಿಡುವುದಿಲ್ಲ. ಸಮೆದ ಕಾಲು ಹಾದಿಯನ್ನೆ ತ್ಯಜಿಸಿ, ಕಾಡು ನುಗ್ಗಿ, ಸಿಂಬಾವಿಯ ದಿಕ್ಕು ಹಿಡಿದು ಹೋಗಬಹುದಲ್ಲ ಎನ್ನಿಸಿತು ಒಮ್ಮೆ ಗುತ್ತಿಗೆ. ಆದರೆ ಆ ಮುಳ್ಳು ಗಿಜರು ಕೊರಕಲುಗಳಲ್ಲಿ, ಕತ್ತಲಲ್ಲಿ, ತಿಮ್ಮಿ ನಡೆಯುವುದು ಸಾಧ್ಯವೆ? ಆಗಲೆ, ಸಮೆದ ಕಾಲುಹಾದಿಯಲ್ಲಿ ನಡೆಯುವಾಗಲೆ, ಒಂದೆರಡು ಸಾರಿ ಮುಳ್ಳು ಚುಚ್ಚಿಸಿಕೊಂಡು ಎಡವಿದ್ದಾಳೆ. ನಿಜ, ಇಬ್ಬರ ಕಾಲುಗಳೂ ಮೆಟ್ಟನ್ನು ಕನಸಿನಲ್ಲಿಯೂ ಕಂಡರಿಯವು. ಆದರೆ ಗುತ್ತಿಯ ಅಂಗಾಲು ನಡೆದೂ ನಡೆದೂ ಒರಟಾಗಿ, ಕಷ್ಟಸಹಿಷ್ಣುವಾಗಿ, ಖರ್ಪರವಾಗಿಬಿಟ್ಟಿದೆ; ತಿಮ್ಮಿ ದುಡಿವ ಆಳಾಗಿ ಹೊಲತಿಯಾಗಿದ್ದರೂ ಎಷ್ಟಂದರೂ ಹೆಣ್ಣು. ಕಡೆಗೆ, ದೇವರರು ಮಾಡಿದ್ದಾಗಲಿ ಎಂದು ಸಮೆದ ಕಾಲುದಾರಿಯಲ್ಲಿಯೆ ಮುಂದುವರಿಯಲು ಮನಸ್ಸು ಮಾಡಿದರು. ಏನಾದರೂ ಅಪಾಯ ಸೂಚನೆ ತೋರಿದರೆ ಕಾಡಿನೊಳಕ್ಕೆ ಓಡಿಯೋ ಹೇಗೊ ತತ್ಸಾಮಯಿಕ ಪ್ರತಿಭೆ ಹೊಳೆದಂತೆ ಮಾಡುವುದು ಎಂದು. ಈಗ

ಅವರಿಗೆ ಹುಲಿ, ಹಂದಿ, ಹಾವು, ಚೇಳು, ದೆಯ್ಯಗಿಯ್ಯ ಯಾವುದರ ಭಯವೂ ನಿವಾರಣೆಯಾಗುತ್ತಿದ್ದಿತೊ ಅದರ ಸಂಗವೆ ಈಗ ಭಯಾನಕವಾಗಿದ್ದಿತು. ಈಗ ಅವರಿಗಿದ್ದುದು ಒಂದೆ ಒಂದರ ಭಯಃ ಮನುಷ್ಯರ ಭಯ!

ಕಮ್ಮಾರಸಾಲೆ ಹತ್ತಿರಕ್ಕೆ ಬಂದಾಗ, ಬೆಂಕಿಯನ್ನು ಕಂಡ ಗುತ್ತಿಗೆ, ಒಂದುದೊಂದಿಮಾಡಿ, ಹೊತ್ತಿಸಿಟ್ಟುಕೊಂಡರೆ ಒಳ್ಳೆಯದು ಎಂದು ತೋರಿತು. ಕತ್ತಲಲ್ಲಿದೊಂದಿಯ ಕಾಂತಿ ತಮ್ಮನ್ನು ಅಡಗಿಸುವುದಕ್ಕೂ ತಮ್ಮ ಮೇಲೆ ಗುಮಾನಿ ಬರದಿರುವಂತೆ ಮಾಡುವುದಕ್ಕೂ ನೆರವಾಗುತ್ತದೆ. ಅಲ್ಲದೆ ರಾತ್ರಿ ಎಲ್ಲಿಯಾದರೂ ಜನದೂರವಾದ ಸ್ಥಳದಲ್ಲಿ ತಂಗಬೇಕಾಗಿ ಬಂದರೆ, ತಮ್ಮ ಬಳಿ ಬೆಂಕಿ ಇದ್ದರೆಲೇಸಲ್ಲವೆ?

ತಿಮ್ಮಿಗೆ ಕತ್ತಲಲ್ಲಿಯೆ ದೂರ ಸರಿದಿರುವಂತೆ ಹೇಳಿ, ಗುತ್ತಿ ಕಮ್ಮಾರ ಸಾಲೆಗೆ ಹೋದನು. ತಿದಿಯೊತ್ತುತ್ತಿದ್ದವನನ್ನು ಬೇಡಿ, ಅವನಿಂದ ಆ ಕೆಲಸವನ್ನು ವಹಿಸಿಕೊಂಡು, ಆನಂದದಿಂದ ತಿದಿ ಒತ್ತುತ್ತಾ ಕುಳಿತ್ತಿದ್ದ ಐತ ಗುತ್ತಿಯನ್ನು ನೋಡಿ, “ಏನು ಮಾಡುತ್ತಾ ಇದ್ದೆಯೋ. ಇಷ್ಟು ಹೊತ್ತು?” ಎಂದು ಪ್ರಶ್ನಿಸಿ, ತಾನು ಎಂತಹ ಮೆಹನತ್ತಿನ ಉದ್ಯೋಗದಲ್ಲಿ ತೊಡಗಿದ್ದೇನೆ ನೋಡು, ನಿನಗೆಲ್ಲಿ ಆ ಪುಣ್ಯ? ಎನ್ನುವಂತೆ ಮುಖ ಅರಳಿಸಿ ಹಲ್ಲುಬಿಟ್ಟನು.

ಅನೈಚ್ಛಿಕವೊ ಎಂಬಂತೆ ತನ್ನ ಕೆಲಸಗಳಲ್ಲಿ ನಿರತಾಗಿಯೆ ಇದ್ದ ಪುಟ್ಟಾಚಾರಿ ಐತರನಿಗೆ “ಏ ಹುಡುಗ, ನೀ ಸರಿಯಾಗಿ ಒತ್ತಾದಾದ್ರೆ ಒತ್ತು. ಇಲ್ದಿದ್ರೆ ಕೊಡು ಅವನಿಗೆ. ನಿನಗೆ ಒಳ್ಳೆ ಆಟಾ ಆಯಿತಲ್ಲಾ!” ಎಂದವನು ಗುತ್ತಿಯ ಕಡೆ ನೋಡಿ “ಏನೊ, ಗುತ್ತಿ, ಇಷ್ಟುಹೊತ್ತಿನ್ಲಿ? ಸಿಂಬಾವಿಗೆ ಹೋಗ್ತಾ ಇದ್ದೀಯೊ? ಅಲ್ಲಿಂದ ಬರ್ತಾ ಇದ್ದೀಯೊ?…. ನಿನ್ನ ಒಡೇರದೊಂದು ಕೋವಿ ಕೆಲಸ ಅದೆಯಂತೆ…. ನನಗೆ ಬರಾಕೆ…. ಪುರಸತ್ತೇ ಆಗ್ಲಿಲ್ಲ.”

“ಹೋಗ್ತಾ ಇದ್ದೀನೀ…. ಅದಕ್ಕೇ ಒಂದು ದೊಂದಿ ಮಾಡ್ಕೊಳ್ಳಾನ ಅಂತಾ ಬಂದೆ.”

“ಅಲ್ಲೊಂದು ಅಡಕೆ ದಬೆಬ ಇರಬೇಕು ತಗೋ”. ಎಂದನು ಪುಟ್ಟಾಚಾರಿ. ಗುತ್ತಿ ಬೇಗಬೇಗನೆ ತನ್ನ ಸೊಂಟದ ಕತ್ತಿಯಿಂದ ದಬ್ಬೆ ಸೀಳಿ, ಕಟ್ಟಿ, ದೊಂದಿ ಹೊತ್ತಿಸಿಕೊಂಡು ಬೀಸುತ್ತಾ ಹೊರಟು ಹೋದನು.

ಅವನು ಹೋದ ತುಸುಹೊತ್ತಿನಲ್ಲಿಯೆ ಕಮ್ಮಾರಸಲೆ ಹೊರಗಡೆ ಕತ್ತಲಲ್ಲಿ ಏನೊ ಗಲಾಟೆ ಕೇಳಿಸಿತು. ಚೇಂಕ್ರ ಹೊಟ್ಟೆಗೆ ದರಾಮ್ ಹೊಯ್ದುಕೊಂಡು ಅತ್ಯುತ್ಸಾಹಿಯಾಗಿ “ಹೆಹ್ಹೆಹ್ಹೆ! ನಂಗೆ ಕೊಟ್ಟೆದ್ರೆ? ಬೈಸೆಕಲ್ಲನ್ನ ಹೆಂಗೆ ಬಿಡ್ತಿದ್ದೆ? ಬುರ್ನಾಸು, ಬರೀ ಬುರ್ನಾಸು, ಆ ಪಾದ್ರಿ. ಅವನಿಗೇನು ಗೊತ್ತು ಬಿಡಾಕೆ?…. ಏ ಐತಾ ಬಾರೋ, ಬಿಡಾರಕ್ಕೆ ಹೋಗಾನೊ! ಮಜಾ ಮಾಡಾಕೆ! ಥೂ ನಿನ್ನ ಹೆಂಡ್ತೀನಾ….”

ಐತ ತಿದಿಯನ್ನು ಮೊದಲೇ ಒತ್ತುತ್ತಿದ್ದವನಿಗೆ ಕೊಟ್ಟು, ಬೇಗಬೇಗನೆ ಎದ್ದು “ನಾ ಬತ್ತೆ, ಆಚಾರಣ್ಣಾ” ಎಂದು ಹೊರಕ್ಕೆ ಧಾವಿಸಿದನು. ಬೆಂಕಿಯ ಬೆಳಕಿನಲ್ಲಿದ್ದು ಅದನ್ನೆ ನೋಡುತ್ತಿದ್ದ ಅವನಿಗೆ ಹೊರಗಡೆ ಕತ್ತಲೆ ಕಗ್ಗಲ್ಲಾದಂತೆ ಕಮಡಿತು. ದಾರಿಗೆ ಅಡ್ಡಲಾಗಿ ನಿಂತಿದ್ದ ಚೇಂಕ್ರನಿಗೆ ಡಿಕ್ಕಿ ಹೊಡೆದುಬಿಟ್ಟನು! ಅವನೂ ದೊಸಕ್ಕನೆ ನೆಲಕ್ಕೆ ಅಮದೂರಿ ಕ್ಯಾಕರಿಸಿ ಉಗಿಯುತ್ತಾ” ಹ್ಹಿಹ್ಹಿಹ್ಹಿ! ನಿನ್ನ….” ಎಂದು ಅವಾಚ್ಯಾವಾಗಿ ಬೈಯ್ಯುತ್ತಾ “ಕುಡ್ದಿದ್ದು ನಾ….ನು…. ಏರಿದ್ದು ನಿಂಗೆ! ಹ್ಹಿಹ್ಹಿಹ್ಹಿ” ಎಂದು ತತ್ತರಿಸುತ್ತಾ ಮತ್ತೆ ಕೈಯೂರಿ ಎದ್ದು ನಿಂತನು.

ತನ್ನನ್ನು ಬೀಳದಂತೆ ಆತುಕೊಳ್ಳಲು ಬಂದ ಐತನಿಗೆ "ಏಯ್, ನಂಗೇನಾಗ್ಯದೆ ಅಂತಾ ಹಿಡುಕೊಳ್ತೀಯೋ?" ಎಂದು ತೂದಲು ತೊದಲುತ್ತಾ ತೂರಾಡುತ್ತಲೆ ನಡೆಯತೊಡಗಿದನು.

ಐತ, ಹುಲಿ ಕಂಡಾಗ ಹೆದರಿಕೆಯ ಪ್ರಭಾವದಿಂದ, ಜೀವ ಉಳಿಸಿಕೊಂಡರೆ ಸಾಕು ಎಂದು ಹತ್ತತಿರವೆ ಇದ್ದ ಕೆಂಜಿಗೆ ಉಡಿಗೊ ಹೇಗೋ ಹತ್ತಿದಾತನು, ಹುಲಿ ಹೋದಮೆಲೆ ಇಳುಯುವ ಗೋಳನ್ನು ಅನುಭವಿಸುವಂತೆ, 'ನಾನು ಯಾಕೆ ಇವನ ಜೊತೆ ಹಾಳು ಬೇಸೆಕಲ್ಲು ಸವಾರಿ ನೋಡಾಕೆ ಹೋದ್ನೆಪ್ಪಾ'ಎಂದು ಶಪಿಸಿಕೊಳ್ಳುತ್ತಾ, ಬಹು ಕಷ್ಟದಿಂದ ಚೇಂಕ್ರನನ್ನು ಬಿಡಾರದವರೆಗೆ ಕರೆತಂದನು. ಕತ್ತಲೆಯ ಕಾಡುದಾರಿಯಲ್ಲಿ ಚೇಂಕ್ರನ ಕಾಮಚೇಷ್ಟೆಗಳನ್ನೂ ಅಶ್ಲೀಲ ಬೈಗುಳಗಳನ್ನೂ ಅವನ ಬಾಯಿಂದ ಉಗುತ್ತಿದ್ದ ಸಾರಾಯಿಯ ವಾಸನೆ ಬೆರತೆ ಉಸಿರ ಗಬ್ಬು ಹರಡಿಕೆಯನ್ನೂ ತುಟಿಪಿಟಕ್ಕೆನ್ನದೆ ಸಹಿಸಿಕೊಂಡಿದ್ದನು. ಚೇಂಕ್ರನ ಬಿಡಾರದ ಹತ್ತಿರ ಅವನನ್ನು ಬಿಟ್ಟು "ಅಕ್ಕಾ, ಸೇರೆಗಾರನ್ನ ಒಳಗೆ ಕರಕೊ" ಎಂದು ದೇಯಿಗೆ ಕೇಳುವಂತೆ ಕೂಗಿಹೇಳಿ, ತನ್ನ ಬಿಡಾರಕ್ಕೆ ಓಡಿದನು, ಯಾವುದಾದರೂ ಒಂದು ಅನಿಷ್ಟದಿಂದಲೋ ಅಪಾಯದಿಂದಲೋ ದೂರ ಸರಿಯುವಂತೆ.

ಅವನ ಬಿಡಾರ ನಿಃಶಬ್ದವಾಗಿತ್ತು. ಒಳಗೆ ಹಣತೆಯ ಸೊಡರಾಗಲಿ ಒಲೆಯ ಬೆಂಕಿಯಾಗಲಿ ಇದ್ದಂತೆ ತೋರಲಿಲ್ಲ. ಜೋಪಡಿಯ ಬಾಗಿಲಿಗೆ ಹೋಗಿ ನೋಡುತ್ತಾನೆ, ತಟ್ಟಿ ಬಾಗಿಲು ಮುಚ್ಚಿದೆ! ನೂಂಕಿದರೆ ತೆರೆಯಲೂ ಇಲ್ಲ. ಕೈಯಿಂದ ತಡವಿನೋಡಿದರೆ, ತಟ್ಟಿಬಾಗಿಲಿಗೆ ಹಗ್ಗ ಬಿಗಿದು ಕಟ್ಟಿದೆ.

'ಇದೇನಿದು? ಪೀಂಚಲು ಎಲ್ಲಿ? ನನಗಾಗಿ ಕಾದು, ಇರುಳು ಹೊತ್ತಾದ ಮೇಲೆ ಒಬ್ಬಳೆ ಇರಲು ಹೆದರಿಕೆಯಾಗಿ, ಪಕ್ಕದಲ್ಲಿರುವ ಪಿಜಿಣನ ಮನೆಗೇನಾದರೂ ಹೋದಳೆ? ಹೋಗಿ ಅಕ್ಕಣಿಯನ್ನು ಕರೆದು ಕೇಳಲೆ? ಅಥವಾ....'

ಏನೇನೊ ಅಮಂಗಳದ ಯೋಚನೆಗಳು ಚೇಂಕ್ರ ತೆರೆದಿದ್ದ ಸಂಶಯದ ಬಾಗಿಲಿಂದ ಅವನ ತಲೆಗೆ ನುಗ್ಗತೊಡಗಿದುವು. ತಾನು ಬಿಡಾರದ ಬಾಗಿಲಿಗೆ ಬಂದೊಎನೆ ಪೀಂಚಲು ತನ್ನ ಸವಿದನಿಯಿಂದ ವಿನೋದವಾಗಿ ಏನನ್ನಾದರೂ ಹೇಳುತ್ತಾ ತನ್ನನ್ನು ಇದಿರುಗೊಂಡು ಒಳಗೆ ಕರೆದುಕೊಂಡು ಹೋಗಿ ಮೋಹಮಾಡಿ, ಮುದ್ದಾಡಿ, ತಿನ್ನಲಿಕ್ಕೆ ಏನನ್ನಾದರೂ ಕೊಟ್ಟು-ಇತ್ಯಾದಿಯಾಗಿ ಕಲ್ಪಿಸಿಕೊಳ್ಳುತ್ತಾ ಬಂದವನಿಗೆ ನಿಃಶಬ್ದತೆ, ಕತ್ತಲೆ, ಮುಚ್ಚಿ ಕಟ್ಟಿದ್ದ ಬಾಗಿಲು ಇದಿರಾಗಿ ಮೂದಲಿಸಿದ್ದುವು. ಆ ನಿರೀಕ್ಷಣಾ ಭಂಗದಿಂದ ಅವನ ಬುದ್ದಿ ಸೋತಂತಾಗಿತ್ತು. ದುರಾದೃಷ್ಟಕೆಕ ಸರಿಯಾಗಿ ಚೇಂಕ್ರ ಬೆಟ್ಟಳ್ಳಿ ಅರೆಕಲ್ಲಿನಲ್ಲಿ ಆಡಿದ್ದ ಮಾತು, ಆದಿನ ಬೆಳಗದಗೆ ತೋಟದಲ್ಲಿ ನಡೆದಿದ್ದ, -ಅನ್ಯ ಸಮಯದಲ್ಲಾಗಿದ್ದರೆ ಮುಗ್ಧವಾಗಿಯೆ ಇರುತ್ತಿದ್ದ, -ಘಟನೆಗಳಿಗೆ ಅಪಾರ್ಥ ವ್ಯಾಖ್ಯಾನವನ್ನೂ ವಿಕಟಧ್ವನಿಯನ್ನೂ ನೀಡಿ, ಯತನ ಬಾಳಿನ ಹಾಲಿಗೆ ಹುಳಿ ಹಿಂಡಿದ್ದುವು.

ಪಿಜಿಣನ ಬಿಡಾರಕ್ಕೆ ಹೋಗಿ, ಅದರ ಮುಚ್ಚಿದ್ದ ಬಾಗಿಲೆಡೆ ನಿಂತು, ಅಕ್ಕಣಿಯನ್ನೆ ಕರೆದು ವಿಚಾರಿಸಿದ, ಯಾವಾಗಲೂ ಏನಾದರೂ ಕಾಯಿಲೆಯಿಂದ ನರುಳುತ್ತಿದ್ದ, ಕೆಲಸ ಮಾಡಿ ದಣಿದು ಮಲಗಿ, ಒಂದು ತರಹ ಕೆಟ್ಟನಿದ್ದೆ ಮಾಡುತ್ತಿದ್ದ ಪಿಜಿಣನ ಪಕ್ಕದಲ್ಲಿ ಕಣ್ಣು ಬಿಟ್ಟುಕೊಂಡೆ ಮಲಗಿದ್ದ, ಮಕ್ಕಳನ್ನೆ ಹಡೆದುಕಾಣದ ಅಕ್ಕಣಿ ಮಲಗಿದ್ದಲ್ಲಿಂದಲೆ ಹೇಳಿದಳು: 'ಒಡೆಯರ ಮನೆಯಕಡೆ ಹೋದವಳು ಇನ್ನೂ ಬಂದಿಲ್ಲ. '

ಐತ ಹತಾಶನಾದಂತ ಮೆಲ್ಲಗೆ ತನ್ನ ಗುಡಿಸಲಿಗೆ ಬಂದನು. ಕೈ ಅಂದಾಜಿನಿಂದ ಬಾಗಿಲಿಗೆ ಬಿಗಿದಿದ್ದ ಹಗ್ಗವನ್ನು ಬಿಚ್ಚಿ ಒಳಗೆ ಹೋದನು. ಹೊರಗಡೆ ನಸುಗಪ್ಪಾಗಿದ್ದ ಕತ್ತಲೆ ಬಿಡಾರದ ಒಳಗಡೆ ಕಾಡಿಗೆಗಪ್ಪಾಗಿತ್ತು. ಕಾಲೂಹೆ ಕೈಯೀಹೆಯ ಮೇಲೆಯೆ ಮೂಲೆಯಲ್ಲಿದ್ದ ಒಲೆಯ ಬಳಿಗೆ ಹೋಗಿ, ಮೆಲ್ಲಗೆ ಊದಿದನು. ಬೂದಿ ಹಾರಿ ಕೆಂಡ ಕಂಡು ಬೆಂಕಿಗೆ ತುಸುವೆ ಜೀವವಿರುವಂತೆ ತೋರಿತು. ಮೆಲ್ಲನೆ ಪಕ್ಕದಲ್ಲಿದ್ದ ಜಿಗ್ಗು ಒಟ್ಟಿ ಜ್ವಾಲೆ ಹೊಮ್ಮುವಂತೆ ಮಾಡಿ, ತೊರಂಗಲ ಎಣ್ಣೆ ಹಾಕಿದ್ದ ಹಣತೆಯ ಬತ್ತಿಯನ್ನು ಹೊತ್ತಿಸಿ  ದೀಪ ಮಾಡಿದನು. ಗಾಢಾಂಧಾಕಾರ ಸಮುದ್ರದ ನಡುವೆ ಮಿನಿಮಿನಿಮಿನಿ ಎಂದು  ಉರಿಯತೊಡಗಿತು, ಹಣತೆಯ ದೀಪದ ಬೆಳಕಿನ ಹನಿ. ಮುಂದೆ? ಮನಸ್ಸೆಲ್ಲ ಶೂನ್ಯವಾದಂತಾಗಿ, ಮುಂದೇನು ಮಾಡುವುದಕ್ಕೂ ತೋಚದೆ, ಮಂಕು ಹಿಡಿದಂತೆ ಕುಳಿತುಬಿಟ್ಟನು ಐತ, ನಿರೀಕ್ಷಣೆಯ ತಪಸ್ಯೆಯಾಗಿ!

ಹಠಾತ್ತನೆ ಎಷ್ಟು ನಿಷ್ಠುರವಾಯಿತು ಜಗತ್ತು! ಆ ಗುಡಿಸಿಲನ್ನು ತುಂಬಿದ್ದ ಅಂಧಕಾರಕ್ಕೆ ಅಂತವಿದೆಯೆ? ಆ ಶೂನ್ಯದ ಪಾತಾಳಕ್ಕೆ ತಳವಿದೆಯೆ? ಜೇನು ಸವಿದಂತೆ ಇತ್ತಲ್ಲಾ ಬದುಕು, ಈ  ವರೆಗೆ? ಉಸಿರು ಕಟ್ಟಿ ಏದುತ್ತಿತ್ತು ಐತನ ಜೀವ!

ತೆರೆದಿದ್ದ ತಟ್ಟಿಯ ಬಾಗಿಲಾಚೆ ಏನೊ ಸದ್ದಾಯಿತು ಅಯ್ಯೊ ಬಾಗಿಲು ಮುಚ್ಚಲು ಮರೆತುಬಿಟ್ಟಿದ್ದನಲ್ಲಾ ಎಂದು ಮೇಲೆದ್ದು ಮೂಂಬರಿಯುವಷ್ಟರಲ್ಲಿ ಒಳಕ್ಕೆ ಬಂದಳು ಪೀಂಚಲು! ಬಿಳಿಯ  ಹಲ್ಲಿನ ಸಾಲೆಲ್ಲ ಕಾಣುವಂತೆ ನಗುತ್ತಿದ್ದಾಳೆ! ಒಂದು ಹೊಸ ಸೀರೆ ಉಟ್ಟಿದ್ದಾಳೆ! ಕೈಯಲ್ಲಿ ಏನೋ  ಗಂಟು, ಪಾತ್ರೆ, ಹಿಡಿದಿದ್ದಾಳೆ! ಅವಳು ತನ್ನ ಮೊಳ ಕೈಯಿಂದಲೆ ತಟ್ಟಿ ಬಾಗಿಲನ್ನು ಮುಚ್ಚಲೆಂದು ತಳ್ಳುತ್ತಾ ತನ್ನ ಕಡೆಗೆ ಬೆನ್ನುಹಾಕಿದಾಗ ನೋಡುತ್ತಾನೆ, ಬಿಳಿಯ ಮಲ್ಲಿಗೆಹೂವಿನ ಕುಚ್ಚು ಮುಡಿದಿದ್ದಾಳೆ!

ಮೋಹಿನಿಗೆ ಮರುಳಾದಂತೆ ಬೆರಗುಹೊಡೆದನು ಹೋಗಿದ್ದಾನೆ ಐತ! ಅವಳು ಬಂಆಗ ಅವಳೊಡನೆ ಎಷ್ಟು ಬಿಗಿಯಾಗಿ ವರ್ತಿಸಬೇಕೆಂದು ಮನಸ್ಸು ಮಾಡಿಕೊಂಡಿದ್ದ? ಅದೆಲ್ಲ ಎಲ್ಲಿಯೊ ಪರಾರಿ!

ಬಾಳು ಹಿಗ್ಗಿತು; ಜೋಪಡಿ ಬೆಳಗಿತು; ಹೊರಗಣ ಮತ್ತು ಒಳಗಣ ಕತ್ತಲೆ ಎಲ್ಲಿಯೊ ಓಡಿತು. ಕತ್ತಲೆ ಇದೆ ಎಂಬುದೇ ಮನಸ್ಸಿಗೆ ಬರಲೊಲ್ಲದು. ಮಧುಮಯವಾಯಿತು ಲೋಕ; ತುಂಬಿ ತುಳುಕಿತು ಬದುಕು; ಮುಖ ಹಿಗ್ಗಿ, ಕಣ್ಣು ಅರಳಿ ಉಸಿರು ತುಂಬಿ "ಎಲ್ಲಿ ಹೋಗಿದ್ದಿ, ಮಾರಾಯ್ತಿ? ಕಾದು ಕಾದು ಸಾಕಾಯ್ತು!" ಎಂಬ ಪ್ರಶ್ನೆ ಹೊಮ್ಮಿತು, ಛದ್ಮವೇಷವಾಂತ ಸ್ವಾಗತ ಗೀತೆಯಂತೆ.

ಅವಳ ನಡೆ, ಉಡುಗೆ, ಭಂಗಿ, ಚಲನವಲನ, ಹಾವಭಾವ, ಋಜುತೆ, ಮುಗ್ಧತೆ-ಒಂದೊಂದೂ ಚೇಂಕ್ರ ಒಡ್ಡಿದ್ದ ಸಂಶಯ ಪಿಶಾಚಕ್ಕೆ ಬೆಂಬಡಿಗೆಯಾಗಿ, ಐತನ ಮನಸ್ಸು ಪ್ರಫುಲ್ಲವಾಯಿತ. ತಾನು ತಂದ ಪಾತ್ರೆ ಮತ್ತು ಬಟ್ಟೆಯ ಗಂಟನ್ನು ಒಂದೆಡೆ ಇಡುತ್ತಾ ಅವಳು "ಅದೆಲ್ಲ ಆಮ್ಯಾಲೆ ಹೇಳ್ತೀನಿ. ಈಗ ಹೊತ್ತಾಯ್ತು, ಬಾ ಉಣ್ಣಾಕೆ" ಎಂದು ಬೇಗಬೇಗನೆ ಬೆಳಿಗ್ಗೆ ತೋಟದಿಂದ ತಂದಿದ್ದ  ಹೊಂಬಾಳೆಯನ್ನೂ ಒಂದು ತೋಳೆದ ಹಾಳೆಯನ್ನೂ ಹಾಕಿದಳು.

"ಎಲ್ಲಿತ್ತೇ ಈ ಹೊಂಬಾಳೆ?"

“ಹೊತ್ತಾರೆ ತ್ವಾಟದಾಗೆ ಸಿಕ್ಕಿತ್ತಲ್ಲಾ ಅದೇ. “

“ಮಜ್ಜಾನ ಉಂಡಿರಲಿಲ್ಲೇನೇ ಅದರಲ್ಲಿ?”

“ಅವನ್ನೇ ತೊಳೆದು ಇಟ್ಟಿದ್ದೆ, ಎಷ್ಟು ಚಂದ ಅದೆ ಅಲ್ಲಾ?”

ಉಣ್ಣುವುದಕ್ಕೆ ಅಣಿಮಾಡುತ್ತಿದ್ದ ಅವಳನ್ನೆ ನೋಡುತ್ತಿದ್ದ ಐತಗೆ ಮನಸ್ಸಿನಲ್ಲಿ ಮತ್ತೆ ಏನೊ ಕಲಕಿದ ಹಾಗಾಯಿತು. ಜೋಪಡಿಯ ಸೂನ್ಯದಲ್ಲಿ, ಜನವಿಹೀನ ರಾತ್ರಿಯ ನೀರವತೆಯಲ್ಲಿ, ತಾನು ಒಲಿದಿದ್ದವಳು ಇಲ್ಲದೆ ಸಂದಿಗ್ಧತೆಯಲ್ಲಿ, ಎಲ್ಲಿ ಹೋದಾಳೊ ಏನಾದಳೊ ಎಂಬ ಕಾತರದಲ್ಲಿ, ಕಾದು ಕಾದು ಬೇಸುತ್ತಿದ್ದ ಅವನಿಗೆ ತನ್ನ ಹುಡುಗಿ ಹೆಂಡತಿ ಪ್ರವೇಶಿಸಿದ್ದನ್ನು ಕಂಡೊಡನೆ ತಟಕ್ಕನೆ ಅವಿಚಾರವಾಗಿ ಹೊಮ್ಮಿದ ಹರ್ಷದ ಉಬ್ಬರ ಇಳದಮೇಲೆ, ಮತ್ತೆ ಪೂರ್ವವಿಚಾರವೃತ್ತಿ ತಲೆಹಾಕತೊಡಗಿತ್ತು.

“ಹೊಸ ಸೀರೆ ಎಲ್ಲಿತ್ತೇ? ಯಾರು ಕೊಟ್ಟಿದ್ದೇ?”

“ಎಲ್ಲಿಯೊ ಇತ್ತು. ಯಾರೊ ಕೊಟ್ಟರು” ಕೆಲಸದಲ್ಲಿ ತೊಡಗಿದ್ದ ಪೀಂಚಲು ಐತನ ಕಡೆ ನೋಡದೆಯೆ ಉತ್ತರವೀಯುತ್ತಿದ್ದಳು.

“ಇದೆಲ್ಲಾ ತಿನ್ನಾಕೆ ತಂದೀಯಲ್ಲಾ ಯಾರು ಕೊಟ್ಟಿದ್ದು?”

“ಯಾರೋ ಕೊಟ್ಟರು. ಅದೆಲ್ಲ ಈಗ ಯಾಕೆ?”

“ಹೂ ಮುಡಿದಿದ್ದೀಯಾ?”

“ಮುಡಿಬಾರದಾ?”

“ನಾ ಊಟಾ ಮಾಡಾದಿಲ್ಲ!” ಐತನ ಧ್ವನಿಯಲ್ಲಿ ಸಿಟ್ಟು ಇಣುಕುತ್ತಿತ್ತು.

“ಅಯ್ಯೊ! ಯಾಕೆ?” ಇದ್ದಕ್ಕಿದ್ದಹಾಗೆ ತಾನು ಮಾಡುತ್ತಿದ್ದ ಕೆಲಸ ನಿಲ್ಲಿಸಿ, ಪೀಂಚಲು ಬೆಕ್ಕಸದಿಂದ ಐತನ ಕಡೆ ತಿರುಗಿ ಕೇಳಿದಳು.

‘ನಂಗೆ ಹೊಟ್ಟೆ ಹಸಿದಿಲ್ಲ’ ಐತ ಮೂಲೆಯಲ್ಲಿ ಹಾಕಿದ್ದ ಚಾಪೆಯ ಮೇಲೆ ಪೀಂಚಲು ಕಡೆಗೆ ಬೆನ್ನು ಹಾಕಿ ಮಲಗಿಯೆಬಿಟ್ಟನು.

ಹೆಣ್ಣಿಗೆ ಮೊದಲು ತುಸು ದಿಗಿಲೆ ಆಯಿತು. ಓಡಿಹೋಗಿ ಅವನ ಪಕ್ಕದಲ್ಲಿ ಕುಳಿತು “ಸಿಟ್ಟು ಮಾಡಿಕೊಂಡಿರಾ?” ಎಂದಳು, ಐತ ಮಾತಾಡಲಿಲ್ಲ; ತಿರುಗಲೂ ಇಲ್ಲ. ಅವನು ಯಾವುದೊ ದುಃಖದಿಂದ ಬಿಕ್ಕುವಂತೆ ತೋರಿತು.

ಪೀಂಚಲು ಅವನ ಮುಖದ ಮೇಲೆ ಕೈಯಾಡಿಸಿದಾಗ ಅದು ಒದ್ದೆಯಾಯಿತು! ಐತ ಅಳುತ್ತಿದ್ದಾನೆ. ಯಾಕೆ? ತಾನೇನು ಮಾಡಿದೆ? ಹೆಣ್ಣಿನಲ್ಲಿದ್ದ ಹೆಂಡತಿಯ ಕರುಳು ಮರುಗಿ ತಾಯ್ತನಕ್ಕೇರಿತು. ಐತನೊಂದು ರಚ್ಚೆ ಹಿಡಿದ ಅರಿಯದ ಮಗುವೊ ಎಂಬಂತೆ ಅವನನ್ನು ಮುದ್ದುಮಾಡಿ ಲಲ್ಲಯ್ಸಿದಳು. ಎಂತಹ ವಿಚಾರಪೂರ್ವಕವಾದ ವಾದದಿಂದಲೂ ನಿವಾರಣೆಯಾಗದ ಸಂಕಟವನ್ನೂ ಪರಿಹರಿಸುವ ಕೈ ಮೈ ಸೋಂಕಿನಿಂದ ಅವನ ಚೇತನವನ್ನೆಲ್ಲ ಸಾಂತ್ವನಕ್ಕೆ ನೀವಿದಳು: ಉಣಲೊಲ್ಲೆ ಎಂದಿದ್ದವನು, ಎದ್ದು ಕಡುಬು ತುಂದು ಬಡಿಸಿಟ್ಟಿದ್ದ ಹೊಂಬಾಳೆಯ ಮುಂದೆ ಕೂತನು! ಅವಳೂ ಅವನಿಗೆ ಎದುರೆ ಹಾಳೆಯ ಮುಂದೆ ಕೂತಳು.

ಪಕ್ಕದಲ್ಲಿ ಬಾಳೆಯ ಕೀತಿನ ಮೇಲೆ ಬಡಿಸಿದ್ದ ಹೋಳಿಗೆಯನ್ನು ಕಂಡು ಐತ ಐಶ್ವರ್ಯವನ್ನು ಎಡವಿದ ದಟ್ಟದರಿದ್ರನಂತೆ ಹಿಗ್ಗಿ “ಇದು ಎಲ್ಲಿತ್ತೆ? ಯಾರು ಕೊಟ್ಟರೆ? ಹೋಳಿಗೆ!” ಆ ಕೊನೆಯ ಪದವನ್ನು ಸವಿದು ಉಚ್ಚರಿಸಿದನು.

ಪೀಂಚಲುಗೆ ನಗೆ ತಡೆಯಲಾಗಲಿಲ್ಲ: ಈಗ ತಾನೆ ಊಟ ಮಾಡುವುದಿಲ್ಲ ಎಂದು ಹಟತೊಟ್ಟು ಮಲಗಿದ್ದ. ಕಣ್ಣಿನ ತುದಿಗಳಲ್ಲಿ ಅತ್ತಿದ್ದ ಒದ್ದೆ ಇನ್ನೂ ಪೂರ್ತಿ ಆರಿಲ್ಲ. ಈಗ ಅದನ್ನೆಲ್ಲ ಮರೆತು, ಅದೊಂದೂ ನಡದೇ ಇಲ್ಲ ಎನ್ನುವ ಹಾಗೆ, ಬಾಲಕನಂತೆ ಮಾತಿಗೆ ತೊಡಗಿದ್ದಾನೆ. ಪೀಂಚಲುಗೆ ಅವನನ್ನು ಚೆನ್ನಾಗಿ ಹಿಸುಕಿ ಮುದ್ದು ಮಾಡಿಬಿಡಬೇಕು ಎನ್ನಿಸಿತು.... ಚೆನ್ನಾಗಿ ನಕ್ಕುಬಿಟ್ಟಳು.

“ಯಾಕೆ? ನಗುತ್ತೀಯಾ?”

“ಆ ಹೋಳಿಗೆ ಯಾರು ಕೊಟ್ಟಿದ್ದು ಗೊತ್ತಾ?” ತನ್ನನ್ನೇ ಪ್ರಶ್ನಾರ್ಥಕವಾಗಿ ನೋಡುತ್ತಿದ್ದ ಗಂಡನಿಗೆ ಪೀಂಚಲು ಹೇಳಿದಳು: “ಹೂವಳ್ಳಿ ಚಿನ್ನಕ್ಕ!”

“ಹೂವಳ್ಳಿಗೆ ಹೋಗಿದ್ಯಾ?”

ಪೀಂಚಲು ಹ್ಞೂ ಎಂದು ತಲೆದೂಗಿದಳು, ಮುಗುಳು ನಗುತ್ತಾ.

“ಯಾಕೆ? ಯಾರ ಸಂಗಡ ಹೋಗಿದ್ದೆ? ಒಬ್ಬಳೆ ಹೋಗಿದ್ಯಾ? ಕಾಡಿನಲ್ಲಿ? ಈ ಕತ್ತಲೇಲಿ?”

“ಅಮ್ಮ ಈವತ್ತು ಹಡೆದರಲ್ದಾ? ನಿಂಗೆ ಗೊತ್ತಿಲ್ಲಾ?”

“ಹೌದೇನು? ಹೆಣ್ಣೋ ಗಂಡೋ?”

“ಗಂಡು!... ನಾ ಯಾಕ ಹೂವಳ್ಳಿಗೆ ಹೋಗಿದ್ದೆ ಗೊತ್ತಾ? ಆ ಬಾವಿಕೊಪ್ಪದ ನಾಗ ಹೆಗ್ಗಡ್ತಮ್ಮ ಅವರ ಸೊಸೆ ನಾಗಕ್ಕ ಇವತ್ತು ಮನೆಗೆ ಬಂದಿದ್ರಲ್ಲಾ.... ಅವರಿಬ್ಬರೂ ಹೋಗಬೇಕಾಗಿತ್ತಂತೆ ಹೂವಳ್ಳಿಗೆ... ಅಮ್ಮನ ಬಾಣಂತನ

ನೋಡಿಕೊಳ್ಳೋಕೆ, ದೊಡ್ಡಮ್ಮ ನಾಗಹೆಗ್ಗಡ್ತಮ್ಮನ್ನ ಇರಿ ಅಂದ್ರಂತೆ…. ಆದರೆ ನಾಗಕ್ಕ ಹೂವಳ್ಳಿಗೆ ಹೋಗ್ತೀನಿ ಅಂದ್ರಂತೆ…."

"ಅದ್ಯಾಕೆ? ಹಾಂಗೆ ಕಣ್ಣು ಮಿಟತಕಿಸಿ ನೋಡ್ತೀಯಾ?"

ಐತನ ಪ್ರಶ್ನೆಗೆ ಉತ್ತರ ಹೇಳದೆ ಮುಂದುವರಿದಿದ್ದಳು ಪೀಂಚಲು:

"ನಾಗಕ್ಕನ್ನ ಹೂವಳ್ಳಿ ತನಕ ಕಳಿಸಿ ಬಾ ಅಂದ್ರು ನನಗೆ. ಹೋಗಿದ್ದೆ…. ಇವತ್ತೇನೋ ಹರಕೆ ಅಂತ ಹೂವಳ್ಳೀಲಿ. ಹಂದಿ ಕಡಿದಿದ್ರು…. ಹೂವಳ್ಳಿ ಚೆನ್ನಕ್ಕ ನನ್ನ ಕಂಡು ಎಷ್ಟು ಸಂತೋಷಪಟ್ರು ಅಂತೀಯಾ! ಅವರೇ ಕೊಟ್ಟಿದ್ದು ಈ ಸೀರೆ, ಕಡಬು ತುಂಡು ಎಲ್ಲ…. ಬೆಳಕು ಬೆಳಕು ಇದ್ದಾಗಲೆ ಬಂದಿದ್ದೆ ಮನೀಗೆ. ದೊಡ್ಡಮ್ಮ ಏನೇನೊ ಕೆಲಸ ಹೇಳಿದ್ರು. ಮಾಡಿಕೊಟ್ಟು ಬಂದೆ. ಅದಕ್ಕೇ ಹೊತ್ತಾಗಿದ್ದು…. ಆ ಅನ್ನ ಈ ಉಪ್ಪಿನಕಾಯಿ ಖಾರ ಜೀರಿಗೆ ಮೆಣಸಿನಕಾಯಿ ಹಾಕಿದ್ದು. ಆಮ್ಯಾಲೆ ಲಬಲಬ ಅಂತ ಬಾಯಿ ಹುಯಿಕೊಂಡೀಯಾ?…. ಹೇಳೀನಿ…." ಎನ್ನಿತ್ತಿದ್ದವಳು ತಟ್ಟಕ್ಕನೆ ಆಲಿಸಿ "ಹೋ! ಸೇರಿಗಾರ್ರ ಬಿಡಾರದಲ್ಲಿ ಏನೋ ಬೊಬ್ಬೆ ಆಗ್ತಾ ಅದೆ!" ಎಂದಳು.

ಐತನೂ ಆಲಿಸಿ "ಆ ಚೇಂಕ್ರ ಮಾರಾಯ ಇವತ್ತು ಚೆನ್ನಾಗಿ ಶರಾಬು ಕುಡಿದು ಬಂದಿದ್ದಾನಲ್ಲಾ? ದೇಯಿಅಕ್ಕನ ಗತಿ ಮುಟ್ಟಿಸುತ್ತಾನೆ ಅಂತ ಕಾಣ್ತದೆ" ಎಂದನು, ಸಂಕ್ಷೇಪವಾಗಿ ನಡೆದದ್ದನ್ನೆಲ್ಲ ಹೇಳಿ.

ಪೀಂಚಲುಗೆ ಅಲ್ಲಿಗೆ ಹೋಗಿ ಬರುವ ಮನಸ್ಸು. ಆದರೆ ಐತ ಕುಡಿದು ಮತ್ತೇರಿದ್ದ ಚೇಂಕ್ರನನ್ನು ನೆನೆದು, ಅವಳನ್ನು ತಡೆದನು. ಚೇಂಕ್ರನ ಬಿಡಾರದಲ್ಲಿ ಆ ಬೊಬ್ಬೆ ಅಸಾಧಾರಣವಾದದ್ದೇನಾಗಿರಲಿಲ್ಲ. ಎಷ್ಟೋ ಸಾರಿ ಅಕ್ಕಪಕ್ಕದ ಬಿಡಾರದವರು ಹೋಗಿ ದೇಯಯಿನ್ನು ರಕ್ಷಿಸಿದ್ದೂ ಉಂಟು. ಆಗಾಗ ನಡೆಯುತ್ತಲೆ ಇರುವಂತೆ ಇವತ್ತೂ ಏನೋ ಗಲಾಟೆ ಎಂದು ಇಬ್ಬರೂ ಊಟಮಾಡತೊಡಗಿದರು.

ಉಂಡು ಪೂರೈಸುವಷ್ಟರಲ್ಲಿ ಐತನ ಮನಸ್ಸಿನಲ್ಲಿ ಕವಿಯತೊಡಗಿದ್ದ ಎಲ್ಲ ಮುಗಿಲುಗಳು ದಿಕ್ಕಾಪಾಲಾಗಿ ಚೆದರಿಹೋಗಿ, ಅವನ ಹೃದಯ ತಿಳಿಬಾನಾಗಿತ್ತು. ಪೀಂಚಲು ಪರವಾಗಿ ಅವನ ಪ್ರೀತಿ ಉಕ್ಕುವಂತಿತ್ತು. ಅವಳನ್ನೆ ನೋಡಿದನು ಎವೆಯಿಕ್ಕದೆ, ಪ್ರಶಂಸನೀಯ ದೃಷ್ಟಿಯಿಂದ: ಇಂಥ ಚೆಲುವೆಯರೂ ಇನ್ನಿದ್ದಾರೆಯೆ? ನಾನೆಂಥ ಪುಣ್ಯವಂತ ಎಂದುಕೊಂಡಿತು ತಣಿದ ಅವನ ಜೀವ.

ಬಿಚ್ಚಿ ಹಾಕಿದ್ದ ಓಲೆಚಾಪೆಯ ಮೇಲೆ ಮಲಗಲು ಹವಣಿಸುತ್ತಿದ್ದವನು "ತಲೆದಿಂಬಿನ ಕಲ್ಲು ಎಲ್ಲಿ ಹೋಯಿತಪ್ಪಾ?" ಎಂದುಕೊಂಡನು.

ಪೀಂಚಲು ಗೋಡೆ ಬದಿ ಬಿದ್ದಿದ್ದ ಒಂದು ಎರಡಡಿ ಉದ್ದದ ಹಾಸುಗಲ್ಲನ್ನು ಕಷ್ಟಪಟ್ಟು ಎತ್ತಿ ತಂದುಕೊಟ್ಟಳು. ಅದನ್ನು ಚಾಪೆಯ ಅಡಿಹಾಕಿ, ಚಾಪೆಯ ಮೇಲೆ ತನ್ನ ಕಂಬಳಿ ಹಾಕಿದನು. ಮುಚ್ಚಿದ್ದ ತಟ್ಟಿ ಬಾಗಿಲಿನ ಬಿರುಕಗಳೆ ಕಿಟಕಿಯ ಕೆಲಸವನ್ನೂ ಬಹಿಸಿಕೊಳ್ಳಬೇಕಾಗಿದ್ದ ಆ ಜೋಪಡಿಯ ಒಳಭಾಗವನ್ನೆಲ್ಲ ನೋಡುತ್ತಾ "ನಿನ್ನೆ ಅಂಥಾ ಭಾರಿಮಳೆ

ಬಂದರೂ ಇವತ್ತು ಏನು ಸೆಕೆ? ಈ ನುಸಿ ಕಾಟ ಬೇರೆ! ಆ ತೆಂಗಿನೆಣ್ಣೆ ಕುಡಿಕೆ ಎಲ್ಲಿ? ಕೊಡ್ತೀಯಾ?" ಎಂದು ಮೈಮೇಲೆ ಸದ್ದಾಗುವಂತೆ ಅಂಗೈಯಿಂದ ಹೊಡೆದುಕೊಂಡನು, ನುಸಿ ಕುಳಿಸತಿದ್ದೆಡೆಗೆ.

ಪೀಂಚಲು ಕುಡಿಕೆ ತಂದುಕೊಟ್ಟಳು. ಐತ ಕೌಪೀನ ವಿನಾ ಸಂಪೂರ್ಣ ನಗ್ನನಾಗಿ ಕುಳಿತು ಮೈಗೆ ತೆಂಗಿನೆಣ್ಣೆ ಸವರಿಕೊಂಡನು. ಬಡತನದ್ದಾದರೂ, ಅಷ್ಟೇನು ಸುಪುಷ್ಟವಾಗಿರದಿದ್ದರೂ, ನಗ್ನತೆಯಲ್ಲಿಯೆ ಹೆಚ್ಚು ಸುಲಕ್ಷಣವಾಗಿ, ನಿತ್ಯ ಪರಿಚಿತವಾಗಿದ್ದ ತೆಂಗಿನೆಣ್ಣೆಯ ಕಂಪನ್ನು ಸೂಸುತ್ತಿದ್ದ ಅವನ ಶರೀರದ ರೂಪು ಹುಡುಗಿಯ ಕಣ್ಣಿಗೆ ಆಪ್ಯಾಯಮಾನವಾಗಿತ್ತು. "ಅಭ್ಯಂಗಕ್ಕೆ ಎಣ್ಣೆ ಹಚ್ಚಿಕೊಂಡ್ಹಾಂಗೆ ಬಡುಕೊಳ್ತಿದ್ದೀ ಯಲ್ಲಾ! ನುಸಿ ಕಚ್ಚದಿದ್ಹಾಂಗೆ ಒಂದು ಚೂರು ಸವರಿಕೊಂಡರೆ ಸಾಲದೆ?" ಎಂದು ಭರ್ತ್ಸನೆ ಮಾಡುವವಳಂತೆ ಹತ್ತಿರಕ್ಕೆ ಓಡಿಬಂದು, ಎಣ್ಣೆ ಕುಡಿಕೆಯನ್ನು ದೂರ ಸರಿಸಿ, ಅವನ ಪಕ್ಕದ್ದಲ್ಲಿ ಕುಳಿತು, ಅವನ ಮೈಯೆನ್ನೆಲ್ಲ ನೀವಿ ಸವರತೊಡಗಿದಳು. "ಅಯ್ಯೊ ಅಯ್ಯೊ ಅಯ್ಯೊ ಎಣ್ಣೆ ಮುಳುಕ ಆಗಿಬಿಟ್ಟೀಯಲ್ಲಾ!" ಎಂದು ಅಲ್ಲಲ್ಲಿಯೆ ಹೆಚ್ಚಾಗಿ ಸವರಿದ ಮೈ ಭಾಗದ ಎಣ್ಣೆಯನ್ನೆಲ್ಲ ಕೀಸಿ ಬಳೀದು ತೆಗೆದು, ಇನ್ನೂ ಎಣ್ಣೆ ಹಚ್ಚದಿದ್ದ ಭಾಗಗಳಿಗೆ ತಿಕ್ಕಿದಳು. ಗಂಡನ ಬರಿ ಮೈ ಕಂಡು ಅವಳಲ್ಲಿ ಉಕ್ಕಿ ಬಂದಿದ್ದ ಮೋಹಪ್ರೇಮಗಳಿಗೆ ಅಭಿವ್ಯಕ್ತಿ ಕೊಡುವುದೇ ಮುಖ್ಯ ಆಶೆಯಾಗಿತ್ತು ಆ ಎಣ್ಣೆ ತಿಕ್ಕುವ ನೆವಕ್ಕೆ ಅವನು 'ಸಾಕೆ!' 'ಬೇಡವೆ!' 'ಜಿಬ್ಬಳಿಕೆ ಆಗ್ತದೆಯೆ!' ಎಂದೆಷ್ಟು ಹೇಳಿದರೂ ಬಿಡದೆ ತೋಳು, ಎದೆ, ಬೆನ್ನು, ಕೊರಳು, ಕೆನ್ನೆ, ಗಲ್ಲ, ತೊಡೆ, ಕಾಲು ಎಲ್ಲವನ್ನೂ ನೀವಿ ನೀವಿ ಸವಿದೇಬಿಟ್ಟಳು! ಐತನಿಗೂ ಆ ತೈಲಸಂಮರ್ದನ ಕಣ್ಣುಮುಚ್ಚಿಕೊಳ್ಳುವಷ್ಟರಮಟ್ಟಿಗೆ ಸುಖಕರವಾಗಿಯೆ ಇತ್ತು! ನಡುನಡುವೆ ಅವನೂ, ತನ್ನ ಎಣ್ಣೆಯನ್ನೆ ಬಳಿದು ತೆಗೆದು ಅವಳ ಮೈಗೂ ಹಚ್ಚುವ ನೆವದಿಂದ ಅವಳ ಮೃದುತ್ವವನ್ನೂ ಮುಟ್ಟಿಸವಿವ ಶೃಂಗಾರ ಚೇಷ್ಟೆಗೆ ಕೈಹಾಕಿದ್ದನು!

"ಅಲೇಸಾಲೇಸು!" ಇದ್ದಕ್ಕಿದ್ದ ಹಾಗೆ ಎಣ್ಣೆ ಉಜ್ಜುವುದನ್ನು ನಿಲ್ಲಿಸಿ ಪೀಂಚಲು ಕಿವಿಗೊಟ್ಟಳು. "ಹುಲಿ ಕೂಗ್ತದೆ!.... ಹುಲಿಕಲ್ ನೆತ್ತೀಲಿರಬೇಕು!" ಐತನೆಂದನು ಪಿಸುದನಿಯಲ್ಲಿ, ತಾನು ಗಟ್ಟಿಯಾಗಿ ಮಾತಾಡಿದರೆ ಎಲ್ಲಿ ಹುಲಿಗೆ ಕೇಳಿಸಿ ಬಿಡುತ್ತದೆಯೊ ಎಂಬಂತೆ.

ಕಾಡೆನ್ನೆಲ್ಲ ನಡುಗಿಸುವಂತೆ ಹೆಬ್ಬುಲಿಯ ಗರ್ಜನೆಯ ಭಯಂಕರವಾಗಿ ಅಲೆ ಅಲೆ ಅಲೆ ಅಲೆಯುತಿತ್ತು. ಮತ್ತೆ ಉನ್ಮತ್ತ ರಭಸದಿಂದ ಅನೇಕ ದೊಡ್ಡ ಜಂತುಗಳು ಹಳುವಿನಲ್ಲಿ ನುಗ್ಗಿ ಓಡಿದ ಸದ್ದಾಯಿತು.

"ದೊಡ್ಡಿನ ಹಿಂಡು ಅಂತಾ ಕಾಣ್ತದೆ! ಹುಲಿ ಕೂಗಿದ್ದಕ್ಕೆ ಹೆದರಿ ಓಡ್ತಾ ಇವೆಯೊ ಏನೊ?" ಎಂದ ಐತ, ಫಕ್ಕನೆ ಮತ್ತೇನನ್ನೊ ನೆನಪಿಗೆ ತಂದುಕೊಂಡಂತೆ, "ಅಲ್ಲಾ? ಆ ಗುತ್ತಿ ನಾವು ಕಮ್ಮಾರಸಾಲೇಲಿ ದೊಂದಿ ಮಾಡಿಕೊಂಡು ಹೋದ, ಈ ಕತ್ತಲೇಲಿ ಈ ಕಾಡಿನಾಗೆ, ಸಿಂಬಾವಿಗೆ ಹೋಗ್ತೀನಿ ಅಂತಾ ಹೋದನಲ್ಲಾ? ಏನಿರಬೇಕು ಅವನ ಎದೆ!... ಆ 'ಹುಲಿಕಲ್ ನೆತ್ತಿ ', 'ಬೆತ್ತದ ಸರ' ಎಲ್ಲ ದಾಟಿಕೊಂಡು ಹೋಗಬೇಕಲ್ಲಾ?"

"ಅವನ ನಾಯಿ ಇರ್ತದಲ್ಲಾ ಯಾವಾಗ್ಲೂ ಅವನ ಜೊತೇಲಿ! ಮತ್ತೇನು ಹೆದರಿಕೆ ಅವನಿಗೆ?" ಎಂದಳು ಪೀಂಚಲು. ತನ್ನಂತಹ ಒಂದು ಹೆಣ್ಣೂ ಅವನ ಸಂಗಡ ಹೋಗುತ್ತಿದೆ ಎಂಬ ಸಂಗತಿ ತಿಳಿದಿದ್ದರೆ ಅವಳು ಏನು ಹೇಳುತ್ತಿದ್ದಳೊ!

ಹಣತೆ ಆರಿತು. ಬತ್ತಿಯ ತುದಿಯ ಕನರುವಾಸನೆ ತುಂಬಿತು. ಸೆಕೆಯ ದೆಸೆಯಿಂದ ಹೊದ್ದುಕೊಳ್ಳದೆ ಮಲಗಿದ್ದ ಐತನ ಒತ್ತಿನಲ್ಲಿಯೆ ಮಲಗಿದ್ದಳು ಪೀಂಚಲು. ಐತನ ಬೆತ್ತಲೆಯ ಮೈಗೆ, ಸೆಕೆಯನ್ನೆಲ್ಲ ಪರಿಹರಿಸುವಂತೆ, ಮತ್ತೊಂದು ಬೆತ್ತಲೆಯ ಮೈಯೆ ಸೋಂಕಿದಂತಾಯಿತು! ಎರಡು ಬಿಸಿಯ ಮೈಸೇರಿ ಎಂತಹ ತಂಪು ಹುಟ್ಟುತ್ತದೆ? ಅಚ್ಚರಿ, ಆನಂದ, ಐತನಿಗೆ! ಇದೇನು? ಸೀರೆ ಉಟ್ಟಿದ್ದಳಲ್ಲಾ ಪೀಂಚಲು? ಹೊಸ ಸೀರೆ!... ಇಧೇನು ಇಬ್ಬರಿಗೂ ಒಟ್ಟಿಗೆ ಹೊದಿಸುತ್ತಾಳೊ?.... ಅಲ್ಲ; ಕಂಬಳಿಯಲ್ಲ! ತೆಳ್ಳಗಿದೆ, ನುಣ್ಣಗಿದೆ, ತಣ್ಣಗಿದೆ, ಆ ಹೊಸ ಸೀರೆ!... ಅವಳು ಉಟ್ಟಿದ್ದ ಸೀರೆಯು ಈಗ ಇಬ್ಬರಿಗೂ ಒಟ್ಟಿಗೆ ಹೊದೆಯುವ ಶಾಲಾಗಿದೆ! ಸೀರೆಯೆ ಶಾಲಾಗಿ, ಹೊದಿಕೆಯೆ ಲಕ್ಷಣ ದ್ವಿಗುಣಿತವಾಗಿದೆ! ಅದಕ್ಕೇ ಮತ್ತೆ? ತನ್ನ ಬತ್ತಲೆಗೆ ಅಪ್ಪಿದ್ದು ಅವಳ ಬತ್ತಲೆ! ಆದರೇನು? ಕವಿದಿಲ್ಲವೆ ಕಗ್ಗತ್ತಲೆ? ಕುರುಡುಗತ್ತಲೆ?

* * *

## ೧೧

ತಾನು ಬಿಡಾರಕ್ಕೆ ಅಷ್ಟು ಹೊತ್ತಾಗಿ ಬಂದದ್ದು ಏಕೆ ಎಂದು ಪೀಂಚಲು ತನ್ನ ಗಂಡ ಐತನಿಗೆ ಒಪ್ಪಿಸಿದ್ದ ವರದಿಯಲ್ಲಿ ನಿಜ ಸುಳ್ಳು ಎರಡೂ ಹೆಣೆದುಕೊಂಡಿದ್ದುವು. ನಿಜಾಂಶವೆ ಅರೆಗಿಂತಲೂ ಮಿಗಿಲಾಗಿತ್ತು ಎನ್ನಬಹುದಾಗಿದ್ದರೂ ಗೋಪ್ಯರಕ್ಷಣೆಯಲ್ಲಿಸುಳ್ಳಿನ ಅಂಶದ ಕೈಯೆ ಮೇಲಾಗಿತ್ತು ಮುಕೊಂದಯ್ಯನಿಗೆ ಮಾತುಕೊಟ್ಟಿದ್ದಂತೆ ಪೀಂಚಲು ತನ್ನ ಗಂಡನ ಬಾಲಕ ಸಹಜವಾದ ಬಾಯಾಳಿತನಕ್ಕೆ ಅಂಜಿ ಕೆಲವು ಸಂಗತಿಗಳನ್ನು ಮರೆಮಾಚಿದ್ದಳು.

ಅವಳು ತಿಳಿಸಿದ್ದಂತೆ, ಮುಕುಂದಯ್ಯನ ಅತ್ತಿಗೆ ಹೆತ್ತ ಕಾರಣಕ್ಕಾಗಿ ನಾಗತ್ತೆ ಕೋಣೂರಿನಲ್ಲಿಯೆ ಉಳಿದಿರಲಿಲ್ಲ. ನಾಗತ್ತೆ ನಾಗಕ್ಕ ಇಬ್ಬರೂ ಸಾಯಂಕಾಲ ಹೂವಳ್ಳಿಗೆ ಹೋಗುತ್ತಿದ್ದ ಪೀಂಚಲು ಅವರಿಬ್ಬರನ್ನೂ ದಾರಿಯಲ್ಲಿ ಸಂಧಿಸಿದ್ದಳಷ್ಟೆ.

ಕಾಗಿನಹಳ್ಳಿ ಅಮ್ಮ ಅವರ ಹೆಸರು ದಾನಮ್ಮ ಎಂದಿದ್ದರೂ ಎಲ್ಲರೂ ಅವರನ್ನು ಅವರ ತವರೂರಿನ ಹೆಸರಿನಿಂದಲೆ ಕರೆಯುತ್ತಿದ್ದದು ಆನಾಡಿನ ರೂಢಿ-ನಾಗತ್ತೆಯನ್ನು ಒಂದೆರಡು ದಿನ ಇದ್ದು ಹೋಗಿ ಎಂದು ಕೇಳಿಕೊಂಡಿದ್ದೇನೊ ನಿಜವೆ. ಆದರೆ ನಾಗತ್ತೆಗೆ ಆ ಸಾಯಾಂಕಾಲವೆ ತಾನೂ ತನ್ನ ಸೊಸೆಯೂ ಹೂವಳ್ಳಿಯಲ್ಲಿ ಇರಲೇಬೇಕಾಗಿತ್ತು. ಅಲ್ಲಿ ನಡೆಯುತ್ತಿದ್ದ ದೆಯ್ಯದ ಹರಕೆಯಲ್ಲಿ ಅತ್ತೆ ಸೊಸೆಯರಿಬ್ಬರೂ ವಹಿಸಬೇಕಾಗಿದ್ದ ಪಾತ್ರ ಗುರುತರವಾದುದಾಗಿತ್ತು. ವಾಸ್ತವಾಂಶವೆಂದರೆ ಆ ಅತ್ತೆ ಸೊಸೆಯರ ಸಲುವಾಗಿಯೆ ಹೂವಳ್ಳಿಯ ವೆಂಕಟಪ್ಪನಾಯಕರು ದೆಯ್ಯದ ಹರಕೆಯ ಸೀಗಿನಿಂದ ಔತಣದ ಏರ್ಪಾಡು ಮಾಡಿದ್ದರು.

ಆದರೆ ಆ ದೆಯ್ಯದ ಹರಕೆಗೆ ಹತ್ತಿರದ ಸಂಬಂಧಿಗಳ ಮನೆಗಳನ್ನೆ 'ಕರೆ'ದಿರಲಿಲ್ಲ. ಹರಕೆಗೆಂದು ಕಡಿಯಲು, ಹಳೆಮನೆಗೆ ಖುದ್ದು ವೆಂಕಟಪ್ಪನಾಯಕರೆ ಹೋಗಿ, ಹಂದಿಯನ್ನು ಹೊರಿಸಿಕೊಂಡು ಬಂದಿದ್ದರೂ ಸೋಗೆಯ

ಮನೆವರಿಗಾಗಲಿ ಹೆಂಚಿನಮನೆಯವರಿಗಾಗಲಿ ಆ ವಿಷಯವನ್ನೆ ತಿಳಿಸಿರಲಿಲ್ಲ. ಇನ್ನು ಕರೆಯುವುದು ಎಲ್ಲಿಂದ ಬಂತು? ಕೋಣೂರು, ಬೆಟ್ಟಳ್ಳಿ, ಸಿಂಬಾವಿ, ಕಾಗಿನಹಳ್ಳಿ, ಬಾವಿಕೊಪ್ಪದ ಮನೆಗಳಿಗೂ 'ಕರೆ' ಕಳಿಸಿರಲಿಲ್ಲ. ಆದರೆ ಹೂವಳ್ಳಿಯ ಹತ್ತಿರವೆ ಸುತ್ತಮುತ್ತ ಇದ್ದ ನಾಲ್ಕಾರು ಗೇಣಿಗುತ್ತಿಗೆ ಮಾಡುವ ಸಣ್ಣ ಪುಟ್ಟ ಒಕ್ಕಲುಗಳಿಗೆ ಮಾತ್ರ ಹರಕೆಗೆ ಬರಲು ಹೇಳಿದ್ದರು. ಹಂದಿಯ ಹಸಿಗೆ ಮಾಡಿದ ಹಳೆಪೈಕದವರಂತೂ ಅನಿವಾರ್ಯ ಅತಿಥಿಗಳಷ್ಟೆ! ಇನ್ನು, ಬಡು ಬಿದ್ದಲ್ಲಿ ಹದ್ದು ಕಾಗೆ ಹಾರಾಡಿಯೆ ಹಾರಾಡುವಂತೆ, ಹಳೆಮನೆಯ ಹೊಲೆಯರು, ಬೆಟ್ಟಳ್ಳಿ ಬೇಲರು, ಕೋಣೂರಿನ ಗಟ್ಟದವರು ಎಡಗೈಯವರು ಬಲಗೈಯವರು ಅವರೂ ಅಂತಾ ಹತ್ತಾರು ಜನ ಸೇರಿ ದೆಯ್ಯದ ಹರಕೆಯ ಗಲಾಟೆಗೆ ನೆರೆ ಬಂದಹಾಗಿತ್ತು.

ಯಾರ ಅಪ್ರಯತ್ನ ಗಮನಕ್ಕಾದರೂ ಬರುವಂತಿದ್ದ ಇನ್ನೊಂದು ವಿಷಯವೆಂದರೆ, ವೆಂಕಟಣ್ಣ ಧರಿಸಿದ್ದ ಬಟ್ಟೆಬರೆ. ಆ ದಿನ ಬೆಳಗ್ಗೆ ಹಳೆಮನೆಯಲ್ಲಿ 'ಕುಂಟನ ಹುಣ್ಣಿನ ಹೂವಳ್ಳಿ ವೆಂಕಣ್ಣ' ನಾಗಿದ್ದವನು ಅಂದೆ ಸಾಯಂಕಾಲ ಹೂವಳ್ಳಿಯಲ್ಲಿ ವೇಷಭೂಷಣ ಧರಿಸಿ 'ಯಜಮಾನರು ವೆಂಕಪ್ಪನಾಯಕರು' ಆಗಿಬಿಟ್ಟಿದ್ದನು! ಹೆಮ್ಮೀಸೆಯ, ಬೃಹದ್ಗಾತ್ರದ, ದೀರ್ಘೋನ್ನತ 'ಸ್ಯೆಂಧವ' ವ್ಯಕ್ತಿ ಶರಟಿನಂತಹ ಒಂದು ಹೊಸ ಒಳಂಗಿ ಹಾಕಿಕೊಂಡು, ಮೊಣಕಾಲಿನ ಕೆಳಗೆ ತುಸುವೆ ನೇತಾಡುವಂತೆ ಕೆಂಪಂಚಿನ ಒಂದು ಹೊಸ ಪಂಚೆಯನ್ನು ಕತ್ತರಿಹಾಕಿ ಕಚ್ಚೆ ಉಟ್ಟಿದ್ದನು. ಕೈಗೆ ಚಿನ್ನದ ಕಡಗ, ಬೆರಳಿಗೆ ಹರಳುಂಗುರ, ಕಿವಿಗೆ ಹರಳೊಂಟಿ ಅಲಂಕಾರವಾಗಿದ್ದುವು. ಹಣೆಗೆ ಅತ್ತಿತ್ತ ಬಿಳಿಯ ನಾಮಗಳೂ, ನಡುವೆ ಕೆಂಪು ನಾಮವೂ ಏರಿ, ನಾಯಕರ ವೀರ ವೈಷ್ಣವತ್ವನ್ನು ಸಾರುತ್ತಿದ್ದವು. ಹಂದಿ ತಿನ್ನುವುದಕ್ಕಾಗಲಿ, ಕಳ್ಳು ಹೆಂಡ ಸಾರಾಯಿ ಕುಡಿಯುವುದಕ್ಕಾಗಲಿ, ಆ ವೈಷ್ಣವತ್ವದಿಂದ ಯಾವ ಅಎಚಣೆಯೂ ಇದಲಿಲ್ಲ. ಆ ದೃಷ್ಟಿಯಿಂದ ವೆಂಕಪ್ಪನಾಯಕರನ್ನು ವಾಮಾಚಾರ ತಾಂತ್ರಿಕ ಶಾಕ್ತರೂ ಮಿರಿಸುತ್ತಿರಲಿಲ್ಲ ಎನ್ನಬಹುದು!

ಹಂದಿಯ ಹಸಿಗೆಗಾಗಿ ಬಂದು, ಔತಣಕ್ಕಾಗಿ ಕಾಯುತ್ತಾ ಕುಳಿತು, ಎಲೆಯಡಿಕೆ ಹಾಕಿ ಕಾಲ ನೂಂಕುತ್ತಿದ್ದ ಹಳೆಪೈಕದವರಲ್ಲಿ ಒಬ್ಬ ವೆಂಕಟಣ್ಣನ ಆ 'ದರೋಬಸ್ತ'ನ್ನು ನಿರ್ದೇಶಿಸಿ ಪಕ್ಕದವನನ್ನು ಕೇಳಿದನು "ಏನೋ ಇವತ್ತು ನಾಯಕರು ಒಳ್ಳೇ ಮದೋಳಿಗನ ಹಾಂಗೆ ಬಟ್ಟೆಗಿಟ್ಟೆ ಹಾಕಿಕೊಂಡಿದ್ದಾರಲ್ಲಾ?"

ಪಕ್ಕದವನು ಹುಳ್ಳಗೆ ಮುಸುಗುನಗೆ ನಕ್ಕು, ಕಣ್ಣುಮಿಟುಕಿಸಿದ: " ಮತ್ತೆ? ಒಂದು ತರದಾಗೆ ಮದೋಳಿಗನೆ!"

"ಹಾಂಗಂದ್ರೆ?"

ಇನ್ನೊಬ್ಬ ಅವನ ಕಿವಿಯ ಹತ್ತಿರ ಪಿಸುಗುಟ್ಟಿದ್ದನು: "ಏನೇನೋ ಹೇಳ್ತಾರಪ್ಪಾ! ಆ ಬಾವಿಕೊಪ್ಪದ ನಾಗಹೆಗ್ಗಡ್ತಮ್ಮನ ಸೊಸೆ ನಾಗಕ್ಕನ್ನ ಇವರು ಕೂಡಿಕೆ ಮಾಡಿಕೊಳ್ತಾರೆ ಅಂತಾ."

"ಹೌದ್ಹೌದು; ಬೈಗು ಬೈಗು ಆಗ್ತಿದ್ದಾಂಗೆ ಸೊಸೇನ ಕರಕೊಂಡು ಬಂದಿದ್ದನ್ನ ನೋಡ್ದೆ ಅತ್ತೆ."

"ಯಾರೋ? ಆ ಬಿಲ್ಲೋರ ಹುಡುಗಿ ಐತನ ಹೆಂಡ್ತಿ ಸಂಗಡ ಮಾತಾಡ್ತಾ ಬಂದ್ರಲ್ಲಾ ಅವರೇನೊ?"

“ಅವರೇ ಕಣೋ, ಆ ನಾಯಕರ ಮಗಳು ಚೆನ್ನಕ್ಕೋರ್ನ ಗಲ್ಲಮುಟ್ಟಿ ನಟಿಗೆ ತೆಗೆದ್ರಲ್ಲಾ ಅವರೇ!”

“ಆಗ್ಲೆ ಏನು ಅಕ್ಕರೆ, ಮಗಳಮೇಲೆ? ಇನ್ನೂ ಚಿಕ್ಕಮ್ಮ ಆಗಾಕೆ ಮೊದ್ಲೆ?”

ನಾಗತ್ತೆ ಮತ್ತು ವೆಂಕಟಣ್ಣ ಇಬ್ಬರೂ ಸೇರಿ ತಮಗಿಬ್ಬರಿಗಲ್ಲದೆ ಜಗತ್ತಿನಲ್ಲಿ ಇನ್ನಾರಿಗೂ ಗೊತ್ತಾಗಬಾರದು ಎಂದು ಮಾಡಿದ್ದ ಮಸಲತ್ತು, ಅದು ಹೇಗೊ ಎಂತೊ, ಗುಸುಗುಸು ಕಿವಿಮಾತಾಗಿ ಅನೇಕರ ಗೋಪ್ಯ ಸಂವಾದ ವಿಷಯವಾಗಿಬಿಟ್ಟಿತ್ತು. ಆದರೆ ಯಾರೊಬ್ಬರೂ ಬಾಯಿಬಿಟ್ಟು ಆಡುತ್ತಿರಲಿಲ್ಲ. ಎಲ್ಲರ ಕಣ್ಣನೊಳಗೂ ಏನೊ ಒಂದು ಸಂಚಿನಂತೆ ಮಿಂಚುತಿತ್ತೆ ಹೊರತೂ ಯಾರಲ್ಲಿಯೂ ಅದು ಸುಸ್ಪಷ್ಟತೆ ಪಡೆದಿರಲಿಲ್ಲ. ಅದದರ ಸುಳಿವನ್ನು ಒಂದಿನಿಂತೂ ಅರಿಯದೆ ಸಂಪೂರ್ಣ ಮುಗ್ಧರಾಗಿದ್ದವರೆಂದದರೆ ಇಬ್ಬರೆ: ಚೆನ್ನಮ್ಮ ಮತ್ತು ನಾಗಕ್ಕ: ಕೂಡಿಕೆಯಾಗುವವನ ಮಗಳು ಮತ್ತು ಕೂಡಿಕೆಯಾಗಲಿರುವ ಹೆಣ್ಣು!

ಹೋದ ವರುಷ ಗದ್ದೆಕುಯ್ಲು ಅಡಕೆಸುಲಿತಗಳ ಸಮಯದಲ್ಲಿ ವೆಂಕಟಣ್ಣನಿಗೆ ನೆರವಾಗುವ ನೆವದಲ್ಲಿ ನಾಗುತ್ತೆ ತನ್ನ ಸೊಸೆಯನ್ನು ವೆಂಕಟಣ್ಣನ ಪರಿಚಯಕ್ಕೆ ತಕ್ಕಮಟ್ಟಿಗೆ ಪಳಗಿಸಿದ್ದೇನೆ ಎಂದು ಭಾವಿಸಿದ್ದಳು. ನಾಗಕ್ಕನೂ ಸಂತೋಷ ಚಿತ್ತೆಯಾಗಿ ಎಲ್ಲರೊಡನೊ ವ್ಯವಹರಿಸಿದ್ದಳು. ಅದಕ್ಕೆ ಮುಖ್ಯಕಾರಣ ವೆಂಕಟಣ್ಣನಾಗಿರಲಿಲ್ಲ, ಅವನ ಮಗಳು ಚೆನ್ನಮ್ಮನಾಗಿದ್ದಳು. ನಾಗಕ್ಕ ಚೆನ್ನಮ್ಮರಲ್ಲಿ, ಜನ್ಮಾಂತರದ ಪ್ರೀತಿ ಸಂಬಂಧವೊ ಎಂಬಂತೆ, ಇನ್ನಿಲ್ಲದ ಅಕ್ಕರೆ ಬೆಳೆದಿತ್ತು. ಒಟ್ಟಿಗೆ ಮಲಗಿ, ಒಟ್ಟಿಗೆ ಎದ್ದು, ಒಟ್ಟಿಗೆ ಉಂಡು, ಒಟ್ಟಿಗೆ ತಿರುಗಿ, ಒಟ್ಟಿಗೆ ಮಾತಾಡಿ, ಒಟ್ಟಿಗೆಕೆಲಸಮಾಡಿ, ಒಡಹುಟ್ಟುಗಳಿಗೂ ಅಸಾಧ್ಯವೆಂವಂತೆ ಒಬ್ಬರನ್ನೊಬ್ಬರು ಸೆಟ್ಟುಹಾಕಿಕೊಂಡಿದ್ದರು. ಒಂದು ಕಾರಣಕ್ಕಾಗಿ ಚೆನ್ನಮ್ಮನ ಅಜ್ಜಿಗೂ ಮತ್ತೊಂದು ಕಾರಣಕ್ಕಾಗಿ ಚೆನ್ನಮ್ಮನ ತಂದೆಗೂ ಅವರಿಬ್ಬರ ಪರಸ್ಪರ ಮೈತ್ರಿ ಅಚ್ಚುಮೆಚ್ಚಾಗಿತ್ತು ಆದ್ದರಿಂದ ಅಜ್ಜಿ ಅಪ್ಪಯ್ಯ ಸಂವರ್ಧನೆಯಲ್ಲಿ. ವೆಂಕಟಣ್ಣ ತನ್ನ ಸಾಲವನ್ನೂ ಲೆಕ್ಕಿಸದೆ, ಒಡವೆ ವಸ್ತುಗಳನ್ನು ತಂದುಕೊಡುವಾಗಲೆಲ್ಲ ಮಗಳಿಗೆ ಕೊಟ್ಟಂತೆಯೆ ನಾಗಕ್ಕಗೂ ಕೊಟ್ಟಿದ್ದನು, ಒಮ್ಮೊಮ್ಮೆ ನಾಗಕ್ಕಗೂ ತುಂಬ ಸಂಕೋಚವಾಗುಷ್ಟರ ಮಟ್ಟಿಗೆ! ಬೇಡ ಎಂದರೆ ಯಾರ ಮನಸ್ಸಿಗೆ ನೋವಾಗುವುದೋ ಎಂದು ಅಳುಕಿ, ಆ ಒಡವೆ ವಸ್ತುಗಳಲ್ಲಿ ಕೆಲವನ್ನು, ತನ್ನ ಬಳಿ ಅದನ್ನೆಲ್ಲ ಭದ್ರವಾಗಿ ಇಡಲು ಪಿಟಾರಿ ಇಲ್ಲ ಎಂಬ ನೆವ ಹೇಳಿ, ಚೆನ್ನಮ್ಮನ ಸಂದುಕದ ಅರೆ ಪಾಲು ಜಾಗ ನಾಗಕ್ಕನದೇ ಆಗಿಬಿಟ್ಟಿತ್ತು.

ವೆಂಕಟಣ್ಣ ಯಾವಯಾವ ಕಡೆಗಳಿಂದ ತನಗೆ ಸಾಲ ದೊರೆಯಬಹುದೊ ಆ ಎಲ್ಲ ಕಡೆಗಳಿಂದಲೂ ಸಾಲ ತಂದೂ ಅವನಿಗೆ ಸಾಲ ಎಷ್ಟಿದೆ ಎಂಬುದೂ ಗೊತ್ತಿರಲಿಲ್ಲ. ಹಳೆಮನೆ ಸುಬ್ಬಣ್ಣ ಹೆಗ್ಗಡೆಯವರಲ್ಲಿ, ಬೆಟ್ಟಳ್ಳಿ ಕಲ್ಲಯ್ಯಗೌಡರಲ್ಲಿ, ಕಲ್ಲೂರು ಮಂಜಭಟ್ಟರಲ್ಲಿ, ಸಿಂಬಾವಿ ಭರಮೈಯ ಹೆಗ್ಗಡೆಯವರಲ್ಲಿ, ಅಲ್ಲದೆ ಸ್ವಲ್ಪ ಸ್ವಲ್ಪ ಎಂದು ಸಣ್ಣಪುಟ್ಟ ಗೇಣಿದಾರರಲ್ಲಿಯೂ ಸಾಲ ತೆಗೆದಿದ್ದನು. ಪಿತ್ರಾರ್ಜಿತವಾಗಿ ಬಂದಿದ್ದ ಚಿರ ಸ್ವತ್ತುಗಳೆಲ್ಲ ದೀಡಾಗಿದ್ದವು. ಕೆಲವು ಸಾರಿ ಒಂದೇ ತೋಟವನ್ನೊ ಗದ್ದೆಯನ್ನೊ ಇಬ್ಬರಿಗೂ ಬರೆದುಕೊಡುವುದಕ್ಕೂ ಹೇಸಿರಲಿಲ್ಲ ಅದನ್ನೇನು ಮನಃಪೂರ್ವಕವಾಗಿ ವ್ಯೂಹಪ್ರಕಾರ ವಂಚನೆಮಾಡಬೇಕೆಂದು ಮಾಡಿರಲಿಲ್ಲ. ಅವನಿಗೆ ಗೊತ್ತಿದ್ದರೆ ತಾನೆ ಯಾರುಯಾರಿಗೆ ಯಾವಯಾವ ಜಮೀನು ದೀಡುಮಾಡಿದ್ದೇನೆ ಎಂಬುದು?

ದುರ್ಗದ ಪಾಳೆಯಗಾರರಲ್ಲಿ ದಂಡನಾಯಕರಾಗಿದ್ದರೆ ವಂಶದವನು ಎಂಬ ಆ ಹಳೆಯ ನೆನಪಿಗೆ ಗೌರವಕ್ಕಾಗಿ ಅನೇಕರು ಸಾಲಕೊಟ್ಟಿದ್ದರು, ಇವತ್ತಲ್ಲಾ ನಾಳೆ ಅದನ್ನು ಬಡ್ಡಿಯೊಡನೆ ತೀರಿಸುತ್ತಾನೆ ಎಂಬ ಧೈರ್ಯದಿಂದ, ಆದರೆ ಕಲ್ಲೂರು ಸಾಹುಕಾರ ಮಂಜಭಟ್ಟರಂತಹ ಬುದ್ಧಿವಂತ ಬ್ರಾಹ್ಮಣರು ಜಮೀನನ್ನು ಲಪಟಾಯಿಸಿಕೊಳ್ಳುವುದಕ್ಕೆ ಒಂದು ನೆವವಾದರೂ ಇರಲಿ ಎಂದೇ ಮಂದಬುದ್ಧಿಯ ಗಡರು ನಾಯಕರು ಹೆಗ್ಗಡೆಗಳಿಗೆ ಸಾಲಕೊಡುತ್ತಿದ್ದರು. ಹಾಗಲ್ಲದಿದ್ದಲ್ಲಿ, ಕಲ್ಲೂರು ದೇವಸ್ಥಾನಕ್ಕೆ ದೊಡ್ಡ ಜಮೀನುದಾರನೂ ಶ್ರೀಮಂತನೂ ಎಂದು ಹೆಸರು ಪಡೆಯಲು ಹೇಗೆ ಸಾದ್ಯವಾಗುತ್ತಿತ್ತು? ತೊಟ್ಟು ಜನಿವಾರ, ಉಟ್ಟ ಪಾಣಿಪಂಚೆ, ಬಹುಶಃ ಕೈಲೊಂದು ಪಂಚಪಾತ್ರೆ-ಇಷ್ಟೆ ಆಸ್ತಿಯಾಗಿ ಬಂದಿದ್ದ ಬಡ ಹಾರುವನು ಈಗ ದೊಡ್ಡಚೌಕಿಮನೆಯ ಯಜಮಾನನಾಗಿ ದರ್ಬಾರು ನಡೆಸಲು ಹೇಗೆ ಸಾಧ್ಯವಾಗುತಿತ್ತು? ಗೌಡ ಹೆಗ್ಗಡೆ ನಾಯಕರುಗಳನ್ನೆಲ್ಲ ತನ್ನ ಮನೆಯ ಅಂಗಳದ ಕೆಳಜಗಲಿಯಲ್ಲಿ ನಿಲ್ಲಿಸಿಯೊ ನೆಲದಮೇಲೆ ಜೂರಿಸಿಯೊ ಅಥವಾ ಹೆಚ್ಚು ಎಂದರೆ ಚಾಪೆಯ ದಾಕ್ಷಿಣ್ಯಕ್ಕೆ ಏರಿಸಿಯೊ ಆಜ್ಞೆಮಾಡಿ, ತಪ್ಪಿದರೆ ಶಿಕ್ಷೆ ವಿಧಿಸುತ್ತೇನೆ ಎಂದು ಗರ್ಜಿಸಲು ಹೇಗೆ ಸಾಧ್ಯವಾಗುತಿತ್ತು? ಮೊದಮೊದಲು 'ಏನು ವೆಂಕಟಪ್ಪನಾಯಕರೆ?' ಎಂದು ಸಂಬೋಧಿಸುತ್ತಿದ್ದವನು ಬರಬರುತ್ತಾ 'ಏನು ವೆಂಕಟಣ್ಣ?' ಎಂದು ಸಲಿಗೆಯಿಂದ ಕರೆಯುವಂತಾಗಿ ಈಗ 'ಏನು ಬಂದೆಯೊ, ಎಂಕ್ಟ?' ಎಂದು ಪ್ರಶ್ನಿಸಲು ಹೇಗೆ ಸಾಧ್ಯವಾಗುತಿತ್ತು? ಅಷ್ಟಾದರೂ ಆ ಬೃಹದ್ ಗಾತ್ರದ ದಂಡನಾಯಕರೂ ವಂಶಸ್ಥನಿಗೆ ಅದೊಂದೂ ಅರ್ಥವಾಗುತ್ತಿರಲಿಲ್ಲವೋ? ಅಥವಾ ಅರ್ಥವಾದರೂ ಅವರ ಸಾಲಗಾರನಾಗಿ ಇನ್ನೂ ಸಾಲ ಬೇಡುವ ದೈನ್ಯಕ್ಕೆವಶನಾಗಿ, ತನ್ನ ಚೈತನ್ಯದ ಪೌರುಷತ್ವವನ್ನೆ ಕಳೆದು ಕೊಂಡಿದ್ದನೋ? ಹಲ್ಲು ಕಿರಿದು, ಬೆಪ್ಪುನಗೆ ನಕ್ಕು, ಸೊಂಟ ಬಗ್ಗಿಸಿ, ಕೈಮುಗಿದು, "ಏನೂ ಇಲ್ಲ, ಭಟ್ಟರೆ; ಸುಮ್ಮನೆ ಹಾಂಗೆ ತಿರುಗಾಡ್ತಾ ಬಂದೆ?" ಎಂದು ರಾಗವಾಗಿ, ಬೇಸರ ತರುವಷ್ಟರಮಟ್ಟಿಗೆ ನಿಧಾನವಾಗಿ, ಮೂರ್ಖ ಉತ್ತರ ಕೊಡುವುದು ರೂಢಿಯಾಗಿ ಹೋಗಿತ್ತು ಹೂವಳ್ಳಿ ವೆಂಕಟಣ್ಣಗೆ.

ಈ ಸಾರಿಯೂ ಅಂತರಂಗದಲ್ಲಿ ಕೂಡಿಕೆಯಾಗಿ ಬಹಿರಂಗದಲ್ಲಿ ದೆಯ್ಯದ ಹರಕೆಯ ರೂಪುವೆತ್ತಿದ್ದ ಆ 'ವಿಶೇಷ'ಕ್ಕೆ ಕಲ್ಲೂರು ಮಂಜಭಟ್ಟರಿಂದಲೆ ಸಾಲ ತಂದಿದ್ದನು. ಆದರೆ ಈ ಸಾರಿ ನಾಗಕ್ಕನನ್ನು ಸೀರುಡಿಕೆ ಮಾಡಿಕೊಳ್ಳುವ ಮೋಹವೇಗದ ಪ್ರವಾಹಕ್ಕೆ ಸಿಕ್ಕಿ ಪಿತ್ರಾರ್ಜಿತ ಆಸ್ತಿಯನ್ನೆಲ್ಲ ತೇಲಿಬಿಟ್ಟಿದ್ದನು. ಅದುವರೆಗೆ ಸ್ವಂತ ಗದ್ದೆ ತೋಟಗಳನ್ನು ಸಾಗುವಳಿ ಹೆಸರಿಗಾದರೂ ಜಮೀನುದಾರನಾಗಿದ್ದವನು ಈಗ ಕಲ್ಲೂರು ಸಾಹುಕಾರ ಮಂಜಭಟ್ಟರ ಒಕ್ಕಲ ಸ್ಥಾನಕ್ಕೆ ಇಳಿದಿದ್ದನು. ಆದರೆ ಈ ವಿಷಯವನ್ನು ಭಟ್ಟರೂ ನಾಯಕರೂ ಒಟ್ಟಾಗಿಯೆ ಗುಟ್ಟಾಗಿಟ್ಟಿದ್ದರು, ವೆಂಕಟಣ್ಣನಿಗೆ ಸಾಲಕ್ಕೊಟ್ಟಿದ್ದ ಇತರರಿಗೆ ಯಾರಿಗೂ ತಿಳಿಯದಿರಲಿ ಎಂದು.

ಹೆಂಡತಿ ಸತ್ತು ಇಷ್ಟು ವರ್ಷಗಳಾದಮೇಲೆ, ಅನೇಕ ಕಡೆಗಳಲ್ಲಿ ತನ್ನನ್ನು ಕೂಡಿಕೆ ಮಾಡಿಕೊಡಲು ತನ್ನ ಅತ್ತೆ ಮಾಡಿದ್ದ ಪ್ರಯತ್ನಗಳನ್ನೆಲ್ಲ ವಿಫಲಗೊಳಿಸಿದ್ದ ಹೆಣ್ಣನ್ನು, ಆಸ್ತಿಯನ್ನೆಲ್ಲ ಬೆಲೆತೆತ್ತು, ಸೀರುಡಿಕೆಯಾಗಲು ಕಾತರನಾದದ್ದು ಏಕೆ?- ಎಂದು ಯಾರಾದರೂ ಕೇಳಿದ್ದರೆ, ಬಹುಶಃ ವೆಂಕಟಣ್ಣ ಹೇಳುತ್ತಿದ್ದ 'ಗಂಡು ಸಂತಾನಕ್ಕಾಗಿ!' 'ಮದುವೆಯ ವಯಸ್ಸಿಗೆ ಬಂದ ಹೆಣ್ಣುಮಗಳು ಚಿನ್ನಮ್ಮ ಇದ್ದಾಳೆ. ಯಾರಾದರೂ ಒಬ್ಬ ಯೋಗ್ಯ ಹುಡುಗನನ್ನು ಮನೆ ಅಳಿಯತನಕ್ಕೆ ತಂದು, ಮಗಳನ್ನು ಅವನಿಗೆ ಮದುವೆಮಾಡಿದರೆ ಆಗದೇ?' ಎಂದೇನೂ ಕೆಲವರು ಸಲಹೆ ಮಾಡಿದ್ದರು. ಆದರೆ ಅದು ತನ್ನ ಸ್ವಂತ ಸುಖಕ್ಕೆ ಸಾಧನವಾದೀತೆ? ಸೀರುಡಿಕೆಯಾಗಿ ಗಂಡು ಮಗುವನ್ನು ಪಡೆದರೆ ಎರಡೂ ಕೈಗೂಡುವುದಿಲ್ಲವೆ: ಸ್ವಂತ ಸುಖ ಮತ್ತು ವಂಶೋದ್ಧಾರ? ಅದೂ ಅಲ್ಲದೆ, 'ಮನೇ ಅಳಿಯ ಮನೇ ತೊಳಿಯ!' ಗಾದೆ ಬೇರೆ ಇದೆಯಲ್ಲ?

ಆದರೆ ಈಗ ಆದದ್ದು-ಮೂಗು ತೆತ್ತು ಕನ್ನಡಿ ಕೊಂಡಂತೆ. ವೆಂಕಟಣ್ಣ ಪಡೆಯಬಹುದಾದ ಪುತ್ರಸಂತಾನಕ್ಕೆ ಲಭಿಸಲಿರುವ ಆಸ್ತಿ ಎರಡೆ: ದಾರಿದ್ರ್ಯ ಮತ್ತು ಸಾಲ!

ಬೈಗಾದ ಹಾಗೆಲ್ಲ ಆ ದಿನ ವೆಂಟಕಣ್ಣನಿಗೆ ಏನೋ ಆನಂದದ ನಿರೀಕ್ಷೆ. ನಾಗತ್ತೆ ಮತ್ತು ನಾಗಕ್ಕ, ದೆಯ್ಯದ ಹರಕೆಗೆ ಬರುವ ಇತರ ನೆಂಟರಂತೆ, ಬರುವುದನ್ನೆ ಕಾಯುತ್ತಿದ್ದ. ಆದರೆ ಬೈಗು ಕಪ್ಪಾಗತೊಡಗಿದ್ದರೂ ಅವರು ಇನ್ನೂ ಬರದಿದ್ದುದನ್ನು ಕಂಡು ಅವನಿಗೆ ದಿಗಿಲುಬಡಿದಂತಾಯಿತು. ಇತರ ನೆಂಟರೂಡನೆ ಮಾತುಕತೆ ಆಡುತ್ತಿದ್ದರೂ ಯಾವುದಾದರೂ ನೆವದಿಂದ ಮತ್ತೆ ಮತ್ತೆ ಹೆಬ್ಬಾಗಿಲಿಗೆ ಹೋಗಿ ನೋಡಿ, ಮನೆಗೆ ಬಂದ ನೆಂಟತಿಯರಿಗೆ ಉಡುಗೂರೆಯಾಗಿ ಕೂಡಲು ತಂದಿದ್ದ ಸೀರೆಗಳ ವಿಚಾರ ಸಲಹೆ ಕೂಡುವ ನೆವದಿಂದ ನಾಗತ್ತೆ ನಾಗಕ್ಕರು ಬಂದರೇ ಇಲ್ಲವೇ ಎಂಬುದನ್ನು ತಿಳಿಯಲು ಪ್ರಯತ್ನಿಸುತ್ತಿದ್ದನು. ಕಡೆಗೊಮ್ಮೆ ಅವನೇ ಕಂಡನು, ಕವಿಯುತ್ತಿದ್ದ ಕಪ್ಪಿನಲ್ಲಿ ಮಸುಗು ಮಸುಗಾಗಿ ಬರುತ್ತಿದ್ದ ಮೂವರು ಸ್ತ್ರೀ ಆಕೃತಿಗಳನ್ನು: ಅವರು ಹತ್ತಿರಕ್ಕೆ ಬಂದಾಗ ನಾಗತ್ತೆ ನಾಗಕ್ಕರನ್ನು ಗುರುತಿಸಿ, ಸಂಪ್ರದಾಯದಂತೆ "ಬಂದ್ರೇ? ಒಳಗೆ ಹೋಗಿ!....ಕೈಕಾಲು ತೊಳಕೊಳ್ಳಾಕೆ ನೀರು ಕೊಡೊ, ಏ ರಾಮ!" ಎಂದು ಅದಕ್ಕಾಗಿ ನಿಂತಿದ್ದ ಆಳಿಗೆ ಕೂಗಿ ಹೇಳಿದನು ಸಂಭ್ರಮ ಸ್ವರದಲ್ಲಿ.

ಗಟ್ಟದ ತಗ್ಗಿನವರಂತೆ ಸೀರೆಯುಟ್ಟು, ನಾಗತ್ತೆ ನಾಗಕ್ಕರೊಡನೆ ಒಳಗೆಹೋಗದೆ ಅಲ್ಲಿಯೆ ನಿಂತಿದ್ದ ಮೂರನೆಯ ಸ್ತ್ರೀ ಆಕೃತಿಗೆ "ಯಾರೆ ನೀನು? ಮುಟ್ಟಾಳೇನೆ?....ಹಳೆಪಕದವಳೊ ಸೆಟ್ಟರವಳೊ?... ಸೆಟ್ಟರವಳಾದರೆ ಹೋಗು ಒಳಗೆ" ಎಂದು ಹರ್ಷ ಚಿತ್ತನಾಗಿದ್ದ ವೆಂಕಟಣ್ಣ ಆದರಪೂರ್ವಕವಾಗಿಯೆ ಹೇಳಿದನು.

ಆ ಆಕೃತಿ "ನಾನು.... ನಾನು ...." ಎಂದು ತಡೆತಡೆದು, ಏನು ಹೇಳಬೇಕೆಂಬುದನ್ನು ಯೋಚಿಸಿದರೂ ಅದು ಸರಿಯಾಗಿ ಹೊಳೆಯದೆ "ಪೀಂಚಲು!" ಎಂದಿತು.

ವೆಂಕಟಣ್ಣ ಅದನ್ನು ಕೇಳಿ ನಕ್ಕು "ಪೀಂಚಲು! ಎಂಥದೇ ಅದು ಪೀಂಚಲು?" ಎಂದು ಕೇಳಿದನು.

"ನನ್ನ ಹೆಸರು, ಅಯ್ಯಾ!" ಪೀಂಚಲು ತಲೆಬಾಗಿ ನೆಲ ನೋಡುತ್ತಿದ್ದಳು.

"ಸೈ ಬಿಡು! ಪೀಂಚಲು? ಒಳ್ಳೆ ಹೆಸರೇ!" ಎಂದು ಹಾಸ್ಯವಾಡಿ "ಎಲ್ಲಿಯವಳೇ ನೀನು? ಯಾತರವಳೆ?... ಅವರ ಸಂಗಡ ಬಂದವಳೇನೇ?"

"ನಾನು ಬಿಲ್ಲವರೋಳು.... ಕೋಣೂರಿನಿಂದ ಬಂದೀನಿ.... ಸಣ್ಣಗೌಡ್ರು...." ಎಂದುವಳು, ತಟಕ್ಕನೆ ನಾಲಗೆ ಕಚ್ಚಿಕೊಂಡು, ಮಾತು ನಿಲ್ಲಿಸಿದಳು. ಬೆಳಕಿನಲ್ಲಾಗಿದ್ದರೆ ಅವಳ ಮುಖಭಂಗಿ ಅವಳಿಗೆ ದ್ರೋಹವೆಸಗುತ್ತಿತ್ತೋ ಏನೊ? ಆದರೆ ರಾತ್ರಿಯ ರಕ್ಷೆ ಕವಿದಿತ್ತು.

"ಯಾರೇ ಮುಕುಂದನೇನೆ? ಏನಾದ್ರೂ ಹೇಳಿ ಕಳ್ಸಿದಾನೊ? ಕೊಟ್ಟು ಕಳ್ಸಿದಾನೊ?..."

“ಅಲ್ಲಾ ಆ….ದೊಡ್ಡಮ್ಮ ಚೆನ್ನಕ್ಕಗೇನೋ” ಎಂದವಳು ಮಾತು ನಿಲ್ಲಿಸಿಯೆಬಿಟ್ಟಳು. ವೆಂಕಟಣ್ಣ ಏನು ಕೇಳಿದರೂ ತುಟಿಪಿಟಕ್ಕೆನ್ನದೆ ಹೋದಳು.

“ಅಯ್ಯೋ ಹಾಳು ಹುಡುಗೀ!… ಹಿತ್ತಲು ಕಡೆಗೆ ಹೋಗಿ ಕೇಳು, ನಿನ್ನ ಚೆನ್ನಕ್ಕ ಸಿಕ್ತಾರೆ” ಎಂದು ಹೇಳಿ, ವೆಂಕಟಣ್ಣ ಒಳಜಗಲಿಗೆ ಹೋದನು.

ಪೀಂಚಲು ಕಣ, ಕರೆಹಟ್ಟಿ, ಸದೆಕೊಟ್ಟಿಗೆಗಳನ್ನು ಬಳಸಿ ಹಿತ್ತಲು ಕಡೆಯ ಬಾಗಿಲಿಗೆ ಹೋದಳು. ಒಳಗೆ ಹಿಲಾಲು ದೀಪಬೆಳಕಿನಲ್ಲಿ ಹಿಟ್ಟು ಕುಟ್ಟುವವರು, ಕಡಬು ಮಾಡುವವರು, ಮಾಂಸ ಬೇಯಿಸುವವರು, ಬಳ್ಳೆ ಬಾಡಿಸುವವರು, ಹೆಂಡ ಗಾಳಿಸುವವರು, ಕಳ್ಳು ಕಾಯಿಸುವವರು, ಕರೆಯುವ, ಮಾತನಾಡುವ ಕೂಗುವ, ಬೈಯುವ, ಗದ್ದಲವೋ ಗದ್ದಲದ ನಡುವೆ ಕೆಲಸಗಳಲ್ಲಿ ತೊಡಗಿದ್ದುದು ಕಂಡುಬಂದಿತು. ಹುರಿದ ಮತ್ತು ಬೇಯಿಸಿದ ಮಾಂಸದ ವಾಸನೆ ಕೆಳ್ಳುಹೆಂಡದ ಕಂಪಿನೊಡನೆ ಬೆರೆತು ಅವಳ ಮೂಗಿಗೆ ಹಿತಕರವಾಗಿತ್ತು.

ಸ್ವಲ್ಪಹೊತ್ತು ಕಾದು, ಸಮಯನೋಡಿ, ತನ್ನ ಸಮೀಪಕ್ಕೆ ಬಂದ ಸುಬ್ಬಿಯನ್ನು ಕೂಗಿ ಕರೆದು, ಚೆನ್ನಮ್ಮಗೆ ತಾನು ಬಂದಿರುವುದನ್ನು ಹೇಳಿ ಕಳಿಸಿದಳು. ಒಳಗೆ ಚೆನ್ನಮ್ಮ ತನ್ನ ಕೋಣೆಯಲ್ಲಿ ತಾನೂ ಸೀರೆ ಉಟ್ಟು, ನಾಗಕ್ಕಗೂ ಹೊಸ ಸೀರೆ ಉಡಿಸುವ ಪ್ರಯತ್ನದಲ್ಲಿದ್ದಳು. ತೆರೆದಿದ್ದ ಸಂದುಕದ ಪಕ್ಕದಲ್ಲಿಯೆ ಇಬ್ಬರ ನಿಂತಿದ್ದರು. ಚೆನ್ನಮ್ಮ ಹಣತೆಯನ್ನು ಸಂದುಕದ ಒಳಗೆ ಬೆಳಕುಬೀಳುವಂತೆ ಮತ್ತೆ ಮತ್ತೆ ಎತ್ತಿ ಹಿಡಿಯುತ್ತಾ ಒಂದೊಂದೆ ಸೀರೆಯನ್ನು ಎತ್ತಿ ಎತ್ತಿ ತೋರಿಸುತ್ತಿದ್ದಳು. ನಾಗಕ್ಕ ‘ನಾಳೆ ಉಟ್ಟುಕೊಳ್ತೀನಕ್ಕಾ, ಇವತ್ತು ಬ್ಯಾಡ” ಎನ್ನುತ್ತಿದ್ದಳು. ಅರಲ್ಲಿ ಸುಬ್ಬಿ ಬಂದು ಪೀಂಚಲು ಬಂದಿದ್ದುದನ್ನು ತಿಳಿಸಿದಳು. ನಾಗಕ್ಕ “ಹೌದು ಕಣೇ, ನಂಗೆ ಮರಹೋಯ್ತು ನಿಂಗೆ ಹೇಳಕ್ಕೆ. ನಮ್ಮ ಸಂಗಾಡನೆ ಬಂದ್ಲು, ದಾರೀಲಿ ಸಿಕ್ಕಿ” ಎಂದುಳು. “ಹಾಂಗಾರೆ ಈಗ ಬಂದುಬಿಡ್ತೀನಿ. ನೀ ಉಟ್ಟುಕೊಳ್ತಿರು ಸೀರೇನ.” ಎಂದು ಹೇಳಿ ಚೆನ್ನಮ್ಮ ಓಡಿದಳು, ಹಿತ್ತಲು ಕಡೆಯ ಬಾಗಿಲಿಗೆ.

ಕೆಲಸಮಾಡುತ್ತಿದ್ದರೂ ಅವಳನ್ನು ಕಂಡು ಬೇಗಬೇಗನೆ ಸರಿದು ದಾರಿ ಬಿಡುತ್ತಿದ್ದ ಜನಗಳ ನಡುನಡುವೆ ನುಸಿದು ಅವಸರ ಅವಸರವಾಗಿ ತನ್ನ ಕಡೆಗೆ ಬರುತ್ತಿದ್ದ ಚೆನ್ನಮ್ಮನನ್ನು ದೊರದಿಂದಲೂ ನೋಡುತ್ತಾ ಪೀಂಚಲು ಹಿಗ್ಗಿ ಹಲ್ಲುಬಿಡುತ್ತಾ ನಿಂತಿದ್ದಳು. ಬಾಲ್ಯದಿಂದಲೂ ಪರಿಚಿತೆಯಾಗಿ, ಕೋಣೂರಿಗೆ ಬಂದಾಗಲೆಲ್ಲಾ ಮುಕುಂದಯ್ಯನೊಡನೆ ತಾನೂ ಐತನೂ ಗದ್ದೆ ತೋಟ ಕಾಡುಗಳಲ್ಲಿ ತಿರುಗುತ್ತಿದ್ದಾಗಲೆಲ್ಲ ತಮ್ಮೊಡನೆ ಸರಿಸಮನಾಗಿ ಸಾಹಸಗಳಲ್ಲಿ ಭಾಗಿಯಾಗುತ್ತಿದ್ದ ‘ಚೆನ್ನಕ್ಕ’ನನ್ನು ಕಂಡು, ಏನು ಹೇಳುವುದಕ್ಕೂ ತೋರದ ಸಂತಸದಿಂದ ಪೀಂಚಲು ಕಣ್ಣರಳಿಸಿ ಹಲ್ಲುಬಿಟ್ಟು, ನಗುತ್ತಾ ನಿಂತಿದ್ದಳು. ಆ ಸಂತೋಷದಲ್ಲಿ ನೂರಾರು ನೆನಪುಗಳು ಹಾಸುಹೊಕ್ಕಾಗಿದ್ದುವೆಂದು ಪ್ರತ್ಯೇಕವಾಗಿ ಹೇಳಬೇಕಾಗಿಲ್ಲ.

ಚೆನ್ನಮ್ಮನೂ ಅವಳನ್ನು ಸ್ವಾಗತಿಸುವಂತೆ ಹಸನ್ಮುಖಿಯಾಗಿ, ತಾನೇ ಮೊದಲು ಮಾತನಾಡಿಸಿದಳು:

“ಏನೇ ಪೀಂಚಲಿ, ಎಷ್ಟು ಹೊತ್ತಾಯ್ತೆ ಬಂದು?…. ಐತ ಎಲ್ಲೇ…. ಮುಂಚೆ ಕಡೆ ಅಂಗಳದಾಗೆ ಇದಾನಾ? ಕರೆಯೆ ಅಂವನ್ನೊ!”

ತನ್ನನ್ನು ಬಿಟ್ಟು ತನ್ನ ಗಂಡ ಒಂದು ಕ್ಷಣವೂ ಇರುವುದಿಲ್ಲ ಎಂಬ ಪ್ರತೀತಯನ್ನು ನೆನಪಿಗೆ ತಂದುಕೊಡುವ ಆ ಪ್ರಶ್ನೆಮಾಲಿಕೆಗೆ ನಾಚಿಕೆ ಪಟ್ಟುಕೊಂಡು ತುಟಿ ಹಿಳಯಿಸಿ ನಗುತ್ತಾ ಪೀಂಚಲು ಹೇಳಿದಳು: “ಇಲ್ಲ, ಚನ್ನಕ್ಕ, ಅವರು ಬರಲಿಲ್ಲ. ನಾನೊಬ್ಬಳ ಬಂದೆ…. ಅವರು ಬೆಟ್ಟಳ್ಳಿಗೆ ಪಾದ್ರೀ ಬೀಸೆಕಲ್ಲು ಸವಾರಿ ನೋಡಾಕೆ ಹೋದ್ರು.”

ಅವಳು ತನ್ನ ಗಂಡನನ್ನು ಕುರಿತು ಪ್ರಯೋಗಿಸಿದೆ ಆ ಬಹು  ವಚನವನ್ನು ಗ್ರಹಿಸಿ, ಇಂಗಿತವಾಗಿ ನಗೆಬೀರಿ ಚಿನ್ನಮ್ಮ ವಿನೋದವಾಡಿದಳು: “ನೀ ಎಷ್ಟು ಬದಲಾಯಿಸಿ ಬಿಟ್ಟಿದ್ದೀಯೆ, ಪೀಂಚಲಿ? ಗುಂಡುಗುಂಡಗೆ ಆಗಿಬಿಟ್ಟಿದ್ದೀಯಾ!”….

“ನೀವೂ ಎಷ್ಟು ಚಂದಾಗಿ ಕಾಣ್ತೀರಿ?ಎಷ್ಟು ದೊಡ್ಡಕ್ಕೆ ಆಗಿಬಿಟ್ಟೀರಿ!”

ತಾಯಿಯ ಬಣ್ಣ ಚೆಲುವುಗಳನ್ನೂ ತಂದೆಯ ದೇಹದಾರ್ಢ್ಯವನ್ನೂ ತಾರುಣ್ಯೋಚಿತ ಪ್ರಮಾಣದಲ್ಲಿ ಪಡೆದು ಶೋಭಿಸುತ್ತಿದ್ದಳು ಚಿನ್ನಮ್ಮ-ಎಂಬುದನ್ನು ತನ್ನ ರೊಕ್ಷ ರೀತಿಯಲ್ಲಿ ಹೇಳಿದ್ದಳು ಪೀಂಚಲು.

ಅವಳು ಗಟ್ಟದ ಕೆಳಗಿನವರು ಕಟ್ಟುವ ರೀತಿಯಲ್ಲಿ ಕಟ್ಟಿದ್ದ ತನ್ನ ಸೊಂಟದ ಮಡಿಲಿನಿಂದ ಏನೋ ಒಂದು ಹಸುರೆಲೆಯ ಪೊಟ್ಟಣವನ್ನು ತೆಗೆದು ನೀಡಿದಳು.

“ಏನೇ ಅದು?” ಚಿನ್ನಮ್ಮನ ದನಿಯಲ್ಲಿ ರಹಸ್ಯದೊಡನೆ ಕುತೂಹಲ ಸ್ಪರ್ಧಿಸುವಂತಿತ್ತು.

“ಕಲ್ಲು ಸಂಪಗೆ ಹಣ್ಣು!”

“ಯಾರು ಕೊಟ್ಟಿದ್ದೆ?” ತನಗೆ ಬೇಕಾಗಿದ್ದವರ ಹೆಸರರು ಹೇಳಿಯೆ ಹೇಳುತ್ತಾಳೆ ಪೀಂಚಲು ಎಂದು ಹಾರೈಸಿ ನಿರೀಕ್ಷಿಸಿದ್ದಳು ಚಿನ್ನಮ್ಮ.

ಅದನ್ನರಿತ ಪೀಂಚಲು ಹುಳ್ಳಗೆ  ನಗುತ್ತಾ “ ನಾನೆ ತಂದಿದ್ದು” ಎಂದಳು.

“ಗಾಳಿಗೆ ಬಬಿದ್ದಿದ್ದನ್ನ ಹೆರಕಿಕೊಂಡು ಬಂದ್ಯಾ?”

“ಇಲ್ಲ, ಕುಯ್ದಿದ್ದು. “

“ಮರಾ ಹತ್ತಿ?”

“ಹ್ಞೂ!” ಪೀಂಚಲು ಸ್ವರದಲ್ಲಿ ಸವಾಲಿತ್ತು.

“ಈಗಲೂ ನೀ ಮರ ಹತ್ತುತ್ತೀಯೇನೆ?”

“ಹತ್ತಬಾರದೇನು?”

"ಥೂ! ಮದುವೆ ಆದಮೇಲೂ ಹತ್ತಿದರೆ, ದಿಂಡೆಬಸವಿ ಅನ್ನುತ್ತಾರಲ್ಲೇ!"

"ನಾ ಯಾಕೆ ಹತ್ತಲಿ? ಹತ್ತೋರು ಹತ್ತಿ ಕುಯ್ದಿದ್ದು!"

"ಹಾಂಗನ್ನು ಮತ್ತೆ…. ಐತ ಕುಯ್ದಿದ್ದು?"

"ಅಲ್ಲ; ನನ್ನನ್ನ ನಿಮ್ಮ ಹತ್ರಕ್ಕೆ ಯಾರು ಕಳಿಸಿದಾರೋ ಅವರೇ ಕುಯ್ದಿದ್ದು!" ರಾಗಪೂರ್ಣವಾಗಿತ್ತು ಪೀಂಚಲು ವಾಣಿ.

"ನೀನು ಬಹಳ ಕಿಲಾಡಿ ಕಣೇ!"

"ಯಾಕೆ? ನೀವು ಅವರ ಹೆಸರು ಹೇಳಿ, ಕೇಳಬಾರದಾ!"

ಹೆಸರು ಹೇಳಿದರೆ ಏನು ಮಹಾ ಎಂದು ಪೀಂಚಲುಗೆ ತನ್ನ ನಿರ್ಲಕ್ಷತೆಯನ್ನು ಪ್ರದರ್ಶಿಸಿ ಅವಳನ್ನು ಪರಾಭವಗೊಳಿಸುವ ರೀವಿಯಿಂದ ಚಿನ್ನಮ್ಮ ಕೇಳಿಯೆಬಿಟ್ಟಳು "ಮುಕುಂದಬಾವನೇನೆ?

"ಹ್ಹಿಕ್ಕಿಹ್ಹಿಕ್ಕಿ!" ಪೀಂಚಲು ನಕ್ಕಳಲ್ಲದೆ ಬೇರೆ ಏನನ್ನೂ ಹೇಳದೆ, ಪೊಟ್ಟಣವನ್ನ ಚಿನ್ನಮ್ಮನ ಒತ್ತಿಕೊಟ್ಟಳು. ಚಿನ್ನಮ್ಮ ಆ ಅಲ್ಪವನ್ನೂ ಅತ್ಯಂತ ಮಮತೆಯಿಂದ ಅಂಜಲಿಬದ್ಧಳಾಗಿ ತೆಗೆದುಕೊಂಡು ತನ್ನ ಮಡಿಲಲ್ಲಿ ಅವಿಸಿಟ್ಟುಕೊಂಡಳು.

"ನಿಂಗೊಂದು ಸೀರೆ ತಂದುಕೊಂಡ್ತೀನೆ. ಇಲ್ಲೇ ಕತ್ತಲೆ ಮರೇಲಿ ಉಟ್ಟಕೊ. ಆಮ್ಯಾಲೆ ಅವುಂತ್ಲ ಉಂಡುಕೊಂಡು ಹೋಗಬದೌಂತೆ…."

"ಇಲ್ಲ, ಚಿನ್ನಕ್ಕಾ" ಗಂಭೀರವಾಣಿಯಿಂದ ಹೇಳುತ್ತಿದ್ದಳು ಪೀಂಚಲು "ನಾ ಈಗಲೆ ಹೋಗಬೇಕು; ಅವರು-ಅವರು ಬೆಟ್ಟಳ್ಳಿಯಿಂದ ಬರಾದರೊಳಗೇ ನಾ ಬಿಡಾರದಾಗಿರಬೇಕು… "

"ಯಾಕೆ? ಏನವಸರಾನೆ ನಿನಗೆ? ಗಂಡನಂತೆ ಹೆಂಡತಿ ಆಗಿಬಿಟ್ಟಿದ್ದೀಯಲ್ಲಾ!…"

"ನಾ ಅವರಿಗೆ ಹೇಳಿಬಂದಿಲ್ಲ."

"ಕದ್ದು ಬಂದೀಯೇನೆ?…"

"ಹ್ಞೂ! ಕದ್ದೇಬಂದೀನಿ!…"

ಪೀಂಚಲು ಧ್ವನಿ ರಹಸ್ಯಮಯವಾಗಿದ್ದುದನ್ನೂ ಅವಳ ಕಣ್ಣಿನ ಇಂಗಿತ ಭಂಗಿಯನ್ನೂ ಗಮನಿಸಿ, ಕಾತರೆಯಾಗಿ "ಏನೆ ಅದು?" ಎಂದಳು ಚಿನ್ನಮ್ಮ.

ಅಲ್ಲಿ ನಡೆಯುತ್ತಿದ್ದ ಗಲಾಟೆಯಲ್ಲಿ ಇವರ ಸಂವಾದ ಯಾರಿಗೂ ಕೇಳಿಸುತ್ತಿರಲಿಲ್ಲ; ಯಾರೂ ಇವರನ್ನು ಗಮನಿಸುತ್ತಲೂ ಇರಲಿಲ್ಲ. ಆದರೂ ಪೀಂಚಲು ಸುತ್ತಮುತ್ತ ಕಳ್ಳಕಣ್ಣು ಹಾಯಿಸಿದಳು. ಚಿನ್ನಮ್ಮನನ್ನು ತಾನು ಮುಟ್ಟಬಾರದು ಎಂಬುದನ್ನು ಮರೆತುಬಿಟ್ಟು ಅವಳ ಕೈಹಿಡಿದು ಪಕ್ಕಕ್ಕೆ ಬೆಳಕಿನಿಂದ ಕತ್ತಲೆಗೆ ಎಳೆದಳು. ಕತ್ತಲೆಯಲ್ಲಿ ಇಬ್ಬರೂ ಮರೆಯಾದ ಮೇಲೆ ಕಿವಿಯಲ್ಲಿ ಪಿಸುಗುಟ್ಟಿದಳು.

ಹಠಾತ್ತನೆ ಮೈಮೇಲೆ ಬಿಸಿನೀರು ಚೆಲ್ಲಿದಂತಾಯ್ತು ಚಿನ್ನಮ್ಮಗೆ. ಏನು ಉತ್ತರ ಹೇಳಬೇಕೊ ತಿಳಿಯದೆ ಪ್ರಜ್ಞೆ ತುಸು ತತ್ತರಿಸಿದಂತಾಯಿತು. ಮತ್ತೆ ನಿತ್ತರಿಸಿ "ನಾಳೆ ಬೇಡ ಅಂತಾ ಹೇಳು. ಎಂತಿದ್ದರೂ ಅಕ್ಕಯ್ಯನ ಬಾಲೆ ತೊಟ್ಟಿಲಿಗೆ ಹಾಕೋ ಮನೆಗೆ ನಾನು ಬಂದೇ ಬರ್ತಿನಲ್ಲಾ?" ಗದ್ಗದವಾಗತೊಡಗಿದ್ದ ದನಿಯಿಂದ ಮತ್ತೆ ಮುಂದುವರೆಸಿದಳು "ಹಾಂಗಾದ್ರೆ ಈಗ್ಲೇ ತಂದುಕೊಡ್ತೀನಿ, ಇಲ್ಲೇ ನಿಂತಿರು." ಮತ್ತೆ ನಿಡಿದಾಗಿ ಸುಯ್ದಳು, ಪೀಂಚಲು ಕೈಯ್ಯನ್ನು ಬಲವಾಗಿ ಒತ್ತಿ ಹಿಡಿದು, "ಪೀಂಚಲಿ, ಏನು ಮಾಡಾನೇ"

ಮುಳುಗುವವನು ತನ್ನನ್ನು ರಕ್ಷಿಸು ಎಂದು ಹುಲ್ಲು ಕಡ್ಡಿಯನ್ನೂ ಅಪ್ಪಿಕೊಳ್ಳುವಂತೆ. ತನ್ನಂತಹ ಅಲ್ಪೆಯ ಸಲಹೆಯನ್ನೂ ಕೇಳುವ ಸ್ಥಿತಿಗಿಳಿದಿದ್ದ ಹೂವಳ್ಳಿ ವೆಂಕಪ್ಪನಾಯಕರ ಹಿರಿಯ ಮಗಳಿಗೆ, - ಸಮಯಸ್ಫೂರ್ತಿಯ ಮಹಿಮೆಯೋ ಏನೋ? ಪೀಂಚಲು ದೃಢವಾಣಿಯಿಂದ ಧೈರ್ಯ ಹೇಳಿಯೆಬಿಟ್ಟಳು: "ನೋಡಾನ ಬಿಡಿ, ಚಿನ್ನಕ್ಕಾ; ಹೆದರಬ್ಯಾಡಿ, ದೇವರಿದ್ದಾನೆ! ಅಲ್ಲಿಗೂ ಬಂದರೆ, ನಾವೆಲ್ಲ ಇಲ್ಲೇನು?"

ಚಿನ್ನಮ್ಮ ತನ್ನ ಉದ್ವೇಗವನ್ನು ಯಾರಿಗೂ ಅನುಮಾನ ಬರದ ರೀತಿಯಲ್ಲಿ ಮರೆಮಾಚಿಕೊಂಡು ಒಳಗೆ ಹೋದಳು. ತುಸು ಹೊತ್ತಿನೊಳಗೆ ಒಂದು ಹೊಸ ಸೀರೆಯನ್ನೂ, ಕಡುಬು ತುಂಡು ಹಾಕಿದ್ದ ಒಂದು ಗುಂಡಾಲವನ್ನೂ, ಹೋಳಿಗೆ ಸುತ್ತಿದ್ದ ಒಂದು ಬಳ್ಳೆಕೀತಿನ ಪೊಟ್ಟಣವನ್ನೂ ತಂದಿತ್ತಳು. ಅದನ್ನೆಲ್ಲ ತೆಗೆದುಕೊಂಡು ಪೀಂಚಲು ಬೇಗ ಬೇಗನೆ ಸರಿದು ಕತ್ತಲೆಯಲ್ಲಿ ಕರಗಿಹೋದಳು.

ಚಿನ್ನಮ್ಮ ತನ್ನ ಕೋಣೆಗೆ ಹಿಂದಕ್ಕೆ ಹೋಗಿ ನೋಡುತ್ತಾಳೆ, ನಾಗಕ್ಕ ಹೊಸಸೀರೆ ಉಟ್ಟುಕೊಂಡಿಲ್ಲ; ಸಂದೂಕವನ್ನೂ ಮುಚ್ಚಿ ಅದರ ಮೇಲೆ ಕೂತಿದ್ದಾಳೆ, ಕಾಲು ಇಳಿಬಿಟ್ಟುಕೊಂಡು. ಚಿನ್ನಮ್ಮನನ್ನು ನೋಡಿದೊಡನೆ ನಾಗಕ್ಕಗೆ ಏನೊ ಅನುಮಾನವಾದಂತಾಗಿ "ಯಾಕೆ, ಚಿನ್ನಮ್ಮ, ಏನೋ ಒಂದು ತರಾ ಮಾಡಿಕೊಂಡೀಯಲ್ಲಾ ಮಖವಾನ?" ಎಂದು ಕೇಳಿ, ತಟಕ್ಕನೆ ಎದ್ದುನಿಂತು ಹತ್ತಿರಕ್ಕೆ ಬಂದಳು.

"ಮತ್ತೆ? ನೀನು ಸೀರೆ ಉಟ್ಟುಕೋ ಅಂದರೆ ಬ್ಯಾಡ ಅಂತಿದ್ದೀಯಲ್ಲಾ?" ಎಂದಾಡಿ ಚಿನ್ನಮ್ಮ ದಿಕ್ಕುತಪ್ಪಿಸಿಯೆಬಿಟ್ಟಳು ನಾಗಕ್ಕಗೆ.

"ಅಯ್ಯೋ, ಪುಣ್ಯಾತಗಿತ್ತಿ, ಅದಕ್ಕೆ ಯಾಕೆ ಅಳುಮಾರೆ ಮಾಡಿಕೊಂಡೀಯಾ?" ಎಂದವಳೆ ಸಂದುಕಿದ ಬಾಗಿಲು ತೆರೆದು, ಚಿನ್ನಮ್ಮ ತನಗಾಗಿ ಅರಿಸಿದ್ದ ಹೊಸ ಸೀರೆಯನ್ನು, ಅಲ್ಲಿಯೆ ಮೂಲೆಯಲ್ಲಿ, ಅವಳೆದುರಿಗೇ ಉಡತೊಡದಿದಳು, ಬಾಗಿಲ ತಾಳ ಭದ್ರವಾಗಿ ಹಾಕಿದೆಯೆ ಎಂಬುದನ್ನು ನೀಡಿಕೊಂಡು...

ನಡು ರಾತ್ರಿಯ ಹೊತ್ತಿಗೆ ದೆಯ್ಯದ ಹರಕೆಯ ಅಡಾವುಡಿಯೆಲ್ಲ ಪೂರೈಸಿ, ಹೊರಗಿನಿಂದ ಬಂದಿದ್ದ ಆಳುಕಾಳುಗಳೆಲ್ಲ ತಿಂದು, ಕುಡಿದು, ತಣಿದು ತೇಗುತ್ತಾ ಹೊರಟು ಹೋದರು, "ನಮ್ಮ ನಾಯಕರನ್ನು ಬಿಟ್ಟರೆ ಇಲ್ಲ" ಎಂದು ತಮ್ಮ ತಮ್ಮೊಳಗೆ ಮೆಚ್ಚುಗೆಯ ಮಾತಾಡಿಕೊಳ್ಳುತ್ತಾ. ಎಂತಹ ಉಸುಬಿನ ಹುಸಿ ತಳಹದಿಯ ಮೇಲೆ ನಾಯಕರ ಔದಾರ್ಯಗೋಪುರ ತತ್ತರಿಸುತ್ತ ನಿಂತಿತ್ತು ಎಂಬುದು ಅವರಿಗೇನು ಗೊತ್ತು?

ಹರಕೆಗೆಂದು ಬಂದಿದ್ದ ಕೆಳವರ್ಗದ ನೆಂಟರೆಲ್ಲರೂ ಒಬ್ಬಿಬ್ಬರು 'ಗಿರಾಸ್ತರು' ವಿನಾ ಎಲ್ಲರೂ ಹೋರಟುಹೋಗಿದ್ದರೂ; 'ಗರ್ತೇರು' ಮಾತ್ರ, ನಾಲ್ಕಾರು ದೂರುದೂರುಗಳ ಹತ್ತಿರದ ಸಂಬಂಧಿಗಳು, ನಾಳೆ ಬೆಳಿಗ್ಗೆ ಹೊರಡುವ ನಿರ್ಣಯ ಮಾಡಿ ಉಳಿದುಕೊಂಡಿದ್ದರು. ಅವರಲ್ಲಿ ಕೆಲವರಿಗೆ ಆಗಲೆ ಔತಣದ ಪರಿಣಾಮ ತೋರತೊಡಗಿದ್ದರಿಂದ ರಾತ್ರಿ ಹೊರಕಡೆಗೆ ಹೋಗಲು ಅನುಕೂಲವಾಗುವಂತೆಯೂ ತೋರತೊಡಗಿದ್ದರಿಂದ ರಾತ್ರಿ ಹೊರಕಡೆಗೆ ಹೋಗಲು ಅನುಕೂಲವಾಗುವಂತೆಯೂ ಮತ್ತೆ ಮತ್ತೆ ಎದ್ದು ವಾಂತಿ ಮಾಡಲು ಹೆಚ್ಚು ಶ್ರಮವಾಗದಂತೆಯೂ ಹಿತ್ತಲು ಕಡೆಗೆ ಹತ್ತಿರದ ಗೃಹಭಾಗದಲ್ಲಿಯೆ ಮಲಗಲು ಸ್ಥಳಾವಕಾಶ ಕಲ್ಪಿಸಿದ್ದರು.

ಪೀಂಚಲು ಸಂಗಡ ಮಾತಾಡಿ ಬಂದ ಮೇಲೆ ಚೆನ್ನಮ್ಮನ ರೀತಿಯಲ್ಲಿ ಏನೊ ಬದಲಾವಣೆಯಾಗಿದ್ದುದನ್ನು ನಾಗಕ್ಕ ಗಮನಿಸಿದ್ದಳು. ಚೆನ್ನಮ್ಮ ಹೇಳಿದಂತೆಲ್ಲ ಮಾಡಿ, ಅವಳ ಮನಸ್ಸನ್ನು ಮೊದಲಿನ ಸ್ಥಿತಿಗೆ ತರಲು ಪ್ರಯತ್ನಿಸುತ್ತಿದ್ದಳು. ಆದರೂ ಅವಲು ಆಗಾಗ ದೀರ್ಘ ಮೌನಿಯಾಗುತ್ತಲೊ, ಬಹಿರ್ವ್ಯಾಪಾರಗಳಲ್ಲಿ ತೊಡಗಿರುವಾಗಲೂ ತಪ್ಪಿ, ತಡವಿ, ತೊದಲಿ, ತನ್ನ ಅಂತರ್ಮುಖಿತ್ವದ ಗುಟ್ಟು ಬಿಟ್ಟುಕೊಡುತ್ತಲೊ ಇರುತ್ತಿದ್ದದನ್ನು ನೋಡಿದ್ದಳು. ಮಲಗಿಕೊಳ್ಳಲು ಹೋಗುವ ಸಮಯ ಬಂದಾಗ, ಚೆನ್ನಮ್ಮ ಎಂದಿನಂತೆ ತನ್ನ ಅಜ್ಜಿಯ ಸಂಗಡ ಮಲಗಲು ಅವಳ ಕೋಣೆಗೆ ಹೊರಟಳು. ನಾಗಕ್ಕ ತಾನೂ ಚಿಕ್ಕಮ್ಮನೂ ಒಟ್ಟಿಗೆ ಚೆನ್ನಮ್ಮನ ಕೋಣೆಯಲ್ಲಿಯೆ ಮಲಗುವ ಸೂಚನೆಯನ್ನೂ ಮುಂದಿಟ್ಟಾಗ ಅವಳು ಎಂದಿನಂತೆ ಯಾವ ಉತ್ಸಾಹವನ್ನೂ ತೋರಿಸದೆ ಉದಾಸಭಾವದಿಂದ "ಅಲ್ಲಿ ಬ್ಯಾರೆ ಯಾರಿಗೊ ನೆಂಟರಮ್ಮೋರಿಗೆ ಹಾಸಗೆ ಹಾಸಿಕೊಟ್ಟಾರೆ ಕಣೇ. ನಾನು ಇವತ್ತು ಅಜ್ಜಿ ಹತ್ರಾನೆ ಮನಗ್ತೀನಿ. ನಿಂಗೂ ನಾಗತ್ತೆಗೂ ಓ ಅಲ್ಲಿ ಕೆಳಗಿನ ದೊಡ್ಡ ಕೋಣೇಲಿ ಹಾಸಿದ್ದಾರೆ" ಎಂದು ಹೇಳಿದಳು.

ಚೆನ್ನಮ್ಮ ಮಲಗಲು ಹೋದ ಮೇಲೆ ನಾಗಕ್ಕ ತನ್ನ ಅತ್ತೆಯನ್ನು ನಿರೀಕ್ಷಿಸುತ್ತಾ ಕಾಯತೊಡಗಿದಳು. ಮನೆ ಒಟ್ಟಿನಲ್ಲಿ ನಿಃಶಬ್ದವಾಗಿತ್ತು. ಅಲ್ಲೊಬ್ಬರು ಇಲ್ಲೊಬ್ಬರು ಗೊರಕೆ ಹೊಡೆಯುವ ಸದ್ದೂ ಕೇಳಿಸತೊಡಗಿತ್ತು. ಹಿತ್ತಲು ಕಡೆ ಬಾಗಿಲಾಚೆ ಯಾರೋ ವಾಂತಿ ಮಾಡಿದ ಸದ್ದು ಒಮ್ಮೆ ಕೇಳಿಸಿತ್ತು. ಮನೆಯ ಹಿಂದಣ ಗುಡ್ಡದ ಕಾಡಿನಲ್ಲಿ ಒಂದು ಕಡವೋ ಕಾಡುಕುರಿಯೋ, ನಾಯಿ ಬೊಗಳಿದಂತೆ, ಆದರೆ ಕೋವಿಯ ಈಡು ಹೊಡೆದಂತೆ ಗಟ್ಟಿಯಾಗಿ, ಅರಚಿದ್ದೂ ಕೇಳಿಸಿತ್ತು. ಸಮಾರಾಧನೆಯ ಎಂಜಲೆಲೆಗಳಿಗೆ ನೆರೆದಿದ್ದ ಮೂಳು ಕುನ್ನಿಗಳ ಕಚ್ಚಾಟವೊ ಆಗಾಗ್ಗೆ ಕಿವಿಗೆ ಬರುತ್ತಿತ್ತು.

ರಾತ್ರಿ ಎಷ್ಟು ಹೊತ್ತಾದರೂ ನಿದ್ರೆ ಮಾಡದೆ ಇರುವುದು ಬಹಳ ಕಾಲದಿಂದ ಅಭ್ಯಾಸವಾಗಿದ್ದ ನಾಗಕ್ಕನಿಗೆ ಇವತ್ತು ಏಕೋ ಬಹಳ ತೂಕಡಿಕೆ; ಕಣ್ಣು ಪ್ರಯತ್ನಪೂರ್ವಕವಾಗಿ ತೆರೆದಷ್ಟೂ ಮುಚ್ಚಿಕೊಳ್ಳುತ್ತಿತ್ತು. ಕಡೆ ಕಡೆಗೆ ಅಲ್ಲಿಯೆ ಮಲಗಿಕೊಂಡುಬಿಡಲೇ ಎನ್ನಿಸತೊಡಗಿತ್ತು. ಅತ್ತೆ ಎಲ್ಲಿಗೆ ಹೋದಳು? ಯಾರ ಹತ್ತಿರ ಏನು ಹರಟೆ ಪಂಚಾಯಿತಿ ಮಾಡುತ್ತಿದ್ದಾಳೆ? ಅದೇಕೆ ಇಷ್ಟು ತೂಕಡಿಕೆ? ಯಾವತ್ತು ಇಲ್ಲದ್ದು? ಬಹುಶಃ ಆ ದಿನ ಬೆಳಿಗ್ಗೆ ಮುಂಚೆಯಿಂದಲೂ

ನಡೆದೂ ನಡೆದೂ, ಗುಡ್ಡವೇರಿ ಕಣಿವೆಯಿಳಿದು ಕಾಡುದಾಟಿ ಬಂದಿದ್ದ ಬಳಲಿಕೆಯ ಕಾರಣವಾಗಿರ ಬಹುದಲ್ಲವೆ? ಅವಳು ಕಳ್ಳು ಹೆಂಡಗಳನ್ನೂ ಕಡುಬು ತುಂಡಿನ ಜೊತೆ ಚೆನ್ನಾಗಿಯೆ ಕುಡಿದಿದ್ದಳು. ತನ್ನ ಅತ್ತೆ ಬೇರೆ ತನ್ನ ಪಕ್ಕದಲ್ಲಿ ಕುಳಿತುಕೊಂಡು ನಂಟರಿಗೆ ಉಪಚಾರ ಮಾಡುವಂತೆ ತನಗೆ ಬೇಡವೆಂದರೂ ಕಳ್ಳು ಹೆಂಡಗಳನ್ನು ದೊನ್ನೆಗೆ ಬೊಗಿಸಿದ್ದಳು. ಅವಳೂ, ಅಳತೆ ಮೀರಿಯೆ ಎಂದು ತೋರುತ್ತದೆ, ಕುಡಿದಿದ್ದಳು. ಇಲ್ಲದಿದ್ದರೆ ಇಂತಹ ತೂಕಡಿಕೆ, ಇಂತಹ ನಿದ್ದೆ ಎಲ್ಲಿಂದ ಬರಬೇಕು?

"ನಾಗೂ, ಮನಗಾಕ್ಕೆ ಬರಾದಿಲ್ಲೇನೆ?" ಎಂದು ತನ್ನ ಬಳಿಯೆ ನಿಂತು ನಾಗತ್ತೆ ಕರೆದಾಗಲೆ ಬೆಚ್ಚಿಬಿದ್ದು ಎಚ್ಚೆತ್ತುಕೊಂಡು ಎದ್ದು ನಿಂತಳು.

"ಎಚ್ಚರ ಮಾಡಿಕೊಳ್ಳೆ. ಹೊಂಗಿಬಿದ್ದೀಯಾ? ಬಾ!"

ನಾಗತ್ತೆಯ ಹಿಂದೆ ಹೋಗಿ ಒಂದು ದೊಡ್ಡ ಕೋಣೆಯಲ್ಲಿ ಹಾಸಿದ್ದ ಹಾಸಗೆಯ ಮೇಲೆ ಮಗ್ಗುಲಾಗಿದ್ದಳೊ ಇಲ್ಲವೊ ಗಾಢ ನಿದ್ರೆಗೆ ಅದ್ದಿಹೋಗಿದ್ದಳು ನಾಗಕ್ಕ. ಬಾಗಿಲು ಮುಚ್ಚಿ, ತಾಳ ಹಾಕಿಕೊಂಡು ಬಂದು, ದೀಪ ಆರಿಸಿ ನಾಗಕ್ಕನ ಒತ್ತಿನಲ್ಲಯೆ ಮಲಗಿದಳು ನಾಗತ್ತೆ.

ಮಲಗುವ ಮುನ್ನ ನಾಗಕ್ಕನ ಪ್ರಜ್ಞೆ ಎಂದಿನಂತೆ ಎಚ್ಚತ್ತಿದ್ದರೆ, ಅವಳಿಗೆ ಅಚ್ಚರಿಯಾಗುತಿತ್ತು, ತನಗಾಗಿ ಹಾಸಿದ್ದ ಹಾಸಗೆಯನ್ನು ನೋಡಿ! ಒಂದು ಚಾಪೆ, ಒಂದು ಕಂಬಳಿ, ಹೆಚ್ಚು ಎಂದರೆ ಒಂದು ಸಣ್ಣ ಜಮಖಾನ, ಇಷ್ಟರ ಮಿತಿಗೆ ಹಿಂದೆಂದೂ ಮೀರಿರಲಿಲ್ಲ ತನಗೆ ಮಲಗಲು ಒದಗುತ್ತಿದ್ದ ಹಾಸಗೆಯ ವೈಭವ. ಇವತ್ತು ದಪ್ಪನೆಯ ಹತ್ತಿಯ ತಡಿಯಮೇಲೆ ಬಿಳಿಯ ಮಗ್ಗುಲುಹಾಸಗೆ ಹಾಸಿತ್ತು. ಕಂಬಳಿಗೆ ಬದಲಾಗಿ ಒಂದು ಶಾಲು ಇತ್ತು. ಮೃದುವಾಗಿ ಶುಚಿಯಾಗಿದ್ದ ತಲೆದಿಂಬು ಬೇರೆ!

ನಾಗತ್ತೆಗೆ ಇನ್ನೂ ನಿದ್ದೆ ಬಂದಿರಲಿಲ್ಲ. ಬೇಗ ನಿದ್ದೆ ಬರುವಂತಹ ಮನಃಸ್ಥಿತಿಯಲ್ಲಿಯೂ ಅವಳು ಇರಲಿಲ್ಲ. ತಾನು ಹೂಡಿದ್ದ ಸಂಚಿನ ಸಫಲತೆಗಾಗಿ ಅವಳ ಜೀವ ಕಾತರಿಸಿತ್ತು. ಅಷ್ಟರಲ್ಲಿ, ಮುಚ್ಚಿ ತಾಳಹಾಕಿ ಭದ್ರಮಾಡಿದ್ದ ಬಾಗಿಲಮೇಲೆ ಆಚೆಕಡೆಯಿಂದ ಯಾರೋ ಕೈ ಆಡಿಸಿದ ಸದ್ದಾಯಿತು. ಅವಳೂ ಅದನ್ನೆ ನಿರೀಕ್ಷಿಸುತ್ತಿದ್ದಳು; ಆದರೆ ಅಷ್ಟು ಬೇಗನೆ ಅಲ್ಲ! ವೆಂಕಪ್ಪನಾಯಕರ ಕಾಮಾತುರತೆ ಪ್ರಕಟವಾಗಿದ್ದ ಆ ಅಶ್ಲೀಲ ತರಾತುರಿಗೆ ನಾಗತ್ತೆಯೂ ಸಿಡುಕಿದಳು "ಈ ಎಂಕಟಣ್ಣಗೆ ಏನು ಅವಸರಾನೊ? ಒಂದು ಗಂಟೆನಾದ್ರೂ ಬಿಟ್ಟು ಬಾ ಅಂದೀನಿ! ಅಷ್ಟರಲ್ಲಿಯೆ ಓಡಿ ಬಂದಾನೆ?"

"ನಾಗೂ, ನಾಗೂ, ನಿದ್ದೆ ಬಂತೇನೆ?" ಮೆಲ್ಲಗೆ ಕರೆದಳು. ಸೊಸೆಯ ಉಸಿರಾಟದಿಂದಲೆ ಅವಳಿಗೆ ಗೊತ್ತಾಯಿತು, ತಾನು ಕಳ್ಳಿನಲ್ಲಿ ಹಾಕಿಕೊಟ್ಟಿದ್ದ ಮದ್ದು ಚೆನ್ನಾಗಿ ಕೆಲಸಮಾಡುತ್ತಿದೆ ಎಂದು. ಮೈಯ ಮುಟ್ಟಿ ಅಲುಗಾಡಿಸಿಯೂ ನೋಡಿ ಖಾತ್ರಿ ಮಾಡಿಕೊಂಡಳು. ಒಂದು ಗಂಟೆಯಾದರೂ ತಾನೂ ಆ ಮೆತ್ತನೆಯ ಹಾಸಗೆಯಲ್ಲಿ ಪವಡಿಸುತ್ತೇನೆ ಎಂದು ಹಾರೈಸಿದ್ದಳು. ಅದಕ್ಕೂ ಭಂಗಬಂದಿತ್ತು! " ಎಷ್ಟು ಬೇಗ ಬಂದು ಬಿಟ್ಟಿದಾನೆ ಈ ಎಂಕಟಣ್ಣ?"

ಕತ್ತಲೆ, ಕಗ್ಗತ್ತಲೆ, ಕವಿದಿತ್ತು ಕೋಣೆಯಲ್ಲಿ. ನಾಗತ್ತೆ ಎದ್ದಳು. ಕೈ ಅಂದಾಜಿನಿಂದಲೆ ತಡುವುತ್ತಾ ಬಾಗಿಲೆಡೆಗೆ ಬಂದು, ಸದ್ದಾಗದಂತೆ ತಾಳ ತೆಗೆದಳು. ಬಾಗಿಲು ಮೆಲ್ಲನೆ ಅರೆ ತೆರೆಯಿತು. ಏನೋ ಪಿಸುಮಾತು! ನಾಗತ್ತೆ ಹೊರಕ್ಕೆ ಹೋದಳು! ವೆಂಕಟಣ್ಣ ಒಳಗೆ ಹೋಗಿ ಸದ್ದಾಗದಂತೆ ಬಾಗಿಲು ಮುಚ್ಚಿ, ತಾಳ ಹಾಕಿಕೊಂಡನು!

ಆ ಇರುಳು ಎಂತಹ ಮಧುರಾನುಭವದ ಎಂತಹ ಸವಿಗನಸು ಬಿತ್ತೊ ನಾಗಕ್ಕಗೆ!

* * *

## ೧೧

೧೮೯೩ ನೆಯ ಇಸವಿ ಸೆಪ್ಟೆಂಬರು ೧೧ನೆಯ ತೇದಿ ಸೋಮವಾರ ತೀರ್ಥಹಳ್ಳಿಯ ಪಾದ್ರಿ ಅಥವಾ ಉಪದೇಶಿ ಜೀವರತ್ನಯ್ಯ ಕಾಡುದಾಟಿ, ಆಗತಾನೆ ಕಳೆಕಿತ್ತು ತೆವರು ಕುಯ್ಲಾಗಿದ್ದ ಗದ್ದೆಕೋಗಿನ ಅಂಚುಗಳನ್ನು ಹತ್ತಿ ಹಾರಿ, ತೋಟದ ಬೇಲಿಯ ತಡಬೆಯನ್ನು ಎಚ್ಚರಿಕೆಯಿಂದ ಏರಿ ಇಳಿದು, ಅಡಕೆ ಮರದ ಸಾರದ ಮೇಲೆ ಅಡೆಹಳ್ಳವನ್ನು ಉತ್ತರಿಸಿ, ಮನೆಯೆಡೆಯ ಕಣದ ಬೇಲಿಯೊಡ್ಡಿಗೆ ಹಾಕಿದ್ದ ಉಣುಗೋಲನ್ನು ಸರಿಸಿ, ಸಿಂಧುವಳ್ಳಿ ಮನೆಗೆ ಪ್ರವೇಶಿಸಿದಂದು ತಾನು ಎಂತಹ ಲೋಕಪ್ರಸಿದ್ಧವಾಗಲಿರುವ ಜಗದ್ ಭವ್ಯ ಮಹದ್‌ಘಟನೆಯೊಂದರೊಡನೆ ಪ್ರತಿಸ್ಪರ್ಧಿಯಾಗಿದ್ದೇನೆ ಎಂಬುದನ್ನು ಅರಿತಿರಲಿಲ್ಲ: ಆ ದಿನವೆ ಕ್ರೈಸ್ತಮತ ಶ್ರದ್ಧೆಯ ಮತ್ತು ಮಿಶನರಿ ಮತಾಂಧತೆಯ ಶಕ್ತಿ ಕೇಂದ್ರವಾಗಿದ್ದ ಅಮೆರಿಕಾ ದೇಶದ ಚಿಕಾಗೊ ನಗರದಲ್ಲಿ ನೆರೆದಿದ್ದ ಸರ್ವಧರ್ಮಸಮ್ಮೇಳನದಲ್ಲಿ ಸ್ವಾಮಿ ವಿವೇಕಾನಂದರು ಹಿಂದೂಧರ್ಮದ ಮತ್ತು ವೇದಾಂತ ದರ್ಶನದ ಮಹೋನ್ನತಿಯನ್ನೂ ವಿಶ್ವ ವೈಶಾಲ್ಯವನ್ನೂ ತಮ್ಮ ಸಿಂಹಕಂಠದಿಂದ ಘೋಷಿಸಿದ್ದರು! ಅದನ್ನು ಆಲಿಸಿದ್ದ ಅನ್ಯಧರ್ಮೀಯ ವಿದ್ವಜ್ಜನಸಮೂಹವು ಆನಂದೋನ್ಮತ್ತವಾಗಿ ಜಯಘೋಷ ಮಾಡಿತ್ತು! ಹಿಂದೂಧರ್ಮ ಮತ್ತು ವೇದಾಂತ ದರ್ಶನದ ದಿಗ್ವಿಜಯಧ್ವಜ ಗಗನಚುಂಬಿಯಾಗಿ ಏರಿ ಹಾರಿ ಲೋಕಲೋಚನಗಳನ್ನೆ ಬೆರಗುಗೊಳಿಸಿತ್ತು! ವಿಂಧ್ಯ ಹಿಮಾಚಲ ಸಹ್ಯಾದ್ರಿಗಳಲ್ಲಿಯೂ ಆ ದಿವ್ಯಧ್ವನಿ ಅನುಕರಣಿತವಾಗಿತ್ತು!

ಆಗಿತ್ತೆ? ಎಲ್ಲಿ ಆಗಿತ್ತು? ಹಾಗಿದ್ದರೆ ಉಪದೇಶಿ ಜೀವರತ್ನಯ್ಯ ಸಿಂಧುವಳ್ಳಿ ಚೆನ್ನಪ್ಪಗೌಡರನ್ನು ಕಿಲಸ್ತರ ಜಾತಿಗೆ ಸೇರಿಸಲು ಎಂದಿಗಾದರೂ ಸಾಧ್ಯವಾಗುತ್ತಿತ್ತೇ? ನಿಜ, ಅವರಿನ್ನೂ ಸೇರಿರಲಿಲ್ಲ: ಆದರೆ, ದೀವದಾನೆ ಕಾಡಾನೆಯನ್ನು ಆಕರ್ಷಿಸಿ ಖೆಡ್ಡಾಕ್ಕೆ ಕೆಡಹಲು ಪ್ರಯತ್ನಿಸುವಂತೆ, ಪಾದ್ರಿ ಜೀವರತ್ನಯ್ಯ ಚೆನ್ನಪ್ಪನ ಕಾಲಡಿಯ ಕುರುಡು ಆಚಾರ ಮತ್ತು ಮೂಢ ನಂಬಿಕೆಗಳ ಭೂಮಿಯನ್ನು ಸಡಿಲಗೊಳಿಸಿ, ಅಗೆದು ತೆಗೆದು, ಕ್ರೈಸ್ತ ಮತದ ಖೆಡ್ಡಾಕಂದಕವನ್ನು ಮೆಲ್ಲಗೆ ನಿರ್ಮಿಸುತ್ತಿದ್ದನು.

ಅತ್ತ ಉತ್ತರಾರ್ಧಗೋಲದ ಬಹುದೂರ ಸಾಗರದಾಚೆಯ ಒಂದು ಆಧುನಿಕ ನಾಗರಿಕತೆಯ ಮತ್ತು ವೈಜ್ಞಾನಿಕ ಪ್ರಗತಿಯ ಶ್ರೀಮಂತ ದೇಶದಲ್ಲಿ ಪ್ರಪ್ರಾಚೀನ ಭಾರತ ಸಂಸ್ಕೃತಿಯ ಸರ್ವೋತ್ತಮ ಪ್ರತಿನಿಧಿಯೊಬ್ಬನು ವೇದಾಂತ

ದರ್ಶನದ ಮೇಲೆ ನಿಂತಿರುವ ಸನಾತನ ಹಿಂದೂಧರ್ಮದ ಸರ್ವೋತ್ಕೃಷ್ಟತೆಯನ್ನು ಅಧಿಕಾರವಾಣಿಯಿಂದ ಪ್ರಸಾರ ಮಾಡುತ್ತಿದ್ದಾಗಲೆ, ಅದನ್ನೆಲ್ಲ ಸದ್ದುಗದ್ದಲವಿಲ್ಲದೆ ಮೂದಲಿಸುವಂತೆ, ಯಃಕಶ್ಚಿತ ಪಾದ್ರಿಯೊಬ್ಬನು - ಅದರಲ್ಲಿಯೂ ನೇಟಿವ್ ಪಾದ್ರಿ - ಘೋರಾರಣ್ಯ ಮಯವಾದ ಸಹ್ಯಾದ್ರಿ ಶ್ರೇಣಿಯ ಮಲೆನಾಡಿನ ಕೊಂಪೆಯ ಅಜ್ಞ ಬೇಸಾಯಗಾರನೊಬ್ಬನಿಗೆ ಹಿಂದೂಧರ್ಮದ ಅನಾಚಾರ, ಅವಿವೇಕ, ಸಂಕುಚಿತ ಮನೋಭಾವ, ಜಾತಿ ಮತ ಪಕ್ಷಪಾತ, ಬ್ರಾಹ್ಮಣರ ತಿರಸ್ಕಾರ, ಶೂದ್ರರ ದೈನ್ಯ, ಅಧೋಗತಿ, ಕಲ್ಲು ಮಣ್ಣು ಪರೋಪಕಾರ, ಪರಾನುಕಂಪನ ನೀತಿ, ತ್ಯಾಗ, ಭಕ್ತಿ, ಉದ್ಧಾರಕ ಸಾಮರ್ಥ್ಯ ಇತ್ಯಾದಿಗಳನ್ನೂ - ಕುರಿತು ಮನಮುಟ್ಟುವಂತೆ ಉಪದೇಶ ಮಾಡುತ್ತಿದ್ದನು, ಗೌಡನ ಮನೆಯ ಚಾವಡಿಯಲ್ಲಿಯೆ ಕುಳಿತು, ಅವನ ಗದ್ದೆ, ತೋಟ, ಅಂಗಳದ ತೊಳಸಿಕಟ್ಟೆಯ ದೇವರು ಮತ್ತು ಎದುರಿಗೇ ಕಾಣುತ್ತಿದ್ದ ಭೂತದ ಬನ - ಇವುಗಳ ಇದಿರಿನಲ್ಲಿಯೆ!

ಅಮೆರಿಕಾದ ಚಿಕಾಗೊ ಬಹುದೂರದಲ್ಲಿದ್ದಿರಬಹುದು? ವಿವೇಕಾನಂದರ ಉತ್ತಾಲ ಧ್ವನಿ ಮಲೆನಾಡಿನ ಕೊಂಪೆಗೆ ಮುಟ್ಟದಿದ್ದಿರಬಹುದು? ಆದರೆ ಸಮೀಪದಲ್ಲಿಯೆ ಇದ್ದುವಲ್ಲ - ಶೃಂಗೇರಿ, ಧರ್ಮಸ್ಥಳ, ಉಡುಪಿ ಇತ್ಯಾದಿ ಪವಿತ್ರಕ್ಷೇತ್ರಗಳ ಗುರುಪೀಠಗಳು? ಅವೇನು ಮಾಡುತ್ತಿದ್ದವು? ಅದ್ವೈತ ತತ್ತ್ವದಿಂದ ಬೌದ್ಧಧರ್ಮವನ್ನೆ ಭರತವರ್ಷದಿಂದ ಅಟ್ಟಿ ವೈದಿಕ ಧರ್ಮಸ್ಥಾಪನೆ ಮಾಡಿದನೆಂದು ಹೇಳಲಾಗುತ್ತಿರುವ ಆಚಾರ್ಯ ಶಂಕರನ ಮೂಲ ಪೀಠದಲ್ಲಿ ವಿರಾಜಮಾನರಾಗಿದ್ದ ಸನ್ಯಾಸಿವರೇಣ್ಯರು ಏನು ಮಾಡುತ್ತಿದ್ದರು?

ಅಜ್ಞರೂ ಮೌಢ್ಯಾಂಧರೂ ಆಗಿದ್ದ ಶೂದ್ರವರ್ಗದ ಸಾಮಾನ್ಯ ಜನರಿಂದ ಪಾದ ಪೂಜೆ ಮಾಡಿಸಿಕೊಳ್ಳುತ್ತಿದ್ದರು; ಅಡ್ಡಪಲ್ಲಕ್ಕಿ ಸೇವೆ ಸಲ್ಲಿಸಿಕೊಳ್ಳುತ್ತಿದ್ದರು; ದಾನ, ದಕ್ಷಿಣೆ, ಸಾಷ್ಟಾಂಗ ನಮಸ್ಕಾರಗಳನ್ನೂ ಸ್ವೀಕರಿಸುತ್ತಿದ್ದರು. ಆಶೀರ್ವಾದ ಮಾಡುತ್ತಿದ್ದರು! ತಮ್ಮ ತಮ್ಮ ಪಂಗಡಕ್ಕೆ ಸೇರಿದ ಬ್ರಾಹ್ಮಣೋತ್ತಮರಿಗೆ, ಭೂಸುರರಿಗೆ, ಸಮಾರಾಧನೆ ಮಾಡಿಸಿ ಹೊಟ್ಟೆ ತುಂಬಿಸುತ್ತಿದ್ದರು. ಬಹುಶಃ ಶಾಸ್ತ್ರಕ್ಕಾಗಿ, ತಮ್ಮ ವರ್ಗಕ್ಕೆ ಸೇರಿದ ವಿದ್ವಾಂಸರನ್ನು ನೆರಪಿ ವಾಕ್ಯಾರ್ಥ ಏರ್ಪಡಿಸುತ್ತಿದ್ದರೂ ಇರಬಹುದು. ಶೂದ್ರರು ವೇದೋಪನಿಷತ್ತುಗಳನ್ನು ಓದುವುದಿರಲಿ, ಕೇಳಿದರೂ ಅವರ ಕಿವಿಗೆ ಸೀಸ ಕರಗಿಸಿ ಹೊಯ್ಯುವ ನರಕ ಶಿಕ್ಷೆಯನ್ನು ವಿಧಿಸಿ, ಅದಕ್ಕೆ ಮನುಧರ್ಮಶಾಸ್ತ್ರವೆಂದು ಹೆಸರಿಟ್ಟವರು ಶೂದ್ರರಿಗೆ ವೇದಾಂತಬೋಧನೆ ಮಾಡುವ ಪಾಪಕ್ಕೆ ಏಕೆ ಪಕ್ಕಾಗುತ್ತಾರೆ?

ಕಾವಲಿಲ್ಲದ ಕೋಟೆಗೆ ನುಗ್ಗಲು ಶತ್ರುವಿಗೆ ಸೈನ್ಯ ಬೇಕೆ? ರಕ್ಷಕರಿಲ್ಲದ ದುರ್ಗವನ್ನು ಗೆಲ್ಲಲು ನಿಪುಣ ಸೈನಿಕನೊಬ್ಬನಾದರೂ ಸಾಕು! ತಮ್ಮ ಧರ್ಮದ ವಿಚಾರವಾದ ಯಾವ ಬುದ್ಧಿಪೂರ್ವಕ ಜ್ಞಾನವೂ ಇಲ್ಲದೆ, ಪರಂಪರಾಗತವಾದ ಅಂಧ ವಿಚಾರ ಸಮೂಹಗಳನ್ನೆ ತತ್ತ್ವಗಳೆಂದು ನಂಬಿ, ಆಲೋಚನಾಶಕ್ತಿ ಲವಲೇಶವೂ ಇಲ್ಲದಿದ್ದವರನ್ನು, ಜಡಬುದ್ಧಿಗಳನ್ನು, ಮತಾಂತರಗೊಳಿಸುವುದು ಸುಲಭವಲ್ಲ; ಆದರೆ ಜಡಬುದ್ಧಿಗಳಾಗದೆ ತುಸು ಮಟ್ಟಿಗೆ ಜಾಗ್ರತಮತಿಗಳಾಗಿಯೂ ತಮ್ಮ ಮತ ಧರ್ಮದ ಸನಾತನ ಮೂಲ ತತ್ತ್ವಗಳನ್ನರಿಯದವರ ನಂಬಿಕೆಗಳನ್ನು ಅಲ್ಲಾಡಿಸುವುದು ಅಷ್ಟೇನು ಕಷ್ಟವಲ್ಲ. ಪಾದ್ರಿ ಜೀವರತ್ನಯ್ಯ ಮಲೆನಾಡಿನ ಗೌಡರುಗಳಲ್ಲಿ ಅಂಥವರನ್ನೆ ಪತ್ತೆಹಚ್ಚಿ ತನ್ನ ಕೆಲಸಕ್ಕೆ ಕೈ ಹಾಕಿದ್ದನು. ಸಿಂಧುವಳ್ಳಿ ಚಿನ್ನಪ್ಪನೆ ಪಾದ್ರಿಯ ಮೊತ್ತಮೊದಲನೆಯ ಬೇಟೆಯಾಗಿದ್ದನು.

ಈ ಕಥೆ ನಡೆಯುತ್ತಿದ್ದ ಕಾಲಕ್ಕೆ ಸುಮಾರು ಎರಡು ಮೂರು ವರ್ಷಗಳ ಹಿಂದೆ, ಅಂದರೆ ಸ್ವಾಮಿ ವಿವೇಕಾನಂದರು ಭರತಖಂಡಕ್ಕೆ ಹಿಂದಿರುಗಿ ಕೊಲಂಬೊ ಇಂದ ಅಲ್ಮೋರದವರೆಗೂ ಭಾಷಣಯಾತ್ರೆ ಮಾಡಿ, ರಾಷ್ಟ್ರದ ಕುಂಡಲಿನೀ ಶಕ್ತಿಯನ್ನ ಉದ್ಬೋಧನಗೊಳಿಸಿದ ಕಾಲಕ್ಕೂ ನಾಲ್ಕಾರು ವರ್ಷಗಳ ಪೂರ್ವದಲ್ಲಿ ಇರಬಹುದು ಒಂದು ದಿನ ಬೈಗಿನ ಹೊತ್ತಿನಲ್ಲಿ ಬೆಟ್ಟಳ್ಳಿ ದೇವಯ್ಯ ಗದ್ದೆ ಕೆಲಸದ ಮೇಲ್ವಿಚಾರಣೆ ಮುಗಿಸಿ, ಆಳುಗಳಿಗೆ ಬತ್ತ, ಉಂಡಿಗೆ, ಎಲಡಿಕೆ, ಹೊಗೆಸೊಪ್ಪು, ಉಪ್ಪು, ಮೆಣಸಿನಕಾಯಿಗಳನ್ನು ಪಡಿಕೊಡಲು ಅವರೊಡನೆ ಮನೆಗೆ ಹಿಂದಿರುಗುತ್ತಿದ್ದಾಗ, ಯಾರೊ ಇಬ್ಬರು, ಹಕ್ಕಲ ಕಡೆಯಿಂದ ಇಳಿಯುವ ಕಾಲುದಾರಿಯಲ್ಲಿ, ಮನೆಯ ಕಡೆಗೆ ಬರುತ್ತಿದ್ದನ್ನು ಕಂಡು, ನಿಂತು, ನೋಡತೊಡಗಿದನು.

ಅವರು ಸ್ವಲ್ಪ ಸಮೀಪಿಸಿದಾಗ ಮುಂದೆ ಬರುತ್ತಿದ್ದವನು ಸಿಂಧುವಳ್ಳಿ ಚೆನ್ನಪ್ಪನೆಂದು ಗುರುತುಹಿಡಿದನು. ಹತ್ತಿರದ ನಂಟನಾಗಿ ಬಾಲ್ಯದಿಂದಲೂ ಸುಪರಿಚಿತನಾಗಿದ್ದ ಅವನು ಥಕ್ಕನೆ ಗುರುತುಸಿಗದಷ್ಟು ಮಟ್ಟಿಗೆ ವೇಷ ಭೂಷಣಗಳಲ್ಲಿ ಬದಲಾವಣೆ ಹೊಂದಿದ್ದನು. ಬೆಳ್ಳಗೆ ಮಡಿಯಾಗಿದ್ದ ಪಂಚೆ ಕಚ್ಚೆ ಹಾಕಿದ್ದನು. ಆಗತಾನೆ ಪೇಟೆಗಳಲ್ಲಿ ರೂಢಿಗೆ ಬರುತ್ತಿದ್ದ ಬನೀನು ತೊಟ್ಟು, 'ಅಂಗಿಕೋಟು' ಹಾಕಿದ್ದನು. ಕಾಲಿಗೆ ಶಿವಮೊಗ್ಗದ ಕಡೆಯ ಮೆಟ್ಟು ಹಾಕಿದ್ದನು. ಆದರೆ ಎಲ್ಲಕಿಂತಲೂ ಹೆಚ್ಚಾಗಿ ಕ್ರಾಂತಿಕಾರಕವಾಗಿ ಕಂಡಿದ್ದೆಂದರೆ, ಲಾಳಾಕಾರವಾಗಿ ಮುಂದಲೆ ಚೌರ ಮಾಡಿಸಿ ಕಟ್ಟಿರುತ್ತಿದ್ದ ಜುಟ್ಟಿಗೆ ಬದಲಾಗಿ ಬಿಟ್ಟಿದ್ದ 'ಕಿರಾಪು'! ಹಣೆಯಂತೂ ಸಾಬರ ಹಣೆಯ ಹಾಗೆ ಬೋಳಾಗಿ, ಹಿಂದೆ, ಅನಿವಾರ್ಯವಾಗಿ, ಊಟ ಪೂರೈಸಿದ್ದಕ್ಕೆ ಚಿಹ್ನೆಯಾಗಿರುತ್ತಿದ್ದ ಕೆಂಪುನಾಮವೂ ಇರಲಿಲ್ಲ! ಕಿವಿಗಳಲ್ಲಿರುತ್ತಿದ್ದ ಒಂಟಿಗಳೂ ಗೈರುಹಾಜರಾಗಿದ್ದವು!

ಚೆನ್ನಪ್ಪ ತನ್ನೊಡನೆ ಬರುತ್ತಿದ್ದವರನ್ನು ಪರಿಚಯ ಮಾಡಿಕೊಟ್ಟನು: "ಇವರು ಜೀವರತ್ನಯ್ಯ, ತೀರ್ಥಹಳ್ಳಿಯ ಪಾದ್ರಿಗಳು! 'ಉಪದೇಶಿ' ಅನ್ನುತ್ತಾರೆ!"

ಸಿಂಧುವಳ್ಳಿ ಚೆನ್ನಪ್ಪನನ್ನು ದೀವದಾನೆಯನ್ನಾಗಿ ಪಳಗಿಸಿಕೊಂಡ ಮೇಲೆ ಅವನ ಮುಖಾಂತರವಾಗಿ ಪಾದ್ರಿ ಇತರ ದೊಡ್ಡ ದೊಡ್ಡ ಗೌಡರ ಮನೆಗಳಿಗೆ ಹೋಗಿ ಅವರ ಪರಿಚಯ ಸ್ನೇಹಗಳನ್ನು ಸಂಪಾದಿಸತೊಡಗಿದ್ದನು. ಆ ಸ್ನೇಹಕ್ಕೆ ಪ್ರತಿರೂಪವಾಗಿಯೆ ಪಾದ್ರಿಯಿಂದ ಅನಕ್ಷರರಾದ ಗೌಡರುಗಳಿಗೆ ಒದಗುತ್ತಿದ್ದ ಸಹಾಯವೆಂದರೆ, ಹಳೆಯ ರಾಜ್ಯಗಳಳಿದು ಬ್ರಿಟಿಷ್ ಚಕ್ರಾಧಿಪತ್ಯ ಸುಭದ್ರವಾಗಿ ಕಾಲೂರುತ್ತಿದ್ದ ಆ ಕಾಲದಲ್ಲಿ ಹೊಸ ಕಾನೂನುಗಳು ಹೊಸ ಹೆಸರಿನ ಅಧಿಕಾರಿಗಳು ಹೊಸ ಹೊಸ ರೂಲೀಸುಗಳು ಜಾರಿಗೆ ಬರುತ್ತಿದ್ದುದರಿಂದ ತಕ್ಕಮಟ್ಟಿಗೆ ಇಂಗ್ಲೀಷ್ ತಿಳಿದಿದ್ದ ಆ ಪಾದ್ರಿ ಸರಕಾರದ ವ್ಯವಹಾರಗಳಲ್ಲಿ ಅವರಿಗೆ ನೀಡುತ್ತಿದ್ದ ನೆರವು. ಹಳ್ಳಿಯವರು ತೀರ್ಥಹಳ್ಳಿಗೆ ಹೋದಾಗ ಆಸ್ಪತ್ರೆ, ಡಾಕ್ಟರು, ಅಮಲ್ದಾರರು, ಪೋಲಿಸಿನವರು, ಪೋಸ್ಟಾಫೀಸು, ಕಾಫಿ, ಹೋಟೆಲ್, ಇಸ್ಕೂಲು ಮುಂತಾದ ತಾವು ಹಿಂದೆಂದೂ ಕೇಳದಿದ್ದ ಭಾಷೆಯ ಹೆಸರುಗಳಿಗೇ ದಿಗಿಲುಪಟ್ಟುಕೊಳ್ಳುತ್ತಿದ್ದಾಗ, ಪಾದ್ರಿಯಿಂದ ಅವರಿಗೆ ತುಂಬಾ ಉಪಕಾರವಾಗುತ್ತಿತ್ತು. ಆ ಅನೂಕೂಲಕ್ಕಾಗಿ ಅವರು ಪಾದ್ರಿಯ ನಿಂದನಾತ್ಮಕವೂ ಆಗಿದ್ದ ಉಪದೇಶವನ್ನೆಲ್ಲ ನಗೆಮೊಗದಿಂದ ಲಘುವಾಗೆಣಿಸಿ ಸಹಿಸಿಕೊಂಡು ಹೋಗುತ್ತಿದ್ದರು. ಪಾದ್ರಿಯೂ ವಯಸ್ಸಾದ ದೊಡ್ಡವರ ಆ ರೀತಿಯ ಅಲಕ್ಷವನ್ನೂ ಮನಸ್ಸಿಗೆ ಹಾಕಿಕೊಳ್ಳುತ್ತಿರಲಿಲ್ಲ, ಏಕೆಂದರೆ, ಅವನಿಗೆ ಗೊತ್ತಿತ್ತು, ತರುಣರು ತನ್ನ ಪ್ರಭಾವಕ್ಕೆ ಕ್ರಮೇಣ ಒಳಗಾಗುತ್ತಾರೆ ಎಂಬ ಸತ್ಯ ಸಂಗತಿ.

ಆ ದಿನ ರಾತ್ರಿ ಊಟದ ಸಮಯ ಬಂದಾಗಲಂತೂ ಬೆಟ್ಟಳ್ಳಿಯ ಮನೆಯಲ್ಲಿ ಒಂದು ಕ್ರಾಂತಿಯ ವಾತಾವರಣವೆ ಏರ್ಪಟ್ಟಿತ್ತು. ಮುಂಡಿಗೆಯ ಮರೆಯಲ್ಲಿ, ಬಾಗಿಲುಸಂದಿಯಲ್ಲಿ, ಅಡಿಗೆಮನೆಯಲ್ಲಿ, ಕೋಣೆಗಳಲ್ಲಿ ಎಲ್ಲೆಲ್ಲಿಯೂ ಗುಸುಗುಸು, ಏನೊ ಅನಿಶ್ಚಯ, ಗಡಿಬಿಡಿ: ರಾಜಕೀಯ ಮಹಾ ಕ್ರಾಂತಿಯ ದಿನದಂದು ಆ ರಾಜ್ಯದ ರಾಜಧಾನಿಯಲ್ಲಿ ನಡೆಯಬಹುದಾದ ಉದ್ವಿಗ್ನ ಪರಿಸ್ಥಿತಿಯಂತೆ!

ಪಾದ್ರಿಯ ಜೊತೆ ಜಗಲಿಯಲ್ಲಿ ಯಜಮಾನರು ಕಲ್ಲಯ್ಯಗೌಡರ ಸಂಗಡ ಅದೂ ಇದು ಮಾತನಾಡುತ್ತಾ ಕುಳಿತಿದ್ದ ಚಿನ್ನಪ್ಪನನ್ನು ಎಕ್ಕಟಿ ಕರೆದು ದೇವಯ್ಯ "ಈಗ ಏನು ಮಾಡೋದೋ?" ಎಂದು ಕೇಳಿದನು.

"ಯಾಕೆ? ಏನು ಸಮಾಚಾರ?" ಪಾದ್ರಿಯನ್ನು ಎಲ್ಲಿ ಕೂರಿಸಿ ಊಟಕ್ಕೆ ಹಾಕುವುದು ಎಂಬ ವಿಚಾರವಾಗಿಯೆ ದೇವಯ್ಯನ ಪ್ರಶ್ನೆ ಎಂದು ಗೊತ್ತಾಗಿದ್ದರೂ ಕೇಳಿದ್ದನು ಚಿನ್ನಪ್ಪ.

"ಅವರಿಗೆ ಎಲ್ಲಿ ಬಳ್ಳೆ ಹಾಕಾದು ಅಂತ ಕೇಳ್ತಾರೆ ಒಳಗೆ."

"ಯಾಕೆ? ನಮ್ಮ ಜೊತೇಲಿ ಕೂರ್ಲಿ!"

"ಥೂ ಥೂ ಥೂ ಥೂ! ಹೊಲೇರಿಗಿಂತಲೂ ಅತ್ತತ್ತ, ಆ ಕಿಲಸ್ತರನ್ನ ಒಳಗೆ ಕೂರಿಸೋದೆ ಸೈ? ಏನೋ ಬಟ್ಟೆಬರಿ ಹಾಕ್ಕೊಂಡು ಬಂದನಲ್ಲಾ ಅಂತ ಜಗಲಿ ಹತ್ತಿಸಿದ್ದು!"

"ಮತ್ತೆಲ್ಲಿ ಕೂರಿಸ್ತಾರಂತೆ?"

"ಹಿತ್ತಲು ಕಡೇಲಿ ಕೂರಿಸಾನ ಅಂತಾ ಹೇಳ್ತಾರೆ ಒಳಗೆ."

"ಹಳೇಪೈಕದವರನ್ನು ಕೂರಿಸೋ ಜಾಗದಲ್ಲಿ?"

"ಹ್ಞೂ!"

"ಏನೋ, ದೇವಯ್ಯ, ನಿನಗೆ ಸ್ವಲ್ಪಾನೂ ದಾಕ್ಷಿಣ್ಯ ಇಲ್ಲ? ಅಮಲ್ದಾರರು ಇನಿಸ್ಪೆಕ್ಟರು ಡಾಕ್ಟರು ಎಲ್ಲ ಅವರನ್ನ ತಮ್ಮ ಪಂಕ್ತೀಲೆ ಕೂರಿಸಿಕೊಂಡು ಊಟ ಮಾಡ್ತಾರೆ; ನಿಮ್ಮ ಮನೇಲಿ ಆ ಗೊಚ್ಚೆವಾಸನೆ ಹಿತ್ತಲು ಕಡೇಲಿ ಬಳ್ಳೆ ಹಾಕಾನ ಅಂತೀಯಲ್ಲಾ!"

"ಕೆಳಜಗಲೀಲಾದ್ರೂ ಹಾಕೋಕೆ ಒಪ್ತಾರಾ? ಕೇಳಿಕೊಂಡು ಬರ್ತೀನಿ" ಎಂದು ದೇವಯ್ಯ ಒಳಗೆ ಹೋಗಿ ಬಂದು "ಏನೇನೊ ಮಾಡಿ ಒಪ್ಪಸ್ದೆ, ಮಾರಾಯ, ಅದಕ್ಕೂ ಬಹಳ ಕಷ್ಟಾನೆ ಆಯ್ತು. ನಮ್ಮ ಅವ್ವ 'ಮೇಲುಪ್ಪರಿಗೇಲಿ ತಿರಪತಿ ಕಾಣ್ಕೆ ಅದೆ. ಜಗಲೀಲಿ ಧರ್ಮಸ್ಥಳದ್ದು ಪ್ರಸಾದ ಕಟ್ಟಿದೆ. ಮನೇಗೆ ಮುಟ್ಟುಚಿಟ್ಟಾದ್ರೆ ಅಣ್ಣಪ್ಪ ದೇವರು ನಮ್ಮ

ಮನೆತನಾನೆ ಅಳಿಸಿಬಿಡ್ತಾನೆ' ಅಂತಾ ಏನೇನೂ ಹೇಳ್ತು" ಎಂದವನು ಕಿಸಕ್ಕನೆ ನಕ್ಕು, ನಿಧಾನವಾಗಿ ವ್ಯಂಗ್ಯಧ್ವನಿಯಿಂದ "ಅಷ್ಟೇ ಅಲ್ಲ; ನಿನಗೂ ಆಯ್ತು, ಸಮಾ!" ಎಂದನು.

"ಏನು ಮಾರಾಯಾ?"

"ಆಮೇಲೆ ಹೇಳ್ತೀನಿ, ಬಾ, ಬಳ್ಳೆಹಾಕಿ ಕಾಯ್ತಿದಾರೆ."

ಸಮಸ್ಯೆ ಅಲ್ಲಿಗೇ ಮುಗಿಯಲಿಲ್ಲ.

ದೇವಯ್ಯನ ತಾಯಿಗೂ ಅವನ ಹೆಂಡತಿಗೂ ಕೆಲವು ವಿವರಗಳ ವಿಚಾರದಲ್ಲಿ ಬಹಳ ಜಿಜ್ಞಾಸೆ ನಡೆಯಿತು. ಊಟಹಾಕುವ ಜಾಗ ನಿರ್ಣಯವಾದ ಮೇಲೆ ಅಡಿಗೆಯ ಆಳೊಬ್ಬನ ಕೈಲಿ ಒಂದು ಮಣೆ ಕೊಟ್ಟು ಕೆಳಜಗಲಿಯ ಮೂಲೆಯಲ್ಲಿ ಅದನ್ನು ಹಾಕಿಸಿದರು. ಆದರ ಸಮೀಪದಲ್ಲಿ ಕವುಚಿಹಾಕಿದ ಒಂದು ಸಿದ್ದೆಯ ಮೇಲೆ ಚಿಮಣಿದೀಪ ಇಡಿಸಿದರು. ಬಾಳೆಎಲೆ ಆರಿಸುವಾಗ ಒಂದು ಸಣ್ಣ ವಿಚಾರಗೋಷ್ಠಿಯೆ ನಡೆಯಿತು. ಕೀತು ಹಾಕುವುದೋ? ಕುಡಿ ಹಾಕುವುದೊ? ಕಂಡು ಹಾಕುವುದೋ? ಕೀತು ಸಣ್ಣದಾಗುತ್ತದೆ; ಕುಡಿಯನ್ನೆ ಹಾಕಿದರಾಯಿತು ಎಂದಳು ದೇವಯ್ಯನ ತಾಯಿ. ಆದರೆ ದೇವಯ್ಯನ ಹೆಂಡತಿ "ಬ್ಯಾಡ, ಅತ್ತೆಮ್ಮ, ಒಂದು ಕಂಡು ಹಾಕಿದರೆ ಆಯಿತು" ಎಂದಳು. ಪಾದ್ರಿಯ ಯೋಗ್ಯತೆಗೆ ಕುಡಿಬಾಳೆಲೆಯ ಸ್ಥಾನಮಾನಗಳು ಮೀರಿದ್ದು ಎಂಬುದು ಅವಳ ಒಳ ಇಂಗಿತವಾಗಿತ್ತು. ಪಾಪ! ಇನ್ನು ಎರಡು ವರ್ಷಗಳ ಒಳಗಾಗಿ, ತನ್ನಿಂದ ತನ್ನ ಗಂಡನನ್ನೆ ಅಪಹರಿಸುವ ಪ್ರಯತ್ನದಲ್ಲಿ, ಪಾದ್ರಿ ತನಗೆ ಎಂತಹ ಸಂಕಟ ತಂದೊಡ್ಡುತ್ತಾನೆ ಎಂಬ ಭವಿಷ್ಯತ್ತು ಅವಳಿಗೆ ಆಗ ಗೊತ್ತಾಗಿದ್ದರೆ, ಆ ವಿಪತ್ತನ್ನು ಕಡಿಮೆ ಮಾಡಿಕೊಳ್ಳಲು ಪ್ರಯತ್ನಿಸುತ್ತಿದ್ದಳೇನೊ, ಕುಡಿಬಳ್ಳೆಯ ಗೌರವವನ್ನೆ ತೋರಿ?

ಬಡಿಸುವ ಸಮಯದಲ್ಲಂತೂ ಒಂದು ವಿಷಯ ಪರಿಸ್ಥಿತಿಯೆ ಒದಗಿತ್ತು. ಮನೆಯ ಹೆಂಗಸರು, ಪಾದ್ರಿಯಿರಲಿ ಚಕ್ರವರ್ತಿಯೆ ಊಟಕ್ಕೆ ಬಂದಿದ್ದರೂ, ಕೀಳು ಜಾತಿಯವರಿಗೆ ಕೈಯಾರೆ  ಅನ್ನ ಇಕ್ಕುವ ಸಂಭವವೆ ಇರಲಿಲ್ಲವಷ್ಟೆ! ಆದರೆ ಆಳುಗಳೂ ಕಿಲಸ್ತರವನಿಗೆ ಕೈಯಾರ ಅನ್ನ ಇಕ್ಕುವ ಸಂಭವವೆ ಇರಲಿಲ್ಲವಷ್ಟೆ! ಆದರೆ ಆಳುಗಳೂ ಕಿಲಸ್ತರವನಿಗೆ ಕೈಯಾರೆ ಬಡಿಸಲು ಒಪ್ಪಲಿಲ್ಲ. 'ದನಾ ತಿನ್ನುವ ಕೀಳುಜಾತಿಗೆ ಕೈಯಿಂದಲೆ ಅನ್ನ ಇಕ್ಕಿ ಅವರ ಎಂಜಲಿನಿಂದ ಮೈಲಿಗೆಯಾಯಿತೆಂದರೆ ಜಾತಿಯವರಾರೂ ತಮ್ಮನ್ನು ಒಳಕ್ಕೆ ಸೇರಿಸುವುದಿಲ್ಲ' ಎಂದು ಬಿಟ್ಟರು. ಕಡೆಗೆ, ಹೊಲೆಯರು ಹಟ್ಟರಿಗೆ ಎಲೆಗೆ ಬಡಿಸುವುದನೆಲ್ಲ ಬಡಿಸಿ ಆ ಎಲೆಯನ್ನೆ ಒಂದು ಮೊರದದಲ್ಲಿಟ್ಟು ಕೊಡುವಂತೆ, ಪಾದ್ರಿಗೂ ಮಾಡಿದರು. ನೀರು ಕುಡಿಯಲು ಕಂಚು ತಾಮ್ರದ ಲೋಟಗಳನ್ನೆ ಎಚ್ಚರಿಕೆಯಿಂದ ಆರಿಸಿಬಿಟ್ಟರು. ಏಕೆಂದರೆ ಅವನ್ನು ಬೆಂಕಿಯಲ್ಲಿ ಸುಟ್ಟು, ಸಗಣಿ ನೀರಿನಲ್ಲಿ  ಅದ್ದಿಟ್ಟು, ಮಡಿಮಾಡಿಕೊಳ್ಳಬಹುದು ಎಂದು. ಊಟಮಾಡಿದ ಮೇಲೆ ಪಾದ್ರಿಯ ಎಲೆಯನ್ನು ತೆಗೆದು ಗೋಮಯ ಹಾಕುವಂತೆಯೂ ಮಾಡಿದ್ದರು.

ಹೀಗೆ ಪ್ರಾರಂಭವಾಗಿತ್ತು, ಎರಡು ವರ್ಷಗಳ ಹಿಂದೆ, ಪಾದ್ರಿ ಜೀವರತ್ನಯ್ಯನ ಮೊದಲನೆಯ ಭೇಟಿ, ಬೆಟ್ಟಳ್ಳಿ ಮನೆಗೆ. ಇದಾದ ಮೇಲೆ ಕೆಲವು ದಿನಗಳಲ್ಲಿ ಯಜಮಾನರು ಕಲ್ಲಯ್ಯಗೌಡರು ತಮ್ಮ ಹಿರಿಯ ಮಗ ದೇವಯ್ಯನೊಡನೆ ತೀರ್ಥಹಳ್ಳಿಗೆ ಕಛೇರಿಯ ಕೆಲಸಕ್ಕಾಗಿ ಹೋಗಿದ್ದರು. ಆಗ ಜೀವರತ್ನಯ್ಯ ಅಧಿಕಾರಿಗಳನ್ನೂ

ಕರಣಿಕ ವರ್ಗದವರನ್ನೂ ತಾನೆ ಕಂಡು ಗೌಡರ ಕೆಲಸ ಬೇಗ ಮುಗಿಯುವಂತೆ ಮಾಡಿದ್ದನು. ಅಲ್ಲದೆ ತಂದೆ ಮಕ್ಕಳಿಬ್ಬರನ್ನೂ ಆಸ್ಪತ್ರೆಯ ಹೆಸರು ಹೊತ್ತಿದ್ದ ಒಂದು ಕಟ್ಟಡಕ್ಕೆ ಕರೆದುಕೊಂಡು ಹೋಗಿ ಅವರ ಮನೆಯ ಹೆಂಗಸರಿಗೆಂದು ಔಷಧಗಳನ್ನೂ ಕೊಡಿಸಿದ್ದನು.

ಬೆಟ್ಟಳ್ಳಿಗೆ ಬರುತ್ತಾ ಹೋಗುತ್ತಾ ಪರಿಚಯ ಸ್ನೇಹಕ್ಕೂ ವಿಶ್ವಾಸಕ್ಕೂ ತಿರುಗಿತು. ದೇವಯ್ಯನ ಮುಖಾಂತರ ಪಾದ್ರಿ ಕೋಣೂರು ಹಳೆಮನೆಗಳಿಗೂ ಭೇಟಿಯಿತ್ತನು. ಹಳೆಮನೆಗೆ ಹೋಗಿದ್ದಾಗಲೆ ಅವನಿಗೆ ಗೊತ್ತಾಗಿದ್ದು, ಸುಬ್ಬಣ್ಣ ಹೆಗ್ಗಡೆಯವರ ದೊಡ್ಡ ಮಗ, ದೊಡ್ಡಣ್ಣ ಹೆಗ್ಗಡೆ, ತಿರುಪತಿಗೆ ಹೋಗಿದ್ದವನು ಹಿಂತಿರುಗಿ ಬಂದಿರಲಿಲ್ಲ ಎಂದು. ದಾರಿಯಲ್ಲಿಯೆ ವಾಂತಿ ಭೇದಿ ರೋಗವಾಗಿ ಸತ್ತುಹೋದನೆಂದು ಕೆಲವರೂ; ಸತ್ತಿರಲಿಲ್ಲ, ಪ್ರಜ್ಞೆ ತಪ್ಪಿದ್ದವನನ್ನು ಸತ್ತನೆಂದು ಭಾವಿಸಿ ರೋಗಕ್ಕೆ ಹೆದರಿ ಬಿಟ್ಟು ಬಂದರೆಂದು ಕೆಲವರೂ; ಪ್ರಜ್ಞೆಯಿಲ್ಲದೆ ಬಿದ್ದಿದ್ದವನನ್ನು ಕಂಡು ಯಾರೊ ಸನ್ನೇಸಿಗಳೊ ಬೈರಾಗಿಗಳೊ ಮದ್ದುಕೊಟ್ಟು ಬದುಕಿಸಿ ತಮ್ಮೊಡನೆ ಕರೆದೊಯ್ದರೆಂದು ಕೆಲವರೂ; ಯಾವುದೊ ಜಾತ್ರೆಯಲ್ಲಿ ಗಡ್ಡಬಿಟ್ಟು ಬೈರಾಗಿಗಳೊಡನೆ ಇದ್ದ ಅವನನ್ನು ಕಂಡೆವೆಂದೂ ಮತ್ತೆ ಕೆಲವರೂ; ನಿಜವೊ? ಸುಳ್ಳೊ? ಊಹಿಸಿಯೊ? ಕತೆಕಟ್ಟಿಯೊ? ನಾನಾ ರೀತಿಯಾಗಿ ವದಂತಿ ಹಬ್ಬಿಸಿದ್ದರು. ಅದನ್ನು ಕೇಳಿ ಪಾದ್ರಿಗೆ ನಿಜವಾಗಿಯೂ ಹೃದಯ ಮರುಗಿತ್ತು. ಅದರಲ್ಲಿಯೂ ಅವನು ದೊಡ್ಡಣ್ಣ ಹೆಗ್ಗಡೆಯ ಹೆಂಡತಿ 'ಹುಚ್ಚು ಹೆಗ್ಗಡಿತಿ' ಯನ್ನು ಕಂಡು ಮಾತನಾಡಿಸಿದ ಮೇಲಂತೂ ದೊಡ್ಡಣ್ಣ ಹೆಗ್ಗಡೆ ಬದುಕಿದ್ದರೆ ಅವನನ್ನು ಹೇಗಾದರೂ ಮಾಡಿ ಪತ್ತೆ ಹಚ್ಚಿ ಕರತರಲೆಬೇಕೆಂದು ತನ್ನ ಕ್ರೈಸ್ತ ಸೌಜನ್ಯಯವನ್ನು ಮಿಶನರಿ ಉತ್ಸಾಹದಿಂದ ಮರೆದಿದ್ದನು. ಆ ಒಂದು ಘಟನೆಯಿಂದಲೆ ಪಾದ್ರಿಯ ವಿಚಾರವಾಗಿದ್ದ ಅನೇಕರ ಸಂಶಯ ಮತ್ತು ದುರಭಿಪ್ರಾಯ ಬದಲಾವಣೆ ಹೊಂದಿತ್ತು.

ದೇವಯ್ಯ ತೀರ್ಥಹಳ್ಳಿಗೆ ಹೋಗಿ ಬಂದಾಗಲೆಲ್ಲ ಏನಾದರೊಂದು ರೀತಿ ಸುಧಾರಿಸಿಯೆ ಬರುತ್ತಿದ್ದನು. ಬಟ್ಟೆಬರೆಗಳಿಗೆ ಅದು ಸೀಮಿತವಾಗಿದ್ದಾಗ ಅವನ ತಾಯಿ ಮತ್ತು ಅವನ ಹೆಂಡತಿ ನಗೆಬೀರಿ ಮೆಚ್ಚಿಗೆ ತೋರಿದ್ದರು. ಹೊಸಹೊಸ ಸಾಮಾನು ತಂದಾಗಲೂ ಯಜಮಾನರು ಹಣದ ದುಂದುಗಾರಿಕೆಯ ವಿಚಾರವಾಗಿ ಭರ್ತ್ಸನೆ ಮಾಡಿದ್ದುಂಟು. ಆದರೆ ಅವನು ಜಗಲಿಯಲ್ಲಿ ತೂಗುಹಾಕಲು ಒಂದು ದೊಡ್ಡ ಗಡಿಯಾರ ತಂದಾಗ, ಆ ನವನಾಗರಿಕತೆಯ ವಸ್ತುವಿಗೆ ಎಲ್ಲರೂ ಅಚ್ಚರಿವೋಗಿ ಬೆರಗಾಗಿದ್ದರು. ಅಂಗಳದ ನೆಳಲನ್ನು ನೋಡಿ ಕಾಲನಿರ್ಣಯಮಾಡಿ ಆಳುಗಳನ್ನು ಬೆಳಿಗ್ಗೆ ಮಧ್ಯಾಹ್ನ ಕೆಲಸಕ್ಕೆ ಕರೆಯುವ ಸಂದಿಗ್ಧತೆ ತಪ್ಪಿತಲ್ಲಾ ಎಂದು ಸಂತೋಷಪಟ್ಟಿದ್ದರು ಕಲ್ಲಯ್ಯಗೌಡರು. ತಾಯಿಗೂ ಮತ್ತು ಹೆಂಡತಿಗೂ ತನ್ನ ಮಗ ಮತ್ತು ಗಂಡ ಎಷ್ಟು ಚೆನ್ನಾಗಿ ಕಾಣಿಸುತ್ತಾನೆ ಹೊಸ ರೀತಿಯ ಹೊಸ ಬಟ್ಟೆ ಹಾಕಿಕೊಂಡು ಎಂದು ಆನಂದವಾಗಿತ್ತು. ಆದರೆ ದೇವಯ್ಯನಲ್ಲಿ ಹೊರನೋಟಕ್ಕೆ ಆಗುತ್ತಿದ್ದ ಬದಲಾವಣೆಗಳಿಗಿಂತಲೂ ಗುರುತರವಾದ ಆಂತರಿಕ ಪರಿವರ್ತನೆಗಳು ನಡೆಯುತ್ತಿದ್ದುವು ಎಂಬುದನ್ನು ಅವರು ಯಾರು ಅರಿಯಲಿಲ್ಲ. ಒಂದು ದಿನ ಅವನು ತೀರ್ಥಹಳ್ಳಿಯಿಂದ ಹಿಂತಿರುಗಿದಾಗ ಜುಟ್ಟು ಬೋಳಿಸಿ ಕಿರಾಪು ಬಿಟ್ಟಿದ್ದನ್ನು ಕಂಡಾಗಲೆ ಅವರಿಗೆ ಹೊರಗಣ ಪರಿವರ್ತನೆಯೂ ಭಯಂಕರವಾಗಿ ಕಾಣಿಸಿದ್ದು!

"ಅಪ್ಪ ಅವ್ವ ಸಾಯೋತನಕ ಕಾಯೋಕಾಗಲಿಲ್ಲವೇನೋ, ಮಗನೆ?" ಎಂದು ತಾಯಿ ಅತ್ತುಕರೆದು ಅನ್ನ ನೀರು ಬಿಟ್ಟಿದ್ದಳು. ಅಪ್ಪ ಅವ್ವ ಸತ್ತಾಗ ಮಾತ್ರ ತಲೆಬೋಳಿಸುತ್ತಿದ್ದುದು ಆಚಾರವಾಗಿತ್ತು. ಈಗ ಕಾರ್ಯವೆ

ನಡೆದುಹೋಗಿದ್ದುದರಿಂದ ಇನ್ನೇನು ಕಾರಣವೂ ನಡೆಯುವುದಕ್ಕೆಂದೇ ಮುನ್‌ಸೂಚಕವಾಗಿ ವಿಧಿ ದೇವಯ್ಯನ ಕೈಲಿ ಆ ಅಧರ್ಮಕಾರ್ಯ ಮಾಡಿಸದೆ ಎಂದು ಭೀತರಾಗಿದ್ದರು.

ದೇವಯ್ಯನ ಹೆಂಡತಿಯೂ ಗಂಡನಿಂದ ಆಗಬಾರದ ಅಮಂಗಳ ಕಾರ್ಯ ಆಗಿಹೋಯಿತಲ್ಲಾ ಎಂದು ಕೋಣೆಬಾಗಿಲು ಹಾಕಿಕೊಂಡು ರೋದಿಸಿ, ದೇವರಿಗೆ ತಪ್ಪುಗಾಣಿಕೆ ಕಟ್ಟಿದ್ದಳು. ಆದರೆ ದಿನಕಳೆದಂತೆಲ್ಲಾ ಅವಳಿಗೆ ಜುಟ್ಟಿಗಿಂತಲೂ ಕ್ರಾಪೇ ತನ್ನ ಗಂಡನಿಗೆ ಲಕ್ಷಣವಾಗಿ ಕಾಣುವಂತೆ ತೋರಿತ್ತು!

ಕ್ರಮೇಣ ದೇವಯ್ಯ ಮಿಂದು, ಉಣ್ಣುವುದಕ್ಕೆ ಹೋಗುವ ಮೊದಲು, ಹಣೆಗೆ ನಾಮ ಇಟ್ಟುಕೊಳ್ಳುವುದನ್ನು ಬಿಟ್ಟಿದ್ದನ್ನೂ, ತುಳಸಿ ಕಟ್ಟೆಗೆ ಸುತ್ತುಬರುವುದೆ ಮೊದಲಾದ ಧಾರ್ಮಿಕಾಚಾರಗಳನ್ನು ತ್ಯಜಿಸಿದ್ದನ್ನೂ, ದೆಯ್ಯ ದ್ಯಾವರು ಸತ್ಯನಾರಾಯಣವ್ರತ ಇವುಗಳನ್ನೆಲ್ಲ ಹೀಯಾಳಿಸತೊಡಗಿದ್ದನ್ನೂ ತಂದೆ ತಾಯಿ ಹೆಂಡತಿಯರಲ್ಲದೆ ನೆಂಟರೂ ಆಳುಕಾಳುಗಳೂ ಗಮನಿಸಿ, ಪಾದ್ರಿ ಮಂಕುಬೂದಿ ಹಾಕಿರಬೇಕೆಂದೂ ಭಾವಿಸಿದ್ದರು. ಕಡೆಕಡೆಗೆ ದೇವಯ್ಯ ಎಲ್ಲ ಆಚಾರವಿಚಾರಗಳಲ್ಲಿಯೂ ವೇಷಭೂಷಣಗಳಲ್ಲಿಯೂ ಸಿಂಧುವಳ್ಳಿ ಚಿನ್ನಪ್ಪನ ಪ್ರತಿಬಿಂಬವೆ ಆಗಿಬಿಟ್ಟಿದ್ದನು.

ಒಂದು ದಿನ ಅವನು ತನ್ನ ಮತಸುಧಾರಣಾ ಕಾರ್ಯದಲ್ಲಿ ಬಹಳ ಮುಂದುವರೆದು ತನ್ನ ಹೆಂಡತಿಯೊಡನೆ ತಮ್ಮ ಕೋಣೆಯಲ್ಲಿ ತುಂಬ ಒರಟಾಗಿ ವರ್ತಿಸಿದ್ದನು:

ದೇವಮ್ಮ (ದೇವಯ್ಯನ ಹೆಂಡತಿಯ ಹುಟ್ಟು ಹೆಸರು ಅವಳ ತವರುಮನೆ ಕೋಣೂರಿನಲ್ಲಿ ಆಕೆಯ ತಂದೆ, ತಾಯಿ, ಅಣ್ಣ ಮೊದಲಾದ ದೊಡ್ಡವರೆಲ್ಲ ಅವಳನ್ನು ಮುದ್ದಿದಾಗಿ 'ಪುಟ್ಟಕ್ಕ' ಎಂದೇ ಕರೆಯುತ್ತಿದ್ದರು. ಅವಳ ತಮ್ಮ ಮುಕುಂದಮ್ಮ 'ಅಕ್ಕಯ್ಯ' ಎಂದು ಕರೆಯುವುದನ್ನು ಅನುಕರಿಸಿ ಚಿಕ್ಕವರೆಲ್ಲರೂ 'ಅಕ್ಕಯ್ಯ' ಎಂದೆ ಹೆಸರಿಸುವುದು ವಾಡಿಕೆಯಾಗಿತ್ತು. ಆದರೆ ಗಂಡನಮನೆಯ ಬೆಟ್ಟಳ್ಳಿಯಲ್ಲಿ ಆಳುಕಾಳುಗಳೆಲ್ಲರೂ ಅವಳನ್ನು ಗೌರವದಿಂದ 'ಕೋಣೂರಮ್ಮ' ಎಂದು ಕರೆಯುತ್ತಿದ್ದರು.) ನಾಗಂದಿಗೆಯಿಂದ ನಾಗಂದಿಗೆಗೆ ಅಡ್ಡಲಾಗಿ ಹಾಕಿದ್ದ ಬಿದಿರ ಗಳುವಿಗೆ ತೂಗುಹಾಕಿದ್ದ ನೇಣುಗಳ ಮೇಲೆ  ನೇತಾಡುತ್ತಿದ್ದ ತೊಟ್ಟಿಲಲ್ಲಿ ಮಲಗಿದ್ದ ತನ್ನ ಐದು ತಿಂಗಳ 'ಬಾಲೆ'ಯನ್ನು ಮಲಗಿಸುತ್ತಿದ್ದಳು. ಬಾಯಿ ಯಾಂತ್ರಿಕವಾಗಿ ಎಂಬಂತೆ ಏನೋ ಹಾಡನ್ನು ಬಹು ಮೆಲ್ಲಗೆ ಗುನುಗುತ್ತಿತ್ತು. ತೊಟ್ಟಿಲನ್ನು ತೂಗುವ 'ಗಿರಕ್ ಗಿರಕ್ ಗಿರಕ್' ಸದ್ದು ಕೋಣೆಯ ನಿಃಶಬ್ದತೆಗೆ ಪೋಷಕವಾಗಿತ್ತು. ಆ ಕೋಣೆಗಿದ್ದ ಎರಡು ಚಿಕ್ಕ ಬೆಳಕಂಡಿಯಲ್ಲಿ ಮೂರು ರೆಕ್ಕೆಗಳನ್ನು ಸಂಪೂರ್ಣವಾಗಿ ಮುಚ್ಚಿದ್ದು, ಮತ್ತೂ ಒಂದನ್ನೂ ಮುಕ್ಕಾಲು ಮುಚ್ಚಿದ್ದುದರಿಂದ ಪದಾರ್ಥಗಳ ಹೊರ ಆಕಾರ ಕಾಣುವಷ್ಟರ ಮಟ್ಟಿಗೆ ಹೌದೊ ಅಲ್ಲವೊ ಎನ್ನುವಷ್ಟು ಬೆಳಕು ಪ್ರವೇಶಿಸುತ್ತಿತ್ತು. ಕಣ್ಣಿಗೆ ತಂಪಾಗಿತ್ತು, ಒಳಗಿದ್ದ ಕತ್ತಲೆ. ಹೊರಗಿದ್ದ ನಡುಹಗಲಿನ ಸುಡು ಬಿಸಿಲಿನ ಮುಂದೆ ಆ ಕೋಣೆ ಸುಖ ಶೀತಲ ಶಾಂತಿಧಾಮದಂತಿತ್ತು.

ದೇವಮ್ಮ ಹೆರಿಗೆಯಾದ ಮೇಲೆ ತವರುಮನೆಯಿಂದ ಬಂದು ಒಂದು ತಿಂಗಳಾಗಿತ್ತು. ಅದು ಚೊಚ್ಚಲ ಹೆರಿಗೆಯಾಗಿದ್ದರೂ ಅವಳು ಶಿಶುಜನನ ಕಾಲದಲ್ಲಿ ತುಂಬ ಕಷ್ಟಪಡಬೇಕಾಗಿಬಂದುದರಿಂದ ಇನ್ನೂ ನಿಃಶಕ್ತಳಾಗಿಯೆ ಇದ್ದಳು. ಸಹಜವಾಗಿದ್ದ ಅವಳ ಚೆಲುವು ಸುಕ್ಕಿಹೋಗಿತ್ತು. ಆದರೆ ಅವಳ ಪ್ರಾಣದೊಂದನ್ನೂ ಮನಸ್ಸಿಗೆ

ಹಾಕಿಕೊಂಡಿರಲಿಲ್ಲ. ತೊಟ್ಟಿಲಲ್ಲಿ ಮಲಗಿದ್ದ 'ಚೆಲುವಯ್ಯ' - ಜೋಯಿಸರು ಜಾತಕ ಬರೆದು, ಹೆಸರು ಚಕಾರದಿಂದ ಪ್ರಾರಂಭವಾಗತಕ್ಕದ್ದು ಎಂದು 'ಚೆನ್ನಪ್ಪ' ಎಂಬುದನ್ನು ಸೂಚಿಸಿದ್ದರೂ ಸಿಂಧುವಳ್ಳಿ ಚೆನ್ನಪ್ಪನನ್ನು ನೆನಪಿಗೆ ತರುವ ಅದು ಅಮಂಗಳಕರವೆಂದು ನಿರ್ಣಯಿಸಿ ದೇವಮ್ಮ ಮತ್ತು ಅವಳ ಅತ್ತೆ, ದೇವಯ್ಯನ ಮಾತನ್ನು ತಿರಸ್ಕರಿಸಿ, 'ಚೆಲುವಯ್ಯ' ಎಂಬ ಹೆಸರಿನಿಂದಲೆ ಕರೆಯತೊಡಗಿದ್ದರು - ಅವಳ ಕಷ್ಟಸಂಕಟಗಳನ್ನೆಲ್ಲ ನುಂಗಿನೊಣೆವ ಪರಮಾನಂದ ಮೂರ್ತಿಯಾಗಿದ್ದನು. ತೂಗುವುದನ್ನು ನಿಲ್ಲಿಸಿ ನೋಡಿದಳು: 'ಬಾಲೆ' ನಿದ್ದೆಯ ಮುದ್ದೆಯಾಗಿತ್ತು!

ಇನ್ನೇನು ಮಧ್ಯಾಹ್ನ ವಿಶ್ರಾಂತಿಗಾಗಿ ಅವಳೂ ತೊಟ್ಟಿಲ ಪಕ್ಕದಲ್ಲಿಯೆ ನೆಲದಮೇಲೆ ಹಾಸಿದ್ದ ಹಾಸಗೆಯ ಮೇಲೆ ಮಗ್ಗುಲಾಗಲು ಹವಣಿಸುತ್ತಿದ್ದಳು. ಗಿರಕ್ಕನೆ ಸದ್ದಾಗಿ ಬಾಗಿಲು ತೆರೆಯಿತು. ದೇವಯ್ಯ ಮೆಲ್ಲನೆ ಒಳಗೆ ಬಂದನು. ಬಂದವನು, ಕೋಣೆಯ ಒಳಗೆ ಇದ್ದ ನಿಃಬ್ದತೆಯನ್ನೂ ಹಗಲುಗತ್ತಲೆಯನ್ನೂ ಧೂಪದ ಪರಿಮಳವನ್ನೂ ನಿಷ್ಕ್ರಿಯಾ ಪ್ರಶಾಂತಿಯನ್ನು ಆಸ್ವಾಧಿಸುವಂತೆ ಬಾಗಿಲ ಬಳಿ ನಿಂತು ಮೆಲ್ಲನೆ ಬಾಗಿಲು ಹಾಕಿದನು. ಬೆಳಕಿನಿಂದ ಬಂದಿದ್ದ ಅವನಿಗೆ ಸ್ವಲ್ಪ ಹೊತ್ತು ಒಳಗೆ ಏನೂ ಕಾಣಿಸಿರಲಿಲ್ಲ. ಕಣ್ಣು ಒಳಗಿನ ಬೆಳಕಿಗೆ ಹೊಂದಿಕೊಂಡಮೇಲೆ ತೊಟ್ಟಿಲು, ಅದರ ಪಕ್ಕದಲ್ಲಿ ಹಾಸಗೆಯಲ್ಲಿ ಕುಳಿತಿದ್ದ ಅವನ ಕೃಶಾಂಗಿ, ಅದಕ್ಕೆ ತುಸುದೂರದಲ್ಲಿಯೆ ಮೂಲೆಯಲ್ಲಿದ್ದ ದೊಡ್ಡ ಮಂಚ - ಎಲ್ಲ ಕ್ರಮೇಣ ದೃಷ್ಟಿಗೆ ಸ್ವಪ್ನವತ್ತಾಗಿ ಮೂಡಿದ್ದುವು.

"ಯಾಕೆ? ಬೆಳಕಂಡಿ ಬಾಗಿಲನ್ನೆಲ್ಲ ಹಾಕಿಬಿಟ್ಟೀಯಾ? ಒಂದು ಚೂರು ಗಾಳಿ ಬೆಳಕು ಓಡ್ಯಾಡಬಾರದೇನೇ?" ಎಂದು ಕಿಟಕಿ ಬಾಗಿಲುಗಳನ್ನು ತೆರೆಯತೊಡಗಿದನು.

"ಬಾಲೆಗೆ ಗಾಳಿ ಸೋಂಕು ಆಗ್ತದಂತೆ, ತೆಗೀಬ್ಯಾಡಿ. ರಣಬಿಸಿಲು ಬೇರೆ; ಕೆಟ್ಟ ಕೆಟ್ಟ ದೆಯ್ಯಗಿಯ್ಯ ಓಡಾಡ್ತವಂತೆ... ಥ್ಥು! ಹೇಳಿದ್ದೊಂದೂ ಗೊತ್ತಾಗಾದಿಲ್ಲ ನಿಮಗೆ. ಮಲಗಿದ್ದ ಬಾಲೇನೂ ಎಬ್ಬಿಸ್ತೀರಿ ಈಗ... ನಿಮಗೆ ಹಿಡಿದಿದ್ದೇ ಹಟ!" ಎಂದು ತೊಟ್ಟಿಲ ಹಗ್ಗಕ್ಕೆ ಒಂದು ಅರಿವೆಯ ತುಂಡನ್ನು ಅಡ್ಡಕಟ್ಟಿದ್ದಳು, ಮಗುವಿಗೆ ಬೆಳಕಿನ ಝಳ ಬೀಳದ ಹಾಗೆ.

ಬೆಳಕಂಡಿಯ ಬಾಗಿಲುಗಳನ್ನೆಲ್ಲ ತೆರೆದು ತಿರುಗಿದವನು ತೊಟ್ಟಿಲ ಹಗ್ಗ ಕಟ್ಟಿದ್ದ ಗಳುವಿಗೆ ಬಟ್ಟೆಸುತ್ತಿ ನೇತುಹಾಕಿದ್ದ ಕುಂಕುಮಾಂಕಿತವಾದ ತೆಂಗಿನಕಾಯನ್ನು ನೋಡಿ "ಇದೇನು ಇದು?" ಎಂದು ತಿರಸ್ಕಾರಪೂರ್ವಕವಾಗಿ ಕೇಳಿದನು.

ಅದೇನು ಎಂಬುದು ಅವನಿಗೂ ಗೊತ್ತಿದ್ದ ವಿಚಾರವೆ ಆಗಿತ್ತು. ಆದರೆ ಅವನು ನಿನ್ನೆ ತಾನೆ ತೀರ್ಥಹಳ್ಳಿಯಿಂದ ಹಿಂದಿರುಗಿದ್ದನು. ಪಾದ್ರಿಯ ಉಪದೇಶದ ಆವೇಶ ಇನ್ನೂ ಬಿಸಿಬಿಸಿಯಾಗಿಯೆ ಇತ್ತು. ಜೀವರತ್ನಯ್ಯ ಗೌಡ ಜನಾಂಗದಲ್ಲಿದ್ದ ಮೂಢಾಚಾರ ಮತ್ತು ಮೂಢನಂಬಿಕೆಗಳನ್ನು ಅಪಹಾಸ್ಯಮಾಡಿ ಖಂಡಿಸಿದ್ದ ಗಾಯದ ನೆತ್ತರು ಇನ್ನೂ ಹಸಿವಾಗಿಯೆ ಇತ್ತು. ಅದಕ್ಕಾಗಿ ತನ್ನ ಮತ್ತು ತನ್ನ ಜಾತಿಯವರ ವಿಚಾರವಾಗಿ ದೇವಯ್ಯನಿಗೆ ಜುಗುಪ್ಸೆ ಹುಟ್ಟಿತ್ತು; ತುಂಬ ಅವಮಾನಕ್ಕೆ ಗುರಿಯಾಗಿತ್ತು ಅವನ ಮನಸ್ಸು. ಅದರ ಪ್ರಭಾವವೆ ಆ ಪ್ರಶ್ನೆಯ ಧ್ವನಿಗೂ ಅದರ ಕರ್ಕಶಕ್ಕೂ ಕಾರಣವಾಗಿತ್ತು.

"ಕಲ್ಲೂರು ದೋಯಿಸರು ಹೆಸರು ಇಟ್ಟುಕೊಡಾಕೆ ಬಂದಿದ್ದಾಗ, ಬಾಲೆಗೆ ಜಕಣಿ ಪಂಜ್ರೊಳ್ಳಿ ಕಾಟ ಕೊಟ್ಟಾವು ಅಂತಾ, ಮಂತ್ರಿಸಿಕೊಟ್ಟಿದ್ರು..." ದೇವಮ್ಮ ಪೂರೈಸಿರಲಿಲ್ಲ.

“ಇದು?” ತೊಟ್ಟಿಲ ಹಗ್ಗಕ್ಕೆ ನೇತುಬಿದ್ದಿದ್ದ ಮತ್ತೆರಡು ವಸ್ತುವಿನೆಡೆಗೆ ಕೈತೋರಿ ಕೇಳಿದನು.

“ಕಣ್ಣಾಪಂಡಿತರ ಅಂತ್ರ.”

“ಇವೆಲ್ಲ ಏನು?” ಇನ್ನೂ ಕೆಲವು ಚಿಕ್ಕಚಿಕ್ಕ ಗಂಟುಗಳ ಕಡೆ ಕೈಮಾಡಿ ಪ್ರಶ್ನಿಸಿದನು.

“ದೇವರು ದಿಂಡರಿಗೆ ಹೇಳಿಕೊಂಡು ಕಾಣಿಕೆ ಕಟ್ಟಿದ್ದು.”

“ನಿನಗೇನು ಬೇರೆ ಕಸುಬಿಲ್ಲೇನು?...”

“ಅವೆಲ್ಲ ನಿಮಗ್ಯಾಕೆ? ಗಂಡಸ್ರಿಗೆ?...”

ದೇವಯ್ಯನ ರೀತಿಯಿಂದಲೂ ಧ್ವನಿಯಿಂದಲೂ ತನ್ನ ಗಂಡನ ಉದ್ದೇಶ ಒಳ್ಳೆಯದಲ್ಲ ಎಂಬುದೇನೂ ದೇವಮ್ಮಗೆ ಗೊತ್ತಾಗಿತ್ತು. ಆದರೆ ಮುಂದೆ ನಡೆದದ್ದಕ್ಕೆ ಅವಳ ಚೇತನ ಸಿದ್ಧವಾಗಿರಲಿಲ್ಲ. ಹಿಂದೆಲ್ಲ ಮೂದಲಿಸುತ್ತಿದ್ದಂತೆಯೊ ಬೈಯುತ್ತಿದ್ದಂತೆಯೊ ಇವತ್ತೂ ಮಾಡಬಹುದೆಂದು ಬಗೆದಿದ್ದಳು. ಆದರೆ ದೇವಯ್ಯ ಮೈಮೇಲೆ ಬಂದವನಂತೆ ಸರಸರಸರನೆ ತೆಂಗಿನಕಾಯಿ ಅಂತ್ರ ಕಾಣಿಕೆಗಳನ್ನೆಲ್ಲ ಕಿತ್ತು ಕಸದ ಮೂಲೆಗೆ ಎಸೆದುಬಿಟ್ಟನು: “ಅಯ್ಯೋ!” ಎಂದು ತತ್ತರಿಸುತ್ತ ತಡೆಯಲು ಎದ್ದಿದ್ದ ಬಾಣಂತಿ ಅವನ ಕೈಯ ನೂಕಿಗೆ ಸಿಕ್ಕಿ ಹಾಸಗೆಯ ಮೇಲೆ ಕುಸಿದು ಬಿಕ್ಕಿಬಿಕ್ಕಿ ಗೊಣಗಿಕೊಳ್ಳುತ್ತಾ ಹೋಗಿ ಮಂಚದ ಮೇಲೆ ಮಲಗಿಕೊಂಡನು. ಅದೃಷ್ಟವಶಾತ್ ಮಗುವಿನ ನಿದ್ದೆಗೆ ಭಂಗ ಬಂದಿರಲಿಲ್ಲ.

ಮಂಚದ ಮೇಲೆ ಮಲಗಿಕೊಂಡ ದೇವಯ್ಯನ ಕಿವಿಗೆ, - ಆ ಕೋಣೆ ಅಷ್ಟು ನಿಃಶಬ್ದವಾಗಿತ್ತು, - ತನ್ನ ಹೆಂಡತಿ ಬಿಕ್ಕಿಬಿಕ್ಕಿ ಸುಯ್ದು ಅಳುವ ಸದ್ದು, ತನ್ನ ಅಂತಃಪ್ರಜ್ಞೆಯ ಭರ್ತ್ಸನೆಯೊ ಎನ್ನುವಂತೆ, ಕೇಳಿಸತೊಡಗಿ ಅವನ ಮನಸ್ಸನ್ನು ಕಲಕಿತು. ಶುದ್ಧ ವಿಚಾರ ದೃಷ್ಟಿಯಿಂದ ತಾನು ಮಾಡಿದುದು ತಪ್ಪಿಲ್ಲ ಎಂದು ಬುದ್ಧಿ ವಾದಿಸುತ್ತಿದ್ದರೂ ಅವನ ಹೃದಯದಲ್ಲಿ ಏನೊ ಮರುಕ ತಲೆಹಾಕಿತ್ತು. ಚೆಲುವೆಯಾಗಿದ್ದ ತನ್ನ ಹೆಂಡತಿಯನ್ನು ಅವನು ಮದುವೆಯಾ ದಂದಿನಿಂದಲೂ ತುಂಬ ಮೋಹದಿಂದ ಪ್ರೀತಿಸಿದ್ದನು. ಅವಳೂ ತನ್ನ ಗಂಡನನ್ನು ಇನ್ನಿಲ್ಲವೆಂಬಂತೆ ಮುದ್ದಿಸಿದ್ದಳು; ದೇವರೆಂಬಂತೆ ಗೌರವಿಸಿದ್ದಳು. ಪಾದ್ರಿಯ ಪ್ರಭಾವಕ್ಕೆ ತಾನು ಒಳಗಾಗುವವರೆಗೂ ಅವರಿಬ್ಬರಲ್ಲಿ ಎಷ್ಟು ಹೊಂದಾಣಿಕೆಯಿತ್ತೆಂದರೆ ಅದನ್ನು ಕಂಡು ಅತ್ತೆಗೂ ಒಮ್ಮೊಮ್ಮೆ ಕರುಬು ಮೂಡಿತ್ತು. ಈಗ ಈ ಸ್ಥಿತಿಗೆ ಬಂದಿದೆಯಲ್ಲಾ? ತನ್ನಗಾದರೂ ಏನು ತಪ್ಪು? ಮಗುವಿನ ಜ್ವರಕ್ಕೆ ಔಷಧಿ ಕೊಟ್ಟು ಗುಣಪಡಿಸುವುದಕ್ಕೆ ಬದಲು ತಾಯಿತಿ ಕಟ್ಟಿದ್ದನ್ನು ಕಿತ್ತುಹಾಕಿದ್ದು ತಪ್ಪೇ? ದಿಷ್ಟಿಮಣಿಯ ಹೆಸರಿನಲ್ಲಿ ಕೂಸಿನ ಕೊರಳಿಗೆ ನಾಣ್ಯ ರೂಪಾಯಿಗಳ ಭಾರವಾದ ಸರವನ್ನು ಹಾಕಿ, ಅದಕ್ಕೆ ಜೊಲ್ಲಿನವಾಸನೆ, ಕಕ್ಕು, ಹೇಲು, ಉಚ್ಚೆ, ಮಣ್ಣು, ಕೊಳೆ ಎಲ್ಲಾ ಹಿಡಿದು ಅಸಹ್ಯವಾಗಿದ್ದುದನ್ನು ತೆಗೆದೆಸೆದದ್ದು ತಪ್ಪೇ? ಧರ್ಮದ ಹೆಸರಿನಲ್ಲಿ ಆರೋಗ್ಯ ಮತ್ತು ನೈರ್ಮಲ್ಯಗಳನ್ನು ನಿರ್ಲಕ್ಷಿಸಿದ್ದನ್ನು ಖಂಡಿಸಿದ್ದು ತಪ್ಪೇ? ಕಲ್ಲು ಮಣ್ಣನ್ನು ದೇವರೆಂದು ನಂಬಿ, ಪೂಜಿಸಿ, ಹಾಳಾಗಿ ಹೋಗುತ್ತಿದ್ದಾರಲ್ಲಾ ಎಂದು ತುಳಸಿಯ ಕಲ್ಲನ್ನು ಕಿತ್ತುಹಾಕಲು ಹೋಗಿದ್ದು? ಸ್ವಲ್ಪ ತಪ್ಪರಿಬಹುದು! ಆದರೆ ಆ ಜೋಯಿಸ ಇವರಿಂದ ಸತ್ಯನಾರಾಯಣ ವ್ರತ ಮಾಡಿಸಿ, ಸುಳ್ಳುಸುಳ್ಳು ಕಟ್ಟು ಕಥೆಗಳನ್ನು ಪುರಾಣ ಎಂದು ಹೇಳಿ, ತನ್ನವರಿಗೆ

ಸಂತರ್ಪಣೆಮಾಡಿಸಿ, ಇವರಿಗೆ ದಾರಿ ತಪ್ಪಿಸುವುದಲ್ಲದೆ ದಿಕ್ಕನ್ನೂ ತಪ್ಪಿಸುತ್ತಿದ್ದನಲ್ಲಾ ಅದನ್ನು ತಡೆದಿದ್ದು ತಪ್ಪೇ? ಆ ಹಳೆಮನೆ ಶಂಕರ ಹೆಗ್ಗಡೆಯ ಕುಟುಂಬವೆ ಹಾಳಾಗುವಂತಾಗಿದೆಯಲ್ಲಾ! ಪಾದ್ರಿ ಹೇಳುತ್ತಾರೆ: ಅವನ ಹೆಂಡತಿಗೆ ಕ್ಷಯ ಇರಬೇಕು. ಮಕ್ಕಳಿಗೂ ತಗುಲಿದೆಯೊ ಏನೊ? ಹೀಗೇ ಸುಮ್ಮನೆ ಬಿಟ್ಟರೆ ಮನೆಯವರೆಲ್ಲರೂ ಆ ಸಾಂಕ್ರಾಮಿಕ ರೋಗದಿಂದ ನರಳಿ ಸಾಯುತ್ತಾರಂತೆ. ಅಷ್ಟೆ ಅಲ್ಲಂತೆ; ಕಡೆಗೆ ಅವರ ಮನೇಲಿ ಊಟಮಾಡಿದವರಿಗೂ ಆ ಪಾತ್ರೆ ಪರಟೆ ಎಂಜಲಿನ ಮುಖಾಂತರ ಕ್ಷಯ ತಗುಲಲಿ ಅದು ಹರಡುತ್ತದಂತೆ. ಆದರೆ ಆ ಬೆಪ್ಪು, ಶಂಕರ ಹೆಗ್ಗಡೆ, ಮೂರುಹೊತ್ತೂ ಪೂಜೆಯಂತೆ, ದೆಯ್ಯದ್ಯಾವರುಗಳಿಗೆ ಹರಕೆಯಂತೆ, ಧರ್ಮಸ್ಥಳದಲ್ಲಿ ಅವನ ಮೇಲೆ ಹುಯ್ಯಲು ಕೊಟ್ಟಿದ್ದಾರಂತೆ, - ಅಂತಾ, ಏನೇನೋ ನಂಬಿಕೊಂಡು, ಆ ಜೋಯಿಸರು, ಈ ಬಟ್ಟರು, ಆ ಗಣಮಗ, ಈ ಸುಡುಗಾಡು ಹಟ್ಟವರು - ಅವರನ್ನೆಲ್ಲ ಕರೆಸಿ, ಏನೇನೋ ಮಾಡಿಸಿ, ತಾನೂ ದಾರಿ ತಪ್ಪಿ, ಇತರರನ್ನೂ ದಿಕ್ಕುತಪ್ಪಿಸುತ್ತಿದ್ದಾನಲ್ಲಾ - ಇದನ್ನೆಲ್ಲಾ ತಿದ್ದಬಾರದೆ? - ಇವಳಿಗೆ ಹೇಳಿದರೆ ಸ್ವಲ್ಪವೂ ಗೊತ್ತಾಗುವುದಿಲ್ಲ. ಸುಮ್ಮನೆ ಅಳುವುದು, ಕಾಲು ಹಿಡಿದುಕೊಳ್ಳುವುದು, ಎರಡೇ ಗೊತ್ತು!...

ಆಲೋಚನೆಗಳ ಪೀಡನೆಗೆ ಸಿಕ್ಕಿದ್ದ ದೇವಯ್ಯ ಮೆಲ್ಲಗೆ ಹೆಂಡತಿಯ ಕಡೆಗೆ ನೋಡಿದನು. ಅವಳು ಮಲಗಿರಲಿಲ್ಲ. ಆದರೆ ಅಳುವುದನ್ನು ನಿಲ್ಲಿಸಿದಂತೆ ತೋರಿತು. ತೊಟ್ಟಿಲಲ್ಲಿ ಮಲಗಿದ್ದ 'ಚೆಲುವಯ್ಯ' ನನ್ನೆ ನೋಡುತ್ತಿದ್ದಳು, ಆ ಸಂತೋಷದಲ್ಲಿ ಈ ದುಃಖವೆಲ್ಲ ಕೊಚ್ಚಿಹೋಯಿತೊ ಎನ್ನುವಂತೆ! ಹಾಗೆಯೆ ಮೆಲ್ಲನೆ ಎದ್ದು, ಬಾಗಿಲು ಸಂದಿಯ ಕಸದ ಮೂಲೆಗೆ ನಡೆದು, ಬಾಗಿ, ತನ್ನ ಗಂಡ ಎಸೆದಿದ್ದ ತೆಂಗಿನಕಾಯಿ. ಅಂತ್ರ, ಕಾಣಿಕೆಗಳನ್ನೆಲ್ಲ ಎತ್ತಿ ಹಣೆಗೆ ಮುಟ್ಟಿಸಿಕೊಂಡು, ಅವನ್ನೆಲ್ಲ ಗೋಡೆಯ ಗೂಡಿನಲ್ಲಿಟ್ಟು ಬಾಗಿಲು ಮುಚ್ಚಿ, ಮತ್ತೆ ಬಂದು ಹಾಸಗೆಯ ಮೇಲೆ ಕುಳಿತಳು.

"ಮಲಕ್ಕೊಳ್ಳೊದಿಲ್ಲೇನೆ?" ದೇವಯ್ಯನ ಧ್ವನಿ ಮೃದುವಾಗಿತ್ತು.

ದೇವಮ್ಮ ಮಗುವಿನ ಕಡೆ ನೋಡುತ್ತಿದ್ದಳು ತುಸು ತಿರುಗಿ ತಲೆಬಾಗಿದಳು: ಆದರೆ ಮಲಗಲಿಲ್ಲ. ಅವಳೂ ಅಷ್ಟು ಪ್ರೀತಿ ತೋರುತ್ತಿದ್ದ ತನ್ನ ಗಂಡ ಹೀಗಾಗಿ ಬಿಟ್ಟಿದ್ದರಲ್ಲಾ ಆ ಪಾದ್ರಿಯ ದೆಸೆಯಿಂದ ಎಂದು ಚಿಂತಿಸುತ್ತಾ, ಏನು ಮಾಡಿದರೆ ಇವರ ಮನಸ್ಸನ್ನು ಮತ್ತೆ ತಾನು ಗೆಲ್ಲಬಹುದು ಎಂದು ಹರುವು ನೆನೆಯುತ್ತಿದ್ದಳು. ಕೋಣೂರು ಮುಕುಂದಯ್ಯ ಗೌಡರ ಅಕ್ಕನಲ್ಲಿ ತಮ್ಮನ ಕೆಲವು ಧೀರ ಲಕ್ಷಣಗಳಿದ್ದು ಸಮಯ ಬಂದಾಗ ಅವಳನ್ನು ಕೈ ಬಿಡುತ್ತಿರಲಿಲ್ಲ.

"ಏನು? ಬಿಸಿಲು ಝಳ ಹೆಚ್ಚಾಯಿತೆ?" ಮತ್ತೆ ಉಪಚರಿಸುವ ಕೆಳದನಿಯಲ್ಲಿ ಪ್ರಶ್ನೆ ಹಾಕಿದ ದೇವಯ್ಯ ಮಂಚದಿಂದೆದ್ದು ಬೆಳಕಂಡಿಗಳ ಬಳಿಗೆ ಹೋಗಿ, ತಾನೆ ಸ್ವಲ್ಪ ಹೊತ್ತಿಗೆ ಮೊದಲು ತೆರೆದಿದ್ದ ಗವಾಕ್ಷದ ರೆಕ್ಕೆಗಳನ್ನು ಮುಚ್ಚಿದನು. ಕೋಣೆಯಲ್ಲಿ ಮೊದಲು ಇದ್ದಂತಹ ತಂಪಾದ ಕರ್ವೆಳಗು ಕವಿದು ಕಣ್ಣಿಗೆ ಹಿತವಾಯಿತು. ದೇವಯ್ಯ ಹಿಂತಿರುಗಿ ಬಂದು ಮಂಚದ ಮೇಲೆ ಮತ್ತೆ ಕಾಲುಚಾಚಿದನು.

"ಇನ್ನೆಷ್ಟು ದಿವಸ ನೆಲದ ಮೇಲೆ ಹಾಸಿಗೆ?" ಮತ್ತೆ ದೇವಯ್ಯ ಅಕ್ಕರೆಯ ದನಿಯಲ್ಲಿ ಕೇಳಿದನು.

ಕೋಣೆಯಲ್ಲಿ ಮೊದಲಿನ ಬೆಳಕು ಇದ್ದಿದ್ದರೆ, ದೇವಯ್ಯನಿಗೆ ಕಾಣಿಸುತ್ತಿತ್ತು, ಬಿಳಿಚಿದ್ದ ಹೆಂಡತಿಯ ಮುಖಕ್ಕೆ ನಸುಗೆಂಪೇರಿ ತುಟಿಯ ತುದಿಗಳಲ್ಲಿ ಕಿರುನಗೆಯ  ಮೊಗ್ಗೆ ಮಲರುತ್ತಿದ್ದುದು! ಆದರೂ ಅದನ್ನು ಗಂಡನಿಗೆ ತೋರಗೊಡಲು ನಾಚಿ 'ಚೆಲುವಯ್ಯ'ನ ತಾಯಿ ಮೊಗದಿರುಹಿದ್ದಳು. ಅವಳಿಗೆ ಆ ಪ್ರಶ್ನೆಯ ಅರ್ಥ, ಧ್ವನಿ, ಉದ್ದೇಶ ಎಲ್ಲ ಚೆನ್ನಾಗಿ ಗೊತ್ತಾಗಿತ್ತು. ಮಂಚದ ಮೇಲೆ ತನ್ನ ಮಗ್ಗುಲಲ್ಲಿಯೆ ಮಲಗಬೇಕೆಂದು ಅನೇಕ ರೀತಿಗಳಲ್ಲಿ ದೇವಯ್ಯ ಹೆಂಡತಿಗೆ ಸೂಚನೆಯೀಯುತ್ತಲೆ ಇದ್ದನು.

"ಏನು? ಮಾತೇ ಆಡಾದಿಲ್ಲಾ? ನನ್ನ ಮೇಲೆ ಸಿಟ್ಟೇ?" ಈ ಸಾರಿ ದೇವಯ್ಯನ ಧ್ವನಿಯಲ್ಲಿ ದೈನ್ಯದ ಮತ್ತು ಶರಣಾಗತಿಯ ಭಂಗಿ ಎದ್ದು ಕಾಣುವಂತಿತ್ತು.

"ಅಮ್ಮ ಹೇಳಿದಾರೆ, ಮುಂದಿನ ಅಮಾಸೆ ಕಳೆದ ಮೇಲೆ, ಕಲ್ಲೂರು ಗಣಪನಿಗೆ ಹೇಳಿಕೊಂಡಿದಾರಂತೆ, ಅಲ್ಲಿಗೆ ಹೋಗಿ ಪೂಜೆಮಾಡಿಸಿಕೊಂಡು ಬರಬೇಕಂತೆ,…. ಆಮೇಲೆ"… ಎಂದು ಅರ್ಥಕ್ಕೇ ಇಂಗಿತವಾಗಿ ಮಾತು ನಿಲ್ಲಿಸಿದ್ದಳು ದೇವಮ್ಮ.

ದೇವಯ್ಯನಿಗೆ, ಮತ್ತೆ, ಕಡಲೆ ತಿನ್ನುವಾಗ ಕಲ್ಲು ಅಗಿದ ಹಾಗೆ ಆಗಿತ್ತು! 'ಅಂತೂ ಸುಖ ಇಲ್ಲ, ಈ ದೇವರು ದಿಂಡಿರುಗಳಿಂದ!' ಎಂದುಕೊಂಡಿತು ಅವನ ಮನಸ್ಸು. ಅವನ ಆತುರತೆಯ ತೇರಿನ ಗಾಲಿಗೆ ಬಲವಾದ ಪೆಟ್ಟೆಮಣೆ ಹಾಕಿದಂತಾಗಿತ್ತು ಹೆಂಡತಿಯ ಹೇಳಿಕೆ. ಅವನ ಹುಡುಗುಬುದ್ಧಿಗೆ ಹೇಗೆ ಗೊತ್ತಾಗಬೇಕು, ತನ್ನ ಬಾಣಂತಿ ಹೆಂಡತಿಯ ಆರೋಗ್ಯ ರಕ್ಷಣೆಯ ಸಲುವಾಗಿಯೆ ಅವನ ಅಮ್ಮ ಈ ಪೂಜೆ ಆ ವ್ರತ ಇತ್ಯಾದಿ ಧಾರ್ಮಿಕ ಪ್ರತಿಮೆಗಳ ರೂಪದಿಂದ ಅವನ ವಿವೇಕದೂರವಾದ ಆತುರತೆಗೆ ಮೂಗುದಾರ ಹಾಕುತ್ತಿದ್ದಾರೆ ಎಂದು? ಯಾವುದನ್ನು ನೇರವಾಗಿ ಹೇಳಬಾರದೊ, ಹೇಳಿದರೆ ಪರಿಣಾಮಕಾರಿಯಾಗುವುದಿಲ್ಲವೊ ಅದನ್ನು ಅನ್ಯ ವಿಧಾನಗಳಿಮದ ಸಾಧಿಸುತ್ತದೆ ಸಮಾಜದ ಸೌಜನ್ಯ, ದಾಕ್ಷಿಣ್ಯ ಮತ್ತು ಸಭ್ಯತೆ.

"ಮೇಲಕ್ಕೆ ಬರ್ತಿಯಾ?" ಗಂಡನ ಧ್ವನಿಯಲ್ಲಿ ಯಾಚನೆ ಇತ್ತು.

ಅದನ್ನು ಗುರುತಿಸಿ ದೇವಮ್ಮಗೆ ಎದ್ದು ಹೋಗಬೇಕೆಂದು ಮನಸ್ಸಾಯಿತು. ಆದರೆ ತಡೆದಳು. ಕೂಸಿನ ಲಾಲನೆಪಾಲನೆಯಲ್ಲಿ ಮಗ್ನಳಾಗಿ ತನ್ನ ಸ್ವಂತ ಸೀರೆ ಬಟ್ಟೆಯ ಶೌಚ ಸೌಂದರ್ಯಗಳ ವಿಚಾರವನ್ನೆ ಅವಳು ಎಷ್ಟೋ ಕಾಲದಿಂದ ಮರೆತುಬಿಟ್ಟಳು. ಈಗಲೂ ಒಂದು ಬಡ್ಡು ಸೀರೆಯನ್ನೆ ಉಟ್ಟಿದ್ದಳು. ಅದರಲ್ಲಿ ಚೆಲುವಯ್ಯನ ಜೊಲ್ಲುಗಿಲ್ಲು ಎಲ್ಲದರ ವಾಸನೆಯೂ ಇತ್ತು. ತನ್ನ ಗಂಡನಿರುವ ಸದ್ಯದ ಮನಃಸ್ಥಿತಿಯಲ್ಲಿ ಅವರಿಗೆ ಜುಗುಪ್ಸೆ ಬರುವಂತಾದರೆ?

ತುಸು ತಲೆ ಎತ್ತಿ ಮಂಚದಕಡೆ ನೋಡುತ್ತಾ ಹೇಳಿದಳು: "ನನ್ನ ಬಟ್ಟೆ ಕೊಳಕಾಗದೆ…."

"ಆದರೆ ಆಗಲಿ, ಬಾ."

ದೇವಮ್ಮ ಎದ್ದು ತೊಟ್ಟಿಲನ್ನು ಬಳಸಿ ಹೋಗಿ ಮಂಚದ ಪಕ್ಕದಲ್ಲಿ ತುಂಬ ಸಂಕೋಚದಿಂದ ನಿಂತಳು. ಮಲಗಿದ್ದ ದೇವಯ್ಯ ಅವಳ ಕೈ ಹಿಡಿದು ಪಕ್ಕದಲ್ಲಿ ಕೂರುವಂತೆ ಮಾಡಿದನು. ಸ್ವಲ್ಪ ಹೊತ್ತು ಯಾರೂ ಮಾತಾಡಲಿಲ್ಲ ಗಂಡ ಮಾತನಾಡಿದ ಮೇಲೆಯೆ ತಾನು ಮಾತನಾಡುವುದೆಂದು ದೇವಮ್ಮ ನಿರ್ಧರಿಸಿದ್ದಳು. ದೇವಯ್ಯ ಹೆಂಡತಿಯ ಕಡೆ ನೋಡುತ್ತಾ ಸ್ವಲ್ಪ ಕಾದನು. ಅವನಿಗೆ ಅನುಭವದಿಂದ ಗೊತ್ತಿತ್ತು, ತನ್ನ ಹೆಂಡತಿ ಮಾತು ಪ್ರಾರಂಭಿಸುವುದು ಹರ್ಮಾಗಾಲ ಎಂದು. ಅವನೇ ಪ್ರಾರಂಭಿಸಿದನು:

"ಬಹಳ ಬಡಕಲಾಗಿಬಿಟ್ಟಿದ್ದೀಯ! ಮುಖ ಎಲ್ಲ ಬಿಳಚಿಕೊಂಡು ಹೋಗಿದೆ!" ಆ ನಸುಗತ್ತುಲಲ್ಲಿ ಅದು ಕಾಣಿಸುತ್ತಿರಲಿಲ್ಲ, ಬೆಳಕಿನಲ್ಲಿ ಕಂಡದ್ದನ್ನೆ ಕುರಿತು ಹೇಳಿದನು ದೇವಯ್ಯ. ಅವಳು ಏನನ್ನೂ ಹೇಳಲಿಲ್ಲ; ತನ್ನ ಕೈ ಹಿಡಿದಿದ್ದ ಗಂಡನ ಕೈಯನ್ನೆ ನೋಡುತ್ತಿದ್ದಳು.

"ನಿನ್ನ ಮುಂಗೈಗೆ ಹಚ್ಚೆಕುಚ್ಚಿಸಿಕೊಳ್ಳದಿದ್ದರೆ ಎಷ್ಟು ಚೆನ್ನಾಗಿ ಕಾಣ್ತಿತ್ತು?"

"ಅದು ಶಿವನ ಜಡೆ! ಮುತ್ತೈದೆಗೆ ಮಂಗಳವಂತೆ..." ನಾಚಿನಾಚಿ ಹೇಳಿದ್ದಳು ದೇವಮ್ಮ.

"ಅದೆಲ್ಲ ಬರೀ ಕಂದಾಚಾರ! ಆ ಪಾದ್ರೀ ಹೆಂಡತಿ ಮಕ್ಕಳು ಯಾರೂ ಕುಚ್ಚಿಸಿಕೊಂಡಿಲ್ಲ. ಎಲ್ಲ ಚೆಂದಾಗಿದಾರಲ್ಲ!...."

ಅದಕ್ಕೇನೂ ಉತ್ತರ ಹೇಳದೆ ನೀಡಿದಾಗಿ ಸುಯ್ದಳು ದೇವಮ್ಮ. ಆ ಪಾದ್ರಿ, ಅವನ ಹೆಂಡತಿ ಮಕ್ಕಳು, ಅವನ ವಿಷಯ ಬಂದರೆ ಸಾಕು, ದೇವಮ್ಮನಿಗೆ ಹಾವುಮೆಟ್ಟಿದ ಹಾಗೆ ಆಗುತ್ತಿತ್ತು.

"ನಮ್ಮ ತರಾ ಗೊಬ್ಬೆ ಕಟ್ಟಿ, ಸೀರೆ ಉಡಾಕಿಂತ ಆ ಪಾದ್ರೀ ಮನೇರು ಉಡಾಹಂಗೆ ಉಟ್ಟರೆ ಚೆಂದಾಗಿರ್ತದೆ" ಒತ್ತಿ ಹೇಳಿದನು ಮತ್ತೆ ದೇವಯ್ಯ.

"ಅದೇ ಬಿರಾಂಬ್ರ ಉಡಿಗೆ?"

"ನೋಡು. ಆ ಪಾದ್ರೀ ಹೆಂಡತಿ ಮಕ್ಕಳು ಬ್ರಾಂಬ್ರ ಹಾಂಗೇನೂ ಅಲ್ಲ. ಗಂಡಸರ ಸಂಗಡ ಸಲೀಸು ಮಾತು ಕತೆ ಆಡ್ತಾರೆ; ಕೂತ್ಗೊತಾರೆ! ನಗ್ತಾರೆ; ಹಾಸ್ಯಮಾಡ್ತಾರೆ! ನಿಮ್ಮ ಹಾಮಗೆ ತಿಂಗಳಿಗೆ ಮೂರುದಿನ 'ಹೊರಗೆ' ಅಂತಾ, ಹಿತ್ತಲು ಕಡೇಲೋ ಮುರಿನ ಒಲೆ ಹತ್ರಾನೋ ರಾತ್ರಿಯೆಲ್ಲ ಬಿದ್ದುಕೊಳ್ಳೂದು ಇಲ್ಲ..."

"ಕಿಲಸ್ತರಾದ ಮಾತ್ರಕ್ಕೆ ಅವರೇನು ಮುಟ್ಟಾಗೋದಿಲ್ಲೇನು?" ಸವಾಲು ಹಾಕಿದಂತೆ ಪ್ರಶ್ನಿಸಿದ್ದಳು, ತುಸು ಚಕಿತೆಯಾಗಿಯೆ, ದೇವಮ್ಮ.

"ಹೆಂಗಸರು ಅಂದಮೇಲೆ ಮುಟ್ಟಾಗ್ದೆ ಇರ್ತಾರೇನು? ನಿಮ್ಮ ಹಾಂಗೆ ಶಾಸ್ತ್ರಗೀಸ್ತ್ರ ಅಂತಾ ಹೊರಗೆ ಕೂರೋದಿಲ್ಲ. ನಮ್ಮ ಹೆಂಗಸ್ರು ಹಿತ್ತಲು ಕಡೇಲಿ, ಅಲ್ಲಿ ಇಲ್ಲಿ ಎಲ್ಲಾದರಲ್ಲಿ, ಕಂಬಳಿಚಾಪೆ ಹಾಕಿಕೊಂಡು ಬಿದ್ದುಕೊಳ್ತಾರೆ ಅಂತ

ಕೇಳಿ, ಅವರು ದಿಗಿಲು ಬಿದ್ರು! ಮುಚ್ಚು ಮರೆ ಬಾಗಿಲು ಗೀಗಿಲು ಏನೂ ಇಲ್ಲದೆ ರಾತ್ರಿ ಕಾಲದಲ್ಲೂ ಹಾಂಗೆ ಮಲಗಿಕೊಳ್ಳೋದು ಉಂಟೇ ಎಂದು!...

"ಇಸ್ಸಿ! ಥೂ! ಹೊಲೇರಿಗಿಂತಾ ಅತ್ತತ್ತ ಆ ಕಿಲಸ್ತರು! ನಮ್ಮ ಮುಕುಂದ ಹೇಳ್ತಿದ್ದ, 'ಬೆಟ್ಟಳ್ಳಿ ಬಾವ ಆ ಪಾದ್ರೀನೆ ದೊಡ್ಡ ಪಮಡಿತ ಅಂತ ತಿಳುಕೊಂಡಾನೆ. ಕಲ್ಲೂರು ಗಣಪತಿ ದೇವಸ್ಥಾನದ ಹತ್ರ ಹೊಳೇದಂಡೆ ಮಂಟ ಪದಾಗೆ ಒಬ್ಬ ಗಡ್ಡದಯ್ಯ ಬಂದಿದಾನಂತೆ, ಈ ಪರ್ಪಂಚದಾಗೆ ಇರೋದೆಲ್ಲ ಅವನಿಗೆ ಗೊತ್ತಂತೆ. ಅವನ ಮುಂದೆ ಈ ಪಾದ್ರಿ ಸಿಂಹದ ಮುಂದೆ ಸಿಂಗಳೀಕ! ನಮ್ಮ ಬಾವ ಒಂದು ಸಾರಿ ಹೋಗಿ ಅವನ ಹತ್ರ ಮಾತಾಡಿ ಬರ್ಲಿ. ಗೊತ್ತಾಗ್ತದೆ,' ಅಂತಾ."

"ಯಾರು? ನಿನ್ನ ತಮ್ಮನಾ? ಅಂವ ಬಿಡು, ಆ ಐಗಳ ಸಂಗಡ ಏನೇನೋ ಪುರಾಣ ಓದ್ತಾ ಬಾಯಿಗೆ ಬಂದಹಾಂಗೆ ಮಾತಾಡ್ತಾನೆ."

"ಅಂದ್ರೆ? ನಿಮ್ಮ ಪಾದ್ರಿ ಹೇಳೋದು ಮಾತ್ರ ಸತ್ಯ; ಬಾಕಿದ್ದೋರು ಹೇಳೋದೆಲ್ಲ ಸುಳ್ಳೋ...? ಅದಕ್ಕೇ ಅಂತಾ ಕಾಣ್ತದೆ. ಯಾರ್ಯಾರೊ ಏನೇನೋ ಆಡಿಕೊಳ್ಳೋದು, ನಿಮ್ಮ ಸುದ್ದಿ!"

"ಏನು ಆಡಿಕೊಳ್ಳೋದು?"

"ಪಾದ್ರಿ ನಿಮ್ಮನ್ನೂ ಜಾತಿಗೆ ಸೇರಿಸ್ತಾನೆ ಅಂತಾ."

"ಈ ಮೂಢ ಜಾತೀಲಿ ಇರೋಕಿಂತ ಅವರ ಜಾತಿಗೆ ಸೇರೋದೆ ವಾಸಿ ಅಂತ ಕಾಣ್ತದೆ...."

"ನಮ್ಮನ್ನ ಬಾವಿಗೋ ಕೆರೆಗೋ ತಳ್ಳಿ ಆಮ್ಯಾಲೆ ಏನು ಬೇಕಾದ್ರೂ ಮಾಡಿ!...."

ದೇವಮ್ಮನ ಕಂಠ ಗದ್ಗದವಾಗಿ, ಮಾತು ಬಿಕ್ಕಳಿಸುತ್ತಿತ್ತು. ಸೆರಗಿನಿಂದ ಬಲಗೈಯಲ್ಲಿ ಕಣ್ಣೊರಸಿಕೊಂಡಳು. ಅವಳ ಎಡಗೈಯನ್ನು ಹಿಡಿದುಕೊಂಡಿದ್ದ ದೇವಯ್ಯ ಅದನ್ನು ಸವರುತ್ತಾ "ಹುಚ್ಚಿಕಣೇ ನೀನು, ಬರೀ ಹುಚ್ಚಿ, ಅವರಿವ್ರು ಹೇಳ್ತಾರೆ ಅಂತಾ ನೀನ್ಯಾಕೆ ಅಳೋದು?.... ಆಗಲಿ, ನಿನ್ನ ತಮ್ಮ ಹೇಳಿದ್ದೂ ಮಾಡೇಬಿಡ್ತೀನಿ.... ಯಾವತ್ತಾದರೂ ಒಂದು ದಿವಸ ನೋಡ್ತೀನಿ ಆ ಗಡ್ಡದಯ್ಯನ್ನ. ಅಳಬೇಡ, ಮಾರಾಯ್ತಿ..."

"ಗಣಪನ ಪೂಜೆಗೆ ಹೋಗ್ತೀವಲ್ಲಾ? ಕಲ್ಲೂರು ದೇವಸ್ಥಾನಕ್ಕೆ? ಆವಾಗ್ಲೆ ಬನ್ನಿ, ನಮ್ಮ ಸಂಗಾಡಾನೆ ಮುಕುಂದನೂ ಬರ್ತಾನಂತೆ!"

* * *

## ೧೩

ನಡುರಾತ್ರಿಯವರೆಗೂ ಕೆರೆ, ಬಾವಿ, ಹಳ್ಳದಗುಂಡಿ, ಕಾಡುಗಳಲ್ಲಿ ಹುಡುಕಿ ತಿಮ್ಮಿಯನ್ನೆಲ್ಲಿಯೂ ಕಾಣದೆ, ನಾನಾ ಊಹೆಗಳನ್ನು ತಲೆಯಲ್ಲಿ ಹೊತ್ತು ಹಿಂದಿರುಗುತ್ತಿದ್ದರು, ಬೆಟ್ಟಳ್ಳಿಯ ಹೊಲಗೇರಿಯವರು. ತಿಮ್ಮಿ ಒಯ್ದುದ್ದು ಎಂದು ಅವಳ ಅವ್ವ ಸೇಸಿ ಗುರುತಿಸಿದ್ದ ಮಡಕೆಯೊಂದೇ ಅವರಿಗೆ ಸಿಕ್ಕಿದ್ದ ಕರಿಯ ಸಾಕ್ಷಿ. ಆದರೆ ಸೇಸಿಯ ಮೈಮೇಲೆ ಬಂದಿದ್ದ ಜಕ್ಕಿಣಿ ಕೊಟ್ಟಿದ್ದ ಭರವಸೆಯನ್ನು ಕೇಳಿ ಅನೇಕರಿಗೆ ಸಮಾಧಾನವಾಗಿತ್ತು. ಆ ದೈವವಾಣಿಯಲ್ಲಿ ಅಚಲಶ್ರದ್ಧೆಯಿಟ್ಟಿದ್ದ ತಿಮ್ಮಿಯ ತಂದೆ ದೊಡ್ಡಬೀರನಿಗಂತೂ ಧೈರ್ಯವೇ ಧೈರ್ಯ! ತನ್ನ ಮಗಳನ್ನು ಜಕಿಣಿ ಅಡಗಿಸಿಟ್ಟಿದೆ; ನಾಳೆ ಬಂದೇಬರುತ್ತಾಳೆ. ಜಕಿಣಿಗೆ ಸರಿಯಾಗಿ ಹರಕೆ ಹೊತ್ತರಾಯಿತು. ಜೊತೆಗೆ ಇನ್ನೊಂದು ಸಂಕಲ್ಪವೂ ಅವನ ತಲೆಗೆ ಹೊಕ್ಕಿತ್ತು: ತಲೆ ಮೇಲೆ ತಲೆಬಿದ್ದು ಹೋದರೂ ಹೋಗಲಿ, ಕಿಲಸ್ತರ ಜಾತಿಗೆ ಸೇರುವ ಆ ಬಚ್ಚನಿಗೆ ಖಂಡಿತ ಹೆಣ್ಣು ಕೊಡುವುದಿಲ್ಲ ಎಂದು.

ಆದರೆ ಆ ಧೈರ್ಯಕ್ಕೆ ಸಮಸ್ಪರ್ಧಿಯಾಗಿದ್ದ ಒಂದು ಮಹಾಸಂಕಟ ಮಾತ್ರ ಅವನನ್ನು ಬಿಟ್ಟಿರಲಿಲ್ಲ: ತನ್ನ ಮಗಳ ಮೈಮೇಲೆ ಹಾಕಿದ್ದ 'ನಗ' ಮಗಳ ಜೊತೆ ಹಿಂದಿರುಗುತ್ತದೆಯೋ ಇಲ್ಲವೋ ಎಂದು. ಅದೂ ಅವರಿವರನ್ನೂ ಬೆಟ್ಟಳ್ಳಿ ಒಡೆಯರನ್ನೂ ಕಾಡಿ ಬೇಡಿ ಕಡ ತಂದದ್ದು! ಅದನ್ನು ಮತ್ತೆ ಮತ್ತೆ ಹೆಂಡತಿಯೊಡನೆ ಹೇಳಿಕೊಂಡು, ಅವಳನ್ನು ರಂಡೆ ಮುಂಡೆ ಎಂದು ಬೈಯತೊಡಗಿದ್ದನು. ಸೇಸಿ ಅಲ್ಲಿ ಇಲ್ಲಿ ಹುಡುಕಿದಂತೆ ಮಾಡಿ, ಮಡಕೆಯಲ್ಲಿ ಗಂಟುಕಟ್ಟಿಹಾಕಿದ್ದ ಆ 'ನಗ' ವನ್ನು ತಂದು 'ಜಕಿಣಿ ಅದನ್ನು ಇಲ್ಲೆ ಹಾಕಿ ಹೋಗ್ಯದೆ' ಎಂದು ಹೇಳಿದಾಗ ಅವನ ಆನಂದಕ್ಕೆ ಪಾರವೆ ಇರಲಿಲ್ಲ. ಬೈಸಿಕಲ್ಲಿನ ಪ್ರಸಂಗದಿಂದಾಗಿದ್ದ ಪೆಟ್ಟುಗಾಯಗಳ ನೋವೂ ಅವನಿಗೆ ಮರೆತುಹೋದಂತಿತ್ತು. "ಇನ್ನು ಆ ಹಾಳುಮುಂಡೆ ಬಂದರೇನು ಬಿಟ್ಟರೇನು?" ಎಂದು ಮಗಳಿಗೆ ಶಾಪ ಹಾಕಿಯೂ ಬಿಟ್ಟಿದ್ದನು: ಅವಳ ರುಣಾ ಕಡೀಲಿ!"

ಇತ್ತ ಕೇರಿಯ ಸುತ್ತಮುತ್ತ ಅವಳ ಅನ್ವೇಷಣೆ ನಡೆಯುತ್ತಿದ್ದಾಗ ತಿಮ್ಮಿ ತನ್ನ ಮುಂದೆ ಅತ್ತಿತ್ತ ಬೀಸುತ್ತಾ ಉರಿಯುತ್ತಾ ಮತ್ತೆ ಉರಿ ಆರಿ ಕೆಂಡವಾಗುತ್ತಾ ಮತ್ತೆ ಬೀಸಿದಂತೆಲ್ಲ ಹೊತ್ತಿ ಉರಿಯುತ್ತಾ ಕಗ್ಗತ್ತಲೆಯಲ್ಲಿ ಬೇಗಬೇಗನೆ ಚಲಿಸಿ ಮುಂಬರಿಯುತ್ತಿದ್ದ ದೊಂದಿಯ ಹಿಂದೆ ಅದನ್ನನುಸರಿಸಿ ಬಿರಬಿರನೆ ನಡೆಯುತ್ತಿದ್ದಳು. ತಾನು ಹೋಗುತ್ತಿದ್ದುದು ಯಾವ ದಾರಿ? ಯಾವ ಊರು? ಎಲ್ಲಿಗೆ ಹೋಗುತ್ತಿದ್ದೇನೆ? ಎಂಬುದಾವುದೂ ಅವಳಿಗೆ ಗೊತ್ತಿರಲೂ ಇಲ್ಲ, ಗೊತ್ತು ಮಾಡಿಕೊಳ್ಳುವ ಗೋಜಿಗೆ ಹೋಗಲೂ ಇಲ್ಲ. ಕಣ್ಣಿಗೂ ಏನೆಂದೂ ಕಾಣಿಸುತ್ತಲೂ ಇರಲಿಲ್ಲ, ದೊಂದಿಯ ತುದಿಯ ಬೆಂಕಿ ವಿನಾ. ಅಂದರೆ ಹಳು ದಟ್ಟವಾಗುತ್ತಿದ್ದುದು ಮೈಗೆ ಕೀಸುವ ಪೊದೆಗಳಿಂದ ಗೊತ್ತಾಗುತ್ತಿತ್ತು. ದೊಂದಿ ಒಮ್ಮೊಮ್ಮೆ ಭಗ್ಗನೆ ಉರಿದಾಗ ತಾವು ಹೋಗುತ್ತಿದ್ದ ಕಾಡು ಎತ್ತರವಾಗಿದ್ದ ಮರಗಳಿಂದ ಕಿಕ್ಕಿರಿದದ್ದೂ ಗೊತ್ತಾಗುತ್ತಿತ್ತು. ಒಮ್ಮೊಮ್ಮೆ ನೀರು ಇರುವ ತಾಣದ ಸಮೀಪದಲ್ಲಿ ಹೋಗುವಾಗ ದೊಂದಿಯ ಪ್ರತಿಬಿಂಬ ಅದರಲ್ಲಿ ಪ್ರಜ್ವಲಿಸುತ್ತಿತ್ತು; ಸರಲಿನ ಜೌಗಿನಲ್ಲಿ ದಾಟುವಾಗ ಕೆಸರು ಸಿಡಿದು ದೊಂದಿಯ ಬೆಂಕಿ ಚುಂಯ್‌ಗುಡುತ್ತಿತ್ತು; ಕಪ್ಪೆಗಳು ಹೆದರಿ ಹಾರಿ ದೊಂದಿಯ ಬೆಳಕು ನೀರಿನ ಅಲೆಗಳಲ್ಲಿ ಕುಣಿಯುತ್ತಿತ್ತು; ಕೆಲವೆಡೆ ಹುಳು ಹಪ್ಪಟೆಗಳು ದೊಂದಿಗೆ ಮುತ್ತಿ ಸುಟ್ಟು ಸೀದು ಚಟಪಟ ಸಿಡಿಯುತ್ತಿದ್ದವು. ಆ ಕತ್ತಲೆಗೆ ಸರಿಸಮವಾಗಿ ಅಥವಾ ಒಂದು ಕೈ ಮೇಲಾಗಿಯೇ ಕರಗಿದ್ದ ಹುಲಿಯ ಒಮ್ಮೆ ಇವಳ ಹಿಂದೆಯೂ ಒಮ್ಮೆ ದೊಂದಿ ಹಿಡಿದು ಬೀಸುತ್ತಾ ಹೋಗುತ್ತಿದ್ದ ಗುತ್ತಿಯ ಮುಂದೆಯೂ, ಒಮ್ಮೆ ಆಕಡೆ ಈಕಡೆ ಪಕ್ಕದಲ್ಲಿಯೂ ಹಳುವಿನಲ್ಲಿ ಓಡಾಡುತ್ತಿದ್ದು ತಿಮ್ಮಿಗೆ

ಧೈರ್ಯವಾಗಿತ್ತು. ಅದರ ಮೈ ಆ ಕತ್ತಲೆಯಲ್ಲಿ ಏನೇನೂ ಕಾಣಿಸದೆ ಇದ್ದಿತಾದರೂ ಒಮ್ಮೊಮ್ಮೆ ದೊಂದಿಯ ಬೆಳಕಿನ ಕಡೆಗೆ ಅದು ಮೋರೆ ತಿರುಗಿಸಿದಾಗ ಅದರ ಕಣ್ಣುಗಳು ಗೋಲಿಯ ಗಾತ್ರದ ಮಿಣುಕು ಹುಳುಗಳಂತೆ ಪಳಪಳ ಹೊಳೆಯುತ್ತಿದ್ದವು. ಹುಲಿಯನ ಓಡಾಟದ ದೆಸೆಯಿಂದ ಒಮ್ಮೊಮ್ಮೆ ಯಾವುದೊ ದೊಡ್ಡ ಪ್ರಾಣಿಯೊ ಪ್ರಾಣಿಗಳೊ ಹಳು ಸದ್ದಾಗುವಂತೆ ಧಾವಿಸುತ್ತಿದ್ದುದು ತಿಮ್ಮಿಗೆ ಉಸಿರುಕಟ್ಟಿ ಉಸಿರುಬಿಡುವಂತಾಗುತ್ತಿತ್ತು. ಹೋಗುತ್ತಾ ಹೋಗುತ್ತಾ ದಾರಿ ಕಡಿದಾಗಿ ಏರತೊಡಗಿತ್ತು. ಮುಂದಿನ ದೊಂದಿಯ ಬೆಳಕು ತನ್ನ ಮುಖಕ್ಕೆ ಕೆಳಗೆ ಅಥವಾ ಸಮನಾಗಿ ನೇರವಾಗಿರದೆ ತುಂಬಾ ಎತ್ತರದಲ್ಲಿ ಹೋಗುತ್ತಿದ್ದಂತೆ ಕಾಣತೊಡಗಿತ್ತು. ಕಾಲೂ ದಣಿದು ಜಾರುವಂತಾಗುತ್ತಿತ್ತು. ಉಸಿರೆಳೆದುಕೊಳ್ಳುವ ವೇಗ ಹೆಚ್ಚಿತ್ತು. ಈಗ ಅವರು ಹೋಗುತ್ತಿದ್ದುದು ಸಮೆದ ಕಾಲು ಹಾದಿಯಲ್ಲ ಎಂಬುದು ಅವಳ ಮನಸ್ಸಿಗೆ ಬಂದಿತ್ತು. ಸಣ್ಣಪುಟ್ಟ ಮುಳ್ಳು ಚುಚ್ಚಿದಾಗಲೆಲ್ಲ ಅವಳೇ ತುಸುಬಾಗಿ ಸಾಧ್ಯವಾದವುಗಳನ್ನು ತೆಗೆದು ಬಿಸಾಡಿದ್ದಳು. ಆದರೆ ಒಂದು ಉದ್ದವಾದ ಅಂಕೋಲೆ ಮುಳ್ಳು ಚುಚ್ಚಿದಾಗ ಮಾತ್ರ ನಡೆಯಲಾರದೆ ಕುಳಿತು "ಬಾವ!" ಎಂದು ಮೆಲ್ಲಗೆ ಅಳುದನಿಯಿಂದ ಕರೆದಿದ್ದಳು. ಗುತ್ತಿ ಹಿಂದಕ್ಕೆ ಬಂದು, ದೊಂದಿಯನ್ನು ಒಂದು ಹಸಿಗಿಡಕ್ಕೆ ಆನಿಸಿಟ್ಟು, ಅದರ ಬೆಳಕಿನಲ್ಲಿ ಅವಳ ಅಂಗಾಲಿಗೆ ಆಳವಾಗಿ ಚುಚ್ಚಿದ್ದ ಮುಳ್ಳನ್ನು ಸ್ವಲ್ಪ ಬಲಪ್ರಯೋಗಮಾಡಿಯೆ ಕಿತ್ತಿದ್ದನು. ರಕ್ತವೂ ಹರಿದಿತ್ತು. ನೋವು ಚೆನ್ನಾಗಿಯೆ ಆಗಿತ್ತು. ಆಮೇಲೆ ಅಂಗಾಲಿನ ಆ ಭಾಗವನ್ನು ಆದಷ್ಟು ಪ್ರಯತ್ನಪೂರ್ವಕವಾಗಿ ನೆಲಕ್ಕೆ ಊರದಂತೆ ನಡೆದಿದ್ದಳು.

ಹಾಗೆ ಕುಂಟಿ ಕುಂಟಿ ಗುತ್ತಿಯ ಹಿಂದೆ ಗುಡ್ಡ ಹತ್ತುತ್ತಿದ್ದಾಗಲೆ ನೆತ್ತರು ಹೆಪ್ಪುಗಟ್ಟುವಂತಹ ಆ ರುದ್ರ ಘಟನೆ ನಡೆದದ್ದು:

ಅದೇ ಸಮಯದಲ್ಲಿ, ಐತ ಪೀಂಚಲು ಇಬ್ಬರೂ ಅವರ ಬಿಡಾರದಲ್ಲಿ ಊಟ ಮುಗಿಸಿ ಈತನ ಬತ್ತಲೆ ಮೈಗೆ ಪೀಂಚಲು ತೆಂಗೆನೆಣ್ಣೆ ನೀವುತ್ತಿದ್ದದ್ದು: ಇದ್ದಕ್ಕಿದ್ದಹಾಗೆ ಹೆಬ್ಬುಲಿಯ ಆರ್ಭಟೆ ಕಂದರಾದ್ರಿವಿಲಿನಗಳನ್ನೆಲ್ಲ ಆಲೋಡಿಸಿತ್ತು; ದೊಡ್ಡಿನ ಹಿಂದು ಭೂಮಿಯನ್ನೆಲ್ಲ ಗುಡುಗಿಸುವಂತೆ ಓಡಿದ ಸದ್ದಾಗಿತ್ತು! ಐತ ಕಮ್ಮಾರಸಾಲೆಯಲ್ಲಿ ದೊಂದಿ ಹೊತ್ತಿಸಿಕೊಂಡು ಸಿಂಬಾವಿಗೆ ಹೋಗುತ್ತೇನೆಂದು ಹೇಳಿ ಹೋಗಿದ್ದ ಗುತ್ತಿಯನ್ನು ನೆನೆದು, ಅವನ ಸುರಕ್ಷತೆಗೆ ಕಾತರನಾಗಿ ಪೀಂಚಲುವಿಗೆ ಹೇಳಿದ್ದನು: "ಏನಿರಬೇಕು ಅವನ ಎದೆ? ಆ ಹುಲಿಕಲ್‌ನೆತ್ತಿ, ಬೆತ್ತದಸರ, ಎಲ್ಲಾ ದಾಟಿಕೊಂಡು ಹೋಗಬೇಕಲ್ಲಾ!" ಎಂದು.

ತಟಕ್ಕನೆ ನಿಂತನು ಗುತ್ತಿ. ಕಿವಿಗೊಟ್ಟನು. ಹುಬ್ಬು ನಿಮಿರಿತು. ಹಣೆ ಬಿತ್ತರಿಸಿತು. ಉಸಿರು ಒಮ್ಮೆಗೆ ನುಗ್ಗಿ ಶ್ವಾಸಕೋಶ ಹಿಗ್ಗಿ ತುಂಬಿತು ಕ್ಷಣಾರ್ಧದಲ್ಲಿ ಗ್ರಹಿಸಿತ್ತು ಅವನ ಬೇಟೆಗಾರ ಮನಸ್ಸು, ನಡೆಯುತ್ತಿದ್ದುದು ಏನು ಎಂದು. ತೆಕ್ಕನೆ ತಿರುಗಿ, ಜೀವ ಹಾರಿಹೋಯಿತೋ ಎಂಬಂತೆ ಹೆದರಿ ಹೌವ್ವನೆ ಹಾರಿ ತನ್ನನ್ನು ಒತ್ತಿ ನಿಂತಿದ್ದ ತಿಮ್ಮಿಯನ್ನು ಬಳಿಯಿದ್ದ ಒಂದು ಹೆಮ್ಮರದ ಬುಡಕ್ಕೆ ಎಳೆದು ನಿಲ್ಲಿಸಿ, ಅವಳಿಗೆ ಅಡ್ಡಲಾಗಿ ನಿಂತು, ಕೈಯಲ್ಲಿದ್ದ ದೊಂದಿಯನ್ನು ಬೀಸುತ್ತಲೆ, ಉಜ್ವಲಗೊಳಿಸಿದನು. ದೊಂದಿಯ ತುದಿಯ ಅಗ್ನಿಜ್ವಾಲೆ ಆ ಕತ್ತಲೆಯಲ್ಲಿ ಅಲಾತಚಕ್ರದಂತೆ ಹಿಂದಕ್ಕೂ ಮುಂದಕ್ಕೂ ಬೆಂಕಿಗೆರೆ ಎಳೆಯುತ್ತಿತ್ತು. ಅವರಿಬ್ಬರೂ ಹಿಂಬದಿಯ ರಕ್ಷೆಯಾಗಿತ್ತು ಆ ಪ್ರಕಾಂಡ ವೃಕ್ಷದ ದಿಂಡು. ಮುಂದುಗಡೆ ರಕ್ಷೆಯಾಗಿತ್ತು, ಬೀಸುತ್ತಿದ್ದ ದೊಂದಿಯ ಹಿಲಾಲು: ಹುಲಿಯಾಗಲಿ ಹಂದಿಯಾಗಲಿ ಕರಡಿಯಾಗಲಿ ದೊಡ್ಡೆ ಆಗಲಿ ಉರಿಯುವ ಬೆಳಕಿಗೆ ಅಂಜಿ ಅದರ ಬಳಿಸಾರುವುದಿಲ್ಲ - ಎಂಬುದು ಗುತ್ತಿಗೆ ಚೆನ್ನಾಗಿ ಗೊತ್ತಿತ್ತು: ಆ ಧೈರ್ಯದಿಂದಲೆ ಅವನು ತಿಮ್ಮಿಗೆ 'ಹೆದರಬೇಡ, ಹಂದದೆ ಸುಮ್ಮನೆ ನಿಂತುಕೊ' ಎಂದು ಎಚ್ಚರಿಕೆ ಹೇಳಿದ್ದನು.

ಕಾಡಿನಲ್ಲಿ ಹೆಬ್ಬುಲಿಯ ಅಬ್ಬರವನ್ನು ಹತ್ತಿರದಿಂದ ಕೇಳಿದವರಿಗೆ ಮಾತ್ರ ಗೊತ್ತು, ಗಿಡ ಮರ ಕಾಡು ಬೆಟ್ಟ ನೆಲ ಎಲ್ಲ ನಡುಗುತ್ತವೆ ಎಂಬುದರ ಅರ್ಥ! ತಿಮ್ಮಿಯೇನೊ ಹೆದರಿಯೆ ಸತ್ತು, ತೊಳ್ಳೆ ನಡುಗುತ್ತಾ, ನಿಲ್ಲಲೂ ಆರದೆ, ಮರದಬುಡಕ್ಕೆ ಒತ್ತಿ ಕುಸಿದು ಕೂತಿದ್ದಳು. ಆದರೆ ಗುತ್ತಿಗೆ ಎದೆನಡುಕವೇನೂ ಇರಲಿಲ್ಲ. ಆ ಅಪಾಯ ಒಂದೆರಡು ನಿಮಿಷಗಳಲ್ಲಿಯೆ ಬಂದ ದಾರಿ ಹಿಡಿದು ಹೋಗುತ್ತದೆ ಎಂಬುದರಲ್ಲಿ ಅವನಿಗೆ ಸಂದೇಹವೂ ಇರಲಿಲ್ಲ; ಆದ್ದರಿಂದ ಅವನೇನೂ ನಡುಗುತ್ತಿಲಿಲ್ಲ. ಕಾಡು ಭೂಮಿ ಬೆಟ್ಟ ಬಂಡೆಗಳೆಲ್ಲ ನಡುಗುತ್ತಿದ್ದುದಕ್ಕೆ ಅವನ ನಡುಕದ ಕಾರಣ ಇನಿತೂ ಇರಲಿಲ್ಲ, ಅವೇ ನಿಜವಾಗಿಯೂ ನಡುಗುತ್ತಿದ್ದುವು. ಅಲ್ಲಿ ಹೆದರಿಕೊಳ್ಳುವುದಕ್ಕೆ ಯಾವ ಸಚೇತನ ಜೀವಿಯೂ ಇರದೆ ಇದ್ದಿದ್ದರೂ ಆ ಪ್ರಕಂಪನ ವ್ಯಾಪಾರ ಭೌತಮಾತ್ರವಾಗಿಯೂ ನಡೆಯುತ್ತಿತ್ತು:

ಹಾಗಿತ್ತು ಆ ಹೆಬ್ಬುಲಿಯ ಆರ್ಭಟ!

ಅದಕ್ಕೆ ಸಮಸ್ಪರ್ಧಿಯಾಗಿ, ನಿಮಿಷಾರ್ಧದಲ್ಲಿಯೆ ಮೊಳಗಿಬಂದಿತ್ತು, ದೊಡ್ಡಿನ ಹಿಂಡು ನುಗ್ಗಿ ಧಾವಿಸಿಬರುತ್ತಿದ್ದ ಮಹಾಸದ್ದು, ಸಣ್ಣ ಪುಟ್ಟ ಮರ ಗಿಡ ಹಳುಗಳೆಲ್ಲ ನುಚ್ಚುನುರಿಯಾಗಿ ನೆಲಸಮವಾಗುವಂತೆ. ಹತ್ತಿರದಲ್ಲಿಯೇ ಸಿಡಿಲು ಬಡಿದಿದ್ದರೆ ಆಗಬಹುದಾದ ಅನುಭವವಾಗಿತ್ತು ಗುತ್ತಿಗೂ! ಹತ್ತೋ ಇಪ್ಪತ್ತೋ ಎಷ್ಟೋ ಕಾಡುಕೋಣ ಕಾಡೆಮ್ಮೆಗಳು ದಿಡು ದಿಡು ಎಂದು ಇವರು ಆಶ್ರಯಿಸಿ ನಿಂತಿದ್ದ ಹೆಮ್ಮರದ ದಿಕ್ಕಿಗೆ ಮಲೆಯ ನೆತ್ತಿಯಿಂದ ಕೆಳಕ್ಕೆ ಧಾವಿಸಿ ಬರುತ್ತಿದ್ದಂತೆ ತೋರಿತು. ಗುತ್ತಿಯ ನಾಯಿ, ಹುಲಿಯ, ಪ್ರಾರಂಭದಲ್ಲಿ ಒಂದೆರಡು ಸೊಲ್ಲು ಬೊಗುಳಿ ಕಾಡಿನೊಳಕ್ಕೆ ನುಗ್ಗಿ ಹೋದದ್ದು, ಮತ್ತೆ ಹಿಂದಕ್ಕೆ ಓಡಿ ಬಂದು ಗುತ್ತಿಯ ಮುಂದೆಯೆ ನಿಂತು ಸದ್ದು ಬರುತ್ತಿದ್ದ ದಿಕ್ಕಿನಕಡೆಗೆ ಮೊಗಮಾಡಿ ಬೊಗುಳತೊಡಗಿತ್ತು. ಆದರೆ ಆ ಹೆಬ್ಬುಲಿಯ ಕೂಗಿನ ಮತ್ತು ದೊಡ್ಡುಗಳ ನುಗ್ಗಿನ ಭಯಂಕರ ರಾವದ ಇದಿರು ನಾಯಿಯ ಬೊಗಳು ನಗಣ್ಯವಾಗಿಬಿಟ್ಟಿತು.

ಬಂತು! ಬಂತು! ಅದೊ ಹತ್ತಿರಕ್ಕೆ ಬರುತ್ತಿವೆ! ಕಣ್ಣಿಗೇನೂ ಕಾಣಿಸದು. ಬೀಸುತ್ತಿದ್ದ ದೊಂದಿಯ ಕೆಂಬಳಕಿನಲ್ಲಿ ಅದೊಂದೇ ನಯನೇಂದ್ರಿಯ ವಿಷಯವಾಗಿತ್ತು. ಇನ್ನು ಕರ್ಣೇಂದ್ರಿಯ? ಅದೂ ತನ್ನ ಅಳವಿಗೆ ಮೀರಿದ್ದ ಸಿಡಿಲು ಸದ್ದಿನ ಮಹಾ ಪ್ರವಾಹದಲ್ಲಿ ಕೊಚ್ಚಿ ಹೋಗಿತ್ತು, ಮುರ್ಛೆಹೋದಂತಿತ್ತು.

ದೊಡ್ಡಿನ ಹಿಂಡು ನುಗ್ಗುವ ರಭಸಕ್ಕೆ ಸಿಡಿಲು ಕಲ್ಲು ಮಣ್ಣು ಇವರು ನಿಂತಿದ್ದೆಡೆಗೆ ಹಾರಿಬರತೊಡಗಿತು. ಅವುಗಳ ವೇಗದಿಂದ ಉದ್ಭವವಾದ ಗಾಳಿಯೂ ಬಳಿ ಸಾರಿದಂತೆ ಅನುಭವ! ಗುತ್ತಿ, ನರ ಬಿಗಿದು, ಕಾಲಗಲಿಸಿ ದೃಢವಾಗಿ ನಿಂತು, ಒಂದೇ ಸಮನೆ ದೊಂದಿಯನ್ನು ಬೀಸತೊಡಗಿದ್ದನು! ನುಗ್ಗಿ ಬರುತ್ತಿದ್ದ ಪ್ರಾಣಿಗಳಿಗೆ ಅದು ಹೇಗೆ ಕಾನಿಸಿತೋ ಆ ಕತ್ತಲಲ್ಲಿ? ಇದ್ದಕ್ಕಿದ್ದಹಾಗೆ, ಗುತ್ತಿಯ ದೊಂದಿಯ ಜ್ವಾಲೆ ಪ್ರತಿಫಲಿಸಿತೆಂದು ತೋರುತ್ತದೆ, ಹಳುವಿನ ನಡುನಡುವೆ ಹಲವಾರು ಹೆಗ್ಗಣ್ಣು ಫಳಫಳಫಳನೆ ಹೊಳೆದಂತಾಗಿ, ಒಡನೆಯೆ, ಬೆಂಕಿ ಬೆದರಿ ಅವು ದಿಕ್ಕು ಬದಲಾಯಿಸಿದ್ದರಿಂದ, ಮಾಯವಾಗಿದ್ದುವು. ಸದ್ದುಹೊಳೆ ಬೇರೆ ದಿಕ್ಕಿಗೆ ಹರಿಯತೊಡಗಿ, ಬರಬರುತ್ತಾ ಕ್ಷೀಣವಾಗಿ, ಮೂರು ನಾಲ್ಕು ನಿಮಿಷಗಳಲ್ಲಿ ಕಾಡು, ಅತ್ಯಂತ ಅಸ್ವಾಭಾವಿಕವೊ ಎಂಬಂತೆ, ಗಾಢವಾಗಿ ನಿಃಶಬ್ದವಾಗಿಬಿಟ್ಟಿತ್ತು. ಹುಲಿಯನ ನಾಲಗೆಯೂ ಅದರ ಗಂಟಲಿನಲ್ಲಿ ಹುದುಗಿ ಮೌನವಾಗಿತ್ತು. ನಡೆದ ಘಟನೆಯ ಭೀಷಣ ಭವ್ಯಾನುಭವಕ್ಕೆ ಸ್ತಂಭೀಭೂತವಾದಂತೆ!

ಹೆದೆಯೇರಿದ ಬಿಲ್ಲಿನಂತೆ ಬಿಗಿದುನಿಂತಿದ್ದ ಮೈಯನ್ನು ಸಡಿಲಿಸಿ, ಶ್ವಾಸಕೋಶ ತುಂಬುವಂತೆ ದೀರ್ಘವಾಗಿ ಉಸಿರೆಳೆದು ಬಿಡುತ್ತಾ, ಗುತ್ತಿ ತಿಮ್ಮಿಯ ಯೋಗಕ್ಷೇಮ ಪರಿಶೀಲನೆಗೆ ತಿರುಗಿದನು. ಅವಳು ಮರದ ಬುಡದಲ್ಲಿ ಮುದ್ದೆಯಾಗಿ ಕೂತಿದ್ದಳು. ಕರೆದರೆ ಮಾತಾಡಲಿಲ್ಲ. ಪಿಳಪಿಳನೆ ಕಣ್ಣುಬಿಟ್ಟು ಅವನ ಕಡೆಗೆ ನೋಡುತ್ತಿದ್ದಳು. ಭೀತಿಮೂಕೆಯಾಗಿದ್ದ ಅವಳಿಗೆ ಮಾತು ನಿಂತುಹೋಗಿತ್ತು. "ಹೆದರಬ್ಯಾಡೆ, ಏಳು, ಬೇಗ ಹೋಗಾನ" ಎಂದು ಮೆಲ್ಲನೆ ಎತ್ತಿ ನಿಲ್ಲಿಸಿದನು. ಅವಳ ಕಾಲುನಡುಕ ಇನ್ನೂ ನಿಂತಿರಲಿಲ್ಲ; ತಾನು ಹಿಡಿದಿದ್ದ ಬುತ್ತಿ ಇರುವ ಗಂಟನ್ನು ಮಾತ್ರ ಭದ್ರವಾಗಿ ಎದೆಗೆ ಅವುಚಿಕೊಂಡಿದ್ದಳು. ಅವಳನ್ನು ನಡೆಸಿಕೊಂಡು ನಿಧಾನವಾಗಿ ಗುಡ್ಡವೇರಿದನು.

ಸ್ವಲ್ಪದೂರ ಹೋದಮೇಲೆ ಗುಡ್ಡದ ಕಡಿಪು ಕಡಿಮಾಯಾಗ ತೊಡಗಿ, ಕಡೆಗೆ ಸಮತಟ್ಟಾಗುತ್ತಾ ಬಂದಿತು. ಇನ್ನೂ ಸ್ವಲ್ಪ ಮುಂದೆ ಹೋದಮೇಲೆ ಮರಗಳೂ ವಿರಳವಾಗಿ, ಹಳು ಹಕ್ಕಲಾದಂತೆ ತೋರಿ, ಕಡೆಗೆ ಬಂಡೆಯ ಹಾಸುಗಲ್ಲಿನ ಮೇಲೆ ನಿಂತಾಗ ನೆತ್ತಿಯ ಮೇಲೆ ಆಕಾಶವು ಕಾಣಿಸತೊಡಗಿತು. ಚುಕ್ಕಿ ಕಿಕ್ಕಿರಿದು, ಕಾಡಿನ ಒಳಗಿದ್ದ ಕಗ್ಗತ್ತಲೆಗೆ ಬದಲಾಗಿ ನಕ್ಷತ್ರ ಕಾಂತಿಯ ಮಬ್ಬುಗತ್ತಲೆ ಹಬ್ಬ, ವಸ್ತುಗಳ ಬಹಿರಾಕಾರಗಳೂ ಮಂಜು ಮಂಜಾಗಿ ಕಾಣಿಸುತ್ತಿದ್ದುವು. ಅವರು ನಿಂತಿದ್ದ ಎತ್ತರಕ್ಕೆ ದಿಗಂತವು ಸುತ್ತಲೂ ವಿಸ್ತಾರವಾಗಿ ಹಿಂದಕ್ಕೆ ಸರಿದು, ದೂರದೂರದ ಪರ್ವತಶ್ರೇಣಿಗಳ ಮಷೀಮಯ ರೂಪಗಳಲ್ಲಿ ಕೊನೆಗೊಂಡಿತ್ತು.

"ಇದೇ ಹುಲಿಕಲ್ಲು ನೆತ್ತಿ ಕಣೇ!" ಎಂದನು ಗುತ್ತಿ.

ತಿಮ್ಮಿ ಮಾತಾಡಲಿಲ್ಲ. ಅವಳು ಒಂದು ಬಂಡೆಯ ಮೇಲೆ ವಿಶ್ರಮಿಸಿಕೊಳ್ಳುವಂತೆ ಕುಳಿತಿದ್ದಳು. ಕೇರಿಯಿಂದ ಹೊರಡುವಾಗ ಅವಳಿಗಿದ್ದ ಪ್ರಣಯೋತ್ಸಾಹದ ಸಾಹಸವೆಲ್ಲ ಉಡುಗಿಹೋಗಿತ್ತು. ಇಷ್ಟು ಹೊತ್ತಿಗೆ ಬಿಡಾರದಲ್ಲಿ ಅಪ್ಪನ ಮಗ್ಗುಲಲ್ಲಿ ಸುಖವಾಗಿ ನಿದ್ದೆ ಮಾಡುತ್ತಾ ಮಲಗಿರುತ್ತಿದ್ದೆನಲ್ಲಾ ಎನ್ನಿಸಿ ಅವಳ ಮನಸ್ಸಿನಲ್ಲಿ ಪಶ್ಚಾತಾಪ ಮೂಡತೊಡಗಿತ್ತು. ಅವಳು ಹೊರಟಾಗ ಈ ಕಾಡು, ಹಳು, ಬೆಟ್ಟ, ಪಯಣದ ದಣಿವು, ಹುಲಿ, ದೊಡ್ಡು, ಪ್ರಾಣಕ್ಕೆ ಒದಗಲಿದ್ದ ಭಯ ಇವುಗಳನ್ನೆಲ್ಲ ನಿರೀಕ್ಷಿಸಿರಲಿಲ್ಲ. ನೆಟ್ಟಗೆ ಸಿಂಬಾವಿಗೆ ಹೋಗಿ, ಅಲ್ಲಿಯ ಕೇರಿಯಲ್ಲಿ ಅತ್ತೆ ಮಾವಂದಿರೊಡನೆ ಇದ್ದುಬಿಡುತ್ತೇನೆ ಎಂದು ಊಹಿಸಿದ್ದಳು.

"ಏನೆ ಪೂರಾ ಸಾಕಾಗಿ ಹೋಯ್ತೇನೆ?" ಗುತ್ತಿ ಅವಳ ಸ್ಥಿತಿಯನ್ನು ಕಂಡು ಸ್ವಲ್ಪ ಚಿಂತೆಯಿಂದಲೆ ಕೇಳಿದನು.

"ಇನ್ನೆಷ್ಟು ದೂರ ಅದೆ ಸಿಂಬಾವಿ?" ದಣಿದ ದನಿಯಿಂದ ತಿಮ್ಮಿ ಕೇಳಿದಳು.

"ಸುಮಾರು ದೂರ ಅದೆ."

"ನಮ್ಮ ಮನೀಗೇ ಹೋಗಾನ."

ಗುತ್ತಿಗೆ ದಿಗ್‌ಭ್ರಾಂತಿ. ಅವಳು ಹೇಳಿದ್ದನ್ನು ನಂಬಲಾರದೆ ಹೋದನು. ಅವಳು ಹೇಳಿದುದರ ಅರ್ಥ ಹಾಗಾರಲಿಕ್ಕಿಲ್ಲ ಎಂದು ಆಶಿಸಿ "ಏನು?" ಎಂದು ಪ್ರಶ್ನಿಸಿ ಉತ್ತರಕ್ಕೆ ಕಾತರನಾಗಿ ಕಿವಿಗೊಟ್ಟಿದ್ದನು.

"ನಮ್ಮ ಮನೀಗೇ ಹೋಗಾನ!" ಪುನರುಚ್ಚರಿಸಿದ್ದಳು ತಿಮ್ಮಿ, ಈ ಸಾರಿ ತುಸು ಅಳುದನಿಯಿಂದ.

"ಮನೀಗೆ ಅಂದ್ರೆ? ನಿಮ್ಮ ಕೇರಿಗಾ?"

"ಹ್ಞೂ!"

"ಹೋದ್ರೆ ನಿನ್ನ ಅಪ್ಪ ಕೊಚ್ಚಿಹಾಕ್ತಾನೆ."

"ಕೇರಿಹತ್ರ ಬಿಟ್ಟುಹೋಗಿಬಿಡು ನೀನು. ನಾ ಬಿಡಾರಕ್ಕೆ ಹೋಗಿ ಅವ್ವನ್ನ ಕರೆದೆಬ್ಬಿಸ್ತೀನಿ...."

"ಎಲ್ಲಿಗೆ ಹೋಗಿದ್ದೆ ಅಂತ ಕೇಳೀದ್ರೆ ನಿನ್ನಪ್ಪ?"

"ದೆಯ್ಯ ಅಡಗಿಸಿತ್ತು ಅಂತಾ ಹೇಳ್ತೀನಿ."

"ನಂಬತಾರೇನೆ?"

"ಅವತ್ತೊಂದು ಸಲ ಹಾಂಗೆ ಹೇಳಿದ್ದೆ; ನೆಂಬಿದ್ರು."

"ಓಡಿಹೋಗಿದ್ದೇನೆ? ಯಾರ ಜೋತೇಲೆ? ಯಾಕೇ? ಯಾವಾಗ್ಲೆ?" ಗುತ್ತಿಯ ಪ್ರಶ್ನೆಗಳಲ್ಲಿ ಸಂಶಯ, ಮಾತ್ಸರ್ಯ, ಕೋಪಚ್ಛಾಯೆ ಎಲ್ಲ ಇದ್ದುವು.

ಆದರೆ ತಿಮ್ಮಿ ಮಾತಾಡಲೆ ಇಲ್ಲ. ಗುತ್ತಿ ಸ್ವಲ್ಪಹೊತ್ತು ಉತ್ತರಕ್ಕಾಗಿ ಕಾದು, ಮತ್ತೆ ನಿರ್ಣಾಯಕವಾಗಿ ಹೇಳಿದನು: "ಈಗ ಹಿಂದಕ್ಕೆ ಹೋಗಾದು ಬಂದಿದ್ದಕ್ಕಿಂತಲೂ ಕಷ್ಟ. ಮುಂದಕ್ಕೆ ಹೋಗಾದು ಬ್ಯಾಡ. ಈಗ್ಲೆ ನಿಂಗೆ ಸಾಕಾಗದೆ. ನಾಳೆ ಹೊತಾರೆ ಯಾವುದೋ ಯೇಚ್ನೆ ಮಾಡಾನ. ಈಗ ಏಳು, ಬಾ, ಹೇಳ್ತೀನಿ."

ತಿಮ್ಮಿ ಎದ್ದು ಹಿಂಬಾಲಿಸಿದಳು. ಗುತ್ತಿ ಸ್ವಲ್ಪ ಹೊತ್ತಿನಲ್ಲಿಯೆ, ದೊಡ್ಡಬೇಟೆಯಲ್ಲಿ ಹಳು ನುಗ್ಗಿದಾಗಲೆಲ್ಲ ಅವನು ಕಾಣುತ್ತಿದ್ದ ಒಂದು ಪಾಳು ಗುಡಿಯ ಮಂಟಪಕ್ಕೆ ಬಂದನು. ಅದು ಹುಲಿಕಲ್ಲು ನೆತ್ತಿಯ ದಕ್ಷಿಣಭುಜದಲ್ಲಿದ್ದ ಒಂದು ಕಲ್ಲು ಕಟ್ಟಡವಾಗಿತ್ತು. ನಗರ ಸಂಸ್ಥಾನದ ಶಿವಪ್ಪನಾಯಕನ ಕಾಲದಲ್ಲಿಯೊ ದುರ್ಗದ ಪಾಳೆಯಗಾರರ ಕಾಲದಲ್ಲಿಯೊ ಅದು ಕಾವಲು ಮಂಟಪವಾಗಿತ್ತು ಎಂದು ಹೇಳುತ್ತಿದ್ದರು. ಈಗ ಅದರ ಸುತ್ತ ಹಳು ಬೆಳೆದು ಹುಲಿಕಲ್ಲು ನೆತ್ತಿಯ ಕಾಲುದಾರಿಯಲ್ಲಿ ತಿರುಗಾಡುವವರ ಊಹೆಗೂ ಅತೀತವಾಗುವಷ್ಟರ ಮಟ್ಟಿಗೆ ಅಗೋಚರವಾಗಿತ್ತು. ಬೇಟೆಯಲ್ಲಿ ಹಳುನುಗ್ಗುವವರಿಗೆ ಮಾತ್ರವೆ ಅದರ ಇರವು ಗೊತ್ತಾಗಲು ಸಾಧ್ಯವಾಗಿತ್ತು. ಬಿಲ್ಲಿನವರೂ ಕೂಡ ಅದರ ವಿಚಾರ ಕೇಳಿದ್ದರೆ ಹೊರತೂ ಕಂಡಿರಲಿಲ್ಲ.

ಮಂಟಪದ ಹತ್ತಿರ ಬಿದ್ದಿದ್ದ ಮರದ ಒಣಗು ಹರೆಗಳನ್ನು ಒಟ್ಟುಹಾಕಿ ದೊಂದಿಯಿಂದ ಬೆಂಕಿ ಹೊತ್ತಿಸಿದನು. ಆ ಬೆಂಕಿಯ ಬೆಳಕು ಮಂಟಪದ ಒಳಗಡೆಯನ್ನೂ ಮುಟ್ಟುತ್ತಿತ್ತು. ತರಗು, ಹುಲ್ಲು, ಕಸಕಡ್ಡಿ, ಕಾಡುಪ್ರಾಣಿಗಳ ಹಿಕ್ಕೆ,

ಸೆಗಣಿ, ಒಂದೆರಡು ಕಡೆ ಕಲ್ಲುಬಿರುಕಿನಲ್ಲಿ ಹುಟ್ಟಿಕೊಂಡಿದ್ದ ಯಾವುದೊ ಜಾತಿಯ ಕಾಡುಗಿಗ ಎಲ್ಲ ಆ ಬೆಳಕಿನಲ್ಲಿ ಕಾಣಿಸಿಕೊಂಡುವು. ಆದರೆ ಗುತ್ತಿಗೆ ಗೊತ್ತಿದ್ದ ಪ್ರತೀತಿಯಂತೆ ಅಲ್ಲಿ ಹುಲಿ ಮಲಗಿರಲಿಲ್ಲ ಹಾವು ಗೀವು ಇದ್ದಾವು ಎಂದು ದೊಣ್ಣೆ ಆಡಿಸಿ ನೋಡಿದನು. ಒಂದು ಇಲಿ ಮಾತ್ರ ಎದ್ದು ಹೊರಗೆ ಓಡಿತು. ತಮಗೆ ಮಲಗುವುದಕ್ಕೆ ಎಂದು ಸ್ವಲ್ಪ ಸ್ಥಳವನ್ನು ಇಬ್ಬರೂ ಸೇರಿ ಗುಡುಸಿಕೊಂಡರು.

ಆಗಲೆ ಅರ್ಧ ರಾತ್ರಿಯ ಮೇಲೆ ಹೊತ್ತಾಗಿತ್ತು. ತಿಮ್ಮಿಗೆ ಕಣ್ಣು ಕುಗುರುಹತ್ತಿತ್ತು. ಹಸಿವು ಬೇರೆ. ಆದರೆ ಹಸಿವಿಗಿಂತಲೂ ಹೆಚ್ಚಾಗಿ ಬಾಯಾರಿಕೆ. ಊಟಕ್ಕೇನೊ ಬುತ್ತಿಯಿತ್ತು. ಆದರೆ ಈ ಗಿರಿನೆತ್ತಿಯಲ್ಲಿ ನೀರು? ಎಲ್ಲಿ ಸಿಕ್ಕುತ್ತದೆ? ನೀರನ್ನು ತರುವುದಕ್ಕಾದರೂ ಪಾತ್ರೆ?

ತುಟಿಯನ್ನು ನಾಲಗೆಯಿಂದ ಸವರಿಕೊಳ್ಳುತ್ತಾ ಕುಗ್ಗಿದ ದನಿಯಲ್ಲಿ ತಿಮ್ಮಿ “ನಂಗೆ ಬಾಳ ಆಕರ ಆಗ್ಯದೆ” ಎಂದಳು.

ಗುತ್ತಿ ಸ್ವಲ್ಪ ಹೊತ್ತು ಆಲೋಚಿಸುವಂತೆ ನಿಂತು “ಇಲ್ಲಿ ಎಲ್ಲೋ ಒಂದು ದೊಣೆ ಇದ್ದಾಂಗಿತ್ತಪ್ಪಾ? ಆವೊತ್ತು ಹಳು ನುಗ್ಗಿ ಆಕರ ಬಂದಾಗ ನೀರು ಕುಡಿದಿದ್ದು. ನೋಡ್ಕೊಂಡು ಬತ್ತೀನಿ. ನೀ ಏನು ಹೆದರಿಕೊ ಬ್ಯಾಡ. ಬೆಂಕಿ ಉರಿತಿದ್ರೆ ಅದರ ಹತ್ರ ಜೀಂವಾದಿ ಯಾವುದೂ ಬರಾದಿಲ್ಲ. ಹುಲಿಯನ್ನ ಇಲ್ಲೆ ಕೂರಿಸಿಕೊ” ಎಂದು ದೊಂದಿ ಬೀಸುತ್ತಾ ಕೆಳಗೆ ಹೋದನು. ತಿಮ್ಮಿ ಹುಲಿಯನ್ನು ಹತ್ತಿರಕ್ಕೆ ಕರೆದು ತಲೆ ಸವರತೊಡಗಿದಳು, ಅದರ ಕೊರಳನ್ನು ತಬ್ಬಿಹಿಡಿದು, ಪ್ರೀತಿಯಿಂದೇನಲ್ಲ, ಗುತ್ತಿಯ ಹಿಂದೆ ಓಡಿಹೋಗದೆ ತನ್ನೆಡೆಯೇ ಇರಲಿ ಎಂದು.

ಅಲ್ಲಿಯೆ ತುಸು ಕೆಳಗೆ ಹಾಸುಬಂಡೆಯ ಮಧ್ಯೆ, ನಿಸರ್ಗವೆ ತೋಡಿದ್ದ ಬಾವಿಯಂತೆ ಇದ್ದ ಕಲ್ಲು ಹೊಂಡದಲ್ಲಿ ತಿಳಿಯಾಗಿದ್ದ ನೀರನ್ನು ಗುತ್ತಿ ಬೆಟ್ಟಬಾಳೆಯ ಎಲೆಯಲ್ಲಿ ಮಾಡಿದ ದೊನ್ನೆಯಲ್ಲಿ ಎತ್ತಿ ತಂದನು. ತಿಮ್ಮಿ ಅದನ್ನೆಲ್ಲ ಒಂದೆ ಏಟಿಗೆ ಕುಡಿದುಬಿಟ್ಟಳು. ನೀರು ಕುಡಿದ ಮೇಲೆ ಅವಳಿಗೆ ಜೀವ ಬಂದಂತಾಗಿ ಸ್ವಲ್ಪ ಚಟುವಟಿಕೆಯಾದಳು.

ತಿಮ್ಮಿಯೆ ಬುತ್ತಿ ಬಿಚ್ಚಿದಳು. ಇಬ್ಬರೂ ಉಂಡು, ತಮ್ಮ ಬಾಯಿಕಡೆಗೆ ನೋಡುತ್ತಲೆ ಕುಳಿತಿದ್ದ ಹುಲಿಯನಿಗೂ ಒಂದಷ್ಟು ಹಾಕಿದರು. ಊಟಮಾಡಿದ ಮೇಲೆ ಇಬ್ಬರೂ ದೊಣೆಯ ಬಳಿಗೆ ಇಳಿದುಹೋಗಿ, ಕೈ ಬಾಯಿ ತೊಳೆದುಕೊಂಡು ನೀರನ್ನು ಚೆನ್ನಾಗಿ ಕುಡಿದರು. ಹುಲಿಯನೂ ಲೊಚಗುಟ್ಟುತ್ತಾ ಸುಮಾರು ಹೊತ್ತು ನೀರು ನೆಕ್ಕಿತ್ತು! ತಿಮ್ಮಿ ಅಂತಹ ಊಟವನ್ನು ಅವಳ ಜೀವಮಾನದಲ್ಲಿಯೆ ಮಾಡಿರಲಿಲ್ಲ: ಅಷ್ಟು ಹಿತವಾಗಿತ್ತು, ರುಚಿಯಾಗಿತ್ತು, ಅವಳ ಅವ್ವ ಕಟ್ಟಿ ಕೊಟ್ಟಿದ್ದ ಆ ಬುತ್ತಿ, ಆ ಗಿರಿನೆತ್ತಿಯಲ್ಲಿ!

ಇಬ್ಬರೂ ನಾಯಿಯೊಡನೆ ಮಂಟಪಕ್ಕೆ ಹಿಂದಿರುಗಿ ಹತ್ತಿ ಬಂದರು. ಗುತ್ತಿ ಉರಿಯುತ್ತಿದ್ದ ಬೆಂಕಿಗೆ ಮತ್ತಷ್ಟು ಕುಂಟೆ ಕಟ್ಟಿಗೆ ಹಾಕಿದನು, ಬೆಳಗಿನ ಜಾವದವರೆಗೂ ಅದು ಉರಿಯಲಿ ಎಂದು. ಏಕೆಂದರೆ ಆ ಬೆಂಕಿಯೆ ಅವರಿಗೆ ಧೈರ್ಯವೂ ರಕ್ಷೆಯೂ ಆಗಿತ್ತು, ಆ ಭಯಂಕರ ಅಡವಿಯಲ್ಲಿ.

ತಿಮ್ಮಿ ಮಂಟಪದಲ್ಲಿ ಗುಡಿಸಿದ್ದ ಜಾಗದಲ್ಲಿ ಮಲಗಲು ಹವಣಿಸುತ್ತಿದ್ದಳು. ಅವಳ ಹೃದಯದಲ್ಲಿ ತಟಕ್ಕನೆ ತನ್ನ ಹೆಣ್ಣುತನದ ನಾಣು ಎಚ್ಚರಗೊಂಡು ಅತ್ತ ಇತ್ತ ನೋಡತೊಡಗಿದಳು. ಬೆಂಕಿಗೆ ಕಟ್ಟಿಗೆ ಹಾಕುತಿದ್ದ ಗುತ್ತಿ “ಅಲ್ಲೇ ನನ್ನ ಕಂಬಳಿ ಹಾಸಿಕೊಂಡು ಮನಿಕ್ಕೊಳ್ಳೆ” ಎಂದನು.

ಅವಳು ಬರುವಾಗ ಬುತ್ತಿ ತಂದಿದ್ದಳೆ ಹೊರತು ಕಂಬಳಿ ತಂದಿರಲಿಲ್ಲ. ಅವನ ಕಂಬಳಿಯನ್ನು ತಾನು ಹಾಸಿಕೊಂಡರೆ ಅವನು ಕಲ್ಲಿನಮೇಲೆ ಮಲಗಬೇಕಾಗುತ್ತದೆ. ಇಲ್ಲದಿದ್ದರೆ? ಅವನೆಲ್ಲಿಯಾದರೂ ತನ್ನ ಮಗ್ಗುಲಲ್ಲಿಯೆ ಮಲಗಿಬಿಟ್ಟರೆ, ಕಂಬಳಿ ತನ್ನದೆಂದು? ತಿಮ್ಮಿಯ ತಲೆಯಲ್ಲಿ ಏನೇನೋ ಸುಳಿಯಿತು. ಅವಳೆಂದಳು ದಾಕ್ಷಿಣ್ಯದ ಮೆಲುದನಿಯಲ್ಲಿ "ಕಂಬಳಿ ಬ್ಯಾಡ. ಅವ್ವ ಕೊಟ್ಟ ಗಂಟಿನಲ್ಲಿ ಒಂದು ಸೀರೆ ಅದೆ. ಅದೇ ಸಾಕು" ಎಂದಳು.

"ನೋಡೂ.... ಬೆಳಗಿನ ಜಾವ ಪೂರಾ ಚಳಿ ಆಗ್ತದೆ. ಕಾರಣ ಬಿದ್ದರೂ ಬೀಳಬೈದು. ಶೀತಾಗೀತಾ ಆಗಿ, ಜರಾಗಿರಾ ಬಂದ್ರೆ ನನ್ನ ಮಾತಿಲ್ಲ. ಆಮ್ಯಾಲೆ ನಿನ್ನವ್ವ ನನ್ನ ಬೈತದೆ...." ಗುತ್ತಿ ಒಳಗೊಳಗೆ ಮುಗುಳುನಗುತ್ತಿದ್ದನು.

"ನಿಂಗೆ ಬ್ಯಾಡೇನು ಕಂಬಳಿ?"

"ಬೇಕು."

"ಮತ್ತೆ? ಇಬ್ಬರೂ ಒಂದೇ ಕಂಬಳೀಲಿ ಹ್ಯಾಂಗೆ ಮನಗಾದು?"

"ಇಬ್ರೆ ಸೈಯಾ? ಮೂರು ಜನ ಬೇಕಾದರೂ ಮನಗಬೈದು. ಅದೇನು ಚಿಟ್ಟಗಂಬಳಿ ಅಂತಾ ಮಾಡೀಯಾ? ಹೆಗ್ಗಂಬಳಿ! ಬೇಕಾದರೆ ಬಿಚ್ಚಿ ಹಾಸಿ ನೋಡು."

"ನಾ ಒಲ್ಲೆ ನಿನ್ನ ಜತೆ ಮನಗಾಕೆ!"

"ಅಲ್ಲೇ, ತಿಮ್ಮೀ, ನೀ ನನ್ನ ಮದೇ ಆದ ಮ್ಯಾಲೆ ಮಗ್ಗಾಗೆ ಮನಗ್ತೀಯೋ ಇಲ್ಲೋ...."

"ಏ ನಿಂಗೇನು ನಾಚಿಗೇನೆ ಇಲ್ಲಾ? ಭಂಡ ಮಾತು ಆಡ್ತೀಯಲ್ಲಾ! ನಾಳೆ ಅತ್ತೆಮ್ಮನ ಹತ್ರ ಹೇಳ್ದೇ ಇದ್ದರೆ ಕೇಳು!"

"ಗಂಡನ ಮಾತು ಹೆಂಡ್ತೀಗೆ ಭಂಡಮಾತೇನೇ?.... ಮನೀಗೆ ಹೋಗಾನ ಅಂತಿದ್ದೀ? ಆಗ್ಲೆ ಅತ್ತೆಮ್ಮಗೆ ಹೇಳ್ತೀನಿ ಅಂತಿಯಲ್ಲಾ? ನೀ ಮಾ ಹುನಾರಿನ ಹುಡುಗಿ ಕಣೇ!"

ತಿಮ್ಮಿ ಮುನಿಸಿಕೊಂಡವಳಂತೆ ಮುಖ ತಿರುಗಿಸಿ, ಕಲ್ಲು ನೆಲದ ಮೇಲೆಯೆ ಮುದುರಿಕೊಂಡು ಮಲಗಿಬಿಟ್ಟಳು, ಗುತ್ತಿಯ ಕಂಬಳಿಯನ್ನೂ ಅದು ಇದ್ದಲ್ಲಿಂದ ತುಸುದೂರಕ್ಕೆ ತಳ್ಳಿ. ಗುತ್ತಿ ಬೆಂಕಿಮಾಡಿ, ತಿಮ್ಮಿಯ ಬಳಿಗೆ ಬಂದು ನೋಡುತ್ತಾನೆ: ಅವಳಿಗೆ ಆಗಲೆ ಗಾಢ ನಿದ್ರೆ ಬಂದಿದೆ!

ಗುತ್ತಿ ತನ್ನ ಹೆಗ್ಗಂಬಳಿಯನ್ನು ಅವಳಿಗೆ ಮುಟ್ಟ ಮುಟ್ಟ ಹರಡಿ ಹಾಸಿದನು. ಈ ಕಡೆಯ ತುದಿಯಲ್ಲಿ, ಬೆಳಿಗ್ಗೆ ಚಳಿಯಾದರೆ ಹೊದ್ದುಕೊಳ್ಳುವಷ್ಟು ಕಂಬಳಿಯನ್ನು ಬಿಟ್ಟುಕೊಂಡು, ಅವಳಿಗೆ ದೂರವಾಗಿಯೆ ಮಲಗಿದನು, ಆದರೆ ಅವಳಿಗೆ ಚಳಿಯಾದರೆ ಅವಳೂ ಕಂಬಳಿಯ ಮೇಲೆ ಮಲಗಿ ಹೊದ್ದುಕೊಳ್ಳಲು ಸಾಲುವಷ್ಟು ಭಾಗ ಬಿಡುವಾಗಿಯೆ ಇತ್ತು.

ಹುಲಿಯನೂ ಅಲ್ಲಿಯೆ ಅವರ ಕಾಲುದಿಸಿ ಮಲಗಿಕೊಂಡಿತ್ತು.

ಬೆಳಗಿನ ಜಾವ ತಿಮ್ಮಿಗೆ ಎಚ್ಚರವಾದಾಗ ನೋಡುತ್ತಾಳೆ, ತಾನು ಗುತ್ತಿಯ ಮೈಗೆ ಮೈಯೊತ್ತಿ ಮಲಗಿದ್ದಾಳೆ! ಕಂಬಳಿ ಅವರಿಬ್ಬರನ್ನೂ ಬಲವಾಗಿ ಸುತ್ತುಹಾಕಿದೆ! ತನ್ನ ಬೆನ್ನಿಗೆ ಗುತ್ತಿಯ ಎದೆಯ ಬಿಸುಪು ಮುಟ್ಟಿ, ಆ ಗುಡ್ಡದ ನೆತ್ತಿಯ ಕುಳಿರ್ಗಾಳಿಯ ಚಳಿಯಲ್ಲಿ ಅತ್ಯಂತ ಸುಖಕರವಾಗಿದೆ! ಆದರೂ ಗುತ್ತಿಗೆ ಎಚ್ಚರವಾಗುವುದಕ್ಕೆ ಮೊದಲೆ, ಆ ನಾಣ್‌ಪಟ್ಟೆನಿಂದ ಪಾರಾಗಿ, ದೂರ  ಮಲಗುತ್ತೇನೆ ಎಂದು ಅವಳು ಪ್ರಯತ್ನಿಸುವುದಕ್ಕೂ ಸಾಧ್ಯವಾಗದಂತೆ ಅವನ ತೋಳು ಅವಳ ಎದೆಯ ಮೇಲಿಂದ ಇಳಿದು ಬಲವಾಗಿ ಬಗಿದಂತಿದೆ! ಅವನು ಉಸಿರಾಡುವುದನ್ನೂ ನಿಶ್ಚಲವಾಗಿರುವುದನ್ನೂ ನೋಡಿದರೆ ಅವನಿಗೆ ನಿದ್ದೆ ಬಂದ ಹಾಗಿದೆ. ಆದರೆ ತನ್ನನ್ನು ಅಪ್ಪಿದ್ದ ಆ ತೋಳಿನ ಬಿಗಿಕಟ್ಟು ನಿದ್ದೆಗೆ ಸಾಧ್ಯವೆ? ಎಂದು ಶಂಕೆಗೆ ಎಡೆಕೊಡುವಂತಿದೆ! ಅವಳಿಗೆ ಎಚ್ಚರವಾದ ಮೊದಲಲ್ಲಿ ಆ ಬಿಗಿಯಪ್ಪುಗೆಯಿಂದ ತಪ್ಪಿಸಿಕೊಳ್ಳಬೇಕೆಂದಿದ್ದ ಮನಸ್ಸು, ಆ ತೋಳಿನ ಬಂಧನದಿಂದ ಪಾರಾಗುವ ಪ್ರಯತ್ನವೇ ಅವನನ್ನು ಎಚ್ಚರಗೊಳಿಸಿ ತಾನಿದ್ದ ಲಜ್ಜಾಕರ ಸ್ಥಿತಿಯನ್ನು ಬಹಿರಂಗಪಡಿಸಬಹುದೆಂಬ ತರುವಾಯದ ಭೀತಿಗೆ ಸಿಕ್ಕಿ, ತಟಸ್ಥವಾಯಿತು. ಕಣ್ಣು ಬಿಟ್ಟು ನೋಡಿದಳು: ಕತ್ತಲೆ, ಕಾಡು; ಏನೇನೊ ಅಪರಿಚಿತ ಶಬ್ದಗಳು; ಬೆಂಕಿಯ ಉರಿ ಆರಿ, ಕೆಂಡವೆ ಕೆಂಪಾಗಿ ಕಾಣುತ್ತಿದೆ. ಹುಲಿಯ ಅಲ್ಲಯೆ ಕುಳಿತು ತನ್ನ ಹಿಂಗಾಲಿನಿಂದ ಕುತ್ತಿಗೆ ತುರಿಸಿಕೊಳ್ಳುತ್ತಿರುವುದು ಬೆಂಕಿಗೆ ಎದುರಾಗಿ ಮಷೀಚಿತ್ರದಂತೆ ಕಾಣುತ್ತಿದೆ. ತಿಮ್ಮಿ ಮತ್ತಷ್ಟು ಬಲವಾಗಿ ಗುತ್ತಿಯ ಮೈಗೆ ತನ್ನ ಬೆನ್ನೊತ್ತಿ ಹೊಕ್ಕು ಮಲಗಿಬಿಟ್ಟಳು.

ಆದರೆ ಅವಳಿಗೆ ನಿದ್ದೆ ಬರಲಿಲ್ಲ; ರಾತ್ರಿ ಮಲಗುವಾಗ ಅವನ ಕಂಬಳಿಯನ್ನು ದೂರಕ್ಕೆ ತಳ್ಳಿ ಮಲಗಿದ್ದೆನಲ್ಲಾ? ಅದು ಹೇಗೆ ಹೀಗೆ ಮಲಗುವಂತಾಯಿತು? ನಿದ್ದೆಗಣ್ಣಿನಲ್ಲಿ ನಾನೇ ಹೊರಳಿ ಹೀಗೆ ಮಲಗಿಬಿಟ್ಟೆನೋ ಅಥವಾ ಭಾವನೆ ನನ್ನನ್ನು ಎಳೆದು ಹೀಗೆ ಮಲಗಿಸಿಕೊಂಡನೊ? ಚಳಿಗೆ ಶೀತವಾಗದಿರಲಿ ಎಂದು! ಇಂತೆಲ್ಲ ಆಲೋಚಿಸುತ್ತಿದ್ದಾಗಲೆ ಅವಳ ಮೈಗೆ ಏನೋ ಸವಿ ಏರತೊಡಗಿತ್ತು!

ತಿಮ್ಮಿ ಶಂಕಿಸದಂತೆ ಗುತ್ತಿ ಅವಳನ್ನು ಎಳೆದು ಮಲಗಿಸಿಕೊಂಡಿರಲಿಲ್ಲ. ರಾತ್ರಿ ಒಂದು ಸಾರಿ ಅವನಿಗೆ ಹುಲಿಯನ ಬೊಗುಳುವಿಕೆಯಿಂದ ಎಚ್ಚರವಾಗಿದ್ದಾಗ ಎದ್ದು ಬೆಂಕಿಗಷ್ಟು ಕಟ್ಟಿಗೆ ಹಾಕಿ ಮಲಗುತ್ತಿದ್ದನು. ಆಗ ತಿಮ್ಮಿ ನಿದ್ದೆಯಲ್ಲಿಯೆ 'ಅವ್ವಾ! ಅವ್ವಾ!' ಎಂದು ಕರೆದದ್ದು ಕೇಳಿಸಿತು. ಆಗತಾನೆ ಬೆಳಗಿನ ಜಾವದ ಕಾಡಿನ ಚಳಿಗಾಳಿ ಬೀಸತೊಡಗಿತ್ತು. ಆ ಚಳಿಗೆ ತಿಮ್ಮಿ ಮೈಯನ್ನೆಲ್ಲ ಮುದುರಿಸಿ ಮುದ್ದೆಮಾಡಿಕೊಂಡು ಮಲಗಿಕೊಳ್ಳುತ್ತಿದ್ದಳು, ಉಟ್ಟಿದ್ದ ಸೀರೆಯನ್ನೆ ಹೊದೆಯಲೆಂಬಂತೆ ಎಳೆದುಕೊಳ್ಳುತ್ತಾ. ಗುತ್ತಿ 'ಇತ್ತಿತ್ತಾ ಬಾರೆ, ಕಂಬಳಿ ಹೊದ್ದುಕೊಂಡು ಮನಗಿಕೊಳ್ಳೆ!' ಎಂದು ಹೇಳಲು, ಅವಳು ನಿದ್ದೆಗಣ್ಣಿನಲ್ಲಿಯೆ, ಅನ್ಯೆಚ್ಛಿಕವಾಗಿ ಎಂಬಂತೆ, ಗುತ್ತಿಯ ಹತ್ತಿರಕ್ಕೆ ಸರಿದಿದ್ದಳು. ಗುತ್ತಿ ಅವಳಿಗೂ ತನಗೂ ಒಟ್ಟಿಗೆ ಕಂಬಳಿಯನ್ನು ಸುತ್ತಿ ಹೊದಿಸಿಕೊಂಡಿದ್ದನು. ಅವನಿಗೂ ಮೈಗೆ ಬೆಚ್ಚಗಾದದ್ದಕ್ಕಿಂತಲೂ ಮನಸ್ಸಿಗೆ ನೊಚ್ಚಗಾಗಿ, ಇಬ್ಬರೂ ಸವಿನಿದ್ದೆ ಮಾಡಿದ್ದರು.

ಆದರೆ ಬೆಳಗಿನ ಜಾವ ತಿಮ್ಮಿಗೆ ಎಚ್ಚರವಾಗಿ ಅವಳು ತಾನಿದ್ದ ಸ್ಥಿತಿಗೆ ಮೊದಲು ಅಚ್ಚರಿಪಟ್ಟು, ಆಮೇಲೆ ಸೊಗಂಬಟ್ಟು, ಕಡೆಗೆ ಗುತ್ತಿಯ ಮೈಗೆ ಮತ್ತಷ್ಟು ಒತ್ತಿ ಹೊಕ್ಕು ಮಲಗಿದಾಗ, ಅವನಿಗೆ ಎಚ್ಚರವಾಗಿ, ಅವಳನ್ನು ಮತ್ತಷ್ಟು ಬಿಗಿದಪ್ಪಿ, ನಿದ್ರಿಸುತ್ತಿದ್ದಂತೆ ನಟಿಸಿದ್ದನು! ಸ್ವಲ್ಪ ಹೊತ್ತಿನಲ್ಲಿಯೆ, ತನ್ನ ಮೈಸೋಂಕಿನಿಂದ ಅವಳ ಮೈಗೆ

ಹೇಗೆ ಸವಿ ಏರತೊಡಗಿತ್ತೋ ಹಾಗೆಯೆ ಆಗತೊಡಗಿತ್ತು ಗುತ್ತಗೂ! ಇಬ್ಬರಿಗೂ ಅದೇನು ಮೊತ್ತಮೊದಲನೆಯದೂ ಆಗಿರಲಿಲ್ಲ, ಹೊಚ್ಚಹೊಸದೂ ಆಗಿರಲಿಲ್ಲ, ಅಂತಹ ರಹಸ್ಯಾನುಭವ! ಪರಸ್ಪರವಾಗಿ ಮಾತ್ರ ಹಾಗಿತ್ತು, ಅಷ್ಟೆ.

ತಿಮ್ಮಿ ತನ್ನ ಸಿಂಬಾವಿ ಬಾವನೂ ಹಿಂದೊಮ್ಮೆ, - ತಮ್ಮ ಕೇರಿಯವನೆ ಆಗಿ ಈಗ ತನ್ನನ್ನು ಮದುವೆಯಾಗಲಿದ್ದ, - ಆ ಬಚ್ಚಬಾವ ತನಗೆ ಮಾಡಿದ್ದಂತೆಯೆ ಮಾಡಬಹುದು ಎಂದು ನಿರೀಕ್ಷಿಸುತ್ತಿದ್ದಳು. ಹಾಗೆಯೆ ಗುತ್ತಿ ಒಮ್ಮೆ ತಾನು ಹಳೆಮನೆಯ ತಮ್ಮವರ ಕೇರಿಗೆ ನಂಟನೊಬ್ಬನ ಮದುವೆಗಾಗಿ ಹೋಗಿ ನಾಲ್ಕುದಿನ ತಳವಾರ ಸುಣ್ಣನ ಬಿಡಾರದಲ್ಲಿದ್ದಾಗ ಅವನ ಹಿರಿಯ ಮಗಳು, ಈಗಲೂ ಅವಿವಾಹಿತೆಯೆ ಆಗಿ ಉಳಿದಿರುವ ಪುಟ್ಟಿ, ತನ್ನನ್ನು ಒಂದು ದಿನ ಬೈಗುಗಪ್ಪಿನಲ್ಲಿ ಒಡೆಯರ ಕಣದ ಹುಲ್ಲು ಬನಬೆಯ ಹಿಂದೆ ಮರೆಗೆ ಕರೆದುಕೊಂಡು ಹೋಗಿ ಮಾಡಿದ್ದಂತೆಯೆ ತಿಮ್ಮಿಯೂ ಮಾಡಬಹುದು ಎಂದು ಹಾರೈಸುತ್ತಿದ್ದನು. ಆದರೆ ಅವರಿಬ್ಬರಲ್ಲಿ ಯಾರೊಬ್ಬರಿಗೂ ತಾನೆ ಮೊದಲು ಮುಂದುವರಿಯಲಾಗದ ಸಂಕೋಚವೊಂದು ಅವರನ್ನು ಪ್ರಣಯದ ಶಿಖರಕ್ಕೇರಿದಂತೆ ತಡೆದಿತ್ತು. ಅವಳು ಒತ್ತುತ್ತಿದ್ದ ರೀತಿ, ಅವನು ಅಪ್ಪುತ್ತಿದ್ದ ಬಿಗಿತ, ಎರಡೂ ಅವರನ್ನು ಪ್ರಣಯಗಿರಿಯ ಪ್ರತ್ಯಂತ ಭೂಮಿಯವರೆಗೂ ಕೊಂಡೊಯ್ದಿದ್ದುವು. ಹುಲಿಯ ಅಲ್ಲಿರದಿದ್ದರೆ ಇನ್ನು ಕೆಲವೇ ನಿಮಿಷಗಳಲ್ಲಿ ರತಿಮನ್ಮಥರು ಅವರನ್ನು ನಿಧುವನದ ಶಿಖರಾನುಭವಕ್ಕೂ ಒಯ್ಯುತ್ತಿದ್ದರೊ ಏನೊ?

ಇದ್ದಕಿದ್ದ ಹಾಗೆ ಯಾವುದೋ ಘಾತುಕ ಪ್ರಾಣಿ ತನ್ನ ಮೇಲೆ ನೆಗೆದ ರಭಸಕ್ಕೆಂಬಂತೆ ಹುಲಿಯ ಕಂಯ್ಕ್ ಎಂದು ಕೂಗಿದ್ದು ಕೇಳಿಸಿತು. ನಾಯಿಗೂ ಆ ಪ್ರಾಣಿಗೂ ಬಲವಾದ ಹೋರಾಟ ನಡೆಯುವಂತೆ ಸದ್ದಾಯಿತು. ಒಂದರ ಮೇಲೆ ಒಂದು ಬಿದ್ದು, ಒಂದನ್ನೊಂದು ಕೊಲ್ಲುವ ಪ್ರಯತ್ನದಲ್ಲಿ ಎರಡೂ ಗುಡ್ಡದ ಇಳಿಜಾರಿನಲ್ಲಿ ಕೆಳಗೆ ಕೆಳಗೆ ಉರುಳುತ್ತಾ ಹೋದಂತಾಯಿತು.

ಗುತ್ತಿಗೆ ಕ್ಷಣಾರ್ಧದಲ್ಲಿ ಗೊತ್ತಾಯಿತು, ಕುರ್ಕ ನಾಯಿಯ ಮೇಲೆ ಬಿದ್ದಿದೆ ಎಂದು ತಟಕ್ಕನೆ ಎದ್ದು "ಹಿಡಿ, ಹುಲಿಯ! ಹಿಡಿ!" ಎಂದು ಗಟ್ಟಿಯಾಗಿ ಕೂಗುತ್ತಾ, ಒಂದು ಹೆಗ್ಗೊಳ್ಳಿಯನ್ನೆತ್ತಿ ಬೀಸುತ್ತಾ, ಸದ್ದಾಗುತ್ತಿದ್ದ ಕಡೆಗೆ ಧಾವಿಸಿದನು. ಇವನ ಕೂಗು ಕೇಳಿಸಿಯೋ ನಾಯಿಯ ಬಲಕ್ಕೆ ಸೋತು ಹೆದರಿಯೋ ಕುರ್ಕ ಓಡುತ್ತಿರುವುದನ್ನೂ ನಾಯಿ ಅಟ್ಟುತ್ತಿರುವುದನ್ನೂ ಕಂಡು, ಗುತ್ತಿ ನಾಯಿಯನ್ನು ಅದರ ಹೆಸರು ಹಿಡಿದು ಕೂಗಿ ಗದರಿಸಿ ಬಳಿಗೆ ಕರೆದನು. ನಾಯಿಯನ್ನು ಹಿಡಿಯುವ ಆ ಜಾತಿಯ ಚಿರತೆ, ನಾಯಿ ತನ್ನನ್ನು ಅಟ್ಟುವಂತೆ ಮಾಡಿ, ಅದನ್ನು ಇತರ ನಾಯಿಗಳಿಂದಲೂ ಮನುಷ್ಯರಿಂದಲೂ ದೂರಕ್ಕೆ ಸೆಳೆದು ಪ್ರತ್ಯೇಕಿಸಿ, ಅದು ಒಂಟಿಯಾದಾಗ ಅದರ ಮೇಲೆ ಬಿದ್ದು ಕೊಲ್ಲುವ ಉಪಾಯ ಹೂಡುತ್ತದೆ ಎಂಬುದು ಗುತ್ತಿಗೆ ಗೊತ್ತಿದ್ದುದರಿಂದಲೆ ಹುಲಿಯ ಕುರ್ಕವನ್ನು ಬೆಂಬತ್ತಿ ಅಟ್ಟೆ ಹಳುವಿಗೆ ಹೋಗದಂತೆ ತಡೆದಿದ್ದನು.

ನಾಯಿ ನಾಲಗೆ ಇಳಿಬಿಟ್ಟುಕೊಂಡು ಏದುತ್ತಾ ಉಸಿರೆಳೆಯುತ್ತಾ ಬಳಿಗೆ ಬಂತು. ಗುತ್ತಿ ಅಭಿಮಾನಕ್ಕೂ ವಿಶ್ವಾಸಕ್ಕೂ ಅದರ ತಲೆಯನ್ನು ಸವರಿದನು. ಅವನ ಕೈ ಅದರ ಕುತ್ತಿಗೆಯ ಮೇಲೆ ಹೋದಾಗ ಏನೋ ವದ್ದ ಮುಟ್ಟಿದಂತಾಯಿತು. ಗುಡ್ಡ ಹತ್ತಿ ಅವರಿಬ್ಬರೂ ಬೆಂಕಿಯ ಬಳಿಗೆ ಬಂದಾಗ, ಬೆಂಕಿಗೆ ಒಣಗಿದ್ದ ಹರೆಗಳನ್ನು ಹಾಕುತ್ತಾ ನಿಂತಿದ್ದ ತಿಮ್ಮಿ "ಅಯ್ಯೋ ಬಾವ, ಇದೇನು ನೆತ್ತರ!" ಎಂದು ಹೌಹಾರಿದಳು. ಬೆಂಕಿಯ ಬೆಳಕಿನಲ್ಲಿ ಗುತ್ತಿಯ ಕೈಯೂ ನಾಯಿಯ ಮೈಯೂ ರಕ್ತಮಯವಾಗಿದ್ದ ಭಯಂಕರ ದೃಶ್ಯ ಕಾಣಿಸಿತ್ತು.

“ಹಾಳು ಕುರ್ಕ! ಹಡಬೇಗೆ ಹುಟ್ಟಿದ್ದು! ನಾಯಿ ಮೈನೆಲ್ಲ ಗಿಬರಿ ಗಾಯಮಾಡಿ ಬಿಟ್ಟಿದೆ!.... ಅದಕ್ಕೂ ಸಮಾ ಮಾಡ್ತು ಅಂತ ಕಾಣ್ತದೆ ಹುಲಿಯ? ಸತ್ನೋ ಕೆಟ್ನೋ ಅಂತಾ ಹೇಕ್ಕೊಂಡು ಓಡ್ತಿತ್ತು, ಹಹ್ಹಹ್ಹ!” ಎಂದು ಜಯಾಟ್ಟಹಾಸಗೈದು ಗುತ್ತಿ ಹುಲಿಯನನ್ನು ಹೊಗಳಿ, ಅದರ ಗಾಯಗಳಿಗೆ ಬಿಸಿಬಿಸಿ ಬೂದಿ ಹಾಕಿ ಮದ್ದು ಮಾಡತೊಡಗಿದನು.

ಎಂತಹ ರತಿಭಾವದ ಕಿಬ್ಬಿಯಂಚಿನ ರಸಸ್ಥಲದಿಂದ ಅದೆಂತಹ ಭಯಂಕರ ಕರುಣ ಬೀಭತ್ಸಗಳ ಕಣಿವೆಗೆ ಹುಲಿಯನ ಅದ್ಭುತ ಸಾಹಸ ತಮ್ಮಿಬ್ಬರನ್ನೂ ತಂದಿತ್ತು ಎಂಬುದನ್ನು ಅವರಿಬ್ಬರೂ, - ಮದ್ದು ಮಾಡಿ ಶುಶ್ರೂಷೆ ಮಾಡುತ್ತಿದ್ದ ಗುತ್ತಿಯಾಗಲಿ, ಆ ಕಾರ್ಯದಲ್ಲಿ ಅವನಿಗೆ ಅನುಕಂಪನೆಯಿಂದ ನೆರವಾಗುತ್ತಿದ್ದ ತಿಮ್ಮಿಯಾಗಲಿ, - ಪರ್ಯಾಲೋಚಿಸುವ ಸ್ಥಿತಿಯಲ್ಲಿರಲಿಲ್ಲ, ತರುವಾಯವಾದರೂ ಅವರಿಬ್ಬರೂ, ಪರಸ್ಪರ ಒಳಸಂಚಿನಿಂದಲೊ ಎಂಬಂತೆ, ಅದನ್ನು ಪ್ರಸ್ತಾಪಿಸಲೂ ಇಲ್ಲ. ಆದರೆ ಆಗಾಗ್ಗೆ ಒಂದು ಕಣ್ಣಿನ ಮಿಂಚೊ, ಒಂದು ಮುಗುಳು ನಗೆಯ ತುಟಿಗೊಂಕಿನ ಹೊಂಚೊ, ಅವರಿಬ್ಬರ ಸಂಚಿನ ಅಂಚಿನಿಂದ ಇಣಿಕಿ ಇಬ್ಬರಿಗೂ ಅದರ ಸವಿಸೊಗದ ನೆನಪು ಮರುಕಳಿಸುವಂತೆ ಆಗುತ್ತಿತ್ತು.

“ಓ ಹೊತಾರೆ ಆಗ್ತಾ ಇದೆ!” ನಸುಗೆಂಪು ಏರುತ್ತಿದ್ದ ಮೂಡುಬಾನೆಡೆಗೆ ಕಣ್ಣಾಗಿ ಸಂತೋಷಕ್ಕೆ ಕೂಗಿಕೊಂಡಳು ತಿಮ್ಮಿ.

ಗುತ್ತಿ ತಿರುಗಿನೋಡಿ, ತುಸುವೊತ್ತಿನ ಹಿಂದೆ ಮೂಡಿ ಸ್ವಲ್ಪ ಮಾತ್ರವೆ ಮೇಲೆ ಏರಿದ್ದ ಅಮಾವಾಸ್ಯೆಗೆ ಮುನ್ನಿನ ಕಮಾನಿನಾಕಾರದ ಹೊಗೆಗೆಂಪಿನ ಕ್ಷೀಣಚಂದ್ರನನ್ನು ಗಮನಿಸಿ “ಏ ಅದು ತಿಂಗಳು ಕಣೇ!” ಎಂದನು.

“ಅದನ್ನಲ್ಲ ನಾ ಹೇಳಿದ್ದು. ಅಲ್ಲಿ ನೋಡು, ಓ ಅಲ್ಲಿ, ಆ ಗುಡ್ಡದ ಹಿಂದಿನ ಗುಡ್ಡದ ನೆತ್ತಿಸಾಲಿನ ಮ್ಯಾಲೆ, ಆಕಾಸ ಹೆಂಗೆ ಕೆಂಪಾಗ್ತಾ ಅದೆ!” ಅವರಿದ್ದ ಶಿಖರದೆತ್ತರದಿಂದ ಕಾಣುತ್ತಿದ್ದು, ಶ್ರೇಣಿಶ್ರೇಣಿಯಾಗಿ ಪೂರ್ವ ದಿಗಂತದವರೆಗೂ ಹಬ್ಬಿದ್ದ ಅರಣ್ಯಾವೃತ ಪರ್ವತ ಪಂಕ್ತಿಗಳ ಕಡೆ ಕೈ ತೋರಿಸಿದ್ದಳು ತಿಮ್ಮಿ.

“ಹೌದೇ ಸೈ!.... ಅಲ್ಲಿ ಕೇಳಿದ್ಯಾ? ಕಾಜಾಣಾನೂ ಸಿಳ್ಳಿಹಾಕಾಕಿ ಸುರು ಮಾಡಿದುವಲ್ಲಾ!” ಕತ್ತಲೆಯಿಂದ ಮೆಲ್ಲಮೆಲ್ಲನೆ ಬೆಳಕಿಗೆ ಹೊಮ್ಮುತ್ತಿದ್ದ ಕಾಡುಗಳಿಂದ ಅಲ್ಲೊಂದು ಇಲ್ಲೊಂದು ಸಿಳ್ಳುಲಿ ನೀರವತಾ ತಂತಿಯನ್ನು ಮೀಟಿದಂತೆ ಕೇಳಿ ಬರುತ್ತಿತ್ತು.

“ಬೆಳಕು ಬಿಡ್ತಲ್ಲಾ? ಹಂಗಾರೆ ಇನ್ನು ಹೊಲ್ದಾನಾ?” ಎಂದು ತಿಮ್ಮಿ ಆಗಲೆ ತುಸು ಬಣ್ಣಗೆಡುತ್ತಿದ್ದ ಬೆಂಕಿಯ ಕಡೆ ನೋಡುತ್ತಾ ಕೇಳಿದಳು.

“ಎಲ್ಲಿಗೇ?” ಗುತ್ತಿಯ ಪ್ರಶ್ನೆ.

“ಮಾವನ ಮನೀಗೆ” ತಿಮ್ಮಿಯ ಉತ್ತರ.

“ಯಾರ ಮಾವನ ಮನೀಗೆ?”

“ನನ್ನ ಮಾವನ ಮನೀಗೆ!”

“ನನ್ನ ಮಾವನ ಮನಿಗೇನೋ ಅಂತಾ ಮಾಡಿದ್ದೆ....”

“ನಿನ್ನ ಮಾವನ ಮನೀಗೆ ಹೋದ್ರೆ ಆಗ್ತದೆ ನಿಂಗೆ, ಚೆನ್ನಾಗಿ, ಮದ್ವೆ!”

“ಅಲೆಲೆಲೆಲೇ ಹುಡುಗೀ! ಒಂದು ರಾತ್ರೀಲೆ ಏಟು ಬದಲಾಯಿಸಿಬಿಟ್ಟೇ? ನಿನ್ನೆ ನೀನೇ ಅಲ್ಲೇನೆ ಹೇಳಿದ್ದೂ, ಮನೀಗೆ ಹೋಗಾನ ಅಂತಾ?”

“ಹೇಳಿದ್ದೆ.... ನಿನ್ನೆ!”

ಇವರಿಬ್ಬರೂ ರಾತ್ರಿಯ ಮಧುರಾನುಭವ ನೆನಪು ಹೊಮ್ಮಿ ನಕ್ಕುಬಿಟ್ಟರು.

ಅಷ್ಟರಲ್ಲಿ ವಸ್ತುಗಳೆಲ್ಲ ಸ್ಪಷ್ಟವಾಗಿ ಕಾಣುವಷ್ಟು ಬೆಳಗಾಗಿತ್ತು.

ತಿಮ್ಮಿ ಮಲೆಯ ಕಣಿವೆಗಳ ಕಡೆ ಕಣ್ಣು ಹಾಯಿಸಿ, ಕಣ್ಣರಳಿಸಿ, ಹಿಗ್ಗಿ, ವಿಸ್ಮಯದಿಂದ ಕೂಗಿಕೊಂಡಳು “ಅಯ್ಯೋ ಅಯ್ಯೋ ಅಯ್ಯೋ! ಅದೇನು ಬಾವ, ಅದೂ? ನೊರೆ, ನೊರೆ, ನೊರೆ, ಹಾಲು! ಕಡ್ಳು ನಿಂತ್ಹಾಂಗೆ ಅದೆಯಲ್ಲಾ?”

“ಕಾವಣ ಕಣೇ, ಕಣಿವೆ ಕಾಡನೆಲ್ಲ ಮುಚ್ಚಿಬಿಟ್ಟಿದೆ.”

“ಏನು ಚೆಂದಾಗಿ ಕಾಣ್ತದೆ, ಬಾವ! ನಾನು ನೋಡೇ ಇರ್ಲಿಲ್ಲ.”

“ಕೆಳೂಗೆ ಬಿಡಾರದಾಗೇ ಕೂತುಕೊಂಡಿದ್ರೆ ಹೆಂಗೆ ಕಾಣ್ತದೆ ಇದೆಲ್ಲ? ನೋಡಿದ್ಯಾ? ನನ್ನ ಜೊತೆ ಬಂದಿದ್ದಕ್ಕೆ ಏನೇನೆಲ್ಲ ಕಂಡ್ತು ನಿಂಗೆ?” ಹಂಗಿಸಿದ್ದನು ಗುತ್ತಿ.

“ಹ್ಞೂ ಕಂಡ್ತು? ನಿನ್ನೆ ಕೊಂದೇ ಹಾಕಿದ್ದಿ, ದೊಡ್ಡಿನ ಕಾಲಿಗೆ ಸಿಕ್ಸಿ!” ತುಟಿ ಉದಿಸಿ ಮೂದಲಿಸಿದಳು ತಿಮ್ಮಿ.

“ಮತ್ತೇನು ಕುದ್ರೆ ಮ್ಯಾಲೆ ಕೂರಸಿ ಕರ್ಕೊಂಡು ಹೋಗ್ತಾರೆ ಅಂತ ಮಾಡಿದ್ಯೇನೋ - ಮದುವಳಿಗೀನ?”

“ಕುದ್ರೆ ಮ್ಯಾಲೆ ಕೂತ್ರೆ, ಕುದ್ರೆ ಕಾಲ್ ಜತೇಲೆ ನಿನ್ನ ಕಾಲ್ನೂ ಮುರಿದು ಹಾಕ್ತಾರೆ, ನಮ್ಮ ವಡೇರ ಕಡೇರು.... ಹಳೆಪೈಕದೋರಿಗೇ ದಂಡಿಗೆ ಕುದ್ರೆ ಹತ್ತಬಾರದು ಅಂತ ಮಾಡ್ಯಾರಂತೆ.”

“ಹತ್ತಿಸ್ತಾರಂತಲ್ಲಾ ಕುದ್ರೆ ಮ್ಯಾಲೆ, ಅವರ ಮಗನ ಮದುವೇಲಿ, ಲಕ್ಕುಂದದ ಸೇಸನಾಯ್ಕರು!”

ಇಬ್ಬರೂ ಪರಿಚಿತರಾರಿಗೂ ಕಾಣಿಸದಂತೆ ಕಾಡಿನ ಒಳದಾರಿಯಲ್ಲಿ ಹೊರಡಲು ಸಿದ್ಧರಾಗಿ ಇಳಿಯತೊಡಗಿದ್ದರು. ಹತ್ತಿಪ್ಪತ್ತು ಮಾರು ಹೋಗುವುದರಲ್ಲಿಯೆ ತಿಮ್ಮಿ ಮತ್ತೆ ಅದ್ಭುತ ದರ್ಶನವಾದಂತೆ ಕೂಗಿಕೊಂಡಳು, ಗುತ್ತಿಗೆ ದಿಗಿಲಾಗುವಂತೆ. "ಅಯ್ಯೊ ಅಯ್ಯೊ ಅಯ್ಯೊ! ಬಾವ, ಬಾವ, ಬಾವ! ಅಲ್ನೋಡು, ಅಲ್ನೋಡು, ಅಲ್ನೋಡು!..." ಮುಂದೆ ಮಾತು ನಿಂತು, ಕೈಮುಗಿದುಕೊಂಡು ಭಾವಪರವಶಳಾಗಿ ನಿಂತುಬಿಟ್ಟಳು.

ಪೂರ್ವ ದಿಗಂತದಿಂದ ಕೆಂಡದುಂಡೆಯಾಗಿ ಕಿರಣವಿಲ್ಲದ ಸೂರ್ಯ ಮೇಲೇಳುತ್ತಿದ್ದನು. ಕಣಿವೆಗಳನ್ನು ತುಂಬಿದ್ದ ಆ ಮಂಜಿನ ನೊರೆನೊರೆಯ ಸಮುದ್ರ, ಹಸುರು ದ್ವೀಪಗಳಂತೆ ನಡುನಡುವೆ ತಲೆಯೆತ್ತಿದ್ದ ಮಲೆನೆತ್ತಿಗಳು. ಮುಡು ಬಾನಿನಲ್ಲಿ ಸಾಗುತ್ತಿದ್ದ ಆ ಮೋಡಗಳ ವರ್ಣಲೀಲೆ, ಇವುಗಳ ಸುವಿಸ್ತೃತ ಭಿತ್ತಿವೇದಿಕೆಯಲ್ಲಿ ಆವಿರ್ಭವಿಸುತ್ತಿದ್ದ ಆ ಚೈತ್ರರವಿಯ ಸೌಂದರ್ಯವು ತಿಮ್ಮಿಯಂತಹಗಳಿಗೂ ಹೃದಯದಲ್ಲಿ ಭೂಮಾನುಭೂತಿ ಸಂಚಾರವಾಗುವಂತೆ ಮಾಡಿತ್ತು.

"ಅಃ, ಬಾವ, ನಮ್ಮ ಬಿಡಾರ ಇಲ್ಲೇ ಇದ್ದಿದ್ರೆ?" ಎಂದು ಮಾತ್ರ ಹೇಳಲು ಶಕ್ತವಾಗಿತ್ತು ಅವಳಿಗೆ ತಿಳಿದಿದ್ದ ಭಾಷೆ, ಅವಳ ಚೇತನದ ಅನುಭವದ ಅಭಿವ್ಯಕ್ತಿಗೆ ಪ್ರತೀಕವಾಗಿ.

ಮೂಡುತ್ತಿದ್ದ ದಿನಸ್ವಾಮಿಗೆ ಕೈ ಮುಗಿಯುತ್ತಾ ನಕ್ಕು ಹೇಳಿದನು ಗುತ್ತಿ: ನಿಮ್ಮ ಬಿಡಾರ ಇಲ್ಲೇ ಇದ್ದಿದ್ರಾ? ನಿನ್ನ ಮಗ್ಗಲಾಗೆ ಮನಗ್ತಿತ್ತು... ಹುಲಿ!"

"ಹುಲಿ ಏನು ನಿನ್ನ ಹಾಂಗಲ್ಲ! ಅದ್ಕೂ ಮಾನಮರ್ವಾದೆ ಅದೆ!" ಗುತ್ತಿ ತತ್ತರಿಸುವಂತೆ ಉತ್ತರ ಬಿಗಿದಿದ್ದಳು ತಿಮ್ಮಿ.

ರಾತ್ರಿ ನಡೆದದ್ದನ್ನು ಜ್ಞಾಪಿಸಿಕೊಂಡು ಇಬ್ಬರೂ ಗಟ್ಟಿಯಾಗಿ ನಗಾಡಿದರು.

"ನೋಡಾಕೆ ಬೆಪ್ಪಿ ಇದ್ದಾಂಗೆ ಇದ್ದೀಯ! ಏನು ಜಾಣ ಮಾತು ಕಲ್ತುಬಿಟ್ಟೀಯೆ ನೀನು?" ಎನ್ನುತ್ತಾ ಗುತ್ತಿ ಸರಸರನೆ ಕಾಲು ಹಾಕತೊಡಗಿದನು.

ಗಾಯಗೊಂಡಿದ್ದ ಹುಲಿಯ ಅವರಿಂದ ದೂರ ಹೋಗದೆ, ಅವರೊಡನೆಯೆ ಮೆಲ್ಲಗೆ ಕುಂಟಿ ನಡೆಯುತ್ತಿತ್ತು. "ಹಾಳು ಕುರ್ಕನ ಉಗುರು! ನಂಜಾಗಿಬಿಡ್ತದೆಯೋ ಏನೊ ನಾಯಿಗೆ? ಬಿಡಾರಕ್ಕೆ ಹೋದಮ್ಯಾಲೆ ಕಾಡುಜೀರಿಗೆ ಅರಸಿನ ಅರೆದು ಹಚ್ಚಬೇಕು?" ಎಂದು ಕೊಂಡನು ಗುತ್ತಿ ಮನಸ್ಸಿನಲ್ಲಿಯೆ, ನಾಯಿಯ ಸೋತ ನಡೆಯನ್ನು ನೋಡಿ.

ಇಬ್ಬರೂ ಕಾಡಿನ ದಾರಿಯಲ್ಲಿ ತುಸುದೂರ ನಡೆದಿದ್ದರು. ಗುತ್ತಿ ತಿಮ್ಮಿಯ ಜಾಣ್ಮಾತನ್ನು ಮೆಲುಕು ಹಾಕಿ ಕಿಸಕ್ಕನೆ ನಕ್ಕನು. ಅದೇ ಸಮಯಕ್ಕೆ ಸರಿಯಾಗಿ ತಿಮ್ಮಿ ಎಡವಿದ್ದಳು: "ನಾ ಎಡಗಿದ್ರೆ ನಿಂಗೆ ತಮಾಸೆ! ನಾ ನಿನ್ನ ಜತೆ ಬಂದದ್ದೆ ತಪ್ಪು!" ಎಂದಳು.

ಬಂದದ್ದು ಬರಿಯ ಅವಳಿಚ್ಛೆಯಿಂದಲ್ಲ ಎಂಬುದನ್ನು ಅವಳಿಗೆ ತೋರಿಸಿ ಅವಳನ್ನು ಕೆಣಕಿ ಪೀಡಿಸುವ ಉದ್ದೇಶದಿಂದ ಗುತ್ತಿ:

"ಇಲ್ಲಿ ನೋಡ್ದೇನು, ಇಲ್ಲಿ, ಏನದೆ ಅಂತಾ?" ಎಂದು ತನ್ನ ಎಡದ ತೋಳನ್ನು ಚಾಚಿ ಅದಕ್ಕೆ ಕಟ್ಟಿದ್ದ ತಾಯಿತಿ ತೋರಿಸುತ್ತಾ ಹಂಗಿಸಿದನು "ಕಣ್ಣಾಪಂಡಿತರು ಕೊಟ್ಟಿದ್ದು ಕಣೇ, ಅಂತ್ರ! ಎಂಥಾ ಒಲ್ಲೆ ಅನ್ನೋ ಹೆಣ್ಣನ್ನಾದ್ರೂ ಒಲಿಯೋ ಹಾಂಗೆ ಮಾಡ್ತದಂತೆ. ಅಲ್ಲದಿದ್ರೆ ನನ್ನ ಸಂಗಡ ನೀ ಇಷ್ಟು ಸುಲಭಕ್ಕೆ ಓಡಿ ಬರ್ತಿದ್ಯಾ? ಚುಟಿಗಿ ಹಾಕಿ ಕರದ್ರೆ ನಾಯಿ ಬರಾಹಂಗೆ?"

"ನಿಂಗೊಬ್ಬನಿಗೇ ಅಂತಾ ಮಾಡಿಯೇನೊ? ಅವನಿಗೂ ಕೊಟ್ಟಾರೆ ಅವರು!" ಎಂದಳು ತಿಮ್ಮಿ. ತಿರಸ್ಕಾರದ ಧ್ವನಿಯಿಂದ, ತುಸು ರಾಗವಾಗಿ.
"ಯಾರಿಗೇ?" ಬೆಚ್ಚಿ ಕೇಳಿದನು ಗುತ್ತಿ, ಸ್ವಲ್ಪ ಅಪ್ರತಿಭನಾದಂತೆ.
"ಯಾರಿಗೆ? ಅವನಿಗೇ! ಆ ಬಚ್ಚಗೆ!" ಗೆದ್ದ ದನಿಯಿಂದ ಹೇಳಿದಳು, ಸೋತವನಿಗೆಂಬಂತೆ.
"ಅವನಿಗೂ ಹೀಂಗೇ ಅಂತ್ರಾ ಕೊಟ್ಟಾರಾ? ಕಣ್ಣಾಪಂಡಿತ್ರು?" ಬೆಪ್ಪಾಗಿತ್ತು ಗುತ್ತಿಯ ದನಿ.
"ಹ್ಞೂ ಮತ್ತೆ! ನಿನ್ನಾಂಗೇ ಅವನೂ ತೋರಿಸಿದ್ದ ನಂಗೆ!"

* * *

## ೧೪

ತಿಮ್ಮಿಯೊಡನೆ ಗುತ್ತಿ, ಆಗತಾನೆ ಮೈದೋರುತ್ತಿದ್ದ ಸೂರ್ಯನಾರಾಯಣನಿಗೆ ಕೈ ಮುಗಿದು, ಹುಲಿಕಲ್ಲುನೆತ್ತಿಯ ಕಾವಲು ಮಂಟಪದ ಅಡಗುದಾಣದಿಂದ, ಯಾರಿಗೂ ಗೊತ್ತಾಗದಂತೆ ಕಾಡುದಾರಿಯಲ್ಲಿಯೇ ನಡೆದು ಸಿಂಬಾವಿಯ ಹೊಲೆಗೇರಿಗೆ ಸೇರುವ ಸಲುವಾಗಿ, ಗುಡ್ಡವಿಳಿಯುತ್ತಿದ್ದ ಸಮಯದಲ್ಲಿಯೇ ಕೋಣೂರಿನ ಅದೇಗುಡ್ಡದ ಬುಡದಲ್ಲಿದ್ದ ಗಟ್ಟದವರ ಬಿಡಾರದಲ್ಲಿ ಪ್ರಣಯದ ಮತ್ತೊಂದು ವಿಕೃತಮುಖದ ದುರಂತ ಜರುಗುತ್ತಿತ್ತು.

ಹುಲಿಕಲ್ಲು ನೆತ್ತಿಗೆ ಸೂರ್ಯೋದಯವಾಗಿದ್ದರೂ ಕೋಣೂರಿನ ಗಟ್ಟದವರ ಬಿಡಾರಕ್ಕೆ ಇನ್ನೂ ಕಾಡುಗತ್ತಲೆ ಕವಿದೆ ಇತ್ತು. ಅಲ್ಲದೆ ತಿಮ್ಮಿಯ ಅಚ್ಚರಿಗೆ ಕಾರಣವಾಗಿದ್ದು ಕಣಿವೆಗಳನ್ನೆಲ್ಲ ತುಂಬಿದ್ದ ನೊರೆಯ ಕಾವಣದ ಕಡಲಿನಲ್ಲಿಯೆ ಮುಳುಗಿ ನಿಂತಿದ್ದ ಗಟ್ಟದ ತಗ್ಗಿನವರ ಜೋಪಡಿಗಳ ಸಾಲು ಮಂಜಿನ ಮಬ್ಬಿನಲ್ಲಿ ಮುಸುಗಿ ಹೋಗಿತ್ತು. ಕಲ್ಲು, ತಗಡು, ಬಿದಿರಗಣೆ, ಮಡಕೆಯ ಚೂರು ಮೊದಲಾದ ಪದಾರ್ಥಗಳ ಮೇಲೆ ಇಬ್ಬನಿ ದಟ್ಟವಾಗಿ ಕೂತು, ಮುಟ್ಟಿದರೆ ನೀರಾಗುವಂತಿತ್ತು. ಸುತ್ತಮುತ್ತಲಿದ್ದ ಎತ್ತರದ ಮರಗಳಿಂದಲೂ ಎಲೆಯ ಹನಿ ತೊಟ್ಟಿಕ್ಕುತ್ತಿತ್ತು. ಇರುಳು ಕವುಚಿಹಾಕಿದ ಬುಟ್ಟಿಗಳನ್ನು ಎತ್ತಿದ್ದರೂ ಕೋಳಿಗಳು ಹೊರಗೆ ಹಾರಲು ತುಸು ಹಿಂದೆಮುಂದೆ ನೋಡುವಂತಿತ್ತು. ಬಿಡಾರದ ಹೊರಗೆ ಬೂದಿ ಗುಡ್ಡೆಯಲ್ಲಿಯೊ ಕಸದ ರಾಶಿಯಲ್ಲಯೊ ಮುದುರಿ ಮಲಗಿದ್ದ ಮೂಳುನಾಯಿಗಳು ಕಣ್ಣುಬಿಡಲೂ ಮನಸ್ಸಿಲ್ಲದೆ ಮಲಗಿದ್ದುವು.

ಚೇಂಕ್ರನ ಬಿಡಾರದ ಮಗ್ಗುಲಲ್ಲಿಯೆ ಇದ್ದ ಪಿಜಿಣನ ಬಿಡಾರದಲ್ಲಿ ಅವನ ಹೆಂಡತಿ ಎಚ್ಚರವಾಗಿದ್ದರೂ ಪಕ್ಕದಲ್ಲಿ ಮಲಗಿದ್ದ ಗಂಡನ ರೋತೆಯನ್ನು ನೆನೆದು ಚಿಂತಿಸುತ್ತಾ ಮಲಗಿದ್ದಳು. ಅವನಿಗಿಂತ ಒಳ್ಳೆಯ ಗಂಡ ತನಗೆ ಸಿಕ್ಕುತ್ತಿರಲಿಲ್ಲ: ಅದೇನೆಂದರೆ - ಗಂಡನ ರೋಗಿಷ್ಠತೆ. ಒಂದು ದಿನ ಕೆಲಸಕ್ಕೆ ನಾಲ್ಕು ದಿನ ಉಳಿ. ಅದಕ್ಕಿಂತಲೂ ಹೆಚ್ಚಾಗಿದ್ದ ಮೂಕವೇದನೆ ಎಂದರೆ, ಅವನಿಂದ ತನಗೆ ಗಂಡಿನಿಂದ ಹೆಣ್ಣಿಗೆ ದೊರೆಯಬೇಕಾದ ಸುಖ ಸರಿಯಾಗಿ ದೊರೆಯುತ್ತಿರಲಿಲ್ಲ ಎಂಬುದು! ಅವನು ಕೆಲಸಕ್ಕೆ ಹೋಗದೆ ಉಳಿದರೂ ಚಿಂತೆಯಿಲ್ಲ, ತಾನೆ ದುಡಿದು ತರುತ್ತಿದ್ದಳು. ಆದರೆ ಯಾರೋಡನೆಯೂ ಹೇಳಬಾರದಿದ್ದ, ಹೇಳಲಾರದಿದ್ದ, ಹೇಳಹೋದರೆ ಅವಮಾನ ನಿಂದೆ ತಿರಸ್ಕಾರಗಳಿಗೆ ತಾನೆ ಒಳಗಾಗುತ್ತಿದ್ದುದನ್ನು ನಿವಾರಿಸುವುದು ಹೇಗೆ? ಪಕ್ಕದ ಬಿಡಾರದವನು ತನ್ನ ವಿಚಾರದಲ್ಲಿ ತುಂಬಾ ಆಸಕ್ತಿ ವಹಿಸುತ್ತಾನೆ; ಆಗಾಗ್ಗೆ ಕಷ್ಟಸುಖಗಳನ್ನು ಸಹಾನುಭೂತಿಯಿಮದ ವಿಚಾರಿಸುತ್ತಾನೆ. ಅವನ ನೋಟದಲ್ಲಿ ಅಕ್ಕಣಿಗೆ ಒಮ್ಮೊಮ್ಮೆ ಏನೇನೊ ಅರ್ಥದ ಸುಳಿವು ಮಿಂಚುವಂತೆ ತೋರುತ್ತದೆ. ಆದರೆ ತಾನು ಗರತಿ: ಗಟ್ಟದೋಳಾದರೇನು? ಕೈ ಹಿಡಿದ ಗಂಡನಿಗೆ, ಅದರಲ್ಲಿಯೂ ಅವನು ತನ್ನೆಲ್ಲ ಕನಿಕರಕ್ಕೂ ಸೇವೆಗೂ ಪಾತ್ರನಾಗಬೇಕಾಗಿರುವ ಕಷ್ಟ ಪರಿಸ್ಥಿತಿಯಲ್ಲಿರುವಾಗ, ಮೋಸಮಾಡುವುದೇ? ದ್ರೋಹ ಮಾಡುವುದೇ? ಪಕ್ಕದಲ್ಲಿ ಕಣ್ಣುಮುಚ್ಚಿ ಮಲಗಿದ್ದ ಗಂಡನನ್ನು ದಿಟ್ಟಿಸಿ ನೋಡಿ 'ಇಲ್ಲ, ಇಲ್ಲ, ಈ ಅಕ್ಕಣಿ ಎಂದಿಗೂ ನಿನಗೆ ದ್ರೋಹಮಾಡುವುದಿಲ್ಲ' ಎಂದು ತನ್ನ ಪ್ರಜ್ಞೆಗೆ ಪ್ರತಿಜ್ಞೆಯ ಎಚ್ಚರಿಕೆ ಕೊಟ್ಟುಕೊಂಡಳು.

ಯಾರೋ ಬಿಡಾರದ ತಟ್ಟಿಬಾಗಿಲೆಡೆಗೆ ಅವಸರವಾಗಿ ಓಡಿ ಬಂದಂತಾಯಿತು. ಅಕ್ಕಣಿ ತನ್ನ ಚಾಪೆಯ ಮೇಲೆ ಎದ್ದು ಕೂತು, ಬಾಗಿಲಕಡೆ ಕಣ್ಣಾಗಿ, ಆಲಿಸಿದಳು.

"ಅಕ್ಕಣೀ! ಅಕ್ಕಣೀ!" ತನ್ನನ್ನೇ ಕರೆಯುತ್ತಿದ್ದಾರೆ! ಯಾರು?

ದೇಯಿಯ ದನಿಯಂತೆ ಕೇಳಿಸಿತು. ಇಷ್ಟು ಹೊತ್ತಾರೆ ಅವಳೇಕೆ ಎದ್ದಿದ್ದಾಳೆ? ಇವತ್ತೊ ನಾಳೆಯೊ ಹೆರಲಿರುವ ತುಂಬು ಬಸಿರಿ? ನಿನ್ನೆ ಬೆಳಿಗ್ಗೆ ಅವಳು ತನಗೆ ಕೂಡುವುದಿಲ್ಲ ಎಂದಿದ್ದರೂ ಚೇಂಕ್ರ ಬಲಾತ್ಕಾರವಾಗಿ ಅವಳನ್ನು ಕೆಲಸಕ್ಕೆ ಎಬ್ಬಿಸಿದ್ದ. ಮಧ್ಯಾಹ್ನ ತೋಟದಿಂದ ಹಿಂದಕ್ಕೆ ಬರುವಾಗ ಅವಳಿಗೆ ನೆಟ್ಟಗೆ ನಡೆಯಲಾಗದೆ ತಾನೂ ಬಾಗಿಯೂ ರಟ್ಟೆಹಿಡಿದು ಮೆಲ್ಲಗೆ ನಡೆಸಿಕೊಂಡು ಬಂದಿದ್ದವು. ರಾತ್ರಿ ಬೇರೆ ಹೊತ್ತಾಗಿ ಕುಡಿದು ಮತ್ತೇರಿ ಬಂದಿದ್ದ ಚೇಂಕ್ರನ ಕ್ರೌರ್ಯಕ್ಕೆ ತುತ್ತಾಗಿದ್ದಳು. ನನಗೆ ಮಕ್ಕಳಾಗದ ವ್ಯಥೆ. ಅವಳಿಗೋ ಈ ವಯಸ್ಸಿಗಾಗಲೆ ಆರು ಮಕ್ಕಳಾಗಿ, ಮೂರು ಸತ್ತು, ಏಳನೆಯದನ್ನು ಹೊತ್ತಿದ್ದಾಳೆ! ಮೈಯಲ್ಲಿ ರಕ್ತವಿಲ್ಲ. ಹೊಟ್ಟೆಯೊಂದೆ ಎದ್ದುಕಾಣುತ್ತಿರುವ ಭಾಗ; ಮತ್ತೆಲ್ಲ ಎಲುಬು, ಚರ್ಮ, ಅವಳೇಕೆ ಇಷ್ಟು ಹೊತ್ತಾರೆ ಬಂದು ಕರೆಯುತ್ತಿದ್ದಾಳೆ? ಪಾಪ, ಏನು ಕಷ್ಟವೊ? ಸಂಕಟವೋ? ಎದ್ದು ಹೋಗಿ ಬಾಗಿಲು ತೆರೆದು ನೋಡುತ್ತೇನೆ.

ಅಕ್ಕಣಿ ಎದ್ದು, ಬಾಗಿಲ ಬಳಿಗೆ ಹೋಗುತ್ತಿದ್ದಾಗಲೆ ಮತ್ತೆ ಅದೇ ಧ್ವನಿ 'ಅಕ್ಕಣೀ ಅಕ್ಕಣೀ!'

'ಹೌದು ದೇಸಾಯದೇ ಆ ಸ್ವರ!' ಎಂದುಕೊಂಡು ಅಕ್ಕಣಿ ಬೇಗ ಬೇಗನೆ ಬಿಗಿದಿದ್ದ ಹಗ್ಗ ಬಿಚ್ಚಿ ತಟ್ಟಿಬಾಗಿಲನ್ನು ನೂಕಿ ತೆರೆದಳು.

ಹೊರಗೆ ಯಾರೂ ಇರಲಿಲ್ಲ. ದಟ್ಟವಾಗಿ ಕವಿದಿದ್ದ ಮಂಜಿನಲ್ಲಿ ಎಲ್ಲ ಮುಚ್ಚಿ ಹೋಗಿತ್ತು. ಬಹಳ ಹತ್ತಿರ ಇದ್ದ ವಸ್ತುಗಳು ಮಾತ್ರ ಹೊಗೆ ಸುತ್ತಿದ್ದ ಹಾಗೆ ಮಸುಗು ಮಸುಗಾಗಿ ಕಾಣಿಸುತ್ತಿದ್ದುವು. ಬಹುಶಃ ಕರೆದಳು ತಾನು ಬಾಗಿಲು ತೆರೆಯುತ್ತಿದ್ದಾಗ ಬೇನೆ ತಾಳಲಾರದೆ ಮತ್ತೆ ತನ್ನ ಬಿಡಾರಕ್ಕೆ ಹೋಗಿರಬೇಕು ಎಂದು ಊಹಿಸಿ, ಅಕ್ಕಣಿ ಕವಿದಿದ್ದ ಮಂಜಿನಲ್ಲಿ ಪಕ್ಕದ ಬಿಡಾರದ ಬಾಗಿಲಿಗೆ ಹೋದಳು. ಅದರ ಬಾಗಿಲೂ ಮುಚ್ಚಿತ್ತು! ಒಳಗಡೆ ಯಾರೋ ಅಳುವ ಸದ್ದಾಗುತ್ತಿತ್ತು. ಮಕ್ಕಳಳುವ ಸದ್ದು: ಇದೇನಿದು? ಕೂಸನ್ನ ಹೆತ್ತ ದೇಯಿ ಎದ್ದುಬಂದು ಕರೆದುಹೋದಳೇ? ಅಥವಾ  ಕರೆದು ಹೋಗಿ ಕೂಸನ್ನು ಹೆತ್ತಳೆ? ಛೆ! ಉಂಟೇ?

ಬಾಗಿಲನ್ನು ನೂಕಿದಳು, ಅದೂ ತೆರೆಯಲಿಲ್ಲ. ಭದ್ರವಾಗಿ ಬಿಗಿದು ಕಟ್ಟಿತ್ತು. ಅಕ್ಕಣಿಗೆ ಏನೋ ಹೆದರಿಕೆಯಾದಂತಾಯಿತು. ಜ್ವರ ಬಂದು ಮಲಗಿದ್ದ ತನ್ನ ಗಂಡನನ್ನು ಎಬ್ಬಿಸುವುದರಿಂದ ಪ್ರಯೋಜನವಿಲ್ಲ ಎಂದು ನಿಶ್ಚಯಿಸಿ, ಐತನ ಬಿಡಾರಕ್ಕೆ ಓಡಿದಳು.

“ಪೀಂಚಲೂ! ಪೀಂಚಲೂ! ಪೀಂಚಲೂ!” ಎಂದು ಒಂದೇ ಸಮನೆ ಗಾಬರಿಪಡಿಸುವ ದನಿಯಲ್ಲಿ ಕೂಗಿದಳು.

ಗಂಡನನ್ನಪ್ಪಿ ಅವನ ಅಪ್ಪುಗೆಯಲ್ಲಿ ನಿದ್ರಿಸುತ್ತಿದ್ದ ಪೀಂಚಲು ಏನೋ ದುಃಸ್ವಪ್ನದಿಂದ ಎಚ್ಚರುವಂತೆ ಬಡರುಬಿದ್ದೆದ್ದಳು. ಬೇಗಬೇಗನೆ ಐತನ ಕಾಲಿನ ಬದಿ ಬಿದ್ದಿದ್ದ ತನ್ನ ಹೊಸ ಸೀರೆಯನ್ನೆತ್ತಿ ಬತ್ತಲೆಯ ಮೈಗೆ ಸುತ್ತಿಕೊಂಡಳು, ಗಂಡನೆಲ್ಲಿ ಕಂಡುಬಿಡುತ್ತಾನೊ ಎಂಬಂತೆ ಮತ್ತೆ ಮತ್ತೆ ಕಣ್ಣು ಮುಚ್ಚಿ ಮಲಗಿದ್ದ ಅವನ ಕಡೆ ನೋಡುತ್ತಾ. ಓಡಿಬಂದು ಹಗ್ಗಬಿಚ್ಚಿ ತಟ್ಟಿಬಾಗಿಲು ನೂಕಿ “ಏನಕ್ಕಾ?” ಎಂದಳು, ಅಕ್ಕಣಿಯನ್ನು ಗುರುತಿಸಿ. ಕವಿದಿದ್ದ ಮಂಜು ಸಾಧಾರಣೆತೆಗೆ ರಹಸ್ಯಮಯ ಅಸ್ಪಷ್ಟತೆಯನ್ನುಂಟುಮಾಡಿ ಗಾಬರಿಗೊಳಿಸುವಂತಿತ್ತು.

ಅಕ್ಕಣಿ ಮಾತಾಡಲಿಲ್ಲ; ಸನ್ನೆಮಾಡಿದಳು. ಇಬ್ಬರೂ ಚೇಂಕ್ರನ ಬಿಡಾರಕ್ಕೆ ಓಡಿದರು.

ಒಳಗಡೆ ಮಕ್ಕಳು. ಅಳುವ ಸದ್ದು ಜೋರಾಗಿತ್ತು.

“ದೇಯೀ! ದೇಯೀ! ದೇಯೀ!” ಇಬ್ಬರೂ ಕರೆದರು.

ಯಾರೊ ಓ ಕೊಳ್ಳಲೂ ಇಲ್ಲ; ಬಾಗಿಲು ಬಿಚ್ಚಿ ತೆರೆಯಲೂ ಇಲ್ಲ. ಇವರು ಕರೆಯುವ ಕೂಗನ್ನು ಕೇಳಿ ಚೇಂಕ್ರನ ಬಿಡಾರದ ಎಡಪಕ್ಕದಲ್ಲಿ ನಾಲ್ಕೇ ಮಾರು ದೂರದಲ್ಲಿದ್ದ ಮೊಡಂಕಿಲನ ಬಿಡಾರದಿಂದ ಅವನೂ ಹೆಂಡತಿ ಬಾಗಿಯೂ ಎದ್ದುಬಂದರು. ಹಸಲವರ ಬಿಡಾರದ ಕಡೆಯಿಂದಲೂ ಕುದುಕನೊಡನೆ ಇನ್ನಿಬ್ಬರು ಓಡಿಬಂದರು. ಐತನು ಸೊಂಟದ ಪಂಚೆಯನ್ನು ಸುತ್ತಿಕೊಳ್ಳುತ್ತಲೆ ಓಡಿಬಂದು ಗುಂಪು ಸೇರಿಕೊಂಡನು.

ತಟ್ಟಿ ಬಾಗಿಲಿಗೆ ಕಟ್ಟಿದ್ದ ಹಗ್ಗವನ್ನು ಕೊಯ್ದು, ತೆರೆದು, ಒಳಗೆ ದಾಟಿದ ಅಕ್ಕಣಿ ಪೀಂಚಲು ಇಬ್ಬರೂ ಚಿಟ್ಟನೆ ಚೀರಿಕೊಂಡು ಹಿಂದಕ್ಕೆ ನುಗ್ಗಿ ಓಡಿಬಂದರು! ಗುಡಿಸಿಲಿನ ಒಳಗೆ ಅರೆಗತ್ತಲೆಯಲ್ಲಿ ಅವರು ಕಂಡಿದ್ದ ದೃಶ್ಯ ಘೋರವಾಗಿತ್ತು: ಅಳುತ್ತಿದ್ದ ಮಕ್ಕಳ ನಡುವೆ ನಿದ್ದೆಮಾಡುವಂತೆ ಮಲಗಿದ್ದ ದೇಯಿಯ ಕಾಲಕಡೆ ರಕ್ತದಂತಹ ಕೆಂಪು

ನೀರು ಕಪ್ಪಗಾಗಿ ನಿಂತಿತ್ತು! ದೇಯಿಯ ಬಾಯಿ ವಿಕಾರವಾಗಿ ತೆರೆದಿತ್ತು! ಸ್ವಲ್ಪ ದೂರದಲ್ಲಿ ಚೇಂಕ್ರ ನಿದ್ದೆಮಾಡುತ್ತಿರುವವನಂತೆ ಮಗ್ಗುಲಾಗಿ ಮಲಗಿದ್ದನು.

* * *

ಬಿಡಾರದಿಂದ ಓಡುತ್ತಲೆ ಬಂದಿದ್ದ ಐತ ಕೋಣೂರು ಮನೆಯ ಹೆಬ್ಬಾಗಿಲ ಮೆಟ್ಟಲಿನ ಬಳಿ ಸುಯ್ಯುಸಿರು ಬಿಟ್ಟು ಏದುತ್ತಾ ನಿಂತಾಗ ಮನೆಗೆ ಇನ್ನೂ ಅದರ ಎಲ್ಲ ಭಾಗಗಳಲ್ಲಿಯೂ ಎಚ್ಚರವಾಗಿರಲಿಲ್ಲ.... ಬೊಗುಳುತ್ತಾ ಬಳಿ ಸಾರಿದ್ದ ನಾಯಿಗಳು ಐತನನ್ನು ಗುರುತಿಸಿ ಬಾಲವಳ್ಳಾಡಿಸಿದ್ದುವು. ಹಲಗಣೆ ಹಾಕಿದ್ದ ಕೆಳಗರುಡಿಯಲ್ಲಿ ಒಂದು ಹಣತೆಯ ಬೆಳಕಿನಲ್ಲಿ ಐಗಳು ಅನಂತಯ್ಯ ಏನನ್ನೊ ರಾಗವಾಗಿ ಓದುತ್ತಿದ್ದುದು ಕೇಳಿಸಿ, ಐತ ಆ ಕಡೆ ಹೋಗಿ "ಅಯ್ಯಾ ಅಯ್ಯಾ, ಹೆಬ್ಬಾಕಲು ತೆಗೀರಿ!" ಎಂದನು.

ಅಷ್ಟು ಹೊತ್ತಿನಲ್ಲಿ ಅವನು ಹಾಗೆ ಕರೆದುದಕ್ಕೆ, ಅವಲ್ಪ ಗಾಬರಿಗೊಂಡೆ ಎದ್ದು ಐಗಳು ಹೆಬ್ಬಾಗಿಲೆಡೆಗೆ ಬಂದು ಅದನ್ನು ತೆಗೆಯತೊಡಗಿದರು. ದಪ್ಪ ದಪ್ಪ ಕಬ್ಬಣದ ಪಟ್ಟಿಗಳನ್ನು ಜೋಡಿಸಿ ಹೊಡೆದಿದ್ದ ದಿಮ್ಮಿಯ ಹೆಬ್ಬಾಗಿಲು ಅವರು ತಮ್ಮೆಲ್ಲ ಬಲವನ್ನೂ ಪ್ರಯೋಗಿಸಿದರೂ ತುಸು ಕಂಡಿಬಿಟ್ಟಿತೆ ಹೊರತು ತೆರೆಯಲಿಲ್ಲ. ಅಷ್ಟರಲ್ಲಿ ಜಗಲಿಯಲ್ಲಿ ಓದುವ ಹುಡುರೊಡನೆ ಮಲಗಿದ್ದ ಮುಕುಂದಯ್ಯನಿಗೆ ಎಚ್ಚರವಾಗಿ ಅವನೂ ಎದ್ದು ಬಂದು ಐಗಳಿಗೆ ನೆರವಾಗಲು, ಹೆಬ್ಬಾಗಿಲು ತೆರೆಯಿತು, ಕಿರ್ ರ್ ರ್ ದಡ್‌ಬಡ್‌ದಡಾರ್ ಎಂದು.

ಐತ ತಾನು ಕಂಡದ್ದು ಕೇಳಿದ್ದು ಊಹಿಸಿದ್ದು ಎಲ್ಲವನ್ನೂ ಒಂದೆ ಉಸಿರಿನಲ್ಲಿ ಒದರಿಬಿಟ್ಟನು. ಅಷ್ಟು ಭಯಂಕರವಾಗಿತ್ತು ಅವನಿಗೆ ಚೇಂಕ್ರನ ಬಿಡಾರದಲ್ಲಿ ರಾತ್ರಿ ನಡೆದಿದ್ದ ರುದ್ರಘಟನೆ; ಅಷ್ಟು ಮುಖ್ಯವಾದದ್ದೂ ಆಗಿತ್ತು. ತನ್ನಂತೆ ಎಲ್ಲರೂ ಆಃ ಆಃ ಆಃ ಆಶ್ಚರ್ಯದಿಂದ ಹೌಹಾರಿಬಿಡುತ್ತಾರೆ ಎಂದು ಭಾವಿಸಿದ್ದನು. ಮತ್ತೇನು? ಅದು ಅಲ್ಪ ವಿಷಯವೆ, ತಾನು ಚಿಕ್ಕಂದಿನಿಂದಲೂ ತಿಳಿದಿದ್ದ ದೇಯಿಯ ಸಾವು?

ಆದರೆ ಆ ಸುದ್ದಿಯನ್ನು ಕೇಳಿ ಐಗಳೂ ಮುಕುಂದಯ್ಯನೂ ಸ್ವಲ್ಪವೂ ಹೌಹಾರಲಿಲ್ಲ. ಅಂತಹ ಸಂದರ್ಭಗಳಲ್ಲಿ ಎಲ್ಲರೂ ಆಡಬಹುದಾದ ಅನುಕಂಪೆಯ ಮತ್ತು ಸಹಾನುಭೂತಿಯ ಎರಡು ಮಾತು ಆಡಿದರಷ್ಟೆ. ಏನೋ ಮಹತ್ಸಂಕಟದ ಜಗತ್‌ಪ್ರಲಯಕರವಾದ ವಿಷಯವನ್ನು ಹೊತ್ತುತಂದು ಹೇಳುತ್ತಿದ್ದೇನೆ ಎಂದು ಭಾವಿಸಿದ್ದ ಐತನಿಗೆ ತನ್ನ ಅತಿ ಉದ್ವೇಗಕ್ಕೆ ನಾಚಿಕೆ ಆಗುವಷ್ಟರಮಟ್ಟಿಗಿತ್ತು ಒಡೆಯರಾಗಿದ್ದವರ ಪ್ರತಿಕ್ರಿಯೆ.

ತಮ್ಮ ಕೋಣೆಯಲ್ಲಿ ಒಬ್ಬರೆ ಮಲಗಿದ್ದ ರಂಗಪ್ಪಗೌಡರು ತಮ್ಮನಿಂದ ಸುದ್ದಿ ಕೇಳಿ ಎದ್ದುಬಂದು "ಆ ಕುಡುಕ ಮುಂಡೇಗಂಡ, ಚೇಂಕ್ರ, ಬಸಿರಿಗೆ ಏನು ಮಾಡಿದನೊ ಏನೋ? ಎತ್ತು ಹಾರಿದ ಹಾಂಗೆ ಹಾರಿಯೆ ಕೊಂದುಹಾಕಿದ ಅಂತ ಕಾಣ್ತದೆ" ಎಂದು ಚೇಂಕ್ರನನ್ನು ಬೈದು, ಐತನನ್ನು ಪ್ರಶ್ನಿಸಿದರು: "ಅವನು ನಿನ್ನೆ ಕುಡಿದು ಬಂದಿದ್ದನೇನೋ?"

ಐತ ಅಪರಾಧವನ್ನು ಮುಚ್ಚಲು ಎಳಸುವ ಅಪರಾಧಿಯ ಸ್ವರದಿಂದ "ನಂ....ಗೊ....ತ್ತಿಲ್ಲ....ಯ್ಯಾ!" ಎಂದು ಕೆಳದನಿಯಲ್ಲಿ ಸುಳ್ಳನ್ನೆ ಹೇಳಿಬಿಟ್ಟನು.

ಗೌಡರು “ಐಗಳೆ, ಅದನ್ನು ಮಣ್ಣುಮಾಡಾಕೆ ಏನೇನು ಬೇಕೊ ಕೊಡಿ….ಆಮ್ಯಾಲೆ ನೀವೂ ಹೋಗಿ ಒಂದು ಸೊಲ್ಪ ಕಂಡು ಬನ್ನಿ…. ಅವನಿಗೆ ಕೊಟ್ಟ ಮುಂಗಡವೆ ಸುಮಾರು ಆಗ್ತದೆ” ಎಂದು ಹೇಳಿ, ಆಕಳಿಸುತ್ತಾ, ಸೊಂಟದ ನಶ್ಯಡಬ್ಬಿಯಿಂದ ಒಂದು ಗುಳಿಗೆ ಮದ್ದಿನಶ್ಯ ತೆಗೆದು ಸೇಯತೊಡಗಿದರು.

ಹೊರಡುವಾಗ ಐತ ಐಗಳೊಬ್ಬರಿಗೆ ಕೇಳಿಸುವಂತೆ, ಕಳೆದ ಬೈಗಿನಲ್ಲಿ ಬೆಟ್ಟಳ್ಳಿ ಹಕ್ಕಲಿನ ಹತ್ತಿರ ತನ್ನನ್ನು ಬೋಳ್ಕೊಳ್ಳುತ್ತಿದ್ದಾಗ ಗುತ್ತಿ ಹೇಳಿದುದನ್ನು ಹೇಳಿದನು, ಹಳೆಮನೆಯ ದೊಡ್ಡ ಹೆಗ್ಗಡೆಯವರು ಅವರನ್ನು ಬರಲು ಹೇಳಿದ್ದಾರಂತೆ ಎಂದು.

ಐತ ಹಿಂದಕ್ಕೆ ಹೋಗುವಷ್ಟರಲ್ಲಿಯೆ ಚೇಂಕ್ರನ ಮೂರು ಚಿಕ್ಕ ಮಕ್ಕಳನ್ನೂ ಪೀಂಚಲು ತನ್ನ ಬಿಡಾರಕ್ಕೆ ಕರೆತಂದಿದ್ದಳು. ಚೇಂಕ್ರ ದೇಯಿಯ ಹೆಣದ ಹತ್ತಿರ “ಅಯ್ಯೋ ನನ್ನ ಬಿಟ್ಟು ಹೋದೆಯಾ? ನನಗಿನ್ಯಾರು ಗತಿ? ಮಕ್ಕಳಿಗೆ ಗಂಜಿ ಮಾಡಿ ಹಾಕೋರ್ಯಾರು?” ಎಂದು ಮಹಾ ಸಂಕಟದಿಂದೆಂಬಂತೆ ಬಾಯಿ ಬಡುಕೊಂಡು ರೋದಿಸುತ್ತಿದ್ದನು. ಉಳಿದವರು ಹೆಣವನ್ನು ಮಣ್ಣು ಮಾಡಲಿಕ್ಕೆ ಏರ್ಪಾಡು ಮಾಡುವುದರಲ್ಲಿದ್ದರು.

ಐತನನ್ನು ನೋಡಿದೊಡನೆ ಚೇಂಕ್ರ “ಅಯ್ಯೋ ಐತಾ, ಚಿನ್ನದಂಥಾ ಹೆಂಡ್ತಿ ಹೋಯ್ತುಲ್ಲೋ? ಕಳಕೊಂಡೆನಲ್ಲೋ?” ಎಂದೆಲ್ಲಾ ಎದೆ ಎದೆ ಬಡಿದುಕೊಂಡು ಮತ್ತಷ್ಟು ಗಟ್ಟಿಯಾಗಿ ರೋದಿಸತೊಡಗಿದನು.

ಅದನ್ನೆಲ್ಲ ಕೇಳಿ ಐತನಿಗೆ ಮೈಯೆಲ್ಲ ಉರಿಯುವಂತಾಯ್ತು! ಒಡೆಯರ ಪ್ರತಿಕ್ರಿಯೆಗೆ ನೂರುಮಡಿ ವಿಡಂಬನವಾಗಿ ತೋರಿತು ಚೇಂಕ್ರನ ರೋದನ, “ಬಿಡಾರಕ್ಕೆ ಹೋಗಿ ಮಜಾಮಾಡಾನ ಬಾರೋ!” ಎಂದು ಕುಡಿದು ಮತ್ತಿನಲ್ಲಿ ಕಮ್ಮಾರಸಾಲೆಯ ಬಳಿ ಕೇಕೆ ಹಾಕುತ್ತಿದ್ದ ಅವನ ಚಿತ್ರ ನೆನಪಿಗೆ ಬಂದು!

ಮುಂದೆ ಮಾಡಬೇಕಾದುದೆಲ್ಲವೂ ಲೆಕ್ಕಾಚಾರದಂತೆ ನಡೆಯಿತು. ಕೆಲವರಿಗೆ ಅಳುವುದೂ ಆ ಲೆಕ್ಕಾಚಾರದಂತೆ ನಡೆಯುವುದರ ಒಂದು ಭಾಗವೆ ಆಗಿತ್ತು. ನಿಜವಾಗಿ ಅತ್ತವರೆಂದರೆ ದೇಯಿಯ ಮೂರು ಮಕ್ಕಳು! ತಮ್ಮ ಅಬ್ಬೆಯನ್ನು ಚಟ್ಟಕಟ್ಟಿ ಹೊತ್ತುಕೊಂಡು ಹೋಗುತ್ತಿದ್ದಾರೆ ಎಂದು ತಿಳಿದೊಡನೆ ಆ ಮೂರು ಮಕ್ಕಳೂ ಬೊಬ್ಬೆಯಿಡತೊಡಗಿದ್ದರು. ಅಬ್ಬೇ ಅಬ್ಬೇ ಎಂದು ಒರಲುತ್ತಾ ಹೆಣ ಹೊತ್ತವರನ್ನು ಹಿಡಿದು ನಿಲ್ಲಿಸಲೆಂಬಂತೆ ಓಡಲೆಳೆಸಿದ್ದ ಅವರನ್ನು ಅಕ್ಕಣಿ ಬಾಗಿ ಪೀಂಚಲು ಒಬ್ಬೊಬ್ಬರನ್ನು ತಬ್ಬಿ ತಡೆದು ಸಮಾಧಾನ ಮಾಡಲು ಪ್ರಯತ್ನಿಸಿದ್ದರು, ತಾವೂ, ಮರಣದ ದುಃಖಕ್ಕೂ ಮಿಗಿಲಾಗಿ, ಮಕ್ಕಳ ದುಃಖಕ್ಕೆ, ದುಃಖಿಸುತ್ತಾ….

* * *

ಹೂವಳ್ಳಿ ಮನೆಯ ಹಿತ್ತಲುಕಡೆಯ ಚೌಕಿಯಲ್ಲಿ, ಹೊಲಸಿನ ಒಲೆಯ ಬಳಿ ಕುಳಿತು ನಾಗತ್ತೆ, ಹಿಂದಿನ ದಿನ ದೆಯ್ಯದ ಹರಕೆಗೆ ಕುಯ್ದಿದ್ದ ಹಂದಿಯ ಮಾಂಸದ ದೊಡ್ಡ ದೊಡ್ಡ ತುಂಡುಗಳನ್ನು ಹಗ್ಗಕ್ಕೆ ಕೊದು, ಒಣಗಿಸಿ ಸಂಡಿಗೆ ಮಾಡುವ ಸಲುವಾಗಿ, ಒಲೆಯ ಮೇಲೆ ಕಟ್ಟಿದ್ದ ಬಿದಿರುಗಳುವಿಗೆ ನೇತುಹಾಕುವ ಕೆಲಸದಲ್ಲಿ ತೊಡಗಿದ್ದಳು. ಅಲ್ಲಿಯೆ ಸ್ವಲ್ಪ ದೂರದಲ್ಲಿದ್ದ ನೀರಿನ ಹಂಡೆಯ ಹತ್ತಿರ ಚಿನ್ನಮ್ಮನ ಅಜ್ಜಿ ತೊಂಡೆಕಾಯಿ ಹರೆಯುತ್ತಾ ಕುಳಿತಿದ್ದರು. ಬೆಳಗಿನ ಬಿಸಿಲು ಕೋಲು ಕೋಲಾಗಿ ಬಿದ್ದಿದ್ದು, ಮನೆಯ ನೊಣಗಳು ಹಾರಿ ಕೂರುವ ಲೀಲೆಗೆ ರಂಗವಾಗಿದ್ದ ಒಂದು ಮೂಲೆಯಲ್ಲಿ

ಚೆನ್ನಮ್ಮ ಹೂವು ಕಟ್ಟುವ ಕಾಯ್ದಲ್ಲಿ ನಿರತಳಾಗಿದ್ದಳು. ಪಕ್ಕದಲ್ಲಿಯೆ ಆವುದೊ ಚಿಂತೆಯಿಂದ ಅನ್ಯಮನಸ್ಕಳಾಗಿದ್ದಂತೆ ಕುಳಿತಿದ್ದ ನಾಗಕ್ಕ ತಲೆ ಬಾಚಿಕೊಳ್ಳುತ್ತಿದ್ದಳು. ಕೆಲಸದ ಆಳು ಸುಬ್ಬಿ ಎಲ್ಲಕ್ಕೂ ದೂರವಾಗಿ ಬಾಗಿಲು ಸಂದಿಯಲ್ಲಿ ನಾಗಂದಿಗೆಯಿಂದ ನೇಲುತ್ತಿದ್ದ ಸಿಕ್ಕದಲ್ಲಿದ್ದ ಬುಟ್ಟಿಯಲ್ಲಿ ಕಾವು ಕೂತಿದ್ದ ಹೇಟೆಯನ್ನೆತ್ತಿ ಅದನ್ನು ಕೊರ್‌ರ್‌ರೆನ್ನಿಸುತ್ತಿದ್ದಳು, ಮೊಟ್ಟೆಗಳೆಲ್ಲ ಮರಿಯಾಗಿವೆಯೊ ಎಂದು ನೋಡುವುದಕ್ಕಾಗಿ.

ಅಜ್ಜಿ ಆ ದಿನ ತೋಟದಾಚೆಯ ಗುಡ್ಡದಲ್ಲಿ ಸೀಗೆಕಾಯಿ ಉದುರಿಸಿ ಹೆರಕುವ ಸಂಕಲ್ಪವನ್ನು ನೆನಪಿಗೆ ತಂದುಕೊಂಡು "ಹೊತಾರೆ ಅಷ್ಟು ಹೊತ್ತಿಗೆ ಬತ್ತೀನಿ ಅಂದಿದ್ದ, ಹೊತ್ತು ಮೇಲೇರಿ ಇಷ್ಟೊತ್ತಾದ್ರೂ ಕಾಣೆನಲ್ಲಾ!" ಎಂದಳು, ತನಗೆ ತಾನೆಂಬಂತೆ.

ನಾಗತ್ತೆ ಕೇಳಿದಳು "ಯಾರು?... ಹಳೇಮನೆ ಹೋಲೇರ ಮಂಜನಾ?"

"ಅಲ್ಲ. ಕೋಣೂರಿನ ಗಟ್ಟದ ತಗ್ಗಿನವನು. ಅವನ ಹೆಸರು - ಅದು ಎಂಥದ್ದೋ ಸುಡುಗಾಡು? - ಅದೇ ಆ ಬಾಗಿ ಗಂಡ" ಎಂದಳು ಅಜ್ಜಿ.

ಚೆನ್ನಮ್ಮ ದೂರದಿಂದಲೆ ಗಟ್ಟಿಯಾಗಿ ಕೇಳಿದಳು "ಯಾರಜ್ಜೀ? ಆ ಮೊಡಂಕಿಲನಾ?"

"ಹೂ ಕಣೇ! ಅವನೇ! ನಿನ್ನೆ ದೆಯ್ಯದ ಹರಕೆ ಕಡುಬು ತುಂಡು ತಿನ್ನಾಕೆ ಬಂದಿದ್ದನಲ್ಲಾ? ಸೀಗೆ ಉಡಿ ಹತ್ತಿ, ಕಾಯಿ ಉದುರಿಸಿಕೊಡ್ತಿಯೇನೋ ಅಂತಾ ಕೇಳ್ದೆ, 'ಹ್ಞೂ' ಅಂದ; ಅವನ ಹೆಂಡ್ತಿ ಬಾಗೀನೂ ಕರಕೊಂಡು ಬತ್ತೀನಿ, ಕಾಯಿ ಹೆರಕಾಕೆ ಅಂತಾನೂ ಹೇಳಿದ್ದ."

"ಆ ಪೀಂಚಲುಗಾದ್ರೂ ಹೇಳಿದ್ರೆ ಅವಳ ಗಂಡ ಐತನನ್ನು ಕರಕೊಂಡು ಬರ್ತಿದ್ದಲ್ಲಾ" ಎಂದಳು ಚೆನ್ನಮ್ಮ.

"ಅವಳೆಲ್ಲ ಬಂದಿದ್ಲೆ?" ಅಜ್ಜಿಯ ಪ್ರಶ್ನೆ.

"ಬಂದಿದ್ಲು.... ಉಣ್ಣಾಕೆ ನಿಲ್ಲಲಿಲ್ಲ..." ಮೊಮ್ಮಗಳ ಉತ್ತರ.

"ಯಾವ ಮಾಯಕದಾಗೆ ಬಂದಿದ್ಲೋ? ಯಾವ ಮಾಯಕದಾಗೆ ಹೋದ್ಲೊ? ನಂಗೊತ್ತಿಲ್ಲಾ...." ಎಂದಳು ಅಜ್ಜಿ.

ಅಷ್ಟರಲ್ಲಿ ಕಾವುಕೂತಿದ್ದ ಕೋಳಿ ಹೇಟೆಯ ಸಹಿತವಾಗಿ ಸಿಕ್ಕಿದ ಮೇಲಿದ್ದ ಬುಟ್ಟಿಯನ್ನು ನೆಲಕ್ಕಿಳಿಸಿ ಸುಬ್ಬಿ ಕೂಗಿದಳು "ಚೆನ್ನಕ್ಕಾ, ಚೆನ್ನಕ್ಕಾ, ಎಲ್ಲಾ ಮಟ್ಟೇನೂ ಮರಿ ಆಗ್ಯವೆ! ಹೂಮರಿ! ಅಯ್ಯಯ್ಯಯ್ಯೋ ಏನು ಹೇನು ಮುಲುಗುಡ್ತವೆ? ದೂರಾನೆ ಇರಿ.... ಹತ್ರ ಬರಬ್ಯಾಡಿ!.... ಹೇನು ಹತ್‌ತಾವೆ!"

ಹೂಕಟ್ಟುವುದನ್ನು ನಿಲ್ಲಿಸಿ, ಹೂಮರಿಗಳನ್ನು ನೋಡಲು ಓಡಿಹೋಗಿದ್ದ ಚೆನ್ನಮ್ಮಗೆ ಅವಳ ಅಜ್ಜಿ "ಹೌದು ಕಣೇ, ಹತ್ರ ಹೋಗಬ್ಯಾಡೇ! ಮೈಗೆಲ್ಲ ಹೇನು ಹತ್‌ತಾವೇ!" ಎಂದು ಸುಬ್ಬಿಯ ಎಚ್ಚರಿಕೆಯನ್ನು ಪುಷ್ಟೀಕರಿಸಿ, ಮತ್ತೆ ಸುಬ್ಬಿಗೆ

ಆಜ್ಞೆ ಮಾಡಿದಳು: "ಏ ಸುಬ್ಬೀ, ಆ ಹ್ಯಾಟೇನೂ ಮರೀನೂ ಒಂದು ಕುಕ್ಕೇಲಿ ಕವುಂಚ್ಹಾಕಿ, ಕಾವು ಕೂತಿದ್ದ ಬುಟ್ಟಿ ಹುಲ್ಲೂ ಎಲ್ಲಾನೂ ಗೊಬ್ಬರ ಗುಂಡಿಗೆ ತಗೊಂಡು ಹೋಗಿ ಸುಟ್ಟು ಹಾಕಿಬಿಡೇ; ಬ್ಯಾಗ!.... ಮನೇ ತುಂಬ ಹೇನು ಮಾಡಬ್ಯಾಡ!"

ಅಜ್ಜಿಯ ಅಪ್ಪಣೆಯಂತೆ ಸುಬ್ಬಿ ಹೇಟೆಮರಿಗಳನ್ನು ಒಂದು ಕುಕ್ಕೆಯಲ್ಲಿ ಕವುಚಿ ಹಾಕಿ, ಕಾವು ಕೂತಿದ್ದ ಬುಟ್ಟಿಯನ್ನು ಅದಕ್ಕೆ ಹಾಕಿದ್ದ ಹುಲ್ಲಿನ ಸಮೇತವಾಗಿ ಹೊರಕ್ಕೆ ಎತ್ತಿಕೊಂಡು ಹೋದಳು. ದಹನ ಸಂಸ್ಕಾರಕ್ಕೆ. ಚಿನ್ನಮ್ಮ ಒಳಗೆ ಓಡಿಹೋಗಿ ಒಂದು ಬೊಗಸೆ ಸಣ್ಣ ನುಚ್ಚನ್ನು ತಂದು ಹೇಟೆ ಮರಿಗಳನ್ನು ಕವುಚಿ ಹಾಕಿದ್ದ ಕುಕ್ಕೆಯೊಳಗೆ ಹಾಕಿದಳು.

"ಸುರು ಆಯ್ತಪ್ಪಾ ಇನ್ನು. ಸುಮ್ಮನೆ ಅಕ್ಕಿ ತಂದು ಸುರಿಯಾಕೆ!" ಎಂದು ಗೊಣಗಿದಳು ಅಜ್ಜಿ.

ಚಿನ್ನಮ್ಮ ಹೂವು ಕಟ್ಟಲು ಮತ್ತೆ ಹಿಂದಕ್ಕೆ ಹೋಗುತ್ತಾ ಬಾಗಿಲ ಕಡೆ ನೋಡಿ "ಓ ಬಂತಲ್ಲಾ ಮೊಡಂಕಿಲನ ಸವಾರಿ!" ಎಂದಳು.

ಅಜ್ಜಿ ಬಾಗಿಲಲ್ಲಿ ಕಾನಿಸಿಕೊಂಡ ಅವನಿಗೆ "ಎಷ್ಟೊತ್ತಿಗೆ ಬರಾದೋ? ಬಿಸಿಲೇರಿ ಹೋಯ್ತಲ್ಲೋ!.... ಬಾಗಿ ಎಲ್ಲೋ?...."

ಮೊಡಂಕಿಲ ತಾನು ತಡವಾಗಿ ಬಂದುದಕ್ಕೂ ತನ್ನ ಹೆಂಡತಿ ಬಾಗಿ ಬರೆದಿದ್ದುದಕ್ಕೂ ಕಾರಣವಾಗಿ ಕೋಣೂರಿನ ಗಟ್ಟದವರ ಬಿಡಾರದಲ್ಲಿ ನಡೆದ ದುರಂತವನ್ನೆಲ್ಲ ಹೇಳಿ "ಅದನ್ನು ಮಣ್ಣುಮಾಡಿ ಬರುವುದೆ ಹೊತ್ತಾಯಿತಮ್ಮಾ" ಎಂದನು.

"ಅವಳು ಬಸಿರುಯಾಗಿದ್ಲಂತಲ್ಲೋ?"

"ಹೌದಮ್ಮಾ, ಇವತ್ತೊ ನಾಳೆಯೊ ಹೆರುತ್ತಿದ್ದಳಂತೆ!"

"ಕೂಸನ್ನ ಹೊರಗೆ ತೆಗೆದು ಹುಗಿದರೋ? ಇಲ್ಲಾ...?"

"ಚೇಂಕ್ರಿನ ಕೈಲಿ ಕತ್ತಿಕೊಟ್ಟು ಏನೇನೋ ಮಾಡುವುದಕ್ಕೆ ಹೇಳುತ್ತಾ ಇದ್ದರು... ಅಮ್ಮಾ, ನಿಜಕ್ಕೂ ಹೇಳುತ್ತೇನೆ. ನನಗೆ ಅಲ್ಲಿ ನಿಲ್ಲಲಾಗಲಿಲ್ಲ. ಹೆದರಿ ಹಿಂದಕ್ಕೆ ಬಂದು ಬಿಟ್ಟೆ!"

"ಏನೋ ಕೂದಲು ಹಣ್ಣಾಗಕ್ಕೆ ಬಂದದೆ ನಿನಗೆ? ಹುಡುಗರು ಹೇಳಿದ್ಹಾಂಗೆ 'ಹೆದರ್ದೆ' ಅಂತೀಯಲ್ಲೋ?"

ಮೊಡಂಕಿಲ ತುಟಿಮುಚ್ಚಿ ನಗುತ್ತಾ ನಾಚಿ ತಲೆಬಾಗಿದನಷ್ಟೆ.

ಮೊಡಂಕಿಲ ಒಂದು ಉದ್ದನೆಯ ದೋಟಿ ತೆಗೆದುಕೊಂಡು ಹೋಗಿ, ಸೀಗೆಯ ಉಡಿ ಅಡರಿದ್ದ ಹೆಮ್ಮಾವಿನ ಮರ ಹತ್ತಿ, ಒಣಗಿ ನಿಂತಿದ್ದ ಕಾಯನ್ನು ಬಡಿದು ಬಡಿದು ಉದುರಿಸುತ್ತಿದ್ದನು. ಅಡಿಗೆ ಊಟ ಎಲ್ಲ ಮುಗಿಸಿ, ಹಗಲು ನಿದ್ದೆಯನ್ನೂ ಸ್ವಲ್ಪ ಮಾಡಿ, ಚಿನ್ನಮ್ಮ ನಾಗಕ್ಕ ಇಬ್ಬರೂ ಸುಬ್ಬಿಯನ್ನು ಕೂಡಿಕೊಂಡು ಮೊಡಂಕಿಲ ಉದುರಿಸಿದ್ದ

ಸೀಗೇಕಾಯಿ ಹೆರಕಲು ಹೋದರು. ಅಜ್ಜಿ 'ಇಳಿಹೊತ್ತು ತಂಪಾದ ಮೇಲೆ ಬರುತ್ತೇನೆ' ಎಂದಿದ್ದಳು. ನಾಗತ್ತೆ ತನಗೆ ಸೊಂಟನೊವು ಎಂದು ಬೆಳಕಂಡಿಯನ್ನೆಲ್ಲ ಮುಚ್ಚಿ ಕತ್ತಲು ಮಾಡಿಕೊಂಡು ಮಲಗಿದ್ದಳು.

ಪೊದೆಗಳ ನಡುನಡುವೆ ತರಗಿನ ಮೇಲೆ ಬಿದ್ದಿದ್ದ ಸೀಗೆಯಕಾಯಿಗಳನ್ನು ಹೆರಕುತ್ತಿದ್ದ ನಾಗಕ್ಕನನ್ನು ಮತ್ತೆ ಮತ್ತೆ ತಲೆಯೆತ್ತಿ ಎತ್ತಿ ನೋಡುತ್ತಿದ್ದ ಚಿನ್ನಮ್ಮ ಕೇಳಿದಳು: "ನಾಗಕ್ಕ, ಯಾಕೆ ಇವತ್ತು ಹೊತಾರೆಯಿಂದ ಏನೋ ಒಂದು ತರಾ ಆಗಿದ್ದಿಯಲ್ಲಾ? ಮೈ ಹುಷಾರಿಲ್ಲೇನು?"

ಹೊರಕ್ಕೆ ನೆಗೆಯಲು ಪ್ರಶ್ನೆಯ ನೆವವನ್ನೆ ಕಾಯುತ್ತಿತ್ತೊ ಎಂಬಂತೆ ಭಾವವುಕ್ಕಿ, ಕಣ್ಣು ತೇವವೇರಿ, ಉಸಿರಾಡುತ್ತಾ ನಿಂತು ನಾಗಕ್ಕ: "ಮೈಗೇನಾಗಿದೆ? ಮೈಗೆ ಏನೂ ಆಗಿಲ್ಲ. ಹುಸಾರಾಗಿದ್ದೀನಿ!" ಎಂದಳು. ಅವಳ ರೀತಿ ಅಳುವಂತೆಯೂ ಎರಡೂ ಗೊತ್ತಾಗುವಂತಿರಲಿಲ್ಲ.

"ಮತ್ತೆ? ಯಾಕೆ ಹಿಂಗೆ ಉಸಿರು ಬಿಡ್ತೀಯಲ್ಲಾ?" ಆಶ್ಚರ್ಯಚಕಿತೆಯಾಗಿ ಕೇಳಿದಳು ಚಿನ್ನಮ್ಮ.

"ಅಕ್ಕಾ, ನಾನೊಂದು ಕೇಳ್ತೀನಿ, ಹೇಳ್ತೀಯಾ?"

"ಏನೇ?"

"ಹೇಳ್ತೀನಿ ಅಂತ ಹೇಳಿದ್ರೆ, ಹೇಳ್ತೀನಿ..."

"ಗೊತ್ತಾಗಾದಂತಾದ್ರೆ ಹೇಳೇ ಹೇಳ್ತೀನಿ..."

"ಬುದ್ದಿವಂತೆ. ನಿಂಗೆ ಗೊತ್ತಾಗೇ ಆಗ್ತದೆ...."

"ಯಾರು ಹೇಳಿದ್ರೆ ನಿಂಗೆ? ನಾ ಒಂದು ಹಳ್ಳಿಮಡ್ಡಿ. ಓದಾಕೆ ಬರಿಯಾಕೆ ಒಂದೂ ಗೊತ್ತಿಲ್ಲ..."

"ಓದಾಕೆ ಬರಿಯಾಕೆ ಬರದಿದ್ರೆ ಏನಾಯ್ತೂ? ಐಗಳ ಹತ್ರ, ಮುಕುಂದಣ್ಣನ ಹತ್ರ, ಕೇಳೀಮಾಡೀ ಎಲ್ಲ ತಿಳಿಕೊಂಡೀಯಂತೆ! ಕೋಣೂರಿನಾಗೆ ಕಾಗಿನಹಳ್ಳಿ ಅಮ್ಮನೂ ಹೇಳ್ತಿದ್ರು. ಇಲ್ಲಿ ಅಜ್ಜಮ್ಮನೂ ಹೇಳ್ತಾರೆ...."

"ಏನು ತಿಳಿಕೊಂಡ್ರೆ ಏನು ಬಂತು? ಅದೃಷ್ಟ ಸರಿಯಾಗಿ ಇಲ್ಲದಿದ್ರೆ?..."

"ನಿಂಗೇನು ಅದೃಷ್ಟ ನನ್ನ ಹಂಗಲ್ಲ..."

"ಅವರವರ ಕಷ್ಟ ಅವರವರಿಗೇ ಗೊತ್ತು." ಚಿನ್ನಮ್ಮ ಹೇಳಿದಳು, ಹೋದ ಇರುಳು ಪೀಂಚಲು ಹೇಳಿದ್ದುದನ್ನು ನೆನೆದು: "ಹೋಗಲಿ ಬಿಡು. ನೀ ಏನೋ ಕೇಳ್ತಿದ್ದೆಲ್ಲ? ಏನದು?"

ಮಾತಾಡುತ್ತಾ ಇಬ್ಬರೂ ಒಂದು ದಟ್ಟ ಪೊದೆಯ ಹಿಂದೆ ಬಂದಿದ್ದವರು ಅಲ್ಲಿಯೆ ನೆರಳಲ್ಲಿ ಮರೆಯಾಗಿ ಕುಳಿತರು.

"ಅಕ್ಕಾ, ಸತ್ತುಹೋದವರು ಮತ್ತೆ ಬರ್ತಾರೇನೆ?"

ಅತ್ಯಂತ ಅನಿರೀಕ್ಷಿತವಾಗಿ ನಾಗಕ್ಕನ ಪ್ರಶ್ನೆಗೆ ಬೆಪ್ಪಾಗಿ ಹೋದಳು ಚಿನ್ನಮ್ಮ ಕಿಸಕ್ಕನೆ ನಕ್ಕುಬಿಟ್ಟಳು!

"ಅಯ್ಯೋ ಮಾರಾಯ್ತಿ, ಎಂತಾ ಪ್ರಶ್ನೆ ಹಾಕಿಬಿಟ್ಟೆ?" ಎಂದಳು.

"ನಗಾಡಬ್ಯಾಡ, ಹೇಳಕ್ಕ" ನಾಗಕ್ಕ ತನ್ನ ಪ್ರಶ್ನೆಯನ್ನು ಗಂಭೀರವಾಗಿ ಪುನರುಚ್ಚರಿಸಿದಳು.

"ಕನಸಿಗಾ?" ಕೇಳಿದಳು ಚಿನ್ನಮ್ಮ.

"ಅಲ್ಲ, ನಿಜವಾಗಿಯೂ!"

"ಎಲ್ಲಾರೂ ಉಂಟೇನೆ?"

"ಮತ್ತೆ? ನಿನ್ನೆ ರಾತ್ರೆ ನನ್ನ…. " ಎಂದು ಅರ್ಧದಲ್ಲಿಯೆ ನಿಲ್ಲಿಸಿದಳು ನಾಗಕ್ಕ.

ಚಿನ್ನಮ್ಮ ಮುನ್ನಿನ ಲಘುತ್ವವನ್ನೆಲ್ಲ ಬಿಟ್ಟು ಕಿವಿಗೊಟ್ಟು ಕೇಳತೊಡಗಿದಳು.

ತಿಳಿವಳಿಕೆಯುಳ್ಳ ಜಾಣ ಹುಡುಗಿಯಾಗಿದ್ದರೂ ಕನ್ಯಾನುಭವಕ್ಕೆ ಅವೇದ್ಯವಾದ ಕೆಲವು ಗೋಪ್ಯ ವಿಷಯಗಳಲ್ಲಿ ಸಂಪೂರ್ಣ ಮುಗ್ಧೆಯಾಗಿದ್ದ ಚಿನ್ನಮ್ಮಗೆ ನಾಗಕ್ಕ ನಡೆದುದೆಲ್ಲವನ್ನೂ ಬಿಡಿಸಿ ಹೇಳಲು ಸಮರ್ಥೆಯಾಗಿರಲಿಲ್ಲ. ಸ್ಥೂಲವಾಗಿ ಸೂಚ್ಯವಾಗಿ ಮಾನಕ್ಕೆ ಮೀರದಿರುವಷ್ಟನ್ನು ಮಾತ್ರ ಹೇಳಿದಳು.

ನಾಗತ್ತೆ ಕೋಣೆಯ ಬಾಗಿಲನ್ನು ತೆರೆದು ವೆಂಕಣ್ಣನನ್ನು ಒಳಕ್ಕೆ ಬಿಟ್ಟುಹೋದ ಮೇಲೆ ಅವನು ತಾಳ ಹಾಕಿಕೊಂಡು ಹೋಗಿ ನಾಗತ್ತೆ ಮಲಗಿದ್ದಲ್ಲಿ ನಾಗಕ್ಕನ ಪಕ್ಕದಲ್ಲಿ ಮಲಗಿದ್ದನು. ಆದರೆ ನಾಗಕ್ಕಗೆ ಇತ್ತಣ ಪ್ರಜ್ಞೆ ಇರಲಿಲ್ಲ: ಅವಳಿಗೆ ಬಂದಿದ್ದದು ನಿದ್ದೆ ಮಾತ್ರವಾಗಿರಲಿಲ್ಲ, ಕಳ್ಳುಹೆಂಡಗಳೊಡನೆ ನಾಗತ್ತೆ ಸೇರಿಸಿಕೊಟ್ಟಿದ್ದ ಮದ್ದಿನ ಮತ್ತೂ ಸೇರಿತ್ತು. ವೆಂಕಟಪ್ಪನಾಯಕನಿಂದ ತನ್ನ ಮೇಲೆ ನಡೆದಿದ್ದ ಅತ್ಯಾಚಾರವೆಲ್ಲ ಅವಳಿಗೆ ಒಮದು ಸವಿಗನಸಿನಂತೆ ಅನುಭವಕ್ಕೆ ಬಂದಿತ್ತು. ಆ ಸ್ವಪ್ನದಲ್ಲಿ ಅವಳು ತನ್ನ ದಿವಂಗತ ಪತಿ ನಾಗಣ್ಣನೊಡನೆ ಮತ್ತೆ ಕೂಡಿದ್ದಳು! ಬಹುಕಾಲದ ಮೇಲೆ ತನ್ನಲ್ಲಿಗೆ ಬಂದಿದ್ದ ಅವನನ್ನು ನೋಡಿ ಮೋಹಿಸಿ ಮುದ್ದಿಸಿದ್ದಳು. ತಾನು ಇಷ್ಟು ಕಾಲವೂ ಅತ್ತೆಯ ಕುಹಕಕ್ಕೆ ಬಲಿಬೀಳದೆ ಯಾರೊಡನೆಯೂ ಸೇರುಡಿಕೆಯಾಗದೆ ಇದ್ದುದಕ್ಕೆ ಸಾರ್ಥಕ ಪ್ರತಿಫಲವೊದಗಿದಂತೆ ಭಾವಿಸಿ ಕೃತಜ್ಞೆಯಾಗಿದ್ದಳು. ಅವನು ತನ್ನ ಲಜ್ಜಾವಲಯವನ್ನು ಅನಾವರನ ಮಾಡಿದಾಗ ಸ್ವಲ್ಪ ದಿಗಿಲಾದಂತೆ ಅನುಭವವಾಗಿದ್ದರೂ, ತನ್ನ ಗಂಡನೊಡನೆ ನಾನು ರಮಿಸುವುದರಲ್ಲಿ ತಪ್ಪೇನು ಎಂದು ಅವಳು ತನ್ನ ಅಂತಃಸಾಕ್ಷಿಗೆ

ತಾನೆ ಸಮಾಧಾನ ಹೇಳಿಕೊಂಡು, ಅವನನ್ನು ಆಲಿಂಗಿಸಿ, ಚುಂಬಿಸಿ, ಒತ್ತಿಕೊಂಡು ಪುಲಕಿತೆಯಾಗಿ ಆನಂದಮಗ್ನೆಯಾಗಿದ್ದಳು.

ಅವಳ ಆ ಚರ್ಯೆಯನ್ನೆಲ್ಲ ವೆಂಕಟಣ್ಣ ತನ್ನ ಪರವಾಗಿ ಅವಳಿಗಿರುವ ಬೇಟದ ಚಿಹ್ನೆಯಿಂದೆ ಭಾವಿಸಿ, ಸುಖರಸಪ್ಲಾವಿತ ಚಿತ್ತನಾಗಿ, ನಾಗತ್ತೆಗೆ ಮನದಲ್ಲಿಯೆ ವಂದಿಸಿದ್ದನು. ತನ್ನ ಪೂರೈಸಿಕೊಮಡು ಅವನು ಹಿಂದಕ್ಕೆ ತನ್ನ ಕೋಣೆಗೆ ಹೋಗಿ ಮಲಗಿಬಿಡಬೇಕು ಎಂಬುದು ಅವರಿಬ್ಬರೂ - ನಾಗತ್ತೆ ಮತ್ತು ವೆಂಕಟಣ್ಣ - ಒಟ್ಟಿ ಒಪ್ಪಿದ್ದ ವ್ಯೂಹವಾಗಿತ್ತು. ಏಕೆಂದರೆ ನಾಗಕ್ಕನನ್ನು ಇನ್ನೂ ಅವನು ಶಾಸ್ತ್ರೀಯವಾಗಿ ಸೀರುಡಿಕೆ ಮಾಡಿಕೊಂಡಂತೆ ಆಗಿರಲಿಲ್ಲ. ಆ ಸಾರ್ವಜನಿಕವಾದ ಬಹಿರಂಗ 'ಕೂಡಿಕೆ'ಯನ್ನು ತರುವಾಯ - ಈ ರೀತಿಯಲ್ಲಿ ಸೋತ ನಾಗಕ್ಕ ಅನಿವಾರ್ಯಕ್ಕೆ ಸಿಕ್ಕಿ ಒಪ್ಪಗೆ  ಕೊಡಬೇಕಾಗಿಯೆ ಬಂದಮೇಲೆ - ಮಾಡಿಕೊಳ್ಳುವುದು ಅವರ ಹರುವಾಗಿತ್ತು. ಆದರೆ ವೆಂಕಟಪ್ಪನಾಯಕರಿಗೆ ನಾಗಕ್ಕನ ಮಗ್ಗುಲಿಂದ ಕೆಲಸ ಪೂರೈಸಿದ ಮೇಲೆಯೂ ಏಳುವ ಮನಸ್ಸಾಗಲಿಲ್ಲ. ನಾಗತ್ತೆ ಬಂದು ಸ್ವಲ್ಪ ಬಲವಾಗಿಯೆ ಬಾಗಿಲು ತಟ್ಟಲು ತೊಡಗಿದ ಮೇಲೆಯೆ ವೆಂಕಟಣ್ಣ ಮನಸ್ಸಿಲ್ಲದ ಮನಸ್ಸಿನಿಂದ ಎದ್ದು ಬಾಗಿಲು ತೆರೆದು ತನ್ನ ಕೋಣೆಗೆ ಹೋಗಿದ್ದನು. ನಾಗತ್ತೆ ಮೊದಲಿನಂತೆ ಬಾಗಿಲು ಮುಚ್ಚಿ ತಾಳ ಹಾಕಿಕೊಂಡು ಹೋಗಿ ನಾಗಕ್ಕನ ಬಳಿ ಮಲಗಿದ್ದಳು. ಬೆಳಿಗ್ಗೆ ನಿದ್ದೆಯೂ ಅಮಲೂ ಇಳಿದಮೇಲೆ ನಾಗಕ್ಕ ತನಗೆ ಬಿದ್ದಿದ್ದ ಕನಸನ್ನು ನೆನೆದು ಆನಂದಾನುಭವ ಮಾಡಿದ್ದಳು. ಆದರೆ ತನ್ನ ಅಂಗಉಪಾಂಗಗಳಿಗೂ ಉಟ್ಟ ಸೀರೆಗೂ ಒದಗಿದ್ದ ಸ್ಥೂಲಭೌತಿಕ ಪರಿಣಾಮವನ್ನು ಕಂಡು ಅವಳಿಗೆ ಅರ್ಥವಾಗದೆ ಹೆದರಿಕೆಯಾಗಿತ್ತು. ಆಲೋಚಿಸಿದಂತೆಲ್ಲ ಅವಳಿಗೆ ಏನೇನೋ ಅನುಮಾನಗಳೂ ತಲೆಹೊಕ್ಕಿದ್ದುವು. ಆದರೆ ಒಂದು ಮಾತ್ರ ಅವಳ ಧೈರ್ಯಕ್ಕೂ ಸಂತೋಷಕ್ಕೂ ಬೆಂಬಲವಾಗಿತ್ತು: ಅತ್ತೆ ಪಕ್ಕದಲ್ಲಿಯೆ ಮಲಗಿದ್ದಳಲ್ಲಾ! ಅವಳೇ ಬಾಗಿಲು ಮುಚ್ಚಿ ತಾಳ ಹಾಕಿಕೊಂಡಳಷ್ಟೆ? ಮನುಷ್ಯರು ಯಾರೂ ಒಳಗೆ ಬರಲು ಸಾಧ್ಯವೇ ಇಲ್ಲ! ಆದ್ದರಿಂದ ಬಂದಿದ್ದಾತನು, ತನಗೆ ಸ್ಪಷ್ಟವಾಗಿ ಆಗಿದ್ದ ಅನುಭವದಂತೆ, ತನ್ನ ತೀರಿಕೊಂಡ ಗಂಡ ನಾಗಣ್ಣನೇ ಆಗಿರಬೇಕು!

"ಹಂಗಾರೆ ನಾಗಜ್ಜಿ ನಿನ್ನ ಮಗ್ಗುಲಾಗೇ ಮನಗಿತ್ತು?" ಎಲ್ಲವನ್ನೂ ಆಲಿಸಿದ ಚಿನ್ನಮ್ಮ ಇತ್ಯರ್ಥ ಹೇಳುವ ಮುನ್ನ ಕೇಳಿದ್ದಳು.

"ಹೌದಕ್ಕಾ!" ಸಮರ್ಥಿಸಿದಳು ನಾಗಕ್ಕ.
"ನಿಜ ಅಲ್ಲ ಕಣೇ. ಸಪ್ನಾನೆ ಇರಬೇಕು. ನಂಗೂ ಸಪ್ಪನದಲ್ಲಿ ನನ್ನವ್ವ ಬರ್ತಿತ್ತು…. ನಿಜ ಆಗಿದ್ದರೆ ನಾಗಜ್ಜಿಗೆ ಎಚ್ಚರ ಆಗ್ದೆ ಇರ್ತಿತ್ತೆ?…. "

ನಿಜ ಎಂದು ಸಾಧಿಸುವುದಕ್ಕೆ ಕೊಡಬಹುದಾಗಿದ್ದ ಸಾಕ್ಷಿಗಳೆಲ್ಲ ಅವಾಚ್ಯವಾಗಿದ್ದು, ಚಿನ್ನಮ್ಮಗೆ ಅಗ್ರಾಹ್ಯವೂ ಆಗಿದುದ್ದರಿಂದ ನಾಗಕ್ಕ ಸುಮ್ಮನಾದಳು.
"ಎಲ್ಲಿ ಹೋದ್ರೇ ಅವರಿಬ್ಬರೂ? ಇಷ್ಟೇ ಏನೇ ಹೆರಕಿದ್ದು, ಏ ಸುಬ್ಬೀ?" ಮನೆಯಿಂದ ಗುಡ್ಡ ಹತ್ತಿ ಬಂದಿದ್ದ ಚಿನ್ನಮ್ಮನ ಅಜ್ಜಿ ಸೊಂಟಗೈಯಾಗಿ ನಿಂತು ಬುಟ್ಟಿಯ ಕಡೆ ನೋಡುತ್ತಾ ಕೇಳಿದಳು.

"ಅಲ್ಲೆಲ್ಲೊ ಮಟ್ಟಿನ ಹಿಂದೆ ಮಾತಾಡ್ತಾ ಕೂತಾರೆ.... ನಾನೊಬ್ಬಳೆ ಎಷ್ಟು ಅಂತಾ ಹೆರಕ್ಲಿ?" ಸುಬ್ಬಿ ಸ್ವಲ್ಪ ಅಸಮಾಧಾನ ಧ್ವನಿಯಿಂದಲೆ ಹೇಳಿದಳು!
ಅಜ್ಜಿಯ ಪ್ರಶ್ನೆ ಮತ್ತು ಸುಬ್ಬಿಯ ಉತ್ತರ ಎರಡನ್ನೂ ಆಲಿಸಿ ಮರೆಯಿಂದ ನಾಗಕ್ಕನೊಡನೆ ಹೊರಗೆ ಬಂದ ಚೆನ್ನಮ್ಮ "ಇಷ್ಟೊತ್ತಿನ ತನಕಾ ಹೆರಕ್ತಾನೇ ಇದ್ದೆವು, ಅಜ್ಜಿ, ಈಗ ತಾನೆ ಇಲ್ಲಿ ಕೂತಿದ್ದು, ನೆಳ್ಳಲ್ಲಿ ಸ್ವಲ್ಪ ದಣಿವಾರಿಸಿಕೊಳ್ಳಾಕೆ." ಎಂದು ಸುಬ್ಬಿಯ ಕಡೆ ತಿರುಗಿ ಸಿಡುಕಿದಳು "ಮಾತಾಡ್ತಾ ಕೂತಿದ್ದಂತೆ? ನೀನು ಕೂತೂ ಕೂತೂ ಏಳ್ತಿದ್ದೆಲ್ಲಾ? ನಾನೇನು ನೋಡ್ಲಿಲ್ಲಾ ಅಂತ ಮಾಡೀಯೇನು?"

ನಾಗಕ್ಕ ಪಿಸುಮಾತಿನ ಕೆಳದನಿಯಲ್ಲಿ ಚೆನ್ನಮ್ಮಗೆ ಹೇಳಿದಳು "ಕಣ್ಣು ಮೂಗು ಒರಸಿಕೊಳ್ಳೆ; ಅಜ್ಜಮ್ಮ ನೋಡ್ತಾರೆ." ಇಬ್ಬರೂ ತಮಗರಿವಿಲ್ಲದೆಯೆ ಸಂವಾದ ಕಾಲದಲ್ಲಿ ಅತ್ತಿದ್ದರು. ಅದರ ಗುರುತು ಸಿಗಬಾರದೆಂದು ಇಬ್ಬರೂ ಬೆವರು ಒರೆಸಿಕೊಳ್ಳುವ ರೀತಿಯಲ್ಲಿ ಕಣ್ಣು ಮೂಗು ಮುಖ ಎಲ್ಲವನ್ನೂ ಗೊಬ್ಬೆ ಸೆರಗಿನಿಂದ ಒರಸಿಕೊಂಡರು.

ಆದರೂ ಚೆನ್ನಮ್ಮ ಹತ್ತಿರಕ್ಕೆ ಬಂದಾಗ ವಯಸ್ಸಿನ ದೆಸೆಯಿಂದ ದೃಷ್ಟಿ ಮಂದವಾಗಿದ್ದ ಅಜ್ಜಿ ಮೊಮ್ಮಗಳ ಮೋರೆಯ ಕಡೆ ಬಿಡದೆ ನೋಡುತ್ತಾ "ಯಾಕೆ? ಕಣ್ಣು ಕೆಂಪಗೆ ಆಗ್ಯದೆಲ್ಲಾ?" ಎಂದವಳು, ತನ್ನ ಪ್ರಶ್ನೆಗೆ ತಾನೇ ಉತ್ತರ ಹೇಳುವಂತೆ ಮುಂದುವರೆಸಿದಳು "ನಮ್ಮ ತ್ವಾಟದ ಮ್ಯಾಲಿನ ಈ ಸೀಂಗೆಉಡಿ ಕಾಯಿ ಬಾಳ ಘಾಟು ಕಣೇ? ಕುಟ್ತಾ ಇದ್ರೆ, ಮನೇಲಿ ಎಲ್ಲಿದ್ರೂ ಸೀನೀ ಸೀನೀ ಸಾಕಾಗಿ ಹೋಗ್ತದೆ!.... ನಮಗೇನು ಒಂದು ವರ್ಷಕ್ಕೆಲ್ಲಾ ನಾಕು ಕೊಟ್ಟೆ ಸೀಂಗೆಬುತ್ತಿ ಆದ್ರೆ ಸಾಕಾಗಿ ಹೋಗ್ತದೆ.... ಎಲ್ಲಿ ಹೋದ್ನೆ ಅಂವ, ಆ ಬಾಗೀ ಗಂಡ?...."

"ಇಲ್ಲೇ ಕೂತೀನ್ರಮ್ಮಾ!" ಪೊದೆಯ ಮರೆಯಿಂದ ಮೊಡಂಕಿಲ ಕೂಗಿದನು.
"ಏನೋ? ಹೊತ್ತಿನ್ನೂ ಸುಮಾರು ಮ್ಯಾಲೆ ಅದೆ; ಆಗ್ಲೆ ಇಳಿದುಬಿಟ್ಯೇನೋ?... ಹೋಗ್ಲಿ ಬಾ. ಒಂದೀಟು ಬ್ಯಾಗ ಬ್ಯಾಗ ಒಟ್ಟುಮಾಡಿ ಮನೇತನಕಾ ತಂದು ಕೊಟ್ಬಿಡು.... ನಿನ್ನ ಹೆಂಡ್ತೀಗೆ ಹೇಳೋ, ಒಂದು ದಿನಾ ಬಂದು ಕುಟ್ಟಿ ಕೊಡಾಕೆ...."

ಇನ್ನೂ ಕಪ್ಪಾಗಲು ಸುಮಾರು ಹೊತ್ತಿದರೂ ಪಡುವಣ ಬಾನಿನಲ್ಲಿ ಬೈಗುಗೆಂಪಿನ ಛಾಯೆ ಆಗಲೆ ಮೈದೋರಿತ್ತು. ಅವರಿದ್ದ ಸ್ಥಾನಕ್ಕೆ ಗುಡ್ಡದ ನೆತ್ತಿಗಾಡಿನ ದಟ್ಟ ನೆಳಲು ಇರುಳಿನ ಮಂಚೂಣಿಯಂತೆ ಕವಿಯತೊಡಗಿತ್ತು. ಚೆನ್ನಮ್ಮ ಅದುವರೆಗೂ ಗಮನಿಸಿಯೆ ಇರಲಿಲ್ಲ: ಗೊತ್ತು ಕೂರಲು ನೆರೆಯುತ್ತಿವೆ ಹಕ್ಕಿಹಿಂಡು! ಎಷ್ಟು ಹಕ್ಕಿಗಳಿವೆ ಈ ಕಾಡಿನ ಸೆರಗಿನಲ್ಲಿ? ಯಾವ ಯಾವ ತರದ ಹಕ್ಕಿ? ಛೆ ಛೆ ಛೆ ಎಷ್ಟು ಬಣ್ಣ? ಒಂದೊಂದರ ಕೂಗೂ ಒಂದೊಂದು ತರ! ಆ ಸಿಳ್ಳು ಹಾಕುವ ನೇಲುಪುಕ್ಕದ ಕರಿಹಕ್ಕಿ? ಅವಳಿಗೆ ಗೊತ್ತು: ಮುಕುಂದಯ್ಯ ತೋರಿಸಿದ್ದ; ಅದು ಕಾಜಾಣ! ಅದೆಂಥ ಹಕ್ಕಿಯೊ ಅದು, ಪಳಪಳ ಹೊಳೆಯುತ್ತಿದೆ, ಬಿಸಿಲುಬಿದ್ದ ಬಳೆಯ ಕಣ್ಣು ಹೊಳೆದ ಹಾಗೆ? ಈಗ ಹಾರಿಹೋಗಿದ್ದು: ಗಿಣಿ ಹಿಂಡು! ಅಕ್ಕೋ ಅದೇ ಕಾಮಳ್ಳಿ ಹಿಂಡು! ಇದು ಪಿಕಳಾರ: ಆವಿತ್ತು ಕೋಣೂರಿನಲ್ಲಿ ಕಣದ ಹತ್ತಿರ ಮಟ್ಟಿನಲ್ಲಿ ಗೂಡುಕಟ್ಟಿ ಮರಿ ಮಾಡಿತ್ತಲ್ಲಾ ಅದೇ! ಛೆ ಛೆ ಛೆ ಛೆ ಎಷ್ಟು ಹಕ್ಕಿ! ಅವೆಲ್ಲವೂ ಒಟ್ಟುಲಿದು ಕಾಡೆಲ್ಲಾ ಗಿಲಿಗಿಚ್ಚಿ ಆಡಿಸಿದ ಹಾಂಗಿದೆಯಲ್ಲಾ!

* * *

'ಹೊಡ್ತಾ ಅಂದ್ರೆ ಎಂಥಾ ಹೊಡ್ತಾ ಅಂತೀಯ? ಹೊನ್ನಳ್ಳಿ ಹೊಡ್ತಾ!' 'ಹಾಕ್ಬೇಕು ಅವನಿಗೆ ಹೊನ್ನಳ್ಳಿ ಹೊಡ್ತಾ!' ಮಲೆನಾಡಿಗರ ಮಾತುಕತೆಗಳಲ್ಲಿ ಈ 'ಹೊನ್ನಳ್ಳಿಹೊಡ್ತ'ದ ಪದಪ್ರಯೋಗವನ್ನು ಮತ್ತೆ ಮತ್ತೆ ಕೇಳಬಹುದಿತ್ತು ಈ ಶತಮಾನದ ಆದಿಭಾಗದಲ್ಲಿ. ಈಗಲೂ ಹಳಬರ ಬಾಯಲ್ಲಿ ಆಗಾಗ 'ಹೊನ್ನಳ್ಳಿ ಹೊಡೆತ' ಬರುವುದುಂಟು. ಆದರೆ ಈಗ ಆ ಪದವನ್ನು ಉಪಯೋಗಿಸುವವರಿಗೆ ಅದರ ಮೂಲ ಏನು ಎಂದಾಗಲಿ, ಹೊಡೆತಕ್ಕೆ ಏಕೆ 'ಹೊನ್ನಳ್ಳಿ' ವಿಶೇಷಣವಾಗಿದೆ ಎಂದಾಗಲಿ ಗೊತ್ತಿರಲಾರದು. ಅಂತೂ ಏನೊ ಒಮದು ಬಲವಾದ ಪೆಟ್ಟು, ಹೊಡೆತ, ರಕ್ತಕಾರಿಕೊಳ್ಳುವಂತಹ ಹೊಡೆತ, ಕೈಕಾಲು ಮುರಿದುಬೀಳುವಂತಹ ಹೊಡೆತ ಎಂಬರ್ಥದಲ್ಲಿ ಅದನ್ನು ಸುಮ್ಮನೆ ಉಪಯೋಗಿಸುತ್ತಾರೆ. "ರುಸ್ತುಂ ಹೊಡೆತ" ಎನ್ನುವುದಿಲ್ಲವೆ ಹಾಗೆ!

ಆದರೆ ಹತ್ತೊಂಬತ್ತನೆಯ ಶತಮಾನದ ಕೊನೆಯಲ್ಲಿ ಆಗುಂಬೆ, ಮೇಗರವಳ್ಳಿ, ತೀರ್ಥಹಳ್ಳಿ, ಮುತ್ತೂರು, ಮುಂಡಾಕಾರು, ಮಂಡಗದ್ದೆ ಮುಂತಾದ ಕಡೆಯ ಮಲೆನಾಡಿನ ಹಳ್ಳಿಗರಿಗೆ ಎಲ್ಲರಿಗೂ "ಹೊನ್ನಳ್ಳಿ ಹೊಡ್ತ" ದ ಅರ್ಥ ಚೆನ್ನಾಗಿಯೆ ಗೊತ್ತಿತ್ತು. ಹಲವರಿಗೆ - ಅದರಲ್ಲೂ ಬಡ ಬಗ್ಗರಿಗೆ - ಅರ್ಥ ಮಾತ್ರವಲ್ಲ ಅದರ ರುಚಿಯೂ ಗೊತ್ತಾಗಿತ್ತು; ಕೆಲವರು ಅದರ ಸಾಕ್ಷಾತ್ಕಾರದ ಸ್ವಾನುಭವಕ್ಕೆ ತುತ್ತಾಗಿ ಸಮಾಧಿಸ್ಥರಾಗಿಯೂ ಇದ್ದರು.

ಹೊನ್ನಳ್ಳಿ ಹೊಡೆತದ ಮೂಲ ಪ್ರಪಿತಾಮಹರೆಂದರೆ ಕಲ್ಲೂರು ಸಾಹುಕಾರ ಮಂಜಭಟ್ಟರು. ಗಟ್ಟದ ಕೆಳಗಣಿಂದ ಪಂಚಪಾತ್ರೆ ಪಾಣಿಪಂಚೆಯೊಡನೆ ಪೂಜಾರಿಯಾಗಿ ಮೇಲೆ ಬಂದವರು ಸ್ವಸಾಮರ್ಥ್ಯದಿಂದಲೂ, ನೈಪುಣ್ಯದಿಂದಲೂ, "ಪುಣ್ಯ"ದಿಂದಲೂ, ಶ್ರೀಮಂತರೂ ಜಮೀನುದಾರರೂ ಆದರು. ಸಾಲ ಕೊಟ್ಟೋ, ಸಾಲ ಕೊಟ್ಟಂತೆ ಬರೆಯಿಸಿಕೊಂಡೋ, ಅಕ್ಷರ ಬಂದವರಿಂದ ರುಜು ಹಾಕಿಸಿಕೊಂಡೋ, ಅಕ್ಷರ ಬಾರದವರಿಂದ ಹೆಬ್ಬೆಟ್ಟೊತ್ತಿಸಿಕೊಂಡೋ ಎಲ್ಲರ ಭಯ ಗೌರವಗಳಿಗೆ ಪಾತ್ರರಾಗಿ ಸುಪ್ರಸಿದ್ಧರಾದರು. ಆದರೆ ದಂಡಶಕ್ತಿ ಇಲ್ಲದಿದ್ದರೆ ಲಕ್ಷ್ಮಿಯನ್ನುಳಿಸಿಕೊಳ್ಳುವುದು ಕಷ್ಟ ಎಂಬುದು ಅವರಿಗೆ ಬೇಗನೆ ಅನುಭವಕ್ಕೆ ಬಂತು. ಲಕ್ಷ್ಮಿಯ ಸ್ವರೂಪವೆ ಹಾಗೆ: ಸ್ವಲ್ಪ ಕಷ್ಟಸಾಧ್ಯವಾದರೂ ಗಳಿಸಿಕೊಳ್ಳಬಹುದು: ಆದರೆ ಉಳಿಸಿಕೊಳ್ಳುವುದು ಮಾತ್ರ ದುಷ್ಟಸಾಧ್ಯವೆ!

ವ್ಯಕ್ತಿಯಾಗಿ ಮಂಜಬಟ್ಟರಿಗೆ ದೈಹಿಕವಾಗಿ ಆ ಶಕ್ತಿಯಿರಲಿಲ್ಲ. ಆದ್ದರಿಂದ ಅವರು ಆಗ ಹೊನ್ನಳ್ಳಿ ಎಂದೇ ಹೆಸರು ಪಡೆದಿದ್ದ ಹೊನ್ನಾಳಿಯಿಂದ ಕೆಲವು ಉಂಡಾಡಿಗಳಾದ ಪುಂಡ ಸಾಬರನ್ನು, ಮೇಗರವಳ್ಳಿಯ ಕರಿಮೀನು ಸಾಬು ಮತ್ತು ಅವನ ತಮ್ಮ ಪುಡೀ ಸಾಬು ಇವರ ಮುಖಾಂತರವಾಗಿ ಕರೆಸಿ ಅವರನ್ನು 'ವಸೂಲಿ ಸಾಬರು' ಆಗಿ ನಿಯಮಿಸಿಕೊಂಡರು. ಊರು ಮನೆಯವರನ್ನು ಆ ಕೆಲಸಕ್ಕೆ ಗೊತ್ತು ಮಾಡಿಕೊಂಡರೆ ಅವರು ನಿರ್ದಾಕ್ಷಿಣ್ಯವಾಗಿ ವರ್ತಿಸುವುದು ಸಾಧ್ಯವಿಲ್ಲ. ತಲತಲಾಂತರದಿಂದ ಗುರುತು ಪರಿಚಯ ಇರುವವರನ್ನೂ, ದೂರವೂ ಹತ್ತಿರವೂ ಆದ ಸಂಬಂಧಿಗಳನ್ನೂ, ಹಿಂದೆ ಪ್ರತಿಷ್ಠಿತರಾಗಿ ತಮಗೆ ನೆರವಾಗಿದ್ದು ತಮ್ಮ ಗೌರವಕ್ಕೂ ಪಾತ್ರರಾಗಿದ್ದು ಈಗ ಅವನತಿಗಿಳಿದಿದ್ದವರನ್ನೂ ದಯೆ ದಾಕ್ಷಿಣ್ಯಗಳಿಲ್ಲದೆ, ಮುಖ ಮೋರೆ ನೋಡದೆ, ಸ್ಥಾನಮಾನಗಳೊಂದನ್ನು ಗಣನೆಗೆ ತಾರದೆ 'ವಸೂಲಿ' ಕೆಲಸ ಮಾಡಬೇಕಾದರೆ ಸ್ಥಳದಿಂದಲೂ ಜಾತಿಮತಗಳಿಂದಲೂ ದೂರವಾಗಿರುವ ಸಾಬರೆ ಅದಕ್ಕೆ ತಕ್ಕವರೆಂದು ನಿರ್ಣಯಿಸಿತ್ತು ಭಟ್ಟರ ರಾಜಕೀಯ ಅರ್ಥಶಾಸ್ತ್ರಪ್ರತಿಭೆ!

ಹೀಗೆ ಹೊನ್ನಾಳಿಯಿಂದ ಬಂದು ಮೇಗರವಳ್ಳಿಯಲ್ಲಿ ಶಿಬಿರ ಸ್ಥಾಪನೆ ಮಾಡಿದ ಸಾಬರ ತಂಡವು ತನಗೆ ಅನುಕೂಲವಾದ ನಿಷ್ಪಕ್ಷಪಾತ ಮಾರ್ಗವನ್ನೆ ಅನುಸರಿಸಿತ್ತು. ದುಡ್ಡು ಕೊಟ್ಟವರಿಗೆಲ್ಲ ಅವರು ವಸೂಲಿ ಸಾಬರಾಗಿ ಸೇವೆ ಸಲ್ಲಿಸತೊಡಗಿದರು. ಶ್ರೀಮಂತರಾಗಿದ್ದು ಒಕ್ಕಲುಗಳಿಗೂ ಇತರರಿಗೂ ಸಾಲ ಕೊಟ್ಟಿದ್ದವರೆಲ್ಲ - ಬೆಟ್ಟಳ್ಳಿ ಕಲ್ಲಯ್ಯಗೌಡರು, ಹಳೆಮನೆ ಸುಬ್ಬಣ್ಣ ಹೆಗ್ಗಡೆಯವರು, ಸಿಂಬಾವಿ ಭರಮೈ ಹೆಗ್ಗಡೆಯವರು, ಲಕ್ಕುಂದದ ಹಳೆಪೈಕದ ಸೇಸನಾಯಕರು ಮೊದಲಾದವರೆಲ್ಲ - ತಮ್ಮ ತಮ್ಮ ದಡೂತಿಗೆ ತಕ್ಕಂತೆ ದುಡ್ಡಿಗೋ ಬತ್ತಕ್ಕೋ ಅಡಕೆಗೋ ವಸೂಲಿ ಸಾಬರ ಸೇವೆಯನ್ನು ಪಡೆಯತೊಡಗಿದರು. ಆ ಸೇವೆಯ ಪರಿಣಾಮವಾಗಿಯೆ ಹುಟ್ಟಿಕೊಂಡಿತು ಆ ನಾಣ್ಣುಡಿ: " ಹೊನ್ನಳ್ಳಿಯ ಹೊಡ್ತ. "ಹೊನ್ನಾಳಿಯಿಂದ ಬಂದಿದ್ದ ಸಾಬರ ಹೊಡೆತ = ಅಂದರೆ ಹೊನ್ನಾಳಿಯ ಹೊಡೆತ - ಅಂದರೆ ಅದರ ಗ್ರಾಮದಯ ರೂಪ "ಹೊನ್ನಾಳ್ಳಿಹೊಡ್ತಾ!"

ಆ 'ಹೊನ್ನಳ್ಳಿ ಹೊಡ್ತ'ದಿಂದ, ಹಿಂದೆ ಪ್ರತಿಷ್ಠಿತವಾಗಿದ್ದು ಈಗ ಅವನತ ಸ್ಥಿತಿಗಿಳಿದಿದ್ದ ಮನೆತನದ ಹೂವಳ್ಳಿ ವೆಂಕಪ್ಪನಾಯಕರಂತಹರಿಗೂ ತಪ್ಪಿಸಿಕೊಳ್ಳಲಾಗಿರಲಿಲ್ಲ.

ಆ ಸಾಬರ ತಂಡದಲ್ಲಿ ಐದು ಹೆಸರುಗಳು ಎಲ್ಲ ಹಳ್ಳಿಗರಿಗೂ ತಿಳಿದಿತ್ತು: ಕರಿಮೀನುಸಾಬು, ಪುಡೀಸಾಬು, ಅಜ್ಜೀಸಾಬು, ಲುಂಗೀಸಾಬು, ಇಜಾರಸಾಬು. ಕರೀಂ ತದ್ಭವವಾಗಿ ಕರಿಮೀನು ಆಗಿದ್ದ ಹೆಸರಿನವರು ಮೇಗರವಳ್ಳಿಯಲ್ಲಿ ಒಂದು ಅಂಗಡಿ ಇಟ್ಟು ನೆಲೆಸಿದ್ದ ಮಾಪಿಳ್ಳೆ. ಅವನ ತಮ್ಮ ಮಂಗಳೂರು ನಶ್ಯ ತಯಾರಿಸಿ ಮಾರುತ್ತಿದ್ದವನಾದ್ದರಿಂದ ಅವನನ್ನು ಪುಡೀಸಾಬು ಎಂದೇ ಕರೆಯುತ್ತಿದ್ದರು. ಆಗುಂಬೆಯ ಘಾಟಿಯ ಕಾಡುದಾರಿಯಲ್ಲಿ ಆಗುತ್ತಿದ್ದ ಕೊಲೆ ದರೋಡೆಗಳಲ್ಲಿ ಅವನ ಪಾಲೂ ಇದ್ದಿತೆಂದು ಕೆಲವರು ಆಡಿಕೊಳ್ಳುತ್ತಿದ್ದರು. ಎತ್ತರವಾಗಿ ದಾಂಡಿಗನಾಗಿ ಕ್ರೂರಿಯಾಗಿ ಕಾಣುತ್ತಿದ್ದ ಇಜಾರದ ಸಾಬುವಿಗೆ ಅವನು ಹಾಕಿಕೊಳ್ಳುತ್ತಿದ್ದ ದೊಗಳೆ ಷರಾಯಿಯಿಂದಲೆ ಆ ಹೆಸರು ಬಂದಿತ್ತು. ಇನ್ನು ಕುಳ್ಳಾಗಿ ಗುಜ್ಜಾಗಿದ್ದ ಸಿಂಡಮೂಗಿನ ಸಾಬು ಯಾವಾಗಲೂ ಸಣ್ಣ ಸಣ್ಣ ಚೌಕದ ಕಣ್ಣಿನ ಕೆಂಗಪ್ಪಿನ ಪಂಚೆಯನ್ನು ಸೊಂಟಕ್ಕೆ ಸುತ್ತಿರುತ್ತಿದ್ದರಿಂದ ಅವನಿಗೆ 'ಲುಂಗೀಸಾಬು' ಎಂದು ಹೆಸರು ಬಂದಿತ್ತು. ತೆಳ್ಳಗೆ ಕರಗಿದ್ದು ಹೋತದ ಗಡ್ಡ ಬಿಟ್ಟಿದ್ದವನ ನಿಜವಾದ ಹೆಸರು 'ಅಜೀಜ್' ಎಂದು. ಆದರೆ ಅದರ ಉಚ್ಚಾರಣೆ ಹಳ್ಳಿಗರ ಬಾಯಲ್ಲಿ 'ಅಜ್ಜೀಸಾಬು' ಎಂದೇ ಆಗಿಹೋಗಿತ್ತು. ಕೊನೆಯ ಮೂವರು ಕನ್ನಡಿಗರು.

ಹೂವಳ್ಳಿಯಲ್ಲಿ ದೆಯ್ಯದ ಹರಕೆಯಾದ ಮರುದಿವಸವಲ್ಲ ಅದರ ಮರುದಿವಸ ವೆಂಕಟಣ್ಣ ಮನೆಯ ಅಂಗಳದಲ್ಲಿ, ತುಳಸಿಕಟ್ಟೆ ದೇವರಿಗೆ ತುಸು ಹತ್ತಿರದಲ್ಲಿಯೆ, ಕಂಬಳಿ ಹಾಕಿಕೊಂಡು ಅದರ ಮೇಲೆ ಕೂತು, ಕೊಟ್ಟೆಕಡ್ಡಿ ಹೆರೆಯುತ್ತಿದ್ದನು. ಹೊತ್ತು ಸುಮಾರು ಬೆಳಿಗ್ಗೆ ಎಂಟು ಎಂಟೂವರೆ ಗಂಟೆಯಾಗಿರಬಹುದು. ಅವನ ಗಮನವೆಲ್ಲ ಸಂಪೂರ್ಣವಾಗಿ ತಾನು ಮಾಡುತ್ತಿದ್ದ ಕೆಲಸದ ಮೇಲೆ ಕೇಂದ್ರೀಕೃತವಾಗಿದ್ದಂತೆ ತೋರುತ್ತಿತ್ತು. ಆದರೆ ನಿಜಾಂಶ, ಅವನ ಮನಸ್ಸು ಸಂಪೂರ್ಣವಾಗಿ ಅನ್ಯವಿಷಯಾಕ್ರಾಂತವಾಗಿತ್ತು. ಎಷ್ಟೋ ವರ್ಷಗಳಿಂದ ಪ್ರತಿವರ್ಷವೂ ಮಾಡುತ್ತಿದ್ದ ಆ ಕೆಲಸವನ್ನು ಅವನ ಕೈಯೂ ಕಣ್ಣೂ ಸ್ವಯಂಚಾಲಿತ ಯಂತ್ರದಂತೆ ನಿರ್ಮನಸ್ಕವಾಗಿಯೆ ಮಾಡುತ್ತಿದ್ದವು. ಸಾಮಾನ್ಯವಾಗಿ ವೆಂಕಟಣ್ಣ ಅಂತರ್ಮುಖಿಯೆ ಅಲ್ಲ; ವಿಶೇಷವಾಗಿಯೂ ಅಲ್ಲ ಎಂದು ಹೇಳಿಬಿಡಬಹುದಾದಷ್ಟು ಬಹಿರ್ಮುಖ ಸ್ಥೂಲವ್ಯಾಪಾರಗಳಲ್ಲಿಯೆ ಅವನ ಮನಸ್ಸು ಓಡಾಡುತ್ತಿದ್ದುದು ರೂಢಿ. ಅಷ್ಟೆ ಅಲ್ಲ; ಅವನ ದೇಹದಂತೆಯೆ ಅವನ ಮನಸ್ಸೂ, ತತ್ತ್ವಶಾಸ್ತ್ರ ರೀತಿಯಲ್ಲಿ ನಿಸರ್ಗ ಸಹಜವಾಗಿ ಸೂಕ್ಷ್ಮ ಎಂಬ ವಿಶೇಷಣಕ್ಕೆ ಪಾತ್ರವಾಗಿದ್ದಿತೇ ಹೊರತು, ಅದಕ್ಕೆ ವ್ಯವಹಾರಸಾಧ್ಯವಾದ ಕ್ಷೇತ್ರದೃಷ್ಟಿಯಿಂದ ಅದರ ಲಕ್ಷಣನಿರ್ಣಯ

ಮಾಡುವುದಾದರೆ, ಅದೂ ಸ್ಥೂಲವೆ ಆಗಿತ್ತು. ಆದರೆ ಹಿಂದಿನ ರಾತ್ರಿ, ಅಂದರೆ, ದೆಯ್ಯದ ಹರಕೆಯಾದ ಮಧುರರಾತ್ರಿಯ ಮರುದಿನದ ರಾತ್ರಿ, ನಡೆದ ಒಂದು ಘಟನೆಯಿಂದಾಗಿ ಅವನ ಮನಸ್ಸು ಒಂದು ಅಸಹ್ಯ ವೇದನೆಯ ಉಸುಬಿನಲ್ಲಿ ಸಿಕ್ಕಿಬಿಟ್ಟಿತ್ತು. ಆ ವೇದನೆ ಎಷ್ಟು ಅಸಹ್ಯವಾಗಿತ್ತೆಂದರೆ, ಇಂದ್ರಿಯಸುಖದ ಎಂತಹ ಅಸಹ್ಯದಲ್ಲಿಯೂ ಅಲಕ್ಷವಾಗಿ ವಿಹರಿಸಿ ಆಸ್ವಾದಿಸಿ ಆನಂದಪಡುವುದನ್ನೂ ಬಹುಕಾಲದಿಂದ ಅಭ್ಯಾಸ ಮಾಡಿಕೊಂಡಿದ್ದ ಅವನ ರೂಕ್ಷಸ್ಥೂಲ ಮನಸ್ಸನ್ನೂ ಸೂಕ್ಷ್ಮವಾಗಿ ಮಾಡಿ, ಅವನು ಚಿಂತಕ್ರಾಂತನಾಗುವಂತೆ ಮಾಡಿಬಿಟ್ಟಿತ್ತು ಅದು....!

ದೆಯ್ಯದ ಹರಕೆ ನಡೆದ ರಾತ್ರಿ ನಾಗತ್ತೆಯ ವಾಮೋಪಾಯದಿಂದ ವೆಂಕಟಣ್ಣ ನಾಗಕ್ಕನ ಮಗ್ಗುಲಲ್ಲಿ ಮಲಗಿ, ಸುಖಾನುಭವ ಮಾಡಿ, ನಾಗತ್ತೆಯ ಬಲಾತ್ಕಾರದಿಂದಲೆಂಬಂತೆ ನಾಗಕ್ಕನ ಇನ್ನೂ ಮೈತಿಳಿಯುವ ಮುನ್ನವೇ ಎದ್ದು ಕೋಣೆಯಿಂದ ಹೊರಗೆ ಬಂದಿದ್ದನು. ಮರುರಾತ್ರಿಯೂ ಅದೇ ನಾಟಕ ಪುನರಭಿನಯವಾಗುವಂತೆ ಏರ್ಪಾಡಾಗಿತ್ತು. ಆದರೆ ಮುಖ್ಯ ಪಾತ್ರವೇ ಕಥಾ ಸಂವಿಧಾನಕ್ಕೆ ತಕ್ಕಂತೆ ಸಹಕರಿಸಿರಲಿಲ್ಲ. ನಾಗಕ್ಕ ಆ ದಿನ ಕಳ್ಳನ್ನಾಗಲಿ ಹೆಂಡವನ್ನಾಗಲಿ ಕುಡಿಯುತ್ತಿದ್ದಂತೆ ನಟಿಸಿದ್ದಳೆ ವಿನಾ ಕುಡಿದಿರಲಿಲ್ಲ. ಅವಳೂ ಚಿನ್ನಮ್ಮನೂ ಸೀಗೆಕಾಯಿ ಹರಕಲು ಹೋದಾಗ ಅವರಿಬ್ಬರಲ್ಲಿ ನಡೆದಿದ್ದ ಸಂವಾದದ ಪರಿಣಾಮವಾಗಿ ಅವಳು ಎಚ್ಚರ ವಹಿಸಿದ್ದಳು. ಚಿನ್ನಮ್ಮ ನಾಗಕ್ಕನಿಗಾದ ಅನುಭವ 'ಕನಸು' ಎಂದು ತೀರ್ಪು ಕೊಟ್ಟಿದ್ದಳು. ಆದರೆ ನಾಗಕ್ಕನಿಗೆ ಅದು ಯಾವುದೋ ರೀತಿಯಲ್ಲಿ ಹೇಗೋ ನಿಜವಾಗಿ ನಡೆದದ್ದು ಎಂಬುದರಲ್ಲಿ ಆಲೋಚಿಸಿದಷ್ಟೂ ಹೆಚ್ಚು ಹೆಚ್ಚಾಗಿ ವಿಶ್ವಾಸ ಹುಟ್ಟತೊಡಗಿ ಅದನ್ನು ಮರುರಾತ್ರೆ ಪರೀಕ್ಷಿಸಲು ಗಟ್ಟಿ ಮನಸ್ಸು ಮಾಡಿದ್ದಳು.

ಕಳೆದ ರಾತ್ರಿಯಂತೆ ನಾಗಕ್ಕ ನಾಗತ್ತೆಯೊಡನೆ ಹೋಗಿ ಅದೇ ಕೋಣೆಯಲ್ಲಿ ಅದೇ ಹಾಸಗೆಯ ಮೇಲೆ ಅದೇ ಕ್ರಮದಲ್ಲಿ ಮಲಗಿದ್ದಳು. ಈ ಸಾರಿ ನಾಗಕ್ಕನೆ ಬಾಗಿಲನ್ನು ಭದ್ರಪಡಿಸಿದ್ದಳು, ತಾಳಹಾಕಿ. ನಾಗತ್ತೆ ಹಣತೆ ಆರಿಸಿ ಮಲಗಿದಳು. ಬತ್ತಿ ಕುಡಿಯ ಕನರುವಾಸನೆಯೂ ನಾಗಕ್ಕನ ಮೂಗಿಗೆ ಬಂದು ತುಸುಹೊತ್ತಿನಲ್ಲಿಯೆ ಇಲ್ಲವಾಗಿ ಹೋಯಿತು. ಕಣ್ಣುಬಿಟ್ಟುಕೊಂಡೆ ಮಲಗಿದ್ದ ಅವಳಿಗೆ ಆ ಕಗ್ಗತ್ತಲೆ ಸ್ಥೂಲತೆಯನ್ನು ಬಿಟ್ಟುಕೊಟ್ಟಿದ್ದ ಕಗ್ಗಲ್ಲಾಗಿತ್ತು.

ಸ್ವಲ್ಪ ಹೊತ್ತಾದ ಮೇಲೆ ನಾಗತ್ತೆ 'ನಾಗೂ! ನಾಗೂ!' ಎಂದು ಮೆಲ್ಲಗೆ ಕರೆದಳು.

ಮೆಲ್ಲಗೆ ಮೈಮುಟ್ಟಿ ಮತ್ತೆ ಕರೆದಳು.

ನಾಗಕ್ಕನಿಂದ ಉತ್ತರವಾಗಲಿ ಏನೊಂದು ಪ್ರತಿಕ್ರಿಯೆಯಾಗಲಿ ತೀರಿಬರಲಿಲ್ಲ.

ಹೋದ ಇರುಳು ತನ್ನ ಉದ್ದೇಶ ಸಾಧನೆಯಲ್ಲಿ ಸದ್ದುಗದ್ದಲವಿಲ್ಲದೆ ಜಯಶೀಲಳಾಗಿದ್ದ ನಾಗತ್ತೆ ಈ ಇರುಳೂ ತನ್ನ ವಿಶೇಷ ಪ್ರಯತ್ನವೇನೂ ಬೇಕಾಗದೆಯೆ ಎಲ್ಲ ಸುಸೂತ್ರವಾಗಿ ನಡೆದು ಹೋಗುತ್ತದೆ ಎಂಬ ಧೈರ್ಯದಲ್ಲಿ ತಾನು ಕುಡಿದು ತಿನ್ನುವ ವಿಚಾರದಲ್ಲಿ ನಿನ್ನೆಗಿಂತಲೂ ಸ್ವಲ್ಪ ಧಾರಾಳವಾಗಿಯೆ ವರ್ತಿಸಿದ್ದಳು. ಅಲ್ಲದೆ ವೆಂಕಟಣ್ಣನೊಡನೆ ಲೈಂಗಿಕ ಸಂಬಂಧಾನುಭವ ಪಡೆದಿದ್ದ ನಾಗಕ್ಕ ಯಾವ ವಿಶೇಷವರ್ತನೆಯನ್ನೂ ಪ್ರದರ್ಶಿಸದೆ ಮೌನವಾಗಿ ಗೆಲುವಾಗಿಯೆ ಇದ್ದುದನ್ನು ಕಂಡು ಅವಳು ತನ್ನ ಸೊಸೆಗೂ ಅದು ಇಷ್ಟಸುಖದ ವಿಷಯವೆ ಆಗಿರಬೇಕು ಎಂದು

ನಿರ್ಣಯಿಸಿದ್ದಳು. ಇಲ್ಲದಿದ್ದರೆ, ಹಿಂದೆ, ಕೆಲವು ಸಲ, ಇದಕ್ಕಿಂತಲೂ ಎಷ್ಟೋ ಪಾಲು ಕಡಿಮೆಯ ಲೈಂಗಿಕ ಲಘುಪ್ರಸಂಗಗಳಲ್ಲಿ ಕೂಡ, ಅವಳು ಕಟುವಾಗಿ ಗುಲ್ಲೆಬ್ಬಿಸಿದ್ದಂತೆ ಹುಯ್ಯಲಿಸದೆ ಇರುತ್ತಿದ್ದಳೇ? ಮೌನವೇ ಸಮ್ಮತಿಯ ಲಕ್ಷಣವೆಂದು ಅವಳು ಭಾವಿಸಿ, ತನ್ನ ಸೊಸೆ ವೆಂಕಟಣ್ಣನೊಡನೆ ಕೂಡಿಕೆಯಾಗುವ ಒಪ್ಪಂದಕ್ಕೆ ಪರಾಕಾಷ್ಠತೆಯ ಸ್ವರೂಪದ ಮುದ್ರೆಯನ್ನೊತ್ತಿಸಿಕೊಂಡು ಬಿಟ್ಟಿದ್ದಾಳೆಂದು ನಿಶ್ಚಿಂತೆಯಾಗಿದ್ದಳು.

ವೆಂಕಟಣ್ಣನೂ ಹೊರಗೆ ಕೆಲಸದಮೇಲೆ ಹೋಗಿದ್ದು, ಕತ್ತಲೆಯಾಗಿ ಬಹಳ ಹೊತ್ತಾದಮೇಲೆ ಕಳ್ಳುಗೊತ್ತಿನಿಂದ ಹಿಂತಿರುಗಿದ್ದನಾದ್ದರಿಂದ, ಅವನೂ ಇಂದು ನಿನ್ನೆಯ ಹಾಗೆ ಅವಸರವಾಗಿ ಬೇಗ ಬರುವುದಿಲ್ಲವೆಂದೂ ನಂಬಿದ್ದಳು. ಆದ್ದರಿಂದಲೆ ಸೊಸೆ ನಿದ್ರಿಸುತ್ತಿದ್ದಾಳೆಂದು ತಿಳಿದ ಮೇಲೆ ಅವಳೂ ಅನುದ್ವಿಗ್ನಚಿತ್ತೆಯಾಗಿ ಚೆನ್ನಾಗಿಯೆ ನಿದ್ದೆ ಮಾಡಿದಳು.

ಆದರೆ ನಾಗಕ್ಕ ಕಣ್ಣು ಮುಚ್ಚಿಯೂ ಇರಲಿಲ್ಲ. ಕಗ್ಗತ್ತಲೆಯನ್ನೆ ನೋಡುತ್ತಾ ಮಲಗಿದ್ದಳು. ಉದ್ವೇಗದಿಂದ ಅವಳ ಮೈ ಬೆವರುತ್ತಿತ್ತು. ಆದಷ್ಟು ಪ್ರಯತ್ನದಿಂದ ಉಸಿರಾಟ ಜೋರಾಗಿ ಕೇಳಿಸದಂತೆ ತಡೆದು ತಡೆದು ಮೆಲ್ಲಗೆ ಉಸಿರಾಡುತ್ತಿದ್ದಳು. ಅವಳಿಗೆ ಏನು ನಡೆಯಬಹುದೊ ಏನು ನಡೆಯುತ್ತದೆಯೊ ಎಂಬ ವಿಚಾರದಲ್ಲಿ ಅನಿಶ್ಚಯತೆ. ಹಿಂದಿನ ರಾತ್ರಿ ಬಂದಂತೆ ಕನಸಿನಲ್ಲಿಯೆ ಗಂಡ ಬರುತ್ತಾನೆಯೋ? ಅಥವಾ ನಿಜವಾಗಿಯೆ ಬಂದುಬಿಡುತ್ತಾನೆಯೋ? ಅಥವಾ ನಿಜವಾಗಿಯೆ ಬಂದು ಬಿಟ್ಟರೆ? ಹಿಂದಿನ ರಾತ್ರಿಯಾದರೂ ತನಗೆ ನಿದ್ದೆ ಬಂದಿತ್ತು. ಆದ್ದರಿಂದ ಗಾಬರಿಯಾಗಿರಲಿಲ್ಲ. ಈಗ ಎಚ್ಚತ್ತಿದ್ದೇನೆ! ಸತ್ತುಹೋದವನು ಹೇಗೆ ಬರುತ್ತಾನೋ? ದೆವ್ವವಾಗಿ ಬಂದರೆ ಏನು ಗತಿ? ನಾಗಕ್ಕನಿಗೆ ದೆವ್ವದ ರೂಪ ಆಕಾರಗಳ ವಿಚಾರವಾಗಿ ಏನೂ ಗೊತ್ತಿಲ್ಲದಿದ್ದರೂ ಅವಳು ತುಂಬಾ ಹೆದರಿಕೊಂಡಳು. ನೆನೆದಂತೆಲ್ಲ ಉದ್ವೇಗ, ಭಯ, ನಿರೀಕ್ಷೆ, ಸಂತೋಷವೆನ್ನಲು ಬಾರದ ಏನೋ ಒಂದು ತರಹದ ಹಿಗ್ಗು ಹೆಚ್ಚಾಗಿ ಮೈ ಮತ್ತೂ ಬೆವರಿತು; ಉಸಿರಾಟ ಹೆಚ್ಚಾಯಿತು. ದೇಹಬಾಧೆ ತೀರಿಸಿಕೊಳ್ಳಲು ಹೊರಗೆ ಹೋಗಬೇಕು ಎನ್ನಿಸಿತು. ಆದರೆ ಏಳುವುದು ಹೇಗೆ? ಏಳುವುದಕ್ಕೂ ಏನೋ ಅಂಜಿಕೆ. ಮೆಲ್ಲಗೆ ಅತ್ತೇ ಅತ್ತೇ ಎಂದು ಕರೆದಳು. ಆದರೆ ಅವಳೂ ಗಾಢ ನಿದ್ರೆಯಲ್ಲಿದ್ದಂತೆ ತೋರಿತು.

ಉದ್ವೇಗದ ಸಮಯದಲ್ಲಿ ಆಗುವ ಶಾರೀರಿಕ ವ್ಯಾಪಾರಗಳ ಫಲವಾಗಿ ಅವಳಿಗೆ ಹೊರಗೆ ಹೋಗಬೇಕಾಗಿಯೆ ಬಂತು. ಅವಶ್ಯಕತೆ ಮಿತಿಮೀರಲು, ಕತ್ತಲೆಯ ಭಯವನ್ನು ಉತ್ತರಿಸಿ, ಬರಿಯ ಒಡಲಿನ ಕೆಚ್ಚೆ ಅವಳನ್ನು ಏಳುವಂತೆ ಮಾಡಿತು. ಎದ್ದು ಕುಳಿತಳು; ನಿಂತಳು; ಕೈಚಾಚಿ ತಡವುತ್ತಾ ಬಾಗಿಲೆಡೆಗೆ ಸಾರಿ, ತಾಳ ತೆಗೆದು ತೆರೆದಳು. ಹೊರಗೆ ಜಗಲಿಯಲ್ಲಿ ಮತ್ತು ಅದಕ್ಕೂ ಕೆಳಗೆ ಅಂಗಳದಲ್ಲಿ ಕತ್ತಲೆ ಬರಬರುತ್ತಾ ಕಡಿಮೆಯಾಗಿ ಕಣ್ಣಿಗೆ ವಸ್ತುಗಳ ನೇಸಲು ಗೊತ್ತಾಗುವಂತಿತ್ತು.

ಮೆಲ್ಲಗೆ ಹೊಸಲು ದಾಟಿ, ಸದ್ದಾಗದಂತೆ ಬಾಗಿಲು ಮುಚ್ಚಿಕೊಂಡು ಜಗಲಿಯಿಂದ ಇಳಿದು ಅಂಗಳಕ್ಕೆ ಹೋಗಿ ಮರೆಯಾದಳು.

ಸ್ವಲ್ಪ ಹೊತ್ತಿನಮೇಲೆ ಹಿಂತಿರುಗಿದಳು. ಹೊರಗಡೆಯ ಗಾಳಿಯ ತಂಪಿಗೆ ಅವಳ ಮೈ ಶಾಂತವಾಗಿತ್ತು. ಸ್ವೇದ ಉದ್ವೇಗ ಎಲ್ಲ ಅಡಗಿತ್ತು. ಅದ್ಯಕ್ಕೆ ಲೋಕದಲ್ಲಿ ಯಾವ ವಿಶೇಷತೆಯೂ ನಡೆಯುವಂತೆ ತೋರುತ್ತಿರಲಿಲ್ಲ.

ಅತೀಂದ್ರಿಯ ವ್ಯಾಪಾರದ ಭಯಮಿಶ್ರಿತ ಪ್ರತೀಕ್ಷೆಯನ್ನು ಸಾಧಾರಣತೆಯ ಅನುದ್ವೇಗಪರಿಸ್ಥಿತಿ ಶಮನಗೊಳಿಸಿತ್ತು. ಅಂಗಳ ದಾಟಿ ಜಗಲಿಗೆ ಹತ್ತಿ, ತಾನು ಮುಚ್ಚಿ ಬಂದಿದ್ದ ಕದವನ್ನು ಮೆಲ್ಲಗೆ ತಳ್ಳಿದಳು, ತೆರೆದೆ ತೆರೆಯುತ್ತದೆ ಎಂಬ ಸುನಿಶ್ಚಿತ ಶ್ರದ್ಧೆಯಿಂದ. ಆದರೆ ಅದು ತೆರೆದುಕೊಳ್ಳಲಿಲ್ಲ! ತುಸು ಬಲವಾಗಿ ತಳ್ಳಿದಳು. ಇಲ್ಲ! ನೂಕಿದಳು. ಆದರೂ ಮುಚ್ಚಿಯೆ ಇತ್ತು!

ಇದ್ದಕ್ಕಿದ್ದಂತೆ ಅವಳ ಚಿತ್ತ ಸಾಧಾರಣತೆಯ ಅನುದ್ವೇಗದ ಪರಿಸ್ಥಿತಿಯಿಂದ ಅದ್ಭುತಾನುಭವದ ಸ್ಥಿತಿಗೆ ನೆಗೆದುಬಿಟ್ಟಿತು! ತನ್ನ ಗಂಡನ ಪ್ರೇತ ತಾನು ಹೊರಗೆ ಹೋಗಿದ್ದ ಸಮಯದಲ್ಲಿ ಒಳಹೊಕ್ಕು ತಾಳ ಹಾಕಿಕೊಂಡಿತೇ? ಹಾಗಾದರೆ ನಿನ್ನೆ ತನಗಾದಂತೆ.... ಅವಳ ಆಲೋಚನೆ ಕೀಲುತಪ್ಪತೊಡಗಿತು.... ಅತ್ತೆ ಮಲಗಿದ್ದಾಳೆ? ಅಯ್ಯೊ, ಏನು ಅಚಾತುರ್ಯ! ಏನು ಅವಿವೇಕವಾಯಿತು ತನ್ನಿಂದ! ಎಂತಾ ಅಪರಾಧ? ಅತ್ತೆಗಾದರೂ ಎಚ್ಚರವಾಗುವುದಿಲ್ಲವೆ? ನಾಗಕ್ಕನಿಗೆ ಕಾಲು ನಡುತೊಡಗಿತು. ಮುಂದೇನು ಮಾಡಬೇಕೋ ಹೊಳೆಯಲಿಲ್ಲ. ಕುಸಿದು ಕುಳಿತಳು. ಕೂಗಿಕೊಳ್ಳೋಣವೆನ್ನಿಸಿತ್ತು. ಅದೂ ಸಾಧ್ಯವಾಗಲಿಲ್ಲ. ಇದೇನು ನಿಜವೋ? ಕನಸೋ? ಕಡೆಗೆ ಇದೂ ನಿನ್ನೆಯಂತಹ ಒಂದು ಸ್ವಪ್ನವೋ ಏನೊ? ನಿನ್ನೆ ಸ್ವಪ್ನದಲ್ಲಿ ನಿಜದಂತೆ ಕಂಡು, ಇಂದು ನಿಜದಲ್ಲಿಯೆ ಸ್ವಪ್ನದಂತೆ ಕಾಣುತ್ತಿದೆಯೊ? ನಾಗಕ್ಕ ಕುಳಿತಲ್ಲಿಯೆ ನಿಜವನ್ನು ಮುಟ್ಟಿ ಗೊತ್ತು ಹಚ್ಚಲು ಕೈನೀಡಿ ತಡವಿ ನೆಲ ಹೊಸ್ತಿಲು ಗೋಡೆಗಳನ್ನು ಮುಟ್ಟಿದಳು. ಥೆ! ಇದು ನಿಜವೆ! ಮನೆಯೆಲ್ಲ ಕಾಣಿಸುತ್ತಿದೆ! ಜಗಲಿ, ಅಂಗಳ, ಜಗಲಿಯ ಮುಂಡಿಗೆಗೆ ಕೀಲಿಸಿದ್ದ ದೊಡ್ಡಿನ ಕೋಡೂ ಸಹ ಕಾಣುತ್ತಿದೆ! - ಚಿನ್ನಮ್ಮ ಮಲಗಿದ್ದಲ್ಲಿಗೆ ಹೋಗಲೆ? ಇವತ್ತು. ನಿನ್ನೆ ಅವರಿಬ್ಬರೂ ಒಪ್ಪಂದ ಮಾಡಿಕೊಂಡಿದ್ದಂತೆ. ನಾಗಕ್ಕ ಚಿನ್ನಮ್ಮನ ಕೋಣೆಯಲ್ಲಿ ಅವಳ ಜೊತೆ ಮಲಗಿರುತ್ತಿದ್ದಳು. ಆದರೆ ಚಿನ್ನಮ್ಮಗೆ ಇದ್ದಕ್ಕಿದ್ದ ಹಾಗೆ ಮೈ ಬಿಸಿಯಾಗಿ ಜ್ವರ ಬಂದಿದ್ದರಿಂದ ಅವಳು ಅಜ್ಜಿಯೊಡನೆಯೆ ಮಲಗಬೇಕಾಗಿ ಬಂತು. ಈ ನಡುರಾತ್ರಿ ಅಲ್ಲಿಗೆ ಹೋಗುವುದಾದರೂ ಹೇಗೆ? ಹೋದರೂ ಅಜ್ಜಿಯನ್ನೆಬ್ಬಿಸಿಲೆ ಬೇಕಾಗುತ್ತದೆ. ಅವಳು ಕೇಳಿದರೆ ಏನೆಂದು ಹೇಳುವುದು? ನಾಗಕ್ಕ ತನಗರಿವಿಲ್ಲದೆಯೆ ಅಳತೊಡಗಿದ್ದಳು. ತಾನೆಂತಹ ದೌರ್ಭಾಗ್ಯೆ? ನನ್ನಷ್ಟಕ್ಕೆ ನಾನು ಸುಮ್ಮನಿರುವುದಕ್ಕೂ ಬಿಡುವುದಿಲ್ಲವಲ್ಲಾ ವಿಧಿ? ಅದೆಂತಹ ವಿಷಯ ಸಂಕಟದಲ್ಲಿ ಸಿಕ್ಕಿಸಿಬಿಟ್ಟಿದೆ, ನನ್ನನ್ನು? ಕೆರೆ ಬಾವಿ ಅಲ್ಲದೆ ಬೇರೆ ಗತಿಯೆ ಇಲ್ಲವೆ ನನಗೆ?.... ಎಷ್ಟು ಹೊತ್ತು ಕೂತಿದ್ದಳೊ ಆ ಬಾಗಿಲೆಡೆ? ನಾಗಕ್ಕಗೆ ಗೊತ್ತಾಗಲಿಲ್ಲ.

ತಟಕ್ಕನೆ ಬಾಗಿಲು ತಾಳ ತೆಗೆದ ಸದ್ದಾಯಿತು. ಕದವೋ ತೆರೆಯಿತು. ಅತ್ತೆಯೆ ಬಂದಳೆಂದು ನಾಗಕ್ಕ ನೋಡುತ್ತಾಳೆ: ಆ ಮಸಗುಗತ್ತಲೆಯಲ್ಲಿಯೂ ಸ್ಪಷ್ಟವಾಗಿ ಗೊತ್ತಾಯಿತು, ಉಟ್ಟಿದ್ದು ಸೀರೆಯಲ್ಲ ಪಂಚೆ ಎಂದು!

ಸೊಂಟಕ್ಕೆ ಸುತ್ತಿದ್ದ ಪಂಚೆಯಲ್ಲದೆ ಮತ್ತೇನೂ ಮೈಮೇಲಿಲ್ಲದ ಆ ವ್ಯಕ್ತಿ ಮುದುರಿ ಕುಳಿತಿದ್ದ ನಾಗಕ್ಕನ ಬಳಿ ನಿಂತು "ಯಾರದು?" ಎಂದಿತು.

ಚಿನ್ನಮ್ಮನ ಅಪ್ಪಯ್ಯನ ಧ್ವನಿ!

ಪ್ರಜ್ಞೆ ತಪ್ಪಿ ಕುಳಿತಲ್ಲಿಯೆ ನೆಲದ ಮೇಲೆ ಬಿದ್ದುಬಿಟ್ಟಳು ನಾಗಕ್ಕ!....

ರಾತ್ರಿ ನಡೆದದ್ದನ್ನೆಲ್ಲಾ ನೆನೆಯುತ್ತಾ ಯಾಂತ್ರಿಕವಾಗಿ ಕೊಟ್ಟೆಕಡ್ಡಿ ಹೆರೆಯುತ್ತಾ ಕುಳಿತಿದ್ದ ವೆಂಕಟಣ್ಣನಿಗೆ ಲುಂಗೀ ಸಾಬು ಬಂದದ್ದು ಗೊತ್ತಾಗಲಿಲ್ಲ. ನಾಯಿಗಳು ಗಟ್ಟಿಯಾಗಿ ಬೊಬ್ಬೆಹಾಕಿದ ಮೇಲೆಯೆ ತಲೆಯೆತ್ತಿದ್ದನು.

"ಸಲಾಂ ಬರ್ತದೆ ನಾಯಕರಿಗೆ!" ಕುಳ್ಳಾಗಿದ್ದರೂ ಸುಪುಷ್ಟನಾಗಿದ್ದುದರಿಂದ ಗುಜ್ಜಾಗಿ ತೋರುತ್ತಿದ್ದ ಆ ಚಪ್ಪಟೆ ಮೂಗಿನ ಸಾಬಿ, ನಸು ಸೊಂಟ ಬಗ್ಗಿಸಿದಂತೆ ಮುಂಬಾಗಿ, ಒಕ್ಕಯ್ ನಮಸ್ಕಾರ ಮಾಡಿದನು. ಬನೀನು ಹಾಕಿ, ಕೆಂಗಪ್ಪಿನ ಬಣ್ಣದ ಕಣ್ಣುಕಣ್ಣಿನ ಲುಂಗಿ ಉಟ್ಟಿದ್ದ ಅವನು ನುಣ್ಣಗೆ ಬೋಳಿಸಿದ್ದ ತಲೆಯ ಬೋಡಿಗೆ ಒಂದು ಕೆಂಗಪ್ಪಿನ ಎಲೆವಸ್ತ್ರ ಸುತ್ತಿದ್ದನು. ಆದರೂ ಆ ವಸ್ತ್ರ ನೆತ್ತಿಯನ್ನು ಸುತ್ತು ಹಾಕಿತ್ತೆ ಹೊರತು ಮುಚ್ಚಿರಲಿಲ್ಲವಾದ್ದರಿಂದ ಎಣ್ಣೆ ಹಾಕಿದಂತೆ ಮಿರುಗುತ್ತಿದ್ದ ಮಂಡೆಯ ಬೋಡು ಕಾಣಿಸುತ್ತಲೆ ಇತ್ತು

ವೆಂಕಟಣ್ಣ ಮುಖ ನಿರ್ಭಾವವಾಗಿಯೆ ಇದ್ದಿತಾದರೂ, ಸಂಪ್ರದಾಯಬದ್ಧವಾಗಿ ಎಂಬಂತೆ, ಪೊದೆಮೀಸೆಯ ಕೆಳಗೆ, ತುಟಿ ನಗೆಯ ಕವಾತು ಮಾಡಿತಷ್ಟೆ! ಅವನ ಮೈಯ ಇತರ ಭಾಗಗಳು ಯಾವುವೂ ಅಲುಗಾಡಲಿಲ್ಲ. ಕೈಯೂ ಕಟ್ಟೆ ಹೆರೆಯುವ ಕೆಲಸ ನಿಲ್ಲಿಸಲಿಲ್ಲ. ಸಾಬಿಯ ಸಲಾಂಇಗೆ ಯಾವ ಪ್ರತಿನಮಸ್ಕಾರದ ಮರ್ಯಾದೆಯ ಸೂಚನೆಯನ್ನೂ ತೋರಲಿಲ್ಲ. ಬಂದವನಿಗೆ 'ಕೂತುಕೊ' ಎಂದು ಹೇಳಲಿಲ್ಲ.

ಲುಂಗೀಸಾಬು ಸ್ವಲ್ಪ ಹೊತ್ತು ನಿಂತಿದ್ದು ತಾನಾಗಿಯೆ ಮೆಲ್ಲಗೆ ನೆಲಕ್ಕೆ ಅಂಡೂರಿದನು, ತಾನು ಕೂರಲಿದ್ದ ಜಾಗದಲ್ಲಿ ಬಿದ್ದಿದ್ದ ಬಿದಿರಿನ ಕೀಸುಗಳನ್ನು ಕರಲಕ್ಕೆ ಸರಿಸಿಕೊಂಡು.

ವೆಂಕಟಣ್ಣ ಮತ್ತೆ ಮೊದಲಿನಂತೆ ಕಡ್ಡಿ ಕೆತ್ತತೊಡಗಿದನು. ಅವನ ಮನಸ್ಸಿನಲ್ಲಿದ್ದ ಚಿಂತೆಯೂ ಮುಂದುವರೆಯಿತು ಮತ್ತೆ:

ನಡೆದಿದ್ದ ನಿಜಸ್ಥಿತಿ, ಅದರಲ್ಲಿ ಪಾತ್ರಧಾರಿಗಳಾಗಿದ್ದ ಆ ಮೂವರಿಗಿಲ್ಲದೆ, ಬೇರೆ ಯಾರಿಗೂ ಗೊತ್ತಾಗದಂತೆ ಕಥೆ ಹುಟ್ಟಿಸಿದ್ದರು: ರಾತ್ರಿ ನಾಗಕ್ಕ ಬಯಲಕಡೆಗೆ ಹೋಗಬೇಕಾಗಿ ಬಂದು, ತಾನೊಬ್ಬಳೆ ಹೊಂತಿರುಗುತ್ತಿದ್ದಾಗ ಏನೋ ಬೆಳ್ಳಿಗೆ ನಿಂತಹಾಗೆ ಕಾಣಿಸಿದ್ದರಿಂದ ಹೆದರಿ ಪ್ರಜ್ಞೆತಪ್ಪಿ ಬಿದ್ದು ಬಿಟ್ಟಳು ಎಂದೂ; ಸದ್ದು ಕೇಳಿ ಎದ್ದು ಬಂದಿದ್ದ ವೆಂಕಟಣ್ಣ ನಾಗತ್ತೆಯರು ಮುಖಕ್ಕೆ ತಣ್ಣೀರು ಎರಚಿ, ಗಾಳಿ ಬೀಸಿ, ದೆಯ್ಯಕ್ಕೆ ಒಂದು ಕೋಳಿ ಸುಳಿದುಬಿಟ್ಟು, ಮತ್ತೆ ಹಾಸಿಗೆಗೊಯ್ದು ಉಪಚರಿಸಿದರೆಂದೂ! ಆದರೆ  ನಿಜವಾದ ನಿಜ ಏನು ಎಂದು ವೆಂಕಟಣ್ಣನಿಗೂ ಅರ್ಥವಾಗಿರಲಿಲ್ಲ! ನಡೆದದ್ದು  ಅಚಾತುರ್ಯವೋ ಅಥವಾ ಚಾತುರ್ಯವೊ? ಎಂಬುದರಲ್ಲಿಯೂ ಅವನಿಗೆ ಸಂಶಯ ಉಂಟಾಗಿತ್ತು. ನಾಗತ್ತೆಯ ಮರೆಬಾಳಿನ ವಿಚಾರವಾಗಿ ಏನೇನೋ ಕೇಳಿದ್ದನು. ಆದರೆ ಕಳೆದ ರಾತ್ರಿ ನಡೆದಮಟ್ಟದ ಅಸಹ್ಯಕ್ಕೂ ಅದು ಏರಿತ್ತೆಂಬುದು ಅವನಿಗೆ ಅದುವರೆಗೂ ಊಹಾತೀತವಾಗಿತ್ತು. ಇದೇ ರೀತಿಯ ಅಚಾತುರ್ಯಪ್ರಯೋಗದ ಚಾತುರ್ಯವನ್ನು ಅವಳು ಯಾರ ಯಾರ ಮೇಲೆ ನಡೆಸಿ ಏನೇನು ಮಾಡಿರಲಿಕ್ಕಿಲ್ಲ? ಸೊಸೆಯ ಕ್ಷೇಮವನ್ನು ನೆವವಾಗಿಟ್ಟುಕೊಂಡು ತನ್ನ ಕೀಳುಗೀಳಿನ ಕೂಣಿ ಹಾಕಿಕೊಂಡು ಕುಳಿತಿದ್ದಾಳಲ್ಲವೆ ಅವಳು? - ನೆನೆದಂತೆಲ್ಲ ನಡೆದದ್ದು ತುಂಬ ಅಸಹ್ಯವಾಗಿ ತೋರಿ, ತನ್ನ ಭಾವಬೀಭತ್ಸದ ಗದ್ಗದವನ್ನು ಮುಚ್ಚಿಕೊಳ್ಳಲು ವೆಂಕಟಣ್ಣ ಕೆಮ್ಮಿ ಕ್ಯಾಕರಿಸಿ ಪಕ್ಕಕ್ಕೆ ತುಪ್ಪಿದನು.

ತಲೆಯೆತ್ತಿ ಸಾಬಿಯನ್ನು ನೇರವಾಗಿ ನೋಡುತ್ತಾ "ಏನು ಬಂತು ಇಷ್ಟು ದೂರ, ಸಾಬರ ಸವಾರಿ?" - ತುಸು ವ್ಯಂಗ್ಯವಾಗಿಯೆ ಇತ್ತು ಆ ಪ್ರಶ್ನೆಯ ಧ್ವನಿ.

ವೆಂಕಟಪ್ಪನಾಯಕರ ಬಹಿರ್ವಿನಯದ ಹಿಂದೆ ಅಡಗಿದ್ದ ಧೂರ್ತಲಕ್ಷಣದ ವರಾಹ ಬಲಿಷ್ಠತೆಯನ್ನು ತಕ್ಕಮಟ್ಟಿಗೆ ಸವಿದೆ ಅರಿತಿದ್ದ ಲುಂಗೀ ಸಾಬು ದೇಶಾವರದ ನಗೆ ನಕ್ಕು "ಸಾಹುಕಾರರು ತಮ್ಮನ್ನು ಕರಕೊಂಡೆ ಬರಬೇಕು ಎಂದು ಹೇಳಿಕಳಿಸಿದ್ದಾರೆ" ಎಂದನು.

"ಯಾಕಂತೆ?" ವೆಂಕಟಣ್ಣನ ನಿಡುಸರದಲ್ಲಿ ಪ್ರತಿಭಟನೆ ಇಣುಕುತ್ತಿತ್ತು.

"ಯಾಕೋ? ನನಗೆ ಗೊತ್ತಿಲ್ಲ. ನಮಗೆಲ್ಲ ಹೇಳುತಾರೇನು?"

"ಹಾಗಾಂದರೆ, ಯಾಕೆ ಅಂತಾ ಕೇಳಿಕೊಂಡು ಬಾ, ಹೋಗು."

ನಾಲ್ಕಾರು ಮೈಲಿ ಗುಡ್ಡಕಾಡು ಹತ್ತಿ ಇಳಿದು ಬಂದಿದ್ದವನಿಗೆ ವೆಂಕಟಣ್ಣ ಹಾಗೆ ತಣ್ಣಗೆ ಹೇಳಿದುದನ್ನು ಕೇಳಿ ಒಳಗೊಳಗೆ ಮೈ ಉರಿದುಹೋಯಿತು. ಆದರೆ ಏನು ಮಾಡುತ್ತಾನೆ? ಅವನು ಒಬ್ಬನೆ ಬಂದಿದ್ದಾನೆ! ಎದುರು ಕುಳಿತಿರುವ ವ್ಯಕ್ತಿಯ ಮುಖ ಮೀಸೆ ಮೈಕಟ್ಟುಗಳೂ ಎಚ್ಚರಿಕೆ ಹೇಳುವಂಥವುಗಳ! ಬಟ್ಟೆ ಬರೆಯಲ್ಲೇನೊ ಲುಂಗೀಸಾಬುವೆ ವೆಂಕಟಣ್ಣನಿಗಿಂತಲೂ ಜೋರಾಗಿ ಕಾಣುತ್ತಿದ್ದರೂ ಸೊಂಟದಪಂಚೆ ವಿನಾ ಬತ್ತಲೆಯಾಗಿಯೆ ಕುಳಿತಿದ್ದ ವೆಂಕಟಣ್ಣ ಗ್ರಾಮೀಣನಂತೆ ತೋರುತ್ತಿದ್ದರೂ, ವೆಂಕಟಣ್ಣ ಯಜಮಾನನಾಗಿದ್ದ ಆ ಹೂವಳ್ಳಿಯ ಹಳೆಯ ಮನೆ ಅಲ್ಲಲ್ಲಿ ಶಿಥಿಲವಾಗಿದ್ದರೂ ತನ್ನ ಬೃಹದಾಕಾರದಿಂದಲೂ ಭಾರಿ ಮುಂಡಿಗೆಗಳಿಂದಲೂ ಮಜಭೂತಾದ ತೊಲೆ ನಾಗಂದಿಗೆ ಹೆಬ್ಬಾಗಿಲುಗಳಿಂದಲೂ ಲುಂಗೀಸಾಬುಗೆ ತನ್ನ ಎದುರಿಗಿರುವ ವ್ಯಕ್ತಿ ದೊಡ್ಡ ದಂಡನಾಯಕನ ವಂಶಕ್ಕೆ ಸೇರಿ, ಆ ಲಕ್ಷಣಗಳಿಗೆ ಬಹಿರಂಗವಾಗಿಯೂ ಆ ಗುಣಗಳಿಗೆ ಅಂತರಂಗವಾಗಿಯೂ ನಿಧಿಯೂ ಪ್ರತಿನಿಧಿಯೂ ಆಗಿದ್ದಾನೆ ಎಂಬುದನ್ನು ಮರೆಯದಂತೆ ಮಾಡಿತ್ತು.

ಅಲ್ಲದೆ.... ಸಾಬುಗೆ ನಾಯಕರ ಇನ್ನೊಂದು ಅನುಭವವೂ ಆಗಿತ್ತು. ಆವೊತ್ತು, ಸುಮಾರು ಐದಾರು ತಿಂಗಳ ಹಿಂದೆ, ಒಂದು ವರುಷಕ್ಕೆ ಹತ್ತಿರಹತ್ತಿರವೆ ಆಗೊ ಇದ್ದರೂ ಇರಬಹುದು, ಕಮ್ಮಾರ ಸಾಲೆಯಲ್ಲಿ ಒಂದು ಸಂಗತಿ ನಡೆದಿತ್ತು. ಆಗಿನ್ನೂ ವೆಂಕಟಣ್ಣನ ಕಾಲಿಗೆ ಕುಂಟನ ಹುಣ್ಣು ಆಗಿರಲಿಲ್ಲ.

ಕಲ್ಲೂರು ಸಾಹುಕಾರ ಮಂಜಭಟ್ಟರಲ್ಲಿ ಕರಣಿಕರಾಗಿದ್ದ (ಗುಮಾಸ್ತರು ಎಂದೂ ಕರೆಯುತ್ತಿದ್ದರು) ಕಿಟ್ಟೈತಾಳರ ಕಟ್ಟಾಣತಿಯಂತೆ ಇಜಾರದಸಾಬು, ಲುಂಗೀಸಾಬು ಮತ್ತು ಅಜ್ಜೀಸಾಬು ಮೂವರೂ ವಸೂಲಿಗೆ ಹೊರಟಿದ್ದರಂತೆ. ಏಕೆಂದರೆ ಎಷ್ಟೋ ಸಾರಿ ಅವರು ಯಾರ ಆಣತಿಯೂ ಇಲ್ಲದೆ ತಮ್ಮ ಸ್ವಂತ ಇಚ್ಛೆಯ ಪ್ರಕಾರ ತಮ್ಮ ಸ್ವಂತ ಪ್ರಯೋಜನಕ್ಕಾಗಿಯೂ ವಸೂಲಿಬೇಟೆಗೆ ಹೊರಡುತ್ತಿದ್ದುದುಂಟು. ಹಾಗೆ ಅವರು ಅನಧಿಕೃತವಾಗಿ ಲೂಟಿಗೆ ಹೊರಟಾಗಲೂ ಅಧಿಕೃತವಾಗಿಯೆ ವಸೂಲಿಗೆ ಬಂದಿದ್ದೇವೆ ಎಂದು ಹೇಳಿಕೊಳ್ಳುತ್ತಿದ್ದರು. ಕೆಲವು ಸಾಲದ ಕುಳಗಳು ಆ ಸಾಬರ ಪುಂಡಾಟಿಕೆಗೆಗೆ ಹೆದರಿ ಲಂಚದ ರೂಪದಲ್ಲಿ ಅವರಿಗೆ ಅಡಕೆ ಬಾಳೇಕಾಯಿ ಅಕ್ಕಿ ಮೆಣಸಿನಕಾಯಿ ಮುಂತಾದವುಗಳನ್ನು ತೆತ್ತು, ಬೀಸುವ ದೊಣ್ಣೆ ತಪ್ಪಿದರೆ ಸಾಕು ಎಂದು, ಅವರನ್ನು ಸಮಾಧಾನಪಡಿಸಿ

ಕಳಿಸುತ್ತಿದ್ದರು. ಆ ರುಚಿ ತಲೆಗೆ ಹತ್ತಿ ಇವರು ಮೂವರು ಪದೇ ಪದೇ ಅದೇ ಕಸುಬಿಗೆ ಕೈಹಾಕುತ್ತಿದ್ದರು. ಅವೊತ್ತು ಇವರು ಮೂವರೂ ಸಂಜೆ ಹೊತ್ತಿಗೆ ಕಮ್ಮಾರಸಾಲೆಯ ಕಳ್ಳಂಗಡಿಯ ಬಳಿಗೆ ಬಂದಾಗ ಕೊಳ್ಳೆ ಹೊಡೆದದ್ದನ್ನೆಲ್ಲ ತುಂಬಿಕೊಂಡೆ ಬಂದಿದ್ದರು. ಅಜ್ಜೀಸಾಬಿಯ ಕುದುರೆತಟ್ಟಿನ ಬೆನ್ನಮೇಲೆ ದುರ್ನಾತದ ಚರ್ಮಗಳಿಂದ ತುಂಬಿದ್ದ ಚೀಲವಿತ್ತು. ಹೊಲೆಯರಿಂದ ಸುಲಿದಿದ್ದ ದನದ ಚರ್ಮಗಳು ಮತ್ತು ದೆಯ್ಯದ ಹರಕೆಗಳಲ್ಲಿ ಹಬ್ಬಗಳಲ್ಲಿ ಇತರ ಮೇಲುಜಾತಿಯವರು ಕಡಿದಿದ್ದ ಕುರಿಯ ಚರ್ಮಗಳು! ಲುಂಗೀಸಾಬಿಯ ಹಸಿಬೆ ಚೀಲದಲ್ಲಿ ಹಿತ್ತಿಲಕಡೆಯ ಬಾಗಿಲಲ್ಲಿ ಸ್ವಾರ್ಲುಮೀನು ಮಾರುವ ನೆವದಿಂದ ಅದರ ಬೆಲೆಗೆ ನಾಲ್ಕೈದು ಮಡಿಯ ಬೆಲೆಯ ಕದರಡಕೆ ಮೆಣಸಿನ ಕಾಳುಗಳನ್ನು ಮನೆಯ ಹೆಗ್ಗಡಿತಮ್ಮನವರುಗಳಿಂದ ಸುಲಿದದ್ದೆಲ್ಲ ಭರ್ತಿಯಾಗಿತ್ತು! ಇಜಾರದ ಸಾಬಿಯ ಪಾಟೀಚೀಲದಲ್ಲಿ ಸಾಲದ ಕುಳಗಳಿಂದ ಲಂಚದ ರೂಪದಲ್ಲಿ ಪಡೆದಿದ್ದ ಸ್ವಂತಸ್ವತ್ತು ತುಂಬಿತ್ತು!

ಮೂವರು ಕಳ್ಳನ್ನೊ ಹೆಂಡವನ್ನೊ ಸಾರಾಯಿಯನ್ನೊ ಕುಡಿದು ಸುಮ್ಮನೆ ತಮ್ಮ ಮನೆಯ ಕಡೆಗೆ ಹೋಗಬಹುದಿತ್ತು. ಆದರೆ ಸಾಬರು ತಮ್ಮ ದೌಲತ್ತು ತೋರಿಸಲು ಹೋಗಿ ಏಟು ತಿಂದಿದ್ದರು, ಮುಖ್ಯವಾಗಿ ವೆಂಕಟಪ್ಪನಾಯಕರ ಕೈಯಲ್ಲಿ!.

ಇಜಾರದ ಸಾಬು ಪುಟ್ಟಾಚಾರಿಯ ಕೈಲಿ ಕೆಲವು ಚಾಕು ಚೂರಿಗಳನ್ನು, ಅಳತೆ ಆಕಾರಗಳನ್ನು ಕೊಟ್ಟು, ತನಗೆ ಬೇಕಾದ ರೀತಿಯಲ್ಲಿ ತಯಾರು ಮಾಡಿಸಿಕೊಂಡಿದ್ದನು. ಅವುಗಳ ಉಪಯೋಗದ ವಿಚಾರದಲ್ಲಿ ನಾನಾ ವದಂತಿಗಳು ಹುಟ್ಟಿದ್ದುವು. ಆಗುಂಬೆ ಘಾಟಿನಲ್ಲಿ ಆಗುತ್ತಿದ್ದ ಸುಲಿಗೆ ಕೊಲೆಗಳಲ್ಲಿ ಪುಟ್ಟಾಚಾರಿ ಮಾಡಿಕೊಟ್ಟಿದ್ದ ಆಯುಧಗಳೂ ಪ್ರಯೋಗವಾಗುತ್ತಿದ್ದುವು ಎಂದು ಗಾಳಿಸುದ್ದಿ ಹಬ್ಬತ್ತು. ಆಚಾರಿಯೆ ಅದಕ್ಕೆ ಕಾರಣ ಎಂದು ಆರೋಪಿಸಿದ ಸಾಬೂಗೂ ಅವನಿಗೂ ಅದರ ವಿಚಾರದಲ್ಲಿ ಮಾತಿಗೆ ಮಾತು ಮಸೆದು ಅವರಿಬ್ಬರಲ್ಲಿಯೂ ಮನಸ್ತಾಪ ಉಂಟಾಗಿತ್ತು. ಅಲ್ಲದೆ ಅವುಗಳ ತಯಾರಿಕೆಗಾಗಿ ಕೊಡಬೇಕಾಗಿದ್ದ ರುಸುಮನ್ನೂ ಇಜಾರದಸಾಬು ಕೊಟ್ಟಿರಲಿಲ್ಲ. ಕೇಳಿದರೆ 'ಪುಡೀಸಾಬುಗಾಗಿಯೆ ಅವುಗಳನ್ನು ಮಡಿಸಿದ್ದು; ಅವನನ್ನೆ ಕೇಳು' ಎನ್ನುತ್ತಿದ್ದನು. ಪುಡೀಸಾಬುವನ್ನು ಕೇಲಿದಾಗ ಅವನು 'ನನಗೂ ಅದಕ್ಕೂ ಏನೂ ಸಂಬಂಧವಿಲ್ಲ' ಎನ್ನುತ್ತಿದ್ದನು. ಅದರ ಮೇಲಿನ ರಚ್ಚೆಗಾಗಿ ಇಜಾರದಸಾಬು 'ಸಾಹುಕಾರ ಮಂಜಭಟ್ಟರಿಗೆ ಮಾಡಿಕೊಡಬೇಕಾಗಿದ್ದ ಕತ್ತಿ, ಕುಳ, ಅಡಕೆ ಸುಲಿಯುವ ಮೆಟ್ಟುಗತ್ತಿ, ಕುಡುಗೋಲು ಇವುಗಳನ್ನು ಪುಟ್ಟಾಚಾರಿ ಏಕೆ ಇನ್ನೂ ಕೊಟ್ಟಿಲ್ಲ? ವಿಚಾರಿಸಲು ಕಿಟ್ಟ ಊತಾಳರು ಹೇಳಿಕಳಿಸಿದ್ದಾರೆ' ಎಮದು ಜೋರು ಮಾಡಿದನು.

"ನೀನು ಯಾವನೋ ಕೇಳೋಕೆ? ಹೋಗಿ ಹೇಳು ನಿನ್ನ ಐತಾಳರಿಗೆ, ನಾನು ಮಾಡಿ ಕೊಡಾದಿಲ್ಲ ಅಂತಾ!" ಪುಟ್ಟಾಚಾರಿ ಬೇಕೆಂತಲೆ ಮೂಗು ಮುರಿಯುವಂತೆ ಮಾತಾಡಿದ್ದನು.

"ನಾನು ಯಾವನು ಅಂದರೆ, ನಿನ್ನ ಜುಟ್ಟು ಹಿಡಿದು ಎಳೆದುಕೊಂಡು ಹೋಗುವ ವಸೂಲಿ ಸಾಹೇಬ!"

"ಸಾಹೇಬನಂತೆ ಸಾಹೇಬ! ದನಾ ತಿನ್ನಾ ಮುಂಡೆಗಂಡ ನಿನಗೆಷ್ಟೊ ದೌಲತ್ತು?"

"ಏನು ಗಂಡ ಗಿಂಡ ಅಂತೀಯ, ಬಾನ್‌ಚಿತ್ ಬೋಳೀಮಗನೆ? ಹಲ್ಲು ಉದುರಿಸಿ ಬಿಟ್ಟೇನು ಹುಷಾರ್!"

"ಚೆಲ್ಲಣದಾಗಿ ಹೇತುಕೊಳ್ಳಾಹಾಂಗೆ ಮಾಡ್ತೀನಿ ನೋಡು ನಿನಗೆ, ಸೂಪರ್ ಸೂಳೆ ಮಗನೆ!" ಪುಟ್ಟಾಚಾರಿ ಕೈಯಲ್ಲಿ ಹಿಡಿದಿದ್ದ ಕಬ್ಬಿಣದ ಸುತ್ತಿಗೆಯೊಡನೆ ಮೇಲೆದ್ದನು.

"ಸೂವರ್ ಗೀವರ್ ಅಂತೀಯೇನೋ, ಮಾದರ್‌ಚತ್? ನಿನ್ನ ಜಾತೀನೆಲ್ಲ ಕೆಡಿಸಿ ಬಿಡ್ತೀನಿ ನೋಡು ಮೊಖಕ್ಕೆ ಉಗಿದು!.... ಹ್ಯಾಕ್ ಥೂ!" ಇಜಾರದ ಸಾಬಿ ಪುಟ್ಟಾಚಾರಿಯ ಕಡೆಗೆ ಉಗಿದುಬಿಟ್ಟನು.

ಪುಟ್ಟಾಚಾರಿ ತನ್ನ ಕೈಲಿದ್ದ ಸುತ್ತಿಗೆಯಿಂದ ಸಾಬಿಯ ಮುಖ ಮೈ ನೋಡದೆ ಬೀಸಿದನು. ದಾಂಡಿಗ ಸಾಬಿ ಹಿಂದಕ್ಕೆ ಸರಿದುದರಿಂದ ಅವನು ರಕ್ಷಣೆಗಾಗಿ ಚಾಚಿದ್ದ ಕೈಗೆ ಮಾತ್ರ ಪೆಟ್ಟು ತಗುಲಿತು. ಕೆಚ್ಚಿನಲ್ಲಿ ಗಟ್ಟಿಗನಾಗಿದ್ದರು ಆಳುತನದಲ್ಲಿ ಸಣಕಲಾಗಿದ್ದ ಪುಟ್ಟಾಚಾರಿಯ ಮೇಲೆ ಸಾಬಿ ನುಗ್ಗಿದ ರಭಸಕ್ಕೆ ಆಚಾರಿ ಕಬ್ಬಿಣದ ಸಾಮಾನುಗಳ ರಾಶಿಯ ಮೇಲೆ ಬಿದ್ದು 'ದುಣ್ಣ ಮುಂಡೆಗಂಡ, ನಿನ್ನ ಎದೆಗೆ ರಣಹೊಡಿಯ' ಎಂದು ಬೈಯುತ್ತಾ ಏಳಲು ಪ್ರಯತ್ನಿಸುತ್ತಿದ್ದನು. ಅಷ್ಟರಲ್ಲಿ ಕಳ್ಳಂಗಡಿಯ ಕಡೆಯಿಂದ ಕೂಗಾಟವನ್ನು ಕೇಳಿ ಓಡಿ ಬಂದಿದ್ದ ಹೂವಳ್ಳಿ ವೆಂಕಟಣ್ಣ ಇಜಾರದ ಸಾಬಿಯ ರಟ್ಟೆಯನ್ನು ಬಲವಾಗಿ ಹಿಡಿದುಬಿಟ್ಟನು. ಅವನು ಆಚಾರಿಯ ಕಡೆಗೆ ಮುಂಬರಿಯದಂತೆ. ಇಜಾರದ ಸಾಬಿಯ ಸಹಾಯಕ್ಕೆ ನುಗ್ಗಿ ಬಂದ ಲುಂಗೀಸಾಬಿ ಅಲ್ಲಿಯೇ ಬಿದ್ದಿದ್ದ ಒಂದು ಕಬ್ಬಿಣದ ತುಂಡಿನಿಂದ ವೆಂಕಟಣ್ಣನ ತೋಳಿಗೆ ಹೊಡೆಯಲು ಹವಣಿಸುವಷ್ಟರಲ್ಲಿ ವೆಂಕಟಣ್ಣ ಅವನನ್ನು ಝಾಡಿಸಿ ಒದೆದ ಹೊಡೆತಕ್ಕೆ ಲುಂಗೀಸಾಬಿ ಒಂದು ಉರುಳು ಉರುಳಿ, ಅಲ್ಲಿ ಹಳಿಕಟ್ಟಲು ತಂದಿಟ್ಟಿದ್ದ ಒಂದು ಗಾಡಿಚಕ್ರಕ್ಕೆ ಡಿಕ್ಕಿ ಹೊಡೆದು, ಅದನ್ನು ಮೈಮೇಲೆ ಬೀಳಿಸಿಕೊಂಡನು. ಅಷ್ಟರಲ್ಲಿ ಬಲಿಷ್ಠನೂ ಭೀಮಕಾಯನೂ ಆಗಿದ್ದ ಇಜಾರದ ಸಾಬಿ ವೆಂಕಟಣ್ಣನ ಕಡೆಗೆ ತಿರುಗಿ, ತನ್ನ ರಟ್ಟೆಯನ್ನು ಅವನ ಹಿಡಿತದಿಂದ ಬಿಡಿಸಿಕೊಳ್ಳಲು ಪ್ರಯತ್ನಪಟ್ಟನು. ಆದರೆ ತಾರುಣ್ಯದಲ್ಲಿ ಗರಡಿಸಾಧನೆ ಮಾಡಿ, ಕತ್ತಿವರಸೆ, ದೊಣ್ಣೆಕಾಳಗ, ಮಲ್ಲಯುದ್ಧ ಮೊದಲಾದವುಗಳಲ್ಲಿ ಹೆಸರು ಪಡೆದಿದ್ದ ವೆಂಕಪ್ಪನಾಯಕನ ಬಲಿಷ್ಠತೆ ಮತ್ತು ಭೀಮಕಾಯತ್ವದ ಮುಂದೆ ಅವನ ಆಟ ನಡೆಯಲಿಲ್ಲ. ಅಷ್ಟೇ ಅಲ್ಲ, ಒಂದೇ ನಿಮಿಷದಲ್ಲಿ ಇಜಾರದ ಸಾಬುವನ್ನು ನೆಲಕ್ಕೆ ಬೀಳಿಸಿ, ಅವನ ಹಿಂಗೈಮುರಿಕಟ್ಟಿಯೂ ಆಗಿತ್ತು! ಅಜ್ಜೀಸಾಬಿ ಗಡ್ಡ ಕಿತ್ತುಕೊಳ್ಳುತ್ತಾ ಬಂದು ದಮ್ಮಯ್ಯಗುಡ್ಡೆಹಾಕಿ ಬಿಡಿಸಿಕೊಳ್ಳದಿದ್ದರೆ ಏನೇನಾಗುತ್ತಿತ್ತೊ?....

ಅದೆಲ್ಲ ಇನ್ನೂ ಮನಸ್ಸಿನಲ್ಲಿ ಹಸಿಯಾಗಿಯೆ ಇರುವಂತೆ ತೋರುತ್ತಿದ್ದ ಆ ಘಟನೆಯ ಬಿಸಿನೆನಪು ಲುಂಗಿಸಾಬುವನ್ನು ಮಾತಿನಲ್ಲಿಯೂ ನಡತೆಯಲ್ಲಿಯೂ ಎಚ್ಚರಿಕೆಯಿಂದಿರುವಿಕೆ ಮಾಡಿತ್ತು. ಇತರರ ಮುಂದೆ ವರ್ತಿಸುವಂತೆ ಈ ಅಲಘುವ್ಯಕ್ತಿಯೊಡನೆ ವ್ಯವಹರಿಸುವುದು ತರವಲ್ಲ ಎಂದು ನಿಶ್ಚಯಿಸಿ, ಅಷ್ಟು ದೂರದಿಂದ ನಡೆದುಬಂದಿದ್ದ ತನ್ನ ದಣಿವಿಗೆ ಏನಾದರೂ ಸ್ವಂತಕ್ಕಾಗಿ ಪಡಿ ಪಡೆಯುವ ಉದ್ದೇಶದಿಂದ ಸುಳ್ಳುದೈನ್ಯವನ್ನು ಪ್ರದರ್ಶಿಸುತ್ತಾ ಹುಸಿವಿನಯದಿಂದ ಬೇಡಿದನು ಲುಂಗಿಸಾಬು:

"ಒಂದು ಬಾಳೆಯ ಗೊನೆ ಆದರೂ ಕೊಡ್ತೀರಾ, ನಾಯಕರೆ?"

ಆ ಪುಂಡರ ಲಂಚಲೂಟಿಯ ವಿಚಾರವನ್ನೆಲ್ಲ ಚೆನ್ನಾಗಿ ತಿಳಿದಿದ್ದ ವೆಂಕಟಣ್ಣ ಕತ್ತೆತ್ತಿ ನೋಡದೆ ಹುಸಿನಗುತ್ತಾ "ಯಾಕೆ? ಬಾಳೆಗೊನೆ ತರಾಕೆ ಹೇಳಿದರೇನು ನಿನ್ನ ಸಾಹುಕಾರರು?" ಎಂದು ಸಿಂಬಳ ಸುರಿದು ಎಸೆದು, ತಾನು ಕುಳಿತಿದ್ದ ಕಂಬಳಿಯ ಸೆರಗಿನಿಂದಲೆ ಬಗ್ಗಿ ಮೂಗು ಒರೆಸಿಕೊಂಡನು.

“ಇವನ ಮೈ ನೋಡಿದರೆ ಇಷ್ಟು ದೊಡ್ಡು; ಮೀಸೆಯೋ ಮಹಾ ಮೀಸೆ; ಮನೆಯೂ ದೊಡ್ಡದೆ; ಆದರೆ ಮನಸ್ಸು ಮಾತ್ರ ಬಹಳ ಸಣ್ಣ: ಕೂತಲ್ಲೆ ಕ್ಯಾಕರಿಸಿ ತುಪ್ಪುತ್ತಾನೆ; ಸಿಂಬಳ ಸುರಿದು ಕಂಬಳಿಗೇ ಒರಸುತ್ತಾನೆ!” ಎಂದೆಲ್ಲ ಒಳಗೊಳಗೆ ಅಂದುಕೊಂಡ ಲುಂಗಿಸಾಬು “ಸಾಹುಕಾರರು ಯಾಕೆ ಹೇಳುತ್ತಾರೆ? ಅವರಿಗೇನು ಬಾಳೆಕೊನೆಗೆ ಬರಗಾಲವೆ? ನಿಮ್ಮವರ ತೋಟಗಳೆಲ್ಲ ಅವರವೇ ಅಲ್ಲವೆ? ನೀವು ಕೊಡುವ ಬಾಳೆಕೊನೆಯೂ ಅವರದ್ದೇ ಆಗುತ್ತದೆ!” ಎಂದು ವೆಂಕಟಪ್ಪನಾಯಕರ ಗದ್ದೆ ತೋಟಗಳೆಲ್ಲ ಮಂಜಭಟ್ಟರ ಸಾಲಕ್ಕೆ ಈಡಾಗಿರುವುದನ್ನು ವ್ಯಂಗ್ಯವಾಗಿ ಮೂದಲಿಸುವಂತೆ ಮಾತಾಡಿದ್ದನು.

“ಮತ್ತೆ? ನಿನ್ನ ಅಪ್ಪ ನಟ್ಟು ಬೆಳೆಸಿದ್ದು ಅಂತಾ ಮಾಡಿದೀಯಾ? ಬಿಟ್ಟಿ ಕೊಡುವುದಕ್ಕೆ ನಿನಗೆ? ಬಾಳೆಕೊನೆ?” ವೆಂಕಟಣ್ಣ ರೇಗಿ ನುಡಿದನು.

“ನನ್ನ ಅಪ್ಪ ಯಾಕೆ ನಿಮ್ಮ ಮನೆಯಲ್ಲಿ ಮಲಗುವುದಕ್ಕೆ ಬರುತ್ತಾನೆ?” ಸಾಬಿಯ ಮಾತಿನ ಅಶ್ಲೀಲದ ಧ್ವನಿ ಮುಂದುವರೆಯಿತು “ನಿಮ್ಮ ಅಪ್ಪನೆ ನೆಟ್ಟು ಬೆಳೆಸಿದ್ದು ಇರಬೇಕು ಅಲ್ಲವೆ?”

ಕೊಟ್ಟೆಕಡ್ಡಿ ಹೆರೆಯುತ್ತಿದ್ದ ವೆಂಕಟಣ್ಣ ಕತ್ತಿಯೊಂದಿಗೆ ಸರಕ್ಕನೆ ಎದ್ದನು. ಕೂತಿದ್ದ ಸಾಬು ಚಂಗನೆ ನೆಗೆದದ್ದು ಹೆಬ್ಬಾಗಿಲ ಕಡೆಗೆ ನುಗ್ಗುವ ಅವಸರದಲ್ಲಿ ಒಂದು ಕಂಬಕ್ಕೆ ಢಿಕ್ಕಿ ಹೊಡೆದು ಧಾತುಹಾರಿ ಕೆಳಗೆ ಬಿದ್ದನು! ಹಣೆ ಒಡೆದು ನೆತ್ತರು ಸುರಿಯತೊಡಗಿತ್ತು!

“ನಾ ಗಟ್ಟಿಯಾಗಿ ಕೆಮ್ಮಿದ್ರೇ ಇವನಿಗೆ ಲುಂಗಿ ಒದ್ದೆ ಆಗ್ತದೆ! ಮತ್ತೆ ಪಟ್ಟಂಗ ಹೊಡೀತಾನೆ, ಪಟಿಂಗ, ಬಾಯಿಗೆ ಬಂದ್ಹಾಂಗೆ, ಲಂಗು ಲಗಾಮು ಇಲ್ದೆ! ನೀಚ ಲೌಡೀಮಗಾ!” ವೆಂಕಟಣ್ಣ ತನಗೆ ತಾನೆ ಹೇಳಿಕೊಂಡನು ನಕ್ಕು.

ತಣ್ಣೀರೆರಚಿ ಗಾಳಿ ಬೀಸಲು ಲುಂಗಿಸಾಬು ಮೈ ತಿಳಿದೆದ್ದನು. ಒಣ ಸೆಗಣಿಪುಡಿ ಹಾಕಿ ಗಾಯದ ರಕ್ತ ನಿಲ್ಲಿಸಿದ ಮೇಲೆ ಹಣೆಗೊಂದು ಕೊಟ್ಟ ಬಟ್ಟೆ ಕಟ್ಟಿಕೊಂಡು, ಹೆಬ್ಬಾಗಿಲು ದಾಟಿ ಮೆಟ್ಟಿಳಿದು ಹೋದನು. ಆದರೆ ತನಗಾಗಿದ್ದ ಹಣೆಗಾಯದ ಸಾಕ್ಷಿಯಿಂದ ತನಗೊದಗಿದ್ದ ಅವಮಾನಕ್ಕೆ ತಕ್ಕ ಪ್ರತೀಕಾರ ಮಾಡುವ ಸಲುವಾಗಿ, ಅವನು ತನ್ನ ಮೇಲೆ ಅದೆಂತಹ ದೂರು ಹೇಳಿ, ತನ್ನನ್ನು ಎಂತೆಂತಹ ಕಷ್ಟಪರಂಪರೆಗಳಿಗೆ ಸಿಕ್ಕಿಸಲಿದ್ದಾನೆ ಎಂಬುದನ್ನು ವೆಂಕಟಣ್ಣ ಆಗ ಹೇಗೆ ತಾನೆ ಅರಿತಾನು?

* * *

ಕೋಣೂರಿನಲ್ಲಿದ್ದುಕೊಂಡು ಐಗಳ ಕೂಲಿಮಠದಲ್ಲಿ ಓದುತ್ತಿದ್ದ ಹುಡುಗರೆಲ್ಲ ಬೆಳಿಗ್ಗೆ ಗಂಜಿಯುಂಡಾದ ಮೇಲೆ ಎಂದಿನಂತೆ ಕೆಳಗರಡಿಗೆ ಬಂದರು. ಹಲಗಣೆಯ ಕಂಡಿಯಲ್ಲಿ ನೋಡಿದಾಗಲೆ ಅವರಿಗೆ ನೆನಪಾದದ್ದು.

"ಓಹೋ, ಇವತ್ತು ಆಡಿಕೆ ಕಣ್ರೋ, ಐಗಳು ಇಲ್ಲ."

"ಮುಂದಿನ ಬೇಸ್ತುವಾರದತನಕ ಅಲ್ಲೇನೋ ಆಡಿಕೆ?"

"ಬೇಸ್ತುವಾರದ ತನಕ ಅಂತಾನೆ! ಆಯಿತುವಾರದ ತನಕ ಕಣೋ!"

"ಬನ್ರೋ, ಲಗ್ಗೆಮಣೆ ಆಡಾನ."

"ನೀವೆಲ್ಲಾ ಕಣಕ್ಕೆ ಹೋಗ್ರೋ, ನಾ ಲಗ್ಗೆ ಚಂಡು ಮಣೆ ಹುಡುಕಿ ತರತೀನಿ.... ನಿನ್ನೆ ಆಡಿದಮೇಲೆ ಎಲ್ಲಿಟ್ಟೆಯೊ ಅವನ್ನ, ಏ ತಿಮ್ಮೂ?"

"ನಾನಲ್ಲ ಕಣೋ ಇಟ್ಟಿದ್ದು; ಧರ್ಮು ಅಂತಾ ಕಾಣ್ತದೆ."

"ಎಲ್ಲಿಟ್ಟೇಯೋ, ಧರ್ಮು?"

"ಅಂವ ಇಲ್ಲಿ ಇಲ್ಲಲ್ಲೋ! ಎಲ್ಲಿ ಹೋದನೋ?...."

"ಮತ್ತೆಲ್ಲಿ ಹೋಗ್ತಾನೆ? ಗಂಜಿ ಉಂಡಾಂವ ಹಳ್ಳದ ಕಡೆಗೆ ಹೊರಟಾ ಅಂತಾ ಕಾಣ್ತದೆ!"

ಹುಡುಗರೆಲ್ಲ ನಕ್ಕರು. ಲಗ್ಗೆಮಣೆ ಚಂಡು ತರಲು ಹೊರಟಿದ್ದವನು ಅವನ್ನು ಹುಡುಕಿ ತರಲು ಮನೆಯೊಳಗೆ ಓಡಿದನು. ಉಳಿದವರು ಕೇಕೆ ಹಾಕುತ್ತಾ ಕಣದ ಅಂಗಳಕ್ಕೆ ಓಡಿದರು.

ಮಣೆ ಚೆಂಡು ಎರಡನ್ನೂ ಹುಡುಕಿ ತಂದಮೇಲೆ, ಎಳಬಿಸಿಲು ಮನೋಹರವಾದ ಮರದಳಿರಿನಿಂದ ಸೋಸಿ ಬಂದು ನೆಳಲು ಬೆಳಕಿನ ರಂಗೋಲಿ ಎರಚಿದಂತಿದ್ದ ಕಣದ ವಿಶಾಲವಾಗಿದ್ದ ಅಂಗಳದಲ್ಲಿ ಮಣೆಯನ್ನು ಕಟ್ಟಿಯ ಆಪುಕೊಟ್ಟು ಹೂಡಿ, ಲಗ್ಗೆಯಾಟ ಪ್ರಾರಂಭಿಸುವ ಮೊದಲು ಎರಡು ಪಕ್ಷಗಳನ್ನು ವಿಂಗಡಿಸತೊಡಗಿದರು. ತಿಮ್ಮು ಒಂದು ಕಡೆಯ ಮುಖಂಡನೆಂದೂ ಕಾಡು ಮತ್ತೊಂದು ಕಡೆಯ ಮುಖಂಡನೆಂದೂ ಗೊತ್ತಾಗಿ, ತಮಗೆ ಬೇಕಾದವರನ್ನು ಹೆಸರು ಹಿಡಿದು ಕೂಗಿದರು. ಲಗ್ಗೆಯಾಟದಲ್ಲಿ ಮಣೆಗಾಗಲಿ ಹಗೆಗಾಗಲಿ ಚೆಂಡನ್ನು ಗುರಿಯಿಟ್ಟು ಹೊಡೆಯುವುದರಲ್ಲಿ ಎತ್ತಿದಕ್ಕೆ ಆಗಿದ್ದ ಧರ್ಮುವ ಹೆಸರನ್ನು ತಿಮ್ಮು ಮೊದಲು ಕೂಗಿದಾಗ, ಕಾಡು ಅದಕ್ಕೆ ತಕರಾರು ಮಾಡಿದರು.

ಧರ್ಮುವ ಹೆಸರನ್ನು ಕೂಗುವುದಾದರೆ ತನಗೇ ಆ ಮೊದಲ ಸರದಿ ಬೇಕೆಂದು, ಹುಡುಗರೆಲ್ಲ ಅತ್ತ ಇತ್ತ ಕಣ್ಣು ತಿರುಗಿಸಿ ಹುಡುಕಿನೋಡಿದಾಗಿ ತಮ್ಮ ಗುಂಪಿನಲ್ಲಿ ಧರ್ಮು ಇಲ್ಲದಿರುವುದು ಮತ್ತೆ ಅವರೆಲ್ಲರ ಗಮನಕ್ಕೆ ಬಂತು.

"ಅಯ್ಯೋ ಧರ್ಮು ಎಲ್ಲಿ ಹೋದನೊ? ಕರೆಯೊ!"

"ಹೊರಕಡೆಗೆ ಹೋಗಿರಬೇಕೊ, ಬರ್ತಾನೊ. ನಿನ್ನೆ ಹೊಟ್ಟೆನೋವು ಅಂತಾ ಅಳ್ತಿದ್ದ ಕಣೋ."

"ಹೊಟ್ಟೆನೋವು ಗಿಟ್ಟೆನೋವು ಎಲ್ಲ ಬರೀ ನೆವ ಕಣೋ…."

"ಮತ್ತೆ?"

"ಅವನ ಅಪ್ಪಯ್ಯನ್ನ ನೆನಸಿಕೊಂಡಾ ಅಂತಾ ಕಾಣ್ತದೆ. ಆಗಾಗ ಕದ್ದುಕೂತು ಅಳ್ತಿರ್ತಾನೆ. ಫಕ್ಕನೆ ಯಾರಾದ್ರೂ ಕಂಡ್ರೆ ಕೇಳಿದ್ರೆ, ಹೊಟ್ಟೆನೋವು ತಲೆನೋವು ಅಂತಾ ಸುಳ್ಳುಸುಳ್ಳೆ ಹೇಳ್ತಾನೆ…."

ಇದ್ದಕ್ಕಿದ್ದ ಹಾಗೆ ಮಕ್ಕಳ ಗುಂಪು ನಿಃಶಬ್ದವಾಯಿತು. ಎಲ್ಲರ ಮುಖದಲ್ಲಿಯೂ ಏನೊ ಸಂಕಟದ ಸಹಾನುಭೂತಿಯ ಛಾಯೆ ಸುಳಿಯಿತು. ಅವರಲ್ಲಿ ಒಬ್ಬೊಬ್ಬರಿಗೂ ಆ ಗುಟ್ಟು ಗೊತ್ತಿತ್ತು ಎಂಬುದು ಸ್ಪಷ್ಟವಾಗಿತ್ತು. ಅಲ್ಲದೆ ಮೇಲೆಮೇಲೆ ಏನೂ ಗೊತ್ತಿಲ್ಲದವರಂತೆ ನಿಶ್ಚಿಂತರಾಗಿ ಕ್ರೀಡಾಮಗ್ನರಾಗಿ ತೋರುತ್ತಿದ್ದರೂ ಒಬ್ಬೊಬ್ಬರೂ ಅದರ ವಿಚಾರವಾಗಿ ಗುಟ್ಟಾಗಿ ಆಲೋಚಿಸಿದ್ದರು, ವ್ಯಸನಪಟ್ಟಿದ್ದರು, ಆಗೊಮ್ಮೆ ಈಗೊಮ್ಮೆ ಪರಸ್ಪರ ವಿಚಾರ ವಿನಿಮಯವನ್ನೂ ಮಾಡಿಕೊಂಡಿದ್ದರು. ಧರ್ಮುವಿನ ಗುಣ ಸಾಮರ್ಥ್ಯಗಳಿಗೆ ಮಾತ್ರವಲ್ಲದೆ ಈ ಕಾರಣಕ್ಕಾಗಿಯೂ ಎಲ್ಲರೂ ಅವನನ್ನು ವಿಶೇಷವಾದ ಅಕ್ಕರೆಯಿಂದ ಕಾಣುತ್ತಿದ್ದರು; ಅವನ ಮನಸ್ಸಿಗೆ ನೋವಾಗದಂತೆ ನಡೆದುಕೊಳ್ಳಲು ಪ್ರಯತ್ನಿಸುತ್ತಿದ್ದರು. ಆದ್ದರಿಂದಲೆ ತಿಮ್ಮು ಕೈಯಲಿದ್ದ ಲಗ್ಗೆಯ ಚೆಂಡನ್ನು ಯಾಂತ್ರಿಕವಾಗಿ ತಿರುಗಿಸುತ್ತಾ ಹೇಳಿದನು, ಅತ್ತ ಇತ್ತ ನೋಡುತ್ತಾ, ಗೆಳೆಯರಿಗೆ ಮಾತ್ರ ಯಾವುದೋ ರಹಸ್ಯವನ್ನು ಬಯಲುಮಾಡುವಂತೆ: "ಹೌದು ಕಣ್ರೋ! ಅವತ್ತೊಂದು ದಿವ್ಸ, ರಾತ್ರಿ, ನಾವೆಲ್ಲ ಮಲಗಿಕೊಳ್ತೀವಲ್ಲ ಒಟ್ಟಿಗೆ ಜಗಲೇಲಿ ಅಲ್ಲಿ. ನೀವೆಲ್ಲ ನಿದ್ದೆ ಮಾಡ್ತಿದ್ರಿ; ನಂಗೆ ಎಚ್ಚರಿತ್ತು…. ಚಿಕ್ಕಯ್ಯ, - ಮುಕುಂದಚಿಕ್ಕಯ್ಯ, - ಧರ್ಮುನ ಪಕ್ಕದಾಗೆ ಮಲಗಿಸಿಕೊಳ್ತಾರಲ್ಲಾ? ಯಾಕೆ ಅಂತೀರಿ? ಅದಕ್ಕೇ! ಧರ್ಮು ನಿದ್ದೆ ಮಾಡ್ತಾನೇ ಎದ್ದು ಬಿಡ್ತಾನೆ ಒಂದೊಂದು ಸಾರಿ. 'ಅವ್ವಾ, ಅವ್ವಾ, ಅಪ್ಪಯ್ಯ ಬಂದ್ರು, ನೋಡಿಲ್ಲಿ!' ಅಂತಾ ದಡ ದಡ ಹೋಗ್ತಾ ಹೇಳ್ತಾನೆ: 'ಬಾಗಿಲು ತೆಗಿ, ಅವ್ವಾ, ಅಪ್ಪಯ್ಯ ಕರೀತಾನೆ!' ಅಂತಾ! ನಾನು 'ಚಿಕ್ಕಯ್ಯಾ ಚಿಕ್ಕಯ್ಯಾ' ಅಂತಾ ಕರೀಬೇಕು ಅಂತಾ ಮಾಡಿದ್ದೆ. ಅಷ್ಟರಲ್ಲಿ ಅವರಿಗೇ ಫಕ್ಕನೆ ಎಚ್ಚರಾಯ್ತು. ಎದ್ದು ಓಡಿಹೋಗಿ ಅವನ್ನ ಹಿಡುಕೊಂಡು ಬಂದು ಕೂರಿಸಿ ಎಚ್ಚರಮಾಡಿದ್ರು: 'ಧರ್ಮು! ಧರ್ಮು! ಕಣ್ಣು ಬಿಡೋ! ನಾನು ಕಣೋ ನಿನ್ನ ಸಣ್ಣಮಾವ! ಎಚ್ಚರ ಮಾಡಿಕೊಳ್ಳೋ!' ಅಂತಾ ಹೇಳಿ, ಅವನ್ನ ಅಳ್ಳಾಡ್ಸಿ ಎಚ್ಚರಮಾಡಿದ್ರು!"

ತಿಮ್ಮು ಮುಗಿಸುವುದನ್ನೆ ಕಾಯುತ್ತಿದ್ದ ಕಾಡು ಅಳುಮೊಗ ಮಾಡಿಕೊಂಡು ಹೇಳಿದನು: "ಮತ್ತೇ! ಮತ್ತೇ! ನಾ ಹೇಳ್ತೇನಿ ಕೇಳ್ರೋ! ಮತ್ತೇ! ಮತ್ತೇ!" ಉಗುಳು ನುಂಗಿಕೊಂಡು ಮುಂದುವರೆಸಿದನು: "ಅವತ್ತೊಂದು ದಿವ್ಸ ಕಣೋ! ನಾ ಬಾಯಿತಪ್ಪಿ ಹಳೆಮನೆ ಅತ್ತೆಮ್ಮನ್ನ, ಎಲ್ಲರೂ ಕರೀತಾರೆ ಅಂತಾ ನಾನೂ, - ಬಾಯಿತಪ್ಪಿ ಅಂದೆ ಅಂತಾ

ಇಟ್ಟುಗೊ, – 'ಹುಚ್ಚು ಹೆಗ್ಗಡ್ತಿ' ಅಂತಾ ಅಂದ್ಬಿಟ್ಟೆ! ಧರ್ಮು ಹಿಂದುಗಡೆ ಇದ್ದದ್ದು ಮರೆತೇಹೋಗಿತ್ತು ಕಣೋ! ಎಂಥಾ ಕೆಲ್ಸಾ ಆಯ್ತು ಅಂತೀಯ? ಧರ್ಮು ಬಿಕ್ಕಿಬಿಕ್ಕಿ ಅಳಾಕೆ ಸುರುಮಾಡಿಬಿಟ್ಟ! ನಾನು 'ದಮ್ಮಯ್ಯ! ತಪ್ಪಾಯ್ತೊ! ಇನ್ನೆಂದಿಗೂ ಹೇಳಾದಿಲ್ಲ ಹಾಂಗೆ.' ಅಂತಾ ತಬ್ಬಿಕೊಂಡು ದಮ್ಮಯ್ಯಗುಡ್ಡೆ ಹಾಕಿದ ಮ್ಯಾಲೇ ಸೊಲ್ಪ ಸಮಾಧಾನಕ್ಕೆ ಬಂದ!…."

ಇನ್ನೊಂದು ಕೀಚಲುಗಂಟಲು ನಡುವೆ ಬಾಯಿಹಾಕಿ ಕೆಳದನಿಯಲ್ಲಿ ಹೇಳತೊಡಗಿತು: ಹಿಂದಿನ ಹಿರಿಯರಿಬ್ಬರು ಪ್ರಾರಂಭಮಾಡಿದ ರೀತಿ ಆವಾಗಲೆ ಆರ್ಷೇಯ ಸಂಪ್ರದಾಯವಾಗಿಬಿಟ್ಟಿತ್ತು: "ಆವತ್ತೊಂದು ದಿವ್ಸ, 'ಭಗವಂತ ಪ್ರಾರ್ಥಿಸಿದರೆ ಭಕ್ತ ಕೊಡ್ತಾನೆ' ಅಂತಾ ಐಗಳು ಹೇಳಿದ್ರಲ್ಲಾ?" ಅಲ್ಲಲ್ಲಿ ನಗೆಯೆದ್ದು ಕೀಚಲುಗಂಟಲು ತಬ್ಬಿಬ್ಬಾಯಿತು!

"ಥೂ ನಿನ್ನ! "ಭಕ್ತ ಪ್ರಾರ್ಥಿಸಿದರೆ ಭಗವಂತ ಕೊಟ್ಟೇಕೊಡುತ್ತಾನೆ!" ಅಂತಾ ಹೇಳಿದ್ದಲ್ಲೇನೋ ಐಗಳು?"

"ಹ್ಞೂ ಹ್ಞೂ ಹ್ಞೂ! ಹಾಂಗೆ ಹಾಂಗೆ ಹಾಂಗೆ!…. ಅವತ್ತೂ, ಅಲ್ಲ, ಅಲ್ಲ, ಅವತ್ತಲ್ಲ, ಅದರ ಮರುದಿವ್ಸ, ಮುಕುಂದಣ್ಣ ಹೋಗಿದ್ರಲ್ಲಾ ಗೋಸಾಯಿಗಳು ಬೀಡುಬಿಟ್ಟಲ್ಲಿಗೆ?"

ನಡುವೆ ಬಾಯಿಹಾಕಿತು ಮತ್ತೊಂದು ದನಿ. ಮೇಲಿನ ಮತ್ತು ಕೆಳಗಿನ ಎರಡೂ ಸಾಲಿನಲ್ಲಿ ಮುಂಬಲ್ಲು ಮುರಿದು ಬಿದ್ದು ಇನ್ನೂ ಹೊಸ ಹಲ್ಲು ಹುಟ್ಟಿರಲಿಲ್ಲ ಅದಕ್ಕೆ. ಮಾತಾಡಿದರೆ ಪದಗಳೆಲ್ಲ ಮಧ್ಯೆ ಮಧ್ಯೆ ಪುಸ್ ಪುಸ್ ಎನ್ನುವಂತೆ ತೋರುತ್ತಿತ್ತು: "ಹೌದೌದು, ಆ ಗೋಸಾಯಿಗಳ ಸಂಗದ ಧರ್ಮಣ್ಣಯ್ಯನ ಅಪ್ಪಯ್ಯ ಗದ್ದ ಬಿತ್ತೊಕೊಂದು ಬಂದಾರೆ ಅಂತಾ ಯಾರೋ ಬಂದು ಹೇಳಿದರಂತೆ…."

"ಕಣ್ಣಾಪಂಡಿತರಂತೆ ಕಣೋ, ಹೇಳ್ದೋರು."

"ಅದನ್ನೇ, ನೋಡಿಕೊಂಡು ಬರಾಕೆ ಹೋಗಿದ್ರಲ್ಲಾ ಮುಕುಂದಣ್ಣ" ಕೀಚಲು ಗಂಟಲು ಮತ್ತೆ ಮುಂಬರಿಯಿತು: "ಆವತ್ತು ಧರ್ಮಣ್ಣಯ್ಯ ಅಂಗಳದ ತುಳಸಿಕಲ್ಲ ದೇವರ ಹತ್ರ ಅಳ್ತಾ ಪ್ರಾರ್ಥನೆ ಮಾಡ್ತಿದ್ದ ಕಣೋ."

"ಯಾರನ್ನೋ ಏನೋ? ಧರ್ಮು ಅಪ್ಪಯ್ಯ ಅಂತಾ ಹೇಳಿಬಿಟ್ಟದ್ರಂತೆ ಆ ಕಣ್ಣಾಪಂಡಿತ್ರು."

ಲಗ್ಗೆ ಆಟ ಪ್ರಾರಂಭಿಸುವ ಮೊದಲು ಧರ್ಮುವನ್ನು ಹುಡುಕಿ ಕರೆತರಲು ಹೊರಟರು ಹುಡುಗರೆಲ್ಲ. ಒಬ್ಬೊಬ್ಬರು ಒಂದೊಂದು ಕಡೆಗೆ. ಧರ್ಮು ಸ್ವಲ್ಪ ಹೊತ್ತು ಕಣ್ಣು ತಪ್ಪಿದ್ದರೆ ಅವರಿಗೆಲ್ಲಾ ಏನೋ ಅನುಮಾನ, ಯಾವುದೋ ಹೆದರಿಕೆ, ಅವನ ಕ್ಷೇಮದ ಹೊರೆ ಹೊಣೆಗೆ ತಾವೆಲ್ಲರೂ ಅನಧಿಕೃತವಾಗಿ ಜವಾಬುದಾರರೊ ಎಂಬಂತೆ.

ಅವರು 'ಕದ್ದಡಗೋ ಆಟ' ಆಡುವ ಮುಚ್ಚುಮರೆಯ ಸಂದಿಗೊಂದಿಗಳಲ್ಲೆಲ್ಲ ಧರ್ಮುಗಾಗಿ ಹುಡುಕಾಡಿದರು. 'ಧರ್ಮೂ! ಓ ಧರ್ಮೂ! ಓ ಧರ್ಮಣ್ಣಯ್ಯ!' ಎಂಬ ಕರೆಕೂಗುಗಳು ಸೌದೆಕೊಟ್ಟಿಗೆ, ದನದ ಕೊಟ್ಟಿಗೆ, ಪಣ್ತದ ಕೊಟ್ಟಿಗೆ, ಬಚ್ಚಲು ಕೊಟ್ಟಿಗೆ, ಕೋಳಿಒಡ್ಡಿ, ಕುರಿಒಡ್ಡಿಗಳಿಂದಲೂ ಹೊಮ್ಮಿದುವು. ಕಡೆಗೆ ರಂಗಪ್ಪಗೌಡರ ಹೆಂಡತಿಯ ಹೆರಿಗೆ ಸಂದರ್ಭದಲ್ಲಿ ಸೂಲಗಿತ್ತಿಯಾಗಿ ಬಂದಿದ್ದ ಹಳೇಪೈಕದ ಯೆಂಕಿಯನ್ನು ಬಚ್ಚಲು ಕೊಟ್ಟಿಗೆಯ ಹತ್ತಿರ

ಇದಿರುಗೊಂಡ ತಿಮ್ಮು 'ಧರ್ಮು ಎಲ್ಲಿ ಹೋದನೆ? ಎಲ್ಲಾದರೂ ನೋಡಿದ್ಯೇನೆ? ನಮ್ಮ ಸಂಗಡ ಗಂಜಿ ಉಂಡು ಹೊರಗೆ ಬಂದಂವ ಪತ್ತೇನೆ ಇಲ್ಲ! ಹುಡುಕೀ ಕರೆದೂ ಸಾಕಾಯ್ತು ನಮಗೆಲ್ಲ.' ಎಂದು ಗಾಬರಿಗೊಂಡ ದನಿಯಿಂದಲೆ ಕೇಳಿದನು.

ಅವಳು ಸ್ವಲ್ಪವೂ ಕುತೂಹಲವನ್ನಾಗಲಿ ಆಸಕ್ತಿಯನ್ನಾಗಲಿ ತೋರಿಸಲಿಲ್ಲ. ಇವರ ಅನ್ವೇಷಣೆಯನ್ನೂ ಅವನ ಕಾಣೆಯಾಗಿರುವಿಕೆಯನ್ನೂ ಸಮತೋಲನವಾಗಿ, ಮಕ್ಕಳ ಆಟವನ್ನು ಕಾಣಬೇಕಾದಂತೆ ಕಂಡು, ಉದಾಸೀನ ಧ್ವನಿಯಿಂದ "ಯಾರ್ರೋ? ಹಳೆಮನೆ ತಿರುಪತಿ ದೊಡ್ಡಯ್ಯನ ಮಗನಾ? ನಿಮ್ಮ ಅವ್ವನ ಹತ್ರ ಹೆರಿಗೆ ತಟ್ಟಿಕೋಣೇಲಿ ಮಾತಾಡ್ತಾ ಕೂತಾರಲ್ಲಾ?" ಎನ್ನುತ್ತಾ ಕೆಲಸಕ್ಕೆ ಅವಸರವಾಗಿ ಹೊರಟೇ ಹೋದಳು. ತಿಮ್ಮುಗೆ ತನಗೆ ತಂಗಿ ಹುಟ್ಟಿರುವುದನ್ನು ಥಕ್ಕನೆ ನೆನಪು ಕೊಟ್ಟಂತಾಗಿ ತಟ್ಟಿಕೋಣೆಗೆ ಓಡಿದನು.

ಹೆರಿಗೆಮನೆಯಾಗಿದ್ದ ಕೆಳಗರಡಿಯ ತಟ್ಟಿಕೋಣೆಗೆ ಹೋದ ತಿಮ್ಮು ಅದರ ಬಾಗಿಲಲ್ಲಿಯೆ ನಿಂತುಬಿಟ್ಟನು. ಒಳಗಿದ್ದ ಕತ್ತಲೆಯಲ್ಲಿ ಅವನಿಗೆ, ಅಗ್ಗಿಷ್ಟಿಕೆಯ ರೂಪದಲ್ಲಿ ಒಂದು ಮೂಲೆಯಲ್ಲಿ ಸಣ್ಣಗೆ ಉರಿಯುತ್ತಿದ್ದ ಬೆಂಕಿ ಹೊರತು, ಇನ್ನೇನೂ ಸ್ಪಷ್ಟಾಗಿ ಕಾಣಿಸಲಿಲ್ಲ. ಅಲ್ಲದೆ ಆ ಕೋಣೆಯ ವಾಸನೆಯೂ ವಿಚಿತ್ರತರಹದ್ದಾಗಿತ್ತು: ಬೆಳ್ಳುಳ್ಳಿ, ಮೆಂತೆ, ಬ್ರಾಂದಿ, ಮೆಣಸು ಇತ್ಯಾದಿ ಕಟುತ್ವದೊಂದಿಗೆ ಧೂಪದ ಪರಿಮಳವೂ ಮಿಳಿತವಾಗಿತ್ತು. ಕೂಸು ಅಳುತ್ತಿದ್ದುದೂ ಬಹು ಮೃದುಸ್ವರವಾಗಿತ್ತು. ಯಾರೂ ಅಸ್ಪಷ್ಟವಾಗಿ ಕಾಣಿಸದಿದ್ದರೂ ಯೆಂಕಿ ಹೇಳಿದುದರ ಆಧಾರದ ಮೇಲೆ ಧರ್ಮುವನ್ನು ಹೆಸರುಹಿಡಿದು ಕೂಗಿದನು.

"ಯಾರು? ತಮ್ಮನೇನೋ?" ಬಾಣಂತಿಯಾಗಿದ್ದ ತಾಯಿ ಮಗನನ್ನು ಮುದ್ದಾಗಿ ಮಾತನಾಡಿಸಿದಳು, ತುಂಬ ದಣಿದಿದ್ದ ಕೆಳದನಿಯಿಂದ.

"ಧರ್ಮು ಇದಾನೇನವ್ವಾ?" ನಿಂತಲ್ಲಿಂದಲೆ ಕೇಳಿದನು ತಿಮ್ಮು.

"ಇಲ್ಲಿದಾನೋ; ಬಾರೋ!

"ಮೊನ್ನೆ ಕಾಲು ತೊಳಕೊಳ್ಳದೆ ಬರಬ್ಯಾಡ ಅಂದಿದ್ದೀ, ತಂಗೀಗೆ ಮುಟ್ಟಿಟ್ಟಾಗ್ತದೆ ಅಂತಾ? ನಾನೀಗ ಕಣದಾಗೆ ಆಡ್ತಾ ಇದ್ದಾಂವ ಹಿಂಗೇ ಬಂದೀನಿ, ಧರ್ಮೂನ ಕರಕೊಂಡು ಹೋಗಾಕೆ...." ಎನ್ನುತ್ತಾ ಜೊತೆಗಾರನನ್ನು ಕೂಗಿದನು: "ಬಾರೋ, ಧರ್ಮೂ, ಲಗ್ಗೆ ಆಟಕ್ಕೆ" ಇಷ್ಟರಲ್ಲಿ ಕೋಣೆಯೊಳಗಣ ಮಬ್ಬಿಗೆ ಹೊಂದಿಕೊಂಡಿದ್ದ ತಿಮ್ಮುವಿನ ಕಣ್ಣಿಗೆ ಅಲ್ಲಿ ಕೂತಿದ್ದ ಧರ್ಮು, ಅವನ ಪಕ್ಕದಲ್ಲಿ ಮಲಗಿದ್ದ ತನ್ನ ತಾಯಿ, ಬಳಿಯೆ ಮೊರದಲ್ಲಿದ್ದ ಶಿಶು ಎಲ್ಲ ಮಾಸಲುಮಾಸಲಾಗಿ ಕಾಣಿಸತೊಡಗಿದ್ದರು.

"ಹೋಗಪ್ಪಾ, ಧರ್ಮೂ, ಆಟಕ್ಕೆ ಕರೀತಾನೆ, ಅಳಬ್ಯಾಡ; ಮಜ್ಜಾನದ ಮ್ಯಾಲೆ ಊಟಮಾಡಿಕೊಂಡು ಹೋಗಬಹುದಂತೆ. ನಾ ಹೇಳ್ತೀನಿ, ನಿನ್ನ ಸಂಗಡ ಐತನ್ನ ಕಳಿಸಾಕೆ; ಹಳೆಮನೆ ತಂಕಾ ಹೋಗಿ ಬಿಟ್ಟುಬರ್ತಾನೆ: ಅಳಬ್ಯಾಡಪ್ಪಾ, ಹೋಗು."

ಅತ್ತೆಮ್ಮ ಭರವಸೆ ಕೊಟ್ಟಮೇಲೆ ಧರ್ಮು ಎದ್ದು ಕಣ್ಣೊರೆಸಿಕೊಳ್ಳುತ್ತಾ ತಿಮ್ಮುವನ್ನು ಹಿಂಬಾಲಿಸಿದನು.

ಬೆಳಿಗ್ಗೆ ಗಂಜಿ ಉಂಡಮೇಲೆ ಧರ್ಮು ಇತರ ಹುಡುಗರೊಡನೆ ಹೋಗದೆ ನೆಟ್ಟಗೆ ತಟ್ಟಿ ಕೋಣೆಗೆ ಹೋಗಿದ್ದುದಕ್ಕೆ ಕಾರಣ, ಅತ್ತೆಮ್ಮನ್ನು ಹೇಗಾದರೂ ಒಪ್ಪಿಸಿ, ತನ್ನ ತಾಯಿಯನ್ನು ನೋಡಲು ಹಳೆಮನೆಗೆ ಹೋಗಬೇಕು ಎಂಬುದೆ.

ರಾತ್ರಿ ಅವನು ಇತರ ಬಾಲಕರೊಡನೆ 'ಸಣ್ಣಮಾವ' ಮುಕುಂದಯ್ಯನ ಹತ್ತಿರವೆ ಎಂದಿನಂತೆ ಮಲಗಿದ್ದನು. ಬಹಳ ಹೊತ್ತಾದರೂ ಅವನಿಗೆ ನಿದ್ದೆ ಬಂದಿರಲಿಲ್ಲ. ತಿರುಪತಿಗೆ ಹೋಗಿ ಹಿಂದುರುಗದೆ ಇದ್ದ ತಂದೆಗಾಗಿ ಪರಿತಪಿಸುತ್ತಿದ್ದ ತಾಯಿಯ ಯೋಚನೆ ಬಲವಾಗಿ ಗುಟ್ಟಾಗಿ ಕಣ್ಣೀರು ಸುರಿಸುತ್ತಲೆ ಮಲಗಿದ್ದನು. ಮುಕುಂದಯ್ಯ ತನಗೆ ಸನಿಹದಲ್ಲಿಯೆ ಬೇರೆಯ ಹಾಸಿಗೆಯಲ್ಲಿ ಮಲಗಿದ್ದ ಐಗಳೊಡನೆ ಏನೇನೋ ಮಾತಾಡುತ್ತಿದ್ದನು. ಆದರತೆ ಅದೆಲ್ಲ ಧರ್ಮುವಿಗೆ ಮೀರಿತ್ತು ಮಾತ್ರವಲ್ಲದೆ ಅವನ ಕುತೂಹಲದ ಕ್ಷೇತ್ರದಿಂದಾಚೆಗಿತ್ತು. ನಡುವೆ ಒಂದೆರಡು ಸಾರಿ ಮುಕುಂದಯ್ಯ ಧರ್ಮುವಿಗೆ ನಿದ್ದೆ ಬಂದಿದೆಯೊ ಇಲ್ಲವೊ ಎಂದು ಗೊತ್ತುಮಾಡಿಕೊಳ್ಳುವುದಕ್ಕಾಗಿ ಅವನನ್ನು ಕರೆದಿದ್ದನು. ಧರ್ಮು ಮಾತಾಡಿರಲಿಲ್ಲ. ಬಹುಶಃ ಹುಡುಗನಿಗೆ ನಿದ್ದೆ ಬಂತು ಎಂದು ನಿಶ್ಚಯಿಸಿಕೊಂಡನೆಂದು ತೋರುತ್ತದೆ, ಮುಕುಂದಯ್ಯ ಮೆಲ್ಲನೆ ಗುಸುಗುಸು ದನಿಯಲ್ಲಿ ಐಗಳು ಅನಂತಯ್ಯನವರೊಡನೆ ಬೇರೆಯ ವಿಷಯ ಪ್ರಸ್ತಾಪಿಸತೊಗಿದನು. ಅದನ್ನಾಲಿಸಿ ಧರ್ಮುಗೆ ಚೇತನ ಸಮಸ್ತವೂ ಮುಳ್ಳಮೇಲೆ ನಿಂತಂತಾಯಿತು: ಅದು ತನ್ನ ತಂದೆಯನ್ನೆ ಕುರಿತದ್ದಾಗಿತ್ತು!

"ಹಾಗಾಂದ್ರೆ ನಾಳೆ ಹೊತಾರೆ ಮುಂಚೇನೆ ಹೊರಟುಬಿಡಿ. ತೀರ್ಥಹಳ್ಳಿಗೆ ಹೋದಮೇಲೆ ಜೀವರತ್ನಯ್ಯನ್ನೂ ವಿಚಾರಿಸಿ, ದಾಸಯ್ಯನ ಜತೇಲಿ ಮಂಡಗದ್ದೆಗೂ ತೂದೂರಿಗೂ ಹೋಗಿ ನೋಡಿಕೊಂಡು ಬನ್ನಿ, ಇದೊಂದು ಸಲ ನೋಡಿಬಿಡಾನ.... ನಮ್ಮ ದೊಡ್ಡಕ್ಕಯ್ಯನ ಗೋಳು ನೋಡಾಹಾಂಗಿಲ್ಲ. ಅನ್ನ ನೀರು ಬಿಟ್ಟು ಇವತ್ತೊ ನಾಳೆಯೊ ಸಾಯ್ತದೆ ಅಂತಾ ಕಾಣ್ತದೆ.... ನಿಮಗೆ ಗುರ್ತು ಸಿಗ್ತದಲ್ಲಾ? ಹಳೆಮನೆ ದೊಡ್ಡಬಾವನ ಗುರ್ತು ನಿಮಗೆ ಚೆನ್ನಾಗೇ ಇರಬೇಕು ಅಲ್ಲೇನು?"

"ಇದೇನು ಹೀಂಗನ್ತೀಯಾ?...." ಐಗಳು ಅನಂತಯ್ಯ ಮುಕುಂದಯ್ಯನ ಪ್ರಶ್ನೆಯನ್ನೆ ಮೂದಲಿಸಿ ನಕ್ಕು ಪ್ರಶ್ನಿಸಿದರು.

"ಅದಕ್ಕೆಲ್ಲಾ....? ಅಂವ ತಿರುಪತಿಯಾತ್ರೆಗೆ ಹೋಗಿ ಏಳೆಂಟು ವರ್ಷಾನೆ ಆಯ್ತು, ನಿಮಗೆ ಥಕ್ಕನೆ ಗುರ್ತು ಸಿಕ್ತದೆಯೋ ಇಲ್ಲೋ ಅಂತಾ ಹೇಳಿದೆ, ಅಷ್ಟೆ....ಅದೂ ಅಲ್ದೆ ಅಂವ ಸನ್ನೇಸಿಗಳೋ ಬೈರಾಗಿಗಳೋ ಗೋಸಾಯಿಗಳೋ ಯಾರ ಜೊತೇಲೋ ಅವರಹಾಂಗೆ ಗಡ್ಡಗಿಡ್ಡ ಬಿಟ್ಕೊಂಡು ಇದಾನೆ ಅಂತಾ ಹೇಳ್ತಾರೆ...."

"ಅವರು ಗಡ್ಡ ಬಿಟ್ಟಿರ್ಲಿ, ವೇಷ ಕಟ್ಟಿರ್ಲಿ, ನನ್ನ ಕಣ್ಣಿಗೆ ಮಣ್ಣೆರಚಾಕೆ ಆಗೋದಿಲ್ಲ ಬಿಡು....ನನಗೆ ಅವರನ್ನ ಮುಖ ನೋಡುವುದೂ ಬೇಡ; ಅವರು ನಡೆಯುವುದು ನೋಡಿದರೇ ಸಾಕು. ಕಂಡುಹಿಡಿದು ಬಿಡ್ತೀನಿ.... ಅವರು ಯಾತ್ರೆ ಹೋದಾಗ ನೀನಿನ್ನೂ ಹುಡುಗ; ಒಂಬತ್ತೋ ಹತ್ತೋ ವರ್ಷ ನಿನಗೆ ಆಗ.... ಎಷ್ಟು ಸಾರಿ ನಾವು ಒಟ್ಟಿಗೆ ಬೇಟೆಗೆ ಹೋಗಿದ್ದೆವು? ಹಳೆಮನೇಲಿ ಒಂದು ಹಬ್ಬ, ಹರಿದಿನ, ಮಾಲಾಯಾ ಆದರೆ ನಾವೆಲ್ಲ ಅಲ್ಲಿ ತಯಾರು! ಒಂದೊಂದು ಬಾರಿ ಇರುಳುಬೆಳಗೂ ಇಸ್ಪೀಟು ಆಡಿದ್ದೂ ಉಂಟು.... ದೊಡ್ಡಣ್ಣ ಹೆಗ್ಗಡೇರು ಭಾರಿ ಧೈರ್ಯದ ಮನುಷ್ಯ ಕಾಣಯ್ಯ.

ಆವೊತ್ತು ಅವರಿಲ್ಲದಿದ್ರೆ ಹೂವಳ್ಳಿ ವೆಂಕಟಣ್ಣ ಬದುಕ್ತಿದ್ನಾ? ಮಿಣಿಬಲೆಗೆ ಬಿದ್ದ ಒಂಟಿಗ ಹಂದೀನ ಭರ್ಜೀಲಿ ತಿವಿಯಾಕೆ ಹೋಗಿ, ಕಾಲುಜಾರಿ ಬಿದ್ದನಲ್ಲಾ! - ದೊಡ್ಡಣ್ಣ ಹೆಗ್ಗಡೇರು ಎಲ್ಲಿದ್ರೋ ಏನೋ ನುಗ್ಗಿಬಂದು, ಗುಂಡು ಹೊಡೆದು, ಅದನ್ನ ಉರುಳಿಸದೆ ಇದ್ದಿದ್ರೆ, ವೆಂಕಟಣ್ಣ ಸೀಳಿ ಸಿಗಿದುಹಾಕಿಬಿಡ್ತಿತ್ತು...."

"ಅವನಿಗೆ ಸಿಕ್ಕಬೇಕಲ್ಲಾ ನಿಮ್ಮ ಗುರುತು?"

"ನಾನೇನು ಗಡ್ಡ ಬಿಟ್ಟಿದ್ದೇನೆಯೆ? ವೇಷಕಟ್ಟಿದ್ದೇನೆಯೆ? ಅವರಿಗೆ ಸಿಕ್ಕದೆ ಏನು ನನ್ನ ಗುರುತು?"

"ಗೋಸಾಯಿಗಳು ಮದ್ದು ಕೊಟ್ಟು ಹಿಂದಿನದೆಲ್ಲ ಮರೆತೇಹೋಗೋಹಾಂಗೆ ಮಾಡ್ತಾರಂತೆ - ಹಾಂಗಾದೋರಿಗೆ ಅವರ ಹೆಂಡ್ತಿ ಮಕ್ಕಳೇ ಹೋದ್ರೂ ಗುರ್ತೇ ಸಿಕ್ಕದಿಲ್ಲಾ ಅಂತಾ ಹೇಳ್ತಾರೆ?...." ಮುಕುಂದಯ್ಯ ತನ್ನ ಸಂದೇಹವನ್ನು ಸಂಕಟದಿಂದ ಹೇಳಿಕೊಂಡನು.

ಅದಕ್ಕೆ ಐಗಳು ಶ್ರದ್ಧಾವಾಣಿಯಿಂದ ಹೇಳಿದ್ದರು: ನೋಡುವ, ದೇವರಿದ್ದಾನೆ.... ಅವರ ಹೆಂಡತಿ ಮಕ್ಕಳಿಗೆ ಪುಣ್ಯ ಇದ್ದರೆ ಕಣ್ಣುಬಿಟ್ಟು ನೋಡಿಯೆ ನೋಡುತ್ತಾನೆ.... ಮದ್ದು ಹೆಚ್ಚೊ, ದೇವರು ಹೆಚ್ಚೋ? ಮದ್ದು ಮರೆಯಿಸಿದ್ದನ್ನ ದೇವರು ನೆನೆಯಿಸಲಾರನೇ?"

ಸಣ್ಣಮಾವ ಮುಕುಂದಯ್ಯ ಮತ್ತು ಐಗಳು ಅನಂತಯ್ಯನವರ ಆ ರಹಸ್ಯ ಸಂವಾದವನ್ನು ಹೃತ್ಪೂರ್ವಕವಾದ ಶ್ರದ್ಧೆಯಿಂದ ಆಲಿಸಿದ್ದ ಧರ್ಮು ದೇವರನ್ನು ನೆನೆಯುತ್ತಾ ಪ್ರಾರ್ಥಿಸುತ್ತಾ ನಿದ್ದೆಹೋದನು. ಆದರೆ ಅಲ್ಲಿಯೂ ಕನಸು ಅವನನ್ನು ಬಿಡಲಿಲ್ಲ. ಕನಸ್ಸಿನಲ್ಲಿಯೇ ಅವನ ಅವ್ವ ಅಳುತ್ತಾ ಬಂದು ರೋದಿಸಿದ್ದರು, ಅವನ ತಲೆಯನ್ನು ಸವರುತ್ತಾ 'ತಮ್ಮಾ, ನಿನ್ನ ಅಪ್ಪಯ್ಯನ್ನ ಕರಕೊಂಡು ಬರಾದಿಲ್ಲೇನೋ? ಅವರು ಊಟಾಮಾಡದೆ ಎಷ್ಟೋ ದಿವಸ ಆಯಿತಲ್ಲಪ್ಪಾ? ಹಸುಕೊಂಡು ಕೊರಗ್ತಿದ್ದಾರಲ್ಲೋ! ನಿನ್ನ ದಮ್ಮಯ್ಯ ಅಂತೀನಿ: ಹೋಗಿ ಏನಾದರೂ ಮಾಡಿ ಕರಕೊಂಡು ಬಾರಪ್ಪಾ!' ಎಂದು. ಅದೆಲ್ಲದರ ಪರಿಣಾಮವಾಗಿಯೆ ಧರ್ಮು ಬೆಳಿಗ್ಗೆ ಎದ್ದು ಗಂಜಿ ಉಂಡವನೆ ಅತ್ತೆಮ್ಮನ ಬಳಿಗೆ ಹೋಗಿ ಅತ್ತು ಕರೆದು ತನ್ನ ಅವ್ವನ ಹತ್ತಿರಕ್ಕೆ ಹೋಗಲು ದೊಡ್ಡ ಮಾವನನ್ನು ಒಪ್ಪಿಸುವಂತೆ ಮಾಡಿದ್ದನು.

ಗೆಳೆಯರಿಗೆ ಮನಸ್ಸು ನೋಯಿಸಬಾರದೆಂದು ಧರ್ಮು ಲಗ್ಗೆಯಾಟಕ್ಕೆ ಸೇರಿದ್ದನು. ಆದರೆ ಅವನ ಮನಸ್ಸೆಲ್ಲ ಅವ್ವನನ್ನೆ ನೆನೆಯುತ್ತಿತ್ತು. ಲಗ್ಗೆಮಣೆಗೆ ಗುರಿಯಿಡುವಾಗಲೂ 'ಈ ಸಾರಿ ಈ ಚೆಂಡು ಲಗ್ಗೆಮಣೆಗೆ ಸರಿಯಾಗಿ ಗುರಿಬಿದ್ದು ಅದನ್ನು ಉರುಳಿಸಿದರೆ, ಅಪ್ಪಯ್ಯ ಬಂದೆ ಬರುತ್ತಾನೆ.' ಎಂದು ಸಂಕಲ್ಪಸಿ ಗುರಿಯಿಟ್ಟಿದ್ದನು. ಲಗ್ಗೆಮಣೆ ಉರುಳಿಬಿದ್ದು ತನ್ನ ಪಕ್ಕದವರೆಲ್ಲ ಫೇ ಎಂದು ಜಯಘೋಷ ಮಾಡಿದಾಗ ಧರ್ಮುವು ಸಂತೋಷದಿಂದ ಕುಣಿದಾಡಿದನು. ಆದರೆ ಅವನ ಹಿಗ್ಗಿಗೆ ಕಾರಣವೆ ಬೇರೆಯಾಗಿತ್ತು!

ಧರ್ಮು ಹಳೆಮನೆಗೆ ಹೋಗುತ್ತಾನೆ ಎಂದು ತಿಳಿದಾಗ ಹುಡುಗರೆಲ್ಲರೂ ಸೇರಿ ಅವನನ್ನು ಕೋಣೂರಿನಲ್ಲಿಯೆ ಇರುವಂತೆ ಮಾಡಲು ಪ್ರಯತ್ನಿಸಿದರು. ಎಂತಿದ್ದರೂ ಮಗಳು ಏಳೆಂಟು ದಿನಗಳಾದರೂ ಹೊರಗೆಲ್ಲಿಗೋ ಹೋದವರು ಬರುವುದಿಲ್ಲವಂತೆ. ಆಡಿಕೆಯ ದಿನಗಳಲ್ಲಿ ಮಾಡಲು ಬೇಕಾದಷ್ಟು ಸಾಹಸಗಳಿವೆ; ಆಡಲು ಆಟಗಳಿವೆ;

ಹಗಲೆಲ್ಲ ಗದ್ದೆ ತೋಟ ಕಾಡುಗುಡ್ಡಗಳಲ್ಲಿ ಅಲೆದಾಡಬಹುದು: ಹಕ್ಕಿ ಹಿಡಿಯಬಹುದು; ಹಣ್ಣು ಕುಯ್ಯಬಹುದು; ಪಂಜರ ಕಟ್ಟಿ ಸಾಕಬಹುದು; ಹೊಂಡ ತೋಣಕಬಹುದು; ಜೇನು ಕೀಳಬಹುದು; ಗಾಣ ಹಾಕಬಹುದು; ಮುಕುಂದಣ್ಣನ ಜೊತೆ ಷಿಕಾರಿಗೆ ಹೋಗಬಹುದು - ಇತ್ಯಾದಿ ಇತ್ಯಾದಿ ಎಲ್ಲವನ್ನೂ ಸೊಗಸುವಂತೆ ಹೇಳಿದರು. ಕಡೆಗೆ ಬೆಟ್ಟಳ್ಳಿಯಿಂದ ಜೋಡೆತ್ತಿನ ಕಮಾನು ಗಾಡಿ ಬರುತ್ತದೆಂದೂ ಅದರಲ್ಲಿ ಕುಳಿತು ಎಲ್ಲರೂ ಕಲ್ಲೂರು ದೇವಸ್ಥಾನಕ್ಕೆ ಪೂಜೆಯ ಉತ್ಸವಕ್ಕೆ ಹೋಗಬಹುದೆಂದೂ ಹೇಳಿದರು. ಆದರೆ ಯಾವುದೂ ಪ್ರಯೋಜನಕಾರಿಯಾಗಲಿಲ್ಲ. ಮಧ್ಯಾಹ್ನ ಊಟವಾದೊಡನೆ ಐತ ಬರುವುದನ್ನೆ ಇದಿರು ನೋಡುತ್ತ ಕುಳಿತಿದ್ದ ಧರ್ಮುಗೆ ಜಗತ್ತಿನ ಅತ್ಯಂತ ಮುಖ್ಯ ವ್ಯಕ್ತಿ ಆಗಿದ್ದನು ಐತ; ಲೋಕದಲ್ಲಿ ನಡೆಯುತ್ತಿದ್ದ ವ್ಯಾಪಾರಗಳಲೆಲ್ಲ ಅತ್ಯಂತ ಸಜೀವಘಟನೆಯಾಗಿತ್ತು ಐತನ ಆಗಮನ!

ಅಜ್ಜಮ್ಮ ಅತ್ತೆಮ್ಮ ದೊಡ್ಡಮಾವ ಸಣ್ಣಮಾವರಿಗೆ 'ಹೋಗಿಬರುತ್ತೀನಿ!' ಹೇಳಿ ಬೀಳ್ಕೊಂಡು ಐತನೊಡನೆ ಹೊರಟಾಗ, ಧರ್ಮುವನ್ನು ಸ್ವಲ್ಪದೂರ ಹಳ್ಳದವರೆಗೆ ಕಳಿಸಿ ಬರುತ್ತೇನೆ ಎಂದು ತಿಮ್ಮು ಕಾಡು ಇತರ ಹುಡುಗರೂ ಜೊತೆ ಹೊರಟರು. ಎದುರಿಗೆ ಬಿಡಾರದಿಂದ ಮನೆಯ ಕಡೆಗೆ ಬರುತ್ತಿದ್ದ ಪೀಂಚಲುವನ್ನು ಕಂಡು ತಿಮ್ಮು "ನೀನೂ ಹೋಗ್ತೀಯೇನೆ, ಐತನ ಸಂಗಡ, ಧರ್ಮುನ ಕಳಿಸಾಕೆ?" ಎಂದು ನಗುತ್ತಾ ಕೇಳಲು, ಅವಳು ನಾಚುತ್ತಾ ಬಳುಕಿ, ಪಕ್ಕಕ್ಕೆ ದಾರಿಬಿಡುವ ನೆವದಿಂದ ಸರಿದು ನಿಂತು "ಈ ತಿಮ್ಮಯ್ಯಗೆ ಯಾವಾಗ್ಲೂ ಚಾಷ್ಟೇನೆ!" ಎಂದು ಐತನಕಡೆ ತಿರುಗಿ "ದೊಡ್ಡಮ್ಮ ಅಕ್ಕಿ ಬೀಸಾಕೆ ಬರಾಕೆ ಹೇಳಿದ್ರು" ಎಂದಳು. ಅವರೆಲ್ಲರೂ ತಿರುಗಣೆಯಲ್ಲಿ ಕಣ್ಮರೆಯಾಗುವವರೆಗೂ ನೋಡುತ್ತಾ ನಿಂತಿದ್ದು.

"ಏ ಐತಾ ಈ ಸಾರಿ ಎಷ್ಟು ಜೇನು ನೋಡಿಟ್ಟೀಯೊ?"

"ಸುಮಾರು ನೋಡಿಟ್ಟೀನಿ...."

"ಮತ್ತೆ ಯಾವಾಗ್ಲೋ ಕಿತ್ತುಕೊಡಾದು?"

"ನನ್ನಿಂದ ಆಗೋದಿಲ್ಲಾಪ್ಪ ಕೀಳಾಕೆ. ಪೀಂಚಲು ಕೀಳ್ತಾಳೆ; ಅವಳಿಗೆ ಎಲೆಮದ್ದು ಗೊತ್ತು."

"ಥೂ ನಿನ್ನ! ನಿಂಗೆ ನಾಚಿಕೆ ಆಗಾದಿಲ್ಲೇನೋ? ನಿನ್ನ ಹೆಂಡ್ತಿ ಮಾಡಿದ್ದನ್ನ ಮಾಡಾಕೆ ನಿನ್ನ ಕೈಲಾಗದಿಲ್ಲೇನೋ?...."

"ಜೇನು ಹುಡುಕಿ ಕಂಡುಹಿಡಿಯೋದೇನು ಬಿಟ್ಟಿ ಆಯ್ತಾ? ಪೀಂಚಲು ಕೈಲಿ ಆಗ್ತದೇನು ಅದು?...."

ಅಷ್ಟರಲ್ಲಿ ಅವರೆಲ್ಲ ಹಳ್ಳದ ಹತ್ತಿರಕ್ಕೆ ಬಂದಿದ್ದರು.

"ಏ ಐತಾ, ಈ ಹೊಂಡ ತೋಣಕಬೇಕು ಅಂತಾ ಮಾಡಿದ್ದುವಲ್ಲೊ. ಅವತ್ತಿನ ಮಾರಿಮಳೇಲಿ ನೀರು ಆಗಿಹೋಗಿಬಿಟ್ಟಿದೆ, ಏನು ಮಾಡೋದೋ?....

“ಮತ್ತೊಂದು ಮಳೆ ಬೀಳಾದ್ರೊಳಗೆ ನೀರು ಬತ್ತಬೈದು. ಆವಾಗ ನೋಡಾನ…. ಹಳ್ಳ ಬಂತಲ್ಲ, ತಿಮ್ಮಯ್ಯ!” ಐತ ಅವರೆಲ್ಲರೂ ಹಿಂತಿರುಗುವುದಕ್ಕೆ ಸೂಚಾನೆ ಕೊಟ್ಟಿದ್ದ. ಆದರೆ ಕಾಡು “ಆ ಅರೆಕಲ್ಲಿನವರೀಗೆ ಬರ್ತೀಂವೊ” ಎಂದನು.

ಸ್ವಲ್ಪ ಹೊತ್ತಿಗೆ ಅರೆಕಲ್ಲೂ ಸಮೀಪಿಸಿತ್ತು. ಆಗ ತಿಮ್ಮು “ಇನ್ನೊಂದು ಸೊಲ್ಪದೂರ ಬರ್ತೀಂವೋ.” ಎಂದು ತನ್ನ ಯಜಮಾನತ್ವದ ಗಾಂಭೀರ್ಯವನ್ನು ಮರೆತೋ ತೊರೆದೋ ಅಂಗಲಾಚುವ ದನಿಯಲ್ಲಿ ಐತನನ್ನೂ ಕೇಳಿಕೊಂಡನು.

ಆದರೆ ಐತ ಮುಂದುವರೆಯದೆ ನಿಂತುಬಿಟ್ಟನು. ಹೇಳಿದನು: “ಆಮ್ಯಾಲೆ ನನ್ನ ಬರ್ತಾರೆ ಕಣ್ರೋ ಅಮ್ಮ, ಹುಡುಗೂರ್ನ ಅಷ್ಟುದೂರ ಯಾಕೆ ಕರಕೊಂಡು ಹೋದೆ ಅಂತಾ. ನಿಮ್ಮ ದಮ್ಮಯ್ಯ ಅಂತೀನ್ರೋ: ಮನೀಗೆ ಹೋಗಿ. ಈಗ ಬೈಗಾಗಿಬಿಡ್ತದೆ.”

ಮನಸ್ಸಿಲ್ಲದ ಮನಸ್ಸಿನಿಂದ ಐತನ ನಿರೋಧಕ್ಕೆ “ಧರ್ಮು. ಹೋಗಿ ಬತ್ತೀಯಾ?” ಎಂದು ನಾಲ್ಕಾರು ಬಾಲವಾಣಿಗಳು ಕೀರಲು ದನಿಯಲ್ಲಿ ಕೂಗಿ ಬೀಳ್ಕೊಂಡು ಮನೆಯ ಕಡೆಗೆ ಹಿಂತಿರುಗಿದುವು.

ಗುಡ್ಡನಾಡಿನ ಕಾಲುದಾರಿಯಲ್ಲಿ ಧರ್ಮು ಮುಂದೆ ಐತ ಹಿಂದೆ ಆಗಿ ಸ್ವಲ್ಪದೂರ ಇಬ್ಬರೂ ಮಾತಿಲ್ಲದೆ ನಡೆದರು. ಇಳಿಬಿಸಲು; ಕಗ್ಗಾಡಿನ ನಿಃಶಬ್ದ; ಅಲ್ಲೊಮ್ಮೆ ಇಲ್ಲೊಮ್ಮೆ ಹಕ್ಕಿದನಿ: ಎಲ್ಲಿಯೋ ಮೇಯುತ್ತಿದ್ದ ದನಗಳ ಕೊರಳ ದೊಂಟೆಯ ಸದ್ದು.

ಇದ್ದಕ್ಕಿದ್ದಂತೆ ಧರ್ಮು “ಐತಾ, ನಿಂಗೆ ನಮಪ್ಪಯ್ನ ಗುರ್ತು ಚೆನ್ನಾಗಿತ್ತೇನೋ?”

“ಚೆನ್ನಾಗಿತ್ತಯ್ಯಾ… “ ಐತ ಇನ್ನೂ ಏನನ್ನೋ ಹೇಳಬೇಕು ಎಂದಿದ್ದನು. ಅಷ್ಟರಲ್ಲಿ ಧರ್ಮು

“ಅವರನ್ನ ನೋಡಿದ್ರೆ ಈಗ್ಲೂ ನಿಂಗೆ ಗುರ್ತು ಸಿಗ್ತದಾ?” ಎಂದು ಕೇಳಿದನು.

“ಸಿಗ್ತದೆ ಏನ್ರಯ್ಯಾ? ನಂಗೆ ಚೆನ್ನಾಗಿ ಬುದ್ದಿ ಬಂದಮ್ಯಾಲೆ ಅಲ್ಲೇನು ಅವರು ತಿರುಪತಿಗೆ ಹೋಗಿದ್ದು? ಅವರು ಹೋಗಾಕೆ ಮುಂಚೆ ನಂಟರು ಇಷ್ಟರು ಎಲ್ಲನ್ನೂ ಕರೆದು ಔಂತ್ಲ ಮಾಡಿಸಿದ್ರು ನಿಮ್ಮ ಮನೇಲಿ. ನಾನೂ ಗಡದ್ದಾಗಿ ಉಂಡಿದ್ದೆ. ನೀವು ಆಗ ಬಾಳ ಸಣ್ಣೋರು…”

“ನಂಗೂ ಸೊಸೊಲ್ಪ ನೆನಪು ಅದೆಯೊ ಅವರದ್ದು. ಮೀಸೆ ಬಿಟ್ಟಿದ್ರಲ್ಲೇನೋ? ಬೆಳ್ಳಗಿದ್ರು! ಕುತ್ತಿಗೀಗೆ ಒಂದು ನೆಪ್ಪು ಇರಾದೆ ಆಚ್ಚರ್ಯ!….

“ಹಾಂಗಾರೆ ಈಗ್ಲೂ ಅವರನ್ನ ಕಂಡ್ರೆ ಗುರ್ತು ಹಿಡೀತೀಯಾ ನೀನು?”

"ಖಂಡಿತಾ ಹಿಡೀತೀನಿ…. ಅವರ ಹೆಗಲ ಹತ್ರ ಬೆನ್ನಮ್ಯಾಲೆ, ಷಿಕಾರೀಲಿ ಹುಲಿ ಗಿಬ್ರಿದ್ದು ಅಂತಿದ್ರಪ್ಪ. ಒಂದು ಇಷ್ಟುದ್ದ ಇಷ್ಟಗಲ ಗಾಂಯದ ಕಲೆ ಇತ್ತು. ನಂಗೆ ಚನ್ನಾಗಿ ಗೊತ್ತು…. ಅಯ್ಯೊ ಅದೊಂದು ಕತೆ!" ಎಂದವನೆ ಐತ ತಡೆಯಲಾರದೆ ನಗತೊಡಗಿದನು. ಕಡೆಕಡೆಗೆ ಬಿದ್ದುಬಿದ್ದು ನಗತೊಡಗಿದನು. ನಕ್ಕೂ ನಕ್ಕೂ ಕಣ್ಣಲ್ಲಿ ನೀರೂ ಬಂದಿತು.

ಧರ್ಮು ಮೊದಲು ತುಸು ಕಕ್ಕಾವಿಕ್ಕಿಯಾದನು. ಗಂಭೀರ ಸನ್ನಿವೇಶದಲ್ಲಿ ದುಃಖದ ವಿಷಯ ಕುರಿತು ಮಾತನಾಡುತ್ತಿದ್ದಾಗ ತಟಕ್ಕನೆ ಐತ ನಗತೊಡಗಿದ್ದು ಅನನ್ವಯದಿಂದ ವಿಕಾರದ ಛಾಯೆಗೂ ತಿರುಗಿತ್ತು. ಆದರೆ ಐತನ ನಿರ್ವಿಕಾರವಾದ ತಿಳಿಯಾದ ಮುಗ್ಧ ಹಾಸ್ಯಾನುಭವ ಸೆಳವಿಗೆ ಸಿಕ್ಕ ಧರ್ಮುವೂ ತನ್ನ ಸಂಕಟವನ್ನೆಲ್ಲ ಮರೆತು ನಗತೊಡಗಿದ್ದನು. ಅಷ್ಟು ಸಾಂಕ್ರಾಮಿಕವಾಗಿತ್ತು ಅವನ ನಗೆ!

ನಕ್ಕು ನಕ್ಕು ದಣಿದು ಸಾಕಾಗಿ ಐತ ಸ್ಥಿಮಿತಕ್ಕೆ ಬಂದಮೇಲೆ ತನ್ನ ಕಡೆ ಬೆರಗಾಗಿ ನೋಡುತ್ತಿದ್ದ ಧರ್ಮುಗೆ "ಮತ್ತೆ ನೀವು ಯಾರ ಹತ್ರಾನಾದ್ರೂ ಹೇಳಗೀಳೀರಿ! ನಿಮ್ಮ ಅಪ್ಪಯ್ಯನೂ, ಹುಡುಗನ ಮಾನಹೋಗ್ತದೆ ಅಂತಾ, ಯಾರ ಹತ್ರಾನು ಹೇಳಬ್ಯಾಡಿ, ಅಂತಾ, ಯಾರ ಹತ್ರಾನೂ ಹೇಳಿರಲಿಲ್ಲ. ನೀವೂ ಯಾರ ಹತ್ರಾನು ಹೇಳಬ್ಯಾಡಿ, ಆಯ್ತಾ?" ಎಂದು ನಡೆದ ಸಂಗತಿಯನ್ನು ಹೇಳಲು ಪ್ರಾರಂಭಿಸಿದ್ದನೊ ಇಲ್ಲವೊ ಮತ್ತೆ ಬಟ್ಟೆ ಹರಿದಂತೆ ನಗತೊಡಗಿದನು. ಬಾಯಲ್ಲಿ ಎಂಜಲೂ ಜೊಲ್ಲೂ ಸುರಿಯತೊಡಗಿತು. ಕಡೆಗೆ ಗುಡ್ಡದ ಕಲ್ಲುಮಣ್ಣಿನಲ್ಲಿ ಇಣಗಿದ್ದ ಕರಡದಮೇಲೆ ಬಿದ್ದು ಹೊರಳಾಡಿಯೂ ಬಿಟ್ಟನು. ಆ ನಗೆಯ ಹೊನಲಿನಲ್ಲಿ ಧರ್ಮುವ ಮನಸ್ಸಿನ ದುಗುಡವೆಲ್ಲ ಕೊಚ್ಚಿಹೋಗಿತ್ತು. ಅವನ ಅಪ್ಪಯ್ಯ ಹಿಂತಿರುಗಿ ಬಂದಂತೆಯೆ ಆಗಿತ್ತು!

"ಹೇಳ್ತಾನೆ ಹೋಗ್ತೀನಿ ಬನ್ರೋ, ಹೊತ್ತಾಗ್ತದೆ." ಐತ ಎದ್ದುನಿಂತು ಬಟ್ಟೆಗೆ ಹಿಡಿದಿದ್ದ ಮಣ್ಣು ಹುಲ್ಲುಚೂರುಗಳನ್ನೆಲ್ಲ ಕೊಡಹಿ ಮುಂದಕ್ಕೆ ಹೊರಟನು.

"ಅವರು ಯಾರ ಹತ್ರಾನೂ  ಹೇಳಲಿಲ್ಲ. ಆದರೆ ನನ್ನ ಕಂಡಾಗಲೆಲ್ಲ ಹಾಸ್ಯ ಮಾಡ್ತಿದ್ರು "ಮರಸಿಗೆ ಬರ್ತಿಯೇನೋ, ಹುಡುಗಾ?" ಅಂತಾ. ಅವರು ಹಾಂಗೆ ಕೇಳ್ದಾಗಲೆಲ್ಲ ನಾನು ನಾಚ್ಕೊಂಡು ನೆಲಾ ಹಿಡಿದುಹೋಗ್ತಿದ್ದೆ! ಕಂಡೋರಿಗೆಲ್ಲ ಆಚರ್ಯ 'ಇದೇನು ಹೀಂಗೆ ಮಾಡ್ತದೆ ಈ ಹುಡುಗ, - ಮರಸಿಗೆ ಬರ್ತಿಯೇನೋ - ಅಂತಾ ಅವರು ಕೇಳಿದ್ರೆ?' ಅಂತಾ! ಗುಟ್ಟು ನಮ್ಮಿಬ್ಬರಿಗೇ ಗೊತ್ತಿದ್ದು!"

ಐತ ದೊಡ್ಡಣ್ಣ ಹೆಗ್ಗಡೆಯವರೊಡನೆ ಮರದ ಮೇಲೆ ಕಟ್ಟಿದ್ದ ಅಟ್ಟಣೆಯ ಮೇಲೆ, ಒಂದು ಹೂಡುವ ಎತ್ತನ್ನು ಹಿಡಿದಿದ್ದ ಹುಲಿಯ ಬೇಟೆಗಾಗಿ, ರಾತ್ರಿ ಮರಸಿಗೆ ಕೂತಿದ್ದ ಸ್ವಾರಸ್ಯ ಕಥೆ ಹೇಳತೊಡಗಿದನು.

"ನಾನು ನಿಮ್ಮ ಹಾಂಗಿದ್ದೆ ಆವಾಗ. ಷಿಕಾರಿಗೆ ಹೋಗಾದು ಅಂದರೆ ಬಾಳ ಹುಚ್ಚು… ಒಂದಿನ ಒಂದು ಹೂಡಕ್ಕೆ ಕಟ್ಟಾ ಎತ್ತನ್ನೆ ಹಿಡ್ದುಬಿಡ್ತು, ಹುಲಿ! ದೊಡ್ಡ ಎತ್ತು ಕಣ್ರೋ! ನಿಮ್ಮ ದೊಡ್ಡ ಮಾವನ ಮದುವೇಲಿ ಹಳೆಮನೆಯಿಂದ ನಿಮ್ಮ ಅತ್ತೆಮ್ಮಗೆ ಬಳ್ಳೊಳ್ಳಿ ಕೊಟ್ಟಿದಂತೆ…. ಹೇಳಿಕಳಿಸಿದ್ರು. ನಿಮ್ಮ ದೊಡ್ಡಮಾವ, ನಿಮ್ಮ ಅಪ್ಪಯ್ಯಗೆ. ಹುಲಿ ಹೊಡಿಯಾದು ಅಂದ್ರೆ ನಿಮ್ಮ ಅಪ್ಪಯ್ಯಗೆ ನೀರು ಕುಡಿದ್ಹಾಂಗೆ! ಈ ಪರಾಂತಕ್ಕೆಲ್ಲ ಭಾರಿ ಈಡುಗಾರರು; ಇಟ್ಟಗುರಿ

ತಪ್ಪಿರ್ತಿಲ್ಲಂತೆ. ಹೇಳಿಕಳ್ಸಿದ್ದೆ ಸೈ, ಬಂದೇ ಬಂದ್ರು, ಜೋಡುನಳಿಗೆ ಕೇಪಿನಕೋವೀನ ಹೆಗಲಮೇಲೆ ಹೇರಿಕೊಂಡು, ಕೋಣೂರಿಗೆ. ಎಂಥಾ ಆಳು ಅಂತೀರಿ? ಬರ್ದ್ದಂಡಾಳು! ಅವರನ್ನ ಕಂಡ್ರೇ ಹುಲಿ ನಡುಗಬೇಕು, ಹಾಂಗಿದ್ರು... ಅವತ್ತು ಬೈಗಿನ ಹೊತ್ತು ನಾ ಸುಮ್ನೆ ನಿಮ್ಮ ಸಣ್ಣಮಾವನ ಜೊತೆ ಚಿಟ್ಟುಬಿಲ್ಲು ಹಿಡುಕೊಂಡು ಹಕ್ಕಿ ಹೊಡಿಯಾಕೆ ಹೋಗಾಕೆ ಮುಕುಂದಯ್ಯನೆ ಹೊರಟಿದ್ರು. ಆದರೆ ದೊಡ್ಡಮ್ಮ - 'ಅವನಿಗೆ ಎರಡು ಜರ ಬಂದು ಇವತ್ತೆ ಬಿಟ್ಟದೆ; ಹೋಗಾದು ಬ್ಯಾಡ.' ಅಂದು ಬಿಟ್ರಂತೆ.... ನಾ ಮುಕುಂದಯ್ಯನ ಹತ್ರಾನೆ ತೆಣೆ ಕೆಳಗೆ ಅಂಗಳದಾಚೆ ನಿಂತಿದ್ದೆ. ನನ್ನಾರೂ ಕರೆದಿದ್ರೆ ಹೋಗ್ತಿದ್ನೆಲ್ಲಾ ಅಂತಾ ಮನಸ್ಸಿನಾಗೆ ಹಾರ್ಯೆಸ್ತಾ. ನಿಮ್ಮ ಅಪ್ಪಯ್ಯ ಜಗಲಿಮೇಲೆ ಕೂತಿದ್ದವರು. ಹಾಂಗೆ ನನ್ನ ಕಡೆ ನೋಡಿದ್ರು. ನಾ ನೆಗ್ತಾ ನಿಂತಿದ್ದೆ. 'ಬತ್ತಿಯೇನೋ ಮರಸೀಗೆ?' ಅಂತಾ ಕರೆದೇಬಿಟ್ರು! ನಂಗೇನು? ಸಂತೋಷವೇ ಸಂತೋಷ! 'ಹ್ಞೂ ಬತ್ತೀನ್ರಯ್ಯಾ!' ಅಂದೇಬಿಟ್ಟೆ. 'ಹುಲಿಗಿಲಿ ಬಂದ್ರೆ ಹೆದರಿಕೋಬಾರ್ದು. ಪಟ್‌ಪಿಟ್ ಅನ್ನದೆ ಸುಮ್ನೆ ಕೂತುಗೋತಿಯಾ?' ಅಂದ್ರು. 'ಹ್ಞೂ, ನಾನೇನು ಹೆದರೋದಿಲ್ಲ!' ಅಂದೆ.

"ನಂಗೂ ಇಷ್ಟು ಊಟ ಹಾಕ್ಸಿದ್ರು; ಅವರೂ ಒಳಗೆ ಹೋಗಿ ಉಂಡ್ರು. ಕತ್ತಲಾಗಾಕೆ ಮುಂಚೇನ

* * *

## ೧೭

ಕೆಂಬೈಗು ಭಯುಗುಗಪ್ಪಗೆ ತಿರುಗಿತ್ತು. ಇರುಳ ರಕ್ಷೆಗೋಸ್ಕರವೂ ಆಶ್ರಯ ಸಂಪಾದನೆಗೂ ಅವಸರವಾಗಿ ಗೊತ್ತು ಸೇರಿಕೊಳ್ಳಲು ಕಾತರವಾಗಿದ್ದ ಪ್ರಾಣಿ ಪಕ್ಷಿ ಸಮೂಹದಿಂದ ಶಬ್ದಮಯವಾಗಿದ್ದ ಕೋಳಿಒಡ್ಡಿ, ಕುರಿಒಡ್ಡಿ, ಹಂದಿಒಡ್ಡಿ, ದನದಕೊಟ್ಟಿಗೆ ಇವುಗಳ ದುರ್ಗಂಧಮಯ ವಾಯುಮಂಡಲವನ್ನು ಹಾದು ಐತನೊಡನೆ ಧರ್ಮು ಸೋಗೆವಿಭಾಗದ ತಮ್ಮ ಮನೆಯ ಮೆಟ್ಟಲನ್ನೇರಿ ನಿಂತಾಗ, ಅವನನ್ನು ಸ್ವಾಗತಿಸಲು ಯಾರು ಇರಲಿಲ್ಲ; ಯಾರೂ ಬರಲಿಲ್ಲ. ಮಲಗಿದ್ದ ನಾಯಿಗಳು ಮಾತ್ರ ಬೊಗಳಿ, ಗುರುತು ಸಿಗಲು ಬಾಲವನ್ನಾಡಿಸಿ, ಮೈಮೇಲೆ ನೆಗೆದಾಡಿದ್ದುವು. ಯಾರೂ ಅವನನ್ನು ನಿರೀಕ್ಷಿಸಿಯೂ ಇರಲಿಲ್ಲ. ಅಷ್ಟೇ ಅಲ್ಲ; ಮನೆಯಲ್ಲಿ ಅವನ ತಾಯಿಯ ನೆವದಿಂದ ಆಗುತ್ತಿದ್ದ ರಂಪಾಟದ ದೃಷ್ಟಿಯಿಂದ ಅವನು ತನ್ನ ಮಾವನಮನೆ ಕೋಣೂರಿನಿಂದ ತಮ್ಮ ಮನೆ ಹಳೆಮನೆಗೆ ಬರುವುದೆ ಒಂದು ಸಂಕಟವಾಗಿ ಪರಿಣಮಿಸುತ್ತಿತ್ತು ಮನೆಯವರಿಗೆ.

'ಬಂದೆಯಾ!' ಎನ್ನುವವರು ಒಬ್ಬರೂ ಇಲ್ಲದೆ ಬೆಕೋ ಬಿಮ್ ಎನ್ನುತ್ತಿದ್ದ ಮನೆಯ ಅಂಗಳಕ್ಕೆ ಪ್ರವೇಶಿಸುವುದೇ ಅವನಿಗೊಂದು ಸುಯ್ಯುವ ಸಂಗತಿಯಾಗಿತ್ತು. ಮನಸ್ಸು ಅಳಬೇಕು ಎನ್ನುವಷ್ಟರ ಮಟ್ಟಿಗೆ ಖಿನ್ನವಾಯಿತು. ಆ ಖಿನ್ನತೆಗೆ ಒಂದೇ ಒಂದು ಸಂತೋಷದ ಕಿರಣ ಪ್ರವೇಶಿಸದೆ ಇದ್ದಿದ್ದರೆ ಧರ್ಮು ಕಣ್ಣೊರಸಿಕೊಳ್ಳಬೇಕಾಗಿತ್ತು. ನೆರೆಯ ಹೆಂಚಿನ ಮನೆಯ ನಿರಾವರಣ ಅಂಗಳದಲ್ಲಿ, ಸೊಂಟ್ ತಾಯಿತಿ ಕಟ್ಟಿದ್ದ ಉಡಿದಾರ ವಿನಾ ಸಂಪೂರ್ಣ ನಿರ್ವಾಣವಾಗಿ ಮಣ್ಣಿನಲ್ಲಿ ಆಟವಾಡುತ್ತಿದ್ದ ರಾಮು, ಶಂಕರ ಹೆಗ್ಗಡೆಯ ಮಗ, 'ಧರ್ಮಣ್ಣಯ್ಯ'ನನ್ನು ನೋಡಿದವನು, 'ನೀನು ಎಲ್ಲಾದ್ರೂ ಆಚೆಮನೀಗೆ ಹೋದ್ರೆ ನಿನ್ನ ಬೆನ್‌ಚಮ್ಡ ಸಿಲಿಯಾ ಹಾಂಗೆ ಹೊಡೆದುಬಡ್ತೀನಿ!' ಎಂದಿದ್ದ ಅವನ

ಅಪ್ಪಯ್ಯನ ಬೆದರಿಕೆಯನ್ನೂ ಸಂಪೂರ್ಣವಾಗಿ ಮರೆತು, 'ಧರ್ಮಣ್ಣೈ ಬಂದಾ! ಧರ್ಮಣ್ಣೈ ಬಂದಾ!' ಎಂದು ಕೇಕೆ ಹಾಕುತ್ತಾ ಓಡಿಬಂದು ಅವನನ್ನು ತಬ್ಬಿಹಿಡಿದನು. ಪುಟ್ಟ ರಾಮುವ ಆ ಸುಸ್ವಾಗತವನ್ನು ಆಸ್ವಾದಿಸಿದ ಧರ್ಮುವ ಚೇತನ ತನ್ನ ಮುನ್ನಿನ ಕುಗ್ಗನ್ನು ವಿಸರ್ಜಿಸಿ ಹಿಗ್ಗಿತು. ದಾರಿಯಲ್ಲಿ ಬರುವಾಗ ಕುಯ್ದು ಅಂಗಿಜೇಬಿಗೆ ಹಾಕಿಕೊಂಡಿದ್ದ ಕಾಕಿಯ ಹಣ್ಣುಗಳನ್ನು ತೆಗೆದು ರಾಮುವಿಗೆ ಕೊಟ್ಟನು. ಆಟಕ್ಕೆ ಜೊತೆಯಿಲ್ಲದೆ ಬೇಸರದ ಒಂಟಿಬಾಳು ಸಾಗಿಸುತ್ತಿದ್ದ ಆ ಬಾಲಕನಿಗೆ  ಧರ್ಮುವ ಆಗಮನ ಒಂದು ಮಹತ್ವಪೂರ್ಣ ಆನಂದದ ಸಂಗತಿಯಾಗಿತ್ತು. ಈಗ ಧರ್ಮು ಕೊಟ್ಟ ಆ ಎಂಟೊ ಹತ್ತೊ ಕರಿಯ ಕಾಕಿ ಹಣ್ಣುಗಳೆ ಅವನಿಗೆ ಪರಮೈಶ್ವರ್ಯವಾಗಿ ಪರಿಣಮಿಸಿತ್ತು.

ಆ ಆನಂದದ ಸನ್ನವೇಶದಲ್ಲಿಯೂ ಧರ್ಮುಗೆ ಫಕ್ಕನೆ ಎಚ್ಚರಿಕೆಯುಂಟಾಗಿ "ಈಗ ಮನೀಗೆ ಹೋಗಪ್ಪಾ, ರಾಮು. ಆಮ್ಯಾಲೆ ನಾನೇ ಬತ್ತೀನಿ, ನಿನ್ನ ಹತ್ರ ಆಡಾಕೆ. ದೊಡ್ಡಚಿಗಪ್ಪಯ್ಯ - ನಿನ್ನ ಅಪ್ಪಯ್ಯ - ಕಂಡರೆ…." ಎಂದು ಅರ್ಧದಲ್ಲಿಯೇ ನಿಲ್ಲಿಸಿದನು.

ರಾಮೂಗೂ ಧರ್ಮಣ್ಣಯ್ಯನ ಎಚ್ಚರಿಕೆ ಅರ್ಥವಾಯಿತು. ಆದರೂ ಅವನು ವಿಚಲಿತನಾಗದೆ "ಅಪ್ಪಯ್ಯ ಮನೇಲಿ ಇಲ್ಲ ಕಣೋ. ಸಿದ್ದರಮಠಕ್ಕೆ ಹೋಗ್ಯಾನೆ, ಚೀಟಿ ಈಬೂತಿ ತರಾಕಂತೆ!" ಎಂದನು.

"ಆಗಲಿ ನೀ ಹೋಗಪ್ಪಾ, ಯಾರಾದರೂ ನೋಡಿ ಹೇಳಿದ್ರೆ?" ಎಂದು ಅವನನ್ನು ಕಳಿಸಿ, ಧರ್ಮು ತಮ್ಮ ಮನೆಯ ಅಂಗಳಕ್ಕೆ ಕಾಲಿಟ್ಟನು.

ಜಗಲಿಯ ಕೆಳತೆಣೆಯಲ್ಲಿ ಕುಳಿತು 'ಸಣ್ಣಚಿಗಪ್ಪಯ್ಯ' - ತಿಮ್ಮಪ್ಪ ಹೆಗ್ಗಡೆ - ಹೊಲೆಯರಿಗೂ ಗಟ್ಟದಾಳುಗಳಿಗೂ 'ಬಾಯಿಗೆ' ಕೊಡುತ್ತಿದ್ದನು. ಅವನ ಪಕ್ಕದಲ್ಲಿ ಒಮದು ಬುಟ್ಟಿ ತುಂಬ ಅಡಕೆ ಮತ್ತು ಹೊಗೆಸೊಪ್ಪಿನ ಸಣ್ಣ ಪಿಂಡಿ ಇದ್ದುವು. ಹೊಗೆಸೊಪ್ಪಿನ ವಾಸನೆಯೂ ಅಲ್ಲೆಲ್ಲ ಹಬ್ಬಿತ್ತು. ಅಜ್ಜಯ್ಯ - ಸುಬ್ಬಣ್ಣ ಹೆಗ್ಗಡೆಯವರೂ - ಎಲ್ಲಯೂ ಕಾಣಲಿಲ್ಲ…. 'ಓ ಬೈಗಿನ ಕಳ್ಳುಗೊತ್ತಿಗೆ ಹೋಗಿರಬೇಕು!' ಎಂದುಕೊಂಡನು ಧರ್ಮು, ಅಜ್ಜಯ್ಯನ ಚಾಳಿಯನ್ನು ನೆನೆಪಿಗೆ ಚಾಳಿಯನ್ನು ನೆನಪಿಗೆ ತಮದುಕೊಂಡು.

ತಿಮ್ಮಪ್ಪ ಹೆಗ್ಗಡೆ ಕಣ್ಣೆತ್ತಿ ನೋಡಿ "ಓಹೋಹೋಹೋ ಸಣ್ಣ ಹೆಗ್ಗಡೆ ಸವಾರಿ ಬಂದುಬಿಡ್ತಲ್ಲಾ!" ಎಂದು ವ್ಯಂಗ್ಯವಾಗಿ ನಕ್ಕು "ಆಡಿಕೇನೋ? ಕಳ್ಳತಪ್ಪಿಸಿಕೊಂಡು ಬಂದ್ಯೋ?" ಎಂದು ಪ್ರಶ್ನಿಸಿ, ಹಿಂದೆ ಇದ್ದ ಐತನನ್ನು ಕಂಡು "ಓಹೋಹೋಹೋ ಈ ಪೀಂಚಲು ಗಂಡನೂ ಬಂದುಬಿಟ್ಟಾನೆ! ನಿನ್ನ ಹೆಂಡ್ತಿ ಬರಲಿಲ್ಲೇನೋ?" ಎಂದು ತನ್ನ ಕರಿಮುಖದ, ಎಲೆಯಡಿಕೆ ಜಗಿದು ಕೆಂಪಾಗಿದ್ದ, ಹಲ್ಲಿನ ಸಾಲುಗಳನ್ನು ಪ್ರದರ್ಶಿಸಿ, ಆಳುಗಳಿಗೆ ಎಲೆ ಅಡಿಕೆ ಹೊಗೆಸೊಪ್ಪುಗಳನ್ನು ವಿನಿಯೋಗ ಮಾಡುತ್ತಲೆ " ಏ ಐತಾ, ನೀನೇನೋ ಜೇನು ಕಂಡು ಹಿಡಿಯೋದರಲ್ಲಿ ಬಾಳ ಗಟ್ಟಿಗನಂತೆ?…. ಎಲ್ಲಾ ಹೇಳ್ತಾರೆ…. ನಮ್ಮ ಕಾಡಾಗೆ ಒಂದಷ್ಟು ಹುಡುಕಿ ಕೊಡ್ತೀಯೇನೋ?…. ನಿನ್ನ ಹೆಂಡ್ತೀನೂ ಗಟ್ಟಿಗೆಯಂತೆ ಜೇನು ಕೀಳೋದರಲ್ಲಿ. ಹೌದೇನೊ? ಅವಳನ್ನೂ ಕರಕೊಂಡು ಬಾ, ನಿನ್ನ ಜೊತೆಗೆ. ಬ್ಯಾಡ ಅನ್ನಾದಿಲ್ಲ" ಎಂದು ಉತ್ತರ ನಿರೀಕ್ಷಿಸದೆ ಮಾತಾಡಿದನು. ಐತನ ಹೆಂಡತಿಯನ್ನು ಕರಕೊಂಡು ಬರುವ ವಿಚಾರದಲ್ಲಿ ತಿಮ್ಮಪ್ಪಹೆಗ್ಗಡೆ ಮಾತಾಡಿದ ಧ್ವನಿಗೆ. ಎಳೆ ಹೆಣ್ಣುಗಳ ಸಂಬಂಧದಲ್ಲಿ ಅವನ ಸ್ವಭಾವವನ್ನು ಅರಿತಿದ್ದ ಆಳುಗಳೆಲ್ಲಾ ಒಬ್ಬರ ಮುಖವನ್ನೊಬ್ಬರು ನೋಡಿಕೊಂಡು ನಗೆಯಾಡಿದರು.

ಜಗಲಿಗೆ ಹತ್ತಿ ಒಳಗೆ ಹೋಗುತ್ತಿದ್ದ ಧರ್ಮುಗೆ ತಿಮ್ಮಪ್ಪಹೆಗಡೆ:

“ಏನೋ? ಹೊರಗಿನಿಂದ ಬಂದವ ಕೈಕಾಲು ತೊಳೆದುಕೊಳ್ಳದೆ ಒಳಗೆ ಹೋಗ್ತೀಯಲ್ಲಾ?” ಎಂದನು. ತಿಮ್ಮಪ್ಪಹೆಗ್ಗಡೆಗೆ ಶುಚಿಯ ನಿಷ್ಠೆಯಾಗಲಿ ಶಿಷ್ಟಾಚಾರದಲ್ಲಿ ಗೌರವವಾಗಲಿ ಇಷ್ಟೂ ಇರದಿದ್ದರೂ ತನ್ನ ಹಿರಿತನದ ಅಧಿಕಾರಿವಾಣಿಯನ್ನು ಮೆರೆಯಲು ಆಳುಗಳ ಮುಂದೆ ಹಾಗೆ ಹೇಳಿದ್ದನಷ್ಟೆ! ಆದರೂ ಧರ್ಮು ಮರೆತುದನ್ನು ನೆನಪಿಗೆ ತಂದುಕೊಂಡತೆ, ಜಗಲಿಯಿಂದಿಳಿದು ಬಚ್ಚಲಿಗೆ ಹೋಗಿ ಕೈಕಾಲು ಮುಖ ತೊಳೆದುಕೊಂಡು ಅಡುಗೆ ಮನೆಗೆ ಹೋದನು.

ಅಲ್ಲಿ ಅವನು ನಿರೀಕ್ಷಿಸಿದಂತೆ ಒಲೆಯ ಅವನ ಅವ್ವ ಕಾಣಿಸಲಿಲ್ಲ. ಮಂಜತ್ತೆ ಸೀರೆಯ ಸೆರಗನ್ನು ಬಿಗಿದು ಕಟ್ಟಿಕೊಂಡು, ಒಲೆಯ ಮೇಲೆ ತಕಪಕಿಸುತ್ತಿದ್ದ ಅನ್ನದ ಹಿತ್ತಾಳೆ ಚರಿಗೆಯನ್ನು ಒಲೆಯ ಪಕ್ಕದಲ್ಲಿಟ್ಟಿದ್ದ ತಾಮ್ರದ ಬಾಗುಮರಿಗೆಗೆ ಎತ್ತಿ ಇಳಿಸಿ, ಸಿಬ್ಬಲ ಮರಚಟ್ಟಿಗಳನ್ನು ಚರಿಗೆಯ ಬಾಯಿಗೆ ಆನಿಸಿ ಒತ್ತಿ, ಅನ್ನ ಬಸಿಯಲು ಅಣಿಯಾಗುತ್ತಿದ್ದಳು.

ಧರ್ಮುವನ್ನು ಕಂಡವಳೆ ಸಂತೋಷಾಶ್ಚರ್ಯ ಭಾವದಿಂದ ಹರ್ಷಿತಳಾಗಿ “ಈಗ ಬಂದ್ಯೇನೋ? ಕೋಣೂರಿನಿಂದ ಬಂದ್ಯೇನೋ? ನಿನ್ನ ಅತ್ತೆಮ್ಮ - ಬಾಲೆಬಾಣ್ತಿ ಹ್ಯಾಂಗಿದ್ದಾರೋ?” ಎಂದು ಕೇಳಿದಳು.

“ಎಲ್ಲ ಚಂದಾಗಿದಾರೆ, ಮಂಜತ್ತೆ.... ನನ್ನ ಜೊತೆ ಬಂದ ಐತಗೆ ಬಂದ ಐತಗೆ ಸೊಲ್ಪ ಬೆಲ್ಲ ನೀರು ಕೊಡತ್ತೆ. ಹಿತ್ತಲು ಕಡೆಗೆ ಬರಾಕೆ ಹೇಳ್ತೀನಿ ಅವನಿಗೆ. ಅಂವ ಈಗ್ಲೆ ಹಿಂದಕ್ಕೆ ಹೊರಡ್ತಾನೆ. ಕತ್ತಲಾಗಬೇಕಾದ್ರೆ ಬಿಡಾರ ಸೇರಿಸಿಕೊಳ್ಳಬೇಕಂತೆ” ಎಂದವನೆ ಜಗಲಿಗೆ ಓಡಿ ಹೋಗಿ ಐತನನ್ನು ಕರೆದುಬಂದನು.

ಅನ್ನ ಬಯಸುವ ಕೆಲಸವನ್ನು ಮುಂದುವರೆಸಿದ್ದ ಮಂಜಮ್ಮ “ನೀನೇ ಕೊಡಣ್ಣಾ. ನಾ ಅನ್ನ ಬಸೀತ ಇದ್ದೀನಿ. ನೋಡಲ್ಲೆ ನಾಗಂದಿಗೆ ಮ್ಯಾಲದೆ ಬೆಲ್ಲದ ಚರಿಗೆ.... ಕೈ ನಿಲುಕದಿದ್ರೆ ಒಂದೆರಡು ಮಣೆ ಹಾಕಿಕೊಳ್ಳಣ್ಣಾ.... ಆಮೇಲೆ ಬಸಿಯಾದು ತಡ ಆಗಿ, ಅನ್ನ ಗಂಜಿಗಲಾದ್ರೆ, ನಿನ್ನ ಸಣ್ಣಚಿಕ್ಕಪ್ಪಯ್ಯ ನಿನ್ನೆ ನಿನ್ನ ಅವ್ವಗೆ ಗುದ್ದಿದ್ದಾಂಗೆ ನನಗೂ ಗುದ್ದುತಾನೆ ಇವತ್ತು!” ಕೊನೆಯ ವಾಕ್ಯವನ್ನು ತನಗೆ ತಾನೆ ಹೇಳಿಕೊಳ್ಳುವಂತೆ ಮಂಜಮ್ಮ ಹೇಳಿದ್ದರೂ ಅದರ ಒಂದೆರಡು ಮಾತು ಧರ್ಮುಗೆ ಕೇಳಿಸಿತ್ತು! ಸಣ್ಣಗಪ್ಪಯ್ಯನ ಉದ್ದಂಡತನದ ಒರಟು ನಡತೆ ಧರ್ಮುಗೆ ಪೂರ್ವಪರಿಚಿತವಾದದ್ದೆ. ಹಾಗೆಯೆ ಏನಾದರೂ ನಡೆದಿರಬೇಕೆಂದು ಊಹಿಸಿದ್ದನು. ಆದರೆ ನಿಜವಾಗಿ ನಡೆದದ್ದು ಅವನ ಊಹೆಗೂ ಮೀರಿದುದಾಗಿತ್ತು.

ಬೆಲ್ಲ ನೀರು ಕುಡಿದ ಮೇಲೆ ಐತ ಕೋಣೂರಿಗೆ ಹಿಂದಿರುಗಲು ಹೊರಟು ನಿಂತಾಗ ಧರ್ಮು “ಐತಾ, ನಿನಗೆ ನನ್ನ ಅಪ್ಪಯ್ಯನ ಗುರುತು ಚೆನ್ನಾಗದೆ ಹೇಳಿದೆ. ನಾನೆಲ್ಲಾದರೂ ಅವರನ್ನ ಹುಡುಕಾಕೆ ಹೊರಟರೆ, ನೀನೂ ಬರಬೇಕು ನನ್ನ ಸಂಗಡ” ಎಂದುದಕ್ಕೆ ಐತ ನಗೆಯೊಪ್ಪಿಗೆ ಸೂಚಿಸಿದ್ದನು.

ಐತನ್ನನು ಬೀಳ್ಕೊಂಡು ಅಡುಗೆಮನೆಗೆ ಹಿಂದಿರುಗಿದ ಧರ್ಮು “ಮಂಜತ್ತೆ, ಅವ್ವ ಎಲ್ಲಿ?” ಎಂದು ಕೇಳಿದನು.

ಮಂಜಮ್ಮ ಉತ್ತರ ಕೊಡಲೂ ಇಲ್ಲ; ಮುಖ ಎತ್ತಿ ಧರ್ಮುವನ್ನು ನೋಡಲೂ ಇಲ್ಲ. ತಾನು ಮಾಡುತ್ತಿದ್ದ ಕೆಲಸವನ್ನು ಮುಂದುವರಿಸಿದಳು, ಧರ್ಮು ಹೇಳಿದ್ದು ಕೇಳಿಸಲಿಲ್ಲ ಎಂಬಂತೆ. ಆದರೆ ಅದು ಕೇಳಿಸಿಯೇ ಅವಳು ಹಾಗೆ ಮಾಡಿದ್ದಳು. ಏನೆಂದು ಉತ್ತರ ಕೊಡುವುದು? ಹೇಗೆ ಉತ್ತರ ಪ್ರಾರಂಭಿಸುವುದು? ಧರ್ಮುವ ಮುಗ್ಧಹೃದಯಕ್ಕೆ ಅಪಘಾತವಾಗದಂತೆ ಸತ್ಯವನ್ನು, ಕಠೋರವಾಗಿದ್ದ ಸತ್ಯವನ್ನು, ಹೇಗೆ ತಿಳಿಸುವುದು? ಎಂದೆಲ್ಲ ಯೋಚಿಸುತ್ತಿದ್ದಳೆಂದು ತೋರುತ್ತದೆ. ಧರ್ಮುವ ಪ್ರಶ್ನೆಗೆ ದುಃಖವಿಕ್ಕಿ ಬರುತ್ತಿದ್ದ ತನ್ನ ಮುಖಭಾವವನ್ನು ಮರೆಮಾಚಲೆಂದೆ ಅವಳು ಅವನ ಕಡೆ ನೋಡುವ ಸಾಹಸ ಮಾಡಿರಲಿಲ್ಲ.

ತನ್ನ ಕಡೆಗೂ ತಿರುಗಿ ನೋಡದಿದ್ದ ಮಂಜತ್ತೆಯ ಭಂಗಿಯನ್ನೂ ನಿಷ್ಠುರ ಎನ್ನುವಂತಿದ್ದ ಅವಳ ಮೌನವನ್ನೂ ಗ್ರಹಿಸಿ ಧರ್ಮು ತುಸು ಅಳುದನಿಯಿಂದಲೆ ಕೇಳಿದನು: "ಯಾಕೆ, ಮಂಜತ್ತೆ, ಮಾತಾಡಾದಿಲ್ಲ?"

ಮುಗ್ಧಬಾಲಕನ ಮುಗ್ಧಹೃದಯದ ಆ ಮುಗ್ಧಪ್ರಶ್ನೆ ಮಂಜಮ್ಮನ ಶೋಕಭಾವದ ಕಟ್ಟೆಯ ಬಾಗಿಲನ್ನೆ ಎತ್ತಿತ್ತೊ ಎಂಬಂತೆ ಆಯಿತು. ಮಾಡುತ್ತಿದ್ದ ಕೆಲಸ ನಿಲ್ಲಿಸಿ, ಎದ್ದುನಿಂತು, ಧರ್ಮುವ ಕಡೆ ನೋಡುತ್ತಾ ಕಣ್ಣೀರು ಸುರಿಸತೊಡಗಿದಳು. ಉಸಿರ ಎಳೆದಾಟ ಹೆಚ್ಚಿತು. ಬಿಕ್ಕಿಬಿಕ್ಕಿ ಅಳುವುದನ್ನು ತುಂಬ ಪ್ರಯತ್ನದಿಂದ ತಡೆಯುತ್ತಿದ್ದಂತೆ ತೋರಿತು. ಬೇರೆ ಯಾರಾದರೂ ಅಡಿಗೆಮನೆಗೆ ಬಂದುಬಿಟ್ಟಾರೊ ಎಂದು ಅಂಜುವಂತೆ ಬಾಗಿಲಿದ್ದ ಕಡೆಗೆ ಕಣ್ಣು ಒಮ್ಮೆ ಇಮ್ಮೆ ಕಳ್ಳನೋಟ ಹಾಯಿಸಿತು: "ಯಾರು? ಅತ್ತಿಗಮ್ಮನಾ? ನಿಮ್ಮ ಕೋಣೇಲಿದಾರೆ!" ಎಂದಳು, ತುಟಿ ಅದುರುತ್ತಾ.

ಹಲವು ವರ್ಷಗಳಿಂದಲೂ ತನ್ನ ಅವ್ವಗೆ ಬಂದೊದಗಿದ್ದ ಮಹಾ ವಿಪತ್ತಿನ ದುಃಖವನ್ನು ಅನುಭವಿಸಿ ಅರಿತಿದ್ದ ಆ ಮಾಲಕನಿಗೆ ತನ್ನ ತಾಯಿಯ ಕ್ಷೇಮವಿಚಾರದಲ್ಲಿ ಯಾವಾಗಲೂ ಅವನ ಅರಿತಿದ್ದ ಆ ಬಾಲಕನಿಗೆ ತನ್ನ ತಾಯಿಯ ಕ್ಷೇಮವಿಚಾರದಲ್ಲಿ ಯಾವಾಗಲೂ ಅವನ ಕಲ್ಪನೆ ಭಯಂಕರವಾದ ಚಿತ್ರಗಳನ್ನೆ ತಂದೊಡ್ಡಿ ಕಣ್ಣೀರಿನ ಕೋಡಿ ಹರಿಯುವಂತೆ ಮಾಡುತ್ತಿತ್ತು. ಅದು ಕೆಟ್ಟಕೆಟ್ಟ ಕನಸುಗಳಲ್ಲಿಯೂ ಪ್ರತಿಫಲಿತವಾಗಿ ಅವನ ನಿದ್ದೆನ್ನೆಲ್ಲ ಕಡಹುತ್ತಿತ್ತು. ಒಮ್ಮೊಮ್ಮೆ ನಿದ್ದೆಗಣ್ಣಿಲ್ಲಿಯೆ ತಾಯಿಯ ಸಹಾಯಕ್ಕೊ ಸೇವೆಗೊ ಅಥವಾ ಅವಳಿಗೊದಗಲಿದ್ದ ಯಾವುದೋ ಭಯಂಕರ ಅನಿಷ್ಟವನ್ನು ತಪ್ಪಿಸುವ ಸಲುವಾಗಿಯೊ ಎದ್ದು ಓಡುತ್ತಲೊ ಇದ್ದನು. ಅದಕ್ಕಾಗಿಯೆ ಅವನು ಎಲ್ಲಿಯೆ ಮಲಗಲಿ ಯಾರಾದರೂ ದೊಡ್ಡವರು ಅವನ ಪಕ್ಕದಲ್ಲಿ ಮಲಗುತ್ತಿದ್ದುದು ಅಭ್ಯಾಸವಾಗಿ ಹೋಗಿತ್ತು. ಈಗಲೂ ತನ್ನ ಪ್ರಶ್ನೆಗೆ ನೇರವಾಗಿ ಉತ್ತರ ಕೊಡದೆ, ತಡೆಗೂ ತಡೆದೂ, ಕಡೆಗೆ ಏನೋ ಒಂದನ್ನು ಹೇಳಬೇಕಲ್ಲಾ ಎಂದು ಹೇಳಿದಂತೆ ಮಾಡಿ, ಅಳತೊಡಗಿದ್ದ ಮಂಜತ್ತೆಯನ್ನು ಕಂಡು ಧರ್ಮುವಿನ ಕಲ್ಪನೆ ಹುಚ್ಚು ಹುಚ್ಚಾಗಿ ಕೆರಳಿತು. ತನ್ನ ತಾಯಿ ಏನೊ ಆಗಿದ್ದಾಳೆ; ಏನೊ ಆಗಿಹೋಗಿದೆ: ಬೆಂಕಿ ಹೊತ್ತಿಸಿಕೊಂಡು ಸತ್ತಳೊ? ಬಾವಿಗೆ ಬಿದ್ದಳೊ? ನೇಣು ಹಾಕಿಕೊಂಡಳೊ? ವಿಷ ತಿಂದಳೊ? ಅಥವಾ ಅಪ್ಪಯ್ಯನನ್ನು ಹುಡುಕಿ ತರುತ್ತೇನೆಂದು ತಾನೊಬ್ಬಳೆ ಹೋಗಿಬಿಟ್ಟಳೊ? - ಅವನೂ ಅಳತೊಡಗಿ, ಬಿಕ್ಕಿಬಿಕ್ಕಿ ತೊದಲುತ್ತಾ "ಯಾ - ಯಾಕೆ ಮಂಜ - ತ್ತೆ, ಅಳ್ತೀಯಾ?" ಎಂದು ಅವಳ ಹತ್ತಿರಕ್ಕೆ ಸರಿದನು. ಅವಳು ತಡೆಯಲಾರದೆ ಮುನ್ನುಗ್ಗಿ ತನ್ನ ಕೆಲಸದ ಕೈ ಒದ್ದೆಯಾಗಿರುವುದನ್ನೂ ಸೀರೆ ಕೊಳೆಯಾಗಿರುವುದನ್ನೂ ಲೆಕ್ಕಿಸದೆ ಅವನನ್ನು ತಬ್ಬಕೊಂಡು, ತನ್ನ ಹೃದಯದಲ್ಲಿ ಸುಪ್ತವಾಗಿದ್ದ ತಾಯ್ತನವನ್ನೆಲ್ಲ ಸೂರೆಗೊಡುವ ರೀತಿಯಲ್ಲಿ ಅವನ ಮುಖದ ಮೇಲೆ ಕೈಯಾಡಿಸಿ, ಸೆರಗಿನಿಂದ ಕಣ್ಣೊರಸುತ್ತಾ

“ಅಳಬ್ಯಾಡ, ತಮ್ಮಯ್ಯಾ” ಎಂದು, ಅವನ ತಾಯಿ ಅವನನ್ನು ಸಂಭೋದಿಸುತ್ತಿದ್ದ ರೀತಿಯನ್ನು ಅನುಕರಿಸಿ, “ನಿಮ್ಮ ಕೋಣೇಲಿ ಇದ್ದಾರೆ ತೋಳಿನಿಂದ ತಬ್ಬಿಕೊಂಡೆ ಕರೆದೊಯ್ದಳು.

ಕೋಣೆಯ ಬಾಗಿಲು ಬಳಿಸಾರಿದಂತೆಲ್ಲ ಮಂಜಮ್ಮನ ಉದ್ವೇಗ ಹಚ್ಚತೊಡಗಿತು: ‘ಅಣ್ಣಯ್ಯ ಹಾಕಿದ್ದ ಬೀಗ ತೆಗೆದಿದ್ದಾನೆಯೊ ಇಲ್ಲವೊ?’ ಎಂದು.

“ಯಾಕತ್ತೆ ನಮ್ಮ ಕೋಣೆ ಬಾಗಿಲಿಗೆ ಬೀಗ ಹಾಕ್ಯದೆ? ಅವ್ವ ಒಳಗಿಲ್ಲೇನು?” ಧರ್ಮು ಕೇಳಿದ ಪ್ರಶ್ನೆಗೆ ಅವಳು ತಲೆಗೆ ಕಲ್ಲೇಟು ಬಿದ್ದಂತೆ ಕತ್ತರಿಸಿದಳು.

ಒಡನೆಯ ಉತ್ತರ ಹೇಳುವ ಸಂಕಟದಿಂದ ತಪ್ಪಿಸಿಕೊಳ್ಳಲೊ ಎಂಬಂತೆ ಮಂಜಮ್ಮ “ನಿನ್ನ ಸಣ್ಣಚಿಗಪ್ಪಯ್ಯನ ಹತ್ತಿರ ಬೀಗದ ಕೈ ಅದೆ. ತರ್ತಿನಿ, ತಡಿ” ಎಂದು ಧರ್ಮುವನ್ನು ಸರಪಳಿಯ ಚಿಲಕಕ್ಕೆ ಬೀಗ ಹಾಕಿ ಭದ್ರಪಡಿಸಿದ್ದ ಅವರ ಕೇಣೆಯ ಬಾಗಿಲೆಡೆಗೆ ನಿಲ್ಲಿಸಿ ಜಗಲಿಗೆ ಓಡಿದಳು.

ನಗೆಯಾಡುತ್ತಾ ತಣ್ಣಗೆ ಕುಳಿತು ಆಳುಗಳಿಗೆ ಬಾಯಿಗೆ ಕೊಡುವ ಮಹಾಕಾರ್ಯದಲ್ಲಿ ಮಗ್ನನಾದಂತಿದ್ದ ತಿಮ್ಮಪ್ಪಹೆಗ್ಗಡೆ ಬೀಗದಕ್ಕೆ ಕೇಳಿದ ತನ್ನ ತಂಗಿಗೆ “ನೋಡು, ಬುಚ್ಚೀ, ಮತ್ತೆ ಅವರೇನಾದ್ರು ಕೆರೆ ಬಾವಿ ಬೀಳ್ತೀನಿ ಅಂತಾ ಹೋದರೋ? ನನ್ನಿಂದ ಮಾತಿಲ್ಲ! ನೀನೆ ಜವಾಬುಗಿತ್ತಿ! ಆ ಮುಂಡಿಗೇಲಿ ಕಡಿನ ಕೋಡಿಗೆ ಸಿಕ್ಕಹಾಕಿದ್ದೆ ಬೀಗದ ಕೈನ!” ಎಂದು ಆ ಜಾಗವನ್ನು ಕಣ್ಣಿಂದಲೆ ನಿರ್ದೇಶಿಸಿ, ಮತ್ತೆ ನಿರುದ್ವಿಗ್ನವಾಗಿ ತನ್ನ ಕೆಲಸದತ್ತ ತಿರುಗಿದನು.

ಬೀಗದ ಕೈ ತೆಗೆದುಕೊಂಡು  ಓಡಿಬಂದು ಅಂಜಮ್ಮ ಬಾಗಿಲು ಬೀಗ ತೆಗೆದಳು. ಧರ್ಮು ಬಾಗಿಲು ದಬ್ಬಿದನು. ಬಾಗಿಲು ತೆರೆಯಲಿಲ್ಲ. ಬಲವಾಗಿ ತಳ್ಳಿದನು, ತೆರೆಯಲಿಲ್ಲ. ಮಂಜಮ್ಮನೂ ತನ್ನೊಂದು ಕೈಯಿಂದಲೆ ಧರ್ಮುಗೆ ನೆರವಾಗಿ ನೂಕಿದಳು. ಆದರೂ ಬಾಗಿಲು ತೆರೆಯಲಿಲ್ಲ.

ಕೋಣೂರು ರಂಗಪ್ಪಗೌಡರ ತಂಗಿ, ಮುಕುಂದಯ್ಯನ ದೊಡ್ಡಕ್ಕ, (ಹಳೆಮನೆಗೆ ಕೊಟ್ಟಿದ್ದ ಹಿರಿಯ ಅಕ್ಕನನ್ನು ದೊಟ್ಟಕ್ಕ ಎಂದೂ ಬೆಟ್ಟಳ್ಳಿಗೆ ಕೊಟ್ಟಿದ್ದ ಕಿರಿಯ, (ಹಳೆಮನೆಗೆ ಕೊಟ್ಟಿದ್ದ ಹಿರಿಯ ಅಕ್ಕನನ್ನು ದೊಡ್ಡಕ್ಕ ಎಂದೂ ಬೆಟ್ಟಳ್ಳಿಗೆ ಕೊಟ್ಟಿದ್ದ ಕಿರಿಯ ಅಕ್ಕನನ್ನು ಪುಟ್ಟಕ್ಕ ಎಂದೂ ಕರೆಯುತ್ತಿದ್ದುದು ವಾಡಿಕೆ). ರಂಗಮ್ಮ, ಹಳೆಮನೆ ಸುಬ್ಬಣ್ಣ ಹೆಗ್ಗಡೆಯವರ ಹಿರಿಯ ಮಗ ದೊಡ್ಡಣ್ಣ ಹೆಗ್ಗಡೆಯವರನ್ನು ಮದುವೆಯಾದದ್ದೆ ಒಂದು ಕಥೆಯಾಗಿತ್ತು. ದೊಡ್ಡಣ್ಣ ಹೆಗ್ಗಡೆಯವರಿಗೆ ರಂಗಮ್ಮ ವೀರಪಣವಾಗಿ ಲಭಿಸಿ, ಹೆಮ್ಮೆಯಿಂದ ಅವರ ಕೈಹಿಡಿದಿದ್ದಳು. ಕೋಣೂರು ರಂಗಪ್ಪಗೌಡರೂ ಹಳೆಮನೆ ದೊಡ್ಡಣ್ಣ ಹೆಗ್ಗಡೆಯವರೂ (ಆಗಿನ್ನೂ ಪಾಲಾಗಿರಲಿಲ್ಲ) ಆಗತಾನೆ ಪ್ರಾಯಕ್ಕೆ ಬಂದ ಯುವಕರಾಗಿದ್ದಾಗ ಒಮ್ಮೆ ಸಾರಿಕೆ ಬೇಟೆಗೆ ಹೋಗಿದ್ದರಂತೆ. ದಟ್ಟಕಾಡಿನ ನಡುವೆ ಒಂದು ಕುಳುಂಪೆಯ ಪಕ್ಕದ ಹೊದರಿನಲ್ಲಿ, ಆಗತಾನೆ ಹುಟ್ಟಿದುವೋ ಅಥವಾ ಹುಟ್ಟಿ ಕೆಲವೆ ಗಂಟೆಗಳಾಗಿದ್ದಿಬಹುದೋ ಗೊತ್ತಿಲ್ಲ, ಮೂರು ಪುಟ್ಟ ಹುಲಿಮರಿಗಳಿದ್ದುವಂತೆ.ತಾಯಿ ಹುಲಿ ಅಲ್ಲೆಲ್ಲಿಯೂ ಸಮೀಪದಲ್ಲಿದ್ದುದು ಗೋಚರಿಸಲಿಲ್ಲ. ದೊಡ್ಡಣ್ಣ  ಹೆಗ್ಗಡೆಯವರು ಮರಿಗಳನ್ನು ಮನೆಗೆ ಎತ್ತಿಕೊಂಡು ಹೋಗೋಣ ಎಂದರಂತೆ.  ರಂಗಪ್ಪಗೌಡರು ‘ಖಂಡಿತ ಬೇಡ, ತಾಯಿಹುಲಿ ನಮ್ಮಿಬ್ಬರನ್ನೂ ಸಿಗಿದುಹಾಕಿಬಿಡ್ತದೆ’ ಎಂದರಂತೆ. ‘ನೀನು ಬರಿ ಪುಕ್ಕಲ!’ ಎಂದು ಮೂದಲಿಸಿದರಂತೆ ದೊಡ್ಡಣ್ಣ

ಹೆಗಡೆ. “ನೀನು ಭಾರಿ ಧೈರ್ಯಗಾರ?” ಎಂದು ಅಣಕಿಸಿದರಂತೆ ರಂಗಪ್ಪಗೌಡರು. ‘ನಾನು ಮನೆಗೆ ತಗೊಂಡೇ ಹೋದರೆ ಏನು ಕೊಡ್ತೀಯಾ?’ ಎಂದರಂತೆ ದೊಡ್ಡಣ್ಣ ಹೆಗಡೆ. ‘ನೀ ಕೇಳಿದ್ದು ಕೊಡ್ತೀನೊ!’ ಎಂದರು ರಂಗಪ್ಪಗೌಡರು. ‘ಕೈಮೇಲೆ ಕೈಯಿಟ್ಟು ಭಾಷೆ ಕೊಡು!’ ಎಂದು ಮುಡಿಗೆಯಿಟ್ಟು ದೊಡ್ಡಣ್ಣಹೆಗ್ಗಡೆ ಚಾಚಿದ ಬಲಅಂಗೈಯ ಮೇಲೆ ರಂಗಪ್ಪಗೌಡರು ತಮ್ಮ ಬಲಗೈಯನ್ನು ಅಪ್ಪಳಿಸಿ ಶಪಥಮಾಡಿದರಂತೆ!

ದೊಡ್ಡಣ್ಣಹೆಗ್ಗಡೆ ಮೂರು ಹುಲಿಮರಿಗಳನ್ನೂ ಕಂಬಳಿಯೊಳಗಿಟ್ಟುಕೊಂಡು ಮನೆಯ ಕಡೆಗೆ ವೇಗವಾಗಿಯೆ ಹೊರಟರಂತೆ. ಅವರು ತಕ್ಕಮಟ್ಟಿಗೆ ದೂರವಾಗಿಯೆ ಸಾಗಿದ್ದರಂತೆ. ಹಿಂದೆ ದೂರದಲ್ಲಿ ಕೇಳಿಸಿತಂತೆ ತಾಯಿ ಹುಲಿಯ ಭಯಂಕರ ಘರ್ಜನೆ!

“ಕೆಟ್ಟೆವೋ, ದೊಡ್ಡಣ್ಣ! ಬಿಟ್ಟು ಬಿಡೋ ಹುಲಿಮರೀನ! ಓಡಿಹೋಗಾನ!” ಎಂದು ಕೂಗಿ ಹೇಳಿ ಓಡತೊಡಗಿದರಂತೆ ರಂಗಪ್ಪಗೌಡರು.

“ನೀನೇನು ಗಂಡಲ್ಲೇನೋ? ನಿಲ್ಲೋ! ಗೌಡನ ಹಿಂದೆ ಓಡೋನಲ್ಲ ಕಣೋ ಹೆಗ್ಗಡೆ!” ಎಂದು ದೊಡ್ಡಣ್ಣಹೆಗ್ಗಡೆ ತನ್ನ ಜೋಡುನಲ್ಲಿ ಕೇಪಿನ ಕೋವಿಯನ್ನು ಅಣಿಮಾಡಿಕೊಂಡು, ಗರ್ಜನೆ ಬರುವ ಕಡೆ ತಿರುಗಿ ತಿರುಗಿ ನೋಡುತ್ತಾ, ಆದಷ್ಟು ಬೇಗನೆ ನಡೆಯತೊಡಗಿದರಂತೆ.

ಧೈರ್ಯಕ್ಕಲ್ಲದಿದ್ದರೂ ದಾಕ್ಷಿಣ್ಯಕ್ಕೆ ಸಿಕ್ಕಿದಂತಾಗಿ ಓಡುವುದನ್ನು ನಿಲ್ಲಿಸಿ ರಂಗಪ್ಪಗೌಡರೂ ತಮ್ಮ ಒಂಟಿನಲ್ಲಿ ಕೇಪಿನ ಕೋವಿಯನ್ನು ಅಣಿಮಾಡಿಕೊಂಡು, ಬಾವನ ಸಂಗಡವೆ ನಡೆಯತೊಡಗಿದರು, ದೇವರು ಮಾಡಿಸಿದ್ದಾಗಲಿ ಎಂದುಕೊಂಡು, ಬಾವನ ಸಂಗಡವೆ ನಡೆಯತೊಡಿದರು, ದೇವರು ಮಾಡಿಸಿದ್ದಾಗಲಿ ಎಂದುಕೊಂಡು.

ಸ್ವಲ್ಪ ಹೊತ್ತಿನೊಳಗಾಗಿಯೆ ಹೆಣ್ಣುಹುಲಿ ಇವರನ್ನು ಹಿಂಬಾಲಿಸಿ ಬಂದು ಮೇಲೆ ಬೀಳಲು ನುಗ್ಗಿತಂತೆ. ಜೋಡುನಲ್ಲಿಯ ಎರಡು ಈಡುಗಳೂ ಒಂಟಿನಲ್ಲಿಯ ಒಂದು ಈಡೂ ಹಾರಿ, ಹುಲಿಗೆ ಮೂರು ಗುಂಡೂಗಳೂ ತಗುಲಿ ಪಲ್ಟಿಹೊಡೆಯಿತಂತೆ! ಆದರೆ ಪೆಟ್ಟು ಅಂತಹ ಆಯಕ್ಕೆ ಬಿದ್ದಿರಲಿಲ್ಲವಾದ್ದರಿಂದ ಮತ್ತೆ ತೆವಳಿಬಂದೇ ಇವರ ಮೇಲೆ ಹಾರಿತಂತೆ. ಆಗ ದೊಡ್ಡಣ್ಣಹೆಗ್ಗಡೆ ತನ್ನ ಸೊಂಟಕ್ಕೆ ತಗುಲಿಸಿದ್ದ ಉದ್ದಗತಿಯಿಂದ ಹುಲಿಯ ಮಂಡೆಗೆ ಹೊಡೆದು ಬೀಳಿಸಿದರಂತೆ. ಆದರೂ ಹೋರಾಟದಲ್ಲಿ ಹುಲಿಯ ಒಂದು ಕೈ - ಅವರ ಹೆಗಲಿನ ಬಳಿ ಬೆನ್ನಿಗೆ, ಬಗೆದುಹಾಕಿದಂತೆ ದೊಡ್ಡ ಗಾಯವಾಗಿ. ರಕ್ತ ಸುರಿದು ರಾಣಾರಂಪವಾಯಿತಂತೆ! ( ಆ ಗಾಯದ ಕಲೆಯನ್ನೆ ಕುರಿತು ಐತ ಧರ್ಮುಗೆ ಹೇಳಿದ್ದು, ಧರ್ಮುವ ಅಪ್ಪಯ್ಯನನ್ನು ಈ ಕಲೆಯಿಂದಲೂ ತಾನು ಗುರುತಿಸಬಲ್ಲೆ ಎಂದು.)

ಹುಲಿಯ ಮರಿಗಳನ್ನೇನೊ ಮನೆಗೆ ತಂದರು. ಆದರೆ ಅವು ಬದುಕದೆ ಹೋದುವು. ಕೆಲವು ತಿಂಗಳೆ ಬೇಕಾಯಿತು, ದೊಡ್ಡಣ್ಣಹೆಗ್ಗಡೆಯ ಗಾಯ ಮಾಯುವುದಕ್ಕೆ.

ಈ ಪ್ರಸಂಗ ಮುಗಿದ ಮೇಲೆ, ಒಂದು ದಿನ ದೊಡ್ಡಣ್ಣ ಕೋಣೂರಿನ ಮಾಲಾಯಕ್ಕೆ ನಂಟನಾಗಿ ಹೋಗಿದ್ದಾ, ಊಟದ ಸಮಯದಲ್ಲಿ, ಇಕ್ಕುವುದಕ್ಕೆ ಬಂದಿದ್ದ ಹೆಣ್ಣುಗಳ ಮಧ್ಯೆ ರಂಗಮ್ಮನನ್ನು ನೋಡಿ. ಪಕ್ಕದಲ್ಲಿಯೆ ಊಟಕ್ಕೆ ಕುಳಿತಿದ್ದ

ರಂಗಪ್ಪನಿಗೆ "ಏನೋ ಬಾವ, ನಾನೇನೂ ಹುಲೀಮರೀನ ಮನೆಗೆ ತಂದೇಬಿಟ್ಟೆ. ನೀನು ಮಾತ್ರ ಕೈಮೇಲೆ ಕೈಹೊಡೆದು ಕೊಟ್ಟಭಾಷೇನೆ ಮರತೇಬಿಟ್ಟೆ!" ಎಂದನಂತೆ.

"ನೀ ಕೇಳಲಿಲ್ಲ ನಾ ಕೊಡಲಿಲ್ಲ!" ಎಂದು, ರಂಗಪ್ಪ ಪಂಕ್ತಿಯಲ್ಲಿ ಊಟಕ್ಕೆ ಕುಳಿತಿದ್ದ ನಂಟರಿಗೆಲ್ಲ ಕಥೆ ಹೇಳಿದನಂತೆ.

ನಂಟರೆಲ್ಲರೂ "ಮತ್ತೆ ಇವತ್ತೆ ಕೇಳಿಬಿಡಲಿ. ನಾವೂ ಎಲ್ಲ ಸಾಕ್ಷಿನೆರೆದ ಹಾಂಗೆಯೂ ಆಗ್ಯದೆ" ಎಂದರಂತೆ.

ರಂಗಪ್ಪಗೌಡನಿಗೆ 'ಏನು ಕೇಳಿಬಿಡುತ್ತಾನೊ ಬಾವ' ಎಂದು ಗಿದಿಲು. ಆದರೆ ದೊಡ್ಡಣ್ಣಹೆಗ್ಗಡೆ ಅವನ ಕಿವಿಯಲ್ಲಿ ತನ್ನ ವೀರಪಣವನ್ನು ಉಸುರಿದಾಗ, ಅವನ ಆನಂದಕ್ಕೆ ಪಾರವೇ ಇಲ್ಲವೆಂಬಂತೆ ಅಟ್ಟಹಾಸಮಾಡಿ ನಕ್ಕನು: ಯಾವುದನ್ನು ಕೊಡಬೇಕಾಗಿತ್ತೋ ಅದಕ್ಕೆ ನೂರುಮಾಡಿ ತಾನೇ ಪಡೆದಂತಾಗಿತ್ತು.

ಊಟಕ್ಕೆ ಕೂತಿದ್ದ ನಂಟರೆಲ್ಲ "ಏನು? ಏನು?" ಎಂದು ಕುತೂಹಲದಿಂದ ಕೇಳಿದರು.

ರಂಗಪ್ಪನು ನಗುತ್ತಾ "ಹೆಣ್ಣುಹುಲಿ ಹೊಡೆದವನು ನನ್ನ ಬಾವ ಇನ್ನೇನು ಕೇಳ್ತಾನೆ?" ಎಂದು ಹಾಸ್ಯಮಾಡಿ, ಓಡಿಸಲು ಬಂದಿದ್ದ ತನ್ನ ತಂಗಿ ರಂಗಮ್ಮನ ಕಡೆ ಇಂಗಿತವಾಗಿ ನೋಡಿದ್ದನು. ಎಲ್ಲರಿಗೂ ವಿಷಯ ಹೊಳೆದು, ನಗೆಯ ಘೋಷದಿಂದ ಭೋಜನಶಾಲೆ ಭೋರ್ಗರೆದಂತಾಗಿತ್ತು. ರಂಗಮ್ಮಗೂ ಗುಟ್ಟು ಹೊಳೆದು, ನಾಚಿ, ಕೆಂಪೇರಿ, ಬೇಗ ಬೇಗನೆ ಹೊರಟು ಹೋಗಿದ್ದಳು ಮತ್ತೆ ಬಡಿಸಲು ಬಂದಿರಲಿಲ್ಲಂತೆ ಆವೊತ್ತು!

ಸ್ವಭಾವತಃ ಹಿಡಿತದ ಕೈಯವರಾದರೂ ಹಿರಿಯ ಮಗನ ಮದುವೆಯನ್ನು ವಿಜೃಂಭಣೆಯಿಂದಲೆ ನೆರವೇರಿಸಿದ್ದರು ಹಳೆಮನೆ ಸುಬ್ಬಣ್ಣಹೆಗ್ಗಡೆಯವರು. ಆದರೆ ಅವರ ಹುಟ್ಟುಗುಣವಾದ ಉಳಿತಾಯದ ಮನೋಧರ್ಮ, ಅದೇ ಸಮಯದಲ್ಲಿಯೆ ಹೆಣ್ಣು ಕೊಟ್ಟು ಹೆಣ್ಣು ತರುವ ಉಪಾಯವನ್ನೂ ಕಂಡುಹಿಡಿದಿತ್ತು. ತಮ್ಮ ಮಗಳು ದೊಡ್ಡಣ್ಣಹೆಗ್ಗಡೆಯ ತಂಗಿಯನ್ನು ಕೋಣೂರು ರಂಗಪ್ಪಗೌಡರಿಗೆ ಧಾರೆಯೆರೆಯುವ ಶುಭಕಾರ್ಯವನ್ನೂ ಜೊತೆಜೊತೆಗೆ ನೆರವೇರಿಸಿ. ಆ ಮದುವೆಯ ವಿಜೃಂಭಣೆಗಾಗಿ ಅವರು ಧಾರಾಳವಾಗಿ ಖರ್ಚುಮಾಡಿದಂತೆ ತಮ್ಮ ಗತಿಸಿದ್ದ ಅಣ್ಣನ ಮಗ ಶಂಕರಹೆಗ್ಗಡೆಯ ಮತ್ತು ಅವನ ತಂಗಿ ಸಿಂಬಾವಿ ಭರಮೈಹೆಗ್ಗಡೆಗೆ ಕೊಟ್ಟಿದ್ದ ಜಟ್ಟಮ್ಮನ ಮದುವೆಗೂ ಖರ್ಚುಮಾಡಲಿಲ್ಲ ಎಂಬುದೂ ಮುಂದೆ ಮನೆ ಪಾಲಾಗುವುದಕ್ಕೆ ಕಾರಣವಾದ ಮನಸ್ತಾಪಕ್ಕೆ ಬಿತ್ತಿದ್ದ ಒಂದು ಬೀಜಪ್ರಾಯವಾಗಿತ್ತು.

ರಂಗಮ್ಮ ಮತ್ತು ದೊಡ್ಡಣ್ಣ ಹೆಗ್ಗಡೆಯವರ ದಾಂಪತ್ಯಜೀವನ ಆ ಹತ್ತೊಂಬತ್ತನೆ ಶತಮಾನದ ತುದಿಗಾಲದಲ್ಲಿ ಮಲೆನಾಡಿನ ಶ್ರೀಮಂತ ಅವಿಭಕ್ತ ಕುಟುಂಬದಲ್ಲಿ ಸಾಗುತ್ತಿದ್ದ ಇತರ ಅನೇಕರ ದಾಂಪತ್ಯ ಜೀವನದಂತೆ ಉಬ್ಬು ತಗ್ಗು ಏರು ಇಳಿತಗಳಿಂದ ಕೂಡಿ ಸಾಗಿತ್ತು, ತಕ್ಕಮಟ್ಟಿಗೆ ಸುಖಮಯವಾಗಿ, ನೆಮ್ಮದಿಯಿಂದಲೆ ಎಂದು ಹೇಳಬಹುದಾದಷ್ಟು. ರಂಗಮ್ಮ ಧರ್ಮುವನ್ನು ಹೊಟ್ಟೆಯಲ್ಲಿ ಹೊತ್ತು ಗರ್ಭಿಣಿಯಾಗಿದ್ದಾಗ ಆಕೆಗೆ ದೀರ್ಘಕಾಲದ ಅಸ್ವಸ್ಥತೆಯಾಯಿತು. ಪದ್ಧತಿಯಂತೆ ದೇವರು ಕೇಳುವುದು, ಗಣ ಬರಿಸುವುದು, ಕಣ್ಣಾ ಪಂಡಿತರಂತಹರಿಂದ ಗಿಡಮೂಲಿಕೆ ಔಷಧ ಕೊಡಿಸುವುದು, ಹರಕೆ ಹೂರುವುದು, ದೆಯ್ಯಗಳಿಗೆ ಕೋಳಿ ಕುರಿ ಆಯಾರ ಕೊಡಿಸುವುದು ಎಲ್ಲ ತರಹದ ಚಿಕಿತ್ಸೆ ನಡೆಯಿತು. ಆದರೆ ಏನೂ ಉತ್ತಮ ಆಗಲಿಲ್ಲ. ಆಗ ದೊಡ್ಡಣ್ಣಹೆಗ್ಗಡೆ, ನಿಮಿತ್ತ ಹೇಳುವುದರಲ್ಲಿ

ಹೆಸರುವಾಸಿಯಾಗಿದ್ದ, ಕಲ್ಲೂರು ಜೋಯಿಸರ ಹತ್ತಿರಕ್ಕೆ ಹೋದರು. ಅವರು ಜಾತಕ ನೋಡಿ, ಹೆಗ್ಗಡೆಗೆ ಅಷ್ಟೇನೂ ಅರ್ಥವಾಗದ 'ಕುಜರಾಹು ಸಂಧಿ' 'ಗುರು ಅಲಂಕಾರಕರ ಕ್ರೂರ ಕೂಟ' ಇತ್ಯಾದಿ ಜೋತಿಷ್ಯ ಹೇಳಿ, ರಂಗಮ್ಮಗೆ ಒಂದು ಕೆಟ್ಟ ಕಂಟಕವಿದೆಯೆಂದೂ ಮಗುವಿನ ತಾಯಿಯಾಗಲಿ ತಂದೆಯಾಗಲಿ ಅದಕ್ಕೆ ತುತ್ತಾಗಬಹುದೆಂದೂ, ಹೊನ್ನಿನ ಗೋದಾನ ಅಥವಾ ತೀರ್ಥಯಾತ್ರೆಯಂತಹ ದೊಡ್ಡ ಹರಕೆ ಹೊತ್ತು ನೆರವೇರಿಸುವ ಪಕ್ಷದಲ್ಲಿ ವಿಧಿಯ ಕ್ರೌರ್ಯ ಸೌಮ್ಯತರವಾಗಬಹುದೆಂದೂ ಸೂಚಿಸಿದರು.

ಅನುಭವದಿದಂದ ತನ್ನ ತಂದೆಯ ಕಾರ್ಪಣ್ಯವನ್ನರಿತಿದ್ದುದರಿಂದಲೂ, ತನಗೂ ಪ್ರವಾಸ ರೂಪದ ಸಾಹಸದಲ್ಲಿ ಆಸಕ್ತಿ ಹುಟ್ಟಿದುದರಿಂದಲೂ ಬೊನ್ನಿ ಗೋದಾನದ ಸೂಚನೆಯನ್ನು ವಿಸರ್ಜಿಸಿ, ತೀರ್ಥಯಾತ್ರೆಗೆ ಮನಸ್ಸುಮಾಡಿ, ದೊಡ್ಡಣ್ಣಹೆಗ್ಗಡೆ ತಿರುಪತಿ ಯಾತ್ರೆ ಮಾಡುವುದಾಗಿ ಹರಕೆ ಹೊತ್ತರು. ಹೆಂಡತಿಗೂ ವಿಷಯವೆಲ್ಲವನ್ನೂ ತಿಳಿಸಿ ಆಕೆಯನ್ನೂ ಒಪ್ಪಿದರು. ಆ ಶ್ರದ್ಧಾಭಕ್ತಿಗಳ ಮಹಿಮೆಯಿಂದಲೋ ಔಷಧೋಪಚಾರಗಳ ಪ್ರಭಾವದಿಂದಲೋ ರಂಗಮ್ಮನಿಗೆ ರೋತೆ ತಪ್ಪಿ, ಕ್ಷೇಮದಿಂದಲೆ ಗಂಡುಮಗುವನ್ನು ಹೆತ್ತಳು. ಧರ್ಮು ನಾಲ್ಕನೆಯ ವರ್ಷದವನಾಗಿದ್ದಾಗ ಆ ಪ್ರಾಂತದ ಒಂದು ತಂಡ ತಿರುಪತಿಯಾತ್ರೆಗೆ ಹೊರಡಲು ಸಿದ್ಧತೆ ಮಾಡಿತು. ದೊಡ್ಡಣ್ಣಹೆಗ್ಗಡೆಯೂ ದೇವರಿಗೆ ಒಪ್ಪಿಸುವ ತಮ್ಮ ಮನೆಯ ಕಾಣಿಕೆಯೊಡನೆ ಯಾತ್ರಿಕರೊಡನೆ ಹೊರಟರು.

ಹೋದವರು ಹಿಂದಕ್ಕೆ ಬರಲಿಲ್ಲ.

ಜ್ಯೋತಿಷ್ಯ ನೋಡಿಸಿ ಅದರಂತೆ ಆಚರಿಸುವವರಿಗೆ ಎಲ್ಲ ಕಾಲದಲ್ಲಿಯೂ ಎಲ್ಲೆಲ್ಲಿಯೂ ಏನು ಗತಿಯಾಗುವುದೋ ಅದೇ ಗತಿ ಆಯಿತು ದೊಡ್ಡಣ್ಣ ಹೆಗ್ಗಡೆಯವರಿಗೂ. ಅದರಿಂದ ಉದ್ಬುದ್ಧವಾಗುವ ಶ್ರದ್ಧಾಶಕ್ತಿಯ ಅಂಶದಿಂದ ಒಳ್ಳಿತಾದರೂ ಅವೈಚಾರಿಕ ಮತ್ತು ಅವೈಜ್ಞಾನಿಕವಾದ ಅದರ ಕ್ರಿಯಾಚಾರದ ಅಂಶವನ್ನು ಅಂಧಹೃದಯದಿಂದ ಅನುಸರಿಸುವುದರಿಂದ ಹಾನಿ ತಪ್ಪುವುದಿಲ್ಲ. ಜೋಯಿಸರು ಸೂಚಿಸಿದ್ದ ಅಮಂಗಳ ಪರಿಹಾರದ ಮಾರ್ಗವೆ ಅಮಂಗಳಕಾರಣವಾಗಿ ಪರಿಣಮಿಸಿಬಿಟ್ಟಿತು. ಅವರೇನೊ 'ತಾಯಿಯಾಗಲಿ ತಂದೆಯಾಗಲಿ ವಿಪತ್ತು' ಎಂದು ಹೇಳಿದ್ದ ತಮ್ಮ 'ನಿಮಿತ್ತ'ದ ಸತ್ಯವನ್ನೆ ಸಮರ್ಥಿಸಿಕೊಂಡಿದ್ದರು, ದೊಡ್ಡಣ್ಣಗೆ ಒದಗಿದ್ದ ಆಪತ್ತಿನಲ್ಲಿ!

ಹೋದ ಯಾತ್ರಿಕರಲ್ಲಿ ಹಿಂತಿರುಗದಿದ್ದವರು ದೊಡ್ಡಣ್ಣಹೆಗಡೆ ಒಬ್ಬರೆ ಆಗಿರಲಿಲ್ಲ. ತಿರುಪತಿ ತಿಮ್ಮಪ್ಪ ಅನೇಕ ಮನೆಗಳಿಂದ ಕಾಣಿಕೆಯನ್ನು ಮಾತ್ರವಲ್ಲದೆ ಜೀವಕಾಣಿಕೆಯನ್ನೂ ತೆಗೆದುಕೊಂಡಿದ್ದನು.

ಆದರೆ ದೊಡ್ಡಣ್ಣಹೆಗ್ಗಡೆ ತೀರಿಕೊಂಡ ವಿಚಾರದಲ್ಲಿ ಒಮ್ಮತವಿರಲಿಲ್ಲ: ಮೊದಲು ಹಿಂದಿರುಗಿದ್ದ ತಂಡದವರು - ಅವರು ವಾಂತಿಭೇದಿಯಾಗಿ ಸಾಯುವುದರಲ್ಲಿದ್ದರೆಂದೂ ತಾವು ಶುಶ್ರೂಷೆ ಮಾಡುವುದಾಗಿ ಹೇಳಿದರೂ ಒಪ್ಪದೆ, ಸಾಂಕ್ರಾಮಿಕ ರೋಗದಿಂದ ತಮ್ಮೆಲ್ಲರನ್ನೂ ಪಾರುಮಾಡುವುದಕ್ಕೋಸ್ಕರವೆ, ತಮ್ಮನ್ನು ಬಲಾತ್ಕಾರವಾಗಿ ಊರಿಗೆ ಬೇಗ ಹಿಂದಿರುಗುವುದಕ್ಕೆ ಹೇಳಿ ಕಳುಹಿಸಿಬಿಟ್ಟರೆಂದೂ, ತಮ್ಮ ಹೆಂಡತಿ ರಂಗಮ್ಮಗೆ ತಮ್ಮ ಕೊನೆಯ ಕಾಣಿಕೆಯಾಗಿ ಕೊಡಲು ಹೇಳಿ, ಒಂದು ತಿರುಪತಿ ತಿಮ್ಮಪ್ಪನ ಪಟವನ್ನು ಕೊಟ್ಟಿದ್ದಾರೆಂದೂ ವರದಿಯನ್ನೊಪ್ಪಿಸಿ, ಆ ಪಟವನ್ನು ಸುಬ್ಬಣ್ಣಹೆಗ್ಗಡೆಯವರ ಕೈಲಿ ದೊಡ್ಡಣ್ಣಹೆಗ್ಗಡೆಯವರ ಸಹಧರ್ಮಿಣಿಗೆ ಒಪ್ಪಿಸುವಂತೆ ಹೇಳಿ, ಕೊಟ್ಟಿದ್ದರು. ತರುವಾಯ ಬಂದ ಎರಡನೆ ತಂಡದವರು - ಅವರು ತೀರಿ ಹೋದರೆಂದೇ ಹೇಳಿದ್ದರು. ಮೂರನೆ ತಂಡದವರು -

ಗೋಸಾಯಿಗಳು ಔಷಧಿಕೊಟ್ಟು ಅವರನ್ನು ಬದುಕಿಸಿ ನೋಡಿಕೊಳ್ಳುತ್ತಿದ್ದಾರೆಂದೂ ಸಂಪೂರ್ಣ ಗುಣವಾಗಿ ತಿರುಗಾಡಲು ಸಾಮರ್ಥ್ಯ ಬಂದಮೇಲೆ ಊರಿಗೆ ಕಳುಹಿಸುತ್ತಾರೆಂದೂ ಹೇಳಿದ್ದರು. ಆಮೇಲೆ ಬಿಡಿಬಿಡಿಯಾಗಿ ಬಂದಿದ್ದ ಇತರ ಯಾತ್ರಿಕರು - ತೀರ್ಥಹಳ್ಳಿಯ ದಾಸಯ್ಯನೂ ಅವರೊಳಗೊಬ್ಬನಾಗಿದ್ದನು, - ದೊಡ್ಡಣ್ಣಹೆಗ್ಗಡೆಗೆ ವೈರಾಗ್ಯ ಬಂದು ಸನ್ಯಾಸಿಯಾಗಿ ಹೋಗಿಬಿಟ್ಟನೆಂದೂ, ಗೋಸಾಯಿಗಳು ಮದ್ದುಕೊಟ್ಟು ಅವನಿಗೆ ತನ್ನ ಹಿಂದಿನದೆಲ್ಲ ಮರೆಯುವಂತೆಮಾಡಿ ತಮ್ಮ ಸೇವೆಗೆ ಇಟ್ಟುಕೊಂಡಿದ್ದಾರೆಂದೂ ನಾನಾ ವಿಧವಾದವಾರ್ತೆ ಹಬ್ಬಿಸಿದ್ದರು. ಅಲ್ಲದೆ ಅವರನ್ನು ಪತ್ತೆಹಚ್ಚಿ ಕರೆತರುವುದಾಗಿ ಭರವಸೆಕೊಟ್ಟು ಅನೇಕರು ಅನೇಕ ರೀತಿಯಿಂದ ಸುಬ್ಬಣ್ಣಹೆಗ್ಗಡೆಯವರಿಂದಲೂ ರಂಗಮ್ಮನಿಂದಲೂ ಇತರ ಹತ್ತಿರದ ಬಂಧು ಬಾಂಧವರಿಂದಲೂ ಹಣ ಹೊನ್ನು ಸುಲಿಗೆಮಾಡಿಯೂ ಇದ್ದರು.

ಧರ್ಮುವ ತಾಯಿ. ರಂಗಮ್ಮ ತನಗಾಗಿ ಯಾತ್ರೆ ಕೈಕೊಂಡಿದ್ದ ತನ್ನ ಗಂಡಗೆ ಒದಗಿದ್ದ ವಿಪತ್ತನ್ನು ಕೇಳಿ ಹೌಹಾರಿದಳು. ಎದೆ ಬೆಂದಳು; ದೆವ್ವ ದೇವರು ಮನುಷ್ಯ ಎಂಬ ತಾರತಮ್ಯವಿಲ್ಲದೆ ಎಲ್ಲರಿಗೂ ಹೇಳಿಕೊಂಡಳು, ಬೇಡಿಕೊಂಡಳು, ಅಂಗಲಾಚಿದಳು, ಕಾಣಿಕೆ ತೆತ್ತಳು, ತನ್ನ ಗಂಡನನ್ನು ಹೇಗಾದರೂ ಮಾಡಿ ಹುಡುಕಿ ಹಿಂದಕ್ಕೆ ತನ್ನಿ ಎಂದು. ತನ್ನ ಗಂಡನ ಕೊನೆಯ ಕಾಣಿಕೆಯೆಂದು ಕಳಸಿಕೊಟ್ಟಿದ್ದ ತಿರುಪತಿ ತಿಮ್ಮಪ್ಪನ ಪಟವನ್ನು ತಮ್ಮ ಕೋಣೆಯಲ್ಲಿಟ್ಟು ಹೂಮುಡಿಸಿ ಧೂಪಹಾಕಿ ಅಡ್ಡಬಿದ್ದು ಬಾಯಿಗೆ ಬಂದಂತೆ ವಾಚಾಮಗೋಚರವಾಗಿ ಶಪಿಸಿ ಬಯ್ಯುವ ಪೂಜೆಯೂ ಸಾಗುತ್ತಿತ್ತು!

ಒಂದು ವರುಷವಾಯ್ತು. ಎರಡೂ ಆಯಿತು. ಕೆಲವರು ದೊಡ್ಡಣ್ಣ ಬದುಕಿದ್ದರೆ ಬರದೆ ಇರುತ್ತಿದ್ದರೇ? ಅವರು ಸತ್ತದ್ದೆ ನಿಜವಿರಬೇಕೆಂದು ಹೇಳಿ, ಉತ್ತರ ಕ್ರಿಯಾದಿಗಳನ್ನು ಮಾಡಲು ತಗಾದೆ ಮಾಡಲಾರಂಭಿಸಿದರು. ಕೆಲವು ಕಂದಾಚಾರದ ಸಂಪ್ರದಾಯಬದ್ಧ ಮುದಿ ವಿಧವೆಯರಂತೂ ರಂಗಮ್ಮನ ಐದೆತನದ ಚಿಹ್ನೆಗಳನ್ನು ಸಹಿರಲಾರದೆ ಅಸಹನೀಯವಾಗಿ ಮಾತಾಡಿಕೊಳ್ಳಲಾರಂಭಿಸಿದರು. ರಂಗಮ್ಮನ ಹೃದಯಕ್ಕೆ ತನ್ನ ಗಂಡ ಸತ್ತದ್ದನ್ನು ಒಪ್ಪಿಕೊಳ್ಳಲು ಸಾಧ್ಯವಾಗಲಿಲ್ಲ. ಅದು ಸಾಧ್ಯವಾಗಿದ್ದರೆ ಒಡನೆಯೆ ಅವಳು ತನ್ನ ಆಯ್ದೆತನದ ಚಿನ್ಹೆಗಳನ್ನು ವಿಸರ್ಜಿಸುವುದಕ್ಕೆ ಇತರರಿಗೆ ಅವಕಾಶಕೊಡುವುದಕ್ಕೆ ಮುನ್ನವೆ ಕೆರೆಯನ್ನೊ ನೇಣನ್ನೊ ಆಶ್ರಯಿಸಿರುತ್ತಿದ್ದಳು.

ಅವಳು ಆಶೆನಿರಾಶೆಗಳ ಉರಿಯಲ್ಲಿ ಬೆಂದು ಒಮ್ಮೊಮ್ಮೆ ತಲೆ ಕೆಟ್ಟಳಂತೆ ವರ್ತಿಸಲೂ ಪ್ರಾರಂಭಮಾಡಿದಳು. ಕೋಣೂರು ರಂಗಪ್ಪಗೌಡರು ತಮ್ಮ ತಾಯಿಯೊಡನೆ ಹಳೆಮನೆಗೆ ಬಂದು ನಾನಾ ವಿಧವಾಗಿ ಬೋಧಿಸಿ ತಂಗಿಯನ್ನು ತವರಿಗೆ ಕರೆದೊಯ್ದರು. ಅಲ್ಲಿ ಸ್ವಲ್ಪ ಕಾಲ ಶಮನವಾದಂತಿದ್ದ ಉನ್ಮಾದ ಇದ್ದಕ್ಕಿದ್ದಹಾಗೆ ಉಲ್ಬಣಗೊಂಡಿತು. ರಂಗಮ್ಮ ತಾನು ಗಂಡನ ಮನೆಗೆ ಹೋಗಬೇಕೆಂದೂ ತಮ್ಮ ಕೋಣೆಯಲ್ಲಿರುವ ತಿಮ್ಮಪ್ಪ ಕರೆಯುತ್ತಿದ್ದಾನೆಂದೂ ಹೇಳಿ ಹಳೆಮನೆಗೆ ಹಿಂತಿರುಗಿದಳು.

ದಿನದಿನದ ಕೆಲಸಕಾರ್ಯಗಳಲ್ಲಿ ತೊಡಗಿದರೆ ಮನಸ್ಸು ಒಂದು ಹಿಡಿತಕ್ಕೆ ಬರಬಹುದೆಂದು ಭಾವಿಸಿ, ಅದುವರೆಗೆ ಅವಳಿಗೆ ಮಾಡಗೊಡದಿದ್ದ ಅಡುಗೆ ಕೆಲಸವನ್ನೂ ಕೊಟ್ಟು ನೋಡಿದರು. ಆಗಲೂ ಮಂಜಮ್ಮಗೆ ಹೆದರಿಕೆ, ಎಲ್ಲಿ ಸೀರೆಗೆ ಬೆಂಕಿ ಹೊತ್ತಿಸಿಕೊಂಡೊ ಮೈಮೇಲೆ ಕುದಿ ಎಸರು ಹಾಕಿಕೊಂಡೊ ಅತ್ತಿಗೆಮ್ಮ ಅನಾಹುತಕ್ಕೆ ಒಳಗಾದಾರು ಎಂದು.

ದುಃಖಾತಿಶಯದಿಂದ ಮನಸ್ಸು ಸೀಳುಸೀಳಾಗಿ ಹೋದಂತಿದ್ದ ರಂಗಮ್ಮ ಕೆಲವು ದಿನ ಬುದ್ಧಿ ಸರಿಯಾದವಳಂತೆ ನಡೆದುಕೊಳ್ಳುತ್ತಿದ್ದು ಹಠಾತ್ತನೆ ಹುಚ್ಚುಹುಚ್ಚಾಗಿ ನಡೆದುಕೊಳ್ಳುತ್ತಿದ್ದರು. ಆದ್ದರಿಂದ ಯಾವುದರಲ್ಲಿಯೂ ಅವಳನ್ನು ನೆಚ್ಚುವಹಾಗಿರಲಿಲ್ಲ.ಸದಾ ಒಂದು ಕಣ್ಣು ಇಟ್ಟಿರಲೆಬೇಕಾಗುತ್ತಿತ್ತು ಅವಳ ಮೇಲೆ ಮನೆಯವರೆಲ್ಲ ಹಾಗೆ ಮಾಡುತ್ತಿದ್ದುದನ್ನು ಕಂಡು, ಎಲ್ಲರೂ ತನ್ನನ್ನು ಸಂಶಯದಿಂದ ನೋಡುತ್ತಿದ್ದಾರೆ ಎಂದು ಹೇಳಿಕೊಂಡು ಅಳುತ್ತಿದ್ದಳು, ಬುದ್ಧಿ ಸರಿಯಾದ ಸ್ಥಿತಿಗೆ ಬಂದ ಸಮಯಗಳಲ್ಲಿ. ತನ್ನ ಅವ್ವ ಏನಾದರೂ ಅಪಘಾತ ಮಾಡಿಕೊಂಡುಬಿಟ್ಟಾಳು ಎಂದು, ತಂದೆತಾಯಿಗಳಿಬ್ಬರನ್ನೂ ಕರೆದುಕೊಂಡು ತಬ್ಬಲಿಯಾಗುವ ಹೆದರಿಕೆಯಿಂದ ಧರ್ಮುವೂ ಗುಟ್ಟಾಗಿ ತನ್ನಮ್ಮನ ಚಲನವಲನಗಳನ್ನು ಕದ್ದು ನೋಡುತ್ತಿದ್ದುದನ್ನು ಕಂಡು ರಂಗಮ್ಮ, ತನ್ನ ಮಗನೂ ಇತರರಂತೆ ತನ್ನ ಮೇಲೆ ಕಣ್ಣುಕಾವಲು ಹಾಕಿದ್ದಾನೆ ಎಂದು, ಸಂಕಟಪಟ್ಟುಕೊಳ್ಳುತ್ತಿದ್ದಳು ಒಮ್ಮೊಮ್ಮೆ, ಕೆಟ್ಟ ಗಳಿಗೆಯಲ್ಲಿ ಹುಟ್ಟಿ ತಂದೆಯ ವಿಪತ್ತಿಗೆ ಅವನೇ ನಿಮಿತ್ತವಾದನೆಂದೂ ಅವನನ್ನು ಶಪಿಸುತ್ತಿದ್ದಳು. ಆದರೆ ಸಾಮಾನ್ಯವಾಗಿ ಧರ್ಮು ಮನೆಯಲ್ಲಿದ್ದದಾಗಲೆ ಅವಳ ಬುದ್ಧಿ ಸ್ವಲ್ಪಮಟ್ಟಿಗಾದರೂ ಸಾಧಾರಣಸ್ಥಿತಿಗೆ ಬಂದು, ಮಂಜಮ್ಮಗೆ ಮನಸ್ಸಿನ ನೆಮ್ಮದಿ ಹೆಚ್ಚುತ್ತಿತ್ತು. ಆದ್ದರಿಂದಲೆ ಧರ್ಮು ಮನೆಗೆ ಬರುವುದನ್ನು ಮಂಜಮ್ಮ ಅಷ್ಟೊಂದು ಪ್ರೀತ್ಯಾದರಗಳಿಂದ ಹಾರೈಸುತ್ತಿದ್ದದ್ದು.

ಈ ಸಾರಿ ಧರ್ಮು ಮನೆಗೆ ಬಂದ ದಿನಕ್ಕೆ ಹಿಂದಿನ ದಿನದಲ್ಲಿ ರಂಗಮ್ಮ ತಾನೇ ಅಡುಗೆ ಒಗೆತನ ಮಾಡುತ್ತೇನೆ ಎಂದು ಕೇಳಿಕೊಂಡಾಗ ಮಂಜಮ್ಮ ಅತ್ತಿಗೆಯ ಮನಸ್ಸಿಗೆ ನೋವಾಗದಿರಲಿ ಎಂದು ಒಪ್ಪಿದಳು. ಎಷ್ಟೊಂದರೂ ರಂಗಮ್ಮನೇ ಮನೆಗೆ ನಿಜವಾದ ಯಜಮಾನಿಯಲ್ಲವೆ? ಬಹುಕಾಲ ಮನೆಗೆ ಹೆಗ್ಗಡತಿಯಾಗಿದ್ದವಳಿಗೆ, ಎಲ್ಲರ ವಿಧೇಯತೆಯನ್ನೂ ಸ್ವೀಕರಿಸಿ ಅಧಿಕಾರ ನಡೆಸಿದ್ದವಳಿಗೆ, ತನ್ನನ್ನು ಸಂಪೂರ್ಣವಾಗಿ ಮೂಲೆಗೊತ್ತಿಬಿಟ್ಟಿದ್ದಾರೆ ಎಂಬ ಭಾವನೆ ಮೂಡುವಂತೆ ವರ್ತಿಸಿದರೆ ಹುಚ್ಚು ಇನ್ನೂ ಹೆಚ್ಚಾಗಿ ಕೆರಳಬಹುದೆಂದು ಸುಬ್ಬಣ್ಣಹೆಗ್ಗಡೆಯವರು ತಮ್ಮ ಕಿರಿಯ ಮಗಳಿಗೆ ಹೇಳಿದ್ದರು: “ಬುಚ್ಚೀ, ನಿನ್ನತ್ತಿಗೆಗೆ ತಲೆ ನೆಟ್ಟಗಾದಾಗ ಅವಳು ಹಿಂದೆ ಮಾಡುತ್ತಿದ್ದಂತೆ ಏನಾದರೂ ಕೆಲಸಗಿಲಸ ಮಾಡುತ್ತೇನೆಂದು ಮುಂದೆ ಬಂದರೆ ‘ಆಗದು’ ಅನ್ನಬೇಡ. ಸ್ವಲ್ಪ ಹುಷಾರಾಗಿ ನೋಡಿಕೋ ಅಷ್ಟೆ” ಎಂದು. ಅದರಂತೆ ಮಂಜಮ್ಮ ಅತ್ತಿಗೆಗೆ ಅಡುಗೆಯ ಕೆಲಸ ವಹಿಸಿದಳು, ತಾನು ಸಹಾಯಕಳಾಗಿ ಸೇವೆಮಾಡಲು ನಿಶ್ಚಯಿಸಿ.

ಅಡುಗೆಯ ಕೆಲಸವನ್ನೇನೊ ಹುಚ್ಚಿಲ್ಲದಿದ್ದಾಗ ಹೇಗೆ ಮಾಡುತ್ತಿದ್ದಳೋ ಹಾಗೆಯೆ ನೆರವೇರಿಸಿದ್ದಳು ರಂಗಮ್ಮ. ಆದರೆ ಗಂಡಸರು ಊಟಕ್ಕೆ ಕೂತಾಗ ಯಾವ ಪದಾರ್ಥವನ್ನೂ ತಿನ್ನಲಾಗಲಿಲ್ಲ! ಬಾಯಿಗೆ ಹಾಕಲಾರದಷ್ಟು ಉಪ್ಪಾಗಿಬಿಟ್ಟಿತ್ತು! ರಂಗಮ್ಮನೆ ಕೈತಪ್ಪಿ ಎರಡು ಮೂರು ಸಾರಿ ಉಪ್ಪು ಹಾಕಿದ್ದಳೋ? ಅಥವಾ ಮಂಜಮ್ಮನೂ ಉಪ್ಪು ಹಾಕಿ, ಆಮೇಲೆ ಅದನ್ನರಿಯದೆ ರಂಗಮ್ಮನೂ ಇನ್ನಷ್ಟು ಉಪ್ಪು ಹಾಕಿದ್ದಳೋ? ಅಥವಾ ರಂಗಮ್ಮಗೆ ಆಗದಿದ್ದವರು ಯಾರಾದರೂ ಹಾಗೆ ಮಾಡಿದ್ದರೋ? ಅಥವಾ ರಂಗಮ್ಮಗೆ ಆಗದಿದ್ದವರು ಯಾರಾದರೂ ಹಾಗೆ ಮಾಡಿದ್ದಳೋ? ಅಂತೂ ಊಟವೆಲ್ಲ ಉಪ್ಪೋ ಉಪ್ಪಾಗಿತ್ತು!

ಸುಬ್ಬಣ್ಣಹೆಗ್ಗಡೆಯವರೇನೊ ತಾಳ್ಮೆಯಿಂದ ಎದ್ದು ಹೋಗಿ, ಮತ್ತೊಮ್ಮೆ ಅಡುಗೆಯಾದ ಮೇಲೆ ಬಂದು ಊಟಮಾಡಿದ್ದರು. ಆದರೆ ತಮ್ಮಪ್ಪಹೆಗ್ಗಡೆ, ಗದ್ದೆ ತೋಟಗಳಲ್ಲಿ ಆಳುಗಳೊಡನೆ ಇದ್ದು ಅವರಿಂದ ಕೆಲಸಮಾಡಿಸಿ ದಣಿದು ಹಸಿದು ಬಂದಿದ್ದವನು, ರೇಗಿ ಮಂಜಮ್ಮಗೆ ಬಾಯಿಗೆ ಬಂದಂತೆ ಬಯ್ದು, ತನಗೆ ಬಡಿಸಲು ಬಂದಿದ್ದ

ರಂಗಮ್ಮ ಹಿಡಿದಿದ್ದ ಕೈಬಟ್ಟಲನ್ನು ನೂಕಿ ತಟ್ಟೆಹಾರಿಸಿ, ಅಡುಗೆಮನೆಯೆಲ್ಲ ಅನ್ನಪಲ್ಯವಾಗುವಂತೆ ಮಾಡಿ ಎದ್ದು ಹೋಗಿದ್ದನು. ರಂಗಮ್ಮ ಅತ್ತು ಕರೆದು ಊಟಮಾಡದೆ ಕೋಣೆಗೆ ಹೋಗಿ ಬಾಗಿಲು ಹಾಕಿಕೊಂಡಿದ್ದಳು.

ಮರುದಿನ, ಅಂದರೆ ಧರ್ಮು ಕೋಣೂರಿನಿಂದ ಹಳೆಮನೆಗೆ ಐತನೊಡನೆ ಹೋದ ದಿನ, ಬೆಳಿಗ್ಗೆ. ರಂಗಮ್ಮ ಎಂದಿನಂತಲ್ಲದೆ ಬಹಳ ಮುಂಚೆಯೆ ಎದ್ದುಬಂದು ಅಡುಗೆಯ ಕೆಲಸಕ್ಕೆ ತೊಡಗಿದ್ದಳು. ಮಂಜಮ್ಮಗೆ ಸೋಜಿಗವಾಯಿತು, ನಿನ್ನೆ ತನ್ನ ಸಣ್ಣಸಣ್ಣಯ್ಯನ ಒರಟಾದ ವರ್ತನೆಗೆ ಒಳಗಾಗಿ, ಅವಮಾನಿತಳಾಗಿ, ಊಟಮಾಡದೆ ಹೋಗಿ, ಕೋಣೆ ಬಾಗಿಲು ಹಾಕಿಕೊಂಡು ಮಲಗಿ, ಎಷ್ಟು ಕರೆದರೂ ಅಂಗಲಾಚಿ ಬೇಡಿಕೊಂಡರೂ ಬಾಗಿಲು ತೆರೆಯದಿದ್ದ ಅತ್ತಿಗೆ ಇವತ್ತು ಹೊತ್ತಾರೆಮುಂಚೆ ಎದ್ದು ಅಡುಗೆ ಕೆಲಸಕ್ಕೆ ಬಂದದ್ದು ಅತ್ಯಂತ ಅಸಾಧಾರಣ ಸಂಗತಿಯಾಗಿ ಅದ್ಭುತಕ್ಕೆಣೆಯಾಗಿತ್ತು. ಆದರೆ ಏನು ಮಾಡುತ್ತಾಳೆ? ಬೇಡ ಎನ್ನುವ ಹಾಗಿಲ್ಲ. ಉಪ್ಪುಗಿಪ್ಪು ಹಾಕುವ ವಿಚಾರದಲ್ಲಿ ಎಚ್ಚರಿಕೆಯಿಂದ ಒಂದು ಕಣ್ಣಿಟ್ಟಿರಲು ನಿಶ್ಚಯಿಸಿ ಸುಮ್ಮನಾದಳು.

ರಂಗಮ್ಮ ಮರುದಿನವೂ ಅಡುಗೆ ಮಾಡಲು ಬಂದುದಕ್ಕೂ ಅಂತಹುದೇ ಕಾರಣವಾಗಿತ್ತು. ಪದಾರ್ಥಗಳಿಗೆ ಹಾಕಿದ್ದ ಉಪ್ಪು ಆ ಪರಿಮಾಣದಲ್ಲಿ ಹೆಚ್ಚಾದದ್ದು ಹೇಗೆ? ಎಂಬುದೆ - ಅವಳಿಗೂ ಬಿಡಿಸದ ಒಗಟಾಗಿತ್ತು! ಅದನ್ನು ಈ ದಿನ, ಎಚ್ಚರಿಕೆಯಿಂದ ಗಮನಿಸಿ, ಕಂಡುಹಿಡಿಯಬೇಕೆಂದು ಅವಳು ಕೆಲಸಕ್ಕೆ ಬಂದಿದ್ದಳು.

ಆದರೆ ತಿಮ್ಮಪ್ಪಹೆಗಡೆ ಆಳುಗಳನ್ನು ಕೆಲಸಕ್ಕೆ ಕರೆತರಲು ಹೋಗುವ ಮುನ್ನ ಗಂಜಿಯುಂಡು ಹೆಂಡ ಕುಡಿದು ಸಿದ್ಧನಾಗಲೆಂದು ಒಳಗೆ ಬಂದವನು ಅಡುಗೆ ಮಾಡಲು ತೊಡಗಿದ್ದ 'ಅತ್ತಿಗೆ' ಯನ್ನು ಕಂಡು ಕ್ರುದ್ಧನಾದನು. "ಬುಚ್ಚೀ!" ಎಂದು ತನ್ನ ತಂಗಿಯನ್ನು ಕೂಗಿ "ಏನು ನಮ್ಮನ್ನೆಲ್ಲ ಕೊಲ್ಲಿಸಬೇಕು ಅಂತಾ ಮಾಡೀಯಾ, ಅತ್ತಿಗೆ ಕೈಲಿ ಅಡಿಗೆ ಮಾಡಿಸಿ? ಅವರು ಅಡಿಗೆ ಮಾಡೋದು ಬ್ಯಾಡವೆ ಬ್ಯಾಡ! ಅಡಿಗೆ ಮನೆಗೆ ಕಾಲಿಡಕೂಡದು ಅವರು! ನಿನ್ನೆ ಉಪ್ಪು ಹಾಕಿದ್ರು; ಇವತ್ತು ವಿಷ ಹಾಕ್ತಾರೆ! ತಲೆ ಕೆಟ್ಟೋರ ಕೈಲೆಲ್ಲಾ ಅಡಿಗೆ ಮಾಡಿಸ್ತೀಯಲ್ಲಾ? ನಿನಗೂ ತಲೆ ಕೆಟ್ಟಿದೆಯೋ?" ಎಂದು ಕೂಗಾಡಿದನು.

ರಂಗಮ್ಮಗೂ ಸಿಟ್ಟುಬಂದು "ನಾಲಿಗೆ ಸೊಲ್ಪ ಹಿಡಿದು ಮಾತಾಡಿ! ತಲೆ ಕೆಟ್ಟಿದ್ದು ಯಾರಿಗೆ? ನನಗೋ ನಿಮಗೋ? ಏನು, ನಿಮ್ಮಣ್ಣಯ್ಯ ಸತ್ತೇಹೋದ್ರು ಅಂತಾ ಮಾಡಿ ಹೀಂಗೆಲ್ಲ ಮಾಡ್ತೀರೋ? ನನಗೂ ಹಕ್ಕಿದೆ ಈ ಮನೇಲಿ? ನನಗೂ ಅಣ್ಣ ತಮ್ಮ ತಾಯಿ ತವರು ಇದೆಃ ನನಗೂ ಒಬ್ಬ ಮಗ ಇದಾನೆ, ಮನೆಗೆ ಹಕ್ಕುದಾರನಾಗಿ!" ಎಂದು ಮಂಜಮ್ಮನೂ ಬೆರಗಾಗುವಂತೆ ಮಾತಾಡಿಬಿಟ್ಟಳು.

ತಿಮ್ಮಪ್ಪಹೆಗ್ಗಡೆ ಎರಗಿಬಂದು ರಂಗಮ್ಮನ ರಟ್ಟೆಹಿಡಿದೆಳೆದು, ಕೂದಲು ಹಿಡಿದು ಬೆನ್ನ ಮೇಲೆ ಹೆಗಲ ಮೇಲೆ ರೋಷಾಂಧನಾಗಿ ಗುದ್ದಿ ಗುದ್ದಿ, ತಡೆಯಲು ಬಂದ ತಂಗಿಯನ್ನೂ ತಳ್ಳಿ, ಅತ್ತಿಗೆಯನ್ನು ಅಡುಗೆ ಮನೆಯಿಂದ ಹೊರಗೆ ನೂಕಿದನುಃ "ಮುಂಡೆಯಾದ್ರೂ ಮುತ್ತೈದೆ ಹಾಂಗೆ ಮಾಡಿಕೊಂಡು ಮನೇಗೆಲ್ಲಾ ಅನಿಷ್ಟ ತರ್ತದೆ, ಹಾಳು ಶನಿ!" ಎಂದು ಶಾಪಹಾಕಿ, ತಾನೂ ಹೊರಹೊರಟನು.

ಮೊದಲೇ ದುಃಖದಿಂದ ಜರ್ಜರಿತಳಾಗಿದ್ದವಳು, ನಿದ್ದೆ ಊಟ ಇಲ್ಲದೆ ಕೃಶಳಾಗಿದ್ದವಳು. ರಂಗಮ್ಮ ತತ್ತರಿಸಿಹೋಗಿ ನೆಲಕ್ಕೆ ಬಿದ್ದಳು. ಮಂಜಮ್ಮ ಅವಳನ್ನು ಹಿಡಿದೆತ್ತಿ ಸಂತೈಸಿದಳು. ಮೆಲ್ಲಗೆ ಅವರ ಕೋಣೆಗೆ ಕರೆದೊಯ್ದು ಹಾಸಗೆಯ ಮೇಲೆ ಮಲಗಿಸಿದಳು.

ಅಷ್ಟರಲ್ಲಿ ಹೊರಗೆ ಹೋಗಿದ್ದ ತಿಮ್ಮಪ್ಪ ಹೆಗ್ಗಡೆ ಮತ್ತೆ ಬಂದು, ಮಂಜಮ್ಮನನ್ನು ಹೊರಗೆ ಕರೆದು, ಕೋಣೆಗೆ ಚಿಲಕ ಇಕ್ಕಿ, ಕೈಲಿ ತಂದಿದ್ದ ಬೀಗಹಾಕಿ, ಹೋಗುತ್ತಾ ಹೇಳಿದನು, ತನಗೆ ತಾನೆ ಹೇಳಿಕೊಳ್ಳುವಂತೆ, ಆದರೆ ಮಂಜಮ್ಮಗೆ ಕೇಳಿಸುವಂತೆ; "ಮತ್ತಿನ್ನೆಲ್ಲಾ ಬಾವಿ ಹಾರಿದ್ರೆ? ನನ್ನ ಮ್ಯಾಲೇಕೆ ಪುಕಾರು?"

ಸ್ವಲ್ಪ ಹೊತ್ತಾದ ಮೇಲೆ ತಿಮ್ಮಪ್ಪಹೆಗ್ಗಡೆ ಆಳುಗಳನ್ನು ಕರೆದುಕೊಂಡು ಕೆಲಸಕ್ಕೆ ಹೋದುದನ್ನು ಕಾದುನೋಡಿ, ಮಂಜಮ್ಮ ಅವನು ಗುಪ್ತ ವೆಂದು ಸಿಕ್ಕಹಾಕಿದ್ದ ಬೀಗದ ಕೈಯನ್ನು ಕಡಿನಕೋಡಿಯಲ್ಲಿ ಪತ್ತೆ ಹಚ್ಚಿ ತಂದು, ಅತ್ತಿಗೆಯ ಕೋಣೆಗೆ ಹಾಕಿದ್ದ ಬೀಗ ತೆಗೆದು ಬಾಗಿಲು ನೂಕಿದಳು. ಆದರೆ ಬಾಗಿಲು ತೆರೆಯಲಿಲ್ಲ. ಕರೆದಳು; ಬೇಡಿದಳು; ಹೊಟ್ಟೆಗೇನಾದರೂ ಸ್ವಲ್ಪ ತೆಗೆದುಕೊಳ್ಳಿ ಎಂದು ಅಂಗಲಾಚಿದಳು. ಆದರೂ ಬಾಗಿಲು ತೆಗೆಯಲಿಲ್ಲ. ಒಳಗಣಿಂದ ಭದ್ರವಾಗಿ ತಾಳಹಾಕಿಕೊಂಡಿದ್ದಳು ರಂಗಮ್ಮ. ಮತ್ತೆ ಮೊದಲಿನಂತೆ ಬೀಗ ಹಾಕಿ, ಬೀಗದ ಕೈಯನ್ನು ಇದ್ದಲ್ಲಿಯೇ ಇರಿಸಿದ್ದಳು ರಂಗಮ್ಮ. ಮತ್ತೆ ಮೊದಲಿನಂತೆ ಬೀಗ ಹಾಕಿ, ಬೀಗದ ಕೈಯನ್ನು ಇದ್ದಲ್ಲಿಯೇ ಇರಿಸಿದ್ದಳು ಮಂಜಮ್ಮ.

ಊಟದ ಹೊತ್ತು ಬಂದಾಗಲೂ ಹಾಗೆಯೆ ಮಾಡಿದ್ದಳು. ಆಗಲೂ ಪ್ರಯೋಜನವಾಗಿರಲಿಲ್ಲ. ಕೊನೆಗೆ ಅಪ್ಪಯ್ಯಗೆ ಹೇಳೋಣವೆಂದು ಜಗಲಿಗೆ ಹೋದಳು. ಸುಬ್ಬಣ್ಣ ಹೆಗ್ಗಡೆಯವರು ಅಲ್ಲಿರಲಿಲ್ಲ. ಅವರು ಊಟಕ್ಕೆ ಬಂದಾಗ ಹೇಳೋಣವೆಂದುಕಾದಳು. ಅವರು ಊಟಕ್ಕೂ ಬರಲಿಲ್ಲ. ಎಲ್ಲಿಗಾದರೂ ಕೆಲಸಕ್ಕೊ ನೆಂಟರ ಮನೆಗೊ ಹೋಗಿದ್ದಾರೆಂಬುದೂ ಅವಳಿಗೆ ತಿಳಿಯದು.ಮಂಜಮ್ಮನ ಕಳವಳ ಹೇಳತೀರದು! ಅತ್ತಿಗೆಮ್ಮನಿಗೆ ಏನಾದ್ರೂ ಮಂಡೆಗೂ ಪೆಟ್ಟು ತಗುಲಿದ್ದರೆ ಏನು ಗತಿ? ಅಥವಾ ಎಲ್ಲಿಯಾದರೂ - (ಮಂಜಮ್ಮನಿಗೆ ಆ ಯೋಚನೆ ಬಂದಕೂಡಲೆ ಮೈನಡುಗಿ ಹೋಗಿತ್ತು) - ಅತ್ತಿಗೆಮ್ಮ ಪ್ರಾಣ ತೆಗೆದುಕೊಂಡಿದ್ದರೆ? ತಿಮ್ಮಪ್ಪಹೆಗ್ಗಡೆ ಮಧ್ಯಾಹ್ನದ ಮೇಲೆ ಊಟಕ್ಕೆ ಬಂದಾಗ ಬೀಗ ತೆಗೆದು ಬಾಗಿಲು ತೆಗೆಯುವಂತೆ ಕೇಳಿಕೊಂಡಳು. ಅದರೆ ಅವನು "ಸತ್ತರೆ ಸಾಯಲಿ! ಶನಿ ತೊಲಗ್ತದೆ!" ಎಂದಿದ್ದನು. ಏನು ಮಾಡುವುದಕ್ಕೂ ತೋರದೆ ಮಂಜಮ್ಮ ತಾನೂ ಊಟಮಾಡಿರಲಿಲ್ಲ. ಒಮ್ಮೆ ಆ ಕೋಣೆಗೆ ಹೊರಗಣಿಂದ ಇದ್ದ ಒಂದೇ ಒಂದು ಬೆಳಕಂಡಿಯಲ್ಲಿ ನೋಡಲು ಪ್ರಯತ್ನಿಸಿದ್ದಳು. ಅದು ತುಂಬಾ ಚಿಕ್ಕದಾಗಿ, ಕಬ್ಬಿಣದ ಸಣ್ಣ ಸರಳುಗಳಿಗೆ ಬದಲಾಗಿ ದಪ್ಪವಾದ ಮರದ ರೀಪುಗಳನ್ನು ಹಾಕಿದ್ದರಿಂದ ಒಳಗಡೆಯ ಕತ್ತಲೆಯಲ್ಲಿ ಏನೂ ಸರಿಯಾಗಿ ಕಾಣಿಸುತ್ತಿರಲಿಲ್ಲ. ಕೆಲಸದ ಹುಡುಗಿ ಹಳೆಪೈಕದ ಹೂವಿಗೂ ಹೇಳಿದ್ದಳು. ಬೆಳಕಂಡಿಯಲ್ಲಿ ನೋಡುವುದಕ್ಕೆ. ಅವಳು ನೋಡಿದಂತೆ ಮಾಡಿ ಉದಾಸೀನದಿಂದ "ಏನೂ ಆಗಿಲ್ಲ ಕಣ್ರೊ. ಅವರಿಗೇನು? ಸುಮ್ಮನೆ ಮನಗಿಕೊಂಡಿದ್ದಾರೆ" ಎಂದು ಹೇಳಿದ್ದಳು. ಅವಳಿಗೂ ತಿಮ್ಮಪ್ಪಹೆಗ್ಗಡೆಗೂ ಇದೆ ಎಂದು ಹೇಳಲಾಗುತ್ತಿದ್ದ ರಹಸ್ಯ ಸಂಬಂಧದ ನೆನಪಾಗಿ, ಮಂಜಮ್ಮ ಜಿಗುಪ್ಸೆಯಿಂದ ಮತ್ತೆ ಅಡುಗೆಮನೆ ಒಳಗೆ ಹೋಗಿದ್ದಳು.

ಆದ್ದರಿಂದಲೆ, ಧರ್ಮು ಆಕಸ್ಮಾತ್ತಾಗಿ ಕೋಣೂರಿನಿಂದ ಬಂದದ್ದು ಮಂಜಮ್ಮಗೆ ಜೀವ ಬಂದಂತಾಗಿತ್ತು. ತಾನೊಬ್ಬಳೆ ಸಹಿಸಲಾರದೆ ಸಹಿಸಬೇಕಾಗಿದ್ದ ಮೂಕಯಾತನೆಗೆ ತನ್ನ ಪರವಾಗಿದ್ದ ಒಬ್ಬ ಪಾಲುಗಾರ ದೊರೆತ

ಹಾಗಾಗಿತ್ತು. ಚಿಕ್ಕ ಹುಡುಗನಾಗಿದ್ದರೂ ಧರ್ಮು ಗಂಡಸಲ್ಲವೆ? ಅತ್ತಿಗೆಮ್ಮನ ಮಗನಲ್ಲವೆ? ಸಾಮಾನ್ಯವಾಗಿ, ಅವನು ಹಳೆಮನೆಯಲ್ಲಿ ಇದ್ದಾಗಲೆಲ್ಲ ಅವನ ಅಪ್ಪನ ಮನಸ್ಸು ಸ್ವಲ್ಪ ಪ್ರಶಾಂತವಾದಂತಾಗಿ ಹಿಡಿತದಲ್ಲಿರುತ್ತದೆಯಲ್ಲವೆ? ಅಲ್ಲದೆ ಧರ್ಮು ಮನೆಯಲ್ಲಿರುವಾಗಲೆಲ್ಲ ತಿಮ್ಮಪ್ಪಹೆಗ್ಗಡೆಯ ಧೂರ್ತವರ್ತನೆಯಲ್ಲಿಯೂ ತುಸು ಸಂಯಮ ಉಂಟಾಗುತ್ತಿದ್ದುದನ್ನೂ ಗಮನಿಸಿದ್ದಳಲ್ಲವೆ ಮಂಜಮ್ಮ?

* * *

## ೨೮

ಅಪ್ಪಯ್ಯ ಎಲ್ಲಿಗೆ ಏಕೆ ಹೋಗಿದ್ದಾರೆ ಎಂಬುದು ಮಂಜಮ್ಮಗೆ ತಿಳಿಯದಿದ್ದರೂ ತಿಮ್ಮಪ್ಪಹೆಗ್ಗಡೆಗೆ ತಿಳಿದೆ ಇತ್ತು. ಆ ತಿಳಿವಳಿಕೆಯೆ ಅಂದು ಅವನ ಧೂರ್ತತನದ ವಿಶೇಷವಾದ ಪ್ರಕಟಣೆಗೂ ಕಾರಣವಾಗಿತ್ತು. ಮನೆಯಲ್ಲಿ ವಯಸ್ಸಾದರೂ ಯಜಮಾನರೂ ಆಗಿದ್ದ ಸುಬ್ಬಣ್ಣಹೆಗ್ಗಡೆ ಇದ್ದಿದ್ದರೆ ತಿಮ್ಮಪ್ಪ ಅತ್ತಿಗೆಯ ಮೈಮೇಲೆ ಕೈಹಾಕುವಷ್ಟು ದೂರ ಮುಂದುವರೆಯಲು ಹಿಂದೆ ಮುಂದೆ ನೋಡುತ್ತಿದ್ದನು. ತಂದೆ ಮಗನಿಗಿಂತಲೂ ಬಲಿಷ್ಠನೂ ಶಕ್ತನೂ ಆಗಿದ್ದನೆಂಬ ಕಾರಣಕ್ಕಲ್ಲ ತಿಮ್ಮಪ್ಪಹೆಗ್ಗಡೆ ಅಂಜುತ್ತಿದ್ದುದು. ತರುಣನೂ, ಸುಪುಷ್ಟನೂ, ತನ್ನ ಸುಖ ಸ್ವಾರ್ಥಗಳಿಗೆ ಅಡ್ಡಬಂದವರ ವಿಚಾರದಲ್ಲಿ ನ್ಯಾಯಾನ್ಯಾಯ ಲಕ್ಷವಿಲ್ಲದೆ ಕ್ರೂರಿಯೂ ಆಗಿದ್ದ ತಿಮ್ಮಪ್ಪ ಮನಸ್ಸು ಮಾಡಿದ್ದರೆ ಅವನ ತಂದೆಯನ್ನು ತಿರಸ್ಕರಿಸಿ ವರ್ತಿಸುವುದೇನೂ ಕಷ್ಟವಾಗುತ್ತಿರಲಿಲ್ಲ. ಆದರೆ ಚಿಕ್ಕಂದಿನಿಂದಲೂ ತಂದೆಯನ್ನು ಕಂಡರೆ ಭಯದಿಂದ ನಡೆದೂ ನಡೆದೂ ಈಗ ಭಯ ಒಂದು ರೀತಿಯ ದೈಹಿಕವ್ಯಾಪಾರವಾಗಿ ಪರಿಣಮಿಸಿತ್ತು ಅವನಿಗೆ. ತಂದೆಯಲ್ಲಿ ಅವನಿಗೆ ಗೌರವವಾಗಲಿ, ಭಕ್ತಿಯಾಗಲಿ, ಕಡೆಗೆ ದಾಕ್ಷಿಣ್ಯವಾಗಲಿ ಇತ್ತು ಎಂದಲ್ಲ, ಅವರು ಅವನನ್ನು ಚಿಕ್ಕಂದಿನಿಂದಲೂ ಒದ್ದು, ಹೊಡೆದು, ಕಿವಿ ಹಿಂಡಿ, ಒಳಶುಂಟಿ ಹಿಡಿದು, ಕೋಳದಂಡ ಹಾಕಿ, ಸಿದ್ದೆಗುಮ್ಮಮಾಡಿ, ಕತ್ತಲೆ ಕೋಣೆಯಲ್ಲಿ ಉಪವಾಸ ಕೂಡಿಹಾಕಿ ಭಯಂಕರವಾಗಿ ಪಳಗಿಸಲು ಪ್ರಯತ್ನಪಟ್ಟಿದ್ದರು. ಅದರ ಪರಿಣಾಮವಾಗಿ ತಿಮ್ಮಪ್ಪಹೆಗ್ಗಡೆ ಸರ್ಕಸ್ಸಿನ ಕ್ರೂರಪ್ರಾಣಿಗೆ ಯಜಮಾನನ ಚಾಟಿಯ ಶಬ್ದದಿಂದಲೆ ಒದಗುವ ನರವ್ಯಾಪಿಯಾದ ಅಂಧಭೀತಿಯಿಂತಹ ಒಂದು ಪುಕ್ಕಲು ಸುಬ್ಬಣ್ಣಹೆಗ್ಗಡೆಯವರ ಕೆಮ್ಮಿನಿಂದಲೊ ಉಚ್ಚಕಂಠದಿಂದಲೊ ಪ್ರಾಪ್ತಿವಾಗುತ್ತಿತ್ತು ಅಷ್ಟೆ! ಆದ್ದರಿಂದಲೆ ಅವರು ಎಷ್ಟೇ ಹೀನಾಯವಾಗಿ ಬಯ್ದರೂ (ಈಗ ಮೈಮುಟ್ಟಿ ಶಿಕ್ಷಿಸುವ ಗೋಜಿಗೆ ಹೋಗುತ್ತಿರಲಿಲ್ಲ) ಒಳಗೊಳಗೆ ಗೊಣಗಿಕೊಳ್ಳುವುದರಲ್ಲಿಯೇ ಅವನ ಪ್ರತಿಭಟನೆ ಪರ್ಯವಸಾನವಾಗುತ್ತಿತ್ತು. ಅದಕ್ಕಿಂತಲೂ ಪ್ರಬಲವಾದ ಪ್ರತಿಕ್ರಿಯೆಗೆ ಬೇಕಾಗಿದ್ದ ನೀತಿಶಕ್ತಿಯಂತೂ ವಿಷಯಲಂಪಟನಾಗಿದ್ದ ಅವನಲ್ಲಿ ಲವಲೇಶವೂ ಇರಲಿಲ್ಲ.

ಅಣ್ಣ ದೊಡ್ಡಣ್ಣ ಹೆಗ್ಗಡೆ ತಿರುಪತಿಯಲ್ಲಿ ತೀರಿಹೋದ ಎಂಬ ಸುದ್ದಿ ಬಂದಾಗ ಆಗಿನ್ನೂ ಸ್ವಲ್ಪ ಚಿಕ್ಕವನಾಗಿದ್ದ ತಿಮ್ಮಪ್ಪ ಇತರರಂತೆಯೆ ಅತ್ತಿದ್ದನು. ಅಣ್ಣ ಸತ್ತಿಲ್ಲ ಎಂಬ ಸುದ್ದಿ ಬಣದಾಗಲೂ ತಿಮ್ಮಪ್ಪ ಇತರರಂತೆಯೆ ಅವನನ್ನು ಹುಡುಕಿ ಕರೆದು ತರುವುದರಲ್ಲಿ ಆಸಕ್ತಿ ವಹಿಸಿದ್ದನು. ಅತ್ತಿಗೆಯ ಮತ್ತು ಅತ್ತಿಗೆಯ ಮಗನ ವಿಚಾರದಲ್ಲಿ ಹೆಚ್ಚಿನ ಸಹಾನುಭೂತಿ ತೋರಿಸಿದ್ದನು. ಅದರೆ ಎರಡು ಮೂರು ವರ್ಷಗಳಲ್ಲಿ ಅವನು ಬದಲಾಯಿಸಿ ಹೀಗಿದ್ದನು. ಅಣ್ಣನನ್ನು ಹುಡುಕುತ್ತೇವೆ

ಎಂಬ ನೆವದಲ್ಲಿ ಅನೇಕರು ಅನೇಕ ವಿಧವಾಗಿ ಸುಬ್ಬಣ್ಣ ಹೆಗ್ಗಡೆಯವರಿಂದಲೂ ಮತ್ತು ಗುಟ್ಟಾಗಿ ರಂಗಮ್ಮನ ಕಡೆಯಿಂದಲೂ ಮನೆಯವರೆಲ್ಲರಿಗೆ ಸೇರಿದ್ದ ಐಶ್ವರ್ಯವನ್ನು ಅಪಹರಿಸುತ್ತಿದ್ದುದನ್ನು ಕಂಡು ತಿಮ್ಮಪ್ಪಹೆಗ್ಗಡೆ ಅಸಮಾಧಾನಪಟ್ಟಿದ್ದನು ಹಿತ್ತಲು ಕಡೆಯಲ್ಲಿ ಸ್ವಾರ್ಲುಮೀನು ವ್ಯಾಪಾರಕ್ಕೆಂದು ಬಂದು, ರಂಗಮ್ಮಗೆ ಸುಳ್ಳು ಸುಳ್ಳು ವಾರ್ತೆಗಳನ್ನೆಲ್ಲ ಹೇಳಿ, ಹುಸಿ ಭರವಸೆಕೊಟ್ಟು, ಚಿನ್ನದ ಬೆಳ್ಳಿಯ ಒಡವೆ ವಸ್ತುಗಳನ್ನು ಸಾಗಿಸುತ್ತಿದ್ದ ಮೇಗರವಳ್ಳಿ ಕರೀಂ ಸಾಬರಾದಿಯಾಗಿ ಹಾಲ್ವಳ್ಳಿ ಭಟ್ಟಂಗಿ ದಾಸಯ್ಯ ಮೊದಲಾದ ಭಿಕ್ಷಾವೃತ್ತಿಯ ಅಲೆಮಾರಿಗಳನ್ನೂ ಮನೆಯ ಹತ್ತಿರ ಕಂಡರೆ ತಿಮ್ಮಪ್ಪಹೆಗ್ಗಡೆ ಬಯ್ದು ಅಟ್ಟುತ್ತಿದ್ದನು. ಬರಬರುತ್ತಾ, ದೊಡ್ಡಣ್ಣ ಹೆಗ್ಗಡೆ ಹಿಂದಿರುಗುವ ಆಶೆ ದೂರ ದೂರವಾದಂತೆಲ್ಲ, ಅವರು ಹಿಂದಿರುಗದಿರಲಿ ಎಂಬಾಸೆ ಹತ್ತಿರ ಹತ್ತಿರವಾಗಿ, ಕಡೆಗೆ ಹೃದಯಪ್ರವೇಶಮಾಡಿ ನೆಲೆಯಾಗಿಬಿಟ್ಟಿತು. ಅದರಲ್ಲಿಯೂ ಮನೆ ಪಾಲಾಗಿ ಶಂಕರಹೆಗ್ಗಡೆ ಬೇರೆ ಹೋದಮೇಲೆ ತಿಮ್ಮಪ್ಪಹೆಗ್ಗಡೆ ತನ್ನ ಮುದಿತಂದೆಯ ತರುವಾಯ ತಾನೆ ಯಜಮಾನನಾಗುವ ಆಶೆಯೂ ಅಂಕುರಿಸಿ, ತಾನು ಸ್ವತಂತ್ರನಾಗಿ ಶಂಕರಹೆಗ್ಗಡೆಯಂತೆ ಮನೆಗೆ ಹೆಂಚು ಹೊದಿಸಿ, ಮದುವೆಯಾಗಿ ಮೆರೆಯುವ ಹೊಂಗನಸೂ ಕೈಬೀಸಿ ಕರೆಯತೊಡಗಿತ್ತು. ಬಾಯಲ್ಲಿ ಬೇರೆ ರೀತಿ ಆಡುತ್ತಿದ್ದರೂ ಅವನ ಹೃದಯದಲ್ಲಿ ಅಣ್ಣ ಹಿಂದಿರುಗುವುದು ಬೇಡವೆ ಬೇಡದ ಅನಿಷ್ಟವಾಗಿತ್ತು!

ಆದ್ದರಿಂದ ಆವೊತ್ತು ಹೊತ್ತಾರೆ ಮುಂಚೆ ಕೋಣೂರಿನಿಂದ ಬಂದ ಐಗಳು, ಪಾದ್ರಿ ಜೀವರತ್ನಯ್ಯ ಕೊಟ್ಟಿದ್ದ ಸುದ್ದಿಯ ಪ್ರಕಾರ, ದೊಡ್ಡಣ್ಣ ಹೆಗ್ಗಡೆಯನ್ನು ಮಂಡಗದ್ದೆಯ ಹತ್ತಿರ ಬೀಡುಬಿಟ್ಟಿದ್ದ ಗೋಸಾಯಿಗಳ ಗುಂಪಿನಲ್ಲಿ ಗುರುತಿಸಿದ್ದಾರಂತೆ ಎಂದು ಸುಬ್ಬಣ್ಣ ಹೆಗ್ಗಡೆಯವರಿಗೆ ತಿಳಿಸಿ, ಅವರನ್ನು ಮೇಗರಳ್ಳಿಯ ಹತ್ತಿರ ಸಿದ್ಧವಾಗುತ್ತಿದ್ದ ಮಿಶನ್ ಇಸ್ಕೂಲಿನ ಮೇಲ್ವಿಚಾರಣೆಗೆಂದು ಅಲ್ಲಿಗೆ ಬಂದಿದ್ದ ಪಾದ್ರಿಯನ್ನೆ ಕಂಡು ಮುಖಾಮುಖಿಯಾಗಿ ಮಾತನಾಡಿ ಮುಂದಿನ ಕ್ರಮ ಕೈಗೊಳ್ಳುವಂತೆ ಪ್ರೇರಿಸಿ ಕರೆದೊಯ್ದಾಗ, ತಿಮ್ಮಪ್ಪಹೆಗ್ಗಡೆ ಯಾರೋ ತನ್ನಿಂದ ಏನನ್ನೊ ಕಸಿದುಕೊಳ್ಳಲು ಒಳಸಂಚು ನಡೆಸಿದ್ದಾರೆ ಎಂಬಂತೆ ಕನಲಿದ್ದನು. ಶುಭವಾದರೂ ಆಗಬಹುದಾಗಿದ್ದ ಆ ವಾರ್ತೆಯನ್ನು ಅತ್ತಿಗೆಗಿರಲಿ ತಂಗಿಗೂ ತಿಳಿಸದೆ ಬಿಮ್ಮಗಿದ್ದನು: ಆ ಮನಃಸ್ಥಿತಿಯೂ ಒಂದು ಪ್ರಬಲ ಪ್ರಚೋದನೆಯಾಗಿತ್ತು ಆ ಧೂರ್ತನಿಗೆ ಅತ್ತಿಗೆಯ ಮೇಲೆ ಕೈ ಮಾಡುವುದಕ್ಕೆ.

ಮೇಲುನೋಟಕ್ಕೆ ಸುಬ್ಬಣ್ಣಹೆಗ್ಗಡೆಯವರು ಅಷ್ಟೇನೂ ಮನಸ್ಸಿಗೆ ಹಾಕಿಕೊಂಡವರಂತೆ ಕಾಣಿಸದಿದ್ದರೂ ಹಿರಿಯ ಮಗನಿಗೆ ಒದಗಿದ್ದ ವಿಪತ್ತು ಅವರನ್ನು ಒಳಗೊಳಗೇ ಜರ್ಜರಿತವನ್ನಾಗಿ ಮಾಡುತ್ತಿತ್ತು. ಹುಟ್ಟಿನಿಂದಲೆ ಗಟ್ಟಿಮುಟ್ಟಾದ ಆಳಾಗಿದ್ದವರು ಈಗ ಮೂರು ನಾಲ್ಕು ವರ್ಷಗಳಲ್ಲಿ ತುಂಬಾ ಇಳಿದುಹೋಗಿದ್ದರು. ಮೈಗೆ ಸುಕ್ಕುಬಂದಿತ್ತು. ಹಿಂದೆ ಹತ್ತಾರು ಮೈಲಿ ಕಾಡು ಬೆಟ್ಟಗಳಲ್ಲಿ ನಿರಾಯಾಸವಾಗಿ ಸುತ್ತುತಿದ್ದವರು ಈಗ ಸ್ವಲ್ಪದರಲ್ಲಿಯ ದಣಿವನ್ನನುಭವಿಸಿದ್ದರು. ಇತ್ತೀಚೆಗೆ ಗದ್ದೆ ತೋಟಗಳಿಗೆ ಅನಿವಾರ್ಯವಾದಾಗ ಮಾತ್ರವಲ್ಲದೆ ಮನೆಯನ್ನೆ ಬಿಟ್ಟು ಹೊರಡುತ್ತಿರಲಿಲ್ಲ. ಹಿಂದಿನ ಬಾಯ ಅರ್ಭಟ ತುಸು ಇದ್ದಿತಾದರೂ ಅದು ಮುಪ್ಪಿನ ಹುಲಿಯ ಅಬ್ಬರದಂತೆ ನಿರ್ಬಲವಾಗಿತ್ತು. ಸೊಸೆಯ ಗೀಳಿನ ಬಾಳೂ ಅವರ ಹೃದಯವನ್ನು ಗರಗಸದಂತೆ ದಿನವೂ ಕೊಯ್ಯುತಿತ್ತು. ಜೊತೆಗೆ ತಿಮ್ಮಪ್ಪನ ನಡತೆ ಧೂರ್ತತೆ ಇದೂ ಅವರ ಆಯಸ್ಸನ್ನು ಚಿಂತೆಗೊಳಗುಮಾಡಿ ಕ್ಷೀಣಗೊಳಿಸುತ್ತಿತ್ತು. ಅವರು ಇದನ್ನೆಲ್ಲ ಸ್ವಲ್ಪವಾದರೂ ಮರೆಯುವುದಕ್ಕೇನೂ ಎಂಬಂತೆ ತಮ್ಮ ಆಸಕ್ತಿಯನ್ನು ಕೋಳಿಬಡ್ಡಿ ಕುರಿಬಡ್ಡಿ ಹಂದಿಬಡ್ಡಿಗಳ ಕಡೆ ಹರಿಸಿ, ದಿನ ನೂಕುತ್ತಿದ್ದರು.

ಐಗಳಿಂದ ವಾರ್ತೆ ತಿಳಿದೊಡನೆಯೆ ಮಂದ ಜಡಸ್ಥಿತಿಯಲ್ಲಿ ಆರೂಢವಾದಂತಿದ್ದ ಸುಬ್ಬಣ್ಣಹೆಗ್ಗಡೆಯವರ ಚೇತನಕ್ಕೆ ಹಠಾತ್ತನೆ ಪೊರೆ ಕಳಚಿದಂತಾಯಿತು: ಕೆಟ್ಟ ಕನಸು ಬಿರಿದು ಕಣ್ದೆರೆದಂತಾಯಿತು. ಅವರ ಅಳಿದುಳಿದ ಜೀವಶಕ್ತಿಯ ಚೈತನ್ಯಸಮಸ್ತವೂ ತನ್ನ ಕೊಟ್ಟ ಕೊನೆಯ ಪ್ರಯತ್ನಕ್ಕಾಗಿ ಹಾರಲು ರೆಕ್ಕೆಗೆದರಿ ಸಿದ್ಧವಾಯಿತು. ಹಿಂದೆ ಎರಡು ಮೂರು ಸಾರಿ ನಿರಾಶೆಗೊಳಗಾಗಿದ್ದರೂ ಈ ಸಾರಿಯೂ ಮಗನನ್ನು ಹಿಂದಕ್ಕೆ ಪಡೆಯುವ ಅವರ ಪ್ರತ್ಯಾಶೆ, ಅದೆ ಮೊದಲನೆಯ ಸಲವೋ ಎಂಬಷ್ಟು ಉತ್ಸಾಹದಿಂದ, ತನ್ನ ಕೊನೆಯ ಸಾಹಸಕ್ಕೆ ತನ್ನೆಲ್ಲವನ್ನೂ ಸಮರ್ಪಿಸಲು ಸಿದ್ಧರಾಗಿ ಕಂಕಣಬದ್ಧವಾಯಿತು, ಹಿಂದಿನ ಸಲಗಳಂತೆ ಗೆಲುವು ಅಥವಾ ಸೋಲು ಎಂಬ ಬುದ್ಧಿಯಿಂದಲ್ಲ, ಗೆಲುವು ಅಥವಾ ಸಾವು ಎಂದು ನಿಶ್ಚಯಿಸಿ!

"ನೀವು ಹುಲಿಕಲ್ಲು ನೆತ್ತಿಗೆ ಹತ್ತಿ ದಾಟಲಾರಿರಿ. ನೀವು ಬರುವುದೇನೂ ಬೇಡ. ನಿಮ್ಮ ಒಪ್ಪಿಗೆ ಇದ್ದರೆ ಸಾಕು.... ಆ ಗುಂಪಿನ ಯಜಮಾನ ಗೋಸಾಯಿಗೆ ಪಾದ್ರಿಯ ಕಡೆಯವರು ಸ್ವಲ್ಪ ದುಡ್ಡು ಕೊಟ್ಟು ಒಲಿಸಿಕೊಳ್ಳಬೇಕಾಯಿತಂತೆ. ಅದನ್ನೆಲ್ಲ ನಾವು ಕೊಡಬೇಕಾಗುತ್ತದೆ. ಅಲ್ಲದೆ ತೀರ್ಥಹಳ್ಳಿಯ ಜಮಾದಾರರು ಅಮಲ್ದಾರರು ಪೋಲೀಸಿನವರು ಡಾಕ್ಟರು ಅದಕ್ಕೆ ಬಹಳ ಮೆಹನತ್ತು ಮಾಡಿದ್ದಾರಂತೆ. ಅವರಿಗೂ ಸ್ವಲ್ಪ ಕೊಡಬೇಕಾಗಿ ಬರಬಹುದು" ಎಂದು ಹೇಳಿದ ಐಗಳಿಗೆ ಸುಬ್ಬಣ್ಣ ಹೆಗ್ಗಡೆ:

ಐಗಳೆ. ನನ್ನ ದೊಡ್ಡಣ್ಣ ಹೋದಮ್ಯಾಲೆ ಈ ಐದಾರು ವರ್ಷ ನಾನು ತಾಳಮದ್ದಲೆ ಪ್ರಸಂಗದಲ್ಲಿ ನೀವು ಹೇಳುತ್ತಿರಲಿಲ್ಲ ಆ ಭೀಷ್ಮಾಚಾರಿಯ ಹಾಂಗೆ ಶರಶಯ್ಯೆಯಲ್ಲಿ ಮಲಗಿದ್ದಾಗಿದೆ...." ಕೊಳಸೆರೆ ಬಿದಿದಂತಾಗಿ ಮುಂದುವರಿಯಲಾರದೆ ಸುಬ್ಬಣ್ಣ ಹೆಗ್ಗಡೆ ತುಸು ತಡೆದು ಗದ್ಗದಧ್ವನಿಯಿಂದಲೆ ಹೇಳತೊಡಗಿದರು. ಆ ಕಠೋರ ಮೈಕಟ್ಟಿನ ಗಂಭೀರ ವೃದ್ಧಮೂರ್ತಿ ಶೋಕವಶನಾಗಿ ಭಾವಾವಿಷ್ಟವಾದ ಅಭೂತಪೂರ್ವ ದೃಶ್ಯವನ್ನು ಕಂಡು ಐಗಳಿಗೆ ಅಚ್ಚರಿಬಡುದಂತಾಯಿತು. ಮೇಲಕ್ಕೆ ನಿರ್ಭಾವನಾಗಿ ನಿಷ್ಠುರನಾಗಿ ಕೃಪಣನಾಗಿ ಕಾಣುತ್ತಿದ್ದ ಆ ಮುದುಕನ ಹೃದಯದ ರಹಸ್ಯಲೋಕದ ಕ್ಷಣಿಕ ಸಂದರ್ಶನದಿಂದ ಐಗಳಿಗೆ ಆತನಲ್ಲಿ ನೈಜವಾದ ಪೂಜ್ಯಬುದ್ಧಿ ಹುಟ್ಟಿತು.

".... ದೊಡ್ಡಣ್ಣ ಇಲ್ಲದ ಮ್ಯಾಲೆ ನಾ.... ನಾ.... ನಾ ಇದ್ದರೇನು? ಹೋ.... ಹೋ.... ಹೋದರೇನು? ಯಾರಿಗಾಗಿ ಈ ಮನೆ ಗದ್ದೆ ತ್ವಾಟ ಎಲ್ಲ? ಆ ನಾಯಿಗೇನು? (ಅವರು ಯಾರನ್ನು ನಿರ್ದೇಶಿಸುತ್ತಿದ್ದರೆ ಎಂಬುದು ಅರ್ಥವಾಯಿತು ಐಗಳಿಗೆ.) ನಂಗೇನು ಕಷ್ಟ ನಂಗೇನು ಹೊಸತಲ್ಲ. ದಿಬ್ಬ ಇಳಿದ್ದಾಂಗೆ ಸಾವಿರ ಸಲ ಹತ್ತಿ ಇಳಿದ್ದೀನಿ, ಪರಾಯದಾಗೆ...."

ಸುಬ್ಬಣ್ಣಹೆಗ್ಗಡೆ ಮೈಮೇಲೆ ಬಂದವರಂತೆ, ಅವರ ವಯಸ್ಸಿಗೆ ಸ್ವಾಭಾವಿಕವಲ್ಲವೊ ಎನ್ನುವಷ್ಟರ ಮಟ್ಟಿಗೆ ಚಟುವಟಿಕೆಯಾಗಿ, ತಮ್ಮ ಕೋಣೆಗ ಹೋಗಿ ಸ್ವಲ್ಪ ಹೊತ್ತಿನಲ್ಲಿಯೆ ಹೊರಗೆ ಬಂದರು. ತಲೆಗೆ ಮುಂಡಾಸು ಸುತ್ತಿದ್ದನು. ಒಂದು ಕಸೆಕಟ್ಟುವ ನಿಲುವಂಗಿಯನ್ನು ಮೊಳಕಾಲು ಮೀರುವಂತೆ ತೊಟ್ಟಿದ್ದರು. ಕೆಂಪಂಚಿನ ಪಂಚೆ ಕಚ್ಚೆ ಹಾಕಿದ್ದರು. ಕೈಯಲ್ಲಿ ದೊಡ್ಡದೊಂದು ಉದ್ದವಾದ ಬೆತ್ತದ ದೊಣ್ಣೆ ಹಿಡಿದಿದ್ದರು. ಅವರನ್ನು ಕಂಡ ಐಗಳಿಗೆ ಪ್ರಾಯಕಾಲದ ಸುಬ್ಬಣ್ಣಹೆಗ್ಗಡೆಯವರ ಮಸುಗು ನೆನಹು ಮರುಕೊಳಿಸಿತ್ತು.

“ಬನ್ನಿ, ಐಗಳೆ, ನಿಮ್ಮ ಹುಲಿಕಲ್ ನೆತ್ತಿ ಎಷ್ಟು ಎತ್ತರ ಆಗ್ಯದೆ? ನೋಡಾನ ಬನ್ನಿ” ಎಂದು ನಗುತ್ತಾ ತೆಣೆಯ ಮೂಲೆಯಲ್ಲಿದ್ದ ಒಂದು ಜೊತೆ ಪ್ರಾಚೀನವಾಗಿ ಒಣಗಿ ಮಡಿಚಿಕೊಂಡಿದ್ದ ಭಾರಿ ಮೆಟ್ಟುಗಳಿಗೆ ಕಾಲು ತೂರಿಸಿಕೊಂಡು ಹೊರಟರು: ಕಣ್ಣಿದ್ದು ನೋಡುವವರಿದ್ದಿದ್ದರೆ ಆ ದೃಶ್ಯ ನಿಜವಾಗಿ ಭವ್ಯ ತೋರುತ್ತಿದ್ದುದರಲ್ಲಿ ಸಂದೇಹವಿಲ್ಲ!

ಮೇಗರವಳ್ಳಿಯಲ್ಲಿ, ಅಂತಕ್ಕ ಸೆಡ್ತಿಯ ಮನೆಯಿಂದ ಮೇಲೆ ಸುಮಾರು ಎರಡು ಮೂರು ಫರ್ಲಾಂಗು ದೂರದಲ್ಲಿ, ಒಂದು ಎತ್ತರವಾದ ದಿಬ್ಬದ ಮೇಲೆ ಮಿಶನ್ ಇಸ್ಕೂಲ್ ಕಟ್ಟಡ ತಯಾರಾಗುತ್ತಿತ್ತು. ಕಟ್ಟಡ ದೊಡ್ಡದೇನೂ ಅಲ್ಲ; ಮೂರು ಅಂಕಣದ್ದು. ಎದುರು ಬದುರಾಗಿ ಎರಡು ಕಿಟಕಿ, ಒಂದೇ ಬಾಗಿಲು. ಮಣ್ಣಿನ ಗೋಡೆ ಎಬ್ಬಿಸಿ, ಕೈಹೆಂಚು ಹೊದಿಸಿದ್ದರು.

ಆಗತಾನೆ ಹಳೆಯ ತರಹದ ಕೂಲಿಮಠಗಳ ಕಾಲವೂ ಹಳೆಯ ವಿದ್ಯಾಭ್ಯಾಸ ಪದ್ಧತಿಯೂ ಮುಕ್ತಾಯಗೊಂಡು, ಆಂಗ್ಲೇಯರ ಆಡಳಿತದ ರೀತಿಯೂ ಇಂಗ್ಲೀಷಿನ ಪ್ರಭಾವವೂ ಮೊಳೆದೋರುತ್ತಿದ್ದ ಸಂಧಿಸಮಯ. ಮಲೆನಾಡಿಗೆ ಆ ಹೊಸ ಪ್ರಭಾವದ ಮುಂಬೆಳಕನ್ನು ಮೊತ್ತಮೊದಲು ತರುವುದರಲ್ಲಿ ಕ್ರೈಸ್ತಪಾದ್ರಿಗಳ ಕಾರ್ಯ ಗಣನೀಯವಾಗಿತ್ತು, ಶ್ಲಾಘನೀಯವಾಗಿತ್ತು. ತಮ್ಮ ಮತಕ್ಕೆ ಜನರನ್ನು ಸೇರಿಸಿಕೊಳ್ಳುವ ಧಾರ್ಮಿಕ ಪ್ರಯತ್ನಕ್ಕೆ ಪೀಠಿಕೆಯಾಗಿತ್ತು ಈ ಲೌಕಿಕ ಸೇವಾ ಕರ್ಮ. ಸಾಮಾನ್ಯ ಜನ ಬಹುಕಾಲದಿಂದಲೂ ಹಿಂದೂಧರ್ಮದ ಹೆಸರಿನಲ್ಲಿ ಬ್ರಾಹ್ಮಣರು ಒಡ್ಡಿದ ಮೂಢಮತಾಚಾರಗಳ ಕೂಣಿಗೆ ಸಿಕ್ಕಿಬಿದ್ದಿದ್ದರು. ಅವರನ್ನು ಆ ಕೂಣಿಯಿಂದ ತಪ್ಪಿಸಿ ರಕ್ಷಿಸುವ ನೆವದಲ್ಲಿ ಕ್ರೈಸ್ತಪಾದ್ರಿಗಳು ತಮ್ಮ ಮತದ ಬಲೆಯನ್ನು ಬೀಸಿ ಅದರೊಳಕ್ಕೆ ಹಾರಿ ಬೀಳುವ ಪ್ರಾಣಿಗಳನ್ನು ಭಕ್ಷಿಸುವ ಅಥವಾ ಅವರ ರೀತಿಯಲ್ಲಿ ರಕ್ಷಿಸುವ ಅಭಿಸಂಧಿಯನ್ನಿಟ್ಟುಕೊಂಡಿದ್ದರು. ಮಂಡಗದ್ದೆಯಲ್ಲಿ ಹೆರಿಗೆ ಆಸ್ಪತ್ರೆ ಸ್ಥಾಪಿಸಿ ಸ್ಥಾಪಿಸಿದಂತೆ ತೀರ್ಥಹಳ್ಳಿ ದೇವಂಗಿ ಮೊದಲಾದೆಡೆಗಳಲ್ಲಿ ಸ್ಕೂಲುಗಳನ್ನೂ ಸ್ಥಾಪಿಸಿದ್ದರು. ಮಲೇರಿಯಾದಲ್ಲಿ ನರಳಿ ನೂರಕ್ಕೆ ತೊಂಬತ್ತೊಂತ್ತರಷ್ಟು ಬಸಿರಿ - ಬಾಣಂತಿ - ಸಾವನ್ನಪ್ಪುತ್ತಿದ್ದ ತರುಣ ವಯಸ್ಸಿನ ಮಾತೆಯರನ್ನು ಕಾಪಾಡಿ, ತಾವು ಕರುಣೆಯ ಅವತಾರವಾಗಿದ್ದ ಯೇಸುಕ್ರಿಸ್ತನ ಅನುಯಾಯಿಗಳೆಂಬುದನ್ನು ಪ್ರತ್ಯಕ್ಷ ನಿದರ್ಶದಿಂದ ತೀರಿಸಿಕೊಟ್ಟು, ಜನರ ಅನುರಾಗ ವಿಶ್ವಾಸಗಳನ್ನೂ ಕೃತಜ್ಞತೆಯನ್ನೂ ಸೂರೆಗೊಂಡು, ಅದನ್ನು ತಮ್ಮ ಮೂಲೋದ್ದೇಶ ಮತ್ತು ಮೂಲಕರ್ತವ್ಯವಾಗಿದ್ದ ಮತಾಂತರಗೊಳಿಸುವ ಕಾರ್ಯಕ್ಕೆ ಉಪಯೋಗಿಸಿಕೊಂಡರು..

ಆ ದಿನ ಆ ‘ಇಸ್ಕೂಲುಮನೆ’ಯಲ್ಲಿ ಒಂದು ಸಣ್ಣ ಗುಂಪು ನೆರೆದಿತ್ತು. ಅವರಲ್ಲಿ ಕೆಲವರು ಆ ಕಟ್ಟಡ ಕಟ್ಟುವ ಕೆಲಸದಲ್ಲಿ ಪ್ರವೃತ್ತರಾದವರು. ಒಬ್ಬಿಬ್ಬರು ಯಾವ ಕೆಲಸವೂ ಇಲ್ಲದ ಉಂಡಾಡಿ ಪ್ರೇಕ್ಷಕರು. ಅವರ ನಡುವೆ ಪಾದ್ರಿ ಜೀವರತ್ನಯ್ಯನೂ ಆ ಸ್ಕೂಲಿನ ಕಂತ್ರಾಟು ವಹಿಸಿಕೊಂಡಿದ್ದ ಕಣ್ಣಾಪಂಡಿತನೂ ಪರಿಶೀಲನೆ ನಡೆಸುತ್ತಾ ಅತ್ತಿಂದಿತ್ತ ಇತ್ತಿಂದಿತ್ತ ತಿರುಗಾಡುತ್ತಿದ್ದರು. ಕಂತ್ರಾಟುದಾರ ಕಣ್ಣಾಪಂಡಿತನ ಕೈಲಿ ಒಂದು ಅಳತೆಗೋಲೂ ದಾರದುಂಡೆಯೂ ಇದ್ದುವು. ಪಾದ್ರಿಯ ಕೈಲಿ ಒಂದು ಕೈಪುಸ್ತಕ ಸೀಸದಕಡ್ಡಿ ಇದ್ದುವು.

ಇನ್ನೂ ಪೂರ್ತಿ ಪೂರೈಸಿದ್ದ ಇಸ್ಕೂಲಿನ ಸುತ್ತಮುತ್ತ ಕಲಸಿದ್ದ ಕೆಮ್ಮಣ್ಣು ಗುಪ್ಪೆಗಳೂ, ಕತ್ತರಿಸಿದ್ದ ಬಿದಿರಿನ ಗಳುಗಳೂ, ಸೀಳಿದ್ದ ಅಡಕೆ ಮರದ ದಬ್ಬೆಗಳೂ, ಕೆತ್ತಿದ್ದ ಮರದ ಹಸಿಹಸಿ ಸಿಬುರುಗಳೂ, ಕಟ್ಟಿ ಬಿಗಿಯುವುದಕ್ಕಾಗಿ ಕಾಡಿನಿಂದ ತಂದಿದ್ದ ತರತರಹದ ಹಂಬಗಳೂ. ಕತ್ತದ ಕಿರುಮಿಣಿಯ ಉಂಡೆಗಳೂ, ಉಗುಳಿದ್ದ ಎಲೆಯಡಕೆಯ

ಕೆಂಬಣ್ಣ ಮೆತ್ತಿ ನೊಣವಾಡುತ್ತಿದ್ದ ಉಂಡೆಸೆದ ಹಾಳೆಕೊಟ್ಟೆಗಳೂ ಅಸ್ತವ್ಯಸ್ತವಾಗಿ ಬಿದ್ದಿದ್ದುವು. ಹೊಸತನದ ಒಂದು ಹಸಿವಾಸನೆ ಸುತ್ತಲೂ ತುಂಬಿತ್ತು.

ಪಾದ್ರಿ ಒಂದು ಕಡೆ ನಿಂತು “ಇದು ಏನು, ಕಣ್ಣಾಪಂಡಿತರೆ? ಏಕೆ ಹೀಗೆ ಅಗೆಯಿಸಿದ್ದೀರಲ್ಲಾ?” ಎಂದರು.

“ಅತು ಅಗೆಯಿಸಿತ್ತಲ್ಲ, ಪಾತ್ರಿಗಳೆ. ರಾತ್ರಿಕತ್ತಲಲ್ಲಿ ಹಂತಿ ಉತ್ತಿತ್ತಲ್ದಾ?” ಎಂದರು ಪಂಡಿತರು, ಪಾದ್ರಿಯ ಅಜ್ಞಾನಕ್ಕೆ ಕನಿಕರದ ನಗೆ ಬೀರುತ್ತಾ.

“ಏನಂದಿರಿ?” ಪಾದ್ರಿಗೆ ಪಂಡಿತನ ಮಾತು ಅರ್ಥವಾಗಲಿಲ್ಲ.

“ ಹಂತಿ ಉತ್ತಿತ್ತು! ಹಂತಿ! ಹಂತಿ!” ಎಂದು ಒತ್ತಿ ಹೇಳಿದರು ಪಂಡಿತರು.

ತುಸು ದೂರದಲ್ಲಿದ್ದು ಅವರ ಕಡೆ ನೋಡುತ್ತಿದ್ದ ಚೇಂಕ್ರ “ಹಂದಿ ಉತ್ತಿತ್ತು ಅಂಬ್ರು ಪಂಡಿತರು!” ಎಂದು ಸ್ಪಷ್ಟಪಡಿಸಿದನು.

“ಸ್ಕೂಲಿನ ಹತ್ತಿರಕ್ಕೆ ಹಂದಿಗಳನ್ನು ಏಕೆ ಬಿಟ್ಟರಿ?” ಪಾದ್ರಿ ತರಾಟೆಗೆ ತೆಗೆದುಕೊಳ್ಳುವ ರೀತಿಯಲ್ಲಿ ಕೇಳಿದ್ದನು.

ಪಂಡಿತನಿಗೆ ನಗೆ ತಡೆಯಲಾಗಲಿಲ್ಲ: “ಕಾಡಿನ ಹಂತಿ ಅಲ್ಲವೆ? ನಾವು ಬಿಡುವುದೇನು ಬಂತು? ದಿನವೂ ರಾತ್ರಿ ಬಂದು ಉತ್ತುತ್ತಿವೆ!” ಎಂದನು.

ಚೇಂಕ್ರ ತನ್ನ ವಿಶೇಷ ಜ್ಞಾನವನ್ನು ಮರೆಯಲು ನಡುವೆ ಬಾಯಿಹಾಕಿ, ಒಂದು ಜಾತಿಯ ಹೂವಿದ್ದ ಗಿಡವನ್ನು ತೋರಿಸಿ “ಈ ಹಂದಿಪುಟ್ಟಿನ ಗೆಡ್ಡೆ ಇದೆಯಲ್ಲಾ ಅದರ ರುಚಿಗೆ” ಎಂದು ಪಂಡಿತನಿಂದಲೂ ತನ್ನ ಕನ್ನಡ ಮೇಲು ಮೆಟ್ಟದ್ದು ಎಂಬ ಹೆಮ್ಮೆಯಿಂದ ಹೇಳಿದನು.

“ನಾನು ಹೇಳಲಿಲ್ಲವೆ ನಿಮಗೆ, ಈ ಕಾಡಿನಲ್ಲಿ ಇಸ್ಕೂಲು ಮಾಡಿದರೆ ಕಾಡು ಪ್ರಾಣಿಗಳೆ ಸ್ಯೆ ಓದಲಿಕ್ಕೆ ಬರುವುದು ಎಂದು”

ಪಂಡಿತನ ವಿನೋದವನ್ನು ನಿರ್ಲಕ್ಷಿಸಿ ಪಾದ್ರಿ “ಇದೆಲ್ಲ ಏನು? ಹಿಕ್ಕೆ ಬಿದ್ದಿದೆಯಲ್ಲಾ?” ಎಂದನು.

“ಅತು ಮೊಲದ ಹಿಕ್ಕೆ ಅಲ್ಲವೊ?”

“ಸ್ಕೂಲಿನ ಹತ್ತಿರವೆ ಇಷ್ಟು ಕಾಡು ಇರುವುದು ಮಕ್ಕಳಿಗೆ ಕ್ಷೇಮವಲ್ಲ. ಕಾಡು ಕಡಿದು ಇನ್ನೂ ಸುತ್ತಲಿನ ಬಯಲನ್ನು ವಿಸ್ತರಿಸಬೇಕು.” ಪಾದ್ರಿ ಆಜ್ಞೆಮಾಡಿದನು.

“ಹೋಯ್, ಚೇಂಕ್ರ ಸೇರೆಗಾರ, ಕೇಳಿತಿಯಾ?” ಎಂದು ಪಂಡಿತ ಚೇಂಕ್ರನ ಕಡೆ ಮುಖಮಾಡಿದನು.

"ಅದಕ್ಕೇನು? ಮಾಡುವಾ. ಒಂದಿಪ್ಪತ್ತು ಮೂವತ್ತು ಆಳು ಬಿದ್ದೀತಷ್ಟೆ?"

ಪಾದ್ರಿ ದಿಗಿಲು ಬಿದ್ದವನಂತೆ ಚೇಂಕ್ರ ಕಡೆನ ನೋಡಿ "ಅಷ್ಟು ಏಕೆ? ಅದು ಭಾರಿ ದುಬಾರಿ." ಎಂದು ಕಿಟಕಿಯ ಕಡೆಗೂ ಮಣ್ಣಿನ ಗೊಡೆಯ ಮೇಲೆ ಹಾಕಿದ್ದ ತೊಲೆಯ ಕಡೆಗೂ ನೋಡುತ್ತಾ "ಇದು ತೇಗದ ಮರದ್ದು ತಾನೆ?" ಎಂದು ಕೇಳಿದನು.

"ಅಲ್ಲ, ಪಾತ್ರಿಗಳೆ, ಇದು ತ್ಯಾಗ ಅಲ್ಲ. ಅದಕ್ಕಿಂತ ಗಟ್ಟಿ. ಈ ಕಿಟಕಿ ನೋಡಿ. ಇತು ಹೆಬ್ಬಲಸು. ಈ ತೊಲೆ ಇತೆಯಲ್ಲಾ ಇತು ಹೊನ್ನೆ. ಎಂಥ ಕೆಂಚು ಇತೆ ಅನ್ನುತ್ತೀರಿ? ಒಂದು ವರ್ಷಕ್ಕೇನೂ ಅಡ್ಡಿ ಇಲ್ಲ...."

"ಮಳೆಗಾಲದಲ್ಲಿ ಈ ಮಣ್ಣಿನ ಗೋಡೆ ಇರಿಸಲು ಹೊಡೆದು ಬಿದ್ದುಹೋಗಬಾರದು. ಇನ್ನೇನು ಮಳೆಗಾಲ ಪ್ರಾರಂಭ ಆಗುತ್ತದೆ. ಇರಿಸಲು ತಟ್ಟಿ ಕಟ್ಟಿಸಿಬಿಡಿ...."

"ಆತಕ್ಕೇ ಕಾಣಿ, ಈ ಕಡಿಮಾಡು ಇಷ್ಟು ನೆಲಕ್ಕೆ ಮುಟ್ಟಿ ಬಗ್ಗಿಸಿತ್ತೇನೆ. ಎಂಥಾ ಅಡ್ಡಗಾಳಿ ಬೀಸಿತರೂ ಇತಕ್ಕೆ ತಗಲುವುತಿಲ್ಲ ಇರಿಸಲು. ಆತರೂ ನೀವು ಹೇಳಿತ ಮೇಲೆ, ಕಟ್ಟಿಸುತ್ತೆ ಇರಿಸಲು ತಟ್ಟೆ...."

ಹೊರಭಾಗದ ಪರಿಶೀಲನೆಯನ್ನು ಮುಗಿಸಿ, ಮಾಡಬೇಕಾದ ಟೀಕೆಗಳನ್ನು ಮಾಡಿ, ಕೊಡಬೇಕಾದ ಸಲಹೆಗಳನ್ನು ಕೊಟ್ಟು; ಪಾದ್ರಿ ಬಾಗಿಲ ಬಳಿಗೆ ಬಂದನು, ಒಳಗೆ ದಾಟಲೆಂದು. ನೋಡುತ್ತಾನೆ, ಒಳಗೆಲ್ಲ ಸೆಗಣಿ, ಕುರಿಹಿಕ್ಕೆ!

"ಇದೇನು, ಪಂಡಿತರೆ, ಸ್ಕೂಲೋ ಕೊಟ್ಟಿಗೆಯೋ?"

"ಹಾಳು ಈ ತನಾಕಾಯುವ ಮುಂಡೇ ಮಕ್ಕಳಿಂತ ಸುಕಾ ಇಲ್ಲ!" ಎಂದು ಪಂಡಿತ ಪ್ರಾರಂಭಿಸುತ್ತಿದ್ದುದನ್ನು ತಡೆದು, ಪಾದ್ರಿ ತುಂಬ ಗಂಭೀರವಾಗಿ ಉಪದೇಶ ಮಾಡಿದನು: "ಪಂಡಿತರೆ, ಕೆಟ್ಟಮಾತು ಆಡಬಾರದು. ನಮ್ಮ ಕ್ರೈಸ್ತ ಧರ್ಮದಲ್ಲಿ ಅದು ಬಹಳ ಪಾಪಕರ."

"ಒಪ್ಪಿತೆ. ಪಾತ್ರಿಗಳೆ, ತಪ್ಪಾಯಿತು! ಆತರೆ ಏನುಮಾಡುವುತು ಹೇಳಿ? ಹೇಳಿ ಹೇಳಿ ಸಾಕಾಯಿತು ಈ ಸೂಳೆಮಕ್ಕಳಿಗೆ! ಮೊನ್ನೆ ಮಳೆ ಬಂದಿತಲ್ಲಾ? ತನಾ ಕುರಿ ಎಲ್ಲ ಇತರೊಳಗೆ ನುಗ್ಗಿಸಿಬಿಟ್ಟಿತ್ತಾರೆ.... ಈ ಬಾಕಿಲಿಗೆ ಒಂದು ಸರಪಣಿ ಚಿಲಕ ಮಾಡಿಸಿ ಹಾಕುತ್ತೇನೆ. ಒಂದು ಒಳ್ಳೆ ಬೀಕ ತಂದುಕೊಟ್ಟುಬಿಡಿ. ತೀರ್ಥಹಳ್ಳಿಯಲ್ಲಿ ಆ ಕಬ್ಬಿಣದ ಸಾಬರ ಅಂಗಡಿಯಲ್ಲಿ ಸಿಕ್ಕುತ್ತದೆ. ಹಾಕಿಸಿಬಿತ್ತೇನೆ. ಆಮೇಲೆ ಈ ಲವಡಿ ಮಕ್ಕಳು ಹ್ಯಾಂಗೆ ಒಳಗೆ ತನಾ ಕುರಿ ಬಿಡುತ್ತಾರೆ? ನೋಡುವಾ!"

ಪಾದ್ರಿ ಸೆಗಣಿ ಹಿಡಿಯುದಂತೆ ಉಟ್ಟ ಪಂಚೆಯನ್ನು ಎಡಗೈಯಲ್ಲಿ ತುಸು ಎತ್ತಿ ಹಿಡಿದುಕೊಂಡು ನೆಸೆದು ನೆಸೆದು ಒಳಗೆ ದಾಟಿದನು. ಪಂಡಿತನೂ ಸಗಣಿಯನ್ನಾಗಲಿ ಕುರಿಹಿಕ್ಕೆಯನ್ನಾಗಲಿ ಲೆಕ್ಕಿಸದೆ ಹಿಂಬಾಲಿಸಿದನು. ಹೊಸದಾಗಿ ತಯಾರಿಸಿದ್ದ ಒರಟು ಒರಟಾದ ಸ್ಥೂಲಕಾಯದ ಮರದ ಕುರ್ಚಿಯೊಂದು ಎದುರು ಗೋಡೆಗೆ ಆನಿಸಿ ನಿಂತಿತ್ತು. ಎಡಬಲ ಪಕ್ಕದ ಗೋಡೆಗಳಿಗೆ ಮುಟ್ಟಿದಂತೆ ಎರಡೆರಡು ಉದ್ದನೆಯ ಕಾಲುಮಣೆಗಳಿದ್ದವು. (ಪಾದ್ರಿ ಅವನ್ನು ಬೆಂಚು

ಎಂದು ಕರೆಯುತ್ತಿದ್ದನು ಅವನನ್ನು ಅನುಕರಿಸುವವರು 'ಬೆಂಚು' ಎಂದು ಅದರ ಉಚ್ಚಾರಣೆಯನ್ನು ಸುಧಾರಿಸಿದ್ದರು!) ಮೇಜಿನ ರೂಪದ ಒಂದು ಸ್ಥೂಲಾಕೃತಿಯ ಚೌಕನೆಯ ಎತ್ತರದ ಕಾಲುಮಣೆ ಕುರ್ಚಿಯ ಮುಂದೆ ನಿಂತಿತ್ತು.

"ಕಣ್ಣುಪಂಡಿತರೆ, ಸ್ಕೂಲು ಅಂದಮೇಲೆ ಚೆನ್ನಾಗಿ ಗಾಳಿ ಬೆಳಕು ಓಡಾಡುವಂತಿರಬೇಕು. ಓದುವ ಮಕ್ಕಳ ಆರೋಗ್ಯಕ್ಕೆ ಅದು ಬಹಳ ಆವಶ್ಯಕ. ಇಲ್ಲಿ ಬೆಳಕೂ ಸಾಲದೂ, ಗಾಳಿಗೂ ದಾರಿಯಿಲ್ಲ. ಇನ್ನೂ ಎರಡು ಕಿಟಕಿ ಇಟ್ಟಿದ್ದರೆ?"

"ನಿಮಕೆ ಕೊತ್ತಿಲ್ಲ, ಪಾತ್ರಿಗಳೆ. ಇತು ಬಯಲುಸೀಮೆ ಅಲ್ಲ; ಮಲೆಸೀಮೆ. ಮಳೆ ಗಾಳಿ ಸುರು ಆಯ್ತು ಅಂದರೆ ಇದ್ದ ಕಿಟಕೀನೂ ಮುಚ್ಚಬೇಕಾಗಿತ್ತೆ…."

ಕುರ್ಚಿ ಬೆಂಚು ಮೇಜುಗಳನ್ನು ಪರಿಶೀಲಿಸಿ, ಇನ್ನೂ ಸ್ವಲ್ಪ ನಾಜೋಕಾಗಿರಬೇಕೆಂದು ಸಲಹೆ ಕೊಟ್ಟು, ಅಲ್ಲಿ ತುಂಬಿದ್ದ ಸೆಗಣಿ ಕುರಿಹಿಕ್ಕೆಯ ಮತ್ತು ಗಂಜಲದ ದುರ್ಗಂಧವನ್ನು ಸಹಿಸಲಾರದೆ, ಮೂಗಿಗೊಂದು ಕರವಸ್ತ್ರವನ್ನು ಅಡ್ಡಹಿಡಿದುಕೊಂಡು, ಪಾದ್ರಿ ಆದಷ್ಟು ಬೇಗನೆ ಹೊರಹೊರಟನು.

"ಸ್ಕೂಲಿಗೆ ಒಂದು ಬಾವಿ ತೆಗೆಸಬೇಕು, ಪಂಡಿತರೆ…. ಎಲ್ಲಿ ಬೆಟ್ಟಳ್ಳಿ ದೇವಯ್ಯಗೌಡರು ಇನ್ನೂ ಬರಲಿಲ್ಲವೆ? ಅವರ ಬೈಸಿಕಲ್ಲಿನ ಗಂಟೆ ಸದ್ದು ಆಗಲೆ ಕೇಳಿಸಿದ್ದ ಹಾಗಿತ್ತು?" ಎಂದು ಜೀವರತ್ನಯ್ಯ ಅತ್ತ ಹುಡುಕಿ ನೋಡಿದರು.

ಚೀಂಕ್ರ "ಅಂತಕ್ಕಸೆಡ್ತೀರ ಮನೀಗೆ ಹ್ವಾದ್ರು ಅಂಬಹಾಂಗೆ ಕಾಣ್ತದೆ" ಎಂದು ಎಲೆಯಡಿಕೆ ಜಗಿದು ಕೆಂಪಾಗಿದ್ದ ಹುಳುಕು ಹಲ್ಲು ಬಿಟ್ಟು ನಗುತ್ತಾ, ಪಂಡಿತರ ಕಡೆಗೆ ಇಂಗಿತವಾಗಿ ದೃಷ್ಟಿ ಬೀರಿದನು. ಅವನು ಮುಡಿದಿದ್ದ ಹೂವನ್ನು ನೋಡಿ ಪಾದ್ರಿಗೆ ನಗೆ ಬರುವ ಹಾಗಾಯಿತು.

* * *

ಹೊಸದಾಗಿ ಬೈಸಿಕಲ್ಲು ಕಲಿತು ಏರಿದ್ದ ಅಮಲು ಇನ್ನೂ ಇಳಿದಿರಲಿಲ್ಲ, ಬೆಟ್ಟಳ್ಳಿ ದೇವಯ್ಯನಿಗೆ. ರಸ್ತೆಗಳೆ ಅಪೂರ್ವವಾಗಿದ್ದ ಆ ಕಾಲದಲ್ಲಿ, ಇದ್ದ ರಸ್ತೆಗಳೂ ಕೊರಕಲು ಬಿದ್ದುಹೋಗಿದ್ದರೂ ದೇವಯ್ಯ ಎಲ್ಲ ಕಡೆಗಳಿಗೂ, ಸಿಕ್ಕಿದೆ ಅವಕಾಶ ಎಂದಿಕೊಂಡು, ಬೈಸಿಕಲ್ಲಿನಲ್ಲಿಯೆ ಸವಾರಿ ಮಾಡುತ್ತಿದ್ದನು. ತಮ್ಮ ಜಮೀನಿನಲ್ಲಿ ಆಳುಗಳು ಕೆಲಸ ಮಾಡುವುದನ್ನು ನೋಡಿಕೊಂಡು ಬರಲೂ ಬೈಸಿಕಲ್ಲಿನ ಮೇಲೆಯೆ ಹೋಗಿಬರುತ್ತಿದ್ದನು, ಅದು ಒಂದೇ ಫರ್ಲಾಂಗು ಆಗಿದ್ದರೂ ಚಿಂತೆಯಿಲ್ಲ. ಆ ಹುಮ್ಮಸ್ಸಿನಲ್ಲಿ ಕೆಲುವು ಸಾರಿ ಬೈಸಿಕಲ್ಲಿನಿಂದ ಬಿದ್ದು ಮುಖ ಮೋರೆ ಒಡೆದುಕೊಂಡಿದ್ದರೂ ಅದನ್ನು ಲಕ್ಷಿಸಿರಲಿಲ್ಲ. ಒಮ್ಮೆ ಮೋರಿಯೊಂದರಿಂದ ಅದರ ಕಲ್ಲು ಕಟ್ಟನೆಗೆ ಡಿಕ್ಕಿ ಹೊಡೆದು ಕೆಳಗೆ ಹಳ್ಳಕ್ಕೆ ಎಗರಿ ಬಿದ್ದು ಪ್ರಾಣಾಪಾಯವೂ ಆಗುವುದರಲ್ಲಿತ್ತು. ಏನಾದರೂ ಅವನಿಗೆ ಬೈಸಿಕಲ್ಲು ಸವಾರಿಯ ಷೋಕಿ ಕುದುರೆ ಸವಾರಿಯ ಷೋಕಿಗಿಂತಲೂ ಹೆಚ್ಚಾಗಿ ಅಮರಿಬಿಟ್ಟಿತ್ತು.

ಆ ಬೈಸಿಕಲ್ಲು ಪಾದ್ರಿಯಿಂದ ತನಗೆ ಬಹುಮಾನವಾಗಿ ಬಂದಿದೆ ಎಂದು ಅವನು ತಿಳಿದುಕೊಂಡಿದ್ದರೂ ಎಲ್ಲರೊಡನೆಯೂ ತಾನು ಹಣ ಕೊಟ್ಟೆ ಕೊಂಡದ್ದು ಎಂದು ಹೇಳಿದ್ದನು. ನಿಜಾಂಶ ಎರಡಕ್ಕೂ ಬೇರೆಯಾಗಿತ್ತು. ಆ

ಬೈಸಿಕಲ್ಲೂ, ಅವನಿಗೆ ಪಾದ್ರಿಯಿಂದ ಬಂದಿದ್ದ ಇತರ ಅನೇಕ ಬಹುಮಾನಗಳಂತೆ, (ಉದಾಹರಣೆಗೆ, ಗೋಡೆಗೆ ತಗುಲಿಸುವ ದೊಡ್ಡ ಗಡಿಯಾರ.) ಅವನೂ ಕ್ರೈಸ್ತನಾಗಿ ಇತರರನ್ನೂ ಕ್ರೈಸ್ತಮತಕ್ಕೆ ಸೇರಿಸುವ ಸಲುವಾಗಿ ಕೊಟ್ಟಿದ್ದ ಮುಂಗಾಣಿಕೆಯಾಗಿತ್ತು. ಅದರ ಪಾದ್ರಿಗೆ ತಾನು ಏನನ್ನು ಮಾಡುತ್ತಿದ್ದೇನೆ ಎಂಬುದರ ಸ್ಪಷ್ಟ ಅರಿವು ಇತ್ತು. ತಾನು ಉಪದೇಶಿಯ ಸ್ಥಾನದಿಂದ ರೆವರೆಂಡಿನ ಪಟ್ಟಕ್ಕೆ ಏರಬೇಕಾದರೆ ಎಷ್ಟು ಜನರನ್ನು ಕಿಲಸ್ತರ ಜಾತಿಗೆ ಸೇರಿಸಬೇಕು ಎಂಬ ಪಟ್ಟಕ್ಕೆ ಅವನ ಬೊಕ್ಕಣದಲ್ಲಿ ಸದಾ ಹಸಿದು ಬಾಯ್ದೆರೆದಿತ್ತು.

ಜೀವರತ್ನಯ್ಯ ಹೇಳಿಕಳುಹಿಸಿದ್ದಂತೆ 'ಇಸ್ಕೂಲುಮನೆ' ನೋಡಲೆಂದು ಬೆಟ್ಟಳ್ಳಿಯಿಂದ ಬೈಸಿಕಲ್ಲು ಹತ್ತಿ ಬಂದಿದ್ದ ದೇವಯ್ಯ, ಅನಾವಶ್ಯಕವಾಗಿ ಟ್ರಿಂಟ್ರಿಂಟ್ರಿಂ ಗಂಟೆ ಬಾರಿಸುತ್ತ, ಅಂತಕ್ಕನ ಮನೆಯ ಉಣುಗೋಲು ತೆಗೆದು ದಾಟಿ, ಬೈಸಿಕಲ್ಲನ್ನು ಅಂಗಳಕ್ಕೆ ನೂಕಿಕೊಂಡೆ ಹೋಗಿ, ಅದನ್ನು ತೆಣೆಗೆ ವಾಲಿಸಿಟ್ಟು, ಜಗಲಿಗೆ ಹತ್ತಿ, ನೇರವಾಗಿ ಒಳಕ್ಕೆ ಹೋದನು. ಅವನ ಚಲನವಲನಗಳೆಲ್ಲ ಅವನು ಆ ಮನೆಗೂ ಮನೆಯವರಿಗೂ ಬಹುಕಾಲದಿಂದಲೂ ತುಂಬ ಪರಿಚಿತನೆಂಬುದನ್ನು ತೋರುವಂತಿತ್ತು.

ಆಗತಾನೆ ಮಿಂದು, ತಟ್ಟಿಗೋಡೆಯ ಬಚ್ಚಲು ಮನೆಯಲ್ಲಿ ಸೀರೆ ಉಟ್ಟುಕೊಳ್ಳುತ್ತಿದ್ದ ಅಂತಕ್ಕನ ಮಗಳು ಕಾವೇರಿಗೆ ಬೈಸಿಕಲ್ಲಿನ ಗಂಟೆಸದ್ದು ಕೇಳಿಸಿದೊಡನೆಯ ಮೊಗದ ಮೇಲೆ ನಗೆಯ ಮುಗುಳು ಮೂಡಿ ಮಲರಿತು. ಕನ್ನಡ ಜಿಲ್ಲೆಯ ಸೆಟ್ಟರ ಹೆಂಗಸರು ಉಡುವಂತೆ ಸೀರೆ ಉಟ್ಟುಕೊಳ್ಳುತ್ತಿದ್ದವಳು ಅಷ್ಟಕ್ಕೆ ನಿಲ್ಲಿಸಿ ಸೊಂಟಕ್ಕೆ ಸುತ್ತಿದ್ದನ್ನು ಕೈಯಲ್ಲಿ ಹಿಡಿದುಕೊಂಡೆ, ಯಾರಾದರೂ ಕಂಡಾರೊ ಎಂದು ಅತ್ತಿತ್ತ ಕಣ್ಣಟ್ಟಿ, ಸೊಂಟದ ಮೇಲಿನ ಮೈ ಬತ್ತಲೆಯಾಗಿಯೆ ಬಳಿಯಿದ್ದ ತನ್ನ ಕೋಣೆಗೆ ಓಡಿ ಹೋಗಿ ಬಾಗಿಲು ಓರೆಮಾಡಿಕೊಂಡಳು. ಆ ಕೋಣೆಯ ಅರೆಗತ್ತಲೆಯಲ್ಲಿ ಸೀರೆಯನ್ನು ಕಳಚಿಯ ಹಾಕಿ, ಬತ್ತಲೆಯ ನಿಂತು, ಮತ್ತೊಂದು ಸೀರೆಗಾಗಿ ಬಿದಿರಿಗಳುವಿನ ಮೇಲೆ ಮಡಿಚಿಟ್ಟಿದ್ದ ಸೀರೆಗಳಲ್ಲಿ ತಡಕಾಡಿ, ಒಂದನ್ನು ಗುರುತಿಸಿ ಎಳೆದಳು. ಅದನ್ನು ಬೆಳಕಂಡಿಯ ಹತ್ತಿರಕ್ಕೆ ಹಿಡಿದು, ಬೆಟ್ಟಳ್ಳಿ ದೇವಯ್ಯಗೌಡರು ಕೆಲವು ದಿನಗಳ ಹಿಂದೆ ತಂದುಕೊಟ್ಟಿದ್ದ ಹೊಸಸೀರೆ ಎಂಬುದನ್ನು ನಿಶ್ಚಯ ಮಾಡಿಕೊಂಡು, ಉಟ್ಟುಕೊಳ್ಳುತೊಡಗಿದಳು, ಗಟ್ಟದ ತೆಗ್ಗಿನವರು ಉಟ್ಟುಕೊಳ್ಳುವಂತಲ್ಲ, ಗಟ್ಟದ ಮೇಲಿನವರು ಉಟ್ಟುಕೊಳ್ಳುವಂತೆ, ಗೊಬ್ಬೆ ಸೆರಗು ಹಾಕಿ.

ಅಷ್ಟರಲ್ಲಿ ಅವಳ ತಾಯಿ ಕರೆದದ್ದು ಕೇಳಿಸಿತು:

"ಕಾವೇರೀ!"

"ಆ!"

"ಮಿಂದಾಯ್ತೇನೇ?"

"ಆಯ್ತು! ಸೀರೆ ಉಡ್ತಿದ್ದೀನಿ!"

“ನಿನ್ನ ಬೆಟ್ಟಳ್ಳಿ ಒಡೇರು ಬಂದಾರೇ! ಒಂದು ಗಳಾಸು ಕಾಪಿ ಕೊಡು, ಬಾ!” ‘ನಿನ್ನ’ ಅನ್ನುವುದನ್ನು ಅಕ್ಕರೆಯೊತ್ತಿ ಹೇಳಿದ್ದಳು ಅಂತಕ್ಕ.

“ಬಂದೆ ಅಬ್ಬೇ,”

ಸೀರೆ ಉಟ್ಟುಕೊಂಡವಳು ಬಚ್ಚಲಿಗೆ ಓಡಿ ಹಂಡೆಯಲ್ಲಿದ್ದ ನೀರಿನಲ್ಲಿ ಮುಖ ನೋಡಿಕೊಂಡು, ಹಣೆಗೆ ಕುಂಕುಮವಿಟ್ಟು, ತಲೆಯ ಕೂದಲನ್ನು ನೀವಿ, ಬೈತಲೆ ಸರಿಮಾಡಿಕೊಂಡಳು. ಹಿಂದಿನ ಸಂಜೆಯ ಮಾಲೆಕಟ್ಟಿ ತಣ್ಣಗಿರುವ ನೀರಿನ ಕರೆದಲ್ಲಿಗೆ, ನಿರುದ್ವಿಗ್ನೆಯಂಬಂತೆ, ಪ್ರಯತ್ನಪೂರ್ವಕವಾದ ಕೃತಕ ಸಾವಧಾನದಿಂದ ತೇಲುತ್ತಾ ಹೋದಳು, ಸಸಂಭ್ರಮವಾಗಿ.

ಮಗಳು ಆಯ್ದಿದ್ದ ಸೀರೆಯನ್ನೂ, ಉಟ್ಟಿದ್ದ ರೀತಿಯನ್ನೂ, ಬಾಚಿ ಬೈತಲೆ ತೆಗೆದಿದ್ದ ಗಟ್ಟದ ಮೇಲಣ ಶೈಲಿಯನ್ನೂ, ಮುಡಿದಿದ್ದ ಹೂವನ್ನೂ, ಬೆಳ್ಳನೆಯ ಹಣೆಯನ್ನಲಂಕರಿಸಿದ್ದ ಕುಂಕುಮಬಿಂದುವ ಸೌಂದರ್ಯ ಶೋಭೆಯನ್ನೂ ನೋಡಿ, ಮೆಚ್ಚಿ, ಅವಳ ಸಮಯೋಚಿತ ಚಾಕಚಕ್ಯತೆಯನ್ನೂ ಜಾಣ್ಮೆಯನ್ನೂ ಮನದಲ್ಲಿಯೆ ಪ್ರಶಂಸಿಸಿ, ಕಣ್ಸನ್ನೆಯಿಂದಲೆ ಪ್ರತ್ಯೇಕವಾಗಿ ಏಕಾಂತವಾಗಿದ್ದ ಅತಿಥಿ ಸತ್ಕಾರದ ಕೂಟಡಿಯನ್ನು ನಿರ್ದೇಶಿಸಿ, ಒಂದು ಗಾಜಿನ ಲೋಟವನ್ನು ಅವಳ ಕೈಗಿತ್ತು, ಹಿಂದಿನಿಂದ ಕಾಫಿ ತರುತ್ತೆನೆ ಎಂಬುದನ್ನೂ ಸನ್ನೆಯಿಂದಲೆ ಸೂಚಿಸಿ, ಅವಳನ್ನು ಪ್ರೋತ್ಸಾಹಿಸುವ ಮುಗುಳು ನಗೆಯ ಮುಖಭಂಗಿಯನ್ನು ಪ್ರದರ್ಶಿಸುತ್ತಾ ಕಳುಹಿಸಿದಳು ತಾಯಿ.

ಹಾಸಗೆ ಸುತ್ತಿ ಇಟ್ಟಿದ್ದ ಒಂದು ಮಂಚದ ಬಳಿಯ ಕಾಲು ಮಣೆಯ ಮೇಲೆ ಕುಳಿತು ಬಾಗಿಲ ಕಡೆ ನೋಡುತ್ತಿದ್ದ ದೇವಯ್ಯ ಕಾವೇರಿಯನ್ನು ಕಂಡೊಡನೆ ತನಗಾದ ಆಶ್ಚರ್ಯವನ್ನು ಕಣ್ಣರಳಿಸಿ ಹೊರಸೂಸುತ್ತಾ “ಅಯ್ಯೋ ನಾನು ‘ಯಾರಪ್ಪಾ ಇದು ನಮ್ಮವರ ಹುಡುಗಿ?’ ಅಂದುಕೊಂಡಿದ್ದೆ! ತುಂಬಾ ಚೆನ್ನಾಗಿ ಕಾಣ್ತದೆಯೆ ನಿನಗೆ, ಸೆಟ್ಟರುಡಿಗೆಗಿಂತ ಈ ಉಡಿಗೆ! ಆ ಸೀರೇನೂ ವಯ್ನಾಗಿ ಒಪ್ತದೆ ನಿನಗೆ!” ಎಂದನು.

ಕ್ರಾಪು ಬಿಟ್ಟು ಹೊಸರೀತಿಯ ಬಟ್ಟೆ ಹಾಕಿಕೊಂಡು ಸುಪುಷ್ಟ ಸಬಲ ದೃಢಕಾಯನಾಗಿ ತನ್ನೆದುರು ಕುಳಿತಿದ್ದ ಯುವಕನ ಮೆಚ್ಚುಗೆಗೆ ಹೆಣ್ಣು ಸೋತು ಬಳಲಿದಂತಾದಳು. ನಾಚಿಕೆಯಿಂದ ಸೆರಗು ಸರಿಪಡಿಸಿಕೊಳ್ಳುತ್ತಾ ‘ನೀವು ತಂದು ಕೊಟ್ಟಿದ್ದೆ ಅಲ್ಲವೊ ಸೀರೆ?’ ಎಂಬ ಕೊರಳಿಗೆ ಬಂದಿದ್ದ ಮಾತನ್ನು ತಡೆಹಿಡಿದು “ಅವ್ವ ಕಾಪಿ ತರುತ್ತಾಳೆ…. ನನಗೆ ಗಳಾಸು ತೆಗೆದುಕೊಂಡು ಹೋಗಿ ಇಡು ಎಂದಳು.” ಬಾಲಿಕಾ ಸಹಜವೆಂಬಂತೆ ಹೇಳಿದಳು, ಅವಲ್ಪ ತೊದಲು ಹೋಗಿ ಇಡು ಎಂದಳು.” ಬಾಲಿಕಾ ಸಹಜವೆಂಬಂತೆ ಹೇಳಿದಳು, ಅವಲ್ಪ ತೊದಲು ಮಾತಿನಲ್ಲಿ.

ಲೋಟವನ್ನಿಡಲು ಸಮೀಪಿಸಿದ್ದ ಅವಳ ಎಡದ ಕೈ ಹಿಡಿದುಕೊಂಡು, ತಾನೇ ಅವಳ ಬಲಗೈಲಿದ್ದ ಲೋಟವನ್ನು ತೆಗೆದು ಬಳಿಯಿದ್ದ ಮಂಚದ ಮೇಲಿಟ್ಟು, ದೇವಯ್ಯ ಅವಳ ಬಲಗೈಯನ್ನೂ ಹಿಡಿದುಕೊಂಡನು. ಅವನಿಗಿಂತಲೂ ಅಂತೆ ಅವಳಿಗೂ ಆ ಸ್ಪರ್ಶ ಸುಖಕರವಾಗಿತ್ತಾದರೂ ಅವಳು ತಪ್ಪಿಸಿಕೊಳ್ಳಲು ಪ್ರಯತ್ನಿಸಿದಳು, ಹಿಂತುರಿಗಿ ಬಾಗಿಲಕಡೆ ಕಳ್ಳನೋಟ ನೋಡುತ್ತಾ. ಆದರೆ ದೇವಯ್ಯ ತನ್ನ ಕಿರುಬೆರಳಿನಲ್ಲಿದ್ದ ಒಂದು ಚಿನ್ನದ ಉಂಗುರವನ್ನು ತೆಗೆದು ಅವಳ ನಡುಬೆರಳಿಗೆ ತೊಡಿಸಲು ತೊಡಗಿದಾಗ ಅದನ್ನು ನಾಣ್ಬೆರಗಿನಿಂದ ನೋಡುತ್ತಾ ಸುಮ್ಮನೆ

ನಿಂತುಬಿಟ್ಟಳು. ಅದು ಅವನ ಕಿರುಬರಳಿನ ಉಂಗುರವಾಗಿದ್ದರೂ, ಅವನು ತೊಡಿಸಿದ್ದ ಇವಳ ಬೆರಳು ನಡುಬೆರಳಾಗಿದ್ದರೂ, ತುಂಬಾ ಸಡಿಲವಾಗಿಯೆ ಇತ್ತು.

ದೇವಯ್ಯ ವಿನೋದವಾಗಿ "ಎಷ್ಟು ತೆಳ್ಳಗಿದ್ದೀಯೆ ನೀನು? ಸಣಕಲಿ!" ಎಂದನು.

ಕಾವೇರಿ ಉಂಗುರ ಕೆಳಗೆ ಬಿದ್ದುಹೋಗದಂತೆ ಬೆರಳನ್ನು ತುಸು ಮಡಚಿ ಕೈ ಎಳೆದು ತಪ್ಪಿಸಿಕೊಂಡು ದೂರ ನಿಂತು "ಮತ್ತೆ ನಿಮ್ಮ ಹಾಗೆ ಇರಬೇಕೇನು ಹೆಣ್ಣಾದ ನಾನು?" ಎಂದು ಅವನ ಭೀಮ ಬಲಿಷ್ಠ ಭದ್ರಕಾಯವನ್ನು ತಲೆಯಿಂದ ಕಾಲದವರೆಗೆ ನೋಡಿ ನಕ್ಕುಬಿಟ್ಟಳು. ಅವಳ ಮೆಲುದನಿ. ಅವಳ ಕುಲುಕುಲು ನಗೆ, ದೇವಯ್ಯನಿಗೆ ತಡೆಯಲಾಗಲಿಲ್ಲ. ಅವಳನ್ನು ಹಿಡಿದು ಬಿಗಿದಪ್ಪಿ ಹಿಸುಗಿಬಿಗಬೇಕು ಎನ್ನಿಸಿತು. ಅಲ್ಲದೆ ಪಾದ್ರಿಯ ಮಗಳಿಂದ ನಾಗರಿಕ ಪ್ರಣಯದ ಕುಶಲ ಕಲೆಯಲ್ಲಿ ದೀಕ್ಷೆ ಪಡೆದು ಸುಶಿಕ್ಷಿತನಾಗುತ್ತಿದ್ದ ಅವನಿಗೆ ಇನ್ನೂ ಏನೇನೂ ಮಾಡಿಬಿಡಬೇಕು ಎನ್ನಿಸಿತು. ಆದರೆ ಕಾಫಿ ಪಾತ್ರೆ ಹಿಡಿದಿದ್ದ ಅಂತಕ್ಕ ಬಾಗಿಲಲ್ಲಿ ಕಾಣಿಸಿಕೊಂಡಳು.

"ಏನು ಚೆಲ್ಲಾಟಕ್ಕೆ ಸುರುಮಾಡಿಬಿಟ್ಟಳಾ ನಿಮ್ಮ ಹತ್ತಿರ?" ಎಂದು ದೇವಯ್ಯನ ಕಡೆಯಿಂದ ಮಗಳ ಕಡೆ ತಿರುಗಿ "ಏನೆ ಅದು ನಿನ್ನ ಅಟಮಟ? ಗಳಾಸು ಇಟ್ಟು ಬಾ ಅಂತ ಕಳ್ಸಿದ್ರೆ ಆಟಕ್ಕೆ ಸುರುಮಾಡಿಬಿಟ್ಟಾ?" ಎಂದು, ಮಗಳ ಬೆರಳಲ್ಲಿದ್ದ ಉಂಗುರದ ಹೊಳಪನ್ನು ನೋಡಿ, ದೇವಯ್ಯಗೆ ಕಾಣದಂತೆ ಕಣ್ಣು ಮಿಟುಕಿಸಿದಳು.

ತನ್ನ ಪ್ರಣಯಲಘುವರ್ತನೆಯ ಮುಖಭಾವವನ್ನು ತಟಕ್ಕನೆ ಗಾಂಭೀರ್ಯದ ಚಿಪ್ಪಿನೊಳಗೆ ಎಳೆದು ಕುಳಿತಿದ್ದ ದೇವಯ್ಯ ಅತ್ಯಂತ ಭಿನ್ನ ವಿಷಯದ ತೆರೆಯೆಳೆದು, ಪ್ರಸ್ತುತ ವಿಷಯದ ದಿಕ್ಕನ್ನೆ ಬದಲಾಯಿಸಿ ಬಿಟ್ಟನು:

"ಏನು ಅಂತಕ್ಕ. ನಿನ್ನ ಮನೆ 'ಕಾಫಿಹೋಟಲ್' ಆಗಿಬಿಟ್ಟಿದೆಯಲ್ಲಾ! ಬೋರ್ಡ ಬರೆಸಿ ಹಾಕ್ಸಿದ್ದೀಯಾ?"

"ಅಯ್ಯೋ ಎಲ್ಲ ಆ ಪಾದ್ರಿಗಳ ಕೆಲ್ಸ ಅಲ್ದಾ? ಆವೊತ್ತು ಕಾಪಿಪುಡಿ ತಂದು ಕೊಟ್ಟು ಕಾಪಿಮಾಡಾದು ತೀರಿಸಿಕೊಟ್ರು. ನಿನ್ನೆ ತೀರ್ಥಹಳ್ಳಿಯಿಂದ ಬರ್ತಾ ಕಾಗದದ ಮ್ಯಾಲೆ ಏನೋ ಬರೆದು ತಂದು ಗ್ವಾಡೆಗೆ ಆಂಟ್ಸಿದಾರೆ. ಬಂದೋರೆಲ್ಲ ನೋಡಿ ನೋಡಿ ನೆಗ್ತಾರೆ....".

ದೇವಯ್ಯ ಕಾಫಿ ಕುಡಿಯುತ್ತಾ ಮಧ್ಯೆ ಮಧ್ಯೆ ಹೇಳಿದನು: "ಪರ್ವಾಇಲ್ಲ ನಿನ್ನ ಕಾಫಿ. ತೀರ್ಥಹಳ್ಳಿ ಹೋಟ್ಲು ಕಾಫಿಗೇನು ಬಿಟ್ಟುಕೊಡೋದಿಲ್ಲ!.... ಮೊನ್ನೆ ನಮ್ಮ ಮನೇಗಿಷ್ಟು ಕಾಫಿಪುಡಿ ತಗೊಂಡು ಹೋಗಿ ಕೊಟ್ಟಿದ್ದೆ.... ಕಾಫಿ ಅಂತಾ ಮಾಡಿದ್ರೂ, ಬಾಯಿಗೆ ಹಾಕಾಗ್ಲಿಲ್ಲ! ನಮ್ಮ ಅಪ್ಪಯ್ಯಂತೂ ಕುಡಿದವರೆ ವಾಕರಿಸಿ ವಾಂತಿ ಮಾಡಿಕೊಂಡು, ಬಾಯಿಗೆ ಬಂದಂತೆ ಬಯ್ಯುತ್ತಾ, ಕ್ಯಾಕರಿಸಿ ತುಪ್ಪಿಬಿಟ್ರು...."

ಅಂತಕ್ಕೆ ಹಿಂದಿನದೇನನ್ನೊ ಸ್ಮರಿಸಿಕೊಂಡು "ಯಾರು? ಕಲ್ಲಯ್ಯ ಒಡೇರ? ಹಿಹ್ಹಿಹ್ಹಿ!" ಎಂದು ತುಸು ನಿಂತು, ಮತ್ತೆ "ಅವರು ಈ ಕಡೆಗೇ ಬರದೆ ಎಷ್ಟೋ ವರ್ಸ ಆಯ್ತು!...." ಎಂದು ಸ್ವಲ್ಪ ದೀರ್ಘಕಾಲವೆ ದೂರ ನೋಡುತ್ತಿದ್ದು ಮತ್ತೆ "ನಿಮ್ಮ ಅವ್ವಗೂ ಕಾಪಿಗೀಪಿ ಮಾಡಿ ಗೊತ್ತಿಲ್ಲ. ಕುನ್ನೇರ್ಲು ಕುಡಿ ಕಸಾಯ, ಕೊತ್ತುಂಬ್ರಿಬೀಜದ ಕಸಾಯ,

ಸೊಗದೆಬೇರಿನ ಕಸಾಯ ಮಾಡಿಕೊಟ್ಟ ಅಭ್ಯಾಸ…. ಹೌದಾಂಬ್ಡಾಂಗೆ ಮರ್ತೇ ಹೋಗಿತ್ತು! ದೇವಮ್ಮಗೆ ಹ್ಯಾಂಗಿದೆ ಈಗ? ಬಾಲೆ ಬಾಣ್ತಿ ಸುಕವಾಗಿದಾರಾ?" ಎಂದು ಕ್ಷೇಮಸಮಾಚಾರ ವಿಚಾರಿಸಿದಳು.

ದೇವಯ್ಯ ಅಂತಕ್ಕನ ಹಿಂದೆ ನಿಂತು ತನ್ನನ್ನೆ ನುಂಗುವಂತೆ ನೋಡುತ್ತಿದ್ದ ಕಾವೇರಿಯ ಕಣ್ಣಿಕ್ಕೆ ನೋಡುತ್ತಾ ಹೇಳಿದನು: "ಇದಾರೆ, ಸುಮಾರಾಗಿ…. ಅದಕ್ಕೋ ಒಂದಲ್ಲ ಒಂದು ರೋತೆ ಇದ್ದೇ ಇರ್ತದೆ…. ಕಲ್ಲೂರು ದೇವಸ್ಥಾನಕ್ಕೆ ಬೇರೆ ಹೋಗಬೇಕಂತೆ ಪೂಜೆ ಮಾಡಿಸಾಕೆ….!"

ದೇವಯ್ಯನ ಅಂತಸ್ಥವನ್ನು ಊಹಿಸಿದ ಅಂತಕ್ಕ "ಅವರಿಗೆ ಇನ್ನೂ ಹಸೀ ಮೈ, ಪಾಪ!…. ನೀವು ಸುಮ್ಮನೆ ಬೇಜಾರು ಮಾಡಿಕೊಂಡರೆ? ಇನ್ನೊಂದು ಐದಾರು ತಿಂಗಳು ಹೋದ್ರೆ ಎಲ್ಲ ಸರಿಹೋಗ್ತದೆ…. ಪೂರಾ ಬೇಜಾರಾದ್ರೆ ಇತ್ತಲಾಗಿ ಬಂದು ಹೋಗ್ತಾ ಇರಿ…. ಹುಡುಗೀನೂ ನೆನೀತಿರ್ತದೆ ನಿಮ್ಮನ್ನೆ!" ಎಂದಳು, ಕೊನೆಯ ವಾಕ್ಯವನ್ನು ತನಗೂ ಕೇಳಿಸಿದಷ್ಟು ಮೆಲ್ಲಗೆ ಕಿವಿಯಲ್ಲಿ ಹೇಳುವಂತೆ ಹೇಳುತ್ತಾ.

ಆದರೆ ಕಾವೇರಿಗೂ, ಅದರ ಶಬ್ದ ಕೇಳಿಸದಿದ್ದರೂ, ಅದರ ಅರ್ಥದ ಅರಿವು ಹೊಳೆದು, ಹೊರಗೆ ಓಡಿದ್ದಳು ಮತ್ತೆ ಒಳಗೆ ಬಂದು "ಚೇಂಕ್ರ ಸೇರಿಗಾರ ಬಂದಿದಾನೆ. ಪಾದ್ರಿ ನಿಮ್ಮನ್ನ ಬರಾಕೆ ಹೇಳಿ ಕಳ್ಸಿದಾರಂತೆ" ಎಂದಳು.

"ಈ ಪಾದ್ರಿ ಕೈಯಿಂದ ಬಚಾವಾಗೋದು ಹ್ಯಾಗೋ ನಂಗಿತ್ತಿಲ್ಲ " ಎನ್ನುತ್ತಾ ದೇವಯ್ಯ ಮೇಲೆದ್ದನು.

"ನಿಮ್ಮನ್ನೂ ಕಿಲಸ್ತರ ಜಾತಿಗೆ ಸೇರಿಸ್ತಾರಂತೆ, ಎಲ್ಲರೂ ಆಡಿಕೊಳ್ತಾರೆ." ಅಂತಕ್ಕ ಏನೋ ಆಗಬಾರದ್ದು ಆಗುತ್ತದೆಯಲ್ಲಾ ಎಂಬ ಧ್ವನಿಯಲ್ಲಿ ಹೇಳಿದಳು.

ದೇವಯ್ಯ ಕಂತ್ರಿನಗೆ ನಕ್ಕು, ಹೇಳುತ್ತಲೆ ಬಾಗಿಲು ದಾಟಿದನು: " ಸಿಂಧುವಳ್ಳಿ ಚಿನ್ನಪ್ಪಗೌಡನ್ನ ಜಾತಿಗೆ ಸೇರಿಸಿಕೊಂಡು, ಅವನ ಹೆಂಡತೀನ ಬಾವಿಗೆ ಹಾರ್ಸಿದ್ದೇ ಸಾಕಾಗಿದೆ!…. ಇನ್ನು ನಾನೂ ಕಿಲಸ್ತರ ಜಾತಿಗೆ ಸೇರಿ….? ಯಾಕೆ ಬಿಡು, ಆಗದ ಹೋಗದ ಮಾತು!…."

ದೇವಯ್ಯ ಬೈಸಿಕಲ್ಲು ಹತ್ತಿ ಗಂಟೆ ಬಾರಿಸುತ್ತಾ ಹೋಗುವುದನ್ನೆ ಬೆರಗಾಗಿ ನೋಡುತ್ತಾ ನಿಂತಿದ್ದಳು ಕಾವೇರಿ, ಬಾಗಿಲ ಸಂದಿಯ ಮರೆಯಲ್ಲಿ.

* * *

ಮುಂಡಾಸು ಸುತ್ತಿ, ಕಸೆಯ ನಿಲುವಂಗಿ ತೊಟ್ಟು, ಕೆಂಪಂಚಿನ ಕಚ್ಚೆಪಂಚೆಯುಟ್ಟು, ಬೆತ್ತದ ದೊಣ್ಣೆಹಿಡಿದು, ಹಳೆಯದೊಂದು ಮೆಟ್ಟಿನ ಜೊತೆಯನ್ನು ಕಾಲಿಗೆ ಹಾಕಿಕೊಂಡು ಉತ್ಸಾಹವಿಕ್ಕಿ ಮನೆಯಿಂದ ಬೊರಬಿದ್ದ ಸುಬ್ಬಣ್ಣಹೆಗ್ಗಡೆಯವರು ಯುವಕರೋಪಾದಿಯಲ್ಲಿ ನಡೆಯತೊಡಗಿದರು. ಅವರ ಮಾತಿನ ಧ್ವನಿಯೂ ಉತ್ತಾಲವಾಗಿಯೆ ಇತ್ತು. ಅವರು ನಡೆಯುತ್ತಿದ್ದ ದಾರಿಯ ಅಕ್ಕಪಕ್ಕದ ಕಲ್ಲು ಗಿಡ ಮರ ಪೊದೆ ಬಂಡೆ ಒಂದೊಂದು ಅವರಿಗೆ ನೆನಪುಗಳನ್ನು ತಂದುಕೊಡುವ ಉಲ್ಲಾಸ ವಸ್ತುಗಳಾಗಿದ್ದುವು.

"ನೋಡಿ, ಐಗಳೇ; ಅದೇ ಮಟ್ಟಿನಲ್ಲಿ ನಾನೂ ದುಗ್ಗಣ್ಣನೂ ಹುಡುಗರಾಗಿದ್ದಾಗ ದುಗ್ಗಣ್ಣ ನಿಮಗೆ ಗೊತ್ತಿಲ್ಲ? ನನ್ನ ಅಣ್ಣ, ನಮ್ಮ ಶಂಕರನ ಅಪ್ಪ, ಅಂವ ತೀರಿಹೋಗಿ ಹದಿನೈದು ಇಪ್ಪತ್ತು ವರ್ಷದ ಮ್ಯಾಲೆ ಆಯ್ತು; ಅದೇ ಮಟ್ಟಿನಲ್ಲಿ ಒಂದು ಕಾಡು ಕೋಳಿಹ್ಯಾಟೆ ಮೊಟ್ಟೆ ಇಕ್ಕಿತ್ತು. ಏಳೆಮಟು ಮೊಟ್ಟೆ. ಮರಿಮಾಡಿದ ಕೂಡ್ಲೆ ನಾನು ದುಗ್ಗಣ್ಣ, ಹುಡುಗಾಟ ನೋಡಿ, - ಮರೀನೆಲ್ಲ ಹಿಡಿದುಬಿಟ್ಟು, ಹೆಂಗ್ಹೆಂಗೊ ಮಾಡಿ. ಆ ಹ್ಯಾಟೆ ಹೋಗಲೂ ಒಲ್ಲದು, ಬರಲೂ ಒಲ್ಲದು. ಪಾಪ! ಎಷ್ಟಾದರೂ ಪ್ರಾಣಭಯ ಅಲ್ಲವೆ? ಕಡೀಗೂ ಮರೀ ಹಿಡುಕೊಂಡು ಹೋಗ್ತಿದ್ದ ನಮ್ಮ ಹಿಂದೇನೆ ಬರಾಕೆ ಶುರು ಮಾಡ್ತು. ನಮ್ಮ ದುಗ್ಗಣ್ಣ ಬಿಲ್ಲು ಹೊಡೆಯೋದರಲ್ಲಿ ಮಹಾಗಟ್ಟಿಗ! ದೊಡ್ಡ ಬಿದಿರುಬಿಲ್ಲು. ಹೊಡೆದೇಬಿಟ್ಟ. ಎದೀಗೆ ಕಲ್ಲುಬಿದ್ದ ಹೊಡೆತಕ್ಕೆ ಕೈಕಾಲು ಹಂದದೆ ಸತ್ತುಬಿತ್ತು!.... ಅದರ ಶಾಪಾನೋ ಏನೋ? ನಮಗೀಗ ತಟ್ಟಿ, ನನ್ನ ಮಗನ್ನೆ ಆಹುತಿ ತಗೊಂಡುಬಿಟ್ತು!... ಕರ್ಮ, ನೋಡ್ರಿ ಬೆನ್ ಬಿಡೋದಿಲ್ಲ!" ಎಂದು ಒಂದು ಹತ್ತುಮಾರು ಮಾತಾಡದೆ ನಡೆಯುತ್ತಿದ್ದು ಮತ್ತೆ ಹೇಳತೊಡಗಿದರು, ಐಗಳು ಆಲಿಸುತ್ತಿದ್ದುದು ನಿಮಿತ್ತ ಮಾತ್ರವೊ ಎಂಬಂತೆ, ಸ್ವಗತವಾಗಿ: "ನಮ್ಮ ದೊಡ್ಡಣ್ಣಂದೂ ಹಂಗೆ ಆಯ್ತು ನೋಡಿ:.... ಹುಲಿ ಆದ್ರೇನಂತೆ ಎಷ್ಟಂದರೂ ಮಕ್ಕಳ ಹೆತ್ತ ತಾಯಿ ಅಲ್ಲವೆ? ಮೂರು ಹುಲಿಮರೀನೂ ಹೊತ್ತುಕೊಂಡೇ ಬಂದ್ಬಿಟ್ಟ ಮನೀಗೆ. ತನ್ನ ಮಕ್ಕಳಕ್ಕರೆಗೆ ಅಟ್ಟಿಕೊಂಡು ಬಂದ ತಾಯಿ ಹುಲೀನೂ ಕೋವೀಲಿ ಹೊಡೆದುಹಾಕಿಬಿಟ್ಟ! ನಾವು ನಂಬಲಿ ಬಿಡಲಿ! ಹೆತ್ತಹೊಟ್ಟೆ ಉರಿದು ಕೊಟ್ಟ ಶಾಪ ತಟ್ಟದೆ ಬಿಡ್ತದೆಯೆ? ಇಂದಲ್ಲ ನಾಳೆ?" ಮುದುಕನ ಧ್ವನಿ ಬರುಬರುತ್ತಾ ರೋದನ ಸ್ವರಕ್ಕೆ ತಿರುಗಿತ್ತು. ದೀರ್ಘವಾಗಿ ಸುಯ್ದು ಬಹಳ ಹೊತ್ತು ಮಾತನಾಡದೆ ಮುಂದುವರಿದರು.

ಸ್ವಲ್ಪ ದೂರ ಹೋಗುವುದರಲ್ಲಿಯೆ ಐಗಳಿಗೆ ಅನುಮಾನವಾಯಿತು, ಹೆಗ್ಗಡೆಯವರ ಮನಃಸ್ಥಿತಿ ಎಂದಿನಂತೆ ಸಾಮಾನ್ಯವಾಗಿರದೆ ಅಸಹಜ ಭೂಮಿಕೆಗೆ ಏರಿರಬೇಕು ಎಂದು. ಅವರ ಉತ್ಸಾಹ ಒಮ್ಮೆ ಶಿಖರಕ್ಕೇರಿದಂತೆ ತೋರಿದರೆ, ಮರುಕ್ಷಣವೆ ಶೋಕದ ಕಮರಿಗೆ ಬಿದ್ದಂತಾಗುತ್ತಿತ್ತು. ಒಮ್ಮೊಮ್ಮೆ ಬಾಲಕ ಸಹಜವಾದ ಉಲ್ಲಾಸದಿಂದ ಯಾವುದೊ ಪರಿಹಾಸ್ಯ ಪ್ರಸಂಗವನ್ನು ನೆನೆನೆನೆದು ನಕ್ಕು ಹೇಳಿದರೆ, ಒನ್ನೊಮ್ಮೆ ಮಹಾ ನಿರಾಶೆಯ ಧ್ವನಿಯಿಂದ ಯಾವುದಾದರೂ ಒಂದು ದುರಂತದ ತತ್ವಚಿಂತನೆಗೆ ಇಳಿದುಬಿಡುತ್ತಿದ್ದರು. ಹಿಗ್ಗು - ಕುಗ್ಗು, ಅಳು - ನಗೆ, ಕೆಚ್ಚು - ಬೆಚ್ಚು, ಭೀತಿ - ಧೈರ್ಯ - ಹೀಗೆ ಅವರ ಚೇತನ ಹರಿವ ಗರಗಸಕ್ಕೆ ಸಿಕ್ಕಿಬಿಟ್ಟಿತು. ಐಗಳು ತಮ್ಮೊಳಗೆ ತಾವೆ 'ನಾನು ಅಚಾತುರ್ಯ ಮಾಡಿದೆ?' ಎಂದುಕೊಂಡರು. ಆದರೆ ಅದನ್ನು ಒಂದಿನಿತೂ ತೋರಗೊಡದೆ ಮುದುಕನೊಡನೆ ಸಮವೇದನೆಯಿಂದೆಂಬಂತೆ ವರ್ತಿಸತೊಡಗಿದರು. ಮುದುಕನನ್ನು ಹೇಗಾದರೂ ಮಾಡಿ

ಹುಲಿಕಲ್ಲು ನೆತ್ತಿ ದಾಟಿಸಿ ಮೇಗರವಳ್ಳಿ ತಲುಪಿಸಿದರೆ ಗೆದ್ದೆ ಎಂದುಕೊಂಡು ಅವರ ಹಿಂದೆ ಹಿಂದೆಯ ಹ್ಲೂಂಗುಡುತ್ತಾ ನಡೆದರು.

ಮುಂದೆ ಹೋಗುತ್ತಿದ್ದ ಸುಬ್ಬಣ್ಣಹೆಗ್ಗಡೆಯವರು ನಿಂತು, ಹಿಂದಿರುಗಿ ನೋಡಿ, ಕೈಲಿ ನಶ್ಯದ ಡಬ್ಬಿ ಹಿಡಿದುಕೊಂಡು ಮಂಗಳೂರು ಪುಡಿಯನ್ನು ಮೂಗಿಗೇರಿಸುತ್ತಲೆ ಮುಂಬರಿಯುತ್ತಿದ್ದ ಐಗಳಿಗೆ "ಏನು ಹಿಂದೆ ಬಿದ್ರಲ್ಲಾ ಐಗಳು?" ಎಂದು ಪರಿಹಾಸದಿಂದ ಪ್ರಶ್ನಿಸಿದರು, ಐಗಳ ಗಮನವನ್ನು ಅನುಲಕ್ಷಿಸಿ "ಓಹೋ ಮರೆತಿದ್ದೆ. ನಿಮ್ಮ ಕಾಲಿನ ಕುಂಟು - ಇನ್ನೂ ಹಾಂಗೇ ಇದೆ?…. ಉಡಿನ ತುಪ್ಪ ಚೆನ್ನಾಗಿ ದಿನಾಲೂ ತಿಕ್ಕಿಸಿ, ಮೇಲ್ನಿಂದ ಬಿಸಿನೀರು ಹುಯ್ಸಿನೋಡಿ. ಹಳೇನೋವು; ಏನಾಗ್ತದೋ?" ಎಂದರು.

ಐಗಳೂ ನಗುತ್ತಾ "ಕುಂಟೇನಲ್ಲಾ! ಅಭ್ಯಾಸ ನಿಂತುಬಿಟ್ಟಿದೆ, ಅಷ್ಟೆ. ನೋವು ಕೂಡ ಏನೂ ಇಲ್ಲ " ಎಂದರು.

ಹುಲಿಕಲ್ ನೆತ್ತಿಯ ಉಬ್ಬು ಪ್ರಾರಂಭವಾಗಲು ಹೆಗ್ಗಡೆಯವರು ಯಾವುದಾದರೂ ಒಂದು ನೆವದಿಂದ ಮತ್ತೆ ಮತ್ತೆ ನಿಂತು ಮುಂದುವರಿದರು. ನೆವಗಳೇನೊ ಅವರಿಗೆ ಬೇಕಾಗಿದ್ದುದಕ್ಕಿಂತಲೂ ಹೆಚ್ಚಾಗಿಯೆ ಇದ್ದುವು, ಅವರ ನೆನಹಿನ ಬೊಕ್ಕಸದಲ್ಲಿ. ಸುಮಾರು ಐವತ್ತು ವರ್ಷಗಳ ಹಿಂದೆಯೆ ಇರಬಹುದು, ಕಡಿಸಿದ್ದ ಒಂದು ದೊಡ್ಡ ತೇಗದಮರದ ಮುಂಡು ನಿಂತಿದ್ದನ್ನು ನೋಡಿ, ಅದರ ಸಂಬಂಧದ ಒಂದು ಕಥೆಯನ್ನೆ ಹೇಳಿದರು. ಇನ್ನೊಂದು ಕಡೆ ಎದ್ದು ನಿಂತಿದ್ದ ಒಂದು ಕಾಡುಕಲ್ಲನ್ನು ತೋರಿಸಿ "ಅದನ್ನೆ, ನೋಡಿ, ಮಸೇಕಲ್ಲು ಅಂತಾರೆ. ನೂರಾರು ವರ್ಷಗಳಿಂದ ಸಾವಿರಾರು ಜನರ ಕತ್ತಿ ಮಸೆದೂ ಮಸೆದೂ ಹ್ಯಾಂಗೆ ನುಣ್ಣಗಾಗ್ಯದೆ ನೋಡಿ! ಸಿಕಾರಿಗೆ ಹೋಗೋರು. ಮರಾ ಕಡಿಯಾಕೆ ಹೋಗೋರು, ಬಗನಿ ಇಳಿಸಾಕೆ ಹೋಗೋರು, ಸೊಪ್ಪು ಸೌದೆಗೆ ಹೋಗೋರು, ಎಲ್ಲಾರು, ನಮ್ಮ ಅಪ್ಪ, ಅಜ್ಜ, ಮುತ್ತಜ್ಜನ ಕಾಲದೋರು ಎಲ್ರೂ ಕತ್ತಿ ಮಸೆದಿದ್ದಾರೆ ಇಲ್ಲಿ…. ನಾನೂ ಮಸೆದಿದ್ದೆ; ನಮ್ಮ ದೊಡ್ಡಣ್ಣನೂ ಮಸೆದಿದ್ದ…. ನಾವೆಲ್ಲ ಹೋಗ್ತೀವಿ. ಈ ಕಲ್ಲು ಮಾತ್ರ ನಮ್ಮ ಮಕ್ಕಳು, ಮೊಮ್ಮಕ್ಕಳು, ಮರಿಮಕ್ಕಳು ಎಲ್ಲರ ಕಾಲಾನೂ ನೋಡ್ತಾ, ಇಲ್ಲೇ, ಹೀಂಗೇ ಕೂತಿರ್ತದೆ! ಹಿಹ್ಹಿಹ್ಹಿ!" ಎಂದು ಸಿಂಬಳ ಸುರಿದು ಕಣ್ಣೊರಸಿಕೊಂಡರು.

ಹುಲಿಕಲ್ಲು ನೆತ್ತಿಯ ಕಾಡಿನಲ್ಲಿ ಅರ್ಧದೂರ ಸಾಗಿದ್ದರು. ಹಳೇಪೈಕದವನು ಬಗನಿ ಕಟ್ಟಿದ್ದನ್ನು ಇಳಿಸಿ, ಕಳ್ಳು ಹೊತ್ತುಕೊಂಡು ಹೋಗುತ್ತಿದ್ದವನು, 'ದೊಡ್ಡಹೆಗ್ಗಡೆರ'ನ್ನು ಕಂಡು ಕಳ್ಳಿನ ಮೊಗೆಯನ್ನು ಹಳುವಿನಲ್ಲಿ ಇಟ್ಟು, ಕೈಮುಗಿಯುತ್ತಾ ಬಳಿಗೆ ಬಂದು. ಹಣೆ ಮಣ್ಣುಮುಟ್ಟುವಂತೆ ಹೆಗ್ಗಡೆಯವರ ಪಾದಕ್ಕೆ ಅಡ್ಡಬಿದ್ದು ಎದ್ದುನಿಂತನು.

ಹೆಗ್ಗಡೆಯವರು ಪರಿಹಾಸ್ಯೆಂಬಂತೆ "ಏನೋ ಬರೀ ಅಡ್ಡಬೀಳೋದ್ರಲ್ಲೇ ಪೂರೈಸ್ತೀಯೋ? ಏನಾದ್ರೂ ಕೊಡ್ತೀಯೊ?" ಎಂದೊಡನೆ ಅವನು ಎಲೆದೊನ್ನೆ ಸೆಟ್ಟು, ಕಳ್ಳು ಹುಯ್ದು ತಂದು ಹೆಗ್ಗಡೆಯವರಿಗೂ ಐಗಳಿಗೂ ನೀಡಿದನು. ಇಬ್ಬರೂ ಕುಡಿದು ಸಂತುಷ್ಟರಾಗಿ ದ್ವಿಗುಣಿತ ಬಲರಾದಂತೆ ಗಿರಿನೆತ್ತಿಗೆ ಹತ್ತತೊಡಗಿದರು.

ಹುಲಿಕಲ್ಲು ನೆತ್ತಿಯಲ್ಲಿ ಹೆಗ್ಗಡೆಯವರು ತಮಗೆ ದಣಿವಾದುದನ್ನು ಬಾಯಿಬಿಟ್ಟು ಹೇಳಿಯೆ ಒಪ್ಪಿಕೊಂಡು, ಒಂದು ಮರದ ನೆಳಲಿನಲ್ಲಿ ಕುಳಿತು, ಬಹುಕಾಲದಿಂದಲೂ ತಾವು ನೋಡದೆ ಇದ್ದ ದಿಗಂತ ವಿಶ್ರಾಂತ ಗಿರಿಶ್ರೇಣಿಯ ದೃಶ್ಯವನ್ನು ನೋಡುತ್ತಾ, ಕಳ್ಳಿನ ಪ್ರಭಾವವನ್ನು ಸಮರ್ಥಿಸುವ ರೀತಿಯಲ್ಲಿ ಅನೇಕ ವಿಚಾರ ಮಾತಾಡಿದರು.

ಬಹಳ ಗೊತ್ತಾದರೂ ಹೆಗ್ಗಡೆಯವರು ಮೇಲೇಳಲಿಲ್ಲ. ಕಡೆಗೆ ಮಾತನ್ನು ನಿಲ್ಲಿಸಿ ಸುಮ್ಮನೆ ನೋಡುತ್ತಾ ಕುಳಿತುಬಿಟ್ಟರು. ಐಗಳು ಹೊತ್ತೇರುತ್ತದೆ ಎಂದು ಸೂಚಿಸಿದಾಗ ಏಳಲು ಪ್ರಯತ್ನಿಸಿದಂತೆ ಮಾಡಿ ಮತ್ತೆ ಕುಳಿತರು. ಇನ್ನೂ ಸ್ವಲ್ಪ ಹೊತ್ತು ಕಳೆದ ಮೇಲೆ ಐಗಳು ಮತ್ತೆ ಹೊರಡುವ ಸೂಚನೆಕೊಟ್ಟರು. ಆಗ ಹೆಗ್ಗಡೆಯವರು ನಿಡಿದಾಗಿ ಸುಯ್ದು, ತಮ್ಮನ್ನು ಎತ್ತಿ ನಿಲ್ಲಿಸುವಂತೆ ಐಗಳಿಗೆ ಸನ್ನೆ ಮಾಡಿದರು. ಐಗಳಿಗೆ ಜೀವವೆ ಹಾರಿಹೋದಂತಾಯಿತು! 'ಕೆಟ್ಟೆ ನಾನು' ಎಂದುಕೊಂಡು ಹೆಗ್ಗಡೆಯವರನ್ನು ಮೆಲ್ಲಗೆ ಎತ್ತಿ ನಿಲ್ಲಿಸಿದರು. ಅವರು ದೊಣ್ಣೆಯೂರಿಕೊಂಡು ನಿಧಾನವಾಗಿ ನಡೆಯತೊಡಗಿದರು. ಇನ್ನು ಮುಂದಿನ ಪಯಣವೆಲ್ಲ ಗುಡ್ಡ ಇಳಿಯುವ ಇಳಿಜಾರಿನದಾಗಿತ್ತು. ಮುದುಕರು ಎಲ್ಲಿ ಮುಗ್ಗರಿಸಿ ಬಿದ್ದುಬಿಡುತ್ತಾರೊ ಎಂಬ ನಿರಂತರ ಭಯದಿಂದ ಐಗಳು ಅವರ ಪಕ್ಕದಲ್ಲಿಯೆ ಎಲ್ಲದಕ್ಕೂ ಸಿದ್ಧರಾಗಿ ನಡೆದರು.

ಇಳಿಜಾರಿನ ಕಾಡುದಾರಿಯಲ್ಲಿ ಸ್ವಲ್ಪದೂರ ಹೋಗುವುದರಲ್ಲಿಯೆ ಹೆಗ್ಗಡೆ ಒಂದು ದೊಡ್ಡ ಮರದ ಬಲಿ ದೊಣ್ಣೆಯೂರಿ ನಿಂತರು. ಆ ಮರದ ಬುಡದಲ್ಲಿ, ಕಡಿದು ತೂತು ದೊಡ್ಡದು ಮಾಡಿದ್ದ, ಒಂದು ಪುರಾತನ ಪೊಟರೆ ಇತ್ತು. ಅದನ್ನು ಐಗಳಿಗೆ ತೋರಿಸಿ, ತಮ್ಮ ಹಳೆಯ ನೆನಪೊಂದನ್ನು ಹೇಳತೊಡಗಿದರು. ಅವರಿಗೆ ವಿಶ್ರಾಂತಿಯ ಅವಶ್ಯಕತೆ ಇದೆ ಎಂದು ಅರಿತಿದ್ದ ಐಗಳು ಅವರನ್ನು ತೋಳು ಮೆಲ್ಲಗೆ ಕೂರಿಸಿದರು.

“ನೀವು ಹೆಚ್ಚು ಮಾತನಾಡಿದರೆ ಬಳಲಿಕೆಯಾಗುತ್ತದೆ” ಎಂದರು ಐಗಳು, ಮೆಲುದನಿಯಲ್ಲಿ, ಹೆದರಿ ಹೆದರಿ.

ಸುಬ್ಬಣ್ಣಹೆಗ್ಗಡೆಯವರಿಗೆ ಅನಂತಯ್ಯನ ಆ ಮಾತು ನಸವಾಲು ಹಾಕಿದಂತಾಗಿ “ಬಿಡಿ ಐಗಳೆ, ನಾನೇನು ಮುದುಕ ಆಗಿಬಿಟ್ಟೆ ಅಂತಾ ಹೇಳ್ತೀರೋ! ಈ ಮುದುಕ ಹಳೆಕಾಲದ ಮುದುಕ. ಈಗಿನ ಹುಡುಗರು ಈ ಮುದುಕನ ಒಂದು ರಟ್ಟೆ ಬಗ್ಗಿಸಲಾರರು! ಏನು ಹೇಳಿ? ಹಹ್ಹಹ್ಹ! ಆ ಗುಡ್ಡ ಹತ್ತುವಾಗ ಒಂದಿಷ್ಟು ದಣಿವಾಗಿತ್ತು ನಿಜ. ಇನ್ನೇನು? ಇಳಿಜಾರಿನಲ್ಲಿ ಜಾರಿಕೊಂಡು ಹೋಗಾದಷ್ಟೆ?” ಎಂದು ಪ್ರತಿಭಟಿಸಿ. ಇಳಿದನಿಯಲ್ಲಿಯೆ ತಮ್ಮ ನೆನಪನ್ನು ಹೇಳತೊಡಗಿದರು: ಐಗಳು ಮುದುಕನಿಗೆ ಭಾವೋದ್ರೇಕವಾದೀತೆಂದು ಹೆದರಿ ಮರುಮಾತಾಡದೆ ಸುಮ್ಮನೆ ಆಲಿಸಿದರು:

“ನೋಡಿ, ಇಲ್ಲಿ ಕಾಣ್ತದಲ್ಲಾ ಈ ಒಟ್ಟೆ, ಇದು ನಮ್ಮ ದೊಡ್ಡಣ್ಣನ ಕತ್ತಿ ಕೆಲಸ. ಅವೊತ್ತಿನ ದೊಡ್ಡ ಬ್ಯಾಟೇಲಿನ ಈ ಮರದ ಬುಡದಾಗೇ ಬಿಲ್ಲಿಗೆ ನಿಂತಿದ್ದ. ಜೀಂವಾದಿ 'ಹಾರುವ' ಒಳ್ಳೆ ಕಂಡಿ ಅಂತಾ ಅಂವನ್ನೆ ಇಲ್ಲಿ ನಿಲ್ಲಿಸಿತ್ತು. ಅವನ ಈಡು ಅಂದ್ರೆ 'ಸೈ! ಬಿತ್ತು!' ಅಂತಾನೆ ಗೊತ್ತು ಎಲ್ರಿಗೂ, - 'ಯಾರದ್ದೋ ಈ ಈಡು?' “ಯಾರದ್ದಪ್ಪಾ? ಕೂಡೆ ಕೂಡೆ ಎಲ್ಡು ಈಡು ಕೇಳಿಸ್ತು?' 'ಹಂಗಾರೆ ನಮ್ಮ ಹಳೆಮನೆ ದೊಡ್ಡಣ್ಣ ಹೆಗ್ಗಡೇರ್ದೆ ಇರ್ಬೆಕು' ' ಅವರದ್ದೆ ಇರಬ್ಯೆದು, ಜೊಡುನಲ್ಲಿ ಇನ್ನ್ಯಾರ್ಹತ್ರ ಅದೆ?' 'ಏನು ಎಲ್ಡು ಬಂದಿ ಬಿದ್ದವೇನೋ? ಕೂಡೆ ಕೂಡೆ ಎಲ್ಡು ಈಡು ಕೇಳಿಸ್ತಲ್ಲಾ?' 'ನಿಂಗೊತ್ತಿಲ್ಲ, ದೊಡ್ಡಣ್ಣ ಹೆಗ್ಗಡೇರ ಈಡುಗಾರಿಕೆ. ಚಂಗ್ ಚಂಗ್ ಚಂಗ್ ಅಂತಾ ಹಳೀನಲ್ಲಿ ಹಾರ್ತಾ ಇದ್ರೂ, ಕಣ್ಣಿಗೆ ಕಾಣಿಸ್ದೆ ಮಿಂಚು ನೆಗೆದ್ಹಾಂಗೆ ನೆಗೀತಾ ಇದ್ರೂ ಅವರು ಇಟ್ಟ ಗುರಿ ತಪ್ಪಾದಿಲ್ಲ!' - ಹಿಂಗೆ ಮಾತಾಡ್ಕೋತಿದ್ರು ಹಳೀನವ್ರು, ಐಗಳೇ! ಅವೊತ್ತು ಎಲ್ಡು ಹಂದೀನೂ ಕೂಡೆಕೂಡೆ ಅವನು ಹೊಡೆದಿದ್ದು. ಒಂದು ದಡ್ಡೆ, ಒಂದು ಸಲಗ! ಆವೊತ್ತೆ ಅಂತಾ ನೆಂಪು ನಂಗೆ, ಒಂದೋ ಎಲ್ಡೋ ನಾಯೀನೂ ಸತ್ತು! ಹಂದಿ ಕ್ವಾರೀಗೆ ಸಿಕ್ಕಿ! ಕೋವಿ ಈಡಿಗೂ ಸಿಕ್ಕಿ! ಹಂದಿ ಹೊಡೆದಾದ ಮ್ಯಾಲೆ ತಿರುಗಿ ನೋಡ್ತಾನಂತೆ: ಜೇನು ಎದ್ದುಬಿಟ್ಟದೆ! ತುಡುವೆ, ಕರಿತುಡುವೆ! ಇದೇ

ಒಟ್ಟೇಲಿ! ಆಗ ನಮ್ಮ ದೊಡ್ಡಣ್ಣ ಶಂಕ್ರ ಇಬ್ಬರೂ ಒಳ್ಳೆ ಪರಾಯಕ್ಕೆ ಬಂದ ಹುಡುಗರು: ಹೆಣ್ಣು ಕೊಡಾಕೆ ನಾ ಮುಂದೆ ನಾ ಮುಂದೆ ಅಂತಾ ಬರ್ತಿದ್ದ ಕಾಲ ಅಂತಾ ಇಟ್ಕೊಳ್ಳಿ! ಸರಿ, ಇಬ್ಬರೂ ಸೇರಿ, ಬ್ಯಾಟೆ ಕತ್ತೀಲೆ ಒಟ್ಟೆ ಕಂಡೀನ ಕಡಿದೂ ಕಡಿದೂ ಮಾಡಿ ಜೇನು ಕಿತ್ತೇ ಕಿತ್ರು! ನಮ್ಮ ದೊಡ್ಡಣ್ಣನೆ ಕಿತ್ತಿದ್ದು. ಶಂಕರಗೆ ಬ್ಯಾಟಿ ಗೀಟೆ ಒಂದೂ ಹಿಡಿಸ್ತಾನೆ ಇರಲಿಲ್ಲ; ಈಗ ಹ್ಯಂಗೋ ಆಗ್ಲೂ ಹಂಗೇ! ಅಂವ ಓಡಿಹೋಗಿ ದೂರ ನಿಂತಿದ್ನಂತೆ! ದೊಡ್ಡಣ್ಣಗೆ ಹೊಡ್ದಿದ್ದ್ವು ಹುಳಾ, ಕಣ್ಣೂ ಮಕಾ ಮೋರೆ ನೋಡದೆ! ಮರುದಿನ ಅಂವನ ಮಕಾಊದಿ ಕುಂಬಳಕಾಯಿ ಆಗಿತ್ತು! ಕಣ್ಣು ಎಲ್ಲವೆ ಅಂತಾನೆ ಗೊತ್ತಾಗ್ತಿರಲಿಲ್ಲ! ಹಿಹ್ಹಿಹ್ಹಿ! ಅರಸಿನ ಮಸಿಕೆಂಡ ತೇದು ಹಚ್ಚಿ, ಹುಲಿಬಣ್ಣ ಆಗಿಬಿಟ್ಟಿತ್ತು! ಹಿಹ್ಹಿಹ್ಹಿ! ನೆನಸಿಕೊಂಡರೆ ನಂಗೆ ನಗೆ ತಡೆಯಾಕೆ ಆಗಾದಿಲ್ಲ. ಹಿಹ್ಹಿಹ್ಹಿ!!" ಹೆಗ್ಗಡೆಯವರು ಮತ್ತೆ ಸಿಂಬಳ ಸುರಿದು ನಗೆ ಕಣ್ಣೊರೆಸಿಕೊಂಡರು. ಮುಂದೆ ಮಾತಾಡದೆ ಸುಮ್ಮನೆ ಏನನ್ನೊ ಯೋಚಿಸುವಂತೆ ನೆಲ ನೋಡುತ್ತಾ ಕುಳಿತುಬಿಟ್ಟರು.

ಮತ್ತೆ ತುಸು ಹೊತ್ತಿನ ಮೇಲೆ, ಅವರಿಗೆ ದಣಿವಾರಿದ ಅನಂತರ, ಐಗಳು ಅವರನ್ನು ಮೆಲ್ಲಗೆ ನಡೆಸಿಕೊಂಡು ಹೊರಟರು. ಮುಂದೆ ಅವರು ಮಾತಾಡುವುದನ್ನೇ ನಿಲ್ಲಿಸಿಬಿಟ್ಟರು.

ಮೇಗರವಳ್ಳಿಯನ್ನು ಸಮೀಪಿಸುತ್ತಿದ್ದಾಗ ಎದುರಿನಿಂದ ಒಂದು ಹೊಲೆಯರ ಗುಂಪು ಸಾಲಾಗಿ ಕಾಡುದಾರಿಯಲ್ಲಿ ಬರುತ್ತಿದ್ದುದು ಕಾಣಿಸಿತು, ಹತ್ತಿರಕ್ಕೆ ಬಂದಾಗ ಐಗಳಿಗೆ ಗೊತ್ತಾಯಿತು, ಅವರೆಲ್ಲ ಬೆಟ್ಟಳ್ಳಿ ಹೊಲಗೇರಿಯವರು ಎಂದು. ಒಬ್ಬಿಬ್ಬರನ್ನು ಗುರುತಿಸಿಯೂಬಿಟ್ಟರು: ಬರುತ್ತಿದ್ದ ಗಂಡಸರಲ್ಲಿ ದೊಡ್ಡಬೀರ, ಅವನ ಹಿರಿಯ ಮಗ ಸಣ್ಣಬೀರ, ಅವನ ತಮ್ಮ ಪುಟ್ಟಬೀರ ಇದ್ದರು; ಹೆಂಗಸರಲ್ಲಿ ದೊಡ್ಡಬೀರನ ಹೆಂಡತಿ  ಸೇಸಿ, ಅವನ ಮಗಳು ತಿಮ್ಮಿ, ಪುಟ್ಟಬೀರನ ಹೆಂಡತಿ ಚಿಕ್ಕಪುಟ್ಟಿ ಇದ್ದರು.

ಹಳೆಮನೆ ದೊಡ್ಡ ಹೆಗ್ಗಡೆಯವರನ್ನು ಗುರುತಿಸಿದೊಡನೆಯೆ ಗಂಡಾಳುಗಳೆಲ್ಲ, ಹೊಟ್ಟೆ ಅಡಿಯಾಗಿ ಮಣ್ಣು ಹಣೆ ಮುಟ್ಟುವಂತೆ, ಎಲ್ಲಿ ಅಂದರಲ್ಲಿ ನಿಂತಿದ್ದ ಎಡೆಯಲ್ಲಯೆ ಮುಳ್ಳು ಪೊದೆ ಒಂದನ್ನೂ ಲೆಕ್ಕಿಸದೆ 'ಅಡ್ಡಬಿದ್ದೆ ಒಡೇರಿಗೆ!' ಎಮದು ಪದ್ಧತಿಯ ಗೌರವವನ್ನು ಯಾಂತ್ರಿಕವಾಗಿ ಉಚ್ಚರಿಸುತ್ತಾ ಉದ್ದುದ್ದಕ್ಕಾಗಿ ಅಡ್ಡಬಿದ್ದು ದೀರ್ಘದಂಡ ನಮಸ್ಕಾರ ಮಾಡಿದರು! ಹೆಣ್ಣಾಳುಗಳೆಲ್ಲಾ ಒಡೆಯರ ಕಣ್ಣಿಗೆ ನೇರವಾಗಿ ಬಿದ್ದರೆ ಅವರಿಗೆಲ್ಲಿ ಮೈಲಿಗೆ ಸೀಕುವುದೊ ಎಂದು ಹೆದರಿದಂತೆ ಹಳುವಿನಲ್ಲಿ ಅಲ್ಲಲ್ಲಿಯೆ ಮರೆಹೊಕ್ಕರು.

ಹೆಗ್ಗಡೆಯವರು ಒಂದು ಮಾತನ್ನೂ ಆಡಲಿಲ್ಲ. ಐಗಳು "ಎಲ್ಲಿಂದ ಬರ್ತಿದ್ದಿರೊ?" ಎಂದು ಕೇಳಿದರು, ಅವರೆಲ್ಲ ಎದ್ದು ಕೈಮುಗಿದುಕೊಂಡು ಸೊಂಟಬಾಗಿ ದೂರ ಪಕ್ಕಕ್ಕೆ ಸರಿದು ನಿಂತಮೇಲೆ.

ತಿಮ್ಮಿಯ ಅಪ್ಪ. ಮುದುಕ ದೊಡ್ಡಬೀರ "ಸಿಂಬಾವಿ ಕೇರಿಗೆ ಹೋಗಿದ್ವಯ್ಯಾ, ಹುಡುಗಿ ಕರಕೊಂಡು ಹೋಗ್ತಾ ಇದ್ದೀಂವಿ, ನಮ್ಮ ಕೇರಿಗೆ" ಎಂದನು.

ಬೇರೆಯ ಸನ್ನಿವೇಶವಾಗಿದ್ದರೆ ಐಗಳು ಇನ್ನಷ್ಟು ಪ್ರಶ್ನೆ ಹಾಕಿ ಉತ್ತರ ಪಡೆದು, ತಮ್ಮ ಕಿವಿಗೆ ಬಿದ್ದಿದ್ದ ಗಾಳಿಸುದ್ದಿಗೆ ವಿವರಣೆಯನ್ನೊ ಸಮರ್ತನೆಯನ್ನೊ ದೊರಕಿಸಿ ಕೊಳ್ಳುತ್ತಿದ್ದರು. ಆದರೆ ದಣಿದ ದುಃಖಿ ಹೆಗ್ಗಡೆಯವರಿದ್ದ ಸ್ಥಿತಿಯಲ್ಲಿ

ಅದೊಂದನ್ನೂ ಕೇಳಲು ಅವರಿಗೆ ಮನಸ್ಸಾಗಲಿಲ್ಲ. ಹೆಗ್ಗಡೆಯವರು ಸರಿಯಾಗಿದ್ದ ಸಮಯದಲ್ಲಿ, ಮಾತನಾಡಲು ಅವರೂ ಒಂದು ಗಂಡೆಯಾದರೂ ಹರಟೆ ಕೊಚ್ಚದೆ ಬಿಡುತ್ತಿರಲಿಲ್ಲ. ಗುತ್ತಿ ತಿಮ್ಮಿಯರ ಶೃಂಗಾರ ಸಾಹಸದ ಕಥೆಯನ್ನೆಲ್ಲ ಬಯಲಿಗೆಳೆಯುತ್ತಿದ್ದರು ಮಾತ್ರವಲ್ಲದೆ, ಹಿಂದಿನ ದಿನ ಸಾಯಂಕಾಲ ಸಿಂಬಾವಿಯ ಹೊಲಗೇರಿಯ ಬಳಿ ನಡೆದಿದ್ದ ಯಾವ ದುರ್ಘಟನೆಯನ್ನು ಬೆಟ್ಟಳ್ಳಿಯ ದೊಡ್ಡಬೀರನು ಮುಚ್ಚಿಡಲು ಪ್ರಯತ್ನಿಸಿದ್ದನೊ ಅದನ್ನೂ ಹೊರಹಾಕದೆ ಬಿಡುತ್ತಿರಲಿಲ್ಲ. ಆದರೂ ಸ್ವಾರಸ್ಯವಾದ ಸಂವಾದಕ್ಕೆ ಅವಕಾಶ ಕಲ್ಪಿಸಿಕೊಳ್ಳುವ ಅಂತಹ ಘಟನಾಗರ್ಭಿತಪ್ರಸಂಗ ತಮ್ಮ ಪಾದಗಳೆಡೆಗೇ ಬಂದಿದ್ದರೂ, ಹೆಗ್ಗಡೆಯವರು ಸಾಕ್ಷಿಪ್ರಜ್ಞರಾದಂತೆ ನಿಂತಿದ್ದರು; ಅವರ ಸಾಮಾನ್ಯವಾದ ಉಸಿರೂಸುಯ್ಯುಸಿರಾಗಿದ್ದುದು ಬಳಿಯಿದ್ದವರಿಗೆ ಗೊತ್ತಾಗುವಂತಿತ್ತು. ಆದ್ದರಿಂದಲೆ ಐಗಳ ಮುಂದಿನ ಮಾತು, ಗುತ್ತಿ ಹಾರಿಸಿಕೊಂಡು ಹೋಗಿದ್ದ ತಿಮ್ಮಿಯನ್ನು ಬಲಾತ್ಕಾರವಾಗಿ ಹಿಂದಕ್ಕೆ ಎಳೆದು ತರಬೇಕೆಂದು ಬೆಟ್ಟಳ್ಳಿ ಕಲ್ಲಯ್ಯಗೌಡರ ಕಟ್ಟಪ್ಪೆಯನ್ನು ಕುರಿತು ತಾವು ಕೇಳಿದ್ದ ಸುದ್ದಿಯ ವಿಚಾರವಾಗಿರದೆ, ಸಂಪೂರ್ಣವಾಗಿ ಬೇರೆಯ ತರಹದ್ದಾಗಿ ಅನಿರೀಕ್ಷಿತ ಎಂಬಂತ್ತಿತ್ತು.

ಐಗಳು ದೊಡ್ಡಬೀರನಿಗೆ "ಯಾರಾದರೂ ಇಬ್ಬರನ್ನ ಕಳಿಸೋ, ನಮ್ಮನ್ನ ಮೇಗರೊಳ್ಳಿಗೆ ಮುಟ್ಟಿಸಿ ಬರಲಿ" ಎಂದರು ಪಿಸುದನಿಯಲ್ಲಿ, ಹೆಗ್ಗಡೆಯವರಿಗೆ ಕೇಳಿಸಿದಂತೆ.

ದೊಡ್ಡಬೀರನಿಗೆ ತುಸು ಬೆಕ್ಕಸವಾಯಿತು. ಮೇಗರವಳ್ಳಿ ಇನ್ನೊಂದು ಮೈಲಿಯೊ ಅರ್ಧಮುಕ್ಕಾಲು ಮೈಲಿಯೊ ಇರುವಲ್ಲಿ, ಜೊತೆಗೆ ಇಬ್ಬರು ಯಾಕೆ ಬೇಕು ಎಂದು. ಆದರೆ ಅವನು ಪ್ರಶ್ನಿಸಲಿಲ್ಲ. ಐಗಳೆ ಅವನ ಪ್ರಶ್ನಮುಖಮುದ್ರೆಯನ್ನರಿತು ಕಣ್ಣು ಮಿಸುಕಿನಿಂದ ಹೆಗ್ಗಡೆಯವರ ಆಯಾಸ್ಥಿತಿಯನ್ನು ನಿರ್ದೇಶಿಸಿ, ಏನಾದರೂ ವಿಷಯ ಪರಿಸ್ಥಿತಿಯೊದಗಿದರೆ ಸಹಾಯ ಬೇಕಾಗಬಹುದು ಎಂಬುದನ್ನು ಸೂಚಿಸಿದರು.

ಅಪ್ಪನ ಕಣ್ಣಪ್ಪಣೆಯಂತೆ ಸಣ್ಣಬೀರ ಪುಟ್ಟಬೀರ ಇಬ್ಬರೂ ಐಗಳು ಮೆಲ್ಲಗೆ ನಡೆಸಿಕೊಂಡು ಹೋಗುತ್ತಿದ್ದ ಹಳೆಮನೆ ಒಡೆಯರ ಹಿಂದೆ ತುಸು ದೂರದಲ್ಲಿಯೆ ಮೈಗಾವಲಾಗಿ ಹೊರಟರು. ಅತ್ಯಂತ ಅನಿವಾರ್ಯ ವಿಷಮಸ್ಥಿತಿ ಒದಗಿದಲ್ಲದೆ ಹೊಲೆಯರು ಮೈಮುಟ್ಟಿ ನೆರವೀಯುವಂತಿರಲಿಲ್ಲ!

ಒಂದರ್ಧ ಮೈಲಿ ಹೋಗುವುದರಲ್ಲಿಯೆ ಹೆಗ್ಗಡೆಯವರ ಕಾಲು ತತ್ತರಿಸತೊಡಗಿತು. ಏನನ್ನೊ ಹೇಳಲು ಪ್ರಯತ್ನಪಟ್ಟರು, ಆಗಲಿಲ್ಲ. ತಮ್ಮ ಭರವನ್ನೆಲ್ಲ ಐಗಳ ಮೇಲೆ ಬಿಟ್ಟು ವಾಲಿದರು. ಕುಳ್ಳಿನಲ್ಲಿ ಸಮಾನವಾಗಿದ್ದರೂ ಆಳುತನದಲ್ಲಿ ಹೆಗ್ಗಡೆಯವರಿಗಿಂತಲೂ ಬಹಳ ಮಟ್ಟಿಗೆ ಕಡಿಮೆಯಾಗಿದ್ದ ಐಗಳು ನಿತ್ತರಿಸಲಾರದೆ ಅವರನ್ನು ಹೇಗೋ ಪ್ರಯತ್ನಪೂರ್ವಕ ಆತು ನಿಂತು, ಹಿಂದೆ ಬರುತ್ತಿದ್ದವರನ್ನು ನೆರವಿಗೆ ಕರೆದರು. ಹೊಲೆಯಿಬ್ಬರೂ ಓಡಿ ಸಾರಿದರು. ಆದರೆ ಮುಟ್ಟಲು ಹಿಂಜರಿದು ನಿಂತರು. ಐಗಳು ಹುಬ್ಬುಗಂಟಿಕ್ಕಿ ಸೂಚಿಸಿದ ಮೇಲೇಯೆ ಅವರಿಬ್ಬರು ಹೆದರಿ ಹೆದರಿ, ವಿಷಸರ್ಪ ನುಗ್ಗಿದ ಗರ್ಭಗುಡಿಗೆ ಬ್ರಾಹ್ಮಣ ಪೂಜಾರಿ ಹಾವನ್ನು ಹೊಡೆದು ತನ್ನನ್ನು ಕಾಪಾಡಿ ಎಂದು ಆರ್ತನಾದದಿಂದ ಆಹ್ವಾನಿಸಲು ಅಂಜಿ ಅಂಜಿ ಒಳನುಗ್ಗುವ ದಂಡಧಾರಿ ಶೂದ್ರಂತೆ, ಹೆಗ್ಗಡೆಯವರನ್ನು ಬೀಳದಂತೆ ಆತುಹಿಡಿದು, ಮೆಲ್ಲಗೆ ನಡೆಸಿಕೊಂಡು ಹೋಗಿ, ಬಿದ್ದಿದ್ದ ಒಂದು ಮರದ ದಿಂಡಿನ ಮೇಲೆ ಕೂರಿಸಿದರು.

“ಓಡಿ ಹೋಗು, ಅಂತಕ್ಕಸೆಡ್ತಿ ಮನೆಗೆ. ಇಸ್ಕೂಲು ಕಟ್ತಾರಲ್ಲಾ ಅಲ್ಲಿ ಬೆಟ್ಟಳ್ಳಿ ದೇವಯ್ಯಗೌಡ್ರು, ಪಾದ್ರಿ, ಕಣ್ಣಪ್ಪ ಎಲ್ಲ ಇರ್ತಾರೆ. ನಾ ಹೇಳ್ದೆ ಅಂತಾ ಹೇಳು, ಹಿಂಗಾಗಿದೆ ಅಂತಾ. ಹೆಗ್ಗಡೇರನ್ನ ಎತ್ತಿಕೊಂಡು ಹೋಗಾಕೆ ಬೇಗ ಒಂದು ಡೋಲಿ ಮಾಡಿಕೊಂಡು ಬರಲಿ.”

ಪುಟ್ಟಬೀರ ಐಗಳ ಮಾತು ಮುಗಿಯುವುದರೊಳಗೆ ವಿಷಯವನ್ನೆಲ್ಲ ಗ್ರಹಿಸಿ ಓಡಿ ಹಳುವಿನಲ್ಲಿ ಕಣ್ಮರೆಯಾದನು.

ದೇವಯ್ಯ ಬೈಸಿಕಲ್ಲು ಹತ್ತಿ ಅಂತಕ್ಕಸೆಡ್ತಿಯ ಮನೆಯಿಂದ ಇಸ್ಕೂಲು ಕಟ್ಟುತ್ತಲಿದ್ದಲ್ಲಿಗೆ ಹೋಗುತ್ತಿದ್ದುದನ್ನೆ ನೋಡುತ್ತಾ ಬಾಗಿಲು ಸಂಧಿಯಲ್ಲಿ ನಿಂತಿದ್ದ ಕಾವೇರಿಯನ್ನು ಕದ್ದು ನೋಡುತ್ತಿದ್ದು, ತನ್ನೊಳಗೆ ತಾನೆ ಏನನ್ನೊ ಬಗೆದು ನಗುತ್ತಾ, ಚೀಂಕ್ರ ಸೇರೆಗಾರ ತಾನೂ ಇಸ್ಕೂಲಿನ ಹತ್ತಿರಕ್ಕೆ ಹೋಗಲೆಂದು ಉಣುಗೋಲನ್ನು ದಾಟುತ್ತಿದ್ದಾಗ, ಏದುಸಿರಾಗಿ ಓಡಿಬರುತ್ತಿದ್ದ ಪುಟ್ಟಬೀರನನ್ನು ಕಂಡನು. ಅವನು ಹತ್ತಿರ ಬಂದವನೆ ಮೇಲುಸಿರು ಕೆಲವುಸಿರಾಗಿ “ಎ….ಎ….ಎಲ್ಲಿ ನ….ನಮ್ಮ ಸ….ಸ….ಸಣ್ಣಯ್ಯ. ಹ….ಹ….ಹಳೆಮನೆ….ಹೆಗ್ಗಡೇರು….ಹೋ….ಹೋದ್ರು….” ಎಂದು ಹೆಗ್ಗಣ್ಣಾಗಿ ನಿಂತನು. ದಿಗಿಲುಗೊಂಡ ಚೀಂಕ್ರ, ದಿಕ್ಕುತೋಚದವನಂತೆ, ಸ್ಕೂಲು ಕಟ್ಟಡದ ಕಡೆಗೆ ಹೋಗುತ್ತಿದ್ದ ಬೈಸಿಕಲ್ಲಿನ ಕಡೆಗೆ ಕೈತೋರಿಸಿದೊಡನೆಯೆ ಪುಟ್ಟಬೀರ ಓಡಿಹೋಗಿ ದೇವಯ್ಯಗೆ ಐಗಳು ಹೇಳಿದ್ದನ್ನು ಗಾಬರಿ ಗಾಬರಿಯಾಗಿ ಹೇಳಿದನು.

ದೇವಯ್ಯನಿಗೆ ಏನು? ಎಂತು? ಏಕೆ? ಒಂದೂ ಅರ್ಥವಾಗಲಿಲ್ಲ. ಮನೆಯಲ್ಲಿ ಸುಖವಾಗಿರಬೇಕಾಗಿದ್ದ 'ಹಳೆಮನೆ ದೊಡ್ಡಪ್ಪಯ್ಯ' ಇಲ್ಲಿಗೆ ಎಲ್ಲಿಂದ ಬಂದರು? ಹಲವು ವರ್ಷಗಳು ಮನೆಯನ್ನೆ ಬಿಟ್ಟು ಹೊರಡದಿದ್ದ ಅವರು ಇವತ್ತೇಕೆ ಹುಲಿಕಲ್ಲು ನೆತ್ತಿಯ ಕಾಡಿಗೆ ಬಂದದ್ದು? ಐಗಳೇನೋ ಬರುತ್ತಾರೆ ಎಂಬುದು ಗೊತ್ತಿತ್ತು. ಆದರೆ ಅವರೇಕೆ ಈ ಮುದುಕನನ್ನು ಕರೆತರುತ್ತಾರೆ? ಅವರಿಗೇನು ಅಷ್ಟು ಬುದ್ಧಿ ಇರಲಿಲ್ಲವೆ? ಎಂಬೆಲ್ಲ ಯೋಚನೆಗಳು ಮಿಂಚು ಸಂಚರಿಸುವಂತೆ ಜಾಲವತ್ತಾಗಿ ತಲೆ ತುಂಬಿದವು. ಮೈಮೇಲೆ ಹಠಾತ್ತಾಗಿ ಕುದಿನಿರು ಚೆಲ್ಲಿದಂತಾಯಿತು. ಪಾದ್ರಿಗೆ ಪಂಡಿತನಿಗೆ ಸಮಾಚಾರ ತಿಳಿಸಿ, ಬೇಕಾದ ಸಲಕರಣೆಗಳನ್ನೆಲ್ಲ ತೆಗೆಯಿಸಿಕೊಂಡು. ಅವರನ್ನೂ ಕರೆದುಕೊಂಡು ಪುಟ್ಟಬೀರನ ಹಿಂದೆ ಓಡುತ್ತಲೆ ಹೋದನು, ಕಾಡಿನ ಕೊರಕಲು ಹಾದಿಯಲ್ಲಿ.

ಜೀವರತ್ನಯ್ಯ ತಾನು ಪ್ರವಾಸದಲ್ಲಿರುವಾಗ ಯಾವಾಗಲೂ ತನ್ನ ಬಳಿ ಆಪದ್ಧನವಾಗಿ ಇಟ್ಟುಕೊಂಡಿರುತ್ತಿದ್ದ ಔಷಧಿಪೆಟ್ಟಿಗೆಯನ್ನು ತನ್ನೊಡನೆ ಕೊಂಡೊಯ್ಯುವುದನ್ನು ಮರೆತಿರಲಿಲ್ಲ.

* * *

# ೩೦

ಅಂತಕ್ಕ, ತನ್ನ ಮಗಳು ಕಾವೇರಿಯ ನೆರವಿನಿಂದ, ಅತ್ಯಂತ ಕಾತರೆಯಾಗಿ ಅವಸರ ಅವಸರವಾಗಿ ಜಗಲಿಯ ಮೇಲೊಂದು ಹಾಸಗೆ ತಯಾರು ಮಾಡಿದಳು. ತನ್ನ ಬಳಿ ಇದ್ದ, ತಾನು ಅತ್ಯುತ್ತಮ ಎಂದು ಪರಿಗಣಿಸಿದ್ದ ತಡಿ ದಿಂಬು ಜಮಖಾನೆ ಜಾಡಿಗಳನ್ನೆ ಹುಡುಕಿ ಹಾಕಿದ್ದಳು. ಆದರೂ ಎಣ್ಣೆಯ ಕೊಳೆಹತ್ತಿದ್ದ ದಿಂಬಿನ ನುಣುಪುಜಿಡ್ಡೂ,, ಅಲ್ಲಲ್ಲಿ ಕಲೆಕಲೆಯಾಗಿದ್ದ ಪುರಾತನ ತಡಿಯ ಕೊಳಕುಕವುರೂ ಎದ್ದು ಕಾಣುತ್ತಿದ್ದುವು. ಅದನ್ನೆಲ್ಲ ಮುಚ್ಚಲು, ಮಗಳ ಸಲಹೆ ಮೇರೆಗೆ, ಒಂದು ಜಮಖಾನೆಯನ್ನು ಮಗ್ಗಲು ಹಾಸಿಗೆಯಂತೆ ಮೇಲ್ಹಾಸಿಬಿಟ್ಟರು! ಅದೂ ಜಿಡ್ಡು ಜಿಡ್ಡಾಗಿ ಕೊಳಕಾಗಿಯೆ ಇದ್ದಿತಾದರೂ ಕೆಂಪು ಕಪ್ಪು ಪಟ್ಟೆಗಳಿದ್ದುದರಿಂದ ಕೊಳಕು ಅಷ್ಟು ಎದ್ದು ಕಾಣುವುದಿಲ್ಲ ಎಂದು ತಾಯಿ ಮಗಳಿಬ್ಬರೂ ಸಮಾಧಾನ ಪಟ್ಟುಕೊಂಡಿದ್ದರು.

ಆಮೇಲೆ ಅಂತಕ್ಕ ಮತ್ತೆ ಮತ್ತೆ ಅಂಗಳಕ್ಕೆ ಹೋಗಿ ಹೆದ್ದಾರಿಯ ಕಡೆ ನೋಡಿ ನೋಡಿ ಬಂದಳು. ಕಾಯುವುದೆ ಒಂದು ತರಹದ ದಣಿವಾಗಿ ತೋರಿ, ಕಡೆಗೆ ತೆಣೆಯ ಮೇಲೆ ಕುಕ್ಕುರುಗಾಲಲ್ಲಿಯೆ ಕುಳಿತು, ಮಗಳಿಗೆ ಹೋಗಿ ನೋಡಿಬರುವಂತೆ ಹೇಳತೊಡಗಿದಳು. ಮಗಳು ನಾಲ್ಕಾರು ಸಾರಿ ಹೋಗಿ ನೋಡಿ ಬಂದಳು. ಹಳೆಮನೆ ಸುಬ್ಬಣ್ಣ ಹೆಗ್ಗಡೆಯವರನ್ನು ಹೊತ್ತ ಡೋಲಿಯಾಗಲಿ, ಆ ಕಾರ್ಯಕ್ಕಾಗಿ ಹೋಗಿದ್ದವರಾಗಲಿ ಯಾರೂ ಗೋಚರಿಸಲಿಲ್ಲ.

ಹೊತ್ತು ಕಳೆದಂತೆ ಅಂತಕ್ಕನಿಗೆ ಗಾಬರಿ ಹೆಚ್ಚಿತು. ಹೊಟ್ಟೆಯಲ್ಲಿ ಏನೋ ಸಂಕಟವಾಗತೊಡಗಿತು. ಕಾವೇರಿ ತನ್ನ ತಾಯಿಯ ಅವಸ್ಥೆಯನ್ನು ಗಮನಿಸಿ "ಯಾಕೆ, ಅಬ್ಬೆ, ಅಳುತ್ತಿದ್ದೀಯಲ್ಲಾ?" ಎಂದಳು ತುಳುವಿನಲ್ಲಿ.

ಅಂತಕ್ಕ ತುಳುವಿನಲ್ಲಿಯೆ "ಯಾರೇ ಅಳುತ್ತಿರುವುದು?" ಎಂದು ನಸುಮುನಿದ ಭಂಗಿಯಲ್ಲಿ ನಿರಾಕರಿಸಿ, ಕಣ್ಣೊರೆಸಿಕೊಂಡು ಸುಯ್ದಳು. ತನ್ನ ಭಾವದೌರ್ಬಲ್ಯವನ್ನು ಮಗಳು ಗುರುತಿಸಬಾರದಾಗಿತ್ತು ಎಂಬುದು ಅವಳ ಅಂತರಂಗವಾಗಿತ್ತು. ಮತ್ತೆ ಸುಮ್ಮನಿದ್ದವಳು ಸ್ವಲ್ಪ ಹೊತ್ತಿನ ಮೇಲೆ "ಯಾಕೆ ಇಷ್ಟು ಹೊತ್ತಾದರೂ ಯಾರೂ ಬರಲಿಲ್ಲ? ಪಾಪ! ಹಳೆಮನೆ ದೊಡ್ಡ ಒಡೆಯರಿಗೆ…." ತಡೆತಡೆದು ಅಳುದನಿಯಲ್ಲಿ ಹೇಳಿದಳು "ಏ-ನಾ-ಗಿಬಿಟ್ಟಿದೀಯೋ?"

ಅಂತಕ್ಕನ ಗಂಡ ಸುಬ್ಬಯ್ಯಶೆಟ್ಟರು ಮೇಗರವಳ್ಳಿಯ ಹತ್ತಿರವಿದ್ದು ಹಳೆಮನೆಗೆ ಸೇರಿದ್ದ ಜಮೀನನ್ನು ಒಕ್ಕಲು ಮಾಡಿಕೊಂಡಿದ್ದರು. ಅವರಿಗೆ ಕಂತ್ರಾಟು ಕೆಲಸದಿಂದಲೂ ಅನೇಕ ತೆರನಾದ ದಳ್ಳಾಳಿ ವ್ಯಾಪಾರದಿಂದಲೂ ಬರುತ್ತಿದ್ದ ಆದಾಯದ ಜೊತೆಗೆ ಇಕ್ಕಲುತನದ ಗದ್ದೆ ಬೇಸಾಯದ ಆದಾಯವೂ ಸೇರಿತ್ತು. ಸುಬ್ಬಣ್ಣಹೆಗ್ಗಡೆಯವರು ಸುಬ್ಬಯ್ಯಶೆಟ್ಟರನ್ನು ಒಡೆಯರು ಒಕ್ಕಲನ್ನು ಕಾಣುವಂತೆ ಕಾಣದೆ, ತಮ್ಮ ಆಪ್ತವರ್ಗಕ್ಕೆ ಸೇರಿದವರೆಂದು ತಿಳಿದುಕೊಂಡಿದ್ದರು. ಸೆಟ್ಟರೂ ಹೆಗ್ಗಡೆಯವರೊಡನೆ ಆಪ್ತಮಿತ್ರ ಭಾವದಿಂದ ನಡೆದುಕೊಳ್ಳುತ್ತಾ ಅವರ ಅನಧಿಕೃತ ಕಾರ್ಯದರ್ಶಿಯಂತಿದ್ದರು. ಅವರಿಬ್ಬರ ಪರಸ್ಪರ ವಿಶ್ವಾಸವನ್ನೂ ಗಾಢಸ್ನೇಹವನ್ನೂ ಕಂಡು ಕರುಬಿದ್ದ ಕೆಲವರು ಆ ಮೈತ್ರಿಗೆ ಅಶ್ಲೀಲಕಾರಣಗಳನ್ನೂ ಆರೋಪಿಸಿದ್ದರು. ಸುಮಾರು ಎಂಟು ಹತ್ತು ವರ್ಷಗಳ ಹಿಂದೆ ಸುಬ್ಬಯ್ಯಸೆಟ್ಟರು ಕಾಡಿನಲ್ಲಿ ಒಂದು ಹೆಮ್ಮರವನ್ನು ನಾಟಾ ಕಡಿಸುತ್ತಿದ್ದಾಗ (ಕಳ್ಳನಾಟ ಎಂದು ಕೆಲವರು ಆಡಿಕೊಳ್ಳುತ್ತಿದ್ದರು.) ಬೀಳುತ್ತಿದ್ದ ಮರದ ಒಂದು ಹೆಗ್ಗೊಂಬೆ ತಗುಲಿ ಅಪಘಾತವಾಗಿ ತೀರಿಕೊಂಡಿದ್ದರು. ಆಗ ಸುಬ್ಬಣ್ಣಹೆಗ್ಗಡೆಯವರು,

ಅವರೂ ಬಿಗಿಮುಷ್ಟಿಯವರೆಂದೂ ಜುಗ್ಗರೆಂದೂ ನಿಂದಿಸುತ್ತಿದ್ದ ಅವರು, ಅತ್ಯಂತ ಉದಾರವಾಗಿ ವರ್ತಿಸಿ ಅಂತಕ್ಕನ ಕೃತಜ್ಞತೆಗೆ ಭಾಜನರಾಗಿದ್ದರು. ಅವರು ಮೇಗರವಳ್ಳಿಗೆ ಬಂದಾಗಲೆಲ್ಲ ಅಲ್ಲಿಯ ಕೆಳಪೇಟೆಯ ಕಾಮತರ ದಿನಮಳಿಗೆಯಲ್ಲಾಗಲಿ, ಭಟ್ಟರ ಜವಳಿ ಅಂಗಡಿಯ ಮಹಡಿಯ ಮೇಲಾಗಲಿ ಉಳಿದುಕೊಳ್ಳದೆ ಮೇಲಿನ ಮೇಗರವಳ್ಳಿಯಲ್ಲಿ ಅಂತಕ್ಕನ ಮನೆಯಲ್ಲಿಯೆ ತಂಗುತ್ತಿದ್ದರು, ಜನರ ಕುಹಕನಿಂದೆಯನ್ನು ಇನಿತೂ ಲೆಕ್ಕಿಸದೆ. ದೊಡ್ಡಣ್ಣಹೆಗ್ಗಡೆ ತಿರುಪತಿಗೆ ಹೋದ ಮೇಲೆ ಸುಬ್ಬಣ್ಣಹೆಗ್ಗಡೆಯವರು ಒಮ್ಮೆಯೂ ಮೇಗರವಳ್ಳಿಯ ಕಡೆಗೆ ಮುಖ ಹಾಕಿರಲಿಲ್ಲ. ಒಂದೆರಡು ಸಾರಿ ಅಂತಕ್ಕನೆ ತನ್ನ ಮಗಳೊಡನೆ ಹಳೆಮನೆಗೆ ಹೋಗಿ, ಅವರ ಕಾಲಿಗೆ ಅಡ್ಡಬಿದ್ದು, ಕಾಣಿಕೆ ಒಪ್ಪಿಸಿ ಬಂದಿದ್ದಳು, ಅಷ್ಟೆ. ಇಷ್ಟು ವರ್ಷಗಳ ಮೇಲೆ ಹೆಗ್ಗಡೆಯವರು ಮೇಗರವಳ್ಳಿಗೆ ಬಂದು ತನ್ನ ಅತಿಥಿಯಾಗುತ್ತಾರೆ ಎಂದು ಹಿಗ್ಗಿದ್ದ ಅಂತಕ್ಕನ ಹೃದಯಕ್ಕೆ, ಅವರಿಗೊದಗಿದ್ದ ಅಪಘಾತದ ಸುದ್ದಿ, ಸಿಡಿಲೆರಗಿದಂತಾಗಿತ್ತು. ಆದರೂ, ಅವರು ಅಸ್ವಸ್ಥರಾದರೂ ಚಿಂತೆಯಿಲ್ಲ, ಜೀವಂತವಾಗಿ ತನ್ನ ಸೇವೆ ಮತ್ತು ಶುಶ್ರೂಷೆಯನ್ನು ಸ್ವೀಕರಿಸಿದ್ದರೆ ತಾನು ಧನ್ಯೆಯಾಗುತ್ತಿದ್ದೆನಲ್ಲಾ ಎಂದು ಅಂತಕ್ಕ ಹಂಬಲಿಸುತ್ತಿದ್ದಳು.

ಮತ್ತೆ ಮತ್ತೆ ಅಂಗಳಕ್ಕಿಳಿದು ಉಣುಗೋಲಿನ ಹತ್ತಿರಕ್ಕೆ ಹೋಗಿ ಹಾದಿ ನೋಡಿ ಹಿಂದಿರುಗುತ್ತಿದ್ದ ಕಾವೇರಿ, ಒಮ್ಮೆ ಹಾಗೆ ಹಾದಿ ನೋಡಲು ಹೋದವಳು ಕೂಗಿಕೊಂಡಳು: "ಅಬ್ಬೆ, ಯಾವನೋ ಒಬ್ಬ ಓಡಿ ಓಡಿ ಬರುತ್ತಿದ್ದಾನೆ!"

ಅಂತಕ್ಕನಿಗೆ ಉದ್ವೇಗಾತಿಶಯದಿಂದ ಕಾಲು ನಡುಗುತ್ತಿದ್ದರೂ ಎದ್ದು ಮಗಳೆಡೆಗೆ ತತ್ತರಿಸುತ್ತಲೆ ಓಡಿ ನಿಂತು ನೋಡಿದಳು: "ಅಯ್ಯೊ ಬೆಪ್ಪು ಹುಡುಗಿ, ನಿನಗೆ ಗೊತ್ತಾಗಲಿಲ್ಲವೆ? ಕೋಣೂರು ಅನಂತೈಗಳಲ್ಲವೆ ಬರುತ್ತರುವವರು?" ಎಂದಳು.

ಕಾವೇರಿಯೂ ಅವರು ತುಸು ಬಳಿಸಾರಿದ ಮೇಲೆ ಗುರುತಿಸಿ "ಹೌದಂಬ್ಬಾಂಗೆ ಕಾಣ್ತದೆ, ಅಬ್ಬೆ, ಕುಂಟಿ ಕುಂಟಿ ಬರುತ್ತಾರಲ್ಲವೆ?" ಎಂದಳು.

ಅಷ್ಟರಲ್ಲಿ ಸಮೀಪಿಸಿದ ಐಗಳು, ಉಣುಗೋಲು ತೆಗೆದು ದಾಟಿ, ಉಸಿರೆಳೆಯುತ್ತಲೆ ಹೇಳಿದರು: "ಅಂತಕ್ಕ, ಆ ಪಾದ್ರಿ ಹೇಳಿದರು, ಅದೇನೋ ಹೊಸ ಪುಡಿ ಕೊಟ್ಟಿದ್ದಾರಂತಲ್ಲಾ? ಅದರದ್ದು ಕಷಾಯ ಮಾಡಿಡಬೇಕಂತೆ, ಹೆಗ್ಗಡೇರಿಗೆ ಕುಡಿಸಲಿಕ್ಕೆ."

ಕಾಫಿ ಮಾಡಲು ಹೇಳಿದ್ದಾರೆ ಎಂದರಿತ ಅಂತಕ್ಕ "ಎಲ್ಲಿದ್ದಾರೆ ಅವರು? ಹೇಗಿದ್ದಾರೆ?" ಎಂದು ಗಾಬರಿಯಿಂದ ವಿಚಾರಿಸಿದಳು.

ಐಗಳು "ಡೋಲಿಯ ಮೇಲೆ ತರುತ್ತಿದ್ದಾರೆ. ಪಾದ್ರಿ ಕೊಟ್ಟ ಗುಳಿಗೆ ಔಷಧ ಬಹಳ ಪರಿಣಾಮಕಾರಿಯಾಯಿತು. ಈಗ ತಕ್ಕಮಟ್ಟಿಗೆ ಪ್ರಜ್ಞೆಯಲ್ಲಿದ್ದಾರೆ. ಒಂದು ಹಾಸಿಗೆ ಮಾಡಬೇಕಿತ್ತಲ್ಲಾ?" ಎಂದರು ಜಗಲಿಯ ಕಡೆ ನೋಡುತ್ತಾ.

ಆಗಲೆಯೆ ಒಳಗೆ ಅವಸರವಾಗಿ ಓಡಿಹೋಗಿದ್ದ ತಾಯಿಗೆ ಬದಲಾಗಿ ಮಗಳೆ ಉತ್ತರ ಹೇಳಿದಳು: "ಹಾಸಿಗೆ ಆಗಲೆ ತಯಾರಾಗಿದೆ, ಐಗಳೆ, ಜಗಲಿ ಮೇಲೆ."

ತುಸು ಹೊತ್ತಿನಲ್ಲಯೆ ಡೋಲಿಯೊಡನೆ ಪಾದ್ರಿ, ದೇವಯ್ಯ ಎಲ್ಲರೂ ಬಂದರು. ಸುಬ್ಬಣ್ಣಹೆಗ್ಗಡೆಯವರನ್ನು ನಿಧಾನವಾಗಿ ಇಳಿಸಿ ಎತ್ತಿಕೊಂಡು ಹೋಗಿ ಹಾಸಗೆಯ ಮೇಲೆ ಮಲಗಿಸಿದರು. ದೇವಯ್ಯ ಅವರ ಮುಂಡಾಸವನ್ನು ಮೆಲ್ಲಗೆ ಕಳಚಿ ಜೋಪಾನವಾಗಿಡಲು ಹೇಳಿ, ಅಂತಕ್ಕನ ಕೈಗೆ ಕೊಟ್ಟನು. ನಿಲುವಂಗಿಯನ್ನು ತೆಗೆಯುವುದು ಹೇಗೆ ಎಂದು ಆಲೋಚಿಸುತ್ತಿರಲು ಪಾದ್ರಿ 'ಬೇಡ' ಎಂದು ಸನ್ನೆಯಿಂದ ಸೂಚಿಸಿ, ಅಲ್ಲಿ ನೆರೆದಿದ್ದವರಿಗೆಲ್ಲ ಹೊರಟುಹೋಗಲು ಹೇಳಿ, ತಾನೂ ದೇವಯ್ಯನನ್ನು ಕರೆದುಕೊಂಡು ಇಸ್ಕೂಲು ಕಟ್ಟುವಲ್ಲಿಗೆ ಹೋದನು. ಹೋಗುವ ಮುನ್ನ ಅಂತಕ್ಕಗೆ ಹೆಗ್ಗಡೆಯವರನ್ನು ನೋಡಿಕೊಳ್ಳುವ ವಿಚಾರವಾಗಿ ಹೇಳಬೇಕಾದ ಎಚ್ಚರಿಕೆಗಳನ್ನೆಲ್ಲ ಹೇಳಿದನು. ಆದರೆ...?

ಎಚ್ಚತ್ತು, ಪ್ರಜ್ಞೆ ತಿಳಿದು, ಸುಬ್ಬಣ್ಣಹೆಗ್ಗಡೆ ಕಣ್ಣು ತೆರೆದು ಸುತ್ತಲೂ ನೋಟ ಹೊರಳಿಸಿದರು. ಅವರ ಕಾಲಿನ ಬುಡದಲ್ಲಿಯೆ ಕಂಬಕ್ಕೆ ಒರಗಿ ಕುಳಿತಿದ್ದ ಅಂತಕ್ಕನನ್ನು ತುಸುವೊತ್ತು ಎವೆಯಿಕ್ಕದೆ ನೋಡಿದರು. ಗುರುತು ಸಿಕ್ಕಿದ ಹೊಳಹು ಅವರ ಕಣ್ಣುಗಳಲ್ಲಿ ಮಿಂಚಿತೇನೋ?

“ಯಾರದು?” ಎಂದರು, ಸೋತ ದನಿಯಲ್ಲಿ.

“ನಾನು, ಅಯ್ಯಾ, ಅಂತಕ್ಕ.”

“ಸುಬ್ಬಣ್ಣನ ಹೆಂಡ್ತಿಯೆ?”

“ಹೌದು, ನನ್ನೊಡೆಯ.” ತನ್ನನ್ನು ತಮ್ಮ ಆಪ್ತಮಿತ್ರ ಸುಬ್ಬಯ್ಯ ಸೆಟ್ಟಿಯ ಹೆಂಡತಿ ಎಂದು ಗುರುತಿಸಿದ್ದರಲ್ಲಿ ಏನೊ ಒಂದು ಆತ್ಮೀಯತೆಯನ್ನು ಅನುಭವಿಸಿ, ಅಂತಕ್ಕ ಆಗಲೆ ಸ್ತ್ರೀ ಸಹಜವಾಗಿ ಭಾವಾವಿಷ್ಟೆಯಾಗಲಾರಂಭಿಸಿದ್ದಳು.

“ಅದಕ್ಕೇ ಮತ್ತೆ? ನಾನು ಯಾಕೋ ಅಂತಿದ್ದೆ!”

“ಏನು ಹೇಳಿದಿರಿ, ಅಯ್ಯಾ?”

“ಸುಬ್ಬಯ್ಯ ಬಂದಿದ್ದ ಈಗ! ಎಚ್ಚರಾಗಾಕೆ ಮುಂಚೆ.”

“ಕನಸು ಕಂಡಿರಾ?”

“ಅಂವ ಸತ್ತು ಇಷ್ಟು ವರ್ಷದ ಮೇಲೆ ಇವತ್ತೆ ಅವನ್ನ ಕಂಡಿದ್ದು. ನನ್ನೂ ಕರೆದ, 'ನೀವು ಬಂದುಬಿಡಿ, ಇಲ್ಲಿ ಚೆನ್ನಾಗಿದೆ' ಅಂತಾ. 'ನಮ್ಮ ದೊಡ್ಡಣ್ಣ ತಿರುಪತಿಗೆ ಹೋದಾಂವ ಇನ್ನೂ ಬಂದೇ ಇಲ್ಲ ಕಣೋ; ಅಂವ ಬಂದಮ್ಯಾಲೆ ಬತ್ತೀನಿ?' ಅಂದೆ.... 'ದೊಡ್ಡಣ್ಣ ಇಲ್ಲೇ ಇದಾನೆ! ಬನ್ನಿ, ತೋರಿಸ್ತೀನಿ!' ಅಂದ. ತೋರಿಸು ಅಂತಾ ಹೇಳಿ ಅವನ ಹಿಂದೆ ಹೋದರೆ, ತೊಟ್ಟಲಾಗಿದ್ದ ಒಂದು ಬಾಲೆ ತೋರಿಸಿ 'ಇವನೆ ನಿಮ್ಮ ದೊಡ್ಡಣ್ಣ!' ಅನ್ನೋದೇನು? ನನಗೆ ಒಂದು ತರಾ ಹೆದರಿಕೆಯಾಗಿ ಕಣ್ಣುಬಿಟ್ಟುಬಿಟ್ಟೆ!”

ಅಂತಕ್ಕ ಬಸ ಬಸ ಬಸ ಅಳತೊಡಗಿ ಹೆಗ್ಗಡೆಯವರ ಕಾಲಿಗೆ ಅಡ್ಡಬಿದ್ದು ಕೈ ಮುಗಿದುಕೊಂಡು ಹೇಳಿದಳು: "ಬ್ಯಾಡ, ನನ್ನೊಡೆಯ, ಬ್ಯಾಡ. ನೀವು ಅವರ ಮಾತು ಕೇಳಬ್ಯಾಡಿ, ನಿಮ್ಮ ದಮ್ಮಯ್ಯ ಅಂತೀನಿ. ನಮ್ಮನ್ನೆಲ್ಲ ನಡುನೀರಿನಲ್ಲಿ ಕೈಬಿಟ್ಟು ಅವರಂತೂ ಹೋಗಿಬಿಟ್ಟರು. ಈಗ 'ಇಲ್ಲಿ ಖುಷಿಯಾಗಿದೆ, ಇಲ್ಲಗೇ ಬನ್ನಿ' ಅಂತಾ ಎಲ್ಲರ್ನೂ ಕರೆಯಾಕೆ ಸುರುಮಾಡಿದಾರೆ? ಖಂಡಿತಾ ಅವರ ಮಾತು ಕೇಳಬ್ಯಾಡಿ ನೀವು!.... ನಮ್ಮ ಗತಿ ನಾಯಿಗತಿ ಆಗ್ತದೆ, ನೀವು ಕೈಬಿಟ್ಟರೆ!"

"ಏನೋ ಕನಸು ಬಿತ್ತು! ಅದಕ್ಕೆಲ್ಲ ಅಳಾದ್ಯಾಕೆ, ಅಂತಕ್ಕ? ನಂಗೇನಾದ್ರೂ ಕುಡಿಯಾಕೆ ಕೊಡ್ತೀಯ?"

ಅಂತಕ್ಕ ಮೈಮರೆತಿದ್ದವಳು ಪಕ್ಕನೆ ಎಚ್ಚತ್ತಂತೆ "ಅಯ್ಯೋ ಒಡೆಯಾ, ನಾನೆಂಥಾ ಬಿರುಗು! ಕಾಪಿ ಮಾಡಿಟ್ಟೀನಿ. ನಿವು ಎದ್ದ ಕೂಡ್ಲೆ ಕೊಡೋಕೆ ಹೇಳಿದ್ರೂ ಆ ಪಾದ್ರಿ. ಮರೆತೇ ಹೋಗಿತ್ತು. ಎಂಥೆಂಥದೊ ಮಾತಾಡಿಬಿಟ್ಟೆ. ನಾನೊಂದು ಮೂಳೆ!" ಎಂದು ತನ್ನನ್ನು ತಾನೆ ಬೈದುಕೊಳ್ಳುತ್ತಾ ಒಳಗೆ ಹೋಗಿ ಬಿಸಿಬಿಸಿ ಕಾಫಿ ತಂದು ಕುಡಿಯಲು ಕೊಟ್ಟಳು.

ಹೆಗ್ಗಡೆ ಹಾಸಗೆಯ ಮೇಲೆ ಮೆಲ್ಲನೆ ಎದ್ದು ಕುಳಿತು. ಗಳಾಸನ್ನು ಕೈಗೆ ತೆಗೆದುಕೊಂಡು, ನೋಡಿ, ಮೂಸಿ ನೋಡಿ, ಮುಖ ಸಿಂಡರಿಸಿ, "ಇದು ಎಂಥದೇ ಕಷಾಯ?" ಎಂದರು.

"ಕಾಪಿ!" ಎಂದಳು ಅಂತಕ್ಕ, ತನ್ನ ಪ್ರಗತಿಶೀಲತೆಗೆ ತಾನೆ ನಸು ನಾಚಿದಂತೆ.

"ಎಂಥದೂಊ?" ಹಣೆ ಸುಕ್ಕಿ ಕೇಳಿದರು ಹೆಗ್ಗಡೆ.

"ಕಾಪಿ!" ಪುನರುಚ್ಚರಿಸಿದ ಅಂತಕ್ಕ ಆಗಲೆ ನಗುಮೊಗವಾಗಿದ್ದಳು.

"ಕಾಪಿ? ಹಾಂಗಂದ್ರೆ?"

"ಅದೊಂದು ತರದ ಬೀಜಾನ ಹುರಿದು, ಪುಡಿಮಾಡಿ, ಬೆಲ್ಲದನೀರು ಕುದಿಸಿ, ಹಾಕಿ, ಕಷಾಯ ಮಾಡಿ, ಅದಕ್ಕೆ ಹಾಲು ಹಾಕಿ ಮಾಡಿದ್ದು....ತೀರ್ಥಹಳ್ಳಿ ಗೀರ್ತಳ್ಳಿ ಪ್ಯಾಟೆ ಕಡೇಲೆಲ್ಲ ದಿನಾ ಹೊತಾರೆ ಕುಡಿಯಾಕೆ ಸುರುಮಾಡಿದ್ದಾರಂತೆ ಅದನ್ನ.... ಸರೀರಕ್ಕೆ ಬಾಳ ಒಳ್ಳೇದಂತೆ.... ಆ ಪಾದ್ರಿ ತಂದುಕೊಟ್ಟಿದ್ದು, ಒಡೆಯಾ. ಇಲ್ಲಿದ್ರೆ ನನಗೆಲ್ಲಿಂದ ಬರಬೇಕು ಬಡವಿಗೆ? ಆ ಪಾದ್ರಿ ಇಲ್ಲಿಗೆ ಬಂದು ಉಳಿದಾಗಲೆಲ್ಲ ಹೊತಾರೆ ಅದನ್ನೆ ಕುಡಿಯೋದು."

ಹೆಗ್ಗಡೆ ಗಳಾಸನ್ನು ತುಟಿಗಿಟ್ಟು ಒಂದು ಸ್ವಲ್ಪ ಕುಡಿದಿದ್ದರೋ ಇಲ್ಲವೊ ಥೂ! ಥೂ! ಥೂ! ಎಂದು ಹಾಸಗೆಯ ಬದಿ ಇಟ್ಟಿದ್ದ ವಾಂತಿ ಬಟ್ಟಲಿಗೆ ವಾಕರಿಸಿ ಉಗುಳಿಬಿಟ್ಟರು. "ಇದನ್ಯಾರು ಕುಡಿದಾರೇ? ಈ ಔಂಸ್ತೀನ? ಹಾಳು ಕಾಪೀನಾ ಬಿಸಾಕ!" ಎಂದು ಶಪಿಸಿ, ಗಳಾಸನ್ನು ಹಿಂದಕ್ಕೆ ಕೊಟ್ಟು, "ಬ್ಯಾರೆ ಏನಾದ್ರೂ ಇದ್ರೆ ತಬಾ. ಇಲ್ದಿದ್ರೆ ಬರೀ ನೀರನೆ ಕೊಡು!" ಎಂದು ತುಸು ಸಿಟ್ಟಾದವರಂತೆ ಮಲಗಿಬಿಟ್ಟರು.

ಅಂತಕ್ಕ ಒಳಗೆ ಹೋಗಿ ಅಕ್ಕಿಬೋಜದ ಹೆಂಡವನ್ನೂ ಸ್ವಾರ್ಲು ಮೀನಿನ ಚಟ್ನಿಯನ್ನು ತಂದುಕೊಟ್ಟ ಮೇಲೆಯೆ ಹೆಗ್ಗಡೆಯವರು ನಂಚಿಕೊಂಡು ಕುಡಿದು, ಸ್ವಲ್ಪ ಚೇತರಿಸಿಕೊಂಡಂತಾಗಿ, ಪ್ರಸನ್ನರಾದದ್ದು!

ಅವರ ದೈಹಿಕ ಸ್ಥಿತಿ ಸ್ವಲ್ಪ ಉತ್ತಮಗೊಂಡು, ಪ್ರಜ್ಞೆ ಸಾಮಾನ್ಯಕ್ಕೆ ಬಂದ ಮೇಲೆ, ನೆನಪು ಮರುಕಳಿಸಿ "ಐಗಳೆಲ್ಲಿ, ನನ್ನ ಸಂಗಡ ಬಂದವರು?" ಎಂದರು.

ಅಂತಕ್ಕ ನಡೆದದ್ದನ್ನೆಲ್ಲ ತನಗೆ ತಿಳಿದುಬಂದಂತೆ ಹೇಳಿ "ಪಾದ್ರಿಗಳು, ಕಣ್ಣಾಪಂಡಿತರು, ಬೆಟ್ಟಳ್ಳಿ ದೇವಯ್ಯಗೌಡರು ಎಲ್ಲಾ ಇಸ್ಕೂಲು ಕಟ್ಟಡದ ಹತ್ತಿರ ಹೋಗಿದ್ದಾರೆ. ಬಾಂವಿ ತೋಡಿಸಾಕೆ ಹಸರುಕಡ್ಡಿ ಹಿಡಿಸ್ತಾರಂತೆ ಐಗಳ ಕೈಲಿ. ಅದಕ್ಕೇ ಅವರನ್ನೂ ಕರಕೊಂಡು ಹೋದರು " ಎಂದಳು.

ಐಗಳು ಎಲ್ಲಿದ್ದಾರೆ ಎಂಬುದರ ಕಡೆಗಾಗಲಿ, ಅವರು ಎಲ್ಲಿಗೆ ಏತಕ್ಕೆ ಹೋದರು ಎಂದು ಅಂತಕ್ಕ ಹೇಳಿದ ವಿವರಣೆಯ ಕಡೆಗಾಗಲಿ ಹೆಗ್ಗಡೆಯವರ ಗಮನ ಹರಿದಂತೆ ಕಾಣಿಸಲಿಲ್ಲ. ತಲೆಯನ್ನು ತಡಕಿ ನೋಡಿಕೊಂಡರು; ತಲೆದಿಂಬಿನ ಅಕ್ಕಪಕ್ಕ ನೋಡಿದರು. ಏನನ್ನೊ ಹುಡುಕುವಂತೆ.

"ಏನು ಬೇಕಾಗಿತ್ತು, ಅಯ್ಯಾ?"

ಅಂತಕ್ಕನ ಪ್ರಶ್ನೆಗೆ ಏನನ್ನೊ ನೆನೆಯುವರಂತೆ ತುಸು ತಡೆದು "ಏನೂ ಇಲ್ಲಾ.... ನನ್ನ ಮುಂಡಾಸು ಎಲ್ಲಿ ಹೋಯ್ತೋ ಏನೋ! ಕಾಡಿನಾಗೇ ಬಿಸಾಕಿ ಬಂದ್ರೋ? ತಂದ್ರೋ? ಅಂತಾ ನೋಡ್ದೆ...." ಎಂದು, ಬೆಲೆಯುಳ್ಳ ಯಾವುದನ್ನೊ ಕಳೆದುಕೊಂಡವರಂತೆ ಖಿನ್ನಮುಖಿಯಾದರು.

ಅಂತಕ್ಕ ತುಸು ಮುಗುಳು ನಗುತ್ತಾ "ಇಲ್ಲೇ ಅದೆ. ನನ್ನ ಹತ್ರಾನೆ ಕೊಟ್ಟಿದ್ದಾರೆ. ಜೋಪಾನವಾಗಿ ಇಡು ಅಂತಾ" ಎಂದು ಮಗುವನ್ನು ಸಂತೈಸುವಂತೆ ಮಾತನಾಡಿದಳು.

"ಎಲ್ಲಿ? ನೋಡಾನ! ತಗೊಂಡು ಬಾ!" ಅಂತಕ್ಕನ ಆಶ್ವಾಸನೆಯಲ್ಲಿ ನಂಬುಗೆ ಸಾಲದೆ, ಪ್ರತ್ಯಕ್ಷ ಪ್ರಮಾಣ ಬಯಸುವವರಂತೆ ಹೇಳಿದರು ಹೆಗ್ಗಡೆ.

"ಕಾವೇರೀ, ಅಯ್ಯೋರ ಮುಂಡಾಸ ಮೆಲ್ಲಗೆ ತೆಗೊಂಡು ಬರ್ತೀಯಾ?" ಅಂತಕ್ಕ ಒಳಗಿದ್ದ ಮಗಳಿಗೆ ಕೂಗಿ ಹೇಳಿದಳು.

ಕಾವೇರಿ ಮುಂಡಾಸ ಎತ್ತಿಕೊಂಡು ಬಂದಳು, ಎರಡೂ ಕೈಯಲ್ಲಿ!

"ಜ್ವಾಕೆ, ಹುಡುಗೀ, ಕೆಳಗ್ಗಿಳಗೆ ಹಾಕಿಬಿಟ್ಟೀಯಾ? ಬಿಚ್ಚಿಹೋದರೆ ಮತ್ತೆ ಕಟ್ಟಾಕೆ ಎಡು ದಿನಾನೆ ಬೇಕಾಗ್ತದೆ!" ಎಚ್ಚರಿಕೆ ಹೇಳಿದ ಹೆಗ್ಗಡೆಯವರು ಅದನ್ನು ಅಮೂಲ್ಯ ವಸ್ತುವನ್ನು ತೆಗೆದುಕೊಳ್ಳುವಂತೆ ಎರಡು ಕೈಯಲ್ಲಿಯೂ

ಹಿಡಿದು ತಲೆದಿಂಬಿನ ಪಕ್ಕದಲ್ಲಿ ಜೋಕೆಯಿಂದ ಇಟ್ಟುಕೊಂಡು, ಹರ್ಷಚಿತ್ತರಾಗಿ ಕಾವೇರಿಯ ಕಡೆ ನೋಡಿ "ಇದು ಯಾರ ಈ ಹುಡುಗಿ?" ಅಂತಕ್ಕನನ್ನು ಪ್ರಶ್ನಿಸಿದರು.

"ಒಡೇರಿಗೆ ಮರತೇ ಹೋಗ್ಯದೆ.... ಅವರು ಹೋದಾಗ ಇವಳು ಮೂರು ನಾಲ್ಕು ವರ್ಷದ ಮಗು. ಇವಳು ನನ್ನ ಮಗಳು; ಕಾವೇರಿ ಅಂತಾ ಹೆಸರು."

"ನಮ್ಮ 'ಬುಚ್ಚಿ' ವಯಸ್ಸೆ ಇರಬೇಕು ಇವಳಿಗೆ?" ಎಂದರು ಹೆಗ್ಗಡೆ, ಕಾವೇರಿಯ ಮುಖವನ್ನೆ ಎವೆಯಿಕ್ಕದೆ ನೋಡುತ್ತಾ.

ಕಾವೇರಿ ನಾಚಿಕೊಂಡು ತಾಯಿಯ ಮರೆಗೆ ಹೋದಳು.

"ಹೌದು ಇವಳಿಗೂ ಮಂಜಮ್ಮನೋರ ವಯಸ್ಸೆ. ಎರಡು ಮೂರು ತಿಂಗಳು ಹೆಚ್ಚು ಕಡಿಮೆ ಇರಬಹುದು" ಎಂದಳು ಅಂತಕ್ಕ.

"ಮದೇಗಿದೇ ಮಾಡೋ ಯೋಚ್ನೆ ಇಲ್ಲೇನು? ಪರಾಯಕ್ಕೆ ಬಂದ ಹುಡುಗೇರನ...." ಎಂದು ಅರ್ಧಕ್ಕೆ ನಿಲ್ಲಿಸಿ ಹೆಗ್ಗಡೆಯವರು ಅಂತಕ್ಕನ ಕಣ್ಣನ್ನೆ ನೋಡಿದರು.

ಅರಿತ ಅಂತಕ್ಕ ಸುಯ್ದು "ಒಂದು ಗಂಡೇನೊ ಗೊತ್ತಾಗಿದೆ. ಆದರೆ ಆ ಹುಡುಗ ಗಟ್ಟದ ಮೇಲೆ ಇಲ್ಲೇ ಇರೋಕೆ ಒಪ್ತಾ ಇಲ್ಲಂತೆ...." ಎಂದಳು.

"ಗಟ್ಟದ ಮ್ಯಾಲೆ ಇರಾಕೆ ಆಗ್ದಿದ್ರೆ ಕೆಳಕ್ಕೆ ಹೋಗ್ಲಿ"

"ನಮ್ಮದು ಅಳಿಯ ಸಂತಾನ. ಕನ್ನಡ ಜಿಲ್ಲೆಯ ಸೆಟ್ಟರಲ್ಲಿ ಗಂಡು ತರುತ್ತಾರೆ; ಹೆಣ್ಣು ಕಳಿಸುವುದಿಲ್ಲ, ಗಟ್ಟದ ಮೇಲಿನವರ ಹಾಂಗೆ."

"ಹೌದಲ್ಲಾ?.... ಮರೆತಿದ್ದೆ!" ಎಂದು ಗಟ್ಟಿಯಾಗಿಯೆ ನಕ್ಕು ಬಿಟ್ಟರು ಹೆಗ್ಗಡೆ.

"ಮಂಜಮ್ಮೋರ ಮದುವೆ ಇಚಾರ ಏನಾಯ್ತೊ? ಸಿಂಬಾವಿ ಹೆಗ್ಡೇರಿಗೆ ಕೊಡ್ತಾರೆ ಅಂತಾ ಸುದ್ದಿ ಹುಟ್ಟಿತ್ತು" ಪ್ರಸ್ತಾಪವೆತ್ತಿದಳು ಅಂತಕ್ಕ.

"ಅದೊಂದು ಕತೇನೆ ಆಗ್ಯದೆ ಬಿಡು! ಆ ಜಟ್ಟಕ್ಕ ನನ್ಹತ್ರ ಬಂದು ಬಾಯ್ ಬಾಯ್ ಹುಯ್ಕೊಂಡು ಬಿಡ್ತು. ಈಗ ವದಂತಿ, ಆ ಹೂವಳ್ಳಿ ಎಂಕ್ಟಣ್ಣನ ಹುಡುಗೀನ ಭರ್ಮಯ್ಯಗೆ ಕೇಳ್ಯಾರಂತೆ! ಎಂಕ್ಟಣ್ಣನೂ ತನ್ನ ಸಾಲಾನೆಲ್ಲ ತೀರಿಸಿಬಿಡಾಕೆ ಭಾರಿ ಮೊತ್ತದ ತೆರಾನೆ ಕೇಳ್ಯಾನಂತೆ! ನೋಡಬೇಕು ಏನಾಗ್ತದೋ ಯವಹಾರ?.... ಎಲ್ಲ ಆ ಕಲ್ಲೂರು ಸಾಹುಕಾರರ ಕೈವಾಡದಾಗೆ ನಡೀತಾ ಅದೆಯಂತೆ...."

“ಅವರ ಕೈಗೆ ಸಿಕ್ಕರಾ? ಆಯ್ತು ಬಿಡಿ!” ಎನ್ನುತ್ತಾ ತನಗೊದಗಿದ್ದ ಏನನ್ನೋ ನೆನಪಿಗೆ ತಂದುಕೊಂಡಲು ಅಂತಕ್ಕ. ಮತ್ತೆ ಸ್ವಲ್ಪ ತಡೆದು ಅಂಜುತ್ತಂಜುತ್ತಲೆ ಹೇಳಿದಳು:

“ನಾನೇನೂ ಇನ್ನೊಂದು ಸುದ್ದಿ ಕೇಳಿದ ಹಾಂಗಿದೆ?”
“ಯಾವ ಸುದ್ದಿ?”
“ಹೂವಳ್ಳಿ ನಾಯಕರ ಮಗಳನ್ನ ಮುಕುಂದೇಗೌಡರು ತಾವೇ ಆಗಬೇಕು ಅಂತಾ ಮಾಡಿಕೊಂಡದ್ರಂತೆ?….”
“ಯಾರೇ? ಕೋಣೂರು ಮುಕುಂದನಾ?”

“ಹ್ಞೂ! ಅವರಿಗೂ ಹೂವಳ್ಳಿ ಚಿನ್ನಕ್ಕಗೂ ಹುಡುಗರಾದ್ದಾಗಿನಿಂದಲೂ ಬಹಳ ಪಿರೀತಿಯಂತೆ!” ಎಂದ ಅಂತಕ್ಕ ತನ್ನ ಮಾತಿಗೆ ತಾನೆ ನಾಚಿದವಳಂತೆ ಮುಖ ತಿರುಗಿಸಿ, ಹಿಂದೆ ಪಕ್ಕದಲ್ಲಿ ನಿಂತು ಎಲ್ಲವನ್ನೂ ಕಿವಿಗೊಟ್ಟು ಆಸಕ್ತಿಯಿಂದ ಆಲಿಸುತ್ತಿದ್ದ ಮಗಳ ಕಡೆ ನೋಡಿ. ಹಲ್ಲು ಬಿಟ್ಟಳು.

ಸುಬ್ಬಣ್ಣ ಹೆಗ್ಗಡೆಯವರೂ ಕಾವೇರಿಯ ಮುಖದ ಕಡೆ ನೋಡಿ ಕಿಲಕ್ಕನೆ ನಕ್ಕು “ಈ ಹುಡುಗರ ಆಟಾನೆಲ್ಲ ಲೆಕ್ಕಕ್ಕೆ ತಗೊಂಡ್ರೆ ಆದ್ದಾಂಗೆ ಆಯ್ತು ಬಿಡು! ಏನು ಮನೇಲಿ ಹೇಳೋರು ಕೇಳೋರು, ಹಿರೇರು ದೊಡ್ಡೋರು, ಯಾರೂ ಇಲ್ಲೇನು? ಇವರಿವರೆ ಗೊತ್ತುಮಾಡಿಕೊಳ್ಳಕೆ? ನಾವೇನು ಕಿಲಸ್ತರೆ? ಮದೇಗೆ ಮುಂಚೇನೆ ಮಾತುಕತೆ ಎಲ್ಲ ಮಾಡಿಕೊಂಡು ಬರಾಕೆ?” ಎಂದವರು ಅರ್ಧ ವಿನೋದಕ್ಕೆಂಬಂತೆ ನೇರವಾಗಿ ಕಾವೇರಿಯನ್ನೆ ಸಂಭೋಧಿಸಿದರು: “ಏನೇ, ಹುಡುಗಿ, ನೀನೆ ಹೇಲೇ. ಮುದುಕನ ಮಾತು ಸರಿಯೋ ತಪ್ಪೋ?”

ಆಡಿದ್ದನ್ನೆಲ್ಲ ಹೀರಿಕೊಳ್ಳುವಂತೆ ಮನಸ್ಸಿಟ್ಟು ಆಲಿಸುತ್ತಿದ್ದ ಕಾವೇರಿ, ಕಿಲಸ್ತರ ಸ್ವಾತಂತ್ರ್ಯದ ವಿಚಾರವಾಗಿ ಸುಬ್ಬಣ್ಣಹೆಗ್ಗಡೆಯವರು ಮಾಡಿದ್ದ ಟೀಕೆಯನ್ನು ಕೇಳಿ, ಆಗಲೆ ತನ್ನ ಹೃದಯದಲ್ಲಿ ಆ ಪದ್ಧತಿಯ ಪರವಾಗಿ ಸಹಾನುಭೂತಿಯಿಂದಿದ್ದವಳು, ತನ್ನ ಮುಖವನ್ನು ಕಂಬದ ಮರೆಯಲ್ಲಿ ಅಡಗಿಸಿಕೊಂಡು ನಿಂತಳು.

ಅಂತಕ್ಕ ಲಘುವಾಗಿ ನಗುತ್ತಾ “ಅವಳನ್ನು ಕೇಳಿದರೆ ಏನು ಹೇಳುತ್ತಾಳೆ? ಒಟ್ಟಾರೆ ಈಗಿನ ಕಾಲದ ಮಕ್ಕಳೆಲ್ಲ, ಹೆಣ್ಣಾಗಲಿ, ಗಂಡಾಗಲಿ, ಎಲ್ಲ ಒಂದೇ! ನಮ್ಮ ಕಾಲದಲ್ಲಿ….” ಎಂದು ಮುಂದುವರೆಸಿ, ತಾವು ಹುಡುಗರಾಗಿದ್ದ ಕಾಲದಲ್ಲಿ ಸಾಮಾಜಿಕ ನಡತೆಯಲ್ಲಿ ಎಂತಹ ಕಟ್ಟುನಿಟ್ಟು ಇದ್ದುವು ಎಂಬುದನ್ನು ಹೆಗ್ಗಡೆಯವರಿಗೆ ನೆನಪುಮಾಡಿಕೊಟ್ಟಳು.

ಹೆಗ್ಗಡೆಯವರು “ಅಲ್ಲದೆ ಮತ್ತೆ?” ಎಂದು ಸಮ್ಮತಿಸಿದರೂ, ತಮ್ಮ ಪ್ರಾಯದ ಕಾಲದ ಅಸಂಯಮ ವರ್ತನೆಗಳ ನೆನಪಾಗಿ ಒಳಗೊಳಗೆ ನಗುತ್ತಿದ್ದರು. ಅವರ ಮಂದಹಾಸದ ಧ್ವನಿ ಅಂತಕ್ಕನ ಅಂತರಾಳದಲ್ಲಿಯೂ ಪ್ರತಿಧ್ವನಿತವಾಗಿ ಅವಳೂ ತನ್ನ ಮಾತಿನ ಅಸತ್ಯತೆಗೆ ತಾನೆ ನಗುತ್ತಾ ಸೆರಗಿನಿಂದ ಮುಖ ಮರೆಸಿಕೊಂಡಳು.

* * *

# ೩೧

ಪಾದ್ರಿ ಜೀವರತ್ನಯ್ಯಗೆ ಕೊಂಚ ಯೋಚನೆಗಿಟ್ಟುಕೊಂಡಿತು: ಮಿಶನ್ ಸ್ಕೂಲಿನ ಹತ್ತಿರ ಬಾವಿ ತೋಡಿಸಲು ಸ್ಥಳ ಗೊತ್ತುಮಾಡುವ ಕಾರ್ಯದಲ್ಲಿ ನೀರಿನ ಪರಿಮಾಣ, ನೀರಿರುವ ಸ್ಥಾನ, ನೀರು ದೊರೆಯುವ ಆಳ ಇವುಗಳನ್ನು ನಿರ್ಧರಿಸುವುದಕ್ಕೆ ಐಗಳ ವಿಶೇಷ ಸಾಮರ್ಥ್ಯದ ಹಸುರುಕಡ್ಡಿಯ ವಿಧಾನವನ್ನು ಉಪಯೋಗಿಸಿಕೊಳ್ಳಬಹುದೆ ಬಾರದೆ ಎಂಬುದರ ವಿಚಾರವಾಗಿ: ಕ್ರೈಸ್ತರಾದ ತಾವು, ಮುಖ್ಯವಾಗಿ ಕ್ರೈಸ್ತ ಮತ ಪ್ರಚಾರಕ್ಕಾಗಿಯೆ ನಿರ್ಮಿತವಾಗಲಿರುವ ಸಂಸ್ಥೆಗೆ, ಕ್ರೈಸ್ತ ಸಮ್ಮತವಲ್ಲದ ಹಿಂದೂ ದುರ್ಮಂತ್ರವಿಧಾನದ ಸಹಾಯ ಪಡೆಯಬಹುದೆ? ನಿಮಿತ್ತ ಕೇಳುವುದು, ಗಣ ಬರಿಸುವುದು, ದೆಯ್ಯದ ಹರಕೆ ಪೂಜೆ ಮಾಡುವುದು ಇತ್ಯಾದಿಗಳನ್ನೆಲ್ಲ ಅವಹೇಳನ ಮಾಡಿ ಖಂಡಿಸುತ್ತಿದ್ದ ತಾವೆ ಈ ಅವೈಜ್ಞಾನಿಕವಾದ ಅಪ್ರಾಕೃತ ಉಪಾಯವನ್ನು ಕೈಗೊಂಡರೆ ನಾಳೆ ತಮ್ಮ ದೊಡ್ಡ ಗುರುಗಳಾದ ರೆವರೆಂಡ್ ಲೇಕ್‌ಹಿಲ್ ದೊರೆಗಳು ಏನೆಂದಾರು?

ಆದರೆ ಕಣ್ಣಾ ಪಂಡಿತರು, ಬೆಟ್ಟಳ್ಳಿ ದೇವಯ್ಯಗೌಡರು, ಕಡೆಗೆ ಅಲ್ಲಿಗೆ ಸುಮ್ಮನೆ ನೋಡಿಕೊಂಡು ಹೋಗಲು ಬಂದಿದ್ದ ಕರಿಮಿನು ಸಾಬರೂ ಕೂಡ ಹಸುರುಕಡ್ಡಿಯ ವಿಧಾನದ ಸಮರ್ಪಕತೆಯ ವಿಷಯವಾಗಿ ತಮ್ಮ ತಮ್ಮ ಅನುಭವಗಳನ್ನು ಒತ್ತಿ ಹೇಳಿ ಸಮರ್ಥಿಸಿ, ಅದು ಅನಿರ್ವಚನೀಯ ಶಕ್ತಿಯಾದರೂ ಅತ್ಯಂತ ಸಹಜವಾದದ್ದೆಂದೂ, ಅದಕ್ಕೂ ದೆವ್ವ ಭೂತಗಣ ನಿಮಿತ್ತಾದಿಗಳಿಗೂ ಏನೂ ಸಂಬಂಧವಿಲ್ಲವೆಂದೂ ದೃಢಪಡಿಸಿದ ಮೇಲೆ ಜೀವರತ್ನಯ್ಯ ಪರೀಕ್ಷಾರ್ಥವಾಗಿ ಪ್ರಯೋಗಿಸಲು ಅನುಮತಿಯಿತ್ತರು.

ಜೀವರತ್ನಯ್ಯಗೂ ಕೆರಳಿ ಅತ್ಯಂತ ಜಾಗರೂಕ ಮನಸ್ಸಿನಿಂದ ಸಮೀಕ್ಷಿಸತೊಡಗಿದರು, ಏನಾದರೂ ದುರ್ಮಂತ್ರದ ಸುಳಿವು ಕಂಡೊಡನೆಯ ಪ್ರಯೋಗ ವಿರಾಮ ಮಾಡಲು ನಿಶ್ಚಯಿಸಿ.

ಐಗಳಿಗೆ, ಪೀಠಿಕೆಪ್ರಾಯವಾಗಿ, ಮೈಮೇಲೆ ಬಂದಂತಾಗಿ ಹೂಂಕರಿಸಬಹುದೆಂದು ನಿರೀಕ್ಷಿಸಿದ್ದ ಜೀವರತ್ನಯ್ಯಗೆ ಆಶ್ಚರ್ಯವಾಯಿತು, ಐಗಳು ತಮ್ಮ ದಿನನಿತ್ಯದ ಸಹಜ ಸ್ಥಿತಿಯಲ್ಲಿಯೆ ಇದ್ದು, ಚೀಂಕ್ರನಿಗೆ ಒಂದು ಕವಲೊಡೆದ ಹಸುರುಕಡ್ಡಿಯನ್ನು ಯಾವುದಾದರೂ ಒಂದು ಗಿಡದಿಂದ ಮುರಿದುಕೊಂಡು ಬರುವಂತೆ ಹೇಳಿದುದನ್ನು ನೋಡಿ! ಚೀಂಕ್ರ ಕೀಳುಜಾತಿಗೆ ಸೇರಿದ್ದ ಅಸ್ಪೃಶ್ಯ; ಅವನ ಹತ್ತಿರ ಅದನ್ನು ತರಲು ಹೇಳುತ್ತಿದ್ದಾರಲ್ಲಾ? ಅಂತಹ ಅಸಾಧಾರಣ ದೈವಿಕ ಕಾರ್ಯನಿರ್ವಹಣೆಗೆ?

ಚೀಂಕ್ರ ಯಾವ ಮುಚ್ಚುಮರೆಯು ಇಲ್ಲದೆ ಬಹಿರಂಗವಾಗಿಯೆ ಸಮೀಪದಲ್ಲಿದ್ದ ಒಂದು ಗಿಡದಿಂದ ಎಲ್ಲರೂ ನೋಡುತ್ತಿದ್ದಂತೆಯೆ ಒಂದು ದೊಡ್ಡ ಕವಲು ಕಡ್ಡಿಯನ್ನು ಮುರಿದು ತಂದ. ಐಗಳು ಅದನ್ನು ಹಿಡಿದು ನೋಡಿ "ಏನೊ ಇದು? ಯಾರಿಗಾದರೂ ಹೊಡೆಯುವುದಕ್ಕೆ ಬರಲು ಮುರಿದುಕೊಂಡು ಬರುವಂತೆ ತಂದಿದ್ದೀಯಲ್ಲಾ ಇಷ್ಟು ದೊಡ್ಡ ಹರೆಯನ್ನ? ಸಣ್ಣದಾಗಿರಬೇಕು; ಬಳುಕಬೇಕು." ಎಂದು ಹೇಳುತ್ತಿರುವಾಗಲೆ ಕಣ್ಣಾಪಂಡಿತರು ತಾವೆ ಹೋಗಿ ಒಂದನ್ನು ಮುರಿದು ತಂದರು.

ಅದು ಐಗಳಿಗೆ ಒಪ್ಪಿಗೆಯಾಯಿತೆಂದು ಅವರ ಮುಖಭಂಗಿಯಿಂದಲೆ ಗ್ರಹಿಸಿದರು ಪಾದ್ರಿ.

ಎಲ್ಲರಿಗೂ ಪವಾಡ ಸಂದರ್ಶನದ ಕುತೂಹಲ, ಆತುರ. ದೂರ ದೂರ ಕೆಲಸ ಮಾಡುತ್ತಿದ್ದ ಆಳುಗಳೆಲ್ಲ ಕೆಲಸ ನಿಲ್ಲಿಸಿ, ನಿಂತು, ಇತ್ತಕಡೆಗೇ ನೋಡುತ್ತಿದ್ದವರು, ಈಗ ಸುತ್ತಣಿಂದಲೂ ಬಳಿ ಸಾರಿ ಗುಂಪಾಗಿ ಸಾಲಾಗಿ ಐಗಳಿಗೆ ತುಸು ದೂರವಾಗಿ ನಿಂತು, ಹುಬ್ಬು ನಿಮಿರಿಸಿ ನೋಡತೊಡಗಿದರು.

ಐಗಳು ಆ ಬಳಕುವ ಹಸುರು ಕಡ್ಡಿಯ ಕವಲಿನ ಎರಡೂ ತುದಿಗಳನ್ನು ತಮ್ಮ ಎರಡೂ ಕೈಯಲ್ಲಿ ಪ್ರತ್ಯೇಕವಾಗಿ ಹಿಡಿದು, ತಮ್ಮ ಎದೆಗೆ ನೇರವಾಗಿ ಚಾಚಿಕೊಂಡರು. ಅದು ಯಾವ ಒಂದು ಕಡ್ಡಿಯಿಂದ ಎರಡಾಗಿ ಕವಲಿತ್ತೊ ಆ ಕಡ್ಡಿಯ ಮೂರು ನಾಲ್ಕು ಅಂಗುಲದುದ್ದದ ಮೂಲಭಾಗ ಸಮತಲವಾಗಿ ಮುಂದಕ್ಕೆ ಚಾಚಿತ್ತು. ಐಗಳು ಮುಂದುವರೆದು ನಡೆಯತೊಡಗಿದರು, ಬಾವಿ ತೊಡಿಸಬೇಕು ಎಂದಿದ್ದ ಎಡೆ.

ನೀರು ಸಿಕ್ಕುವ ತಾಣಕ್ಕೆ ಬಂದೊಡನೆ ಆ ಹಸುರುಕಡ್ಡಿಯ ಚಾಚಿದ್ದ ಮೂಲಭಾಗ ನೆಲದ ಕಡೆ ತನಗೆ ತಾನೆ ಬಾಗುತ್ತದೆ ಎಂದು ಕೇಳಿದ್ದ ಅವರೆಲ್ಲರೂ ಆ ಕಡ್ಡಿಯ ಕೊನೆಯ ಕಡೆಗೆ ನೋಡುತ್ತಾ ಐಗಳನ್ನು ಹಿಂಬಾಲಿಸಿದರು. ಪಾದ್ರಿಯೂ ನಡೆಯಬಹುದಾದ ಮೋಸವನ್ನು ಕಂಡುಹಿಡಿಯುವ ಪತ್ತೇದಾರಿಕೆ ಬುದ್ಧಿಯಿಂದ ಕಣ್ಣಿನ ಮೇಲೆ ಕಣ್ಣಿಟ್ಟುಕೊಂಡು ಎಲ್ಲರಿಗಿಂತಲೂ ಮುಂದಾಗಿಯೆ ಐಗಳನ್ನು ಅನುಸರಿಸುತ್ತಿದ್ದನು.

ಪಾದ್ರಿ ಬಾವಿ ಅಗೆಯಲು ನಿರ್ದೇಶಿಸಿದ್ದ ಜಾಗದಲ್ಲಿ ಹಸುರುಕಡ್ಡಿ ಭಾಗಲಿಲ್ಲ. ಐಗಳು ಇನ್ನೂ ಮುಂಬರಿದರು. ಸ್ವಲ್ಪ ದೂರ ಸಾಗುವುದರಲ್ಲಿಯೆ ಕಡ್ಡಿಯ ತುದಿ ನೆಲದ ಕಡೆ ನಮಸ್ಕಾರ ಮಾಡುತ್ತದೆಯೊ ಎಂಬಂತೆ ನಸುವೆ ಬಾಗತೊಡಗಿತು. ಅದನ್ನು ಕಂಡೊಡನೆ ಹೋ ಎಂದು ಜಯಘೋಷ ಮಾಡುವಂತೆ ನೆರೆದವರ ಅನಂದ್ಯೋದ್ಗಾರವೆದ್ದಿತು.

ಪಾದ್ರಿಗೆ ನಂಬಿಕೆಯಾಗಲಿಲ್ಲ. ಐಗಳೇ ತಮ್ಮ ಕೈಚಳಕದಿಂದ ಆ ಬಳುಕುವ ಹಸುರು ಕಡ್ಡಿಯ ತಲೆಯನ್ನು ಹಾಗೆ ನೆಲದ ಕಡೆಗೆ ತುಯ್ಯುವಂತೆ ಮಾಡುತ್ತಿರಬೇಕು ಎಂದುಕೊಂಡನು.

ಐಗಳು ಇನ್ನೂ ಮುಂದುವರಿದರು, ಕಡ್ಡಿ ಮತ್ತೆ ತಲೆಯೆತ್ತಿ ಮೊದಲಿನಂತೆ ನಿಂತಿತು.

“ಅತ್ತ ಕಡೆ ಪ್ರಯೋಜನವಿಲ್ಲ, ಐಗಳೆ. ಇತ್ತ ಮೊಕ ತಿರುಗಿ, ಆ ಹಲಸಿನ ಮರದ ಕಡೆಗೆ” ಎಂದರು ಕಣ್ಣಾಪಂಡಿತರು.

ಕಣ್ಣಾಪಂಡಿತರ ಸೂಚನೆಯ ಮೇರೆಗೆ ಐಗಳು ಹಲಸಿನ ಮರದ ದಿಕ್ಕಿಗೆ ತಿರುಗಿ ನಡೆಯತೊಡಗಿದರು. ಹಲಸಿನ ಮರ ಸಮಿಪಿಸಲು ಹಸುರು ಕಡ್ಡಿಯ ತಲೆ ಇದ್ದಕ್ಕಿದ್ದಂತೆ, ಅದರ ತುದಿಗೆ ಕಟ್ಟಿದ್ದ ಅದೃಶ್ಯ ಸೂತ್ರವನ್ನು ಯಾರೋ ನೆಲದ ಕಡೆಗೆ ಬಲವಾಗಿ ಜಗ್ಗಿಸಿ ಎಳೆದರೋ ಎಂಬಂತೆ, ಮುರಿಯುವಷ್ಟರ ಮಟ್ಟಿಗೆ ಬಾಗಿ ಕೊಂಕಿಬಿಟ್ಟಿತು! ನೋಡುತ್ತಿದ್ದವರಿಗೆ ಆ ಕ್ರಿಯೆ ಎಷ್ಟು ವಿಸ್ಮಯಕರವಾಗಿತ್ತೆಂದರೆ, ಯಾವುದೊ ಅತಿಮಾನುಷವಾದ ಜೀವಂತ ಶಕ್ತಿಯೆ ಆ ನಿರ್ಜೀವ ಹಸುರು ಕಡ್ಡಿಯಲ್ಲಿ ಸೇರಿಕೊಂಡು ಆಟವಾಡುತ್ತಿದೆಯೋ ಏನೋ ಎಂಬ ಭ್ರಾಂತಿಭಯ ಮೂಡುವಂತಾಯಿತು. 'ಇದು ಖಂಡಿತ ದೇವರ ಶಕ್ತಿಯಲ್ಲ; ದೇವರ ವೈರಿಯಾದ ಸೈತಾನನ ಶಕ್ತಿಯೆ ಇರಬೇಕು!' ಎಂದುಕೊಂಡರು ಪಾದ್ರಿ ಜೀವರತ್ನಯ್ಯ. ಯೇಸುಕ್ರಿಸ್ತನು ಮಾಡಿದ ಮಹಾದ್ಭುತಕರವಾದ ಪವಾಡಗಳಲ್ಲಿ ಅವರಿಗೆ

ಅಪಾರ ಶ್ರದ್ಧೆಯಿದ್ದರೂ, ಕ್ರೈಸ್ತನಲ್ಲದವನಲ್ಲಿ ತೋರಿಬರುವ ಆ ಪವಾಡಶಕ್ತಿ ಎಂದಿಗೂ ಸೈತಾನನದೇ ಎಂಬುದು ಅವರ ಅವೈಚಾರಿಕ ಮತಶ್ರದ್ಧೆಯಾಗಿತ್ತು.

ಐಗಳೆ, ಸ್ವಲ್ಪ ನಿಲ್ಲಿ, ಇಲ್ಲಿ ಕೊಡಿ, ನಾನು ನೋಡುತ್ತೇನೆ ಆ ಹಸುರುಕಡ್ಡಿಯನ್ನ, ಎಂದರು ಪಾದ್ರಿ

ಐಗಳು ಪರಿಹಾಸ ಮುಖ ಮುದ್ರೆಯಿಂದಲೆ ತಮ್ಮ ಎರಡೂ ಕೈ ಹಿಡಿದಿದ್ದ ಹಸುರು ಕಡ್ಡಿಯನ್ನು ಜೀವರತ್ನಯ್ಯಗೆ ನೀಡಿದರು. ಅವರು ಅದನ್ನು ಸ್ವಲ್ಪ ಎಚ್ಚರಿಕೆಯಿಂದಲೆ ತೆಗೆದುಕೊಂಡು ಅತ್ತ ಇತ್ತ ತಿರುಗಿಸಿ ನೋಡಿ "ನಾನು ಬೇರೆ ಒಂದು ಕಡ್ಡಿ ಮುರಿದು ಕೊಡಬಹುದೇ?" ಎಂದರು.

ಐಗಳೊಡನೆ ನಾಲ್ಕಾರು ದನಿಗಳು "ಅದಕ್ಕೇನಂತೆ ಮುರಿದು ಕೊಡಿ" ಎಂದುವು ಒಟ್ಟಿಗೆ.

ಪಾದ್ರಿ ಸ್ಕೂಲಿನ ಸುತ್ತಲೂ ಕಡಿದು ಬಯಲು ಮಾಡಿದ್ದ ಕಾಡಿನ ಅಂಚಿಗೆ ಹೋಗಿ ಒಂದು ಕವಲುಕಡ್ಡಿಯನ್ನು ಮುರಿದು ತಂದರು.

ಅದನ್ನು ಕೈಗೆ ತೆಗೆದುಕೊಳ್ಳುತ್ತಾ ಬೆಟ್ಟಳ್ಳಿ ದೇವಯ್ಯಗೌಡರು "ಇದು ಅದಕ್ಕಿಂತ ಪಸಂದಾಗಿದೆ. ಲಾಯಖ್ಖಾಗಿ ಬಳುಕ್ತದೆ." ಎಂದು ಐಗಳಿಗೆ ಕೊಟ್ಟರು.

ಐಗಳು ಮೆಚ್ಚಿನೋಡಿ ಹಿಂದಿನ ಕಡ್ಡಿಯನ್ನು ಹಿಡಿದ್ದಂತೆಯೆ ಇದನ್ನೂ ಹಿಡಿದುಕೊಂಡರು.

ಒಡನೆಯೆ, ನೋಡುತ್ತಿದ್ದ ಜನರೆಲ್ಲ ಕೈಚಪ್ಪಾಳೆ ಹೊಡೆದು ಹೋ ಎಂದ ಸದ್ದು ಪಾದ್ರಿಯ ಕಿವಿಗೆ ಅಪ್ಪಳಿಸಿದಂತಾಯ್ತು: ಪಾದ್ರಿ ನೋಡುತ್ತಾರೆ: ತಾವು ಕೊಟ್ಟಿದ್ದ ಹಸುರುಕಡ್ಡಿ ಹಿಂದಿನ ಕಡ್ಡಿಗಿಂತಲೂ ಹೆಚ್ಚಾಗಿ ತಲೆಬಾಗಿದಂತಾಗಿ, ಹಲಸಿನ ಮರದ ಬುಡದಲ್ಲಿ ಬಾವಿ ಅಗೆದರೆ ನೀರು ಸಮೃದ್ಧವಾಗಿ ಉಕ್ಕುತ್ತದೆ ಎಂಬುದನ್ನು ಮೌನವಾಗಿ ಘೋಷಿಸುತ್ತದೆ!

ಪಾದ್ರಿಯ ಸೂಚನೆಯ ಪ್ರಕಾರ ಐಗಳು ಆ ಕಡ್ಡಿಯನ್ನೆ ಹಿಡಿದು ಮೊದಲು ನಡೆದ ಹಾದಿಯಲ್ಲಿಯೆ ಮತ್ತೊಮ್ಮೆ ನಡೆದರೂ ಈ ಕಡ್ಡಿ ಆ ಕಡ್ಡಿ ಗಿಂತಲೂ ಸ್ಪಷ್ಟವಾಗಿ ಬಾಗಿ ಅಥವಾ ಬಾಗದೆ ಮೊದಲಿನ ಕಡ್ಡಿ ಬರೆದಿದ್ದ ಇತಿಹಾಸವನ್ನೆ ಬರೆದುಬಿಟ್ಟಿತು.

"ಐಗಳೆ, ನಾನು ಕಡ್ಡಿ ಹಿಡಿಯುತ್ತೇನೆ, ನೋಡೋಣ ಇತ್ತ ಕೊಡಿ " ಎಂದರು ಪಾದ್ರಿ, ಪರೀಕ್ಷೆ ನಡೆಸುವ ಉದ್ದೇಶದಿಂದ.

ಪಾದ್ರಿ ಐಗಳು ಹಿಡಿದಿದ್ದಂತೆಯೆ ಹಿಡಿದು ಅಲ್ಲೆಲ್ಲ ಸುತ್ತಾಡಿದರು. ಕಡ್ಡಿ ಇನಿತೂ ಮಿಸುಕಲಿಲ್ಲ. ನೆರೆದಿದ್ದವರೆಲ್ಲ ನಕ್ಕರು ಅಷ್ಟೆ!

ಅಷ್ಟರಲ್ಲಿ ಐಗಳು ವಿನೋದ ಮಾಡಿ ನೋಡುವ ಉದ್ದೇಶದಿಂದ “ಪಾದ್ರಿಗಳೆ, ಇನ್ನೊಮ್ಮೆ ಹಿಡಿಯಿರಿ ನೀವು. ಒಂದು ವಿಚಿತ್ರ ತೋರಿಸುವಾ!” ಎಂದು ಕಡ್ಡಿಯನ್ನು ಸರಿಯಾಗಿ ಹಿಡಿಸುವ ನೆವದಿಂದ ಅವರ ತೋಳನ್ನು ಮುಟ್ಟಿಹಿಡಿದು “ಹ್ಞೂ! ಈಗ ನಡೆಯಿರಿ!” ಎಂದರು.

ಹತ್ತು ಹೆಜ್ಜೆ ಹೋಗುವುದರಲ್ಲಯೆ ಪಾದ್ರಿ ಹಿಡಿದಿದ್ದ ಹಸುರುಕಡ್ಡಿ ಬಳುಕತೊಡಗಿತು! ಪಾದ್ರಿಗೆ ವಿಸ್ಮಯ, ದಿಗಿಲು! ತಾನೆಲ್ಲ ಸೈತಾನನ ಪ್ರಭಾವಕ್ಕೆ ಒಳಗಾದೆನೋ ಎಂದು! ಆದರೂ ಧೈರ್ಯಮಾಡಿ ನಡೆದರು. ಹಲಸಿನ ಮರದ ಬುಡಕ್ಕೆ ಬರುವಷ್ಟರಲ್ಲಿ ಪಾದ್ರಿ ಹಿಡಿದಿದ್ದ ಹಸುರುಕಡ್ಡಿ ಐಗಳು ಹಿಡಿದಿದ್ದಾಗ ಹೇಗೆ ಬಾಗಿತೋ ಹಾಗೆಯೆ ಬಾಗಿತ್ತು!

“ಹಾಗಾದರೆ ಇದು ಎಲ್ಲರಿಗೂ ಬಾಗುತ್ತದೆ! ಎಲ್ಲರಿಗೂ ಸಾಧ್ಯ!” ಎಂದ ಜೀವರತ್ನಯ್ಯ ನೋಡುತ್ತಾರೆ, ಬಾಗಿದ್ದ ಕಡ್ಡಿ ನೆಟ್ಟಗೆ ನಿಂತಿದೆ, ಏನು ಮಾಡಿದರೂ ಬಾಗುವ ಚಿಹ್ನೆ ತೋರಿಸಿದೆ!

ಪಾದ್ರಿ ಬೆರಗಾಗಿ ಹೋದರು. ಆದರೆ ಮತ್ತೆ ನೋಡುತ್ತಿದ್ದಂತೆ, ಕಡ್ಡಿ ಮೊದಲಿನಂತೆ ಬಾಗಿತ್ತು! ಪಾದ್ರಿ ವಿಸ್ಮಯ ಸಂಮೂಢರಾದಂತೆ ಬೆಪ್ಪುನಗೆ ನಗುತ್ತಾ ಹಲ್ಲು ಬಿಡುತ್ತಿದ್ದುದನ್ನು ನೋಡಿ, ಗುಟ್ಟು ಅರಿತಿದ್ದ ದೇವಯ್ಯ ಮತ್ತು ಕಣ್ಣಾಪಂಡಿತರು ಗಹಗಹಿಸಿ ನಕ್ಕರು.

ಪಾದ್ರಿಯ ಪ್ರಶ್ನಾರ್ಥಕ ಮುಖಮುದ್ರೆಯನ್ನು ನೋಡಿ ಕಣ್ಣಾಪಂಡಿತರು ರಾಗಸ್ವರದಲ್ಲಿ “ಅಯ್ಯೋ, ಪಾತ್ರಿಗಳೇ, ನಿಮಗೆ ಇಷ್ಟೂ ಗೊತ್ತಾಕಕಿಲ್ಲವೋ? ಐಗಳು ನಿಮ್ಮ ರಟ್ಟೆ ಹಿಡಿದುಕೊಂಡಿದ್ದರಲ್ಲವಾ? ಅವರು ನಿಮ್ಮನ್ನು ಮುಟ್ಟಿದಾಗ ಕಡ್ಡಿ ಬಾಕುತ್ತಿತ್ತು; ಬಿಟ್ಟಾಗ ನೆಟ್ಟಕಾಕುತಿತ್ತು... ಅವರೆ ಹಿಡಿದುಕೊಂಡರೂ ಸೈ, ಯಾರೆ ಹಿಡಿದುಕೊಂಡಿರಲಿ ಅವರು ಮೈಮುಟ್ಟಿದರೂ ಸೈ, ಹಸುರುಕಡ್ಡಿ ಕೆಲಸಮಾಡುತ್ತದೆ!” ಎಂದರು.

ಜೀವರತ್ನಯ್ಯ ಸ್ವಲ್ಪ ಅಪ್ರತಿಭರಾದರು. ಅದರ ತರ್ಕ ಅವರಿಗೆ ಬಗೆಹರಿಯಲಿಲ್ಲ. ಇದು ಮಂತ್ರಶಕ್ತಿಯೋ? ಅಥವಾ ವಿದ್ಯುಚ್ಛಕ್ತಿಯಂತೆಯೆ ಒಂದು ತರಹದ ನೈಸರ್ಗಿಕ ಶಕ್ತಿಯೋ? ನೈಸರ್ಗಿಕ ಶಕ್ತಿಯಾದರೆ ಎಲ್ಲರಲ್ಲಿಯೂ ಏಕೆ ಇಲ್ಲ?

ಅಥವಾ ಬುದ್ಧಿಶಕ್ತಿಯಂತೆ, ಮೇಧಾ ಪ್ರತಿಭಾ ಶಕ್ತಿಗಳಂತೆ, ದೈವದತ್ತವಾಗಿ ಒಬ್ಬರಲ್ಲಿದ್ದು ಇನ್ನೊಬ್ಬರಲ್ಲಿ ಇರದೆ ಇರಬಹುದಲ್ಲವೆ? ಆದರೆ ಬುದ್ಧಿ ಮೇಧಾ ಮತ್ತು ಪ್ರತಿಭಾಶಕ್ತಿಗಳನ್ನು ಪಡೆದವರು ಐಗಳಂತೆ ಆ ಶಕ್ತಿಗಳನ್ನು ಇತರರಲ್ಲಿ ಸ್ಪರ್ಶಮಾತ್ರದಿಂದ ಪ್ರಚೋದಿಸಲು ಸಾಧ್ಯವೇ? ಅಲ್ಲದೆ ಐಗಳೇನು ತಮ್ಮ ಇಚ್ಛಾಶಕ್ತಿಯಿಂದ ಅದನ್ನು ಇತರರಲ್ಲಿ ಪ್ರಚೋದಿಸುತ್ತಿಲ್ಲ. ಅವರು ಯಾರನ್ನು ಮುಟ್ಟಿದರೂ, ಇಚ್ಛೆಯಿರಲಿ ಇಲ್ಲದಿರಲಿ ಹಸುರುಕಡ್ಡಿ ಕೆಲಸಮಾಡುತ್ತದೆ! ಇದೆಂತಹ ವಿಚಿತ್ರಶಕ್ತಿ?

“ಅನಂತಯ್ಯನವರೆ, ನಿಮಗೆ ಈ ಶಕ್ತಿ ಹೇಗೆ ಬಂತು? ಎಲ್ಲಿ ಸಂಪಾದಿಸಿರಿ? ಯಾರಾದರೂ ಮಂತ್ರ ಹೇಳಿಕೊಟ್ಟರೇ?” ಎಂದು ಐಗಳನ್ನೇ ಕೇಳಿದರು ಪಾದ್ರಿ.

ಐಗಳು ನಕ್ಕರು: “ಮಂತ್ರವೂ ಇಲ್ಲ, ತಂತ್ರವೂ ಇಲ್ಲ. ನಾನು ಹುಡುಗನಾಗಿದ್ದಾಗ ನಮ್ಮೂರಲ್ಲಿ, ಗಟ್ಟದ ತಗ್ಗಿನಲ್ಲಿ ಸೋಮೇಶ್ವರದ ಸಮೀಪದ ಒಂದು ಹಳ್ಳಿ, ಅಲ್ಲಿ ಯಾರೋ ಹೀಗೆಯೆ ಬಾವಿ ತೋಡಿಸಲು ಇಬ್ಬರನ್ನು ಕರೆಯಿಸಿದ್ದರು.

ನಾವು ನಾಲ್ಕಾರು ಮಕ್ಕಳು ಅಲ್ಲಿಯೆ ಚೆಣ್ಣಿಕೋಲು ಆಡುತ್ತಿದ್ದರು ನೋಡುತ್ತಾ ನಿಂತೆವು. ಅವರು ಹೀಗೆಯೆ ಹಸುರುಕಡ್ಡಿ ಹಿಡಿದು ಹೋಗುತ್ತಿದ್ದಾಗ ಅದು ಬಾಗುತ್ತಿತ್ತು, ನೆಟ್ಟಗಾಗುತ್ತಿತ್ತು, ಮತ್ತೆ ಬಾಗುತ್ತಿತ್ತು. ನಮಗೆ ಅದನ್ನು ಕಂಡು ಬೆಪ್ಪು ಬೆರಗು! "ಅಂವ ಏನೋ ಕೈಚಳಕ ಮಾಡ್ತಿದ್ದಾನೆ; ಕಳ್ಳ!" ಎಂದ ನಮ್ಮಲ್ಲಿ ಒಬ್ಬ. "ನಾವೂ ಮಾಡಿ ನೋಡುವಾ!" ಎಂದ ಇನ್ನೊಬ್ಬ. ಅವರೆಲ್ಲರೂ ಹೋದಮೇಲೆ ಮಾವೋ ಕವಲೊಡೆದ ಹಸರುಕಡ್ಡಿ ಮುರಿದು ತಂದು, ಅವನು ಹಿಡಿದಿದ್ದ ಹಾಗೆಯೆ ಹಿಡಿದುಕೊಂಡು ನಡೆದಾಡಿದೆವು. ಯಾರ ಕಡ್ಡಿಯೂ ಬಳುಕಲಿಲ್ಲ; ನನ್ನ ಕಡ್ಡಿ ಮಾತ್ರ ಅವನ ಕಡ್ಡಿಯಂತೆಯೆ ಬಳಕುತ್ತಿತ್ತು, ನೆಟ್ಟಗಾಗುತ್ತಿತ್ತು; ಒಂದು ಕಡೆ ಚೆನ್ನಾಗಿ ಬಾಗಿಯೆ ನಿಂತೂಬಿಟ್ಟಿತು! ಮಕ್ಕಳೆಲ್ಲರಿಗೂ ಬೆರಗೋ ಬೆರಗು!.... ನನಗೆ ಬಂದದ್ದು, ನೋಡಿ, ಹೀಗೆ, ಈ ಶಕ್ತಿ...."

"ಹೋಯ್, ಐಗಳೇ, ಕೂಗುತ್ತಾರಂತೆ ಹೆಗ್ಗಡೇರು" ಎಂದರು ಯಾರೋ ಒಬ್ಬರು ಗುಂಪಿನಲ್ಲಿದ್ದವರು.

ಅಷ್ಟರಲ್ಲಿ ಅಂತಕ್ಕನ ಮನೆಗೆಲಸ ಆಳು, ಕೊರಗ ಹುಡುಗ, ಅನಂತಯ್ಯನವರ ಕಡೆಗೆ ಧಾವಿಸಿ ಬಂದು, ಹೆಗ್ಗಡೆಯವರು ಕರೆಯುತ್ತಾರೆ ಎಂದು ತುಳುವಿನಲ್ಲಿ ಹೇಳಿದನು.

ಪಾದ್ರಿಗೆ ಗಾಬರಿಯಾಗಿ "ಏನಂತೆ?" ಎಂದರು.

ಅನಂತಯ್ಯ ಮತ್ತೆ ತುಳುವಿನಲ್ಲಿಯೆ ಆ ಹುಡುಗನೊಡನೆ ಮಾತಾಡಿ, ಪಾದ್ರಿಗೆ ಹೇಳಿದರು: "ಏನೂ ಇಲ್ಲ, ಸುಮ್ಮನೆ ಹೇಳಿಕಳಿಸಿದ್ದಾರೆ ನನಗೆ, ಅಷ್ಟೆ ಹಾಸಗೆಯ ಮೇಲೆ ಎದ್ದು ಕುಳಿತ್ತಿದ್ದಾರಂತೆ. ಮಾತುಕತೆ ಆಡುತ್ತಿದ್ದಾರಂತೆ...."

ಊಟದ ಹೊತ್ತು ಆಗಲೆ ಮೀರಿ ಹೋಗಿತ್ತು. ಎಲ್ಲರೂ ಹಗಲೂಟಕ್ಕಾಗಿ ಕೆಲಸ ನಿಲ್ಲಿಸಿ ಹೊರಟರು. ಜೀವರತ್ನಯ್ಯ, ದೇವಯ್ಯ, ಅನಂತಯ್ಯ ಮೂವರೂ ಅಂತಕ್ಕನ 'ಹೋಟೆಲ್' ಆಗಿ ಪರಿವರ್ತಿತವಾಗಿದ್ದ ಮನೆಗೆ ನಡೆದರು. ಅದನ್ನಾಗಲೆ 'ಓಟ್ಲುಮನೆ' ಎನ್ನತೊಡಗಿದ್ದರು ಜನ.

ಅಂತಕ್ಕನ ಓಟ್ಲುಮನೆಯ ಜಗಲಿಯಲ್ಲಿ ಸ್ವಸ್ಥರಾದಂತೆ ಹಾಸಗೆಯ ಮೇಲೆ ಎದ್ದು ಕುಳಿತಿದ್ದ ಸುಬ್ಬಣ್ಣಹೆಗ್ಗಡೆಯವರು ತಡಬೆ ಹತ್ತಿಳಿದು ದಾಟಿಬರುತ್ತಿದ್ದ ದೇವಯ್ಯ ಜೀವರತ್ನಯ್ಯರನ್ನು ಕಂಡು, ತಮಗೆ ರೂಢಮೂಲವಾಗಿದ್ದ ಹಳ್ಳಿಯ ಯಜಮಾನಿಕೆಯ ದೊಡ್ಡ ಗಂಟಲಿನಿಂದಲೆ ಕೇಳಿದರು "ಓಯ್ ಅನಂತೈಗಳೆ, ನನ್ನ ಜೋಡು ಅಲ್ಲೇ ಬಿಟ್ಟು ಬಂದಿರಾ ಏನು ಕತೆ? ಬೆತ್ತದ ದೊಣ್ಣೇನೂ ಕಾಣಾದಿಲ್ಲ?...."

ತಮ್ಮ ವಸ್ತುಗಳ ವಿಚಾರದಲ್ಲಿ ಹೆಗ್ಗಡೆಯವರಿಗೆ ಕೃಪಣೋಪಮ ಮನೋಧರ್ಮವಿರುವುದನ್ನೂ, ಅವು ಎಲ್ಲಿಯಾದರೂ ಕಳೆದುಹೋಗುವುದಿರಲಿ ತುಸು ಕಣ್ಮರೆಯಾದರೂ ಹುಡುಗರಂತೆ ರೊಚ್ಚಿಗೆದ್ದು ಹಠಮಾಡುತ್ತಾರೆ ಎಂಬುದನ್ನೂ ಅರಿತಿದ್ದ ಅನಂತಯ್ಯ ಮಕ್ಕಳನ್ನು ಸಾಂತ್ವನಗೊಳಿಸುವಂತೆ "ಇಲ್ಲ ಇಲ್ಲ; ಎಲ್ಲವನ್ನೂ ತೆಗೆದುಕೊಂಡು ಬಂದಿದ್ದೇವೆ. ದೇವಯ್ಯಗೌಡರೆ ತೆಗೆದು ಇಟ್ಟಿದ್ದಾರೆ " ಎಂದು ಹಿಂದೆ ಅಂಜಿಕೆಯಿಂದಲೆಂಬಂತೆ ತುಸು ಹುದುಗಿಯೆ ಬರುತ್ತಿದ್ದ ದೇವಯ್ಯನ ಕಡೆ ಮುಖ ಮಾಡಿ "ಅಲ್ಲವೋ, ದೇವಯ್ಯಾ? ನಿಮ್ಮ ಕಡೆಗೇ ನಾನು ಕೊಟ್ಟೆನಲ್ಲವೇ?" ಎಂದು ಹೆಗ್ಗಡೆಯವರಿಗೆ ಗೊತ್ತಾಗದಂತೆ ಕಣ್ಣು ಮಿಟುಕಿಸಿದರು.

ದೇವಯ್ಯನಿಗೂ ಗೊತ್ತಿತ್ತು, ತನ್ನ ಹಳೆಮನೆ ದೊಡ್ಡಪ್ಪಯ್ಯನ ಸ್ವಭಾವ. ಆದ್ದರಿಂದಲೆ ಅವನಿಗೆ ಐಗಳ ಕಣ್ಸೈಟುಕು ಅರ್ಥವಾಗಿ, ಮೆಟ್ಟು ದೊಣ್ಣೆಗಳು ಎಲ್ಲಿವೆಯೋ ಏನೋ ಎಂಬುದು ಅವನಿಗೆ ಸ್ವಲ್ಪವೂ ಗೊತ್ತಿಲ್ಲದಿದ್ದರೂ “ಅಲ್ಲೆ ಇವೆ, ಐಗಳೆ, ಕಲಬಿ ಹಿಂದುಗಡೆ “ ಎಂದುಬಿಟ್ಟನು, ಹೆಗ್ಗಡೆಯವರಿಗೆ ಕೇಳಿಸುವಂತೆ ಗಟ್ಟಿಯಾಗಿ.

ಜಗಲಿಯ ಕೆಳಗಣ ಅರೆಗತ್ತಲೆ ಕಿರುಜಗಲಿಯ ಮೂಲೆಯಲ್ಲಿದ್ದ ಪುರಾತನವಾದ ಆ ಕಲಬಿಯ ಮೇಲೆ ಮಲಗಿದ್ದ ಯಾವನೊ ಒಬ್ಬ ಊಟದ ಗಿರಾಕಿ ಕಲಬಿಯ ಸುತ್ತಮುತ್ತ ಮೇಲೆ ಕೆಳಗೆ ಕಣ್ಣಟ್ಟಿನೋಡಿ, ಯಾವ ಮೆಟ್ಟನ್ನೂ ದೊಣ್ಣೆಯನ್ನೂ ಕಾಣದೆ ಸೋಜಿಗಪಟ್ಟು ಸುಮ್ಮನಾದದ್ದನ್ನು ಯಾರೂ ಗಮನಿಸಲಿಲ್ಲ.

ಜೀವರತ್ನಯ್ಯಗೆ ಮುದುಕ ಹೆಗ್ಗಡೆಯ ವರ್ತನೆ ಕಂಡು ಸೋಜಿಗವೆನಿಸಿತು: ತನ್ನ ಹಿರಿಯ ಮಗ ದೊಡ್ಡಣ್ಣಹೆಗ್ಗಡೆಯ ಅನ್ವೇಷಣೆಗೆ ಶೋಕಕಾತರವಾಗಿ ಮನೆಯಿಂದ ಹೊರಟು, ಹತ್ತಲಾರದ ಗುಡ್ಡ ಹತ್ತಿ, ಆಯಾಸದಿಂದಲೆ ಮೈಮರೆತು, ಇತ್ತೋ ಇತ್ತೋ ಎಂಬ ಸ್ಥಿತಿಗಿಳಿದು, ಈಗತಾನೆ ಚೇತರಿಸಿಕೊಂಡಿದ್ದ ಆತನು, ಕಡು ಬಡತನದ ಬಾಳಿನವರಿಗೆ ಮಾತ್ರ ಸಹಜವಾಗುವ ಜಿಪುಣ ರೀತಿಯಲ್ಲಿ ಮೆಟ್ಟು ದೊಣ್ಣೆಗಳಂತಹ ಅಲ್ಪ ಬೆಲೆಯ ಸಾಮಾನ್ಯ ವಸ್ತುಗಳಿಗಾಗಿ ಅಷ್ಟೊಂದು ಸೋದ್ವಿಗ್ನನಾಗಿ ಗೋಗರೆಯುತ್ತಿರುವುದನ್ನು ಕಂಡು! ಜೊತೆಗೆ ಬೆಟ್ಟಳ್ಳಿ ದೇವಯ್ಯಗೌಡರ ವರ್ತನೆಯೂ ಆಶ್ಚರ್ಯಕರವಾಗಿಯೆ ಇತ್ತು: ಸ್ಕೂಲು ಜಾಗದಿಂದ ಬರುವಾಗ ಅಂತಕ್ಕನ ಮನೆಯ ಅಂಗಳದೊಳಕ್ಕೆ ಬೈಸಿಕಲ್ಲನ್ನು ತಂದು ನಿಲ್ಲಿಸುವ ಸಲುವಾಗಿ ಪಾದ್ರಿ ಉಣುಗೋಲಿನ ಗಳುಗಳನ್ನು ಸರಿಸಲು ಹೋದಾಗ, ಹಿಂದೆ ಬೈಸಿಕಲ್ಲನ್ನು ನೂಕಿಕೊಂಡು ಬರುತ್ತಿದ್ದ ದೇವಯ್ಯ ಬೇಡವೆಂದು ಸನ್ನೆಮಾಡಿ, ಬೈಸಿಕಲ್ಲನ್ನು ಹೊರಗಡೆಯೆ ಮರೆಯಾಗಿ ನಿಲ್ಲಿಸಿ, ಇತರರಂತೆ ತಡಬೆ ಹತ್ತಿ ದಾಟಿಯೆ ಬಂದಿದ್ದನು. ಅಂಗಳದೊಳಕ್ಕೆ ಬಂದ ಮೇಲೆಯೂ, ಬೆತ್ತಹಿಡಿದ ಮೇಷ್ಟರನ್ನು ಎದುರುಗೊಳ್ಳಲು ಹಿಂಜರಿವ ತಪ್ಪುಮಾಡಿದ ಹುಡುಗನಂತೆ, ಸುಬ್ಬಣ್ಣಹೆಗ್ಗಡೆಯವರ ಸಾನ್ನಿಧ್ಯದಲ್ಲಿ ಕುಗ್ಗಿ ಕುನುಗಿ ಜಣುಗುವಂತೆ, ಹೆದಹೆದರಿ ನಡೆದುಕೊಳ್ಳುತ್ತಿದ್ದನ್ನು. ಶರೀರ ದಾರ್ಢ್ಯದಲ್ಲಿ, ಧೈರ್ಯದಲ್ಲಿ, ವ್ಯಕ್ತಿತ್ವದಲ್ಲಿ, ದಿಟ್ಟತನದಲ್ಲಿ ಇತರರೆಲ್ಲರಿಗೂ ಮೀರಿ ಎದ್ದು ಕಾಣುತ್ತಿದ್ದ ಅವನು ಇತರ ಯಾರ ಮುಂದೆಯೂ ನಡೆದುಕೊಳ್ಳದಿದ್ದ ರೀತಿಯಲ್ಲಿ ಸುಬ್ಬಣ್ಣಹೆಗ್ಗಡೆಯವರ ಮುಂದೆ ನಡೆದುಕೊಳ್ಳುತ್ತಿದ್ದುದನ್ನು ನೋಡಿ ಪಾದ್ರಿ ಕಕ್ಕಾವಿಕ್ಕಿಯಾದನು.

“ಏನೋ, ದೇವು? ನೀನ್ಯಾವಾಗ ಬಂದ್ಯೋ? ಮನೇಕಡೆ ಎಲ್ಲ ಹ್ಯಾಂಗಿದಾರೊ? ನಿನ್ನ ಅಪ್ಪಯ್ಯ ಚಂದಾಗಿದಾರೇನೋ?” ದೇವಯ್ಯನ ಧ್ವನಿಯನ್ನು ಕೇಳಿದ ಹೆಗ್ಗಡೆಯವರು ಆತನು ಸಮೀಪಿಸಿದೊಡನೆ ಪ್ರಶ್ನೆಯ ಹಿಂದೆ ಪ್ರಶ್ನೆಯ ಬಾಣಬಿಟ್ಟರು. ಆತ ತಡವರಿಸುತ್ತಿದ್ದುದನ್ನು ನೋಡಿ “ಯಾಕೋ ಮಾತಾಡೋದಿಲ್ಲಾ?” ಎಂದೂ ಕೇಳಿಬಿಟ್ಟರು.

ದೇವಯ್ಯ ಪಾದ್ರಿಯ ಪಕ್ಕದ ರಕ್ಷೆಯಲ್ಲೆಂಬಂತೆ ಸಂಕುಚಿತನಾಗಿ ನಿಮತು “ನಾನಾಗ್ಲೆ ಬಂದಿದ್ದೆ, ದೊಡ್ಡಪಯ್ಯ…. ಮನೇಲೆಲ್ಲ ಚಂದಾಗಿದ್ದಾರೆ” ಎಂದು ಉತ್ತರ ಹೇಳಿ, “ನಿಮಗೆ ಹ್ಯಾಂಗದೆ ಈಗ, ದೊಡ್ಡಪ್ಪಯ್ಯ?” ಎಂದು ಯೋಗಕ್ಷೇಮ ವಿಚಾರಿಸಿದನು.

ದೊಡ್ಡ ಗಂಟಲಿನಿಂದ ರಭಸವಾಗಿ ಎಂಬಂತೆ ಸುಬ್ಬಣ್ಣಹೆಗ್ಗಡೆ “ಈಗ ಹ್ಯಾಂಗದೆ ಅಂತಾ ಕೇಳ್ತೀಯಲ್ಲಾ? ನಂಗೇನಾಗಿದ್ಯೋ?” ಎಂದು ಹ್ಹ ಹ್ಹ ಹ್ಹ ನಕ್ಕರು.

ಮುದುಕನಿಗೆ ತನಗೇನಾಗಿತ್ತು ಎಂಬುದರ ಅರಿವೂ ನೆನಪೂ ತಪ್ಪಿದೆ ಎಂಬುದೇನೊ ಎಲ್ಲರಿಗೂ ಗೊತ್ತಾಯಿತು. ಆದ್ದರಿಂದ ಜೀವರತ್ನಯ್ಯ ತಾನು ವಿಚಾರಿಸಬೇಕೆಂದಿದ್ದ ಯೋಗಕ್ಷೇಮದ ಪ್ರಶ್ನೆಯನ್ನು ತಡೆಹಿಡಿದು, ಬೇರೆ ರೀತಿಯಲ್ಲಿ ಮಾತಾಡತೊಡಗಿದನು, ಜಗುಲಿಯ ಮೇಲಿದ್ದ ಚಾಪೆಯ ಮೇಲೆ ಕುಳಿತುಕೊಂಡು. ದೇವಯ್ಯ ಮಾತ್ರ ನಿಂತೇ ಇದ್ದನು: ಹಳೆಯ ಹಿರಿಯರ ಮುಂದೆ ಕೈಕಟ್ಟಿಕೊಂಡು, ಮಾತಾಡದೆ, ವಿಧೇಯತಾಭಂಗಿಯಲ್ಲಿ ನಿಲ್ಲುವ ಆ ಬಾಲ್ಯ ಅಭ್ಯಾಸ ಸ್ನಾಯುಗತವಾಗಿತ್ತು ಆತನಿಗೆ, ಮತ್ತು ಆ ಕಾಳದ ಮಲೆನಾಡಿನ ನಾಮಧಾರಿ ಗೌಡರ ದೊಡ್ಡ ಮನೆತನದ ಹಲವು ಮಕ್ಕಳಿಗೆ!

“ಯಜಮಾನರಿಗೆ ಬಹಳ ಪ್ರಯಾಸವಾಗಿರಬೇಕು, ಗುಡ್ಡ ಹತ್ತಿ ಇಳಿದು ಇಲ್ಲಿಯವರೆಗೆ ನಡೆದು ಬರುವುದಕ್ಕೆ, ಅಲ್ಲವೆ?” ಪಾದ್ರಿ ಔಪಚಾರಿಕವಾಗಿ ಮಾತು ಪ್ರಾರಂಭಿಸಿದರು.

“ನೀವೇನೊ ನಮ್ಮ ದೊಡ್ಡಣ್ಣ ವಿಚಾರ ಹೇಳಿದರಂತೆ, ಅನಂತಯ್ಯ ತಿಳಿಸಿದರು. ಇಷ್ಟು ವರ್ಷ ಆ ಸುದ್ದಿ ಈ ಸುದ್ದಿ ಕೇಳಿ ಕೇಳಿ, ಕಾದೂ ಕಾದೂ ಸಾಕಾಗಿದೆ ನನಗೆ, ಪಾದ್ರಿಗಳೆ” ಎನ್ನುತ್ತಿದ್ದ ಹಾಗೆ ಸುಬ್ಬಣ್ಣಹೆಗ್ಗಡೆಯವರ ಮುಖಚರ್ಯೆ, ಕಂಠಧ್ವನಿ, ಯಾಜಮಾನ್ಯದ ಭಂಗಿ, ಮಾತಿನ ರೀತಿ ಎಲ್ಲ ಬದಲಾಯಿಸಿದಂತೆ ತೋರಿತು. ಗಂಟಲು  ತುಸು ಗದ್ಗದವಾಗಿ ಮುಂದುವರೆಸಿದರು, ಹನಿಗೂಡುತ್ತಿದ್ದ ಕಣ್ಣುಗಳಿಂದ ಜೀವರತ್ನಯ್ಯನ ಕಣ್ಣುಗಳನ್ನೆ ನೇರವಾಗಿ ನೋಡುತ್ತಾ: “ಮ್ಯಾಲೆ ಮ್ಯಾಲೆ ಹಸಿಯಾಗಿದ್ದಾಂಗೆ ಕಾಣ್ತೇನಿ; ಒಳಗೆಲ್ಲಾ ಬೆಂದು ಸುಟ್ಟು ಹೋಗ್ಯದೆ.... ಆ ಪಾಪದ ಹುಡುಗಿ, ನನ್ನ ಸೊಸೇ ಗೋಳೋ ಹೇಳಬಾರದು; ಮುಂಡೇನೂ ಅಲ್ಲ, ಮುತ್ತೈದೇನೂ ಅಲ್ಲ; ಅಂತರಾಳದಲ್ಲಿ ಸಿಕ್ಕಿ ನಕ್ಕಬಳೀತಾ ಅದೆ. ಅಂವ ಸತ್ತೇಹೋದಿದ್ರೂ, ಅತ್ತೂ ಕರೆದೂ ಪೂರೈಸ್ತಿತ್ತು. ಬದುಕಿದಾನೆ ಅಂತಾ ಹೇಳಿದ್ರು. ಎಲ್ಲಿದಾನೋ? ಹ್ಯಾಂಗಿದಾನೋ? ಏನೇನು ಕಷ್ಟಪಡ್ತಿದಾನೊ? ಹೆಂಡ್ತಿ ಮಕ್ಕಳ್ನೆಲ್ಲ ಎಷ್ಟು ನೆನೆದು ಗೋಳಾಡ್ತಿದಾನೋ? ಚಿಂತೆ ಮಾಡಿ ಮಾಡಿ ಅದೂ ಸಾಯ್ತಾ ಅದೆ; ನಾನೂ ಅಬ್ರಿ ತುದಿಗೆ ಜಾರ್ತಾ ಇದೀನಿ. ಈ ಸಾರಿ ಸತ್ತಿದಾನೆ ಇಲ್ಲ ಬದುಕಿದಾನೆ, ಒಂದನ್ನ ನಿಚ್ಚೆಯ್ಸಿಕೊಂಡು ಹೋಗಾನ ಅಂತಾ ಹತ್ತಲಾರದ ಗುಡ್ಡಾನೂ ಹತ್ತಿ ಬಂದೆ.... ಎಲ್ಲಿ ಕಂಡ್ರಿ? ಯಾರು ಕಂಡ್ರು? ಅವನೇ ಹೌದೆ? ಇಲ್ಲ, ಹಿಂದೆಲ್ಲ ಆದ ಹಂಗೆ, ಯಾರನ್ನೋ ಏನೋ ಅವನು ಅಂತಾ ಹೇಳ್ತಿದಾರೋ?....”

ಅಷ್ಟರಲ್ಲಿ ಅಂತಕ್ಕ ದೇವಯ್ಯನನ್ನು ಒಳಗೆ ಕರೆದಳು. ಸುಬ್ಬಣ್ಣಹೆಗ್ಗಡೆಯವರು ಊಟಕ್ಕೆ ಏರ್ಪಾಡಾಗುತ್ತಿದೆ ಎಂಬುದನ್ನು ಅರಿತು “ಪಾದ್ರಿಗಳೆ, ಪಾಪ, ನಿಮಗೆ ಊಟಕ್ಕೆ ಬಾಳ ಹೊತ್ತಾಯ್ತು. ಮೊದಲು ಊಟ ಮುಗಿಸಿ” ಎಂದರು.

ಇತ್ತೀಚೆಗೆ, ಸಾಮಾನ್ಯವಾಗಿ, ಪಾದ್ರಿಯೊಡನೆಯೆ ಹೊರಗಡೆ ಜಗಲಿಯಲ್ಲಿ ಊಟಕ್ಕೆ ಕುಳಿತುಕೊಳ್ಳುತ್ತಿದ್ದ ದೇವಯ್ಯ ಇವತ್ತು ಹಾಗೆ ಮಾಡಲು ಅಂಜಿ, ಜೀವರತ್ನಯ್ಯ ಒಬ್ಬರಿಗೇ ಕುಳಿತುಕೊಳ್ಳುತ್ತಿದ್ದ ದೇವಯ್ಯ ಇವತ್ತು ಹಾಗೆ ಮಾಡಲು ಅಂಜಿ, ಜೀವರತ್ನಯ್ಯ ಒಬ್ಬರಿಗೇ ಜಗಲಿಯಲ್ಲಿ ಬಳ್ಳೆಹಾಕಲು ಹೇಳಿ, ತಾನೂ ಐಗಳೂ ಒಳಗೆ ಜಾತಿಯವರು ಕೂರುವಲ್ಲಿ ಊಟಕ್ಕೆ ಕುಳಿತರು. ಬೆಟ್ಟಳ್ಳಿ ದೇವಯ್ಯಗೌಡರ ಆ ಬದಲಾಯಿಸಿದ ವರ್ತನೆಯನ್ನು ಗಮನಿಸಿ ಜೀವರತ್ನಯ್ಯ ಒಳಗೊಳಗೆ ತುಸು ಅಸಮಾಧಾನ ಪಟ್ಟುಕೊಂಡರು.

ಊಟವಾದ ಮೇಲೆ ಜೀವರತ್ನಯ್ಯ ಸುಬ್ಬಣ್ಣಹೆಗ್ಗಡೆಯವರು ಮಲಗಿದ್ದ ಹಾಸಗೆಯ ಪಕ್ಕಕ್ಕೆ ಹೋದರು. ಮುದುಕ ಮಲಗಿ ನಿದ್ರಿಸುತ್ತಿದ್ದಂತೆ ತೋರಿತು. ಆದರೆ ತುಸು ಹೆಚ್ಚು ಸಂಖ್ಯೆಯಲ್ಲಿಯೆ ಅಲ್ಲಿ ನಿತ್ಯವಾಸವಾಗಿದ್ದ ಮನೆಯೆ ನೊಣಗಳು ವೃದ್ಧನ ಮುಖದ ಮೇಲೆ ಕುಳಿತೂ ಹಾರಿ, ಹಾರೀ ಕುಳಿತು, ನಿದ್ದೆಯ ನಿರಂತರತೆಗೆ ಭಂಗ ತರುತ್ತಿದ್ದುವು. ಪಾದ್ರಿ ತನ್ನ ಅಂಗವಸ್ತ್ರದಿಂದ ಅವುಗಳನ್ನು ಅಟ್ಟಿದಾಗ, ಅದರ ಗಾಳಿ ಬೀಸಿದಕ್ಕೆ ಮುದುಕ ಕಣ್ಣುತೆರೆದರು.

"ತಮಗೆ ನಿದ್ರಾಭಂಗವಾಯಿತೇನೊ? ನೊಣ ಅಟ್ಟೆ ಅಷ್ಟೆ, ಮಲಗಿ ನಿದ್ದೆಮಾಡಿ."

"ಇಲ್ಲ ಇಲ್ಲ, ನಿದ್ದೆ ಬಂದಿರಲಿಲ್ಲ. ಸುಮ್ಮನೆ ಕಣ್ಣುಮುಚ್ಚಿಕೊಂಡು ಮಲಗಿದ್ದೆ, ಬನ್ನಿ, ಕೂತುಕೊಳ್ಳಿ...." ಎಂದು ಸುಬ್ಬಣ್ಣಹೆಗ್ಗಡೆ ಏಲತೊಡಗಿದರು.

"ಬೇಡ, ಬೇಡ, ಏಳುವುದು ಬೇಡ. ನೀವು ಮಲಗೇ ಇರಿ. ನಾನು ಕೂತು ಕೊಳ್ಳುತ್ತೇನೆ" ಎಂದು ಪಾದ್ರಿ ಏಳುತ್ತಿದ್ದ ಹೆಗ್ಗಡೆಯವರನ್ನು ಮಲಗಿರುವಂತೆ ಮಾಡಿ, ತಾವು ಪಕ್ಕದಲ್ಲಿ ಕುಳಿತುಕೊಂಡರು.

ದೇವಯ್ಯನೂ ಅನಂತಯ್ಯನೂ ಎಲೆ, ಅಡಿಕೆ, ಹೊಗೆಸೊಪ್ಪು, ಸುಣ್ಣದಡಬ್ಬಿ ಇರುವ ಮಾಸಿದ ಹಳೆಯ ಬೆತ್ತದ ತಟ್ಟೆಯೊಂದನ್ನು ತಂದು ಇಟ್ಟು, ತಾವೂ ಪಾದ್ರಿಯ ಪಕ್ಕದಲ್ಲಿಯೆ ಕುಳಿತರು.

ಪಾದ್ರಿ ಪ್ರಶಾಂತ ಧ್ವನಿಯಿಂದ ನಿಧಾನವಾಗಿ ಹೇಳತೊಡಗಿದರು. ಮುದುಕನಿಗೆ ಉದ್ವೇಗ ಹೆಚ್ಚಿ, ಮತ್ತೆ ಎಲ್ಲಿಯಾದರು. ಹೃದಯಾಘಾತಕ್ಕೆ ಅವಕಾಶವಾದೀದು ಎಂಬುದು ಅವರ ಭಯಾಶಂಕೆಯಾಗಿತ್ತು:

"ಆ ದಿನ ನಮ್ಮ ಮಿಶಲ್ ಆಸ್ಪತ್ರೆ ನೋಡಲು ಮಂಡಗದ್ದೆಗೆ ಬಂದಿದ್ದ ಸಿಂಧುವಳ್ಳಿ ಚೆನ್ನಪ್ಪಗೌಡರು, ಸಾಯಂಕಾಲ ನಮ್ಮ ದೊಡ್ಡ ಗುರು ರೆವರೆಂಡ್ ಲೇಕ್‌ಹಿಲ್ ಸಾಹೇಬರು ಮತ್ತು ಲೇಡಿ ಡಾಕ್ಟರರಾಗಿರುವ ಮಿಸ್ ಕ್ಯಾಂಬೆಲ್ ಇವರೊಡನೆ ಹೊಳೆಯ ಕಡೆ ವಾಕ್ ಹೋಗಿದ್ದರು. ಅಂದರೆ ಸುಮ್ಮನೆ ಗಾಳಿಸೇವನೆಯಾಗಿ ತಿರುಗಾಡಲು ಹೋಗಿದ್ದರಂತೆ. ತುಂಗಾ ನದಿಯ ತೀರದ ಒಂದು ಕಡೆ ಬಯಲಿನಲ್ಲಿ ಗೋಸಾಯಿಗಳು ಬಿಡುಬಿಟ್ಟಿದ್ದರಂತೆ. ನಮ್ಮ ರೆವರೆಂಡ್ ಸಾಹೇಬರು, - ಅವರು ಅಂಥ ಜನರನ್ನು ಕಂಡರೆ ಯೋಗಕ್ಷೇಮ ಇಚಾರಿಸದೆ ಹೋಗುವುದಿಲ್ಲ, - ಬೀಡಿನ ಹತ್ತಿರಕ್ಕೆ ಹೋಗಿ ಅವರ ಯಜಮಾನನೊಡನೆ ಮಾತನಾಡುತ್ತಿದ್ದಂತೆ. ಅವರು ಕನ್ನಡಭಾಷೆ ಚೆನ್ನಾಗಿ ಅಭ್ಯಾಸ ಮಾಡಿದ್ದಾರೆ. ಉಪನ್ಯಾಸವನ್ನೂ ಕೊಡಬಲ್ಲರು. ನಮ್ಮ ಮೇಗರವಳ್ಳಿ ಮಿಶನ್‌ಸ್ಕೂಲಿನ ಕಟ್ಟಡ ಮುಗಿದ ಮೇಲೆ, ಇದನ್ನು ಪ್ರಾರಂಭಮಾಡುವ ಸಂದರ್ಭದಲ್ಲಿ, ಅವರನ್ನೆ ಕರೆಯಬೇಕು ಎಂದಿದ್ದೇವೆ. ಆಗ ನೀವು ಅವರನ್ನು ನೋಡಬಹುದು, ಮತ್ತು ಕನ್ನಡದಲ್ಲಿಯೇ ಮಾತನ್ನೂ ಆಡಬಹುದು. ಅವರು ಇಂಗ್ಲೀಷ್ ಜನರಲ್ಲಿ ಬಹಳ ದೊಡ್ಡ ಧರ್ಮಗುರುಗಳು...."

"ದೊಡ್ಡಣ್ಣಹೆಗ್ಗಡೆಯವರ ವಿಚಾರ ಹೇಳುತ್ತಿದ್ದಿರಲ್ಲಾ?" ನಡುವೆ ಬಾಯಿ ಹಾಕಿದರು ಐಗಳು ಅನಂತಯ್ಯ, ಪಾದ್ರಿಯ ಗಮನವನ್ನು ಪ್ರಕೃತ ವಿಷಯಕ್ಕೆ ತಿರುಗಿಲೆಂದು.

ಪಾದ್ರಿ ಮುಂದುವರಿದರು:

“ಕಾವಿಲ್ಲದ ಬಾವುಟ ಅಲ್ಲಲ್ಲಿ ನೆಟ್ಟು, ಒಂದು ಎರಡು ಮಾರು ದೂರದೂರದಲ್ಲಿ ಬಣ್ಣ ಬಣ್ಣದ ತೇಪೆಹಾಕಿದ ಬಟ್ಟೆಯ ಸಣ್ಣಸಣ್ಣ ಡೇರೆ ಹಾಕಿಕೊಂಡಿದ್ದರಂತೆ. ಚಿನ್ನಪ್ಪಗೌಡರು ಅವುಗಳ ನಡುನಡುವೆ ಸುಮ್ಮನೆ ಕುತೂಹಲಕ್ಕಾಗಿ ಕಂಡವರೊಡನೆ ಮಾತಾಡುತ್ತಾ ಹೋಗುತ್ತಿದ್ದರು. ಇದ್ದಕ್ಕಿದ್ದಹಾಗೆ ಅವರ ಗಮನ ದೊಡ್ಡಣ್ಣ ಹೆಗ್ಗಡೆಯವರ ನೆನಪುತರುವ ಹಾಗಿದ್ದ ಒಬ್ಬ ಗೋಸಾಯಿಯ ಮೇಲೆ ಬಿತ್ತು. ಅವನನ್ನೂ ಮಾತಾಡಿಸಿರಂತೆ ಹತ್ತಿರ ಹೋಗಿ. ಗಡ್ಡ ಮೀಸೆ ಕೆದರಿಬಿಟ್ಟಿದ್ದನಂತೆ, ತಲೆಕೂದಲು ಉದ್ದುದ್ದ ಬೆಳೆದು ಸಿಕ್ಕುಗಟ್ಟಿತಂತೆ. ಸುಮ್ಮನೆ ಇವರನ್ನೆ ದುರುದುರು ನೋಡಿದರಂತೆ. ಚಿನ್ನಪ್ಪಗೌಡರಿಗೆ ಅನುಮಾನ ಬಂದು ರೆವರೆಂಡ್ ಲೇಕ್‌ಹಿಲ್‌ರಿಗೂ ತಿಳಿಸಿದರಂತೆ. ಅವರು ಯಜಮಾನ ಗೋಸಾಯಿಯನ್ನು ಪ್ರಶ್ನಿಸಿದಾಗ ಅವನು ಒಪ್ಪಕೊಂಡನಂತೆ, ಚಿನ್ನಪ್ಪಗೌಡರು ಕಂಡ ಗೋಸಾಯಿ ನಿಜವಾದ ಗೋಸಾಯಿ ಅಲ್ಲವೆಂದೂ, ಕೆಲವು ವರ್ಷಗಳ ಹಿಂದೆ ತಿರುಪತಿಗೆ ಬಂದಿದ್ದ ಯಾತ್ರಿಕರು ಸತ್ತನೆಂದು ಬಿಟ್ಟುಹೋಗಿದ್ದ ಯಾವನೊ ಒಬ್ಬನನ್ನು ತಮ್ಮ ಕಡೆಯವರು ನೋಡಿ, ಜೀವವಿದ್ದಂತೆ ತೋರಿದ್ದರಿಂದ ಮದ್ದುಕೊಟ್ಟು ಬದುಕಿಸಿಕೊಂಡರೆಂದೂ, ಆದರೆ ಆದರೆ ಅವನಿಗೆ ತನ್ನ ಪೂರ್ವ ಜೀವನವೆಲ್ಲ ಮರೆತುಹೋಗಿ, ತಾನು ಯಾರು? ಎಲ್ಲಿಂದ ಬಂದವನು? ಎಂಬ ವಿಷಯ ಯಾವುದನ್ನೂ ಹೇಳಲಾರದೆ ಹೋದನಂತೆ. ಕಡೆಗೆ ಮಾತು ಕೂಡ ಆಡಲಾರದೆ ಮೂಗನಂತೆ ಗೋಸಾಯಿಗಳ ಸಂಗಡ ಅಲೆಯುತ್ತಾ ಇದ್ದಾನಂತೆ.”

“ಗೋಸಾಯಿಗಳೇ ಮದ್ದುಹಾಕಿ ದೊಡ್ಡಣ್ಣ ಹೆಗ್ಗಡೆಯವರಿಗೆ ಅವರ ಹಿಂದಿನದೆಲ್ಲ ಮರೆಯುವಂತೆ ಮಾಡಿರಲಿಕ್ಕೂ ಸಾಕು! ಮಂತ್ರ ಮಾಟದಲ್ಲಿ ಕದೀಮರಂತೆ ಈ ಗೋಸಾಯಿಗಳು” ಐಗಳು ನಡುವೆ ಬಾಯಿಹಾಕಿದರು.

“ಹಾಗಿರಲಿಕ್ಕಿಲ್ಲ, ಐಗಳೆ” ಅನಂತಯ್ಯನವರ ಅಭಿಪ್ರಾಯಕ್ಕೆ ಈ ಸಂದರ್ಭದಲ್ಲಿ ಆದಾರವಿಲ್ಲ ಎಂಬುದನ್ನು ಸಮರ್ಥಿಸಲು ಪಾದ್ರಿ ಮುಂದುವರೆದರು: “ಆ ಯಜಮಾನ ಗೋಸಾಯಿ, ಪಾಪ. ಆ ದಿಕ್ಕುಗೆಟ್ಟ ಅನಾಥನನ್ನು ತಾವು ಹೋದಲೆಲ್ಲ ಕರೆದುಕೊಮಡು ಹೋಗಿ, ಅವನ ಊರು ಮನೆ ವಾರಸುದಾರರನ್ನು ಪತ್ತೆಮಾಡಲು ಬಹಳ ಪ್ರಯತ್ನ ಮಾಡಿದನಂತೆ. ಈಗಲೂ ಪ್ರಯತ್ನ ಮಾಡುತ್ತಲೆ ಇದ್ದಾನಂತೆ. ತಾವು ಅಲೆಯುತ್ತಾ ಹೋಗಿ ಬೀಡು ಬಿಟ್ಟ ಅನೇಕ ಊರುಗಳಲ್ಲಿ ವಿಚಾರಿಸಿದರಂತೆ; ಯಾರೂ ಗುರುತಿಸಲಿಲ್ಲವಂತೆ. ಈಗ್ಗೆ ಸುಮಾರು ಐದಾರು ತಿಂಗಳ ಹಿಂದೆ ಬೀರೂರು ಹತ್ತಿರ ಅವರು ಬೀಡು ಬಿಟ್ಟಿದ್ದಾಗ ಕತ್ತೆ ಹೇರೆತ್ತುಗಳ ಮೇಲೆ ಅಡಿಕೆ ಸಾಗಿಸುತ್ತಿದ್ದ ಒಡ್ಡರ ಗುಂಪು ಸಿಕ್ಕಿ, ಅವರಲ್ಲೊಬ್ಬನು - ತೀರ್ಥಹಳ್ಳಿ ಕಡೆ ಯಾರೊ ಒಬ್ಬರು ತಿರುಪತಿಗೆ ಹೋಗಿದ್ದವರು ತಪ್ಪಿಹೋಗಿದ್ದಾರೆಂದು ಬಹಳ ಕಾಲದಿಂದಲೂ ಹುಡುಕುತ್ತಿದ್ದಾರೆ ಎಂಬ ವದಂತಿ ಹೇಳಿದನಂತೆ. ಆದ್ದರಿಂದಲೆ ಅವರು ಈ ಕಡೆ ಬೀಡು ತಿರುಗಿಸಿ ಹೊರಟಿದ್ದಾರಂತೆ....”

ಮಲಗಿ ಆಲಿಸುತ್ತಿದ್ದ ಸುಬ್ಬಣ್ಣ ಹೆಗ್ಗಡೆಯವರಿಗೆ ಸಂತೋಷಾಧಿಕ್ಯದಿಂದಲೆ ಉಕ್ಕಿ ಬರುತ್ತಿದ್ದ ದುಃಖಪ್ರವಾಹವನ್ನು ತಡೆಯಲಾಗಲಿಲ್ಲ. ಕಣ್ಣೀರು ಸುರಿಸುತ್ತಾ ಎದ್ದು ಕುಳಿತು “ಮತ್ಯಾಕೆ ಅನುಮಾನ? ಬಿಡಿ, ಬಿಡಿ, ಪಾದ್ರಿಗಳೆ, ಅಂವ ನಮ್ಮ ದೊಡ್ಡಣ್ಣ ಅಲ್ಲದೆ ಬ್ಯಾರೆ ಯಾರೂ ಅಲ್ಲ. ಹೋಗಾನ, ನಾನೂ ಬರ್ತೀನಿ. ಹ್ಯಾಂಗಾರು ಮಾಡಿ ಅವನ್ನೊಂದು ಮನೆಗೆ ಕರಕೊಂಡು ಬಂದ್ರೆ ಸಾಕು. ತಣ್ಣಗೆ ಕಣ್ಣು ಮುಚ್ತೀನಿ.... ಅಂತೂ ಕಡೆಗೂ ಕಣ್‌ಬಿಟ್ಟ ನಮ್ಮ ತಿರುಪತಿ

ತಿಮ್ಮಪ್ಪ!" ಎನ್ನುತ್ತಾ ತಮ್ಮ ಎರಡೂ ಕೈಗಳನ್ನು ಜೋಡಿಸಿ ಹಣೆಗಿಟ್ಟುಕೊಂಡು "ಸ್ವಾಮಿ! ಸ್ವಾಮಿ! ಕಾಪಾಡಪ್ಪಾ!" ಎಮದು ಅಗೋಚರನಿಗೆ ಕೃತಜ್ಞತೆ ಅರ್ಪಿಸುವ ಭಂಗಿಯಲ್ಲಿ ನಮಸ್ಕಾರ ಮಾಡಿದರು.

ದೇವಯ್ಯನಿಗೆ ಭಾವಾವೇಗದಿಂದ ಗಂಟಲು ಉಬ್ಬಿಬಂದ ಹಾಗಾಗಿ ಮುಖ ತಿರುಗಿಸಿಕೊಂಡನು. ಬಾಗಿಲು ಸಂಧಿಯಲ್ಲಿ ಮರೆಯಾಗಿ ನಿಂತು ಆಲಿಸುತ್ತಿದ್ದ ಕಾವೇರಿ ಓಡಿ ಹೋಗಿ ತನ್ನ ತಾಯಿಗೆ ಮಂಗಳವಾರ್ತೆಯನ್ನು ಒದರಿಬಿಟ್ಟಳು.

ಹೆಗ್ಗಡೆಯವರು ತಿರುಪತಿ ತಿಮ್ಮಪ್ಪಗೆ ಕೃತಜ್ಞತೆ ಸಲ್ಲಿಸಿದ್ದನ್ನು ನೋಡಿ, ಪಾದ್ರಿ ಕನಿಕರದಿಂದ ಮುಗುಳುನಗುತ್ತಾ ಹೇಳಿದರು: "ಸ್ವಲ್ಪ ಸಮಾಧಾನ ತಂದುಕೊಳ್ಳಿ, ಯಜಮಾನರೆ. ನಿಮ್ಮ ತಿರುಪತಿ ತಿಮ್ಮಪ್ಪನವರು ಇನ್ನೂ ಪೂರ್ತಿ ಕಣ್ಣುಬಿಟ್ಟಂತೆ ತೋರುತ್ತಿಲ್ಲ!"

"ಯಾಕೆ ಕಣ್ಣು ಬಿಡಬಾರದು ಅವನು? ಅವನಿಗೆ ಸಲ್ಲಿಸಬೇಕಾದ ಕಾಣಿಕೆ ಗೀಣಿಕೆ ಎಲ್ಲ ಸಲ್ಲಿಸಿ, ಋಣ ತೀರಿಸಿ, ಹಿಂದಕ್ಕೆ ಬರ್ತಿದ್ದಾಗಲೆ ಅಲ್ಲೇನು ನಮ್ಮ ದೊಡ್ಡಣ್ಣ ಕಾಯಿಲೆ ಬಿದ್ದದ್ದು? ನಮ್ಮ ಕಷ್ಟಾನೆಲ್ಲ ಕಾಣದೆ ಇರಾಕೆ ಅವನ ಕಣ್ ಇಂಗಿ ಹೋಗ್ಯಾದೇನು? ನಾವೇನು ಪಾಪ ಮಾಡಿದ್ದು ನಮಗೀ ದುಕ್ಕ ಕೊಡಾಕೆ?" ಹೇಳುತ್ತಾ ಸಿಟ್ಟು ದುಃಖಕ್ಕೆ ತಿರುಗಿ ಅಳತೊಡಗಿದರು ಸುಬ್ಬಣ್ಣ ಹೆಗ್ಗಡೆ.

ತಾನು 'ಸ್ವಾಮಿ, ಕಾಪಾಡಪ್ಪಾ!' ಎಂದು ಸ್ವಲ್ಪ ಹೊತ್ತಿಗೆ ಮುನ್ನ ಕೃತಜ್ಞತೆಯಿಂದ ಕೈಮುಗಿದಿದ್ದ ತನ್ನ ದೇವರನ್ನೆ ಅಪರಾಧಿ ಸ್ಥಾನದಲ್ಲಿ ನಿಲ್ಲಿಸಿ ಸವಾಲು ಹಾಕುತ್ತಿದ್ದ ಮುದುಕ ಹೆಗ್ಗಡೆಯ ಹಿಂದೂಭಕ್ತಿ ಕ್ರೈಸ್ತಪಾದ್ರಿಗೆ ಅರ್ಥವಾಗದೆ ಬೆಪ್ಪು ಬೆರಗಾಗಿ ಹೋದನು. "ಇವರ ಕೈಗೆಲ್ಲಿಯಾದರೂ ಇವರ ದೇವರು ಸಿಕ್ಕರೆ, ಗುದ್ದಿಯೂ ಬಿಡುತ್ತಾರೆ!" ಎಂದುಕೊಂಡನು ಮನಸ್ಸಿನಲ್ಲಿಯೆ ಜೀವರತ್ನಯ್ಯ. ಆದರೆ ಅಳುತ್ತಿದ್ದ ಮುದುಕನನ್ನು ನೋಡಿ, ಮನಕರಗಿ, ಸಹಿಸಲಾರದೆ ಸಂತೈಸಿದನು: "ಅಳಬೇಡಿ, ಯಜಮಾನರೆ, ದೇವರು ಒಳ್ಳೆಯದು ಮಾಡಿಯಾನು.... ಆ ಗೋಸಾಯಿ ಕಳೆದು ಹೋಗಿದ್ದ ದೊಡ್ಡಣ್ಣಹೆಗ್ಗಡೆಯವರೇ ಹೌದು ಎನ್ನುವುದಕ್ಕೇನೂ ಬೇಕಾದಷ್ಟು ಸಾಕ್ಷಿ ಸಿಕ್ಕಿದೆ. ತೀರ್ಥಹಳ್ಳಿಯ ದಾಸಯ್ಯನವರೂ ಅವರ ಕೆಲವು ಪರಿಚಯಸ್ಥರೂ ಅವರನ್ನು ಗುರುತಿಸಿದ್ದಾರೆ. ಆದರೆ ಅವರಿಗೆ ನೆನಪು ತಪ್ಪಿ ಹೋಗಿದೆ. ಹಳೆಯದೊಂದೂ ಜ್ಞಾಪಕವಿಲ್ಲ. ತನಗೆ ತಾನೆ ಒಮ್ಮೊಮ್ಮೆ ಏನನ್ನೊ ಹೇಳಿಕೊಳ್ಳುತ್ತಿದ್ದಾರಂತೆ. ಆದರೆ ಅದು ಏನು ಎತ್ತ ಎಂದು ಯಾರಿಗೂ ಅರ್ತವಾಗಲಿಲ್ಲ. ಅದಕ್ಕೇ ಯಾವುದೋ ಬೇರೆಯ ಪ್ರೇತ ಅವರ ದೇಹಕ್ಕೆ ಸೇರಿಕೊಂಡುಬಿಟ್ಟಿದೆ ಎಂದು ಹೇಳತೊಡಗಿದ್ದಾರೆ. ಆದರೆ ಅದೆಲ್ಲ ನಂಬಲಾರ್ಹವಾದುದಲ್ಲ...."

"ಈಗ ಎಲ್ಲಿದ್ದಾನೆ ಅವನು?" ಮುದುಕನ ಪ್ರಶ್ನೆ.

"ತೀರ್ಥಹಳ್ಳಿ ಲಾಕಪ್ಪಿನಲ್ಲಿ!" ಪಾದ್ರಿಯ ಉತ್ತರ.

ಸುಬ್ಬಣ್ಣಹೆಗ್ಗಡೆಯವರಂತೆ ದೇವಯ್ಯನೂ ಐಗಳು ಬೆಚ್ಚಿದಂತಾದರು.

"ಆ? ಲಾಕಪ್ಪಿನಲ್ಲೇಕೆ?" ಕೇಳಿದನು ದೇವಯ್ಯ.

"ಪೋಲಿಸರ ವಶದಲ್ಲಿ!.... ನೀವು ಯಾರೂ ಗಾಬರಿಯಾಗುವ ಅವಶ್ಯಕತೆ ಏನಿಲ್ಲ.... ಯಜಮಾನ ಗೋಸಾಯಿ ಏನೊ ದೊಡ್ಡಣ್ಣಹೆಗ್ಗಡೆಯವರಂತಿರುವ ಆ ಮೂಕಗೋಸಾಯಿಯನ್ನು ನಮ್ಮ ಕಡೆ ಒಪ್ಪಿಸಲು ಸಿದ್ಧನಾಗಿದ್ದ.... ಆದರೆ ಆ ಗೋಸಾಯಿ ನಮ್ಮ ಜೊತೆ ಬರಲು ನಿರಾಕರಿಸಿದ. ಅಲ್ಲದೆ ಸಿಂಧುವಳ್ಳಿ ಚಿನ್ನಪ್ಪಗೌಡರಿಗೂ ತೀರ್ಥಹಳ್ಳಿ ದಾಸಯ್ಯನವರಿಗೂ ಹೊಡದೇಬಿಟ್ಟ! ಜೊತೆಗೆ ನಮ್ಮ ರೆವರೆಂಡ್ ಸಾಹೇಬರೂ ಒಂದು ವಿಚಾರ ಎಚ್ಚರಿಕೆ ಹೇಳಿದರು. ಅದು ಕಾನೂನಿಗೆ ಸಂಬಂಧಪಟ್ಟದ್ದು...."

"ಏನಂತೆ? ಕಾನೂನಿಗೆ ಸಂಬಂಧಪಟ್ಟದ್ದು?"

"ಆಮೇಲೆ ಅವನು ಒಂದು ವೇಳೆ ದೊಡ್ಡಣ್ಣಹೆಗ್ಗಡೆ ಅಲ್ಲ ಎಂದು ಹತ್ತಿರದ ಸಂಬಂಧಿಗಳು ಹೇಳಿಬಿಟ್ಟರೆ? ಯಜಮಾನ ಗೋಸಾಯಿಗೆ ಎರಡು ಸಾವಿರ ರೂಪಾಯಿ ಕೊಡುತ್ತೇವೆ ಎಂದು ನಾವು ಒಪ್ಪಿಕೊಂಡಿದ್ದೇವೆ. ಅವನು ದೊಡ್ಡಣ್ಣಹೆಗ್ಗಡೆಯವರ ರಕ್ಷಣೆ ಪೋಷಣೆಗಾಗಿ ಖರ್ಚು ಮಾಡಿದ್ದೇನೆ ಎಂದು ಹೇಳುತ್ತಿರುವ ಸಾವಿರದ ಐನೂರು; ಜೊತೆಗೆ ಅವನು ಮಾಡಿರುವ ಉಪಕಾರಕ್ಕಾಗಿ ಬಹುಮಾನರೂಪಾಯಿ ಕೊಡುವ ಐನೂರು...."

ಸುಬ್ಬಣ್ಣಹೆಗ್ಗಡೆಯವರು ಆ ಭಯಂಕರ ಪ್ರಮಾಣದ ಮೊತ್ತಕ್ಕೆ ದಿಗ್‌ಭ್ರಮೆ ಹೊಡೆದವನಂತೆ ಕಣ್ಣುಬಾಯಿ ಬಿಟ್ಟುಕೊಂಡು ತಮ್ಮನ್ನೆ ನೋಡುತ್ತಿದ್ದ ಭಯಭಂಗಿಯ ಅರ್ಥ ಏನು ಎಂಬುದನ್ನು ಗ್ರಹಿಸಿಯೂ ಗ್ರಹಿಸದವರಂತೆ ಜೀವರತ್ನಯ್ಯ ಮುಂದುವರಿದರು: "ಆತ ದೊಡ್ಡಣ್ಣಹೆಗ್ಗಡೆಯವರೇ ಹೌದು ಎಂದಾದರೆ ನಾವು ಕೊಡುವುದೇನು ಹೆಚ್ಚಲ್ಲ ಎಂದು ಇಟ್ಟುಕೊಳ್ಳಿ...."

ತಟಕ್ಕನೆ ಬಾಯಿ ಹಾಕಿದರು ಸುಬ್ಬಣ್ಣಹೆಗ್ಗಡೆ, ಮುನಿದ ದನಿಯಿಂದ: "ಹ್ಯಾಂಗೆ ಹೆಚ್ಚಲ್ಲ ಅಂತೀರಿ, ಪಾದ್ರಿಗಳೆ? ದೊಡ್ಡಣ್ಣ ತಿರುಪತಿಗೆ ಹೋಗುವಾಗ ಅವನ ಸೊಂಟದಾಗೆ ಇದ್ದ ಚಿನ್ನದ ನೆವಣಾನೆ ಸಾವಿರಾರು ರೂಪಾಯಿ ಬೆಲೆಬಾಳ್ತದೆ. ಒಂದು ಕಿರುಬೆಳ್ಳು ಗಾತ್ರಾನೆ ಇತ್ತು ಆ ನೆವಣ! ಅವನ ಕಿವೀಲಿ ಇದ್ದ ಒಂಟಿಗಳಿಗೇ ಸುಮಾರು ದುಡ್ಡು ಆಗ್ತಿತ್ತು. ಅದನ್ನೆಲ್ಲ ಕಿತ್ತಿಕೊಂಡು ಆ ನಿಮ್ಮ ಯಜಮಾನ ಗೋಸಾಯಿ ಮತ್ತೂ ಎರಡು ಸಾವಿರ ರೂಪಾಯಿ ನುಂಗಾನ ಅಂತಾ ಮಾಡ್ಯಾನೆ! ಅವನ ಮ್ಯಾಲೆ ಫಿರ್ಯಾದಿ ಕೊಡ್ತೇನಿ, ಅಮಲ್ದಾರ ಹತ್ರ, ನನ್ನ ಮಗನ್ದೆಲ್ಲಾ ದೋಚಿಕೊಂಡಿದಾನೆ ಅಂತಾ!...."

ಪಾದ್ರಿಗೆ ಇಸ್ಸಿ ಎನಿಸಿತು. ಇಂತಹ ದುರಂತ ಸನ್ನಿವೇಶವಲ್ಲದಿದ್ದರೆ ಅವನು ನಗುತ್ತಿದ್ದನೊ ಏನೊ! ಅನಂತಯ್ಯನೂ ಏನು ಸನ್ನಿವೇಶವಲ್ಲದಿದ್ದರೆ ಅವನು ನಗುತ್ತಿದ್ದನೊ ಏನೊ! ಅನಂತಯ್ಯನೂ ಏನು ಹೇಳುವುದಕ್ಕೂ ತೋಚದೆ ಪೆಚ್ಚಾದವನಂತೆ ಕುಳಿತು. ನೆಲ ನೋಡುತ್ತಿದ್ದನು. ದೇವಯ್ಯನಿಗೆ ತುಂಬ ಅವಮಾನವಾದಂತಾಗಿ "ಬಿಡಿ, ದೊಡ್ಡಪ್ಪಯ್ಯ; ಈಗ ಅದನ್ನೆಲ್ಲ ಯಾಕೆ ಎತ್ತಬೇಕು? ಮೊದುಲು ಆ ಗೋಸಾಯಿ ನಮ್ಮ ದೊಡ್ಡಣ್ಣಯ್ಯ ಹೌದೇ ಅಲ್ಲವೇ ಅಂತ ಗೊತ್ತಾಗಲಿ" ಎಂದು ಮನಸ್ಸಿನ ದಿಕ್ಕು ಬದಲಾಯಿಸುವ ಸಲುವಾಗಿ ಜೀವರತ್ನಯ್ಯನ ಕಡೆಗೆ ತಿರುಗಿ "ಮಂಡಗದ್ದೆ ಮಿಶನ್ ಆಸ್ಪತ್ರೆ ಲೇಡಿ ಡಾಕ್ಟರು ಪರೀಕ್ಷೆ ಮಾಡಿ ಅದೇನೊ ಹೇಳಿದರು ಅಂತಾ ಹೇಳಿದ್ಹಾಂಗಿತ್ತು ನೀವು?" ಎಂದನು.

“ಅವರು ಸಾಧಾರಣ ಪರೀಕ್ಷೆ ಮಾಡಿದರಷ್ಟೆ. ಆದರೆ ಅವನನ್ನು ಪೋಲಿಸು ಇನ್‌ಸ್ಪೆಕ್ಟರ್ ಸಹಾಯದಿಂದ ತೀರ್ಥಹಳ್ಳಿಗೆ ತಂದಮೇಲೆ, ತೀರ್ಥಹಳ್ಳಿ ಆಸ್ಪತ್ರೆ ಡಾಕ್ಟರೇ ಪರೀಕ್ಷೆ ಮಾಡಿ, ಔಷಧ ಪಥ್ಯ ಎಲ್ಲ ನೋಡಿಕೊಳ್ತಿದ್ದಾರೆ. ಅವನು ಕಾನೂನು ಪ್ರಕಾರ ಲಾಕಪ್ಪಿನಲ್ಲಿದ್ದಾನೆ ಅಷ್ಟೆ. ಆದರೆ ವಾಸ್ತವವವಾಗಿ ಆಸ್ಪತ್ರೆಯ ಹತ್ತಿರ ಇರುವ ನಮ್ಮ ಮನೆಯ ಹಿಂಭಾಗದ ಒಂದು ಕೋಣೆಯಲ್ಲಿ ಇಟ್ಟಿದ್ದೇವೆ. ನನ್ನ ಮಗಳೂ ಸಹಾಯ ಮಾಡುತ್ತಿದ್ದಾಳೆ. ಎಷ್ಟೋ ವರ್ಷ ಆಗಿರಬೇಕು ಆ ಪುಣ್ಯಾತ್ಮ ಸ್ನಾನಮಾಡಿ, ನಮಗೆ ನಾಲ್ಕೈದು ಜನಕ್ಕೆ ಸಾಕೋಸಾಕಾಯ್ತು, ಅವನಿಗೆ ಸ್ನಾನ ಮಾಡಿಸಬೇಕಾದರೆ! ಅವನಿಗೊಂದು ಕ್ಷೌರ ಮಾಡಿಸುವುದಕ್ಕೆ ಪ್ರಯತ್ನ ಮಾಡಿದೆವು; ನಮ್ಮಿಂದಾಗಲಿಲ್ಲ. ಕ್ಷೌರದ ಕತ್ತಿಯನ್ನೆ ಹಿಡಿದೆಳೆಯುವುದರಲ್ಲಿದ್ದ. ಗಡ್ಡ ಕೂದಲು ಎಲ್ಲ ಕತ್ತರಿಸಿದರೆ ದೊಡ್ಡಣ್ಣಹೆಗ್ಗಡೆ ಹೌದೊ ಅಲ್ಲವೊ ಎನ್ನುವುದನ್ನು ಸಂಶಯಕ್ಕೆ ಆಸ್ಪದವಿಲ್ಲದಂತೆ ಹೇಳಿಬಿಡಬಹುದು ಎನ್ನುತ್ತಿದ್ದಾರೆ ತೀರ್ಥಹಳ್ಳಿಯ ದಾಸಯ್ಯ ಮತ್ತು ಇತರ ಮಿತ್ರರು.

“ಆ ಅಣ್ಣಪ್ಪಯ್ಯ ನೋಡಿದರೇನು?” ಅನಂತಯ್ಯ ಕೇಳಿದರು.

“ಕಾಫಿ ಹೋಟೆಲ್ ಇಟ್ಟಿದ್ದಾರಲ್ಲಾ ಅವರೇ?”

“ಹೌದು, ಅವರೆ! ಕಾಡು ಕೊಂಕಣಿ, ಗೌಡ ಸಾರಸ್ವತರು.”

“ಇಲ್ಲ ಅವರು ನೋಡಿಲ್ಲ.”

ಸುಬ್ಬಣ್ಣಹೆಗ್ಗಡೆಯವರು ಕೀರಲು ಧ್ವನಿಯಲ್ಲಿ ಚಪ್ಪಾಳೆ ಹೊಡೆದು ಹೇಳಿದರು, ಕಣ್ಣಾಮುಚ್ಚಾಲೆಯಲ್ಲಿ ಕಳ್ಳನನ್ನು ಕಂಡು ಹಿಗ್ಗಿ ಕೂಗುವ ಹುಡುಗನಂತೆ: ಹೌದೆ ಸ್ವೈ, ಪಾದ್ರಿಗಳೆ! ಅಣ್ಣಪ್ಪಯ್ಯಗೆ ನೀವು ತೋರಿಸಿದ್ರೆ, ಒಂದು ಚಣಕ್ಕೆ ಗುರ್ತು ಹಿಡಿದುಬಿಡ್ತಿದ್ದ! ಬಾಳ ಸೂಟಿ ಮನುಷ್ಯ. ನಮ್ಮ ದೊಡ್ಡಣ್ಣ ಹೌದೆ ಅಲ್ಲೆ ಅಂತಾ ಕಡ್ಡಿ ತುಂಡು ಮಾಡಿದ್ಹಾಂಗೆ ಹೇಳಿಬಿಡ್ತಿದ್ದ!.... ಅಂವ ತೀರ್ಥಹಳ್ಳಿ ಹೋದಾಗ್ಲೆಲ್ಲಾ ಅಲ್ಲೆ ಉಂಡು ಮಲಗ್ತಿದ್ದ! ಅಂವ ಒಂದು ಬುರುಬುರಿ ಮಾಡ್ತಾನೆ ನೋಡಿ, ಪಸಂದಾಗಿರ್ತದೆ!....”

ಎಲ್ಲರೂ ಕಿಸಕ್ಕನೆ ನಕ್ಕುಬಿಟ್ಟರು, ಮುದುಕನ ಮೇದುಳಿನ ಕಲಸುಮೇಲೋಗರದ ತಿಕ್ಕಲುತನಕ್ಕೆ!

ಆದರೆ ಆ ನಗೆ ಒಂದು ಉಪಕಾರ ಮಾಡಿತ್ತು. ಹೆಗ್ಗಡೆಯವರ ಕೃಪಣಕಟುವಾದ ಮಾತುಗಳಿಂದ ಜಿಗುಪ್ಸಾಕಲುಷಿತವಾಗಿದ್ದ ಮನೋವಾರಣ ತಿಳಿಯಾಗಲು ಸಹಾಯ ಮಾಡಿತು. ಬಿಗಿಗೊಂಡಿದ್ದ ಸರ್ವರ ಚಿತ್ತಸ್ಥಿತಿಯೂ ಸಡಿಲಗೊಂಡಂತಾಯಿತು. ಅಂಗಳದಲ್ಲಿ ಕಸವನ್ನು ಕೆದಕುತ್ತಿದ್ದ ಕೋಳಿಗಳಲ್ಲಿ ಒಂದು ಹುಂಜ ತೆಣೆಯ ಮೇಲಕ್ಕೆ ನೆಗೆದು, ಅಸಹ್ಯ ಮಾಡಿ, ಅಲ್ಲಿಯೆ ಮಲಗಿ ನಿದ್ರಿಸುತ್ತಿದ್ದ ನಾಯಿಯನ್ನು ನೋಡುತ್ತಾ ಲೊಕ್ ಲೊಕ್ ಲೊಕ್ ಎಂದು ಹೆದರುಸದ್ದು ಮಾಡಲು, ಕಣ್ದೆರೆದ ನಾಯಿ ಎದ್ದು ಕೂತಿದ್ದನ್ನು ಕಂಡು, ಅದು ಮತ್ತೆ ಅಂಗಳಕ್ಕೆ ಹಾರಿದುದನ್ನು ಅಷ್ಟೇನೂ ಗಮನಿಸದೆ ಸುಮ್ಮನೆ ನೋಡುತ್ತಿದ್ದ ಜೀವರತ್ನಯ್ಯ ನಗುನಗುತ್ತಲೆ: “ಯಜಮಾನರೆ, ನೀವೀಗ ಅಣ್ಣಪ್ಪಯ್ಯನ ಬುರುಬುರಿ ರುಚಿ ನೋಡುವ ಅವಶ್ಯಕತೆ ಏನಿಲ್ಲ!.... ಸದ್ಯಕ್ಕೆ ನನ್ನ ಸಂಗಡ ಐಗಳೊಬ್ಬರು ಬಂದರೆ ಸಾಕು. ಆ ಗೋಸಾಯಿ ದೊಡ್ಡಣ್ಣಹೆಗ್ಗಡೆಯವರೇ ಹೌದು ಎಂದಾದರೆ, ಸರಕಾರದ ಅನುಮತಿ ಪಡೆದು, ಅವರನ್ನು

ಕರೆತರುತ್ತೇವೆ. ಒಂದು ವೇಳೆ ಕಾನೂನು ಪ್ರಕಾರ ಅವರ ಹತ್ತಿರದ ಸಂಬಂಧಿಗಳು, - ಅಂದರೆ ಹೆಂಡತಿ, ಮಕ್ಕಳು, ಅಣ್ಣ, ತಮ್ಮ, ತಂದೆ, ತಾಯಿ - ಯಾರಾದರೂ ಬಂದು, ಗುರುತಿಸಬೇಕು ಎಂದು ಅಮಲ್ದಾರರು ಹೇಳಿದರೆ, ಆಗ ನೀವಾಗಲಿ ನಿಮ್ಮ ಸೊಸೆಯಾಗಲಿ ಬರಬೇಕಾಗಬಹುದು...."

"ನಾನು ಗುರುತಿಸಿದರೆ ಸಾಲದೇನು?" ದೇವಯ್ಯ ಕೇಳಿದನು.

"ಸಾಕಾಗದೆ ಏನು? ನೋಡೋಣ" ಎಂದರು ಜೀವರತ್ನಯ್ಯ.

* * *

## ೩೧

ಯಾವ ದಿನ ಅರುಣೋದಯಕ್ಕೆ ಮುನ್ನ, ಹುಲಿಕಲ್ಲು ನೆತ್ತಿಯ ಕಲ್ಲುಮಂಟಪದಲ್ಲಿ ಆ ಇರುಳನ್ನು ಕಳೆದಿದ್ದ ಗುತ್ತಿ, ತಾನು ಹಾರಿಸಿಕೊಂಡು ಬಂದ ತಿಮ್ಮಿಯೊಡನೆ ಕಾಡಿನ ಕಳ್ಳದಾರಿಯಲ್ಲಿ ನಡೆದು ಹಾರಿಸಿಕೊಂಡು ಬಂದ ಹುಡುಗಿ ತಿಮ್ಮೊಯೊಡನೆ ಕಾಡಿನ ಕಳ್ಳದಾರಿಯಲ್ಲಿ ನಡೆದು ಸಿಂಬಾವಿಯ ತಮ್ಮ ಕೇರಿಯನ್ನು ಗುಪ್ತವಾಗಿ ಸೇರಲು ಯೋಚಿಸಿ, ಗುಡ್ಡವಿಳಿಯತೊಡಗಿದ್ದನೋ ಅದೇ ದಿನ ಅದೇ ಹೊತ್ತಿನಲ್ಲಿ ಸಿಂಬಾವಿಯ ದೊಡ್ಡ ಚೌಕಿಮನೆಯ ಒಂದು ಕಗ್ಗತ್ತಲೆ ಕವಿದಿದ್ದ ಕೋಣೆಯಲ್ಲಿ ಮಲಗಿದ್ದ ಭರಮೈಹೆಗ್ಗಡೆಯವರು ನಿದ್ದೆಯಿಲ್ಲದೆ ಹೊರಳಿ ಗುತ್ತಿಯನ್ನೆ ನೆನೆಯುತ್ತಿದ್ದರು. ತಾವು ಬರೆದು ಅವನ ಕೈಯಲ್ಲಿ ಕಳುಹಿಸಿದ್ದ ಕಾಗದಕ್ಕೆ ಏನು ಉತ್ತರ ಬರುತ್ತದೆಯೋ ಎಂದು ಕಾತರರಾಗಿದ್ದರು. ತಮ್ಮ ಹೆಂಡತಿ ಜಟ್ಟಮ್ಮನ ಅನುರೋಧದಿಂದಾಗಿ ಹಳೆಮನೆಗೆ ಹೆಣ್ಣು ಕೊಟ್ಟು ಹೆಣ್ಣು ತರುವ ಆಲೋಚನೆಯನ್ನು ಕೈಬಿಟ್ಟಿದ್ದರು. ಆದರೆ ಹೂವಳ್ಳಿ ವೆಂಕಟಪ್ಪ ನಾಯಕರ ಮಗಳನ್ನು ತಮಗೆ ಮದುವೆ ಮಾಡಿಕೊಡುವಂತೆ ಅವರನ್ನು ಒಪ್ಪಿಸುವ ಭಾರವನ್ನು ಸುಬ್ಬಣ್ಣಹೆಗ್ಗಡೆಯವರ ಮೇಲೆಯೆ ಹಾಕಿದ್ದರು.

ಭರಮೈಹೆಗ್ಗಡೆಯವರು ಮಲಗಿದ್ದ ಮಂಚ ಇಬ್ಬರೂ ಆರಾಮವಾಗಿ ಮಲಗುವಷ್ಟು ಅಗಲವಾಗಿದ್ದರೂ, ಅವರು ತಡಿ ದಂಪತಿಗಳಿಗಾಗಿಯೆ ರಚಿತವಾಗಿದ್ದು ವಿಶಾಲವಾಗಿದ್ದರೂ, ಮಂಚದ ಮೇಲೆ ಅವರೊಬ್ಬರೇ ಮಲಗಿ ಹೊರಳುತ್ತಿದ್ದರು. ಅವರ ಹೆಂಡತಿ ಕೋಣೆಯಲ್ಲಿ ಮಲಗಿರಲಿಲ್ಲ ಎಂದಲ್ಲ. ಜಟ್ಟಮ್ಮ ಅಲ್ಲಿಯೆ ಮಲಗಿದ್ದರು ಕೆಳಗೆ ಮೆಲದಮೇಲೆ, ಒಂದು ಚಾಪೆಕಂಬಳಿ ಹಾಸಿಕೊಂಡು. ನಿನ್ನೆ ಬೈಗು ಅವರಿಗೂ ಅವರ ನಾದಿನಿ ಲಕ್ಕಮ್ಮಗೂ ನಡೆದಿದ್ದ ಜಗಳದಲ್ಲಿ ಭರಮೈಹೆಗ್ಗಡೆ ತಂಗಿಯ ಪರ ವಹಿಸಿದ್ದರ ಅಥವಾ ವಹಿಸಿದ್ದರೆಂದು ಜಟ್ಟಮ್ಮ ಭಾವಿಸಿದ್ದುದರ ಪರಿಣಾಮವಾಗಿ!

ನಾಡಿಗೆಲ್ಲ ಬೆಳಕು ಬಿಟ್ಟಿದ್ದರೂ ಸಿಂಬಾವಿಗೆ ಇನ್ನೂ ಬೆಳಕು ಬಿಟ್ಟಿರಲಿಲ್ಲ. ಆ ಮನೆಗೆ ಮುಟ್ಟಿಕೊಂಡಂತೆಯೆ ಕಾಡುತುಂಬಿದ್ದ ಗುಡ್ಡವೊಂದು ಅರ್ಧ ಆಕಾಶದವರೆಗೂ ಎದ್ದು ನಿಂತು ಸುತ್ತುವರಿದಂತಿತ್ತು. ಸೂರ್ಯ ಸಿಂಬಾವಿ ಮನೆಗೆ ಪೂರ್ವ ದಿಕ್ಕಿನಲ್ಲಿ ಕಾಣಿಸಿಕೊಳ್ಳಬೇಕಾದರೆ ಗುಡ್ಡವೇರಿ ಬಹುದೂರ ಬರಬೇಕಾಗಿತ್ತು.

ಆದರೆ ಜಟ್ಟಮ್ಮ ಬೆಳಕಿಗಾಗಿ ಕಾಯಲಿಲ್ಲ. ಕೋಳಿ ಕೂಗಿದ್ದೆ ಅವರಿಗೆ ಸಾಕಾಗಿ, ಚಾಪೆಯಿಂದೆದ್ದು ದಿನನಿತ್ಯದ ಮನೆಕೆಲಸ ಪ್ರಾರಂಭಿಸಲು ಅಡುಗೆಮನೆ ಕಡೆಗೆ ಹೋದರು. ಕಡಗ ಬಳೆಗಳ ಕಿಣಿಕಿಣಿ ಸ್ದಿಗೆ ಆ ಕಡೆ ತಿರುಗಿ, ಮೆಲ್ಲನೆ ಬಾಗಿಲು ತರೆದು ಅವರು ಹೋದದ್ದನ್ನು ಹೆಗ್ಗಡೆ ನೋಡಿದ್ದರು. ಅಷ್ಟೆ ಅಲ್ಲ, ಸಣ್ಣದನಿಯಲ್ಲಿ ಹೆದರಿ ಹೆದರಿ ಹೆಸರು ಹಿಡಿದೂ ಕರೆದಿದ್ದರು 'ಜಟ್ಟೂ!' ಎಂದು. ಆದರೆ ಅವರು ತುಸುವೂ ನಿಲ್ಲದೆಯೆ, ಹಿಂದಿರುಗಿಯೂ ನೋಡದೆ, ಹೆಗ್ಗಡೆ ಸಂಕಟವುಕ್ಕುವಂತೆ ಮಾಡಿದ್ದರು.

ಜಟ್ಟಮ್ಮ ಹೋಗುವಾಗ ಆ ಕೋಣೆಗಿದ್ದ ಒಂದೇ ಬಾಗಿಲನ್ನು ಹಾಕಿಕೊಳ್ಳದೆ ಹಾರುಹೊಡೆದೆ ಹೋಗಿದ್ದರು. ಅದರ ಮೂಲಕ ಹೌದೊ ಅಲ್ಲೊ ಎನ್ನುವಷ್ಟು ಬೆಳಕು, ಕತ್ತಲೆಗೆ ಸೋತು ಕರಿಚಿಕೊಂಡಿದ್ದ ಬೆಳಕು, ಪ್ರವೇಶಿಸಿತ್ತು. ಕತ್ತಲೆಗೆ ತುಂಬ ಅಭ್ಯಾಸವಾಗಿದ್ದ ಹೆಗ್ಗಡೆಯ ಕಣ್ಣಿಗೆ ಆ ಬೆಳಕಿನ ನೇಸಲಿನಲ್ಲಿ ಕೋಣೆಯಲ್ಲಿದ್ದ ಪರಿಚಿತ ವಸ್ತುಗಳು ಆಕಾರಮಾತ್ರವಾಗಿ ಕಾಣತೊಡಗಿದ್ದುವು: ಜಿಡ್ಡು ಹಿಡಿದ ಹಿತ್ತಾಳೆಯ ದೀಪದ ಕಂಬದ ಮೇಲೆ, ಅರೆ ಉರಿದು ಆರಿಸಿದ್ದ ಬತ್ತಿಯ, ಹರಳೆಣ್ಣೆಯ ಕರಿಹಣತೆ: ಮೂಲೆಯಲ್ಲಿ ಜಟ್ಟಮ್ಮನ ಬೆಲೆಯುಳ್ಳ ಸೀರೆ ಬಟ್ಟೆ ಒಡವೆಗಳನ್ನೆಲ್ಲ ಗರ್ಭದಲ್ಲಿ ಅಡಗಿಸಿಕೊಂಡಿದ್ದ ಒಂದು ದೊಡ್ಡ ಸಂದೂಕ; ಅದೇ ಮೂಲೆಯಲ್ಲಿ ಸಂದುಕದ ಹಿಂದೆ ಎರಡು ಗೋಡೆಗಳು ಸೇರುವೆಡೆ, ಹತ್ತೆ ಕೆಳಗಾಗಿ ಒರಗಿಸಿಟ್ಟಿದ್ದ ಜೋಡುನಳಿಕೆಯ ಕೇಪಿನ ಕೋವಿ; ಎಲ್ಲಕ್ಕೂ ಹೆಚ್ಚಾಗಿ ಮನೋವೇದಕವಾಗಿ, ತೊಟ್ಟಿಲನ್ನು ತೂಗುಹಾಕುವುದಕ್ಕಾಗಿ ನಾಗಬಂದಿಗೆಯಿಂದ ನಾಗಂದಿಗೆಗೆ ಅಡ್ಡಲಾಗಿ ಹಾಕಿದ್ದ ನಿಡಿದಾದ ಬಲಿಷ್ಠವಾದ ಹೆಬ್ಬಿದಿರಿನ ಗಳು, ಮತ್ತು ಅದಕ್ಕೆ ನೇಲು ಬೀಳುವಂತೆ ಹಾಕಿದ್ದು, ಉಪಯೋಗವಿಲ್ಲದಿದ್ದುದರಿಂದ ಬಹಳ ಕಾಲದಿಂದಲೂ ಗಳುವಿಗೆ ಸುತ್ತಿದ್ದ ತೊಟ್ಟಿಲ ಹಗ್ಗ!

ವಸ್ತುವಿನಿಂದ ವಸ್ತುವಿಗೆ ನಿರ್ಲಕ್ಷವಾಗಿ ಅಲೆದೆಲೆದು ಹೋಗುತ್ತಿದ್ದ ಹೆಗ್ಗಡೆಯ ಕಣ್ಣು ಆ ಗಳುವನ್ನೂ ಅದಕ್ಕೆ ಸುತ್ತಿದ್ದ ಹಗ್ಗವನ್ನೂ ತಲುಪಿದೊಡನೆ ಮುಗ್ಗುರಿಸಿದಮತೆ, ಯಾರೊ ಹಿಡಿದಲುಬಿನಂತೆ, ಫಕ್ಕನೆ ನಿಂತುಬಿಟ್ಟಿತು! ತೊಟ್ಟಿಲ ನೇಣು ಸುತ್ತಿದ್ದ ಆಗಳು ಅವರನ್ನು ತಮ್ಮ ಬದುಕಿನ ಸಮಸ್ಯೆಯ ಕೇಂದ್ರಕ್ಕೆ ಕರೆತಂದು ಬಿಟ್ಟಿತ್ತು!

ಆ ನೇಣಿಗೆ ಒಮ್ಮೆಯಾದರೂ ತೊಟ್ಟಿಲನ್ನು ಹೊರುವ ಭಾಗ್ಯ ಒದಗಿರಲಿಲ್ಲ; ಆ ಗಳುವಿಗೆ ಒಮ್ಮೆಯಾದರೂ ಅಳುವ ಕಂದನ ಹೊತ್ತು ತೂಗುವ ಮಧುರ ಭಾರವನ್ನು ಸವಿಯುವ ಯೋಗ ಒದಗಿರಲಿಲ್ಲ. ಅದು ತನ್ನ ಹೆಂಡತಿಯ ಬಂಜೆತನದ ಪ್ರತೀಕವಾಗಿ ತೋರುತ್ತಿತ್ತು ಹೆಗ್ಗಡೆಗೆ. ವಂಶೋದ್ಧಾರಕನಾದ ಕುಮಾರನೊಬ್ಬನನ್ನು ಪಡೆಯುವ ನೆವವೊಡ್ಡಿ ಹೆಗ್ಗಡೆ ಮತ್ತೊಂದು ಮದುವೆಯಾಗುವ ಪ್ರಸ್ತಾಪವೆತ್ತಿದ್ದಾಗ ಅವರ ಹೆಂಡತಿ ಜಟ್ಟಮ್ಮ ಆ ತೊಟ್ಟಿಲ ಹಗ್ಗದಿಂದಲೇ ಅದೇ ಗಳುವಿಗೆ ನೇಣುಹಾಕಿಕೊಳ್ಳುತ್ತೇನೆ ಎಂದು ಹೆದರಿಸಿದ್ದ ಭಯಂಕರ ಪ್ರಸಂಗವಂತೂ ಮರೆಯುವಂತಿರಲಿಲ್ಲ. ಮದುವೆಯಾದ ಮೊದಲ ದಿನಗಳಲ್ಲಿ ಅತ್ಯಂತ ಸವಿಯ ಮತ್ತು ಸುಖದ ಅನುಭವಗಳಿಗೆ ಆಕರವಾಗಿದ್ದ ಆ ಕೋಣೆ ಬರಬರುತ್ತಾ ಹೆದರಿಕೆಯ ಹೆಗ್ಗವಿಯಾಗಿಬಿಟ್ಟಿತ್ತು.

ಸಾಧಾರಣವಾಗಿ ಬಿಸಿಲು ಇಣುಕುವವರೆಗೂ ಮಲಗಿರುತ್ತಿದ್ದ ಭರಮೈಹೆಗ್ಗಡೆಗೆ ಆವೊತ್ತು ಇನ್ನು ಮುಂದೆ ಮಲಗಲಾಗಲಿಲ್ಲ. ಕೋಣೆಯಲ್ಲಿ ಕತ್ತಲೆ ತುಂಬಿದ್ದಂತೆಯೆ, ಹೊದೆದಿದ್ದ ಶಾಲನ್ನು ಕೆಲಕ್ಕೆ ಸರಿಸಿ, ಎದ್ದು ಕುಳಿತರು ಮಂಚದಮೇಲೆ, ಕಾಲು ಇಳಿಬಿಟ್ಟುಕೊಂಡು. ಸೊಂಟದ ಉಡಿದಾರಕ್ಕೆ ಕಟ್ಟಿದ್ದ ಲಂಗೋಟಿ ವಿನಾ ಸಂಪೂರ್ಣ ನಗ್ನರಾಗಿದ್ದ ಅವರು ಕೈನೀಡಿ ತಡಕಿದರು, ರಾತ್ರಿ ಮಲಗುವಾಗ ಬಿಚ್ಚಿ ತಲೆದಿಸಿ ಇಟ್ಟಿದ್ದ ಅಡ್ಡಪಂಚೆಗಾಗಿ. ಕತ್ತಲೆಯಿದ್ದರೂ ಕಣ್ಣಂದಾಜಿನಿಂದಲೆ ಅದನ್ನು ಹೆಗಲಮೇಲೆ ಹಾಕಿಕೊಂಡು ಎದ್ದುನಿಂತರು. ತಮ್ಮ ದೇಹವೆ ತಮಗೆ ಕಾಣದಷ್ಟು ಕಪ್ಪು ಕವಿದಿತ್ತಾದರೂ ಹೆಗ್ಗಡೆ ಸ್ವಾಭಾವಿಕವಾದ ಸಂಕೋಚವನ್ನನುಭವಿಸಿ ಸುತ್ತಲೂ ಕಳ್ಳನೋಟ ಬೀರಿ, ನಾಗಂದಿಗೆಗೆ ಕೈಹಾಕಿ ಏನೋ ಔಷಧಿಯ ಡಬ್ಬಿಯನ್ನು ತೆಗೆದುಕೊಂಡು, ಕೌಪೀನವನ್ನು ಸಡಿಲಿಸಿ ಬಿಚ್ಚಿ, ಕೈಯ ಅಂದಾಜಿನಿಂದಲೆ ಮರ್ಮಸ್ಥಾನದ ವ್ರಣಗಳಿಗೆ ಮದ್ದು ಲೇಪಿಸಿಕೊಂಡರು. ಮತ್ತೆ ಲಂಗೋಟಿ ಕಟ್ಟಿಕೊಂಡು, ಹೆಗಲಮೇಲಿದ್ದ ಅಡ್ಡಪಂಚೆ ಸುತ್ತಿಕೊಂಡು, ಹಾಸಗೆಯ ಮೇಲಿದ್ದ ಶಾಲನ್ನೆತ್ತಿ ಹೊದೆದು, ಕೋಣೆಯ ಬಾಗಿಲಿಗೆ ಬಂದು ಅಂಗಳದ ಕಡೆ ನೋಡುತ್ತಾ ನಿಂತರು. ಅಂಗಳದಲ್ಲಿದ್ದ ಕಲ್ಲಿನ ತುಳಸಿಕಟ್ಟೆಗೆ ಅನೈಚ್ಛಿಕವಾಗಿಯೊ ಎಂಬಂತೆ. ಬರಿಯ ಅಭ್ಯಾಸದ ಯಾಂತ್ರಿಕ ಚಲನೆಯ ಭಂಗಿಯಿಂದ ಕೈಮುಗಿದು, ಕೆಮ್ಮುತ್ತಾ ಜಗಲಿಗೆ ನಡೆದರು.

ಅಡುಗೆ ಮನೆಯ ದಿಕ್ಕಿನಿಂದ ಮಜ್ಜಿಗೆ ಕಡೆಯುತ್ತಿದ್ದ ಕಡಗೋಲಿನ ಸದ್ದು ಕೇಳಿಬರುತ್ತಿತ್ತು. ಮನೆಗೆ ಅಂಟಿಕೊಂಡಿದ್ದ ದನದಕೊಟ್ಟಿಗೆಯಿಂದ ಕೋಡುಗಳ ಸದ್ದೂ, ಗೊರಸುಗಳ ಸದ್ದೂ, ಕರುಗಳು ಕರೆಯುವ ಅಂಬಾ ಸದ್ದೂ, ತಾಯಿಹಸುಗಳ ಉತ್ತರಧ್ವನಿನಿರೂಪದ ಹಂಬಾ ಸದ್ದೂ ಕೇಳಿಸುತ್ತಿತ್ತು. ಕೋಳಿಒಡ್ಡಿಯಿಂದ, ಆಗತಾನೆ ಬೆಳಕು ಬಿಡುತ್ತಿರುವುದನ್ನು ಕಂಡು, ಹೊರಗೆ ಹಾರಲು ಕಾತರವಾಗಿ ತರತರದ ಉಲಿಹಗಳನ್ನು  ಬೀರುತ್ತಿದ್ದ ಹೇಟೆ ಹುಂಜ ಸಳುಗ ಮರಿಗಳ ಸದ್ದೂ ಆ ದೊಡ್ಡಮನೆಯ ಒಳಗಣ ಬಿಮ್ಮೆಂಬ ನಿಃಶಬ್ದತೆಯನ್ನು ಹಿತಕರವಾಗಿ ಭಂಗಿಸಿತ್ತು. ನಿತ್ಯಪರಿಚಿತವಾದ ಆ ನಾದಸಮೂಹವನ್ನು ಆಲಿಸಿದರೂ ಲಕ್ಷಿಸಿದ ಉದಾಸೀನತೆಯಿಂದ ಹೆಗ್ಗಡೆ ಬಚ್ಚಲು ಮನೆಯ ಕಡೆಗೆ ಹೋದರು.

ಸ್ವಲ್ಪ ಹೊತ್ತಿನ ಮೇಲೆ ಜಗಲಿಗೆ ಹಿಂದಿರುಗಿದವರು ತಾವು ಅನೇಕ ವರ್ಷಗಳಿಂದ ನಿತ್ಯವೂ ತಪ್ಪದೆ ಕೂರುತ್ತಿದ್ದ ಜಾಗದಲ್ಲಿ ಕೂತು, ಮುಂಡಿಗೆಗೆ ಬೆನ್ನೊರಗಿ, ಶಾಲುಗೂಡಾದರು:

"ದೊಳ್ಳಾ! ಏ ದೊಳ್ಳಾ!"

ಹೆಗ್ಗಡೆ ಕರೆದುದಕ್ಕೆ ದೊಳ್ಳ ಓಕೊಳ್ಳಲಿಲ್ಲ. ಆದರೆ ಅಡುಗೆಮನಿಯಿಂದ ಬಂದು ಬಾಗಿಲಲ್ಲಿ ಇಣುಕಿದ ತರುಣಿ ಲಕ್ಕಮ್ಮ "ಅಂವ ಹಟ್ಟೀಲಿ ಮುರು ಹಾಕ್ತಾ ಇದಾನೆ, ಅಣ್ಣಯ್ಯ ಕರೀಬೇಕೇನು?" ಎಂದು ಕೇಳಿದಳು.

"ಆ ಹಳೇಪೈಕದ ಬುಲ್ಡ ಬಂದನೇನು ನೋಡ್ತೀಯಾ, ತಂಗಿ?"

"ಹ್ಞೂ ಬಂದಿದ್ದ. ತಂದುಕೊಟ್ಟು ಹೋಗ್ಯಾನೆ. ತರಲೇನು?"

"ತ" ಬಾರಕ್ಕ, ಒಂದು ಚೂರು. ಹಾಳುಹೊಟ್ಟೇಲೇ ಕುಡೀಬೇಕು ಅಂತಾರೆ ಹೇಳ್ಯಾರೆ ಪಂಡಿತ್ರು."

ಧರ್ಮಸ್ಥಳಕ್ಕೆ ಯಾತ್ರೆ ಹೋಗಿದ್ದಾಗ ಕನ್ನಡ ಜಿಲ್ಲೆಯಲ್ಲಿ ಆಡಿದ ಆಟಗಳ ಪರಿಣಾಮವಾಗಿ ಹೆಗ್ಗಡೆಯವರಿಗೆ ಮರ್ಮಪ್ರಾಪ್ತವಾಗಿತ್ತು. ಕಣ್ಣಾಪಂಡಿತರು ಮದ್ದುಕೊಟ್ಟು ಬೆಳಿಗ್ಗೆ ಆಗತಾನೆ ಇಳಿಸಿದ ತೆಂಗಿನ ಕಳ್ಳನ್ನು ಕುಡಿಯಬೇಕೆಂದು ಪಥ್ಯ ವಿಧಿಸಿದ್ದರು. ರೊಟ್ಟಿ ಜಾರಿ ತುಪ್ಪಕ್ಕೆ ಬಿದ್ದಹಾಗಾಗಿತ್ತು ಭರಮೈಹೆಗ್ಗಡೆಯವರಿಗೆ. ಮೊದಲೆ ಕಳ್ಳು ಹೆಂಡ ಸಾರಾಯಿಗಳಲ್ಲಿ ಮುಳುಗಿ ಏರುತ್ತಿದ್ದವರಿಗೆ ವೈದ್ಯರು ವಿಧಿಸಿದ್ದ ಪಥ್ಯದ ದೆಸೆಯಿಂದ ರೋಗವೂ ಆಸ್ವಾದ್ಯವಾಗಿಯೆ ಸಂಭವಿಸಿತ್ತು. ಆದರೆ ಪಥ್ಯದಲ್ಲಿ ಆಗುತ್ತಿದ್ದದ್ದು ಒಂದೇ ವ್ಯತ್ಯಾಸ: ಕಳ್ಳು ಆಗತಾನೆ ಇಳಿಸಿದ್ದಾಗಿರಬೇಕು ಎಂಬ ನಿಯಮವನ್ನು ಪರಿಪಾಲಿಸುವುರಲ್ಲಿ ಹಳೇ ಪೈಕದ ಬುರುಡ ಅಷ್ಟೇನೂ ನಿಷ್ಠಾವಂತನಾಗಿರಲಿಲ್ಲ. ಒಂದೆರಡು ಸಾರಿ ಅವನು ಆ ನಿಷ್ಠೆಯನ್ನು ಪರಿಪಾಲಿಸಿ ಹೆಗ್ಗಡೆಯವರ ಕೈಯಲ್ಲಿ ಏಟು ತಿನ್ನುವುದೊಂದೆ ಬಾಕಿಯಾಗಿತ್ತು. “ಇದೇನು ಕಳ್ಳೊ? ನೀರೊ? ನಿನ್ನ ಹಲ್ಲು ಹೊಟ್ಟೆಗೆ ಹೋಗೋ ಹಾಗೆ ಹೊಡೆದುಬಿಡ್ತೀನಿ, ನೋಡು, ಕಳ್ಳಲೌಡಿ ಮಗನೆ!” ಎಂದು ರೇಗಿದ್ದರು. ಆಮೇಲೆ ಅವನು ಒಡೆಯರ ಬಾಯಿರುಚಿಗೆ ಇಷ್ಟವಾದ ಬಲಿಷ್ಠವಾದ ಮದ್ಯವನ್ನೆ ಒದಗಿಸತೊಡಗಿದ್ದನು.

ತುಂಬ ತುಂಬಿದ್ದ ಮೊಗೆಯಲ್ಲಿ ಲಕ್ಕಮ್ಮ ಹೊರಲಾರದೆ ಹೊತ್ತು ತಂದದ್ದು ಆ ಬಲಿಷ್ಠ ಮದ್ಯವನ್ನೆ!

“ನೀನೆ ಯಾಕೆ ಹೊತ್ತುಕೊಂಡು ಬಂದ್ಯೇ? ಮಂಜ ಇರಲಿಲ್ಲೇನೆ?”

“ಅತ್ತಿಗಮ್ಮ ಬಿಡಬೇಕಾಯ್ತಲ್ಲಾ ಅವನ್ನ?” ಮೇಲುಸಿರೆಳೆಯುತ್ತಲೆ ಹೇಳಿದಳು ಲಕ್ಕಮ್ಮ, ಆಪಾದನೆಯ ಧ್ವನಿಯಲ್ಲಿ.

“ಏನು ಮಾಡ್ತಿದಾನ್ಯೆ ಅವನು?”

“ಮಜ್ಜಿಗೆ ಕಡೀತಿದಾನೆ!”

“ಅವಳು ಏನು ಮಾಡ್ತಿದ್ದಾಳೋ?” ಸಿಡುಕಿ ಕೇಳಿದರು ಹೆಗ್ಗಡೆ.

“ರೊಟ್ಟಿ ಮಾಡ್ತಿದಾರೆ.”

ತಂಗಿ ಸೀರೆಯನ್ನು ಎತ್ತಿಕಟ್ಟಿದ್ದ ಭಂಗಿಯನ್ನು ನೋಡಿ ಹೆಗ್ಗಡೆ “ನೀನೇನು ಹಾಲು ಕರ್ಯಾಕೆ ಹಟ್ಟಿಕಡೆ ಹೊರಟ್ಹಾಂಗದೆ?” ಎಂದರು.

“ದಿನಾ ಮತ್ಯಾರು ಕರೆಯೋರು? ನಾನೆ!”

“ಆ ಗಲ್ಬ ಅಲ್ಲಿಟ್ಟು ಹೋಗು. ನಾ ಬೊಗಿಸಿಕೊಳ್ತೀನಿ.”

ಲಕ್ಕಮ್ಮ ಕಳ್ಳು ಕುಡಿಯುವುದಕ್ಕಾಗಿಯೆ ತಯಾರಾಗಿ ನುಣ್ಣಗೆ ಮಾಡಿದ್ದ ಕರಟವನ್ನು ಮೊಗೆಯ ಬಾಯಿಂದ ತೆಗೆದು ಕೆಳಗಿಟ್ಟು, ಹಾಲು ಕರೆಯಲು ಹಟ್ಟಿಗೆ ಹೋದಳು. ಹೆಗ್ಗಡೆ ಕಳ್ಳು ಬೊಗ್ಗಿಸಿಕೊಂಡು, ಕಳ್ಳಿನಲ್ಲಿಯೆ ಕೈತೊಳೆದು,

ಬಾಯಿ ಮುಕ್ಕಳಿಸಿ ಅಂಗಳಕ್ಕೆ ಉಗುಳಿ, ನಿಧಾನವಾಗಿ ಸವಿದು ಸವಿದು ಕುಡಿಯತೊಡಗಿದರು. ಕಳ್ಳಿನ ಕೆಂಪು ಸುತ್ತಲೂ ವ್ಯಾಪಿಸತೊಡಗಿತು.

ಸೂರ್ಯ ಮನೆಯ ಮುಂದಣ ಮಲೆಯ ನೆತ್ತಿಗೇರಿ ಕಾಣಿಸಿಕೊಂಡ ಸ್ವಲ್ಪ ಹೊತ್ತಿನಲ್ಲಿಯೆ, ಹೆಗ್ಗಡೆ ಮರಾಟಿ ಮಂಜನನ್ನು ಕೂಗಿಹೇಳಿದರು, "ಆ ದೊಳ್ಳಗೆ ಹೇಳೋ, ಹೊಲೇರ ಕೇರಿಗೆ ಹೋಗಿ, ಗುತ್ತಿ ಬಂದನೇನು ಕೇಳಿಕೊಂಡು ಬರಲಿ." ಸುಮಾರು ಒಂದು ಗಂಟೆ ಕಳೆದ ಮೇಲೆ ದೊಳ್ಳ ಹೆಬ್ಬಾಗಿಲಲ್ಲಿ ಕಾಣಿಸಿಕೊಂಡು ಬಿಜಿಲು ಬಿಜಿಲು ಮಾತಿನಲ್ಲಿ "ಅಂವಿನ್ನೂ ಬಂದಿಲ್ಲಂತೆ" ಎಂದನು.

"ಇಷ್ಟೊತ್ತು ಬೇಕಾಯ್ತೇನೊ ನಿಂಗೆ, ಹೊಲೇರ ಬಿಡಾರಕ್ಕೆ ಹೋಗಿಬರಾಕೆ?" ಗದರಿಸಿದರು ಹೆಗ್ಗಡೆ.

"ಅಗೋಡಿಗೆ ದನಾ ನುಗ್ಗಿದ್ವು. ಅಟ್ಟಿ ಬಂದೆ." ದೊಳ್ಳ ಸುಳ್ಳೆ ಹೇಳಿದನು.

"ಮನೆಹಾಳು ಮುಂಡೆಗಂಡರು!" ಹೆಗ್ಗಡೆ ಆಶೀವರ್ದಿಸಿ ಕಳ್ಳಿಗೆ ಕೈಹಾಕಿದರು.

* * *

ದೊಳ್ಳ ಒಡೆಯರ ಅಪ್ಪಣೆಯಂತೆ ಹೊಲೆಯರ ಬಿಡಾರಕ್ಕೆ ಹೋಗಿ ಗುತ್ತಿ ಹಿಂದಿರುಗಿದ್ದಾನೆಯೆ ಇಲ್ಲವೆ ಎಂಬುದನ್ನು ವಿಚಾರಿಸುತ್ತಿದ್ದ ಸಮಯದಲ್ಲಿ, ಗುತ್ತಿ ತಿಮ್ಮಿಯನ್ನು ಹತ್ತಿರದ ಕಾಡಿನಲ್ಲಿ ಮರೆಯಾಗಿ ಕುಳ್ಳಿರಲು ಹೇಳಿ, ತನ್ನ ನಾಯಿ ಹುಲಿಯನನ್ನು ಮೆಲ್ಲಗೆ ಎತ್ತಿ ತಂದು ಲಕ್ಕುಂದದ ಹಳೆಪೈಕದ ಸೇಸನಾಯ್ಕನ ಮನೆಯ ಹಿತ್ತಲು ಕಡೆಯಲ್ಲಿ ಕಾಡಿಯ ಸಹಾಯದಿಂದ ಔಷಧೋಪಚಾರದ ಶುಶ್ರೂಷೆಯಲ್ಲಿ ತನ್ಮಯರಾಗಿದ್ದನು.

ಆವೊತ್ತು ಹೊತ್ತಾರೆ ಹುಲಿಕಲ್ಲು ನೆತ್ತಿಯಲ್ಲಿ ಕುರ್ಕನೊಡನೆ ಹೋರಾಡಿ ಗಾಯಗೊಂಡಿದ್ದ ಹುಲಿಯ ಮೊದಮೊದಲು ಗುತ್ತಿ ತಿಮ್ಮಿಯರ ಹಿಂದೆ ಮುಂದೆ ಅತ್ತ ಇತ್ತ ಹಳುವಿನಲ್ಲಿ ಓಡಿಯಾಡುತ್ತಾ ಬರುತ್ತಿತ್ತು. ಸ್ವಲ್ಪದೂರ ಹೋಗುವುದರಲ್ಲಿ ಅತ್ತ ಇತ್ತ ಓಡಿಯಾಡುವುದನ್ನು ನಿಲ್ಲಿಸಿ ಅವರ ಹಿಂದೆಯೆ ಬರತೊಡಗಿತ್ತು. ಆಗಲೆ ಗುತ್ತಿಗೆ ಅನುಮಾನವಾಗಿ, ನಾಯಿಯನ್ನು ಹತ್ತಿರಕ್ಕೆ ಕರೆದು, ತಲೆ ತಟ್ಟಿ ಮುದ್ದುಕಮಾಡಿ ಹುರಿದುಂಬಿಸಿದ್ದನು. ನಾಯಿ ಕುಂಟುತ್ತಾ ಮೆಲ್ಲಗೆ ನಡೆಯುತ್ತಿತ್ತು.

ಕಾಡಿನಲ್ಲಿ ಇನ್ನೂ ಸ್ವಲ್ಪದೂರ ನಡೆದಮೇಲೆ ಒಂದು ಕಡೆ ಹಂದಿಯ ಹಿಂಡು ಅಡ್ಡಹಾಯಿತು. ಹಳುವಿನಲ್ಲಿ ಒಂದು ಮೊಲ, ಒಂದು ಬರ್ಕ, ಒಂದು ಚಿಟ್ಟುಗೋಳಿ, ಒಂದು ಉಡ, ಕಡೆಗೆ ಒಂದು ಓತಿ ಇಂತಹ ಅಲ್ಪ ಮತ್ತು ಅತ್ಯಲ್ಪ ಪ್ರಾಣಿಗಳೂ ಸುಳಿದರೆ ಸಾಕು ಅತ್ಯುತ್ಸಾಹದಿಂದ ನುಗ್ಗಿ ಅಟ್ಟಿಕೊಂಡು ಹೋಗುತ್ತಿದ್ದ ಬೇಟೆನಾಯಿ ಹುಲಿಯ ಈಗ ದೊಡ್ಡ ಹಂದಿಯ ಹಿಂಡೇ ಅಡ್ಡ ಹಾಯ್ದರೂ ಅಟ್ಟದೆ ಬೊಗಳದೆ ತಲೆ ಜೋಲು ಹಾಕಿ ತಮ್ಮ ಹಿಂದೆ ಮೆಲ್ಲಗೆ ಕುಂಟುತ್ತಾ ಬರುತ್ತಿದ್ದುದನ್ನು ಗಮನಿಸಿ ಗುತ್ತಿಗೆ ಜೀವವೆ ಹಾರಿಹೋದಂತಾಯಿತು!

ಸಂಕಟದ ಧ್ವನಿಯಿಂದ "ಅಯ್ಯೋ, ತಿಮ್ಮಿ, ಏನಾಯ್ತು ನಾಯಿಗೆ?" ಎಂದು ಹಿಂದಕ್ಕೆ ಓಡಿ ಬಂದು ಹುಲಿಯನ ಪಕ್ಕದಲ್ಲಿ ಕೂತು ಪರಿಶೀಲಿಸತೊಡಗಿದನು.

ಚಿರತೆಯ ಕೂರುಗುರುಗಳಿಂದ ಆಗಿದ್ದ ಗಾಯಗಳಿಂದ ನೆತ್ತರು ಸೋರಿ ಆ ಕರಿಯ ಬಣ್ಣದ ನಾಯಿಯ ಮೈಯೆಲ್ಲಾ ಕೆಂಪಗಾದಂತಿತ್ತು. ಜೊತೆಗೆ ಒಂದು ಉಗುರೋ ಹಲ್ಲೋ ತಾಗಿ ಒಂದು ಕಣ್ಣೂ ಊದಿಕೊಂಡು ರಕ್ತಮಿಶ್ರವಾದ ನೀರು ಇಳಿಯುತ್ತಿತ್ತು. ಗುತ್ತಿ ಮುಟ್ಟಿದೊಡನೆ ನಾಯಿ ನೋವಿಗೆ ನರಳಿತು. ಅದರ ಕಣ್ಣಿನ ನೋಟವಂತೂ ಗುತ್ತಿಯ ಕರುಳಿಗೆ ಇರಿದಂತಾಯಿತು. ಯಾರ ಮೇಲೋ ಏಕೋ ದುಃಖಮಿಶ್ರವಾದ ಮಹಾಸಿಟ್ಟು ಉಕ್ಕಿದಂತಾಯಿತು, ತನ್ನ ನಚ್ಚಿನ ನಾಯಿಗೆ ಆ ಗತಿ ಒದಗಿದುದಕ್ಕಾಗಿ!

ಭಾವಾಂಧನಾಗಿ ಗುತ್ತಿ ತಿಮ್ಮಿಯ ಕಡೆಗೆ ತಿರುಗಿ "ಸನಿಮುಂಡೆ, ನಿನ್ನ ದೆಸಿಂದ  ನನ್ನ ನಾಯಿನೂ ಹೋಯ್ತಲ್ಲೇ! ಯಾವ ಇಸಗಳಿಗೇಲಿ ಹುಟ್ಟಿದ್ಯೋ ನೀನು, ಹುಲಿಯನ ತಿನ್ನಾಕೆ!" ಎಂದು ಸಿಡುಕಿದನು. ಅವನ ಕಣ್ಣು ಆಗಲೆ ನೀರು ತುಂಬಿಕೊಂಡಿತ್ತು.

ತಿಮ್ಮಿಗೆ ಏನೂ ತೋಚಲಿಲ್ಲ, ತಾನು ಏನು ತಪ್ಪು ಮಾಡಿದುದಕ್ಕಾಗಿ ಬಾವ ಬಯ್ಯುತ್ತಿದ್ದಾನೆ ಎಂದು. ನಿಂದೆಯ ಆಘಾತಕ್ಕೆ ಮೊದಲು ತಟಕ್ಕನೆ ಬೆಪ್ಪುಬೆರಗಾದಳು. ಒಡನೆಯೆ, ಬಂಡೆಯಬೆಟ್ಟ ದನಿಗೆ ಮರುದನಿಕೊಡುವಂತೆ, ನಿಸರ್ಗ ಸಹಜವಾದ ಪ್ರತಿಕ್ರಿಯೆಯಿಂದಲೂ ಎಂಬಂತೆ ಪಡಿನುಡಿದೆಬಿಟ್ಟಳು: "ನಾನ್ಯಾಕೆ ಆದೇನು ಸನಿಮುಂಡೆ? ಬೇಕಾದರೆ ನೀನೆ ಆಗು ಸನಿಮುಂಡೆ ಗಂಡ!"

ಸನ್ನಿವೇಶ ಲಘುತರವಾಗಿದ್ದು, ಇಬ್ಬರೂ ಧ್ವನಿಗ್ರಹಣಶಕ್ತಿಯುಳ್ಳವರಾಗಿದ್ದರೆ, ಚೆನ್ನಾಗಿ ನಗಬಹುದಾಗಿತ್ತೊ ಏನೊ? ಆದರೆ ಗುತ್ತಿ ತಲೆಯೆತ್ತಿ ತಿಮ್ಮಿಯ ಮುನಿದ ಮೋರೆಯನ್ನು ದುರುದುರು ನೋಡುತ್ತಾ "ನೋಡೂ, ತಿಮ್ಮಿ, ಹುಡುಗಾಟಿಕೆ ಮಾಡಬ್ಯಾಡ. ನಂಗೆ ಸಿಟ್ಟು ಬಂದ್ರೆ ನಿನ್ನ...." ಮಾತನ್ನು ಅರ್ಧಕ್ಕೆ ತಡೆದು ನಾಯಿಯ ಕಡೆತಿರುಗಿದನು.

ತಿಮ್ಮಿಗೆ ಆಗಲೆ ಅಳುಬರುವಂತಾಗಿತ್ತು. ಬಾವನ ಮುನಿದ ಮುಖ, ಇರಿವ ದೃಷ್ಟಿ, ಹಲ್ಲುಮಟ್ಟೆಕಚ್ಚಿದ್ದ ತುಟಿಗಳನ್ನು ಕಂಡು ಹೆದರಿಕೆಯೆ ಆಯಿತು. ಅದರಲ್ಲಿಯೂ ಕಗ್ಗಾಡು; ಕೂಗಿಕೊಂಡರೂ ನೆರವಿಗೆ ಬರಲು ಬೇರೆ ಯಾರೂ ಇಲ್ಲ; ಗುತ್ತಿಯ ದೊಣ್ಣೆ ಕತ್ತಿಗಳೂ ಆ ಸಂದರ್ಭದಲ್ಲಿ ಭಯಂಕರವಾಗಿಯೆ ಕಂಡುವು! ಅವನು 'ನಂಗೆ ಸಿಟ್ಟು ಬಂದ್ರೆ ನಿನ್ನ....' ಎಂದು ನಿಲ್ಲಿಸಿದ್ದರೂ ಅವಳು ತನ್ನ ಮನದಲ್ಲಿಯೆ 'ಕಡಿದು ತುಂಡು ಮಾಡಿಬಿಡ್ತೀನಿ!' ಎಂದು ವಾಕ್ಯವನ್ನು ಪೂರೈಸಿಕೊಂಡು, ಬಿಕ್ಕಿಬಿಕ್ಕಿ ಅಳತೊಡಗಿದಳು.

"ಯಾಕೇ ಅಳ್ತೀಯಾ? ಯಾರು ಸತ್ರೂ ಅಂತಾನೆ?" ಗುತ್ತಿಯ ಸಿಟ್ಟು ಬೆರಸಿದ ತಪ್ಪೊಪ್ಪಿಗೆಯ ದನಿ ಕೇಳಿತು?"

"ಮತ್ತೆ? ಒಬ್ಬಳ್ನೇ ಕಾಡಿಗೆ ಕರಕೊಂಡು ಬಂದು, ಕತ್ತರ್ಸಿ ಹಾಕ್ತೀನಿ ಅಂತೀಯಲ್ಲಾ?"

ಗುತ್ತಿಗೆ ಒಳಗೊಳಗೇ ನಗೆ ತಡೆಯಲಾಗಲಿಲ್ಲ. ಆದರೆ ನಕ್ಕರೆ ಸದರ ಕೊಟ್ಟ ಹಾಗಾಗುತ್ತದೆ ಎಂದು ತಲೆಯೆತ್ತದೆ " ಕತ್ತರ್ಸಿ ಹಾಕ್ತೀನಿ ಅಂತಾ ಯಾವಾಗ್ಲೆ ಹೇಳ್ದೆ? ಸುಳ್ಳಿ!" ಎನ್ನುತ್ತಾ ಹುಲಿಯನ ಮೆಯ್ಯ ಗಾಯದ ಪರಿಶೀಲನೆಯನ್ನೆ ಮುಂದುವರಿಸಿದನು.

ಬಾವ ಮೃದುವಾಗುತ್ತಿದ್ದುದನ್ನು ಅರಿತು, ತಿಮ್ಮಿ ಮತ್ತೂ ಗಟ್ಟಿಯಾಗಿ ಬಿಕ್ಕಿ ಅಳುತ್ತಾ "ನೀನು ಹೇಳ್ಲಿಲ್ಲಾ? ಕಡಿದುಹಾಕಿಬಿಡ್ತೀನಿ ಅಂತಾ?.... ಊ್ಞ, ಊ್ಞ, ಊ್ಞ.... ನಾ ಹೇಳ್ತೀನಿ ಅತ್ತೆಮ್ಮನ ಹತ್ರ.... ಊ್ಞ, ಊ್ಞ,ಊ್ಞ...."

"ಅಯ್ಯೋ ನಿನ್ನಾ! ಒಳ್ಳೆ ಗಿರಾಚಾರ ಆಯ್ತಲ್ಲಾ! ಸುಮ್ನೆ ಸಿಟ್ಟಿಗೆ ಹೇಳಿದ್ನೇ ಬದ್ದಾ ಅಂದುಕೊಂಡು ರಂಪಾ ಮಾಡ್ತೀಯಲ್ಲೇ! ಹ್ಹಿಹ್ಹಿಹ್ಹಿಹ್ಹಿ! ಪುಣ್ಯಾತಗಿತ್ತೀ, ತೆಪ್ಪಾಯ್ತು ಅಂತೀನೆ, ಸುಮ್ಮಕಿರು." ಎನ್ನುತ್ತಾ ಗುತ್ತಿ ತಲೆಯೆತ್ತಿ, ದೂರ ನಿಂತಿದ್ದ ತಿಮ್ಮಿಯ ಮುಖವನ್ನು ನಗೆಗೂಡಿ ನೋಡಿ "ಅಲ್ಲೇ? ಏನೋ ಒಂದು ಮದೇಮಾಡಿಕೊಳ್ಳಾನ, ಒಳ್ಳೆ ಚೆಲುವಿ ಹೆಣ್ತಿ ಆಗ್ತಾಳೆ ಅಂತಾ ಹಾರಿಸಿಕೊಂಡು ಬಂದ್ರೆ, ಕಾಡಿಗೆ ಕರಕೊಂಡು ಬಂದು ಕತ್ತರ್ಸಿ ಹಾಕ್ತೀನಿ ಅಂತಾ ಹೇಳ್ದೆ ಅಂತೀಯಲ್ಲಾ? ನೀನೊಂದು ಮೂಳಿ, ಬಿಡು! ತಮಾಸೆಗಿಮಾಸೆ ಒಂದೂ ಅರ್ತಾನೆ ಆಗಾದಿಲ್ಲ ನಿಂಗೆ.... ಹೋಗ್ಲಿ, ಬಾ ಇಲ್ಲಿ, ನನ್ನ ದೊಣ್ಣೆ, ಕತ್ತಿ, ಕಂಬ್ಳಿ ಹಿಡ್ಕಾ. ನಾ ನಾಯಿನ ಎತ್ಕೊಂಡಾರು ಬರ್ತಿನಿ."

"ಆಗ ಮಾತ್ರ ಉರಿಮಾರೆ ಮಾಡಿಕೊಂಡಿದ್ದೀ? ಈಗ ನಗ್ನೆಗ್ತಾ ಮಾತಾಡ್ತೀಯ! ನಂಗೆ ಅರ್ಥಾಗದಿಲ್ಲೇನು ನಿನ್ನ ತಮಾಸೆ?" ಎಂದು ಮೂದಲಿಸುವಂತೆ ನುಡಿದು, ತಿಮ್ಮಿ ಗುತ್ತಿಯ ದೊಣ್ಣೆ ಕತ್ತಿಕಂಬಳಿಗಳನ್ನು ಎತ್ತಿ ಹೊತ್ತುಕೊಂಡಳು.

ಗುತ್ತಿ ನಾಯಿಯ ಕುತ್ತಿಗೆಗೆ ಒಂದು ಕೈ, ಬಾಲದ ಹಿಂದಕ್ಕೆ ಒಂದು ಕೈ ಕೊಟ್ಟು ಅದನ್ನೆತ್ತಿ ಎದೆಗವಚಿಕೊಂಡು ಹೊರಟನು. ಹುಲಿಯನನ್ನು ಹೊತ್ತುಕೊಂಡು ಹೋಗುವುದು ಗುತ್ತಿಯಂಥ ಬಲಿಷ್ಠನಿಗೂ ಸುಲಭವಾಗಿರಲಿಲ್ಲ. ಕಾಡಿನಲ್ಲಿ ಅಲ್ಲಲ್ಲಿ ಇಳಿಸಿ, ದಣಿವಾರಿಸಿಕೊಂಡು, ದಾರಿಗೆ ಸರಲು ಅಡ್ಡ ಬಂದೆಡೆಯಲ್ಲೆಲ್ಲ ಅದಕ್ಕೆ ನೀರು ಕುಡಿಸಿ, ತಲೆಗೂ ಸ್ವಲ್ಪ ನೀರು ಚಿಮುಕಿಸಿ ತಟ್ಟಿ, ತಣ್ಣಗೆ ಮಾಡಿ, ಲಕ್ಕುಂದದ ಸಮೀಪಕ್ಕೆ ಬಂದರು.

ಉಂಡು ತಿಂದು ಕುಡಿದು, ಒಡವೆ ವಸ್ತ್ರ ತೊಟ್ಟು ಉಟ್ಟು, ಮನೆಯಲ್ಲಿ ಸುಖವಾಗಿ ಮೆರೆಯುತ್ತಿರಬಹುದಾಗಿದ್ದ ಮದುಮಗಳು ತಿಮ್ಮಿಗೆ ನಾಯಿ ಹೊತ್ತ ಬಾವನ ಹಿಂದೆ ಅವನ ಕತ್ತಿ ದೊಣ್ಣೆ ಕಂಬಳಿ ಹೊತ್ತುಕೊಂಡು ಮಲೆಗಳಲ್ಲಿ ಅಲೆಯುವ ಪ್ರಣಯಸಾಹಸ ಪ್ರಾರಂಭದಲ್ಲಿಯೆ ಒಗರಾಗತೊಡಗಿತ್ತು. ಅದರ ಜೊತೆಗೆ ಅವರು ಲಕ್ಕುಂದದ ಹಳೆಪೈಕದ ಸೇಸನಾಯ್ಕರ ಮನೆಯ ಸಮೀಪದ ಕಾಡಿಗೆ ಬಂದಾಗ ಗುತ್ತಿ "ತಿಮ್ಮಿ, ನೀನಿಲ್ಲೆ ಹುಳುವಿನಾಗೆ ಅಡಗಿಕೊಂಡಿರು. ನಾ ಸೇಸನಾಯ್ಕರ ಮನೆಗೆ ಹೋಗಿ ಹುಲಿಯಗೆ ಒಂದೀಟು ಗಂಜಿ ಗಿಂಜಿ ಹಾಕಿಸಿ, ಮದ್ದುಗಿದ್ದು ಮಾಡಿ, ಹುಸಾರು ಮಾಡಿಕೊಂಡು ಬತ್ತೀನಿ. ಒಬ್ಬಳೆ ಅಂತಾ ನೀ ಏನೂ ಹೆದರಬ್ಯಾಡ. ಹೊಗೆ ಕಾಣ್ತದೆ ನೋಡು.... "ಇಲ್ಲೆ ಅದೆ ಅವರ ಮನೆ... ನಾಯಿ ಕೂಗಾದು ಕೇಳಿಸ್ತದೆ ನೋಡು.... ಕೇಳಿದ್ಯಾ? ಕೋಳಿ ಕೂಗಾದೂ ಕೇಳಿಸ್ತದೆ!" ಎಂದಾಗ ತಿಮ್ಮಿಯ ಹೃದಯದಲ್ಲಿ ಸಿಟ್ಟೂ ಎಣೆಯಾಡಿದುವು.

“ಅಡಗಿಕೊಂಡರಾಕೆ ನಾ ಏನೂ ಕದ್ದುಕೊಂಡು ಬಂದಿಲ್ಲ! ನಾನೂ ಬತ್ತೀನಿ. ನಿನ್ನ ಸೇಸನಾಯ್ಕರು, ಸೇಸನಾಯ್ಕರ ಮನೆ, ನಾ ಕಾಣದಿದ್ದಲ್ಲ! ನಂಟರ ಮನೆಗೆ ಕರಕೊಂಡು ಹೋಗ್ತಿದ್ದೀನಿ ಅಂತ ಹೇಳು, ಕೇಳಿದ್ರೆ. ನಿನ್ನ ಸ್ವಾದರತ್ತೆ ಮಗಳಲ್ಲೇನು ನಾನು?…. ನಾ ಒಬ್ಬಳೆ ಇಲ್ಲಿರಾಕೆ ಹೆದರಿಕೆ.”

ತಾನು ಚಿಕ್ಕಂದಿನಿಂದಲೂ ಅರಿತಿದ್ದ ಹುಡುಗಿ ಎಷ್ಟು ಬದಲಾಯಿಸಿದ್ದಾಳೆಂದು ಗುತ್ತಿಗೆ ಆಶ್ಚರ್ಯವಾಯಿತು, ತಿಮ್ಮಿಯ ಮಾತು ಕೇಳಿ, ತಲೆಯೆತ್ತಿ, ನೋಟನೆಟ್ಟು ನೋಡಿದನು ಅವಳ ಕಡೆ. ಅವಳು ಚಿಕ್ಕ ಹುಡುಗಿಯಲ್ಲ ತರುಣಿ ಎಂಬುದನ್ನು ಸಾರುವಂತಿತ್ತು ಅವಳ ಸರ್ವಾಂಗ ಭಂಗಿ. 'ನಾನು ಇವಳಿಗೆ ಅಧೀನವಾಗದಿದ್ದರೆ ಇವಳು ನನಗೆ ಅಧೀನವಾಗುವ ಚೇತನವಲ್ಲ' ಎಂಬರ್ಥದ ಒಂದು ಭಾವಸಂಚಾರವಾಗಿ ಗುತ್ತಿ ಬೇಡಿಕೊಳ್ಳುವ ದನಿಯಲ್ಲಿ “ನಿಂಗಿಲ್ಲಿ ಹೆದರಿಕೆ ಆದರೆ ಅವರ ಮನೆ ಹತ್ರಕ್ಕೇ ಬಾ. ಆದರೆ, ತಿಮ್ಮಿ, ನಾವು ರಾತಾರಾತ್ರಿ ಓಡಿ ಬಂದೀವಿ. ನಮ್ಮನ್ನ ಹುಡುಕಕ್ಕೆ ಗೌಡರು ಜನಾ ಅಟ್ಟದೆ ಬಿಡ್ತಾರೇನು? ಪೋಲೀಸರಿಗೂ ಹೇಳಿದ್ರೂ ಹೇಳಿದ್ರೇ! ನಾವೆಲ್ಲಾರು ಸಿಕ್ಕಿಬಿದ್ರೆ ಚಮಡಾ ಸುಲ್ದು ಬಿಡ್ತಾರೆ. ನಂದಂತೂ ಇರಲಿ ಬಿಡು; ನಿನ್ನೂ ಹೊಡೆದೂ ಬಡಿದೂ ಎಳಕೊಂಡು ಹೋಗಿ ಆ ಕಿಲಸ್ತರ ಬಚ್ಚಗೆ ಗಂಟುಹಾಕದೆ ಬಿಡಾದಿಲ್ಲ! ಏನು? ಗೊತ್ತಾತೇನು ನಾ ಹೇಳಿದ್ದು?”

ಗುತ್ತಿ ವರ್ಣಿಸಿದ್ದನ್ನು ಕೇಳಿ, ತಿಮ್ಮಿ ಹೌಹಾರಿ ಸಂಪೂರ್ಣ ಶರಣಾದಳು: “ನೀ ಹೇಳ್ದಾಂಗೆ ಕೇಳ್ತೀನಿ, ಬಾವ!” ಎಂದು ಅಳುದನಿಯಲ್ಲಿ ಮುಂದುವರಿದಳು: ನನ್ನ ಎಲಕೊಂಡು ಹೋಗಿ ಆ…. ಆ ಸುಡುಗಾಡು ಮುಂಡೆ ಮಗನಿಗೆ..” ಮುಂದೆ ಬಾಯಿಬಿಟ್ಟು ಹೇಳಲಾರದೆ ಬಿಕ್ಕತೊಡಗಿದಳು.

“ನಿಂಗ್ಯಾಕೆ ಆ ಹೆದರಿಕೆ? ನಾ ಇದ್ದೀನಿ!” ಗುತ್ತಿ ಧೈರ್ಯ ಹೇಳಿ, ಸೇಸನಾಯಕನ ಮನೆಯ ಕೊಟ್ಟಿಗೆಯವರೆಗೂ ಅವಳನ್ನು ಕರೆದೊಯ್ದು, ಅಲ್ಲಿ ಒಂದು ಮಟ್ಟಿನ ಹಿಂದೆ ಕುಳಿತಿರುವಂತೆ ಹೇಳಿ, ತಾನು ಹುಲಿಯನೊಡನೆ ಮನೆಯ ಕಡೆಗೆ ಹೋದನು.

ನಾಯಿಗಳು ಬೊಗಳಿ ಗಲಾಟೆ ಮಾಡಿದ್ದನ್ನು ಕೇಳಿ, ಕಾಡಿ ಬಾಗಿಲಲ್ಲಿ ಇಣುಕಿದಳು ಹುಲಿಯನ್ನು ಹೊತ್ತು ಬರುತ್ತಿದ್ದ ಗುತ್ತಿಯನ್ನು ಗುರುತಿಸಿ ಬೆರಗಾದಳು. ದಾರಿಯಲ್ಲಿ ಬರುತ್ತಿದ್ದಾಗ ಹುಲಿಯ ಒಂದು ಕುರ್ಕನನ್ನು ಅಟ್ಟಿಸಿಕೊಂಡು ಹೋಗಿ ಅದರ ಮೇಲೆ ಬಿದ್ದಿತೆಂದೂ, ಅದಕ್ಕೂ ಇದಕ್ಕೂ ಜಟಾಪಟಿಯಾಗಿ ಹುಲಿಯ ಗಾಯಗೊಂಡಿತೆಂದೂ ಗುತ್ತಿ ಕತೆ ಹೇಳಿದ ಮೇಲೆ, ಕಾಡಿ ಅರಸಿನ ಕಾಡುಜೀರಿಗೆ ಅರೆದು ಕುದಿಸಿ, ಗಾಯಗಳಿಗೆ ಹೆಚ್ಚುವಂತೆ ಮದ್ದು ಮಾಡಿಕೊಟ್ಟು “ಕುರ್ಕನ ಉಗುರಿನ ನಂಜು ಹೊಡೀತದೆ ಕಣೋ?” ಎಂದು ಭರವಸೆ ನೀಡಿದಳು. ಆ ಮೇಲೆ ಸ್ವಲ್ಪ ಗಂಜಿಯನ್ನೂ ತಂದು ಕುಡಿಸಲು ಕೊಟ್ಟಳು. ಗಂಜಿ ಹೊಟ್ಟೆಗೆ ಹೋದಮೇಲೆ ಹುಲಿಯ ನಿಜವಾಗಿಯೂ ಸ್ವಲ್ಪ ಹುಷಾರಾಗಿ ಎದ್ದು ನಿಂತಿತು. ಗಾಯಕ್ಕೆ ಹಚ್ಚಿದ ಮದ್ದಿನ ಉರಿಯನ್ನು ತಾಳಲಾರದೆ ಅದು ಮೈನೆಕ್ಕಿಕೊಳ್ಳಲು ಪ್ರಯತ್ನಿಸಿದಾಗ ಗುತ್ತಿ ಒಂದು ಏಟುಕೊಟ್ಟು ಸುಮ್ಮನಿರಿಸಿದನು. ಕೊನೆಯದಾಗಿ, ಕಾಡಿ ಇನ್ನೂ ಒಂದು ಉಪಾಯ ಸೂಚಿಸಿದಳು, ಸ್ವಲ್ಪ ಹೆಂಡ ಕುಡಿಸಿದರೆ, ಹುಮ್ಮಸ್ಸು ಬಂದ ಹಾಗಾಗಿ, ಲಕ್ಕುಂದದಿಂದ ಸಿಂಬಾವಿಯವರೆಗೂ ನಾಯಿಯನ್ನು ಹೊರುವ ತೊಂದರೆ ತಪ್ಪುತ್ತದೆ ಎಂದು. ಗುತ್ತಿಗೂ ಹುಲಿಯನನ್ನು ಹೊತ್ತು ಸಾಕಾಗಿತ್ತು. ಅದನ್ನು ಲಕ್ಕುಂದದಲ್ಲಿಯೆ ಕಾಡಿಯ ಬಳಿ ಶುಶ್ರೂಸೆಗೆ ಬಿಟ್ಟು ಹೋಗುವ ಆಲೋಚನೆಯನ್ನೂ ಮಾಡಿದ್ದನು. ಆದ್ದರಿಂದ,

ನಾಯಿ ನಡದೇ ಸಿಂಬಾವಿಗೆ ತನ್ನೊಡನೆ ಬರುವಂತಾದರೆ ಆಗಲಿ ಎಂದು, ಕಾಡಿ ಕೊಟ್ಟ ಹೆಂಡವನ್ನೂ ಕುಡಿಸಿದನು. ಹುಲಿಯನೂ ತನಗೆ ಪೂರ್ವಾಭ್ಯಾಸವಿದ್ದಿತೊ ಎಂಬಂತೆ ಲೊಚಗುಟ್ಟುತ್ತ ಮದ್ಯಪಾನ ಮಾಡಿತು.

ಹೆಂಡ ಕುಡಿಸಿದ ಮೇಲೆ ಒಂದು ಪವಾಡವೆ ನಡೆದುಹೋಯಿತು. ಹುಲಿಯ ತುಂಬ ಚಟುವಟಿಕೆಯಾಯಿತು. ಗುತ್ತಿ ಸಂತೋಷಾತಿಶಯದಿಂದ "ಗೆದ್ದೆ ಕಣ್ರೋ! ನಿಮ್ಮ ಹಸ್ತಗುಣ!.... ನಾ ಬತ್ತೀನ್ರೋ, ಕಾಡಮ್ಮ." ಎಂದು ತನ್ನ ರೀತಿಯಲ್ಲಿ ವಂದಾನರ್ಪಣೆ ಮಾಡಿ ಬೀಳ್ಕೊಂಡನು, ತನ್ನೊಡನೆ ಚಟುವಟಿಕೆಯಿಂದ ನಡೆದು ಬರುತ್ತಿದ್ದ ಹುಲಿಯನನ್ನು ಕೂಡಿ.

ಹುಲಿಯನನ್ನು ಮೆಲ್ಲಗೆ ನಡೆಸಿಕೊಂಡು ತಿಮ್ಮಿಯೊಡನೆ ಗುತ್ತಿ ಸಿಂಬಾವಿಯ ಹೊಲೆಗೇರಿಯ ತಮ್ಮ ಬಿಡಾರವನ್ನು ಪ್ರವೇಶಿಸಿದಾಗ ಆಗಲೆ ಬಿಸಿಲೇರಿತ್ತು. ಅವನ ತಾಯಿ ಗಿಡ್ಡಿಗೆ ಅನಿರೀಕ್ಷಿತವಾಗಿ ನೆಂಟರ ಮನೆಗೆ ಆಗಮಿಸಿದ್ದ ತನ್ನ ಸೋದರ ಸೊಸೆಯನ್ನು ಕಂಡು ಸಂತೋಷವಾದರೂ ಸ್ವಲ್ಪ ಸೋಜಿಗವೂ ಆಯಿತು. "ಏನೋ? ತಿಮ್ಮಿ ಒಬ್ಬಳೆ ಬಂದಿದಾಳೇನೋ ನಿನ್ನ ಸಂಗಡ?" ಎಂದು ತಾಯಿ ಕೇಳಿದ ಪ್ರಶ್ನೆಯ ಧ್ವನಿಯನ್ನರಿತ ಗುತ್ತಿ ಅವಳ ಕಿವಿಯಲ್ಲಿ ಪಿಸು ಮಾತಾಡಿದಮೇಲೆ, ಗಿಡ್ಡಿ ತುಸು ಭೀತಳಾದರೂ ಅದನ್ನು ತೋರಗೊಡಲಿಲ್ಲ.

ಗುತ್ತಿಯ ಅಪ್ಪ ಕರಿಸಿದ್ದ ಮನೆಯಲ್ಲಿರಲಿಲ್ಲ; ಕೆಲಸಕ್ಕೆ ಹೋಗಿದ್ದನು.

"ಅಯ್ಯ ಹೇಳಿ ಕಳಿಸಿದ್ರೋ, ದೊಳ್ಳಯ್ಯನ ಕೈಲಿ, ನೀ ಬಂದಿಯೋ ಇಲ್ಲೋ ಕೇಳಿಕೊಂಡು ಬಾ ಅಂತ. ಯಾಕೋ ಏನೊ? ಗೊತ್ತಿಲ್ಲ. ಬ್ಯಾಗ ಮನೀಗೆ ಹೋಗಿ ಅವರನ್ನ ನೋಡು.

ತಾಯಿ ತಿಳಿಸಿದೊಡನೆಯ ಗುತ್ತಿ ಅವಸರವಸರವಾಗಿ 'ಬಿಡಾರ'ದಿಂದ 'ಮನೆ'ಗೆ ಓಡಿದನು. ಅವನಿಗೆ ಭರಮೈಹೆಗ್ಗಡೆಯವರ ಮನೋಧರ್ಮದ ಉಗ್ರಪರಿಚಯ ಚೆನ್ನಾಗಿಯೆ ಇತ್ತು.

ಹಿಂದಿನ ದಿನವೆ ಕಾಗದಕ್ಕೆ ಉತ್ತರ ತೆಗೆದುಕೊಂಡು ಬರಬೇಕಾಗಿದ್ದ ಗುತ್ತಿ ಒಂದು ದಿನ ತಡವಾಗಿ ಬಂದದ್ದು ಮಾತ್ರವಲ್ಲದೆ ಹೊತ್ತಾಗಿಯೂ ಬಂದದ್ದಕ್ಕೆ ಭರಮೈಹೆಗ್ಗಡೆ ಅವನನ್ನು ಅವರ ಬೈಗುಳದ ನಿಘಂಟಿನಿಂದ ಆಯ್ದು ತೆಗೆದ ಪದಗಳನ್ನೆಲ್ಲ ಪ್ರಯೋಗಿಸಿ ಚೆನ್ನಾಗಿ ತರಾಟೆಗೆ ತೆಗೆದುಕೊಂಡರು. ಗುತ್ತಿ ಹಳೆಮನೆ ದೊಡ್ಡ ಹೆಗ್ಗಡೆಯವರು ಕಾಗದ ಕೊಡಲಿಲ್ಲವೆಂದೂ, ಕೊಟ್ಟಿದ್ದರೆ ಆವತ್ತೆ ಹೊರಟು ಬರುತ್ತಿದ್ದೆನೆಂದೂ, ತಾನು ಹೊತ್ತಾಗಿ ಬಂದುದಕ್ಕೆ ಕಾರಣ ಹೇಳಲು ಹೋಗಿ ಮತ್ತಷ್ಟು ಅನ್ನಿಸಿಕೊಂಡನು.

"ಮತ್ತ್ಯಾಕೆ ನಿಂತಿರೋದು? ಹೋಗಬಹುದು ತಳವಾರರ ಸವಾರಿ!" ಮಾತು ಮುಗಿಸಿದ ಮೇಲೆ ಹೆಗ್ಗಡೆಯವರು ತಲೆಬಗ್ಗಿಸಿ ಏನೊ ಲೆಕ್ಕ ಬರೆಯುತ್ತಿದ್ದವರು ಮತ್ತೆ ತಲೆಯೆತ್ತಿ ನೋಡಿ, ಇನ್ನೂ ನಿಂತೇ ಇದ್ದ ಗುತ್ತಿಗೆ ವ್ಯಂಗ್ಯವಾಗಿ ಭರ್ತ್ಸನೆ ಮಾಡುವಂತೆ ಹೇಳಿದರು.

ಆದರೂ ಗುತ್ತಿ ಹಂದದೆ ನೆಲ ನೋಡುತ್ತಾ ನಿಂತನು.

ತಾನು ಒಡೆಯರ ಅನುಮತಿಯಿಲ್ಲದೆ ಮಾಡಿದ್ದ ಸಾಹಸವನ್ನು ಅವರಿಗೆ ತಿಳಿಸಲೋ ಬೇಡವೊ? ತಿಳಿಸಿದರೆ ಏನು ಹೇಳುತ್ತಾರೊ? ಇಂದಾಗಲಿ ನಾಳೆಯಾಗಲಿ, ತಾನಾಗಲಿ ತನ್ನ ತಂದೆಯಾಗಲಿ, ಒಡೆಯರಿಗೆ ವಿಷಯವನ್ನು ತಿಳಿಸಿಯೆ ತೀರಬೇಕಾಗುತ್ತದೆ. ಏಕೆಂದರೆ ಅವರ ಒಪ್ಪಿಗೆ, ಬೆಂಬಲ, ಧನ ಸಹಾಯ, ಕಡೆಗೆ ಜನಸಹಾಯ ಇವುಗಳಿಲ್ಲದೆ ಬೆಟ್ಟಳ್ಳಿ ಕಲ್ಲಯ್ಯಗೌಡರಂಥವರಿಂದ ಅವರ ಜೀತದಾಳೊಬ್ಬಳನ್ನು ದಕ್ಕಿಸಿಕೊಳ್ಳುವುದು ಅಸಾಧ್ಯ. ಆದರೆ ಅವಳನ್ನು ಹಾರಿಸಿಕೊಂಡು ಬರುವ ಮುನ್ನವೆ ಒಡೆಯರಿಗೆ ಒಂದು ಮಾತು ತಿಳಿಸಿದ್ದರೆ ಅದರ ಹೊಣೆಗಾರಿಕೆಯ ಬಹುಪಾಲು ಅವರದ್ದೆ ಆಗಿರುತ್ತಿತ್ತು. ಈಗ ಒಡೆಯರಿಗಂತೂ ಇರಲಿ, ತನ್ನ ಸ್ವಂತ ತಾಯಿ ತಂದೆಯರಿಗೇ ಗೊತ್ತಿಲ್ಲದ ರೀತಿಯಲ್ಲಿ ಕೆಲಸಮಾಡಿಬಿಟ್ಟದ್ದೇನೆ!.... ಆಲೋಚಿಸಿದಷ್ಟು ಆಳವಾಗಿ ತೋರ ತೊಡಗಿತ್ತು, ತಾನು ಹಾಯಲು ಇಳಿದಿದ್ದ ಹೊಳೆ. ಆದ್ದರಿಂದಲೆ ಒಡೆಯರ ಮೂದಲಿಕೆಯ ಉಕ್ತಿಗೆ ಯಾವ ಪ್ರತಿಕ್ರಿಯೆಯನ್ನೂ ತೋರಲಾರದೆ ಗುತ್ತಿ ಹಂದದೆ ನೆಲ ನೋಡುತ್ತಾ ನಿಂತದ್ದು.

ಹೆಗ್ಗಡೆ ಮತ್ತೊಮ್ಮೆ ತಲೆಯೆತ್ತಿ "ಯಾಕೋ? ಕಲ್ಲು ನಿಂತ್ಹಾಂಗೆ ನಿಂತೀಯ? ಮತ್ತೂ ಏನಾದ್ರೂ ಬೇಕೋ? ಕನಾತಿ? ಬರಿ ಬಾಯಲ್ಲಿ ಬೈದಿದ್ದು ಸಾಲದು ಅಂತಾ ಕಾಣ್ತದೆ!" ಎಂದು ಗದರಿಸಿದರು.

"ನಿಮ್ಮ ಹತ್ರ ಒಂದು ಇಸಿಯ ಕೇಳಾನ ಅಂತಾ...." ಎಂದು ಗುತ್ತಿ ಕಿವಿಯ ಹಿಂದೆ ತಲೆ ಕರೆದುಕೊಳ್ಳುತ್ತಾ ಮುಖವೆತ್ತಿದನು.

"ಏನೋ ಅದು? ಬೊಗಳೋ?"

"ನನ್ನ.... ಸ್ವಾದರ ಮಾವನ ಮಗಳು ತಿಮ್ಮೀನ...." ತಲೆ ಕೆರೆದುಕೊಳ್ಳುತ್ತಾ ಇದ್ದಬಿದ್ದ ಹಲ್ಲುಗಳನ್ನೆಲ್ಲಾ ಪ್ರದರ್ಶಿಸುತ್ತಾ ಗುತ್ತಿ ಇನ್ನೂ ಮುಂದುವರಿಯುವಷ್ಟರಲ್ಲಿ ಭರಮೈಹೆಗ್ಗಡೆ ಕೈಯಲ್ಲಿ ಹಿಡಿದಿದ್ದ ಲೆಕ್ಕದ ಪುಸ್ತಕವನ್ನು ದೂರ ನೂಕಿ, ತಾಟಸ್ಥ್ಯವನ್ನೆಲ್ಲ ಆಚೆಗೆ ತಳ್ಳಿ:

"ನಿನಗೇನು ಸೊಕ್ಕೇನೊ? ತಲೆಗಿಲೆ ಕೆಟ್ಟಿದೆಯೋ? ಅವರ ಸಾಲಾನೆಲ್ಲ ತೀರಿಸಿ, ಅವಳಿಗೆ ಅಷ್ಟೊಂದು ತೆರಾ ಕೊಟ್ಟು, ನಾ ನಿನಗೆ ಮದೇಮಾಡ್ಸಿ, ನನ್ನ ಮನೇ ಹಾಳು ಮಾಡಿಕೊಳ್ಳಲೇನೊ? ನಿನಗೆ, ನಿನ್ನ ಅಪ್ಪಗೆ, ಕೊಟ್ಟ ಸಾಲಾನೇ ಕುತ್ತರ ಬೆಳೆದ್ಹಾಂಗೆ ಬೆಳೆದು ನಿಂತದೆ! ಅದನ್ನೇ ನೀವು ತೀರಿಸಾದು ಯಾವಾಗಲೋ?.... ಹೇಳ್ತೀನಿ, ನೋಡು. ನಿಂಗೆ ಅವಳನ್ನ ಮದೇ ಮಾಡಿಕೊಳ್ಳಲೇಬೇಕು ಅಂತಾ ಅಷ್ಟೊಂದು ತೆವಲು ಹತ್ತಿದ್ರೆ, ಬೆಟ್ಟಳ್ಳಿ ಗೌಡ್ರಿಂದಲೆ ಸಾಲಾ ತಗೊಂಡು, ನನ್ನ ಸಾಲಾನೆಲ್ಲ ತೀರ್ಸಿ, ಅವರ ಕೇರೀಗೇ ಹೋಗಿ, ಅವಳನ್ನೇ ಮದೇ ಮಾಡಿಕೊಂಡು ಸುಕಾಗಿರು! ಯಾರು ಬ್ಯಾಡ ಅಂತಾರೆ?" ಎಂದು, ಮಳೆ ಹೊಯ್ದಂತೆ ಮಾತಾಡಿ, ಸಿಟ್ಟಿಗೆ ಮೈಕೆರೆದುಕೊಳ್ಳುವಂತೆ, ಶಾಲಿನೊಳಗೆ ಕೈಹಾಕಿಕೊಂಡು ತುರಿಗಜ್ಜಿಯ ದೇಹಭಾಗಗಳನ್ನು ಪರಪರನೆ ತುರಿಸಿಕೊಳ್ಳಲಾರಂಭಿಸಿದರು.

ಗುತ್ತಿ ಒಡೆಯರಿಂದ ಬೇರೆ ರೀತಿಯ ಮಾತನ್ನು ನಿರೀಕ್ಷಿಸಿದರು. ಒಡೆಯರಿಗೆ ದುಡಿಯಲು ಮತ್ತೊಂದು ಹೆಣ್ಣಾಳು ದೊರೆಯುವುದರಿಂದ ತನ್ನ ಪ್ರಯತ್ನಕ್ಕೆ ಪ್ರೋತ್ಸಾಹ ಲಭಿಸುತ್ತದೆ ಎಂದು ಹಾರೈಸಿದ್ದನು. ಅಲ್ಲದೆ ಆಳುಗಳ

ವಿಚಾರಕ್ಕಾಗಿಯೆ ಹಿಂದಿನಿಂದಲೂ ಸಿಂಬಾವಿಗೂ ಬೆಟ್ಟಳ್ಳಿಗೂ ಒಂದು ಸ್ಪರ್ಧಾ ಮನೋಭಾವ ಬೆಳೆದು, ಕೆಲವೊಮ್ಮೆ ಮನಸ್ತಾಪಕ್ಕೂ ಜಗಳಕ್ಕೂ ಕೂಡ ಕಾರಣವಾಗಿತ್ತುಬಿಟ್ಟಿತ್ತು. ನನ್ನ ತಂದೆ ಕರಿಸಿದ್ದಗೆ ಬೆಟ್ಟಳ್ಳಿ ಕೇರಿಯ ದೊಡ್ಡಬೀರನ ತಂಗಿ ಗಿಡ್ಡಿಯನ್ನು ತಂದಾಗಲೆ ಬೆಟ್ಟಳ್ಳಿ ಕಲ್ಲಯ್ಯಗೌಡರಿಗೂ ಭರಮೈಹೆಗ್ಗಡೆಯ ತಂದೆ ಸಿಂಬಾವಿಯ ದಿವಂಗತ ದುಗ್ಗಣ್ಣಹೆಗ್ಗಡೆಯವರಿಗೂ ಹೊಡೆದಾಟವಾಗುವುದರಲ್ಲಿತ್ತಂತೆ ಎಂಬುದು ಬಿದ್ದಿತ್ತು ಗುತ್ತಿಯ ಕಿವಿಗೆ, ಪೂರ್ವೇತಿಹಾಸರೂಪದಲ್ಲಿ. ಆಗ ಕಲ್ಲೂರು ಸಾಹುಕಾರ ಮಂಭಟ್ಟರ ಮಧ್ಯಸ್ತಿಕೆಯಲ್ಲಿ ಪಂಚಾಯಿತಿ ನಡೆದು, ಸಿಂಭಾವಿಯಕೇರಿಯ ಗುತ್ತಿಯ ಅಪ್ಪ ಕರಿಸಿದ್ದನ ತಂಗಿ ಸೇಸಿಯನ್ನು ಬೆಟ್ಟಳ್ಳಿ ಕೇರಿಯ ತಿಮ್ಮಿಯ ಅಪ್ಪ ದೊಡ್ಡಬೀರನಿಗೆ ಮದುವೆ ಮಾಡಿಸಿ, ಆಳಿಗೆ ಆಳು ಬದಲು ಬಂದು ತುಂಬಿಕೊಳ್ಳುವಂತೆ ಮಾಡಿ, ಎರಡು ಮನೆತನಗಳಿಗೂ ರಾಜಿ ಮಾಡಿಸಿದ್ದರಂತೆ. ಎರಡು ಮನೆತನಗಳೂ ಅಂತಹ ಜಗಳಗಳೂ ಅಂತಹ ರಾಜಿಗಳೂ ಅನೇಕ ಸಾರಿ ಅನೇಕ ಕಾರಣಗಳಿಗಾಗಿ ನಡೆದಿದ್ದುವು. ಎರಡು, ಮನೆತನಗಳಿಗೂ ಪರಸ್ಪರ ನೆಂಟಸ್ತಿಗೆ, ಹೋಗಿ ಬರುವುದು, ಮಾತುಕತೆ ಎಂದಿನಂತೆ ನಡೆದುಕೊಂಡೇ ಬರುತ್ತಿದ್ದರೂ ಅದೆಲ್ಲ ಮೇಲುಮೇಲಿನ ವಿಷಯವಾಗಿತ್ತು; ಒಳಗೊಳಗೆ, ಅಂತರಂಗದಲ್ಲಿ, ಪರಸ್ಪರ ಸ್ಪರ್ಧಾಭಾವವೂ ಪ್ರತಿಷ್ಠೆಯ ಪೈಪೋಟಿಯೂ ಗವೆಯುತ್ತಿತ್ತು. ಒಡೆಯರ ಕೋಪೋಕ್ತಿಯ ಹೊಗೆಯ ಆ ಹಳೇಯ ಜಿದ್ದಿನ ಕಿಡಿಗಳೆ ಆಡುತ್ತಿದ್ದುವು ಎಂಬುದನ್ನು ಗುತ್ತಿ ಗ್ರಹಿಸಲಿಲ್ಲ. ಜೊತೆಗೆ, ತಮ್ಮ ಸ್ವಂತ ಮದುವೆಯ ಸಮಸ್ಯೆಯೆ ದಿನದಿನಕ್ಕೂ ಹೆಚ್ಚು ಹೆಚ್ಚು ಕಗ್ಗಂಟಾಗುತ್ತಿದ್ದು, ಅನಿಶ್ಚಯ ಪರಿಸ್ಥಿತಿಯಲ್ಲಿರುವಾಗ ಈ ಹಾಳು ಹೊಲೆಯ ತನ್ನ ಮದುವೆಯ ಕೆಂಜಿಗೆ ಹಿಂಡಿಲನ್ನು ಕಡಿದು ನನ್ನ ಮೇಲೆ ತಳ್ಳುತ್ತಿದ್ದಾನಲ್ಲಾ ಎಂಬ ಮದುವೆಯ ಕೆಂಜಿಗೆ ಹಿಂಡಿಲನ್ನು ಕಡಿದು ತನ್ನ ಮೇಲೆ ತಳ್ಳುತ್ತಿದ್ದಾನಲ್ಲಾ ಎಂಬ ಸಿಡುಕೂ ಅವರ ಸಿಟ್ಟಿನ ನುಡಿಗಳಿಗೆ ಕಾರಣವಾಗಿತ್ತು.

ಗುತ್ತಿಗೆ ತಟಕ್ಕನೆ ದಿಕ್ಕುಗೆಟ್ಟಂತಾಯಿತು. ಒಡೆಯರ ಬಲದ ಮತ್ತು ಬೆಂಬಲದ ಧೈರ್ಯದಿಂದ ಯಾವ ಸಾಹಸಕ್ಕೆ ಕೈಹಾಕಿದ್ದನೊ, ಯಾವ ಸಾಹಸವನ್ನು ಕೆಚ್ಚಿನಿಂದಲೂ ಹಿಗ್ಗಿನಿಂದಲೂ ಸಾಧಿಸಿಯೆ ಬಿಟ್ಟಿದ್ದನೊ ಅದು ಈಗ ಅವಿವೇಕಸಾಹಸದಂತೆ ಅಪಾಯಕಾರಿ ತೋರತೊಡಗಿ, ಅವನ ಪ್ರಾಣದಲ್ಲಿ ಒಂದು ಅವ್ಯಕ್ತ ಭಯಸಂಚಾರವಾಯಿತು; ಮೂಕ ದುಃಖವೂ ಉಕ್ಕಿ ಬಂತು. ತಿಮ್ಮಿಯನ್ನು ತಾನು ರಾತ್ರಾರಾತ್ರಿ ಹಾರಿಸಿಕೊಂಡು ಬಂದಿದ್ದೇನೆ ಎಂಬುದನ್ನು ಆಗಲೆ ಒಡೆಯರಿಗೆ ತಿಳಿಸುವುದಾಗಿರಲಿಲ್ಲ ಅವನ ಇರಾದೆ. ಆದರೆ ಅವಳನ್ನು ಹಾರಿಸಿಕೊಂಡು ಬಂದು ತಾನು ಮದುವೆಯಾಗುವುದಕ್ಕೆ ಒಡೆಯರ ಅನುಮತಿಯನ್ನು ಮೊದಲು ಪಡೆದು ಆಮೇಲೆ ತಕ್ಕ ಸಮಯದಲ್ಲಿ ಹಾರಿಸಿಕೊಂಡು ಬಂದೆ ಎಂದು ಹೇಳುವುದು ಅವನ ಇಚ್ಛೆಯಾಗಿತ್ತು. ಆದರೆ ಈಗ? ಹಾರಿಸಿಕೊಂಡು ಬರುವುದಕ್ಕೆ ಅನುಮತಿ ನೀಡುವುದಿರಲಿ; ಬೆಟ್ಟಳ್ಳಿಗೌಡರಿಂದ ಹಣ ಪಡೆದು, ತಮ್ಮ ಸಾಲ ತೀರಿಸಿ, ನೀನೆ ಅಲ್ಲಿಗೆ ಹೋಗಿ, ಅವಳನ್ನು ಮದುವೆಯಾಗಿ, ಅವರ ಜೀತದಾಳಾಗಿ ಸುಖವಾಗಿರು – ಎನ್ನುತ್ತಿದ್ದಾರೆ! ಬಚ್ಚನಿಗೇ ಅವಳನ್ನು ಮದುವೆ ಮಾಡಬೇಕೆಂದು ಹಟತೊಟ್ಟಿರುವ ಗೌಡರು, 'ನನ್ನ ಅಪ್ಪನಿಗೆ ನಾ ಹುಟ್ಟಿದ್ದರೆ' ಎಂದೆಲ್ಲ ಏನೇನೋ ಆಣೆ ಭಾಷೆ ಹಾಕಿ ಪ್ರತಿಜ್ಞೆ ಮಾಡಿರುವ ಗೌಡರು, ನಾನು ಸಿಕ್ಕರೆ ನನ್ನನ್ನು ಜೀವಸಹಿತ ಬಿಟ್ಟಾರೆಯೆ? ನನ್ನ ಒಡೆಯರ ಬಲ ಮತ್ತು ಬೆಂಬಲ ದೊರೆಯದಿದ್ದರೆ ನಾನು ಕೆಟ್ಟೆ; ಬದುಕ ಬೇಕಾದರೆ ಊರು ಬಿಟ್ಟು ಕಾಡು ಸೇರುವುದೊಂದೇ ದಾರಿ; ಇಲ್ಲದಿದ್ದರೆ ದೇಶಾಂತರ ಹೊಗಬೇಕು – ಈ ರೀತಿಯ ತರತರದ ಭಾವನೆ ಮತ್ತು ಆಲೋಚನೆಗಳ ಆವರ್ತಗರ್ತಕ್ಕೆ ಸಿಕ್ಕಿದಂತಾಗಿದ್ದ ಗುತ್ತಿಯ ಮನಸ್ಸು ತತ್ತರಿಸಿ, ಶರಣಾಗತಿಯ ಕೊಟ್ಟಕೊನೆಯ ಆಶ್ರಯವನ್ನು ನಿಶ್ಚಯಿಸಿತು.

ಹೆಗ್ಗಡೆ ಇನ್ನೂ ಕಜ್ಜಿ ತುರಿಸಿ ಮುಗಿಸಿರಲಿಲ್ಲ. ತುರಿಗಜ್ಜಿಯ ಹಣೆಯ ಬರಹವೆ ಹಾಗೆ! ಒಂದು ಕಡೆ ತುರಿಕೆ ಶುರುವಾಯಿತು ಅಂದರೆ ಅದನ್ನು ತುರಿಸಿತುರಿಸಿ ನವೆಯನ್ನು ಸಮಾಧಾನ ಸ್ಥಿತಿಗೆ ತರುವಷ್ಟರಲ್ಲಿಯೆ ಅದರ ಪಕ್ಕದ ಸೀಮೆಯಲ್ಲಿ ಆಂದೋಳನಕ್ಕೆ ಪ್ರಾರಂಭ! ಹರಿತವಾದ ಉಗುರಿನ ಕೈಬೆರಳುಗಳನ್ನು ಅಲ್ಲಿಗೆ ಕಳಿಸಿ ಆ ಕ್ರಾಂತಿಯನ್ನು ಹತ್ತಿಕ್ಕುವುದೆ ತಡ ಆ ಸ್ಥಳಕ್ಕೆ ಸ್ವಲ್ಪವೂ ಸಂಬಂಧವಿಲ್ಲದ ಇರುವ ತೊಡೆಯ ಸಂಧಿಯ ದೂರ ಪ್ರಾಂತದಲ್ಲಿ ಗಲಭೆ ಷುರು! ಹಾಳು ತುರಿಗಜ್ಜಿ! ಹೆಗ್ಗಡೆಗೆ ಸೇರಿದ್ದ ದೇಹಚಕ್ರಾಧಿಪತ್ಯವೆಲ್ಲ ತುರಿಗಜ್ಜಿಯ ಕ್ಷೋಭೆಗೆ ಒಳಗಾಗಿದ್ದುದರಿಂದ ಅವರು ಇನ್ನೂ ಕಜ್ಜಿ ತುರಿಸಿ ಪೂರೈಸಿರಲಿಲ್ಲ! ನೋಡುತ್ತಾರೆ: ಗುತ್ತಿ ಮೈಮೇಲೆ ಬಂದವನಂತೆ ಮುಖ ಊದಿಸಿ ಕೆಂಪಗೆ ಮಾಡಿಕೊಂಡು, ಕಣ್ಣೀರು ಸುರಿಸುತ್ತಾ, ಕೈ ಕೈ ಮುಗಿಯುತ್ತಾ, ಸೊಂಟ ಬಗ್ಗಿ ಮುಂಬರಿದು, ತೆಣೆಯ ಕೆಳಗೆ ಅಂಗಳದಲ್ಲಿ, ಹೆಗ್ಗಡೆಯವರಿಗೆ ನೇರ ಇದಿರಿನಲ್ಲಿ, ಬಡಿಗೆ ಬೀಳುವಂತೆ ಬೀಳುತ್ತಾ "ಅಯ್ಯಾ, ನಿಮ್ಮ ದಮ್ಮಯ್ಯ, ನನ್ನ ಕೈಬಿಡಬ್ಯಾಡಿ. ಸಾಯೋವರೆಗೂ ನಿಮ್ಮ ಗುಲಾಮನಾಗಿ ದುಡಿದು ರುಣ ತೀರಿಸ್ತೀನಿ " ಎಂದು ಗದ್ಗದಿಸುತ್ತಾ ಉದ್ದಂಡ ನಮಸ್ಕಾರ ಮಾಡಿದ್ದಾನೆ!

ಹೆಗ್ಗಡೆಗೆ ಮೈಮೇಲೆ ಬಿಸಿನೀರು ಚೆಲ್ಲಿದಂತಾಯ್ತು. ದೈನಂದಿನ ತಟಸ್ಥಭಾವದಲ್ಲಿದ್ದ ಅವರ ಚೇತನ ಮಿಂಚನ ಚಾಟಿಗೆಂಬಂತೆ ತನ್ನ ಉದಾಸೀನವನ್ನೆಲ್ಲಾ ಕೊಡಹಿ ತಳ್ಳಿ ಎಚ್ಚರಗೊಂಡಿತು. ಗುತ್ತಿಯ ಅನಿರೀಕ್ಷಿತ ವರ್ತನೆ ಅವರ ಮನಸ್ಸನ್ನು ಹೆಡೆಯೆತ್ತಿ ನಿಲ್ಲಿಸಿತು. ಅದುವರೆಗೂ ಎಷ್ಟೆ ತುರಿಸಿಕೊಂಡರೂ ಶಮನಗೊಳ್ಳದೆ ಹತೋಟಿಗೆ ಬರದಿದ್ದ ತುರಿಗಜ್ಜಿಯ ಕೆರೆತವೂ ತಟಕ್ಕನೆ ನಿಂತು, ಅವರ ಪ್ರಜ್ಞಾಸೀಮೆಯಿಂದಲೆ ಗಡಿಪಾರಾಗಿ ಹೋಯಿತು. ಅಂಗಳದ ಮಣ್ಣಿನಲ್ಲಿ ಅಡ್ಡಬಿದ್ದು, ಎದ್ದುನಿಂತು, ಕೈಮುಗಿದುಕೊಂಡು ಅಂಗಲಾಚುತ್ತಿದ್ದ ಗುತ್ತಿಯನ್ನು ಎವೆಯಿಕ್ಕದೆ ನೋಡುತ್ತಾ ಅವನ ಮಾತಿಗೆ ಕಿವಿಹೊಟ್ಟರು:

"ನಾನೊಂದು ನಿಮ್ಮ ಕಾಲ ಕಸ! ಸಾಯೋವರೆಗೂ ನಿಮ್ಮ ಗುಲಾಮನಾಗಿ ದುಡಿದು ರುಣ ತೀರಿಸ್ತೀನಿ! ಅಯ್ಯಾ, ನಾನೇನು ನನಗಾಗಿ ಮಾಡಿದ್ದಲ್ಲ. ನಮ್ಮ ಧಣೀರ ಮಾನಮರ್ವಾದೆ ಕಾಪಾಡಕ್ಕಾಗಿ ನಾನು ಹಾಂಗೆ ಮಾಡಿದ್ದು...."

"ಏನು ಮಾಡಿದೆಯೋ ನೀನು?" ಒಡೆಯರ ಪ್ರಶ್ನೆಯನ್ನು ಗಮನಿಸದವನಂತೆ ಮುಂಬರಿದನು ಗುತ್ತಿ.

"ಆ ಲುಚ್ಚ! ಆ ನೀಚ! ಆ ಹೊಲೇರ ಕುರುದೆ! ಆ ಬಚ್ಚ, ಅಂವ ಮೂರುಕಾಸಿನ ಮನುಷ್ಯ. ನನ್ನ ಒಡೇರನ್ನ ನನ್ನ ಮುಂದೆ "ಅವನು ಇವನು ನೀನು ತಾನು" ಅಂತಾ ಮಾತಾಡಬೈದೇನು? ಹೇಳಿ! ನೀವೇ ಹೇಳಿ! ಅದಕ್ಕೆ ನಾನು ಮಾಡಿದ್ದು ಹಾಂಗೆ!...."

"ಏನು ಮಾಡಿದ್ದೊ? ಬಿಡಿಸಿ ಹೇಳೊ ಸರಿಯಾಗಿ." ಹೆಗ್ಗಡೆಯ ಧ್ವನಿ ಮೃದುತರವಾಗಿ ಸಹಾನುಭೂತಿಸೂಚಕವಾಗಿತ್ತು. ಅದನ್ನು ಗ್ರಹಿಸಿದ ಗುತ್ತಿ ನಡೆದದ್ದೆಲ್ಲವನ್ನು ತನಗೆ ಪ್ರತಿಕೂಲವಾಗುವಂತಃ ಅಂಶಗಳನ್ನೆಲ್ಲ ತ್ಯಜಿಸಿಯೊ ತೇಲಿಸಿಯೊ ಭಾವಪೂರ್ಣವಾಗಿ ವರದಿ ಮಾಡಿದನು. ಬೆಟ್ಟಳ್ಳಿಗೌಡರ ಪ್ರತಿಜ್ಞೆಯ ವಿಚಾರವಾಗಿ ಹೇಳುವಾಗ ಸಿಂಬಾವಿ ಹೆಗ್ಗಡೆಯವರಿಗೆ ಅವಮಾನಕರವಾಗಿ ಅವರನ್ನು ಕೆರಳಿಸುವಂತಹ ಅಲ್ಪಸ್ವಲ್ಪ ನಿಂದಾಂಶವನ್ನು ಸೇರಿಸಲು ಮರೆಯಲಿಲ್ಲ.

ಆಲಿಸುತ್ತಾ ಆಲಿಸುತ್ತಾ ಹೆಗ್ಗಡೆಯ ಹೃದಯದಲ್ಲಿ ಮನೆತನದ ರಚ್ಚು ಉಸಿರಾಡಿತು. ಹಲ್ಲು ಬಿಗಿದು ತುಟಿಗಚ್ಚಿತು.

“ಏನೋ? ನಿಜ ಹೇಳ್ತಿದ್ದಿಯೇನೋ?” ಹೆಗ್ಗಡೆಯ ಗಡಸುದನಿ.

“ಧರ್ಮಸ್ಥಳದ ದೇವರಾಣೆಗೂ! ನಾ ಹೇಳಿದ್ದು ಸುಳ್ಳಾಗಿದ್ರೆ ನನ್ನ ನಾಲಿಗೆ ಬಿದ್ದೇ ಹೋಗ್ಲಿ!”

“ಆ ಹುಡುಗಿ ಅದರ ಒಪ್ಪಗೆಯಿಂದಲೆ ನಿನ್ನ ಸಂಗಡ ಬಂತೇನೊ?”

“ಹೌದು, ನನ್ನೊಡೆಯಾ. ಅದು, ಅದರ ಅವ್ವ, ಇಬ್ಬರಿಗೂ ಒಪ್ಪಿಗೆ. ತಿಮ್ಮಿಯಂತೂ ಆ ಬಚ್ಚನ್ನ ಬಾಯಿಗೆ ಬಂದ್ಹಂಗೆ ಬೈತದೆ! ಅದರ ಅಪ್ಪನೂ ಕಿಲಸ್ತರ ಜಾತಿಗೆ ಸೇರೋ ಜಾತಿಕೆಟ್ಟಂವಗೆ ಕೊಡಾಕೆ ಒಪ್ಪಿಲ್ಲವಂತೆ. ಆದ್ರೆ ಗೌಡರ ಹೆದರಿಕೆಗೆ ಹ್ಞೂ ಅಂದಿದ್ನಂತೆ. ನಾ ಕಾಣಾದೆ ತಡ, ಅತ್ತೆ “ಅಪ್ಪಾ, ಹೆಂಗಾದ್ರೂ ಮಾಡಿ ನನ್ನ ಹುಡುಗೀನ ಬದುಕ್ಸು” ಅಂತ ಹೇಳಿ ನನ್ನ ಸಂಗಡ ರಾತಾರಾತ್ರಿ ಕಳ್ಸಿಕೊಟ್ಟು, ಬ್ಯಾರೆ ಯಾರಿಗೂ ಗೊತ್ತಿಲ್ದಂಗೆ. ನಂದೇನೂ ತಪ್ಪಿಲ್ಲ, ನನ್ನೊಡೆಯಾ!”

ಸೊಂಟಬಾಗಿ, ಕೈಮುಗಿದು, ದೀನವದನನಾಗಿ ನಿಂತಿದ್ದ ಸುದೃಢಕಾಯದ ತಮ್ಮ ಕುಳ್ಳಬಂಟನನ್ನು ಕೃಪಾದೃಷ್ಟಿಯಿಂದ ಸ್ವಲ್ಪ ಹೊತ್ತು ನೋಡುತ್ತಿದ್ದು ಭರಮೈಹೆಗ್ಗಡೆ ಏನೇನನ್ನೊ ಮನಸ್ಸಿನಲ್ಲಿ ನಿಶ್ಚಯಿಸಿ ಹೇಳಿದರು: “ನಿನ್ನ ಅಪ್ಪನ್ನ ಬಂದು ನನ್ನ ನೋಡಾಕೆ ಹೇಳೊ, ಹೋಗೋ!”

ಗುತ್ತಿ ಹರ್ಷಮುಖಿಯಾಗಿ, ಕೇರಿಯ ಕಡೆ ತಿರುಗುವುದಕ್ಕೆ ಬದಲು, ಜಟ್ಟಮ್ಮ ಹೆಗ್ಗಡತಿಯವರನ್ನು ಕಂಡು ಹೋಗಲು ಹಿತ್ತಲು ಕಡೆ ಬಾಗಿಲಿಗೆ ಹೋದನು: ತವರು ಮನೆಯ ಇಷ್ಟವಾರ್ತೆಗಳನ್ನೆ ಹೇಳಿ ಮನಸ್ಸು ಸಂತೋಪಡಿಸಿದರೆ ‘ಹೆಗ್ಗಡ್ತಮ್ಮೋರು’ ಏನಾದರೂ ‘ಬಾಯಿಗೆ ಕೊಡದೆ’ ಇರುತ್ತಾರೆಯೆ?

* * *

## ೨೨

ಬೆಟ್ಟಳ್ಳಿಯ ಹೊಲೆಯರ ಕೇರಿಯಲ್ಲಿ ಆಗತಾನೆ ಒಡ್ಡಿಗಳಿಂದ ಹೊರಟ ಊರುಹಂದಿಗಳು, ಸಲಗ - ದಡ್ಡೆ - ಮಣಕ - ಮರಿಗಳು, ಗುರುಗಳು ಕುಂಯಿಕುಂಯಿ ಸದ್ದು ಮಾಡುತ್ತಾ ಗುಡಿಸಲು ಗುಡಿಸಲಿನ ನಡುವಣ ಸಂಧಿಗಳಲ್ಲಿ ದಿನನಿತ್ಯದ ಪದ್ಧತಿಯಂತೆ ಆಹಾರಾನ್ವೇಷನೆಯಲ್ಲಿ ತೊಡಗಿದ್ದುವು. ಕೋಳಿಗಳೂ, ಹುಂಜ - ಹೇಟೆ - ಸಳಗ - ಮರಿ - ಹೂಮರಿ, ಗೂಡುಗಳಿಂದ ಗೊತ್ತುಗಳಿಂದ ಹೊರಗೆ ಹಾರಿ ಕೊಚ್ಚೆಯ ಸ್ಥಳಗಳಲ್ಲಿ ಕೆದಕುವ ಕೆಲಸಕ್ಕೆ ಕಾಲು ಕೊಕ್ಕು ಹಾಕಿದ್ದುವು. ಅಡುಗೆ ಒಲೆಗಳಿಂದ ಹೊಮ್ಮಿದ ನೀಲಿ ಹೊಗೆ ಗುಡಿಸಲುಗಳಿಗೆ ಹೊದಿಸಿದ್ದ ಹುಲ್ಲಿನ ಬಿರುಕುಗಳಿಂದ ಮೆಲ್ಲಗೆ ಹೊರಟು ಗಾಳಿಯಲ್ಲಿ ತಿಳ್ಳೆಯಾಟವಾಡಲು ಮೊದಲುಮಾಡಿತ್ತು. ಬೆಳಗಿನ ಹೊತ್ತಿನಲ್ಲಿ

ಅಂತಹ ಕೇರಿಗಳಿಗೆ ಸ್ವಾಭಾವಿಕವಾಗಿರುತ್ತಿದ್ದ ದುರ್ವಾಸನೆಗಳ ಒಕ್ಕೂಟ ಆ ಕೇರಿಯವರ ಮೂಗಿಗೆ ಅಗೋಚರವಾಗಿದ್ದರೂ ಹೊರಗಿನಿಂದ ಬರುವವರಿಗೆ ಮೂಗು ಮುಚ್ಚಿಕೊಳ್ಳುವಂತೆ ತುಂಬಿ ಹಬ್ಬಿತ್ತು.

ಆದ್ದರಿಂದಲೆ ದೇವಯ್ಯಗೌಡರು ಕಳಿಸಿದ್ದ ಗಟ್ಟದ ತಗ್ಗಿನ ಸೆಟ್ಟಿಯಾಳು ಮೂಗು ಮುಚ್ಚಿಕೊಂಡು ಬಾಯಿಂದಲೆ ಉಸಿರಾಡುತ್ತಾ ನಿಂತಿದ್ದು, ಬಚ್ಚನ ಬಿಡಾರದ ಮುಂದೆ. ಬಚ್ಚನಿಗೆ ಗೌಡರು ಕಳಿಸಿದ್ದ ಸಂದೇಶವನ್ನು ನೀಡಿ, ಹೆಚ್ಚುಹೊತ್ತು ನಿಲ್ಲಲು ಸಾಧ್ಯವಾಗದೆ, ಅವನು ಹೊರಟುಹೋದ ಅನಂತರ, ತನ್ನ ಸಾರಥಿತ್ವದ ಸಮವಸ್ತ್ರವನ್ನು ಧರಿಸಿ, ತನಗೆ ಹೆಣ್ಣು ಕೊಡಬೇಕಾಗಿದ್ದ ಭಾವಿ ಮಾವ ದೊಡ್ಡಬೀರನ ಬಿಡಾರಕ್ಕೆ ನಡೆದು, ಗೌಡರು ಈ ಕೂಡಲೆ ಬರಬೇಕೆಂದು ಹೇಳಿಕಳುಹಿಸಿದ್ದ ವಾರ್ತೆಯನ್ನು ಠೀವಿಯಿಂದ ತಿಳಿಸಿ, ಹೆಚ್ಚಿನ ಸಂಭಾಷಣೆಗೆ ತೊಡಗುವುದಕ್ಕೆ ಅವಕಾಶವಿಲ್ಲದಷ್ಟು ಬಿಗುಮಾನದಿಂದಲೂ ಬೇಗದಿಂದಲೂ ಹಿಂದಿರುಗಿ, ಒಡೆಯರ ಮನೆಯ ಕಡೆಗೆ ಬಿರುಬಿರನೆ ಕಾಲುಹಾಕಿದ್ದನು.

ಹಿಂದಿನ ದಿನ ಸಾಯಂಕಾಲ ದೇವಯ್ಯಗೌಡರ ಬೈಸಿಕಲ್ಲು ಕಲಿಕೆಯ ಸಾಹಸದಲ್ಲಿ ಭಾಗಿಯಾಗಿ, ಬಿದ್ದು, ಗಾಯವಾಗಿ, ಮೈಕೈ ನೋವಿನಿಂದ ನರಳುತ್ತಿದ್ದ ಮುದುಕ, (ಆ ಕಾಲದಲ್ಲಿದ್ದ ಮಲೆನಾಡಿಗರ ಆಯುಃಪ್ರಮಾಣದ ದೃಷ್ಟಿಯಿಂದ ಅವನನ್ನು 'ವಯಸ್ಸಾದವನು' ಎಂದು ಹೇಳುವುದಕ್ಕಿಂತ 'ಮುದುಕ' ಎಂದು ಹೇಳಿದರೇ ಸತ್ಯಕ್ಕೆ ಹೆಚ್ಚು ನಿಕಟವಾಗುತ್ತದೆ.) ದೊಡ್ಡಬೀರ, ಇನ್ನೂ ತನ್ನ ಕಂಬಳಿಹಾಸಗೆಯಿಂದ ಎದ್ದಿರಲಿಲ್ಲ. ಅಲ್ಲದೆ ತನ್ನ ಮಗಳು ತಿಮ್ಮಿ, ಮದುಮಗಳಾಗಿರಬೇಕಾಗಿದ್ದವಳು, ಹಠಾತ್ತನೆ ಕಾಣೆಯಾಗಿದ್ದದ್ದೂ, ಅವಳಿಗಾಗಿ ಕೆರೆ ಬಾವಿ ಕಾಡುಗಳಲ್ಲಿ ನಡುರಾತ್ರಿಯವರೆಗೆ ಹುಡುಕಿ ಹತಾಶರಾಗಿದ್ದದ್ದೂ ಮುದುಕನ ಮನಸ್ಸನ್ನು ಕದಡಿ, ದಣಿಸಿ, ಅದನ್ನು ದೈನ್ಯ ಸ್ಥಿತಿಗೆ ತಂದಿತ್ತು.

ಗೌಡರು ಹೇಳಿಕಳುಹಿಸಿದ್ದು ಏತಕ್ಕೆ ಎಂಬುದನ್ನು ಒಡನೆಯೆ ಊಹಿಸಿ, ದೊಡ್ಡಬೀರ ಹೆಂಡತಿಯನ್ನು ಕರೆದು "ಹೋಗೆ, ಸಣ್ಣಬೀರನ್ನ ಬರಾಕ್ಹೇಳ್" ಎಂದನು. ಹಿರಿಯಮಗ ಸಣ್ಣಬೀರ ಬರಲು "ಗೌಡರು ಹೇಳಿಕಳಿಸ್ಯಾರೆ. ನಂಗೆ ಮೈಕೈ ನೋವು. ಏಳಾಕೆ ಆಗದಿಲ್ಲ. ನೀನೆ ಹೋಗಿ ಬಾ" ಎನ್ನಲು ಸಣ್ಣಬೀರ ತಾನೊಬ್ಬನೆ ಹೋಗಲು ಒಪ್ಪಲಿಲ್ಲ. ತಿಮ್ಮಿ ಕಣ್ಮರೆಯಾಗುವ ವಿಚಾರಕ್ಕಾಗಿಯೆ ತನ್ನ ಅಪ್ಪನನ್ನು ಕರೆಯಿಸುತ್ತಿರುವುದು ಎಂಬುದೂ ಅವನಿಗೂ ಗೊತ್ತಾಯಿತು. ತಿಮ್ಮಿ ಕಾಣೆಯಾದುದಕ್ಕೆ ನಿಜವಾದ ಕಾರಣ ಅವಳು ಕೆರೆ ಬಾವಿಗಳಲ್ಲಿ ಆತ್ಮಹತ್ಯೆ ಮಾಡಿಕೊಂಡದ್ದಲ್ಲ. ಕಿಲಸ್ತರ ಜಾತಿಗೆ ಸೇರಲಿರುವ ಬಚ್ಚನಿಗೆ ಮದುವೆ ಮಾಡಿಕೊಡಲು ಇಷ್ಟವಿಲ್ಲದೆ ಅವಳ ತಂದೆತಾಯಿಯವರು ಅವಳನ್ನು ಗುಟ್ಟಾಗಿ ಅಡಗಿಸಿಟ್ಟು, ಅವಳೆಲ್ಲಿಯೊ ಕಾಣೆಯಾಗಿದ್ದಾಳೆ ಎಂಬ ಗುಲ್ಲು ಹಬ್ಬಿಸಿದ್ದಾರೆ ಎಂಬ ಗುಸುಗುಸು ಸುದ್ದಿಯೂ ಗುಡಿಸಲುಗಳಲ್ಲಿ ಹಬ್ಬಿತ್ತು. ಜೊತೆಗೆ ಹಿಂದಿನ ದಿನ ಸಂಜೆ ಬೈಸಿಕಲ್ಲು ಸವಾರಿಯಾಗುತ್ತಿದ್ದಾಗ ಬೆಟ್ಟಳ್ಳಿ ಹಕ್ಕಲಿನಲ್ಲಿ ನೆರೆದಿದ್ದ ಜನಸಂದಣಿಯಲ್ಲಿ ಗುತ್ತಿಯನ್ನು ಕಂಡಿದ್ದವರನೇಕರು ತಿಮ್ಮಿ ಕಾಣೆಯಾಗಿದ್ದುದಕ್ಕೆ ಅವನೇ ಕಾರಣವಾಗಿರಬೇಕೆಂದೂ ಊಹಿಸಿ ನಂಬಿದ್ದರು. ಏಕೆಂದರೆ, ಸಿಂಬಾವಿ ಗುತ್ತಿಯೆ ತಿಮ್ಮಿಯನ್ನು ಮದುವೆಯಾಗುತ್ತಾನೆ ಎಂದೂ, ತಿಮ್ಮಿಯೂ ಅವಳ ತಾಯಿ ಸೇಸಿಯೂ ಗುತ್ತಿಯ ಪರವಾಗಿಯೆ ಇದ್ದಾರೆಂದೂ ಕೇರಿಯವರಿಗೆ ಸಾಧಾರಣವಾಗಿ ತಿಳಿದ ವಿಷಯವಾಗಿತ್ತು. ದೊಡ್ಡಬೀರ ಮೊದಮೊದಲು ಗೌಡರ ಹೆದರಿಕೆಗೆ ತನ್ನ ಮಗಳನ್ನು ಕೇರಿಯ ಹೊರಗೆ ಕೊಡುವುದಿಲ್ಲ ಎಂದು ಬಚ್ಚನಿಗೆ ಕೊಡಲು ಸಮ್ಮತಿಸಿದ್ದರೂ ಅವನು ದೇವಯ್ಯಗೌಡರೊಡನೆ ಕಿಲಸ್ತರನಾಗುತ್ತಾನೆ ಎಂಬ ವದಂತಿ ಹಬ್ಬಿದ ಮೇಲೆ ಮನಸ್ಸು ಬದಲಾಯಿಸಿದ್ದನು. ಈ ಎಲ್ಲ

ಒಳಗುಟ್ಟಿನ ವಿಷಯಗಳನ್ನೂ ಬಚ್ಚನಿಂದ ಕೇಳಿ ತಿಳಿದಿದ್ದ ದೇವಯ್ಯ ತನ್ನ ತಂದೆ ಕಲ್ಲಯ್ಯಗೌಡರಿಗೆ ಹೇಳಿ, ದೊಡ್ಡಬೀರನಿಗೆ ಕರೆಕಳಿಸಿದ್ದನು. ಏನಾದರೂ ಹೆಚ್ಚು ಕಡಿಮೆಯಾದರೂ ದೊಡ್ಡಬೀರ ಮುದುಕನಾದ್ದರಿಂದ ಅವನಿಗೆ ದೇಹ ದಂಡನೆಯಾಗುವ ಸಂಭವ ಅಷ್ಟಾಗಿರಲಿಲ್ಲ. ಆದರೆ ಸಣ್ಣಬೀರನಿಗೆ ತನ್ನ ವಯೋಧರ್ಮದಿಂದ ಆ ರಕ್ಷೆ ಪಡೆಯುವ ಧೈರ್ಯವಿರಲಿಲ್ಲ. ಅವನಿಗೆ ಕಲ್ಲಯ್ಯಗೌಡರ ಮತ್ತು ದೇವಯ್ಯಗೌಡರ ಸಿಟ್ಟಿನ ಬೆತ್ತದ ರುಚಿಯನ್ನು ಅನುಭವಿಸುವ ಸಂದರ್ಭಗಳೂ ಹಿಂದೆ ಒಂದೆರಡು ಸಾರಿ ದೊರೆಕೊಂಡಿದ್ದುವು. ಆದ್ದರಿಂದಲೆ ಅವನು ತಾನೊಬ್ಬನೆ ಹೋಗಿ ಗೌಡರ ಕೋಪಕ್ಕೆ ಎದುರಾಗಲು ಒಪ್ಪಲಿಲ್ಲ.

ಅಂತೂ ಕಡೆಗೆ ತಂದೆಮಕ್ಕಳಿಬ್ಬರೂ ಹೋಗುವುದೆಂದು ನಿರ್ಣಯವಾಯಿತು. ಕಿರಿಯ ಮಗನಿಗೆ ಹೇಳಿಕಳಿಸಿದರೆ ಅವನು ಬಿಡಾದಿಂದಲೆ ಹೊರಡಲಿಲ್ಲ. ತನ್ನ ಹೆಂಡತಿ ಚಿಕ್ಕಪುಟ್ಟಿಯ ಕೈಲಿ ತನಗೆ 'ಸಣ್ಣಕೆ ಒಡಲ ಜರ ಬಂದದೆ' ಎಂದು ಹೇಳಿ ಕಳುಹಿಸಿ ನುಣುಚಿಕೊಂಡಿತು.

ದೊಡ್ಡಬೀರನನ್ನು ಮೆಲ್ಲಗೆ ನಡೆಸಿಕೊಂಡು ಸಣ್ಣಬೀರನು ಬೆಟ್ಟಳ್ಳಿ ಮನೆಯ ಹೊರ ಚಾವಡಿಗೆ ಸೇರಿ, ಅಲ್ಲಿ ಕಂಬದ ಬುಡದಲ್ಲಿ ಕಂಬಳಿ ಹಾಕಿಕೊಂಡು ಇಬ್ಬರೂ ಕೂತರು. ಆಗಲೆ ಚಾವಡಿಯಲ್ಲಿ ಬೀಡಿಯ ವಾಸನೆಯಿದ್ದುದನ್ನು ಗಮನಿಸಿ, ಸಣ್ಣಬೀರನಿಗೆ ಭಯಾಶಂಕೆಯಾಗಿ, ದೊಡ್ಡಬೀರನನ್ನು ಕುರಿತು "ಅಪ್ಪಾ, ಯಾಕೋ ಬೀಡಿವಾಸನೆ ನೋಡಿದ್ರೆ, ಸಾಬರನ್ನ ಕರೆಸಿದ್ಹಾಂಗೆ ಕಾಣ್ತದೋ! ಹೊತಾರೆ ಎಡದ ಮಗ್ಗುಲಾಗೆ ಎದ್ದಡನೋ ಏನೋ ನಾನು? ಏನು ಗಿರಾಚಾರ ಕಾದಿದೆಯೋ? ಅವತ್ತು ಹೊಡೆಸಿದ್ರಲ್ಲಾ ಮಗ್ಗಲು ಮುರಿಯ ಹಾಂಗೆ, ಹೊನ್ನಳ್ಳಿಹೊಡ್ತಾ...." ಎನ್ನುತ್ತಿದ್ದವನು ಬೆಚ್ಚಿ ಬೆದರಿ ದೂರ ನೋಡಿ ಹೇಳಿದನು "ನೋಡಿದ್ಯಾ? ನಾ ಹೇಳಿದ್ದು ಸುಳ್ಳೊ ಬದ್ದೋ? ಆ ಇಜಾರದ ಸಾಬ್ರು, ಲುಂಗೀಸಾಬ್ರು ಇಬ್ರೂ ಬಂದಾರೆ!"

ಅಷ್ಟರಲ್ಲಿ ಒಳಗಿನ ಅಂಗಳದಿಂದ ಆ ಇಬ್ಬರು ಹೊನ್ನಾಳಿ ಸಾಬಿಗಳೂ ಈ ಇಬ್ಬರೂ ಕುಳಿತಿದ್ದಲ್ಲಿಗೆ ಬಂದು ಸ್ವಲ್ಪ ದೂರದಲ್ಲಿ ನಿಂತರು. ಕಟುಕನು ತಾನು ಕಡಿಯಲಿರುವ ಕುರಿಗಳು ಪುಷ್ಟವಾಗಿವೆಯೋ ಇಲ್ಲವೋ ಎಂಬುದನ್ನು ಅರಿಯಲು ಅವುಗಳನ್ನು ನೋಡುವಂತೆ ದೊಡ್ಡಬೀರ ಸಣ್ಣಬೀರನನ್ನು ದುರುದುರುದುರನೆ ನೋಡಿದರು. ಸಿಂಡಮೂಗಿನ ಕುಳ್ಳ ಲುಂಗೀಸಾಬಿಯ ಮುಖದಲ್ಲಿ ಪರಿಹಾಸ್ಯದ ನಗೆ ತನ್ನನ್ನು ಮೊದಲಿಸುತ್ತಿದ್ದಂತೆ ಭಾಸವಾಯಿತು.ಸಣ್ಣಬೀರನಿಗೆ. ಆದರೆ ಬಲಿಷ್ಠಕಾಯನೂ ದೀರ್ಘದೇಹಿಯೂ ಆಗಿದ್ದ ಇಜಾರದ ಸಾಬಿಯ ಮುಖದಲ್ಲಿ ದೌಷ್ಟಕ್ರೌರ್ಯಗಳ ಭಯಾಕನತೆಯ ಮುದ್ರೆಗೊಂಡಂತಿದ್ದುದನ್ನು ಕಂಡ ತಂದೆ ಮಕ್ಕಳಿಬ್ಬರೂ ನಿರಾಶಾಹತರಾದಂತೆ ಸುಮ್ಮನೆ ನಿಷ್ಕಾರಣ ಕೃತಕ ಬೆಪ್ಪುನಗೆ ನಗುತ್ತಾ ಮಿಳ್ಮಳನೆ ನೋಡುತ್ತಾ ಕುಳಿತಿದ್ದರು.

"ಓಹೋಹೋ! ಸರದಾರ ಮಕ್ಕಳು! ಏನು ದೌಲತ್ತೋ ನಿಮಗೆ? ನವಾಬರು ಕೂತಹಾಂಗೆ ಕೂತಿದಾರೆ! ಏಳ್ರೋ! ಎದ್ದು ನಿಲ್ರೋ! ಏನು ಜಂಭ ಇವಕ್ಕೆ? ಕೂತೇ ಒದಾವೆ!" ಹಂದಿ ಹೂಂಕರಿಸಿ ತಿವಿಯುವಂತೆ ಗದರಿದನು ಇಜಾರದ ಸಾಬಿ.

ಅನೈಚ್ಛಿಕವೆಂಬಂತೆ ದಿಗಿಲುಬಿದ್ದು ತಟಕ್ಕನೆ ಎದ್ದು ನಿಂತುಬಿಟ್ಟನು ಸಣ್ಣಬೀರ!

ಉಂಗೀಸಾಬಿ ನಕ್ಕನು: "ಗಮಾರ! ಹಳ್ಳಿಗಮಾರ!"

"ಏ, ಸುಮ್ನೆ ಕೂತ್ಕೊಬಾರ್ದೇನೋ, ಹುಡುಗಾ?" ದೊಡ್ಡಬೀರ ಕೂತಲ್ಲಿಂದ ಒಂದು ಚೂರೂ ಹಂದದೆ, ಎದ್ದು ನಿಂತಿದ್ದ ಸಣ್ಣಬೀರನನ್ನು ರಟ್ಟೆಹಿಡಿದೆಳೆದು ಕೂರಿಸಿ, ಹುಸಿನಗು ನಗುತ್ತಾ "ಈ ಇಜಾರದ ಸಾಬಣ್ಣಗೆ ಕದಬಿಲ್ಲ. ಹೋದಲ್ಲಿತನಕ ದುಂಡಾವರ್ತಿ, ದರ್ಬಾರು, ಜಬರದಸ್ತು! ಅದಕ್ಕೇ ಮತ್ತೆ, ಕಮ್ಮಾರಸಾಲೇಲಿ ಪುಟ್ಟಾಚಾರ ಮೇಲೆ ಕೈಮಾಡಿ, ಹೂವಳ್ಳಿ ನಾಯಕರ ಹತ್ರ ಗನಾಗಿ ಕನಾತಿ ತಿಂದದ್ದು!" ಎಂದು ಇಜಾರದ ಸಾಬಿಯನ್ನು ತಿರಸ್ಕಾರದಿಂದ ನೋಡುತ್ತಾ ಮೂದಲಿಸಿದನು.

ಇಜಾರದ ಸಾಬಿ ಉಂಗೀಸಾಬಿಯ ಕಡೆ ತಿರುಗಿ ತುರುಕಮಾತಿನಲ್ಲಿ "ಇವನಿಗೆ ಏನಂತೀಯಾ ಸೊಕ್ಕು! ಕೇರಿಗೆ ಯಜಮಾನ ಅಂತಾ ಬಹಳ ದಿಮಾಕು. ಆವೊತ್ತು ನಾನೂ ಅಜೀಜು ಚಮಡಕ್ಕಾಗಿ ಕುದುರೆ ತಟ್ಟು ತೆಗೆದುಕೊಂಡು ಇವರ ಕೇರಿಗೆ ಹೋದರೆ 'ನೀವು ಕೇರಿ ಒಳಗೆಲ್ಲ ಬರಬಾರದು. ನಮಗೂ ದೇವರು ದಿಂಡರೂ ಇದಾವೆ. ನಮ್ಮ ಜಾತಿ ಕೆಟ್ಟುಹೋಗ್ತದೆ' ಅಂತಾ ಏನೇನೋ ಬೊಗಳಿಬಿಟ್ಟ.... ಇವತ್ತು ಇವನ, ಇವನ ಮಗನ, ಸೊಕ್ಕನೆಲ್ಲ ಇಳಿಸಿಬಿಡ್ತೀನಿ; ಗೌಡರು ಬೆತ್ತ ತಗೋ ಅನ್ನಲಿ!" ಎಂದು ದೊಡ್ಡಬೀರನ ಕಡೆ ನೋಡಿ, ಮೀಸೆ ಕುಣಿಸುತ್ತಾ ಮುಂದುವರೆಸಿದನು ಕನ್ನಡದಲ್ಲಿ: "ನಿನಗೆ ಇವತ್ತು; ನಾಳೆ, ನಿನ್ನ ಹೂವಳ್ಳಿ ನಾಯಕರಿಗೆ; ಜಾಸ್ತಿಯಾಗಿದ್ದ ಚರ್ಬಿ ಎಲ್ಲಾ ಕರಗ್ತದೆ, ನೋಡ್ತಾ ಇರು."

"ಈವತ್ತು ಗೊತ್ತಾಗ್ತದ್ಯೋ ನಿಮ್ಮಿಬ್ಬರಿಗೂ, ಹೊನ್ನಳ್ಳಿ ಹೊಡೆತದ ರುಚಿ! ಮದುವೆ ಮಾಡಿಕೊಡುತ್ತೇನೆ ಎಂದು ಹುಡುಗೀನೆ ಪರಾರಿ ಮಾಡಿಸಿದ್ದೀಯಲ್ಲಾ, ನೀನೆಂಥ ದಗಲಬಾಜಿ?" ಎಂದನು ಉಂಗೀಸಾಬು.

"ಜಕಣಿಗೆ ಸರಿಯಾಗಿ ಹರಕೆ ನಡೆಸ್ಲಿಲ್ಲ ಅಂತಾ ಕಾಣ್ತದೆ. ಜಕಣಿ ಅಡಗಿಸಿಟ್ರೆ ಯಾರೇನು ಮಾಡಾಕೆ ಆಗ್ತದೆ? ಸರಿಯಾಗಿ ಹರಕೆಮಾಡ್ತೀವಿ ಅಂತಾ ಹೇಳಿಕೊಂಡ್ರೆ, ಹುಡುಗೀನೇನು ಮುಚ್ಚಿಟ್ಟುಕೊಳ್ತದೆಯೆ?" ರಾಗವಾಗಿ ದನಿಎಳೆದ ದೊಡ್ಡಬೀರನನ್ನು ಮೂದಲಿಸುವಂತೆ ಅಣುಕು ದನಿಯಲ್ಲಿ ಇಜಾರದ ಸಾಬಿ ಹಂಗಿಸಿದನು;

"ಆಗ್ತದೆ! ಆಗ್ತದೆ! ಸರ್‍ರೀಯಾಗಿ ಹರಕೆ ಆಗ್ತದೆಯೋ ಇವತ್ತು! ಜಕಿಣಿ... ನುಂಗಿದ ಹುಡುಗೀನ ವಾಂತಿ ಮಾಡಿಬಿಡಬೇಕು.... ಹಂಗಾಗ್ತದೆ ಇವತ್ತಿನ ಹರಕೆ!"

ಅಷ್ಟರಲ್ಲಿ ಜಗಲಿಯಿಂದ 'ಯಜಮಾನ ಕೆಮ್ಮು' ಕೇಳಿಸಿತು; ಸೊಂಟಕ್ಕೆ ಸದಾ ನೇತು ಹಾಕಿಕೊಂಡೇ ಇರುತ್ತಿದ್ದ ಬೀಗದ ಕೈ ಗೊಂಚಲಿನ ಸದ್ದೂ ಸಮೀಪಿಸಿತು. ನಾಲ್ವರೂ ಆ ಕಡೆ ನೋಡುತ್ತಿದ್ದಂತೆ, ಮೊಣಕಾಲಿನವರೆಗೆ ಕಚ್ಚೆಪಂಚೆ ಹಾಕಿದ್ದು, ಕಸೆ ಅಂಗಿಯ ಮೇಲೆ ಹಸುರು ಶಾಲು ಹೊದೆದಿದ್ದು, ವೃದ್ಧರಾದರೂ ಸೊಂಟಬಾಗದಿರುವ ಸುದೃಢಕಾಯದ ಬಲಿಷ್ಠ ವ್ಯಕ್ತಿ ಕಲ್ಲಯ್ಯಗೌಡರು ಚಾವಡಿಗೆ ಬಂದು ಕಲ್ಲುಮಂಚದ ಮೇಲೆ ಒರಗಿ ಕೂತರು. ಅವರು ಬರುತ್ತಿದ್ದಂತೆಯೆ ದೊಡ್ಡಬೀರ ಸಣ್ಣಬೀರರು ಎದ್ದು ನಿಂತು, ಸೊಂಟಬಾಗಿ, ನೆಲಮುಟ್ಟಿ, ನಮಸ್ಕಾರ ಸಲ್ಲಿಸಿದರು. ಸಾಬರಿಬ್ಬರೂ ಗೌರವಸೂಚಕವಾಗಿ ಸಲಾಂ ಮಾಡಿ, ಸರಿದು, ದೂರ ನಿಂತರು. 'ಎಲೆ'ಯಲ್ಲಿ ಹುಳುವಾಗಿದ್ದ ಕರೆಯುವ ಹಸುವೊಂದಕ್ಕೆ ಔಷಧಿ ಹಾಕಿಸಿ ಆಗತಾನೆ ಕೊಟ್ಟಿಗೆಯಿಂದ ಹಿಂದಿರುಗಿದ್ದ ಗೌಡರ ಮೈಯಿಂದ ಬರುತ್ತಿದ್ದ

ಸೆಗಣಿ ಗಂಜಲ ಮಿಶ್ರವಾದ ಕೊಟ್ಟಿಗೆಯ ವಾಸನೆ ಸಾಬಿಗಳಿಗೆ ತುಸು ಅಹಿತಕರವಾಗಿಯೆ ತೋರಿತು; ಹೊಲೆಯರಿಗೆ ಅದರ ಪರಿವೆಯೆ ಇರಲಿಲ್ಲ. ಜೀವವಿರುವ ದನಗಳನ್ನು ಕೊಂದು ತಿನ್ನುವವರಿಗೂ ಸತ್ತ ಬಡು ತಿನ್ನುವವರಿಗೂ ಅಷ್ಟಾದರೂ ಬೇಡವೆ ವ್ಯತ್ಯಾಸ?

"ಏನೋ? ನಿನ್ನ ಮಗಳು ಸಿಕ್ಕಲಿಲ್ಲೇನೋ?" ಗೌಡರ ಧ್ವನಿಯಲ್ಲಿ ಉಗ್ರಗಾಂಭೀರ್ಯವಿತ್ತೆ ವಿನಾ ಕಾತರತೆಯಿರಲಿಲ್ಲ.

"ಇಲ್ಲ, ನನ್ನೊಡೆಯಾ." ನಿಂತೆ ಇದ್ದ ದೊಡ್ಡಬೀರ ಮತ್ತೊಮ್ಮೆ ಸೊಂಟ ಬಗ್ಗಿಸಿ ಕೈಮುಗಿದು ಹೇಳಿದನು.

"ಯಾವ ಯಾವ ಕೆರೆ ಬಾವಿ ಹಳ್ಳ ಗುಂಡಿ ಎಲ್ಲ ಹುಡುಕಿ ಆಯಿತೋ?" ಗೌಡರ ಧ್ವನಿ ನಿಷ್ಠುರವಾಗಿತ್ತು; ಸತ್ತುಹೋದವಳು ಸಿಕ್ಕಿದಳೊ ಇಲ್ಲವೊ ಎಂಬ ವಿಚಾರದಲ್ಲಿ ಇರಬೇಕಾಗಿದ್ದ ಯಾವ ತರಹದ ಉದ್ವೇಗವೂ ಇರಲಿಲ್ಲ. ಜೊತೆಯಲ್ಲಿ ವ್ಯಂಗ್ಯದ ಛಾಯೆ ಇಣುಕುತ್ತಿತ್ತು.

ದೊಡ್ಡಬೀರ, ಅದಾವುದನ್ನೂ ಅರಿಯದವನಂತೆ, ಪ್ರಶ್ನೆಗೆ ಸರಿಯಾದ ಉತ್ತರಕೊಡುವ ಮನಸ್ಸಿನಿಂದ ಹಾಡ್ಯದ ಕೆರೆ, ಮಕ್ಕಿಗದ್ದೆಯ ಬಾವಿ, ಕೋಡ್ಲುಗುಂಡಿ ಎಂದು ಮೊದಲಾಗಿ ಒಂದು ಪಟ್ಟಿಯನ್ನೆ ನಿವೇದಿಸತೊಡಗಿದ್ದನು. ಗೌಡರು ಜಿಗುಪ್ಸೆಯಿಂದ ಮುಖ ಕಂತ್ರಿಸಿಕೊಂಡು, ದೊಡ್ಡಬೀರ ನನ್ನು ನಡುವೆ ತಡೆದು, ವ್ಯಂಗ್ಯ ಸ್ಪಷ್ಟವಾಗುವಂತೆ ನಿಧಾನವಾಗಿ, ಶುದ್ಧ ಸಾಹಿತ್ಯರೀತಿಯಿಂದ ಕೇಳಿದರು: "ಅಡಕೆ ಮರದ ಚೊಂಡೀಲಿ ಹುಡುಕಿದರೇನೋ?:

ಈ ಸಾರಿಯ ಪ್ರಶ್ನೆಯಲ್ಲಿ ಉಗ್ರತೆ ವ್ಯಂಗ್ಯ ಎರಡೂ ಸ್ಪಷ್ಟವಾಗಿದ್ದುದು ಮುದುಕನಿಗೆ ಅರ್ಥವಾಯಿತೆಂದು ತೊರುತ್ತದೆ. ಅವನು ಮುಂದೆ  ಮಾತಾಡದೆ ನೆಲ ನೋಡತೊಡಗಿದನು. ಸಾಬಿಗಳಿಬ್ಬರೂ ನಗೆ ತಡೆಯಲಾರದೆ ಮುಖ ತಿರುಗಿಸಿಕೊಂಡರು. ನೋಡತೊಡಗಿದನು. ಸಾಬಿಗಳಿಬ್ಬರೂ ನಗೆ ತಡೆಯಲಾರದೆ ಮುಖ ತಿರುಗಿಸಿಕೊಂಡರು.

ಸಣ್ಣಬೀರನಿಗೆ ಆಗಲೆ ತೊಳ್ಳೆ ನಡುಗತೊಡಗಿತ್ತು!

"ಯಾರ ಹತ್ರವೂ ತನ್ನ ಈ ಪಡಪೋಸಿ?" ಗೌಡರ ಇಂಗಿತವರಿತ ಇಜಾರದ ಸಾಬಿ ದೊಡ್ಡಬೀರನಿಗೆ ನೇರವಾಗಿ ಪ್ರಶ್ನೆ ಹಾಕಿದನು.

"ಯಾಕೋ ಕಾಲು ನಡುಗಿಸುತ್ತಾ ನಿಂತೀಯ? ನೀನಾದರೂ ನಿಜ ಹೇಳೋ. ನಿನ್ನ ತಂಗೀನ ಎಲ್ಲಿ ಮುಚ್ಚಿಟ್ಟಿದ್ದಾರೋ? ಎಲ್ಲಿಗೆ ಕಳ್ಸಿದ್ರೋ?" ಮಿಳ್ಮಳನೆ ಮಾತು ಹೊರಡದೆ ಕಣ್ಣು ಕಣ್ಣು ಬಿಡುತ್ತಿದ್ದ ಸಣ್ಣಬೀರನನ್ನು ನಿರ್ದೇಶಿಸಿ ಲುಂಗೀಸಾಬು ಮತ್ತೆ ಎಚ್ಚರಿಕೆ ಹೇಳಿದನು "ಹೇಳುತ್ತಿದ್ದರೆ ಒಳ್ಳೆ ಮಾತಿನಲ್ಲಿ ಹೇಳು. ಇಲ್ಲದಿದ್ದರೆ, ನಿನಗೆ ಗೊತ್ತೆ ಇದೆಯಲ್ಲಾ ಕಂಬಕ್ಕೆ ಕಟ್ಟಿ ಬಾಯಿ ಬಿಡಿಸುತ್ತಾರೆ."

ಸಣ್ಣಬೀರ ನಡುಕುದನಿಯಲ್ಲಿ ಕೈಕೈ ಮುಗಿಯುತ್ತಾ "ಅಯ್ಯಾ, ನಿಮ್ಮ ಉಪ್ಪು ಅನ್ನ ತಿಂದು ನಿಮಗೆ ನಾ ಸುಳ್ಳು ಹೇಳಾದಿಲ್ಲ. ಧರ್ಮಸ್ಥಳದ ದೇವ್ರಾಣೆಗೂ ನಂಗೊತ್ತಿಲ್ಲ...." ಅವನಿನ್ನೂ ಹೇಳಿ ಮುಗಿಸಿರಲಿಲ್ಲ; ಗೌಡರು ಲುಂಗೀ

ಸಾಬುವನ್ನು ಕುರಿತು "ಹೇಗೊ, ಬುಡನ್, ಒಂದಷ್ಟು ಹುಣಿಸೇ ಬರಲು ಮುರುಕೊಂಡು ಬಾರೊ!" ಎಂದು ಇಜಾರದ ಸಾಬಿಯ ಕಡೆ ನೋಡಿ "ಏನೋ ನೋಡ್ತೀಯಾ? ಕಟ್ರೋ ಅವನ್ನ ಕಂಬಕ್ಕೆ!" ಎಂದು ಕಠಿಣಧ್ವನಿಯಲ್ಲಿ ಆಜ್ಞಾಪಿಸಿದರು.

ಇಜಾರದ ಸಾಬು ತನ್ನ ಕೈಯಿಂದ ಉಗ್ರಸನ್ನೆ ಮಾಡಿ ತಲೆಯಾಡಿಸಿ ಕರೆದೊಡನೆಯೆ, ಗಾಡಿಯ ನೊಗಕ್ಕೆ ಹೆಗಲು ಕೊಟ್ಟೂ ಕೊಟ್ಟೂ ಅಭ್ಯಾಸವಿದ್ದ ಗಾಡಿಯೆತ್ತು ಗಾಡಿ ಹೊಡೆಯುವವನು ಮೂಕಿಗೆ ಕೈಹಾಕಿ ಎತ್ತಿ ಲೊಚಗುಟ್ಟಿದೊಡನೆಯೆ ನೊಗಕ್ಕೆ ವಿಧೇಯತೆಯಿಂದ ಹೆಗಲು ಕೊಡುವಂತೆ, ಸಣ್ಣಬೀರ ನಡುನಡುಗುತ್ತಲೆ, ನಾಲಗೆ ಬಿದ್ದುಹೋಗಿ ಮಾತು ಸತ್ತವನಂತೆ, ಮೂಕಪಶುವಿನಂತೆ, ಒಮ್ಮೆ ಕೆರಳಿ ಕುಳಿತಿದ್ದ ಗೌಡರನ್ನೂ ಒಮ್ಮೆ ದುಃಖದೀನನಾಗಿ ಪರಿತಪಿಸುತ್ತಿದ್ದ ತನ್ನ ತಂದೆಯನ್ನೂ ನೋಡುತ್ತಾ ಶಿಕ್ಷಾ ಸ್ತಂಭದ ಕಡೆ ಮುಂದುವರಿದನು. ಅವನು ಹೋದ ರೀತಿ, ಆ ಕಂಬವನ್ನು ತಬ್ಬಿ ನಿಂತ ರೀತಿ, ಎರಡು ಕೈಗಳನ್ನೂ ಜೋಡಿಸಿ ಹಗ್ಗ ಬಿಗಿದುಕೊಂಡ ರೀತಿ, ಹೇಗಿತ್ತು ಎಂದರೆ ಆ ಯೂಪಸ್ತಂಭಕ್ಕೆ ಬಲಿ ಕಟ್ಟಿಸಿಕೊಳ್ಳುವ ಯಜ್ಞವಿಧಾನ ಅವನಿಗೆ ಪೂರ್ವ ಪರಿಚಿತವಾದದ್ದು ಎಂಬುದು ಚೆನ್ನಾಗಿ ಗೊತ್ತಾಗುವಂತಿತ್ತು. ತಾನು ಮಾತ್ರವೆ ಅಲ್ಲದೆ ಇತರ ಅಪರಾಧಿಗಳೂ ಗೌಡರ ಕ್ರೋಧಕ್ಕೆ ಪಾತ್ರರಾಗಿ ಆ ಯೂಪಸ್ತಂಭಕ್ಕೆ ಯಜ್ಞಪಶುಗಳಾಗಿದ್ದುದನ್ನು ಅವನು ಹಿಂದೆ ಎಷ್ಟೋ ಸಾರಿ ಕಂಡೂ ಇದ್ದನು, ಅನುಭವಿಸಿಯೂ ಇದ್ದನು. ಆಜ್ಞೆಯಾದೊಡನೆಯೆ ಹೋಗಿ, ನೊಗಕ್ಕೆ ಹೆಗಲು ಕೊಡುವಂತೆ ಕಂಬವನ್ನು ತಬ್ಬಿ ನಿಂತು ಕೈ ಕಟ್ಟಿಸಿಕೊಳ್ಳಲು ಒಪ್ಪದೆ ಪ್ರತಿಭಟಿಸಿದವರಿಗೆ ಏನು ಯಮಶಿಕ್ಷೆ ಒದಗುತ್ತಿತ್ತು ಎಂಬುದೂ ಅವನಿಗೆ ಗೊತ್ತಿದ್ದ ವಿಷಯವೇ ಆಗಿತ್ತು. ಆದ್ದರಿಂದಲೆ ಅವನು ಚಕಾರವೆತ್ತದೆ ಬೇಗಬೇಗ ಹೋಗಿ ಕಂಬವನ್ನಪ್ಪಿ ಕೈ ಕಟ್ಟಿಸಿಕೊಂಡದ್ದು!

ಲುಂಗೀಸಾಬು ತಂದು ಒಟ್ಟಿದ ಹುಣಿಸೆಬರಲುಗಳಲ್ಲಿ ಒಂದನ್ನು ತಜ್ಞನಂತೆ. ಪರಿಶೀಲಿಸಿ ಆರಿಸಿಕೊಂಡ ಇಜಾರದ ಸಾಬು ಸಣ್ಣಬೀರನ ಬತ್ತಲೆಯ ಬೆನ್ನಮೇಲೆಯೂ (ಹೊದೆದಿದ್ದ ಕಂಬಳಿಯನ್ನು ಸಣ್ಣಬೀರನೆ ಕಂಬ ತಬ್ಬಲು ಹೋಗುವ ಮುನ್ನ ಅನಿವಾರ್ಯ ರೂಢಿಗೆ ವಶನಾಗಿ ತೆಗೆದುಹಾಕಿದ್ದನು.) ಕೊಳಕಲಾಗಿದ್ದ ಹರಕಲು ಪಂಚೆ ಸುತ್ತಿದ್ದ ಅಂಡಿನ ಮೇಲೇಯೂ ಸಶಬ್ದವಾಗಿ ಪ್ರಯೋಗ ಮಾಡಿದನು. ಚಿಟಾರನೆ ಕೂಗಿಕೊಂಡು ಕೀರಿ ರೋಧಿಸುತ್ತಾ "ದಮ್ಮಯ್ಯ, ಸಾಬ್ರೆ, ಹೊಡೀಬ್ಯಾಡಿ. ನಾ ಸಾಯ್ತೀನಿ. ನನ್ನ ಹೆಂಡ್ರು ಮಕ್ಕಳ ಬಾಯ್ಗೆ ಮಣ್ಣು ಹಾಕಬ್ಯಾಡಿ. ನಿಮ್ಮ.... (ಒಂದು ಅಸಹ್ಯ ಪದ ಪ್ರಯೋಗ ಮಾಡಿ) ತಿನ್ತೀನಿ! ಅಯ್ಯೋ ಅಪ್ಪಾ ಬಿಡಿಸೋ! ನಂಗೊತ್ತಿಲ್ಲೋ, ತಿಮ್ಮಿ ಎಲ್ಲಿ ಹೋದ್ಲು ಅಂತಾ! ಅಯ್ಯೋ ಅಯ್ಯೋ ಅಯ್ಯೋ!" ಎಂದು ಸಣ್ಣಬೀರ ಒದ್ದಾಡಿಕೊಂಡು ಒರಲುತ್ತಿದ್ದ ಹಾಗೆಯೆ ಇಜಾರದ ಸಾಬಿ ಮತ್ತೂ ಒಂದು ಎರಡು ಮೂರು ಸಾರಿ ಬರಲನ್ನು ಬೀಸಿಬೀಸಿ ಹೊಡೆದೇಬಿಟ್ಟನು.

ಮೊದಲಬಾರಿಯ ಹೊಡೆತಕ್ಕೇ ಬಾಸುಂಡೆಗಳೆದ್ದಿದ್ದ ಬೆನ್ನು ಎರಡನೆಯ ಸುತ್ತಿನ ಪೆಟ್ಟುಗಳಿಗೆ ಇದ್ದಕಿದ್ದಹಾಗೆ ಕೆಂಪಾಯಿತು, ನೆತ್ತರು ಚಿಮ್ಮಿ! ಅವನು ಉಟ್ಟಿದ್ದ ಪಂಚೆ ಒದ್ದೆಯಾಗಿ ಕಾಲಮೇಲೆ ಇಳಿದ ಉಚ್ಚೆಗೆ ತೊಯ್ದಿತು. ಅಂಡಿನ ಬಟ್ಟೆಯೂ ರಕ್ತದಿಂದ ಕೆಂಪಾಯಿತು. ಅವನ ಕೂಗೂ ಒಮ್ಮೆಗೆ ನಿಂತುಬಿಟ್ಟಿತು! ತಲೆ ಕತ್ತಿನ ಮೇಲೆ ನಿಲ್ಲಲೊಲ್ಲದೆ ಜೋಲಿತು!

ದೊಡ್ಡಬೀರ ಗದ್ಗದಿಸುತ್ತಾ ಎದ್ದು ಓಡಿಹೋಗಿ ಗೌಡರ ಕಾಲಬಳಿ ದೊಪ್ಪನೆ ಬಿದ್ದು "ಒಡೆಯಾ, ನನ್ನ ಮಗನ್ನ ಉಳಿಸಿಕೊಡೀ!"ಎಂದು ಕೂಗಿಕೊಂಡನು.

ಅಷ್ಟರಲ್ಲಿ ತನ್ನ ಗಂಡಗೂ ಮಗಗೂ ಏನು ಗತಿಯಾಗುತ್ತದೆಯೊ ಎಂದು ಹೆದರಿ, ಬಿಡಾರದಿಂದ ಓಡೋಡಿ ಬಂದು, ಬಚ್ಚನೊಡನೆ ದೂರದಲ್ಲಿ ಮರೆಯಾಗಿ ನಿಂತಿದ್ದ ಸೇಸಿಯೂ ಎದೆಎದೆ ಬಡಿದುಕೊಳ್ಳುತ್ತಾ ಬಂದು, ಇಜಾರದ ಸಾಬಿಯ ಕೈಲಿದ್ದ ಹುಣಿಸೆಯ ಬರಲನ್ನು ಕಸಿದೆಸೆದು, ಅವನನ್ನು ತಳ್ಳಿ, ತಲೆ ಜೋಲುತ್ತಿದ್ದ ತನ್ನ ಮಗನನ್ನು ಆತುಕೊಂಡಳು!

ದಾಂಡಿಗನೂ ಬಲಿಷ್ಠನೂ ಕ್ರೂರಿಯೂ ಆಗಿ, ಇಂತಹ ಧೂರ್ತಕರ್ಮಗಳಲ್ಲಿ ನುರಿತು ನಿಷ್ಠುರನಾಗಿದ್ದ ಇಜಾರದ ಸಾಬುಗೆ ಅದೇನಾಯಿತೀ ಏನೋ? ಇದ್ದಕ್ಕಿದ್ದಂತೆ ಸತ್ವಹೀನನಾದವನಂತೆ ನಿರ್ಬಲವಾಗಿ, ಸೇಸಿ ದುಃಖಾರ್ತೆಯಾಗಿ ಓಡಿಬಂದು ಎಳೆದೊಡನೆ ಅವನ ಕೈಲಿದ್ದ ಹುಣಸೆಬರಲು ತನಗೆ ತಾನೆ ಎಂಬಂತೆ ಕೈಬಿಟ್ಟುಹೋಗಿತ್ತು! ಅವಲು ತಳ್ಳುದೊಡನೆ ಒಂದಲ್ಲ, ಎರಡು ಮಾರು, ಹಿಂಜರಿದು ಸ್ತಂಭೀಭೂತನಾದಂತೆ ನಿಂತು ಬಿಟ್ಟನು! ಹೊಲೆಯಳಾದರೂ, ಬಡವಳಾದರೂ, ಯಾವ ವಿಧವಾದ ವ್ಯಕ್ತಿತ್ವ ವಿಶೇಷವೂ ಲವಲೇಶವೂ ಇಲ್ಲದವಳಾದರೂ, ಸಂಕಟತಪ್ತ ತಾಯ್ತನ ಎಂತಹ ಅಲ್ಪ ಸ್ತ್ರೀಯನ್ನಾದರೂ ಭೂಮಪಟ್ಟಕ್ಕೇರಿಸಿಬಿಡುತ್ತದೆಯೋ ಏನೋ ಎಂಬಂತೆ, ಅವಳ ಮಾತೃ ದುಃಖ ಜನ್ಯಕ್ರೋಧದ ಸಾನ್ನಿಧ್ಯಭೀಷಣೆಗೆ ಕ್ಷಣಮಾತ್ರ ಭೀತಚೇತಸನಾದನು ಇಜಾರದ ಸಾಬಿ! ಗೌಡರ ಆಜ್ಞೆಯನ್ನು ಮರೆತು, ಸೇಸಿಯ ಮಾತಿಲ್ಲದ ಆಭತಿಗೆ ಒಳಗಾದವನಂತೆ, ಬೇಗಬೇಗನೆ ಸಣ್ಣಬೀರನನ್ನು ಬಿಗಿದಿದ್ದ ಹಗ್ಗದ ಕಟ್ಟುಗಳನ್ನೆಲ್ಲ ಬಿಚ್ಚಿಹಾಕಿದನು. ಪ್ರಜ್ಞೆ ತಪ್ಪಿದ್ದ ಪ್ರಾಯದ ಮಗನ ಭಾರವನ್ನು ಆತೂ  ಆನಲಾರದೆ ನೆಲದ ಮೇಲೆ ಮಲಗಿಸಿದಳು ಸೇಸಿ.

ಮೈಮೇಲೆ ಜಕಣಿ ಬಂದಿತೋ ಎಂಬಂತೆ, ಗೌಡರನ್ನು ಕಂಡರೆ ನೂರುಮಾರು ದೂರದಲ್ಲಿಯೆ ಕುಗ್ಗಿ ಹೆದರಿ ಹದುಗಿ ಹುದುಗಿಕೊಳ್ಳುವ ಸ್ವಭಾವದ ಸಹಜಭೀರು, ಆ ಹೊಲತಿ, ಏದುತ್ತಾ ನೀಡಿದಾಗಿ ಉಸಿರೆಳೆದು ಬಿಡುತ್ತಾ ಗೌಡರ ಕಡೆ ತಿರುಗಿ ಕೈಮುಗಿದಿಕೊಂಡು ರೋದನ ಮಿಶ್ರವಾದ ತಾರಸ್ವರದಲ್ಲಿ "ಸ್ವಾಮಿ, ನನ್ನ ಬೇಕೆಂದರೆ ಹೊಡೆದು ಹಾಕಿಸಿ! ನನ್ನ ಗಂಡ ಮಕ್ಕಳನ್ನು ಕೊನ್ನಬ್ಯಾಡಿ, ದಮ್ಮಯ್ಯ, ನನ್ನ ತಂದೇ!.... ತಿಮ್ಮಿ ಮತ್ತೆಲ್ಲಿಗೂ ಹೋಗಿಲ್ಲ. ಅವಳ ಮಾವನ ಮನೆಗೆ, ಸಿಂಬಾವಿ ಕೇರಿಗೇ ಹೋಗಿರಬ್ಕೆದು. ನಿನ್ನೆ ಅವಳ ಬಾವ ಬಂದಿದ್ದ.... ಅರಿಯದ ಮಗು.... ನಾ ಹೋಗಿ ಅವಳನ್ನೂ ಕರಕೊಂಡು ಬತ್ತೀನಿ.... ನಿಮ್ಮ ಉಪ್ಪು ಅನ್ನದ ರುಣ ತೀರಿಸ್ತೀವಿ, ನನ್ನ ಗಂಡನ್ನ ಮಗನ್ನ ಹೊಡೆದಬ್ಯಾಡೀ. ನನ್ನೊಡೆಯಾ, ತಪ್ಪಾಯ್ತು, ಕಾಲಿಗೆ ಬಿದ್ದೆ!" ಎಂದು, ಮೂರ್ಛಿತನಾಗಿ ಬಿದ್ದಿದ್ದ ಮಗನ ಪಕ್ಕದಲ್ಲಿಯೆ, ಗೌಡರು ಕೂತಿದ್ದ ಕಲ್ಲುಮಂಚದ ದಿಕ್ಕಿಗೆ ಉದ್ದುದ್ದವಾಗಿ ಅಡ್ಡಬಿದ್ದಳು.

ಬೆಟ್ಟಳ್ಳಿಯ ಕಲ್ಲಯ್ಯಗೌಡರು ಕಲ್ಲುಮಂಚದ ಮೇಲೆ ಕಲ್ಲಾಗಿಯೆ ಕುಳಿತಂತೆ ತೋರುತ್ತಿದ್ದರು, ತೋರುತ್ತಿದ್ದರು ಮಾತ್ರ. ವಾಸ್ತವವಾಗಿ ಅವರು ಸ್ವಭಾವತಃ ಕಲ್ಲೆದೆಯವರಾಗಿರಲಿಲ್ಲ. ಅವರು ನಡುವಯಸ್ಸಿನವರೆಗೂ ಮೆಲ್ಲದೆಯವರಾಗಿಯೆ ಇದ್ದು, ತಮ್ಮ ಮೆಲ್ಲೆದೆತನದ ದುರುಪಯೋಗ ಮಾಡಿಕೊಂಡು ತಮಗೂ ತಮ್ಮ ಸಂಸಾರಕ್ಕೂ ಕಷ್ಟನಷ್ಟಗಳನ್ನು ಉಂಟುಮಾಡಿದ್ದವರಿಂದ ರಕ್ಷಣೆ ಪಡೆಯುವ ಸಲುವಾಗಿ ಕಲ್ಲೆದೆತನವನ್ನು ಆರೋಪಿಸಿಕೊಂಡು, ಕಠೋರತೆಯನ್ನು ರಕ್ಷಾಕವಚದಂತೆ ತೊಟ್ಟುಕೊಂಡಿದ್ದರಷ್ಟೆ! ಬುದ್ಧಿಪೂರ್ವಕವಾಗಿ, ಒಂದು ಉದ್ದೇಶ ಸಾಧನೆಗಾಗಿ, ತಮ್ಮ ಮೃದುತ್ವವನ್ನು ಅಪಾಯದಿಂದ ಪಾರುಮಾಡುವುದಕ್ಕಾಗಿ ಕಠಿಣತೆಯ ಖರ್ಪರವನ್ನು ಅದರ ಸುತ್ತ ಬೆಳೆಸಿಕೊಂಡ ಮೇಲೆ ಅವರ ದರ್ಪಕ್ಕೆ ಹೆದರಿದ ಜನರಿಂದ ಅವರ ಕೆಲಸಗಳೆಲ್ಲ ಸುಸೂತ್ರವಾಗಿ ನಡೆಯತೊಡಗಿದ್ದುವು. ಆದರೆ ಕ್ರೌರ್ಯವನ್ನು ಪ್ರಯೋಗಿಸಿದ ಮೇಲೆ ಪ್ರತಿಸಲವೂ ತಪ್ಪದೆ ಅದರ ಪ್ರತೀಕಾರಕ್ಕೆ

ಒಳಗಾಗುತ್ತಿದ್ದರು, ಹೊಟ್ಟೆನೋವು, ತಲೆನೋವು, ಹಲ್ಲುನೋವು, ವಾಂತಿ, ದುಃಸ್ವಪ್ನಗಳಿಂದ ನಿದ್ದೆಗೇಡು, ವಿಕಾರರೂಪಗಳನ್ನು ಕಂಡು ಬೆದರುವ ಮಾನಸಿಕ ಭ್ರಾಂತಿ, ಏನೋ ಅಚಿಂತ್ಯ ಅಧೈರ್ಯ, ಏನೋ ಗೊತ್ತುಗುರಿಯಿಲ್ಲದ ಮನಃಕ್ಲೇಶ - ಇತ್ಯಾದಿಯಾಗಿ ಒಂದಲ್ಲ ಒಂದು ತೊಂದರೆಯಿಮದ ನರಳುತ್ತಿದ್ದರು.

ಈ ಕ್ರೌರ್ಯಪ್ರಯೋಗಕ್ಕೂ ತರುವಾಯ ಸಂಭವಿಸುತ್ತಿದ್ದ ದೈಹಿಕ ಅಥವಾ ಮಾನಸಿಕ ವ್ಯಾಧಿಗಳಿಗೂ ಕಾರ್ಯಕಾರಣ ಸಂಬಂಧವಿರಬಹುದೆಂಬುದನ್ನೂ ಕಲ್ಲಯ್ಯ ಗೌಡರು ಆಲೋಚಿಸಿರಲಿಲ್ಲ. ಯಾರಾದರೂ ಹೇಳಿದ್ದರೂ ಅವರು ನಂಬಲೂ ಸಿದ್ಧರಿರಲಿಲ್ಲ. ಅದಕ್ಕೆ ಬದಲಾಗಿ ದೆವ್ವ ದೇವರು ಭೂತ ಜಕಿಣಿ ಗ್ರಹ ಪಿಶಾಚಾದಿ ಅಲೌಕಿಕ ಮತ್ತು ಅತೀಂದ್ರಿಯ ಶಕ್ತಿಗಳ ಚೇಷ್ಟೆಯನ್ನೆ ಅವರು ನಿಜವಾದ ಕಾರಣ ಎಂದು ನಂಬಿ, ಅದಕ್ಕೆ ಅನುಗುಣವಾದ ಪರಿಹಾರೋಪಾಯಗಳನ್ನೆ ಕೈಗೊಳ್ಳುತ್ತಿದ್ದರು. ಆದರೆ ಪ್ರಾಜ್ಞೆಯಾಗಿದ್ದ ಅವರ ಹೆಂಡತಿ, ದೊಡ್ಡಮ್ಮ ಹೆಗ್ಗಡಿತಿಯವರು, ದೆಯ್ಯದ್ಯಾವರುಗಳಲ್ಲಿ ಇತರರಂತೆ ಶ್ರದ್ಧೆಯಿದ್ದವರಾದರೂ, ತನ್ನ ಗಂಡನ ಕ್ರೂರ ವರ್ತನೆಗೂ ತರುವಾಯ ಒದಗುತ್ತಿದ್ದ ದೈಹಿಕ ಮಾನಸಿಕ ವ್ಯಾಧಿ ವ್ಯಾಪಾರಗಳಿಗೂ ಸಂಬಂಧವಿರುವುದನ್ನು ಅನುಭವದಿಂದ ಕಂಡುಕೊಂಡಿದ್ದರು. ಅದಕ್ಕಾಗಿ ಅವರು ತನ್ನ ಗಮಡನನ್ನು ಕ್ರೌರ್ಯಪ್ರಯೋಗದಿಂದ ಪರಾಙ್ಮುಖಿಯನ್ನಾಗಿ ಮಾಡಲು ಸತತವೂ ಪ್ರಯತ್ನಿಸುತ್ತಿದ್ದರು. ಸೂಚನೆ ಕೊಟ್ಟಿದ್ದರು; ಬುದ್ಧಿವಾದ ಎಂದು ತೋರದಿರುವಂತೆ ಬುದ್ಧಿಹೇಳಿದ್ದರು; ಯಾವುದೂ ಪರಿಣಾಮಕಾರಿಯಾಗದಿರಲು ಕೆಲವು ದಿನಗಳು ಮಾತು ಬಿಟ್ಟಿದ್ದರು; ಕಡೆಗೆ ಉಪವಾಸವನ್ನೂ ಮಾಡತೊಡಗಿದ್ದರು. ಹೆಂಡತಿ ಮಾತುಬಿಟ್ಟಾಗ ಮತ್ತು ಉಪವಾಸಕ್ಕೆ ತೊಡಗಿದಾಗ ಗೌಡರು ಹೆದರಿ ಹಿಂಜರಿಯುತ್ತಿದ್ದರು. ಆದರೂ ಅನಿವಾರ್ಯವೆಂದು ಅವರಿಗೆ ತೋರಿದಾಗ ತಮ್ಮ ಹೆಂಡತಿಗೆ ತಿಳಿಯದಂತೆ ದಂಡನಕಾರ್ಯದಲ್ಲಿ ತೊಡಗುತ್ತಿದ್ದರು. ಆ ದಿನ ಅವರು ತೊಡಗಿದ್ದ ದಂಡನ ಕಾರ್ಯವೂ ಗೋಪ್ಯ ಸ್ವರೂಪದ್ದೇ ಆಗಿತ್ತು.

ಆದ್ದರಿಂಲೇ ಇಜಾರದ ಸಾಬಿಯ ಹೊನ್ನಳ್ಳಿಹೊಡೆತಕ್ಕೆ ಸಣ್ಣಬೀರನು ಚಿಟಾರನೆ ಚೀರಿಚೀರಿ ಗೋಳಿಟ್ಟುದನ್ನು ಕೇಳಿದಾಗ ಅವರ ಸಹಜ ಮರುಕ ಹೃದಯದ ಅಂತರಾಳದಲ್ಲಿ ಇಣಿಕಿಬಂದರೂ ಅದನ್ನು ದರ್ಪಹೀನತೆಯ ದೌರ್ಬಲ್ಯವೆಂದು ದಮನಮಾಡಿ, ಅವನ ರೋದನ ಎಲ್ಲಿಯಾದರೂ ದೂರದ ಒಳಗೆ ಅಡುಗೆಮನೆಯಲ್ಲಿರುವ ತಮ್ಮ ಹೆಂಡತಿಗೆ ಕೇಳಿಸಿಬಿಟ್ಟೀತಲ್ಲಾ ಎಂದು ಸಿಟ್ಟಿಗೆದ್ದು "ಏನು ಒರಲ್ತಾನೊ ಹೊಲೆಮುಂಡೆಗಂಡ? ಅವನ ಬಾಯಿಗೆ ಒಂದು ಬಟ್ಟೆನಾದ್ರೂ ತುರುಕೋ!" ಎಂದು ಸಿಡುಕಿದರು. ತನ್ನ ಕಾರ್ಯದಲ್ಲಿಯೇ ಮಗ್ನನಾಗಿದ್ದ ಇಜಾರದ ಸಾಬಿಗೆ ಅದು ಕೇಳಿಸಿರಲಿಲ್ಲವಾದ್ದರಿಂದ ಆ ಬಾಯಿಗೆ ಬಟ್ಟೆ ತುರುಕುವ ರೋದನನಿರೋಧ ಕಾರ್ಯ ನಡೆದಿರಲಿಲ್ಲ!

ಸಣ್ಣಬೀರನ ರೋದನ ತಕ್ಕಮಟ್ಟಿಗೆ ದೂರಗಾಮಿಯಾಗಿಯೆ ಇದ್ದಿತಾದರೂ ಬೆಟ್ಟಳ್ಳಿ ಮನೆ ನೂರಾರು ವರ್ಷಗಳ ಹಿಂದಿನ ಭದ್ರ ರಚನೆಯಾಗಿ, ಸುವಿಶಾಲ ವಾಗಿದ್ದುದರಿಂದ ಚಾವಡಿಗೂ ಅಡುಗೆ ಮನೆಗೂ ಸುಮಾರು ದೂರವಿದ್ದು, ಚಾವಡಿಯಲ್ಲಿ ನಡೆಯುವ ಗದ್ದಲ ಸಾಧಾರಣವಾಗಿ ಅಲ್ಲಿಗೆ ತಲುಪುತ್ತಲೆ ಇರಲಿಲ್ಲ.

ಆದರೂ ದೊಡ್ಡಮ್ಮ ಹೆಗ್ಗಡತಿಯವರಿಗೆ ಅದು ಗೊತ್ತಾಯಿತು! ಯಾರ ಚಾಡಿಯ ಪರಿಣಾಮವಾಗಿಯೇ ದೊಡ್ಡಬೀರ ಸಣ್ಣಬೀರರು ಈಗ ಚಾವಡಿಶಿಕ್ಷೆಗೆ ಗುರಿಯಾಗಿದ್ದರೋ ಆ ಬಚ್ಚನೆ ಓಡಿಹೋಗಿ ಹಿತ್ತಲುಕಡೆಯ ಬಾಗಿಲಲ್ಲಿ ದೊಡ್ಡಮ್ಮಹೆಗ್ಗಡತಿಯವರಿಗೆ ದೂರು ಕೊಟ್ಟಿದ್ದನು. ತನ್ನ ಮದುವೆಗೆ ಗೊತ್ತಾಗಿದ್ದ ಹೆಣ್ಣನ್ನು ಅನ್ಯರ ಪಾಲುಮಾಡಲು

ಹವಣಿಸಿದ್ದ ದೊಡ್ಡಬೀರನಿಗೆ ಗೌಡರಿಂದ ಗದರಿಸಿ ಬುದ್ಧಿ ಹೇಳಿಸಿ, ತಿಮ್ಮಿಯನ್ನು ಹಿಂದಕ್ಕೆ ಎಳೆಯಿಸಿ ತಂದು ತಾನೆ ಮದುವೆಯಾಗಬೇಕು ಎಂಬ ಆಶೆಯಿಂದ ಅವನು ಆ ಚಾಡಿಯ ಕೆಲಸದಲ್ಲಿ ತೊಡಗಿದ್ದನೆ ವಿನಾ 'ಹೊನ್ನಳ್ಳಿಹೊಡೆತ'ಕ್ಕೆ ತನ್ನ ಮಾವ ಬಾವಂದಿರನ್ನು ಗುರಿಪಡಿಸಬೇಕೆಂದು ಎಂದಿಗೂ ಅವನ 'ಇರಾದೆ' ಆಗಿರಲಿಲ್ಲ. ಆದ್ದರಿಂದ ಸಣ್ಣಬೀರನನ್ನು ಕಂಬಕ್ಕೆ ಕಟ್ಟಿಸಿ ಸಾಬರಿಂದ ಹೊಡೆಯಿಸುತ್ತಾರೆಂದು ಗೊತ್ತಾದೊಡನೆ ಮರೆಯಲ್ಲಿ ನಿಂತು ವೀಕ್ಷಿಸುತ್ತಿದ್ದ ಅವನು ತನ್ನ ಅತ್ತೆ ಸೇಸಿಗೆ ಆ ದುರಂತ ವಾರ್ತೆಯನ್ನು ತಿಳಿಸಲೆಂದು ಕೇರಿಯ ಕಡೆಗೆ ಓಡುತ್ತಿದ್ದವನಿಗೆ ತನ್ನ ಇದಿರಾಗಿ ಏದುತ್ತಾ ಬೇಗಬೇಗನೆ ಕುಕ್ಕೋಟದಿಂದ ಧಾವಿಸಿ ಬರುತ್ತಿದ್ದ ಸೇಸಿಯ ಇದಿರಾಗಿದ್ದಳು. ಮಗಳನ್ನು ಗುತ್ತಿಯೊಡನೆ ಓಡಿಹೋಗುವಂತೆ ಮಾಡಿ. ಅದನ್ನು ಗುಟ್ಟಾಗಿಟ್ಟಿದ್ದ ತನ್ನ ವರ್ತನೆಯಿಂದ ತನ್ನ ಗಂಡನಿಗೂ ಹಿರಿಯ ಮಗನಿಗೂ ಏನು ಗತಿಯಾಗುತ್ತದೆಯೋ ಎಂದು ಹೆದರಿ, ಪಶ್ಚಾದವಿವೇಕದಿಂದ ಪ್ರಚೋದಿತಳಾಗಿ ಅವಳು "ಮನೆ" ಗೆ ಓಡಿಬರುತ್ತಿದ್ದಳು. ಬಚ್ಚನಿಂದ ನಡೆಯುತ್ತಿದ್ದ ಸಂಗತಿಯನ್ನೆಲ್ಲ ತಿಳಿಯುತ್ತಾ ಅವರೊಡನೆ ಅವನ ಹಿಂದೆಯೆ ಓಡೋಡಿ ಬಂದು ಚಾವಡಿಗೆ ತುಸು ದೂರದಲ್ಲಿದ್ದ ಹೆಬ್ಬಸಿರಿ ಮರದ ಬುಡದಲ್ಲಿ ಮರೆಯಾಗಿ ನಿಂತು ನೋಡುತ್ತಿದ್ದಂತೆಯೆ ಮಗನ ಒರಲು ಕಿವಿಗೆ ಬಿದ್ದು ತಾಯಿಯ ಕರುಳನ್ನೆ ಇರಿದು ಕೊರಲನ್ನೆ ಕೊಯ್ದಂತಾಗಲು, ಪುತ್ರಮೋಹಾವೇಶವಶಳಾಗಿ ಸಣ್ಣಬೀರನ ರಕ್ಷೆಗೆ ನುಗ್ಗಿದಳು!

ಸೇಸಿ ಅತ್ತ ನುಗ್ಗಿದೊಡನೆ ಬಚ್ಚ ಇತ್ತ ಹಿತ್ತಲು ಕಡೆಯ ಬಾಗಿಲಿಗೆ ಧಾವಿಸಿ ಆಸ್ತಾನದಲ್ಲಿ ಆಗುತ್ತಿದ್ದ ಅನಾಹುತವನ್ನು ತಪ್ಪಿಸಲು ಅಂತಃಪುರಕ್ಕೆ ದುರುಕೊಟ್ಟಿದ್ದನು.

ಅಡುಗೆಯ ಮನೆಯಲ್ಲಿ, ಒಲೆಗಳಿದ್ದ ಸ್ಥಳದಿಂದ ಸ್ವಲ್ಪದೂರದಲ್ಲಿ, ಮರದ ಸರಳುಗಳ ಬೆಳಕಂಡಿಯಿಂದ ತೂರಿಬರುತ್ತಿದ್ದ ಎಳಬಿಸಿಲಿನ ಪಟ್ಟೆಪಟ್ಟೆ ರಂಗೋಲಿಯಂತಹ ಬೆಳಕು ನೆಳಲಿನ ಜಾಗದಲ್ಲಿ 'ಉರುಡು ಹಾಸಗೆ'ಯ ಮೇಲೆ ಅಂಗಾತನೆ 'ಉರುಡುಹಾಕಿದ್ದ' ಬತ್ತಲೆ ಮೆಯ್ಯ ಮೊಮ್ಮಗ ಚೆಲುವಯ್ಯನನ್ನು ಆಡಿಸುವ ಸುಖದಲ್ಲಿ ಸಂಪೂರ್ಣವಾಗಿ ಮಗ್ನರಾಗಿದ್ದ ದೊಡ್ಡಮ್ಮ ಹೆಗ್ಗಡಿತಿಯವರು ಬಚ್ಚನು ಕಿಟಕಿಯಾಚೆಯಿಂದಲೆ ಕೂಗಿ ಹೇಳಿದ್ದನ್ನು ಕೇಳಿ "ತಮ್ಮಾ, ತಮ್ಮಾ, ಅಲ್ಲಿ ಓಡಿಹೋಗಪ್ಪಾ! ಏನಾದ್ರೂ ಆದಲಾರದ್ದು ಆಗಿಬಿಟ್ಟಾತು! ಅವರಿಗೆ ಸಿಟ್ಟು ಬಂದಾಗ ಮೈಮೇಲೆ ಎಚ್ಚರಿರಾದಿಲ್ಲ. ಅಯ್ಯೋ ದೇವರೆ!" ಎಂದು, ಅಂಕಟದನಿಯಲ್ಲಿ, ಒಲೆಯ ಬಳಿ ತನ್ನ ಹೆಂಡತಿ ದೇವಮ್ಮಗೆ ಕಾಫಿಗೆ ಹಾಕುವ ಹಿಟ್ಟಿನ ಪ್ರಮಾಣವನ್ನೂ ಕಾಫಿ ತಯಾರಿಸುವ ರೀತಿಯನ್ನೂ ತೋರಿಸಿ ಕೊಡುತ್ತಿದ್ದ ದೇವಯ್ಯನಿಗೆ ಹೇಳಿದರು. ಮದ್ದು ಮೊಮ್ಮಗನ ಮಿದುವಾದ ನಸುಗೆಂಪಿನ ಮೆಯ್ಯ ಕೋಮಲತೆಯನ್ನು ತನ್ನ ಮುದಿ ಒರಟು ಅಂಗೈಯಿಂದ ಮುಟ್ಟಿ ನೀವಿ ದಿವ್ಯಸುಖಾನುಭವ ಮಾಡುತ್ತಿದ್ದ ಅಜ್ಜಮ್ಮಗೆ ಬಚ್ಚನು ಕೊಟ್ಟ ಸುದ್ದಿ ಕಡು ಕಠಿನ ಕರ್ಕಶದಂತೆ ತೋರಿತ್ತು. ಹಿಂದೊಮ್ಮೆ ಜೀತದಾಳು ಹೊಲೆಯನೊಬ್ಬನ ಎದೆಯಮೇಲೆ ಹಲಗೆ ಹಾಕಿಸಿ ಮೆಟ್ಟಿಸಿ, ಅವನು ರಕ್ತಕಾರಿಕೊಂಡು, ತರುವಾಯ ಮೃತನಾಗಿದ್ದ ಕಹಿನೆನಪು ಮರುಕೊಳಿಸಿ ಅವರಿಗೆ ಅಸಹ್ಯವೇದನೆಯಾಯಿತು. ಶಿಶು ಚೆಲುವಯ್ಯನ ಕೈ ಕಾಲು ಒದರಾಟ, ತೊದಲು ತೊದಲು ಉಲಿದಾಟ, ತಿಳಿಯಾದ ಮುಗ್ಧ ಕಣ್ಣುಗಳ ಸುಳಿದಾಟ - ಇವುಗಳ ತಮ್ಮ ಗಂಡನನ್ನೂ ತನ್ನನ್ನೂ ಕ್ರೂರಕರ್ಮಗಳಿಗಾಗಿ ಭರ್ತ್ಸನೆಮಾಡುವಂತೆ ಭಾಸವಾಯಿತು. ಮತ್ತೊಮ್ಮೆ ದೇವಯ್ಯನಿಗೆ ಅಂಗಲಾಚಿದರು: "ಹೋಗೋ, ತಮ್ಮಾ, ಬ್ಯಾಗ ಆ ದುಣ್ಣ ಮುಂಡೇಗಂಡ, ಸಾಬಿ, ಹೊಡೆದು ಕೊಂದೇ ಬಿಟ್ಟಾನು! ಆ ಪಾಪ ಹೊತ್ತುಕೊಂಡು ನಾವು ಎಲ್ಲಿ ತೀರಿಸಾನ? ಆ ಸಣ್ಣಬೀರನೊ ಮೊನ್ನೆ ಮೊನ್ನೆ ಮದುವೆ ಆಗ್ಯಾನೆ! ಅಯ್ಯೋ ದೇವರೆ!"

ಬೆಟ್ಟಳ್ಳಿಮನೆಗೆ ಕಾಫಿ ಪ್ರವೇಶವಾಗಿ ಬಹಳಕಾಲ ಆಗಿರಲಿಲ್ಲ. ತನ್ನ ತಾಯಿಗೂ ಹೆಂಡತಿಗೂ ಕಾಫಿ ಸರಿಯಾಗಿ ತಯಾರಿಸಲು ಬರುವುದಿಲ್ಲ ಎಂಬುದು ದೇವಯ್ಯನ ಮತವಾಗಿತ್ತು. ಅವನ ಪಾಲಿಗೆ ಉತ್ತಮ ಕಾಫಿಗೆ ಒರೆಗಲ್ಲು ಎಂದರೆ ಪಾದ್ರಿ ಜೀವರತ್ನಯ್ಯನ ಮಗಳು, ಜೋತಿರ್ಮಣಿಯಮ್ಮ, ಅವರು ತೀರ್ಥಹಳ್ಳಿಗೆ ಹೋದಾಗಲೆಲ್ಲ ಅವನಿಗೆ ಮಾಡಿಕೊಡುತ್ತಿದ್ದ ಕಾಫಿ. ದೇವಮ್ಮ ಗಂಡನ ಉಪದೇಶಾತ್ಮಕ ಉಪನ್ಯಾಸವನ್ನು ಪರಿಹಾಸಾಂಚಿತ ಕಿರುನಗೆಯಿಂದ ಸುಮ್ಮನೆ ಹೂಂಗುಡುತ್ತಿದ್ದಳು. ಅವಳಿಗೆ ಅವನ ಬೋಧನೆಯಿಂದ ಯಾವ ಪ್ರಯೋಜನವೂ ಆಗುವಂತಿರಲಿಲ್ಲ. ತನ್ನ ಗಂಡನಿಗಿಂತಲೂ ತನಗೇ ಅದರಲ್ಲಿ ಹೆಚ್ಚು ಅಭಿರುಚಿಯೂ ಅನುಭವವೂ ಇದೆ ಎಂಬುದು ಅವಳ ನಂಬಿಕೆಯಾಗಿತ್ತು. ಜೋತಿರ್ಮಣಿಯ ಕಾಫಿಯ ರುಚಿಗೆ ಏನು ಕಾರಣ ಎಂಬುದೂ ಅವಳ ಹೆಣ್ಣೆದೆಗೆ ಗೋಚರವಾಗಿತ್ತು! ಆದ್ದರಿಂದಲೆ ಅವಲು ಸ್ವಲ್ಪ ವಿಡಂಬನ, ಸ್ವಲ್ಪ ಪರಿಹಾಸ, ಸ್ವಲ್ಪ ತಿರಸ್ಕಾರ, ಸ್ವಲ್ಪ ಮಾತ್ಸರ್ಯಗಳಿಂದ ಹಾಸುಹೊಕ್ಕಾಗಿ ಕಿರುನಗೆಯನ್ನು ಬೀರುತ್ತಾ ಪಾತ್ರೆಯ ಮೇಲೆ ಬಾಗಿ ಗಂಡನ ಮಾತಿಗೆ ಕಿವಿಗೊಡುವಂತೆ ನಟಿಸುತ್ತಿದ್ದಳು. ಅವಲ ಮನಸ್ಸೆಲ್ಲ 'ಉರುಡು ಹಾಸಿಗೆ'ಯ ಮೇಲಿದ್ದ ಮುದ್ದು ಕಂದನಿಗೆ ಮೊಲೆಕೊಡಲು ಹೊತ್ತಾಯಿತಲ್ಲಾ ಎಂಬುದರ ಕಡೆಗೇ ಇದ್ದಿತು. ಅತ್ತ ಗಂಡನಿಗೆ ಬೇಗ ಚಾವಡಿಗೆ ಹೋಗುವಂತೆ ಬೆಸನಿತ್ತಾಗ, ಅವಳು ಅದ್ಯಕ್ಕೆ ಉಪದೇಶ ಮುಗಿಯುವುದಲ್ಲಾ ಎಂದು ಸುಯ್ಯುತ್ತಾ ನೆಟ್ಟಗೆ ನಿಂತಳು, ಕೊರಳಿನಿಂದ ನೇತುಬಿದ್ದಿದ್ದ ಕರಿಮಣಿ ತಾಳಿಯ ಸರವೂ ಕಟ್ಟಾಣಿಯೂ ಎದೆಗವುಚಿ ಗೊಬ್ಬೆ ಸೆರಗಿನಲ್ಲಿ ಹುದುಗುವಂತೆ.

ಅವ್ವನ ಆಣತಿಗೆ ದೇವಯ್ಯ "ಇರಲವ್ವಾ, ಹೋಗ್ತೀನಿ…. ಆ ಬಟ್ಟೆ ಮಕ್ಕಳಿಗೆ ಬೆನ್ನು ಮುರಿಯೋ ಹಾಂಗೆ ಒಂದೆರಡು ಬೀಳಲಿ!…. ಬಚ್ಚನಿಗೆ ಹೇಳಿದ್ರಂತೆ ಆ ದೊಡ್ಡಬೀರನ ಬಿಡಾರದವರು…." "ಏ, ನೀ ಎತ್ತಲಾಗಿ ನೋಡ್ತಿದ್ದೀಯೆ? ನಾ ಹೇಳಾದನ್ನ ಸ್ವಲ್ಪ ಕಿವಿ ಮೇಲೆ ಹಾಕಿಕೊ! ಸುಮ್ಮನೆ ದಿನಾ ಬೋರುಗಾಫಿ ಮಾಡಬ್ಯಾಡ!" ಎಂದು ಆಗತಾನೆ ನೆಟ್ಟಗೆ ನಿಂತಿದ್ದ ಹೆಂಡತಿಯ ಕಡೆ ಮುನಿದು ನುಡಿದು, ಮತ್ತೆ ತಾಯಿತನ್ನು ನಿರ್ದೇಶಿಸಿ ಹೇಳಿದನು: "ಹೇಳಿದ್ರಂತೆ ಆ ದೊಡ್ಡಬೀರನ ಕಡೆಯವರು ನಮ್ಮ ಗಾಡಿ ಬಚ್ಚನಿಗೆ 'ನಿನಗ್ಯಾರೋ ಹೆಣ್ಣುಕೊಡ್ತಾರೆ? ಸಣ್ಣಗೌಡ್ರು ತಾಂವೂ ಜಾತಿ ಕೆಡೋದಲ್ಲದೆ, ನಿನ್ನೂ ಜಾತಿ ಕೆಡಿಸಾಕೆ ಹೊಲ್ಟಾರೆ! ನಮಗೆ ಇಷ್ಟಾ ಇಲ್ಲಪ್ಪ, ಜಾತಿ ಕೆಡಾಕೆ!' ಅಂತ…."

"ಕಾಫಿ ಹಿಟ್ಟು, ಈಗೇನು ಎಲ್ಲಿಗೂ ಓಡಿಹೋಗೋದಿಲ್ಲ! ಆಮೇಲೆ ಹೇಳಿಕೊಡಬಹುದಂತೆ! ಈಗ ಹೋಗಿ; ಬಿಡಿಸಿ ಅವನ್ನ!" ಎಂದಳು ದೇವಮ್ಮ, ತನ್ನ ಕಡೆ ನೋಡುತ್ತಿದ್ದ ಗಂಡನ ಕಣ್ಣನ್ನು ಒಲವಿನಿಂದಿರಿದು ನೋಡಿ.

ದೇವಯ್ಯ ನಿರುಪಾಯನಾದವನಂತೆ ಸರಕ್ಕನೆ ಎದ್ದು ಚಾವಡಿಗೆ ಧಾವಿಸಿದನು.

ಅವನು ಹೋಗಿ ಎರಡು ಮೂರು ನಿಮಿಷ ಆಗಿರಲಿಲ್ಲ. ಮತ್ತೆ ಓಡುತ್ತಲೆ ಒಳಗೆ ಬಂದು "ಅವ್ವಾ, ಅವ್ವಾ, ಒಂದು ಸ್ವಲ್ಪ ತೆಂಗಿನೆಣ್ಣೆ ಕೊಡು…." ಎಂದು ಬರಿದಾಗಿದ್ದ ಉರುಡು ಹಾಸಗೆಯ ಬಳಿಯಿದ್ದ ತಾಯಿಗೆ ಹೇಳಿ, ತನ್ನ ಹೆಂಡತಿಯನ್ನು ಹುಡುಕುವವನಂತೆ ಅತ್ತ ಇತ್ತ ನೋಡಿ "ಅವಳೇಲ್ಲಿ? ಆ ಪಾದ್ರಿ ಕೊಟ್ಟಿದ್ದ ಗಾಯಕ್ಕೆ ಹಾಕುವ ಔಷಧ, ಬಿಳಿಪುಡಿ, ಬೇಕಿತ್ತಲ್ಲಾ!" ಎಂದನು.

ತುಸು ಕತ್ತಲಾಗಿದ್ದೆಡೆಯಲ್ಲಿ ಚೆಲುವಯ್ಯನಿಗೆ ಮೊಲೆ ಕೊಡುತ್ತಾ ಆ ಸುಖಾನುಭವದಲ್ಲಿ ಮಗ್ನೆಯಾಗಿ ಕುಳಿತಿದ್ದ ದೇವಮ್ಮ ತನ್ನ ಬಿಳಿ ಮೈ ಕಾಣಿಸುತ್ತಿದ್ದ ವಕ್ಷಭಾಗವನ್ನು, ಮಗನಿಗೆ ಮೊಲೆ ಉಣ್ಣಲು ತೊಂದರೆಯಾಗದಂತೆ,

ಬೇಗಬೇಗನೆ ಸೆರಗೆಳೆದು ಓರೆಮಾಡಿಕೊಂಡು ಹೇಳಿದಳು: "ಆ ಬಿಳಿಪುಡಿ ಪುಟ್ಟಾನೆ? ನಮ್ಮ ಕೋಣೆ ನಾಗಂದಿಗೆ ಮೇಲೆ ಇರಬೇಕು. ಹುಡುಕಿನೋಡಿ ನೀವೇ ತಗೊಳ್ಳಿ" ತಾನು ಆಗತಾನೆ ಕೈಗೊಂಡಿದ್ದ ಕೆಲಸದ ಮಹತ್ತು ಗಂಡನಿಗೆ ಮನದಟ್ಟಾಗಲಿ ಎಂಬುದು ಅವಳ ಇಂಗಿತವಾಗಿತ್ತು.

"ಏನಾಗಿದೆಯೋ, ತಮ್ಮಾ?" ದೊಡ್ಡಮ್ಮ ಹೆಗ್ಗಡತಿಯರು ಆದಷ್ಟು ಸರಭಸವಾಗಿ ಕಾತರತೆಯಿಂದಲೆ ಎದ್ದು ಎಣ್ಣೆ ಕುಡಿಕೆಯನ್ನು ಮೂಲೆಯಲ್ಲಿದ್ದ ಸಿಕ್ಕದಿಂದ ತೆಗೆದುಕೊಡುತ್ತಾ ಕೇಳಿದರು.

"ಆಗೋದೇನು? ಆ ಕೋಣೆಯ, ಇಜಾರದ ಸಾಬಿ, ಅಡಸಲಾ ಬಡಸಲಾ ಹೊಡೆದು ಬಿಟ್ಟಿದ್ದಾನೆ!" ಎನ್ನುತ್ತಾ ಎಣ್ಣೆಕುಡಿಕೆ ಈಸಿಕೊಂಡು, ಗಾಯಕ್ಕೆ ಹಾಕುವ ಔಷಧಿಯನ್ನು ತೆಗೆದುಕೊಳ್ಳಲು ತಮ್ಮ ಮಲಗುವ ಕೋಣೆಗೆ ಓಡಿದನು, "ನಮ್ಮ ಅಪ್ಪಯ್ಯಗೆ ಯಾವಾಗ ಬುದ್ಧಿ ಬರ್ತದೆಯೋ? ನಾ ಕಾಣೆ!" ಎಂದುಕೊಳ್ಳುತ್ತಾ.

ಅದನ್ನಾಲಿಸಿದ ಅವನ ತಾಯಿ, ಹಿಂದೊಮ್ಮೆ ದೇವಯ್ಯ ತುಳಸಿಕಟ್ಟೆಯನ್ನು ಮೀಟಿ ತೆಗೆಯಲು ಸವೆಗೋಲು ತೆಗೆದುಕೊಂಡು ಅಂಗಳಕ್ಕಿಳಿದಾಗ ಬಾರುಮಾಡಿದ್ದ ಕೋವಿಯನ್ನೆ ಮಗನ ಕಡೆಗೆ ಗುರಿಹಿಡಿದು, ತಾನು ಅದನ್ನು ತಡೆದಿದ್ದಾಗ ಇದ್ದ ತನ್ನ ಗಂಡನ ಉಗ್ರ ಸ್ವರೂಪವನ್ನು ನೆನೆದುಕೊಂಡು "ಅಯ್ಯೋ! ದೇವರೇ!" ಎಂದು ದೀರ್ಘವಾಗಿ ಸುಯ್ದರು!

ಆದರೆ ಅಡುಗೆಮನೆಯ ಒಂದು ಕಂಬಕ್ಕೆ ಬೆನ್ನು ಆನಿಸಿ ಇರಗಿ ಚಿಕ್ಕಾಲು ಬಕ್ಕಾಲು ಹಾಕಿ ಅರೆಗತ್ತಲಲ್ಲಿ ಕುಳಿತಿದ್ದ ಅಮ್ಮನ ತೊಡೆಯ ಮೇಲೆ ಮಲಗಿ ಮೃದು ಸಶಬ್ದವಾಗಿ ಮೊಲೆಯುಣ್ಣುತ್ತಿದ್ದ ಕಂದನ ಆನಂದವನ್ನು ಸಾಸಿರ್ಮಡಿಯಾಗಿ ಸವಿಯುತ್ತಾ ಸುಖಮೂರ್ಛೆಗೆ ಸದೃಶವಾದ ಚಿತ್ತಸ್ಥಿತಿಯಲ್ಲಿದ್ದ ಚೊಚ್ಚಲುತಾಯಿ ದೇವಮ್ಮನ ಪ್ರಜ್ಞೆಗೆ ಹೊರಗಣ ಲೋಕದ ಕಠೋರತೆಯಾಗಲಿ ಕ್ರೌರ್ಯವಾಗಲಿ ತಮ್ಮ ತೀಕ್ಷ್ಣವಾಸ್ತವ ರೂಪದಲ್ಲಿ ಪ್ರವೇಶಿಸುವಂತಿರಲಿಲ್ಲ. ಕಾವ್ಯ ಪ್ರಪಂಚದಲ್ಲಿ ಯಾತ್ರಿಯಾಗುವ ರಸಾಸ್ವಾದಿ ಸಹೃದಯನ ಪ್ರಜ್ಞೆಗೆ ಸಂಭವಿಸುತ್ತದೆ ಎಂದು ಹೇಳಲಾಗುವ ಒಂದು ಸದ್ಯಃಪರವಾದ ನಿರ್ವೃತಿ ಅವಳ ಚೇತನವನ್ನು ತನ್ನ ವಕ್ಷಸ್ಥಲದಲ್ಲಿಟ್ಟುಕೊಂಡು ರಕ್ಷಿಸಿತ್ತು. ತನ್ನ ಜೀವದ ಸಾರಸರ್ವಸ್ವವೆ ಬಹಿರ್ಭೂತವಾಗಿ ಮುದ್ದಿನ ಮುದ್ದೆಯಾದಂತಿದ್ದ ತನ್ನ ಕಂದನ ಮಿದು ತುಟಿ ತನ್ನೆದೆಯ ಪೀಯೂಷಕಲಶದ ತೊಟ್ಟಿಗೆ ಸೋಕಿ ಅದನ್ನು ಚೀಪುತ್ತಿರುವಾಗ ಸಂಸಾರದ ಯಾವ ಕೋಟಲೆಯೂ ಅವಳ ರಸನಿದ್ರಾ ಸಮಾಧಿಗೆ ಭಂಗ ತರಲು ಸಮರ್ಥವಾಗಿರಲಿಲ್ಲ: ಸಣ್ಣಬೀರನ ಸಂಕಟವಾಗಲಿ, ತನ್ನ ಗಂಡನ ಬಹು ಪ್ರಣಯಾಶಂಕೆಯಾಗಲಿ, ತನ್ನ ಹಳೆಮನೆಯ ಅಕ್ಕಯ್ಯಗೆ ಒದಗಿದ್ದ ಮಹಾವಿಪತ್ತಾಗಲಿ! ತಾಯಿ ಕೊಟ್ಟಳು; ಮಗು ಈಂಟಿತು: ಜಗತ್ತಿನ ಇತರ ಕರ್ಮಗಳೆಲ್ಲ ತತ್ಕಾಲದಲ್ಲಿ ಸ್ಥಗಿತಗೊಂಡಂತಿದ್ದುವು, ವಿಶ್ವಗೌರವಭಾಜನವಾದ ಆ ಜಗದ್ಭವ್ಯ ಘಟನೆಯ ಮುಂದೆ!

* * *

# ೨೪

ಒಡೆಯರ ಮನೆಯಿಂದ ಗಂಡನನ್ನೂ ಹಿರಿಯ ಮಗನನ್ನೂ ರಕ್ಷಿಸಿ ಕೇರಿಗೆ ಕರೆದುಕೊಂಡು ಬಂದ ಸೇಸಿ ಆ ದಿನವೆ ಮಧ್ಯಾಹ್ನದ ಮೇಲೆ, ಕಲ್ಲಯ್ಯಗೌಡರಿಗೆ ಮಾತುಕೊಟ್ಟಿದ್ದ ಪ್ರಕಾರ, ಮಗಳನ್ನು ಹಿಂದಕ್ಕೆ ಕರೆತರುತ್ತೇನೆಂದು ಹೇಳಿ ತನ್ನ ಕಿರಿಯ ಮಗ ಪುಟ್ಟಬೀರನನ್ನು ಜೊತೆಗಿಟ್ಟಿಕೊಂಡು ಸಿಂಬಾವಿಗೆ ಹೊರಟಳು.

ಪುಟ್ಟಬೀರನಿಗೆ ಬದಲಾಗಿ ಅವನ ಹೆಂಡತಿ ಚಿಕ್ಕಪುಟ್ಟಯನ್ನೆ ಕರೆದುಕೊಂಡು ಹೋಗಲು ಮೊದಲು ಮನಸ್ಸು ಮಾಡಿದ್ದಳು, ಆದರೆ ಆ ಸೊಸೆ ತಾನು ಬರಲೊಲ್ಲೆ ಎಂದು ಬಿಟ್ಟಿದ್ದಲ್ಲದೆ 'ಇವರ ಕಿಸುರಿಗೆ ನೀವ್ಯಾಕೆ ಹೋಗಿ ಸಿಕ್ಕುಹಾಕ್ಕೊಳ್ತೀರಿ?' ಎಂದು ತನ್ನ ಗಂಡನನ್ನೂ ಅವನ ತಾಯಿಯೊಡನೆ ಹೋಗದಂತೆ ಪುಸಲಾಯಿಸಿದ್ದಳು. ಆದರೆ ಬಾಸುಂಡೆಗಾಯಗಳಿಂದ ಅವನೇ ಜೊತೆ ಹೋಗುವಂತೆ ಮಾಡಿದ್ದನು.

ಅದಕ್ಕೆ ಇನ್ನೂ ಒಂದು ಕಾರಣವಿತ್ತು: ನೆಂಟರ ಮನೆಗೆ ಹೋಗುವುದೆಂದರೆ ಅವನ ಹೆಂಡತಿ ಲಕ್ಕಿಗೆ (ಅವಳು ಸಣ್ಣಸಣ್ಣ ಅನ್ನದ ದಿಬ್ಬಗಳನ್ನೆ ತಿನ್ನುತ್ತಿದ್ದುದರಿಂದ ಅವಳಿಗೆ 'ಹೊಟ್ಟೆಲಕ್ಕಿ' ಎಂಬ ಅಡ್ಡ ಹೆಸರೂ ಇತ್ತು.) ರೆಕ್ಕೆಯೆ ಬಂದಂತಾಗುತ್ತಿತ್ತು. ಅವಳೇ ಕಾತರಳಾಗಿದ್ದಳು ಅತ್ತೆಯೊಡಗೂಡಿ ಸಿಂಬಾವಿಗೆ ಹೋಗಲು, ಗಂಡನಿಗೆ ಏಟುಬಿದ್ದಿದೆ; ಆತನಿಗೆ ಶುಶ್ರೂಷೆ ಮಾಡಬೇಕೇಂದೇನೂ ಅವಳಿಗೆ ಅಷ್ಟಾಗಿ ಅನ್ನಿಸಿರಲಿಲ್ಲ. ಅಷ್ಟೆ ಅಲ್ಲ, ಗಂಡನನ್ನು ಚೆನ್ನಾಗಿ ಹೊನ್ನಳ್ಳಿ ಹೊಡೆತ ಹಾಕಿ ಥಳಿಸಿದರು ಎಂಬ ಸುದ್ದಿ ಅವಳ ಕಿವಿಗೆ ಬಿದ್ದಾಗ ಅವಳು ಮುತಿ ಚೂಪಗೆ ಮಾಡಿಕೊಂಡು "ಹಂಗಾಗಬೇಕು ಅವರಿಗೆ! ಬೀಳಲಿ ಇನ್ನೂ ಎಲ್ಡು ಕನಾತಿ! ನಂಗೆ ಮಾತ್ರ ಬೆನ್ನಮ್ಯಾಲೆ ಇಕ್ಕಡಿಸ್ತಾರಲ್ಲಾ? ನಂಗೆ ಹೆಂಗೆ ನೋವಾಗ್ತದೆ ಅನ್ನಾದು. ಈಗ್ಲಾದ್ರೂ ಗೊತ್ತಾಗ್ಲಿ!" ಎಂದು ಮೂದಲಿಸಿದ್ದಳು. ಆದರೆ ಸಣ್ಣಬೀರನನ್ನು ತನ್ನ ಮಾವನೂ ಅತ್ತೆಯೂ ಮೆಲ್ಲಗೆ ನಡೆಸಿಕೊಂಡು ಬಂದು ಬಿಡಾರದಲ್ಲಿ ಚಾಪೆಯ ಮೇಲೆ ಮಲಗಿಸಿದಾಗ ಗಾಯಗಳನ್ನೂ, ಅದಕ್ಕೆ ಹಚ್ಚಿದ್ದ ತೆಂಗಿನೆಣ್ಣೆಯನ್ನೂ ಮೀರಿ ಹರಿಯುತ್ತಿದ್ದ ನೆತ್ತರನ್ನೂ, ಅಲ್ಲಲ್ಲಿ ಬೆಳ್ಳಗಿದ್ದ ಔಷಧಿಯ ಬಿಳಿಪುಡಿಯ ರಂಪವನ್ನೂ ಮೀರಿ ಹರಿಯುತ್ತಿದ್ದ ನೆತ್ತರನ್ನೂ, ಅಲ್ಲಲ್ಲಿ ಬೆಳ್ಳಗಿದ್ದ ಔಷಧಿಯ ಬಿಳಿಪುಡಿಯ ರಂಪವನ್ನೂ ನೋಡಿ, ಲಬಲಬನೆ ಬಾಯಿಬಡಿದುಕೊಂಡೂ ಎದೆಗುದ್ದಿಕೊಂಡೂ ಕೇರಿಯಲ್ಲಾ ನೆರೆಯುವಂತೆ ಗೋಳುಹೊಯ್ದುಕೊಂಡಿದ್ದಳು! ಇಜಾರದ ಸಾಬಿಯನ್ನು ಬಯ್ಯುವ ನೆವದಿಂದ ಎಲ್ಲರಿಗೂ ಸಹಸ್ರನಾಮಾರ್ಚನೆ ಮಾಡಿದ್ದಳು: "ಪಾಪಿ ಮುಂಡೇಗಂಡ! ಅವನ ಯದಿಗೆ ರಣ ಹೊಡಿಯಾ! ಅವನಿಗೆ ದೊಡ್ಡರೋಗ ಬರಾ! ಅವನ ಬಾಯಿಗೆ ಹುಳಾ ಬೀಳಾ! ಅವನ ರಟ್ಟೆ ಸೇದಿಹೋಗಾ! ಅವನ ಹೆಂಡ್ತಿ....!" ಎಂದು ಮೊದಲಾಗಿ ತನಗೆ ಗೊತ್ತಿದ್ದ ನಿಂದಾ ನಿಘಂಟನ್ನೆಲ್ಲ ಬರಿದುಮಾಡಿದ್ದಳು! ಆದರೂ ಸ್ವಲ್ಪ ಹೊತ್ತಿನಲ್ಲಯೆ ಅವಳು ತನ್ನ ಅತ್ತೆ ಸೇಸಿಯೊಡನೆ ಸಿಂಬಾವಿ ಕೇರಿಯ ನೆಂಟರ ಮನೆಗೆ ಹೊರಡಲು ಉತ್ಸುಕಳಾಗಿದ್ದಳು! ಕಡೆಗೂ ಅವಳು ಸಿಂಬಾವಿಗೆ ಹೊರಡದಿದ್ದುದಕ್ಕೆ ಕಾರಣವಾಗಿದ್ದ ಒಳಗುಟ್ಟೆಂದರೆ, ನೆರೆಯ ಬಿಡಾರದ ಮೈದುನ ಪುಟ್ಟಬೀರನ ಹೆಂಡತಿ, ಚಿಕ್ಕಪುಟ್ಟಿ, ತಾನಿಲ್ಲದ ವೇಳೆಯಲ್ಲಿ ತನ್ನ ಗಂಡನಿಗೆ ಅನ್ನಗಂಜಿ ಕೊಡುವ ನೆವದಲ್ಲಿ ಎಲ್ಲ ಗುಡಿಸಿಲಿಗೆ ಬಂದು ಏನು ಮಾಡಿಬಿಡುತ್ತಾಳೊ ಎಂಬುದೆ ಆಗಿತ್ತು!

ಸೇಸಿ ಹೊರಡುವ ಮುನ್ನ ತನ್ನ ಮಗಳು ಮದುವಣಗಿತ್ತಿಯಾಗಿ ಧರಿಸಿದ್ದು, ಗುತ್ತಿಯೊಡನೆ ಓಡಿಹೋಗುವ ಮೊದಲು ಗಂಟು ಕಟ್ಟಿ ತನಗೆ ಕೊಟ್ಟಿದ್ದ ನಗದ ಗಂಟನ್ನೂ ಮಡಿಲಿಗೆ ಹಾಕಿಕೊಂಡಿದ್ದಳು. ಮಗಳನ್ನೆ ಸಿಂಬಾವಿಯಿಂದ ಹಿಂದಕ್ಕೆ ಕರೆತರಲು ಹೋಗುವವಳು ಬೆಟ್ಟಳ್ಳಿಗೌಡರದಾಗಿದ್ದ ನಗಗಳನ್ನು ಏತಕ್ಕೆ ಒಯ್ಯುತ್ತೀಯೆ ಎಂದು ಯಾರಾದರೂ ಕೇಳಿದ್ದರೆ ಉತ್ತರ ಹೇಳುವುದಕ್ಕೆ ಅವಳಿಗೇ ಸರಿಯಾಗಿ ಗೊತ್ತಾಗುತ್ತಿತ್ತೊ ಇಲ್ಲವೊ? ಅವಳ ಮನಸ್ಸಿನಲ್ಲಿಯೂ ಯಾವುದೂ ಇನ್ನೂ ಸ್ಪಷ್ಟವಾಗಿರಲಿಲ್ಲ. ಮಗನಿಗಾಗಿದ್ದ ರಾಕ್ಷಸ ಶಿಕ್ಷೆಯನ್ನು ಕಂಡಾಗಣಿಂದ, ಹಿಂದೆ ಅವಳ ಮನಸ್ಸಿನಲ್ಲಿ ಅಸ್ಪಷ್ಟವಾಗಿದ್ದ ಅಭಿಪ್ರಾಯವೊಂದು ಖಚಿತವಾಗತೊಡಗಿತ್ತು. ತನ್ನ ಮಗನನ್ನು ದನ ಹೊಡೆದ ಹಾಗೆ ಹೊಡೆದದ್ದೇನೋ ಆಗಿಹೋಗಿತ್ತು. ಅದಕ್ಕೆ ಪ್ರತೀಕಾರವಾಗಿ ಅವರ ನಗಗಳನ್ನೆಲ್ಲ ಮಗಳೇ ಓಡಿಹೋಗುವಾಗ ತೆಗೆದುಕೊಂಡು ಹೋಗಿ ಹಾಳುಮಾಡಿಬಿಟ್ಟಿದ್ದಾಳೆ ಎಂದು ಹೇಳಿ ಲಪಟಾಯಿಸಬಾರದೇಕೆ? ಮತ್ತೂ ಒಂದು ಯೋಚನೆ: ಮಗಳನ್ನು ಹಿಂದಕ್ಕೆ ಕರೆತಂದು ಕಟುಕರಿಗೆ ಒಪ್ಪಿಸುವುದಿರಲಿ; ತಾನೇ ಹಿಂದಿರುಗಿ ಬರೆದಿದ್ದರಾಯಿತು. ತನ್ನ ಗಂಡನನ್ನು ಉಪಾಯದಿಂದ ಸಿಂಬಾವಿಗೇ ಬಂದು ಹೆಗ್ಗಡೆಯವರ ಆಳಾಗಿರುವಂತೆ ಒಪ್ಪಿಸಿದರಾಯಿತು! ಎಂತಿದ್ದರೂ ಗೌಡರಿಗೂ ಹೆಗ್ಗಡೆಯವರಿಗೂ ಹಿಂದಿನಿಂದಲೂ ಜಿದ್ದು! ಅದನ್ನೇಕೆ ನಮ್ಮ ಕ್ಷೇಮಕ್ಕೆ ಬಳಸಿಕೊಳ್ಳಬಾರದು? ಹೀಗೆಲ್ಲಾ ಸೇಸಿಯ ತಲೆಯಲ್ಲಿ ದೂರಾಲೋಚನೆ ದುರಾಲೋಚನೆಗಳು ಒಳಸಂಚು ಹುಡುತ್ತಿದ್ದ ಹಾಗೆಯೆ ದಾರಿ ಸಾಗುತ್ತಿತ್ತು. ತಾಯಿಯ ಮಣವನ್ನು ಗಮನಿಸಿದ ಪುಟ್ಟಬೀರ ಒಂದೆರಡು ಸಾರಿ ನಿಂತು, ಅವಳು ಮುಂದೆ ಹೋಗುತ್ತಿದ್ದ ತನ್ನನ್ನು ಬಳಿಸಾರಿದೊಡನೆ "ಯಾಕವ್ವಾ ಬಾ'ಳ ದಣಿವಾಯ್ತೆ?" ಎಂದು ಪ್ರಶ್ನಿಸಿದ್ದನು. ಅದಕ್ಕೆ ಅವಳು ಅಳುದನಿಯಿಂದ "ಇಲ್ಲಪ್ಪಾ, ನಿನ್ನ ಅಣ್ಣನ್ನ ಆ ರೀತಿ ಜಪ್ಪಿದರಲ್ಲಾ ಅದನ್ನೆ ನೆನೆಸಿಕೊಂಡು ಬರ್ತಿದ್ದೆ! ಅವರೇನು ನರಮನುಸರೋ ರಾಕ್ಷೇಸರೋ? ನಾವಿನ್ನು ಅವರ ಹತ್ರ ಹೆಂಗೆ ಗೆಯ್ದು ಕಾಲಹಾಕಾದು ಅಂತಾ…." ಎಂದು ಅರ್ಧಕ್ಕೆ ನಿಲ್ಲಿಸಿ ದೀರ್ಘವಾಗಿ ಸುಯ್ದಿದ್ದಳು. ತನ್ನ ಮನಸ್ಸಿನಲ್ಲಿದ್ದ ಕ್ರಾಂತಿಕಾರಕ ವಿಚಾರಗಳನ್ನು ಹೆದರುಪುಕ್ಕಲು ಮತ್ತು ಬಾಯಿಹರಕಲು ಸ್ವಭಾವದ ಮಗನಿಗೆ ತಿಳಿಸಲು ಅಂಜಿದಳು.

ಸೇಸಿ ಪುಟ್ಟಬೀರರು ಸಿಂಬಾವಿಯ ಕೇರಿಯ ಸಮೀಪಕ್ಕೆ ಬರುವಷ್ಟರಲ್ಲಿ ದನ ಕೊಟ್ಟಿಗೆಗೆ ಬರುವ ಹೊತ್ತಾಗಿತ್ತು. ಹಿಂದೆ ಎಷ್ಟೋ ಸಾರಿ ಸೇಸಿ ಬೆಟ್ಟಳ್ಳಿಯಿಂದ ಸಿಂಬಾವಿಯ ತವರು ಮನೆಗೆ ಹೀಗೆಯೆ ನಡೆದುಕೊಂಡು ಬಂದಿದ್ದಳು. ತರುಣಿ ನವವಧುವಾಗಿ ಯುವಕನಾಗಿದ್ದ ದೊಡ್ಡಬೀರನೊಡನೆ ಸಂಭ್ರಮದಿಂದ ನಡೆದು ಬಂದಿದ್ದಳು. ಆಗ ತನ್ನ ತಂದೆತಾಯಿಯರಿದ್ದರು. ಕೇರಿಗೆ ಕೇರಿಯ ತಮ್ಮನ್ನು ಉತ್ಸಾಹದಿಂದ ಇದಿರುಗೊಂಡಿತ್ತು. ಆಮೇಲೆ ಶಿಶುವಾಗಿದ್ದ ಸಣ್ಣಬೀರನನ್ನು ಹೊತ್ತು ನಡೆದು ಬಂದಿದ್ದಳು. ಆಮೇಲೆ ಶಿಶು ಪುಟ್ಟಬೀರನನ್ನು ಹೊತ್ತುಕೊಂಡು ಬಾಲಕ ಸಣ್ಣಬೀರನನ್ನು ನಡೆಸಿಕೊಂಡು ಬಂದಿದ್ದಳು. ಒಂದು ಸಾರಿ ಬಂದಾಗ ತಂದೆ ತೀರಿಹೋಗಿದ್ದ ಕೇರಿಯಾಗಿತ್ತು. ಮತ್ತೊಂದು ಸಾರಿ ಬಂದಾಗ ತಾಯಿ ಇಲ್ಲದ ಕೇರಿಯಾಗಿತ್ತು. ಅಣ್ಣ ಕರಿಸಿದ್ದ ಅತ್ತಿಗೆ ಗಿಡ್ಡಿಯೊಡನೆ ಇದಿರುಗೊಂಡು ತನ್ನನ್ನೂ ತನ್ನ ಮಕ್ಕಳನ್ನೂ ಸ್ವಾಗತಿಸಿ ಸತ್ಕರಿಸಿದ್ದರು. ತಂದೆತಾಯಿ ತೀರಿಹೋದಮೇಲೆ ಸಿಂಬಾವಿಗೆ ಬರುವುದೆ ಅಪರೂಪವಾಗಿ ಹೊಗಿತ್ತು ಸೇಸಿಗೆ. ಮೊದಮೊದಲು ಹೇಗೊ ಪ್ರಯತ್ನಮಾಡಿ ವರ್ಷಕ್ಕೆ ಒಮ್ಮೆಯಾದರೂ ಬಂದು ಹೋಗುತ್ತಿದ್ದಳು. ಕಡೆಕಡೆಗೆ ಅದು ಸಾಧ್ಯವಾಗದೆ ಹೋಗಿತ್ತು, ಸೊಂಟ ನಸುಬಾಗಿ, ಕೂದಲು ನರೆ ಕಂಡು, ನಡುವಯಸ್ಸಿನಲ್ಲಿಯೆ ನಡು ಡೊಂಕಿ ಮುದಿತನಕ್ಕೆ ಕಾಲಿಟ್ಟ ಅವಳಿಗೆ. ಮೂರು ವರ್ಷಗಳ ಹಿಂದೆ ಒಮ್ಮೆ ಅಣ್ಣನಿಗೆ ಸಖತ್ತು ಕಾಯಿಲೆಯಾಗಿ ಅತ್ತಮುಖವೊ ಇತ್ತ ಮುಖವೊ ಎಂಬಂತಾಗಿದೆ ಎಂಬುದನ್ನು ಕೇಳಿ ಮುದುಕಿ ತನ್ನ ಮುದಿ ಗಂಡನೊಡನೆ, ಮಳೆಗಾಲವಾಗಿದ್ದರೂ ಕೂಡ, ಅರ್ಧ ದಿನವೆಲ್ಲಾ ನಡೆದೂ ನಡೆದೂ ಸಿಂಬಾವಿಗೆ ಬಂದು ಒಪ್ಪತ್ತು ಇದ್ದು ಹೋಗಿದ್ದಳು. ಆಗಲೆ ಅವಳು ಮನಸ್ಸು ಮಾಡಿದ್ದು, ಕಟ್ಟಾಳಾಗಿದ್ದ ತರುಣ ಗುತ್ತಿಯನ್ನು ನೋಡಿ, ತನ್ನ ಮಗಳು

ತಿಮ್ಮಿಯನ್ನು, ಏನೇ ಆಗಲಿ, ಅವನಿಗೇ ಕೊಟ್ಟು ಅಳಿಯನನ್ನಾಗಿ ಮಾಡಿಕೊಳ್ಳಬೇಕೆಂದು. ಆದರೆ ಜೀತದಾಳುಗಳಿಗೆ ಆ ಹಕ್ಕನ್ನು ಎಲ್ಲಿಂದ ಬರಬೇಕು? ಒಡೆಯರ ಆಸ್ತಿಯಾಗಿದ್ದ ಅವರನ್ನು ಯಾರಿಗೆ ಕೊಡಬೇಕು? ಎಂಬುದನ್ನು ತಂದೆತಾಯಿಗಳು ನಿರ್ಧರಿಸಲು ಸಾಧ್ಯವೆ? ತಮ್ಮ ಜಾನುವಾರಗಳನ್ನು ಬಿಕರಿ ಮಾಡುವ ಹಕ್ಕು ಎಂತೋ ಅಂತೆ ಬೇಲರು ಹೊಲೆಯರು ಮಾದಿಗರು ಮೊದಲಾದ ತಮ್ಮ ಹೆಣ್ಣುಗಂಡು ಜೀತದಾಳುಗಳನ್ನೂ ಇಡುವ ಕೊಡುವ ಬಿಡುವ ಹಕ್ಕು ಅವರದ್ದೆ ತಾನೆ? ವಸ್ತುತಃ ಹಾಗಿದ್ದರೂ, ಸೇಸಿ ಎಷ್ಟಾದರೂ ಮನುಷ್ಯ ವರ್ಗಕ್ಕೆ ಸೇರಿದವಳಲ್ಲವೆ? ಅವಳೇನು ದನ ಅಲ್ಲವಲ್ಲ! ಮಾನವ ವರ್ಗಕ್ಕೇ ಸಹಜವಾದ ಸ್ವಾತಂತ್ರ್ಯ ಇಚ್ಛೆ, ಆಶೆ, ಅಪೇಕ್ಷೆ, ಪ್ರಯತ್ನಶೀಲತೆ ಇವುಗಳಿಂದ ಅವಳು ತಪ್ಪಿಸಿಕೊಳ್ಳಲು ಸಾಧ್ಯವೆ? ಆ ಇಚ್ಛೆ ಆಶೆ ಅಪೇಕ್ಷೆಗಳು ಕೈಗೂಡಲಿ ಬಿಡಲಿ, ಪ್ರಯತ್ನಮಾಡುವುದರಿಂದ ತಪ್ಪಿಸಿಕೊಳ್ಳಲಾದೀತೆ? ಅದರಿಂದ ಎಂತಹ ಹಾನಿಯೆ ಒದಗಲಿ, ಸರ್ವನಾಶವೆ ಬೇಕಾದರೂ ಆಗಲಿ, ಮಾನವತ್ವವನ್ನು ತಲುಪಿದ ಚೇತನ ಕಲ್ಲು ಮಣ್ಣುಗಳಂತೆ ತಟಸ್ಥವಾಗಿ ಬಿದ್ದಿರಲು ಸಾಧ್ಯವಿಲ್ಲ.

ಆದ್ದರಿಂದಲೆ ಸೇಸಿಯ ಚೇತನ, ಅದು ಪ್ರಾಣಿಸಮೀಪವೇ ಆಗಿದ್ದರೂ, ತನ್ನ ಮನುಷ್ಯತ್ವ ಸಹಜವಾಗಿದ್ದ ಹಕ್ಕನ್ನು ಸ್ಥಾಪಿಸಿಕೊಳ್ಳಲು, ಭಯಂಕರವಾದ ಕ್ರೂರವಾದ ದುರ್ದಮ್ಯವಾದ ಪ್ರತಿಭಟನೆ ಮತ್ತು ಪ್ರತೀಕಾರಗಳ ಮೃತ್ಯುಭೀಕರ ರೌರವ ನರಕವೆ ತನ್ನಿದಿರೇ ಆ ಎಂದು ಬಾಯಿ ತೆರೆಯುವ ಸಂಭವವಿದ್ದರೂ, ಅಂಜುತಂಜುತ್ತಲೆ ಬದ್ಧಕಂಕಣವಾದಂತೆ ಯತ್ನಶೀಲವಾಗಿತ್ತು.

ನೂರಾರು ಚಿಂತೆಗಳಿಂದ ಆಕುಲವಾಗಿದ್ದ ಅವಳಿಗೆ, ಮೂರು ವರುಷಗಳ ತರುವಾಯ ತವರನ್ನು ಸಮೀಪಿಸುತ್ತಿದ್ದರೂ, ಹಿಂದೆ ಆಗುತ್ತಿದ್ದ ಹಿಗ್ಗು ಒದಗಲಿಲ್ಲ. ಅದಕ್ಕೆ ಬದಲಾಗಿ ಏನೊ ಉದ್ವೇಗವೆ ಹೃದಯವನ್ನು ಕದಡಿದಂತಿತ್ತು. ಇಕ್ಕಟ್ಟಾಗಿದ್ದ ಕಾಲು ಹಾದಿಯ ಇಕ್ಕಲಗಳಲ್ಲಿಯೂ ಮುತ್ತಿದ್ದ ಗಿಡಪೊದೆಗಳ ನಡುವೆ, ತನಗಿಂತಲೂ ಮುಂದೆ ನಡೆಯುತ್ತಿದ್ದ ಪುಟ್ಟಬೀರನು ತಟಕ್ಕನೆ ನಿಂತು, ತನ್ನನ್ನು ಸಂಬೋಧಿಸಿದಾಗಲೆ ಅವಳಿಗೆ ಎಚ್ಚರವಾದಂತಾಗಿದ್ದು:

“ಅವ್ವಾ, ಆಲೇಸು! ಏನೋ ವಾಲಗ ಕೇಳಿಸ್ತದೆ ಅಲ್ಲೇನು? ಕೇರೀಲಿ!” ತಿರುಗಿ ನಿಂತು, ಕಿವಿಗೊಡುವ ಭಂಗಿಯಿಂದ ತಲೆಯನ್ನು ತುಸು ಓರೆಮಾಡಿ, ತಾಯಿಯನ್ನೆ ಪ್ರಶ್ನಾರ್ಥಕವಾಗಿ ನೋಡುತ್ತಿದ್ದನು ಪುಟ್ಟಬೀರ.

ಸೇಸಿ ಸೊಂಟಗೈಯಾಗಿ ಸುಯ್ದು ನಿಂತು ಆಲಿಸಿದಳು. ಹೌದು, ಕೆಳಗೆ ಕಣಿವೆಯಲ್ಲಿ, ಗದ್ದೆಕೋಗಿನ ನೆತ್ತಿಯಲ್ಲಿ, ದಟ್ಟವಾಗಿ ಬೆಳೆದ ಮರಗಳ ಮರೆಯಲ್ಲಿ ತನ್ನ ಹುಟ್ಟು ಕೇರಿಯಿಂದ ಬೈಗುಗಾಳಿಯಲ್ಲಿ ತೇಲಿಬರುತ್ತಿದೆ ವಾಲಗದ ಸುಸ್ವರ! ಏಕೋ ಏನೋ? ಸುಖವೋ ದುಃಖವೋ? ಸೇಸಿಯ ಗಂಟಲಲ್ಲಿ ಏನೊ ಕಟ್ಟಿಕೊಂಡಂತಾಗಿ ಅದನ್ನು ಕೆಮ್ಮಿನಿಂದ ಮರೆಮಾಚಿದಳು. ಕೊನೆಬೈಗಿನ ಮುದಿಬಿಸಿಲಲ್ಲಿ ಕೇರಿಯ ಬಿಡಾರಗಳಿಂದೇಳುತ್ತಿದ್ದ ಅಡುಗೆಯ ಹೊಗೆ ಹೇಗೆ ಕಾಣಿಸುತ್ತಿದೆ, ಎಂದೋ ತೀರಿಹೋಗಿದ್ದ ಅವ್ವನ ನೆನಪಾಗುವಂತೆ!

‘ಯಾರದ್ದೊ ಮದೆಮನೆ ಇರಬೈದು’ ಎಂದಳು ತಾಯಿ.

ತಾಯಿಯ ಕಡೆಗೆ ತಿರುಗಿ ನಿಂತು ಅವಳನ್ನೆ ಗಮನಿಸುತ್ತಿದ್ದ ಪುಟ್ಟಬೀರ “ಅದೆಂಥದವ್ವಾ? ಜೋತುಬೀಳಾಹಾಂಗೆ ಮಡ್ಲುತುಂಬ ತುಂಬಿಕೊಂಡಿದ್ದೀಯಲ್ಲಾ ಅಷ್ಟು ಭಾರಾನ? ಹೊರೆಯಾದ್ರೆ ಇತ್ತ ಕೊಟ್ಟಾದ್ರೂ ಕೊಡು” ಎಂದನು.

“ಎಂಥದಿಲ್ಲೋ.... ಹುಡುಗರಿಗೆ ಕೊಡಾನ ಅಂತ ಒಂದು ಚೂರು ಕೊಬ್ರಿ ಕಡ್ಲೆ ಬೆಲ್ಲಾ ಹಾಕ್ಕೋಂಡೀನಿ.... ಏನು ಭಾರ ಬಿಡು! ನಿಮ್ಮನ್ನೆಲ್ಲ ಹೊತ್ತೋಳಿಗೆ?” ಎಂದು ಮುದುಕಿ ನಗೆಸುಳಿಸಿ, ಮುಂದಕ್ಕೆ ಕಾಲು ಹಾಕಿದಳು “ಹೋಗಾನ ಬಾ. ಹೊತ್ತು ಮುಳುಗ್ತು.”

ಇಬ್ಬರೂ ಹತ್ತು ಹೆಜ್ಜೆ ಹಾಕಿ ಗುಡ್ಡವಿಳಿಯುತ್ತಿರಲು ಪಕ್ಕದೊಂದು ಮಟ್ಟಿನ ಹತ್ತಿರದಿಂದ ಅಗೆಯುವ ಸದ್ದು ಕೇಳಿಸಿತು.

ಕತ್ತಲಾಗುತ್ತಿರುವ ಅಷ್ಟುಹೊತ್ತಿನಲ್ಲಿ ಯಾರು ಏನನ್ನು ಅಗೆಯುತ್ತಿರಬಹುದು ಎಂಬ ಕುತೂಹಲದಿಂದ, ಮುಂದೆ ಹೋಗುತ್ತಿದ್ದ ಪುಟ್ಟಬೀರ “ಯಾರೋ ಅದೂ? ಹೋಯ್?” ಎಂದು ಕೂಗಿದನು. ಗೂಡಿಗೂ ಗೊತ್ತಿಗೂ ಹಾರಿಹೋಗುತ್ತಿದ್ದ ಹಕ್ಕಿಗಳ ಸದ್ದಿನೊಡನೆ ಬೆರೆತು ಅವನ ಪ್ರಶ್ನೆಗೆ ಉತ್ತರವಾಗಿ ತುಸು ಅಣುಕುದನಿಯ ‘ಹೋಯ್!’ ಕೇಳಿಸಿತು. ಆ ಕಡೆ ನೋಡುತ್ತಿದ್ದಂತೆಯೆ ಸವೆಗೋಲನ್ನೂ ಕಿತ್ತಿದ್ದ ಬೇರುಗಳನ್ನೂ ಹೆಗಲಮೇಲೆಯೂ ಕೈಯಲ್ಲಿಯೂ ಹೊತ್ತು ಹಿಡಿದಿದ್ದ ಸಿಂಬಾವಿ ಹೆಗ್ಗಡೆಯವರ ಕೆಲಸದ ಹುಡುಗ, ದೊಳ್ಳ, ಪೊದೆಯ ಸಂಧಿಯಿಂದ ಕಾನಿಸಿಕೊಮಡು “ಓಹೋಹೋ! ಏನು ಸೇಸಿ ಸವಾರಿ ಹಾಜರು, ಮಗಳಮದುವೆಗೆ!” ಎನ್ನುತ್ತಾ ಹತ್ತಿರಕ್ಕೆ ಬಂದನು.

ದೊಳ್ಳ ಹೇಳಿದ್ದನ್ನು ಸರಿಯಾಗಿ ಗ್ರಹಿಸದೆ ಸೇಸಿ ವಿಷಾದ ಸ್ವರದಲ್ಲಿ “ಹೌದು, ದೊಳ್ಳಯ್ಯಾ, ಮಗಳನ್ನು ಮದುವೆ ಮಾಡಾಕೆ ಕರಕೊಂಡು ಹೋಗಾಕೆ ಬಂದೀನಿ, ನಮ್ಮ ಗಿರಾಚಾರ!” ಎಂದಳು.

“ಎಲ್ಲೀಗೆ ಕರಕೊಂಡು ಹೋಗ್ತೀಯಾ?.... ಇಲ್ಲೇ ಅಂತೆ ಮದುವೆ! ಇವತ್ತು ರಾತ್ರೀನೆ ಧಾರೆಯಂತೆ! ಕೇಳ್ಸದಿಲ್ಲೇನು ವಾಲಗ, ನಿಮ್ಮ ಕೇರೀಲಿ?”

“ಯಾರದ್ರಾ ಧಾರೆ?” ಬೆಪ್ಪಾಗಿ ಕೇಳಿದನು ಪುಟ್ಟಬೀರ.

“ಯಾರದ್ದೂ?....ಹಿ ಹ್ಹಿ ಹ್ಹಿ! ನಿನ್ನ ತಂಗೀದೋ! ನಿನ್ನ ಸ್ವಾದರತ್ತೆಮಗ, ನುನ್ನ ಬಾವ ಇದಾನಲ್ಲಾ, ಆ ಗುತ್ತಿಗೇ ಕೊಟ್ಟು ಮದುವೆ!.... ಹಂಗಾರೆ ನಿಮಗೆ ಯಾರಿಗೂ ಗೊತ್ತೇ ಇಲ್ಲ?.... ಹಿಹ್ಹಿಹ್ಹಿ!.... ನೀವು ಯಾರೂ ಬರಾದಿಲ್ಲ ಅಂತಾನೂ ಹೇಳ್ತಿದ್ರು ಅಂತಾ ಇಟ್ಟುಗೋ, ಅದ್ಕೇ ನಿಮ್ಮಿಬ್ಬರನ್ನೂ ಕಂಡು ನನಗೆ ಸೋಜಿಗ ಆಯ್ತು, ಅಂತೂ ಬಂದೇಬಿಟ್ರಲ್ಲಾ ಮದೇಗೆ ಅಂತಾ! ಹಿಹ್ಹಿಹ್ಹಿ!”

ದೊಳ್ಳ ತಾನು ಸಂತೋಷ ವಾರ್ತೆಯನ್ನೆ ಹೇಳುತ್ತಿದ್ದೇನೆ ಎಂದು ಲಘು ಹೃದಯದಿಂದ ಹೇಳುತ್ತಿದ್ದ ಆ ಮಾತುಗಳನ್ನು ಕೇಳಿ ಸೇಸಿಗೆ ದಿಗ್‌ಭ್ರಮೆಯಾಯಿತು: ಒಮ್ಮೆ ಸಂತೋಷವೆ ಉಕ್ಕಿದಂತಾಯಿತು! ಆದರೆ ಕ್ಷಣಮಾತ್ರದಲ್ಲಿ ಏನೋ ಭೀತಿ ಕವಿದು ಅವಳ ಮೋರೆಗೆ ದೆವ್ವ ಕಂಡವರ ಮುಖದ ವಿಕೃತಛಾಯೆ ಮೂಡಿತು. ಅವಳಿಗೆ ದೊಳ್ಳನ ಮಾತು ಅರ್ಥವಾಗಲಿಲ್ಲ; ಅದರಲ್ಲಿ ನಂಬಿಕೆಯೂ ಬರಲಿಲ್ಲ. ಸುಳ್ಳೆ ಹೇಳುತ್ತಿದ್ದಾನೆ ಅಥವಾ ತಪ್ಪು ತಿಳಿವಳಿಕೆಯಿಂದ ಆಡುತ್ತಿರಬೇಕು ಎಂದು ಭಾವಿಸಿದಳು. ಎಷ್ಟಾದರೂ ಬುದ್ಧಿ ಬಲಿಯದ ಹುಡುಗ!.... ಹಿಂದಿನ ರಾತ್ರಿ

ಗುತ್ತಿಯೊಡನೆ ಓಡಿಬಂದ ತನ್ನ ಮಗಳಿಗೆ ಈ ರಾತ್ರಿಯೆ ಮದುವೆಯಾಗುತ್ತಿದೆ ಎಂಬುದು ಅವಳಿಗೆ ಅಸಂಭವನೀಯವಾಗಿತ್ತು.

"ಏನು ಬೇರೋ ಅದು? ಯಾರಿಗ್ರೋ?" ಎಂದು ಪ್ರಶ್ನಿಸಿ ವಿಷಯದ ದಿಕ್ಕನ್ನೆ ಬದಲಾಯಿಸಿದಳು ಸೇಸಿ.

"ಹೆಗ್ಗಡೇರಿಗೆ ಕಸಾಯಕ್ಕೆ!" ಉತ್ತರಿಸಿದನು ದೊಳ್ಳ, ಅಳಲೆಕಾಯಿ ಪಂಡಿತನೆಂಬಂತೆ!

ಹಸಿಬೇರಿನ ವಾಸನೆ ಮೂಗಿಗೂ ಹಿತಕರವಾಗಿ ವ್ಯಾಪಿಸುತ್ತಿದ್ದುದನ್ನು ಗಮನಿಸಿ ದೊಳ್ಳ ತನ್ನ ಅಭಿಜ್ಞತೆಯನ್ನು ಪ್ರದರ್ಶಿಸಲು ಮುಂದುವರೆದನು: "ಸಣಲೆ ಸದುಗನ್ನ ಕಿತ್ತುಕೊಂಡು ಬಾ ಅಂದ್ರು, ಮರಾಟಿ ಮಂಜಗೆ. 'ನಂಗೊತ್ತಿಲ್ಲಮ್ಮಾ' ಅಂದ ಅಂವ.... ಹಿಹ್ಹಿಹ್ಹಿ!.... ಆಮ್ಯಾಲೆ ನನ್ನ ಕೇಳಿದ್ರೂ 'ನಿಂಗೊತ್ತೇನೊ?' ಅಂತ. ಹಿಹ್ಹಿಹ್ಹಿ! 'ಗೊತ್ತಿಲ್ದೆ ಏನು?' ಅಂದೆ.... ನಾನಿಲ್ದೆ ಇದ್ರೆ ನಮ್ಮ ಜಟ್ಟಮ್ಮ ಹೆಗ್ಗಡ್ತೇರಿಗೆ ಕೈಕಾಲೆ ಬಿದ್ದುಹೋದ್ಹಾಂಗಾಗ್ತದೆ! ಆ ಹಳ್ಳಿಮುಕ್ಕ ಮರಾಟಿ ಮಂಜನ್ನ ಕಟ್ಟಿಕೊಂಡು ಎಂಥದು ಮಾಡ್ತಾರೆ ಅವರಾದ್ರೂ?.... ಒಂದಿಷ್ಟು ಕೂಳು ಬೇಯಿಸಕ್ಕೆ ಗೊತ್ತು ಅವನಿಗೆ ಅಷ್ಟೆ. ಅದಕ್ಕೆ ನಮ್ಮ ಒಡೇರು ನಂಗೆ 'ನೀ ಕೆಲಸಕ್ಕೆ ಬ್ಯಾಡ ಹೋಗೋ' ಅಂದ್ರೂ, ನಮ್ಮ ಜಟ್ಟಮ್ಮ ಹೆಗ್ಗಡ್ತೇರು 'ನೀ ಹೋದ್ರೆ ಅವರಿಗೆ ಗಿಡಮೂಲಿಕೆ ತಂದು ಕೊಡೋರು ಯಾರಪ್ಪಾ? ಇರು.' ಅಂತಾ ಹೇಳಿದ್ರು!.... ಆ ಹೆಗ್ಗಡೇರ ತಂಗೀಗೆ ಮಾತ್ರ ನನ್ನ ಕಂಡರಾಗಾದಿಲ್ಲಾ.... ನಾಯಿ ಕಂಡ್ಹಾಂಗೆ ಮಾಡ್ತಾರೆ...."

"ಹೆಗ್ಗಡೇರಿಗೆ ಏನು?.... ಕಾಯಿಲೇನಾ?" ಕೇಳಿದಳು ಸೇಸಿ, ದೊಳ್ಳನ ಮಾತಿನ ಹೊನಲಿಗೆ ತಡೆಹಾಕಲೆಂದು.

"ಅಯ್ಯೋ ಅವರಿಗೆ ವ್ಯಾತೆ ತಪ್ಪಿದ್ದು ಯಾವಾಗ? ಮೂರು ಹೊತ್ತೂ ಕಾಯಿಲೆ, ಕಾಯಿಲೆ! ಹಿಹ್ಹಿಹ್ಹಿ!.... ಕೆಮ್ಮು, ಸೀತ, ಗೂರ್ಲು, ಸೊಂಟನೋವು, ಜರ, ಹಸಿಬಕ್ಕೆ, ತುರಿಗಜ್ಜಿ, ಕುರು, ಆಮಶಂಕೆ, ತಲೆನೋವು, ಉಬ್ಬಸ! ಒಂದೊ, ಎಲ್ಡೊ? ಹಿಹ್ಹಿಹ್ಹಿ...."

"ಕತ್ತಲಾತು, ದೊಳ್ಳಯ್ಯ, ನೀವು ಹೊಲ್ಡಿ," ಎಂದು ನಡುವೆ ಬಾಯಿಹಾಕಿ ಪುಟ್ಟಬೀರ ಸರಸರನೆ ಕೇರಿಯ ದಿಕ್ಕಿಗೆ ಇಳಿದುನಡೆದನು, ತಾಯಿಯೊಡಗೂಡಿ.

ಭರಮೈಹೆಗ್ಗಡೆಯವರು ಗುತ್ತಿಗೆ "ನಿನ್ನ ಅಪ್ಪನ್ನ ಬಂದು ನನ್ನ ನೋಡಾಕೆ ಹೇಳೋ! ಹೋಗೋ!" ಎಂದಾಗ ಗುತ್ತಿಗೆ ಹೋದ ಜೀವ ಮತ್ತೆ ಬಂದಂತಾಯಿತು. ಹಿತ್ತಲು ಕಡೆ ಬಾಗಿಲಿಗೆ ಹೋಗಿ, ಜಟ್ಟಮ್ಮ ಹೆಗ್ಗಡತಿಯವರಿಗೆ ಕಣ್ಣಾಪಂಡಿತರು ಇನ್ನೊಂದೆರಡು ಮೂರು ದಿನಗಳಲ್ಲಿ ಔಷಧ ತಯಾರಿಮಾಡಿಕೊಂಡು ತಾವೇ ಖುದ್ದು ಬಂದು, ಹೆಗ್ಗಡೆ ಹೆಗ್ಗಡತಿ ಇಬ್ಬರಿಗೂ ಮಕ್ಕಳಾಗುವುದಕ್ಕೂ ಆರೋಗ್ಯವಾಗುವುದಕ್ಕೂ ಮದ್ದು ಕೊಡುವುದಾಗಿ ಹೇಳಿದರು ಎಂಬುದಾಗಿ ತಿಳಿಸಿ, ತಂಗಳನ್ನ ಮಜ್ಜಿಗೆ ಉಪ್ಪಿನಕಾಯಿಗಳನ್ನು ಕಾಣಿಕೆಯಾಗಿ ಪಡೆದು, ಬಿಡಾರಕ್ಕೆ ಹಿಂತಿರುಗಿದ್ದನು.

ಹಗಲೂಟಕ್ಕೆ ಕೆಲಸ ಬಿಟ್ಟು ಬಂದ ಕರಿಸಿದ್ದನಿಗೆ ಮಗನೊಡನೆ ಅನಿರೀಕ್ಷಿತವಾಗಿ ಒಬ್ಬಳೆ ಬಂದಿದ್ದ ತಂಗಿಯ ಮಗಳನ್ನು ಕಂಡು ಅಚ್ಚರಿಗಿಂತಲೂ ಹೆಚ್ಚು ಅನುಮಾನವಾಯಿತು. ಆದರೆ ಗುತ್ತಿ ನಡೆದಿದ್ದ ಸಂಗತಿಯನ್ನು

ಸಂಕ್ಷೇಪವಾಗಿ ತಿಳಿಸಿದ ಮೇಲೆ ಅವನಿಗೂ ಧೈರ್ಯ ಹಿಂತಿರುಗಿದಂತಾಗಿತ್ತು. ಮಗನು ತಿಳಿಸಿದಂತೆ ಹೋಗಿ ಒಡೆಯರನ್ನು ಕಂಡನು. ಅವರು ಅವನೊಡನೆ ಸ್ವಲ್ಪ ಆಲೋಚನೆ ಮಾಡಿ, ಮರುದಿನ ಬೆಳಗಾಗುವುದರೊಳಗೆ ಆ ರಾತ್ರಿಯೆ ಲಗ್ನ ಪ್ರಸ್ತ ಎಲ್ಲವನ್ನೂ ಮಾಡಿ, ಮುಗಿಯಿಸಿ ಬಿಡಬೇಕೆಂದು ಸಲಹೆ ಮಾಡಿದ್ದರು. ಲಗ್ನಕ್ಕೆ ಬೇಕಾದ ಕೆಲವು ಸಾಮಗ್ರಿಗಳನ್ನೂ ಕೊಡಿಸಿದರು. 'ವಾಲಗ ಎಂತಿದ್ದರೂ ನಿಮ್ಮದೇ ಅದೆ. ನಿಮ್ಮ ಒಡ್ಡಿಯದೇ ಒಂದು ಹಂದಿ ಕಡಿದು ಬಿಡಿ. ಮನೆಯಿಂದ ಅಕ್ಕಿ ಬೆಲ್ಲ ಕೊಡಿಸ್ತೇನೆ. ಹೆಣ್ಣಿಗೆ ಗಂಡಿಗೆ ಉಡಾಕೆ ತೊಡಾಕೆ ಏನು ಬೇಕೋ ತಗೊಂಡು ಹೋಗು....' ಎಂದು ಪ್ರೋತ್ಸಾಹಿಸಿ ಕಳುಹಿಸಿದ್ದರು.

ಹುಡುಗಿಯ ತಂದೆ ತಾಯಿಯರಿಲ್ಲದೆ, ಬೇರೆ ಊರಿನ ಕೇರಿಗಳ ನಂಟರಿಷ್ಟರಿಗೆ ತಿಳಿಸದೆ, ಕರೆಯದೆ, ಹೇಗೆ ಲಗ್ನ ಮಾಡುವುದು ಎಂಬುದಕ್ಕೆ'ಆ ಶಾಸ್ತ್ರಾನೆಲ್ಲಾ ಹಿಂದಿನಿಂದ ಮಾಡಿಕೊಳ್ಳಬಹುದು.' ಎಂದು ಸಮಾಧಾನ ಹೇಳಿದ್ದರು. ಬೆಟ್ಟಳ್ಳಿಗೌಡರ ಕಡೆಯಿಂದ ಕಾಗದವಾಗಲಿ ಜನವಾಗಲಿ ಬರುವ ಮೊದಲೇ ಲಗ್ನ ನೆರವೇರಿಬಿಟ್ಟಿದ್ದರೆ ತಮ್ಮ ಕೇರಿಗೆ ಒಂದು ಹೆಣ್ಣಾಳನ್ನು ಗಿಟ್ಟಿಸಿಕೊಂಡಂತಾಗುತ್ತದೆ ಎಂಬುದು ಅವರ ಉದ್ದೇಶದ ಒಂದು ಪಾದವಾಗಿತ್ತು; ಇನ್ನೊಂದು, ಬೆಟ್ಟಳ್ಳಿ ಮನೆತನದ ಮೇಲೆ ಸಿಂಬಾವಿ ಮನೆತನ ಒಂದು ವಿಜಯ ಸಾಧಿಸಿದಂತಾಗುತ್ತದೆ ಎಂಬ ಪ್ರತಿಷ್ಠೆ.

ಕರಿಸಿದ್ದ ಕೇರಿಯರ ನೆರವಿನಿಂದ ಮಗನ ಲಗ್ನಕ್ಕೆ ಎಲ್ಲ ಸಿದ್ಧತೆಗಳನ್ನೂ ಮಾಡಿಕೊಂಡನು. ಆದರೆ ಹೆಣ್ಣಿನ ತಾಯಿ, ತನ್ನ ಒಡಹುಟ್ಟಿದವಳು, ಲಗ್ನದ ಉತ್ಸವದಲ್ಲಿ ಮುಖ್ಯಭಾಗಿನಿಯಾಗಿ ಇರಬೇಕಾದವಳು ಇಲ್ಲದುದಕ್ಕಾಗಿ ಅವನ ಮನಸ್ಸು ಖಿನ್ನವಾಗಿತ್ತು. ಆದ್ದರಿಂದಲೆ ಸೇಸಿ ಪುಟ್ಟಬೀರರು ಅನಿರೀಕ್ಷಿತವಾಗಿ ಕೇರಿಯಲ್ಲಿ ಕಾಣಿಸಿಕೊಂಡಾಗ ಅವನ ಹಿಗ್ಗು ಸಗ್ಗಕ್ಕೇರಿತ್ತು! ಏನೋ ಒಂದು ಶುಭಶಕುನವೆ ಇಳಿದು ಬಂದಂತಾಗಿ, ದೇವರ ಆಶೀರ್ವಾದ ತನ್ನ ಕಡೆಗಿದೆ ಎಂದು ಭಾವಿಸಿದ್ದನು.

ಬಹು ಭಾವ ಸಂಚಲನೆಯ ಗರಗಸದಲ್ಲಿ ಸಿಕ್ಕಿದಂತಾಗಿದ್ದ ಸೇಸಿಯ ಹೃದಯವೂ ಎಲ್ಲ ವಿಷಯಗಳನ್ನೂ ಅಣ್ಣನಿಂದ ಕೇಳಿ ತಿಳಿದಮೇಲೆ ತಕ್ಕಮಟ್ಟಿಗೆ ನಿಶ್ಚಿಂತವಾಯಿತು. ಜೊತೆಗೆ ಹೆಗ್ಗಡೆಯವರೂ ಅವಳನ್ನು ಮನೆಗೆ ಕರೆಸಿ, ಧೈರ್ಯ ಹೇಳಿದರು: "ಹೆಂಗಿದ್ರೋ ನೀನೂ ನಮ್ಮ ಕೇರಿಯ ಮಗಳೇ! ನಿನ್ನ ಮಗಳೂ ನಿನ್ನ ತವರಿಗೇ ಸೇರುವುದರಲ್ಲಿ ನ್ಯಾಯ ಇದೆ! ಏನು ಬಂದ್ರೂ, ನಾನು ನೋಡಿಕೊಳ್ಳುತ್ತೇನೆ, ಇದೇನು ಬಲಾತ್ಕಾರದ ಮದುವೆ ಅಲ್ಲ. ಹೆಣ್ಣು, ಹೆಣ್ಣಿನ ತಾಯಿ, ಹೆಣ್ಣಿನ ಸೋದರಮಾವ ಎಲ್ಲಾ ತಮ್ಮ ಸ್ವಂತ ಖುಷಿಯಿಂದಲೇ ಒಪ್ಪಿ ಲಗ್ನ ನಡೆದ ಮೇಲೆ, ಯಾರು ಏನು ಮಾಡುವ ಹಾಂಗಿದ್ದಾರೆ?"

ಪುಕ್ಕಲೆದೆಯ ಪುಟ್ಟಬೀರನಿಗೆ ಅದೆಲ್ಲವನ್ನೂ ಕೇಳಿ, ನೋಡಿ, ದಿಗಿಲೋ ದಿಗಿಲು! ತನ್ನ ತಾಯಿಯನ್ನು ಗುಟ್ಟಾಗಿ ಕರೆದು "ಅವ್ವಾ, ತಿಮ್ಮೀನ ಕರಕೊಂಡು ಹೋಗಾಕೆ ಅಂತ ಬಂದವರು ನಾವೇ ಅವಳನ್ನು ಅವಸರವಸರವಾಗಿ ಲಗ್ನ ಮಾಡಿಕೊಟ್ಟೆವು ಅಂತಾ ಗೊತ್ತಾದ್ರೆ ನಮ್ಮ ಗೌಡ್ರು ನಮನ್ನ ಸುಮ್ನೆ ಬಿಟ್ಟಾರೆ? ಸಿಗಿದು ತೋರಣ ಕಟ್ಟಿಸ್ತಾರಲ್ಲ ನಮ್ಮನ್ನೆಲ್ಲ!...." ಎಂದು ತನ್ನ ಭೀತಿಯನ್ನು ತೋಡಿಕೊಂಡಾಗ ಸೇಸಿ "ಹೆಗ್ಗಡೇರು ಹೇಳಿದಾರೆ, ನಾನೆಲ್ಲ ನೋಡಿಕೊಳ್ತೀನಿ ಅಂತಾ. ನಮಗೇನು ಹೆದರಿಕೆ? ಸುಮ್ಮನಿರು. ಅಷ್ಟರಮ್ಯಾಲೆ, ನಮ್ಮನ್ನೆಲ್ಲ ಹೊಡೆಸ್ತಾರೆ ಅಂತಾ ಕಂಡ್ರೆ, ಆ ಊರನ್ನೆ ಬಿಟ್ಟು ಇಲ್ಲಿಗೇ ಬಂದರಾಯ್ತು." ಎಂದು ಸಮಾಧಾನ ಹೇಳಿ ಧೈರ್ಯ ಕೊಟ್ಟಿದ್ದಳು. ಸೇಸಿಗೂ ಗೊತ್ತಿತ್ತು, ಒಂದು ವೇಳೆ ತಿಮ್ಮಿಯನ್ನು ಹಿಂದಕ್ಕೆ ಕರೆದುಕೊಂಡು ಹೋಗಿದ್ದರೂ ಏನೇನು ದುರಂತ

ನಡೆಯಬಹುದಿತ್ತು ಎಂದು: ತಮ್ಮೆಲ್ಲರ ಇಷ್ಟಕ್ಕೆ ವಿರುದ್ಧವಾಗಿ, ಹೆಣ್ಣಿನ ಇಚ್ಛೆಯನ್ನೂ ನಿರ್ದಯವಾಗಿ ತುಳಿದು, ತನ್ನ ಮಗಳನ್ನು ಆ ಬಚ್ಚನ ಕೊರಳಿಗೆ ಕಟ್ಟಿ ಬಿಡುತ್ತಾರೆ ಎಂದು.

ಆದ್ದರಿಂದ ದೇವರೆ ತಮ್ಮನ್ನು ಪಾರುಮಾಡಿದ ಎಂದುಕೊಂಡು ಸೇಸಿ ಮಗಳ ಮದುವೆಯಲ್ಲಿ ಮನಃಪೂರ್ವಕವಾಗಿ ಭಾಗವಹಿದಳು. ತಾನು ಗುಟ್ಟಾಗಿ ತಂದಿದ್ದ ಬೆಟ್ಟಳ್ಳಿಗೌಡರ 'ನಗದ ಗಂಟಿ'ನಿಂದ ಒಂದೆರಡು ಆಭರಣಗಳನ್ನೂ ತೆಗೆದು, ಮದುವಣಗಿತ್ತಿಗೆ ತೊಡಿಸಿ, ನೋಡಿ, ಹೆಮ್ಮೆಯಿಂದ ಸೊಗಸಿದ್ದಳು!

* * *

ಎರಡು ಮೂರು ದಿನಗಳಾದರೂ ಸೇಸಿಯಾಗಲಿ ಪುಟ್ಟಬೀರನಾಗಲಿ ಹಿಂತಿರಿಗದಿದ್ದುದನ್ನು ನೋಡಿ ದೊಡ್ಡಬೀರನಿಗೆ ಕಳವಳವಾಯಿತು. ಬಚ್ಚನನ್ನು ಕರೆದು, ತನ್ನ ಹೆಂಡತಿಯನ್ನೂ ಕಿರಿಯ ಮಗಳನ್ನೂ ಅವನಿದಿರಿನಲ್ಲಿಯೆ ಬಾಯಿಗೆ ಬಂದಂತೆ ಬಯ್ದು, ಇನ್ನೊಂದು ದಿನದೊಳಗೆ ಯಾರೂ ಬರದಿದ್ದರೆ ತಾನೆ ಹೋಗಿ ಬರುವುದಾಗಿ ಗೌಡರಿಗೆ ತಿಳಿಸುವಂತೆ ಹೇಳಿದನು. ಆದರೆ ಬಚ್ಚನಿಗಾಗಲೆ ಗಾಳಿಸುದ್ದಿ ತಲುಪಿತ್ತು. ಅದನ್ನು ದೇವಯ್ಯಗೌಡರಿಗೆ ಹೇಳಿಯೂ ಇದ್ದನು. ಆದ್ದರಿಂದಲೆ ಆ ದಿನವೆ ಸಂಜೆ ಪುಟ್ಟಬೀರನೊಬ್ಬನೆ ಹಿಂತಿರುಗಿ, ತಂಗಿಗೆ ಗುತ್ತಿಯೊಡನೆ ಮದುವೆಯಾಗಿ ಹೋಯಿತೆಂದೂ, ತಾನೂ ತಾಯಿಯೂ ಎಷ್ಟು ಹೇಳಿದರೂ ಕೇಳಲಿಲ್ಲವೆಂದೂ, ಸಿಂಬಾವಿ ಹೆಗ್ಗಡೆಯವರೆ ಖುದ್ದು ನಿಂತು ಲಗ್ನ ಮಾಡಿಸಿದರೆಂದೂ, ಗೌಡರಿಗೆ ವರದಿಯೊಪ್ಪಿಸಿದಾಗ ಅದು ಅವರಿಗೆ ಹೊಸವಾರ್ತೆಯಾಗಿರಲಿಲ್ಲ.

ಕಲ್ಲಯ್ಯಗೌಡರಿಗೆ ಸಿಟ್ಟು ನೆತ್ತಿಗೇರಿತು. ತಮಗೆ ಸೇರಿದ ಹೆಣ್ಣಾಳೊಂದನ್ನು ಅವರ ಆಳೊಬ್ಬನು ಹಾರಿಸಿಕೊಂಡು ಹೀಗಿದ್ದಾನೆಂದೂ ಅವಳನ್ನು ಒಡನೆಯೆ ಕಳಿಸಿಕೊಡಬೇಕೆಂದೂ ಕಾಗದ ಬರೆದು ಕಳಿಸಿದರು. ಅದಕ್ಕೆ ಉತ್ತರವಾಗಿ ಸಿಂಬಾವಿ ಹೆಗ್ಗಡೆಯವರು, ಕಾಗದ ಬರೆದು ಕಳಿಸಿದರು. ಅದಕ್ಕೆ ಉತ್ತರವಾಗಿ ಸಿಂಬಾವಿ ಹೆಗ್ಗಡೆಯವರು, ನಡೆದ ಅವಿವೇಕಕ್ಕೆ ತಮ್ಮ ವಿಷಾದವನ್ನು ವ್ಯಕ್ತಪಡಿಸಿ, ತಾವು ವಿಚಾರಿಸಿದ್ದಲ್ಲಿ ಆ ಗಂಡು ಹೆಣ್ಣುಗಳಿಗೆ ಆಗಲೆ ಮದುವೆ ನಡೆದುಹೋಗಿದೆಯೆಂದೂ, ಹೆಣ್ಣು ಮತ್ತು ಹೆಣ್ಣಿನ ತಾಯಿ, ಅಣ್ಣ ಎಲ್ಲರೂ ಒಪ್ಪಿಯೆ ಮದುವೆಯಾಗಿರುವುದರಿಂದ ಅದರಲ್ಲಿ ಯಾವ ಜುಲುಮ್ಮಿನ ಅಂಶವೂ ಕಾಣಿಸುತ್ತಿಲ್ಲವೆಂದೂ ಉತ್ತರ ಬರೆದರು: ಬೆಂಕಿ ಆರಿಸಲೆಂದು ತುಪ್ಪ ಹೊಯ್ದಂತಾಯಿತು!

ಉಪಾಯದಿಂದಾಗಲಿ ಬಲಪ್ರಯೋಗದಿಂದಾಗಲಿ ತಮ್ಮ ಜೀತದವಳಾಗಿ ಯಮಗೆ ಸೇರಿರುವ ತಮ್ಮ ಕೇರಿಯ ಹುಡುಗಿಯನ್ನು ಕರೆತಂದೋ ಎಳೆತಂದೋ ಬಚ್ಚನಿಗೆ ಮದುವೆ ಮಾಡಿಸಿಯೇ ತೀರಬೇಕೆಂದು ಕಲ್ಲಯ್ಯಗೌಡರು ಹಠಪ್ರತಿಜ್ಞೆ ಮಾಡಿಕೊಂಡರು. ಆದರೆ ತಮ್ಮ ಮನಸ್ಸಿನ ಗುಟ್ಟನ್ನು ಹೊರಗೆ ಹಾಕಲಿಲ್ಲ. ಸಮಯ ಕಾದು ಕೆಲಸ ಮಾಡಲು ನಿರ್ಧರಿಸಿದರು.

ಆ ಹುನಾರಿನ ಅಂಗವಾಗಿ ಸಿಂಬಾವಿ ಹೆಗ್ಗಡೆಯವರಿಗೆ ಒಂದು ಕಾಗದ ಬರೆದರು: ಆದದ್ದು ಆಗಿಹೋಯಿತು. ಆದರೆ ನಮ್ಮ ಹೊಲಗೇರಿಯ ಹೆಣ್ಣಿಗೆ ಬದಲಾಗಿ ನಿಮ್ಮ ಹೊಲಗೇರಿಯಿಂದ ಒಂದು ಹೆಣ್ಣನ್ನು ನಮ್ಮ ಕೇರಿಯ ಆಳುಹುಡುಗನೊಬ್ಬನಿಗೆ ತಂದುಕೊಳ್ಳುವ ಇಚ್ಛೆ ಇದೆ. ನಿಮ್ಮ ಆಳುಹುಡುಗ ಹಾರಿಸಿಕೊಂಡು ಹೋದ ದೊಡ್ಡಬೀರನ

ಮಗಳನ್ನು ಈ ಹುಡುಗನಿಗೆ ಲಗ್ನ ಮಾಡಲು ಎಲ್ಲ ಏರ್ಪಾಡು ಆಗಿತ್ತು. ಆದ್ದರಿಂದ ಆ ವಿಚಾರದಲ್ಲಿ ನಮಗೆ ಆದಷ್ಟು ಬೇಗನೆ ಸಹಾಯ ಮಾಡುವಿರೆಂದು ನಂಬಿದ್ದೇನೆ - ಎಂದು.

ಇದರ ಮಧ್ಯೆ ಕಲ್ಲಯ್ಯಗೌಡರು ಮದುಮಗಳಿಗೆ ತೊಡಿಸಲೆಂದು ತಾವು ಕೊಟ್ಟಿದ್ದ ನಗಗಳನ್ನು ಹಿಂತಿರುಗಿಸುವಂತೆ ದೊಡ್ಡಬೀರನನ್ನು ಕೇಳಿದರು. ತಿಮ್ಮಿ ಕಾಣೆಯಾದ ಮೇಲೆ ತನ್ನ ಹೆಂಡತಿ ಸೇಸಿ ಆ ನಗದ ಗಂಟನ್ನು ತನಗೆ ತೋರಿಸಿ ಇಟ್ಟಿದ್ದು ನೆನಪಿಗೆ ಬಂದರೂ ದೊಡ್ಡಬೀರ ಆ ನಗವೆಲ್ಲ ಮಗಳ ಮೈಮೇಲೆಯೆ ಇತ್ತೆಂದೂ ಅವಳು ಓಡಿಹೋಗುವಾಗ ಅವನ್ನೂ ತೆಗೆದುಕೊಂಡೇ ಹೋಗಿದ್ದಾಳೆಂದೂ ಹೇಳಿಬಿಟ್ಟನು. ಆ ಆಭರಣಗಳನ್ನೆಲ್ಲ ಕಳುಹಿಸಿಕೊಡಿ ಎಂದು ಸಿಂಬಾವಿ ಹೆಗ್ಗಡೆಯವರಿಗೆ ಬರೆದ ಕಾಗದಕ್ಕೆ ಅವರು, ಆ ನಗಗಳನ್ನೆಲ್ಲ ಗಂಟುಕಟ್ಟಿ ಬಿಡಾರದಲ್ಲಿಯೆ ಬಿಟ್ಟು ಬಂದುದಾಗಿ ಹುಡುಗಿ ಹೇಳುತ್ತಾಳೆಂದೂ ಇಲ್ಲಿ ಅವಳ ಬಿಡಾರವನ್ನೆಲ್ಲ ಸೋಸಿ ನೋಡಿದರೂ ಒಂದೂ ನಗ ಕಾಣಿಸಲಿಲ್ಲವೆಂದೂ ಉತ್ತರ ಬರೆದರು. ಕಲ್ಲಯ್ಯಗೌಡರು ಮೇಗರವಳ್ಳಿಯ ವಸೂಲಿಸಾಬರ ಗುಂಪನ್ನು ಗುಟ್ಟಾಗಿ ಕರೆಯಿಸಿ, ಅವರಿಗೆ ಹೇಳಬೇಕಾದುದನ್ನೆಲ್ಲ ಹೇಳಿದರು. ದೊಡ್ಡಬೀರನನ್ನೂ ಕರೆದು ಸಾಮ ದಾನ ಭೇದ ದಂಡೋಪಾಯಗಳೆಲ್ಲವನ್ನೂ ಅವನ ಮುಂದಿಟ್ಟು, ವಸೂಲಿ ಸಾಬರನ್ನು ಅವನಿಗೆ ಬೆಂಬಲ ನೀಡುವುದಾಗಿ ತಿಳಿಸಿದರು. ಅವನೇನಾದರೂ ತಾವು ಹೇಳಿದಂತೆ ಮಾಡಲು ಹಿಂಜರಿದರೆ, ಮೋಸಮಾಡುವ ಸೂಚನೆ ಏನಾದರೂ ಕಂಡುಬಂದರೆ, ಅವನ ಕೈಗೆ ಕೋಳಹಾಕಿಸಿ, ಮೈ ಮುರಿಯುವಂತೆ ಲಾಕಪ್ಪಿನಲ್ಲಿ ಹೊಡೆಯಿಸಿ, ಜೈಲಿನಲ್ಲಿಯೆ ಸಾಯುವಂತೆ ಮಾಡುವುದಾಗಿಯೂ ಬೆದರಿಕೆ ಹಾಕಿದರು.

* * *

ಕಲ್ಲೂರು ಸಾಹುಕಾರ ಮಂಜಭಟ್ಟರು ತುರುತ್ತಾಗಿ ಬಂದು ತಮ್ಮನ್ನು ಕಾಣಬೇಕೆಂದು ಸಿಂಬಾವಿ ಭರಮೈ ಹೆಗ್ಗಡೆಯವರಿಗೆ ಹೇಳಿ ಕಳಿಸಿದ್ದರು. ಬ್ರಾಹ್ಮಣರನ್ನು ಅವರ ಮನೆಯಲ್ಲಿಯೆ ನೋಡಹೋಗುವ ನಿಮಿತ್ತ ಭರಮೈಹೆಗ್ಗಡೆಯವರು ಮಿಂದು, ಆದಷ್ಟು ಮಡಿಯಾದ ಬಟ್ಟೆ ಹಾಕಿಕೊಂಡು ಹೊರಟರು ಕಲ್ಲೂರಿಗೆ, ಭಟ್ಟರು ಕಳುಹಿಸಿದ್ದ ಆಳಿನೊಡನೆ. ಸೀತೂರು ಗುಡ್ಡವನ್ನು ಹತ್ತಿಳಿದು. ಲಕ್ಕುಂದವನ್ನು ದಾಟಿ, ದಟ್ಟಗಾಡಿನ ಹಳುವಿಡಿದ ಕಾಲುದಾರಿಯಲ್ಲಿ ಹೋಗುತ್ತಿದ್ದಾಗ ಎದುರಾಗಿ ಬರುತ್ತಿದ್ದ ಬೆಟ್ಟಳ್ಳಿ ಹೊಲೆಯರ ಗುಂಪು ಕಾಣಿಸಿತು: ದೊಡ್ಡಬೀರ, ಸಣ್ಣಬೀರ ಮತ್ತು ಅವನ ಹೆಂಡತಿ ಚಿಕ್ಕಪುಟ್ಟಿ. ಹೊಟ್ಟೆಲಕ್ಕಿ (ಸಣ್ಣಬೀರನ ಹೆಂಡತಿ) ಚಿಕ್ಕಪುಟ್ಟಿಯೊಡನೆ ಹೋಗಲು ಒಪ್ಪದೆ ಹಿಂದೆಯೆ ಉಳಿದಿದ್ದರು. ರೂಢಿಯಂತೆ ಗಂಡಸರೆಲ್ಲರೂ ನೆಲಮುಟ್ಟಿ ನಮಸ್ಕಾರ ಮಾಡಿ, ಅರುಗಾಗಿ ನಿಂತರು; ಹೆಂಗಸು ಹಳುವಿನಲ್ಲಿ ಮರೆಯಾಗಿ ನಿಂತಳು.

“ಎಲ್ಲಿಗ್ರೋ? ಎಲ್ಲ ಗುಂಪುಕಟ್ಟಿಕೊಂಡು ಹೊರಟೇರಲ್ಲಾ! ಅಪ್ಪಾ ಮಕ್ಕಳು?” ಹೆಗ್ಗಡೆಯವರು ಅಧಿಕಾರವಾಣಿಯಲ್ಲಿ ಕೇಳಿದರು.

“ಅಳಿಯ - ಮಗಳನ್ನೂ ಕರಕೊಂಡು ಹೋಗಾನ ಅಂತ ನೆಂಟರ ಮನೆಗೆ ಹೋಗ್ತಾ ಇದ್ದೀವಿ, ಒಡೆಯಾ!” ಸೊಂಟಬಾಗಿ ಕೈಮುಗಿದು ವಿನಯದಿಂದ ಉತ್ತರಿಸಿದ ದೊಡ್ಡಬೀರ.

“ನಿಮ್ಮ ಗೌಡರು ಹೇಳಿ ಕಳಿಸಿದಾರೇನೋ?” ಹೆಗ್ಗಡೆಯವರ ಪ್ರಶ್ನೆ ಅರ್ಥಗರ್ಭಿತವಾಗಿತ್ತು.

“ಇಲ್ಲ, ಅಯ್ಯಾ. ಲಗ್ನ ಆದ ಹುಡುಗೀನ ತವರು ಮನೆಗೆ ಕರಕೊಂಡು ಹೋಗಾನ ಅಂತಾ….”

“ಕರಕೊಂಡು ಹೋಗಿ….”

“ನಾಕು ದಿನ ಇಟ್ಟುಕೊಂಡು ಕಳಿಸ್ತೀನಿ.”

“ನೀನೇನು ಆ ಹುಡುಗೀನ ಬಲಾತ್ಕಾರವಾಗಿ ಇನ್ನ್ಯಾರಿಗೊ ಕೊಡಾಕೆ ಮಾಡಿದ್ಯಂತೆ?”

“ನಮ್ಮ ದೊಡ್ಡಗೌಡರ ಅಪ್ಪಣೆ ಏನೊ ಆಗಿತ್ತು….” ಸ್ವಲ್ಪ ತಡೆದೂ ತಡೆದೂ ದೊಡ್ಡಬೀರ ಮುಂದುವರಿದನು. “ಆದರೆ…. ನಮಗ್ಯಾರಿಗೂ…. ಅಷ್ಟೇನೂ…. ಮನಸ್ಸಿರಲಿಲ್ಲ…. ಈಗ ಆಗಿದ್ದೆಲ್ಲ ಒಳ್ಳೇದ್ಕೇ ಆಯ್ತಲ್ಲ!….” ಎಂದು ಹಲ್ಲು ಬಿಟ್ಟು ನಕ್ಕು, ತನ್ನ ಸಮ್ಮತಿಯನ್ನೂ ಸಂತೋಷವನ್ನೂ ಹೆಗ್ಗಡೆಯವರಿಗೆ ಮನದಟ್ಟಾಗುವಂತೆ ಸೂಚಿಸಿದನು.

“ಆಗ್ಲಿ ಹೋಗೋ…. ಆದರೆ ಗುತ್ತೀನ ಮಾತ್ರ ಈಗ ಕರಕೊಂಡು ಹೋಗಬ್ಯಾಡ…. ಗದ್ದೆ ಕೆಲಸ ಸುರುವಾಗ್ಯದೆ” ಎಂದು ಎಚ್ಚರಿಕೆ ಹೇಳಿ, ಹೆಗ್ಗಡೆ ಮುಂದೆ ನಡೆದು ಹಳುವಿನಲ್ಲಿ ಮರೆಯಾದರು.

* * *

ಭರಮೈಹೆಗ್ಗಡೆಯವರು ತಮ್ಮ ಸಾಧಾರಣ ಮನಃಸ್ಥಿತಿಯಲ್ಲಿ ಇದ್ದಿದ್ದರೆ ದೊಡ್ಬೀರನನ್ನು ಅಷ್ಟು ಸುಲಭದಲ್ಲಿ ಅಷ್ಟು ಶೀಘ್ರವಾಗಿ ಬಿಟ್ಟು ಹೋಗುತ್ತಿರಲಿಲ್ಲ. ಅಷ್ಟು ಹೊಟ್ಟೆಯಡಿಯಾಗಿ ಅಡ್ಡಬಿದ್ದರೂ, ಕೈಮುಗಿದುಕೊಂಡೆ ಸೊಂಟಬಾಗಿ ಭಯಭಕ್ತಿಗಳಿಂದ ಮಾತನಾಡಿದ್ದರೂ ಅವನನ್ನು ಅಷ್ಟು ಸರಳವಾಗಿ ನಂಬುತ್ತಲೂ ಇರಲಿಲ್ಲ. ತಾವು ಕೈಕೊಳ್ಳಬೇಕಾದ ಮುಂಜಾಗ್ರತೆಯ ಕಾರ್ಯಕ್ರಮಗಳನ್ನು ಕೈಕೊಳ್ಳದೆ ಬಿಡುತ್ತಿರಲಿಲ್ಲ. ಆದರೆ ಅವರು ಅಂದು ಒಂದು ಅಸಾಧರಣ ಮನಃಸ್ಥಿತಿಯಲ್ಲಿದ್ದರು.

ಹೂವಳ್ಳಿ ವೆಂಕಪ್ಪನಾಯಕರ ಮಗಳನ್ನು, ತಾವು ಕೇಳುವುದೆ ತಡ, ಅನುಗ್ರಹ ಮಾಡಿದಂತಾಯಿತೆಂದು ದುಂಬಾಲು ಬಿದ್ದು ತಮಗೆ ಕೊಟ್ಟುಬಿಡುತ್ತಾರೆ ಎಂದು ಭಾವಿಸಿದ್ದರು ಸಿಂಬಾವಿ ಭರಮೈಹೆಗ್ಗಡೆ. ವೆಂಕಟಣ್ಣನಂತಹ ಬಡವ ಮತ್ತು ಸಾಲಗಾರ, ಅವನ ಮನೆತನದ ಹಿಂದಿನ ದೊಡ್ಡಸ್ತಿಕೆ ಏನೆ ಆಗಿರಲಿ, ತಮ್ಮಂತಹ ಸಿರಿವಂತರೂ ಜಮೀನುದಾರರೂ ಬಯಸಿದ್ದಾರೆಂದು ಗೊತ್ತಾದರೆ, ತನ್ನ ಮಗಳನ್ನು ಮದುವೆ ಮಾಡಿಕೊಡಲು ಎಂದಾದರೂ ಹಿಂದೆ ಮುಂದೆ ನೋಡುತ್ತಾನೆಯೆ? ಅಲ್ಲದೆ, ತೆರ ಕೊಡುವ ದೃಷ್ಟಯಿಂದಲಾದರೂ ತನಗಿಂತಲೂ ಹೆಚ್ಚು ಕೊಡುವವರು ಯಾರಾದರೂ ಇದ್ದರೆಯೆ? - ಎಂಬುದು ಅವತ ಠೀವಿಯಾಗಿತ್ತು.

ಆದರೆ ಭರಮೈಹೆಗ್ಗಡೆಯವರ ಹೆಂಡತಿ ಜಟ್ಟಮ್ಮ ಹೆಗ್ಗಡಿತಿಯವರು ಮಧ್ಯಸ್ಥಗಾರರ ಮುಖಾಂತರ ಆ ಪ್ರಸ್ತಾಪವೆತ್ತಿದಾಗ ಹೂವಳ್ಳಿ ವೆಂಕಟಣ್ಣ ಏನೇನೊ ಸಬೂಬು ಹೇಳಿ ನುಣುಚಿಕೊಂಡಿದ್ದನು. ಅವನು ಕೊಟ್ಟಿದ್ದ ಮುಖ್ಯ

ಕಾರಣ, ಹುಡುಗಿಯ ಅಜ್ಜಿಗೆ ಇಷ್ಟವಿಲ್ಲ ಎಂದು. ಕೋಣೂರು ಮುಕುಂದಯ್ಯ ತನ್ನನ್ನು ಒಂದು ದಿನ ಗುಟ್ಟಾಗಿ ಸಂಧಿಸಿ, ತನ್ನ ಮಗಳು ಚಿನ್ನಮ್ಮನನ್ನು ರೋಗಿಷ್ಠನೂ, ವಯಸ್ಸಾದವನೂ, ಮೊದಲ ಹೆಂಡತಿ ಇನ್ನೂ ಬದುಕಿರುವವನೂ ಆಗಿರುವ ಸಿಂಬಾವಿ ಹೆಗ್ಗಡೆಗೆ ಖಂಡಿತ ಕೊಡಬಾರದೆಂದು ಪ್ರಕಟವಾಗಿಯೂ, ತನಗೂ ಚಿನ್ನಮ್ಮಗೂ ಚಿಕ್ಕಂದಿನಿಂದಲೂ ಪರಸ್ಪರ ಅನುರಾಗವಿದ್ದು ಒಬ್ಬರನ್ನೊಬ್ಬರು ಒಪ್ಪಿರುವುದರಿಂದ ಆಕೆಯ ಮತ್ತು ತನ್ನ ಇಬ್ಬರ ಸುಖವೂ ಆಕೆಯನ್ನು ತನಗೇ ಕೊಟ್ಟು ಮದುವೆ ಮಾಡುವುದರಿಂದ ಸಾಧಿತವಾಗುತ್ತದೆ ಎಂದು ಇಂಗಿತವಾಗಿಯೂ, ಸೂಚಿಸಿದ್ದ ಏಕಾಂತ ವಿಷಯವನ್ನು ಮಾತ್ರ ವೆಂಕಟಣ್ಣ ಯಾರೊಡನೆಯೂ ಹೇಳಿರಲಿಲ್ಲ. ಆದರೂ ಅದು, ಚಿನ್ನಮ್ಮನ ಮೇಲೆ ಮುಕುಂದಯ್ಯನಿಗಿದ್ದ ಮನಸ್ಸು, ಅಷ್ಟೇನೂ ರಹಸ್ಯವಿಷಯವಾಗಿ ಉಳಿದಿರಲಿಲ್ಲ. ಆ ಸುದ್ದಿಗಾಳಿ ಭರಮೈ ಹೆಗ್ಗಡೆಯ ಕಿವಿಗೂ ಬೀಸಿತ್ತು.

ಗುಣದಿಂದ ಗೆಲ್ಲಲಾದುದನ್ನು ಹಣದಿಂದ ಗೆಲ್ಲಲಾರೆನೆ? ಎಂಬ ಹಠದಿಂದ ಭರಮೈ ಹೆಗ್ಗಡೆ ಬೇರೆಯ ದಾರಿ ಹಿಡಿದಿದ್ದರು, ಚಿನ್ನಮ್ಮನ ತಂದೆಯನ್ನು ದಣಿಸಿ, ಸೋಲಿಸಿ, ವಶಪಡಿಸಿಕೊಳ್ಳಲು. ಆ ವಿಚಾರವಾಗಿ ಕಲ್ಲೂರು ಸಾಹುಕಾರರಿಗೂ ಕಿವಿಮಾತು ಹೇಳಿ, ಅವರನ್ನೂ ಒಳಗೆ ಹಾಕಿಕೊಂಡಿದ್ದರು.

ಹೂವಳ್ಳಿಯ ಅಂಗಳದಲ್ಲಿ ಎದ್ದು ಓಡುವ ಭರದಲ್ಲಿ ಮುಂಡಿಗೆಗೆ ಹಾಯ್ದು, ಪೆಟ್ಟಾಗಿ, ಹಣೆಯೊಡೆದು, ರಕ್ತಸೋರಿ, ಅವಮಾನಿತನಾಗಿ ಹಿಂತಿರುಗಿದ ಲುಂಗೀಸಾಬು ಕಲ್ಲೂರು ಸಾಹುಕಾರರು ಮಂಜಭಟ್ಟರ ಕರಣಿಕರಾಗಿದ್ದ ಕಿಟ್ಟೈತಾಳರ ಮೂಖಾಂತರ ಸಾಹುಕಾರರ ಕಿವಿಯಲ್ಲಿ ಹೂವಳ್ಳಿ ವೆಂಕಪ್ಪನಾಯಕರ ಮೇಲೆ, ತನಗಾಗಿದ್ದ ಅವಮಾನಕ್ಕೆ ರಚ್ಚು ತೀರಿಸಿಕೊಳ್ಳುವ ಸಲುವಾಗಿ, ವಿಷವನ್ನೆ ಕಾರಿದ್ದನು: “ಆ ಕಟ್ಟೈತಾಳ ನನಗೆ ಗೊತ್ತಿಲ್ಲೇನೋ? ಹಾದರಗಿತ್ತಿ ಹೆಂಡತೀನೆ ಆಳಲಾರದೆ ಸಾಹುಕಾರರ ಮಗಗೆ ಗುತ್ತಿಗೆ ಕೊಟ್ಟಾಂವ, ಅಂವ ನನ್ನ - ಟ ಹರಿಯೋದು ಅಷ್ಟರೊಳಗೆ ಇದೆ!” “ನಿನ್ನ ಸಾಹುಕಾರ ಮಂಜಭಟ್ಟನನ್ನೂ ನಾ ಬಲ್ಲೆ, ಬಿಡು; ಜುಗ್ಗ! ಹೇಲಿನಾಗೆ ಬಿದ್ದ ಕಾಸ್ನೂ ನಾಲಿಗೇಲಿ ನೆಕ್ಕೊಳ್ತಾನೆ!” “ಹಡಬೇತಿರುಗೋ ಮಗನ್ನ ಸರಿಮಾಡಲಾರದೆ, ಆ ಬಡ ಸೊಸೇನ, ಮಾವನೂ ಅತ್ತೇನೂ ಸೇರಿಕೊಂಡು, ಕಾಲು ತಿರುಪಿ ಹೆಳವ ಮಾಡಿದಾರಲ್ಲಾ ಹಾಂಗಲ್ಲ.... ನನ್ನ ಸುದ್ದಿ ಬಂದರೆ, ಅವನ ಜನಿವಾರ ಹರಿದು ಅವನ ಹೆಂಡ್ತೀನಾ....” ಇಂತಹ ಬೈಗುಳವನ್ನೆಲ್ಲ ಸ್ಪಷ್ಟನೆ ಮಾಡಿ, ವೆಂಕಪ್ಪನಾಯಕರ ಮೇಲೆ ಹೇರಿ, ಕಿಟ್ಟೈತಾಳರನ್ನೂ ಮಂಜಭಟ್ಟರನ್ನೂ ಮೆಟ್ಟಿದ ಫಟಸರ್ಪಗಳನ್ನಾಗಿ ಕೆಣಕಿ ಛೂ ಬಿಟ್ಟನು ಲುಂಗೀಸಾಬಿ.

ಆ ಬೈಗುಳಗಳೆಲ್ಲ ಬರಿಯ ಭಾವೋಪಯೋಗದವುಗಳಾಗಿದ್ದಿದ್ದರೆ ಬೈಸಿಕೊಂಡವರು ಅಷ್ಟೊಂದು ರೇಗುತ್ತಿದ್ದರೋ ಇಲ್ಲವೋ? ಆದರೆ ದುರದೃಷ್ಟವಶಾತ್ ಅವುಗಳಿಗೆ ಲೋಕ ಸಂವಾದವೂ ಇದ್ದುದರಿಂದ ಹಸಿಗಾಯದ ಮೇಲೆ ಬಿಸಿನೀರು ಹೊಯ್ದಹಾಗಾಗಿತ್ತು. ಕಿಟ್ಟತಾಳನ ಹೆಂಡತಿ ಹಾದರಗಿತ್ತಿ ಎಂಬುದಾಗಲಿ, ಮಂಜಭಟ್ಟರ ಪೋಲಿ ಮಗ ತನ್ನ ಸಾತ್ವಿಕ ಶೀಲದ ಹೆಂಡತಿಯನ್ನು ನಿರ್ಲಕ್ಷಿಸಿ ಐತಾಳರ ಹೆಂಡತಿಯೊಡನೆ ಅಕ್ರಮ ಸಂಬಂಧ ಇಟ್ಟುಕೊಂಡಿದ್ದಾನೆ ಎಂಬುದಾಗಲಿ, ಮಂಜಭಟ್ಟರೂ ಅವರ ಹೆಂಡತಿಯೂ ಸೇರಿ ಸೊಸೆಯ ಕಾಲು ಮುರಿದಿದ್ದಾರೆ ಎಂಬುದಾಗಲಿ - ವೆಂಕಟಪ್ಪನಾಯಕರಿಗೆ ಗೊತ್ತಿದ್ದ ವಿಷಯಗಳಾಗಿರಲಿಲ್ಲ; ಅವೆಲ್ಲ ಹೊಕ್ಕು ಬಳಸುತ್ತಿದ್ದ ಲುಂಗೀಸಾಬುವಂತಹರಿಗೆ ಮಾತ್ರ ತಿಳಿದಿದ್ದ ಗುಟ್ಟುಗಳಾಗಿದ್ದುವು. ಆ ಅಂತಃಪುರದ ಅಂತರಂಗದ ರಹಸ್ಯಗಳನ್ನೆಲ್ಲ ಬಯಲಿಗೆಳೆದುದಕ್ಕಾಗಿ ವೆಂಕಟಪ್ಪನಾಯಕರ ಮೇಲೆ ಸೇಡು ತೀರಿಸಿಕೊಳ್ಳಲು ಉಗ್ರಕ್ರಮ ಕೈಗೊಳ್ಳಲು ನಿಶ್ಚಯಿಸಿದರು, ಭಟ್ಟರು ಮತ್ತು ಅವರ ಕರಣಿಕರು.

ಪರಿಣಾಮವಾಗಿ, ಒಂದು ದಿನ ಹೊತ್ತಾರೆ ಗಟ್ಟದಾಳೊಬ್ಬನು ಓಡೋಡಿ ಬಂದು ಹೂವಳ್ಳಿ ವೆಂಕಟಣ್ಣನಿಗೆ ಹೇಳಿದ, "ನಿಮ್ಮ ಗದ್ದೆಯನ್ನು ಯಾರೊ ಹತ್ತಿಪ್ಪತ್ತು ಜನರು ಎತ್ತು ನೇಗಿಲುಗಳೊಡನೆ ಬಂದು ಉಳತೊಡಗಿದ್ದಾರೆ" ಎಂದು.

ವೆಂಕಟಣ್ಣ ಹೋಗಿ ನೋಡುತ್ತಾನೆ: ಕಲ್ಲೂರು ಸಾಹುಕಾರ ಮಂಜಭಟ್ಟರ ಕರಣಿಕರಾಗಿದ್ದ ಕಿಟ್ಟೈತಾಳರೆ ಖುದ್ದು ನಿಂತು, ತನಗೆ ಸೇರಿದ್ದ ಗದ್ದೆಯನ್ನು ಸಾಗುವಳಿ ಮಾಡಲು ತೊಡಗಿದ್ದಾರೆ! "ಏನು? ಏಕೆ?" ಎಂದು ಕೇಳಿದ್ದಕ್ಕೆ, "ಸಾಹುಕಾರರ ಅಪ್ಪಣೆಯಾಗಿದೆ, ಅದರಂತೆ ನಾವು ಕೆಲಸ ಮಾಡುತ್ತಿದ್ದೇವೆ. ನೀವು ಏನು ಹೇಳಿಕೊಳ್ಳುದಿದ್ದರೂ ಅವರ ಹತ್ತಿರವೆ ಹೋಗಿ ಹೇಳಿಕೊಳ್ಳಿ" ಎಂದುಬಿಟ್ಟರು. ಮಾತಿಗೆ ಮಾತು ಮಸೆಯಿತು. ಊಳುವುದನ್ನು ತಡೆಯಲು ಹೋಗಿ, ಎತ್ತಿನ ಮೂಗುದಾರವನ್ನು ಹಿಡಿದು ನಿಲ್ಲಿಸಿದ ವೆಂಟಣ್ಣನನ್ನು ಲುಂಗೀಸಾಬು, ಇಜಾರದಸಾಬು, ಅಜ್ಜೀಸಾಬು ಮೂವರೂ ಸೇರಿ ಇತರ ಆಳುಗಳ ಬೆಂಬಲದೊಡನೆ ಹೊಡೆದು ಗದ್ದೆಯಿಂದಾಚೆಗೆ ನೂಕಿದರು. ಹೊಡೆದಾಟದಲ್ಲಿ ಎರಡು ಕಡೆಯವರಿಗೂ ಪೆಟ್ಟು ಬಿದ್ದು ನೆತ್ತರು ಸೋರಿತು. ಆ ದೊಂಬಿಯ ವಾರ್ತೆ ಕೋಣೂರು ರಂಗಪ್ಪಗೌಡರಿಗೆ ತಲುಪಿ, ಅವರು ಮುಕುಂದಯ್ಯನನ್ನೂ ಕರೆದುಕೊಂಡು ಕೆಲವು ಆಳುಗಳೊಡನೆ ಸ್ಥಳಕ್ಕೆ ಧಾವಿಸಿಬಂದರು.

ಎದುರುಪಕ್ಷಕ್ಕೆ ಸೇರಿದವರು ಬಹಳ ಜನ ಬಂದುದನ್ನು ಕಂಡು ನರಿಬುದ್ಧಿಯ ಐತಾಳರು, ನಮಸ್ಕಾರಪೂರ್ವಕವಾಗಿ ಕೋಣೂರು ರಂಗಪ್ಪಗೌಡರನ್ನು ಸ್ವಾಗತಿಸಿ, ಅಂಥಾನ ನಡೆಸಿದರು. ಹೂವಳ್ಳಿ ವೆಂಕಟಪ್ಪನಾಯಕರು ತಮ್ಮ ಜಮೀನನ್ನೆಲ್ಲ ಕಲ್ಲೂರು ಸಾಹುಕಾರರಿಗೆ ಕ್ರಯಕ್ಕೆ ಬರೆದುಕೊಟ್ಟಿರುವುದರಿಂದ ಅವರಿಗೆ ಸೇರಿರುವ ಜಮೀನಿನ ಬೇಸಾಯಕ್ಕೆ ಅವರು ಏರ್ಪಾಡು ಮಾಡಿರುವರೆಂದೂ, ಅದರ ತೀರ್ಮಾನ ಅವರಿಗೇ ಸೇರಿದ್ದೆಂದೂ, ತಾನಾಗಲಿ ಬೇಸಾಯದ ಕೆಲಸಕ್ಕೆ ಬಂದಿರುವ ಆಳುಗಳಾಗಲಿ ಹೊಣೆಯಲ್ಲವೆಂದೂ ತಿಳಿಸಿದರು.

ರಂಗಪ್ಪಗೌಡರು ಗದ್ದೆಯಂಚಿನ ಮೇಲೆಯೆ ಸಂಬಂಧಪಟ್ಟವರೆಲ್ಲರನ್ನೂ ಕೂರಿಸಿಕೊಂಡು ಪಂಚಾಯಿತಿ ನಡೆಸಿದರು. ಅದರ ಪರಿಣಾಮವಾಗಿ ಕಿಟ್ಟೈತಾಳರು ಆಳು ಎತ್ತು ನೇಗಿಲುಗಳನ್ನೆಲ್ಲ ವಾಪಾಸು ಕಳಿಸಿ. ಇನ್ನೊಂದು ವಾರದೊಳಗಾಗಿ ವೆಂಕಟಪ್ಪನಾಯಕರು ಸಾಹುಕಾರರಲ್ಲಗೆ ಬಂದು ಯಾವುದನ್ನೂ ಇತ್ಯರ್ಥಮಾಡಿ ಕೊಳ್ಳಬೇಕೆಂದೂ, ತಡಮಾಡಿದರೆ ಮಳೆ ಹಿಡಿಯುವುದರೊಳಗೆ ಗದ್ದೆಯ ಬೇಸಾಯಕ್ಕೆ ತೊಡಗುವುದಾಗಿಯೂ ತಿಳಿಸಿ ಹಿಂದಿರುಗಿದರು. ಐತಾಳರು ಹೋದಮೇಲೆ ರಂಗಪ್ಪಗೌಡರು ವಿಚಾರಿಸಿದರು. ಹೂವಳ್ಳಿ ವೆಂಕಟಣ್ಣ ತನಗೆ ಭಟ್ಟರಲ್ಲಿದ್ದ ಸಾಲದ ಮೊತ್ತವನ್ನು ತಿಳಿಸಿ, ನಂಬಿಕೆ ಕ್ರಯ ಬರೆದುಕೊಟ್ಟಿದ್ದನ್ನು ನಿಜಕ್ರಯವೆಂದೇ ಮೋಸ ಮಾಡಿದ್ದಾರೆಂದು ಅವರನ್ನು ನಿಂದಿಸತೊಡಗಿದನು. ಭಟ್ಟರು ಸಾಹುಕಾರರಾದ ವಂಚನೆಯ ರೀತಿಗಳನ್ನು ವೆಂಕಟಣ್ಣನ ನೆನಪಿಗೆ ತಂದುಕೊಟ್ಟು 'ಅವರ ಹತ್ತಿರ ಹೋದವರು ಅನೇಕರು ಹಾಳಾಗಿದ್ದಾರೆ. ನೀನು ಹೇಗಾದರೂ ಉಪಾಯದಿಂದ ಪಾರಾಗದಿದ್ದರೆ ನಿನ್ನ ಜಮೀನು ಉಳಿಯುವುದಿಲ್ಲ' ಎಂದು ರಂಗಪ್ಪಗೌಡರು ಎಚ್ಚರಿಕೆ ಹೇಳಿದ್ದಕ್ಕೆ ವೆಂಕಟಣ್ಣ ನರಿನಗೆ ನಗುತ್ತಾ ಕಣ್ಣು ಮಿಂಚಿಸಿ ಹೇಳಿದನು: "ಕಾನೂನು ಪರ್ಕಾರ ಅವರು ನನ್ನ ಜಮೀನು ದಕ್ಕಿಸಿಕೊಳ್ಳಾದು ಅಷ್ಟೇನು ಸುಲಭ ಅಲ್ಲಾ! ಅವರಿಗೆ ಬರಕೊಡಾಕೆ ಮುಂಚೇನೆ ಅದರಲ್ಲಿ ಸುಮಾರು ಪಾಲು ಗದ್ದೆ ತೋಟಾನ ಬೆಟ್ಟಳ್ಳಿ ಗೌಡರಿಗೆ, ಹಳೆಮನೆ ಹೆಗ್ಗಡೇರಿಗೆ, ಸಿಂಬಾವಿ ಹೆಗ್ಗಡೇರಿಗೆ ಎಲ್ಲ ದೀಡು, ಭೋಗ್ಯ, ಕ್ರಯ ಎಲ್ಲಾ ಮಾಡಿಟ್ಟೀನಿ!.... ಅವರಲ್ಲೂ ಹತ್ರಾನೂ ಸುಮಾರು ಸಾಲ ಅದೆ ನನಗೆ!"

ಹೊರನೋಟಕ್ಕೆ ಸ್ಥೂಲಕಾಯವಾಗಿ ಸ್ಥೂಲಮತಿಯಾಗಿ ತೋರುತ್ತಿದ್ದ ವೆಂಕಟಣ್ಣನ ದಪ್ಪಬುದ್ಧಿಯ ಚಪ್ಪಡಿಬೆಪ್ಪಿನ ಅಡಿಯಲ್ಲಿ ಎಂತೆಂತಹ ವಿಷದ ಹಾವು ಚೇಳು ಮನೆಮಾಡಿ ಅಡಗಿಕೊಂಡಿವೆ ಎಂಬುದನ್ನರಿತು ರಂಗಪ್ಪಗೌಡರಿಗೂ ಮುಕುಂದಯ್ಯನಿಗೂ ಬೆರಗುಬಡಿದಂತಾಯಿತು. 'ಈ ಮನುಷ್ಯ ಏನು ಬೇಕಾದರೂ ಮಾಡಲು ಸಿದ್ಧ!' ಎಂದುಕೊಂಡರು ಮನಸ್ಸಿನಲ್ಲಿಯೆ. ಅವನು ಚಿನ್ನಮ್ಮನ ತಂದೆ ಎಂಬುದನ್ನು ಗ್ರಹಿಸಿದ ಮುಕುಂದಯ್ಯನ ಹೃದಯದಲ್ಲಿ ಏತಕ್ಕೊ ಏನೊ ಭೀತಿಸಂಚಾರದ ಅನುಭವವಾಯಿತು.

ಮಂಜಭಟ್ಟರ ಸಾಲಕ್ಕೆ ರಂಗಪ್ಪಗೌಡರು ಜಾಮೀನು ನಿಂತು ನಂಬಿಕೆಯ ಕ್ರಯಪತ್ರವನ್ನು ಬಿಡಿಸಿಕೊಡಬೇಕೆಂದು ವೆಂಕಟಣ್ಣ ಮುಗ್ಧಭಂಗಿಯಿಂದ ಸೂಚಿಸಲು ರಂಗಪ್ಪಗೌಡರು ಹೌಹಾರಿ "ಎಲ್ಲಾರು ಉಂಟೆ, ಮಾರಾಯ? ಹೊಳೇಲಿ ಮುಳುಗೋನ್ನ ಎತ್ತಿಕೊಂಡು ಬರ್ತಿನಿ ಅಂತಾ ಮೀಸು ಬರದ ಮೂಳ ಹೊಳೀಗೆ ಹಾರದ್ಹಂಗೆ ಆದಾತು!" ಎಂದು ನಿರಾಕರಿಸಿದರು.

ವೆಂಕಟಣ್ಣ ಮುಕುಂದಯ್ಯನ ಕಡೆ ಸಹಾಯ ಯಾಚನೆಯ ನೋಟ ಬೀರಿದಾಗ, ಅವನು ತಾನು ಅಣ್ಣನ ಅಧೀನನಾಗಿರುವುದರಿಂದ ಏನನ್ನೂ ಸ್ವತಂತ್ರಿಸಿ ಮಾಡಲಾರೆ ಎಂಬುದನ್ನು ಸೂಚಿಸುವಂತೆ ನೆಲದ ಕಡೆ ನೋಡತೊಡಗಿದ್ದನು.

ಆದಿನ ರಾತ್ರಿಯೆ ಚಿನ್ನಮ್ಮನ ಬಾಳಿನಹಣೆಬರಹ ನಿರ್ಣಯವಾದದ್ದು: ಮುಕುಂದಯ್ಯನದೂ ಕೂಡ!

ಮಂಜಭಟ್ಟರ ಮೊಸಳೆಬಾಯಿಂದ ಹೇಗೆ ತಪ್ಪಿಸಿಕೊಳ್ಳುವುದು? ಎಂದು ನಿದ್ದೆಯಿಲ್ಲದೆ ಯೋಚಿಸುತ್ತಾ ಮಲಗಿದ್ದ ವೆಂಕಟಣ್ಣನಿಗೆ ತನ್ನನ್ನು ಸದ್ಯದ ಕಷ್ಟದಿಂದ ಪಾರುಮಾಡಲು ಶಕ್ತವಾಗಿ ತೋರಿದ್ದೆಂದರೆ ಒಂದೇ ಒಂದು ದಾರಿ: ಎಷ್ಟಾದರೂ ತೆರಕೊಟ್ಟು ತನ್ನ ಮಗಳನ್ನು ಮದುವೆಯಾಗಲು ಉತ್ಸುಕರಾಗಿದ್ದ ಸಿಂಬಾವಿ ಭರಮೈಹೆಗ್ಗಡೆಯವರನ್ನೆ ಜಾಮೀನು ನಿಲ್ಲಲು ಕೇಳಿ, ಅವರು ಒಪ್ಪಿದರೆ, ಕೃತಜ್ಞತಾರೂಪವಾಗಿ ಅವರನ್ನೆ ಅಳಿಯನನ್ನಾಗಿ ಮಾಡಿಕೊಳ್ಳುವುದು!

ತಮ್ಮ ಭಾವಿ ಮಾವನ ಆ ನಿಶ್ಚಯದ ಪರಿಣಾಮವಾಗಿಯೆ, ಅಂದು ಸಿಂಬಾವಿ ಹೆಗ್ಗಡೆಯವರು ಕಲ್ಲೂರು ಮಂಜಭಟ್ಟರಲ್ಲಿಗೆ ಹೊರಟಿದ್ದರು. ಆದ್ದರಿಂದಲೆ ಅವರು ಅಸಾಧಾರಣ ಮನಸ್ಥಿತಿಯಲ್ಲಿದ್ದದ್ದು: ದೊಡ್ಡಬೀರನ ದೀರ್ಘದಂಡ ನಮಸ್ಕಾರಕ್ಕೂ ಸೊಂಟಬಾಗಿನ ಮತ್ತು ಕೈ ಮುಗಿಹದ ಮರುಳು ಮಾತಿಗೂ ಒಳಗಾಗಿ, ಮದುಮಗಳು ತಿಮ್ಮಿಯನ್ನು ಅವಳ ತವರಿಗೆ ನೆಂಟರುಪಚಾರಕ್ಕಾಗಿ ಕರೆದುಕೊಂಡು ಹೋಗಬಹುದೆಂದೂ, ಬೇಗನೆ ಗಂಡನ ಮನೆಗೆ ಹಿಂದಕ್ಕೆ ಕಳುಹಿಸಿಕೊಡಬೇಕೆಂದೂ ಹೇಳಿ, ಒಪ್ಪಿಗೆ ಕೊಟ್ಟದ್ದು!

ಹಡಬೆ ತಿರುಗುವ ಚಾಳಿಯ ಮಗನ ತಂದೆಯಾಗಿ, ಸೊಸೆ ಕಾಲನ್ನೆ ತಿರುಪಿ ಹಾಕಿದ್ದ ಸಾಹುಕಾರ ಮಂಜಭಟ್ಟರಿಗೆ ಶೂದ್ರತ್ವವೊಂದರಿಂದ ಮಾತ್ರವೆ ಬೇರೆಯಾಗಿ, ಉಳಿದುದೆಲ್ಲದರಲ್ಲಿಯೂ ತದ್ರೂಪಗುಣ ಸದೃಶರಾಗಿದ್ದ ಹೆಗ್ಗಡೆಯವರು ಅಂದು ಅವರಿಗೆ ಎಷ್ಟು ಕೃತಜ್ಞರಾಗಿದ್ದರೆಂದರೆ, ಎಳೆಹರೆಯದ ನವವಧುವಿನ ಪಾಣಿಗ್ರಹಣ ಮಾಡಿ,

ಆಗಳೆಯ ಮಧುಮಂಚಕ್ಕೆ ಅವಳನ್ನೂ ಒಯ್ಯುತ್ತಿದ್ದಾರೆಯೊ ಎಂಬಂತೆ, ಮಹಾ ಉದಾರ ಮನಸ್ಕರಾಗಿದ್ದರು, ತಮ್ಮ ಎಂದಿನ ಹುಟ್ಟುಗುಣವಾದ ಕೃಪಣ ಬುದ್ದಿಯ ಜಾಗರೂಕತೆಯಿಂದಲೂ ದೂರವಾಗಿ!

* * *

## ೩೫

ಲಕ್ಕುಂದಕ್ಕೂ ಸಿಂಬಾವಿಗೂ ನಡುವೆ ಅಡ್ಡಲಾಗಿದ್ದ ಸೀತೂರು ಗುಡ್ಡದ ಒಂದು ತೋಳಿನಲ್ಲಿ, ಹಿಂದೊಮ್ಮೆ ಅಂದು ಹಳೆಮನೆಯ ಸುಬ್ಬಣ್ಣ ಹೆಗ್ಗಡೆಯವರಿಗೆ ಸಿಂಬಾವಿ ಭರಮೈ ಹೆಗ್ಗಡೆಯವರು ಬರೆದುಕೊಟ್ಟಿದ್ದ ಕಾಗದವನ್ನು ಹೊತ್ತಿದ್ದ ಗುತ್ತಿ ಬಿರುಮಳೆಯಿಂದ ನೆರೆಯುಕ್ಕಿ ಹರಿಯುತ್ತಿದ್ದ ಹಳ್ಳವನ್ನು ದಾಟಲಾರದೆ ಅದರ 'ಹೆಣಾಕಾಯ್ತಾ' ಕುಳಿತಿದ್ದ ದಿಬ್ಬಕ್ಕೆ ಹಿಂದೆಯೆ, ಮೇಲಕ್ಕೆ, ಸುಮಾರು ಎರಡು ಫರ್ಲಾಂಗು ದೂರದಲ್ಲಿದ್ದ ಗುಡ್ಡದೆತ್ತರದ ಭುಜಪ್ರದೇಶದಲ್ಲಿ, ಕಾಡು ಒಂದು ಹತ್ತು ಮಾರು ಬಯಲಾಗಿ ತುಸು ಇಳಿಜಾರಾಗಿದ್ದ ಕಿರುಹಕ್ಕಲಿನಲ್ಲಿ ಹಾದುಹೋಗುತ್ತಿದ್ದ ಕಾಳುದಾರಿಯ ಪಕ್ಕದಲ್ಲಿದ್ದ ಒಂದು ಕುನ್ನೇರಿಳೆಯ ಮಟ್ಟಿಗೆ ಕಟ್ಟಿಕೊಂಡು ನಿಂತಿತ್ತು, ಅಷ್ಟೇನೂ ಪುಷ್ಟವಲ್ಲದ ಸಾಧಾರಣ ಜಾತಿಯ ಒಂದು ಕುದುರೆ, ಆ ಕುದುರೆಯ ಬಳಿಯಾಗಲಿ ಸಮೀಪದಲ್ಲಾಗಲಿ ಯಾರೂ ಕಾಣಿಸುತ್ತಿರಲಿಲ್ಲ. ನಿರ್ಜನವಾಗಿದ್ದ ಆ ಮಲೆಗಾಡಿನ ಪಕ್ಷಿಕೂಜನ ವಿನಾ ನಿಃಶಬ್ದತೆಯಲ್ಲಿ, ವಿಶೇಷವಾಗಿ ನಗರ ನಾಗರಿಕತೆಯ, ಸಮರ ಸಾಹಸವಲಯದ, ವ್ಯಾಪಾರ ವಾಣಿಜ್ಯ ಜನಜಂಗುಳಿಯ ಮತ್ತು ರಾಜಸ್ಥಾನ ವೈಭವ ಕ್ಷೇತ್ರದ ಸಂಬಂಧಿಯಾಗಿದ್ದ ಆ ಪ್ರಾಣಿ ವಿದೇಶಿಪ್ರವಾಸಿಯಂತೆ ವಿಚಿತ್ರವಾಗಿ ತೋರುತ್ತಿತ್ತು. ಅದು ತನಗೆ ಅನ್ವಯವಾಗುವ ಸನ್ನೇವೇಶದಲ್ಲಿ ಇರುವಂತೆ ತೋರುತ್ತಿರಲಿಲ್ಲ. ಹಿಂಡುತಪ್ಪಿಯೂ ದಿಕ್ಕುತಪ್ಪಿಯೊ ಬಂದಂತಿತ್ತು.

ಮಲೆನಾಡಿನ ಆ ಕಾಡುಬೆಟ್ಟಗಳಿಗೆ ಕುದುರೆಗಳೇನೂ ಅಪರಿಚಿತ ಪ್ರಾಣಿಗಳಾಗಿರಲಿಲ್ಲ, ಸುಮಾರು ಅರ್ಧಶತಮಾನದ ಹಿಂದೆ! ನಗರ, ಇಕ್ಕೇರಿ, ಕೌಲೆದುರ್ಗ ಮೊದಲಾದ ಸಂಸ್ಥಾನಗಳೂ ಪಾಲೇಯಪಟ್ಟುಗಳೂ ಪ್ರಬಲವಾಗಿದ್ದ ಕಾಲದಲ್ಲಿ ಸೈನಿಕ ಅಶ್ವಗಳ ಹೇಷಾರವದಿಂದಲೂ ಖುರಪುಟಧ್ವನಿಗಳಿಂದಲೂ ಆ ಕಾಡುಬೆಟ್ಟಗಳು ಅನುಕರಣಿತವಾಗಿದ್ದುವು! ಆದರೆ ಈಗ, ಬ್ರಿಟಿಷರ ಸಾಮ್ರಾಜ್ಯ ಸ್ಥಾಪನೆಯಾಗಿ, ಹಿಂದಿದ್ದ ಅರಸಿಕೆ ಪಾಳೆಯಗಾರಿಕೆಗಳೆಲ್ಲ ಮಣ್ಣು ಪಾಲಾಗಿ, ಸಹ್ಯಾದ್ರಿ ಶ್ರೇಣಿಯ ಆರಣ್ಯಕ ರಂಗದಲ್ಲಿ ಸ್ಮಶಾನ ಮೌನ ವ್ಯಾಪಿಸಿದಮೇಲೆ, ಕುದುರೆ ಎಲ್ಲಿ ಅಪೂರ್ವ ವಸ್ತುವಾಗಿತ್ತು; ಸ್ವಲ್ಪ ಮಟ್ಟಗೆ ವಿದೇಶೀಯವೂ ಆಗಿದ್ದಂತೆ ತೋರುತ್ತಿತ್ತು. ದನ, ಎತ್ತು, ಹುಲಿ, ಮಿಗ, ಕಡ, ಕುರ್ಕ, ಬರ್ಕ, ಮೊಲ, ಮುಂಗುಸಿ. ನವಿಲು, ಹೊರಸಲು, ಕಾಜಾಣ, ಪಿಕಳಾರ, ಕಾಡುಕೋಳಿ, ಕೆಣೆಹಂದಿ ಮೊದಲಾದ ಜಂತುಗಳಂತೆ ಸ್ಥಳೀಯವಾಗಿರಲಿಲ್ಲ. ತಾವು ಕಟ್ಟಿದ್ದ ಸಾಮ್ರಾಜ್ಯವನ್ನು ಕಳೆದುಕೊಂಡಿದ್ದರೂ, ಅದರ ದೌಲತ್ತಿನ ಅವಶೇಷರೂಪವಾಗಿ ಸಾಬರು ಮಾತ್ರವೆ ವಿಶೇಷವಾಗಿ ಹೊರೆಹೊರಲೂ ಕಾಡುಮೇಡುಗಳ ಇಕ್ಕಟ್ಟಿನ ಕಾಲುದಾರಿಯಲ್ಲಿ ಸಂಚರಿಸಲೂ ಉಪಯೋಗಿಸುತ್ತಿದ್ದ ಬಡಕಲು ಪ್ರಾಣಿಯಾಗಿ ಉಳಿದಿತ್ತು. ಅದಕ್ಕೆ ಹಿಂದಿನ ಔನ್ನತ್ಯವಾಗಲಿ ವೇಗಪಟುತ್ವವಾಗಲಿ ಠೀವಿಯಾಗಲಿ ತೇಜಸ್ಸಾಗಲಿ ಇನಿತೂ ಇರಲಿಲ್ಲ. ಹಯ, ಅಶ್ವ, ವಾರುವ, ತೇಜಿ ಇತ್ಯಾದಿ ವೈಭವದ ಮತ್ತು ಗೌರವದ ಹೆಸರುಗಳಿಗಿರಲಿ, ಕುದುರೆ

ಎಂಬ ಹೆಸರಿಗೂ ಅದು ಯೋಗ್ಯವಾಗಿರಲಿಲ್ಲ; ಆ ಹೆಸರಿಗೂ ಅದು ಬೆದರಿ ಹಿಂಜರಿಯುತ್ತಿತ್ತು. ಆದ್ದರಿಂದಲೆ ಅದಕ್ಕೆ ನಾಚಿಕೆಯಾಗಿ ಕುಗ್ಗದಿರಲಿ ಎಂದು ಅಲ್ಲಿಯ ಜನಸಾಮಾನ್ಯರು ಅದನ್ನು 'ಸಾಬರ ತಟ್ಟು' ಎಂಬ ಸುಸಾಮಾನ್ಯಮಾನದಿಂದಲೆ ಕರೆಯುತ್ತಿದ್ದರು. ಒದಗಿಬಂದಿದ್ದ ಅವನತಿಯಲ್ಲಿ ಅವರೂ ಕುದುರೆಯೊಡನೆ ಸಮಪಾಲುದಾರರಾಗಿದ್ದರಲ್ಲವೆ?

ಅಲ್ಲಿ ನಿಂತಿದ್ದುದೂ ಜಾತಿಯಲ್ಲಿ ಕುದುರೆಯಾಗಿದ್ದರೂ ಸ್ಥಿತಿಯಲ್ಲಿ ಸಾಬರ ತಟ್ಟೆ ಆಗಿತ್ತು. ಮೇಗರವಳ್ಳಿಯ ಚಮಡ ಸಾಗಿಸುವ ಅಜ್ಜೀಸಾಬು ಹೇರಿಗೂ ಫೇರಿಗೂ ಬಳಸುತ್ತಿದ್ದ ತಟ್ಟಿಗಿಂತ ತುಸು ಉತ್ತಮವಾಗಿತ್ತು ಎನ್ನಬಹುದು. ಅದಕ್ಕೂ ಹೆಸರಿಗೆ ಒಂದು ಕಡಿವಾಣ, ಲಗಾಮು, ಜೀನು ಎಲ್ಲ ಇದ್ದಂತಿತ್ತು. ಪಕ್ಕೆಲುಬು ತುಸು ಇಣುಕುವಂತಿದ್ದ ಬೆನ್ನಿನ ಮೇಲೆ ಇಕ್ಕೆಲಗಳಲ್ಲಿಯೂ ಅಮಾನು ತುಂಬಿ ಜೋತುಬಿದ್ದಿದ್ದ ಹಸುಬೆ ಚೀಲವೂ ಇತ್ತು.ಯಾರಾದರೂ ಪಕ್ಕದಲ್ಲಿದ್ದ ಕಾಳುದಾರಿಯಲ್ಲಿ ಹಾದುಹೋಗಿದ್ದರೆ, ಅವರ ಮೂಗಿಗೇ ಗೊತ್ತಾಗುತ್ತಿತ್ತು ಹಸುಬೆಚೀಲದ ಒಳಗಿದ್ದ ಪ್ರಧಾನವಸ್ತು ಯಾವುದು ಎಂದು. ಸ್ವಾರ್ಲು ಮತ್ತು ಬಂಗಡೆ ಮೀನಿನ ಗಬ್ಬುವಾಸನೆಯೊಡನೆ ಕುದುರೆಯ ಲದ್ದಿಯ ಮತ್ತು ಉಚ್ಚೆಯ ಕಟುದುರ್ವಾಸನೆಯೂ ಕೂಡಿದ್ದನ್ನೂ ನೋಡಿದರೆ ಅಲ್ಲಿ ಬಹಳ ಹೊತ್ತಿನಿಂದಲೂ ಕಟ್ಟುಗೊಂಡಿದೆ ಎಂಬುದನ್ನೂ ಊಹಿಸಬಹುದಾಗಿತ್ತು. ಅದಕ್ಕೂ ನಿಂತೂ ನಿಂತೂ ಬೇಜಾರಾಗಿ ಹಿಂಗಾಲುಗಳನ್ನು ಒಮ್ಮೆ ಬಲಕ್ಕೆ ಒಮ್ಮೆ ಎಡಕ್ಕೆ ಎತ್ತಿ ಎತ್ತಿ ಇಟು ಕಿನಿಸಿಗೆಯನ್ನು ಪ್ರದರ್ಶಿಸುತ್ತಿತ್ತು. ಅಲ್ಲದೆ ಆಗೊಮ್ಮೆ ಈಗೊಮ್ಮೆ ಕಾಡಿನ ಇಳಿಜಾರದ ಕಡೆ ಕತ್ತು ತಿರುಗಿಸಿ ನೋಡಿ ಕೆನೆಯುತ್ತಲೂ ಇತ್ತು. ಅದು ಕೆನೆತ ಆ ಕಾಡಿನ ಸದ್ದಿಲಿತನದಲ್ಲಿ ಬಹುದೂರದವರೆಗೂ ಸಂಚರಿಸುತ್ತಿತ್ತು. ಅದರ ಕೆನೆತ ಆ ಕಾಡಿನ ಸದ್ದಿಲಿತನದಲ್ಲಿ ಬಹುದೂರದವರೆಗೂ ಸಂಚರಿಸುತ್ತಿತ್ತು. ಅದು ಕೆನೆದಾಗಲೆಲ್ಲ ಸುತ್ತ ಹತ್ತಿರದ ಮರಗಳಲ್ಲಿದ್ದ ಕಾಡು ಹಕ್ಕಿಗಳು ಗಾಬರಿಗೊಂಡು ಕೂಗಿಕೊಂಡು ಹಾರುತ್ತಿದ್ದುವು. ಬೇಜಾರಿನ ಜೊತೆಗೆ ನೆತ್ತರು ಹೀರುವ ಕಾಡುನೊಣಗಳ ಪೀಡನೆಯೂ ಸೇರಿ, ಅವುಗಳನ್ನೋಡಿಸಲು ಚವರಿಬಾಲ ಬೀಸುವುದರ ಜೊತೆಗೆ ಗೊರಸಿನಿಂದ ನೆಲವನ್ನೊದ್ದು ಕುದುರೆ ಮೈಯಲ್ಲಾಡಿಸಿ ಕುಣಿಯುತ್ತಿತ್ತು. ಹಾಗೆ ಕುಣಿದಾಗಲೆಲ್ಲ ಅದರ ನೆತ್ತಿಯ ಜುಲ್ಪಿನ ಕೆಳಗೆ, ಕೆಂಬರು ಹಣೆಯ ಬಿಳಿಯ ದಾಸಪಟ್ಟೆಯ ಮೇಲೆ, ಅಲಂಕಾರಾರ್ಥವಾಗಿ ಇಳಿಬಿಟ್ಟಿದ್ದ ಗೆಜ್ಜೆಯ ಕುಚ್ಚಿನಿಂದ ಗಲಿರು ಗಲಿರೆಂದು ಕಿಂಕಿಣಿಯಾದ ಹೊಮ್ಮುತ್ತಿತ್ತು, ಅದರ ಒಡೆಯನ ವ್ಯಾಪಾರ ಬುದ್ದಿಯ ಯಾವುದೊ ಒಂದು ಮೂಲೆಯಲ್ಲಿದ್ದ ಷೋಕಿಗೂ ಸಾಕ್ಷಿಯಾಗಿ!

ಇದಕ್ಕಿದ್ದಹಾಗೆ ಕುದುರೆ ಕಿವಿಗಳನ್ನು ಕತ್ತರಿಎಬ್ಬಿಸಿ, ಕಾಡಿನ ಹಳುವಿನಲ್ಲಿ ಇಳಿದು ಹೋಗಿದ್ದ ಕಾಲುದಾರಿಯ ಕಡೆ ಕತ್ತುಕೊಂಕಿಸಿ ನೋಡತೊಡಗಿತು, ಯಾರೊ ಮಾತನಾಡುಕೊಳ್ಳುತ್ತಾ ಗುಡ್ಡ ಹತ್ತಿ ಬರುತ್ತಿದ್ದ ಗೊಣಗೊಣ ಸದ್ದು ಹತ್ತಿರ ಹತ್ತಿರವಾಗುತ್ತಾ ಬಂದು, ದಾರಿಯಲ್ಲಿ ಸಿಕ್ಕಿದ್ದ ಹೆಗ್ಗಡೆಯವರನ್ನು ಬೀಳುಕೊಂಡು ಸಿಂಬಾವಿಯ ಕೇರಿಗೆ ಹೊರಟಿದ್ದ ಬೆಟ್ಟಳ್ಳಿ ದೊಡ್ಡಬೀರನ ತಲೆಗಳು ಒಂದರ ಹಿಂದೆ ಒಂದು, ಸಾಲಾಗಿ ಕಾಣಿಸಿಕೊಂಡುವು. ಕುದುರೆ ನೀಡುತ್ತಿದ್ದಂತೆಯೆ ಎದೆ, ಹೊಟ್ಟೆ, ಸೊಂಟ, ಕಾಲು ಗೋಚರವಾಗಿ, ಆ ನಾಲ್ಕು ಮನುಷ್ಯರೂ ಸಮೀಪಿಸಿದರು. ತನ್ನ ಒಡೆಯನಿಗಾಗಿ ಕಾದೂ ಕಾದೂ ಅವನೇ ಬಂದನೇನೋ ಎಂದು ನಿರೀಕ್ಷಿಸಿದ್ದ ಆ ಪ್ರಾಣಿಗೆ ತುಂಬ ನಿರಾಶೆಯಾದಂತಾಗಿ ಮುಖ ಇಳಿಸಿ ತಟಸ್ಥಭಂಗಿಯಲ್ಲಿ ನಿಂತುಕೊಂಡಿತು.

"ಇದೇನೋ? ಅಜ್ಜೀಸಾಬರ ತಟ್ಟು? ಇಲ್ಲಿ?"

“ಅಜ್ಜೀ ಸಾಬರದಲ್ಲೋ, ಮೇಗ್ರೊಳ್ಳಿ ಕರೀಮೀನು ಸಾಬರದ್ದು ಅಂತ ಕಾಣ್ತದೆ.”

“ಯಾರ ಹಿತ್ತಲ ಕಬ್ಬೋ? ಯಾರ ತ್ವಾಟದ ಬಾಳೆಕೊನೇನೋ? ಲೂಟಿಯಾಗ್ತಿರಬ್ಯೆದು!”

“ಅಂತೂ ಈ ಸಾಬರ ತಂಡದ ದೆಸೆಯಿಂದ ಸುಖಾ ಇಲ್ಲ.”

“ಆ ದುಣ್ಣಮುಂಡೇಗಂಡ! ಇಜಾರದ ಸಾಬಿ! ಅಂವನ್ನ ಯಾರಾದರೂ ಕಡಿದು ಹಾಕಿದ್ರೆ, ಉಂದು ಹಂಡೇ ಹಾಲು ಕುಡೀತಿದ್ದೆ!” ಪ್ರತೀಕಾರ ಮಾಡಲಾರದ ಸಿಟ್ಟಿನಿಂದ ಸಣ್ಣಬೀರ ಹೇಳಿದ್ದನ್ನು ಕೇಳಿ ನಕ್ಕು ಅವನ ತಂದೆ ದೊಡ್ಡಬೀರ ವಿಷಯದ ಕಟುತ್ವವನ್ನು ವಿನೋದದಿಂದ ಕಡಿಮೆ ಮಾಡಲೆಂಬಂತೆ ಹೇಳಿದನು:

“ಎಲ್ಲಿಂದ ತರ್ತಿಯೋ ಅಷ್ಟೊಂದು ಹಾಲ್ನ? ನಿನ್ನ ಹೇಣ್ತಿ ಹಡದ್ರೆ ಬಾಲೆಗೆ ಹಾಲು ಕುಡಿಸಾಕೆ ಒಂದು ಒಳಾಲೆ ಹಾಲಿಗೆ ಗತಿ ಇಲ್ಲ?....

“ನೀ ತಮಾಸೆ ಮಾಡಬ್ಯಾಡ, ಅಪ್ಪಾ!.... ಆ ಮಾಕೀಮನೆ ಈರಣ್ಣನ್ನ ಕಡ್ದು ರಕ್ತ ಕುಡಿದ್ರಂತಲ್ಲಾ ಹಾಂಗೇ ಅವನ ರಕ್ತ ಕುಡೀದೆ ಇದ್ರೆ ನಾನು ಅಪ್ಪಗೆ ಹುಟ್ಟಿದಾಂವ ಅಲ್ಲಾ! ನೋಡ್ತೀರು! ನನ್ನ ಬೆನ್ನಿನ ಬಾಸುಂಡೆ ಇನ್ನೂ ಮಾದಿಲ್ಲ.... ಏನೋ ನಮ್ಮ ಧಣಿ, ಉಪ್ಪು ಅನ್ನ ಹಾಕಿ ಸಾಕ್ದೋರು ಇದ್ರಲ್ಲಾ ಅಂತಾ ಅವೊತ್ತು ಸುಮ್ಮನಿದ್ದೆ! ಇನ್ನೊಂದು ಸಲ ನನಗೆ ಸಿಕ್ಲಿ ಸಮಯ? ನೋಡ್ತೀನಿ ನನ್ನ ಕೈಲಿ ಏನಾಗ್ತದೆ ಅಂತಾ? ಬಗನೇ ಕತ್ತೀನ ಮಸೆದು ಇಟ್ಟುಕೊಂಡ್ಹಾಂಗೆ ಇಟ್ಟುಕೊಂಡೀನಿ, ನನ್ನ ಕೆಲಸದ ಕತ್ತೀನ! ಉಂದೆ ಕೊಚ್ಚಿಗೆ ಅವನ ಆನೆಗಾತ್ರದ ಕುತ್ತಿಗೆ ಕತ್ತರಿಸಿ ಬೀಳಬೇಕು, ಹಾಂಗೆ ಹೊಡೀತೀನಿ....”

ಸಣ್ಣಬೀರ ಇನ್ನೂ ಮುಂದುವರಿಸುವುದರಲ್ಲಿದ್ದ! ಅಷ್ಟರಲ್ಲಿ ದೊಡ್ಡಬೀರ ತಿರುಗಿ ನಿಂತು ಗದರಿಸಿದ: “ಈ ಸೊಕ್ಕಿನ ಮಾತೆಲ್ಲ ಕಟ್ಟಿಡು! ಅಂಬಲಿ ತಿನ್ನಾಂವ ಅಂಬರಕ್ಕೆ ಹಾರಿದ್ಹಾಂಗೆ ಆದಾತು. ತೂದೂರು ಕಟ್ಟೇಲಿ ಮಾರಾಜರ ದಂಡಿನೋರು, ಸುಮಾರು ಜನ ಗೌಡ್ರನ್ನೆ ಕುತ್ತಿಗೀಗೆ ನೇಣುಹಾಕಿ ಮರಕ್ಕೆ ನೇತಾಕಿದ್ರಂತಲ್ಲಾ, ಹಾಂಗೇ ಆಗ್ತದೆ ನಿನ್ಗೂ, ಗೊತ್ತಾತೇನು? ಕಡೀಗೆ ನಿನ್ನ ದೆಸಿಂದ ನಮ್ಮನ್ನೂ ಎಲ್ಲ ತೀರ್ಥಹಳ್ಳಿ ಕಚೇರಿಗೆ ಎಳಕೊಂಡು ಹೋದಾರು ಕರೀಪೇಟದೋರು, ಗೊತ್ತಾತೇನು?....”

ದೊಡ್ಡಬೀರನ ಗುಂಪು ಮಾತಾಡುತ್ತಲೆ ಮುಂದುವರಿದು ಹಳುವಿನಲ್ಲಿ ಮರೆಯಾಯಿತು. ಕುದುರೆ ಅವರು ಹೋದ ಕಡೆಯೆ ನೋಡುತ್ತಾ ನಿಂತಿತ್ತು.

ಸಣ್ಣಬೀರ ಸ್ವಲ್ಪದೂರ ಹೋದವನು, ಹಿಂದುಳಿದು, ಹಾದಿಯ ಪಕ್ಕದ ಹಳುವಿನಲ್ಲಿ ಜಲಬಾಧೆಗೆ ಹೋಗುವವನಂತೆ ಮರೆಯಾಗಿ ಕುಳಿತನು. ಉಳಿದವರು ಮುಂಬರಿದರು.

ಕುದುರೆ ನೋಡುತ್ತಿದ್ದಂತೆಯೆ ಸಣ್ಣಬೀರ ಹಿಂದಿರುಗಿ ಬರುತ್ತಿದ್ದುದು ಅದಕ್ಕೆ ಕಾಣಿಸಿತು. ನೇರವಾಗಿ ತನ್ನ ಕಡೆಯೆ ಬರುತ್ತಿದ್ದ ಅವನನ್ನು ಅದು ಕುತೂಹಲದಿಂದಲೂ ಅಚ್ಚರಿಯಿಂದಲೊ ಸಂಶಯದಿಂದಲೊ ನೋಡುತ್ತಲೆ ಇತ್ತು.

ಸಣ್ಣಬೀರ ಹತ್ತಿರ ಬಂದು, ಅದನ್ನು ಸಮಾಧಾನಪಡಿಸಲು ಅದರ ಕಡಿವಾಣವಿದ್ದ ಬಾಯಿಯ ಹತ್ತಿರ ಯಾವುದೊ ಸೊಪ್ಪನ್ನು ಹಿಡಿದನು. ಕುದುರೆ ಮೊದಲು ಅಪನಂಬಿಕೆಯಿಂದ ಮೂಗಿನ ಸೊಳ್ಳೆಯನ್ನು ಹಿಗ್ಗಿಸಿ ಕುಗ್ಗಿಸಿ ಮೂಸಿ ಮೂಸಿ ಬೆಚ್ಚುತ್ತಿದ್ದುದು ಕೊನೆಗೆ ಅದನ್ನು ತಿನ್ನಲೆಂಬಂತೆ ಸ್ವೀಕರಿಸಿತು. ಆದರೆ ತಿನ್ನಲಿಲ್ಲ ಕೆಳಕ್ಕೆ ಬೀಳಿಸಿತು. ಅದರ ಮೈಯನ್ನು ಉಪಚರಿಸಿ ತಟ್ಟುತ್ತಾ ಸಣ್ಣಬೀರ ಹಸುಬೆ ಚೀಲದ ಬಾಯನ್ನು ಹುಡುಕಿ, ಒಳಗೆ ಕೈಹಾಕಿ, ಸ್ವಾರ್ಲುಮೀನಿನ ಕೆಂತೆಗಳನ್ನು ಎಳೆದು ತೆಗೆದನು. ತಟಕ್ಕನೆ ಸೊಂಟದ ಕತ್ತಿಯಿಂದ ಕುದುರೆಯನ್ನು ಕಟ್ಟಿಹಾಕಿದ್ದ ಕುನ್ನೇರಿಲು ಮಟ್ಟಿನ ರೆಂಬೆಯನ್ನು ಕತ್ತರಿಸಿ, ಅತ್ತ ಇತ್ತ ಹುಡುಕುನೋಟವಟ್ಟಿ ಕಣ್ಣುಸುಳಿಸುತ್ತಾ, ತನ್ನವರು ಹೋದ ದಿಕ್ಕಿಗೆ ಓಡಿದನು. ನಿಂತೂ ನಿಂತೂ ಬೇಜಾರಾಗಿದ್ದ ಕುದುರೆ ಕುನ್ನೇರಿಲ ರೆಂಬೆಸಹಿತವಾಗಿ ಕಿರುಬಯಲಿನಲ್ಲಿ ಗಟ್ಟಿಯಾಗಿ ಕೆನೆಯುತ್ತಾ ಓಡಾಡತೊಡಗಿತು.

ಅದು ಇನ್ನೆತ್ತ ಓಡುತ್ತಿತ್ತೋ? ಮನೆಯ ನೆನಪಾಗಿ ಮೇಗರವಳ್ಳಿಯ ಕಡೆಗೇ ಹೋಗುತ್ತಿತ್ತೋ? ಅಥವಾ ತನ್ನ ಯಜಮಾನ ಹೋಗಿದ್ದ ದಿಕ್ಕಿಗೆ ಸೀತೂರಿನ ಕಡೆಗೇ ಸಾಗುತ್ತಿತ್ತೋ? ಆದರೆ ಅಷ್ಟರಲ್ಲಿ ಅದರ ಪ್ರತಿಧ್ವನಿಯೊ ಎಂಬಂತೆ ಪ್ರತ್ಯುತ್ತರವಾಗಿ ಮತ್ತೊಂದು ಕುದುರೆ ಕೆನೆದ ಸದ್ದು ಕೇಳಿಸಿ, ಆ ಹೆಣ್ದನಿಗೆ ಹಿಗ್ಗಿದ ಈ ಕುದುರೆಗಂಡು ಕತ್ತೆತ್ತಿ ಕಿವಿ ನಿಮಿರಿಸಿ ಆಲಿಸುತ್ತಾ ನಿಂತಿತು.

ಅದು ಬಹಳ ಹೊತ್ತು ಹಾಗೆ ನಿಂತಿರಲಿಲ್ಲ: ಅಜ್ಜೀಸಾಬು ಲಕ್ಕುಂದದ ದಿಕ್ಕಿನಿಂದ, ಭಾರವಾದ ಹೇರನ್ನು ಹೊತ್ತು ಮೆಲ್ಲಗೆ ಗುಡ್ಡವೇರುತ್ತಿದ್ದ ತನ್ನ ತಟ್ಟಿನ ಪಕ್ಕದಲ್ಲಿ, ಲಗಾಮು ಹಿಡಿದುಕೊಂಡು ನಡೆಯುತ್ತಾ ಬಂದನು. ಬಂಧನ ವಿಮುಕ್ತವಾಗಿದ್ದ ಗಂಡು ಕುದುರೆ ಆ ಬಂದ ಹೆಣ್ಣು ಕುದುರೆಯನ್ನೂ ಅದರ ಗಡ್ಡದೊಡೆಯನನ್ನೂ ಕಂಡು, ಗುರುತಿಸಿ, ಹಿಗ್ಗಿನಿಂದ ಬಳಿಸಾರಿತು.

ಲಗಾಮಿನ ತುದಿಯಲ್ಲಿದ್ದ ರೆಂಬೆಯನ್ನು ಕಂಡ ಅಜ್ಜೀಸಾಬು ಕರೀಂಸಾಬು ಪೊದೆಗೆ ಕಟ್ಟಿಹೋಗಿದ್ದ ಕುದುರೆ ಅದನ್ನು ಜಗ್ಗಿಸಿ ಎಳೆದು ಮುರಿದುಕೊಂಡಿರಬೇಕೆಂದು ಊಹಿಸಿದನು. ಅದರ ಬೆನ್ನಿನಿಂದ ಜಾರಿ ಕೆಳಗೆ ಬಿದ್ದಿದ್ದ ಹಸುಬೆ ಚೀಲವನ್ನು ಎತ್ತಿ ತಂದು ತನ್ನ ಪಕ್ಕದಲ್ಲಿಟ್ಟುಕೊಂಡು ಕಾಯುತ್ತಾ ಕುಳಿತನು.

ಕುದುರೆಗಳೆರಡೂ ಒಂದರ ಮುಖ ಮೈಗಳಿಗೆ ಮತ್ತೊಂದರ ಮುಕ ಮೈಗಳನ್ನು ತಿಕ್ಕುತ್ತಾ ಪರಸ್ಪರ ಅನುರಾಗ ಪ್ರದರ್ಶನ ಮಾಡುತ್ತಾ ತಮ್ಮ ಸ್ವಾಭಾವಿಕ ಲೈಂಗಿಕ ಸ್ವರೂಪವನ್ನು ಮೆರೆಯತೊಡಗಿದುವು.

ಸ್ವಲ್ಪ ಹೊತ್ತಿನಲ್ಲಿ ಸೀತೂರಿನ ದಿಕ್ಕಿನಿಂದ ಇಜಾರದ ಸಾಬಿಯೂ ಲುಂಗೀಸಾಬಿಯೂ ಹಳುವಿನಲ್ಲಿ ಗುಡ್ಡವೇರಿ ಬರುತ್ತಿದ್ದುದು ಕಾಣಿಸಿತು. ಇಜಾರದ ಸಾಬಿಯ ಬೆನ್ನಿನ ಮೇಲೆ ಒಂದು ಭಾರೀ ಕರಿಬಾಳೆ ಗೊನೆ ಇತ್ತು; ಲುಂಗೀಸಾಬುವಿನ ಹೆಗಲಮೇಲೆ ಒಂದು ತಕ್ಕಮಟ್ಟಿಗೆ ದೊಡ್ಡದೆ ಆದ ದಾಸ ಕಬ್ಬಿನ ಹೊರೆ ಇತ್ತು. ಇಬ್ಬರೂ ಅಜ್ಜೀಸಾಬುವಿನ ಸಮೀಪಕ್ಕೆ ಬಂದು ಉಸ್ಸೆನ್ನುತ್ತಾ ಹೊರೆಗಳನ್ನಿಳಿಸಿ, ಇತ್ತೀಚಿನ ಮಳೆಗಳಿಂದ ಆಗತಾನೆ ಹಸುರಾಗತೊಡಗಿದ್ದ ನೆಲದ ಮೇಲೆ ಕೂತರು.

ಅಜ್ಜೀಸಾಬು ಬಾಳೆಯ ಗೊನೆಯನ್ನೂ ಕಬ್ಬಿನ ಹೊರೆಯನ್ನೂ ತುಸು ಕರುಬಿನಿಂದಲೆ ನೋಡುತ್ತಾ ಸಾಬರ ಮಾತಿನಲ್ಲೇ ಕೇಳಿದನು: "ಎಂಥಾ ಬಾಳೆಕೊನೆ! ಅಬ್ಬ!.... ಏನು ಕೊಟ್ಟೆ?"

"ಹರಾಮ್ ಬಾಂಚೊತ್! ಏನು ಉಡಾಫಿ ಮಾತು ಆಡಿದ ಅವನು?" ಎಂದನು ಇಜಾರದ ಸಾಬು, ಅವರ ಭಾಷೆಯಲ್ಲಿಯೆ.

ವ್ಯಾಪಾರದ ಚೌಕಾಸಿಯಲ್ಲಿ ಭಿನ್ನಾಭಿಪ್ರಾಯ ಬಂದು ಮಾತಿಗೆ ಮಾತು ಹತ್ತಿರಬಹುದೆಂದು ಊಹಿಸಿ ಅಜ್ಜೀಸಾಬು "ಎಲ್ಲಿ? ತೋಟದಲ್ಲೇ ಯಾಪಾರ ಆಯ್ತಾ?" ಎಂದನು.

"ಆಗಿದ್ದು ತೋಟದಲ್ಲೇ! ಯಾಪಾರ ಮಾತ್ರ ಅಲ್ಲ!" ಎಂದನು ಲುಂಗೀಸಾಬಿ ವ್ಯಂಗ್ಯವಾಗಿ ನಗುತ್ತಾ.

"ಚೂರಿ ತೋರಿಸಿದ್ದೆ ತಡ, ಲೌಡೀಮಗ ಪರಾರಿಯಾಗಿಬಿಟ್ಟ!" ಎನ್ನುತ್ತಾ ಇಜಾರದ ಸಾಬಿ ವಿಕಟವಾಗಿ ನಗತೊಡಗಿದನು.

ಬಹುಮಟ್ಟಿಗೆ ಅಸೂಯೆಯಿಂದಲೆ ಪ್ರೇರಿತವಾಗಿದ್ದು, ದುರ್ಬಲನೂ ಕೃಶಶರೀರಿಯೂ ಆಗಿದ್ದ ಅಜ್ಜೀಸಾಬಿಯ ನೀತಿಪ್ರಜ್ಞೆ ಎಚ್ಚತ್ತಂತಾಗಿ, ತನ್ನ ಮನದಲ್ಲಿಯೆ "ನೀನು ಹೀಗೇ ಕಂಡಕಂಡವರ ಅಡಕೆತೋಟಕ್ಕೊ ಬಾಳೆ ತೋಟಕ್ಕೊ ಕಬ್ಬಿನಹಿತ್ತಲಿಗೋ ನುಗ್ಗಿನುಗ್ಗಿ ದುಂಡಾವರ್ತಿಯಿಂದ ಲೂಟಿಮಾಡುತ್ತಿರು?.... ಒಂದು ದಿನ ನಿನಗೆ ಆಗ್ತದೆ, ಸರಿಯಾಗಿ!" ಎಂದುಕೊಳ್ಳುತ್ತಾ, ಕೊಬ್ಬಿ ಬೆಳೆದಿದ್ದ ಹಂದಿಕತ್ತಿನ ಇಜಾರದ ಸಾಬಿಯ ಮಹಾಕಾಯದ ಕಡೆಗೆ ಕೈಲಾಗದ ಜುಗುಪ್ಸೆಯಿಂದ ನೋಡಿದನು.

ಅಷ್ಟರಲ್ಲಿ ಒಂದು ಕಾಡುದಾರಿಯ ಕಡೆಯ ಹಳು ಅಲುಗಿದಂತಾಗಿ, ಆ ಕಡೆಯೆ ನೋಡುತ್ತಿದ್ದ ಲುಂಗೀಸಾಬುಗೆ ಹಲಸಿನ ಹಣ್ಣನ್ನು ಹೆಗಲ ಮೇಲೆ ಹೊತ್ತು ಬರುತ್ತಿದ್ದ ಲಕ್ಕುಂದದ ಸೇಸನಾಯ್ಕನ ಮಗ ಹಮೀರನ ತಲೆವಸ್ತ್ರ ಕಾಣಿಸಿತು, ಹಳುವಿನ ಮರೆಯಿಂದಲೆ ಕಿರುಹಕ್ಕಲಿನಲ್ಲಿ ಕುಳಿತಿದ್ದ ಸಾಬರ ತಂಡವನ್ನು ಕಂಡ ಹಮೀರನಾಯ್ಕನು ಹೆಗಲ ಹೊರೆಯನ್ನು ಥಕ್ಕನೆ ಹಳುವಿನಲ್ಲಿಯೆ ಬಗ್ಗಿ ಮರೆಸಿಟ್ಟು, ಏನೊ ಕಾಣದವನಂತೆ ಮುಂದುವರಿದನು: ಅದರೆ ಲುಂಗೀಸಾಬು ಅದನ್ನಾಗಲೆ ಕಂಡುಬಿಟ್ಟಿದ್ದನು!

ಹಮೀರನಾಯ್ಕನು ಹಾಗೆ ಹಣ್ಣನ್ನು ಮುಚ್ಚಿಡುವುದಕ್ಕೆ ಕಾರಣ ಈ ಸಾಬರ ತಂಡದವರ ಸುಲಿಗೆಯ ಅನುಭವವೆ! ಯಾರಾದರೂ ಒಬ್ಬೊಬ್ಬರೆ ದಾರಿಯಲ್ಲಿ ಸಿಕ್ಕರೆ, ಅವರು ಗುರುತಿನವರಾದರೆ, ನಗುನಗುತ್ತಲೆ ಬೋಳೆಯ ಮಾತಗಳನ್ನಾಡುತ್ತಾ, ತಮಾಷೆಮಾಡುವವರಂತೆಯೆ ಕಸಿದುಕೊಳ್ಳುತ್ತಿದ್ದರು. ಅಪರಿಚಿತರಾದರೆ, ಬೆದರಿಸಿಯೊ ಹೊಡೆದೊ ಬಡಿದೊ ದೋಚುತ್ತಿದ್ದರು.

ಇಜಾರದ ಸಾಬಿ ಅಣಕುಗೌರವವನ್ನು ನಟಿಸುತ್ತಾ "ಓಹೋಹೋ ಏನು ಹಮ್ಮೀರನಾಯ್ಕರ ಸವಾರಿ, ಕಾಡ ಕಡೆಯಿಂದ ಬರ್ತಾ ಇದೆಯಲ್ಲಾ, ಖಾಲಿ ಕೈಲಿ?" ಎಂದು ಹಲ್ಲುಬಿಟ್ಟನು.

“ಭರ್ತೀನೆಲ್ಲಾ ಅಲ್ಲೇ ಹಳುವಿನಾಗೆ ಇಟ್ಟರೆ, ಖಾಲಿಯಾಗದೆ ಮತ್ತೇನು ಕೈ?” ಎಂದು ಲುಂಗೀಸಾಬಿ ನಕ್ಕು, ಹಮ್ಮೀರನ ಮುಣವನ್ನೇ ಅರ್ಥಗರ್ಭಿತ ವ್ಯಂಗ್ಯದೃಷ್ಟಿಯಿಂದ ನೋಡುತ್ತಾ ಕೇಳಿದನು: “ಹೌದೋ? ಅಲ್ಲೋ? ಹೇಳಿ ಮತ್ತೆ ನೀವೆ, ಹಮ್ಮೀರನಾಯಕರೆ?”

ಹೆದರಿದವನಿಗೆ ವಿನೋದ ಗ್ರಾಹ್ಯವಾಗಲಿಲ್ಲ. ಆದರೂ ಪೆಚ್ಚಾಗಿ ಪಿಚ್ಚನೆ ಹಲ್ಲು ಬಿಟ್ಟನು ಹಮೀರ.

ಮೇಲುಸಾಲಿನ ಮೂರು ಹಲ್ಲುಗಳೂ ಮುರಿದು ಹೆಬ್ಬಾಗಿಲು ತರದಂತಿದ್ದ ಅವನ ಬಾಯನ್ನು ನೋಡಿ ಮೂವರು ಸಾಬರೂ ಗಟ್ಟಿಯಾಗಿ ನಗತೊಡಗಿದರು. ಅವರೂ ಕೇಳಿದ್ದರು ಆ ಹಲ್ಲು ಉದುರಿದ ಸನ್ನಿವೇಶದ ಕಥೆಯನ್ನು: ಹಮೀರ ಒಂದು ದಿನ ಬೈಗುಗತ್ತಲಲ್ಲಿ ಮಿತಿಮೀರಿ ಕುಡಿದು, ಮತ್ತೇರಿ, ಹಾದಿಬದಿಯಲ್ಲಿ ಎಡವಿ ಬಿದ್ದನಂತೆ. ಅವನು ಮುಖ ಅಡಿಯಾಗಿ ಏಳೆಂಟು ಅಡಿ ಎತ್ತರದ ಕೊರಕಲಿಗೆ ಬಿದ್ದಿದ್ದನಂತೆ. ಬಿದ್ದಾಗ ಒಂದು ಕಗ್ಗಲ್ಲು ಅವನ ಬಾಯಿಗೆ ಬಡಿದ ಹೊಡೆತಕ್ಕೆ ಹಲ್ಲು ಸಡಿಲಿ ಮುರಿದುವಂತೆ. ಅವನ ಹಿಂದೆ ಅವನಂತೆಯೆ ಕುಡಿದು ಬರುತ್ತಿದ್ದವರು ಅವನನ್ನು ಎತ್ತಿ ನಿಲ್ಲಿಸಲು ಹೋದಾಗ, ಅವನು ಮರುಳನಂತೆ ಕಿಲಕಿಲನೆ ನಗುತ್ತಾ, ಬಾಯಿಂದ ಸೋರುತ್ತಿದ್ದ ರಕ್ತವನ್ನೂ ಲೆಕ್ಕಿಸದೆ ‘ತಗಾ ನಿಂಗೊಂದು! ತಗಾ ನಿಂಗೊಂದು! ತಗಾ ನಿಂಗೊಂದು!’ ಎಂದು ಅಲುಹುತ್ತಿದ್ದ ಹಲ್ಲುಗಳನ್ನು ಒಂದೊಂದನ್ನು ಕಿತ್ತೂ ಕಿತ್ತೂ ತನ್ನನ್ನು ಎತ್ತಿದವರಿಗೆ ಇನಾಮು ಕೊಟ್ಟಿದ್ದನಂತೆ! ಆ ಕಥೆ ಜನರಿಂದ ಜನಕ್ಕೆ ಹಬ್ಬಿ, ನಾಡಿನ ಒಂದು ಹಾಸ್ಯವಾಗಿ ಪರಿಣಮಿಸಿತ್ತು. ‘ತಗಾ ನಿಂಗೊಂದು!’ ಎಂದೊಡನೆ, ಜನ ಹಮೀರನ ಹಲ್ಲನ್ನು ನೆನೆದು ನಗೆಯಲ್ಲಿ ಮುಳುಗುತ್ತಿದ್ದರು.

ವ್ಯಕ್ತಿಯನ್ನು ನೋಡದಿದ್ದವರು ಯಾರಾದರೂ ಹಮೀರನಾಯ್ಕ ಎಂಬ ಹೆಸರನ್ನು ಕೇಳಿದ್ದರೆ ಅವರ ಕಲ್ಪನೆಯಲ್ಲಿ ಸುಳಿಯುತ್ತಿದ್ದ ಆ ವ್ಯಕ್ತಿಯ ಚಿತ್ರಕ್ಕೂ ಅವರು ಆ ವ್ಯಕ್ತಿಯನ್ನೆ ಸಾಕ್ಷಾತ್ತಾಗಿ ನೋಡಿದಾಗ ಕಾಣುತ್ತಿದ್ದ ಚಿತ್ತರಕ್ಕೂ ಆನೆಗೂ ಆಡಿಗೂ ಇರುವಷ್ಟು ವ್ಯತ್ಯಾಸವಿರುತ್ತಿತ್ತು. ಅಂತಹ ಸಾಧಾರಣ ದುರ್ಬಲ ವ್ಯಕ್ತಿಗೆ ಎಂತಹ ಹೆಸರಿಟ್ಟಿದ್ದರು! ಆದರೆ ಅದಕ್ಕೆ ಸಮರ್ಥನೀಯವಾದ ಒಂದು ಆಧಾರವೂ ಇತ್ತು: ಆ ಬಡಕಲು ‘ಹಮೀರ’ನ ಹೆಸರನ್ನೇ ಹೊತ್ತಿದ್ದ ಅವನ ಮುತ್ತಜ್ಜನೊ, ಅವನಜ್ಜನೊ, ದುರ್ಗದ ಪಾಳೇಯಗಾರರ ಹಳೆಪೈಕದ ಪಡೆಗೆ ಪಡೆದವಳನಾಗಿದ್ದನಂತೆ! ಅವನ ಶಕ್ತಿ ಪ್ರತಾಪ ಸಾಹಸಗಳ ವಿಚಾರವಾದ ಅನೇಕ ನಿಜವೋ ಸುಳ್ಳೋ ಕಥೆಗಳು ಲಕ್ಕುಂದದ ಸೇಸನಾಯಕನ ಮನೆತನದ ಗತವೈಭವದ ಸ್ಮಾರಕನಿಕೇತನಗಳಾಗಿದ್ದುವು. ಆ ಮಹಿಮೆಯಿಂದಲೆ ಅವನಿನ್ನೂ ಹಳೆಪೈಕದವರ ಮುಖಂಡನಾಗಿ, ಕುಲದವರ ವಿಧೇಯತೆಗೆ ಪಾತ್ರನಾಗಿದ್ದನು.

ಆದರೆ ಹತ್ತೊಂಭತ್ತನೆಯ ಶತಮಾನದ ಅಂತ್ಯದ ಗತವೈಭವಕ್ಕೆ ನಿದರ್ಶನಪ್ರಾಯನಾಗಿದ್ದ ನಮ್ಮ ಹಮ್ಮೀರನಾಯಕನಿಗೆ ಅವನ ಮೋರೆಯ ಮೇಲೆ, ಪೌರುಷದ ಚಿಹ್ನೆಯ ಮಾತಂತಿರಲಿ, ಪುರುಷ ಲಕ್ಷಣವಾದ ರೋಮವೂ ಇರಲಿಲ್ಲ. ಅವನ ಅಪ್ಪ ಸೇಸನಾಯಕನಿಗಿದ್ದಂತೆ ಅವನ ಕೈಕಾಲುಗಳಲ್ಲಿಯೂ ಕೂದಲು ಹುಟ್ಟಿಯೆ ಇಲ್ಲವೆಂಬತೆ ನುಣ್ಣಗೆ ಕ್ಷೌರ ಮಾಡಿಸಿದಂತೆ ಕಾಣುತ್ತಿತ್ತು. ಆದ್ದರಿಂದಲೆ ಇಜಾರದ ಸಾಬಿಗೆ ಅವನನ್ನು ಕಂಡರೆ, ಸೀರೆಯುಡದೆ ಸೊಂಟಕ್ಕೆ ಅಡ್ಡಪಂಚೆ ಸುತ್ತಿ, ಹರಕಲು ಅಂಗಿ ಹಾಕಿಕೊಂಡ ಬೆಳ್ಳನೆ ತೆಳ್ಳನೆ ಹುಡುಗಿಯನ್ನು ಕಂಡಂತಾಗಿ, ಖುಷಿಯಾಗುತ್ತಿದ್ದದ್ದು!

“ಭಾಗವತರಾಟದಲ್ಲಿ ಹೆಣ್ಣುವೇಷ ಹಾಕಿದರೆ ಲಾಯಖ್ಖಾಗ್ತದೆ ನಮ್ಮ ಹಮ್ಮೀರಣ್ಣಗೆ!” ಎಂದನು ಇಜಾರದ ಸಾಬು.

ತಾನು ಹಳುವಿನಲ್ಲಿ ಹಲಸಿನ ಹಣ್ಣು ಇಟ್ಟಿದ್ದನ್ನು ಅಜ್ಜೀಸಾಬು ಕಂಡುಬಿಟ್ಟಿದ್ದಾನೆಯೊ ಏನೋ ಎಂದು ಮೊದಲು ಪೆಚ್ಚಾಗಿದ್ದ ಹಮೀರನು ಇಜಾರದ ಸಾಬು ಹೇಳಿದ್ದನ್ನು ಕೇಳಿ ನಾಚಿ ನೆಲಕ್ಕಿಳಿದಂತಾಗಿ

“ಏ, ಈ ಸಾಬರಿಗೆ ಕಸುಬಿಲ್ಲ!” ಎಂದು ಬೆಪ್ಪುನಗೆ ನಕ್ಕನು.

“ಅವನು ಯಾಕೆ ಹೆಣ್ಣುವೇಷ ಹಾಕುತ್ತಾನೆ ಇನ್ನು? ಮದುವೆ ಗಂಡು ಆಗುವವನು? ಅಲ್ಲವೇನೋ?” ಕೇಳಿದನು ಲುಂಗೀಸಾಬು.

“ವ್ಹಾರೆವ್ಹಾ! ಹೆಣ್ಣಿಗೆ ಯಾರೋ ಹೆಣ್ಣು ಕೊಡುವವರು?” ಇರಿಯಿತು ಇಜಾರ ಸಾಬಿಯ ಕುಹಕ ಹಾಸ್ಯ.

“ಸೀತೂರು ತಿಮ್ಮನಾಯ್ಕರೋ! ಮಗಳ ಕೊಟ್ಟು ಇವನ್ನ ಅಳಿಯ ಮಾಡಿ ಕೊಳ್ತಾರಂತೆ” ಲುಂಗೀಸಾಬು ಎಂದನು.

ಇದ್ದಕಿದ್ದಹಾಗೆ ಕನ್ನಡವನ್ನು ಬಿಟ್ಟು ತುರುಕುಮಾತಿನಲ್ಲಿ ಇಜಾರದ ಸಾಬಿ ಏನನ್ನೊ ಹೇಳಿದುದಕ್ಕೆ ಉಳಿದ ಇಬ್ಬರು ಸಾಬರೂ ಹಮೀರನನ್ನೆ ನೋಡುತ್ತಾ ಬಿದ್ದು ಬಿದ್ದುಗಹಗಹಿಸಿ ನಗತೊಡಗಿದರು. ಏನನ್ನೋ ತುಂಬ ಅಸಹ್ಯವಾದ ಅಶ್ಲೀಲವನ್ನು ಇಜಾರದ ಸಾಬಿ ನುಡಿದಿರಬೇಕೆಂದು ಗೊತ್ತಾದರೂ ಅದರ ಇರಿತದ ಮೊನೆಯನ್ನು ನಿವಾರಿಸುವ ರೀತಿಯಲ್ಲಿ ಹಮೀರನೂ ನಗತೊಡಗಲು, ಉಳಿದ ಮೂವರೂ ಮತ್ತಷ್ಟು ಬಿದ್ದುಬಿದ್ದು ಹ್ಹೆಹ್ಹೆಹ್ಹೇ ಎಂದು ಅಟ್ಟಹಾಸಮಾಡಿದ ರಭಸಕ್ಕೆ ಕುದುರೆಗಳೆರಡೂ ಬೆಚ್ಚಿ, ನಾಲ್ಕು ಹೆಜ್ಜೆ ಓಡಿ ನಿಂತುವು.

“ಹೋಗಲಿ ಬಿಡು, ಹಮೀರಣ್ಣ; ನೀನು, ನಿಕಾ ಮಾಡಿಕೊ; ಸಂತೋಷ.... ಅಲ್ಲಯ್ಯಾ, ನನ್ನ ಕುದುರೆ ಬೇಡ ಅಂತಾ ಹೇಳಿಬಿಟ್ಯಂತೆ?.... ನನ್ನ ಕುದುರೆ ಸ್ವಲ್ಪ ಬಡಕಲಾದ ಮಾತ್ರಕ್ಕೆ ನಿನ್ನ ಹೊರೋದಕ್ಕೆ ಆಗ್ತಿರಲಿಲ್ಲವೆ ಅದಕ್ಕೆ? ನೀನೇನು ಭಾರಿ ಆಳೇ? ಮದುವೆ ಗಂಡಾದ ಕೂಡ್ಲೆ ನಿನ್ನ ತೂಕ ಹೆಚ್ಚಿಬಿಡುತ್ತದ್ಯೋ?” ಕೇಳಿದನು ಅಜ್ಜೀಸಾಬು.

“ಕುದುರೇನೇ ನಿಕಾ ಮಾಡಿಕೊಳ್ತಾನೇನೋ?” ಗಹಗಹಿಸಿ ನಗುತ್ತಾ ಕೇಳಿದನು ಇಜಾರದ ಸಾಬು.

ನಾಲ್ವರ ನಗೆಯ ಮಧ್ಯೆ ಲುಂಗೀಸಾಬು ವಿವರಿಸಿದನು: “ಅವನು ಮಾಡಿಕೊಳ್ತೇನೆ ಅಂದ್ರೂ ಕುದುರೆ ಒಪ್ಪಬೇಕಲ್ಲಾ? ಅದಕ್ಕಾಗಲೆ ಗಂಡು ಸಿಕ್ಕಯ್ತೆ, ಅಲ್ಲಿ ನೋಡಿ ಕಾಣ್ತದಲ್ಲಾ! ಭರ್ಜರಿ ಗಂಡು! ಇವನ ಹಾಗೆ ಬಡಕಲಲ್ಲ!” ಎಲ್ಲರೂ ಆ ಕಡೆ ಕಣ್ಣಾದರು, ಪ್ರಣಯ ಸಿದ್ಧತೆಯ ಪೂರ್ವ ಲೀಲೆಯಲ್ಲಿ ತೊಡಗಿದ್ದ ಕುದುರೆಗಳ ಕಡೆ, “ಹಾಂಗಿಲ್ಲ ಆ ವಿಷಯಾ....” ಎಂದು ಮತ್ತೆ ಮುಂದುವರೆಸಿದನು ಲುಂಗೀಸಾಬು “ಹಳೆಪೈಕದವರು ದಂಡಿಗೆ ಹತ್ತಬಾರದು, ಕುದುರೆ ಏರಬಾರದು ಅಂತಾ ಸರಕಾರದ ತನಕ ಹೊಡೆದಾಡಿ ಹಕ್ಕು ಮಾಡಿಕೊಂಡಿದಾರೆ ಗೌಡರು. ದುರ್ಗದವರ ಕಾಲದಲ್ಲಿ ನಾವೂನೂ ರಾಜ್ಯ ಕಟ್ಟೋರು, ರಾಜ್ಯ ಆಳ್ದೋರು, ನಮಗೆ ಅದು ಪೂರ್ವದಿಂದ ಬಂದ ಹಕ್ಕು ಅಂತಾ ಹಳೆಪೈಕದೋರು.... ಈಗ ಸೀಮೆ ಮುಖಂಡರು ಲಕ್ಕುಂದದ ಸೇಸನಾಯ್ಕರು ಸೀತೂರು ತಿಮ್ಮನಾಯ್ಕರು ಎಲ್ಲಾ ಸೇರಿ, ಹಮ್ಮಿರಣ್ಣನ ಮದುವೇಲಿ ಮದುವೆ ಗಂಡನ್ನ ಕುದುರೆ ಮೇಲೆ ಹತ್ತಿಸಿ ಹೆಣ್ಣಿನ ಮನೆಗೆ ದಿಬ್ಬಣ ತಗೊಂಡು ಹೋಗ್ತಾರಂತೆ; ಗಂಡು

ಹೆಣ್ಣನ್ನ ಕರಕೊಂಡು ಬರುವಾಗ ದಂಡೀಗೆ ಮೇಲೆ ಕರಕೊಂಡು ಬರ್ತಾರಂತೆ; ಈಗ ಗೌಡರ ಕಡೆ ಸೀಮೆ ಮುಖಂಡರೆಲ್ಲ ಸೇರಿ ಮಸಲತ್ತು ಮಾಡಿಕೊಂಡಿದಾರಂತೆ; ಸೇಸನಾಯ್ಕರ ಮಗನ ಮದುವೇಲಿ ಗಂಡನ್ನ ಕುದುರೆ ಮೇಲೆ ಹತ್ತಿಸಿದ್ರೆ, ದಿಬ್ಬಣ ತಡೆದು, ಕುದುರೆ ಕಾಲು ಮುರಿದು ಹಾಕಬೇಕು ಅಂತಾ...." ಒಂದು ಕ್ಷಣ ಮಾತು ನಿಲ್ಲಿಸಿ, ಹಮಿರನ ಕಡೆ ತಿರುಗಿ, ವ್ಯಂಗ್ಯ ಮೃದುಹಾಸದಿಂದ ಕೇಳಿದನು: "ಅದಕ್ಕೇ ಅಲ್ಲೇನೊ, ಹೇಳೊ, ಹಮ್ಮಿರಣ್ಣಾ, ಇದ್ದಿದ್ದರಲ್ಲಿ ಬಲವಾದ ಗಂಡುಕುದುರೇನೆ ಆರಿಸಿಕೊಂಡದ್ದು?"

ಹಮೀರನು ಲುಂಗೀಸಾಬಿಯ ಧ್ವನಿಯ ವ್ಯಂಗ್ಯವನ್ನು ಗ್ರಹಿಸಲು ಅಸಮರ್ಥನಾಗಿ, ಅಜ್ಜೀಸಾಬಿಯ ಬಡಕಲು ಕುದುರೆಯ ಪಕ್ಕದಲ್ಲಿ ನಿಂತು ಹೋಲಿಕೆಯಿಂದ ಹೆಚ್ಚು ಎತ್ತರವೂ ಆಗಿ ಕಾಣುತ್ತಿದ್ದ ಕರೀಂ ಸಾಬರ ಕುದುರೆಯನ್ನು ಮೆಚ್ಚಿ ನೋಡುತ್ತಾ, ಬೆಪ್ಪುನಗೆ ನಗುತ್ತಾ, ತನ್ನ ಗಂಭೀರವಾದ ಅಭಿಪ್ರಾಯವನ್ನು ಗಂಭೀರವಾಗಿಯೆ ಮಂಡಿಸುವವನಂತೆ ಉತ್ತರಿಸಿದನು: " ಮತ್ತೆ? ನೀವು ಹೇಳಾದೇನು ಸುಳ್ಳಾ? ಕರ್ಮಿನು ಸಾಬರ ಕುದುರೆ ಹ್ಯಾಂಗದೆ ನೋಡಿ! ಅದರ ಕಾಲು ಮುರಿಯಾಕೆ ಬಂದೋರಿಗೆ ಒಂದು ಒದೆ ಒದ್ದರೆ ಸಾಲ್ದೇನು? ಹಲ್ಲು ಮುರಿದ್ಹೋಗ್ತಾರೆ!...."

ಅವನು ಇನ್ನೂ ಮುಂದುವರಿಯುತ್ತಿದ್ದನೊ ಏನೊ? ಎಲ್ಲರೂ ಗೊಳ್ಳೆಂದು ನಕ್ಕುದನ್ನು ನೋಡಿ, ಪಿಚ್ಚನೆ ಹಲ್ಲು ಬಿಡುತ್ತಾ ತೆಪ್ಪಗಾದನು.

"ಅದೆಲ್ಲಾ ಸೈ. ನೀನು ಕುದುರೆ ಮೇಲೆ ಯಾವಾಗಲಾದರೂ ಹತ್ತಿದ್ದೀಯೊ?" ಇಜಾರದ ಸಾಬಿ ಲೇವಡಿಮಾಡಿದನು.

"ಕುದುರೆ ಮ್ಯಾಲೆ ಹತ್ತದಿದ್ರೆ ಏನಂತೆ?.... ನಾ ಹುಡುಗನಾಗಿದ್ದಾಗ ದನಾಕಾಯಾಕೆ ಹೋಗ್ತಿದ್ದಾಗ ದನದ ಮೇಲೆ ಎಮ್ಮೆ ಮೇಲೆ ಎಷ್ಟುಸಾರಿ ಹತ್ತಿಲ್ಲ?...." ಪ್ರತಿಭಟಿಸುವಂತೆ ಮಾತಾಡಿದನು ಹಮೀರ.

"ಹಾಗಾಂದ್ರೆ ನೀ ಅದನ್ನೂ ಮಾಡಿದ್ದೀಯಾ ಅನ್ನು, ಹೋರಿ ಕೆಲಸಾನ?" ಇಜಾರದ ಸಾಬಿಯ ಮಾತಿನ ಅಶ್ಲೀಲ ಇಂಗಿತವನ್ನು ಗ್ರಹಿಸಲಾರದೆ ನಿಂತಿದ್ದ ಹಮೀರನಿಗೆ ಅದನ್ನು ಸ್ಪಷ್ಟಪಡಿಸಲೆಂಬಂತೆ ಒತ್ತಿ ವಿವರಿಸಿದನು "ಅಯ್ಯೋ ಬೆಪ್ಪಾ! ಕುದುರೆ ಮೇಲೆ ಹತ್ತೋದು ಅಂದರೆ ಬೆನ್ನಮೇಲೆ ಹತ್ತಿ ಸವಾರಿ ಮಾಡೊದೋ? ಅದರ ಬಾಲ ಎತ್ತಿ ಹಿಂದುಗಡೆಯಿಂದ  ಹತ್ತೋದಲ್ಲ, ನೀ ದನಕ್ಕೆ ಎಮ್ಮೆಗೆ ಹತ್ತಿದ ಹಾಂಗೆ!...."

ಎಲ್ಲರೂ ನಗುತ್ತಿದ್ದುದನ್ನು ನೋಡಿ ಹಮೀರನಿಗೆ ತಟ್ಟನೆ ಹೊಳೆಯಿತು, ಸಾಬಿಯ ಪೋಲಿಮಾತಿನ ಅರ್ಥ. ಅವನ ಮುಖ ಸಿಟ್ಟಿನಿಂದಲೂ ಜಿಗುಪ್ಸೆಯಿಂದಲೂ ಸಣ್ಣಗಾಯಿತು: "ಥ್ಥೂ!" ಎಂದನು ಯಾರ ಮುಖಕ್ಕೊ ಉಗುಳುವಂತೆ "ನಾನೇನು ಹಗಲು ಹನ್ನೆರಡು ಗಂಟೆಗೆ ರಾಜ್ಯ ಕಳಕೊಂಡವರ ಜಾತಿ ಅಲ್ಲ, ಹಾಂಗೆಲ್ಲ ಮಾಡಾಕೆ!"

ಮಧ್ಯಾಹ್ನ ಹನ್ನೆರಡು ಗಂಟೆಯ ಹೊತ್ತಿನಲ್ಲೆ ಶ್ರೀರಂಗಪಟ್ಟಣವನ್ನು ಕಳೆದುಕೊಂಡರೆಂದು ಮುಸಲ್ಮಾನರನ್ನು ಮೂದಲಿಸುವುದು ಆಗ ವಾಡಿಕೆಯಾಗಿತ್ತು. ಮುಸಲ್ಮಾನರಿಗೂ ಆ ನಿಂದೆ ಅತ್ಯಂತ ದುಸ್ಸಹನೀಯವಾಗಿ ಅವಮಾನಕರವಾಗಿದ್ದುದರಿಂದ ಹಾಗೆ ನಿಂದಿಸಿದವರನ್ನು ಖೂನಿ ಮಾಡಲೂ ಹೇಸುತ್ತಿರಲಿಲ್ಲ.

ತಟಕ್ಕನೆ ಇಜಾರದ ಸಾಬಿಯ ಮುಖ ಕರ್ಕಶವಾಯ್ತು. ಹಮೀರನ ಕೆಚ್ಚಲ್ಲದಿದ್ದರೂ ಅವನ ಮೊಂಡ ಮೂರ್ಖತೆಯ ಅವನ ಬಾಯಿಂದ ಏನನ್ನು ಬೇಕಾದರೂ ಹೇಳಿಸಿಬಿಡಬಹುದುದೆಂದು ಲುಂಗೀಸಾಬುವಿಗೆ ದಿಗಿಲಾಯಿತು. ವಿಷಾದದ ದಿಕ್ಕಿನ ಇಳಿಜಾರಿನ ಕಡೆಗೆ ಜಾರುತಿದ್ದ ವಿನೋದದ ಅಪಘಾತವನ್ನು ತಡೆಗಟ್ಟುವ ಉದ್ದೇಶದಿಂದ "ತಮಾಷೆಗೆ ಹೇಳಿದ್ದಕ್ಕೆಲ್ಲ ಸಿಟ್ಟುಮಾಡಬೇಡಣ್ಣಾ, ಹಮೀರಣ್ಣಾ!.... ನಿನ್ನ ಲಗ್ನಕ್ಕೆ ನಾನೂ ಬುಡನ್ ಇಬ್ಬರೂ ಬಿರುಸು ಬಾನ ಗರ್ನಾಲು ಹಾರಿಸೋಕೆ ಒಪ್ಪಿಕೊಂಡಿದ್ದೀವಿ.... ನೋಡ್ತೀರು, ಎಷ್ಟು ಪಸಂದಾಗಿ ಜಬರ್ದಸ್ತಿನಿಂದ ನಿನ್ನ ಲಗ್ನದ ದರ್ಬಾರು ನಡೀತದೆ!.... ನೋಡ್ತೀರು, ಎಷ್ಟು ಪಸಂದಾಗಿ ಜಬರ್ದಸ್ತಿನಿಂದ ನಿನ್ನ ಲಗ್ನದ ದರ್ಬಾರು ನಡೀತದೆ!.... ಇರ್ಲಿ ಬಿಡೂ.... ಈಗ ಬಹಳ ಹಸಿವಾಗ್ತೈತೆ ನಮಗೆ 'ಹಸಿದು ಹಲಸಿನ ಹಣ್ಣು, ಉಂಡು ಬಾಳೆಹಣ್ಣು" ತಿನ್ನಬೇಕಂತೆ!.... ಆ ಹಳುವಿನಾಗೆ ಒಂದು ಹಲಸಿನ ಹಣ್ಣು, ಉಂಡು ಬಾಳೆಹಣ್ಣು' ತಿನ್ನಬೇಕಂತೆ!... ಆ ಹಳುವಿನಾಗೆ ಒಂದು ಹಲಸಿನ ಹಣ್ಣು ಇಟ್ಟಿದ್ದ ಹಣ್ಣು ಇಟ್ಟಿದ್ದೆ! ಹೋಗಿ ತಗೊಂಡು ಬಾ'ಣ್ಣಾ!" ಎನ್ನುತ್ತಾ ಹಮೀರ ಹಲಸಿನ ಹಣ್ಣನ್ನು ಅಡಗಿಸಿಟ್ಟಿದ್ದ ಜಾಗದ ಕಡೆ ಕೈತೋರಿದನು.

"ಆ ಆ ಆ! ನೀ ಒಳ್ಳೆ ಗಟ್ಟಿಗ ಕಣೋ, ಸಾಬಣ್ಣಾ! ಅದನ್ನ ಯಾರಿಗೋ ಕೊಡಾಕಂತಾ ತಂದೀನೀ...." ಹಮೀರನ ಮುಖ ತಟಕ್ಕನೆ ಮೊದಲಿನ ಮುಗ್ಧಭಂಗಿಗೆ ತಿರುಗಿ, ಸಸ್ನೇಹ ವಾಣಿಯಿಂದ ಹೇಳಿ ಸರಸರನೆ ತಾನು ಹಲಸಿನ ಹಣ್ಣು ಅಡಗಿಸಿಟ್ಟಿದ್ದ ಸ್ಥಳಕ್ಕೆ ಹೋಗಿ ಅದನ್ನು ಹೊತ್ತು ತಂದನು.

ಹಮೀರನ ಕ್ರಿಯೆಯನ್ನೆ ಗಮನಿಸುತ್ತಾ ಇಜಾರದ ಸಾಬಿ "ಹಳ್ಳಿಗಮಾರ; ಆದರೂ ನರೀಬುದ್ಧಿ ಬಿಟ್ಟಿಲ್ಲ!" ಎಂದನು.

ಸರಿ, ಇನ್ನೇನು ಮಾಡುತ್ತಾನೆ ಹಮೀರ? ಕಂಡಮೇಲೆ ಬಿಡುವುದಿಲ್ಲ ಈ ಸಾಬರ ಹಿಂದು! ತುಸು ಪ್ರತಿಭಟಿಸಿ ನೋಡಿದ. ಆದರೆ ಪ್ರಯೋಜನ ಕಾಣಲಿಲ್ಲ.

ಹಲಸಿನಹಣ್ಣಿನ ಮಹಾ ಗಾತ್ರವನ್ನು ನೋಡಿ ಅಜ್ಜೀಸಾಬು ಕೇಳಿದನು "ಬಿಳುವನೋ? ಬಕ್ಕೆಯೋ?"

ಹಣ್ಣನ್ನು ಕೆಳಗಿಳಿಸುತ್ತಾ ಹಮೀರ "ಬಿಳುವ!" ಎಂದನು. ಅವನ ಕೊರಳಿನಲ್ಲಿ ತುಸು ಅಸಮಾಧಾನವಿತ್ತು.

"ಹಾಂಗಾದರೆ ಕತ್ತಿ ಚೂರಿ ಏನೂ ಬೇಡ, ತೊಟ್ಟು ಹಿಡಿದು ಬಲವಾಗಿ ಎಳೆದರೆ ಹಿಸಿದು ಎರಡು ಭಾಗ ಆಗ್ತದೆ." ಎನ್ನುತ್ತಾ ಕೂತಲ್ಲಿಂದ ಎದ್ದ ಲುಂಗಿಸಾಬು ಹಮೀರನೆಡೆಗೆ ಬಂದು "ಎಲ್ಲಿ? ಸ್ವಲ್ಪ ಸರಿ!" ಎಂದು ಅವನ ಜಾಗದಲ್ಲಿ ತಾನೆ ನಿಂತು, ಒಂದು ಕೈಯಲ್ಲಿ ಹಣ್ಣಿನ ತೊಟ್ಟು ಹಿಡಿದು, ಇನ್ನೊಂದರಿಂದ ಹಣ್ಣನ್ನು ಒತ್ತಿ, ಬಲವಾಗಿ ಎಳೆದನು. ಹಣ್ಣು ಹಿಸಿದು ಇಬ್ಭಾಗವಾಗಿ ತನ್ನ ಹೊಟ್ಟೆಯ ತೊಳೆಚುಳಿಕಿಗಳನ್ನೆಲ್ಲ ಬಯಲಿಗೆ ಹಾಕಿತು. ಚೆನ್ನಾಗಿ ಕಳಿತು ಲೋಳಿಲೋಳಿಯಾಗಿದ್ದ ತೊಳೆಗಳನ್ನು ನಾಲ್ವರೂ ಹಿಸುಕಿ, ಬೀಜ ಹೊರಗೆ ಹಾಕಿ, ಅಗಿಯಲು ಹಲ್ಲಿಗೂ ಸಿಕ್ಕದಂತಿದ್ದ ಅವುಗಳನ್ನು ನಾಲಗೆಯಿಂದ ಅತ್ತ ಇತ್ತ ಓಡಾಡಿಸಿ ಗುಳು ಗುಳು ನುಂಗತೊಡಗಿದರು.

"ಈ ಬಿಳುವನಹಣ್ಣಿನ ತೊಳೆ ಆಗಿಯೋ ರಗಳೇನೆ ಇಲ್ಲ. ಮುದುಕರಿಗಂತೂ ಪಸಂದು, ಹಿಹಿಹಿ!" ಎಂದನು ಹಮೀರ.

"ಮುದುಕರಿಗೆ ಮಾತ್ರಾನೇ? ಹಲ್ಲು ಉದುರಿಸಿಕೊಂಡೋರಿಗೆಲ್ಲರಿಗೂ ಪಸಂದೆ!" ಎನ್ನುತ್ತಾ ಉಂಗೀಸಾಬು ಮುಂಬಲ್ಲು ಮುರಿದಿದ್ದ ಹಮೀರನ ಕಡೆ ನೋಡಿ ನಕ್ಕನು: "ಅದಕ್ಕೆ ಅಂತಾ ಕಾಣ್ತದೆ, ನೀನು ಬಕ್ಕೇ ತರದೆ ಬಿಳುವನ್ನೇ ತಂದದ್ದು!"

ಕಾಡಿನ ಹಳುವಿನಲ್ಲಿ ಯಾರೋ ಮಾತಾಡಿಕೊಂಡು ಬರುತ್ತಿರುವುದು ಕೇಳಿಸಿ, ಒಬ್ಬೊಬ್ಬರು ಒಂದೊಂದು ಕಡೆಗೆ ತಿರುಗಿ ನೋಡಿದರು. ಸೀತೂರು ದಿಕ್ಕಿನತ್ತ ನೋಡುತ್ತಿದ್ದ ಹಮೀರಗೆ ಆ ಕಡೆಯ ಗುರುಗಿ ಹಳು ಅಲುಗಾಡುವುದು ಕಾಣಿಸಿ, ನೋಡುತ್ತದ್ದಂತೆಯೇ ಮೇಗರವಳ್ಳಿಯ 'ಕರ್ಮಿನ್ ಸಾಬರೂ' ಅವರ ತಮ್ಮ 'ಪುಡೀ ಸಾಬರೂ' ಗೋಚರಿಸಿದರು. ಇಬ್ಬರೂ ಮಲೆಯಾಳಿ ಭಾಷೆಯಲ್ಲಿಯೆ ಮಾತಾಡಿಕೊಂಡು ಬಂದರು. ಇಬ್ಬರೂ ಮಾಪಿಳ್ಳೆ ಲಬ್ಬೆ ಬ್ಯಾರಿ ಮೊದಲಾದ ಮಲೆಯಾಳಿಗಳು ಉಡುವಂತಹ, ಬೇರೆ ಬೇರೆ ಬಣ್ಣದ ಅಡ್ಡಗೀರು ಉದ್ದಗೀರಿನ ಕಣ್ಣುಕಣ್ಣಿನ ಅಡ್ಡಪಂಚೆ ಸುತ್ತಿ, ಉದ್ದುದ್ದ ಬನೀನು ಹಾಕಿದ್ದರು. ಕಪ್ಪು ಬಣ್ಣದ ಕರಿಮೀನು ಸಾಬು ಅಷ್ಟೇನು ಉದ್ದವಲ್ಲದ ಗಡ್ಡಬಿಟ್ಟಿದ್ದನು; ಅವನಿಗಿಂತಲೂ ತುಸು ಬೆಳ್ಳಗಿದ್ದ ಪುಡಿಸಾಬುವಿಗೆ ಮೀಸೆ ಮಾತ್ರ ಇತ್ತು. ಅಣ್ಣನಿಗಿಂತ ತಮ್ಮ ಷೋಕಿಯಾಗಿ ಕಾಣುತ್ತಿದ್ದನು. ಅಣ್ಣನ ಕಾಲಿನಲ್ಲಿ ಕನ್ನಡಜಿಲ್ಲೆಯ ಮೆಟ್ಟುಗಳಿದ್ದರೆ ತಮ್ಮನ ಕಾಲಿನಲ್ಲಿ ಕೆಂಪುಬಣ್ಣದ ಚಡಾವುಗಳಿದ್ದುವು. ಹತ್ತಿರಕ್ಕೆ ಬಂದವರೆ ಭಾಷೆಯನ್ನು ಕನ್ನಡಕ್ಕೆ ಬದಲಾಯಿಸಿದರು. ಏಕೆಂದರೆ, ಉಳಿದ ಮೂವರು ಹೊನ್ನಾಳಿಕಡೆಯ ಸಾಬರಿಗೆ ಮಲೆಯಾಳಿ ಅರ್ಥವಾಗುತ್ತಿರಲಿಲ್ಲ. ಮಲೆಯಾಳದ ಕಡೆಯ ಇವರಿಬ್ಬರಿಗೆ ಮುಸಲ್ಮಾನ ಭಾಷೆ ಬರುತ್ತಿರಲಿಲ್ಲ.

"ಕುದುರೆ ಎಲ್ಲಿ? ಕಾಣುವುದಿಲ್ಲ. ಇಲ್ಲಿಯೆ ಈ ಮಟ್ಟಿಗೆ ಕಟ್ಟಿ ಹಾಕಿತಲ್ಲಾ?" ಗಾಬರಿಯಿಂದ ಕೇಳಿದನು ಕರೀಂ ಸಾಬು, ಸಾಮಾನು ತುಂಬಿದ್ದ ತನ್ನ ಹಸುಬೆ ಚೀಲವನ್ನು ನೆಲದಮೇಲೆ ಕಂಡು.

ಆಗಲೆ ಗೊತ್ತಾದದ್ದು, ಹಲಸಿನಹಣ್ಣು ತಿನ್ನುತ್ತಿದ್ದ ನಾಲ್ವರಿಗೂ, ಕುದುರೆಗಳೆರಡೂ ಕಣ್ಣು ತಪ್ಪಿಸಿಕೊಂಡಿವೆ ಎಂಬುದು!

"ಅಯ್ಯಯ್ಯೋ, ಇಲ್ಲೇ ಇದ್ವಲ್ಲೋ ಇಷ್ಟೊತ್ತನಕ! ಯತ್ತ ಮಕ ಹೋದ್ವೋ, ಹಂಗಾರೆ?" ಸೋಜಿಗ ವ್ಯಕ್ತಪಡಿಸಿದನು ಹಮೀರ.

"ಯಾರೋ ಬಿಚ್ಚಿಬಿಟ್ಟಿದ್ದು?" ಕರೀಂ ಸಾಬು ಕೇಳಿದನು, ಸ್ವಲ್ಪ ಕೋಪಧ್ವನಿಯಲ್ಲಿಯೆ.

"ಯಾರೂ ಬಿಚ್ಚಿದ್ದಲ್ಲ." ದೀರ್ಘಸ್ವರದಲ್ಲಿ ಪದಗಳನ್ನು ವಿರಳವಾಗಿ ಉಚ್ಚರಿಸುತ್ತಾ "ನಾನು ಇಲ್ಲಿಗೆ ಬರುವಷ್ಟರಲ್ಲೆ ಕುದುರೆ, ಕಟ್ಟಿದ್ದ ಹರೆ ಮುರಿದುಕೊಂಡು, ಹಕ್ಕಲಿನಲ್ಲಿ ತಿರುಗುತ್ತಿತ್ತು. ಲಗಾಮಿನ ತುದಿಗೆ ಕಟ್ಟಿದ್ದ ಹರೆ ನೇತಾಡುತ್ತಿತ್ತು....ಕೆಳಗೆ ಬಿದ್ದಿದ್ದ ಮೂಟೇನ ನಾನೆ ಎತ್ತಿ ತಂದಿಟ್ಟದ್ದು." ಎನ್ನುತ್ತಾ ಎದ್ದನು ಅಜ್ಜೀಸಾಬು, ಕುದುರೆಗಳನ್ನು ಹುಡುಕಿ ತರುವ ಉದ್ದೇಶದಿಂದ.

ಕರೀಂಸಾಬು ಕುನ್ನೇರಿಲ ಪೊದೆಯ ಹತ್ತಿರ ಹೋಗಿ ಬಗ್ಗಿನೋಡಿ "ಸುಳ್ಳು ಹೇಳಬೇಡ. ಇಲ್ಲಿ ನೋಡು, ಯಾರೋ ಹರೆಯನ್ನು ಕತ್ತಿಯಿಂದ ಕತ್ತರಿಸಿದ್ದಾರೆ, ಬೇಕಂತಲೇ!" ಎನ್ನುತ್ತಿರಲು, ಉಳಿದವರೂ ಹತ್ತಿರ ಹೋಗಿ ನೋಡಿ, ಹೌದೆಂದು ಸಮ್ಮತಿಸಿದರು.

“ಹೊಟ್ಟೆಕಿಚ್ಚಿನ ಬಾಂಚದ್ ಸೂಳೆಮಕ್ಕಳು, ಇದ್ದೇ ಇರುತ್ತಾರೆ, ಕಾಡಿನಲ್ಲಿಯೂ!” ಎಂದನು ಪುಡೀಸಾಬು. ಅವನಿಗೆ ಉಳಿದ ಮೂವರು ಕನ್ನಡಿಗ ಸಾಬರ ಮೇಲೆ ಗುಮಾನಿ!

ಅಜ್ಜೀಸಾಬು ಬೇಗಬೇಗನೆ ನಡೆದು ಕುದುರೆಗಳಿದ್ದ ದಿಕ್ಕಿನ ಹಳುವಿನಲ್ಲಿ ಕಣ್ಮರೆಯಾಗಿ, ಅಲ್ಲಿಯೆ ತುಸು ದೂರದಲ್ಲಿದ್ದ ಎರಡು ಕುದುರೆಗಳನ್ನೂ ಹಿಂದಕ್ಕೆ ಹೊಡೆದು ತಂದನು. ಕರೀಂಸಾಬು ಮತ್ತು ಪುಡೀಸಾಬೂ ಇಬ್ಬರೂ ತಮ್ಮ ಕುದುರೆಯ ಬಳಿಗೆ ಹೋಗಿ. ಅದರ ಬೆನ್ನಿಗೆ ಹಸುಬೆ ಚೀಲವನ್ನು ಎತ್ತಿ ತಂದಿಟ್ಟು, ಅದನ್ನು ತೀಕ್ಷ್ಣವಾಗಿ ಪರಿಶೀಲಿಸಿದರು. ಯಾರೋ ಚೀಲಕ್ಕೆ ಕೈ ಹಾಕಿದ್ದಾರೆ ಎಂಬುದನ್ನು ಅನುಮಾನಿಸಿ, ಸಾಮಾನುಗಳನ್ನು ಅಜಮಾಯಿಸಿ ಮಾಡಿ, ಸ್ವಾರ್ಲುಮೀನು ತುಂಡುಗಳನ್ನು ತೆಗೆದಿದ್ದಾರೆ ಎಂಬುದನ್ನು ಖಾತ್ರಿಮಾಡಿಕೊಂಡು, ಅಲ್ಲಿದ್ದವರಲ್ಲಿ ತಮಗಿಬ್ಬರಿಗೇ ಮಾತ್ರ ಗೊತ್ತಾಗುತ್ತಿದ್ದ ಮಲೆಯಾಳಿಯಲ್ಲಿಯೆ ಸ್ವಲ್ಪಹೊತ್ತು ಮಾತಾಡಿಕೊಂಡರು. ಮಾತು ಅರ್ಥಗರ್ಭಿತವಾಗಿ ನೋಡಿಕೊಂಡು, ತಮ್ಮನ್ನೆ ಕುರಿತು ತಮಗೆ ತಿಳಿಯಬಾರದ ಏನನ್ನೋ ಮಾತನಾಡಿಕೊಳ್ಳುತ್ತಿದ್ದಾರೆ ಎಂದು ಊಹಿಸಿ, ಉಳಿದಿದ್ದ ಹಲಸಿನ ತೊಳೆಗಳನ್ನು ತಿನ್ನತೊಡಗಿದರು, ತಮಗೇನೂ ಅರ್ಥವಾಗದವರಂತೆ ಉದಾಸೀನತೆಯನ್ನು ನಟಿಸುತ್ತಾ.

ಅಣ್ಣತಮ್ಮಂದಿರಿಬ್ಬರೂ ಹಸುಬೆ ಚೀಲವನ್ನು ಕುದುರೆಯ ಬೆನ್ನಿಗೆ ಸರಿಯಾಗಿ ಬಿಗಿದು ಕಟ್ಟಿ, ಹಲಸಿನ ಹಣ್ಣಿನ ಬುಡಕ್ಕೆ ಬಂದರು, ಸ್ವಲ್ಪ ಬಿಗುಮೊಗರಾಗಿಯೆ. ಉಳಿದವರು ತುಸು ಅತ್ತ ಇತ್ತ ಸರಿದು ಅವರಿಬ್ಬರಿಗೂ ತೆರಪು ಮಾಡಿಕೊಡಲು ಅವರೂ ಕುಳಿತು ತೊಳೆಗಳನ್ನು ನುಂಗತೊಡಗಿದರು.

“ಹೋಯ್ ಕರ್ಮೀನ್ ಸಾಬರೇ, ನಿಮ್ಮ ಗಡ್ಡಕ್ಕೆ. ಮ್ಯಾಣ ಹಿಡಿದಾತು? ಹುಸಾರಾಗಿ ತಿನ್ನಿ. ಹಿಹ್ಹಿಹ್ಹಿ!” ಎಂದು ವಿನೋದವಾಡಿದನು ಹಮೀರ.

“ಓಹೋಹೋ, ಈ ಹಲ್‌ಮುರುಕ ಹಮೀರಣ್ಣನ ನಾ ನೋಡ್ಲೆ ಇಲ್ಲ.... ನಿನ್ನ ಮಾವನ ಮನೀಗೆ ಹೋಗಿದ್ದೆನೋ, ಸೀತೂರಿಗೆ. ನಿನ್ನ ಹೆಂಡ್ತಿ ಲಗ್ನಕ್ಕೆ ನಾನೆ ಎಲ್ಲ ಸರಬರಾಜು ಮಾಡಿಕೊಡ್ತೀನಿ ಅಂತಾ ಒಪ್ಪಿಕೊಂಡು ಬಂದೀನಪ್ಪಾ!.... ಅಲೆಲೆಲೇ, ಏನೋ ಬಹಳ ನಾಚಿಕೆ ಮಾಡುತ್ತೀಯಾ?....” ಎಂದನು ಕರೀಂಸಾಬು, ಹಮೀರನ ಹೃದಯದ ಹಿಗ್ಗು ಅವನ ಮೊಗವನ್ನೆಲ್ಲ ಅರಳಿಸಿದುದನ್ನು ಕಂಡು.

ಲಜ್ಜೆಯ ರೂಪನ್ನು ತಾಳಿದ್ದ ಹಮೀರನ ಸಂತೋಷ ಇನ್ನೇನನ್ನೂ ಹೇಳುವುದಕ್ಕೆ ತೋಚದೆ “ಏ, ಸುಮ್ಮನಿರಿ ಅಂದ್ರೆ! ಈ ಸಾಬಣ್ಣನಿಗೆ ಯಾವಾಗ್ಲೂ ತಮಾಸೇನೆ!” ಎಂದು ಮಾತಿನ ದಿಕ್ಕು ಬದಲಾಯಿಸುವ ಹುನಾರಿನಿಂದ “ಅಲ್ಲಾ? ಕರ್ಮಿನ ಸಾಬ್ರೆ, ನೀವು ಯಾಕೆ ಇಷ್ಟು ಕರಗಿದ್ದೀರಿ? ನಿಮ್ಮ ತಮ್ಮ ಆ ಪುಡೀಸಾಬ್ರು, ನೋಡಿ, ಏಸು ಬೆಳ್ಳಗಿದ್ದಾರೆ?” ಎಂದನು.

“ಹಾಗೇ ಮತ್ತೆ? ನಿನ್ನ ಮಾವನಿಗೆ ಚವರಿ ಮೀಸೆ, ಮೈಯೆಲ್ಲಾ ರೋಮ. ನಿನಗೆ? ಹಜಾಮತ್ತು ಮಾಡಿದ ಹಾಗೆ, ಮುಖ ಮೈ ಎಲ್ಲ ಹೆಂಗಸರ ಹಾಗೆ!.... ನೀ ನೋಡು ಎಷ್ಟು ಬೆಳ್ಳಗಿದ್ದೀಯ? ಆದರೆ ನಿನ್ನ ಹೆಂಡ್ತಿ? ನನ್ನಷ್ಟು ಬೆಳ್ಳಗಿಲ್ಲಲ್ಲಾ!”

“ಏನಿಲ್ಲ! ಎಲ್ಲಾ ಸುಳ್ಳು!” ಪ್ರತಿಭಟಿಸಿದನು ಹಮೀರ.

“ಹಾಗಾದ್ರೆ….ನೀನಾಗಲೆ….ಮೈ….ಬಣ್ಣಗಿಣ್ಣ ಎಲ್ಲ ನೋಡಿಬಿಟ್ಟಿದ್ದೀಯಾ ಅನ್ನು?….” ನಿಲ್ಲಿಸಿ ನುಡಿದು ಕಣ್ಣುಮಿಟುಕಿಸಿ ಮೂದಲಿಸಿದನು ಕರೀಂಸಾಬು.

ಎಲ್ಲರೂ ಗಟ್ಟಿಯಾಗಿ ನಗತೊಡಗಲು, ಹಮೀರನೂ ಕಣ್ಣಲ್ಲಿ ನೀರು ಬರುವಂತೆ ನಗುತ್ತಾ ಸರಕ್ಕನೆ ಮೇಲೆದ್ದು, ಲಕ್ಕುಂದದ ಕಡೆ ಇಳಿಯುವ ಕಾಡುಹಾದಿಯಲ್ಲಿ ನಡೆಯತೊಡಗಿದನು. ಅವರೆಲ್ಲರೂ ಸೇರಿ ಕರೆದರೂ ಹಿಂತಿರುಗಿ ನೋಡದೆ ಹಳುವಿನಲ್ಲಿ ಗುಡ್ಡವಿಳಿದು ಮರೆಯಾದನು.

ಆಗಲೆ ಬೈಗಾಗತೊಡಗಿತ್ತು. ಆಕಾಶದ ಎತ್ತರದಲ್ಲಿ ಇನ್ನೂ ಚೆನ್ನಾಗಿಯೆ ಬೆಳಕು ಇದ್ದರೂ ಕಾಡಿನಲ್ಲಿ ಕಪ್ಪು ಕವಿಯತೊಡಗಿತ್ತು. ಮೊದಮೊದಲು ಅಲ್ಲೊಂದು ಇಲ್ಲೊಂದು ಕೂಗಲು ತೊಡಗಿದ್ದ ಜೀರುಂಡೆಗಳು ಬರಬರುತ್ತಾ ಸುತ್ತ ನಾಲ್ಕು ದಿಕ್ಕಿನಿಂದಲೂ ಜೀರ್ ಜೀರ್ ಎಂಬ ಕೊರೆಯುವ ಕರ್ಕಶ ಧ್ವನಿಯ ಗರಗಸಬಲೆಯನ್ನೇ ನೇಯ್ದು ಕಾಡಿನ ಮೇಲೆ ಬೀಸಿದ್ದುವು. ಅವುಗಳ ಆ ಕಿವಿ ಚಿಟ್ಟುಹಿಡಿಸುವ ಚೀರಾಟದಲ್ಲಿ ಹಕ್ಕಿಗಳ ಉಲಿಯಾಗಲಿ, ಕಡೆಗೆ ತಮ್ಮೊಳಗೆ ತಾವು ಆಡಿಕೊಳ್ಳುವ ಮಾತಾಗಲಿ, ಕೇಳಿಸುವುದೆ ಕಷ್ಟವಾಗಿತ್ತು. ಆ ಜೀರ್ದನಿಯಲ್ಲಿ ಏನೊ ಒಂದು ದುಃಶಕುನದ ಕರೆಕರೆ ಅಡಗಿದ್ದು, ಆಲಿಸುವ ಕಿವಿಗೆ ಒಂದೇನೊ ನಿಡುರೇಜಿಗೆ ಹುಟ್ಟಿ, ಹೃದಯಕ್ಕೆ ಒಂದು ಅಸ್ಪಷ್ಟ ಭೀತಿಭೂತದ ಛಾಯೆ ಬಿದ್ದಂತಾಗುತ್ತಿತ್ತು. ಎಂತಹ ಕ್ರೂರಕರ್ಮಿ ಧೂರ್ತರನ್ನೂ ಬೇಗಬೇಗನೆ ಕಾಡಿನಿಂದ ಊರ ಕಡೆಗೆ ಅಟ್ಟಿಬಿಡುವ ಒಂದು ಶ್ಮಶಾನ ಸದೃಶವಾದ ಭಯಾನಕತೆ ಆ ಜೀರುಂಡೆಗಳ ಕೊರಲಿನಿಂದ ಹೊಮ್ಮಿ, ಮುಸುಗುತ್ತಿದ್ದ ಕತ್ತಲೆಯೊಡನೆ ಮಿಳಿತವಾಗುತ್ತಿತ್ತು.

ಆ ಅರಣ್ಯಕವಾದ ಅಸಹನೀಯ ಅನುಭವದಿಂದ ಪಾರಾಗಲೋಸುಗದೆ ಹೊತ್ತಿಸಿದ್ದ ಐದು ಬೀಡಿಗಳು ಅವರ ತುಟಿಯ ನಡುವೆ ಕಿಡಿ ಹೊಮ್ಮಿಸಿ, ಹೊಗೆ ಕಾರಿ, ಹೊಗೆಸೊಪ್ಪಿನ ಕಟುವಾಸನೆಯನ್ನು ಹಬ್ಬಿಸಿದ್ದುವು. ಆ ವಾಸನೆ, ಅವರಿಗೆ ಸುಪರಿಚಿತವಾಗಿದ್ದ ನಾಗರಿಕ ಸಂಸ್ಕಾರಗಳನ್ನೆಬ್ಬಿಸಿ, ಮನಸ್ಸನ್ನು ಆರಣ್ಯಕತೆಯ ಭಾರದಿಂದೆತ್ತಿ ಹಗುರಗೊಳಿಸಿತ್ತು.

ಐವರೂ ಸಿಂಬಾವಿಯ ಕಡೆಗೆ ಹೋಗುವ ಕಾಡುದಾರಿಯಲ್ಲಿ ಎರಡು ಕುದುರೆಗಳನ್ನೂ ನಡೆಸಿಕೊಂಡು ಹೊರಟರು: ಇಜಾರದ ಸಾಬಿಯ ಬೆನ್ನಿನಮೇಲೆ ಬಾಳೆಯ ಹೆಗ್ಗೊನೆ; ಲುಂಗೀಸಾಬಿಯ ಹೆಗಲಮೇಲೆ ಕಬ್ಬಿನ ಹೊರೆ - ಚಾಡಿ ಹೇಳುತ್ತಿದ್ದುವು!

* * *

# ೩೬

ಆವೊತ್ತು ಬೆಳಿಗ್ಗೆ ಸಿಂಬಾವಿಯ ಹೊಲಗೇರಿಯಲ್ಲಿ, ಗಟ್ಟದ ತಗ್ಗಿನವರ ಬಿಡಾರಗಳಲ್ಲಿ ಮತ್ತು ಹಳೆಪೈಕದ ಒಕ್ಕಲು ಮನೆಯ ಗುಡಿಸಲುಗಳಲ್ಲಿ ಮಕ್ಕಳಿಗೆ ಸಂಭ್ರಮವೋ ಸಂಭ್ರಮವಾಗಿ ಹೋಯ್ತು:

ಹೊಲಗೇರಿಯ ಅಂಚಿನಲ್ಲಿದ್ದು ಬಹು ಎತ್ತರಕ್ಕೆ ಬೆಳೆದಿದ್ದ ಒಂದು ಬೃಹದಾಕಾರದ ಗೊಜ್ಜಿನ ಮಾವಿನ ಮರದ ಬುಡದಲ್ಲಿ, ಕಳೆದ ರಾತ್ರಿಯಲ್ಲಿ ಗಾಲಿಗೆ ಉದಿರಿದ್ದ ಹಣ್ಣುಗಳನ್ನು ಹೆರಕುವುದಕ್ಕಾಗಿ ಹೊತ್ತಾರೆ ಮುಂಚೆಯೆ ನೆರೆದಿದ್ದ ಹೊಲೆಯರ ಕುರುದೆಗಳಿಗೆ ಅವರ ದೈನಂದಿನ ನಿತ್ಯಜೀವನದ ನೀರಸ ಸಾಧಾರಣತೆಯನ್ನು ಕಲಕಿ ಅಲ್ಲೋಲಕಲ್ಲೋಲ ಮಾಡುವಂತಹ ಒಂದು ಅಪೂರ್ವ ವಸ್ತು ದೃಗ್ಗೋಚರವಾಯಿತು! ಅದು ಮೊದಲು ಗೋಚರವಾದದ್ದು ದೃಕ್ಕಿಗಲ್ಲ, ಕರ್ಣಕ್ಕೆ.

ಲಕ್ಕಿಮಟ್ಟಿನ ಬುಡದಲ್ಲಿ, ತನಗೆ ತುಸುದೂರದಲ್ಲಿಯೆ ನಿಂತು ಯಾಚನಾಧ್ವನಿಯಿಂದ ಅರಚಿಕೊಳ್ಳುತ್ತಿದ್ದ ಊರುಹಂದಿಯ ಮತ್ತು ಸದರ ಮರಿಯ ನಿತ್ಯಪರಿಚಿತ ಆರ್ತನಾದವನ್ನು ಗಮನಿಸದೆ, ‘ಹೇಲಕ್ಕೆ ಕೂತಿತ್ತು’ ಒಂದು ಕುರುದೆ! ಹೆಣ್ಣು ಕುರುದೆ! ಅದರ ಮೈಮೇಲೆ ಬಟ್ಟೆಯ ಚೂರು ಯಾವ ರೂಪದಲ್ಲಿಯೂ ಇರಲಿಲ್ಲ. ತಲೆ ಕೆದರಿದ್ದ ಆ ಬತ್ತಲೆಯ ಮಗು ತನ್ನೆದುರಿಗೆ ಬಿದ್ದಿದ್ದು, ಹಕ್ಕಿಯೊ ಅಳಿಲೊ ತಿಂದು ಅರೆಯಾಗಿದ್ದ ಒಂದು ಮಾವಿನ ಹಣ್ಣನ್ನು ಹೆರಕಿಕೊಂಡು ತಿಂದು, ಅದರ ಗೊರಟನ್ನು ಚೀಪುತ್ತಾ ಇತ್ತು. ಇದ್ದಕ್ಕಿದ್ದ ಹಾಗೆ ತಾನೆಂದೂ ಕೇಳದಿದ್ದ ಒಂದು ಭಯಂಕರ ಗರ್ಜನೆ ಕೇಳಿಸಿದಂತಾಗಿ, ಚಿಟಾರನೆ ಚೀರುತ್ತಾ, ತನ್ನ ಅಣ್ಣ ಇದ್ದೆಡೆಗೆ ಓಡಿ ಬಂತು. ಅವನೂ ತನ್ನ ತಂಗಿಯಂತೆಯೆ ನಗ್ನನಾಗಿದ್ದರೂ ಅವಳಿಗಿಂತಲೂ ಬಹುಶಃ ಒಂದು ವರ್ಷಕ್ಕೆ ಹಿರಿಯನಾಗಿದ್ದು, ಸೊಂಟಕ್ಕೆ ಒಂದು ಕೊಳೆಮುಸುಕಿನ ಉಡಿದಾರ ಕಟ್ಟಿದ್ದರಿಂದ ತನ್ನ ತಂಗಿಯ ರಕ್ಷೆಯಧಿಕಾರ ಪಡೆದಿದ್ದನಷ್ಟೆ! ಆದರೆ ಅವನಿಗೂ ಆ ಅಪರಿಚಿತ ಸದ್ದನ್ನೂ ಕೇಳಿ ಅವನ ತಂಗಿಗೆ ಆಗಿದ್ದಷ್ಟೆ ಹೆದರಿಕೆಯಾಗಿದ್ದರಿಂದ ಅವರಿಬ್ಬರೂ ತಮಗಿಂತಲೂ ಒಂದು ವರ್ಷಕ್ಕೆ ದೊಡ್ಡವನಾಗಿ ಜ್ವರಗಡ್ಡೆಯಿಂದ ಹೊಟ್ಟೆ ಡೊಳ್ಳಾಗಿದ್ದು ಲಂಗೋಟಿದಾರಿಯಾಗಿದ್ದ ಒಬ್ಬನ ಬಳಿಗೆ ಆಶ್ರಯಕ್ಕಾಗಿ ಓಡಿ ಬಂದರು. ಆ ಲಂಗೋಟಿಯ ಕುರುದೆಗೆ ಆ ಶಬ್ದ ಅಷ್ಟು ಅಪರಿಚಿತವಾದುದಾಗಿರಲಿಲ್ಲ. ಹೋದ ವರುಷವೆ ಅವನು ಅದನ್ನು ಕೇಳಿದ್ದನು. ಅವನು ಆ ಶಬ್ದಕ್ಕೆ ಕಾರಣವಾದದು ಅಲ್ಲೆ ಎಲ್ಲಿಯೊ ಮೇಯುತ್ತಿರಬೇಕೆಂದು ನಿಶ್ಚಯಿಸಿ, ನಾಲ್ಕು ಕಡೆಯೂ ನೋಡಿ. ಕಂಡು “ಕುದ್ರೆ ಕಣ್ರೋ, ಕುದ್ರೆ! ಸಾಬರ ಕುದ್ರೆ!” ‘ಹೇ ಹೇ ಹೇ’ ಎಂದು ಕೂಗಿ ಹರ್ಷಘೋಷ ಮಾಡುತ್ತಾ, ದೂರದಲ್ಲಿ ಮೇಯುತ್ತಿದ್ದಾ ಪ್ರಾಣಿಯ ಕಡೆಗೆ ಓಡಿದನು. ಸರಿ, ಹೊರಟಿತು ಹತ್ತಾರು ಹುಡುಗರ ಕೊರಳ ಕೂಗು: “ಕುದ್ರೆ! ಕುದ್ರೆ! ಕುದ್ರೆ! ಕುದ್ರೆ! ಬನ್ರೋ ಬನ್ರೋ! ಕುದ್ರೆ! ಕುದ್ರೆ! ಕುದ್ರೆ! ಹೇ ಹೇ ಹೇ!....

ಲಂಗೋಟಿ, ಉಡಿದಾರ, ಬತ್ತಲೆ ಇತ್ಯಾದಿ ಎಲ್ಲ ‘ಹೊಲೇರ ಕುರುದೆ’ಗಳೂ ಧಾವಿಸಿ, ಮೇಯುತ್ತಿದ್ದ ಕುದುರೆಗಳಿಗೆ ಸಾಕಷ್ಟು ದೂರದಲ್ಲಿಯೆ ಭಯಭಕ್ತಿಯಿಂದ ಗುಂಪುನಿಂತು ಅವುಗಳ ಅದ್ಭುತ ವೈಚಿತ್ರ್ಯವನ್ನು ಬೆರಗುಗಣ್ಣಾಗಿ ನೋಡತೊಡಗಿದುವು.

ನಾಗರಿಕತೆಗೆ ಸುದುಷ್ಪ್ರವೇಶ್ಯವಾಗಿದ್ದ ಆ ಮಲೆನಾಡಿನ ಕೊಂಪೆಯ ಕಾಡುಹಳ್ಳಿಯ ಹುಡುಗರಿಗೆ ಮೇಗರವಳ್ಳಿಯ ಕರ್ಮಿನ್‌ಸಾಬರ ಕುದುರೆಯ ಆಗಮನವೆಂದರೆ ಒಂದು ಮಹತ್ತಾದ ಐತಿಹಾಸಿಕ ಘಟನೆಯೆ! ಆ

ಅಪೂರ್ವಪ್ರಾಣಿಯನ್ನು ನೋಡುವುದೆ ಅವರಿಗೆಲ್ಲ ಒಂದು ಮಹತ್ತಾದ ಅದ್ಭುತಾನುಭವ. ಜೊತೆಗೆ, ಆ ಅನುಭವವನ್ನು ಮತ್ತಷ್ಟು ಆನಂದಮಯವನ್ನಾಗಿ ಮಾಡುವ ಇನ್ನೊಂದು ಕಾರಣವೂ ಇತ್ತು. ಕರ್ಮಿನ್ ಸಾಬರು ನೀರುಳ್ಳಿ, ದಿನಸಿ, ಒಣಮೀನು ಮುಂತಾದ, ದೊಡ್ಡವರಿಗೆ ಸಂಸಾರ ನಡೆಸಲು ಆವಶ್ಯಕವಾದ, ಪದಾರ್ಥಗಳ ಜೊತೆಗೆ ಕೊಬರಿ, ಕಡಲರ, ಉತ್ತುತ್ತೆ, ಓಲೆಬೆಲ್ಲ, ಕರ್ಜೂರ, ಮಿಠಾಯಿ, ಬತ್ತಾಸು, ಬೆಂಡು ಮೊದಲಾದ, ವಿಶೇಷವಾದ ಮಕ್ಕಳ ಹಿಗ್ಗಿಗೆ ಕಾರಣವಾಗುವ, ಪದಾರ್ಥಗಳನ್ನೂ ಮಾರಾಟಕ್ಕೆ ತರುತ್ತಿದ್ದರು. ಮೊದಲನೆಯ ವರ್ಗದ ಸರಕನ್ನು ಬಹಿರಂಗವಾಗಿಯೆ, ಎಂದರೆ ಮನೆಯ: "ಮುಂಚೆಕಡೆ"ಯೆ ವ್ಯಾಪಾರ ಮಾಡುತ್ತಿದ್ದರು, ಮನೆಯ ಯಜಮಾನರ ಸಮ್ಮುಖದಲ್ಲಿ. ಎರಡನೆಯ ವರ್ಗದ ಸರಕಿನ ವ್ಯಾಪಾರವೆಲ್ಲ ಸಾಧಾರಣವಾಗಿ ಅಂತರಂಗದಲ್ಲಿ, ಎಂದರೆ ಮನೆಯ ಹಿತ್ತಲುಕಡೆಯ ಬಾಗಿಲಲ್ಲಿ, ಹೆಂಗಸರು ಮಕ್ಕಳೊಡನೆ ನಡೆಯುತ್ತಿತ್ತು. "ಹಿತ್ತಲುಕಡೆಯ" ಮಾರುಕಟ್ಟೆಯಲ್ಲಿಯೆ ಚೆನ್ನಾಗಿ ಗಿಟ್ಟುತ್ತದ್ದುದು!....

ಅಲ್ಲಿ ನೋಡಿ:

ಸಿಂಬಾವಿ ಮನೆಯ ಹಿತ್ತಲುಕಡೆಯ ಬಾಗಿಲಾಚೆ, ದೊಡ್ಡ ಹುಣಿಸೆಮರದ ಬುಡದಲ್ಲಿ ನಿಬಿಡವಾಗಿ ಬೆಳೆದಿದ್ದ ಲಕ್ಕಿ, ಅರಮರಲು, ಹುಳಿಚೊಪ್ಪು ಮೊದಲಾದ ಪೊದೆಗಳ ಮಧ್ಯೆ, ಸಹಿಸಬಾರದ ಉಚ್ಚೆಯ ಸಿನುಗು, ಹೇಲಿನ ನಾತಗಳನ್ನು ಒಂದಿನಿತೂ ಗಮನಕ್ಕೂ ತಂದುಕೊಳ್ಳದೆ, ಮನೆಗೆಲಸದ ಹುಡುಗ, ದೊಳ್ಳ, ಏನೋ ಕಳ್ಳ ಕೆಲಸದಲ್ಲಿ ತೊಡಗಿದಂತೆ ಅತ್ತ ಇತ್ತ ನೋಡುತ್ತಾ ಏನನ್ನೊ ಎತ್ತುತ್ತಿದ್ದಾನೆ!

ಕಳೆದ ರಾತ್ರಿಯೆ ಆ ಗೋಣಿಚೀಲದ ಗಂಟನ್ನು ಗುಟ್ಟಾಗಿ ತಂದು ಅಲ್ಲಿ ಬೈತಿಟ್ಟಿದ್ದನು: ಹಿಂದಿನ ದಿನ ಸಂಜೆಯ ಮುಂಗಪ್ಪಿನಲ್ಲಿ ಕರ್ಮಿನ ಸಾಬರ ಗುಂಪು ಕುದುರೆಗಳೊಡನೆ ಬಂದು, 'ಹೆಗ್ಗಡೇರು ಇದ್ದಾರೆಯೆ?' ಎಂದು ವಿಚಾರಿಸಿ, ಅವರು ಕಲ್ಲೂರಿಗೆ ಹೋಗಿರುವುದನ್ನು ತಿಳಿದು, ಜಟ್ಟಮ್ಮ ಹೆಗ್ಗಡಿತಿಯರ ಅಪ್ಪಣೆ ಪಡೆದು, ಸೌದೆ ಕೊಟ್ಟಿಗೆಯ ಕಡಿಮಾಡಿನಲ್ಲಿ. ವರ್ಷ ವರ್ಷವೂ ಅವರು ಸಿಂಬಾವಿಗೆ ಹೇರು ತಂದಾಗಲೆಲ್ಲ ಅನುಸರಿಸುವ ಪದ್ಧತಿಯಂತೆ, ಬೀಡು ಬಿಟ್ಟಾಗಲೆ ಮನೆಗೆಲಸದ ಹುಡುಗ, ದೊಳ್ಳ, ಅಡುಗೆ ಕೆಲಸದ ಮರಾಟಿ ಮಂಜನ ಕದರಡಕೆಯ ದಾಸ್ತಾನನ್ನು ಅಜಮಾಯಿಸಿ ಮಾಡಿದ್ದನು: ಅಂದರೆ ಮರಾಟಿ ಮಂಜನು ಸಾತ್ವಿಕ ಸತ್ಯಸಂಧತೆಯಿಂದ ಶೇಖರಿಸಿದ್ದ ಕದರಡಕೆ ಬರಿಯ ಬೆಟ್ಟೆ ಗೋಟು ಎಂದು ಕಂಡುಬಂದಿದ್ದರಿಂದ ಅದರ ಜೊತೆಗೆ ಸ್ವಲ್ಪ ಹಸ ಮತ್ತು ದಳಗಳನ್ನಾದರೂ ಬೆರಕೆ ಮಾಡದಿದ್ದರೆ ಸಾಬರು ಕಡಲೆ ಕೊಬ್ಬರಿ ಬತ್ತಾಸುಗಳನ್ನು ಸರಿಯಾದ ಪರಿಮಾಣದಲ್ಲಿ ತನಗೆ ಕೊಡುವುದಿಲ್ಲ ಎಂದು ಶಂಕಿಸಿ, ಮನೆಯ ಸ್ವಂತ ಮಾರಾಟದ ಅಡಕೆ ರಾಶಿಗಳಿದ್ದ ಗರಡೀಕೋಣೆಗೂ ಕದ್ದು ನುಗ್ಗಿ, ಮರಾಟಿಮಂಜನ ದಾಸ್ತಾನಿನಲ್ಲಿ ಕಂಡು ಬಂದಿದ್ದ ನ್ಯೂನತೆಯನ್ನು ನಿವಾರಿಸಿ ಕೊಂಡಿದ್ದನು.

ಆದರೂ ಅವನು ಅಷ್ಟೆಲ್ಲ ಮೆಹನತ್ತು ಮಾಡಿದ್ದರೂ, ಕರ್ಮಿನ್ ಸಾಬರ ಟೀಕೆ ಸ್ವಲ್ಪ ನಿರಾಶಾದಾಯಕವಾಗಿಯೆ ಇತ್ತು. ಯಾರಾದರೂ ಕಂಡುಬಿಟ್ಟಾರು ಎಂದು ಕಳವಳಗೊಂಡಿದ್ದ ದೊಳ್ಳನಿಗೆ ಗಂಟಲು ಗದ್ಗದವಾಗಿ, ಕಣ್ಣು ಹನಿತುಂಬಿ, ಅಳು ಬರುವಂತಾಯ್ತು.

ದೊಳ್ಳ ತಂದಿದ್ದ ಗೋಣಿಚೀಲದ ಗಂಟನ್ನು ಉದ್ದೇಶಪೂರ್ವಕವಾದ ತಿರಸ್ಕಾರದ ಭಾವದಿಂದಲೂ ಔದಾಸೀನ್ಯದಿಂದಲೂ ನಿಧಾನವಾಗಿ ಬಿಚ್ಚುತ್ತಾ, ಅದರಲ್ಲಿದ್ದ ಅಡಕೆಯ ಗುಣಕ್ಕೂ ಪ್ರಮಾಣಕ್ಕೂ ಒಳಗೊಳಗೆ ಹೃದಯ ಹಿಗ್ಗುತ್ತಿದ್ದರೂ ಮುಖವನ್ನು ಸಿಂಪಡಿಸುತ್ತಾ, ಕರೀಂಸಾಬಿ, "ತ್ಚು! ತ್ಚು! ತ್ಚು! ಏ ಹುಡುಗಾ, ಎಂಥಾ ಬುರ್ನಾಸ್ ಅಡಕೆಯೋ ಇದು? ಎಲ್ಲಿ ಸಿಕ್ಕಿತೊ ನಿನಗೆ?" ಎನ್ನುತ್ತಾ ಅಡಕೆಯಲ್ಲಿ ಕೈಯಾಡಿಸಿ, ತನ್ನ ತಮ್ಮ ಪುಡೀಸಾಬೂಗೆ ಏನನ್ನೊ ಮಲೆಯಾಳಿಯಲ್ಲಿ ಹೇಳಿ ಕಣ್ಣು ಮಿಟುಕಿಸಿದನು.

"ಅದ್ಯಾಕೆ, ಸಾಬ್ರೆ? ತಾನೇ ತ್ವಾಟದಾಗೆ ಕದರಡಿಕೆ ಹೆರಕಿ, ಸುಲಿದು, ಚೊಗರು ಹಾಕಿ ಬೇಯಿಸಿ ಮಾಡಿದ್ದು." ದೊಳ್ಳನೆಂದನು ಅಳುಕು ದನಿಯಿಂದಲೆ.

"ಬರೀ ಗೋಟು, ಬೆಟ್ಟ! ಇದಕ್ಕೆ ಏನು ಕೊಡೋದೋ ನಿನಗೆ?.... ಹೋಗು ಪುಡೀ ಸಾಬರ ಹತ್ತಿರ; ಕೊಟ್ಟುಕಳಿಸುತ್ತಾರೆ." ಎಂದು ಅವಸರವಸರವಾಗಿ, ದೊಳ್ಳನ ಯಾವ ಅಭಿಪ್ರಾಯಕ್ಕೂ ಕಾಯದೆ, ಅಡಕೆಯನ್ನೆಲ್ಲ ತಮ್ಮ ದೊಡ್ಡ ಹಸುಬೆ ಚೀಲಕ್ಕೆ ಸುರಿದುಕೊಂಡು, ದೊಳ್ಳನ ಹರಕಲು ಚೀಲವನ್ನು ಅವನಿಗೆ ಕೊಟ್ಟುಬಿಟ್ಟು, ಅವನು ಅಲ್ಲಿ ಇದ್ದಾನೆಯೆ ಇಲ್ಲವೆ ಎಂಬ ಪ್ರಜ್ಞೆಯೆ ಇಲ್ಲದವರಂತೆ, ಅನ್ಯಕಾರ್ಯದಲ್ಲಿ ಮಗ್ನರಾದರು 'ಕರ್ಮಿನ ಸಾಬ್ರು!'

ತಾನು ಕದ್ದಿದ್ದ ಮರಾಟಿಮಂಜನ 'ಕದರಡಕೆ'ಗೆ ಸರಿಯಾದ ತಿಂಡಿಸಾಮಾನು ಬರುವುದಿಲ್ಲ ಎಂದು ಶಂಕಿಸಿ. ಒಡೆಯರ ಮನೆಯ ಅಡಕೆಯ ರಾಶಿಯಿಂದಲೂ ಒಂದಷ್ಟು ಒಳ್ಳೆಯ ಹಸ ಮತ್ತು ದಳಗಳನ್ನು ಕದ್ದು ಸೇರಿಸಿಕೊಂಡು ಬಂದಿದ್ದ ದೊಳ್ಳನಿಗೆ ಕರ್ಮಿನ್ ಸಾಬರು ಬೇಕೆಂದೇ ಸುಳ್ಳೆ ಹೇಳಿ, ತನಗೆ ದಗಾ ಹಾಕುತ್ತಿದ್ದಾರೆಂದು ಗೊತ್ತಾದರೂ, ಉಕ್ಕಿಬರುತ್ತಿದ್ದ ದುಃಖ ಕೋಪಗಳನ್ನು ನುಂಗಿಕೊಂಡನು. ಮರಾಟಿ ಮಂಜನಾಗಲಿ ಮತ್ತೆ ಯಾರಾದರಾಗಲಿ ಬಂದು ತಾನು ಮಾಡುತ್ತಿದ್ದ ವ್ಯಾಪಾರವನ್ನು ಗಮನಿಸಿದರೆ, ಎಲ್ಲಿ ಸಿಕ್ಕಿಬೀಳುತ್ತೇನೆಯೊ ಎಂದು ಅಂಜಿ, ವಿನಿಮಯ ಕಾರ್ಯವನ್ನು ಆದಷ್ಟು ಬೇಗನೆ ಮುಗಿಸುವ ಆತುರದಿಂದ ಪುಡೀಸಾಬರ ಕಡೆಗೆ ಹೋದನು. ಅಲ್ಲಿ, ಕಟ್ಟಿ ಇಟ್ಟಿದ್ದ ಚೀಲಗಳಲ್ಲಿ, ಉತ್ತುತ್ತೆಯೊ ಕರ್ಜೂರವೊ ಓಲೆಬೆಲ್ಲೊ ಬತ್ತಾಸೊ ಬೆಂಡೊ ಮಿಠಾಯಿಯೊ ಯಾವ ಯಾವ ದೇವತೆಗಳೊ ತನ್ನನ್ನು ಅನುಗ್ರಹಿಸಲು ಕಾತರರಾಗಿ, ಪ್ರತ್ಯಕ್ಷರಾಗಲು ಕಾದು ಕುಳಿತಿರುವ ಚಿತ್ರವನ್ನು ಕಲ್ಪನೆಯ ಕಣ್ಣುಕೆರಳಿ ಕಾಣುತ್ತಾ ನಿಂತನು. ಆದರೆ ಪುಡೀಸಾಬು ಬಿದಿರಿನ ಗೆಣ್ಣು ಕತ್ತರಿಸಿ ಇಟ್ಟಿದ್ದ ಒಂದು ಸಣ್ಣ ಸಿದ್ದೆಯನ್ನು ಕೈಗೆ ತೆಗೆದುಕೊಂಡು, ಅದನ್ನು ಒಂದು ಚೀಲದೊಳಗೆ ತೂರಿಸಿ, ಹೊರಗೆ ತೆಗೆದು, ದೊಳ್ಳನತ್ತ ಕೈ ಚಾಚಿ ನೀಡಿದಾಗ, ಪ್ರತ್ಯಕ್ಷವಾಗಿದ್ದ ಆ ಬಡಕಲು ಬೂಸಲು ದೇವತೆಯನ್ನು ನೋಡಿ  ಅವನ ಆಶೆ ತಲೆಕೆಳಗಾಗಿ ಉರುಳಿ ಹೋಯಿತು! ಆ ಸಿದ್ದೆಯೊಳಗಿದ್ದ ತಿನಿಸಿನ ಗುಣ ಮಾತ್ರ ಎರಡೂ ಅತ್ಯಂತ ನಿರಾಶಾದಾಯಕವಾಗಿತ್ತು! ಆ ಹಳೆಯ ಮುಗ್ಗಲು ಹುರಿಗಡಲೆಗೆ ನಿಡುಸುಯ್ಯುತ್ತಾ ಇನ್ನೇನು ಮಾಡುವುದು ಎಂದು ಸೆರಗನ್ನೇನೋ ಒಟ್ಟಿದನು, ತನ್ನ ಅಡಕೆಯನ್ನೆಲ್ಲ ಸವನಿಸಿಕೊಂಡು ಕರ್ಮಿನ್ ಸಾಬರು ಹಿಂತಿರುಗಿಸಿದ್ದ ಖಾಲಿ ಚೀಲವನ್ನೆ!

ತಾನು ಕೊಟ್ಟಿದ್ದ ಅಷ್ಟೊಂದು ಅಡಕೆಗೆ ಇನ್ನೂ ಬೇರೆ ಬೇರೆಯ ಉತ್ತಮತರದ ತಿಂಡಿಸಾಮಾನುಗಳೂ ದೊರೆಯುತ್ತವೆ ಎಂದು ಚೀಲವನ್ನೊಡ್ಡಿಕೊಂಡೇ ಕಾದು ನಿರೀಕ್ಷಿಸಿ ನಿಂತಿದ್ದ ದೊಳ್ಳನನ್ನು ಗಂಭೀರ ಮುಖಮುದ್ರೆಯಿಂದ ನೋಡಿ ಪುಡೀಸಾಬು "ಮತ್ತೆ ಯಾಕೆ ನಿಂತೀಯ, ದೊಳ್ಳಣ್ಣಾ?" ಎಂದು ಆಶ್ಚರ್ಯ ಸೂಚಿಸುವ ಧ್ವನಿಯಲ್ಲಿ ಕೇಳಿದನು.

“ಏನು, ಸಾಬ್ರೆ, ಇದು? ಅಷ್ಟೊಂದು ಅಡಿಕೆ ಕೊಟ್ಟೇನಿ! ಬರೀ ಉಂದು ಮುಷ್ಟಿ ಕಡಲೆ ಕೊಟ್ಟೀರಲ್ಲಾ? ಉತ್ತುತ್ತೆ ಕರ್ಜೂರ ಬತ್ತಾಸು ಏನೂ ಇಲ್ಲೇನು?” ತುಸು ಅಳುದನಿಯಿಂದಲೆ ಯಾಚಿಸಿದನು ದೊಳ್ಳ.

“ಉತ್ತುತ್ತೆ ಕರ್ಜೂರ ಅಂದ್ರೆ ಏನೂ ಅಂತಾ ತಿಳಿದುಕೊಂಡಿದ್ದೀಯಾ? ಅವೇನು ನಿನ್ನ ಅಡಕೆ ಸಿಕ್ಕಹಾಗೆ ಕಾಡು ಬದಿಯ ತೋಟದಾಗೆ ಸಿಕ್ಕುತ್ತವೆ ಅಂತಾ ಮಾಡಿದ್ದೀಯಾ? ಅವು ಎಲ್ಲಿಂದ ಬರುತ್ತವೆ ನಿನಗೆ ಗೊತ್ತೇ? ಅರಬ್ಬೀ, ಅರಬ್ಬೀ, ಅರಬ್ಬೀ ದೇಶದಿಂದ ಕಣೋ! ಸಾವಿರಾರು ಮೈಲಿ ದಾಟಿಕೊಂಡು, ಸಮುದ್ರ ಹಾದು ಬರುತ್ತವೆ! ತಿಳಿಯಿತೇನು? ನೀನು ತಂದ ಅಡಕೆಯ ಕರೀದಿಯೆಲ್ಲ ಒಂದೇ ಒಂದು ಉತ್ತುತ್ತೆಗೆ ಸಾಲದೋ! ನಿನ್ನನ್ನೆ ಮಾರಿಕೊಂಡರೂ ಒಂದು ಅಚ್ಚೇರು ಕರ್ಜೂರವೂ ಸಿಗಲಾರದೋ!.... ಅರೆ! ಇಷ್ಟು ದೊಡ್ಡ ಹುಡುಗನಾಗಿ ಕಣ್ಣೀರು ಹಾಕುತ್ತೀಯಲ್ಲೋ! ನಾಚಿಕೆ ಆಗೋದಿಲ್ಲವೆ ನಿಮಗೆ?” ಅಣಕು ನಗೆಯಾಡಿದನು ಪುಡೀಸಾಬು, ದೊಳ್ಳನ ಕಣ್ಣಿನಿಂದ ಬಳಬಳನೆ ಎರಡು ಮೂರು ಹನಿ ತೊಟ್ಟಿಕ್ಕಿದುದನ್ನು ಕಂಡು.

ಪಕ್ಕದಲ್ಲಿ ಏನೋ ಬಹು ಮುಖ್ಯವಾದ ಕೆಲಸದಲ್ಲಿ ತೊಡಗಿರುವಂತೆ ನಟಿಸಿಯೂ ಎಲ್ಲವನ್ನೂ ಗಮನಿಸುತ್ತಿದ್ದ ಕರೀಂಸಾಬು ಪುಡೀಸಾಬುಗೆ ಕನ್ನಡದಲ್ಲಿಯೆ “ಹೋಗಲಿ, ಪಾಪ! ಒಂದೊಂದೇ ಉತ್ತುತ್ತೆ ಕರ್ಜೂರ ಬತಾಸು ಕೊಟ್ಟು ಕಳಿಸು.” ಎಂದನು. ದೊಳ್ಳ ಕೊಟ್ಟಿದ್ದ ಅಡಕೆಯ ಬೆಲೆ ಅದಕ್ಕೆ ನೂರುಮುಡಿ ಆಗುತ್ತದೆ ಎಂದು ಅವನಿಗೆ ಗೊತ್ತಿಲ್ಲವೆ?

ಕಣ್ಣೀರೊರೆಸಿಕೊಂಡು ದೊಳ್ಳ ಪುಡೀಸಾಬಿಯಿಂದ ಆ ಅನುಗ್ರಹವನ್ನು ಸ್ವೀಕರಿಸಿ, ಅಳುವಿಗೂ ನಗುವಿಗೂ ನಡುವಣ ಮುಖಭಂಗಿಯನ್ನು ಪ್ರದರ್ಶಿಸುತ್ತಾ ಯಾಚಿಸಿದನು: “ಉಂದೇ ಉಂದು ವಾಲೆಬೆಲ್ಲಾನಾದ್ರೂ ಕೊಡಿ, ಸಾಬ್ರೆ!”

“ಅರೆ ಅಲ್ಲಾ! ನಿನಗೆ ಎಷ್ಟುಕೊಟ್ಟರೂ ಸಾಲದಲ್ಲೊ!....” ಎಂದು ಪುಡೀಸಾಬು ಇಡಿಯ ಓಲೆಬೆಲ್ಲವಲ್ಲದಿದ್ದರೆ ಒಂದು ಚೂರನ್ನಾದರೂ ಕೊಡುವ ಮನಸ್ಸುಮಾಡಿ, ಸಾವಧಾನವಾಗಿ ಓಲೆಬೆಲ್ಲವಿದ್ದ ಚೀಲವನ್ನು ಗೊತ್ತುಮಾಡಿಕೊಳ್ಳುವುದರಲ್ಲಿದ್ದನು. ಅಷ್ಟರಲ್ಲಿ ತನ್ನ ಗಳುಕಾಲುಗಳನ್ನು ನಿಧಾನವಾಗಿ ಎತ್ತಿಎತ್ತಿ ಬೀಸಿ ಹಾಕುತ್ತಾ ದೂರದಲ್ಲಿ ಬರುತ್ತಿದ್ದ ಮರಾಟಿಮಂಜನನ್ನು ಕಂಡು ಹೌಹಾರಿ ದೊಳ್ಳ “ಆಮ್ಯಾಲೆ ಬತ್ತೀನಿ, ಸಾಬ್ರೆ. ಕೊಡಬೈದಂತೆ!” ಎಂದು ಕರೀಂಸಾಬು ಕಡೆ ತಿರುಗಿನೋಡಿ ಪಿಸುದನಿಯಲ್ಲಿ “ಆ ಮಂಜಗೆ ಹೇಳಬ್ಯಾಡಿ, ಸಾಬ್ರೆ.” ಎಂದು ಪೊದೆಗಳ ನಡುವೆ ನುಸಿದು ಓಡಿ ಕಣ್ಮರೆಯಾದನು.

ಕೊನೆಯ ಮಾತುಗಳನ್ನು ದೊಳ್ಳ ಹೇಳುವುದೇನೂ ಬೇಡವಾಗಿತ್ತು. ಏಕೆಂದರೆ, ಕಳ್ಳವ್ಯಾಪಾರದಲ್ಲಿ ನುರಿತಿದ್ದ ಕರ್ಮಿನ್ ಸಾಬುವಿಗೆ ಒಬ್ಬ ಗಿರಾಕಿಯ ಗುಟ್ಟನ್ನು ಇನ್ನೊಬ್ಬ ಗಿರಾಕಿಗೆ ಬಿಟ್ಟುಕೊಡಬಾರದು ಎಂಬ ಅರ್ಥಶಾಸ್ತ್ರದ ರಹಸ್ಯ ಅನುಭವಪೂರ್ವಕವಾಗಿಯೆ ಚೆನ್ನಾಗಿ ಗೊತ್ತಾಗಿತ್ತು.

“ನಮ್ಮ....ದೊಳ್ಳ ಹುಡುಗ.... ಆ! ಇಲ್ಲೆಲ್ಲಾದ್ರು ಬಂದಿದ್ನ, ಸಾಬ್ರೆ? ಆ?” ಆಲಿಸುವವರಿಗೆ ಆಕಳಿಕೆಯೆ ಬರುವಷ್ಟು ಸಾವಕಾಶವಾಗಿ ಪ್ರಶ್ನಿಸಿದ್ದನು ಮರಾಟಿ ಮಂಜ, ತುಸು ರಾಗಧ್ವನಿಯಲ್ಲಿ.

ತಲೆಯಲ್ಲಾಡಿಸಿ “ಇಲ್ಲ; ಇಲ್ಲಿ ಬರಲಿಲ್ಲ.” ಎಂದರು ಸಾಬರು.

"ಆ? ಆ ಮುಂಡೇಕುರುದೆ ನನ್ನ ಕದರಡಿಕೆ ಕದ್ದುಕೊಂಡು ಹೋಗಿದಾನಲ್ಲಾ! ಆ?.... ಅಂವ ಏನಾದ್ರೂ ಅಡಿಕೆ ತಂದರೆ, ಹಿಡಿದು ಇಟ್ಟುಕೊಂಡಿರಿ! ಆ? ಆ'ತಾ? ಆ?"

ಸಾಬರು ಮಾತನಾಡಲಿಲ್ಲ; ತಲೆದೂಗಿ ಸಮ್ಮತಿಸಿದರು, ಅಷ್ಟೆ. ಮಂಜ ಹತಾಶನಾದಂತೆ ಹಿಂದಿರುಗಿ, ತುಸು ಬಿರಬಿರನೆ ನಡೆದನು.

ಹಿಂತಿರುಗಿ ಮನೆಗೆ ಬಂದ ಮರಾಟಿ ಮಂಜನ ಬರಿಗೈಯನ್ನು ಕಂಡು ತರುಣಿ ಲಕ್ಕಮ್ಮ ಸ್ವಲ್ಪ ರಹಸ್ಯಧ್ವನಿಯಲ್ಲಿ ಕೇಳಿದಳು, ಅತ್ತಿಗೆ ಜಟ್ಟಮ್ಮ ಹೆಗ್ಗಡತಿಯವರು ಅಲ್ಲೆಲ್ಲಿಯೂ ಇಲ್ಲ ಎಂಬುದನ್ನು ನಿಶ್ಚಯಿಸಿಕೊಂಡು, "ಏನೋ? ಸಿಕ್ಕಲ್ಲೇನೋ?"

"ಆ್ಞ ಹಾಳು ಮುಂಡೆ ಕುರುದೆ ಅಲ್ಲಿಗೆ ಬರನೇಇಲ್ಲಂತೇ" - ಮಂಜನೆಂದನು ರಾಗಧ್ವನಿಯಿಂದ..

"ಹಾಂಗಾದರೆ " ಅತ್ತ ಇತ್ತ ನೋಡಿ, ಸ್ವಲ್ಪ ಆಲೋಚಿಸಿ, ಏನನ್ನೊ ನಿರ್ಣಯಿಸಿದಂತೆ ಸರಕ್ಕನೆ ಹೊರಟು "ಬಾರೋ ನಾನೇ ಕೊಡ್ತೇನಿ." ಎಂದು ಲಕ್ಕಮ್ಮ ಮನೆಯ ಅಡಕೆ ರಾಶಿಯಿದ್ದ ಕೋಣೆಯ ಕಡೆಗೆ ಹೋದಳು.

ಲಕ್ಕಮ್ಮ ಕೊಟ್ಟಿದ್ದ ಹಸನಡಕೆಯನ್ನು ಮಂಜ ಸಾಬರ ಬೀಡಿಗೆ ಒಯ್ದು, ಹೆಗ್ಗಡೆಯವರ ತಂಗಿಯೆ ಹೇಳಿ ಕಳುಹಿಸಿದ್ದಾರೆ ಎಂಬುದನ್ನೂ ಸ್ಪಷ್ಟಪಡಿಸಿ, ಓಲೆಬೆಲ್ಲ, ಉತ್ತುತ್ತೆ, ಕರ್ಜೂರಾದಿ ತಿಂಡಿಸಾಮಾನುಗಳನ್ನು ಮುಚ್ಚಿಕೊಂಡೆ ತಂದುಕೊಟ್ಟರು. ಈ ಸಾರಿಯೂ ಕರ್ಮಿನ್ ಸಾಬರು ಲಾಭಕರವಾಗಿಯೆ ವ್ಯಾಪಾರ ಮಾಡಿದ್ದರೂ ದೊಳ್ಳನಿಗೆ ಮಾಡಿದಂತೆ ಬುಡಕಟ್ಟು ಚೌರ ಮಾಡುವ ಸಾಹಸಕ್ಕೆ ಹೋಗಿರಲಿಲ್ಲ.

ಸಿಂಬಾವಿ ಭರಮ್ಮೆಹೆಗ್ಗಡೆಯವರ ಖಾಸಾ ತಂಗಿಯಾಗಿದ್ದು ಅವಿವಾಹಿತೆಯಾಗಿದ್ದ ಲಕ್ಕಮ್ಮ ತಮ್ಮ ಮನೆಯ ಅಡಕೆಯನ್ನು ತಾನೆಯೆ, ತಮ್ಮ ಅಡುಗೆ ಆಳಿನ ಸಮ್ಮುಖದಲ್ಲಿಯೆ, 'ಕದ್ದು ಮುಚ್ಚಿ' ಮಾಡಿದುದು ಏಕೆ ಎಂದು ಅರಿಯಬೇಕಾದರೆ, ತುಸು ಒಳಹೊಕ್ಕು ನೋಡಿದಲ್ಲದೆ ತಿಳಿಯುವುದಿಲ್ಲ: ಅಡಕೆಕೊಯ್ಲು ಪೂರೈಸಿ, ಮನೆಯ ಕೊನೆತೆಗೆಯಿಸುವುದೆಲ್ಲ ಮುಗಿದ ಮೇಲೆ ಮನೆಯ ಹೆಂಗಸರು ಮಕ್ಕಳೂ ಮತ್ತು ಅವರ ಅನುಮತಿ ಪಡೆದ ಮನೆಯ ಒಳಗೆಲಸದ ಆಳುಗಳೂ ತೋಟದಲ್ಲಿ ಉದುರಿ ಬಿದ್ದಿರುವ ಅಡಕೆಕಾಯಿಗಳನ್ನು ಆಯ್ದು, ಸುಲಿದು, ಬೇಯಿಸಿ, ಹರಡಿ ಆರಿಸಿ ತಮ್ಮ ತಮ್ಮ ಸ್ವಂತ ಚಿಲ್ಲರೆ ಖರ್ಚನ್ನು ಸಂಪಾದಿಸಿಕೊಳ್ಳಲು 'ಕದರಡಕೆ' ಮಾಡಿಕೊಳ್ಳುತ್ತಿದ್ದುದು ವಾಡಿಕೆ. ಆದರೆ ಸಿಂಬಾವಿ ಭರಮ್ಮೆಹೆಗ್ಗಡೆಯವರ ಹೆಂಡತಿ ಜಟ್ಟಮ್ಮ ಹೆಗ್ಗಡತಿಗೂ ಅವರ ಗಂಡನ ತಂಗಿ ಲಕ್ಕಮ್ಮನಿಗೂ ಹುಯ್ದಕ್ಕಿ ಬೇಯುತ್ತಿರಲಿಲ್ಲ ವಾದ್ದರಿಂದ ಲಕ್ಕಮ್ಮಗೆ 'ಕದರಡಿಕೆ' ಹೆರಕಲು ಆಗದಿರುವಂತೆ ಆಳುಗಳಿಂದ ಅಡಚಣೆ ತಂದೊಡ್ಡಿದ್ದಳು ಜಟ್ಟಮ್ಮ.

ಜಟ್ಟಮ್ಮ ದೊಳ್ಳ ಹುಡುಗನನ್ನು ತನ್ನ ಪರ ಒಳಗೆ ಹಾಕಿಕೊಂಡು ಕೆಲಸ ಮಾಡಿಸುತ್ತಿದ್ದಳು. ಲಕ್ಕಮ್ಮ ತನ್ನ ಸುಖ ದುಃಖ ತೋಡಿಕೊಂಡು ಕೆಲಸ ಮಾಡಿಸುತ್ತಿದ್ದಳು. ಲಕ್ಕಮ್ಮ ತನ್ನ ದುಃಖ ತೋಡಿಕೊಂಡು ಅಡುಗೆಯಾಳು ಮರಾಟಿ ನಂಜನ ಸಹಾನುಭೂತಿ ಸಂಪಾದಿಸಿದಳು. ಆದರೆ ದೊಳ್ಳನ ಚುರುಕಿನ ಮುಂದೆ ಮರಾಟೆ ಮಂಜನ 'ನಿಧಾನ' ಏನೇನೂ ನಡೆಯುತ್ತಿರಲಿಲ್ಲ. ಮಂಜನೂ ತನಗೆ ಬಿಡುವಾದಾಗಲೆಲ್ಲಾ ತೋಟಕ್ಕೆ ಹೋಗಿ ಸ್ವಲ್ಪ ಕದರಡಕೆ

ಹೆರಕಿದ್ದನು, ಲಕ್ಕಮ್ಮನಿಗಾಗಿ. ಆದರೆ ಅದನ್ನೂ ದೊಳ್ಳ ಕದ್ದು ಹಾರಿಸಿದ್ದನು. ಅತ್ತಿಗೆ ತನಗೆ ಯಾವ ವಿಶೇಷವಾದ ತಿಂಡಿಗಳನ್ನೂ ಕೊಂಡು ಕೊಡುತ್ತಿರಲಿಲ್ಲವಾದ್ದರಿಂದ, ತಾಯಿ ಬದುಕಿದ್ದಾಗ ತಾನು ಹುಡುಗಿಯಾಗಿದ್ದಾಗಿನಿಂದಲೂ ವರುಷ ವರುಷವೂ ಕರ್ಮಿನ್ ಸಾಬರಿಂದ ತಪ್ಪದೆ ತಿಂಡಿ ಸಾಮಾನುಗಳನ್ನು ಕದರಡಕೆ ಕೊಟ್ಟು ಕೊಂಡೂ. ತುಡು ತೀರಿಸಿಕೊಂಡ ಅಭ್ಯಾಸವಿದ್ದ ತರುಣಿ ಲಕ್ಕಮ್ಮ ಮನೆಯ ಅಡಕೆಯನ್ನೆ ಕದ್ದೂ ಮುಚ್ಚಿ ತೆಗೆದುಕೊಂಡು ತನ್ನ ಪಾಲಿನ 'ಕದರಡಕೆ' ಮಾಡಿಕೊಳ್ಳುತ್ತಿದ್ದುದು ಅನಿವಾರ್ಯವಾಗಿತ್ತು. ಅದನ್ನು ಕಂಡು ಹಿಡಿದಿದ್ದ ಅತ್ತಿಗೆಗೂ ನಾದಿನಿಗೂ ವರುಷವರುಷವೂ ಜಗಳವಾಗುತ್ತಲೆ ಇತ್ತು. ನಾದಿನಿ ಮಾಡುತ್ತಿದ್ದ ಮನೆಹಾಳು ಒಗೆತನದ ವಿಚಾರವಾಗಿ ದೂರು ಹೇಳಿದರೂ ತನ್ನ ಗಂಡ ಸುಮ್ಮನಿದ್ದುಬಿಡುತ್ತಿದ್ದುದರಿಂದ ಪ್ರತೀಕಾರಸ್ವರೂಪವಾಗಿ ಜಟ್ಟಮ್ಮ ತಾನೂ ಮನೆಯ ಅಡಕೆಯ ರಾಶಿಯಿಂದಲೆ ಸಾಕಷ್ಟು 'ಕದರಡಕೆ'ಯನ್ನು ಆಕ್ರಮಿಸಿಕೊಳ್ಳುವುದರಲ್ಲಿ ಹಿಂದೆ ಬಿದ್ದಿರಲಿಲ್ಲ, ನಾದಿನಿಗೆ ಇಮ್ಮಡಿ ಮುಮ್ಮಡಿ ಪ್ರತಿಸ್ಪರ್ಧಿಯಾಗಿ: ಅಂತೂ ಒಟ್ಟಿನಲ್ಲಿ ಕರ್ಮಿನ್‌ಸಾಬರಿಗೆ 'ಒಳ್ಳೆಯ ಪಡಾವು!'

* * *

ದೊಳ್ಳ ಮತ್ತು ಮಂಜರಂತಹ ಗಿರಾಕಿಗಳು ಒಬ್ಬೊಬ್ಬರಾಗಿ ಬಂದು ಅಕ್ಕಿ ಬತ್ತ ಅಡಕೆಯಂತಹ ಬೆಳೆಯ ಸಾಮಾನುಗಳನ್ನೊ, ಹಾರೆ ಕತ್ತಿ ಸವೆಗೋಲು ಮೆಟ್ಟುಗತ್ತಿ ಮುಂತಾದ ಕದ್ದ ಹತಾರುಗಳನ್ನೊ ಕೊಟ್ಟು ಕರೀಂ ಸಾಬರ ವಾಣಿಜ್ಯ ಜಾಣ್ಮೆ ದಯಪಾಲಿಸಿದಷ್ಟು ತಿಂಡಿ ಪದಾರ್ಥಗಳನ್ನು ತೆಗೆದುಕೊಂಡು ಹೋಗತೊಡಗಿದರು. ಅಂತಹ ಗಿರಾಕಿಗಳಲ್ಲಿ ಗಂಡಸರಿಗಿಂತಲೂ ಹೆಂಗಸರು ಮಕ್ಕಳೇ ಹೆಚ್ಚಾಗಿರುತ್ತಿದ್ದರು: ಹೊಲೆಯರು, ದೀವರು, ಗಟ್ಟದ ತಗ್ಗಿನವರು, ಗೌಡರು ಎಲ್ಲ ಜಾತಿವರ್ಗಗಳಿಗೂ ಅಲ್ಲಿ ಪ್ರಾತಿನಿಧ್ಯವಿರುತ್ತಿತ್ತು.

ಗಂಡಸರೂ ಅನೇಕರು ತಮ್ಮ ಸಂಸಾರಕ್ಕೆ ವರ್ಷಕ್ಕೆ ಬೇಕಾಗುವ ದಿನಸಿ ಕೊಬ್ಬರಿ ಕೊತ್ತುಂಬರಿ ಇತ್ಯಾದಿ ವಸ್ತುಗಳನ್ನು ಸಾಮಾನಿಗೋ ದುಡ್ಡಿಗೋ ಒಡವೆ ವಸ್ತ್ರಗಳಿಗೋ ಬಹಿರಂಗವಾಗಿಯೆ ವಿನಿಮಯ ವ್ಯಾಪಾರ ಮಾಡಿಯೋ ಕೊಂಡುಕೊಂಡೋ ಹೋಗುತ್ತಿದ್ದರು. ಗುತ್ತಿಯೂ ಅವರ ನಡುವೆ ನಿಂತಿದ್ದುದನ್ನು ಕರೀಂಸಾಬರು ಗಮನಿಸಿ, ಅವನ ಕಡೆಗೆ ವಿಶೇಷವಾಗಿ ಎಂಬಂತೆ ನೋಡಿ, ಅವನನ್ನೇ ಪ್ರತ್ಯೇಕವಾಗಿ ಸ್ವಾಗತಿಸಲೆಂಬಂತೆ ಮುಗುಳು ನಕ್ಕರು; ಗುತ್ತಿಯೂ ಹಲ್ಲು ಕಾಣುವಂತೆ ಬಾಯಿ ಹಿಗ್ಗಿಸಿ ನಕ್ಕು, ಸ್ವಾಗತವನ್ನು ಸ್ವೀಕರಿಸಿ, ಕೃತಜ್ಞತೆಯನ್ನು ಪ್ರದರ್ಶಿಸಿದನು.

ಬಂದ ಗಿರಾಕಿಗಳೆಲ್ಲ ಹೋಗುವವರೆಗೆ ದೂರ ಹಿಂದೆ ನಿಂತಿದ್ದ ಗುತ್ತಿ ಹತ್ತಿರಕ್ಕೆ ಬರಲು 'ಕರ್ಮಿನ್‌ಸಾಬು' ಅವನು ಹಾಕಿಕೊಂಡಿದ್ದ ಹೊಸ ಬಟ್ಟೆಗಳನ್ನೂ, ಜುಟ್ಟಿಗೆ ಮುಡಿದಿದ್ದ ಹೂವನ್ನೂ, ಎಲ್ಲಕ್ಕೂ ವಿಶೇಷವಾಗಿ ಕಾಲುಬೆರಳಿಗೆ ಹಾಕಿಕೊಂಡಿದ್ದ ದಪ್ಪನಾದ ಬೆಳ್ಳಿಯ ಉಂಗುರವನ್ನೂ ಗಮನಿಸಿ ನಗುತ್ತಾ "ಏನು ಮದುಮಗನ ಸವಾರಿ ಖುದ್ದಾಗಿ ಬಂದುಬಿಟ್ಟಿದೆಯಲ್ಲಾ?" ಎಂದು ಒಡನೆಯೆ ಮುಖಭಂಗಿವನ್ನು ಗಂಭೀರ ಮುದ್ರೆಗೆ ತಿರುಗಿಸಿ "ನಮಗೆ ಬರಬೇಕಾದ 'ಚಿಲ್ಲರೆ' ತಂದಿದ್ದೀಯಷ್ಟೆ?" ಎಂದು ವ್ಯಂಗ್ಯಧ್ವನಿಯಲ್ಲಿ 'ಚಿಲ್ಲರೆ' ಎನ್ನುವುದನ್ನು ಒತ್ತಿಹೇಳಿ ಮೂದಲಿಸುವಂತೆ ಕೇಳಿದನು.

"ನಮ್ಮ ಹೆಗ್ಗಡೇರು ಮನೇಲಿಲ್ಲ ಕಣ್ರೋ. ಅವರು ಬಂದ ಕೂಡ್ಲೆ ನಿಮ್ಮ ದುಡ್ಡೆಲ್ಲ ಈಸಿಕೊಟ್ಟು ಬಿಡ್ತೀನಿ. ಈಗ ತುರುತ್ತಾಗಿ ಅಷ್ಟು ಸಾಮಾನು ಬೇಕಾಗದೆ. ಮನೀಗೆ ನೆಂಟರು ಬಂದಾರೆ…."

"ಮತ್ತೆ ನೀನು ಆವೊತ್ತು ಏನು ಹೇಳಿದ್ದು?…."

"ಯಾವೊತ್ರೋ?"

"ಯಾವೊತ್ತು? ಆವೊತ್ತು, ಬೆಳಿಗ್ಗೆ ಮುಂಚೆ ಮೇಗರವಳ್ಳೀಲಿ ಕಣ್ಣಾ ಪಂಡಿತರ ಹತ್ತಿರ ಅಂತ್ರ ತೆಗೆದುಕೊಂಡು ಹೋದೆಯಲ್ಲಾ…."

"ಏ ಯಾರು ಹೇಳ್ದೋರಾ ನಿಮಗೆ?" ತನ್ನ ಗುಟ್ಟು ಬಯಲಾದುದಕ್ಕೆ ನಾಚಿಕೊಂಡು ಕೇಳಿದ್ದನು ಗುತ್ತಿ.

"ಯಾರಾದರೂ ಹೇಳಲಿ, ನಿನಗೆ ಏಕೆ ಅದು?…. ಯಾರು ಹೇಳಬೇಕು ಏಕೆ? ನಮಗೆ ಕಣ್ಣಿಲ್ಲವೊ ನೋಡುವುದಕ್ಕೆ? ಬೆಕ್ಕು ಕಣ್ಣು ಮುಚ್ಚಕೊಂಡು ಹಾಲು ಕುಡಿಯುತ್ತಂತೆ!…. ಆವೊತ್ತು ನೀನು ಎಷ್ಟು ದಿಮಾಕಿ ನಿಂದ ಹೇಳಿದೆ? 'ಇನ್ನೆಂಟು ದಿನಾ ತಡೀರಿ, ನನ್ನ ಮದೇಗೆ ಹೆಗ್ಗಡೇರ ಕೈಲಿ ದುಡ್ಡು ಕೇಳೀನಿ, ಅದರಾಗೆ ನಿಮ್ಮ ಚಿಳ್ರೇನೂ ತೀರಸಿ ಬಿಡ್ತೀನಿ' ಅಂತಾ. ಆ 'ಚಿಳ್ರೇ'ನ ತೀರಿಸಿಬಿಡು ಮೊದಲು. ಆಮೇಲೆ ಸಾಮಾನು ಕೊಡುವ ಮಾತು. ಸುಮ್ಮನೆ ಸತಾಯಿಸಬೇಡ." ಮಾಪಿಳ್ಳೆಯ ಕನ್ನಡದ ಕಾಕುದನಿ ನಿಷ್ಠುರ ನುಡಿದು ನಿಂತಿತು.

ಗುತ್ತಿ ಸ್ವಲ್ಪ ಅತ್ತ ಇತ್ತ ನೋಡಿ, ಕರೀಂ ಸಾಬರಿಗೆ ತುಂಬ ಸಮೀಪಕ್ಕೆ ಸರಿದು ಕಿವಿಯಲ್ಲಿ ಹೇಳುವಂತೆ ಪಿಸುಮಾತಿನಲ್ಲಿ "ಹಂಗ್ಯಾರೆ ಒಂದು ಕೆಲ್ಸ ಮಾಡಿ, ಸಾಬ್ರೆ. ಈಗ ತುರ್ತು ಸಾಮಾನು ಬೇಕಾಗದೆ. ಬೆಟ್ಟಳ್ಳಿಯಿಂದ ನನ್ನ ಮಾವ ಬಾವ ಎಲ್ಲ ಬಂದಾರೆ; ಅವಳನ್ನ ತವರಿಗೆ ಕರಕೊಂಡು ಹೋಗ್ತಾರಂತೆ…." ಎಂದು ಸೊಂಟದ ಪಂಚೆಯಲ್ಲಿ ಸುತ್ತಿದ್ದ ಯಾವುದೋ ಒಂದು ವಸ್ತುವಿಗೆ ಕೈಹಾಕಿ ಬಿಚ್ಚಿ, ಮೆಲ್ಲಗೆ ಕಳ್ಳಭಂಗಿಯಲ್ಲಿ ಹೊರದೆಗೆದು ಮುಚ್ಚುಗೈಯಲ್ಲಿಯೆ ನೀಡಿದನು.

ಅದನ್ನು ಕೈಗೆ ತೆಗೆದುಕೊಂಡು ನೋಡಿದ ಕರೀಂ ಸಾಬಿಗೆ ತನ್ನ ಕಣ್ಣನ್ನೆ ನಂಬಲಾಗಲಿಲ್ಲ. ಕೇಳಿದನು ತಲೆಯೆತ್ತಿ ಪಿಸುದನಿಯಲ್ಲಿಯೆ "ಎಲ್ಲಿತ್ತೋ ಇದು ನಿನಗೆ?"

ಅಂತಹ ಚಿನ್ನದ ಬೆಳ್ಳಿಯ ಆಭರಣಗಳನ್ನೆಷ್ಟೊ ಕಳವು ಮಾಲುಗಳನ್ನು ಲಪಟಾಯಿಸಿ ಜೀರ್ಣಿಸಿಕೊಂಡಿದ್ದ ಸಾಬಿಗೆ ತುಸು ಬೆರಗು ಇದ್ದಿತೆ ಹೊರತು ಅಂಜಿಕೆ ಏನೂ ಇರಲಿಲ್ಲ. ಆದರೂ ಕಳ್ಳಮಾಲನ್ನು ತಾನು ತೆಗೆದುಕೊಳ್ಳುತ್ತಿರುವುದರಿಂದ ಎಂತಹ ಅಪಾಯ ಸ್ಥಿತಿಯಿಂದ ಗಿರಾಕಿಯನ್ನು ಪಾರು ಮಾಡುತ್ತದ್ದೇನೆಂದೂ, ಮತ್ತು ಗಿರಾಕಿಗಾಗಿ ತಾನು ಎಂತಹ ಅಪಾಯವನ್ನು ಎದುರಿಸಬೇಕಾಗಿದೆ ಎಂದೂ ಗಿರಾಕಿಗೆ ಚೆನ್ನಾಗಿ ಮನದಟ್ಟು ಮಾಡಿ, ಅದರ ಬೆಲೆಯನ್ನು ಅರ್ಧಕ್ಕೋ ಕಾಲಿಗೋ ಇಳಿಸುವ ಸಲುವಾಗಿಯೇ ಅವನು ಆ ಪ್ರಶ್ನೆ ಹಾಕಿದ್ದನು.

“ಹಂಗೇನೂ ಕದ್ದಿದ್ದಲ್ಲ, ಸಾಬ್ರೆ! ನನ್ನತ್ತೆ ಅವಳ ಮಗಳಿಗೆ ಮದೇಮನೇಲಿ ಕೊಟ್ಟದ್ದು: ನಾನೇನು ಇದನ್ನು ನಿಮಗೆ ಮಾರಾಟ ಮಾಡಾಕೆ ಬಂದಿಲ್ಲ. ಹೆಗ್ಗಡೇರು ಮನೀಗೆ ಬಂದಕೂಡ್ಲೆ, ನಿಮ್ಮ ದುಡ್ಡು ಈಸಿಕೊಡ್ತೀನಿ. ಅಲ್ಲಿ ತಂಕಾ ಇದನ್ನು ಅಡು ಇಟ್ಟುಕೊಂಡಿರಿ. ಆಗಬೈದಾ?”

ಅನುಭವಿಯಾದ ಸಾಬಿ ಗುತ್ತಿಯ ಮಾತನ್ನು ನಂಬಲಿಲ್ಲ. ಒಂದು ವೇಳೆ ಅವನು ಹೇಳುತ್ತಿರುವುದರಲ್ಲಿ ನಿಜಾಂಶ ಇದ್ದರೂ, ಹೊಲೆಯ ತಾನು ಅಡವು ಇಟ್ಟ ಆಭರಣವನ್ನು ಅವಧಿಯೊಳಗಾಗಿಯಾಗಲಿ ಅವಧಿಯ ಹೊರಗೇ ಆಗಲಿ ಬಿಡಿಸಿ ಕೊಂಡಿದ್ದನ್ನು ಅವನು ಎಂದೂ ನೋಡಿಯೂ ಇರಲಿಲ್ಲ; ಕೇಳಿಯೂ ಇರಲಿಲ್ಲ. ಒಂದು ವೇಳೆ ಹಣ ದೊರಕಿದರೂ ಅವನು ಬಿಡಿಸಿಕೊಳ್ಳದೆ ಇರುವ ಹಾಗೆ ಸಂಗತಿ ಏರ್ಪಡಿಸಿ, ಸನ್ನಿವೇಶ ರಚನೆ ಮಾಡುವ ಜಾಣ್ಮೆ ತನಗೆ ಗೊತ್ತಿಲ್ಲವೇ? ಕರೀಂ ಸಾಬಿ ಮರುಮಾತಾಡದೆ ಗುತ್ತಿ ಕೇಳಿದ ಎಲ್ಲ ಸಾಮಾನುಗಳನ್ನೂ ಕೊಟ್ಟು ಕಳುಹಿಸಿದನು. ಬೆಟ್ಟಳ್ಳಿ ಕಲ್ಲಯ್ಯಗೌಡರು ತಿಮ್ಮಿ ಬಚ್ಚರ ಮದುವೆಯ ಸಮಯದಲ್ಲಿ ಉಪಯೋಗಿಸಿಕೊಳ್ಳಲಿ ಎಂದು ದೊಡ್ಡಬೀರನಿಗೆ ಕೊಟ್ಟಿದ್ದು, ಗುತ್ತಿಯ ಜೊತೆಯಲ್ಲಿ ಓಡಿಹೋಗುವಾಗ ತಿಮ್ಮಿ ಗಂಟಿಕಟ್ಟಿ ಬಿಡಾರದಲ್ಲಿಯೆ ಇಟ್ಟು ಹೋಗಿದ್ದು, ಸೇಸಿ ಸಿಂಬಾವಿಗೆ ಬರುವಾಗ ಗುಟ್ಟಾಗಿ ಹೊತ್ತು ತಂದಿದ್ದ ಆ ಗಂಟಿನಲ್ಲಿದ್ದ ಆಭರಣಗಳಲ್ಲಿ ಅವಳು ಧಾರೆಯ ಸಮಯದಲ್ಲಿ ಮದುಮಗಳಾಗಿದ್ದ ತನ್ನ ಮಗಳಿಗೆ ತೊಡಿಸಿದ್ದ ಒಂದು ಬಂಗಾರದ ಜಡೆಬಿಲ್ಲೆ ಕರೀಂ ಸಾಬಿಯ ಹಮ್ಮಿಣಿಯೊಳಗೆ ಅಡಗಿಹೋಯಿತು.

* * *

ಮರಾಟಿಮಂಜನನ್ನು ಕಂಡು, ಹಳುವಿನಲ್ಲಿ ನುಗ್ಗಿ ಕಣ್ಮರೆಯಾದ ದೊಳ್ಳ, ಮನೆಗೆ ಹಿಂದಿರುಗುವುದಕ್ಕೆ ಬದಲಾಗಿ ಕಾಡಿನ ಕಡೆ ತಿರುಗಿ ಗುಡ್ಡವೇರಿದ್ದನು. ಹುರಿಗಡಲೆಯನ್ನು ತಿಂದು ಖರ್ಚುಮಾಡಿಯೆ ಮನೆಗೆ ಹೋಗುವುದು ಉತ್ತಮ ಎಂದು ಅವನ ಜಾಣತನ ನಿರ್ಣಯಿಸಿತ್ತು. ಅಲ್ಲದೆ ಮನೆಗೆ ಹೋಗುವುದು ಉತ್ತಮ ಎಂದು ಅವನ ಜಾಣತನ ನಿರ್ಣಯಿಸಿತ್ತು. ಅಲ್ಲದೆ ಮನೆಗೆ ಹಿಂದಕ್ಕೆ ಹೋಗುವಾಗ ಪುಡೀಸಾಬರಿಂದ ಓಲೆಬೆಲ್ಲ ಉತ್ತುತ್ತೆ ಖರ್ಜೂರಾದಿಗಳನ್ನು ಈಸಿಕೊಂಡು ಹೋಗಲು ಅನುಕೂಲವಾಗಬಹುದೆಂದೂ ಭಾವಿಸಿದ್ದನು. ಎಂತಿದ್ದರೂ ಮನೆಗೆ ಹಿಂತಿರುಗಿದ ಮೇಲೆ ಬೈಗುಳ ತಪ್ಪಿದ್ದಲ್ಲ; ಒಂದೆರಡು ಗುದ್ದೂ ಬಿದ್ದರೂ ಬೀಳಬಹುದು; ಹುರಿಗಡಲೆಯನ್ನಾದರೂ ವಿರಾಮವಾಗಿ ಕಾಡಿನಲ್ಲಿ ಮರ ಪೊದೆಗಳ ನಡುವೆ ತಿರುಗುತ್ತಾ ಚೆನ್ನಾಗಿ ಮೆದ್ದು ಹೋದರಾಯಿತು ಎಂದು “ನಿಚ್ಚಯ್ಸಿ”ಯೆ “ಕೆಮ್ಮಣ್ಣುಬ್ಬಿ”ನ ಕಡೆ ಹೊರಟಿದ್ದನು.

ಹುರಿಗಡಲೆಯೇ ಅಪೂರ್ವವೂ ಅತ್ಯಮೂಲ್ಯವೂ ಆದ ತಿಂಡಿಯಾಗಿದ್ದ ಆ ಹಳ್ಳಿಯ ಆಳುಗೆಲಸದ ಹುಡುಗನಿಗೆ ಇತ್ತಣ ಧ್ಯಾಸವೆ ಇರಲಿಲ್ಲ: ಅವನ ಪ್ರಜ್ಞೆಯ ಬಹುಪಾಲು ಅವನು ಅಗಿಯುತ್ತಿದ್ದ ಕಡಲೆಯ ರುಚಿಯ ಆಸ್ವಾದನೆಯಲ್ಲಯೆ ಮಗ್ನವಾಗಿತ್ತು. ಕಾಡಿನ ಸೌಂದರ್ಯವಾಗಲಿ ಭಯಂಕರತೆಯಾಗಲಿ, ಹಕ್ಕಿಗಳ ಉಲಿಹವಾಗಲಿ ಹೂವುಗಳ ಬಣ್ಣವಾಗಲಿ, ಹಸುರಿನಲ್ಲಿ ಸೋಸಿ ಬರುತ್ತಿದ್ದ ಪೂರ್ವಾಹ್ನದ ಬಿಸಿಲಿನ ಬೆಚ್ಚನೆಯ ಸುಖವಾಗಲಿ, ಆಕಾಶದಲ್ಲಿ ತೇಲುತ್ತಿದ್ದ ಮುಮ್ಮಳೇಗಾಲದ ಮೋಡಗಳ ಚೆಲುವಾಗಲಿ ಯಾವುದಕ್ಕೂ ಅವನ ಒಳಮನಸ್ಸಿನ ವಲಯಕ್ಕೆ ಪ್ರಜ್ಞಾಪೂರ್ವಕವಾಗದ ಪ್ರವೇಶವಿರಲಿಲ್ಲ.... ಆದರೆ, ಅದೇನು? ಸಾಮಾನ್ಯವಾಗಿ ಕಾಗೆಗಳೇ ವಿರಳವಾಗಿರುತ್ತಿದ್ದ ಆ ಮಲೆನಾಡಿನಲ್ಲಿ, ಅದೇನು ಅಷ್ಟೊಂದು ಕಾಗೆಗಳು ನೆರೆದು ಕೂಗಿಕೊಳ್ಳುತ್ತಿವೆ, ಆ ಸರಲಿನಲ್ಲಿ

ಹರಿಯುವ ಅಡೆಹಳ್ಳದ ಹತ್ತಿರ! ಮರಗಳಲ್ಲಿ ಮಂಗಗಳೂ ಕಿರಿಚಿಕೊಳ್ಳುವ ಸದ್ದು! ಸುತ್ತಲೂ ಗಿಡ ಪೊದೆ ಬೆಳೆದು ಎತ್ತರವಾಗಿದ್ದ ಒಂದು ಮೊರಡಿಯ ಬಂಡೆಗಲ್ಲ ಮೇಲೆ ಏರಿನಿಂತು, ಹಳು ತುಂಬಿದ್ದ ಕಣಿವೆಯಲ್ಲಿ ದೂರ ಕೆಳಗೆ ಹರಿಯುತ್ತಿದ್ದ ಅಡೆ ಹಳ್ಳದ ಕಡೆ ನೋಡಿದನು: ನೋಡಿ ಬೆಚ್ಚಿದನು! ಒಂದು ಮಟ್ಟಿನ ಹಿಂದೆ ಮರೆಯಾಗಿ ನಿಂತು, ಕಾಲ ತುದಿಯ ಹೆಬ್ಬೆಟ್ಟಿನ ಮೇಲೆ ನಿಮಿರಿ ನಿಕ್ಕುಳಿಸಿ ನೋಡಿದನು! ಬೆರಗಾಯಿತು! ಹೆದರಿಕೆಯೂ ಆಯಿತು! ಕಡಲೆಯನ್ನು ಅಗಿಯುತ್ತಿದ್ದ ಬಾಯಿ ಅರೆತೆಗೆದು ನಿಷ್ಪಂದವಾಗಿಬಿಟ್ಟಿತು!

ಕಾಗೆಗಳು ಹಾರಾಡಿ ಕೂಗುತ್ತಿದ್ದುದನ್ನೂ ಮರಗಳಲ್ಲಿ ಮಂಗಗಳು ಕಿರಿಚಿಕೊಳ್ಳುತ್ತಿದ್ದುದನ್ನೂ ಗಮನಿಸಿದ್ದ ದೊಳ್ಳ, ಕಾಡಿನ ಅನುಭವವಿದ್ದ ಎಲ್ಲರೂ ಊಹಿಸುವಂತೆ, ಅಲ್ಲೆಲ್ಲಿಯೋ ಹುಲಿಯೋ ಕುರ್ಕನೋ ಇರಬೇಕೆಂದು ಊಹಿಸಿದ್ದನು. ಅದಕ್ಕಾಗಿಯೆ ಎಚ್ಚರಿಕೆಯಿಂದಾಗಿ ದಿಬ್ಬವೇರಿ ಅರೆಕಲ್ಲ ಮರೆನಿಂತು ಕಣ್ಣಿಟ್ಟಿ ನೋಡಿದ್ದನು: ಆದರೆ ಅವನು ಕಂಡದ್ದೇನು? ಹೆಬ್ಬುಲಿಯೇ ಆಗಿದ್ದರೂ ಅವನಿಗೆ ಅಷ್ಟು ದಿಗಿಲೂ ಬೆರಗೂ ಆಗುತ್ತಿರಲಿಲ್ಲ:

ಸೊಂಟದ ಮೇಲಣ ಮೈಯೆಲ್ಲ ಬತ್ತಲೆಯಾಗಿ, ಮೊಣಕಾಲಿಗೂ ಮೇಲೆ ಮಡಿಚಿದ್ದ ಇಜಾರ ಮಾತ್ರದಿಂದಿದ್ದ ಇಜಾರದ ಸಾಬಿಯೂ ಅವನಂತೆಯೆ ಬತ್ತಲೆಯಾಗಿ ಲುಂಗಿಯನ್ನು ಸೊಂಟದವರೆಗೂ ಎತ್ತಿ ಬಿಗಿದಿದ್ದ ಲುಂಗೀಸಾಬಿಯೂ ಚೂರಿಗಳನ್ನು ಹಿಡಿದು, ಕೈಯೆಲ್ಲ ರಕ್ತಮಯವಾಗಿ, ಯಾರನ್ನೊ ಕೊಲೆಮಾಡುವ ಕರ್ಮದಲ್ಲಿ ತೊಡಗಿದ್ದಂತೆ ಭೈರವವಾಗಿ ಕಾಣುತ್ತಿದ್ದರು. ಉಸಿರು ಕಟ್ಟಿದಂತಾಗಿ, ಒಡನೆಯೆ ಏದುಸಿರು ಬಿಡತೊಡಗಿದ್ದ ದೊಳ್ಳನ ಕಾಲು ನಡುಗತೊಡಗಿತ್ತು. ಅವನೂ ಆ ಸಾಬರ ವಿಚಾರ ಏನೇನೊ ಭಯಂಕರ ಸುದ್ದಿಗಳನ್ನು ಕೇಳಿದ್ದನು. ಗಾಬರಿಯಿಂದ ಕೂಗಿಕೊಳ್ಳಬೇಕೆಂದು ಮನಸ್ಸಾದರೂ ಕೂಗು ಕೊರಳಿನಿಂದ ಹೊರಡಲಿಲ್ಲ. ಅಲ್ಲದೆ, ತಾನೂ ಒಬ್ಬನೆ ಇದ್ದುದರಿಂದ, ಅವರು ಮಾಡುತ್ತಿದ್ದ ಕೊಲೆಗೆಲಸವನ್ನು ತಾನು ಕಂಡ ಮೇಲೆ ಅವರ ಕೈಗೆ ಸಿಕ್ಕಿಕೊಂಡರೆ, ಆ ಸುದ್ದಿ ಇತರರಿಗೆ ತನ್ನಿಂದ ಗೊತ್ತಾಗುತ್ತದೆ ಎಂಬ ಕಾರಣಕ್ಕಾಗಿಯೇ ತನ್ನನ್ನೂ ಪೂರೈಸದೆ ಬಿಡುವುದಿಲ್ಲ ಎಂದೂ ಅವನಿಗೆ ಭೀತಿ ಬಡಿದಂತಾಗಿತ್ತು. ಚಲಿಸಿದರೂ ಅವರಿಗೆಲ್ಲಿ ಗೊತ್ತಾಗಿಬಿಡುತ್ತದೆಯೋ ಎಂದು ಮರವಟ್ಟು ನಿಂತು ನಿರುಪಾಯನಾಗಿ ಎವೆಯಿಕ್ಕದೆ ನೋಡುತ್ತಿರಲೇಬೇಕಾಯಿತು.

ಹಾಗೆ ನೋಡುತ್ತಿದ್ದಾಗ, ಸಾಬರು ಅತ್ತ ಇತ್ತ ಚಲಿಸಿದಾಗ, ಅವರು ಯಾರನ್ನೂ ಕೊಲೆ ಮಾಡುತ್ತಿಲ್ಲವೆಂದೂ, ಒಂದು ಸಣ್ಣ ಮರದ ಹರೆಗೆ ಬಳ್ಳಿಯಿಂದ ನೇತುಹಾಕಿದ್ದ ಕುರಿಯನ್ನು ಸುಲಿಯುತ್ತಿದ್ದಾರೆಂದು ಗೊತ್ತಾಗಿ, ದೊಳ್ಳನ ಹೃದಯದಲ್ಲಿ ತುಸು ಧೈರ್ಯ ಸಂಚಾರವಾಗಿ ಮನಸ್ಸಿಗೆ ಸಮಾಧಾನವೂ ಆಯಿತು. ಆ ದೃಶ್ಯವನ್ನು ಇನ್ನೂ ಸ್ವಲ್ಪ ವಿವರವಾಗಿ ಈಕ್ಷಿಸಲೂ ಸಾಧ್ಯವಾಯಿತು ಅವನಿಗೆ.

ಅವರು ಚರ್ಮ ಸುಲಿಯುತ್ತಿದ್ದ ಕುರಿಯ ತಲೆಯಿಂದ ಅದು 'ಸೊಪ್ಪುಗುರಿ' ಎಂದೂ ಗೊತ್ತಾಗುವಂತಿತ್ತು. ಅದರ ಕೊಂಬೊ ಕಿವಿಯೊ ಗಡ್ಡವೊ ಕುತ್ತಿಗೆಯ ಮೊಲೆಯೊ? ಯಾವುದೂ ಸ್ಪಷ್ಟವಾಗಿ ತೋರುತ್ತಿರಲಿಲ್ಲವಾದರೂ ಅವನಿಗೆ ಅದು ಪರಿಚಯದ ಪ್ರಾಣಿಯಂತೆಯೆ ಭಾಸವಾಗತೊಡಗಿತು: ಹಳೆಪೈಕದ ತಿಮ್ಮನ ಹೋತವಿರಬಹುದೇ? – ಇಲ್ಲ, ಗುತ್ತಿಯ ಅಪ್ಪ ಕರಿಸಿದ್ದನ ಗಬ್ಬದ ಆಡು ಇರಬಹುದೇ? ಛೇಛೇ! – ಗಬ್ಬದ ಕುರಿಯನ್ನು ಯಾರಾದರೂ ಕೊಯ್ಯುತ್ತಾರೆಯೇ? ಹೊಟ್ಟೆಯಲ್ಲಿ ಮರಿಗಳಿಲ್ಲವೆ? ಪಾಪ! – ದೊಳ್ಳ ನೋಡುತ್ತಿದ್ದಂತೆಯೆ, ಮಿಂಚಿನ ವೇಗದಲ್ಲಿ, ಚರ್ಮ ಸುಲಿದ ಕುರಿಯ ಕೆಂಪು ಮಾಂಸದ ಒಡಲು ಗೋಚರಿಸಿ ನೇತಾಡುತ್ತಿತ್ತು! ಸಾಬರಿಬ್ಬರೂ ತುಂಬ

ಚುರುಕಿನಿಂದ ಕೆಲಸ ಸಾಗಿಸುತ್ತಿದ್ದರು: ಅವರ ಅವಸರದ ಚಲನವಲನಗಳಿಂದಲೂ, ಅವರಿಬ್ಬರೂ ಮತ್ತೆ ಮತ್ತೆ ತಲೆಯೆತ್ತಿ ಆಕಾಶದ ಕಡೆ ಸಿಟ್ಟಿನಿಂದ ನೋಡಿ, ಕೂಗಿ ಎರಗಿ ಹಾರಾಡುತ್ತಿದ್ದ ಕಾಗೆಗಳನ್ನೂ ಮರಗಳಲ್ಲಿ ಕಿರಿಚುತ್ತಿದ್ದ ಕೋತಿಗಳನ್ನೂ ಕಲ್ಲುಬೀರುವಂತೆ ಹೆದರಿಸಿ ಅಟ್ಟಲು ಪ್ರಯತ್ನಿಸುತ್ತಿದ್ದುದರಿಂದಲೂ ತಮ್ಮ ಗುಟ್ಟಿನ ಕಾರ್ಯ ಬಯಲಾಗುವುದಕ್ಕೆ ಅವಕಾಶ ಕೊಡದಂತೆ ಬೇಗಬೇಗನೆ ಮುಗಿಸಬೇಕೆಂಬುದರಲ್ಲಿ ಆಸಕ್ತರಾಗಿದ್ದಂತೆ ತೋರಿತು. ಅವರು ಪೂರೈಸುವ ಮುನ್ನವೆ ತಾನು ವರ್ತಮಾನ ಕೊಟ್ಟು, ಅವರನ್ನು ಸಿಕ್ಕಹಾಕಿರಬೇಕೆಂದು ಮನಸ್ಸು ಮಾಡಿದ ದೊಳ್ಳ ಮೆಲ್ಲನೆ ಬಗ್ಗಿ ಜುಣುಗಿ ಅರೆಕಲ್ಲಿನಿಂದ ಇಳಿದು ಹಳುವಿನಲ್ಲಿ ಹಿಂದಕ್ಕೆ ಓಡಿದನು. ತನ್ನ 'ಕದರಡಕೆ'ಗೆ ನ್ಯಾಯವಾದ ಬೆಲೆಯ ತಿಂಡಿ ಸಾಮಾನು ಕೊಡದೆ ಮೋಸ ಮಾಡಿದ ಸಾಬರಿಗೆ ತಕ್ಕ ಶಾಸ್ತಿ ಮಾಡಿಸುತ್ತೇನೆ ಎಂಬ ಪ್ರತೀಕಾರದ ಹೆಮ್ಮೆಯೂ ಅವನಿಗೆ ಪ್ರೇರಕವಾಗಿತ್ತು. ಈ ಹೊನ್ನಾಲಿ ಸಾಬರಿಗೆ ಶಿಕ್ಷೆಯಾದರೆ ಆ ಮಲೆಯಾಳಿ ಮಾಪಿಳ್ಳೆಗಳು ಅಷ್ಟೇನೂ ಕಣ್ಣೀರು ಕರೆಯುವುದಿಲ್ಲ ಎಂಬುದು ದೊಳ್ಳನಿಗೆ ಹೇಗೆ ಗೊತ್ತಾಗಬೇಕು?

ಗುಡ್ಡವಿಳಿದು ದೊಳ್ಳನೇನೋ ಬರ್ದಂಡು ಓಡಿದನು. ಆದರೆ ತಾನು ಕಂಡದ್ದನ್ನು ಹೊಲಗೇರಿಗೆ ಹೋಗಿ ಕರಿಸಿದ್ದನ ಕಡೆಯವರಿಗೆ ಹೇಳಬೇಕೋ? ಅಥವಾ ಹಳೆಪೈಕದವರ ಹಟ್ಟಿಗೆ ಹೋಗಿ ಹೇಳಬೇಕೋ? ಎಂಬ ಯೋಚನೆಯಲ್ಲಿ ಯಾವುದರ ಇತ್ಯರ್ಥವೂ ಥಟ್ಟನೆ ಹೊಳೆಯದೆ, ಉತ್ತುತ್ತೆ ಖರ್ಜೂರ ಓಲೆಬೆಲ್ಲಗಳ ನೆನಪಾಗಿ ಸಾಬರ ಬೀಡಿನ ಕಡೆಗೆ ಹೋದನು, ತನಗೆ ಸಲ್ಲಬೇಕಾದ ತಿಂಡಿಸಾಮಾನುಗಳನ್ನು ತೆಗೆದುಕೊಂಡು ಆಮೇಲೆ ದೂರು ಹೇಳುವುದೆಂದು ನಿಶ್ಚಯಿಸಿ. ಅಲ್ಲಿ, ಅವನು ಪುಡೀಸಾಬರಿಂದ ಒಂದೊಂದೇ ಉತ್ತುತ್ತೆ ಖರ್ಜೂರ ಓಲೆಬೆಲ್ಲದ ಚೂರುಗಳನ್ನು ಪಡೆದು, ಹರಕಲು ದಗಲೆಯ ಜೇಬಿಗೆ ಹಾಕಿಕೊಳ್ಳುತ್ತಿದ್ದಾಗಲೆ ಮರಾಟಿಮಂಜನೂ ಹಾಜರಾದನು! ಕಳ್ಳನನ್ನು ಮಾಲುಸಮೇತ ಹಿಡಿದ ಪೋಲೀಸಿನವನಂತೆ ದೊಳ್ಳನನ್ನು ರಟ್ಟೆ ಹಿಡಿದು ಮನೆಯ ಕಡೆ ಎಳೆದುಕೊಂಡು ಹೋದನು.

* * *

ಅಂತೂ, ಸದ್ಯಕ್ಕೆ ಯಾವ ಗಲಾಟೆಯೂ ಇಲ್ಲದೆ, ಆ ದಿನ ಮಧ್ಯಾಹ್ನದ ಹೊತ್ತಿಗೆ ಕರಿಸಿದ್ದನ ಗಬ್ಬದ ಆಡು ಸಾಬರ ಅಡುಗೆಯ ಪಲಾವಿನ ವಾಸನೆಯಾಗಿ ಪರಿವರ್ತಿತವಾಗಿ ಸಿಂಬಾವಿ ಹಳ್ಳಿಯ ಮಲೆನಾಡಿನ ವಾಯುಮಂಡಲದಲ್ಲಿ ಪಸರಿಸಿತ್ತು.

ಆದರೆ ಅಪರಾಹ್ನದಲ್ಲಿ ವಿಷಯ ವಿಕೋಪಕ್ಕೇರಿತು:

ದೊಳ್ಳನನ್ನು ಎಳೆದುಕೊಂಡು ಹೋಗಿ 'ಸಣ್ಣಮ್ಮ'ನ ಸಮ್ಮುಖದಲ್ಲಿ ನಿಲ್ಲಿಸಿ ಮರಾಟಿಮಂಜ ಅವನಿಗಿನ್ನೂ ಶಿಕ್ಷೆ ವಿಧಿಸಿರಲಿಲ್ಲ, ಬರಿಯ ವಿಚಾರಣೆಯ ಮಟ್ಟದಲ್ಲಿಯೆ ದೊಳ್ಳ ಗೊಳೋ ಎಂದು ಗಟ್ಟಿಯಾಗಿ ಅಳತೊಡಗಿ 'ದೊಡ್ಡಮ್ಮ'ನ ರಕ್ಷಣೆಗಾಗಿ ಕೂಗಿಕೊಳ್ಳತೊಡಗಿದನು.

ಅಡುಗೆಮನೆಯಲ್ಲಿದ್ದ ಜಟ್ಟಮ್ಮಗೆ ದೊಳ್ಳನ ಕೂಗು ಕೇಳಿಸಿದೊಡನೆಯೆ ಲಕ್ಕಮ್ಮನಿಗೆ ತೇಜೋವಧೆ ಮಾಡಲು ಅವಕಾಶ ಸಿಕ್ಕಿತೆಂದು ಉರಿಮೋರೆ ಮಾಡಿಕೊಂಡೆ ನುಗ್ಗಿ ಬಂದು ಕೂಗಿದಳು: "ಯಾಕೋ ಆ ಹುಡುಗನಿಗೆ ಸುಮ್ಮನೆ ಹೊಡೀತಿದ್ದೀಯಾ? ಪಾಪದಂವ ಸಿಕ್ಕಿದಾ ಅಂತಾ? ಈ ಮನೇಲಿ ಯಾರೂ ಹೇಳೋರು ಕೇಳೋರು ಇಲ್ಲೇನೋ?"

"ಆ್ಞನಾ....ಹೊದೆನೇನಮ್ಮಾ?.... ನನ್ನ ಕದರಡಿಕೆ ಕದ್ದುಕೊಂಡು ಹೋಗಿ.... ಆ... ಸಾಬರಿಗೆ ಕೊಟ್ಟು....ಉತ್ತುತ್ತೆ ವಾಲೆಬೆಲ್ಲ ತಂದಾನೆ....ಆ ನೋಡಿ, ನೀವೇ ನೋಡಿ" ಎಂದು ಮಂಜ ದೊಳ್ಳನ ಜೇಬಿನಿಂದ ಆ ಪದಾರ್ಥಗಳ ಅವಶೇಷಗಳನ್ನು ಹೊರಕ್ಕೆ ತೆಗೆದು ತೋರಿಸಿದನು.

ಆದರೆ ಜಟ್ಟಮ್ಮ ನ್ಯಾಯಾನ್ಯಾಯ ನಿರ್ಣಯಮಾಡಲು ಅಲ್ಲಿಗೆ ಧಾವಿಸಿರಲಿಲ್ಲ. ಲಕ್ಕಮ್ಮನ ಕಡೆ ದುರುದುರು ನೋಡುತ್ತಾ "ಮನೇಲಿರೋ ದಿಂಡೆಬಸವೀನೆ ಮನೇ ಅಡಕೇನೆಲ್ಲ ಕದ್ದು ಸಾಬರಿಗೆ ಕೊಟ್ಟು ಕೊಬ್ರಿ ಬೆಲ್ಲ ತಿನ್ತಾ ಕೂತ್ರೇ ಆ ಅರಿಯದ ಹುಡುಗನಿಗೆ ಯಾಕೆ ಸುಮ್ಮನೆ ಹೊಡೀತೀಯಾ?" ಎಂದು, ದೊಳ್ಳನ ಕಡೆ ತಿರುಗಿ ಹೇಳಿದಳು: "ಹೋಗೋ ನೀನು ಒಳಗೆ, ಕಾರ ಕಡೆಯೋದು ಬಿಟ್ಕೊಂಡು ಇಲ್ಯಾಕೆ ನಿಂತೀಯಾ?"

ದೊಳ್ಳನೇನೊ ಸದ್ಯಕ್ಕೆ ಬದುಕಿದೆ ಎಂದುಕೊಂಡು, ಒಳಗೊಳಗೆ ನಗುತ್ತಾ, ಖಾರ ಕಡೆಯಲು ಹೋದನು. ಆದರೆ ಲಕ್ಕಮ್ಮ ಅತ್ತಿಗೆ ತನ್ನನ್ನು 'ದಿಂಡೆ ಬಸವಿ' ಎಂದುದಕ್ಕೆ "ಯಾರೇ ದಿಂಡೇ ಬಸವಿ? ನಾನೋ? ನೀನೋ? ಗಂಡನ ಕೊಲ್ಲಾಕೆ, ಔಂಸ್ತಿ ಕೊಡೋ ನೆವ ಹೂಡಿ, ಕಣ್ಣಾಪಂಡಿತರಿಂದ ಗುತ್ತಿ ಕೈಲಿ ಮದ್ದು ತರಸಿ ಹಾಕ್ತಾ ಇದ್ದೀಯಲ್ಲಾ? ಯಾರಿಗೂ ಗೊತ್ತಿಲ್ಲ ಅಂತಾ ಮಾಡಿಯೇನು? ಅದಕ್ಕೇ ಅಲ್ಲೇನು? ಅಣ್ಣಯ್ಯ ದಿನಕ್ಕೂ ಬಡಕಲು ಆಗ್ತಾ, ಹೋಗ್ತಾ ಇರೋದು? ಗಂಡನ್ನ ತಿಂದು, ಮಿಂಡನ್ನ ಇಟ್ಟುಕೊಳ್ಳಾನ ಅಂತಾ ಮಾಡ್ದೋಳು ನೀನು ದಿಂಡೇ ಬಸವೀನೋ? ನಾನೋ?" ಎಂದುಬಿಟ್ಟಳು, ತಾನು ಆಪಾದಿಸುತ್ತಿರುವುದು ನಿಜವಲ್ಲವೆಂದು ಗೊತ್ತಿದ್ದರೂ, ಭಾವೋಪಯೋಗಿಯಾದ ನಿಂದನೆಯ ಪ್ರತೀಕಾರ ಖಡ್ಗಧಾರೆ ಎಷ್ಟು ತೀಕ್ಷ್ಣವಾಗಿದ್ದರೆ ಅಷ್ಟೂ ಬಲವಾಗಿ ಹೃದಯಕ್ಕೆ ಏಟು ನಾಟುತ್ತದೆ ಎಂದು.

ಸರಿ, ಇಬ್ಬರಿಗೂ ಪದ್ಧತಿಯಂತೆ ಬೈಗುಳದ ಒಂದು ಲಡಾಯವೆ ನಡೆದುಹೋಯ್ತು, ಅವಾಚ್ಯ ಅಶ್ಲೀಲಭಾಷೆಯ ಕುಳ್ಳೆಗಳನ್ನೆ ಒಬ್ಬರಮೇಲೊಬ್ಬರು ಎಸೆಮಾಡಿ.

ಇತ್ತ ಜಟ್ಟಮ್ಮ ಲಕ್ಕಮ್ಮರಿಗೆ ಜಟಾಪಟಿ ನಡೆಯುತ್ತಿದ್ದಾಗ, ಅತ್ತ ತೊಂದರೆಯ ರಂಗದಿಂದ ನುಸುಳಿಹೋಗಿದ್ದ ದೊಳ್ಳ, ಹಿತ್ತಲುಕಡೆಯ ಬಾಗಿಲಲ್ಲಿ ಹೆಗ್ಗಡತಮ್ಮೋರಿಂದ ನಂಟರುಪಚಾರಕ್ಕೆ ಏನಾದರೂ ಈಸಿಕೊಂಡು ಹೋಗಲು ಬಂದು ನಿಂತಿದ್ದ ಗಿಡ್ಡಿಗೆ, ತಾನು ಕೆಮ್ಮಣ್ಣುಬ್ಬಿನಲ್ಲಿ ಕಂಡದ್ದನ್ನು ಭಾವಪೂರ್ಣವಾಗಿ ವರ್ಣಿಸುತ್ತಿದ್ದನು. ಅಷ್ಟೊಂದು ಆಶೆಪಟ್ಟು ಸಾಕಿದ್ದ ತನ್ನ ಶಬ್ದದ ಆಡಿಗೆ ಆದ ಗತಿಯನ್ನು ಕೇಳಿ ಅವಳು ಮಾತಾಡದಾದಳು. ಗದ್ಗದ ಸ್ವರದಿಂದ "ನಿಜವಾಗಿಯೂ ಹೌದೇನ್ರೋ ನೀವು ಕಂಡಿದ್ದು? ಆ ಮುಂಡೇ ಮಕ್ಕಳ ಹೆಂಡ್ರು ಮುಂಡೇರಾಗಾಕೆ! ಇವತ್ತೋ ನಾಳೇ ಮರಿ ಹಾಕ್ತಿತ್ತಲ್ರೋ ನಮ್ಮ ಕುರಿ!" ಎನ್ನುತ್ತಾ ಬಿಡಾರಕ್ಕೆ ಹೊರಡುತ್ತಿದ್ದವಳಿಗೆ ದೊಳ್ಳ ಕೂಗಿ ಹೇಳಿದ " ನಾನೇನು ಹತ್ರ ಹೋಗಿ ನೋಡ್ಲಿಲ್ಲೇ! ಅಂತೂ ಕಂಡ್ಹಂಗಾಯ್ತು, ಹೇಳ್ದೆ. ನಿಮ್ಮದೋ? ಹಳೇಪೈಕದೋರದೋ? ಅಂತೂ ಯಾರದ್ದೋ ಒಂದನ್ನು ಕತ್ರಾಯ್ಸಿ ಬಿಟ್ಟಾರೆ ಸಾಬ್ರು."

ಮರುದಿನ ಬೆಳಿಗ್ಗೆ ಮುಂಚೆ ಸೊಸೆಯನ್ನು ತವರುಮನೆಗೆ ಕಳುಹಿಸುವ ಸಂಭ್ರಮದಲ್ಲಿದ್ದ ಕರಿಸಿದ್ದನ ಬಿಡಾರಕ್ಕೆ ಸಿಡಿಲು ಬಡಿದಂತಾಯ್ತು, ದೊಳ್ಳ ತಿಳಿಸಿದ್ದ ಸಂಗತಿಯನ್ನು ಗಿಡ್ಡಿಯಿಂದ ಕೇಳಿ. ಬಡಹೊಲೆಯರ ಸಂಸಾರಕ್ಕೆ ತಮ್ಮ ಒಂದು ಗಬ್ಬದ ಆಡು ಕೊಲೆಯಾದ ವಿಚಾರ ಹೇಗೆ ತಾನೆ ಲಘುವಾದೀತು? ಅಲ್ಲದೆ ಹುಟ್ಟಿದಂದಿನಿಂದ ಅವರೊಡನೆ ಬೆಳೆದಿದ್ದ ಅದರೊಡನೆ ಅಕ್ಕರೆಯ ಸಂಬಂಧಗಳು ಬೇರೆ ಬೆಳೆದಿರುತ್ತವೆ! ಮನುಷ್ಯರಾಗಿದ್ದರೂ ಪಶುಜೀವನದ ಮಟ್ಟಕ್ಕೆ ಅತಿ ನಿಕಟವಾಗಿದ್ದ ಅವರಿಗೆ ತಮ್ಮ ಒಂದು ಪ್ರೀತಿಯ ಪ್ರಾಣಿ ಕಳುವಾಗಿ ಕೊಲೆಯಾದದ್ದು ನಮ್ಮ ಕುಟುಂಬದ ಒಂದು ವ್ಯಕ್ತಿಯೆ ಅಪಮೃತ್ಯುವಿಗೀಡಾದಂತಾಗಿತ್ತು. ಮೊದಲನೆಯದಾಗಿ, ಆ ಆಡನ್ನು ದಿನವೂ ಅದು ಮೇಯುತ್ತಿದ್ದ ಜಾಗಗಳಲ್ಲಿ ಹುಡುಕಿದರು. ಗುತ್ತಿ ತಾನು ಅದನ್ನು ಮ್ಹೇ ಮ್ಹೇ ಎಂದು ಕೂಗಿ ಕರೆದು ಸೊಪ್ಪು ತಿನ್ನಿಸುತ್ತಿದ್ದ ರೀತಿಯಲ್ಲಿ ಕರೆದು ಕೂಗಿದನು. ಅದನ್ನು ಕಂಡಿರಬಹುದಾಗಿದ್ದ ಇತರ ಬಿಡಾರದವರನ್ನು ವಿಚಾರಿಸಿದನು. ಅದನ್ನು ಹುಡುಕುವುದರಲ್ಲಿ ತನ್ನ ನೆಚ್ಚಿನ ನಾಯಿ 'ಹುಲಿಯ'ನ ನೆರವನ್ನು ಮಾತ್ರ ಪಡೆಯಲಾರದೆ ಹೋಗಿ ಅವನ ಸಂಕಟ ಇಮ್ಮಡಿಯಾಯಿತು. ಎರಡು ದಿನಗಳ ಹಿಂದೆ ಹುಲಿಕಲ್ಲು ನೆತ್ತಯಲ್ಲಿ ತಿಮ್ಮಿಯೊಡನೆ ಇಳಿಯುತ್ತಿದ್ದಾಗ ಕುರ್ಕನಿಂದ ಗಾಯಗೊಂಡ ಅದು ನಂಜೇರಿ ನರಳುತ್ತಾ ಮಲಗಿತ್ತು. ಕಾಡುಜೀರಿಗೆ ಅರೆದು ಹಚ್ಚಿದ್ದ ಅದರ ಒಂದು ಕಣ್ಣಂತೂ ಊದಿಕೊಂಡು ಇನ್ನುಮುಂದೆ ಕೆಲಸಕ್ಕೆ ಬರುವುದಿಲ್ಲ ಎಂಬಂತೆ ತೋರುತ್ತಿತ್ತು. “ತ್ತು! ನನ್ನ ಹುಲಿಯ ಸರಿಯಾಗಿದ್ದಿದ್ರೆ ಅದನ್ನು ಒಂದು ಚಣಕ್ಕೆ ಪತ್ತೆ ಹಚ್‌ತಿದ್ದೆ” ಎಂದು ಮರುಗಿದನು ಗುತ್ತಿ.

ಇಜಾರದ ಸಾಬಿಯ ಮೇಲೆ ಸೇಡು ತೀರಿಸಿಕೊಳ್ಳಲು ಅವಕಾಶ ಸಿಕ್ಕಿದರೂ ಸಿಕ್ಕಬಹುದು ಎಂದು ಆಲೋಚಿಸಿದ್ದ ಬೆಟ್ಟಳ್ಳಿಯ ಸಣ್ಣಬೀರ ತನ್ನ ಬಾವನನ್ನು ಹುರಿದುಂಬಿಸಿ, ಹಗಲೂಟವಾದ ಮೇಲೆ, ಕತ್ತಿ ದೊಣ್ಣೆ ತೆಗೆದುಕೊಂಡು, ಒಂದು ಸಣ್ಣ ಗುಂಪನ್ನೆ ಕಟ್ಟಿಕೊಂಡು, ದೊಳ್ಳ ಹೇಳಿದ್ದ ಕೆಮ್ಮಣ್ಣುಬ್ಬಿನ ಹಳ್ಳದ ಆ ಸ್ಥಳಕ್ಕೆ ಹೋದನು, ತಲಾಸು ಮಾಡುವುದಕ್ಕೆ.

ಕುರಿಯನ್ನು ಕೊಂಬೆಗೆ ನೇತುಹಾಕಿ ಚರ್ಮ ಸುಲಿದಿದ್ದ ಜಾಗವನ್ನೇನೋ ರಕ್ತ ಮೊದಲಾದ ಗುರುತುಗಳಿಂದ ಕಂಡುಹಿಡಿದರು. ಆದರೆ ಕೊಲೆಯಾಗಿ ಸುಲಿಗೆಯಾದದ್ದು ತಮ್ಮ ಗಬ್ಬದ ಆಡೇ ಎಂದು ಗುರುತು ಸಾಕ್ಷಿ ಹೇಳುವಂತಹ ಯಾವ ಪದಾರ್ಥವೂ ಅಲ್ಲಿ ಇರದಂತೆ ಮಾಡಿದ್ದರು, ಆ ಕಲೆಯಲ್ಲಿ ನಿಷ್ಣಾತರಾಗಿದ್ದ ಸಾಬರು. ಇನ್ನೇನು ಹತಾಶರಾಗಿ ಹಿಂದಿರುಗಬೇಕು; ಅಷ್ಟರಲ್ಲಿ ಅವರ ಜೊತೆ ಬಂದಿದ್ದ ಅವರ ಕೇರಿಯ ಒಂದು ಮೂಳೂನಾಯಿ ಹಳ್ಳದ ಪಾತ್ರದ ಪಕ್ಕದಲ್ಲಿದ್ದ ಒಂದು ಮಳಲಿನ ದಂಡೆಯನ್ನು ಪರಪರನೆ ಸೋದ್ವಿಗ್ನವಾಗಿ ಕರೆಯುತ್ತಿದ್ದುದು ಗೋಚರಿಸಿತು. ಆ ಸ್ಥಳದ ಮಳಲನ್ನು ಕೆದಕಿ ತೆಗೆದು ನೋಡಿದಾಗ:

“ಅಯ್ಯಯ್ಯೋ! ಅಯ್ಯಯ್ಯೋ! ಹಾಳು ಮುಂಡೇಮಕ್ಕಳು! ಅವರ ಕುಲ ನಾಶನಾಗ! ಎರಡು ಮರೀನೂ ಹೂಣಿಬಿಟ್ಟಿದರಲ್ಲೋ!” ರೋದನ ಧ್ವನಿಯಿಂದ ಅರಚಿಕೊಂಡನು ಗುತ್ತಿ, ಸಿಟ್ಟಿನ, ಸಂಕಟದ ಮತ್ತು ದುಃಖದ ಭರದಲ್ಲಿ.

“ಅಯ್ಯಯ್ಯೋ! ಹೊಟ್ಟೆ ಬಗೆದು ಪಚ್ಚೇನೂ ಹೀಂಗೆ ತೆಗೀಬೇಕು, ಬಾವ, ಬಿಡಬಾರ್ದು ಇವತ್ತು, ಏನೇ ಆಗ್ಲಿ!....ಥ್ಪೂ!” ಶಪಿಸಿದನು ಸಣ್ಣಬೀರ.

“ಅಯ್ಯಯ್ಯೋ! ಇಲ್ಲಿ ನೋಡಿ, ಇಲ್ಲಿ! ತೊಳ್ಳೇನೂ ಬಿಸಾಡಿ ಹೋಗ್ಯಾರೆ.” ಸಂಕಟ ತೋಡಿಕೊಂಡಿತು ಒಂದು ಎಳಸು ಕೀಚಲು ಕಂಠ.

“ತೊಳ್ಳೇನೂ ಪಚ್ಚೇನೂ ತಗಂಡು ಉಂದು ಹಾಳಕೊಟ್ಟೆಗಾರೂ ಹಾಕ್ಕೋಳ್ಳೋ.” ಬುದ್ಧಿ ಹೇಳಿತು ಮತ್ತೊಂದು ಕೊರಳು. ಅಷ್ಟು ಅಮೂಲ್ಯ ವಸ್ತುವನ್ನು ಹೀಗೆ ಎಸೆದು ಹೋಗಿದ್ದಾರಲ್ಲಾ ಎಂಬ ಸಂಕಟಕ್ಕೆ.

ಅಷ್ಟರಲ್ಲಿ ಇನ್ನೊಂದು ಮರಳುದಿಣ್ಣೆಯನ್ನು ಕೆದರುತ್ತಿದ್ದ ಒಬ್ಬ “ಅಯ್ಯಯ್ಯೋ! ತಲೆಬುಲ್ಡೇನ ಇಲ್ಲೇ ಹಾಕಿ ಹೋಗ್ಯಾರಲ್ಲೋ!” ಎಂದು ಕೂಗಿ, ಅದನ್ನು ಕೊಂಬು ಹಿಡಿದು ಎತ್ತಿ ತೋರುತ್ತಾ ನಿಂತನು.

ಎಲ್ಲರೂ ಓಡಿಹೋಗಿ ನೋಡಿದರು. ನಿಸ್ಸಂದೇಹವಾಗಿ ಅದು ಗುತ್ತಿಯ ಬಿಡಾರದ ಗಬ್ಬದ ಆಡಿನ ಮುಖವೇ ಆಗಿತ್ತು. ಗುತ್ತಿ ಅದನ್ನು ಅಕ್ಕೆರೆಗೆಂಬಂತೆ ಎರಡೂ ಕೈಯಲ್ಲಿ ಆಂತು ದುಃಖಿಸತೊಡಗಿದನು.

* * *

ದನ ಕೊಟ್ಟಿಗೆಗೆ ಬರುವ ಬೈಗಿನ ಹೊತ್ತು ಕರೀಂ ಸಾಬು ದಿನದ ‘ಯಾಪಾರ’ವನ್ನೆಲ್ಲ ಪೂರೈಸಿ ಗಂಟಿಮೂಟೆ ಕಟ್ಟುತ್ತಿದ್ದಾಗ ದೂರದಲ್ಲಿ ಏನೋ ಗಲಾಟೆ ಕೇಳಿಸಿತು. ಏನೊ ಹೊಲೆಯರ ಕೇರಿಯ ಕೂಗಾಟವಿರಬೇಕು ಎಂದುಕೊಂಡು ತನ್ನ ಕೆಲಸ ಮುಂದುವರಿಸುತ್ತಿರಲು, ಯಾರೋ ಹಳುವಿನ ನಡುವೆ ಸದ್ದಾಗುವಂತೆ ಓಡಿ ಬರುತ್ತಿದ್ದುದನ್ನು ಗಮನಿಸಿ ಸತ್ತಕಡೆ ನೋಡುತ್ತಿದ್ದ ಹಾಗೆಯೆ, ದೊಳ್ಳ ಏದುತ್ತಾ ದೌಡಾಯಿಸಿ ಬಂದು ಬಾಲಕ ಸಹಜವಾದ ಬಿಜಿಲು ಬಿಜಿಲು ರೀತಿಯಲ್ಲಿ ಕೂಗಿಕೊಂಡನು “:ಕರ್ಮಿನ್ ಸಾಬ್ರೇ, ಓಡಿಬಲ್ಲಿ ಓಡಿಬಲ್ಲಿ! ಕತ್ತೀಲಿ ಕಡೀತಿದಾರೆ! ಬಲ್ಲೀ, ಬಲ್ಲೀ, ಬ್ಯಾಗ ಬಲ್ಲಿ!”

ಕರೀಂ ಸಾಬು ಬೇಗಬೇಗನೆ ಗಂಟುಮೂಟೆ ಕಟ್ಟಿ, ಅದನ್ನು ಭದ್ರಪಡಿಸಿ ಮೂಲೆಯಲ್ಲಿಟ್ಟು, ತಟ್ಟಿಬಾಗಿಲನ್ನು ಎಳೆದು ಕಟ್ಟಿದನು. ಹಾಗೆ ಮಾಡುತ್ತಿದ್ದಾಗಲೆ ಕೆಲವು ಪ್ರಶ್ನೆ ಹಾಕಿ ದೊಳ್ಳನಿಂದ ವಿಷಯ ಏನೆಂದು ವಿವರ ತಿಳಿಯಲು ಪ್ರಯತ್ನಿಸಿದನು. ಆದರೆ ದೊಳ್ಳನ ಹೇಳಿಕೆಗಳು ವಿರೋಧಾಭಾಸದಿಂದ ಕೂಡಿ. ನಡೆದ ಸಂಗತಿಯನ್ನು ಸ್ಪಷ್ಟಪಡಿಸುವುದಕ್ಕೆ ಬದಲಾಗಿ, ಮತ್ತಷ್ಟು ಕಳವಳವುಂಟುಮಾಡಿದುವಷ್ಟು: ‘ಸಾಬರಿಗೂ ಹೊಲೇರಿಗೂ ಜಟಾಪಟಿ….’ ‘ಇಜಾರದ ಸಾಬರಿಗೆ ಕೈ ಕತ್ತರಿಸಿ…. ಮಂಡೆಗೆ ಪೆಟ್ಟು ಬಿದ್ದು….’ ‘ಗುತ್ತಿಗೂ ಕಾಲು ಸಂದಿ ತಪ್ಪಿಹೋಯ್ತು….’ ‘ಅವರ ಗಬ್ಬದ ಕುರೀನ ಇವರು ಕುಯ್ಕೊಂಡು ತಿಂದ್ರಂತೆ….!’

‘ಬಂತಪ್ಪಾ ಏನೋ ಮಲಾಮತ್ ಗ್ರಾಚಾರ!’ ಎಂದುಕೊಳ್ಳುತ್ತಾ ಕರೀಂಸಾಬರು ಬೇಗಬೇಗನೆ ದೊಳ್ಳನ ಮಾರ್ಗದರ್ಶನದಲ್ಲಿ ಕುಕ್ಕೋಟ ಓಡುತ್ತಲೆ ಹೋದರು.

ಇವರು ಆ ಸ್ಥಳಕ್ಕೆ ತಲುಪುವಷ್ಟರಲ್ಲಿ ಹೊಡೆದಾಟ ಕೊನೆಯ ಹಂತಕ್ಕೆ ಕಾಲಿಟ್ಟಿತ್ತು. ಕರೀಂ ಸಾಬರ ಕೊರಳು ಕೇಳಿಸಿ, ಅವರನ್ನು ಕಂಡೊಡನೆ ಇಬ್ಬಣದವರೂ ಕದನವಿರಾಮ ಘೋಷಣೆ ಮಾಡಿದಂತೆ ಕೈ ತಡೆದು ನಿಂತು, ಅವರಿಗೆ ದೂರು ಕೊಟ್ಟು ತಮ್ಮ ತಮ್ಮ ವರ್ತನೆಯ ನ್ಯಾಯ ಸಮರ್ಥನೆ ಮಾಡಿಕೊಳ್ಳುವ ಭಂಗಿಯಲ್ಲಿ ಅವರ ಕಡೆ

ತಿರುಗಿ ಬಳಿ ಸಾರಿದರು. ಕರೀಂಸಾಬರು ಹೊನ್ನಳಿಯ ವಸೂಲಿ ಸಾಬರುಗಳಂತೆ ಮೊನ್ನೆ ಮೊನ್ನೆ ಬಂದು, ಇಂದೊ ನಾಳೆಯೊ ಮರಳುವವರಾಗಿರಲಿಲ್ಲ. ಅವರು ಬಹುಕಾಲದಿಂದಲೂ ಮೇಗರವಳ್ಳಿಯಲ್ಲಿ ಮನೆಮಾಡಿಕೊಂಡು, ಅಂಗಡಿ ನಡೆಸುತ್ತಾ, ಸುತ್ತಣ ಹಳ್ಳಿಗಳಲ್ಲಿ ವ್ಯಾಪಾರ ಮಾಡುತ್ತಿದ್ದುದರಿಂದ ಎಲ್ಲರಿಗೂ ಪರಿಚಯದವರಾಗಿ, ಬೇಕಾದವರಾಗಿ, ಅನೇಕರ ಗೌರವಕ್ಕೂ ಕೃತಜ್ಞತೆಗೂ ಪಾತ್ರರಾಗಿದ್ದರು. ಬಡವರಾದ ಸಾಮಾನ್ಯ ಜನರಿಗೆ ಅವರಲ್ಲಿ ಒಂದು ಯಜಮಾನ ಕಳೆ ಕಾಣಿಸುತ್ತಿದ್ದು, ಕಷ್ಟಕಾಲದಲ್ಲಿ ಅವರ ಹಿತೋಪದೇಶದ ಮಾತುಗಳಿಗೆ ಮನ್ನಣೆ ಕೊಡುತ್ತಿದ್ದರು.

ಗಬ್ಬದ ಆಡಿನ ಮಂಡೆಯೂ, ಅಜ್ಜೀಸಾಬುವ ಚರ್ಮದ ಚೀಲದಲ್ಲಿ ಇತರ ಕುರಿ ಮತ್ತು ದನದ ಚರ್ಮಗಳೊಡನೆ ಹುದುಗಿದ್ದು ಗುತ್ತಿಯ ಕಡೆಯವರಿಂದ ಹೊರಗೆ ಎಳೆದುಹಾಕಲ್ಪಟ್ಟಿದ್ದ ಅವರ ಆಡಿನದೇ ಆಗಿದ್ದ ಕಪ್ಪು ಬಿಳಿಯ ಬಣ್ಣದ ರೋಮಮಯ ಚರ್ಮವೂ, ಕುರಿಮರಿಯ ಭ್ರೂಣಗಳೂ ರಕ್ತಮಿಶ್ರಿತವಾದ ಭಯಾನಕ ಸಾಕ್ಷಿಗಳಾಗಿ ಅಲ್ಲಿ ಬಿದ್ದಿದ್ದುವು. ತಲೆಬುರುಡೆಗೆ ಬಲವಾದ ದೊಣ್ಣೆ ಪೆಟ್ಟು ತಗುಲಿ ರಕ್ತ ಸೋರುತ್ತಿದ್ದ ಇಜಾರದ ಸಾಬಿ ಎತ್ತಿ ಹಿಡಿದಿದ್ದ ಅವನ ಬಲಗೈಯ ಹೆಬ್ಬೆರಳು ಅರ್ಧ ಭಾಗಕ್ಕೂ ಹೆಚ್ಚಾಗಿಯೆ ಕತ್ತರಿಸಿ ನೇತಾಡುತ್ತಿತ್ತು. ಮೊಣಕಾಲ ಕೆಳಗಿನ ಭಾಗಕ್ಕೆ ಬಲವಾದ ಏಟುತಗುಲಿ ಮಾಂಸ ಹಿಸಿದು, ನೆತ್ತರು ಸೋರಿ, ಎಲುಬೂ ಕಾಣಿಸುತ್ತಿದ್ದ ಗುತ್ತಿಯ ಮುಖ ಮತ್ತು ಭುಜದ ಭಾಗಗಲ್ಲಿ ಚೂರಿಯ ಇರಿತದಿಂದಾಗಿ ಗಾಯಗಳಿಂದ ತೊಯ್ದು, ಉಟ್ಟ ಬಟ್ಟೆ ಕರಿಗೆಂಪು ಕಲೆಗಳಿಂದ ರುದ್ರವಾಗಿತ್ತು. ಇಕ್ಕಡೆಯ ಇತರರೂ ಸಣ್ಣಪುಟ್ಟ ಗಾಯಗಳಿಂದಲೂ ಮೂಗೇಟುಗಳಿಂದಲೂ ನೊಂದು ಒಬ್ಬರ ಮೇಲೊಬ್ಬರು ದೂರು ಹೇರುತ್ತಾ ಕೂಗಾಡುತ್ತಿದ್ದರು.

* * *

## ೩೭

ಮರುದಿನ ಹೊತ್ತಾರೆ ಮುಂಚೆ ಸಿಂಬಾವಿಯ ಹೊಲಗೇರಿಯ ಅಂಚಿನಲ್ಲಿ, ಕರಿಸಿದ್ದನ ಬಿಡಾರದಿಂದ ತುಸುದೂರಕ್ಕೆ, ಆಕಾಶ ಮುಟ್ಟುವಂತೆ ಬೆಳೆದಿದ್ದ ಗೊಜ್ಜಿನ ಮಾವಿನ ಮರದ ಹತ್ತಿರ, ಹೊರಡಲು ಅಣಿಯಾಗಿ ನಿಂತಿದ್ದ ಸಣ್ಣಬೀರನು ತುಸು ತಾಳ್ಮೆಗೆಟ್ಟವನಂತೆ ಬೇಸರ ಮೋರೆ ಮಾಡಿಕೊಂಡು, ಕೇರಿಯ ಕಡೆ ತಿರುಗಿ, ತನ್ನ ಮಾವನ ಬಿಡಾರದ ಬಾಗಿಲಕಡೆಯೇ ನೋಡುತ್ತಿದ್ದನು. ಬಹಳ ಹೊತ್ತಾದರೂ ಬೆಟ್ಟಳ್ಳಿಗೆ ಹೊರಡಬೇಕಾಗಿದ್ದ ಗುಂಪಿನವರು - ಅಪ್ಪ ದೊಡ್ಡಬೀರ, ಅವ್ವ ಸೇಸಿ, ತಮ್ಮ ಪುಟ್ಟಬೀರ, ತಮ್ಮನ ಹೆಂಡತಿ ಚಿಕ್ಕಪುಟ್ಟಿ, ಮದುವಣಗಿತ್ತಿ ತಂಗಿ ತಿಮ್ಮಿ - ಯಾರೊಬ್ಬರೂ ಬಿಡಾರದಿಂದ ಹೊರಕ್ಕೆ ಬರಲಿಲ್ಲ. ಹೆಗಲಮೇಲಿದ್ದ ಕಂಬಳಿಯನ್ನು ನೆಲಕ್ಕೆ ಹಾಕಿಕೊಂಡು ಅದರ ಮೇಲೆ ಕುಳಿತು ಹಾದಿ ಕಾಯುತ್ತಿದ್ದನು. ಅವನ ಮುಖದ ಮೇಲೆ, ಕೆನ್ನೆ ಗಲ್ಲಗಳಲ್ಲಿ ಆಗಿದ್ದ ಗಾಯಗಳಿಗೆ ಏನೋ ಕರಿಔಷಧಿ ಹಚ್ಚಿಕೊಂಡಿದ್ದರಿಂದ ಆ ಕಪ್ಪು ಕಲೆಗಳು ವಿಕಾರವಾಗಿ ಎದ್ದು ಕಾಣುತ್ತಿದ್ದುವು. ಆದರೆ ಅವನ ಮುಖಭಾವದಲ್ಲಿ ಇಜಾರದ ಸಾಬಿಯ ಮೇಲೆ ಸೇಡು ತೀರಿಸಿಕೊಂಡ ಹೆಮ್ಮೆಯ ಕಳೆ ಸಂಚಾರಿಯಾಗಿ ನಲಿದಾಡುತ್ತಿತ್ತು.

ಹಿಂದಿನ ದಿನ ಸಂಜೆ ಆಗಿದ್ದ ಹೊಡೆದಾಟದಲ್ಲಿ ತನ್ನ ಕತ್ತಿಯ ಪ್ರಭಾವದಿಂದ ಇಜಾರದ ಸಾಬಿಯ ಬೆರಳು ಕತ್ತರಿಸಿ, ಕುತ್ತಿಗೆ ಹೆಗಲುಗಳ ಮೇಲೆಯೂ ಘಾತವಾಗಿ ಗಾಯಗಳಾಗಿದ್ದು, ಸಾಬಿಯ ಸ್ಥಿತಿ ವಿಷಮಿಸಿ, ರಾತ್ರಿಯೆ, ಅವನನ್ನು ಕುದುರೆಯ ಮೇಲೆ ಮೇಗರವಳ್ಳಿಗೆ ಸಾಗಿಸಿದ್ದರು, ಕಣ್ಣಾಪಂಡಿತರಿಂದ ತಾತ್ಕಾಲಿಕವಾಗಿ ಮದ್ದು ಹಾಕಿಸಿ, ಆಮೇಲೆ ತೀರ್ಥಹಳ್ಳಿಯ ಆಸ್ಪತ್ರೆಗೆ ಸಾಗಿಸುವ ಉದ್ದೇಶದಿಂದ. ಆದರೆ ಆ ಭಯಂಕರ ಘಾತವಾದದ್ದು ತನ್ನಿಂದಲೇ ಎಂಬುದು ಮಾತ್ರ ಆ ದೊಂಬಿಯಲ್ಲಿ ಯಾರಿಗೂ ಗೊತ್ತಾಗದಂತೆ ಕುಶಲತೆಯಿಂದ ಕೆಲಸ ನಿರ್ವಹಿಸಿದ್ದನು ಸಣ್ಣಬೀರ. ತನ್ನ ಬಾವ, ಗುತ್ತಿ, ಸಾಬಿಯ ಬುರುಡೆಗೆ ಬೀಸಿ ಬೀಸಿ ಹೊಡೆದಿದ್ದ ಬಗನಿ ದೊಣ್ಣೆಯ ಪೆಟ್ಟುಗಳೆ ಎಲ್ಲರ ಕಣ್ಣಿಗೂ ಬಿದ್ದಿದ್ದು, ಕತ್ತಿಯ ಏಟುಗಳಿಗೂ ಗುತ್ತಿಯೆ ಕಾರಣ ಎಂಬ ಭಾವನೆಗೆ ಎಡೆಗೊಟ್ಟಿತ್ತು. ಸಣ್ಣಬೀರ ಆ ಭಾವನೆಯನ್ನು ತಿದ್ದುವ ಗೋಜಿಗೆ ಹೋಗದೆ ಅದಕ್ಕೆ ಪುಷ್ಟಿಯನ್ನೆ ಕೊಟ್ಟಿದ್ದನು. ಒಂದು ವೇಳೆ ಹುಣ್ಣು ವಿಷಮಿಸಿ ಸಾಬಿ ಎಲ್ಲಿಯಾದರೂ ಸತ್ತುಬಿಟ್ಟರೆ, ತನ್ನ ಮೇಲೆ ಖೂನಿಯ ಆಪಾದನೆ ಬರದಂತೆ ನೋಡಿಕೊಳ್ಳುವುದೂ ಅವನ ಎಚ್ಚರಿಕೆಯಾಗಿತ್ತು.

ಬಿಡಾರದದೊಳಗೆ ಒಂದು ಸಣ್ಣ ರುದ್ರನಾಟಕದ ದೇಶ್ಯವೆ ನಡೆಯುತ್ತಿತ್ತು. ಕಾಲಿಗೆ ಮದ್ದು ಹಾಕಿ ಬಟ್ಟೆ ಸುತ್ತಿಕೊಂಡಿದ್ದ ಗುತ್ತಿ, ಕಂಬಳಿ ಹೊದೆದು ಚಾಪೆಯ ಮೇಲೆ, ಎಲ್ಲವನ್ನೂ ನೋಡುತ್ತಾ ಮಲಗಿದ್ದನು, ಆ ನಾಟಕದಲ್ಲಿ ಪಾತ್ರಧಾರಿಯಾಗಿದ್ದರೂ ಪ್ರೇಕ್ಷಕನಂತೆ ತಟಸ್ಥನಾಗಿ. ಗುತ್ತಿಯ ತನ್ನ ಹೆಂಡತಿಯನ್ನು ತವರುಮನೆಗೆ ಕಳುಹಿಸಲು ಮನಸ್ಸಿರಲಿಲ್ಲ. ತನ್ನ ಒಡೆಯರು, ಸಿಂಬಾವಿ ಹೆಗ್ಗಡೆಯವರು, ಮನೆಗೆ ಬಂದಮೇಲೆ ಅವರನ್ನು ಕೇಳಿ ಕರೆದುಕೊಮಡು ಹೋಗಬಹುದು ಎಂದಿದ್ದನು. ಆದರೆ ಹೆಗ್ಗಡೆಯವರೇ ದಾರಿಯಲ್ಲಿ ಸಿಕ್ಕಿ, ತಿಮ್ಮಿಯನ್ನು ತವರಿಗೆ ಕರೆದೊಯ್ಯಲು ಅನುಮತಿ ಕೊಟ್ಟಿದ್ದಾರೆ ಎಂಬುದನ್ನು ಕೇಳಿದ ಮೇಲೆ ಅವನಿಗೆ ಅನುಮಾನ ಇನ್ನೂ ಹೆಚ್ಚಾಗಿತ್ತು. ಆದ್ದರಿಮದ ತಾನೂ ತಿಮ್ಮಿಯೊಡನೆ ಹೋಗುವುದಾಗಿ ಮನಸ್ಸು ಮಾಡಿದ್ದನು. ದೊಡ್ಡಬೀರನು ಗುತ್ತಿಯ ಮೇಲಿನ ಗೌಡರ ಸಿಟ್ಟು ಇಳಿಯುವವರೆಗೂ ಗುತ್ತಿ ಬೆಟ್ಟಳ್ಳಿಗೆ ಕಾಲಿಡದಿರುವುದೇ ಲೇಸು ಎಂದು ಉಪಾಯವಾಗಿ ಗುತ್ತಿಯನ್ನು ಬರದಂತೆ ಮಾಡಲು ಪ್ರಯತ್ನಿಸಿ ಬೆದರಿಕೆ ಹಾಕಿದ್ದನು. ಗುತ್ತಿಯ ಸಂಶಯ ಇನ್ನೂ ಹೆಚ್ಚಿದಂತಾಗಿ ತಾನೂ ಜೊತೆಗೆ ಹೋಗುವುದೆಂದೇ ನಿಶ್ಚಯಿಸಿದ್ದನು. ಆದರೆ ಹಿಮದಿನ ಸಂಜೆ ನಡೆದ ದುರ್ಘಟನೆಯಲ್ಲಿ ತನಗೆ ಬಲವಾದ ಪೆಟ್ಟು ತಗಲಿ, ತಾನು ಹಾಸಗೆ ಹಿಡಿದುದರಿಂದ ಹತಾಶನಾಗಿ ಮಲಗಿದ್ದನು.

ಹೊರಡುವ ಮುನ್ನ ಕರಿಸಿದ್ದ ತಾನು ತನ್ನ ಒಡೆಯರಿಂದ ಮದುವೆಗಾಗಿ ತಂದು ಸೊಸೆ ತಿಮ್ಮಿಗೆ ತಿಮ್ಮಿಗೆ ತೊಡೊಸಿದ್ದ ಆಭರಣಗಳನ್ನೆಲ್ಲ ಹಿಂದಕ್ಕೆ ತೆಗೆದಿಟ್ಟುಕೊಂಡನು. ಆಗ ಸೇಸಿಗೆ ಮದುವೆ ಹೊತ್ತಿನಲ್ಲಿ ಮಗಳಿಗೆ ತಾನು ಇಡಿಸಿದ್ದ ಜಡೆಬಿಲ್ಲೆಯ ನೆನಪಾಗಿ, ಅದನ್ನು ತನಗೆ ಕೊಡು ಎಂದು ಮಗಳನ್ನು ಕೇಳಲು, ಅವಳು ಹುಡುಕಿ ಹುಡುಕಿ, ಅದು ಸಿಗದಿರಲು ಅಳತೊಡಗಿದ್ದಳು. ತಾಯಿ ಮಗಳು ಇಬ್ಬರೂ ಕಣ್ಣೊರೆಸಿ ಕೊಳ್ಳುತ್ತಿದ್ದರೂ ಯಾರಿಗೆ ಗುಮಾನಿ ಬರಲಿಲ್ಲ. ಗಂಎನನ್ನು ಆ ದುಸ್ಥಿತಿಯಲ್ಲಿ ಬಿಟ್ಟು ಒಬ್ಬಳೆ ತವರಿಗೆ ಹೋಗಬೇಕಾದುದರಿಂದ ಹುಡುಗಿ ಅಳುತ್ತಿದ್ದಾಳೆ ಎಂದೂ, ಮಗಳ ದುಃಖದಲ್ಲಿ ತಾಯಿಯೂ ಭಾಗಿಯಾಗಿದ್ದಾಳೆಂದೂ ಎಲ್ಲರೂ ಭಾವಿಸಿದರು. ಆದರೆ ಬಹಳ ಹೊತ್ತಾದರೂ ಅವರಿಬ್ಬರೂ ಹುಡುಕುವುದರಲ್ಲಿಯೆ ತೊಡಗಿ ತಡಮಾಡುತ್ತಿದ್ದುದರಿಂದ ದೊಡ್ಡಬೀರ 'ಹೊರಡಿ' ಎಂದು ಗದರಿಸಿದ್ದನು. ಕಳ್ಳಮಾಲು ಕಳುವಾಗಿದ್ದರೂ ಬಾಯಿ ಬಿಡಲಾರದ ಸಂಕಟದಿಂದ ಸೇಸಿ ಏನೇನೋ ನೆವ ಹೇಳುತ್ತಾ ಹುಡುಕುವುದನ್ನು ಮುಂದುವರಿಸಿದ್ದಳು. ಆದ್ದರಿಂದಲೆ ಬಿಡಾರದ ಬಾಗಿಲಕಡೆ, ಈಗ ಹೊರಡುತ್ತಾರೆ, ಇನ್ನೇನು ಹೊರಡುತ್ತಾರೆ, ಎಂದು ನೋಡುತ್ತಿದ್ದ ಸಣ್ಣಬೀರ ತಾಳ್ಮೆಗೆಟ್ಟು, ಕಂಬಳಿ ಹಾಸಿಕೊಮಡು ಹಾದಿ ಕಾಯುತ್ತಾ ಕೂತದ್ದು.

ಕಡೆಗೆ ತಿಮ್ಮಿಯೆ ಮಲಗಿದ್ದ ಗುತ್ತಿಯ ಕಿವಿಯಲ್ಲಿ ಏನೇನೋ ಹೇಳಿ, ತಾಯಿ ಅತ್ತಿಗೆಯವರೊಡನೆ ಅಣ್ಣಂದಿರನ್ನು ಹಿಂಬಾಲಿಸಿದ್ದಳು.

ದೊಡ್ಡಬೀರನ ಗುಂಪು ಬೆಟ್ಟಳ್ಳಿಗೆ ಹಿಮದಿರುಗುವ ಮಾರ್ಗವಾಗಿ ಲಕ್ಕುಂದ ಮೇಗರವಳ್ಳಿಗಳನ್ನು ದಾಟಿ ಹುಲಿಕಲ್ಲು ಗುಡ್ಡವನ್ನು ಏರುತ್ತಿದ್ದಾಗಲೆ ಕಾಡಿನ ಕಾಲುದಾರಿಯಲ್ಲಿ ಹಳೆಮನೆ ಸುಬ್ಬಣ್ಣ ಹೆಗ್ಗಡೆಯವರನ್ನು ನಡೆಸಿಕೊಮಡು ಇಳಿದು ಬರುತ್ತಿದ್ದ ಕೋಣೂರಿನ ಐಗಳು ಅನಂತಯ್ಯನವರಿಗೆ ಇದಿರಾದದ್ದು. ಐಗಳ ಸನ್ನೆಯ ಕೋರಿಕೆಯಂತೆ ದೊಡ್ಡಬೀರನು ಸಣ್ಣಬೀರ ಪುಟ್ಟಬೀರರನ್ನು ಅವರ ಜೊತೆ ಹೋಗುವಂತೆ ಹೇಳಿ ಉಳಿದವರೊಡನೆ ಮುನ್ನಡೆದಿದ್ದನು.

ಐಗಳ ಆದೇಶದಂತೆ ಪುಟ್ಟಬೀರ ಮೇಗರವಳ್ಳಿಗೆ ಓಡಿ, ಅಂತಕ್ಕ ಸೆಟ್ಟಿಗಿತ್ತಿಯ ಮನೆಯಲ್ಲಿದ್ದ ಬೆಟ್ಟಳ್ಳಿ ದೇವಯ್ಯಗೌಡರಿಗೆ ಹಳೆಮನೆ ಹೆಗ್ಗಡೆಯವರಿಗೆ ಒದಗಿದ್ದ ಆಪತ್ತಿನ ವಿಚಾರ ತಿಳಿಸಿ, ದೇವಯ್ಯ ಪಾದ್ರಿಯೊಡಗೂಡಿ ಡೋಲಿಯೊಡನೆ ಹೋಗಿ, ಹೆಗ್ಗಡೆಯವರನ್ನು ಅಂತಕ್ಕನ ಮನೆಗೆ ಸುರಕ್ಷಿತವಾಗಿ ಸಾಗಿಸಿದ ತರುವಾಯ, ಬೆಟ್ಟಳ್ಳಿಗೆ ಹಿಂದಿರುಗುತ್ತಿದ್ದ ಸಣ್ಣಬೀರರ ಕೈಲಿ, ತನ್ನ ತಂದೆಗೆ 'ಹಳೆಮನೆ ದೊಡ್ಡಪ್ಪಯ್ಯನ್ನ ಬೆಟ್ಟಳ್ಳಿಗೆ ಸಾಗಿಸಲು ಬೇಗ ಗಾಡಿ ಕಳುಹಿಸುವಂತೆ' ಹೇಳಿಕಳುಹಿಸಿದ್ದನು. ಏಕೆಂದರೆ ಸುಬ್ಬಣ್ಣಹೆಗ್ಗಡೆಯವರು ಮತ್ತೆ ಹುಲಿಕಲ್ಲಿನ ಕಾಡುದಾರಿಯನ್ನೇರಿ ಹಳೆಮನೆಗೆ ಹಿಂತಿರುಗುವುದು ಅಸಾಧ್ಯವೆಂಬುದು ದೇವಯ್ಯನಿಗೆ ಮನದಟ್ಟಾಗಿತ್ತು.

ಸಾಯಂಕಾಲ ಮೇಗರವಳ್ಳಿಯ ಕಾಡುಕೊರಕಲು ರಸ್ತೆಯಲ್ಲಿ, ಎತ್ತಿನ ಕೊರಳ ಗಗ್ಗರದ ಸರ ಗೈಲುಗ್ಯೆಲೆಂದು ಚಕ್ರಗಳ ಗಡಗಡದ ಸದ್ದು ಮೊಳಗುವಂತೆ ಇಂಚರ ಗೈಯುತ್ತಾ ಬಂದು ಬೆಟ್ಟಳ್ಳಿಯ ಕಮಾನುಗಾಡಿ ಅಂತಕ್ಕನ ಮನೆಯ ಮುಂದೆ ನಿಲ್ಲಲು, ಸಾಲಂಕೃತನಾಗಿದ್ದ ಸಾರಥಿ ಬಚ್ಚನು ಗಾಡಿಕತ್ತರಿಯಿಂದ ಕೆಳಕ್ಕೆ ನಗೆದು, ಎತ್ತಿನ ಕೊರಲು ಬಿಚ್ಚಿ ನೊಗಕ್ಕೆ ಕಟ್ಟಿ, ಒಳಗೆ ಹೋಗಿ ಒಡೆಯ ದೇವಯ್ಯಗೌಡರಿಗೆ ಸಮಾಚಾರ ತಿಳಿಸಿದನು. ಬೆಟ್ಟಳ್ಳಿಯ ಗಾಡಿ ತಮ್ಮನ್ನು ಕರೆದೊಯ್ಯಲು ಬಂದುದನ್ನು ಕೇಳಿ ಸುಬ್ಬಣ್ಣಹೆಗ್ಗಡೆಯವರು ದೇವಯ್ಯಗೆ “ಅಯ್ಯೋ ನಿನ್ನ! ಗಾಡಿ ಯಾಕೆ ಬರಾಕೆ ಹೇಳಿದ್ಯೋ? ನನಗೇನು ನಡಕೊಂಡು ಹೋಗಾಕೆ ಆಗ್ತಿರ್ಲಿಲೆನೋ?” ಎಂದಾಗ ಅವನು “ನಮ್ಮ ಹೊಲೇರು ಎಲ್ಲೋ ಹೇಳಿರಬೇಕು ಅಂತಾ ಕಾಣ್ತದೆ ಅಪ್ಪಯ್ಯಗೆ. ಅದಕ್ಕೆ ಗಾಡಿ ಕಳಿಸಿದಾರೆ, ನಿಮ್ಮನ್ನ ಕರಕೊಂಡು ಬರಾಕೆ” ಎಂದು ಸಮಾಧಾನ ಹೇಳಿ, ಅವರನ್ನು ಮೆಲ್ಲಗೆ ಗಾಡಿ ಹತ್ತಿಸಿ, ತಾನು ಗಾಡಿಯ ಹಿಂದೆಯೆ ಬೈಸಿಕಲ್ಲಿನಲ್ಲಿ ಹೊರಡಲು ಹವಣಿಸುತ್ತಿದ್ದನು. ಅಷ್ಟರಲ್ಲಿ ಜೀವರತ್ನಯ್ಯ ಅವನ ಕಿವಿಯಲ್ಲಿ ಏನನ್ನೊ ಹೇಳಿದುದರ ಪರಿಣಾಮವಾಗಿ ಬೈಸಿಕಲ್ಲನ್ನು ಪಾದ್ರಿಗೆ ಕೊಟ್ಟು, ತಾನೂ ಹಿಂಬಾಗದಿಂದ ಗಾಡಿ ಹತ್ತಿ ಕುಳಿತನು. ಬಚ್ಚನೂ ಗಾಡಿ ಕತ್ತರಿಗೆ ನೆಗೆದು ಕುಳಿತಿದ್ದೆ ತಡ, ಬಲಿಷ್ಠವೂ ಸುಪುಷ್ಟವೂ ಆದ ಎತ್ತುಗಳು ತುಸು ವೇಗವಾಗಿಯೆ ಕಾಲು ಹಾಕಿದುವು, ಹುರುಳಿಯಾಸೆಯ ಮನೆಯ ಕಡೆಗೆ.

ತಡಿ ದಿಂಬು ಹಾಕಿ ಮೆತ್ತಗೆ ಮಾಡಿದ್ದ ಗಾಡಿಯ ಒಳಗೆ ಒರಗಿ ಕುಳಿತಿದ್ದ ಸುಬ್ಬಣ್ಣಹೆಗ್ಗಡೆ ಸ್ವಲ್ಪಹೊತ್ತು ಬಾಲಕನೋಪಾದಿಯಲ್ಲಿ ಸುತ್ತಣ ದೃಶ್ಯಗಳನ್ನು ನೋಡುತ್ತಾ ಹಸನ್ಮುಖಿಗಳಾಗಿ ಕುಳಿತಿದ್ದರು. ನಡುನಡುವೆ, ರಸ್ತೆಯಾಗಲಿ ಗಾಡಿಗಳಾಗಲಿ ಅಪೂರ್ವವಾಗಿದ್ದ ಆ ಕಾಲದ ಆ ಕೊರಕಲು ದಾರಿಯಲ್ಲಿ, ಗಾಡಿ ಭಯಂಕರವಾಗಿ ಅತ್ತಯಿತ್ತ ಕುಲುಕಿದಾಗ ಮಾತ್ರ ಬಾಯಲ್ಲಿ ಏನಾದರೂ ಹೇಳಿಕೊಳ್ಳುತ್ತಿದ್ದರು: 'ಹೋ ನನ್ನ ಬೆನ್ನು ಮುರಿದುಹೋಗ್ತದೆ.' 'ಇದೊಳ್ಳೆ ಗಾಡಿಸವಾರಿ, ಮಾರಾಯ!' 'ಇಳಿದಾದ್ರೂ ಹೋಗ್ತಿನಪ್ಪಾ ನಾನು!' ಇತ್ಯಾದಿ, ಸ್ವಲ್ಪ

ದೂರ ಹೋದಮೇಲೆ ಇದ್ದಕಿದ್ದಹಾಗೆ 'ನಿಲ್ಲಿಸೋ, ಗಾಡಿ ನಿಲ್ಲಸೋ!' ಎಂದು ಕೂಗಿಕೊಂಡರು. ಗಾಡಿ ನಿಲ್ಲಿಸಿ, ಏಕೆ ಎಂದು ಕೇಳಲು 'ನನ್ನ ದೊಣ್ಣೆ, ಮೆಟ್ಟು ತಂದೀರೇನೋ?' ಎಂದು ದೇವಯ್ಯನ ಕಡೆ ಗಾಬರಿಯಾಗಿ ನೋಡಿದರು. ಬಚ್ಚ 'ಗಾಡಿಯೊಳಗೆ ಹುಲ್ಲಿನಡಿ ಇಟ್ಟಿದ್ದೇನೆ' ಎಂದು ಹೇಳಿದ ಮೇಲೆಯೆ ಶಾಂತಚಿತ್ತರಾಗಿ ಮತ್ತೆ ಒರಗಿ ಕುಳಿತರು. ದೇವಯ್ಯ ಅವರನ್ನು ಮಾತನಾಡಿಸಿದರೆ ಅವರಿಗೆ ಏನೇನೋ ಕೆರಳಿದಂತಾಗುತ್ತದೆ ಎಂದು ಹೆದರಿ ಆದಷ್ಟು ಸುಮ್ಮನಿರಲು ಪ್ರಯತ್ನಿಸುತ್ತಿದ್ದನು. ಆದರೆ ತುಸುಹೊತ್ತಿನಲ್ಲಿಯೆ ಮತ್ತೆ ಅವರು ತಮ್ಮ ದೊಡ್ಡಮಗ ದೊಡ್ಡಣ್ಣನ ವಿಷಯವಾಗಿ ಸ್ವಲ್ಪ ಅಬದ್ಧವಾಗಿಯೆ ಎಂಬಂತೆ ಮಾತಾಡತೊಡಗಿದರು. ದೇವಯ್ಯಗೆ ಒಳಗೊಳಗೇ ದಿಗಿಲಾದರೂ ಅದನ್ನು ತೋರಗೊಡದೆ 'ದೊಡ್ಡಪಯ್ಯ, ನಿಮಗೆ ಬೆನ್ನು ನೋಯ್ತದೆ ಅಂತ ಕಾಣ್ತದೆ, ಹಾಳ್ ರಸ್ತೆ! ಗಾಡಿ ತುಂಬಾ ಜಟಕಾ ಹೊಡೀತದೆ! ಒಂದು ಸ್ವಲ್ಪ ಮಲಗಿಕೊಳ್ಳಿ' ಎಂದು ದಿಂಬು ಸರಿಮಾಡಿಟ್ಟು ಕೊಟ್ಟನು. 'ಆಗಲಪ್ಪಾ! ಉಸ್!' ಎಂದು ದೀರ್ಘವಾಗಿ ಸುಯ್ದು ಮಲಗುತ್ತಾ ತಮಗೆ ತಾವೇ ಎಂಬಂತೆ ಹೇಳಿಕೊಂಡದ್ದು ದೇವಯ್ಯಗೂ ಕೇಳಿಸಿತ್ತು: 'ದೊಡ್ಡಣ್ಣಗೆ ಎಲ್ಲ ವಹಿಸಿಕೊಟ್ಟು ತಣ್ಣಗೆ ಕಣ್ಣು ಮುಚ್ಚಿಕೊಂಡುಬಿಡ್ತೀನಿ!'

ಗಾಡಿ ತೊಟ್ಟಿಲು ತೂಗಿತೆಂಬಂತಾಗಿ ಚೆನ್ನಾಗಿ ನಿದ್ದೆ ಮಾಡುತ್ತಿದ್ದ ಮುದುಕನಿಗೆ ಮೋಡವೇರಿದ್ದಾಗಲಿ, ಗುಡುಗು ಮಿಂಚಾಗಲಿ, ಭೋರೆಂದು ಸುರಿದಿದ್ದ ಮಳೆಯಾಗಲಿ ಪ್ರಜ್ಞಾಗೋಚರವಾಗಿರಲಿಲ್ಲ. ಮಳೇ ಹೊಳವಾಗಿ, ಸೂರ್ಯ ಮುಳುಗಿ, ಕತ್ತಲೆಯ ಮೊದಲ ಛಾಯೆ ಕಾಡನ್ನೆಲ್ಲ ಕವಿಯುತ್ತಿರಲು ಇದ್ದಕಿದ್ದಹಾಗೆ ಕುಮುಟಿ ಎದ್ದು ಕುಳಿತ ಸುಬ್ಬಣ್ಣ ಹೆಗ್ಗಡೆಯವರು "ಅರೆ! ಎಲ್ಲಿ ಹೋದ್ನೋ?" ಎಂದರು.

"ಯಾರು?" ದೇವಯ್ಯ ಬೆಚ್ಚಿಯೆ ಕೇಳಿದನು.

"ನಮ್ಮ ದೊಡ್ಡಣ್ಣ ಕಣೋ! ನಿಮ್ಮ ಮನೆ ಅಂಗಳದಲ್ಲಿ ನಿನ್ನ ಜೊತೆ ಸಣ್ಣ ಹುಡುಗನಾಗಿ ಆಡ್ತಿದ್ದ ಕಣೋ! ಚೆನ್ನಾಗಿ ಕಂಡೆನೋ!...."

"ನಿದ್ದೆ ಮಾಡ್ತಿದ್ರಿ; ಕನಸು ಬಿತ್ತು ಅಂತಾ ಕಾಣ್ತದೆ, ದೊಡ್ಡಪಯ್ಯಾ. ಮಲಗಿಕೊಳ್ಳಿ.... ಮಲಗಿಕೊಳ್ಳಿ.... ಇನ್ನೇನು ಬಂದುಬಿಡ್ತು ನಮ್ಮ ಮನೆ...."

"ಇನ್ನೆಷ್ಟು ದೂರ ಅದಿಯೋ?"

"ಒಂದರ್ಧ ಮೈಲಿ ಒಳಗೇ."

"ಆಗ್ಲೆ ಕತ್ತಲಾಗಿಬಿಟ್ಟದಲ್ಲೋ...." ಮುದುಕ ಸುತ್ತಲೂ ಕಣ್ಣು ಹೊರಳಿಸಿದನು.

"ಹೌದು ದೊಡ್ಡಪಯ್ಯ. ಈ ಗಾಡಿ ಹೊಡೆಯೋನು ಲಾಟೀನ್ನೂ ತಂದಿಲ್ಲ...."

"ಕತ್ತಲಾಗಾಕೆ ಮುಂಚೇನೆ ಬತ್ತೀಂವಿ ಅಂತ ಮಾಡಿದ್ದೆ, ಅಯ್ಯಾ" ಬಚ್ಚ ಹೇಳಿದನು ಕ್ಷಮೆ ಕೇಳುವಂತೆ.

ಮುಂದೆ ನಾಲ್ಕು ಮಾರು ಹೋಗುವುದರಲ್ಲಿ ಒಂದು ಲಾಟೀನೂ ಎರಡು ಮೂರು ದೊಂದಿಗಳ ಬೆಳಕೂ ಕಾಡಿನ ನಡುವೆ ಕಾಣಿಸಿ, ಗಾಡಿಯ ಕಡೆಗೆ ಬಂದುವು. ಮೇಗರವಳ್ಳಿಯಿಂದ ಗಾಡಿ ಬರುವುದು ಹೊತ್ತಾದ್ದರಿಂದ ಬೆಟ್ಟಳ್ಳಿ ಕಲ್ಲಯ್ಯಗೌಡರು ಮುಂಜಾಗ್ರತೆಯ ಕ್ರಮವಾಗಿ ಬೆಳಕು ಕೊಟ್ಟು ಕಳಸಿದ್ದ ಆಳುಗಳು ದೇವಯ್ಯನ ಪ್ರಶ್ನೆಗೆ ಓಗೊಟ್ಟು, ಗಾಡಿಯ ಹಿಂದೆ ಮುಂದೆ ಬೆಳಕು ಹಿಡಿದು ನಡೆಯತೊಡಗಿದರು. ಗಾಡಿಯ, ಎತ್ತುಗಳ ಮತ್ತು ದೊಂದಿ ಲಾಟೀನು ಹಿಡಿದು ಹಿಂದೆ ಮುಂದೆ ನಡೆದವರ ಕಾಲುಗಳ ಭೂತಾಕಾರದ ನೆರಳುಗಳು ದಾರಿಯ ಪಕ್ಕದ ಕಾಡಿನ ಮೇಲೆಯೂ ರಸ್ತೆಯ ಮೇಲೆಯೂ ಶಕುನಪೂರ್ಣವಾಗಿ ಹಿಂದಕ್ಕೂ ಮುಂದಕ್ಕೂ ಚಲಿಸುತ್ತಿದ್ದುವು.

ಬೆಟ್ಟಳ್ಳಿಗೆ ಹಳೆಮನೆ ಹೆಗ್ಗಡೆಯವರು ಬರದೆ ಒಂದೆರಡು ವರ್ಷಗಳೆ ಆಗಿದ್ದುವೇನೋ? ಅವರಿಗೇನೂ ಆಪತ್ತು ಒದಗಿದೆ ಎಂಬ ಸುದ್ದಿ ವಿಷಾದಕರವಾಗಿದ್ದಿತಾದರೂ ಅವರನ್ನು ಕರೆದು ತರಲು ಗಾಡಿ ಕಳುಹಿಸಿದ್ದಾರೆ ಎಂಬ ವಾರ್ತೆ ಮನೆಯ ಒಳಗೂ ಹೊರಗೂ ಸಡಗರವನ್ನೆ ತುಂಬಿತ್ತು. ಕಲ್ಲಯ್ಯಗೌಡರೂ ಸಸಂಭ್ರಮರಾಗಿಯೆ ಗಾಡಿ ಬರುವುದನ್ನು ಇದಿರು ನೋಡುತ್ತಿದ್ದರು.

ಕತ್ತಲಾದಮೇಲೆ ದೊಂದಿ ಲಾಟೀನುಗಳನ್ನು ಕೊಟ್ಟು ಆಳುಗಳನ್ನು ಕಳುಹಿಸಿದ್ದರು. ಅವರು ಬರುವುದು ತಡವಾಯಿತೆಂದೆನೆಸಿದಾಗ ಮತ್ತೊಬ್ಬ ಆಳನ್ನು ಒಳದಾರಿಯಿಂದ ಅಟ್ಟಿದ್ದರು. ಅವನು ಓಡೋಡಿ ಬಂದು ಗಾಡಿ ಬರುತ್ತಿರುವ ಸುದ್ದಿಯನ್ನು ತಿಳಿಸಿದ ಮೇಲೆಯೆ ಗೌಡರು ಹೊರಚಾವಡಿಯಿಂದ ಒಳಜಗಲಿಗೆ ಹೊಗಿ, ಜಗಲಿಗೆ ಲಾಂದ್ರವನ್ನು ಹೊತ್ತಿಸಿದ್ದರು. ಲಾಂದ್ರ ಲ್ಯಾಂಪು ಲಾಟೀನುಗಳು ಬೆಟ್ಟಳ್ಳಿ ಮನೆಯ ಮುಂದುವರೆಯುತ್ತಿದ್ದ ನಾಗರಿಕತೆಯ ಸಂಕೇತಗಳಾಗಿದ್ದುವು. ಆ ಪ್ರಾಂತದ ಉಳಿದ ಶ್ರೀಮಂತರ ಮನೆಗಳಲ್ಲಿ ಇನ್ನೂ ಹರಳೆಣ್ಣೆಯ ಹಣತೆ ಮತ್ತು ಚಿಮಿನಿ ದೀಪಗಳೆ ಇದ್ದು, ಬೆಟ್ಟಳ್ಳಿ ಮನೆಯ ಸುಧಾರಿಸಿದ ವಾತಾವರಣವನ್ನು ಇವು ಬೆಳಗುತ್ತಿದ್ದುವು, ಕಮಾನುಗಾಡಿಯಿಂದೆಂತೂ ಅಂತೆ!

ಗಗ್ಗರದ ಸರದ ಸುಸ್ವರ ನಿಂತು, ದೇವಯ್ಯ ತನ್ನ ದೊಡ್ಡಪ್ಪಯ್ಯನವರನ್ನು ಮೆಲ್ಲನೆ ಗಾಡಿಯಿಂದಿಳಿಸಿ, ಜಗಲಿಗೆ ಕರೆತಂದನು. ಬೊಗಳುತ್ತಿದ್ದ ನಾಯಿಗಳನ್ನು ಗದರಿಸಿ ಅಟ್ಟಿ, ಕಲ್ಲಯ್ಯಗೌಡರು 'ಬಂದ್ರೇ?' ಎಂದು ಅತಿಥಿಯನ್ನು ಸ್ವಾಗತಿಸಿ, ಕೆಸರಲಗೆಯ ಮೇಲೆ ಹೊಳೆಯುತ್ತಿದ್ದ ಹಿತ್ತಾಳೆ ಚೊಂಬುಗಳಲ್ಲಿದ್ದ ಬಿಸಿನೀರನ್ನು ಕಾಲು ತೊಳೆದುಕೊಳ್ಳಲು ಕೊಟ್ಟು, ಒರೆಸಿಕೊಳ್ಳಲು ಅಂಗವಸ್ತ್ರವನ್ನು ನೀಡಿ, ಜಗಲಿಯ ಮೇಲೆ ಹಾಸಿದ್ದ ಜಮಖಾನೆಯ ಮೇಲೆ ದಿಂಬಿಗೆ ಒರಗಿ ಕುಳಿತುಕೊಳ್ಳುವಂತೆ ನೆರವಾದರು.

ಅದುವರೆಗೂ ಹೆಚ್ಚು ಮಾತಾಡದೆ ಆ್ಞ ಊ್ಞ ಹೌದು ಇಲ್ಲ ಎಂದು ಒಂದೊಂದೆ ಶಬ್ದದಲ್ಲಿ ಸೋತದನಿಯಿಂದ ಉತ್ತರ ಹೇಳುತ್ತಿದ್ದ ಸುಬ್ಬಣ್ಣಹೆಗ್ಗಡೆಯವರು ಇದ್ದಕಿದ್ದಹಾಗೆ, ಕಿವಿ ಮಂದವಾದವರೊಡನೆ ಮಾತನಾಡುವವರಂತೆ, ಗಟ್ಟಿಯಾಗಿ ಗಂಟಲೆತ್ತಿ ನುಡಿಯತೊಡಗಿದರು: 'ಹ್ಯಾಂಗಿದ್ದೀರಿ ಈಗ?' ಎಂದು ಕೇಳಿದ್ದಕ್ಕೆ 'ಹ್ಯಾಂಗಿರೋದು? ನೋಡ್ತಿದ್ದೀರಲ್ಲಾ! ಇದ್ದೀನಿ ಹೀಂಗೆ!' ಎಂದು ಕೂಗಿದರು, ಮಹೋಲ್ಲಾಸ ಧ್ವನಿಯಿಂದ, ನಿಃಶಬ್ದವಾಗಿದ್ದ ಮನೆ ಮರುದನಿ ತುಂಬುವಂತೆ! 'ಮನೆ ಕಡೆ ಎಲ್ಲ ಕ್ಷೇಮವೇ?' ಎಂದು ಪದ್ದತಿಯಂತೆ ಕ್ಷೇಮ ಸಮಾಚಾರ ವಿಚಾರಿಸಿದ್ದಕ್ಕೆ ಉತ್ತರವಾಗಿ ಎಲ್ಲ ಕ್ಷೇಮವೇ?' ಎಂದು ಪದ್ಧತಿಯಂತೆ ಕ್ಷೇಮ ಸಮಾಚಾರ ವಿಚಾರಿಸಿದ್ದಕ್ಕೆ ಉತ್ತರವಾಗಿ ಅಡುಗೆಮನೆಯಲ್ಲಿದ್ದ ಸ್ತ್ರೀ ವರ್ಗವೆಲ್ಲ ಗಾಬರಿಗೊಂಡು ಮಾಣಿಗೆಯ ಬಾಗಿಲಲ್ಲಿ ಬೆರಗಾಗಿ ನೆರೆದು ಇಣಿಕಿ

ನೋಡುವಂತೆ, ಗಟ್ಟಿಯಾಗಿ ತಮ್ಮ ಗೃಹಕೃತ್ಯದ ಕಷ್ಟಕೋಟಲೆಗಳನ್ನೆಲ್ಲ ಹೇಳತೊಡಗಿದರು. ಆಗ ದೇವಯ್ಯ ಯಾವುದನ್ನೊ ನೆವ ಮಾಡಿಕೊಂಡು ತನ್ನ ತಂದೆಯನ್ನು ದೂರ ಕರೆದೊಯ್ದು, ದೊಟ್ಟಪ್ಪಯ್ಯನ ಆ ದಿನದ ಅಸಾಧಾರಣ ಮನಃಸ್ಥಿತಿಯ ವಿಚಾರವಾಗಿ ತಿಳಿಸಿ ಅವರನ್ನು ಎಚ್ಚರಿಸಿದನು.

ಆಮೇಲೆ ಕಲ್ಲಯ್ಯಗೌಡರು ಅವರೊಡನೆ ಹೆಚ್ಚುಮಾತಿಗೆ ಹೋಗಲಿಲ್ಲ. ಅವರನ್ನು ಆದಷ್ಟು ಬೇಗನೆ ಊಟಕ್ಕೆ ಏಳಿಸಿದರು. ಅವರ ಗೌರವಾರ್ಥವಾಗಿಯೇ ತಯಾರಿಸಿದ್ದ ಔತಣವನ್ನು ಆತಿಥ್ಯಕ್ಕೆ ಅಪಚಾರವಾಗದಷ್ಟು ಮಿತಪ್ರಮಾಣದಲ್ಲಿ ಬಡಿಸಿದರು. ಕೋಳಿತುಂಡು, ಕಡಬು, ಕಳ್ಳು ಇವುಗಳ ಸೇವನೆಯಿಂದ ಸಂತೃಪ್ತರಾದ ಹೆಗ್ಗಡೆಯವರು ಊಟ ಪೂರೈಸಿದ ಮೇಲೆ ಎಲೆಯಡಿಕೆ ಹಾಕಿಕೊಳ್ಳುತ್ತಿದ್ದಾಗ ಒಳಗೆ ದೇವಯ್ಯನ ಮಲಗುವ ಕೋಣೆಯಲ್ಲಿ ಅವನ ಮಗು ಚೆಲುವಯ್ಯ ಅಳುತ್ತಿದ್ದುದು ಕೇಳಿಸಿ, ಬೆಚ್ಚಿದಂತಾಗಿ, ಕಣ್ಣರಳಿಸಿ ಸುತ್ತಲೂ ಹುಡುಕುನೋಟದಿಂದಲೆಂಬಂತೆ ಹಣೆ ಸುಕ್ಕಿಸಿ ನೋಡಿ "ಯಾರೋ ಅದೂ? ನಮ್ಮ ದೊಡ್ಡಣ್ಣನ ಸರಾ ಕೇಳಿಸಿದ್ಹಾಂಗೇ ಆಯ್ತಲ್ಲಾ!" ಎಂದು ತಟಕ್ಕನೆ ಅಂತರ್ಮುಖಿಯಾಗಿಬಿಟ್ಟರು. ಕಣ್ಣಿಂದ ನೀರು ತೊಟ್ಟಕ್ಕಿತು. ಬಿಕ್ಕಿ ಬಿಕ್ಕಿ ಅಳತೊಡಗಿದರು.

ಕಲ್ಲಯ್ಯಗೌಡರು ಅವರನ್ನು ಸಮಾಧಾನ ಮಾಡುತ್ತಿರಲು, ದೇವಯ್ಯ "ಯಾರೂ ಅಲ್ಲ, ದೊಡ್ಡಪ್ಪಯ್ಯಾ, ಬ್ಯಾಲೇನ ತೊಟ್ಟಿಲಿಗೆ ಮಲಗಿಸಕ್ಕೆ ಮುಂಚೆ, ಮೈಗೆ ಎಣ್ಣೆ ಹಚ್ತದೆ ಅಂತಾ ಕಾಣ್ತದೆ. ಅದಕ್ಕೆ ಅಳ್ತಾ ಇದೆ…. ನೀವು ಸ್ವಲ್ಪ ಮಲಗಿಕೊಳ್ಳಿ. ಹಾಸಿಗೆ ಹಾಸಿದೆ. ನಿಮಗೆ ಗಾಡಿ ಪಯಣ ಪೂರಾ ಮೈನೋವಾಗಿರಬೇಕು" ಎಂದು ಅವರನ್ನು ಹಾಸಿಗೆಗೆ ಕರೆದೊಯ್ದು ಮಲಗಿಸಿದನು.

ದೇವಯ್ಯ ಶಾಲು ಹೊದಿಸುತ್ತಿದ್ದಾಗ ಸುಬ್ಬಣ್ಣ ಹೆಗ್ಗಡೆಯವರು ಮತ್ತೆ "ಯಾರು? ನಿನ್ನ ಮಗನೇನೋ?" ಎಂದು ಕೇಳಿದರು.

"ಹೌದು ಅವನ ಮಗನೆ" ಎಂದರು ಕಲ್ಲಯ್ಯಗೌಡರು.

"ಏನು ಹೆಸರು ಇಟ್ಟಾರೆ ದೋಯಿಸರು?" ಎಂದು ಕೇಳಿದ ಹೆಗ್ಗಡೆಯವರು "ದೊಡ್ಡಣ್ಣ ಅಂತ್ಲೇನೋ?" ಎಂದರು.

"ಅಲ್ಲ 'ಚೆಲುವಯ್ಯಾ' ಅಂತಾ."

ಆವೊತ್ತು ರಾತ್ರಿ ದೇವಯ್ಯ ಮುದುಕನ ಬಳಿಯಲ್ಲಿಯೆ ಹಾಸಗೆ ಹಾಸಿಕೊಂಡು ಮಲಗಿದ್ದನು. ನಿದ್ದೆಯಲ್ಲಿ ಏನೇನೋ ಅವರು ಕನವರಿಸುತ್ತಿದ್ದರು. ಒಮ್ಮೆ "ಚೆಲುವಯ್ಯಾ" ಎಂದೂ ಕನಸಿನಲ್ಲಿಯೆ ಕರೆದದ್ದು ಕೇಳಿಸಿತು. ಎರಡು ಸಾರಿ ಅವರನ್ನು, ದೊಡ್ಡದು ಮಾಡಿದ ಲಾಟೀನು ಬೆಳಕಿನಲ್ಲಿ, ಮೆಲ್ಲಗೆ ನಡೆಸಿಕೊಂಡು ಹೆಬ್ಬಾಗಿಲಾಚೆಗೆ ಹೋಗಿ ಒಂದ ಮಾಡಿಸಿಕೊಂಡು ಕರೆತಂದು ಮಲಗಿಸಿದನು.

ಮರುದಿನ ಬೆಳಿಗ್ಗೆ ಹಳೆಮನೆ ಹೆಗ್ಗಡೆಯವರು ಸಂಪೂರ್ಣವಾಗಿ ಸ್ವಸ್ಥರಾಗಿ ಮುನ್ನಿನ ಸಾಧಾರಣ ಸ್ಥಿತಿಗೆ ಬಂದಂತೆ ಉಲ್ಲಾಸಭರಿತವಾದ ಹರ್ಷಚಿತ್ತದಿಂದ ಮಾತನಾಡುತ್ತಾ ವರ್ತಿಸತೊಡಗಿದರು. ಕಲ್ಲಯ್ಯಗೌಡರೊಡನೆ ಹಿಂದಿನ

ಹಳೆಯ ದಿನಗಳನ್ನು ಕುರಿತು ಅನೇಕಾನೇಕ ವಿನೋದವಾಡಿದರು. ಬೆಟ್ಟಳ್ಳಿ ಮನೆಯಲ್ಲಿ ಇತ್ತೀಚೆಗೆ ಪ್ರಚಲಿತವಾಗಿದ್ದ ಕಾಫಿ ಕುಡಿಯುವ ನವನಾಗರಿಕ ಚಾಳಿಯನ್ನು ಕುಚೋದ್ಯ ಮಾಡಿ, ತಾವು ಹಾಲು ಹಾಕಿ ತಯಾರಿಸಿದ ಕುನ್ನೇರಿಲುಕುಡಿಯ ಕಷಾಯವನ್ನೆ ಕುಡಿದರು.

ಕಷಾಯ ಕುಡಿಯುತ್ತಿದ್ದಾಗ ಅದರ ರುಚಿಯನ್ನು ಬಹಳವಾಗಿ ಶ್ಲಾಘಿಸುತ್ತಾ, ಅದನ್ನು ತಯಾರು ಮಾಡಿದ್ದ ದೇವಯ್ಯನ ತಾಯಿ ದೊಡ್ಡಮ್ಮ ಹೆಗ್ಗಡಿತಿಯವರಿಗೆ "ಏನು, ದೊಡ್ಡಕ್ಕ, ಗೌಡರಿಗೂ ಕಾಫಿ ಜಲಿಸಿಬಿಟ್ಟಿದ್ದೀರಲ್ಲಾ? ಕಾಫಿ ಎಷ್ಟಾದರೂ ಉಷ್ಣ. ಕುನ್ನೇರ್ಲು ಕುಡಿ ಕಷಾಯಾನೇ ತಂಪು. ಅದರಲ್ಲೂ ನನ್ನ ನಿನ್ಹಾಂಗೆ ವಯಸ್ಸಾದೋರಿಗೆ ಕಾಫಿ ಖಂಡಿತಾ ನಂಜು. ಅಲ್ಲೇನು ಹೇಳು?" ಎಂದು ಕೇಕೆಹಾಕಿ ನಕ್ಕರು.

ಕಲ್ಲಯ್ಯಗೌಡರು ತಮ್ಮ ಹೆಂಡತಿಯ ಕಡೆ ನೋಡಿ ವಿನೋದವಾಗಿ "ನೋಡಿದ್ಯಾ? ನಿಂಗೆ ಈಗ್ಲಾದ್ರೂ ಗೊತ್ತಾಯ್ತೇನು, ವಯಸ್ಸಾಗಿದೆ ಅಂತಾ? ಹೆಗ್ಡೇರೆ ಹೇಳ್ತಿದಾರೆ, ನೀನು ಅವರೂ ವಯಸ್ಸಾದವರು ಅಂತಾ!" ಎಂದು ನಕ್ಕರು.

ನಡುವಯಸ್ಸು ಮೀರಿದ್ದ ಗಂಭೀರ ಮಹಿಳೆ ದೊಡ್ಡಮ್ಮ ಹೆಗ್ಗಡಿತಿಯವರು ಗಂಡನ ಮತ್ತು ಹಳೆಮನೆ ಬಾವನವರ ವಿನೋದದ ಮಾತುಗಳಿಗೆ ಏನೊಂದೂ ಉತ್ತರ ಕೊಡದೆ, ಬಾಯಿಗೆ ಸೆರಗು ಮುಚ್ಚಕೊಂಡು ನಕ್ಕರು. ಸುಮಾರು ಸಮ ಸಮ ವಯಸ್ಕರಾಗಿದ್ದ ಗೌಡರೂ ಬಹಳ ಕಾಲದ ಮೇಲೆ ಒಟ್ಟಿಗೆ ಸೇರಿ ತಮ್ಮ ಎಳೆಗಾಲದ ಮನೋಭಂಗಿಯನ್ನು ಸವಿಯುತ್ತಿದ್ದಂತೆಯೆ, ವರ್ಷವೆಲ್ಲವೂ ತಮಗಿಂತಲೂ ಬಹಳ ಚಿಕ್ಕವರೊಡನೆಯೆ ವ್ಯವಹರಿಸುತ್ತಿದ್ದ ಹೆಗ್ಗಡಿತಿಯವರ ಮನಸ್ಸೂ ಕಳೆದುಹೋಗಿ ಬಹುದೂರವಾಗಿದ್ದ ತಮ್ಮ ಎಳೆಗಾಲದ ಭೂಮಿಕೆಗೆ ಪ್ರವೇಶಿಸಿದಂತಾಗಿತ್ತು.

ಜೊತೆಗೆ, ನಗಲಿರುವವರಿಗೆ ಕಚಗುಳಿ ಇಡುವಂತೆ, ದೇವಯ್ಯ ತಾನು ಕುಡಿಯುತ್ತಿದ್ದ ಕಾಫಿಯನ್ನು ಕೆಳಗಿಟ್ಟು ತನ್ನ ತಾಯಿಯ ಕಡೆಗೆ ನಗುಮೊಗವಾಗಿ ನೋಡುತ್ತಾ "ಅಯ್ಯಯ್ಯೋ, ಇದೇನು? ಅವ್ವಗೆ ಇವತ್ತು ಎಲ್ಲಿಲ್ಲದ ನಾಚಿಕೆಯಾಗಿಬಿಟ್ಟದಲ್ಲಾ!" ಎಂದು ಹಾಸ್ಯವಾಡಿದನು. ಹೊಗೆಯಿಂದ ತುಂಬಿರುತ್ತಿದ್ದ ಅಡುಗೆಮನೆಯೆಲ್ಲ ನಗೆಯಿಂದ ತುಂಬಿಹೋಯಿತು.

ಅಷ್ಟರಲ್ಲಿ ಬಾಲೆಯಾಡಿಸುವ ಹುಡುಗಿ ಶಿಶು ಚೆಲುವಯ್ಯನನ್ನು ಎತ್ತಿಕೊಂಡು ಹೋಗುತ್ತಿದ್ದುದನ್ನು ಕಂಡ ಹೆಗ್ಗಡೆಯವರು "ಎಲೆಲೆಲೆಲೆ ಹುಡುಗಿ, ಇತ್ತ ಎತ್ತಿಕೊಂಡು ಬಾರೆ; ನಾನೊಂದಿಷ್ಟು ನೋಡ್ತೀನಿ, ನನ್ನ ಮೊಮ್ಮಗನ್ನ!" ಎಂದು ಅಟ್ಟಹಾಸ ಮಾಡಿದರು.

ಹುಡುಗಿ ಚೆಲುವಯ್ಯನನ್ನು, ಕಿಟಕಿಯಿಂದ ಬಂದ ಎಳಬಿಸಿಲು ಬಿದ್ದಲ್ಲಿ, ಉರುಡು ಹಾಸಗೆ ಹಾಸಿ ಮಲಗಿಸಿದಳು. ಹಿಂದಿನ ದಿನ ಸಂಜೆ ಬಿದ್ದಿದ್ದ ಬಿರುಮಳೆಗೆ ಚಳಿಯಾಗುವಷ್ಟರಮಟ್ಟಿಗೆ ತಣ್ಣಗಾಗಿದ್ದ ಹವೆಯಲ್ಲಿ, ಎಳಬಿಸಿಲ ಸುಖೋಷ್ಣವನ್ನು ಅನುಭವಿಸಿದ ಆ ಕೂಸು ಅಂಗಾತನೆ ಮಲಗಿ ಕೈಕಾಲು ಆಡಿಸುತ್ತಾ, ನಗುವಂತೆ ಮೊದಲು

ದನಿಯೆಸಗುತ್ತಾ, ಅದರ ಕಡೆಗೇ ಕಣ್ಣಾಗಿದ್ದ ಎಲ್ಲರ ಹೃದಯದ ಮೇಲೆಯೂ ಆನಂದ ಕಾಂತಿಯನ್ನು ಸಿಂಚಿಸಿ, ಮುದ್ದುಮೋಹವುಕ್ಕುವಂತೆ ಮಾಡಿತು.

ಮಣೆಯ ಮೇಲೆ ಕುಕ್ಕುರುಗಾಲಾಗಿ ಕುಳಿತು, ಗೋಡೆಗೆ ಒರಗಿಕೊಂಡಿದ್ದ ಸುಬ್ಬಣ್ಣ ಹೆಗ್ಗಡೆಯವರು ಮಗುವನ್ನು ನೋಡುತ್ತಿದ್ದ ಹಾಗೆಯೆ ಇತರರಿಗೆ ಅಚ್ಚರಿಯಾಗುವಂತೆ ಆನಂದಮಯರಾಗಿಬಿಟ್ಟರು. ಗೋಡೆಗೆ ಒರಗಿದ್ದವರು ನೆಟ್ಟಗೆ ನಿಮಿರಿ ಕುಳಿತರು. ಮತ್ತೆ ಮುಂದಕ್ಕೆ ಬಾಗಿ, ನಗೆಬೀರಿ ನೋಡತೊಡಗಿದರು. ಮತ್ತೆ ಮಣೆಯ ಮೇಲಿಂದ ಎದ್ದು ಉರುಡುಹಾಸಿಗೆಯ ಪಕ್ಕಕ್ಕೆ ಸರಿದು, ತುದಿಗಾಲ ಮೇಲೆ ಕುಳಿತು, ಬಗ್ಗಿ, ಮುದ್ದಿಸತೊಡಗಿದರು. ಆಮೇಲೆ ತುದಿಗಾಲಮೇಲೆ ಕುಳಿತಿದ್ದವರು ಅಂಡೂರಿ ಚಿಕ್ಕಾಲು ಬಕ್ಕಾಲು ಹಾಕಿ ಬಲವಾಗಿ ಕುಳಿತುಬಿಟ್ಟರು. ಯಾವುದೋ ಭಾವಾವೇಶದಿಂದ ಅವರ ಮುಖಭಂಗಿ ತೇಜಸ್ವಿಯಾಯಿತು. ಚೆಲುವಯ್ಯನ ಕೆನ್ನೆ ಗಲ್ಲ ಹಣೆಗಳನ್ನು ಮೆಲ್ಲಗೆ ಮುಟ್ಟಿ ನೀವಿ ಸೊಗಸುತ್ತಾ ಲಲ್ಲೆಗೈದು ತೊದಲಾಡಿದರು. ಅಷ್ಟರಲ್ಲಿ ಅವರ ಪಕ್ಕಕ್ಕೆ ಬಂದು ಕುಳಿತಿದ್ದ ದೇವಯ್ಯನ ಕಡೆ ಹನಿಗಣ್ಣಾಗಿ ನೋಡುತ್ತಾ 'ಅವನ ಹಾಂಗೆ ಕಾಣ್ತಾನೊ ನಿನ್ನ ಮಗ! ಅವನೆ ಇವನು ಅನ್ನಬೇಕು, ಹಾಂಗೇ ಅದಾನೆ! ನಮ್ಮ ದೊಡ್ಡಣ್ಣ ಬಾಲೆ ಆಗಿದ್ದಾಗ ಹಿಂಗೇ ಇದ್ದ ಕಣೋ! ಅದೇ ಕಣ್ಣು, ಅದೇ ಮೂಗು, ಅದೇ ಚೆಂದ!' ಎನ್ನುತ್ತಾ ಕಲ್ಲಯ್ಯಗೌಡರು ಮತ್ತು ದೊಡ್ಡಮ್ಮ ಹೆಗ್ಗಡಿತಿಯವರ ಕಡೆಗೂ ತಿರುಗಿ "ಗೌಡರಿಗೆ ಗೊತ್ತಿರಬೇಕಲ್ಲಾ? ನಮ್ಮ ದೊಡ್ಡಣ್ಣನ ತೊಟ್ಟಿಲಿಗೆ ಹಾಕೋ ಮನೆಗೆ ನೀವಿಬ್ಬರೂ ಬಂದಿದ್ರಲ್ಲಾ?... ನಾ ಹೇಳಾದು ಸುಳ್ಳೋ ಬದ್ದೋ ನೀನೆ ನೋಡು, ದೊಡ್ಡಕ್ಕಾ!" ಎಂದು ಮಗುವನ್ನು ಮೆಲ್ಲಗೆ ಎತ್ತಿ ತೊಡೆಯ ಮೇಲೆ ಮಲಗಿಸಿಕೊಂಡರು.

ಆಗಲೆ ಮುದುಕನ ವರ್ತನೆಯ ಅಸಾಧಾರಣತೆಗೆ ಎಲ್ಲರಿಗೂ ಸ್ವಲ್ಪ ಗಾಬರಿಯಾಗತೊಡಗಿತ್ತು. ಅದಕ್ಕೆ ಸರಿಯಾಗಿ ಮಗುವೂ ಗಟ್ಟಿಯಾಗಿ ಅಳತೊಡಗಿತು.

ದೇವಯ್ಯ "ದೊಡ್ಡಪ್ಪಯ್ಯಾ, ನಿಮ್ಮ ಬಟ್ಟೇನೆಲ್ಲಾ ಒದ್ದೆಮಾಡಿ ಬಿಟ್ಟಾನು! ಇತ್ತ ಕೊಡಿ ಅವನ್ನ" ಎಂದು ಮಗನ ಅಳುದನಿಗೇಳಿ ಆಗಲೆಯೆ ಅಲ್ಲಿಗೆ ಬಂದಿದ್ದ ತನ್ನ ಹೆಂಡತಿಯ ಕಡೆ ನೋಡಿದನು. ದೇವಮ್ಮ ಚೆಲುವಯ್ಯನನ್ನು ಎತ್ತಿ ಎದೆಗವಚಿಕೊಂಡು ಬೇಗಬೇಗನೇ ತಮ್ಮ ಮಲಗುವ ಕೋಣೆಗೆ ಹೋದಳು.

ಆ ದಿನ ಪೂರ್ವಾಹ್ನವೆಲ್ಲ ಹೆಗ್ಗಡೆಯವರ ಹರ್ಷಚಿತ್ತಕ್ಕೆ ಇನಿತೂ ಭಂಗ ಬರಲಿಲ್ಲ. ಶಿಶು ಚೆಲುವಯ್ಯನನ್ನು ಕಂಡಾಗಣಿಂದ ಅವರ ಮೊಗದ ಮೇಲೆ ಅರಳಿದ್ದ ನಗೆಯ ಮಲರು ಅವರು ಮಧ್ಯಾಹ್ನದ ಊಟ ಮುಗಿಸಿ ಹಗಲು ನಿದ್ದೆ ಮಾಡಿ ಎದ್ದಮೇಲೆಯೂ ಮಾಸದೆ ಬಾಡದೆ ಹುಸುಸಾಗಿಯೆ ಇತ್ತು, ಹಿಂದಿನ ದಿನ ರಾತ್ರಿ ಹಳೆಮನೆಗೆ ಹೋಗಿ ಬಂದಿದ್ದ ಮುಕುಂದಯ್ಯ ಐತನ ಕೈಲಿ ದೇವಯ್ಯಗೆ ಚೀಟಿಕೊಟ್ಟು ಕಳುಹಿಸುವವರೆಗೆ.

ಚೀಟಿಯನ್ನು ಓದಿಕೊಂಡ ದೇವಯ್ಯ ವಿಷಯವನ್ನು ತಟಕ್ಕನೆ ಸುಬ್ಬಣ್ಣ ಹೆಗ್ಗಡೆಯರಿಗೆ ತಿಳಿಸಲಿಲ್ಲ. ತನ್ನ ತಂದೆಯೊಡನೆ ಪ್ರಸ್ತಾಪಿಸಿದನು. ಹೆಗ್ಗಡೆಯವರು ಆ ದಿನವೆ ಕಾಲುನಡಿಗೆಯಲ್ಲಿ ಬೆಟ್ಟಳ್ಳಿಯಿಂದ ಹಳೆಮನೆಗೆ ನಡೆದುಕೊಂಡು ಹೋಗುವುದು ಅಸಾಧ್ಯವೆ ಆಗಿತ್ತು. ಗಾಡಿಯ ಮೇಲೆಯೆ ಕಳುಹಿಸುವುದಕ್ಕೂ ಆಗುವಂತಿರಲಿಲ್ಲ. ಏಕೆಂದರೆ ಹಳೆಮನೆಗೆ ಗಾಡಿದಾರಿಯೆ ಇರಲಿಲ್ಲ. ಎತ್ತುಗಾಡಿ ಇಟ್ಟುಕೊಳ್ಳುವುದೇ ಅಪೂರ್ವ ಭೋಗವಾಗಿದ್ದ ಆ ಕಾಲದಲ್ಲಿ ಗಾಡಿಯ ರಸ್ತೆ ಎಲ್ಲಿಂದ ಬರಬೇಕು? ಕಟ್ಟಿಗೆ ಗೊಬ್ಬರಗಳೂ ತಲೆಹೊರೆಯ ಮೇಲೆಯೆ ಸಾಗುತ್ತಿದ್ದುವು;

ಹೊರಗಡೆಯಿಂದ ಬರುತ್ತಿದ್ದ ದಿನಸಿ ಸಾಮಾನುಗಳೆಲ್ಲ ಹೇರೆತ್ತಿನ ಮೇಲೆ ಆಮದಾಗುತ್ತಿದ್ದವು. ಹೀಗಾಗಿ ಜನಕ್ಕೆ ಗಾಡಿ ರಸ್ತೆಯ ಅವಶ್ಯಕತೆಯೆ ತೋರಿರಲಿಲ್ಲ.

ಹೆಗ್ಗಡೆಯವರಂತೂ ಸಂತೋಷಚಿತ್ತರಾಗಿ ಸದ್ಯಕ್ಕೆ ತಾಪತ್ರಯಮಯವಾದ ತಮ್ಮ ಮನೆಯನ್ನೇ ಮರೆತುಬಿಟ್ಟಂತೆ ಇದ್ದರು. ಪದೇ ಪದೇ ಮೊಮ್ಮಗನನ್ನು ಕರೆದು ತರಹೇಳಿ ಮುದ್ದು ಮಾತಾಡಿಸಿ ನಲಿಯುತ್ತಿದ್ದರು. ಕಲ್ಲಯ್ಯಗೌಡರು ಮನಸ್ಸಿಲ್ಲದ ಮನಸ್ಸಿನಿಂದ ಅವರಿಗೆ ತಮ್ಮ ಮನೆಯ ನೆನಪುಕೊಟ್ಟು, ಅಲ್ಲಿಗೆ ಆ ದಿನವೆ ಹಿಂತಿರುಗಬೇಕಾಗಬಹುದೆಂದು ಸೂಚಿಸಿದಾಗ, ಅವರು ಮುನಿಸಿಕೊಂಡಂತೆ ಮಾತಾಡಿದರು: "ಅಯ್ಯೋ ಇದ್ದೇ ಇದೆ, ಗೌಡರೆ, ಹಾಳು ಮನೆ! ಇನ್ನೆರಡು ದಿನ ಇಲ್ಲೇ ಸುಖವಾಗಿ ಇದ್ದುಬಿಡ್ತೀನಿ, ನನ್ನ ಮೊಮ್ಮಗನ್ನ ನೋಡ್ತಾ, ಹಾಯಾಗಿ!"

ಕೊನೆಗೆ, ನಿರ್ವಾಹವಿಲ್ಲದೆ, ದೇವಯ್ಯ ಮೆಲ್ಲಗೆ ಮುಕುಂದಯ್ಯನ ಚೀಟಿಯ ಪ್ರಸ್ತಾಪವೆತ್ತಿ, ಹಳೆಮನೆಯಲ್ಲಿ ನಡೆದ ದುರಂತವನ್ನು ಆದಷ್ಟು ಸೌಮ್ಯ ರೀತಿಯಲ್ಲಿ ತಿಳಿಸಿದಾಗ, ಹೆಗ್ಗಡೆಯವರಿಗೆ ಆದ ಸಂಕಟ ಹೇಳತೀರದ್ದಾಗಿತ್ತು. ಬಾಲಕರಂತೆ ಅವರು ರೋದಿಸುವುದನ್ನು ನೋಡಿ ಕಲ್ಲಯ್ಯಗೌಡರಾದಿಯಾಗಿ ಕಣ್ಣೀರು ತಡೆಯಲಾಗಲಿಲ್ಲ: "ದೇವಯ್ಯ, ನನ್ನ ದೊಡ್ಡಣ್ಣನ್ನ ಯಾವಾಗ ಕರಕೊಂಡು ಬರತಿಯಪ್ಪಾ ತೀರ್ಥಹಳ್ಳಿಯಿಂದ? ಎಲ್ಲ ಅವನಿಗೆ ವಹಿಸಿ, ತಣ್ಣಗೆ ಕಣ್ಣು ಮುಚ್ಚಿಕೋಳ್ತಿನಪ್ಪಾ! ನಂಗೆ ಸಾಕಪ್ಪಾ ಈ ಸಂಸಾರ!" ಎಂದು ತಲೆಮೇಲೆ ಕೈ ಹೊತ್ತುಕೊಂಡು ಅಳುತ್ತಾ ಕುಳಿತುಬಿಟ್ಟರು.

ಗಾಡಿ ಹಿಡಿದುಕೊಳ್ಳುವುದಕ್ಕೂ ದಾರಿಗಡ್ಡವಾದ ಹಳು ಮಟ್ಟು ಸವರುವುದಕ್ಕೂ ಮೂರು ನಾಲ್ಕು ಜನರಿದ್ದರೆ ಗಾಡಿಯನ್ನು ಹೇಗಾದರೂ ಮಾಡಿ ಹಕ್ಕಲು ಬಯಲಿನ ಮುಖಾಂತರ ಹಲೆಮನೆಯ ಹತ್ತಿರದವರೆಗೆ ಹೊಡೆದು ಕೊಂಡು ಹೋಗಬಹುದು ಎಂದು ಬಚ್ಚ ಭರವಸೆ ಕೊಟ್ಟಮೇಲೆ, ಸುಬ್ಬಣ್ಣ ಹೆಗ್ಗಡೆಯವರನ್ನು ತಡಿ ಹಾಸಿ, ದಿಂಬುಗಳ ನಡುವೆ ಮಲಗಿಸಿ, ದೇವಯ್ಯನೂ ಗಾಡಿಯ ಹಿಂದೆ ಅವರಿಗೆ ಮೈಗಾವಲಾಗಿ ಹತ್ತಿದನು. ವಿಷಣ್ಣ ವಾತಾವರಣದಲ್ಲಿ ಬೆಟ್ಟಳ್ಳಿ ಮನೆಯವರೆಲ್ಲ ನಿಂತು ನೋಡುತ್ತಿರಲು, ಗಾಡಿ ಮರೆಯಾಗಿ ಗಂಟೆ ಗಗ್ಗರದ ಸರಗಳ ಸದ್ದು ಮಾತ್ರ ಕೇಳಿಸಿ, ಕಡೆಗೆ ಅದೂ ನಿಂತಿತು. ಕಲ್ಲಯ್ಯಗೌಡರು ನೀಡಿದಾಗಿ ಸುಯ್ದು, ಯಾರ ಕಡೆಯೂ ನೋಡದೇ ನೆಲವನ್ನೇ ನೋಡುತ್ತಾ ಒಳಗೆ ನಡೆದರು. ಅತ್ತೆಯೊಡನೆ ಮಗನನ್ನು ಎತ್ತಿಕೊಂಡು ನಿಂತಿದ್ದ ದೇವಮ್ಮ ತನ್ನ ಅಕ್ಕನಿಗೊದಗಿದ್ದ ಸಂಕಟದ ಸ್ಥಿತಿಗೆ ಕಣ್ಣೀರು ಸುರಿಸುತ್ತಾ, ಮೈದುನ ತಿಮ್ಮಪ್ಪ ಹೆಗ್ಗಡೆಯನ್ನು ಶಪಿಸಿದಳು. ತನ್ನ ತಮ್ಮನಿಂದ ಚೀಟಿ ತಂದಿದ್ದ ಐತನನ್ನು ಪ್ರತ್ಯೇಕವಾಗಿ ಮನೆಯ ಹಿತ್ತಲು ಕಡೆಯ ಬಾಗಿಲಿಗೆ ಕರೆದು, ಅವನಿಂದ ತಾನು ಕೇಳಿ ತಿಳಿದಿದ್ದ ವಿವರವನ್ನೆಲ್ಲಾ ಗದ್ಗದ ಕಂಠದಿಂದ ಅತ್ತೆ ದೊಡ್ಡಮ್ಮ ಹೆಗ್ಗಡಿತಿಯವರಿಗೂ ಹೇಳಿದಳು:

ಧರ್ಮವನ್ನು ಹಳೆಮನೆಗೆ ಕೆರೆದೊಯ್ದು ಬಿಟ್ಟು, ಕತ್ತಲೆಯಲ್ಲಿಯೆ ಕೋಣೂರಿಗೆ ಹಿಂದಿರುಗಿದ್ದ ಐತನು, ತಾನು ಹಳೆಪೈಕದ ಕೆಲಸದ ಹೆಣ್ಣಾಳು ಹೂವಿಯಿಂದಲೂ, ಬಾಯಿಗೆ ತೆಗೆದುಕೊಂಡು ಬಿಡಾರಕ್ಕೆ ಹೊರಟಿದ್ದ ಹಳೆಮನೆ ಕೇರಿಯ ಹೊಲೆಯರಿಂದಲೂ ಸಂಗ್ರಹಿಸಿದ್ದ ಸುದ್ದಿಯನ್ನು ಮುಕುಂದಯ್ಯನಿಗೆ ತಿಳಿಸಿದನಂತೆ. ಒಡನೆಯ, ತನ್ನ ಅಕ್ಕನನ್ನು ಹೇಗಾದರೂ ಉಳಿಸಬೇಕೆಂದು, ಮುಕುಂದಯ್ಯ ಅಣ್ಣ ರಂಗಪ್ಪಗೌಡರನ್ನೂ ಕೂಡಿಕೊಂಡು ಹಳೆಮನೆಗೆ

ಹೋಗಿ, ಕೋಣೆಯ ಬಾಗಿಲನ್ನು ಒಡೆದು ಒಳನುಗ್ಗಿ, ಪ್ರಜ್ಞೆತಪ್ಪಿ ಮಂಚದ ಮೇಲೆ ಬಿದ್ದುಕೊಂಡಿದ್ದ ರಂಗಮ್ಮನಿಗೆ ಶೈತ್ಯೋಪಚಾರ ಮಾಡಿ, ಧಾತು ಬರುವಂತೆ ಮಾಡಿದ್ದರಂತೆ!

* * *

## ೩೮

ಹೆಂಡತಿ ದೇಯಿ ತೀರಿಕೊಂಡಾಗ ಸೇರೆಗಾರ ಚೇಂಕ್ರ ಒಂದು ದಿನವೆಲ್ಲ ಶೋಕವನ್ನಾಚರಿಸಿದ್ದನು: ತನ್ನ ಮೂವರು ಚಿಕ್ಕಮಕ್ಕಳ ಬತ್ತಲೆ ಅರೆಬತ್ತಲೆಯ ಒಡಲುಗಳನ್ನು ತಬ್ಬಿ ತಬ್ಬಿ ಮುಂಡಾಡಿ ಕಣ್ಣೀರು ಕರೆದಿದ್ದನು. ನೆರೆಯ ಬಿಡಾರದ ಪಿಜಿಣನ ಹೆಂಡತಿ ಅಕ್ಕಣಿಯ ಸಹಾಯದಿಂದ ಮಕ್ಕಳಿಗೆಲ್ಲ ತಾನೆ ಗಂಜಿ ಉಣಬಡಿಸಿದ್ದನು. ಅಕ್ಕಣಿಯನ್ನು ಬಾಯಿತುಂಬ ಹೊಗಳಿ ತನ್ನ ಕೃತಜ್ಞತೆಯನ್ನು ನೂರುಸಾರಿ ಹೇಳಿಕೊಂಡಿದ್ದನು. ಜ್ವರ ಬಂದು ತನ್ನ ಬಿಡಾರದ ಮೂಲೆಯಲ್ಲಿ ಕಂಬಳಿ ಹೊದೆದು ಚಾಪೆಯ ಮೇಲೆ ಬಿದ್ದುಕೊಂಡಿದ್ದ ಪಿಜಣನ ಬಳಿ ಬಹಳ ಹೊತ್ತು ಕುಳಿತು ತನ್ನ ದುಃಖವನ್ನು ತೋಡಿಕೊಂಡು ತನ್ನ ಅನಾಥಮಕ್ಕಳಿಗೆ ಇನ್ನುಮುಂದೆ ಅಕ್ಕಣಿಯೆ ಗತಿ ಎಂದು ಅತ್ತಿದ್ದನು. ಹುಡುಗ ಐತನ ಮುಂದೆಯೆ ಇನ್ನೂ ಹುಡುಗಿಯತನವನ್ನೇ ದಾಟದಿದ್ದ ಅವಳ ಪುಟ್ಟ ಹೆಂಡತಿ ಪೀಂಚಲುಗೆ ದೈನ್ಯದಿಂದ ಕೈಮುಗಿದು, ತನ್ನ ತಬ್ಬಲಿ ಮಕ್ಕಳಿಗೆ ಅವಳೇ ತಾಯಿಯೆಂದೂ ಐತನೇ ತಂದೆ ಎಂದೂ, ಮುತ್ತಿನಂಥ ಹೆಂಡತಿ ಹೋದ ಮೇಲೆ ತಾನಿನ್ನು ಬದುಕುವ ಸಂಭವವಿಲ್ಲವೆಂದೂ, ನಾಟಕವಾಡುತ್ತಿದ್ದಾನೆಯೊ ಎಂಬಷ್ಟರಮಟ್ಟಿಗೆ ವರ್ತಿಸುತ್ತಿದ್ದನು. ಕೇಳಿದವರಿಗೆ ಸಂಕಟವುಕ್ಕುವಂತೆ. ಸೇರೆಗಾರನೆಂದು ಮೆರೆಯುತ್ತಿದ್ದವನು ಬರಿಯ ಕೆಲಸದಾಳುಗಳಾದ ತಮ್ಮ ಮುಂದೆ ಅಷ್ಟು ದೈನ್ಯದಿಂದ ಯಾಚಿಸುತ್ತಾ ಶೋಕಿಸುತ್ತಿದ್ದುದನ್ನು ಕಂಡು, ಐತನೊಬ್ಬನು ವಿನಾ, ಸರ್ವರೂ ಚೇಂಕ್ರನ ಸತೀಪ್ರೇಮಕ್ಕೂ ಸಂಕಟಕ್ಕೂ ಸಭ್ಯತೆಗಳು ಬೆರಗಾಗಿ, ಮರುಗಿ ಮಾರುಹೋಗಿದ್ದರು.

ಆದರೆ ಮಾರನೆಯ ದಿನವೆ ಚೇಂಕ್ರನ ಮನಸ್ಥಿತಿ ಬದಲಾಯಿಸಿತ್ತು. ಮಧ್ಯಾಹ್ನದವರೆಗೂ ಹಾಗೂ ಹೀಗೂ ಕಷ್ಟಪಟ್ಟು ಬಿಡಾರದ ಶೂನ್ಯತೆಯನ್ನು ಸಹಿಸಿಕೊಂಡಿದ್ದನು. ಅಪರಾಹ್ನದಲ್ಲಿ ಅವನಿಂದ ತಡೆಯಲಾಗಲಿಲ್ಲ. ಬಿಡಾರದ ತುಂಬ ಬಿಕೋ ತುಂಬಿದಂತಾಯ್ತು. ಸತ್ತುಹೋದ ಹೆಂಡತಿಯ ಬಡ ಸಂದೂಕವನ್ನು ಬೀಗ ಮುರಿದು ಬಾಯಿ ತೆರೆದು, ಹುಡುಕಿ ಮಾಡಿ, ಕೈಯಾಡಿಸಿದವನು. ಗತಿಸಿದವಳ ಬಡ ಒಡವೆಯ ಚೂರುಪಾರನ್ನು ಬೊಕ್ಕಣ್ಣಕ್ಕೆ ಹಾಕಿಕೊಂಡನು. ಅವಳದ್ದೆ ಆಗಿದ್ದು ಅವಳು ಉಡದೇ ಮಾಡದೇ ಇಟ್ಟೇ ರಕ್ಷಿಸಿಕೊಂಡು ಬಂದಿದ್ದ ಒಂದು, ಇದ್ದಿದ್ದರಲ್ಲಿ ಚೆನ್ನಾಗಿದ್ದು ವಿಶೇಷ ಸಂದರ್ಭಗಳಲ್ಲಿ ಉಡಲು ಬೇಕೆಂದು ಜೋಪಾನವಾಗಿಟ್ಟಿದ್ದ, ಸೀರೆಯನ್ನು ಹೊರತೆಗೆದು, ಕಣ್ಣೀರು ಸುರಿಸುತ್ತಲೇ ತನ್ನ ಮಕ್ಕಳಿಗೆ ಹೊರಗೆ ತಲೆಬಾಚುತ್ತಿದ್ದ ಅಕ್ಕಣಿಯನ್ನು ಕರೆದು, ಕಾಣಿಕೆ ನೀಡಿದನು, ಅವಳಿಗೆ ತನ್ನ ಮಕ್ಕಳ ರಕ್ಷಣೆಯ ಹೊಣೆಗಾರಿಕೆ ನೀಡುವಂತೆ. ಆಮೇಲೆ ಅವನ ಪದ್ಧತಿಯಂತೆ, ತೆಂಗಿನೆಣ್ಣೆ ಹಚ್ಚಿ ತಲೆಬಾಚಿಕೊಂಡು, ತನಗೆ ಸ್ವಲ್ಪ ಕೆಲಸವಿದೆಯೆಂದೂ ಕಪ್ಪಾಗುವುದರೊಳಗೆ ಬಂದು ಬಿಡುತ್ತೇನೆಂದೂ ಅಕ್ಕಣಿಗೆ ಹೇಳಿ, ಕಮ್ಮಾರಸಾಲೆಯ ಕಳ್ಳಂಗಡಿಯ ಕಡೆಗೆ ಹೊರಟು ಹೋದನು.

ಮತ್ತೆ ಎರಡು ದಿನ ಇತ್ತಕಡೆ ತಲೆ ಹಾಕಲಿಲ್ಲ!... ಆ ದಿನ ಕತ್ತಲೆವರೆಗೂ ನೋಡಿ ನೋಡಿ ಅಕ್ಕನಿ, ತಮ್ಮ ಕಾಣೆಯಾದ ಅಬ್ಬೆಯನ್ನು ನೆನೆನೆದು ಅಳುತ್ತಿದ್ದ ಅವನ ಮಕ್ಕಳಿಗೆ ಗಂಜಿಹಾಕಿ, ತನ್ನ ಬಿಡಾರದಲ್ಲೇ ಅವರನ್ನು ಮಲಗಿಸಿಕೊಂಡಿದ್ದಳು.

ಮೂರನೆಯ ದಿನ ಚೇಂಕ್ರ ಬಿಡಾರಕ್ಕೆ ಹಿಂದಿರುಗಿದನು. ಅವನ ಮುಖದಲ್ಲಿ ಶೋಕದ ಛಾಯೆ ಕೂಡ ಇರಲಿಲ್ಲ. ಬದಲಾಗಿ ಗೆಲುವಿನ ಕಳೆಯೆ ಕಾಣಿಸುತ್ತಿತ್ತು. ಅಳುತ್ತಾ ಬಳಿಸಾರಿದ ಮಕ್ಕಳಿಗೆ ತಾನು ತಂದಿದ್ದ ಓಲೆಬೆಲ್ಲವನ್ನು ಕೊಟ್ಟು, ಸಿಂಬಳ ಸುರಿಯುತ್ತಿದ್ದ ಮೂಗು ಮುಸುಡಿಗಳನ್ನು ಒರಸಿ, ಸಮಾಧಾನ ಮಾಡಿದನು. ಅಕ್ಕಣಿಗೆ ತಾನು ಕಣ್ಣಾಪಂಡಿತರ ಜೊತೆಗೂಡಿ ಮೇಗರ ವಳ್ಳಿಯಲ್ಲಿ ಪಾದ್ರಿ ಕಟ್ಟಿಸಲಿರುವ ಇಸ್ಕೂಲಿನ ಕಂತ್ರಾಟು ಹಿಡಿದಿರುವುದಾಗಿಯೂ, ಒಂದು ನಾಲ್ಕು ದಿನ ಅಲ್ಲಿಯೆ ಇರಬೇಕಾಗಿ ಬರುತ್ತದೆಂದೂ, ನಡುನಡುವೆ ಎರಡೂ ಮೂರು ದಿನಕ್ಕೊಮ್ಮೆ ಬಂದು ಹೋಗುತ್ತಿರುವುದಾಗಿಯೂ ಹೇಳಿ, ಅವಳ ಕೈಗೆ ತನ್ನ ಮಕ್ಕಳ ಬಾಬ್ತು ಖರ್ಚಿಗಾಗಿ ಸ್ವಲ್ಪ ಹಣವನ್ನು ಕೊಟ್ಟನು. ಹಣವನ್ನೆ ಮುಟ್ಟಿ ಕಾಣದಿದ್ದ ಅವಳು ಚೇಂದ್ರ ಸೇರೆಗಾರರ ಶ್ರೀಮಂತತೆಗೆ ಬೆರಗಾದಳು. ದೇಯಿಯ ಗಂಡ ಇಷ್ಟು ಸಾಹುಕಾರರಾಗುವ ಸಮಯಕ್ಕೆ ಸರಿಯಾಗಿ ಅವಳು ಸಾಯಬೇಕ? ಅಯ್ಯೋ ಅವಳಿಗೆ ಅದೃಷ್ಟವಿಲ್ಲದೆ ಹೋಯಿತಲ್ಲಾ! ಅವಳೇ ಇದ್ದಿದ್ದರೆ ಎಷ್ಟು ಸಂತೋಷಪಡುತ್ತಿದ್ದಳು? ಎಂದುಕೊಂಡಳು.

ಹೀಗೆ ಚೇಂಕ್ರ ಸೇರೆಗಾರನು ಆಗಾಗ್ಗೆ ಬಿಡಾರಕ್ಕೆ ಬಂದು, ಒಂದು ಹಗಲೋ ಒಂದು ಇರುಳೋ ತಂಗಿದ್ದು, ಮತ್ತೆ ಮೇಗರವಳ್ಳಿಗೆ ಕಂತ್ರಾಟು ಕೆಲಸಕ್ಕೆ ಹೋಗುತ್ತೇನೆ ಎಂದು ಕಣ್ಮರೆಯಾಗುತ್ತಿದ್ದನು. ಅವನು ತಮ್ಮ ಗದ್ದೆ ತೋಟದ ಕೆಲಸಕ್ಕೆ ಬರಬೇಕು; ಇಲ್ಲಾ? ನಮ್ಮ ಸಾಲಾನೆಲ್ಲ ತೀರಿಸಿ, ಬಿಡಾರ ಖಾಲಿ ಮಾಡಬೇಕು ಎಂದು ಐತನ ಕೈಯಲ್ಲಿ ಹೇಳಿಕಳಿಸಿದರು.

ಒಂದು ದಿನ ಅಕ್ಕಣಿ ತನ್ನ ಖಾಯಿಲೆ ಗಂಡನಿಗೆ ನಿತ್ಯವೂ ಬಡಿಸುವಂತೆ ಕುಚ್ಚಲಕ್ಕಿ ಗಂಜಿ ಮತ್ತು ಒಂದು ಹಸಿಮೆಣಸಿನಕಾಯಿ ಬಡಿಸುವುದಕ್ಕೆ ಬದಲಾಗಿ ಹಚ್ಚನಕ್ಕಿ ಅನ್ನವನ್ನೂ ಸ್ವಾರ್ಲುಮೀನು ಚಟ್ನಿಯನ್ನೂ ಬೆರಕಜೆಸೊಪ್ಪಿನ ಸಾರನ್ನೂ ನಂಚಿಕೊಳ್ಳುವುದಕ್ಕೆ ಮೇಗರವಳ್ಳಿ ಅಂತ್ಯಕ್ಕಸೆಡ್ತಿಯವರ ಮನೆಯಿಂದ ತಂದದ್ದು ಎಂದು ಚೇಂಕ್ರ ತಂದುಕೊಟ್ಟಿದ್ದ ಕಳಲೆ ಉಪ್ಪಿನ ಕಾಯನ್ನೂ ಬಡಿಸಲು, ಪಿಜಿಣ ಆಶ್ಚರ್ಯಚಕಿತನಾಗಿ ಆನಂದದ ಗರಬಡಿದವನಂತೆ ಹೆಂಡತಿಯ ಸುಧಾರಿಸಿದ ಬಟ್ಟೆಬರೆ ಕಡೆಯೂ ನೋಡಿ “ಎಲ್ಲಿಂದ ಬಂತೇ ಇದೆಲ್ಲಾ?” ಎಂದು ಕೇಳಿದನು, ಬೆರಗುಸಿರೆಳೆದು.

“ಏನೋ ಅವರ ಮಕ್ಕಳನ್ನ ನೋಡಿಕೊಳ್ತೇನೆ ಅಂತಾ ಚೇಂಕ್ರ ಸೇರೆಗಾರು ತಂದು ಕೊಟ್ಟದ್ದು.”

“ಅಂತೂ ಹೆಂಡ್ತಿ ಸತ್ತಮೇಲಾದ್ರೂ ಅವನಿಗೆ ದೇವ್ರು ಒಳ್ಳೆಬುದ್ಧಿ ಕೊಟ್ನಲ್ಲಾ!... “

“ಮೇಗ್ರೊಳ್ಳಿ ಕಣ್ಣಾಪಂಡಿತ್ರು ಕೊಟ್ರು ಅಂತಾ ನಿಮ್ಮ ಜಡಕ್ಕೂ ಮದ್ದು ತಂದು ಕೊಟ್ಟಾರೆ... “

“ಎಲ್ಲಿ ಮತ್ತೆ? ನೀ ಕೊಡಲೇ ಇಲ್ಲಾ!”

“ಅಂಬಲಿ ಉಂಡಮ್ಯಾಲೆ ತಗೊಳ್ಳಬೇಕಂತೆ. ಆಮ್ಯಾಲೆ ಕೊಡ್ತೀನಿ.”

ಅಂತೂ ಆ ಊಟ ಔಷಧಿಗಳ ಪ್ರಭಾವದಿಂದಲೋ ಏನೋ ಪಿಜಿಣನಿಗೆ ಹೊಟ್ಟೆ ಗೆಡ್ಡೆಯ ರೋಗ ಪೂರ್ತಿ ಗುಣವಾಗದಿದ್ದರೂ ಗೌಡರ ಮನೆಯ ಕೆಲಸಕ್ಕೆ ಹೋಗುವಂತಾದನು. ಅಕ್ಕಣಿಯೂ ಆಗೊಮ್ಮೆ ಈಗೊಮ್ಮೆ ಗೌಡರ ಹೆದರಿಕೆಗಾಗಿ ಕೆಲಸಕ್ಕೆ ಹೋಗುತ್ತಿದ್ದರೂ ಚೇಂಕ್ರ ಸೇರಗಾರನ ಉದಾರ ಕೊಡುಗೆಯಿಂದಾಗಿ ಅವಳಿಗೆ ಕೆಲಸಕ್ಕೆ ಹೋಗಲೇಬೇಕಾದ ಅವಶ್ಯಕತೆ ಅಷ್ಟಾಗಿ ಇರಲಿಲ್ಲ. ಅಲ್ಲದೆ ಸೇರೆಗಾರನ ಮೂರು ಮಕ್ಕಳ ಯೋಗಕ್ಷೇಮದ ಭಾರ ಬೇರೆ ಅವಳ ಮೇಲೆ ಬಿದ್ದಿತ್ತು.

ಮಕ್ಕಳಿಲ್ಲದ ಅಕ್ಕಣಿ ಚೇಂಕ್ರನ ಮಕ್ಕಳಿಗೆ ಎರಡನೆಯ ತಾಯಿಯಾಗಿ, ಅವರನ್ನು ಅಕ್ಕರೆಯಿಂದ ನೋಡಿಕೊಳ್ಳುತ್ತಾ, ಅವನ ಬಿಡಾರದ ವಹಿವಾಟುಗಾರಳಾಗಿ, ತುಸು ಉತ್ತಮವಾದ ಬಟ್ಟೆಬರೆಗಳಿಂದ ಮೆರೆಯತೊಡಗಿದುದನ್ನು ನೋಡುತ್ತಿದ್ದ ಪೀಂಚಲುಗೆ ಕೆಲವು ದಿನಗಳಲ್ಲಿಯೆ ಏನೋ ಅನುಮಾನ ಸುಳಿಯತೊಡಗಿತು. ಆದರೆ ಅದುವರೆಗೂ ತನಗೆ ಗೊತ್ತಿದ್ದ ಅಕ್ಕಣಿ ಯಕ್ಕನ ಮೇಲೆ ಅಂತಹ ಅಪವಾದವನ್ನು ಹೊರಿಸಲು ಅವಳ ಮನಸ್ಸು ಬಹಿರಂಗವಾಗಿ ಒಪ್ಪಲಿಲ್ಲ. ಆದರೂ ಅವಳ ಅಂತರಂಗದಲ್ಲಿ ಆ ಕಹಿ ಕೊರೆಯತೊಡಗಿತ್ತು. ಅಲ್ಲದೆ ಅಕ್ಕಣಿಯ ಗಂಡ ಪಿಜಿಣನೇ ಚೇಂಕ್ರ ಸೇರೆಗಾರನನ್ನು ಬಾಯಿ ತುಂಬ ಹೊಗಳುತ್ತಾ ಮೆಚ್ಚುಗೆಯಿಂದಿರುವಾಗ ನಚ್ಚಿನ ಅವನ ಹೆಂಡತಿಯ ಮೇಲೆ ಯಾರಿಗೆ ತಾನೆ ದೂರು ಹೊರಿಸಲು ಧೈರ್ಯವಾದೀತು?

ಆದರೂ ಪೀಂಚಲು ಒಂದು ರಾತ್ರಿ ತನ್ನ ಗಂಡನೊಡನೆ ಏಕಾಂತದ ಸರಸದಲ್ಲಿದ್ದಾಗ, ಅದೂ ಇದೂ ಮಾತನಾಡುತ್ತಾ ನಾಲಿಗೆ ಸಡಿಲಗೊಂಡು, ಅಕ್ಕಣಿಯ ವಿಚಾರವಾಗಿದ್ದ ತನ್ನ ಅನುಮಾನವನ್ನು ಐತನ ಕಿವಿಗೆ ಪಿಸುಗುಟ್ಟಿದಳು. ಐತನಿಗೂ ಅಂತಹುದೇ ಅನುಮಾನ ಅಂತಹುದೇ ಅನುಮಾನ ತೋರತೊಡಗಿತ್ತೆಂದು ಅವಳಿಗೆ ಗೊತ್ತಾದ ಮೇಲೆ ನೆರೆಯ ಬಿಡಾರಗಳ ಕಡೆ ಸ್ವಲ್ಪ ವಿಶೇಷ ಆಸಕ್ತಿಯಿಂದ ಕಣ್ಣು ಕಿವಿ ಇಡತೊಡಗಿದಳು.

ಐತ ಒಂದು ಸಂಜೆ ಒಡೆಯರ ತೋಟದ ಕೆಲಸ ಪೂರೈಸಿ ಬಿಡಾರಕ್ಕೆ ಹಿಂದಿರುಗಿದವನು, ಗಂಜಿ ಕಾಯಿಸುತ್ತಿದ್ದ ತನ್ನ ಹುಡುಗಿ ಹೆಂಡತಿಯೊಡನೆ ಸರಸಸಲ್ಲಾಪದಲ್ಲಿದ್ದನು. ಕೆಲದಿನಗಳಿಂದ ಅವಳಿಗೆ ಬೆಳಿಗ್ಗೆ ಎದ್ದಾಗ ವಾಕರಿಕೆ ಯಾಗುತ್ತಿದ್ದುದನ್ನೇ ಕುರಿತು ಇಬ್ಬರೂ ವಿನೋದವಾಡುತ್ತಿದ್ದರು. ಹೆಂಡತಿಗೆ ದಿನವೂ ಬೆಳಿಗ್ಗೆ ವಾಂತಿಯಾಗುತ್ತಿದ್ದುದನ್ನು ಕಂಡು ಐತನಿಗೆ ಗಾಬರಿಯಾಗಿತ್ತು. ಆ ದಿನ ಅವನು ಕೋಣೂರು ಮನೆಗೆ ಕೆಲಸಕ್ಕೆ ಹೋಗಿದ್ದಾಗ ಮುಕುಂದಯ್ಯನ ತಾಯಿ, ಕಾಗಿನಹಳ್ಳಿ ಅಮ್ಮ ಎಂದು ಎಲ್ಲರೂ ಕರೆಯುತ್ತಿದ್ದ ದಾನಮ್ಮ ಹೆಗ್ಗಡಿಯವರು, ಅವನ ಹತ್ತಿರ ತೋಟದಿಂದ ‘ಬಳ್ಳೆ’ ತರಲು ಹೇಳಿದರು. ಐತ ಅಡಕೆ ತೋಟಕ್ಕೆ ಹೋಗಿ ಒಂದು ಹೊರೆ ಊಟಕ್ಕೆ ಉಪಯೋಗವಾಗುವ ಬಾಳೆಯ ಎಲೆಗಳನ್ನು ತಂದು, ಮನೆಯ ಹಿತ್ತಲು ಕಡೆ ಬಾಗಿಲ ಬಳಿ ಇಟ್ಟನು. ಕಾಗಿನಹಳ್ಳಿ ಅಮ್ಮ, ಹಾಗೆ ತಾವು ಹೇಳಿದ ಏನಾದರೂ ಸಣ್ಣಪುಟ್ಟ ಕೆಲಸ ಮಾಡಿಕೊಟ್ಟವರಿಗೆ ಕೊಡುವ ಪದ್ಧತಿಯಂತೆ, ಐತನಿಗೂ ಮಜ್ಜಿಗೆ ಉಪ್ಪಿನಕಾಯಿ ಕೊಟ್ಟು, ನಗುತ್ತಾ ಹೇಳಿದ್ದರು: “ಏನೋ ಹುಡುಗಾ, ಹುಡುಗಿ ಕಟ್ಟಿಕೊಂಡು ಇನ್ನೂ ಒಂದು ವರ್ಷಾನೂ ಆಯ್ತೋ ಇಲ್ಲೋ ಅಷ್ಟರಲ್ಲೇ....” ಎಂದು ಅರ್ಧಕ್ಕೆ ನಿಲ್ಲಿಸಿ, ವ್ಯಂಗ್ಯವಾಗಿ ತನ್ನ ಕಡೆಗೆ ನೋಡಿ ಹಾಸ್ಯ ಮಾಡುವಂತಿದ್ದುದನ್ನು ಕಂಡು ಐತನಿಗೆ ಮುಖವೆಲ್ಲಾ ಪೆಚ್ಚಾಯಿತು. ಅವನಿಗೆ ಅವರ

ವ್ಯಂಗ್ಯದ ಇಂಗಿತ ಹೊಳೆಯಲಿಲ್ಲ. ಪೀಂಚಲುಗೆ ವಾಂತಿಯಾಗುತ್ತಿರುವುದರಿಂದ ಅವಳನ್ನು ಏನೋ ಅಪಾಯಕ್ಕೆ ತಾನು ಈಡುಮಾಡಿಬಿಟ್ಟಿದ್ದೇನೆ ಎಂದು ಅಮ್ಮ ನಿಂದಿಸುತ್ತಿರಬೇಕೆಂದೇ ಊಹಿಸಬಿಟ್ಟನು!

ತಪ್ಪೊಪ್ಪಿ ಕ್ಷಮೆಯನ್ನು ಅಂಗಲಾಚಿ ಬೇಡುವವನಂತೆ ಗಟ್ಟದ ತಗ್ಗಿನವರ ರೀತಿಯಿಂದ "ನಾನು ಏನು ಮಾಡಲಿ, ಅಮ್ಮಾ? ಅವಳು ಬೇಡ ಎಂದರೂ ಕೇಳದೆ ಅಲ್ಲಿ ಇಲ್ಲಿ ಹೋಗುತ್ತಾಳೆ; ಅದನ್ನೂ ಇದನ್ನೂ ಸಿಕ್ಕಿದ್ದನ್ನೆಲ್ಲಾ ತಿನ್ನುತ್ತಾಳೆ. ಮರಹತ್ತಿ ಪ್ಯಾರಲ ಕಡ್ಡೇನೂ ತಿನ್ತಾಳೆ! ಆವೊತ್ತು ತ್ವಾಟದಾಚೆ ದರೆಯಲ್ಲಿ ಜೇನುಕಿತ್ತು ಮೋರೆ ಊದಿಸಿಕೊಂಡಿದ್ದಳಲ್ಲಾ! ಈಗ ವಾಂತಿ ಹತ್ತಿ ಬಿಟ್ಟಿದೆ, ದಿನಾ ಹೊತ್ತಾರ! ದಿನಾ ಬೈಗಿನಹೊತ್ತು ಅದೆಲ್ಲಿಗೋ ಹೋಗ್ತಾಳೆ, ಮದ್ದಿಗೆ ಎಲಿಕೆವಿ ಸೊಪ್ಪ ತರಲಿಕ್ಕಂತೆ!..... ನೀವಾದ್ರೂ ಹೇಳಿ, ಅಮ್ಮಾ, ಏನು ಮಾಡುವುದು ಆ ಖಾಯಿಲೆಗೆ?... "

"ಥೂ ಹುಡುಗಾ! ನೀನೆಂಥಾ ಮಂಗನೋ! ನಿಂಗೇನು ಅಷ್ಟೂ ತಿಳಿಯಲಿಕ್ಕಿಲ್ಲಾ? ಅವಳಿಗೆ ಏನೂ ಕಾಯಿಲೆ ಅಲ್ಲೊ, ಬೆಪ್ಪಾ! ನಾನೇ ಹೇಳಿದ್ದೋ ಆ ಸೊಪ್ಪು ತಂದು, ಹಸೋಳೆ ಮಾಡಿಕೊಳ್ಳಾಕೆ!"

ರೋಗದ ವಿಚಾರ ಕೇಳಿ, ಸಂಕಟಪಟ್ಟು, ಸಹಾನುಭೂತಿ ತೋರಿಸುವುದಕ್ಕೆ ಬದಲಾಗಿ, ಹೆಗ್ಗಡ್ತಮ್ಮೋರು ಬೈದು ಮೂದಲಿಸುತ್ತಿರುವುದನ್ನು ಕಂಡು ಐತ ಬೆಪ್ಪಾಗಿ "ಮತ್ತೆ? ಯಾಕಮ್ಮ ಹಾಂಗೆ ವಾಂತಿ ಮಾಡಿಕೊಳ್ತಾಳಲ್ಲಾ?" ಎಂದನು.

"ಅವಳಿಗೆ ನೀರು ನಿಂತದೆ ಕಣೋ, ಬೆಪ್ಪು ಹುಡುಗಾ!" ಎಂದು ನಕ್ಕು ಸರಕ್ಕನೆ ತಿರುಗಿ ಒಳಗೆ ಹೋಗಿದ್ದರು. ಐತ ಅದನ್ನೆಲ್ಲ ಅರ್ಥಮಾಡಿಕೊಳ್ಳಲು ಪ್ರಯತ್ನಿಸಿ, ಆಶ್ಚರ್ಯಪಡುತ್ತಾ ಬಿಡಾರಕ್ಕೆ ಹಿಂದಿರುಗಿದ್ದನು.

"ನೀರು ನಿಂತದೆ ಅಂದರೆ ಏನೇ?" ಗಂಜಿ ಬೇಯಿಸುತ್ತಾ ಒಲೆಯ ಕಡ ಮುಖ ಮಾಡಿ ಕುಳಿತಿದ್ದ ಹೆಂಡತಿಗೆ ಪ್ರಶ್ನೆ ಹಾಕಿದ್ದನು ಐತ. ಅವಳು ಮುಖ ಇತ್ತ ತಿರುಗಿಸದೆ ತನ್ನ ಕೆಲಸದಲ್ಲಿ ಮಗ್ನಳಾಗಿ:

"ನೀರು ನಿಂತದೆ ಆಂದ್ರೆ? ನೀರು ನಿಂತದೆ ಅಂತಾನೆ ಅರ್ಥ! ತ್ವಾಟದ ಹಳ್ಳದಾಗೆ ನೋಡಿಲ್ಲೇನು ನೀನು ನೀರು ನಿಂತಿರೋದನ್ನ?" ಎಂದಳು.

ಐತನಿಗೆ ಸ್ವಲ್ಪ ಸಿಟ್ಟು ಬಂದಂತಾಯ್ತು, ಹಳ್ಳದಲ್ಲಿ ನೀರು ನಿಂತಿರುವ ವಿಚಾರವನ್ನು ಇವಳಿಂದ ತಾನು ಕೇಳಿ ತಿಳಿದುಕೊಳ್ಳಬೇಕಾಗಿತ್ತೇ ಎಂದು.

"ಅದನ್ನಲ್ಲ ನಾ ಕೇಳಿದ್ದು. ಹೆಗ್ಗಡ್ತಮ್ಮೋರು ಹೇಳಿದ್ರಲ್ಲಾ ನಿಂಗೆ ನೀರು ನಿಂತದೆ ಅಂತಾ, ಅದನ್ನ ನಾ ಕೇಳಿದ್ದು."

ಪೀಂಚಲು ತನ್ನ ಗಂಡನ ಕಡೆಗೆ ತಿರುಗದೆಯೆ, ತಡೆಯಲಾರದೆ, ಕಿಸಕ್ಕನೆ ನಕ್ಕುಬಿಟ್ಟಳು, ಐತನ ದಡ್ಡತನದ ಕಪಾಳಕ್ಕೆ ಹೊಡೆಯುವಂತೆ.

"ಯಾಕೆ? ನಗುತ್ತೀಯಾ?" ಬಿಗುದನಿಯಿಂದಲೆ ಕೇಳಿದನು ಐತ.

ಪೀಂಚಲು ಮುಖ ತಿರುಗಿಸಿ, ಗಂಡನನ್ನು ಪ್ರೀತಿಯುಕ್ಕುವಂತೆ ವಿನೋದದಿಂದ ದೃಷ್ಟಿಸಿ ನೋಡಿ, ನಾಚಿಕೆಯಿಂದ ಮುಖದ ಮುದ್ದು ಇಮ್ಮಡಿಯಾಯಿತೆಂಬಂತೆ ಗದರಿಸಿದಳು. ಗಂಡನೆಂಬ ಗೌರವಕ್ಕೆ ಇದ್ದಕ್ಕಿದ್ದ ಹಾಗೆ ಬಹುವಚನವನ್ನುಪಯೋಗಿಸಿ:

"ನಿಮಗೆ ಯಾಕೆ ಆ ಪಂಚಾಯ್ತಿ? ಗಂಡಸರಿಗೆ? ಹೆಗ್ಗಡ್ತಮ್ಮೋರ ಹತ್ರ ಏನೇನೆಲ್ಲಾ ಆಡಿಬಿಟ್ಟಿರೋ ಏನೋ? ಇನ್ನು ನಾನು ಮನೆಗೆ ಹೋದಾಗ ಎಲ್ಲರ ಮುಂದೆ ಹೇಳಿಕೊಂಡು ಏನೆಲ್ಲ ನಗುತ್ತಾರೋ ದೊಡ್ಡ ಅಮ್ಮ? ನಾನು ನಾಚಿಕೆಯಿಂದ ಮುಖ ಎತ್ತುವುದು ಹೇಂಗೆ?"

ಅದುವರೆಗೂ ತನಗೆ ತಿಳಿಯದಿದ್ದ ಯಾವುದೋ ಗುಟ್ಟಿನ ಅರಿವು ತಟಕ್ಕನೆ ಮನಕ್ಕೆ ಮೂಡಿದಂತಾಗಿ ಐತನ ಕಣ್ಣು ಅರಳಿ ಬೆಳಗಿದುವು. ಮೊಗದಲ್ಲಿ ಮುಗ್ಧ ಮಂದಸ್ಮಿತವೊಂದು ತುಟಿಗಳೆಡೆ ಹೊಮ್ಮಿತು. ಯಾರೂ ಮೈಮೇಲೆ ನೀರೆರಚಿದಂತಾಗಿ ರೋಮಾಂಚನವಾಯಿತು. ತನ್ನ ಪುಟ್ಟ ಹೆಂಡತಿಯನ್ನು ಎದ್ದು ಅಪ್ಪಿಕೊಂಡು ಬಿಡಬೇಕು ಎನ್ನಿಸಿತು. ಅದರೆ ಪೀಂಚಲುವಿನ ಭಂಗಿ ಅಷ್ಟು ಉತ್ತೇಜನಕರವಾಗಿಲ್ಲದುದನ್ನು ಗ್ರಹಿಸಿ, ತನ್ನ ಉಲ್ಲಾಸವನ್ನೆಲ್ಲ "ಓಹೋ! ಅಷ್ಟೇನೆ? ಈಗ ಗೊತ್ತಾಯ್ತು! ಕಳ್ಳಿ!" ಎಂಬ ಉದ್ಗಾರದಲ್ಲಿ ಮರೆಸಿಬಿಟ್ಟು "ಸೇರಿಗಾರ್‍ರ ಸವಾರಿ ಬಂದ್ಹಾಂಗೆ ಕಾಣ್ತದೆ, ಅವರ ಬಿಡಾರಕ್ಕೆ ಹೋಗಿ ಬರ್ತೀನಿ" ಎಂದು ಎದ್ದನು.

"ಈಗ ಯಾಕೆ ನೀವು ಹೋಗುವುದು? ಅಲ್ಲಿ ಅಕ್ಕಣಿ ಮಕ್ಕಳು ಎಲ್ಲ ಇರಲಕ್ಕು!" ಧ್ವನಿಪೂರ್ಣವಾಗಿಯೆ ಇತ್ತು ಪಿಂಚಲು ಹೇಳಿದ್ದು.

"ಗೌಡರು ಕಂಡಾಬಟ್ಟೆ ಬೈದರಲ್ಲಾ ಇವತ್ತು, ನನಗೆ? ಅವರು 'ಅವೊತ್ತು ನಾ ಹೇಳಿದ್ದನ್ನ ಚೇಂಕ್ರನಿಗೆ ಹೇಳಿದೆಯೇನೋ?' ಅಂದರು. 'ಇಲ್ಲಾ, ಇನ್ನೂ ಅವನು ಸಿಕ್ಕಿಲ್ಲ' ಅಂದೆ. 'ನೀವೆಲ್ಲ ಒಂದೇ ಜಾತಿ. ನನ್ನ ಹತ್ರ ಠಕ್ಕು ಮಾಡ್ತೀಯಾ' ಅಂದುಬಿಟ್ಟರು. ಇವತ್ತಾದ್ರೂ ಹೋಗಿ ಹೇಳಿಬಿಡ್ತೀನಿ.

ಐತ ಹೊರಟುಹೋದ ಮೇಲೆ, ಪೀಂಚಲು ಮುಗುಳು ನಗುತ್ತಲೇ ಎಸರು ಕುದಿಯುತ್ತಿದ್ದ ಒಲೆಯ ಕಡೆಗೆ ತಿರುಗಿ, ತನ್ನ ಹೊಟ್ಟೆಯ ಕಡೆ ನೋಡಿಕೊಂಡು, ಯಾವುದೋ ಒಂದು ಹಿಗ್ಗನ್ನು ಮೆಲುಕು ಹಾಕುವಳಂತೆ ನಿಮೀಲಿತನೇತ್ರೆಯಾದಳು.

ಐತ ಬೈಗು ಹೊತ್ತಿನ ಮುಂಗಪ್ಪಿನಲ್ಲಿ, ಪಿಜಿಣನ ಕತ್ತಲು ಕವಿದಿದ್ದ ಬಿಡಾರವನ್ನು ದಾಟಿ, ಚೇಂಕ್ರನ ಬಿಡಾರದ ಬಾಗಿಲಿಗೆ ಬಂದಾಗ ಅದರ ಒಳಗಡೆಯಿಂದ ಮಾತಿನ ಗುಜುಗುಜು ಕೇಳಿಸಿತು. ಬಾಗಿಲ ಹೊರಗಿದ್ದ ಮಬ್ಬು ಬೆಳಕಿನಲ್ಲಿ ಕೋಳಿತಪ್ಪುಳದ ರಾಶಿ ಚೆದರಿಬಿದ್ದಿದ್ದನ್ನು ಗಮನಿಸಿದನು. ಕೋಳಿ ಸುಡುವ ವಾಸನೆಯೂ ಮೂಗಿಗೆ ಬಿತ್ತು, ಹಿತಕರವಾಗಿಯೆ! ಮುಚ್ಚಿದ್ದ ಬಿದಿರು ಕಣೆಯ ತಟ್ಟಿಬಾಗಿಲನ್ನು ತಳ್ಳಿದನು. ಅದು ತೆರೆದಾಗ ಒಳಗೆ ದೂರದ ಮೂಲೆಯಲ್ಲಿ ಉರಿಯುತ್ತಿದ್ದ ಬೆಂಕಿಯ ಒಲೆಯ ಬಳಿ ಅಕ್ಕಣಿ ಇಡೀ ಕೋಳಿಯನ್ನು ಸುಡುತ್ತಿದ್ದುದನ್ನೂ, ಬಾಗಿಲಿಗೆ ಹತ್ತಿರವಾಗಿ ಹಣತೆ ದೀಪದ ಮಬ್ಬು ಬೆಳಕಿನಲ್ಲಿ ಚೇಂಕ್ರ ತನ್ನ ಮೂರು ಮಕ್ಕಳೊಡನೆ ಏನೋ

ವಿನೋದವಾಡುತ್ತಿದ್ದುದನ್ನೂ ನೋಡಿ ಪ್ರವೇಶಿಸದೆ, ಬಾಗಿಲಲ್ಲಿಯೆ, ಅದನ್ನು ತುಂಬಿಕೊಂಡೆ, ನಿಂತನು. ಏತಕ್ಕೂ ಅವನಿಗೆ ಒಳಕ್ಕೆ ಹೋಗಲು ಸಂಕೋಚವಾಯಿತು.

ತಲೆಯೆತ್ತಿ ನೋಡಿದ ಚೀಂಕ್ರ "ಯಾರು? ಐತನೇನೋ?" ಎಂದು, ಎದ್ದು, ಬಾಗಿಲಿಗೆ ಬಂದನು. ಅವನ ಆ ಚಲನೆಯಲ್ಲಿ, ತನ್ನ ಏಕಾಂತದ ನೆಮ್ಮದಿಗೆ ಅನ್ಯರಾರೂ ಒಳನುಗ್ಗಿ ಭಂಗ ತರದಿರಲಿ ಎಂಬ ಇಂಗಿತವಿತ್ತು.

"ಸೊಲ್ಪ ಮಾತಾಡುವುದಿತ್ತು, ಸೇರುಗಾರ್ರೆ" ಎಂದು ಐತ ಹಿಂದಕ್ಕೆ ಕತ್ತಲಿಗೇ ಸರಿದನು. ಚೀಂಕ್ರನೂ ಅವನನ್ನು ಹಿಂಬಾಲಿಸಿದನು. ಇಬ್ಬರಿಗೂ ಪರಸ್ಪರ ಆಕಾರ ವಿನಾ ಒಬ್ಬರ ಮುಖ ಇನ್ನೊಬ್ಬರಿಗೆ ಕಾಣಿಸುತ್ತಿರಲಿಲ್ಲ.

ಐತ ಗೌಡರು ತನ್ನೊಂದಿಗೆ ಹೇಳಿ ಕಳುಹಿಸಿದ್ದ 'ಇಲ್ಲಾ ಒಂದೇ ಕೆಲಸಕ್ಕೆ ಬರಬೇಕು. ಇಲ್ಲಾ? ಸಾಲ ತೀರಿಸಿ, ಬಿಡಾರ ಖಾಲಿ ಮಾಡಬೇಕು' ಎಂಬ ಕಠೋರ ಸತ್ಯವನ್ನು ತನ್ನ ಕೈಲಾದ ಮಟ್ಟಿಗೆ ಅನಿಷ್ಠುರವಾಗಿಯೆ ತಿಳಿಸಿದನು.

ಬೆಳಕಿದ್ದಿದ್ದರೆ, ಐತನಿಗೆ ಚೀಂಕ್ರನ ಮುಖದ ಮೇಲೆ ಏನೇನು ಭಾವದ ಛಾಯೆ ಕಾಣಿಸುತ್ತಿತ್ತೊ?

ಆದರೆ ಚೀಂಕ್ರನ ಕೃತಕ ವಿನಯದ ವಾಣಿಮಾತ್ರ ಕೇಳಿಸಿತ್ತು ಐತನಿಗೆ: "ಇಲ್ಲಿ ಕಾಣು, ಐತ, ನಾವೇನೂ ಅವರ ಸಾಲಕ್ಕೆ ದಗಾ ಹಾಕುವುದಿಲ್ಲ. ಅವರ ಉಪ್ಪು ಅಂಬಲಿ ತಿಂದ ರುಣಾನ ತೀರ್ಸೇ ತೀರಿಸ್ತೀನಿ. ಏನೋ ಕಣ್ಣಾಪಂಡಿತ್ರು ಅಷ್ಟಲ್ದೆ ಕೇಳಿಕೊಂಡರು: 'ಮಿಶನ್ ಇಸ್ಕೂಲ್ ಕಂತ್ರಾಟು ಹಿಡಿದು ಬಿಟ್ಟೀನಿ; 'ಸೇರೆಗಾರ, ನೀನೇನಾದ್ರೂ ಮಾಡಿ ನಾಲ್ಕಾಳು ತಂದು ಕೆಲ್ಸ ಮುಗಿಸಿಕೊಂಡು' ಅಂತ. ಒಪ್ಪಿಬಿಟ್ಟೆ. ಅದು ಮುಗಿದ ಒಡನೆಯೆ ನಾನು ಗೌಡರ ಕೆಲಸಕ್ಕೆ ಹಾಜರಾಲ್ವಾ?" ಚೀಂಕ್ರ ಮತ್ತೆ ಏನನ್ನೊ ಗುಟ್ಟು ಹೇಳುವವನಂತೆ ಕೆಳದನಿಯಲ್ಲಿ ಮುಂದುವರಿಸಿದನು. "ಇಕಾ, ಐತ, ಇನ್ನೊಂದು ಮಾತು ಹೇಳ್ತಿನಿ. ನಾ ಹೇಳ್ದ ಅಂತಾ ಯಾರಿಗೂ ಹೇಳಬ್ಯಾಡ. ಆ ಪಾದ್ರಿ ನಿಮ್ಮ ಗೌಡರು ಕೊಡಾಕಿಂತ ಎಲ್ಲರಷ್ಟು ದುಡ್ಡೂನೂ ಪಡೀನೂ ಕೊಡ್ತಾನೋ. ನೀನೂ ಬರ್ತಿದ್ರೆ ಬಾ, ನೋಡು ಒಂದಿ ಕೈಯ್ನಾ. ಅಲ್ದೆ, ಜಾಣತನ ಇದ್ರೆ, ಬ್ಯಾರೆ ತರದ ಆದಾಯನು ಮಾಡಿಕೊಳ್ಳ ಬೌದು ಅಂತ ಇಟ್ಟುಕೋ!" ಎಂದು ವ್ಯಂಗ್ಯ ಧ್ವನಿಯಲ್ಲಿ ತಟಕ್ಕನೆ ಮಾತು ನಿಲ್ಲಿಸಿದನು.

"ಅದನ್ನೇ ಏನೋ ಸಣ್ಣಗೌಡರು ಹೇಳ್ತಿದ್ರು ಕಣೊ."

"ಯಾರೋ? ಏನು ಹೇಳ್ತಿದ್ರೋ"

"ಮುಕುಂದಣ್ಣ ಕಣೋ. ನೀನು ಆ ಸಾಬರ ಸಂಗಡ ಸೇರಿಕೊಂಡು ಕದಿಯೋದು ಖೂನಿಮಾಡೋದು ಎಲ್ಲಾ ಮಾಡ್ತೀಯಂತೆ ಅಂತಾ ಯಾರೋ ಅವರಿಗೆ ಹೇಳಿದ್ರಂತೆ."

ಚೀಂಕ್ರನ ಧ್ವನಿ ಬಿಗಡಯಿಸಿತು; "ಯಾರಂತೋ ಕಳ್ಳಸೂಳೇ ಮಕ್ಳು, ಹಂಗೆ ಹೇಳ್ದೋರು? ಅವರ ಬಾಯಿಗೆ ನನ್ನ.... ನ ಹಾಕ!" ಎಂದು ಬೈದವನು, ಮತ್ತೆ ಐತನ ಹೆಗಲ ಮೇಲೆ ಕೈ ಇಟ್ಟು "ನೋಡು, ಯತ ನಾ ಹೇಳ್ತಿನಿ, ನಿನ್ನ ಒಳ್ಳೇದಕ್ಕೆ.... ಆ ಮುಕುಂದೇಗೌಡ್ರನ್ನ ನಂಬಿ ನೀ ಕಟ್ಟೆ. ಆದಷ್ಟು ಬ್ಯಾಗ ನಿನ್ನ ಹೆಂಡ್ತೀನ ಇಲ್ಲಿಂದ ಕರಕೊಂಡು

ಎಲ್ಲಿಗಾದ್ರು ಹೋಗಿಬಿಡು. ನಂಗೆ ನೋಡ್ದೋರೆ ಒಬ್ಬರು ಹೇಳಿದ್ರು, ಪೀಂಚಲು ಅವರ ಸಂಗಡ ಕೆಟ್ಟ ಸಂಬಂಧಕ್ಕೆ ಇಳಿದುಬಿಟ್ಟಿದ್ದಾಳೆ ಅಂತಾ. ಆ ವಾಟೆ ಹಿಂಡಲ ಹತ್ರ ಮಟ್ಟಿನಲ್ಲಿ, ಕತ್ತಲಾದ ಮ್ಯಾಲೆ ಅವರಿಬ್ಬರೂ ಒಟ್ಟಾಗ್ತಾರಂತೆ. ನಿನ್ನ ಲಗ್ನ ಆಗಬೇಕಾದ್ರೆ ಮುಂಚೇನೆ ಪೀಂಚಲೂಗೂ ಅವರಿಗೂ ಏನೋ ಗುಟ್ಟಿನ ಸಂಬಂಧ ಇತ್ತಂತೆ. ನೀನು ಮಾತ್ರ ಬೆಪ್ಪನ ಹಾಂಗೆ 'ಮುಕುಂದಣ್ಣ! ಮುಕುಂದಣ್ಣ!' ಅಂತಾ ಅವರ ಬಾಲ ಕಟ್ಟಿಕೊಂಡು ತಿರುಗ್ತೀಯ!... ನನಗ್ಯಾಕೆ ಬೇಕಿತ್ತು, ಆ ಸುದ್ದೀನ ನಿನಗೆ ಹೇಳಾದು? ಏನೋ ಮಾತು ಬಂತಲ್ಲಾ, ಹೇಳಿಬಿಟ್ಟೇ" ಎಂದವನು, ಐತ ಒಂದು ಮಾತನ್ನೂ ಆಡದೆ ಮರವಟ್ಟವನಂತೆ ನಿಂತಿದ್ದನ್ನು ನೋಡಿ, ತಾನು ಮಾಡಿದ ಅನಾಹುತವನ್ನು ಪರಿಹರಿಸಲೆಂಬಂತೆ ಆಹ್ವಾನಿಸಿದನು: "ನಮ್ಮ ಬಿಡಾರಕ್ಕೆ ಊಟಕ್ಕೆ ಬಾರೊ, ಇವತ್ತು ಔಂವುತ್ಲ ಮಾಡೀವಿ!"

ಐತ ಯಾವ ಉತ್ತರವನ್ನೂ ಕೊಡದೆ ತನ್ನ ಬಿಡಾರಕ್ಕೆ ಗುಂಡು ತಗುಲಿದ ಮಿಗದಂತೆ ಕಲೆಳೆದುಕೊಂಡೇ ಹೋದನು. ಚೇಂಕ್ರ ತನ್ನೊಳಗೆ ತಾನೆ ನಗುತ್ತಾ ತನ್ನ ಬಿಡಾರಕ್ಕೆ ಹಿಂದಿರುಗಿ, ಕೋಳಿ ಹಸಿಗೆಯಲ್ಲಿ ಅಕ್ಕಣಿಗೆ ನೆರವಾದನು.

ಚೇಂಕ್ರನ ಬಿಡಾರದಿಂದ ಹಿಂದಿರುಗಿ ಬಂದ ಐತನ ಮುಖಭಂಗಿ ಆ ಬಡಜೋಪಡಿಯ ಒಳಗಿದ್ದ ಬಡಬೆಳಕಿನಲ್ಲಿಯೂ ಪೀಂಚಲುಗೆ ಏನೋ ಶಂಕಾಸ್ಪದವಾಗಿ ಕಂಡಿತು. ಅವನು ತನ್ನ ನಿತ್ಯದ ರೂಢಿಯಂತಲ್ಲದೆ ಮೌನವಾಗಿದ್ದುದನ್ನು ಗಮನಿಸಿ, ಅವಳಿಗೆ ತುಸು ಗಾಬರಿಯಾಗಿ, ಅವನು ಚೇಂಕ್ರನ ಬಿಡಾರಕ್ಕೆ ಹೋಗುವ ಮುನ್ನ ಅವರಿಬ್ಬರೂ ಮಾತನಾಡುತ್ತಿದ್ದು ತುಂಡುಗಡಿದಿದ್ದ ವಿನೋದ ವಿಚಾರವನ್ನು ಪ್ರಸ್ತಾಪಿಸಿ ಗಂಡನ ಮನಸ್ಸನ್ನು ರಮಿಸಲೆಳೆಸಿದಳು. ಅದರಿಂದಲೂ ಪ್ರಯೋಜನ ತೋರಲಿಲ್ಲ. "ನಾನು ಹೇಳಲಿಲ್ಲೇನು ನಿಮಗೆ? ಆ ಚೇಂಕ್ರನ ಹತ್ತಿರಕ್ಕೆ ಹೋಗಬ್ಯಾಡಿ ಈಗ ಅಂತಾ? ಈ ಹೊತ್ತಿನಲ್ಲಿ ಅವನಿಗೆ ತಲೆ ಸಮನಾಗಿರುವುದು ಉಂಟೆ? ಅವನ ಹತ್ತಿರ ಏನೋ ಅನ್ನಿಸಿಕೊಂಡು ಬಂದಿದ್ದೀರಿ ಅಂತಾ ಕಾಣುತ್ತದೆ. ನಮಗೆ ಯಾಕೆ ಬೇಕಿತ್ತು ಅವನ ತಂಟೆ?" ಎಂದು, ಗಂಡನ ರೀತಿಗೆ ತನ್ನ ವ್ಯಾಖ್ಯಾನವನ್ನೇ ನೀಡಿ, ಸಮಾಧಾನ ಮಾಡಿಕೊಂಡಳು. ಇಬ್ಬರೂ ಒಟ್ಟಿಗೆ ಊಟಕ್ಕೆ ಕೂತಾಗಲೂ ಐತ ಅವಶ್ಯಕವಾದುದಕ್ಕಿಂತಲೂ ಹೆಚ್ಚಿಗೆ ಮಾತಾಡಲಿಲ್ಲ. ಪೀಂಚಲು ತನ್ನ ಕಡೆಗೆ ನೋಡದೆ ಇರುವಾಗಲೆಲ್ಲ ಅವಳ ಮುಖವನ್ನೇ ಕದ್ದು ಕದ್ದು ನೋಡುತ್ತಿದ್ದನು. ತನ್ನ ಒಲವಿನ ಆ ಮುಖದಲ್ಲಿ ಚೇಂಕ್ರನು ಹೇಳಿದ್ದಕ್ಕೆ ಏನಾದರೂ ಸಾಕ್ಷಿದೊರೆಯುತ್ತದೆಯೋ ಎಂದು ಸಮೀಕ್ಷಿಸುವಂತೆ. ಪೀಂಚಲು ಅದನ್ನೂ ಗಮನಿಸಿ ಒಂದೆರಡು ಸಾರಿ ಗಂಡನ ಕಣ್ಣನ್ನೇ ನೇರವಾಗಿ ನೋಡಿದಳು. ಹಾಗೆ ನೋಡಿದಾಗಲೆಲ್ಲ ಐತ ತಟಕ್ಕನೆ ತಲೆ ಬಗ್ಗಿಸಿ ಉಣ್ಣಲು ತೊಡಗುತ್ತಿದ್ದನು.

ಆ ರಾತ್ರಿ ಪೀಂಚಲು ಗಂಡನ ಮಗ್ಗುಲಲ್ಲಿ ಮಲಗುವಾಗ ಎಂದಿನಂತೆ ಉಟ್ಟ ಬಟ್ಟೆಯನ್ನು ಬಿಚ್ಚಿಟ್ಟು, ತನ್ನ ಬತ್ತಲೆಯನ್ನು ಅವನ ಮೈಗೊತ್ತಿ ಒಂದೆ ಕಂಬಳಿಯನ್ನು ಹೊದ್ದುಕೊಂಡು ಮಲಗಲಿಲ್ಲ. ಐತನೂ ಉದಾಸೀನನಂತೆ ತಟಸ್ಥನಾಗಿ ಮುಖ ತಿರುಗಿಸಿ ಮಲಗಿದನು, ನಿದ್ದೆ ಹೋದಂತೆ. ತನ್ನ ಪುಟ್ಟ ಹೆಂಡತಿ ನಿಃಶಬ್ದವಾಗಿ ಅಳುತ್ತಿದ್ದುದೂ ಅವನಿಗೆ ಗಮನಕ್ಕೆ ಬರಲಿಲ್ಲ. ಹಾಲಿನಂತಿದ್ದ ಅವರ ಬಡ ಸಂಸಾರದ ಸಿರಿಬಾಳಿಗೆ ಚೇಂಕ್ರ ಸೇರೆಗಾರ ಹುಳಿ ಹಿಂಡಿಬಿಟ್ಟಿದ್ದನು.

ಐತ ಆ ದಿನ ರಾತ್ರಿಯೂ ಮರುಹಗಲೂ ತಾನು ಚೇಂಕ್ರನಿಂದ ಕೇಳಿದ್ದುದನ್ನು ಕುರಿತು ಬಹಳ ಆಲೋಚಿಸಿದನು. ತಾನು ಪೀಂಚಲುವನ್ನು ಮದುವೆಯಾಗುವ ಮುನ್ನ ಪೀಂಚಲು ಪರವಾಗಿದ್ದ ಮುಕುಂದಯ್ಯನ ವರ್ತನೆಯನ್ನು ಪರಿಚಿಂತಿಸಿದನು. ಮದುವೆಯಾದ ಮೇಲೂ ತನ್ನ ಕಣ್ಣಿಗೆ ಬಿದ್ದ ಮತ್ತು ಗಮನಕ್ಕೆ ಬಂದ ಎಲ್ಲವನ್ನೂ ನೆನೆದು ನೆನೆದು

ವಿಚಾರಮಾಡಿದನು. ಯಾವುದರಲ್ಲಿಯೂ ಅವನಿಗೆ ಚೇಂಕ್ರ ಹೇಳಿದ್ದು ಸತ್ಯವಾಗಿರುವಂತೆ ತೋರಲಿಲ್ಲ. ಆದರೆ ಮುಕುಂದಯ್ಯ ಪೀಂಚಲು ಅವರ ಪರಸ್ಪರವಾದ ಸರಳ ಸ್ನೇಹ ವರ್ತನೆಯನ್ನು ಸಂಶಯಕ್ಕೊಳಗಾದ ಮನಸ್ಸು ಹಾಗೆ ಬೇಕಾದರೆ ಹಾಗೆ, ಹೀಗೆ ಬೇಕಾದರೆ ಹೀಗೆ, ಹೇಗೆ ಬೇಕಾದರೂ ಅರ್ಥಯಿಸಬಹುದಿತ್ತು. ಸಂಶಯಕ್ಕೆ ಪೋಷಕವಾಗಿದ್ದ ಒಂದು ಸಂಗತಿ ಮಾತ್ರ ಚೇಂಕ್ರ ಹೇಳಿದ್ದೂ ಸತ್ಯವಾಗಿತ್ತು: ಪೀಂಚಲು ತನ್ನ ವಾಕರಿಕೆಗೆ ಮದ್ದು ಮಾಡಲು ಇಲಿಕಿವಿಸೊಪ್ಪು ತರುತ್ತೇನೆಂದು ಬೈಗುಹೋತ್ತಿನಲ್ಲಿ ವಾಟೆಹಿಂಡಲಿನ ಸರಲಿನ ಕಡೆ ಆಗಾಗ್ಗೆ ಹೋಗುತ್ತಿದ್ದುದು ಮತ್ತು ಒಮ್ಮೊಮ್ಮೆ ತುಂಬ ಕತ್ತಲಾದ ಮೇಲೆ ನಿಧಾನವಾಗಿ ಹಿಂದಿರುಗುತ್ತಿದ್ದದ್ದು, ಜೊತೆಗೆ, ಹೊವಳ್ಳಿ ಚೆನ್ನಮ್ಮನನ್ನು ಸಿಂಬಾವಿ ಭರಮೈಹೆಗ್ಗಡೆಯವರು ಕೇಳುತ್ತಿದ್ದಾರೆ ಎಂಬ ಸುದ್ದಿ ಹುಟ್ಟಿದಾಗ, ಹರಕು ಬಾಯಿಯ ಐತವನ್ನು ಬಿಟ್ಟು, ತಾನು ಸಮರ್ಥ ಎಂದು ಭಾವಿಸಿದ್ದ ಪೀಂಚಲುವನ್ನೆ ತನ್ನ ಮತ್ತು ಚೆನ್ನಮ್ಮನ ನಡುವೆ ರಹಸ್ಯ ವ್ಯವಹಾರ ನಡೆಸಲು ಮುಕುಂದಯ್ಯ ಆರಿಸಿಕೊಂಡ ಸಂದರ್ಭದಲ್ಲಿ, ತನ್ನ ಹೆಂಡತಿ ತನಗೆ ತಿಳಿಸಲೊಲ್ಲದ ಏನೋ ಒಂದು ಗುಟ್ಟನ್ನು ತನ್ನಿಂದ ಬೈತಿಡುತ್ತಿದ್ದಳೆ ಎಂಬ ಅನುಮಾನವೊಂದು ಐತನ ಮನಸ್ಸನ್ನು ಹೊಕ್ಕಿತ್ತು. ಆದ್ದರಿಂದಲೇ ಐತ ತಾನೊಮ್ಮೆ ಪ್ರತ್ಯಕ್ಷವಾಗಿ ಸತ್ಯ ಏನೆಂದು ಪರಿಶೀಲಿಸಲು ನಿಶ್ಚಯಿಸಿದನು.

ಇದಾದ ಮೂರು ನಾಲ್ಕು ದಿನಗಳಲ್ಲಿಯೆ ಒಂದು ಸಂಜೆ, ಕತ್ತಲೆಯ ಮೊದಲ ಅಡಿ ಮಲೆನಾಡಿನ ಬೆಟ್ಟಗಾಡಿನ ಮುಡಿಗೆ ಎರಗುತ್ತಿದ್ದಾಗ, ಪೀಂಚಲು ತನ್ನ ಗಂಡನಿಗೆ ಮದ್ದಿನ ಸೊಪ್ಪು ತರಲು ಹೋಗುತ್ತೇನೆ ಎಂದು ಕರ್ತವ್ಯ ಧ್ವನಿಯಿಂದ ಹೇಳಿ ಹೊರಟಳು. ಅವಳ ಮಾತಿನಲ್ಲಿ ಏನೋ ಉದ್ವೇಗವಿದ್ದಂತೆ ತೋರಿತು ಐತನಿಗೆ. ಅವಳ ಚಲನೆಯಲ್ಲಿ ಅವಸರವೂ ಕಾಣಿಸಿತು. ಅವಳು ಮೂರು ನಾಲ್ಕು ದಿನಗಳಿಂದಲೂ, ಇದ್ದಕ್ಕಿದ್ದಂತೆ ತನ್ನ ಗಂಡ ನಿಷ್ಠುರವಾಗಿ ವರ್ತಿಸುತ್ತಿದ್ದುದನ್ನು ಅರ್ಥಮಾಡಿಕೊಳ್ಳಲಾರದೆ, ಸೋತು, ಕುದಿದು, ಅತ್ತು, ಸೊರಗಿ ಬೇಗುದಿಗೊಂಡಿದ್ದುದನ್ನು ಮಾತ್ರ ಅವನ ಸಂಶಯ ಪೀಡಿತ ಚಿತ್ತ ಗ್ರಹಿಸಲಿಲ್ಲ.

ತಾನು ಮೊದಲೆ ಮಸೆದು ಹರಿತಮಾಡಿ ಇಟ್ಟಿದ್ದ ಕೆಲಸದ ಕತ್ತಿಯನ್ನು ಸೊಂಟದ ಒಡ್ಯಾಣಕ್ಕೆ, ಸಿಕ್ಕಿಸಿಕೊಂಡು ಐತ ಹತ್ತಿರದ ಒಳದಾರಿಯಿಂದ ತೋಟದ ಮೇಲೆ ಹಾದು ವಾಟೆಹಿಂಡಲನ್ನು ತಲುಪಿ, ಅಲ್ಲಿಗೆ ತುಸುವೆ ದೂರದಲ್ಲಿದ್ದು ಎಲೆ ದಟ್ಟಯಿಸಿ ಬೆಳೆದಿದ್ದ ಒಂದು ಹಲಸಿನ ಮರವನ್ನೇರಿ ಅಡಗಿ ಕುಳಿತು ಕಾದನು.

ಕತ್ತಲೆ ಹೆಚ್ಚು ಹೆಚ್ಚು ಕಪ್ಪಾಗುತ್ತಿತ್ತು. ಗೊತ್ತು ಕೂರಲು ಹಾರಿ ಹೋಗುತ್ತಿದ್ದ ಹಕ್ಕಿಗಳ ಸದ್ದೂ ಅಡಗಿತು. ಹಳುವಿನಲ್ಲಿ ಕರ್ಕಶವಾಗಿ ಒರಲುತ್ತಿದ್ದ ಜೀರುಂಡೆಗಳು ಮಾತ್ರ ಉತ್ತೇಜನಗೊಳ್ಳುವಂತೆ ಕಿವಿಗೆ ಚಿಟ್ಟು ಹಿಡಿಯಿಸುತ್ತಿದ್ದುವು. ಯಾರೂ ಕಾಣಿಸದಿರಲು ಐತನಿಗೆ ತಾನು ಬಹಳ ಹೊತ್ತು ಕಾಯುತ್ತಿದ್ದಂತೆ ಅನುಭವವಾಗತೊಡಗಿತು. ಒಂದು ಸಾರಿ ಆಕಳಿಸಿಯೂ ಬಿಟ್ಟನು! 'ಎಲ್ಲಿಗೆ ಹೋದಳು ಅವಳು?' ಎಂದುಕೊಂಡನು. 'ಏನಾದರೂ ವಾಸನೆ ತಿಳಿದು ಜಾಗವನ್ನೇ ಬದಲಾಯಿಸಿಬಿಟ್ಟರೇ?' ಎಂದೂ ಮನದಲ್ಲಿ ಒಂದು ಸಂಶಯ ಸುಳಿಯಿತು, "ಅಥವಾ ಆ ಹಾಳು ಚೇಂಕ್ರ ಹೇಳಿದ್ದೆಲ್ಲ ಬರಿಯ ಸುಳ್ಳೋ?" ಆದರೆ ಅವಳೇ ಹೇಳಿದಳಲ್ಲಾ "ಮದ್ದಿಗೆ ಸೊಪ್ಪು ತರಲು ಹೋಗುತ್ತೇನೆ" ಎಂದು? 'ಚೆನ್ನಾಗಿ ಕತ್ತಲಾದ ಮೇಲೆ ನಾನು ಇಲ್ಲಿ ಕೂತಿದ್ದರೂ ಏನು ಪ್ರಯೋಜನ? ಏನೂ ಕಾಣಿಸುವುದಿಲ್ಲ!' ಹೀಗೆಲ್ಲ ಚಿಂತಿಸುತ್ತಿದ್ದಂತೆಯೆ ಸೊಪ್ಪು ತುಂಬಿದ ಬುಟ್ಟಿ ಹಿಡಿದ ಪೀಂಚಲು ಪೊದೆಗಳ ನಡುವೆ ಬರುತ್ತಿದ್ದುದು ಕಾಣಿಸಿ, ಐತನ ಮೈಯಲ್ಲಿ ನೆತ್ತರು ಬಿಸಿಯಾಗಿ, ಹೆಬ್ಬುಲಿಯಂತೆ ಭೋರಿಟ್ಟಿತು! ಬಂದವಳು ಪೊದೆಗಳ ನಡುವಣ ಒಂದು ಕಿರುಬಯಲಿನಲ್ಲಿ ಕುಳಿತಳು. ತುಸು ಹೊತ್ತಿನೊಳಗಾಗಿ ಮತ್ತೊಂದು ವ್ಯಕ್ತಿ ನಸುಕು ಮಬ್ಬಿನಲ್ಲಿ ಗೋಚರವಾಯಿತು.

ಅದು ಕೋಣೂರು ಮುಕುಂದಯ್ಯ ಎಂದು ಐತನಿಗೆ ಯಾರೂ ಪರಿಚಯ ಮಾಡಿಕೊಡಬೇಕಾಗಿರಲಿಲ್ಲ! ಮುಕುಂದಯ್ಯ ಪೀಂಚಲುಗೆ ಒಂದೆರಡು ಮಾರು ದೂರದಲ್ಲಿ ಕುಳಿತುಕೊಂಡನು. ಇಬ್ಬರೂ ಮಾತನಾಡತೊಡಗಿದರು. ಆದರೆ ಏನು ಮಾತಾಡುತ್ತಿದ್ದಾರೆ ಎಂಬುದು ಐತನಿಗೆ ಕೇಳಿಸಲಾರದಷ್ಟು ಮೆಲ್ಲಗೆ, ಆ ಮುಂಗಪ್ಪಿನಲ್ಲಿ ಅವರ ಮುಖ ಭಾವಗಳೂ ಆಗೋಚರವಾಗಿತ್ತು.

ಚೇಂಕ್ರ ಹೇಳಿದ ಸತ್ಯಕ್ಕೆ ಪ್ರತ್ಯಕ್ಷ ಪ್ರಮಾಣವನ್ನು ಕಂಡ ಐತನ ಚೇತನ ಕ್ರೋಧವನ್ನು ಅನುಭವಿಸುವುದಕ್ಕಿಂತಲೂ ಹೆಚ್ಚಾಗಿ ದುಃಖದಿಂದ ಬಿಕ್ಕತೊಡಗಿತು. ಆ ಇಬ್ಬರಲ್ಲಿ ಯಾರೊಬ್ಬರಾದರೂ ತನಗೆ ದೂರದವರಾಗಿ ಅನ್ಯರಾಗಿದ್ದರೆ ಅವನು ಕೋಪವನ್ನೇ ಸ್ವಾಗತಿಸಿ ಪ್ರತೀಕಾರಕ್ಕೆ ಅಣಿಯಾಗುತ್ತಿದ್ದನು. ಆದರೆ ಅಲ್ಲಿ ಇದ್ದವರಿಬ್ಬರೂ ತನಗೆ ಚಿಕ್ಕಂದಿನಿಂದಲೂ ಪರಿಚಿತರಾಗಿ, ಬೇಕಾದವರಾಗಿದ್ದರು. ತನ್ನವರೇ ಆದ ಅವರಿಬ್ಬರೂ ಸೇರಿ, ಅವರನ್ನು ನಂಬಿದ್ದ ತನಗೆ, ಇಂತಹ ಅವಮಾನಕರವಾದ ಅನ್ಯಾಯವೆಸಗುತ್ತಿದ್ದಾರಲ್ಲಾ ಎಂದು ಸುಯ್ದು ಐತನ ಕಣ್ಣಿನಿಂದ ನೀರು ತೊಟ್ಟಕ್ಕಿತು. ತಾನು ಎಷ್ಟೊಂದು ಪ್ರೀತಿಸುತ್ತಿದ್ದ ಪೀಂಚಲು ತನಗೆ ಹೀಗೆ ಮೋಸ ಮಾಡುವುದೆ...? "ಅರೇ! ಇದೇನು? ಮತ್ತೂ ಯಾರೋ ಇಬ್ಬರು ಪೊದೆಗಳ ಮಧ್ಯೆ ಮಬ್ಬುಗತ್ತಲಲ್ಲಿ ಬರುತ್ತಿದ್ದಾರೆ! ಇವರಿಬ್ಬರೂ ಕುಳಿತಿದ್ದೆಡೆಗೇ! ಬಂದವರು ಸ್ತ್ರೀವ್ಯಕ್ತಿಗಳೆಂಬುದೂ ಐತನಿಗೆ ಚೆನ್ನಾಗಿ ಗೊತ್ತಾಯಿತು. ಐತನ ಖೇದ ಇದ್ದಕ್ಕಿದ್ದ ಹಾಗೆ ಬೆಕ್ಕಸಕ್ಕೆ ತಿರುಗಿತು: ಹಾದರಕ್ಕೆ ಹೊರಟವರು ಯಾರಾದರೂ ಹೀಗೆ ಗುಂಪು ನೆರೆಯುತ್ತಾರೆಯೇ? ಛೇ! ಚೇಂಕ್ರ ಹೇಳಿದ್ದೆಲ್ಲಾ ಸುಳ್ಳೆ! ಸುಮ್ಮನೆ ನನ್ನನ್ನು ನಾಲ್ಕು ಐದು ದಿನ ಬೇಯಿಸಿಬಿಟ್ಟನಲ್ಲಾ, ಆ ಸೊಣಗ? ಇವರು ಇಲ್ಲಿ ಸೇರುವುದಕ್ಕೆ ಇನ್ನೇನೋ ಬೇರೆ ರಹಸ್ಯ ಇರಬೇಕು. ನನ್ನಿಂದ ಮುಚ್ಚಿಡುವಂಥ ಗುಟ್ಟು ಅದೇನು ನನ್ನ ಹೆಂಡತಿಗೆ?

ಐತ ಆಲೋಚಿಸುತ್ತಿದ್ದಂತೆಯೆ ಕವಿದು ಬಂದ ಕತ್ತಲೆಯಲ್ಲಿ ಅವರು ಯಾರೂ ಕಾಣಿಸದಂತಾಯ್ತು. ಅವರೆಲ್ಲರೂ ಸೇರಿ ಏನನ್ನೋ ಗುಜುಗುಜು ಮಾತಾಡಿಕೊಳ್ಳುತ್ತಿದ್ದದ್ದು ಮಾತ್ರ ಕೇಳಿಸುತ್ತಿತ್ತು. ಮರದಿಂದಿಳಿದು ಸದ್ದು ಮಾಡದೆ ಪೊದೆಗಳ ನಡುವೆ ಅವರಿದ್ದ ಎಡೆಗೆ ಹೋಗಿ ಆಲಿಸೋಣವೇ ಎನ್ನಿಸಿತು ಐತನಿಗೆ. ಆದರೆ ಎಲ್ಲಿಯಾದರೂ ಸದ್ದಾಗಿ ತಾನು ಸಿಕ್ಕಿಬಿದ್ದರೆ ಏನು ವಿವರಣೆ ಕೊಡಲು ಸಾಧ್ಯ? ಈಗ ಮಾಡಿರುವ ಅವಿವೇಕವೆ ಸಾಕು; ಇನ್ನೂ ಹೆಚ್ಚಿನ ಅವಿವೇಕಕ್ಕೆ ಬೀಳುವುದು ಬೇಡ ಎಂದು, ಗಟ್ಟಿ ಮನಸ್ಸು ಮಾಡಿ, ಮರದಿಂದ ಮೆಲ್ಲನೆ ಇಳಿದು, ತಾನು ಬಂದಿದ್ದ ಒಳದಾರಿಯಿಂದಲೆ ಕತ್ತಲೆಯಲ್ಲಿ ಕಾಲು ತಡವುತ್ತಾ ನಡೆದು ಐತ ಬಿಡಾರ ಸೇರಿ, ಪೀಂಚಲುವಿನ ಬರವನ್ನೇ ಇದಿರು ನೋಡುತ್ತಾ ಕಾತರನಾಗಿ ಕುಳಿತನು.

ಐತ ಮರದ ಮೇಲೆ ಕುಳಿತಿದ್ದಾಗಲೆ ದೂರ ಪಶ್ಚಿಮ ದಿಗಂತದತ್ತ ಮೋಡ ಕವಿದು ಮಿಂಚುತ್ತಿತ್ತು. ಅದನ್ನವನು ನೋಡಿದ್ದನೆ ವಿನಾ ಗಮನಿಸಿರಲಿಲ್ಲ. ಅವನು ಬಿಡಾರ ಸೇರುವ ಹೊತ್ತಿಗಾಗಲೆ ಮುಗಿಲು ಮುಚ್ಚಿ, ಮಿಂಚು ಗುಡುಗು ಸಿಡಿಲು ಪ್ರಾರಂಭವಾಗಿ, ಗಾಳಿ ಜೋರಾಗಿ ಬೀಸಿ, ಮಳೆಯ ತೋರಹನಿ ಟಪ್ಪಟಪ್ಪನೆ ವಿರಳವಾಗಿ ಬೀಳತೊಡಗಿತ್ತು. ಸ್ವಲ್ಪ ಹೊತ್ತಿನಲ್ಲಿಯೆ ಮುಂಗಾರು ಮಳೆ ಭೋರೆಂದು ಹೊಯ್ದು, ಅರ್ಧಗಂಟೆಯೊಳಗೆ ನಿಂತುಬಿಟ್ಟಿತು. ಅಲ್ಲಿ ಸೇರಿದ್ದ ನಾಲ್ವರೂ ಚೆನ್ನಾಗಿ ನೆನೆದು ಒದ್ದೆಮುದ್ದೆಯಾಗಿರಬೇಕು ಎಂದು ಭಾವಿಸಿದ ಐತ ತನ್ನ ಬಸುರಿ ಹೆಂಡತಿಯ ಯೋಗಕ್ಷೇಮದ ವಿಚಾರವಾಗಿ ಕಳವಳಗೊಂಡನು! ಮಳೆಯಲ್ಲಿ ತೊಯ್ದು ಶೀತವಾಗಿ ಜ್ವರಬಂದು ಏನಾದರೂ ಆಗಿಬಿಟ್ಟರೆ?

ಮಳೆ ನಿಂತು ಸ್ವಲ್ಪ ಹೊತ್ತಿನ ಮೇಲೆ ಪಿಂಚಲು, ಸೋಂಟದ ಮೇಲಿಟ್ಟು ಎಡಗೈಯಿಂದ ಹಿಡಿದಿದ್ದ ಬುಟ್ಟಿಯೊಡನೆ ಬಿಡಾರದ ಒಳಗೆ ಬಂದು, ಅದನ್ನು ಒಲೆಯ ಬಳಿಯ ಮೂಲೆಯಲ್ಲಿ ಇಳಿಸಿದಳು. ಅನೈಚ್ಛಿಕವಾಗಿಯೆ ಅತ್ತಕಡೆ ತಿರುಗಿದ್ದ ಐತನ ಕಣ್ಣಿಗೆ ಬುಟ್ಟಿಯಲ್ಲಿ ಸೊಪ್ಪೂ ಮತ್ತು ಅದರ ಪಕ್ಕದಲ್ಲಿದ್ದ ಹಿತ್ತಾಳೆಯ ಪಾತ್ರೆಯೂ ಕಾಣಿಸಿ ಮನಸ್ಸಿಗೆ ಸಂತೋಷವಾಯಿತು. ಆ ಹಿತ್ತಾಳೆಯ ಪಾತ್ರೆ ಕೋಣೂರು ಮನೆಯದೆಂದೂ ಅದು ತನ್ನ ಹೆಂಡತಿಯೊಡನೆ ಬಿಡಾರಕ್ಕೆ ಬಂದಾಗಲೆಲ್ಲ, ತಿನ್ನಲೋ ನಂಚಿಕೊಳ್ಳಲೋ ಹನಿಸಿಕೊಳ್ಳಲೋ, ದೊಡ್ಡಮ್ಮನ ಕೃಪೆ ಅದರಲ್ಲಿ ಏನಾದರೂ ಇರುತ್ತದೆ ಎಂದೂ ಐತನಿಗೆ ಬಹುಕಾಲದಿಂದಲೂ ಗೊತ್ತು.

"ಎಲ್ಲಿಗೇ ಹೋಗಿದ್ದೇ? ಇಷ್ಟು ಹೊತ್ತು ಯಾಕೆ?" ಪ್ರಶ್ನಿಸಿದ ಐತನ ಧ್ವನಿಯಲ್ಲಿ ಉಗ್ರತೆಯಿರದೆ ತನಗೆ ಅತ್ಯಂತ ಪರಿಚಿತವಾದ ಸವಿ ಇದ್ದುದನ್ನು ಗಮನಿಸಿ ಪೀಂಚಲು ಸ್ವಲ್ಪ ಚಕಿತೆಯಾದಳು. ಮೊಗವೆತ್ತಿ ಗಂಡನ ಮುಖದತ್ತ ಕಿರಿಹಿಡಿದು ನೋಡಿದಳು. ಗಂಡ ಮೊದಲಿನ ಗಂಡನಾಗಿದ್ದನು! ನಾಲ್ಕೈದು ದಿನಗಳಿಂದಲೂ ಇದ್ದ ಬಿಮ್ಮಾಗಲಿ ಸೆಡೆತವಾಗಲಿ ಮುಖದಲ್ಲಿ ಲೇಶವೂ ಇರಲಿಲ್ಲ. ಅವನ ಕಣ್ಣೂ ತುಟಿಯೂ ನಗುತ್ತಿದ್ದುವು! ಅವನಿಗೆ ಸಹಜವಾಗಿದ್ದ ಹುಡುಗುಮೊಗದಲ್ಲಿ ಅಣುಗತನದ ಮಾಸದ ಛಾಯೆಯನ್ನು ಕಂಡು, ತಾಯ್ತನಕ್ಕೆ ನಿಗೂಢ ಅಭ್ಯರ್ಥಿಯಾಗಿದ್ದ ಅವಳ ಹೃದಯ ಮಾತೃಭಾವದಿಂದ ತುಂಬಿಹೋಯಿತು. ಮುದ್ದುಮಗುವನ್ನು ಅಪ್ಪಿಕೊಂಡು ಮುದ್ದಿಸುವಂತೆ ಗಂಡನನ್ನು ಮುಂಡಾಡಬೇಕು ಎನ್ನಿಸಿತು. ಆದರೂ ನಾಲ್ಕೈದು ದಿನಗಳಿಂದ ತನಗಾಗಿದ್ದ ಬೇಗೆಯನ್ನು ನೆನೆದು ತನ್ನ ಹಿಗ್ಗನ್ನು ತಡೆಹಿಡಿದು "ಎಲ್ಲಿಗೆ ಹೋಗಿದ್ದೆ? ಸೊಪ್ಪು ತರಾಕೆ! ಕಾಣದಿಲ್ಲೇನು?" ಎಂದು ಬಿಗುಮಾನವನ್ನು ನಟಿಸಿಯೇ ಉತ್ತರ ಕೊಟ್ಟಳು.

"ಮತ್ತೆ? ಆ ತಂಬಾಳೆ?"

"ಅದು ಮನೆಯದು. ದೊಡ್ಡಮ್ಮ ಕೊಟ್ಟದ್ದು."

"ನೀವೆಲ್ಲ ಮಳೆ ಬರುವಾಗ ಅಲ್ಲೇ ಇದ್ದೀರೇನು?" ಸರಳಹೃದಯದ ಬೆಪ್ಪು ಹುಡುಗ ಐತ ತನ್ನ ಪ್ರಶ್ನೆ ತನಗೇ ದ್ರೋಹ ಬಗೆದು ತನ್ನನ್ನು ಹಿಡಿದುಕೊಡುತ್ತದೆ ಎಂಬುದನ್ನು ಗ್ರಹಿಸಿರಲಿಲ್ಲ. ಯಾವುದನ್ನು ಮುಚ್ಚಿಡಬೇಕೆಂದು ಎಚ್ಚರಿಕೆ ವಹಿಸಿದ್ದನೋ ಅದನ್ನೇ ಬಿಚ್ಚಿಬಿಟ್ಟನು!

"ಎಲ್ಲೀ? ಯಾರು? ಏನೆಲ್ಲ ನೀವು ಕೇಳಾದು?" ಅಚ್ಚರಿಯಿಂದ ಐತನ ಕಣ್ಣನ್ನೇ ನೋಡುತ್ತಾ ಕೇಳಿದಳು ಪೀಂಚಲು.

ತಟಕ್ಕನೆ ತನ್ನ ಅವಿವೇಕ ಹೊಳೆದಂತಾಗಿ ಐತ "ಅ…. ಅ…. ಅಲ್ಲಾ…. ನೀನು ಎಲ್ಲಿದ್ದೇ ಅಂದೆ… ನಿನಗೆ ಶೀತಗೀತ ಆಗಿಬಿಟ್ಟಾತು ಅಂತಾ ಹೆದರಿದ್ದೆ…. ಆದ್ರೆ ನೀನು ಮಳೇಲಿ ನೆಂದೇ ಇಲ್ಲಲ್ಲಾ? ಅದ್ಕೇ ಕೇಳ್ದೆ!" ಎಂದು ನಾಚಿಕೊಂಡಂತೆ ನೆಲ ನೋಡಿದನು.

"ಯಾಕೆ ಹೀಂಗೆ ಮಾಡುತ್ತಿದ್ದೀರಿ ನೀವು, ನಾಲ್ಕೈದು ದಿನಗಳಿಂದಲೂ? ಚೇಂಕ್ರ ಏನೆಲ್ಲ ಹೇಳಿದ ಆವೊತ್ತು ನಿಮಗೆ? ನನ್ನ ಜೀವ ಸುಟ್ಟು ಸೋತು ಹೋಯಿತಲ್ಲಾ!"ಪೀಂಚಲು ಧನಿ ಭಾವೋದ್ವೇಗದಿಂದ ಅಳುವಂತೆ, ಗದ್ಗದವಾಗಿತ್ತು.

“ಅಂವ ಸತ್ತ! ಅಂವ ಹೇಳುತ್ತಾನೇನು? ಅವನ ಹೆಣಾ!... ನನ್ನಿಂದ ತಪ್ಪಾಯ್ತು, ಪೀಂಚಲು!..... ನನಗೆ ಹೇಳದೆ ನೀನು ಎನನ್ನೋ ಮುಚ್ಚುಮರೆ ಮಾಡುತ್ತಿದ್ದೀಯಾ ಅಂತಾ....” ಐತ ಮುಂದೆ ನುಡಿಯಲಾರದೆ, ಅರ್ಧದಲ್ಲಿಯೆ ನಿಲ್ಲಿಸಿ, ಮಗುವಿನಂತೆ ಬಿಕ್ಕಿ ಬಿಕ್ಕಿ ಅಳತೊಡಗಿದನು. ಪೀಂಚಲು ತಡೆಯಲಾರದೆ ಅವನ ಬಳಿಗೆ ಓಡಿ, ಪಕ್ಕದಲ್ಲಿಯೆ ಅವನಿಗೆ ಒತ್ತಿ ಕುಳಿತು, “ಅಳಬೇಡ, ಐತ ಅಳಬೇಡ!” ಎಂದು ತಾನೂ ಅಳುತ್ತಲೆ ಮಕ್ಕಳನ್ನು ಸಂತೈಸುವಂತೆ ಕಣ್ಣು ಕೆನ್ನೆ ಒರಸಿ ಸಮಾಧಾನ ಮಾಡಿದಳು.

ಮತ್ತೆ ಮೆಲ್ಲಗೆ ಹೇಳತೊಡಗಿಸಳು: “ನನಗೆ ಗೊತ್ತಾಯ್ತು. ಆದರೆ ಏನು ಮಾಡಲಿ?..... ಮುಕುಂದಯ್ಯ ನನ್ನನ್ನು ನಂಬಿ ಹೇಳಿದ್ದರಲ್ಲಾ; ‘ಐತನಿಗೆ ಈಗ ಹೇಳಬೇಡ. ಅವನದು ಹರಕುಬಾಯಿ. ಯಾರು ಯಾರಿಗೆಲ್ಲಾ ಹೇಳಿಬಿಡುತ್ತಾನೆ. ಆಮೇಲೆ ಅವನಿಂದಲೂ ಕೆಲಸವಾಗಬೇಕಾದಾಗ ಹೇಳಿದರಾಯ್ತು’ ಅಂತ. ಅದಕ್ಕೇ ನಾನು ಬಾಯಿ ಕಟ್ಟಿಕೊಂಡಿದ್ದೆ. ಇವೊತ್ತು ಅವರಿಗೆ ಹೇಳಿಯೆಬಿಟ್ಟೆ, ನೀನು ಮಾತುಬಿಟ್ಟು ಕೊರಗ್ತಾ ಇರೋದ. ‘ಹಾಂಗಾದರೆ ಅವನಿಗೆ ತಿಳಿಸಿಬಿಡು’ ಅಂದಿದ್ದಾರೆ. ಅದಕ್ಕೇ ಹೇಳ್ತೀನಿ... “

ಪೀಂಚಲು ತನ್ನ ಅಡುಗೆ ಕೆಲಸವನ್ನು ಮಾಡುತ್ತಲೇ ಹೇಳುತ್ತಿದ್ದಳು. ಅವಳು ಕುಳಿತರೆ, ಎದ್ದರೆ, ಅತ್ತ ಇತ್ತ ಓಡಾಡಿದರೆ ಐತನ ಕಣ್ಣು, ಹಸಿದ ನಾಯಿ ತನಗೆ ಅನ್ನ ಹಾಕುವವರು ಬೋಗಣಿ ಹಿಡಿದು ಅತ್ತ ಇತ್ತ ಓಡಾಡಿದರೆ ಅನ್ನವಿರುವ ಆ ಬೋಗಣಿಯನ್ನು ಹಿಡಿದ ಕೈಯ ಕಡೆಗೇ ನೋಡುತ್ತಾ ಬಾಲ ಅಲ್ಲಾಡಿಸುತ್ತಾ ಅವರ ಹಿಂದೇ ಮುಂದೇ ತಿರುಗುವಂತೆ, ತನ್ನ ಹೆಂಡತಿಯನ್ನೇ ಬಯಸಿ ನೋಡಿ, ಬಿಡದೆ ಹಿಂಬಾಲಿಸುತ್ತಿತ್ತು. ನಡು ನಡುವೆ ಆಗೊಂದು ಈಗೊಂದು ಏನಾದರೂ ಪ್ರಶ್ನೆ ಹಾಕುತ್ತಿದ್ದನು: ‘ಪೀಂಚಲು ಎಂಥ ಚೆಲುವೆ!’ ‘ಅಃ ನನ್ನ ಹೆಂಡತಿ ಅದೆಷ್ಟು ಚೆನ್ನಾಗಿದ್ದಾಳೆ!’ ‘ನಾನೆಷ್ಟು ಪುಣ್ಯ ಮಾಡಿದ್ದೆ ಇವಳನ್ನು ಪಡೆಯುವುದಕ್ಕೆ?’ ‘ನಾನೆಂಥಾ ಪಾಪಿ ಅವಳನ್ನು ಅಷ್ಟು ಬೇಯಿಸಿಬಿಟ್ಟೆನಲ್ಲಾ?’ ‘ಇನ್ನು ಎಂದೆಂದಿಗೂ ಹಾಗೆ ಮಾಡುವುದಿಲ್ಲ!’ ಹೀಗೆಲ್ಲ ಐತನ ಮನಸ್ಸು ತನ್ನೊಳಗ ತಾನೇ ಹೇಳಿಕೊಳ್ಳುತ್ತಿತ್ತು.

ಗೌಡರ ಗದ್ದೆ ತೋಟಗಳಲ್ಲಿ ಕೆಲಸಮಾಡುವ ಗಟ್ಟದ ತಗ್ಗಿನ ಹೆಣ್ಣಾಳುಗಳಿಗೂ (ಗಂಡಾಳುಗಳ ಮಾತು ಅಂತಿರಲಿ!) ಮೈಯನ್ನೆಲ್ಲ ಮುಚ್ಚಿಕೊಳ್ಳುವಷ್ಟು ಬಟ್ಟೆ ಇರುವುದಿಲ್ಲ. ಕುಪ್ಪಸವನ್ನಂತೂ ಅವರು ಕಂಡೇ ಅರಿಯರು. ಸೊಂಟಕ್ಕೆ ಸುತ್ತಿಕೊಂಡ ಅರಿವೆಯ ತುಂಡಿನ ಒಂದು ಸೆರಗೇ ಅವರ ಎದೆಯನ್ನೆಲ್ಲ ಗೋಪ್ಯವಾಗಿಡುವ ಕರ್ತವ್ಯವನ್ನೂ ಹಾಗೂ ಹೀಗೂ ಹೊರುತ್ತಿತ್ತು. ವಯಸ್ಸಾದ ಹೆಣ್ಣಾಳುಗಳಂತೂ ಆ ಗೋಪ್ಯವನ್ನೂ ರಕ್ಷಿಸುವ ಶ್ರಮ ತೆಗೆದುಕೊಳ್ಳಲಾರದಷ್ಟು ಅಸಡ್ಡೆಯಿಂದಿರುತ್ತಿದ್ದರು. ಐತ ಅಂಥವರ ನಡುವೆಯೆ ಚಿಕ್ಕಂದಿನಿಂದಲೂ ಬೆಳೆದಿದ್ದನು. ಅವರ ಕೂಡೆಯೆ ಕೆಲಸಮಾಡಿಯೂ ಇದ್ದನು. ಚಿಕ್ಕಂದಿನಿಂದಲೂ ಅವನು ನೋಡುತ್ತಿದ್ದು, ಬಹಿರಂಗವಾಗಿಯೆ ಇರುತ್ತಿದ್ದ ಅಮಗ ಅಂಗ ಭಾಗ ಉಪಾಂಗಗಳ ವಿಚಾರದಲ್ಲಿ ಅವನು ಸಂಪೂರ್ಣವಾಗಿ ಅಲಕ್ಷದಿಂದಿದ್ದನ್ನು. ಆದರೆ ಇಂದು ಅವನಿಗೆ ಹೊಸ ಕಣ್ಣು ತೆರೆದಂತೆ ಬೇರೆಯ ರೀತಿಯ ಅನುಭವವಾಗತೊಡಗಿತ್ತು.

ಹೂವಳ್ಳಿ ‘ಚಿನ್ನಕ್ಕ’ನ, ಕೋಣೂರು ಮುಕುಂದಯ್ಯನ, ನಾಗಕ್ಕ, ನಾಗತ್ತೆ ಮತ್ತು ಹೂವಳ್ಳಿ ನಾಯಕರ, ಸಿಂಬಾವಿ ಹೆಗ್ಗಡೆಯವರ ಮತ್ತು ಹಳೆಮನೆ ತಿಮ್ಮಪ್ಪ ಹೆಗ್ಗಡೆಯ ವಿಚಾರವಾಗಿ ತಾನು ಕೇಳಿ ತಿಳಿದದ್ದನ್ನೆಲ್ಲ ಹೇಳುತ್ತಿದ್ದ ಪೀಂಚಲು ಎಸರು ಇಳಿಸಲು ಒಲೆಯ ಮೇಲೆ ಬಾಗಿ, ತನ್ನ ಕಡೆಗೆ ಬೆನ್ನಾಗಿ ನಿಂತಾಗ, ಐತನಿಗೆ ತೆಳ್ಳನೆಯ ಸೀರೆಯ

ತುಂಡು ಬಿಗಿದು ಮುಚ್ಚಿದ್ದ ಅವಳ ದುಂಡನೆಯ ನಿತಂಬಗಳನ್ನು ನೋಡಿ ಮೋಹವುಕ್ಕಿದಂತಾಯ್ತು. 'ಎಷ್ಟು ಚೆನ್ನಾಗಿ ಕಾಣುತ್ತಾಳೆ ಈ ಪೀಂಚಲು?' ಎಂದುಕೊಂಡನು ಮತ್ತೊಮ್ಮೆ! ಮತ್ತೆ ಅವನ ಕಣ್ಣು ಅವಳ ತೋಳುಗಳತ್ತ ಸರಿದು 'ಎಷ್ಟು ಬೆಳ್ಳಗಿದ್ದಾಳೆ ನನ್ನ ಹೆಂಡತಿ? ನಾನು ನೋಡಿಯೆ ಇರಲಿಲ್ಲಾ ಇಷ್ಟು ದಿನ!' ಎಂದುಕೊಂಡನು. ಹಾಗೆಯೆ ಅವಳೊಮ್ಮೆ ಊಟಕ್ಕೆ ಹಾಳೆಯ ಕೊಟ್ಟೆಯನ್ನೂ ಕುಡಿಯಲಿಕ್ಕೆ ಗರಟವನ್ನೂ ಅಣಿಮಾಡಿಡಲೆಂದು ನೆಲಕ್ಕೆ ಬಾಗಿದಾಗ ಸಡಿಲಗೊಂಡ ಅವಳ ಸೆರಗಿನೊಳಗಣ ಮೃದು ಕುಟ್ಮಲಸದೃಶ ಕುಚಗಳನ್ನು ಹಿಗ್ಗಿನೋಡಿ 'ಅಯ್ಯೋ! ಕಾಣುತ್ತಲೇ ಇರಲಿಲ್ಲ! ಈಗ ಎಷ್ಟು ದೊಡ್ಡದಾಗಿ ಬಿಟ್ಟಿವೆ? ಇವತ್ತು ರಾತ್ರಿ ನಾನು ಅವಕ್ಕೊಂದು ಮುತ್ತು ಕೊಡಲೇಬೇಕು!' ಎಂದು ಮನಸ್ಸಿನಲ್ಲಿ ಅಂದುಕೊಳ್ಳುತ್ತಿದ್ದರೂ ಬಾಯಲ್ಲಿ. "ಹಾಂಗಾದ್ರೆ ನಾಗಕ್ಕನ ಸೀರುಡಿಕೆ ಮಾಡಿಕೊಂಡಾಯ್ತಾ ಹೂವಳ್ಳಿ ನಾಯಕ್ರು?" ಎಂದು ಕೇಳಿದನು.

"ದೆಯ್ಯದ ಹರಿಕೆ ಆಯ್ತಲ್ಲಾ? ಅದಾಗಿ ಒಂದು ವಾರಾನೋ ಹದಿನೈದು ದಿನಾನೋ ಆಗಿತ್ತಂತೆ, ನಾಗಕ್ಕ ತಾಳಿ ಕಟ್ಟಿಸಿಕೊಂಡೇ ಬಿಟ್ರಂತೆ!"

"ಮತ್ತೆ ನಾಗಕ್ಕನ ಮೊದಲನೆಯ ಗಂಡ ಸತ್ತಮೇಲೆ ಅವರು ಯಾರನ್ನೂ ಕೂಡಿಕೆ ಮಾಡಿಕೊಳ್ಳೋದಿಲ್ಲಾ ಅಂತ ಹಟ ಹಿಡಿದಿದ್ರಂತೆ?"

"ಹೌದೋ.... ಆದರೆ ಈ ಸಂಬಂಧ ಅವರು ಒಪ್ಪಿಕೊಂಡಿದ್ದು, ನನಗೆ ಅನ್ನಿಸ್ತದೆ, ಚೆನ್ನಕ್ಕನ ಕಷ್ಟ ತಪ್ಪಿಸೋಕಾಗೇ ಅಂತಾ."

"ಇವರು ಕೂಡಿಕೆ ಆದ್ರೆ ಚೆನ್ನಕ್ಕನ ಕಷ್ಟ ಹ್ಯಾಂಗೆ ತಪ್ತದೆ?"

"ಹ್ಯಾಂಗೆ ತಪ್ತದೆ ಅಂದ್ರೆ! ಗಂಡನ್ನ ಮನಸ್ಸನ್ನ ಒಲಿಸಿಕೊಂಡು, ಚೆನ್ನಕ್ಕನ್ನ ಸಿಂಬಾವೀ ಹೆಗ್ಗಡೇರಿಗೆ ಕೊಡೋದು ತಪ್ಪಿಸಿ, ನಮ್ಮ ಮುಕುಂದಯ್ಯಗೇ ಕೊಡೋ ಹಾಂಗೆ ಮಾಡೋದಕ್ಕೆ...." ನೋಡುತ್ತಾಳೆ, ಗಂಡನ ದೃಷ್ಟಿ ಸಡಿಲವಾಗಿರುವ ತನ್ನ ಸೆರಗಿನ ಒಳಗೆ ನುಗ್ಗಿ ಆಟವಾಡುತ್ತಿದೆ! "ಏ, ನೀನೇನು ನನ್ನ ಮಾತು ಆಲೈಸ್ತಿದ್ದೀಯೊ? ಎತ್ತಲಾಗೋ ನೋಡ್ತಿದ್ದೀಯಲ್ಲಾ!"

"ಎತ್ತಲಾಗಿ ನೋಡ್ತಿದ್ದೀನೇ? ನಿನ್ನ ಕಡೀಗ ಕಣ್ಣಿಟ್ಟೀನಲ್ಲಾ!... "

"ನನ್ನ ಕಡೀಗೆ ಕಣ್ಣಿಟ್ಟೀಯ ಅನ್ನೋದು ಕಾಣ್ತಾನೆ ಇದೆಯಲ್ಲಾ...." ಎಂದು ಸಡಿಲವಾಗಿ ಎಳಲುತ್ತಿದ್ದ ತನ್ನ ಸೆರಗನ್ನು ಎಳೆದು ಭದ್ರಪಡಿಸಿಕೊಂಡು, ಶೃಂಗಾರಪೂರ್ಣವಾದ ಭರ್ತ್ಸನಾದೃಷ್ಟಿಯಿಂದ ಮುಗುಳು ನಕ್ಕು ಗಂಡನನ್ನು ಸೂರೆ ಹೊಡೆದುಬಿಟ್ಟಳು.

ಇಬ್ಬರೂ ಅಂಬಲಿ ಉಣ್ಣಕ್ಕೆ ಎದುರು ಬದುರಾಗಿ ಕೂತರು. ಐತನ ಕಣ್ಣು ಪೀಂಚಲು ಮೂಲೆಯಲ್ಲಿಟ್ಟಿದ್ದ ಹಿತ್ತಾಳೆ ಪಾತ್ರೆಯತ್ತ ಮತ್ತೆ ಮತ್ತೆ ಹೋಗುತಿತ್ತು. ದೊಡ್ಡ ಅಮ್ಮ ಏನನ್ನೋ ಕೊಟ್ಟಿದ್ದಾರೆ; ಊಟಕ್ಕೆ ಕುಳಿತೊಡನೆ ಅದನ್ನು

ಬಡಿಸುತ್ತಾಳೆ ಎಂದು ಹಾರೈಸಿದ್ದ ಐತನಿಗೆ ತನ್ನ ಹೆಂಡತಿ ಆ ಕಡೆ ಗಮನವನ್ನೆ ಹಾಕದೆ ಉಣ್ಣಲು ಕುಳಿತಿದ್ದನ್ನು ಕಂಡು ನಿರಾಶೆಯಾಯಿತು. ಮತ್ತೆ ಮತ್ತೆ ಆ ಕಡೆ ನೋಡತೊಡಗಿದನು.

"ಅದು ಗಂಡಸರ ತಿಂಡಿ ಅಲ್ಲ" ಎಂದು ಓರೆಗಣ್ಣಿನಿಂದ ನೋಡಿ ನಕ್ಕಳು ಪೀಂಚಲು.

"ತಿಂಡೀಲಿ ಗಂಡಸರ ತಿಂಡಿ ಹೆಂಗಸರ ತಿಂಡಿ ಅಂತಾ ಬೇರೆ ಬೇರೆ ಇರುತ್ತದೇನು?...." ಮೂದಲಿಸಿದನು ಐತ.

"ಇರದೆ ಏನು ಮತ್ತೆ? ಬಸಿರೇರು ಬಾಣಂತೇರು ತಿನ್ನೋದನ್ನೆಲ್ಲ ಗಂಡಸರೂ ತಿಂತಾರೇನು?...." ಅಣಕಿಸಿ ನುಡಿದಳು ಪೀಂಚಲು.

"ಓಹೋಹೋ ಈಗ ಗೊತ್ತಾಯ್ತು ಬಿಡು. ಅದಕ್ಕೆ ನೀನು ಅಷ್ಟು ಹೊತ್ತಾಗಿ ಬಂದದ್ದು..... ದೊಡ್ಡ ಅಮ್ಮಗೆ ಎಲ್ಲಾ ಹೇಳಿಬಿಟ್ಟಿದ್ದೀಯಾ ಅನ್ನು."

"ಅದಕ್ಕೇನಲ್ಲ ಹೊತ್ತಾಗಿ ಬಂದದ್ದು."

"ಮತ್ತೇ?"

"ಅದೆಲ್ಲಾ ನಿನಗೆ ಈಗಲೆ ಹೇಳಬಾರ್ದು...."

"ಅದು ಯಾರು? ಇಬ್ಬರು ಹೆಂಗಸರು ಬಂದ ಹಾಂಗಿತ್ತಲ್ಲಾ ಕತ್ತಲೆ ಆದಮೇಲೆ ನೀವಿದ್ದಲ್ಲಿಗೆ?"

ಬಾಯಿಗೆ ಸುರಿದುಕೊಳ್ಳುವುದರಲ್ಲಿದ್ದ ಅಂಬಲಿಯನ್ನು ಕೈಬೊಗಸೆಯಿಂದ ಹಾಗೆಯೆ ಹಾಳೆಕೊಟ್ಟೆಗೆ ಹಾಕಿ, ಪೀಂಚಲು ಬೆರಗು ಬಡಿದವಳಂತೆ ಗಂಡನ ಕಣ್ಣನ್ನೆ ನೋಡತೊಡಗಿದಳು:

"ಅದು ನಿನಗೆ ಹೆಂಗೆ ತಿಳಿದದ್ದು?" ಎಂದಳು ತುಸು ಹೊತ್ತು ತಡೆದು.

"ನಾನು ಅಲ್ಲೇ ಹಲಸಿನ ಮರ ಹತ್ತಿದ್ದೆ, ಕುಜ್ಜು ಸಿಗುತ್ತವೆಯೆ ನೋಡಲಿಕ್ಕೆ... "

"ನೀನು ಮೇಲೆ ಕಾಣುವಷ್ಟು ಸಾಮಾನ್ಯ ಏನಲ್ಲ, ಹೊಂಚಿ ನೋಡುವ ಅಭ್ಯಾಸ ಬೇರೆ ಕಲಿತುಕೊಂಡಿದ್ದೀಯಾ?... "

ಐತ ತಲೆ ಬಗ್ಗಿಸಿಬಿಟ್ಟನು. ಅಪರಾಧಿಯಂತೆ. ಅವನ ಮೋರೆ ಬಾಡಿತು. ಅದನ್ನರಿತು ಪೀಂಚಲು ಅವನ ಮನಸ್ಸನ್ನು ಆ ಕಹಿಯಿಂದ ಪಾರುಮಾಡುವ ಉದ್ದೇಶದಿಂದ "ಹೂವಳ್ಳಿ ಚಿನ್ನಕ್ಕ, ನಾಗಕ್ಕನ್ನ ಕರಕೊಂಡು ಬಂದಿದ್ರು" ಎಂದಳು.

ಅದನ್ನು ನಂಬಲಾರದವನಂತೆ ಐತ ಸರಕ್ಕನೆ ತಲೆಯೆತ್ತಿ "ಆ್ಞ? ಯಾರು ಬಂದಿದ್ರು ಅಂದೆ?" ಎಂದು ಬೆರಗಾದನು.

"ಹೂವಳ್ಳಿ ಚಿನ್ನಕ್ಕ ನಾಗಕ್ಕನ್ನ ಕರಕೊಂಡು ಬಂದಿದ್ರು... " ಮತ್ತೆ ಹೇಳಿದಳು ಪೀಂಚಲು.

ಕಲ್ಲೂರು ಮಂಜಭಟ್ಟರ ಸಾಲಕ್ಕೆ ಸಿಂಬಾವಿ ಭರಮೈ ಹೆಗ್ಗಡೆಯವರು ಜಾಮೀನು ನಿಂತು ಹೂವಳ್ಳಿ ವೆಂಕಪ್ಪನಾಯಕರ ತೋಟಗದ್ದೆಗನ್ನು ಉಳಿಸಿಕೊಟ್ಟ ವಿಚಾರವನ್ನೂ, ಚಿನ್ನಮ್ಮನನ್ನು ಭರಮೈ ಹೆಗ್ಗಡೆಯವರಿಗೆ ಕೊಟ್ಟು ಲಗ್ನವಾಗುವ ವಿಚಾರವನ್ನೂ ಕೇಳಿದ ಐತ "ಲಗ್ನ ನಿಶ್ಚಯ ಆಗೇ ಹೋಯ್ತುಂತೇನು?" ಎಂದನು.

"ಮಳೆ ಹಿಡಿಯೋದರ ಒಳಗೇ ಮಾಡಿಬಿಡ್ತಾರಂತೆ! ಆ ಚಿನ್ನಕ್ಕನ ದುಃಖ ನೋಡಾಕೆ ಆಗೋದಿಲ್ಲ. ಜೀವಕ್ಕ ಏನಾದ್ರೂ ಮಾಡಿಕೊಂಡು ಬಿಟ್ಟಾರು ಅಂತಾ ನಾಗಕ್ಕ ಮೂರು ಹೊತ್ತೂ ಅವರ ಹಿಂದೇನೆ ಇರತಾರಂತೆ. ಅವರು ಒಂದು ಮಾತು ಆಡಲಿಲ್ಲ. ಸುಮ್ಮನ ಅಳ್ತಾನೆ ಇದ್ರು. ನಾಗಕ್ಕನೇ ಎಲ್ಲಾ ಹೇಳಿದ್ದು ಮಾಡಿದ್ದು.... "

"ಮತ್ತೆ ನಾಗಕ್ಕ ಉಡಿಕೆ ಮಾಡಿಕೊಳ್ಳಾಕ್ಕ ಒಪ್ಪಿದ್ದು ಚಿನ್ನಕ್ಕನ ಕಷ್ಟ ತಪ್ಪಿಸಾಕೆ ಅಂತಿದ್ದೀ? ಈಗ ಏನ್ ಆದ್ಹಾಂಗಾತು?"

"ಚಿನ್ನಕ್ಕನ ಅಪ್ಪಯ್ಯನೂ ಒಂದು ತರದ ಮಂಡ ಮನುಷ್ಯ. ಸಾಲ ತೀರ್ಸಾಕೆ ದುಡ್ಡು ಕೊಡ್ತಾರೆ. ತೆರಾನೂ ಕೈತುಂಬ ಕೊಡ್ತಾರೆ ಅಂತಾ ಹೇಳಿ ಚಿನ್ನಕ್ಕನ ಕೊರಳಿೀಗೆ ಆ ರೋಗಿಷ್ಟನ್ನ ಕಟ್ಟಾಕೆ ಒಪ್ಪಿಕೊಂಡುಬಿಟ್ಟಾರ. ಪಾಪ, ನಾಗಕ್ಕನೂ ಏನೆಲ್ಲ ಮಾಡಿದ್ರಂತೆ: ಏನೂ ಪ್ರಯೋಜನ ಆಗ್ಲಿಲ್ಲಂತೆ."

"ಈಗ ಮತ್ತೇನು ಮಾಡಾದೆ?" ತುಂಬ ಸಂಕಟದ ಧ್ವನಿಯಿಂದಲೇ ಕೇಳಿದನು ಐತ. ಚಿನ್ನಮ್ಮನನ್ನು ಪಾರುಗಾಣಿಸುವ ಹೊಣೆಯನ್ನು ತಾನೆ ಹೊತ್ತುಕೊಂಡು ಬಿಟ್ಟನೊ ಎಂಬಂತೆ.

"ಅದೆಲ್ಲ ನಿನಗ್ಯಾಕ? ಮುಕುಂದಯ್ಯ ನಾಗಕ್ಕ ನಾನು ಎಲ್ಲಾ ಸೇರಿ ಏನೋ ಹುನಾರು ಮಾಡ್ತೀವಿ. ನೀನು ಯಾರ ಹತ್ರನೂ ತುಟಿಪಿಟಕ್ಕೆನ್ನದೆ ನಾವು ಹೇಳ್ದಂಗೆ ಮಾಡ್ತಿಯೇನು ಹೇಳು?...."

"ನೀ ಹೇಳಿದ್ಹಾಂಗೆ ಅಂದ್ರೆ? ಮುಕುಂದಯ್ಯ ಹೇಳಿದ್ಹಾಂಗೆ!... ಅದೇನು ನಾ ಹೇಳಿದ್ಹಾಂಗೆ ಮಾಡಿದ್ರೆ ನಿಂಗೆ ಮಾನ ಮುಕ್ಕಾಗ್ತದೇನೋ?... "

"ಇಲ್ಲ ಮಹಾರಾಯ್ತೀ, ನೀ ಹೇಳದ್ಹಂಗೇ ಮಾಡ್ತೀನಿ!" ಐತನ ಭಂಗಿಯಲ್ಲಿ ಸಂಪೂರ್ಣ ಶರಣಾಗತಿಯ ಭಾವ ತುಳುಕುತ್ತಿತ್ತು.

ನಾಲ್ಕೈದು ದಿನಗಳಿಂದಲೂ ಪ್ರೇಮಲ ಸ್ವಭಾವದ ಐತನ ಜೀವಕ್ಕೆ, ಸುಡುಬಿಸಿಲಿನಲ್ಲಿ ಬಾಯಾರಿ, ಮರುಭೂಮಿ ಪ್ರವಾಸ ಕೈಗೊಂಡ ಹಾಗೆ ಆಗಿತ್ತು. ಪಕ್ಕದಲ್ಲಿಯೆ ತಂಪೀಯುವ ಮರುವನವಿದ್ದರೂ ನಿರ್ಮಲ ಶೀತಲೋದಕದ ತಟಾಕವಿದ್ದರೂ ಗರ್ವಕ್ಕೂ ಅಭಿಮಾನಕ್ಕೂ ವಶವಾಗಿದ್ದ ಅವನ ಚೇತನ ಆ ನೀರನ್ನು ಕುಡಿಯಲೊಲ್ಲದೆ, ಆ ತಣ್ಣೆಳಲನ್ನು ಆಶ್ರಯಿಸಲು ತಿರಸ್ಕರಿಸಿ ಬಿಸಿಲಿನಲ್ಲಿಯೆ ಬಿಗುಮಾನದಿಂದ ಬೇಯುತ್ತಿತ್ತು. ಇಂದು ಅನಿರೀಕ್ಷಿತವಾಗಿ ಆಶ್ಚರ್ಯಕರವಾಗಿ ಆ ದುಃಸ್ವಪ್ನ ಬಿರಿದು ಬಯಲಾಗಿತ್ತು. ತನ್ನ ಹೆಂಡತಿಯನ್ನು ತಾನು ತಪ್ಪಾಗಿ

ತಿಳಿದುಕೊಂಡೆನೆಂದು ಅವನಿಗೆ ಗೊತ್ತಾದ ಒಡನೆಯೆ ಕವಿದಿದ್ದ ಮೋಡವೆಲ್ಲ ತೊಲಗಿ ಹೋಗಿತ್ತು; ಹುಣ್ಣಿಮೆಯ ತಿಂಗಳ ಬೆಳಕು ಬದುಕನ್ನೆಲ್ಲ ತನ್ನ ತಣ್ಬೆಳಗಿನಿಂದ ಆಹ್ಲಾದಕರವನ್ನಾಗಿ ಮಾಡಿತ್ತು; ಮಾತ್ಸರ್ಯದ ಚಪ್ಪಡಿ ಬಂಡಿಯಡಿ ಸಿಕ್ಕಿ ಅದರ ನುಗ್ಗುನುರಿ ಮಾಡುತ್ತಿದ್ದ ಭಾರಕ್ಕೆ ಏದುತ್ತಿದ್ದ ಅವನ ಹೃದಯ, ಇದ್ದಕ್ಕಿದ್ದ ಹಾಗೆ ವಿಮುಕ್ತವಾಗಿ, ಹಗುರವಾಗಿ ಗರಿಕೆದರಿ ಗಾಳಿಯಲ್ಲಿ ಹಾರಾಡಿ ತಿಳ್ಳೆಯಾಡುತ್ತಿತ್ತು. ಪೀಂಚಲುವಿನ ಒಂದೊಂದು ಚಲನೆ, ಒಂದೊಂದು ಭಂಗಿ, ಒಂದೊಂದು ಅಂಗ ಉಪಾಂಗ ಎಲ್ಲವೂ ಸ್ವರ್ಗೀಯವಾಗಿ ತೋರಿ ಅವನನ್ನು ಇಂದ್ರಪಟ್ಟಕ್ಕೇರಿಸಿತ್ತು; ಅಡಕೆಯ ಸೋಗೆ ಹೊದಿಸಿದ್ದ ಅವನ ಆ ಜೋಪಡಿಬಿಡಾರವನ್ನು ಅಮರಾವತಿಯ ನಂದನವನ್ನಾಗಿ ಮಾರ್ಪಡಿಸಿತ್ತು.

ಪೀಂಚಲು ದೀಪ ಆರಿಸಿ, ಕತ್ತಲೆಯಲ್ಲಿಯೆ ತನ್ನ ಸೀರೆಯನ್ನು ಬಿಚ್ಚಿಟ್ಟು, ಐತನು ಹೊದೆದಿದ್ದ ಕಂಬಳಿಯಡಿ ನುಸುಳಿ, ತನ್ನ ಬತ್ತಲೆ ಮೈಯನ್ನು ಅವನ ಬತ್ತಲೆಯ ಮೈಗೆ ಒತ್ತಿ ಚಾಪೆಯ ಮೇಲೆ ಹಾಸಿದ್ದ ಕಂಬಳಿಯ ಮೇಲೆ ಹಾಸಿದ್ದ ಇನ್ನೊಂದು ಹರಕಲು ಸೀರೆಯನ್ನೇ ಮಗ್ಗಲು ಹಾಸಿಗೆಯನ್ನಾಗಿ ಮಾಡಿದ್ದ ಶಯ್ಯೆಯಲ್ಲಿ ಪವಡಿಸಿದಾಗ ಐತನಿಗೆ ಅದು ಹಂಸತೂಲಿಕಾತಲ್ಪವಾಗಿ ಬಿಟ್ಟಿತ್ತು! ತನ್ನ ಸರ್ವಸ್ವದಿಂದಲೂ ಅವಳ ಸರ್ವಸ್ವವನ್ನೂ ತಬ್ಬುವಂತೆ ತನ್ನೆರಡು ತೋಳುಗಳಲ್ಲಿ ಅವಳನ್ನು ಬಿಗಿದಪ್ಪಿ, ಕೆನ್ನೆಯ ಮೇಲೆ ಕೆನ್ನೆಯಿಟ್ಟು ಸಮಾಧಿಸ್ಥನಾಗಿ ಕರಗಿಯೆ ಹೋದಂತೆ ಸ್ವಲ್ಪ ಹೊತ್ತು ನಿಶ್ಚಲನಾಗಿ ಬಿಟ್ಟನು. ಆದರೆ ಅವನ ಅಳ್ಳೆ ಹೊಡೆದುಕೊಳ್ಳುತ್ತಾ ಇದ್ದುದು ಅವಳ ಹೊಡೆದುಕೊಳ್ಳುತ್ತಿದ್ದ ಅಳ್ಳೆಗೆ ಆಪ್ಯಾಯಮಾನವಾಗಿ ಅರಿವಾಗುತ್ತಿತ್ತು. ನಾಲ್ಕು ತೊಡೆಗಳೂ ನಾಲ್ಕು ಕೈಗಳೂ ಒಂದನ್ನೊಂದು ಬಿಗಿಯುವುದರಲ್ಲಿ ಸೆಣಸುವಂತಿದ್ದುವು. ಅವಳ ಮೆತ್ತನೆಯ ಕುಚಗಳು ತನ್ನ ವೃಕ್ಷಕ್ಕೆ ಒತ್ತಿದ್ದಂತೆಲ್ಲ ಐತನ ಎಡದ ಕೈ ಅವಳ ಬೆನ್ನಿನ ಮೇಲೆ ಆಡುತ್ತಾ ಆಡುತ್ತಾ ಕೆಳಕೆಳಗಿಳಿದು ಅವಳ ಮೃದುಕಠಿಣ ನಿತಂಬಗಳನ್ನು ಸೋಂಕಿ, ಒತ್ತಿ, ಕೈಮುತ್ತನ್ನೊತ್ತಿ ಸೊಗಸಿದಾಗ ಅವನ ಪ್ರಜ್ಞೆ, ಜೇನುತುಪ್ಪದ ಕೆರೆಯಲ್ಲಿ ನಾಲಗೆಯಾಗಿ ಮುಳುಗಿ ಲಯವಾಗಿಬಿಟ್ಟಿತು. ಆ ಆನಂದಕ್ಕೆ ಆ ರೋಮಾಂಚನಕ್ಕೆ ಪೀಂಚಲು ಅವಶಳಾಗಿ, ತನ್ನ ಮಾನಸಮಸ್ತದ್ವಾರದ ರತಿಕವಾಟಗಳನ್ನು ಸಂಪೂರ್ಣವಾಗಿ ಅಗಲಿಸಿ ತೆರೆದು, ತನ್ನ ಇನಿಯನ ಮನ್ಮಥಾವಿಷ್ಟ ಪೌರುಷ ಪ್ರವೇಶನಕ್ಕೆ ಸುಗಮ ಮಾರ್ಗ ಮಾಡಿಕೊಟ್ಟು, ಆತನ ಸಮಸ್ತ ಪುರುಷಕಾರವೂ ತನ್ನೊಳಗೆ ಸಂಮಗ್ನಲಗ್ನವಾಗುವಂತೆ ಸ್ವೀಕರಿಸಿದಳು....

ಹೊರಗೆ ಸುತ್ತಲಿದ್ದ ಹಳುವಿನಲ್ಲಿ, ನೀರಿನಲ್ಲಿ, ಒಡ್ಡಿನಲ್ಲಿ, ಕೆಸರಿನಲ್ಲಿ, ಹುಳುಹುಪ್ಪಟೆ ಕಪ್ಪೆಗಳು, ಆಗಲೆ ಏಳೆಂಟು ಬಾರಿ ಸುರಿದಿದ್ದ ಮುಂಗಾರು ಮಳೆಗಳ ಪ್ರಭಾವದಿಂದ ಮತ್ತವಾದಂತೆ ಕೋಟಿಕೋಟಿಕೋಟಿ ಕೂಗುತ್ತಿದ್ದುವು, ಚೀರುತ್ತಿದ್ದುವು, ವಟಗುಟ್ಟುತ್ತಿದ್ದುವು. ಆದರೆ ಸುಖನಿದ್ರಾ ಸಮುದ್ರದಲ್ಲಿ ಮಗ್ನವಾಗಿದ್ದ ಕಿವಿಗಳಿಗೆ ಅವು ಗಮನಕ್ಕೂ ಬರಲಿಲ್ಲ.

ನಡುರಾತ್ರಿ ಒಮ್ಮೆ ಹುಲಿಕಲ್ಲಿ ನೆತ್ತಿಯಲ್ಲಿ ಹುಲಿ ಕೂಗಿದಾಗ ಪೀಂಚಲು ಬೆದರಿದಂತೆ ಕುಮುಟಿ, ತುಸು ಸಡಿಲವಾಗಿದ್ದ ತನ್ನ ತೋಳುಗಳನ್ನು ಗಂಡನ ಮೈಗೆ ಬಿಗಿದು ಸುತ್ತಿ ಮತ್ತಷ್ಟು ಒತ್ತಿ ಮಲಗಿದ್ದಳು.

ಬೆಳಗಿನ ಜಾವದಲ್ಲಿ ಐತನಿಗೆ ತನ್ನ ಆಲಿಂಗನದಲ್ಲಿದ್ದು ತನ್ನನ್ನು ಆಲಿಂಗಿಸಿದ್ದ ಪೀಂಚಲು ಅಳುತ್ತಿರುವಂತೆ ಭಾಸವಾಯಿತು. “ಯಾಕೆ, ಪೀಂಚಲು ಅಳುತ್ತೀಯಾ?” ಎಂದನು, ಮೆಲುದನಿಯಲ್ಲಿ ಮುದ್ದಾಗಿ ಕರೆದು.

ಅವಳು ನಿಡಿದಾಗಿ ಸುಯ್ದು “ಚೆನ್ನಕ್ಕ ಅಳುತ್ತಿದ್ದರು; ನನಗೂ ಅಳೂ ಹಂಗಾಯ್ತು!” ಎಂದಳು.

“ಕನಸು ಕಂಡೆಯಾ ಏನು?”

“ಅಲ್ಲ ಎಚ್ಚರಾಗಿತ್ತು. ಆ ವಾಟೆ ಹಿಂಡಲ ಹತ್ತಿರ ಅವರು ಅಳುತ್ತಿದ್ದುದು ನೆನಪಿಗೆ ಬಂತು…. “

“ಅಳುವುದು ಯಾಕೆ ಸುಮ್ಮನೆ? ಮುಕುಂದಯ್ಯ ಹೇಳಿದ ಹಾಗೆ ಮಾಡಿದರಾಯ್ತು. ಚೆನ್ನಕ್ಕನ ಆ ಮದುವೆ ಹೇಂಗೆ ಆಗುತ್ತದೆ ನೋಡುವಾ!” ಎಂದು ಅವಳ ಕೆನ್ನೆಗೆ ಕೆನ್ನೆಯೊತ್ತಿ ಸಂತೈಸಿದನು. ಅವಳೂ ಅಪ್ಪುಗೆಯನ್ನು ಸಡಿಲಿಸಿ, ಮಗ್ಗುಲಿಗೆ ತಿರುಗಿ, ತನ್ನ ಬತ್ತಲೆ ಬೆನ್ನನ್ನು ಅವನ ಬತ್ತಲೆ ಹೊಟ್ಟೆಗೆ ಬೆಚ್ಚಗೆ ಅನಿಸಿ ಒತ್ತಿ ಮಲಗಿದಳು. ಐತ ತನ್ನ ಬಲಗೈಯಿಂದ ಅವಳನ್ನು ಎದೆಗೊತ್ತಿಕೊಂಡು ಮಲಗುವ ನೆವದಲ್ಲಿ ಅವಳ ನಿತಂಬ ಸುಖಾ ಸ್ವಾದನ ಮಾಡುತ್ತಾ ಕೇಳಿದನು, ಪಿಸುದನಿಯಲ್ಲಿ, ಅವಳ ಕಿವಿಯ ಬಳಿಯೆ ಬಾಯಿಬಿಟ್ಟು:

“ಹೌದಾ, ಪೀಂಚಲು, ಚೆನ್ನಕ್ಕ ಮುಕುಂದಯ್ಯನ ಲಗ್ನ ಆದ ಮೇಲೆ, ಅವರಿಬ್ಬರೂ ಹೀಂಗೆ ಮಲಗಿಕೊಳ್ತಾರೇನೇ?”

“ಇಸ್ಸಿ, ಸುಮ್ಮನೆ ಮಲಗಿ! ನಿಮಗೆ ಬೇರೆ ಕಸುಬಿಲ್ಲ! ಏನೆಲ್ಲ ಕೇಳುತ್ತೀರಿ!” ಎಂದು ಗದರಿಸಿ, ತನ್ನ ನಿತಂಬದೇಶವನ್ನು ಇನ್ನಷ್ಟು ಬಲವಾಗಿ ಗಂಡನ ಉದರ ಊರು ಸಂಗಮ ಪ್ರದೇಶಕ್ಕೆ ಒತ್ತಿ ಒತ್ತಿ ಹೊಕ್ಕು ಮಲಗಿದಳು.

* * *

## ೩೯

ಬೆಟ್ಟಳ್ಳಿಯಿಂದ ಕಲ್ಲೂರಿಗೆ ಹೋಗುವ ದಾರಿಯ ಹೆಗ್ಗಾಡಿನ ಕಾಡುರಸ್ತೆಯಲ್ಲಿ ಕಮಾನು ಕಟ್ಟಿದ್ದ ಜೋಡೆತ್ತಿನ ಗಾಡಿಯೊಂದು ನಿಧಾನವಾಗಿ ಹೋಗುತ್ತಿತ್ತು. ಅದು ಹಾಗೆ ಮೆಲ್ಲಗೆ ಹೋಗುತ್ತಿದ್ದುದಕ್ಕೆ ಕಾರಣ ಎತ್ತುಗಳೂ ಆಗಿರಲಿಲ್ಲ, ಗಾಡಿ ಹೊಡೆಯುವವನೂ ಆಗಿರಲಿಲ್ಲ; ಹಾದಿಯೆ ಮುಖ್ಯ ಕಾರಣವಾಗಿತ್ತು. ಅಲ್ಲಿ ಸಾಮಾನ್ಯವಾಗಿ ಯಾವ ನಾಗರಿಕ ವಾಹನವೂ ಸಂಚರಿಸುತ್ತಿರಲಿಲ್ಲ ಎಂಬುದಕ್ಕೆ ಅದರ ಕೊರಕಲೂ. ಅಪೂರ್ವವಾಗಿ ಉಪಯೋಗಿಸುತ್ತಿದ್ದುದರ ದೆಸೆಯಿಂದಾಗಿ ಎದ್ದು ಕಾಣುತ್ತಿದ್ದ ಅದರ ಪಾಳುತನವೂ ಸಾಕ್ಷಿಯಾಗಿದ್ದುವು; ಗಾಡಿಯ ಚಕ್ರಗಳು ಹೋಗುತ್ತಿದ್ದ ಕೊರಕಲು ಓಣಿಯಲ್ಲಿ ಬಿದ್ದು ತುಂಬಿದ್ದ ತರಗೆಲೆಗಳೂ ಒಣಕಲು ಕಡ್ಡಿಗಳೂ ಹರಿಯದೆ ಮುರಿಯದೆ ಅಕ್ಷತವಾಗಿದ್ದುವು.

ಗಾಡಿಗೆ ಕಮಾನು ಕಟ್ಟಿದ್ದ ಠೀವಿ, ಎತ್ತುಗಳ ಕೊರಳಿನಲ್ಲಿ ಇಂಚರಗೈಯುತ್ತಿದ್ದ ಗಂಟೆ ಗಗ್ಗರದ ಸರಗಳು, ಚೆನ್ನಾಗಿ ಕೀಸಿ ಸೊಗಸುಗೊಳಿಸಿದ್ದ ಕೋಡುಗಳ ತುದಿಯಲ್ಲಿ ಹೊಳೆಯುತ್ತಿದ್ದ ಹಿತ್ತಾಳೆಯ ಕೋಡು ಕುಂಚುಗಳು, ಆ

ಕುಂಚಗಳ ತುದಿಯಲ್ಲಿ ಜೋಲಾಡುತ್ತಿದ್ದ ಬಣ್ಣದ ಕುಚ್ಚುಗಳು, ಗಾಡಿ ಹೊಡೆಯುತ್ತಿದ್ದವನು ಹಿಡಿದಿದ್ದ ಬಾರುಕೋಲಿನ ಬಣ್ಣದ ಶೃಂಗಾರ, ಅವನು ತಲೆಗೆ ಸುತ್ತಿದ್ದ ಕೆಂಪು ಎಲೆವಸ್ತ್ರ, ಅವನು ಹಾಕಿಕೊಂಡಿದ್ದ ಅಂಗಿ, ಅವನು ಮೊಣಕಾಲವರೆಗೆ ಸುತ್ತಿ ಉಟ್ಟುಕೊಂಡಿದ್ದ ಕೆಂಪಂಚಿನ ಅಡ್ಡಪಂಚೆ, ಅವನ ಕಿವಿಗಳಲ್ಲಿದ್ದ ಒಂಟಿಗಳು ಎಲ್ಲವೂ ಏನೊ ಒಂದು ಷೋಕಿಯನ್ನೂ ಸೊಗಸುಗಾರಿಕೆಯನ್ನೂ ಮನಸ್ಸಿಗೆ ತರುವಂತಿದ್ದುವು.

ಗಾಡಿಯ ಒಳಗಡೆ ಮೂವರು ಹೆಂಗಸರೂ ಮೂವರು ಹುಡುಗರೂ ಇದ್ದರು. ಹೆಂಗಸರಲ್ಲಿ ಅತ್ಯಂತ ಕಿರಿಯವಳೆಂದು ತೋರುತ್ತಿದ್ದಾಕೆಯ ತೊಡೆಯ ಮೇಲಿದ್ದ ಕೈಗೂಸೊಂದು ಆಗಾಗ ಅಳುತ್ತಿದ್ದ ಸದ್ದು, ಗಾಡಿ ಜಟಕಾ ಹೊಡೆಯದೆ ಸಮವಾಗಿದ್ದ ರಸ್ತೆಯಲ್ಲಿ ಹೋಗುತ್ತಿದ್ದಾಗ ಮಾತ್ರ, ಗಗ್ಗರದ ಸರದ ಟಿಂಟಿಣಿಯೊಡನೆ ಬೆರೆತು ಕೇಳಿಸುವಂತಿತ್ತು.

ಗಾಡಿಯ ಹಿಂಭಾಗದಲ್ಲಿ ಕುಳಿತು ಕಾಡನ್ನೂ ಆಕಾಸವನ್ನೂ ಪ್ರಾಣಿಪಕ್ಷಿ ಜೀವನದ ವ್ಯಾಪಾರ ವಿಶೇಷಗಳನ್ನೂ ಬಾಲಕಸಹಜವಾದ ಕುತೂಹಲದಿಂದ ಈಕ್ಷಿಸುತ್ತಿದ್ದ ಮೂವರು ಹುಡುಗರಲ್ಲಿ ಇಬ್ಬರು, ಗಾಡಿಯ ಶಬ್ದವನ್ನೂ ಮೀರಿಸುವಂತೆ, ತಮ್ಮಿಂದಾದಷ್ಟು ಗಟ್ಟಿಯಾಗಿ ಗಳಪುತ್ತಾ, ಮಕ್ಕಳ ಟೀಕೆಟಿಪ್ಪಣಿಯ ಮುಗ್ಧ ಸಂವಾದದಲ್ಲಿ ತೊಡಗಿದ್ದರು. ಮೂರನೆಯವನು ತನ್ನ ಸಂಗಾತಿಗಳ ಮಾತಿನಲ್ಲಿಯೂ, ಅವರು ನೋಡಿ ತೋರಿ ನಕ್ಕು ಕೇಕೆ ಹಾಕಿ, ಕೈ ಚಪ್ಪಾಳೆ ಹೊಡೆದು ಗಮನಿಸುತ್ತಿದ್ದ ಪ್ರಕೃತಿದೃಶ್ಯ ಮತ್ತು ಪಶುಪಕ್ಷಿ ಚೇಷ್ಟಿತಗಳಲ್ಲಿಯೂ ಆಸಕ್ತನಂತೆ ತೋರುತ್ತಿದ್ದರೂ ಯಾವೊಂದು ಮಾತನ್ನೂ ಆಡದೆ ನೀರವವಾಗಿದ್ದನು. ಒಮ್ಮೊಮ್ಮೆ ಅವನು ಅತ್ಯಂತ ಅಂತರ್ಮೂಖನಾದಂತೆ ತತ್ಕಾಲ ದೇಶದಲ್ಲಿರದೆ ಇನ್ನೆಲ್ಲಿಯೋ ಇದ್ದು ಇನ್ನಾವುದನ್ನೋ ಗಮನಿಸುತ್ತಿರುವಂತೆ ಭಾಸವಾಗುತ್ತಿತ್ತು.

ಆದ್ದರಿಂದಲೆ ಒಂದು ಸಾರಿ ತಿಮ್ಮು, ಕಾಡು, ಇಬ್ಬರೂ ಒಟ್ಟಿಗೆ ಒಕ್ಕೊರಲಿನಲ್ಲಿ "ಅಲ್ನೋಡೋ! ಅಲ್ನೋಡೋ, ಧರ್ಮೂ, ಕಾಡುಕೋಳಿ ಹುಂಜ ! ಕಾಡುಕೋಳಿ ಹುಂಜ! ಅಲ್ಲಿ! ಅಲ್ಲಿ! ಅಲ್ಲಿ! ಆ ಮುಟ್ಟಿನಾಚೀಲಿ" ಎಂದು ಕೂಗಿಕೊಂಡಾಗ ಧರ್ಮು ಕುಮುಟಿ ಬಿದ್ದು ಆಗತಾನೆ ಎಚ್ಚರಗೊಂಡಂತೆ ಗಾಬರಿಯಾಗಿದ್ದನು.

ಅವನು ಹಾಗೆ ಬೆಚ್ಚಿ ಬೆದರಿದ್ದನ್ನು ಗಮನಿಸಿದ್ದ ಬೆಟ್ಟಳ್ಳಿ ಅಜ್ಜಮ್ಮ, ಅವನ ತಾಯಿಯ ತಂಗಿಯ ಅತ್ತೆ, ಬೆಟ್ಟಳ್ಳಿ ಕಲ್ಲಯ್ಯಗೌಡರ ಹೆಂಡತಿ ದೊಡ್ಡಮ್ಮ ಹೆಗ್ಗಡತಿಯವರು, ವಯಸ್ಸಿನಲ್ಲಿ ಉಳಿದ ಇಬ್ಬರಿಗಿಂತ ಹಿರಿಯನಾಗಿದ್ದ ತಮ್ಮ ಕಿರಿಯ ಮಗ ಕಾಡುವನ್ನೂ, ಕೋಣೂರು ರಂಗಪ್ಪಗೌಡರ ಮಗ ತಿಮ್ಮುವನ್ನೂ ಕುರಿತು "ಏ ಹುಡುಗುರಾ, ಯಾಕ್ರೋ ಹಂಗೆ ಕೂಗ್ತೀರಿ?" ಎಂದು ಗದರಿಸಿದ್ದರು.

ಧರ್ಮು ಮಾತ್ರ ಏನೊಂದೂ ಮಾತಾಡದೆ, ತನ್ನ ಅವ್ವನ ಕಡೆ ಅವ್ಯಕ್ತ ದುಃಖ ಮುಖಮುದ್ರೆಯಿಂದ ನೋಡಿ, ಅಭ್ಯಾಸ ಮಾತ್ರವಾಗಿ ಒಂದು ಔಪಚಾರಿಕ ಮುಗುಳು ನಗೆ ಬೀರಿದ್ದನು.

ಚಿಂತಾಮುಖಮುದ್ರೆಯಿಂದಿದ್ದ ಹಳೆಮನೆ ದೊಡ್ಡಣ್ಣ ಹೆಗ್ಗಡೆಯವರ ಸಹಧರ್ಮಿಣಿ ರಂಗಮ್ಮ ತನ್ನ ಮಗನನ್ನು ಸಂತೈಸಲೂ ಎಂಬಂತೆ ಅವನ ತಲೆಯ ಮೇಲೆ ಕೈಯಾಡಿಸಿ, ಪಕ್ಕದಲ್ಲಿ ಶಿಶು ಚೆಲುವಯ್ಯನನ್ನು ತೊಡೆಯ ಮೇಲೆ ಮಲಗಿಸಿಕೊಂಡು ಕುಳಿತಿದ್ದ ತನ್ನ ತಂಗಿಯ ಬೆಟ್ಟಳ್ಳಿ ದೇವಯ್ಯಗೌಡರ ಸೌಭಾಗ್ಯವತಿ ದೇವಮ್ಮ ಕಡೆ

ಅರ್ಥಪೂರ್ಣವಾಗಿ ನೋಡಿದಳು. ದೇವಮ್ಮ ಚೆಲುವಯ್ಯನನ್ನು ತನ್ನ ಅಕ್ಕಯ್ಯನ ತೊಡೆಗೆ ಸಾಗಿಸಿದಳು. ಧರ್ಮು ಇದ್ದಕ್ಕಿದ್ದ ಹಾಗೆ, ತನ್ನನ್ನು ಕವಿದಿದ್ದ ಮೋಡಗಳನ್ನೆಲ್ಲ ವಿಸರ್ಜಿಸಿದ ನೀಲಾಕಾಶದಂತೆ, ಸುಪ್ರಸನ್ನವದನನಾಗಿ ತನ್ನ ತಮ್ಮನನ್ನು-ತಾಯಿಯ ತಂಗಿಯ ಮಗ-ಮಾತನಾಡಿಸುತ್ತಾ ಅವನೊಡನೆ ಶಿಶುಲೀಲೆಯಲ್ಲಿ ಮಗ್ನನಾಗಿಬಿಟ್ಟನು.

ಇತ್ತೀಚೆಗೆ ಧರ್ಮುಗೆ ತನ್ನ ತಾಯಿಗೆ ಒದಗಿದ್ದ ಮಹಾಸಂಕಟದ ಅರ್ಥವೇನು ಎಂಬುದು ಅರಿವಾಗಹತ್ತಿತ್ತು. ತಾನು ಇನ್ನೂ ಅರಿಯದ ಮೂರುನಾಲ್ಕು ವರ್ಷದ ಮಗುವಾಗಿದ್ದಾಗಲೆ ತನ್ನ ತಂದೆ ತಿರುಪತಿಗೆ ಹೋಗಿ ಹಿಂತಿರುಗಿರಲಿಲ್ಲ. ಬಾಲ್ಯಕ್ಕೆ ಆ ದುರಂತದ ಅರಿವು ಅರ್ಥ ದುಃಖ ಅನರ್ಥ ಯಾವುದೂ ಅಷ್ಟಾಗಿ ನಾಟಿರಲಿಲ್ಲ. ಆದರೆ ಅವನ ಚೇತನ ವಯಸ್ಸಾದಂತೆಲ್ಲಾ ಕಣ್ದೆರೆದು ಪ್ರಜ್ಞಾಪೂರ್ವಕವಾಗಿ ಗಮನಿಸುವುದನ್ನು ಕಲಿತಂತೆ, ತನ್ನ ಅವ್ವನ ದುಃಖವೂ ದುಃಸ್ಥಿತಿಯೂ ಅವನ ಹೃದಯಕ್ಕೆ ತಾಗಿದ್ದುವು. ಆಮೇಲೆ, ತನ್ನ ಮನೆಯ ಅಥವಾ ತನ್ನ ಮಾವನ ಮನೆಯ ಹಿರಿಯರಾರೂ ತನ್ನೊಡನೆಯಾಗಲಿ ತನ್ನಿದಿರಿನಲ್ಲಾಗಲಿ ಆ ಪ್ರಸ್ತಾಪವನ್ನೇ ಎತ್ತುತ್ತಿರಲಿಲ್ಲವಾದರೂ, ಕೋಣೂರಿಗೆ ಐಗಳ ಮಠದಲ್ಲಿ ಓದುವುದಕ್ಕೆ ಹೋದ ತರುವಾಯ ಐತನಂತಹ ಆಳುಮಕ್ಕಳಿಂದಲೂ ಆ ವಿಚಾರವನ್ನು ಸ್ವಲ್ಪಮಟ್ಟಿಗೆ ಗ್ರಹಿಸಿ ಮರುಗಿದ್ದನು. ಅಲ್ಲದೆ, ಒಮ್ಮೊಮ್ಮೆ ಅವನ ಸಣ್ಣಮಾವ (ಮುಕುಂದಯ್ಯ) ದೊಡ್ಡಮಾವ (ರಂಗಪ್ಪ ಗೌಡರು) ಕಾಗಿನಹಳ್ಳಿ ಅಜ್ಜಮ್ಮ (ದಾನಮ್ಮ ಹೆಗ್ಗಡತಿಯವರು: ಮುಕುಂದಯ್ಯ, ರಂಗಪ್ಪ ಗೌಡರು, ಧರ್ಮುವಿನ ತಾಯಿ ಮತ್ತು ಬೆಟ್ಟಳ್ಳಿ ದೇವಯ್ಯನ ಹೆಂಡತಿ ದೇವಮ್ಮ ಇವರನ್ನೆಲ್ಲ ಹೆತ್ತ ತಾಯಿ) ಅತ್ತೆಮ್ಮ (ರಂಗಪ್ಪಗೌಡರ ಹೆಂಡತಿ, ತಿಮ್ಮುವ ತಾಯಿ ಮತ್ತು ತನ್ನ ತಂದೆ ಹಳೆಮನೆ ದೊಡ್ಡಣ್ಣ ಹೆಗ್ಗಡೆಯವರ ತಂಗಿ.) ಇವರೆಲ್ಲ ತಮ್ಮತಮ್ಮೊಳಗೆ ಮಾತನಾಡಿಕೊಳ್ಳುತ್ತಿದ್ದಾಗ ಕದ್ದು ನಿಂತು ಆಲಿಸಿಯೂ ಸತ್ಯಸಂಗ್ರಹ ಮಾಡಿದ್ದನು. ಕೆಲವು ಸಾರಿ, ತನ್ನ ಇಚ್ಛೆಯಿಂದಲ್ಲದಿದ್ದರೂ, ಘಟನಾವೈಚಿತ್ರದಿಂದಲೇ ತನ್ನ ತಂದೆಗೆ ಒದಗಿರುವ ದುರಂತದ ವಿಚಾರ ಅವನ ಕಿವಿಗೆ ಬಿದ್ದಿತ್ತು. ಹೀಗಾಗಿ, ಇತ್ತೀಚೆಗಂತೂ, ತನಗೂ ತನ್ನ ತಾಯಿಗೂ ಒದಗಿರುವ ವಿಪತ್ತಿನ ಅರಿವು ಅವನಿಗೆ ತಕ್ಕ ಮಟ್ಟಿಗೆ ಸಂಪೂರ್ಣವಾಗಿಯೆ ಗ್ರಾಹ್ಯವಾಗಿತ್ತು.

ಅದರಲ್ಲಿಯೂ ಆವೊತ್ತು ರಾತ್ರಿ ಅವರೊಡನೆ ಸನಿಹದಲ್ಲಿ ಕೋಣೂರಿನ ಜಗಲಿಯ ಮೇಲೆ ಮಲಗಿದ್ದಾಗ, ಅವನ ಸಣ್ಣ ಮಾವನಿಗೂ ಐಗಳಿಗೂ ನಡೆದ ಸಂಭಾಷಣೆಯನ್ನು ಕೇಳಿ, ಮರುದಿನ ತಾನು ಐತನನ್ನು ಜೊತೆಗೆ ಕರೆದುಕೊಂಡು ಹಳೆಮನೆಗೆ ಹೋದಾಗಿನಿಂದ ನಡೆದ ದುರ್ಘಟನಾ ಪರಂಪರೆಗಳಿಂದ ಅವನ ಶಿಶುಹೃದಯ ಜರ್ಝರಿತವಾಗಿತ್ತು. ತನ್ನ ತಾಯಿಯನ್ನು ಹೊಡೆದು ಕೋಣೆಗೆ ತಳ್ಳಿ ಚಿಕ್ಕಯ್ಯ ಬೀಗಹಾಕಿದ್ದುದನ್ನು ಕಂಡು ಮಂಜತ್ತೆಮ್ಮನಿಂದ ನಡೆದದ್ದನ್ನೆಲ್ಲ ಕೇಳಿ, ಬೀಗ ತೆಗೆದು ತಾನೆಷ್ಟು ಬಾಗಿಲು ತಳ್ಳಿ ಏನೇನೆಲ್ಲ ಹೇಳಿಕೊಂಡು ಅತ್ತರೂ ಅವ್ವ ಓಕೊಳ್ಳದೆ ಬಾಗಿಲು ತೆಗೆಯದೆ ಇದ್ದು, ಆಮೇಲೆ ಕೋಣೂರಿನಿಂದ ಸಣ್ಣ ಮಾವ ದೊಡ್ಡಮಾವ ಬಂದವರು ಕೊಡಲಿಯಿಂದ ಬಾಗಿಲು ಒಡೆದಮೇಲೆ ಒಳಗೆ ಹೋಗಿ ಪ್ರಜ್ಞೆತಪ್ಪಿ ಮಂಚದ ಮೇಲೆ ಬಿದ್ದಿದ್ದ ತನ್ನ ತಾಯಿಯನ್ನು ನೋಡಿದಾಗ, ಧರ್ಮು ಅವಳ ಪಾದ ಹಿಡಿದುಕೊಂಡು ಆಲಿಸಿದವರೆಲ್ಲರ ಕರುಳು ಬೇಯುವಂತೆ ಅತ್ತಿದ್ದನು. ಮರುದಿನ ಬೆಟ್ಟಳ್ಳಿಯ ಗಾಡಿ ಅಜ್ಜಯ್ಯನನ್ನು (ಸುಬ್ಬಣ್ಣ ಹೆಗ್ಗಡೆ) ಕರೆತಂದಾಗ ಅವರ ಮೊಣಕಾಲುಗಳನ್ನು ಅಪ್ಪಿ ಬಿಕ್ಕಿ ಬಿಕ್ಕಿ ರೋದಿಸಿದ್ದನು. ಅಜ್ಜಯ್ಯನಿಗೆ ಸಿಟ್ಟು ಬಂದು, ಚಿಕ್ಕಯ್ಯನನ್ನು (ತಿಮ್ಮಪ್ಪ ಹೆಗ್ಗಡೆ) ಹೀನಾಯಮಾನವಾಗಿ ಬೈದು, ಅವನ ಕಪಾಳಕ್ಕೆ ಹೊಡೆಯಲು ಹೋದಾಗ, ಅವನು ತಳ್ಳಿದ ರಭಸಕ್ಕೆ ಅವರು ತೆಣೆಯಿಂದ ಕೆಳಗೆ ಉರುಳಿಬಿದ್ದು ಮೂರ್ಛೆ ಹೋಗಿದುದ್ದನ್ನೂ ಧರ್ಮು ಸ್ತಂಭಿತವಾಗಿ ಕಂಡಿದ್ದನ್ನು! ಆಮೇಲೆ ಅಜ್ಜಯ್ಯ ಹಾಸಗೆ ಹಿಡಿದಿದ್ದು, ಎರಡು ಮೂರು ದಿನಗಳಾದರೂ ಇನ್ನೂ ಎದ್ದಿರಲಿಲ್ಲ, ಕೋಣೂರು ದೊಡ್ಡಮಾವ, ಸಣ್ಣಮಾವ, ಬೆಟ್ಟಳ್ಳಿ, ದೇವೈ ಚಿಕ್ಕಪ್ಪಯ್ಯು ಎಲ್ಲರೂ

ಒತ್ತಿ ಒತ್ತಿ ಹೇಳಿ ಹೇಳಿ ಒಪ್ಪಿಸಿದ ಮೇಲೆ ತನ್ನ ಅವ್ವ ಬೆಟ್ಟಳ್ಳಿಗೆ ಕೆಲವು ದಿನಗಳ ಮಟ್ಟಿಗೆ ಹೋಗಿರಲು ಒಪ್ಪಿದಳು. ಅವಳೊಡನೆ ತಾನೂ ಬೆಟ್ಟಳ್ಳಿಗೆ ಬಂದು, ಕಲ್ಲೂರು ದೇವಸ್ಥಾನಕ್ಕೆ ಸತ್ಯನಾರಾಯಣ ವ್ರತ ಮಾಡಿಸಲು ಹೋಗುವ ತನ್ನ ತಾಯಿಯನ್ನೂ, ಅತ್ತಿಗೆಯನ್ನೂ ಜೊತೆಗೊಳ್ಳು ತಮ್ಮ ಮನೆ ಬೆಟ್ಟಳ್ಳಿಗೆ ಬಂದಿದ್ದ ಗೆಳೆಯ ಕಾಡುವನ್ನೂ ಅವನೊಡನೆ ಇದ್ದ ತಿಮ್ಮುವನ್ನೂ ಕೂಡಿಕೊಂಡಿದ್ದನು.

ಬೆಟ್ಟಳ್ಳಿಗೆ ಬಂದ ಮೇಲೆ ಧರ್ಮುಗೆ ಒಂದು ಅಪೂರ್ವ ಅನುಭವವಾಗಿತ್ತು. ನಿಚ್ಚರೋತೆಯ ತಮ್ಮ ಮನೆಯ ವಾತಾವರಣದಿಂದ ಹೊರಬಿದ್ದು ಬೆಟ್ಟಳ್ಳಿ ಮನೆಯ ಸಂತೋಷದ ಮನೋವಲಯಕ್ಕೆ ಪ್ರವೇಶಿಸಿದ್ದುದರ ಪರಿಣಾಮವಾಗಿದ್ದರೂ ಆಗಿರಬಹುದು; ತನ್ನ ಒಡನಾಡಿಗಳಾಗಿದ್ದ ಕಾಡು, ತಿಮ್ಮು ಅವರನ್ನು ಮರಳಿ ಕೂಡಿಕೊಂಡು ಆತ ಅಲೆದಾಟಗಳಲ್ಲಿ ಮಗ್ನನಾಗಿ ಮನಸ್ಸನ್ನು ದುಃಖಚಿಂತನೆಯಿಂದ ತಾತ್ಕಾಲಿಕವಾಗಿಯಾದರೂ ದೂರಮಾಡಿಕೊಂಡುದರ ಫಲವಾಗಿಯೂ ಇರಬಹುದು; ಅವರೆಡಕ್ಕಿಂತಲೂ ಅತಿಶಯವಾಗಿ ಪ್ರಭಾವಶಾಲಿಯಾಗಿದ್ದುದೆಂದರೆ, ಅವನ ತಾಯಿಯಲ್ಲಿ ಹಠಾತ್ತನೆ ತೋರಿಬಂದಿದ್ದ ಭಾವಪರಿವರ್ತನೆ! ತನ್ನ ಅವ್ವನ ಕಣ್ಣಲ್ಲಿ ಹೊಸಬೆಳಕು ಮೂಡಿ, ತನ್ನ ಅಕ್ಕರೆಯ ಆ ಮೊಗದಲ್ಲಿ 'ಗೆಲವು' ಕಾಣಿಸಿದುದನ್ನು ಕಂಡ ಧರ್ಮುವ ಹೃದಯವೂ ಗೆಲುವಾಗಿಬಿಟ್ಟಿತ್ತು: ಇಲ್ಲಿ, ಈಗ, ಯಾರೂ ಅವಳನ್ನು 'ಹುಚ್ಚು ಹೆಗ್ಗಡ್ತಿ' ಎಂದು ಕರೆಯುತ್ತಲೂ ಇರಲಿಲ್ಲ, ಕರೆಯುವಂತೆಯೂ ಇರಲಿಲ್ಲ. ಅವಳ ಮನಸ್ಸು, ಮಾತು, ನಡತೆ ಮತ್ತು ಎಲ್ಲ ಕ್ರಿಯೆ ಎಲ್ಲ ಇತರ ಸಾಧಾರಣವಾಗಿ ಸರ್ವರಿಗೂ ಹರ್ಷದಾಯಕವಾಗಿತ್ತು.

ಆ ಪರಿವರ್ತನೆಗೆ ಮೂಲಕಾರಣವಾಗಿದ್ದವನೆಂದರೆ: ಚೆಲುವಯ್ಯ!

ಬೆಟ್ಟಳ್ಳಿಗೆ ಬಂದು ತನ್ನ ತಂಗಿಯ ಮಗನನ್ನು, ಬಾಲೆಯಾಡಿಸುವ ಹುಡುಗಿಯ ಸೊಂಟದ ಮೇಲೆ, ಕಂಡಾಗಣಿಂದ ಧರ್ಮುವ ತಾಯಿ ರಂಗಮ್ಮಗೆ ತನ್ನ ಕಷ್ಟ ಸಂಕಟ ದುಃಖ ಎಲ್ಲ ಹೆಡೆಮುಚ್ಚಿದಂತಾಗಿ ಮನಸ್ಸಿಗೆ ಏನೋ ಒಂದು ಅನಿರ್ವಚನೀಯವಾದ ನೆಮ್ಮದಿ ಒದಗಿದಂತಾಗಿತ್ತು. ಅವಳು ಅವನನ್ನು ಎವೆಯಿಕ್ಕದೆ ನೋಡುತ್ತಾ ನಿಂತುದನ್ನು ನೋಡಿ ಪಕ್ಕದಲ್ಲಿಯೆ ನಿಂತಿದ್ದ ದೇವಮ್ಮಗೆ ತನ್ನ ಅಕ್ಕಯ್ಯನ ಮನಃಸ್ಥಿತಿಯ ವಿಚಾರದಲ್ಲಿ ತುಸು ಕಳವಳ ಉಂಟಾಗಿತ್ತು. ಅವಳನ್ನು 'ಹುಚ್ಚು ಹೆಗ್ಗಡತಿ' ಎಂದು ಜನರು ಕರೆಯುತ್ತಿದ್ದುದು ನೆನಪಿಗೆ ಬಂದು, ಆಕೆಗೆ ಆಗಾಗ ತಲೆ ಕೆಟ್ಟಂತಾಗಿ ಹುಚ್ಚಿಯಂತೆ ವರ್ತಿಸಿ ಬಿಡುವ ಸಂಭವ ಉಂಟು ಎಂಬುದನ್ನೂ ನೆನೆದು, ತನ್ನ ಕಂದನಿಗೆ ಏನಾದರೂ ಅಮಂಗಳವಾದೀತೆಂದು ಒಳಗೊಳಗೆ ಬೆದರಿದ್ದಳು. ಆದರೆ ಅದನ್ನು ತೋರಗೊಡದೆ, ತನ್ನ ಕಂದನನ್ನು ಹುಡುಗಿಯ ಸೊಂಟದಿಂದ ತಾನೆ ಎತ್ತಿಕೊಂಡು, ಅಕ್ಕನ ಮುಂದೆ ನಿಂತು ತೋರುತ್ತಾ "ನಿನ್ನ ದೊಡ್ಡಮ್ಮನ್ನ ನೋಡೋ, ಮಾತಾಡ್ಸೋ ಏ ತುಂಟಾ" ಎಂದಿದ್ದಳು. ಚೆಲುವಯ್ಯನೂ ತನ್ನ ದೊಡ್ಡಮ್ಮನ ಕಡೆ ಕಣ್ಣರಳಿ ನೋಡುತ್ತಾ, ಬಿಜಿಲು ಬಿಜಿಲು ದನಿಮಾಡುತ್ತಾ, ಅವಳೇ ಎತ್ತಿಕೊಳ್ಳಲಿ ಎಂಬಂತೆ, ತನ್ನ ಪುಟ್ಟ ಇನಿದೋಳುಗಳನ್ನು ಮುಂದಕ್ಕೆ ಚಾಚಿ ತನ್ನ ಅಮ್ಮನ ವಕ್ಷದಿಂದ ಚಿಮ್ಮತೊಡಗಲು, ರಂಗಮ್ಮ ಅಕ್ಕರೆಯುಕ್ಕಿ ಅವನನ್ನು ಎತ್ತಿಕೊಂಡು, ತನ್ನ ಎದೆಗವುಚಿ, ಕೆನ್ನೆಗೆ ಮೊಗವಿಟ್ಟು, ಮುಂಡಾಡಿದ್ದಳು. ಆ ಮುದ್ದಾಟದಲ್ಲಿ ಎಂತಹ ಅದ್ಭುತ ಪವಾಡ ನಡೆದು ಹೋಗಿತ್ತೆಂಬುದನ್ನು ಅಲ್ಲಿದ್ದವರಾರೂ ಗ್ರಹಿಸಲಿಲ್ಲ. ಆದರೆ ಒಂದು ವಿಷಯ ಮಾತ್ರ ಎಲ್ಲರಿಗೂ ಹೃದ್ಗೋಚರವಾಗಿತ್ತು: ಆ ಕ್ಷಣದಿಂದ ರಂಗಮ್ಮ ಬೇರೆಯ ವ್ಯಕ್ತಿಯಾಗಿದ್ದಳು! ಅವಳ ಮನಸ್ಸು ವಿಷಣ್ಣತೆಯ ಪೊರೆಗಳಚಿ ಸುಪ್ರಸನ್ನವಾಗಿಬಿಟ್ಟಿತ್ತು! ಆ

ವ್ಯತ್ಯಾಸ ಎಷ್ಟು ಆಶ್ಚರ್ಯಕರವಾಗಿತ್ತು ಎಂದರೆ ಕೆಲವರಿಗಂತೂ ಅದೂ ಅವಳ ಹುಚ್ಚಿನ ಮತ್ತೊಂದು ರೀತಿಯೋ ಏನೋ ಎಂಬ ಶಂಕೆ ತಲೆದೋರಿತ್ತು.

ತನ್ನ ತಾಯಿ ತನಗೆ ಬುದ್ಧಿ ತಿಳಿದ ಮೇಲೆ ಅನೇಕ ವರ್ಷಗಳಿಂದಲೂ ಸರಿಯಾಗಿ ಉಣದೆ, ಉಡದೆ, ಮೀಯದೆ, ಬಾಚಿಕೊಳ್ಳದೆ ಕೃಶಳಾಗಿ, ಮಲಿನವಸ್ತ್ರೆಯಾಗಿ, ನೋಡುವುದಕ್ಕೆ ಹುಚ್ಚಿಯಂತೆಯೆ ತೋರುತ್ತಿದ್ದವಳು ಇದ್ದಕ್ಕಿದಂತೆ ಇತರ ಮುತ್ತೈದೆ ಗರತಿಯರಂತೆ ಇರತೊಡಗಿದುದನ್ನು ಕಂಡು ಧರ್ಮುಗೆ ಕಾಡುಪಾಲಾಗಿದ್ದ ಅಪ್ಪ; ಮತ್ತೆ ಮನೆಗೆ ಮರಳಿದಷ್ಟು ಹರ್ಷವಾಗಿತ್ತು. ತಾಯಿ ಮೂರು ಹೊತ್ತೂ ಚೆಲುವಯ್ಯನನ್ನು ಎತ್ತಿಕೊಂಡೊ, ಅವನಿಗೆ ಉಣಿಸುತ್ತಲೊ, ಸೀರೆ ಸರಿಸಿ ನೀಡಿದ ಕಾಲಿನ ಬತ್ತಲೆ ತೊಡೆಗಳ ಮೇಲೆ ಅವನನ್ನು ಮಲಗಿಸಿಕೊಂಡು ನೀರುಹೊಯ್ದು ಮೈತಿಕ್ಕಿ ಮೀಯಿಸುತ್ತಲೋ, ರಾತ್ರಿ ತೊಟ್ಟಿಲಿಗೆ ಹಾಕಿ ಮಲಗಿಸುವ ಮುನ್ನ ಪದ್ಧತಿಯಂತೆ ಮೈಗೆ ಎಣ್ಣೆ ತಿಕ್ಕುತ್ತಲೊ ಅಥವಾ ತೊಟ್ಟಿಲು ತೂಗುತ್ತಲೊ ಹರ್ಷಚಿತ್ತಳಾಗಿರುವುದನ್ನು ಕಂಡು ಧರ್ಮವೂ ಚೆಲುವಯ್ಯನನ್ನು, ತನ್ನ ಗೆಳೆಯರು ಕಾಡು ತಿಮ್ಮು ಪರಿಹಾಸ್ಯಮಾಡುವಷ್ಟರ ಮಟ್ಟಿಗೆ, ಓಲೈಸುತ್ತಿದ್ದನು.

ಬೆಟ್ಟಳ್ಳಿಯ ಗಾಡಿ ಇವರನ್ನೆಲ್ಲ ಕರೆದುಕೊಂಡು ಕಲ್ಲೂರು ದೇವಸ್ಥಾನಕ್ಕೆ ಸತ್ಯನಾರಾಯಣ ವ್ರತಾಚರಣೆಗಾಗಿ ಹೋಗಲು ಗೊತ್ತಾದ ದಿನಕ್ಕೆ ಹಿಂದಿನ ದಿನ ಸಾಯಂಕಾಲ ಕೋಣೂರಿನಿಂದ ಮುಕುಂದಯ್ಯ ಬಂದಾಗ, ಧರ್ಮು ತಿಮ್ಮು ಕಾಡು ಮೂವರೂ ಅವನ ಸುತ್ತಮುತ್ತ ಕೈಹಿಡಿದುಕೊಂಡೂ ಬಟ್ಟೆ ಹಿಡಿದುಕೊಂಡೂ ಚಪ್ಪಾಳೆ ಹೊಡೆಯುತ್ತಾ ಕುಣಿದಾಡಿದ್ದರು. ಒಬ್ಬನಿಗೆ ಸಣ್ಣಮಾವ, ಇನ್ನೊಬ್ಬನಿಗೆ ಚಿಕ್ಕಯ್ಯ, ಮತ್ತೊಬ್ಬನಿಗೆ ಸಣ್ಣಭಾವ ಆಗಿದ್ದ ಮುಕುಂದಯ್ಯ ಹುಡುಗರೊಡನೆ ಹುಡುಗನಾಗಿ, ಅವರ ಬಾಲಚೇಷ್ಟೆಗಳಲ್ಲೆಲ್ಲ ಭಾಗಿಯಾಗಿ ಅವರನ್ನು ನಗಿಸಿ ಕುಣಿಸಿ ಸಂತೋಷಪಡಿಸುತ್ತಿದ್ದುದರಿಂದ ಅವನನ್ನು ಕಂಡರೆ ಹುಡುಗರಿಗೆಲ್ಲ ಖುಷಿಯೋ ಖುಷಿ!

ತೀರ್ಥಹಳ್ಳಿಗೆ ಪಾದ್ರಿ ಜೀವರತ್ನಯ್ಯನ ಜೊತೆ ಹೋಗಿ ಅಷ್ಟು ಹೊತ್ತಿಗಾಗಲೆ ಹಿಂದಿರುಗಿ ಬಂದಿರಬಹುದಾಗಿದ್ದ ಮಗಳು ಅನಂತಯ್ಯ ಆ ಗೋಸಾಯಿ ತನ್ನ ತಂದೆ ಹೌದೊ ಅಲ್ಲವೊ ಎಂಬುದರ ವಿಚಾರವಾಗಿ ಏನಾದರೂ ಖಚಿತವಾರ್ತೆಯನ್ನು ತಂದಿರಬಹುದೆಂದು ಊಹಿಸಿ, ತಿಳಿಯಲು ಕಾತರನಾಗಿದ್ದ ಧರ್ಮುಗೆ ನಿರಾಶೆಯಾಯಿತು. ಸಣ್ಣಮಾವ ಆ ಸುದ್ದಿಯನ್ನೇ ಎತ್ತಲಿಲ್ಲ. ಧರ್ಮೂಗೂ ಆ ಪ್ರಸ್ತಾಪವೆತ್ತಲು ಧೈರ್ಯ ಬರಲಿಲ್ಲ. ಆದರೂ ಅವನು ಕಿವಿಯಾಗಿ ಕಣ್ಣಾಗಿ, ಸಣ್ಣಮಾವ ದೇವೈಚಿಕ್ಕಪ್ಪಯ್ಯನೊಡನೆ ಕಲ್ಲಜ್ಜಯ್ಯನೊಡನೆ ಸೇರೆಗಾರ ಸುಬ್ಬಣ್ಣಸೆಟ್ಟರೊಡನೆ ಮಾತಾಡುವಾಗಲೆಲ್ಲ ಏನಾದರೂ ನೆವಮಾಡಿಕೊಂಡು ಅವರ ಸಂವಾದವನ್ನು ಆಲೈಸುವಷ್ಟು ಸಮೀಪದಲ್ಲಿಯೆ ಸುಳಿಯುತ್ತಿದ್ದನು. ಅದರಿಂದಲೂ ಏನೂ ಪ್ರಯೋಜನವಾಗಲಿಲ್ಲ. ಏಕೆಂದರೆ ಧರ್ಮುವಿನ ಸಂಚು ಮುಕುಂದಯ್ಯನಿಗೂ ಹೊಳೆದುಬಿಟ್ಟಿತ್ತಾದ್ದರಿಂದ ಅವನೂ ಯಾವುದೊ ರಹಸ್ಯವನ್ನು ದೊಡ್ಡವರೊಡನೆ ತುಂಬ ಕೆಳದನಿಯಲ್ಲಿ ಮಾತನಾಡುತ್ತಿದ್ದು, ಧರ್ಮು ಸಮೀಪಕ್ಕೆ ಸುಳಿದೊಡನೆ ಆ ಪ್ರಸ್ತಾಪವನ್ನೆ ತುಂಡುಗಡಿಸಿ, ಇನ್ನೇನನ್ನೊ-ತೋಟ ಗದ್ದೆ ಅಡಕೆಧಾರಣೆ ಷಿಕಾರಿ ಇತ್ಯಾದಿಗಳ ವಿಚಾರವಾಗಿ - ಮಾತನಾಡುತ್ತಿದ್ದವನಂತೆ ದನಿ ಏರಿಸಿ ಹೇಳತೊಡಗುತ್ತಿದ್ದನು!

ಸಾಲದ್ದಕ್ಕೆ ಬೇರೆ, ಕತ್ತಲಾದ ಮೇಲೆ ಜಗಲಿಯಲ್ಲಿ, ಆಗಿನ ಕಾಲಕ್ಕೆ ಆ ಪ್ರಾಂತಕ್ಕೇ ಸುವಿಶೇಷವಾಗಿ ಬೆಟ್ಟಳ್ಳಿ ಮನೆಯ ನವನಾಗರಿಕತೆಯ ಸಾಮಗ್ರಿಗಳಾಗಿದ್ದ ಲಾಟೀನು, ಲಾಂದ್ರ, ಲ್ಯಾಂಪುಗಳ ಉಜ್ವಲ ಪ್ರಕಾಶದಲ್ಲಿ

ಮುಕುಂದಯ್ಯ ಹುಡುಗರನ್ನೆಲ್ಲ ಜಮಾಯಿಸಿ ಕುಮ್ ಚಟ್ ಹೊಡೆಯಿಸಿದ್ದನು; ಲಾಗ ಹಾಕಿಸಿ ನಗಿಸಿದ್ದನು; ಕುಸ್ತಿಮಾಡಿಸಿದ್ದನು; ಮಗ್ಗಿ ಹೇಳಿಸಿ, ಗೋವಿನ ಕಥೆ ಹಾಡಿಸಿದ್ದನು. ಕಡೆಗೆ, ಸೇರೆಗಾರ ಸುಬ್ಬಣ್ಣಸೆಟ್ಟರೂ ತಾನೂ ಸೇರಿ ಜೈಮಿನಿಯನ್ನು ರಾಗವಾಗಿ ಓದಿ ಪ್ರಸಂಗವನ್ನೂ ನಡೆಯಿಸಿದ್ದನು.

ಬಲ್ಲವರಿಗೆ ಮುಕುಂದಯ್ಯನ ಉದ್ದೇಶ ಸ್ಪಷ್ಟವಾಗಿತ್ತು; ಬೆಟ್ಟಳ್ಳಿಗೆ ಬಂದ ಮೇಲೆ ತನ್ನ ಅಕ್ಕ ಮತ್ತು ಅಕ್ಕನ ಮಗ ಇಬ್ಬರೂ ಚೆಲುವಯ್ಯನ ಸಂಗದಲ್ಲಿ ಹರ್ಷಚಿತ್ತರಾಗಿದ್ದಾರೆ ಎಂಬುದನ್ನು ಕೇಳಿ ತಿಳಿದಿದ್ದ ಅವನಿಗೆ ಅವರ ಆ ಗೆಲುವಿಗೆ ಹಾನಿತರುವ ವಾರ್ತೆಯನ್ನು ಬಹಿರಂಗಪಡಿಸಲು ಇಷ್ಟವಿರಲಿಲ್ಲ; ಮಾತ್ರವಲ್ಲ, ಅವರ ಮನಸ್ಸನ್ನು ಆ ವಿಚಾರದಿಂದ ದೂರವಾಗಿಸಬೇಕೆಂಬುದೂ ಅವನ ಇಚ್ಛೆಯಾಗಿತ್ತು. ಆದ್ದರಿಂದಲೇ, ಧರ್ಮು ಮೈಮರೆತಂತೆ ತಲ್ಲೀನನಾಗಿ ಚಂದ್ರಾಸನ ಕಥೆಯನ್ನು ಕೇಳಿ, ಭಗವದ್ ಭಕ್ತಿ ಎಂತಹ ಸಂಕಟಗಳನ್ನೂ ನಿವಾರಿಸುತ್ತದೆ ಎಂಬ ಆಶ್ವಾಸನೆಗೆ ಭಾವವುಕ್ಕಿ ಕಣ್ಣೀರು ಕರೆಯುತ್ತಿದ್ದುದನ್ನು ಗಮನಿಸಿದಾಗ ಮುಕುಂದಯ್ಯನಿಗೆ ಸಂತೃಪ್ತಿಯಾಗಿತ್ತು.

ಮರುದಿನ ಕಲ್ಲೂರಿಗೆ ಹೋಗುತ್ತಿದ್ದಾಗ ಗಾಡಿಯ ಮೇಲೆ ತನ್ನ ಗೆಳೆಯರೊಡನೆ ಕುಳಿತಿದ್ದಾಗ ಧರ್ಮು ಅಂತರಮುಖಿಯಾಗಿ ಮನಸ್ಸಿನಲ್ಲಿ ಮೆಲುಕು ಹಾಕುತ್ತಿದ್ದುದೂ ಅದನ್ನೆ!

ಅಲ್ಲೊಂದೆಡೆ ದಾರಿಯ ಪಕ್ಕದಲ್ಲಿದ್ದ ರಂಜದ ಮರದಿಂದ ಹೂವು ಉದುರಿ ನಿಬಿಡವಾಗಿ ಬಿದ್ದಿದ್ದು ಅದರ ಕಂಪು ಘಮ್ಮೆಂದು ಬರುತ್ತಿದ್ದುದನ್ನು ಗಮನಿಸಿದೊಡನೆ ತಿಮ್ಮೂವೂ ಕಾಡುವೂ, ಅಜ್ಜಮ್ಮ 'ತಡೆಯಿರೋ; ತಡೆಯಿರೋ; ಹಾರಬೇಡಿ; ಗಾಡಿ ನಿಲ್ಲಿಸುತ್ತಾನೆ!' ಎಂದು ಕೂಗಿಕೊಳ್ಳುತ್ತಾ ಗಾಡಿ ಹೊಡೆಯುವವನಿಗೆ 'ಏ ಬಚ್ಚಾ, ಗಾಡಿ ನಿಲ್ಲಿಸೋ, ಹುಡುಗರು ಇಳೀಬೇಕಂತೆ' ಎನ್ನುತ್ತಿರುಷ್ಟರಲ್ಲಿಯೆ ಗಾಡಿಯ ಹಿಂಭಾಗದಿಂದ ಕೆಳಗೆ ಹಾರಿಯೆಬಿಟ್ಟರು! ಕಾಡು ಹೇಗೋ ತತ್ತರಿಸಿ ನಿಂತನು; ತಿಮ್ಮು ಬಿದ್ದು ಎರಡುರುಳು ಉರುಳಿ, ಕೈಕಾಲು ಕೀಸಿಕೊಂಡು, ಸತ್ಯರಾಯಣೋತ್ಸವಕ್ಕಾಗಿ ಉಟ್ಟುಕೊಂಡಿದ್ದ ಅಡ್ಡಪಂಚೆಗೂ ತೊಟ್ಟಿದ್ದ ಬನೀನಿನ ತೋಳಿಗೂ ರಕ್ತದ ಕಲೆ ಕೆಂಪೇರುವಂತೆ ಮಾಡಿಕೊಂಡನು. ಸಾಲದ್ದಕ್ಕೆ ತನ್ನನ್ನು ನೂಕಿ ಬೀಳಿಸಿದವನು ಕಾಡಣ್ಣನೇ ಎಂದು ಕಿರಿಚಿ, ಅವನ ಮೈಮೇಲೆ ಬಿದ್ದು ಮುಖ ಮೋರೆ ಎನ್ನದೆ ಗುದ್ದಿಯೂ ಬಿಟ್ಟನು! ಧರ್ಮು ಬೇಗ ಬೇಗನೆ, ಅಷ್ಟರಲ್ಲಿಯೆ ನಿಂತಿದ್ದ ಗಾಡಿಯಿಂದ ಕೆಳಗೆ ಹಾರಿ, ಅವರಿಬ್ಬರ ನಡುವೆ ನುಗ್ಗಿ, ಜಗಳ ಬಿಡಿಸಬೇಕಾಯಿತು....

ಗಾಡಿ ಮುಂಬರಿದು ಕಾಡನ್ನು ದಾಟಿ ಒಂದು ಗದ್ದೆ ಕೋಗಿನ ಹತ್ತಿರಕ್ಕೆ ಬಂದಾಗ ಅಡೆಹಳ್ಳವೊಂದು ಅಡ್ಡಬಂದಿತು. ಗಾಡಿ ನಿಲ್ಲಿಸಿ, ಎತ್ತುಗಳ ಕೊರಳು ಬಿಚ್ಚಿದ ಮೇಲೆ ಎಲ್ಲರೂ ಇಳಿದರು. ಹೆಂಗಸರು ಮೂವರೂ ಸೇರಿ, ವೀಳೆಯದೆಲೆಯಲ್ಲಿ ಅಡಕೆಯನ್ನು ಮಡಿಚಿಟ್ಟು. ಪದ್ಧತಿಯಂತೆ ಗಂಗೆಗೆ ವೀಳೆಯ ಅರ್ಪಿಸುವ ಶಾಸ್ತ್ರ ಮಾಡಿದರು. ಚೆಲುವಯ್ಯನ ಮೇಲೆ 'ಗಂಗವ್ವಾ ಒಳ್ಳೇದು ಮಾಡಮ್ಮಾ' ಎಂದು ಪ್ರಾರ್ಥಿಸಿ ತೀರ್ಥ ಚಿಮುಕಿಸಿದರು. ಹುಡುಗರು ಹಳ್ಳದ ಬಿಳಿಯ ಕಲ್ಲುಗುಂಡುಗಳನ್ನು ತೆಗೆದೆತ್ತಿ ಕಪ್ಪೆಗಳಿಗೆ ಗುರಿಕಟ್ಟಿ ಹೊಡೆಯುವ ಪಂಥದಲ್ಲಿ ತೊಡಗಿದ್ದರು!...

ಹಳ್ಳವನ್ನು ದಾಟಿ ಗಾಡಿ ಗದ್ದೆಕೋಗಿನ ಮೂಲೆಗೆ ಹೋದಾಗ, ಹಾದಿಯ ಬಳಿಯೆ ಇದ್ದ ಹಳೆಪೈಕದವರ ಮನೆಯ ತಡಬೆಗೆ ವಾಲಿಸಿ ನಿಲ್ಲಿಸಿದ್ದ ಬೈಸಿಕಲ್ಲು ಕಣ್ಣಿಗೆ ಬಿತ್ತು. ಅಲ್ಲಿಯೆ ಪಕ್ಕದಲ್ಲಿದ್ದ ಅಗೋಡಿಯಲ್ಲಿ ಆರುಕಟ್ಟೆ ಉರುಳಿದ್ದ ಆ ಮನೆಯ ಮುದುಕ ಯಜಮಾನ ಗಾಡಿಯನ್ನು ಗುರುತಿಸಿ, ಮೇಣಿಯನ್ನು ಬೇರೆಯವನ ಕೈಗೆ ಕೊಟ್ಟು, ಓಡಿಬಂದು

'ದ್ಯಾವೇಗೌಡ್ರು, ಮುಕುಂದೇಗೌಡ್ರು ಇಲ್ಲೆ ಷಿಕಾರಿಮಾಡಿ ಒಂದು ಹಂದೀ ಹಸಿಗೆ ಮಾಡಿಸ್ತಿದಾರೆ. ಗಾಡಿ ಬರಾಕೂ ಹೇಳಿ ನಿಲ್ಲಿಸು ಅಂತಾ ಹೇಳಿದ್ರು ನನ್ನ ಹತ್ರ' ಎಂದನು.

"ನಾನು ಹೇಳ್ದೆ 'ದೇವರ ಕೆಲಸಕ್ಕೆ ಹೋಗುವಾಗ ಕೋವಿ ಯಾಕ್ರೋ ತಗೊಂಡು ಹೋಗ್ತೀರಿ?' ಅಂತಾ. ನನ್ನ ಮಾತು ಎಲ್ಲಿ ಕೇಳ್ತಾರೆ? ಇಬ್ಬರೂನೂ ಒಂದೇ ಬೈಸಿಕಲ್ಲಿನ ಮ್ಯಾಲೆ ಹತ್ತಿಕೊಂಡು, ಕೋವೀನೂ ಹಿಡುಕೊಂಡು, 'ನಾವ್ ಮುಂದೆ ಹೋಗ್ತಾ ಇರ್ತೀವಿ; ನೀವ್ ನಿಧಾನವಾಗಿ ಗಾಡೀಲಿ ಬನ್ನಿ' ಅಂತಾ ಹೊಲ್ಟರು. ಈಗ ನೋಡಿದ್ಯಾ? ಹಂದಿ ಹೊಡಕೊಂಡು, ಹಸಿಗೆ ಮಾಡಿಸ್ತಾ ಕೂತಾರೆ!" ದೊಡ್ಡಮ್ಮ ಹೆಗ್ಗಡಿತಿಯವರು ತಮ್ಮ ಅಸಮಾಧಾನವನ್ನು ಗೊಣಗುತ್ತಾ 'ಏ ಬಚ್ಚಾ, ಎತ್ತಿನ ಕೊರಳು ಬಿಚ್ಚಿ, ಹೋಗಿ ಕೇಳಿಕೊಂಡು ಬಾರೋ, 'ನಾವು ಮುಂದೆ ಹೋಗಾದೇನು?' ಅಂತಾ ದೊಡ್ಡಮ್ಮ ಕೇಳ್ತಾರೆ ಅನ್ನು" ಎಂದು ಗಾಡಿ ಹೊಡೆಯುತ್ತಿದ್ದವನಿಗೆ ಬೆಸಸಿದರು. ಅವನು ಅವರು ಹೇಳಿದಂತೆ ಮಾಡಿ, ಹಂದಿ ಹಸಿಗೆಯಾಗುತ್ತಿದ್ದ ಜಾಗಕ್ಕೆ ಹಳೆಪೈಕದವನೊಡನೆ ಹೊರಡಲು, ಮೂವರು ಹುಡುಗರೂ ಕುತೂಹಲದಿಂದ ತಕಪಕನೆ ಕುದಿಯುತ್ತಾ ಅವರನ್ನು ಹಿಂಬಾಲಿಸಿದರು. ಅವ್ವ, ಅಜ್ಜಮ್ಮ ಕೂಗಿ ಕರೆಯುತ್ತಿದ್ದುದನ್ನು ಒಂದಿನಿತೂ ಲೆಕ್ಕಿಸದೆ: 'ಗಂಡು ಮಕ್ಕಳ ಹಣೆಬರಾನೆ ಹೀಂಗೆ!' ಎಂದರು ದೊಡ್ಡಮ್ಮ ಹೆಗ್ಗಡಿತಿಯವರು ದೇವಮ್ಮ ತನ್ನ ಅಕ್ಕನ ತೊಡೆಯ ಮೇಲಿದ್ದ ತನ್ನ ಕಂದನನ್ನು ಅವನ ಅಜ್ಜಮ್ಮನ ಟೀಕೆಯಿಂದ ಹೊರತುಪಡಿಸುವಂತೆ, ತನ್ನ ಮಾತೃತ್ವದ ದೃಷ್ಟಿರಕ್ಷೆ ನೀಡಿದಳು, ಮುಗುಳು ನಗೆಗೂಡಿ ನೋಡಿ!

ಮಲೆನಾಡಿನಲ್ಲಿ ಹುಡುಗರೆಲ್ಲರಿಗೂ ಬೇಟೆ ಎಂದರೆ ಪ್ರಾಣ. ದೊಡ್ಡವರು ನಾಯಿ ಕರೆದುಕೊಂಡು ಕಾಡು ಹತ್ತುವುದನ್ನು ಅವರು ಎಂತಹ ಕರುಬಿನಿಂದ ನೋಡುತ್ತಿರುತ್ತಾರೆ? 'ನಾವೂ ನಾಯಿಗಳಾಗಿದ್ದಿದ್ದರೆ!' ಎಂದುಕೊಳ್ಳುವುದೂ ಉಂಟು. ಯಾವಾಗಲಾದರೂ ಒಮ್ಮೆ ಬೇಟೆ ನುಗ್ಗುವ ಕಾಡು ಅಂತಹ ಅಪಾಯಕರವಾದ ದುರ್ಗಮ ಪ್ರದೇಶವಲ್ಲದಿದ್ದಾಗ ಹುಡುಗರನ್ನೂ ಕರೆದುಕೊಂಡು ಹೋಗುವುದೂ ಉಂಟು. ಅಂತಹ ಕೃಪೆಗೆ ಪಾತ್ರರಾದಾಗ ಆ ಹುಡುಗರ ಆನಂದ ಹೇಳತೀರದು. ಬೇಟೆಯಲ್ಲಿ ಅವರ ಆಸಕ್ತಿ ಎಷ್ಟು ಎಂದರೆ, ಬೇಟೆಯಾದ ಪ್ರಾಣಿಯನ್ನು ಹಸಿಗೆ ಮಾಡುವ ಮುನ್ನ ತೋರಿಸಿದರೂ ಸಾಕು, ಧನ್ಯರಾದೆವೆಂದು ಭಾವಿಸುತ್ತಾರೆ! ಎಷ್ಟೋ ಸಾರಿ ಮಧ್ಯರಾತ್ರಿಯಾಗಿದ್ದು ಅವರು ಗಾಢ ನಿದ್ರೆಯಲ್ಲಿದ್ದರೂ, ತಿಂಗಳ ಬೆಳಕಿನ ಬೇಟೆಯಲ್ಲಿ ಹೊಡೆದು ಮನೆಗೆ ತಂದ ಕಾಡು ಹಂದಿಯನ್ನು ಅವರನ್ನೆಬ್ಬಿಸಿ ತೋರಿಸದಿದ್ದರೆ ಮರುದಿನವೆಲ್ಲಾ ಅವರು ಆ ನಿರಾಶೆಯನ್ನನುಭವಿಸಿ ಸಂಕಟಪಡುತ್ತಾರೆ! ಬೇಟೆ ಅಂದರೆ ಅಂಥಾ ಹುಚ್ಚು!

ಸಮೀಪಿಸುತ್ತಿದ್ದ ಹಾಗೆಯೇ 'ಹಸಿಗೆ'ಯಾಗುತ್ತಿದ್ದ ಕಾಡುಹಂದಿಯ ಜಂವಿ ಸುಟ್ಟ ವಾಸನೆ ಗಾಳಿಯಲ್ಲಿ ತೇಲಿಬಂತು. ಮೂಗಾಳಿ ಸಿಕ್ಕ ನಾಯಿಗಳಂತೆ ಮೂವರು ಹುಡುಗರೂ ಆ ಸ್ಥಳಕ್ಕೆ ಒಬ್ಬರ ಮೇಲೆ ಒಬ್ಬರು ನುಗ್ಗಿ ಓಡಿದರು. ನಾಲ್ಕಾರು ಜನರು ಒಂದು ದೊಡ್ಡ ಒಂಟಿಗ ಹೋರಿ ಕಾಡು ಹಂದಿಯನ್ನು ದೊಡ್ಡ ಮರಗಳನ್ನಡಕಿ ಹೊತ್ತಿಸಿದ್ದ ಬೆಂಕಿಯಲ್ಲಿ ಸುಡುತ್ತಿದ್ದರು. ಅದರ ಎರಡೆರಡು ಕಾಲುಗಳನ್ನು ಹೆಬ್ಬಳ್ಳಿಗಳಿಂದ ಬಿಗಿದು ಕಟ್ಟಿ, ನಡುವೆ ಬಿದಿರಗಳು ತೂರಿಸಿ, ಅದನ್ನು ಎತ್ತಿ ಎತ್ತಿ ಮಗ್ಗುಲಿಂದ ಮಗ್ಗುಲಿಗೆ ಬೆಂಕಿಯ ಮೇಲೆ ಕಾಯಿಸಿ, ತಿರುಗಿಸುತ್ತಿದ್ದರು. ಇನ್ನಿಬ್ಬರು, ಆಚೆಗೊಬ್ಬ ಈಚೆಗೊಬ್ಬ, ಕೀಸಿ ಹರಿತಮಾಡಿದ ಅಡಕೆಯ ದಬ್ಬೆಗಳಿಂದ ಹಂದಿಯ ಚರ್ಮವನ್ನು ಹತ್ತರಿ ಹಿಡಿವಂತೆ ಹೆರಸುತ್ತಿದ್ದರು. ಅದರ ಅಂಗಾಂಗಗಳೆಲ್ಲ, ಮರ್ಯಾಂಗಗಳೂ ಸೇರಿ, ನಿಮ್ಮನೆ ನಿಗುರಿದ್ದುವು. ಹುಡುಗರ ಕುಚೋದ್ಯ ಟೀಕೆಗಳಿಗೆ ಪಕ್ಕಾಗಿ.

ಮೂವರು ಹುಡುಗರೂ ಆ ದೃಶ್ಯವನ್ನು ಆಸೆಯಿಂದ, ಹೆಮ್ಮೆಯಿಂದ, ಪ್ರಶಂಸೆಯಿಂದ ಅವಲೋಕಿಸುತ್ತಾ ನಿಂತರು, ಕೂತರು, ಎದ್ದರು, ಓಡಾಡಿದರು. ಸುತ್ತಲೂ ಸುತ್ತಿ ಸುತ್ತಿ ಮತ್ತೆ ಮತ್ತೆ ವೀಕ್ಷಿಸಿದವರು. ಅವರಿಗೆ ಆ ಹಂದಿ ಒಂದು ಪ್ರತೀಕವಾಗಿತ್ತು ಸಹ್ಯಾದ್ರಿಯ ವಿಸ್ತೃತ ಅರಣ್ಯಗಳಿಗೆ, ಅಲ್ಲಿಯ ದುರ್ಗಮ ಕಾನನಾಂತರಕ್ಕೆ, ಅದರ ನಿಬಿಡ ಹಳುವಿಗೆ, ಅದರ ಘೋರ ಭಯಂಕರತೆಗೆ, ಅದರ ಬೇಟೆಯ ಸಾಹಸಕ್ಕೆ. 'ಹಸಿಗೆ'ಯಾಗುತ್ತಿದ್ದ ಆ ಮಹಾಕಾಯದ ಜಂತುವಿನ ಪ್ರತಿಮಾ ಗವಾಕ್ಷದ ಮುಖಾಂತರ ಅವರ ಚೇತನಗಳಿಗೆ ಅದರ ಹಿಂದಿರುವ ವಿಸ್ಮಯಲೋಕಕ್ಕೆ ಪ್ರವೇಶ ಒದಗಿದಂತಾಗಿತ್ತು.

"ಅಲ್ಲಿ ನೋಡೋ, ಅದರ ಕೋರೆ!"

"ಅದೆಲ್ಲಾದ್ರೂ ತಿಂವಿದ್ರೆ ಹೊಟ್ಟೆಪಚ್ಚೆ ಎಲ್ಲ ಹೊರಗೇ ಬರ್ತದೆ, ಅಲ್ಲೇನೊ?"

"ನಮ್ಮನೇಲಿ ಅವತ್ತೊಂದಿನ ಬ್ಯಾಟೆಗೆ ಹೋಗಿದ್ದಾಗ, ನಮ್ಮದೊಂದು ಹೊಸಾ ಚೀನೀನಾಯಿ ಕಣೋ, ಕಮೀನು, ಚಿಕ್ಕಯ್ಯ ತೀರ್ಥಹಳ್ಳಿಗೆ ಹೋಗಿದ್ದಾಗ ತಂದಿದ್ರು, ಏನು ಚೆನ್ನಾಗಿ ಡಿಕಾರಿ ಮಾಡ್ತಿತ್ತು ಅಂತೀಯಾ? ಅದನ್ನು ಸಿಗಿದು ಹಾಕಿ ಬಿಟ್ಟಿತ್ತು ಕಣೋ, ಒಂದು ಒಂಟಿಗನ ಹಂದಿ!" ತಿಮ್ಮು ಅದರ ಕತೆ ಹೇಳಿದನು.

"ಇಂಥಾ ಹಂದಿ ಎಂಥಾ ಹೆಬ್ಬುಲೀನೂ ಸೀಳಿಹಾಕಿಬಿಡ್ತದೆ ಕಣೋ. ಆಗುಂಬೇಲಿ...." ಎಂದು ಕಾಡು ತಾನು ಕೇಳಿದ್ದ ಸಂಗತಿಯನ್ನು ಹೇಳಿದನು.

"ಇಂಥಾ ಹಂದಿ ಎಂಥಾ ಹೆಬ್ಬುಲೀನೂ ಸೀಳಿಹಾಕಿಬಿಡ್ತದೆ ಕಣೋ. ಆಗುಂಬೇಲಿ...." ಎಂದು ಕಾಡು ತಾನು ಕೇಳಿದ್ದ ಸಂಗತಿಯನ್ನು ಹೇಳಿದನು.

ಅಷ್ಟರಲ್ಲಿ "ಏ ಕಾಡು, ನೀವೆಲ್ಲ ಹೋಗ್ರೋ ಗಾಡಿಗೆ. ಗಾಡಿ ಹೊರಡ್ತದೆ. ನಾವು ಆಮೇಲೆ ಬರುತ್ತೀವಿ" ಎಂಬ ದೇವಯ್ಯನ ಆಜ್ಞಾಪನೆ ಕೇಳಿಸಿ, ಮುವರು ಹುಡುಗರೂ ಮನಸ್ಸಿಲ್ಲದ ಮನಸ್ಸಿನಿಂದ, ಹಸಿಗೆಯಾಗುತ್ತಿದ್ದ ಹಂದಿಯ ಕಡೆಗೆ ತಿರುಗಿ ತಿರುಗಿ ನೋಡುತ್ತಾ ಹಿಂದಿರುಗಿದರು.

ಗಾಡಿ ಕಲ್ಲೂರನ್ನು ಸಮೀಪಿಸುತ್ತಿದ್ದಾಗ, ರಸ್ತೆಗೆ ಒಳದಾರಿಯಿಂದ ಬಂದು ಕೂಡುತ್ತಿದ್ದ ಕಾಲುದಾರಿ ಸೇರುವೆಡೆ, ಒಂದು ಬಾನೆತ್ತರ ಬೆಳೆದಿದ್ದ ದೊಡ್ಡ ಧೂಪದ ಮರದ ಬುಡದ ಹೆಬ್ಬೇರಿನ ಮೇಲೆ ಯಾರೋ ಒಬ್ಬರು ಕುಳಿತಿದ್ದುದು ಗಾಡಿ ಹೊಡೆಯುವ ಬಚ್ಚನ ಕಣ್ಣಿಗೆ ಬಿತ್ತು. ಅವರು ಹಣೆಗೆ ಬಳಿದುಕೊಂಡಿದ್ದ ಬಿಳಿಯ ಮತ್ತು ಕೆಂಪು ನಾಮಗಳ ಪಟ್ಟೆ ಆ ದೂರಕ್ಕೂ ಎದ್ದು ಕಾಣುತ್ತಿತ್ತು.

ಗಾಡಿಯೊಳಗೆ ಮುಂದೆ ಕುಳಿತಿದ್ದ ದೊಡ್ಡಮ್ಮ ಹೆಗ್ಗಡಿತಿಯವರು ಕೇಳಿದರು "ಯಾರೋ ಅದು ಅಲ್ಲಿ ಕೂತಿದಾರಲ್ಲಾ? ದಾಸಯ್ಯನ ಕಂಡ ಹಾಂಗೆ ಕಾಣ್ತದೆ!"

ತುಸು ನಗುತ್ತಾ ಬಚ್ಚ ಹೇಳಿದನು "ಆ ರೀತಿ ನಾಮದ ಪಟ್ಟೆ ಬಡುಕೊಳ್ಳೋರು ಮತ್ಯಾರು? ಹಳೆಮನೆ ಹಂಚಿನಮನೆ ಅಯ್ಯೋರು ಇರಬೇಕು. ಅವರು ಆಗಾಗ್ಗೆ ಬರ್ತಾನೆ ಇರ್ತಾರೆ, ಕಲ್ಲೂರು ದೇವರ ಹತ್ರಕ್ಕೆ."

ಗಾಡಿ ಸಮೀಪಿಸುತ್ತಿದ್ದುದನ್ನು ಕಂಡು ಧೂಪದ ಮರದ ಬೇರಿನ ಮೇಲೆ ಕುಳಿತಿದ್ದ ವ್ಯಕ್ತಿ ಎದ್ದು ನಿಂತಿತು. "ಓಹೋ, ಬೆಟ್ಟಳ್ಳಿ ಗೌಡರ ಗಾಡಿ ಇರಬೇಕು!" ಎಂದುಕೊಂಡರು. ಶಂಕರಪ್ಪ ಹೆಗ್ಗಡೆಯವರು, ತಮಗೆ ತಾವೆ ಮತ್ತೆ ಕಾಲುದಾರಿಯ ದಿಕ್ಕಿಗೆ ತಿರುಗಿ, ಯಾರನ್ನೋ ನೀರಿಕ್ಷಿಸುತ್ತಿರುವಂತೆ ಅತ್ತ ನೋಡುತ್ತಾ ನಿಂತರು. ಅವರ ಹೆಂಡತಿ ಸೀತಮ್ಮ, ಮಗ ರಾಮು, ಬಾಲೆ ಆಡಿಸುವ ಹುಡುಗಿ ಕೆಂಪಿ - ದೂರದಲ್ಲಿ ದಣಿದು ಮೆಲ್ಲಗೆ ಕಾಲುಹಾಕುತ್ತಿದ್ದರು. ಅವರ ಕೈಕೂಸು ತಾಯಿಯ ಸೊಂಟದಲ್ಲಿತ್ತು.

ಬೆಟ್ಟಳ್ಳಿ ಮನೆಯ ವಿಚಾರವಾಗಿ ಹಳೆಮನೆ ಹೆಂಚಿನ ಮನೆಯ ಶಂಕರಪ್ಪ ಹೆಗ್ಗಡೆಯವರಿಗೆ ನೇರವಾದ ಯಾವ ವೈರಭಾವ ಇರಲಿಲ್ಲವಾದರೂ ತನ್ನ ತಂಗಿ ಜಟ್ಟಮ್ಮನನ್ನು ಭರಮೈಹೆಗ್ಗಡೆಯವರು ಲಗ್ನವಾದಂದಿನಿಂದ ಸಿಂಬಾವಿ ಮನೆಯ ನೆಂಟಸ್ತಿಕೆಯ ದೆಸೆಯಿಂದಾಗಿ ಅವರು ಬೆಟ್ಟಳ್ಳಿಯ ವಿಚಾರದಲ್ಲಿ ಬಿಗುಮನಸ್ಸಿನಿಂದ ಇರುತ್ತಿದ್ದುದೆ ರೂಢಿ. ಅಲ್ಲದೆ ಜಾತಿ, ನೀತಿ, ಪೂಜೆ, ಪುನಸ್ಕಾರ, ಬಿರಾಂಜರು, ದೇವರು, ದೆಯ್ಯ, ಆಚಾರ, ಕಟ್ಟಳೆಗಳಲ್ಲಿ ಸಂಪ್ರದಾಯನಿಷ್ಠೆಯ ವೀರಾನುಯಾಯಿಯಾಗಿದ್ದ ಶಂಕರಪ್ಪ ಹೆಗ್ಗಡೆಗೆ ಕಿಲಸ್ತರ ಪಾದ್ರಿಗಳನ್ನೆಲ್ಲ ಮನೆಗೆ ಸೇರಿಸಿ, ಅವರೊಡನೆ ಸಹಪಂಕ್ತಿ ಭೋಜನವನ್ನೂ ಮಾಡಿ, ಅವರು ಕೊಟ್ಟ ವಿಲಾಯತಿ ವಸ್ತುಗಳನ್ನೆಲ್ಲ ಲಾಟೀನು, ಬೈಸಿಕಲ್ಲು, ತೋಟಾಕೋವಿ, ಸೀಮೆ ಬಿಸ್ಕತ್ತು, ಕ್ರಾಪು, ಹ್ಯಾಟು, ಬೂಟ್ಸು ಇತ್ಯಾದಿ ಇತ್ಯಾದಿ ತಿರುಪತಿ, ಧರ್ಮಸ್ಥಳಗಳ ದೇವರ ಕಾಣಿಕೆ ಇಟ್ಟಿರುವ ಮನೆಯ ಒಳಕ್ಕೆ ತಂದಿಟ್ಟುಕೊಂಡು, ಕುಲಗೆಟ್ಟು ಹೋಗಿರುವ ಬೆಟ್ಟಳ್ಳಿಯವರನ್ನು ಕಂಡರೆ ತಿರಸ್ಕಾರ, ಜಿಗುಪ್ಸೆ!

ಆದ್ದರಿಂದಲೆ ಎತ್ತಿನ ಕೊರಳ ಗಂಟೆ ಗಗ್ಗರದ ಸರಗಳಿಂದ ಸಶಬ್ದವಾಗಿ ಚಲಿಸುತ್ತಿದ್ದ ಗಾಡಿ ತಮ್ಮ ಬಳಿಯೆ ಬಂದು ನಿಂತು ನಿಃಶಬ್ದವಾದುದನ್ನು ಕಿವಿ ಸಂಪೂರ್ಣವಾಗಿ ಗಮನಿಸಿದ್ದರೂ ಶಂಕರಪ್ಪ ಹೆಗ್ಗಡೆ ಯಾವುದನ್ನೂ ನೋಡದೆ ಏನನ್ನೂ ಆಲಿಸದಿದ್ದವರಂತೆ ಅತ್ತ ಮುಖಹಾಕಿದ್ದವರು ಇತ್ತ ಮುಖ ತಿರುಗಿಸದೆ ನಿಂತಿದ್ದರು!

"ಇಲ್ಲಿ ಯಾಕೆ ನಿಂತೀಯಾ, ಶಂಕರಮಾವಾ?" ಗಾಡಿಯ ಹಿಂದುಗಡೆಯಿಂದ ಕೆಳಗೆ ಹಾರಿದ ತಿಮ್ಮು ಪ್ರಶ್ನೆ ಕೇಳುತ್ತಾ ತಮ್ಮ ಹತ್ತಿರಕ್ಕೆ ಬಂದ ಮೇಲೆಯೆ ಶಂಕರಹೆಗ್ಗಡೆ ಇತ್ತ ಮುಖ ತಿರುಗಿಸಿ ಗಾಡಿಯ ಮುಂಭಾಗದಲ್ಲಿ ಕುಳಿತಿದ್ದ ದೊಡ್ಡಮ್ಮ ಹೆಗ್ಗಡತಿಯವರನ್ನು ಆಗತಾನೆ ಗುರುತಿಸಿದಂತೆ ನೋಡಿ "ಓಹೋಹೋ, ನೀವೇನು? ನಾನು ಮೇಗರೊಳ್ಳಿ ಜವಳಿ ಅಂಗಡಿ ಪೈಗಳ ಗಾಡಿ ಅಂತ ಮಾಡಿದ್ದೆ!... ಏನು, ಬೆಟ್ಟಳ್ಳಿ ಚಿಗಮ್ಮಾ, ಎಲ್ಲಾ ಚೆನ್ನಾಗಿ ಇದ್ದೀರಾ?" ಎಂದು ಗಾಡಿಯ ಹತ್ತಿರಕ್ಕೆ ಬಂದು ಅದರ ಮುಂಭಾಗದಲ್ಲಿ ಎತ್ತಿನ ಪಕ್ಕಕ್ಕೆ ನಿಂತು, ತುಸು ತಲೆ ಬಾಗಿಸಿ ಗಾಡಿಯೊಳಕ್ಕೆ ನೋಡಿ "ಓ ಹೋ ಹೋ! ಎಲ್ಲಾ ಹೊರಟಿದ್ದೀರಿ!..... ದೂರಾ?" ಎಂದರು.

ತಿರುಪತಿಗೆ ಹೋಗಿ ಹಿಂದಿರುಗದಿದ್ದ ದೊಡ್ಡಣ್ಣ ಹೆಗ್ಗಡೆಯೂ ತಾನೂ ಸಣ್ಣ ಹುಡುಗರಾಗಿ ಹಳೆಮನೆಯ ಉಚ್ಛ್ರಾಯ ಕಾಲದ ಕಣ್ಮಣಿಗಳಂತಿದ್ದ ಆ ಪಾಲಾಗುವ ಮುನ್ನಿನ ಬಹುಪೂರ್ವ ಸ್ಮರಣೆಯ ಪುಣ್ಯಕಾಲದಲ್ಲಿ ಬೆಟ್ಟಳ್ಳಿ ಚಿಕ್ಕಮ್ಮ (ದೊಡ್ಡಮ್ಮ ಹೆಗ್ಗಡತಿಯವರು) ಹಳೆಮನೆಗೆ ಬಂದಾಗಲೆಲ್ಲ, ಅವರ ಮಡಿಲಿನಿಂದ ಹೊರಹೊಮ್ಮುತ್ತಿದ್ದ ಕೊಬರಿ

ಬೆಲ್ಲವನ್ನೋ ಮಂಡಕ್ಕಿ ಮಿಠಾಯಿಯನ್ನೊ ತಿಂದು, ಸುಖಿಸಿ, ಕೇಕೆ ಹಾಕುತ್ತಿದ್ದ ಸಲಿಗೆಯ ಕಾಲದ ನೆನಪಾಗಿ, ಸೆಡೆತು ನಿಂತಿದ್ದ ಶಂಕರ ಹೆಗ್ಗಡೆಯ ಚೇತನ ಸರಳ ಸ್ಥಿತಿಗಿಳಿದು, ಆಲಿಸಿತು.

"ಏನೋ ಎಲ್ಲಾ ದೇವರು ನಡಸಿ ಹಿಂಗಿದ್ದೀಂವಪ್ಪಾ, ಶಂಕರೂ. ಇಲ್ಲೇ ಕಲ್ಲೂರಿಗೆ ಹೋಗ್ತಾ ಇದ್ದೀಂವಿ, ದೇವರಿಗೆ ಒಂದು ಹಣ್‌ಕಾಯಿ ಮಾಡ್ಸಿ ಬರಾನಾ ಅಂತಾ. ನಿಮ್ಮನೇ ಕಡೇ ಹ್ಯಾಂಗಿದಾರೆ, ಸೀತೂ ಮಕ್ಕಳೂ ಎಲ್ಲಾ?"

'ಚಿಕ್ಕಮ್ಮನ ತಲೆಕೂದಲೆಲ್ಲಾ ಎಷ್ಟು ಬೆಳ್ಳಗಾಗಿ ಹೋಗ್ಯದೆ? ಅಜ್ಜೀ ನೋಡಿದ್ಹಾಂಗ ಆಗ್ತದಲ್ಲಾ!' ಮನಸ್ಸಿನಲ್ಲಿಯೆ ಅಂದುಕೊಂಡ ಶಂಕರ ಹೆಗ್ಗಡೆ, ಗಟ್ಟಿಯಾಗಿ ಉತ್ತರಿಸಿದನು ತನ್ನಲ್ಲಿ ಮಾತೃಭಾವವನ್ನು ಉದ್ದೀಪಿಸುತ್ತಿದ್ದ ದೊಡ್ಡಮ್ಮ ಹೆಗ್ಗಡಿತಿಯವರ ಸುಕ್ಕೇರಿದ ಮುಖವನ್ನು ಅಕ್ಕರೆಗೂಡಿದ ಕನಿಕರದಿಂದ ಗಮನಿಸುತ್ತಾ; "ಹ್ಯಾಂಗಿದಾರೆ ಅಂತಾ ಹೇಳ್ಲಿ, ಚಿಗಮ್ಮಾ?" ದೂರ ಕಾಲುದಾರಿಯತ್ತ ಕಣ್ಣಾಗಿ, "ಅಲ್ಲೇ ದೂರ ಬರತಾ ಇದಾರಲ್ಲಾ, ನೀವೇ ನೋಡಬಹುದು" ಎಂದು ಆ ಕಡೇಗೇ ಹಿಗ್ಗಿ ಕೇಕೆ ಹಾಕುತ್ತಾ ಓಡುತ್ತಿದ್ದ ತಿಮ್ಮು ಧರ್ಮ ಕಾಡು ಅವರನ್ನು ನಿರ್ದೇಶಿಸಿ "ಬಿದ್ದೀರ್ರೋ? ಯಾಕೆ ಹಂಗೆ ಓಡ್ತಿರೋ?" ಎಂದು ಕೂಗಿದರು.

ತನ್ನ ಕಡೆಗೆ ಓಡಿ ಬರುತ್ತಿದ್ದ 'ಧರ್ಮಣ್ಣಯ್ಯ', 'ಕಾಡಣ್ಣಯ್ಯ' ಮತ್ತು 'ತಿಮ್ಮಬಾವ' ಮೂವರನ್ನೂ ಗುರುತಿಸಿದ ರಾಮು, ಮೆಲ್ಲಗೆ ಏದುತ್ತಾ ಬಹುಪ್ರಯಾಸದಿಂದ ಕಾಲುಹಾಕುತ್ತಿದ್ದ ತನ್ನ ತಾಯಿಯ ಪಕ್ಕದಲ್ಲಿ ಅಷ್ಟೇ ಆಯಾಸದಿಂದ ಮೆಲ್ಲಗೆ ಬರುತ್ತಿದ್ದವನು, ತನ್ನ ಬಡಕಲು ಒಡಲಿನ ಅಸಾಮರ್ಥ್ಯವನ್ನು ಒಂದಿನಿತೂ ಬಗೆಗೆ ತಾರದೆ, ಹಿಗ್ಗಿನ ಹೊನಲಿಗೆ ಸಿಕ್ಕವನಂತೆ ಮುನ್ನುಗ್ಗಿ ಓಡಿದನು: ಹತ್ತು ಹೆಜ್ಜೆಗಳಲ್ಲಿಯೆ ಬಿದ್ದೂ ಬಿಟ್ಟನು! ಧರ್ಮ ಓಡಿ ಬಂದು ತಬ್ಬಿ ಅವನನ್ನು ಎತ್ತಿದಾಗ, ಅವನ ಮೊಣಕಾಲು ಮಂಡಿ ಮೊಣಕೈಗಳು ಹಾದಿಯ ಜಂಬಿಟ್ಟಿಗೆ ಕಲ್ಲಿಗೆ ತೀಡಿ ಗಾಯವಾಗಿ, ಅವನು ಸದ್ದು ಮಾಡದೆ ಅಳುತ್ತಿದ್ದನು. ತಿಮ್ಮು ಕಾಡು ಇಬ್ಬರೂ ರಾಮುವ ಬಟ್ಟೆಗೆ ಬಂದಿದ್ದ ಶಂಕರ ಹೆಗ್ಗಡೆಯವರ ಕೈ ಜೀವಚ್ಛವದಂತಿದ್ದ ತಮ್ಮ ಮಗನ ಬೆನ್ನಿಗೆ ಒಂದು ಏಟನ್ನೂ ಕೊಟ್ಟು ಬಿಟ್ಟಿತು! 'ಬೇಡ, ಚಿಕ್ಕಯ್ಯ!' 'ಬೇಡ, ಶಂಕರಮಾವ!' 'ಬೇಡ ಚಿಗಪ್ಪಯ್ಯ!' ಎಂದು ಕೈ ಅಡ್ಡಹಾಕಿ ಮೂವರು ಹುಡುಗರೂ ಅಂಗಲಾಚಿ ಕೂಗಿ ತಡೆಯದಿದ್ದರೆ ರಾಮೂಗೆ ಇನ್ನೂ ಎಷ್ಟು ಏಟು ಬೀಳುತ್ತಿತ್ತೊ?

ಕಂಕುಳಲ್ಲಿ ಕೂಸನ್ನೆತ್ತಿಕೊಂಡು, ಹಣೆಯ ಮೇಲೆ ಮುಖದಲ್ಲಿ ಬೆವರು ಸುರಿಸುತ್ತಾ, ದೀರ್ಘವಾಗಿ ಸುಯ್ಯುತ್ತಾ ಬಳಿಸಾರಿದ ಸೀತಮ್ಮನನ್ನು ವಿಶ್ವಾಸದಿಂದ ಮಾತಾಡಿಸಿ, ದೊಡ್ಡಮ್ಮ ಹೆಗ್ಗಡತಿಯವರು ಗಾಡಿ ಹತ್ತುವಂತೆ ಹೇಳಿದರು. ಸೀತಮ್ಮ ಗಂಡನ ಕಡೆ ಒಮ್ಮೆ ಹೌದೊ ಅಲ್ಲವೊ ಎಂಬಂತೆ ಕಣ್ಣು ಸುಳಿಸಿದಳು. ಅವಳ ಕೃಶತ್ವ, ಅವಳ ದುರ್ಬಲತೆ, ಅವಳಿಗೆ ಆಗ ಇದ್ದ ಆಯಾಸ ಸ್ಥಿತಿ, ಕಂಕುಳಲ್ಲಿದ್ದ ಮಗುವಿನ ಹೊರೆ ಒಂದೊಂದೂ ಗಾಡಿಗೆ ಹತ್ತುವ ಪರವಾಗಿ ವಾದಿಸುತ್ತಿದ್ದರೂ ಅವಳಿಗೆ ಗೊತ್ತು, ತಾನೆಲ್ಲಿಯಾದರೂ ಬೆಟ್ಟಳ್ಳಿ ಗಾಡಿಗೆ ಹತ್ತಿದರೆ ತನ್ನ ಗಂಡ ಆಮೇಲೆ ತನಗೆ ಶನಿ ಬಿಡಿಸುತ್ತಾರೆ ಎಂದು! ಅವಳು 'ಒಲ್ಲೆ' ಎಂಬರ್ಥದಲ್ಲಿ ತಲೆ ಅಲ್ಲಾಡಿಸುತ್ತಿದ್ದಂತೆಯೆ, ಶಂಕರ ಹೆಗ್ಗಡೆ "ಚಿಗಮ್ಮಾ, ಅದಕ್ಕೆ ಗಾಡಿ ಹತ್ತಿದ್ರೆ ಆಗೋದೆ ಇಲ್ಲ. ತಲೆ ತಿರುಗಿ ಕಕ್ಕಿಕೊಂಡು ಬಿಡ್ತದೆ! ಅದೂ ಅಲ್ಲದೆ…." ಮುಂದೆ ಹೇಳುವುದೊ? ಬಿಡುವುದೊ? ಎಂದು ನಾಚಿಸುತ್ತಿರುವಷ್ಟರಲ್ಲಿ, ಬಿಳಿಚಿಕೊಂಡಿರುವ ಮುಖ ಮತ್ತು ಇತರ ದೈಹಿಕ ಲಕ್ಷಣಗಳಿಂದ ಸೀತಮ್ಮಗೆ ಬಸಿರು ನಿಂತಿದ್ದರೂ ನಿಂತಿರಬಹುದೆಂದು ಊಹಿಸಿ ದೊಡ್ಡಮ್ಮ "ಎಷ್ಟು ತಿಂಗಳಾಗಿದೆಯೊ?" ಎಂದು ಕೇಳಿಯೆ ಬಿಟ್ಟರು.

“ಆ-ಗ್ಯದೆ-ಮೂರು ನಾಲ್ಕು ತಿಂಗಳು ಅಂತ್ತಾ ಕಾಣ್ತದೆ.” ಕೆಂಪು ಬಿಳಿಯ ಪಟ್ಟೆನಾಮಗಳ ಧರ್ಮ ಧ್ವಜವನ್ನು ಹಣೆ ತುಂಬ ಎತ್ತಿ ಹಿಡಿದು, ಸುಪುಷ್ಟನಾಗಿ ದುಂಡು ದುಂಡಗೆ ಬೆಳೆದು, ಮೈ ಮುಖ ಎಲ್ಲಿಯೂ ಬಿರಾಂಬರ ಕಳೆ ತುಂಬಿದೆ ಎಂಬ ಖ್ಯಾತಿ ಪಡೆದಿದ್ದ ಶಂಕರಹೆಗ್ಗಡೆ ನಿಧಾನವಾಗಿ ಹೇಳಿದರು. ಇನ್ನೂ ಒಂದು ವರ್ಷವೂ ಆಗಿದೆಯೋ ಇಲ್ಲವೋ ಎಂಬ ಕೃಶಗಾತ್ರದ ಕೂಸನ್ನು ಸೊಂಟದ ಮೇಲೆ ಹೊರಲಾರದೆ ಹೊತ್ತು ನಿಂತಿದ್ದ ಸೀತಮ್ಮನನ್ನು ಕರುಳುಬೆಂದು ನೋಡಿದರು ಗಾಡಿಯಲ್ಲಿದ್ದ ಮೂವರು ಹೆಂಗಸರೂ!

ರಾಮುವನ್ನಾದರೂ ತಮ್ಮ ಜೊತೆ ಗಾಡಿ ಹತ್ತಿಸಿ ಕರೆದುಕೊಂಡು ಹೋಗುತ್ತೇವೆ ಎಂದ ಹುಡುಗರಿಗೂ ಅದೇ ಮರ್ಯಾದೆಯಾಯಿತು. ತಾನೆಲ್ಲಿಯಾದರೂ ನೆರೆಮನೆಯ ದಾಯಾದಿಗಳ ಮಗ ಧರ್ಮು ಒಡನೆ ಗಾಡಿ ಹತ್ತಿದರೆ ಅಪ್ಪಯ್ಯ ಚಮಡ ಸುಲಿಯುತ್ತಾನೆ ಎಂದು ಹಿಂದಿನ ಅನೇಕ ಅನುಭವಗಳಿಂದ ಅರಿತಿದ್ದ ರಾಮು ಸುಮ್ಮನೆ ಅಳತೊಡಗಲು, ಶಂಕರ ಹೆಗ್ಗಡ “ಅಯ್ಯೋ ಅವನಿಗೆ ಗಾಡೀ ಎತ್ತೂ ಅಂದ್ರೇ ಬಾಳ ಹೆದರಿಕೊಳ್ತಾನೋ!” ಎಂದು ವ್ಯಾಖ್ಯಾನ ಮಾಡಿದರು.

ಗಾಡಿ ಕಾಡಿನ ರಸ್ತೆಯಲ್ಲಿ ಮುಂದುವರಿದು ಕಿಕ್ಕಿರಿದು ಹಳು ಮತ್ತು ಮರಗಳ ನಡುವೆ ಮರೆಯಾಗುವುದನ್ನೆ ಹೆಂಡತಿ ಮಕ್ಕಳೊಡನೆ ನಿಂತು ಕರುಬುಗೂಡಿದ ತಿರಸ್ಕಾರ ಭಾವದಿಂದ ನೋಡುತ್ತಾ ನಿಂತಿದ್ದ ಶಂಕರ ಹೆಗ್ಗಡೆ ಸ್ವಗತ ಎಂಬಂತೆ ಗಟ್ಟಿಯಾಗಿಯೆ ಹೇಳಿಕೊಂಡರು. ಎಲ್ಲರಿಗೂ ಸ್ಪಷ್ಟವಾಗಿ ಕೇಳಿಸಲಿ ಎಂಬಂತೆ: “ದೇವಸ್ಥಾನಕ್ಕೆ ಹೋಗ್ತಾರಂತೆ, ದೇವಸ್ಥಾನಕ್ಕೆ! ಮ್ಟುಃ! ಹೊಲೇರವನ್ನ ಗಾಡಿ ಹೊಡೆಯಾಕೆ ಕೂರಿಸಿಕೊಂಡು ಏನು ಮಡಿಯಾಗಿ ಹೋಗ್ತಾರೋ ದೇವರ ಸೇವೆಗೆ? ನಮ್ಮನ್ನೂ ಬೇರೆ ಗಾಡಿ ಹತ್ತೀ ಅಂತಾರೆ! ನಮಗೆ ಇರೋ ವ್ಯೋರ್ತೇನೆ ಸಾಲದು? ಇನ್ನು ಇವರ ಸಂಗಡ ಮಡಿಗೆಟ್ಟು ಹೋಗಿ, ದೇವರು ಮುನಿದಾ ಅಂದ್ರೆ ಮುಗೀತು ನಮ್ಮ ಗತಿ! ಈ ಅನಾಚಾರನೆಲ್ಲಾ ಹ್ಯಾಂಗೆ ಸಹಿಸ್ತಾನೋ ಆ ಭಗವಂತ? ಅವನಿಗೇ ಗೊತ್ತು!.... ಹೂಂ! ನಡಿಯೋ ರಾಮು, ಇನ್ನು! ದಣಿವು ಆರಿಸಿಕೊಂಡಿದ್ದು ಆಯ್ತಲ್ಲಾ!.... ಯಾಕೆ ನಿಂತಿಯೇ? ನಡೆಯೇ! ನಿಂಗೆ ಆಗ್ದೆ ಇದ್ರೆ ಕೆಂಪೀಕೈಲೊ ಕೊಡೇ ಬಾಲೇನ.... ಏ ಕೆಂಪೀ, ಕರಕೊಳ್ಳೆ ಅವನ್ನ!... “

* * *

## ೪೦

“ಇದೇ ಏನೋ ಕಲ್ಲೂರು?” ಅದೇ ಮೊದಲನೆಯ ಸಾರಿ ಸಲ್ಲಿಗೆ ಬರುತ್ತಿದ್ದ ತಿಮ್ಮು ಊರಿನ ಬೀದಿಯಲ್ಲಿ ಚಲಿಸುತ್ತಿದ್ದ ಗಾಡಿಯ ಹಿಂಭಾಗದಲ್ಲಿ ತನ್ನೊಡನೆ ಕುಳಿತು ಇಣಿಕಿಣಿಕಿ ಅಕ್ಕಪಕ್ಕದ ಮನೆಗಳನ್ನೂ ಅಲ್ಲಿ ಕಾಣಬರುತ್ತಿದ್ದ ಹುಡುಗರು ಮಕ್ಕಳ ಚಲನವಲನಗಳನ್ನೂ ಗ್ರಾಮೀಣ ಕುತೂಹಲದಿಂದ ವೀಕ್ಷಿಸುತ್ತಿದ್ದ ತನ್ನ ಗೆಳೆಯರನ್ನು ಕೇಳಿದನು.

"ಹೌದು ಕಣೋ! ನೋಡು, ಅದೇ ಹೊಳೆದಂಡೇಲಿ ಕಾಣ್ತಾ ಇದೆಯಲ್ಲಾ? ದೊಡ್ಡಮನೆ? ಅರ್ಧ ಮಂಗಳೂರು ಹೆಂಚು, ಅರ್ಧ ಓಡುಹೆಂಚು ಹೊದಿಸಿದ್ದು? ಅದೇ ಕಲ್ಲೂರು ಸಾಹುಕಾರರು ಮಂಜಭಟ್ಟರ ಮನೆ ಕಣೋ!" ಉಳಿದ ಇಬ್ಬರಿಗಿಂತಲೂ ವಯಸ್ಸಿನಲ್ಲಿ ಹಿರಿಯನಾಗಿ, ಹಿಂದೆ ಒಂದೆರಡು ಸಾರಿ, ತನ್ನ ಅಪ್ಪಯ್ಯ ಬೆಟ್ಟಳ್ಳಿ ಕಲ್ಲಯ್ಯಗೌಡರೊಡನೆ, ಅಲ್ಲಿಗೆ ಬಂದಿದ್ದು ಸ್ಥಳಪರಿಚಯ ಪಡೆದಿದ್ದ ಕಾಡು ಹೇಳಿ, ಮತ್ತೆ ಮುಂದುವರಿದನು: "ಅಪ್ಪಯ್ಯನ ಸಂಗಡ ಒಂದು ಸಾರಿ ಕಲ್ಲೂರು ತೇರಿಗೆ ಬಂದಿದ್ದೆ ಕಣೋ. ಆಗ ಆ ಭಟ್ಟರ ಮನೇಲೇ ಊಟ ಮಾಡಿದ್ದು ನಾವು. ಹೋಳಿಗೆ ಪಾಯಸ ಏನೇನೋ ಇಕ್ಕಿದ್ರು ಕಣೋ! ಆದರೆ, ಮನೆ ಒಳಗೆ ಬಳ್ಳೆಹಾಕಿರಲಿಲ್ಲ; ಹೊರಂಗಳದ ತೆಣೆ ಮೂಲೇಲಿ ಹಾಕಿದ್ರೋ ಅಪ್ಪಯ್ಯನೇ ನನ್ನ ಬಳ್ಳೇನೂ ಎತ್ತಹಾಕಿ, ಅವರೇ ಅಲ್ಲೆಲ್ಲಾ ಗ್ವಾಮಯಾನೂ ಹಾಕಿದ್ರು! ನಂಗೆ ಇಸ್ಸಿ ಅನ್ನಿಸಿಬಿಟ್ಟಿತ್ತು!... ಇನ್ನು ಎಂದೆಂದಿಗೂ ಅವರ ಮನೇಲಿ ಊಟ ಮಾಡಬಾರದು ಅಂತಾ ಮಾಡಿಬಿಟ್ಟೇನಿ!"

ಇನ್ನೂ ಏನೇನು ಹೇಳುತ್ತಿದ್ದನೊ ಕಾಡು? ಅಷ್ಟರಲ್ಲಿ ಅವನ ಅವ್ವ ದೊಡ್ಡಮ್ಮ ಹೆಗ್ಗಡತಿಯವರು "ಸಾಕು ಬಿಡೋ, ಮತ್ತೇನು ಬಿರಾಂಬ್ರ ಮನೇಲಿ ಗೌಡರನ್ನು ಒಳಗೆ ಕೂರಿಸಿ ಇಕ್ತಾರೆ ಅಂತಾ ಮಾಡಿಯೇನು? ನಮ್ಮನೇಲಿ, ಆ ಕಿಲಸ್ತರ ಉಪದೇಶಿ ಬರತಾನಲ್ಲ, ಅವನ್ನ ಒಳಗೆ ಕೂರಿಸಿ ಊಟ ಹಾಕ್ತಿಂವೇನು? ಹಂಗೇನೆ ಬಿರಾಂಬರ ಮನೇಲಿ ನಮ್ಮನ್ನೆಲ್ಲ ಹೊರಗೇ ಕೂರಿಸಿ ಇಕ್ತಾರೆ" ಎಂದು ಬ್ರಾಹ್ಮಣ ಸಮರ್ಥನೆ ಮಾಡಿದರು.

"ಆದ್ರೆ? ದೇವಣ್ಣಯ್ಯ ಉಪದೇಶಿ ಜೊತೇಲೇ ಕೂತು ಉಣ್ತಾನಲ್ಲಾ? ಹಂಗೇ ಆ ಭಟ್ಟರ ಮಗ ಯಾಕೆ ಕೂರಬಾರದಾಗಿತ್ತು. ಉಣ್ಣಾಕೆ ನಮ್ಮ ಜೊತೇಲಿ?" ಪ್ರತಿಭಟಿಸಿತ್ತು ಕಾಡಣ್ಣನ ತರ್ಕವಾಣಿ.

"ನಿನ್ನ ದೇವಣ್ಣಯ್ಯ ಜಾತಿಗೀತಿ ಎಲ್ಲಾ ಬಿಟ್ಟಾಗದೆ! ಬೇಕಾದ್ರೆ ಹೊಲೇರು ಹಟ್ಟರ ಸಂಗಡಾನೂ ಉಣ್ತಾನೆ!" ಎಂದು ಸಿಡುಕಿ, ದೊಡ್ಡಮ್ಮ ಸುಮ್ಮನಾದರು. ಅಷ್ಟರಲ್ಲಿ ಗಾಡಿ ದೇವಸ್ಥಾನದ ಬಳಿಯ ದೊಡ್ಡ ಅರಳಿ ಕಟ್ಟೆಯ ಬುಡದಲ್ಲಿ, ವಾಡಿಕೆಯಂತೆ, ನಿಂತಿತು. ಹುಡುಗರೆಲ್ಲ ಸಸಂಭ್ರಮದಿಂದ, ಬಚ್ಚ ಎತ್ತಿರ ಕೊರಳು ಬಿಚ್ಚಿ ಮೂಕಿಯನ್ನು ನೆಲಕ್ಕೆ ಮುಟ್ಟಿಸುವ ಮುನ್ನವೆ, ಹಿಂದುಗಡೆಯಿಂದ ಹಾರಿಬಿಟ್ಟರು!

ಬೆಟ್ಟಳ್ಳಿಯ ಕಮಾನುಗಾಡಿ ಬಂದದ್ದನ್ನು ಗಮನಿಸಿದ ಜೋಯಿಸರು ಬಂದರು ವಿಚಾರಿಸಿದರು, ಮಡಿ ಕೆಡದಂತೆ ಆದಷ್ಟು ದೂರದಲ್ಲಿಯೆ ನಿಂತು, ಪುಣ್ಯವಶಾತ್ ಅವರಿಗೆ ಗಾಡಿ ಹೊಡೆಯುತ್ತಿದ್ದ ಬಚ್ಚ ಹೊಲೆಯರವನು ಎಂದು ಗೊತ್ತಾಗಲಿಲ್ಲ!

ಬೆಟ್ಟಳ್ಳಿ ಕಲ್ಲಯ್ಯಗೌಡರು ಬಂದಿಲ್ಲ; ಬದಲಾಗಿ, ಅವರ ದೊಡ್ಡಮಗ ದೇವಯ್ಯಗೌಡರು ಬಂದಿದ್ದಾರೆ ಎಂಬುದನ್ನು ಕೇಳಿದ ಜೋಯಿಸರ ಮುಖ ಮಂಡಲ ತುಸು ನಿಸ್ತೇಜವಾಯಿತು. ಬ್ರಾಹ್ಮಣರಿಗೆ ತೋರಿಸಬೇಕಾಗಿದ್ದ ಗೌರವದಲ್ಲಿಯೂ ಅವರಿಗೆ ನೀಡಬೇಕಾಗಿದ್ದ ದಾನದಕ್ಷಿಣೆಗಳ ವಿಚಾರದಲ್ಲಿಯೂ ತಮ್ಮ ಸಂಪ್ರದಾಯ ಬದ್ಧತೆಯಿಂದಲೂ ನಿಷ್ಠೆಯಿಂದಲೂ ಔದಾರ್ಯದಿಂದಲೂ ವಿಪ್ರಪೂಜಾಧುರಂಧರ ಎಂದು ಕಲ್ಲೂರಿನ ಹಾರುವರಲ್ಲಿ ಕೀರ್ತಿ ಪಡೆದಿದ್ದ ಕಲ್ಲಯ್ಯಗೌಡರು ಬರದಿದ್ದುದು ಅಪಾರ ನಷ್ಟದ ಬಾಬತ್ತಾಗಿತ್ತು, ಪುಜಾರಿಗಳಾಗಿದ್ದ ಭಟ್ಟರಿಗೂ ಜೋಯಿಸರಿಗೂ, ಜೊತೆಗೆ, ಹಾರುವರ ವಿಚಾರದಲ್ಲಿ ಪಾದ್ರಿಗಳೊಡನೆ ಸೇರಿಕೊಂಡು, ಕೆಟ್ಟ ಅಭಿಪ್ರಾಯವನ್ನು

ಸಂಪಾದಿಸಿ, ಅವರನ್ನು ತಿರಸ್ಕಾರದಿಂದಲೂ ದ್ವೇಷದಿಂದಲೂ ಕಾಣುತ್ತಿದ್ದಾನೆ ಎಂಬ ದೇವಯ್ಯನ 'ಅಪಕೀರ್ತಿ' ಜನಿವಾರದವರಲ್ಲಿ ತಕ್ಕಮಟ್ಟಿಗೆ ಹಬ್ಬಿಬಿಟ್ಟಿತ್ತು.

ಆದರೂ ದೇವಯ್ಯಗೌಡರನ್ನು ಕಂಡು, ಅವರ ಮನೆಯವರು ಮಾಡಿಸುತ್ತಿದ್ದ ಸತ್ಯನಾರಾಯಣದ ಪೂಜೆಯ ಸಂಬಂಧವಾಗಿ ಮಾತಾಡುವುದು ಒಳ್ಳೆಯದೆಂದು ಭಾವಿಸಿದ ಜೋಯಿಸರು "ಎಲ್ಲಿದ್ದಾರೆ, ದೇವಯ್ಯಗೌಡರು? ಅವರನ್ನು ಕಾಣಬೇಕಿತ್ತಲ್ಲಾ" ಎಂದಾಗ.

ಕಾಡು "ಅಣ್ಣಯ್ಯ ಇನ್ನೂ ಬಂದಿಲ್ಲ, ಭಟ್ಟರೆ. ಹ-ಹ-ಹ" ಎಂದು ಹಂದಿ ಹಸಿಗೆ ಮಾಡಿಸುತ್ತಿದ್ದ ಸ್ವಾರಸ್ಯ ವಿಚಾರವನ್ನು ತಿಳಿಸಬೇಕೋ ಬೇಡವೊ ಎಂದು ತಡೆದು ತಡೆದು ಹವಣಿಸುತ್ತಿದ್ದುದನ್ನು ಅರಿತ ಬಚ್ಚ, ಆಗಲಿದ್ದ ಅಚಾತುರ್ಯವನ್ನು ತಪ್ಪಿಸುವ ನೈಪುಣ್ಯ ಪ್ರದರ್ಶನ ಮಾಡಿ "ಹಲಸಿನ ಹಣ್ಣು ಕುಯಿಸುತ್ತಾ ಇದ್ದರು, ದೇವಯ್ಯೋರು; ನಿಮಗೆ ಕೊಡಾಕೆ ಅಂತಾ ಕಾಣ್ತದೆ. ಇನ್ನೇನು ಬಂದು ಬಿಡುತ್ತಾರೆ, ಬೈಸಿಕಲ್ ಮ್ಯಾಲೆ!" ಎಂದನು. ಅತ್ತ, ಅದೇ ಸಮಯದಲ್ಲಿ, ದೇವಯ್ಯಗೌಡರು ಹಸಿಗೆಯಾಗಿದ್ದ ಆ ಕಾಡು ಹಂದಿಯ ಹುರಿದ ಮಾಂಸದ "ಉಪ್ಪು ತುಂಡ"ನ್ನು ಬಾಯಿ ತುಂಬ ಹಾಕಿಕೊಂಡು ಜಗಿದು ತಿನ್ನುತ್ತಾ, ದೇವರ ಕಾರ್ಯಕ್ಕೆ ಹೋಗುತ್ತಿದ್ದುದರಿಂದ ಅದನ್ನು ತಿನ್ನಲು ನಿರಾಕರಿಸಿದ್ದ ಮುಕುಂದಯ್ಯನನ್ನು ಪರಿಹಾಸ್ಯ ಮಾಡುತ್ತಾ ಇದ್ದ ಸತ್ಯ ಸಂಗತಿಯನ್ನರಿಯದೆ ಜೋಯಿಸರು ತುಂಬ ಆಸ್ತಿಕಭಾವದಿಂದ ಹೇಳಿ ಹಿಂತಿರುಗಿದರು: "ಸತ್ಯ ನಾರಾಯಣ ಪೂಜೆಗೆ ಎಲ್ಲ ಸಿದ್ಧವಾಗಿದೆ. ಹೆಗ್ಗಡತಿ ಅಮ್ಮನವರಿಗೂ ತಿಳಿಸಿಬಿಡು, ಎಲ್ಲರೂ ಹೊಳೆಯಲ್ಲಿ ಕೈಕಾಲು ಮುಖ ತೊಳೆದುಕೊಂಡು ದೇವಸ್ಥಾನಕ್ಕೆ ಬರಲಿ."

ತಮ್ಮ ಹಳ್ಳಿಯನ್ನು 'ಊರು' ಎಂದಾಗಲಿ 'ಹಳ್ಳಿ' ಎಂದಾಗಲಿ ಕರೆಯದ 'ಮನೆ' ಎಂದೇ ಕರೆದು, ದೊಡ್ಡದಾದರೂ ಒಂದೊಂದೇ ಬಿಡಿಯಾಗಿದ್ದ ಮನೆಯಲ್ಲಿ ವಾಸಿಸಿ ರೂಢಿಯಾಗಿದ್ದ ಧರ್ಮು ತಿಮ್ಮು ಅವರಿಗೆ ಇಪ್ಪತ್ತೊ ಮೂವತ್ತೊ ಹೆಂಚಿನ ಮನೆಗಳೂ ಸೋಗೆಯ ಮತ್ತು ಹುಲ್ಲಿನ ಗುಡಿಸಲು ಮನೆಗಳೂ ಒಟ್ಟಿಗಿದ್ದು, ಅವುಗಳ ನಡುವೆ ಹಾದುಹೋಗಿದ್ದ ಒಂದು ತೇರುಬೀದಿಯೂ ಇದ್ದ ಕಲ್ಲೂರು, 'ಪೇಟೆ'ಯಾಗಿ, ಸಾಕಷ್ಟು ವಿಸ್ಮಯ ಗೌರವಾಸ್ಪದವಾಗಿಯೆ ಇತ್ತು. ಅವರಿಬ್ಬರಿಗಿಂತಲೂ ಮೊದಲೇ ಆ ಊರಿನ ತೇರಿಗೆ ಬಂದು ಹೋಗಿದ್ದ ಕಾಡು ಸರ್ವಜ್ಞ ಮಾರ್ಗದರ್ಶಿಯಾಗಿಬಿಟ್ಟನು!

ಕೈಕಾಲು ಮುಖ ತೊಳೆದುಕೊಳ್ಳುವುದಕ್ಕೆ ಎಲ್ಲರೂ ಅಲ್ಲಲ್ಲಿ ಧರಿಸಿ ಹಾಳಾಗಿದ್ದ ಮೆಟ್ಟಲುಗಳನ್ನು ಇಳಿಯುತ್ತಿದ್ದಾಗ ತನ್ನ ಅಮ್ಮನ "ಏ, ಬದಿಗೆ ನಿಂತುಕೊಳ್ರೋ, ಮಡಿಯಮ್ಮ ಬರ್ತಿದ್ದಾರೆ!" ಎಂಬ ಅಜ್ಞಾಧ್ವನಿಯನ್ನು ಕೇಳಿ, ಕಾಡು ತನ್ನ ಗೆಳೆಯರಿಬ್ಬರನ್ನೂ ಪಕ್ಕಕ್ಕೆ ಎಳೆದುಕೊಂಡು ನಿಂತನು. ಕೆಂಪು ಸೀರೆಯುಟ್ಟು, ನುಣ್ಣಗೆ ಬೋಳಿಸಿದ ಮಂಡೆಗೆ ಸೆರಗು ಮುಚ್ಚಿ, ಕೈಯಲ್ಲೊಂದು ಚೆನ್ನಾಗಿ ಬೆಳಗಿ ಪಳಪಳ ಹೊಳೆಯುತ್ತಿದ್ದ ತಾಮ್ರದ ತಂಬಿಗೆ ಹಿಡಿದು ಬರುತ್ತಿದ್ದ ಹೆಂಗಸೊಬ್ಬಳನ್ನು ಕಂಡು ತಿಮ್ಮು ಕೇಳಿದನು "ಯಾರೋ ಅದು?" ತಮ್ಮ ಮನೆಯಲ್ಲಿ ಎಲ್ಲರೂ ಗೌರವ ತೋರಿಸುತ್ತಿದ್ದ ತನ್ನ ಅಜ್ಜಮ್ಮನೂ ಕೂಡ ಅವಳಿಗಾಗಿ ಪಕ್ಕಕ್ಕೆ ಸರಿದು ದಾರಿಬಿಡುವಷ್ಟು ಭಯ ಭಕ್ತಿ ಗೌರವಾಸ್ಪದಳಾದ ಆ ಹೆಂಗಸು ಬಹಳ ದೊಡ್ಡ ವ್ಯಕ್ತಿಯೆ ಆಗಿರಬೇಕೆಂದು ಅವನ ಭಾವನೆ. ಆದರೆ 'ಸರ್ವಜ್ಞ ಮಾರ್ಗದರ್ಶಿ' ಪ್ರತ್ಯುತ್ತರ ಕೊಡದೆ, ಅರ್ಧ ಭೀತಿಯಿಂದಲೊ ಎಂಬಂತೆ, ಮೆಟ್ಟಲನ್ನು ಎಣಿಸುತ್ತಿರುವಳೊ ಎಂಬಷ್ಟು ನಿಧಾನವಾಗಿ ಹತ್ತಿ ಹತ್ತಿ ಬರುತ್ತಿದ್ದ ಆ ಬೃಹದಾಕಾರದ, ಸ್ಥೂಲಕಾಯದ, ಉಗ್ರವದನದ ಸ್ತ್ರೀಯನ್ನು ಸುಮ್ಮನೆ

ನೋಡುತ್ತಿದ್ದನು. ಅವಳು ಹತ್ತಿರ ಬಂದಾಗ, ತುಟಿಯನ್ನೆತ್ತಿಕೊಂಡು ಉಬ್ಬಿ ಹೊರಟ ಒಂದು ಕೋರೆ ಹಲ್ಲೂ, ಪಕ್ಕದ ಎರಡು ಮೂರು ಹಲ್ಲು ಬಿದ್ದುಹೋಗಿ ಉಬ್ಬಿದ್ದ ಅಸುಡೂ ನೋಡುವುದಕ್ಕೆ ಹೆದರಿಕೆ ಹುಟ್ಟಿಸುವಂತಿದ್ದುವು.

ಮತ್ತೆ ಕೇಳಿದನು ತಿಮ್ಮು ಮೆಲ್ಲಗೆ "ಯಾರೋ ಅದೂ? ಗಂಡಸೋ? ಹೆಂಗಸೋ?"

"ಹೆಂಗಸು ಕಣೋ! ಬೋಳುಹಾರ್ತಿ!…. ಅವಳ ಕಡೇನೇ ನೋಡಬ್ಯಾಡೋ, ಬಯ್ತಾಳಂತೆ" ಎಂದನು ಕಾಡು. ಆದಷ್ಟು ಮೆಲ್ಲಗೆ.

ಆದರೆ ಸಮೀಪಿಸಿದ್ದ ಆ ಬ್ರಾಹ್ಮಣ ವಿಧವೆಗೆ ಅದು ಕೇಳಿಸಿತೆಂದು ತೋರುತ್ತದೆ. ಅವರ ಕಡೆ ದುರುದುರುದುರು ಕಣ್ಣು ಬಿಟ್ಟು, ಬಾಯಲ್ಲಿ ಏನೋ ಶಾಪಹಾಕುತ್ತಾ, ಏದುತ್ತಾ ಮೇಲಕ್ಕೆ ಏರಿ ಮೆಟ್ಟಿಲು ಹತ್ತಿ ಹೋದಳು.

"ಹಾಂಗಂದ್ರೆ?" ತಿಮ್ಮು ಮತ್ತೆ ಪ್ರಶ್ನಿಸಿದನು, ಅವಳು ದೂರ ಹೋದ ಮೇಲೆ.

"ಬೋಳಮ್ಮ ಕಣೋ…. ಬೋಳು ಮುಂಡೆ!"

"ಛೆ! ಯಾಕೊ ಬಯ್ತೀಯಾ?"

"ಏ, ಬಯ್ಯದಲ್ಲ ಕಣೋ; ಬ್ರಾಂಬ್ರಲ್ಲಿ ಗಂಡ ಸತ್ತ ಮುಂಡೇರಿಗೆ ಮಂಡೆ ಬೋಳಿಸ್ತಾರೆ, ಅದ್ಕೇ 'ಬೋಳುಮುಂಡೆ' ಅನ್ನಾದು!" ಮಾತಾಡುತ್ತಲೆ ಎಲ್ಲರ ಜೊತೆ ಇವರೂ ಹೊಳೆಗೆ ಇಳಿದರು.

ಧರ್ಮು ಏನೊಂದನ್ನೂ ಮಾತನಾಡದೆ ಚಿಂತಾಗ್ರಸ್ತನಾಗಿ ಮೆಲ್ಲಗೆ ಮೆಟ್ಟಲು ಇಳಿಯುತ್ತಿದ್ದನು. ಕಾಡು 'ಬೋಳುಹಾರ್ತಿ' ಎನ್ನುವುದಕ್ಕೆ ಕೊಟ್ಟ ವಿವರಣೆಯನ್ನು ಕೇಳಿ ಅವನಿಗೆ ಗುಂಡು ತನ್ನೆದೆಗೇ ತಗುಲಿದಂತೆ ಆಗಿತ್ತು. ತಿರುಪತಿಗೆ ಹೋಗಿದ್ದ ತನ್ನ ಅಪ್ಪಯ್ಯ ಸತ್ತಿದ್ದರೆ, ಅಥವಾ ಸತ್ತರೆ, ತನ್ನ ಅವ್ವನೂ ಹೀಗೆಯೆ ಮಂಡೆಬೋಳಿಸಿಕೊಂಡು ಕೆಂಪು ಸೀರೆ ಉಟ್ಟುಕೊಂಡು ವಿಕಾರವಾಗುತ್ತಾಳೆಯೊ ಏನೊ ಎಂಬೊಂದು ಮಹಾ ಸಂಕಟಕರ ಭೀತಿ ಅವನ ಹೃದಯದಲ್ಲಿ ಸಂಚರಿಸತೊಡಗಿತ್ತು. ಮುಂದೆ ಹೆಂಗಸರ ಜೊತೆ ತಂಗಿಯ ಮಗು ಚೆಲುವಯ್ಯನನ್ನು ಎತ್ತಿಕೊಂಡು ಮೆಟ್ಟಿಲಿಳಿಯುತ್ತಿದ್ದ ತನ್ನ ಮಾತೃಮೂರ್ತಿಯನ್ನು ನೋಡಿದನು. ಅವನಿಗೆ ಎದೆ ಕರಗಿದಂತಾಯ್ತು.

ಹೆದರಿ ಹೆದರಿ ಪ್ರಶ್ನಿಸಿದನು "ಕಾಡಣ್ಣಯ್ಯ, ನಮ್ಮಲ್ಲಿಯೂ ಹೀಂಗೆ ಮಾಡ್ತಾರೇನೋ, ಗಂಡ ಸತ್ತರೆ?"

"ಥೂಥೂಥೂ! ಎಂಥಾ ಮಾತಾಡ್ತೀಯೋ? ನಮ್ಮಲ್ಲಿ ಯಾರಿಗೂ ಹೀಂಗೆ ಮಾಡಾದಿಲ್ಲೊ! ಬ್ರಾಂಬ್ರ ಜಾತೀಲಿ ಮಾತ್ರ ಹಂಗೆ ಮಾಡಾದು."

"ಸದ್ಯ ನಾನೂ ನನ್ನವ್ವನೂ ಬಿರಾಂಬ್ರಜಾತೀಲಿ ಹುಟ್ಟದೆ ಗೌಡರ ಜಾತೀಲಿ ಹುಟ್ಟಿದ್ದೀವಲ್ಲಾ!" ಮನಸ್ಸಿನಲ್ಲಿಯೆ ಅಂದುಕೊಂಡು ಧರ್ಮು ಹೊಳೆಯ ಅಂಚಿನ ತೆಳ್ಳೆ ನೀರಿಗಿಳಿದನು.

ಹೊಳೆಯಿಂದ ಮೇಲಕ್ಕೆ ಬರುತ್ತಿದ್ದಾಗ ಬಂಡೆಗಳೆಡೆ ದುರ್ವಾಸನೆ ಬರುತ್ತಿರಲು ತಿಮ್ಮು ಮೂಗು ಮುಚ್ಚಿಕೊಂಡನು; "ಈ ಊರಿನ ಹಾರುವರೆಲ್ಲ ಇಲ್ಲೆ…." ಮೂವರೂ ಅಸಹ್ಯ ಸೂಚಕ ಧ್ವನಿಮಾಡುತ್ತಾ ಆ ಸ್ಥಳದಿಂದ ಬೇಗನೆ ದೂರ ಹೋಗಲು ಓಡಿ ಓಡಿ ಮೆಟ್ಟಲೇರಿದರು.

ದೊಡ್ಡಮ್ಮ ಹೆಗ್ಗಡಿತಿಯವರ ಗಂಭೀರವಾದ ಮುಂದಾಳುತನದಲ್ಲಿ ಎಲ್ಲರೂ ದೇವಸ್ಥಾನದ ಒಳಾಂಗಣಕ್ಕೆ ಹೋದರು. ಕಾಡು ಮಾತ್ರ ತನ್ನ ಗೆಳೆಯರ ಬಟ್ಟೆ ಹಿಡಿದೆಳೆಯುವ ಸಂಕೇತಮಾಡಿ, ಅವರನ್ನು ಹಿಂದುಳಿಯುವಂತೆ ಮಾಡಿದನು. ದೇವರ ಪೂಜೆಗೆ ಆದಷ್ಟು ಬೇಗನೆ ಹೋಗಿ, ತನ್ನ ತಾಯಿಗೂ ತನಗೂ ಮಂಗಳವಾಗುವಂತೆ ಪ್ರಾರ್ಥಿಸಿಕೊಳ್ಳಲು ಆತುರದಿಂದಿದ್ದ ಧರ್ಮು "ಯಾಕೋ? ಅಜ್ಜಮ್ಮ ಬಯ್ತಾರೆ; ಬೇಗ ಹೋಗೋಣೋ" ಎಂದನು.

"ಇನ್ನೂ ಸುಮಾರು ಹೊತ್ತಿದೆಯೋ ಪೂಜೆಗೆ. ಗಂಟೆ ಜಾಗಟೆ ಎಲ್ಲ ಬಾರಿಸ್ತಾರಲ್ಲಾ? ಆವಾಗ ಓಡಿದರಾಯ್ತು. ನಿಮಗೆ ರಥದ ಕೊಟ್ಟಿಗೆ ತೋರಿಸ್ತೀನಿ ಬನ್ನಿ. ರಥಾನೂ ಇರ್ತದೆ. ದೊಡ್ಡ ಗಾಲಿಯ ತೇರು ಕಣೋ!"

ರಥದ ಕೊಟ್ಟಿಗೆಗೆ ಹೋಗಿ ಮೂವರೂ ವಿಸ್ಮಯದಿಂದ ಅದರ ಬೃಹದಾಕಾರದ ಗಾಲಿಗಳನ್ನು ನೋಡುತ್ತಿದ್ದಾಗ, ಕಾಡು ರಥೋತ್ಸವದಲ್ಲಿ ತೇರನ್ನು ಹೇಗೆ ಸಿಂಗರಿಸುತ್ತಾರೆ, ಹೇಗೆ ಎಳೆಯುತ್ತಾರೆ, ಮಿಣಿ ಕಟ್ಟುವುದು ಹೇಗೆ - ಎಂಬೆಲ್ಲ ತನ್ನ ಅನುಭವಗಳನ್ನು ವಿವರಿಸುತ್ತಿರಲು, ತಿಮ್ಮು ಹಿಗ್ಗಿ ಕೂಗಿಯೆಬಿಟ್ಟನು: "ಅಲ್ಲಿ ನೋಡೋ! ಅಲ್ಲಿ ನೋಡೋ! ಅವೆಂಥಾ ಹಕ್ಕಿಯೊ? ಎಷ್ಟೊಂದು ಇವೆಯೋ?"

"ಅವು ಪಾರಿವಾಳ ಕಣೋ. ಇಲ್ಲೇ ಅವು ಗೂಡುಕಟ್ಟಿ ಮರೀನೂ ಮಾಡ್ತವೆ."

"ಅವನ್ನ ಹೊಡಕೊಂಡು ತಿನ್ನಾದಿಲ್ಲೇನೋ… "

"ದೇವರ ಹಕ್ಕಿ, ದೇವರ ಮೀನು ಇವನ್ನ ತಿನ್ತಾರೇನೋ ಯಾರಾದ್ರೂ? ಅದರಲ್ಲೂ ಇಲ್ಲಿ ಇರೋರೆಲ್ಲಾ ಹೆಚ್ಚಾಗಿ ಹಾರುವರೆ."

"ಇದೇನೋ ಇಷ್ಟೊಂದು ಕಾಗೆ? ಹಿಂಡು ಹಿಂಡು? ನಮ್ಮ ಮನೆ ಹತ್ರ ಹುಡುಕಿದ್ರೂ ಕಾಣಾಕೆ ಸಿಗಾದು ಅಪರೂಪ."

"ಹಾರ್ ಮಕ್ಕಳು ಇದ್ದಲ್ಲೇ ಹಾಂಗೆ ಕಣೋ! ಕಾಗೆ, ನಾಯಿ ಹಿಂಡು ಹಿಂಡೇ ಇರ್ತವೆ. ಚೆಂದಾಗಿ ತಿಂದು ಬಿಸಾಡ್ತಾರೆ ನೋಡು, ಅದಕ್ಕೇ!"

ಕಾಡು ತಿಮ್ಮು ಅವರ ಕೊನೆಮೊದಲಿಲ್ಲವೆಂಬಂತೆ ಸಾಗುತ್ತಿದ್ದ ಮಾತಿನ ಕಡೆಗೆ ಧರ್ಮು ಅಷ್ಟೇನೂ ಹೆಚ್ಚು ಗಮನ ಕೊಟ್ಟಂತೆ ಕಾಣುತ್ತಿರಲಿಲ್ಲ. ಅವನ ಮನಸ್ಸೆಲ್ಲ ದೇವಸ್ಥಾನದ ಕಡೆಗೇ ಇತ್ತು. ಒಂದೆರಡು ಸಾರಿ ಅವನಿಗೆ ಗಂಟೆಯೊ ಜಾಗಟೆಯೂ ಬಾರಿಸಿದಂತೆ ಕೇಳಿಸಿತ್ತು. ಆದರೆ ಕಾಡು "ನಿಂಗೇನೋ ಕಿವಿ ಒಳಗೇ ಯಾರೋ ಗಂಟೆ ಜಾಗಟೆ ಬಾರಿಸ್ತಾರೆ ಅಂತಾ ಕಾಣ್ತಾದೆ!" ಎಂದು ಹಾಸ್ಯ ಮಾಡಿದ್ದನು. ಆದರೆ ಧರ್ಮು ಮತ್ತೆ ಮತ್ತೆ ಎಚ್ಚರಿಸುತ್ತಲೆ ಇದ್ದುದರಿಂದ ಮೂವರೂ ದೇವಸ್ಥಾನದೊಳಕ್ಕೆ ಯಾರ ಗಮನಕ್ಕೂ ಬೀಳಬಾರದೆಂದು ಮೆಲ್ಲಗೆ ನುಸುಳಿ ನಡೆದರು.

ಕಲ್ಲನ್ನೆ ಹಾಸಿ, ಕಲ್ಲನ್ನೆ ಹೊದಿಸಿ, ಕಲ್ಲಿನ ಕಂಬಗಳ ಮೇಲೆಯೆ ನಿಂತಿದ್ದ ಆ ಗುಡಿಯ ನಿರ್ಮಲವಾಗಿದ್ದ ಒಳಾಂಗಣ ಹೂವು ಗಂಧ ಧೂಪ ಇವುಗಳ ಮಿಶ್ರಪರಿಮಳದಿಂದ ಮನಸ್ಸಿಗೆ ಪವಿತ್ರ ಭಾವನೆಯನ್ನು ತರುತ್ತಿತ್ತು. ಆ ಕಂಭಗಳಲ್ಲಿ ಆ ಬೋದಿಗೆಗಳಲ್ಲಿ ಕಲ್ಲಿನ ಕೆತ್ತನೆಯ ಕೆಲಸ ಕುತೂಹಲಕಾರಿಯಾಗಿತ್ತಾದರೂ ಬೆಕ್ಕಸಪಡುವಂಥಾದ್ದೇನೂ ಇರಲಿಲ್ಲ, ಹುಡುಗರ ಭಾಗಕ್ಕೆ. ಏಕೆಂದರೆ ಅವರ ಮನೆಯ ಜಗಲಿಯ ದೊಡ್ಡ ದೊಡ್ಡ ಮಂಡಿಗೆಗಳೇ ಚಿತ್ರಕರ್ಮದಲ್ಲಿ ಆ ಕಲ್ಲುಕಂಭಗಳಿಗಿಂತಲೂ ಮೇಲುಮಟ್ಟದ್ದಾಗಿದ್ದುವು.

ಜಗಲಿಯಂತೆ ಎತ್ತರವಾಗಿದ್ದ ಅಂಗಣದ ಮೇಲುಭಾಗದಲ್ಲಿ ಬ್ರಾಹ್ಮಣ ಮುತ್ತೈದೆಯರು ಕುಳಿತಿದ್ದರು. ಕೆಳಗಿನ ಅಂಗಳದಲ್ಲಿ ಶೂದ್ರವರ್ಗದವರು ಎಂದರೆ ಬೆಟ್ಟಳ್ಳಿ ಕೋಣೂರು ಹಳೆಮನೆಯ ಹೆಂಗಸರು ಗುಂಪು ಕೂಡಿದ್ದರು. ಗಾಡಿ ಹತ್ತಲೊಲ್ಲದೆ ದಾರಿಯಲ್ಲಿ ಬಿಟ್ಟು ಬಂದಿದ್ದ ರಾಮುವೂ ತನ್ನ ತಾಯಿಯ ಪಕ್ಕದಲ್ಲಿ ಕುಳಿತಿದ್ದವನು, ಪ್ರವೇಶಿಸಿದ ಈ ಮೂವರನ್ನೂ ಕಂಡೊಡನೆ, ಸನ್ನಿವೇಶದ ಗಾಂಭೀರ್ಯವನ್ನು ಒಂದಿನಿತೂ ಗಮನಿಸದೆ “ಓ! ಧರ್ಮಣ್ಣಯ್ಯ ತಿಮ್ಮಭಾವ ಎಲ್ಲಾ ಬಂದ್ರಲ್ಲಾ!” ಎಂದು ಗಟ್ಟಿಯಾಗಿ ತಮ್ಮ ಹಳ್ಳಿಯ ಮನೆಯಲ್ಲಿ ಕೂಗುವಂತೆ ಕೂಗಿ ಕರೆಯುತ್ತಾ ಎದ್ದು ಓಡಿ ಬಂದು, ಅವರನ್ನು ಸ್ವಾಗತಿಸಿ, ತನ್ನ ಹಳ್ಳಿಗತನದಿಂದ ಎಲ್ಲರ, ವಿಶೇಷವಾಗಿ ಬ್ರಾಹ್ಮಣ ಮಹಿಳಾವರ್ಗದ ಮುಚ್ಚುನಗೆಗೆ ಪಕ್ಕಾಗಿದ್ದನು! ಶೂದ್ರವರ್ಗದ ಸ್ತ್ರೀಯರು ಮುಸುಗುನಗೆ ನಟಿಸಿದ್ದರೂ ತಮ್ಮವನಾದ ಹುಡುಗನೊಬ್ಬನ ಅಸಭ್ಯ ಅಥವಾ ಗ್ರಾಮ್ಯವರ್ತನೆಗಾಗಿ ಅವಮಾನಿತರಾಗಿದ್ದರು!

ಬ್ರಾಹ್ಮಣ ಗಂಡಸರಿಗೆ ಸಮೀಪವಾಗಿ, ಆದರೆ ಕೆಳ ಅಂಗಳದಲ್ಲಿ, ಕೆಲವೇ ಶೂದ್ರರೊಡನೆ ಕುಳಿತಿದ್ದ ಪಟ್ಟೆನಾಮದ ಹೆಂಚಿನ ಮನೆಯ ಶಂಕರಪ್ಪ ಹೆಗ್ಗಡೆಯವರು ಹೆಗ್ಗನ್ನು ಬಿಟ್ಟು ಮಗನನ್ನು ಗದರಿಸಿದರು. ಧರ್ಮು ಜನರ ಕಣ್ಣಿನಿಂದ ಆದಷ್ಟು ಬೇಗನೆ ತಪ್ಪಿಸಿಕೊಳ್ಳಲೆಂಬಂತೆ, ರಾಮುವ ಕೈಹಿಡಿದುಕೊಂಡೇ ಬೇಗಬೇಗನೆ ಹೋಗಿ, ತನ್ನ ತಾಯಿಯ ಹತ್ತಿರ ಹುದುಗುವವನಂತೆ ಕುಳಿತನು. ಕಾಡು ತಿಮ್ಮು ಇಬ್ಬರೂ ದುರದಲ್ಲಿಯೆ ಒಂದು ಕಲ್ಲು ಕಂಬಕ್ಕೆ ಒರಗಿ ನಿಂತು ಎಲ್ಲವನ್ನೂ ನೋಡತೊಡಗಿದರು, ತಾವು ಯಾವುದನ್ನೂ ಲಕ್ಷಿಸುವವರಲ್ಲ ಎಂಬಂತೆ ಸೆಟೆದುನಿಂತು.

ತನ್ನ ತಾಯಿ ಮುಂತಾದವರ ಗೊಬ್ಬೆ ಸೆರಗಿನ ಮಲೆನಾಡಿನ ಉಡಿಗೆಯನ್ನೇ ನೋಡಿ ಅಭ್ಯಾಸವಾಗಿದ್ದ ತಿಮ್ಮುಗೆ ಹಾರುವರ ಹೆಂಗಸರ ಉಡುಗೆಯ ರೀತಿ ವಿನೋದಕರವಾಗಿತ್ತು. ಅದರಲ್ಲಿಯೂ ಕಚ್ಚೆ ಹಾಕಿದಂತೆ ಸೀರೆ ಉಟ್ಟಿದ್ದವರನ್ನು ನೋಡಿ ಅವನಿಗೆ ನಗೆ ತಡೆಯಲಾಗಲಿಲ್ಲ: “ಏನೋ, ಕಾಡಣ್ಣಯ್ಯ, ಗಂಡಸರ ಹಾಂಗೆ ಕಚ್ಚೆ ಹಾಕಿಲ್ಲಾರಲ್ಲೋ ಥೂ!” ಎಂದು ಪಿಸುಗುಟ್ಟಿದ್ದನು. ಅದೊಂದು ತರದ ಬಿರಾಂಬರ ಉಡಿಗೆ ಕಣೋ!” ಎಂದು ವಿವರಿಸಿದ್ದನು ಕಾಡು. ತಿಮ್ಮುಗೆ ಉಡಿಗೆ ತೊಡಿಗೆಯಲ್ಲಾಗಲಿ ರೂಪದಲ್ಲಾಗಲಿ ಬಣ್ಣದಲ್ಲಾಗಲಿ ತನ್ನ ಹಳೆಮನೆ ಅತ್ತೆಮ್ಮ ಬೆಟ್ಟಳ್ಳಿ ಅತ್ತೆಮ್ಮ ಮುಂತಾದವರ ಮುಂದೆ ಯಾವ “ಹಾರ್ತಿ”ಯೂ “ಚೆಂದ” ಕಾಣಿಸಲಿಲ್ಲ.

ಇವರು ನೋಡುತ್ತಿದ್ದಂತೆಯೆ ಒಬ್ಬಳು ಬ್ರಾಹ್ಮಣ ಯುವತಿ, ಒಳ್ಳೆಯ ಸೀರೆಯನ್ನುಟ್ಟು ಅಲಂಕಾರವಾಗಿದ್ದಳು, ಮತ್ತೊಬ್ಬಳು ಬ್ರಾಹ್ಮಣ ತರುಣಿಯನ್ನು ನೋಡುವುದಕ್ಕೆ ಬೆಳ್ಳಗೆ ತೆಳ್ಳಗೆ ಲಕ್ಷಣವಾಗಿದ್ದರೂ ತುಂಬ ಕೃಶಳಾಗಿದ್ದು ಟೊಂಕ ತಿರುಪಿದಂತೆ ಕಾಲು ಹಾಕಿ ಕುಂಟುತ್ತಿದ್ದಳು-ಕೈ ಆಪುಕೊಟ್ಟು ಮೆಲ್ಲಗೆ ನಡೆಸಿಕೊಂಡು ಬಂದು ಬ್ರಾಹ್ಮಣ ಮಹಿಳೆಯರ ನಡುವೆ ಕೂರಿಸಿ, ತಾನೂ ಅವಳ ಪಕ್ಕದಲ್ಲಿ ರಕ್ಷಕಳೆಂಬಂತೆ ಕೂತಳು. ಅಲ್ಲಿ ನೆರೆದಿದ್ದ ಗಂಡಸರ

ಮತ್ತು ಹೆಂಗಸರ ದೃಷ್ಟಿಯೆಲ್ಲ ಅವಳ ಕಡೆ ನೆಟ್ಟಿತ್ತು. ಕೆಲವರು ತಮ್ಮತಮ್ಮಲ್ಲಿಯೆ ಪಿಸುಪಿಸು ಮಾತನಾಡಿಕೊಂಡರು; ಕೆಲವರು ಕಿಸಕ್ಕನೆ ಮೆಲುನಗೆ ನಕ್ಕಿದ್ದೂ ಕೇಳಿಸಿತು.

ನೋಡುವುದಕ್ಕೆ ಸುಂದರವಾಗಿದ್ದರೂ ಕಾಯಿಲೆ ಹಿಡಿದವಳಂತೆ ಬಿಳಿಚಿ ಕೃಶವಾಗಿದ್ದು ಕುಂಟುತ್ತಾ ಬಂದಿದ್ದ ಆ ತರುಣಿಯನ್ನು ನೋಡಿ, ತನ್ನ ಹುಟ್ಟುಗುಣವಾದ ಸೌಂದರ್ಯ ಪಕ್ಷಪಾತವನ್ನಾಗಲೆ ಪ್ರದರ್ಶಿಸತೊಡಗಿದ್ದ ತಿಮ್ಮು, ಸಂಕಟಮುಖಿಯಾಗಿ, ಸರ್ವಜ್ಞ ಮಾರ್ಗದರ್ಶಿಯ ಸ್ಥಾನಕ್ಕೆ ಸ್ವಯಂ ಪಟ್ಟಕಟ್ಟಿಸಿಕೊಂಡಿದ್ದ ಕಾಡುವನ್ನು ಕುರಿತು "ಅದು ಯಾರೋ ಆ ಹೆಂಗಸು? ಪಾಪ! ಏನಾಗಿದೆಯೋ ಅವಳಿಗೆ? ಎಷ್ಟು ಚೆನ್ನಾಗಿದ್ದಾರೆ ಅಲ್ಲಾ? ನೋಡಕ್ಕೆ ಹೂವಳ್ಳಿ ಚಿನ್ನಕ್ಕನ ಹಾಂಗೆ ಕಾಣ್ತಾರೆ" ಎಂದನು.

ಕಾಡು ತನ್ನ ತಾಯಿ ದೊಡ್ಡಮ್ಮ ಹೆಗ್ಗಡಿತಿಯವರು ಕೂತಿದ್ದಲ್ಲಿಗೆ ಓಡಿಹೋಗಿ, ಅವರೊಡನೆಯೂ ದೇವಮ್ಮ ರಂಗಮ್ಮ ಧರ್ಮು ಅವರೊಡನೆಯೂ ಏನೇನೋ ಪಿಸು ಮಾತಾಡುತ್ತಿದ್ದು, ತಜ್ಞನಾದ ಸಂತೋಷದಿಂದ ಹಿಂದಿರುಗಿ ಬಂದು ಹೇಳಿದನು: "ಅವರು ಮಂಜಭಟ್ಟರ ಸೊಸೆ ಅಂತೆ ಕಣೋ! ಅವರನ್ನೆ ಅಂತೆ, ಅತ್ತೆ ಮಾವ ಸೇರಿಕೊಂಡು ಹೊಡೆದೂ ಬಡಿದೂ ಕಾಲು ತಿರುವಿ ಹಾಕಿದ್ದು! ಆಗ ಒಂದು ಸಾರಿ ಒಬ್ಬ ಒಳಗೆ ಬಂದು ಅವರ ಇವರ ಹತ್ರ ಏನೇನೋ ಕಿವಿಮಾತು ಆಡಿ ಹೊರಗೆ ಹೋದ ನೋಡು, ಬಚ್ಚಗಾನಿ ಉಟ್ಕುಂಡು ಚಿನ್ನದ ರುದ್ರಾಕ್ಷೀನ ಕೊರಳಿಗೆ ಹಾಕಿಕೊಂಡಿದ್ನಲ್ಲಾ? ನಮ್ಮ ದೇವಣ್ಣಯ್ಯನ ಹಾಂಗೆ ಚೆಂದಾಗಿದ್ದನಲ್ಲೋ?... ಅವನೇ ಅಂತೆ ಅವರ ಗಂಡ! ನಾರಾಯಣಭಟ್ಟ ಅಂತೆ ಕಣೋ ಅವನ ಹೆಸರು... ಅಂವ ಇವರನ್ನ ಬಿಟ್ಟು ಕಿಟ್ಟ ಐತಾಳನ ಹೆಂಡ್ತಿ ಇಟ್ಟುಕೊಂಡಿದ್ದಾನಂತೆ.... ಯಾರಂತೀಯಾ? ನೋಡಲ್ಲೇ ಅವರ ಹತ್ರಾನೆ ಕೂತಿದ್ದಾಳಲ್ಲಾ, ಸಿಂಗಾರ ಮಾಡಿಕೊಂಡು, ಗಟ್ಟದ ತಗ್ಗಿನವರರಾಂಗೆ ತಲೆಚಾಚಿ ಕೊಂಡಿದೆಯಲ್ಲಾ ಅವಳೇ!...

"ಅವರನ್ನ ಕೈಹಿಡಿದು ನಡೆಸಿಕೊಂಡು ಬಂದಳಲ್ಲಾ ಅವಳ್ ಏನೋ?"

"ಹ್ಞೂ ಕಣೋ!"

ಅಷ್ಟರಲ್ಲಿ ನೆರೆದಿದ್ದವರೆಲ್ಲ ಗುಡಿಯ ಹೆಬ್ಬಾಗಿಲ ಕಡೆ ದೃಷ್ಟಿಯಾಗಿ ಏನೊ ಗುಜುಗುಜು ಹಬ್ಬಿತು. ನೋಡುತ್ತಿದ್ದ ಹಾಗೆ ಜೋಯಿಸರ ಸಂಗಡ ದೇವಯ್ಯ, ಮುಕುಂದಯ್ಯ ಪ್ರವೇಶಿಸಿದರು.

ಕೆದರು ಕ್ರಾಪಿನ ತಲೆ, ಹರಳೊಂಟೆ ಹೊಳೆವ ಕಿವಿ, ಕರಿಯ ಕುಡಿಮಾಸೆ, ಹೊನ್ನುಂಗುರದ ಬೆರಳು, ನಶ್ಯದ ಬಣ್ಣದ ಕೋಟು, ಬಿಳಪಲ್ಲಿನಕಚ್ಚೆಪಂಚೆ, ಹೆಗಲ ಮೇಲಿದ್ದ ಹೊಸ ತೋಟಾಕೋವಿ, ಎತ್ತರದ ಬಲಿಷ್ಠರ ಭಂಗಿ, ಕ್ರೈಸ್ತಪಾದ್ರಿಗಳ ಮೂಲಕ ಆಗತಾನೆ ಮಲ್ಲಗೆ ಪ್ರವೇಶಿಸುತ್ತಿದ್ದ ನವನಾಗರಿಕತೆಯ ಸ್ಥೂಲರುಚಿಯ ಲಕ್ಷಣಗಳಿಂದ ಸಮನ್ವಿತರಾಗಿದ್ದ ದೇವಯ್ಯ ಗೌಡರನ್ನು ನೋಡಿ ನೆರೆದಿದ್ದವರೆಲ್ಲರೂ, ಹೆಂಗಸರು, ಗಂಡಸರು, ಎಲ್ಲರೂ ಬೆರಗಾದರು; ಕೆಲವರು ಕರುಬೂ ತಲೆಹಾಕಿತ್ತು; ಹಲವರಲ್ಲಿ, ಬ್ರಾಹ್ಮಣ ದ್ವೇಷಿಯೆಂದು ಹೆಸರಾಗಿದ್ದ ಅವನ ಮೇಲೆ, ತಿರಸ್ಕಾರ ಭಾವವೂ ಸುಳಿಯದಿರಲಿಲ್ಲ.

ಅವನ ಪಕ್ಕದಲ್ಲಿದ್ದು, ಒಂದು ಸಾಧಾರಣ ಕೋಟು ಹಾಕಿಕೊಂಡು, ಕಟ್ಟಿದ್ದ ಜುಟ್ಟು ಹಿಂದುಗಡೆ ಕಾಣಿಸುವಂತೆ ತಲೆಗೊಂದು ತೋಪಿಯಿಟ್ಟು, ಅಡ್ಡಪಂಚೆಯುಟ್ಟಿದ್ದ ತರುಣ ಮುಕುಂದಯ್ಯನನ್ನು ಯಾರೂ ಅಷ್ಟಾಗಿ ಗಮನಿಸಲಿಲ್ಲ.

ನಾರಾಯಣಭಟ್ಟನ ಹೆಂಡತಿಯ ಪಕ್ಕದಲ್ಲಿ ಕುಳಿತಿದ್ದ ಐತಾಳನ ಹೆಂಡತಿಯಂತೂ, ತನ್ನ ತೋಟಾಕೋವಿಯನ್ನು ಒಂದು ಮೂಲೆಯಲ್ಲಿ ಕಲ್ಲು ಕಂಭಕ್ಕೆ ಒರಗಿಸಿಟ್ಟು, ಮುಕುಂದಯ್ಯನನ್ನು ಹಿಂಬಾಲಿಸಿ, ಶೂದ್ರ ಗಂಡಸರು ಕುಳಿತಿದ್ದೆಡೆಗೆ ನಡೆದು ದೇವಯ್ಯ ಅವರ ನಡುವೆ ಕುಳಿತುಕೊಳ್ಳುವವರೆಗೂ ಅವನತ್ತ ಇಟ್ಟಿದ್ದ ದೃಷ್ಟಿಯನ್ನು ಇತ್ತ ತಿರುಗಿಸಿರಲಿಲ್ಲ. ಆಮೇಲೆಯೂ ಏನಾದರೊಂದು ನೆವ ಮಾಡಿಕೊಂಡು ಮತ್ತೆ ಮತ್ತೆ ಅವನತ್ತ ಕಣ್ಣು ಹಾಕುತ್ತಲೆ ಇದ್ದು. ಒಮ್ಮೆ ಹಾರುವ ಗಂಡಸರ ನಡುವೆ ಕುಳಿತಿದ್ದ ನಾರಾಯಣಭಟ್ಟನು ಎದ್ದು ದೇವಯ್ಯನ ಪಕ್ಕದಲ್ಲಿ ತುದಿಗಾಲಿನ ಮೇಲೆಯೆ ಕುಳಿತು ಸಂಭಾಷಿಸುತ್ತಿದ್ದಾಗಲಂತೂ ಅವರಿಬ್ಬರಿಗಿದ್ದ ತಾರತಮ್ಯವನ್ನು ಚೆನ್ನಾಗಿ ಗಮನಿಸಿದ್ದಳು; 'ನಾರಾಯಣಭಟ್ಟನೂ ದೇವಯ್ಯನ ಹಾಗೆ ಕ್ರಾಪು ಬಿಟ್ಟಿದ್ದರೆ ಎಷ್ಟು ಚೆನ್ನಾಗಿರುತ್ತಿತ್ತು?' ಎಂದುಕೊಂಡಿದ್ದಳು ಅವಳು.

ಪೂಜೆ ಪ್ರಾರಂಭವಾಗುವುದಕ್ಕೆ ಸ್ವಲ್ಪ ಮುಂಚೆ, ತಮ್ಮನ್ನು ಹಿಂಬಾಲಿಸುತ್ತಿದ್ದ ಕರಣಿಕ ಕಿಟ್ಟಿ ಐತಾಳನೊಡನೆ, ಕಲ್ಲೂರಿನಲೆಲ್ಲ ಅತ್ಯಂತ ಶ್ರೀಮಂತರೂ ಗಣ್ಯರೂ ದಕ್ಷರೂ ಎನ್ನಿಸಿಕೊಂಡಿದ್ದ ಮಂಜಭಟ್ಟರೆ ಸಾಕ್ಷಾತ್ತಾಗಿ ಹಾಜರಾದರು. ಉತ್ತರದಲ್ಲಿ ಸಿಪಾಯಿ ದಂಗೆ ನಡೆಯುತ್ತಿದ್ದ ಕಾಲದಲ್ಲಿ ಹುಡುಗರಾಗಿದ್ದ ಅವರು ದಕ್ಷಿಣಕನ್ನಡಜಿಲ್ಲೆಯಿಂದ ಬರಿ ಕೈ ಬೀಸಿಕೊಂಡು ಬಂದಿದ್ದು ಕಲ್ಲೂರಿನ ದೇವಸ್ಥಾನದಲ್ಲಿ ಪೂಜಾರಿಯಾಗಿ ನಿಂತು, ಭಗವಂತನ ವಿಶೇಷಾನುಗ್ರಹದಿಂದ ಪ್ರಭಾವಶಾಲಿಯಾಗಿ ಶ್ರೀಮಂತ ಸ್ಥಿತಿಗೆ ಏರಿದ್ದರು. ದೇವರ ಆ ಉಪಕಾರವನ್ನು ನಿತ್ಯವೂ ಸ್ಮರಿಸಿ ಕೃತಜ್ಞತೆ ಸಲ್ಲಿಸಲೊ ಎಂಬಂತೆ ಅವರು ಅನಿವಾರ್ಯವೊದಗಿದಾಗ ಹೊರತು ಉಳಿದೆಲ್ಲ ದಿನಗಳಲ್ಲಿಯೂ ತಪಪ್ಪೆ ಗುಡಿಗೆ ಬಂದು ದರ್ಶನ ಕೊಟ್ಟೂ ಪಡೆದೂ ಹೋಗುತ್ತಿದ್ದುದು ವಾಡಿಕೆ. ದೇವರು ಅವರೊಡನೆ ಗೃಹಕೃತ್ಯದ ಸಮಸ್ಯೆಗಳ ವಿಚಾರವಾಗಿ ಒಮ್ಮೊಮ್ಮೆ ಸಂವಾದ ನಡೆಸುತ್ತಿದ್ದನೆಂದೂ ಜನರು ಹೇಳುತ್ತಿದ್ದರು! ವಿವಾದಗಳನ್ನೂ ಮಂಜಭಟ್ಟರ ಮುಖೇನ ಇತ್ಯರ್ಥಪಡಿಸುತ್ತಿದ್ದನಂತೆ! ಹಾಗೆ ಇತ್ಯರ್ಥವಾಗಿದ್ದ ಎಷ್ಟೋ ವಿವಾದಗಳು ಮಂಜಭಟ್ಟರಿಗೇ ಸಂಬಂಧಪಟ್ಟವುಗಳಾಗಿ ಇರುತ್ತಿದ್ದುದರಿಂದ ಅವರು ಬಹುಬೇಗನೆ ಪುಣ್ಯವಂತರಾಗಿದ್ದರು!

ಸುಮಾರು ಎಪ್ಪತ್ತು ಎಪ್ಪತ್ತೈದರ ಅವರು ಅಷ್ಟೇನೂ ಎತ್ತರವಾಗಿರದೆ ತುಂಬ ದಪ್ಪವಾಗಿದ್ದರು. ಸುಪ್ರಸಿದ್ಧವಾಗಿದ್ದ ಅವರ ಜುಗ್ಗುತನ ಉಟ್ಟ ಬಟ್ಟೆಬರೆಗಳಲ್ಲಿ ತೋರುತ್ತಿದ್ದರೂ ಊಟ ತಿಂಡಿ ಫಳಾರಗಳವರೆಗೆ ಅದು ವ್ಯಾಪಿಸಿರಲಿಲ್ಲವೆಂಬುದನ್ನು ಅವರ ಸುಪುಷ್ಟಕಾಯ ಸಾರುತ್ತಿತ್ತು. ಕೊಳಕಾಗಿದ್ದ ಒಂದು ಮಡಿ ಪಾಣಿಪಂಚೆಯನ್ನು ಮೊಳಕಾಲಿನವರೆಗೆ ಕಚ್ಚೆ ಹಾಕಿದ್ದು, ಅವರ ಡೊಳ್ಳು ಹೊಟ್ಟೆಯೂ ನರೆತ ಕೂದಲು ತುಂಬಿದ್ದ ವಕ್ಷಸ್ಥಲವೂ ಜನಿವಾರ ವಿನಾ ಬತ್ತಲೆಯಾಗಿದ್ದುವು.

ಅವರು ಪ್ರವೇಶಿಸಿದೊಡನೆ ಅಲ್ಲಿ ನೆರೆದಿದ್ದವರ ಮಾತುಕತೆಯೆಲ್ಲ ನಂತು ನಿಃಶಬ್ದವಾಯ್ತು; ಗರ್ಭಗುಡಿಯಲ್ಲಿ ಜೋಯಿಸರು ಮೃದುಸ್ವರದಲ್ಲಿ ಹೇಳಿಕೊಡುತ್ತಿದ್ದ ಮಂತ್ರಘೋಷವೂ ಅಸ್ಪಷ್ಟ ಮಧುರವಾಗಿ ಕೇಳಿಸತೊಡಗಿತು. ಮೂಲೆಯಲ್ಲಿ ಕಣ್ಣು ಸೆಳೆಯುವಂತೆ ನಿಂತಿದ್ದ ತೋಟಾ ಕೋವಿಯನ್ನು ದುರುದುರನೆ ನೋಡಿ "ಯಾರದ್ದೊ ಅದು?"

ಎಂದು ಐತಾಳನ್ನು ಕೇಳಿದರು. "ಬೆಟ್ಟಳ್ಳಿ ದೇವಯ್ಯಗೌಡರದ್ದು." ಎಂದು ಐತಾಳ ಪಿಸುದನಿಯಲ್ಲಿಯೆ ಉತ್ತರಿಸಲು, ಮಂಜಭಟ್ಟರು ನೇರವಾಗಿ, ಆದರೆ ಅತ್ಯಂತ ಸಾವಾಕಾಶವಾಗಿ, ದೇವಯ್ಯ ಕುಳಿತಿದ್ದೆಡೆಗೆ ಚಲಿಸಿದರು. ಅವರು ಸಮೀಪಿಸುತ್ತಿರುವುದನ್ನು ಕಂಡು ಮುಕುಂದಯ್ಯ ಎದ್ದುನಿಂತು ಕೈಮುಗುದನು. ಆದರೆ ದೇವಯ್ಯ ಪದ್ಮಾಸನ ಹಾಕಿ ಕುಳಿತಿದ್ದವನು ಹಾಗೆಯೆ "ನಮಸ್ಕಾರ ಸಾಹುಕಾರರಿಗೆ!" ಎಂದೆನೆಷ್ಟೆ.

ಅದನ್ನು ಚೆನ್ನಾಗಿ ಗಮನಿಸಿದ ಮಂಜಭಟ್ಟರು ತಮ್ಮ ಅಸಮಾಧಾನವನ್ನು ಒಂದಿನಿಂತೂ ಹೊರಗೆಡಹದೆ ಹುಸಿನಗು ನಗುತ್ತಾ ಮೂದಲಿಕೆಯ ದನಿಯಿಂದ "ಓಹೋಹೋ! ಏನು ದ್ಯಾವಣ್ಣನ ಸವಾರಿ ದೇವಸ್ಥಾನದವರೆಗೂ ಚಿತ್ತೈಸಿದೆಯೆಲ್ಲಾ!.... ಕಲ್ಲಯ್ಯ ಬಂದಿಲ್ಲೇನೋ? ಹುಷಾರಾಗಿದ್ದಾನಷ್ಟೆ?" ಎಂದರು.

ಬ್ರಾಹ್ಮಣರಾದ ಅವರು ಶೂದ್ರನಾದ ತನ್ನನ್ನು 'ದೇವಯ್ಯ' ಎಂದು ಸಂಬೋಧಿಸುವುದಕ್ಕೆ ಬದಲಾಗಿ, ತಮ್ಮ ಮೇಲುತನವನ್ನೂ ಹೆಚ್ಚುಗಾರಿಕೆಯನ್ನೂ ತಿಕ್ಕಿ ಉಜ್ಜಿ ತನ್ನ ಮನಸ್ಸಿಗೆ ತರುವ ಉದ್ದೇಶದಿಂದಲೆ ಕೀಳುಜನರನ್ನು ಕರೆಯುವ ರೀತಿಯಲ್ಲಿ 'ದ್ಯಾವಣ್ಣ' ಎಂದುದನ್ನೂ, ಆ ಪ್ರಾಂತದಲ್ಲೆಲ್ಲ ದೊಡ್ಡ ಮನುಷ್ಯರೆಂದು ಸಂಭಾವಿರಾಗಿದ್ದು ಹೆಚ್ಚು ಕಡಮೆ ಅವರಷ್ಟೆ ವಯಸ್ಕರಾಗಿದ್ದು ತನ್ನ ತಂದೆಯನ್ನೂ ಗೌರವಸೂಚಕ ಬಹುವಚನದಿಂದ 'ಕಲ್ಲಯ್ಯಗೌಡರು' 'ಹುಷಾರಾಗಿದ್ದಾರೆಯೆ?' ಎನ್ನದೆ 'ಕಲ್ಲಯ್ಯ' 'ಹುಷಾರಾಗಿದ್ದಾನೆ?' ಎಂದು ಏಕವಚನದಿಂದಲೆ ಮಾತನಾಡಿಸಿದುದನ್ನೂ ಗಮನಿಸಿದ ದೇವಯ್ಯನ ಆತ್ಮಗೌರವ ಸೆಟೆದು ನಿಂತು, 'ಸುಳ್ಳಾದರೂ ಚಿಂತೆಯಿಲ್ಲ ಈ ಹಾರುವನಿಗೆ ಸರಿಯಾಗಿಯೆ ಉತ್ತರ ಹೇಳುತ್ತೇನೆ' ಎಂದು ನಿಶ್ಚಯಿಸಿ ಲಘುವಾಗಿ ನಗುತ್ತಾ ಹೇಳಿದನು; "ಯಾರು? ಹಳೇಪೈಕದ ಕಲ್ಲನಾ? ಅಂವ ಕಳ್ಳಬಗನಿ ಕಳ್ಳು ಇಳಿಸಾಕೆ ಕಾಡಿಗೆ ಹೋಗಿರಬೇಕು!"

"ಅಲ್ಲ, ಮಾರಾಯಾ; 'ನಿನ್ನ ಅಪ್ಪಯ್ಯ ಕಲ್ಲಯ್ಯಗೌಡರು ಹುಷಾರಾಗಿದ್ದಾರೆಯೆ?' ಅಂತ ಕೇಳಿದ್ದು.... ಏನೋ ನಾವು ಹುಡುಗರಾಗಿದ್ದಾಗಿನಿಂದ ನಮ್ಮಿಬ್ಬರದ್ದೂ ಪರಿಚಯ; ಏಕವಚನದಲ್ಲೇ ಮಾತಾಡಿಸೋದು ರೂಢಿಯಾಗಿ ಬಿಟ್ಟಿದೆ. ಈಗಿನ ಹುಡುಗರಿಗೆ ಅದೆಲ್ಲಾ ಹಿಡಿಸೋದಿಲ್ಲ, ಅರ್ಥವಾಗೋದಿಲ್ಲಾ. ಅವಮಾನವಾಯ್ತು ಅಂತಾ ತಿಳಿಕೋತಾರೆ...." ಸ್ವಲ್ಪ ಅಪ್ರತಿಭರಾದ ಮಂಜಭಟ್ಟರು ಕ್ಷಮಾಯಾಚನೆಯ ಭಂಗಿಯಲ್ಲಿ ಹೇಳಿದ್ದರೂ ದೇವಯ್ಯ ತನ್ನ ಮುನ್ನಿನ ಸಂಕಲ್ಪವನ್ನು ಕೈಬಿಡದೆ ಮುಂದುವರಿದನು;

"ಅಪ್ಪಯ್ಯನಾ?.... ನಾನು ಏನೋ ಅಂತಿದ್ದೆ!.... ತಪ್ಪಾಯ್ತು!.... ಅವರೂ ಮೇಗರೊಳ್ಳಿ ಮಿಷನ್ ಸ್ಕೂಲಿಗೆ ಹೋದರು. ರೆವರೆಂಡ್ ಲೇಕಹಿಲ್ ದೊಡ್ಡ ಪಾದ್ರಿ ಬರ್ತಾರಂತೆ, ಉಪದೇಶಿ ಜೀವರತ್ನಯ್ಯ ಹೇಳಿದ್ದರು. 'ಬ್ರಾಹ್ಮಣ ಕೂಣಿಯಲ್ಲಿ ಶೂದ್ರಮೀನು' ಅಂತಾ ಹರಿಕಥೆ ಮಾಡ್ತಾರಂತೆ...." ಅಷ್ಟರಲ್ಲಿ....

ಗಂಟೆ ಜಾಗಟೆ ಸದ್ದಾಗಿ ಪೂಜೆ ಪ್ರಾರಂಭವಾಗುವ ಸೂಚನೆಯ ತಮಗೊಂದು ಸದವಕಾಶ ನೆವವಾಯಿತೆಂಬಂತೆ ಮಂಜಭಟ್ಟರು ನಿರ್ದಾಕ್ಷಿಣ್ಯವಾಗಿ ಸಟಕ್ಕನೆ ತಿರುಗಿ ಬ್ರಾಹ್ಮಣ ಸಮುದಾಯದತ್ತ ನಡೆದು ಗರ್ಭಗುಡಿ ಪ್ರವೇಶಮಾಡಿದರು.

ಪೂಜೆಯ ಶಾಸ್ತ್ರವೆಲ್ಲ ಪೂರೈಸಿ, ಬ್ರಾಹ್ಮಣ ಮಹನೀಯರ ಮತ್ತು ಮಹಿಳೆಯರ ನಡುವೆ ಮಂಗಳಾರತಿಯ ತಟ್ಟೆ ಸಂಚರಿಸಿ, ತೀರ್ಥಪ್ರಸಾದಗಳ ವಿನಿಯೋಗವಾದ ಮೇಲೆ, ಶೂದ್ರಸಮುದಾಯಕ್ಕೆ ಅದರ ಪ್ರಯೋಗವಾಗುತ್ತಿತ್ತು. ಮಂಗಳಾರತಿ ತನ್ನ ಸಮೀಪಕ್ಕೆ ಬಂದೊಡನೆ, ಚೆಲುವಯ್ಯನನ್ನು ತೊಡೆಯ ಮೇಲೆ ಕೂರಿಸಿಕೊಂಡು ಕುಳಿತಿದ್ದ ರಂಗಮ್ಮಗೆ ಮೈಮೇಲೆ ಬಂದ ಹಾಗೆ ಆಗಿ ಸ್ವಚ್ಛವಾದ ಸಾಹಿತ್ಯ ಭಾಷೆಯಲ್ಲಿ ಎಂಬಂತೆ ಗದ್ಗದವರಿಸಿ ಪ್ರಾರ್ಥಿಸತೊಡಗಿದಳು; ಅವಳ ದೃಷ್ಟಿ ಒಮ್ಮೆ ಗರ್ಭಗುಡಿಯ ಕಡೆಗೂ ಒಮ್ಮೆ ತೊಡೆಯ ಮೇಲಿದ್ದ ತಂಗಿಯ ಮಗನ ಕಡೆಗೂ ಹೊರಳಿದಂತಾಗಿ, ನೋಡುವವರಿಗೆ ಒಮ್ಮೆ ಅವಳು ದೇವರನ್ನು ಸಂಬೋಧಿಸುವಂತೆ ತೋರಿದರೆ, ಮತ್ತೊಮ್ಮೆ ಚೆಲುವಯ್ಯನನ್ನು ಕುರಿತು ಹೇಳುತಿದ್ಆಳೆಯೋ ಎನ್ನಿಸುವಂತಿತ್ತು. “ಏನಂತೆ?” “ಯಾಕಂತೆ?” “ಅಳುತ್ತಾಳಲ್ಲಾ ಯಾಕೆ?” “ಏನು ಹೇಳುತ್ತಿದ್ದಾಳೆ?” “ಯಾರು ಅದು?” ಎಂಬ ಗುಜುಗುಜು ಪ್ರಶ್ನೆಗಳೆದ್ದಂತೆಯೆ “ಅವಳು ಹುಚ್ಚು ಹೆಗ್ಗಡ್ತಿಯಂತೆ!” “ತಿರುಪತಿಗೆ ಹೋಗಿ ಸತ್ತು ಹೋದ ಹೆಗ್ಗಡೆಯ ಹೆಂಡ್ತಿಯಂತೆ!” “ಏಳೆಂಟು ವರ್ಷಗಳಿಂದ, ಪಾಪ, ದುಃಖದಲ್ಲಿ ನವೆದೂ ನವೆದೂ ಬುದ್ಧಿಯೆ ಕೆಟ್ಟಿದೆಯಂತೆ!” “ಏನೂ ಇಲ್ಲ; ಅವಳಿಗೆ ಆಗಾಗ್ಗೆ ಹೀಗೆ ಮೈಮೇಲೆ ಬರುವುದು ವಾಡಿಕೆಯಂತೆ!” “ಅವಳ ತೊಡೆಯ ಮೇಲಿರುವ ಕೂಸನ್ನಾದರೂ ಎತ್ತಿಕೊಳ್ಳಬಾರದೇ? ಹುಚ್ಚಿನ ಭರದಲ್ಲಿ ಏನಾದರೂ ಮಾಡಿಬಿಟ್ಟರೆ ಅದಕ್ಕೆ?” “ಹೌದು, ಅದನ್ನೇ ನೋಡುತ್ತಿದೆ ಆಗಾಗ್ಗೆ!” “ಅರೆ! ಎಂಥ ಗ್ರಂಥಭಾಷೆಯಲ್ಲಿ ಹೇಳುತ್ತಿದ್ದಾಳೆ!” “ಯಾವ ಜನ್ಮದಲ್ಲಿ ಏನಾಗಿದ್ದಳೋ ಏನು ಕಲಿತಿದ್ದಳೋ ಯಾರಿಗೆ ಗೊತ್ತು?” “ಅಯ್ಯೋ! ನಾನೆ ಕಂಡಿದ್ದುಂಟು: ಒಂದು ಸೆಟ್ಟರ ಹೆಂಗಸು ಉಡುಪಿಯಲ್ಲಿ ಮೈಮೇಲೆ ಬಂದಾಗ ಸಂಸ್ಕೃತದಲ್ಲಿ ಶ್ಲೋಕ ಹೇಳಿತ್ತಲ್ಲಾ?” ಎಂಬ ನಾನಾ ರೀತಿಯ ಪ್ರಶ್ನೆಗಳೂ ಉತ್ತರಗಳೂ ವ್ಯಾಖ್ಯಾನಗಳೂ ಎದ್ದುವು. ಆದರೆ ರಂಗಮ್ಮನ ಆರ್ತವಾಣಿಯ ಅರ್ಥ ಮತ್ತು ಅದರ ಭಾವತೀಕ್ಷ್ಣತೆ ತನ್ನ ತಾಯಿಯ ಪಕ್ಕದಲ್ಲಿಯೆ ಕುಳಿತು ಕಂಬನಿಗರೆದು ಆಲಿಸುತ್ತಿದ್ದ ಧರ್ಮುವಿಗಾದಷ್ಟು ಮತ್ತಾರಿಗೂ ಆಗಲಿಲ್ಲ.

ತಾಯಿ ಕೈಮುಗಿದುಕೊಂಡು ಕಣ್ಣೀರು ಸುರಿಸುತ್ತಾ ಹೇಳುತ್ತಿದ್ದಳು; “ಸ್ವಾಮೀ, ನಾನೇನು ತಪ್ಪು ಮಾಡಿದೆ? ನನಗೇಕೆ ಈ ಶಿಕ್ಷೆಕೊಟ್ಟೆ? ನಿನ್ನ ದರ್ಶನಕ್ಕೆ ಬಂದ ನನ್ನ ಸ್ವಾಮಿಯನ್ನೇಕೆ ಅಪಹರಿಸಿಬಿಟ್ಟೆ? ನನ್ನ ಕಂದನನ್ನೇಕೆ ಅನಾಥನನ್ನಾಗಿ ಮಾಡಿಬಿಟ್ಟೆ? ಎಷ್ಟು ವರುಷವಾಯ್ತು, ನನ್ನ ಜೀವಕ್ಕೆ ಬೆಂಕಿಯಿಟ್ಟು? ಇನ್ನೂ ಉರಿಯುತ್ತಿದೆಯಲ್ಲಾ ಆ ಸೂಡು! ನಿನ್ನ ಕರುಣಾಜಲದಿಂದ ಅದನ್ನು ನಂದಿಸಬಾರದೇ, ಸ್ವಾಮಿ, ಪರಮಾತ್ಮಾ, ಲೋಕೈಕನಾಥಾ, ಕರುಣಾಸಿಂಧೂ?....” ಇದ್ದಕ್ಕಿದ್ದ ಹಾಗೆ ಗರ್ಭಗುಡಿಯ ಕಡೆಗಿದ್ದ ದೃಷ್ಟಿಯನ್ನು ತೊಡೆಯ ಮೇಲಿದ್ದ ಚೆಲುವಯ್ಯನ ಕಡೆಗೆ ತಿರುಗಿಸಿ, ಬಹುವಚನದಿಂದ ಸಂಭೋದಿಸತೊಡಗಿದಳು; “ಸ್ವಾಮೀ, ನನ್ನನ್ನಲ್ಲಿಯೇ ಬಿಟ್ಟು ಇಲ್ಲಿಗೇಕೆ ಬಂದಿರಿ ನೀವೊಬ್ಬರೆ? ಜನ್ಮಜನ್ಮಗಳಲ್ಲಿ ಕೈಹಿಡಿದು ಕಾಪಾಡಿದ ನೀವು ಈ ಜನ್ಮದಲ್ಲೆಕೆ ಹೀಗೆ ಮಾಡಿದಿರಿ? ನನ್ನನ್ನೂ ಜೊತೆಯಲ್ಲಿ ಕರೆದುಕೊಂಡು ಬರಬಾರದಾಗಿತ್ತೇ? ನಿಮ್ಮ ಮನಸ್ಸು ಮುರಿಯುವಂಥ ಕೆಲಸ, ಸ್ವಾಮೀ, ನಾನೇನು ಮಾಡಿದೆ? ಹಗಲಿರುಳೂ ಇಂದು ಬರುತ್ತೀರಿ, ನಾಳೆ ಬರುತ್ತೀರಿ, ಆಗ ಬರುತ್ತೀರಿ, ಈಗ ಬರುತ್ತೀರಿ ಎಂದು ಅನ್ನ ನೀರು ಬಿಟ್ಟು, ಕಣ್ಣೀರಿನಲ್ಲಿ ಮಿಂದು, ಸಂಕಟಗಳಲ್ಲಿ ಬೆಂದು, ಎಂಟು ಹತ್ತು ವರ್ಷಗಳ ಆದುವಲ್ಲಾ, ಸ್ವಾಮೀ, ಸ್ವಾಮೀ, ಸ್ವಾಮೀ, ನಿಮ್ಮ ಪಾದ ಹಿಡಿದುಕೊಂಡಿದ್ದೇನೆ, ಸ್ವಾಮೀ, ಕೈಬಿಡಬೇಡಿ, ಬಿಡಬೇಡಿ, ನಾನಿನ್ನು ತಡೆಯಲಾರೆ!”

ಇದ್ದಕ್ಕಿದ್ದ ಹಾಗೆ ತನ್ನ ಅವ್ವ ತನ್ನ ತೊಡೆಯ ಮೇಲಿದ್ದ ಶಿಶು ಚೆಲುವಯ್ಯನ ಎರಡು ಪಾದಗಳನ್ನು ತನ್ನೆರಡು ಕೈಗಳಿಂದ ಹಿಡಿದುಕೊಂಡಿರುವುದನ್ನು ಕಂಡ ಧರ್ಮು ಬೆಟ್ಟಳ್ಳಿ ಚಿಕ್ಕಮ್ಮಗೆ “ಚಿಗಮ್ಮಾ ಚಿಗಮ್ಮಾ! ತಮ್ಮನ್ನ

ಕರಕೋ! ತಮ್ಮನ್ನ ಕರಕೋ! ಅಂವ ಅಳ್ತಾನೆ!" ಎಂದು ಗಾಬರಿಯಿಂದಲೆ ಕೆಳದನಿಯಲ್ಲಿ ಕೂಗಿ ಹೇಳಿದನು. ಅಷ್ಟರಲ್ಲಿ ಮೊದಲಿನಿಂದಲೂ ತುಸು ಕಳವಳದಲ್ಲಿಯೆ ಇದ್ದ ದೇವಮ್ಮನೂ ತನ್ನ ಅಕ್ಕನ ಕೈಗಳು ತನ್ನ ಮಗನ ಕಾಲುಗಳನ್ನು ಬಿಗಿಯಾಗಿ ಹಿಡಿದುಕೊಂಡಿದ್ದನ್ನು ಗಮನಿಸಿದಳು. ತಟಕ್ಕನೆ ಮಗುವನ್ನು ಅಕ್ಕನ ತೊಡೆಯ ಮೇಲಿಂದ ಎತ್ತಿಕೊಳ್ಳುವ ಮನಸ್ಸಿದ್ದರೂ ಹಾಗೆ ಮಾಡುವುದು ಚೆನ್ನಾಗಿರುತ್ತದೆಯೋ? ಇಲ್ಲವೊ? ಅಕ್ಕನ ವಿಚಾರದಲ್ಲಿ ಚಡಪಡಿಸುತ್ತಿದ್ದವಳು, ಧರ್ಮು ಕೂಗಿದೊಡನೆ, ಅಳತೊಡಗಿದ್ದ ಮಗುವನ್ನು ಅಪಾಯದಿಂದ ರಕ್ಷಿಸುವಂತೆ ಎತ್ತಿಕೊಂಡೆಬಿಟ್ಟಳು.

ಅದನ್ನು ಕಂಡ ರಂಗಮ್ಮ ಮಾತನಾಡುವುದನ್ನೂ ಅಳುವುದನ್ನೂ ನಿಲ್ಲಿಸಿ, ಮುಗುಳು ನಗುತ್ತಾ, ನಿಟ್ಟುಸಿರೆಳೆದು, ಫಕ್ಕನೆ ಎಚ್ಚರಗೊಂಡವಳಂತೆ ತನ್ನನ್ನು ತಾನು ಹಿಡಿತದಲ್ಲಿಟ್ಟುಕೊಂಡು, ಮೌನವಾಗಿ ಕಣ್ಣುಮುಚ್ಚಿ ಕುಳಿತು ಬಿಟ್ಟಳು.

ನೆರೆದಿದ್ದವರೆಲ್ಲರೂ ಯಾವುದೊ ಒಂದು ಅರ್ಥವಾಗದ ಅತೀಂದ್ರಿಯ ಭೀಷೆಯಿಂದ ಪಾರಾದವರಂತೆ ದೀರ್ಘವಾಗಿ ಸುಯ್ದು, ಸತ್ಯನಾರಾಯಣ ವ್ರತದ ಕಥೆಯನ್ನು ಹೇಳಲು ಸಿದ್ಧವಾಗುತ್ತಿದ್ದ ಜೋಯಿಸರ ಪೀಠದ ಕಡೆಗೆ ಮುಖಮಾಡಿ ಕುಳಿತರು.

ಜೋಯಿಸರು ಪುರಾಣ ಪ್ರಾರಂಭವಾದ ಸ್ವಲ್ಪ ಹೊತ್ತಿನಲ್ಲಿಯೆ ನೆರೆದಿದ್ದವರಲ್ಲಿ ಅಲ್ಲೊಬ್ಬರು ಇಲ್ಲೊಬ್ಬರು ಶ್ರೋತಭಕ್ತರ ಗಮನ ಸೆಳೆಯಬಾರದೆಂದು ಆದಷ್ಟು ಪ್ರಯತ್ನದಿಂದ ಮೆಲ್ಲಗೆ ಎದ್ದು ಹೊರಗೆ ಜುಗುಣತೊಡಗಿದರು. ದೇವಯ್ಯನೂ ಮುಕುಂದಯ್ಯನ ಕಿವಿಯಲ್ಲಿ "ಈ ಅಜ್ಜಿ ಪುರಾಣ ಯಾರು ಕೇಳ್ತಾರೊ? ಕೂತುಕೂತು ಕಾಲೆಲ್ಲ ಮರಗಟ್ಟಿ ಹೋಗಿದೆ." ಎಂದು ಹೇಳಿ, ಎದ್ದು ಮೂಲೆಯಲ್ಲಿ ಒರಗಿಸಿದ್ದ ತೋಟಾ ಕೋವಿಯನ್ನು ಗಾಡಿಯಲ್ಲಿ ಇಡುವ ಸಲುವಾಗಿ ತೆಗೆದುಕೊಂಡು, ಹೊರಗೆ ಹೋದನು. ಅತ್ತ ಇತ್ತ ನೋಡಿ ಮುಕುಂದಯ್ಯನೂ ಅವನನ್ನು ಹಿಂಬಾಲಿಸಿದನು.

ಇವರಿಬ್ಬರು ಗಾಡಿ ಬಿಟ್ಟಿದ್ದ ಅರಳಿಕಟ್ಟೆಯ ಬಳಿಗೆ ಹೋಗುವಷ್ಟರಲ್ಲಿ ಶ್ರೋತೃಭಕ್ತರ ಏಕಾಗ್ರತೆಗೆ ಒಂದಿನಿಂತೂ ಭಂಗಬಾರದಂತೆ ಅವರ ಗಮನವನ್ನು ಒಂದು ಸ್ವಲ್ಪವೂ ಸೆಳೆಯದ ಧರ್ಮಶ್ರವಣರಂಗದಿಂದ ಇವರಿಗಿಂತ ಮೊದಲೇ ಪಾರಾಗಿ ಬಂದಿದ್ದ ಧರ್ಮು ಕಾಡು ತಿಮ್ಮು ಮೂವರೂ ಹೊಳೆಯ ಕಡೆಯಿಂದ ಓಡಿ ಬರುತ್ತಿದ್ದುದು ಕಾಣಿಸಿತು.

"ನೀವೇನು ಹೊಳೇಲಿ ಆಟ ಆಡಾಕೆ ಬಂದಿದ್ದೇನ್ರೋ? ದೇವರ ಕಥೆ ಕೇಳಾದುಬಿಟ್ಟು ಯಾಕ್ರೋ ಬಂದ್ರಿ?" ಎಂದು ಮುದುಕಯ್ಯ ಸ್ವಲ್ಪ ವಿನೋದಕ್ಕಾಗಿ ಗದರಿಸಿದನು.

"ಮತ್ತೆ ನೀವೂ ಬಂದೀರಲ್ಲಾ? ನೀವ್ಯಾಕೆ ಹರಿಕಥೆ ಕೇಳೋದು ಬಿಟ್ಟು ಬಂದೀರಿ?" ಎಂದು ಪ್ರತಿಯಾಗಿ ಅಣಕಿಸಿದನು ಕಾಡು.

"ಸತ್ಯನಾರಾಯಣ ಕಥೆ ಕೇಳದಿದ್ದವರಿಗೆ ಹಾರುವರು ಊಟ ಹಾಕಾದಿಲ್ಲ." ಮುಕುಂದಯ್ಯ ಪರಿಹಾಸ್ಯ ಮಾಡಿದನು.

“ಹಾಂಗಾರೆ ನಿಮಗೂ ಹಾಕಾದಿಲ್ಲ!” ತಿಮ್ಮ ಪಡಿನುಡಿದನು.

“ನಮಗೇನು ಆ ಹಾರುವರ ಸೀಊಟ ಬೇಕಾಗಿಲ್ಲ. ನಾವು ಹಂದೀ ಉಪ್ಪು ತುಂಡು ಸರ್ಮ್‌ನಾಗಿ ಹೊಟ್ಟೆಮೀರಿ ಹೊಡಕೊಂಡೇ ಬಂದೀವಿ!” ತೋಟಾಕೋವಿಯನ್ನು ಗಾಡಿಯೊಳಗಿಡಲು ಬಚ್ಚನಿಗೆ ಕೊಡುತ್ತಾ ಮೂದಲಿಸಿದನು. ದೇವಯ್ಯ, “ನನಗೆ ಗೊತ್ತೇ ಇತ್ತು. ಜೋಯಿಸರ ಅಜ್ಜೀಕಥೇ ಎಲ್ಲಾ ಮುಗಿದು, ಆ ಹಾರುವರಿಗೆಲ್ಲಾ ಮೊದಲು ಸಂತರ್ಪಣೆ ಮಾಡಿಸಿ, ಆಮೇಲೆ ಉಳಿದಿದ್ದ ಅವರ ಎಂಜಲು ಪಂಜಲು ಎಲ್ಲಾ ನಮಗೆ ಹಾಕಬೇಕಾದ್ರೆ ಇವತ್ತು ನಾಲ್ಕು ಗಂಟೇನ ಆಗ್ತದೆಯೋ? ಐದಾದ್ರೂ ಆಯ್ತೇ!.... ಅಷ್ಟು ಹೊತ್ತಿನ ತನಕಾ ನಿಮ್ಮ ಹೊಟ್ಟೆಹುಳ ಎಲ್ಲಾ ನಿಗರಬಡ್ದೆ ಕಂಡಿರ್ತವೆ!”

“ನಮ್ಮ ಹೊಟ್ಟೇನು ತುಂಬಿದೆ. ನಮಗೂ ಸಿಗ್ತು!” ಎಂದನು ಧರ್ಮು, ದೇವಯ್ಯನ ಮೂದಲಿಕೆಯನ್ನು ಮೂದಲಿಸಿ.

“ಯಾರು ಕೊಟ್ರೋ? ಏನು ತಿಂದಿರೋ? ನಿಮ್ಮ ದೆಸೆಯಿಂದ ಆಗಾದಿಲ್ಲ!” ಮುಕುಂದಯ್ಯ ಬೆರಗಾಗಿ ಪ್ರಶ್ನಿಸಿದನು.

ಧರ್ಮು ಹೊಳೆಯ ದಂಡೆಯಲ್ಲಿ ಕೆಳಗಡೆ ತುಸು ದೂರದಲ್ಲಿದ್ದ ಒಂದು ಕಲ್ಲುಮಂಟಪದ ಕಡೆಗೆ ಕೈತೋರಿಸುತ್ತಾ “ಅಲ್ಲೊಬ್ಬ ಸನ್ನೇಸಿ ಗಡ್ಡದಯ್ಯ ಇದಾನಲ್ಲಾ ಅಂವ ಕೊಟ್ಟದ್ದು. ಏಂಥೆಂಥ ಹಣ್ಣು ಕೊಟ್ಟ? ನಾವಿದೂವರೆಗೂ ತಿಂದೇ ಇರಲಿಲ್ಲ, ಕಂಡೇ ಇರಲಿಲ್ಲ, ಅಂಥಂಥಾ ಹಣ್ಣು ಕೊಟ್ಟ!” ಎಂದು ಇನ್ನೂ ಮುಂದುವರಿಯುವದರಲ್ಲಿದ್ದನು.

“ಸುಳ್ಳೋ? ಬದ್ದೋ?” ಮುದುಕಯ್ಯ ನಡುವೆ ಕೇಳಿದನು.

ಧರ್ಮುವನ್ನು ಸಮರ್ಥಿಸುವ ಆತುರದ ದನಿಯಲ್ಲಿ ತಿಮ್ಮ “ಹೌದು, ಚಿಕ್ಕಯ್ಯಾ, ಹೌದು! ಜೋಳಿಗೆಗೆ ಕೈಹಾಕ್ದ, ತೆಗೆದುಕೊಟ್ಟ! ಜೋಳಿಗೆಗೆ ಕೈಹಾಕ್ದ, ತಗದಕೊಟ್ಟ!....ನಮಗೆಲ್ಲ ನಕ್ಕು ನ್ಕು ಸಾಕಾಗುವ ಹಾಂಗೆ ಏನೇನೋ ತಮಾಸೆ ಮಾಡಿದ, ಹೇಳಿದ!.... ಬೇಕಾದರೆ ಮೂಸಿನೋಡು ನನ್ನ ಕೈನ.” ಎಂದು ಮುಕುಂದಯ್ಯನ ಮೂಗಿನ ಬಳಿಗೆ ಕೈಚಾಚಿದನು. ಅವರಾರೂ ಕೈ ಬಾಯಿ ತೊಳೆಯುವ ಗೋಜಿಗೆ ಹೋಗಿರಲಿಲ್ಲ; ಅಂಗಿ ಪಂಚೆಗಳ ಮೇಲೆ ಆ ಕೆಲಸ ನಿರ್ವಹಿಸಿದ್ದವು.

ಮೂಗಿಗೆ ಬಂದ ಹಣ್ಣಿನ ವಾಸನೆಗೆ ಮುಂಕುದಯ್ಯ ದಂಗು ಬಡಿದು ನಿಂತನು. ಹುಡುಗರು ಡೋಂಗೀ ಬಿಡುತ್ತಿದ್ದಾರೆಯೊ ಏನೋ ನೋಡಬೇಕೆಂದು ದೇವಯ್ಯ ಅವರೆಲ್ಲರ ಕೈಗಳನ್ನೂ ಮೂಸಿ ಮೂಸಿ ಹುಬ್ಬೇರಿಸಿ ಕಣ್ಣರಳಿಸಿ ಬೆರಗಾದನು.

ಕಲ್ಲೂರು ಗಡ್ಡದಯ್ಯನ ಪ್ರಸಿದ್ಧಿ ಕೋಣೂರು ಬೆಟ್ಟಳ್ಳಿಗಳಿಗೇನು ಗೊತ್ತಿರದ ವಿಚಾರವಾಗಿರಲಿಲ್ಲ. ಆದರೆ ಉಪದೇಶಿ ಜೀವರತ್ನಯ್ಯ ‘ನಮ್ಮ ಯೇಸುಸ್ವಾಮಿ ಎಂಥಂಥ ಅಧ್ಭುತ ಮಾಡಿ ತೋರಿಸಿದ್ದಾರೆ! ಅವರ ಮುಂದೆ ಇದೆಲ್ಲ ಏನು ಮಹಾ? ಹಾವಾಡಿಗರು, ದೊಂಬರು, ಯಕ್ಷಿಣಿಗಾರರು ಎಲ್ಲರೂ ಮಾಡಿ ತೋರಿಸ್ತಾರೆ!’ ಎಂದು ಅಪಹಾಸ್ಯ ಮಾಡಿದ್ದನಾದ್ದರಿಂದ ದೇವಯ್ಯ ಅದನ್ನು ಲಘುವಾಗಿ ಭಾವಿಸಿ ತಿರಸ್ಕರಿಸಿದನು. ಮುಕುಂದಯ್ಯನಿಗೆ ಸಾಧುಸನ್ಯಾಸಿಗಳ ವಿಷಯದಲ್ಲಿ ಹೆಚ್ಚು ಗೌರವಭಾವನೆಯಿದ್ದರೂ ಅವರಲ್ಲಿ ಮಂತ್ರ ಮಾಟ ಮಾಡುವ

ಮೋಸಗಾರರೂ ಇರುತ್ತಾರೆಂದು ಐಗಳು ಅನಂತಯ್ಯನಿಂದ ತಿಳಿದಿದ್ದನಾದ್ದರಿಂದ ಆ ವಿಷಯದಲ್ಲಿ ತಾನೆ ಮುಂದುವರಿದು ಪರಿಶೀಲಿಸುವ ಗೋಜಿಗೆ ಹೋಗಿರಲಿಲ್ಲ. ಆದರೆ ಇತ್ತೀಚೆಗೆ, ಹೂವಳ್ಳಿ ಚಿನ್ನಮ್ಮನ ಸಂಬಂಧದಲ್ಲಿ ತಾನು ಸಂಕಟಕ್ಕೆ ಸಿಕ್ಕಿಕೊಂಡ ಮೇಲೆ, ಕೈನೋಡಿಯೋ ಜಾತಕ ನೋಡಿಯೋ ಅಥವಾ ದಿವ್ಯದೃಷ್ಟಿಯಿಂದಲೋ ಭವಿಷ್ಯ ಹೇಳಬಲ್ಲ ಶಕ್ತಿಯುಂಟೆಂದು ಜನ ಹೇಳುತ್ತಿದ್ದ ಕಲ್ಲೂರ ಗಡ್ಡದಯ್ಯನ ಬಳಿಗೆ ಹೋಗಬೇಕೆಂದು ಮನಸ್ಸು ಅವನಲ್ಲಿ ಅಂಕುರಿಸಿತ್ತು. ಬೆಟ್ಟಬೆಳ್ಳಿಯವರು ಸತ್ಯನಾರಾಯಣವ್ರತಕ್ಕೆ ಕಲ್ಲೂರು ದೇವಸ್ಥಾನಕ್ಕೆ ಹೋಗುತ್ತಾರೆಂದು ತಿಳಿದುಬಂದಾಗ ತಾನೂ ಜೊತೆಗೂಡುತ್ತೇನೆಂದು ಅವನು ದೇವಯ್ಯನಿಗೆ ಹೇಳಿಕಳುಹಿಸಿದುದಕ್ಕೆ ಮುಖ್ಯಪ್ರೇರಣೆ ಗಡ್ಡದಯ್ಯನನ್ನು ನೋಡುವ ಮತ್ತು ಕೇಳುವ ಅವಕಾಶ ದೊರಕಬಹುದೆಂಬುದರಿಂದಲೇ ಒದಗಿತ್ತು. ಆದ್ದರಿಂದಲೆ ಅವನು ದೇವಯ್ಯನನ್ನೂ ಪುಸಲಾಯಿಸಿ ಕರೆದುಕೊಂಡು ಆ ಗಡ್ಡದಯ್ಯನಿದ್ದ ಕಲ್ಲುಮಂಟಪಕ್ಕೆ ಹೋದದ್ದು.

* * *

## ೪೧

ಕಲ್ಲೂರು 'ಗಡ್ಡದಯ್ಯ' ಯಾರು? ಏನು? ಎಂತು? ಯಾರಿಗೊಬ್ಬರಿಗೂ ಸರಿಯಾಗಿ ಗೊತ್ತಿರಲಿಲ್ಲ. ಸಂನ್ಯಾಸಿ, ಬೈರಾಗಿ, ಗೋಸಾಯಿ ಎಂಬ ಇತರ ಹೆಸರುಗಳಿಂದಲೂ ಅವನನ್ನು ಕರೆಯುತ್ತಿದ್ದರು, ತುಸು ಮೇಲ್ವರ್ಗದ ಜನರು. ಆದರೆ ಸಾಮಾನ್ಯರು ಅವನನ್ನು ಅವನನ್ನು ಕರೆಯುತ್ತಿದ್ದರು. 'ಗಡ್ಡ ದಯ್ಯ' ಎಂದೇ.

ಆತನ ವಿಚಾರವಾದ ಅನೇಕ ಊಹಾಪೋಹಗಳು ಮಾತ್ರ ಗಾಳಿಸುದ್ದಿಗಳಾಗಿ ಹಬ್ಬಿದ್ದುವು.

ಕೆಲವರು ಅವನು ತಲೆ ಮರೆಸಿಕೊಂಡಿರುವ ರಾಜಮನೆತನದವನು ಎಂದು ಹೇಳುತ್ತಿದ್ದರು. ಬಹುಶಃ ಆತನ ಆಳುತನ, ಮೈಕಟ್ಟು, ಎತ್ತರ, ನಯನಕಾಂತಿ, ವದನತೇಜಸ್ಸು, ವ್ಯಕ್ತಿಭಂಗಿ ಇವುಗಳನ್ನು ಗಮನಿಸಿದರೆ ಹಾಗೆ ಯೇ ಕಾಣುತ್ತಿತ್ತು. ಸೀಪಾಯಿದಂಗೆ ಎಂದು ವಿದೇಶೀಯ ಆಕ್ರಮಣಕಾರರು ಕರೆದ ಭಾರತದ ಪ್ರಪ್ರಥಮ ಸ್ವಾಂತಂತ್ರ್ಯ ಸಂಗ್ರಾಮಾನಾಂತರ ರಾಷ್ಟ್ರದ ಅನೇಕ ಎಡೆಗಳಲ್ಲಿ ಬ್ರಿಟಿಷರಿಂದ ಪಾರಾಗುವ ಪ್ರಯತ್ನಗಳು ನಡೆದುವು. ಆ ಪ್ರಯತ್ನದಲ್ಲಿ ಅನೇಕ ದೊಡ್ಡ ಸಣ್ಣ ರಾಜರುಗಳೂ ಪಾಳೆಪಟ್ಟುಗಳು ಪಾಲುಗೊಂಡು, ವಿದೇಶಿಯರ ರಾಜತಂತ್ರಕ್ಕೆ ಬಲಿಯಾದುವು. ಆ ಪಾಳೆಯಗಾರರು ಮತ್ತು ರಾಜಮನೆತನದವರಲ್ಲಿ ಶತ್ರುವಿಗೆ ಶರಣಾಗತವಾದ ಮತ್ತು ಸೆರೆಸಿಕ್ಕದ ಬಹುಮಂದಿ ನಾನಾ ರೀತಿಗಳಲ್ಲಿ ತಲೆಮರಿಸಿಕೊಂಡರು. ಹಾಗೆ ಅಡಗುವ ತಂತ್ರಗಳಲ್ಲಿ ಸನ್ಯಾಂಸಿ ಬೈರಾಗಿ ಗೋಸಾಯಿಗಳ ವೇಷದಲ್ಲಿ ಅವರ ಗುಂಪುಗಳಲ್ಲಿ ಸೇರಿಯೋ ಬಿಡಿಯಾಗಿಯೋ ಇದ್ದುಬಿಡುತ್ತಿದ್ದುದೂ ಒಂದಾಗಿತ್ತು. ಕೆಲವರಲ್ಲಿ 'ಗಡದ್ದಯ್ಯ'ನೂ ಅಂತಹನೊಬ್ಬನು ಎಂಬ ಪ್ರತೀತಿ ಹರಡಿತ್ತು.

ಮತ್ತೆ ಕೆಲವರು ಅವನನ್ನು ಯಾವುದೋ ಗುರುಪೀಠದ ಜಗದ್ಗುರುವಾಗಿದ್ದು, ಅದಕ್ಕೆ ಬೇಸತ್ತು ತ್ಯಜಿಸಿಬಂದವನು ಎಂದು ಹೇಳುತ್ತಿದ್ದರು. ತ್ಯಜಿಸಿ ಬಂದದ್ದಕ್ಕೂ ಪರಸ್ಪರ ವಿರುದ್ದವಾದ ಕಾರಣಗಳನ್ನು ಕೊಡುತ್ತಿದ್ದರು.

ನೀತಿಭ್ರಷ್ಟನಾದುದರಿಂದ ಓಡಿಸಲ್ಪಟ್ಟವನು ಎಂದು ಕೆಲವರು ಹೇಳಿದರೆ, ಸುತ್ತಮುತ್ತಲಿದ್ದ ನೀತಿಭ್ರಷ್ಟರನ್ನು ತಡೆಗಟ್ಟಲಾರದೆ, ಸಹಿಸಲಾರದೆ, ಅವರಿಂದ ಪಾರಾಗಿ ಬಂದವನು ಎಂದು ಇತರರು ಹೇಳುತ್ತಿದ್ದರು.

ಯಾವುದೋ ಕೊಲೆಯಲ್ಲಿ ಪಾತ್ರವಹಿಸಿ ತಲೆತಪ್ಪಿಕೊಂಡು ಬಂದಿರಬೇಕು ಎಂಬುದು ಮಂಜಭಟ್ಟರ ಊಹೆಯಾಗಿತ್ತು. ಅವನೆಂದಿಗೂ ಬ್ರಾಹ್ಮಣನಾಗಿರಲಾರ ಎಂಬುದೂ ಅವರ ಮತ್ತೊಂದು ಸಿದ್ಧಾಂತವಾಗಿತ್ತು. ಏಕೆಂದರೆ ಅವನಲ್ಲಿ ಬ್ರಾಹ್ಮಣದ ಬಹಿರ್ಲಾಂಛನಗಳಾವುವೂ ಇರಲಿಲ್ಲ.

ಅವನ ವಿಚಾರವಾಗಿ ಎಂತೊ ಅಂತೆಯೆ ಅವನ ಶಕ್ತಿ, ಮಹಾತ್ಮೆ, ದೌರ್ಜನ್ಯ, ದೌಷ್ಟ್ಯ, ದಯೆ, ದೈನ್ಯ, ಅನುಕಂಪೆ, ಉಪಕಾರ, ಕ್ರೌರ್ಯ, ಕಠೋರತೆ ಇತ್ಯಾದಿಗಳನ್ನು ಕುರಿತೂ ಪರಸ್ಪರ ವಿರುದ್ಧವಾದ ನಾನಾ ರೀತಿಯ ವದಂತಿಗಳು ಹಬ್ಬಿದ್ದುವು. ಕೆಲವರು, ಹುಟ್ಟಿನಿಂದಲೆ ಪ್ರಶಾಂತ ಸ್ವಭಾವದವರು, ಅವನನ್ನು ಮಹಾಯೋಗಿಶ್ವರನೆಂದೂ ಅಷ್ಟಸಿದ್ಧಿಗಳನ್ನೂ ಪಡೆದಿರುವ ಶಾಪಾನುಗ್ರಹ ಸಮರ್ಥನೆಂದೂ ವರ್ಣಿಸಿದರೆ; ಮತ್ತೆ ಕೆಲವರು ಜನ್ಮತಃ ನಿಂದಾಸ್ವಭಾವದವರು, ಅವನೊಬ್ಬ ಮಾಂತ್ರಿಕನೆಂದೂ, ದೆವ್ವ ಪಿಶಾಚಿಗಳನ್ನು ದುರ್ಮಂತ್ರದಿಂದ ವಶಪಡಿಸಿಕೊಂಡಿರುವನೆಂದೂ, ತನಗಿರುವ ಅದೃಶ್ಯವಾಗುವ ಶಕ್ತಿಯಿಂದ ಲಕ್ಷಣವಾಗಿರುವ ಹೆಣ್ಣುಗಳಿರುವಲ್ಲಿಗೆ ಪ್ರವೇಶಿಸಿ ಅವರ ಮಾನಾಪಹರಣ ಮಾಡುತ್ತಾನೆಂದೂ, ದುಃಶಕ್ತಿಗಳ ಸಹಾಯದಿಂದ ಪದಾರ್ಥಗಳನ್ನು ಕದ್ದು ತರಿಸಿ, ಜನರನ್ನು ದಂಗುಬಡಿಸಿ, ಅವರನ್ನು ಅವರರಿಯದಂತೆಯೆ ದೋಚುತ್ತಾನೆಂದೂ ಮಕ್ಕಳೊಡನೆ ಮಾತ್ರ ನೆಗಮಾತಾಡಿ ಅವರಿಗೆ ತಿನ್ನಲು ಹಣ್ಣು ಹಂಪಲುಗಳನ್ನು ಸೃಷ್ಟಿಸಿಯೆ ಕೊಡುತ್ತಾನೆಂದೂ ಮತ್ತೊಂದು ವದಂತಿ. ಅವನು ಕಲ್ಲೂರಿನ ಮನೆಗಳಲ್ಲಿ ಬ್ರಾಹ್ಮಣ ಶೂದ್ರರೆಂಬ ಭೇದವಿಲ್ಲದೆ ಅನನ್ ಭಿಕ್ಷೆ ಎತ್ತುತ್ತಿದ್ದುದು ಆಗೊಮ್ಮೆ ಈಗೊಮ್ಮೆ ಕಣ್ಣಿಗೆ ಬೀಳುತ್ತಿತ್ತದರೂ ಅದನ್ನು ತಾನು ಊಟ ಮಾಡದೆ ದನ ಕಾಯುವವರಿಗೋ ಹೊಳೆಯ ಮೀನುಗಳಿಗೊ ಬೀದಿ ನಾಯಿಗಳಿಗೋ ಹಾಕುತ್ತಿದ್ದನೆಂಬುದು ಅನೇಕರ ನಂಬುಗೆಯಾಗಿತ್ತು. ವಾಸ್ತವವಾಗಿ ಅವನು ತನಗೆ ಬೇಕಾದುದನ್ನೆಲ್ಲ ತನ್ನ ಯೋಗಶಕ್ತಿಯಿಂದಲೆ ಸೃಷ್ಟಿಸಿಕೊಂಡು ಭಕ್ಷಿಸುತ್ತಿದ್ದನಂತೆ! ತಾನಾರು ಏನು ಎಂಬ ಗುಟ್ಟು ಜನರಿಗೆ ತಿಳಿಯದಿರಲಿ ಎಂದೇ ಅವನು ಸಾಮಾನ್ಯನಂತೆ ತೋರಿಸಿಕೊಳ್ಳುವ ಸಲುವಾಗಿಯೆ ಅನ್ನ ಭಿಕ್ಷೆ ಎತ್ತುತ್ತಿದ್ದನಂತೆ!

ಇಂತಹ ಚಿತ್ರವಿಚಿತ್ರವಾದ ವದಂತಿಗಳನ್ನೆಲ್ಲ ಕೇಳಿದ್ದುದರಿಂದಲೆ ದೇವಯ್ಯ ಮುಕುಂದಯ್ಯ ಇಬ್ಬರೂ ತುಸು ಎಚ್ಚರಿಕೆಯಿಂದಲೆ, ಎದೆಡವ ಗುಟ್ಟುತಲೆ, ಕಲ್ಲು ಮಂಟಪದ ಸಮೀಪಕ್ಕೆ ಹೋಗಿದ್ದರು.

ಮುಂಗಾರಿನ ಮೊದಲ ಮಳೆಗಳಿಂದ ತುಸುವೆ ತುಂಬಿ ಬಂಡೆ ಗಳೆಡೆಯಡೆ ಹರಿಯುತ್ತಿದ್ದ ಹೊಳೆಯ ನೀರಿನ, ಮತ್ತು ಪಕ್ಕದಲ್ಲಿದ್ದ ಒಂದು ಮಹಾ ಅಶ್ವತ್ಥವೃಕ್ಷದ ಪರ್ಣಕೋಟಿಯ ಮರ್ಮರನಾದ ವಿನಾ ಸಂಪೂರ್ಣ ನಿಃಶಬ್ದವಾಗಿದ್ದ ಕಲ್ಲುಮಂಟಪ ನಿರ್ಜನವೂ ಆಗಿದ್ದಂತೆ ಭಾಸವಾಯಿತು, ಮೊದಲ ನೋಟಕ್ಕೆ ಬರಿಗಾಲಿನಲ್ಲಿದ್ದ ಮುಕುಂದಯ್ಯ ಮೆಟ್ಟು ಹಾಕಿಕೊಂಡಿದ್ದ ದೇವಯ್ಯನ ಕಡೆ ನೋಡಿ ಸನ್ನೆ ಮಾಡಲು ಅವನು ಮೆಟ್ಟುಗಳನ್ನು ಹಾಕಿಕೊಂಡಿದ್ದ ದೇವಯ್ಯನ ಕಡೆ ನೋಡಿ ಸನ್ನೆ ಮಾಡಲು ಅವನು ಮೆಟ್ಟುಗಳನ್ನು ಒಂದು ಮೆಟ್ಟಿನ ಬುಡದಲ್ಲಿ ಕಳಚಿಬಿಟ್ಟು ಹಿಂಬಾಲಿಸಿದನು. ನಿತ್ಯವೂ ಊದಿನಕಡ್ಡಿ ಹೊತ್ತಿಸುವ ಪ್ರದೇಶದಲ್ಲಿ ಸರ್ವದಾ ಎಂಬಂತೆ ಹೊಮ್ಮುತ್ತಿರುವ ಒಂದು ಪರಿಮಳ ಪವಿತ್ರತೆ ಮಂಟಪವನ್ನೆಲ್ಲ ವ್ಯಾಪಿಸಿತ್ತು. ಸಾಮಾನ್ಯವಾಗಿ ಊರಿನ ಸಮೀಪದಲ್ಲರಿವ ಹೊಳೆಯ ದಂಡೆಯ

ಕಲ್ಲುಮಂಟಪಗಳಂತಲ್ಲದೆ ಆ ಮಂಟಪ ನಿರ್ಮಲವಾಗಿ ಕಾನಿಸಿತು. ಮಂಟಪದ ಒಂದು ಮೂಲೆಯಲ್ಲಿ ಕಾಷಾಯಧಾರಿಯಾಗಿದ್ದ ಒಬ್ಬ ಮನುಷ್ಯ ಮೃಗಚರ್ಮಾಸನದ ಮೇಲೆ ಧ್ಯಾನಸ್ಥನಾಗಿದ್ದಂತೆ ನಿಶ್ಚಲಭಂಗಿಯಲ್ಲಿ ನಿಮೀಲಿತ ನೇತ್ರನಾಗಿ ಕಾಣಿಸಿಕೊಂಡನು. ಮುಕುಂದಯ್ಯ ತೀರ ಬಳಿಸಾರದೆ ಸ್ವಲ್ಪ ದೂರದಲ್ಲಿಯೆ ನಿಂತು ದೀರ್ಘದಂಡ ಪ್ರಣಾಮ ಮಾಡಿದನು. ದೇವಯ್ಯನಿಗೂ ಹಾಗೆಯೆ ಅಡ್ಡಬೀಳುವ ಮನಸ್ಸಾದರೂ, ಅತೀ ಭಾವಪ್ರದರ್ಶನವು ಆತ್ಮಗೌರವಕ್ಕೆ ಹಾನಿಕರವೆಂಬ ಅಹಂತಾಪ್ರತಿಷ್ಠಿತನಾಗಿ, ನಿತಂತೆಯೆ ಕೈಮುಗಿದು ನಮಸ್ಕಾರ ಮಾಡಿದನು. ಒಬ್ಬನು ಅಡ್ಡಬಿದ್ದುದನ್ನಾಗಲಿ ಮತ್ತೊಬ್ಬನು ನಿಂತೇ ಕೈಮುಗಿದುದನ್ನಾಗಲಿ ಗಮನಿಸಿದಂತೆ ತೋರಲಿಲ್ಲ ಆ 'ಗಡ್ಡದಯ್ಯ' ಒಂದೆರಡು ನಿಮಿಷಗಳು ಹಾಗೆಯೆ ನಿಂತಿದ್ದು ಇಬ್ಬರೂ ಸದ್ದುಮಾಡದೆ ಕಲ್ಲುನೆಲದ ಮೇಲೆ ಚಕ್ಕಾಲುಬಕ್ಕಾಲು ಹಾಕಿ ಕೂತುಕೊಂಡರು.

ಹೆಚ್ಚು ಊರು ಸುತ್ತಿ, ಆಗತಾನೆ ಮಲೆನಾಡಿಗೆ ಪ್ರವೇಶಿಸಿದ ಪಾಶ್ಚಾತ್ಯ ನಾಗರಿಕತೆಯ ಮುಂಚೂಣಿಯಲ್ಲಿದ್ದ ಕ್ರೈಸ್ತ ಪಾದ್ರಿಗಳ ಸಂಗ ಮತ್ತು ಪ್ರಭಾವದಿಂದ ಹೊಸ ಹೊಸ ತರಹದ ಜನರ ವೇಷಭೂಷಣಗಳ ಪರಿಚಯವಿದ್ದ ದೇವಯ್ಯನಾಗಲಿ; ತನ್ನ ಒಂದೆ ಮನೆ ಹಳ್ಳಿಯ ಮತ್ತು ಅದರ ಸುತ್ತ ಮುತ್ತ ಇದ್ದ ಅಂತಹವೇ ಆದ ಹಳ್ಳಿಗಳ, ಅಥವಾ ಹೆಚ್ಚು ಎಂದರೆ, ಮೇಗರವಳ್ಳಿ, ಆಗುಂಬೆ ಮತ್ತು ತೀರ್ಥಹಳ್ಳಿಯಂತಹ ಕಿರಿಊರು ಕಿರುಪೇಟೆಗಳ ಪರಿಚಯ ಮಾತ್ರವಿದ್ದ ಮುಕುಂದಯ್ಯನಾಗಲಿ ಹಿಂದೆಲ್ಲ ಕಂಡಿದ್ದ ಯಾವ ಸನ್ಯಾಂಸಿ, ಬೈರಾಗಿ, ಗೋಸಾಯಿಯಂತೆಯೂ ಇರಲಿಲ್ಲ. ಅವರ ಮುಂದೆ ಪದ್ಮಾಸನಸ್ಥನಾಗಿ ಕಣ್ಣುಮುಚ್ಚಿ ಕುಳಿತಿದ್ದ ಆ 'ಗಡ್ಡದ್ದಯ್ಯ' ಆತನ ಕೆದರುಗೂದಲು, ಗಡ್ಡ, ಮೀಸೆ, ಮುಖ, ಮೈ, ಬಟ್ಟೆ ಎಲ್ಲವೂ ಆ ಮಂಟಪದಂತೆಯೆ ಶುಚಿರ್ಭೂತನಾಗಿ, ಶುಭ್ರವಾಗಿ, ನೈರ್ಮಲ್ಯ ವಾತಾವರಣವನ್ನು ಹೊರಸೂಸುತ್ತಿದ್ದವು. ತುಸು ತಿರಸ್ಕಾರಭಾವನೆಯಿಂದಲೆ ಅಲ್ಲಿಗೆ ಬಂದಿದ್ದ ದೇವಯ್ಯನಂತೂ ಆ ನೈರ್ಮಲ್ಯಕ್ಕೆ ಮನಸೋತನು. ಹಿಂದೆ ಅವನು ನೋಡಿದ್ದ ಸಂನ್ಯಾಸಿ ಬೈರಾಗಿ ಗೋಸಾಯಿಗಳೆಲ್ಲ ಶುಚಿಯಾಗಿರುವ ಸಭ್ಯರು ಯಾರೂ ಬಳಿಸಾರದಷ್ಟು ಗಲೀಜಾಗಿರುತ್ತಿದ್ದರು.

ನೋಡುವುದಕ್ಕೆ ಗಡ್ಡದಯ್ಯ ವಯಸ್ಸಾದವನಂತೆ ಕಾಣುತ್ತಿರಲಿಲ್ಲ, ದೇವಯ್ಯನಷ್ಟೆ ವಯಸ್ಸಾದಂತೆ ತೋರುತ್ತಿದ್ದನು. ತುಂಬ ಮೋಟಾಗಿದ್ದ ಆತನ ಗಡ್ಡವಾಗಲಿ ಕುಡಿಮೀಸೆಯಾಗಲಿ ಕ್ಷೌರಭಾವವನ್ನು ಸೂಚಿಸುತ್ತಿದ್ದುವೆ ಹೊರತು ದಾಡಿ ಬಿಟ್ಟ ಭಾವವನ್ನು ಮನಸ್ಸಿಗೆ ತರುತ್ತಿರಲಿಲ್ಲ. ಅವನ ಗಡ್ಡ, ಮೀಸೆ ಮತ್ತು ತಲೆಕೂದಲುಗಳ ಮಿಂಚುಗಪ್ಪಿನ ಹಿನ್ನಲೆಯಲ್ಲಿ ಮುಖದ ಮೈಬಣ್ಣ ಹೊಂಗಾಂತಿಯನ್ನು ಮನಸ್ಸಿಗೆ ತರುವ ಹಾಗಿತ್ತು. ಅವನು ಹಾಕಿಕೊಂಡಿದ್ದ ನೀಳವಾದ 'ಕಪನಿ' ಕುಳಿತಿದ್ದ ಅವನ ಮೈಯೆಲ್ಲವನ್ನೂ ಮುಚ್ಚಿತ್ತಾದರೂ ಆ ಮೈಕಟ್ಟಿನ ದೃಢ ಧೀರ ಬಲಿಷ್ಠ ಭಂಗಿಯನ್ನು ಮರೆ ಮಾಡಲು ಸಮರ್ಥವಾಗಿರಲಿಲ್ಲ. ಮೆಚ್ಚಿ ನೋಡುತ್ತ ಕುಳಿತಿದ್ದ ಅವರಿಗಿಬ್ಬರಿಗೂ ಆದ ಮತ್ತೊಂದು ಆಶ್ಚರ್ಯವೆಂದರೆ ಈ ಕಾಷಾಯಧಾರಿಯಲ್ಲಿ, ಸಾಧಾರಣವಾಗಿ ಅಂತಹ ಇತರರೆಲ್ಲರಲ್ಲಿಯೂ ತಪ್ಪದೆ ಇರುವಂತೆ, ಯಾವ ಭಸ್ಮಾವಲೇಪನವಾಗಲಿ ರುದ್ರಾಕ್ಷಿ ಸರವಾಗಲಿ ಗಾಂಜಾ ಸೇಯುವ ಗುಡಿಗುಡಿಯಂತಹ ಸಕಲಕರಣೆಗಳಾಗಲಿ ಕಂಡುಬರದಿದ್ದುದು. ಮತ್ತೂ, ಆತನ ಪಕ್ಕದಲ್ಲಿ ದೇವಯ್ಯ ರೆವಡೆಂಡ್ ಲೇಕಹಿಲ್ ದೊಡ್ಡಪಾದ್ರಿಗಳ ಹತ್ತಿರ ನೋಡಿದ್ದಂಥ, ಹೊಳೆವ ಅಚ್ಚಕ್ಷರದ ರಟ್ಟಿನ, ಒಂದೆರಡು ದಪ್ಪದಪ್ಪ ಪುಸ್ತಕಗಳಿದ್ದುದು! ಆ ಅಕ್ಷರಗಳು ಇಂಗ್ಲೀಷು ಎಂಬುದೂ ದೇವಯ್ಯಗೆ ಗೊತ್ತಾಗಿ, ಮುಕುಂದಯ್ಯನ ಕಿವಿಯಲ್ಲಿ ಏನನ್ನೊ ಪಿಸುಗುಟ್ಟಿದುದೆ ಕಾರಣವಾಯಿತೊ ಏನೋ ಎಂಬಂತೆ ಸಂನ್ಯಾಸಿ ಕಣ್ಣು ತೆರೆದು ಅವರನ್ನು ನೋಡಿದನು.

ಮುಕುಂದಯ್ಯ ದೇವಯ್ಯ ಇಬ್ಬರೂ ತೆಕ್ಕನೆ ಚಕಿರಾದಂತೆ ಬೆರಗುಸಿರೆಳೆದುಕೊಂಡರು, ಹಾಗಿತ್ತು ಆ ಕಣ್ಣಕಾಂತಿ! ಮೊದಲೆ ತೇಜಃಪುಂಜವಾಗಿ ಕಾಣಿಸುತ್ತಿದ್ದ ಮುಖ ಮಂಡಲ ಆ ಸುವಿಶಾಲ ನೇತ್ರದ್ವಯದ ದೃಷ್ಟಿದೀಪ್ತಿಗೆ ಇನ್ನಷ್ಟು ಭವ್ಯಸುಂದರವಾಯ್ತು;

ಇಬ್ಬರು ಅನ್ಯೆಚ್ಛಿಕವೆಂಬಂತೆ ಮತ್ತೊಮ್ಮೆ ಕೈಮುಗಿದರು!

ತನ್ನ ವೈಯಕ್ತಿಕ ಸಮಸ್ಯೆಗಳಿಗೆ ಗಡ್ಡದಯ್ಯನಿಂದ ಏನಾದರೂ ಪರಿಹಾರ ದೊರೆಯಬಹುದೆಂದು ಪ್ರಶ್ನೆ ಕೇಳಲು ಕಾತರನಾಗಿ ಬಂದಿದ್ದ ಮುಕುಂದಯ್ಯ ತಾನು ಹಿಂದೆಂದೂ ನೋಡದೆ ಇದ್ದಂತಹ ಇಂತಹ ವಿಶೇಷ ರೂಪದ ಮತ್ತ ರೀತಿಯ ಸನ್ಯಾಸಿಗೆ ಅಂತಹ ಪ್ರಶ್ನೆಗಳನ್ನು ಹೇಗೆ ಹಾಕುವುದೆಂದು ನಾಚಿ ಹೆದರಿ ತನ್ನೊಳಗೆ ತಾನೆ ಸೆಡೆತುಕೊಳ್ಳುವಂತೆ ಮಾತನಾಡಲಾರದೆ ಕುಳಿತುಬಿಟ್ಟನು. ಮುಕುಂದಯ್ಯನಿಗೋಸ್ಕರವಾಗಿಯೆ ಅವನೊಡನೆ ಬಂದಿದ್ದ ದೆವಯ್ಯ, ಸ್ವಲ್ಪ ಹೊತ್ತು ಕಾದು ನೋಡಿ, ಮುಕುಂದಯ್ಯನ ಕಡೆ ಅರ್ಥಪೂರ್ಣವಾಗಿ ಮತ್ತೆ ಮತ್ತೆ ನೋಡಿದನು. ಅವನು ಬಾಯಿ ತೆರೆಯದಿದ್ದುದನ್ನು ಕಂಡು ತಾಣೆ ಮಾತಿಗೆ ಮೊದಲು ಮಾಡಿದನು; ಕ್ರೈಸ್ತ ಉಪದೇಶಿ ಮತ್ತು ಪಾದ್ರಿಗಳೊಡನೆ ಚರ್ಚೆ ನಡೆಸಿ ಅಭ್ಯಾಸವಿದ್ದ ಅವನು ತನ್ನ ಯಾವ ಕೌಟುಂಬಿಕ ಅಥವಾ ವೈಯಕ್ತಿಕ ಸಮಸ್ಯೆಗಳನ್ನೂ ಪ್ರಸ್ತಾಪಿಸದೆ ಹಿಂದೂಮತ, ಜಾತಿಪದ್ಧತಿ, ಬ್ರಾಹ್ಮಣರಿಂದ ಬ್ರಾಹ್ಮಣೇತರಿಗೆ ಆಗುತ್ತಿರುವ ಅನ್ಯಾಯ, ಹಿಂದೂ ದೇವರುಗಳಲ್ಲಿ ಕಂಡುಬರುವ ಅನೈತಿಕ ವ್ಯಾಪಾರ, ಕ್ರೈಸ್ತಮತ ಪ್ರಚಾರ, ಕ್ರೈಸ್ತರು ಕೈಗೊಳ್ಳುತ್ತಿರುವ ಉದ್ಧಾರ ಕಾರ್ಯ -ಇತ್ಯಾದಿಗಳನ್ನೆ ಕುರಿತು ಪ್ರಶ್ನೆ ಕೇಳಿದನು.

ಸಂನ್ಯಾಸಿ ತುಂಬ ಸಂತೋಷದಿಂದಲೆ ಉತ್ತರ ಹೇಳಿದನು. ಆತನ ಧ್ವನಿ ಅಸಾಧಾರಣ ಗಂಭೀರವಾಗಿತ್ತು; ಆಲಿಸುವುದಕ್ಕೆ ಹಿತವೂ ಆಗಿತ್ತು. ಆತನು ಆಡುತ್ತಿದ್ದ ಸ್ಪಷ್ಟವೂ ಸ್ವಚ್ಛವೂ ಆಗಿದ್ದ ಗ್ರಂಥಭಾಷೆಯಿಂದ ಅವನ ಹುಟ್ಟುನುಡಿ ಕನ್ನಡವಾಗಿರಲಿಕ್ಕಿಲ್ಲ ಎಂಬಂತೆ ತೋರುತ್ತಿತ್ತು. ಕನ್ನಡಿಗರಲ್ಲದವರು ಬಹುಕಾಲ ಕನ್ನಡನಾಡಿನಲ್ಲಿದ್ದು ಕಲಿತ ಭಾಷೆಯಂತಿತ್ತು. ಆತನು ಆಡುತ್ತಿದ್ದ ಮಾತು. ಅಲ್ಲದೆ ಸಂಸ್ಕೃತ ಭೂಯಿಷ್ಠವಾಗಿ ಆಲಿಸುತ್ತಿದ್ದವರ ಯೋಗ್ಯತೆಗೆ ಮೀರಿ ಬಹು ಎತ್ತರದಲ್ಲಿಯೆ ಚರಿಸುವಂತಿತ್ತು. ಆದರೆ ಪಾದ್ರಿಯ ಉಪದೇಶಗಳನ್ನು ಕೇಳಿದ್ದ ದೇವಯ್ಯನಿಗೆ ತಾನು ಈಗ ಆಲಿಸುತ್ತಿದ್ದ ಈ ವಾಣಿಯ ಸ್ವರೂಪವೆ ಬೇರೆಯ ಅಂತಸ್ತಿನದು ಎಂದು ವೇದ್ಯವಾಯಿತು. ಇದರ ಧೀರತೆ, ದಿವ್ಯತೆ, ಬವ್ಯತೆ, ವಸ್ತು, ವಿನ್ಯಾಸಗಳಿಗೂ ಪಾದ್ರಿಯ ಉಪದೇಶಕ್ಕೂ ಒಡ್ಡರ ಬಂಡಿಗೂ ದೇವರ ತೇರಿಗೂ ಇರುವ ಅಂತರವಿತ್ತು.

ಸಂನ್ಯಾಸಿ ಹಿಂದೂಮತ, ಜಾತಿಭೇದ, ಮತಾಚಾರಮೌಢ್ಯ, ಬ್ರಾಹ್ಮಣ ಪುರೋಹಿತವರ್ಗದವರಿಂದ ಇತರರಿಗೆ ಆಗುತ್ತಿರುವ ಅನ್ಯಾಯ ಮತ್ತು ಅಪಚಾರ ಅವುಗಳನ್ನು ಕುರಿತ ದೇವಯ್ಯನ ಖಂಡನೆ ಮತ್ತು ಟೀಕೆಗಳಲ್ಲಿ ಬಹುಭಾಗವನ್ನು ಒಪ್ಪಿಕೊಂಡದ್ದು ಮಾತ್ರವಲ್ಲದೆ ದೇವಯ್ಯನಿಗಿಂತಲೂ ಸಮರ್ಥವಾಫಿ ಸ್ವಾರಸ್ಯಕರವಾಗಿ ನಿದರ್ಶನಪೂರ್ವಕವಾಗಿ ಅವುಗಳನ್ನು ವಿಸ್ತರಿಸಿದ್ದನು. ಆತನ ತೀಕ್ಷ್ಣ ವಿಡಂಬನೆಗೂ ನಿಶಿತ ಹಾಸ್ಯಕ್ಕೂ ವಶರಾಗಿ ದೇವಯ್ಯ ಮುಕುಂದಯ್ಯ ಇಬ್ಬರೂ ಒಮ್ಮೊಮ್ಮೆ ಬಿದ್ದುಬಿದ್ದು ನಕ್ಕೂ ಇದ್ದರು. ಆದರೆ ಯಾವಾಗ ವೇದಾಂತ ತತ್ತ್ವಗಳನ್ನು ಆಧರಿಸಿ, ಹಿಂದೂ ಧರ್ಮದ ಮತ್ತು ಭಾರತೀಯ ದೃಷ್ಟಿಯ ಸಮರ್ಥನೆಗೆ ಕೈಹಾಕಿದನೋ ಆಗ ಶ್ರೋತೃಗಳಿಬ್ಬರೂ ಒಂದು ಭೂಮಾನುಭೂತಿಯ ಅನುಭವದಲ್ಲಿ ಡಂಗಾಗಿ ಹೋಗಿದ್ದರು. ಹಿಂದೂಗಳಾಗಿದ್ದ ಅವರು

ಮಹೋನ್ನತ ದಿವ್ಯ ದರ್ಶನದ ಆಸ್ತಿಗೆ ಹಕ್ಕುದಾರರಾಗಿದ್ದಾರೆ ಎಂಬುದನ್ನು ಆತನು ವಿವರಿಸಿದಾಗ ಆ ಮಂಟಪದಲ್ಲಿ ಒಂದು ದಿವ್ಯ ಆರಾಧನೆಯ ಸಾನ್ನಿಧ್ಯವೆ ಸೃಷ್ಟಿಯಾಗಿತ್ತು! ಅದರಲ್ಲಿಯೂ ಆತನು ಚಿಕಾಗೊ ಸರ್ವಧರ್ಮ ಸಮ್ಮೇಲನದಲ್ಲಿ ಅಂದಿಗೆ ಮೂರೇ ವರ್ಷಗಳ ಹಿಂದೆ ಸ್ವಾಮಿ ವಿವೇಕಾನಂದ ಎಂಬ್ಬೊಬ್ಬ ಸಂನ್ಯಾಸಿ ಹಿಂದೂ ಧರ್ಮದ ಮೇಲ್ಮೆಯ ವಿಚಾರವಾಗಿ ಉಪನ್ಯಾಸಮಾಡಿ, ಲೋಕವೆಲ್ಲ ಬೆರಗಾಗುವಂತೆ ದಿಗ್ವಿಜಯಿಯಾಗಿರುವ ಸಂಗತಿಯನ್ನು ರೋಮಾಂಚನ ಕಾರಿಯಾದ ಭಾಷಾರೀತಿಯಿಂದ ವರ್ಣೀಸಿದಾಗಂತೂ ದೇವಯ್ಯನಿಗೆ ಕುಳಿತುಕೊಳ್ಳಲಾಗಲಿಲ್ಲ; ಎದ್ದುನಿಂತು ಕುಣಿದಾಡಬೇಕೆಂಬ ಮನಸ್ಸನ್ನು ಹೇಗೊ ತಡೆದುಕೊಂಡನು.

ಸಂನ್ಯಾಸಿ ಮತ್ತೂ ಹೇಳಿದನು; "ಆ ಸ್ವಾಮಿ ವಿವೇಕಾನಂದರು ಇಂಡಿಯಾಕ್ಕೆ ಬರುವ ದಾರಿಯಲ್ಲಿದ್ದಾರೆ. ಬಂದಮೇಲೆ ಭರತಖಂಡವನ್ನೆಲ್ಲ ಸಂಚರಿಸಿ, ಬೋಧಿಸಿ, ಭಾಷಣಮಾಡಿ ಹೊಸದೊಂದು ಯುಗಶಕ್ತಿಯನ್ನೆ ಉದ್ಬೋಧನಗೊಳಿಸುತ್ತಾರೆ. ಹಿಂದೂಧರ್ಮವು ಬ್ರಾಹ್ಮಣ ಪುರೋಹಿತರಿಂದ ಪಾರಾಗಿ, ಕ್ರೈಸ್ತಾದಿ ಮತಪ್ರಚಾರಣೆಗೆ ದುರ್ಗಮವಗಿ, ತನ್ನ ವೇದೋಪನಿಷತ್ತಿನ ಶುದ್ಧ ವೇದಾಂತ ದರ್ಶನದಲ್ಲಿ ಪ್ರತಿಷ್ಠಿತವಾಗುವ ಕಾಲ ಸಮೀಪಿಸುತ್ತಿದೆ. ಅದಕ್ಕಾಗಿ ನಾನೂ, ನನ್ನಂತಹ ಇತರ ಕೆಲವರೂ, ದೇಶದಾದ್ಯಂತ ಸಂಚರಿಸಿ, ಸ್ಥಳೀಯ ದೇವತಾಶಕ್ತಿಗಳನ್ನು ಎಚ್ಚರಿಸುತ್ತಿದ್ದೇವೆ. ನಾನು ಸ್ವಾಮಿ ವಿವೇಕಾನಂದರು ಕೊಲಂಬೋ ನಗರಕ್ಕೆ ಬರುವಷ್ಟರಲ್ಲಿ ಈ ಕರ್ತವ್ಯವನ್ನು ಮುಗಿಸಿ, ಅವರನ್ನು ಎದುರುಗೊಂಡು ಸ್ವಾಗತಿಸಲು ಅಲ್ಲಿಗೆ ಹೊಗುವ ಹಾದಿಯಲ್ಲಿದ್ದೇನೆ."

ಮುಕುಂದಯ್ಯ ದೇವಯ್ಯರಿಗೆ ಸಂನ್ಯಾಸಿ ಹೇಳಿದುದರಲ್ಲಿ ಮುಕ್ಕಾಲು ಮೂರು ವೀಸ ಬುದ್ಧಿ ಗಮ್ಯವಾಗಲಿಲ್ಲ; ಆದರೂ ಅದರ ತಾತ್ಪಾರವು ಭಾವಗೋಚರವಾಗಿ ಅವರು ಒಂದು ಹೊಸ ಜನ್ಮಕ್ಕೆ ಹುಟ್ಟಿಬಂದತಾಗಿತ್ತು. ಆ ಮಲೆನಾಡಿನ ಕೊಂಪೆಯ ಕಾಡಿಗೆ ಆಗ ಹೊರಲೋಕದ ಸುದ್ದಿ ಸಂಪರ್ಕವೆ ಇರಲಿಲ್ಲ. ಪತ್ರಿಕೆಗಳೂ ಇರಲಿಲ್ಲ; ಬೆಂಗಳೂರು ಮೈಸೂರುಗಳಲ್ಲಿ ಆಗ ತಾನೆ ಕನ್ನಡದಲ್ಲಿ ಹೊರಡಲು ಶುರುವಾಗಿದ್ದ ಪತ್ರಿಕೆಗಳೂ ಅಂಚೆಯ ಅಭಾವದಿಂದಾಗಿ ಇನ್ನೂ ಬರತೊಡಗಿರಲಿಲ್ಲ. ಪಾದ್ರಿ ಪ್ರವೇಶಿಸಿದ ಹಳ್ಳಿಯ ಒಂದೆರಡು ಮನೆಗಳಿಗೆ ಆಗಾಗ ತಿಂಗಳುಗಟ್ಟಲೆ ಹಳೆಯವಾಗಿದ್ದ ಮಿಶನರಿ ಪತ್ರಕೆಗಳು ಬಂದರೂ ಅವನ್ನು ಒದುತ್ತಿದ್ದುದೂ ಅಷ್ಟಕಷ್ಟೆ. ಹೀಗಿರಲು ಸಂನ್ಯಾಸಿ ಹೇಳಿದ್ದ ವಿದೇಶದ ಹೆಸರುಗಳೂ ವಿದೇಶದ ನಗರಗಳ ಹೆಸರುಗಳೂ ವಿವೇಕಾನಂದರ ಹೆಸರೂ ಉಪನಿಶತ್ತು ವೇದಾಂತ ಮುಂತಾದ ಹೆಸರುಗಳೂ ಎಷ್ಟರ ಮಟ್ಟಿಗೆ ತಾನೆ ಅರ್ಥವತ್ತಾದಾವು? ಅದರಲ್ಲಿಯೂ ಸಂನ್ಯಾಸಿ 'ಸ್ಥಳೀಯ ದೇವಾಶಕ್ತಿಗಳನ್ನೂ ಎಚ್ಚರಿಸುತ್ತಿದ್ದೇವೆ.' ಎಂದಾಗ, ಸುತಾರಾಂ ಭಾವವಾಗದ ದೇವಯ್ಯನು ಮುಕುಂದಯ್ಯನ ಕಡೆ ತಿರುಗಿನೋಡಿ, ಒಳಗೊಳಗೆ ನಕ್ಕು ಸಂದೇಹಗರಸ್ತನಾಗಿದ್ದನು. ಸಂನ್ಯಾಸಿಯಂತೂ ತನ್ನ ವಿಚಾರವಾಗಿ ದೇವಯ್ಯ ಹಾಕಿದ್ದ ಪ್ರಶ್ನೆಗಳಿಗೆಲ್ಲ ಯವ ಉತ್ತರವನ್ನೂ ಕೊಡದೆ ಮುಗುಳುನಕ್ಕಿದ್ದನಷ್ಟೆ!....

ಇವರಿಗಾಗಿ ಹುಡುಕಿ ಹುಡುಕಿ ಹೊಳೆದಂಡೆಯಿಂದ ಕೂಗುತ್ತಿದ್ದ ಬಚ್ಚನ ಕರೆ ಕೇಳಿಸಿದಾಗ ಮುಕುಂದಯ್ಯನು ದೇವಯ್ಯನ ಕಿವಿಯಲ್ಲಿ ಏನನ್ನೊ ಉಸುರಿದನು. ದೇವಯ್ಯ ಎದ್ದು ನಿಂತು, ಬಗ್ಗಿ ನಮಸ್ಕಾರ ಮಾಡಿ, ಮತ್ತೊಮ್ಮೆ ದರ್ಶನ ತೆಗೆದುಕೊಳ್ಳುತ್ತೇನೆ ಎಂದು ಹೇಳಿ, ಗೌರವ ಪ್ರದರ್ಶನಕ್ಕಾಗಿ ಹಿಂದು ಹಿಂದಕ್ಕೆ ತುಸು ನಡೆದು, ಆಮೇಲೆ ತಿರುಗಿಕೊಂಡು ಹೊರಟುಹೋದನು.

ದೇವಯ್ಯ ಹೋದಮೇಲೆ ತಾನೊಬ್ಬನೆಯೆ ಆದ ಮುಕುಂದಯ್ಯನಿಗೆ ಸಂನ್ಯಾಸಿಯ ಸಾನ್ನಿಧ್ಯದ ಮಹತ್ತು ಭಾರತರವಾದಂತಾಯ್ತು! ತನ್ನ ವೈಯಕ್ತಿಕ ಜೀವನದ ಸಮಸ್ಯೆಗಳಿಗೆ 'ಗಡದ್ದಯ್ಯ'ನಿಂದ ಏನಾದರೂ ಸಹಾಯಪಡೆಯಲೆಂದೇ ಅವನು ಆವೊತ್ತು ಅಲ್ಲಿಗೆ ಬಂದಿದ್ದನು. ಅದಕ್ಕಾಗಿಯೆ ದೇಯಯ್ಯನನ್ನು ಕಳುಹಿಸಿ ತಾನೊಬ್ಬನೆ ಉಳಿದುಕೊಂಡಿದ್ದನು. ಆದರೆ ಭಾಯಿಂದ ಮಾತು ಹೊರಡದಾಯ್ತು! ಸುಮ್ಮನೆ ಕೈ ಜೋಡಿಸಿಕೊಂಡು ಸನ್ಯಾಸಿಯ ಪಾದಗಳ ಕಡೆ ನೋಡುತ್ತಾ ಕುಳಿತುಬಿಟ್ಟನು!

ಸಂನ್ಯಾಸಿಯೆ ಮಾತನಾಡಿಸಿದನು:

“ಏನೋ ಆರ್ತಿಯಲ್ಲಿ ಸಿಕ್ಕಿದಿರಲ್ಲವೆ ನೀವು?”

ಅರ್ಥವಾಗದಿದ್ದರೂ ಭಾವವಾಯಿತು; ಆದರೂ ಮುಕುಂದಯ್ಯ ಮಾತಾಡಲಿಲ್ಲ. ಅವನ ಕಣ್ಣಿಂದ ನೀರು ತೊಟ್ಟಿಕ್ಕಿತು!

ಸಂನ್ಯಾಸಿ ತುಸು ಹೊತ್ತು ಕಣ್ಣುಮುಚ್ಚಿಕೊಂಡು ಕುಳಿತಿದ್ದು, ಮತ್ತೆ ಕಣ್ಮೆರೆದು ಕರುಣಾಪೂರ್ಣಧ್ವನಿಯಿಂದ ಹೇಳಿದನು; “ಹೋದ ಜನ್ಮದಲ್ಲಿ ನೀವಿಬ್ಬರೂ ದಂಪತಿಗಳಾಗಿದ್ದಿರಿ. ಈ ಜನ್ಮದಲ್ಲಿಯೂ ಅದು ಮುಂದುವರಿದು ಸಾರ್ಥಕಗೊಳ್ಳುತ್ತದೆ. ಅದಕ್ಕಾಗಿ ನೀವು ದುಃಖಿಸಬೇಕಾಗಿಲ್ಲ. ನಿಮ್ಮ ಧರ್ಮ ಕರ್ಮ ನೀವು ಮಾಡುತ್ತಾ ಹೋಗಿ.”

“ಅವಳ ಲಗ್ನ ಇನ್ನೊಬ್ಬರೊಡನೆ ಆಗುವುದು ನಿಶ್ಚಯವಾಗಿದೆ. ತಮ್ಮ ಅನುಗ್ರಹಕ್ಕೆ ಪಾತ್ರನಾಗಿ ನನ್ನ ಇಷ್ಟಾರ್ಥ ನೆರವೇರಿಸಿಕೊಳ್ಳುವುದಕ್ಕಾಗಿ ಬಂದೆ.” ಮುಕುಂದಯ್ಯನ ಭಾಷೆ ಸಾನ್ನಿಧ್ಯಪ್ರಭಾವದಿಂದ ಏರಿ ನಡೆಯುತ್ತಿತ್ತು. ಅವನಿಗೆ ಸಂನ್ಯಾಸಿಯ ಸರ್ವಜ್ಞ ಸಾಮರ್ಥ್ಯದ ವಿಷಯದಲ್ಲಿ ಸಂದೇಹ ಮೂಡಲೂ ಇಲ್ಲ; ಸಮರ್ಥನೆ ಬೇಕೂ ಆಗಿರಲಿಲ್ಲ.ಆರ್ತನಾಗಿದ್ದ ಅವನ ಮನಸ್ಸು ಅದನ್ನು ಎಂದೋ ಒಪ್ಪಿಕೊಂಡುಬಿಟ್ಟಿತ್ತು.

ಸಂನ್ಯಾಸಿ ಮಾತನಾಡಲಿಲ್ಲ. ಸುಮ್ಮನೆ ಮುಗುಳುನಕ್ಕನಷ್ಟೆ. ಆದರೆ ಆ ಮುಗುಳುನಗೆಯಲ್ಲಿ ಎಂತಹ ಅಧಿಕಾರ ಮುದ್ರೆಯಿತ್ತು ಎಂದರೆ; ತಾನು ಹೇಳಿದ ಮೇಲೆ ಆಗಿಹೋಯ್ತು ಎಂಬ ದೃಢನಿಶ್ಚಯ ಭಾವ!

ಮುಕುಂದಯ್ಯ ತನ್ನ ಹಳೆಮನೆಯ ಬಾವ ದೊಡ್ಡಣ್ಣ ಹೆಗ್ಗಡೆಗೆ ಸಂಭವಿಸಸಿರುವ ದುರ್ಗತಿಯನ್ನು ವಿಸ್ಮೃತಿಯನ್ನು ಕುರಿತು ಅರಿಕಮಾಡಿಕೊಂಡು, ಆತನಿಗೆ ಪುನಃ ಸ್ಮರಣೆಯುಂಟಾಗಿ, ಮನೆಗೆ ಮರಳುವಂತೆ ಆಶೀರ್ವಾದ ಮಾಡಬೇಕೆಂದು ಕೇಳಿಕೊಂಡಾಗ ಸಂನ್ಯಾಸಿ ಕಣ್ಣುಮುಚ್ಚಿಕೊಂಡೆ ಎಲ್ಲವನ್ನೂ ಆಲಿಸಿದ್ದನು.

ಸ್ವಲ್ಪ ಹೊತ್ತಿನ ಮೇಲೆ ಧೀರ್ಘವಾಗಿ ಸುಯ್ದು ಕಣ್ಣೆರೆದನು;

“ಆತ ತಿರುಪತಿಯಲ್ಲಿಯ ಏಳೆಂಟು ವರ್ಷಗಳ ಪೂರ್ವದಲ್ಲಿಯೆ ಗತಿಸಿದ್ದಾನಲ್ಲಾ? ಮತ್ತೆ ಏಕೆ ಆ ಚಿಂತೆ?

“ಹಾಗೆಯೆ ಕೆಲವರು ಭಾವಿಸಿದ್ದರು. ಆದರೆ ಅವರು ಬದುಕಿದ್ದಾರೆ. ಗೋಸಾಯಿಗಳ ಜೊತೆ ಇದ್ದರು. ಈಗ ತೀರ್ಥಹಳ್ಳಿಯಲ್ಲಿ ಪೋಲೀಸರ ವಶದಲ್ಲಿ ಇದ್ದಾರೆ. ವೈದ್ಯರು ನೋಡಿಕೊಳ್ಳುತ್ತಾರೆ. ಅವರಿಗೆ ತಾನು ಯಾರು ಏನು

ಎಂಬುದೆಲ್ಲ ಮರೆತುಹೋಗಿಬಿಟ್ಟಿದೆಯಂತೆ. ತನ್ನವರು ಯಾರೂ ಗುರುತಿಸಲು ಸಾಧ್ಯವಾಗಿಲ್ಲವೆಂಬಂತೆ. ಮೊನ್ನೆ ಅವರನ್ನು ಚೆನ್ನಾಗಿ ತಿಳಿದಿದ್ದ ನಮ್ಮ ಒಬ್ಬರು ಐಗಳು ಅಲ್ಲಿಗೆ ಹೊಗಿ ನೋಡಿಕೊಂಡೂ ಬಂದಿದ್ದಾರೆ. ನಮ್ಮ ಭಾವನೇ ಹೌದೆಂದೂ ನೇಕ ಚಿಹ್ನೆಗಳಿಂದ ಅವರು ಗುರುತಿಸಿದ್ದಾರೆ. ಹುಲಿಯಿಂದಾಗಿದ್ದ ಒಂದು ಗಾಯದ ಕಲೆಯಂತೂ ಚೆನ್ನಾಗಿ ಗುರುತು ಸಿಕ್ಕುವಂತಿದೆಯಂತೆ…. ನನ್ನ ಅಕ್ಕ ಏಳೆಂಟು ವರ್ಷಗಲಿಂದ ಕೊರಗುತ್ತಿದ್ದಾರೆ….”

ಸಂನ್ಯಾಸಿ ಇದ್ದಕ್ಕಿದ್ದಂತೆ ತನ್ನ ಕೈಯತ್ತಿ ಯಾವುದೋ ಭಾಷೆಯಲ್ಲ ಏನನ್ನೋ ಹೇಳಿದನೋ? ಹೇಳಿಕೊಂಡನೋ? ಮುಕುಂದಯ್ಯ ಮಾತು ನಿಲ್ಲಿಸಿ ಸುಮ್ಮನಾಗಿಬಿಟ್ಟನು.

“ನಾನು ಈಗ ನಿಮಗೆ ಹೇಳುವುದನ್ನು ನೀವು ಎಂದೂ ಯಾರಿಗೂ ಯಾವ ಸಂದರ್ಭದಲ್ಲಿಯೂ ಹೇಳದೆ ಇರುವುದಾದರೆ ನಿಮಗೆ, ಮನುಷ್ಯ ಸಾಮಾನ್ಯರಿಗೆ ಹೇಳಬಾರದ ಮತ್ತು ಹೇಳಿದರೂ ಅರ್ಥವಾಗಲಾರದ, ಕೆಲವು ರಹಸ್ಯಗಳನ್ನು ತಿಳಿಸುತ್ತೇನೆ; ನಿಮ್ಮ ಸಮಾಧಾನಕ್ಕಾಗಿ ಮತ್ತು ನಿಮಗೆ ಅರಿಯಲಸಾಧ್ಯವಾದ ಒಂದು ಕಾರಣಕ್ಕಾಗಿ….”

“ಆಗಲಿ. ತಮ್ಮ ಅಪ್ಪಣೆ ಹಾಗಿರುವುದಾದರೆ ಅದನ್ನು ತಪಪ್ದೆ ಪಾಲಿಸುತ್ತೇನೆ.” ಕುತೂಹಲಾಗ್ನಿ ಕರಳಿ ಮಾತುಕೊಟ್ಟನು ಮುಕುಂದಯ್ಯ, ದೂರದಿಂದಲೆ ಸಂನ್ಯಾಸಿಯ ಪಾದದತ್ತ ಕೈಮುಗಿದು.

“ಎಂತಹ ಕಠಿಣಪ್ರಸಂಗ ಒದಗಿದರೂ ನಿಮ್ಮ ವಚನಪಾಲನೆಗೆ ಭಂಗ ಬರದಿರಲಿ. ನೀವೀಗ ನನ್ನಿಂದ ಕೇಳುವುದರ ಸತ್ಯತೆಯನ್ನು ನಿಮ್ಮ ಜನ್ಮದಲ್ಲಿಯೆ ಕಾಣುವಿರಿ. ನಾನು ಇದನ್ನೆಲ್ಲ ನಿಮಗೆ ಹೇಳುತ್ತಿರುವುದಕ್ಕೂ ಒಂದು ಕಾರಣವಿದೆ. ನಾನು ನಿಮಗೆ ಆಗ ತಿಳಿಸಿದೆನಲ್ಲಾ ಆ ಸ್ವಾಮಿ ವಿವೇಕಾನಂದರಿಮದ ಜಾಗ್ರತವಾಗುವ ಯುಗಧರ್ಮ ಶಕ್ತಿಗೆ ಸೇವೆ ಸಲ್ಲಿಸುವ ಚೇತನಗಳು ನಮ್ಮ ಸಂತಾನರಲ್ಲಿ ಮುಂದೆ ಸಂಭವಿಸಲಿವೆ! ಒಂದು ರೀತಿಯಿಂದ ಕೆಲವಾಗಲೆ ಸಂಭವಿಸಿಯೂ ಆಗಿದೆ!….

ತನಗೆ ಗ್ರಾಹ್ಯವಾಗದ ಯಾವುದೋ ಒಂದು ಅನ್ಯಲೋಕದಲ್ಲಿ ಸಂಚರಿಸುತ್ತಿರುವಂತೆ ಮುಕುಂದಯ್ಯ ಬೆರಗುಹೊಡೆದು ಆಲಿಸತೊಡಗಿದನು, ತನ್ನ ಗ್ರಾಮಿಣ ಬುದ್ಧಿಯನ್ನು ಆದಷ್ಟು ಏಕಾಗ್ರತೆಗೊಳಿಸಿ ಗ್ರಹಿಸಲು ಪ್ರಯತ್ನಿಸುವವನಂತೆ.

“ತೀರ್ಥಹಳ್ಳಿಯಲ್ಲಿ ಇರುವುದೇನೋ ನಿಮ್ಮ ಬಾವನಾಗಿದ್ದವರ ಶರೀರವೆ! ಆದರೆ ಅವರೊಳಗಿರುವುದು ಅವರ ಜೀವವಲ್ಲ. ಅವರ ಮರಣ ಸಮಯದಲ್ಲಿ ಅಲ್ಲಿಯೆ ಅಕಾಲ ಮೃತ್ಯುವಿಗೆ ತುತ್ತಾಗಿದ್ದು ಇನ್ನೂ ಸಮೆಯಿಸುವ ಕರ್ಮವಿದ್ದ ಒಬ್ಬ ಬೈರಾಗಿಯ ಜೀವ ಅದನ್ನು ಅಕ್ರಮಿಸಿದೆ. ಅದು ಇಂದೋ ನಾಳೆಯೋ ತನ್ನ ಪ್ರಾರಬ್ಧ ಮುಗಿದೊಡನೆಯೆ ಆ ಶರೀರವನ್ನು ತ್ಯಜಿಸುತ್ತದೆ…. ಇದೆಲ್ಲ ತಿಳಿಯದೆ ಇದ್ದಿದ್ದರೆ ನೀವು ಹೇಗೆ ವರ್ತಿಸುತ್ತಿದ್ದಿರೋ ಹಾಗೆಯೇ ವರ್ತಿಸಬೇಕು; ಗೊತ್ತಾಯಿತೆ? ನಿಮ್ಮ ಈ ಜ್ಞಾನವೆಲ್ಲ ಸಾಕ್ಷೀಪ್ರಜ್ಞೆಯಾಗಿಯೆ ಉಳಿಯಬೇಕು. ಭಗವಂತನಿಗೆ ಪ್ರಾರ್ಥನೆ ಸಲ್ಲಿಸುವುದೊಂದಲ್ಲದೆ ಬೇರೆ ಯಾವ ಕ್ರಿಯೆಯೂ ಕರ್ಮವೂ ನಿಮ್ಮ ಜ್ಞಾನದ ಫಲವಾಗಿ ನಿಮ್ಮಿಂದ ಹೊಮ್ಮಬಾರದು. ನೀವು ಈ ವಿಚಾರದಲ್ಲಿ ಅತ್ಯಂತ ನಿಸ್ಸಂಗತ್ವವನ್ನು ಸಾಧಿಸಬೇಕು. ಇಲ್ಲದಿದ್ದರೆ

ಅನಗತ್ಯವಾದ ಕ್ಲೇಶ ಕಷ್ಟ ಜಟಿಲತೆಗಳಿಗೆ ಕಾರಣರಾಗುತ್ತೀರಿ…. ತಿರುಪತಿಗೆ ಹೋಗಿದ್ದ ಆ ನಿಮ್ಮ ಬಾವ ಆಗಲೆ ಇಲ್ಲಿ ಜನ್ಮವೆತ್ತಿದ್ದಾರೆ…. "ಕ್ಷೌರದ ಅಲಗಿನ ಮೇಲೆ ನಿಂತದ್ದ ಮುಕುಂದಯ್ಯನ ಕುತೂಹಲವನ್ನು ಗಮನಿಸಿ ಸಂನ್ಯಾಸಿ ಹೇಳಿದನು; "ಇದಕ್ಕೆಲ್ಲ ಅಷ್ಟೊಂದು ವಿಸಮಯ ಏಕೆ? ಇದೆಲ್ಲ ನಿತ್ಯವೂ ಸೂಕ್ಷ್ಮ ಲೋಕಗಳಲ್ಲಿ ನಡೆಯುತ್ತಿರುವ ಸಾಮಾನ್ಯ ವ್ಯಾಪಾರ…. ನಿಮ್ಮ ಜೊತೆಯಲ್ಲಿ ಬಂದಿದ್ದು ಈಗ ತಾನೆ ಹೊರಟು ಹೋದರಲ್ಲಾ ಅವರ ಮಗನಾಗಿ!…."

ಮುಕುಂದಯ್ಯನಿಗೆ ತಡೆಯಲಾಗಲಿಲ್ಲ; "ಅವರು ನಮ್ಮ ಪುಟ್ಟಕ್ಕನ ಗಂಡ?" ಎಂದು ಏಕೊ ಏನೊ ತೊದಲಿಬಿಟ್ಟನು.

ಸಂನ್ಯಾಸಿ ಚಿಕ್ಕ ಹುಡುಗನ ಬೆಕ್ಕಸಕ್ಕೆ ದೊಡ್ಡವರು ನಗುವಂತೆ ನಕ್ಕು ಮುಂದುವರಿಸಿದನು; "ತಿರುಪತಿಯಲ್ಲಿ ತೀರಿಕೊಂಡ ನಿಮ್ಮ ಬಾವನ ಸಹಧರ್ಮಿಣಿ, ನೀವು ಈ ಜನ್ಮದಲ್ಲಿ ಮದುವೆಯಾಗಬೇಕೆಂದಿರುವ ನಿಮ್ಮ ಪೂರ್ವಜನ್ಮದ ಪತ್ನಿಯಲ್ಲಿಯೆ, ನಿಮ್ಮ ಮಗಳಾಗಿ ಹುಟ್ಟಿ, ತನ್ನ ಹಿಂದಿನ ಜನ್ಮದ ಗಂಡನನ್ನೇ ಮದುವೆಯಾಗುತ್ತಾಳೆ!….

ಭಾವಾವೇಶದಲ್ಲಿ ಮುಕುಂದಯ್ಯನಿಗೆ ಮೆದುಳೆಲ್ಲ ಆವಿಯಾಗಿ ಬಿಟ್ಟಿತೊ ಎನ್ನುವಂತಾಗಿತ್ತು. ಆದರೂ ಧೈರ್ಯಮಾಡಿ ಹೇಳಿಯೆ ಬಿಟ್ಟನು: "ನಮ್ಮ ದೊಡ್ಡ ಅಕ್ಕ ಇನ್ನೂ ಬದುಕಿದ್ದಾರೆ. ಇವತ್ತಿನ ಸತ್ಯನಾರಾಯಣ ವ್ರತಕ್ಕಾಗಿ ದೇವಸ್ಥಾನಕ್ಕೆ ಬಂದಿದ್ದಾರೆ. ಅಲ್ಲಿ ಅವರಿಗೆ ಏನೊ ಮೈಮೇಲೆ ಬಂದುಬಿಟ್ಟಂತಾಗಿ ದೇವರಿಗೆ ಮೊರೆಯಿಟ್ಟರು!…."

"ಬದುಕಿರುವವರೂ ಸಾಯುತ್ತಾರೆ; ಸತ್ತವರು ಮತ್ತೆ ಹುಟ್ಟುತ್ತಾರೆ. ಹೀಗೆ ಸಾಗುತ್ತಿದೆ ಭಗವಂತನ ಲೀಲೆ!….ನೀವಿನ್ನು ಹೊರಡಿ. ನಿಮಗಾಗಿ ಕಾಯುತ್ತಿದ್ದಾರೆ. ನಿಮಗೆ ದೇವರು ಒಳ್ಳೆಯದು ಮಾಡಲಿ!" ಎಂದು ಸಂವಾದವನ್ನು ಸಟಕ್ಕನೆ ತುಂಡುಗಡಿದು ಸಂನ್ಯಾಸಿ ಎದ್ದು ನಿಂತನು. ಇನ್ನೂ ಏನೇನನ್ನೋ ಕೇಳಬೇಕೆಂದಿದ್ದ ಮುಕುಂದಯ್ಯ ಅತ್ಯಂತ ಭಕ್ತಿಭಾವದಿಂದ ಆತನ ಪಾದತಲದಲ್ಲಿ ಅಡ್ಡಬಿದ್ದು, ಎದ್ದುನಿಂತು, ಏನಾದರೂ ಪ್ರಸಾದ ಕೊಡಬಹುದೇ ಎಂದು ಒಂದು ಕ್ಷಣ ನಿರೀಕ್ಷಿಸಿ, ಅಂತಹ ಸೂಚನೆ ಏನೂ ಕಾಣದಿರಲು ಅಲ್ಲಿಂದ ಹೊರಟನು.

ಆಗತಾನೆ ಉದಯವಾದಂತೆ ತೋರಿತು. ಅವನಿಗೆ ಹೊರಗಡೆಯ ಪ್ರಪಂಚ! ಅದೇ ಹೊಳೆ, ಅದೇ ಹೊಳೆಯ ದಂಡೆ, ಅದೇ ಅಶ್ವತ್ಥವೃಕ್ಷ, ಅದೇ ಅರಳೀಕಟ್ಟೆ, ಅದೇ ಕಲ್ಲೂರು ದೇವಸ್ಥಾನ, ಅದೇ ಮನೆಗಳು-ಆದರೆ ಮುಕುಂದಯ್ಯನಿಗೆ ಇನ್ನೆಂದಿಗೂ ಆ ಪ್ರಪಂಚ ಮೊದಲಿನ ಪ್ರಪಂಚವಾಗಿರಲು ಸಾಧ್ಯವಿರಲಿಲ್ಲ. ತನ್ನಲ್ಲಿ ಉನ್ಮೇಷಿತವಾದ ನವೋತ್ಥಾನವನ್ನು ಸಾಧಾರಣತೆಯ ಸೋಗಿನಲ್ಲಿ ಸಾಧ್ಯವಾದಷ್ಟು ಮಟ್ಟಿಗೆ ಹುದುಗಿಸಿಕೊಂಡು ದೇವಸ್ಥಾನಕ್ಕೆ ಹೋದನು.

ಬ್ರಾಹ್ಮಣರ ಅನ್ನಸಂತರ್ಪಣೆ ಮುಗಿದು, ಶೂದ್ರರ ಊಟ ಪ್ರಾರಂಭವಾಗಿತ್ತು. ತನಗೆ ಏನೊಂದೂ ವಿಶೇಷ ಸಂಭವಿಸದವನಂತೆ ಹೋಗಿ ಪಂಕ್ತಿಯಲ್ಲಿ ಕುಳಿತುಕೊಂಡನು. ಹಾರುವರು ಹಾಕಿದ ಊಟದ ಸವಿಗೆ ಕಾಡು ಧರ್ಮು ತಿಮ್ಮು ಏನೇನೊ ಮಾತಾಡಿಕೊಳ್ಳುತ್ತಾ ನಗುತ್ತಾ ಉತ್ಸಾಹದಿಂದ ಉಣ್ಣುತ್ತಿದ್ದರು. ಆ ಹುಡುಗರ ಕಡೆ ನೋಡುತ್ತಾ ಮುಕುಂದಯ್ಯ 'ಇವರಲ್ಲಿ ಯಾರು ಯಾರಾಗಿರಬಹುದು?' ಎಂದುಕೊಂಡನು. ಪ್ರಪಂಚವನ್ನೆಂತೊ ಅಂತೆ ಆ ಮಕ್ಕಳನ್ನೂ ಅವನು ಹಿಂದೆ ನೊಡುತ್ತಿದ್ದಂತೆ ನೋಡಲು ಸಾಧ್ಯವಾಗಲೆ ಇಲ್ಲ. ಕಣ್ಣು ಹೊರಳಿಸಿ ತನ್ನ

ಹಳೆಯಮನೆಯ ಅಕ್ಕಯ್ಯ, ರಂಗಮ್ಮ ಹೆಗ್ಗಡತಿಯವರು, ಕೂತಿದ್ದ ದಿಕ್ಕಿಗೆ ನೋಡಿದನು. ಚೆಲುವಯ್ಯ ಕಣ್ಣಿಗೆ ಬಿದ್ದನು. ಅದೊಂದು ಅದ್ಭುತ ನಾಟಕದ ಲೀಲಾದೃಶ್ಯವಾಗಿ ತೋರಿ, ಮುಕುಂದಯ್ಯನ ಮುಖ ಭಾವದಿಂದ ಕೆಂಪಾಯಿತು; ತೊಟ್ಟಿಕ್ಕುವ ಅಶ್ರುವನ್ನು ಅಂಗಿತೋಳಿನಿಂದ ಒರಸಿಕೊಂಡು, ಪಂಚೆಯ ಅಂಚಿನಿಂದ ಮೂಗನ್ನು ಶುಚಿಮಾಡಿ, ಭಾವಗೋಪನಕ್ಕಾಗಿ ಬಗ್ಗಿ ಉಣತೊಡಗಿದನು.

* * *

## ೪೧

ದೇವರ ಕಾರ್ಯ ಮುಗಿಸಿಕೊಂಡು ಕಲ್ಲೂರಿನಿಂದ ಬೆಟ್ಟಳ್ಳಿಗೆ ಹಿಂತಿರುಗಿದ ಮರುದಿನವಸವಲ್ಲ ಅದರ ಮರುದಿವಸ ಮುಕುಂದಯ್ಯನೊಡನೆ ಧರ್ಮು ಅವನ ತಾಯಿ ಮತ್ತು ತಿಮ್ಮು ಮೂವರೂ ಕೋಣೂರಿಗೆ ಹೋಗುವುದೆಂದು ನಿಶ್ಚಯವಾಗಿತ್ತು. ಆದರೆ ಆ ದಿನ ಮಳೆ ಬೆಳಗಿದನಂದಲೂ ಹಿಡಿದು ಹೊಡೆಯಲು ಪ್ರಾರಂಭವಾಗಿ ಇಡಿಯ ದಿನವೆಲ್ಲ ಜಡಿ ಸುರಿದಿದ್ದರಿಂದ ಹೊರಡಲಿಲ್ಲ. ಹಳ್ಳಿಯ ಜನರು 'ಅಂತೂ ಮಳೆ ಕೂತ್ಹಾಂಗೆ ಆತು!' ಎಂದುಕೊಂಡಿದ್ದರು, ಮುಗಿಲ ಕಡೆ ನೋಡಿ.

ನಂಟರು ಮರುದಿನ ಬೆಳಿಗ್ಗೆ ಹೊರಟು ನಿಂತಾಗ ಅವರನ್ನು ಬೀಳ್ಕೊಳ್ಳಲು ಮನೆಯ ಗಂಡಸರು ಹೆಂಗಸರು ಎಲ್ಲರೂ ಹೊರ ಅಂಗಳದಲ್ಲಿ ನಿಂತಿದ್ದರು. ರಂಗಮ್ಮ ಚೆಲುವಯ್ಯನನ್ನು ಎತ್ತಿಕೊಂಡಿದ್ದಳು. 'ಹೋಗಿ ಬರ್ತೆವೆ' 'ಹೋಗಿ ಬನ್ನಿ' ಎಂದು ಹೇಳುವುದು ಕೇಳುವುದು ಎಲ್ಲ ಪೂರೈಸಿದಾಗ, ಚೆಲುವಯ್ಯನನ್ನು ತನ್ನ ಅಕ್ಕ ರಂಗಮ್ಮನ ಕೈಯಿಂದ ತಾನು ಕರೆದೆತ್ತಿಕೊಳ್ಳಲು ದೇವಮ್ಮ ತೋಳು ಚಾಚಿ ನಿಂತಾಗ ಅವನು ತನ್ನ ತಾಯಿಯ ಕೈಗೆ ಬರಲೊಲ್ಲದೆ ರಂಗಮ್ಮನ ಎದೆಗಪ್ಪಿಕೊಂಡು ಅವಳ ಸೆರಗಿನಲ್ಲಿ ಮುಖ ಮರೆಸಿಕೊಂಡನು. ಅದನ್ನು ಕಂಡು ಅಲ್ಲಿದ್ದವರೆಲ್ಲ ನಕ್ಕರು. ಅಜ್ಜ ಕಲ್ಲಯ್ಯ ಗೌಡರು "ಓ ಹೋ ಹೋ! ನೋಡ್ರಪಾ! ದೊಡ್ಡಮ್ಮನ್ನ ಬಿಟ್ಟಿರಾಕೇ ಮನಸ್ಸಿಲ್ಲ ಈ ಹುಡುಗ್‌ಗೆ!" ಎಂದು ವಿನೋದವಾಡಿದರು. ಹತ್ತಿರ ನಿಂತಿದ್ದ ಧರ್ಮು ಚೆಲುವಯ್ಯನ ಕಡೆ ಕೈನೀಡಿ "ನಾನು ಕರಕೋಳ್ತೀನೊ! ನನ್ನ ಹತ್ರಕ್ಕೆ ಬಾರೊ, ಪುಟ್ಟಾ!" ಎಂದು ಮುದ್ದು ಮಾತಾಡಿ ತೋಳುಚಾಚಲು ಸ್ವಲ್ಪವೂ ಪ್ರತಿಭಟಿಸದೆ ಅವನ ಕೈಗೆ ಹೋದನು. ಅದನ್ನು ಕಂಡು ಮತ್ತೆ ಎಲ್ಲರೂ ನಕ್ಕರು. ಆದರೆ ಮತ್ತೆ ತನ್ನನ್ನು ಕರೆದುಕೊಳ್ಳಲು ಬಂದ ತನ್ನ ತಾಯಿಯ ಕೈಗಾಗಲಿ ಅಜ್ಜಿಯ ಕೈಗಾಗಲಿ ಹೋಗಲೊಲ್ಲದೆ ರೊಚ್ಚೆಮಾಡುತ್ತಿರಲು ತುಸು ಬಲತ್ಕಾರವಾಗಿಯೆ ಅವನ ತಾಯಿ ಎಳೆದೆತ್ತಿಕೊಂಡಾಗ ಅವನು ಅಳತೊಡಗಿದನು. ಆದರೆ ಆ ಶಿಶುವರ್ತನೆಗೆ, ದೂರದಲ್ಲಿ ನಿಂತು ವಿಸ್ಮಯ ಮುಖಮುದ್ರೆಯಿಂದ ನೋಡುತ್ತಿದ್ದ ಮುಕುಂದಯ್ಯ ವಿನಾ, ಯಾರೂ ಅಷ್ಟು ವಿಶೇಷ ಗಮನ ಕೊಡದೆ ನಂಟರನ್ನು ಬೀಳ್ಕೊಂಡರು. ರಂಗಮ್ಮ ಹನಿಗಣ್ಣಾಗಿಯೆ ಹೊರಟಳು.

ಅವಳಿಗೆ ಬೆಟ್ಟಳ್ಳಿಗೆ ಬಂದಾಗಿನಿಂದ ಏನೋ ಒಂದು ರೀತಿಯ ಮನಸ್ಸಾಮಾಧಾನ ಒದಗಿತ್ತು. ಶಿಶು ಚೆಲುವಯ್ಯನ ಸಂಗವೂ ಅವಳ ಮನಸ್ಸನ್ನು ತನ್ನ ಸಂಕಟದಿಂದ ದುರ ಕರೆದೊಯ್ದು, ಅದರ ದುಃಸ್ಮೃತಿಯ ಮೇಲೆ ತೆಳ್ಳನೆಯ

ವಿಸ್ಮೃತಿಯ ಪರದೆಯನ್ನೆಳೆದಂತಾಗಿತ್ತು. ಅಲ್ಲದೆ ಕಲ್ಲೂರಿನ ದೇವಸ್ಥಾನದಲ್ಲಿ ಇದ್ದಕ್ಕಿದ್ದಹಾಗೆ ದೇವರ ಪಕ್ಕದಲ್ಲಿ ತನ್ನ ಗಂಡ ದೊಡ್ಡಣ್ಣಹೆಗ್ಗಡೆ ತಾನು ತಿರುಪತಿಗೆ ಹೊರಟಾಗ ಇದ್ದಂತೆಯೆ ಕಾಣಿಸಿಕೊಂಡಂತಾಗಿ, ಅವಳ ಹೃದಯದಲ್ಲಿ ಅವಳಿಗೆ ಅರ್ಥವಾಗದ ಏನೋ ಒಂದು ರೀತಿಯ ಪರಿವರ್ತನೆಯಾಗಿತ್ತು.

ಅವಳ ತಮ್ಮ ಮುಕುಂದಯ್ಯ ಅಳಿಂದ ಮಾತ್ರ ಗುಟ್ಟಾಗಿರಲು ಪ್ರಯತ್ನಿಸಿದ್ದ ಸುದ್ದಿ ಐಗಳು ಅನಂತಯ್ಯ ತೀರ್ಥಹಳ್ಳಿಯಿಂದ ಹಿಂದಿರುಗಿ ಬಂದು, "ಆ ಗೋಸಾಯಿ ಬೇರೆ ಯಾರೂ ಅಲ್ಲ, ದೊಡ್ಡಣ್ಣಹೆಗ್ಗಡೆಯೆ ಹೌದು" ಎಂದು ಗುರುತಿಸಿದ್ದ ಸುದ್ದಿ, ಅವಳ ಕಿವಿ ನೇರವಾಗಿ ತಲುಪದಿದ್ದರೂ, ಅವರಿವರ ಗುಟ್ಟಿನ ಮಾತುಗಳಿಂದಲೂ ಗುಟ್ಟಿನ ವರ್ತನೆಯಿಂದಲೂ ಗುಮಾನಿಯಾಗುವಷ್ಟರ ಮಟ್ಟಿಗೆ ಗೊತ್ತಾಗಿತ್ತು ಆದ್ದರಿಂದಲೇ ಅವಳು ಒಮ್ಮೆ ಏಕಾಂತವಾಗಿ ತನ್ನ ಮಗ ಧರ್ಮುವಿನ ಹತ್ತಿರ "ತಮ್ಮಾ, ನೀನಾದ್ರೂ ನನ್ನ ಒಂದು ಸಾರಿ ತೀರ್ಥಹಳ್ಳಿಗೆ ಕರೆದುಕೊಂಡು ಹೋಗ್ತಿಯಾ? ನನ್ನ ಕಂಡ ಮ್ಯಾಲಾದ್ರೂ ಅವರಿಗೆ ನೆನಪು ಸರಿಯಾಗಿ ಬಂದು, ಸುಖವಾಗಿ ಮನೀಗೆ ಬರ್ತಿದ್ರೋ ಏನೋ?" ಎಂದು ತನ್ನ ಹೃದಯದ ನೋವನ್ನು ತೋಡಿಕೊಂಡಿದ್ದಳು.

ಕೋಣೂರಿಗೆ ಹೊರಟಿದ್ದ ನಂಟರೊಡನೆ ಷಿಕಾರಿ ಉಡುಪಿನಲ್ಲಿದ್ದ ದೇವಯ್ಯನೂ ತನ್ನ ಹೊಚ್ಚಹೊಸ ತೋಟಾಕೋವಿಯನ್ನು ಹೆಗಲಮೇಲೆ ಹಾಕಿಕೊಂಡು ಹೊರಟಿದ್ದನು. ಅವನು ಸಾರಿಕೆಬೇಟೆಗೆ ಹೋಗಬೇಕೆಂದಿದ್ದ ಆ ಕಾಡಿಗೆ ಕೋಣೂರಿನ ಕಾಲುದಾರಿಯಲ್ಲಿಯೆ ಅಗಚಿ ಹೋಗಬೇಕಾಗಿತ್ತು. ಅವನನ್ನು ಹಿಂಬಾಲಿಸಿ ಮೂರು ನಾಲ್ಕು ನಾಯಿಗಳೂ ಹೊರಟಿದ್ದುವು.

ದೇವಯ್ಯ ಮುಕುಂದಯ್ಯರು ತಮ್ಮ ತಮ್ಮೊಳಗೆ ಮಾತಾಡಿಕೊಳ್ಳುತ್ತಾ ಹೋಗುತ್ತಿದ್ದರು, ಕಲ್ಲೂರು 'ಗಡ್ಡದಯ್ಯ'ನನ್ನು ಸಂದರ್ಶಿಸಿದ್ದರ ವಿಚಾರವಾಗಿ. ದೇವಯ್ಯನೆಂದನು:

ಅವರೇನು ಸಾಮಾನ್ಯ ಮನುಷ್ಯರಲ್ಲೋ; ದೊಡ್ಡ ವಿದ್ವಾಂಸರೇ ಇರಬೇಕು. ಅವರ ಹತ್ತಿರ ಇತ್ತಲ್ಲಾ ಆ ಇಂಗ್ಲೀಷು ಪುಸ್ತಕ?.... ನೀ ನೋಡ್ದೇನು?....ಇನ್ನೊಂದು ಸಾರಿ ಅವರ ಹತ್ರ ಹೋಗಬೇಕಲ್ಲಾ! ಯಾವಾಗ ಹೋಗಾನ ಹೇಳು.

ದೇವಯ್ಯನಿಗಿಂತಲೂ ನೂರುಮಡಿ ಗಡ್ಡದಯ್ಯನ ಪ್ರಭಾವವನ್ನು ಅರಿತು ಅನುಭವಿಸಿದ್ದ ಮುಕುಂದಯ್ಯ ಹೆಚ್ಚಿಗೆ ಏನೂ ಮಾತಾಡದೆ "ಹೋಗಾನ.... ನಮ್ಮ ದೊಡ್ಡಣ್ಣ ಬಾವನ್ನ ಮನೀಗೆ ಕರಕೊಂಡು ಬಂದಮ್ಯಾಲೆ...." ಎಂದನಷ್ಟೆ. ಆದರೆ ತಾನೊಬ್ಬನೆ ಇದ್ದಾಗ ಗಡ್ಡದಯ್ಯ ತನಗೊಬ್ಬನಿಗೇ ಎಂದು ಹೇಳಿದ್ದ ಭಯಂಕರ ರಹಸ್ಯದ ವಿಚಾರವಾಗಿ ಒಂದು ಚಕಾರದ ಗುಟ್ಟನ್ನೂ ಬಿಟ್ಟುಕೊಡಲಿಲ್ಲ.

ಅಷ್ಟರಲ್ಲಿ ಅವರ ದಾರಿ ಬೆಟ್ಟಳ್ಳಿ ಹೊಲಗೇರಿಯ ಸಮೀಪದಲ್ಲಿದ್ದ ಕಾರೆಮಟ್ಟಿನ ಅರೆಕಲ್ಲಿನ ಬುಡಕ್ಕೆ ಸಾಗಿತ್ತು. ಎಲ್ಲಿ ಗುತ್ತಿ ಸಿಂಬಾವಿ ಗುತ್ತಿಯ ನಾಯಿ, ಹುಲಿಯ, ಅವನೊಡನೆ ಅಲ್ಲಿಗೆ ಬಂದಾಗಲೆಲ್ಲ ತಪ್ಪದೆ ಕಾಲೆತ್ತಿ ಗುಂಡುಗಲ್ಲಿಗೆ ಅಭಿಷೇಕ ಮಾಡಿಯೆ ಮಾಡುತ್ತಿತ್ತೋ ಅಲ್ಲಿಗೆ: ಎಲ್ಲಿ ಗುತ್ತಿ ಹೊಂಚಿ ಕೂತು, ತನ್ನೆಡೆಗೆ ಬೈಕುಪ್ಪಿನಲ್ಲಿ ಕದ್ದು ಓಡಿ ಬಂದಿದ್ದ ತಿಮ್ಮಿಯನ್ನು ಸಂಧಿಸಿ, ಅವಳನ್ನು ಹುಲಿಕಲ್ಲು ನೆತ್ತಿಯ ಮಾರ್ಗವಾಗಿ ಸಿಂಬಾವಿಗೆ ಹಾರಿಸಿಕೊಂಡು ಹೋಗಿದ್ದನೋ ಅಲ್ಲಿಗೆ!

ಅಪ್ರಸಿದ್ಧ ಯಃಕಶ್ಚಿತ ವ್ಯಕ್ತಿಗಳಿಗೆ ಸಂಬಂಧಪಟ್ಟುದಾದರೂ ತೀವ್ರ ಭಾವಮಯವಾದ ವಿಶೇಷ ಘಟನೆಗಳು ಸಂಭವಿಸಿದ ಸಾಧಾರಣ ಸ್ಥಳಗಳಿಗೂ ಒಂದು ಸ್ಮೃತಿಸಂಸ್ಕಾರರೂಪದ ವಿಶಿಷ್ಟ ಮನೋಮಂಡಲ ಕಲ್ಪಿತವಾಗಿದ್ದು, ತರುವಾಯ ಅದನ್ನು ಪ್ರವೇಶಿಸುವ ಸಮಾನ ಸಹಾನುಭೂತಿಯ ಮತ್ತು ಅನುಕಂಪೆಯ ವ್ಯಕ್ತಿಗಳ ಹೃದಯದಲ್ಲಿ ಏನಾದರೂ ಪ್ರತಿಕ್ರಿಯೆಯನ್ನುಂಟುಮಾಡುತ್ತವೆಂದೂ ಏನೋ? ಅಥವಾ ತನಗೆ ಪೂರ್ವ ಪರಿಚಯವಿದ್ದು ಅಲ್ಲಿಯೆ ಸಮೀಪದಲ್ಲಿದೆ ಎಂದು ಗೊತ್ತಿದ್ದ ಹೊಲಗೇರಿಯ ಪ್ರಭಾವದಿಂದಲೊ? ಮುಕುಂದಯ್ಯ ದೇವಯ್ಯನನ್ನು ಕೇಳಿದನು: "ಅಲ್ಲಾ, ಭಾವ, ಮಾವನೂ ನೀನೂ ಸೇರಿಕೊಂಡು ಏನೇನೋ ಪುಕಾರು ಮಾಡ್ತಿದ್ದೀರಂತೆ? ಆ ಸಿಂಬಾವಿ ಹೋಲೇರ ಗುತ್ತಿ ಮದುವೆಯಾದೋಳ್ನ ಏನೇನೊ ಪುಕಾರುಮಾಡಿ ಕರಕೊಂಡು ಬಂದು, ನಿಮ್ಮ ಗಾಡಿ ಹೊಡಿಯೋ ಬಚ್ಚಗೆ ಬಲಾತ್ಕಾರವಾಗಿ ಕೂಡಿಕೆ ಮಾಡ್ತೀರಂತೆ! ಹೌದೇನು?"

"ಯಾರು ಹೇಳ್ದೋರು ನಿನಗೆ? ಅವಳನ್ನ ಆ ಬಚ್ಚಗೆ ಕೊಟ್ಟು ಮದೇಮಾಡೋದು ಅಂತಾ ಎಲ್ಲ ನಿಶ್ಚಯವಾಗಿತ್ತು. ಆ ತಾಯಿಗ್ಗಂಡ ಗುತ್ತಿ, ನಮ್ಮ ಮನೇಮೇಲೆ ಯಾವಾಗ್ಲೂ ಕತ್ತಿಕಟ್ಟೋಕೆ ಸಮಯ ಕಾಯ್ತಾ ಇರ್ತಾನಲ್ಲಾ ಆ ಭರಮೈಹೆಗ್ಗಡೆ, ಅವನ ಮಸಲತ್ತಿಗೆ ಒಳಗಾಗಿ, ಈ ಹುಡುಗೀನ ಹಾರಿಸಿಕೊಂಡು ಹೋಗಿ, ಸುಳ್ಳೆಮಳ್ಳೆ ಮದುವೆ ಆಯ್ತು ಅಂತಾ ಸುದ್ದಿ ಹುಟ್ಟಿಸಿದ್ದ...ಯಾರೇನು ಎಳಕೊಂಡು ಬರ್ಲಿಲ್ಲ ಅವಳ್ನ. ಅವಳ ಅಪ್ಪನೇ ಸಿಂಬಾವಿಗೆ ಹೋಗಿ, ಬುದ್ಧಿ ಹೇಳಿ, ಒಪ್ಪಿಸಿ, ಕರಕೊಂಡು ಬಂದಿದ್ದು....ಗೊತ್ತಾಯ್ತೇನು?" ದೇವಯ್ಯ ತಾನೂ ತನ್ನ ತಂದೆಯೂ ನಿರಾಪರಾಧಿಗಳೆಂಬುದನ್ನು ಸಮರ್ಥಿಸಿ ಮಾತಾಡಿದ್ದನು.

"ಆ ಹುಡುಗೀಗೆ ಇಷ್ಟ ಇಲ್ಲಂತೆ, ಬಚ್ಚನ್ನ ಮದುವೆ ಆಗೋಕೆ? ಅವಳೇ ತನ್ನಿಚ್ಛೆಯಿಂದಲೆ ಹೋಗಿದ್ದಂತೆ ಗುತ್ತಿ ಸಂಗಡ?.... ಕೆರೆ ಬಾವಿ ಹಾರ್ತೀನಿ ಅಂತಾಳಂತೆ ಈಗ!"

"ಹುಡುಗಿ ಇಷ್ಟಾನೋ? ಹಿ ಹ್ಹಿ ಹ್ಹಿ ಹ್ಹಿ! ಅಪ್ಪ, ಅಮ್ಮ, ಸಾಲ ಕೊಟ್ಟೋರು ಉಪ್ಪು ಅನ್ನ ಹಾಕಿ ಸಾಕ್ದೋರು, ಯಾರ ಇಷ್ಟಾನೂ ಲೆಕ್ಕಕ್ಕಿಲ್ಲ? ಹುಡುಗಿ ಇಷ್ಟ ಮಾತ್ರ ಲೆಕ್ಕಕ್ಕೆ ಬರ್ತದೆ? ಒಳ್ಳೇ ನ್ಯಾಯ ಬಿಡೂ ನಿನ್ದೂ?.... ಈಗಿನ ಕಾಲದಲ್ಲಿ ಯಾರಪ್ಪಾ ಕೇಳ್ತಾರೆ ಹುಡುಗಿ ಇಷ್ಟಾನ?....ನಿನಗೆ ಗೊತ್ತಲ್ಲ!" ದೇವಯ್ಯ ಮುಕುಂದಯ್ಯನ ಕಣ್ಣನ್ನು ನೇರವಾಗಿ ನೋಡಿದುದರ ಇಂಗಿತ ಅವನಿಗೆ ತಟ್ಟನೆಹೊಳೆದು, ಮುಖ ತಿರುಗಿಸಿ, ಕಾಡುದಟ್ಟಯಿಸಿದ್ದ ಮಲೆಯ ಸಾಲನ್ನೂ ಅದರಾಚೆ ಮೋಡ ಕವಿದಿದ್ದ ಚೆನ್ನಮ್ಮನ ದುಃಖ ನೋಡುತ್ತಾ ನಿರುತ್ತರನಾದನು, ಮನಸ್ಸಿನ ದಿಗಂತದಲ್ಲಿ ಹೂವಳ್ಳಿ ಚೆನ್ನಮ್ಮನ ದುಃಖ ದಾರುಣ ಮೂರ್ತಿ ಹೊಳೆದಂತಾಗಿ!

ತುಸದೂರ ಇಬ್ಬರೂ ಮೌನವಾಗಿಯೆ ಮುಂಬರಿದಿದ್ದರು.... ದೇವಯ್ಯ ಕಾಡಿನ ಕಡೆಗೆ ಏರುವ ಓಣಿಯ ಬಳಿ ನಿಂತು "ನಾನಿಲ್ಲೇ ಅಗಚಿ ಹೋಗ್ತೀನೋ, ಮುಕುಂದು" ಎಂದು ತಮಗಿಂತಲೂ ಸ್ವಲ್ಪ ಹಿಂದೆ ಬರುತ್ತಿದ್ದ ತನ್ನ ರಂಗತ್ತೆಯ ಹಿಂದೆ ಮುಂದೆ ಸುತ್ತಮುತ್ತ ಏನೇನೋ ಬಾಲಲೀಲೆಗಳನ್ನಾಡುತ್ತಾ, ಹಣ್ಣುಗಳನ್ನು ಕುಯ್ಯುತ್ತಾ ಮಟ್ಟುಗಳಲ್ಲಿ ಹಕ್ಕಿಯ ಗೂಡುಗಳನ್ನು ಹುಡುಕುತ್ತಾ ಬರುತ್ತಿದ್ದ ಧರ್ಮು ತಿಮ್ಮು ಅವರನ್ನು ಕರೆದು "ಹೋಗಿ ಬರ್ತೀರೇನ್ರೋ, ಏ ತಂಟೆಗಳಾ!" ಎಂದು ವಿನೋದವಾಡಿ, ಅವರಿಬ್ಬರೂ ತನ್ನೆಡೆಗೆ ಓಡಿ ಬರುವಷ್ಟರಲ್ಲಿ ನಾಯಿಗಳೊಡನೆ ಹಳುವಿನಲ್ಲಿ ಹೊಕ್ಕುಬಿಟ್ಟನು. ನಿಂತಿದ್ದ ಮುಕುಂದಯ್ಯನನ್ನು ಅವನ ಹಳೆಮನೆ ಅಕ್ಕಯ್ಯ ಕೂಡಿಕೊಂಡ ಮೇಲೆ ಮತ್ತೆ ಎಲ್ಲರೂ ಮುನ್ನಡೆದರು.

ನಾಲ್ಕು ಹೆಜ್ಜೆ ಹೋಗಿದ್ದರು. ರಂಗಮ್ಮ ಕೇಳಿದಳು. "ತಮ್ಮಯ್ಯ, ನೀವೆಲ್ಲ ಸೇರಿ ಯಾಕೆ ಈ ಮೂಚ್ಚುಮರೆ ಮಾಡ್ತಿದ್ದೀರೋ ನಾ ಕಾಣೆ. ಇಷ್ಟು ವರ್ಷಾಣೆ ಎಲ್ಲ ಸೈಸಿದವಳು ಇನ್ನು ಮುಂದೆ ಬರಾದನ್ನ ಸೈಸಲಾರನೇ?"

ಮುಕುಂದಯ್ಯ ಐಗಳು ತೀರ್ಥಹಳ್ಳಿಗೆ ಹೋಗಿ ಹಿಂದಿರುಗಿ ಬಂದು ಹೇಳಿದ್ದ ವಿವರಗಳನ್ನೆಲ್ಲ ಹೇಳಿದನು. ಧರ್ಮು ತಿಮ್ಮು ಇಬ್ಬರಿಗೂ ತಮ್ಮ ಆಟ ಗೀಟ ಎಲ್ಲವನ್ನು ಬಿಟ್ಟು ಅತ್ಯಂತ ಗಂಭೀರವಾಗಿ ರಂಗಮ್ಮನ ಪಕ್ಕದಲ್ಲಿಯೆ ನಡೆಯುತ್ತಾ ಆಲಿಸುತ್ತಿದ್ದರು.

"ಅವರೇ ಹೌದು ಅಂತಾ ಆದಮೇಲೆ ನನ್ನ್ಯಾಕೆ ನೀ ತೀರ್ಥಹಳ್ಳಿಗೆ ಕರಕೊಂಡು ಹೋಗಬಾರದು?" ರಂಗಮ್ಮ ಕೇಳಿದಳು.

"ಅವರಿಗೆ ಸ್ವಲ್ಪವೂ ನೆನಪೇ ಇಲ್ಲವಂತೆ…."

"ನನ್ನೂ ಧರ್ಮುನೂ ನೋಡಿದರೆ ನೆನ್ಪಾಗಬೈದೋ ಏನೋ?"

ಗಡ್ಡದಯ್ಯನನ್ನು ಸಂದರ್ಶಿಸುವುದಕ್ಕೆ ಮೊದಲೇ ಆಗಿದ್ದರೆ ಮುಕುಂದಯ್ಯ 'ಆಗಲಿ' ಎನ್ನುತ್ತಿದ್ದನು. ಆದರೆ ಈಗ ಅವನು ಇತರರಿಗೆ ಇಲ್ಲದಿದ್ದ ಮತ್ತು ಇತರರಿಗೆ ಹೇಳಬಾರದಿದ್ದ ಒಂದು ರಹಸ್ಯಜ್ಞಾನದ ಸಂಕಟಕ್ಕೆ ಸಿಕ್ಕಿದ್ದನು!

"ಸ್ವಲ್ಪ ತಡಿ, ಅಕ್ಕಯ್ಯ, ನಾನೂ ಬೆಟ್ಟಳ್ಳಿ ಬಾವನೂ ನಾಳೆ ನಾಡಿದ್ದರ ಹಾಂಗೆ ಅವರೆ ಗಾಡಿ ಕಟ್ಟಿಸಿಕೊಂಡು ಹಗಾನ ಅಂತಾ ಮಾಡಿದ್ದೀವಿ…."

ತುಸು ನಡುಕು ದನಿಂಯಿಂದಲೆ ಹೇಳಿದಳು ರಂಗಮ್ಮ:

"ನೆನಪು ಬರ್ಲಿ, ಬರದೇ ಇರ್ಲಿ, ಕರಕೊಂಡು ಬಂದುಬಿಡು, ತಮ್ಮಯ್ಯಾ, ದೇವರು ಮಾಡಿಸಿದ್ಹಾಂಗ ಆಗ್ತದೆ."

ಏನಾದರೂ ಆಗಲಿ, ಹೇಗಾದರೂ ಇರಲಿ, ಎಂಟು ವರ್ಷಗಳಿಂದ ಪರಿತಪಿಸುತ್ತಿದ್ದ ರಂಗಮ್ಮಗೆ ತನ್ನ ಗಂಡನ ಮುಖದರ್ಶನವಾದರೂ ಸಾಕು, ಬೆಂದೆದೆಗೆ ತಂಪಾಗಿ ತಾನು ಧನ್ಯೆಯಾಗುತ್ತೇನೆ ಎಂಬ ಮನಸ್ಸು.

ಸ್ವಲ್ಪ ಹೊತ್ತು ಯಾರೊಬ್ಬರೂ ಮಾತಾಡದೆ ತಮ್ಮ ತಮ್ಮ ಚಿಂತೆಯಲ್ಲಿಯೆ ಮಗ್ನರಾದಂತೆ ಮುಂದುವರಿದಿದ್ದರು. ಇದ್ದಕ್ಕಿದ್ದ ಹಾಗೆ ಮಲೆಯ ಓರೆಯ ಕಾಡಿನ ನಡುವಣೆತ್ತರದಿಂದ ನಾಯಿಗಳು ಬೊಗಳುವ ದೂರದ ಸದ್ದು ಕೇಳಿಸಿತು. ಧರ್ಮು ತಿಮ್ಮು ಇಬ್ಬರೂ ಉತ್ಸಾಹಿತರಾಗಿ ಕಿವಿಗೊಟ್ಟಿದ್ದರು. ಆಲಿಸುತ್ತಿದಂತೆಯೆ ಒಂದು ಕೋವಿಈಡೂ ಕೇಳಿಸಿತು. ದೂರದ ಆ ಢಂಕಾರ ಕಾಡಿನ ಸಾಹಸದ ಕೇಕೆಯಂತೆ ಕೇಳಿಸಿ, ಧರ್ಮು ತಿಮ್ಮು ಇಬ್ಬರೂ ಕುಣಿದಾಡುತ್ತಾ 'ಬೆಟ್ಟಳ್ಳಿ ಚಿಕ್ಕಪ್ಪಯ್ಯ ಎಂಥದನ್ನೋ ಹೊಡದ್ರು ಅಂತಾ ಕಾನ್ತದೆ!' 'ದ್ಯಾವಣ್ಣಮಾವ ಹಂದಿ ಹೊಡದ್ರೋ! ದ್ಯಾವಣ್ಣಮಾವ ಹಂದಿ ಹೊಡದ್ರೋ!' ಎಂದು ಕೂಗುತ್ತಾ ಆ ಸ್ಥಳಕ್ಕೇ ಓಡತೊಡಗಿದರು. ಮುಕುಂದಯ್ಯ ಗದರಿಸಿ ಇಬ್ಬರನ್ನೂ ಹಿಂದಕ್ಕೆ ಕರೆದು ಭರ್ತ್ಸನೆ ಮಾಡಿದನು: "ನಿಮಗೇನು ಆಟಾನಾ? ಅದೆಷ್ಟು ದೂರ ಅಂತಾ ನಿಮಗೇನು ಗೊತ್ತೇ?

ಈಡು ಇಲ್ಲೇ ಕೇಳಿಸಿದ್ಹಾಂಗಾಯ್ತು ಅಂತಾ ಅದೇನು ಇಲ್ಲೆ ಹತ್ರ ಅದೆ  ಅಂತಾ ಮಾಡಿರೇನು? ಬನ್ನಿ, ಸುಮ್ಮನೆ ಬನ್ನಿ!"

ಇವರು ಕಮ್ಮಾರಸಾಲೆ ಇದ್ದ ಜಾಗಕ್ಕೆ ಬರುವಷ್ಟರಲ್ಲಿ ಆಕಾಶವೆಲ್ಲ ಮೋಡ ತುಂಬಿ, ಮೋಡಗತ್ತಲೆಯ ಮಬ್ಬು ಕವಿದಿತ್ತು. "ಇವತ್ತೂ ನಿನ್ನ ಹಾಂಗೆ ಮಳೆ ಹಿಡಿದು ಹೊಡೀತದೆಯೋ ಏನೋ ಕರ್ಮ?" ಎಂದುಕೊಂಡ ಮುಕುಂದಯ್ಯ, ತನಗೆ ತಾನೆ "ಏನಾದಾರಾಗಲಿ; ಮುಂಜಾಗ್ರತೆಯ ಕ್ರಮವಾಗ ಒಂದು ಓಲೆಕೊಡೆಯನ್ನಾದರೂ ಈಸಿಕೊಂಡು ಬಂದಿರುತ್ತೇನೆ" ಎಂದು ಉಳಿದವರನ್ನು ಹಳುವಿನ ನಡುವಣ ಕಾಲುದಾರಿಯಲ್ಲಿ ನಿಲ್ಲುವಂತೆ ಹೇಳಿ, ತಾನೊಬ್ಬನೆ ಹಿಂದಿನ ದಿನದ ಮಳೆಯಲ್ಲಿ ನಿಂತಿದ್ದ ಕೆಸರು ಹಾರದಂತೆ ಪಂಚೆಯನ್ನು ಎತ್ತಿ ಕಟ್ಟಿಕೊಂಡು, ಪುಟ್ಟಾಚಾರಿಯ ಗುಡಿಸಲಿಗೆ ಹೋದನು. ಅವೊತ್ತು ಆಚಾರಿ ತಿದಿಬೆಂಕಿ ಹೊತ್ತಿಸಿರಲಿಲ್ಲ; 'ಕೂತಿದ್ದನು!' ಎಂದರೆ ರಜಾ ತೆಗೆದುಕೊಂಡಿದ್ದನು!

ಓಲೆಕೊಡೆಯನ್ನು ಕೊಡುತ್ತಾ ಪುಟ್ಟಾಚಾರಿ ಮುಕುಂದಯ್ಯನ ಕಡೆಗೆ ಅರ್ಥಪೂರ್ಣವಾಗಿ ನೋಡಿ "ಗೌಡರ ಸವಾರಿ ಯತ್ತ ಮಕ ಹೋಗಿತ್ತು?.... ಚೇಂಕ್ರ ಸಿಕ್ಕಲಿಲ್ಲೇನು ನಿಮಗೆ?" ಎಂದನು.

ಮುಕುಂದಯ್ಯ ತಾನು ಇತರರೂ ಬೆಟ್ಟಳ್ಳಿಯಿಂದ ಬರುತ್ತಿದ್ದೇವೆ ಎಂಬುದನ್ನು ತಿಳಿಸಲು, ಪುಟ್ಟಾಚಾರಿ "ಹಂಗಾರೆ ನಿಮಗಿನ್ನೂ ಸುದ್ದಿ ಗೊತ್ತಾಗಿಲ್ಲ?" ಎಂದನು.

"ಯಾವ ಸುದ್ದಿ?"

"ಚೇಂಕ್ರ ಅಂತಕ್ಕನ ಕಡೆಯಿಂದ ಒಂದು ಕಾಗದ ತಂದಿದ್ದ. ತೀರ್ಥಳ್ಳಿ ಪಾದ್ರಿ ಕಳಿಸಿದ್ದಳಂತೆ...."ಪುಟ್ಟಾಚಾರಿ ಇನ್ನೂ ಮುಗಿಸಿರಲಿಲ್ಲ.

"ಕುಡುಕ ಸೂಳೇಮಗ ಎತ್ತ ಸತ್ತ?" ರೇಗಿ ಕೇಳಿದನು ಮುಕುಂದಯ್ಯ, ಏನು ವಾರ್ತೆ ಕಳುಹಿಸಿದ್ದಾರೆಯೋ ಜೀವರತ್ನಯ್ಯ ಎಂಬ ಕಳವಳಕ್ಕೆ ಸಿಕ್ಕಿ.

"ಆವಾಗ್ಲೆ ಹೋದನಲ್ಲ, ಕೋಣೂರು ಗೌಡ್ರಿಗೆ ಕಾಗದ ಕೋಡ್ತೀನಿ ಅಂತಾ?.... ಸುಳ್ಳೋ.... ಬದ್ದೋ? ಅಂತೂ ಅಂವ ಹೇಳಿದ್ದು: ದೊಡ್ಡಣ್ಣ ಹೆಗ್ಗಡೇರಿಗೆ ಇಪರೀತ ಕಾಯಿಲೆ ಆಗಿ, ಇನ್ನೇನು ಅತ್ತೋ ಇತ್ತೋ ಅನ್ನೋ ಹಾಂಗಿದಾರಂತೆ!...."

ಪುಟ್ಟಾಚಾರಿಯು ಮುಂದಿನ ಮಾತನ್ನು ಕೇಳಲು ಮುಕುಂದಯ್ಯ ಅಲ್ಲಿರಲಿಲ್ಲ.

ಕೊಡೆ ತೆಗೆದುಕೊಂಡು ಬಂದವನು ಯಾರೊಡನೆಯೂ ಏನೂ ಮಾತನಾಡದೆ ಮನೆಯ ಕಡೆಗೆ ಬಿರುಬಿರನೆ ಕಾಲು ಹಾಕತೊಡಗಿದನು. ಧರ್ಮು ತಿಮ್ಮು ರಂಗಮ್ಮ ಮೂವರೂ ಓಡೋಡಿ ಏದುತ್ತಾ ಅವನನ್ನು ಹಿಂಬಾಲಿಸಬೇಕಾಯಿತು.

ಆದರೆ ಬಹಳ ದೂರ ಹೋಗಿರಲಿಲ್ಲ. ಎದುರುಗಡೆಯಿಂದ ಓಡಿ ಬರುತ್ತಿದ್ದ ಐತ ಪೊದೆಗಳ ನಡುವೆ ಕಾಣಿಸಿದನು.

"ಏನೋ, ಐತ? ಯಾಕೋ ಓಡಿಬರುತ್ತಿದ್ದೀಯ?" ಮೇಲೆ ಕೆಳಗೆ ಉಸಿರೆಳೆದು ಏದುತ್ತಿದ್ದ ಐತನಿಗೆ ಮುಕುಂದಯ್ಯ ತುಸು ಭಾವವಶನಾಗಿ ಏದುತ್ತಲೆ ಪ್ರಶ್ನೆ ಹಾಕಿದ್ದನು.

ಐತ ಏನನ್ನೊ ಸೊಂಟದಲ್ಲಿ ಕೈಯಾಡಿಸಿ ಹುಡುಕುತ್ತಾ ಹೇಳಿದನು. ತೊದಲು ತೊದಲಾಗಿ: "ಮತ್ತೆ....ಮತ್ತೆ.... ಮತ್ತೆ.... ಕಾಣಿ.... ಇಜಾರದ ಸಾಬೂನ ತೀರ್ಥಹಳ್ಳಿ ಆಸ್ಪತ್ರೆಗೆ.... ಸೇರಿಸಕ್ಕೆ.... ಕರಕೊಂಡು ಹೋಗಿದ್ನಂತೆ ಲುಂಗೀಸಾಬು. ಸಿಂಗಾವಿ ಗುತ್ತಿ ಕತ್ತೀಲಿ ಕಡಿದುಬಿಟ್ಟಿದ್ನಂತೆ ಅವನ್ನ....ಸಾಯಾಕಾಗಿ ಬಿದ್ದಾನಂತೆ ಇಜಾರದ ಸಾಬು!.... ಖೂನಿ ಮಾಡ್ಯಾನೆ ಅಂತಾ ಹೇಳಿ.... ಗುತ್ತಿನ.... ಕೋಳಹಾಕಿ ಹಿಡುಕೊಂಡು ಹೋಗಾಕೆ ಗೇಟೇಸಿನೋರು ಬಂದಾರಂತೆ.... ಲುಂಗಿಸಾಬು ಜೊತೇಲಿ! ಲುಂಗಿಸಾಬು ತಂದುಕೊಟ್ಟನಂತೆ ಈ ಕಾಗದಾನ ಅಂತಕ್ಕನ ಕೈಲಿ. ಚೇಂಕ್ರ ತಂದುಕೊಟ್ಟ.... ದೊಡ್ಡ ಗೌಡ್ರು ಓದಿ ನನ್ನ ಕೈಲಿ ಕೊಟ್ರು, 'ಬೇಗ ಓಡು ಬೆಟ್ಟಳ್ಳಿಗೆ. ಮುಕುಂದಗೆ ಕೊಡು ಈ ಕಾಗದಾನ' ಅಂತಾ."

ಮುಕುಂದಯ್ಯ ಐತನ ಕೈಯಿಂದ ಕಾಗದವನ್ನು ಕಿತ್ತುಕೊಂಡು, ಓದಿ ರಂಗಮ್ಮನ ಕಡೆ ತಿರುಗಿ "ಅಕ್ಕಯ್ಯ, ನೀನಿ ಹುಡುಗರನ್ನ ಕರೆದುಕೊಂಡು ಮನೇಗೆ ಹೋಗು. ನಾನೀಗ ಜರೂರು ಬೆಟ್ಟಳ್ಳಿಗೆ ಹೋಗಬೇಕಾಗಿದೆ" ಎಂದವನೆ ಓಲೆಕೊಡೆಯನ್ನು ಐತನ ಕೈಗೆ ಕೊಟ್ಟು "ಅಣ್ಣಯ್ಯಗೆ ಹೇಳು, ನಾನು ಬೆಟ್ಟಳ್ಳಿಗೆ ಹೋಗಿ, ಬಾವನ್ನ ಕರಕೊಂಡು, ಗಾಡಿ ಕಟ್ಟಿಸಿಕೊಂಡೇ ತೀರ್ಥಳ್ಳಿಗೆ ಹೋದಾ ಅಂತ.... ಏ ಧರ್ಮು, ನೀನೂ ಹೇಳ್ತೀಯೇನೋ?" ಎನ್ನುತ್ತಾ ಹಿಂದಕ್ಕೆ ತಿರುಗಿ ಬಂದ ಹಾದಿಯಲ್ಲಿಯೆ ವೇಗವಾಗಿ ಹೊರಟುಬಿಟ್ಟನು.

ಧರ್ಮು "ಆಗಲಿ, ಮಾವಾ!" ಎಂದು ಕೂಗಿದ್ದು ಕೂಡ ಅವನಿಗೆ ಕೇಳಿಸಿರಲಿಕ್ಕಿಲ್ಲ.

ಮುಕುಂದಯ್ಯ ಹಳುವಿನಲ್ಲಿ ಕಣ್ಮರೆಯಾದ ಕೂಡಲೆ ರಂಗಮ್ಮ "ಏನೋ ಅದು, ಐತಾ? ಯಾಕೋ ಅವನು ಮತ್ತೆ ಹಿಂದಕ್ಕೆ ಹೋಗಿದ್ದು?.... ಅವರು ಹ್ಯಾಂಗಿದ್ದಾರಂತೋ ತೀರ್ಥಳ್ಳೀಲಿ?" ಎಂದು ಕೇಳುತ್ತಾ ದೀರ್ಘವಾಗಿ ಸುಯ್ದು ಕೋಣೂರಿನ ಕಡೆಗೆ ನಡೆಯತೊಡಗಿದಳು.

"ನಂಗೊತ್ತಿಲ್ಲ, ಅಮ್ಮಾ.... ಗೌಡರು.... ಕಾಗದ ಓದ್ದೋರೇ.... 'ಅಯ್ಯೋ ದೇವರೇ!' ಅಂತಾ ತಲೆಮ್ಯಾಲೆ ಕೈಹೊತ್ತುಕೊಂಡು ಕೂತುಬಿಟ್ರು!.... ಆ ಚೇಂಕ್ರ ಹೇಳ್ತಿದ್ದ. 'ತಿರುಪತಿಗೆ ಹೋಗಿದ್ದ ಹೆಗ್ಗಡೇರಿಗೆ ಇಪರೀತ ರೇಸ್ಮೆ ಕಾಯ್ಲೆ' ಅಂತಾ.... ಹೌದೋ ಸುಳ್ಳೋ? ಅಂವ ಒಬ್ಬ ಕುಡುಕ ಸೂಳೇಮಗ!

* * *

ಮೇಗರವಳ್ಳಿಯಿಂದ ತೀರ್ಥಹಳ್ಳಿಗೆ ಹೋಗುವ ಹೆದ್ದಾರಿ. ಸಾಮಾನ್ಯರ ಮಾತಿನಲ್ಲಿ ಅದಕ್ಕಿನ್ನೂ 'ರಸ್ತೆ' ಎಂಬ ಹೆಸರು ಸರ್ವಸಾಮಾನ್ಯವಾಗಿರಲಿಲ್ಲ. ಆದರೆ ಬಳಕೆಗೆ ಬರುತ್ತಿತ್ತು. ಆದರೆ ಬಳಕೆಗೆ ಬರುತ್ತಿತ್ತು. ಮುಂದೆ 'ರಸ್ತೆ'ಗೆ ಬದಲಾಗಿ 'ರೋಡು' ಎಂಬುದು ಬಳಕೆಗೆ ಬಂದಂತೆ, ಮುಸಲ್ಮಾನರ ದೌಲತ್ತು ಸಂಪೂರ್ಣವಾಗಿ ಸಂಸ್ಥಾಪಿತವಾದಂದು. 'ರಸ್ತೆ'ಯಾಗುತ್ತಿದ್ದ ಆ 'ಹೆದ್ದಾರಿ' ದುರಸ್ತು ಕಾಣದೆ ಬಹುಕಾಲವಾಗಿದ್ದ ಅನುಭವ ಅದರ ಮೇಲೆ ತೀರ್ಥಹಳ್ಳಿಯ ಕಡೆಗೆ ಸಾಗುತ್ತಿದ್ದ ಮೂವರಿಗೂ ಚೆನ್ನಾಗಿಯೆ ಆಗುತ್ತಿತ್ತು. ಅದರಲ್ಲಿಯೂ ಆ ಅನುಭವದ 'ಫಜೀತಿ' ಹಳ್ಳಿಗಾಡಿನ ಕಾಡುಗಳಲ್ಲಿ ಬರಿಗಾಲಿನಲ್ಲಿಯೆ ತಿರುಗಿ ಅಭ್ಯಾಸವಿದ್ದ ಸಿಂಬಾವಿ ಗುತ್ತಿಗೆಗಿಂತಲೂ ನೂರುಮಡಿಯಾಗಿ ವಿಶೇಷವಾಗಿ ಪಟ್ಟಣದ ಬೀದಿಗಳಲ್ಲಿಯೆ ಗಸ್ತು ತಿರುಗುವ ಅಭ್ಯಾಸವಿದ್ದ ಆ ಇಬ್ಬರು ಪೋಲೀಸನವರಿಗೆ ಸಮಧಿಕವಾಗಿ ಅನುಭವಕ್ಕೆ ಬರುತ್ತಿತ್ತು.

ಅದರಲ್ಲಿಯೂ ಏನು ಮಳೆ! ಮುಂಗಾರಿನ ಪ್ರಾರಂಭದ ಜೋರಿನಿಂದ ಸುರಿಯುತ್ತಿರಲಿಲ್ಲ, ನಿಜ; ಆದರೆ ಹಿಡಿದು ಹೊಡೆಯುತ್ತಿತ್ತು. ಜಡಿ! ಸುತ್ತಲೂ ಹೆಗ್ಗಾಡು; ಆಕಾಶದೆತ್ತರಕ್ಕೆ ಬೆಳೆದು ನಿಂತಿದ್ದುವು, ನೂರಾರು ವರ್ಷಗಳ ಸಾಲಧೂಪದ ಹೆಮ್ಮರಗಳು. ಹಳುವೋ ನಿತ್ಯ ಶ್ಯಾಮಲ! ರೇಜಿಗೆ ಹಿಡಿಸುವ ಜೀರುಂಡೆಗಳ ಕರ್ಕಶದ ಚೀರುದನಿ ಬೇರೆ. ಹಕ್ಕಿಗಳ ಸದ್ದೆ ಇಲ್ಲ. ನಿಲ್ಲದೆ ಸುರಿಯುತ್ತಿದ್ದ ಆ ಮಳೆಯಲ್ಲಿ ಅವು ಎಲ್ಲಿಯೋ ತಲೆ ಉಡುಗಿಸಿದ್ದವು. ಮಿಂಚು ಗುಡುಗು ಸಿಡಿಲು ಯಾವುದೂ ಇಲ್ಲ; ಅವಾದರೂ ಇದ್ದಿದ್ದರೆ ಹೆದರಿಕೆಯನ್ನಾದರೂ ಹುಟ್ಟಿಸಿ ಬೇಸರ ಪರಿಹಾರಮಾಡುತ್ತಿದ್ದುವು! ಬೇಸರ!ಬೇಸರ!ಬೇಸರ! ಜಿಂಯ್ಯೋ ಎಂದು ಮಳೆ ಹೊಡೆಯುತ್ತಿದೆ. ಆ ಕೊರಕಲು ರಸ್ತೆಯಲ್ಲಿ ಕೆಸರು ಮತ್ತು ಹೊಂಡಗಳನ್ನು ತಪ್ಪಿಸಿ ನಡೆಯುವ ಸಲುವಾಗಿ ನೆಗೆನೆಗೆದು ಹಾರುತ್ತಾ ಬಿಚ್ಚಿ ಸೂಡಿದ್ದ ಎರಡು ಕೊಡೆಗಳು ಸಾಗುತ್ತಿವೆ; ಅವರ ನಡುವೆ ಆ ಎರಡಕ್ಕೂ ತುಂಬ ಕುಳ್ಳಾಗಿ ಒಂದು ಕಂಬಳಿಕೊಪ್ಪೆ ಸಾಗುತ್ತಿದೆ: ಇಬ್ಬರು ಪೋಲೀಸರು ಮತ್ತು ಸಿಂಬಾವಿ ಹೊಲೆಯರ ನಾಯಿಗುತ್ತಿ!

ಗುತ್ತಿಗೆಯೊಬ್ಬನೆ ಇದ್ದಾನಲ್ಲಾ! ಅವನ ನಾಯಿಯೆಲ್ಲಿ? ಹುಲಿಯ!

ಅದಕ್ಕಾಗಿಯೆ ಎಂದು ತೋರುತ್ತದೆ, ಗುತ್ತಿ ಮತ್ತೆ ಮತ್ತೆ ಹಿಂದಕ್ಕೆ ಕಳ್ಳನೋಟವಟ್ಟಿ ನೋಡುತ್ತಾ ಹೋಗುತ್ತಿದ್ದಾನೆ. ಅಂದು ತಿಮ್ಮಿಯೊಡನೆ ಹುಲಿಕಲ್ಲು ನೆತ್ತಿಯಿಂದ ಇಳಿಯುತ್ತಿದ್ದಾಗ ಕುರ್ಕನ ಸಂಗಡ ಕಾದಾಡಿ ಮಾಡಿಕೊಂಡಿದ್ದ ಉಗುರಿನ ಗಾಯದ ದೆಸೆಯಿಂದ ಒಂದು ಕಣ್ಣು ಹೂಕೂತು ಕಾನಿಸದಂತಾಗಿ ಒಕ್ಕಣ್ಣಾಗಿದ್ದ ತನ್ನ ನಾಯಿ ಮತ್ತೆ ಎಲ್ಲಿ ಬಂದುಬಿಟ್ಟೀತೋ ಎಂಬ ಅಂಜಿಕೆಯಿಂದ. ಏಕೆಂದರೆ, ಕೇರಿಯಲ್ಲಿ ಪೋಲೀಸರು ತನ್ನನ್ನು ಹಿಡಿದಾಗ, ಹುಲಿಯ ಒಬ್ಬನ ಮೇಲೆ ಹಾರಿ ಕಚ್ಚಿದ್ದರಿಂದ ಅವನ ಅಂಗಿಯ ತೋಳು ಹರಿದುಹೋಗಿತ್ತು. ಆಗ ಮತ್ತೊಬ್ಬನು ತನ್ನ ದೊಣ್ಣೆಯಿಂದ ಅದಕ್ಕೊಂದು ಬಲವಾದ ಪೆಟ್ಟುಕೊಟ್ಟು, ಕೂಗಿಕೊಳ್ಳುವಂತೆ ಮಾಡಿ, ಓಡಿಸಿದ್ದನು. ಆದರೂ ಆ ಒಕ್ಕಣ್ಣಿನ ಸ್ವಾಮಿಭಕ್ತ ತನ್ನನ್ನು ಬೆಂಬಿಡದೆ ಹಿಂಬಾಲಿಸಿತ್ತು. ರಸ್ತೆಯಲ್ಲಿ ಒಂದೆರಡು ಸಾರಿ ಅದು ಹತ್ತಿರಕ್ಕೆ ಬಂದಾಗ ಆ ಇಬ್ಬರು ಪೋಲೀಸರೂ ಬಡಿಗೆ ಮತ್ತು ಕಲ್ಲುಗಳಿಂದ ಅದನ್ನು ಹೊಡೆದು ಹಿಂದಕ್ಕಟ್ಟಿದ್ದರು. ಒಂದು ಸಾರಿಯಂತೂ ಪೋಲೀಸನವನು ಎಸೆದ ದೊಡ್ಡದೊಂದು ಕಲ್ಲು ಅದರ ಮೂತಿಗೆ ತಗುಲಿ ಹುಲಿಯ ರೋಧಿಸುತ್ತಾ ಓಡಿತ್ತು. ಆಗ

ಗುತ್ತಿ ಪ್ರತಿಭಟಿಸಿ, ತಲೆಗೊಂದು ಏಟು ತಿಂದಿದ್ದನು. ಆಮೇಲೆ, ನಾಯಿ ತನ್ನನ್ನು ಹಿಂಬಾಲಿಸಿದರೆ ಪ್ರಾಣಾಯಾಮಕ್ಕೆ ಒಳಗಾಗುತ್ತದೆ ಎಂಬ ಭೀತಿಯಿಂದ ತಾನೂ ಕಲ್ಲೆಸೆದು ಅದನ್ನು ಓಡಿಸಿದ್ದನು, 'ಹೋಗು, ಹುಲಿಯಾ, ನಡೀ ಕೇರಿಗೆ' ಎಂದು ಗದರಿಸಿ. ಆಗ ಬೋಳುಮೀಸೆಯ ಪೋಲೀಸನವರು 'ಓ ಹೋ ಹೋ! ಈ ಹೊಲೆಯನ ನಾಯಿ ಹೆಸರು ಹುಲಿ ಅಂತೆ ಹುಲಿ….!' ಎಂದು ಹಂಗಿಸಿದ್ದನು.

ಈಗ ಗುತ್ತಿ ಮತ್ತೆ ಹಿಂದಕ್ಕೆ ನೋಡುತ್ತಿದ್ದುದನ್ನು ಗಮನಿಸಿದ ಗಿರ್ಲುಮೀಸೆಯ ಪೋಲೀಸನವನು "ಯಾಕೋ? ಹಿಂದಕ್ಕೆ ಮತ್ತೆ ಮತ್ತೆ ನೋಡ್ತೀಯಾ? ನಿನ್ನ ನಾಯಿನ ಛೂ ಬಿಟ್ಟು ಪರಾರಿಯಾಗಲು ಯೋಚನೆ ಮಾಡ್ತಿದ್ದೀಯೋ? ಅದೆಲ್ಲ ಬಿಟ್ಟುಬಿಡು. ಅದರ ಹೆಣಾನೂ ಹಾಕ್ತೀವಿ! ಗೊತ್ತಾಯ್ತೇನು?…. ನಾವು ಹಿಡಿಯೋಕೆ ಬಂದಕೂಡ್ಲೆ ಕೇರೀನೆ ಬಿಟ್ಟು ಕಾಡು ಹತ್ತಿದ್ದೆಯಲ್ಲಾ ಹಾಂಗಲ್ಲಾ, ಬದ್ಮಾಷ್, ಗೊತ್ತಾಯ್ತೇನು?" ಎಂದು ಕ್ರೂರನೇತ್ರಗಳಿಂದ ನೋಡಿದ್ದನು. ಗುತ್ತಿಯ ಕಡೆಗೆ. ಗುತ್ತಿ ಪ್ರತ್ಯುತ್ತರ ಹೇಳದೆ ಚಿಂತಾ ಭಾರನಂತೆ ಕಾಲು ಹಾಕಿದ್ದನು.

ಪೋಲೀಸಿನವರು ತನ್ನನ್ನು ಹಿಡಿದು, ಕೈಗೆ ಕೋಳ ಹಾಕಿ, ತೀರ್ಥಹಳ್ಳಿಗೆ ಕರೆದುಕೊಂಡು ಹೋಗಲು ಬಂದಿದ್ದಾರೆ ಎಂಬ ಸುದ್ದಿ ತಿಳಿದ ಕೂಡಲೆ ಗುತ್ತಿ ಕಂಗಾಲಾಗಿದ್ದನು. ಅವನ ಅಪ್ಪ ಕರಿಸಿದ್ದನೂ ಅಮ್ಮ ಗಿಡ್ಡಿಯೂ ಯಾರಾದರೂ ಸತ್ತರೆ ಬಾಯಿ ಬಡುಕೊಳ್ಳುವಂತೆ ಲಬಲಬಿಸಿದ್ದರು. ಕೇರಿಗೆ ಪೋಲೀಸರು ಬರುತ್ತಾರೆ ಎಂಬ ವಾರ್ತೆ ಕೇಳಿದೊಡನೆ ಕೇರಿಯ ಗಂಡಸರು ಹೆಂಗಸರು ಎಲ್ಲರೂ ತಲೆತಪ್ಪಿಸಿಕೊಳ್ಳಲು ಕಾಡು ಹತ್ತಿದ್ದರು. ನಡೆಯಲಾರದ ಮುದುಕ ಮುದುಕಿಯರೂ ಮಕ್ಕಳೂ ಮಾತ್ರ ತಮ್ಮ ತಮ್ಮ ಬಿಡಾರದ ತಟ್ಟಿ ಬಾಗಿಲುಗಳನ್ನು ಭದ್ರವಾಗಿ ಹಾಕಿಕೊಂಡು, ಒಲೆಯನ್ನು ಹೊತ್ತಿಸದೆ ಹುದುಗಿಬಿಟ್ಟರು.

ಪೋಲೀಸರು, ಸಿಂಬಾವಿ ಭರಮೈಹೆಗ್ಗಡೆಯವರೊಡನೆ, ಹೊಲೆಗೇರಿಗೆ ಬಂದಾಗ ತಮ್ಮನ್ನೆದುರುಗೊಂಡ ಅದರ ನಿರವತೆಗಳನ್ನು ನೋಡಿ ಹತಾಶರಾಗಿ ಸಿಡುಕ್ಕಿದ್ದರು. ಭರಮೈಹೆಗ್ಗಡೆಯವರೇ ಮುನ್ಸೂಚನೆ ಕೊಟ್ಟು, ತಮ್ಮ ಆಳನ್ನು ರಕ್ಷಿಸಲು ಈ ಉಪಾಯ ಹೂಡಿರಬಹುದು ಎಂಬ ಶಂಕೆಯೂ ತಲೆದೂರಿತ್ತು ಆ ಪೋಲೀಸನವರಿಗೆ. ಆದ್ದರಿಂದ ಅವರಿಗೂ ಹಿತ ಹೇಳುವ ರೀತಿಯಲ್ಲಿ ಮುಚ್ಚುಮರೆಯ ಎಚ್ಚರಿಕೆ ಕೊಡುತ್ತಾ ಅವರೊಡನೆ ಸಿಂಬಾವಿ ಮನೆಗೆ ಹಿಂದಿರುಗಿ, ಅಲ್ಲಿಯೆ ಉಳಿದುಕೊಂಡಿದ್ದರು. ಭರಮೈಹೆಗ್ಗಡೆಯವರು ಶ್ರೀಮಂತರಾಗಿದ್ದರೂ ಸರಕಾರ, ಪೋಲೀಸು ಎಂದರೆ ಅವರಿಗೆ ತುಂಬ ಪುಕ್ಕಲು. ಆಗಿನ ಕಾಲದಲ್ಲಿ ಪೋಲೀಸರಿಗೆ ಅಂಜದಿದ್ದವರೆ ಇರಲಿಲ್ಲ; ಅವರ ಅಧಿಕಾರ, ಜಬರದಸ್ತು ಅಂತಹದ್ದಾಗಿತ್ತು. ಆದ್ದರಿಂದಲೆ ಆ ದಿನ ಸಿಂಬಾವಿ ಮನೆಯಲ್ಲಿ ಕೋಳಿತುಂಡು, ಕಡಬು, ಕಳ್ಳು ಸಾರಾಯಿಗಳ ಔತಣವನ್ನೇರ್ಪಡಿಸಿ ಸರಕಾರದ ಯಮದೂತರನ್ನು ತೃಪ್ತಿಪಡಿಸಿದ್ದರು.

ಕಾಡಿಗೆ ಓಡಿದ್ದ ಹೊಲೆಯರು ಬಹಳ ಹೊತ್ತು ಅಲ್ಲಿರಲಿಕ್ಕಾಗಿರಲಿಲ್ಲ. ಮುಚ್ಚಿಕೊಂಡಿದ್ದ ಮೋಡಗಪ್ಪು ಜಡಿಮಳೆಯಾಗಿ ಬಿಡದೆ ಸುರಿಯತೊಡಗಿದ್ದುದರಿಂದ ಅನೇಕರು ತೊಪ್ಪನೆ ತೊಯ್ದು, ಅಲ್ಲಿ ಇಲ್ಲಿ ನುಸುಳಿ, ಕಳ್ಳತನದಿಂದ ತಮ್ಮ ತಮ್ಮ ಬಿಡಾರಗಳಿಗೆ ಹೊಕ್ಕಿದ್ದರು. ಆದರೆ ಆ ದಿನ ಗಬ್ಬದ ಆಡಿನ ಕೊಲೆಯ ದೆಸೆಯಿಂದಾಗಿ ಸಾಬರೊಡನೆ ನಡೆದಿದ್ದ ಹೊಡೆದಾಟದಲ್ಲಿ ಹಾಜರಿದ್ದು ನೇರವಾಗಿ ಭಾಗವಹಿಸಿದ್ದರು ಯಾರೂ ಹಗಲಿನಲ್ಲಿ ಬಿಡಾರಕ್ಕೆ ಹಿಂದಿರುಗಿರಲಿಲ್ಲ. ಹಳೆಪೈಕದವರ ಹಟ್ಟಯ ಹಿಂದೆಯೊ ಕೂಡುಹಟ್ಟಿಯ ಅಟ್ಟದ ಮೇಲೆಯೊ, ಸೌದೆ ಕೊಟ್ಟಿಗೆಯ ಸಂಧಿಯಲ್ಲಿಯೊ ಅಡಗಿ ನಿಂತು ಕಾಲನೂಕಿ, ದೊಂಬಿಯಲ್ಲಿ ಅವನ ಕಾಳಿಗೆ ಬಿದ್ದ ಪೆಟ್ಟು ಇರುತ್ತಿದ್ದನಾದರೂ,

ಪೋಲೀಸರು ಸಿಂಬಾವಿಗೆ ಬರುವವರೆಗೂ ಹಾಸಗೆಯಲ್ಲಿಯೆ ಹೆಚ್ಚಾಗಿ ಇರುತ್ತಿದ್ದನಾದರೂ, ದೊಳ್ಳ ಮನೆಯಿಂದ ತಂದುಕೊಟ್ಟಿದ್ದ ಬುತ್ತಿಯಿಂದ ಹಗಲೂಟವನ್ನು ಪೂರೈಸಿ ಹಾಗೂ ಹೀಗೂ ಕರೆಯುವ ಕೊಟ್ಟಿಗೆಯ ಅಟ್ಟದ ಮೇಲೆ ಅವಿತಿದ್ದು, ಚೆನ್ನಾಗಿ ರಾತ್ರಿಯಾದ ಮೇಲೆ ಜಡಿಮಳೆಯಲ್ಲಿಯೆ ಕುಂಟುತ್ತಾ ಬಿಡಾರ ಸೇರಿದ್ದನು. ಮರುದಿನ ಬೆಳಗಿನ ಜಾವದಲ್ಲಿ ಸಿಂಬಾವಿಯಿಂದ ಹೊರಬಿದ್ದು ಎಲ್ಲಿಯಾದರೂ ಲಕ್ಕುಂದದಲ್ಲಿಯೋ ಸೀತೂರಿನಲ್ಲಿಯೋ ಅಡಗಿದ್ದು, ಪೋಲೀಸನವರು ಊರುಬಿಟ್ಟು ಹೋದಮೇಲೆ ಬೆಟ್ಟಳ್ಳಿಗೆ ಹೋಗಿ, ಕಷ್ಟಕ್ಕೆ ಸಿಕ್ಕಿದ್ದ ತಿಮ್ಮಿಯನ್ನು ಎಲ್ಲಿಗಾದರೂ ದೂರ ಓಡಿಸಿಕೊಂಡು ಹೋಗಬೇಕೆಂದು ವ್ಯೂಹಿಸಿದ್ದನು, ಮನದಲ್ಲಿಯೆ.

ಆದರೆ ಇಂಥಾದ್ದನ್ನೆಲ್ಲ ಎಷ್ಟೆಷ್ಟೋ ಕಂಡು ಅನುಭವಿಸಿ ನುರಿತಿದ್ದ ಆ ಪೋಲೀಸಿನವರು ಭರಮೈಹೆಗ್ಗಡೆಯವರಿಗೂ ಗುಟ್ಟು ಬಿಟ್ಟುಕೊಡದೆ, ರಾತ್ರಿ ನಾಲ್ಕು ಗಂಟೆಯ ಹೊತ್ತಿಗೇ, ಮಳೆಯನ್ನೂ ಲೆಕ್ಕಿಸದೆ ಕೇರಿಗೆ ಹೋಗಿ, ಕರಿಸಿದ್ದನ ಬಿಡಾರಕ್ಕೆ ಮುತ್ತಿಗೆ ಹಾಕಿ, ಗುಲ್ಲು ಕೋಲಾಹಲಗಳ ನಡುವೆ, ಲಾಟೀನಿನ ಬೆಳಕಿನಲ್ಲಿಯೆ ಗುತ್ತಿಯನ್ನು ಸೆರೆಹಿಡಿದು ಬಿಟ್ಟಿದ್ದರು!

ಅವನ ಕೈಗೆ ಕೋಳ ಹಾಕಿ ಮನೆಗೆ ಕರೆದೊಯ್ದ ಮೇಲೆಯೇ ಭರಮೈಹೆಗ್ಗಡೆಯವರಿಗೆ ಆ ವಿಷಯ ಗೊತ್ತಾದದ್ದು! ಅವರು ತಮ್ಮೊಳಗೇ 'ಶನಿಮುಂಡೇಗಂಡ! ಹೊಲೆಸೂಳೇ ಮಗ! ಎರಡು ದಿನ ಬಿಡಾರಕ್ಕೆ ಹೋಗಬ್ಯಾಡ ಅಂತಾ ದೊಳ್ಳನ ಕೈಲಿ ಬುತತೀನೂ ಕೊಟ್ಟು ಕಳ್ಸಿದ್ರೂ, ಬಿಡಾರಕ್ಕೆ ಹೋಗಿ ಸಿಕ್ಕಿಕೊಂಡಿದ್ದ್ಆನಲ್ಲಾ ಪೋಲೀಸರ ಕೈಗೆ!' ಎಂದು ಗೊಣಗಿ ಶಪಿಸುತ್ತಾ, ಶಾಲು ಹೊದೆದು, ಕೋಣೆಯಿಂದ ಎದ್ದು ಬಂದಿದ್ದರು.

ಪೋಲೀಸರ ಎದುರಿಗೆ ಗುತ್ತಿಯನ್ನು ಬಾಯಿಗೆ ಬಂದಂತೆ ಬಯ್ದು, 'ಪೋಲೀಸರು ಹೇಳಿದ ಹಾಗೆ ಕೇಳು; ನಿನಗೇನೂ ಶಿಕ್ಷೆ ಆಗುವುದಿಲ್ಲ. ಮತ್ತೆ ಓಡಿಗೀಡಿ ಹೋಗಲು ಪ್ರಯತ್ನಿಸೀಯಾ? ಹುಷಾರು!' ಎಂದು ಬುದ್ಧಿ ಹೇಳಿದಂತೆ ಮಾಡಿ, ಯಾರಿಗೂ ಗೊತ್ತಾಗದ ರೀತಿಯಲ್ಲಿ ಕಣ್ಣು ಮಿಟುಕಿಸಿದ್ದರು. ಪೋಲೀಸರಿಗೂ ಹೊಟ್ಟೆಗೂ ಬಾಯಿಗೂ ಬೆಚ್ಚಗೆ ಮಾಡಿದ್ದಂತೆಯೆ ಕೈಗೂ ಅವರ ನೀರಿಕ್ಷೆಗೆ ಮಿಗಿಲಾಗಿಯೇ ಬೆಚ್ಚಗೆ ಮಾಡಿ, ಕೈಗೆ ಕೋಳ ಹಾಕಿದ್ದನ್ನೂ ತಪ್ಪಿಸಿದ್ದರು.

ಪೋಲೀಸರಿಗೆ ಕಪ್ಪಕಾಣಿಕೆ ಅರ್ಪಿಸುವುದಕ್ಕಾಗಿ ಅವರನ್ನು ಉಪ್ಪರಿಗೆಯ ಮೇಲಕ್ಕೆ ರಹಸ್ಯಕ್ಕೆ ಕರೆದೊಯ್ದು, ಗುತ್ತಿಯ ಪರವಾಗಿ ವಾದಿಸಿದ್ದರು: "ಅವನೇನು ಖೂನೀಗೀನಿ ಮಾಡುವಂಥಾ ಮನುಷ್ಯನಲ್ಲ. ಹೇಳಿದ ಹಾಗೆ ಕೇಳಿಕೊಂಡು ಬಹಳ ಒಳ್ಳೆಯವನಾಗಿ ಕೆಲಸ ಮಾಡಿಕೊಂಡು ಇದ್ದಾನೆ. ನಮ್ಮ ಹೊಲೇರ ಪೈಕಿ ಸಿಪಾಯಿ ಅಂದರೆ ಅವನೊಬ್ಬನೆ ಸೈ! ಇನ್ನೂ ಹುಡುಗ. ಆ ಇಜಾಗರದ ಸಾಬಿ ಅವನ ಗಬ್ಬದ ಕುರೀನ ಕೊಯ್ದು ಹಾಕಿದ ಸಿಟ್ಟಿಗೆ ಸ್ವಲ್ಪ ಗಲಾಟೆ ಮಾಡಿಬಿಟ್ಟ. ಅವನ ಕಾಲಿನ ಎಲುಬು ಮುರಿಯುವಹಾಂಗೆ ಏಟು ಕೊಟ್ಟಿದ್ದೂ ಆ ಇಜಾರದ ಸಾಬೀನೇ ಅಂತಾ, ಕಂಡವರೆಲ್ಲ ಹೇಳಿದ್ದಾರೆ ನನಗೆ. ಅವೊತ್ತಿನ ಹೊಡೆದಾಟದಲ್ಲಿ ಗುತ್ತಿ ಹತ್ತಿರ ಕತ್ತಿಯೆ ಇರಲಿಲ್ಲಂತೆ. ಕತ್ತೀಲಿ ಕಡಿದವನು ಅವನ ಬಾವನಂತೆ, ಬೆಟ್ಟಳ್ಳಿ ಹೊಲೇರ ಸಣ್ಣಬೀರ! ಅಂವ ಈಗ ನುಣುಚಿಕೊಂಡು ಬಿಟ್ಟಿದ್ದಾನೆ, ಇವನ್ನ ಸಿಕ್ಕಿಹಾಕಿ!....ಪಾಪ, ಕಾಲು ಗಾಯ ಬೇರೆ ಇನ್ನೂ ಮಾದಿಲ್ಲ. ಕೋಳ ಗೀಳ ಹಾಕಿ ಹಿಂಸೆ ಮಾಡಬೇಡಿ....ಅದೂ ಅಲ್ಲದೆ ಮೊನ್ನೆ ಮದುವೆ ಮಾಡಿಕೊಂಡಿದ್ದಾನೆ. ಅವನ ಹೆಂಡ್ತೀನ ಉಪಾಯವಾಗಿ ತವರಿಗೆ ಕರಕೊಂಡು ಹೋಗ್ತೀಂವಿ ಅಂತ ಕರಕೊಂಡು ಹೋಗಿ, ಈಗ ಅವಳನ್ನ ಮತ್ತೊಬ್ಬನಿಗೆ ಲಗ್ನಾ ಮಾಡ್ತಾರಂತೆ. ಅದರದ್ದೂ ಒಂದು ಮೊಕದ್ದಮೆ ಬರಬಹುದು ಇಷ್ಟರಲ್ಲೇ ನಿಮ್ಮ ಕಛೇರಿಗೆ...."

ಪೋಲೀಸಿನವರು ತಮಗೆ ಲಭಿಸಿದ ಅನೀರಿಕ್ಷಿತ ಪರಿಮಾಣದ ಪರಿತೋಷದಿಂದ ಸಂತೃಪ್ತರಾಗಿ, ವಿಚಾರಣೆಯಲ್ಲಿ ಗುತ್ತಿಗೆ ಏನೂ ತೊಂದರೆಯಾಗದಂತೆ ಸಾಕ್ಷಿಹೇಳಿಸಿ, ಅವನನ್ನು ಖಂಡಿತ ಖುಲಾಸೆ ಮಾಡಿಸುವುದಾಗಿ ಭರವಸೆಯಿತ್ತು ಹೆಗ್ಗಡೆಯವರಿಗೆ ಸಲಾಂ ಹೇಳಿದ್ದರು. ಅವರ ಆ ಭರವಸೆಗೆ ಸಾಕಾದಷ್ಟು ಆಧಾರವೂ ಇತ್ತು. ಏಕೆಂದರೆ ಗುತ್ತಿಯನ್ನು ಅವರು ಹಿಡಿದು ಒಯ್ಯುತ್ತಿದ್ದುದಕ್ಕೆ ಯಾವ ಸಕ್ರಮವಾದ ಅಧಿಕೃತ ಆಜ್ಞೆಯೂ ಇರಲಿಲ್ಲ. ಇತ್ತ ಭರಮೈಹೆಗ್ಗಡೆಯವರಿಂದ ತಿಂದಂತೆ ಅತ್ತ ಬೆಟ್ಟಳ್ಳಿ ಕಲ್ಲಯ್ಯಗೌಡರ  ಕಡೆಯಿಂದಲೂ ತಿಂದು ಈ ನಕಲಿ ದಸ್ತಗಿರಿಗೆ ಕೈಹಾಕಿದ್ದರು. ಅವರಿಗೆ ಇಜಾರದಸಾಬಿ ಸಿಕ್ಕಿದ್ದು ಒಂದು ಬರಿಯ ನೆವವಾಗಿತ್ತು. ಆ ಸಾಬಿ ನಿಜವಾಗಿಯೂ ಸಾಯುವ ಸ್ಥಿತಿಯಲ್ಲೇನೂ ಇರಲಿಲ್ಲ. ಒಂದು ಬೆರಳು ತುಂಡಾಗಿತ್ತು, ಅಷ್ಟೆ ಅಲ್ಲದೆ ಅವನಿಗಾಗಿದ್ದ ಉಳಿದ ಗಾಯಗಳೂ ಆಸ್ಪತ್ರೆಯಲ್ಲಿ ಗುಣಮುಖವಾಗುತ್ತಿದ್ದುವು. ಬೆಟ್ಟಳ್ಳಿ ಕಲ್ಲಯ್ಯಗೌಡರು ಮತ್ತು ದೇವಯ್ಯನ ಮುಖಾಂತರ ತೀರ್ಥಹಳ್ಳಿಗೆ ಹೋಗಿ ಪಾದ್ರಿಗೆ ದೂರುಕೊಟ್ಟಿದ್ದ ಬಚ್ಚನಿಂದ ಇಷ್ಟೆಲ್ಲ ಕಿತಾಪತಿ ನಡೆದದ್ದು ಯಾರಿಗೂ ಇನ್ನೂ ಗೊತ್ತಾಗಿರಲಿಲ್ಲ. ದೇವಯ್ಯಗೌಡರನ್ನೂ ತನ್ನನ್ನೂ ಕಿಲಸ್ತರ ಜಾತಿಗೆ ಸೇರಿಸುತ್ತಾನೆಂದು ಗುತ್ತಿ ಪಾದ್ರಿಗೆ ಬಾಯಿಗೆ ಬಂದ ಹಾಗೆ ಬಯ್ದನು ಎಂದು ಬಚ್ಚ ಜೀವರತ್ನಯ್ಯನ ಕಿವಿಗೆ ವಿಷ ಹೊಯ್ದಿದ್ದನು. ಅದರಲ್ಲಿ ಬಚ್ಚನಿಗಿದ್ದ ನಿಜವಾದ ಉದ್ದೇಶ. ಹೇಗಾದರೂ ಮಾಡಿ ಗುತ್ತಿಯನ್ನು ಲಾಕಪ್ಪಿನಲ್ಲಿ ಇಡಿಸಿಯೋ ಜೈಲಿಗೆ ಹಾಕಿಸಿಯೋ ದೂರವಾಗಿಟ್ಟಿದ್ದರೆ, ತಾನು ತಿಮ್ಮಿಯನ್ನು ನಿರ್ವಿಘ್ನವಾಗಿ ಮದುವೆಯಾಗಬಹುದು ಎಂಬುದೆ! ಜೀವರತ್ನಯ್ಯ ತನ್ನ ಜಾತಿಯವನೇ ಆಗಿದ್ದ ಜಮಾದಾರನ ಸಹಾಯದಿಂದ ಇದನ್ನೆಲ್ಲ ಏರ್ಪಡಿಸಿದ್ದನು. ಅದನ್ನೆಲ್ಲ ಪೋಲೀಸಿನವರಿಗೆ ಭರಮೈಹೆಗ್ಗಡೆಯವರಿಗೆ ಯಾವ ಭರವಸೆ ಕೊಡುವುದೂ ಅಷ್ಟೇನೂ ಕಷ್ಟವಾಗಿರಲಿಲ್ಲ.

ಗುತ್ತಿ ಕುಂಟುತ್ತಾ ಪೋಲೀಸಿನವರ ನಡುವೆ ನಿಧಾನವಾಗಿ ಸಾಗಿದ್ದನು. ತನಗೂ ತನ್ನ ಹೆಂಡತಿಗೂ ಒದಗಿದ್ದ ಕಷ್ಟವನ್ನು ನೆನೆದಂತೆಲ್ಲಾ ಅವನಿಗೆ ದುಃಖ ಉಕ್ಕಿ ಬರುತ್ತಿತ್ತು. ಮೊನ್ನೆ ಮೊನ್ನೆ ತಾನೇ ಮದುವೆಯಾಗಿ, ಒಂದೆರಡು ದಿನ ಮಗ್ಗುಲಲ್ಲಿ ಮಲಗಿಸಿಕೊಂಡೂ ಅಂಗಸುಖದಿಂದ ರುಚಿಯರಿತಿದ್ದ ಅವನಿಗೆ, ಮಾವ ದೊಡ್ಡಬೀರ ತನ್ನ ಮಗಳನ್ನು ತವರಿಗೆ ಕರೆದೊಯ್ದಾಗಲೆ ಸಹಿಸಲಾರದಷ್ಟು ಖೇದವಾಗಿತ್ತು. ಜೊತೆಗೆ, ಹಾಳು ಇಜಾರದ ಸಾಬಿಯ ದೆಸೆಯಿಂದ ಕಾಳಿಗೆ ಬೇರೆ ಪೆಟ್ಟು ಬಿದ್ದು ಯಾತನಗೀಡು ಮಾಡಿತ್ತು. ಒಂದು ದೃಷ್ಟಿಯಿಂದ ಆ ಯಾತನೆಯನ್ನೂ ಅವನು ಸ್ವಾಗತಿಸಿದ್ದನು, ಏಕೆಂದರೆ ಅದು ತಿಮ್ಮಿಯ ಅಗಲಿಕೆಯ ಉರಿಯನ್ನು ಕೊಂಚ ಮಟ್ಟಿಗಾದರೂ ಮರೆಯಿಸುತ್ತಿತ್ತು. ಕಾಲು ಗುಣವಾದೊಡನೆಯ ತಾನು ಬೆಟ್ಟಳ್ಳಿಗೆ ಹಾರಿಹೋಗಿ ತಿಮ್ಮಿಯನ್ನು ಕರೆತರುತ್ತೇನೆ ಎಂದು ಹೊಂಗನಸು ಕಟ್ಟಿಕೊಂಡಿದ್ದನು. ಆಗ ಬಂದಿತ್ತು ಗುಸು ಸುದ್ದಿ: ತಿಮ್ಮಿಯನ್ನು ಕರಕೊಂಡು ಹೋದುದರ ಉದ್ದೇಶ ಅವಳನ್ನು ಹಿಂದಕ್ಕೆ ಕಳುಹಿಸಿ ಕೊಡುವುದಕ್ಕಲ್ಲ ಎಂದು! ಗುತ್ತಿಯ ಚೇತನವಲ್ಲ ಬೆಂಕಿ ಹೊತ್ತಿಕೊಂಡು ಉರಿಯತೊಡಗಿತ್ತು. ಕಾಳು ತುಸು ಗುಣವಾದರೆ ಸಾಕಲ್ಲಾ ಎಂದು ಪರಿತಪಿಸುತ್ತಿದ್ದನು. ಅಷ್ಟರಲ್ಲಿ ಪೋಲೀಸರು ಬಂದು ತನ್ನನ್ನು ಹಿಡಿದಿದ್ದರು! ಈಗ ಅವರ ನಡುವೆ, ಕಟುಕರ ನಡುವಣ ಕುರಿಯಂತೆ, ತಲೆಬಗ್ಗಿಸಿಕೊಂಡು ಹೋಗುತ್ತಿದ್ದಾನೆ. ತೀರ್ಥಹಳ್ಳಿಗೆ! ಮಳೆ ಸುರಿಯುತ್ತಿದೆ. ದಾರಿಯುದ್ದಕ್ಕೂ ಅವನು ಏನೊಂದು ಂಆತಿಗೆ ಹೋಗಿರಲಿಲ್ಲ.

ಗುತ್ತಿಯ ತಲೆಯಲ್ಲಿ ಏನೇನೋ ಚಿಂತೆ ಸುಳಿದಾಡುತ್ತಿವೆ. ಒಡೆಯರು ಹೇಳಿದ್ದನ್ನೆಲ್ಲ ನೆನೆಯುತ್ತಾನೆ. ಅವರು ಕಣ್ಣು ಮಿಟುಕಿಸಿದುದರ ಅರ್ಥ ಏನು ಎಂದು ಪರಿಚಿಂತಿಸುತ್ತಾನೆ. ದಾರಿಯಲ್ಲಿ ಪೋಲೀಸರ ಕಣ್ಣಿಗೆ ಮಣ್ಣೆರಚಿ ತಪ್ಪಿಸಿಕೊಂಡುಬಿಡು ಎಂದರಲ್ಲವೆ ಎಂದು ಆಲೋಚಿಸುತ್ತಾನೆ! ತಿಮ್ಮಿಯ ನೆನಪು ಬರುತ್ತದೆ; ಒಡನೆಯೆ ಅವನ

ಚೈತನ್ಯ ತಪ್ಪಿಸಿಕೊಂಡು ಒಡುವ ಸಾಹಸಕ್ಕೆ ಅನುವಾಗುತ್ತದೆ.... ಮತ್ತೆ ವಿವೇಕ ಮೂಡುತ್ತದೆ: ಈ ಇಬ್ಬರು ಪೋಲೀಸರಿಂದ ಹೇಗೆ ತಪ್ಪಿಸಿಕೊಂಡು ಓಡಲಿ? ಸಿಕ್ಕಿಬಿದ್ದರೆ ನನ್ನ ಗತಿ ಏನಾಗುತ್ತದೆ? ಕಾಲಾದರೂ ಸರಿಯಾಗಿ ಇದ್ದಿದ್ದರೆ ಒಂದು ಕೈ ನೋಡಬಹುದಿತ್ತು. ಅಯ್ಯೋ ಎಂದು ಎದೆ ಒಳಗೊಳಗೆ ಬೇಯುತ್ತದೆ. 'ಇಂದೊಮ್ಮೆ ಹೇಗಾದರೂ ತಪ್ಪಿಸಿಕೊಂಡು ತಿಮ್ಮಿಯನ್ನು ಸೇರಿದರೆ, ಆಮೇಲೆ ನಮ್ಮನ್ನು ಕಂಡುಹಿಡಿಯುವವರಾರು? ನೋಡುತ್ತೇನೆ!' ಎಂದುಕೊಳ್ಳುತ್ತದೆ ಅವನ ವಿರಹದಗ್ಧ ಮನಸ್ಸು....ಚಿಂತಿಸುತ್ತಿದ್ದಂತೆ ಏನೋ ಹೊಳೆಯಿತು ತಲೆಗೆ!

'ಅದೇ ಉಪಾಯ! ನೋಡಿಯೇಬಿಡುತ್ತೇನೆ!' ಎಂದು ಧೃಡ ಮಾಡಿಕೊಂಡನು. ಎಚ್ಚರಿಕೆಯಿಂದ ತನಗೆ ಅಡಿಅಡಿಯೂ ಪರಿಚಿತವಾಗಿದ್ದ ಹೆದ್ದಾರಿಯ ಇಕ್ಕೆಲಗಳನ್ನೂ ಚೆನ್ನಾಗಿ ವೀಕ್ಷಿಸುತ್ತಾ ನಡೆಯತೊಡಗಿದನು....'ಆ ಕ್ಯಾದಗೆ ಹಿಂಡಲ ಹತ್ರ ಕೆರೆ ಅಂಗಳದ ಕಂಪ ಅದೆಯಲ್ಲಾ ಅಲ್ಲೇ ಕೊಟ್ಟರೆ ಕೊಡಬೇಕು ಇವರಿಗೆ ಕೈ! ಆ ಕಂಪದಾಗೆ ಒಂದು ಕಡಾನೇ ಸಿಕ್ಕೊಂಡು ಬಿದ್ದಿತ್ತು. ಆ ದೊಡ್ಡ ಬ್ಯಾಟೀಲಿ! ಇನ್ನು ಈ ಗಿರ್ಲು ಮೀಸೆ ಧಡಿಯ ಹೂತುಕೊಂಡು ಹೋಗಾದೇನು ಹೆಚ್ಚೆ?.... ಮತ್ತೆ ಈ ಸಣಕಲ ಮೀಸೆ ಬೋಳ? ಆ ಹಳುವಿನ ಗಿಜರಿನಾಗೆ ಇಂವ ನನ್ನ ಅಟ್ಟಿ ಹಿಡಿಯಾದು ಅದೇ! ಮಳೆ ಬ್ಯಾರೆ ಹುಯ್ತಾ ಇದೆ! ಆಗಿದ್ದಾಗ್ಲಿ, ನೋಡೇಬಿಡ್ತೀನಿ!'....

ಇದ್ದಕ್ಕಿದ್ದ ಹಾಗೆ ಗುತ್ತಿ ಡುರುಕ್ಕೆಂದು ಹೂಸು ಕೊಟ್ಟು ನಿಂತನು!

ಥೂ! ಥೂ! ಥೂ! ತುಪ್ಪುತ್ತಾ ಶಪಿಸುತ್ತಾ, ಆದರೂ ನಗು ತಡೆಯಲಾರದ ಕಿಸಕ್ಕನೆ ನಕ್ಕು, ಪೋಲೀಸಿನವರಿಬ್ಬರೂ ಗುತ್ತಿಯಿಂದ ದೂರ ನೆಗೆದು ನಿಂತರು.

ಗುತ್ತಿ ರಸ್ತೆಯ ಮಧ್ಯೆ ಕೂತು, ಹೊಟ್ಟೆ ಕಿವುಚಿಕೊಳ್ಳುತ್ತಾ, ಮುಖದ ಮೇಲೆ ಯಮಯಾತನಾಭಂಗಿಯನ್ನು ಪ್ರದರ್ಶಿಸುತ್ತಾ, ಅಯ್ಯೋ ಅಯ್ಯೋ ಎಂದು ನರಳುತ್ತಿದ್ದನ್ನು ನೋಡಿ ಗಿರ್ಲುಮಿಸೆಯವನು ಸ್ವಲ್ಪ ಹತ್ತಿರಕ್ಕೆ ಬಂದು "ಏನಾಯ್ತೋ? ಏನಾಯ್ತೋ" ಎಂದು ಕೇಳಿದನು.

ಗುತ್ತಿ ಅರ್ಧ ಉಸಿರು ಕಟ್ಟಿದವನಂತೆ ನರಳಿದನು "ಹೊಟ್ಟೆ ಕಚ್ತದೇ, ನನ್ನೊಡೆಯಾ! ಒಂದು ಚೂರು ಹೊರಕಡೀಗೆ ಹೋಗಿ ಬತ್ತೀನಿ!"

"ಎಲ್ಲಿಗೆ ಹೋಗ್ತಾನಂತೆ? ಕಳ್ಳಮಾದರ್ಚೋತ್ ಸೂಳೇಮಗ, ಏನೋ ಹುನಾರ್ ತಗೀತಿದಾನೆ! ಏಳೋ, ಏಳೋ, ಬೋಳಿಮಗನೆ, ಒದಿತೀನಿ ನೋಡು." ಹತ್ತಿರಕ್ಕೆ ಬರುತ್ತಾ ಬೈದನು ಬೋಳುಮೀಸೆಯನು.

ಎಲ್ಲಿಗೂ ಹೋಗಾದಿಲ್ಲಾ, ನನ್ನೊಡೆಯಾ.... ಹೊಟ್ಟೆ ಕಚ್ತದೇ.... ಹೊರಕಡೆಗೆ ಹೋಗಿ ಬತ್ತೀನಿ.... ದೂರ ಹೋಗದಿಲ್ಲಾ.... ಇಲ್ಲೇ ಮಟ್ಟಿನ ಹಿಂದೆ ಕೂತುಗೋತೀನಿ!" ಎನ್ನುತ್ತಾ ಕಂಬಳಿಕೊಪ್ಪ ಹಾಕಿದ್ದ ಯಾತನಾಕ್ಲಿಷ್ಟ ಮುಕವನ್ನೆತ್ತಿ ಬೋಳುಮೀಸೆಯವನ ಕಡೆ ದೈನ್ಯದಿಂದ ನೋಡಿದನು.

"ಪಾಯಿಖಾನಿಗೆ 'ಹೊರಕಡೆ' ಅಂತಾ ಹೇಳ್ತಾರೆ ಈ ಹಳ್ಳಿ ಜನ. ಶನಿಸೂಳೆಮಗ ಹೋಗಿಯಾದ್ರೂ ಬರ್ಲಿ." ಹೇಳಿತು ಗಿರ್ಲುಮೀಸೆಯ ಸಹಾನುಭೂತಿಯ ವಾಣಿ. ಅಷ್ಟರೊಳಗಾಗಲೆ ಗುತ್ತಿ ಎರಡು ಮೂರು ಸಾರಿ ಹೂಸು ಬಿಟ್ಟಿದ್ದನು.

ಹತ್ತಿರ ಬಂದಿದ್ದ ಬೋಳುಮೀಸೆಯವನು ನಾತ ಸಹಿಸಲಾರದೆ ಮೂಗು ಮುಚ್ಚಿಕೊಂಡು ದೂರ ಹೋಗುತ್ತಾ ಕೂಗಿದನು: "ಸಾಯೋ ಬೇಗ, ನಿನ್ನ ಹಾಳು ಹೊಟ್ಟೆಗೆ ಬೆಂಕಿಹಾಕ!"

ಗುತ್ತಿ ನಿಧಾನವಾಗಿ ಎದ್ದು, ಕೇದಗೆ ಹಿಂಡಿಲನ್ನೂ, ಉಸುಬಿನ ಕೆರೆಯ ಅಂಗಳವನ್ನೂ ಹಸಿರುಹುಲ್ಲು ಹಬ್ಬಿ ಸಾಧಾರಣ ಬಯಲಿನಂತೆ ತೋರುತ್ತಿದ್ದ ಕಂಪದ ಹುಸಿ ನೆಲವಿದ್ದ ಮೂಲೆಯನ್ನೂ ಸಮೀಕ್ಷಿಸಿದನು. ತಾನು ಎತ್ತ ಕಡೆಯಿಂದ ಹೋಗಿ, ಎಲ್ಲಿ 'ಹೊರಕಡೆ'ಗೆ ಕೂರಬೇಕು ಎಂಬುದನ್ನೂ ತಜ್ಞಶೀಘ್ರತೆಯಿಂದ ನಿಶ್ಚಯ ಮಾಡಿಕೊಂಡನು. ಇದ್ದಕ್ಕಿದ್ದಹಾಗೆ, ಬಹಳ ಅವಸರವಾದಂತೆ, ಮೊಳಕಾಲಿನವರೆಗೆ ಸುತ್ತಿದ್ದು ಕೊಳಕಲು ಮುದ್ದೆಯಾಗಿದ್ದ ತನ್ನ ಅಡ್ಡಪಂಚೆಯನ್ನು ಅಂಡೆಲ್ಲ ಕಾಣುವಂತೆ ಎತ್ತಿ, ಒಳಗೆ ಕಟ್ಟಿದ್ದ ಲಂಗೋಟಿಯನ್ನು ಬಿಚ್ಚುವವನಂತೆ ನಟಿಸುತ್ತಾ ರಸ್ತೆಯನ್ನು ಬಿಟ್ಟು ಇಳಿಜಾರಿನಲ್ಲಿ ಓಡಿದನು! ಪೋಲೀಸಿನವರಿಬ್ಬರೂ ಅವನ ರೋಮಮಯ ಕುಂಡೆಯ ದರ್ಶನಕ್ಕೆ ಜುಗುಪ್ಸೆ ಪಟ್ಟು, 'ಥೂ! ಥೂ! ಥೂ!' ಎಂದು ಉಗುಳುತ್ತಾ 'ಸಾಕಪ್ಪಾ ಈ ಹೊಲೆಸೂಳೆಮಗನ ಸಾವಾಸ!' ಎಂದು ಬಯ್ಯುತ್ತಾ ಮುಖತಿರುಗಿಸಿಕೊಂಡರು.

"ಏಯ್ ದೂರ ಹೋಗಬೇಡೋ!" ಎಂದು ಆಜ್ಞೆ ಕೂಗಿತು ಗಿರ್ಲುಮೀಸೆ.

ಅವನ ಅಪ್ಪನ ಮನೆಗೆ ಎಲ್ಲಿಗೆ ಸಾಯ್ತಾನೆ?" ಎಂದಿತು ಬೋಳುಮೀಸೆ.

ಈ ಹಾಳು ಪೋಲೀಸು ಕೆಲಸ ನನಗೆ ಯಾಕೆ ಬೇಕಿತ್ತು, ಮಾಯಿಂದಪ್ಪೂ?" ಎಂದು ರಸ್ತೆಯ ಅಂಚಿನಲ್ಲಿ ತುದಿಗಾಲ ಮೇಲೆ ಕೂತು, ಕೊಡೆಯ ಮರೆಯಲ್ಲಿ ಬೀಡಿ ಹೊತ್ತಿಸಲು ಅನುಗುಣವಾಗುತ್ತಿತ್ತು, ಗಿರ್ಲುಮೀಸೆ.

"ಈ ದನಗೋಳು ಮಳೇಲಿ ಸಾಲದಕ್ಕೆ ಈ ಹೊಲೆಸೂಳೇಮಗನ್ದು ಬೇರೆ ರಂಪ!" ಎಂದು ಬೋಳುಮೀಸೆ ಗುತ್ತಿ ಹೋದತ್ತಕಡೆ ನೋಡುತ್ತಿತ್ತು.

ಯಾವ ಪೊದೆಯ ಮರೆಯಲ್ಲಿ ಗುತ್ತಿ ಪಾಯಖಾನೆಗೆ ಕೂತಹಾಗೆ ಮಾಡಿದ್ದನೋ ಅಲ್ಲಿಂದ ಸ್ವಲ್ಪ ದೂರದಲ್ಲಿ ರಸ್ತೆಯ ಅಂಚಿನ ಕಾಡಿನಲ್ಲಿ ಯಾವುದೋ ಪ್ರಾಣಿ ಓಡಾಡಿದ ಸದ್ದಾಯಿತು. ಪಟ್ಟಣಜೀವಿಗಳಾದ ಪೋಲೋಸರಿಬ್ಬರಿಗೂ ತುಸು ತಲ್ಲಣವಾಯ್ತು, ಹುಲಿಯೋ ಏನೋ ಎಂದು.

ಆ ಶಂಕೆಯ ನಿವಾರಣಾರ್ಥವಾಗಿಯೂ ಮತ್ತು ಧೈರ್ಯ ತಂದುಕೊಳ್ಳುವುದಕ್ಕಾಗಿಯೂ ಗಿರ್ಲುಮೀಸೆ 'ಏಯ್, ಆಯ್ತೇನೋ? ಬೇಗ ಬಾರೊ!' ಎಂದು ಕೂಗಿ, ಬೀಡಿ ಹೊತ್ತಿಸಲು ಪ್ರಯತ್ನಿಸತೊಡಗಿದನು. ಆದರೆ ಆ ಮಳೆಗಾಲದಲ್ಲಿ ಅದು ಕೈಗೊಡುವ ಸಂಭವ ಕಾಣಲಿಲ್ಲ. ಬರಿದೆ ಬೆಂಕಿಕಡ್ಡಿ ಕರ್ಚು ಮಾಡುವುದೇಕೆ ಎಂದು ಪೊಟ್ಟಣವನ್ನೂ ಬೀಡಿಯನ್ನೂ ಜೇಬಿಗೆ ಹಾಕಿಕೊಂಡು ಎದ್ದು ನಿಂತು ನೋಡಿದಾಗ, ಗುತ್ತಿ ಅಲ್ಲಿ ಎಲ್ಲಿಯೂ ಕೂತಿದ್ದಂತೆ ಭಾಸವಾಗಲಿಲ್ಲ! ಕರೆದರೆ ಉತ್ತರವಿಲ್ಲ!

“ಕೊಟ್ಟ ಕಣೋ ಸೂಳೆಮಗ ಕೈಯ!” ಎಂದೋಡಿ ಕೆರೆಯ ಅಂಗಳದ ನೀರಿಲ್ಲದ ಹಸುರು ನೆಲದ ಕಡೆಗೆ ಹಾರಿ ಧಾವಿಸುತ್ತಾ ಗಿರ್ಲು ಮೀಸೆಯವನು ಬೋಳುಮೀಸೆಯವನಿಗೆ ಕೂಗಿದನು: “ಮಾಯಿಂದಪ್ಪೂ, ಮಾಯಿಂದಪ್ಪೂ, ಅತ್ತ ಕಡೆಯಿಂದ ಓಡಿ ಬಾ! ಅಡ್ಡಹಾಕು! ಓಡು! ಓಡು!”

ಮಾಯಿಂದಪ್ಪು ಕೆರೆಯನ್ನು ಬಳಸಿ ಸುತ್ತುಗಟ್ಟುವ ಉದ್ದೇಶದಿಂದ ಅತ್ತಕಡೆ ಓಡಿ ಕಾಡಿನ ಹಳುವಿಗೆ ನುಗ್ಗಿದನು. ಆದರೆ ಆ ಮುಳ್ಳಿನ ಗಿಜರಿನಲ್ಲಿ ಅವನು, ಓಡುವುದಿರಲಿ, ಚಲಿಸುವುದೆ ಹರ್ಮಾಗಾಲವಾಯಿತು. ಕಷ್ಟಪಟ್ಟು ನುಸುಳಿ ನಾಲ್ಕು ಹೆಜ್ಜೆ ಹೋಗುವುದರಲ್ಲಿ ಗುತ್ತಿ ಛೂ ಬಿಟ್ಟಿದ್ದ ಅವನ ದೈತ್ಯನಾಯಿ ಹುಲಿಯ - ಆ ಒಕ್ಕಣ್ಣಿನ ಸ್ವಾಮಿಭಕ್ತ ತನ್ನ ಒಡೆಯನನ್ನೆ ರಸ್ತೆಯ ಅಂಚಿನ ಕಾಡಿನಲ್ಲಿ ಮರೆಯಾಗಿ ಹಿಂಬಾಲಿಸುತ್ತಿತ್ತೆಂದು ತೋರುತ್ತದೆ. ಅವನ ಮೇಲೆ ರೌದ್ರವಾಗಿ ಬೊಗಳುತ್ತಾ ಎಗರಿತು. ಆ ಮುಳ್ಳು ಬಳ್ಳಿ ಗಿಜುರುಗಳ ಮಧ್ಯೆ ಮಾಯಿಂದಪ್ಪುಗೆ ನೆಟ್ಟಗೆ ನಿಲ್ಲಲೂ ಆಗುತ್ತಿರಲಿಲ್ಲವಾದ್ದರಿಂದ ಹುಲಿಯನ ಭಾರಕ್ಕೂ ವೇಗಕ್ಕೂ ಕಂಗಾಲಾಗಿ ಕೆಳಗೆ ಬಿದ್ದುಬಿಟ್ಟನು. ಹುಲಿಯು ಅವನನ್ನು ಕಚ್ಚುವ ಗೋಜಿಗೆ ಹೋಗದೆ, ಕಾಡಿನಲ್ಲಿ ಒಂದೇ ಸಮನೆ ಕುಂಟಿಕುಂಟಿ ಓಡುತ್ತಿದ್ದ ತನ್ನ ಒಡೆಯನ ಮೈಗಾವಲಾಗಿ ಅವನ ಹಿಂದೆ ಹಿಂದೆಯೆ ಓಡಿ ಬಿಟ್ಟಿತ್ತು!

ಮಾಯಿಂದಪ್ಪು ತತ್ತರಿಸಿಕೊಂಡು ಎದ್ದು ನಿಲ್ಲುವ ಹೊತ್ತಿಗೆ, ಆರ್ತಧ್ವನಿಯಿಂದ ತನ್ನನ್ನು ಹೆಸರು ಹಿಡಿದು ಕೂಗುತ್ತಿದ್ದ ದಫೇದಾರ ಮಾನನಾಯಕರ ಬೊಬ್ಬೆ ಕೇಳಿಸಿತು! ಏನೊಂದು ಅರ್ಥವಾಗದ ಮಾಯಿಂದಪ್ಪು ಹಿಂದುರುಗಿ, ಕೂಗು ಕೇಳಿಸುತ್ತಿದ್ದ ದಿಕ್ಕಿಗೆ ರಸ್ತೆಯ ಕಡೆಗೇ ಮತ್ತೆ ಓಡಿದನು, ಆ ಹಳುವಿನಲ್ಲಿ ತನಗೆ ಪರಮಸಾಧ್ಯವಾದ ವೇಗದಲ್ಲಿ.

ಮಾನನಾಯಕರ ಕೂಗೇನೊ ಕೇಳಿಸುತ್ತಿತ್ತು! ಆದರೆ ಮಾಯಿಂದಪ್ಪು ಎತ್ತ ಕಣ್ಣು ಹೊರಳಿಸಿದರೂ ದಫೇದಾರರು ದೃಗ್ಗೋಚರವಾಗಲಿಲ್ಲ. ದಿಗಿಲುಗೊಂಡು ಅತ್ತ ಇತ್ತ ಓಡಿ ಹುಡುಕಿ ನೋಡುತ್ತಾನೆ, ಕೆರೆಯ ಅಂಗಳದ ಹಸುರುನೆಲದಲ್ಲಿ, ಭೂಗರ್ಭದಿಂದ ಮೂಡಿ ನಿಂತ ವರಾಹವತಾರದಂತೆ, ಸೊಂಟದ ಮೇಲೆ ಮಾತ್ರ ಗೋಚರವಾಗಿ ನಿಂತಿದ್ದರೋ ಮಾಯಿಂದಪ್ಪುಗೆ ಅರ್ಥವಾಗಲಿಲ್ಲ. ಅವರಿಗೆ ನೆರವಾಗಲು ಅವರತ್ತ ಏಕೆ? ಹೇಗೆ? ಹಾಗೆ ನಿಂತಿದ್ದರೋ ಮಾಯಿಂದಪ್ಪುಗೆ ಅರ್ಥವಾಗಲಿಲ್ಲ. ಅವರಿಗೆ ನೆರವಾಗಲು ಅವರತ್ತ ಓಡ ತೊಡಗಿದನು.

“ಬರಬೇಡ! ಬರಬೇಡ! ಅಲ್ಲೆ ನಿಲ್ಲು! ನಿಲ್ಲು! ನಿಲ್ಲು! ಉಸುಬು! ಕಂಪ!” ಮಾನನಾಯಕರು ಅಬ್ಬರಿಸಿ ಕೂಗಿದರು.

ಮಾಯಿಂದಪ್ಪಯ ಮರವಟ್ಟಂತಾಗಿ ನಿಂತುಬಿಟ್ಟನು.

ತತ್ಕಾಲದಲ್ಲಿ, ಆ ಜಡಿಮಳೆಯಲ್ಲಿ, ಆ ನಿರ್ಜನ ಕಾಡಿನ ಮಧ್ಯೆ, ಹೇಳುವವರು ಕೇಳುವವರು ದಿಕ್ಕು ದೆಸೆ ಯಾವುದೂ ಇಲ್ಲದಂತಾಗಿದ್ದ ಆ ವಾತಾವರಣದಲ್ಲಿ, ಕಷ್ಟಕ್ಕೆ ಸಿಕ್ಕಿದ್ದ ಅವರಿಬ್ಬರೂ ತಮ್ಮ ಪೋಲೀಸುಗಾರಿಕೆಯ ಮತ್ತು ಅಧಿಕಾರದ ಸರ್ವ ಉಪಾಧಿಗಳಿಂದಲೂ ಬಿಡುಗಡೆ ಹೊಂದಿ ಸಾಮಾನ್ಯ ಮನುಷ್ಯವ್ಯಕ್ತಿಗಳಾಗಿದ್ದರು: ಒಬ್ಬನು ಬೋವಿ-ಮನೆಯಲ್ಲಿ ಹೆಂಡತಿ ಬಾಣಂತಿಯಾಗಿರುವ ಗಂಡುಕೂಸಿನ ತಂದೆ,- ಮಾನನಾಯಕ! ಇನ್ನೊಬ್ಬನು ಸೆಟ್ಟಿ ವಿಧವೆಯಾಗಿದ್ದು ರೋಗದಿಂದ ನರಳುತ್ತಿರುವ ತಾಯಿಯ ಒಬ್ಬನೆ ಮಗ, - ಮಾಯಿಂದಪ್ಪು!

ಮಾಯಿಂದಪ್ಪ ನೋಡುತ್ತಿದ್ದಂತೆಯೆ ದೃಗ್ಗೋಚರವಾಗಿದ್ದ ಮಾನನಾಯಕರ ದೇಹಭಾಗ ಮೆಲ್ಲಮೆಲ್ಲನೆ ಕಡಮೆಯಾಗುತ್ತಿದ್ದಂತೆ ತೋರಿತು! ನಾಯಕರು ಮೇಲೆಳಲು ಪ್ರಯತ್ನಪಟ್ಟಂತೆಲ್ಲ ಕೆಳಕೆಳಕ್ಕೆ ಹೋಗುತ್ತಿದ್ದರು! ಅವರ ಸೂಚನೆಯ ಮೇರಗೆ ಮಾಯಿಂದಪ್ಪ ತನ್ನ ಪೋಲೀಸಿನ ಕರಿಯಪೇಟವನ್ನು ಬಿಚ್ಚಿ, ಒಂದು ತುದಿ ತನ್ನ ಕೈಯಲ್ಲಿರುವಂತೆ ಹಿಡಿದು, ಸುರಳಿ ಬಿಚ್ಚಿ ಬೀಸಿ ಎಸೆದನು. ಒಂದೆರಡು ಪ್ರಯತ್ನಗಳಲ್ಲಿಯೆ ನಾಯಕರು ಅದರ ಮತ್ತೊಂದು ತುದಿಯನ್ನು ತಮ್ಮನ್ನು ರಕ್ಷಿಸಲು ಐತಂದ ಪರಮಾತ್ಮನ ಪಾದಾರವಿಂದವೋ ಎಂಬಂತಹ ಭಕ್ತಿಯ ಕೃತಜ್ಞತೆಯಿಂದ ಬಿಗಿಯಾಗಿ ಹಿಡಿದುಕೊಂಡರು. ಆದರೆ ಮಾಯಿಂದಪ್ಪುವಿನಿಂದ ಉಸುಬಿನಲ್ಲಿ ಭದ್ರವಾಗಿ ಸಿಕ್ಕಿಕೊಂಡಿದ್ದ ಅವರನ್ನು ಹೊರಕ್ಕೆಳೆಯಲಾಗಲಿಲ್ಲ; ಕೆಳಕೆಳಕ್ಕೆ ಮುಳುಗುತ್ತಿದ್ದುದನ್ನು ತಪ್ಪಿಸಲು ಮಾತ್ರ ಸಾಧ್ಯವಾಯಿತು.

ಮಾನನಾಯಕರ ಕಣ್ಣಿಂದ ನೀರು ಸೋರಿದ್ದನ್ನೇನೋ ಕಂಡನು ಮಾಯಿಂದಪ್ಪು: ಅದರೆ ಅವರು ತೀರ್ಥಹಳ್ಳಿಯ ರಾಮೇಶ್ವರ ದೇವರಿಗೆ ಅನನ್ಯ ಭಕ್ತಿಯಿಂದ ಮನಸ್ಸಿನಲ್ಲಿಯೆ ಮಾಡಿಕೊಳ್ಳುತ್ತಿದ್ದ ಪ್ರಾರ್ಥನೆ ಮತ್ತು ಹೊತ್ತುಕೊಳ್ಳುತ್ತಿದ್ದ ಹರಕೆ ಕೇಳಿಸಿರಲಿಲ್ಲ;

'ಸ್ವಾಮಿ, ಇದೊಂದು ಸಾರಿ ನಮ್ಮನ್ನು ಹೇಗಾದರೂ ಬಚಾವು ಮಾಡು! ಈ ಪಾಪಿಷ್ಠ ಪೋಲೀಸು ಕೆಲಸಕ್ಕೆ ಖಂಡಿತ ರಾಜಿನಾಮೆಕೊಟ್ಟು, ನನ್ನ ಗದ್ದೆ ತೋಟ ನೋಡಿಕೊಂಡು ಮಾಡಿಕೊಂಡು ನೆಮ್ಮದಿಯಾಗಿ ನಿನ್ನ ಸೇವೆ ಸಲ್ಲಿಸುತ್ತೇನೆ. ಏನೋ ಆ ಅಮಲ್ದಾರರು ಹೇಳಿದರು-ಬೋವೀ ಜನಾಂಗಕ್ಕೆ ನೀನೊಂದು ಭೂಷಣ ಆಗಿರುತ್ತೀಯಾ; ದಫೇದಾರನಾಗು-ಅಂತಾ. ನನಗೂ ದುರ್ಬುದ್ಧಿ, ಕೆಟ್ಟಗಳಗೇಲಿ ಹೇಲು ತಿನ್ನಾಕೆ ಒಪ್ಪಿಕೊಂಡು ಕೆಟ್ಟೆ, ಸ್ವಾಮೀ! ಇದೊಂದು ಸಾರಿ ನನ್ನ ಕಾಪಾಡು!'

ರಾಮೇಶ್ವರನಿಗೆ ಅವರ ಪ್ರಾರ್ಥನೆ ಮುಟ್ಟಿತೋ ಏನೋ? ರಾಮೇಶ್ವರದ ದೇವಸ್ಥಾನದಲ್ಲಿ ಗಂಟೆಯ ಸದ್ದಾಗುವಂತೆ ಕೇಳಿಸಿತು. ಮಾನನಾಯಕರ ಕಿವಿಗಳಿಗೆ! ಭಗವಂತ ಇಷ್ಟು ಸುಲಭನೇ? ನಾಯಕರಿಗೆ ಅಚ್ಚರಿಯಾಯಿತು. ಆದರೆ ಆ ಘಂಟೆಯ ದನಿ ಮಾಯಿಂದಪ್ಪುವಿಗೂ ಕೇಳಿಸಿತ್ತು. ಅವನು ಕತ್ತು ತಿರುಗಿಸಿ ತೀರ್ಥಹಳ್ಳಿಯ ದಿಕ್ಕಿಗೆ ನೋಡಿದನು. ಏನೂ ಕಾಣಿಸಲಿಲ್ಲ. ಮೇಗರವಳ್ಳಿಯ ದಿಕ್ಕಿಗೆ ನೋಡಿದಾಗ, ಗಂಟೆ ಗಗ್ಗರ ಕಟ್ಟಿದ್ದ ಸುಸ್ವರದ ಕೊರಳಿನ ಎತ್ತುಗಳು ಕಮಾನುಗಾಡಿಯೊಂದನ್ನು ಎಳೆದುಕೊಂಡು ತಮ್ಮನ್ನು ಸಮೀಪಿಸುತ್ತಿದ್ದುವು.

ಗಾಡಿ ನಿಂತಿತು, ಹಿಂಬಾಗದಿಂದ ದೇವಯ್ಯನೂ ಮುಕುಂದಯ್ಯನೂ ಕೊಡೆ ಸುಡಿಸಿಕೊಳ್ಳುತ್ತಲೆ ಹಾರಿದರು. ಮಳೆಯಲ್ಲಿ ತೊಯ್ಯುತ್ತಲೆ ಕರಿಪೇಟದ ತುದಿಯನ್ನು ಹಿಡಿದು ನಿಂತಿದ್ದ ಪೋಲೀಸನವನನ್ನು ಗುರುತಿಸಿ, ದೇವಯ್ಯ ಕೇಳಿದನು "ಏನು, ಮಾಯಿಂದಪ್ಪ? ಇದ್ಯಾಕೆ ಇಲ್ಲಿ ಹೀಂಗೆ ನಿಂತೀಯಾ?"

ಅಷ್ಟರಲ್ಲಿ ಕೆರೆಯಂಗಳದ ಕಡೆಯಿಂದ "ನಮಸ್ಕಾರ, ಗೌಡರಿಗೆ." ಎಂದು ಯಾರೂ ಕೂಗಿದ್ದನ್ನು ಕೇಳಿ ಅತ್ತಕಡೆ ನೋಡುತ್ತಾರೆ: ಗಿರ್ಲು ಮೀಸೆಯ ದಫೇದಾರ ಮಾನನಾಯಕರು ಹೂತುಕೊಂಡು ನಿಂತಿದ್ದಾರೆ!

ಎತ್ತಿನ ಕೊರಳು ಬಿಚ್ಚಿ, ಗಾಡಿ ಬಿಟ್ಟು, ಕಂಬಳಿಕೊಪ್ಪೆ ಹಾಕಿಕೊಂಡು ಓಡಿಬಂದಿದ್ದ ಬಚ್ಚನಿಗೆ ಆಜ್ಞಾಪಿಸಲು, ಅವನೂ ಮಾಯಿಂದಪ್ಪುವೂ ಸೇರಿ ಮೆಲ್ಲನೆ ಜಗ್ಗಿಸಿ ಎಳೆದೂ ಎಳೆದೂ ದಫೇದಾರರನ್ನು ದಡಕ್ಕೆ ತಂದರು.

ಮಾನನಾಯಕರು ಕಂಪದ ಕೆಸರು ಮೆತ್ತಿದ ಬಟ್ಟೆಗಳನ್ನು ತೆಗೆಯುವುದೆ ಮುಂತಾದ ಕೆಲಸದಲ್ಲಿ ತೊಡಗಿದ್ದಾಗ, ಮಾಯಿಂದಪ್ಪು ನಡೆದುದನ್ನೆಲ್ಲ ಸಂಕ್ಷೇಪವಾಗಿ ತಿಳಿಸಿ:

"ಬಡ್ಡೀಮಗ, ನೋಡಿ, ಎಂಥಾ ಜಾಗ ಆರಿಸಿದ್ದಾನೆ ಓಡಿಹೋಗುವುದಕ್ಕೆ?" ಎಂದನು.

"ದಫೇದಾರ್ರು ಉಳಿದದ್ದೆ ಹೆಚ್ಚು ಈ ಕಂಪದಾಗೆ. ಇದರೊಳಗೆ ಸುಮಾರು ಹಂದಿ ಹುಲಿ ಕಡ ಮಿಗ ಎಲ್ಲಾ ಹೂತುಕೊಂಡು ಹೋಗ್ಯವೆಯಂತೆ!" ಎಂದನು ಬಚ್ಚ.

"ಅಂತೂ ಗಾಳದ ತುದಿಗೆ ಒಳ್ಳೆ ಎರೆ ಸಿಕ್ಕಿಸಿಕೊಂಡು ಕರೀ ಪೇಟದ ನೇಣು ಹಿಡುಕೊಂಡು ನಿಂತಿದ್ದೀ ಅನ್ನು!" ಅಂತಹ ಅಪಘಾತವೇನೂ ನಡೆಯದೆ ಅಪಾಯದಿಂದ ಪಾರಾಗಿದ್ದುದರಿಂದ ಸಂದರ್ಭವನ್ನು ವಿನೋದಕ್ಕೆ ತಿರುಗಿಸಿದ್ದನು ದೇವಯ್ಯ.

ಆ ತೊಂದರೆಯ ಸನ್ನಿವೇಶದಲ್ಲಿಯೂ ಎಲ್ಲರೂ ನಕ್ಕರು, ತುಸುದೂರದಿಂದ ಆಲಿಸಿದ್ದ ಮಾನನಾಯಕರೂ ಸೇರಿ.

ಮಾಯಿಂದಪ್ಪು ಗುತ್ತಿಯನ್ನು ಮತ್ತೆ ಹಿಡಿಯುವ ಮಾತನ್ನೆತ್ತಿದಾಗ, ದೇವಯ್ಯ ಬುದ್ಧಿ ಹೇಳಿದನು: "ನಿಮ್ಮ ಪೋಲೀಸರನ್ನೆಲ್ಲ ಕರಕೊಂಡು ಬಂದು ಷಿಕಾರಿ ನುಗ್ಗಿದರೂ ಅಂವ ಇನ್ನು ಬಡಪಟ್ಟಿಗೆ ಸಿಕ್ಕೋದಿಲ್ಲ. ಅಂವ ಏನು ಸಾಮಾನ್ಯ ಅಂತ ಮಾಡಿರೇನು? ಪುಂಡ! ಜಗಪುಂಡ! ಆ ಸಿಂಬಾವಿ ಹೆಗ್ಗಡೆಯ ಚಿತಾವಣೆ ಬೇರೆ ಇದೆ ಅವನಿಗೆ ಹುಡಗೇರನ್ನ ಹಾರಿಸೋದು, ದೊಂಬಿ ಮಾಡೋದು, ಕಳವು ಖೂನಿ ನಡಸೋದು, ಒಂದೋ ಎರಡೋ ಅಂವ ಮಾಡದಿದ್ದೇ ಇಲ್ಲ. ಇತ್ತ ಕಡೆಗೆಲ್ಲಾ ಅವನೊಬ್ಬ ಖದೀಮ್‌ಪುಂಡ ಆಗಿಬಿಟ್ಟಿದ್ದಾನೆ!"

ಬಚ್ಚನೂ ತನ್ನ ಸಲಹೆ ಸೇರಿಸಿದ್ದನು: "ಅಯ್ಯಾ, ಈ ಕಾಡಿನಲ್ಲಿ ಈ ಮಳೇಲಿ ಅಂವ ಇನ್ನೆಲ್ಲಿ ಸಿಕ್ತಾನೆ? ಎಂತಿದ್ರೂ ಇಂದೋ ನಾಳೆಯೋ ಬೆಟ್ಟಳ್ಳಿಗೆ ನಮ್ಮ ಕೇರಿಗೆ ಬಂದೇ ಬರ್ತಾನೆ. ಆಗ ಬೇಕಾದ್ರೆ ನಾ ಹಿಡುಕೊಡ್ತೀನಿ ಅಂವನ್ನ!"

ತನಗೆ ಚಿಕ್ಕಂದಿನಿಂದಲೂ ಚೆನ್ನಾಗಿ ಪರಿಚಿತನಾಗಿದ್ದು ತುಂಬ ಒಳ್ಳೆಯ ನಿಷ್ಠಾವಂತ ಸೇವಕನಾಗಿದ್ದ ಗುತ್ತಿಯನ್ನು ಕುರಿತು ಅವರಾಡುತ್ತಿದ್ದ ಮಾತುಗಳನ್ನು ಆಲಿಸಿ ಆಶ್ಚರ್ಯಪಡುತ್ತಾ ನಿಂತಿದ್ದನು ಮುಕುಂದಯ್ಯ.

ಮಾನನಾಯಕರು ತಮ್ಮ ಮಾನಸ್ಥಾನದ ಏರ್ಪಾಡುಗಳನ್ನೆಲ್ಲ ಪೂರೈಸಿ ಕೊಂಡಾದ ಮೇಲೆ, ಒದ್ದೆ ಬಟ್ಟೆಗಳಲ್ಲಿ ನಡುಗುತ್ತಿದ್ದ ಆ ಇಬ್ಬರು ಪೋಲೀಸರನ್ನೂ ಅವರ ಸಾಮಾನುಗಳ ಸಹಿತ ಗಾಡಿಯಲ್ಲಿ ಕೂರಿಸಿಕೊಂಡು, ಬೆಟ್ಟಳ್ಳಿಯ ಕಮಾನುಗಾಡಿ ಗಂಟೆ ಗಗ್ಗರಗಳ ಸುಸ್ವರಗೈಯುತ್ತಾ, ಎಡೆಬಿಡದೆ ಸುರಿಯುತ್ತಿದ್ದ ಮಳೆಯಲ್ಲಿ ತೀರ್ಥಹಳ್ಳಿಯ ಕಡೆಗೆ ಹೊರಟಿತು.

“ನೀವೆಲ್ಲಾದರೂ ಬರುವುದು ಸ್ವಲ್ಪ ತಡವಾಗಿದ್ದರೆ, ನನ್ನ ಹೆಣಾನೆ ಹಾಕಿಕೊಂಡು ಹೋಗಬೇಕಾಗುತ್ತಿತ್ತೇನೋ?” ಎಂದರು ದಫೇದಾರರು.

ಹಿಂತಿರುಗಿ ಬರುವಾಗ ಹೆಣಾ ಹಾಕಿಕೊಂಡು ಬರುವ ಅಶುಭಯೋಗವಿದ್ದ ಆ ಗಾಡಿ ಹೋಗುವಾಗೇಕೆ ಹೆಣಾ ಹೊತ್ತುಕೊಂಡು ಹೋದೀತು?

* * *

## ೪೪

ಹಳೆಮನೆಯ ಹೊಲಗೇರಿಯಿಂದ ಕತ್ತಿ ಕೊಡಲಿ ಹಿಡಿದು, ಕಂಬಳಿಕೊಪ್ಪ ಹಾಕಿಕೊಂಡಿದ್ದ ಆಳುಗಳು-ಮಂಜ, ತಿಮ್ಮ, ಸಿದ್ದ, ಕಿಸಿದ್ದ, ಸಣತಿಮ್ಮ-ಸುಡುಗಾಡು ಪಟ್ಟೆಯಲ್ಲಿ ಕಟ್ಟಿಗೆ ಒಟ್ಟಿ ಸೂಡುಮಾಡಲು ಹೊರಟಿದ್ದರು. ಮಳೆ ಸಣ್ಣಗೆ ಬೀಳುತ್ತಲೆ ಇತ್ತು. ಬೆಳಗ್ಗೆ ಒಂಬತ್ತು ಗಂಟೆಯ ಸಮಯವಾಗಿದ್ದರೂ ಆಗತಾನೆ ಹೊತ್ತಾರೆಯಾಗಿದ್ದಂತೆ ಮೋಡಗಪ್ಪು ತುಂಬಿ ಚಳಿಗಾಳಿ ಬೀಸುತ್ತಿತ್ತು. ‘ದುರ್ದಿನ’ ಎಂಬ ವರ್ಣನೆಗೆ ಅತ್ಯಂತ ಅರ್ಹ ನಿದರ್ಶನವಾಗಿತ್ತು ಆ ದಿನ.

‘ಒಡೇರ ದಿಬ್ಬ’ದ ಹತ್ತಿರಕ್ಕೆ ಗುಂಪು ಬಂದ ಮಂಜ “ಹಿಂಗಾಗ್ತದೆ ಅಂತಾ ಯಾರಿಗೆ ಗೊತ್ತಿತ್ತು” ಎಂದು ಅಳು ತಡೆದವನಂತೆ ನಿಡುಸುಯ್ಯುತ್ತಾ ಹೇಳಿದನು: “ನೋಡು ತಿಮ್ಮಣ್ಣಾ, ಅವರು ತಿರುಪತಿಗೆ ಹೊರಡಾಕೆ ಹಿಂದಿನ ದಿನ, ಇದೇ ದಿಬ್ಬದ ಮೇಲೆ ನಿಂತುಕೊಂಡು ನಮ್ಮನ್ನೆಲ್ಲ ಕೆಲಸಕ್ಕೆ ಕರೆದಿದ್ರು! ಆವಾಗ್ಲೂ ನನ್ನ ಬಿಡಾರ ಇಲ್ಲೆ ಇತ್ತಲ್ಲಾ, ಹಿಂಗೆ ಎದಿರಿಗೆ! ಬಿಡಾರದ ಒಳಗಿನಿಂದಲೆ ಅವರನ್ನ ನೋಡಿದ್ದೆ: ದೇವರ್ನೇ ನೋಡಿದ್ಹಾಂಗೇ ಆಗಿತ್ತು! ನಂಗೂ ಅವರಿಗೂ ಸುಮಾರು ಒಂದೇ ವಯಸ್ಸು. ಅವರು ಕೆಲಸಕ್ಕೆ ಕರೆದಿದ್ರೋ! ಇಷ್ಟು ಬ್ಯಾಗ ಅವರ ಸೂಡು ಕಡಿಯಾಕೆ ಹೋಗ್ತೀನಿ ಅಂತಾ....” ಮಂಜಗೆ ದುಃಖ ಉಕ್ಕಿ ಬಂದು ಮುಂದೆ ಮಾತಾಡದೆ ಕತ್ತಿ ಹಿಡಿದಿದ್ದ ಕೈಯಿಂದಲೆ ಕಣ್ಣೊರಸಿಕೊಂಡನು.

“ಈ ಸಣ್ಣ ಹೆಗ್ಗಡೇರ್ಹಾಗಲ್ಲ, ಅವರು ಒಂದು ಸಾರೀನೂ ಬೈದಿದ್ದು ನಂಗೆ ನೆನಪಿಲ್ಲ. ಏನು ವೈನಾಗಿ ಮಾತಾಡ್ಸಿದ್ರು: ‘ತಿಮ್ಮಾ, ಹಾಂಗೆ ಮಾಡಬ್ಯಾಡೋ, ಹೀಂಗೆ ಮಾಡೋ’ ಅಂತಾ ಬುದ್ದಿ ಹೇಳಿ ತಿದ್‌ತಿದ್ರೆ ಹೊರ್ತೂ, ಒಂದು ಪೆಟ್ಟು ಹೊಡೀತಿರ್ಲಿಲ್ಲ, ಒಂದು ಕೆಟ್ಟ ಬೈಗುಳ ಬೈತಿರ್ಲಿಲ್ಲ ಅವರ ಬಾಯ್ಲಿ....ನಾನೊಂದು ಸರ್ತಿ, ಏನಾತು ಅಂತೀಯಾ? ನಮ್ಮ ಬಿಡಾರಕ್ಕೆ ಯಾರೋ ನೆಂಟರು ಬಂದಾರೆ ಅಂತಾ, ಬಾಯಿಗೆ ಹಾಕಾಕೆ ಒಂದೆಲ್ಡು ಈಳ್ಯೆದೆಲೆ ತರಾನ ಅಂತಾ, ಮೆಲ್ಲಕೆ ಕದ್ದುಹೋಗಿ, ಅಡಕೆ ಮರಕ್ಕೆ ಒರಕಿ ಒಂದೆಲ್ಡು ಎಲೆ ಕುಯ್ದಿದ್ದೆ. ಹಾಳ್‌ಬಳ್ಳಿ! ನನ್ನ ಜೊತೇನೆ ಹರಕೊಂಡು ಬಿದ್ದು ಬಿಡಾದೇನು? ಅಷ್ಟು ಹೊತ್ತಿಗೆ, ಎಲ್ಲಿಂದ್ಲೋ ಏನೋ, ಇಳಿದು ಬಂದ್ಹಾಗೆ ಬಂದೇ ಬಿಟ್ರು ಅವರು! ಇನ್ಯಾರಾದ್ರೂ ಆಗಿದ್ರೆ ನನ್ನ ಬೆನ್ನು ಮುರಿಯಾಂಗ ಕನಾತಿ ಕೊಡ್ತಿದ್ರು! ಅವರು.... ತಂಪು ಹೊತ್ತಿನಾಗೆ ನೇನೀಬೇಕು, ಪುಣ್ಯಾತ್ಮರು, ಸತ್ತು ಸ್ವರ್ಗದಾಗೆ ಇದಾರೆ!.... ಅವರು ಬೈಲೂ ಇಲ್ಲ, ‘ತಿಮ್ಮಾ, ಎಷ್ಟು ಸಾರಿ ಬುದ್ಧಿ ಹೇಳೋದೋ

ನಿನಗೆ? ತ್ವಾಟದಾಗ ಬಾಳೆಕೊನೆ, ಮೆಣಸು, ವೀಳ್ಯದೆಲೆ, ಕದ್ದೀಬಾರ್ದು ಅಂತಾ?.... ಎಲೆ ಕದ್ದಿದ್ದರ ಜೊತೆಗೆ ಬಳ್ಳೀನೂ ಜಾರಿಸಿಬಿಟ್ಟೆಯಲ್ಲಾ! ಈ ಕೆಟ್ಟ ಚಾಳಿ ಬಿಟ್ಟುಬಿಡು ಒಳ್ಳೆದಲ್ಲ!' ಅಂತಾ ಅಂದು, ಅವರೂನೂ ಒಂದು ಕೈಕೊಟ್ಟು, ನನ್ನ ಕೈಲಿ ಬಳ್ಳಿನೆಲ್ಲಾ ಎತ್ತಿ ಕಟ್ಸಿ.... ನಾ ಕದ್ದು ಕುಯ್ದು ಎಲೇನೂ ನಂಗೇ ಕೊಟ್ಟು ಕಳ್ಸಿದ್ರು ಕಣೋ!...."

ತಿಮ್ಮ ಹೇಳುತ್ತಿದ್ದುದನ್ನು ಕೇಳುತ್ತಾ ಸಿದ್ದ ಸಣತಿಮ್ಮನ ಕಡೆ ನೋಡಿ ನಕ್ಕನು. ತಿಮ್ಮನ ಆ ಕೆಟ್ಟಚಾಳಿಗೆ ಇನ್ನೂ ನಿವೃತ್ತಿಯ ವಯಸ್ಸಾಗಿರಲಿಲ್ಲ ಎಂಬುದು ಅವರಿಬ್ಬರಿಗೂ ಚೆನ್ನಾಗಿ ಗೊತ್ತಿತ್ತು.

"ರಾತ್ರೇಲಿ 'ಮನೆ'ಯಿಂದ ಕೋವಿ ಈಡು ಕೇಳಿಸಿದಾಗ ನಂಗೆ ಎದೆ ಹಾರಿಬಿಟ್ಟಿತ್ತು, ದೊಡ್ಡ ಹೆಗ್ಗಡೇರೆ ಹೋದ್ರೋ ಏನೋ ಅಂತಾ! ನಮ್ಮ ಹೆಗ್ಗಡೇರು ದೂಕಿ ಬೀಳ್ಸಿ ಅವರನ್ನೂ ಹಾಸಿಗೆ ಹಿಡ್ಸಿಬಿಟ್ಟಿದ್ದಾರಲ್ಲಾ!" ಎಂದನು ಕರಿಸಿದ್ದ. ಯಾರಾದರೂ ತೀರಿಕೊಂಡಾಗ ಆ ಸುದ್ದಿಯನ್ನು ಹತ್ತಿರದ ಹಳ್ಳಿಗಳಿಗೆ ತಿಳಿಸುವ ಒಂದು ವಿಧಾನವಾಗಿತ್ತು, ಹಾಗೆ ಕೋವಿ ಹಾರಿಸುವ ಪದ್ಧತಿ.

"ಇನ್ನೇನು ಬಿಡು, ನಿರುಂಬಳ ಆಯ್ತಲ್ಲಾ ಇವರಿಗೆ! ಅಪ್ಪಯ್ಯನ ಹಾಸಿಗೆ ಹಿಡ್ಸಿದ್ರು; ಅಣ್ಣಯ್ಯನ್ನ - ತಿರುಪತಿಗೆ ಕಳಿಸಿದೋರನ್ನ, - ಅತ್ತ ಮಖಾನೇ ಕಳಿಸಿದಂಗಾಯ್ತು! ಅವರು ಎಲ್ಲಿ ಮತ್ತೇ ಮನಿಗೆ ಬಂದು ಬಿಡ್ತಾರೋ ಅಂತಾ ಏನೆನೆಲ್ಲ ಮಾಡಿದ್ರೂ? ಅಂವ ಅಣ್ಣಯ್ಯನೇ ಅಲ್ಲ; ಯಾವುನೋ ಗೋಸಾಯಿನ ಮನಿಗೆ ಕರಕೊಂಡು ಬರಾಕೆ ಮಾಡ್ತಿದಾರೆ. ಯಾವನಾದ್ರೇನಂತೆ? ನಮ್ಮತ್ತಿಗೆಮ್ಮಗೆ ಒಬ್ಬ ಗಂಡ ಸಿಕ್ಕಿದ್ರೆ ಸಾಕಾಗಿದೆ? ಅಂತಾ ಏನೆನಲ್ಲ ಹೇಳಾಕೆ ಸುರು ಮಾಡಿದ್ರು, ಮಾರಾಯರು ನಮ್ಮ ತಿಮ್ಮಪ್ಪಯ್ಯ" ಕರಿಸಿದ್ದ ಮೂದಲಿಸುವ ದನಿಯಿಂದ ತನ್ನ ಟೀಕೆಯನ್ನು ಕೊನೆಗಾನಿಸಲು, ದೊಡ್ಡಣ್ಣ ಹೆಗ್ಗಡೆಯವರ ಶವವನ್ನು ಬೆಟ್ಟಳ್ಳಿ ಗಾಡಿಯ ಮೇಲೆ ತೀರ್ಥಹಳ್ಳಿಯಿಂದ ತರುತ್ತಿದ್ದಾರೆ. ಎಂಬ ಸುದ್ದಿ ಕಿವಿಗೆ ಬಿದ್ದಾಗಿನಿಂದಲೂ, ಆ ಒಡೆಯನನ್ನು ಚಿಕ್ಕಂದಿನಿಂದಲೂ ಮೆಚ್ಚಿಕೊಂಡು ಒಡನಾಡಿಯಂತೆ ಬೆಳೆದಿದ್ದು, ಈಗ ಆಪ್ತಬಂಧುವನ್ನು ಕಳೆದುಕೊಂಡಂತೆ ದುಃಖಿಸುತ್ತಿದ್ದ ಮಂಜನು ತನ್ನ ಕ್ರೋಧವನ್ನು ತಡೆಯಲಾರದೆ, ತಿಮ್ಮಪ್ಪ ಹೆಗ್ಗಡೆಯ ನೀಚತನವನ್ನು ಮುಲಾಜಿಲ್ಲದೆ ಬಯಲಿಗೆಳೆಯತೊಡಗಿದನು.

"ಯಾರಿಗೇನೂ ಗೊತ್ತಿಲ್ಲೇನು ಇವರ ಹಣೆಬರಾ? ಇವರ ಕುಲಗೆಟ್ಟ ಅನಾಚಾರನ ಯಾರ ಹತ್ರ ಮುಚ್ಚಿಡ್ತಾರಂತೆ? ಅವರು ಈಗಂತೂ ಸಣುಬಿನ ನಾಯಿ, ಹಲುಬಿನ ಎತ್ತಿಗಿಂತ ಅತ್ತತ್ತ ಆಗಿಬಿಟ್ಟಾರೆ! ಹಳೆಪೈಕದೋರು? ಹೊಲೆರೋ? ಸೆಟ್ಟರೋ? ಹಸಲರೋ? ಬಿಲ್ಲರೋ? ಕಡೀಗೆ ಕಿಲಸ್ತರು ಸಾಬರೋ? ಯಾರಾದರೂ ಸೈ ಹೆಣ್‌ಜಾತಿ ಆಗಿಬಿಟ್ರೆ ಆತು. ಮನೆಕೆಲಸಕ್ಕಿರೋ ಆ ಹಳೆ ಪೈಕದ ಹೂವಿ, ಹಡಬೆಹಾದರಗಿತ್ತಿ, ಅದನ್ನ ಪೂಜಿಸಿ ಈಗ ನಮ್ಮ ಕೇರಿಗೆ ಕೈ ಹಾಕ್ಯಾರೆ!"

ಮಂಜನ ಆಪಾದನೆಗೆ ಬೆಚ್ಚಿಬಿದ್ದು ಸಿದ್ದ ಕರಿಸಿದ್ದ ಸಣತಿಮ್ಮ ಮೂವರು ಒಟ್ಟಿಗೆ ಕೂಗಿದರು "ಹೌದೇನೋ? ಸುಳ್ಳೋ ಬದ್ದೋ?"

"ಸುಳ್ಳು ಹೇಳದ್ರೆ ನನ್ನ ನಾಲಿಗೆ ಬಿದ್ದು ಹೋಗ್ಲಿ!" ಎಂದು ಆಣೆ ಇಟ್ಟುಕೊಳ್ಳುತ್ತಾ ಮಂಜ ಮತ್ತೂ ಬಿರುಸಿನಿಂದ ಮುಂದುವರಿದನು: "ದೀವರನ್ನ ಯಾರಾದರೂ ಗೌಡರ ಮನೆಗೆ ಸೇರಸ್ತಾರೇನೋ? ಈ ತಿಮ್ಮಪ್ಪಹೆಗ್ಗಡೇರು ಆ

ದೀವರನ್ನ ಹೂವಿನ, ಎತ್ತಿಕಟ್ಟೆದ್ರಿಂದಲೇ ಅಲ್ಲೇನೂ, ಅವಳು ಆವತ್ತು, ಮಂಜಮ್ಮೋರ, ಕೋಣೂರು ಅಮ್ಮೋರ ಕಣ್ಣು ತಪ್ಪಿಸಿ, ಅಡಿಗೆ ಮನೆಯೊಳಗೆ ಹೋಗಿ ಸಿಕ್ಕಿದ ಮೇಲಿದ್ದ ಉಪ್ಪಿನಕುಕ್ಕೆಯಿಂದ ಮುಷ್ಟಿಗಟ್ಲೆ ಉಪ್ಪು ತೆಗೆದು ಪಲ್ಯಕ್ಕೂ ಸಾರಿಗೂ ಹಾಕಿ ಬಂದಿದ್ದು? ಪಾಪ! ಅವತ್ತೇ ಕೋಣುರು ಅಮ್ಮ 'ನಾನೇ ಅಡಿಗೆ ಮಾಡ್ತೀನಿ' ಅಂತಾ ಮಾಡಿದ್ರಂತೆ. ಅವರನ್ನ 'ಹುಚ್ಚು ಹೆಗ್ಗಡ್ತೀ' ಅನ್ನಿಸಿ, ಮನೆಯಿಂದ ಹೊರಗೆ ಹಾಕಬೇಕು ಅಂತಲೇ, ಆ ಹಳೇಪೈಕದೋಳ ಕೈಲಿ ಉಪ್ಪು ಹಾಕಿಸಿ, ಆಮ್ಯಾಲೆ ಉಣ್ಣಕ್ಕೆ ಕೂತಾಗ ರಂಪ ಮಾಡಿ ಎದ್ದು ಹೋಗಿ, ಕಡೀಗೆ ರಂಗಮ್ಮ ಹೆಗ್ಗಡ್ತೇರನ್ನೂ ಗುದ್ದಿ, ಹೊಡೆದು, ಅವರ್ನ ಕೋಣೆ ಒಳಗೆ ಕೂಡಿ, ಬಾಗಿಲು ಹಾಕಿ, ಬೀಗ ಹಾಕಿದ್ದು!"

"ನಮ್ಮ ಕೇರೀಗೂ ಕೈ ಹಾಕ್ಯಾರೆ ಅಂದ್ಯಲ್ಲೋ?"

"ನೋಡು, ಬಾಯಿ ಬಿಟ್ರೆ ಬಣ್ಣಗೇಡು. ನಮ್ಮ ಬುಡಕ್ಕೇ ಬರ್ತದೆ!...."

"ಯಾರು? ನಮ್ಮ ಕುಳವಾಡಿ ಸಣ್ಣಯ್ಯನ ಮಗಳು ಪುಟ್ಟಿನೇನೊ?"

"ಮಾಡಿದೋರ ಪಾಪ ಆಡಿದೋರ ಬಾಯಲ್ಲಂತೆ. ನಮಗ್ಯಾಕೆ ಆ ಇಚಾರ?" ಮಂಜ ಆ ವಿಷಯವನ್ನು ಅಲ್ಲಿಗೇ ಮುಕ್ತಾಯಗೊಳಿಸುವಂತೆ ನುಡಿದು, ಎದುರಿಗೇ ಕಾನಿಸುವಷ್ಟು ಸಮೀಪಕ್ಕೆ ಬಂದಿದ್ದ ಸುಡುಗಾಡು ಪಟ್ಟೆಯ ಕಡೆ ಕಣ್ಣಟ್ಟೆ "ಚೆನ್ನಾಗಿ ಒಣಗಿದ ಸೌದೇನೆ ಕಡೀಬೇಕ್ರೊ...." ಎಂದು ಮುಗಿಲುಕಡೆ ನೋಡಿ ಹೇಳಿಕೊಂಡನು "ಮಳೆ ಏನೋ ಹೊಳವಾಗೋ ಹಾಂಗೆ ಕಾಣ್ತದೆ.... ಇನ್ ಸತ್ತೋರ ಪುಣ್ಯ ಹ್ಯಾಂಗಿದೆಯೋ ನೋಡಬೇಕು? ಒಂದೀಟು ಬಿಸಿಲು ಕಾದಿದ್ರೆ, ಮಳೇಲಿ ನೆಂದ ಕಟ್ಟಿಗೆ ಆರಿಯಾದ್ರೂ ಆರ್ತಿತ್ತೇನೋ."

"ಒಂದು ಸೊಲ್ಪಾನಾದ್ರೂ ಒಣಗಿದ ಸೌದೇನ ತರಬೇಕಾಗ್ತದೆ ಮನೇ ಸೌದೆ ಕೊಟ್ಟಿಗೆಯಿಂದ. ಇಲ್ದಿದ್ರೆ ಬೆಂಕಿ ಹೊತ್ತಾದಾದ್ರೂ ಹ್ಯಾಂಗೆ?" ಎಂದ ಸಿದ್ದ, ಕಾಡಿನ ನಡುವೆಯಿಂದ ಒಂದು ಶಕುನದ ಹಕ್ಕಿ ವಿಕಾರವಾಗಿ ದನಿಗೈಯುತ್ತಿರುವುದನ್ನು ಆಲಿಸಿ, ತನಗೆ ತಾನೆಂಬಂತೆ ಅಂದುಕೊಂಡನು "ಹಾಳು ಹಕ್ಕಿ! ಮತ್ತೇನು ಕೇಡು ನುಡೀತಾ ಅದೆಯೋ ಮೀಮೀಮೀಮೀ ಅಂತಾ?

'ಸುಡುಗಾಡು ಪಟ್ಟೆ' ಗುಡ್ಡದ ಓರೆಮಗ್ಗುಲಲ್ಲಿದ್ದು, ಇಳಿಜಾರು ಒಂದೆಡೆ ತುಸು ಸಮತಟ್ಟಾಗಿದ್ದ ಸ್ಥಾನವಾಗಿತ್ತು. ಸುತ್ತಮುತ್ತಣ ಹಕ್ಕಲು ಬಯಲಿಗೂ ಅದಕ್ಕೂ ಯಾವ ವ್ಯತ್ಯಾಸವೂ ಇರಲಿಲ್ಲ. ಎಲ್ಲ ಕಡೆಯೂ ಇರುವಂತೆಯೆ ಅಲ್ಲಲ್ಲಿ ನೇರಿಳೆ, ಹಲಸು, ಹುಣಿಸೆ, ಹೊನ್ನೆ, ಆಲ, ಮತ್ತಿ, ನೆಲ್ಲಿ, ವಾಟೆ ಮೊದಲಾದ ಮರಗಳಿದ್ದು, ನಡುನಡುವೆ ಅಲ್ಲಲ್ಲಿ ಸೀಗೆ, ಲಕ್ಕಿ, ಕೆಂಜಿಗೆ, ಹುಳಿಚೊಪ್ಪು, ಇಲಾತ್ಸೀಂಗೆ, ಅರಮರಲು, ಬೆಮ್ಮಾರಲು, ಕರ್ಜಿ ಇತ್ಯಾದಿ ಪೊದೆಗಳು ಬೆಳೆದುಕೊಂಡಿದ್ದುವು. ಅದು ಶ್ಮಶಾನ ಎಂಬುದಕ್ಕೆ ಯಾವೊಂದು ವಿಶೇಷವಾದ ಚಿಹ್ನೆಯೂ ಕಾಣುತ್ತಿರಲಿಲ್ಲ. ಇತರ ಕಡೆಗಳಂತೆ ಅಲ್ಲಿಯೂ ಹುಲ್ಲು ಹಚ್ಚ ಹಸುರಾಗಿ ಹಬ್ಬಿ ನಯನಮನೋಹರವಾಗಿತ್ತು. ಅದರಲ್ಲಿಯೂ ಈಗ ಮಳೆಗಾಲವಾದ್ದರಿಂದ ಆ ಹಸುರು ಚ್ಯತಿಯಿಲ್ಲದೆ ಬೆಳೆದು ಹುಲುಸಾಗಿದ್ದು, ಜೀವನವನ್ನಲ್ಲದೆ ಸಾವಿನ ಛಾಯೆಯನ್ನೂ ಸುಳಿಯಗೊಡುತ್ತಿರಲಿಲ್ಲ. ಅದು ಹಳೆಮನೆ ಮನೆತನದ ಸ್ವಂತ ಶ್ಮಶಾನವಾಗಿತ್ತು. ಹೊಲೆಯರು, ಹಳೆಪೈಕದವರು, ಗಟ್ಟದತಗ್ಗಿನವರು ಯಾರೂ ಅದನ್ನು ಬಳಸುತ್ತಿರಲಿಲ್ಲ. ಅದು ಹೆಗ್ಗಡೆ ಮನೆತನದ ಹೆಣಗಳಿಗೆ ಮೀಸಲಾಗಿತ್ತು.

ಆದ್ದರಿಂದ ಅದಕ್ಕೆ ಪದೇಪದೇ ತನ್ನ ಕರ್ತವ್ಯ ನಿರ್ವಹಣೆ ಮಾಡುವ ಅವಕಾಶ ಒದಗುತ್ತಿರಲಿಲ್ಲ. ವರ್ಷಕ್ಕೋ, ಎರಡು ವರ್ಷಕ್ಕೋ, ಕಡೆಗೆ ಮೂರು ನಾಲ್ಕು ಐದು ಆರು ವರ್ಷಗಳಿಗೊಮ್ಮೆಯೋ ಅದಕ್ಕೆ ಸುಡುಗಾಡುತನ ಅಥವಾ ಶ್ಮಶಾನತ್ವ ಒದಗುತ್ತಿತ್ತು. ಹುಡುಗರು ಮಕ್ಕಳು ಸತ್ತರೆ ಹೂಳಿಬಿಡುತ್ತಿದ್ದರು. ದೊಡ್ಡವರು ಸತ್ತರೆ ಮಾತ್ರ ಸುಡುತ್ತಿದ್ದರು. ಈಗಲೂ ಅಲ್ಲಿ ಹೆಣ ಸುಟ್ಟಿದ್ದರ ಯಾವ ಚಿಹ್ನೆಯೂ ಗೋಚಾರವಾಗದಿದ್ದರೂ ಹುಡುಗರು ಮಕ್ಕಳನ್ನು ಹೂಳಿದ್ದರ ಗುರುತು ಸಣ್ಣ ಸಣ್ಣ ಹಸುರು ದಿಣ್ಣೆಗಳಾಗಿ, ಹುಡುಕಿನೋಡಿದರೆ, ಕಾನಿಸುವಂತಿತ್ತು. ಇವತ್ತಿಗೆ ಹಿಂದೆ ಆ ಸ್ಮಶಾನ ಸೂಡಿನ ಬೆಂಕಿ ಕಂಡಿದ್ದು ಎಂದರೆ, ಸುಮಾರು ಹತ್ತು ಹನ್ನೆರಡು ವರ್ಷಗಳಾಚೆ ಸುಬ್ಬಣ್ಣಹೆಗ್ಗಡೆಯವರ ಹೆಂಡತಿ, ಇವತ್ತು ಅಗ್ನಿ ಸಂಸ್ಕಾರಕ್ಕೆ ಒಳಗಾಗಲಿರುವ ದೊಡ್ಡಣ್ಣಹೆಗ್ಗಡೆಯವರ ತಾಯಿ ತೀರಿಕೊಂಡಿದ್ದಾಗಲೆ! ಅಲ್ಲಿಂದಿತ್ತ ಹೆರಿಗೆ ಯಾದೊಡನೆಯೆ ಸತ್ತಿದ್ದ ಹೆಂಚಿನ ಮನೆ ಶಂಕರಪ್ಪ ಹೆಗ್ಗಡೆಯವರ ಒಂದೆರಡು ಬಾಳದೆ ಹೋದ ಸಂತಾನಗಳನ್ನು ಬಿಟ್ಟರೆ ತನ್ನ ವೃತ್ತಿಯೆ ಮರೆತುಹೋಗಿ ನಿವೃತ್ತಿಯಾದಂತೆ ತೋರತೊಡಗಿತ್ತು! ಆದರೆ ಈ ಸುಡುಗಾಡಿಗೆ ತನ್ನ ಸ್ವಧರ್ಮ ಸಂಪೂರ್ಣವಾಗಿ ಮರೆತುಹೋಗದಂತೆ ನೋಡಿಕೊಳ್ಳುತ್ತಿದ್ದುವು, ಇದಕ್ಕೆ ತುಸು ಸಮೀಪದಲ್ಲಿಯೆ ಇದ್ದ ಇತರ ಸುಡುಗಾಡು ಪಟ್ಟೆಗಳು: ಹೊಲೆಯರದು, ಹಳೆಪೈಕರದು, ಸೆಟ್ಟರದು ಮತ್ತು ಇತರ ಗಟ್ಟದ ತಗ್ಗಿನ ಕೀಳುಜಾತಿಯವರದ್ದು.

ಹೊರಗಣಿಂದ ಬಂದು ನೋಡಿದರೆ ಆ ಸ್ಥಳ ಒಂದು ಸುಮನೋಹರವಾದ ಗಿರಿವನಭಾಗಿಯಾಗಿ, ಆಹ್ಲಾದಕರವಾಗಿ, ಪ್ರಶಾಂತವಾಗಿ, ಪಕ್ಷಿಕೂಜನದಿಂದ ಸುಮಧುರ ಬಂಧುರವಾಗಿ ಕಾಣಿಸುವಂತಿದ್ದರೂ ಅಲ್ಲಿಯ ನಿವಾಸಿಗಳಿಗೆ ಅದು 'ಮಸಣ'ವಾಗಿಯೆ ಇತ್ತು, ದುಃಸ್ಮೃತಿ ನಿಧಿಯಾಗಿ. ರಾತ್ರಿಯ ಹೊತ್ತು ಅಮವಾಸ್ಯೆಯಲ್ಲಿ, ಯಾರೂ ಆ ದಾರಿಯಲ್ಲಿ ಓಡಾಡಲು ಧೈರ್ಯಮಾಡುತ್ತಿರಲಿಲ್ಲ. ಹೊಲೆಯರ ಸಿದ್ದನನ್ನು ಕೇಳಿದರೆ ಹೇಳುತ್ತಾನೆ: ಅವನಿಗೆ ಎಷ್ಟು ಸಲ ಕಾಣಿಸಿಕೊಂಡಿಲ್ಲ ಮಸಣಿ? ಹಳೆಪೈಕದ ಹೂವಿಯನ್ನು ಕೇಳಿದರೆ ಹೇಳುತ್ತಾಳೆ: ಯಾವುದೋ ವಿಕಾರರೂಪು ಹಿಂದಿನಿಂದ ಬಂದು ಸೆರಗು ಹಿಡಿದು ಎಳೆದ ಹಾಗೆ ಆಗಿಲ್ಲ? ಮಟಮಟ ಬೇಸಗೆಯ ಮಧ್ಯಾಹ್ನದಲ್ಲಂತೂ ಅಲ್ಲಿ ರಣ ತಿರುಗಾಡುವುದು ಎಲ್ಲರಿಗೂ ಗೊತ್ತಿದ್ದ ವಿಷಯವೆ ಆಗಿತ್ತು! ಅದನ್ನು ನಂಬದ ಕಿಲಿಸ್ತಾನರ ಕಿಲಾಮತ್ತು ಕೆಲವು ವರ್ಷಗಳ ಹಿಂದೆ ಅದೇ ಸ್ಥಳದಲ್ಲಿಯೆ, ಹಗಲು ಹನ್ನೆರಡು ಗಂಟೆಯಲ್ಲಿ, ರಣ ಹೊಡೆದು ರಕ್ತ ಕಾರಿಕೊಂಡು ಸತ್ತುಹೋಗಿರಲಿಲ್ಲವೆ! ಆ ಸುಡುಗಾಡಿನ ನಿಸರ್ಗಸುಂದರ ಪ್ರಶಾಂತ ಮುಖಕ್ಕೆ ಮರುಳಾಗಿ ಮೋಸ ಹೋಗುತ್ತಾರೆಂದು ಅದರ ಕರ್ಕಶ ಕರುಳನ್ನರಿತ ಊರು ಮನೆಯವರು?

ಇಂತಹ ವಿಚಾರಗಳನ್ನೆ ಕುರಿತು ಸಂವಾದ ಮಾಡುತ್ತಾ ಹಳೆ ಮನೆಯ ಹೊಲೆಯರು ಕಟ್ಟಿಗೆ ಕಡಿದು ಒಟ್ಟಿ ಸೂಡುಮಾಡುತ್ತಿದ್ದರು. ಮೊದ ಮೊದಲು ಹೂಳವಾಗಿದ್ದ ಮಳೆ ಬರುಬರುತ್ತಾ ಬಿಸಿಲಿಗೆ ತಾವು ಬಿಡುವಂತೆ ಮೋಡಗಳನ್ನು ಸರಿಯತೊಡಗಿತು. ಆಗೊಮ್ಮೆ ಈಗೊಮ್ಮೆ ಹೂಬಿಸಿಲು ಆಡ ತೊಡಗಿ, ಕ್ರಮೇಣ ಆಕಾಶ ನಿರ್ಮಲವೂ ಆಯಿತು. ಬಿಸಿಲು ಚೆನ್ನಾಗಿಯೇ ಕಾಯತೊಡಗಿತು.

"ಅವರ ಪುಣ್ಯ ಕಣೋ!" ಮಂಜನೆಂದಿದ್ದನು.

ಅಷ್ಟರಲ್ಲಿ ಕಾಡು ಗುಡ್ಡಗಳನ್ನೆಲ್ಲ ಮೊಳಗಿಸುತ್ತಾ ಗುಢುಂ ಗುಢುಂ ಗುಢುಂ ಎಂದು ಒಂದಾದ ಮೇಲೊಂದರಂತೆ ಕದಿನಿ ಹಾರಿಸಿದ ಸದ್ದು ಪರ್ವತ ಕಂದಗಳಿಂದ ಭೀಷಣವಾಗಿ ಅನುರಣಿತವಾಯಿತು.

“ತೀರ್ಥಹಳ್ಳಿಯಿಂದ ಗಾಡಿ ಬಂತು ಅಂತಾ ಕಾಣ್ತದೆ!” ಎಂದನು ತಿಮ್ಮ. ಅವನ ಮುಖಮುದ್ರೆ ಇನ್ನೇನು ಸ್ವಲ್ಪ ಹೊತ್ತಿನಲ್ಲಿಯೆ ಎದುರುಗೊಳ್ಳಬೇಕಾಗಿರುವ ಸಂಕಟಕರ ದೃಶ್ಯವನ್ನು ನೆನೆದು ಹೆದರಿಕೊಂಡಂತಿತ್ತು.

“ಗಾಡಿ ಮನೆ ಹತ್ರಕ್ಕೆ ಎಲ್ಲಿ ಬತ್ತದೆ? ಇನ್ನೂ ದಾರೀನೆ ಮಾಡಿಲ್ಲ? ತ್ಟಾಟದಾಚೆ ಹಕ್ಕಲಾಗೇ ನಿಲ್ಲಿಸಿ, ಶವ ಹೊತ್ತುಕೊಂಡು ಬತ್ತಾರೆ” ಎಂದನು ಸಣತಿಮ್ಮ. ಅವನ ಮುಖ ಬಿಳಿಚಿಕೊಳ್ಳತೊಡಗಿತ್ತು; ಕಣ್ಣೂ ಹನಿ ತುಂಬಿದಂತಿತ್ತು.

“ಅವರು ಮನೇಬಿಟ್ಟು ತಿರುಪತಿಗೆ ಹೋದಾಗಿನಿಂದ ಎಲ್ಲ ಹಾಳಾಗ್ತಾ ಅದೆ. ಮನೆಪಾಲೂ ಆಗಿಹೋಯ್ತು! ಹಾಸಿಗೆ ಹಿಡಿದ ದೊಡ್ಡ ಹೆಗ್ಡೇರು ಇನ್ನೇನು ಮ್ಯಾಲೆ ಏಳೂ ಹಾಂಗೆ ಕಾಣಾದಿಲ್ಲ. ಹ್ಞೂ!.... ನಮ್ಮ ತಿಮ್ಮಪ್ಪಹೆಗ್ಡೇರ ದರ್ಬಾರಿನಾಗೆ ಇನ್ನು ಏನೇನಾಗ್ತದ್ಯೋ ಭಗವಂತಗೇ ಗೊತ್ತು. ಅವರ ಹತ್ರ ಇನ್ನು ಆ ರಂಗಮ್ಮ ಹೆಗ್ಗಡ್ತೇರು ಹ್ಯಾಂಗೆ ಏಗ್ತಾರೋ ಏನೋ ನಾ ಬ್ಯಾರೆ ಕಾಣೆ! ಮೊದಲೇ ಅವರ್ನ ‘ಹುಚ್ಚು ಹೆಗ್ಗಡ್ತಿ’ ಮಾಡಿ ಕೂರಿಸ್ಯಾರೆ! ಅವರ ಮಗ ಧರ್ಮಯ್ಯ ಇನ್ನೂ ಏನೂ ಅರಿಯದ ಹುಡುಗ. ಅವರು ಇರ್ಲಿ; ನಾವೂ ಇನ್ನು ಮ್ಯಾಲೆ ಇವರ ಕೈಲಿ ಹ್ಯಾಂಗೆ ಕಾಲಾ ಹಾಕಾದೋ ಏನೋ?....” ಮಂಜ ತಟಕ್ಕನೆ ಮಾತು ನಿಲ್ಲಿಸಿ ದೂರ ನೋಡಿ ಅದ್ಯಾರೋ ಓಡಿ ಬರ್ತಾ ಇದಾರಲ್ಲಾ!” ಎಂದು ಚೆನ್ನಾಗಿ ನೋಡುತ್ತಾ “ನಮ್ಮ ಹೆಂಚಿನ ಮನೆ ಹೆಗ್ಡೇರು ಅಲ್ಲೇನೋ?.... ಹೌದು ಕಣೋ.... ಅವ್ರೆ” ಎನ್ನುತ್ತಾ ಅವರನ್ನು ಎದುರುಗೊಳ್ಳಲು ಬೇಗ ಬೇಗ ಓಡಿದನು.

ಶಂಕರ ಹೆಗ್ಗಡೆ “ಅವರೆಲ್ಲ ಬರ್ತಿದಾರ್‍ರೊ.... ನೀವು ಮುಟ್ಟಾಳ್ಗಳೆಲ್ಲ, ದೂರ ಸರಿದು, ಮರೇಲಿ ನಿಂತ್ಕೊಳ್ಳಿ” ಎಂದರು.

ಅಪ್ಪಣೆಯಂತೆ ಹೊಲೆಯರೂ ಮತ್ತು ಗತಿಸಿದ ಒಡೆಯರಿಗೆ ಅಂತ್ಯ ಗೌರವ ಸಲ್ಲಿಸಲು ಆಗಲೆ ನೆರೆದಿದ್ದ ಐತ, ಪಿಜಿಣ, ತುಕ್ರ, ಕುದುಕ ಮೊದಲಾದ ಗಟ್ಟದ ತಗ್ಗಿನವರೂ ಬೇಗ ಬೇಗನೆ ದಾರಿಬಿಟ್ಟು ದೂರಸರಿದು ಪೊದೆಗಳನ್ನಾಶ್ರಯಿಸಿ ಮರೆಯಲ್ಲಿ ನಿಂತರು, ದೂರದಲ್ಲಿ ಕಾಣಿಸಿಕೊಂಡು ಶ್ಮಶಾನವನ್ನು ಸಮೀಪಿಸುತ್ತಿದ್ದ ಹೆಂಗಸರ ಗುಂಪನ್ನು ಭಯವಿಹ್ವಲನಾದ ನಿರ್ನಿಮೇಷ ನೇತ್ರಗಳಿಂದ ನೋಡುತ್ತಾ!

ಏಳೆಂಟು ವರುಷಗಳಿಂದ ಹಿಂದೆ ತಿರುಪತಿಗೆ ಹೋಗಿ ಹಿಂದಿರುಗದಿದ್ದ ದೊಡ್ಡಣ್ಣಹೆಗ್ಗಡೆಯವರ ಕಳೇಬರವನ್ನು ತೀರ್ಥಹಳ್ಳಿಯಿಂದ ಹಳೆಮನೆಗೆ ದಹನ ಸಂಸ್ಕಾರಾರ್ಥವಾಗಿ ಬೆಟ್ಟಳ್ಳಿಯ ಗಾಡಿಯಲ್ಲಿ ತರುತ್ತಿದ್ದಾರೆ ಎಂಬ ಸಿಡಿಲಸುದ್ದಿ ಮಿಂಚಿನ ವೇಗದಿಂದ ಎಲ್ಲ ನೆಂಟರ ಮನೆಗಳಿಗೂ ಮುಟ್ಟಿ, ಸಿಂಬಾವಿ ಬಾವಿಕೊಪ್ಪ ಹೊಸಮನೆ ಬೆಟ್ಟಳ್ಳಿ ಹೂವಳ್ಳಿ ಕೋಣೂರು ಆದಿಯಾಗಿ ಅನೇಕ ಕಡೆಗಳಿಂದ ಹತ್ತಿರದ ಸಂಬಂಧಿಗಳು ಹಳೆಮನೆಯಲ್ಲಿ ನೆರೆಯತೊಡಗಿದ್ದರು. ಅದರಲ್ಲಿಯೂ ತನ್ನ ಗಂಡನು ತಿರುಪತಿಗೆ ಹೋಗಿ ಹಿಂತಿರುಗಿ ಬಂದವರೊಡನೆ ಬರಲಿಲ್ಲವೆಂದೂ, ಆತನು ತಿರುಪತಿಯ ವಾಂತಿಭೇದಿಯಾಗಿ ತೀರಿಕೊಂಡನೆಂದೂ, ಗೋಸಾಯಿಗಳು ಮದ್ದು ಕೊಟ್ಟು ರಕ್ಷಿಸಿ ತಮ್ಮೊಡನೆ ಕರೆದುಕೊಂಡು ಹೋಗಿದ್ದಾರೆಂದೂ, ಇಂದೊ ನಾಳೆಯೊ ಮನೆಯ ನೆನಪಾಗಿ ಹಿಂತಿರುಗಬಹುದೆಂದು ಏಳೆಂಟು ವರ್ಷಗಳಿಂದ ಆಸೆ ಭಯ ಶಂಕೆ ಹತಾಶೆ ನಿಂದೆ ದ್ವೇಷ ಕಷ್ಟ ದೈನ್ಯ ದಾಸ್ಯಾದಿಗಳಲ್ಲಿ ಸಿಕ್ಕಿ, ನಾನಾ ವಿಧವಾದ ವಾರ್ತೆಗಳ ಜಂಝೂಟದಲ್ಲಿ ತೊಳಲಿ ಬಳಲಿ ಬೆಂದು ಹೋಗಿದ್ದ

ರಂಗಮ್ಮನನ್ನು 'ಮಾತಾಡಿಸಿಕೊಂಡು' ಹೋಗಲೆಂದು, ಕೆಲರು ಸಂಪ್ರದಾಯಕ್ಕೂ ಮತ್ತೆ ಕೆಲರು ವಿಶ್ವಾಸಕ್ಕೂ ಬದ್ಧರಾಗಿ, ಅನೇಕ ಹೆಗ್ಗಡಿತಮ್ಮರುಗಳೂ ಬಂದು ಸೇರಿದ್ದರು.

ಶೋಕದ ನಾನಾ ಭಂಗಿಗಳಲ್ಲಿ ಗುಂಪುಕಟ್ಟಿ ಬರುತ್ತಿದ್ದ ಹೆಂಗಸರ ನಡುವೆ, ಎರಡು ಮೂರು ದಿನ ಬಿಚ್ಚದಿದ್ದು ಮಾಸಿದ ಕೊಳಕು ಸೀರೆಯುಟ್ಟು, ಅವರ್ಣನೀಯವಾದ ದುಃಖಾತೀಶಯದಿಂದ ಬಿಕ್ಕಿಬಿಕ್ಕಿ ಅಳುತ್ತಾ, ಎರಡೇ ದಿನಗಳಲ್ಲಿ ಮುದುಕಿಯಾಗಿ ಬಿಟ್ಟಳೆಂಬಂತೆ ಸೊಂಟ ಬಾಗಿ, ತಲೆತಗ್ಗಿಸಿ, ತನ್ನ ವೃದ್ಧಮಾತೆ ದಾನಮ್ಮ ಹೆಗ್ಗಡಿತಿಯವರ- ಕೋಣೂರಿನ ಕಾಗಿನಹಳ್ಳಿ ಅಮ್ಮ-ಮತ್ತು ಸಿಂಬಾವಿ ಭರಮೈಹೆಗ್ಗಡೆ ಯವರ ಹೆಂಡತಿ ಜಟ್ಟಮ್ಮ ಹೆಗ್ಗಡಿತಿಯವರ ನಡುವೆ, ಅವರ ಕೈಯಾಪಿನಲ್ಲಿ, ಸಂಕಟವೆ ಸಾಕಾರಗೊಂಡಂತೆ, ತತ್ತರಿಸುತ್ತಾ ಬರುತ್ತಿದ್ದ ರಂಗಮ್ಮ ಹೆಗ್ಗಡಿತಿಯವರನ್ನು ನೋಡಿ ನೆರೆದಿದ್ದ ಹೆಣ್ಣುಗಂಡು ಆಳುಗಳೆಲ್ಲ ಬಿಕ್ಕಿಬಿಕ್ಕಿ ಅಳತೊಡಗಿದರು; ಶೋಕದ ನಾನಾ ರೀತಿಯ ಉದ್ಗಾರಗಳೂ ಹೊಮ್ಮಿ ಸುಡುಗಾಡೆಲ್ಲ ರೋದನಮಯವಾಯಿತು.

ಅಳಲು ಬಡಿದು ಮರವಟ್ಟವನಂತೆ ನಿಂತು ನೋಡುತ್ತಿದ್ದ ಐತನನ್ನು ಯಾರೋ ಹಿಂದಿನಿಂದ ಮುಟ್ಟಿದಂತಾಯಿತು. ತಿರುಗಿ ನೋಡಿದಾಗ, ಅವನ ಹೆಂಡತಿ ಪೀಂಚಲು ಕಣ್ಣುಸನ್ನೆ ಮಾಡಿ ಕರೆದಳು. ಇತರ ಗಟ್ಟದ ತಗ್ಗಿನ ಗಂಡಸರ ಗುಂಪಿನಿಂದ ಸ್ವಲ್ಪ ದೂರ ಸರಿದ ಮೇಲೆ ಹೇಳಿದಳು: "ಧರ್ಮಯ್ಯೋರು, ಪಾಪ! ಅಳ್ತಾ ಇದಾರೆ! 'ಐತನ್ನ ಕರಕೊಂಡು ಬಾರೇ, ಪೀಂಚಲು!' ಅಂತಾ ನನ್ನ ಕೂಡೆ ಹೇಳಿಕಳ್ಸಿದ್ರು!"

"ಎಲ್ಲಿ ಇದಾರೆ?" ಎಂದು ಕೇಳಿದ ಐತ, ಸ್ವಲ್ಪ ಅಸಮಾಧಾನದಿಂದಲೆ ಹೆಂಡತಿಯ ಕಡೆ ಎವೆಯಿಕ್ಕದೆ ನೋಡುತ್ತಾ "ಅಂತೂ ಬರಬ್ಯಾಡ ಅಂದ್ರೂ ಬಂದೇಬಿಟ್ಟೇಯಾ!" ಎಂದು ಬಸರಿಯಾಗಿದ್ದ ತನ್ನ ಹೆಂಡತಿಯ ಚೊಚ್ಚಲು ಹೊಟ್ಟೆಯ ಕಡೆ ಮುನಿದುಕೊಂಡಂತೆ ನೋಡಿದನು.

"ದೊಡ್ಡಮ್ಮೋರೆ 'ಪೀಂಚಲೂ, ನನ್ನ ಸಂಗಡ ಬಾರೆ' ಅಂತಾ ಕರೆದಮ್ಯಾಲೆ ಬರದೆ ಇರೋಕೆ ಆಗ್ತದೇನು? ಏನೋ ಅವರೀಗೂ ಕಷ್ಟಕಾಲ!" ಎಂದು ಸಮಾಧಾನ ಹೇಳಿ, ತನ್ನ ಗಂಡನನ್ನು ಮಹಿಳೆಯರ ಗುಂಪಿನ ಬಳಿಯಿದ್ದ ಧರ್ಮು ಇದ್ದಲ್ಲಿಗೆ ಕರೆದುಕೊಂಡಿ ಹೋದಳು.

ಗರ್ಭಿಣಿಯರು ಶ್ಮಶಾನ ಮತ್ತು ಶವಸಂಸ್ಕಾರದಂತಹ ಅಮಂಗಲಗಳಿಂದ ದೂರವಾಗಿರಬೇಕೆಂದೂ, ಇಲ್ಲದಿದ್ದರೆ ಹುಟ್ಟುವ ಶಿಶುವಿನ ಮೇಲೆ ಕೆಟ್ಟ ಪರಿಣಾಮವಾಗುತ್ತದೆಂದೂ ಐತನು ಹಳೆಮನೆಗೆ ಹೋಗಬಾರದೆಂದು ಪೀಂಚಲುಗೆ ಕಟ್ಟಪ್ಪಣೆ ಮಾಡಿ, ಅವಳನ್ನು ಬಿಡಾರದಲ್ಲಿಯೆ ಇರಲು ಹೇಳಿ, ತಾನು ಇತರ ಗಂಡಾಳುಗಳೊಡನೆ ಕೋಣೂರಿನಿಂದ ಹಳೆಮನೆಗೆ ಬೆಳಗಿನ ಜಾವದಲ್ಲಿಯೆ ಹೊರಟು ಬಂದಿದ್ದನು. ಆದರೆ ಅವಳು ಆಪತ್ತಿಗೆ ಸಿಕ್ಕಿದ್ದ ರಂಗಮ್ಮ ಹೆಗ್ಗಡಿತಿಯವರನ್ನು ಬಿಟ್ಟಿರಲಾರದೆ ದಾನಮ್ಮ ಹೆಗ್ಗಡಿತಿಯವರೊಡನೆ, ಗಂಡನ ಆಜ್ಞೆಯನ್ನು ಉಲ್ಲಂಘಿಸಿ, ಹೊರಟು ಬಂದಿದ್ದಳು.

ಸುಡುಗಾಡಿಗೆ ಸುಡುಗಾಡೇ ಚಕಿತವಾದಂತೆ ಅಲ್ಲಿ ನೆರೆದಿದ್ದವರ ಮನಸ್ಸು ಮುಖ ಕಣ್ಣುಗಳೆಲ್ಲ ಗಾಡಿ ನಿಂತಿದ್ದ ದಿಕ್ಕಿನ ದಾರಿಯ ಕಡೆಗೆ ಏಕಾಗ್ರವಾದವು. ಐಗಳು ಅನಂತಯ್ಯ 'ಅಗ್ನಿ' ಹಿಡಿದು ಪೊದೆಪೊದೆಯ ನಡುವಣ ಬಯಲಿನ

ಇಕ್ಕಟ್ಟು ಕಾಲುದಾರಿಯಲ್ಲಿ ಬರುತ್ತಿದ್ದುದು ಕಾಣಿಸಿತು. ಅವರ ಹಿಂದೆ ಚಟ್ಟವನ್ನು ಹೊತ್ತಿದ್ದವರ ಪಂಕ್ತಿ ಗೋಚರಿಸಿತು. ಅಗ್ರಭಾಗದಲ್ಲಿ ಬೆಟ್ಟಳ್ಳಿ ದೇವಯ್ಯ ಕೋಣೂರು ಮುಕುಂದಯ್ಯ ಹೆಗಲು ಕೊಟ್ಟಿದ್ದರು. ಹಿಂಭಾಗದಲ್ಲಿ ಹೆಗಲು ಕೊಟ್ಟಿದ್ದವರಲ್ಲಿ ತಿಮ್ಮಪ್ಪನೂ ಸಿಂಭಾವಿ ಭರಮೈಹೆಗ್ಗಡೆಯೂ ಇದ್ದರು. ಹೂವಳ್ಳಿ ವೆಂಕಟಣ್ಣನ ಬೃಹತ್ತಾದ ಸುದೀರ್ಘ ಸ್ಥೂಲಕಾಯವೂ ಮುಂಭಾಗದಲ್ಲಿ ಹೆಗಲು ಕೊಟ್ಟಿದ್ದವರೊಡನೆಯೆ ಕಾಣಿಸಿತ್ತಾದರೂ ಅವನು ಇತರರಿಗೆ ತನ್ನ ಎತ್ತರದ ದೆಸೆಯಿಂದ ತೊಂದರೆಯಾಗಬಾರದೆಂದು ಹೆಗಲು ಕೊಡದೆ ಇತರರ ಮಟ್ಟದೆತ್ತರಕ್ಕೆ ಕೈ ಆನಿಸಿಯೆ ಗೌರವಾರ್ಥವಾಗಿ ಕೂಡಿ, ಕುಂಟಿ ಬರುತ್ತಿದ್ದನು. ಅವರ ಹಿಂದೆ ಗಂಡಸರದೊಂದು ಗುಂಪೇ ಬರುತ್ತಿತ್ತು: ಮೇಗರವಳ್ಳಿಯ ಕಣ್ಣಾಪಂಡಿತರು, ಕರೀಂಸಾಬರು, ಜವಳಿ ಅಂಗಡಿ ಕಾಮತರು, ದಿನಸಿ ಅಂಗಡಿ ಪೈಗಳು, ತೀರ್ಥಹಳ್ಳಿ ದಾಸಯ್ಯ, ಪಾದ್ರಿ ಜೀವರತ್ನಯ್ಯ ಇತ್ಯಾದಿ ಇತ್ಯಾದಿ.

ಸೂಡಿಗೆ ಸ್ವಲ್ಪ ಸಮೀಪದಲ್ಲಿ ಚಟ್ಟ ನೆಲಮುಟ್ಟಿದುದೆ ತಡೆ ರೋದನ ಧ್ವನಿಯೊಂದಿಗೆ ನೆರೆದವರ ನೂಕುನುಗ್ಗಲು ಕಿಕ್ಕಿರಿಯಿತು. ಐತನ ಸಹಾಯದಿಂದ ಧರ್ಮುವೂ ತಾನು ಹಿಂದೆ ನೋಡಿದ್ದಿರಬಹುದಾದ ನೆನಪೂ ಅಳಿಸಿಹೋಗಿದ್ದ ತನ್ನ ಅಪ್ಪಯ್ಯನ ಮುಖವನ್ನಾದರೂ ಕೊನೆಯ ಸಾರಿ ನೋಡುವ ಉದ್ದೇಶದಿಂದ ಜನರ ಮಧ್ಯೆ ತೂರಿಕೊಂಡು ಹೋಗಿ ನೋಡಿದನು. ಆದರೆ ಏನೋ ಹೆದರಿಕೆಯಾದಂತಾಗಿ, ಕುತೂಹಲ ಪರಿಹಾರವಾದವನಂತೆ ಮತ್ತೆ ಐತನ ಕೈ ಹಿಡಿದುಕೊಂಡು ಹಿಂದಕ್ಕೆ ಬಂದು, ಬೆದರುಗಣ್ಣಾಗಿ ನಿಂತುಬಿಟ್ಟನು. ಅವನಿಗೆ ದುಃಖಕ್ಕಿಂತಲೂ ಹೆಚ್ಚು ದಿಗಿಲಾದಂತೆ ತೋರಿತು: 'ಹೆದರಬೇಡಿ, ಅಯ್ಯಾ' ಎಂದನು ಐತ.

ಆದಷ್ಟು ಪ್ರಯತ್ನದಿಂದ, ತುಸುಹೊತ್ತಿನಲ್ಲಿಯೆ, ಚಟ್ಟದ ಹತ್ತಿರಕ್ಕೆ ಮುಖ ದರ್ಶನಕ್ಕಾಗಿ ನುಗ್ಗಿದ್ದವರನ್ನೆಲ್ಲಾ ದೂರದೂರ ಹಿಂದಕ್ಕೆ ಕಳಿಸಿದರು. ಒಂದು ಕಡೆ ತಾಯಿ ದಾನಮ್ಮ ಹೆಗ್ಗಡಿತಿಯವರು ಇನ್ನೊಂದು ಕಡೆ ಅತ್ತಿಗೆ ಜಟ್ಟಮ್ಮ ಹೆಗ್ಗಡಿತಿಯವರು ತೋಳು ಹಿಡಿದಿರಲು ರಂಗಮ್ಮ ಗಂಡನ ಕಳೇಬರವಿದ್ದ ಚಟ್ಟದ ಕಡೆಗೆ, ಬಗ್ಗಿ ಕುಗ್ಗಿ, ಮುಖ ಮುಚ್ಚಿಕೊಂಡು, ಬಿಕ್ಕಿಬಿಕ್ಕಿ ಅಳುತ್ತಾ, ಇನ್ನೊಂದು ಸ್ವಲ್ಪ ಹೊತ್ತಿನಲ್ಲಿಯೆ ಕಳಚಿಹೋಗಲಿರುವ ಕರಿಮಣಿ ಸರದ ತಾಳಿ ಜೋಲುವಂತೆ ಬಾಗಿ, ತುಸು ಹೊತ್ತಿನಲ್ಲಿಯೆ ಒಡೆದು ಬೀಳಲಿರುವ ಬಳೆ ಸದ್ದಾಗುವಂತೆ ನಡುಗುತ್ತಾ ಬಂದಳು. ಏಳೆಂಟು ವರ್ಷಗಳಿಂದ ತನ್ನನ್ನು ದಹಿಸಿದ್ದ, ಏಳೆಂಟು ವರ್ಷಗಳೂ ತಾನು ಸಹಿಸಿದ್ದ ದುಃಖಾಗ್ನಿಪ್ರವಾಹಗಳೆಲ್ಲ ಒಟ್ಟಾಗಿ ಅವಳ ಹೃದಯವನ್ನು ಸುಟ್ಟುವೆಂಬಂತೆ ಚೀತ್ಕರಿಸಿದಳು: "ಅಯ್ಯೋ, ಸ್ವಾಮೀ, ತಿರುಪತಿ ತಿಮ್ಮಪ್ಪಾ, ನನ್ನನ್ನೂ ಕರಕೊಳ್ಳಪ್ಪಾ ನಿನ್ನ ಪಾದಾರವಿಂದಕ್ಕೆ! ಸ್ವಾಮೀ! ಸ್ವಾಮೀ! ಸ್ವಾಮೀ!" ಎನ್ನುತ್ತಾ ನೆರೆದಿದ್ದವರೆಲ್ಲ ಕಿಂಕರ್ತವ್ಯ ವಿಮೂಢರಂತೆ ನೋಡುತ್ತಿರಲು, ಮುನ್ನುಗ್ಗಿ ತನ್ನ ಗಂಡನ ಕಳೇಬರದ ಪಾದಗಳನ್ನು ಹಣೆಗೂ ಮುಖಕ್ಕೂ ಬಲವಾಗಿ ಒತ್ತಿ, ಕೈಯಲ್ಲಿ ಹಿಡಿದಮರಿಕೊಂಡು ಸಾಷ್ಟಾಂಗ ಪ್ರಣಾಮ ಮಾಡುವಂತೆ ಉದ್ದುದ್ದ ಅಡ್ಡಬಿದ್ದಳು!

ಸಂತೈಸುವ ಸಲುವಾಗಿ ಮಗಳ ಒಂದು ಪಕ್ಕದಲ್ಲಿ ದುಃಖದಗ್ಧಳಾಗಿದ್ದ ತಾಯಿಯೂ ಇನ್ನೊಂದು ಪಕ್ಕದಲ್ಲಿ ಚಿಕ್ಕಂದಿನಿಂದಲೂ ಗೆಳತಿಯಾಗಿ ಬೆಳೆದಿದ್ದ ಅತ್ತಿಗೆಯೂ ಕುಳಿತರು.

ಅಷ್ಟರಲ್ಲಿ, ಮನೆಯ ಕಡೆಯಯಿಂದ, ಮಗಳು ಮಂಜಮ್ಮನ ಹೆಗಲ ಮೇಲೆ ಎಡಗೈಯಿಟ್ಟು, ಬಲಗೈಯಲ್ಲಿ ದೊಣ್ಣೆಯೂರಿ, ಮೆಲ್ಲನೆ ಬರುತ್ತಿದ್ದ ಸುಬ್ಬಣ್ಣಹೆಗ್ಗಡೆಯವರನ್ನು ನಡೆಯಿಸಿಕೊಂಡು ಬಂದ ಬೆಟ್ಟಳ್ಳಿ ಕಲ್ಲಯ್ಯಗೌಡರು ಕಳೇಬರದ ಹತ್ತಿರಕ್ಕೆ ಬಂದರು.

"ಮಾವಯ್ಯ ಬಂದ್ರು, ಏಳು, ರಂಗೂ!" ಎಂದು ತಾಯಿಯೂ "ಅತ್ತಿಗೆಮ್ಮಾ! ಅತ್ತಿಗೆಮ್ಮಾ! ಏಳಿ, ಮಾವಯ್ಯ ಬಂದಾರೆ!" ಎಂದು ಜಟ್ಟಮ್ಮನೂ ರಂಗಮ್ಮನನ್ನು ಕರೆದು ಎಬ್ಬಿಸಲು ಪ್ರಯತ್ನಿಸಿದರು. ಆದರೆ ಗಂಡನ ಪಾದನಗಳನ್ನು ಅದುಮಿ ಹಿಡಿದಿದ್ದ ರಂಗಮ್ಮನ ಕೈಗಳು ಸಡಿಲಲಿಲ್ಲ; ಪಾದಕ್ಕೆ ಒತ್ತಿದ್ದ ಹಣೆ ಚಲಿಸಲಿಲ್ಲ. ಉಸಿರಾಡುತ್ತಿದ್ದಾಳೆಯೋ ಇಲ್ಲವೋ ಎಂಬಷ್ಟು ನಿಶ್ಚಲವಾಗಿದ್ದಳು!

ದಾನಮ್ಮ ಹೆಗ್ಗಡಿತಿಯವರಿಗೆ ಯಾಕೋ ಹೆದರಿಕೆಯಾಯಿತು. "ಮುಕುಂದಾ, ಇಲ್ಲಿ ಬಾರಪ್ಪಾ!" ಎಂದು ಅಳುದನಿಯಿಂದ ಕೂಗಿದರು, ಸ್ವಲ್ಪ ದೂರದಲ್ಲಿಯೆ ನಿಂತಿದ್ದ ಮಗನನ್ನು.

ಮುಕುಂದಯ್ಯ ಹತ್ತಿರ ಬರಲು "ನಿನ್ನ ಅಕ್ಕಯ್ಯ ಯಾಕೋ ಮಾತಾಡಾದಿಲ್ಲ; ಸ್ವಲ್ಪ ನೋಡಪ್ಪಾ!" ಎಂದು ಎದ್ದು ನಿಂತರು. ಅವರೊಡನೆ ಜಟ್ಟಮ್ಮನೂ ಎದ್ದು ನಿಂತು ಗಾಬರಿಯಿಂದಲೆ ಸ್ವಲ್ಪ ದೂರ ಸರಿದರು.

ಮುಕುಂದಯ್ಯ ತನ್ನ ಅಕ್ಕನನ್ನು ಕರೆದು, ಮುಟ್ಟಿ, ಎಬ್ಬಿಸಲು ಮಾಡಿದ ಪ್ರಯತ್ನ ವ್ಯರ್ಥವಾಗುತ್ತಿರುವುದನ್ನು ಕಂಡು ದೇವಯ್ಯನೂ ಬಳಿಸಾರಿ ಪರಿಶೀಲಿಸಿದನು.

"ಧಾತು ಹಾರಿರಬೇಕು ಸ್ವಲ್ಪ ನೀರು ತನ್ನಿ" ಎನ್ನುತ್ತಾ ದೇವಯ್ಯ ತನ್ನ ಅಂಗ ವಸ್ತ್ರದಿಂದ ಗಾಳಿ ಬೀಸತೊಡಗಿದನು.

ಹಾಹಾಕಾರವೆದ್ದಿತು!

ಮುಖಕ್ಕೆ ನೀರು ಎರಚಿದರು. ಬಾಯಿಗೂ ನೀರು ಬಿಟ್ಟರು: ತಿರುಪತಿ ತಿಮ್ಮಪ್ಪನು ಧರ್ಮೂ ತಾಯಿಯ ಆರ್ತಪ್ರಾರ್ಥನೆಗೆ ಸಂಪೂರ್ಣವಾಗಿ ಓಗೊಟ್ಟಿದ್ದನು!

ತನ್ನ ಅವ್ವಗೆ ಪ್ರಾಣ ಹೋಯಿತು ಎಂದು ಗೊತ್ತಾದೊಡನೆ, ಐತನ ಕೈಹಿಡಿದು,- ಹುಲಿ ಅಟ್ಟಿ ಕೊಂದು ತಿನ್ನುತ್ತಿದ್ದ ತಾಯಿಯನ್ನು ನೋಡುತ್ತಾ ದಿಕ್ಕುಗೆಟ್ಟು ಹೆದರಿ ದೂರ ನಿಲ್ಲುವ ಜಿಂಕೆಮರಿಯಂತೆ,-ದಿಗ್ಭ್ರಾಂತನಾಗಿ ನಿಂತಿದ್ದ ಧರ್ಮು "ಅಯ್ಯೋ ಐತಾ!" ಎಂದು ನಡುಗಿ ಚೀತ್ಕರಿಸಿ ನೆಲಕ್ಕುರುಳಿ ವಿಲಿವಿಲಿ ಒದ್ದಾಡತೊಡಗಿದನು! ಐತ ಅವನನ್ನು ಹಿಡಿದೆತ್ತಿ ನಿಲ್ಲಿಸಿ, ತನ್ನ ಎದೆಗೆ ಬಲವಾಗಿ ಅವುಚಿಕೊಂಡು "ಹೆದರಬ್ಯಾಡಿ, ಅಯ್ಯಾ! ಹೆದರಬ್ಯಾಡಿ ಅಯ್ಯಾ!" ಎಂದೆಂದು ಗದ್ಗದಿಸಿ ಅಳತೊಡಗಿದನು.

ಅದನ್ನು ಗಮನಿಸಿದ ಮುಕುಂದಯ್ಯ ದೇವಯ್ಯ ಇಬ್ಬರೂ ತಮ್ಮೊಳಗೆ ಮಾತಾಡಿಕೊಂಡು ಐಗಳು ಅನಂತಯ್ಯನವರನ್ನು ಕರೆದು ಅವರ ಕಿವಿಯಲ್ಲಿ ಏನನ್ನೊ ಹೇಳಿ ಕಳುಹಿಸಿದರು. ಅವರು ಐತ ಅಪ್ಪಿ ಹಿಡಿದಿದ್ದ

ಧರ್ಮು ಬಳಿಗೆ ಬಂದು ಸಮಾಧಾನ ಪಡಿಸುತ್ತಾ ಅವನನ್ನು ಮನೆಗೆ ಕರೆದು ಕೊಂಡುಹೋದರು, ಐತನನ್ನೂ ಸಂಗಡ ಇರಹೇಳಿ.

ದುಃಖದ ಮೇಲೆ ದುಃಖದ ಆಘಾತವಾಗಿದ್ದ ಬಾಲಕನ ಹೃದಯ ಅವರ ಸಂತೈಕೆಯಿಂದ ತುಸು ಶಾಂತವಾದ ಮೇಲೆ ಐಗಳು ಹೇಳಿದರು: "ಧರ್ಮು, ನಿನ್ನ ತಾಯಿ ನಿಜವಾಗಿಯೂ ದೈವಭಕ್ತೆ, ಪುಣ್ಯವಂತೆ. ಆದ್ದರಿಂದಲೆ ದೇವರು ಅವರ ಪ್ರಾರ್ಥನೆಯನ್ನು ತಡಮಾಡದೆ ಸಲ್ಲಿಸಿದ್ದಾನೆ. ಇಂಥಾ ಇಚ್ಛಾಮರಣ ಎಲ್ಲರಿಗೂ ಸಿಗುವುದಿಲ್ಲ. ಪತಿವ್ರತೆಗೆ ಮಾತ್ರ ಸಾಧ್ಯ, ಈ ರೀತಿ ಪತಿಯೊಡನೆ ಚಿತೆ ಏರುವ ಭಾಗ್ಯ. ನಿಮಗೆ ನಾನು ಪುರಾಣದ ಕಥೆಗಳಲ್ಲಿ ಹೀಗೆ ಆಗುವುದನ್ನು ಹೇಳಿದ್ದೆ. ಇವೊತ್ತು ನಾವೇ ಅಂಥಾದ್ದು ಒಂದನ್ನ ಕಣ್ಣಾರೆ ಕಂಡ ಹಾಗಾಯ್ತು.... ನೀನು ಚೆನ್ನಾಗಿ ಓದುಬರಹ ಕಲಿತು ದೊಡ್ಡವನಾದರೆ ಸ್ವರ್ಗದಲ್ಲಿರುವ ನಿನ್ನ ತಂದೆ ತಾಯಿಗಳಿಗೆ ತುಂಬಾ ಸಂತೋಷವಾಗುತ್ತದೆ."

* * *

## ೪೫

ಯಾರು ಬದುಕಲಿ, ಯಾರು ಸಾಯಲಿ, ಯಾರು ಹುಟ್ಟಲಿ, ಹುಟ್ಟದೆ ಹೋಗಲಿ, ಮಳೆಗಾಲ ನಿಲ್ಲುತ್ತದೆಯೆ? ಮಳೆಹಿಡಿದು ಕೂತಿತ್ತು, ನಾಲ್ಕುಪಾದಗಳನ್ನೂ ಬಲವಾಗಿ ಊರಿ! ಮೋಡ ಸದಾ ಕವಿದು ಸೂರ್ಯದರ್ಶನವೆ ಅಪೂರ್ವವಾಯಿತು. ತನ್ನ ದುರ್ದಮ್ಯ ವ್ಯಾಪಾರಗಳನ್ನು ನಿರ್ಲಕ್ಷವಾಗಿ ನಿರ್ದಾಕ್ಷಿಣ್ಯವಾಗಿ ಸಾಗಿಸಿತ್ತು ಬೃಹತ್ ಪ್ರಕೃತಿ. ಆ ಪ್ರಕೃತಿಯ ಪ್ರತಿರೂಪವಾದ ಸಹ್ಯಾದ್ರಿ ಪರ್ವತ ಕಾನನ ಶ್ರೇಣಿ ಮನುಷ್ಯರ ಅಲ್ಪ ಸುಖದುಃಖಗಳಿಗೆ ಸಂಪೂರ್ಣ ನಿಸ್ಸಂಗಿಯಾಗಿ ಭೀಷಣ ವರ್ಷಧಾರೆಯಲ್ಲಿ ತೊಪ್ಪನೆ ತೊಯ್ಯುತ್ತಾ ಹಬ್ಬಿ ಕೊಬ್ಬಿ ಉಬ್ಬಿ ನಿಂತಿತ್ತು.

ಆ ಭೂಮ ನಿಸರ್ಗದ ಮುಂದೆ ಹಳೆಮನೆ, ಕೋಣೂರು, ಹೂವಳ್ಳಿ, ಬೆಟ್ಟಳ್ಳಿ ಮತ್ತು ಸಿಂಬಾವಿಯಂತಹ ಏಕಾಗ್ರ ಕ್ಷುದ್ರ ಗ್ರಾಮಗಳ ಬದುಕಿನ ಆಶೆ ನಿರಾಶೆ ಕಷ್ಟ ಸುಖ ಶೋಕ ತಾಪಾದಿಗಳು ಯಃಕಶ್ಚಿತಗಳಾಗಿದ್ದುದರಲ್ಲಿ ಆಶ್ಚರ್ಯವೇನು? ತಂದೆ ತಾಯಿಯವರನ್ನು ಏಕಕಾಲದಲ್ಲಿ ಅನಿರೀಕ್ಷಿತವಾಗಿ ಕಳೆದುಕೊಂಡ ಧರ್ಮುವ ಮನಃಸ್ಥಿತಿಯಾಗಲಿ; ತಾನು ಬಯಸಿದ ಹೆಣ್ಣು, ಆ ಹೆಣ್ಣಿನ ಇಚ್ಛೆಗೂ ವಿರುದ್ಧವಾಗಿ, ಮತ್ತೊಬ್ಬನ ಪಾಲಾಗುತ್ತದೆಯಲ್ಲಾ ಎಂಬ ಮುಕುಂದಯ್ಯನ ಹೃದಯವ್ಯಥೆಯಾಗಲಿ; ತಾನು ಹಾರಿಸಿಕೊಂಡು ಬಂದು ಮದುವೆಯಾಗಿದ್ದ ಹುಡುಗಿಯನ್ನು ಮತ್ತೆ ತವರಿಗೊಯ್ದು ಬಲಾತ್ಕಾರವಾಗಿ ಮತ್ತೊಬ್ಬನಿಗೆ ಮದುವೆ ಮಾಡಿಸುತ್ತಾರೆ ಎಂಬ ವಾರ್ತೆಯ ಬಡಬಾಗ್ನಿಯನ್ನು ಹೊಟ್ಟೆಯೊಳಗಿಟ್ಟುಕೊಂಡು, ಹೇಗೋ ಉಪಾಯದಿಂದ ಪೋಲೀಸರ ಕೈಯಿಂದ ತಪ್ಪಿಸಿಕೊಂಡು ಮಳೆಗಾಲದ ಕಾಡಿನಲ್ಲಿ ತಲೆಮರೆಸಿಕೊಂಡು ಕಾಲ ಹಾಕುತ್ತಿರುವ ಗುತ್ತಿಯ ದಾರುಣ ಚಿತ್ತಸ್ಥಿತಿಯಾಗಲಿ; ನಿರಂತರ ರೋಗಿಷ್ಠನಾಗಿದ್ದರೂ ತನ್ನನ್ನು ಒಲಿದು ಬದುಕು ಸಾಗಿಸುತ್ತಿದ್ದ ತನ್ನ ಹೆಂಡತಿ ಅಕ್ಕಣಿ ಮೆಲ್ಲಮೆಲ್ಲಗೆ ಜಾರಿ ಚೇಂಕ್ರನಿಗೆ ವಶವಾಗುತ್ತಿದ್ದಾಳಲ್ಲಾ ಎಂದು ಒಳಒಳಗೆ ಕೊರಗಲಾರಂಭಿಸಿರುವ ಪಿಜಿಣನ ಬಾಳಬೇಗೆಯಾಗಲಿ; ಕಡೆಗೆ, ಪಾದ್ರಿಯಿಂದ ಅನೇಕಾನೇಕ ಪರಿತೋಷಗಳನ್ನು ಪಡೆದು, ಆತನಿಗೆ ತಾನು ಕ್ರೈಸ್ತ ಜಾತಿಗೆ ಸೇರುತ್ತೇನೆ

ಎಂಬ ನಂಬುಗೆ ಬರುವಂತೆ ಮಾಡಿ, ಒಂದು ರೀತಿಯಲ್ಲಿ ಮಾತನ್ನೂ ಕೊಟ್ಟು, ಈಗ ಅದರಿಂದ ನುಣುಚಿಕೊಳ್ಳಲು ಹವಣಿಸುತ್ತಿರುವ ದೇವಯ್ಯನ ಹಾಸ್ಯಾಸ್ಪದವಾದ ಒಳತೋಟಿಯಾಗಲಿ-ಆ ಸಹ್ಯಾದ್ರಿಯ ಮಲೆ ಕಾಡು ಮಳೆ ಇವುಗಳ ಕಡೆಗಣ್ಣಿನ ಗಮನಕ್ಕಾದರೂ ಬರುತ್ತವೆಯೇ?-ಮಲೆಯೋ? ಅಲೆಅಲೆಅಲೆಯಾಗಿ ಬಾನ್ಮುಟ್ಟಿ ತಲೆಯೆತ್ತಿ ನಿಂತಿದೆ! ಕಾಡೋ? ದಿಗಂತವಿಶ್ರಾಂತವಾಗಿ, ದಟ್ಟವಾಗಿ, ವ್ಯಾಘ್ರಭೀಷಣವಾಗಿ, ವರಾಕಠೋರವಾಗಿ ಹಸರಿಸಿದೆ! ಮಳೆಯೋ? ಹಗಲೂ ಇರುಳೂ ಒಂದೇ ಸಮನೆ ಸುರಿಯುತ್ತಿದೆ, ಹೊಡೆಯುತ್ತಿದೆ, ಜಡಿಯುತ್ತಿದೆ!

ಮನೆಮನೆಯಲ್ಲಿಯ ಹಳ್ಳಿಯ ಜನರು ಗದ್ದೆಯ ಕೆಲಸಕ್ಕೆ ಶುರು ಮಾಡಿದ್ದಾರೆ: ಆರು ಕಟ್ಟುತ್ತಿದ್ದಾರೆ; ಅಗೋಡಿ ಮಾಡುತ್ತಿದ್ದಾರೆ; ಅಂಚು ಕೆತ್ತುತ್ತಿದ್ದಾರೆ. ಹಗಲು, ಕೂಣಿಹಾಕಿ ಮೀನು ಹಿಡಿಯುತ್ತಿದ್ದಾರೆ; ರಾತ್ರಿ, ದೊಂದಿ ಲಾಟೀನುಗಳ ಬೆಳಕಿನಲ್ಲಿ ಹತ್ತುಮೀನು ಕಡಿಯುತ್ತಿದ್ದಾರೆ. ಅಟ್ಟದ ಮೇಲಿದ್ದ ಗೊರಬುಗಳೆಲ್ಲ ಹೆಣ್ಣಾಳುಗಳ ತಲೆಗೇರಿ ಸಂಚರಿಸುತ್ತವೆ; ಹಾಸಿಗೆಯಲ್ಲಿಯೂ ಸಂಧಿಮೂಲೆಗಳಲ್ಲಿಯೂ ಇದ್ದ ಕಂಬಳಿಗಳೆಲ್ಲ ಕೊಪ್ಪೆಗಳಾಗಿ ಗಂಡಾಳುಗಳ ತಲೆಗೇರಿ ದುಡಿದಾಡುತ್ತಿವೆ. ಎತ್ತಿನ ಹಟ್ಟಿಯ ಉಳುಮೆಯ ಕೆಲಸದ ಎತ್ತುಗಳೆಲ್ಲ ರಜಾಕಾಲ ಮುಗಿದು ಇಸ್ಕೂಲು ಪ್ರಾರಂಭವಾದಂತಿದೆ!

ಹಳೆಮನೆಯ ದುರಂತ ಸಂಭವಿಸಿದ ತರುಣದಲ್ಲಿ ಯಾರು ಇಬ್ಬರು ಸಂಧಿಸಿದರೂ ಮೊದಮೊದಲಲ್ಲಿ ಮಾತು ಮೊದಲಾಗುತ್ತಿದ್ದದ್ದು ಒಂದೇ ವಿಷಯದಿಂದ: ತಿರುಪತಿಗೆ ಹೋಗಿದ್ದು ಹಿಂತಿರುಗಿದ್ದ ಹಳೆಮನೆ ದೊಡ್ಡಣ್ಣ ಹೆಗ್ಗಡೆಯವರು ಕಾಲವಾದ ಕಥೆ ಮತ್ತು ಅವರ ಹೆಂಡತಿ ರಂಗಮ್ಮ ಹೆಗ್ಗಡಿತಿಯವರ ಇಚ್ಛಾಮರಣದ ಸುದ್ದಿ! ಅಳುತ್ತಾ ಮಾತಾಡಿದರು; ನಗುತ್ತಾ ಮಾತಾಡಿದರು; ಉಳುತ್ತಾ ಮಾತಾಡಿದರು; ಅಂಚು ಕೆತ್ತುತ್ತಾ ಮಾತಾಡಿದರು; ಬಾಯಿಗೆ ಹಾಕಿಕೊಳ್ಳುತ್ತಾ ಮಾತಾಡಿದರು; ಎಲೆಯಡಕೆ ಜಗಿಯುತ್ತಾ ಮಾತಾಡಿದರು; ಬೆಳಗ್ಗೆ ಕೆಲಸಕ್ಕೆ ಹೋಗುತ್ತಾ ಮಾತಾಡಿದರು; ಬೈಗಿನಲ್ಲಿ ಮನೆಗೆ ಹಿಂದಿರುಗುತ್ತಾ ಮಾತಾಡಿದರು! ಎಷ್ಟು ಮಾತಾಡಿದರೂ ಸಾಲದ ಸುದ್ದಿ! ಎಷ್ಟು ಮೆಚ್ಚಿ ನುಡಿದರೂ ತೀರದ ಸುದ್ದಿ! ಕರುಣ, ಅದ್ಭುತ ಶಾಂತರಸಗಳಿಗೆ ಅಕ್ಷಯ ಪಾತ್ರೆಯಾಗಿ ಪವಿತ್ರ ತೀರ್ಥವಾರ್ತೆಯಾಗಿತ್ತು ಆ ಸುದ್ದಿ!

ಎಂತಹ ಹೂಳಿನ ಮೇಲೆಯೂ ಕಾಲಕ್ರಮೇಣ ಹುಲ್ಲು ಬೆಳೆಯುತ್ತದೆ; ಎಂತಹ ಸೂಡಿನ ಸುಟ್ಟು ನೆಲವನ್ನಾದರೂ ಕಾಲಕ್ರಮೇಣ ಹಸುರು ತಬ್ಬುತ್ತದೆ. ಅಲ್ಲಿ ಹೆಣ ಹೂಳಿದ್ದಾರೆಂಬ ಚಿಹ್ನೆಯೆ ಮಾಸಿಹೋಗುತ್ತದೆ; ಅಲ್ಲಿ ಹೆಣ ಸುಟ್ಟಿದ್ದರು ಎಂಬ ಗುರುತೂ ಕಾಣದಂತೆ ಗರುಕೆ ತಬ್ಬಿ ನಳನಳಿಸಿ ಹಸುರು ನಗೆ ಬೀರುತ್ತದೆ. ಹಾಗೆಯೆ ಬದುಕಿನ ಇತರ ಸದ್ಯೋಮುಖ್ಯ ಸಂಗತಿಗಳು ಬರಬರುತ್ತಾ ಜನಮನವನ್ನಾಕ್ರಮಿಸಿ, ದೊಡ್ಡಣ್ಣಹೆಗ್ಗಡೆ ಮತ್ತು ರಂಗಮ್ಮ ಹೆಗ್ಗಡಿತಿಯವರ ದಾರುಣ ಕಥೆಯನ್ನು ಕ್ರಮೇಣ ದೂರಸ್ಮೃತಿಯನ್ನಾಗಿ ಮಾಡತೊಡಗಿದ್ದವು.

ಉಳಿದೆಲ್ಲರಿಗಿಂತಲೂ ಹೆಚ್ಚಾಗಿ ದುಃಖಿಯಾಗಿದ್ದ ತಬ್ಬಲಿ ಧರ್ಮು ಸೂತಕಾನಂತರ ತಿಥಿ ಮೊದಲಾದ ಕರ್ಮಗಳೆಲ್ಲ ಪೂರೈಸಿದ ಮೇಲೆ ಕೋಣೂರಿಗೆ ಹಿಂದಿರುಗಿ ಮಾವನ ಮನೆಯಲ್ಲಿ, ಅಜ್ಜಿಯ ಮತ್ತು ಅತ್ತೆಯ ಅಕ್ಕರೆಯ ಆಶ್ರಯದಲ್ಲಿ, ಐಗಳ ಮಠದಲ್ಲಿ ಅನಂತಯ್ಯನವರಿಂದ ಎಂದಿನಂತೆ ಇತರ ಮಕ್ಕಳೊಡನೆ ಓದು ಬರಹ ಕಲಿಯಲು ತೊಡಗಿದ್ದನು. ಅವನ ಗೆಳೆಯರು ಕಾಡು, ತಿಮ್ಮು ಇಬ್ಬರೂ ಅವನಿಗೊದಗಿದ್ದ ದುರಂತದ ನಿಮಿತ್ತ ತಮ್ಮ ಗೆಳೆಯನನ್ನು ಎಂದಿಗಿಂತಲೂ ಹೆಚ್ಚು ಪ್ರೀತಿಯಿಂದಲೂ ಅಕ್ಕರೆಯಿಂದಲೂ ದಾಕ್ಷಿಣ್ಯದಿಂದಲೂ ಕಾಣುತ್ತಿದ್ದರು.

ಧರ್ಮು ಯಾರಿಗೂ ತಿಳಿಯದಂತೆ ಅಳುತ್ತಿದ್ದು ಗೆಳೆಯರು ಸಮೀಪಿಸುತ್ತಿರುವುದನ್ನು ಕಂಡು ಕಣ್ಣೊರೆಸಿಕೊಂಡಾಗಲೆಲ್ಲ ಕಾಡು, ತಿಮ್ಮು ಇಬ್ಬರೂ ಅವನನ್ನು ನಾನಾ ರೀತಿಯಿಂದ ಸಂತವಿಸುತ್ತಿದ್ದರು: 'ನಿನ್ನ ಅವ್ವ ಅಪ್ಪಯ್ಯ ಸ್ವರ್ಗದಲ್ಲಿದ್ದು ನೋಡುತ್ತಿದ್ದಾರೆ ಕಣೋ!' ಐತನ ಹೆಂಡತಿ ಪೀಂಚಲು ನೋಡಿದಳಂತೆ, ಸೂಡಿನ ಬೆಂಕಿಯೆಲ್ಲ ಆರುತ್ತಿದ್ದಾಗ ಆಕಾಶದಿಂದ ಒಂದು ರಥ ಇಳಿದು ಬಂದು, ದೊಡ್ಡ ಮಾವಗೂ ದೊಡ್ಡತ್ತೆಗೂ ಹೂವಿನ ಹಾರ ಹಾಕಿ, ಅದರಲ್ಲಿ ಕೂರಿಸಿಕೊಂಡು ಹೋಯಿತಂತೆ!' 'ಮುಕುಂದ ಮಾವನ ಸ್ವಪ್ನದಲ್ಲಿ ದೊಡ್ಡಮ್ಮ ದೊಡ್ಡಪ್ಪಯ್ಯ ಇಬ್ಬರೂ ಬಂದಿದ್ದರಂತೆ ಕಣೋ!' ಇತ್ಯಾದಿಯಾಗಿ. ಒಂದು ಸಾರಿ ಧರ್ಮು ಬೈಗುಗತ್ತಲಲ್ಲಿ ಮಗ್ಗಿ ಹೇಳುತ್ತಿದ್ದಾಗಲೆ, ನಡುವೆ ತಂದೆತಾಯಿಯರ ನೆನಪುಕ್ಕಿ ದುಃಖ ತಡೆಯಲಾರದೆ ಬಿಕ್ಕಿ ಬಿಕ್ಕಿ ಅತ್ತಾಗ ಅನಂತೈಗಳು ಅನೇಕ ರೀತಿಯಾಗಿ ಸಾಂತ್ವನ ಹೇಳಿ ಅವತ್ತಿನ ಮಗ್ಗಿ ಪಾಠದಂತಹ ಮುಖ್ಯ ವಿಷಯವನ್ನು ನಿಲ್ಲಿಸಿ ಅಡಿಕೆ ಬಿಟ್ಟಿದ್ದರು. ಆಗ ಕಾಡು ಧರ್ಮುವ ಜೊತೆಯೇ ಹೋಗಿ. ಕೆಸರ್ಹಲಗೆಯ ಮೇಲೆ ಅವನ ಪಕ್ಕದಲ್ಲಿಯೆ ಒತ್ತಿ ಕುಳಿತು, ಅಂಗಳಕ್ಕೆ ಕಾಲು ಇಳಿಬಿಟ್ಟಕೊಂಡು ಹೇಳಿದ್ದನು, ತುಳಸೀಕಟ್ಟೆಗೆ ಹೊತ್ತಿಸಿಟ್ಟಿದ್ದ ನೀಲಾಂಜನದ ದೀಪವನ್ನೇ ನೋಡುತ್ತಾ: "ಧರ್ಮೂ, ಆ 'ಗಡ್ಡದಯ್ಯ' ಆವೊತ್ತು ಆ ಕಲ್ಲೂರು ಹೊಳೆದಂಡೆ ಮ್ಯಾಲೆ, ಅದೇ ಆ ಜೋಳಿಗೆಗೆ ಕೈ ಹಾಕಿ ಹಾಕಿ ನಮಗೆ ಹಣ್ಣು ಕೊಟ್ಟನಲ್ಲಾ ಆ ಗಡ್ಡದಯ್ಯ, ನಿನ್ನೊಬ್ಬನ್ನೇ ಹತ್ರಕ್ಕೆ ಕರೆದು ಹೆಗಲ ಮೇಲೆ ಕೈ ಹಾಕಿ ಹೇಳಿದ್ದನಲ್ಲಾ? ನಿಂಗೆ ಗ್ಯಾಪಕ ಅದೆಯೇನು?" ಎಂದು ಕೇಳಲು, ಧರ್ಮು ಮಾತಾಡದೆ ತಲೆದೂಗಿ ಸಮ್ಮತಿಸಿದಂತೆ ತನ್ನ ಕಡೆ ನೋಡುತ್ತಿರಲು, ಕಾಡು ಉತ್ತೇಜಿತನಾಗಿ ಮುಂದುವರಿದಿದ್ದನು: "ಅಂವ ಹೇಳಿದ್ದೇನು? ಗೊತ್ತೇ? 'ಮಗೂ, ನಿನ್ನ ಭವಿಷ್ಯ ಉಜ್ವಲವಾಗಿದೆ. ಚೆನ್ನಾಗಿ ಓದು ಬರಹ ಕಲಿತುಕೋ. ನೀನು ಮುಂದೆ ತುಂಬ ದೊಡ್ಡ ಹೆಸರು ಪಡೆದು ದೊಡ್ಡ ಮನುಷ್ಯನಾಗುತ್ತೀಯ!...."

"ಹಾಂಗಲ್ಲ ಕಣೋ, ಅಂವ ಅಂದದ್ದು: 'ಕೀರ್ತಿವಂತನಾಗುತ್ತೀಯ'" ಧರ್ಮು ಅತ್ಯಂತ ಸರಳ ಮುಗ್ಧ ಭಾವದಿಂದ ಸ್ನೇಹಿತನ ಜ್ಞಾಪಕವನ್ನು ತಿದ್ದಿದ್ದನು.

* * *

ತೀರ್ಥಹಳ್ಳಿಯಿಂದ ಬಂದ ಬೆಟ್ಟಳ್ಳಿಯ ಗಾಡಿಯಿಂದ ಹೆಣವನ್ನು ಇಳಿಸುತ್ತಿದ್ದಾಗ ತಿಮ್ಮಪ್ಪಹೆಗ್ಗಡೆಯೂ ಇತರರಂತೆ ಶೋಕ ಪ್ರದರ್ಶನ ಮಾಡಲು ಮುಂದುವರಿದಿದ್ದನು. ಆದರೆ ಆ ಹೆಣದ ಮುಖವನ್ನು ನೋಡಿ, ಆ ಕಳೇಬರ ನಿಜವಾಗಿಯೂ ತಿರುಪತಿಗೆ ಹೋಗಿದ್ದ ತನ್ನ ಅಣ್ಣನದೇ ಎಂಬುದು ಖಾತ್ರಿಯಾದ ತರುವಾಯ, ಅವನ ಚೇತನ ಹೌಹಾರಿಬಿಟ್ಟಿತ್ತು. ಚಿಕ್ಕಂದಿನಿಂದಲೂ ತಾನು ಒಲಿದಿದ್ದಾತನ ಮೃತ್ಯುಸಮ್ಮುಖದಲ್ಲಿ ಉಂಟಾಗುವ ಒಂದು ಅಪಾರ್ಥಿವ ಭೀತಿ ಅವನ ಹೃದಯವನ್ನಾಕ್ರಮಿಸಿತ್ತು. ಏಳೆಂಟು ವರುಷಗಳ ಹಿಂದೆ ಅಣ್ಣ ತಿರುಪತಿಗೆ ಹೋಗುವವರೆಗೂ ತಿಮ್ಮಪ್ಪಗೆ ಅವನಲ್ಲಿ ಉಳಿದೆಲ್ಲರಿಗಿಂತಲೂ ಅತಿಶಯವಾದ ಗಾಢವಿಶ್ವಾಸವಿತ್ತು. ಏಕೆಂದರೆ ಹುಡುಗ ತಿಮ್ಮಪ್ಪನ ಒರಟು ರೂಪ, ಒರಟುವರ್ತನೆ, ಒಡಲಕೊಳಕು, ಹೊಲಸುಬಾಯಿ ಇವುಗಳ ದೆಸೆಯಿಂದ ತಂದೆ ಸುಬ್ಬಣ್ಣ ಹೆಗ್ಗಡೆಯವರಾದಿಯಾಗಿ ಎಲ್ಲರೂ ಅವನನ್ನು ಜಿಗುಪ್ಸೆಯಿಂದ ಕಡೆಗಣಿಸಿ ಬೈದು ದೂರೀಕರಿಸುತ್ತಿದ್ದಾಗ ಅಣ್ಣ ದೊಡ್ಡಣ್ಣಹೆಗ್ಗಡೆ ಯೊಬ್ಬನೆ ಅವನನ್ನು ಪ್ರೀತಿಯಿಂದ ಕಾಣುತ್ತಿದ್ದನು. ಷಿಕಾರಿ ಹುಚ್ಚಿನ ದೊಡ್ಡಣ್ಣ ಕಾಡು ಸುತ್ತಲು ಕಾತರನಾಗಿದ್ದ ತಮ್ಮನನ್ನು ಎಷ್ಟೋಸಾರಿ ತನ್ನೊಡನೆ ಸಾರಿಕೆ ಬೇಟೆಗೂ ಮರುಸು ಕೂರುವುದಕ್ಕೂ ಕರೆದುಕೊಂಡು ಹೋಗುತ್ತಿದ್ದನು. ಜೇನು ಕೀಳುವುದು, ಹಕ್ಕಿ ಹೊಡೆಯುವುದು, ಮೀನಿಗೆ ಗಾಳ

ಹಾಕುವುದು, ಕೆರೆಗೆ ಬಲೆಹಾಕಿ ಮೀನು ಹಿಡಿಯುವುದು, ಹಲಸಿನ ಹಣ್ಣೋ ದೀರ್ಕನ ಹಣ್ಣೋ ಮಾವಿನ ಹಣ್ಣೋ ಕಲ್ಲುಸಂಪಿಗೆ ಹಣ್ಣೋ ಕುಯ್ಯುವುದು, ಉರುಳು ಒಡ್ಡಿ ಹುಂಡುಕೋಳಿ ಚಿಟ್ಟುಗೋಳಿ ಕಾಡುಕೋಳಿಗಳನ್ನು ಹಿಡಿಯುವುದು, ಮೊದಲಾದ ನಾನಾ ಲಲಿತ ಮತ್ತು ರುದ್ರ ಸಾಹಸಗಳಲ್ಲಿ ತಿಮ್ಮಪ್ಪ ಅಣ್ಣನೊಡನೆ ಭಾಗಿಯಾಗಿ ಸಂತೋಷಪಟ್ಟಿದ್ದನು.

ತಿರುಪತಿಗೆ ಹೋದ ಅಣ್ಣ ತಿರುಗಿ ಹಿಂದಿರುಗದಿದ್ದಾಗ ತಿಮ್ಮಪ್ಪನ ದುಃಖ ಇತರ ಯಾರ ದುಃಖಕ್ಕೂ ಕಡಿಮೆಯದ್ದಾಗಿರಲಿಲ್ಲ. ಆದರೆ ಕೌಮಾರ್ಯ ತಾರುಣ್ಯಕ್ಕೇರಿ, ತಾರುಣ್ಯ ಯೌವನದಂಚಿಗೆ ಸಮೀಪಿಸುವಷ್ಟರಲ್ಲಿ, ಇದ್ದ ಒಬ್ಬ ಅಣ್ಣನ ವಿಶ್ವಾಸದಿಂದಲೂ ದೂರನಾಗಿ, ಮನೆಯವರ ಕಟುತ್ವಕ್ಕೆ ಕಹಿಗೊಂಡಿದ್ದ ಅವನ ಚೇತನ ತನ್ನ ಸಿಹಿ ಸಂತೋಷಗಳನ್ನು ತನ್ನವರೂ ಮನೆಯವರೂ ಅಲ್ಲದ ಅನ್ಯರ ಸಂಗದಲ್ಲಿಯೂ ಪಾಪಕ್ಷೇತ್ರಗಳಲ್ಲಿಯೂ ಕಂಡುಕೊಂಡು ವಿಲಾಸಿಸತೊಡಗಿತ್ತು. ಚೆನ್ನಾಗಿ ಮೀಯಿಸಿ ಶುಚಿಯಾಗಿಟ್ಟು ಒಳ್ಳೆಯ ಆಹಾರ ತಿನ್ನಿಸಿ ಸಾಕಿದ್ದ ಮನೆಯ ಚೇನಿನಾಯಿ, 'ಸಣಬಿ'ನ ಸಮಯ ಬಂದಾಗ, ದದ್ದು ಹಿಡಿದು ವಿಕಾರವಾಗಿದ್ದರೂ ಲೆಕ್ಕಿಸದೆ ಬೀದಿಯ ನಾಯಿಯ ಸಂಗ ಬಯಸಿ ಸರಪಣಿ ಕಂಪೌಂಡುಗಳಿಂದ ನುಣುಚಿಕೊಂಡು ಪೋಲಿಬೀಳುವಂತೆ, ತಿಮ್ಮಪ್ಪ ಕೀಳು ಜಾತಿಯವರ ಹಟ್ಟಿ ಬಿಡಾರ ಗುಡಿಸಲು ಜೋಪಡಿಗಳಲ್ಲಿಯೂ ಸುಖವನ್ನರಸಿ ಪಡೆದಿದ್ದನು. ಅವನ ಹೊಲಸು ಶೃಂಗಾರ ಸಾಹಸದ ಇತ್ತೀಚಿನ ಬೇಟೆಗೆ ತುತ್ತಾಗಿದ್ದವಳೆಂದರೆ ಹೊಲೆಯರ ಕುಳುವಾಡಿ ಸಣ್ಣನ ಹಿರಿಯ ಅವಿವಾಹಿತ ಮಗಳು ಪುಟ್ಟಿ! ಉಂಡಾಡಿ ಬೈರನ ನೆರವು ಪಡೆದು ಅವಳನ್ನು ಉಪಾಯವಾಗಿ ನೆಲ್ಲುಹುಲ್ಲು ಕುತ್ತರೆ ಹಾಕಿದ್ದ ಕಣಕ್ಕೆ ಬೈಗಿನಲ್ಲಿ ಬರುವಂತೆ ಮಾಡಿ, ಕಳ್ಳು ಕುಡಿಸಿ, ತನ್ನ ದೇಹ ತೃಷ್ಣೆಯನ್ನು ಪರಿಹರಿಸಿಕೊಂಡಿದ್ದನು, 'ಸಣ್ಣ ಒಡೆಯ ತಿಮ್ಮಪ್ಪಯ್ಯ'! ಆ ಗುಟ್ಟೂ ಎಲ್ಲರ ಗುಟ್ಟಿನ ಪಿಸುಮಾತಾಗಿಯೆ ಬಹಿರಂಗ ವಿಷಯವಾಗಿಬಿಟ್ಟಿತ್ತು. ತಾವು ಊರಿನಲ್ಲಿ ಇಲ್ಲದಿದ್ದಾಗ ನಡೆದಿದ್ದ ಆ ವಿಷಯವನ್ನು ಕೇಳಿತಿಳಿದಿದ್ದ ಅವನ ತಂದೆ ಸುಬ್ಬಣ್ಣಹೆಗ್ಗಡೆಯವರು ಬೆಟ್ಟಳ್ಳಿಯಿಂದ ಹಿಂದಿರುಗಿ ಬಂದಾಗ ಅವನ ಕಪಾಲಕ್ಕೆ ಹೊಡೆಯಲು ಹೋಗಿದ್ದಕ್ಕೆ ನಿಜವಾದ ಅಂತಃಕಾರಣವೂ ಅದೇ ಆಗಿತ್ತು!

ಅಣ್ಣನ ಕಳೇಬರವನ್ನು ಕಂಡಾಗಲೆ ತುಸು ಸೆಡೆತಿದ್ದ ತಿಮ್ಮಪ್ಪನ ನೀಚತ್ವ ಅತ್ತಿಗೆಯ ಆಕಸ್ಮಿಕವಾದ ಮತ್ತು ಅತ್ಯಂತ ಶೋಕದ ಸನ್ನಿವೇಶದಲ್ಲಿ ಅತ್ಯದ್ಭುತವೆಂಬಂತೆ ಸಂಭವಿಸಿದ್ದ ಸಾವಿನ ಸಮ್ಮುಖದಲ್ಲಿ ಹಠಾತ್ತನೆ ಕುಸಿದು ಬಿದ್ದಂತಾಗಿತ್ತು. ಏಕೆ? ಏನು?ಎತ್ತ? ಎಂಬುದು ಅವನಿಗೇನೂ ಅರ್ಥವಾಗಿರಲಿಲ್ಲ. ಯಾವುದೋ ಮಹಾ ದೊಡ್ಡದರ ಮುಂದೆ ತನ್ನ ಅಲ್ಪತ್ವ ಮುದುಗಿ ನಾಚಿ ಹೆದರಿ ಕುಗ್ಗಿ ನೆಲಸಮವಾಗಿ ಹೋದಂತಾಗಿತ್ತು ಅವನಿಗೆ. ಅದರಿಂದ ಪಾರಾಗುವ ಪ್ರಯತ್ನದಲ್ಲಿ, ಆ ಪಾರಾಗುವಿಕೆಯ ಒಂದು ಅನಿವಾರ್ಯ ವಿಧಾನವೊ ಎಂಬಂತೆ, ಅವನ ಚೇತನ, ಆ ಕುಗ್ಗಿಗೆ ಪ್ರತಿಸ್ಪರ್ಧಿಯಾಗಿ, ತನ್ನ ಪಾತಾಳ ಸುಪ್ತಸ್ಥಿತಿಯಲ್ಲಿ ಗುಪ್ತವಾಗಿದ್ದ ದೊಡ್ಡತನವನ್ನು ಹೊಡೆದೆಬ್ಬಿಸಿ ನಿಮಿರಿ ನಿಲ್ಲಿಸಿತ್ತು. ತಾತ್ಕಾಲಿಕವೋ? ಚಿರಕಾಲಿಕವೋ? ಅಂತೂ ಅದನ್ನು ಗಮನಿಸಿದ ಅನೇಕರಿಗೆ ದೊಡ್ಡಣ್ಣಹೆಗ್ಗಡೆಯ ದೊಡ್ಡತನವೆ ತಮ್ಮನ ಮೈಮೇಲೆ ಬಂದಿರಬೇಕು ಅನ್ನಿಸಿತ್ತು.

ಆದ್ದರಿಂದಲೆ ಹಾಸಗೆ ಹಿಡಿದಿದ್ದ ಸುಬ್ಬಣ್ಣಹೆಗ್ಗಡೆಯವರು ಮಲಗಿದ್ದ ಕೋಣೆಗೆ ಬೆಳಿಗ್ಗೆ ಮುಂಚೆ ಪ್ರವೇಶಿಸಿ, ತಿಮ್ಮಪ್ಪ "ಅಪ್ಪಯ್ಯಗೆ ಎಚ್ಚರಾಯ್ತಾ? ಮಕಾ ತೊಳೆಯಾಕೆ ಬಿಸಿನೀರು ತರಲೇನು?" ಎಂದು ಕೇಳಿದಾಗ, ತಂದೆಗೆ ಆದ ಆಶ್ಚರ್ಯ ಅಷ್ಟಿಷ್ಟಲ್ಲ! ಇನ್ನೂ ಸ್ವಲ್ಪ ಹೊತ್ತಿನಮೇಲೆ ಮತ್ತೆ ಅವನು ಒಳಕ್ಕೆ ಬಂದು ಅತ್ಯಂತ ವಿನಯವಾಣಿಯಿಂದ

“ಅಪ್ಪಯ್ಯಗೆ ಕಣ್ಣಾ ಪಂಡಿತರ ಕಷಾಯ ತಂದುಕೊಡಲೇನು ಅಂತಾ ಕೇಳ್ತದೆ ಬುಚ್ಚಿ.” ಎಂದಾಗ ಆ ಆಶ್ಚರ್ಯ ವಿಸ್ಮಯಕ್ಕೆ ತಿರುಗಿ, ಆನಂದಾತಿಶಯಕ್ಕೆ ಅವರ ಕಣ್ಣು ಹನಿಗೂಡಿತ್ತು! ನಿನ್ನೆ ತಾನೆ ನಡೆದಿದ್ದ ಎರಡು ಪ್ರಿಯಜೀವಿಗಳ ದೇಹದ ದಹನ ಸಂಸ್ಕಾರದಿಂದ ದುಃಖ ಜರ್ಜರಿತವಾಗಿದ್ದ ಅವರ ಮುದಿಹೃದಯ, ಅದುವರೆಗೂ ಪಕ್ಕೆಯಲ್ಲಿ ಮುಳ್ಳಾಗಿ ಚುಚ್ಚುತ್ತಿದ್ದ ಈ ಮಗನ ಪರಿವರ್ತನೆಯನ್ನು ಕಂಡು, ಕೃತಜ್ಞತೆಗೆ ಹಿಗ್ಗಿ ಹೋಗಿತ್ತು. ಅವರ ಪಿತೃಚೇತನ ಇದ್ದಕ್ಕಿದ್ದಂತೆ ತಿಮ್ಮಪ್ಪನ ಹಿಂದಿನ ಅಲ್ಪತ್ವ ಅಪರಾಧ ದೌಷ್ಟ್ಯಗಳನ್ನೆಲ್ಲ ಕ್ಷಮಿಸಿ, ಅವನ ಪರವಾಗಿ ವಾದಿಸಿತ್ತು: 'ಪಾಪ! ಹುಡುಗ ನಿಜವಾಗಿಯೂ ಒಳ್ಳೆಯವನೆ! ನಾವೇ ಅವನ್ನ ಬೈದೂ ಹೊಡೆದೂ ದೂರಮಾಡಿ ಹಾಂಗಾಗಿಬಿಟ್ಟಿದ್ದ! ಏನೊ ದೇವರು ಕಣ್ಣು ಬಿಟ್ಟ ಅಂತಾ ಕಾಣ್ತದೆ ನಮ್ಮ ಮನೇ ಮೇಲೆ!'

ಮಂಜಮ್ಮನಂತೂ ತನ್ನ ಒರಟು ಅಣ್ಣಯ್ಯ ತನ್ನನ್ನು, ತನ್ನ ಅಪ್ಪಯ್ಯ ಅಕ್ಕರೆಗೆ ಕರೆಯುವಂತೆ, 'ಬುಚ್ಚಿ' ಎಂದು ಸಂಭೋಧಿಸಿ ಕರೆಯತೊಡಗಿದ್ದನ್ನು ಕೇಳಿ, ಅವನ ಮೇಲಣ ಮಮತೆಯುಕ್ಕಿ ಕರಗಿದಂತಾಗಿದ್ದಳು. ತಿಮ್ಮಪ್ಪ ಸಾಧಾರಣವಾಗಿ ತನ್ನ ತಂಗಿಯನ್ನು ತಿರಸ್ಕಾರ ಧ್ವನಿಯಿಂದ 'ಮಂಜಿ' ಎಂದೇ ಕರೆಯುತ್ತಿದ್ದುದು ವಾಡಿಕೆಯಾಗಿತ್ತು.

ಧರ್ಮುವ ಪರವಾಗಿದ್ದ ತಿಮ್ಮಪ್ಪನ ವರ್ತನೆಯಂತೂ ಸಂಪೂರ್ಣವಾಗಿ ಬದಲಾಯಿಸಿತ್ತು. ತಾನೆ ಮನೆಯ ಯಜಮಾನನಾಗಿ ಅವನ ಅಭ್ಯುದಯದ ಹೊಣೆಗಾರಿಕೆ ಹೊತ್ತಂತೆ ತೋರುತ್ತಿತ್ತು....' ಐಗಳ ಹತ್ರ ಚೆನ್ನಾಗಿ ಓದು ಬರಾ ಕಲಿ. ಆಮ್ಯಾಲೆ ಮೇಗರೊಳ್ಳೀಲಿ ಹೊಸ ಮಿಶನ್ ಇಸ್ಕೂಲಾಗಿದೆಯಲ್ಲಾ ಅಲ್ಲಿಗೆ ಹೋಗಿ ಇಂಗಲೀಸು ಕಲ್ತು, ಕಡೀಗೆ ತೀರ್ಥಹಳ್ಳಿಗೂ ಹೋಗಬೈದಂತೆ!....' ಎಂದು ತುಂಬ ಮುದ್ದಿನಿಂದ ಮಾತಾಡಿಸಿ ಅವನನ್ನು ಕೋಣೂರಿಗೆ ಕಳಿಸಿದ್ದನು.

ಮನೆ ಹಿಸ್ಸೆಯಾಗಿ ಶಂಕರಹೆಗ್ಗಡೆ ಬೇರೆ ಹೋದಾಗಿನಿಂದಲೂ ಒಮ್ಮೆಯೂ ಅವರ ಮನೆಯ ಕಡೆಗೆ ಸುಳಿಯದಿದ್ದ ತಿಮ್ಮಪ್ಪಹೆಗ್ಗಡೆ, ದೊಡ್ಡಣ್ಣಹೆಗ್ಗಡೆ ಮತ್ತು ರಂಗಮ್ಮ ಹೆಗ್ಗಡಿತಿಯವರ ಹನ್ನೊಂದನೆಯ ದಿನದ ತಿಥಿ ಪೂರೈಸಿದ ಮರುದಿನ ಬೆಳಗ್ಗೆ, ಮೊತ್ತ ಮೊದಲಾಗಿ ಹೆಂಚಿನ ಮನೆಯ ಅಂಗಳಕ್ಕೆ ಕಾಲಿಟ್ಟನು. ಜಗಲಿಯಲ್ಲಿ ತನ್ನ ಬಾವ ಸಿಂಬಾವಿ ಭರಮೈಹೆಗ್ಗಡೆಯವರೊಡನೆ ಮಾತನಾಡುತ್ತಾ ಕುಳಿತಿದ್ದ ಶಂಕರಹೆಗ್ಗಡೆಗೆ ತನ್ನ ಕಣ್ಣನ್ನೆ ನಂಬಲು ಸಾಧ್ಯವಾಗಲಿಲ್ಲ.

ಬಂಧುಜೀವಗಳೆರಡರ ಸದ್ಯೋಮರಣದ ದುರಂತ ದುಃಖಛಾಯೆ ಯಲ್ಲಿದ್ದ ಶಂಕರಹೆಗ್ಗಡೆಯ ಹೃದಯದಲ್ಲಿಯೂ ತಾತ್ಕಾಲಿಕ ಕ್ಷಮಾಗುಣವು ತನಗೆ ತಾನೆ ಉದ್ದೀಪಿತವಾದ್ದರಿಂದ ಸಿಂಬಾವಿ ಬಾವನ ಇದಿರಿನಲ್ಲಿ ದಾಯಾದಿ ತಿಮ್ಮಪ್ಪನನ್ನು ವಿಶ್ವಾಸದಿಂದಲೆ ಬರಮಾಡಿಕೊಂಡನು. ತನ್ನಿಂದ ಏನಾದರೂ ಸೇವೆ ಅಥವಾ ಸಹಾಯದ ಆವಶ್ಯಕತೆ ಇದೆಯೆ ಎಂದೂ ವಿಚಾರಿಸಿದ್ದನು.

ತಿಮ್ಮಪ್ಪ ಆ ಮಾತು ಈ ಮಾತು ಆಡಿ, ಸಿಂಬಾವಿ ಬಾವನನ್ನು ಏಕಾಂತಕ್ಕೆ ಕರೆದು ಮಾತಾಡಿದನು. ಅಲ್ಲಿಂದ ಸೀತತ್ತಿಗಮ್ಮನ ಯೋಗಕ್ಷೇಮ ವಿಚಾರಿಸುವ ನೆವದಿಂದ, ಏನೇನನ್ನೊ ಗಳಪುತ್ತಿದ್ದು ತನ್ನ ಕೈ ಹಿಡಿದುಕೊಂಡು ಪಕ್ಕದಲ್ಲಿಯೇ ನಡೆದುಬಂದ ರಾಮುವಿನೊಡನೆ, ಒಳಗೆ ಹೋಗಿ, ಜಟ್ಟಕ್ಕಯ್ಯನೊಡನೆ ತನ್ನ ನಾನಾ ವಿಧವಾದ

ಸುಖ ದುಃಖಗಳನ್ನು ಹೇಳಿಕೊಂಡು, ಮೆಲ್ಲನೆ ಪಿಸುದನಿಯಲ್ಲಿ ತನ್ನ ಮತ್ತು ತಂಗಿ ಮಂಜಮ್ಮನ ಮದುವೆಯ ಪ್ರಸ್ತಾಪವೆತ್ತಿದನು.

"ನೋಡು, ಅಕ್ಕಯ್ಯ, ನನ್ನ ದುರಾದೃಷ್ಟ, ಅಣ್ಣಯ್ಯ ಅತ್ತಿಗೆಮ್ಮ ಇಬ್ಬರೂ ಒಟ್ಟಿಗೆ ಹೋಗಿಬಿಟ್ರು…. ಅಪ್ಪಯ್ಯನೂ ಹಾಸಿಗೆ ಹಿಡಿದು ಬಿಟ್ಟಾನೆ…. ಇನ್ನೇನು ಹೊರೆ ಎಲ್ಲಾ ನನ್ನ ಮ್ಯಾಲೇ ಬಿದ್ದ ಹಾಂಗಾಯ್ತು…. ನೀವೆಲ್ಲ ನನ್ನ ಕೈಹಿಡಿದು ಎತ್ತದೆ ಇದ್ದರೆ, ನನಗೆ ಇನ್ಯಾರು ಗತಿ?" ಅಳುದನಿಯಿಂದಲೆ ನುಡಿದು, ಕಂಬನಿ ಮಿಡಿದು, "ನಮ್ಮ ಮನೆ ಪಾಲಾಗದೆ ಇದ್ದಿದ್ರೆ ಶಂಕರಣ್ಣಯ್ಯನೇ ಎಲ್ಲಾನೂ ನೋಡಿಕೊಳ್ತಿದ್ನೋ ಇಲ್ಲೋ? ಮನೆ ಪಾಲಾದ್ರೆ ಏನಾಯ್ತು? ಅಂವ ಅಣ್ಣಯ್ಯ, ನೀನು ಅಕ್ಕಯ್ಯ ಅನ್ನೋದೇನಾದ್ರೂ ತಪ್ಪತದೆಯೇ?…." ಎಂದು ಮೊದಲಾಗಿ ಪೀಠಿಕೆ ಹಾಕಿ, ತನ್ನ ಮತ್ತು ತಂಗಿಯ ಮದುವೆಯ ಭಾರವೂ ಅವರ ಮೇಲೆಯೆ ಬಿದ್ದಿದೆ ಎಂಬುದನ್ನೂ ಸೂಚಿಸಿ, ಭರಮೈಹೆಗ್ಗಡೆಗೆ ತನ್ನ ತಂಗಿ ಮಂಜಮ್ಮನನ್ನು, ಹಿಂದೆ ಮಾತಾಗಿದ್ದು, ಜಟ್ಟಮ್ಮನಿಂದಲೆ ಅದು ಮುರಿದು ಬಿದ್ದುದನ್ನೂ ಇಂಗಿತವಾಗಿ ನುಡಿದು,-ತಂದುಕೊಂಡು, ತನಗೆ ಭರಮೈಹೆಗ್ಗಡೆಯ ತಂಗಿ ಲಕ್ಕಮ್ಮನನ್ನು ಕೊಟ್ಟು ಲಗ್ನವೇರ್ಪಡಿಸುವಂತೆ ಸಲಹೆಕೊಟ್ಟನು.

ಆದರೆ ಜಟ್ಟಮ್ಮ ತನ್ನ ಗಂಡನ ಮದುವೆ ಹೂವಳ್ಳಿ ವೆಂಕಪ್ಪನಾಯಕರ ಮಗಳು ಚಿನ್ನಮ್ಮನೊಡನೆ ಆಗಲೆ ನಿಶ್ಚಯವಾಗಿಬಿಟ್ಟಿರುವ ವಿಚಾರ ತಿಳಿಸಿ, "ತಮ್ಮ ತಂಗೀನೇ ಕೊಟ್ಟು, ನಿನ್ನ ತಂಗೀನೇ ತರಾದು ಅಂತಾ ಮೊದಲೇನೋ ವೇಚನೆ ಮಾಡಿದ್ರು. ಆದರೆ ಈಗ ಯಾಕೋ ಅವರ ಮನಸ್ಸು ಬದಲಾಯಿಸಿದ ಹಾಂಗೆ ಕಾಣ್ತದೆ. ತಂಗೀನ ಬ್ಯಾರೆ ಯಾರಿಗೋ ಕೊಡಾಕೆ ನೋಡ್ತಿರೊ ಹಾಂಗೆ ಕಾಣ್ತದೆ!….ನಂಗೇನೋ ಅವಳನ್ನ ನಿಂಗೇ ಕೊಡಬೇಕು ಅಂತಾ ಮನಸ್ಸು. ಆದರೆ ಅವರ ತಂಗೀನ ಅವರ ಮನಸ್ಸು ಬಂದೋರಿಗೆ ಕೊಡಬ್ಯಾಡ ಅಂತಾ ಹ್ಯಾಂಗೆ ಹೇಳಾದು, ಹೆಣ್ಣು ಹೆಂಗ್ಸು?" ಎಂದು ಹೇಳಿ, ತುಂಬ ಸಹಾನುಭೂತಿ ವ್ಯಕ್ತಪಡಿಸಿದಳು. ತಿಮ್ಮಪ್ಪಹೆಗ್ಗಡೆಯ ಕೆಟ್ಟಚಾಳಿಯ ಅಸಹ್ಯ ಕಥೆ ಕಿವಿಯಿಂದ ಕಿವಿಗೆ ಅಸಹ್ಯಾಸಹ್ಯತರವಾಗಿ ಹಬ್ಬಿದುದೇ ತನ್ನ ಗಂಡನ ಮನಸ್ಸು ಬದಲಾಯಿಸಿದುದಕ್ಕೆ ಒಳಗುಟ್ಟಿನ ಕಾರಣ ಎನ್ನುವುದನ್ನು ಮಾತ್ರ ಜಟ್ಟಮ್ಮ ಬಿಟ್ಟುಕೊಟ್ಟಿರಲಿಲ್ಲ.

ನೆರೆಮನೆಗೆ ಹೋಗುವಾಗ ಇದ್ದ ಪ್ರಶಾಂತತೆ ನೆರೆಮನೆಯಿಂದ ಹಿಂತಿರುಗಿದ ತಿಮ್ಮಪ್ಪ ಹೆಗ್ಗಡೆಯಲ್ಲಿ ಇರಲಿಲ್ಲ. ಅವನ ಮನಸ್ಸು ಸಂಪೂರ್ಣ ವಿಕ್ಷುಬ್ಧಗೊಂಡಿತ್ತು. ತನ್ನ ತಂಗಿ ಮಂಜಮ್ಮನೊಡನೆ ಸಿಂಗಾವಿ ಭರಮೈಹೆಗ್ಗಡೆಯ ವಿವಾಹ ಮುರಿದುಬಿದ್ದಿದ್ದ ವಿಚಾರ ಅವನಿಗೇನೂ ಹೊಸದಾಗಿರಲಿಲ್ಲ. ಹೂವಳ್ಳಿಯ ಚಿನ್ನಮ್ಮನ ಮದುವೆಯ ವಿಚಾರವೂ ಅವನಿಗೆ ಗೊತ್ತಿದ್ದುದೆ ಆಗಿತ್ತು. ಆ ಘಟನೆಯಿಂದ ತನ್ನ ಮತ್ತು ಸಿಂಬಾವಿ ಲಕ್ಕಮ್ಮನ ಮದುವೆ ಸ್ವಲ್ಪ ತಡವಾಗ ಬಹುದೇ ಹೊರತು ಇನ್ನೇನೂ ಪ್ರಮಾದಕ್ಕೆ ಅವಕಾಶವಿಲ್ಲ ಎಂದು ಭಾವಿಸಿ ಆಶಾವಾದಿಯಾಗಿದ್ದನು. ಆದರೆ ಈಗ ಭರಮೈಹೆಗ್ಗಡೆ ತನ್ನ ತಂಗಿಯನ್ನು ತನಗೆ ಕೊಡುವ ವಿಚಾರದಲ್ಲಿ ವಿಮನಸ್ಕನಾಗಿ, ಬೇರೆ ಆಲೋಚನೆಯಲ್ಲಿದ್ದಾನೆಂದು ಅತ್ಯಂತ ಪ್ರಮಾಣಪೂರ್ವಕವಾದ ಅಧಿಕಾರದ ಸ್ಥಳದಿಂದಲೆ ಕೇಳಿ ತಿಳಿದು ದಿಕ್ಕುಗೆಟ್ಟಂತಾಗಿದ್ದನು.

ಅವನ ಆ ದಿಙ್ಮೂಡತ್ವಕ್ಕೆ ಕಾರಣ, ಅಂತಹ ಆದರ್ಶಮಯ ಮಹತ್ವದ ಸಂಗತಿಯಾಗಿರಲಿಲ್ಲ. ಹೂವಳ್ಳಿ ಚಿನ್ನಮ್ಮನನ್ನು ಭರಮೈಹೆಗ್ಗಡೆಗೆ ದ್ವಿತೀಯ ಪತ್ನಿಯನ್ನಾಗಿ ಮಾಡುತ್ತಾರೆಂದು ಕೇಳಿದಾಗ ಮುಕುಂದಯ್ಯನಿಗುಂಟಾಗಿದ್ದ ದಿಙ್ಮೂಢತ್ವಕ್ಕೂ ಈಗ ತಿಮ್ಮಪ್ಪಹೆಗ್ಗಡಗೆ ಉಂಟಾಗಿದ್ದ ಮನಃಕ್ಷೋಭೆಗೂ

ಧ್ಯೇಯಸ್ವರೂಪದಲ್ಲಿ ಯಾವ ದೂರದ ಸಂಬಂಧವೂ ಇರಲಿಲ್ಲ. ತಿಮ್ಮಪ್ಪಹೆಗ್ಗಡೆ ಆಗಲೆ ಹೆಣ್ಣಿನ ಸುಖವನ್ನು ನಾನಾ ಪಾತ್ರೆಗಳಲ್ಲಿ ಉಂಡುಬಿಟ್ಟಿದ್ದನು. ಅವನಿಗೆ ಈಗ ಬೇಕಾದದ್ದು ತನ್ನ ಜಾತಿಗೆ ಸೇರಿದ್ದ ಒಂದು ಹೆಣ್ಣು. ಇತರರಂತೆ ತಾನೂ, ತನ್ನಂತಹ ಮನೆತನದ ಒಂದು ಹೆಣ್ಣನ್ನು ಮದುವೆಯಾಗಿ, ಸಮಾಜದ ಕಣ್ಣಿನಲ್ಲಿ ಎಲ್ಲರಂತೆ ಗೌರವವಾಗಿ ಗೌಡಿಕೆ ಮಾಡಿಕೊಂಡಿದ್ದರಾಯಿತು ಎಂಬುದಷ್ಟೇ ಅವನಿಗೆ ಬೇಕಾಗಿತ್ತು. ಲಕ್ಕಮ್ಮನೇ ಬೇಕು ಎಂದೂ ಅವನಿಗೆ ಹಟ ಇದ್ದಿರಲಿಲ್ಲ. ತಾನು ಗೌರವಪೂರ್ವಕವಾಗಿ ಮದುವೆಯಾಗಬಹುದಾದ ಅಂತಹ ಮತ್ತೊಂದು ಹೆಣ್ಣು ಸಿಕ್ಕುವ ಪಕ್ಷದಲ್ಲಿ ಸಂತೋಷದಿಂದಲೆ ಲಕ್ಕಮ್ಮನನ್ನು ತ್ಯಜಿಸುತ್ತಿದ್ದನು. ತ್ಯಜಿಸುತ್ತಿದ್ದೇನೆ, ತ್ಯಜಿಸಬೇಕಾಯಿತಲ್ಲಾ ಎಂಬ ಯಾವ ಪಶ್ಚಾತ್ತಾಪದ ಚುಚ್ಚೂ ಅವನ ಮನಸ್ಸಿಗೆ ಬರುತ್ತಿರಲಿಲ್ಲ. ಆದರೆ ಈಗ ಬೇರೆ ಯೂರು ತನಗೆ ಹೆಣ್ಣು ಕೊಡಲು ಒಪ್ಪದಿರುವಾಗ ಸಿಕ್ಕಿದ್ದ ಒಂದು ಹೆಣ್ಣೂ ಕೈಬಿಟ್ಟು ಹೋದರೆ, ತನ್ನ ಮಾನ ಮೂರು ಕಾಸಾಗುವುದಿಲ್ಲವೆ? ಕಡೆಗೆ, ಯಾವ ಸರೀಕ ಜಾತಿಯವನೂ ಹೆಣ್ಣು ಕೊಡದಿದ್ದ ತನಗೆ, ಯಾವುದಾದರೂ ಒಂದು ಜಾತಿ ಮಾತ್ರದಲ್ಲಿ ಸಮಾನವಾಗಿರುವ, ಕೀಳುಮಟ್ಟದ ಒಕ್ಕಲ ಹೆಣ್ಣು ಗತಿಯಾದರೆ? ಎಷ್ಟು ಅಗೌರವ! ಆದ್ದರಿಂದಲೆ ಸಿಂಬಾವಿ ಲಕ್ಕಮ್ಮನನ್ನು ಹೇಗಾದರೂ ಮಾಡಿ ದಕ್ಕಿಸಿಕೊಳ್ಳಲೇಬೇಕೆಂದೂ, ಅದಕ್ಕಿರುವ ಒಂದೇ ಒಂದು ದಾರಿ ಎಂದರೆ ಭರಮೈಹೆಗ್ಗಡೆಗೆ ಹೂವಳ್ಳಿ ಚಿನ್ನಮ್ಮ ದಕ್ಕುದಂತೆ ಮಾಡಿ, ಅವನಿಗೆ ತನ್ನ ತಂಗಿ ಮಂಜಮ್ಮನನ್ನೇ ಗತಿ ಎಂಬಂತೆ ಮಾಡಬೇಕೆಂದೂ, ಹಾಗೆ ಮಾಡಿದರೇನೇ ಅವನ ತಂಗಿಯನ್ನು ಅನಿವಾರ್ಯವಾಗಿ ತನಗೇ ಕೊಡಲೇ ಬೇಕಾಗುತ್ತದೆಂದು ತೀರ್ಮಾನಿಸಿ, ಕಾರ್ಯೋನ್ಮುಖನಾಗಲು ಗಟ್ಟಿಮನಸ್ಸು ಮಾಡಿಕೊಂಡನು. ಸ್ವಭಾವತಃ ರೂಕ್ಷನಾಗಿದ್ದ ತಿಮ್ಮಪ್ಪಹೆಗ್ಗಡೆ, ಯಾವ ಕೆಲಸ ಕೈಗೊಂಡರೂ ರೂಕ್ಷತೆಯೇನು ತಪ್ಪಿದ್ದಲ್ಲವಷ್ಟೇ?

* * *

ತೀರ್ಥಹಳ್ಳಿಯಲ್ಲಿ ತನ್ನ ಹಳೆಮನೆ ಬಾವ, ದೊಡ್ಡಣ್ಣಹೆಗ್ಗಡೆ ತೀರಿಕೊಂಡಾಗ, ಮುಂಕುಂದಯ್ಯನ ಮನಸ್ಸು ಒಂದು ವಿಚಿತ್ರ ಮನಸ್ಥಿತಿಯನ್ನು ಅನುಭವಿಸಿತ್ತು.'ಗಡ್ಡದಯ್ಯ'ನಿಂದ ತಾನು ತಿಳಿದಿದ್ದ ರಹಸ್ಯಜ್ಞಾನದಿಂದಾಗಿ, ಅವನಿಗೆ ಆ ಸಾವು, ಅವನು ಆ ರಹಸ್ಯವನ್ನು ತಿಳಿಯದಿದ್ದರೆ ಎಷ್ಟು ದುಃಖವನ್ನು ತರುತ್ತಿತ್ತೋ, ಅಷ್ಟು ದುಃಖವಾಗಿರಲಿಲ್ಲ. ದೊಡ್ಡಣ್ಣಹೆಗ್ಗಡೆಯದೇ ಆಗಿದ್ದ ಆ ದೇಹದಲ್ಲಿ ಇದ್ದ ಬೇರೆ ಯಾವುದೊ ಜೀವ, ತನ್ನ ಪ್ರಾರಬ್ಧವನ್ನು ಪೂರೈಸಿ, ಇಂದೋ ನಾಳೆಯೋ ದೇಹತ್ಯಾಗ ಮಾಡುತ್ತದೆ ಎಂದು 'ಗಡ್ಡದಯ್ಯ' ಹೇಳಿದುದನ್ನು ಅವನು ಮತ್ತೆ ಮತ್ತೆ ನೆನೆಯುತ್ತಿದ್ದನು. ದೊಡ್ಡಣ್ಣಹೆಗ್ಗಡೆಯ ಜೀವವೆ ಈಗ ತನ್ನ ಕಿರಿಯ ಅಕ್ಕ ದೇವಮ್ಮಗೂ ಬೆಟ್ಟಳ್ಳಿಯ ದೇವಯ್ಯಗೂ ಮಗನಾಗಿ ಹುಟ್ಟಿದ್ದಾನೆ ಎಂಬ 'ಗಡ್ಡದಯ್ಯನ' ಮಾತಿನಲ್ಲಿ ಅವನ ನಂಬುಗೆ ಅಷ್ಟು ಸುಭದ್ರವಾಗಿರಲಿಲ್ಲ. ಆದರೂ ತನ್ನ ದೊಡ್ಡ ಅಕ್ಕ, ಹಳೆಮನೆ ರಂಗಮ್ಮ, ಬೆಟ್ಟಳ್ಳಿಗೆ ಹೋದಾಗಿನಿಂದ 'ಚೆಲುವಯ್ಯ'ನೊಡನೆ ವ್ಯವಹರಿಸಿದ ರೀತಿಯನ್ನು ಕೇಳಿಯೂ ನೋಡಿಯೂ ಅವನಿಗೆ 'ಗಡ್ಡದಯ್ಯ'ನ ಮಾತು ನಿಜವಿದ್ದರೂ ಇರಬಹುದೇನೋ ಎಂದನ್ನಿಸಿತ್ತು. ಅಷ್ಟೇ ಅಲ್ಲದೆ, 'ಹುಚ್ಚುಹೆಗ್ಗಡಿತಿ' ಎನ್ನಿಸಿಕೊಂಡಿದ್ದ ತನ್ನ ಅಕ್ಕ ತನ್ನ ಮುಂದಿನ ಜನ್ಮದಲ್ಲಿ ತನಗೂ ಹೂವಳ್ಳಿ ಚಿನ್ನಮ್ಮನಿಗೂ ಮಗಳಾಗಿ ಹುಟ್ಟಿ, ಮತ್ತೆ ಚೆಲುವಯ್ಯನನ್ನೇ ಮದುವೆಯಾಗಿ, ತನ್ನ ಈ ಜನ್ಮದ ಪ್ರಾರ್ಥನೆಗೆ ಮುಂದಿನ ಜನ್ಮದಲ್ಲಿ ಸಂಪೂರ್ಣವಾದ ಸುಖದ ಸಿದ್ಧಿಯನ್ನು ಪಡೆಯುತ್ತಾಳೆ ಎಂಬುದನ್ನೂ ಸೂಚಿಸಿತ್ತು 'ಗಡ್ಡದಯ್ಯ'ನ ಭವಿಷ್ಯದರ್ಶನ. ಆದರೆ ತನ್ನ ದೊಡ್ಡಅಕ್ಕ ಇಷ್ಟು ಬೇಗನೆ ಇಷ್ಟು ಅನಿರೀಕ್ಷಿತವಾಗಿ ಅದ್ಭುತವೆಂಬಂತೆ ದೇಹತ್ಯಾಗ ಮಾಡಿ 'ಗಡ್ಡದಯ್ಯ'ನ ಮಾತಿಗೆ ಪುಷ್ಟಿ ನೀಡುತ್ತಾಳೆ ಎಂದು ಅವನು ಊಹಿಸಿಯೆ ಇರಲಿಲ್ಲ. ಈಗ ಅದೂ ನಡೆದು ಹೋಗಿತ್ತು! ತನಗಿರುವ ರಹಸ್ಯಜ್ಞಾನದ ಮಹಿಮೆಯಿಂದ ಒಂದು ಉಚ್ಚಸ್ತರದಲ್ಲಿ ನೆಲೆಸಿದ್ದ ಅವನ ಮನಸ್ಸಿಗೆ,

ಅಕ್ಕನ ಅನಿರೀಕ್ಷಿತ ಮರಣವೂ ಅದಕ್ಕಾಗಿಯೆ ಅಷ್ಟು ಸಂಕಟವನ್ನು ತರದಿದ್ದರೂ, ಧರ್ಮು ಪಡುತ್ತಿದ್ದ ಸಹಿಸಲಾರದ ಶೋಕವನ್ನು ನೋಡಿ ಮಮ್ಮಲ ಮರುಕ ಉಂಟಾಗಿತ್ತು.

ಸಿಂಬಾವಿ ಭರಮೈಹೆಗ್ಗಡೆಗೆ ಮದುವೆ ನಿಶ್ಚಯವಾಗಿರುವ ಹೂವಳ್ಳಿ ಚಿನ್ನಮ್ಮನಲ್ಲಿ ತನಗೆ ಮಗಳು ಸಂಭವಿಸುವ ಅಸಂಭವನೀಯ ವಿಚಾರ ಮನಸ್ಸಿಗೆ ಬಂದಾಗಲೆಲ್ಲ ಅವನಿಗೆ 'ಗಡ್ಡದಯ್ಯ'ನ ಕಣಿ ಒಂದು ಬರಿಯ ಕಟ್ಟುಕಥೆಯಾಗಿ ತೋರುತ್ತಿತ್ತು. ಚಿನ್ನಮ್ಮನನ್ನು ಆ ವಿವಾಹದಿಂದ ಪಾರು ಮಾಡಲು ಒಳಸಂಚೇನೋ ನಡೆಯುತ್ತಿತ್ತು. ಆದರೆ ಅದರ ಸಫಲತೆಯ ವಿಷಯದಲ್ಲಿ ಮುಕುಂದಯ್ಯನ ಶ್ರದ್ಧೆ ದೋಲಾಯಮಾನವಾಗಿ ಕಂಪಿಸುತ್ತಿತ್ತು. ಅದಕ್ಕೆ ತನ್ನವರದ್ದಾಗಲಿ ದೊಡ್ಡವರ ಯಾರ ಬೆಂಬಲವೂ ಇರಲಿಲ್ಲ. ಅಷ್ಟೇ ಅಲ್ಲ, ಸಾಮಾಜಿಕವಾದ ಮಾನಮರ್ಯಾದೆ ಕಟ್ಟುಪಾಡುಗಳ ವಿಚಾರದಲ್ಲಿ ಸಂಪ್ರದಾಯ ದೃಷ್ಟಿಯಿಂದಲ್ ಸಂಪೂರ್ಣಬದ್ಧರಾಗಿದ್ದ ಆ ದೊಡ್ಡವರಿಗೆ ಈ ಸಂಗತಿ ಏನಾದರೂ ಗೊತ್ತಾಗಿದ್ದರೆ ಛೀಮಾರಿ ಹಾಕಿ ಅದನ್ನು ವಿಫಲಗೊಳಿಸಲು ಸರ್ವ ಪ್ರಯತ್ನವನ್ನೂ ಮಾಡುತ್ತಿದ್ದರು.

ಆದ್ದರಿಂದಲೇ, ಒಂದು ದಿನ, ಬೈಗು ಕಪ್ಪಾಗುತ್ತಿದ್ದಾಗ, ಧರ್ಮು ಕಾಡು ತಿಮ್ಮು ಮತ್ತು ಇತರ ಹುಡುಗರೂ ಸೇರಿ ಎಲ್ಲರೂ ಒಡ್ಡಿಗೆ ಕೋಳಿಗಳನ್ನಟ್ಟಿ ಕೂಡುತ್ತಿದ್ದ ಅಟ್ಟಹಾಸದ ಗಲಭೆಯಲ್ಲಿ ಮುಕುಂದಯ್ಯನೂ ವಿನೋದಾರ್ಥಿಯಾಗಿ ಭಾಗಿಯಾಗಿದ್ದಾಗ, ಧರ್ಮುವನ್ನು ಅವನ ಅಜ್ಜಯ್ಯ ಕರೆತರಲು ಹೇಳಿದ್ದಾರೆಂದು ಹಳೆಮನೆಗೆ ಕರೆದುಕೊಂಡು ಹೋಗಲು ಕೋಣೂರಿಗೆ ಬಂದಿದ್ದ ತಿಮ್ಮಪ್ಪಹೆಗ್ಗಡೆ, ಆ ಮಾತು ಈ ಮಾತಿನ ನಡುವೆ "ಮುಕುಂದಬಾವ, ನಾ ಹೇಳ್ತಿನಿ ಕೇಳಿ. ಈ ಹೂವಳ್ಳಿ ಹೆಣ್ಣನ್ನ ಸಿಂಬಾವಿಗೆ ಲಗ್ನ ಮಾಡಿ ಕೊಡುದನ್ನ ತಪ್ಪಿಸದೆ ಇದ್ದರೆ ನಾವೆಲ್ಲ ಆ ಅನ್ಯಾಯದಲ್ಲಿ ಪಾಲುಗಾರರಾಗಬೇಕಾಗುತ್ತದೆ. ಇಷ್ಟು ಎಳೇ ಹುಡುಗೀನ ಆ ಹಳೇ ಮುದುಕಗೆ ಕಟ್ಟೋಕೆ ಬದಲಾಗಿ ಅದನ್ನು ಬಾವಿಗಾದ್ರೂ ಹಾಕೋದು ಲೇಸು! ನಮ್ಮ ಮನೇಲಿ ಕೆಲಸ ಮಾಡ್ತಾಳಲ್ಲಾ ಆ ಹಳೆಪೈಕದ ಹೂವಿ ಹೇಳ್ತಿತ್ತು 'ಆ ಹೂವಳ್ಳಿ ಚಿನ್ನಮ್ಮೋರ ದುಃಖ ಯಾರಿಗೆ ನೋಡಕ್ಕಾಗ್ತದೆ? ಅವರು ಕಂಡಿತಾ ಕೆರೆಗೋ ಬಾವಿಗೋ ಬೀಳ್ತಾರೆ; ಇಲ್ಲ, ನೇಣು ಹಾಕಿಕೊಳ್ತಾರೆ!' ಅಂತಾ". ಎಂದು ಏಕಾಂತವಾಗಿ ತನಗೆ ಹೇಳಿದ್ದನ್ನು ಕೇಳಿ ಮುಕುಂದಯ್ಯ ಬೆರಗಾಗಿ ಹೋಗಿದ್ದನು! ಆದರೆ ತಿಮ್ಮಪ್ಪಹೆಗ್ಗಡೆಯ ಸ್ವಭಾವವನ್ನಿರಿತ್ತಿದ್ದ ಮುಕುಂದಯ್ಯ, ಅವನು ನಿಜವಾಗಿಯೂ ತನ್ನ ಕಡೆಗಿದ್ದಾನೆಯೋ? ಅಥವಾ ಗುಟ್ಟು ತಿಳಿದುಕೊಂಡು ತಮ್ಮ ಸಂಚನ್ನು ಹೊರಹಾಕಿ, ಹಿಡಿದುಕೊಟ್ಟು, ಹಾಳುಮಾಡ ಲೋಸ್ಕರವೆ ಸೋಗು ಹಾಕುತ್ತಿದ್ದಾನೆಯೋ? ಎಂಬುದನ್ನು ನಿಶ್ಚಯಿಸಲಾರದೆ ಯಾವ ಪ್ರತ್ಯುತ್ತರವನ್ನು ಕೊಡದೆ ಎಚ್ಚರಿಕೆಯಿಂದ ವರ್ತಿಸಿದ್ದನು.

ಮಳೆ ಹಿಡಿದಿದ್ದರಿಂದಲೂ ಬೇಸಾಯಗಾರರೆಲ್ಲ ಪುರುಸೊತ್ತಿಲ್ಲದೆ ಬೆಳಗಿನಿಂದ ಬೈಗಿನವರೆಗೂ ಗದ್ದೆಗಳಲ್ಲಿ ದುಡಿಯಬೇಕಾಗಿದ್ದರಿಂದಲೂ ಹೂವಳ್ಳಿ ಲಗ್ನ ಮುಂದಿನ ವರ್ಷಕ್ಕೆ ಮುಂದುವರಿಯಬಹುದೆಂದು ಇದ್ದ ಒಂದು ದೂರದಾಸೆಯೂ ಭಗ್ನಗೊಂಡಿತ್ತು. ಸಿಂಬಾವಿ ಹೆಗ್ಗಡೆ ಹೂವಳ್ಳಿ ವೆಂಕಪ್ಪನಾಯಕರಿಗೆ ತಗಾದೆ ಮಾಡಿ "ಆರಿದ್ರೇ ಮಳೆಗೆ ಆದವನೇ ಗಂಡ!' ಎಂಬ ಗಾದೆಯನ್ನು ಸಾರ್ಥಕಗೊಳಿಸಿದ್ದರು. ಬರುವವರು ಬರಲಿ ಇಲ್ಲದವರು ಬಿಡಲಿ; ಮದುವೆಯಂತೂ ಗೊತ್ತಾಗಿದ್ದ ಕಾಲಕ್ಕೆ ನಡೆಯಲೇಬೇಕೆಂದು ಸಾಲಗಾರನಿಗೆ ಸಾಲ ಕೊಟ್ಟವನ ತಗಾದೆಆಜ್ಞೆ ಮಾಡಿದ್ದರು!

ಆ ದುರ್ಮುಹೂರ್ತ ಬಳಿಸಾರಿದಂತೆಲ್ಲ ಮನಸ್ಸಿನ ಶಂಕೆ ಮತ್ತು ಎದೆಯ ತಲ್ಲಣ ಹೆಚ್ಚುಹೆಚ್ಚಾಗುತ್ತಿದ್ದ ಮುಕುಂದಯ್ಯ 'ಗಡ್ಡದಯ್ಯ'ನನ್ನು ಮತ್ತೊಮ್ಮೆ ಕಾಣುವ ಅಭಿಸಂಧಿಯಿಂದ, ತನ್ನ ಪುಟ್ಟಕ್ಕ ಮತ್ತು ಪುಟ್ಟಕ್ಕನ ಮಗು ಹೇಗಿದ್ದಾರೆಂದು ವಿಚಾರಿಸುವ ನೆವವೊಡ್ಡಿ, 'ಗದ್ದೆ ಕೆಲಸ ಬಿಟ್ಟು, ನೆಂಟರ ಮನೆ ತಿರುಗ್ತಾನೆ, ಎಂಬ ತನ್ನ ಅಣ್ಣ ರಂಗಪ್ಪಗೌಡರ ಕಟುಟೀಕೆಯನ್ನೂ ಸಹಿಸಿ, ಬೆಟ್ಟಳ್ಳಿಗೆ ಹೋದನು. ಕಲ್ಲೂರಿಗೆ ಹೋಗಿ 'ಗಡ್ಡದಯ್ಯ'ನನ್ನು ಸಂಧಿಸುವ ತನ್ನ ಮನಸ್ಸನ್ನು ದೇವಯ್ಯನಿಗೆ ತಿಳಿಸಲು ಅವನು, ತಾನು ಸಿಕ್ಕಿಬಿದ್ದಿರುವ ಸಮಸ್ಯೆಯಿಂದ ಪಾರಾಗಲು ತಾನೇ 'ಗಡ್ಡದಯ್ಯ'ನ ಮಾರ್ಗ ದರ್ಶನ ಪಡೆಯಲೆಂದು ಕಲ್ಲೂರಿಗೆ ಹೋಗಿದ್ದುದಾಗಿಯೂ, ಆದರೆ 'ಗಡ್ಡದಯ್ಯ' ಆ ಕಲ್ಲುಮಂಟಪದಿಂದ ಅದೃಶ್ಯನಾಗಿ ಎಷ್ಟೋ ದಿನಗಳಾದುದಾಗಿ ತಿಳಿದುಬಂದಿತೆಂದೂ ಆತನು ಶೃಂಗೇರಿಯ ದರ್ಶನ ಮಾಡಿಕೊಂಡು ಕನ್ಯಾಕುಮಾರಿಯ ಮಾರ್ಗವಾಗಿ ಕೊಲಂಬೋಗೆ ಹೋಗುವುದಾಗಿ ಹೇಳುತ್ತಿದ್ದನಂತೆ ಎಂದೂ ತಿಳಿಸಿದನು.

ಮತ್ತೆ ಆ ನಿರಾಡಂಬರ ತೇಜಸ್ವಿಯಾಗಿದ್ದ ಪೂಜ್ಯ ಸಂನ್ಯಾಸಿಯನ್ನು ಸಂದರ್ಶಿಸುವ ಭಾಗ್ಯ ತನ್ನ ಜೀವಮಾನದಲ್ಲಿ ಎಂದೆಂದಿಗೂ ಒದಗಲಾರದು ಎಂದು ಚಿಂತಿಸಿ ಖಿನ್ನನಾದ ಮುಕುಂದಯ್ಯನ ಚೇತನಕ್ಕೆ ಹಠಾತ್ತನೆ ಆತನ ಮಹಿಮೆ ಉಜ್ವಲವಾಗಿ ಸ್ಫುರಿಸಿದಂತಾಯ್ತು. ಅಂದು ಆತನು ಅಮೆರಿಕಾ, ವಿವೇಕಾನಂದ, ವೇದಾಂತ ದರ್ಶನ, ಭಾರತದ ಪುನರುಜ್ಜೀವನ ಇತ್ಯಾದಿಯಾಗಿ ಹೇಳಿದ್ದುದು, ಯಾವುದೂ ಅರ್ಥವಾಗಲಿ ಭಾವವಾಗಲಿ ಆಗದಿದ್ದುದು, ಇಂದು ಮುಕುಂದಯ್ಯನ ಅಗೋಚರ ಆಕಾಶಪ್ರಜ್ಞೆಯ ಅಂಚಿನಲ್ಲಿ, ಆಗತಾನೆ ಆಗಲಿರುವ ಚಂದ್ರೋದಯ ಪೂರ್ವದ ಕನಕಕಾಂತಿಯಿಂದ ಪ್ರಜ್ವಲಿಸತೊಡಗಿತು. ಆ ಮೂರ್ತಿಯನ್ನು ನೆನೆನೆನೆದು ಮನದಲ್ಲಿಯೆ ಅದಕ್ಕೆ ಅಡ್ಡ ಬಿದ್ದನು!

ಆ ದಿನ ರಾತ್ರಿ, ಊಟಕ್ಕೆ ಮೊದಲೂ ಊಟವಾದ ತರುವಾಯವೂ, ದೇವಯ್ಯ ಮುಕುಂದಯ್ಯ ಇಬ್ಬರೂ ಬಹಳ ಹೊತ್ತಿನವರೆಗೆ ಮಾತಾಡುತ್ತಿದ್ದುದು, ಹೊರಗಡೆ ಸುರಿಯುತ್ತಿದ್ದ ಜಡಿಮಳೆಯ ಜೋಗುಳದಲ್ಲಿ, ತಮ್ಮ ಕೋಣೆಯಲ್ಲಿ ಅರೆಜೊಂಪಿನ ನಿದ್ದೆಯಲ್ಲಿದ್ದ ಕಲ್ಲಯ್ಯಗೌಡರಿಗೆ ಗುನುಗುನುಗುನು ಸದ್ದಾಗಿ ಮಾತ್ರ ಕೇಳಿಸುತ್ತಲೆ ಇತ್ತು.

"ಆ ಭರಮೈಹೆಗ್ಗಡೆ ಮಾಡೋದು ಅಷ್ಟರಲ್ಲೇ ಇದೆ! ನಾವು ಮಾಡೋದು ಮಾಡಾನ! ಚಿನ್ನಕ್ಕನ ತಪ್ಪಿಸೋ ಕೆಲಸ ನೀ ನೋಡಿಕೋ; ಮುಂದಿನ ಕೆಲಸ ನನಗೆ ಬಿಡು. ನಾ ಎಲ್ಲ ಪ್ಲಾನು ಮಾಡ್ತಿನಿ." ಮುಕುಂದಯ್ಯನಿಗೆ ಧೈರ್ಯ ಹೇಳಿ ಹುರಿದುಂಬಿಸಿದ ದೇವಯ್ಯ, ಆತನ ಮಗಳ ದಾಕ್ಷಿಣ್ಯಕ್ಕೆ ಸಿಕ್ಕಿಬಿದ್ದಿದ್ದ ತನ್ನನ್ನು ಮತಾಂತರಗೊಳಿಸುವ ಪಾದ್ರಿಯ ಬ್ಯಾಪ್ಟಿಸಮ್ ಏರ್ಪಾಡಿನಿಂದ ತನ್ನನ್ನು ಪಾರುಗಾಣಿಸುವ ವಿಚಾರದಲ್ಲಿ ಇಬ್ಬರೂ ಒಪ್ಪಿಕೊಂಡಿದ್ದ ರೀತಿಯನ್ನು ಕಾರ್ಯಗತ ಮಾಡುವ ವಿಷಯವಾಗಿ ಒತ್ತಿ ಒತ್ತಿ ಎಚ್ಚರಿಕೆ ಹೇಳಿದನು: "ನೋಡೂ, ಕೋವಿಗೆ ಮಾತ್ರ ಈಡು ತುಂಬಿಕೊಂಡು ಬಂದೀಯಾ, ಹುಷಾರು! ಆ ದೊಡ್ಡ ಪಾದ್ರಿ ಲೇಕ್ ಹಿಲ್ ದೊರೇನೂ ಬರ್ತಾನಂತೆ ತೀರ್ಥ ಕೊಡೋಕೆ!"

"ಬರೀ ಕೇಪು, ಮಸಿ ಹಾಕ್ಕೊಂಡು ಬರ್ತಿನಿ! ಸಮಯ ಬಿದ್ದರೆ ಒಂದು ಹುಸಿ ಬೆದರು ಈಡು ಹಾರಿಸೋಕೆ; ಆಯ್ತಾ?.... ರವೆ, ಗುಂಡು ಹಾಕ್ಕೊಂಡು ಬಂದು ಅವರನ್ನು ಖೂನಿ ಮಾಡಾಕೆ ನಂಗೇನು ಹುಚ್ಚೆ?.... ಬಾಗಿಲಿಗೆ ಹೊರಗಡೆಯಿಂದ ಚಿಲಕ ಹಾಕಿ ಅಗಳಿ ಹಾಕಾಕೆ ನಮ್ಮ ಐಗಳಿಗೆ ಹಚ್ಚಿಕೊಡ್ತೀನಿ!.... ಆ ಜಾತಿಗೆ ಸೇರಿಸೋ ಹುಚ್ಚು ಬಿಡಿಸ್ದೇ ಇದ್ರೆ ಆಗೋದಿಲ್ಲ ಆ ಪಾದ್ರಿಗೆ! ಬಾಕಿ ಎಲ್ಲಾ ಒಳ್ಳೆ ಮನುಷ್ಯನೇ!"

ಮುಕುಂದಯ್ಯ ಧೈರ್ಯ ಹೇಳಿ ಆಶ್ವಾಸನೆ ಕೊಟ್ಟನು ದೇವಯ್ಯಗೆ.

* * *

## ೪೬

ದಟ್ಟಗಾಡಿನ ಮರದೆಲೆಗಳ ಮೇಲೆ ಮಳೆ ಬೀಳುತ್ತಿದ್ದ ಸದ್ದಿನಲ್ಲಿಯೂ ಕೆರೆಹೊಂಡದ ಕಂಪಕ್ಕೆ ಹಾರಿ ಉಸುಬಿನಲ್ಲಿ ಸಿಕ್ಕಿಬಿದ್ದು ಕೂಗಿಕುಳ್ಳುತ್ತಿದ್ದ ಗಿರ್ಲುಮೀಸೆ ಪೋಲೀಸೀನವನ ಆರ್ತನಾದವೂ ಗುತ್ತಿಗೆ ಕೇಳಿಸಿತ್ತು; ಬೇರೆಯ ಕಡೆಯಿಂದ ನನ್ನನ್ನು ಅಡ್ಡಹಾಕಲು ಓಡಿ ಬಂದು ಮುಳ್ಳಿನ ಪೊದೆಗಳಲ್ಲಿ ಸಿಕ್ಕಿಕೊಂಡ ಬೋಳುಮೀಸೆಯ ಪೋಲೀಸಿನವನ ಮೇಲೆ ಹುಲಿಯ ಹಾರಿದಾಗ ಅವನು ಉರುಳಿಬಿದ್ದು ಶಪಿಸಿ ಕೂಗಿಕೊಂಡದ್ದು ಅವನಿಗೆ ಕೇಳಿಸಿತ್ತು. ಅವನು ಮಾತ್ರ, ಇಜಾರದ ಸಾಬಿಯ ದೊಣ್ಣೆ ಪೆಟ್ಟಿನ ಗಾಯದ ಗುಣ್ಣಿನಿಂದ ನೋಯುತ್ತಿದ್ದ ತನ್ನ ಕಾಲಿನ ಕುಂಟನ್ನು ಒಂದಿನಿತೂ ಲೆಕ್ಕಿಸದೆ, ಒಂದೇ ಸಮನೆ ಗುಡ್ಡವೇರಿ ಕಾಡಿನಲ್ಲಿ ಓಡತೊಡಗಿದ್ದನು. ಆದಷ್ಟು ಬೇಗನೆ ಅಪಾಯದಿಂದ ದೂರ ಓಡಿ ಪಾರಾಗಬೇಕು ಎಂಬುದೇ ಅವನ ಮುಖ್ಯ ಲಕ್ಷ್ಯವಾಗಿತ್ತು. ಎಲ್ಲಿಗೆ? ಎತ್ತ ಕಡೆಗೆ? ಅದೊಂದೂ ಅವನ ಪ್ರಜ್ಞೆಯಲ್ಲಿರಲಿಲ್ಲ.

ಕೊಪ್ಪೆ ಹಾಕಿಕೊಂಡಿದ್ದ ಕಂಬಳಿ ಮುಳ್ಳಿಗೆ ಸಿಕ್ಕಿಕೊಂಡಾಗ ಅದನ್ನು ಓಡುತ್ತಲೆ ರಭಸದಿಂದ ಎಳೆದು ಬಗಲಿಗೆ ಸೇರಿಸಿದ್ದನು. ಆಮೇಲೆ ತಲೆಯ ಎಲೆವಸ್ತ್ರ ಪೊದೆಯ ಮುಳ್ಳಿಗೆ ಸಿಕ್ಕಿ ನೇತಾಡುತ್ತಿದ್ದುದನ್ನು, ನಿರ್ದಯವಾಗಿ ಅದು ಹರಿದುದನ್ನೂ ಲೆಕ್ಕಿಸದೆ, ಎಳೆದು ಸೊಂಟಕ್ಕೆ ಸುತ್ತಿಕೊಂಡಿದ್ದನು. ಕಂಬಳಿಕೊಪ್ಪೆ ಮತ್ತು ತಲೆವಸ್ತ್ರಗಳು ಸ್ಥಳಾಂತರ ಹೊಂದಿದಮೇಲೆ ಮಳೆಯ ನೀರಿನಲ್ಲಿ ತಲೆ ಮೈ ಎಲ್ಲ ತೊಪ್ಪನೆ ತೊಯ್ದಿದ್ದವು. ಮುಖಕ್ಕೆ ಹರೆ ಗೀರಿ ನೆತ್ತರು ಸೋರಿದ್ದುದು ಅವನಿಗೆ ಗೊತ್ತೆ ಇರಲಿಲ್ಲ. ಕಾಲಿಗೊಮ್ಮೆ ಕೊರಕಲು ಹೆಟ್ಟದಾಗ ಯಾಂತ್ರಿಕವಾಗೆಂಬಂತೆ ನಿಂತು ಅದನ್ನು ಕಿತ್ತು ಹಾಕಿದ್ದನೆ ಹೊರತು ರಕ್ತ ಹರಿದುದನ್ನು ಗಮನಿಸಲು ಪುರುಸೊತ್ತೆ ಇರಲಿಲ್ಲ. ಇನ್ನು ಕಾಲಿಗೆ ಹತ್ತಿ, ತೊಡೆಗೇರಿ, ಸೊಂಟದ ಸುತ್ತಮುತ್ತಣ ಪ್ರದೇಶಗಳನ್ನೂ ಆಕ್ರಮಿಸುತ್ತಿದ್ದ ಇಂಬಳಗಳ ತಂಟೆಗೂ ಅವನು ಹೋಗಿರಲಿಲ್ಲ. ತಲೆಯಮೇಲೆ ಬಿದ್ದ ಮಳೆಯ ನೀರಿನೊಡನೆ ಸಂಗಮವಾಗಿ, ಏದುತ್ತಿದ್ದ ಅವನ ಬಿಸಿಯುಸಿರ ಮೈಯಿಂದ ಇಳಿಯುತ್ತಿದ್ದ ಬೆವರು ಅವನ ದಗಲೆಯನ್ನೂ ಸೊಂಟದ ಪಂಚೆಯನ್ನೂ ಒದ್ದೆಮುದ್ದೆಯನ್ನಾಗಿ ಮಾಡಿತ್ತು.

ಪ್ರಯಾಣಕಾಲದಲ್ಲಿ ತಪ್ಪದೆ ಗತ್ತಿಯೊಡನೆ ಇರುತ್ತಿದ್ದ ಉಪಕರಣಗಳಲ್ಲಿ ಅವನ ಕತ್ತಿ ಮತ್ತು ಬಗನಿದೊಣ್ಣೆ ಎರಡೂ ಇಂದು ಅವನನ್ನು ಕೈಬಿಟ್ಟಿದ್ದುವು. ಅವನು ಹೊರಡುವ ಮುಂಚೆ ಅವೆರಡನ್ನೂ ಪದ್ಧತಿಯಂತೆ ತೆಗೆದುಕೊಂಡಾಗ ಗಿರ್ಲುಮೀಸೆಯವನು ಅವನ್ನು ಅವನ ಕೈಯಿಂದ ಕಿತ್ತು ಬಿಡಾರದ ಒಳಕ್ಕೆ ಎಸೆದಿದ್ದನು. ದೊಣ್ಣೆ ಇರದಿದ್ದರೂ ಚಿಂತೆಯಿರಲಿಲ್ಲ ಗುತ್ತಿಗೆ! ಕತ್ತಿಯಾದರೂ ಇದ್ದಿದ್ದರೆ? ದೊಣ್ಣೆಯನ್ನೂ ಮಾಡಿಕೊಳ್ಳಬಹುದಾಗಿತ್ತು; ಕಾಡಿನಲ್ಲಿ ಹೊಟ್ಟೆ ತುಂಬಿಕೊಳ್ಳುವುದಕ್ಕೂ ಅನುಕೂಲವಾಗುತ್ತಿತ್ತು!

ಎಷ್ಟು ಹೊತ್ತು ಓಡಿದ್ದನೊ? ಗುತ್ತಿಗೆ ಅರಿವಿರಲಿಲ್ಲ! ಅಂತೂ ಕೊನೆಗೆ, ಅಪಾಯದಿಂದ ಪಾರಾದೆ ಎಂಬ ಧೈರ್ಯ ಹೃದಯಕ್ಕೆ ಸ್ಫುರಿಸಿದಾಗ, ಕಾಡಿನ ನಡುವೆ ಬಿದ್ದಿದ್ದ ಒಂದು ಪುರಾತನ ಮರದ ದಿಂಡಿನ ಮೇಲೆ ಕಂಬಳಿ ಹಾಕಿಕೊಂಡು ಉಸ್ಸೆಂದು ಕೂತನು. ತೊಪ್ಪನೆ ತೊಯ್ದು ಅವನ ಒಕ್ಕಣ್ಣಿನ ಚತುಷ್ಪಾದಿ ಸ್ವಾಮಿಭಕ್ತ ಹುಲಿಯನೂ ಅವನ ಕಾಲಬುಡದಲ್ಲಿ ಕೂರಲು ಪ್ರಯತ್ನಿಸಿ, ಇಂಬಳಗಳಿಂದ ಪಾರಾಗಲೆಂಬಂತೆ ಗುತ್ತಿ ಕೂತ್ತಿದ್ದ ಹೆಮ್ಮರದ ದಿಂಡಿನ ಮೇಲಕ್ಕೆ ನೆಗೆದು, ಅವನ ಪಕ್ಕದಲ್ಲಿ, ಅವನಿಗಿಂತಲೂ ತುಸು ಎತ್ತರವಾಗಿಯೆ, ಅಂಡೂರಿ ಕೂತುಕೊಂಡಿತು. ಏದುತ್ತಿದ್ದ ನಾಯಿಯ ತೆರೆದ ಬಾಯಿಯಿಂದ ಜೋಲುತ್ತಿದ್ದ ಕೆನ್ನಾಲಗೆಯಿಂದ ಜೊಲ್ಲೋ ನೀರೋ ತೊಟ್ಟಿಕ್ಕುತ್ತಿತ್ತು. ಒದ್ದೆಯಾದ ರೋಮಮಯ ಮೈಯಿಂದ ಆವಿಯೂ ಸಿನುಗುವಾಸನೆಯೂ ಹೊಮ್ಮುತ್ತಿದ್ದುದನ್ನು ಗಮನಿಸುವ ಸ್ಥಿತಿಯಲ್ಲಿರಲಿಲ್ಲ ಒಡೆಯನ ಜಾಗೃತಪ್ರಜ್ಞೆ.

ತಾನು ಮಾಡಿದುದೇನು? ತನಗಾಗಿರುವುದೇನು? ಎಂಬುದನ್ನು ಬುದ್ಧಿ ಗ್ರಹಿಸತೊಡಗಬೇಕಾದರೆ ಸ್ವಲ್ಪ ಕಾಲವೆ ಹಿಡಿಯಿತು ಗುತ್ತಿಗೆ. ಏದಾಟ ನಿಂತಮೇಲೆ ಮನಸ್ಸು ಸಾವಧಾನವಾಗಿ ಆಲೋಚಿಸಲು ಸಮರ್ಥವಾಯಿತು. ತಾನು ಪಾರಾಗಿದ್ದ ಅಪಾಯಕ್ಕಿಂತಲೂ ಹೆಚ್ಚು ಅಪಾಯಕರವಾಗಿ ತೋರಿತು ತಾನು ತಪ್ಪಿಸಿಕೊಂಡಿದ್ದ ಉಪಾಯದ ಸ್ವರೂಪಃ ಆ ಗೀರ್ಲುಮೀಸೆಯವನು ಕಂಪದಲ್ಲಿ ಮುಳುಗಿ ಸತ್ತಿದ್ದರೆ!? ಅವನನ್ನು ಬಿಡಿಸಲು ಹೋಗಿ ಆ ಮೀಸೆಬೋಳನೂ ಕಂಪದ ಪಾಲಾಗಿದ್ದರೆ?! ನಾನೇ ಅವರಿಬ್ಬರ ಸಾವಿಗೂ ಕಾರಣನಾದೆನೆಂದು ಮರಣದಂಡನೆಗೆ ಗುರಿಮಾಡದೆ ಬಿಡುತ್ತಾರೆಯೆ? ಈಗಾಗಲೆ ನನ್ನ ಪತ್ತೆಗೆ ಶುರುವಾಗಿರಬೇಕು. ನಾನು ಎಲ್ಲಿ ಹೇಗೆ ತಲೆತಪ್ಪಿಸಿಕೊಳ್ಳಲಿ? ಮುತ್ತೂರು ಸೀಮೆಯ ಕಡೆಗೋ, ಕೊಪ್ಪದ ಸೀಮೆಯ ಕಡೆಗೋ, ಮುಂಡಕಾರು ಸೀಮೆಯ ಕಡೆಗೋ ಹೊಳೆ ದಾಟಿ ಓಡಿಹೋಗಿ, ಹೆಸರುಗಿಸರು ಬದಲಾಯಿಸಿಕೊಂಡು, ಒಂದೆರಡು ವರ್ಷ ಸಿಕ್ಕದಿದ್ದರೆ, ಅಷ್ಟರಲ್ಲಿ ಎಲ್ಲ ಅಡತಿ ಮರೆತು ಹೋಗಬಹುದು…. ಆದರೆ? ಆದರೆ ತಿಮ್ಮಿ?…. ನನ್ನ ತಿಮ್ಮಿ?…. ತಿಮ್ಮಿಯ ಯೋಚನೆ ಬಂದೊಡನೆ ಮೈನರಗಳೆಲ್ಲ ಸಡಿಲವಾಗಿ, ಸೋತು, ನಿದ್ದೆಮಾಡಿಬಿಡುತ್ತೇನೆಯೋ ಎಂಬ ಹಾಗಾಯಿತು ಗುತ್ತಿಗೆ. ಅವನ ಕ್ರಿಯಾಪಟುತ್ವಕ್ಕೇ ಲಕ್ವ ಬಡಿದಹಾಗಾಯಿತು. ಆ ಭಯಂಕರ ಅರಣ್ಯದಲ್ಲಿ, ಆಕಾಶ ಮುಟ್ಟಿ ಬೆಳೆದಿದ್ದ ಮರಗಳ ನಿರ್ದಾಕ್ಷಿಣ್ಯ ತಾಟಸ್ಥ್ಯದಲ್ಲಿ, ಆಗ ತಾನೆ ಮಳೆ ನಿಂತಿದ್ದ ಆ ಭೀಷಣ ನಿರ್ಜನತೆಯಲ್ಲಿ ತನ್ನ ನಿಸ್ಸಾಹಾಯಕವಾದ ಒಂಟಿತನ ತನ್ನನ್ನು ಮೂದಲಿಸುವಂತೆ ತೋರಿ, ಬಿಕ್ಕಿಬಿಕ್ಕಿ ಅಳುತ್ತಾ, ಪಕ್ಕದಲ್ಲಿ ಒಮ್ಮೊಮ್ಮೆ ಮೈ ಕಚ್ಚಿಕೊಳ್ಳುತ್ತಲೂ, ಒಮ್ಮೊಮ್ಮೆ ಸೀನುತ್ತಲೂ, ಮತ್ತೆ ಕಾಡಿನ ಕಡೆಗೂ ತನ್ನ ಒಡೆಯನ ಕಡೆಗೂ ನೋಡುತ್ತಲೂ ಕುಳಿತ್ತಿದ್ದು, ತನಗಿಂತಲೂ ಹೆಚ್ಚು ಎತ್ತರವಾಗಿಯೂ ದೃಢತರವಾಗಿಯೂ ಧೈರ್ಯಶಾಲಿಯಾಗಿಯೂ ತೋರುತ್ತಿದ್ದ ಹುಲಿಯನ ಒದ್ದೆ ಮೈಯನ್ನೇ ಬಲವಾಗಿ ಅಪ್ಪಿ, ಅದರ ಬಲಿಷ್ಠತೆಯನ್ನು ಕುಸಿದು ಬೀಳುತ್ತಿದ್ದ ತನ್ನ ಚೇತನಕ್ಕೆ ಆಪು ಕೊಟ್ಟುಕೊಂಡನು! ಅವನು ಹಿಂದೆ ಎಂದೂ ಹಾಗೆ ಅತ್ತಿರಲಿಲ್ಲ! ಹುಲಿಯನಿಗೆ ಅದರ ನಿಜವಾದ ಅರ್ಥವಾಗದೆ, ಒಡೆಯ ತನ್ನೊಡನೆ ಆಟವಾಡುತ್ತಿದ್ದಾನೆಂದು ಭಾವಿಸಿ, ಕ್ರೀಡಾರೂಪದ ಪ್ರತಿಕ್ರಿಯೆಯನ್ನೇ ಪ್ರದರ್ಶಿಸಿತ್ತು!

ತಿಮ್ಮಿಯನ್ನೂ ಜೊತೆಗೆ ಕರೆದುಕೊಂಡು ಓಡಿಹೋಗಲೇ? ಹೇಗೆ? ಅವಳನ್ನು ಬಲಾತ್ಕಾರವಾಗಿ ಬೇರೆಯೊಬ್ಬನಿಗೆ ಮದುವೆಮಾಡಿಸುವ ದುರುದ್ದೇಶದಿಂದ ಬೆಟ್ಟಳ್ಳಿ ಕಲ್ಲಯ್ಯಗೌಡರು ಉಪಾಯಹೂಡಿ, ಹುಡುಗಿಯ ತಂದೆ ಅಣ್ಣಂದಿರನ್ನು ಕಳಿಸಿ, ಹುಡುಗಿಯನ್ನು ಕರೆಯಿಸಿಕೊಂಡಿದ್ದಾರೆ ಎಂಬ ಸುದ್ದಿ ಆಗಲೆ ಹರಡಿಬಿಟ್ಟಿತ್ತಲ್ಲಾ? ಈಗ ನಾನು ಬೆಟ್ಟಳ್ಳಿ ಹೊಲೆಗೇರಿಯಲ್ಲಿ ಕಾಣಿಸಿ ಕೊಂಡರೆ ಸಾಕು, ನನ್ನನ್ನು ಹಿಡಿದು ಪೋಲೀಸರಿಗೆ ಒಪ್ಪಿಸದೆ ಇರುತ್ತಾರೆಯೆ?…. ಅಯ್ಯೋ, ಹೋದ ಜಲ್ಮದಲ್ಲಿ ನಾನು ಏನು ಪಾಪ ಮಾಡಿದ್ದೆನೋ? ಇಲ್ಲದಿದ್ದರೆ ಹೀಂಗೆಲ್ಲಾ ಯಾಕೆ ಆಗಬೇಕಿತ್ತು? ಆ

ಹಾಳು ಸಾಬರು ಆವೊತ್ತೆ ಸಿಂಬಾವಿಗೆ ಹೇರು ತರಬೇಕೆ? ಆ ದುಷ್ಟಮುಂಡೆಗಂಡ ಇಜಾರದಸಾಬಿ ಗಬ್ಬದ ಆಡನ್ನು ಕೊಲ್ಲದಿದ್ದರೆ ನಾನೇಕೆ ಅವನೊಡನೆ ಜಗಳಕ್ಕೆ ಹೋಗ್ತಿದ್ದೆ? ಅವನದೇ ಎಲ್ಲಾ ತಪ್ಪು! ಆದರೆ ಪೋಲೀಸರ ಕೈಗೆ ಸಿಕ್ಕಿಬಿದ್ದವನು ನಾನು! ಕತ್ತಿಬೀಸಿದವನು ಆ ಸಣ್ಣಬೀರ! ಹೇಳಿದರೂ ಯಾರೂ ನಂಬುವುದಿಲ್ಲ. 'ಆ ಬಡಕಲಗೆ ಎಲ್ಲಿ ಬಂತು ಜೂರತ್ತು, ಕತ್ತಿ ಬೀಸಾಕೆ?' ಅಂತಾರೆ. ನಾನು ಬಲಿಷ್ಠನಾಗಿದ್ದದ್ದೇ ತಪ್ಪೇ? ಏನು ಪಾಪ ಮಾಡಿದ್ದೇನೋ ಹೋದ ಜಲ್ಮದಲ್ಲಿ? ಅದಕ್ಕೇ ಈಗ ಈ ಶಿಕ್ಷೆ.

ಇದ್ದಕ್ಕಿದ್ದ ಹಾಗೆ ಏನೋ ಮಿಂಚು ಹೊಳೆದಂತಾಯ್ತು ಗುತ್ತಿಗೆ. "ನಾನು ಹೊಲೆರವನಲ್ಲದೆ ಬ್ಯಾರೆ ಜಾತಿಗೆ ಸೇರಿದವನಾಗಿದ್ದರೆ ಹೀಂಗಾಗ್ತಿತ್ತೇ?" ಎಂದುಕೊಂಡನು, "ಗೌಡರ ಜಾತಿಗೆ? ಸೆಟ್ಟರ ಜಾತಿಗೆ? ಬಿರಾಂಬರ ಜಾತಿಗೆ?.... ಉಂಹ್ಞೂ ಈ ಜಲ್ಮದಾಗೆ ಅದೆಲ್ಲಿ ಸಾಧ್ಯ?.... ಸಾಬರ ಜಾತಿಗೆ? ಕಿಲಸ್ತರ ಜಾತಿಗೆ?....ಥೂ ಥೂ ಥೂ!" ತನ್ನ ತಲೆಯಲ್ಲಿ ಸುಳಿದಿದ್ದ ಏನನ್ನೊ ಉಗಳಿ ನಿರಾಕರಿಸಿದನು. ಆದರೂ ಬೆಟ್ಟಳ್ಳಿ ಹಕ್ಕಲಿನಲ್ಲಿ ದೇವಯ್ಯಗೌಡರಿಗ್ ಬೈಸಿಕಲ್ಲು ಕಲಿಸುತ್ತಿದ್ದಾಗ, ಹೊತ್ತು ಮುಳುಗಿದ ಮೇಲೆ ಬೈಗಿನ ಹೊತ್ತಿನಲ್ಲಿ, ತೀರ್ಥಹಳ್ಳಿಯ ಪಾದ್ರಿ ಮಾಡಿದ ಪ್ರಾರ್ಥನೆಯೂ, ಆಮೇಲೆ ಅವನು ಹೇಳಿದ ಉಪದೇಶ ಭಾಷಣದ ಕೆಲವು ಭಾಗಗಳೂ ಅವನ ನೆನಪಿಗೆ ಬಂದುವು. ಅದರ ಜೊತೆಜೊತೆಗೇ ಐಗಳೂ ಮುಕುಂದಯ್ಯನೂ 'ಪರ್ಸಂಗ'ದಲ್ಲಿ ಭಾರತ ರಾಮಾಯಣ ಓದುತ್ತಾ ಕಥೆ ಹೇಳುತ್ತಿದ್ದ ಹಿತೋಪದೇಶಗಳೂ ಮನಸ್ಸಿನಲ್ಲಿ ಸುಳಿಯತೊಡಗಿದುವು. ಅಲ್ಲದೆ ಭಾಗವತರಾಟಗಳಲ್ಲಿ ತಾನು ಕೇಳಿ ಗ್ರಹಿಸಿದ್ದ ಕೆಲವು ವಿಚಾರಗಳೂ ಅವನ ಸುಪ್ತಚಿತ್ತದಿಂದ ಅಪತ್ಸಮಯಾನುಸಂಗಿಗಳಾಗಿ ಮೂಡಿ ಸುಳಿಯತೊಡಗಿದುವು. ಅಳುವುದನ್ನು ನಿಲ್ಲಿಸಿ, ಏನೋ ಧೈರ್ಯ ಬಂದವನಂತೆ ಉಸಿರೆಳೆದು ನೆಟ್ಟಗೆ ಕುಳಿತು, ತನಗೆ ತಿಳಿದಂತೆ, ಒರಟು ಒರಟಾಗಿ, ಆದರೂ ಭಾವಪೂರ್ವಕವಾಗಿ, ಭಕ್ತಿಯಿಂದ ಭಗವಂತನಿಗೆ ಮೊರೆಯಿಟ್ಟನು. ಅವನು ಮೊರೆಯಿಟ್ಟ ರೀತಿಯ ಮತ್ತು ಅದರ ಭಾಷೆಯ ಸರಿಯಾದ ಅರ್ಥ ಭಗವಂತನೊಬ್ಬನಿಗೇ ಆಗತಕ್ಕದ್ದಾಗಿತ್ತು! ಅವನ ಭಗವಂತನೂ ಅಷ್ಟೇ ಜಟಿಲ ಸ್ವರೂಪದವನಾಗಿದ್ದನು: ಸಾಕಾರ, ನಿರಾಕಾರ, ಆ ಕಾರ, ಈ ಕಾರ ಎಲ್ಲವೂ ಆಗಿಯೂ ಯಾವುದು ಆಗಿರದೆ, ಬರಿಯ ಗುತ್ತಿಯ ಭಾವಮಾತ್ರನಾಗಿದ್ದು, ಎಂತಹ ವೇದಾಂತಿಯ ದರ್ಶನವೂ ತತ್ತರಿಸುವಂತಿತ್ತು! ಅಂತೂ ಏರಿತ್ತು, ಹೊಲೆಯನ ಹೃದಯದ ಪ್ರಾರ್ಥನೆ, ಭಗವಂತನ ಚರಣಾರವಿಂದಗಳಿಗೆ!

ಸ್ವಲ್ಪ ಕಾಲ ವಿರಮಿಸಿದ್ದ ಮಳೆಗಾಲದ ಹೊಯ್ಯಳೆ ಮತ್ತೆ ಸುರಿಯತೊಡಗಿದಾಗ ಗುತ್ತಿ ಎದ್ದು ಹೊರಟನು. ಸಾಧಾರಣವಾಗಿ ಮೇಗರ ಹಳ್ಳಿ, ಹಳೆಮನೆ, ಕೋಣೂರು, ಹೂವಳ್ಳಿ, ಸಿಂಬಾವಿ ಇವುಗಳ ಆಸುಪಾಸಿನ ಬೆಟ್ಟಗುಡ್ಡ ಕಾಡುಗಳೆಲ್ಲ ಒಂದಲ್ಲ ಒಂದು ರೀತಿಯಲ್ಲಿ ಗುತ್ತಿಗೆ ಪರಿಚಿತವಾಗಳಾಗಿದ್ದುವು. ಬೇಟೆಯಲ್ಲಿ ಹುಳು ನುಗ್ಗಿಯೊ, ವಾಟೆ ಬಿದಿರು ಬೆತ್ತಗಳ ಅನ್ವೇಷಣೆಯಲ್ಲಿಯೊ, ಭೂಮಿಹುಣ್ಣಿಮೆ ಹಬ್ಬದಲ್ಲಿ ನೂಲೆಗೆಣಸು, ಉಗನಿಕಾಯಿ, ಬೆರಕೆಸೊಪ್ಪು ಇತ್ಯಾದಿಗಳನ್ನು ಸಂಗ್ರಹಿಸುವಾಗಲೋ, ಬಗನಿ ಕಟ್ಟಲು ಸರಿಯಾದ ಮರಗಳನ್ನು ಹುಡುಕುವುದಕ್ಕಾಗಿಯೋ, ತುಡುವೆಜೇನು ಕೀಳಲೆಂದು ಮರದ ಪೊಟರೆ ಮತ್ತು ಹುತ್ತಗಳನ್ನು ಅಜಮಾಯಿಸಿ ಮಾಡುತ್ತಾ ಬುತ್ತಿ ಕಟ್ಟಿಕೊಂಡು ಅಲೆಯುವಾಗಲೊ-ಅಂತೂ ಒಂದಲ್ಲ ಒಂದು ರೀತಿಯಲ್ಲಿ ಗುತ್ತಿಗೆ ಸಹ್ಯಾದ್ರಿಯ ಆ ಅರಣ್ಯಪ್ರದೇಶ ಸುಪರಿಚಿತವಾದದ್ದೆ ಆಗಿತ್ತು. ಕಣ್ಣುಕಟ್ಟಿ ಬಿಟ್ಟರೂ ಊರಿಗೆ ಬರುತ್ತೇನೆ ಎನ್ನುತ್ತಿದ್ದ ಅವನು. ಆದರೆ ಈ ದಿನ ಅವನು ನಡುಹಗಲು ಪೂರೈಸಿ, ಹೊತ್ತು ಓರೆಯಾಗುವವರೆಗೂ ಅಲೆದರೂ ತಾನು ಎಲ್ಲಿದ್ದೇನೆ? ಎತ್ತ ಹೋಗುತ್ತಿದ್ದೇನೆ? ಎಂಬುದರ ಗೊತ್ತು ಸಿಕ್ಕಲಿಲ್ಲ. ಅಷ್ಟು ನಿಬಿಡವೂ ಉನ್ನತವೂ ಕರಾಳವೂ ಕಂದರಮಯವೂ ಆ ಕಾಣಿಸತೊಡಗಿತ್ತು ಆ ಹೆಗ್ಗಾಡು. ಇಳಿದು ಏರಿ, ಏರಿ ಇಳಿದು, ಸರಲು ಸರಲುಗಳನ್ನು ದಾಟಿದರೂ ಎಲ್ಲಿಯೂ ಊರು ಸಮೀಪಿಸುವ

ಚಿಹ್ನೆ ತೋರಲಿಲ್ಲ. 'ಇದೇನಿದು? ದಿಕ್ಕು ತಪ್ಪಿಬಿಟ್ಟೆನೆ?' ಎಂದುಕೊಂಡಿದ್ದನು, 'ಅಥವಾ ಹುಚ್ಚುಬಳ್ಳಿ ಎಲ್ಲಿಯಾದರೂ ಕಾಲಿಗೆ ತಗುಲಿಬಿಟ್ಟಿತೆ?'

ಹೆಗ್ಗಾಡಿನಲ್ಲಿ ಒಂದು ಜಾತಿಯ ವಿಷಬಳ್ಳಿ ಇದೆ ಎಂದೂ, ಅದನ್ನು ಮುಟ್ಟಿದವನು ಮನೆ ಸೇರುವ ಸಂಭವವಿಲ್ಲವೆಂದೂ ಹಳ್ಳಿಗರಲ್ಲಿ ಒಂದು ನಂಬಿಕೆ ರೂಢಿಯಾಗಿತ್ತು. ಆ ಬಳ್ಳಿ ಮುಟ್ಟಿ ಅನೇಕ ಜನರೂ ಜಾನುವಾರುಗಳೂ ಕಾಡಿನಲ್ಲಿ ದಿಕ್ಕುತಪ್ಪಿ ಅಲೆದೂ ಅಲೆದೂ ಸತ್ತುಹೋಗಿದ್ದುವೆಂಬ ಕಥೆಗಳೂ ಪ್ರಚಲಿತವಾಗಿದ್ದುವು. ಸಾಯಂಕಾಲವಾಗುತ್ತಾ ಬಂದರೂ ಯಾವ ಊರಿನ ಸನಿಹವೂ ಕಿವಿಗಾಗಲಿ ಕಣ್ಣಿಗಾಗಲಿ ಗೋಚರವಾಗದಿದ್ದಾಗ ಗುತ್ತಿಗೆ ತುಸು ದಿಗಿಲಾಯಿತು. ಹೊಟ್ಟೆ ಹಸಿವಾಗಿದ್ದಾಗ ಬಗನಿ ಸಸಿಗಳನ್ನು ಕಿತ್ತು ಮರಕ್ಕೆ ಬಡಿದು, ಅವುಗಳ ತಿರುಳನ್ನು ತಿಂದಿದ್ದನು. ಒಂದುಕಡೆ ಹಲಸಿನ ಮರದಿಂದ ಬಿಳುವನ ಜಾತಿಯ ಹಣ್ಣನ್ನು ಕೆಡವಿ, ಬಿದ್ದ ರಭಸಕ್ಕೆ ಬಿರಿದಿದ್ದ ಅದನ್ನು ಸಿಗಿದು, ತೊಳೆಗಳನ್ನು ನುಂಗಿದ್ದನು. ಕುರ್ಕನುಗುರು ಬಗೆದಿದ್ದ ಕಣ್ಣಿನ ಗಾಯದ ದೆಸೆಯಿಂದ ಬಹಳ ಕಾಲ ನರಳಿದ್ದುದರ ಫಲವಾಗಿ ಅವನ ತಾಯಿ, ಹುಲಿಯ, ಲಾಚಾರಾಗಿದ್ದರೂ ಮೊಲವನ್ನೊ ಬರ್ಕವನ್ನೊ ಅಥವಾ ಇನ್ನಾವುದೊ ಸಣ್ಣ ಜಂತುವನ್ನೊ ಬೇಟೆಯಾಡಿ ತಿಂದು ತನ್ನ ಹಸಿವೆಯನ್ನು ಪರಿಹರಿಸಿಕೊಂಡಿದ್ದದನ್ನು ಅವನು ಅರಿತಿದ್ದನು, ಬಾಹ್ಯ ಚಿಹ್ನೆಗಳಿಂದ. ಆದರೆ ಅವನಿಗಾದದ್ದು ಹಸಿವೆಯ ಭೀತಿಯಲ್ಲ. ಹುಚ್ಚುಬಳ್ಳಿ ಮುಟ್ಟಿ ತಾನು ಯಾವ ಊರನ್ನೂ ಸೇರದೇ ಇರುವಂತಾಗಿಬಿಟ್ಟರೆ ಏನು ಗತಿ? ಎಂಬುದು ಅವನ ಹೃದ್ಗತ ಭಯವಾಗತೊಡಗಿತು. ಎಷ್ಟೋಸಾರಿ ಮಲೆಯ ನೆತ್ತಿಗಳಲ್ಲಿ ಇದ್ದೇನೆ ಎಂದು ಗೊತ್ತಾದಾಗ, ಬಹಳ ಹೊತ್ತು ಕಿವಿಗೊಟ್ಟು ಆಲಿಸಿದ್ದನು, ಯಾವ ದಿಕ್ಕಿನಿಂದಾದರೂ ಮನುಷ್ಯಾವಾಸದ ಸದ್ದು ಬರುತ್ತದೆಯೆ ಎಂದು: ದೂರದ ಊರುಕೋಳಿಯ ಕೂಗು? ನಾಯಿಯ ಬೊಗಳು ದನಿ? ದನಗಳ ಅಂಬಾ ಶಬ್ದ? ಅಥವಾ ಯಾರಾದರೂ ಯಾವನನ್ನಾದರೂ ಕೂಗಿ ಕರೆಯುವ ಕಾಕು?- ಆದರೆ ಮರಗಳಲ್ಲಿ ಬೀಳುವ ಮಳೆ ಮತ್ತು ಬೀಸುವ ಗಾಳಿಯ ಸದ್ದಲ್ಲದೆ ಬೇರೆ ಕೇಳಿಸಿರಲಿಲ್ಲ. ಇಜಾರದ ಸಾಬಿಯ ದೊಣ್ಣೆಯೇಟಿನ ಗಾಯದ ಕಾಲು ಬೇರೆ ಹಿಸಿದು ರಕ್ತ ಸೋರಿ ನೋಯತೊಡಗಿತ್ತು! ಗುತ್ತಿಯ ಮನಸ್ಸಿನಲ್ಲಿ ಪ್ರಾರ್ಥನೆಗೂ ಜಾಗವಿರದಷ್ಟು ಕಳವಳ ತುಂಬಿಕೊಂಡಿತ್ತು! ಅವನು ಹೊತ್ತು ಇಳಿದಂತೆಲ್ಲ ಹೆಚ್ಚು ಹೆಚ್ಚು ಗಾಬರಿಯಿಂದ ಉನ್ಮತ್ತನಂತೆ ಬೇಗಬೇಗನೆ ಹತ್ತಿ ಇಳಿದು ಇಳಿದು ಹತ್ತಿ ನಡೆಯತೊಡಗಿದನು. ಮೋಡವಿರದಿದ್ದರೆ ತನಗೆ ಗೊತ್ತಿದ್ದ 'ಬೆಳ್ಳಿ'ಯನ್ನಾದರೂ ನೋಡಿ ದಿಕ್ಕು ತಿಳಿಯುತ್ತಿದ್ದನೋ ಏನೋ? ಆದರೆ ಕತ್ತಲಾಗುತ್ತ ಬಂದ ಹಾಗೆ ಮೋಡ ದಟ್ಟಯಿಸಿ, ಮಳೆ ಜೋರಾಗಿ ಸುರಿಯಿತು. ಆದರೂ ಗುತ್ತಿ, ಕತ್ತಲೆಯಲ್ಲಿಯೂ, ಮುಂದೆ ಸಾಗುವುದನ್ನು ಮಾತ್ರ ಬಿಡಲಿಲ್ಲ. ಅದೇ ಅವನನ್ನು ಬದುಕಿಸಿದ್ದು!

ರಾತ್ರಿ ಸುಮಾರು ಎಂಟು ಎಂಟೂವರೆ ಗಂಟೆಯ ಹೊತ್ತಿಗೆ, ಗುತ್ತಿಗೆ ತಾನಿದ್ದ ಮಲೆನೆತ್ತಿಯೊಂದರ ಬುಡದಲ್ಲಿ, ಆದರೂ ಬಹುದೂರ ಕೆಳಗಡೆ, ಏನೋ ಒಂದು ಬೆಳಕು ಕಾಣಿಸಿತು: ದೊಂದಿಯೊ? ಲಾಟೀನೊ? ಮುರುವಿನ ಒಲೆಯ ಬೆಂಕಿಯೊ? ಆ ಬೆಳಕಿನ ಕಡೆಗೆ ಸ್ವಲ್ಪ ಸಂದೇಹದಿಂದಲೆ ಇಳಿಯತೊಡಗಿದನು. ಏಕೆಂದರೆ ಮಳೆಯಲ್ಲಿ ನೆನೆದಾಗ ಕೆಲವು ಮರದ ತೊಗಟೆಗಳೂ ಪೊದೆಯ ಕಡ್ಡಿಗಳೂ ಗುಂಪಾಗಿದ್ದು ಉಜ್ವಲಕಾಂತಿಯಿಂದ ಬೆಳಗುತ್ತವೆ- ಎಂಬುದನ್ನು ಗುತ್ತಿ ಅನುಭವದಿಂದ ಅರಿತಿದ್ದನು. ಆದರೆ ಸ್ವಲ್ಪ ದೂರ ಇಳಿಯುವುದರಲ್ಲಿ, ಆ ಬೆಳಕು ಮರೆಯಾದರೂ, ಒಂದು ನಾಯಿ ಬೊಗಳಿದ ಸದ್ದು ಕೇಳಿಸಿದ ಗುತ್ತಿಗೆ ಧೈರ್ಯವಾಯಿತು. ಇನ್ನೂ ಸ್ವಲ್ಪ ದೂರ ಇಳಿದ ಮೇಲೆ ಮಾತಾಡುತ್ತಿದ್ದ ಮನುಷ್ಯರ ಧ್ವನಿಯೂ ಕೇಳಿಸಿ, ಯಾವುದೊ ಮನೆಗೆ ತಾನು ಸಮೀಪಿಸುತ್ತಿದ್ದೇನೆ ಎಂದರಿತು 'ದೇವರೇ ಕಾಪಾಡಿದ' ಎಂದುಕೊಂಡನು.

ಮಲೆಯ ನೆತ್ತಿಯಿಂದ ಗುತ್ತಿಗೆ ಕಂಡಿದ್ದ ಆ ಬೆಳಕು ಒಂದು ಸೋಗೆ ಹೊದಿಸಿದ್ದ ದೊಡ್ಡ ಚೌಕಿಮನೆಗೆ ಅಂಟಿಕೊಂಡತಿದ್ದ ಅದರ ಬಚ್ಚಲು ಕೊಟ್ಟಿಗೆಯ ಮೂಲೆಯಲ್ಲಿ ಧಗಧಗನೆ ಉರಿಯುತ್ತಿದ್ದ ಮುರುವಿನ ಒಲೆಯ ಬೆಂಕಿಯದ್ದಾಗಿತ್ತು. ಆ ಬಚ್ಚಲು ಕೊಟ್ಟಿಗೆಗೆ ಅರೆಗೋಡೆ ಹಾಕಿದ್ದುದರಿಂದಲೆ ಆ ಮುರುವಿನ ಒಲೆಯ ಬೆಂಕಿ ಮಲೆಯ ನೆತ್ತಿಯ ಆ ದೂರಕ್ಕೆ ಗುತ್ತಿ ಯಾವುದೊ ಒಂದು ಕೋನದಲ್ಲಿದ್ದಾಗ ಕಾಣಿಸಿತ್ತು. ಗುತ್ತಿ ಪ್ರವೇಶಿಸಿದಾಗ ಆ ಒಲೆಯ ಬಳಿ ಹಳೆಪೈಕದವನೊಬ್ಬನು ಸ್ವಲ್ಪ ವಯಸ್ಸಾದಂತೆ ತೋರುತ್ತಿದ್ದ ಗೌಡರೊಬ್ಬರಿಗೆ ಕಳ್ಳುಕಾಯಿಸಿ ಕೊಡುವ ಕೆಲಸದಲ್ಲಿದ್ದನು. ಮಳೆಯಲ್ಲಿ ತೊಯ್ದು, ಚಳಿಗೆ ಉದುರುಹತ್ತಿ, ಗತಗತನೆ ನಡುಗುತ್ತಿದ್ದ ಒಬ್ಬ ಮನುಷ್ಯನು ಒಂದು ನಾಯಿಯೂ ಬಚ್ಚಲು ಕೊಟ್ಟಿಗೆಯೊಳಗೆ ಬಂದು ಅದರ ಬಾಗಿಲಿಲ್ಲದ ಬಾಗಿಲಲ್ಲಿ ನಿಂತು ಬೆಂಕಿಯ ಬೆಳಕಿನಲ್ಲಿ ಕಾಣಿಸಿಕೊಂಡಾಗ ಒಳಗಿದ್ದವರಿಬ್ಬರೂ ತುಸು ಬೆಚ್ಚಿದಂತೆ ತೋರಿದರು. ಅಂತಹ ಅವೇಳೆಯಲ್ಲಿ ಅನಿರೀಕ್ಷಿತವಾಗಿ ಪ್ರತ್ಯಕ್ಷನಾದ ಆ ಅಪರಿಚಿತನನ್ನು ಕಂಡು ಅವರಿಬ್ಬರಿಗೂ ಮಾತೇ ಹೊರಡದೆ ಸುಮ್ಮನೆ ನೋಡತೊಡಗಿದ್ದರು. 'ನಾನು, ಒಡೆಯಾ, ಕೊಳಿಗಿ ಸಿದ್ದ!' ಎಂದು ಗುತ್ತಿ ಹೇಳಿ ಕೊಂಡಾಗಲೆ ಅವರಿಬ್ಬರಿಗೂ ಸಮಾಧಾನವಾಗಿ, ತಾವು ಕಂಡದ್ದು ರಾತ್ರಿ ಹೇಳಬಾರದ ಬೇರೆ ಯಾವುದು ಅಲ್ಲ ಎಂದು ಧೈರ್ಯ ತಾಳಿ ಮಾತಾಡತೊಡಗಿದರು.

ಗುತ್ತಿ ಬೇಕಂತಲೆ ತನ್ನ ನಿಜವನ್ನು ಮರೆಮಾಡಿ, ತನ್ನ ಊರು ಹೆಸರು ಎಲ್ಲವನ್ನೂ ಹುಸಿಹೇಳಿದ್ದನು. ತಾನು ಹೆಡಗೆಬಳ್ಳಿ ಹುಡುಕುತ್ತಾ ಕಾಡು ಹತ್ತಿದ್ದನೆಂದೂ ದಿಕ್ಕು ತಪ್ಪಿ ಅಲೆದು ಅಲ್ಲಿಗೆ ಬಂದಿದ್ದನೆಂದೂ ತಿಳಿಸಿ, ಬೆಳಿಗ್ಗೆಯಿಂದ ಊಟವಿಲ್ಲದೆ ಹಸಿದಿರುವ ಸಂಗತಿಯನ್ನೂ ಹೇಳಲು ಮರೆಯಲಿಲ್ಲ. ತಾನು ಎಲ್ಲಿಗೆ ಬಂದಿದ್ದೇನೆ ಎಂಬುದೂ ಅವನಿಗೆ ಗೊತ್ತಿರಲಿಲ್ಲವಾದ್ದರಿಂದ ಹಳೆಪೈಕದವನನ್ನು ಆಲಾಯಿದ ವಿಚಾರಿಸಿ ತಿಳಿದುಕೊಂಡನು: 'ಕಾಗಿನಹಳ್ಳಿ!' ಎಂಬ ಹೆಸರನ್ನು ಕೇಳಿದೊಡನೆ ತಾನು ದೇಶಾಂತರ ಬಂದುಬಿಟ್ಟಿದ್ದೇನೆ ಎಂದೇ ಭಾವಿಸಿದ್ದನು. 'ಕಾಗಿನಹಳ್ಳಿ' ಎಂಬ ಹೆಸರೇನೂ ಅವನಿಗೆ ಪರಿಚಿತವಾಗಿದ್ದದ್ದೆ. ಕೋಣೂರು ಮುಕುಂದಯ್ಯನ ತಾಯಿ ದಾನಮ್ಮ ಹೆಗ್ಗಡಿತಿಯವರನ್ನು ಆಳುಕಾಳು ಸಾಧಾರಣ ಜನ ಕರೆಯುತ್ತಿದ್ದದ್ದೆ 'ಕಾಗಿನಹಳ್ಳಿ ಅಮ್ಮ' ಎಂದು. ದಾನಮ್ಮ ಹೆಗ್ಗಡಿತಿಯವರ ತವರುಮನೆ 'ಕಾಗಿನಹಳ್ಳಿ' ಎಂದು ಗೊತ್ತಿತ್ತೆ ಹೊರತು ಗುತ್ತಿ ಆ ದೂರದ ಊರಿನ ಮನೆಗೆ ಎಂದೂ ಹೋಗಿರಲಿಲ್ಲ. ಆದರೂ ತಾನು ಬಂದದ್ದು ಕಾಗಿನಹಳ್ಳಿ ಅಮ್ಮನ ತವರುಮನೆಗೆ ಎಂಬ ಭಾವನೆ ಅವನಲ್ಲಿ ಅದುವರೆಗೂ ಇದ್ದ ಅಪರಿಚಿತತ್ವ ಮತ್ತು ದೂರತ್ವದ ಭಾವನೆಯನ್ನು ಪರಿಹರಿಸಿ, ಇದು 'ಕಾಗಿನಹಳ್ಳಿ ಅಮ್ಮ'ನ ತವರು ಎಂಬ ಸಲುಗಯ ಭಾವನೆಯನ್ನುದ್ದೀಪಿಸಿತ್ತು. ಆದ್ದರಿಂದಲೆ ಅವನಿಗೆ ತನಗೆ ಬೇಕಾದ್ದನ್ನು ಕೇಳಿ ಈಸಿಕೊಳ್ಳಲು ನೆಂಟಸ್ತಿಗೆಯ ಹಕ್ಕಿದೆ ಎಂಬ ಗ್ರಾಮೀಣ ಸುಲಭವಾದ ಧೈರ್ಯವೂ ಮೂಡಿತ್ತು. ತನಗೂ ತನ್ನ ನಾಯಿಗೂ ಹೊಟ್ಟೆ ತುಂಬುವಷ್ಟು ಅನ್ನ ದೊರಕಿಸಿಕೊಳ್ಳುತ್ತೇನೆ ಎಂದು.

ಕಳ್ಳುಕುಡಿಯುತ್ತಿದ್ದ ಗೌಡರಿಗಾಗಲಿ, ಅದನ್ನು ವಿನಿಯೋಗಿಸುತ್ತಿದ್ದ ಹಳೆಪೈಕದವನಿಗಾಗಲಿ ಗುತ್ತಿಯ ನಿಜಸ್ಥಿತಿಯನ್ನು ವಿಚಾರಿಸುವುದಕ್ಕೂ ಅರಿಯುವುದಕ್ಕೂ ಮನಸ್ಸೂ ಇರಲಿಲ್ಲ; ಸಮಯವೂ ಅಂತಹದ್ದಾಗಿರಲಿಲ್ಲ. ತಮ್ಮ ಕೆಲಸವನ್ನು ಬೇಗಬೇಗನೆ ಪೂರೈಸಿ ಗೌಡರು ಮನೆಯೊಳಕ್ಕೆ ಹೋದರು; ಹಳೆಪೈಕದವನೂ ಅಲ್ಲಿಯೆ ಎಲ್ಲಿಯೊ ಸಮೀಪದಲ್ಲಿದ್ದ ತನ್ನ ಗುಡಿಸಲಿಗೆ ನಡೆದನು. ಗುತ್ತಿಯೂ ಹುಲಿಯನೂ ಮುರುವಿನ ಒಲೆಯ ಬೆಂಕಿಯ ಸಾನಿಧ್ಯದ ಬೆಚ್ಚನೆಯ ಮಡಿಲಿಗೆ, ತಾಯಿಯ ಎದೆಗೆ ಮುಗ್ಗುವ ಮಕ್ಕಳಂತೆ, ನುಗ್ಗಿ ಓಡಿ ಚಳಿ ಕಾಯಿಸುತ್ತಾ ಕುಳಿತರು.

ಆಃ! ಹಿಂದೆಂದೂ ಗುತ್ತಿಗೆ ಅಷ್ಟು ಆಪ್ಯಾಯಮಾನವಾಗಿ ತೋರಿರಲಿಲ್ಲ ಬೆಂಕಿ! ಹುಲಿಯನಂತೂ ಬೆಂಕಿಯ ಜ್ವಾಲೆಗೇ ತನ್ನ ಮುಸುಡಿಯನ್ನು ತೂರಿ, ಒಲೆಯ ಒಳಕ್ಕೆ ನುಗ್ಗುತ್ತದೆಯೊ ಏನೋ ಎಂಬಂತೆ ವರ್ತಿಸುತ್ತಿದ್ದುದನ್ನು ನೋಡಿ, ಗುತ್ತಿ ಎರಡು ಮೂರು ಸಾರಿ ಅದನ್ನು ಬಾಲ ಹಿಡಿದೆಳೆದು ಹಾಕಬೇಕಾಯಿತು! ಒಂದು ಸಾರಿಯಂತೂ ಅವನ ಶಕ್ತಿಯನ್ನೂ ಮೀರಿ ಅದು ಮುಂದಕ್ಕೆ ಮೈಚಾಚುತ್ತಿರಲು ಅವನಿಗೆ ಸಿಟ್ಟೇರಿ ಬೆನ್ನಿಗೆರಡು ಗುದ್ದು ಕೊಟ್ಟಿದ್ದನು, ಧಿಃಕ್ಕೆಂದು!

ಒಮ್ಮೆ ಬೆನ್ನು ತಿರುಗಿಸಿ, ಒಮ್ಮೆ ಹೊಟ್ಟೆ ತಿರುಗಿಸಿ, ಒಮ್ಮೆ ಎರಡೂ ಕೈಗಳನ್ನು ಜ್ವಾಲೆಯ ಹತ್ತಿರಕ್ಕೆ ಒಡ್ಡಿ, ಒಮ್ಮೆ ಸೊಂಟದ ಪಂಚೆ ಯನ್ನು ಬಿಚ್ಚಿ ಆರಿಸಿ, ಅದನ್ನು ಸುತ್ತಿಕೊಂಡು, ಒಳಗಿನ ಕೌಪೀನವನ್ನೂ ತೆಗೆದು ಒದ್ದೆಹಿಂಡಿ ಒಲೆಯ ಮೇಲೆ ಹರಡಿ ಆರಿಸಿ ಕಟ್ಟಿಕೊಂಡು, ಕಂಬಳಿ ಮತ್ತು ಬಟ್ಟೆಗಳನ್ನು ಮುರುವಿನ ಹಂಡೆಯ ಮೇಲೆಯೂ ಒಲೆಯ ತೋಳುಗಳ ಮೇಲೆಯೂ ಹರಡಿದನು. ಇಂಬಳಗಳನ್ನು ತನ್ನು ಮೈಯ ಸಂದುಗೊಂದುಗಳಿಂದಲೂ ಹುಲಿಯ ಮೈಯ ಸಂದುಗೊಂದು ರಂಧ್ರಾದಿಗಳಿಂದಲೂ ಕಿತ್ತು ತೆಗೆದು ಕೆಂಡದ ಮೇಲೆ ಜುಂಯೆಂನ್ನುವಂತೆ ಹಾಕಿ ಹೋಮ ಮಾಡಿದನು. ಅಂತೂ ನರನ ಮತ್ತು ನಾಯಿಯ ಚಳಿ, ಉಡುರು, ನಡುಕ ಎಲ್ಲ ತೊಲಗಿ ಮೈಗೆ ಬಿಸುಪೇರಿ ಸುಖಾನುಭವವಾಗುವ ಹೊತ್ತಿಗೆ ಆಳು ಹುಡುಗನೊಬ್ಬನು ಮೊರದಲ್ಲಿದ್ದ ಬಾಳೆಯ ಕೀತನ ಮೇಲೆ ಹಾಕಿದ್ದ ಅನ್ನ ಸಾರು ಪಲ್ಯ ಉಪ್ಪಿನಕಾಯಿಗಸಿಯ ಊಟವನ್ನು, ಸಣ್ಣಗೆ ಸುರಿಯುತ್ತಿದ್ದ ಮಳೆಯಲ್ಲಿ ಓಡೋಡಿ ಬಂದು, ತಂದಿಟ್ಟನು.

ಅನ್ನವೇನೊ ಮೊರದ ತುಂಬ ಕುತ್ತುರೆಯಾಗಿ ಇದ್ದಿತಾದರೂ ಹಸಿದ ಹೊಲೆಯನಿಗೆ ಅದು ಸಾಲದೆಂಬಂತೆ ತೋರಿ "ತಂಗಳಿದ್ದರೆ ಇನ್ನೊಂದು ಚೂರು ತಂದು ಹಾಕ್ರೋ.... ನಾಯಿಗೂ ಬೆಳಗಿನಿಂದ ಅನ್ನ ಇಲ್ಲ." ಎಂದು ರಾಗ ಎಳೆದು, ಮತ್ತೆ ನಗುತ್ತಾ "ಕೋಣೂರಿನ ಕಾಗಿನಹಳ್ಳಿ ಅಮ್ಮ ನಂಗೊತ್ರೋ, ನಾಳೆ ಏನಾದ್ರೂ ಹೇಳಾದಿದ್ರೆ, ಕೊಡಾದಿದ್ರೆ, ನನ್ಹತ್ರ ಹೇಳಿಕೊಡಬ್ಯೆದು ಅಂತಾ ಹೇಳ್ರೋ ಹೆಗ್ಗಡ್ತಮೋರಿಗೆ" ಎಂದೂ ಸೇರಿಸಿದನು.

ಆ ಹುಡುಗ ಮತ್ತೆ ಮನೆಯೊಳಗೆ ಹೋಗಿ ಬಂದು "ಇದ್ದುಬದ್ದಿದ್ದನೆಲ್ಲಾ ಬಳ್ದು ತಂದೀನೋ; ಒಂದು ಅಗಳೂ ಇಲ್ಲ ಅನ್ನ." ಎಂದು ಹೇಳಿ, ಕೈಯಲ್ಲಿದ್ದ ಒಂದು ಮೊಗೆಯನ್ನು ಗುತ್ತಿಯ ಮುಂದಿಟ್ಟು, ಮತ್ತೆ ಮಳೆಯಲ್ಲಿಯೆ ಮನೆಯೊಳಕ್ಕೆ ಓಡಿಬಿಟ್ಟನು. ಮೊಗೆಯಿಂದ ಹೊಮ್ಮಿ ಬಂದ ಕಂಪಿಗೆ ಮೂಗೊಡ್ಡಿದ ಗುತ್ತಿಗೆ ಬ್ರಹ್ಮನಂದವಾಗಿ ಒಂದು ಮುಕ್ಕುಳು ಅದರಿಂದಲೇ ಕುಡಿದೇ ಬಿಟ್ಟನು: ಹತ್ತಿರವಿಟ್ಟಿದ್ದ ಗರಟಕ್ಕೆ ಹೊಯ್ದುಕೊಂಡು ಕುಡಿಯುವಷ್ಟು ಅನವಸರವೂ ಸಾಧ್ಯವಿರಲಿಲ್ಲ ಅವನಿಗೆ.

ಒಲೆಗೆ ಕಚ್ಚಿದ್ದ ಭಾರಿ ಕುಂಟೆಗಳನ್ನು ಆದಷ್ಟು ಮುಂದೆ ನೂಕಿ, ಬೆಂಕಿ ಬೆಳಗುವವರೆಗೂ ಉಜ್ವಲಿಸುವಂತೆ ಮಾಡಿ, ಗುತ್ತಿ ಉಣ್ಣುವುದಕ್ಕೆ ಕುಳಿತನು. ಮುರುವಿನ ಹಂಡೆಯಲ್ಲಿ ಕತ್ತರಿಸಿದ್ದ ಹುಲ್ಲು, ಕಲಗಚ್ಚು, ಅನ್ನ ಬಸಿದ ಬಾಗುಮರಿಗೆಯ ಗಂಜಿ, ಹಲಸಿನ ಹಣ್ಣಿನ ಕೊಚ್ಚಿದ ಸೇಡೆ ಇತ್ಯಾದಿ ವಿಶ್ರಣದ ಮುರು ತಕಪಕನೆ ಕುದಿಯುತ್ತಾ ಗೊಜಗೊಜಗೊಜ ಸದ್ದುಮಾಡುತ್ತಿತ್ತು. ಕರೆಯುವ ಎಮ್ಮೆ ದನಗಳಿಗೆ ಮರುಬೆಳಗಿನ ಉಪಾಹಾರವಾಗಿ.

ದೊಡ್ಡ ದೊಡ್ಡ ತುತ್ತುಗಳನ್ನು ಉಂಡೆ ಕಟ್ಟಿ ಕಟ್ಟಿ ಬಾಯಿಗೆ ಎಸೆದುಕೊಳ್ಳುತ್ತಿದ್ದ ಗುತ್ತಿ ಕೂಳಿನ ಕುತ್ತುರೆ ಅರೆ ಮುಗಿಯುವಷ್ಟರಲ್ಲೆ ನೋಡುತ್ತಾನೆ: ಹತ್ತಿರ-ಹತ್ತಿರ-ಹತ್ತಿರ-ಹತ್ತಿರ ಒರಕಿಬಂದ ಹುಲಿಯ ಬಳ್ಳೆಯ ಅಂಚಿಗೇ

ಮುಟ್ಟೇಕೊಂಡೇ ಕುಳಿತು, ಕರಗಿಹೋಗುತ್ತಿದ್ದ ಅನ್ನದ ರಾಶಿಯ ಕಡೆಗೂ ಗುತ್ತಿಯ ಬಾಯಿಯ ಕಡೆಗೂ ಕೆಳಗೆ-ಮೇಲೆ ಮೇಲೆ-ಕೆಳಗೆ ನೋಡುತ್ತಾ, ನೋಡುತ್ತಾ ಅನ್ನುವುದಕ್ಕಿಂತಲೂ ಕಣ್ಣು ಕಣ್ಣುಬಿಡುತ್ತಾ, ಬಾಲವಳ್ಳಾಡಿಸುತ್ತಾ, ಜೊಲ್ಲು ಸುರಿಸುತ್ತಾ ಕೂತಿದೆ! 'ಹಥೀ! ಏನು ಹೊಟ್ಟೆಬಾಕ ಮುಂಡೇದೊ ಹಾಳ್ ನಾಯಿ!' ಎಂದು ಶಪಿಸಿ, ಗುತ್ತಿ ಅದನ್ನು ದೂರಕ್ಕೆ ನೂಕಿದನು, ಎಡಗೈಯಿಂದ. ಅದುವರೆಗೂ ಅವನು ಅದರ ಕಡೆ ನೋಡಿರಲೂ ಇಲ್ಲ; ಅದನ್ನು ಗಮನಿಸಿರಲೂ ಇಲ್ಲ. ಈಗ ಪಕ್ಕನೆ ಅದರ ಒಕ್ಕಣ್ಣು ಅವನ ಕಣ್ಣುಗಳಿಗೆ ಇದಿರಾಗಲು, ಕರುಳಿಗೇ ಏನೋ ಇರಿದಂತಾಯಿತು! ಗುತ್ತಿಯ ಹಸಿವೆಯೇನೋ ಎಲ್ಲವನ್ನೂ ಕಬಳಿಸುವ ಬಡಬಾಗ್ನಿಯಂತಿತ್ತು. ಆ ಅನ್ನ ತನಗೇ ಸಾಲುವುದಿಲ್ಲ ಎಂಬ ಭಾವನೆಯೂ ಇತ್ತು. ಅಲ್ಲದೆ, ನಾಯಿ ಕಾಡಿನಲ್ಲಿ ಮೊಲವನ್ನೊ ಏನನ್ನೊ ಹಿಡಿದು ತಿಂದಿದೆ; ಅದಕ್ಕೆ ಅಷ್ಟೇನೂ ಹಸಿವಾಗಿರಲಾರದು, ಎಂಬ ವಾದವನ್ನೂ ಹೂಡುತ್ತಿತ್ತು ಅವನ ಲೋಭಿಮನಸ್ಸು. ಆದರೂ ಗುತ್ತಿ ಉಣ್ಣುವುದನ್ನು ನಿಲ್ಲಿಸಿದನು. “ಇದೊಂದು ಯಾವಾಗಲೂ ನನ್ನ ಬಲಗೊಡೆಯ! ಬಸವನ ಹಿಂದೆ ಬಾಲ ಬಂದ್ಹಗೆ! ನೀನು ಇನ್ನೆಲ್ಲಿಯಾದ್ರೂ ನನ್ನ ಹಿಂದೆ ಬಾ. ನಿನಗೆ ಮಾಡ್ತೀನಿ ತಕ್ಕ ಶಾಸ್ತಿ! ಕಾಡಿನಾಗೇ ಹೆಡಗೆಬಳ್ಳೀಲಿ ಮರಕ್ಕೆ ಕಟ್ಟಿಹಾಕಿ ಬರದಿದ್ರೆ, ನೋಡು ಮತ್ತೆ, ನಾ ಗುತ್ತೀನೆ ಅಲ್ಲ! ಇದೇ ಮೊದಲು, ಇದೇ ಕಡೆ! ಗೊತ್ತಾ'ತಾ?” ಎಂದು ಕಣ್ಣು ಕೆರಳಿ ಹುಲಿಯನ್ನು ಬೈದು ಗದರಿಸಿ, ಅದಕ್ಕೆ ಬುದ್ದಿ ಹೇಳಿ, ಇದೊಂದು ಬಾರಿ ಕ್ಷಮಿಸುವಂತೆ ಉಳಿದಿದ್ದ ತನ್ನ ಅನ್ನದಲ್ಲಿ ಅರ್ಧದಷ್ಟನ್ನು ತೆಗೆದು ನಾಯಿಯ ಮುಂದೆ ನೆಲದಮೇಲೆ ಹಾಕಿದನು. ಒಡೆಯನ ಬೈಗುಳವನ್ನೆಲ್ಲ ಅನಾಸಕ್ತಿಯಿಂದ ಕೇಳುತ್ತಿದ್ದ, ಇಲ್ಲವೆ ಒಕ್ಕಣ್ಣಿನಿಂದಲೆ ನೋಡುತ್ತಿದ್ದ, ಆ ನಾಯಿ ನಿರ್ದಾಕ್ಷಿಣ್ಯವಾಗಿ, ಆನಂದಾತಿಶಯಕ್ಕೆ ಬಾಲವೆ ಬಿದ್ದುಹೋಗುತ್ತಿದೆಯೊ ಎಂಬಂತೆ ಅದನ್ನು ಅಳ್ಳಾಡಿಸುತ್ತಾ, ಕೂಳನ್ನೆಲ್ಲ ಗಬಗಬನೆ ಖಾಲಿಮಾಡಿಬಿಟ್ಟಿತು, ನಿಮಿಷಾರ್ಧದಲ್ಲಿ!....

ಮರುದಿನ ಬೆಳಗ್ಗೆ ಸ್ವಲ್ಪ ಹೊತ್ತಾಗಿಯೆ ಎದ್ದ ಗುತ್ತಿ ಮುಂದೇನು ಮಾಡಬೇಕೆಂದು ಯೋಚಿಸತೊಡಗಿದನು. ಪೋಲೀಸಿನವರು ಕಂಪದಲ್ಲಿ ಸಿಕ್ಕಿ ಸತ್ತ ವಿಚಾರದ ಗಾಳಿಸುದ್ದಿ ಏನಾದರೂ ಕಾಗಿನಹಳ್ಳಿಯನ್ನು ತಲುಪಿ, ಯಾರ ಬಾಯಿಂದಾದರೂ ಬರಬಹುದೋ ಏನೋ ಎಂದು ನಿರೀಕ್ಷಿಸಿದನು. ಆದರೆ ಕಾಗಿನಹಳ್ಳಿ ಕೋಟೆಮೈಲಿ ಆಚೆಗಿದ್ದರೆ ಎಂತೊ ಅಂತೆ ಆ ವಿಚಾರದಲ್ಲಿ ಅತ್ಯಂತ ಅನಾಸ್ಥೆಯಿಂದಿತ್ತು. ಆ ದಿನವೆ ಅಮೆರಿಕಾದಲ್ಲಿ ಸ್ವಾಮಿ ವಿವೇಕಾನಂದರು ಒಬ್ಬ ಐರೋಪ್ಯ ಶಿಷ್ಯನಿಗೆ ಸಂನ್ಯಾಸ ದೀಕ್ಷೆಯಿತ್ತು ಆತನನ್ನು ಸ್ವಾಮಿ ಕೃಪಾರಂದರನ್ನಾಗಿ ಮಾಡಿರಬಹುದಾಗಿದ್ದ ಸುದ್ದಿಯ ವಿಷಯವಾಗಿ ಎಷ್ಟು ತಿಳುವಳಿಕೆಯಿತ್ತೊ ಅಷ್ಟೆ ತಿಳುವಳಿಕೆ ಇತ್ತು ಕಾಗಿನಹಳ್ಳಿಗೆ ಸಿಂಬಾವಿ ಗುತ್ತಿ ಪೋಲೀಸರಿಂದ ತಪ್ಪಿಸಿಕೊಂಡು ಬಂದಿದ್ದ ವಿಷಯದಲ್ಲಿಯೂ!

ಆವೊತ್ತು ಕಾಗಿನಹಳ್ಳಿಯನ್ನೆಲ್ಲ ಕಲಕಿದ ಸುದ್ದಿ ಬೇರೊಂದಾಗಿತ್ತು: ಬೆಳಗ್ಗೆ ಸುಮಾರು ಒಂಬತ್ತು ಗಂಟೆಯ ಹೊತ್ತಿನಲ್ಲಿ ಹಳೆಮನೆ ಹೆಗ್ಗಡೆಯವರು ಕಳಿಸಿದ್ದ ಬೈರ ಬಂದು, ದೊಡ್ಡಣ್ಣಹೆಗ್ಗಡೆಯವರು ತೀರ್ಥಹಳ್ಳಿಯಲ್ಲಿ ವಿಚಾರವನ್ನೂ ಬೆಟ್ಟಳ್ಳಿ ಗಾಡಿಯಲ್ಲಿ ದೇವಯ್ಯಗೌಡರು ಮುಕುಂದಯ್ಯಗೌಡರು ಹೆಣ ತರಲು ಹೋಗಿರುವ ವಿಚಾರವನ್ನೂ ತಿಳಿಸಿದನು. ತಮ್ಮ ಅಕ್ಕನ ಮಗಳ ಗಂಡನ ಶವಸಂಸ್ಕಾರದಲ್ಲಿ ಪಾಲುಗೊಳ್ಳಲು ಕಾಗಿನಹಳ್ಳಿ ಗೌಡರು ಸುದ್ದಿ ಮುಟ್ಟಿದ ಒಡನೆಯೆ ಸುಮಾರು ಏಳೆಂಟುಮೈಲಿ ದೂರವಿದ್ದ ಹಳೆಮನೆಗೆ ಹೊರಟರು. ಅವರ ಸಂಗಡವೆ ಮತ್ತೆ ಹಿಂದಕ್ಕೆ ಹೊರಟಿದ್ದ ಬೈರನನ್ನು ಕೂಡಿಕೊಂಡು ಗುತ್ತಿಯೂ ಹೊರಟನು.

ಬೈರನನ್ನು ಕಂಡಾಗ ಗುತ್ತಿ ದಿಗಿಲುಗೊಂಡಿದ್ದನು, ತನ್ನ ಕಥೆ ಅವನಿಗೆ ಗೊತ್ತಿದೆಯೊ ಏನೋ ಎಂದು. ಆದರೆ ಬೈರನಿಗೆ ಅದಾವುದೂ ತಿಳಿದಿದ್ದಂತೆ ತೋರಲಿಲ್ಲ. ಬೈರನೇ ಆಶ್ಚರ್ಯ ಸೂಚಿಸಿ, ಸಿಂಬಾವಿಗೆ ಬಹುದೂರದ ಮೂಲೆಯಲ್ಲಿದ್ದ ಕಾಗಿನಹಳ್ಳಿಗೆ ಗುತ್ತಿ ಏಕೆ ಬಂದಿದ್ದನೆಂದು ಕೇಳಿದಾಗ, ಹೆಗ್ಗಡೆಯವರು ಏನೋ ಕಾಗದ ಕೊಟ್ಟಿದ್ದರು, ಅದಕ್ಕಾಗಿ ಬಂದಿದ್ದೆ ಎಂದಿದ್ದನು. ಅಂತೂ ಹಳೆಮನೆಯವರಿಗೂ ತಲುಪಿಲ್ಲ ಸುದ್ದಿ ಎಂದುಕೊಂಡು ಧೈರ್ಯತಾಳಿದ್ದನು. ಆದರೂ ಯಾರಿಂದಾದರೂ ಸುದ್ದಿ ಕೇಳಲು ಅವನು ಕಾತರನಾಗಿದ್ದನು. ಏಕೆಂದರೆ, ಅವನಿಗೆ ಪೋಲೀಸರು ಸತ್ತಿದ್ದಾರೆಯೆ ಇಲ್ಲವೆ ಎಂಬ ವಾರ್ತೆ ಬಹು ಮುಖ್ಯವಾಗಿತ್ತು. ಅವರೇನಾದರೂ ಸತ್ತಿದ್ದರೆ, ತಾನು ಆ ಕಡೆ ಕಾಲು ಹಾಕುವುದು ಅತ್ಯಂತ ಅಪಾಯಕಾರಿಯಾಗಿತ್ತು.

ಏನಾದರೂ ಆಗಲಿ, ತನ್ನ ಎಚ್ಚರಿಕೆ ತನಗಿರುವುದು ಮೇಲು ಎಂದುಕೊಂಡು, ಅವನು ತನ್ನ ಗುರುತು ಆದಷ್ಟು ಮಟ್ಟಿಗೆ ಥಕ್ಕನೆ ಯಾರಿಗೂ ಸಿಕ್ಕದಿರಲಿ ಎಂದು, ಹಿಂದಿನ ದಿನ ಇಡೀ ದಿನವೆಲ್ಲ ಜಪ್ಪಿದ್ದ ಬಿರುಮಳೆ ಈವೊತ್ತು ಸೋಜಿಗವೆಂಬಂತೆ ನಿಂತು ಚೆನ್ನಾಗಿ ಹೊಳವಾಗಿ ಬಿಸಿಲು ಬಂದಿದ್ದರೂ, ಹಾಕಿದ್ದ ಕಂಬಳಿಕೊಪ್ಪೆಯನ್ನು ತೆಗೆದಿರಲಿಲ್ಲ. ಹಾದಿ ನೋಡಲು ಎಷ್ಟು ಬೇಕೋ ಅಷ್ಟು ಮಾತ್ರ ಕಂಡಿಬಿಟ್ಟು ಕೊಂಡಿದ್ದನು, ಮುಖವನ್ನೆಲ್ಲ ಆದಷ್ಟು ಮರೆಮಾಡಿಕೊಂಡು.

ಗುತ್ತಿ ಬೈರನೊಡನೆ ಹಳೆಮನೆಯ ಸುಡುಗಾಡಿಗೆ ಹೋಗುವಷ್ಟರಲ್ಲಿ ದೊಡ್ಡಣ್ಣ ಹೆಗ್ಗಡೆಯವರ ಕಳೇಬರವಾಗಲೆ ಅಲ್ಲಿಗೆ ಬಂದಿತ್ತು. ಹೊಲೆಯರು ಮೊದಲಾದ ಕೀಳು ಜಾತಿಯ ಜನರೆಲ್ಲ ದೂರದೂರ ಪೊದೆಗಳೆಡೆ ಗುಂಪುಸೇರಿ ದುಃಖಿಸುತ್ತಿದ್ದರು. ಯಾರೂ ಗುತ್ತಿಯನ್ನು ಗಮನಿಸುವ ಸ್ಥಿತಿಯಲ್ಲಿರಲಿಲ್ಲ. ಗುತ್ತಿಗೂ ದುಃಖವುಕ್ಕಿಬಂದು ನೋಡುತ್ತಾ ನಿಂತಿದ್ದನು. ಏಕೆಂದರೆ ತನ್ನ ಚಿಕ್ಕಂದಿ ನಿಂದಲೂ ಅವರು ತರುಣರಾಗಿ ಯುವಕರಾಗಿ, ಸಿಂಬಾವಿಯ ನೆಂಟರ ಮನೆಗೆ ಬರುತ್ತಿದ್ದಾಗಿನಿಂದಲೂ ಅವರೊಡನೆ ಆಡಿ ಓಡಾಡಿ ಬೇಟೆಯಾಡಿ, ದೊಡ್ಡಣ್ಣ ಹೆಗ್ಗಡೆಯವರಲ್ಲಿ ಅವನಿಗೊಂದು ಗೌರವಪೂರ್ಣ ವಿಶ್ವಾಸ ಉಂಟಾಗಿತ್ತು.

ಅವನು ನೋಡುತ್ತಾ ನಿಂತಿದ್ದಾಗಲೆ ದೊಡ್ಡಣ್ಣಹೆಗ್ಗಡೆಯವರ ಧರ್ಮಪತ್ನಿ ರಂಗಮ್ಮ ಹೆಗ್ಗಡಿತಿಯವರು ಗಂಡನ ಪಾದಕ್ಕೆ ಅಡ್ಡಬಿದ್ದರು ಎಷ್ಟು ಹೊತ್ತಾದರೂ ಮೇಲೇಳದೆ, ಸತ್ತೇಹೋಗಿದ್ದರು! ಆಗಂತೂ ನೆರೆದಿದ್ದ ಬಂಧುಗಳೊಡನೆ ಆಳುಕಾಳುಗಳೆಲ್ಲರೂ ಸುಡುಗಾಡೇ ಗೋಳಾಡುವಂತೆ ರೋದಿಸಿದ್ದರು. ಗುತ್ತಿಗೆ ಆ ರೋದನ, ಆ ಶೋಕ, ಆ ದುಃಖ ಇವುಗಳ ಮುಂದೆ 'ಛೀಃ ತಾನೆಷ್ಟರವನು? ತನ್ನ ಕಷ್ಟ ಏನು ಮಹಾ?' ಎಂಬ ಒಂದು ತರಹದ ವೈರಾಗ್ಯಭಾವನೆ ಹುಟ್ಟಿ, ಮುಂದೆ ತನಗೇನಾಗುತ್ತದೆ ಎಂಬ ವಿಚಾರದಲ್ಲಿ ಅಲಕ್ಷವಾಗಿದ್ದನು: 'ಹಾಳು ಈ ಭೂಮಿಯ ಬಾಳೇ ಇಷ್ಟು! ಇಂದಲ್ಲ ನಾಳೆ ಎಲ್ಲರಿಗೂ ಇದೇ ಗತಿ! ಅದಕ್ಕಾಗಿ ಸುಮ್ಮನೆ ಪಾಡುಪಡುವುದೇಕೆ? ಬ್ರಹ್ಮ ಹಣೆಯಲ್ಲಿ ಬರೆದದ್ದು ಏನಾಗಬೇಕು ಅಂತಾ ಇದೆಯೋ ಅದೇ ಆಗುತ್ತದೆ!'

ಆ ದಿನ ರಾತ್ರಿ ಅವನು ಬೈರನ ಬಿಡಾರದಲ್ಲಿಯೆ ಉಳಿದಿದ್ದನು. ಶವಸಂಸ್ಕಾರದಲ್ಲಿ ಭಾಗಿಗಳಾಗಲು ಬಂದಿದ್ದ ಬಂಧುವರ್ಗದವರ ಮಧ್ಯೆ ತನ್ನ ಒಡೆಯರು ಸಿಂಬಾವಿ ಭರಮೈಹೆಗ್ಗಡೆಯವರನ್ನೂ ನೋಡಿದ್ದನು. ನಾಳೆ ಅವರನ್ನು ಹೇಗಾದರೂ ಮಾಡಿ ಏಕಾಂತವಾಗಿ ಸಂಧಿಸಿ, ತಾನು ಮುಂದೆ ಮಾಡಬೇಕಾದುದನ್ನು ಅವರಿಂದ ತಿಳಿದು, ಅದರಂತೆ ಮಾಡುತ್ತೇನೆ-ಎಂದು ಆಲೋಚಿಸುತ್ತಾ ಬಿಡಾರದ ಒಳಗೆ ಕತ್ತಲೆಯಲ್ಲಿ ಒಬ್ಬನೆ ಮಲಗಿದ್ದ ಗುತ್ತಿಗೆ,

ಯಾರೋ ಬಾಗಿಲ ಬಳಿ ಬಂದದ್ದು ಗೊತ್ತಾಗಿ, ಒಡೆಯರ ಮನೆಗೆಲಸಕ್ಕೆ ಇತರ ಆಳುಗಳೊಡನೆ ಹೋಗಿದ್ದ ಬೈರನೇ ಬಂದನೆಂದು ಭಾವಿಸಿ, “ಯಾರದು?” ಎಂದನು.

ಯಾವ ಉತ್ತರವೂ ಬರಲಿಲ್ಲ; ಯಾರೂ ಮಾತಾಡಲಿಲ್ಲ; ಆದರೆ ಕೈ ಬಳೆಗಳ ಕಿಂಕಿಣಿಕಿಣಿ ಕೇಳಿಸಿತು.

ಬೈರನ ಹೆಂಡತಿ ಸತ್ತುಹೋಗಿದ್ದು, ಅವನಿನ್ನೂ ಮದುವೆಯಾಗದೆ ಒಬ್ಬೊಂಟಿಗನಾಗಿಯೆ ಬಿಡಾರದಲ್ಲಿದ್ದುಕೊಂಡು, ತನ್ನ ಅಡುಗೆಯನ್ನು ತಾನೇ ಮಾಡಿಕೊಂಡು 'ಒಂಟಿಗೇಡಿ' ಎನ್ನಿಸಿಕೊಂಡಿದ್ದಾನೆ ಎಂಬ ಸಂಗತಿಯನ್ನು ತಿಳಿದಿದ್ದ ಗುತ್ತಿಗೆ, ಬಳೆಯ ಸದ್ದು ಕೇಳಿ ತುಸು ಸೋಜಿಗವಾಯಿತು. ಆದರೆ ಬೈರನ ಶೃಂಗಾರಜೀವನದ ಖುಖ್ಯಾತಿಯನ್ನು ಅರಿತಿದ್ದ ಅವನಿಗೆ ಮನ್ಮಥಕುತೂಹಲ ಕೆರಳಿ ಬಾಗಿಲತ್ತ ನೋಡುತ್ತ ಮಲಗಿಯೆ ಇದ್ದನು.

ಬೈರನ ಬಿಡಾರದ ಒಳಗೆ ಕತ್ತಲೆ ಕವಿದಿದ್ದಿತಾದರೂ ಹೊರಗಡೆ ಇದ್ದ ಬಯಲುಗತ್ತಲೆಯ ಬೆಳಕಿನ ದೆಸೆಯಿಂದ ಬಾಗಿಲಷ್ಟು ಅಗಲದ ಚೌಕದಲ್ಲಿ ಬಾಗಿಲಿಗೆ ಬಂದ ಯಾರನ್ನಾದರೂ ಆಕಾರಮಾತ್ರವಾಗಿ ನೋಡ ಬಹುದಾಗಿತ್ತು. ಗುತ್ತಿ ಅತ್ತಕಡೆಯೇ ಕಣ್ಣಾಗಿರಲು ಒಂದು ಹೆಣ್ಣಿನ ಆಕೃತಿ ಬಾಗಿಲಿಗೆ ಬಂದು ನಿಂತಿತು. ಗುತ್ತಿಗೆ ತುಸುವೆ ಮೈ ಬಿಸಿಯೇರಿತು. ಯಾರಿರಬಹುದು? ಹಳೆಮನೆಯ ಕೇರಿಯವರೆಲ್ಲರೂ ಒಂದಲ್ಲ ಒಂದು ರೀತಿಯಿಂದ ನನಗೆ ಗೊತ್ತಿರುವವರೆ? ಆಕೃತಿ ನೋಡಿದರೆ ಹುಡುಗಿಯಂತೆ ಕಾಣುತ್ತಿದೆ! ಬೈರನಿಗಾಗಿ ಬಂದವಳೇ? ಅಥವಾ ತನಗೇ ಆಗಿಯೋ? ತಾನು ಬಂದದ್ದು ಅಷ್ಟಾಗಿ ಯಾರಿಗೂ ಗೊತ್ತಾಗಿಲ್ಲ. ಆ ತೆರನ ಸಂಬಂಧದಲ್ಲಿ ತನಗೆ ಗೊತ್ತಿರುವವಳೆಂದರೆ ತಳವಾರ ಸಣ್ಣನ ಮಗಳು ಪುಟ್ಟಿ! ಹಿಂದೆ ಹುಡುಗಾಟದ ಮಟ್ಟದಲ್ಲಿ ಅವಳ ಸಂಗ ಮತ್ತು ಅಂಗಸುಖಗಳೆರಡನ್ನೂ ಅನುಭವಿಸಿದ್ದನು. ಅದನ್ನು ನೆನೆದು ಅವನಿಗೆ ನವಿರು ನಿಮಿರಿತು. ಹೊಲೆಯನ ರೂಕ್ಷಪ್ರಜ್ಞೆಗೆ ಒಂದು ಕ್ಷಣದ ಮಟ್ಟಿಗೆ ಪೂರ್ವಾಪರ ಸಂಬಂಧ ತಪ್ಪಿ ಹೋದಂತಾಗಿ ತಿಮ್ಮಿಯನ್ನೂ ಅವಳ ಸರ್ವಾಂಗ ಸರ್ವಸುಖ ಸಂಬಂಧವನ್ನೂ ಅದು ಮರೆತೆಬಿಟ್ಟಿತ್ತು.!

ಏನನ್ನೋ ಗುಟ್ಟಾಗಿ ಮಾತಾಡುವವನಂತೆ ಗಟ್ಟಿಯಾಗಿ ಪಿಸುದನಿಯಲ್ಲಿ “ಯಾರು? ಪುಟ್ಟಿಯೇನೇ?” ಎಂದು ಕೇಳಿ, ಉತ್ತರವನ್ನು ನಿರೀಕ್ಷಿಸದೆ “ನಾನೊಬ್ಬನೆ ಇದ್ದೀನಿ ಕಣೆ!” ಎಂದು ಆಶ್ವಾಸನೆ ಕೊಡುವಂತೆ ನುಡಿದನು.

ಅಷ್ಟರಲ್ಲಿ ಹೊರಗಡೆ ದೂರದಲ್ಲಿ ಯಾರೊ ಕೆಲವರು ಮಾತನಾಡಿಕೊಳ್ಳುತ್ತಿರುವ ಸದ್ದು ಕೇಳಿಸಿ, ಬಾಗಿಲಲ್ಲಿ ನಿಂತಿದ್ದ ಆಕೃತಿ ತಟಕ್ಕನೆ ಹಿಂದಕ್ಕೆ ಸರಿದು ಮರೆಯಾಯಿತು. ಬೈರನೂ ಗುತ್ತಿಯನ್ನು ಹೆಸರು ಹಿಡಿದು ಕೂಗುತ್ತಾ ಬಾಗಿಲಿಗೆ ಬಂದನು….

ಮರುದಿನ ಗುತ್ತಿ ಸಮಯಕಾದು, ಹಳೆಮನೆ ಹೆಂಚಿನ ಮನೆಯಲ್ಲಿ ಉಳಿದುಕೊಂಡಿದ್ದ ತನ್ನ ಒಡೆಯರನ್ನು ಏಕಾಂತವಾಗಿಯೆ ಸಂಧಿಸಿದನು. ಅವರು ಪೋಲೀಸಿನವನು ಕಂಪದಲ್ಲಿ ಸಿಕ್ಕಿಬಿದ್ದಿದ್ದು, ತೀರ್ಥಹಳ್ಳಿಗೆ ಹೋಗುತ್ತಿದ್ದ ಬೆಟ್ಟಳ್ಳಿ ಗಾಡಿಯಲ್ಲಿದ್ದವರಿಂದ ರಕ್ಷಿಸಲ್ಪಟ್ಟಿದ್ದ ವಿಚಾರವನ್ನು ತಿಳಿಸಿ, ಗುತ್ತಿಯ ದಸ್ತಗಿರಿಗಾಗಿ ವಾರಂಟು ಹೊರಡಿಸುತ್ತಾರಂತೆ ಎಂಬುದನ್ನು ಹೇಳಿ “ನೀನು ಒಂದು ಆರು ತಿಂಗಳು ಒಂದು ವರ್ಷ, ಎಲ್ಲಾದರೂ

ತಲೆತಪ್ಪಿಸಿಕೊಂಡಿರು. ಇದೆಲ್ಲ ತಣ್ಣಗಾದ ಮ್ಯಾಲೆ ಕೇರಿಗೆ ಬರಬಹುದು. ನಾನೂ ಕಲ್ಲೂರು ಮಂಜಭಟ್ಟರಿಗೆ ಹೇಳಿ ಏನಾದ್ರೂ ಮಾಡಿಸ್ತೀನಿ. ತೀರ್ಥಹಳ್ಳಿ ಅಮಲ್ದಾರ್ರು ಅವರ ಸಂಬಂಧದೋರಂತೆ." ಎಂದು ಸಲಹೆ ಕೊಟ್ಟರು.

ದಸ್ತಗಿರಿ, ವಾರಂಟು ಎಂಬ ಭಯಂಕರ ಪದಗಳನ್ನು ಕೇಳಿಯೆ ಗುತ್ತಿಗೆ ಜಂಘಾಬಲ ಉಡುಗಿದಂತಾಯ್ತು. ಓಡಿಹೋಗಿ ತಲೆ ತಪ್ಪಿಸಿಕೊಂಡಿರುವ ಸಲಹೆ ಅವನಿಗೆ ಅನಾವಶ್ಯಕವಾಗಿತ್ತು. ಆದರೂ ಧೈರ್ಯ ಮಾಡಿ ಅವನು ತಿಮ್ಮಿಯನ್ನು ಕರೆದುಕೊಂಡೇ ಓಡಿ ಹೋಗುವ ವಿಚಾರವೆತ್ತಿದಾಗ, ಒಡೆಯರು ರೇಗಿ ಬಯ್ದರು: "ಮುಂಡೇಮಗನೇ, ನಿನ್ನ ತಲೆಯಂತೂ ಹೋಗ್ತದಲ್ಲಾ! ನಮ್ಮ ತಲೆಗೂ ತಂದಿಡಬ್ಯಾಡ! ನೀನೆಲ್ಲಾದ್ರೂ ಬೆಟ್ಟಳ್ಳಿ ಕೇರಿಕಡೆ ಸುಳಿದ್ರೆ, ನಿನ್ನ ಹಿಡಿದು ಪೋಲೀಸರಿಗೆ ಕೊಡ್ತಾರೆ? ಗೊತ್ತಾತೇನು?.... ಕೊಪ್ಪದ ಸೀಮೆ, ಮುತ್ತೂರು ಸೀಮೆ ಕಡೆಗೆ ಹೋಗು. ತೀರ್ಥಹಳ್ಳಿ ಮ್ಯಾಲೆ ಹೋಗೀಯಾ ಹುಷಾರು! ಆಗುಂಬೆ ಕಡೆಯಿಂದ ಹೋಗು.... ಕೊಪ್ಪದ ಹತ್ತಿರ 'ಆಲೆಗದ್ದೆ' ಅಂತಾ ಇದೆ. ಅಲ್ಲಿ ಗಣಪಯ್ಯನಾಯ್ಕರು ಅಂತಾ ಅದಾರೆ. ಅವರ ಹತ್ತಿರ ಕೆಲಸಕ್ಕೆ ಸೇರಿದ್ರೆ, ಪೋಲೀಸರು ನಿನ್ನ ಹತ್ರಾನೇ ಬರಾದಿಲ್ಲ.... ಅಲ್ಲಿದ್ರೆ ಮುತ್ತೂರು ಸೀಮೇಲಿ 'ಕಾನೂರು' ಅಂತಾ ಅದೆ. ಅಲ್ಲಿ ಸುಬ್ಬಯ್ಯಗೌಡ್ರು, ಚಂದ್ರಯ್ಯಗೌಡರು ಅಂತಾ ಎಲ್ಲಾ ಅದಾರೆ. ಅವರನ್ನಾದ್ರೂ ಸೇರು...ಎಲ್ಲ ತಣ್ಣಗಾದಮ್ಯಾಲೆ ನಾ ಹೇಳಿಕಳಿಸ್ತೀನಿ!...."

* * *

## ೪೭

ಕಾರ್ಮೋಡ ಮುಸುಗಿ ಮಳೆ ಹಿಡಿದು ಹೊಡೆಯುತ್ತಿದ್ದುದರಿಂದ ಹೊತ್ತಿಗೆ ಮುನ್ನವೆ ಬೈಗುಗಪ್ಪು ಕವಿದಿತ್ತು. ಗದ್ದೆಯ ಕೆಲಸದಿಂದ ಹಿಂದಿರುಗುತ್ತಿದ್ದ ಆಳುಗಳೆಲ್ಲ 'ಇವೊತ್ತು ಎಂದಿಗಿಂತಲೂ ಹೆಚ್ಚು ಹೊತ್ತು ಕೆಲಸಮಾಡಿಬಿಟ್ಟರು. ಮುಕುಂದೇಗೌಡರು.' ಎಂದು ಮನಸ್ಸಿನಲ್ಲಿಯೆ ತುಸು ಅಸಮಾಧಾನಪಟ್ಟುಕೊಂಡು ತಮ್ಮ ತಮ್ಮ ಬಿಡಾರಗಳಿಗೆ, ಉಪ್ಪು ಮೆಣಸು ಬಾಳೇಕಾಯಿ ಅಕ್ಕಿ ಎಲೆ ಅಡಿಕೆ ಹೊಗೆಸೊಪ್ಪು ಮೊದಲಾದ ಗಂಟುಕಟ್ಟಿದ್ದ ಪಡಿಯ ಸಾಮಗ್ರಿಗಳೊಡನೆ, ಕೆಲವರು ಕಂಬಳಿಕೊಪ್ಪೆ ಹಾಕಿಕೊಂಡೂ, ಕೆಲವರು ಗೊರಬು ಸೂಡಿಕೊಂಡೂ ದಣಿದು ಮೆಲ್ಲನೆ ಹಿಂದಿರುಗುತ್ತಿದ್ದರು. ಹೆಣ್ಣಾಳುಗಳ ಗುಂಪಿನಲ್ಲಿ ಬರುತ್ತಿದ್ದ ಪೀಂಚಲು ತನ್ನ ಬಿಡಾರದ ಮುಂದೆ ನಿಂತು ಅಕ್ಕಣಿ, ಬಾಗಿ, ಚಿಕ್ಕಿ ಮೊದಲಾದವರನ್ನು ಬರಿಯ ನಗೆಯಿಂದಲೋ ಅಥವಾ ರೂಢಿಯ ಉಪಚಾರದ ಮಾತಿನಿಂದಲೋ ಬೀಳುಕೊಟ್ಟಳು. ತನ್ನ ಬಿಡಾರದ ತಡಿಕೆ ಬಾಗಿಲಿಗೆ ಬಿಗಿದಿದ್ದ ಹಗ್ಗವನ್ನು ಬಿಚ್ಚಿ, ಅದನ್ನು ನೂಕಿ, ಗೊರಬು ಬಾಗಿಲಿಗೆ ಹಿಡಿಸುವಂತೆ ಅಡ್ಡಡ್ಡವಾಗಿ ತನ್ನೆಲ್ಲ ಗಂಟುಮೂಟೆಗಳೊಡನೆ ಒಳಹೊಕ್ಕು, ಮತ್ತೆ ಬಾಗಿಲು ಹಾಕಿಕೊಂಡಳು, ಹೊರಗಡೆ ಬೀಳುತ್ತಿದ್ದ ಮಳೆಯ ಇರಿಚಲು ಒಳಕ್ಕೆ ಸಿಡಿದುಹಾರಿ ಬಿಡಾರದ ನೆಲ ಒದ್ದೆಯಾಗದಿರಲಿ ಎಂದು.

ಹೊರಗಡೆ ಮೇಯುತ್ತಿದ್ದು, ಒದ್ದೆಮುದ್ದೆಯಾಗಿ ಗರಿ ತಿಪ್ಪುಳು ಮೆಯ್ಗಂಟಿ ಸಣ್ಣಗೆ ಕಾಣುತ್ತಿದ್ದ ಅವಳ ಒಂದು ಹುಂಜವೂ ಎರಡು ಹೇಂಟೆಗಳೂ ಮೂರುನಾಲ್ಕು ಮರಿಗಳೂ ಕತ್ತಲಾಗುತ್ತಿದ್ದುದರಿಂದ ಒಳಕ್ಕೆ ಹೋಗಲು ಮನೆಯ ಯಜಮಾನಿಯ ಆಗಮನವನ್ನೇ ನಿರೀಕ್ಷಿಸುತ್ತಿದ್ದಳು, ಅವಳು ಬಂದು ಬಾಗಿಲು ತೆಗೆದೊಡನೆಯೆ ಅವಳಿಗಿಂತಲೂ

ಮೊದಲೆ ಒಳಕ್ಕೆ ನುಗ್ಗಿ, ಗೊತ್ತು ಕೂರುವ ಜಾಗಕ್ಕೆ ಹೋಗಿದ್ದುವು. ಪೀಂಚಲು ಮೂಲೆಯಲ್ಲಿ ಗೂಟಕ್ಕೆ ತಗುಲಿಸಿದ್ದ ಒಂದು ಕಣ್ಣುಕಟ್ಟಿನ ದೊಡ್ಡ ಬುಟ್ಟಿಯನ್ನು ತೆಗೆದು ಆ ಕೋಳಿಗಳನ್ನೆಲ್ಲ ಒಟ್ಟಿಗೆ ಮೂಲೆಗೆ ತಳ್ಳಿ ಮುಚ್ಚಿಹಾಕಿದಳು. ತನ್ನ ಗೊರಬನ್ನು ಆ ಗೂಟಕ್ಕೆ ತಗುಲಿಹಾಕಿದಳು. ಕೈಯಲ್ಲಿದ್ದ ಗಂಟನ್ನು ಕೆಳಗಿಟ್ಟು, ಆ ಗಂಟಿಗೇ ಒತ್ತಿ ಹಿಡಿದುಕೊಂಡು ಬಂದಿದ್ದ ಒಂದು ಕೆಸುವಿನ ಎಲೆಯ ಕೊಟ್ಟೆಯನ್ನು ತೆಗೆದು, ಪ್ರತ್ಯೇಕವಾಗಿ, ಒಲೆಯಿದ್ದ ಮೂಲೆಯೆಡೆ ಇಟ್ಟಳು. ಇಟ್ಟೊಡನೆ ಬಿಚ್ಚಿಕೊಂಡ ಆ ಪೊಟ್ಟಣದಲ್ಲಿ ಕೆಲವು ಬೆಳ್ಳೇಡಿ, ಸೋಸಲು, ತೊಳ್ಳೆಮೀನುಗಳಿದ್ದು, ಒಂದು ತೊಳ್ಳೆಮೀನಿಗೆ ಇನ್ನೂ ಜೀವವಿದ್ದುದರಿಂದ ಚಿಮ್ಮಿಹಾರಿ ಒಲೆಯ ಬೂದಿಗೆ ಬಿದ್ದಿತು. ಪೀಂಚಲು ಅದನ್ನೆತ್ತಿ ನೆಲಕ್ಕೆ ಬಡಿದು ನಿಶ್ಚಲವಾದ ಅದನ್ನು ಮತ್ತೆ ಎತ್ತಿ ಕೊಟ್ಟೆಯ ಎಲೆಗೇ ಹಾಕಿದಳು.

ಒಂದು ಅರುವೆಯಿಂದ ಕೈಕಾಲು ಮುಖದ ಒದ್ದೆಯನ್ನೆಲ್ಲ ಒರಸಿಕೊಂಡು, ತುಸು ಹೆಚ್ಚು ಕತ್ತಲೆ ಕವಿದಿದ್ದ ಮೂಲೆಯಲ್ಲಿ ಬಾಗಿಲಕಡೆಗೆ ಬೆನ್ನಾಗಿ ನಿಂತು ಒದ್ದೆಯಾಗಿದ್ದ ಸೀರೆಯನ್ನು ಬಿಚ್ಚಿ ಹರಡಿದಳು. ಯಾರೂ ಇರದಿದ್ದರೂ ಯಾರೂ ನೋಡುವ ಸಂಭವವೂ ಇರದಿದ್ದರೂ ಅವಳು ತನ್ನ ನಗ್ನತೆಗೆ ತಾನೇ ನಾಚಿಯೂ ಅದನ್ನು ಸವಿಯದಿರಲಾಗಲಿಲ್ಲ. ಅದರಲ್ಲಿಯೂ ತುಸುವೆ ಉಬ್ಬಿದಂತಿದ್ದ ತನ್ನ ಬದ್ದೆಯ ಭಾಗವನ್ನು ನೋಡಿಕೊಂಡು ಮುಗುಳುನಗುತ್ತಾ ಏನನ್ನೋ ಸವಿಯುವಂತೆ ಕ್ಷಣಕಾಲ ನಿಂತಳು. ಅಲ್ಲಿಯೆ ಅಲ್ಲವೆ ಇನ್ನೊಂದು ಆರು ತಿಂಗಳಲ್ಲಿಯೆ ತನಗೆ ಕಂದಮ್ಮನಾಗಿ ಬರುವ ಒಂದು ಜೀವ ಬೆಳೆಯುತ್ತಿರುವುದು? ಆದರೆ ಚಳಿಯನ್ನನುಭವಿಸಿದ ಮೈ ಅವಳನ್ನು ಎಚ್ಚರಿಸಿದುದರಿಂದ ಬೇಗಬೇಗನೆ ಮತ್ತೊಂದು ಒಣಗಿದ ಉತ್ತಮತರದ ಸೀರೆಯನ್ನು ಸುತ್ತಿಕೊಂಡು, ಮುಂದಿನ ಅಡುಗೆಯ ಕೆಲಸಕ್ಕೆ ತೊಡಗಿದಳು. ಗಂಡ ದುಡಿದು ದಣಿದು ಮಳೆಯಲ್ಲಿ ಒದ್ದೆಯಾಗಿ ಬರುವ ಹೊತ್ತಿಗೆ ಏನನ್ನಾದರೂ ಬಿಸಿಬಿಸಿ ಮಾಡಿರದಿದ್ದರೆ? ಐತ ತುಂಬ ಒಲವಿನ ಸ್ವಭಾವದವನಾಗಿದ್ದರೂ ದಣಿದು ಹಸಿದಾಗ, ಹಟಮಾಡುವ ಮಕ್ಕಳ ಹಾಗೆ, ರೇಗಾಡುತ್ತಿದ್ದುದು ಉಂಟು! ಜೊತೆಗೆ ಈಗೀಗ ಪೀಂಚಲುವಿನ ಸತೀತ್ವ ಪರಿಪಕ್ವವಾಗುತ್ತಾ ಮಾತೃತ್ವಕ್ಕೆ ತಿರುಗುತ್ತಿದ್ದುದು, ಅದರ ಅಕ್ಕರೆಯ ವಲಯಕ್ಕೆ ತನ್ನ ಗಂಡನನ್ನೂ ಸೆಳೆದುಕೊಳ್ಳುವ ಮೃದುಲ ಸಾಹಸದಲ್ಲಿ ಸಂತೋಷಿಸುತಿತ್ತು!

ಒಲೆಯಲ್ಲಿ ಬೂದಿಮುಚ್ಚಿಕೊಂಡಿದ್ದ ಒಂದು ಸಣ್ಣ ಕೊಳ್ಳಿಯನ್ನೂದಿ, ಜಿಗ್ಗು ಕಚ್ಚಿ, ಬೆಂಕಿಮಾಡಿದಳು. ಅದರಿಂದಲೆ ಒಂದು ಉರಿಯುವ ಕಡ್ಡಿಯಿಂದ ಹಣತೆಯ ಸೊಡರು ಹೊತ್ತಿಸಿಬಿಟ್ಟಳು. ಆಗತಾನೆ ಹಳ್ಳಿಗಳ ಕಡೆಗೂ ಬರತೊಡಗಿ ಅತಿಅತಿ ಅಪೂರ್ವ ವಸ್ತುವಾಗಿದ್ದ ಒಂದು ಬೆಂಕಿಪೊಟ್ಟಣವನ್ನು ಐತ ಹೇಗೋ ಸಂಪಾದಿಸಿ ಅವಳಿಗೆ ತಂದುಕೊಟ್ಟಿದ್ದನಾದರೂ ಪೀಂಚಲು ಅದನ್ನು ಅಮೂಲ್ಯವಸ್ತುವನ್ನು ರಕ್ಷಿಸುವಂತೆ ಕಾಪಾಡಿಟ್ಟುಕೊಂಡಿದ್ದಳು. ಕಷ್ಟಕಾಲದಲ್ಲಿ ಅನಿವಾರ್ಯವಾದಾಗ ಮಾತ್ರ ಅದರ ಉಪಯೋಗವೆಂಬುದು ಅವಳ ದೃಢನಿಶ್ಚಯವಾಗಿತ್ತು: ತನಗೆ ಮಗು ಜನಿಸಿದ ಮೇಲೆ ವೇಳೆಯಲ್ಲದ ವೇಳೆಯಲ್ಲಿ ದೀಪ ಹೊತ್ತಿಸಬೇಕಾಗಿಬರಬಹುದು; ಬೆಂಕಿಮಾಡಿ ಏನನ್ನಾದರೂ ತಯಾರಿಸಬೇಕಾಗಿ ಬರಬಹುದು! ಅದಕ್ಕಾಗಿ ದಿನವೂ ಒಲೆಯಲ್ಲಿ ಒಂದು ಗಟ್ಟಿಕೊಳ್ಳಿ ಜೀವಂತವಾಗಿರುವಂತೆ ಮಾಡಿಟ್ಟು, ಸಾಯಂಕಾಲ ಅದನ್ನು ಊದಿಯೆ ಬೆಂಕಿ ಹೊತ್ತಿಸುತ್ತಿದ್ದಳು. ಒಂದು ವೇಳೆ ಅದು ಆರಿಯೆ ಹೋಗಿದ್ದರೆ ನೆರೆಯ ಬಿಡಾರಗಳಿಗೆ ಹೋಗಿ ಬೆಂಕಿ ತರುತ್ತಿದ್ದಳು. ಅಂತೂ ತನ್ನಲ್ಲಿದ್ದ ಬೆಂಕಿಪೊಟ್ಟಣದಲ್ಲಿ ಕಡ್ಡಿ ಒಂದೊ ಎರಡಕ್ಕಿಂತ ಹೆಚ್ಚಾಗಿ ಖರ್ಚಾಗದಂತೆ ಭದ್ರವಾಗಿಟ್ಟಿದ್ದಳು, ಒಲೆಯ ಸಮೀಪದಲ್ಲಿ ಥಂಡಿ ತಗುಲದಂತೆ.

ಏಡಿ ಮೀನುಗಳನ್ನು ಕೆಂಡದಲ್ಲಿ ಸುಟ್ಟು, ಚಟ್ನಿಗೆ ನುರಿದಿಟ್ಟು, ಸಣ್ಣ ಗಡಿಗೆಯಲ್ಲಿಟ್ಟಿದ್ದ ಅದಕ್ಕೆ ಸೇರಿಸುವ ಒಣಮೆಣಸಿನಕಾಯಿ ನೀರುಳ್ಳಿ ಕೊಬ್ಬರಿಯ ಚೂರು ಇತ್ಯಾದಿ ಮಸಾಲೆ ಸಾಮಗ್ರಿಗಳನ್ನು ಹುಡುಕತೊಡಗಿದಾಗ ಅವಳು ಹೌಹಾರಿ, ಸಣ್ಣಗೆ ಕೂಗಿಕೊಂಡು, ತಟಕ್ಕನೆ ಎದ್ದು ಹಿಂದಕ್ಕೆ ಚಿಮ್ಮಿ ನಿಂತಳು: ಐದಾರೇಳು ಕುಂಬ್ರಿ ಹುಳುಗಳೂ ಕೊಡ್ಲಿ ಹುಳುಗಳೂ ಗಡಿಗೆಯಿಂದ ನೆಗೆದು ನೆಲದ ಮೇಲೆಯೂ ಅವಳ ಮೈಮೇಲೆಯೂ ಹರಿದಾಡತೊಡಗಿದವು! ಒಂದನ್ನು ಕಾಲಿನಿಂದಲೆ ನೆಲಕ್ಕೆ ತಿಕ್ಕಿದಳು. ಆದರೆ ಸೆರಗಿನೊಳಗೆ ಹೊಕ್ಕ ಒಂದನ್ನು ಅಲ್ಲಿಂದ ಹೊರಡಿಸುವ ಪ್ರಯತ್ನದಲ್ಲಿ ಸದ್ಯಪ್ರಫುಲ್ಲವಾಗಿದ್ದ ಕೋಮಲ ಕುಚದ್ವಯಗಳನ್ನೂ ಪೀಡಿಸಬೇಕಾಗಿ ಬಂತು. ಅದರಲ್ಲಿ ಒಂದು ಹುಳು ಹಾರಿಹೋಗಿ ಗೊರಬಿನ ಮೇಲೆ ಕೂತಿತು. ಪೀಂಚಲು ಓಡಿಹೋಗಿ ಮೂಲೆಯಲ್ಲಿದ್ದ ಹಿಡಿಯನ್ನು ತೆಗೆದುಕೊಂಡು ಬಂದು ಬಡಿದಳು. ಅದು ಅರ್ಧಪ್ರಾಣವಾಗಿ ಬಿದ್ದು ತೆವಳಿಕೊಂಡು ಕೋಳಿಗಳನ್ನು ಕವುಚಿಹಾಕಿದ್ದ ಬುಟ್ಟಿಯೊಳಗೇ ನುಗ್ಗಿತು. ಕೋಳಿಗಳೇ ಅದರ ಮುಂದಿನ ಕ್ಷೇಮಸಮಾಚಾರ ತೆಗೆದುಕೊಳ್ಳುತ್ತವೆ ಎಂಬ ವಿಶ್ವಾಸದಿಂದ ಪೀಂಚಲು ನೆಲದ ಕಡೆ ತಿರುಗಿ ಅಲ್ಲಿ ಇಲ್ಲಿ ಮರೆಯಾಗಲು ಪ್ರಯತ್ನಿಸುತ್ತಿದ್ದ ಎರಡು ಮೂರನ್ನು ಹಿಡಿಯಿಂದ ಹೊಡೆದು ಕೊಂದಳು. ಉಳಿದವು ತಪ್ಪಿಸಿಕೊಂಡೆಬಿಟ್ಟುವು. ಎಳೆಬಸಿರಿ ಏದುತ್ತಾ ನಿಂತು, ತನಗೆ ತಿಳಿದಿದ್ದ ಕೆಲವೇ ಅತ್ಯಂತ ಅಸಹ್ಯವಾದ ಅಶ್ಲೀಲ ಪದಪ್ರಯೋಗದಿಂದ ಅವುಗಳನ್ನು ಶಪಿಸಿದಳು.

ಹೊರಗಡೆ ಬೃಹತ್ ಪ್ರಪಂಚ ಜೀವನದ ಮಹದ್ ವ್ಯಾಪಾರಗಳೂ ಇಷ್ಟೇ ಆಸ್ಥೆಯಿಂದ ಸಾಗಿದ್ದುವು; ಮಲೆನಾಡಿನ ಮಳೆಗಾಲದ ಜಡಿಮಳೆ ಸುರಿಯುತ್ತಿತ್ತು; ಕಾರ್ಗತ್ತಲೆ ದಟ್ಟೈಸಿತ್ತು.

ಅಡುಗೆಯನ್ನೆಲ್ಲ ಮುಗಿಸಿ ಪೀಂಚಲು ಕಾದಳು, ಗಂಡನಿಗಾಗಿ. ಅವನು ಇವೊತ್ತು ಬರುವುದು ಹೊತ್ತಾಗಬಹುದೆಂದು ಅವಳು ಊಹಿಸಿಯೇ ಇದ್ದಳು. ಆದರೆ ಈ ಮಳೆಯಲ್ಲಿ ಈ ಕಗ್ಗತ್ತಲೆಯಲ್ಲಿ ಐತನೂ ಮುಕುಂದಯ್ಯಗೌಡರೂ ಆ ಗುತ್ತಿಯನ್ನು ಕಟ್ಟಿಕೊಂಡು ಹುಲಿಕಲ್ಲು ನೆತ್ತಿಯ ಆಚೆಯ ಕಡೆಗಿದ್ದ ಕಲ್ಲುಮಂಟಪವಿದ್ದ ಕಂಟಕಮಯ ಪ್ರದೇಶದಲ್ಲಿ ಏನು ಮಾಡುತ್ತಿರಬಹುದು ಎಂದು ಊಹಿಸಲೂ ಸಾಧ್ಯವಿರಲಿಲ್ಲ ಅವಳಿಗೆ.

ಗಂಡನು ಬಂದ ಮೇಲೆಯೆ ಅವನೊಡನೆ ತಾನು ಉಣ್ಣುವುದು ಎಂದು ಮನಸ್ಸು ಮಾಡಿದ್ದಳು ಪೀಂಚಲು. ಆದರೆ ಗದ್ದೆಯಲ್ಲಿ ಪಾದಮುಚ್ಚುವಷ್ಟರ ನೀರಿನಲ್ಲಿ ನಿಂತು ದುಡಿದಿದ್ದ ಅವಳಿಗೆ ಹಸಿವು ಜೋರಾಗಿತ್ತು. ಹಸಿವಿನ ತೀಕ್ಷ್ಣತೆಯನ್ನು ಸ್ವಲ್ಪ ಕಡಿಮೆ ಮಾಡುವ ಉದ್ದೇಶದಿಂದ ಇನಿತೆ ಉಣ್ಣುವೆನೆಂದು ಕುಳಿತಳು. ಊಟಕ್ಕೆ ಕುಳಿತು, ಒಂದೆರಡು ತುತ್ತು ಏಡಿಮೀನಿನ ಚಟ್ನಿಯೊಡನೆ ಗಂಟಲಿಂದ ಹೊಟ್ಟೆಗಿಳಿದಮೇಲೆ, ನಾಲಗೆಯ ಹತೋಟಿ ಅವಳ ಕೈ ಮೀರಿತ್ತು. ಮತ್ತೆ ಮತ್ತೆ ಉಣ್ಣುವುದೇಕೆ ಎಂದು ಚೆನ್ನಾಗಿಯೆ ತನ್ನ ಊಟವನ್ನು ಪೂರೈಸಿದ್ದಳು. ಹಾಗೆಯೆ ಚಾಪೆಯ ಮೇಲೆ ಒರಗಿದ್ದಳು. ಅರೆ ನಿದ್ದೆಯ ಜೊಂಪು ಹತ್ತಿತ್ತು....

ಯಾರೊ ಬಾಗಿಲು ದೂಕುವ ಸದ್ದಾಗಿ ಪೀಂಚಲು ಚಾಪೆಯ ಮೇಲೆ ಎದ್ದುಕುಳಿತಳು. ತನ್ನ ಗಂಡನೆ ಎಂಬ ನಿಶ್ಚಯದಿಂದ ಎದ್ದು, ಹಗ್ಗ ಬಿಚ್ಚಿ, ತಟ್ಟಿಬಾಗಿಲನ್ನು ತುಸುವೆ ಓರೆಮಾಡಿದಳು: ಪೀಂಚಲು ಬೆಚ್ಚಿಬಿದ್ದಳು; ಮೈಯೆಲ್ಲ ಬಿಸಿಯೇರಿ ಕಂಪಿಸಿತು; ಒಂದು ಹೆಜ್ಜೆ ಹಿಂಜರಿದರೂ ಬಾಗಿಲನ್ನು ಮತ್ತೆ ಭದ್ರವಾಗಿ ನೂಕಿ ಹಿಡಿದುಕೊಂಡಳು. ಅವಳ ಕಣ್ಣಿಗೆ ಬಿದ್ದ ರೂಪು ಐತನದಾಗಿರಲಿಲ್ಲ. ಸ್ತ್ರೀಯಾಕೃತಿಯೊಂದು ಮಳೆಯಲ್ಲಿ ತೊಯ್ದು ಒದ್ದೆ ಮುದ್ದೆಯಾಗಿ ನಿಂತಿದ್ದುದು ಒಳಗಿನ ಹಣತೆಯ ಸುಮಂದಕಾಂತಿಯಲ್ಲಿ ಅಸ್ಪಷ್ಟವಾಗಿ ವಿಕಾರವಾಗಿ ಗೋಚರಿಸಿತ್ತು.

ಅಳುತ್ತಿದ್ದುದೂ, ತನ್ನ ಹೆಸರನ್ನು ಮೆಲ್ಲಗೆ ಉಚ್ಚರಿಸಿ ಕರೆದು, ತಾನು ಯಾರೆಂಬುದನ್ನು ಹೇಳಿದುದೂ ಕೇಳಿಸಿ, ಅಚ್ಚರಿಗೊಂಡ ಪೀಂಚಲುಗೆ ಯಾವುದೂ ಅರ್ಥವಾಗದಿದ್ದರೂ ಬೆಟ್ಟಳ್ಳಿಯ ಹೊಲೆಯರ ಹುಡುಗಿ ತಿಮ್ಮಿಗೆ ತನ್ನ ಆಶ್ರಯದ ರಕ್ಷೆ ಬೇಕಾಗಿದೆ ಎಂಬುದನ್ನು ತಟಕ್ಕನೆ ಅರಿತಳು: ಅವಳು ಗುತ್ತಿಯ ಹೆಂಡತಿ ಅಲ್ಲವೆ?

"ಪೀಂಚಲವ್ವಾ, ನಾನು ಬೆಟ್ಟಳ್ಳಿ ತಿಮ್ಮಿ!" ಎಂದಿತು ಆ ಧ್ವನಿ.

ಬಾಗಿಲು ತೆರೆದು, ತಲೆಯಿಂದ ಕಾಲಿನವರೆಗೂ ಒದ್ದೆಯಾಗಿ ಸೀರೆಯಿಂದ ನೀರು ಸೋರುತ್ತಿದ್ದ ಹೊಲೆಯರ ಹುಡುಗಿಯನ್ನು ಒಳಕ್ಕೆ ಬಿಟ್ಟು, ಮತ್ತೆ ಬಾಗಿಲು ಮುಚ್ಚಿ ಹಗ್ಗ ಬಿಗಿದಳು.

ಬೇರೆಯ ಸಮಯ ಅಥವಾ ಸನ್ನಿವೇಶವಾಗಿದ್ದರೆ ಎಷ್ಟೊಂದು ಮೀನಮೇಷ ನಡೆಯುತ್ತಿತ್ತೋ ಮನಸ್ಸಿನಲ್ಲಿ? ಆದರೆ ಆಗ ಹೊಲೆಯರವಳನ್ನು ಒಳಗೆ ಸೇರಿಸಬಹುದೆ ಬೇಡವೆ ಎಂಬ ಪ್ರಶ್ನೆಗೆ ಅವಳ ಪ್ರಜ್ಞೆಯಲ್ಲಿ ಅವಕಾಶವೆ ಇರಲಿಲ್ಲ.

ತಿಮ್ಮಿಯ ಸೀರೆಯಿಂದ ಧಾರಾಕಾರವಾಗಿ ಸೋರುತ್ತಿದ್ದ ನೀರನ್ನು ನೋಡಿ ಪೀಂಚಲು ಅವಳನ್ನು ಬಿಡಾರದ ಒಂದು ಮೂಲೆಯಲ್ಲಿ ವಿಶೇಷ ಸಂದರ್ಭಗಳಲ್ಲಿ ಕಾಲುತೊಳೆದುಕೊಳ್ಳಲೆಂದು ಹಾಕಿದ್ದ ಸಣ್ಣ ಚಪ್ಪಡಿ ಕಲ್ಲಿಗೆ ಕರೆದೊಯ್ದು ಸೀರೆಯನ್ನು ಹಿಂಡಿಕೊಳ್ಳಲು ಹೇಳಿದಳು. ತಲೆ ಒರೆಸಿಕೊಳ್ಳಲು ಒಂದು ಅರುವೆ ಕೊಟ್ಟಳು....

ಆದರೆ ತಿಮ್ಮಿಗೆ ಆ ಉಪಚಾರಗಳೊಂದೂ ಬೇಡವಾಗಿತ್ತು. ಅವಳ ಕಣ್ಣು ಮುಖಗಳಲ್ಲಿದ್ದ ಬೆದರಿದ ಪ್ರಾಣಿಯ ಗಾಬರಿ ಹಣತೆಸೊಡರಿನ ಮಂದಕಾಂತಿ ಯಲ್ಲಿಯೂ ಗೋಚರವಾಗಿತ್ತು. "ನನ್ನ ಬ್ಯಾಗ ಅಡಗಿಸಿಡಿ! ಅಟ್ಟಿಕೊಂಡು ಬರ್ತಿದಾರೆ! ಹುಡುಕ್ತಿದಾರೆ! ಸಿಕ್ಕರೆ ಕೊಂದೇಹಾಕ್ತಾರೆ! ನಿಮ್ಮ ದಮ್ಮಯ್ಯ!...." ಎಂದು ಪಿಸುಮಾತಿನಲ್ಲಿ ಅಳುತ್ತಲೆ ಗಳಪುತ್ತಿದ್ದಳು.

ಏಕೆ? ಏನು? ಎಂತು? ಯಾವುದನ್ನೂ ಕೇಳುವ ಗೋಜಿಗೆ ಹೋಗದೆ, ಯಾವುದೋ ಸನ್ನಿಹಿತವಾದ ಅಪಾಯವಿರಬೇಕು ಎಂದರಿತು, ಪೀಂಚಲು ಗೂಟಕ್ಕೆ ಸಿಕ್ಕಿ ಹಾಕಿದ್ದ ಗೊರಬನ್ನು ತಂದು ಮೂಲೆಗೆ ಆನಿಸಿಟ್ಟು, ತಾನು ಬೆಚ್ಚಿ ಹರಡಿದ್ದ ತನ್ನ ಗದ್ದೆ ಕೆಲಸದ ಒದ್ದೆ ಸೀರೆಯನ್ನೆ ತೆರೆಮರೆಯಾಗುವಂತೆ ಮಾಡಿ, ತಿಮ್ಮಿಯನ್ನು ಸಂಪೂರ್ಣವಾಗಿ ಮುಚ್ಚಿಟ್ಟಳು....

ಐದೇ ನಿಮಿಷದ ಹಿಂದೆ ಪ್ರಶಾಂತವಾಗಿ, ಬೇಜಾರಿನ ಬೀಡೊ ಎನ್ನುವಷ್ಟರ ಮಟ್ಟಿಗೆ ತಾಟಸ್ಥ್ಯದಿಂದಿದ್ದ ಐತನ ಬಿಡಾರ ಈಗ ಅಪಾಯ ಬಹಳ ಭಯಂಕರ ಗರ್ಭಿತವಾಗಿ ತೋರತೊಡಗಿತ್ತು ಪೀಂಚಲುಗೆ. ಮುಂದೇನಾಗುತ್ತದೆಯೊ? ಏನು ಕಾದಿದೆಯೊ? ಏನಾದರೆ ಏನು ಮಾಡಬೇಕೊ? ತಾನೊಬ್ಬಳೆ ಇದ್ದೇನಲ್ಲಾ? ಗಂಡನೂ ಇದ್ದಿದ್ದರೆ! ಅನೇಕ ಭಯ ಭೀತಿ ಭಾವಗಳ ಸಂಚಾರಕ್ಕೆ ವೇದಿಕೆಯಾದ ಪೀಂಚಲುವಿನ ಹೃದಯ ಡವಡವಗುಟ್ಟತೊಡಗಿತು. ಚಳಿಗೆ ಬದಲಾಗಿ ಸೆಕೆಯಾಗತೊಡಗಿತು. ಸೆರಗಿನಿಂದ ಬೆವರನ್ನೂ ಒರೆಸಿಕೊಂಡಳು.

ಇದ್ದಕ್ಕಿದ್ದಹಾಗೆ ನಾಲ್ಕಾರು ಜನ ತನ್ನ ಬಿಡಾರದ ಬಳಿಯೆ ಓಡಿದ ಹಾಗೆ ತೋರಿತು. ಒಂದು ಬೆಳಕೂ, ತಡಿಕೆಯ ಸಂಧಿಗಳಲ್ಲಿ, ಚಲಿಸುತ್ತಿದ್ದುದು ಕಾಣಿಸಿತು. ಉಸಿರುಕಟ್ಟಿ ಕಾದು ಕುಳಿತಳು ಚಾಪೆಯ ಮೇಲೆ, ಏನೋ ಕೆಲಸದಲ್ಲಿ

ತೊಡಗಿರುವಂತೆ ನಟಿಸುತ್ತಾ: ಹತ್ತಿರವಿದ್ದ ಒಂದು ಮೊರವನ್ನು ಬಳಿಗೆಳೆದುಕೊಂಡು ಅದರಲ್ಲಿದ್ದ ಅಕ್ಕಿಯಲ್ಲಿ ಕೈಯಾಡಿಸತೊಡಗಿದ್ದಳು....

ಪಕ್ಕದ ಬಿಡಾರದಲ್ಲಿ ಏನೊ ಮಾತುಕತೆ ಗಟ್ಟಿಯಾಗಿ, ನಡೆಯುತ್ತಿದ್ದುದು ಕೇಳಿಸಿತು! 'ಇಲ್ಲಿ ಯಾರೂ ಬರಲಿಲ್ಲವೊ!'.'ನಾನು ಕಾಣೆ'! 'ಏ ನಿಜ ಹೇಳೋ!' 'ಸುಳ್ಳು ಹೇಳಲಿಕ್ಕೆ ನನಗೆ ಏನು ತೆವಲು?' -ಇಂತಹ ಪ್ರಶ್ನೆ ಉತ್ತರಗಳ ಬಳಿಕ ಎಲ್ಲ ನಿಃಶಬ್ದವಾಯಿತು. ಮಳೆಯೂ ನಿಂತಿದ್ದಂತೆ ತೋರಿತು.

ಪೀಂಚಲು, ಹುಡುಕಿಕೊಂಡು ಬಂದವರು ಹೋದರೆಂದು ಧೈರ್ಯ ತಾಳಿ, ಗೊರಬಿನ ಕಡೆ ನೋಡಿದಳು. ಅದು ನಿಶ್ಚಲವಾಗಿ ಮುಗ್ಧವಾಗಿತ್ತು: ಅದರ ಹಿಂದೆ ಅದೆಂತಹ ಸುಮಹದ್ ದುರಂತವಾಗಬಹುದಾದ ಘಟನಾ ಪರಂಪರೆಯ ಪಿಂಡಿಯೆ ಅಡಗಿ ಕುಳಿತಿತ್ತು?

ಮತ್ತೆ?.... ಅದೇನು?.... ಪೀಂಚಲು ಕಿವಿಗೊಟ್ಟೂ ಆಲಿಸಿದಳು:

ಹಿಂದೆ ಕಾಣಿಸಿಕೊಂಡಿದ್ದ ಬೆಳಕೂ ಕೇಳಿಸಿದ್ದ ಜನರ ಓಡಾಟದ ಸದ್ದೂ ಪುನಃ ಬಳಿಸಾರುವಂತೆ ತೋರಿತು. ಐತನ ಹೆಂಡತಿಯ ಹೃದಯ ಹೊಡೆದುಕೊಳ್ಳತೊಡಗಿತು.

ಯಾರೋ ಬಿಡಾರದ ತಡಿಕೆಯ ಬಾಗಿಲನ್ನು ಅಳ್ಳಾಡಿಸಿದಂತಾಯ್ತು.

ಆ ಮುಹೂರ್ತದಲ್ಲಿ ಪೀಂಚಲು ಹೇಗೆ ವರ್ತಿಸುತ್ತಾಳೆ ಎಂಬುದರ ಮೇಲೆ ತೂಗುತ್ತಿತ್ತು ಹಲವು ಜೀವಗಳ ಗತಿ ಮತ್ತು ವಿಧಿ! ಅವಳ ಧ್ವನಿ ಧೈರ್ಯಗೆಟ್ಟಿದ್ದರೆ, ನಡುಗಿದ್ದರೆ, ತಡವರಿಸಿದ್ದರೆ, ಮುಂದಣ ಘಟನಾಪರಂಪರೆಯ ದಿಕ್ಕೇ ಬದಲಾಯಿಸುತ್ತಿತ್ತು!

ಆದರೆ ಐತನ ಸತಿ ಧೈರ್ಯಗೆಡಲಿಲ್ಲ; ಅವಳ ದನಿ ನಡುಗಲಿಲ್ಲ; ಅವಳು ತಡವರಿಸಲಿಲ್ಲ. ಗುತ್ತಿ ಅಂದು ಪರ್ವತಶಿಖರದ ಅರಣ್ಯ ಮಧ್ಯೆ ಹುಲಿಯನನ್ನು ತಬ್ಬಿಕೊಂಡು ಅಳುತ್ತಾ ಭಗವಂತನಿಗೆ ಸಲ್ಲಿಸಿದ್ದ ಪ್ರಾರ್ಥನೆ ಐತನ ಹೆಂಡತಿಯ ಹೃದಯದಲ್ಲಿ ಇಂದು ಅವ್ಯರ್ಥ ಆಶೀರ್ವಾದವಾಗಿತ್ತೆಂದು ತೋರುತ್ತದೆ:

ದಿಟ್ಟದನಿಯಿಂದ “ಯಾರದು?” ಎಂದಳು.

“ಐತಣ್ಣ ಅದಾನೇನು?” ಎಂದಿತು ಒಂದು ಕರ್ಕಶಕಂಠ.

“ಮನೆಗೆ ಹೋಗಿದಾರೆ. ಈಗ ಬರಬೌದು.”

ಮತ್ತೊಂದು ದುರ್ಬಲ ಮುದಿದನಿ ಕೇಳಿತು: “ಇಲ್ಲಿ ಯಾರಾದ್ರೂ ಬಂದಿದ್ರೇನು, ಕಪ್ಪಾದ ಮ್ಯಾಲೆ?”

“ಯಾರ್ನೂ ನಾ ಕಾಣೆ!” ಎಂದು ತುಸು ರಾಗವೆಳೆದು ಮುಚ್ಚು ಮರೆಯ ಸಂದೇಹಕ್ಕೆ ಒಂದಿನಿತೂ ಅವಕಾಶವೀಯದ ಪ್ರಶಾಂತಮುಗ್ಧವಾಣಿ ಯಿಂದ ಉತ್ತರಿಸಿದಳು ಪೀಂಚಲು.

“ಕಮ್ಮಾರಸಾಲೆ ಹತ್ತಿರಾನೆ ಎಲ್ಲೋ ಅಡಗಿಕೊಂಡಳು ಅಂತಾ ಕಾಣ್ತದೆಯೋ. ಲೌಡಿ ಎಲ್ಲಿಗೆ ಸಾಯ್ತಾಳೆ ನೋಡಾನ ಬನ್ನಿ” ಎಂದಿತು ಒಂದು ಸಿಟ್ಟಿಗೆದ್ದ ಗಡಸು ದನಿ.

“ಸಿಕ್ಕಲಿ ಅವಳು, ಈ ಸಾರಿ. ಒಂದು ಕಾಲು ಕಡಿದೇ ಹಾಕ್ತೀನಿ, ಮನೇಬಿಟ್ಟು ಹೋಗದೆ ಇದ್ದಾಂಗೆ” ಎಂದಿತು ಮತ್ತೆ ಆ ದುರ್ಬಲ ಮುದಿಧ್ವನಿ.

ಬೆಳಕು ದೂರ ದೂರ ಹೋಗಿ ಕಣ್ಮರೆಯಾಯಿತು; ಓಡಾಟದ ಸದ್ದು ನಿಂತು, ಮತ್ತೆ ಹನಿಹಾಕತೊಡಗಿದ್ದ ಮಳೆಯ ಮೊದಲ ಹೆಜ್ಜೆಯ ಪಟಪಟ ಸದ್ದೂ ಕೇಳಿಸತೊಡಗಿತು. ತುಂಬ ಕ್ಲಿಷ್ಟವಾದ, ಆದರೂ ಬಹು ಮುಖ್ಯವಾದ ತನ್ನ ಪಾತ್ರವನ್ನು ಪ್ರೇಕ್ಷಕರು ಮೆಚ್ಚುವಂತೆ ಅಭಿನಯಿಸಿ, ನೇಪಥ್ಯವನ್ನು ಹೊಕ್ಕಮೇಲೆಯೂ ಮುಂದುವರಿಯುತ್ತಿರುವ ಕೈಚಪ್ಪಾಳೆ ಮತ್ತು ಸಿಳ್ಳುಗಳ ಉತ್ಸಾಹ ಕೋಲಾಹಲವನ್ನು ಆಲಿಸುವ ನಟನಂತಾಗಿ ದೀರ್ಘವಾಗಿ ನಿಟ್ಟುಸಿರು ಬಿಟ್ಟು ಕುಳಿತಳು ಪೀಂಚಲು. ತಿಮ್ಮಿಯನ್ನಂತೂ  ಹೊರಕ್ಕೆ ಕರೆಯುವ ಸಾಹಸಕ್ಕೆ ಹೋಗಲಿಲ್ಲ. ಅಪಾಯದಿಂದ ಇನ್ನೂ ಸಂಪೂರ್ಣವಾಗಿ ಪಾರಾದೆವೋ ಇಲ್ಲವೋ ಎಂಬ ಸಂಶಯದಿಂದ ಅವಳು ದೃಢಮನಸ್ಸು ಮಾಡಿದ್ದಳು, ತನ್ನ ಗಂಡ ಬರುವವರೆಗೂ ತಿಮ್ಮಿಯನ್ನು ಹೊರಕ್ಕೆ ಕರೆಯಬಾರದು ಎಂದು. ಕರೆದಿದ್ದರೂ ಆಗ ಹೊರಕ್ಕೆ ಬರುತ್ತಿರಲಿಲ್ಲ ತಿಮ್ಮಿ!

ಹಣತೆಯ ಎಣ್ಣೆ ಮುಗಿಯುತ್ತಾ ಬಂದಿತ್ತು. ಆದರೂ ಐತ ಬಂದಿರಲಿಲ್ಲ. ಗೊರಬಿನಾಚೆ ತಿಮ್ಮಿ ಒದ್ದೆಬಟ್ಟೆಯಲ್ಲಿ ನಡುಗುತ್ತಿದ್ದುದು ಗೊತ್ತಾಗಿ, ದೀಪವನ್ನಾರಿಸಿ ತಿಮ್ಮಿಯನ್ನು ಹೊರಕ್ಕೆ ಕರೆದಳು. ಒಲೆಯ ಬೆಂಕಿಯನ್ನು ತುಸುವೆ ಹೊತ್ತಿಸಿದಳು. ಅದರ ಮಬ್ಬು ಬೆಳಕಿನಲ್ಲಿ, ಅವಳಿಗೆ ತನ್ನದೊಂದು ಜಡ್ಡುಸೀರೆಯನ್ನು ಕೊಟ್ಟು, ಬಟ್ಟೆ ಬದಲಾಯಿಸುವಂತೆ ಮಾಡಿದಳು. ಪೀಂಚಲುಗಿಂತಲೂ ಸುಪುಷ್ಟಳಾಗಿದ್ದ ತಿಮ್ಮಿ ಗಟ್ಟದ ಮೇಲಿನವರು ಉಡುವಂತೆ ಆ ಸೀರೆಯನ್ನು ಗೊಬ್ಬೆ ಸೆರಗುಹಾಕಿ ಉಡತೊಡಗಲು ಅದು ಸಾಕಾಗದಿದ್ದುದನ್ನು ಕಂಡು ಗಟ್ಟದ ಕೆಳಗಿನವರು ಉಡುವಂತೆ ತಾನೆ ಅವಳಿಗೆ ಉಡಿಸಿದಳು. ಒಂದುವೇಳೆ ಯಾರಾದರೂ ಕಂಡರೂ ಅವಳನ್ನು ಗಟ್ಟದ ತಗ್ಗಿನ ಹುಡುಗಿ ಎಂದೇ ತಪ್ಪಾಗಿ ತಿಳಿದುಕೊಳ್ಳಲಿ ಎಂಬುದೂ ಅವಳ ಭಾವವಾಗಿತ್ತು. ಆಮೇಲೆ ಒಲೆಯ ಬಳಿ ಕತ್ತಲೆಯಲ್ಲಿಯೆ ಕುಳಿತು ಮೈಬಿಸಿ ಮಾಡಿಕೊಳ್ಳುವಂತೆ ಹೇಳಿದಳು: ಅದಾದಮೇಲೆ  ಗೊರಬು ಮರೆಯಿಟ್ಟದ್ದ ಮೂಲೆಯಲ್ಲಿ ಚಾಪೆಯ ಮೇಲೆ ಮಲಗಿಕೊಳ್ಳುವಂತೆ ಹೇಳಿ, ಸ್ವಲ್ಪ ಬಲಾತ್ಕಾರವಾಗಿಯೆ ಮಲಗಿಸಿದಳು.

ತುಸುಹೊತ್ತು ಹೊರಗನಾಲಿಸುವುದು, ಯಾರೂ ಇಲ್ಲವೆಂದು ಧೈರ್ಯವಾದ ಮೇಲೆ ಮೆಲ್ಲಗೆ ಮಾತಾಡುವುದು, ಮತ್ತೆ ಮಾತು ನಿಲ್ಲಿಸಿ ಆಲಿಸುವುದು, ಮತ್ತೆ ಪಿಸಿಪಿಸಿ ಮಾತಾಡುವುದು, ಹೀಗೆ ಇಬ್ಬರೂ ಮುಂದುವರಿಸಿದರು: ತಿಮ್ಮಿ ಸಂಕ್ಷೇಪವಾಗಿ ತಾನು ಬಿಡಾರದಿಂದ ಓಡಿಬಂದ ವಿಚಾರವನ್ನೂ, ತನ್ನ ಮದುವೆ ಬಚ್ಚನೊಡನೆ ಆಗಬೇಕೆಂದಿದ್ದ ವಿಚಾರವನ್ನೂ, ತನ್ನ ಗಂಡ ಹಳೆಮನೆಯ ಹೊಲಗೇರಿಗೆ ಬಂದು ತನಗಾಗಿ ಹೊಂಚು ಹಾಕುತ್ತಿದ್ದಾನೆ ಎಂಬುದನ್ನು ತಾನು ಗುಟ್ಟಾಗಿ ಆಲಿಸಿದ ಸಂಗತಿಯನ್ನೂ, ಅವನನ್ನು ಹೇಗಾದರೂ ಮಾಡಿ ಹಿಡಿದು ಪೋಲೀಸರಿಗೆ ಒಪ್ಪಿಸಲು ಸಂಚು ನಡೆಯುತ್ತಿದ್ದುದನ್ನೂ, ಆ ಸಂಚಿಗೆ ಅವನು ಬೀಳುವುದಕ್ಕೆ ಮೊದಲೆ ತಾನು

ಅವನನ್ನು ಸೇರಿದರೆ ಇಬ್ಬರಿಗೂ ಕೇಡು ತಪ್ಪುತ್ತದೆ ಎಂದು ತನಗೆ ತೋರಿ, ಗುಮಾನಿಯಾಗದಂತೆ ಜಡಿಮಳೆಯ ರಾತ್ರಿಯನ್ನೆ ಪರಾರಿಯಾಗಲು ಆರಿಸಿದುದನ್ನೂ, ಅಳುತ್ತಳುತ್ತಲೆ ತಿಳಿಸಿದಳು.

ಒಮ್ಮೆ ಇವರು ಮಾತು ನಿಲ್ಲಿಸಿ ಆಲಿಸಿದಾಗ ಯಾರೋ ಬಾಗಿಲಬಳಿ ಬಂದಂತಾಯಿತು. ತಿಮ್ಮಿ ಬೇಗಬೇಗನೆ ಸೆರಗು ಮುಸುಗು ಹಾಕಿಕೊಂಡು ಚಾಪೆಯ ಮೇಲೆ ಮೂಲೆಯ ಕಡೆ ಮೊಗ ಮಾಡಿ ಮಲಗಿಕೊಂಡಳು. ಐತ ಹೆಂಡತಿಯ ಹೆಸರು ಹಿಡಿದು ಕರೆದದ್ದು ಕೇಳಿಸಿತು. ಪೀಂಚಲು ಬಾಗಿಲು ತೆರೆದು ಅವನನ್ನು ಒಳಗೆ ಬಿಟ್ಟು ಬಾಗಿಲು ಮುಚ್ಚಿದಳು. ಒಲೆಯ ಕೆಂಡದ ಬೆಳಕು ಇದ್ದತಾದರೂ ಐತ ಒಳಗೆ ಬಂದವನೆ ಅತ್ತ ಇತ್ತ ಸಂಶಯದೃಷ್ಟಿ ಬೀರಿ “ಯಾರ ಹತ್ರಾನೆ ಪಿಸಿಪಿಸಿ ಮಾತಾಡ್ತಿದ್ದೆಯಲ್ಲಾ?” ಎಂದು ತನ್ನ ಕಂಬಳಿಕೊಪ್ಪೆಯನ್ನು ಮೂಲೆಗೆ ಕೊಡಹಿ ಗೂಟಕ್ಕೆ ಸಿಕ್ಕಿಸಿದನು.

“ಯಾರ ಹತ್ತಿರ ಮಾತಾಡುವುದು ಮತ್ತೆ? ಕಾದು ಕಾದು ಸಾಕಾಗಿಹೋಗಿತ್ತಲ್ದಾ? ನನ್ನಷ್ಟಕ್ಕೆ ನಾನೆ ಏನೊ ಹೇಳಿಕೊಳ್ಳುತ್ತಿದ್ದೆ.”

ಐತ ಹೆಂಡತಿಯ ಕಡೆಗೆ ಮುದ್ದಾಗಿ ನೋಡುತ್ತಾ “ನಿನ್ನ ಒಳಗಿರುವವನ ಕೂಡೆ ಮಾತಾಡುತ್ತಿದ್ದೆ ಅನ್ನು; ಸುಭದ್ರೆಯ ಗರ್ಭದಲ್ಲಿರುವ ಅಭಿಮನ್ಯು ಸಂಗಡ! ಐಗಳು ಪರ್ಸಂಗದಲ್ಲಿ ಹೇಳಿದ್ದರಲ್ಲಾ ಹಾಂಗೆ!” ಎನ್ನುತ್ತಾ ಪೀಂಚಲುವಿನ ಕಡೆಗೆ ಪ್ರಣಯಚೇಷ್ಟೆಯ ಉದ್ದೇಶದಿಂದ ಚಲಿಸತೊಡಗಲು ಅವಳು ಗಾಬರಿಯಾದಳು. ತಾವಿಬ್ಬರೇ ಅಲ್ಲಿರುವುದು ಎಂದು ನಂಬುಗೆಯಿಂದ ಐತ ಏನೆಲ್ಲ ನಾಚಿಕೆಗೇಡಿನ ಕೆಲಸಮಾಡಲು ಹಿಂಜರಿಯುವುದಿಲ್ಲ ಎಂಬುದನ್ನು ನೂರಾರು ಅನುಭವಗಳಿಂದ ಅರಿತಿದ್ದ ಪೀಂಚಲು, ತಟಕ್ಕನೆ ಸರಿದು ನಿಂತು, ಕಣ್ಣುಸನ್ನೆಯಿಂದಲೆ ತಿಮ್ಮಿ ಮುಸುಗು ಹಾಕಿಕೊಂಡು ಮಲಗಿದ್ದ ಕಡೆಗೆ ಕೈದೋರಿ ಎಚ್ಚರಿಸಿದಳು. ಬೆಚ್ಚಿ ನಿಂತ ಐತ ಒಲೆಯ ಕೆಂಡದ ಅರೆಗತ್ತಲೆಯ ಮಬ್ಬು ಬೆಳಕಿನಲ್ಲಿ ಚಾಪೆಯ ಮೇಲೆ ಮಲಗಿದ್ದ ಮನುಷ್ಯಾಕಾರವನ್ನೊಮ್ಮೆಯೂ ತನ್ನ ಹೆಂಡತಿಯ ಕಡೆಗೊಮ್ಮೆಯೂ ಸಂಶಯ ಮತ್ತು ಪ್ರಶ್ನದೃಷ್ಟಿ ಪ್ರಸಾರ ಮಾಡತೊಡಗಿದನು.

ಗಂಡಸಿನ ಅನುಮಾನ ಅಸೂಯೆಗಳ ಸ್ವಭಾವವನ್ನು ಚೆನ್ನಾಗಿ ತಿಳಿದಿದ್ದ ಪೀಂಚಲು ಅರ್ಧ ಮೂದಲೆಯ ಧ್ವನಿಭಂಗಿಯಿಂದ “ಹೆದರುವುದು ಬೇಡ: ಗಂಡಸಲ್ಲ!” ಎಂದು ತುಟಿ ಕೊಂಕಿಸಿ ನಗೆಬೀರಿದಳು.

ತಮ್ಮ ಭಾಷೆಯಲ್ಲಿ ಮಾತಾಡಿಕೊಂಡರೆ ಗಟ್ಟದ ಮೇಲಿನವರೆಗೆ ತಿಳಿಯುವುದಿಲ್ಲ ಎಂದು “ಮತ್ತೆ ಯಾರೆ ಅದು?” ತುಂಬ ಕೆಳದನಿಯಲ್ಲಿ ಕೇಳಿದನು ಐತ್, ತುಳುವಿನಲ್ಲಿ.

“ನನ್ನ ತಂಗಿ!” ಪರಿಹಾಸ್ಯವಾಡಿದಳು ಪೀಂಚಲು. ತುಳುವೂ ಪ್ರಯೋಜನವಿಲ್ಲದಾಯ್ತಲ್ಲ!

“ನಿನಗೆ ಎಂಥಾ ತಂಗಿಯೆ? ನನಗೆ ಗೊತ್ತಿಲ್ಲದವಳು?

“ನಿನಗೆ ಗೊತ್ತಿರುವವಳೆ! ಗಟ್ಟದ ಕೆಳಗಿನಿಂದ ಬಂದಿದ್ದಾಳೆ!”

“ಒಬ್ಬಳೆಯೊ? ಗಂಡಗಿಂಡ ಉಂಟೊ?”

“ಅದೆಲ್ಲ ಯಾಕೆ ನಿನಗೆ? ಗಂಡ ಇಲ್ಲದೆ ಒಬ್ಬಳೆ ಬಂದಿದ್ದರೆ ಮತ್ತೊಂದು ಕಟ್ಟಿಕೊಳ್ಳುವ ಆಸೆಯೋ? ನಾನು ಆಗಲೇ ಸಾಕಾಗಿಬಿಟ್ಟೆನೋ?”

“ನಿನ್ನೊಬ್ಬಳನ್ನೇ ತಣಿಸುವುದು ನನ್ನಿಂದ ಆಗದ ಕೆಲಸ ಆಗಿದೆ. ಇನ್ನು ಮತ್ತೊಬ್ಬಳನ್ನು ಕಟ್ಟಿಕೊಂಡು ಗುಂಡಿಗೆ ಹಾರಬೇಕು!”

ಅಷ್ಟರಲ್ಲಿ ಇದ್ದಕ್ಕಿದ್ದಂತೆ ಚಾಪೆಯಮೇಲೆ ಮೂಲೆಯಲ್ಲಿ ಮುದುಡಿಕೊಂಡಿದ್ದ ವ್ಯಕ್ತಿ ತಡೆಯಲಾರದೆ ಬಟ್ಟೆ ಹರಿದಂತೆ ಕಿಸಕ್ಕನೆ ನಕ್ಕುಬಿಟ್ಟಿತು: ಹಾಗೆಯೆ ತಟಕ್ಕನೆ ಎದ್ದು ಕುಳಿತು ಮೂಲೆಯ ಕಡೆಗೆ ಮುಖ ತಿರುಗಿಸಿ ಕೊಂಡಿತು, ಸೆರಗು ಮುಚ್ಚಿಕೊಂಡು. ಆಶ್ಚರ್ಯವಾಯಿತು ಪೀಂಚಲುವಿಗೆ, ಹೊಲೆಯರ ಹುಡುಗಿಗೂ ತುಳು ಅರ್ಥವಾಗುತ್ತೆ!

ಐತನಿಗೆ ಮುಖಭಂಗವಾದಂತಾಗಿ, ತನ್ನ ಕುತೂಹಲ ಪರಿಹಾರ ಮಾಡಿಕೊಳ್ಳುವ ಉದ್ದೇಶದಿಂದ, ಹೆಂಡತಿಗೆ ದೀಪ ಹೊತ್ತಿಸಲು ಅಪ್ಪಣೆ ಮಾಡಿದನು. ಆದರೆ ಆ ಹಣತೆಯ ಸೊಡರಿನಲ್ಲಿಯೂ ಐತನಿಗೆ ಯಾವ ಗುರುತು ಸಿಕ್ಕಲಿಲ್ಲ.

ತಾನು ನೆಂಟರೊಡನೆ ಊಟ ಪೂರೈಸಿದುದಾಗಿ ಹೇಳಿ ಪೀಂಚಲು ಐತನಿಗೆ ಉಣಬಡಿಸಿದಳು. ದಿನವೂ ಗಂಡಹೆಂಡಿರಿಬ್ಬರೂ ಒಟ್ಟಿಗೆ ಕುಳಿತು ಮಾತಿನ  ಉಪ್ಪು ಹುಳಿ ಖಾರ ಸಹಿತವಾಗಿ ಉಣ್ಣುತ್ತಿದ್ದುದು ವಾಡಿಕೆ. ಇವೊತ್ತು ಐತ ಯಾವ ಮಾತನ್ನೂ ಆಡಲಾರದೆ ಉಂಡನು. ಅವನು ಹೆಂಡತಿಗೆ ಹೇಳುವ ವಿಷಯ ಬಹಳವಿತ್ತು; ಬಹಳ ಸ್ವಾರಸ್ಯದ್ದೂ ಆಗಿತ್ತು. ಆದರೆ ಅಪರಿಚಿತರಿದ್ದುದರಿಂದ ಆ ರಹಸ್ಯವನ್ನು ಹೊರಗೆಡಹಲಿಲ್ಲ. ಒಮ್ಮೆ ಪೀಂಚಲು 'ಯಾಕೆ ಇಷ್ಟು ಹೊತ್ತು ಮಾಡಿದಿರಿ?' ಎಂದೇನೊ ಕೇಳಿದ್ದಳು. ಆಗ ಅವನು ಕಣ್ಣಿಂದಲೆ 'ಗುಟ್ಟಾಗಿರಬೇಕಾದುದನ್ನು ಇತರರೆದುರು ಕೇಳಬ್ಯಾಡ!' ಎಂದು ಸೂಚಿಸಿದ್ದನು.

ಊಟ ಪೂರೈಸಿದ ತರುವಾಯ ಐತ ಕೈಬಾಯಿ ತೊಳೆಯಲೆಂದೂ, ಮತ್ತು ಉಣ್ಣಲು ಬಟ್ಟಲಿನಂತೆ ತಾನು ಉಪಯೋಗಿಸಿದ್ದ ಅಡಕೆಯ ಹಾಳೆಯನ್ನು ಮರುದಿನದ ಊಟಕ್ಕೆ ಬಳಸುವ ಸಲುವಾಗಿ ತೊಳೆದು ತಂದಿಡಲೆಂದು ಬಾಗಿಲಾಚೆಗೆ ಹೋದನು. ಮಳೆ ತುಸು ನಿಂತಿತ್ತು. ಕಗ್ಗತ್ತಲೆ ಮಸಿಯ ಗೋಡೆಯಂತೆ ಬದ್ಧಭ್ರುಕುಟಿಯಾಗಿತ್ತು.

ಗಂಡನ ಕೈಗೆ ನೀರು ಹಾಕಲೆಂದು ಪೀಂಚಲು ಒಂದು ನೀರು ತುಂಬಿದ ಮೊಗೆಯೊಡನೆ ಅವನನ್ನು ಹಿಂಬಾಲಿಸಿದಳು. ಆ ಸಮಯವನ್ನುಪಯೋಗಿಸಿಕೊಂಡು ಐತ ಪಿಸುಗುಟ್ಟಿದನು: ಗುತ್ತೀಗೆ ಇಲ್ಲಿಗೇ ಬಾ ಮಲಗಾಕ್ಕೆ ಅಂತಾ ಹೇಳಿಬಿಟ್ಟೀನಲ್ಲಾ? ನಿನ್ನ ತಂಗಿ ಬರ್ತಾಳೆ ಅಂಬೋದು ನನಗೆ ಗೊತ್ತಿರಲಿಲ್ಲ. ಈಗ ಏನು ಮಾಡುವುದು? ಅವನನ್ನು ಎಲ್ಲಿ ಮಲಗಿಸುವುದು? ನಾನೆಲ್ಲಿ ಮಲಗುವುದು? ನಿನ್ನ ತಂಗೀನ ಎಲ್ಲಿ ಮಲಗಿಸೋದು? ಒಳ್ಳೆ ಪೀಕಲಾಟಕ್ಕೆ ಬಂದಿತಲ್ಲಾ!”

“ಎಲ್ಲಿಗೆ ಹೋಗಿದಾನೆ ಆ ಗುತ್ತಿ?”

"ಮುಕುಂದಯ್ಯೋರ ಸಂಗಡ ಮನೀಗೆ ಹೋದ, ಅವರನ್ನು ಅಲ್ಲಿ ಬಿಟ್ಟು, ಅಲ್ಲೇ ತಂಗಳುಂಡು ಬರ್ತಾನಂತೆ. ನಾಳೆ ಹೊತಾರೆ ಮುಂಚೆ ನಾನೂ ಅವನೂ ಹುಲಿಕಲ್ಲು ನೆತ್ತಿಯ ಕಲ್ಲುಮಂಟಪಕ್ಕೆ ಹೋಗ್ತೀಂವಿ."

"ಮತ್ತೆ ಈವೊತ್ತು ಅಲ್ಲೀಗೆ ಅಲ್ಲೇನು ನೀವು ಹೋಗಿದ್ದು?"

"ಹೋಗಿದ್ದು ಉಂಟು. ಆದರೆ ದಾರೀಲೆ ಹಳೆಮನೆ ಸಣ್ಣಹೆಗ್ಗಡೇರು ಸಿಕ್ಕಿದ್ರು. ಅವರು ಸಿಂಬಾವಿಗೆ ಹೋಗಿ ಬರ್ತಿದ್ರು. ಭರಮೈಹೆಗ್ಗಡೆರಿಗೆ ಈ ಸಂಬಂಧ ತಪ್ಪಿಸಾಕೆ ಏನೇನೋ ಹುನಾರು ಮಾಡ್ತಿದ್ದಾರೆ ಅವರೂ....! ಕಲ್ಲು ಮಂಟಪಕ್ಕೆ ನಮ್ಮ ಸಂಗಡಾನೆ ಬಂದು ಕೆಲಸಾನೂ ಮಾಡಿಕೊಟ್ರು ಅನ್ನು! ಅವರ ಕತೇನೆಲ್ಲ ಕೇಳೂದೆ ಸುಮಾರು ಹೊತ್ತು ಆಗಿಬಿಟ್ಟಿತ್ತಲ್ದಾ?....ಹೂವಳ್ಳಿ ಚೆನ್ನಕ್ಕನ ಆ ಕಲ್ಲುಮಂಟಪದಾಗೆ ಕದ್ದಡಗಿಸಿ ಇಡುವುದೆಂದು ಗೊತ್ತುಮಾಡಿದ್ದೇವೆ. ಒಂದು ಹದಿನೈದು ದಿನದ ಮಟ್ಟಿಗಾದರೂ ಅಲ್ಲಿ ಇರುವ ಏರ್ಪಾಡು ಮಾಡಬೇಕಾಗಿದೆ...."

"ಬೇರೆ ಜನಕ್ಕೆ ಗೊತ್ತಾದರೆ?"

"ಈ ದನಗೋಳು ಮಳೆಯಲ್ಲಿ?.... ಈ ಮಳೆಗಾಲದಲ್ಲಿ ಆ ಹುಳುವಿನ ಬಳಿ ಒಂದು ನರ ನುಸಿ ಸುಳಿಯಲಾರದು. ನಮಗೇ ಅಲ್ಲಿ ದಾರಿ ಕಾಣಬೇಕಾದರೆ ಸಾಕುಸಾಕಾಯಿತು. ಅದನ್ನು ತೋರಿಸಿಕೊಟ್ಟವನೂ ಆ ಗುತ್ತಿಯೆ! ಹಿಂದೆ ಅವನು ಆ ಬೆಟ್ಟಳ್ಳಿ ಹುಡುಗಿಯನ್ನು ಹಾರಿಸಿಕೊಂಡು ಹೋದಾಗ ಅಲ್ಲಿಯೆ ಒಂದು ರಾತ್ರೆ ಮಲಗಿದ್ದನಂತೆ! ಬಡ್ಡಿಮಗನಿಗೆ ಆವೊತ್ತೆ ಅವಳ ಕೂಡೆ.... ಹಿಹ್ಹಿಹ್ಹಿ...." ಐತ ಅರ್ಧದಲ್ಲಿಯೆ ಮಾತು ನಿಲ್ಲಿಸಿ ಹೆಂಡತಿಯ ಗಲ್ಲವನ್ನು ಅರ್ಥಪೂರ್ಣವಾಗಿ ತಿವಿದನು.

"ಇಸ್ಸಿ! ನಿನಗೆ ಯಾವಾಗಲೂ ಅದೇ!" ರೇಗು ನಟಿಸಿದಳು ಪೀಂಚಲು.

"ಈಗ ಅವನು ಇಲ್ಲಿಗೆ ಬರುವುದೂ ಅದಕ್ಕೆ ಅಲ್ವಾ?"

"ಯಾವುದಕ್ಕೇ? ಆವೊತ್ತು ಮಲಗಿದ ಹಾಂಗೇ ಈವೊತ್ತು ಅವಳ ಮಗ್ಗುಲಿಗೆ ಮಲಗುವುದಕ್ಕಾ?...."

"ಇಸ್ಸೀ! ನಿನಗೆ ಯಾವಾಗಲೂ ಅದೇ!" ಪ್ರತೀಕಾರದ ರೇಗು ನಟಿಸಿದ್ದನು ಐತ.

ಗಂಡನ ಮೂದಲೆಯನ್ನು ಗಮನಿಸದವಳಂತೆ ಮುಂದುವರಿಸಿದಳು ಪೀಂಚಲು: "ಅವನಿಗೆ ಯಾರು ಹೇಳಿದರು, ಅವಳು ಇಲ್ಲಿ ಇದ್ದಾಳೆ ಎಂದು? ಬೇಕಾದರೆ ಬೆಟ್ಟಳ್ಳಿಗೆ ಹೋಗಿ ಕರೆದುಕೊಂಡು ಬರಲಿ!...."

"ಸ್ವಲ್ಪ ತಡೆ, ಮಾರಾಯ್ತೀ.... ಅದನ್ನೆ ನಿನ್ನ ಹತ್ತಿರ ಹೇಳುವುದಕ್ಕೆ ಅವನು ಬರುತ್ತಾನೆ.... ನನ್ನ ಹತ್ತಿರ ಹೇಳಿದ. ನಾನು ಹೇಳಿದೆ 'ಗಂಡಸಿಂದ ಆಗದ ಕೆಲಸ ಅದು' ಎಂದು.... ಅವನು ಅಲ್ಲಿಗೆ ಹೋದರೆ ಹಿಡಿದು ಪೋಲೀಸಿಗೆ ಕೊಡುತ್ತಾರಂತೆ. ಆವೊತ್ತು ನಿನಗೆ ಹೇಳಿದ್ದೆನಲ್ಲಾ ಅವನ ರಾಮಾಯಣ?....ಈಗ ನೀನು ಹೇಂಗಾದರೂ ಮಾಡಿ ಅವಳನ್ನು ಕೇರಿಯಿಂದ ತಪ್ಪಿಸಿ ತಂದುಕೊಡಬೇಕಂತೆ. ಅವಳನ್ನೂ ಕೂಡಿಕೊಂಡೇ ಅವನು

ಪರಾರಿಯಾಗುತ್ತಾನಂತೆ, ಆರು ತಿಂಗಳೋ? ಒಂದು ವರ್ಷವೊ?.... ಅವನ ಒಡೆಯರೂ ಹಾಂಗೇ ಹೇಳಿದ್ದರಂಬ್ರು.... ತಿಮ್ಮಪ್ಪಹೆಗ್ಗಡೇರೂ ಮುಕುಂದಯ್ಯಗೌಡರೂ ಅವನಿಗೆ ಏನೋನೋ ಧೈರ್ಯ ಹೇಳಿ ನಿಲ್ಲಿಸಿಕೊಂಡಿದ್ದಾರೆ, ಕಲ್ಲುಮಂಟಪದಲ್ಲಿ ಬಿಡಾರ ಮಾಡಿ ಕಾವಲಿರುವುದಕ್ಕೆ!....ಈಗ ಹೇಂಗಾದ್ರೂ ಮಾಡಿ ಅವನ ಹೆಂಡತೀನ ಬಿಡಿಸಿಕೊಡಬೇಕಲ್ಲ!....ಇಲ್ಲದಿದ್ದರೆ ಅವನು ಒಪ್ಪುತ್ತಿದ್ದನೇ, ಅವನ ಒಡೆಯರಿಗೆ ಗೊತ್ತಾದ ಹೆಣ್ಣನ್ನು ಮುಕುಂದಯ್ಯಗೌಡರಿಗಾಗಿ ಹಾರಿಸುವುದಕ್ಕೆ?.... ಅದೆಲ್ಲಾ ಇರಲಿ ಈಗ ಅವನು ಬರುತ್ತಾನಲ್ಲಾ ಎಲ್ಲಿ ಮಲಗಿಸುವುದು?...."

"ಆ ಗೊರಬನ್ನು ಮರೆಯಾಗಿಟ್ಟು ಈ ಬಾಗಿಲ ಬದಿಯೆ ಮಲಗಿಕೋ ಅಂದರೆ ಸೈ...."

"ನಾವು?" ಐತನ ಪ್ರಶ್ನೆಯಲ್ಲಿ ಬಿಡಿಸಲಾರದ ಮಹಾಸಮಸ್ಯೆಯ ಸಂಕಟಧ್ವನಿ ಇತ್ತು, ತನ್ನನ್ನು ಎಲ್ಲಿ ದೂರ ಮಲಗಿಸಿಬಿಡುತ್ತಾಳೆಯೊ ಎಂದು.

"ನೀನು ಈವತ್ತೊಂದು ದಿವಸ ಗುತ್ತಿಯ ಸಮೀಪದಲ್ಲಿ ದೂರ ಮಲಗಿದರಾಯ್ತು! ನಾನು ತಂಗಿಯ ಕೂಡೆ ಮಲಗುತ್ತೇನೆ...." ಪೀಂಚಲುವಿನ ಮೊಗದಲ್ಲಿ ತುಂಟುನಗೆ ಆಡುತ್ತಿದ್ದುದು ಐತನಿಗೆ ಆ ಕತ್ತಲೆಯಲ್ಲಿ ಕಾಣಿಸುವಂತಿರಲಿಲ್ಲ.

"ಥೂ! ಥೂ!ಥೂ! ನಾನು ಒಲ್ಲೆ. ಗೊರಬು ಮರೆಯಿದ್ದರೂ ಹೊಲೆಯನ ಬಳಿ ಮಲಗುವುದೆ?" ಐತನ ಪ್ರತಿಭಟನೆಯ ನಿಜವಾದ ಕಾರಣ ಬೇರೆಯಾಗಿತ್ತು ಎಂಬುದನ್ನು ಅವನ ಹೆಂಡತಿಗೆ ಹೇಳಿಕೊಡಬೇಕಾಗಿರಲಿಲ್ಲ.

"ಹಾಗಂದರೆ ನಾವು ದಿನವೂ ಮಲಗುವಲ್ಲಿಯೆ ಮಲಗುವ."

"ನಿನ್ನ ತಂಗಿ?"

"ಅವಳನ್ನು ಗುತ್ತಿಯ ಜೊತೆಯೆ ಮಲಗಿಸಿದರಾಯ್ತು!"

"ಅಯ್ಯಯ್ಯೋ! ನಿನಗೇನು ಪಿತ್ತವೆ?"

"ಮತ್ತೇನು ನಿನ್ನ ಮಗ್ಗುಲಲ್ಲಿ ಮಲಗಿಸಿಕೊಳ್ತೀಯಾ?"

"ಏನು ಮಾತನಾಡುತ್ತಿ ನೀನು? ಬುದ್ಧಿ ನೆಟ್ಟಗಿದೆಯೋ?"

"ನಿನಗಂತೂ ನೆಟ್ಟಗಿದೆ ಎಂದು ಗೊತ್ತಾಯ್ತಲ್ಲಾ? ಅಷ್ಟೇ ಸಾಕು!"

"ಯಾಕೆ?.... ಹುಡುಗಾಟವಾಡುತ್ತಿದ್ದೀಯಲ್ಲಾ?"

"ಮತ್ತೆ ನಾನೇನು ಮುದುಕಿಯೆ?…. ಈಗ ಬಾ ಒಳಗೆ. ಹನಿ ಬೀಳುತ್ತದೆ…. ಗುತ್ತಿ ಬರಲಿ. ನಾನೆಲ್ಲ ಸರಿಮಾಡುತ್ತೇನೆ."

ಅಷ್ಟರಲ್ಲಿ ಕತ್ತಲಲ್ಲಿ ಸದ್ದಾಯಿತು. ನೋಡಿದರೆ ಏನೂ ಕಾಣಿಸಲಿಲ್ಲ. ಕರಿಯ ನಾಯಿ, ಹುಲಿಯ, ಐತನ ಕಾಲ ಬಳಿಗ ಬಂದು ಬಾಲ ಆಡಿಸಿ ಕುಂಯಿಗುಟ್ಟಿದ ಮೇಲೆಯೆ ಅವರಿಗೆ ಗೊತ್ತಾಗಿದ್ದು, ಗುತ್ತಿಯೂ ಹಿಂಬಾಲಿಸುತ್ತಿದ್ದಾನೆ ಎಂದು….

ತಿಮ್ಮಿ ತನಗೆ ಮರೆಯಾಗಿಟ್ಟಿದ್ದ ಗೊರಬಿನ ಸಂಧಿಯಿಂದಲೆ ಬಿಡಾರದ ಬಾಗಿಲಕಡೆ ಓರೆಗಣ್ಣುಮಾಡಿ ನೋಡುತ್ತಿದ್ದಳು. ಗಂಡಹೆಂಡಿರಿಬ್ಬರೂ ಏನೋ ಗುಟ್ಟು ಮಾತನಾಡುತ್ತಿದ್ದುದು ಗೊತ್ತಾಗಿ ಅತ್ತಲೆ ಕಿವಿಯಾಗಿಸಿದ್ದಳು. ಒಂದೆರಡು ಸಾರಿ ತನ್ನ ಗಂಡನ ಹೆಸರೂ ಅವರ ಮಾತಿನಲ್ಲಿ ಕೇಳಿಸಿ, ಅವಳ ಕುತೂಹಲ ಕೆರಳಿ, ಆತುರ ನಿಮಿರಿತ್ತು. ಗುತ್ತಿ ಹಳೆಮನೆಯ ಹೊಲಗೇರಿಯಲ್ಲಿ ತಲೆಮರೆಸಿಕೊಂಡು, ತನ್ನನ್ನು ಸಂಧಿಸಿ, ಕರೆದುಕೊಂಡು ಎಲ್ಲಿಗಾದರೂ ಓಡಿಹೋಗುವ ಹುನಾರಿನಲ್ಲಿದ್ದಾನೆಂದು ಅವಳಿಗೆ ತಿಳಿದಿತ್ತು. ಹಳೆಮನೆಯ ಹೊಲಗೇರಿಯನ್ನೇ ಗುರಿಯಾಗಿಟ್ಟುಕೊಂಡು ಅಂದು ರಾತ್ರಿ ಆ ಭಾರಿ ಮಳೆಯಲ್ಲಿ ಅವಳು ಹೊರಬಿದ್ದಿದ್ದಳು. ಆದರೆ ಅವಳನ್ನು ಸರ್ಪಕಾವಲು ಕಾಯುತ್ತಿದ್ದವರಿಗೆ ಅದು ತಿಳಿದು ಬೆನ್ನುಹತ್ತಿದ್ದರು. ಅವಳು ಅಲ್ಲಿ ಇಲ್ಲಿ ಅವಿತು ಆ ಕಗ್ಗತ್ತಲೆಯ ಕಾಡಿನಲ್ಲಿ ಅವರಿಗೆ ದಿಕ್ಕು ತಪ್ಪುವಂತೆ ಮಾಡಿ, ಕಡೆಗೆ ಐತನ ಬಿಡಾರದ ರಕ್ಷೆ ಪಡೆದಿದ್ದಳು. ಈಗಲೂ ಹೇಗಾದರೂ ಮಾಡಿ ತನ್ನ ಗಂಡನನ್ನೊಮ್ಮೆ ಕೂಡಿಕೊಂಡರೆ ಆಮೇಲೆ ಯಮ ಬಂದರೂ ತನ್ನನ್ನು ಅವನಿಂದ ತಪ್ಪಿಸಲಾರನು ಎಂದುಕೊಂಡಿದ್ದಳು.

ಆದರೆ ಯಾವಾಗ ಐತ ಪೀಂಚಲು ಅವರನ್ನು ಹಿಂಬಾಲಿಸಿ ಗುತ್ತಿಯೂ ಹುಲಿಯನೂ ಒಳಗೆ ಬಂದುದನ್ನು ಕಂಡಳೊ ಆಗ ಅವಳಿಗೆ ನರಗಳೆಲ್ಲ ಸಡಿಲವಾದಂತಾಗಿ, ಶಕ್ತಿಯುಡುಗಿ ಒಡಲು ಸೋತಂತಾಗಿ, ಪ್ರಜ್ಞೆ ಕುಸಿದು, ಮೊದಲಿನಂತೆ ಚಾಪೆಯ ಮೇಲೆ ಒರಗಿಬಿಟ್ಟಳು: ಭಗವಂತನ ಕೃಪೆ ಅಷ್ಟು ಅನಿರೀಕ್ಷಿತವಾಗಿ, ಆ ಪ್ರಮಾಣದಲ್ಲಿ, ಪ್ರವಾಹದೋಪಾದಿಯಲ್ಲಿ ನುಗ್ಗಿ ಬಂದು ಅಪ್ಪಳಿಸಿದರೆ ಯಾವ ಚೇತನಕ್ಕೆ ತಾನೆ ಪ್ರಜ್ಞೆಯಿಂದಿರಲು ಸಾಧ್ಯ? ಎಂತಹ ಕಟ್ಟಿದ ನಾಟಕದಲ್ಲಿಯೂ ಇಂತಹ ಮಂಗಳಕರ ಇಷ್ಟಸಿದ್ಧಿ ಈ ರೀತಿ ಒದಗುವುದು ದುಸ್ಸಾಧ್ಯವೆ!

ಗೌಡರ ಮನೆಯ ಮುರುವಿನ ಒಲೆಯ ಬೆಂಕಿಯಲ್ಲಿ ಕಂಬಳಿ ಬಟ್ಟೆಗಳನ್ನೆಲ್ಲ ಒಣಗಿಸಿಕೊಂಡು ಬಂದಿದ್ದ ಗುತ್ತಿ ಬಾಗಿಲ ಬಳಿಯೆ ಕಂಬಳಿ ಹಾಸಿಕೊಂಡು ಕೂತಮೇಲೆ "ಏನು, ಐತಣ್ಣ, ನಾ ಹೇಳಿದ್ದೆಲ್ಲ ಹೇಳಿದೆಯೇನು ಪೀಂಚಲವ್ವಗೆ?" ಎಂದು ಎಲೆ ಅಡಿಕೆ ಹಾಕತೊಡಗಿದನು.

"ಎಲ್ಲ ಹೇಳಿದ್ದೇನೆ. ಆದರೆ…." ಐತ ನಗುಮೊಗವಾಗಿದ್ದ ಹೆಂಡತಿಯ ಕಡೆಗೆ ನೋಡಿದನು.

"ನೋಡು, ಗುತ್ತಿ, ಅದೇನು ಸುಲಭದ ಕೆಲಸ ಅಂತಾ ಮಾಡಿದ್ದೀಯಾ? ಸಿಕ್ಕರೆ ನನ್ನನ್ನೆ ಸಿಗಿದು ಹಾಕಿಬಿಡುತ್ತಾರೆ!…." ನಗುತ್ತಲೆ ಹೇಳಿದಳು ಪೀಂಚಲು. ಅವಳ ಲಘು ಭಂಗಿಯನ್ನು ಗಮನಿಸಿದ ಗುತ್ತಿ ಮನಸ್ಸಿನಲ್ಲಿಯೆ ಈ ಹೆಣ್ಣಿಗೆ ಪರರ ಸಂಕಟ ಏನೂ ಗೊತ್ತೆ ಆಗುವುದಿಲ್ಲ!" ಎಂದುಕೊಂಡು ಹೇಳಿದನು:

"ನಾ ಸಾಯೋ ತನಕಾ ನಿಮ್ಮ ಉಪಕಾರ ಮರೆಯೋದಿಲ್ಲ…. ಆ ಹುಡುಗಿ ನೇಣುಗೀಣು ಹಾಕಿಕೊಳ್ ತಾಳೋ? ಹಳ್ಳ ಕೆರೆ ಹಾರ್ತಾಳೋ ಅಂತಾ ಹೆದರಿಕೆ ಆಗ್ಯದೆ ನಂಗೆ. ಇದೊಂದು ಸತಿ ನಾವು ಒಟ್ಟಾದರೆ, ಮತ್ತೆ ಬಿಡಿ,

ನಮ್ಮನ್ನು ಯಾರು ಅಗಚ್ತಾರೆ ನೋಡ್ತೀನಿ. ಅಗಚಿದ್ರೆ ನಮ್ಮ ಹೆಣಾನೆ ಅಗಚಬೇಕು! ಗೊತ್ತಾತೇನು?…. ನಮ್ಮನ್ನು ಬದುಕಿಸಿದೋರು ಅಂತಾ ನಿನಗೂ ಐತಣ್ಣಗೂ ಜೀತ ಮಾಡಿಕೊಂಡು ಬೇಕಾದ್ರೂ ಇರ್ತೀನಿ!"

"ನಮಗೇನ್ ನಿನ್ನ ಜೀತ ಬ್ಯಾಡ, ಗುತ್ತಿ. ಪರಾಣ ಹೋದ್ರೂ ಹೆದರದೆ ಮುಕುಂದೇಗೌಡರ ಕೆಲಸಾನ ನಡ್ಸಿ ಕೊಟ್ಟುಬಿಡು. ಸಾಕೇ ಸಾಕು!" ಎಂದಳು ಪೀಂಚಲು.

"ಏನು ಮಳೆ ಹೊಡೀತಿದೆ! ನಟ್ಟಿಗದ್ದೆ ಎಲ್ಲ ಕೊಚ್ಚಿಹೋಗ್ತದೆಯೋ ಏನೋ?" ಐತನ ಮಾತಿಗೆ ಎಲ್ಲರೂ ಕಿವಿಗೊಟ್ಟು ಆಲಿಸಿದರು. ಭೋರ್ಭೋರ್ಭೋರೆಂದು ಆಷಾಢದ ಮಳೆ ಸುರಿಯುತ್ತಿತ್ತು.

"ಅದಕ್ಕೆ ಅಲ್ಲೇನು ಮತ್ತೆ, ನಾನು ಪರಾರಿಯಾಗದೆ ಇಲ್ಲೇ ಇರೋದು?" ಮುಂದುವರಿಸಿದನು ಗುತ್ತಿ, ತುಂಡಾದ ಸಂಭಾಷಣೆಯನ್ನು.

"ತಿಮ್ಮಿ ಸಿಕ್ಕಿದ ಕೂಡ್ಲೆ ಓಡಿಬಿಡ್ತೀಯೋ ಏನೋ?"

"ದೇವರಾಣೆಗೂ ಹಾಂಗೆ ಮಾಡೋನಲ್ಲ ನಾನು, ಪೀಂಚಲವ್ವ." ಅಂಗಲಾಚಿದನು, ಅಳುದನಿಯ ಗುತ್ತಿ.

ಪೀಂಚಲು ಗೊರಬು ಮರೆಯಾಗಿ ಗುತ್ತಿಗೆ ಕಾಣದಿದ್ದ ರೀತಿಯಲ್ಲಿ ಮುಬ್ಬುಗತ್ತಲೆಯಲ್ಲಿ ಮಲಗಿದ್ದ ತಿಮ್ಮಿಯ ಕಡೆ ನೋಡಿದಳು. ಅವಳು ನಿದ್ದೆ ಮಾಡುತ್ತಿರಬಹುದೆಂದು ಭಾವಿಸಿ ಹೇಳಿದಳು: "ನೀವೆಲ್ಲ ಬರೋಕೆ ಮುಂಚೆ, ಸ್ವಲ್ಪ ಹೊತ್ತಿನಲ್ಲಿ ಅವಳನ್ನು ಹುಡುಕಿಕೊಂಡು ಬಂದಿದ್ರೋ!"

ಗುತ್ತಿ ಐತ ಇಬ್ಬರೂ ದಿಗಿಲುಬಿದ್ದು "ಯಾರನ್ನ?" ಎಂದು ಒಟ್ಟಿಗೆ ಕೇಳಿಬಿಟ್ಟರು.

"ತಿಮ್ಮೀನ!"

"ಯಾಕಂತೆ? ಎಲ್ಲಿಗೆ ಹೋದಳಂತೆ? ಹಳ್ಳ ಹಾರಿದಳೋ? ನೇಣುಹಾಕಿ ಕೊಂಡಳೋ? ಅಯ್ಯೋ ಕೆಟ್ಟೆನಪ್ಪಾ ನಾನೂ! ನಾನೀಗ್ಲೆ ಬೆಟ್ಟಳ್ಳಿ ಕೇರಿಗೆ ಹೋಗ್ತೀನಿ!" ಎದ್ದು ನಿಂತು ಕಂಬಳಿಗೆ ಕೈಹಾಕಿದನು ಗುತ್ತಿ.

ತಾನು ಹೇಳಬಾರದ್ದನ್ನು ಹೇಳಿ ಅಚಾತುರ್ಯವಾಯಿತೆಂದು ಪೀಂಚಲು ತಟಕ್ಕನೆ ದನಿ ಬದಲಾಯಿಸಿದಳು: "ಕುಶಾಲಿಗೆ ಹೇಳಿದರೆ ನಿಜ ಅಂತಾ ಮಾಡಿಕೊಂಡು ಗೋಳಾಡ್ತೀಯಲ್ಲೋ, ಗುತ್ತಿ! ಕೂತುಕೊಳ್ಳೊ! ಅವಳನ್ನ ಕರಕೊಂಡು ಬಂದು ಕೊಟ್ಟರೆ ಸೈಯಲ್ಲಾ ನಿಂಗೆ…."

"ಯಾವೊತ್ತು?" ಗುತ್ತಿ ಮತ್ತೆ ಕೂರುತ್ತಾ ಕೇಳಿದನು.

"ಯಾವೊತ್ತೇನು? ಈವೊತ್ತು ಬೇಕಾದರೆ ಈವೊತ್ತೆ! ಈಗ್ಲೆ ಬೇಕಾದ್ರೆ ಈಗ್ಲೆ!" ನಗುನಗುತ್ತಲೆ ಹೇಳಿದಳು ಪೀಂಚಲು, ಐತ ಕಕ್ಕಾವಿಕ್ಕಿಯಾಗೆ.

“ನಿಮಗೆ ಆಟ, ನಂಗೆ ಪರಾಣಸಂಕ್ಟ!” ನರಳಿದನು ಗುತ್ತಿ, ಮುಖ ಗಂಟುಹಾಕಿ.

ಮರುಮಾತಾಡದೆ ಪೀಂಚಲು ನಿರ್ದಾಕ್ಷಿಣ್ಯಭಂಗಿಯಿಂದ ಸರಕ್ಕನೆ ಎದ್ದುನಿಂತಳು. ಗೊರಬಿನ ಮರೆಗೆ ನಡೆದು, ಬಾಗಿ, ಮೆಲ್ಲಗೆ “ತಿಮ್ಮಿ, ಏ ತಿಮ್ಮಿ, ಏಳೆ!” ಎಂದು ಮೈ ಅಲುಗಾಡಿಸಿದಳು.

ಅವಳು ತನ್ನ ಹೆಂಡತಿಯ ಹೆಸರು ಹಿಡಿದು ಕರೆಯುತ್ತಿದ್ದುದನ್ನು ಕೇಳಿ ಗುತ್ತಿಗೆ ಬೆರಗು ಬಡಿದಂತಾಯಿತು. ಆದರೆ ಅವನು ಅಂತಹ ಪವಾಡವನ್ನು ಕನಸಿನಲ್ಲಿಯೂ ನಿರೀಕ್ಷಿಸಿರಲಿಲ್ಲವಾದುದರಿಂದ ತನ್ನ ಹೆಂಡತಿಯ ಹೆಸರಿನ ಬೇರೆ ಯಾರನ್ನಾದರೂ ಎಬ್ಬಿಸುತ್ತಿರಬೇಕೆಂದು ಭಾವಿಸಿದನು. ಅಥವಾ ಹಾಸ್ಯಗಾರ್ತಿ ಪೀಂಚಲವ್ವ ಮತ್ತೊಂದೇನಾದರೂ ಕುಶಾಲಿಗೆ ಶುರುಮಾಡಿರಬಹುದೆ? ಎಂದು ಗೊರಬಿನ ಕಡೆಗೇ ಕಣ್ಣಾಗಿ ಕುಳಿತಿದ್ದನು. ಐತನಂತೂ ಬಿಟ್ಟಕಣ್ಣು ಮುಚ್ಚದೆ, ಅರ್ಧಬಾಯಿ ತೆರೆದು, ಯಕ್ಷಿಣಿ ಮಾಡುವವನನ್ನು ನೋಡುವ ಹಳ್ಳಿಗರಂತೆ ಗಲ್ಲಗೈಯಾಗಿ ನಿಂತಿದ್ದನು, ತನ್ನ ಚತುರೆಯಾದ ಹೆಂಡತಿಯ ಶಯನಸಂವಿಧಾನದ ರಾಜಕಾರಣತಂತ್ರಜ್ಞತೆಗೆ ವಿಸ್ಮಿತನಾಗಿ.

ಪೀಂಚಲು ಗೊರಬನ್ನೆತ್ತಿ ತಂದು ಬಿಡಾರದ ಜಾಗವನ್ನು ಇಬ್ಭಾಗಿಸುವಂತೆ ನಡುವೆ ಇಟ್ಟಳು. ಒದ್ದೆಮುದ್ದೆಯಾಗಿ ನೆಲದಮೇಲೆ ಬಿದ್ದಿದ್ದ ತಿಮ್ಮಿಯ ಸೀರೆಯನ್ನು, ಆರಿಸುವುದಕ್ಕೋಸ್ಕರ ಹರಡುವಂತೆ, ಅಡ್ಡಡ್ಡವಾಗಿ ಮರೆಕಟ್ಟಿದ್ದಳು. ತಿಮ್ಮಿ ಮಲಗಿದ್ದ ಚಾಪೆಯನ್ನು ಗುತ್ತಿಗೆ ನೀಡಿ “ನೀನಲ್ಲೆ ಹಾಸಿಕೊಳ್ಳೊ; ಇವಳಿಗೂ ಸೊಲ್ಪ ಜಾಗ ಕೊಡು!” ಎಂದು, ನಾಚಿಕೆಯಿಂದ ಬಾಗಿ ನಿಂತಿದ್ದ ಹೊಲೆಯರ ಹುಡುಗಿಗೆ “ದೂರ ದೂರ ಬ್ಯಾರೆ ಬ್ಯಾರೆ ಮಲಗಿಕೊಳ್ಳಾಕೆ ನಮ್ಮ ಸಣ್ಣ ಬಿಡಾರದಾಗೆ ಜಾಗ ಇಲ್ಲ ಕಣೇ.... ನಾವಿಲ್ಲಿ ಮಲಗಿಕೊಳ್ಳಬೇಕು; ನೀ ಆಚೆಗೆ ನಡೇ!” ಎಂದು ತುಸು ಬಲಪ್ರಯೋಗ ಮಾಡಿ ತಳ್ಳಿದಂತೆ ನಟಿಸಿ, ತಿಮ್ಮಿಯನ್ನು ಗುತ್ತಿಯ ಕಡೆಗೆ ಸಾಗಿಸಿಯೇ ಬಿಟ್ಟಳು. ಐತನನ್ನು ಈ ಕಡೆಗೆ ಕರೆದು, ತನಗೂ ತನ್ನ ಗಂಡನಿಗೂ ಹಾಸಗೆ ಮಾಡತೊಡಗಿದಳು.

ಪೀಂಚಲು ಗೊರಬನ್ನೆತ್ತಿದಾಗ, ಅತ್ತಕಡೆಯೆ ನೋಡುತ್ತಿದ್ದ ಗುತ್ತಿಯ ಕಣ್ಣಿಗೆ, ಆ ಮಬ್ಬು ಬೆಳಕಿನಲ್ಲಿ, ಗಟ್ಟದ ತಗ್ಗಿನವರಂತೆ ಸೀರೆ ಸುತ್ತಿಕೊಂಡಿದ್ದ ಹುಡುಗಿ ಕಾಣಿಸಿತ್ತು. “ಇವಳಿಗೂ ಸೊಲ್ಪ ಜಾಗ ಕೊಡೊ!” ಎಂದು ತನಗೆ ಹೇಳಿ, ಪೀಂಚಲು ಆ ಹುಡುಗಿಗೆ “ಬ್ಯಾರೆ ಮಲಗಾಕೆ ಇಲ್ಲಿ ಜಾಗ ಇಲ್ಲ; ನೀ ಆಚೆಗೆ ನಡೀ!” ಎಂದು ಅವಳನ್ನು ತನ್ನ ಕಡೆಗೆ ತಳ್ಳಿದಾಗ, ಮುದುಡಿ ಮಲಗಿದ್ದ ಮೂಲೆಯಿಂದ ನೆಗೆದೆದ್ದು, ಅವಳ ಮೇಲೆ ಹಾರಿ, ಬಾಲ ಅಳ್ಳಾಡಿಸಿದ ಹುಲಿಯನನ್ನು ಕಂಡು ತಿಮ್ಮಿಯನ್ನು ಗುರುತಿಸಿದ ಗುತ್ತಿಗೆ ಏನಾಯಿತೆಂದು ಯಾರು ತಾನೆ ಹೇಳಬಲ್ಲರು? ಅವನಿನ್ನೂ ಅವಳ ಮುಖದ ಕಡೆಗೆ ನೋಡಿ ಪೂರೈಸಿರಲಿಲ್ಲ; ಅಷ್ಟರೊಳಗೆ, ಏನವಸರವಾಗಿತ್ತೊ ಆ ಪೀಂಚಲವ್ವಗೆ?- ಬೆಳಕಲ್ಲದ ಬೆಳಕಿನ ಆ ಹಣತೆಯ ಸೊಡರನ್ನೂ ಆರಿಸಿ ಬಿಟ್ಟಳು! ನಾಚಿಕೆ ಸಂಕೋಚಗಳನ್ನೆಲ್ಲ ನಿವಾರಿಸಿ, ಒಲಿದ ಒಡಲುಗಳನ್ನಪ್ಪಿಸಿ ಒಂದುಗೂಡಿಸುವ ಕಗ್ಗತ್ತಲೆ ದಟ್ಟಯ್ಸಿತು, ರತಿ ಮನ್ಮಥ ಧೈರ್ಯಪ್ರಚೋದಿಯಾಗಿ!.... ಒಳಗೆ ಎಲ್ಲ ನಿಶ್ಯಬ್ದವಾಗಿ ಸ್ವಲ್ಪ ಹೊತ್ತಾದಮೇಲೆ....

“ಹಥೀ! ಅನಿಷ್ಟದ್ದೆ!” ಗುತ್ತಿ ಬಯ್ದುದ್ದು ಕೇಳಿಸಿ, ತನ್ನ ಮನದನ್ನೆಯ ನಗ್ನತೆಯನ್ನೆಲ್ಲ, ತನ್ನ ಸಂಪೂರ್ಣ ಬತ್ತಲೆಯಿಂದಪ್ಪಿ, ತಬ್ಬಿ, ಕಂಬಳಿ ಹೊದ್ದು ಮಲಗಿದ್ದ ಐತ ಗೊರಬಿನ ತೆರೆಯ ಆ ಕಡೆಯಿಂದ ಕೇಳಿದನು: “ಏನೋ ಅದು, ಗುತ್ತಿ? ಯಾರನ್ನೋ ಬಯ್ತಿದೀಯಾ?”

“ಈ ಹಾಳ್ ನಾಯಿ! ನಮಗೇ ಜಾಗ ಸಾಲದು. ಅದು ಬ್ಯಾರೆ ಕಂಬಳಿಗೆ ಒತ್ತಿ ಮಲಗಕ್ಕೆ ನೋಡ್ತದಲ್ಲಾ!” ನಕ್ಕನು ಗುತ್ತಿ.

“ನೀವಿಬ್ಬರೂ ಸ್ವಲ್ಪ ಒತ್ತೊತ್ತಿಗೆ ಒತ್ತಿ ಮಲಗಿಕೊಂಡರೆ ಅದಕ್ಕೂ ಒಂದು ಚೂರು ಜಾಗ ಸಿಗ್ತದೆ! ಹಿಹ್ಹಿಹ್ಹಿ” ನಕ್ಕನು ಐತ.

“ಹಾಂಗಾರೆ, ನೀವು ಹಂಗೇ ಮಾಡಿ! ನಿಮ್ಮ ಹತ್ರಕ್ಕೇ ಹುಲಿಯನ್ನೆ ಕಳ್ಸಿತೀನಿ! ಆಗಬ್ಯೆದಾ? ಹಿಹ್ಹಿಹ್ಹಿ!”

“ಅಯ್ಯೋ, ನಿನ್ನ ಉಪಕಾರ! ಹಾಂಗೊಂದು ಮಾಡಬ್ಯಾಡ ಮಾರಾಯ ಹಿಹ್ಹಿಹ್ಹಿಹ್ಹಿ!”

ಗಂಡಸರಿಬ್ಬರ ನಗೆಯ ನಡುವೆ ಹೆಣ್ಣುಗಳೆರಡರ ಕಿಲಿಕಿಲಿಯ ಕಿರುನಗೆ ಮುಳುಗಿ ಹೋಗಿತ್ತು, ಆ ಹೊರಗಣ ಜಡಿಮಳೆಯ ಸದ್ದಿನಲ್ಲಿ!

* * *

## ೪೮

ಆವೊತ್ತು ಹೊತ್ತಾರೆ ಹಳೆಮನೆ ತಿಮ್ಮಪ್ಪಹೆಗ್ಗಡೆ ಹೂವಳ್ಳಿ ಮನೆಯ ಹೆಬ್ಬಾಗಿಲು ಹೊಕ್ಕು ಜಗಲಿಗೆ ಹೋದಾಗ ವೆಂಕಟಣ್ಣ, ಕಂಬಳಿ ಹೊದ್ದುಕೊಂಡು ಮಲಗಿದ್ದವನು, ಎದ್ದು ಕುಳಿತು ಗಟ್ಟಿಯಾಗಿ ಕೂಗಿ ಹೇಳಿದನು, ಮಗಳಿಗೆ ಹೇಳುವಂತೆ: “ಚಿನ್ನೂ, ಏ ಚಿನ್ನೂ, ನಿನ್ನ ಹಳೆಮನೆ ಅಣ್ಣಯ್ಯ ಬಂದಾನೇ. ಕಾಲು ತೊಳೆಯಲಿಕ್ಕೆ ಉಂದು ಚೊಂಬು ನೀರು ತಂದಿಡೇ.”

ಚಿನ್ನಮ್ಮಗೆ ಬದಲಾಗಿ ನಾಗಕ್ಕನೆ ಒಂದು ಹಿತ್ತಾಳೆ ಚೊಂಬಿನಲ್ಲಿ ನೀರು ತಂದು ಜಗಲಿಯ ಕೆಸರ್ಹಲಗೆಯ ಮೇಲೆ ಇಟ್ಟು, ಸರಕ್ಕನೆ ಹಿಂದಿರುಗಿ ಹೋಗುತ್ತಿದ್ದಳು. ಅಷ್ಟರಲ್ಲಿ ವೆಂಕಟಣ್ಣ “ಒಂದು ಜಮಖಾನ ಹಾಸಿ, ದಿಂಬು ಹಾಕ್ತೀಯಾ ನಂಟರಿಗೆ?” ಎಂದು ಹೆಂಡತಿಯಾದವಳಿಗೆ ಗಂಡನು ಆಜ್ಞೆ ಮಾಡುವ ರೀತಿಯಲ್ಲಿ ಹೇಳಿದನು. ಅವಳು ನವವಧು ಸಹಜವಾದ ಲಜ್ಜಾ ಭಂಗಿಯಿಂದಲೆಂಬಂತೆ ತಾನು ಕೂಡಿಕೆಯಾಗಿದ್ದ ಗಂಡನ ಅಪ್ಪಣೆಯನ್ನು ನೆರವೇರಿಸಿ ಹೋದಳು.

ತಿಮ್ಮಪ್ಪ ಕೆಸರಾಗಿದ್ದ ಕಾಲುಗಳನ್ನು ಪದ್ಧತಿಯಂತೆ ತೊಳೆದು ಕೊಂಡು, ಅದಕ್ಕಾಗಿಯೆ ಅಲ್ಲಿ ಕಡಿನ ಕೋಡಿನ ಮೇಲೆ ಹರಡಿದ್ದ ಅಂಗವಸ್ತ್ರ ದಿಂದ ನೀರೊರೆಸಿಕೊಂಡು ಬಂದು ದಿಂಬಿಗೊರಗಿ ಜಮಖಾನದ ಮೇಲೆ ಕೆಸರ್ಹಲಗೆಯಿಂದ ಕಾಲು ಇಳಿಬಿಟ್ಟುಕೊಂಡು ಕುಳಿತನು.

“ಏನ್ ಬಾ'ಳ ಅಪ್ರೂಪಕ್ಕೆ ಬಂದ್ಬಿಟ್ಟೆ, ತಿಮ್ಮೂ, ಬಡೋರ ಮನೀಗೆ?...ನಿನ್ನ ಅಪ್ಪಯ್ಯ ಹ್ಯಾಂಗಿದಾರೆ....ನಾನೇ ಬರ್ಬೇಕು ಅಂತಾ ಮಾಡಿದ್ದೆ, ಮದೇಮನೆ ಕರಿಯಾಕೆ. ಹಾಂಗ್ಯಾರೆ, ಏನು ಮಾಡಾದು? ನನ್ನ ಕಾಲಿನ ಈ ಕುಂಟನಹುಣ್ಣು ಜಾಸ್ತಿ ಆಗಿ, ರಸಿಗೆ ಸೋರಕ್ಕೆ ಸುರುವಾತು. ಆ ಕಣ್ಣಾಪಂಡಿತನ ಔಸ್ತಿ ಹಾಕಿ ಹಾಕಿ ಸಾಕಾತು. ಈಗ ಆ ಕಮ್ಮಾರಸಾಲೆ ಪುಟ್ಟಾಚಾರಿ ಕೊಟ್ಟ ಔಸ್ತಿ ಹಾಕ್ತಾ ಇದೀನಿ. ಮೊನ್ನೆಯಿಂದ ಜರಾ ಬ್ಯಾರೆ ಬರಾಕೆ ಸುರು ಮಾಡದೆ....ನಾಲಗೆಗೆ ಅಗ್ರ ಆಗಿಬಿಟ್ಟಿದೆ....ಹೊಟ್ಟೆಗೇನೂ ಸೇರಾದಿಲ್ಲ....ಉಂಡಿದ್ದೆಲ್ಲ ವಾಂತಿ ಆಗ್ತದೆ....ಕಲ್ಲೂರು ದೇವರ ಪರ್ಸಾದಾನು ತಂದಾತು. ಏನೋ ಸನಿ ಹಿಡಿದ್ದಾಂಗೆ ಆಗ್ಯದೆ ನಂಗೆ....” ದೀರ್ಘವಾಗಿ ನಿಟ್ಟುಸಿರುಬಿಟ್ಟು ಮುಂದುವರಿಸಿದನು. “ಆವೊತ್ತು ನಿಮ್ಮನೆ ಸುಡುಗಾಡಿನಾಗೆ....ಅದೆಲ್ಲ ನಡೀತಲ್ಲ? ಎಲ್ಲ ಪೂರೈಸಿ ಕತ್ಲೇಲಿ ಹೊಲ್ಟು ಮನೀಗೆ ಒಬ್ಬನೆ ಬರ್ತಾ ಇದ್ದೆ. ಆ ಚೌಡೀಬನದ ಹತ್ರ, ಹಾಂಗ್ಯಾರೆ ಏನು ಅಂತಾ ಹೇಳಾದು, ಏನೋ ಬಂದು ನನ್ನ ಮೈ ಮುಟ್ಟಿದ್ದಾಂಗೆ ಆ'ತು! ಆವತ್ತಿನಿಂದ ಸುರುವಾಗ್ಯದೆ, ನೋಡು, ಈ ವರ್ಾತೆ!....”

ತಿಮ್ಮಪ್ಪಹೆಗ್ಗಡೆ ಯಾವ ಔಪಚಾರಿಕ ಪೀಠಿಕೆಯನ್ನೂ ಹಾಕಲಿಲ್ಲ. ವೆಂಕಟಚಿಕ್ಕಪ್ಪಯ್ಯನ ಸರಮಾತಿನಲ್ಲಿ ಅಡಕವಾಗಿದ್ದ ಯಾವ ಪ್ರಶ್ನೆಯನ್ನೂ ಗಮನಿಸಿದಂತೆಯೂ ತೋರಲಿಲ್ಲ. ತಟಕ್ಕನೆ ತಾನು ಯಾವ ಉದ್ದೇಶಕ್ಕಾಗಿ ಬಂದಿದ್ದನೋ ಅದನ್ನೇ ಪ್ರಸ್ತಾಪಿಸತೊಡಗಿದನು:

“ಅಪ್ಪಯ್ಯ ಹೇಳಿ ಕಳಿಸ್ಯಾನೆ.” ಎಂದು ಸುಳ್ಳಿನಿಂದಲೆ ಪ್ರಾರಂಭಿಸಿದ್ದನು: “ನಿನಗೆ ಕಷ್ಟಕಾಲದಲ್ಲಿ ಸಾಲಗೀಲ ಕೊಟ್ಟು ಉಪಕಾರ ಮಾಡಿದ್ದಕ್ಕೆ ತಕ್ಕ ಉಪಕಾರಾನೆ ಮಾಡೀಯ ನಮಗೆ....ನಮಗೆ ಒಂದು ಮಾತು ಕೇಳದೆ ಸಿಂಬಾವಿಗೆ ಹೆಣ್ಣು ಕೊಡಾಕೆ ಹೆಂಗೆ ಒಪ್ಪಿದೆ? ನನ್ನ ತಂಗೀನ ಭರಂಬಾವಗೆ ಕೊಟ್ಟು ಅವನ ತಂಗೀನ ನಂಗೆ ತರಾದು ಅಂತಾ ಎಲ್ಲ ನಿಶ್ಚಯವಾಗಿದ್ದೂ ನೀನು ಈ ಅನ್ಯಾಯ ಮಾಡೋದೇನು?....”

ತಿಮ್ಮಪ್ಪಹೆಗ್ಗಡೇಯ ಈ ಅನಿರೀಕ್ಷಿತ ಆಕ್ರಮಣಕ್ಕೆ ವೆಂಕಟಣ್ಣ ತ್ತತ್ತರಿಸಿ ಬಾಯಿಗೆ ಬಂದದ್ದನ್ನೇ- ಮನಸ್ಸಿಗೆ ಬಂದದ್ದನ್ನಾಗಿಸಿ, ಹೇಳತೊಡಗಿದನು: “ಹಾಂಗ್ಯಾರೆ.... ಹಾಂಗ್ಯಾರೆ ನಮ್ಮ ಹೆಣ್ಣನ್ನ ನಾವು ಯಾರಿಗೆ ಬೇಕಾದ್ರೂ ಕೊಡಾಕೆ ಹಕ್ಕಿಲೇನು ನಮಗೆ? ನಾನೇನು ಅವನ್ನ ಕಾಲ್ ಕಟ್ಟಿಕೊಂಡು ನನ್ನ ಮಗಳನ್ನು ಮದುವೆ ಆಗೂ ಅಂತಾ ಕೇಳಿಕೊಳ್ಳಲಿಲ್ಲ, ಗೊತ್ತಾತೇನು? ಹಾಂಗ್ಯಾರೆ.... ಹಾಂಗ್ಯಾರೆ.... ನೀನೆ ಬೇಕಾರೆ ಕೇಳು, ಆ ಕಲ್ಲೂರು ಮಂಜಭಟ್ಟರನ್ನ. ಎಂಥಾ ಇಕ್ಕಟ್ಟಿಗೆ ನನ್ನ ಸಿಕ್ಕಿಸಿಕೊಂಡು 'ಒಲ್ಲೇ! ಒಲ್ಲೇ!' ಅನ್ತಿದ್ದ ನನ್ನ ಮಗಳನ್ನ ನಾನೇ ಬಾಂವಿಗೆ ಹಾಕ್ದಾಂಗೆ ಮಾಡಿದ್ರೂ ಅಂತಾ ನಿಂಗೇ ಗೊತ್ತಾಗ್ತದೆ....”

“ಕೋಣೂರು ಸಣ್ಣ ಬಾವಗೆ ಕೊಡ್ತೀನಿ ಕೊಡ್ತೀನಿ ಅಂತಾ ಇದ್ದು ಹೀಂಗ್ಯಾಕೆ ಮೋಸ ಮಾಡಬೇಕಾಗಿತ್ತು ನೀನು?”

“ಅವನಿಗೇ ಕೊಡ್ತೀನಪ್ಪಾ ಅಂದೆ....ನನ್ನ ಮನೆ ಮಠಾ ಎಲ್ಲಾ ಹೋಗದೆ ಇರೋ ಹಾಂಗೆ ಸಾಲ ತೀರ್ಸೋಕೆ ಸ್ವಲ್ಪ ದುಡ್ಡು ಕೊಡಿ ಅಂತಾನೂ ದಮ್ಮಯ್ಯಗುಡ್ಡೆ ಹಾಕ್ದೆ....ಮುಕುಂದನ ಅಣ್ಣ ಒಂದು ಕಾಸ್ನೂ ಕೊಡಾಕೆ ಆಗಾದಿಲ್ಲ ಅಂದುಬಿಟ್ಟ....” ಅಳುದನಿಯಲ್ಲಿ ಮುಂದುವರಿಸಿದನು ವೆಂಕಟಣ್ಣ “ಇನ್ನೇನು ಮಾಡ್ಲಿ? ನನ್ನ ಕರ್ಳ್ನ ನಾನು ಕಿತ್ತುಕೊಂಡೆ, ಬ್ಯಾರೆ ಯಾವ ದಾರೀನು ತೋರ್ದೆ, ತಿಮ್ಮೂ!”

“ಈಗಲಾದ್ರೂ ಹೇಳು, ನಮ್ಮ ಹುಡುಗೀನ ಕೊಡಾಕೆ ಆಗಾದಿಲ್ಲ ಅಂತಾ….”

“ನನ್ನ ತಿಂದ್ಹಾಕೆ ಬಿಡ್ತಾರೆ ಕಣೋ! ಜಾತಿಯಿಂದ ಹೊರಗೆ ಹಾಕ್ಸಿ, ನಾಕು ಜನರ ಎದುರು ತಲೆ ಎತ್ತಿಕೊಂಡು ತಿರುಗದ ಹಾಂಗೆ ಮಾಡಿಬಿಡ್ತಾರೆ….ನನ್ನ ಮನೆ ಜಮೀನು ಎಲ್ಲ ಕಸುಕೊಂಡು, ನನ್ನ ಕಾಡಿಗೇ ಅಟ್ಟಿ ಬಿಡ್ತಾರೆ!…. ಮದುವೆ ಎಲ್ಲ ನಿಶ್ಚಯ ಆಗಿ, ದಿನಾನೂ ಗೊತ್ತಾಗಿ ಹೋಗ್ಯದೆ…. ಲಗ್ನಪತ್ರಿಕೆನೂ ಬರ್ಸಿ ಕಳಿಸಿ ಆಗ್ಯದೆ….”

ತಿಮ್ಮಪ್ಪ ಹೆಗ್ಗಡೆ ಸ್ವಲ್ಪ ಹೊತ್ತು ಏನೇನನ್ನೋ ಚಿಂತಿಸುತ್ತಾ ಮೌನವಾಗಿ ಕುಳಿತಿದ್ದನು. ವೆಂಕಟಣ್ಣನ ನಿಸ್ಸಹಾಯಕ ದುಸ್ಥಿತಿ ಅವನಿಗೆ ಚೆನ್ನಾಗಿ ತಿಳಿದಂತಾಗಿತ್ತು. 'ಈ ಲಗ್ನ ತಪ್ಪುವಂತೆ ಮಾಡುವುದಕ್ಕೆ ನೀನು ಒಪ್ಪಿಗೆ ಕೊಟ್ಟರೆ ನಾನು ಏನಾದರೂ ಮಾಡುತ್ತೇನೆ' ಎಂದು ಕೇಳಿಬಿಡಲೇನು ಎಂದುಕೊಂಡನು ಒಮ್ಮೆ. ಮತ್ತೆ ವೆಂಕಟಣ್ಣನಂತಹ ಸ್ಥೂಲ ಬುದ್ಧಿಯ ಮತ್ತು ಅಸ್ಥಿರ ಮನಸ್ಸಿನ ಮನುಷ್ಯಗೆ ಅಂತಹ ರಹಸ್ಯವನ್ನು ಬಿಟ್ಟುಕೊಡುವುದರಿಂದ ಕಾರ್ಯನಿರ್ವಹಣೆಗೆ ಒದಗುವ ಸಹಾಯಕ್ಕಿಂತಲೂ ಅಪಾಯವೇ ಹೆಚ್ಚು ಎಂದು ಭಾವಿಸಿ ತೆಪ್ಪಗಾದನು.

ಅವನು ಸರಕ್ಕನ್ ಎದ್ದು ನಿಂತು “ನಾನು ಹೋಗಿ ಬರ್ತೀನಿ” ಎಂದಾಗ, ವೆಂಕಟಣ್ಣ ಕುಂಟಿನ ಹುಣ್ಣಿನ ನೋವಿಗೆ ನರಳುತ್ತಾ “ಊಟದ ಹೊತ್ತಾತು; ಉಂಡುಕೊಂಡೇ ಹೋಗೋ.” ಎಂದುದನ್ನೂ ಆಲಿಸದವನಂತೆ, ಹೂವಳ್ಳಿಯಿಂದ ಹೊರಟು ಕೋಣೂರಿಗೆ ಹೋಗಿದ್ದನು.

ಈ ಸಾರಿ ತಿಮ್ಮಪ್ಪಹೆಗ್ಗಡೆ ತನ್ನ ಮನಸ್ಸಿನಲ್ಲಿದ್ದುದನ್ನು ಮುಚ್ಚುಮರೆ ಮಾಡದೆ ಮುಕುಂದಯ್ಯನ ಮುಂದೆ ಬಿಚ್ಚಿಟ್ಟನು. ಹಿಂದೊಮ್ಮೆ ಈ ಪ್ರಸ್ತಾಪವೆತ್ತಿದ್ದಾಗ ತಿಮ್ಮಪ್ಪಹೆಗ್ಗಡೆಯ ವಿಷಯದಲ್ಲಿ ನಂಬುಗೆಯಿಲ್ಲದಿದ್ದ ಮುಕುಂದಯ್ಯ ತನ್ನ ಯಾವ ಪ್ರತಿಕ್ರಿಯೆಯನ್ನೂ ತೋರಗೊಟ್ಟಿರಲಿಲ್ಲ. ಇದ್ದಕ್ಕಿದ್ದ ಹಾಗಿ ಭರಮೈಹೆಗ್ಗಡೆಯ ದ್ವಿತೀಯ ವಿವಾಹಕ್ಕೆ ಭಂಗತರುವ ತಿಮ್ಮಪ್ಪಹೆಗ್ಗಡೆಯ ಪ್ರಯತ್ನ ಅರ್ಥರಹಿತವಾಗಿ ಸಂಶಯಾಸ್ಪದವಾಗಿತ್ತು. ಆದರೆ ಈಗ ಅದು ಅರ್ಥಪೂರ್ಣವಾದುದರಿಂದ ತಿಮ್ಮಪ್ಪಹೆಗ್ಗಡೆಯ ವರ್ತನೆಯಲ್ಲಿ ವಂಚನೆಯಿಲ್ಲವೆಂಬುದು ಸ್ಪಷ್ಟವಾಗಿತ್ತು. ಮುಕುಂದಯ್ಯ ಮತ್ತು ಹೂವಳ್ಳಿ ಚಿನ್ನಮ್ಮನ ಮದುವೆ ಆಗಬೇಕೆಂಬುದು ಅವನ ಮುಖ್ಯ ಉದ್ದೇಶವಾಗಿರಲಿಲ್ಲ. ಈ ಮದುವೆ ನಡೆಯದಂತೆ ನೋಡಿಕೊಂಡರೆ ಅವನ ಮತ್ತು ಅವನ ತಂಗಿಯ ಮದುವೆಯ ದಾರಿ ಸರಾಗವಾಗುತ್ತದೆ ಎಂಬುದೆ ಅವನ ಪ್ರಧಾನೋದ್ದೇಶವಾಗಿತ್ತು. ತಿಮ್ಮಪ್ಪ ಹೆಗ್ಗಡೆಯ ಸ್ವಾರ್ಥ ತನ್ನ ಸ್ವಾರ್ಥಕ್ಕೆ ಸಹಕಾರಿಯಾಗಿಯೂ ಉಪಕಾರಿಯಾಗಿಯೂ ಆಗಿದ್ದುದರಿಂದ ಮುಕುಂದಯ್ಯ ಅವನನ್ನೂ ತನ್ನ ಒಳಸಂಚಿನ ವಲಯಕ್ಕೆ ಸೇರಿಸಕೊಳ್ಳಲೊಪ್ಪಿದ್ದನು.

ಆದರೆ ತಿಮ್ಮಪ್ಪ ಹೆಗ್ಗಡೆಯ ಸಂಚು ಮುಕುಂದಯ್ಯನ ಸಂಚಿನ ವಲಯದ ಮಿತಿಯಲ್ಲಿರಲು ಸಮ್ಮತಿಸದೆ, ಅದಕ್ಕೆ ಸಹಕಾರಿಯಾಗುವ ರೀತಿಯಲ್ಲಿ ತನ್ನ ವಲಯವನ್ನು ವಿಸ್ತರಿಸಿಕೊಂಡು ಮುಂದುವರಿದಿತ್ತು….

ಆ ಉದ್ದೇಶದಿಂದಲೆ ಅವನು ಸಿಂಬಾವಿಗೆ ಹೋದದ್ದು.

ಈ ಸಾರಿ ಸಿಂಬಾವಿಯಲ್ಲಿ ಕಾಣಿಸಿಕೊಂಡ ತಿಮ್ಮಪ್ಪಹೆಗ್ಗಡೆ ಹೊಸ ರೂಪ ತಾಳಿದ್ದನು. ಹಿಂದೆಲ್ಲ ಹೋಗುತ್ತಿದ್ದಂತೆ ಸಾಧಾರಣ ವೇಷದಲ್ಲಿ ಹೋಗಿರಲಿಲ್ಲ. ಭರಮೈಹೆಗ್ಗಡೆಯ ತಂಗಿ ಮೊತ್ತಮೊದಲು, ಜಗಲಿಯಲ್ಲಿ ಹಾಸಿದ್ದ

ಜಮಖಾನದ ಮೇಲೆ ಮುಂಡಿಗೆಗೆ ಆನಿಸಿದ್ದ ದಿಂಬಿಗೊರಗಿ ಮಂಡಿಸಿದ್ದ, ಅವನನ್ನು ನೋಡಿದಾಗ ಯಾರೋ ಹೊಸ ನೆಂಟರೆಂದು ಬೆರಗಾಗಿ ನೋಡಿದ್ದಳು. ಅಂಗಿ, ಪಂಚೆ, ಬಚ್ಚಗಾನಿ, ಕಿವಿಯ ಹರಳೊಂಟೆ, ಕೈಯ ಚಿನ್ನದುಂಗುರ, ಇವುಗಳಿಂದ ಶೋಭಿಸುತ್ತಿದ್ದ ತಿಮ್ಮಪ್ಪಹೆಗ್ಗಡೆ ಹಳೆಮನೆಗೆ ಆಗಲೆ ಯಜಮಾನನಾಗಿದ್ದಾನೆ ಎಂಬುದನ್ನೂ ಪ್ರಕಟಿಸಿತ್ತು. ಅವನು ಕಳಚಿಟ್ಟಿದ್ದ ಕನ್ನಡಜಿಲ್ಲೆಯ ಹೂವು ಕೂರಿಸಿದ ಮೆಟ್ಟೂ, ಮಳೆಯಲ್ಲಿ ಬಂದದ್ದರಿಂದ ಒದ್ದೆ ಸೋರುತ್ತಿದ್ದು ಬಿಚ್ಚಿಟ್ಟಿದ್ದ ಹೊಸ ಕೊಡೆಯೂ ಜಮಖಾನದ ಮೇಲೆ ತೆರೆದಿಟ್ಟಿದ್ದ ರೇಷ್ಮೆಯ ಬಣ್ಣದ ಟೋಪಿಯೂ ಆಗಿನ ಕಾಲದ ಹಳ್ಳಿಗಳಲ್ಲಿ ಈಗಿನ ಕಾಲದ ಕಾರುಗಳಿಗೆ ಸಮನಾದ ಭೋಗೈಶ್ವರ್ಯದ ಸಾಮಗ್ರಿಗಳಾಗಿದ್ದು ಬೆರಗುಗೊಳಿಸುತ್ತಿದ್ದವು! ಛೆಃ ಯಾರು ಹೇಳುತ್ತಾರೆ ತಿಮ್ಮಪ್ಪಹೆಗ್ಗಡೆ ಕೊಳಕಿನ ಕುರೂಪಿ ಎಂದು, ಈಗ?

ಹೂವಳ್ಳಿ ಹೆಣ್ಣಿನಿಂದ ಭರಮೈಹೆಗ್ಗಡೆಯನ್ನು ವಿಮುಖನನ್ನಾಗಿ ಮಾಡಲು ಈ ಸಾರಿ ತಿಮ್ಮಪ್ಪಹೆಗ್ಗಡೆ ಪ್ರಯೋಗಿಸಿದ್ದ ಅಸ್ತ್ರ ತಕ್ಕಮಟ್ಟಿಗೆ ಬ್ರಹ್ಮಾಸ್ತ್ರವೆ ಆಗಿತ್ತು: ಆ ಹೆಣ್ಣು ಹಿಂದಿನಿಂದಲೂ ಕೋಣೂರು ಮುಕುಂದಯ್ಯನೊಡನೆ ಸ್ನೇಹದಿಂದಿದ್ದು, ಇತ್ತೀಚೆಗೆ ದೇಹಸಂಬಂಧವನ್ನೂ ಸಂಪಾದಿಸಿಕೊಂಡು, ಈಗಾಗಲೆ ಒಂದ ಎರಡೊ ತಿಂಗಳೂ ಆಗಿದೆ ಎಂದೂ ಹೇಳುತ್ತಾರೆ. ಅವಳನ್ನು ಲಗ್ನವಾದರೆ ಅಪವಾದ ಅವಮಾನ ಎರಡೂ ತಪ್ಪಿದ್ದಲ್ಲ!

ಆದರೆ ಭರಮೈಹೆಗ್ಗಡೆ ಅಂತಹ ಧರ್ಮಸೂಕ್ಷ್ಮತೆಗೆ ಅಳುಕಲಿಲ್ಲ; ಹಾಗೇನಾದರೂ ಆಗಿದೆ ಎಂದು ಗೊತ್ತಾಗಿ, ಅವಳು ಮದುವೆಯಾಗಿ ಒಂಬತ್ತು ತಿಂಗಳೊಳಗಾಗಿ ಹೆತ್ತುಗಿತ್ತರೆ ಅವಳನ್ನು ಬಿಟ್ಟು, ಓಡಿಸಿ, ಜಾತಿಯಿಂದ ಬಹಿಷ್ಕಾರ ಹಾಕಿದರಾಯ್ತು, ಎಂದು ಉತ್ತರ ಹೇಳಿ ನಿಶ್ಚಿಂತರಾದರು. ಬಾಯಿಬಿಟ್ಟು ಹೇಳದಿದ್ದ ಇನ್ನೊಂದು ವಿಚಾರ ಅವರ ಮನಸ್ಸಿನಲ್ಲಿತ್ತು: ಈಗೆಲ್ಲಿಯಾದರೂ ಒಂದುವೇಳೆ ತಾನೆ ಮದುವೆಯಾಗುವುದಿಲ್ಲ ಎಂದರೆ, ತಾನು ಜಾಮೀನಾಗಿ ನಿಂತು ಕೊಟ್ಟಿದ್ದ ಸಾಲದ ಹಣವೆಲ್ಲ ಮುಳುಗಿಹೋಗುತ್ತದೆ. ಮದುವೆಯನ್ನು ಮುರಿಯುವುದಕ್ಕೆ ತಾನೆ ಕಾರಣನಾಗುವುದರಿಂದ ಹಣ ಪಡೆಯುವ ಹಕ್ಕಿನಿಂದಲೂ ಚ್ಯುತನಾಗಬೇಕಾಗುತ್ತದೆ. ಹೆಣ್ಣು ಕೊಡುವುದಿಲ್ಲ ಎಂದು ವೆಂಕಪ್ಪನಾಯಕರೆ ಹೇಳಿ ಕರಾರನ್ನು ಮುರಿದರೆ ಆಗ ಅದರ ಹೊಣೆ ತನ್ನ ಮೇಲೆ ಬೀಳುವುದಿಲ್ಲ, ನನ್ನ ಹಣ ನನಗುಳಿಯುತ್ತದೆ. ನಾನು ಬೇರೆ ಎಲ್ಲಿಯಾದರೂ-ಹಳೆಮನೆಯ ಹೆಣ್ಣಾದರೆ ಹಳೆಮನೆಯ ಹೆಣ್ಣು-ಹೆಣ್ಣು ನೋಡಬಹುದು.

ಜಗಲಿಯಲ್ಲಿ ಮಾಡಿದ ಪ್ರಯತ್ನ ಸಫಲವಾಗದಿರಲು ತಿಮ್ಮಪ್ಪ ಹೆಗ್ಗಡೆ ಅಂತಃಪುರದ ಕಡೆಗೆ ತಿರುಗಿ, ಜಟ್ಟಕ್ಕಯ್ಯನ ಮೇಲೆ ಬೇರೊಂದು ಮೋಹನಾಸ್ತ್ರ ಪ್ರಯೋಗ ಮಾಡಿದನು: ಮುಕುಂದಯ್ಯ ಆ ಹುಡುಗಿಯನ್ನು ಮದುವೆಯಾಗದಿರುವುದಕ್ಕೆ ನಿಜವಾದ ಕಾರಣ ಬೇರೆ ಇದೆ. ಅವನಿಗೇ ಕೊಡಬೇಕೆಂದು ಆ ಹೆಣ್ಣಿನ ಜಾತಕ ನೋಡಿಸಿದಾಗ ಅದು ಗೊತ್ತಾಯಿತಂತೆ: ಅವಳಿಗೆ ವೈಧವ್ಯಯೋಗವಿದ್ದು, ಮದುವೆಯಾಗಿ ಸ್ವಲ್ಪವೆ ಕಾಲದೊಳಗಾಗಿ ವಿಧವೆಯಾಗುತ್ತಾಳೆ! ಆದ್ದರಿಂದಲೆ ಕೋಣೂರಿನವರು ಅವಳನ್ನು ತಮ್ಮ ಮನೆಗೆ ತಂದುಕೊಳ್ಳಲು ಒಪ್ಪಲಿಲ್ಲ. ಅದನ್ನೆಲ್ಲ ಮುಚ್ಚಿಟ್ಟು, ವೆಂಕಟಣ್ಣನೂ ಮಂಜಭಟ್ಟರೂ ಜಾತಕ ನೋಡಿದ ಜೋಯಿಸರನ್ನು ಒಳಗೆ ಹಾಕಿಕೊಂಡು, ಭರಂಬಾವಗೆ ಅವಳನ್ನು ಗಂಟುಹಾಕಿ, ಗಂಟು ನುಂಗಲು ಈ ಹುನಾರು ಮಾಡಿದ್ದಾರೆ!

ಜಟ್ಟಮ್ಮಗೆ ಏನೆಲ್ಲ ದ್ವೇಷಾಸೂಯೆಗಳಿದ್ದರೂ ಗಂಡನನ್ನು ಕಳೆದುಕೊಂಡು ಮುಂಡೆಯಾಗುವ ಭಯಂಕರವಾದ ಅಮಂಗಳಕ್ಕೆ ಗುರಿಯಾಗುವುದು ಬೇಕಿರಲಿಲ್ಲ. ತನ್ನ ಮೇಲಿನ ಅಕ್ಕರೆಯಿಂದ, ಆ ದನಗೋಳು ಮಳೆಯಲ್ಲಿಯೂ,

ಮಾಡಲಿದ್ದ ಬೇಸಾಯದ ಕೆಲಸವನ್ನೆಲ್ಲ ಬದಿಗೊತ್ತಿ, ಅಷ್ಟುದೂರ ಕಷ್ಟಪಟ್ಟು ಕೊಂಡು ಬರುವ ತೊಂದರೆಯನ್ನೂ ಲೆಕ್ಕಿಸದೆ ಬಂದು ಈ ದುರ್ವಾರ್ತೆಯನ್ನು ತಿಳಿಸಿದ ತಮ್ಮನನ್ನು ಮನಸಾರೆ ವಂದಿಸಿದಳು. ಏನಾದರೂ ಮಾಡಿ ಈ ಲಗ್ನ ನಡೆಯದಂತೆ ಮಾಡಬೇಕೆಂದು ಬೇಡಿಕೊಂಡಳು. ಅಷ್ಟೆ ಅಲ್ಲ; ಈ ಲಗ್ನ ಮುರಿದ ಮೇಲೆ ಮಂಜಮ್ಮನನ್ನೇ ಸಿಂಬಾವಿಗೆ ತಂದುಕೊಳ್ಳುವ ಮತ್ತು ಲಕ್ಕಮ್ಮನನ್ನು ಹಳೆಮನೆಗೆ ಕೊಡುವ ಮಂಗಳಕಾರ್ಯವನ್ನೂ ಮುಗಿಸಿಬಿಡಬೇಕೆಂದು ಅಷ್ಟಲ್ಲದೆ ಹೇಳಿಕೊಂಡಳು.

ಆ ದಿನ ರಾತ್ರಿಯೂಟಕ್ಕೆ ನಂಟರು ಬಂದಿದ್ದಾರೆಂದು ತಯಾರಿಸಿದ್ದ ಕಡಬು ತುಂಡುಗಳನ್ನು ಚೆನ್ನಾಗಿ ಉಂಡು, ಕಳ್ಳುಸರಾಯಿಗಳನ್ನು ಚೆನ್ನಾಗಿ ಕುಡಿದು ಭರಮೈಹೆಗ್ಗಡೆ ತನ್ನ ಕೋಣೆಗೆ ಹೋಗಿ ಮಲಗಿದ ಮೇಲೆ ತಮ್ಮನೂ ಅಕ್ಕನೂ ಬಹಳ ಹೊತ್ತು ಮಾತಾಡಿದರು. ಲಗ್ನವನ್ನು ಹೇಗೆ ತಪ್ಪಿಸುತ್ತೇವೆ ಎಂಬ ಗುಟ್ಟನ್ನು ತಿಮ್ಮಪ್ಪಹೆಗ್ಗಡೆ ಬಿಟ್ಟುಕೊಡದಿದ್ದರೂ ಲಗ್ನವನ್ನಂತೂ ತಪ್ಪಿಸಿಯೆ ತಪ್ಪಿಸುತ್ತೇವೆ ಎಂದು ಜಟ್ಟಮ್ಮನಿಗೆ ಭರವಸೆಕೊಟ್ಟು ಅದಕ್ಕೆ ಅವಳು ಮಾತ್ರ ಯಾವ ವಿಘ್ನವನ್ನೂ ತಂದೊಡ್ಡಬಾರದೆಂದು ಎಚ್ಚರಿಸಿ, ಅವಳಿಂದ ನಡೆಯ ಬೇಕಾದ ಕಾರ್ಯಗಳ ವಿಚಾರದಲ್ಲಿಯೂ ಕೆಲವು ಸಲಹೆಯಿತ್ತನು.

ಮರುದಿನವೂ ಭಾವಿ ಮಾವನ ಮನೆಯಲ್ಲಿ ಭಾವಿ ಹೆಂಡತಿಯ ಮುಖದ ಸಕೃದ್ದರ್ಶನಗಳಿಂದ ಕೃತಾರ್ಥನಾಗಿ, ಹಗಲೂಟವನ್ನೂ ಪೂರೈಸಿ, ಸ್ವಲ್ಪ ವಿಶ್ರಮಿಸಿದ್ದು, ಮೋಡ ಕವಿದು ಮಳೆ ಜಿನುಗುತ್ತಿದ್ದರೂ ಅಪರಾಹ್ನದಲ್ಲಿಯೆ ಹಳೆಮನೆಗೆ ಹಿಂದಕ್ಕೆ ಹೊರಟಿದ್ದನು. ಹಳೆಮನೆಯ ಸಣ್ಣಬಾವ ಬಂದು, ಒಂದು ದಿನ ಉಳಿದಿದ್ದು, ಹಿಂತಿರುಗಿಹೋದ ಆ ದಿನದಿಂದ ಮೊದಲುಗೊಂಡು ಲಕ್ಕಮ್ಮನಿಗೆ ತನ್ನ ಪರವಾದ ತನ್ನ ಅತ್ತಿಗೆಯ ವರ್ತನೆಯಲ್ಲಿ ತುಂಬ ವ್ಯತ್ಯಸ್ತವಾದ ಪರಿವರ್ತನೆಯನ್ನು ಕಂಡು ಆಶ್ಚರ್ಯಮಿಶ್ರವಾದ ಸಂತೋಷವುಂಟಾಗಿತ್ತು.

ಹೂವಳ್ಳಿಯಲ್ಲಿ ಪ್ರಾರಂಭವಾಗಿ, ಕೋಣೂರಿನಲ್ಲಿ ಬೆಳೆದು, ಸಿಂಬಾವಿಯಲ್ಲಿ ಪರಿಪಕ್ವವಾಗಿದ್ದ ತನ್ನ ವ್ಯೂಹವನ್ನು ಜಯಪ್ರದವಾಗಿ ಕೊನೆಗಾಣಿಸುತ್ತೇನೆಂಬ ಹಿಗ್ಗಿನಿಂದ ಹಿಂಬರುತ್ತಿದ್ದ ತಿಮ್ಮಪ್ಪಗೆ ಹುಲಿಕಲ್ಲು ನೆತ್ತಿಯ ಇಳಿಜಾರಿನಲ್ಲಿ ಕಲ್ಲುಮಂಟಪದ ಕಡೆಗೆ ಹೋಗುತ್ತಿದ್ದವರ ಗುಂಪು-ಮುಕುಂದಯ್ಯ, ಐತ ಮತ್ತು ಗುತ್ತಿ-ಸಿಕ್ಕಿತ್ತು. ಉಡುಪಿನಿಂದ ಮದುಮಗನಂತೆ ಡೌಲಾಗಿ ಕಾಣುತ್ತಿದ್ದ ತಿಮ್ಮಪ್ಪನನ್ನು ಕಂಡು, ಮುಕುಂದಯ್ಯನಿರಲಿ, ಐತ ಗುತ್ತಿಯರು ಕೂಡ ಮುಗುಳುನಕ್ಕಿದ್ದರು: ಅಂತಹ ಅನನ್ವಯ ಎದ್ದು ಕಾಣುತ್ತಿತ್ತು, ಹಿಂದಿನ ತರುಣ ತಿಮ್ಮಪ್ಪಗೂ ಇಂದಿನ ಯುವಕ ತಿಮ್ಮಪ್ಪಹೆಗ್ಗಡೆಯವರಿಗೂ!

ಮೋಡ ದಟ್ಟಯಿಸಿತ್ತು; ಮಳೆ ಸುರಿಯುತ್ತಿತ್ತು; ಬೈಗು ಕಪ್ಪಾಗುತ್ತಿತ್ತು. ಐತ ಹಿಡಿದಿದ್ದ ಲಾಟೀನು ಬೆಳಕೋ ಆ ವರ್ಷಕಾಲದ ನಿಬಿಡಾರಣ್ಯದ ಹಳುವಿನಲ್ಲಿ ನೆಪ ಮಾತ್ರಕ್ಕೆ ಬೆಳಕಾಗಿತ್ತು. ಆದರೂ ತಿಮ್ಮಪ್ಪಹೆಗ್ಗಡೆ ಅವರ ಸಂಗಡ ಆ ಕಲ್ಲು ಮಂಟಪದ ನಿಭೃತಸ್ಥಾನಕ್ಕೆ ಹೋಗಿ ಅದನ್ನು ವಾಸಯೋಗ್ಯವನ್ನಾಗಿ ಮಾಡುವ ಸಾಹಸದಲ್ಲಿ ಅವರಿಗೆ ನೆರವಾಗಿದ್ದನು.

ತಮ್ಮ ಕೆಲಸವನ್ನೆಲ್ಲ ತಕ್ಕಮಟ್ಟಿಗೆ ಮುಗಿಸಿ ಅವರು ಹಿಂದಿರುಗಿದಾಗ ರಾತ್ರಿ ಬಹಳ ದೂರ ಸಾಗಿತ್ತು. ಗಟ್ಟದ ತಗ್ಗಿನವರ ಬಿಡಾರಗಳು ಸಮೀಪಿಸಿದಾಗ, ಐತ ತನ್ನ ಕೈಲಿದ್ದ ಲಾಟೀನನ್ನು ಗುತ್ತಿಯ ಕೈಗೆ ಕೊಟ್ಟು, ತನ್ನ ಬಿಡಾರಕ್ಕೆ

ಬಂದಿದ್ದನು. ಗುತ್ತಿ ತಿಮ್ಮಪ್ಪ ಮತ್ತು ಮುಕುಂದಯ್ಯರಿಗೆ ಬೆಳಕುಹಿಡಿದು ದಾರಿತೋರುತ್ತಾ ಮುಂಬಾಲಿಸಿ, ಕೋಣೂರು ಮನೆಗೆ ಹೋಗಿ, ತಂಗಳುಂಡು, ಕಂಬಳಿ ಬಟ್ಟೆಗಳನ್ನು ಮುರುವಿನ ಒಲೆಯ ಬೆಂಕಿಯಲ್ಲಿ ಒಣಗಿಸಿಕೊಂಡು, ಐತನ ಬಿಡಾರಕ್ಕೆ ಬಂದಿದ್ದನು….

ದೊಡ್ಡಣ್ಣಹೆಗ್ಗಡೆ ಮತ್ತು ಅವರ ಧರ್ಮಪತ್ನಿ ರಂಗಮ್ಮಹೆಗ್ಗಡಿತಿ ಅವರ ಶವ ಸಂಸ್ಕಾರಾನಂತರ ಹಳೆಮನೆಯ ಹೊಲೆಗೇರಿಯಲ್ಲಿ ತಲೆಮರೆಸಿ ಕೊಂಡಿದ್ದ ಗುತ್ತಿ ಶಂಕರಹೆಗ್ಗಡೆಯವರ ಹೆಂಚಿನ ಮನೆಯಲ್ಲಿ ತನ್ನ ಸಿಂಬಾವಿ ಒಡೆಯರನ್ನು ಸಂಧಿಸಿದ್ದನಷ್ಟೆ? ಒಡೆಯರು ಅವನಿಗೆ ಕೆಲವು ಕಾಲ ದೂರ ಓಡಿಹೋಗಿ ತಲೆತಪ್ಪಿಸಿಕೊಂಡಿರು ಎಂದು ಸಲಹೆ ಕೊಟ್ಟಿದ್ದರು. ಆದರೆ ತನ್ನ ಹೆಂಡತಿ ತಿಮ್ಮಿಯನ್ನು, ತನ್ನ ಜೊತೆಗೆ ಕರೆದುಕೊಂಡು ಹೋಗಲು ಆಗದಿದ್ದರೂ, ಒಮ್ಮೆಯಾದರೂ ಹೇಗಾದರೂ ಸಂಧಿಸಿ ಅವಳಿಗೆ ಹೇಳುವುದನ್ನೆಲ್ಲ ಹೇಳಿಯಾದರೂ ಹೋಗಬೇಕೆಂದು ನಿರ್ಣಯಿಸಿ, ಯಾರಿಗೂ ಗೊತ್ತಾಗದಂತೆ ಇರುಳಿನಲ್ಲಿ ಕೋಣೂರಿಗೆ ಹೋಗಿ ಐತನನ್ನು ಕೇಳಿಕೊಂಡಿದ್ದನು, ತನಗೆ ನೆರವಾಗಬೇಕು ಎಂದು. ಐತ ಆ ವಿಚಾರವನ್ನು ಮುಕುಂದಯ್ಯನಿಗೆ ತಿಳಿಸಿದಾಗ, ಅವನು ಗುತ್ತಿಯನ್ನು ತನ್ನಲ್ಲಿಗೆ ಕರೆಯುವಂತೆ ಮಾಡಿ, ದುಡುಕಿ ಓಡಿಹೋಗಬೇಡ ಎಂದು ಅವನಿಗೆ ಧೈರ್ಯಹೇಳಿ, ಚಿನ್ನಮ್ಮನನ್ನು ಅವಳಿಗೆ ಒದಗಲಿರುವ ಸಂಕಟದಿಂದ ಪಾರುಮಾಡುವ ಉದ್ಯಮದಲ್ಲಿ ತನಗೆ ಸೇವೆ ಸಲ್ಲಿಸುವಂತೆಯೂ, ತಾನು ಅವನಿಗೆ ಪೋಲೀಸರಿಂದ ಒದಗಬಹುದಾದ ಕಷ್ಟವನ್ನು ಪರಿಹರಿಸುವುದಾಗಿಯೂ ಮಾತುಕೊಟ್ಟನು. ಹಾಗೆ ಮಾತು ಕೊಡಲು ಸಾಕಷ್ಟು ಆಧಾರ ಅವನಿಗೆ ದೇವಯ್ಯನಿಂದ ಆಗಲೆ ತಿಳಿದಿತ್ತು. ಆ ಪೋಲೀಸಿನವರನ್ನು ಕಂಪದಿಂದ ರಕ್ಷಿಸಿ, ಅವರನ್ನು ಗಾಡಿಯ ಮೇಲೆ ತೀರ್ಥಹಳ್ಳಿಗೆ ಕರೆದುಕೊಂಡು ಹೋಗುತ್ತಿದ್ದಾಗಲೆ ಅವರು ತಿಳಿಸಿದ್ದರು: ಅದನ್ನೆಲ್ಲ ಅಲ್ಲಿಗೆ ಕೈಬಿಡುತ್ತೇವೆ; ಕೇಸು ಮುಂದುವರಿಸಲು ಸಾಕಷ್ಟು ಆಧಾರವೆ ಇಲ್ಲ ಎಂದು.

ಹುಲಿಕಲ್ಲು ನೆತ್ತಿಯ ಕಲ್ಲುಮಂಟಪವನ್ನು ಹೂವಳ್ಳಿ ಚಿನ್ನಮ್ಮನ ಅಡಗುದಾಣವನ್ನಾಗಿ ಆರಿಸಿಕೊಳ್ಳುವುದಕ್ಕೂ ಬಹುಮಟ್ಟಿಗೆ ಗುತ್ತಿಯೆ ಕಾರಣವಾಗಿದ್ದನು. ಮೇಗರವಳ್ಳಿಯ ಕಡೆಗೆ ಹೋಗುವ ಕಾಲುದಾರಿಯ ದಿಕ್ಕಿನಿಂದ ಅದನ್ನು ಏರಲೂ ಸೇರಲೂ ಸುಖಿಯಾಗಿ ಬೆಳೆದಿದ್ದ ಹೆಣ್ಣುಮಗಳಿಗೆ ಕಷ್ಟಸಾಧ್ಯವೆಂದು ಗುತ್ತಿ ಸ್ವಲ್ಪ ಬಳಸಿನದ್ದಾದರೂ ಮತ್ತೊಂದು ಕಡಿದಲ್ಲದ ದಾರಿಯನ್ನು ಸೂಚಿಸಿದ್ದನು. ಮದುವೆಯ ದಿನಕ್ಕೆ ಮುನ್ನವೆ ತಾನೇ ಆ ದಾರಿಯನ್ನು ಯಾರಿಗೂ ಗೊತ್ತಾಗದಂತೆ ಸವರಿಕೊಡುವುದಾಗಿಯೂ ಭರವಸೆ ಕೊಟ್ಟಿದ್ದನು….

ಬೆಳಕು ಬಿಡುವುದಕ್ಕೆ ಮೊದಲೆ ಯಾರ ಕಣ್ಣಿಗೂ ಬೀಳದಂತೆ ತಾನು ಹುಲಿಕಲ್ಲು ನೆತ್ತಿಯ ಕಲ್ಲುಮಂಟಪವನ್ನು ಸೇರಿಕೊಳ್ಳಬೇಕೇಂಬುದು ಗುತ್ತಿಯ ನಿಶ್ಚಯವಾಗಿತ್ತು. ಈಗ ದೇವರೆ ನಡೆಸಿಕೊಟ್ಟಂತೆ ಅಕಸ್ಮಾತ್ತಾಗಿ ತಿಮ್ಮಿಯೂ ತನ್ನನ್ನು ಸೇರಿದುದರಿಂದ ಆ ಹೊಣೆಯ ಹೊರೆ ಇಮ್ಮಡಿಸಿತ್ತು. ರಾತ್ರಿ ಸಿಕ್ಕದಿದ್ದ ಅವಳಿಗಾಗಿ ಬೆಳಗಾದಮೇಲೆ ಪತ್ತೆ ತರದೂದು ಜೋರಾಗಿ ನಡೆಯುತ್ತದೆ ಎಂದೂ ಅವನಿಗೆ ಗೊತ್ತಿತ್ತು. ಆದ್ದರಿಂದ ಬೆಳಗಿನ ಜಾವ ಕತ್ತಲೆಯಲ್ಲಿಯೆ ಎದ್ದು ಅವಳನ್ನೂ ಕರೆದುಕೊಂಡು ಹೊರಟುಬಿಡಬೇಕೆಂದು ಗಟ್ಟಿಮನಸ್ಸು ಮಾಡಿ ಮಲಗಿದ್ದನು.ಆದರೆ ದಿನವೆಲ್ಲ ದಣಿದು ರಾತ್ರಿಯೂ ಬಹಳ ಹೊತ್ತಾದ ಮೇಲೆ ಮಲಗಿದ್ದ ಆ ನಾಲ್ವರು ಜೋಡಿ ದಂಪತಿಗಳಿಗೆ ವರ್ಷಾಕಾಲದ ಸಹಜವಾದ ಗಾಢನಿದ್ರೆ ಹತ್ತಿತ್ತು.

ಅರಿಷಡ್ವರ್ಗಮಯವಾದ ಮನುಷ್ಯಜೀವನ ವ್ಯಾಪಾರಗಳ ಯಾವ ಅರಿವೂ ಗೊಂದಲವೂ ಇಲ್ಲದೆ, ಪೀಂಚಲು ಮೂಲೆಗೆ ತಳ್ಳಿ ಕವುಚಿ ಹಾಕಿದ್ದ ಬುಟ್ಟಿಯೊಳಗಡೆ ಹೇಟೆ ಮರಿಗಳೊಡನೆ ನಿರುಂಬಳವಾಗಿ ನಿದ್ರಿಸುತ್ತಿದ್ದ ಹುಂಜಕ್ಕೆ ಪ್ರಕೃತಿಸಹಜವಾದ ಕೊನೆಯ ಜಾವದ ಜಾಗ್ರತಿಯುಂಟಾಗಿ, ಬುಟ್ಟಿಯೊಳಗಡೆಯೆ ಕೊಕ್ಕೊಕ್ಕೋ ಎಂದು ಕೂಗಿಕೊಳ್ಳಲು ತೊಡಗದೆ ಇದ್ದಿದ್ದರೆ, ಗುತ್ತಿ ತಿಮ್ಮಿಯರ ಬದುಕಿನಲ್ಲಿ ಏನೇನು ಕಷ್ಟ ಸಂಕಟ ಪ್ರಳಯಕ್ರಾಂತಿಗಳೆ ಜರುಗುತ್ತಿದ್ದವೊ ಯಾರಿಗೆ ಗೊತ್ತು? ಆ ಪ್ರಜ್ಞೆಗೂ ಅರಿವಿಗೂ ದೂರವಾಗಿದ್ದ ಗುತ್ತಿ, ಹುಂಜನ ಪ್ರಚ್ಛನ್ನ ಉಪಕಾರಕ್ಕೆ ಕೃತಜ್ಞನಾಗುವುದಕ್ಕೆ ಬದಲಾಗಿ, ನಿದ್ರಾಭಂಗ ಮಾಡಿದುದಕ್ಕೆ ಅದನ್ನು ಶಪಿಸುತ್ತಾ ಎದ್ದು, ತಿಮ್ಮಿಯನ್ನೂ ಎಬ್ಬಿಸಿದನು, "ಇದರ ಗಂಟಲು ಕಟ್ಟಿಹೋಗಕೆ, ಏನು ಬಡುಕೊಳ್ತದೆಯೋ! ಏಳೇ, ಹೊತ್ತಾತು. ಬೆಣಕು ಬಿಡಾಕೆ ಮುಂಚೇನೆ ಹೋಗಾನ್!"

ಗುತ್ತಿ ತಿಮ್ಮಿಯರು ಎದ್ದುದನ್ನು ಅರಿತ ಪೀಂಚಲವೂ ಎದ್ದು, ಕತ್ತಲೆಯ ಮರೆಯಲ್ಲಿ ಬಿಚ್ಚಿ ತಲೆಯಡಿ ಇಟ್ಟುಕೊಂಡಿದ್ದ ಸೀರೆಯನ್ನು ಬೇಗಬೇಗನೆ ಸುತ್ತಿಕೊಂಡು, ಐತನನ್ನು ಏಳುವಂತೆ ಹೇಳಿದಳು. ಅವನು ಮಾತ್ರ ಕಂಬಳಿಯನ್ನು ಇನ್ನೂ ಬಲವಾಗಿ ಸುತ್ತಿ ಹೊದ್ದುಕೊಂಡು ಗೊಣಗಿದನಷ್ಟೆ!

ತಿಮ್ಮಿ ಪೀಂಚಲು ಕೊಟ್ಟಿದ್ದ ಸೀರೆಯನ್ನು ಬಿಚ್ಚಿಟ್ಟು, ಆರಿದ್ದ ತನ್ನ ಸೀರೆಯನ್ನೇ ಉಟ್ಟುಕೊಳ್ಳುತ್ತೇನೆ ಎಂದಾಗ,- 'ಫಕ್ಕನೆ ಯಾರಾದರೂ ನೋಡಿದರೂ ಗಟ್ಟದ ತಗ್ಗಿನವಳೆಂದು ನಿನ್ನನ್ನು ಗುರುತಿಸುವುದಿಲ್ಲ; ಅದನ್ನೆ ಉಟ್ಟುಕೊಂಡು ಹೋಗು; ನಿನ್ನ ಸೀರೆಯನ್ನೂ ತೆಗೆದುಕೊಂಡು ಹೋಗು' ಎಂದಳು ಪೀಂಚಲು.

ಗುತ್ತಿ ಬೇಡ ಬೇಡ ಎಂದರೂ ಪೀಂಚಲು 'ಅವಳು ದಣಿದಿದ್ದಾಳೆ, ನಿನ್ನೆ ರಾತ್ರಿಯೆಲ್ಲ ಓಡಿಯಾಡಿ. ನೀನು ಗೌಡರ ಮನೆಯಲ್ಲಿ ಚೆನ್ನಾಗಿ ತಂಗಳುಂಡು ಬಂದಿದ್ದಿ!' ಎಂದು ಬೇಗ ಬೇಗನೆ ರಾತ್ರಿ ಉಳಿದಿದ್ದ ತಂಗಳನ್ನಷ್ಟು ಬುತ್ತಿಮಾಡಿ ಕೊಟ್ಟಳು, ತಿಮ್ಮಿಯ ಕೈಗೆ.

ಕಂಬಳಿಯೊಳಗಿನಿಂದಲೆ ಐತ ತಾನು ಬೆಳಕು ಬಿಟ್ಟಮೇಲೆ ಬರುವುದಾಗಿಯೂ, ಸಾಮಾನು ತರುವುದಾಗಿಯೂ ಕೂಗಿ ಹೇಳಿದನು ಗುತ್ತಿಗೆ.

ಇರುಳೆಲ್ಲ ಹೊಯ್ದಿದ್ದ ಮಳೆ ಬೆಳಗಿನ ಜಾವದಲ್ಲಿ ನಿಂತಿತ್ತು. ಕವಿದಿದ್ದ ಮೋಡಗಪ್ಪಿನ ಕತ್ತಲೆ ಬೆಳಗನ್ನಿದಿರು ನೋಡುವಂತಿತ್ತು. ಗುತ್ತಿ, ತಿಮ್ಮಿ ಮತ್ತು ಹುಲಿಯ ಮೂವರು ನಿಃಶಬ್ದವಾಗಿ ಹುಲಿಕಲ್ಲು ನೆತ್ತಿಯ ಕಡೆಗೆ ಕಾಡು ಹತ್ತಿ ಹೋದರು. ಬಿಡಾರದ ತಟ್ಟಿಬಾಗಿಲನ್ನು ಹಾಕಿ, ಕಟ್ಟಿ, ಪೀಂಚಲು ಮತ್ತೆ ಐತನ ಕಂಬಳಿಯೊಳಗೆ ಹೊಕ್ಕಳು.

* * *

ಪಾದ್ರಿ ತನ್ನ ಕಿವಿಯಲ್ಲಿ ಏನನ್ನೊ ಹೇಳಲು ಅವನಿಗೆ ತನ್ನ ಬೈಸಿಕಲ್ಲನ್ನು ಕೊಟ್ಟು, ಹಳೆಮನೆ ಸುಬ್ಬಣ್ಣಹೆಗ್ಗಡೆಯವರನ್ನು ಕೂರಿಸಿಕೊಂಡು ಬೆಟ್ಟಳ್ಳಿಗೆ ಹೊರಟ್ಟಿದ್ದ ತಮ್ಮ ಕಮಾನುಗಾಡಿಯನ್ನು ಹಿಂಭಾಗದಿಂದಲೆ ಹತ್ತಿ ಕುಳಿತ ದೇವಯ್ಯನು ಕಾಡಿನ ನಡುವಣ ರಸ್ತೆಯ ತಿರುಗಣೆಯಲ್ಲಿ ಕಣ್ಮರೆ ಯಾಗಲು, ಉಣುಗೋಲನ್ನು ದಾಟಿ ರಸ್ತೆಯ ಅಂಚಿನಲ್ಲಿ, ತಾಯಿ ಅಂತಕ್ಕನ ಪಕ್ಕದಲ್ಲಿ, ನಿಂತು ಎವೆಯಿಕ್ಕದೆ ನೋಡುತ್ತಿದ್ದ ಕಾವೇರಿ ಮೌನವಾಗಿಯೆ ನಿಟ್ಟುಸಿರೆಳೆದು, ತನ್ನಂತೆಯೆ ನಿಡುಸುಯ್ದು ಸೆರಗಿನಿಂದ ಕಣ್ಣೊರೆಸಿಕೊಳ್ಳುತ್ತಿದ್ದ ತಾಯಿಯೊಡನೆ ಮನೆಯೊಳಕ್ಕೆ ನಡೆದಳು.

ಅಂಗಳದ ಒಳಗಡೆಯೆ ಒಡ್ಡಿನ ಬದಿ ನಿಂತಿದ್ದ ಚೇಂಕ್ರ ಸೇರೆಗಾರನು ತಾಯಿಯನ್ನೂ ಮಗಳನ್ನೂ ಮುಗುಳುನಗೆವೆರಸಿ ನೋಡುತ್ತಿದ್ದು "ನಾನೆ ಹಾಕ್ತೆ; ನೀವು ಹೋಯಿನಿ" ಎಂದು, ತಾನೆ ಉಣುಗೋಲಿನ ಗಳುಗಳನ್ನು ಕಂಬದ ತೂತುಗಳಿಗೆ ನೂಕಿ ಹಾಕಿ ಭದ್ರ ಮಾಡಿದನು. "ಹಾಂಗಾರೆ ನಾನು ಹೋತೆ; ಬೈಗಾಯಿತ್ತು" ಎಂದು ಹೇಳಿ ಬೀಳುಕೊಂಡು, ತಡಬೆಯನ್ನು ಹತ್ತಿ ದಾಟುತ್ತಿದ್ದನು.

"ಕೋಣೂರ ಬಿಡಾರಕ್ಕೆ ಹೋಗುತ್ತೀಯಾ? ಕಪ್ಪಾಯ್ತಲ್ಲೋ? ಹುಲಿಕಲ್ಲು ಗುಡ್ಡಹತ್ತಿ ಇಳೀಬೇಕಲ್ಲಾ?"

ಅಂತಕ್ಕನ ಔಪಚಾರಿಕ ಪ್ರಶ್ನೆಗೆ ಚೇಂಕ್ರ "ಮತ್ತೇನು ಮಾಡು ಲಕ್ಕು? ಬಿಡಾರದಲ್ಲಿ ಮಕ್ಕಳಿವೆಯಲ್ಲಾ? ಏನೋ ಆ ಅಕ್ಕಣಿ, ಮಕ್ಕಳಿಗೆ ತಾಯಿಯಾಗಿ ನೋಡಿಕೊಳ್ಳುತ್ತಿದ್ದಾಳೆ. ಇಲ್ಲದಿದ್ದರೆ ಅವು ಕೂಳಿಲ್ಲದೆ ಸಾಯ ಬೇಕಾಗಿತ್ತು…."ಎನ್ನುತ್ತಲೆ ತಡಬೆ ಹೆದ್ದಾರಿಗಿಳಿದನು.

"ಯಾರೋ ಅದು? ಪುಣ್ಯಾತಗಿತ್ತಿ! ನಿನಗೆ ಏನಾಗಬೇಕೊ?"

"ಏನು ಆಗಬೇಕಿಲ್ಲ. ನನ್ನ ಬಿಡಾರದ ಬದಿಯಲ್ಲೆ ಬಿಡಾರ ಮಾಡಿಕೊಂಡಿದಾನಲ್ಲಾ ಆ ಪಿಜಿಣ? ಅವನ ಬುಡದಿ…."

ಮುಂದೆ ಮಾತಿಗೆ ಅವಕಾಶ ಕೊಡದಷ್ಟು ಅವಸರದಲ್ಲಿ ಹೊರಟು ಹೋಗಿದ್ದನು ಸೇರೆಗಾರ ಚೇಂಕ್ರ.

ತಾಯಿ ಚೇಂಕ್ರನೊಡನೆ ಮಾತಾಡುತ್ತಿದ್ದಾಗಲೆ ಅದರಲ್ಲಿ ಸಂಪೂರ್ಣ ಅನಾಸಕ್ತಳಾಗಿ ಕಾವೇರಿ ತನ್ನ ಕೋಣೆಗೆ ಧಾವಿಸಿದ್ದಳು.

ಬಾಗಿಲು ಹಾಕಿಕೊಂಡವಳೆ ಕೈ ನೋಡಿಕೊಂಡಳು. ಹೌಹಾರಿ ದಿಗಿಲುಬಿದ್ದಳು. ಮತ್ತೆ ಬಾಗಿಲು ತೆರೆದು ಮುಂಚೆಕಡೆಗೆ ಬಂದು ಅಲ್ಲಿ ಇಲ್ಲಿ ನೆಲದ ಕಡೆ ನೋಡಿ ಹುಡುಕಿದಳು. ಅಂಗಳಕ್ಕೂ ಇಳಿದು ಕಸಬಿದ್ದಿದ್ದ ನೆಲವನ್ನೆಲ್ಲ ಬಗ್ಗಿ ಹುಡುಕಿದಳು. ಉಣುಗೋಲು ಬಳಿಯೂ ಹೋಗಿ ಬಾಗಿ ನೋಡಿದಳು. ಮತ್ತೆ ಹಿಂದಕ್ಕೆ ಬಂದು, ಬಾಗಿಲು ಸಂಧಿಯಲ್ಲಿ ಕತ್ತಲೆಯಾಗಿದ್ದುದರಿಂದ ಕೈಯಿಂದಲೆ ನೆಲ ತಡವಿ ಹುಡುಕಾಡಿದಳು. ಮತ್ತೆ ಅಡುಗೆ ಮನೆಗೆ ಓಡಿ,

ಚಿಮಿಣಿ ಹೊತ್ತಿಸಿ, ಅದನ್ನು ಹಿಡಿದು, ಅದರ ಬೆಳಕಿನಲ್ಲಿ ಜಗಲಿ ಅಂಗಳಗಳನ್ನೆಲ್ಲ ಸೋವಿದಳು. ಎಲ್ಲಿಯೂ ಕಾಣಿಸಲಿಲ್ಲ, ಆ ದಿನ ಪೂರ್ವಾಹ್ನದಲ್ಲಿ ಕೋಣೆಯೊಳಗೆ ತನ್ನನ್ನು ಮುದ್ದುಮಾಡುತ್ತಾ ದೇವಯ್ಯಗೌಡರು ತನ್ನ ಕೈಬೆರಳಿಗೆ ತೊಡಿಸಿದ್ದ ಹರಳಿನ ಹೊನ್ನುಂಗುರ! ಕಡೆಗೆ ಕೋಣೆಯ ಬಾಗಿಲು ಹಾಕಿಕೊಂಡು ಕುಳಿತು ಬಿಕ್ಕಿಬಿಕ್ಕಿ ಅಳತೊಡಗಿದಳು.

ದೇವಯ್ಯಗೌಡರ ಉಂಗುರ ಅವಳ ಬೆರಳಿಗೆ ಸಡಿಲವಾಗಿದ್ದುದೇನೊ ನಿಜ. ಒಂದೆರಡು ಸಾರಿ ಕಳಚಿಬಿದ್ದಾಗಲೂ ಅದನ್ನೆತ್ತಿ ಮತ್ತೆ ಹಾಕಿಕೊಂಡಿದ್ದಳು ಕಾವೇರಿ. ಅವಳ ತಾಯಿ ಎಚ್ಚರಿಕೆ ಹೇಳಿದ್ದರೂ ಲಕ್ಷಿಸದೆ ತನ್ನ ಮೋಹದ ಆ ಸುಂದರ ಅನರ್ಘ್ಯವಸ್ತುವನ್ನು ಬೆರಳಿನಿಂದ ಕಳಚಿ ಇಡಲು ಇಷ್ಟಪಟ್ಟಿರಲಿಲ್ಲ. ಆ ಬೆರಳನ್ನು ತುಸು ಕೊಂಕಿಸುವುದರ ಮೂಲಕ ಉಂಗುರ ಜಾರಿಬೀಳದಂತೆ ಜಾಗರೂಕತೆಯಿಂದ ಇದ್ದಳು. ಆದರೆ ತುದಿಯಲ್ಲಿ, ಸುಬ್ಬಣ್ಣಹೆಗ್ಗಡೆಯವರನ್ನು ಗಾಡಿಗೆ ಸಾಗಿಸುವ ಸಮಯದ ಅಡಾವುಡಿಯಲ್ಲಿ, ಅದು ಎಲ್ಲಿ ಕಳಚಿ ಬಿತ್ತೆಂಬುದು ಅವಳ ಪ್ರಜ್ಞೆಗೆ ಬಂದಿರಲಿಲ್ಲ.

ಬಿದ್ದದ್ದಾದರೂ ಎಲ್ಲಿಗೆ ಹೋಗಬೇಕು? ಅಲ್ಲೆ ಎಲ್ಲಿಯೊ ಬಿದ್ದಿರಬೇಕು, ಇಲ್ಲವೆ ಯಾರಾದರೂ ಎತ್ತಿಕೊಂಡಿರಬೇಕು. ಎಲ್ಲೆಲ್ಲಿಯೊ ದೀಪ ಹಚ್ಚಿಕೊಂಡು ಹುಡುಕಿಯಾಯ್ತು. ಹಾಗಾದರೆ ಯಾರಾದರೂ ಎತ್ತಿಕೊಂಡಿರಬೇಕು. ಯಾರು? ಆಗ ಅಲ್ಲಿದ್ದವರೆಂದರೆ ಪಾದ್ರಿ, ಸುಬ್ಬಣ್ಣಹೆಗ್ಗಡೆ, ದೇವಯ್ಯ, ಗಾಡಿ ಹೊಡೆಯುವ ಬಚ್ಚ, ಸೇರೆಗಾರ ಚೇಂಕ್ರ, ಐಗಳು ಅನಂತಯ್ಯ, ಕೆಲಸದ ಹುಡುಗ ಕೊರಗ. ಉಳಿದವರೆಲ್ಲ ಒಡ್ಡಿನ ಆಚೆಯ ರಸ್ತೆಯಲ್ಲಿದ್ದರು. ಸೇರೆಗಾರ ಚೇಂಕ್ರ ಅವರೆದುರೆ, ಅವರಿಗೆ ಹೇಳಿಯೇ ಹೋಗಿದ್ದಾನೆ. ಕೆಲಸದ ಹುಡುಗ ಕೊರಗನನ್ನು ಹೆದರಿಸಿ “ಒಳ್ಳೆ ಮಾತಿನಲ್ಲಿ ಉಂಗುರ ಕೊಡುತ್ತೀಯೊ ಇಲ್ಲವೊ?” ಎಂದು ಕೇಳಿದರು: ಅವನು ದಮ್ಮಯ್ಯಗುಡ್ಡೆ ಹಾಕುತ್ತಲೇ ತಾನು ಅದನ್ನು ದೇವರಾಣೆಗೂ ಕಾಣಲಿಲ್ಲ ಎಂದನು. ದೇವರಿಗೆ ಸುಳಿಸಿದ ತೆಂಗಿನ ಕಾಯನ್ನೂ ಮುಟ್ಟಿಸಿ ಪ್ರಮಾಣ ಮಾಡುವಂತೆ ಹೇಳಿದರು. ಅವನು ಅದನ್ನೂ ಧೈರ್ಯವಾಗಿಯೆ ಮಾಡಿಬಿಟ್ಟು ತನ್ನ ಪ್ರಮಾಣಿಕತನವನ್ನು ಸ್ಥಾಪಿಸಿಕೊಂಡನು. ಕೊನೆಗೆ ಇನ್ನೇನೂ ತೋರದೆ, ಧರ್ಮಸ್ಥಳದ ಅಣ್ಣಪ್ಪ ಭೂತರಾಯಗೆ “ನೋಡೋಣ, ಅಣ್ಣಪ್ಪ ದೇವರಿಗೆ ಶಕ್ತಿ ಇದ್ದಲ್ಲಿ ಉಂಗುರ ಎಲ್ಲಿಗೆ ಹೋಗುತ್ತದೆ?” ಎಂದು ಹೇಳಿಕೊಂಡು, ಮುಡಿಪು ಕಟ್ಟಿದರು.

ಉಂಗುರದ ಅನ್ವೇಷಣೆಯಾಗಲಿ ವಿಚಾರಣೆಯಾಗಲಿ ಹೆಚ್ಚಿನ ಗುಲ್ಲಿಗೂ ಹೋಗುವಂತಿರಲಿಲ್ಲ; ಏಕೆಂದರೆ ಅದು ಅಕ್ರಮಾತಿಕ್ರಮದ ಪ್ರಣಯ ಪ್ರಪಂಚದ ಗೋಪ್ಯ ವಲಯಕ್ಕೆ ಸೇರಿದುದಾಗಿತ್ತು. ಬೆಟ್ಟಳ್ಳಿ ದೇವಯ್ಯಗೌಡರು ಅಂತಕ್ಕನ ಮಗಳು ಕಾವೇರಿಯ ಬೆರಳಿಗೆ ತೊಡಿಸಿದ್ದ ಹರಳಿನ ಹೊನ್ನುಂಗುರ ಕಳುವಾಯಿತಂತೆ ಎಂಬ ಸುದ್ದಿ ಹಬ್ಬಿದರೆ, ಯಾರ ಯಾರ ಎಲ್ಲೆಲ್ಲಿಯ ಸಂಬಂಧ ಬಾಂಧವ್ಯಗಳಲ್ಲಿ ಎಂತೆಂತಹ ದುರಂತವಾಗಲಿಕ್ಕಿಲ್ಲ?

ಕಾವೇರಿ ಹುಡುಕಿ ಸೋತು ಕೋಣೆಯಲ್ಲಿ ಬಿಕ್ಕಿಬಿಕ್ಕಿ ಅಳುತ್ತಿದ್ದಾಗ ಅವಳ ಹರಳುಂಗುರ ಚೇಂಕ್ರನ್ ಸೊಂಟದಲ್ಲಿ ಸುರಕ್ಷಿತವಾಗಿ ಪ್ರಯಾಣ ಮಾಡುತ್ತಿತ್ತು, ಕರ್ಮೀನು ಸಾಬರ ಅಂಗಡಿಗೆ. ಅಂಗಳದಲ್ಲಿ ಕಳಚಿಬಿದ್ದು ಕಸದಲ್ಲಿ ಮರೆಯಾಗಿ ಬಿದ್ದಿದ್ದ ಅದನ್ನು ಅವನು ಎತ್ತಿಕೊಂಡು ಸೊಂಟದ ಪಂಚೆಯ ಮಡಿಕೆಯಲ್ಲಿ ಸಿಕ್ಕಿಸಿಕೊಂಡಿದ್ದನು: ಯಾರಾದರೂ ನೋಡಿದ್ದರೆ ಅಥವಾ ವಿಚಾರಿಸಿದ್ದರೆ ಕೊಡುವ ಮನಸ್ಸಿನಿಂದಲೆ ಎತ್ತಿಕೊಂಡಿದ್ದನು. ಆದರೆ ಯಾರೂ ನೋಡಲಿಲ್ಲ ಎಂದು ಗೊತ್ತಾದೊಡನೆ ಕಳುವ ಕಸುಬಿನಲ್ಲಿ ಪಳಗಿದ್ದ ಅವನ ಮನಸ್ಸು ಬದಲಾಯಿಸಿತ್ತು. ಅವನು ಅಂಗಳದಿಂದ ಹೊರಡುವ ಮುನ್ನವೆ ಕಾವೇರಿಗೆ ತನ್ನ ಉಂಗುರ ಬಿದ್ದುಹೋದುದು ಗೊತ್ತಾಗಿ ಹುಡುಕಿದ್ದರಾಗಲಿ

ವಿಚಾರಿಸಿದ್ದರಾಗಲಿ ಮನಸ್ಸು ಕರಗಿ ಕೊಡುತ್ತಿದ್ದನೇನೊ ಏನೋ? ಏಕೆಂದರೆ ಹಸಲರವನಾಗಿ ಅಸ್ಪೃಶ್ಯಸದೃಶ್ಯನಾಗಿ ಹೊರಗೇ ನಿಲ್ಲುವ ಕೂಲಿಯಾಳಾಗಿದ್ದರೂ ಸೆಟ್ಟರ ಹುಡುಗಿಯ ರೂಪಕ್ಕೆ ಹುಟ್ಟು ಕಾಮುಕನಾಗಿದ್ದ ಅವನು ಗುಟ್ಟಾಗಿ ಸೋತಿದ್ದನು. ಉಂಗುರವನ್ನು ಹುಡುಕಿ ಕೊಡುವ ನೆವದಿಂದಾದರೂ ಅವಳ ಮನಸ್ಸಿನಲ್ಲಿ ತುಸು ತಾವನ್ನು ಸಂಪಾದಿಸಲು ಪ್ರಯತ್ನಿಸುತ್ತಿದ್ದನೆಂದು ತೋರುತ್ತದೆ. ಆದರೆ ತಾನು ಬಿಡಾರಕ್ಕೆ ಹೋಗುತ್ತೇನೆಂದು ಅಂತಕ್ಕನಿಗೆ ಹೇಳಿ, ತನ್ನ ಮೇಲಿನ ಗುಮಾನಿಗೆ ಅವಕಾಶವಿಲ್ಲದಂತೆ ಮಾಡಿ, ತಡಬೆ ದಾಟಿ ಹೊರಟ ಅವನಿಗೆ ಆದಷ್ಟು ಜಾಗ್ರತೆ, ಕಳವು ಮಾಲನ್ನು ಅಡವಿಟ್ಟುಕೊಳ್ಳುವ ಕಸುಬಿನಿಂದಲೆ ವಿಶೇಷವಾಗಿ ಐಶ್ವರ್ಯ ಸಂಪಾದಿಸುತ್ತಿದ್ದ, ಕರೀಂಸಾಬರಿಗೆ ಕೊಟ್ಟು ಪ್ರತಿಫಲ ಪಡೆದು ಕೈತೊಳೆದುಕೊಳ್ಳಲು ಹವಣಿಸಿ ಅವರ ಮಳಿಗೆಗೆ ಹೋದನು.

ಆದರೆ ಅವರು ಸಿಂಬಾವಿಯಲ್ಲಿ ಗಾಯಗೊಂಡು ಅಸ್ತಾವಸ್ತೆಯಲ್ಲಿದ್ದ ಇಜಾರದ ಸಾಬಿಗೆ ಇಲಾಜು ಮಾಡಿಸುವ ಮತ್ತು ಅವನನ್ನು ಆದಷ್ಟು ಬೇಗನೆ ತೀರ್ಥಹಳ್ಳಿಯ ಆಸ್ಪತ್ರೆಗೆ ಸಾಗಿಸುವ ಗಡಿಬಿಡಿಯಲ್ಲಿದ್ದರು. ಕಣ್ಣಾಪಂಡಿತರು ತಮಗೆ ತಿಳಿದಂತೆ ಔಷಧಿ ಮಾಡುತ್ತಿದ್ದರು. ಸ್ವಲ್ಪ ಹೊತ್ತಿನಲ್ಲಿಯೆ, ಸಿಂಬಾವಿಯಲ್ಲಿ ಇಜಾರದ ಸಾಬಿಗೆ ಒದಗಿದ್ದ ದುರ್ಘಟನೆಯ ವಿಷಯವನ್ನು ಕೇಳಿ, ದೇವಯ್ಯಗೌಡರ ಕಿವಿಗೆ ಅದನ್ನು ಉಸುರಿ, ಅವರ ಬೈಸಿಕಲ್ಲನ್ನು ಈಸಿಕೊಂಡಿದ್ದ ಜೀವರತ್ನಯ್ಯನವರೂ ಅಲ್ಲಿಗೆ ಧಾವಿಸಿದ್ದರು.

ಮೊದಮೊದಲು, ಏನೊ ಮಾತನಾಡುವುದಿದೆ ಎಂಬುದನ್ನು ದೂರದಿಂದಲೆ ಕಣ್ಣಿನಿಂದಲೆ ಸೂಚಿಸಿ ಚೇಂಕ್ರನು ಎಷ್ಟು ಪ್ರಯತ್ನಪಟ್ಟರೂ ಕರೀಂಸಾಬರು ಅದನ್ನು ಗಮನಿಸಿಯೂ, ಮನಸ್ಸಿಗೆ ಹಾಕಿಕೊಳ್ಳಲಿಲ್ಲ. ಒಂದೆರಡು ಸಾರಿ 'ತನಗೆ ಕೆಲಸವಿದೆ ಈಗ ಆಗುವುದಿಲ್ಲ' ಎಂದು ಗದರಿಸಿಯೂ ಬಿಟ್ಟರು. ಆದರೆ ಅವನು ತನ್ನ ಸೊಂಟಕ್ಕೆ ಕೈಹಾಕಿ ಹಾಕಿ ತೆಗೆಯುವುದರ ಮುಖಾಂತರವೂ ಪುಡಿಸಾಬರೊಡನೆ ಹೇಳಿಕಳಿಸುವುದರ ಮುಖಾಂತರವೂ ಕಾರ್ಯದ ಶ್ರೀಮಂತಗುರುತ್ವವನ್ನು ಅವರ ಮನಸ್ಸಿಗೆ ಮಂದಟ್ಟು ಮಾಡಿದ ಮೇಲೆ ಹತ್ತಿರ ಬಂದು ವಿಚಾರಿಸಿದರು. ಮನೆಯ ಹಿಂದಣ ಗುಟ್ಟಿನ ಕೋಣೆಗೆ ಕರೆದೊಯ್ದು ಹರಳುಂಗುರವನ್ನು ಕೈಗೆ ತೆಗೆದುಕೊಂಡರು. ಒಡನೆಯೆ ಬೆಚ್ಚಿದರು. ಮತ್ತೆ ಬೆಳಕಿಗೆ ಹಿಡಿದು ಚೆನ್ನಾಗಿ ಪರೀಕ್ಷಿಸಿದರು: 'ಅರೆ! ಅದೇ ಉಂಗುರ! ತೊಲಗಿಸಲು ಎಷ್ಟು ಪ್ರಯತ್ನಪಟ್ಟರೂ ಮತ್ತೆ ಮತ್ತೆ ತನ್ನ ಬಳಿಗೆ ಬರುತ್ತಿದೆಯಲ್ಲಾ!...ಅನೇಕ ವರ್ಷಗಳ ಹಿಂದೆ.... ತಾನಿನ್ನೂ ಯೌವನದಲ್ಲಿದ್ದಾಗ.... ಇವರ ದರೋಡೆಯ ಗುಂಪು ಆಗುಂಬೆಯ ಘಾಟಿಯಲ್ಲಿ ನಡೆಸಿದ್ದ ಒಂದು ಕೊಲೆಯಲ್ಲಿ ದೊರಕಿದ್ದಲ್ಲವೆ? ಹೊಸದಾಗಿ ಮದುವೆಯಾಗಿದ್ದ ದಂಪತಿಗಳು-ಸೊನಗಾರರಂತೆ!-ಗಟ್ಟದ ಮೇಲಣ ದುಡಿಮೆಯನ್ನು ಗಟ್ಟದ ಕೆಳಗಿದ್ದ ತಮ್ಮ ಊರಿಗೆ ಕೊಂಡೊಯ್ಯುತ್ತಿದ್ದರು.... ತಾನು ತಡೆದರೂ ಕೇಳದೆ ಗಂಡನಿಗೆ ಚೂರಿಹಾಕಿ ಬಿಟ್ಟರು! ಪಾಪಿಗಳು! ಆ ಹೆಂಗಸು, ಅಲ್ಲ ಹುಡುಗಿ, ಗೊಳೋ ಎಂದು ಕೂಗುತ್ತಾ ಅಬ್ಬರಿಗೇ ಹಾರಿಬಿಟ್ಟಳು!.... ಅವಳ ಒಡಲೂ ಮುರಿದೂ ಮುದ್ದೆಯಾಗಿತ್ತು! ಅವಳ ಮೈಮೇಲಿದ್ದ ಚೂರುಪಾರು ನಗವನ್ನೂ ಸುಲಿದಿದ್ದರು!.... ಹಾಳು ನೆನಪು!-ಈಗ ನೆನೆದರೇ ಮೈ ನಡುಗುತ್ತದೆ!.... ಗಂಡನ ಬೆರಳಿನಲ್ಲಿದ್ದ ಈ ಉಂಗುರವನ್ನು ಕಲ್ಲೂರು ಸಾಹುಕಾರರಿಗೆ ದಾಟಿಸಿದ್ದೆ!....ಆ ಮಂಜಭಟ್ಟನೂ ಇಂತಹ ಕೆಟ್ಟ ಕಳ್ಳ ಕೊಲೆಯ ಮಾಲನ್ನೇ ಸಂಗ್ರಹಿಸಿ ಇಷ್ಟು ದೊಡ್ಡ ಸಾಹುಕಾರನಾಗಿದ್ದಲ್ಲವೆ? ಇದು ಹೇಗೆ ಈ ಚೇಂಕ್ರನ ಕೈಗೆ ಬಂತು? ಕದ್ದನೊ? ಕೊಲೆಗಿಲೆ ಮಾಡಿದನೊ?'-ಕೇಳಬೇಕೆನ್ನಿಸಿತು ಕರೀಂಸಾಬರಿಗೆ: ಒಂದು ಅರ್ಧ ಕ್ಷಣಕ್ಕೂ ಕಡಮೆಯ ಕಾಲದಲ್ಲಿ ಆ ಉಂಗುರದ ಪೂರ್ವಕಥೆ ಮಿಂಚಿತ್ತು ಮನಸ್ಸಿನಲ್ಲಿ!

ಆದರೆ ಅವರ ಬಾಯಿಂದ ಹೊರಬಿದ್ದದ್ದೇ ಬೇರೆ: "ಅಲ್ಲವೋ, ಚೇಂಕ್ರ ನಿನಗೆ ಎಲ್ಲಿ ಸಿಕ್ಕುತ್ತವೆಯೋ ಇಂಥ ಪಡಪೋಸಿ ಮಾಲು, ಬರೀ ಗಿಲೀಟು. ಮೂರು ಕಾಸು ಬಾಳುವುದಿಲ್ಲ...ಮೊನ್ನೆ ನೀನು ತಂದು ಕೊಟ್ಟ ಅಡಕೆಯೂ ಪಡಪೋಸಿಯದ್ದೆ! ಹಸಿ ಅಡಕೆಯನ್ನೆ ತಟ್ಟೆಯಿಂದ ಹೊತ್ತು ತಂದಿದ್ದೆಯೋ ಏನೋ?.... ಸರಿ. ಇರಲಿ ಬಿಡು. ಆಮೇಲೆ ಮಾತಾಡುವಾ. ಈಗ ನನಗೆ ಸಮಯ ಇಲ್ಲ. ನಿನಗೆ ಏನು ಸಾಮಾನು ಬೇಕೋ ಅಂಗಡಿಯಿಂದ ತೆಗೆದುಕೊಂಡು ಹೋಗಿರು. ಆಮೇಲೆ ಲೆಕ್ಕ ಮಾಡಿದರಾಯಿತು..." ಎಂದು ಮರುಮಾತಿಗೆಡೆಯಿಲ್ಲದಂತೆ ಒಳಗೆ ನಡೆದರು.

'ಈ ಕರ್ಮೀನ ಸಾಬಿ ಪಕ್ಕಾ ತಾಯಿಗ್ಗಂಡ! ಉಂಗುರ ಗಿಲೀಟಿನದಂತೆ? ಅಡಕೆ ಹಸಿಯದಂತೆ! ಗೌಡರ ಮನೆಯಲ್ಲಿ ಒಣಗಿಸಿ ಆರಿಸಿ ಇಟ್ಟಿದ್ದ ಹಸವನ್ನೆ ನಾನು ತಂದದ್ದು. ನನಗೆ ಗೊತ್ತಿಲ್ಲವೆ ಅದರ ಬೆಲೆ? ಅದು ಪಡಪೋಸಿ ಮಾಲಂತೆ! ಇವನು ಹೇಳಿಬಿಟ್ಟರಾಯಿತೆ?' ಎಂದು ಮನಸ್ಸಿನಲ್ಲಿಯೆ ಶಪಿಸುತ್ತಾ, ಚೇಂಕ್ರ ತನಗೆ ಬೇಕಾದ ಸಾಮಾನುಗಳನ್ನು ಮಳಿಗೆಯಿಂದ ಈಸಿಕೊಂಡು ಬಿಡಾರಕ್ಕೆ ಹೋಗಿದ್ದನು, ತುಂಬು ಕತ್ತಲೆಯಾದಮೇಲೆಯೆ. ಕಳುವಿನ ವ್ಯಾಪಾರದಲ್ಲಿ ಚೌಕಾಸಿಗೆ ಅವಕಾಶವೆಲ್ಲಿ?

ಚೇಂಕ್ರನ ಬಿಡಾರದಲ್ಲಿ ಐತ ಒಂದು ಇರುಳು ಕಂಡಿದ್ದ ಔತಣದ ಸಂಭ್ರಮವೂ ಚೇಂಕ್ರನ ಈ ತೆರನ ಸಂಪಾದನೆಯಿಂದಲೆ ಸಂಭವಿಸಿತ್ತು! ಅವನು ಮಾತ್ರ ಹೇಳುತ್ತಿದ್ದನು, ಮೇಗರವಳ್ಳಿಯಲ್ಲಿ ಕಂತ್ರಾಟು ಕೆಲಸ ಮಾಡಿ ದುಡ್ಡು ಮೊಗೆಯುತ್ತಿದ್ದೇನೆ ಎಂದು: ಅವನ ಮಕ್ಕಳಿಗೆ ತಿಂಡಿ, ಬಟ್ಟೆ; ಅಕ್ಕಣಿಗೆ ಬಳೆ, ಸೀರೆ; ಅಕ್ಕಣಿಯ ರೋಗಿಷ್ಠ ಗಂಡ ಪಿಜಿಣನಿಗೂ ಕಷ್ಟಕಾಲದಲ್ಲಿ ದುಡ್ಡು, ಕಾಸು, ಸಾರಾಯಿ-ಇತ್ಯಾದಿ ಎಲ್ಲ ವೆಚ್ಚಗಳಿಗೂ ಯಥೇಚ್ಛವಾಗಿತ್ತು ಚೇಂಕ್ರ ಸೇರೆಗಾರನ ಸಂಪಾದನೆ!

ಚೇಂಕ್ರ ಸಭ್ಯನಂತೆ ಸೋಗು ಹಾಕಿಕೊಂಡು, ಸಮಯ ಸಾಧಿಸಿ, ತನ್ನನ್ನು ನಂಬಿದವರು ಇತರರು ಎಂಬ ಭೇದವಿಲ್ಲದೆ ಕದಿಯುತ್ತಿದ್ದುದು ಮಾತ್ರವಲ್ಲದೆ, ಇತ್ತೀಚೆಗೆ ಹೊನ್ನಾಳಿ ಸಾಬರ ಗುಂಪಿನ ಸೆಳೆತಕ್ಕೂ ಸಿಕ್ಕಿ, ಹಾದಿಹೋಕರ ದರೋಡೆಗೂ ನೆರವಾಗಿ ಹೊಸ ತರಹದ ಸಂಪಾದನೆಗೂ ಶುರು ಮಾಡಿದ್ದನು. ತಾನೇ ಹೊಡೆಯುವ, ಬಡಿಯುವ, ತಲೆಯೊಡೆಯುವ ಮತ್ತು ಚೂರಿಹಾಕುವ ಕೆಲಸಗಳಿಗೆ ನೇರವಾಗಿ ಕೈ ಹಾಕುತ್ತಿರಲಿಲ್ಲ, ನಿಜ. ಕೂಲಿ ಮಾಡಿ ದುಡಿದು ಆಳಾಗಿ, ಆಳುಗಳಿಗೆ ಸೇರೆಗಾರನಾಗಿ ಇದುವರೆಗೆ ಜೀವನ ಯಾಪನೆ ಮಾಡುತ್ತಿದ್ದ ಆ ಹಸಲರವನಿಗೆ ಪುಂಡಾಟವೆ ಬದುಕಾಗಿದ್ದ ಸಾಬರ ಧೈರ್ಯ, ಧೂರ್ತತೆ, ಕ್ರೌರ್ಯ, ನೈಷ್ಠುರ್ಯ, ನಿರ್ದಾಕ್ಷಿಣ್ಯಗಳು ಸುಲಭಸಾಧ್ಯವಾಗಿರಲಿಲ್ಲ. ಆದರೆ ರಾತ್ರಿಹೊತ್ತು ಕಾಡುಬೆಟ್ಟಗಳ ಇಕ್ಕಟ್ಟಿನಲ್ಲಿ, ನಿರ್ಜನ ಸ್ಥಳಗಳಲ್ಲಿ, ತಾನೂ ಒಬ್ಬ ಗಟ್ಟದ ತಗ್ಗಿಗೆ ಹೋಗುವ ಪ್ರಯಾಣಿಕನೆಂಬಂತೆ ತಲೆಮೇಲೆ ಕೊಳಕು ಜಾಯಿಕಾಯಿ ಪೆಟ್ಟಿಗೆ ಹೊತ್ತುಕೊಂಡೋ ಕೈಯಲ್ಲಿ ಪಾತ್ರೆ ಪರಟೆ ಹಿಡಿದುಕೊಂಡೋ ಹೋಗುತ್ತಿದ್ದು ಸಹಪ್ರಯಾಣಿಕರ ಐಶ್ವರ್ಯದ ಗುಟ್ಟನ್ನು ಅರಿತು, ಅದನ್ನು ಸಂಕೇತಗಳಿಂದ, ಯಾವುದಾದರೂ ಪದ ಹೇಳಿಯೋ ಕೆಮ್ಮಿಯೋ ಅಥವಾ ದಾರಿತಪ್ಪಿಹೋದ ತನ್ನ ಜೊತೆಯ ಪಯಣಿಗನಿಗೆ ಗಟ್ಟಿಯಾಗಿ ಛದ್ಮವಾಕ್ಯಗಳನ್ನು ಕೂಗಿ ಹೇಳುವಂತೆ ನಟಿಸಿಯೋ, ತಿಳಿಸಿ ಸುಲಿಗೆಗೆ ನೆರವಾಗುತ್ತಿದ್ದನು: ಅಂತಹ ಪಾಪಕಾರ್ಯಗಳಲ್ಲಿಯೂ ಒಮ್ಮೆ ಅವನಿಗೆ ಪುಣ್ಯ ಸಂಪಾದನೆ ಮಾಡುವ ಅವಕಾಶವೂ ಒದಗಿತ್ತು: ತನ್ನ ಗುರುತು ಅವರಿಗೆ ಸಿಕ್ಕದಿದ್ದರೂ ತನಗೆ ಪರಿಚಯವಿದ್ದ ಒಬ್ಬ ಉಡುಪಿಯ ಗೃಹಸ್ಥರ ಪ್ರಾಣವನ್ನು ಉಪಾಯದಿಂದ ಉಳಿಸಿದ್ದನು, ಸಾಬರಿಗೆ ಗೊತ್ತಾಗದಂತೆ! ಮಾತುಕತೆಗಳಿಂದ ಆ ಗೃಹಸ್ಥರು ತಾನು ಸಣ್ಣವನಾಗಿದ್ದಾಗ ತನ್ನ ತಂದೆ ತಾಯಿಗಳಿಗೆ ಅನ್ನ ಹಾಕಿ, ಬಟ್ಟೆ ಕೊಟ್ಟು ತನ್ನನ್ನೂ ಕಾಪಾಡಿದ್ದಾರೆಂಬುದು ಗೊತ್ತಾಗಿ,

ಅವರನ್ನು ಹೇಗಾದರೂ ರಕ್ಷಿಸಬೇಕೆಂಬ ಕೃತಜ್ಞತೆಯ ಧರ್ಮಬುದ್ಧಿ ಜಾಗ್ರತವಾಗಿ, ಸಾಬರಿಗೆ ತಪ್ಪು ಮಾರ್ಗದರ್ಶನ ಮಾಡಿ, ಆ ಗೃಹಸ್ಥರನ್ನು ಸುರಕ್ಷಿತ ಸ್ಥಾನಕ್ಕೆ ಒಯ್ದುಬಿಟ್ಟು, ಸೂಕ್ಷ್ಮವಾಗಿ ಎಚ್ಚರಿಕೆ ಹೇಳಿ ಕಣ್ಮರೆಯಾಗಿದ್ದನಂತೆ! ಆ ಕತೆಯನ್ನು ಅವನು ಇನ್ನಾರದ್ದೋ ಎಂಬಂತೆ ಹೇಳಿ, ಜನರೆ ಮೆಚ್ಚುಗೆಯನ್ನು ಸವಿಯುತ್ತಿದ್ದನು.!

ಕೋಣೂರಿನ ಗಟ್ಟದ ತಗ್ಗಿನವರ ಬಿಡಾರಗಳಲ್ಲಂತೂ 'ಚೇಂಕ್ರ ಸೇರೆಗಾರ'ರ ವಿಚಾರವಾದ ಗೌರವ, ಶ್ಲಾಘನೆ ಹೆಚ್ಚುತ್ತಿತ್ತು. ಅವನ ದುಶ್ಚಾಳಿಗಳನ್ನು ಅರಿತಿದ್ದವರು ಅವನ ಹೆಂಡತಿ ದೇಯಿ ಸತ್ತುದಕ್ಕೆ ಅವನೇ ಕಾರಣವೆಂದು ಮೊದಮೊದಲು ಅವನನ್ನು ನಿಂದಿಸಿ ತಿರಸ್ಕರಿಸಿದ್ದರೂ ಅವನು ಇದ್ದಕ್ಕಿದ್ದ ಹಾಗೆ ಧನ ಸಂಪಾದನೆ ಮಾಡಿ ತನ್ನ ಮಕ್ಕಳನ್ನೂ ಚೆನ್ನಾಗಿ ನೋಡಿಕೊಳ್ಳುವಂತೆ ಅಕ್ಕಣಿಗೆ ನೆರವಾಗಿ, ಅಕ್ಕಣಿಗೆ ಮಾತ್ರವಲ್ಲದೆ ಅವಳ ಕಾಯಿಲೆ ಗಂಡ ಪಿಜಿಣನಿಗೂ ತನ್ನ ಔದಾರ್ಯವನ್ನು ವಿಸ್ತರಿಸಿದುದನ್ನು ನೋಡಿ, ಅವನ್ ಪರೋಪಕಾರ ಬುದ್ಧಿಯನ್ನು ಬಾಯಿ ತುಂಬ ಹೊಗಳಿದ್ದರು. ಚೇಂಕ್ರ ಹೇಗೆ ಸಂಪಾದಿಸುತ್ತಿದ್ದಾನೆ ಎಂಬುದರ ಕಡೆಗೆ ಅವರು ನೋಡಲೂ ಇಲ್ಲ, ನೋಡಬೇಕಾಗಿಯೂ ಇರಲಿಲ್ಲ. ಆಗೊಮ್ಮೆ ಈಗೊಮ್ಮೆ ಅಲ್ಲಿ ಇಲ್ಲಿ ಒಬ್ಬೊಬ್ಬರು ಅವನ ಸಂಪಾದನೆಯ ವಿಧಾನದ ನಿಜಸ್ವರೂಪದ ವಿಚಾರವಾಗಿ ಆಡಿಕೊಳ್ಳುತ್ತಿದ್ದರೇನೋ ಹೌದು. ಹಾಗೆ ಆಡಿಕೊಳ್ಳುತ್ತಿದ್ದಾರೆ ಎಂಬುದನ್ನು ಐತ ಒಮ್ಮೆ ಅವನ ಗಮನಕ್ಕೆ ತರಲು ಪ್ರಯತ್ನಿಸಿದಾಗ ಚೇಂಕ್ರ ಆ ವಿಷಯವನ್ನೆ ಹಿಂದಿರುಗಿಸಿ ಐತನ ಸಂಸಾರದ ಸುಖದ ಬಾಳಿಗೇ ವಿಷಪ್ರಯೋಗ ಮಾಡಿದ್ದನಷ್ಟೆ!

ಅಕ್ಕಣಿಯ ಮೂಲಕವಾಗಿ ತನಗೊದಗಿದ ಸಹಾಯಕ್ಕೆ ಪಿಜಿಣ ತುಂಬ ಕೃತಜ್ಞನಾಗಿ ಚೇಂಕ್ರನ ಮಕ್ಕಳನ್ನು ತನ್ನ ಹೆಂಡತಿ ಸಾಕಿ ಸಲಹುತ್ತಿದ್ದುದಕ್ಕೆ ಸಂತೋಷಪಟ್ಟಿದ್ದನು. ಅಲ್ಲದೆ ತನಗೆ ಮಕ್ಕಳಿಲ್ಲದುದರಿಂದ ದೇಯಿಯ ಮಕ್ಕಳನ್ನು ನೋಡಿಕೊಳ್ಳುವುದರಲ್ಲಿ ಬದುಕಿನ ಹಿಗ್ಗನ್ನು ಅನುಭವಿಸುತ್ತಿದ್ದ ಅಕ್ಕಣಿಯ ಮುಖದಲ್ಲಿ ಹೊಮ್ಮುತ್ತಿದ್ದ ಹರ್ಷಕ್ಕೆ ಪಿಜಿಣನ ಮನಸ್ಸೂ ಹರ್ಷಿಸಿತ್ತು. ಎಷ್ಟೋ ರಾತ್ರಿಗಳಲ್ಲಿ ಚೇಂಕ್ರ ತನ್ನ ಕರಾಳ ನಿಶಾಚರ ಸಂಪಾದನೆಯ ಕಾರ್ಯಗಳಲ್ಲಿ ತೊಡಗಿ ಬಿಡಾರಕ್ಕೆ ಬರುತ್ತಲೆ ಇರಲಿಲ್ಲ. ಆಗ ಅವಳು ಅವನ ಮಕ್ಕಳೊಂದಿಗೆ ಚೇಂಕ್ರನ ಬಿಡಾರದಲ್ಲಿಯೆ ಮಲಗುತ್ತಿದ್ದಳು, ತನ್ನ ಗಂಡನ ಅನುಮತಿಯ ಮೇರೆಗೇ. ಎಂದಾದರೂ ಮಧ್ಯರಾತ್ರಿಯ ಮೇಲೆಯೋ ಅಥವಾ ಬೆಳಗಿನ ಕಡೆಯ ಯಾಮದಲ್ಲಿಯೋ ಚೇಂಕ್ರ ಬಿಡಾರಕ್ಕೆ ಬಂದಾಗ ಅವಳು ತನ್ನ ಬಿಡಾರಕ್ಕೇ ಬಂದು ಗಂಡನೊಡನೆ ಮಲಗುತ್ತಿದ್ದಳು.

ಪ್ರಾರಂಭದಲ್ಲಿ ಪಿಜಿಣನಿಗೆ ಅದೆಲ್ಲ ತುಂಬ ಸಾಜವಾಗಿಯೇ ಕಂಡಿತ್ತು. ಸಂತೋಷಪ್ರದವಾಗಿಯೂ ಇತ್ತು. ತನ್ನ ಹೆಂಡತಿ ತನಗೆ ಮಾಡುತ್ತಿದ್ದ ಆರೈಕೆ ಶುಶ್ರೂಷೆಗಳಿಗೆ ಅವಳ ಮೇಲಣ ಅವನ ಮಮತೆ ಇಮ್ಮಡಿಸಿತ್ತು. ಅಲ್ಲದೆ ಅಕ್ಕಣಿ ತಲೆಬಾಚಿ, ಹೂ ಮುಡಿದು, ಹೊಸಸೀರೆಯುಟ್ಟು ಗೆಲುವಾಗಿದ್ದುದು ಅವನಿಗೆ ಮಾದಕವಾಗಿಯೂ ಇತ್ತು. ಮೊದಲಿನಂತಲ್ಲದ ವಿಶೇಷ ರೀತಿಯಿಂದ ಅವಳು ತನಗೆ ಸುಖಕೊಡುತ್ತಿದ್ದುದನ್ನು ಕಂಡು ಅವಳಿಗೆ ಮಕ್ಕಳಾದರೂ ಆಗಬಹುದೇನೋ ಎಂಬ ಆಶೆ ಭರವಸೆಯ ರೂಪಕ್ಕೆ ತಿರುಗಿತ್ತು.

ಒಂದು ದಿನ ಬೆಳಗಿನ ಜಾವ ನೆರೆಯ ಬಿಡಾರದ ಪೀಂಚಲು ಇನ್ನೂ ಚೆನ್ನಾಗಿ ಕತ್ತಲೆಯಾಗಿದ್ದಾಗಲೆ ಪಿಜಿಣನ ಬಿಡಾರಕ್ಕೆ ಬೆಂಕಿ ಕೇಳಲು ಬಂದಳು. ಪಿಜಿಣ, ಬಿಡಾರದ ಬಾಗಿಲು ಮುಚ್ಚಿದ್ದಂತೆಯೆ, ಒಳಗಣಿಂದ “ಚೇಂಕ್ರ ಬಂದಿಲ್ಲ ಕಾಣ್ತೆ; ಅವಳು ಅವನ ಬಿಡಾರದಲ್ಲಿ ಮಕ್ಕಳ ಕೂಡೆ ಮಲಗಿರಲಕ್ಕು” ಎಂದನು.

“ರಾತ್ರಿಯೆ ಬಂದಿದ್ದನಲ್ಲಾ ಚೇಂಕ್ರ! ನಮ್ಮವರ ಹತ್ರ ಮಾತಾಡಿ ಕೊಂಡು ಹೋದ!” ಎಂದು ತನಗೆ ತಾನೆಯೆ ಹೇಳಿಕೊಳ್ಳುವಂತೆ ಹೇಳಿ, ಅಕ್ಕಣಿಯನ್ನು ಕೇಳಿ ಚೇಂಕ್ರನ ಬಿಡಾರದಲ್ಲಿರಬಹುದಾದ ಬೆಂಕಿಯನ್ನು ತರುವ ಉದ್ದೇಶದಿಂದ ಅಲ್ಲಿಗೆ ಹೋದಳು.

ಪೀಂಚಲು ಕರೆದಾಗ ಅಕ್ಕಣಿಗೆ ಬದಲಾಗಿ ಚೇಂಕ್ರನೆ ತನ್ನ ಬಿಡಾರದ ಬಾಗಿಲು ತೆರೆದನು. “ಬೆಂಕಿ ಕೇಳುವ ಎಂದು ಬಂದೆ. ಅಕ್ಕಣಿ ಇದ್ದಾಳಾ?” ಎಂದು ಕೇಳಿದ ಪೀಂಚಲುವಿಗೆ ಚೇಂಕ್ರ, ಆ ಕತ್ತಲೆಯಲ್ಲಿ ಕಾಣಿಸದಿದ್ದರೂ, ತಾಂಬೂಲರಾಗದ ದಂತ ಪಂಕ್ತಿಯನ್ನು ಪ್ರದರ್ಶಿಸಿ ನಗುತ್ತಾ “ಅವಳು ಇಲ್ಲಿ ಎಲ್ಲಿದ್ದಾಳೆ? ನಾನು ಬಂದಾಗಲೆ ರಾತ್ರಿ ತನ್ನ ಬಿಡಾರಕ್ಕೆ ಹೋದಳಲ್ಲಾ!....ನೋಡ್ತೆ, ಬೆಂಕಿ ಇದೆಯೆ ಒಲೆಯಲ್ಲಿ?” ಎಂದು ಪೀಂಚಲುವನ್ನು ಬಾಗಿಲ ಹೊರಗೇ ನಿಲ್ಲಿಸಿ, ಒಳಗೆ ಹೋಗಿ, ಒಂದು ಮಡಕೆಯ ಓಡಿನಲ್ಲಿ ಬೆಂಕಿ ಕೆಂಡಗಳನ್ನು ತಂದುಕೊಟ್ಟು, ಬಾಗಿಲು ಹಾಕಿಕೊಂಡನು. ಪೀಂಚಲುಗೆ ಆಶ್ಚರ್ಯವಾಯಿತು; ಚೇಂಕ್ರ ಹಿಂದೆಂದೂ ಅಷ್ಟು ದಾಕ್ಷಿಣ್ಯಪರವಾಗಿ ವರ್ತಿಸಿ ತನಗೆ ಅಂತಹ ಸೇವೆಯ ಕೆಲಸ ಮಾಡಿಕೊಟ್ಟಿರಲಿಲ್ಲ.

ಆದರೆ ಆ ಆಶ್ಚರ್ಯ ಬಹಳಕಾಲ ಇರಲಿಲ್ಲ. ಅವಳು ತನ್ನ ಬಿಡಾರಕ್ಕೆ ಹೋಗುವಷ್ಟರಲ್ಲಿಯೆ ಅದು ವಿಷಾದಕ್ಕೆ ಎಡೆಕೊಟ್ಟಿತ್ತು: ಅಕ್ಕಣಿ ಎಂದಿನಂತೆ ತನ್ನ ಬಿಡಾರಕ್ಕೆ ಹಿಂದಿರುಗಿರಲಿಲ್ಲ! ಚೇಂಕ್ರನು ಬಂದಮೇಲೆಯೂ ಅವಳು ರಾತ್ರಿಯನ್ನೆಲ್ಲಾ ಅವನ ಬಿಡಾರದಲ್ಲಿಯೆ ಕಳೆದಿದ್ದಳು!

ತನಗೆ ತಾನೆಂಬಂತೆ ಪೀಂಚಲು ಹೇಳಿಕೊಂಡಿದ್ದನ್ನು ಪಿಜಿಣ ಕೇಳಿ ಶಂಕೆಗೊಳಗಾಗಿದ್ದನು. ನಿಜವೋ ಸುಳ್ಳೋ ಅವನಿಗೆ ಬಗೆಹರಿದಿರಲಿಲ್ಲ. ಬೆಳಗಾದ ಮೇಲೆ ಅಕ್ಕಣಿ ಬಿಡಾರಕ್ಕೆ ಬಂದಾಗ ಅವನು ಯಾವುದನ್ನೂ ವಿಚಾರಿಸುವ ಗೋಜಿಗೆ ಹೋಗದೆ ಅವಳನ್ನೆ ಮತ್ತೆ ಮತ್ತೆ ನೋಡಿದ್ದನು, ಏನನ್ನೋ ಗ್ರಹಿಸುವವನಂತೆ, ಕಂಡುಹಿಡಿಯಲೆಂಬಂತೆ.

ಅಕ್ಕಣಿಗೂ ಶಂಕೆ ಹುಟ್ಟಿತ್ತು: ಪೀಂಚಲು ಚೇಂಕ್ರನ ಬಿಡಾರಕ್ಕೆ ಬೆಂಕಿ ಕೇಳಲು ಬರುವ ಮುನ್ನ ತಮ್ಮ ಬಿಡಾರದಲ್ಲಿ ವಿಚಾರಿಸಿಯೆ ಇರಬೇಕು ಎಂದು. ಅಕ್ಕಣಿ ಮೊದಮೊದಲು ದಾಕ್ಷಿಣ್ಯಕ್ಕೆ ಒಳಗಾಗಿ, ಬರಬುತ್ತಾ ಕೃತಜ್ಞತೆಗೆ ಪ್ರತಿರೂಪವಾಗಿ ಕ್ರಮೇಣ ರುಚಿವಶಳೂ ಆಗಿ ಚೇಂಕ್ರನ ಸಹವಾಸದ ಕೂಣಿಗೆ ಬಿದ್ದಿದ್ದಳು. ಆದರೆ ತನ್ನ ಗಂಡನ ವಿಚಾರದಲ್ಲಿ ಯಾವ ಉದಾಸೀನವನ್ನೂ ತೋರಗೊಡದೆ ಸೇವೆ ಸಲ್ಲಿಸುತ್ತಿದ್ದಳು. ಆ ಸೇವೆಯ ಹಿಂದೆ ದಯೆ ಕರುಣೆಗಳೆ ಪ್ರಧಾನವಾಗಿದ್ದು, ದಾಂಪತ್ಯಪ್ರೇಮ ಇಳಿಮುಖ ವಾಗುತ್ತಿದ್ದುದನ್ನು ಗ್ರಹಿಸುವಷ್ಟು ಪ್ರಜ್ಞಾಸೂಕ್ಷ್ಮತೆ ಅವಳಿಗಿರಲಿಲ್ಲ. ಮೊದಲಿನಿಂದಲೂ ಒಂದಲ್ಲ ಒಂದು ರೀತಿಯಲ್ಲಿ ಕಾಯಿಲೆ ಬೀಳುತ್ತಿದ್ದು ಕೃಶನೂ ಅಶಕ್ತನೂ ಆಗಿದ್ದ ಪಿಜಿಣನಿಂದ ಅವಳಿಗೆ ಆರೋಗ್ಯದೃಢ ಕಾಯಳಾದ ತರುಣಿಗೆ ದೊರೆಯಬೇಕಾದ ಲೈಂಗಿಕ ತೃಪ್ತಿ ದೊರೆಯುತ್ತಿರಲಿಲ್ಲ. ಆದರೆ ಸಂಪ್ರದಾಯದಿಂದ ನೀತಿವಂತೆಯಾಗಿದ್ದ ಅವಳಿಗೆ ಹಾಗೆ ಲೈಂಗಿಕ ತೃಪ್ತಿ ದೊರೆಯುತ್ತಿಲ್ಲ ಎಂಬುದೂ ತಿಳಿದಿರಲಿಲ್ಲ. ಒಮ್ಮೆ ಪ್ರಮಾದವಶದಿಂದಲೋ ಎಂಬಂತೆ ಆ ಅಜ್ಞಾನ ಜಾರ ಪ್ರವೀಣನಾಗಿದ್ದ ಚೇಂಕ್ರನಿಂದ ಪರಿಹಾರವಾಯಿತು. ಆದರೆ ಅದನ್ನೊಂದು ಮಹಾ ಅಕಾರ್ಯವೆಂದು ಅವಳು ಭಾವಿಸಿರಲಿಲ್ಲ. ಚೇಂಕ್ರನಿಂದ ತನಗೂ, ಹೆಚ್ಚಾಗಿ ಕೆಲಸಕ್ಕೆ ಹೋಗಲಾರದೆ ಸಂಪಾದನೆಯಿಲ್ಲದೆ ರೋಗಿಯಾಗಿ ನರಳುತ್ತಿದ್ದ ತನ್ನ ಗಂಡನಿಗೂ, ಆಗುತ್ತಿದ್ದ ಉಪಕಾರಕ್ಕೆ ಒಂದು ರೀತಿಯಲ್ಲಿ ಋಣ ತೀರಿಸುವ ಕೃತಜ್ಞತಾ ರೂಪದ ಪ್ರತ್ಯುಪಕಾರವಾಯಿತೆಂದೇ ಅವಳು ಭಾವಿಸಿದ್ದಳು. ಅದರಲ್ಲಿಯೂ ತನ್ನ ಹೆಂಡತಿ ದೇಯಿ ತೀರಿಹೋದ ಮೇಲೆ

ಅಕ್ಕಣಿಯ ಪರವಾದ ಚೇಂಕ್ರನ ವರ್ತನೆ ಯಾಚನಾಪೂರ್ವಕವಾಗಿ ಆಪ್ಯಾಯಮಾನವಾಗಿತ್ತು. ಅದಕ್ಕೆ ವಶಳಾಗದೆ ಇರಲು ಅವಳಿಗೂ ಸಾಧ್ಯವಾಗಲಿಲ್ಲ. ಅಲ್ಲದೆ ತಾನು ಚೇಂಕ್ರನ ಮಕ್ಕಳನ್ನು ನೋಡಿಕೊಳ್ಳುತ್ತಿದ್ದುದರಲ್ಲಿಯೂ, ಚೇಂಕ್ರನಿಗೆ ಅನ್ನ ಗಂಜಿ ಮಾಡಿ ಹಾಕುತ್ತಿದ್ದುದರಲ್ಲಿಯೂ, ಅವನು ಬಿಡಾರಕ್ಕೆ ಬರದಿದ್ದ ರಾತ್ರಿಗಳಲ್ಲಿ ಅವನ ಬಿಡಾರದಲ್ಲಿಯೆ ಅವನ ಮಕ್ಕಳೊಡನೆ ಮಲಗಲು ಅನುಮತಿ ಕೊಡುತ್ತಿದ್ದುದರಲ್ಲಿಯೂ ತನ್ನ ಗಂಡನಿಗೂ ಕೂಡ ತನ್ನ ಈ ವಿಚಾರವಾದ ವರ್ತನೆ ಅಷ್ಟೇನೂ ಅನಮ್ಮತವಾಗಿರದಿರಬಹುದು ಎಂದೂ ಅವಳ ಹೃದಯ ಒಳಗೊಳಗೆ ಅನುಮಾನಿಸಿತ್ತು.

ಆದರೆ ಒಮ್ಮೆ ಪಿಜಿಣ ಅವಳ ವಿಚಾರವಾಗಿ ಅಸಮಾಧಾನ ವ್ಯಕ್ತಪಡಿಸಿ ತಾನೆಂತಿದ್ದರೂ ಇನ್ನು ಹೆಚ್ಚು ಕಾಲ ಬದುಕುವುದಿಲ್ಲವಾದ್ದರಿಂದ ಅಲ್ಲಿಯವರೆಗಾದರೂ ನಾಲ್ಕು ಜನ ಆಡಿಕೊಳ್ಳದಂತೆ ಬಾಳು ಎಂದು ಕಣ್ಣೀರುಗರೆದು, ಹಾಸಗೆಯ ಮೇಲೆ ಎದ್ದು ಕೂತಿದ್ದ ತನ್ನ ಒಣಕಲು ಒಡಲನ್ನು ದೊಪ್ಪನೆ ಕೆಡೆಯುವಂತೆ ಮಾಡಿ ಬಿದ್ದು ಮಲಗಿದಾಗ, ಅಕ್ಕಣಿ ಒಂದು ದಿನವೆಲ್ಲ ಉಣ್ಣದೆ ಅಳುತ್ತಲೆ ತನ್ನ ಕೆಲಸವೆಲ್ಲವನ್ನೂ ಮಾಡಿ, ಚೇಂಕ್ರನು ಬಿಡಾರಕ್ಕೆ ಬರದಿದ್ದರೂ ಆ ರಾತ್ರಿ ಅವನ ಮಕ್ಕಳನ್ನು ಅವನ ಬಿಡಾರದಲ್ಲಿಯೆ ಮಲಗಿಸಿ, ಅವಕ್ಕೆ ನಿದ್ದೆ ಬಂದ ಮೇಲೆ ತಟ್ಟಿಬಾಗಿಲು ಮುಚ್ಚಿ, ಹೊರಗಣಿಂದಲೆ ಬಿಗಿದು ಕಟ್ಟಿ, ತನ್ನ ಬಿಡಾರಕ್ಕೇ ಬಂದು ಪಿಜಿಣನೊಡನೆ ಮಲಗಿದ್ದಳು. ಆದರೆ ನಡುರಾತ್ರಿ ಆ ಮಕ್ಕಳು ಅಳುತ್ತಾ 'ಅಕ್ಕಣ್ಣಬ್ಬೇ ಅಕ್ಕಣ್ಣಬ್ಬೇ' ಎಂದು ಕರೆದು ಗೋಳಿಟ್ಟಾಗ ಪಿಜಿಣನೆ ತನ್ನ ಹೆಂಡತಿಗೆ ಸಮಾಧಾನ ಹೇಳಿ ಚೇಂಕ್ರನ ಬಿಡಾರಕ್ಕೆ ಹೋಗಿ ಅವನ ಮಕ್ಕಳೊಡನೆ ಮಲಗುವಂತೆ ಮಾಡಿದ್ದನು.

ಅಕ್ಕಣಿ ತನಗೆ ಮನಸೋಲುತ್ತಿದ್ದಾಳೆಂದು ಗೊತ್ತಾದ ಕೂಡಲೆ ಚೇಂಕ್ರ ಅವಳನ್ನು ಪಿಜಿಣನಿಂದ ಬಿಡಿಸಿ, ಬೇರೆಯೂರಿಗೆ ಹಾರಿಸಿಕೊಂಡು ಹೋಗುವ ಉಪಾಯವನ್ನೂ ಯೋಚಿಸಿದ್ದನು. ಆದರೆ ಅಕ್ಕಣಿಗೆ ತನ್ನ ಗಂಡನಲ್ಲಿ ದೈಹಿಕರೂಪದ ಸಂಬಂಧವಾಗಿ ವಿರಕ್ತಿ-ಮೂಡಿದ್ದರೂ ಅವನು ತನ್ನವನು ಎಂಬ ಅಭಿಮಾನ ತಪ್ಪಿರಲಿಲ್ಲ. ಅವನ ಕೈ ಮೀರು ಅವನಿಗೆ ಒದಗಿದ್ದ ಅಸ್ವಸ್ಥತೆಯೊಂದೇ ಪಿಜಿಣನಲ್ಲಿದ್ದ ದೋಷವಾಗಿತ್ತು. ಉಳಿದೆಲ್ಲದರಲ್ಲಿಯೂ ಅವನು ಚೇಂಕ್ರನಿಗಿಂತ ಸಾವಿರಪಾಲು ಉತ್ತಮ ವ್ಯಕ್ತಿಯಾಗಿದ್ದನು. ಹೆಂಡತಿ ಇರಲಿ, ಯಾರೂ ಅವನನ್ನು ವಿಶ್ವಾಸಗೌರವಗಳಿಂದಲೆ ಕಾಣಬೇಕು-ಅಂತಹ ಹೃದಯವಿತ್ತು ಅವನಿಗೆ. ಚೇಂಕ್ರನಲ್ಲಿದ್ದ ಸ್ವಾರ್ಥತೆ, ನಿರ್ದಯೆ, ನಿರ್ದಾಕ್ಷಿಣ್ಯ, ನೈಷ್ಠುರ್ಯಗಳೂ ಅವನಲ್ಲಿರಲಿಲ್ಲ. ಅವನು ಒಮ್ಮೆಯಾದರೂ ಹೊಡೆದದ್ದು ಅಕ್ಕಣಿಗೆ ಜ್ಞಾಪಕವಿರಲಿಲ್ಲ. ಅವನ ಷಂಡತನವೇ ಅವನ ಸಾತ್ವಿಕತೆಗೆ ಕಾರಣವೆಂದು ಅವನಿಗೆ ಆಗದವರು ಹೇಳಿಕೊಂಡು ಪರಿಹಾಸ್ಯಮಾಡುತ್ತಿದ್ದರು. ಆದರೆ ಅವನ ಷಂಡತನವೂ ಪೌರುಷದ ಮಿತಿರೂಪವಾಗಿದ್ದತೆ ಹೊರತು ಅದರ ಅಭಾವ ವಾಗಿರಲಿಲ್ಲ ಎಂಬುದನ್ನು ಅನುಭವದಿಂದ ಅರಿತಿದ್ದ ಅಕ್ಕಣಿ ಅಸುಖಿಯಾಗಿರಲಿಲ್ಲ. ಆದ್ದರಿಂದಲೆ ತನ್ನ ಗಂಡನ ಗೌರವವನ್ನು ಬಿಟ್ಟುಕೊಡಲು ಅವಳು ಸಿದ್ಧಳಿರಲಿಲ್ಲ. ಆದ್ದರಿಂದಲೆ ಅವನು ಹೆಚ್ಚು ಹೆಚ್ಚು ಅಸ್ವಸ್ಥನಾದಂತೆಲ್ಲ ಅವನನ್ನು ಹೆಚ್ಚು ಹೆಚ್ಚು ಅಕ್ಕರೆಯಿಂದ ಕಾಣತೊಡಗಿದ್ದಳು.

ಅಕ್ಕಣಿ ತನಗೆ ಮೈಯನ್ನು ಸೋತುಬಿಟ್ಟಮೇಲೆ ಚೇಂಕ್ರನಿಗ್ ಧೈರ್ಯಬಂದು ಅವಳೊಡನೆ ಓಡಿಹೋಗುವ ಪ್ರಸ್ತಾಪವೆತ್ತಿದ್ದನು. ಆಗ ಅವಳ ರೌದ್ರ ಮುಖಭಂಗಿ ನೋಡಿಯೆ ಚೇಂಕ್ರನಿಗೆ ಹೆದರಿಕೆಯಾಗಿತ್ತು. 'ಈ ರಾಕ್ಷಸಿಯ ಹತ್ತಿರ ನಾನೇಕೆ ಹಾಗೆ ಹೇಳಿದೆನಪ್ಪಾ?' ಎಂದುಕೊಳ್ಳುವಂತಾಗಿತ್ತು ಅವನಿಗೆ. ಆ ಕ್ಷಣದಿಂದಲೆ ಅಕ್ಕಣಿ ಅವನೊಡನೆ ಮಾತು ಬಿಟ್ಟಿದ್ದಳು. ಅವನ ಮಕ್ಕಳನ್ನು ಮೊದಲಿನಂತೆಯೆ ನೋಡಿಕೊಂಡು, ಅವನಿಗೂ ಗಂಜಿಗಿಂಜಿ ಬೇಯಿಸಿ

ಹಾಕುತ್ತಿದ್ದಳೆಷ್ಟೋ ಅಷ್ಟೆ! ಅವನನ್ನು ಒಂದು ನಾಯಿ ಕಂಡಂತೆ ಕಂಡು, ನಾಯಿಗೆ ಅನ್ನ ಹಾಕುವಂತೆಯೇ ಹಾಕುತ್ತಿದ್ದಳು, ಕರ್ತವ್ಯಕ್ಕಾಗಿ ಎಂಬಂತೆ. ಚೇಂಕ್ರನಿಗೆ ಸಾವಿರ ಬೈಗುಳಕ್ಕಿಂತಲೂ ಭಯಂಕರವಾಗಿತ್ತು ಅವಳ ಮೌನ. ಅದನ್ನು ಸಹಿಸಲಾರದೆ ಅವನು ಪಿಜಿಣನ ಬಳಿಗೆ ಬಂದು ದೂರು ಹೇಳಿಕೊಂಡಿದ್ದನು, ಕಣ್ಣು ತೇವವಾಗಿ: 'ಏನೋ ಕೆಟ್ಟಗಳಿಗೆಯಲ್ಲಿ ಬಾಯಿತಪ್ಪಿ ಏನನ್ನೊ ಮಾತಾಡಿಬಿಟ್ಟೆ ಎಂದು ನಿನ್ನ ಹೆಂಡತಿ ನನ್ನ ಮೇಲೆ ಪೂರಾ ಸಿಟ್ಟುಮಾಡಿ ಮಾತುಬಿಟ್ಟಿದ್ದಾಳೆ! ನೀನಾದರೂ ಹೇಳು, ಮಾರಾಯ! ತಪ್ಪಾಯಿತು! ನನ್ನ ಮಕ್ಕಳ ಮುಖನೋಡಿ ನನ್ನ ತಪ್ಪು ಮರೆತುಬಿಡಲಿ!" ಬೆಣ್ಣೆನುಡಿ ನಿಪುಣನಾದ ಸೇರೆಗಾರ ಚೇಂಕ್ರನನ್ನು ನಂಬಿ ಪಿಜಿಣ ಮನಕರಗಿಹೋಗಿದ್ದನು.

ಆದರೆ ಚೇಂಕ್ರ ತಾನು ಹಿಡಿದ ಸಾಧನೆಯನ್ನು ಕೈಬಿಡಲಿಲ್ಲ. 'ಇವಳೆಂಥ ವಿಚಿತ್ರ ಪತಿವ್ರತೆ' ಎಂದು ತನಗೆ ಅರ್ಥವಾಗದ ಅವಳನ್ನು ಟೀಕಿಸುತ್ತಿತ್ತು ಅವನ ದುರ್ಮನಸ್ಸು. ಅವನು ತಿಳಿದಿದ್ದ ಯಾವ ಹೆಣ್ಣಿನ ನಡತೆಯಾಗಲಿ ಯಾವ ಹೆಣ್ಣುಗಳಾಗಲಿ ಅಕ್ಕಣಿಯ ವರ್ತನೆಗೆ ಕೀಲಿಕೈ ಒದಗಿಸಲು ಸಮರ್ಥವಾಗಿರಲಿಲ್ಲ.

ಪಿಜಿಣನ ಕಾಯಿಲೆ ಗುಣಮುಖವಾಗದೆ ಅದು ಉಗ್ರ ಆಮಶಂಕೆಗೂ ತಿರುಗಿದಾಗ ಅಕ್ಕಣಿ ಆಗಾಗ ಕಣ್ಣೊರೆಸಿಕೊಳ್ಳುತ್ತಿದ್ದುದನ್ನು ಕಂಡು ಚೇಂಕ್ರ ಕಣ್ಣಾಪಂಡಿತರಿಂದ ಔಷಧಿಕೊಡಿಸಿದ್ದನು. ತಾನು ಮೇಗರವಳ್ಳಿಯಿಂದ ಬರುವಾಗಲೆಲ್ಲ ಪಿಜಿಣನ ಔಷಧಿಗೂ ಪಥ್ಯಕ್ಕೂ ಬೇಕಾದ ಸಾಮಗ್ರಿಯನ್ನು ತಂದುಕೊಡುತ್ತಿದ್ದನು. ತನ್ನ ಗಂಡನ ಯೋಗಕ್ಷೇಮದಲ್ಲಿ ಕಾತರನಾಗಿ ಅಷ್ಟೊಂದು ಆಸಕ್ತನಾದ ಚೇಂಕ್ರನ ವಿಚಾರದಲ್ಲಿ ಅಕ್ಕಣಿಗೆ ಕೃತಜ್ಞತೆ ಉಕ್ಕಿತಾದರೂ, ಅವನು ಆಶಿಸಿದಂತೆ ಚೇಂಕ್ರನ ಪರವಾಗಿ ಪ್ರೇಮನಾಮಕವಾದ ಕಾಮಭಾವನೆ ಅವಳಲ್ಲಿ ಉದ್ದೀಪಿತವಾದಂತೆ ತೋರಲಿಲ್ಲ. ಪಿಜಿಣ ಸತ್ತಲ್ಲದೆ ಅಕ್ಕಣಿಯ ಮನಸ್ಸು ತನ್ನ ಕಡೆಗೆ ಒಲೆಯುವುದಿಲ್ಲ ಎಂಬುದು ನಿಶ್ಚಯವಾದ ಮೇಲೆ ಚೇಂಕ್ರ ತನಗೂ ಅಕ್ಕಣಿಗೂ ನಡುವೆ ಇದ್ದ ಆ ಅಡಚಣೆಯನ್ನೇಕೆ ಪರಿಹರಿಸಬಾರದು ಎಂದೂ ಯೋಚಿಸಿದ್ದನು. ಅದೇನು ಅಂತಹ ಕಷ್ಟದ ವಿಷಯವಾಗಿಯೂ ತೋರಿರಲಿಲ್ಲ. ಕಣ್ಣಾಪಂಡಿತರು ಪಿಜಿಣನ ಆಮಶಂಕೆಗೆ ಔಷಧಿ ಕೊಡುವಾಗ ಒಂದು ತರಹದ ಗುಳಿಗೆಗಳನ್ನು ಕೊಡುತ್ತಿದ್ದರು. ಅದರಲ್ಲಿ ಅಫೀಮು ಇರುವುದರಿಂದ ಅದನ್ನು ಅತ್ಯಂತ ಅಲ್ಪ ಪ್ರಮಾಣದಲ್ಲಿಯೆ ಪ್ರಯೋಗಿಸಬೇಕೆಂದು ಎಚ್ಚರಿಕೆ ಕೊಟ್ಟಿದ್ದರು. ಅಲ್ಲದೆ ಪಥ್ಯ ಹೇಳುವಾಗ ಸಾರಾಯಿಯಂತಹ ಉಷ್ಣದ ಪದಾರ್ಥಗಳನ್ನು ಸೇವನೆಮಾಡದಂತೆ ನೋಡಿಕೊಳ್ಳಬೇಕೆಂದು ಹೇಳಿದ್ದರು. ಆ ಗುಣಕಾರಕ ಸಲಹೆಗಳನ್ನೆ ತನ್ನ ಕಾರ್ಯಸಾಧನೆಗೆ ಉಪಯೋಗಿಸಿಕೊಂಡರೆ ಬಹುಬೇಗನೆ ಫಲಸಿದ್ಧಿಯಾಗುತ್ತದೆ ಎಂದು ತೋರಿತ್ತು ಚೇಂಕ್ರನಿಗೆ. ಅಫೀಮಿನ ಪ್ರಮಾಣವನ್ನು ಹೆಚ್ಚಿಸಿಬಿಟ್ಟರಾಯಿತು, ಏನೂ ಯಾತನೆಯಿಲ್ಲದೆ, ನಿದ್ದೆ ಮಾಡುತ್ತಲೆ ಪರಲೋಕಗತನಾಗುತ್ತಾನೆ. ಆದರೆ ಆ ದಾರಿ ಏಕೋ ಸರಿಬೀಳಲಿಲ್ಲ ಚೇಂಕ್ರನಿಗೆ. ಅವನ ಚೇತನ ತನ್ನನ್ನು ನಂಬಿ ತನಗೆ ಉಪಕಾರ ಮಾಡುತ್ತಿದ್ದ ಅಕ್ಕಣಿಯ ಒಲವಿನ ವಸ್ತುವಿಗೆ ವಿಷವೂಡಿಸಿ ಕೊಲ್ಲುವಷ್ಟು ಅಧೋಗತಿಗೆ ಹೋಗಿರಲಿಲ್ಲವಾದ್ದರಿಂದ ಆ ಕೆಲಸ ಮಾಡಲು ಅಂಜಿಕೆಯಾಯಿತು.

ಆದರೆ ಪಿಜಿಣನನ್ನು ನೋಡಿದಾಗಲೆಲ್ಲ, ಅವನು ಸಾವಿನ ಕಡೆಗೆ ಇಳಿಜಾರಿನಲ್ಲಿ ಜಾರುತ್ತಿದ್ದಾನೆಂಬುದು ಚೆನ್ನಾಗಿ ಕಾಣುತ್ತಿತ್ತು. ಇಂದೊ ನಾಳೆಯೊ ಅಕ್ಕಣಿಗೆ ಅವನ ತೊಂದರೆ ತಪ್ಪಿ, ಅವನಿಂದ ಬಿಡುಗಡೆ ಆಗುತ್ತದೆ. ನಾಲ್ಕುದಿನ ಮೊದಲೇ ಅದು ಆದರೆ, ಅವನಿಗೂ ನರಳುವ ತೊಂದರೆ ತಪ್ಪೀತು; ತನಗೂ ಅದರಿಂದ ಉಪಕಾರವಾದೀತು. ಔಷಧಿಯಿಂದ ತನ್ನ ಸ್ವಾರ್ಥವನ್ನು ಸಾಧಿಸಿಕೊಳ್ಳಲು ಹಿಂಜರಿದ ಅವನ ಮನಸ್ಸು ಪಥ್ಯದಿಂದ ಅದನ್ನು

ಪಡೆಯುವುದರಲ್ಲಿ ಪಾಪಭಾವನೆಯನ್ನು ಅನುಭವಿಸಲಿಲ್ಲ. ಏಕೆಂದರೆ ಅದು ಪಿಜಿಣನಿಗೇ ಬಹಳ ಇಷ್ಟವಾದುದಾಗಿತ್ತು. ಕಳ್ಳು, ಸಾರಾಯಿ, ಸ್ವಾರ್ಲು ಮೀನು, ಖಾರ ಇತ್ಯಾದಿ ಪದಾರ್ಥಗಳು ಪಿಜಿಣನ ಕಾಯಿಲೆನಾಲಗೆಗೆ ಬಹಳ ಬೇಕಾದದ್ದು, ಅವನ್ನು ಒದಗಿಸದಿದ್ದರೆ ಅಕ್ಕಣಿಯಮೇಲೆ ರೇಗಿರೇಗಿ ಬೀಳುತ್ತಾ ಹಟಮಾರಿ ಮಕ್ಕಳಂತೆ ವರ್ತಿಸುತ್ತಿದ್ದನು. ಚೇಂಕ್ರನು ಅಕೃಪಣ ಹಸ್ತದಿಂದ ತುಂಬ ಉದಾರಿಯಾಗಿ ಆ ಆಮಿಷ ಪದಾರ್ಥಗಳನ್ನು ಒದಗಿಸುವುದರಲ್ಲಿ ತನ್ನ ಇಷ್ಟಾರ್ಥ ನೆರವೇರಿಕೆಗೆ ಸಮೀಪಿಸುತ್ತಿದ್ದನು, ಅದರ ಜವಾಬ್ದಾರಿಯಿಂದ ದೂರನಾಗಿ, ಅಥವಾ ದೂರವಾಗಿದ್ದೇನೆ ಎಂದು ಭ್ರಮಿಸಿ. ಏಕೆಂದರೆ ಅವನೇ ಪಿಜಿಣನಿಗೆ ಅಕ್ಕಣಿಯ ಇದಿರಿನಲ್ಲಿಯೇ ಪದೇ ಪದೇ ಹೇಳುತ್ತಿರಲಿಲ್ಲವೆ, ಆ ಉಷ್ಣ ಪದಾರ್ಥಗಳೆಲ್ಲ ಈ ರೋಗಕ್ಕೆ ಬಹಳ ಕಟ್ಟವಂತೆ, ತಿನ್ನಬಾರದಂತೆ ಎಂದು? ಆದರೂ ಪಿಜಿಣ ಬಾಯಿರುಚಿಗೆ ಹಟಮಾಡಿ ಪೀಡಿಸಿ ಅವು ಬೇಕೇಬೇಕು ಎಂದು ತನ್ನ ಹೆಂಡತಿಯನ್ನು ಕಾಡಿಬೇಡಿ ತಿಂದರೆ ತನ್ನದೇನು ಬಂತು ಹೊಣೆ ಅದರಲ್ಲಿ?

ಹೂವಳ್ಳಿ ಮದುವೆಗೆ ಹಿಂದಿನ ದಿವಸ ಚೇಂಕ್ರ ತನ್ನ ಬಿಡಾರಕ್ಕೆ ಹೊತ್ತಿನಂತೆಯೆ ಬಂದ. ಕೆಸರು ಮೆತ್ತಿದ್ದ ಕಾಲನ್ನು ಗುಡಿಸಲಿನ ಬಾಗಿಲ ಮುಂದೆಯೆ ಕಿರುಕಾಲುವೆಯಲ್ಲಿ ಹರಿಯುತ್ತಿದ್ದ ನೀರಿನಲ್ಲಿ ತೊಳೆದುಕೊಂಡು ಒಳಗೆ ಬಂದು, ಕಂಬಳಿಕೊಪ್ಪೆಯನ್ನು ಕೊಡವಿ ಮೂಲೆಯ ಗೂಟಕ್ಕೆ ಸಿಕ್ಕಹಾಕಿ, ಕೊಪ್ಪೆಯ ಒಳಗೆ ಮುಚ್ಚಿಕೊಂಡು ತಂದಿದ್ದ ಕೆಲವು ಶೀಸೆಗಳನ್ನು ಮೆಲ್ಲಗೆ ಎಚ್ಚರಿಕೆಯಿಂದ ಬಾಗಿಲ ಸಂಧಿಯಲ್ಲಿಟ್ಟನು, ಅವಿತಿಡುವಂತೆ. ಸ್ವಲ್ಪಹೊತ್ತು ಬೆಂಕಿಯ ಮುಂದೆ ಕುಳಿತು ಮಳೆಯಿಂದ ಒದ್ದೆಯಾಗಿದ್ದ ಮೈಯನ್ನು ಬೆಚ್ಚಗೆ ಮಾಡಿಕೊಂಡು, ಮೇಲೆದ್ದು, ಸನ್ನೆಯಿಂದ ಅಕ್ಕಣಿಗೆ ಕೆಲವು ಶೀಸೆಗಳನ್ನು ಎತ್ತಿಕೊಳ್ಳುವಂತೆ ಹೇಳಿ, ತಾನೂ ಕೆಲವನ್ನು ಎತ್ತಿಕೊಂಡು ಪಿಜಿಣನ ಬಿಡಾರಕ್ಕೆ ಹೋದನು.

ಅಪೂರ್ವಕ್ಕೆ ಹೊತ್ತಿಗೆ ಬಹಳ ಮುಂಚೆಯೆ ಬಂದಿದ್ದ ಚೇಂಕ್ರನನ್ನು ನೋಡಿ ಮಲಗಿದ್ದಲ್ಲಿಂದಲೆ ಪಿಜಿಣ ಕೇಳಿದನು "ಏನು ಇವತ್ತು ಸೇರಿಗಾರ್ರ ಸವಾರಿ ಬಹಳ ಬೇಗನೆ ಬಂದಿತ್ತಲ್ಲಾ?"

ಪಿಜಿಣನ ಧ್ವನಿ ಉಡುಗಿಹೋಗಿತ್ತು. ತುಂಬ ನಿಃಶಕ್ತನಾಗಿದ್ದಂತೆ ತೋರಿತು! "ಏನು ಬಹಳ ಸೋತುಹೋದ ಹಾಂಗಿದೆಯಲ್ಲಾ ನೀನು? ಹ್ಯಾಂಗಿದೆ ಹೊರಗೆ ಹೋಗುವುದು?" ಚೇಂಕ್ರನೆಂದನು ಔಪಚಾರಿಕವಾಗಿ.

ಅದಕ್ಕೆ ಉತ್ತರವಾಗಿಯೊ ಎಂಬಂತೆ ಪಿಜಿಣ, ಹೊದೆದಿದ್ದ ಕಂಬಳಿಯನ್ನು ಕಾಲತ್ತ ನೂಕಿ, ಏಳಲಾರದೆ ಎದ್ದು ಕುಳಿತನು. ಸೂಚನೆಯನ್ನು ತಿಳಿದು ಅಕ್ಕಣಿ ಬಳಿಗೆ ನಡೆದು, ಅವನಿಗೆ ಏಳಲು ಸಹಾಯ ಮಾಡಿದಳು. ಅಲ್ಲಿಯೆ ಮರೆ ಕಟ್ಟಿದ್ದ ಒಂದು ಮೂಲೆಗೆ ಎಲುಬು ಚಕ್ಕಳವಾಗಿದ್ದ ಪಿಜಿಣನನ್ನು ನಡೆಸಿಕೊಂಡು ಹೋಗಿ ಕೂರಿಸಿದಳು. ಆ ಬಿಡಾರವನ್ನು ತುಂಬಿದ್ದ ದುರ್ವಾಸನೆಗೆ ಕಾರಣ ಚೇಂಕ್ರನಿಗೆ ಗೊತ್ತಾದದ್ದು ಆಗಲೆ! 'ಇನ್ನೇನು ಹೆಚ್ಚು ದಿನಾ ಇಲ್ಲ ಇವನಿಗೆ!' ಎಂದುಕೊಂಡನು ಚೇಂಕ್ರ ಮನಸ್ಸಿನಲ್ಲಿಯೆ.

ಅಕ್ಕಣಿ ಕೌಪೀನ ಮಾತ್ರ ಧಾರಿಯಾಗಿದ್ದ ಗಂಡನ ರಟ್ಟೆ ಹಿಡಿದು ತಂದು ಚಾಪೆಯ ಮೇಲೆ ಮೆಲ್ಲಗೆ ಮಲಗಿಸಿ ಕಂಬಳಿ ಹೊದಿಸಿದಳು, ತಾಯಿ ಮಗುವನ್ನೆಂತೊ ಅಂತೆ.

“ಮಲಗಿ ಮಲಗಿ ಚರ್ಮ ಎಲ್ಲ ಸುಲಿದೆ ಹೋಯಿತ್ತು! ಉಸ್ ಸ್ ಸ್ ಸ್!” ಎಂದುಕೊಂಡನು ಪಿಜಿಣ, “ಏನಾದರೂ ಸೊಲ್ಪ ಸಕ್ತಿ ಬರ್ಹಾಂಗೆ ಕೊಟ್ಟಿದ್ರೆ? ಉಸ್ ಸ್ ಸ್ ಸ್…. ಇನ್ನೊಂದು ಸಾರಿ ತಿರುಗಾಡುವಂತಾದ್ರೆ ಮತ್ತೆ ನಾನು ಕಾಯಿಲೆಗೆ ಹೆದರುವುದಿಲ್ಲ….ಉಸ್ ಸ್ ಸ್ ಸ್!…. ಅವು ಎಂಥ ಶೀಸೆಗಳೋ?”

ಚೇಂಕ್ರ ಅಕ್ಕಣಿಗೆ ಹೇಳುವಂತೆ ಗುಟ್ಟಿನ ದನಿಯಲ್ಲಿ ಆ ಶೀಸೆಗಳೆಲ್ಲ ಸಾರಾಯಿ ಶೇಸೆಗಳೆಂದೂ, ಅದೆಲ್ಲ ಮನೆಯ ಬಟ್ಟಿಯಲ್ಲಿಯೆ ತಯಾರಾದ ಬಹಳ ಘಾಟು ಇರುವ ವಸ್ತುವೆಂದೂ, ಅದನ್ನು ತನ್ನ ಬಿಡಾರದಲ್ಲಿ ಬಚ್ಚಿಟ್ಟರೆ ಅನುಮಾನಕ್ಕೆ ಕಾರಣವಾಗಿ ಸಿಕ್ಕಿಹಾಕಿಕೊಳ್ಳುವ ಸಂಭವವಿದೆಯೆಂದೂ, ಪಿಜಿಣನ ಬಿಡಾರದಲ್ಲಿ ಅವಿಸಿಟ್ಟರೆ ಯಾರೂ ಗುಮಾನಿಸರೆಂದೂ, ತಾನೂ ಅವುಗಳನ್ನು ಸುರಕ್ಷಿತ ಸ್ಥಾನಕ್ಕೆ ಸಾಗಿಸುವವರೆಗೆ ಅವು ಅಲ್ಲಿಯೆ ಇರಲಿ ಎಂದೂ ವಿವರಣೆ ಕೊಟ್ಟು, ಉರಿಹೊತ್ತಿಸಿ ಬೆಂಕಿಮಾಡಲು ಒಂದು ಮೂಲೆಯಲ್ಲಿ ಜಿಗ್ಗಿನೊಡನೆ ರಾಶಿಹಾಕಿದ್ದ ಕೊನೆಮಟ್ಟೆಗಳಡಿ ಅವನ್ನೆಲ್ಲ ಮುಚ್ಚಿಟ್ಟನು….

ಐತ ಪೀಂಚಲು ಅವರ ಬಿಡಾರದಲ್ಲಿ ಇದ್ದಾರೆಯೆ ಎಂದು ವಿಚಾರಿಸಿದಾಗ ಅಕ್ಕಣಿ ತಿಳಿಸಿದಳು, ಅವರು ಎರಡು ಮೂರು ದಿನಗಳ ಹಿಂದೆಯೆ ಮದುವೆಯ ಕೆಲಸ ಮಾಡಿಕೊಡಲು ಹೂವಳ್ಳಿ ಮನೆಗೆ ಹೋದರು ಎಂದು.

ಚೇಂಕ್ರ-ತನಗೂ ನಾಯಕರು ಹೇಳಿದ್ದರು, ಎರಡು ದಿನಕ್ಕೆ ಮೊದಲೆ ಬಂದು ಮದುವೆ ಮನೆಯ ಚಪ್ಪರ ಗಿಪ್ಪರ ಹಾಕಿಕೊಡು ಎಂದು, ಆದರೆ ಬೇರೆ ಏನೋ ಕೆಲಸ ಗಂಟು ಬಿದ್ದಿದ್ದರಿಂದ ಹೋಗಲಾಗಲಿಲ್ಲ; ಇವತ್ತೆ ರಾತ್ರೆ ಹೋಗ್ತೆ; ನಾಳೆಯಷ್ಟೆ ಮದುವೆಯ ದಿಬ್ಬಣ ಬರುವುದು?-ಎಂದು ಹೇಳಿ ತನ್ನ ಬಿಡಾರಕ್ಕೆ ಹೋಗಿ ರಾತ್ರಿಯೂಟ ಮುಗಿಸಿಕೊಂಡು ಹೂವಳ್ಳಿಗೆ ಹೋದನು.

ಚೇಂಕ್ರನಿಗೆ ಯಾವ ಮದುವೆಯ ಮನೆಗೂ ಕರೆ ಬೇಕಾಗಿರಲಿಲ್ಲ. ಅವನು ಹೋಗಿಯೆ ಹೋಗುತ್ತಿದ್ದನು, ತುಂಡು ಕಡಬು ಪರಮಾನ್ನಕ್ಕಾಗಿ! ಮತ್ತು, ಹುಡುಗರು ಮಕ್ಕಳ ಕೈಯಿಂದಲೊ ಮದುವೆಗೆ ಬಂದ ಗರತಿ ನೆಂಡತಿ ಯರ ಮೈಯಿಂದಲೊ ಗ್ರಾಸ್ತರ ಜೇಬಿನಿಂದಲೊ ಉಂಗುರವೋ ಅಡ್ಡಿಕೆಯೋ ಮುಯ್ಯಿಡಲು ತಂದಿದ್ದ ಹಣವೋ….ಯಾವುದು ಸಿಕ್ಕರೆ ಅದನ್ನು ಲಪಟಾಯಿಸಿ, ಬಿರುಸು ಬಾಣ ಗರ್ನಾಲು ಹಾರಿಸುವುದಕ್ಕಾಗಿ ಎಲ್ಲ ಮದುವೆ ಮನೆ ಗಳಲ್ಲಿಯೂ ಹಾಜರಿರುತ್ತಿದ್ದ ಸಾಬರ ಮುಖಾಂತರ ಅದನ್ನು ಸಾಗಿಸುವ ಸಂಪಾದನೆಗಾಗಿ! ಮತ್ತು, ಸಂನಿವೇಶವೊದಗಿ, ಸಾಧ್ಯವಾದರೆ, ಮತ್ತೊಂದು ಕೆಟ್ಟಕೆಲಸಕ್ಕಾಗಿಯೂ!

ಚೇಂಕ್ರ ಹೂವಳ್ಳಿಮನೆಗೆ ತಲುಪಿದಾಗ ಮದುವೆಯ ಕೆಲಸಕ್ಕೆ ಬಂದಿದ್ದ ಆಳುಗಳಿಗೆ ಇನ್ನೂ ರಾತ್ರಿಯೂಟವಾಗಿರಲಿಲ್ಲ. ಮಳೆಗಾಲದ ಮದುವೆಯಾದ್ದರಿಂದ ಬೇಸಗೆಯಲ್ಲಿ ನೆರೆಯುತ್ತಿದ್ದಂತೆ ನೆಂಟರೂ ಸೇರಿದ್ದಿರಲಿಲ್ಲ. ಹೂವಳ್ಳಿ ಮನೆ ಹಿಂದಿನ ಕಾಲದ ಚೌಕಿ ಮನೆಯಾಗಿದ್ದರಿಂದ ಆ ಮಳೆಗಾಲದ ಮದುವೆಗೆ ನೆರೆಯಬಹುದಾದ ಅಲ್ಪಸ್ವಲ್ಪ ಜನಕ್ಕೆ ಚೌಕಿಯ ಜಾಗವೆ ಯಥೇಚ್ಛವಾಗಿತ್ತು. ಮಳೆ ಬಿಡದೆ ಹೊಡೆಯುತ್ತಲೆ ಇದ್ದುದರಿಂದ ಧಾರೆಯ ಮಂಟಪವನ್ನೂ ಪದ್ಧತಿಯಂತೆ ಅಂಗಳದಲ್ಲಿ ನಿರ್ಮಿಸದೆ ಚೌಕಿಯ ಒಂದು ಮೂಲೆಯಲ್ಲಿಯೆ ರಚಿಸಿದ್ದರು. ಅಲ್ಲಿಯೆ ಪಕ್ಕದಲ್ಲಿ ಹಸೆಗೋಡೆಯನ್ನೂ ಬರೆಯಿಸಿದ್ದರು. ಹಸೆಗೋಡೆಯನ್ನು ಬರೆಯುತ್ತಿದ್ದವನು ಇನ್ನೂ ಅದನ್ನು ಮುಗಿಸಿರಲಿಲ್ಲ; ದೀಪದ ಬೆಳಕಿನಲ್ಲಿ ಎಲೆಗಳಿಗೆ ಹಸುರು ಬಣ್ಣ ತುಂಬುತ್ತಿದ್ದನು. ನಾಲ್ಕಾರು ಕೆಲಸದ ಜನರು,

ತಮ್ಮ ಗ್ರಾಮೀಣತಾರುಚಿಗೆ ಅದ್ಭುತವಾಗಿ ತೋರುತ್ತಿದ್ದ ಆ ವರ್ಣಕಲೆಯನ್ನು ನೋಡುತ್ತಾ ಬಿಟ್ಟ ಬಾಯಾಗಿ ಪ್ರಶಂಸಿಸುತ್ತಾ ಸುತ್ತ ನಿಂತಿದ್ದರು! ಚೀಂಕ್ರನೂ ಹೋಗಿ ಅವರ ನಡುವೆ ನಿಂತು ನೋಡತೊಡಗಿ ಅವರ ಮಾತುಕತೆಗಳಲ್ಲಿ ಭಾಗಿಯಾದನು.

ಹಿತ್ತಲುಕಡೆಯ ಬಾಗಿಲಲ್ಲಿ ಹೋಗೀ ಬಂದೂ ಮಾಡುತ್ತಿದ್ದು, ಗಟ್ಟದ ಮೇಲಿನವರಂತೆ ಗೊಬ್ಬೆಸೆರಗುಕಟ್ಟಿ ಹೊಸ ಸೀರೆಯುಟ್ಟು ಮನೋಹರವಾಗಿ ಮೆರೆಯುತ್ತಿದ್ದ ಪೀಂಚಲು ಚೀಂಕ್ರನ ಹಸಿದ ಕಣ್ಣಿಗೆ ಬಿದ್ದಳಾದರೂ ಐತನ ಸುಳಿವು ಮಾತ್ರ ಅಲ್ಲೆಲ್ಲಿಯೂ ಇರಲಿಲ್ಲ. ವಿಚಾರಿಸಿದಾಗ ಕೆಲಸ ಮಾಡುತ್ತಿದ್ದವರು ಹೇಳಿದರು, ಅವನು ಇತ್ತ ಕಡೆ ಬಂದೇ ಇಲ್ಲ ಎಂದು. ಪೀಂಚಲು ಇದ್ದಲ್ಲಿ ಐತ ಇಲ್ಲದೆ ಇದ್ದುದಕ್ಕೆ ಸೋಜಿಗ ಪಡುತ್ತಾ ಹೇಳಿಕೊಂಡನು ಚೀಂಕ್ರ ತನ್ನಲ್ಲಿಯೆ: 'ಹಾಂಗಾದ್ರೆ ನಾನು ಕೇಳಿದ ಸುದ್ದಿಯಲ್ಲಿ ಏನೋ ಇರಬೇಕು!'

* * *

## ೫೦

ಕನಸಿನಿಂದ ಎಚ್ಚೆತ್ತು ಹಾಸಗೆಯಲ್ಲಿ ಮಗ್ಗುಲಿಗೆ ಹೊರಳಿದಾಗ ಚಿನ್ನಮ್ಮಗೆ, ತಾನು ತೊಟ್ಟುಕೊಂಡೆ ಮಲಗಿ ನಿದ್ರಿಸಿದ್ದ ಆಭರಣಗಳಿಂದಲೂ ಉಟ್ಟುಕೊಂಡಿದ್ದ ಹೊಸ ಸೀರೆಯ ಜರಿಯ ಮರ್ಮರದಿಂದಲೂ, ತಾನು ಮದುಮಗಳಾಗಿದ್ದೇನೆ ಎಂಬ ಕಟುತ್ವ ತಟಕ್ಕನೆ ಪ್ರಜ್ಞಾಗೋಚರವಾಯ್ತು. ಅವಳು ಆ ಬೆಲೆಯುಳ್ಳ ಒಡವೆಗಳನ್ನು ಸಂತೋಷದಿಂದ ತೊಟ್ಟುಕೊಂಡಿರಲಿಲ್ಲ; ಇತರರ ಬಲಾತ್ಕಾರಕ್ಕಾಗಿ ಇಟ್ಟುಕೊಂಡಿದ್ದಳಷ್ಟೆ!

ಹೂವಳ್ಳಿ ಮನೆಯ ಆ ಕೋಣೆಯಲ್ಲಿ ಇನ್ನೂ ಕತ್ತಲೆ ತನ್ನ ಅಧಿಕಾರವನ್ನು ಬಿಟ್ಟುಕೊಟ್ಟಿರಲಿಲ್ಲ. ಆಗ ತಾನೆ ಬೆಳಗಾಗಿದ್ದರೂ, ಮೋಡ ಮುಸುಕಿ, ಮಳೆ ಕುಂಭದ್ರೋಣವಾಗಿ ಸುರಿಯುತ್ತಿದ್ದುದರಿಂದ, ಮಳೆಗಾಲದ ಮಲೆನಾಡಿನಲ್ಲಿ ನಿರಂತರವಾಗಿ ದಟ್ಟಯಿಸಿರುವ ಹಗಲುಮಬ್ಬು ಆ ಒಂದೇ ಒಂದು ಸಣ್ಣ ಬೆಳಕಂಡಿ ಇರುವ ಕೋಣೆಯನ್ನು ಬೆಳಗಲು ಪ್ರಯತ್ನಿಸಿ ಸೋತುಹೋದಂತಿತ್ತು.

ಮಲಗಿದ್ದಂತೆಯೆ ಮದುವಣಗಿತ್ತಿ ಚಿನ್ನಮ್ಮ ತುಸು ತಲೆಯೆತ್ತಿ ನೋಡಿದಳು. ತನಗೆ ತುಸು ಬಳಿಯೆ ಇದ್ದು ಬರಿದಾಗಿದ್ದ ಹಾಸಗೆಯಿಂದ ತನ್ನ ಅಜ್ಜಿ ಆಗಲೆ ಎದ್ದು ಅಡುಗೆ ಮನೆಗೆ ಹೋಗಿದ್ದುದು ಗೊತ್ತಾಯಿತು. ತನ್ನ ಮತ್ತೊಂದು ಪಕ್ಕದಲ್ಲಿ ಚಾಪೆಗಳ ಮೇಲೆ ಹಾಸಿದ್ದ ಒಂದು ದೊಡ್ಡ ಜಮಖಾನೆಯ ಮೇಲೆ ಮೂವರು ಹುಡುಗರು ಅಸ್ತವ್ಯಸ್ತವಾಗಿ ಮಲಗಿದ್ದುದು ಮಬ್ಬುಮಬ್ಬಾಗಿ ಕಾಣಿಸಿತು. ಮದುವೆ ಮನೆಯಲ್ಲಿ ಬಂದ ನೆಂಟರಿಗೆಲ್ಲ ಹಾಸಗೆ ಹಾಸುವುದು ಸಾಧ್ಯವಲ್ಲವಾದ್ದರಿಂದ ಚಾಪೆಗಳ ಮೇಲೆ ಜಮಖಾನೆಯನ್ನೊ ಜಾಡಿಯನ್ನೊ ಹೆಗ್ಗಂಬಳಿಯನ್ನೊ ಬಿಚ್ಚಿಹರಡಿದರೆ ಅದೇ ಹಾಸಗೆಯಾಗಿ, ಅಗಲಕ್ಕೆ ತಕ್ಕಂತೆ, ಎಂಟೊ ಹತ್ತೊ ಇಪ್ಪತ್ತೊ ಜನರು ಒಟ್ಟೊಟ್ಟಿಗೆ ಮಲಗುತ್ತಿದ್ದುದು ರೂಢಿ. ಹಾಗೆಯೆ ಚಿನ್ನಮ್ಮನ ಅಜ್ಜಿಯ ಕೋಣೆಯಲ್ಲಿ ಬಿಡಿ ಹಾಸಗೆಗಳಲ್ಲಿ ಮಲಗಿದ್ದ ಚಿನ್ನಮ್ಮ ಮತ್ತು

ಅವಳ ಅಜ್ಜಿಯ ಜೊತೆ, ಹಾಸಿದ್ದ ಒಂದು ಜಮಖಾನೆಯಲ್ಲಿ, ಧರ್ಮು ಕಾಡು ತಿಮ್ಮು ಮೂವರೂ ಒಬ್ಬರ ಹೊಟ್ಟೆಯ ಮೇಲೆ ಒಬ್ಬರು ಕಾಲು ಹಾಕಿಯೊ, ಒಬ್ಬರ ಕಾಲ ಹತ್ತಿರ ಮತ್ತೊಬ್ಬರು ತಲೆ ಇಟ್ಟುಕೊಂಡೊ, ಹೊದಿಕೆಯನ್ನು ಎತ್ತೆತ್ತಲೊ ತಳ್ಳಿ ಮಲಗಿದ್ದರು!

ನಿರುದ್ವಿಗ್ನರೂ ನಿಶ್ಚಿಂತರೂ ಆಗಿ ಅಸ್ತವ್ಯಸ್ತ ವಿಚಿತ್ರ ವಿನ್ಯಾಸ ಭಂಗಿಗಳಿಂದ ನಿದ್ರಾಮಗ್ನರಾಗಿ ಬಿದ್ದಿದ್ದ ಆ ಬಾಲಕರ ಮುಗ್ಧರೂಪಗಳನ್ನು ಕಂಡು ಚೆನ್ನಮ್ಮಗೆ ತನ್ನ ಆ ವಿಷಮಸಂಕಟಸ್ಥಿತಿಯಲ್ಲಿಯೂ ಮುಗುಳುನಗದಿರಲಾಗಲಿಲ್ಲ. ಏಕೋ ಏನೋ? ಆ ಮಳೆಯ ರೇಜಿಗೆಯ ದುರ್ದಿನದ ನಿರಾಶಾಮಯ ಮ್ಲಾನತೆಯಲ್ಲಿಯೂ ಹಾಗೆ ಪ್ರಶಾಂತವಾಗಿ ನಿದ್ರಿಸುತ್ತಿದ್ದ ಮಕ್ಕಳನ್ನು ಕಂಡ ಅವಳ ಹೃದಯದಲ್ಲಿ ಏನೋ ಆಶಾಭರವಸೆ ಸುಳಿದಂತಾಗಿ, ಮತ್ತೆ ಹಾಗೆಯೆ ಮಲಗಿ ಕಣ್ಣುಮುಚ್ಚಿಕೊಂಡಳು.

ಮನಸ್ಸು ಎಚ್ಚರುವ ಮುನ್ನ ತಾನು ಕಂಡಿದ್ದ ಕನಸನ್ನು ನೆನೆದು ಸೋಜಿಗಪಡಗತೊಡಗಿತ್ತು:

-ಹೌದು; ಮುಕುಂಬಾವ ಕಲ್ಲೂರು ಹೊಳೆದಂಡೆಯಲ್ಲಿ ಕಂಡೆ ಎಂದು ಹೇಳಿದ್ದ ಆ ಗಡ್ಡದಯ್ಯನವರೆ ಇರಬೇಕು, ಕನಸಿನಲ್ಲಿ ನನಗೆ ಕಾಣಿಸಿಕೊಂಡ ಸ್ವಾಮಿಗಳು! ಅವರ ಸಂಗಡ ಮುಕುಂಬಾವನೂ ಅವರ ದೊಡ್ಡಕ್ಕಯ್ಯನ ಕೈಹಿಡಿದು ನಡೆಸಿಕೊಂಡು ಬಂದರಲ್ಲಾ? ಏನಾಶ್ಚರ್ಯ!.... ಪಾಪ!.... ಹಳೆಮನೆ ರಂಗತ್ತಿಗಮ್ಮ ಗಂಡನ ಪಾದ ಹಿಡಿದುಕೊಂಡೇ ಸತ್ತು, ಗಂಡನ ಸಂಗಡಲೇ ಸೂಡಿನಲ್ಲಿ ಮಲಗಿ ಸ್ವರ್ಗಕ್ಕೆ ಹೋದರಲ್ಲಾ! ಹೆಂಡತಿ ಅಂದರೆ ಹಾಂಗಿರಬೇಕು. ಗಂಡನ ಜೊತೇಲೆ ಹೋಗಿಬಿಡಬೇಕು!....ಗಡ್ಡದಯ್ಯನೋರು ಏನೇನೋ ಹೇಳಿದ್ರಲ್ಲಾ ಮುಕುಂದಬಾವಗೆ.... ನಂಗೊಂದೂ ಈಗ ನೆನಪಾಗೋದಿಲ್ಲ.... ರಂಗತ್ತಿಗಮ್ಮ ನನ್ನ ತಲೆ ಸವರುತ್ತಾ 'ಅಳಬೇಡ, ಚಿನ್ನೂ! ನಮ್ಮ ಮುಕುಂದ ಇದಾನೆ, ಯಾಕೆ ನಿಂಗೆ ಹೆದರಿಕೆ!' ಅಂತಾ ಹೇಳಿದ್ಹಾಂಗಯ್ತಲ್ಲೇ?.... ಥೂ ಇನ್ನೂ ಏನೇನೋ! ಸರಿಯಾಗಿ ನೆನಪೇ ಆಗ ಒಲ್ಲದು....

ಪಕ್ಕದಲ್ಲಿ ಮಲಗಿದ್ದ ಧರ್ಮು ನಿದ್ದೆಯಲ್ಲಿಯೆ ಏನನ್ನೊ ತಿನ್ನುವ ನಂತೆ ಬಾಯಿ ಚಪ್ಪರಿಸಿದುದನ್ನು ಗಮನಿಸಿ ಚೆನ್ನಮ್ಮಗೆ ಅವನ ಮೇಲೆ ಮುದ್ದು ಸೂಸಿದಂತಾಗಿ ಮುಗುಳು ನಗುತ್ತಾ 'ಕನಸಿನಾಗೇ ಎಂಥದನ್ನೋ ತಿಂತಿದಾನೆ ಧರ್ಮು....ಪಾಪ ತಬ್ಬಲಿ!....ನನ್ನ ಕನಸಿನಲ್ಲಿ ಅವನಮ್ಮ ಬಂದಿದ್ದನ್ನ ಅವನಿಗೆ ಹೇಳಿದ್ರೆ, ಗೊಳೋ ಅಂತಾ ಅತ್ತೇ ಬಿಡ್ತಾನೆ....ಎದ್ದಮೇಲೆ, ಅವನಿಗೆ, ನಿನ್ನೆ ನಾನು ನಾಗಕ್ಕ ಸೇರಿ ಮಾಡಿಟ್ಟಿರುವ, ಅರಳುಂಡೆ ಕೊಡ್ತೀನಿ....ಅವನು ಆ ಗಡ್ಡದಯ್ಯನೋರ್ನ ನೋಡಿದ್ದನಂತೆ, ಕಾಡು ತಿಮ್ಮು ಜೊತೇಲಿ....ಜೋಳಿಗೆಗೆ ಕೈಹಾಕಿ ಹಾಕಿ, ಏನೇನೊ ಹಣ್ಣು ಕೊಟ್ಟಿದ್ದರಂತೆ, ಆ ಗಡ್ಡದಯ್ಯನೋರು!....ಮುಕುಂದಬಾವ ಹೇಳ್ತಿದ್ರು, ಅವರು ದೊಡ್ಡ ಮಹಾತ್ಮರು ಅಂತಾ....

ಇದ್ದಕ್ಕಿದ್ದಹಾಗೆ ಧರ್ಮು "ಅವ್ವಾ, ಅವ್ವಾ, ಹೋಗ್ಬೇಡ, ಹೋಗ್ಬೇಡ! ನಾನೂ ಬತ್ತೀನಿ! ನಾನೂ ಬತ್ತೀನಿ! ದಮ್ಮಯ್ಯ! ದಮ್ಮಯ್ಯ! ನಿಂತ್ಕೋ ನಿಂತ್ಕೋ" ಎಂದು ಕೂಗಿಕೊಳ್ಳುತ್ತಾ ತಟಕ್ಕನೆ ಎದ್ದು ಕುಳಿತನು, ನಿದ್ದೆಗಣ್ಣಿನಲ್ಲಿಯೆ ಎಲ್ಲಿಗೋ ಓಡುವವನಂತೆ!

ಚೆನ್ನಮ್ಮ ಅವನನ್ನು ತಬ್ಬಿ ಹಿಡಿದು "ತಮ್ಮಯ್ಯಾ, ತಮ್ಮಯ್ಯಾ, ಎಚ್ಚರ ಮಾಡಿಕೊ" ಎಂದು ಕೆನ್ನೆಯ ಮೇಲೆ ಕೈಯಾಡಿಸಿದಳು, ಮದುಮಗಳ ಸಾಲಂಕೃತ ಕರದ ಕಡಗ ಬಳೆಗಳು ಝಣತ್ಕರಿಸುವಂತೆ….

ಧರ್ಮು ಕಣ್ದೆರೆದು ಬೆಬ್ಬಳಿಸಿಸುತ್ತ ನೋಡುತ್ತಾ, ಚೆನ್ನಮ್ಮನನ್ನು ಗುರುತಿಸಿ, ಅವಳ ಕುತ್ತಿಗೆಗೆ ಸೆಟ್ಟುಹಾಕಿಕೊಂಡು ಅಳತೊಡಗಿದನು.

"ಯಾಕೋ ತಮ್ಮಯ್ಯಾ, ಎಚ್ಚರಮಾಡಿಕೊಳ್ಳೋ! ನಾನು ಕಣೋ, ನಿನ್ನ ಚೆನ್ನಕ್ಕಯ್ಯ!"

"ಅವ್ವಾ ಬಂದಿತ್ತು, ಚೆನ್ನಕ್ಕಯ್ಯ. ನಾನು ಕರೆದ್ರೂ ನಿಲ್ಲಲಿಲ್ಲ ಹೋಗೇ ಬಿಡ್ತು."

ಕಣ್ಣೀರೊರಸುತ್ತಾ ಚೆನ್ನಮ್ಮ ಸಂತೈಸಿದಳು: "ಕನಸು ಕಣೋ ಅದಕ್ಕೆ ಯಾಕೆ ಅಳ್ತೀಯಾ?"

"ಅವೊತ್ತು ನಿಂಗೆ ಹೇಳ್ತಿದ್ದೆನಲ್ಲಾ, ಆ ಗಡ್ಡದಯ್ಯ? ಅವನೂ ಬಂದಿದ್ದ. ಅವೊತ್ತನ್ಹಾಂಗೆ ಜೋಳಿಗೆಯಿಂದ ಹಣ್ಣು ತೆಗೆದೂ ತೆಗೆದೂ ಅವ್ವನ ಕೈಗೆ ಕೊಡ್ತಿದ್ದ. ಅವ್ವ ನಂಗೆ ಕೊಡ್ತಿತ್ತು. ನಾನೂ ತಿಂದಿದ್ದೇ ತಿಂದಿದ್ದು!…."

"ಅದಕ್ಕೆ ಏನೋ, ಬಾಯಿ ಚಪ್ಪರಿಸ್ತಿದ್ದೀ, ನಿದ್ದೇಲೀ?….ನಾನು ಎಂಥದನಪ್ಪಾ ಹೀಂಗೆ ತಿನ್ತಾನೆ ಅಂತಿದ್ದೆ?…." ಚೆನ್ನಮ್ಮನ ಧ್ವನಿಯಲ್ಲಿ ಹಾಸ್ಯವಿತ್ತು.

ಇಬ್ಬರೂ ಮೆಲ್ಲಗೆ ನಗಾಡಿದರು.

ಮಳೆ ತುಸು ನಿಂತಿದ್ದರಿಂದ ಮದುವೆಮನೆಯ ಗಜಿಬಿಜಿ ಕೋಣೆಯವರೆಗೂ ಕೇಳಿಸಿತ್ತು. ಬೆಳಕೂ ತುಸುವೆ ಬಲಿತಿತ್ತು.

"ಏ ಎಡದ ಮಗ್ಗುಲಲ್ಲಿ ಏಳಬೇಡೋ?" ಎಚ್ಚರಿಸಿದನು ಧರ್ಮು.

ಹಾಸಗೆಯ ಮೇಲೆ ಎದ್ದು ಕುಳಿತಿದ್ದ ತಿಮ್ಮು ಮತ್ತೆ ಮಲಗಿ, ತನ್ನ ಬಲಗಡೆ ಯಾವುದೆಂದು ಖಾತ್ರಿ ಮಾಡಿಕೊಂಡು, ಬಲದ ಮಗ್ಗುಲಲ್ಲಿ ಎದ್ದುಕುಳಿತನು, ಸಂಭವಿಸಲಿದ್ದ ಯಾವುದೊ ಅಮಂಗಳವನ್ನು ಪರಿಹರಿಸಿಕೊಂಡ ಸಂತೃಪ್ತಿಯಿಂದ.

ಮೂವರು ಹುಡುಗರೂ ಬಡಬಡನೆ ಎದ್ದು ಕೋಣೆಯಿಂದ ಹೊರಗೆ ಓಡುತ್ತಲೆ ಹೋದರು….ಕಾಲಿಗೆ ಮುಳ್ಳು ಚುಚ್ಚಿ ಕೀತಿದ್ದ ಬಲಹಿಮ್ಮಡಿಯನ್ನು ಊರಲಾರದೆ ಕಾಡು ಕುಂಟಿ ಟೊಕ್ಕಹಾಕುತ್ತಲೆ ಹೊಸಲು ದಾಟಿದನು. ಕಳೆದ ರಾತ್ರಿ ಮಲಗುವಾಗಲೆ ಚೆನ್ನಮ್ಮ ಅವನ ಕಾಲಿಗೆ ಎರಡು ದಿನಗಳ ಹಿಂದೆಯೆ ಚುಚ್ಚಿ ಒಳಗೇ ಮುರಿದುಕೊಂಡಿದ್ದ ಮುಳ್ಳನ್ನು ಸೂಜಿಯಿಂದ ಬಿಡಿಸಿ, ತೆಗೆಯುತ್ತೇನೆಂದು ಎಷ್ಟು ಹೇಳಿದರೂ 'ನೋವಾಗುತ್ತದೆ' ಎಂದು ಮುಳ್ಳನ್ನು ತೆಗೆಯಲು ಬಿಟ್ಟಿರಲೆ ಇಲ್ಲ, ಕಾಡು.

ಮೂವರು ಹುಡುಗರೂ ಹೊರಗೆ ಹೋದ ಮೇಲೆ ಕೋಣೆಯ ಜನವಿಹೀನತಾ ನಿಃಶಬ್ದತೆ ತಟಕ್ಕನೆ ಬಾರಚಪ್ಪಡಿಯಾಗಿ ತನ್ನ ಹೃದಯದ ಮೇಲೆ ಅಪ್ಪಳಿಸಿ ಕೂತಂತಾಯ್ತು. ಉಸಿರಾಡುವುದು ಕಷ್ಟವಾದಂತಾಗಿ ಪ್ರಯತ್ನಪೂರ್ವಕ ಉಸಿರೆಳೆದುಕೊಳ್ಳತೊಡಗಿದಳು. ಮಕ್ಕಳ ಸಂಗದಲ್ಲಿ ಅಷ್ಟೇನೂ ಪ್ರಜ್ಞಾಭಾರವಾಗಿರದೆ ಹಗುರವಾದಂತಿದ್ದ ತನ್ನ ಆ ದಿನದ ಘೋರ ಪರಿಸ್ಥಿತಿ, ನೀರಿನೊಳಗಿದ್ದ ಕಲ್ಲುಗುಂಡನ್ನು ನೀರಿನ ಮಟ್ಟದಿಂದ ಮೇಲಕ್ಕೆ ಎತ್ತಿದಾಗ ಆಗುವಂತೆ, ಇಮ್ಮಡಿ ಮುಮ್ಮಡಿ ತೂಕದಿಂದ ಅಸಹನೀಯ ದುರ್ಭರವಾಯಿತು. ಆ ಪರಿಸ್ಥಿತಿಯಿಂದ ತನ್ನನ್ನು ಪಾರುಮಾಡಲು ರಚಿತವಾಗಿರುವ ವ್ಯೂಹೋಪಾಯವೂ ತನ್ನ ಅಪಾಯಕರ ಸಂದಿಗ್ಧತೆಯಿಂದ ಮತ್ತಷ್ಟು ಭೀಕರವಾಗಿ ಕಂಡಿತು. ಮುಕುಂದಬಾವ ನಿಂದ ಕಲಿತಿದ್ದ ಪ್ರಾರ್ಥನೆ ನಿಟ್ಟುಸಿರಾಗಿ ಹೊಮ್ಮಿತು: 'ನಿನ್ನ ಪಾದಕ್ಕೆ ಬಿದ್ದೆ; ಕೈ ಹಿಡಿದೆತ್ತಿ ಕಾಪಾಡು, ಸ್ವಾಮಿ, ಸ್ವಾಮಿ, ಪರಮಾತ್ಮಾ!'

ಭಗವಂತನಿದ್ದಾನೆ ಎಂಬುದರಲ್ಲಾಗಲಿ, ಭಕ್ತಿಯಿಂದ ಪ್ರಾರ್ಥಿಸಿದರೆ ನಮ್ಮ ಕಷ್ಟಗಳನ್ನೆಲ್ಲ ಪರಿಹರಿಸಿ ಕಾಪಾಡುತ್ತಾನೆ ಎಂಬುದರಲ್ಲಾಗಲಿ, ಅವನಿಗೆ ಅಸಾಧ್ಯವಾದುದು ಏನು ಇಲ್ಲ, ಅವನು ಸರ್ವಶಕ್ತ ಎಂಬುದರಲ್ಲಾಗಲಿ, ಅವಳು ಸಂದೇಹವೆಂಬುದನ್ನೆ ಹುಟ್ಟಿನಿಂದಲೆ ಅರಿಯದವಳಾಗಿದ್ದಳು. ಅವಳ ಶ್ರದ್ಧೆ ವಿಚಾರನಿಷ್ಠವಾಗಿರಲಿಲ್ಲ, ನಿಸರ್ಗ ಸಿದ್ಧವಾಗಿತ್ತು. ಭಾಗವತರಾಟಗಳಲ್ಲಿ ತಾಳಮದ್ದಳೆ ಪ್ರಸಂಗಗಳಲ್ಲಿ ಅವಳು ಕೇಳಿ ನೋಡಿದ್ದುದು ಏನಿದ್ದರೂ ಆ ನಿಸರ್ಗದತ್ತವಾದ ಶ್ರದ್ಧೆಯನ್ನು ಸ್ವಲ್ಪ ಬುದ್ಧಿಜಾಗ್ರತವನ್ನಾಗಿ ಮಾಡುವುದೆಷ್ಟೋ ಅಷ್ಟೆ ಆಗಿತ್ತು. ದ್ರೌಪದಿಗೆ ಮಾನಾಪಹರಣಕಾರಿಯಾದ ಮಹತ್ ಸಂಕಟ ಒದಗಿದಾಗ ಅವಳ ಪ್ರಾರ್ಥನೆಗೆ ಓಗೊಟ್ಟು ಕಾಪಾಡಲಿಲ್ಲವೆ ಶ್ರೀಕೃಷ್ಣ ಪರಮಾತ್ಮ? ಮೊಸಳೆಯ ಕೈಗೆ ಸಿಕ್ಕ ಗಜೇಂದ್ರನ ಪ್ರಾರ್ಥನೆ ಕೂಡ ಭಗವಂತನಿಗೆ ಕೇಳಿಸಿರಲಿಲ್ಲವೆ? ಭಕ್ತರ ಆರ್ತಪ್ರಾರ್ಥನೆಗೆ ಭಗವಂತ ಓಗೊಟ್ಟ ಎಷ್ಟೋ ಕಥೆಗಳನ್ನು ಕೇಳಿದ್ದಳು ಚಿನ್ನಮ್ಮ. ಆದರೆ ಅವು ಬರಿಯ ಕಾವ್ಯ ಕಥೆಗಳಾಗಿರಲಿಲ್ಲ ಅವಳಿಗೆ; ಸರಿಯಾಗಿ ಪ್ರಯೋಗವಾದೊಡನೆಯೆ ನಿರ್ದಿಷ್ಟ ಫಲವನ್ನೆ ಅನಿವಾರ್ಯವಾಗಿ ಕೊಡುವ ವೈಜ್ಞಾನಿಕ ಬೀಜಸೂತ್ರಗಳಂತಿದ್ದವು. ಆ ಸೂತ್ರಗಳಲ್ಲಿ ವಿಜ್ಞಾನಿಗಿರುವ ಶ್ರದ್ಧೆಗೇನೂ ಬಿಟ್ಟುಕೊಡುತ್ತಿರಲಿಲ್ಲ ಈ ಕಥಾಪ್ರತಿಮೆಗಳಲ್ಲಿ ಯಾವಾಗ ಬೇಕಾದರಾವಾಗ ಕ್ರಿಯೆಯಾಗಲು ಅಣಿಯಾಗಿರುವ ಕೃಪಾಶಕ್ತಿಯಲ್ಲಿ ಚಿನ್ನಮ್ಮನಿಗೆ ಇದ್ದ ಶ್ರದ್ಧೆ: ಅಂಧಶ್ರದ್ಧೆ, ಅವಿಚಾರದಿಂದ ಅಂಧವಾದಷ್ಟೂ ಶಕ್ತಿಯುಕ್ತವಾಗುವ ಶ್ರದ್ಧೆ, ದಿವ್ಯಶ್ರದ್ಧೆ!

ಇದ್ದಕ್ಕಿದ್ದ ಹಾಗೆ ಗಾಳಿ ಮಳೆಗಳ ಭೋರಾಟದ ವಿರಾಮವನ್ನೆ ಅವಕಾಶ ಮಾಡಿಕೊಂಡಂತೆ, ಮದುವೆಮನೆಯ ವಾಲಗ ಮದ್ದಳೆಗಳ ಪೇಂ ಪೇಂ ಪೇಂ ಡುಬ್ ಡುಬ್ ಡುಬ್ ಡುಬ್ ನಾದ, ಅಲ್ಲ ಸದ್ದು ಕೇಳಿಸ ತೊಡಗಿತ್ತು, ಹಿಂದೆ ಅನೇಕ ಸಾರಿ ಚಿನ್ನಮ್ಮ ನಂಟಳಾಗಿ ಹೋಗಿದ್ದ ಮದುವೆ ಮನೆಗಳಲ್ಲಿ ಕೇಳಿಸಿದ್ದಂತೆ ಕರ್ಣಾನಂದಕರವಾಗಿ ಅಲ್ಲ, ಕರ್ಣಕಠೋರವಾಗಿ! ತೀರ್ಥಹಳ್ಳಿಯಿಂದ ಆ ಜಿರಾಪತಿ ಮಳೆಯಲ್ಲಿ ವಾಲಗದವರು ಬರದಿದ್ದ ಪ್ರಯುಕ್ತ ಹಳೆಮನೆಯ ಕೇರಿಯ ಹೊಲೆಯರನ್ನೆ ಆ ಕೆಲಸಕ್ಕೆ ನೇಮಿಸಿದ್ದರು ಎಂಬ ಕಾರಣದಿಂದಲ್ಲ, ತನಗೊದಗಲಿರುವ ದುರಂತ ಹತ್ತಿರಕ್ಕೆ ಹತ್ತಿರಕ್ಕೆ ಬರುತ್ತಿದೆ ಎಂಬುದನ್ನು ಚಿನ್ನಮ್ಮನ ಪ್ರಜ್ಞೆಗೆ ಚೀರಿಹೇಳುತ್ತಿರುವಂತೆ ತೋರಿದ್ದರಿಂದ. ಯಾರೋ ಆಜ್ಞೆಮಾಡಿರಬೇಕು ಸುಮ್ಮನಿದ್ದ ಆ ವಾಲಗದವರಿಗೆ: 'ಉದ್ರೋ, ಉದ್ರೋ, ಮದೋಳ್ಗೀಗೆ ಸಾಸ್ತ್ರ ಮಾಡಿಸ್ತಾರೆ!'

ಆ ಸದ್ದನ್ನೆ ಹಿಂಬಾಲಿಸಿದಂತೆ ಒಬ್ಬರು ಮುತ್ತೈದೆ ನೆಂಟರಮ್ಮ ಕೋಣೆಯನ್ನು ಪ್ರವೇಶಿಸಿ ರಾಗ ತೆಗೆದರು, ತುಂಬ ವಿಶ್ವಾಸದ ಮತ್ತು ವಿನೋದದ ಧ್ವನಿಯಿಂದ: 'ಏನೇ? ಮದೋಳ್ಗೀಗೆ ಇನ್ನೂ ನಿದ್ದೆ ಹರೀಲೇ ಇಲ್ಲ ಅಂತಾ ಕಾಣ್ತದೆ....? ಹೀಂಗೆ ಮನಗಿದ್ರೆ ಆತು ಬಿಡು ಗಂಡನ ಮನೇಲಿ!...."

ಮುಕುಂದಬಾವ ಹೇಳಿದ್ದರು ಅವಳಿಗೆ, ತನ್ನ ಅಸಮಾಧಾನವನ್ನಾಗಲಿ ದುಃಖವನ್ನಾಗಲಿ ತನಗೆ ಒಪ್ಪಿಗೆಯಿಲ್ಲವೆಂಬ ಭಾವವನ್ನಾಗಲಿ ತೋರಗೊಡಕೂಡದು ಎಂದು ಯಾರ ಸಂಶಯವನ್ನೂ ಕೆರಳಿಸದಂತೆ ಎಚ್ಚರಿಕೆಯಿಂದ ವರ್ತಿಸಬೇಕು ಎಂದು: ನೆಂಟರಮ್ಮನ ಮಾತಿಗೆ ಚೆನ್ನಮ್ಮ ನಾಚಿಗೆಯನ್ನು ಪ್ರದರ್ಶಿಸಿ ನಸುನಗುವಂತೆ ತೋರುತ್ತಾ ಮೇಲೆದ್ದು ನಿಂತು "ಈಗ ಬಂದು ಬಿಡ್ತೀನಮ್ಮಾ, ನಾಗಕ್ಕನ್ನ ಸ್ವಲ್ಪ ಬರಾಕೆ ಹೇಳ್ತೀರಾ?" ಎಂದಳು.

ನೆಂಟರಮ್ಮ ಹೊರಗೆ ಹೋದರು. ಒಂದೆರಡು ನಿಮಿಷಗಳಲ್ಲಿಯೆ ನಾಗಕ್ಕ ಪ್ರವೇಶಿಸಿದಳು. ಚೆನ್ನಮ್ಮನ ಕಣ್ಣುಸನ್ನೆಯರಿತು ಬಾಗಿಲು ಮುಚ್ಚಿ ತಾಳ ಹಾಕಿದಳು. ಸುತ್ತ ನೋಡಿ, ಕೋಣೆಯಲ್ಲಿ ತಾವಿಬ್ಬರೆ ಅಲ್ಲದೆ ಬೇರೆ ಯಾರೂ ಇಲ್ಲವೆಂದು ನಿಶ್ಚಯ ಮಾಡಿಕೊಂಡು, ಚೆನ್ನಮ್ಮನ ಬಳಿಗೆ ಬಿರುಬಿರನೆ ನಡೆದಳು.

ದುಃಖವುಕ್ಕಿ ಬಂದ ಚೆನ್ನಮ್ಮ ನಾಗಕ್ಕನ್ನನ್ನು ತೆಕ್ಕನೆ ತಬ್ಬು ಹಾಕಿ, ತನ್ನ ಮುಖವನ್ನು ಅವಳ ಎದೆಗೆ ಒತ್ತಿ, ಬಿಕ್ಕಿ ಬಿಕ್ಕಿ ಅಳತೊಡಗಿದಳು.

"ನೀ ಹೀಂಗೆ ಎದೆಗೆಟ್ರೆ ಹೆಂಗೇ? ಸೊಲೂಪ ಧೈರ್ಯ ತಂದುಕೊ. ಯಾಕೆ ಹೆದರ್ಕುತೀಯ?" ಸಂತೈಸಿದಳು ನಾಗಕ್ಕ.

ನಾಗಕ್ಕನ ವಕ್ಷಸ್ಥಲದಿಂದ ಮೊಗವೆತ್ತಿ, ಸೆರಗಿನಿಂದ ಕಣ್ಣೀರು ಒರಸಿಕೊಳ್ಳುತ್ತಾ ಚೆನ್ನಮ್ಮ ಕೇಳಿದಳು "ಪೀಂಚಲು ಇದಾಳೇನು?"

"ನಿನ್ನೆಯಿಂದಲೂ ಅಲ್ಲೇ ಇದಾಳೆ. ರಾತ್ರೀನೂ ಅಲ್ಲೆ ಬಾಗಿಲಾಚೇನೆ ಮಲಗಿಕೊಂಡಿದ್ದಳು...."

"ಅವಳನ್ನ ಒಂದು ಚೂರು ಒಳಗೆ ಕರೀತೀಯಾ?"

"ಮುಕುಂದಣ್ಣ ಹೇಳಿದಾರೆ, ಯಾರಿಗೂ ಅನುಮಾನ ಹುಟ್ಟದ ಹಾಂಗೆ ನೋಡಿಕೋ ಅಂತಾ....ಹಸಲೋರವಳನ್ನ ಒಳಗೆ ಕರೆದಿದ್ದು ಯಾರಿಗಾದ್ರೂ ಗೊತ್ತಾದ್ರೆ?....ಪೀಂಚಲು ಹತ್ರ ನೀನು ಹಾಂಗೆ ಪದೇ ಪದೇ ಮಾತಾಡ್ತಾ ಇರೋದನ್ನ ಕಂಡರೆ ಯಾರಿಗಾದ್ರೂ ಅನುಮಾನ ಬರದೇ ಇರ್ತದಯೆ?....

"ಐತ ರಾತ್ರೆ ಬಂದಿದ್ದನೇ? ಏನಾದರೂ ಹೇಳಿದ್ನೇ? ಕೇಳಾನಾ ಅಂತಾ-"

"ಬಂದಿದ್ದನಂತೆ...." ಕಿಸಕ್ಕನೆ ನಕ್ಕಳು ನಾಗಕ್ಕ. "ಗೊಬ್ಬೆ ಸೆರಗುಹಾಕಿ ನಮ್ಮ ಹಾಂಗೆ ಸೀರೆ ಉಟ್ಟಿದ್ದಳಲ್ಲಾ ಪೀಂಚಲು? ಅದಕ್ಕೇ ಅವನಿಗೆ ಅವಳ ಗುರುತೇ ಸಿಕ್ಕದೆ 'ಹೆಗ್ಗಡ್ತಮ್ಮೋರೆ, ಪೀಂಚಲೂನ ಸೊಲ್ಪ ಬರಾಕೆ ಹೇಳ್ತೀರಾ, ನಿನ್ನ ಗಂಡ ಕರೀತಾನೆ ಅಂತಾ'.... ಅಂತಾ ಅವಳಿಗೇ ಹೇಳಿದನಂತೆ! ಅವಳಿಗೆ ನಗೆ ತಡೆಯಾಕೆ ಆಗದೆ ನೆಗಾಡಿದಾಗ ಅವನಿಗೆ ಗೊತ್ತಾಯ್ತಂತೆ, ಅವಳೇ ನನ್ನ ಹೆಂಡತಿ ಅಂತಾ!....

ಚೆನ್ನಮ್ಮನೂ ನಗು ತಡೆಯಲಾಗಲಿಲ್ಲ. ತನ್ನ ಸಂಕಟವೆಲ್ಲ ಪರಿಹಾರವಾಯಿತೊ ಎಂಬಂತೆ ನಕ್ಕುಬಿಟ್ಟಳು.

ನಾಗಕ್ಕ ಮುಂದುವರಿದಳು: "ನಿನ್ನನ್ನ ಅಡಗಿಸಿ ಇಡಾಕೆ ಏನೇನು ಬೇಕೋ ಅದನ್ನೆಲ್ಲ ಮಾಡಿ ಆಗಿದೆಯಂತೆ. ಇವತ್ತು ಕತ್ತಲಾದ ಮ್ಯಾಲೆ ಹಿತ್ತಲು ಕಡೀಲಿರುವ ನೀರಿನ ಹಂಡೆಗೆ ಕೋಲು ಬಡಿದು ಸೂಚನೆ ಕೊಟ್ಟಕೂಡಲೆ, ನಾನು ನಿನಗೆ ಹೇಳ್ತೀನಿ. ನೀನು 'ಹೊರಕಡೆಗೆ' ಹೋಗ್ತೀನಿ ಅಂತಾ ಎದ್ದು ಬಾ. ನಾನು ಪೀಂಚಲು ಕೈಲಿ ಚೊಂಬು ಕೊಟ್ಟು ನಿನ್ನ ಹಿಂದೆ ಕಳಿಸ್ತೀನಿ. ಆ ಹಾಡ್ಯದ ಕಡೆ ನೀವಿಬ್ಬರೂ ಹೋಗಿ. ಐತ ಅಲ್ಲಿ ಕಾಯ್ತಾ ಇರ್ತಾನೆ. ಅವನ ಸಂಗಡ ಕಾಡುಹತ್ತಿ ಬಿಡಿ.... ಮಳೇ ಏನು ನಿಲ್ಲೋ ಹಾಂಗೆ ಕಾಣಾದಿಲ್ಲ. ಅದಕ್ಕೆಲ್ಲ ಏರ್ಪಾಡು ಮಾಡಿದಾರಂತೆ ಮುಕುಂದಣ್ಣ. ನೀನು ಮಾತ್ರ ಅಳಾದು, ಹೆದರಾದು, ಪುಕ್ಕಲ್ತನ ಮಾಡಾದು ಎಲ್ಲಾ ಬಿಟ್ಟುಬಿಡು. ಗೊತ್ತಾತೇನು?...." ಯಾರೊ ಬಾಗಿಲು ತಟ್ಟಿದ ಸದ್ದು ಕೇಳಿಸಿತು. "ಬಾಗಿಲು ತಟ್ತಿದಾರೆ. ನಿನ್ನ ಮೀಯ್ಸಾಕೆ ಕರಕೊಂಡು ಹೋಗ್ತಾರೊ ಏನೊ? ಮೀಯಿಸಲಿ, ಸೀರೆ ಉಡಿಸಲಿ, ಒಡವೆ ಹಾಕಲಿ, ಏನು ಮಾಡಿದರೂ ಮಾಡಲಿ. ನೀನು ಸುಮ್ಮನಿದ್ದುಬಿಡು...." ಬಾಗಿಲ ಕಡೆ ತಿರುಗಿ ಕೂಗಿ ಹೇಳಿದಳು ನಾಗಕ್ಕ "ಬಂದ್ಲೂ! ಬಂದ್ಲೂ! ಸೀರೆ ಉಟ್ಟುಕೊಳ್ತದೆ!...." ತುಸು ತಡೆದು, ಚಿನ್ನಮ್ಮ ಕಣ್ಣೊರೆಸಿ ಸೀರೆ ಸರಿಮಾಡಿಕೊಂಡಮೇಲೆ, ಸರಸರನೆ ಬಾಗಿಲೆಡೆಗೆ ಸರಿದು ತಾಳ ತೆಗೆದಳು. ನಾಲ್ಕಾರು ನೆಂಟರಮ್ಮೋರು ಹೊಸಬಟ್ಟೆಯ ವಾಸನೆಯನ್ನು ಬೀರುತ್ತಿದ್ದ ಸೀರೆಗಳನ್ನುಟ್ಟು ಬರಬರನೆ ಸದ್ದು ಮಾಡುತ್ತಾ ಮದುಮಗಳಿಗೆ ಶಾಸ್ತ್ರ ಮಾಡಿಸಲು ಅವಳನ್ನು ಕರೆದುಕೊಂಡು ಹೋಗಲು ಕೋಣೆಯೊಳಕ್ಕೆ ಬಂದರು.

* * *

ಚಿನ್ನಮ್ಮನ ಕೋಣೆಯಿಂದ ಹೊರಬಿದ್ದ ಮೂವರು ಹುಡುಗರೂ ಬಚ್ಚಲಿಗೆ ಓಡುತ್ತಲೆ ಹೋಗಿ, ಮದುವೆಗೆ ಬಂದಿದ್ದು ಸ್ನಾನ ಮುಖ ಪ್ರಕ್ಷಾಲನಾದಿಗಳಲ್ಲಿದ್ದ ನೆಂಟರ ನಡುವೆ ನುಗ್ಗಿ, ಹಲ್ಲುಜ್ಜಿಕೊಳ್ಳುವ ಮುಖ ತೊಳೆದುಕೊಳ್ಳುವ ಶಾಸ್ತ್ರ ಪೂರೈಸಿ, ಅಲ್ಲಿಂದ ಅಡುಗೆ ಮನೆಗೆ ಓಡಿದರು. ನೆಂಟರು ಗಿಂಟರು ಯಾವ ದಾಕ್ಷಿಣ್ಯಕ್ಕೂ ಕಟ್ಟುಬೀಳದೆ ಉಪಹಾರವನ್ನು ಗಿಟ್ಟಿಸಿಕೊಂಡು ಜಗಲಿಗೆ ಹೊರಟರು.

ಮಳೆಗಾಲವಾದ್ದರಿಂದಲೂ ಮಳೆ ಸುರಿಯುತ್ತಲೆ ಇದ್ದುದ್ದರಿಂದಲೂ ಬೇಸಾಯದ ಕಾಲವಾಗಿ ಜನರಿಗೆ ಪುರಸೊತ್ತು ಇಲ್ಲದಿದ್ದುದರಿಂದಲೂ ಮದುವೆಗೆ ಹೆಚ್ಚಾಗಿ ನೆಂಟರು ಸೇರಿರಲಿಲ್ಲ. ಕಡೆಗೆ, ಒಂದು ದೆಯ್ಯದ ಹರಕೆಗೆ ಸೇರುವಷ್ಟೂ ಜನ ಸೇರಿರಲಿಲ್ಲ. ನೆರೆದ ನೆಂಟರಿಗಿಂತಲೂ ಆಳುಕಾಳುಗಳ ಸಂಖ್ಯೆಯೆ ಜಾಸ್ತಿ ಎಂಬಂತಿತ್ತು.

ಮೂವರೂ ಹಸೆಗೋಡೆ ಬರೆದಿದ್ದ ಎಡೆಗೆ ಹೋಗಿ, ಅದನ್ನು ಮೆಚ್ಚಿ ನೋಡಿದರು. ಅಲ್ಲಿ ಬರೆದಿದ್ದ ಎಲೆ ಹಲಸಿನದೋ ಮಾವಿನದೋ ಎಂದು ಚರ್ಚೆಯನ್ನು ಕೂಡ ನಡೆಸಿದರು. ತಿಮ್ಮು ಕೈಬೆರಳಿನಿಂದ ಉಜ್ಜಿ ನೋಡಿ "ಅಯ್ಯೋ, ಗಟ್ಟಿ ಬಣ್ಣ ಅಲ್ಲ ಕಣೋ, ನೋಡಿಲ್ಲಿ, ಕೈಗೆ ಹ್ಯಾಂಗೆ ಹಿಡಿದಿದೆ ಈ ಹಸುರು?" ಎಂದು ಟೀಕಿಸಿ ಧರ್ಮು ಕಾಡುವರಿಗೆ ತೋರಿಸಿದನು. ಅಲ್ಲಿದ್ದ ಯಾರೋ ದೊಡ್ಡವರು 'ಏ ಹುಡುಗರ್ರಾ, ಹಸೆಗ್ವಾಡೆ ಹಾಳು ಮಾಡಬ್ಯಾಡ್ರೋ ಕೈ ತಿಕ್ಕಿ?" ಎಂದು ಕೂಗದಿದ್ದರೆ, ಪರೀಕ್ಷೆ ಇನ್ನೂ ಬಹಳ ಮುಂದುವರಿಯುತ್ತಿತ್ತೆಂದು ತೋರುತ್ತದೆ. ಆದರೆ ಅಲ್ಲಿಂದ ಧಾರೆಮಂಟಪದ ಸೌಂದರ್ಯ ಸಂವೀಕ್ಷಣೆಗಾಗಿ ಮೂವರೂ ಓಡಿಬಿಟ್ಟರು.

ಆ ಗ್ರಾಮೀಣ ರೂಕ್ಷಾಭಿರುಚಿಯ ಬಣ್ಣಬಣ್ಣದ ಕಲೆಯ ಮಂಟಪವನ್ನಂತೂ ಬಿಟ್ಟಕಣ್ಣಾಗಿ, ತಮ್ಮ ಆಸ್ವಾದನೆಯನ್ನು ಲೊಚಗುಟ್ಟಿ ಪ್ರದರ್ಶಿಸುತ್ತಾ, ನೋಡಿದರು ಮೂವರೂ. ಆ ಕಂಭಗಳಿಗೆ ಸುತ್ತಿದ್ದ ಕೆಂಪು ಬಿಳಿಯ ಬಟ್ಟೆಯ

ಪಟ್ಟಿಗಳನ್ನೂ ಹೊಳೆಯುತ್ತಿದ್ದ ಬೇಗಡೆಯ ಕಾಗದದ ಹೂವು ಮೊದಲಾದ ಅಲಂಕಾರಗಳನ್ನು 'ಅಃ ಎಷ್ಟು ಚಂದಾಗದೆ!' ಎಂದೆಂದು ಕುಣಿಕುಣಿದು ನೋಡಿದರು. ಅವಕಾಶ ಒದಗಿದ್ದರೆ ತಿಮ್ಮ ಅದರಲ್ಲಿದ್ದ ಒಂದೆರಡು ಬೇಗಡೆಯ ಹೂವುಗಳನ್ನಾದರೂ ಕಿತ್ತು ಜೇಬಿಗೆ ಇಳಿಬಿಡುತ್ತಿದ್ದನೋ ಏನೋ?!

ಆದರೆ ಕುಂಟುತ್ತಿದ್ದ  ಕಾಡು ಮತ್ತೆ ಮತ್ತೆ ಅಭೀಪ್ಸನೇತ್ರ ಗಳಿಂದ ನೋಡುತ್ತಿದ್ದ ವಸ್ತು ಬೇರೆಯ ತರಹದ್ದಾಗಿತ್ತು: ಚಪ್ಪರಕ್ಕೆ ನೇತುಕಟ್ಟಿದ್ದ ಬಾಳೆಯ ಗೊನೆಗಳಲ್ಲಿ ಒಂದು ವಾಟೆಬಾಳೆಯ ಗೊನೆಯ ಎರಡು ಹೆಣಿಗೆ ಚೆನ್ನಾಗಿ ಕಳಿತು ಹಣ್ಣಾಗಿ ಕಡು ಹಳದಿ ಬಣ್ಣದಿಂದ ಮೋಹಿಸಿ ಕಂಗೊಳಿಸುತ್ತಿದ್ದವು. ಆದರೆ ಆ ಹಾಳು ಚಪ್ಪರ ಎತ್ತರವಾಗಿದ್ದರಿಂದ ಹುಡುಗರಿಗೆ, ಯಾರಿಗೂ ಗೊತ್ತಾಗದಂತೆ ಗುಟ್ಟಾಗಿ ಕೆಲಸ ಮಾಡುವಷ್ಟು, ಸುಲಭ ಸಾಧ್ಯವಾಗಿರಲಿಲ್ಲ.

ಅಲ್ಲಿಂದ ಮೂವರೂ, ಇದ್ದಕ್ಕಿದ್ದ ಹಾಗೆ ವಾಲಗ ಉಕ್ಕಿ ಕೇಳಿ ಬರುತ್ತಿದ್ದ, ಕೆಳಗರಡಿಯ ಮೂಲೆಗೆ ಧಾವಿಸಿದರು. ವಾಲಗ ಉದುತ್ತಿದ್ದವರು ಹೊಲೆಯರಾಗಿದ್ದರೂ ಮಳೆಯ ದೆಸೆಯಿಂದಾಗಿ ಅವರಿಗೆ ಮನೆಯೊಳಗೇ ಕೆಳಗರಡಿಯ ಒಂದು ಮೂಲೆಯನ್ನೆ ಬಿಟ್ಟುಕೊಟ್ಟಿದ್ದರು.

ವಾಲಗ ಉದುತ್ತಿದ್ದವರು ತಲೆಗೆ ಕೆಂಪು ಪಟ್ಟೆಯ ಎಲೆವಸ್ತ್ರ ಸುತ್ತಿದ್ದರು; ಹೊಸದಾಗಿ ತೋರುತ್ತಿದ್ದ ಕರಿಗೀರಿನ ಕಬಚ ಹಾಕಿದ್ದರು; ತಕ್ಕಮಟ್ಟಿಗೆ ಮಡಿಯಾಗಿ ಕಾಣುತ್ತಿದ್ದ ಅಡ್ಡಪಂಚೆ ಅವರ ಮೊಣಕಾಲಿನವರೆಗೂ ಸುತ್ತಿದ್ದುವು. ಅಪರಿಚಿತರಾಗಿದ್ದ ಆ ಪರಕೀಯರನ್ನು ಅತಿಯಾಗಿ ಅಮೀಪಿಸದ ಸಂಕೋಚದಿಂದ ಮೂವರೂ ಹುಡುಗರೂ ತುಸುದೂರದಲ್ಲಿಯೆ ನಿಂತರು ಗಾಳಿತುಂಬಿದ ಕೆನ್ನೆಗಳನ್ನು ಹಿಗ್ಗಿಸಿ, ವಾಲಗದ ಸಪುರ ತುದಿಯನ್ನು ತುಟಿ ಬಿಗಿದ ಬಾಯಿಗಿಟ್ಟು ಊದುತ್ತಾ, ವಾಲಗದ ಕಣ್ಣುಗಳಮೇಲೆ ಕೈಯಾಡಿಸಿ ವಿವಿಧ ಸ್ವರಮಾಲೆಗಳನ್ನು ಹೊಮ್ಮಿಸುತ್ತಿದ್ದ ಅವರನ್ನು ತುಸು ಬೆರಗು ಬೆರೆತ ಹಿಗ್ಗಿನಿಂದಲೆ ನೋಡುತ್ತಿದ್ದರು.

ಇದ್ದಕ್ಕಿದ್ದ ಹಾಗೆ ತಿಮ್ಮ ಕಣ್ಣುಕೀಲಿಸಿ ವಾಲಗ ಊದುತ್ತಿದ್ದವನೊಬ್ಬನ ಮುಖವನ್ನೇ ದಿಟ್ಟಿಸತೊಡಗಿದನು. ಅವನಿಗೆ ಆ ಮುಖ ತನಗೆ ಪರಿಚಿತವಾಗಿದ್ದ ಯಾರದ್ದೊ ಒಂದು ಮುಖವನ್ನು ನೆನೆಪಿಗೆ ತರುತ್ತಿತ್ತು!

"ಕಾಡಣ್ಣಯ್ಯ, ಅವನ್ನ ನೋಡಿದ್ರೆ ಹಳೆಮನೆ ಬೈರನ್ನ ಕಂಡ್ಹಾಂಗೆ ಕಾಣ್ತದಲ್ಲೇನೋ?" ಕಾಡುನ ಕಿವಿಯಲ್ಲಿ ಪಿಸಿಪಿಸಿ ನುಡಿದನು ತಿಮ್ಮು.

"ವಾಲಗದವನೋ ಅವನು! ಹಳೆಮನೆ ಬೈರನ್ನ ಕೈಲಿ ಮದುವೆ ವಾಲಗ  ಊದಿಸ್ತಾರೇನೋ ಯಾರಾರೂ?" ಎಂದನು ಕಾಡು.

ತಿಮ್ಮ ಆಗಲೆ ನಗುತ್ತಿದ್ದ ಧರ್ಮುವ ಕಡೆಗೆ ತಿರುಗಿ ಪಿಸುಗುಟ್ಟಿದನು "ಅಂವ ನಿಮ್ಮ ಹೊಲೇರ ಬೈರನ್ಹಾಂಗೇ ಇಲ್ಏನೊ, ಧರಂಬಾವ?"

ಧರ್ಮುಗೆ ಆಗಲೆ ಗೊತ್ತಾಗಿತ್ತು, ಅಷ್ಟು ಷೋಕಿಯಾಗಿ ಕುಳಿತು ಅತ್ತಿತ್ತ ತಲೆಯಾಡಿಸಿ ವಾಲಗ ಊದುತ್ತಿದ್ದವರು ತಮ್ಮ ಮನೆಯ ಹೊಲಗೇರಿಯ ಮಂಜ,

ತಿಮ್ಮ, ಸಿದ್ಧ, ಬೈರ ಎಂದು.

"ಥೂ! ಹೊಲೇರ ಕೈಲಿ ಯಾರಾರೂ ಮದುವೆಮನೆ ವಾಲಗ ಊದಿಸ್ತಾರೇನೊ? ಅಲ್ಲೇನೋ, ಧರ್ಮು?" ಕಾಡು ಕೇಳಿದನು ಮತ್ತೆ.

ಅಷ್ಟರಲ್ಲಿ ವಾಲಗ ಊದುತ್ತಿದ್ದವನೆ ಇವರತ್ತ ತಿರುಗಿ, ವಾಲಗ ನಿಲ್ಲಿಸಿ, ನಸುನಗುತ್ತಾ ಕೇಳಿದನು " ನನ್ನ ಗುರುತು ಸಿಕ್ಕಲೇ ಇಲ್ಲಾ ಅಂತಾ ಕಾಣ್ತದೆ ನಮ್ಮ ಕೋಣೂರು ಸಣ್ಣಯ್ಯೋರಿಗೆ?.... ನಾನು ಕಣ್ರೋ, ಹಳೆಮನೆ ಬೈರ!"

ತಿಮ್ಮುಗೆ ತುಂಬ ಅವಮಾನವಾದಂತಾಯ್ತು. ಕೀಳು ಜಾತಿಯ ಹೊಲೆಯನಾಗಿ, ದನಕಾಯುವವನಾಗಿ, ಗೊಬ್ಬರ ಗಿಬ್ಬರ ಹೊತ್ತು ಗದ್ದೆ ತೋಟಗಳಲ್ಲಿ ತಾವು ಹೇಳಿದಂತೆ

ಕೆಲಸ ಮಾಡಿಕೊಂಡಿರುವ 'ಬಡುತಿನ್ನುವ' ಜೀತದಾಳೊಬ್ಬನ ಮುಂದೆ, ಅವನು ಊದುತ್ತಿದ್ದ ವಾಲಗವನ್ನು ಬೆರಗಾಗಿ ಮೆಚ್ಚಿ ಆಲಿಸುತ್ತಿದ್ದುದು ತನ್ನ ಗೌಡಿಕೆಯ ಗೌರವಕ್ಕೇ ಮಸಿ ಬಳಿದುಕೊಂಡಂತಾಯ್ತಲ್ಲಾ ಎಂದು ಮುಖ ಸಣ್ಣಗೆ ಮಾಡಿಕೊಂಡನು: "ಥೂ, ಬನ್ರೋ! ಈ ಬಡು ತಿನ್ನೋರ ವಾಲಗ ಏನು ಕೇಳಾದು!" ಅಂದವನೆ ಕಾಡು ಧರ್ಮು ಇಬ್ಬರನ್ನೂ ರಟ್ಟೆ ಹಿಡಿದೆಳೆದು ಅಲ್ಲಿಂದ ಹೊರಟನು, ತನಗಾದ ಅವಮಾನಕ್ಕೆ ತಕ್ಕ ಪ್ರತೀಕಾರ ಮಾಡುವವನಂತೆ, ಅಥವಾ ಅಜ್ಞಾನದಿಂದ ತನಗೆ ಸಂಭವಿಸಿದ್ದ ಅವಮರ್ಯಾದೆಗೆ ತಕ್ಕ ಪ್ರಾಯಶ್ಚಿತ್ತ ಮಾಡಿಕೊಳ್ಳುವವನಂತೆ!

ಬಡು ತಿನ್ನುವವರ ವಾಲಗವನ್ನು ಆಲಿಸಲೊಲ್ಲದೆ ತಿರಸ್ಕರಿಸಿ, ತನ್ನಿಬ್ಬರು ತನಗಿಂತಲೂ ವಯಸ್ಸಾದ ಮಿತ್ರರನ್ನು ಎಳೆದುಕೊಂಡು ಹೊರಟ ತಿಮ್ಮ ಬಾವಿಕಟ್ಟೆಯ ಬಳಿ ಪಣತದ ಕಡಿಮಾಡಿನಲ್ಲಿ ರಾಶಿ ರಾಶಿ ಮಿನು ಸೋಸುತ್ತಿದ್ದ ಹೆಂಗಸರಿದ್ದಲ್ಲಿಗೆ ನಡೆದನು. ಮಳೆಯ ಜೋರಿಗೆ ಕೂಣೆಗೆ ಮಸ್ತಾಗಿ ಬಿದ್ದಿದ್ದುವು ಹತ್ತುಮಿನು! ನಗೆಯುತ್ತಿದ್ದ, ಉಸಿರೆಳೆಯುತ್ತಿದ್ದ, ವಿವಿಧಾಕಾರದ, ಬಣ್ಣ ಬಣ್ಣದ ಜಲಪ್ರಣಿಗಳನ್ನು ಸ್ವಲ್ಪ ಹೊತ್ತು ಹರ್ಷಿತರಾಗಿ ನೋಡುತ್ತಾ, ಬಾಯಿಗೆ ಬಂದಂತೆ ಏನೇನೋ ಟೀಕೆ ಮಾಡುತ್ತಾ ನಿಂತಿದ್ದರು. ಮಿನುಗಳನ್ನು ಸೋಸುತ್ತಿದ್ದ ಹೆಂಗಸರು ತಮ್ಮತಮ್ಮೊಳಗೆ ಜರುಗುತ್ತಿದ್ದ ಸಂಭಾಷಣೆಯನ್ನು ತುಂಡುಗಡಿಸದೆ ಮುಂದುವರಿಸಿಯೆ ಇದ್ದರು. ಹಾಗೆ ಮಾತನಾಡಿಕೊಳ್ಳುತಿದ್ದ ನಾಲ್ಕಾರು ಜೋಡಿ ಸ್ತ್ರೀಯರ ಒಂದಕ್ಕೊಂದು ಸಂಬಂಧವಿಲ್ಲವೆಂಬಂತೆ ಕೇಳಿ ಬರುತ್ತಿದ್ದ ಸಂವಾದದ ತುಂಡುಗಳನ್ನು ಕೇಳಿಯೂ ಆಲಿಸುತ್ತಿರಲಿಲ್ಲ ಆ ಮೂವರು ಹುಡುಗರು: ಅವರಿಗೆ ಆ ಮಾತುಗಳಲ್ಲಿ ಅರ್ಥದ ಅನ್ವಯವಿರಲಿಲ್ಲವಾದ್ದರಿಂದ ಅರ್ಥವಾಗುತ್ತಿರಲೂ ಇಲ್ಲ. ಅಷ್ಟೆ. ಆದರೆ, ಆ ಮಾತುಗಳಿಗೆ ಅರ್ಥವಿರಲಿಲ್ಲ ಎಂದರ್ಥವಲ್ಲ. ಸಂಬಂಧಪಟ್ಟವರು ಆಲಿಸಿದ್ದರೆ ಅರ್ಥಮಾತ್ರವಲ್ಲ, ಧ್ವನಿಯೂ ಬೇಕಾದಷ್ಟು ಇರುತ್ತಿತ್ತು:

"ಅಯ್ಯೋ ಅವಳದ್ದು ಏನಂತೀಯಾ? ಸೊಸೇನ ಕೂಡಿಕೆ ಮಾಡಿಸಿ, ಮನೆ ಯಜಮಾನಿ ಆಗಿ ಬಿಡ್ತೀನಿ ಅಂತಾ ಮಾಡಿದ್ಲು.... ಆದರೆ ಹೀಂಗಾಯ್ತು!"

"ಅವಳಿಗೆ ಮೊದಲಿಂದ಼್ೂ ಆ ಕೆಟ್ಟ ಚಾಳಿ ಇದ್ದೇ ಇತ್ತು... ಆಗದಿದ್ದೋರಿಗೆ ಮದ್ದು ಬ್ಯಾರೆ ಹಾಕ್ತಾಳಂತೆ!...."

“ಅದರಾಗೆ ತತ್ತಿ ಇದೆಯೇನು ನೋಡು, ಪುಟ್ಟಕ್ಕ... ಅವನು ಪೋಲೀಸರಿಗೆ ಗಸಿ ಕೊಟ್ಟಂವ, ಆ ಹುಡುಗೀನೂ ಹಾರಿಸಿಕೊಂಡು ಕೊಪ್ಪದ ಸೀಮೆ ಕಡೆಗೋ ಸಿಂಗೇರಿ ಸೀಮೆ ಕಡೆಗೋ ಪರಾರಿಯಾದನಂತೆ...”

“...ಅಯ್ಯೋ ನಮಗ್ಯಾಕೆ ಬಿಡೇ ದೊಡ್ಡೋರ ಮಾತು! ಸಾಲ ತೀರ್ಸಾಕೆ ತೆರ ತಗೊಂಡು ಹೆತ್ತ ಮಗಳ್ನೇ ಬಾಂವಿಗೆ ಹಾಕ್ತಿದಾರೆ?... ಇಸ್ಸಿ! ಎಂಥದ್ನ ತಿಂದಿತ್ತೊ ಏನೋ ಈ ಹಾಳು ಸೋಸಲು? ಕೆಟ್ಟ ವಾಸ್ನೆ ಪಚ್ಚೀ ತುಂಬಾ.”

“.... ಅಂವೆಲ್ಲಿ ಕಳಿತಾನೇ ಈ ಮಳೆಗಾಲಾನ? ಇಲುಗು ತೊಗಲು ಆಗಿ ಬಿದ್ದು ಕುಂಡಾನಂತೇ, ಹಾಸಿಗೇಲಿ ಹೇಲು ಉಚ್ಚೆ ಎಲ್ಲ ಮಾಡಿಕೊಳ್ತಾ?...”

“ಪಸಂದ್‌ದಾಯ್ತು ಬಿಡು, ಹಾಂಗ್ಯಾರೆ, ಅವನ ಹೆಂಡ್ತೀಗೆ...!”

“....ನಮ್ಮ ಸುದ್ದಿ ಮಾತ್ರ ಬರ್ಲಿ, ತೋರಿಸ್ತೀನಿ ಅವರಿಗೆ... ಒಡ್ಡು ಮುರ್ದು ದನಾ ಬಿಟ್ಟರಲ್ಲಾ ಅವರ ತ್ವಾಟಕ್ಕೆ?... ನನ್ನ ಗಂಡನೇ ಆಗಿದ್ರೆ, ಕತ್ತೀಲಿ ಕಡಿದು ಹಾಕ್ದೆ ಬಿಡ್ತಿರಲಿಲ್ಲ....!”

ಹೆಂಗಸರು ಮೀನು ಸೋಸುತ್ತಿದ್ದಲ್ಲಿಂದ ಹಳೆಪೈಕದವರು ಕುರಿ ಸುಲಿಯುತ್ತಿದ್ದ ಸೌದೆಕೊಟ್ಟಿಗೆಯ ಒಂದು ಭಾಗಕ್ಕೆ, ಸುರಿಯುತ್ತಿದ್ದ ಮಳೆಯಲ್ಲಿ ಕೆಸರುಕೊಚ್ಚೆ ಮೆಟ್ಟಿಕೊಂಡೆ, ಧಾವಿಸಿದ್ದರು ಆ ಮೂವರೂ. ಅಲ್ಲಿ ಹೆಚ್ಚು ಹೊತ್ತು ನಿಲ್ಲದೆ ಅದಕ್ಕಿಂತಲೂ ಸ್ವಾರಸ್ಯವೆಂದು ತೋರಿದ ಸೌದೆಕೊಟ್ಟಿಗೆಯ ಮತ್ತೊಂದು ಭಾಗಕ್ಕೆ ಓಡಿದರು. ಅಲ್ಲಿ ಸಾಬರ ಕಡೆಯವರು ದಿಬ್ಬಣ ಬಂದಕೂಡಲೆ ಹಾರಿಸುವುದಕ್ಕಾಗಿ ಗರ್ನಾಲು, ಬಿರುಸು, ಸುರ್ ಸುರ್ ಬಾಣ, ಅಕಾಶಬಾಣ ಮುಂತಾದವುಗಳನ್ನು ಸಿದ್ಧಮಾಡಿಕೊಳ್ಳುತ್ತಿದ್ದರು. ಪಕ್ಕದಲ್ಲಿಯೆ ಹೊಲೆಯರೂ ದೀವರೂ ಕದಿನಿಗಳಿಗೆ ಮಸಿಹಾಕಿ ಕುಟ್ಟುವ ಕೆಲಸದಲ್ಲಿ ತೊಡಗಿದ್ದರು. ತಿಮ್ಮುಗೆ ಹೇಗಾದರೂ ಮಾಡಿ ಒಂದು ಗರ್ನಾಲು ಹಾರಿಸಿಯೋ ಒಂದು ಕದಿನಿ ಹೊಡೆಸಿಯೋ ಅದರ ಭಯಂಕರ ಸದ್ದನ್ನು ಆಲಿಸಬೇಕೆಂಬ ಆಸೆ. ಆದರೆ ಕಾಡುಗೆ ಹೆದರಿಕೆಯೋ ಹೆದರಿಕೆ! ಹುಟ್ಟಿದಂದಿನಿಂದಲೂ ಅವನಿಗೆ ಸಿದ್ದಿಮದ್ದಿನ ಸದ್ದು, ಅದು ಕೋವಿಯದ್ದಾಗಲಿ ಕದಿನಿಯದ್ದಾಗಲಿ ಗರ್ನಾಲೆ ಆಗಲಿ, ತುಂಬಾ ಭೀತಿ. ಅನಿವಾರ್ಯವಾಗಿ ಅದನ್ನು ಕೇಳಬೇಕಾಗಿ ಬಂದಾಗ, ಯಾರಾದರೂ ಕಂಡರೆ ತನ್ನನ್ನು ಪುಕ್ಕಲ ಎಂದು ಹಾಸ್ಯ ಮಾಡುವರೆಂದು ಅಂಜಿ, ಯಾರಿಗೂ ಕಾಣದ ರೀತಿಯಲ್ಲಿ ಏನಾದರೂ ನೆವ ತೆಗೆದು ಕಿವಿಗಳಿಗೆ ಕೈಬೆರಳು ಹಾಕಿ ತೂತುಗಳನ್ನು ಮುಚ್ಚಿಕೊಳ್ಳುತ್ತಿದ್ದನು. ಮುಂಗಾರ ಮೊದಲಲ್ಲಿ ಮಳೆಯ ಮೋಡಗಳು ಕಿವಿದು ಗುಡುಗು ಮಿಂಚತೊಡಗಿದಾಗಲಂತೂ ಅವನ ಜೀವ ಗತಗತ ನಡುಗುತಿತ್ತು. ಸಿಡಿಲಿನ ಸದ್ದು ಕೇಳಿದರೆ ಅವನ ಜೀವ ಸತ್ತು ಹುಟ್ಟುತಿತ್ತು! ಅವನಿಗೊಮ್ಮೆ ಓಂದು ಕನಸು ಬಿದ್ದಿತಂತೆ. ಅದರಲ್ಲಿ ಅವನು ಯಾವುದೋ ಒಂದು ಭಯಂಕರ ಯುದ್ಧದಲ್ಲಿ ಭಾಗವಹಿಸು ತ್ತಿದ್ದಂತೆಯೂ ಒಂದು ಭಾರಿ ಪಿರಂಗಿ ಸಿಡಿದು ಅದರ ಗುಂಡು ತನಗೆ ಬಡಿದಂತೆಯೂ ತಾನು ರಕ್ತದ ಮಡುವಿನಲ್ಲಿ ಮುಳುಗಿ ಸಾಯುತ್ತಿದ್ದಂತೆಯೂ ಕಂಡು ಹೆದರಿ ಎಚ್ಚತ್ತನಂತೆ. ಅದನ್ನು ಕೇಳಿ ಧರ್ಮು ‘ಅವನು ಹಿಂದಿನ ಜನ್ಮದಲ್ಲಿ ಸಿಪಾಯಿಯಾಗಿದ್ದು, ಗುಂಡುಬಿದ್ದು ಸತ್ತಿದ್ದರಿಂದಲೆ, ಈ ಜನ್ಮದಲ್ಲಿಯೂ ಈಗ ಸಿಡಿಮದ್ದಿನ ಸದ್ದು ಕೇಳಿದರೆ ಹೆದರಿ ಸಾಯುತ್ತಾನೆ!’ ಎಂದಿದ್ದನಂತೆ.

ಅಂತೂ ತಿಮ್ಮ ಏನೇನೊ ಅಪಾಯ ಮಾಡಿ, ಗೋಗರೆದು, ಲುಂಗಿ ಸಾಬುವನ್ನೊಪ್ಪಸಿದನು…. ಕಾಡು 'ತಡಿಯೋ! ತಡಿಯೋ! ನಾನು ಹೋದಮ್ಯಾಲೆ ಹೊಡಿಯೊ' ಎನ್ನುತಾ ಕಿವಿಮುಚ್ಚಿಕೊಂಡೆ ಅಲ್ಲಿಂದ ಪರಾರಿಯಾಗಿಯೆ ಬಿಟ್ಟನು.

ಗರ್ನಾಲೀನೊ ಹಾರಿತು. ಆದರೆ ಆ ಮಳೆಯ ದೆಸೆಯಿಂದ ಕೊಟ್ಟಿಗೆಯ ಮಾಡಿನ ಒಳಗಿನಿಂದಲೆ ಲುಂಗಿಸಾಬಿ ಅದನ್ನು ಎಸೆದಿದ್ದರಿಂದ ಅದು ದಿಕ್ಕು ತಪ್ಪಿ ಮನೆಯ ಹತ್ತಿರ ವೆಂಕಪ್ಪನಾಯಕರು ಮಲಗಿದ್ದ ಕೋಣೆಗೆ ಅತಿ ಸಮಿಪವಾಗಿ ಸಿಡಿದು ಸದ್ದು ಮಾಡಿತ್ತು! ಯಾರೊ ಅಲ್ಲಿಂದಲೆ ಕೂಗಿ ಬಯ್ದರು: "ಯಾವನೊ ಅವನು, ಹುಚ್ಚುಮುಂಡೇಗಂಡ! ಗರ್ನಾಲು ಹೊಡೆದವನು? ಅವನಿಗೇನು ಮುಖದ ಮೇಲೆ ಕಣ್ಣದೆಯೇನೊ? ನಾಯಕರಿಗೆ ಜರ ಜಾಸ್ತಿ ಆಗಿ ನರಳ್ತಾ ಮಲಗಿದಾರೆ, ಅವರ ಕ್ವಾಣೆ ಬೆಳಕಂಡೀಗೆ ಹೊಡೀತಾನೆ ಇಂವ ಗರ್ನಾಲ? ಪಟಿಂಗ!"

ಲುಂಗೀಸಾಬು ನಾಲಗೆ ಕಚ್ಚಿಕೊಂಡು ಕೆಳದನಿಯಲ್ಲಿ ದೊರಿದನು ತಿಮ್ಮುಗೆ: "ಹೋಯ್! ನಮ್ಮ ಸಣ್ಣ ಒಡೆಯರ ಮಾತು ಕೇಳಿ ಸಮಾ ಅಯ್ತಲ್ಲಾ ನನಗೆ? ಸಾಕು, ಮಾರಾಯ್ರಾ, ನಿಮ್ಮ ಸಾವಾಸ!…"

ಅಲ್ಲಿದ್ದವರೆಲ್ಲ ಬಿದ್ದು ಬಿದ್ದು ನಕ್ಕರು….

"ಅಲ್ಲೋ ನಾಯಕರಿಗೆ ಕುಂಟನ ಹುಣ್ಣು ಜಾಸ್ತಿಯಾಗಿ, ಜರದಾಗೆ ನೆರಳ್ತಾ ಸುಮಾರು ದಿವಸ ಆಯ್ತಂತೋ. ಬಾಯಿಗೆ ಬಧಾಂಗೆ ಹಲವರೀತಾರಂತೆ. ಹಾಂಗಾದ್ರೆ ಇವತ್ತು ಧಾರೆ ಎರಕೊಡೋರು ಯಾರೋ?"ಒಬ್ಬ ಕೇಳಿದನು.

"ಅವರು ಗೆಲುವಾಗೆ ಇದ್ದಿದ್ರೂ ಧಾರೆ ಎರಕೊಡಾಕೆ ಆಗ್ತಿರಲಿಲ್ಲಾ…." ಮತ್ತೊಬ್ಬನ ಅನಿಸಿಕೆ.

"ಯಾಕೆ?"

"ಯಾಕೆ ಅಂದ್ರೆ? ಕೂಡಿಕೆ ಮಾಡಿಕೊಂಡ ಕೊಡ್ಲೆ ಕೈ ಹಿಡಿದ ಹೆಂಡ್ತಿ ಆಗಿ ಬಿಡ್ತಾಳೇನು? ಧಾರೆ ಎರೆದುಕೊಡಬೇಕಾದರೆ ಧರ್ಮಪತ್ನೀನೆ ಆಗಬೇಕು…."ತಾನು 'ಧರ್ಮಪತ್ನಿ' ಎಂಬ ದೊಡ್ಡ ಮಾತನ್ನು ಸರಿಯಾಗಿ ಉಚ್ಚರಿಸಿ ಆಲಿಸುತ್ತಿದ್ದವರನ್ನು ಬೆರಗುಗೊಳಿಸಿದನೆಂದುಕೊಂಡು ಹೆಮ್ಮೆಯಿಂದ ಮುಂದುವರಿದನು ಹಾಗೆ ಹೇಳುತ್ತಿದ್ದವನು "ಅದಕ್ಕೇ ಒಂದು ಬ್ಯಾರೆ ಏರ್ಪಾಟು ಮಾಡ್ಯಾರಂತೆ…."

"ಬಾರೊ ಹೋಗಾನ, ಚೆನ್ನಕ್ಕಯ್ನ ಹತ್ರಕ್ಕೆ." ತಿಮ್ಮ ಸಂವಾದವನ್ನು ಕುತೂಹಲದಿಂದ ಆಲಿಸುತ್ತಿದ್ದ ಧರ್ಮುವನ್ನು ಅಂಗಿತೋಳು ಹಿಡಿದೆಳೆದು ಎಬ್ಬಿಸಿದನು. ಅವನಿಗೆ ಕೂಡಿಕೆ, ಹೆಂಡ್ತಿ, ಧರ್ಮಪತ್ನಿ, ಧಾರೆ ಈ ಮಾತುಗಳೆಲ್ಲ ತನ್ನನ್ನೆ ಏನೊ ಅರ್ಥವಾಗದ ಫಜೀತಿಗೆ ಸಿಕ್ಕಿಸುವಂತೆ ತೋರಿ, ಅವುಗಳಿಂದ ದೂರವಾದ ತನ್ನ ಸರಳ ಜೀವನಕ್ಕೆ ಪಾರಗಿ ಹೋಗುವಂತೆ, ಅಲ್ಲಿಂದ ತನಗರ್ಥವಾಗುತ್ತಿದ್ದ ಚೆನ್ನಕ್ಕಯ್ಯನ ಸಾನಿಧ್ಯವನ್ನರಸಿ ಓಡಿದ್ದನು.

ತಿಮ್ಮ ಧರ್ಮು ಇಬ್ಬರೂ ಹಿತ್ತಲು ಕಡೆಯ ಬಾಗಿಲಿನಿಂದ ಒಳಹೊಕ್ಕು, ಒಳಅಂಗಳದ ಅಂಚಿನಲ್ಲಿಟ್ಟಿದ್ದ ದೊಡ್ಡ ತಾಮ್ರದ ಹಂಡೆಯಿಂದ ನೀರು ಮೊಗೆದು ಕೆಸರಾಗಿದ್ದ ಕಾಲುಗಳನ್ನು ತೊಳೆದುಕೊಳ್ಳುತ್ತಿದರು. ಧರ್ಮು, ಅದಕ್ಕಾಗಿ ಹಾಕಿದ್ದ ಹಾಸುಗಲ್ಲಿನ ಮೇಲೆ ನಿಂತು, ಕಾಲು ತೊಳೆದುಕೊಳ್ಳುತ್ತಿದ್ದಾಗ ತಿಮ್ಮ ತನ್ನ ಸರದಿಗಾಗಿ ಕಾಯುತ್ತಿದ್ದವನು,

ಹಂಡೆಯ ಪಕ್ಕದಲ್ಲಿ ಕಂಬಕ್ಕೆ ಒರಗಿಸಿ ಇಟ್ಟಿದ್ದ ಒಂದು ಸೌದೆ ತುಂಡನ್ನು ಕಂಡು, ಯಾವ ಉದ್ದೇಶವೂ ಇಲ್ಲದೆ ಯಾಂತ್ರಿಕವಾಗಿ ಅದನ್ನು ಕೈಗೆ ತೆಗೆದುಕೊಂಡು, ಮಕ್ಕಳಿಗೆ ಸ್ವಾಭಾವಿಕವಾದ ಸಹಜ ಚೇಷ್ಟೆಯಿಂದ ಪ್ರಚೋದಿತನಾಗಿ, ತಾಮ್ರದ ಹಂಡೆಗೆ ಬಡಿಯತೊಡಗಿದನು: ಡಣ್ ಡಣ್ ಡಣಕು ಡಣಕು! ಡಣಕು ಡಣಕು ಡಣ್ ಡಣ್! ಡಣಕು ಡಣಕು ಡಣಕು ಡಣಕು! ಡಣ್ ಡಣ್ ಡಣ್ ಡಣ್!

ಆ ಲೋಹಶಬ್ದ ತಕ್ಕಮಟ್ಟಿಗೆ ಜೋರಾಗಿಯೆ ಇದ್ದಿತಾದರೂ ಮದುವೆಮನೆಯ ಗಜಿಬಿಜಿಯಲ್ಲಿ ಮತ್ತು ಹಿತ್ತಲುಕಡೆಯಲ್ಲಿಯೆ ನಾನಾ ವಿಧವಾದ ಅಡುಗೆಯ ಕೆಲಸ ಕಾರ್ಯಗಳಲ್ಲಿ ತೊಡಗಿದ್ದ ಜನರ ಗದ್ದಲದಲ್ಲಿ ಅದು ಯಾರ ಗಮನವನ್ನೂ ವಿಶೇಷವಾಗಿ ಸೆಳೆಯುವಂತಿರಲಿಲ್ಲ. ಆದರೂ ಅದು ಮದುವೆ ಮನೆಯಲಿ ನೆರೆದಿದ್ದ ನೂರಾರು ಜನರಲಿ ಮೂವರ ಹೃದಯಗಳಲ್ಲಿ ಮಾತ್ರವೆ ವಿಶಿಷ್ಟ ಭಾವತರಂಗಗಳನ್ನು ಹೊಡೆದೆಬ್ಬಿಸಿತ್ತು!

'ಡಣ್ ಡಣ್ ಡಣಕು ಡಣಕು! ಡಣ್ ಡಣ್ ಡಣಕು ಡಣಕು:' ತನಗೆ ಶಾಸ್ತ್ರ ಮಾಡಿಸುತ್ತಾ ಸುತ್ತುವರಿದಿದ್ದ ನೆಂಟರಮ್ಮಂದಿರ ನಡುವೆ ಮದುಮಗಳಾಗಿ ವಸನಭೂಷಣ ಭೂಷಿತೆಯಾಗಿ ಬೆವರುತ್ತಾ ಕುಳಿತಿದ್ದ ಚೆನ್ನಮ್ಮ ತಟಕ್ಕನೆ ಚಕಿತೆಯಾಗಿ ಕಿವಿನಿಮಿರಿ ಆಲಿಸಿದಳು: 'ಡಣ್ ಡಣ್ ಡಣಕು ಡಣಕು!' ಹೌದು, ಹಂಡೆಗೆ ಕೋಲು ಬಡಿದ ಸದ್ದು! ಅರೆ! ಈಗೇಕೆ ಆ ಸದ್ದು? ಕತ್ತಲಾದಮೇಲೆ ತಾನೆ ಅದು ಕೇಳಿಬರಬೇಕಾದದ್ದು, ಶೂದ್ರರ ಧಾರೆ ಯಾವಾಗಲೂ ನಿಶಾಲಗ್ನದಲ್ಲಿ ತಾನೆ? ಅದರಲ್ಲಿಯೂ ಇವತ್ತಿನ ಧಾರೆ-ಸಿಂಬಾವಿ ಭರಮೈಹೆಗ್ಗಡೆಯವರಿಗೆ ಹೂವಳ್ಳಿ ಚೆನ್ನಮ್ಮನನ್ನು ದ್ವಿತೀಯ ಪತ್ನಿಯನ್ನಾಗಿ ವಹಿಸಿಕೊಡುವ ಧಾರೆಯ ಸಮಯ ರಾತ್ರಿ ಹನ್ನೆರಡು ಗಂಟೆಗೆ ತಾನೆ 'ಗಳಿಗೆ ಬರುವುದು? ' ಧಾರಾಮುಹೂರ್ತ? ಹಾಗಾದರೆ ಈಗಲೆ, ಹಗಲಿನಲ್ಲಿಯೆ ಬಾವ ತನ್ನನ್ನು ಈಗಲೆ...?

"ಏನಾಯ್ತೆ ಮದೋಳ್ಗೀಗೆ?.... ಜಡೆ ಹೂವು ಭಾರಾಯ್ತೇನೆ? ಏನು ಬೇಕೆ?....ಯಾರು ಬೇಕೆ?... ಯಾಕೆ ಹಾಂಗೆ ನೋಡ್ತೀಯಾ ಸುತ್ತಾಮುತ್ತಾ...." ನಾಲ್ಕಾರು ನೆಂಡತಿಯರು ಚೆನ್ನಮ್ಮನ ತಳಮಳವನ್ನು ಗಮನಿಸಿ ಪ್ರಶ್ನೆಗಳ ಧಾಳಿಯನ್ನೆ ಪ್ರಾರಂಭಿಸಿದರು.

ಒಳಗೆಲಸದಲ್ಲಿದ್ದ ನಾಗಕ್ಕಗೂ ಆ ಹಂಡೆಯ ಸದ್ದು ಕೇಳಿಸಿತ್ತು. ಅವಳೂ ಚಕಿತೆಯಾಗಿ ಅದನ್ನು ಸ್ವಲ್ಪ ಸಂದಿಗ್ಧಮನೋಭಾವದಿಂದಲೆ ಆಲಿಸಿ, ಅದರ ನಿಜಾಂಶವನ್ನರಿಯಲು ಹಿತ್ತಲುಕಡೆಗೆ ಹೋಗುತ್ತಿರುವಾಗ ದಾರಿಯಲ್ಲಿ ಸಿಕ್ಕಿದ ನೆಂಟರಮ್ಮ "ನಾಗೂ, ಮದೋಳ್ಗೀಗೆ ಏನೊ ಒಂದು ತರಾ ಆಗ್ಯದೆ, ಸೊಲ್ಪ ಬಾ" ಎಂದು ಅವಳನ್ನು ಮಾಣಿಗೆಗೆ, ಆಗತಾನೆ ಮಿಹದಿಂದ ಹಿಂತಿರುಗಿದ್ದ ಚೆನ್ನಮ್ಮನ ಬಳಿಗೆ ಕರೆದೊಯ್ದರು.

ಚೆನ್ನಮ್ಮ ನಾಗಕ್ಕನ ಕಿವಿಯಲ್ಲಿ ಹೇಳಿದುದಕ್ಕಿಂತಲೂ ಹೆಚ್ಚಾಗಿ ಮತ್ತು ಹೆಚ್ಚು ಸ್ಪಷ್ಟತರವಾಗಿ ಅವಳ ಬೆಚ್ಚಗಣ್ಣುಗಳಿಂದಲೆ ನಾಗಕ್ಕ ಎಲ್ಲವನ್ನು ಅರಿತುಕೊಂಡು, ಸಮಾಧಾನ ಹೇಳಿ, ಶಬ್ದದ ಕಾರಣ ಮತ್ತು ಉದ್ದೇಶಗಳನ್ನು ವಿಚಾರಿಸಲು ಹಿತ್ತಲುಕಡೆಯ ಹೆಂಡಯ ಎಡೆಗೆ ಬಿರುಬಿರನೆ ಧಾವಿಸಿದಳು.

ನಾಗಕ್ಕ ಆ ಸ್ಥಳಕ್ಕೆ ಬರುವುದರೊಳಗೆ ಹಂಡೆಯ ಸದ್ದಿಗೆ ಭಾವಚಕಿತೆಯಾಗಿದ್ದ ಇನ್ನೊಂದು ವ್ಯಕ್ತಿ,-ಮೂರನೆಯ ವ್ಯಕ್ತಿ-ಪೀಂಚಲು ಅಲ್ಲಿಗೆ ಓಡಿಹೋಗಿ, ತುಸು ದೂರದಲ್ಲಿಯೆ ನಿಂತು, "ಅಯ್ಯಾ, ಅಯ್ಯಾ, ಕೋಣೂರು ಸಣ್ಣಯ್ಯಾ,

ಹಂಡೆಗೆ ಹೊಡೀಬೇಡಿ, ಹೊಡೀಬೇಡಿ. ಗಲಾಟೆ ಮಾಡಿದ್ರೆ ಬಯ್ತಾರೆ. ದೊಡ್ಡಯ್ಯೋರಿಗೆ ಕಾಯಿಲೆ ಜಾಸ್ತಿ ಆಗ್ಯದೆಯಂತೆ…" ಎಂದು ಅಂಗಲಾಚುತ್ತಿದ್ದಳು.

ನಾಗಕ್ಕ ಬರುವಷ್ಟರಲ್ಲಿಯೆ ಡಣಕು ನಿಂತಿತ್ತು. ತಿಮ್ಮು ಕೈಯಲ್ಲಿ ಸೌದೆ ತುಂಡು ಹಿಡಿದು ಪೀಂಚಲುಗೆ ಏನನ್ನೊ ಹೇಳುತ್ತಿದ್ದನು. ನಾಗಕ್ಕ ಬಂದು, ವಿಷಯ ಅರಿತು, ತಿಮ್ಮುಗೆ" ಕೋಣೂರು ತಮ್ಮಯ್ಯಂದೋ ಈ ಕೆಲಸ?" ಎಂದಷ್ಟೆ ನಗುತ್ತಾ ಹೇಳಿ, ಪೀಂಚಲು ಇದ್ದಡೆಗೆ ಹತ್ತಿರಕ್ಕೆ ಹೋಗಿ ಮೆಲ್ಲಗೆ ಮಾತಾಡತೊಡಗಿದಳು. ಧರ್ಮುವ ತರುವಾಯ ತಿಮ್ಮುವೂ ಕಾಲು ತೊಳೆದುಕೊಂಡು ಚಿನ್ನಕ್ಕಯ್ಯ ಇದ್ದೆಡೆಗಾಗಿ ಇಬ್ಬರೂ ಓಡಿದರು.

ನಾಗಕ್ಕ ಒಳಗೆ ಹೋದಮೇಲೆ ಪೀಂಚಲು, ರಾತ್ರಿ ಕತ್ತಲೆಯಲ್ಲಿ ಹುಡುಕಲು ಕಷ್ಟವಾಗದಿರಲಿ ಎಂದು, ತಾನೇ ಕಂಬಕ್ಕೆ ಒರಗಿಸಿಟ್ಟಿದ್ದ ಸೌದೆ ತುಂಡನ್ನು ಅಲ್ಲಿಂದ ತೆಗೆದು, ಹುಡುಗರಿಗೆ ಸಿಕ್ಕದಂತೆ, ನಾಗಂದಿಗೆಯಮೇಲೆ ಅಲ್ಲಿಯೆ ಹತ್ತಿರ ಇಟ್ಟಳು…

ಧರ್ಮುವೊಡನೆ ತಿಮ್ಮು ಹೋಗಿ ನೋಡುತ್ತಾನೆ, ಚಿನ್ನಕ್ಕಯ್ಯ ತನಗೆ ಅಗಮ್ಯವೂ ದುರ್ಗಮವೂ ಆದ ಸ್ಥಳದಲ್ಲಿ ದುಸ್ಸಾಧ್ಯಳಾಗಿ ಕುಳಿತಿದ್ದಾಳೆ, ತಲೆ ಬಗ್ಗಿಸಿಕೊಂಡು: ಮಳೆಗಾಲದ ಮೋಡಮಬ್ಬು ಕವಿದು ದ್ವಿಗುಣಿತವಾಗಿ ಕತ್ತಲೆ ಮುತ್ತಿದ್ದ ಮಾಣಿಗೆಯೊಳಗೆ, ಕಂಭದ ಮೇಲೆ ಮಿಣಿಮಿಣಿ ಉರಿಯುತ್ತಿದ್ದ ದೊಡ್ಡ ಹಣತೆಯ ದೀಪದ ಬೆಳಕಿನಲ್ಲಿ, ತರತರದ ಬಣ್ಣದ ಮತ್ತು ಅಂಚಿನ ಸೀರೆಗಳನ್ನುಟ್ಟಿದ್ದ ಹುಡುಗಿಯರ ಮತ್ತು ಹೆಂಗಸರ ಕೋಟೆಯ ಮಧ್ಯೆ ಸೆರೆಯಾದಳೆಂಬಂತೆ ಕುಳಿತಿದ್ದಳು ಚಿನ್ನಕ್ಕಯ್ಯ, ನಾನಾ ರೀತಿಯ ಕೊರಳ, ಕಿವಿಯ, ಮೂಗಿನ, ಬೈತಲೆಯ, ಜಡೆಯ, ತೋಳಿನ ಮತ್ತು ಕೈಯ ಆಭರಣಗಳ ಹೊರೆಯಿಂದ ಜಗ್ಗಿದಂತಾಗಿ ಬಾಗಿ!- ಮದುಮಗಳಾಗಿ!

ತಿಮ್ಮು ಧರ್ಮು ಇಬ್ಬರೂ ನಿಸ್ಸಹಾಯಕರಾಗಿ ಆದಷ್ಟು ದೂರ ನಿಂತೇ ನೋಡಿದೌ, ಅಲ್ಲಿ ನೆರೆದಿದ್ದ ನೆಂಟರಮ್ಮಂದಿರ ಕಣ್ಣಿಗೆ ಬೀಳಬಾರದೆಂದು. ಚಿನ್ನಕ್ಕಯ್ಯ ಏನೋ ಅಪಾಯಕ್ಕೆ ಸಿಕ್ಕಿಬಿದ್ದಿದ್ದಾಳೆ ಎಂದೇ ಭಾವಿಸಿ ತಿಮ್ಮು ಪಿಸಿಪಿಸಿ ಕೇಳಿದನು ಧರ್ಮುವನ್ನು: " ಯಾಕೊ ಹಿಂಗೆ ಮಾಡಿದಾರೆ ಚಿನ್ನಕ್ಕಯ್ಗೆ? "

ಅವನೇನೊ ಯಾರಿಗೂ ಕೇಳಿಸಬಾರದೆಂದು ಮೆಲ್ಲಗೆ ಮಾತಾಡಿದ್ದನು. ಆದರೆ ಸಮಿಪದಲ್ಲಿದ್ದ ನೆಂಟರಮ್ಮ ಒಬ್ಬರು " ಯಾರದು? ಕೋಣೂರು ತಮ್ಮಯ್ಯನಾ?…ನಿನ್ನಕ್ಕಯ್ಯನ ಇವತ್ತು ಹೊತ್ತುಕೊಂಡು ಹೋಗ್ತಾರೆ ಕಣೋ, ನಿನ್ನ ಸಿಂಬಾವಿ ಬಾವಯ್ಯ."

"ಬಾವಯ್ಯ ಅಲ್ಲ. ಅವನಿಗೆ ಮಾವಯ್ಯ ಆಗ್ತಾರೆ" ತಿದ್ದಿದರು ಮತ್ತೊಬ್ಬ ನೆಂಟರಮ್ಮ.

ಅಲ್ಲಿ ನೆರೆದಿದ್ದ ಗರತಿಯರೊಡನೆ ಹುಡುಗಿಯರೂ ಕಿಲಕಿಲನೆ ನಕ್ಕರು. ಹುಡುಗರಿಬ್ಬರಿಗೂ ತುಂಬ ನಾಚಿಕೆಯಾಗಿ ಅಲ್ಲಿಂದ ಓಟ ಕಿತ್ತರು.

ಅವರಿನ್ನೂ ಮಾಣಿಗೆಯಿಂದ ಹೊರಗೆ ದಾಟಿರಲಿಲ್ಲ, ಯಾರೊ ಗಟ್ಟಿಯಾಗಿ ಹೇಳಿದುದು ಕೇಳಿಸಿತು: 'ಮಾವಯ್ಯ ಅಲ್ಲ; ಚಿಕ್ಕಪ್ಪಯ್ಯ!'

ಚಿಕ್ಕಪ್ಪಯ್ಯ?

ತಿಮ್ಮುಗೆ ಇದ್ದುದ್ದು ಒಬ್ಬನೆ ಚಿಕ್ಕಪ್ಪಯ್ಯ: ಮುಕುಂದ ಚಿಕ್ಕಪ್ಪಯ್ಯ!

'ಮತ್ತೊಬ್ಬರು ಯಾರೊ ಚಿಕ್ಕಪ್ಪಯ್ಯನಂತೆ? ಥೂ!' ಎಂದುಕೊಂಡ ತಿಮ್ಮುನ ಮನಸ್ಸು ಆ ಚಿಕ್ಕಪ್ಪಯ್ಯನ ವಿಚಾರವಾಗಿ ತುಂಬ ಹೇಯಭಾವನೆಯನ್ನನುಭವಿಸಿ, ಅವನು

ಚಿನ್ನಕ್ಕಯ್ಯನನ್ನು ಹೊತ್ತುಕೊಂಡು ಹೋಗುವ ವಿಚಾರದಲ್ಲಿ ಅತ್ಯಂತ ಕ್ರೂರವಾದ ಪ್ರತಿಭಟನೆಯ ಭಂಗಿಯನ್ನೂ ತಾಳಿತ್ತು!

* * *

## ೫೧

ಸಂಜೆ ಸುಮಾರು ನಾಲ್ಕೊ ನಾಲ್ಕೂವರೆಯೊ ಗಂಟೆಯಾಗಿತ್ತು. ಆದರೂ ಮೋಡಗತ್ತಲೆ ಕವಿದು ಆರೂವರೆಯೊ ಏಳೊ ಎಂಬ ಭ್ರಾಂತಿಗೆ ಎಡಗೊಡುತ್ತಿತ್ತು. ಮಳೆ ಸುರಿಯುತ್ತಿತ್ತು. ಸೋಗೆ ಹೊದಿಸಿದ್ದ ಮನೆಯ ಅನೇಕ ಭಾಗಗಳಲ್ಲಿ ನೀರು ಸೋರಿ ಸೋರಿ, ಅಲ್ಲಲ್ಲಿ ತಂಬಾಳೆ ಬೋಗುಣಿ ಮಡಕೆಗಳನ್ನಿಟ್ಟು ನೀರು ಹಿಡಿದು, ಅದು ಹರಿಯದಂತೆ ಮಾಡಬೇಕಾಗಿ ಬಂದಿತ್ತು.

ಹೂವಳ್ಳಿಮನೆಯೊಳಗೆ ಜನ ತುಂಬಿದಂತೆ ಭಾಸವಾಗುತಿತ್ತು. ನಿಜಕ್ಕೂ ಜನ ತುಂಬ ವಿರಳವಾಗಿಯೆ ಇತ್ತು. ಮಳೆಯಿಲ್ಲದ ದಿನವಾಗಿದ್ದರೆ ಹೊರಗೆಲ್ಲ ಸುತ್ತ ಮುತ್ತಾ ಓಡಾಡುತ್ತಾ ಇರುತ್ತಿದ್ದ ಮದುವೆಯ ಉಲ್ಲಾಸ ಉತ್ಸವಗಳು ಮಳೆಯ ನಿಮಿತ್ತ ಮನೆಯೊಳಗೇ ಮುದುಡಿಕೊಂಡು ದಟ್ಟಯ್ಸಿದ ಭ್ರಮೆಗೆ ಕಾರಣವಾಗಿತ್ತಷ್ಟೆ! ಗಿಜಿಬಿಜಿ ಸದ್ದೂ ಸರ್ವವ್ಯಾಪಿಯಾಗಿತ್ತು.

ಸಿಂಬಾವಿಯಿಂದ ಬರುವ ಗಂಡಿನ ಕಡೆಯ ದಿಬ್ಬಣದವಿಚಾರವಾಗಿಯೆ ಗುಂಪು ಗುಂಪಿನಲ್ಲಿ ಮಾತುಕತೆ ಚರ್ಚೆ ಜಿಜ್ಞಾಸೆ ಊಹೆ ಎಲ್ಲ ನಡೆದಿತ್ತು: 'ಈ ಮಳೆಯಲ್ಲಿ ದಿಬ್ಬಣ ಹಂಗೆ ಬರುತ್ತದೆಯೊ ದೇವರೆ ಬಲ್ಲ.' 'ಹಳ್ಳ ದಾಟುವುದಾದರೂ ಹ್ಯಾಂಗೆ, ಮಾರಾಯ್ರಾ?' 'ದಂಡಿಗೆಯವರು ಕಾಲುದಾರಿಯಲ್ಲಿ ಜಾರಿಬಿದ್ದು ಗಂಡಿನ ಸೊಂಟ ಮುರಿದೆ ತರುತ್ತಾರೆ ಅಂಬೋ ಹಾಂಗೆ ಕಾಣ್ತದೆ.' 'ಒಬ್ಬರಿಬ್ಬರಾದರೂ ತೇಲಿ ಹೋಗದೆ ಇರುತ್ತಾರೆಯೆ ತುಂಬಿದ ಹಳ್ಳದಲ್ಲಿ?' 'ಅವರಿಗೇನು ಹುಚ್ಚೊ? ತುಂಬಿದ ಹಳ್ಳಕ್ಕೆ ಇಳಿಯುವುದಕ್ಕೆ? ಅಚೆಯ ದಂಡೆಯಲ್ಲಿ ಕಾಯುತ್ತಾರೆ, ಹಳ್ಳ ಇಳಿಯೋ ತನಕ.' 'ಹಾಂಗೆ ಕಾಯುವುದಾದರೆ ನಾಳೆ ಬೈಗಿನತನಕ ಅವರು ಕಾಯಬೇಕಾದೀತು, ಈ ಮಳೆ ನೋಡಿದರೆ ನಿಲ್ಲುವ ಹಾಂಗೆ ತೋರುವುದಿಲ್ಲ.' 'ಹೆಣ್ಣಿನ ಅದೃಷ್ಟಾನೂ...' 'ಅಂಥಾ ದೊಡ್ಡೋರ ಕೈ ಹಿಡಿಯುವ ಪುಣ್ಯ

ಇರಬೇಕಾಯ್ತಲ್ಲ! ' 'ಎಂಥಾ ದೊಡ್ಡೋರಪ್ಪಾ? ದುಡ್ಡಿನ ದೊಡ್ಡವರೋ?' 'ಹ್ಞೂ! ಯಾಕಾಗಬಾರದು? ದುಡ್ಡಿನ ದೊಡ್ಡವರೇ ಅಂತಾನೂ ಇಟ್ಟುಕೋ...'

ಈ ಗಜಿಬಿಜಿ ಗಲಾಟೆಯಿಂದ ದೂರವಾಗಿ, ತನ್ನ ಅಜ್ಜಿಯ ಕೋಣೆಯಲ್ಲಿ ಚಿನ್ನಮ್ಮ ಒಬ್ಬಳೆ ಚಾಪೆಯ ಮೇಲೆ ಕುಳಿತು, ಸುತ್ತಿಟ್ಟಿದ್ದ ಅಜ್ಜಿಯ ಹಾಸಗೆಗೆ ಒರಗಿಕೊಂಡು ಗಂಭೀರ ಚಿಂತಾಮಗ್ನಳಾಗಿದ್ದಳು. ಬೆಳಿಗ್ಗೆ ಶಾಸ್ತ್ರ ಮಾಡಿಸುವಾಗ ಅವಳ ಅಂಗೋಪಾಂಗಗಳ ಮೇಲೆ ಹೇರಿದ್ದ ಚಿತ್ರ ವಿಚಿತ್ರವಾದ ಆಭರಣ ಸಂದೋಹ ವಿಲ್ಲದಿದ್ದರೂ ಅವಳು ಮದುವಣಗಿತ್ತಿ ಎಂಬುದಕ್ಕೆ ಸಾಕ್ಷಿಯಾಗಿ ಕೆಲವೇ ಅಲಂಕಾರಗಳಿಂದ ಶೋಭಿತೆಯಾಗಿದ್ದಳು; ಕುಂಕುಮವೆರೆಸಿದ ಕೆಲವು ಅಕ್ಷತೆಗಳೂ ಅವಳ ಸುತ್ತ ಬಿದ್ದಿದ್ದುವು; ಶಾಸ್ತ್ರ ಮಾಡಿಸುವಾಗ ಅವಳ ತಲೆಗೂದಲಲ್ಲಿ, ಗೊಬ್ಬೆ ಸೆರಗಿನಲ್ಲಿ, ಮಡೀಲಿನಲ್ಲಿ ಸೀರೆಯ ಮಡಿಕೆಗಳಲ್ಲಿ, ಆಭರಣಗಳಲ್ಲಿ ಸಿಕ್ಕಿಕೊಂಡಿದ್ದು, ಕೋಣೆಯ ಏಕಾಂತಕ್ಕೆ ಬಂದು ಕೊಡವಿಕೊಂಡಾಗ ಬಿದ್ದವು ಅವು:

'ಯಾಕೆ ಹೀಗೆ ಸುರಿಯುತ್ತಿದೆ ಮಳೆ? ಇವತ್ತೆ?.... ಈ ಮಳೆ ಹೀಗೇ ಬೀಳುತ್ತಿದ್ದರೆ ಗತಿ? ನನ್ನನ್ನು ಹೇಗೆ ತಪ್ಪಿಸಿಕೊಂಡು ಹೋಗುತ್ತಾರೊ ಮುಕುಂದಬಾವ? ಸಿಕ್ಕಿಬಿದ್ದರೆ ಏನುಗತಿ?... ತಪ್ಪಿಸಿಕೊಂಡು ಹೋಗುವುದಕ್ಕೆ ಆಗುತ್ತದೆಯೊ ಇಲ್ಲವೋ?... ಒಂದು ವೇಳೆ ಎಲ್ಲಿ ಯಾದರೂ ಧಾರೆಗೆ ನಿಲ್ಲುವ ಪ್ರಸಂಗ ಬಂದೇ ಬಿಟ್ಟರೆ?... ಬಂದರೆ, ಇದ್ದೇ ಇದೆಯಲ್ಲಾ ನನ್ನ ಹತ್ತಿರ, ಔಷಧಿ! ನಾಗಕ್ಕನೇ ತಿನ್ನುವುದಕ್ಕೆ ಇಟ್ಟುಕೊಂಡಿದ್ದ ವಿಷ!- ಆಲೋಚನೆಯ ನಡುವೆ ಚಿನ್ನಮ್ಮ ಎದ್ದು ನಿಂತಳು. ನಾಗಂದಿಗೆಯ ಮೇಲೆ ಕೈಯಾಡಿಸಿ ಒಂದು ಸಣ್ಣ ಕರಡಿಗೆಯನ್ನು ತೆಗೆದು, ಅದರಲ್ಲಿದ್ದ ಪೊಟ್ಟಣವನ್ನು ಬಿಚ್ಚಿ ನೋಡಿ, ವಿಷದ ಪದಾರ್ಥ ಇರುವುದನ್ನು ಮತ್ತೊಮ್ಮೆ ನಿಶ್ಚಯಪಡಿಸಿಕೊಂಡು ಕರಡಿಗೆಯನ್ನು ಅಲ್ಲಿಯೇ ಭದ್ರಪಡಿಸಿಟ್ಟು, ಮತ್ತೆ ಚಾಪೆಯ ಮೇಲೆ ಸುಯ್ಯುತ್ತಾ ಕೂತುಕೊಂಡಳು: 'ನನ್ನ ಅವ್ವ ಇದ್ದಿದ್ದರೆ?....' ಚಿನ್ನಮ್ಮನ ಅಲೋಚನೆ ತನ್ನ ತಾಯಿಯನ್ನು ನೆನಪಿಗೆ ತಂದೊಡನೆಯ ಕಣ್ಣೀರು ಸುರಿಯತೊಡಗಿ ನೀರವವಾಗಿ ಬಿಕ್ಕಿಬಿಕ್ಕಿ ಅಳತೊಡಗಿದಳು.

ಅವಳ ತಾಯಿಯ ಅಕಾರವಾಗಲಿ ಮುಖವಾಗಲಿ ಅವಳ ನೆನಪಿಗೆ ಸ್ವಲ್ಪವಾದರೂ ಸ್ಪಷ್ಟವಾಗಿ ಬರುವಂತಿರಲಿಲ್ಲ. ಅಷ್ಟು ಚಿಕ್ಕ ವಯಸ್ಸಿನಲ್ಲಿಯೆ ತಾಯಿ ತೀರಿಹೋಗಿದ್ದಳು. ಬಹಳ ಕಾಲದವರೆಗೆ ಅವಳು ಅಜ್ಜಿಯನ್ನೆ ತನ್ನ ತಾಯಿಯೆಂದೂ ತಿಳಿದುಕೊಂಡಿದ್ದಳು. ಅವಳ ಅಜ್ಜಿ ಅವಳನ್ನು ತನ್ನ ಜೀವಕ್ಕಿಂತ ಹೆಚ್ಚಾಗಿ ಪ್ರಿತಿಸುತ್ತಿದ್ದರೂ ಅವಳ ಹೃದಯದ ಹೊಸ ಆಶೆಗಳನ್ನು ಅರಿಯಲಾರದ ಸಂಪ್ರದಾಯದ ಮುದುಕಿಯಾಗಿದ್ದಳು. ಕೋಣೂರು ಮುಕುಂದನಿಗೆ ತನ್ನ ಮೊಮ್ಮಗಳನ್ನು ಕೊಡಲು ಅವಳಿಗೆ ಇಷ್ಟವಿಲ್ಲದಿರಲಿಲ್ಲ. ಆದರೆ ಸಿಂಬಾವಿ ಭರಮೈಹೆಗ್ಗಡೆಯವರ ದೊಡ್ಡಸ್ತಿಗೆ, ಐಸ್ವರ್ಯ, ಅವರ ಮೊದಲನೆಯ ಹೆಂಡತಿಗೆ ಮಕ್ಕಳಾಗದೆ ಬಂಜೆಯಾಗಿದ್ದುದರಿಂದ ತನ್ನ ಮೊಮ್ಮಗಳ ಮಕ್ಕಳಿಗೇ ಸಿಂಬಾವಿಯ ದೊಡ್ಡ ಆಸ್ತಿಯೆಲ್ಲ ದೊರೆಯುತ್ತದೆ ಎಂಬ ದೂರದ ಮಹದಾಶೆ, ಅವರು ನೀಡಿದ್ದ ಧನ ಕನಕ- ಇವುಗಳಿಂದ ಪ್ರೇರಿತಳಾಗಿ, ಲೌಕಿಕವಾಗಿ ವಿವೇಕಪೂರ್ವಕವಾದುದು ಎಂದು ತಾನು ನಂಬಿದ ತನ್ನ ಅಳಿಯನ ಸಲಹೆಗೆ ಸಮ್ಮತಿಸಿದ್ದಳು. ತನ್ನ ಮಗಳಂತೂ ಬಡವನ ಕೈ ಹಿಡಿದು ಸುಖವನ್ನೆ ಕಾಣದೆ ಬಾಳದೆ ಹೋದಳು; ಮೊಮ್ಮಗಳಾದರೂ ಸಿರಿವಂತರ ಮನೆ ಸೇರಿ ಸುಖಿಯಾಗಿರಲಿ ಎಂಬುದೊಂದೆ ಮುದುಕಿಯ ಹಾರೈಕೆಯಾಗಿತ್ತು.

ಇನ್ನು ಅವಳ ತಂದೆ, ವೆಂಕಪ್ಪನಾಯಕರ ಆಕಾರ, ಗಾತ್ರ, ಮಹಾಮೀಸೆ, ಮಾತು ನಡತೆ ಎಲ್ಲದರಲ್ಲಿಯೂ ಇರುತ್ತಿದ್ದ ಒಂದು ಗ್ರಾಮೀಣರೂಕ್ಷತೆ-ಇವುಗಳಿಂದಾಗಿ ಚಿನ್ನಮ್ಮಗೆ ಎಳೆತನದಿಂದಲೂ ತಂದೆಯಲ್ಲಿ ಭಯ ಭಕ್ತಿಯೆ ಉದ್ದೀಪನವಾಗಿತ್ತು. ತಂದೆಯನ್ನು ಪ್ರೀತಿಸುವುದಕ್ಕಿಂತಲೂ ಹೆಚ್ಚಾಗಿ ಗೌರವಿಸುತ್ತಿದ್ದಳು. ಆ ಗೌರವದಲ್ಲಿ ಹೆದರಿಕೆಯೆ ಹೃದಯವಾಗಿರುತ್ತಿತ್ತು. ದೊಡ್ಡವಳಾದ ಮೇಲಂತೂ ಅವಳು ಹೆಚ್ಚು ಕಡಮೆ ದೂರವಾಗಿಯೆ ಇರುತ್ತಿದ್ದಳು. ತಂದೆಗೆ ಇದಿರಾಡುವ ಧೈರ್ಯವಾಗಲಿ, ಎದರು ಬೀಳುವ ಉದ್ಧಟತನವಾಗಲಿ ಅವಳಿಗೆ ಕನಸಿನಲ್ಲಿಯೂ ಸಾಧ್ಯವಿರಲಿಲ್ಲ. ಆದ್ದರಿಂದಲೆ ನಾಗಕ್ಕನ ಪರಿಚಯವಾದ ಮೇಲೆ ಅವಳನ್ನೆ ನೆಮ್ಮಿಬಿಟ್ಟಿದ್ದಳು. ನಾಗಕ್ಕ ಒಂದು ರೀತಿಯಲ್ಲಿ ಚಿಕ್ಕಮ್ಮನಾಗಿ ಮನೆಯಲ್ಲಿ ನಿಂತಮೇಲಂತೂ ಆಕೆಯ ತನ್ನ ಹೆತ್ತ ತಾಯಿಯ ಸ್ಥಾನದಲ್ಲಿಯೂ ನಿಂತಿದ್ದಳು. ಪ್ರಣಯ ಮತ್ತು ವಿಷಯ ದಾಂಪತ್ಯ ಜೀವನಗಳ ಕರಾಳ ಮುಖಗಳ ನರಕಮಯ ಪರಿಚಯವಿದ್ದ ನಾಗಕ್ಕಗೆ ಚಿನ್ನಮ್ಮನ ಹೃದಯ ಸಂಪೂರ್ಣವಾಗಿ ಅರ್ಥವಾಗಿದ್ದು, ಅವಳನ್ನು ಸ್ವಂತ ಮಗಳೆಂಬಂತೆ ಪ್ರೀತಿಸುತ್ತಿದ್ದುದರಿಂದ, ಅವಳಿಗಾಗಿ ತನಗೆ ಏನು ಕಷ್ಟ ನಷ್ಟ ಕೇಡುಬಂದರೂ ಸಹಿಸಲು ಸಿದ್ಧಳಾಗಿ, ಅವಳನ್ನು ಈ ವಿಷಯ ವಿವಾಹದಿಂದ ಪಾರುಮಾಡಲು ದೃಢಸಂಕಲ್ಪ ಮಾಡಿದ್ದಳು, ಅವಳನ್ನು ಈ ಹೂವಳ್ಳಿಗೆ ಬಂದದ್ದೂ ಕೂಡಿಕೆಯ ಒಂದು ರೀತಿಯ ಸಮ್ಮತಿಯಿತ್ತದ್ದೂ ಚಿನ್ನಮ್ಮನ ಅಕ್ಕರೆಗಾಗಿಯೆ; ಈಗ ಅವಳ ಸ್ವಂತದ್ದು ಎನ್ನಬಹುದಾದ ಸುಖಸಂತೋಷ ಏನಿದ್ದರೂ ಅದೆಲ್ಲ ಚಿನ್ನಮ್ಮನ ಸುಖಸಂತೋಷದಲ್ಲಿ ಅಭೇದವಾಗಿತ್ತು.

ತಾಯಿಯನ್ನು ನೆನೆದ ಚಿನ್ನಮ್ಮ ಆ ಮಾತೃಮುಖದ ನೆನಪೇನಾದರೂ ಮನಸ್ಸಿನ ಕಣ್ಣಿಗೆ ಕಾಣುತ್ತದೆಯೆ ಎಂದು ಪ್ರಯತ್ನಿಸಿದಳು. ಪ್ರಯೋಜನವಾಗಲಿಲ್ಲ. ತನ್ನ ಅಜ್ಜಿ ಮತ್ತು ಇತರ ಹತ್ತಿರದ ಬಂಧುಗಳು ತನ್ನ ತಾಯಿಯ ಸ್ಫುರದ್ರೂಪ ಆಕಾರ ಸೌಂದರ್ಯಗಳನ್ನು ನೆನೆದು ಮೆಚ್ಚಿ ಮಾತಾಡುವಾಗಲೆಲ್ಲ ಹೇಳುತ್ತಿದ್ದದ್ದು ಅವಳ ಜ್ಞಾಪಕಕ್ಕೆ ಬಂತು. ತಾನು ಹುಡುಗಿಯಾಗಿದ್ದಾಗಲೆ, ತನ್ನನ್ನು ನೋಡಿದವರೆಲ್ಲ, ತನ್ನ ಮುಖ ತನ್ನ ತಾಯಿಯ ಮುಖಕ್ಕೆ ಹೋಲುತ್ತದೆ ಎನ್ನುತ್ತಿದ್ದರು. ದೊಡ್ಡವಳಾಗಿ ತರುಣಿಯಾದ ಮೇಲಂತೂ ತನ್ನನ್ನು ನೋಡಿ ತನ್ನ ತಾಯಿಯನ್ನು ನೋಡುವುದೇ ಬೇಡ ಎನ್ನುವಷ್ಟು ತನ್ನ ಮುಖ ತಾಯಿಯ ಮುಖಕ್ಕೆ 'ತದ್ರೂಪ' ಆಗಿದೆ ಎನ್ನುತ್ತಿದ್ದರು.

ಚಿನ್ನಮ್ಮ ಬಾಚಣಿಕೆಯ ಪಕ್ಕದಲ್ಲಿ ಗೋಡೆಗೆ ಆನಿಸಿಟ್ಟಿದ್ದ ಸಣ್ಣ ಕನ್ನಡಿಯನ್ನು ಕೈಗೆ ತೆಗೆದುಕೊಂಡಳು. ಅದನ್ನು ಕೊಂಡುಕೊಟ್ಟಿದ್ದೂ ಮುಕುಂದಬಾವನೆ, ಇತರ ನೆಂತರೊಡನೆ ತಾನೂ ಅವರ ಸಂಗಡ ತೇರಿಗೆ ಹೋಗಿದ್ದಂದು; ಅದಕ್ಕೆ ಮೊದಲು ಅವಳು ಬೋಗುಣಿಯಲ್ಲಿಯೊ ಹಂಡೆಯಲ್ಲಿಯೊ ಇರುತ್ತಿದ್ದ ನೀರಿನಲ್ಲಿ ನೋಡಿಕೊಂಡೆ ಹಣೆಗೆ ಕುಂಕುಮ ಇಟ್ಟುಕೊಳ್ಳುತ್ತಿದ್ದದ್ದು ರೂಢಿ. ಹೆಣ್ಣುಮಕ್ಕಳು ಕನ್ನಡಿ ನೋಡಿಕೊಂಡು ತಲೆಬಾಚಿಕೊಳ್ಳುವುದೆಂದರೆ ಅದೊಂದು ಅನೀತಿವ್ಯಾಪಾರವೆಂದೇ ಆಗಿನ ಭಾವನೆಯಾಗಿತ್ತ. 'ಕನ್ನಡಿ ನೋಡಿಕೊಳ್ಳುವುದು ಸೂಳೆಯರು ಮಾತ್ರ!' ಎಂದೂ ಕೆಲವರು ವಯಸ್ಸಾದ ಹೆಗ್ಗಡಿತಮ್ಮಗಳು ಹೇಳುತ್ತಿದ್ದುದನ್ನೂ ಕೇಳಿದ್ದಳು. ಆದ್ದರಿಂದಲೆ ಮುಕುಂದಬಾವನಿಂದ ಕನ್ನಡಿಯನ್ನು ಈಸಿಕೊಳ್ಳುವಾಗಲೆ ಏನೋ ಕಳ್ಳತನದ ಹುಳಿಯನ್ನು ಅನುಭವಿಸಿತ್ತು ಅವಳ ಮನಸ್ಸು. ತರುವಾಯವೂ ಕನ್ನಡಿಯನ್ನು ಮುಚ್ಚು ಮರೆಯಾಗಿಯೆ ಬಳಸುವುದು ಅವಳಿಗೆ ಅಭ್ಯಾಸವಾಗಿ ಹೋಗಿತ್ತು. ಅದ್ದರಿಂದಲೆ ಈಗಲೂ ಅವಳ ಕಣ್ಣು ಬಾಗಿಲತ್ತ ಓಡಿದ್ದು! ತಾಳಹಾಕಿದ್ದೇನೆಂದು ಪ್ರತ್ಯಕ್ಷ ಜ್ಞಾನದಿಂದ ನಿಶ್ಚಯಮಾಡಿಕೊಂಡ ಮೇಲೆಯೆ ಅವಳು ಕನ್ನಡಿಯಲ್ಲಿ ಮುಖ ನೋಡಿಕೊಳ್ಳಲು ತೊಡಗಿದಳು!...

'ಆಃ ಎಷ್ಟು ಚಂದಾಗದೆ ನನ್ನವ್ವ!'...ಚಿನ್ನಮ್ಮನ ಹೃದಯದಿಂದ ಹಿಗ್ಗಿನ ಸುಯ್ಲೊಂದು ಹೊಮ್ಮಿತ್ತು.... 'ನೋಡಕ್ಕೆ ಎರಡು ಕಣ್ಣೂ ಸಾಲ್ದು! ಕೈ ತೊಳೆದುಕೊಂಡು ಮೈ ಮುಟ್ಟಬೇಕು!... ಇಂಥವಳನ್ನು ಹೊಡೀತಿದ್ದನಂತಲ್ಲಾ ನನ್ನಪ್ಪಯ್ಯ?... ಹೆಂಗಾರು ಕೈಬರ್ತಿತ್ತೋ ಅವನಿಗೆ?...' ಅವಳ ಅರಿವಿಲ್ಲದೆಯೆ ಚಿನ್ನಮ್ಮನ ಕಣ್ಣು ನೀರುಕ್ಕಿ ಮಂಜಾಗಿ ಹರಿಯತೊಡಗಿತ್ತು... 'ತೂ! ಇದೆಂಥ ಹಾಳುಮಳೆ? ಈ ಮುಗಿಲ ಮಬ್ಬಿನಾಗೆ ಕನ್ನಡೀನೂ ಸರಿಯಾಗಿ ಕಾಣಾದಿಲ್ಲ....'

ಚಿನ್ನಮ್ಮ ಕನ್ನಡಿಯನ್ನು ಹೆಚ್ಚು ಬೆಳಕಿಗೆ ಹಿಡಿದರೆ ಹೆಚ್ಚು ಚೆನ್ನಾಗಿ ಕಾಣುತ್ತದೆ ಎಂದುಕೊಂಡು ಬೆಳಕಂಡಿಯ ಕಡೆಗೆ ತುಸು ಸರಿದಳು. ಕನ್ನಡಿಯ ಮೇಲೇನೊ ಹೆಚ್ಚು ಬೆಳಕು ಬಿತ್ತು. ಆದರೆ? ಅವಳಿಗೆ ಥಕ್ಕನೆ ಅರಿವಾಗಿ ಮೆಲ್ಲಗೆ ನಕ್ಕಳು. ಕನ್ನಡಿಯನ್ನಲ್ಲ ಬೆಳಕಿಗೆ ತರಬೇಕಾದ್ದು; ತನ್ನ ಮುಖವನ್ನು!

ಕಣ್ಣೊರಸಿಕೊಂಡು, ತನ್ನ ಮುಖವನ್ನೆ ಬೆಳಕಿಗೊಡ್ಡುವಂತೆ ತಿರುಗಿ ಕುಳಿತು, ಕನ್ನಡಿಯಲ್ಲಿ ತುಸು ಚೆನ್ನಾಗಿ ಕಾಣತೊಡಗಿದ ಸೌಂದರ್ಯರಾಶಿಯ ಕಡೆಗೆ ನೋಡತೊಡಗಿದಳು, ದೃಷ್ಟಿನಟ್ಟು. ಆ ಕನ್ನಡಿಯ ವಿಸ್ತೀರ್ಣವೂ, ತುಸು ದೂರ ಹಿಡಿದುಕೊಂಡರೆ, ಮುಖ ಮಾತ್ರ ಕಾಣುವಷ್ಟಿತ್ತು! ಆದ್ದರಿಂದ ತನ್ನ ತಾಯಿಯ ಮುಖದ ಚಂದವನ್ನು ಒಮ್ಮೆಗೇ ಸಮಗ್ರವಾಗಿ ಕಾಣಲಾರದೆ ಭಾಗಭಾಗವಾಗಿಯೆ ಕಂಡು ಅಕ್ಕರೆಯುಕ್ಕಿದಳು: ಬೈತಲೆ ತೆಗದಿದ್ದ ಮಿಂಚುಗಪ್ಪಿನ ತಲೆಕೂದಲು. ಅಗಲವಾದ ಹೊಂಬಣ್ಣದ ಹಣೆ, ಹಣೆಯ ಮಾಂಗಲ್ಯವನ್ನೂ ಚೆಲುವನ್ನೂ ನೂರುಮಡಿಗೈವ ಕುಂಕುಮದ ಬೊಟ್ಟು, ಕಾಡಿಗೆಗಪ್ಪಿನ ಹುಬ್ಬು ಹೊಳೆಯುತ್ತಿರುವ ಕಣ್ಣಿನ ಮೇಲೆ ಬಾಗಿರುವ ಸೊಗಸು, ಕನ್ನೆಯ ಮಿರುಗುವ ಕೋಮಲತೆ, ತುಟಿಯ ಮನೋಹರತೆ, ಗಲ್ಲದ ದುಂಡನೆಯ ಮುದ್ದು, ಮೂಗುತಿ ಮಿರುಗುವ ನೀಳಮೂಗು, ಸಾಭರಣ ಸುಂದರವಾದ ಕಿವಿ-ಒಂದೊಂದನ್ನೂ ಮತ್ತೆ ಮತ್ತೆ ನೋಡಿ 'ಅಃ ನನ್ನವ್ವ ಎಷ್ಟು ಚಂದಾಗದೆ!' ಎಂದುಕೊಂಡಳು ಚಿನ್ನಮ್ಮ, ಅನೇಕ ಸಾರಿ! ಗಲ್ಲದ ಕೆಳಭಾಗದಲ್ಲಿ ಆಗಿ ನಿಂತುಬಿಟ್ಟಿದ್ದ ಗಾಯದ ಸಣ್ಣ ಕಲೆಯನ್ನು ನೋಡಿದಾಗ, ತಾನು ಹುಡುಗಿಯಾಗಿದ್ದಾಗ ಬಚ್ಚಲು ಕಲ್ಲಿನ ಮೇಲೆ ಜಾರಿಬಿದ್ದು, ಕೊಣದ ಕಲ್ಲು ಗಲ್ಲಕ್ಕೆ ತಗುಲಿ, ನೆತ್ತರು ಸೋರಿ, ಅಜ್ಜಿಯ ಜೀವವೆ ಹಾರಿಹೋಗುವಂತಾಗಿದ್ದನ್ನು ನೆನೆದಳು. ತನ್ನ ಮುಖದಲ್ಲಿದ್ದ ಆ ಒಂದೆ ಕಳಂಕ ತನ್ನ ತಾಯಿಯ ಮುಖದ್ದಲ್ಲ ಎಂದು ನೆನೆದಾಗಲೆ ಅವಳಿಗೆ ತಾನೂ ಬಣ್ಣಿಸುತ್ತಿದ್ದ ಮುಖ ತನ್ನದು ಎಂಬ ಪ್ರಜ್ಞೆ ಸುಸ್ಪಷ್ಟ ಜಾಗ್ರತವಾದದ್ದು.

ಅಷ್ಟು ಹೊತ್ತಿಗೆ ಸರಿಯಾಗಿ ಯಾರೊ ಕತೆದ ಕೂಗು ಕೇಳಿಸಿದಂತಾಗಿ ಕನ್ನಡಿಯನ್ನು ಬೇಗ ಬೇಗನೆ ಅಡಗಿಸಿದಳು. ಆದರೆ ಯಾರೂ ಕರೆದಿರಲಿಲ್ಲ. ಅವಳ ಬೀರಿ, ಮುದ್ದು ಬೆಕ್ಕು, ಮಿಯಾವ್ ಮಿಯಾವ್ ಎನ್ನುತ್ತಾ ಅವಳ ಬಳಿಗೆ ಬಾಲವೆತ್ತಿ ಬಂದು ಮೈಗೆ ಮೈ ತಿಕ್ಕತೊಡಗಿತು. ಬಹುಶಃ ಅವಳನ್ನು ಎಲ್ಲೆಲ್ಲಿಯೂ ಅರಸಿ ಕಾಣದೆ, ಕೋಣೆಯಲ್ಲಿ ಹುಡುಕಿ ನೋಡುವ ಸಲುವಾಗಿ ಬಾಗಿಲಿಗೆ ಬಂದು, ಅದೂ ಮುಚ್ಚಿದ್ದುದನ್ನು ಕಂಡು, ಬೆಳಕಂಡಿಯಿಂದ ನುಸುಳಿ ಬಂದಿತ್ತೆಂದು ತೋರುತ್ತದೆ ಆ ಬೀರಿಬೆಕ್ಕು. ಅದನ್ನು ಕಂಡು ಚಿನ್ನಮ್ಮನ ಹೃದಯದಲ್ಲಿ ಎಂತಹ ಅತ್ಮೀಯತೆ ಉಕ್ಕಿತೆಂದರೆ, ತನ್ನ ಅವ್ವನೆ ಬೆಕಿನ ನೆವದಲ್ಲಿ ತನ್ನನ್ನು ಸಂತೈಸಲು ಬಂದಿದ್ದಾಳೆಯೊ ಏನೊ ಎಂಬ ಅನುಭವ ಉಂಟಾಗಿ, ಮೈಮೇಲಣ ರೋಮ ಮುಳ್ಳುನಿಲ್ಲುವಂತಾಯ್ತು! ಬೀರಿಯ ತಲೆಯನ್ನು ಸವರುತ್ತಾ ಅದರ ಬಹು ಮೃದುವಾದ ಮೀಯಾವ್ ಮೀಯಾವ್ ಕರೆಯ ಸದ್ದನ್ನು ಸವಿದಳು. ಬೆಕ್ಕಾದರೂ ದಿಕ್ಕಾಯ್ತಲ್ಲಾ ಈ ಅನಾಥೆಗೆ ಎಂದುಕೊಂಡಿತು ಅವಳ ಮನಸ್ಸು: ಅವಳಿಗೆ ಹೇಗೆ ಗೊತ್ತಾಗಬೇಕು, ಯಾರೆ ಆಗಲಿ, ಯಾವುದೆ ಆಗಲಿ ಸೃಷ್ಟಿವ್ಯೂಹದಲ್ಲಿ ದಿಕ್ಕಿಲ್ಲದೆ ಇರುವುದಿಲ್ಲ ಎಂದು? ಆ ಬೆಕ್ಕಿನ ಮೀಯಾವ್ ಮೀಯಾವ್ ಕಾಕತಾಳೀಯವಾಗಿ

ತೋರಿದರೂ ಅವಳಿಗೆ ಸಂತೃಕೆ ನೀಡಿತ್ತು, ಅಶ್ವಾಸನೆಯನ್ನೂ ನೀಡಿತ್ತು-ಎಂಬುದು ಮಾತ್ರ ಅವಳ ಅರಿವಿಗೆ ಮೀರಿದ್ದಾಗಿತ್ತು. ಅವಳ ಮದುವೆ ಸಿಂಬಾವಿ ಭರಮೈ ಹೆಗ್ಗಡೆಯವರೊಡನೆ ನಡೆಯುವುದಾಗಲಿ ನಡೆಯದಿರುವುದಾಗಲಿ ಅವಳಿಗೆ ಮಾತ್ರ ಮಹದ್ವಿಷಯವಾಗಿರಲಿಲ್ಲ ಅವಳು ಮತ್ತು ಅವಳ ಭವಿಷ್ಯ. ಬಹುಶಃ ಅವಳ ಮಕ್ಕಳಲ್ಲಿ ಇಬ್ಬನೊ ಅಥವಾ ಮೊಮ್ಮಕ್ಕಳಲ್ಲಿ ಒಬ್ಬನೊ ಐತಿಹಾಸಿಕವಾಗಿಯೊ ಅಧ್ಯಾತ್ಮಿಕವಾದ ಅಧಾರಪಾತ್ರವಾಗಿರಬಾರದೇಕೆ? ಭೂತಕಾಲದ ಪ್ರಚೋದನೆ ಮಾತ್ರವಲ್ಲದೆ ಭವಿಷ್ಯತ್ಕಾಲದ ಆಕರ್ಷಣೆಯೂ ವರ್ತಮಾನದ ಚಲನವಲನಗಳನ್ನು ನಿರ್ಣಯಿಸುವ ಪ್ರಬಲ ಶಕ್ತಿಯಾಗಿರುತ್ತದೆ ಅಲ್ಲವೆ?...

ಯಾರೊ ದಡದಡನೆ ಬಾಗಿಲು ತಟ್ಟಿದರು! ಆ ತಟ್ಟುವ ರೀತಿಯಲ್ಲಿ ಅವಸರವೊ ಉದ್ವೇಗವೊ ವ್ಯಕ್ತವಾಗುವಂತಿತ್ತು. ಹಾಗಲ್ಲದಿದ್ದರೆ ತಟ್ಟುವವರು ಹುಡುಗರು ಮಾತ್ರವೆ ಆಗಿರಬೇಕು; ದೊಡ್ಡವರಾದರೆ ಮೆಲ್ಲಗೆ ತಟ್ಟುತ್ತಿದ್ದರು, ಇಲ್ಲದೆ ಕರೆಯುತ್ತಿದ್ದರು.... ಚಿನ್ನಮ್ಮ ಕುಳಿತಲ್ಲಿಂದ ಏಳದೆಯೆ ಆಲಿಸಿದಳು. ದಡದಡದಡ ತಟ್ಟುವುದು ನಿಂತು ಒಂದು ಬಾಲಕವಾಣಿ ಕೇಳಿಸಿತು: " ಅಕ್ಕಯ್ಯ,ಅಕ್ಕಯ್ಯ, ಬಾಗಿಲು ತೆಗಿ!" ಚಿನ್ನಮ್ಮ ಮುಖ ಒರಸಿಕೊಂಡು, ಸೀರೆ ಬಟ್ಟೆ ಸರಿಮಾಡಿಕೊಂಡು ಎದ್ದು ಹೋಗಿ ತಾಳ ತೆಗೆದಳು.

"ಅಕ್ಕಯ್ಯ! ಅಕ್ಕಯ್ಯ! ಕೇಳ್ದೇನು?" ಎಂದು ಮೇಲುಸಿರೆಳೆಯುತ್ತಲೆ ಒಳನುಗ್ಗಿದನು ಧರ್ಮು. ಚಿನ್ನಮ್ಮ ಮತ್ತೆ ಬಾಗಿಲು ಹಾಕಿ, ತಾಳವಿಕ್ಕಿ ಚಾಪೆಗೆ ನಡೆದಳು. ಹುಡುಗನ ಉದ್ವೇಗ ಅವಳಿಗೂ ತಗುಲತೊಡಗಿತ್ತು. ಕೇಳಿದಳು:

"ಏನೋ? ಏನೋ?....ಯಾಕೋ ಏದುತ್ತಿಯಲ್ಲಾ?"

"ನಮ್ಮ ತಿಮ್ಮಿಗಪ್ಪಯ್ಯ ಸಿಂಬಾವಿ ಗಂಡಿನ ಕಡೆ ಮದುವೆಗೆ ಹೋಗಿದ್ದವ ಬಂದಾನೆ...."

"ಯಾರೋ? ಹಳೆಮನೆ ತಿಮ್ಮಪ್ಪಣ್ಣೈನೇನೊ?"

"ಹ್ಞೂ ಅವನೇ."

"ಏನಂತ್ಯೋ?"

"ಸಿಂಬಾವಿ ಕಡೆ ಏನು ಮಳೆ ಅಂದ್ರೆ ಮಳೆಯಂತೆ! ಇಲ್ಲೀ ಮಳೆಗೆ ಹತ್ತರಷ್ಟೊ ನೂರತಷ್ಟೊ ಬರ್ತಾ ಇದೆಯಂತೆ!.... ಹಳ್ಳಾ ಎಲ್ಲಾ ತುಂಬಿ ಹರೀತವಂತೆ....'ಇವತ್ತೇನು ದಿಬ್ಬಣ ಧಾರೆಮೂಹೂರ್ತಕ್ಕೆ ಬರಾ ತರಾ ಇಲ್ಲ!' ಅಂತಾ ಇದ್ದ ಜಗಲೀಲಿ ನೆಂತರ ಹತ್ರ...."

"ಬರದೇ ಇದ್ದರೆ ಅಷ್ಟೇ ಹೋಯ್ತು! ಹಾಳಾಗಲಿ ಬಿಡು! ಋಣ ಕಡೀತು!...."

ಧರ್ಮು ಬೆರಗಾದವನಂತೆ ತನ್ನ ಚಿನ್ನಕ್ಕಯ್ಯನ ಕಡೆ ನೋಡಿದನು. ತಾನು ತರುವ ವಿಷಾದಕರ ವಾರ್ತೆಯಿಂದ ಇನ್ನೇನಾಗದಿದ್ದರೂ ಖಿನ್ನಳಂತೂ ಆಗಿಯೆ ಆಗುತ್ತಾಳೆ ಎಂದು ಹಾರೈಸಿದ್ದ ಅವನಿಗೆ ಚಿನ್ನಮ್ಮನ ಸಿಡುಕಿನ

ಶಾಪಸದೃಶವಾದ ಬಿರುನುಡಿಗಳನ್ನು ಕೇಳಿ ಸೋಜಿಗವಾಯಿತು. ಅಕ್ಕಯ್ಯ ಏಕೋ ಮುನಿಸಿಕೊಂಡಿದ್ದಾಳೆ ಎಂದು ಭಾವಿಸಿದನು. ಮರುಕ್ಷಣದಲ್ಲಿಯೆ ಅವನ ಮನಸ್ಸಿಗೆ ಇನ್ನೊಂದು ವಿಷಯದ ಬೆಳಕು ಹೊಳೆದಂತಾಯಿತು. ಆ ವಿಷಯ ಅವನಿಗೆ ಹೆಚ್ಚೇನೂ ತಿಳಿದಿರಲಿಲ್ಲ; ಅವನ ವಯಸ್ಸಿಗೆ ವಿಶೇಷವಾಗಿ ಅರ್ಥವಾಗುವಂತೆಯೂ ಇರಲಿಲ್ಲ. ಆದರೂ ತನ್ನ ಕೋಣೂರು ಮುಕುಂದಮಾವನಿಗೆ ಹೂವಳ್ಳಿ ಚಿನ್ನಕ್ಕಯ್ಯನನ್ನು ಕೊಟ್ಟು ಮದುವೆಯಾಗುತ್ತದಂತೆ ಎಂಬರ್ಥದ ಸಂಬಂಧವನ್ನು ಅವರಿಬ್ಬರಲ್ಲಿಯೂ ಕಲ್ಪಿಸಿಕೊಂಡಿತ್ತು ಅವನ ಮನಸ್ಸು. ಆದರೆ ಅಂತಹ ಹೆಣ್ಣು ಗಂಡಿನ ಮದುವೆ ಮಾತುಗಳು ಎಷ್ಟೋ ಆಗಿ, ಹೋಗಿ, ಕಡೆಗೆ ಯಾರೋ ಯಾರನ್ನೋ ಮದುವೆಯಾಗುತ್ತಿದ್ದುದು ಆ ನಾಡಿನ ಸಹಜ ಜೀವನ ವ್ಯಾಪಾರಗಳಲ್ಲಿ ಒಂದಾಗಿದ್ದುದರಿಂದ ಅಂಥಾದ್ದನ್ನು ಯಾರೂ ವಿಶೇಷವಾಗಿ ಮನಸ್ಸಿಗೆ ಹಾಕಿಕೊಳ್ಳುತ್ತಿರಲಿಲ್ಲ. ಇನ್ನು ಸಣ್ಣ ಹುಡುಗರಿಗೆ ಅದರಲ್ಲಿರಬಹುದಾದ ವಿಶೇಷಾರ್ಥ ಹೇರೆತಾನೆ ಅರಿವಿಗೆ ಬಂದೀತು?

ಯಾವಾಗ ಮುಕುಂದಮಾವನ ಆಲೋಚನೆ ಮನಸ್ಸಿಗೆ ಬಂದಿತೋ ಹುಡುಗ ಸಹಜವಾಗಿಯೆ ಕೇಳಿದನು: "ಅಕ್ಕಯ್ಯ, ಮುಕುಂದ ಮಾವ ಯಾಕೆ ಮದೇಮನೆಗೆ ಬಂದೇ ಇಲ್ಲಾ?...."

ಪ್ರಶ್ನೆಯೇನೊ ತುಂಬಾ ಸರಳವಾಗಿಯೆ ಇತ್ತು. ಆದರೆ ಎಂತಹ ಭಯಂಕರ ಜಟಿಲತೆಯನ್ನು ಕೆರಳಿಸೆಬ್ಬಿಸಿತ್ತು ಚಿನ್ನಮ್ಮನ ಹೃದಯದಲ್ಲಿ!

ಅವಳ ಮುಖ ಸಣ್ಣದಾಯಿತು. ಕೋಣೆಯಲ್ಲಿ ಅಷ್ಟು ಮಬ್ಬು ಬೆಳಕಿರದಿದ್ದರೆ, ಬಣ್ಣ ಬದಲಾಯಿಸಿದ್ದನ್ನೂ ಗಮನಿಸುತ್ತಿದ್ದನೊ ಏನೊ, ಧರ್ಮು. ತುಟಿ ಅಳತೊಡಗುವ ಮಕ್ಕಳ ತುಟಿಗಳಂತೆ ತುಸು ನಡುಗುತ್ತಾ ಮುಂಚಾಚಿದಂತಾದುವು. ಕಣ್ಣು ಹನಿಗೂಡಿದುವು. ತನ್ನಿಂದ ತಡೆಯಲಾಗದ ಭಾವಗೋಪನಕ್ಕಾಗಿ ಮಾತಿಲ್ಲದೆ ಮುಖ ತಿರುಗಿಸಿಕೊಂಡಳು.

ಅಕ್ಕಯ್ಯಗೆ ಮಹಾಸಂಕಟಕರವಾಗುವ ಅಪರಾಧವನ್ನೆಸಗಿದಂತವನಾಗಿ ಧರ್ಮು, ಕಂಪದ ಗದ್ದೆ ಎಂಬುದು ಗೊತ್ತಿಲ್ಲದೆ ಅದರ ಅಂಚಿನ ಮೇಲೆ ನಡೆಯುವವನು ಕೆಳಗೆ ಒಂದು ಕಾಲು ಹಾಕಿ ಫಕ್ಕನೆ ಅದನ್ನೆತ್ತಿಕೊಳ್ಳುವಂತೆ, ತಟಕ್ಕನೆ ವಿಷಯದ ದಿಕ್ಕನೆ ಬದಲಾಯಿಸಿದನು: "ಅಕ್ಕಯ್ಯ, ಕಾಡಣ್ಣಯ್ಯಗೆ ಕಾಲಿಗೆ ಮುಳ್ಳು ಚುಚ್ಚಿಕೊಂಡಿತ್ತಲ್ಲಾ? ಅದೀಗ ಕೀತು ಸಿಡೀತಾ ಅದೆಯಂತೆ, ಜರ ಬಂದು ನಡುಗ್ತಾಕೂತಾನೆ ಜಗಲೀಲ."

ಚಿನ್ನಮ್ಮ ತನ್ನ ದುಃಖವನ್ನೆಲ್ಲ ಬದಿಗೊತ್ತಿದಂತೆ ಸೆರಗಿನಿಂದ ಕಣ್ಣೊರಸಿಕೊಂಡು ಹೇಳಿದಳು, ಸಾಧಾರಣ ಧ್ವನಿಯಲ್ಲಿ: " ಹೋಗೋ, ಕರಕೊಂಡು ಬಾರೋ ಅವನ್ನ. ಒಂದು ಚೂರು ಕಾಡು ಜೀರಿಗೆ ತಿನ್ನಿಸಿ, ಬಿಸಿ ನೀರು ಕುಡಿಸಿ, ಬೆಚ್ಚಗೆ ಹೊದಿಸಿ, ಮಲಿಗಿಸ್ಯಾರು ಮಲಗಿಸ್ತೀನಿ, ಪಾಪ!.... ಹೆಂಗಾರು ಮಾಡಿ ಕಾಲಿನ ಮುಳ್ಳು ತೆಗೆದು, ಕೀವು ಬಿಡಿಸದೆ ಇದ್ದರೆ....ಛೇ ಪಾಪ!....

ಅಕ್ಕನಲ್ಲಾದ ಬದಲಾವಣೆಗೆ ಹರ್ಷಚಿತ್ತನಾಗಿ ಧರ್ಮು ಕಾಡುವನ್ನು ಕರೆತರಲು ಜಗಲಿಗೆ ಓಡಿದನು....

ಕಾಡುಗೆ ಕಾಡುಜೀರಿಗೆ ತಿನ್ನಿಸಿ, ಬಿಸಿ ನೀರು ಕುಡಿಸಿ, ಚೆನ್ನಾಗಿ ಹೊದಿಸಿ ಮಲಗಿಸಿ, ನಾನಾ ರೀತಿಯ ಸಮಾಧಾನವನ್ನು ಹೇಳಿ ಉಪಾಯದಿಂದ ಕಾಲಿನ ಕೀವು ಬಿಡಿಸಿ, ಒಳಗೆ ಮುರಿದುಕೊಂಡಿದ್ದ ಅಂಕೋಲೆ ಮುಳ್ಳಿನ ಅರ್ಧ ಚೂರನ್ನು ಹೊರತೆಗೆದು ಮುಗಿಸುವಷ್ಟರಲ್ಲಿ ಬೈಗು ಕಪ್ಪಾಗಿತ್ತು. ಯಾರೋ ಹೊತ್ತಿಸಿದ್ದ ಒಂದು ಹಣತೆಯ ಬೆಳಕೂ ಕೋಣೆಯನ್ನು ತುಸು ಬೆಳಗತೊಡಗಿತ್ತು.

ಕಾಡುಗೆ ಚಿಕಿತ್ಸೆ ನಡೆಯುತ್ತಿದ್ದಾಗ ಒಳಗೂ ಹೊರಗೂ ಬಂದೂ ಹೋಗಿ, ಹೋಗೀ ಬಂದು ಮಾಡುತ್ತಲೆ ಇದ್ದ ಚಟುವಟಿಕೆಯ ತಿಮ್ಮು ಏನೇನೊ ವಾರ್ತೆಗಳನ್ನು ತಂದೂ ತಂದೂ ಅಕ್ಕಯ್ಯಗೆ ಹೇಳುತ್ತಲೆ ಇದ್ದನು. ಗುರು ಲಘು ಬೇದವಿಲ್ಲದ ಆ ಸುದ್ದಿಗಳಲ್ಲಿ ಬಹುಪಾಲು ನಗೆಯ ವಿಷಯಗಳೆ ಆಗಿರುತ್ತಿದ್ದುವು. ಆದರೆ ಕತ್ತಲಾಗಿ ದೀಪ ಹೊತ್ತಿಸಿದ ಮೇಲೊಮ್ಮೆ ಕೋಣೆಯಿಂದ ಹೊರಬಿದ್ದವನು ಬಹಳ ಹೊತ್ತಿನವರೆಗೂ ಒಳಗೆ ಬರಲಿಲ್ಲ. ಆಮೇಲೆ ದಡದಡನೆ ಒಳಗೆ ಓಡಿ ಬಂದವನು ಹೇಳಿದನು: “ಅಕ್ಕಯ್ಯ, ಮಳೆ ಜೋರಾಗಿ ಹೊಡೀತಿತ್ತಂತೆ. ಇಳಿಜಾರಿನಲ್ಲಿ ದಂಡಿಗೆ ಹೊತ್ತವರು ಕಾಲುಜಾರಿ ಬಿದ್ದು, ದಂಡಿಗೆ ಒಳಗೆ ಕೂತಿದ್ದ ಮದುವನಗಗೆ ಸೊಂಟ ಉಳುಕಿಹೋಗದೆಯಂತೆ!....”

ಅವನು ಇನ್ನೂ ಮುಂದುವರಿಸುತ್ತಿದ್ದನೊ ಏನೊ? ಆದರೆ ಚಿನ್ನಮ್ಮ ಕಿಸಕ್ಕನೆ ನಕ್ಕು ಬಿಟ್ಟಿದ್ದನ್ನು ಕಂಡು ಅವಾಕಾದನು. ತನಗೆ ಗಂಡನಾಗುವವನ ಸೊಂಟ ಮುರಿದದ್ದನ್ನು ಕೇಳಿ ಹೆಂಡತಿಯಾಗುವವಳು ತಡೆಯಲಾರದೆ ನಕ್ಕಿದ್ದನ್ನು ಕಂಡು ಹುಡುಗನಿಗೆ ಸೋಜಿಗವಾಯಿತು ಆದರೆ ಮರುಕ್ಷಣದಲ್ಲಿಯೆ ಏಕೋ ಏನೋ ಅವನೂ ಗಹಗಹಿಸಿ ನಗತೊಡಗಿದನು: ಮತ್ತೆ ಹೇಳಿದನು ತುಸು ಮೂದಲಿಕೆಯ ದನಿಯಿಂದ: “ಹಂಗಾಗಬೇಕಲ್ಲೇನಕ್ಕಯ್ಯಾ ಅವರಿಗೆ? ಹಿಹ್ಹಿಹ್ಹಿಹಿಹಿ!”

ಇಬ್ಬರೂ ಒಟ್ಟಿಗೆ ಚೆನ್ನಾಗಿ ನಗುವುದನ್ನು ಕೇಳಿ ಜ್ವರತಪ್ತನಾಗಿ ಮಲಗಿದ್ದ ಕಾಡುವೂ ನಗತೊಡಗಿದನು. ಧರ್ಮು ಅಲ್ಲಿ ಇದ್ದಿದ್ದರೆ ಅವನೂ ಸೇರುತ್ತಿದ್ದನೊ ಆ ನಗುವಿನ ಹೊನಲಿಗೆ: ಅಷ್ಟು ಹಾಸ್ಯಾಸ್ಪದವಾಗಿತ್ತು ದಂಡಿಗೆಯವರು ಜಾರಿ ಬೀಳುವ ಮತ್ತು ಮದುಮಗನ ಸಾಲಂಕೃತ ಸೊಂಟಮುರಿಯುವ ದೃಶ್ಯ! ಅಷ್ಟರಲ್ಲಿ ಗರತಿಯರು ಕೆಲವರು ಬಂದು ಮದುಮಗಳನ್ನು ಶಾಸ್ತ್ರ ಮಾಡಿಸಲು, ಶೃಂಗಾರಗೈದು, ಧಾರೆಯ ಮಂಟಪಕ್ಕೆ ಸಿದ್ಧಗೊಳಿಸುವುದಕ್ಕಾಗಿ ಕರೆದೊಯ್ದರು.

ಕೋಣೆಯೆಲ್ಲ ನಿಃಶಬ್ದವಾದ ಮೇಲೆ, ಕಾಡು ಒದ್ದನೆಯ ಆಗ ಬಾರದೆಂದು ಜೊತೆ ಕುಳಿತಿದ್ದ ತಿಮ್ಮು “ಹಿಹ್ಹಿಹ್ಹಿಹ್ಹಿ! ಕಾಡಣ್ಣಯ್ಯ, ಆ ಮತ್ತಿಗೇರಿ ಅತ್ತೆಮ್ಮನ ಬಾಲೆ.... ಥೂ ಥೂ ಥೂ!....” ಅದನ್ನು ನೆನೆನೆನೆದು ಹುಡುಗರಿಬ್ಬರೂ ನಗತೊಡಗಿದರು, ಒಬ್ಬರಿಗೊಬ್ಬರು ಕಚಗುಳಿ. ಇಟ್ಟುಕೊಂಡರೊ ಎಂಬಂತೆ.

* * *

ಬೈಗಾಯ್ತು; ಕಪಾಯ್ತು; ಕತ್ತಲಾಯ್ತು; ರಾತ್ರಿಯೂ ಸುದೂರ ಸಾಗಿತ್ತು. ಹಣತೆಗಳು, ಚಿಮಿಣಿಗಳು, ದೊಂದಿಗಳು, ಬೆಟ್ಟಳ್ಳಿಯಿಂದ ತಂದಿದ್ದು ನವನಾಗರಿಕತೆಯ ಲಾಂಛನಗಳಾಗಿದ್ದ ಲಾಟೀನು ಲ್ಯಾಂಪುಗಳು ಅಲ್ಲಲ್ಲಿ, ಅವು ಅವುಗಳಿಗೆ ಉಚಿತವಾಗಿದ್ದ ಸ್ಥಾನಗಳಲ್ಲಿ ಉರಿಯತೊಡಗಿದ್ದುವು. ಮದುವೆಗೆ ನೆರೆದಿದ್ದವರು ಸ್ವಲ್ಪವೆ ಸಂಖ್ಯೆಯ

ಜನಗಳಾದರೂ ಅಲ್ಲಲ್ಲಿ ಗುಂಪುಗುಂಪಾಗಿ ಕುಳಿತು ಗುಜು ಗುಜು ಮಾತನಾಡಿಕೊಳ್ಳುತ್ತಿದ್ದುದು ಆ ಪುರಾತನ ಕಾಲದ ದೊಡ್ಡ ಮನೆಯ ತುಂಬ ಒಂದು ಜೇನುಗೂಡಿನ ಝೇಂಕಾರದಂತಹ ಮೊರೆ ತುಂಬಿತ್ತು: ಕಲ್ಲೂರು ಗಣಪತಿ ಸಾವಿರಕಾಯಿ ಒಡೆಸುವುದಾಗಿ ಹಾಸಿಗೆ ಹಿಡಿದಿದ್ದ ವೆಂಕಪ್ಪನಾಯಕರು ಹರಕೆ ಹೊತ್ತಿದ್ದರೂ ಮಳೆ ನಿಂತಿರಲಿಲ್ಲ; ಕಡಮೆಯಾಗಿರಲೂ ಇಲ್ಲ. ಸಿಂಬಾವಿಯಿಂದ ಬರಬೇಕಾಗಿದ್ದ ದಿಬ್ಬಣವನ್ನು ನಾನಾ ಭಾವಭಂಗಿ ಗಳಿಂದ ನಿರೀಕ್ಷಿಸುತ್ತಾ ವಿವಿಧ ಸ್ವರೂಪದ ವ್ಯಾಖ್ಯಾನ ಟೀಕೆಗಳನ್ನು ಮಾಡುತ್ತಾ, ಇಡಿಯ ಮನೆಯ, ಗರತಿಯರೂ ಗಿರಾಸ್ತರೂ ಅಡುಗೆಯವರೂ ಆಳುಗಳೂ ಎಲ್ಲ ಕಾಯುತ್ತಿದ್ದರು:

“ಹೋಯ್, ಕಡೆಗೂ ಗಂಡಿನ ಕಡೆ ದಿಬ್ಬಣ ಬರ್ತದೆಯೋ ಇಲ್ಲೋ?….”

“ಆವಾಗ ಒಂದು ಸಾರಿ, ಎಲ್ಲೋ ದೂರದಾಗೆ, ಕೊಂಬಿನ ಕೂಗು ಕೇಳಿಸಿಧಾಂಗೆ ಆಯ್ತಪ್ಪಾ….”

“ಯಾವಾಗ್ಲೋ?”

“ದೋಯಿಸ್ರು ಬಂದ್ರಲ್ಲಾ ಆವಾಗ…”

“ಏ ! ಅದಿಲ್ಲೇ ನಮ್ಮ ಹಳೆಮನೆ ಹೊಲೇರು ಊದಿದ್ದಿರ್ಬೇಕು.”

“ದೋಯಿಸ್ರೇ ಹೇಳಿದರಂತೊ ‘ಅಲ್ಲೆಲ್ಲೋ ದೂರದಲ್ಲಿ ದಿಬ್ಬಣದ ಸದ್ದು ಕೇಳಿದ್ಹಾಂಗೆ ಆಗ್ತಿತ್ತು.’ ಅಂತಾ….”

“ದಂಡಿಗೀನ ಹೊತ್ಕೊಂಡು ಬಿದ್ರಂತಲ್ಲಾ ಬೋವೇರು ಜಾರಿ!….ಮದುವನಗಗೆ ಸೊಂಟಾನೆ ಉಳುಕ್ತು ಅಂತಾ ಹೇಳ್ತಿದ್ರಂತೆ?….”

“ಅದೆಲ್ಲಾ ಸುಳ್ಳಂತೋ… ಜಾರಿ ಬಿದ್ದಿದ್ದೇನೊ ಹೌದಂತೆ, ಆದರೆ ಸೊಂಟಗಿಂಟ ಮುರಿದಿದ್ದು ಸುಳ್ಳಂತೆ….”

“ಹೆಗ್ಗಡೇರ ಹಿರೇ ಹೆಂಡ್ತಿ, ಅದೇ ಮೊದಲನೆ ಹೆಂಡ್ತಿ ಜಟ್ಟಮ್ಮ ಹೆಗ್ಗಡ್ತೇರು, ‘ಅಪಶಕುನ ಆಯ್ತು. ದಿಬ್ಬಣ ಮುಂದೆ ಹೋಗಾದೆಬ್ಯಾಡ, ಅಂತಾ ಕೂತುಬಿಟ್ಟಿದ್ರಂತೆ?”

“ಆದ್ರೆ, ಹೆಗ್ಗಡೇರು ಬಿಡ್ತಾರೇನೋ? ಇಂಥಾ ಹೆಣ್ಣು ಕಿರೀ ಹೆಂಡ್ತಿ ಆಗಿ ಬರುವಾಗ?….”

“ಅಲ್ಲಿ ನೋಡಲ್ಲಿ! ಯಾರೋ ದಿಬ್ಬಣದ ಕಡೇರು ಬಂಧಾಂಗೆ ಕಾಣ್ತದೆ…. ಏನಂತೆ ಹೋಗಿ ಕೇಳಿಕೊಂಡಾದ್ರೂ ಬರ್ತೀನಿ….”

ಮಾತಾಡುತ್ತಿದ್ದವನು ಎದ್ದುಹೋಗಿ,ಹೊಸದಾಗಿ ಮಳೆಯಲ್ಲಿ ನೆನೆದು ಬಂದಿದ್ದ ಒಬ್ಬನೊಡನೆ, ಸುತ್ತಲೂ ಮುತ್ತಿಕೊಂಡು ಪ್ರಶ್ನೆಗಳ ಸುರಿಮಳೆ ಸುರಿಸಿ ಮಾತಾಡುತ್ತಿದ್ದ ಗುಂಪಿನಲ್ಲಿ ಸೇರಿದನು.

ದಿಬ್ಬಣದವರೇನೊ ಕೋಡ್ಲುಹಳದ ದಂಡೆವರೆಗೂ 'ಹಾಂಗೂ ಹೀಂಗೂ ಮಾಡಿ' ಬಂದಿದ್ದಾರೆಂದೂ, ಹಳ್ಳ ತುಂಬಿ ಹರಿಯುತ್ತಿರುವುದರಿಂದ, ಮಳೆ ಸ್ವಲ್ಪ ಕಡಿಮೆಯಾಗಿ, ಹಳ್ಳದ ನೀರು ಇಳಿಯುವುದನ್ನೆ ಕಾಯುತ್ತಿದ್ದಾ ರೆಂದೂ ಗೊತ್ತಾಯಿತು. ಹಳ್ಳದ ಮತ್ತು ಅದರ ಆಳವಿರುವ ಮತ್ತು ಆಳವಿರದಿರುವ ಜಾಗಗಳ ಪರಿಚಯವಿರುವ ಊರು ಮನೆಯವರನ್ನು ಕಳಿಸಿ ದಿಬ್ಬಣದವರನ್ನೂ ದಂಡಿಗೆಯಮ್ನೂ ದಾಟಿಸುವ ಕೆಲಸಕ್ಕೆ ಹಚ್ಚಿದರು. ಅವರು ದಿಬ್ಬಣದವರು ಕಾಯುತ್ತಿದ್ದೆಡೆಗೆ ಹೋಗಿ ಈಚೆಯ ದಂಡೆಯಿಂದಲೆ ಕೂಗಿ ಹೇಳಿ, ಅರ್ಧಮೈಲಿಯ ಮೇಲುಭಾಗದಲ್ಲಿ ಹಳ್ಳ ಅಗಲವಾಗಿ ನೀರು ಅಳವಿಲ್ಲದೆ ಹರಿಯುತ್ತಿದ್ದ ಕಲ್ಲು ಕಲ್ಲು ಜಾಗದಲ್ಲಿ ದಿಬ್ಬಣದವರನ್ನೂ ದಂಡಿಗೆಯವರನ್ನೂ ಎಚ್ಚರಿಕೆಯಿಂದ ದಾಟಿಸಿದರು.

ಅಂತೂ ದಿಬ್ಬಣದವರೂ ದಂಡಿಗೆಯೂ, ಹೂವಳ್ಳಿಯ ಮನೆಯ ಮುಂದಣ ಗದ್ದೆ ಬಯಲಿನ ಹಕ್ಕಲ ಬಳಿಗೆ ಬಂದುವನ್ನು ಸಾರಲು ಕೊಂಬು ಕೂಗಿದುವು, ಕದಿನಿ ಹಾರಿದುವು, ತಂಬಟೆ ಬಾರಿಸಿದುವು. “ದಿಬ್ಬಣ ಬಂತು! ದಿಬ್ಬಣ ಬಂತು!” ಎಂದು ಎಲ್ಲೆಲ್ಲಿಯೂ ಗದ್ದಲ ಸಂಭ್ರಮ ತೆರೆಯುಕ್ಕಿತು! ಎರಡು ಕಡೆಯ ವಾಲಗ ವಾದ್ಯಗಳೂ ಭೋರ್ಗರೆಯಿತು:

ಸರ್ವಾಲಂಕಾರ ಭೂಷಿತೆಯಾಗಿ, ಗರತಿಯರು ಸುತ್ತುಗಟ್ಟಿರಲು ಗೋಡೆಗೆ ಬೆನ್ನೊರಗಿ ತಲೆಬಾಗಿ ಕುಳಿತಿದ್ದ ಮದುಮಗಳು, ಚಿನ್ನಮ್ಮ, ಗಂಭೀರ ಚಿಂತಾಮಗ್ನೆಯಾಗಿ ತನ್ನ ದೈವವನ್ನು ನೆನೆಯುತ್ತಾ ಅಗಾಗ್ಗೆ ಕಣ್ಣೊರಸಿಕೊಳ್ಳುತ್ತಿದ್ದಳು. ಸುತ್ತ ಹತ್ತಿರವಿದ್ದ ಮುತ್ತೈದೆಯರು ಅವಳ ಕಣ್ಣೀರಿಗೆ ತಮ್ಮದೆ ಆದ ರೀತಿಯಲ್ಲಿ ವ್ಯಾಖ್ಯಾನಮಾಡಿಕೊಂಡು ಅವಳನ್ನು ಸಮಾಧಾನಪಡಿಸಲೆಂದು ಉಸಿರಿದ ಮಾತುಗಳೆ ಅವಳ ದುಃಖಕ್ಕೆ ಕಾರಣವಾಗಿ ಚಿನ್ನಮ್ಮ ಮತ್ತಷ್ಟು ಹತಾಶೆಯಾಗಿ ವಿಹ್ವಲಗೊಳ್ಳುತ್ತಿದ್ದಳು. ಧರ್ಮು ತಿಮ್ಮು ಹೇಳಿದ್ದ ಸುದ್ದಿಗಳಿಂದಲೂ, ಮತ್ತು ಸುತ್ತಮುತ್ತಲಿದ್ದ ವಯಸ್ಸಾದ ಹೆಗ್ಗಡಿತಿಯವರು ತಮ್ಮ ತಮ್ಮೊಳಗೆ ಆಡಿಕೊಳ್ಳುತ್ತಿದ್ದಮಾತುಗಳಿಂದಲೂ, ಮಳೆಬಿಡದೆ ಹೊಡೆಯುತ್ತಿದ್ದುದರಿಂದಲೂ, ದಿಬ್ಬಣದವರು ರಾತ್ರಿ ಬಹಳ ಹೊತ್ತಾದರೂ ಬಾರದೆ ಇದ್ದುದರಿಂದಲೂ ಆ ದಿನ ತನಗೊದಗಲಿರುವ ಮದುವೆಯ ದುರಂತ ತನ್ನ ಪಲಾಯನರೂಪದ ಪ್ರಯತ್ನ ವಿಲ್ಲದೆಯೆ ದೇವರ ದಯೆಯಿಂದ ನಿಂತರೂ ನಿಲ್ಲ ಬಹುದೆಂದು ಹಾರೈಸಿದ್ದಳು. ಹಿತ್ತಲು ಕಡೆಯ ಹಂಡೆಯ ಸದ್ದು ಯಾವಾಗಬೇಕಾದರೂ ಕೇಳಿಸ ಬಹುದೆಂದು ಅತ್ತಕಡೆ ಕಿವಿಯಾಗಿಯೆ ಕುಳಿತಿದ್ದಳು. ನಾಗಕ್ಕನೂ ಅಗಾಗ ಮದುಮಗಳಿಗೆ ಏನನ್ನೊ ಹೇಳುವ ನೆವದಿಂದ ಬಂದು ಅವಳ ಕಿವಿಯಲ್ಲಿ ಧೈರ್ಯದ ಮಾತುಗಳನ್ನು ಹೇಳಿ ಹೋಗುತ್ತಿದ್ದಳು: ಪಕ್ಕದಲ್ಲಿದ್ದ ಗರತಿಯರು ಯಾಕೆ? ಏನು? ಎಂತು? ಎಂದು ವಿಚಾರಿಸಿದಾಗ ನಾಗಕ್ಕ 'ಹುಡುಗಿಗೆ ಏನೂ ಸ್ವಲ್ಪ ಹೊಟ್ಟೆ ಸರಿಯಾಗಿಲ್ಲ ' ಎಂದೂ, 'ತಲೆನೋವು' ಎಂದೊ 'ಅದಕ್ಕೆ ಏನಾದರೂ ಕುಡಿಯುವುದಕ್ಕೆ ಬೇಕೇನೋ ಎಂದು ಕೇಳಿದೆ.' ಎಂದೊ ನೆವಹೇಳುತ್ತಿದ್ದಳು. ದಿಬ್ಬಣ ಕೋಡ್ಲುಹಳ್ಳದ ದಂಡೆಗೆ ಮುಟ್ಟಿ, ನೀರು ಇಳಿಯುವುದನ್ನೆ ಕಾಯುತ್ತಿದೆ=ಎಂಬ ಸುದ್ದಿ ಬಂದಾಗ, ಮದುವೆಗೆ ಬಂದಿದ್ದ ನೆಂಟರಮ್ಮರೆಲ್ಲ ತಾವು ಬಂದದ್ದು ವ್ಯರ್ಥವಾಗಲಿಲ್ಲವಲ್ಲಾ ಎಂಬ ತೃಪ್ತಿಯಿಂದ ನಿಡುಸುಯ್ದು ಸಂತಸ ಗೊಂಡಿದ್ದರು. ಅದೇ ಸುದ್ದಿ ಚಿನ್ನಮ್ಮನ ಹೃದಯಕ್ಕೆ ಸಿಡಿಲಾಗಿ ಎರಗಿತ್ತು.

'ಏಕಿನ್ನೂ ಹಂಡೆಯ ಸದಾಗಲಿಲ್ಲ? ನನ್ನನ್ನು ಇಲ್ಲಿಂದ ಮೊದಲೇ ಏಕೆ ಪಾರು ಮಾಡಬಾರದಾಗಿತ್ತು? ಮುಕುಂದಬಾವಗೆ ನಾನು ಬೇಡವಾದೆನೆ?'-ಚಿನ್ನಮ್ಮನ ಶಂಕೆ ಉದ್ವೇಗ ಗರಗಸವಾಗಿ ಹೃದಯದ ಮೇಲೆ

ಹರಿಯತೊಡಗಿತ್ತು. ಮಡಿಲಿನಲ್ಲಿ ಆ ವಿಷದ ಪೊಟ್ಟಣವಾದರೂ ಇದೆಯೆ? ನೋಡಿಕೊಂಡಳು ಕೈತಡವಿ. ಅದೂ ಇರಲಿಲ್ಲ. 'ಅಯ್ಯೋ, ನಾಗಂದಿಗೆಯ ಮೇಲೆ ಇಟ್ಟವಳು ಮರತೇ ಬಂದುಬಿಟ್ಟೆನಲ್ಲಾ!' ಎಂದುಕೊಂಡು ಅತ್ತ ಇತ್ತ ಗಾಬರಿಗೊಂಡವಳಂತೆ ಕಣ್ಣು ಹಾಯಿಸತೊಡಗಿದಳು.

"ಯಾಕೇ? ಮದೋಳ್ಗಿಗೆ ಹೊಟ್ಟೆಗಿಟ್ಟೆ ನೋಯ್ತುದೇನೆ?" ಹತ್ತಿರವಿದ್ದು ಗಮನಿಸಿದ ನೆಂಟರಮ್ಮ ಒಬ್ಬರು ಕೇಳಿದರು.

"ನಾಗಕ್ಕನ ಬರಾಕೆ ಹೇಳಬೇಕಂತೆ." ಸಖಿಯತನವನ್ನು ವಹಿಸಿಕೊಂಡು ಮೆರೆಯುತ್ತಿದ್ದ ಹುಡುಗಿಯೊಬ್ಬಳು ಹೇಳಿದಳು.

ಯಾರೊ ಹೋಗಿ ನಾಗಕ್ಕಗೆ ಹೇಳಿದರು. ಅವಳು ಬಂದು ವಿಚಾರಿಸಿದಾಗ ಅವಳ ಕಿವಿಯಲ್ಲಿ ಚಿನ್ನಮ್ಮ ಪಿಸುಗುಟ್ಟಿದಳು.ನಾಗಕ್ಕ ಮದುಮಗಳನ್ನುಃ ಎಬ್ಬಿಸಿ ಕರೆದೊಯ್ದಳು.

ಚಿನ್ನಮ್ಮ ತನ್ನ ಕೋಣೆಗೆ ಹೋಗಿ, ನಾಗಕ್ಕಗೆ ಬಾಗಿಲು ತಾಳ ಹಾಕುವಂತೆ ಹೇಳಿ ವಿಷವಿದ್ದ ಕರಡಿಗೆಗೆ ಕೈಹಾಕಿ, ಅದರಲ್ಲಿದ್ದ ಪೊಟ್ಟಣವನ್ನು ತೆಗೆದು ಮಡಿಲಿಗೆ ಹಾಕಿಕೊಳ್ಳುತ್ತಿದ್ದಾಗ, ನಾಗಕ್ಕಗೆ ಎಲ್ಲವೂ ತಟಕ್ಕನೆ ಅರ್ಥವಾಗಿ, ಅದನ್ನು ಕಸಿದುಕೊಂಡಳು. ಆಗಲೆ ಕೇಳಿಸಿದ್ದು, ಹಿತ್ತಲುಕಡೆಯ ಹಂಡೆಯನ್ನು ಬಡಿದ ಸದ್ದು!

ಆ ಸದ್ದಿನಷ್ಟು ಸಾಧಾರಣವಾದದ್ದು, ಯಕ್ಕಚ್ಚಿತವಾದದ್ದು, ಗಮನಾನರ್ಹವಾದದ್ದು, ಆ ಮದುವೆಮನೆಯ ಗಲಾಟೆಯಲ್ಲಿ ಅತ್ಯಂತ ನಿರ್ಲಕ್ಷಿತವಾದದ್ದು ಅಂದು ಆ ಹೂವಳ್ಳಿಯ ಜಗತ್ತಿನಲ್ಲಿ ಮತ್ತೊಂದಿರಲಿಲ್ಲ. ಆದರೆ ಚಿನ್ನಮ್ಮಗೂ ಅವಳ ಕ್ಷೇಮಕಾತರೆಯಾಗಿದ್ದ ನಾಗಕ್ಕಗೂ ಆ ನಾದಸಂಕೇತ ಮೋಕ್ಷದ್ವಾರಕ್ಕೂ ಮಿಗಿಲಾಗಿತ್ತು!

ಇಬ್ಬರಿಗೂ ಮಿಂಚು ಮುಟ್ಟಿದಂತಾಗಿ ನಿಮಿರಿ ನಿಂತು ಆಲಿಸಿದರು. ಮೈ ಬಿಸಿಯೇರಿ ಉಸಿರಾಟ ಸೋದ್ವಿಗ್ನವಾಯಿತು. ಬಾಯಿಗಿಂತಲೂ ಹೆಚ್ಚಾಗಿ ಕಣ್ಣುಗಳೆ ಮಾತಾಡಿಕೊಂಡವು.

ಚಿನ್ನಮ್ಮ ಬೇಗಬೇಗನೆ ಸುಲಭವಾಗಿ ಕಳಚಿಬಿಡಬಹುದಾಗಿದ್ದ ಒಡವೆಗಳನ್ನು, ಅದರಲ್ಲಿಯೂ ಭಾರವಾಗಿದ್ದು ಚಲನೆಗೆ ತೊಡಕು ಮಾಡುವ ಕಟ್ಟಾಣಿ ಮತ್ತು ಜಡೆಬಿಲ್ಲೆಯ ಸರಮಾಲೆಗಳಂತಹ ಆಭರಣಗಳನ್ನು, ತೆಗೆ ತೆಗೆದು ನಾಗಕ್ಕನ ಕೈಗೆ ಕೊಟ್ಟಳು. ಅವಳು ಪಕ್ಕದಲ್ಲಿದ್ದ ಸಂದುಕಕ್ಕೆ ಅವನ್ನು ಹಾಕಿ "ಹೊತ್ತಾಯ್ತು! ಬ್ಯಾಗ!" ಎಂದು ಎಚ್ಚರಿಸಿದಳು.

ಹೊರಕ್ಕೆ ಹೊರಡಲೆಂದು ನಾಗಕ್ಕ ಬಾಗಿಲ ತಾಳಕ್ಕೆ ಕೈ ಹಾಕುತ್ತಿರಲು, ಚಿನ್ನಮ್ಮ ಅಳುದನಿಯಲ್ಲಿ ಬಿಕ್ಕುತ್ತಾ " ಅಜ್ಜಿಗೆ ಹೇಳಿಹೋಗ್ತೀನಿ, ನಾಗಕ್ಕಾ!" ಎಂದಳು.

"ಏನು ನೆಂಟರ ಮನೆಗೆ ಹೊರಟಿದ್ದೀನಿ ಅಂತಾ ಮಾಡೀಯೆನು? ನಿನ್ನ ಉಪಚಾರ ಮಾಡಿ ಕಳಿಸಿಕೊಡಾಕೆ? ಅಜ್ಜಿಗೆ ಗೊತ್ತಾದ್ರೆ ನಿನ್ನಗತಿ ಮುಗೀತು ಅಂತಾ ಇಟ್ಟುಗೊ.....!"

"ನಾನಿಲ್ಲ ಅಂತಾ ಗೊತ್ತಾದ ಕೂಡ್ಲೆ ಅಜ್ಜಿ ಎದೆ ಒಡೆದು ಸಾಯ್ತದೆ!... ನಾಗಕ್ಕಾ ನಾ ಹೋಗಾದಿಲ್ಲ; ನಾ ಒಲ್ಲೆ! ನಾ ಹಾಳಾದ್ರೆ ಅಷ್ಟೇ ಹೋಯ್ತು; ನೇಣು ಹಾಕ್ಕೊಳ್ತೀನಿ; ಇಲ್ದಿದ್ರೆ ಕೆರೇ ಬಾವಿ ಹಾರ್ತೀನಿ! ಏನಾದ್ರೂ ಮಾಡ್ಕೊಳ್ತೀನಿ!....ಅಜ್ಜಿ ಅತ್ತೂ ಅತ್ತೂ ಎದೆ ಒಡೆದೇ ಸಾಯ್ತದಲ್ಲಾ, ನಾ ಸತ್ತುಹೋದೆ ಅಂತಾ!"

ನಾಗಕ್ಕ ಒಂದು ಕ್ಷಣ ದಿಕ್ಕು ಕೆಟ್ಟಂತಾಗಿ ತತ್ತರಿಸಿದಳು. ಎಷ್ಟು ದಿನಗಳಿಂದ, ಎಷ್ಟು ಪ್ರಯತ್ನದಿಂದ ಮುಕುಂದಣ್ಣ ಚಿನ್ನಮ್ಮನಿಗಾಗಿಯೆ, ತನಗಾಗಿ ಮಾತ್ರವೆ ಅಲ್ಲ, ಕಷ್ಟಪಟ್ಟು ಕಟ್ಟಿದ್ದ ವ್ಯೂಹದ ಕೋಟೆ ಇದ್ದಕ್ಕಿದ್ದ ಹಾಗೆ ಧಸಕ್ಕೆಂದು ಬಿದ್ದು ಹೋಗುವುದರಲ್ಲಿದೆಯಲ್ಲಾ ಎಂಬ ಸಂಕಟದ ಚಪ್ಪಡಿಯಡಿ ಸಿಕ್ಕಿ ಜೀವವೆ ಅಪ್ಪಚ್ಚಿಯಾದಂತಾದಳು!

"ಅಯ್ಯೋ, ಚಿನ್ನೂ, ಯಾಕೆ ಹೀಂಗೆ ಮಾಡ್ತೀಯಾ? ನಿನ್ನ ಕುತ್ತಿಗೇನ ನೀನೇ ಕತ್ತರ್ಸಿಕೊಳ್ಳೋದಲ್ಲದೆ ನಮ್ಮೆಲ್ಲರ ಕುತ್ತಿಗೇಗೂ ತಂದಿಡ್ತಾ ಇದ್ದೀಯಲ್ಲಾ? ಮುಕುಂದಣ್ಣ ಏನಂತಾರೇ? ಈ ಮಳೇಲಿ, ಅಲ್ಲೆಲ್ಲೊ ಕಾಡಿನಲ್ಲಿ, ನೀರು ಬರ್ತೀಯ ಅಂತಾ ಕಾಯ್ತಾ ಇದ್ದಾರಲ್ಲಾ!.... ಅಲ್ಲಿ ಕೇಳ್ದೇನು? ಹಂಡೇ ಸದ್ದು! ಪೀಂಚಲು ಮತ್ತೆ ಬಡೀತಿದಾಳೆ!.... ನಿನ್ನ ದಮ್ಮಯ್ಯ ಅಂತೀನೇ! ನಿನ್ನ ಬಾಳ್ನೆಲ್ಲಾ ಬೂದಿ ಹುಯ್ಕೋಬ್ಯಾಡೇ! ನಿನ್ನ ದಮ್ಮಯ್ಯ ಅಂತೀನೇ! ನಿನ್ನ ಅಜ್ಜಿಗೆ ಏನು ಹೇಳಬೇಕೋ ಅದ್ನೆಲ್ಲಾ ನಾನೆ ಹೇಳ್ತೀನೇ, ಪುಣ್ಯಾತಗಿತ್ತೀ!.... ಹೊತ್ತಾಯ್ತು! ಬಾ, ಕಣ್ಣೊರ್ಸಿಕೊ! ಯಾರಿಗೂ ಗೊತ್ತಾಗಬಾರದು; ಹೊರಕಡೀಗೆ ಹೋಗ್ತೀಯಾ ಅಂತಾ ಹೇಳ್ತೀನಿ, ಯಾರಾದ್ರೂ ಕೇಳಿದ್ರೆ. ಬಾ ನನ್ನ ಹಿಂದೆ!"

ಚಿನ್ನಮ್ಮಗೆ ಮಾತಾಡಲೂ ಅವಕಾಶವಾಗದ ರೀತಿಯಲ್ಲಿ ಅವಳ ಕೈ ಹಿಡಿದೆಳೆದುಕೊಂಡೆ ಬಾಗಿಲು ದಾಟಿದಳು ನಾಗಕ್ಕ. ಜನಸಂದಣಿಯ ನಡುವೆ ನಡೆದು, ಹಂಡೆಯ ಕಡೆಯಿಂದ ಓಡಿ ಬಳಿಗೆ ಬಂದ, ಗಟ್ಟದ ಮೇಲಣ ಉಡುಗೆ ಉಟ್ಟಿದ್ದ ಪೀಂಚಲುವಿಗೆ ಏನನ್ನೊ ಹೇಳಿ, ನೀರಿನ ತಂಬಿಗೆಯನ್ನು ಅವಳ ಕೈಗೆ ಕೊಟ್ಟು, ಹಿತ್ತಲು ಕಡೆಯ ಹಿಂಬಾಗಿಲು ತೆಗೆದು, ಮಾಡ ಸಂದಿಯ ಕಡೆಗೆ ಕೈದೋರಿದಂತೆ ಮಾಡಿದಳು. ಪೀಂಚಲು ತಾನೊಂದು ಕಂಬಳಿಕೊಪ್ಪೆ ಹಾಕಿಕೊಂಡು, ಮತ್ತೊಂದನ್ನು ಮದುಮಗಳಿಗೆ ಹಾಕಿ, ಚಿನ್ನಮ್ಮ ಸಹಿತ ಕಗ್ಗತ್ತಲೆಯಲ್ಲಿ ಕರಗಿಹೋದಳು.

ಮಳೆ ಬೀಳುತ್ತಲೆ ಇತ್ತು. ಆದರೆ ಅದರ ಜೋರು ತುಸು ಇಳಿದಂತೆ ತೋರುತ್ತಿತ್ತು. ಪೀಂಚಲು ಮಾರ್ಗದರ್ಶಿಯಾಗಿ ಮುಂಬರಿಯುತ್ತಿದ್ದರೂ ಅವಳಿಗಿಂತಲೂ ಚಿನ್ನಮ್ಮಗೇ ಆ ದನಓಣಿಯ ಗುಡ್ಡದ ದಾರಿ ಹೆಚ್ಚು ಪರಿಚಿತವಾದುದಾಗಿತ್ತು. ಆದರೂ ಪೀಂಚಲುಗಿಂತಲೂ ಚಿನ್ನಮ್ಮಗೇ ಹಾದಿ ನಡೆಯುವುದು ಕಷ್ಟತರವಾಗಿತ್ತು. ಎಷ್ಟಂದರೂ ಪೀಚಲು ಕೆಲಸದ ಆಳು; ಅವಳು ದಿನದಿನವೂ ಮಳೆಯಲ್ಲಿ ಚಳಿಯಲ್ಲಿ ಬಿಸಿಲಲ್ಲಿ ಗದ್ದೆಯಲ್ಲಿ ತೋಟದಲ್ಲಿ ಕಾಡಿನಲ್ಲಿ ನಡೆದೂ ದುಡಿದೂ ಅಭ್ಯಾಸವಾದವಳು. ಚಿನ್ನಮ್ಮ ಚಿಕ್ಕವಳಾಗಿದ್ದಾಗ ಆ ಹಾಡ್ಯ, ಕಾಡು, ಗದ್ದೆಗಳಲ್ಲಿ ಅಡ್ಡಾಡಿದ್ದರೂ ದೊಡ್ಡವಳಾದ ಮೇಲೆ ಇತ್ತೀಚಿನ ವರ್ಷಗಳಲ್ಲಿ ಅವಳು ಶ್ರೀಮಂತರ ಗೃಹಿಣಿಯರಂತೆ ಹೆಚ್ಚು ಕಾಲವನ್ನು ಮನೆಯೊಳಗಣ ಮೃದುಲತಾ ವಲಯದಲ್ಲಿಯೆ ಕಳೆಯುತ್ತಿದ್ದಳು. ಹಳು ಕೀಳುವುದಕ್ಕೂ ಸಸಿ ನೆಡುವುದಕ್ಕೊ ಇತರ ಶ್ರಮಜೀವಿ ಸ್ತ್ರೀಯರೊಡನೆ ಸ್ವಸಂತೋಷದಿಂದ ವಿಲಾಸಾರ್ಥವಾಗಿಯೆ ಗೊರಬು ಸೂಡಿಅಕೊಂಡು ಅಗೊಮ್ಮೆ ಈಗೊಮ್ಮೆ ಗದ್ದೆ ತೋಟಗಳಿಗೆ ಹೋಗುತ್ತಿದ್ದುದುಂಟು. ಆದರೆ ಅದೆಲ್ಲ ಕಲಾರೂಪದ್ದಾಗಿರುತ್ತಿತ್ತೆ ಹೊರತು ಅವಸ್ಯ ದುಡಿಮೆಯ ಶ್ರಮರೂಪದ್ದಾಗಿರುತ್ತಿರಲಿಲ್ಲ.

“ಪೀಂಚಲೂ, ಅಷ್ಟು ಜೋರಾಗಿ ಹೋಗಬೇಡೇ. ಸ್ವಲ್ಪ ನಿಲ್ಲೇ.” ಚಿನ್ನಮ್ಮ ಮುಳ್ಳಿನ ಪೊದೆಗೆ ಸಿಕ್ಕಿದ್ದ ಸೀರೆಯ ತುದಿಯನ್ನು ಬಿಡಿಸಿಕೊಂಡು, ಪಿಚಕ್ ಪಿಚಕ್ಕೆಂದು ಸುತ್ತುಗಾಲುಂಗುರ ಹಾಕಿದ್ದ ಕಾಲುಬೆರಳುಗಳ ಸಂದಿಯಿಂದ ಮೇಗಾಲನ್ನು ಆವರಿಸಿ ಸೀರೆಗೂ ಹಾರುತ್ತಿದ್ದ ಕೆಸರಿನಲ್ಲಿ, ಎಚ್ಚರಿಕೆಯಿಂದ, ಆದರೂ ಆದಷ್ಟು ಬೇಗಬೇಗನೇ, ಕಾಲು ಹಾಕಿದಳು, ನಡುನಡುವೆ ಜಾರುತ್ತಾ, ಮುಗ್ಗರಿಸುತ್ತಾ.

ಮಳೆಗಾಲ ಕೂತಿತ್ತಾದ್ದರಿಂದ ಅದರ ಪ್ರಾರಂಭಸ್ಥಿತಿಯ ಗುಡುಗು-ಸಿಡಿಲುಗಳ ಆರ್ಭಟ ಇರಲಿಲ್ಲ. ಗಾಳಿಯೂ ತನ್ನ ಉಗ್ರ ಚಂಚಲತೆಯನ್ನು ತ್ಯಜಿಸಿ ಒಂದು ಸ್ಥಿರ ವೇಗದಿಂದಲೇ ಬೀಸುತ್ತಿತ್ತು. ಮೇಘ ಸಂದಿಗಳಲ್ಲಿ ಮಿಂಚು ಮತ್ತೆ ಮತ್ತೆ ಥಳಿಸುತ್ತಿದ್ದರೂ ಅದು ಸದ್ದಿನಿಂದ ಹೆದರಿಸುತ್ತಿರಲಿಲ್ಲ. ಬಹುಮಟ್ಟಿಗೆ ಮೂಕವಾಗಿತ್ತು. ನಿಮಿಷ ನಿಮಿಷಕ್ಕೂ ಒಂದಲ್ಲ ಒಂದು ದಿಕ್ಕಿನಿಂದ ಮಿಂಚು ಇಣುಕಾಡುತ್ತಿದ್ದಾದ್ದರಿಂದ ಪೀಂಚಲು ಚಿನ್ನಮ್ಮರಿಗೆ ಆಕಾಶದಿಂದಲೇ ಹಾದಿದೀಪ ಒದಗಿದಂತಿತ್ತು. ಮಿಂಚಿದಾಗಲೆಲ್ಲಾ ಕಾಡೂ ಪೊದೆಗಳೂ ಬಾಣು ಮೋಡಗಳೂ ಮಳೆಯೂ ದನೋಣಿಯ ಕಲ್ಲು ಕೊರಕಲಿನ ದಾರಿಯೂ ಹಗಲಿಣುಕಿದಂತೆ ಸುಸ್ಪಷ್ಟವಾಗಿ ತೋರಿ ಮತ್ತೇ ಕವಿಯುತ್ತಿದ್ದ ಕಾರ್ಗತ್ತಲೆಯಲ್ಲಿ ಮಷೀಯಮಯವಾಗಿ ಶೂನ್ಯವಾಘುತ್ತಿದ್ದುವು; ಆಗಲೇ ಮಿಣುಕು ಹುಳುಗಳು ಕೋಟಿ ಕೋಟಿ ಸಂಖ್ಯೆಯಲ್ಲಿ ಪೊದೆ ಮರ, ಬಳ್ಳಿ ಗಿಡಗಳನ್ನೆಲ್ಲ ಆಕ್ರಮಿಸಿದಂತೆ ಆವರಿಸಿ ಮಿರುಗುತ್ತಿದ್ದವು.!

ಚೊಚ್ಚಲ ಬಸಿರಿಯೂ ಮತ್ತು ಒಲ್ಲದ ಮದುವೆಯಿಂದ ಪಾರಾದ ಮದುಮಗಳೂ, ಕಂಬಳಿಕೊಪ್ಪೆಗಳನ್ನು ಬಲವಾಗಿ ಸುತ್ತಿಕೊಂಡು ಮಳೆಗಾಳಿ ಚಳಿಗಳಿಂದ ರಕ್ಷಣೆ ಪಡೆಯಲು ಪ್ರಯತ್ನಿಸುತ್ತಾ ಸ್ವಲ್ಪ ದೂರ ಕಾಡುದಾರಿಯಲ್ಲಿ ಸಾಗಿದ್ದರು. ಮನೆಯಿಂದ ಹೊರಬದ್ದ ಉತ್ಸಾಹದ ಪ್ರಥಮ ಮನಃಸ್ಥಿತಿ ಬರುಬರುತ್ತಾ ನೈಸರ್ಗಿಕ ಅರಣ್ಯ ಕಠೋರತೆಗೆ ಸಿಕ್ಕಿ ಕುಗ್ಗಿದಂತಾಗಲು ಚಿನ್ನಮ್ಮ ಕೇಳಿದಳೂ: ಇನ್ನೆಷ್ಟು ದೂರ ಅದೆಯೆ, ಅವರು ಸಿಕ್ಕಕೆ?”

“ಹಾಡ್ಯದ ಮಾರಮ್ಮನ ಗುಡಿ ಹತ್ರ ಇರ್ತಿನಿ ಅಂತಾ ಹೇಳಿದ್ರು.”

ಚಿನ್ನಮ್ಮಗೆ ಗೊತ್ತಿದ್ದಂತೆ ಸಾಮಾನ್ಯವಾಗಿ ಪೀಂಚಲು ತನ್ನ ಗಂಡನನ್ನು ಕುರಿತು ಮಾತನಾಡುವಾಗಲೆಲ್ಲ ಏಕವಚನವನ್ನೇ ಪ್ರಯೋಗಿಸುತ್ತಿದ್ದದ್ದು ಮುಕುಂದಬಾವನನ್ನೇ ಕುರಿತು ಆಡುತ್ತಿದ್ದಾಳೆ ಎಂದು ಭಾವಿಸಿ ಕೇಳಿದಳು:
“ಯಾರೆ ಹೇಳಿದ್ದು”

“ನನ್ನ ಗಂಡ ಕಣ್ರೋ, ಐತ.” ನಿರ್ಭಾವ ಧ್ವನಿಯಿಂದ ಉತ್ತರಿಸುತ್ತಾ ಬೇಗಬೇಗನೆ ಸಾಗಿದ್ದಳು, ಪೀಂಚಲು.

ಇದ್ದಕ್ಕಿದ್ದ ಹಾಗೆ ಒಂದು ಮಿಂಚು ಫಳ್ಳೆಂದಿತು. ಒಂದು ಕ್ಷಣಕಾಲ ಹಗಲಾದಂತಾಗಿ ಗಿಡ, ಮರ, ದಂಡೆಯ ಬಿದಿರ ಹಿಂಡಿಲು, ಕೆರೆಯ ಏರಿ, ಕೆರೆ ತುಂಬ ತುಂಬಿದ ನೀರಿನ ಹರವು, ಪ್ರತಿಬಿಂಬದ ಆಕಾಶ ಎಲ್ಲ ತಟಕ್ಕನೆ ಕಾಣಿಸಿ, ಮತ್ತೆ ಕಣ್ಣಿಗೆ ಕಪ್ಪು ಮೆತ್ತಿದಂತಾಯ್ತು. ಮಳೆ ಗಾಳಿಯ ಸದ್ದಿನ ಕೂಡೆ ವಟಗುಟ್ಟುವ ಕಪ್ಪೆ ಮತ್ತು ಕ್ರಿಮಿ ಕೀಟಾದಿಗಳ ಕರ್ಕಶ ಧ್ವನಿ ಕಿವಿಗೆ ಘೋರವಾಗಿತ್ತು: ದಿಬ್ಬಣದ ಅಬ್ಬರವೂ ದೂರ ಕೇಳಿಸಿತ್ತು.

ಎದೆ ಜಗ್ ಎಂದಿತು ಪೀಂಚಲುಗೆ. ಹಿಂದೆ ಬರುತ್ತಿದ್ದ ಚಿನ್ನಮ್ಮಗೆ ಡಿಕ್ಕಿ ಹೊಡೆಯುವಂತೆ ಹಿಂನೆಗೆದು ಸರಿದು “ಅಯ್ಯಮ್ಮಾ!” ಎಂದು ನಿಂತಳು. “ಕೆರೆಗೇ ಬೀಳ್ತಿದ್ದೆವಲ್ಲಾ, ಚಿನ್ನಕ್ಕಾ, ಮಿಂಚದೆ ಇದ್ದಿದ್ರೆ!….”

"ಮಾರಮ್ಮನ ಗುಡಿ ಹತ್ರ ಅಂದಿ, ಇಲ್ಲಿಗ್ಯಾಕೆ ಬಂದ್ಯೇ?"

"ನಂಗೆ ದಾರಿ ತಪ್ಪು ಕಣ್ರೋ, ದಾರೀನೇ ಗೊತ್ತಾಗದಿಲ್ಲ." ಐತನ ಹೆಂಡತಿಯ ದನಿಯಲ್ಲಿ ಏನೋ ಅಧೀರತೆಯ ಸುಳಿವಿತ್ತು.

"ಹಿಂದಕ್ಕೆ ಹೋಗಾನೆ, ಮತ್ತೆ…."

"ಎಲ್ಲಿಗ್ರೋ? ಮನಿಗೇನ್ರೋ?"

"ನೀ ಹೋಗು ಮನೀಗೆ, ಬೇಕಾದ್ರೆ…." ಚಿನ್ನಮ್ಮನ ದನಿಯಲ್ಲಿ ಸಿಡುಕಿತ್ತು.

"ನೀವು?"

"ನಾನಿಲ್ಲೇ ಕೆರೆಗೆ ಹಾರ್ತಿನಿ!…."

"ನಿಮ್ಮ ದಮ್ಮಯ್ಯ, ಚಿನ್ನಕ್ಕಾ, ಹಂಗೆಲ್ಲಾ ಹೇಳಬ್ಯಾಡಿ?"

"ಮತ್ತೇ?'…. ಮನೀಗೆ ಹೋಗಾನ ಅಂದ್ರೆಲ್ಲಾ ಅದ್ಕೇ ಕೇಳ್ದೆ…"

"ಹಿಂದಕ್ಕೆ ಹೋಗಿ, ಆ ದೊಡ್ಡ ಬಸಿರ ಮರದ ಹತ್ರಕ್ಕ ಹೋದ್ರೆ, ಅಲ್ಲಿಂದ ನಂಗೊತ್ತು ಮಾರಮ್ಮನ ಗುಡೀಗೆ ಹಾದಿ…."

* * *

## ೫೧

ಕಲ್ಕತ್ತದ ವರಾಹ ನಗರದಲ್ಲಿದ್ದ ಹಾಳುಮನೆಯ ಮಠದ ಇಬ್ಬರು ತರುಣ ಸಂನ್ಯಾಸಿಗಳು ಆವೊತ್ತಿನ ರಾತ್ರಿಯನ್ನು ದಕ್ಷಿಣೇಶ್ವರದಲ್ಲಿ ಧ್ಯಾನ ಜಪ-ತಪಗಳಲ್ಲಿ ಕಳೆಯಲೆಂದು ಭವತಾರಿಣಿಯ ಸನ್ನಿಧಿಗೆ ಬಂದಿದ್ದರು. ಉಜ್ವಲ ದೀಪಸ್ತೋಮದ ಕಾಂತಿಯಲ್ಲಿ ಪುಷ್ಪಮಾಲಾ ಗಂಧಾದಿಗಳಿಂದ ಅಲಂಕೃತಳಾಗಿದ್ದ ದೇವಿಯ ಪೂಜೆ ಪೂರೈಸಿದ ತರುವಾಯ ಎದುರಿಗಿದ್ದ ನಾಟ್ಯಮಂಟಪದಲ್ಲಿ ಕುಳಿತಿದ್ದರು. ಸಾಧಾರಣವಾಗಿ ಬರುತ್ತಿದ್ದ ಮಳೆ ಇದ್ದಕ್ಕಿದ್ದಂತೆ ಜೋರಾಗಿ ಸುರಿಯತೊಡಗಿತ್ತು. ದೀಪಗಳೂ ಕ್ಷಯಿಸುತ್ತಾ ಬಂದು ಕೊನೆಗೆ ಒಂದೊ ಎರಡೋ ಮಾತ್ರ

ಉರಿಯುತ್ತಿದ್ದವು. ಭವತಾರಿಣಿಯ ಸುತ್ತ ಮುತ್ತಲೂ ಮಂದಕಾಂತಿ ಹಬ್ಬಿ ಏನೋ ಒಂದು ವಿಧವಾದ ಯೌಗಿಕಸ್ವಾಪ್ನಿಕತೆ ಆವರಿಸಿದಂತಿತ್ತು.

ತರುಣ ಸಂನ್ಯಾಸಿಗಳಿಬ್ಬರೂ ಕುಳಿತಿದ್ದ ನಾಟ್ಯಮಂಟಪದಲ್ಲಿ ಕತ್ತಲೆ ಕವಿದಿತ್ತು. ರಾತ್ರಿ ಮುಂದುವರೆದು ಬಹಳ ಹೊತ್ತಾದರೂ ಗಾಳಿಯೊಡನೆ ಕೂಡಿದ್ದ ಬಿರುಮಳೆ ಬಿಡದೆ ಮುಸಲಧಾರೆಯಾಗಿ ಹೊಯ್ಯುತ್ತಲೆ ಇದ್ದುದರಿಂದ, ಕೆಲವೆ ವರ್ಷಗಳ ಹಿಂದೆ ಕಾಶೀಪುರದ ತೋಟದ ಮನೆಯಲ್ಲಿ ಮಹಾಸಮಾಧಿಯನ್ನೈದಿದ ತಮ್ಮ ಗುರುಮಹಾರಾಜರು ವಾಸಿಸುತ್ತಿದ್ದು ತಮ್ಮ ಜೀವಿತದ ಮುಖ್ಯ ಭಾಗಗಳನ್ನೆಲ್ಲ ಯಾವ ದಿವ್ಯ ಕೊಠಡಿಯಲ್ಲಿ ಕಳೆದಿದ್ದರೋ ಆ ಪುಣ್ಯ ಸ್ಮರಣೆಯ ಸ್ಥಳಕ್ಕೆ, ತಾವು ಪೂರ್ವಭಾವಿಯಾಗಿ ಸಂಕಲ್ಪಿಸಿದಂತೆ, ಹೋಗಿ ಧ್ಯಾನಕ್ಕೆ ಕುಳಿತುಕೊಳ್ಳುವುದನ್ನು ಅನಿವಾರ್ಯತೆಯಿಂದ ಕೈಬಿಟ್ಟು, ಸದ್ಯಕ್ಕೆ ನಾಟ್ಯಮಂಟಪದಲ್ಲಿಯೆ ಧ್ಯಾನ ಮಾಡಲು ತೊಡಗಿದ್ದರು.

ಗಂಭೀರ ಧ್ಯಾನಮಗ್ನನಾಗಿದ್ದ ಒಬ್ಬಾತನಿಗೆ ತಾನು ಯಾವುದೋ ಒಂದು ಸುದೂರದ ಅರಣ್ಯಾದ್ರಿಕಂದರ ಪ್ರದೇಶದಲ್ಲಿದ್ದಂತೆಯೂ, ಸುರಿಯುತ್ತಿದ್ದ ಭೀಕರ ವರ್ಷದಲ್ಲಿ ತಾನು ತೊಯ್ದು ತೇಲುತ್ತಿರುವಂತೆಯೂ ಒಂದು ಅನಿರ್ವಚನೀಯವಾದ ವಿಚಿತ್ರಾನುಭವವಾಗ ತೊಡಗಿತು. ಆ ಸ್ವಪ್ನ ಸದೃಶ್ಯ ಅನುಭವದಿಂದ ಎಚ್ಚರುವ ಸಲುವಾಗಿಆತನು ಕಣ್ದೆರೆದು ಸುತ್ತಲೂ ನೋಡಿದನು: ಡನ್ಚರಿ!

ನಿಜವಾಗಿಯೂ ತನ್ನ ಸುತ್ತಲೂ ಭಯಂಕರ ಅರಣ್ಯ! ಮಳೆ ಬೀಳುತ್ತಿದೆ! ಗಾಳಿ ಬೀಸುತ್ತಿದೆ! ಭವತಾರಿಣಿಯ ಪೂಜಾಮೂರ್ತಿಯಿದ್ದೆಡೆ ಮಣ್ಣಿನ ಅರ್ಧ ಗೋಡೆಯ, ಓಡು ಹಂಚು ಹೊದಿಸಿದ. ಒಂದು ಗಾಡಿ ಕಾಣುಸುತ್ತಿದೆ! ಒಂದು ಹಣತೆಯ ಸೊಡರು, ಬೆಳಕಲ್ಲದ ಬೆಳಕು ಬೀರಿ, ಗಾಳಿಗೆ ನಡುಗುತ್ತಿದೆ! ಹುಡುಗಿಯ ಆಕಾರವೊಂದು ವಿಗ್ರಹದ ಕಲ್ಲಿಗೆ ಅಡ್ಡ ಬಿದ್ದಿದೆ.! ಪಕ್ಕದಲ್ಲಿ ಇನ್ನೊಂದು ಹುಡುಗಿಯ ಆಕಾರ ನಿಂತಿದೆ.!

ಕಣ್ದೆರೆದ ಮೇಲೆಯೂ ತಾನಿದ್ದ ಸ್ವಪ್ನಲೋಕವು ತನ್ನ ಅಸ್ತಿತ್ವವನ್ನು ಒಂದರ್ಧ ದಕ್ಷಿಣೇಶ್ವರದ ಭವತಾರಿಣಿಯ ವಿಗ್ರಹ, ಮಂದಿರ ಎಲ್ಲವೂ ಮುನ್ನಿನಂತೆ ಕಾಣಿಸಿಕೊಂಡುವು!

ಸಂನ್ಯಾಸಿ ಸೋಜಿಗಪಟ್ಟರು ಆತನಿಗೆ ಅಂತಹ ಆಶ್ಚರ್ಯವೇನೂ ಆಗಲಿಲ್ಲ. ಏಕೆಂದರೆ ಅಂತಹ ಮತ್ತು ಅದಕ್ಕಿಂತಲೂ ಮಹದಾಶ್ಚರ್ಯಕರವಾದ ಎನಿತೆನಿತೊ ಅತೀಮದ್ರಿಯ ದರ್ಶನಗಳನ್ನು ಜಗನ್ಮಾತೆ ಶ್ರೀಗುರುಕೃಪೆಯಿಂದ ಆತನಿಗೆ ದಯಪಾಲಿಸಿದ್ದಳು. ಎಲ್ಲಿಯೋ ಯಾರೋ ಆರ್ತರು ತಾಯಿಗೆ ಭಕ್ತಿಯಿಂದ ಮಣಿದು ತಮ್ಮ ಸಂಕಟವನ್ನು ನಿವೇದಿಸುತ್ತಿರಬೇಕು. ಅದು ಇಲ್ಲಿ ಭವತಾರಿಣಿಯಲ್ಲಿ ಪ್ರತಿಫಲಿತವಾಗಿ ತನಗೆ ಧ್ಯಾನ ಸಮಯದಲ್ಲಿ ಆ ದರ್ಶನವಾಗಿರಬೇಕು; ಎಂದುಕೊಂಡು ಮತ್ತೆ ಆ ಸಂನ್ಯಾಸಿ ಧ್ಯಾನಸ್ಥನಾದನು. ತಾನು ಕಂಡ ಆ ಹೆಣ್ಣುಮಗಳ ಸಂಕಟ ಏನಿದ್ದರೂ ಪರಿಹಾರವಾಗಿ, ಆಕೆಗೆ ತಾಯಿ ಕೃಪೆಮಾಡಲಿ! ಎಂದು ಮನದಲ್ಲಿಯೇ ಹರಸಿ:

ತಾನು ಕಂಡ ಆ ಹೆಣ್ಣುಮಗಳ ಮೊಮ್ಮಕ್ಕಳಲ್ಲಿ, ಅಂದರೆ ಮಗಳ ಮಕ್ಕಳಲ್ಲಿ ಒಬ್ಬಾತನು, ಅನೇಕ ವರ್ಷಗಳ ತರುವಾಯ, ತಾನು ಶ್ರೀ ರಾಮಕೃಷ್ಣ ಮಹಾಸಂಘದ ಮಹಾಧ್ಯಕ್ಷನಾಗಿರುವಾಗ, ತನ್ನಿಂದಲೇ ದೀಕ್ಷೆ ಪಡೆದು ಮಹಾಸಂಘದ ಸಂನ್ಯಾಸಿ ಇಂದೇಕೆ ಕಾಣುವ ಗೋಜಿಗೆ ಹೋಗುತ್ತಾನೆ?

* * *

ಹೂವಳ್ಳಿ ವೆಂಕಪ್ಪನಾಯಕರು ಉಚ್ಛ್ರಾಯ ದಶೆಯಲ್ಲಿದ್ದಾಗ ಅದನ್ನು 'ಹಾಡ್ಯ' ಎಂದು ಕರೆಯಬಹುದಾಗಿದ್ದರೂ ಈಗ ಅದು ಬರಿಯ ಕಗ್ಗಾಡೆ ಆಗಿತ್ತು. ಹಿಂದೆ ತರಗು ಗುಡಿಸಿ, ಕೆಂಜಿಗೆ ಹಿಂಡಲು, ಕಾರೆ ಮಟ್ಟುಗಳನ್ನೆಲ್ಲ ಕಡಿದು ಹಾಕಿ, ಅದನ್ನು 'ದರಗಿನ ಹಾಡ್ಯ'ವನ್ನಾಗಿ ಚೊಕ್ಕಟವಾಗಿ ಇಟ್ಟಿದ್ದಾಗ, ಆ ಹಾಡ್ಯದ ತುದಿಯಲ್ಲಿದ್ದ ಮಾರಮ್ಮನ ಗುಡಿಯನ್ನು ಪ್ರತಿ ವರ್ಷವೂ ಓಡುಹೆಂಚು ಕಿತ್ತುಹೊದಿಸಿ, ಗೋಡೆಗೆ ಕೆಂಪು ಬಿಳಿಯ ಕೆಮ್ಮಣ್ಣು ಜೇಡಿಗಳ ಪಟ್ಟೆ ಹಾಕಿ ಅಲಂಕರಿಸುತ್ತಿದ್ದರು. ಈಗಲೂ ಮಾರಮ್ಮಗೆ ಕೋಳಿ ಕುರಿ ಹಂದಿಗಳ ಬಲಿಪೂಜೆ ಪ್ರತಿವರ್ಷವೂ ನಡೆಯುತ್ತಿತ್ತಾದರೂ ಗುಡಿ ಮಾತ್ರ ದುರಸ್ತಿಯಿಲ್ಲದೆ ಪಾಳುಬಿದ್ದಂತಿತ್ತು. ಮಣ್ಣಿನ ಅದರ ಮುಕ್ಕಾಲು ಗೋಡೆಗಳೂ ಮನೆನೀರು ಸೋರಿ ಕರಗಿ ಬಿದ್ದು ಅಲ್ಲಲ್ಲಿ ಅರೆಗೋಡೆಗಳಾಗಿದ್ದುವು. ಎಲೆ ಕಡ್ಡಿ ಕಸ ತುಂಬಿಹೋಗಿತ್ತು. ಅದಕ್ಕೆ ಬಾಗಿಲೂ ಇರಲಿಲ್ಲಿ. ಬದಲಾಗಿ ಉಣುಗೋಲು ಇತ್ತು. ಉಣುಗೋಲಿನ ಗಳುಗಳೂ ಜಜ್ಜರಿತವಾಗಿ ಬಿದ್ದುಹೋಗಿದ್ದವು. ಮಳೆ ಜೋರಾಗಿ ಹಿಡಿದಾಗ ಹಾವುಗಳೂ ಹುಲಿ ಹಂದೆ ಕಡ ಮಿಗ ಮೊದಲಾದ ಪ್ರಾಣಿಗಳೂ ಮಳೆಯ ಬಿರುಸಿನಿಂದ ರಕ್ಷೆ ಪಡಯಲು ಮಾರಮ್ಮನ ಗುಡಿಯಲ್ಲಿ ತಂಗುತ್ತಿದ್ದವು ಎಂದೂ ಪ್ರತೀತಿಯಿತ್ತು.

ಇಂದೂ ಕೂಡ ಕತ್ತಲೆಯಾದ ಮೇಲೆ, ದೀಪದ ಕುಡಿಯನ್ನು ತುಂಬ ಕೆಳಗಿಳಿಸಿ ಸಣ್ಣದು ಮಾಡಿಕೊಂಡಿದ್ದ ಲಾಟೀನನ್ನು ಕೈಯಲ್ಲಿ ಹಿಡಿದು, ಕಂಬಳಿಕೊಪ್ಪೆ ಹಾಕಿಕೊಂಡಿದ್ದ ವ್ಯಕ್ತಿಯೊಂದು ಆ ಕಾಡಿನ ನಡುವಣ ಮಾರಮ್ಮನ ಗುಡಿಯ ಸಮೀಪಕ್ಕೆ ಬಂದಾಗ, ಮಳೆಯಿಂದ ರಕ್ಷಣೆ ಪಡೆದು ಒಳಗೆ ನಿಂತಿದ್ದ ಯಾವುದೋ ದೊಡ್ಡ ಪ್ರಾಣಿಯೊಂದು ಹೊರಕ್ಕೆ ನೆಗೆದು ಹಳುವಿನಲ್ಲಿ ದಡದಡನೆ ಸದ್ದುಮಾಡುತ್ತಾ ಓಡಿಹೋಗಿತ್ತು! ಲಾಟೀನು ಹಿಡಿದಿದ್ದ ವ್ಯಕ್ತಿ ಗುಡಿಯೊಳಗೆ ಹೋಗಿ, ಮೊದಲೆ ಅಣಿಮಾಡಿ ಇಟ್ಟಿದ್ದ ಹಣತೆಗೆ ದೀಪ ಹೊತ್ತಿಸಿ, ಅದನ್ನು ಮಾರಿಯ ಪ್ರತಿಮೆಯಾಗಿದ್ದು ಎಣ್ಣೆ ಹಿಡಿದು ಕರ್ರಗಾಗಿದ್ದ ಕಲ್ಲುಗುಂಡಿನ ಮುಂದೆ ಗಾಳಿಗೆ ಆರಿಹೋಗದಂತೆ ಗೂಡಿನಲ್ಲಿ ಮರೆಯಾಗಿಟ್ಟು, ಅಮ್ಮಗೆ ಅಡ್ಡಬಿದ್ದು, ಮಾತಿಲ್ಲದ ತನ್ನ ಪ್ರಾರ್ಥನೆಯನ್ನು ಸಲ್ಲಿಸಿತು. ಮತ್ತೆ ಎದ್ದು ನಿಂತು ಕೈಮುಗಿಯಿತು. ಮತ್ತೆ ಗುಡಿಯ ಬಾಗಿಲಿನ ಉಣುಗೋಲಿನ ಬಳಿ ನಿಂತು ಹೂವಳ್ಳಿಮನೆಯ ದಿಕ್ಕಿನಲ್ಲಿ ಕಾಡಿನ ಕಡೆ ನೋಡುತ್ತಾ ಯಾರನ್ನೋ ನಿರೀಕ್ಷಿಸುವಂತೆ ತೋರಿತು.

ಸ್ವಲ್ಪ ಹೊತ್ತಿನಲ್ಲಿಯೆ ಕಂಬಳಿಕೊಪ್ಪೆಹಾಕಿಕೊಂಡಿದ್ದ ಮತ್ತೊಂದು ವ್ಯಕ್ತಿ ಹೂವಳ್ಳಿ ಮನೆಯ ದಿಕ್ಕಿನಿಂದ ಅವಸರ ಅವಸರವಾಗಿ ಬಂದು ಗುಡಿಯೊಳಗೆ ಹೊಕ್ಕಿತು.

ಕಾಯುತ್ತಿದ್ದ ವ್ಯಕ್ತಿ ಕೇಳಿತು "ಏನೋ, ಐತ? ಯಾಕೊ ಇಷ್ಟು ಹೊತ್ತು ಮಾಡಿದೆ?"

ಪೀಂಚಲುಗೆ ಎಲ್ಲ ಹೇಳಿ ಬಂದಿದ್ದೇನೆ, ಅಯ್ಯಾ. ಅವಳಿಗೂ ದಾರಿ ಗೊತ್ತಂತೆ. ಚಿನ್ನಕ್ಕನ ಕರಕೊಂಡು ಬಂದು ಬಿಡುತ್ತಾಳೆ."

"ಹಾಂಗಾದ್ರೆ ನೀ ಇಲ್ಲೇ ಕಾದುಕೊಂಡಿರು. ಅವರು ಬಂದ ಕೂಡ್ಲೆ ಕರಕೊಂಡು ಬಂದುಬಿಡು. ನಾನು ಹಳೆಪೈಕದ ಯೆಂಕಿಮನೆಯ ಹತ್ರದ ಕೊಟ್ಟಿಗೇಲಿ ಕಾದಿರ್ತೀನಿ....ಗುತ್ತೀಗೂ, ನಾವು ಬರಾದು ಹೊತ್ತಾದ್ರೆ, ಬಾ ಅಂತಾ

ಹೇಳೀನಿ…" ಮುಕುಂದಯ್ಯ ಐತನಿಗೆ ಅವನು ಮಾಡಬೇಕಾದುದನ್ನು ಹೇಳುತ್ತಾ, ಲಾಟೀನಿನೊಡ ಕೆಳಗಿಳಿದು ಹಳುವಿನಲ್ಲಿ ಮರೆಯಾಗುವ ಮುನ್ನ ಮತ್ತೆ ಕೂಗಿ ಹೇಳಿದನು. "ಬೇಗ ಬನ್ನಿ, ಹೊತ್ತು ಮಾಡಬೇಡಿ!…." 'ಹುಲಿಕಲ್ಲು ನೆತ್ತಿಗೆ ಹತ್ತದೇನೂ ಬಿಟ್ಟಿ ಅಲ್ಲ, ಹೆಂಗಸರಿಗೆ! ಅದರಲ್ಲೂ ನಿನ್ನ ಹೆಂಡ್ತಿ ಬಸಿರಿ' ಎಂದೂ, ಐತನಿಗೆ ಕೇಳಿಸಲೆಂದಲ್ಲ, ತನಗೆ ತಾನೆಂಬಂತೆ, ಹೇಳಿಕೊಂಡನು.

ಲಾಟೀನಿನ ಬೆಳಕು ಮುಕುಂದಯ್ಯನ ಆಕೃತಿಯೊಡನೆ ಮಳೆ ಬೀಳುತ್ತಿದ್ದ ಹಳುವಿನಲ್ಲಿ ಮರೆಯಾದ ಮೇಲೆ, ಕವಿದ ಕತ್ತಲೆಯಲ್ಲಿ ಐತನಿಗೆ ಕಾದು ಕುಳಿತನು. ಮಾರಮ್ಮನ ಮುಂದಿದ್ದ ಹಣತೆಯ ಬೆಳಕು ಕತ್ತಲೆಯ ಒಂದೆರಡಡಿಯನ್ನೂ ಬೆಳಗುತ್ತಿರಲಿಲ್ಲ.

ಈಗ ಬರುತ್ತಾರೆ, ಆಗ ಬರುತ್ತಾರೆ; ಈಗ ಬಂದಾರು, ಇನ್ನೇನು ಬಂದಾರು;- ಐತನಿಗೆ ಕಾದು ಕಾದು ಬಳಲಿಕೆಯಾಗತೊಡಗಿತು. ಕಡೆ ಕಡೆಗೆ ಅವರು ಬರದೆ ಇದ್ದುದಕ್ಕೆ ಅವನ ಕಲ್ಪನೆ ಏನೇನೋ ಕಾರಣಗಳನ್ನು ಕಲ್ಪಿಸಿಕೊಂಡು ದಿಗಿಲುಪಡತೊಡಗಿತು. ಏನಾದರೂ ಆಗಲಿ, ನಾನೆ ಹೋಗಿ ನೋಡಿಯಾದರೂ ನೋಡಿಕೊಂಡು ಬರುತ್ತೇನೆ. ಅವರು ಹೊರಟಿದ್ದರೆ ದಾರಿಯಲ್ಲಿ ಸಿಕ್ಕಿಯೆ ಸಿಕ್ಕುತ್ತಾರೆ. ಹೀಗೆ ನಿಶ್ಚಯಿಸಿ ಐತ ಮಾರಮ್ಮನ ಗುಡಿಯಿಂದ ಹೂವಳ್ಳಿ ಮನೆಯ ಕಡೆಗೆ ಹಳುವಿನಲ್ಲಿ ಗುಡ್ಡವಿಳಿತು ಹೋದನು:

ಅವನು ಹೋಗಿ ಸ್ವಲ್ಪ ಹೊತ್ತಿನಲ್ಲಿಯೇ ಚೆನ್ನಮ್ಮ ಪೀಂಚಲು ಇಬ್ಬರೂ ಮಾರಮ್ಮನ ಗುಡಿಯ ಹತ್ತಿರಕ್ಕೆ ಬಂದರು. ದಾರಿ ತಪ್ಪಿದ್ದ ಅವರು, ಮತ್ತೆ ಹಿಂದಕ್ಕೆ ಬಂದು, ಸರಿ ದಾರಿಗೆ ಸೇರುವಷ್ಟರಲ್ಲಿ, ಐತ ಅದನ್ನು ದಾಟಿ ಹೂವಳ್ಳಿಮನೆಕಡೆಗೆ ಹೋಗಿಬಿಟ್ಟದ್ದನಾದ್ದರಿಂದ ಇವರು ಅವನಿಗೆ ಸಿಕ್ಕಿರಲಿಲ್ಲ.

ಗುಡಿಯ ಬಾಗಿಲಿಗೆ ಬಂದು ಪೀಂಚಲು ತನ್ನ ಗಂಡನ ಹೆಸರು ಹಿಡಿದು ಕರೆದಾಗ ಯಾರೂ ಓಕೊಳ್ಳಲಿಲ್ಲ. ಅವಳಿಗೆ ಗಾಬರಿಯಾಯಿತು. ಐತನೇನಾದರೂ ಸಿಕ್ಕದಿದ್ದರೆ ಮುಂದೇನು ಮಾಡಬೇಕು? ಮತ್ತೆ ಮನೆಗೆ ಹಿಂದಿರುಗುವುದೇ? ಅದು ಸಾಧ್ಯವಿಲ್ಲ ಎಂಬುದನ್ನು ಚೆನ್ನಮ್ಮ ಆಗಲೆ ಆ ಕೆರೆಯ ಹತ್ತಿರ ಹೇಳಿಬಿಟ್ಟಿದ್ದಾಳೆ! ತಾನೆ ಸ್ವತಂತ್ರಿಸಿ ಚೆನ್ನಮ್ಮನನ್ನು ಹುಲಿಕಲ್ಲು ನೆತ್ತಿಗೆ ಈ ಮಳೆಗಾಳಿಯ ರಾತ್ರಿಯಲ್ಲಿ ಹೇಗೆ ಕರೆದುಕೊಂಡು ಹೋಗುವುದು? ಪೀಂಚಲು ದಿಟ್ಟ ಹೆಣ್ಣಾಗಿದ್ದರೂ ಅವಳ ಎದೆ ತಲ್ಲಣಿಸಿತು. ತನ್ನ ಹೆದರಿಕೆಯನ್ನು ತೋರಗೊಟ್ಟರೆ ಮೊದಲೇ ಕಾಲು ಸೋಲುತ್ತಿದೆ ಎನ್ನುತ್ತಿದ್ದ ಚೆನ್ನಮ್ಮಗೆ ಕಾಲೇ ಬರದೇ ಹೋಗಬಹುದಲ್ಲಾ?

ಮತ್ತೆ ಸ್ವಲ್ಪ ಗಟ್ಟಿಯಾಗಿ ಕೂಗಿದಳು: "ಐತಾ!"

ಆಗಲೆ ಇಬ್ಬರೂ ಗುಡಿಯೊಳಗೆ ಹೋಗಿದ್ದರಿಂದ ಅವಳ ಕೂಗು ಅವಳಿಗೇ ವಿಕಾರ ಮೂದಲಿಕೆಯಾಗಿ ಕೇಳಿಸಿತು.

ಇಬ್ಬರೂ ಕಂಬಳಿ ಕೊಪ್ಪೆಗಳನ್ನು ತೆಗೆದಿಟ್ಟು ನೋಡುತ್ತಾರೆ: ಅಮ್ಮನ ಮುಂದೆ ಗೂಡಿನಲ್ಲಿ ಗಾಳಿಗೆ ಮರೆಯಾಗಿದ್ದ ಹಣತೆ ಮಿಣಿಮಿಣಿಮಿಣಿ ಸಣ್ಣಗೆ ಉರಿಯುತ್ತಿದೆ!

ಅದನ್ನು ಕಂಡು ಇಬ್ಬರಿಗೂ ಸ್ವಲ್ಪ ಧೈರ್ಯವಾಯಿತು: ಬಹಶಃ ಐತನೇ ಅದನ್ನು ಹಚ್ಚಿಟ್ಟು ಇಲ್ಲೆ ಎಲ್ಲಿಯೊ ಹೋಗಿರಬಹುದು. ಸ್ವಲ್ಪ ಹೊತ್ತು ಕಾದರು. ಕಾಯುವವರಿಗೆ ಆ ಕಾಲ ದೀರ್ಘವಾಗಿಯೆ ತೋರತೊಡಗಿತು.

"ಎಲ್ಲಿ ಹೋದನೆ ನಿನ್ನ ಗಂಡ? ಇಲ್ಲೆ ಕಾಯುತ್ತಿರುತ್ತಾನೆ ಅಂತಾ ಹೇಳ್ದೆಲ್ಲಾ?" ಆಯಾಸಧ್ವನಿಯಲ್ಲಿ ಕೇಳಿದಳು ಚಿನ್ನಮ್ಮ.

ಚಿನ್ನಮ್ಮ ಗಟ್ಟಿಮುಟ್ಟಾದ ಹುಡುಗಿಯಾಗಿದ್ದರೂ ಆ ದಿನ ಅವಳು ಊಟದ ಶಾಸ್ತ್ರ ಮಾಡಿದ್ದಳೆ ಹೊರತು ನಿಜವಾಗಿಯೂ ಹೊಟ್ಟೆ ತುಂಬ ಉಂಡಿರಲಿಲ್ಲ. ಜೊತೆಗೆ ದಿನವೆನ್ನೆಲ್ಲ ಚಿಂತೆ ಉದ್ವೇಗಗಳಲ್ಲಿಯೇ ಕಳೆದಿದ್ದಳು. ಧರ್ಮು ತಿಮ್ಮು ಇಬ್ಬರೂ ಸೇರಿ ಮದುವೆಯ ಚಪ್ಪರ ಕಟ್ಟಿದ್ದ ಕರಿಬಾಳೆ ಹಣ್ಣಿನ ಗೊನೆಯಿಂದ ಕದ್ದು ಮುರಿದು ತಂದು ತಾವು ತಿನ್ನುವಾಗ ಅವಳಿಗೂ ಬಲಾತ್ಕಾರವಾಗಿ ಕೊಟ್ಟಿದ್ದ ಹಣ್ಣುಗಳನ್ನು ತಿಂದಿದ್ದೆಷ್ಟೊ ಅಷ್ಟೆ ಅವಳ ಹೊಟ್ಟೆಗೆ ಆಸರೆಯಾಗಿತ್ತು. ಆ ಪ್ರಚ್ಛನ್ನ ಉಪವಾಸದ ಪರಿಣಾಮ ಅವಳಲ್ಲಿ ಆಗಲೆ ಪ್ರಕಟವಾಗತೊಡಗಿತ್ತು.

"ಪೀಂಚಲೂ, ಇಲ್ಲಿರೋ ದರಗು ಕಸಾನೆಲ್ಲ ಒಂದುಚೂರು ಕಾಲಿನಲ್ಲೆ ಒತ್ತರಿಸ್ತೀಯಾ?" ಹಣತೆಯ ಬೆಳಕಿನ ಬಳಿ ನಿಂತು ಹೇಳಿದಳು ಚಿನ್ನಮ್ಮ.

ಪೀಂಚಲು ಹಾಗೆಯೆ ಮಾಡಿದ ಮೇಲೆ, ಚಿನ್ನಮ್ಮ ದಣಿದವಳಂತೆ ಅಮ್ಮನ ಮುಂದೆ, ಅವಳ ಕಡೆ ಮುಖ ಹಾಕಿ, ಮಂಡಿಯೂರಿ, ಕೈಮುಗಿದು ಕುಳಿತಳು. ಪೀಂಚಲು ಪಕ್ಕದಲ್ಲಿ ನಿಂತು ನೋಡುತ್ತಿದ್ದಂತೆಯೆ, ಯಾವುದೋ ದುಃಖಾತಿರೇಕದಿಂದ ಬಿಕ್ಕಿಬಿಕ್ಕಿ ಅಳುತ್ತಾ, ಕೈಮುಗಿದುಕೊಂಡೆ ಸಾಷ್ಟಾಂಗ ನಮಸ್ಕಾರದ ಭಂಗಿಯಲ್ಲಿ ನೆಲದಮೇಲೆ ಉದ್ದುದ್ದ ಅಡ್ಡಬಿದ್ದಳು!

ಭಕ್ತಿ ತುಂಬ ಶ್ರದ್ಧೆಯಿಂದ ಹೊಮ್ಮಿದ ಆರ್ತ ಜೀವದ ಪ್ರಾರ್ಥನೆಗೆ ಜಗನ್ಮಾತೆ ಅವಳು ಆಖ್ಯಾತ ಹೂವಳ್ಳಿ ಹಾಡ್ಯದ ಮಾರಿಯಮ್ಮನ ರೂಪದಿಂದಿರಲಿ ಅಥವಾ ದಕ್ಷಿಣೇಶ್ವರದ ಜಗದ್ ವಿಖ್ಯಾತ ಭವತಾರಿಣಿಯ ರೂಪದಿಂದಿರಲಿ ಓಕೊಳ್ಳದಿರುತ್ತಾಳೆಯೆ?

ಪೀಂಚಲು ಸ್ವಲ್ಪ ಹೊತ್ತು ನಿಂತು ನೋಡುತ್ತಿದ್ದಳು. ಚಿನ್ನಕ್ಕ ದೇವರಿಗೆ ಅಡ್ಡಬಿದ್ದು ಈಗ ಏಳುತ್ತಾರೆ, ಆಗ ಏಳುತ್ತಾರೆ ಎಂದು ನಿರೀಕ್ಷಿಸಿದುದು ವ್ಯರ್ಥವಾಯಿತು. ಯಾರಾದರೂ ಇಷ್ಟು ದೀರ್ಘಕಾಲ ಅಡ್ಡಬೀಳುತ್ತಾರೆಯೇ? ಇದ್ದಕ್ಕದ್ದ ಹಾಗೆ ಅವಳಿಗೆ ಇಂತಹುದೆ ಇನ್ನೊಂದರ ನೆನಪಾಗಿ ನಡುಗಿದಳು. ಹೌದು; ಅಡ್ಡಬಿದ್ದವರು ಬಹಳ ಹೊತ್ತಾದರೂ ಎದ್ದೇ ಇರಲಿಲ್ಲ! ಸುಡುಗಾಡಿನಲ್ಲಿ ಗಂಡನ ಕಳೇಬರದ ಪಾದ ಹಿಡಿದು ಅಡ್ಡಬಿದ್ದ ಹಳೆಮನೆ ಹೆಗ್ಗಡತಮ್ಮೋರು ಎಷ್ಟು ಹೊತ್ತಾದರೂ ಎದ್ದೇ ಇರಲಿಲ್ಲ. ಪೀಂಚಲು ಅದನ್ನೆಲ್ಲ ಪ್ರತ್ಯಕ್ಷದರ್ಶಿಯಾಗಿ ನೋಡಿದ್ದಳು. ಆ ನೆನಪು ಹೊಳೆದೊಡನೆಯೆ ಪೀಂಚಲುಗೆ ಕೈ ಕಾಲು ತಣ್ಣಗಾದಂತಾಗಿ, ನಿಂತಲ್ಲೆ ನೆಲಕ್ಕೆ ಕುಸಿಯುವಂತೆ ಕಾಲು ತತ್ತರಿಸತೊಡಗಿದವು: ಅಯ್ಯೋ ದೇವರೆ! ಚಿನ್ನಕ್ಕಗೂ ಹಾಗೇ ಆಗಿಬಿಟ್ಟರೆ?

ಕುಸಿದು ಕುಳಿತು "ಚಿನ್ನಕ್ಕಾ ಚಿನ್ನಕ್ಕಾ" ಎಂದು ಮೈ ಮುಟ್ಟಿ ಕರೆದಳು; ಚಿನ್ನಕ್ಕನ ಮೈ ಅಲುಗಾಡಿತು; ಉಸಿರೆದುಕೊಳ್ಳುವ ಸದ್ದೂ ಕೇಳಿಸಿತು. 'ಬದುಕಿದೆ!' ಎಂದುಕೊಂಡಿತು ಪೀಂಚಲುವಿನ ಜೀವ!

ಆದರೆ ಚೆನ್ನಮ್ಮ ಮಾತಾಡಲೂ ಇಲ್ಲ; ಏಳಲೂ ಇಲ್ಲ. ಅವಳಿಗೆ ಇತ್ತಣ ಪ್ರಜ್ಞೆ ಇರುವಂತೆಯೂ ತೋರಲಿಲ್ಲ. ಅವಳಿಗೆ ಏನಾಗುತ್ತಿತ್ತು ಎಂಬುದನ್ನು ಪೀಂಚಲು ಪಾಪ, ಹೇಗೆ ಅರಿತಾಳು! ಇತ್ತಣ ಪ್ರಜ್ಞೆಗೆ ಮರಳಿದ ಮೇಲಾದರು ಚೆನ್ನಮ್ಮಗೂ ಅದು ಬುದ್ಧಿವೇದ್ಯವಾಗಲು ಸಾಧ್ಯವೆ?

ಅಷ್ಟರಲ್ಲಿ ಹಳುವಿನಲ್ಲಿ ಹೊರಗಡೆ ಯಾವುದೊ ಪ್ರಾಣಿ ಓಡುವ ಸದ್ದಾಗಿ ಪೀಂಚಲು ಮೈಬಿಸಿಯಾಗಿ ಎದ್ದು ನಿಂತಳು. ಯಾವುದಾದರೂ ದುಷ್ಟ ಜಂತು ಮಳೆಯಿಂದ ರಕ್ಷೆ ಪಡೆಯಲು ಗುಡಿಯೊಳಗೆ ನುಗ್ಗಿದರೆ ಏನು ಗತಿ? ಗುಡಿಯ ಬಾಗಿಲಿರುವ ಕತ್ತಲೆಯ ಕಡೆ ಪೀಂಚಲು ನೋಡುತ್ತಿದ್ದಂತೆಯೆ ಹತ್ತಿರದ ಹಳು ಅಲುಗಿ, ಹತ್ತಿರ ಹತ್ತಿರ ಇನ್ನೂ ಹತ್ತಿರಕ್ಕೆ ಆ ಪ್ರಾಣಿ ಧಾವಿಸುತ್ತಾ ಬಳಿಸಾರಿ ಕಡೆಗೆ ಗುಡಿಯೊಳಕ್ಕೇ ನುಗ್ಗಿಬಿಟ್ಟಿತು!

"ಹಡ್ಡಿಡ್ಡಿಡ್ಡಿಡ್ಡೀ!" "ಅದನ್ನೋಡಿಸುವ ಸಲುವಾಗಿ ಕೂಗಿದಳು ಪೀಂಚಲು.

"ಏ!  ನಾನಲ್ದಾ? ಇವಳಿಗೇನು ಬಂದಿತ್ತೊ ಕೂಗುವುದಕ್ಕೆ? ನಾನೇನು ಹಂದಿಯೋ ಹುಲಿಯೋ?.... ಕೇಳಿತು ಐತನ ತುಸು ಅಣಕದ ದನಿ.

"ಹಂದಿ ಅಲ್ಲದಿದ್ದರೆ ಕೋಣ?...ಎಲ್ಲಿಗೆ ಹೋಗಿದ್ದೆ ನೀನು? ಇಲ್ಲಿಯೆ ಇರುತ್ತೇನೆ ಅಂದಿದ್ದಂವಾ?...."ಸಿಡುಕಿದಳು ಪೀಂಚಲು.

ಐತ ಓಡುತ್ತಲೆ ಬಂದಿದ್ದ. ನಡೆದದ್ದನ್ನು ಸಂಕ್ಷೇಪವಾಗಿ ಹೇಳಿ, ಅವಸರಪಡಿಸಿದ: ಚೆನ್ನಕ್ಕನ್ನ ಹುಡುಕುತ್ತಿದ್ದಾರೆ! ಆಗಲೆ ಗಾಬರಿಯಾಗಿದೆ! ಚೆನ್ನಕ್ಕನ ಕರಕೊಂಡು ಬೇಗ ಹೋಗಬೇಕು. ಮುಕುಂದಣ್ಣ ಯೆಂಕಮ್ಮನ ಕೊಟ್ಟಿಗೆ ಹತ್ರ ಕಾಯ್ತೀನಿ ಅಂತಾ ಹೇಳಿದ್ದಾರೆ."

ಪೀಂಚಲು ಅಲ್ಲಿ ನಡೆದದ್ದನ್ನು ಗಂಡನಿಗೆ ತಿಳಿಸಿ, ಚೆನ್ನಮ್ಮ ಏಳಲೊಲ್ಲದೆಯೋ ಏಳನಾರದೆಯೋ ಅಡ್ಡಬಿದ್ದಿರುವುದನ್ನು ತೋರಿಸಿದಳು. ಐತನೂ ಹೆದರಿಕೊಂಡೆ "ಚೆನ್ನಕ್ಕಾ! ಚೆನ್ನಕ್ಕಾ!" ಎಂದು ಕಿವಿಯ ಹತ್ತಿರ ಕರೆದರು ಪ್ರಯೋಜನವಾಗಲಿಲ್ಲ. ದಿಕ್ಕು ತೋರದಂತಾಗಿ ಅವನು ಮುಕುಂದಯ್ಯನನ್ನು ಕರೆತರುತ್ತೇನೆಂದು ಅತ್ತ ಕಡೆಗೆ ಗುಡ್ಡ ಏರಿ ಓಡಿದನು.

ಅಷ್ಟರಲ್ಲಿ, ಬಹಳ ಹೊತ್ತಾದರೂ ಇವರು ಬರದಿರುವುದನ್ನು ಶಂಕಿಸಿ, ಲಾಟೀನನ್ನು ತಾನು ಗುಡಿಯಲ್ಲಿಯೆ ಬಿಟ್ಟು ಬರದೆ ತನ್ನ ಜೊತೆಯಲ್ಲಿ ತಂದುದಕ್ಕಾಗಿ ಪರಿತಪಿಸುತ್ತಾ, ಕತ್ತಲಲ್ಲಿ ದಾರಿಯಲ್ಲದ ಹಳುವಿನಲ್ಲಿ ಹಾದಿ ತಪ್ಪಿದರೋ ಏನೋ ಎಂದು ಕಳವಳಿಸುತ್ತಾ ಲಾಟೀನಿನ ಬೆಳಕಿನೊಡನೆ ಓಡೋಡಿ ಬರುತ್ತಿದ್ದ ಮುಕುಂದಯ್ಯನನ್ನು ಸಂಧಿಸಿದ ಐತ ಅವನಿಗೆ ನಡೆದುದನ್ನೆಲ್ಲ ಹೇಳತ್ತಲೆ ಗುಡಿಗೆ ಕರೆತಂದನು.

ದೊಡ್ಡದು ಮಾಡಿದ ಲಾಟೀನಿನ ಬೆಳಕಿನಲ್ಲಿ ಗುಡಿಯ ಒಳಗು ಬೆಳಗಿತು. ದೇವರ ಮುಂದೆ ಅಡ್ಡಬಿದ್ದಿಂತಿದ್ದ ಚೆನ್ನಮ್ಮನ ಆಕಾರ, ಆಕೆ ಉಟ್ಟಿದ್ದ ಧಾರೆಯ ಸೀರೆ ಮತ್ತು ಹೊರಡುವ ಅವಸರದಲ್ಲಿ ಕಳಚಿಡಲು ಸಾಧ್ಯವಾಗದಿದ್ದು ತೊಟ್ಟಂತೆಯೇ ಇಟ್ಟುಕೊಂಡಿದ್ದ ಹೊಳೆವ ಹೊನ್ನಿನ ತೊಡವುಗಳು ಇವುಗಳಿಂದ ಶೋಭಿಸಿ, ಮುಕುಂದಯ್ಯನ

ಮನಸ್ಸಿಗೆ ತಾನು ಕಾವ್ಯದಲ್ಲಿ ಓದಿದ್ದ ಅಪ್ಸರಾ ದೇವಿಯರ ನೆನಪು ತಂದಿತ್ತು. ಆದರೆ ಅದರ ಆಸ್ವಾದನೆಗೆ ಅನುಕೂಲವಾಗಿರದಿದ್ದ ಆ ಸನ್ನಿವೇಶ ಅವನ ಹೃದಯದ ಖೇದೋದ್ವೇಗಗಳನ್ನು ದ್ವಿಗುಣಿತ ಮಾಡಿತೆ ಹೊರತೂ ಅವನನ್ನು ಸುಖಿಯನ್ನಾಗಿ ಮಾಡಲಿಲ್ಲ.

"ಏಳಿ ಚಿನ್ನಕ್ಕಾ! ಮುಕ್ಕುಂದಯ್ಯ ಬಂದರು, ಮುಕುಂದಯ್ಯ!"

ಪೀಂಚಲು ಕಿವಿಯಲ್ಲಿ ಉಚ್ಚರಿಸಿದ ಮುಕ್ಕುಂದಯ್ಯನ ಹೆಸರು ಮಂತ್ರವಾಯಿತೆಂಬಂತೆ ಚಿನ್ನಮ್ಮ "ಆಃ ಬಂದರೇ? ಅವರು ಬಂದರೇ?" ಎಂದು, 'ಅವರು' ಎಂಬ ಪದವನ್ನು ಧ್ವನಿಸ್ಫುರಿಸುವಂತೆ ಒತ್ತಿ ಉಸುರಿ, ದಡಬಡನೆ ಎದ್ದು ನಿಂತಳು.

ತನ್ನ ಕಡೆಗೆ ಮುಖಮಾಡಿ ನಿಂತಿದ್ದ ಚಿನ್ನಮ್ಮನನ್ನು ಲಾಟೀನಿನ ಬೆಳಕಿನಲ್ಲಿ ನೋಡಿ, ಮೊದಲ ನೋಟಕ್ಕೆ, ಮುಕ್ಕುಂದಯ್ಯ ಮರುಳಾಗಿ ಹೋದನು. ಬಾಲ್ಯದಿಂದಲೂ ತಾನು ನೋಡುತ್ತಲೆ ಬಂದಿದ್ದ ಅವಳು ಇಂದು ಯಾರೊ ಅನ್ಯಳೆಂಬಂತೆ ಅದ್ಭುತವಾಗಿ ತೋರಿದಳು. ಅವಳು ಮಾರಿಯಮ್ಮನ ಮುಂದೆ ಅಡ್ಡಬಿದ್ದಿದ್ದಾಗ ಹಿಂಭಾಗದಿಂದ ನೋಡಿಯೆ ಭಾವವಶನಾಗಿದ್ದನು. ಈಗ ಆ ದಿವ್ಯ ಮುಗ್ಧ ಮುಖದ ತೇಜಃಪೂರ್ಣವಾದ ಸೌಂದರ್ಯರಾಶಿಯನ್ನು ಈಕ್ಷಿಸಿ ವಿಸ್ಮಿತನಾದನು. ಅದರಲ್ಲಿಯೂ ಮದುಮಗಳ ಉಡುಗೆ ತೊಡುಗೆಗಳಲ್ಲಿ ಆಕೆ ಸಾಕ್ಷಾತ್ ಲಕ್ಷ್ಮೀಯಾಗಿ ವಿರಾಜಿಸಿದ್ದಳು. ಹಿಂದೆ ಇಲ್ಲದಿದ್ದ ಏನೋ ಎಂದು ಪೀಂಚಲುವು ಬೆರಗಾಗಿ ನೊಡಿದಳು. "ಚಿನ್ನಕ್ಕ ಎಷ್ಟು ಚಂದಾಗಿ ಆಗಿಬಿಟ್ಟಿದ್ದಾರೆ?" ಎಂದುಕೊಂಡಳು ಅವಳೂ!

ಚಿನ್ನಮ್ಮ ಎದ್ದು ನಿಂತಿದ್ದರೂ ಇನ್ನೂ ಸಂಪೂರ್ಣ ಎಚ್ಚರ ಗೊಂಡಂತೆ ಕಾಣುತ್ತಿರಲಿಲ್ಲ. ಯಾವುದೋ ದಿವ್ಯ ಅತೀತ ಶಕ್ತಿಯ ಅಧೀನದಲ್ಲಿಯೆ ವರ್ತಿಸುತ್ತಿದ್ದಂತೆ ಭಾಸವಾಯಿತು. ಅವಳು ಮುಕ್ಕುಂದಯ್ಯನನ್ನು ನೇರವಾಗಿ ನೋಡಿ, ಮೊಗದಲ್ಲಿ ಮುಗುಳುನಗೆಯೊಂದನ್ನು ಸುಳಿಸಿದಳು. ತನ್ನ ಮುಕ್ಕುಂದಬಾವ ಬಂದಿದ್ದಾರೆ; ತನ್ನ ಸರ್ವಸ್ವವೂ ಇನ್ನು ಅವರಿಗೆ ಎಲ್ಲವನ್ನೂ ನೈವೇದ್ಯಮಾಡಿ, ತನ್ನತನವೆನ್ನೆಲ್ಲ ಅವರಿಗೆ ಸಂಪೂರ್ಣವಾಗಿ ಶರಣುಗೊಳಿಸಿದ ಶರಣಾಗತಿಭಾವದಲ್ಲಿ ಅವಳ ದೃಷ್ಟಿ ಮುಕ್ಕುಂದಯ್ಯನ ದೃಷ್ಟಿಯನ್ನು ಸಂಧಿಸಿತ್ತು. ಅವನಂತೂ ಸುಪ್ರಸನ್ನೆಯಾದ ಧನಲಕ್ಷ್ಮಿಯ ಮುಂದೆ ನಿಂತಿರುವ ದರಿದ್ರನಂತೆ ದೈನ್ಯವನ್ನೂ ಐಶ್ವರ್ಯವನ್ನೂ ಒಮ್ಮೆಗೇ ಅನುಭವಿಸುತ್ತಿದ್ದನು: ತನಗಾಗಿ ಏನನ್ನೆಲ್ಲ ತ್ಯಜಿಸಿ ಬಂದಿದ್ದಾಳೆ ತನ್ನ ಚಿನ್ನಿ! ಶಠ ಸಂಪ್ರದಾಯಬದ್ಧವಾದ ಅಂದಿನ ಆ ಕುಲೀನ ಸಮಾಜದಲ್ಲಿ, ನಾಗರಿಕ ಅಕ್ಷರವಿದ್ಯೆಯ ಗಂಧವೂ ಇಲ್ಲದ ಲಜ್ಜಾಶೀಲವತಿಯಾದ ಸಣ್ಣ ಹುಡುಗಿಯೊಬ್ಬಳು ಧೈರ್ಯಮಾಡಿ ಮಾನ ಮರ್ಯಾದೆ ಕ್ಷೇಮ ಬಂಧುಬಾಂಧವರು ಯಾರನ್ನೂ ಯಾವುದನ್ನೂ ಪರಿಗಣಿಸದೆ, ಲಕ್ಷಿಸದೆ, ಮದುವೆಯ ದಿನವೆ ತಾನೊಲಿದವನಿಗಾಗಿ ಹೀಗೆ ಸಾಹಸಿಯಾದದ್ದು ಏನು ಸಾಮಾನ್ಯವೆ? ದೈವ ನಿಯಾಮಕವೆ ಇರಬೇಕು! ಅದರಲ್ಲಿಯೂ ತನ್ನಂತಹ ಸಾಮಾನ್ಯನಿಗಾಗಿ? (ಇಲ್ಲಿ ತನ್ನ ಮುಂದೆಯೇ ದೇವರಾಜ್ಞೆಯಂತೆ ನಿಂತು ಹೊಳೆಯುತ್ತಿದ್ದ ಅವಳಿಗೂ ಕಂಬಳಿಕೊಪ್ಪೆ ಹಾಕಿಕೊಂಡು ಸಾಮಾನ್ಯ ಉಡುಪಿನಲ್ಲಿ ರೂಕ್ಷವಾಗಿ ನಿಂತಿದ್ದ ತನಗೂ ಇದ್ದ ತಾರತಮ್ಯ ಮುಕ್ಕುಂದಯ್ಯನಿಗೆ ಪ್ರತ್ಯಕ್ಷಗೋಚರವಾದಂತಿತ್ತು!) ಅಲ್ಪನಿಗಾಗಿ? ಯಾವ ವಿಶೇಷವೂ ಇಲ್ಲದ ಕ್ಷುದ್ರನಿಗಾಗಿ? ಮುಕುಂದಯ್ಯನಿಗೆ ಕಲ್ಲೂರು ಗಡ್ಡದಯ್ಯನ ನೆನಪಾಯಿತು. ಚಿನ್ನಮ್ಮನ ಪರವಾಗಿ ಹೃದಯದಲ್ಲಿ ಅನಂತ ಕೃತಜ್ಞತೆ ಉಕ್ಕಿ ಕಣ್ಣುಗಳಲ್ಲಿ ಹೊಮ್ಮಿತು ನೀರಾಗಿ!

“ಐತಾ, ಲಾಟೀನು ತೆಗೆದುಕೊ; ಬತ್ತಿ ಇಳಿಸಿ, ದೀಪ ಸಣ್ಣದು ಮಾಡಿಕೊ ಮುಂದೆ ಹೊರಡು....ಪೀಂಚಲೂ, ನೀನು ಆ ಕಂಬಳಿಕೊಪ್ಪೆ ಹಾಕಿಕೊ. ಇವಳದ್ದನ್ನೂ ಎತ್ತಿಕೊ....

ಎಷ್ಟು ತಟಕ್ಕನೆ ನಿಶ್ಚಯಿಸಿ ಮುಕುಂದಯ್ಯ ಹೇಳಿದ್ದನೆಂದರೆ, ಅವನ ಧ್ವನಿಯಲ್ಲಿ ಚಲನವಲನಗಳಲ್ಲಿ ಶೀಘ್ರತ್ವದ ಬಾವಭಂಗಿಗಳು ಸುಸ್ಫುಟವಾಗಿದ್ದುವು.

ಐತ ಲಾಟೀನು ಸಹಿತ ಗುಡಿಯಿಂದ ಕೆಳಗಿಳಿದನು.

ಮತ್ತೆ ಮೊದಲಿನಂತೆಯೆ ಕವಿದು ಬಂದ ಮಿಣಿಮಿಣಿ ಹಣತೆ ಬೆಳಕಿನ ಮಬ್ಬುಗತ್ತಲೆಯಲ್ಲಿ ನಿಂತಿದ್ದ ಚಿನ್ನಮ್ಮನೆಡೆಗೆ ಮುಕುಂದಯ್ಯ ಸರಸರನೆ ನಡೆದು, ಅವಳನ್ನು ತನ್ನ ಹೆಗ್ಗಂಬಳಿಕೊಪ್ಪೆಯೊಳಗೆ ಸುತ್ತಿ, ತನ್ನ ಬಲ ತೋಳಿಂದ ಅವುಚಿಕೊಂಡು. ಮಗು ತನ್ನನ್ನು ಅವುಚಿಕೊಳ್ಳುವ ತಾಯಿಗೆ ವಶವಾಗುವಂತೆ ಅವಳು ತನ್ನ ಹಿಂದಿನ ಸಂಕೋಚವನ್ನೆಲ್ಲ ಬಿಸುಟು, ಆ ಬಲಿಷ್ಠ ಆಶ್ರಯವನ್ನು ಬಿಗಿಯಾಗಿ ಅಪ್ಪಿಕೊಂಡಳು. ಅದುವರೆಗೂ ಅವರು ಎಂದೂ ಒಬ್ಬರನ್ನೊಬ್ಬರು ಹಾಗೆ ಮುಟ್ಟಿರಲಿಲ್ಲ.

ಹುಲಿಕಲ್ಲು ನೆತ್ತಿಗೆ ಹೋಗುವ ಕಡಿದಲ್ಲದ ಬಳಸುಮಾರ್ಗದಲ್ಲಿ ಅವರು ಹಳೆಪೈಕದ ಯಂಕಿಯ ಮನೆಯ ಹತ್ತಿರದ ಕೊಟ್ಟಿಗೆಯ ಬಳಿಗೆ ಬಂದಾಗ, ಚಿನ್ನಮ್ಮ ತನಗೆ ಬಾಯಿ ಒಣಗಿ ಬರುತ್ತಿದೆ ಎಂದು ಮುಕುಂದ ಬಾವನ ಕಿವಿಯಲ್ಲಿ ಉಸುರಿದಳು. ಎಲ್ಲರೂ ಕೊಟ್ಟಿಗೆಯ ಕಡಿಮಾಡಿನ ಆಶ್ರಯದಲ್ಲಿ ಸ್ವಲ್ಪ ಹೊತ್ತು ವಿಶ್ರಮಿಸಿಕೊಳ್ಳಲು ನಿಶ್ಚಯಿಸಿ ನಿಂತರು.

ಮಳೆ ತುಸು ನಿಂತಿತ್ತು. ಆದರೆ ಗಾಳಿ ಶೀತಲವಾಗಿ ಬೀಸುತ್ತಲೆ ಇತ್ತು. ಕೊಟ್ಟಿಗೆಯ ಒಳಗಿಂದ ದನ ಎತ್ತುಗಳ ಕೋಡಿನ ಸದ್ದು, ಸೀನಿನ ಸತ್ತು, ಉಸಿರಾಟದ ಸದ್ದು, ಹಲುಬಿನ ಗಿಡ್ಡಗಳ ಓಡಾಟದ ಸದ್ದು ಕೇಳಿ ಬರುತ್ತಿತ್ತು. ಗಂಜಲ ಸಗಣಿಯ ಕಟು ವಾಸನೆಯೂ ತುಂಬಿತ್ತು. ಕಾಡಿನ ಜಿಗಣೆಕಾಟವನ್ನು ಮೀರಿತ್ತು ನುಸಿಯ ಕಾಟ.

ಮುಕುಂದಯ್ಯನ ಸೂಚನೆಯಂತೆ ಐತ ಹಾಲು ತರಲು ಯೆಂಕಿಯ ಮನೆಗೆ ಹೋದನು.

ಯೆಂಕಿಯ ಮನೆ, ಅದು ಹೊಲೆಯರದ್ದೋ ಗಟ್ಟದ ತಗ್ಗಿನವರದ್ದೋ ಆಗಿದ್ದರೆ ಬಿಡಾರವೆಂದೇ ಕರೆಯಲ್ಪಡುತ್ತಿತ್ತು. ಅದು ಹುಲ್ಲಿನ ಗುಡಿಸಲಾಗಿದ್ದರೂ ದೀವರ ಜಾತಿಯರದ್ದಾದ್ದರಿಂದ ಅದನ್ನು 'ಮನೆ' ಎಂದು ಕರೆಯುತ್ತಿದ್ದರು ಅಷ್ಟೆ. ಆ ಹೆಸರಿಗೆ ಅದಕ್ಕಿದ್ದ ಹಕ್ಕು ಎಂದರೆ ತಡಿಕೆ ಗೋಡೆಗೆ ಬದಲಾಗಿ ಅದಕ್ಕಿದ್ದ ಮಣ್ಣಿನ ಗೋಡೆಗಳು ಮತ್ತು ಅದರ ಸ್ಥವರತೆ.

ವಯಸ್ಸಾದ ವಿಧವೆ ಯೆಂಕಿ ಒಬ್ಬೊಂಟಿಗಳು. ಅವಳು ಹೆರಿಗೆ ಮಾಡಿಸುವುದು, ಸಣ್ಣ ಪುಟ್ಟ ಕಾಯಿಲೆಗಳಿಗೆ ಮದ್ದು ಕೊಡುವುದು, ದನ ಕರುಗಳಿಗೆ ಕಾಯಿಲೆಯಾದರೆ ಮುಷ್ಟ ಮಾಡುವುದು, ಹಾಲು ಕಡಿಮೆಯಾದರೆ ಹೆಚ್ಚಾಗುವುದಕ್ಕೆ ಬೂದಿ ಮಂತ್ರಿಸಿಕೊಡುವುದು, ಮುಂಡೆ ಬಸುರಿಯಾದರೆ ಅಥವಾ ಕನ್ನೆ ಕಳ್ಳಬಸುರಿಯಾದರೆ ಮದ್ದು ಹಾಕಿ ಸಾಮಾಜಿಕವಾದ ಅವಮಾನ ಬಹಿಷ್ಕಾರಾದಿ ಕ್ಲೇಶಕಷ್ಟಗಳಿಂದ ಆರ್ತರನ್ನು ರಕ್ಷಿಸುವುದು-ಇತ್ಯಾದಿಗಳಲ್ಲಿ ತೊಡಗಿ

ಜೀವನಯಾಪನೆ ಮಾಡುತ್ತಿದ್ದಳು. ಆದ್ದರಿಂದ ಅವಳಿಗೆ ಪರಿಚಯವಿಲ್ಲದ ಮತ್ತು ಅವಳ ಪರಿಚಯವಿಲ್ಲದ ಜನರು ಆ ಸೀಮೆಯಲ್ಲಿ ಯಾರೊಬ್ಬರೂ ಇರುತ್ತಿರಲಿಲ್ಲ. ಅವಳಿಗೆ ತಿಳಿಯದಿರುವ ಯಾವ ಗುಟ್ಟಿನ ಸುದ್ದಿಯೂ ಇರಲೂ ಸಾಧ್ಯವಿರಲಿಲ್ಲ.

ರಾತ್ರಿ ಬಹಳ ಹೊತ್ತಾದರೂ ಯೆಂಕಿಯ ಮನೆಯೊಳಗೆ ದೀಪವಿತ್ತು. ಐತ ತಟ್ಟಿದೊಡನೆ ಬಾಗಿಲು ತೆರೆದದ್ದು ಯೆಂಕಿಯಲ್ಲ, ನಾಗತ್ತೆ!

ಐತ ನಾಗತ್ತೆಯನ್ನು ಕಂಡು ಕಕ್ಕಾವಿಕ್ಕಿಯಾದ. ಅವನಿಗೆ ಮಾತೇ ಹೊರಡಲಿಲ್ಲ. ಅಂತಹ ಅಸ್ಥಾನದಲ್ಲಿ ಅವೇಳೆಯಲ್ಲಿ ಅನಿರೀಕ್ಷಿತವಾಗಿ ನಾಗತ್ತೆಯನ್ನು ಸಂಧಿಸಲು ಅವನ ಪ್ರಜ್ಞೆ ಸ್ವಲ್ಪವೂ ಸಿದ್ಧವಾಗಿರಲಿಲ್ಲ.

ಅಲ್ಲಿಂದ ಇಲ್ಲಿಂದ ಅವಳ ವಿಚಾರವಾಗಿ ಸ್ವಲ್ಪ ಸ್ವಲ್ಪ ಸುದ್ದಿ ಅವನ ಕಿವಿಗೆ ಬಿದ್ದಿತ್ತು. ಆದರೆ ತನ್ನ ಹೆಂಡತಿಯಿಂದಲೇ ಕೇಳಿದ್ದ ಅತ್ಯಂತ ಅಸಹ್ಯವಾದ ರಹಸ್ಯವಾರ್ತೆಯಿಂದ ನಾಗತ್ತೆಯ ವಿಚಾರವಾಗಿ ಅವನ ಮನಸ್ಸು ಪೂರಾ ಕೆಟ್ಟಿತ್ತು. ಅವಳನ್ನು ಹೂವಳ್ಳಿ ನಾಯಕರು ತಮ್ಮ ಮೇಲೆ ಬರಬಹುದಾದ ಅಪವಾದದಿಂದ ಪಾರಾಗುವುದಕ್ಕಾಗಿಯೂ ತಮ್ಮ ಮಗಳ ಮದುವೆಯ ಸಂದರ್ಭದಲ್ಲಿ ಪಾಲು ಮುಖಂಡರಿಂದ ಬಹಿಷ್ಕಾರ ಗಿಹಿಷ್ಕಾರದ ಅವಮಾನದ ಗೊಂದಲಕ್ಕೆ ಅವಕಾಶ ಒದಗದಿರುವುದಕ್ಕಾಗಿಯೂ ಹೂವಳ್ಳಿ ಮನೆಯಿಂದ ಹೊರಡಿಸಿದ ಮೇಲೆ, ನಾಗತ್ತೆ ಮೇಗರವಳ್ಳಿಯಲ್ಲಿ ಯಾರೊ ಕೀಳುಜಾತಿಯವರ ಮನೆಯಲ್ಲಿ,-ಸಾಬರ ಮನೆಯಲ್ಲಿ ಎಂದೂ ಹೇಳುತ್ತಿದ್ದವರು ಕೆಲವರು,-ಗುಪ್ತ ಆಶ್ರಯ ಪಡೆದು, ಹಳೆಪೈಕದ ಯೆಂಕಿಯಿಂದ ಮದ್ದು ತೆಗೆದುಕೊಳ್ಳುತ್ತಿದ್ದಾಳೆ ಎಂದು ಕೇಳಿದ್ದನು. ಆದರೆ ಇಂತಹ ಸಂಕಟದ ಸಂದರ್ಭದಲ್ಲಿ ಯೆಂಕಮ್ಮನ ಮನೆಯಲ್ಲಿ ನಾಗತ್ತೆಗೆ ಇದಿರಾಗುವ ಅನನ್ವಯಕ್ಕೆ ಅವನ ಪ್ರಜ್ಞೆ ಸಿದ್ಧವಾಗಿರಲಿಲ್ಲ.

"ಏನೋ, ಐತಾ? ಈ ಮಳೇಲಿ? ಇಷ್ಹೊತ್ತಿನಲ್ಲಿ? ಇಲ್ಲಿ?"

ನಾಗತ್ತೆಯ ಪ್ರಶ್ನೆಗಳಿಗೆ ಉತ್ತರವೆ ಹೊರಡದೆ, ಮುಕುಂದಣ್ಣ ಚಿನ್ನಕ್ಕರ ಗುಟ್ಟಿನ ಸಾಹಸ ಬಯಲಾಗದಂತೆ ಏನು ಹೇಳುವುದು ಎಂದು ಚಿಂತಿಸುತ್ತಾ ನಿಂತಿದ್ದ ಐತ ಒಳಗಣಿಂದ ಯೆಂಕಿ ಬರುತ್ತಿದ್ದುದನ್ನು ಕಂಡು "ಏನಿಲ್ಲ. ಯೆಂಕಮ್ಮನ ಹತ್ರ ಮದ್ದಿಗೆ ಬಂದೆ!" ಎಂದುಬಿಟ್ಟನು.

"ಯಾರಿಗೋ?....ನಿನ್ನ ಹೆಂಡ್ತಿಗೇನೋ?....ಅವಳಿಗೆ ಆಗಲೆ ತಿಂಗಳು ತುಂಬಿದೆಯೇನೊ?....ಬ್ಯಾನೆ ಸಂಕಟ ತೊಡಗಿ ಯೆಂಕಿ ಕರೆಯೋಕ್ಕೆ ಬಂದಿಯೇನೋ?...." ನಾಗತ್ತೆ ಪ್ರಶ್ನೆಗರೆದಳು.

ತನಗೆ ಹೊಳೆಯದಿದ್ದ ಉತ್ತರವನ್ನು ನಾಗತ್ತೆಯೆ ಸೂಚಿಸಿದ್ದರಿಂದ ಅದನ್ನೆ ಗಬಕ್ಕನೆ ಒಪ್ಪಿಕೊಂಡು "ಹೌದು, ಮಾರಾಯ್ರು, ಅದಕ್ಕೇ ಓಡಿ ಬಂದೆ" ಎಂದುಬಿಟ್ಟನು ಐತ.

ಆದರೆ ಅವರ ಸಂಭಾಷಣೆಯನ್ನು ಆಲಿಸುತ್ತಿದ್ದ ಯೆಂಕಿ ಐತ ಹೇಳಿದುದನ್ನು ನಂಬಿರಲಿಲ್ಲ. ಅವಳಿಗೆ ಆ ರಾತ್ರಿ ನಡೆಯಲು ಸಿದ್ಧವಾಗಿದ್ದ ನಾಟಕದ ಪೂರ್ವಪರಿಚಯವಿದ್ದುದರಿಂದಲೂ ಅವಳ ಸಹಾನುಭೂತಿಯೆಲ್ಲ ಮುಕುಂದಯ್ಯನ ಪರವಾಗಿದ್ದುದರಿಂದಲೂ ಐತನನ್ನು ಏಕಾಂತಕ್ಕೆ ಕರೆದು ಕಿವಿಮಾತಾಡಿದಳು. ಮುಕುಂದಯ್ಯ

ಹಾಲಿಗೆ ಹೇಳಿ ಕಳುಹಿಸಿದ್ದಾರೆ ಎಂಬುದನ್ನು ಕೇಳಿದೊಡನೆ ಆ ಅನುಭವಶಾಲಿಯಾಗಿದ್ದ ಮುದುಕಿಗೆ ಎಲ್ಲ ಗೊತ್ತಾಗಿ ಹೋಯಿತು.

"ಓಡಿಹೋಗಿ ಹೇಳು ಮುಕುಂದಯ್ಯೋರಿಗೆ, ಚಿನ್ನಕ್ಕನ್ನ ಇಲ್ಲಿಗೆ ಕರಕೊಂಡು ಬರಾಕೆ....ಅಯ್ಯೋ, ಈ ಕತ್ತಲೇಲಿ ಈ ಮಳೇಲಿ, ಪಾಪ! ಅಷ್ಟು ಸುಖದಲ್ಲಿ ಬೆಳೆದ ಆ ಅರಿಯದ ಮಗು, ಹುಲಿಕಲ್ಲು ನೆತ್ತಿಗೆ ಹೆಂಗೋ ಹತ್ತಾದು?... 'ಅಲ್ಲಿ ಯಾರೂ ಇಲ್ಲ; ಅವರನ್ನ ಕರಕೊಂಡು ಬರಬೇಕಂತೆ' ಅಂತಾ ಹೇಳು..." ಐತ ದೂರದಲ್ಲಿ ನಿಂತಿದ್ದ ನಾಗತ್ತೆಯ ಕಡೆಗೆ ಕಣ್ಣು ಹಾಯಿಸಿದುದನ್ನು ಗಮನಿಸಿ ಮುದುಕಿ ಮುಂದುವರಿಸಿದಳು: "ಆ ಬಾಂವಿಕೊಪ್ಪದ ಹೆಗ್ಗಡ್ತೇರನ್ನ ಯಾರ ಕಣ್ಣಿಗೂ ಬೀಳದ ಹಾಂಗೆ ಮುಚ್ಚಿಟ್ಟಿದ್ದೀನೋ. ನೀ ಮಾತ್ರ ಆ ಇಚಾರ ಮಾತೆತ್ತಬ್ಯಾಡ, ಗೊತ್ತಾಯ್ತಾ? ಓಡು, ಮತ್ತೆ, ಬ್ಯಾಗ."

ಐತ ಓಡುತ್ತಲೆ ಕತ್ತಲೆಯಲ್ಲಿ ಕಣ್ಮರೆಯಾದನು. ಯೆಂಕಿ ನಾಗತ್ತೆಯನ್ನು ಮನೆಯ ಹಿಂದುಗಡೆಯ ಒಂದು ಕೋಣೆಯಲ್ಲಿ ಕುಳಿತಿರುವಂತೆ ಹೇಳಿ, ಬಾಗಿಲು ಎಳೆದುಕೊಂಡು ಚಿಲಕ ಹಾಕಿದಳು. ಜಗಲಿಯಲ್ಲಿ ಅತಿಥಿಗಳು ಕುಳಿತುಕೊಳ್ಳಲು ಅನುಕೂಲವಾಗುವಂತೆ ಒಂದು ಚಾಪೆ ಬಿಚ್ಚಿ ಹರಡಿದಳು.

ಸ್ವಲ್ಪ ಹೊತ್ತಿನಲ್ಲಿಯೆ ಮದುಮಗಳ ವೇಷಭೂಷಣದಿಂದ ಮುದುಕಿಯ ಕಣ್ಣಿಗೆ ಅಮೃತಸೇಚನ ಮಾಡುತ್ತಿದ್ದ ಚಿನ್ನಮ್ಮನನ್ನು ಮುಂದುಮಾಡಿಕೊಂಡು ಮುಕುಂದಯ್ಯ, ಪೀಂಚಲು ಮತ್ತು ಐತ ಮನೆಯನ್ನು ಪ್ರವೇಶಿಸಿದರು. ಮುದುಕಿ ಮುಕುಂದಯ್ಯಗೆ ಕಾಲು ತೊಳೆದುಕೊಳ್ಳಲು ನೀರುಕೊಟ್ಟು, ಬೇಡಬೇಡವೆಂದರೂ ಕೇಳದೆ ಸುತ್ತುಗಾಲುಂಗುರಗಳನ್ನು ಶುಚಿಮಾಡಿ ಮತ್ತೆ ಮೊದಲಿನಂತೆಯೆ ತುಂಬ ಮುದ್ದಿನಿಂದ ತೊಡಿಸಿದಳು. ನಿಸ್ಸಂತಾನಳಾಗಿ ಒಂಟಿಬಾಳು ಬಾಳುತ್ತಿದ್ದ ಆ ವೃದ್ಧೆಯ ಕಣ್ಣು ಒದ್ದೆಯಾಗಿದ್ದುದನ್ನು ಅವಳು ಯಾರಿಗೂ ತೋರಗೊಡಲಿಲ್ಲ. ಸೊಬಗು ತುಂಬಿ, ಹೊಂಬಳಗ ಮುದ್ದು ಸೂಸಿ, ಮಿರುಗುತ್ತಿದ್ದ ಚಿನ್ನಮ್ಮನ ಕೋಮಲ ಪಾದಯುಗ್ಮಗಳನ್ನು, ನಾನಾ ನೆವದಿಂದ ಸುಕ್ಕಿದ ತನ್ನ ಒರಟು ಕೈಯಿಂದ ಮುಟ್ಟಿ, ಸೋಂಕಿ, ನೀರೊರೆಸಿ, ಸೊಗಯಿಸುತ್ತಾ ಕಣ್ಣಿನಿಂದಲ್ ಮುದ್ದಿಸಿದಳು, ಆ ಮುದುಕಿ.

ಹಳೆಪೈಕದವಳ ಅಡುಗೆಮನೆ ಹೂವಳ್ಳಿ ವೆಂಕಪ್ಪನಾಯಕರ ಮಗಳಿಗೆ ಪ್ರವೇಶಿಸಲು ನಿಷಿದ್ಧ ಪ್ರದೇಶವಾಗಿದ್ದರೂ, ಅದರ ಮಿಶ್ರವಾಸನೆ ಅಸಹನೀಯವಾಗಿದ್ದರೂ ಯೆಂಕಿ ಚಿನ್ನಮ್ಮನನ್ನು ಒಳಗೆ ಕರೆದೊಯ್ದು ಒಲೆಯ ಬೆಂಕಿಯಲ್ಲಿ ಒದ್ದೆಯಾರಿಸಿಕೊಳ್ಳುವಂತೆ ಮಾಡಿದಳು. ಮಳೆ ಗಾಳಿಯ ಚಳಿಗೆ ಇನ್ನೇನು ಉಡುರು ಹತ್ತುವುದರಲ್ಲಿದ್ದ ಅವಳ ಮೈಗೆ ಯೆಂಕಿಯ ಒಲೆಯ ಬೆಂಕಿ ಮುದುಕಿಯ ತಾಯ್ತನದ ಅಕ್ಕರೆಯಷ್ಟೆ ಬೆಚ್ಚಗೆ ನೊಚ್ಚಗಿತ್ತು! ಯೆಂಕಿ ಕೊಟ್ಟ ಬಾಳೆಹಣ್ಣುಗಳನ್ನು ತಿಂದು, ಹಾಲು ಕುಡಿದು, ನಿಜವಾಗಿಯೂ ಹಸಿವೆಯಿಂದಲೆ ದಣಿದಿದ್ದ ಚಿನ್ನಮ್ಮ ಚೇತರಿಸಿಕೊಂಡಳು. ಜೊತೆಗೆ ಎಷ್ಟು ಬೇಡವೆಂದರೂ ಒಲ್ಲೆನೆಂದರೂ ಕೇಳದೆ ಮುದುಕಿ ಕುಚ್ಚಿಕೊಟ್ಟ ಒಂದು ಮೊಟ್ಟೆಯನ್ನೂ ತಿನ್ನಬೇಕಾಯಿತು. ಅವಳು ಕಣ್ಣುಸನ್ನೆ ಕೈಸನ್ನೆಗಳಿಂದಲೆ ಸೂಚಿಸಿದ ಇನ್ನೊಂದು ಕುಡಿಯುವ ಪದಾರ್ಥವನ್ನು ಮಾತ್ರ ಚಿನ್ನಮ್ಮ ಬಲವಾಗಿ ತಲೆಯಲ್ಲಾಡಿಸಿಯೆ ತಿರಸ್ಕರಿಸಿದ್ದಳು: ಅವಳು ಅಡುಗೆಯ ಮನೆಗೆ ಕಾಲಿಡುವಾಗಲೆ ಮೂಗಿಗೆ ರುಮ್ಮನೆ ಬಡಿದಿತ್ತು ಕಳ್ಳುಗಂಪು!

“ಬೆಳಗಿನ ಜಾಂವ ಕಸ್ತಲೆಕಸ್ತಲೆ ಇರುವಾಗಲೆ ಎದ್ದು ಹೋಗಬ್ಹೈದು. ಈ ಕತ್ತಲೇಲಿ ಈ ಮಳೇಲಿ (ಆಗ ಮಳೆ ನಿಂತಿತ್ತು; ಆದರೂ ಮುದುಕಿ ತನ್ನ ವಾದದ ಪುಷ್ಟಿಗಾಗಿ ಅದನ್ನು ಲಕ್ಷಿಸದೆ ಮಾತಾಡುತ್ತಿದ್ದಳು.) ಚೆನ್ನಕ್ಕನ್ನ ಯಾಕೆ ದಣಿಸ್ತೀರಿ?” ಎಂದು ನಾನಾ ವಿಧವಾಗಿ ಯೆಂಕಿ ವಾದಿಸಿದರೂ ಮುಕುಂದಯ್ಯ ಅದಕ್ಕೆ ಒಪ್ಪಲಿಲ್ಲ. ಅಲ್ಲದೆ ಚೇತರಿಸಿಕೊಂಡಿದ್ದ ಚೆನ್ನಮ್ಮನೂ, ತನಗೀಗ ಯಾವ ದಣಿವೂ ಇಲ್ಲ, ಎಂದು ಮುಕುಂದಬಾವನ ಇತ್ಯರ್ಥವನ್ನೇ ಸಮರ್ಥಿಸಿದಳು. ಮುದುಕಿ ನವವಧೂವೇಷದಲ್ಲಿದ್ದ ನವ ತಾರುಣ್ಯದ ಹುಡುಗಿಯನ್ನು ಅರ್ಥಪೂರ್ಣವಾಗಿ ನೋಡಿ, ನಿಡುಸುಯ್ದು, ಮುಗುಳು ನಗೆ ನಕ್ಕಳಷ್ಟೆ! ತನ್ನ ತಾರುಣ್ಯದಲ್ಲಿ ತನ್ನ ಪ್ರಿಯನೊಡನೆ ಕಾಡು ಬೆಟ್ಟ ಹತ್ತಿ ಇಳಿದು ದಣಿವು ಕಾಣದೆ ನಡೆದಾಡಿದ್ದ ನೆನಪು ಅವಳಿಗೆ ಮರುಕೊಳಿಸಿರಬಹುದೇನೊ!

ಆದರೆ ಪೀಂಚಲು ತನ್ನ ಗಂಡನ ಕಿವಿಯಲ್ಲಿ, ಯೆಂಕಮ್ಮ ಹೇಳಿದ ಹಾಗೆ ಮಾಡಿದ್ದರೇ ಅನುಕೂಲವಾಗುತ್ತಿತ್ತು, ಎಂಬರ್ಥದ ಮಾತಾಡಿದಳು. ತನ್ನ ಹೆಂಡತಿ ಚೊಚ್ಚಲು ಎಳ ಬಸುರಿ ಎಂಬುದನ್ನು ನೆನಪಿಗೆ ತಂದುಕೊಂಡು ಐತ ಮುಕುಂದಯ್ಯನಿಗೆ ಅದನ್ನು ಹೇಳಲು, ಅವನು ಯೆಂಕಿಗೆ-'ಪೀಂಚಲು ಮಾತ್ರ ಉಳಿಯುತ್ತಾಳೆ. ಮರುದಿನ ಬೆಳಿಗ್ಗೆ ಅವಳನ್ನು ಕೋಣೂರಿಗೆ ಅವಳ ಬಿಡಾರಕ್ಕೆ ಕಳಿಸಿಕೊಡಿ'-ಎಂದು ಹೇಳಿ, ಚೆನ್ನಮ್ಮ ಮತ್ತು ಐತರೊಡನೆ ಹೊರಡಲನುವಾದನು.

ಮುಕುಂದಯ್ಯ ತನ್ನವನೆ ಆಗಿದ್ದರೂ, ಮುಂದೆ ತಾನು ಅವನವಳೆ ಆಗುವುದಿದ್ದರೂ, ತನ್ನ ಜೊತೆ ಮತ್ತೊಂದು ಹೆಣ್ಣುಜೀವ ಇಲ್ಲದೆ ತಾನೊಬ್ಬಳೆ ಗಂಡಸರಿಬ್ಬರ ಸಂಗಡ ಹೋಗುವುದಕ್ಕೆ ತುಂಬ ನಾಚಿಕೆಪಟ್ಟುಕೊಂಡ ಚೆನ್ನಮ್ಮ ಪೀಂಚಲು ಮುಖದ ಕಡೆ ಯಾಚನಾ ದೃಷ್ಟಿ ಬೀರಿ ನೋಡಲು, ಆ ಇಂಗಿತಜ್ಞೆ ಹಿಂದು ಮುಂದು ನೋಡದೆ ಅವನೊಡನೆ ಹೊರಟೆಬಿಟ್ಟಳು!

ಆ ನಾಲ್ಕು ನೆರಳುಗಳೂ ಐತ ಹಿಡಿದಿದ್ದ ಲಾಟೀನಿನ ಬೆಳಕೂ ಹಳುವಿನಲ್ಲಿ ಅಡಗಿದ ಮೇಲೆ ಯೆಂಕಿ ಬಾಗಿಲು ಮುಚ್ಚಿಕೊಂಡು ಸೆರಗಿನಿಂದ ಕಣ್ಣು ಮೂಗು ಒರಸಿಕೊಂಡಳು.

* * *

## ೫೨

ಹಿಂಬದಿಗೆ ಗಿಡ ಮರ ಹಳು ಬೆಳೆದು ಕಿಕ್ಕಿರಿದು ಅದನ್ನು ಸಂಪೂರ್ಣವಾಗಿ ಅಡಗಿಸಿಟ್ಟಂತೆ ಮರೆಮಾಡಿದ್ದರೂ, ಮುಂಗಡೆಗೆ ಹಬ್ಬಿದ್ದ ಹಾಸುಬಂಡೆಯ ದೆಸೆಯಿಂದ,- ಅಲ್ಲಲ್ಲಿ ದೂರದೂರ ಮುರುಟಿದಂತೆ ತಲ ಯೆತ್ತಿದ್ದ ಕುಳ್ಳು ಮಟ್ಟುಗಳಿದ್ದರೂ-ಬಯಲು ಬಯಲಾಗಿ ತೋರುತ್ತಿದ್ದ ಹುಲಿಕಲ್ಲು ನೆತ್ತಿಯ ಕಲ್ಲುಮಂಟಪದ ಒಂದು ಮೂಲೆಯಲ್ಲಿ ದೊಡ್ಡ ದೊಡ್ಡ ಕುಂಟೆಗಳನ್ನೆ ಅಡಕಿ ಹೊತ್ತಿಸಿದ್ದ ಬೆಂಕಿ ಉರಿಯುತ್ತಿತ್ತು. ಆ ಬೆಂಕಿ ನಿನ್ನೆ ಮೊನ್ನೆಯದಾಗಿರಲಿಲ್ಲ; ಅನೇಕ ದಿನಗಳಿಂದ ಇಪ್ಪತ್ತುನಾಲ್ಕು ಗಂಟೆಯೂ ಆರದೆ ಸಜೀವವಾಗಿದ್ದ 'ನಂದಾ ಬೆಂಕಿಯಾಗಿತ್ತು.' ಹೊರಗೆ

ಒಂದೇ ಸಮನೆ ಸುರಿಯುತ್ತಿದ್ದ ಮಳೆಯಿಂದಲೂ ಸುಂಯ್ಯೆಂದು ಭೋರಿಡುತ್ತ ಬೀಸುತ್ತಿದ್ದ ಗಾಳಿಯಿಂದಲೂ ಎಷ್ಟೇ ಶೈತ್ಯವಿದ್ದರೂ ಮಂಟಪದೊಳಭಾಗವು ಆ ಬೆಂಕಿಯ ಪ್ರಭಾವದಿಂದ ಸದಾ ಬೆಚ್ಚಗಿದ್ದು ಮನೆಯಂತೆ ಹಿತಕರವಾಗಿತ್ತು.

ಆ ಬೆಂಕಿಯ ಪಕ್ಕದಲ್ಲಿ ಅಡುಗೆ ಮಾಡಲು ಒಲೆಯನ್ನಾಗಿ ಬಹಳ ಕಾಲದಿಂದ ಉಪಯೋಗಿಸಿದ್ದ ಮೂರು ಕರಿಹಿಡಿದ ಕಲ್ಲುಗುಂಡುಗಳೂ, ಆ ಬಳಿಯೆ ಕೆಲವು ಮಡಕೆ ಕುಡಿಕೆಯ ಸಾಮಾನುಗಳೂ ಇದ್ದುವು. ಮಂಟಪದ ಎದುರಿನ ಹಾಸುಬಂಡೆಯೊಂದರ ಮೇಲೆ ತಟ್ಟಿಗಳನ್ನು ಮಾಡಲು ಸಲುಕು ತೆಗೆದಿದ್ದ ವಾಟೆಯ ಮತ್ತು ಬಿದಿರಿನ ತಿಳ್ಳದ ಬಿಳಿಯ ರಾಶಿ ಅಲ್ಲಿ ಕಾಮಗಾರಿಯ ಅತ್ಯಂತ ಅರ್ವಾಚೀನತೆಯನ್ನು ಸೂಚಿಸುತ್ತಿತ್ತು. ಮಂಟಪದ ಒಂದು ಭಾಗ, ಬಿದಿರು ಗೂಟಗಳನ್ನು ನೆಟ್ಟು ವಾಟೆಯ ತಟ್ಟಿಗಳನ್ನು ಮರೆ ಕಟ್ಟಿದುದರಿಂದ, ನಿವಾಸ ಯೋಗ್ಯವಾದ ಕೋಣೆಯಾಗಿ ಪರಿವರ್ತಿತವಾಗಿತ್ತು.

ಬೆಂಕಿಯ ಪಕ್ಕದಲ್ಲಿ ತರುಣಿಯೊಬ್ಬಳು ಕುಳಿತು, ಯಾವ ಉದ್ದೇಶವೂ ಇಲ್ಲದ ಯಾಂತ್ರಿಕ ಕರ್ಮದಲ್ಲಿ ತೊಡಗಿದ್ದಂತೆ, ಆ ಬೆಂಕಿಗೆ ನಿಧಾನವಾಗಿ ಎರಡೋ ಮೂರೋ ನಿಮಿಷಗಳಿಗೊಮ್ಮೆ ಕಸವನ್ನೊ, ಕಡ್ಡಿಯನ್ನೊ, ಹಲಸಿನ ಬೀಜವನ್ನೊ, ಅಲ್ಲಲ್ಲ ಗಾಳಿಯಲ್ಲಿ ಚೆದರಿದಂತಿದ್ದ ಕಾಡುಕೋಳಿಯ ಪುಕ್ಕವನ್ನೊ ಎಸೆಯುತ್ತಿದ್ದಳು. ಒಮ್ಮೊಮ್ಮೆ ಆ ಯಾಂತ್ರಿಕ ಕರ್ಮವು ನಿಂತು ಅವಳು ಕುಗುರುವಂತೆಯೂ ತೋರುತ್ತಿತ್ತು. ಅವಳ ಎದುರಿಗೆ ತುಸುದೂರದಲ್ಲಿ, ಬಹು ದಿನಗಳಿಂದ ಹಾಕಿ ಹಾಕಿ ರಾಶಿಯಾಗಿದ್ದ ಬೂದಿಗುಡ್ಡೆಯ ಮೇಲೆ, ಪಕ್ಕದಲ್ಲಿ ಹೊಡೆದಿದ್ದ ಬಿದಿರುಗೂಟಕ್ಕೆ ಬಳ್ಳಿಯ ನುಲಿಯಿಂದ ಕಟ್ಟುಗೊಂಡು ಟೊಣಪಗಾತ್ರದ ಕರಿಯ ನಾಯಿಯೊಂದು ಮುದುರಿ ಸುತ್ತಿಕೊಂಡು ಮಲಗಿ ನಿದ್ರಿಸುವಂತಿತ್ತು. ಅದರ ನಿದ್ರೆಯೂ ಅವಶ್ಯ ನಿದ್ರೆಯಾಗಿರಲಿಲ್ಲ. ಬೇಜಾರಿನ ನಿದ್ದೆಯಾಗಿತ್ತು.

ಆಗತಾನೆ ಬೈಗಾಗುತ್ತಿತ್ತು. ಆದರೂ ದಟ್ಟಯಿಸಿದ್ದ ಮೋಡಗಪ್ಪು ಕತ್ತಲಿಳಿದಷ್ಟು ಕಪ್ಪಾಗಿ, ಹಗಲುಬೆಳಕಿನಲ್ಲಿ ಸಪ್ಪೆಗೆಂಪಾಗಿದ್ದ 'ನಂದಾ ಬೆಂಕಿ' ಆಗಲೆ ಕೆಂಗೆಂಪಾಗಿ ಹೊಳೆಯತೊಡಗಿತ್ತು. ಎದುರಿಗೆ ದಿಗಂತ ವಿಶ್ರಾಂತವಾಗಿ ತರಂಗ ತರಂಗವಾಗಿ ಹಬ್ಬಿದ್ದ ಪರ್ವತಾರಣ್ಯಶ್ರೇಣಿ ವರ್ಷಧಾರಾ ಸಾಂದ್ರತೆಯಿಂದಲೂ ಮೆಲ್ಲಗೆ ಇಳಿದು ಕವಿಯುತ್ತಿದ್ದ ಕತ್ತಲೆಯಿಂದಲೂ ತನ್ನ ಸ್ಪಷ್ಟತೆಯನ್ನೆಲ್ಲ ಕಳೆದುಕೊಂಡು ಹಸುರು ಹಸುರು ಛಾಯೆಯ ಮಹಾಮುದ್ದೆಗಳಾಗುತ್ತಿದ್ದವು. ಕಣಿವೆಯ ದೂರದಿಂದ ಈಗೊಮ್ಮೆ ಆಗೊಮ್ಮೆ, ಮಳೆ ಇಳಿಗೊಂಡು ಗಾಳಿಯ ಸದ್ದು ಕಡಿಮೆಯಾದಾಗ, ವಾಲಗದ ಸದ್ದು ಕೇಳಿಸಿ, ತಿಮ್ಮಿಗೆ ಹೂವಳ್ಳಿ ಮದುವೆಯ ನೆನಪುಕೊಟ್ಟು, ಅಲ್ಲಿ ಇಂದು ನಡೆಯಲಿರುವ ಮಹಾಘಟನೆಯಲ್ಲಿ ತಾನೂ ಮತ್ತು ತನ್ನ ಗಂಡ ಗುತ್ತಿಯೂ ವಹಿಸುತ್ತಿದ್ದ ಪಾತ್ರದ ಅರಿವಾಗುತ್ತಿತ್ತು:

'ಇವತ್ತೆ ರಾತ್ರಿ ಮದುವಣಗಿತ್ತಿ ಚಿನ್ನಮ್ಮೋರು ಇಲ್ಲಿಗೆ ಬರುತ್ತಾರೆ! ತಾನಿಲ್ಲಿರುವಲ್ಲಿಗೆ! ಈ ಹುಲಿಕಲ್ಲು ನೆತ್ತಿಯ ಕಲ್ಲುಮಂಟಪಕ್ಕೆ!.... ಪಾಪ, ಹೆಂಗೆ ಈ ಕಾಡು ಗುಡ್ಡ ಹತ್ತಿ ಬರುತ್ತಾರೊ?.... ಧಾರೆಸೀರೆ ಉಟ್ಟುಕೊಂಡು, ಕಟ್ಟಾಣಿ ಗೆಜ್ಜಡಿಕೆ ವಾಲೆ ಬಾಸಿಂಗ ಎಲ್ಲ ಇರೋಹಾಂಗೆ ಬಂದು ಬಿಡ್ತಾರೊ?....' ತಿಮ್ಮಿ ಮನದಲ್ಲಿಯೆ ಸ್ವರ್ಣಾಲಂಕಾರ ಭೂಷಿತೆಯಾದ ಮದುಮಗಳನ್ನು ಕಲ್ಪಿಸಿಕೊಂಡು ಆ ನೋಟದ ಸಂತೋಷಕ್ಕೆ ಹಿಗ್ಗಿದಳು. ಚಿನ್ನಮ್ಮ ಬಂದಾಗ ತಾನು ಅವರನ್ನು ಹೇಗೆ ಸ್ವಾಗತಿಸಬೇಕು, ಏನೇನು ಸೇವೆ ಮಾಡಬೇಕು ಎಂದೂ ಆಲೋಚಿಸಿದಳು. ತಾತ್ಕಾಲದಲ್ಲಿ ತಿಮ್ಮಿಗೆ ತಾನು ಹೊಲತಿ ಎಂಬುದೂ, ಆದ್ದರಿಂದ ತನ್ನ ಸೇವೆ ಏನಿದ್ದರೂ ಹತ್ತಿರದ್ದಾಗಿರದೆ

ದೂರದ್ದಾಗಿರಬೇಕೆಂಬುದು ಮರೆತುಹೋಗಿತ್ತು. ಆಲೋಚನೆಯಿಂದ ಮಧ್ಯೆ ತಿಮ್ಮ ಆಗಾಗ್ಗೆ ಆಕಳಿಸಿ ಕಣ್ಣೊರೆಸಿಕೊಂಡಿದ್ದಳು, ಆಕಳಿಕೆಯಿಂದ ಬರುವ ಕಣ್ಣೀರನ್ನು! ಒಯ್ಯೊಯ್ಯನೆ ಅವಳ ಪ್ರಜ್ಞೆ ಜಾಗ್ರತ್ ಸತ್ತೆಯಿಂದ ಜಾರಿ ಸ್ವಪ್ನಸತ್ತೆಯ ಅಂಚಿಗೆ ಹೋಗಿ ಹೋಗಿ ಹಿಂದಿರುಗುತ್ತಿತ್ತು. "ಯಾಕೆ ಹೀಂಗೆ ಆಕಳಿಕೆ ಬರ್ತವೆಯೋ? ಯಾರೋ ನನ್ನ ನೆನೀತಾ ಇರಬೈದು....ಮತ್ತ್ಯಾರು ನೆನೀತಾರೆ? ನನ್ನಪ್ಪನೆ ನೆನೀತ ಇರಬೈದು....ಥೂ ಇವರು ಯಾಕೆ ಇಷ್ಟೊತ್ತು ಮಾಡ್ತಾರಪ್ಪಾ? ಕತ್ತಲಾತಾ ಬಂತು. ಇನ್ನೂ ಬರಲಿಲ್ಲ. ಮುಕುಂದಯ್ಯೋರನ್ನ ಯೆಂಕಮ್ಮನ ಮನೆ ತಂಕಾ ಕಳಿಸಿ, ಹೊಸದಾಗಿ ಮಾಡಿದ ದಾರಿ ತೋರಿಸಿ, ಬಂದುಬಿಡ್ತೀನಿ ಅಂತಾ ಹೋದ್ರಲ್ಲಾ!...." ಬೂದಿ ಗುಡ್ಡೆಯಲ್ಲಿ ಮುದುರಿಕೊಂಡು ಬೆಚ್ಚಗೆ ಮಲಗಿದ್ದ ಹುಲಿಯನ ಕಡೆ ನೋಡುತ್ತಾ "ನನ್ನ ಧೈರ್ಯಕ್ಕೆ ಬಿಟ್ಟೂಹೋಗ್ತೀನಿ ಅಂತಾ ಅದನ್ನು ಬ್ಯಾರೆ ಇಲ್ಲಿ ಕಟ್ಟಿಹಾಕಿ...." ತಿಮ್ಮಿ ಬೆರಗಾಗಿ ನೋಡುತ್ತಾಳೆ: ಕಲ್ಲುಮಂಟಪದ ಇದಿರಿನಲ್ಲಿದ್ದ ಹಾಸುಬಂಡೆಯ ಮೇಲೆ ಒಂದು ಕುದುರೆ ನಿಂತಿದೆ! ಸೈನಿಕ ವೇಷದಲ್ಲಿರುವ ಒಬ್ಬ ಸವಾರ ಅದರ ಮೇಲೆ ಕೂತು ಲಗಾಮು ಹಿಡಿದಿದ್ದಾನೆ. ಯಾರನ್ನೋ ನಿರೀಕ್ಷಿಸುವಂತೆ ಎಡಕ್ಕೂ ಬಲಕ್ಕೂ ನೋಡುತ್ತಿದ್ದಾನೆ.- ಅಷ್ಟರಲ್ಲಿ ತರುಣಿಯೊಬ್ಬಳು ಕುದುಯೆಡೆಗೆ ಓಡಿ ಬಂದು ಕೈನೀಡುತ್ತಾಳೆ. ಅವಳು ಬಾಸಿಂಗ ಕಟ್ಟಿ, ಒಡವೆ ತೊಟ್ಟು, ಮದುಮಗಳ ವೇಷದಲ್ಲಿದ್ದಾಳೆ. ಸವಾರನು ಬಾಗಿ ಅವಳನ್ನೆತ್ತಿ ತನ್ನ ಮುಂದೆ ಕುದುರೆಯ ಮೇಲೆ ಕೂರಿಸಿಕೊಂಡೊಡನೆ ಕುದುರೆ ಹಾಸುಬಂಡೆಯ ಮೇಲೆ ಖುರಪುಟ ಧ್ವನಿಯೇಳುವಂತೆ ಚಿಮ್ಮಿ ನೆಗೆದು ಓಡಿ ಕಣ್ಮರೆಯಾಗುತ್ತದೆ. ಅದುವರೆಗೆ ಸುಮ್ಮನೆ ಮಲಗಿದ್ದ ಹುಲಿಯ ಕಟ್ಟಿದ್ದ ಬಳ್ಳಿ ಹರಿದು ಹೋಯಿತೆಂಬಂತೆ ಜಗ್ಗಿಸೆಳೆಯುತ್ತಾ ಭಯಂಕರವಾಗಿ ಕುದುರೆ ಓಡಿದತ್ತ ಮೋರೆಯಾಗಿ ಬೊಗಳುತ್ತಿದೆ. ಒಂದು ಕ್ಷಣಾರ್ಧದಲ್ಲಿ ಎಂಬಂತೆ ನಡೆದುದೆಲ್ಲವನ್ನೂ ಕಣ್ಣು ಬಿಟ್ಟುಕೊಂಡೆ ಕಂಡಿದ್ದ ತಿಮ್ಮಿ ದಿಙ್ಮೂಢಳಾಗಿ ಗತಗತ ನಡುಗುತ್ತಾ ಕುಳಿತಿದ್ದಾಳೆ!

ಹಿಂದೆ ಈ ಹುಲಿಕಲ್ಲು ನೆತ್ತಿಯ ಕಲ್ಲುಮಂಟಪವು ನಗರ ಸಂಸ್ಥಾನದ ಸೈನ್ಯದ ಕಾವಲ್ದಾಣವಾಗಿದ್ದಾಗ ನಡೆದಿದ್ದ ಯಾವುದಾದರೂ ಒಂದು ಘಟನೆ ಆ ಗಿರಿಮಸ್ತಕದ ಪ್ರಾಣಮಯ ಸೂಕ್ಷ್ಮಪೃಥ್ವೀತತ್ವದಲ್ಲಿ, ಅದಕ್ಕೆ ಸಂವಾದಿಯಾಗುತ್ತಿದ್ದ ಪ್ರಾಣಿ ಸದೃಶಸಂಸ್ಕಾರದ ಅಬುದ್ಧಿಜೀವಿ ತಿಮ್ಮಿಯ ಪ್ರಾಣಮಯ ಸ್ವಪ್ನಪ್ರಜ್ಞೆಯ ಪ್ರಭಾವದಿಂದ, ಪುನಃಸ್ಮೃತಿಯಾಗಿ ಆವಿರ್ಭವಿಸಿ ಅವಳಿಗೆ ದೃಗ್ಗೋಚರವಾಯಿತೋ? ಅಥವಾ ಚಿನ್ನಮ್ಮ ಮುಕುಂದಯ್ಯರ ಜನ್ಮಾಂತರ ಸಂಬಂಧದ ಘಟನೆಯೊಂದು ಅವರನ್ನು ಕುರಿತೆ ನೆನೆಯುತ್ತಿದ್ದ ತಿಮ್ಮಿಯ ಅರ್ಧಜಾಗ್ರತ್ ಪ್ರಜ್ಞೆಯಲ್ಲಿ ಪ್ರತಿಮಿತವಾಗಿ ಕಾಣಿಸಿಕೊಂಡಿತೋ? ಅಥವಾ ಕಳೆದ ರಾತ್ರಿ ಅವಳ ಗಂಡ, ಒಡೆಯರ ಮನೆಯಲ್ಲಿ ಅಡಕೆ ಸುಲಿತದ ಸಮಯದಲ್ಲಿ ರಾತ್ರಿಯೆಲ್ಲಾ ಕೆಲಸಮಾಡಬೇಕಾಗಿ ಬಂದಾಗ ಬೇಸರ ಪರಿಹಾರಕ್ಕಾಗಿ ಯಾರಾದರೊಬ್ಬರು ಸರದಿಯ ಮೇಲೆ ಹೇಳುತ್ತಿದ್ದ ಸರಗತೆಯನ್ನು ತಾನು ಕೇಳಿದ್ದು, ಅದನ್ನು ಅವಳಿಗೆ ಹೇಳಿದ್ದುದರ ಪರಿಣಾಮವೋ? ಅಂತೂ ತಾನು ಕಣ್ಣು ತೆರೆದಿದ್ದಾಗಲೆ ಕಾಣಿಸಿಕೊಂಡಿದ್ದ ಆ ರಣತೇಜಿಯನ್ನೂ ಆ ಸಮರಸಜ್ಜಿತ ಧೀರಭಂಗಿಯ ಅಶ್ವಾರೋಹಿಯನ್ನೂ ಅವನೆಡೆಗೆ ಧಾವಿಸಿ ಬಂದು ಅವನ ಕೈ ಹಿಡಿದು ಚಂಗನೆ ಕುದುರೆಯೇರಿದ್ದ ಆ ಸಾಲಂಕೃತ ವಧೂವೇಷದ ತರುಣಿಯನ್ನೂ ನೆನೆನೆನೆದು ತಿಮ್ಮಿ ಭಯಭ್ರಾಂತೆಯಾಗಿ ವಿಕಂಪಿಸುತ್ತಿದ್ದರೂ ಮರ ವಟ್ಟಂತೆ ಕುಳಿತಿದ್ದಳು!

ಕತ್ತಲೆಯಲ್ಲಿ ಕಲ್ಲುಮಂಟಪದೊಳಕ್ಕೆ ಬರುತ್ತಿದ್ದವನು ತನ್ನ ಒಡೆಯ ಎಂಬುದನ್ನರಿಯುವ ಮುನ್ನ ಹುಲಿಯ ಒಂದೆರಡು ಸೊಲ್ಲು ಬೊಗುಳಿತು.

“ಏಈಈ! ಇದಕ್ಕೇನು ಇದ್ದೊಂದು ಒಕ್ಕಣ್ಣೂ ಇಂಗಿ ಹೋಗ್ಯಾದೇನ್ರೋ? ಹಥೀ!” ಎನ್ನುತ್ತಾ ಗುತ್ತಿ ಒಳಗೆ ಬರಲು, ಹುಲಿಯ ಹಾರಿಹಾರಿ ಬಾಲವಳ್ಳಾಡಿ ಕುಂಯಿಗುಡುತ್ತಾ ಸ್ವಾಗತಿಸಿತು.

“ಏಈಈಈ! ಯಾಕೆ? ಹಿಂಗೆ ಕೂತೀಯಾ? ಏನಾಗದೆಯೆ ನಿಂಗೆ?” ಗುತ್ತಿ ಮಂಕು ಬಡಿದವಳಂತೆ ಕೂತಿದ್ದ ತಿಮ್ಮಿಯ ಕಡೆಗ ಹೇಳುತ್ತಾ, ತನ್ನ ಕಂಬಳಿ ಕೊಪ್ಪೆಯನ್ನು ತೆಗೆದು ಕೊಡಹಿ, ಕಟ್ಟಿದ್ದ ತಟ್ಟಿಯ ಮೇಲೆ ಒಣಗಲು ಹರಡಿದನು. ಗಾಳಿ ಮಳೆಗಳಲ್ಲಿ, ಹಳುವಿನ ಹನಿಯಲ್ಲಿ, ಒದ್ದೆಯಾಗಿ ಚಳಿ ಹತ್ತಿದ್ದ ಮೈಯನ್ನು ಬೆಚ್ಚಗೆ ಮಾಡಿಕೊಳ್ಳಲು, ಉರಿಯುತ್ತಿದ್ದ ಕುಂಟೆಯ ಕೆಂಡವನ್ನು ಕೆದಕಿ, ಇನ್ನಷ್ಟು ಜಿಗ್ಗು ಅಡಕಿ, ಬೆಂಕಿ ಕಾಯಿಸಿಕೊಳ್ಳಲು ನೆಲಕೆ ಅಂಡೂರಿ ಕುಳಿತ ಗುತ್ತಿ ಮತ್ತೊಮ್ಮೆ ಹೆಂಡತಿಯ ಕಡೆ ನೋಡಿದನು: ತಿಮ್ಮಿ ನೀರವವಾಗಿ ಅಳುತ್ತಿದ್ದಳು.

“ಏಈಈ! ಏನಾಗದೆಯೆ ನಿಂಗೆ? ಅಳಾಕೆ?” ಈ ಸಾರಿ ಗುತ್ತಿಯ ಪ್ರಶ್ನೆ ಅಲಘು ಧ್ವನಿಯಿಂದಲೆ ಹೊಮ್ಮಿತ್ತು.

“ನಾ ಹೇಳ್ಳಿಲ್ಲೇನು, ನನ್ನೊಬ್ಬಳ್ನೇ ಬಿಟ್ಟುಹೋಗಬ್ಯಾಡಾ ಅಂತಾ?” ಅಳುದನಿಯಿಂದಲೆ ಹೇಳುತ್ತಾ ತಿಮ್ಮಿ ಗುತ್ತಿಯ ಕಡೆ ನಿಷ್ಠುರದೃಷ್ಟಿ ಬೀರಿದಳು.

“ಈಗೇನಾಯ್ತು ಬಿಟ್ಟುಹೋದ್ರೆ?.... ಒಬ್ಬಳೆ ಆಗ್ತೀಯಾ ಅಂತಾ ಹುಲಿಯನ್ನ ಬ್ಯಾರೆ ಕಟ್ಟಿಹಾಕಿ ಹೋಗೀನೀ!?....”

“ಈ ಗುಡ್ಡದ ನೆತ್ತೀಲಿ ನಾವಿನ್ನಿರೋದು ಬ್ಯಾಡ! ಏನೇನೋ ತಿರುಗ್ತವೆ!....”

“ಕಾಡಿನ ಪರಾಣಿ ಕಾಡಿನಲ್ಲಿ ತಿರುಗಬಾರ್ದೇನು? ಹುಲಿ, ಹಂದಿ, ಕಡ, ಮಿಗ, ಹಾವು, ಚೇಣು? ನಮಗೇನು ಮಾಡ್ತವೆ ಅವು?.... ಚಿನ್ನಕ್ಕನ್ನ ಬ್ಯಾರೆ ಕರಕೊಂಡು ಬರ್ತಾರೆ, ಇವೊತ್ತೆ ಇಳ್ಳು!”

“ಕಾಡಿನ ಪರಾಣಿ ಅಲ್ಲ, ನಾ ಕಂಡಿದ್ದು....”

“ಮತ್ತೆ?....” ಗುತ್ತಿಯ ದನಿಯಲ್ಲಿ ಅಚ್ಚರಿಯಿತ್ತು. ಉರಿಗೆ ಜಿಗ್ಗು ಹಾಕುತ್ತಿದ್ದುದನ್ನು ನಿಲ್ಲಿಸಿ, ಹೆಂಡತಿಯ ಕಡೆ ನೋಡತೊಡಗಿದನು.

ತಿಮ್ಮಿ ತಾನು ಕಂಡದ್ದನ್ನು ತನಗೆ ಸಾಧ್ಯವಾದ ರೀತಿಯಿಂದ ಬಣ್ಣಿಸಿದಳು. ಗುತ್ತಿಯ ಎದೆಯಲ್ಲಿ ಏನೋ ಒಂದು ತರಹ ಆಗುತ್ತಿದ್ದರೂ ಅದನ್ನು ತೋರಗೊಡದ ಗಂಡುಭಂಗಿಯಲ್ಲಿ ಕೇಳಿದನು: “ಕುಗುರ್ತಿದ್ಯೋ? ಕಣ್ಣು ಬಿಟ್ಕೊಂಡಿದ್ಯೋ? ಕನಸಿನಾಗೆ ಕಂಡಿದ್ದನ್ನ ಕಣ್ಣುಬಿಟ್ಟುಕೊಂಡು ಕಂಡೆ ಅಂತಾ ಮಾಡಿಕೊಂಡೀಯ!....”

“ಹಾಂಗಾರೆ ಹುಲಿಯನೂ ಕನಸಿನಾಗೇ ಕಂಡ್ತೇನು? ಹ್ಯಾಂಗೆ ಬೊಗಳ್ತು, ಅರೆಕಲ್ಲಿನ ಮ್ಯಾಲೆ ಕುದ್ರೆ ಕಟಕಟಗುಡೀತಾ ಓಡ್ದಾಗ?....”

“ನಮಗೆ ಯಾರಿಗೂ ಇಷ್ಟು ದಿನ ಕಾಣಿಸಿಕೊಳ್ಳದೆ, ರಾಜಕುಮಾರ ನಿಂಗೊಬ್ಬಳಿಗೇ ಕಾಣಿಸಿಕೊಂಡನೋ? ಚೆಂದುಳ್ಳಿ ಹೆಣ್ಣು ಅಂತಾ? ಬಿಡು ಬಿಡು, ಬರೀ ಬಿರಾಂತು ಕಣೇ, ನಿನ್ದು!....”

ಬಾಯಲ್ಲಿ ತಿರಸ್ಕಾರವಿದ್ದರೂ ಗುತ್ತಿಗೆ ಮನಸ್ಸಿನಲ್ಲಿ ತಿರಸ್ಕರಿಸಲಾಗಲಿಲ್ಲ. ಹುಲಿಕಲ್ಲು ನೆತ್ತಿಯಲ್ಲಿ ರಾತ್ರಿ ತಂಗಿದ್ದಾಗಲೆಲ್ಲ ಅವನಿಗೆ ಏನೇನೊ ವಿಚಿತ್ರ ಶಬ್ದಗಳು ಕೇಳಿಸುತ್ತಿದ್ದುದುಂಟು! ಮನುಷ್ಯಾತೀತ ಶಕ್ತಿಗಳು ಇಂತಹ ಗುಡ್ಡದ ನೆತ್ತಿಗಳಲ್ಲಿ ಸಂಚರಿಸುತ್ತವೆ ಎಂಬುದನ್ನೂ ಅವನು ಅನೇಕರಿಂದ ಕೇಳಿ ನಂಬಿದ್ದನು. ಅಲ್ಲಿಂದ ಹೊರಟುಬಿಡಬೇಕು ಎಂಬ ತಿಮ್ಮಿಯ ಭಯಪ್ರೇರಿತವಾದ ಸೂಚನೆಗೆ ಗುತ್ತಿಯ ಮನದಲ್ಲಿ ಮೆಲ್ಲನೆ ಸಹಾನುಭೂತಿ ಸಂಚರಿಸಿತೊಡಗಿತು. ಆದರೆ ತಟ್ಟಕ್ಕನೆ ಹೋಗುವುದಾದರೂ ಹೇಗೆ? ಭಯಂಕರ ಮಳೆಗಾಲದಲ್ಲಿ ಹೋಗುವುದಾದರೂ ಎಲ್ಲಿಗೆ? ಸಿಂಬಾವಿ ಕೇರಿಗೆ ಎರಡು ವರ್ಷ ಬರಬಾರದು; ತಲೆಮರೆಸಿಕೊಂಡಿರು ಎಂದು ಒಡೆಯರು ಎಚ್ಚರಿಕೆ ಇತ್ತಿದ್ದಾರೆ! ಬೆಟ್ಟಳ್ಳಿ ಕೇರಿಯಂತೂ ತಿಮ್ಮಿಯನ್ನು ಹಾರಿಸಿಕೊಂಡು ಬಂದಿರುವ ತನಗೆ ವಿಷಪ್ರಾಯ! ತಿಮ್ಮಿ ಅಲ್ಲಿಗೆ ಇನ್ನೆಂದೂ ಕಾಲಿಡುವುದಿಲ್ಲವೆಂದೂ, ಅದಕ್ಕೆ ಬದಲಾಗಿ 'ಪರಾಣ ತೆಗೆದುಕೊಂಡು ಬಿಡುತ್ತೇನೆ' ಎಂದೂ ನಿಶ್ಚಯಿಸಿದ್ದಾಳೆ! ಅಲ್ಲದೆ ಮುಕುಂದಯ್ಯ ಗೌಡರು ಧೈರ್ಯ ಕೊಟ್ಟಿದ್ದರಿಂದಲೆ ತಾನು ತನ್ನ ಹೆಂಡತಿಯೊಡನೆ, ಅವರಿಗೆ ಆವಶ್ಯಕವಾಗುವಷ್ಟು ಕಾಲ, ಹುಲಿಕಲ್ಲು ನೆತ್ತಿಯ ಕಲ್ಲುಮಂಟಪದಲ್ಲಿದ್ದುಕೊಂಡು, ಅದನ್ನು ತುಸು ನಿವಾಸಯೋಗ್ಯವನ್ನಾಗಿ ಮಾಡಿ, ಹೂವಳ್ಳಿ ಚಿನ್ನಕ್ಕನನ್ನು ಕೆಲವುಕಾಲ ಅಡಗಿಸಿಡಲು ನೆರವಾಗುವುದಾಗಿ ಮಾತುಕೊಟ್ಟಿದ್ದಾನೆ! ಅವರನ್ನು ಅಲ್ಲಿಗೆ ಕರೆದುಕೊಂಡು ಬರುವ ದಿನವೇ ಇವನು ಹೊರಡುವ ಯೋಚನೆ ಮಾಡಿದರೆ ಉಂಡಮನೆಗೆ ಎರಡು ಬಗೆದ ಕಡುಪಾಪಿಯಾಗುತ್ತಾನೆ! ಛೆ ಎಲ್ಲಾದರೂ ಉಂಟೆ? ಆ ಆಲೋಚನೆಯ ದಾರಿಯನ್ನೇ ಅಳಿಸಿಬಿಡುವ ರೀತಿಯಲ್ಲಿ ಗುತ್ತಿ ತಿಮ್ಮಿಯ ಕಡೆಗೆ ಮುಖ ತಿರುಗಿಸಿ:

“ಯಾಕೇ? ಮಾತಾಡ್ದೆ ಸುಮ್ನೆ ಕೂತುಬಿಟ್ಯೆಲ್ಲಾ?....”

“ನೀವು ಯಾಕೆ ಸುಮ್ನೆ ಕೂತಿದ್ದು? ಅದ್ಕೆ ನಾನೂ ಕೂತಿದ್ದು!”

“ಹಾಂಗಲ್ಲ; ಮೂರು ಹೊತ್ತೂ ಬಾಯಿ ಹನಾಹನಾ ವಟಗುಟ್ಟೋಳು ಸುಮ್ನೆ ಕೂತ್ಯೆಲ್ಲಾ ಅಂತಾ ಕೇಳ್ದೆ....”

ಗಂಡನ ವಿಡಂಬನೆಯ ಚುಚ್ಚನ್ನು ಗಮನಿಸದೆ ತಿಮ್ಮಿ ವಿಷಣ್ಣ ಭಾವದಿಂದ ಉತ್ತರಿಸಿದಳು: “ಮಳೆ ಹುಯ್ತಿತ್ತಲ್ಲಾ, ಗಾಳೀ ಭೋರಾಟ ಆಲೈಸ್ತಾ ಕೂತಿದ್ದೆ....”

“ಇದೆಲ್ಲ ಪೂರೈಸಿದ ಮ್ಯಾಲೆ ಮುಂದೇನು ಮಾಡೋದು? ಯೋಚ್ನೆ ಮಾಡೀಯೇನು?....”

“ಸಿಂಬಾವಿ ಕೇರಿಗೆ ಹೋಗಾದು, ಮಾವನ ಮನೀಗೆ.”

“ಹೆಗ್ಗಡೇರು ಹೇಳ್ಯಾರೆ, ಈಗ ಬರಬ್ಯಾಡ ಕೇರೀಗೆ ಅಂತಾ....ಈ ಪೋಲೀಸಿನೋರ್ದೆಲ್ಲ ತಣ್ಣಗೆ ಆದಮ್ಯಾಲೆ ಬಾ ಅಂದ್ರು.”

“ಕೋಣೂರು ಸಣ್ಣಯ್ಯ ಮನ್ನೆ ಹೇಳಿದ್ರಲ್ಲಾ? ಅದೆಲ್ಲಾ ತಣ್ಣಗೆ ಆದ್ಹಾಂಗೆ ಅಂತಾ. ಈ ಇಜಾರದ ಸಾಬಿಗೆ ಗುಣಾಗಿ ಅವನೂರಿಗೆ ಹೋದ ನಂತೆ!….”

“ನೋಡು, ಅದೆಲ್ಲ ಪೋಲೀಸಿನವರು ಹುಟ್ಟಿಸಿರುವ ಉಪಾಯ. ನಾನು ಕೇರಿಗೆ ಹೋದಕೂಡ್ಲೆ ಮತ್ತೆ ಹಿಡುಕೊಳ್ಳಾಕೇ ಈ ಕತೆ ಹುಟ್ಟಿಸ್ಯಾರೆ….”

“ಮತ್ತೇನು ಮಾಡಾನ?….”

“ಮುತ್ತೂರು ಸೀಮೆ ಕಡೆ ಹೋಗಾನ….ಯಾರಿಗೂ ಗುರುತು ಗೊತ್ತಾಗದ ಹಾಂಗೆ ಆರು ತಿಂಗಳೋ ವರ್ಷಾನೋ ಇದ್ದು ಬಿಡಾನ…. ಆಮ್ಯಾಲೆ ಏನು ಎತ್ತ ಅಂತ ಸಂಗ್ತಿ ಇಚಾರ್ಸಿ, ಸಿಂಬಾವಿ ಕೇರಿಗೇ ಬಂದರಾಯ್ತು…. ನೀ ಏನು ಹೇಳ್ತೀಯಾ?…. ನಾನೇನೋ ಒಂದು ಹರು ನೆನೆದ್ದೀನಿ. ಮೇಗ್ರೊಳ್ಳಿ ಕಡೆಯಿಂದ ತೀರ್ಥಳ್ಳಿ ಮೇಲಾಸಿ ಹೊಳೆದಾಟಿ ಹೋಗುವ ಗಟ್ಟದ ತಗ್ಗಿನವರು ಸಿಗ್ತಾರೆ. ಅವರ ಸಂಗಡ ನಾವು ಗಟ್ಟದ ತಗ್ಗಿನವರ ಹಾಂಗೆ ಮಾಡಿಕೊಂಡು, ತೀರ್ಥಳ್ಳಿ ದೋಣಿಗಂಡೀಲಿ ಹೊಳೆದಾಟಿ ಬಿಟ್ರೆ, ನಮ್ಮನ್ಯಾರೂ ಮೂಸಿ ನೋಡೂದಿಲ್ಲ ಆ ಮ್ಯಾಲೆ….”

“ಥೂ! ನನ್ನಿಂದ ಆಗಾದಿಲ್ಲ, ಆ ಹಸಲೋರು ಕರಾದೇರು ಬಿಲ್ಲೋರು ಉಟ್ಟಂಗೆ ಸೀರೆ ಉಡಾಕೆ!….”

“ಒಂದೆರಡು ದಿನ ಹಾಂಗೆ ಉಟ್ಟುಕೊಂಡ್ರೆ ನಿಂಗೇನು ಜಾತಿ ಹೋಗ್ತದಾ?….'

“ಊ್ಹೂ ಹ್ಞು! ನೀವೇನು ಮಾಡಾಕೆ ಹೇಳುದ್ರೂ ಮಾಡ್ತೀನಿ, ಅದೊಂದು ಮಾತ್ರ ನನ್ನಿಂದ ಆಗಾದಿಲ್ಲ. ನಾ ಯಾವಾಗ್ಲೂ ಗೊಬ್ಬೆ ಸೆರಗು ಹಾಕ್ಯೇ ಸೀರೆ ಉಡಾದು!….”

“ಅದ್ಕೇ ಹೇಳಾದು, ನೀನು 'ಮಂಡೀ' ಅಂತಾ…. ನಾ ಹೇಳ್ದ ಹಂಗೆ ನೀ ಕೇಳೂದಾದ್ರೇ ನನ್ನ ಸಂಗಡ ಬಾ….ಇಲ್ದಿದ್ರೆ ಎಲ್ಲಿಗೆ ಹೋಗೀಯೊ ಹೋಗು, ನಿನ್ನ ಅಪ್ಪನ ಮನೀಗೆ!….”

“ನನ್ನೆಲ್ಲಾದ್ರೂ ಕೆರೀಗೋ ಬಾಂವಿಗೋ ಹಾಕಿ ಹೋಗಿ! ನನ್ನ ಕಂಡ್ರೆ ನಿಮಗೆ ಯಾವಾಗ್ಲೂ ಸಸಾರ!….ಬೇಕಾದಾಗ ಮಾತ್ರ ಹೆಂಗೆ ಬಾಲ ಅಲ್ಲಾಡಿಸ್ಕೊಂಡು ಉಪಚಾರ ಮಾಡ್ತಾ ಬರ್ತಾರೆ!….” ತಿಮ್ಮಿ ತಟಕ್ಕನೆ ಬಿಕ್ಕಿ ಬಿಕ್ಕಿ ಅಳತೊಡಗಿದಳು.

“ಮತ್ತೆ ಸುರು ಮಾಡ್ದೆಲ್ಲಾ ನಿನ್ನಾಟಕ್ಕೆ! ಹ್ಞ? ನಾನೇನು ನಿನ್ನ ಬಿಟ್ಟೇಹೋಗ್ತೀನಿ ಅಂತಾ ಹೇಳಿದನೇನೆ?….” ಗುತ್ತಿ ಮಂಟಪದ ಒಂದು ಮೂಲೆಯ ಕಡೆಗೆ ಕಣ್ಣಾಗಿ ಬೊಗಳತೊಡಗಿದ್ದ ಹುಲಿಯನ ಕಡೆಗೂ ನೋಡಿದವನೆ ಚಂಗನೆ ಎದ್ದು ಒಂದು ಬಿದಿರಿನ ದೊಣ್ಣೆಯನ್ನು ಹುಡುಕಿ ನುಗ್ಗಿದನು. ತಿಮ್ಮಿ ಅಳುಗಿಳುವನ್ನೆಲ್ಲ ನಿಲ್ಲಿಸಿ, ನೆಗೆದೆದ್ದು ದೂರ ಓಡಿ ನಿಂತು ನೋಡಿದಳು, ಗುತ್ತಿ ಹೊಡೆಯುತ್ತಿದ್ದ ಒಂದು ಸರ್ಪನ ಹಾವನ್ನು! ಸತ್ತ ಹಾವನ್ನು ದೊಣ್ಣೆಯ ತುದಿಯಲ್ಲಿ ಎತ್ತಿಕೊಂಡು ಹೋಗಿ ಹೊರಗೆ ಹಳುವಿನತ್ತ ಬೀಸಿ ಒಗೆದು ಬಂದು ಮತ್ತೆ ಮೊದಲಿನಂತೆ ಚಳಿಕಾಯಿಸುತ್ತಾ ಕುಳಿತನು. ತಿಮ್ಮಿಯೂ ಹತ್ತಿರವೆ ಬಂದು ಕುಳಿತಳು. ಮಳೆ ಜೋರಾಗಿ ಚಳಿ ಹೆಚ್ಚಿದಂತೆಲ್ಲ ಬೆಚ್ಚನೆ ಜಾಗವನ್ನು

ಹುಡುಕಿಕೊಂಡು ಬರುತ್ತಿದ್ದ ಹಾವುಗಳನ್ನು ಹೊಡೆದು ಹೊಡೆದು ಅಭ್ಯಾಸವಾಗಿ ಹೋಗಿದ್ದ ಅವರಿಗೆ ಆ ಘಟನೆ ಒಂದು ವಿಶೇಷವಾಗಿರಲಿಲ್ಲ. ಅದನ್ನು ಕುರಿತು ಅವರು ಪ್ರಸ್ತಾಪಿಸಲೂ ಇಲ್ಲ.

ರಾತ್ರಿ ಸ್ವಲ್ಪ ಹೊತ್ತಾದ ಮೇಲೆ ಇಬ್ಬರೂ ತಂಗಳುಂಡು, ಕೊರಳು ಬಿಚ್ಚಿದ ಹುಲಿಯನಿಗೂ ಒಂದಷ್ಟು ಹಾಕಿ, 'ನಂದಾಬೆಂಕಿ' ಕಾವಿನ ವಲಯದಲ್ಲಿಯೆ ಕಂಬಳಿ ಸುತ್ತಿಕೊಂಡು ಉರುಡಿದರು. ತಿಮ್ಮಿ ಗೊರಕೆ ಹೊಡೆಯತೊಡಗಿದಳು. ಗುತ್ತಿಗೂ ಆ ದಿನವೆಲ್ಲ ಗುಡ್ಡವೇರಿ ಇಳಿದು ಕೆಲಸಮಾಡಿದ್ದ ದಣಿವಿನಿಂದ ರೆಪ್ಪೆ ಭಾರವಾಗಿ ನಿದ್ದೆ ಬರತೊಡಗಿತ್ತು. ಈಗಲೊ ಆಗಲೊ ಚಿನ್ನಕ್ಕನನ್ನು ಕರೆದುಕೊಂಡು ಬಂದುಬಿಡಬಹುದು ಎಂದು ಎಚ್ಚರವಾಗಿಯೆ ಇರಲು ಬಹಳ ಪ್ರಯತ್ನ ಪಡುತ್ತಿದ್ದನು. ಅಲ್ಲದೆ ತಾವು ಬರುವುದು ಬಹಳ ತಡವಾದರೆ ಯೆಂಕಿಯ ಮನೆಯ ಬಳಿಗೆ ಬರುವಂತೆ ಸೂಚಿಸಿದ್ದನು ಮುಕುಂದಯ್ಯ. ಏನು ಮಾಡಿದರೂ ಅವನ ಕೈಯಲ್ಲಾಗದೆ ಅಂತೂ ಕಡೆಗೆ, ಕಣ್ಣು ಸೋತು, ರೆಪ್ಪೆ ಮುಚ್ಚಿ, ಗುತ್ತಿಯೂ ನಿದ್ದೆ ಮಾಡಿಬಿಟ್ಟನು.

ಕೆಟ್ಟ ಕನಸೊಂದರಿಂದ ನಿದ್ದೆಯ ಗುಳ್ಳೆಯೊಡೆದಂತಾಗಿ ತೆಕ್ಕನೆ ಎಚ್ಚರಗೊಂಡ ಗುತ್ತಿ ಎದ್ದು ಕುಳಿತು, ಕಣ್ಣುಜ್ಜಿಕೊಂಡು, ಸುತ್ತಲೂ ನೋಡಿದನು. ಮಳೆ ಹೊಳವಾಗಿತ್ತು, ಹೊರಗೆ ಕಗ್ಗತ್ತಲು ಕವಿದಿತ್ತು. ಬೆಂಕಿಯ ಉರಿ ಆರಿದ್ದರೂ ಹೆಗ್ಗುಂಟೆಗಳಲ್ಲಿ ಕೆಂಡ ನಿಗಿನಿಗಿ ಝಗಿಸುತ್ತಿತ್ತು. ಗಾಳಿ ಭೋರೆಂದು ಬೀಸುತ್ತಿದ್ದು, ಮಂಟಪದ ಕಲ್ಲುಗೋಡೆಯ ಬಿರುಕುಗಳಲ್ಲಿ ಸಿಳ್ಳು ಹಾಕುತ್ತಿತ್ತು. ಹೊರಗೆ ಕಣ್ಣು ಹಾಯಿಸಿದಾಗ ಅಲ್ಲಲ್ಲಿ ಮಿಣುಕು ಹುಳುಗಳ ಚಿಕ್ಕ ಚಿಕ್ಕ ಹಿಂಡು ಮಿಂಚಿ ಮರೆಯಾಗುತ್ತಿದ್ದು, ಕತ್ತಲೆಯನ್ನು ಇನ್ನೂ ಕಡುಗತ್ತಲೆಯನ್ನಾಗಿ ಮಾಡಿ ತೋರಿಸುವಂತಿತ್ತು. ಬೂದಿಗುಡ್ಡೆಯಲ್ಲಿ ಎದ್ದು ಕುಳಿತಿದ್ದ ಹುಲಿಯ ಮುಂಗಾಲೂರಿ ಹಿಂಗಾಲಿನಿಂದ ಕಿವಿಯ ಬುಡದ ಕುತ್ತಿಗೆಯನ್ನು ಕೆರೆದುಕೊಳ್ಳುತ್ತಿತ್ತು. ತಿಮ್ಮಿ ಗಾಢನಿದ್ರೆಯಲ್ಲಿದ್ದು ಮುಗ್ಧಭಂಗಿಯಲ್ಲಿ ಮಲಗಿದ್ದಳು. ತುಸು ಕೆಳಕ್ಕೆ ಓಸರಿಸಿದ್ದ ಕಂಬಳಿಯನ್ನು ಅವಳಿಗೆ ಸರಿಯಾಗಿ ಹೊದಿಸಿ, ಇಣುಕುವಂತಿದ್ದ ನಾಣಿನ ವಲಯವನ್ನು ಮುಚ್ಚಿದನು.

ರಾತ್ರಿ ಎಷ್ಟು ಹೊತ್ತಾಗಿದೆಯೋ, ತಾನು ಎಷ್ಟು ಹೊತ್ತು ಮಲಗಿದ್ದನೋ ಗುತ್ತಿಗೆ ಸ್ವಲ್ಪವೂ ಅಂದಾಜಾಗಲಿಲ್ಲ. ಇಷ್ಟು ಹೊತ್ತಿಗಾಗಲೆ ಚಿನ್ನಕ್ಕನನ್ನು ಕರೆದುಕೊಂಡು ಬರಬೇಕಾಗಿತ್ತಲ್ಲ? ಯಾಕೆ ಇನ್ನೂ ಬರಲಿಲ್ಲ? ಮದುವೆ ನಡೆದೇಹೋಯಿತೋ ಏನೋ? ತನ್ನ ಒಡೆಯರ ಆಸೆ ನೆರವೇರಿದುದಕ್ಕಾಗಿ ಗುತ್ತಿಯ ಮನದಲ್ಲಿ ಗೆಲುವಿನ ಸೂಚನೆ ತಲೆಯೆತ್ತಿತ್ತಾದರೂ ಮರುಕ್ಷಣದಲ್ಲಿಯೆ ಅವನ ಸಮಸ್ತ ಆಕಾಂಕ್ಷೆಯೂ ಮುಕುಂದಯ್ಯ ಚಿನ್ನಮ್ಮರ ಪರವಾಗಿ ಸಾವಿರ ಹೆಡೆಗಳನ್ನೆತ್ತಿ ನಿಂತಿತು. ತನ್ನ ಮತ್ತು ತಿಮ್ಮಿಯ ಗೆಲುವಿನಷ್ಟೆ ಆವಶ್ಯಕವೂ ಮುಖ್ಯವೂ ಆಗಿ ಕಂಡಿತು, ಮುಕುಂದಯ್ಯ ಚಿನ್ನಮ್ಮರ ಗೆಲುವು. ತಾವು ಬರುವುದು ಹೊತ್ತಾದರೆ, ತನ್ನನ್ನು ಯೆಂಕಮ್ಮನ ಮನೆಯ ಹತ್ತಿರಕ್ಕೆ ಬರುವಂತೆ ಹೇಳಿದ್ದುದು ನೆನೆಪಿಗೆ ಬಂದು, ಗುತ್ತಿ ಕರ್ತವ್ಯಕಾತರನಾದವನಂತೆ ಝಗ್ಗನೆ ಎದ್ದು ನಿಂತನು.

ಮಲಗಿ ನಿದ್ರಿಸುತ್ತಿದ್ದ ಹೆಂಡತಿಯ ಕಡೆ ನೋಡಿದನು. ಹುಲಿಯನನ್ನು ಗೂಟಕ್ಕೆ ಕಟ್ಟಿ ಹಾಕಿ, ತಿಮ್ಮಿಯನ್ನು ಎಚ್ಚರಗೊಳಿಸುವ ಗೋಜಿಗೆ ಹೋಗದೆ.... ಛೆ ಛೆ ಎಲ್ಲಿಯಾದರೂ ತಾನು ಹೋದಮೇಲೆ ಅವಳಿಗೆ ಎಚ್ಚರವಾಗಿ, ಪಕ್ಕದಲ್ಲಿ ನನಿಲ್ಲದುದನ್ನು ಕಂಡು ಕೂಗಿಕೊಂಡರೆ? ಅವಳನ್ನು ಎಚ್ಚರ ಮಾಡಿಯೆ ಹೋಗುತ್ತೇನೆ....ಎದ್ದಮೇಲೆ ನನ್ನನ್ನು ಹೋಗಲು ಬಿಡುತ್ತಾಳೆಯೆ? ಏನಾದರಾಗಲಿ, ನೋಡುತ್ತೇನೆ.

ಪ್ರಯತ್ನವೆ ಆಯಿತು, ತಿಮ್ಮಿಯನ್ನು ಜಾಗ್ರತ್ ಪ್ರಪಂಚಕ್ಕೆ ತರುವುದು!

“ಸಣ್ಣಯ್ಯೋರು ಬರಲಿಲ್ಲ, ಚಿನ್ನಕ್ಕನ್ನ ಕರಕೊಂಡು. 'ಹೊತ್ತಾದ್ರೆ ಬಾ ಯೆಂಕಿ ಮನೆ ಹತ್ರಕ್ಕೆ.' ಅಂತಾ ಹೇಳಿದ್ರು. ನಾನೂ ನಿದ್ದೆ ಮಾಡಿಬಿಟ್ಟೆ! ಈಗ ಎಷ್ಟ್ಹೊತ್ತಾಗದೆಯೋ ಏನೋ ಇಳ್ಳು? ಒಂದೀಟು ಹೋಗಿ ನೋಡಿ ಬಂದು ಬಿಡ್ತೀನಿ…. ನೀ ಏನೂ ಹೆದರಬ್ಯಾಡ, ಹುಲಿಯ ಇರ್ತದೆ.”

“ನಾ ಒಬ್ಬಳೆ ಇಲ್ಲಿರಾಕೆ ಖಂಡಿತಾ ನಾ ಒಲ್ಲೆ. ನಾನೂ ಬತ್ತೀನಿ….”

“ಏನು ತಮಾಸೆ ಅಂತಾ ಮಾಡ್ದೇನೆ, ಕತ್ತಲಲ್ಲಿ ಕಾಡಿನಾಗೆ ಹೋಗಾದು?….”

“ಅವೊತ್ತು ಮಾತ್ರ ನಮ್ಮ ಕೇರಿಯಿಂದ ನನ್ನ ಹಾರಿಸಿಕೊಂಡು ಬರಾಕೆ ನಿಮಗೆ ಕತ್ತಲೇನೂ ಇರಲಿಲ್ಲ, ಕಾಡೂ ಇರಲಿಲ್ಲ!….”

ಗುತ್ತಿ ಬೇಸ್ತು ಬಿದ್ದವನಂತೆ ಬಾಯ್ದೆರೆದು ನಿಂತು, ಏನು ಉತ್ತರಕೊಡಲಿ ಎಂದು ಯೋಚಿಸುತ್ತಿದ್ದವನಂತೆ ತೋರಿತು. ಕೆಳಕ್ಕೆ ಬಿದ್ದು ಸಂಪೂರ್ಣವಾಗಿ ಸೋತಿದ್ದರೂ ಇನ್ನೂ ಕುಸ್ತಿಮಾಡುತ್ತಿದ್ದೇನೆಂದು ತೋರಿಸಿಕೊಳ್ಳಲು ಬರಿದೆ ಕೈಕಾಲು ಆಡಿಸುವ ಹುಡುಗನಂತೆ ಹೇಳಿದನು: “ಏಈಈಈ! ನಿಂಗೇನು ತಮಾಸೆ ಆಗಿದಿಯಾ? ಅವೊತ್ತೇನು ಇವೊತ್ತಿನ ಹಾಂಗ್ ಮಳೆಗಾಲ ಆಗಿತ್ತಾ? ಏನು ಜಾರ್ತದೆ!….ಇಂಬಳ!….ಹಳ್ಳಬ್ಯಾರೆ ಬಂದಿರ್ತದೆ! ಅವೊತ್ತಿನ ಹಾಂಗೆ ದೊಂದಿ ಹಿಡುಕೊಂಡು ಹೋಗಾಕಾದ್ರೂ ಆಗ್ತದೆಯಾ?….”

“ಅದೇನು ಬೆಣಕು ಕಾಣ್ತದೆ? ಅಲ್ಲಿ ನೋಡಿ! ಅವರೇ ಬಂದ್ರೊ ಏನೊ?….”

ತಿಮ್ಮಿ ನೋಡುತ್ತಿದ್ದ ಕಾಡಿನ ದಿಕ್ಕಿಗೆ ಗುತ್ತಿಯೂ ನೋಡಿದನು. ಹೌದು! ಬೆಳಕು! ಲಾಟೀನಿನ ಬೆಳಕೇ!

ಆದರೆ ಇಬ್ಬರೂ ನೋಡುತ್ತಿದ್ದಂತೆಯೆ ಬೆಳಕು ಸಂಪೂರ್ಣ ಮರೆಯಾಗಿ ಮೊದಲಿನಂತೆ ಕಗ್ಗತ್ತಲೆ ಕವಿಯಿತು. ದಾರಿಯ ದಿಕ್ಕು ಬದಲಾಯಿಸಿದಾಗ ಹಳುವಿನಲ್ಲಿ ಲಾಟೀನು ಮರೆಯಾಯಿತೋ ಏನೋ ಎಂದು ಭಾವಿಸಿ ಗುತ್ತಿ ಮಂಟಪದ ಮುಂದೆ ಓರೆಯಾಗಿ ಇಳಿದಿದ್ದ ಕಲ್ಲರೆಯ ಮೇಲೆ ನಾಲ್ಕುಮಾರು ನಡೆದುಹೋಗಿ ಕಾಡಿನ ಕಡೆ ನೋಡಿದನು. ಒಂದೆರಡು ನಿಮಿಷವಾದ ಮೇಲೆ, ಕವಿದಿದ್ದ ಕತ್ತಲೆಯ ಹಳುವಿನಲ್ಲಿ ಮತ್ತೆ ಭಗ್ಗನೆ ಬೆಳಕು ಹೊತ್ತಿಕೊಂಡಂತಾಯಿತು! ನೋಡುತ್ತಾನೆ: ಹಿಂಡುಗೊಂಡ ಸಾವಿರ, ಲಕ್ಷ, ಕೋಟಿ, ಕೋಟಿ ಮಿಣುಕು ಹುಳುಗಳು ಒಮ್ಮೆಯೆ ಮಿಂಚಿ, ಯಾವ ಲಾಟೀನೂ ಬೆಳಗಲಾರದಷ್ಟು ಪ್ರಕಾಶಮಾನವಾಗಿ, ಗಿಡ, ಮರ ಪೊದೆಯ ದಟ್ಟ ಹಳುವನ್ನು ಬೆಳಗುತ್ತಿವೆ! ಹಾಂಗೆ ಗುಂಪು ಗುಂಪು ಮಿಣುಕು ಹುಳುಗಳು ಬೆಳಗುವುದನ್ನು ಗುತ್ತಿ ಎಷ್ಟೋ ಸಾರಿ ಕಂಡಿದ್ದನು. ಆದರೆ ಆ ರಾತ್ರಿ ಅವನು ಕಂಡದ್ದನ್ನು ಅವನೇ ಕಾಣದಿದ್ದರೆ ಎಂದಿಗೂ ನಂಬಲು ಸಾಧ್ಯವಾಗುತ್ತಿರಲಿಲ್ಲ. ಅಂತಹ ಪ್ರಮಾಣದಲ್ಲಿ ಅಷ್ಟು ಪ್ರಕಾಶಮಾನವಾಗಿತ್ತು ಅದು!

ಗುತ್ತಿ ಹಿಂದಕ್ಕೆ ಬಂದು ಬೆಂಕಿಯ ಬಳಿ ತಿಮ್ಮಿಗೆ ಸಮೀಪದಲ್ಲಿ ಕುಳಿತುಕೊಳ್ಳುತ್ತಾ ಹೇಳಿದನು, ತಾನು ಕಂಡಿದ್ದ ಭವ್ಯಾದ್ಭುತ ದೃಶ್ಯದಿಂದ ಒಂದಿನಿತೂ ಪ್ರಭಾವಿತವಾಗದ ಪ್ರಜ್ಞೆಯಿಂದ, ನಿರಾಶಾಧ್ವನಿಯಲ್ಲಿ "ಏಈ ಲಾಟೀನು ಬೆಳಕಲ್ಲ ಏನೂ ಅಲ್ಲ; ಹೊನ್ನೆ ಹುಳದ ಹಿಂಡ್ಹಿಂಡೇ ದೊಂದಿ ಬೀಸ್ತಿದ್ವು."

ತನ್ನ ಗಂಡ ತನ್ನನ್ನು ಒಬ್ಬಳನ್ನೆ ಬಿಟ್ಟು ಹೋಗುವುದಿಲ್ಲವೆಂದು ದೃಢಮಾಡಿಕೊಂಡ ತಿಮ್ಮಿ ಮೊದಲಿನಂತೆ ಉರುಡಿಕೊಂಡು, ಚೆನ್ನಾಗಿ ಕಣ್ಣು ಬಿಟ್ಟುಕೊಂಡೆ ಕಂಬಳಿ ಹೊದ್ದುಕೊಂಡಳು. ಗುತ್ತಿ ಒಬ್ಬನೆ ಆ ಕತ್ತಲೆಯಲ್ಲಿ ಆ ಕಗ್ಗಾಡಿನಲ್ಲಿ ಆ ಮಳೆಯಲ್ಲಿ ಹೋಗದಿರುವಂತೆ ಮಾಡಲು, ನಿಜವಾಗಿಯೂ ತನಗಾಗಿಯೆ ತನಗಿದ್ದ ತನ್ನ ಹೆದರಿಕೆಯನ್ನು ತಿಮ್ಮಿ ಮುಂದುಮಾಡಿದ್ದಳಾದರೂ, ಅವಳ ಆ ಪ್ರಯತ್ನದಲ್ಲಿ ತನ್ನ ಗಂಡನಿಗೆ ಎಲ್ಲಿಯಾದರೂ ಅಪಾಯ ಒದಗೀತು ಎಂಬ ಮುನ್ನೆಚ್ಚರಿಕೆಯೂ ಪ್ರಚ್ಛನ್ನವಾಗಿತ್ತು.

ಗುತ್ತಿ ಬೆಂಕಿಯ ಹತ್ತಿರ ಕುಳಿತು ಯಾಂತ್ರಿಕವಾಗಿ ಕಟ್ಟಿಗೆಯ ತುಂಡುಗಳನ್ನು ಅದಕ್ಕೆ ಎಸೆಯುತ್ತಲೊ ಅಥವಾ ಕುಂಟೆಯ ಕೆಂಗೆಂಡಗಳನ್ನು ಕೆದುಕುತ್ತಲೊ ಇದ್ದನಾದರೂ ಅವನ ಮನಸ್ಸು ಏನೇನೊ ಭೀತಿಗಳನ್ನು ನೆನೆಯತೊಡಗಿತ್ತು:

"ಯಾಕೆ ಅವರಿನ್ನೂ ಬರಲಿಲ್ಲ? ಕಾಡಿನಲ್ಲಿ ದಾರಿ ತಪ್ಪಿದರೇ? ಅಷ್ಟು ಚೆನ್ನಾಗಿ ಹಳು ಸವರಿ ದಾರಿ ಮಾಡೀನಿ, ಹ್ಯಾಂಗೆ ತಪ್ತದೆ ದಾರಿ? ಅವರೇ ಎಷ್ಟೋ ಸಾರಿ ಅದೇ ದಾರೀಲಿ ಓಡ್ಯಾಡಿಲ್ಲೇನು, ಚಾಪೆ, ಹಾಸಿಗೆ, ಸೀರೆ, ಕಂಬಳಿ, ಸಾಮಾನು ಎಲ್ಲ ತರಾಕೆ?....ಅತೋರೆ,-" ಇದ್ದಕ್ಕಿದ್ದ ಗುತ್ತಿ ಬೆಚ್ಚಿಬಿದ್ದಂತಾದನು: ಉಸಿರಾಟ ಜೋರಾಯಿತು: ಕಣ್ಣು ಎವೆಯಿಕ್ಕುವುದನ್ನೂ ಮರೆತವೂ! "ಅತೋರೆ,....ಆ ವಾಟೆ ಹಕ್ಕಕ್ಕೆ ನೆರೆ ಬಂದು, ದಾಟುವಾಗ ಎಲ್ಲಿಯಾದರೂ...." ಆ ಭಯಂಕರವನ್ನು ನೆನೆಯಲಾರದೆ ಗುತ್ತಿ ತನ್ನ ಹೆಂಡತಿಯ ಕಡೆ ನೋಡಿ "ತಿಮ್ಮಿ, ತಿಮ್ಮಿ," ಎಂದನು. ತಿಮ್ಮಿಗೆ ಎಚ್ಚರವಾಗಲಿಲ್ಲ. "ಎರಲಾರದು!" ಮುಂದುವರಿಯಿತು ಗುಂತಿಯ ಚಿಂತಾ ತರಂಗಿಣಿ. "ಅಂತೋರೆ, ಆ ಹೂವಳ್ಳಿ ನಾಯಕರೇನು ಯಾವುದಕ್ಕೂ ಹೇಸೋರಲ್ಲ....ಆದರೆ ಅವರಿಗೆ ಕಾಯಿಲೆಯಾಗಿ ಏಳೋಕೆ ಆಗದೆ ಬಿದ್ದು ಕೊಂಡಾರಂತೆ!....ಛೇ, ಎಷ್ಟು ಹೊತ್ತಾಯ್ತು! ಥೂ, ಹೊತ್ತೇ ಹೋಗೋದಿಲ್ಲ ಲ್ಲಪ್ಪಾ!.... ಈಗೇನು ಮಾಡ್ಲಿ?...." ಮತ್ತೆ ಗುತ್ತಿ ಕರೆದನು. ತಿಮ್ಮಿ ಏ ತಿಮ್ಮಿ! "ಕೈಚಾಚಿ ಮೆಲ್ಲನೆ ದೂಡಿ ಎಬ್ಬಿಸಿ ಅಂಗಲಾಚುವನಂತೆ ಹೇಳಿದನು: "ಇಷ್ಟೊತ್ತಾದ್ರೂ ಬರ್ಲಿಲ್ಲಲ್ಲೇ! ಹೋಗಿ ನೋಡಿಕೊಂಡಾರೂ ಬತ್ತೀನೆ!...."

ತಿಮ್ಮಿ ಎದ್ದು ಕೂತು ಗಂಡನೆಂದುದನ್ನು ಗ್ರಹಿಸಲು ಸ್ವಲ್ಪ ಸಮಯ ತೆಗೆದುಕೊಂಡಳು. ಅವಳಿಗೂ ಸನ್ನಿವೇಶದ ಗುರುತ್ವ ಮನಸ್ಸಿಗೆ ತಟ್ಟಿತು: "ನಾನೂ ಬತ್ತೀನಿ, ಹೋಗಾನ! ಏನಾದ್ರೋ ಏನೋ? ಯಾಕೆ ಬರಲಿಲ್ಲೋ?...."

ಇಬ್ಬರೂ ಕಂಬಳಿಕೊಪ್ಪೆ ಹಾಕಿಕೊಂಡರು. ಮಳೆ ಹೊಳವಾದುದನ್ನು ಕಂಡು ಒಂದು ದೊಂದಿಯನ್ನೂ ಹಚ್ಚಿಕೊಂಡರು. ಬೆಂಕಿಗೆ ಇನ್ನಷ್ಟು ಸೌದೆ ಅಡಕಿದರು. ತಟ್ಟಿ ಬಾಗಿಲನ್ನು ಓರೆಯಾಗಿಬಿಟ್ಟು ಮುಚ್ಚಿ ಕಲ್ಲುಮಂಟಪದಿಂದ ಹೊರಗೆ ಬಂದರು, ಹುಲಿಯನೂ ಕೂಡಿ.

"ಅದೇನು ಬೆಣಕು ಕಾಣ್ತದೆ ನೋಡಿ!" ತಿಮ್ಮಿ ದೂರದ ಹಳುವಿನ ಕಡೆ ನೋಡುತ್ತಾ ಹೇಳಿದಳು.

“ಹೊನ್ನೆ ಹುಳದ್ದೇ ಬೆಣಕಿರಬೈದು” ಉದಾಸೀನದಿಂದಾಡಿದನು ಗುತ್ತಿ.

ಆದರೆ ಹುಲಿಯ ಯಾವುದಾದರೂ ಪ್ರಾಣಿಯ ಸುಳಿವು ಗೋಚರವಾದಾಗ ಬೊಗಳುವ ರೀತಿಯಲ್ಲಿ ಕಟುವಾಗಿ ಬೊಗಳಿತು.

ಅಷ್ಟರಲ್ಲಿಯೆ ಕಾಡಿನ ಅಂಚಿನ ಪೊದೆಗಳ ನಡುವೆ ಕಲ್ಲರೆಯನ್ನು ಪ್ರವೇಶಿಸುತ್ತಿದ್ದ ಲಾಟೀನಿನ ಬೆಳಕು ಸ್ಪಷ್ಟವಾಗಿ ಕಾಣಿಸಿತು!

ನೋಡುತ್ತಿದ್ದಂತೆ ಮುಕುಂದಯ್ಯ ಚಿನ್ನಮ್ಮ ಪೀಂಚಲು ಐತ ನಾಲ್ವರ ಆಕಾರಗಳೂ ಕಾಲ್ದೆರಳುಗಳೂ ಕಲ್ಲುಮಂಟಪದತ್ತ ಏರಿ ಬಂದುವು.

ಗುತ್ತಿ ತಿಮ್ಮಿಯರಿಗೆ ಜೀವ ಬಂದಂತಾಯ್ತು!

ಬಂದ ನಾಲ್ವರೂ ಕಾಡಿನಲ್ಲಿ ಜಿಗಣೆ, ಮುಳ್ಳು, ಕೆಸರು ಮೊದಲಾದ ಅನಿವಾರ್ಯ ತೊಂದರೆಗಳಿಗೆ ಸಿಕ್ಕಿದ್ದರೂ ಹೆಚ್ಚಿನ ಅಪಾಯಕ್ಕೆ ಒಳಗಾಗಿರಲಿಲ್ಲ. ಸರಲು ದಾಟುವಾಗ ಸ್ವಲ್ಪ ನೀರು ಹೆಚ್ಚಿದ್ದರಿಂದ ತೊಂದರೆಯಾಗಿದ್ದೇನೋ ಹೌದಂತೆ! ಆದರೆ ಮುಕುಂದಯ್ಯ ಮದುಮಗಳ ಉಡುಗೆ ತೊಡುಗೆಗಳಲ್ಲಿದ್ದ ಚಿನ್ನಮ್ಮನನ್ನು ಕೆಸರಾಗದಂತೆ ಎತ್ತಿಕೊಂಡೇ ದಾಟಿದ್ದು ಮಾತ್ರ ಒಂದು ಸ್ವಾರಸ್ಯದ ಸಂಗತಿಯಾಗಿತ್ತು! ಪೀಂಚಲು ಮಾತ್ರ ಉಳಿದೆಲ್ಲರಿಗಿಂತಲೂ ದಣಿದಿದ್ದರೂ, ಐತನ ನೆರವನ್ನು ನಿರಾಕರಿಸಿಯೆ ಸರಲು ದಾಟಿದ್ದಳಂತೆ! ಒಂದು ಕಡೆ ಮಾತ್ರ, ಗುತ್ತಿ ಕಡಿದಿದ್ದ ಹಳು ಅಷ್ಟೇನೂ ದಾರಿಯ ಜಾಡಿನಂತೆ ತೋರದೆ, ಪ್ರಯಾಣಿಕರನ್ನು ಅಡ್ಡದಾರಿಯಲ್ಲಿ ತುಸು ಅಲೆಯುವಂತೆ ಮಾಡಿತ್ತಷ್ಟೆ!

ತಟ್ಟಿ ಕಟ್ಟಿ ಮರೆಮಾಡಿದ್ದ ಜಾಗದಲ್ಲಿ ಅಡುಗೆಗಾಗಿ ಹಾಕಿದ್ದ ಒಲೆಗೆ ಬೆಂಕಿಹೊತ್ತಿಸಿದರು. ಧಾರೆಯ ಸೀರೆ ಡಾಗೀನುಗಳನ್ನೆಲ್ಲ ತೆಗೆದಿಟ್ಟು, ಮುಕುಂದಯ್ಯ ತಂದಿಟ್ಟಿದ್ದ ಅವನ ಅತ್ತಿಗೆಯ ಸೀರೆಯೊಂದನ್ನುಟ್ಟು, ಚಿನ್ನಮ್ಮ ಬೆಂಕಿಕಾಯಿಸಿಕೊಂಡಳು. ಪೀಂಚಲು ತನ್ನ ಸೀರೆಯ ಒದ್ದೆ ಭಾಗಗಳನ್ನೆಲ್ಲ ಹಿಂಡಿ, ದೊಡ್ಡ ಬೆಂಕಿಯ ಬಳಿ ನಿಂತು, ಆರಿಸಿಕೊಂಡಳು.

ಕುದುರೆಯ ಸವಾರನಾಗಿ ಕಾಣಿಸಿಕೊಂಡಿದ್ದ ರಾಜಕುಮಾರನ ಕೈಹಿಡಿದು ಅವನ ಮುಂದೆ ಕುದುರೆಯ ಬೆನ್ನಿಗೆ ನೆಗೆದೇರಿದ್ದ ರಾಜಕುಮಾರಿಗಿಂತಲೂ ಅದ್ಭುತವಾಗಿ ಕಾಣಿಸುತ್ತಿದ್ದ ಚಿನ್ನಕ್ಕನನ್ನು ನೋಡಿ ನೋಡಿ ಹಿಗ್ಗಿ ಹೋಗಿದ್ದ ತಿಮ್ಮಿ ಸಸಂಭ್ರಮವಾಗಿ ದೂರದೂರದಿಂದಲೆ ತಾನು ಸಲ್ಲಿಸಬಹುದಾಗಿದ್ದ ಎಲ್ಲ ತರಹದ ಸೇವೆಯನ್ನೂ ಸಲ್ಲಿಸುವುದರಲ್ಲಿ ಸಾಕಾರ ಗಡಿಬಿಡಿಯಾಗಿಬಿಟ್ಟಿದ್ದಳು.

* * *

ಮೊಡಂಕಿಲನ ಹೆಂಡತಿ, ಬಾಗಿ, ಪಿಜಿಣನ ಬಿಡಾರಕ್ಕೆ ಬಂದು, ಹೂವಳ್ಳಿ ಮದುವೆ ಮನೆಗೆ ಹೋಗಿ ಧಾರೆ ನೋಡಿಕೊಂಡು ಬರೋಣ ಬಾ ಎಂದು ಅಕ್ಕಣಿಯನ್ನು ಆಹ್ವಾನಿಸಿದಾಗ, ಅವಳು ಹಾಸಗೆಯ ಮೇಲೆ ಹೊರಳುತ್ತಾ ನರಳುತ್ತಿದ್ದ ತನ್ನ ಗಂಡನ ಕಡೆಗೆ ನೋಡಿ, ತಾನು ತನ್ನ ಗಂಡನನ್ನು ಆ ದುಃಸ್ಥಿತಿಯಲ್ಲಿ ಬಿಟ್ಟು ಬರಲು ಸಾಧ್ಯವಿಲ್ಲವೆಂದು ತಿಳಿಸಿದಳು. ಆದರೆ ಪಿಜಿಣನೇ ಪ್ರೋತ್ಸಾಹಿಸಿದನು: 'ಹೋಗಿ ಬಾ; ಅವಳು ಅಷ್ಟಲ್ಲದೆ ಕರೆಯುತ್ತಾಳೆ. ನಿನಗೂ ಬೇಜಾರು ಪರಿಹಾರವಾದ ಹಾಂಗೆ ಆಗುತ್ತದೆ. ನನ್ನ ರೋತೆ ಇದ್ದೇ ಇರುತ್ತದೆ! ಅದು ಜೀವಹೋದ ಮೇಲೆಯೇ ಮುಗಿಯುವುದು! ಧಾರೆಯಾದರೂ ಎಷ್ಟು ಹೊತ್ತು ಆಗುತ್ತದೆ? ಮುಗಿದಕೂಡಲೆ ಬಂದುಬಿಡಬಹುದಲ್ಲಾ?'

ಚೇಂಕ್ರನ ಮಕ್ಕಳನ್ನು ಬಾಗಿಯ ಬಿಡಾರದಲ್ಲಿ ಮಲಗಿಸಿ, ಚೇಂಕ್ರ ತಂದುಕೊಟ್ಟಿದ್ದ ಹೊಸ ಸೀರೆಯನ್ನಟ್ಟು, ಒಂದೆರಡು ಆಭರಣಗಳನ್ನೂ ತೊಟ್ಟು, ಅಕ್ಕಣಿ 'ಹೋಗಿ ಬರುತ್ತೇನೆ' ಹೇಳಲು ಗಂಡನೆಡೆಗೆ ಹೋದಳು. ಅವಳ ಹಿಗ್ಗನ್ನೂ, ಹೊಸ ಸೀರೆಯುಟ್ಟ ಸಂಭ್ರಮವನ್ನೂ, ಕಳಕಳಿಸುತ್ತಿದ್ದ ಮೋರೆಯನ್ನು ತುಸು ಎವೆಯಿಕ್ಕದೆ ನೋಡಿ, ಸುಯ್ದು, 'ಹೋಗಿ ಬಾ' ಎಂದನು ಪಿಜಿಣ, ನರಳುವ ದನಿಯಲ್ಲಿ. ಅವನ ಹೃದಯದಲ್ಲಿ ಶಮನವಾಗಲಿ ಪ್ರತೀಕಾರವಾಗಲಿ ಸಾಧ್ಯವಿಲ್ಲದ ಮತ್ಸರಾಗ್ನಿ ಆ ರುಗ್ಣಾವಸ್ಥೆಯಲ್ಲಿಯೂ ಹೊಗೆಯಾಡತೊಡಗಿತ್ತು.

ಅಕ್ಕಣಿ ಹೋದಮೇಲೆ ಪಿಜಿಣನ ಮನಸ್ಸು ತನ್ನ ಭಯಂಕರ ನಿರ್ಧಾರದತ್ತ ಹಲ್ಲುಕಚ್ಚಿಕೊಂಡು ಬದ್ಧಭ್ರುಕುಟಿಯಾಗಿ ಸಾಗಲಾರಂಭಿಸಿತು!

ತನ್ನ ಶುಶ್ರೂಷೆಯ ವಿಚಾರದಲ್ಲಿ ಅತ್ಯಂತ ಆಸಕ್ತೆಯಾಗಿದ್ದರೂ ಚೇಂಕ್ರನೊಡನೆ ಸಂಬಂಧ ಬೆಳೆಸಿದ್ದಾಳೆ ಎಂಬ ಗುಟ್ಟು ಪಿಜಿಣನ ಪ್ರಜ್ಞೆಗೆ ಹೊಕ್ಕಮೇಲೆ ತನ್ನ ಹೆಂಡತಿಯ ಪರವಾದ ಅವನ ಮನಸ್ಸು ಮೆಲ್ಲಮೆಲ್ಲನೆ ವಿರಕ್ತವಾಗತೊಡಗಿತ್ತು. ಅವಳಿಂದ ತಾನು ಇನ್ನು ಸುಖಪಡೆಯಲು ಸಮರ್ಥನಾಗಬಲ್ಲೆನೆಂಬ ಆಸೆಯನ್ನು ಸಂಪೂರ್ಣವಾಗಿ ಬಿಟ್ಟ ಅವನಿಗೆ, ಅವಳಿಗೂ ತನ್ನಿಂದ ಸುಖ ಇಲ್ಲ ಎಂಬುದು ಮನದಟ್ಟಾಯಿತು. ತಾನು ತೊಲಗಿದರೆ, ಅವಳ ಆಶೆಯೂ ಕೈಗೂಡಿ, ಅವಳು ಚೇಂಕ್ರನೊಡನೆ ನೆಮ್ಮದಿಯಾಗಿ ಇರಬಹುದು ಎಂಬ ಅವನ ಆಲೋಚನೆಗೆ ದಿನದಿನವೂ ಅಧಿಕಗೊಳ್ಳುತ್ತಿದ್ದ ಅವನ ಹೊಟ್ಟೆಯ ಬೇನೆಯೂ ಸಮರ್ಥನೆ ಇತ್ತಿತ್ತು! ಎಷ್ಟೋ ಸಾರಿ ಆ ಯಮಯಾತನೆ ಸಹಿಸಲಾರದೆ 'ಏನಾದರೂ ಅಫೀಮುಗಿಫೀಮು ತಂದುಕೊಟ್ಟು, ತನ್ನ ಪರಾಣ ಹೋಗುವಂತೆ ಮಾಡಿ, ನನ್ನನ್ನು ಬದುಕಿಸುತ್ತೀಯಾ?' ಎಂದು ಅಕ್ಕಣಿಗೆ ಕೈಮುಗಿದದ್ದೂ ಉಂಟು!

ಚೇಂಕ್ರ ಕೊನೆಮಟ್ಟೆಯ ರಾಶಿಯಲ್ಲಿ ಮುಚ್ಚಿಟ್ಟಿದ್ದ ಶೀಸೆಗಳ ಕಡೆ ಪಿಜಿಣ ಸತೃಷ್ಣ ದೃಷ್ಟಿ ಬೀರಿದ್ದನು. ಆದರೆ ಅಕ್ಕಣಿ ಅದಕ್ಕೆ ಅವಕಾಶಕೊಡದಂತೆ ಎಚ್ಚರಿಕೆ ವಹಿಸಿದ್ದಳು. ಈಗ ಯಾರ ಅಂಕೆಯೂ ಇಲ್ಲದ ಅವನು ಹಾಸಿಗೆಯಿಂದೆದ್ದು ಆ ಶೀಸೆಗಳಿಂದ ಸಾರಾಯಿಯನ್ನು ಕರಟಕ್ಕೆ ಬೊಗ್ಗಿಸಿ ಬೊಗ್ಗಿಸಿ ಕುಡಿದನು. ಕುಡಿದಂತೆಲ್ಲ ಹುಮ್ಮಸ್ಸು ಏರಿತು. ಚಟ್ಟಿಯಲ್ಲಿ ಬಚ್ಚಿಟ್ಟಿದ್ದ ಮೀನುಪಲ್ಯವನ್ನು ಚೆನ್ನಾಗಿ ನಂಚಿಕೊಂಡು ಮತ್ತಷ್ಟು ಕುಡಿದನು. ತುಂಬ ಶಕ್ತಿ ಬಂದಂತಾಗಿ, ಒಂದು ತೆರನಾದ ಸಂತೋಷೋನ್ಮಾದ ಆವರಿಸಿತು. ಹೋಗಿ ಹಾಸಗೆಯ ಮೇಲೆ ಉಸ್ಸೆಂದು ಉರುಳಿಕೊಂಡನು.

ಸ್ವಲ್ಪ ಹೊತ್ತಿನಲ್ಲಿಯೆ ಭಯಂಕರ ಪ್ರತಿಕ್ರಿಯೆ ಪ್ರಾರಂಭವಾಯಿತು. ಹೊಟ್ಟೆಯ ಬೇನೆ ಸಾವಿರಾರು ಚೇಳು ಕಚ್ಚಿದಂತೆ ಕಠೋರವಾಯಿತು. ರಕ್ತ ರಕ್ತವೆ ಭೇದಿಯಾಯಿತು. ಅಯ್ಯೋ ಎಂದು ಕೂಗಿಕೊಂಡು ಮೇಲೆದ್ದು ನಿಲ್ಲಲಾರದೆ ಮಡಕೆಗಳ ಮೇಲೆ ಬಿದ್ದನು. ಉರಿಯನ್ನು ತಾಳಲಾರದೆ ಪಾತ್ರೆಯಲ್ಲಿದ್ದ ತಣ್ಣೀರನ್ನು ಗೊಟಗೊಟನೆ ಕುಡಿದನು. ಏನು ಮಾಡಿದರೂ ಆ ತಾಪ, ಆ ಯಾತನೆ, ಹೆಚ್ಚುತ್ತಾ ಹೋಯಿತು. ಕೂಗಿದರೂ ಗಂಟಲಿನಿಂದ ಸ್ವರ ಹೊರಡಲಿಲ್ಲ. 'ಅಕ್ಕಣೀ! ಅಕ್ಕಣೀ! ಅಯ್ಯೋ! ಅಯ್ಯೋ!' ಎಂದು ಒರಲಿ ಕರೆಯುತ್ತಿದ್ದೇನೆ ಎಂದು ತಿಳಿದುಕೊಂಡನಷ್ಟೇ! ಕೊರಳಿಂದ ದನಿ ಹೊರಟರೆ ತಾನೆ? ಕಡೆಗೆ ಬೇಗೆ ಬೇನೆ ತಡೆಯಲಾರದೆ ಒಂದು ನೇಣನ್ನು ತುಡುಕಿ, ಬೋಗುಣಿಯೊಂದನ್ನು ಬೋರಲು ಹಾಕಿ, ಅದರ ಮೇಲೆ ಹತ್ತಿ, ಸೂರಿನ ಬಿದಿರಿಗೆ ಉರುಳು ಕಟ್ಟಿದನು….ಅವನು ಸಾಯಬೇಕು ಎಂದೇನೊ ನಿಶ್ಚಯಿಸಿದ್ದನು. ಆದರೆ ಆ ರೀತಿಯದ್ದಾಗಿರಲಿಲ್ಲ. ತಾನು ಆತ್ಮಹತ್ಯೆಮಾಡಿಕೊಂಡೆ ಎಂಬುದು ಯಾರಿಗೂ ಗೊತ್ತಾಗದಂತೆ ಅದನ್ನು ಸಾಧಿಸಲು ಯೋಚಿಸಿದ್ದನು: ಸ್ವಲ್ಪ ಮೈಗೆ ಬಲ ಬಂದರೆ, ಗೌಡರ ಅಡಕೆತೋಟಕ್ಕೆ ಕೊಟ್ಟೆಕಟ್ಟಲು ಹೋಗಿ, ಕೊಟ್ಟೆಮಣೆ ಕೊಟ್ಟೆಹೊರೆ ಸಹಿತವಾಗಿ ಎತ್ತರದ ಅಡಕೆ ಮರದ ನೆತ್ತಿಗೇರಿ, ಅಲ್ಲಿಂದ ಛಕ್ಕನೆ ಕೊಟ್ಟೆ ಮಣೆಯಿಂದ ಜಾರಿ ಬಿದ್ದಂತೆ, ಆಕಸ್ಮಿಕದಲ್ಲಿ ಮರಣ ಹೊಂದಿದಂತೆ, ತೋರಿಸಿಕೊಳ್ಳಬೇಕು ಎಂದು ಸಂಕಲ್ಪಿಸಿದ್ದನು. ಆದರೆ….

ಆ ರಾತ್ರಿ ಬಾಗಿ ಮೊಡಂಕಿಲರೊಡನೆ ಹೂವಳ್ಳಿ ಮದುವೆಮನೆಗೆ ಹೋದ ಅಕ್ಕಣಿ ಆ ಜನ, ಆ ಗಲಭೆ, ಆ ವಾದ್ಯ, ಆ ಸಂದಣಿಯಲ್ಲಿ, ಆ ಬಣ್ಣ, ಆ ಕಂಪು, ಆ ಸೀರೆಗಳು, ಆ ಆಭರಣಗಳು ಇವುಗಳಲ್ಲಿ ಕಣ್ಮುಳುಗಿ ಮನಮುಳುಗಿ ಹೋದಳು. ತಾನೇ ತಂದು ಕೊಟ್ಟಿದ್ದ ಹೊಸ ಸೀರೆ ಉಟ್ಟು ಮನೋಹರಿಯಾಗಿದ್ದ ಅವಳನ್ನು ಚೇಂಕ್ರ ಸೇರೆಗಾರ ಮತ್ತೆಮತ್ತೆ ಏನಾದರೂ ನೆವ ಮಾಡಿಕೊಂಡು ಬಂದು ಮಾತಾಡಿಸುತ್ತಿದ್ದುದು ಅಕ್ಕಣಿಗೇನು ಅಹಿತವಾಗಿರಲಿಲ್ಲ! ಎಲೆ ಅಡಕೆ ಹಾಕಿದ್ದ ರಂಗುತುಟಿಗಳಿಂದ ನಕ್ಕು ಸೇರೆಗಾರನಿಗೆ ಮನರಂಜಕವಾಗಿಯೂ ವರ್ತಿಸಿದ್ದಳು!

"ಈವೊತ್ತೇನು ಊಟ ನಮಗೆ ಬೆಳಗಿನ ಜಾವ ಸಿಕ್ಕಿದ್ರೆ ನಮ್ಮ ಪುಣ್ಯ! ಈ ಬಾಳೆ ಹಣ್ಣಾದ್ರೂ ತಿಂದರು." ಎಂದು ಅಕ್ರಮವಾಗಿ ಮುರಿದು ತಂದಿದ್ದ ಮದುವೆ ಚಪ್ಪರದ ಬಾಳೆಹಣ್ಣನ್ನು ಕೂಟ್ಟು ಹೋದವನು, ಮತ್ತೆ ಸ್ವಲ್ಪ ಹೊತ್ತಿನಲ್ಲಿಯೆ ತಿರುಗಿಬಂದು ಹೇಳಿದ್ದನು: "ಇವತ್ತೇನು ಗುಂಡಿನ ಮನೆ ದಿಬ್ಬಣ್ ಸಿಂಬಾವಿಯಿಂದ ಬರೋದಿಲ್ಲ ಅಂಬ್ರು! ಭಾರಿ ಮಳೆ ಅಂತೆ ಆ ಕಡೆ!...

ಮತ್ತೊಮ್ಮೆ ರಾತ್ರಿ ಮುಂದುವರಿದ ಮೇಲೆ ಬಂದವನು ಹೇಳಿದ್ದನು,ಬಾಗಿ ಅಕ್ಕಣಿ ಇನ್ನೂ ಒಂದಿಬ್ಬರೂ ಗಟ್ಟದ ತಗ್ಗಿನ ಹೆಣ್ಣಾಳುಗಳನ್ನು ಒಟ್ಟಿಗೆ ಉದ್ದೇಶಿಸಿ: "ಹೋಯ್, ಇವೊತ್ತು ಲಗ್ನ ನಡೆಯುವ ತರಾ ಕಾಣುವುದಿಲ್ಲ, ಹೆಣ್ಣುಗಳಿರಾ. ನಾಯಕರಿಗೆ ಸಕತ್ತು ಖಾಯಿಲೆಯಾಗಿ, ಬಾಯಿಗೆ ನೀರುಬಿಡುವ ಹಾಂಗೆ ಆಗಿದೆಯಂತೆ…."

ಇನ್ನೂ ಸ್ವಲ್ಪಹೊತ್ತು ಬಿಟ್ಟುಕೊಂಡು ಅವಸರ ಅವಸರವಾಗಿ ಓಡುತ್ತಾ ಬಂದವನು "ಏಳಿನಿ, ಏಳಿನಿ ಬೇಗ! ದಿಬ್ಬಣ ಇನ್ನೂ ಬರುವುದು ಬಾಳ ಹೊತ್ತಾಗ್ತದಂತೆ, ಧಾರೆಗೆ ಮುಂಚೇನೆ ಊಟ ಮುಗಿಸಲಕ್ಕು ಅಂಬ್ರು." ಎಂದು ಅವರನ್ನೆಲ್ಲ ಕರೆದುಕೊಂಡು ಹೋಗಿ ಹೊರಗಿನ ಕೀಳುಜಾತಿಯ ಜನರು ಕೂತಿದ್ದ ಪಂಕ್ತಿಯಲ್ಲಿ ಹೆಂಗಸರ ನಡುವೆ ಕೂರಿಸಿದನು.

ಅಷ್ಟರಲ್ಲಿ ಯಾರೋ ಕೂಗಿದರು " ಹಸಲೋರು ಅಲ್ಲಿ ಕೂರಬೇಕು; ಇಲ್ಲಲ್ಲಾ! ಏಳಿ ಹೆಂಗಸ್ರೆಲ್ಲಾ!..."

"ಹಸಲೋರೇನು ಬಿಲ್ಲೋರಿಗಿಂತ ಕೀಳಲ್ಲ ಜಾತೀಲಿ. ನೀನೆ ಬೇಕಾದರೆ ಎದ್ದು ಹೋಗು! " ಚೇಂಕ್ರ ಪ್ರತಿಭಟಿಸಿದನು.

"ಹಾದರದ ಸೂಳೆಮಗನಿಗೆ ಏನು ದೌಲತ್ತು?" ಕೂಗಿತು ಎದುರುತ್ತರ!

"ಯಾವನೋ ಸೂಳೇಮಗ? ನಿನ್ನ ಹೆಂಡ್ತಿನಾ….ಯ!"

"ಹೆಡ್ತಿ ತಿಂದುಕೊಂಡ ಲೌಡೀಮಗನೆ, ಕಂಡೋರ ಹೆಂಡಿರನ್ನೆಲ್ಲಾ ಕೆಡಿಸಿ, ಬಾಯಿಗೆ ಬಂದಹಾಂಗೆ ಮಾತಾಡ್ತಿಯಾ? ದವಡೇಲಿ ಹಲ್ಲೊಂದು ಇಲ್ಲದ್ಹಾಂಗೆ ಮಾಡೇನು? ಹುಸಾರ್, ಷಂಡಮುಂಡೇಗಂಡ!"

ಗಲಾಟೆ ದೊಂಬಿಗೆ ತಿರುಗುವ ಮುನ್ನ ನಾಲ್ಕಾರು ಜನ ಸೇರಿ, ವಿವೇಕ ಹೇಳಿ, ಸಮಜಾಯಿಸಿ ಮಾಡಿದರು.

ಅಕ್ಕಣಿ ತುಂಡು ಕಡುವು ಪರಮಾನ್ನ ಎಲ್ಲವನ್ನೂ ಸವಿದು ಚಪ್ಪರಿಸಿದಳು, ಇತರ ಹೆಂಗಸರೊಡನೆ ಅದೂ ಇದೂ ಹರಟೆ ಹೊಡೆಯುತ್ತಾ.

ಊಟ ಪೂರೈಸಿದ ಮೇಲೆ ಮತ್ತೆ ಅವರೆಲ್ಲರೂ ಕೆಳಗರಡಿಯ ಕತ್ತಲು ಕವಿದ ಮೂಲೆಯಲ್ಲಿ ಸೇರಿ, ಗುಜುಗುಜು ಮಾತಾಡುತ್ತಾ. ಎಲೆ ಅಡಿಕೆ ಹಾಕಿಕೊಳ್ಳುತ್ತಾ, ಅಂದಿನ ನಾಟಕದ ಮುಖ್ಯದೃಶ್ಯಾವಲೋಕನಕ್ಕಾಗಿ ಕಾಯುತ್ತಾ ಕುಳಿತರು, ಧಾರೆಯ ಮಂಟಪದ ದಿಕ್ಕಿಗೆ ಆಗಾಗ ಕಣ್ಣು ಹಾಯಿಸುತ್ತಾ.

ರಾತ್ರಿ ಬಹಳ ಹೊತ್ತು ಮುಂಬರಿದ ಮೇಲೆ, ದಿಬ್ಬಣ ಅಂತೂ ಇಂತೂ ಹಳ್ಳದ ದಂಡೆಯವರೆಗೆ ಬಂದು ನೀರು ಇಳಿಯುವುದನ್ನೆ ಕಾಯುತ್ತಿದೆ ಎಂಬ ಸುದ್ದಿ ಹಬ್ಬಿತು. ಬಾಗಿ ಅಕ್ಕಣಿಯರ ಗುಂಪಿನಲ್ಲಿ ಸಂತೋಷದ ತರಂಗವಾಡಿತು, ಧಾರೆ 'ಕಾಂಬ' ಪುಣ್ಯ ಲಭಿಸಿತಲ್ಲಾ ಎಂದು.

ಆದರೆ ಸ್ವಲ್ಪ ಹೊತ್ತಾದ ಮೇಲೆ, ನೆರೆದಿದ್ದ ಜನಗಳಲ್ಲಿ ಒಂದು ನಂಬಲಾರದ ದುರ್ವಾರ್ತೆ ಗುಜುಗುಜು ಹರಡತೊಡಗಿತು. ಮೊದಮೊದಲು ಒಬ್ಬರ ಕಿವಿಯಲೊಬ್ಬರು ಪಿಸುಮಾತನ್ನಾಗಿ ಮಾತ್ರ ಹೇಳುತ್ತಿದ್ದುದು ಸ್ವಲ್ಪ ಹೊತ್ತಿನಲ್ಲಿ ಗಟ್ಟಿಯಾಗಿಯೆ ಆಡುತ್ತಿದ್ದ ಬಹಿರಂಗ ಚರ್ಚಾವಿಷಯವಾಗಿ ಪರಿಣಮಿಸಿತ್ತು.

ಬಾಗಿ ಅಕ್ಕಣಿಯರಿಗೆ ಅದನ್ನು ಸ್ಪಷ್ಟವಾಗಿ ತಿಳಿಸಿದವರಲ್ಲಿ ಮೊತ್ತಮೊದಲುಗನೆಂದರೆ ಮೊಡಂಕಿಲ. ಏನೋ ಅನಾಹುತವಾದದ್ದನ್ನು ಕಂಡು ಹೇಳಬಂದವನಂತೆ ಗುಜುಗುಜು ಗುಂಪಿನ ನಡುವೆ ನುಗ್ಗಿ ಓಡೋತ್ತಲೆ ಬಂದು ಒದರಿದನು: "ಹೋಯ್, ಕೇಳಿದಿರಾ? ಹೆಣ್ಣೆ ಪತ್ತೆ ಇಲ್ಲ್ ಅಂಬ್ರು!"

ಬಾಗಿ ಅಕ್ಕಣಿಯರು ದಿಗಿಲುಬಿದ್ದು ಕೇಳಿದರು: "ಎಲ್ಲಿಗೆ ಹೋಪರಪ್ಪ ಈ ಕತ್ತಲೇಲಿ? ಅಯ್ಯೋ ದ್ಯಾವರೆ!"

ಪಕ್ಕದಲ್ಲಿದ್ದು ಇವರ ಸಂಭಾಷಣೆಗೆ ಕಿವಿಗೊಟ್ಟಿದ್ದ ಒಬ್ಬಳು ಸಮಾಧಾನ ಹೇಳಿದಳು: "ಎಲ್ಲಿಗೊ ಹೋಪರಲ್ಲ. 'ಹೊರಕಡೆ'ಗೆ ಹೋಗಿರಲಕ್ಕುಅಂಬ್ರು. ನಮ್ಮ ಪೀಂಚಲು ಅವರ ಸಂಗಡ ಇದ್ದಳಂಬ್ರು.... ಅವರಿಗೆ ಹೊತ್ತಾರೆಯಿಂದ ಹೊಟ್ಟೆನೋವಿತ್ತು ಅಂಬ್ರು..."

ಅಷ್ಟರಲ್ಲಿ ಗಂಡಿನ ದಿಬ್ಬಣ ಮನೆ ಮುಟ್ಟಿತ್ತು. ಎಲ್ಲಿ ನೋಡಿದರೂ ಸಂಭ್ರಮ, ಗಲಾಟೆ, ಗುಜುಗುಜು, ದೀಪಗಳ ಓಡಾಟ, ಒಬ್ಬರನ್ನೊಬ್ಬರು ಸ್ವಾಗತಿಸುವುದು, ಸಂಬೋದಿಸುವುದು...ಅಕ್ಕಣಿ ಬಾಗಿಯರಂತಹ ಕೀಳುಜಾತಿಯವರು ಅದರಲ್ಲಿ ಬರಿಯ ಪ್ರೇಕ್ಷಕರಾಗಿ ದೂರದಿಂದ ಮಾತ್ರ ಭಾಗವಹಿಸುವುದು ಸಾಧ್ಯವಾಗಿತ್ತು.

ಗಂಡಿನ ಕಡೆಯ ದಿಬ್ಬಣದವರೆಲ್ಲ ಮದುಮಗನಿಗಾಗಿ ಗೊತ್ತುಮಾಡಿದ್ದ ಮೇಲಿನ ಜಗಲಿಯ ಎತ್ತರದ ಜಾಗದಲ್ಲಿ ಆಸೀನರಾದರು. ದಿಬ್ಬಣದವರ ಕಡೆ ಮೆಚ್ಚಿ ನೋಡುತ್ತಾ, ಅವರನ್ನೂ ಅವರ ಬಟ್ಟೆಬರೆಗಳನ್ನೂ, ಪರಿಚಯವಿದ್ದಲ್ಲಿ ಅವರ ಪರಿಚಯ ವಿಚಾರವನ್ನೂ ಕುರಿತು ಲೋಕಾಭಿರಾಮವಾಗಿ ಮಾತನಾಡುತ್ತಿದ್ದ ಅಕ್ಕಣಿ ತನ್ನ ಕಡೆಗೆ ಬರುತ್ತಿದ್ದ ಚೇಂಕ್ರಿ ಸೇರೆಗಾರನನ್ನು ಕಂಡು ಮುಗುಳುನಕ್ಕಳು.

ಸೇರೆಗಾರ ಮಾತ್ರ ಮುಳುಗು ನಗಲಿಲ್ಲ. ಅವನ ಮುಖದ ಮೇಲೆ ಏನೋ ಗಂಭೀರ ಛಾಯೆ ಇದ್ದಹಾಗಿತ್ತು. ಉಟ್ಟಬಟ್ಟೆ ಒದ್ದೆಯಾಗಿದ್ದಂತೆಯೂ ತೋರಿತು. ತಲೆಗೆ ಸುತ್ತಿದ್ದ ಕೆಂಪು ವಸ್ತ್ರವೂ ಒದ್ದೆಯಾಗಿ ಕರಿಯ ಛಾಯೆಯನ್ನು ಪಡೆದಿತ್ತು.

"ಓ ಏನು ಚೇಂಕ್ರ ಸೇರೆಗಾರ್ರು ಮಳೇಲಿ ನೆಂದ ಹಾಂಗಿದೆಯಲ್ಲಾ? ಗಂಡಿನ ಕಡೆ ದಿಬ್ಬಣದೋರನ್ನ ಹಳ್ಳ ದಾಂಟಿಸಲಿಕ್ಕೆ ಹೋಗಿ ರಲಕ್ಕು!...

ಮೊಡಂಕಿಲ ಮೇಲಿನ ಪ್ರಶ್ನೆಗೆ ಯಾವ ಉತ್ತರವನ್ನೂ ಕೊಡದೆ ಚೇಂಕ್ರ ಸಮೀಪಕ್ಕೆ ಬಂದು ನಡುವೆ ಕುಳಿತು, ಒಂದು ರೀತಿಯ ರಹಸ್ಯಧ್ವನಿಯಲ್ಲಿ ಸುಯ್ದನು: "ಇನ್ನು ಯಾಕೆ ಕಾಯುತ್ತೀರಿ ಸುಮ್ಮನೆ? ಈವೊತ್ತು ಧಾರೆ ಮುಖ ನಾವು ಕಾಣಲಿಕ್ಕಿಲ್ಲ! ಲಗ್ನ ನಿಂತ ಹಾಂಗೆ ಸೈ! ಮದುವೆಯ ಹೆಣ್ಣೆ ಮನೆಯಲ್ಲಿಲ್ಲ!"

"ಹೊರಕಡೆಗೆ ಹೋಗಿರಲಕ್ಕು ಅಂಬ್ರು?" ಅಕ್ಕಣಿಯ ಮಾತು.

"ನಮ್ಮ ಪೀಂಚಲೂ ಸಂಗಡ ಹ್ವೋಯ್ಕಂಬ್ರು!" ಬಾಗಿಯ ದನಿ.

"ನಾನೆ ಕಂಡಿದ್ದಲ್ಲಾ? ಮತ್ತೇನು ಸುಮ್ಮನೆ ನಾನು ಮಳೇಲಿ ನೆನ್ದದ್ದೆ?" ಎಂದು ಚೇಂಕ್ರ ನಿರ್ಣಾಯಕವಾಗಿ ನಕ್ಕನಷ್ಟೆ.

ಆ ರಾತ್ರಿ ಚೇಂಕ್ರನು ಐತನಲ್ಲದೆ ಪೀಂಚಲು ಒಬ್ಬಳೆ ಗಟ್ಟದ ಮೇಲಿನವರ ಉಡುಗೆಯಲ್ಲಿದ್ದುದನ್ನು ನೋಡಿದಾಗಣಿಂದಲೂ ಅತ್ತಕಡೆ ಒಂದು ಕಣ್ಣಿಟ್ಟಿದ್ದನು. ಚಿನ್ನಮ್ಮನನ್ನು 'ಹೊರಕಡೆ'ಗೆ ಕರೆದುಕೊಂಡು ಹೋಗುವ ನೆವದಿಂದ ಪೀಂಚಲು ಅವಳ ಸಂಗಡ ಹೋದುದನ್ನೂ ದೂರದಿಂದ ಗಮನಿಸಿದ್ದನು. ಆದರೆ ಅವರಿಬ್ಬರೇ ಆ ಮಳೆಯಲ್ಲಿ ಆ ಕತ್ತಲೆಯಲ್ಲಿ ಆ ಕಾಡಿನಲ್ಲಿ ಹೋಗುತ್ತಾರೆ ಎಂದು ಅವನು ಊಹಿಸಿರಲಿಲ್ಲ. ಆದರೆ ಅವರು ಹೋದ

ಸ್ವಲ್ಪ ದೀರ್ಘ ಸಮಯದ ಮೇಲೆ ಐತನೊಬ್ಬನೆ ಬಂದು ಅಲ್ಲಿ ಇಲ್ಲಿ ಇಣುಕುತ್ತಿದ್ದುದನ್ನು ಅವನು ಗಮನಿಸಿ, ಅವನನ್ನು ಮಾತಾಡುಸುವ ನೆವದಲ್ಲಿ ಅವನ ಹಿಂದೆ ಮುಂದೆಯೇ ತಿರುಗಾಡುತ್ತಿದ್ದನು. ಆದರೂ ತುಸು ಹೊತ್ತಿನೊಳಗೆ, ಆ ಜನಗಳ ನಡುವೆ ಅಲ್ಲಿ ಇಲ್ಲಿ ಕತ್ತಲಲ್ಲಿ ನುಗ್ಗಿ ಓಡಾಡುವಂತೆ ನಟಿಸುತ್ತಿದ ಐತ, ಹೇಗೋ ಚೇಂಕ್ರನ ಕಣ್ಣು ತಪ್ಪಿಸಿ ಪರಾರಿಯಾಗಿದ್ದನು. ಜನರು ಮದುಮಗಳು ಕಾಣೆಯಾದುದನ್ನು ಗೊತ್ತುಹಚ್ಚಿ, ಹುಡುಕಲು ತೊಡಗಿದಾಗಲೆ ಚೇಂಕ್ರನಿಗೆ ನಡೆದಿದ್ದ ಸಂಗತಿಯ ಗುಟ್ಟು ಹೊಳೆದಿತ್ತು: ಮದುಮಗಳು ಚೆನ್ನಮ್ಮನನ್ನು ಪೀಂಚಲು ಐತರ ನೆರವಿನಿಂದ ಕೋಣುರು ಮುಕುಂದಯ್ಯಗೌಡರು ಕಣ್ಣು ತಪ್ಪಿಸಿ ಕರೆದೊಯ್ದಿದ್ದಾರೆ ಎಂದು: ಯಾವುದು ಅವನ ಕಿವಿಗೆ ಅದುವರೆಗೆ ಬರಿಯ ಗಾಳಿಸುದ್ದಿಯಾಗಿ ಬಿದ್ದಿತ್ತೋ ಅದು ಈಗ ಖಾತ್ರಿಯಾಗಿ ನಡೆದ ಘಟನೆಯಾಗಿ ಹೋಗಿತ್ತು!.

ಮದುಮಗಳು ಕಾಣೆಯಾದುದಕ್ಕೆ ಅನೇಕರ ಊಹೆ ಅನೇಕ ರೀತಿಗಳಲ್ಲಿ ಆಟವಾಡಿತ್ತು. ಆದರೆ ಬಹುಜನರು ನಂಬಿದ್ದೆಂದರೆ, ಒಲ್ಲದ ಗಂಡನನ್ನು ಕೈ ಹಿಡಿಯಲು ಹೇಸಿ, ಅವಳು ಕರೆಗೋ ಹಳ್ಳಕ್ಕೋ ಹಾರಿ ಆತ್ಮಹತ್ಯೆ ಮಾಡಿಕೊಂಡಿರಬೇಕು ಎಂಬುದು. ಆದ್ದರಿಂದ ಅನ್ವೇಷಣೆಯೂ ಆ ಜಾಡನ್ನೆ ಹಿಡಿದಿತ್ತು.

ಅಂತೂ ಆ ರಾತ್ರಿ ಮದುವೆ ನಡೆಯುವುದಿಲ್ಲ ಎಂಬುದು ನಿಶ್ಚಯವಾಗಿ ಅಕ್ಕಣಿ ಬಾಗಿಯರು ಕೋಣೂರಿನ ತಮ್ಮ ಬಿಡಾರಗಳಿಗೆ ಹಿಂದಿರುಗುವಷ್ಟರಲ್ಲಿ,ಮತ್ತೊಂದು ಭಯಂಕರ ವಾರ್ತೆಯನ್ನು ತಂದಿದ್ದನು ಚೇಂಕ್ರ: ಹೂವಳ್ಳಿ ವೆಂಕಪ್ಪನಾಯಕರು ತೀರಿಕೊಂಡ ಸುದ್ದಿ!

ಇಡೀ ಮನೆಯನ್ನೆಲ್ಲ ವ್ಯಾಪಿಸಿದ್ದ ಉತ್ಸವದ ವಾತವರಣ ಮಾಯವಾಗಿ, ಮಸಣದ ದುಃಖಮಯ ಮ್ಲಾನತೆ ತುಂಬಿಹೋದಂತಾಗಿತ್ತು. ಚೆನ್ನಮ್ಮ ಕಾಣೆಯಾದ ವಿಚಾರವಾಗಿಯೂ ಅವಳ ತಂದೆ ತೀರಿಕೊಂಡ ವಿಚಾರವಾಗಿಯೂ ನಾನಾ ತರಹದ ಸುದ್ದಿಗಳು ಹುಟ್ಟಿಕೊಂಡು ಕಿವಿಯಿಂದ ಕಿವಿಗೆ ಬಾಯಿಂದ ಬಾಯಿಗೆ ಹರಡತೊಡಗಿದ್ದುವು. ಗಟ್ಟಿಯಾಗಿ ರೋದಿಸುವರೊಂದು ಕಡೆ, ನಿಃಶಬ್ದವಾಗಿ ಬಿಕ್ಕಿ ಬಿಕ್ಕಿ ಅಳುವರೊಂದು ಕಡೆ, ಕೋಪದಿಂದ ಸಿಂಬಾವಿಯ ಕಡೆಯವರನ್ನು ಟೀಕಿಸುವರೊಂದು ಕಡೆ, ತಪ್ಪನ್ನೆಲ್ಲ ಹೂವಳ್ಳಿಯವರ ಮೇಲೆಯೆ ಹೊರಿಸಿ ನಿಂದಿಸುವರೊಂದು ಕಡೆ. ಸೋತು, ಶತ್ರುವಿನ ಧಾಳಿಗೆ ಸಿಕ್ಕು, ದಿಕ್ಕಾಪಾಲಾಗಿ ಓಡುವ ಸೈನ್ಯದ ಗಲಿಬಿಲಿ, ಭಯ, ಅಸ್ತವ್ಯಸ್ತತೆ ಮತ್ತು ದಿಗ್ಭ್ರಾಂತಿ ಎಲ್ಲೆಲ್ಲಿಯೂ ಹಬ್ಬಿ, ಹೂವಳ್ಳಿ ಮನೆ ರಾಣಾರಂಗವಾಗಿ ಹೋಗಿತ್ತು.

"ಪಾಪ! ಒಬ್ಬಳೇ ಮಗಳು! ಧಾರೆಯ ದಿನವೇ ಹಳ್ಳಕ್ಕೆ ಹಾರಿ ಪ್ರಾಣ ತೆಗೆದುಕೊಂಡ ಸುದ್ದಿ ಕಿವಿಗೆ ಬಿದ್ದಿದ್ದೇ ತಡ 'ಆ್ಞ!' ಅಂತಾ ಕೂಗಿ, ಪ್ರಜ್ಞತಪ್ಪಿ, ಕಣ್ಣು ಮುಚ್ಚಿದವರು ಮತ್ತೆ ಕಣ್ಣು ತೆರೆಯಲೇ ಇಲ್ಲವಂಗೆ!"

"ಮೊದಲೇ ಸುಮಾರು ವರ್ಷದಿಂದ, ಕಾಲಿನಲ್ಲಿ ಆಗಿದ್ದ ಕುಂಟಿನ ಹುಣ್ಣಿನ ದೆಸೆಯಿಂದ ನಂಜು ಏರಿ, ಜ್ವರ ಜೋರಾಗಿ, ಮಾತು ನಿಂತೇ ಹೋಗಿತ್ತಂತೆ. ಹೆಂಗಾದ್ರೂ ಲಗ್ನ ಒಂದು ಪೂರೈಸಿದರೆ ಸಾಕಲ್ಲಾ ಅಂತಿದ್ರಂತೆ.... ಮದುವಣಗಿತ್ತಿ ಎಲ್ಲೂ ಇಲ್ಲ, ಏನಾದಳೋ ಗೊತ್ತಿಲ್ಲ-ಅಂತಾ ಕೇಳಿದ್ದೆ ಒಂದು ನೆಪ ಆಗಿ ಪರಾಣ ಹಾರೇ ಹೋಯ್ತಂತೆ!"

“ಅಯ್ಯೋ! ಆ ಮುದುಕೀಗೋಳು ನೋಡಬಾರದಂತೆ! ಮೊಮ್ಮಗಳು ಅಂದ್ರೆ ಅಷ್ಟು ಅಕ್ಕರೆಯಿಂದ ಸಾಕಿತ್ತಂತೆ ಆ ಅಜ್ಜಿ. ಅತ್ತೂ ಅತ್ತೂ ಸೊಂಟಾನೆ ಬಿದ್ದು ಹೋದ್ದಂಗಾಗ್ಯದೆಯಂತೆ! ಅದೂ ಏನ ನಾಳೆ ಹೊತ್ತಾರೆ ಒಳಗೇ ಅತ್ತ ಮಕ ಹೋಗೋ ಹಾಂಗೇ ಅದೆಯಂತೆ!”

“ಆ ನಾಗಕ್ಕಂದೇ ಎಲ್ಲಾ ಕಿತಾಪತಿ. ಅಂತಾನೂ ಹೇಳ್ತಾರಪ್ಪಾ! ಸುಳ್ಳೋ ಬದ್ದೋ? ಆ ಭಗವಂಗನೇ ಬಲ್ಲ!….”

ಇಂತಹ ಅನೇಕ ತರಹದ ಸಂವಾದದ ಕೆಂಜಿಗೆ ಹಿಂಡಲಿನಲ್ಲಿ ನುಸುಳಿ ತೂರಿ ಅಕ್ಕಣಿ, ಬಾಗಿ ಮತ್ತು ಮೊಡಂಕಿಲರು ಹೂವಳ್ಳಿಯಿಂದ ಕೋಣೂರಿಗೆ ಹಿಂತಿರುಗಿ ಹೊರಟರು. ನಟ್ಟಿರುಳು ಕಳೆದು ಬಹೂದೂರ ಸಾಗಿತ್ತು. ಮಳೆ ಮೂದಲಿನಂತೆ ಜೋರಾಗಿ ಸುರಿಯದಿದ್ದರೂ ನಿಂತು ನಿಂತು ಸುರಿಯುತ್ತ ರಾತ್ರಿಯನ್ನು ದುರ್ನಿಶೆಯನ್ನಾಗಿ ಮಾಡಿತ್ತು.

ಕೋಣೂರು ಮನೆಯನ್ನು ದಾಟಿ ತಮ್ಮ ಬಿಡಾರಗಳಿದ್ದ ಜಾಗಕ್ಕೆ ಸಮಿಪಿಸುತ್ತಿದ್ದ ಅಕ್ಕಣಿಗೆ ಏಕೋ ದುಃಖ ಉಕ್ಕಿಬಂದಂತಾಗಿ, ಎಷ್ಟೊ ಪ್ರಯತ್ನಪಟ್ಟರೂ ತಡೆಯಲಿಕ್ಕಾಗದೆ, ಬಿಕ್ಕಿಬಿಕ್ಕಿ ಅಳತೊಡಗಿದಳು.

ಪಕ್ಕದಲ್ಲಿದ್ದ ಬಾಗಿ, ರೋಗಿಯಾಗಿದ್ದ ತನ್ನ ಗಂಡನ ದುಸ್ಥಿತಿಯ ನೆನಪಾಗಿ ಅಕ್ಕಣಿ ಅಳುತ್ತಿರಬೇಕು ಎಂದು ಭಾವಿಸಿ, ನಾನಾ ರೀತಿಯಿಂದ ಸಮಾಧಾನ ಹೇಳಿದಳು: ಆದರೆ ಅಕ್ಕಣಿಗೆ ಚೆನ್ನಾಗಿ ಗೊತ್ತಿತ್ತು. ಬಾಗಿ ಹೇಳಿದ ಯಾವ ಸಮಾಧಾನವನಕ್ಕೂ ಬುಡ ಭದ್ರವಿಲ್ಲ ಎಂದು.

ತನ್ನ ಗಂಡನ ರೋಗ ಗುಣವಾಗುವುದಿಲ್ಲ ಎಂಬುದು ಅಕ್ಕಣಿಗೆ ಖಾತ್ರಿಯಾಗಿ ಹೋಗಿತ್ತು. ಅವನಿಂದ ಯಾವ ವಿಧವಾದ ಸುಖವೂ ತನಗೆ ಇನ್ನು ಮುಂದು ದೊರೆಯುವುದಿಲ್ಲ ಎಂಬುದರಲ್ಲಿಯೂ ಅವಳಿಗೆ ಸಂದೇಹವಿರಲಿಲ್ಲ. ಅವನು ಬದುಕಿರುವಷ್ಟು ಕಾಲವೂ ತಾನೇ ಅವನಿಗಿ ದುಡಿದು ಹಾಕಬೇಕು ಎನ್ನುವುದೂ ಅವಳಿಗೆ ಸ್ಪಷ್ಟವಾಗಿತ್ತು. ಆದರೂ ಅವನು ಸತ್ತರೆ ತಾನು ಮುಂಡೆಯಾಗುತ್ತೇನಲ್ಲ ಎಂಬ ಅಮಂಗಳದ ಭೀತಿ ಅವಳ ಹೃದಯನ್ನಾವರಿಸಿತ್ತು. ಅವರ ಕೀಳುಜಾತಿಯ ರಿವಾಜಿನಂತೆ ಪಿಜಿಣ ಸತ್ತರೆ ಅಕ್ಕಣಿಯ ಮುಂಡೆತನ ಅನಿವಾರ್ಯವಾದುದೇನಾಗಿರಲಿಲ್ಲ! ಕೆಲವೇ ದಿನಗಳಲ್ಲಿ, ಸತ್ತವನಿಗೆ ಮಾಡಿ ಮುಗಿಸಬೇಕಾತಿದ್ದ ಕ್ರಿಯೆಗಳೆಲ್ಲ ಪೂರೈಸಿದೊಡನೆ, ಅವಳು ತನ್ನ ವೈಧವ್ಯ ದುಃಖದಿಂದ ಪಾರಾಗಿ, ನವವಧುವೂ ಆಗಬಹುದಾಗಿತ್ತು! ಚೀಂಕ್ರನ ಕೃಪೆಯಿಂದ ಆ ಅವಕಾಶವೂ ಶೀಘ್ರವಾಗಿ ಅಶ್ರಮವಾಗಿಯೆ ಲಭಿಸುವಂತೆಯೂ ಇತ್ತು!. ಅಕ್ಕಣಿಯ ಒಳಮನಸ್ಸಿಗೆ ಒಮ್ಮೊಮ್ಮೆ ಆ ಕನಸೂ ಮಿಂಚುತ್ತಿದ್ದುದುಂಟು. ಹಾಗೆ ಮಿಂಚಿದಾಗಲೆಲ್ಲ ಅವಳು ತನ್ನನ್ನು ತಾನೆ ಪಾಪಿ ಎಂದು ಬಯ್ದುಕೊಂಡು, ತನಗೆ ತಾನೆ ನೂರು ಶಾಪ ಹಾಕಿಕೊಳ್ಳುತ್ತಿದ್ದಳು.. ಅವಳ ಅಂತರಾಳದ ಧರ್ಮಪ್ರಜ್ಞೆ 'ಚಿಃ ನೀನು ಎಂತಹ ಹಾದರಗಿತ್ತಿ ಆಗಿಹೋದೆ? ಗಂಡನ ಸಾವನ್ನು ಬಯಸಿ, ಮಿಂಡನನ್ನು ಕೂಡಿಕೆಯಾಗುವ ಸಂಚು ಮಾಡುತ್ತಿದ್ದಿಯಾ?' ಎಂದು ಮೂದಲಿಸಿದಂತಾಗುತ್ತಿತ್ತು. ಆದರೂ ಪಿಜಿಣ ಈ ಭಯಂಕರ ರೋಗದಿಂದ ನರಳುತ್ತಾ ಇನ್ನೂ ಬಹು ದೀರ್ಘಕಾಲ ಬದುಕಿರುವ ಸಂಭವವನ್ನು ನೆನೆದಾಗಲೆಲ್ಲ ಅಕ್ಕಣಿಯ ಜೀವ ದಿಕ್ಕುಗೆಟ್ಟು ಸಂಕಟದಿಂದ ನಿಡುಸುಯ್ಯುತ್ತಿತ್ತು. ಹೀಗೆ ಇಬ್ಬಗೆಯ ಇಕ್ಕುಳದಲ್ಲಿ ಸಿಕ್ಕಾಗಲೆಲ್ಲ ಅಕ್ಕಣಿ ಬಿಕ್ಕಿಬಿಕ್ಕಿ ಅತ್ತೂ ಅತ್ತೂ, ಅದರಿಂದುಂಟಾಗುತ್ತಿದ್ದ ದಣಿವನ್ನೆ, ಒಂದು ತೆರನ ಪ್ರಜ್ಞಾ ಮೂರ್ಛೆಯನ್ನೆ, ಸಮಾಧಾನವನ್ನಾಗಿ ಪರಿಗಣಿಸುತ್ತಿದ್ದದ್ದು ಅವಳಿಗೆ ರೂಢಿ ಬಿದ್ದಿತ್ತು.

ಅಳುತ್ತಳುತ್ತಲೆ ಅಕ್ಕಣಿ ಅವಳ ಬಿಡಾರದ ಬಾಗಿಲಿಗೆ ಬಂದಳು.

ಸರಿ, ಇನ್ನೇನು? ತಟ್ಟಿಯ ಬಾಗಿಲ ನೂಕಿ ಒಳಹೊಕ್ಕರೆ ಅವಳಿಗಾಗಿ ಕಾಯುತ್ತಲೆ ಇರುತ್ತದೆ ದಿನನಿತ್ಯದ ರೋತೆ!

ಬಾಗಿ ಮೊಡಂಕಿಲರು ಅಕ್ಕಣಿ ಬಾಗಿಲು ತೆರೆಯುವುದನ್ನೆ ನೋಡುತ್ತಾ ಅವಳ ಹಿಂದೆ ನಿಂತರು. ಅವರು ತಮ್ಮ ಬಿಡಾರಕ್ಕೆ ನಾಲ್ಕುಮಾರು ಹಿಂದೆಯ ಅಗಚಿ ಹೋಗಬೇಕಾಗಿತ್ತು. ಆದರೆ ಅಕ್ಕಣಿಯ ದುಃಖಸ್ಥಿತಿಯನ್ನೂ ಅವಳ ಗಂಡನ ರೋಗದ ಉಲ್ಬಣತೆಯನ್ನೂ ನೆನೆದು, ಬಿಡಾರದೊಳಕ್ಕೆ ಹೋಗಿ ವಿಚಾರಿಸಿಕೊಂಡೆ ಹೋಗುವ ಎಂದು ಬಂದಿದ್ದರು.

ಕತ್ತಲೆ ಕವಿದಿದ್ದ ಬಿಡಾರ ಅಷ್ಟು ನೀರವವಾಗಿದ್ದುದು ಅಕ್ಕಣಿಗೆ ಅಚ್ಚರಿಗಿಂತಲೂ ಹೆಚ್ಚಾಗಿ ಅನುಮಾನ ಉಂಟುಮಾಡಿತ್ತು. ಸಾಮಾನ್ಯವಾಗಿ ಪಿಜಿಣನಿಗೆ ಇತ್ತೀಚೆಗೆ ನಿದ್ದೆಯೆ ಬರುತ್ತಿರಲಿಲ್ಲ. ಮೂರು ಹೊತ್ತೂ ಅಯ್ಯಪ್ಪಾ ಉಸ್ಸಪ್ಪ ಎನ್ನುತ್ತಲೋ ನರಳುತಲೋ ಇನ್ನೇನನ್ನಾದರೂ ಹಲವರಿಯುತ್ತಲೋ ಇರುತ್ತಿದ್ದ. 'ಇಂದೇನು ಇಷ್ಟು ನಿಃಶಬ್ಧವಾಗಿ ನಿದ್ದೆ ಮಾಡುತ್ತಿದ್ದರಲ್ಲಾ! ಎಂದು ಕೊಂಡಿತು ಅವಳ ಮನಸ್ಸು. ಕಡೆಗೆ ಉಸಿರಾಡುವುದಾದರೂ ಕೇಳಿಸಬೇಕಾಗಿತ್ತಲ್ಲ? ಏನು ವಾಸನೆ? ಒಡನೆಯೆ ಚೇಂಕ್ರ ಕೊನೆಮೆಟ್ಟೆಯ ರಾಶಿಯಡಿ ಅಡಗಿಸಿಟ್ಟಿದ್ದ ಸಾರಾಯಿ ಶೀಸೆಗಳ ನೆನಪಾಗಿ ಅವಳೆದೆ ಏನೋ ಆಶಂಕಿಯಿಂದ ಹೌಹಾರಿತು. ಕಾಲೆಲ್ಲ ಸೋತು ಬಂದಂತಾಯಿತು. ಗಂಟಲು ಆರಿತು. ಬೇಗಬೇಗನೆ ಬಾಗಿಲು ತಳ್ಳಿ. ಒಳಗೆ ಕಗ್ಗತ್ತಲೆಗೆ ದಾಟಿದಳು. ಬಿಡಾರದ ಮೂಲೆಯಲ್ಲಿದ್ದ ಒಲೆಯಲ್ಲಿ ಕೆಂಡ ಬೂದಿಮುಚ್ಚಿಕೊಂಡಿತ್ತು. ನೆಟ್ಟಗೆ ಅಲ್ಲಿಗೆ ಕೆಸರು ಗಾಲಿನಲ್ಲಿಯೆ ನಡೆದು, ಕೂತು, ಊದಿ, ಜಿಗ್ಗು, ಒಟ್ಟಿದಳು. ಬೆಂಕಿ ಹೊತ್ತಿಕೊಂಡು ಜ್ವಾಲೆ ಉರಿಯಿತು. ಬಿಡಾರ ಬೆಳಕಾಯಿತು.

ಬಿಡಾರ ಬೆಳಕಾಯಿತು. ಆದರೆ ಅಕ್ಕಣಿಯ ಕಣ್ಣಿಗೆ ಬಿದ್ದ ಘೋರ ದೃಶ್ಯಕ್ಕೆ, ಅವಳ ಪ್ರಾಣಕ್ಕೆ ಕಗ್ಗತ್ತಲೆಯ ಸಿಡಿಲು ಹೊಡೆದಂತಾಗಿ, ಕಣ್ಣು ಕತ್ತಲೆಗಟ್ಟಿ, ಪ್ರಜ್ಞೆ ಸೋತು, ಚಿಟಾರನೆ ಚೀರಿಕೊಂಡು, ಧಾತು ಹಾರಿ ನೆಲಕ್ಕೆ ಉರುಳಿಬಿಟ್ಟಳು!

ತತ್ತರಿಸಿ ಹೋದ ಬಾಗಿ ಮೊಡಂಕಿಲರು ಒಳಗೆ ನುಗ್ಗಿ ನೋಡುತ್ತಾರೆ: ಒಲೆಯ ಉರಿಯ ಮಂದಕಾಂತಿಯಲ್ಲಿ ನಸುಮಬ್ಬಾಗಿ ಕಾಣಿಸುತ್ತಿದೆ, ಬಿಡಾರದ ಬೆಂಗಟೆಯಿಂದ ನೇತಾಡುತ್ತಿದ್ದ ಪಿಜಿಣನ ನಿಶ್ಚಲ-ಕೃಶ-ಕಳೇಬರ….

ರಾತ್ರಿ ಹೂವಳ್ಳಿಯ ಮದುವೆಮನೆಯಲ್ಲಾದ ದುರಂತದ ಗಲಿಬಿಲಿಯಲ್ಲಿ ಸಧ್ಯವಾದಷ್ಟು ತನ್ನ ಸಂಪಾದನೆಯನ್ನು ಕೈಗೂಡಿಸಿಕೊಂಡು ಮರುದಿನ ಬೆಳಗ್ಗೆ ಚೇಂಕ್ರ ಸೇರೆಗಾರನು ಕೋಣೂರಿಗೆ ಹಿಂತಿರುಗಿದಾಗ ಅವನ ಆಶೆ, ಅವನ ಹೃದಯದ ನಿಗೂಢ ದುರಭಿಸಂಧಿ, ಅಷ್ಟು ಶೀಘ್ರವಾಗಿ ಕೈಗೂಡುತ್ತದೆ ಎಂದು ಅವನು ಭಾವಿಸಿರಲಿಲ್ಲ: ತಾನು ಕೊನೆ ಮುಟ್ಟೆಯಡಿ ಮುಚ್ಚಿಟ್ಟಿದ್ದ ಸಾರಾಯಿ ಶೀಸೆಗಳಿಗೆ ಒದಗಿದ್ದ ಗತಿಗೆ ಅವನು ಬಹಳ ವ್ಯಸನಪಟ್ಟಂತೆ ತೋರಿಸಿಕೊಂಡಿದ್ದರೂ ಒಳಗೊಳಗೆ ಸಾರ್ಥಕವಾಯಿತೆಂದು ಹಿಗ್ಗಿದನು. ಅಕ್ಕಣಿಯ ದುಃಖದಲ್ಲಿ ಸಮಭಾಗಿಯಾದಂತೆ ಶೋಕಿಸಿದ್ದನು. ಇತರರ ಸಂಗಡ ತಾನೂ ನಿರಾಸಕ್ತನೆಂಬಂತೆ ಅಕ್ಕಣಿಗೆ ಸಮಾಧಾನ ಹೇಳಿದ್ದನು. ಪಿಜಿಣನ ಶವ ಸಂಸ್ಕಾರದಲ್ಲಿ ಅತ್ಯಂತ ಮುತುವರ್ಜಿಯಿಂದ ಪರಮಬಂಧುವಿನಂತೆ ಸೇವೆ ಸಲ್ಲಿಸಿದನು.

ಅಕ್ಕಣಿ ಮಾತ್ರ ಅವನ ಕಡೆ ದೃಷ್ಟಿ ಹಾಯಿಸಲಿಲ್ಲ. ಅತ್ಯಂತ ನಿರ್ಲಕ್ಷತೆಯಿಂದ ಚೇಂಕ್ರನ ಅಸ್ತಿತ್ವವನ್ನೆ ತಿರಸ್ಕರಿಸುವಂತೆ ವರ್ತಿಸಿದಳು. ತನ್ನ ಗಂಡನ ಸಾವೊಂದೇ ಅವಳ ಮನಸ್ಸರ್ವವನ್ನೂ ವ್ಯಾಪಿಸಿ, ಅವಳ ಬದುಕನ್ನು ಬೇಯಿಸುತ್ತಿದ್ದಂತೆ ಕಾಣುತ್ತಿತ್ತು. ತನ್ನ ಗಂಡನ ಅಕಾಲ ಮರಣಕ್ಕೆ ಚೇಂಕ್ರನೇ ಕಾರಣ ಎಂಬ ಧ್ವನಿ ಬರುವಂತಹ ಮಾತನ್ನೂ ಆಡಿದ್ದಳು!

"ಸೇರೆಗಾರ್ರನ್ನು ಯಾಕೆ ಬಯ್ಯುತ್ತೀಯಾ? ನಿನಗೂ ನಿನ್ನ ಗಂಡಗೂ ಅವರು ಎಷ್ಟೆಲ್ಲ ಉಪಕಾರ ಮಾಡಿದ್ದಾರೆ?" ಎಂದು ಕಿವಿಮಾತು ಹೇಳಿದ ಬಾಗಿಗಿ, ಮೂದಲಿಸುವಂತೆ ನುಡಿದಿದ್ದಳು, ಸುಯ್ದು:

"ಮಾಡಿದಾರೆ! ಉಪಕಾರ ಮಾಡಿದ್ದಾರೆ! ಉಪಕಾರದ ಒಳಗಿದ್ದ ಅಪಕಾರ ನಿನಗೆ ಹೆಂಗೆ ಗೊತ್ತಾಗಲಕ್ಕೂ, ಬಾಗಕ್ಕಾ?"

* * *

## ೩೩

ದಟ್ಟಗಾಡಿನ ಮಲೆಗಳ ನಡುವೆ ಹುಟ್ಟಿ ಬೆಳೆದ ಮಲೆನಾಡಿನ ಮಲೆಗಳ ಮಗಳಾಗಿದ್ದರೂ ಚಿನ್ನಮ್ಮ ಎಂದೂ ಅಂತಹ ಮೇಘಚುಂಬಿ ಘೋರಾರಣ್ಯದ ಶಿಖರ ಪ್ರದೇಶದಲ್ಲಿ, ಅದರಲ್ಲಿಯೂ ಅಂತಹ ಗಾಳಿಮಳೆಗಳ ಬಿರುಬಿನ ಸನ್ನಿವೇಶದಲ್ಲಿ, ಇರುಳನ್ನು ಕಳೆದವಳಾಗಿರಲಿಲ್ಲ. ಅಜ್ಜಿಯ ಅಕ್ಕರೆಯ ಬೆಚ್ಚನೆಯ ಮಗ್ಗುಲಲ್ಲಿಯೆ ಅವಳ ಬದುಕು ಬೆಳೆದಿತ್ತು, ಬಾಳು ಸಾಗಿತ್ತು. ತನಗೆ ವಿಷಮಯವಾಗಿದ್ದ ವಿಷಮ ವಿವಾಹದಿಂಗ ಪಾರಾಗಿ,ಅಮೃತಮಯವಾಗಿದ್ದು ತಾನೊಲಿದವನನ್ನೆ ತನ್ನ ಬದುಕಿನ ಸಂಗಿಯನ್ನಾಗಿ ಪಡೆಯುವ ಹೃದಯದ ಹಂಬಲವೊಂದೆ ಅವಳನ್ನು ಆ ರಾತ್ರಿ ಅಂತಹ ಅಪೂರ್ವ ಸಾಹಸಕ್ಕೆ ಪ್ರಚೋದಿಸಿತ್ತು. ಅವಳ ಚೇತನದ ಸಹಜ ಸ್ವರೂಪವಾಗಿದ್ದ ಕುಸುಮಕೋಮಲತೆ ಕೆಲವು ಮುಹೂರ್ತಕಾಲದ ಮಟ್ಟಿಗೆ ವಜ್ರಕಠೋರವಾಗಿ ಪರಿವರ್ತಿತವಾಗಿತ್ತು. ಅಂತಹ ಪರಿವರ್ತನೆ ಏಕದೇಶನಿಷ್ಠವಾದ ಅಂಶದೃಷ್ಟಿಗೆ ಆಕಸ್ಮಿಕ, ಅಸಾಧ್ಯ, ಅತ್ಯಂತ ಅಪೂರ್ವ, ಅಸ್ವಾಭಾವಿಕ ಎಂಬಂತೆ ಭಾಸವಾದರೂ, ಚಿನ್ನಮ್ಮನ ಹೊಟ್ಟೆಯಲ್ಲಿ ಮಗಳಾಗಿ ಹುಟ್ಟುವವಳ ಅಥವಾ ಆ ಮಗಳ ಹೊಟ್ಟೆಯಲ್ಲಿ ಮಗನಾಗಿ ಹುಟ್ಟಿ ಮುಂದೆ ಜಗಜ್ಜೀವನ ವಿಕಾಸಕ್ಕೆ ತನ್ನ ಕಾಣಿಕೆಯನ್ನು ಸಲ್ಲಿಸುವ ಅದಾವುದೊ ಒಂದು ಗುರುಚೇತನದ ಚಿತ್ತಪಸ್ಸಿನ ಪ್ರಭಾವವನ್ನರಿಯುವ ತ್ರಿಕಾಲಜ್ಞವಾದ ಪೂರ್ಣದೃಷ್ಟಿಗೆ ಅದು ಅತ್ಯಂತ ಅನಿವಾರ್ಯ ಧರ್ಮವಾಗಿಯೆ ಕಾಣಿಸುವುದರಲ್ಲಿ ಸಂದೇಹವಿಲ್ಲ.

ಹುಲಿಕಲ್ಲು ನೆತ್ತಿಯ ಕಲ್ಲುಮಂಟಪಕ್ಕೆ ಬಂದು, ಬಟ್ಟೆ ಬದಲಾಯಿಸಿ, ಬೆಂಕಿ ಕಾಯಿಸಿಕೊಂಡು, ಬುತ್ತಿಯೂಟ ಉಣ್ಣುವ ಶಾಸ್ತ್ರ ಮಾಡಿ, ಮುಕುಂದಯ್ಯನ ಮುಂಗಾಣ್ಕೆ ಒದಗಿಸಿದ್ದ ಬೆಚ್ಚನೆಯ ಕಂಬಳಿಯ ಮೇಲೆ ಬೆಚ್ಚಗೆ ಹೊದೆದುಕೊಂಡು ಮಲಗಿದ ಮೇಲೆಯೆ ಆ ಚಿತ್ತಪ್ಪಸ್ಸಿನ ಪ್ರಭಾವ ತಿರೋಹಿತಮಾದಂತಾದಿ ಚಿನ್ನಮ್ಮನ ಹೃದಯ ಅಳುಕತೊಡಗಿದ್ದು!

ತನ್ನಂತಹ ಪುಕ್ಕಲೆದೆಯ ಹಳ್ಳಿಯ ಹುಡುಗಿ, ಅತ್ತಕಡೆಯ ಜನರು ಕಥೆಗಳಲ್ಲಲ್ಲದೆ ಕಂಡು ಕೇಳರಿಯದ, ಅಂತಹ ಮಹಾ ಅಪವಾದಕರವಾದ ಅಪರಾಧ ಸದೃಶವಾದ ಭಯಂಕರ ಸಾಹಸಕ್ಕೆ ಕೈಹಾಕಿದ್ದಾದರೂ ಹೇಗೆ ಎನ್ನುವುದು ಅವಳಿಗೆ ಅರ್ಥವಾಗಲಿಲ್ಲ. ನೆನೆದಂತೆಲ್ಲ ಹೆದರಿಕೆಯಾಗತೊಡಗಿತು.ಇನ್ನೂ ಬುದ್ಧಿರೂಪಕ್ಕಿಳಿಯದೆ ಭಾವರೂಪ ಮಾತ್ರವಾಗಿದ್ದ ಆ ಚಿಂತನೆ ಚಿನ್ನಮ್ಮನ ಚೇತನದಲ್ಲಿ ತನ್ನ ಅಜ್ಜಿಯ ಪರವಾದ ಯೋಚನೆಯಾಗಿ ಪರಿಣಮಿಸಿ, ಅಜ್ಜಿಯನ್ನು ನೆನೆನೆನೆದು ಮುಸುಗಿನೊಳಗೆ ಸದ್ದಿಲ್ಲದೆ ಅಳತೊಡಗಿದಳು.

ಚಿನ್ನಮ್ಮ ಮಲಗಿದ್ದ ಜಾಗಕ್ಕೆ ಸಮೀಪದಲ್ಲಿದ್ದ ಕಲ್ಲುಗೋಡೆಯ ಬಿರುಕಿನಲ್ಲಿ ಕೀಟವೊಂದು ಟಿಪಿಟ್ಟಿಪಿಟ್ಟಿಪಿಟ್ಟಿ ಎಂದು ಬಿಡದೆ ಕೂಗಿಕೊಳ್ಳುತ್ತಿತ್ತು. ಅದು ಮೊದಮೊದಲು ಕಿನಿಸಿಗೆ ಉಂಟುಮಾಡಿದರೂ ಬರಬರುತ್ತಾ ಒಂದು ತೆರನಾದ ಜೋಗುಳದುಲಿಯಂತಾಗಿ, ಅಳುತ್ತಳುತ್ತಲೆ, ಹಿಂದೆಂದೂ ದಣಿಯದಷ್ಟು ದಣಿದಿದ್ದ ಕುಮಾರಿ ನಿದ್ದೆಹೋದಳು.

ಮನೆಯಲ್ಲಿ ಗದ್ದಲವೋ ಗದ್ದಲ! ಮದುವೆಗೆ ಬಂದಿದ್ದ ನಂಟರು, ದಿಬ್ಬಣದವರು, ಊಟಕ್ಕಾಗಿಯೆ ಬಂದಿದ್ದ ಕೀಳುಜಾತಿಯ ಆಳುಕಾಳುಗಳು, ಧಾರೆಯ ನೋಟಕ್ಕಾಗಿಯೂ ಬಂದಿದ್ದವರೂ ಎಲ್ಲರೂ ಓಡಾಡುತ್ತಿದ್ದಾರೆ: ಹುಡುಕುತ್ತಿದ್ದಾರೆ! ಕರೆಯುತ್ತಿದ್ದಾರೆ!.... ಇದೇನಿದು? ಕುಂಟನ ಹುಣ್ಣು ವಿಷಮಿಸಿ ಏಳಲಾರದೆ, ಮಾತು ಕೂಡ ನಿಂತುಹೋಗುವಷ್ಟು ಜ್ವರದಿಂದ ನರಳುತ್ತಿದ ಅಪ್ಪಯ್ಯ ಕೋಣೆಯಿಂದೆದ್ದು ಬಂದು, ಮದುವೆಗೆ ನೆರೆದಿದ್ದ ಗರತಿಯರ ನಡುವೆ ನುಗ್ಗಿ, ಯಾರನ್ನೊ ಹೊಡೆಯುತ್ತಿದ್ದಾನೆ! ಚಿನ್ನಮ್ಮ ನಡುಗುತ್ತ ಮೈ ಬೆವರಿ ನೋಡುತ್ತಾಳೆ: ರೌದ್ರಾವೇಶದ ತನ್ನ ಅಪ್ಪಯ್ಯ ನಾಗಕ್ಕನ ಜಡೆ ಹಿಡಿದು, ಗುದ್ದಿ ಗುದ್ದಿ ಎತ್ತಿಯೆತ್ತಿ ಕುಕ್ಕಿ, ಒದೆಯುತ್ತಿದ್ದಾನೆ. ನಾಗಕ್ಕ ಕೆಳಗೆ ಬಿದ್ದು, ಏಳಲು ಪ್ರಯತ್ನಿಸುತ್ತಾ, ಒಂದೊಂದು ಒದೆಗೂ ತತ್ತರಿಸಿ ಮತ್ತೆಮತ್ತೆ ನೆಲಕ್ಕೆ ಬೀಳುತ್ತಿದ್ದಾಳೆ! ಚಿನ್ನಮ್ಮ ತಡೆಯಲಾರದೆ “ದಮ್ಮಯ್ಯ ಅಪ್ಪಯ್ಯಾ! ಹೊಡೀಬ್ಯಾಡ, ಬಿಡು! ಎಂದು ಕೂಗಿ ಮುನ್ನುಗ್ಗಿದವಳು, ಅಪ್ಪಯ್ಯ ತನ್ನ ಹೊಟ್ಟೆಗೇ ಝಾಡಿಸಿ ಒದ್ದ ಹೊಡೆತಕ್ಕೆ ಅರಚಿಕೊಂಡು ನೆಲಕ್ಕೊರಗುತ್ತಾಳೆ!

ಗಡಗಡನೆ ನಡುಗುತ್ತಾ, ಮೈ ಬೆವರಿ, ಕುಮುಟಿ ಬಿದ್ದು, ಚಿನ್ನಮ್ಮ ತಟಕ್ಕನೆ ಕಣ್ಣು ತೆರೆಯುವುದಕ್ಕೂ, ಹತ್ತಿರವೆ ಬೇರೆ ಚಾಪೆಯ ಮೇಲೆ, ಅತಿ ಆಯಾಸದಿಂದಾಗಿದ್ದ ತನ್ನ ಬಸಿರಿನ ನೋವನ್ನು ಯಾರಿಗೂ ಹೇಳದೆ, ನಿದ್ದೆಯಿಲ್ಲದೆ, ಬಿದ್ದುಕೊಂಡಿದ್ದ ಪೀಂಚಲು ಚಿನ್ನಮ್ಮ ಕೂಗಿಕೊಂಡದ್ದನ್ನು ಕೇಳಿ, “ ಚಿನ್ನಕ್ಕಾ, ಬಲಮಗ್ಗುಲಿಗೆ ತಿರುಗಿಕೊಳ್ಳಿ! ಅಂಗಾತನೆ ಮಲಗಿದ್ರೆ ಒತ್ತುಗ ಅಗ್ರದೆ!” ಎಂದು ಕರೆಯುವುದಕ್ಕೂ ಸರಿಹೋಯಿತು.

ಚಿನ್ನಮ್ಮ ಪೀಂಚಲು ಹೇಳಿದಂತೆ ಮಾಡಿ, ಮೆಲುದನಿಯಲ್ಲಿ ಕೇಳಿದನು: “ನಾನು ಕೂಗಿಕೊಂಡೆನೇನೇ?”

“ಹೌದು…. ಅಂಗಾತನೆ ಮನಗಿದ್ರೇ ಹಾಂಗಾಗಾದು.”

ಮಗ್ಗುಲಿಗೆ ತಿರುಗಿ ಮಲಗಿಕೊಂಡ ಚಿನ್ನಮ್ಮ ಕಣ್ಣುಬಿಟ್ಟುಕೊಂಡೆ ಇದ್ದಳು, ಬಹಳ ಹೊತ್ತು, ತಾನು ಕಂಡ ಕನಸನ್ನು ನೆನೆಯುತ್ತಾ. ಅವಳೂ ಪೀಂಚಲೂ ಇಬ್ಬರೂ ತಟ್ಟಿಕಟ್ಟಿ ಮರೆಮಾಡಿದ್ದ ಕೋಣೆಯಂತಹ ಜಾಗದಲ್ಲಿ ಮಲಗಿದ್ದರು, ಒಬ್ಬರಿಂದೊಬ್ಬರು ಸುಮಾರು ಒಂದು ಮಾರು ದೂರವಾಗಿ. ಆಚೆಗೆ ಹತ್ತಾರು ಮಾರು ದೂರದಲ್ಲಿ ‘ನಂದಾಬೆಂಕಿ’ಯ

ಸುತ್ತಲೂ ಕುಳಿತು ಮಾತಾಡುತ್ತಿದ್ದ ಮುಕುಂದಯ್ಯ ಐತ ಗುತ್ತಿಯರ ಆಕೃತಿಗಳು ಕೆಂಡಗಾಂತಿಯಲ್ಲಿ ಮಬ್ಬಾಗಿ ಕಾಣಿಸುತ್ತಿದ್ದುವು.

ತಾನು ಕನಸಿನಲ್ಲಿ ಕಂಡಂತೆಯೆ ಆಗಿಬಿಟ್ಟಿರಬಹುದೆ ಮನೆಯಲ್ಲಿ? ತನಗಾಗಿ ನಾಗಕ್ಕಗೆ ಏನೇನು ಕಷ್ಟವೋ? ಅಪ್ಪಯ್ಯನಿಗೆ ಕಾಯಿಲೆ ಜೋರಾಗಿ, ಅವನು ಏಳದಿರುವಂತೆ ಆಗಿದ್ದರೆ ಎಂದು ತನ್ನ ಒಳಮನಸ್ಸು ಹಾರೈಸುತ್ತಿರುವುದನ್ನು ಗೊತ್ತುಹಚ್ಚಿದ ಅವಳ ಮಗಳುತನದ ಪಿತೃಪ್ರೀತಿ ಜುಗುಪ್ಸೆಯಿಂದ ಇಸ್ಸಿ ಎಂದುಕೊಂಡಿತು. ಆಲೋಚಿಸುತ್ತಿದ್ದ ಹಾಗೆಯೆ ದಣಿದ ಒಡಲು ಮತ್ತೆ ಕಣ್ಣುಮುಚ್ಚಿತ್ತು.

ಚಿನ್ನಮ್ಮ ತಮ್ಮ ಮನೆಯ ತುಳಸಿಕಟ್ಟೆಯ ದೇವರಿಗೆ ಮನದಲ್ಲಿಯೆ ಅಡ್ಡಬಿದ್ದು ನಿದ್ದೆ ಮಾಡಿದವಳು ಚೆನ್ನಾಗಿಯೆ ನಿದ್ರಿಸಿದ್ದಳು: ಅವಿಚಾರ ಭಕ್ತಿಯ ಅಂಧಶ್ರದ್ಧೆಯಿಂದ ಅವಳಿಗೆ ಭಗವಂತನಲ್ಲಿ ಶರಣಾಗತಿ ಸುಲಭವಾಗಿಯೆ ಸಿದ್ಧಿಸಿತ್ತು. ಮದುವೆ ಗೊತ್ತಾದ ದಿನವೇ ಅವಳು ಮುಕುಂದಯ್ಯನೊಡನೆ ಓಡಿ ಬಂದು, ಎಂತಹ ಕಂಟಕಮಯ ಜಟಿಲ ಸಮಸ್ಯೆಗಳ ಶತಶತ ಜಾಲವನ್ನೆ ನೆಯ್ದು, ಭಗವಂತನ ಮುಂದೆ ಪರಿಹಾರಕ್ಕಾಗಿ ಒಡ್ಡಿದ್ದಾಳೆ ಎಂಬುದರ ಅರಿವು ಅವಳಿಗೆ ಇನಿತೂ ಇರಲಿಲ್ಲ! ಅದನ್ನೆಲ್ಲ ಕಟ್ಟಿಕೊಂಡು ಅವಳಿಗೇನು? ಸರ್ವ ಶಕ್ತನೂ ಸರ್ವಜ್ಞಾನಿಯೂ ಪರಮಕೃಪಾನಿಧಿಯೂ ಆಗಿರುವ ಅವನಿಗೆ ಅದೊಂದು ದೊಡ್ಡ ವಿಷಯವೇನು? ಅದನ್ನೆಲ್ಲಾ ಚಿಂತಿಸಿ ಭಕ್ತೆ ಅವಳೇಕೆ ತಲೆ ಕೆಡಿಸಿಕೊಳ್ಳಬೇಕು! ಹೂವಳ್ಳಿ ಮನೆಯ ಬದುಕಿನಲ್ಲಿ, ಸಿಂಬಾವಿ ಮನೆಯ ಬದುಕಿನಲ್ಲಿ, ಹಳೆಮನೆ ಕೋಣೂರುಗಳ ಮನೆ ಬದುಕಿನಲ್ಲಿ, ಭರಮೈಹೆಗ್ಗಡೆ ವೆಂಕಪ್ಪನಾಯಕ ರಾದಿಯಾಗಿ ಹಲವಾರು ವ್ಯಕ್ತಿಗಳ ಮತ್ತು ಸಾಮಾಜಿಕ ಜೀವನದಲ್ಲಿ ಏನೇನು ಭೂಕಂಪಗಳಾಗುತ್ತವೆ? ಏನೇನು ಜ್ವಾಲಾಮುಖಿಗಳೇಳುತ್ತವೆ? ಏನೇನು ವಿಪ್ಲವ ಪ್ರವಾಹಗಳು ನುಗ್ಗಿ ಯಾರು ಯಾರು ಮುಳುಗುತ್ತಾರೆ? ಯಾರು ಯಾರು ಕೊಚ್ಚಿಹೋಗುತ್ತಾರೆ? ಅದನ್ನೆಲ್ಲ ಕಟ್ಟಿಕೊಂಡು ಅವಳಿಗೇನು? ಅದೆಲ್ಲ ಅವಳು ಯಾರಿಗೆ ಅಡ್ಡಬಿದ್ದು ಶರಣಾಗತಳಾದಳೊ ಆ ಭಗವಂತನ ಭಾರ!

ಚಿನ್ನಮ್ಮ ತಕ್ಕಮಟ್ಟಿಗೆ ಚೆನ್ನಾಗಿಯೆ ನಿದ್ದೆಮಾಡಿದ್ದಳು. ಆದರೆ ಬೆಳಗಿನ ಮುಂಜಾವಿನಲ್ಲಿ:

ಅಜ್ಜಿ ಅಳುತ್ತಾ ಕುಳಿತಿದ್ದಾಳೆ. ನಾಗಕ್ಕ ಅವಳ ಸುತ್ತಲೂ ಕೋಟೆಯ ಗೋಡೆ ಎಬ್ಬಿಸುವಂತೆ ಸೌದೆ ಒಟ್ಟುತ್ತಿದ್ದಾಳೆ. ಚಿನ್ನಮ್ಮ ನೋಡುತ್ತಿದ್ದಂತೆ ಸೌಧೆಯ ಗೋಡೆ ಅಜ್ಜಿಯ ಶೀರ್ಣಮುಖ ಮಾತ್ರ ಕಾಣುವಂತೆ, ಸುತ್ತಲೂ ಎದ್ದು ಅವಳನ್ನು ಮುಚ್ಚಿತು. ಚಿನ್ನಮ್ಮನಿಗೆ ಅಜ್ಜಿಯ ನೆರವಿಗೆ ಹೋಗುವ ತುರಾತುರಿ: ಆದರೆ ಹೆಜ್ಜೆ ಹಾಕಲಾಗುತ್ತಿಲ್ಲ! ಕೂಗಿ ನಾಗಕ್ಕನಿಗೆ ಹಾಗೆ ಮಾಡದಿರಲು ಹೇಳುವಾಶೆ: ಆದರೆ ಬಾಯೇ ಹೊರಡುತ್ತಿಲ್ಲ! ನಿಸ್ಸಹಾಯಳಾಗಿ ನಿಂತಿದ್ದಾಳೆ. ಅಯ್ಯೋ ಸೌಧೆಯ ಕೋಟೆ ಅಜ್ಜಿಯನ್ನು ಸಂಪೂರ್ಣವಾಗಿ ಮುಚ್ಚಿಯೆ ಬಿಟ್ಟಿತೆ? ನಾಗಕ್ಕ ಎಲ್ಲಿಯೂ ಕಾಣಿಸುತ್ತಿಲ್ಲ!... ಆದರೆ ಅಪ್ಪಯ್ಯ! 'ಅಯ್ಯೋ, ಬೇಡಾ ಬೇಡಾ, ಅಪ್ಪಯ್ಯ' ಎಂದು ಒರಲುತ್ತಾಳೆ. ದನಿ ಹೊರಡದು! ಹೂವಳ್ಳಿ ವೆಂಕಪ್ಪನಾಯಕರು, ಕುಂಟಿನ ಹುಣ್ಣಿಲ್ಲ, ಕಾಯಿಲೆ ಇಲ್ಲ್, ಸಂಪೂರ್ಣ ಆರೋಗ್ಯದಿಂದಿದ್ದಾರೆ, ಅಜ್ಜಿಯನ್ನು ಮುಚ್ಚಿರುವ ಆ ಸೌದೆ ರಾಶಿಗೆ ಬೆಂಕಿಯಿಟ್ಟರು! ಜ್ವಾಲೆ ಧಗಧಗನೆ ಉರಿದೇಳುತ್ತಿದೆ!...

ಬೆವರಿ, ತತ್ತರಿಸಿ ಕುಮುಟಿಬಿದ್ದೆದ್ದಳು ಚಿನ್ನಮ್ಮ! ನೋಡುತ್ತಾಳೆ, ಎಲ್ಲರೂ ಮಲಗಿ ನಿದ್ರಿಸುತ್ತಿದ್ದಾರೆ. ದೂರದಲ್ಲಿ ಕುಂಟೆಯ ಬೆಂಕಿ ಕೆಂಡವಾಗಿ ಮಾತ್ರ ಝುಗಝುಗಿಸುತ್ತಿದೆ.

ಬಳಿಯ ಬೂದಿಯ ರಾಶಿಯಲ್ಲಿ ಹುಲಿಯ ಅಂಡೂರಿ ಕುಳಿತು ಮೈ ಕೆರೆದುಕೊಳ್ಳುತ್ತಿದೆ. ಗಾಳಿ ಸುಯ್ಯನೆ ಬೀಸುತ್ತಿದೆ. ಮಳೆ ಸುರಿಯುತ್ತಿದೆ. ಪೀಂಚಲು ತನ್ನ ಬಳಿಯೆ ತುಸು ದೂರದಲ್ಲಿ ಮಲಗಿ ನಿದ್ದೆಯಲ್ಲಿದ್ದಾಳೆ. ತಟ್ಟೆಯ ಕೋಣೆಯ ಆಚೆ ದೂರದಲ್ಲಿ ಮುಕುಂದಯ್ಯ ಐತರು ಮಲಗಿರುವುದು ಚಿನ್ನಮ್ಮನ ಹೃದಯ ಹೇಳಿಕೊಂಡಿತು: " ಮುಕುಂದಭಾವನಿಗೆ ಎಷ್ಟು ನಾಚಿಕೆ! ಎಷ್ಟು ಮರ್ಯಾದೆ! ನನ್ನ ಮಾನ ಮರ್ಯಾದೆ ಅಂದರೆ ಅವರಿಗೆ ಎಷ್ಟು ಮುತುವರ್ಜಿ!... ಅಷ್ಟು ದೂರದಲ್ಲಿ ಮಲಗಿದ್ದಾರಲ್ಲಾ!....

ತರುವಾಯ ಅವಳಿಗೆ ನಿದ್ದೆ ಮಾಡಲಾಗಲಿಲ್ಲ. ಎಲ್ಲದಕ್ಕಿಂತಲೂ ಹೆಚ್ಚಾಗಿ ಅಜ್ಜಿಯ ಚಿಂತೆಯ ಅವಳ ಹೃದಯವನ್ನು ಆಕ್ರಮಿಸತೊಡಗಿತು! ನಾಗಕ್ಕ ಅಜ್ಜಿಗೆ ಏನಾದರೂ ಸಮಾಧಾನ ಹೇಳಿದಳೋ ಇಲ್ಲವೋ? ನನಗೆ ಈ ಮದುವೆಯಲ್ಲಿ ಇಷ್ಟ ಸ್ವಲ್ಪವೂ ಇರಲಿಲ್ಲ ಎಂಬುದು ಅಜ್ಜಿಗೆ ಗೊತ್ತಿತ್ತು. ನಾನೆಲ್ಲಿ ಪ್ರಾಣ ಕಳೆದುಕೊಂಡುಬಿಟ್ಟೆನೋ ಎಂದು ಅಜ್ಜಿ ಎಷ್ಟು ಗೋಳಿಡುತ್ತಾಳೋ? ಅಥವಾ...? ತಾನು ಕಂಡ ಕನಸು ಏನಾದರೂ ನಡೆದಿದ್ದ ನಿಜವನ್ನೆ ಸೂಚಿಸಿತೊ? ನಾನು ಸತ್ತೇಹೋದೆ ಎಂದು ಹೆದರಿ ಅಜ್ಜಿಯ ಪ್ರಾಣವೆ ಹಾರಿ ಹೋಗಿದ್ದರೆ? ಚಿನ್ನಮ್ಮಗೆ ಅದನ್ನು ನೆನೆದ ಮಾತ್ರದಿಂದಲೆ ಬದುಕು ಶೂನ್ಯವಾದಂತಾಗಿ ಸುಮ್ಮನೆ ಕಣ್ಣೀರು ಸುರಿಸುತ್ತಾ ಮಲಗಿದ್ದಳು: 'ಅಯ್ಯೋ ಅಜ್ಜಿಗೆ ನಾನೇನು ಮಾಡಿಬಿಟ್ಟೆನೋ, ಸ್ವಾಮಿ? ಸರೂ ತಪ್ಪಾಯ್ತು! ನಿನ್ನ ಪಾದಕ್ಕೆ ಬೀಳ್ತಿನಿ: ಇದೊಂದು ಸಾರಿ ಕಾಪಾಡು!...

ಬೆಳಗ್ಗೆ ಎಚ್ಚರವಾದಾಗ ಯಾರೊ ಗೊಣಗೊಣನೆ ಮಾತಾಡುತ್ತಿದ್ದದು ಚಿನ್ನಮ್ಮನ ಕಿವಿಗೆ ಬಿತ್ತು. ಕಣ್ಣುಬಿಟ್ಟು ನೋಡಿದಾಗ 'ನಂದಾಬೆಂಕಿ'ಯ ಹತ್ತಿರ ಮುಕುಂದಯ್ಯನೊಡನೆ ಯಾರೊ ಮಾತಾಡುತ್ತಾ ಇದ್ದದ್ದು ಮಂಜು ಮಂಜಾಗಿ ಕಾಣಿಸಿತು. ಉಡುಗೆ ತೊಡುಗೆ ರೀತಿಗಳಿಂದ ಗುತ್ತಿ ಐತರಂತಿರಲಿಲ್ಲ. ಯಾರು ಎಂಬುದು ಸ್ಪಷ್ಟವಾಗದಂತಹ ಹೊಗೆ ಮುಸುಗಿತ್ತು. ಇದೇನು ಹೊಗೆ? ಎಲ್ಲಿಂದ ಬಂತು? 'ನಂದಾಬೆಂಕಿ'ಯ ಕುಂಟೆಗಳು ಚೆನ್ನಾಗಿ ಉರಿಯುತ್ತಿದ್ದುದರಿಂದ ಅಲ್ಲಿಂದ ಹೊಗೆ ಏಳುವ ಸಂಭವವೆ ಇರಲಿಲ್ಲ. ಚಿನ್ನಮ್ಮಗೆ ಮೊದಲು ಆಶ್ಚರ್ಯವಾಗಿ, ಕಡೆಗೆ ಹೆದರಿಕೆಯಾಯ್ತು: ಎಂಥದಕ್ಕಾದರೂ ಬೆಂಕಿ ಬಿದ್ದಿದೆಯೊ?

ಹತ್ತಿರ ಮಲಗಿದ್ದ ಪೀಂಚಲುಗೆ ಹೇಳಿದಳು. ಅವಳು ನಿಧಾನವಾಗಿ ಎದ್ದು ಕುಳುತು ಸುತ್ತಲೂ ನೋಡಿದಳು. ಮೇಲಕ್ಕೇಳುವುದಕ್ಕೆ ತುಸು ಸಂಕೋಚಪಟ್ಟುಕೊಂಡಂತೆ ಸೀರೆಯನ್ನೆಲ್ಲ ಸರಿಮಾಡಿಕೊಂಡು ಎದ್ದುನಿಂತಳು. ಗಟ್ಟದ ಮೇಲಿನವರಂತೆ ಗೊಬ್ಬೆ ಸೆರಗು ಕಟ್ಟಿ, ಸೊಂಟಕ್ಕೆ ಸೀರೆ ಬಿಗಿದು ಸುತ್ತಿ, ಕಳೆದ ರಾತ್ರಿ ತನ್ನೊಡನೆ ಬಂದಿದ್ದಳಲ್ಲವೆ? ಗೌಡರ ಹುಡುಗಿಯಂತೆ? ಈಗೇನು ಗಟ್ಟದ ಕೆಳಗಿನವರಂತೆ ಸೀರೆ ಉಟ್ಟಿದ್ದಾಳಲ್ಲ? ಸೆಟ್ಟರ ಹುಡುಗಿಯಂತೆ? ಏನು ರಾತ್ರಿ ಸೀರೆ ಬದಲಾಯಿಸಿ ಉಟ್ಟುಕೊಂಡಳೆ? ಒದ್ದೆಯಾಗಿದ್ದುದನ್ನು ಬದಲಾಯಿಸು ಎಂದು ನಾನೇ ಹೇಳಿದರೆ, ಬೇಡಾ ಎಂದು ಉಟ್ಟುದನ್ನೇ ಬೆಂಕಿಕಾಯಿಸಿ ಆರಿಸಿಕೊಂಡಿದ್ದಳಲ್ಲ ಮತ್ತೆ?

"ಯಾವಾಗ್ಲೆ ಸೀರೆ ಬದಲಾಯಿಸಿ ಉಟ್ಟಿದ್ದು? " ಕೇಳಿದಳು ಚಿನ್ನಮ್ಮ.

"ರಾತ್ರೇಲಿ ಹೊರಗೆ ಹೋಗಿ ಬಂದೆ. ಆವಾಗ..."ಎಂದು ನಿಲ್ಲಿಸಿ, ಹೊಗೆಗೆ ಕಾರಣ ಕಂಡುಹಿಡಿಯಲು ಒಲೆಯ ಹತ್ತಿರಕ್ಕೆ ಹೋಗುತ್ತಿದ್ದ ಪೀಂಚಲು, ತುಸು ಅನುಮಾನಿಸಿ ನಿಂತು, ತಾನು ಹೇಳಿದ್ದ ಉತ್ತರ ಸಾಲದಾಗಬಹುದು ಎಂಬಂತೆ ಮತ್ತೆ ಸೇರಿದಳು: " ನನಗೆ ನಾಲ್ಕು ಐದು ತಿಂಗಳಾಗಿದೆ, ಚಿನ್ನಕ್ಕ. ನಿನ್ನೆ ಗುಡ್ಡ ಹತ್ತುವಾಗ ಬಹಳ

ಕಷ್ಟವಾಯಿತು ಕಾಣಿ. ರಾತ್ರಿ ನೀವು ಕನವರಿಸಿ ಕೂಗಿಕೊಂಡಾಗಳೂ ನಾನು ಹೊಟ್ಟೆ ಬೇನೆಯಿಂದ ಹೊರಳಾಡುತ್ತಿದ್ದೆ. ಮತ್ತೆ ಸೊಂಟಕ್ಕೆ ಬಿಗಿದು ಸುತ್ತಿದ್ದ ನಿಮ್ಮ ರೀತಿಯ ಉಡುಗೆ ಬಹಳ ತೊಂದರೆ ಕೊಟ್ಟಿತ್ತು. ಅದಕ್ಕೇ ಬಿಚ್ಚಿ ನಮ್ಮ ರೀತಿ ಉಟ್ಟುಕೊಂಡು ಮಲಗಿದೆನಲ್ಲಾ? "

"ಛೆ ಪಾಪ! ನನ್ನ ದೆಸೆಯಿಂದ ನಿಂಗೆಷ್ಟು ಕಷ್ಟ?" ಎಂದಳಷ್ಟೆ ಮುಗ್ಧೆ ಚಿನ್ನಮ್ಮ. "ಮೋಡ ಮುಚ್ಚಿತ್ತು, ಚಿನ್ನಕ್ಕ. ಹೊಗೆ ಅಲ್ಲ. ಹೊರಗಂತೂ ಏನೊಂದೂ ಕಾಣುವುದಿಲ್ಲ. ನಾವೂ ಮೋಡದ ಮೂಡದ ಮೂಟ್ಟೆ ಒಳಗೇ ಇದ್ದೇವಲ್ಲಾ?"

"ಅದು ಯಾರೆ ಮುಕುಂದಬಾವನ ಸಂಗಡ ಮಾತಾಡ್ತಿರೋರು?"

"ಹಳೆಮನೆ ತಿಮ್ಮಪ್ಪಯ್ಯೋರು ಅಂತಾ ಕಾಣ್ತದೆ."

"ಚಿನ್ನಮ್ಮನ ಹೃದಯ ಒಮ್ಮಗೆ ಹರ್ಷಭಯಗಳಿಂದ ತಾಡಿದ ವಾಯಿತು: ತಿಮ್ಮಪ್ಪಣ್ಣಯ್ಯನಿಂದ ಅಜ್ಜಿಯ ಸುದ್ದಿ ತಿಳಿಯಬಹುದೆಂದು: ಆ ಸುದ್ದಿ ಮಂಗಳದ್ದೊ? ಅಥವಾ...?...

* * *

ಕಲ್ಲುಮಂಟಪದ ಗೋಡೆಗಳೆಲ್ಲ ಅನುರಣಿತವಾಗುವಂತೆ ಹುಲಿಯ ಕರ್ಕಶವಾಗಿ ಬೊಗಳಿದುದನ್ನು ಕೇಳಿ, ತಟಕ್ಕನೆ ಎಚ್ಚರಗೊಂಡು ಗುತ್ತಿ, ಪಕ್ಕದಲ್ಲಿ ಮಲಗಿದ್ದ ತಿಮ್ಮಿ ದಿಗಿಲುಗೊಳ್ಳುವಂತೆ ಹೌಹಾರಿ ಎದ್ದು, ತಾನೂ ತನ್ನ ಹೆಂಡತಿಯೂ ಅಲಾಯಿದವಾಗಿ ದೂರ ಮಲಗಿದ್ದ ಮೂಲೆಯಿಂದ ಓಡಿಬಂದು ನೋಡಿದಾಗ ಕಂಬಳಿಕೊಪ್ಪೆ ಹಾಕಿಕೊಂಡು, ಕೈಯಲ್ಲಿ ಲಾಟೀನನೊಂದನ್ನು ಹಿಡಿದುಕೊಂಡು ಬರುತ್ತಿದ್ದ ಒಂದು ಆಕೃತಿ ಕಾಣಿಸಿತು. ಆ ಆಕೃತಿ ನಾಯಿಗೆ ಸ್ವಲ್ಪವೂ ಹೆದರದೆ ಹಿಂಜರಿಯದೆ ನಿರ್ಲಕ್ಷವಾಗಿ ಮುಂಬರಿಯುತ್ತಿದ್ದು, ಹತ್ತಿರ ಬಂದಮೇಲೆ "ಹಛೀ ನಿನ್ನ ಹುಲಿ ಹಿಡಿಯ! ಈ ನಾಯಿಗೇನು ಗುರುತೇ ಸಿಕ್ಕಾದೆಲ್ಲೇನು?" ಎಂದು ಗದರಿತು. ಹುಲಿಯ ಧ್ವನಿಯನ್ನೊ ವಾಸನೆಯನ್ನೊ ಒಡನೆಯೆ ಗುರುತಿಸಿದಂತೆ ಬಾಲವಳ್ಳಾಡಿಸಿತು. ಗುತ್ತಿಯೂ ಗುರುತಿಸಿದನು: ಹಳೆಮನೆ ತಿಮ್ಮಪ್ಪಹೆಗ್ಗಡೆ!

ಇನ್ನೂ ಬೆಳಕು ಬಿಡುವುದಕ್ಕೆ ಒಂದು ಗಂಟೆಯಾದರೂ ಇರಬಹುದು: ಇಷ್ಟು ಕಪ್ಪಿನಲ್ಲೇ ಈ ಮಳೆಯಲ್ಲಿ ಗುಡ್ಡಹತ್ತಿ ಯಾಕೆ ಬಂದರೂ? ಗುತ್ತಿ ಸೋಜಿಗಪಡುವಷ್ಟರಲ್ಲಿ ಎಚ್ಚರಗೊಂಡಿದ್ದ ಮುಕುಂದಯ್ಯ ಮಲಗಿದ್ದಲ್ಲಿಂದಲೆ ಕೇಳಿದನು; " ಏನೋ ಅದು ಗುತ್ತೀ?"

"ಹಳೇಮನೆ ಸಣ್ಣ ಅಯ್ಯ ಬಂದಾರೆ...."

ಮುಕುಂದಯ್ಯಗೆ ಮೈಮೇಲೆ ಕುದಿನೀರು ಹೊಯ್ದಂತಾಗಿ ಎದ್ದುಕೂತನು! ಹೂವಳ್ಳಿಯಲ್ಲಿ ಏನೋ ಅನಾಹುತವಾಗಿರಬೇಕು ಎಂಬುದರಲ್ಲಿ ಅವನಿಗೆ ಅನುಮಾನವೇ ಉಳಿಯಲಿಲ್ಲ.

ತಿಮ್ಮಪ್ಪಹೆಗ್ಗಡೆ ನಂದಾಬೆಂಕಿಗೆ ಸಮೀಪವಾಗಿಯೆ ಕುಳಿತು ಮೆಲುದನಿಯಲ್ಲಿ, ರಹಸ್ಯ ಹೇಳುವಂತೆ, ಹೂವಳ್ಳಿಯಲ್ಲಿ ರಾತ್ರಿ ನಡೆದದ್ದನ್ನೆಲ್ಲ ವರದಿ ಮಾಡಿದನು:

ಚೆನ್ನಮ್ಮ ಕಣ್ಮರೆಯಾದ ಮೇಲೆ ನಡೆದ ಹುಡುಕಾಟವನ್ನೂ; ಆ ಸುದ್ದಿ ಕಿವಿಗೆ ಬಿದ್ದೊಡನೆ ಸ್ವರತಪ್ತನಾಗಿ ಅರ್ಧ ಪ್ರಜ್ಞಾವಸ್ಥೆಯಲ್ಲಿ ಬಿದ್ದು ಕೊಂಡಿದ್ದ ವೆಂಕಟಣ್ಣ ನಾಗಕ್ಕನ್ನನ್ನು ದುರ್ಭಾಷೆಗಳಿಂದ ಶಪಿಸುತ್ತ ಅವಳನ್ನು ಹೊಡೆಯಲೆಂದು ಎದ್ದು, ತತ್ತರಿಸಿ ಬಿದ್ದು, ತಲೆಗೆ ಮಂಚದ ಏಣು ತಗುಲಿ, ತೀರಿಕೊಂಡಿದ್ದನ್ನೂ; ಅಪಶಕುನವಾಯಿತೆಂದು ಮದುವೆಯ ಗಂಡು ರಾತ್ರಾರಾತ್ರಿಯೆ ಹೂವಳ್ಳಿಯನ್ನು ತ್ಯಜಿಸಿ, ಹಳೆಮನೆಗೆ ಬಂದು, ತನ್ನ ಭಾವ ಹೆಂಚಿನಮನೆಯ ಶಂಕರಪ್ಪಹೆಗ್ಗಡೆಯ ಮನೆಯಲ್ಲಿ ತನ್ನ ಹೆಂಡತಿಯೊಡನೆ ತಂಗಿರುವುದನ್ನೂ; ಮದುವೆಗೆ ಬಂದವರೂ ದಿಬ್ಬಣದವರೂ ಎಲ್ಲ ಬೆಳಗಿನ ಜಾವದಲ್ಲಿ ತಮ್ಮ ತಮ್ಮ ಮನೆಗಳಿಗೆ ಹಿಂದಿರುಗಿದುದನ್ನೂ ತಿಳಿಸಿ "ಬೆಳಗಾದ ಮ್ಯಾಲೆ ಬೆಟ್ಟಳ್ಳಿ ದ್ಯಾವಣ್ಣಯ್ಯನೇ ಮುಂದೆ ನಿಂತು ಮುಂದಿನ ಕೆಲಸ ಎಲ್ಲ ಮಾಡಿಸ್ತಾನಂತೆ. ಹೆಣಾ ತೆಗೆದು, ಸುಟ್ಟು, ಎಲ್ಲ ಪೂರೈಸಿದ ಮೇಲೆ, ಇವತ್ತೇ, ಬೈಗಿನ ಹೊತ್ತು, ಚೆನ್ನಕ್ಕನ್ನ ಮನೆಗೆ ಕರಕೊಂಡು ಬರಲಿ ಅಂತಾ ಹೇಳಿ ಕಳಿಸ್ಯಾನೆ." ಎಂದು ಹೇಳಿ, ಮುಕುಂದಯ್ಯ ಏನು ಹೇಳುತ್ತಾನೆಯೊ ಎಂಬುದನ್ನು ನಿರೀಕ್ಷಿಸುವಂತೆ, ಅವನ ಮುಖದ ಕಡೆ ನೋಡುತ್ತಾ ಕುಳಿತನು, ತಿಮ್ಮಪ್ಪಹೆಗ್ಗಡೆ.

ಆದರೆ ಮುಕುಂದಯ್ಯ ಬೆಂಕಿಯ ಕಡೆ ನೋಡುತ್ತಿದ್ದನೆ ಹೊರತು ಮಾತಾಡಲೂ ಇಲ್ಲ, ಮುಖವೆತ್ತಲೂ ಇಲ್ಲ. ಅವನು ಕಟ್ಟಿಕೊಂಡಿದ್ದ ವ್ಯೂಹವೆಲ್ಲ ತಲಕೆಳಗಾಗಿತ್ತು. ಅವನ ಮನಸ್ಸು ಈ ಅನಿರೀಕ್ಷಿತಕ್ಕೆ ಅಣಿಯಾಗಿರಲಿಲ್ಲ. ಮುಂದೇನು ಮಾಡಬೇಕೋ? ಯಾವ ರೀತಿ ನಡೆದರೆ ತನ್ನ ಮತ್ತು ಚೆನ್ನಮ್ಮನ ಇಷ್ಟಾರ್ಥ ಕೈಗೂಡುತ್ತದೆಯೋ ಒಂದೂ ಅವನಿಗೆ ತೋರಲಿಲ್ಲ. ಅವನ ಬುದ್ಧಿಗೆ ಕತ್ತಲುಗಟ್ಟಿದಂತಾಗಿತ್ತು.

ಸ್ವಲ್ಪ ಹೊತ್ತು ಉತ್ತರಕ್ಕಾಗಿ ಕಾದು, ಉತ್ತರ ಏನು ಹೊರಡುವಂತೆ ತೋರದಿರಲು, ತಿಮ್ಮಪ್ಪ ಹೆಗ್ಗಡೆ: "ಚೆನ್ನಕ್ಕನ್ನೆ ಕೇಳಿ ನೋಡಾನೇನು?" ಎಂದನು.

"ಅದಕ್ಕೇನು ಗೊತ್ತಾಗ್ತದೆ? ಅದಾದ್ರೂ ಏನು ಹೇಳ್ತದೆ?"

"ಏನಾದ್ರಾಗಲಿ ಕೇಳಿ ನೋಡ್ತಿನಿ."

"ನೋಡಾದಾದ್ರೆ ನೋಡು!"

ಮುಕುಂದಯ್ಯನ ನಿರುತ್ಸಾಹಕರವಾದ ಔದಾಸೀನ್ಯದ ಒಪ್ಪಿಗೆ ದೊರೆಯಲು, ತಿಮ್ಮಪ್ಪಹೆಗ್ಗಡೆ ತಟ್ಟಿಗೋಡೆಯ ಒಳಗೆ ಹೋಗಿ, ಸ್ವಲ್ಪ ಹೊತ್ತು ಚೆನ್ನಮ್ಮನೊಡನೆ ಮಾತಾಡುತ್ತಿದ್ದು, ಹೊರಗೆ ಬಂದು ಹೇಳಿದನು: " ಅವಳು ಹೇಳ್ತಾಳೆ,'ಈಗ್ಲೇ ಮನೀಗೆ ಹೋಗ್ತೀನಿ!.'ಅಂತಾ. ಅಪ್ಪಯ್ಯ ಹೋಗಿದ್ದಕ್ಕಿಂತಲೂ ಅಜ್ಜೀ ಚಿಂತೇನೆ ಬಾಳಾ ಆಗ್ಯದೆ ಅಂತಾ ಕಾಣ್ತದೆ."

“ಅಪ್ಪ ಇದ್ದು ಮಾಡದೂ ಅಷ್ಟರೊಳಗೇ ಇತ್ತು!” ಮುಕುಂದಯ್ಯನ ಉದಾಸಭಾವ ಮತ್ತೆ ಕ್ರಿಯಾಶೀಲತೆಗೆ ತಿರುಗಿತ್ತು. ಅವನು ಆಡಿದ ಮಾತಿನ ಒಳ ಅರ್ಥ ‘ಅಪ್ಪ ಸತ್ತಿದ್ದು ಒಳ್ಳೆಯದೆ ಆಯ್ತು, ಮಗಳ ಕ್ಷೇಮಕ್ಕೆ!’ ಎಂಬಂತಿತ್ತು.

ತುಸು ಹೊತ್ತು ಯೋಚಿಸುತ್ತಾ ಕುಳಿತಿದ್ದು, ಏನನ್ನೂ ಮನದಲ್ಲಿ ನಿರ್ಣಯಿಸಿ,,ಮುಕುಂದಯ್ಯ ಮೇಲೆದ್ದು ಚಿನ್ನಮ್ಮ ಇದ್ದಲ್ಲಿಗೆ ತಟ್ಟೆಮರೆಯ ಒಳಗೆ ಹೋದನು.ಅವಳೊಡನೆ ಸ್ವಲ್ಪ ಕಾಲವೆ ಮಾತನಾಡುತ್ತಿದ್ದು, ಹೊರಗೆ ಬಂದು ಹೇಳಿದನು ತಿಮ್ಮಪ್ಪಹೆಗ್ಗಡೆಗೆ: “ಬೆಟ್ಟಳ್ಳಿ ಬಾವಗೆ ಹೇಳು, ಬೈಗಿನ ಹೊತ್ತಿಗೆ ಕರಕೊಂಡು ಬರ್ತಾನೆ ಅಂತಾ, ಅಜ್ಜಿಗೂ ಹೇಳು,ಹೂವಳ್ಳೀಲೇ ಇರೋ ಹಾಂಗೆ...ನೀನೂ ಇರು...ಮುಂದಿಂದೆಲ್ಲಾ ಒಂದು ಇತ್ಯರ್ಥ ಆಗೇಬಿಡ್ಲಿ... ನಮ್ಮ ರಂಗಪ್ಪಣ್ಣಯ್ಯ ಏನೇನೊ ಹೇಳ್ತಿದ್ದನಂತೆ. ಅವನ ಪಾಲು ಅವನು ತಗೊಂಡು ಏನಾರೂ ಮಾಡಲಿ, ಎಲ್ಲಿಗಾರೂ ಹೋಗಲಿ, ಅಂತಾ: ಪಾಲುಮುಖಂಡರೆಲ್ಲ ಸೇರಿ ನಮಗೆ ಬಹಿಷ್ಕಾರ ಹಾಕ್ತಾರಂತೆ!”

“ಅವರ ಮುಂಡಾಮೋಚ್ತು! ಯಾರಿಗೋ? ಬಹಿಷ್ಕಾರ ಹಾಕೋದು? ಯಾರೊ? ಯಾಕಂತೋ?... “ ತಿಮ್ಮಪ್ಪ ಹೆಗ್ಗಡೆಯ ಮಾತಿನಲ್ಲಿ ಹೊಣೆಗಾರಿಕೆ ಸಾಲದ ಹುಡುಗತನದ ಧೂರ್ತತೆ ಎದ್ದು ಕಾಣುತ್ತಿತ್ತು. “ ಹಾಂಗಾರೆ ಈಗ ನಾ ಹೋಗ್ತೀನಿ. ಸಾಯಂಕಾಲ ಇರ್ತಿನಿ ಹೂವಳ್ಳೀಲಿ. ದ್ಯಾವಣ್ಣಯ್ಯಗೂ ಹೇಳ್ತಿನಿ, ನೀ ಹೇಳಿದ್ನೆಲ್ಲಾ. ಬಾ, ಅಮ್ಯಾಲೆ ಮಾತಾಡಾನ....”

ಕಡೆಯಪಕ್ಷ ಒಂದೆರಡು ವಾರಗಳಾದರೂ ಚಿನ್ನಮ್ಮ ಅಡಗಿರಬೇಕಾಗಬಹುದು ಎಂದು ಮುಕುಂದಯ್ಯ ಅದಕ್ಕೆ ತಕ್ಕ ಸಿದ್ಧತೆ ಮಾಡಿದ್ದನು, ಹುಲಿಕಲ್ಲು ನೆತ್ತಿಯ ಕಲ್ಲುಮಂಟಪದಲ್ಲಿ. ಆದರೆ ಈಗ ಅವಳು ಅಲ್ಲಿ ಒಂದು ದಿನವನ್ನೂ ಪೂರ್ತಿ ಕಳೆಯಲಾಗಲಿಲ್ಲ. ಅವಳ ತಂದೆ ವೆಂಕಣ್ಣನ ನಿಧನದಿಂದ ಘಟನಾವ್ಯೂಹದ ದಿಕ್ಕೆ ಬದಲಾಯಿಸಿಹೋಗಿತ್ತು.

ಮುಕುಂದಯ್ಯ ಗುತ್ತಿಗೂ ಐತನಿಗೂ ಹೂವಳ್ಳಿಯಲ್ಲಿ ನಡೆದ ಸಮಾಚಾರವನ್ನೆಲ್ಲ ತಿಳಿಸಿ, ತಾನು ಚಿನ್ನಮ್ಮನನ್ನು ಬೈಗಿನ ಹೊತ್ತಿನಲ್ಲಿ ಕರೆದುಕೊಂಡು ಹೋಗಿ ಹೂವಳ್ಳಿಗೆ ಬಿಡುವುದಾಗಿಯೂ; ಪೀಂಚಲು ಗುಡ್ಡ ಇಳಿಯಲು ಸಧ್ಯಕ್ಕೆ ಅಸಮರ್ಥೆಯಾಗಿರುವುದರಿಂದ ಅವಳಿಗೆ ಮೈ ಸರಿಯಾಗುವ ತನಕ ಅಲ್ಲಿಯೆ ವಿಶ್ರಾಂತಿಯಿಂದಿದ್ದು, ಐತ ಅವಳನ್ನು ಕೋಣೂರಿನ ಅವರ ಬಿಡಾರಕ್ಕೆ ಕರೆದುಕೊಂಡು ಹೋಗುವಂತೆಯೂ ಹಿಂದಕ್ಕೆ ಸಾಗಿಸಬೇಕಾದ ಕೆಲವು ಸಾಮಾನುಗಳನ್ನು ಸಾಗಿಸಿದ ಮೇಲೆ, ಗುತ್ತಿ ಸಿಂಬಾವಿಗೆ ಹಿಂತಿರುಗುವಂತೆಯೂ ಸಲಹೆಮಾಡಿದನು. ತಾನೂ ತನ್ನ ಹೆಂಡತಿಯೂ ಸಿಂಬಾವಿಗೆ ಹಿಂದಿರುಗುವ ವಿಚಾರದಲ್ಲಿ ಗುತ್ತಿ ತನ್ನ ಒಡೆಯರ ಆಜ್ಞೆಯನ್ನೂ ತನ್ನ ಮಾವನ ಕಡೆಯವರಿಂದ ಒದಗಬಹುದಾದ ಕಿರುಕುಳವನ್ನೂ ಮತ್ತು ಪೋಲಿಸರ ಭಯವನ್ನೂ ಸೂಚಿಸಲು, ಮುಕುಂದಯ್ಯ ಅವನಿಗೆ ತಾನು ಹಿಂದೆ ತಿಳಿಸಿದಂತೆಯೆ ಧೈರ್ಯ ಹೇಳಿದನು.ಎಲ್ಲವನ್ನೂ ಆಲಿಸಿದ ಮೇಲೆ ಗುತ್ತಿ ಅನುಮಾನಿಸಿ ಹೇಳಿದನು ನಿಧಾನವಾಗಿ “ಏನೋ ನೋಡ್ತಿನಿ, ಅಯ್ಯಾ.... ನಂಗೇನಾದ್ರೂ ನೀವು ಒಂದಿಟು ದುಡ್ಡು ಕೊಟ್ಟಿದ್ರೆ, ಆಪತ್ತಿಗೆ ಅನುವಾಗ್ತಿತ್ತೇನೋ? ದೇಸಾಂತ್ರ ಹೋಗಿ ಬಂದ ಮ್ಯಾಲಾದ್ರು ನಿಮ್ಮ ರುಣ ತೀರಿಸದೆ ಇಟ್ಟುಕೊಳ್ಳಾದಿಲ್ಲ. ನಾನೂ ನನ್ನ ಹೆಂಡ್ತೀನೂ ಇಬ್ರೂ ಗೆಯ್ದಾದ್ರೂ ತೀರಿಸ್ತೀಂವೆ!.”

“ದುಡ್ಡೇನೋ ಕೊಡಾನ. ಆದರೆ ನೀ ದೇಶಾಂತರ ಹೋಗಾದ್ಯಾಕೆ?”

“ದೂರಾ ಏನು ಹೋಗಾದಿಲ್ಲಯ್ಯಾ….! “ ಮುಂದುವರಿದನು ಗುತ್ತಿ ಇಂಗಿತವಾಗಿ ನಗುತ್ತಾ “ನಿಮ್ಮಾ-ಚಿನ್ನಕ್ಕೋರಾ ಲಗ್ನಕ್ಕೆ ಹಾಜರಿದ್ದು, ಮದುವೆ ಚಪ್ಪರ ಹಾಕೋ ಸೇವೆನಾದ್ರೂ ಮಾಡೇಮಾಡ್ತೀನಿ ಬಿಡಿ!…”

ನಡೆದೆಲ್ಲ ಘಟನೆಗಳಿಂದ ಅದುವರೆಗೂ ಮ್ಲಾನವಾಗಿದ್ದ ಮುಕುಂದಯ್ಯನ ಮುಖದ ಮಬ್ಬು ತೊಲಗಿದಂತಾಯ್ತು. ಗುತ್ತಿಯ ಲೋಕಾಭಿರಾಮದ ಮಾತು ಅವನಲ್ಲಿ ಹುದುಗಿದ್ದ ಆಶಾಕಿರಣಗಳನ್ನು ಮೂಡಿಸಿ ಬೆಳಸಿತು. ನಗುತ್ತಲೆ ವಿನೋದದಿಂದೆಂಬಂತೆ ಹೇಳಿದನು: “ಹಾಂಗೆ ಆಗಲಿ ಬಿಡು, ನಿನಗೆ ನಮ್ಮ ಸೇವೆ ಮಾಡುವ ಯೋಗ ಇರೋದರಿಂದಾದ್ರೂ ಹಾಂಗಾದ್ರೆ ಸಂತೋಷಾನೆ!”

ಉಲ್ಲಸಿತವಾದ ಮುಕುಂದಯ್ಯನ ಮನಸ್ಸು ತನ್ನ ಸಂಕಲ್ಪನಾ ವಿಲಾಸವನ್ನು ಮುಂದುವರಿಸಿತು.ಯಃಕಶ್ಚಿತರಾದ ಗುತ್ತಿ ಐತರಲ್ಲದಿದ್ದರೆ ಯಾವ ವಿಚಾರವನ್ನು ಇತರರೊಡನೆ ಬಾಯಿಬಿಡಲು ಹಿಂಜರಿಯುತ್ತಿತ್ತೋ ಆ ಗೋಪ್ಯ ವಿಷಯವನ್ನು, ತನಗೆ ತಾನೆ ಗಟ್ಟಿಯಾಗಿ ಹೇಳಿಕೊಳ್ಳುವಂತೆ, ಮುಕುಂದಯ್ಯನ ಜಿಹ್ವೆ ಅವನ ಹೃದಯದ್ವಾರವನ್ನು ತೆರೆದಿತ್ತು: ಮತ್ತೆ ಲಘುವಾಗಿಯೇ ಹೇಳಿದನು, ಅರ್ಧ ವಿನೋದಕ್ಕೆಂಬಂತೆ: “ಹೂವಳ್ಳಿ ಮಾವನೂ ತೀರಿಕೊಂಡಾಯ್ತು. ಇನ್ನು ಆ ಮನೆ ನಡಸೋ ಭಾರವನ್ನೆಲ್ಲಾ ನಾನೆ ಹೊರಬೇಕಾಗ್ತದೆಯೋ ಏನೋ? ನಮ್ಮ ರಂಗಪ್ಪಣ್ಣಯ್ಯನೂ ಹಿಸ್ಸೆ ಕೊಟ್ಟು, ನನ್ನ ಬ್ಯಾರೆ ಹಾಕೋ ಹುನಾರಿನಲ್ಲಿದಾನೆ… ಅಲ್ಲೋ ಗುತ್ತಿ?”

ತನ್ನೊಳಗೆ ತಾನೆ ಮಾತಾಡಿಕೊಳ್ಳುತ್ತಿದ್ದಂತೆ ಹೇಳುತ್ತಿದ್ದ ಮುಕುಂದಯ್ಯ ಇದ್ದಕ್ಕಿದ್ದಂತೆ ತನ್ನನ್ನು ಸಂಬೋಧಿಸಲು, ಗುತ್ತಿ ಎಚ್ಚತ್ತವನಂತೆ ಹರ್ಷಗೊಂಡು “ಆ್ಞ” ಎಂದು ಸಮೀಪಸ್ಥನಾಗುವವನಂತೆ ಮುಖವನ್ನು ಮುಂದಕ್ಕೆ ಚಾಚಿ ವಿಶೇಷಾಸಕ್ತಿಯಿಂದ ಕಿವಿಗೊಟ್ಟನು.

“ಅಲ್ಲಾ? ಒಂದು ವೇಳೆ ಹೂವಳ್ಳೀಲಿ ಮಸಲಾ ನಾನೆ ನಿಂತು ಗದ್ದೆ ತೋಟಕ ಕೆಲಸ ಎಲ್ಲಾ ಮುಗಿಸಬೇಕಾಗಿ ಬಂದರೆ…. ಅಲ್ಲೀಗೆ ಬರ್ತಿರೇನೊ ನೀನೂ ನಿನ್ನ ಹೆಂಡ್ತಿ?”

“ಭಗವಂತ ನಡೆಸಿದ್ರೆ ಖಂಡಿತಾ ಬತ್ತೀನಿ, ನನ್ನೊಡೆಯಾ? ನಿಮ್ಮ ಪಾದದಾಗೆ ಗೆಯ್ದುಕೊಂಡು ಬಿದ್ದಿರ್ತಿನಿ…” ಇನ್ನೇನು ಆ ಸನ್ನಿವೇಶವೂ ಸಾಕ್ಷಾತ್ಕಾತಕ್ಕೆ ಸನ್ನಿಕಟವಾಗಿಯೇ ಬಿಟ್ಟಿತೆಂಬಂತೆ ಮುಕುಂಕಯ್ಯನ ಪ್ರಶ್ನೆಗೆ ಹಿಗ್ಗಿನಿಂದ ಉತ್ತರ ಕೊಟ್ಟಿದ್ದನು ಗುತ್ತಿ!

ಅವರ ಸಂವಾದವನ್ನು ಆಲಿಸುತ್ತಾ ಕಿರುನಗೆವೆರೆಸಿ ಕುಳಿತಿದ್ದ ಐತ ಪರಿಹಾಸ್ಯಕೆಂಬಂತೆ: “ಮುಕುಂದಣ್ಣಗೆ ಗುತ್ತೀನ ಕಂಡರೇ ಅಷ್ಟು ಇಷ್ಟ. ನಾವು? ನಾನೂ ಪೀಂಚಲು?…”

“ನೀವಾ?… ನೀನು ಯಾದೆ? ಖಳ್ಳ! ಬರೀ ಕೂಳು ಖರ್ಚಿಗೆ!… ಪೀಂಚಲು ಒಬ್ಬಳೇ ಸಾಕು!… “ ಗಹಗಹಿಸಿ ನಕ್ಕನು ಮುಕುಂದಯ್ಯ.

ಪೀಂಚಲು ಒಬ್ಬಳೇ ನಮ್ಮಿಬ್ಬರ ಪಾಲು ಕೆಲಸಕ್ಕೂ ಸಾಕಲ್ದಾ? ನಿಮಗೇನು ನಷ್ಟ ಆಗಲಿಕ್ಕಿಲ್ಲ, ನಾನೂ ಅವಳ ಜೊತೆ ಬಂದಿದ್ದರೆ!” ನಗುನಗುತ್ತಲೆ ಹೇಳಿದನು ಐತ.

ಮೂವರೂ ಒಟ್ಟಿಗೆ ನಕ್ಕರು! ತಟ್ಟಿಕೋಣೆಯ ಒಳಗಡೆ ತಮ್ಮ ತಮ್ಮ ಕೆಲಸದಲ್ಲಿದ್ದ ಮೂವರು ಹೆಣ್ಣುಗಳೂ ಅಂತಹ ದುಃಖಭಾರದ ವಿಷಮಸನ್ನಿವೇಶದಲ್ಲಿಯೂ ಆ ರೀತಿ ಲಘುಹೃದಯರಾಗಿ ನಗುತ್ತಿದ್ದ ಗಂಡುಗಳನ್ನು ಕಂಡು ಅಚ್ಚರಿಗೊಂಡಿದ್ದರು!

* * *

## ೫೭

ಆಗುಂಬೆಯಿಂದ ಮೇಗರವಳ್ಳಿಯ ಮುಖಾಂತರ ತೀರ್ಥಹಳ್ಳಿಗೆ ಬಂದು, ದೋಣಿಗಂಡಿಯಲ್ಲಿ ಹೊಳೆದಾಟಿ ಮುತ್ತಳ್ಳಿ, ಸೀತೆಮನೆ, ಕಾನೂರುಗಳಿಗೆ ಹೋಗುವ ಗಟ್ಟದ ತಗ್ಗಿನವರ ಗುಂಪಿನಲ್ಲಿ ಸೇರಿ, ಗುತ್ತಿ ತಿಮ್ಮಿಯೊಡನೆ ತುಂಗಾನದಿಯ ಎಡದ ದಡದಲ್ಲಿರುವ ದೈತ್ಯಾಕಾರದ ಅರಳಿಮರದ ಕಟ್ಟೆಗೆ ತುಸುದೂರದಲ್ಲಿ, ಹೊಳೆ ದಾಟಲು ದೋಣಿಯಲ್ಲಿ ತನಗೆ ಲಭಿಸಿರುವ ಸರದಿಗಾಗಿ ಕಾಯುತ್ತಾ ಕುಳಿತಿದ್ದನು. ನೆರೆ ಏರಿ ಭೋರ್ಗರೆದು ವಿಸ್ತಾರವಾಗಿ ವೇಗವಾಗಿ ಹರಿಯುತ್ತಿದ್ದ ಕೆಮ್ಮಣ್ಣು ಬಣ್ಣದ ಮಹಾಪ್ರವಾಹವನ್ನೇ ನೋಡುತ್ತಿದೆಯೊ ಎಂಬಂತೆ ಅವನ ನಾಯಿ ಹುಲಿಯನೂ ತನ್ನ ಕರ್ರನೆಯ ಬೃಹದಾಕಾರದಿಂದ ಹೊಸಬರಾರೂ ಬಳಿಗೆ ಬರದಂತೆ ಹೆದರಿಕೆ ಹುಟ್ಟಿಸುವ ಭಯಾನಕ ಭಂಗಿಯಿಂದ ಕುಳಿತಿತ್ತು, ಮುಂಗಾಲೂರಿ ಉನ್ನತವಾಗಿ, ತಿಮ್ಮಿ ಚಿಂತಾಕ್ರಾಂತೆ ಯಾದಂತೆ ತುಸು ದೂರವೆ ಕುಳಿತಿದ್ದಳು, ಅಂಗೈಗೆ ಗಲ್ಲವೂರಿ, ಗಟ್ಟದ ತಗ್ಗಿನ ಆಳುಗಳು, ಗಂಡಸರು, ಹೆಂಗಸರು, ಮಕ್ಕಳು ತಮ್ಮ ತಮ್ಮ ಸರದಿಗಾಗಿ ದೋಣಿಗೆ ಕಾಯುತ್ತಾ, ಕುಳಿತೋ ನಿಂತೋ ಬೇಸರಪರಿಹಾರಕ್ಕಾಗಿ ಅಲ್ಲಿಂದಿಲ್ಲಿಗೆ ಇಲ್ಲಿಂದಲ್ಲಿಗೆ ಸುಮ್ಮನೆ ಓಡಾಡುತ್ತಲೋ ಇದ್ದರು. ಅರಳಿಕಟ್ಟೆಯ ಮೇಲೆ ಸ್ವಲ್ಪ ಚೆನ್ನಾಗಿ ಬಟ್ಟೆ ಹಾಕಿಕೊಂಡಿದ್ದ ಯಾರೋ ಇಬ್ಬರು ಗೌಡರು ಕುಳಿತಿದ್ದುದನ್ನೂ ನೋಡಬಹುದಾಗಿತ್ತು.

"ಈ ದೋಣಿಗೆ ಕಾಯುವುದು ಸಾಕಪ್ಪಾ!....ಒಂದು ಹದಿನೈದು ಇಪ್ಪತ್ತು ದಿನ ಮುಂಚಿತವಾಗಿಯೆ ಬಂದಿದ್ದರೆ ನಮಗೆ ಇದರ ಹಂಗು ಯಾಕೆ ಬೇಕಿತ್ತು? ಸಲೀಸಾಗಿ ಕಲ್ಲು ಸಾರದ ಮೇಲೆಯೆ ದಾಟಿ ಹೋಗುತ್ತಿದ್ದೆವಲ್ಲಾ?...." ಕುಡಿಮೀಸೆ ಬಿಟ್ಟು, ತಲೆಗೆ ಕೆಂಪು ಎಲೆವಸ್ತ್ರ ಸುತ್ತಿ ಮುಖಂಡನಾಗಿ ಕಾಣುತ್ತಿದ್ದ ಒಬ್ಬ ಕನ್ನಡ ಜಿಲ್ಲೆಯವನು ಹೇಳುತ್ತಿದ್ದುದನ್ನು ಆಲಿಸಿ ಗುತ್ತಿ ಅವನ ಕಡೆಗೆ ನೋಡತೊಡಗಿದನು.

ಗುತ್ತಿಗೆ ಆಶ್ಚರ್ಯವಾಯಿತು. ಅಷ್ಟು ದೊಡ್ಡ ಹೊಳೆಗೆ ಸಾರ ಹಾಕಲಿಕ್ಕೆ ಅದೇನು ಹಳ್ಳವೇ? ಅವನ ಕಣ್ಣಿಗೆ ಆ ವಿಸ್ತಾರವಾಗಿದ್ದ ಸುಚಂಚಲ ಜಲರಾಶಿಯ ನಡುವೆ ಕಾಣುತ್ತಿದ್ದ ಒಂದೇ ಸ್ಥಿರವಸ್ತು ಎಂದರೆ, ದೋಣಿಗಂಡಿಗೆ ಬಹುದೂರ ಮೇಲು ಭಾಗದಲ್ಲಿ ಕಾಣಿಸುತ್ತಿದ್ದ ಒಂದು ಕಲ್ಲು ಮಂಟಪದ ಅಗ್ರಭಾಗ. ಅದೂ ಏನು ಈಗಲೋ ಆಗಲೋ ಮುಳುಗಿ ಮುಚ್ಚಿಹೋಗುವಂತೆ ತೋರುತ್ತಿತ್ತು.

ಕೆಂಪು ಎಲೆವಸ್ತ್ರದವನೊಡನೆ ಮಾತಾಡುತ್ತಿದ್ದ ಹಾಳೆಟೋಪಿಯ ಗಟ್ಟಿದಾಳು ಸಮ್ಮತಿಸಿದನು: "ಹೌದಂಬ್ರು ಕಾಣಿ, ನಮ್ಮ ಕಾನೂನು ಸೇರಿಗಾರ್ರು ಒಂದು ತಿಂಗಳ ಹಿಂದೆಯೆ ಆಳುಗಳನ್ನೆಲ್ಲ ಕರೆದುಕೊಂಡು ಹೋದ್ರಂಬ್ರಲ್ಲಾ, ಆ ಕಲ್ಲುಸಾರದ ಮೇಲೆಯೇ!"

ಮುತ್ತೂರು ಸೀಮೆಯೂ ಕೂಡ 'ದೇಸಾಂತ್ರ'ವಾಗಿದ್ದ ಗುತ್ತಿಯ ಬದುಕೆಲ್ಲ ಇದುವರೆಗೆ ಸಿಂಬಾವಿ, ಮೇಗರವಳ್ಳಿ, ಹಳೆಮನೆ, ಹೂವಳ್ಳಿ, ಕೋಣೂರು, ಬೆಟ್ಟಳ್ಳಿಗಳಿಗೇ ಸೀಮಿತವಾಗಿದ್ದುದರಿಂದ ಅವನೆಂದೂ ಬೇಸಗೆಯಲ್ಲಿ ತೀರ್ಥಹಳ್ಳಿಯ ರಾಮತೀರ್ಥದ ದೃಶ್ಯವನ್ನು ನೋಡಿರಲಿಲ್ಲ. ಕಡೆಗೆ ಅವನ ಸಂಕುಚಿತ ಜೀವನದ ಹದಿನೆಂಟೋ ಇಪ್ಪತ್ತೋ ವರ್ಷಗಳಲ್ಲಿ, ಒಮ್ಮೆಯಾದರೂ ಅವನು 'ಎಳ್ಳಾಮಾಸೆ'ಯ ಜಾತ್ರೆಗಾದರೂ ತೀರ್ಥಹಳ್ಳಿಯಂತಹ 'ದೂರದೇಶಕ್ಕೆ' ಬಂದವನಲ್ಲ. ಹೊಲೆಯನಾಗಿದ್ದ ಅವನಿಗೆ ಈ ಜನ್ಮದಲ್ಲಿ ಪರಶುರಾಮತೀರ್ಥದ ಸ್ನಾನವಂತೂ ಸರ್ವಥಾ ಅಲಭ್ಯವಾದುದರಿಂದ ಅಂತಹ ಅಗಮ್ಯಸ್ಥಾನಕ್ಕೆ ಏರಲು ಅವನೆಂದೂ ಆಶಿಸಿರಲಿಲ್ಲ.

"ಮತ್ತೆ, ನೀವೆಲ್ಲ ಎತ್ತ ಹೋಗುವವರು ಹೊಳೆ ದಾಂಟಿ?" ಕೆಂಪು ಎಲೆವಸ್ತ್ರದವನು ಕೇಳಿದನು.

"ನಾವು ಮುತ್ತಳ್ಳಿಗೆ ಹ್ವೋಯ್ಕು...ನೀವೋ?" ಹಾಳೆ ಟೋಪಿಯ ಉತ್ತರ ಮತ್ತು ಪ್ರಶ್ನೆ.

"ನಾನೋ? ಸೀತೆಮನೆಯಲ್ಲಿ ಸೇರೆಗಾರಿಕೆ ಮಾಡಿಕೊಂಡಿರ್ತೆ" ಎಂದ ಕೆಂಪುವಸ್ತ್ರದವನು ಅರಳಿಕಟ್ಟೆಯ ತಿರುಗಿನೋಡಿ "ಅಲ್ಲಿ ಕೂತವರು ನಿಮ್ಮ ಗೌಡ್ರಲ್ಲವೋ ಕಾಣು" ಎಂದನು.

ಹಾಳೆತೋಪಿಯವನು ಅತ್ತ ನೋಡಿ ಗುರುತಿಸಿ "ಹೌದು ಮಾರಾಯ್ರು, ಅವರೇ! ನಮ್ಮ ಒಡೆಯರಲ್ದಾ ಶಾಮಯ್ಯಗೌಡರು!"ಎಂದನು.

"ಅವರು ಯಾರೋ? ಇನ್ನೊಬ್ಬರು? ಅವರ ಸಂಗಡ ಮಾತಾಡುವವರು? ಒಳ್ಳೆ ಮದುಮಗನ ಹಾಗೆ ಅಂಗಿ ಹಾಕಿ, ರುಮಾಲು ಕಟ್ಟಿದ್ದಾರಲ್ಲಾ?"

"ಹುರಿಮೀಸೆ ಬಿಟ್ಟಿದ್ದಾರಲ್ಲಾ ಅವರಾ? ಅಯ್ಯೋ ನಿನ್ನ? ಅವರು ಗೊತ್ತಿಲ್ಲವೆ ನಿನಗೆ? ಕಾನೂರು ಸಣ್ಣಗೌಡರಲ್ದಾ?..."

"ಅಯ್ಯೋ, ನನ್ನ ಕಣ್ಣು ಹೊಟ್ಟೆಹಾರ! ಹೌದೆ ಹೌದು, ಚಂದ್ರಯ್ಯಗೌಡರು! ಆ ವೇಷದಲ್ಲಿ ನನಗೆ ಗುರುತೆ ಆಗಲಿಲ್ಲ! ಮೊನ್ನೆ ಮೊನ್ನೆ ಅವರ ಹೆಂಡತಿ ತೀರಿಹೋದರಂಬ್ರು, ಪಾಪ !....

"ಅದಕ್ಕೇ ಕಾಣ್ತು, ಮರುಮದುವೆಗೆ ಹೆಣ್ಣು ನೋಡಲಿಕ್ಕೆ ಹೋಗಿದ್ದರಂಬ್ರು, ಮಳೂರು ಮಂಡಗದ್ದೆ ಕಡೆಗೆ, ಅವರ ಬಾವನ ಸಂಗಡ...."

'ಕಾನೂರು' 'ಮುತ್ತಳ್ಳಿ' ಎಂಬ ಹೆಸರು ಕೇಳಿ ಗುತ್ತಿ ಕಿವಿ ನಿಮಿರಿದ್ದನು. ತನ್ನ ಒಡೆಯರು ಸಿಂಬಾವಿ ಭರಮೈ ಹೆಗ್ಗಡೆಯವರೂ ಆ ಹೆಸರುಗಳನ್ನೆ ಹೇಳಿದ್ದ ನೆನಪಾಗಿ, ಅರಳಿಕಟ್ಟೆಯ ಮೇಲೆ ಕುಳಿತಿದ್ದವರನ್ನು ಕುತೂಹಲದಿಂದ

ನೋಡತೊಡಗಿದ್ದನು: ಆ ಇಬ್ಬರು ಗೌಡರೂ ಇನ್ನೂ ತನ್ನಂತೆಯೆ ಹುಡುಗಪ್ರಾಯದವರಾಗಿ ಕಂಡರು. ಅವರಲ್ಲಿ ಯಾರಾದರೊಬ್ಬರನ್ನು ತನ್ನ 'ಅಜ್ಞಾತವಾಸದ' ಕಾಲದ ಒಡೆಯರನ್ನಾಗಿ ಆರಿಸಿಕೊಳ್ಳಲೇಬೇಕಾಗಿತ್ತು. ಮುತ್ತಳ್ಳಿಯ ಶಾಮಯ್ಯಗೌಡರು ನೋಡುವುದಕ್ಕೆ ಸಾತ್ವಿಕರಾಗಿ ಸೌಮ್ಯರಾಗಿ ಕಂಡರೂ ಗುತ್ತಿಯ ಆಕರ್ಷಣೆಯೆಲ್ಲ ಹಾಳೆತೋಪಿಯವನು ಕಾನೂರಿನ ಸಣ್ಣಗೌಡರು ಎಂದು ವರ್ಣಿಸಿದ್ದ ವ್ಯಕ್ತಿಯ ರಾಜಠೀವಿಯ ಕಡೆಗೇ ವಾಲಿತ್ತು.

ಅಷ್ಟರಲ್ಲಿ ಆಚೆಯ ದಡದಿಂದ ಜನರನ್ನು ಕರೆದು ತಂದಿದ್ದ ದೋಣಿ ಈಚೆಯ ದಡಕ್ಕೆ ಸಮೀಪಿಸುತ್ತಿತ್ತು. ದೋಣಿಯಲ್ಲಿ ಆದಷ್ಟು ಬೇಗನೆ ಜಾಗ ಸಂಪಾದಿಸುವ ಅಥವಾ ಆಕ್ರಮಿಸಿಕೊಳ್ಳುವ ತರಾತುರಿಯಿಂದ ಕಾಯುತ್ತಿದ್ದ ಜನ ಸೋಪಾನ ಪಂಕ್ತಿಯನ್ನಿಳಿದು ಧಾವಿತು. ಗುತ್ತಿಯೂ ಅನೈಚ್ಛಿಕವಾಗಿಯೆ ಎದ್ದು ನಿಂತನು!

ಆದರೆ ಅವನಿಗೆ ಇತರರಂತೆ ನೂಕುನುಗ್ಗಲಿನಲ್ಲಿ ಹೋಗುವ ಕೆಚ್ಚಾಗಲಿಲ್ಲ. ಜನರು ದೋಣಿಯಿಂದಿಳಿಯುವ ಮತ್ತು ದೋಣಿ ಹತ್ತುವ ಸಾಹಸಗಳೆರಡನ್ನೂ ನೋಡುತ್ತಾ ಅಂಬಿಗರ ಭರ್ತ್ಸನೆ ಆಜ್ಞೆ ವಿಜ್ಞಾಪನೆ ನಿಂದೆ ಶಾಪ ಮೊದಲಾದುವುಗಳನ್ನು ಆಲಿಸುತ್ತಾ, ತುಸು ದಿಗಿಲುಗೊಂಡಂತೆ ಕುಳಿತಿದ್ದಲ್ಲಿಯೇ ನಟ್ಟು ನಿಂತಿದ್ದನು. ತನ್ನೂರಿನಲ್ಲಿ ಯಾರ ಮುಲಾಜೂ ಇಲ್ಲದವನಂತೆ ಸಿಂಹಧೈರ್ಯದಿಂದ ವರ್ತಿಸುತ್ತಿದ್ದವನು ಇಲ್ಲಿ ಪರ ಊರಿನಲ್ಲಿ (ಅವನ ರೀತಿಯಲ್ಲಿ ಹೇಳುವುದಾದರೆ 'ಪರದೇಶದಲ್ಲಿ') ಹೊಲಬುಗೆಟ್ಟ ನಾಯಿಯಂತೆ ಅಂಜುಬುರುಕುತನವನ್ನು ಅನುಭವಿಸುತ್ತಿದ್ದನು. ಅದಕ್ಕೆ ಕಾರಣ, ಬರಿಯ ಅಪರಿಚಿತ ಪ್ರದೇಶ ಮತ್ತು ಅಪರಿಚಿತ ಜನ ಮಾತ್ರವೆ ಆಗಿರಲಿಲ್ಲ. ಅವನಿಗೆ ತೊಳ್ಳೆ ನಡಗುವಂತಾಗುತ್ತಿದ್ದದ್ದು ಪೋಲೀಸಿನವರ ಭೀತಿಯಿಂದ. ಮೇಗರವಳ್ಳಿಯಿಂದ ಹೊರಟವನು ದಾರಿಯುದ್ದಕ್ಕೂ ಎಲ್ಲಿ ಯಾರು ತನ್ನನ್ನು ಗುರುತಿಸಿ ಹಿಡಿದುಬಿಡುತ್ತಾರೋ ಎಂದು ಹೆದರಿಕೊಂಡೇ ಬಂದಿದ್ದನು. ಅದಕ್ಕಾಗಿಯೆ ಹುಲಿಯನನ್ನೂ ಹಿಂದಕ್ಕೆ ಹೊಡೆದೋಡಿಸಿ, ಅದು ಸಿಂಬಾವಿ ಕೇರಿಗೆ ಸೇರುವಂತೆ ಮಾಡಲು ಬಹಳ ಪ್ರಯತ್ನಿಸಿದ್ದನು. ಏಕೆಂದರೆ ಅವನಿಗೆ ಗೊತ್ತಿತ್ತು, ಆ ನಾಯಿಯನ್ನು ತನ್ನೊಡನೆ ಒಮ್ಮೆ ಕಂಡವರು ಅದನ್ನು ಮರೆಯಲಾರರು ಎಂದು. ಜೊತೆಗೆ ತನ್ನ ಅಸಾಧಾರಣ ಕುಳ್ಳತನ ಬೇರೆ ಅವನನ್ನು ಎಂತಹ ಗುಂಪಿನಲ್ಲಿಯೂ ಪ್ರತ್ಯೇಕಿಸಿ ಗುರುತಿಸಿ ಹಿಡಿದುಕೊಡುವಂತಿತ್ತು. ಅವನು ಸ್ವಲ್ಪವಾದರೂ ಗುರುತು ಮರೆಸಿಕೊಳ್ಳಲೆಂದು ಗಡ್ಡಮೀಸೆಗಳನ್ನು ಬಹಳ ದಿನಗಳಿಂದ ಬೋಳಿಸಿರಲಿಲ್ಲ. ಆದರೂ ಗಟ್ಟದ ತಗ್ಗಿನವರಂತೆ ಸೀರೆ ಉಟ್ಟುಕೊಳ್ಳಲು ನಿರಾಕರಿಸಿದ ತಿಮ್ಮಿಯೂ, ಎಲ್ಲರ ಗಮನಕ್ಕೂ ಬಿದ್ದೇ ಬೀಳುವ ಹುಲಿಯನೂ ತನ್ನ ಜೊತೆಯೇ ನಡೆದುಬರುತ್ತಿದ್ದರೆ, ತನ್ನನ್ನು ಕಂಡಿದ್ದ ಪೋಲೀಸರ ಮಾತಿರಲಿ, ತನ್ನ ಚಹರೆ ಮತ್ತು ತನ್ನ ಶುಕನಸಂಗಿಯ ವಿಚಾರವಾಗಿ ಕೇಳಿದ್ದರೂ ಸಾಕು, ಯಾವನಾದರೂ ತನ್ನನ್ನು ಗುರುತಿಸುವ ಸಂಭವವುಂಟೆಂದು ಹೆದರಿ, ಹುಲಿಯನ ಕೊರಳಿಗೆ ಹಗ್ಗಹಾಕಿ, ತಿಮ್ಮಿ ಅದನ್ನು ಹಿಡಿದುಕೊಂಡು ತನಗೆ ಬಹುದೂರವಾಗಿ, ತನಗೂ ಅವರಿಗೂ ಸಂಬಂಧವಿಲ್ಲವೆಂಬುದನ್ನು ಸಾರುವಂತೆ, ಗಟ್ಟದತಗ್ಗಿನ ಆಳುಗಳೊಟನೆ ನಡೆದುಬರುವಂತೆ ಏರ್ಪಾಡು ಮಾಡಿದ್ದನು! ತೀರ್ಥಹಳ್ಳಿಯ ಪೇಟೆಯ ಮಧ್ಯೆ ಹೊಳೆದಂಡೆಗೆ ನಡೆದುಬರುವ ರಸ್ತೆಯಲ್ಲಿ, ಅವನ ಪಕ್ಕದಲ್ಲಿ ನಡೆದು ಹೋಗುತ್ತಿದ್ದ ಗಟ್ಟದಾಳುಗಳು 'ಅದೇ ಪೋಲೀಸು ಕಛೇರಿ, ಇದೇ ಲಾಕಪ್ಪು!' ಎಂದು ತಮ್ಮ ಎಡಬಲ ಎತ್ತರದಲ್ಲಿದ್ದ ಕಲ್ಲುಕಟ್ಟಡಗಳನ್ನು ನಿರ್ದೇಶಿಸಿ ಮಾತನಾಡಿಕೊಂಡಾಗ ಗುತ್ತಿಗೆ ಜಂಘಾಬಲವೆ ಸಡಿಲವಾಗಿತ್ತು! ಯಾರಾದರೂ ಕರೀಪೇಟದವರು, ಆ ಗಿರ್ಲುಮೀಸೆಯವನೋ? ಆ ಮೀಸೆಬೋಳನೋ? ತನ್ನನ್ನು ಗುರುತಿಸಿ ಕಂಡು ಹಿಡಿದರೆ ಏನುಗತಿ? ಎಂದು ಕಳವಳಿಸಿ, ಮೋರೆ ಕೆಳಗೆ ಮಾಡಿಕೊಂಡೇ ಬಿರಬಿರನೆ ಸಾಗಿದ್ದನು! ಆದರೆ ಆ ಮಳೆಗಾಲದ ಕೆಸರುರಸ್ತೆಯಾಗಲಿ, ಬೀಳುತ್ತಿದ್ದ ಸೋನೆಮಳೆಯಿಂದ ಮಂಜು ಮುಸುಗಿದಂತೆ ಕಾಣುತ್ತಿದ್ದು ಹಾಸುಂಬೆ ಹಬ್ಬಿದ ಕಲ್ಲುಗೋಡೆಯ ಈ

ಕಟ್ಟಡಗಳಲ್ಲಾಗಲಿ, ಇವನನ್ನು ಗುರುತಿಸುವುದಕ್ಕಿರಲಿ ನೋಡುವುದಕ್ಕೂ ಒಂದು ನರಪಿಳ್ಳೆಯಾದರೂ ಕಾಣುತ್ತಿರಲಿಲ್ಲ….

"ಏಯ್ ಹಸಲೋರವನೆ, ಯಾರದ್ದೋ ಇದು, ಈ ಕೋಳೀ ಬುಟ್ಟಿ? ನಿನ್ನ ಕೋಳೀ ಕುನ್ನೀನೆಲ್ಲ ಸಾಗಿಸಕ್ಕೆ ಜಾಗ ಎಲ್ಲಿದ್ಯೋ ದೋಣೀಲಿ? ತೆಗೀತೀಯೋ ಇಲ್ಲೋ, ಲೌಡೀ ಮಗನೆ?…."

ಅಂಬಿಗನ ಆರ್ಭಟಗೆ ಗುತ್ತಿ ಕಣ್ಣುಬಾಯಿ ಬಿಟ್ಟುಕೊಂಡು ನಿಂತಿದ್ದವನು ತನ್ನ ನಾಯಿಯಕಡೆ ನೋಡಿದನು. ಅವನ ಮನದಲ್ಲಿ ಚಿಂತೆ ಸಂಚರಿಸಿತು: 'ಹಾಂಗಾದ್ರೆ ಹುಲಿಯನ್ನು ದೋಣಿ ಹತ್ತಾಕ್ಕೆ ಬಿಡಾದಿಲ್ಲ? ಈ ನೆರೇಲಿ ಹೆಂಗೆ ಈಜಿ ಆಚೆದಡ ಸೇರ್ತದೆಯೋ ಶಿವನೇ ಬಲ್ಲ! ಹೊಳೇಪಾಲೇ ಸೈ ಅಂತಾ ಕಾಣ್ತದೆ!' ಪಕ್ಕದಲ್ಲಿ ನಿಂತು, ಭೋರ್ಗರೆದು ರೌದ್ರ ವೇಗದಿಂದ ಬಿದಿರುಹಿಂಡಲುಗಳನ್ನೂ ಹೆಮ್ಮರಗಳನ್ನೂ ಸೊಪ್ಪು ಸದೆಗಳನ್ನೂ ಕೊಚ್ಚಿಕೊಂಡು ಹರಿಯುತ್ತಿದ್ದ ತುಂಗೆಯ ನೆರೆವೊನಲನ್ನೂ ದೋಣಿಯ ನೂಕು ನುಗ್ಗಲು ಗಲಭಯನ್ನೂ ನೋಡುತ್ತಾ ನಿಂತಿದ್ದ ಹುಲಿಯನ ಕಡೆ ಸಿಟ್ಟಿನಿಂದ ಕಣ್ಣುಹಾಯಿಸಿ ಶಪಿಸಿದನು: "ಹಾಳು ಮುಂಡೇದು, ಹಡಬೆಗೆ ಹುಟ್ಟಿದ್ದು! ಇದರ ರುಣ ಕಡಿಯಾಕೆ! ಎಷ್ಟು ಹೊಡೆದಟ್ಟಿದ್ರೂ ಹಿಂದಕ್ಕೆ ಹೋಗ್ದೆಹೋಯ್ತು, ಕೇರೀಗೆ! ಈಗ ದಾಟು ಹೊಳೇನ! ಮುಳುಗಿ ಸಾಯಿ!…. "

ಅಷ್ಟರಲ್ಲಿ ಅಂಬಿಗನು ಹೇಟೆ ಮರಿಗಳಿದ್ದು ಪೀಂಗುಡುತ್ತಿದ್ದ ಬುಟ್ಟಿಯ ಪಂಜರವನ್ನೆತ್ತಿ, ತನ್ನಜ್ಞೆಯನ್ನು ಪರಿಪಾಲಿಸದೆ ಬರಿದೆ ಹಲ್ಲುಬಿಡುತ್ತಾ ದಡದ ಮರಳಿನಮೇಲೆ ನಿಂತಿದ್ದ ಗಟ್ಟದವನ ಕಾಲುಬುಡಕ್ಕೆ, ದೋಣಿಯಿಂದ ಎಸೆದನು. ಆ ಭೂಕಂಪಕ್ಕೆ ದಿಗಿಲುಗೊಂಡು ಕೂಗಾಡುತ್ತಿದ್ದ ಹೇಟೆ ಮರಿಗಳನ್ನು ಬುಟ್ಟಿಯೊಳಗೇ ಸಂತೈಸಿ, ಆ ಗಟ್ಟಿದಾಳು ಸಾವಧಾನವಾಗಿ, ಅಂಬಿಗನ ತಪ್ಪನ್ನು ತಿದ್ದಿದನಷ್ಟೆ: "ನಾನು ಹಸಲೋರವನಲ್ಲ, ಒಡೆಯ, ಬಿಲ್ಲೋರವನು!"

ದೋಣಿಗೆ ಗಟ್ಟಿದಾಳುಗಳೆಲ್ಲ ಹತ್ತಿದ್ದರು. ಅಷ್ಟರಲ್ಲಿ ಮೂರು ನಾಲ್ಕು ಜನ ಹಾರುವರು ದೋಣಿಗಂಡಿಗೆ ಬಂದವರು ಕೈಯೆತ್ತಿ ಅಂಬಿಗನನ್ನು ಕುರಿತು "ಓ ತಮ್ಮಯ್ಯಣ್ಣಾ, ತಮ್ಮಯ್ಯಣ್ಣಾ, ದೋಣಿ ಬಿಡಬೇಡ ಬಿಡಬೇಡ" ಎಂದು ಕೂಗುತ್ತಾ ದೋಣಿಯ ಬುಡಕ್ಕೆ ಓಡಿ ಬಂದರು, "ಮಾರಾಯ, ಮಠದಲ್ಲಿ ಸತ್ಯನಾರಾಯಣ ವ್ರತ. ಬೇಗ ಹೋಗಬೇಕಾದಗಿದೆ ಸಮಾರಾಧನೆಗೆ, ನಮ್ಮನ್ನು ಮೊದಲು ದಾಟಿಸಿಬಿಡು; ಅಷ್ಟು ಉಪಕಾರವಾದೀತು."

"ಜನಿವಾರದವರು ಹತ್ತತ್ತಾರೋ, ಇಳಿರೋ ಎಲ್ಲ!" ಅಂಬಿಗ ತಮ್ಮಯ್ಯಣ್ಣ ಆಜ್ಞೆಮಾಡಿದ. ಏನೋ ಅಪರಾಧ ಮಾಡಿದ್ದವರಂತೆ ದಿಗಿಲುಗೊಂಡು, ಮರುಮಾತಾಡದೆ, ಎಲ್ಲರೂ ಅವರವರ ಸಾಮಾನುಗಳೊಡನೆ ಇಳಿದು ದೂರಸರಿದರು. ದೋಣಿಪೂರ್ತಿ ಖಾಲಿಯಾಯಿತು. ಆ ಮೂರು ನಾಲ್ಕು ಮಂದಿ ಊಟಕ್ಕೆ ಅವಸರವಾದ ಮಡಿ ಬ್ರಾಹ್ಮಣರು ದೋಣಿ ಹತ್ತಿ ನಿಂತರು, ಕಚ್ಚೆಗಳನ್ನು ಮಡಿದು ಸೊಂಟಕ್ಕೆ ಸಿಕ್ಕಿಸಿಕೊಂಡು.

ತಕ್ಕಮಟ್ಟಿಗೆ ದೊಡ್ಡದಾಗಿಯೆ ಇದ್ದ ಆ ದೋಣಿಯಲ್ಲಿ ಇಪ್ಪತ್ತು ಇಪ್ಪತ್ತೈದು ಜನರು ಧಾರಳವಾಗಿ ಹತ್ತಬಹುದಾಗಿತ್ತು. ಆದರೆ ಇತರ ಮುಟ್ಟಾಳುಗಳು ಹತ್ತಿದರೆ ಬ್ರಾಹ್ಮಣರಿಗೆ ಮೈಲಿಗೆಯಾಗುತ್ತದೆ. ಅಂತಹ ಅಪಚಾರವೇನಾದರೂ ನಡೆದರೆ ತನಗೂ ತನ್ನ ದೋಣಿಗೂ ತನ್ನ ಅಂಬಿಗನ ಕಸುಬಿಗೂ ಕೇಡಾಗುತ್ತದೆ ಎಂದು ನಂಬಿದ್ದ ಆ ತಮ್ಮಯ್ಯಣ್ಣ, ಬೇರೆ ಉಪಾಯ ಕಾಣದೆ, ಆ ನಾಲ್ವರನ್ನೇ ಆಚೆ ದಡಕ್ಕೆ ಕೊಂಡೊಯ್ಯಲು ಸಿದ್ಧನಾಗಿದ್ದ. ಅಷ್ಟರಲ್ಲಿ ಹಾರುವರಲ್ಲಿ

ಒಬ್ಬ "ಅಲ್ಲಿ ಯಾರೋ ಇಬ್ಬರು ಗೌಡರು ಕೂತಿದ್ದಾರೆ ನೋಡು, ಅರಳಿಕಟ್ಟೇಲಿ. ಅವರೂ ಹೊಳೆ ದಾಟುವವರಿರಬೇಕು. ಜನ ಸಾಲದಿದ್ದರೆ ಅವರನ್ನು ಕರೆಯಬಹುದಲ್ಲಾ?" ಎಂದು ಸಲಹೆ ಮಾಡಿದನು.

"ಅವರೋ?....ಅವರು ನಮ್ಮ ಧಣೇರು ಕಣ್ರಯ್ಯಾ! ಕಾನೂರು ಚಂದ್ರೇಗೌಡ್ರು, ಮುತ್ತಳ್ಳಿ ಶ್ಯಾಮೇಗೌಡ್ರು. ಆಗಲೆ ಕರೆದಿದ್ದೆ ಅವರನ್ನು.... ಅವರನ್ನ ಹಾಂಗೆಲ್ಲ ಕಾಯ್ಸೋಕೆ ಆಗ್ತದೆಯೇ? ವರ್ಷಾ ವರ್ಷಾ ಭತ್ತ ಕೊಟ್ಟು ನಮ್ಮ ಹೊಟ್ಟೆ ಹೊರೆಯೋರೆ ಅವರು....ಇಲ್ಲದಿದ್ರೆ ಈ ದೋಣಿ ದಾಟೋರು ಕೊಡೋ ಒಂದೊಂದೇ ಬಿಲ್ಲೆ ಯಾತಕ್ಕೆ ಸಾಕಾಗ್ತಿತ್ತು ನಮಗೆ?....ಬೈಗನ ಹೊತ್ತು ಒಂದು ತೊಟ್ಟು ಕುಡಿಯಾಕೂ ಸಾಕಾಗ್ತಿರಲಿಲ್ಲ! ಹಿಹ್ಹಿಹ್ಹಿ! ಬೇಜಾರು ಮಾಡಿಕೊಳ್ಳಬೇಡಿ, ಅಯ್ಯಾ, ಬಿರಾಂಬ್ರ ಹತ್ರ ಹಾಂಗೆಲ್ಲ ಹೇಳ್ದೆ ಅಂತಾ! ಹಿಹ್ಹಿಹ್ಹಿ!...ಅವರೂ....ಹ್ಹುಹ್ಹುಹ್ಹು; ಸೀತೆಮನೆ ಸಿಂಗಪ್ಪಗೌಡರಿಗಾಗಿ ಕಾಯ್ತಿದಾರೆ....ಅವರಿಲ್ಲೇ ಪ್ಯಾಟೆಗೆ ಹೋಗ್ಯಾರಂತೆ...."ಎನ್ನುತ್ತಾ ತಮ್ಮಯ್ಯಣ್ಣ ನಾಲ್ಕೇ ಬ್ರಾಹ್ಮಣರನ್ನು ಕೂರಿಸಿಕೊಂಡು, ದಡದಲ್ಲಿ ನಿಂತು ಗಂಟೆಗಟ್ಟಲೆ ಕಾಯುತ್ತಿದ್ದ ಜನರು ಗುಂಪು ನಿಸ್ಸಹಾಯಕರಾಗಿ ನೋಡುತ್ತಿರಲು, ಹುಟ್ಟಿನಿಂದ ದಡವನ್ನೊತ್ತಿ ದೋಣಿಯ ಹೊನಲಿಗೆ ತಳ್ಳಿಕೊಂಡು, ತನ್ನ ಜಾಗದಲ್ಲಿ ಕೂತು ಹುಟ್ಟುಹಾಕತೊಡಗಿದನು, ದೋಣಿಯ ಮತ್ತೊಂದು ತುದಿಯಲ್ಲಿದ್ದ ತನ್ನ ಸಹಾಯಕ ಅಂಬಿಗನಿಗೆ, ಉಳಿದವರಿಗೆ ಅಷ್ಟೇನೂ ಅರ್ಥವಾಗದ ಪರಿಭಾಷೆಯಲ್ಲಿ, ಪ್ರವಾಹ ರಭಸವನ್ನೂ ಅದರಲ್ಲಿ ತೇಲುತ್ತಾ ಬರುತ್ತಿದ್ದ ಹೆಮ್ಮರಗಳನ್ನೂ ಹೇಗೆ ತಪ್ಪಿಸಬೇಕೆಂಬುದಾಗಿ ಸಲಹೆ ಸೂಚನೆಗಳನ್ನು ಕೊಡುತ್ತಾ.

ಗುತ್ತಿ ನೋಡುತ್ತಾ ನಿಂತಿದ್ದಂತೆಯೆ ದೋಣಿ ದೂರ ದೂರ ದೂರವಾಗಿ ಚಿಕ್ಕ ಚಿಕ್ಕ ಚಿಕ್ಕದಾಗಿ, ಹೋಗಿ ಹೋಗಿ ಹೋಗಿ, ಸುಮಾರು ಐದಾರು ಫರ್ಲಾಂಗು ವಿಸ್ತಾರವಾಗಿದ್ದ ನೆರೆಹೊನಲಿನಲ್ಲಿ ಮೇಲಕ್ಕೊಮ್ಮೆ ಕೆಳಕ್ಕೊಮ್ಮೆ ಕೊಚ್ಚಿ ತೇಲಿ, ಅಲೆಗಳಲ್ಲಿ ಎದ್ದು ಬಿದ್ದು ಹಾರಿ ಆಚೆಯ ದಡಕ್ಕೆ ಸೇರಿತು. ಮತ್ತೆ, ನೋಡುತ್ತಿದ್ದಂತೆಯೇ, ಜನರನ್ನು ತುಂಬಿಕೊಂಡು ಈಚೆಯ ದಡಕ್ಕೂ ಬಂತು. ಬರುವಾಗ ಮಾತ್ರ ಪ್ರವಾಹರಭಸದಲ್ಲಿ ನುಗ್ಗಿ ಬರುತ್ತಿದ್ದ ಒಂದು ಹೆಮ್ಮರಕ್ಕೆ ಇನ್ನೇನು ತಗುಲಿ ಮುಳುಗಿತು ಎನ್ನುವಷ್ಟರಲ್ಲಿ ಅಂಬಿಗರು ಸಾಹಸದಿಂದ ಹುಟ್ಟುಹಾಕಿ ದೋಣಿಯ ಮುಖವನ್ನೆ ಬೇರೆ ದಿಕ್ಕಿಗೆ ತಿರುಗಿಸಿ ರಕ್ಷಿಸಿದ್ದರು.

ಅಂತೂ ಮೂರು ನಾಲ್ಕು ಸಾರಿ ದೋಣಿ ಹೋಗಿ ಬರುವಷ್ಟರಲ್ಲಿ ಸೇರೆಹಾರರ ಗಟ್ಟದಾಳುಗಳೆಲ್ಲ ಆಚೆದಡ ಸೇರಿದ್ದರು. ಮಳೆಗಾಲವಾಗಿದ್ದರಿಂದ ಗುತ್ತಿಗೆ ಹೊತ್ತೂ ಗೊತ್ತಾಗುವಂತಿರಲಿಲ್ಲ. ತಿಮ್ಮಿ ಆಕಳಿಸಿ, ಆಕಳಿಸಿ, ಕಂಬಳಿಕೊಪ್ಪೆಯನ್ನು ಮಳೆಗಾಳಿ ಬೀಸಿದಂತೆಲ್ಲ ಬಲವಾಗಿ ಸುತ್ತಿಕೊಳ್ಳುತ್ತಿದ್ದಳಷ್ಟೆ.

ಸೀತೆಮನೆ ಸಿಂಗಪ್ಪಗೌಡರೂ ಪೇಟೆಯಿಂದ ಹಿಂತಿರುಗಿ ಬಂದು, ಕಾನೂರು ಚಂದ್ರಯ್ಯಗೌಡರು ಮತ್ತು ಮುತ್ತಳ್ಳಿ ಶಾಮಯ್ಯಗೌಡರನ್ನು ಕೂಡಿಕೊಂಡು ಮೆಟ್ಟಿಲುಗಳನ್ನು ಇಳಿದು ಹೊಳೆಯ ದಂಡೆಗೆ ದೋಣಿ ಹತ್ತಲು ಬಂದು ನಿಂತಾಗಲೆ ಗುತ್ತಿಯೂ ಅವರ ಹಿಂದೆಯೆ ಇಳಿದುಬಂದು ತುಸುದೂರದಲ್ಲಿ ನಿಂತನು.

ಒರಚುಗಣ್ಣಿನ ಸಿಂಗಪ್ಪಗೌಡರು ತಮ್ಮ ತಾರುಣ್ಯಸಹಜವಾಗಿದ್ದ ಸಂತೋಷದ ಮುಖ ಭಂಗಿಯಿಂದ ಗುತ್ತಿಯ ಕಡೆ ಓರೆನೋಟ ಬೀರಿ, ಕಂಚಿನ ಸದ್ದನ್ನು ನೆನಪಿಗೆ ತರಬಹುದಾದ ಕಂಠಧ್ವನಿಯಿಂದ ಕೇಳಿದರು "ಯಾರೋ ನೀನು? ಎಲ್ಲಿ ಆಯಿತೋ ನಿನಗೆ?"

ಎರಡೂ ಕೈಗಳನ್ನು ಜೋಡಿಸಿ ಎತ್ತಿ ಮುಗಿಯುತ್ತಾ, ಸೊಂಟ ಬಾಗಿಸಿ ನೆಲಮುಟ್ಟಿ ನಮಸ್ಕಾರ ಮಾಡಿ, ತುಂಬ ಭಯ ಭಕ್ತಿ ವಿನಯದಿಂದ ಗುತ್ತಿ "ನಾನು ಒಡೆಯ, ನಾನು" ಎಂದು ಸ್ವಲ್ಪ ತಡೆದು ತಡೆದು "ನಾನು ಕುಳ್ಳಸಣ್ಣ!" ಎಂದನು.

ಗದುಗಿನ ಭಾರತ ತೊರವೆ ರಾಮಾಯಣಾದಿ ಓಲೆಗ್ರಂಥಗಳನ್ನು ರಾಗವಾಗಿ ಓದಿ ಮನರಂಜಿಸುವುದರಲ್ಲಿ ಪ್ರಸಿದ್ಧರಾಗಿದ್ದ ಪರಿಹಾಸ ಪ್ರವೃತ್ತಿಯ ಸಿಂಗಪ್ಪಗೌಡರು ನಗುತ್ತಾ "ಕಂಡರೆ ಗೊತ್ತಾಗ್ತದೋ ಅದು! ನೀನು ಕುಳ್ಳಾ ಸಣ್ಣಾ ಅಂತ!....ನಿನ್ನ ಹೆಸರೇನೊ?" ಎಂದರು. ಉಳಿದ ಇಬ್ಬರು ಗೌಡರೂ ಗುತ್ತಿಯ ಕಡೆ ತಿರುಗಿ ನಿಂತದ್ದವರು ನಗತೊಡಗಿದ್ದರು.

"ನನ್ನ ಹೆಸರೇ 'ಕುಳ್ಸಣ್ಣ' ಅಂತಾ, ಒಡೆಯ!" ಮೂವರು ಗೌಡರೂ ಪರಿಹಾಸ್ಯದ ಲಘುಮನೋಧರ್ಮವನ್ನು ಪ್ರಕಟಿಸಿದ್ದರಿಂದ ಗುತ್ತಿಗೆ ಸುಳ್ಳನ್ನೂ ಧೈರ್ಯವಾಗಿ ಹೇಳಲು ಧ್ಯರ್ಯ ಬಂದಿತ್ತು. ತನ್ನ ನಿಜವಾದ ಹೆಸರು ಗೊತ್ತಾದರೆ 'ಅಜ್ಞಾತವಾಸ' ವಿಫಲವಾಗಿ ಪೋಲೀಸರ ಕೈಗೆ ಬೀಳಬಹುದು ಎಂಬ ಭಯದಿಂದಲೆ ಅವನು ತನ್ನ ಊರು ಹೆಸರು ಎಲ್ಲವನ್ನೂ ಮುಚ್ಚಿಡಲು ಮನಸ್ಸು ಮಾಡಿದ್ದನು.

"ಎಲ್ಲಿ ಆಯಿತೋ ನಿನಗೆ?" ಗಡಸು ದನಿಯಲ್ಲಿ ಕೇಳಿದರು ಚಂದ್ರಯ್ಯಗೌಡರು.

"ಮೇಗರೊಳ್ಳಿ ಕಡೆ, ಒಡೆಯ." ಮತ್ತೆ ಬಗ್ಗಿದನು ಗುತ್ತಿ.

"ಮೇಗರಳ್ಳಿ ಕಡೆ ಅಂದರೆ? ಯಾರ ಮನೆಯವನೋ?" ಕೇಳಿದರು ಸಿಂಗಪ್ಪಗೌಡರು,

"ಕೊಳಿಗೆ, ಒಡೆಯ ಕೊಳಿಗಿ ಕೇರಿಯವನು." -ಗುತ್ತಿ ಕೈಮುಗಿದನು.

"ಬೇಲರವನೇನೋ?' ಚಂದ್ರಯ್ಯಗೌಡರ ಪ್ರಶ್ನೆ.

"ಅಲ್ಲ, ಒಡೆಯ, ಹೊಲೇರವನು?"

"ಇತ್ತಲಾಗಿ ಎಲ್ಲಿ ಹೊರಟೆಯೋ ಮತ್ತೆ?" ಮುತ್ತಳ್ಳಿ ಕಾನೂರು ಅತ್ತಕಡೆ ಇರುವವರೆಲ್ಲ ಹೆಚ್ಚಾಗಿ ಬೇಲರೆ ಆಗಿದ್ದುದರಿಂದ ಗುತ್ತಿಗೆ ಆ ಕಡೆ ನೆಂಟರಿರಲಾರರಾಗಿ ಅತ್ತ ಕಡೆ ಏಕೆ ಹೋಗುತ್ತಿದ್ದಾನೆ ಎಂಬುದು ಚಂದ್ರಯ್ಯಗೌಡರ ಇಂಗಿತವಾಗಿತ್ತು: "ಯಾರಾದರೂ ನಿನಗೆ ನೆಂಟರಿದ್ದಾರೇನೋ?"

"ಇಲ್ಲ, ಒಡೆಯ..."

"ಮತ್ತೆ? ಹೆಂಡ್ತಿ ಕರಕೊಂಡು ಹೊರಟಿದ್ದೀಯಾ?" ಚಂದ್ರಯ್ಯಗೌಡರು ತಿಮ್ಮಿಯ ಕಡೆ ನೋಡಿ ಕೇಳಿದರು "ಅವಳು ಯಾರೊ? ನಿನ್ನ ಹೆಂಡ್ತೀನೊ? ತಂಗೀನೋ?...."

“ಹೆಡ್ತಿ, ಒಡೆಯಾ!” ಹಲ್ಲುಗಳೆಲ್ಲವನ್ನೂ ಪ್ರದರ್ಶಿಸುತ್ತಾ ಹೇಳಿದನು ಗುತ್ತಿ.

ಚಂದ್ರಯ್ಯಗೌಡರು ತಾರುಣ್ಯೋತ್ತರ ಲಕ್ಷಣದ ಶೃಂಗಾರ ಮಂದಹಾಸದಿಂದ ತನ್ನ ಕಡೆ ನೋಡುತ್ತಿದ್ದುದನ್ನು ಹೆಣ್ಣು ಹೃದಯ ಮಾತ್ರವೆ ಗ್ರಹಿಸಬಹುದಾಗಿದ್ದ ಸೂಕ್ಷ್ಮತೆಯಿಂದ ಅರಿತ ತಿಮ್ಮಿ ನಾಚಿಕೊಂಡು ಮುಖ ತಿರುಗಿಸಿ ನಿಂತಳು. ಚಂದ್ರಯ್ಯಗೌಡರಿಗೂ ಮೊದಲನೆ ಹೆಂಡತಿ ತೀರಿಹೋಗ ಸ್ವಲ್ಪ ಕಾಲವಾಗಿತ್ತು. ಎರಡನೆಯದಕ್ಕಾಗಿ ಸಂಧಾನ ಅನುಸಂಧಾನ ನಡೆಯುತ್ತಿತ್ತು. ಆದ್ದರಿಂದ ಲಕ್ಷಣವಾಗಿದ್ದ ಯಾವ ಹೆಣ್ಣನ್ನಾದರೂ ಸಂತೋಷದಿಂದ ನೋಡುವ ಸ್ಥಿತಿಯಲ್ಲಿದ್ದರು. ಮತ್ತೆಯೂ ಕೆಣುಕುವಂತೆ ನಗುತ್ತಾ ಕೇಳಿದರು; “ನಿನ್ನ ಹೆಂಡ್ತೀನೋ? ಇಲ್ಲಾ...?”

ಗೌಡರು ಅರ್ಧದಲ್ಲಿಯೆ ನಿಲ್ಲಿಸಿದ ವ್ಯಂಗ್ಯೋಕ್ತಿಗೆ ಗುತ್ತಿ ಕಕ್ಕಾವಿಕ್ಕಿಯಾಗಿ, ಬಚ್ಚನಿಗೆ ಹೆಂಡತಿಯಾಗುವವಳನ್ನು ತಾನು ಹಾರಿಸಿಕೊಂಡುಬಂದ ಸಂಗತಿ ಇವರಿಗೆ ಎಲ್ಲಿಯಾದರೂ ಗೊತ್ತಾಗಿದೆಯೇ? ಎಂಬ ಶಂಕೆಯೂ ತಟಕ್ಕನೆ ಮನಸ್ಸಿಗೆ ಬರಲು, ತನ್ನನ್ನು ತಾನು ಸಮರ್ಥಿಸಿಕೊಳ್ಳಲು, ಸ್ವಲ್ಪ ಹೆಚ್ಚು ಎನ್ನಬಹುದಾದ ಅಂಗಭಂಗಿಯಿಂದಲೆ “ನನ್ನ ಹೆಡ್ತೀನೇ, ಒಡೆಯಾ! ದೇವರಾಣೆಗೂ! ತಮ್ಮ ಪಾದದಾಣೆಗೂ! ನಾನು ಸುಳ್ಳು ಹೇಳಿದ್ರೆ ನನ್ನ ನಾಲಿಗೆ ಬಿದ್ದೇಹೋಗ್ಲಿ! ಬೇಕಾದರೆ ಅದನ್ನೇ ಕೇಳಿ! ಎಂದು ಮುಖ ತಿರುಗಿಸಿ ನಿಂತಿದ್ದ ತಿಮ್ಮಿಯ ಕಡೆ ನೋಡಿದನು.

“ಸರಿ ಬಿಡು! ಬೇಲಿಗೆ ಓತಿಕ್ಯಾತ ಸಾಕ್ಷಿ ಹೇಳಿದ್ಹಾಂಗೆ! ಅವಳನ್ನೇನು ಕೇಳಾದು!” ಎಂದು ಚಂದ್ರಯ್ಯಗೌಡರು ಗುತ್ತಿಯಿಂದ ಶಾಮಯ್ಯಗೌಡರ ಕಡೆ ತಿರುಗಿ, ಕಾನೂರು ಬಾವನ ಕಾಮಾಭಿರುಚಿಯನ್ನೂ ಶೃಂಗಾರ ಚೇಷ್ಟೆಯ ಸ್ವಭಾವವನ್ನೂ ಅರಿತಿದ್ದ ಅವರು ತಮ್ಮನ್ನೆ ವ್ಯಂಗ್ಯವಾಗಿ ಅವಲೋಕಿಸುತ್ತಿದ್ದುದನ್ನು ಗಮನಿಸಿ, ತಮ್ಮ ವಾಕ್ಕಿಗೂ ವರ್ತನೆಗೂ ಸಮಾಧಾನ ಹೇಳುವ ರೀತಿಯಲ್ಲಿ ಹೇಳಿದರು: “ಅಲ್ಲಾ ಬಾವ, ಹಂಗ್ಯಾಕೆ ಕೇಳ್ದೆ ಅಂತೀರೋ? ಆ ಮೇಗ್ರೊಳ್ಳಿ ಸೀಮೆ ಹಣೇಬರಾನೇ ಹಾಂಗೆ; ಹುಡುಗಿ ಹಾರಿಸೋದು, ಕಂಡೋರ ಹೆಂಡಿರನ್ನ ಕೆಡಿಸಾದು, ಅದೇ ಕಸಬು. ಅದ್ಕೇ ಕೇಳ್ದೆ, ಲೌಡಿಮಗ ಯಾರನ್ನಾದ್ರೂ ಹಾರಿಸಿಕೊಂಡು ಓಡಿಬಂದಿದಾನೋ ಏನೋ ಅಂತಾ....ಮೊನ್ನೆ ಮೊನ್ನೆ ಅಲ್ಲಿ ಯಾರೋ ಒಬ್ಬರು ನಾಯಕರ ಮಗಳನ್ನೆ ಯಾರೋ ಗೌಡರ ಹುಡುಗ ಲಗ್ನದ ದಿನವೇ, ಧಾರೆಗೆ ಇನ್ನೇನು ಒಂದು ಗಳಿಗೆ ಇದೆ ಅನ್ನಬೇಕಾದರೆ, ಹಾರಿಸಿಕೊಂಡು ಹೋಗ್ಯಾನಂತೆ!....ಹೌದಲ್ಲೇನೋ, ಸಿಂಗಪ್ಪ?”

ಪ್ರಶ್ನೆ ತಮ್ಮ ಕಡೆ ತಿರುಗಲು ಸಿಂಗಪ್ಪಗೌಡರು “ಉಪದೇಶಿ ಜೀವರತ್ನಯ್ಯ ಹೇಳ್ತಿದ್ರಪ್ಪಾ. ಅದೊಂದು ದೊಡ್ಡ ಪುಕಾರೇ ಆಗಿದೆಯಂತೆ. ಪಾಲುಮುಖಂಡರ ಬಹಿಷ್ಕಾರದ ಕಾಗದ ನಮ್ಮ ಕಡೆಗೂ ಬಂದರೂ ಬರಬಹುದು....ಸಿಂಬಾವಿ ಭರಮೈ ಹೆಗ್ಗಡೇರಿಗೇ ಅಂತೆ ಮದುವೆ ಆಗಬೇಕಾಗಿದ್ದು, ಎರಡನೆ ಮದುವೆಯಂತೆ. ಮೊದಲನೇ ಹೆಂಡ್ತೀಲಿ ಮಕ್ಕಳಿಲ್ಲಂತೆ. ಹೆಣ್ಣು ಹೂವಳ್ಳಿನಾಯಕರ ಮಗಳಂತೆ. ಹಾರಿಸಿಕೊಂಡು ಹೋದವನು ಕೋಣೂರುಗೌಡರ ತಮ್ಮನಂತೆ.” ಎಂದು, ಗುತ್ತಿಯ ಕಡೆಗೆ ತಿರುಗಿ “ಇವನಿಗೇನಾದ್ರೂ ಗೊತ್ತಿದ್ರೂ ಗೊತ್ತಿರಬಹುದು” ಎಂದರು.

ಗುತ್ತಗೆ ಆಗಲೆ ಎದೆ ಡವಡವಗುಟ್ಟುತ್ತಿತ್ತು. ಆ ಕಥಾವಿಷಯ ಗೊತ್ತಿರುವುದು ಮಾತ್ರವಲ್ಲ, ಅದರಲ್ಲಿ ಬಹುಪಾಲು ಸಕ್ರಿಯಾ ಪಾತ್ರಧಾರಿಯೂ ಆಗಿದ್ದ ಅವನಿಗೆ ಆ ಮಳೆಗಾಲದಲ್ಲಿಯೂ ಮೈ ಬೆವರತೊಡಗಿತ್ತು. ಅಷ್ಟರಲ್ಲಿ

ಚಂದ್ರಯ್ಯಗೌಡರ ಗಡಸು ದನಿಯೂ ಪ್ರಶ್ನೆ ಹಾಕಿತು: "ಏಯ್…. ಹೆಸರು ಹಿಡಿದು ಕರೆಯಲು ಪ್ರಯತ್ನಿಸಿ ಫಕ್ಕನೆ ನೆನಪಿಗೆ ಬಾರದಿರಲು "ಎಂಥದೋ ನಿನ್ನ ಹಾಳು ಹೆಸರು?…. ಕುಳ್ಳಣ್ಣನೋ….?

"ಕುಳ್ಳಸಣ್ಣ, ಒಡೆಯಾ?" ಸೂಚಿಸಿದನು ಗುತ್ತಿ.

"ನಿಂಗೇನಾದ್ರೂ ಗೊತ್ತೇನೋ ಆ ವಿಷ್ಯಾ?" ಚಂದ್ರಯ್ಯಗೌಡರು ಪ್ರಶ್ನಿಸಿದರು.

"ಇಲ್ಲ, ನನ್ನೊಡೆಯಾ, ನಂಗೇನೂ ತಿಳೀದು ಆ ಇಚಾರ!" ತಾನು ಬೆಪ್ಪರಲ್ಲಿ ಬೆಪ್ಪ ಎಂಬ ಮುಖಭಂಗಿಯನ್ನು ಪ್ರದರ್ಶಿಸುತ್ತಾ ಮೈಯನ್ನೆಲ್ಲ ಮೊಳಕಾಲಿಗೆ ಕುನುಗಿಸಿ ಕೈಮುಗಿದನು ಗುತ್ತಿ.

"ಅಯ್ಯೋ ಆ ಗೊಬ್ಬರ ಹೊರಾ ಹೊಲೆಯಗೆ ಹೆಂಗೆ ಗೊತ್ತಾಗಬೇಕು ಅದೆಲ್ಲಾ?…." ಎನ್ನುತ್ತಾ ಶಾಮಯ್ಯಗೌಡರು ಆ ವಿಚಾರವನ್ನು ಅಲ್ಲಿಗೇ ನಿಲ್ಲಿಸುವ ಉದ್ದೇಶದಿಂದಲೂ, ದೋಣಿ ಆಗಲೆ ಹೊಳೆಯ ನಡುವೆ ಅರ್ಧ ದೂರ ಬಂದುದರಿಂದಲೂ ಆ ದಿಕ್ಕಗೆ ತಿರುಗಿ "ನೀನೀಗ ಹೋಳೆ ದಾಟಿ ಎಲ್ಲಿಗೆ ಹೋಗವ್ನೋ?" ಎಂದರು.

"ಎಲ್ಲಿಗಾದ್ರೂ ಆತು, ಒಡೆಯಾ. ಒಂದು ತುತ್ತು ಅನ್ನ ಸಿಕ್ಕರಾಯ್ತು, ನಿಮ್ಮ ಪಾದಸೇವೆ ಮಾಡಿಕೊಂಡು ಬಿದ್ದಿರ್ತಿನಿ…" ಎಂದನು ಗುತ್ತಿ.

"ನಿಮ್ಮ ಕೇರೀನ, ನಿಮ್ಮ ಒಡೇರ್ನ, ಯಾಕೋ ಮತ್ತೆ ಬಿಟ್ಟು ಬಂದಿದ್ದು?" ಸಿಂಗಪ್ಪಗೌಡರು ಕೇಳಿದರು.

"ಏನೋ ಸಕುನ ಬರ್ಲಿಲ್ಲಾ, ಒಡೆಯ. ಗಣಮಗನೂ ಹೇಳ್ತು, ನಾಕು ಕಾಲ ಬ್ಯಾರೆ ಎಲ್ಲಾದ್ರೂ ಹೋಗಿ ಇದ್ದು ಬಾ, ಅಷ್ಟರಾಗೆ ಸನಿ ಬಿಡ್ತದೆ ಅಂತಾ.

"ಹಂಗಾದ್ರೆ ಕಾನೂರಿನಾಗೆ ಇರ್ತಾನೆ ಬಿಡಿ, ಕೆಲ್ಸ ಮಾಡಿ ಕೊಂಡು" ಚಂದ್ರಯ್ಯಗೌಡರು ಇತ್ಯರ್ಥವಾಗಿಯೆ ಹೇಳಿಬಿಟ್ಟರು. ಅವರಿಗೆ ದುಡಿಯುವ ಗುತ್ತಿಯ, ಅಂದರೆ ಕುಳ್ಳಸಣ್ಣನ, ಬಲಿಷ್ಠವಾದ ದೇಹಸೌಷ್ಠವ ದಷ್ಟೇ ಆಕರ್ಷಣೀಯವಾಗಿತ್ತು ಅವನಿಗಿಂತಲೂ ಎತ್ತರವಾಗಿ ಲಕ್ಷಣವಾಗಿದ್ದ ಅವನ ಹೆಂಡತಿಯ ಅಂಗಭಂಗಿ. ಹಾಗೆಯೆ ಗುತ್ತಿಯನ್ನು ಕೇಳಿದರು: "ನೀ ಹೊಲೇರವನೋ? ಬೇಲರವನೋ?"

"ಹೊಲೇರವನು, ಒಡೆಯಾ." ಗುತ್ತಿಗೂ ಸಂತೋಷವೇ ಆಗಿತ್ತು. ಚಂದ್ರಯ್ಯಗೌಡರ ಆಳಾಗಿ ಅವರ ರಕ್ಷಣೆಯಲ್ಲಿರಲು ಎಂತಹ ಪೋಲೀಸರೂ ಚಂದ್ರಯ್ಯಗೌಡರನ್ನು ಮೀರಿ ತನ್ನನ್ನು ಮುಟ್ಟಲಾರರು ಎಂಬ ನೆಚ್ಚು ಮೂಡಿತ್ತ ಅವನಿಗೆ, ಅವರ ಜಬರ್ದಸ್ತಿನ ಮಾತು, ವೇಷ ಭೂಷಣ ಮತ್ತು ಠೀವಿಗಳನ್ನು ಕಂಡು.

"ಹಾಂಗಾದ್ರೆ ನೀನು ಬ್ಯಾರೆ ಬಿಡಾರಾನೆ ಮಾಡಿಕೊಂಡು, ಬ್ಯಾರೆ ಕಡೇನೆ ಇರಬೇಕಾಗ್ತದೆ, ಗೊತ್ತಾಯ್ತೇನು? ನಮ್ಮಲ್ಲಿ ಇರೋರೆಲ್ಲ ಬೇಲರೆ. ಅವರ ಕೇರೀಲಿ ನಿಂಗೆ ಜಾಗ ಕೊಡ್ತಾರೇನು?" 'ಕುಳ್ಳಸಣ್ಣ' ಆಗಲೇ ತಮ್ಮ ಆಳಾಗಿದ್ದಾನೆ ಎಂಬ ಅಭಿಮಾನದ ಧ್ವನಿಯಲ್ಲಿ ಮಾತಾಡಿಸತೊಡಿಗಿದ್ದರು ಚಂದ್ರಯ್ಯಗೌಡರು.

"ಅದಕ್ಕೇನು, ಒಡೆಯಾ? ಆಗಲಿ." ತನ್ನ ಮೇಲಿದ್ದ ಏನೋ ಜವಾಬ್ದಾರಿಯ ಭಾರವೆಲ್ಲ ಇಳಿದಂತಾಗಿ ಸಮ್ಮತಿಸಿದನು ಗುತ್ತಿ.

ದೋಣಿ ಬಂತು, ಬನ್ನಿ ಬನ್ನಿ...." ಎನ್ನುತ್ತಾ ಸಿಂಗಪ್ಪಗೌಡರು ಕಚ್ಚೆ ಪಂಚೆಯನ್ನು ಎತ್ತಿ ಸೊಂಟಕ್ಕೆ ಸಿಕ್ಕಿಸಿಕೊಳ್ಳುತ್ತಾ, ಕೊಡೆಯನ್ನು ಮಡಿಸಿ ಬಗಲಲ್ಲಿ ಇಟ್ಟುಕೊಂಡು ಬೇಗ ಬೇಗ ನಡೆದರು. ಉಳಿದ ಇಬ್ಬರು ಗೌಡರೂ ಹಿಂಬಾಲಿಸಿದರು.

ಅಂಬಿಗ ತಮ್ಮಯ್ಯಣ್ಣ ಧಣಿಗಳನ್ನು ಸ್ವಾಗತಿಸುತ್ತಾ "ಅಯ್ಯಾ, ಬೇಗ ಬೇಗ ಹತ್ತಿ.... ಮಾಡ ಕರ್‍ರಗಾಗಿದೆ....ಮಳೆ ದನಗೋಳು ಬರಾಹಾಂಗೆ ಕಾಣ್ತದೆ.... ನಿಮ್ಮನ್ನೊಂದು ಹೆಂಗಾದ್ರೂ ಆಚೆ ದಡ ಸೇರಿಸಿ ಬಂದು, ದೋಣಿ ಕಟ್ಟಿಬಿಡ್ತೀನಿ. ಈವೊತ್ತಿಗೆ ಮತ್ತೆ ದೋಣಿ ಹಾಕಾದಿಲ್ಲ ಹೋಳೀಗೆ. ನೆರೇನೂ ಗಂಟೆಗಂಟೆಗೆ ಏರ್ತಾ ಅದೆ... ಆಚೆ ದಡದ ಹತ್ರ ಒಂದೂ ಹೆಣಾನೂ ತೇಲಿ ಹೋಗ್ತಾ ಇತ್ತು. ಒಂದು ಬಿಡಾರದ ಮಾಡೂ ತೇಲಿ ಬತ್ರಾ ಇತ್ತು, ನಡೂ ಹೊಳೇಲಿ! ಭಾರಿ ಮೇಲ್ಮಳೆ ಇರದ್ಬೈದು...." ಎಂದು, ಅವರು ದೋಣಿ ಹತ್ತಲು ಅನುಕೂಲವಾಗುವಂತೆ ಅದೆ ಪಕ್ಕದ ಭಾಗವನ್ನು ಮರಳಿನ ದಡಕ್ಕೆ ಎಳೆದು ಹಿಡಿದುಕೊಂಡನು.

ಗುತ್ತಿ ತಿಮ್ಮಿಯೊಡನೆ ದೋಣಿಗೆ ಏರಲು ಬಂದಾಗ ತಮ್ಮಯ್ಯಣ್ಣ "ಎಲ್ಲಿಯವನೋ? ಯಾರ ಕಡೆಯವನೋ ನೀನು? ಹೊಳೇ ಕಾಣಿಕೆ ಬಿಲ್ಲೆ ಕೊಟ್ಟು ಹತ್ತು" ಎಂದನು. 'ನಾನು ಅಯ್ಯೋರ ಕಡೆ ಆಳು' ಎಂದನು ಗುತ್ತಿ.

"ಯಾವ ಅಯ್ಯೋರೋ? ನಾ ಎಂದೂ ನೋಡದ್ದಾಂಗ ನೆಪ್ಪಿಲ್ಲ ನಿನ್ನ?"

"ಅಲ್ಲಿ ಕೂತಾರಲ್ಲಾ? ಆ ಅಯ್ಯೋರು."

ಅಷ್ಟರಲ್ಲಿ ಚಂದ್ರಯ್ಯಗೌಡರು "ಅವರಿಬ್ಬರನ್ನೂ ಹತ್ತಿಸಿಕೊಳ್ಳೊ, ತಮ್ಮಯ್ಯಣ್ಣ, ನಮ್ಮ ಕಡೇರು." ಎಂದು ಗಟ್ಟಿಯಾಗಿ ಕೂಗಿ ಹೇಳಿದರು, ಆಗತಾನೆ ಜೋರಾಗಿ ಪ್ರಾರಂಭವಾಗುತ್ತಿದ್ದ ಮಳೆಗಾಳಿಯಲ್ಲೂ ಕೇಳಿಸುವಂತೆ.

ಅಂಬಿಗನು ಗುತ್ತಿ ತಿಮ್ಮಿಯರು ಹತ್ತಿ ಕೂತೊಡನೆ, ದೋಣಿಗೆ ತನು ಹತ್ತಿ, ಹುಟ್ಟಿನಿಂದ ಅದವನ್ನು ತಳ್ಳುವಷ್ಟರಲ್ಲಿ, ಹುಲಿಯನೂ ದೋಣಿ ಹತ್ತಲು ಪರದಾಡುತ್ತಿದ್ದುದನ್ನು ನೋಡಿ "ಏಯ್, ಯಾರದ್ದೋ ಆ ನಾಯಿ? ನಿನ್ದೇನೋ? ಅಟ್ಟೋ ಅದನ್ನ. ಮನುಷ್ಯರಿಗೆ ತಾವಿಲ್ಲ; ನಯಿನ ಹತ್ತಿಸ್ತಿದಾನೆ!" ಎಂದು ಗದರಿಸಿ, ಹುಲಿಯನ್ನು ಹುಟ್ಟಿನ ತುದಿಯಿಂದ ತಳ್ಳಿದನು.

"ಅದಕ್ಕೇನು ಧಾಡಿ? ಈಜಿಕೊಂಡೇ ಬರ್ತದೆ." ದೋಣಿಯೊಳಗೆ ಕೂತಿದ್ದೊಬ್ಬನು ಹೇಳಿದನು.

"ಈ ನೆರೇಲಿ ಎಲ್ಲಿ ಆಗ್ತದೆ ಈಜಕ್ಕೆ? ನನ್ನ ಹತ್ರಾನೆ ಒಂದು ಚೂರು ಜಾಗ ಕೊಡ್ತೀನಿ...." ಗುತ್ತಿ ಮೆಲ್ಲಗೆ ಹೇಳಿದನು ಅಂಜಿ ಅಂಜಿ.

“ನಾವೆಲ್ಲಗಂಗಮ್ಮನ ಪಾಲು ಆಗಬೇಕಾಗ್ತದೆ, ಗೊತ್ತಯ್ತೇನು? ಅವೊತ್ತು ಹೀಂಗೆ ಒಂದು ನಾಯೀನ ಹತ್ತಿಸಿಕೊಂಡು, ನಡೂ ಹೊಳೇಲಿ ಅದು ಹೆದರಿ ಎಲ್ಲರ ಮೇಲೂ ಹಾರಾಕೆ ಸುರುಮಾಡಿ, ಜನ ಒಂದು ಕಡೆಗೆ ವಾಲಿ, ದೋಣಿ ಮುಗುಚಿಕೊಳ್ಳಾಕೆ ಆಗಿತ್ತು.” ಹೇಳುತ್ತಲೆ ತಮ್ಮಯ್ಯಣ್ಣ ದೋಣಿಯನ್ನು ತಳ್ಳಿಕೊಂಡು ಹುಟ್ಟುಹೊಡೆಯಲು ತೊಡಗಿದನು.

ಗುತ್ತಿಗೆ ಕಣ್ಣು ಹನಿಮಂಜಾಗಿ, ದಡದಲ್ಲಿ ಅತ್ತ ಇತ್ತ ಪರದಾಡುತ್ತಾ, ಕುಂಯಿಗುಟ್ಟುತ್ತಾ, ನೀರಿಗೆ ಕಲಿಟ್ಟು ಮತ್ತೆ ಹೊಳೆಗೆ ಹೆದರಿ ಹಿಂಜರಿದು ದಡಕ್ಕೆ ಹತ್ತಿ ಓಡಾಡುತ್ತಿದ್ದ, ತನ್ನ ಬಹುಕಾಲದ ಸಂಗಾತಿಯಾಗಿ ಸೇವೆ ಸಲ್ಲಿಸಿ, ಜೊತೆ ಬಿಡದೆ ಅಕ್ಕರೆಯ ವಸ್ತುವಾಗಿದ್ದ ನಾಯಿಯನ್ನು ನಿಸ್ಸಹಾಯಕವಾಗಿ ನೋಡುತ್ತಾ ಕುಳಿತನು.

“ಅದೆಲ್ಲಿ ಬತ್ತದೆ ಈ ನರೇಲಿ? ಹಿಂದಕ್ಕೆ ಹೋಗ್ತದೆ, ಮನೀಗೆ. ಅದನ್ಯಾಕೆ ಕರಕೊಂಡು ಬರಬೇಕಾಗಿತ್ತೊ ಈ ದನಗೋಳು ಮಳೇಲಿ?” ಯಾರೋ ಹೇಳಿದ್ದು ಕೇಳಿಸಿತು ಗುತ್ತಿಗೆ.

ದೋಣಿ ದೂರ ದೂರ ಹೋದಂತೆ ಹುಲಿಯನ ಪರದಾಟ ಹೆಚ್ಚಾಗಿ, ಕಡೆಗೆ ದೋಣಿಯ ಕಡೆಗೆ ಮೋರೆಯೆತ್ತಿ ಬಳ್ಳಿಕ್ಕತೊಡಗಿತು.

“ಥೂ ಅನಿಷ್ಟದ್ದೆ? ಅಪಶಕುನ ಒರಲ್ತದಲ್ಲೋ!” ಎಂದರು ಯಾರೋ.

“ಹೋಗು, ಹುಲಿಯಾ, ಕೇರಿಗೆ ಹೋಗು!” ಗುತ್ತಿ ಕೊರಳೆತ್ತಿ ಗಟ್ಟಿಯಾಗಿ ಕೂಗಿದನು. ನಾಯಿಗೆ ಕೇಳಿಸಲಿ ಎಂದು. ಆಗಲೆ ದೋಣಿ ಪ್ರವಾಹದಲ್ಲಿ ಸ್ವಲ್ಪ ದೂರ ಸಾಗಿತ್ತು.

“ಅಕ್ಕಳ್ರೋ! ನಾಯಿಗೆ ಹುಲಿ ಅಂತಾ ಹೆಸರಿಟ್ಟಾನಲ್ಲಾ ಈ ಹೊಲೆಯ?” ಯಾರೋ ಹೇಳಿ ನಕ್ಕರು. ಅನೇಕರು ನಕ್ಕಿದ್ದೂ ಕೇಳಿಸಿತು ಗುತ್ತಿಗೆ.

ಒಂದು ಕಡೆ ಪ್ರಾಣಭಯ, ಒಂದು ಕಡೆ ಸ್ವಮಿ ಪ್ರೀತಿ, ಹುಲಿಯನ ಜೀವ ಉಭಯಸಂಕಟಕ್ಕೆ ಸಿಕ್ಕಿ ದಡದಲ್ಲಿ ಓಲಾಡುತ್ತಿತ್ತು. ಅದು ಎಂದೂ ಇಂತಹ ಜಲಪ್ರವಾಹವನ್ನು ನೋಡಿರಲಿಲ್ಲ. ಹೆಚ್ಚು ಎಂದರೆ ಸಣ್ಣ ಕೆರೆ ಹಳ್ಳಗಳಲ್ಲಿ ಈಜಿ ದಾಟಿದ ಅನುಭವವಿತ್ತು. ಅದು ಮನಸ್ಸು ಮಾಡಿದ್ದರೆ, ಗುತ್ತಿ ಕೂಗಿ ಹೇಳಿದಂತೆ, ಸಿಂಬಾವಿ ಹೊಲೆಗೇರಿಗೆ ಹಿಂದಿರುಗಲೂ ಸುಲಭಸಾಧ್ಯವಾಗುತ್ತಿತ್ತು. ಆದರೆ ಗುತ್ತಿ ಯಾವ ಉದ್ದೇಶದಿಂದ ಕೂಗಿದ್ದನೋ ಅದಕ್ಕೆ ವಿರುದ್ಧವಾದ ಪರಿಣಾಮ ಉಂಟಾಯಿತು ನಯಿಯಲ್ಲಿ. ಹೊಳೆಗೆ ಹಾರಲು ಹಿಂದೆ ಮುಂದೆ ನೋಡುತ್ತಿದ್ದ ನಾಯಿ, ತನ್ನ ಯಜಮಾನನ ಧ್ವನಿಯನ್ನು ಕೇಳಿದೊಡನೆ, ತನ್ನನ್ನು ಕರೆಯುತ್ತಿದ್ದಾನೆಂದೇ ಭಾವಿಸಿ, ನೀರಿಗೆ ಧುಮುಕಿಯೆ ಬಿಟ್ಟಿತು!

“ಅಕ್ಕಳ್ರೋ ಹಾರೇ ಬಿಡ್ತಲ್ಲಾ ಹೋಳೀಗೆ!”

“ಈಜಿದ್ರೂ ಈಜಾತು! ಅದೇನು ಸಾಮಾನ್ಯದ್ದಲ್ಲ ಆ ನಾಯಿ!”

"ಅದ್ಯಕೋ ಅತ್ತತ್ಲಾಗೆ ಹೋಗ್ತದಲ್ಲಾ?"

"ಅದ್ಕೆ ಇತ್ಲಾ ಕಡೇ ಕಣ್ಣು ಕುಲ್ಡಾಗ್ಯದೆ." ತನ್ನ ನಾಯಿಯ ಕಷ್ಟಕ್ಕೆ ವಿವರಣೆ ಕೊಟ್ಟನು ಗುತ್ತಿ.

"ಹಂಗಾರೆ ಒಕ್ಕಣ್ಣು ಶುಕ್ಲಾಚಾರಿ!" ಯಾರೋ ಒಬ್ಬರು ವಿನೋದ ವಾಡಲು, ಎಲ್ಲರೂ ನಕ್ಕರು.

"ಏನಾಯ್ತೋ ಕಣ್ಣಿಗೆ?" ಇನ್ನೊಬ್ಬನ ಪ್ರಶ್ನೆ, ಅಷ್ಟೇನೂ ಪ್ರಕೃತವಲ್ಲದ್ದು.

"ಕುರ್ಕನ ಕೈಲಿ ಜಟಾಪಟಿ ಆದಾಗ ಹಂಗಾಯ್ತು!" ಮತ್ತೆ ಗುತ್ತಿಯ ಹೆಮ್ಮೆಯ ಉತ್ತರ.

ಅಷ್ಟರಲ್ಲಿ ದೋಣಿ ಹೊಳೆಯಲ್ಲಿ ದಡಕ್ಕೆ ಹತ್ತಿರ ಹತ್ತಿರವಾಗಿಯೆ ಮೇಲೆಮೇಲಕ್ಕೆ ಹೋಗುತ್ತಿದ್ದುದನ್ನು ಗಮನಿಸಿ ಸಿಂಗಪ್ಪಗೌಡರು "ಏನೋ, ತಮ್ಮಯ್ಯಣ್ಣ, ಬುತ್ತಿಕಲ್ಲು ಬಂಡೆ ಕಡೆಗೆ ಹೋಗ್ತಾ ಇದೆಯಲ್ಲೋ ದೋಣಿ?" ಎಂದು ಟೀಕಿಸಿದರು. ಬೀಮ ಬುತ್ತಿ ಉಣ್ಣುವಾಗ ಅನ್ನದಲ್ಲಿ ಸಿಕ್ಕಿದ್ದ ಕಲ್ಲಂತೆ ಅದು, ಸುಮಾರು ಎರಡೂ ಮೂರು ಆನೆ ಗಾತ್ರದ್ದು! ಬೇಸಗೆಯಲ್ಲಿ ಮರಳಿನ ಮೇಲೆ ಪ್ರತ್ಯೇಕವಾಗಿ ಎಲ್ಲರ ಗೌರವಾಶ್ಚರ್ಯವನ್ನೂ ಸೆಳೆಯುತ್ತಾ ನಿಂತಿರುತ್ತದೆ, ಈಗ ಪ್ರವಾಹದಲ್ಲಿ ಮುಚ್ಚಿಹೋಗಿತ್ತು. ದೋಣಿ ಎಲ್ಲಿಯಾದರೂ ನೀರಲ್ಲಿ ಅಡಗಿರುವ ಅದರ ನೆತ್ತಿಗೆ ತಗುಲಿಬಿಟ್ಟೀತು ಎಂಬ ಹೆದರಿಕೆಯಿಂದಲೆ ಸಿಂಗಪ್ಪಗೌಡರು ಅಂಬಿಗನಿಗೆ ಎಚ್ಚರಿಕೆ ಕೊಟ್ಟಿದ್ದರು.

ಬೇರೆ ಯಾರಾದರೂ ಆಗಿದ್ದರೆ ತಮ್ಮಯ್ಯಣ್ಣ "ಕೂತುಕೊಳ್ಳೋ ನಿನ್ನ ಮುಂಡಾಮೋಚ್ತು! ನಿನ್ನ ಅಪ್ಪ ಅಜ್ಜನ ಕಲದಿಂದಲೂ ನಾನು ಇಲ್ಲಿ ದೋಣಿ ಬಿಡ್ತಿದ್ದೀನೋ. ನನಗೆ ಗೊತ್ತಿಲ್ಲಾ ಅಂತಾ ಹೇಳ್ತಾನೆ!" ಎಂದು ಮೂದಲಿಸಿ ಬಿಡುತ್ತಿದ್ದ. ಆದರೆ ಸಿಂಗಪ್ಪಗೌಡರಿಗೆ ಹೇಳಿದ್ದು "ಇಲ್ಲಾ, ಒಡೆಯಾ, ಹೊಳೆ ಏರ್ತಾ ಇದೆ, ಬಹಳ ಸೆಳವು. ಕೆಳಗೆ ಹೋದರೆ ಪೂರಾ ಕೆಳಗೇ ಎಳೆದುಬಿಡ್ತದೆ. ಅದಕ್ಕೆ ಸ್ವಲ್ಪ ಮೇಲುಮೇಲಕ್ಕೆ ಹೋಗಿ ತಿರುಗಿಸ್ತೀನಿ.

ದೋಣಿ ನದಿಯ ಮಧ್ಯಪ್ರವಾಹದ ಕಡೆಗೆ ಹೋದಷ್ಟೂ, ಅರಳಿಕಟ್ಟೆ ರಾಮೇಶ್ವರ ದೇವಸ್ಥಾನದ ಶಿಖರಾಗ್ರ ಮೊದಲಾದ ತೀರ್ಥಹಳ್ಳಿಯ ಕಡೆಯ ದಡದ ವಸ್ತುಗಳು ದೂರವಾಗಿ ಸಣ್ಣಗಾದಷ್ಟೂ ದೋಣಿಯಲ್ಲಿದ್ದ ಪ್ರಯಾಣಿಕರಿಗೆ ಪುಕ್ಕಲು ಹೆಚ್ಚತೊಡಗಿತ್ತು: ಅಷ್ಟು ಭೀಷಣ ಕ್ಷುಬ್ಧವಾಗಿತ್ತು ತುಂಗಾ ಪ್ರವಾಹ. ಮಳೆಯೂ ಇದ್ದಕ್ಕಿದ್ದಂತೆ ಮುಸಲಧಾರೆಯಾಗಿ ಸುರಿಯ ತೊಡಗಿತ್ತು. ಗಾಳಿ ಭಯಂಕರ ವೇಗದಿಂದ ಬೀಸಿತ್ತು. ಕೆಮ್ಮಣ್ಣು ಬಣ್ಣದ ಅಲೆಗಳು ದೋಣಿಯ ಪಕ್ಕಕ್ಕೆ ರೌದ್ರವಾಗಿ ಅಪ್ಪಳಿಸಿದ್ದುವು. ಮರಮಟ್ಟು ಸೊಪ್ಪುಸದೆ ಬಿದಿರಹಿಂಡಿಲು ಲತೆಂಗಿನಹೆಡಲು ಅಡಕೆಸೋಗೆ ಮೊದಲಾದುವು ನೊರೆಗೆರೆಯುತ್ತಿದ್ದ ನೀರಿನಲ್ಲಿ ಭಯಂಕರ ವೇಗದಿಂದ ಓಡುತ್ತಿರುವ ನೋಟ ಹೆದರಿಕೆ ಹುಟ್ಟಿಸಿತ್ತು. ಅದರಲ್ಲಿಯೂ ಹಾಗೆ ಓಡುತ್ತಿದ್ದ ದೊಡ್ಡ ದಿಮ್ಮಿಯ ಮರಗಳೂ ಕೂಡ ಹೊಳೆಯ ನಡುವೆ ಸುಂಟರು ಸುಳಿಗೆ ಸಿಕ್ಕಿ ಗಿರ್ರನೆ ತಿರುಗಿ ತಿರುಗಿ ಕಂತಿಹೋಗುತ್ತಿದ್ದ ದೃಶ್ಯವಂತೂ ಭೈಆನಕವಾಗಿತ್ತು. ಆ ಆವರ್ತಗರ್ತಕ್ಕೆ ದೋಣಿ ಸಿಕ್ಕರೆ ಏನು ಗತಿ ಎಂದು ಕೆಲವರು ದೇವರನ್ನು ನೆನೆಯುತ್ತಿದ್ದರು: ಹೇಗಾದರು ದಡ ಸೇರಿಸಪ್ಪಾ ಎಂದು! ಹೆಚ್ಚುತ್ತಿದ್ದ ಪುಕ್ಕಲಿಗೆ ದೋಣಿಯ ಪ್ರಯಾಣಿಕರ ಪ್ರತಿಕ್ರಿಯೆ ವಿವಿಧವಾಗಿತ್ತು. ಕೆಲವರಲ್ಲಿ ಮಾತು ನಿಂತು ಹೋಯಿತು; ಕೆಲವರು ಹೃದಯದ ಹೆದರಿಕೆಯನ್ನು ಮುಚ್ಚಿಕೊಳ್ಳುವುದಕ್ಕೋ ಮರೆಯುವುದಕ್ಕೋ ಸುಮ್ಮನೆ ಅದೂ ಇದೂ ಗಳಪತೊಡಗಿದರು. ಒಬ್ಬಿಬ್ಬರು ಹೊಳೆಯ ಕಡೆ ನೋಡುವುದನ್ನೆ ಬಿಟ್ಟು, ತಲೆ ಬಗ್ಗಿಸಿ ದೋಣಿಯ ತಳದ ತಮ್ಮ

ಪಾದಗಳನ್ನೆ ನೋಡುತ್ತಾ ಕುಳಿತುಬಿಟ್ಟರು! ಗಂಡನ ಪಕ್ಕದಲ್ಲಿ ಅವನಿಗೆ ಎದುರಾಗಿ ಕುಳಿತಿದ್ದ ತಿಮ್ಮಿ ದೋಣಿಯ ಇಕ್ಕೆಲಗಳನ್ನು ತನ್ನೆರಡು ಕೈಗಳಿಂದಲೂ ಬಲವಾಗಿ ಅದುಮಿಹಿಡಿದು, ಕಣ್ಣುಮುಚ್ಚಿಕೊಂಡೆ ತಲೆಯನ್ನು ಬಗ್ಗಿಸಿ ಕುಳಿತುಬಿಟ್ಟಿದ್ದಳು! ಗುತ್ತಿ ಮತ್ತಾವುದನ್ನೂ ಒಂದಿನಿತೂ ಗಮನಿಸದೆ ಸರ್ವೇಂದ್ರಿಯ ಪ್ರಾಣಗಳೂ ಏಕದೃಷ್ಟಿಯಾಗಿ ತನ್ನ ನಾಯಿಯ ಕಡೆಗೇ, ಬಿಟ್ಟ ಕಣ್ಣು ಮುಚ್ಚದೆ, ತನ್ನಾ ನೋಡುವಿಕೆಯೆ ಹುಲಿಯನಿಗೆ ಬಲವೂ ಬೆಂಬಲವೂ ಆಗಿ ಅದನ್ನು ರಕ್ಷಿಸುವುದೋ ಎಂಬಂತೆ, ನೋಡುತ್ತಾ ಉದ್ವಿಗ್ನ ಚಿಂತಾಕ್ರಾಂತನಾಗಿ ತುದಿಗಾಲಿನ ಮೇಲೆಯೆ ಕುಳಿತಿದ್ದನು, ಯಾವ ಸಮಯಕ್ಕೆ ನಾಯಿಗೆ ಸಹಾಯ ಬೇಕಾದರೂ ಒಡನೆಯೆ ಅದನ್ನು ನೀಡಲು ಹಾತೊರೆಯುತ್ತಿರುವ ಭಂಗಿಯಲ್ಲಿ!

ದೋಣಿ ಹೊಳೆಯ ದಂಡೆಗೆ ಸಮೀಪವಾಗಿ ಹೊನಲಿನಲ್ಲಿ ಪಶ್ಚಿಮ ದಿಙ್ಮುಖವಾಗಿ ಮೇಲಕ್ಕೆ ಹೋಗುತ್ತಿದ್ದಷ್ಟೂ ಕಾಲವೂ ಹುಲಿಯ ಅದನ್ನು ಹಿಂಬಾಲಿಸಿ ನೀರಿಗೆ ಎದುರಾಗಿಯೇ ತನ್ನ ಬಲವನ್ನೆಲ್ಲ ಉಪಯೋಗಿಸಿ ಈಜಿತ್ತು. ಆದರೆ ಯಾವಾಗ ದೋಣಿಯ ಮುಖವನ್ನು ಅಂಬಿಗರು, ಆಚೆಯ ದಡಕ್ಕೆ ಒಯ್ಯುವ ಉದ್ದೇಶದಿಂದ, ದಕ್ಷಿಣದಿಕ್ಕಿಗೆ ತಿರುಗಿಸಿ, ಹೊನಲಿನ ರಭಸಕ್ಕೆ ಸಮಗ್ಯೆಯಾಗಲೆಂದು, ಜೋರಾಗಿ ಹುಟ್ಟು ಹಾಕಲು ಷುರುಮಾಡಿದರೊ ಆಗ ಹುಲಿಯನ ಶಕ್ತಿ ಪ್ರವಾಹದ ವೇಗಕ್ಕೆ ಶರಣಾಗಬೇಕಾಯಿತು. ಗುತ್ತಿ ಮತ್ತು ಇತರ ಆಸಕ್ತರಾಗಿದ್ದ ಕೆಲವರು ನೋಡುತ್ತಿದ್ದಂತೆಯೆ ಹುಲಿಯ ದೋಣಿಯಿಂದ ದೂರದೂರವಾಗತೊಡಗಿತು: “ಛೆ ಪಾಪ! ನೀರಿನ ರಭಸ ಪೂರಾ ಇದೆ. ಹೆಂಗೆ ಈಜ್ತದೆಯೋ ಬಡಪಾಯಿ?….” “ಅಯ್ಯಯ್ಯೋ ಸುಳಿಗೆ ಸಿಕ್ಕಿ ಮುಳುಗಿ ಬಿಡ್ತಲ್ಲಾ ನಾಯಿ!”….“ಇಲ್ಲ, ಇಲ್ಲಾ, ತಲೆ ಎತ್ತಿತ್ತು ಕಾಣಿ, ಅತ್ತಕಡೆ, ಬಲಗಡೇಲಿ!”….“ಅಯ್ಯಯ್ಯೋ ಕೊಚ್ಚಿ ಹೋಗುವ ಬಿದಿರ ಹಿಂಡಿಲಿಗೇ ಹತ್ತಕ್ಕೆ ನೋಡ್ತಾದಲ್ಲಾ! ಬಿದಿರಿಗೆ ಸಿಕ್ಕರೆ ಆಯ್ತು ಅದರ ಗತಿ!” ಅಲೆಗಳ ಹೊಡೆತಕ್ಕೆ ಸಿಕ್ಕಿ ಒಮ್ಮೆ ಮುಳುಗಿ, ಒಮ್ಮೆ ತಲೆ ಎತ್ತಿ, ಕೊಚ್ಚಿ ಹೋಗುತ್ತಿದ್ದ ತನ್ನ ನಾಯಿ ಬಿದಿರ ಹಿಂಡಿಲಿಗೆ ಸಿಕ್ಕಿ ಸಾಯುತ್ತದೆ ಎಂದು ನಿಶ್ಚಯಿಸಿ ನೋಡುತ್ತಿದ್ದ ಗುತ್ತಿ “ಅಯ್ಯಪ್ಪಾ, ಸಕು!” ಎಂದು ನಿಟ್ಟುಸಿರೆಳೆದನು, ಬಿದಿರ ಹಿಂಡಿಲು ನಯಿಗೆ ಎಟುಕದ ವೇಗದಲ್ಲಿ ಅದನ್ನು ದಾಟಿ ಹೋದಾಗ! ಉತ್ತೇಜನ ಕೊಡುವ ಹಂಬಲದಿಂದ ಗುತ್ತಿ ಕೂಗಿದನು: “ಈಜು! ಈಜು, ಹುಲಿಯಾ!” ನಾಯಿಗೆ ಅದು ಕೇಳಿಸಿತೊ ಇಲ್ಲವೊ? ಅಂತೂ ಅವನು ಕೂಗಿದುದಕ್ಕೊ ಎಂಬಂತೆ ಹುಲಿಯ ಮತ್ತೆ ದೋಣಿಯ ಕಡೆ ಬರುತ್ತಿದ್ದಂತೆ ತೋರಿ, ಗುತ್ತಿಯ ಹೃದಯ ಹಿಗ್ಗಿತು!

ಆದರೆ ನಡೆದಿದ್ದ ಸಂಗತಿ ಬೇರೆಯಾಗಿತ್ತು. ದೊಡ್ಡದೊಂದು ಹೆಮ್ಮರ ನಡುಹೊಳೆಯ ಪ್ರವಾಹದಲ್ಲಿ ಮೇಲುಗಡೆಯಿಂದ ತೇಲಿ ಬರುತ್ತಿದ್ದುದನ್ನು ಕಂಡು ಅಂಬಿಗರುಮ ಅದಕ್ಕೆ ಅಡ್ಡಲಾಗುವ ಬದಲು ಆ ಮರ ಕೊಚ್ಚಿ ಕೆಳಗೆ ಹೋದಮೇಲೆಯೆ ಅತ್ತ ದೋಣಿ ಬಿಡುವುದು ಕ್ಷೇಮಕರ ಎಂದು, ಸ್ವಲ್ಪ ಕ್ಷಣ ಹುಟ್ಟುಹಾಕುವುದನ್ನು ನಿಲ್ಲಿಸಿದ್ದರಿಂದ ದೋಣಿ ಕೆಳಗೆ ಕೊಚ್ಚಿ ಹೋಗಿ ನಾಯಿಯನ್ನು ಸಮೀಪಿಸುತ್ತಿತ್ತು. ಗುತ್ತಿ ನೋಡುತ್ತಿದ್ದಂತೆಯೆ ಹುಲಿಯನ ತಲೆ ಅಲೆಗಳ ನಡುವೆ ಹೊಯ್ದಾಡುತ್ತಿದ್ದದ್ದು ಸ್ಪಷ್ಟವಾಗಿ ಕಾಣಿಸಿತು. “ಬಾ, ಹುಲಿಯಾ, ಬಾ!” ಎಂದು ಗಂಟಲು ಸೀಳಿ ಹೋಗುವಂತೆ ಗಟ್ಟಿಯಾಗಿ ಕೂಗಿದನು. ನಾಯಿ ಇನ್ನೂ ಬಳಿಸಾರಿತು ದೋಣಿಗೆ. ಕ್ಷೀಣವಾಗುತ್ತಿದ್ದರೂ ತನ್ನ ಉಳಿದ ಅಲ್ಪ ಸ್ವಲ್ಪ ಬಲವನ್ನೆಲ್ಲ ಉಪಯೋಗಿಸಿ ಅದು ಪ್ರಾಣಭಯದಿಂದ ಮಾತ್ರ ಹೋರಾಡುತ್ತಿದ್ದಂತೆ ತೋರಿತು. ಗುತ್ತಿಗೆ ತಟಕ್ಕನೆ ಒಂದು ಉಪಾಯ ಹೊಳೆಯಿತು: ತನ್ನ ತಲೆವಸ್ತ್ರದ ತುದಿಯನ್ನು, ನಾಯಿ ಇನ್ನೂ ಸಮೀಪಕ್ಕೆ ಬಂದಾಗ, ಅದರ ಮುಖದ ಹತ್ತಿರಕ್ಕೆ ಬೀಳುವಂತೆ ಎಸೆದರೆ ಅದನ್ನು ಕಚ್ಚಿಕೊಂಡರೂ

ಕಚ್ಚಿಕೊಳ್ಳಬಹುದು. ಆಗ ಅದನ್ನು ಎಳೆದು ದೋಣಿಗೆ ಎತ್ತಿಕೊಂಡರೆ! ಅಂಬಿಗ ತಮ್ಮಯ್ಯಣ್ಣನಿರಲಿ, ಧಣಿ ಚಂದ್ರಯ್ಯಗೌಡರು ಬೈದರೂ ಬೈಯಲಿ! ನನ್ನ ಪುರಾಣ ಹೋದರೂ ಚಿಂತಿಲ್ಲ!

ಹತ್ತಿರ ಹತ್ತಿ, ಹತ್ತಿರ, ಹತ್ತಿರ ಬಂದಿತು ನಾಯಿ. ಎಷ್ಟು ಹತ್ತಿರವಾಯಿತು ಎಂದರೆ, ದೋಣಿ ನಾಯಿಯ ಮೇಲೆಯೆ ಹೋಗಿ, ಅದು ಅಡಿ ಸಿಕ್ಕಿಬಿಡುತ್ತದೆ ಎಂದು ಶಂಕಿಸಿದರು ಕೆಲವರು. "ಹುಲಿಯಾ!ಹುಲಿಯಾ!ಹುಲಿಯಾ!" ಎಂದು ಕರೆಯುತ್ತಲೆ ಇದ್ದನು ಗುತ್ತಿ. ಹುಲಿಯನಿಗೂ ಪ್ರೀತಿಯ ಯಜಮಾನನ ಧ್ವನಿ ಕೇಳಿಸಿತು. ಅಲೆಗಳಲ್ಲಿ ಹೋರಾಡುತ್ತಲೆ ದೋಣಿಯ ಕಡೆ ಕಣ್ಣೆತ್ತಿ ನೋಡಿ ಗುತ್ತಿಯನ್ನು ಗುರುತಿಸಿತು. ಅವನು ವಸ್ತ್ರಸಹಿತ ನೀಡಿದ್ದ ಆ ಮೈತ್ರಿಯ ಕೈಗೆ ಸೇರುವಾಸೆಯಿಂದ, ತನ್ನು, ನಿಷ್ಕರುಣೆಯಿಂದ ನೂಕುತ್ತಿದ್ದ ಅಲೆಗಳನ್ನು ನೂಕಿ ನೂಕಿ, ತನ್ನ ಕೊನೆಯ ಬಲವನ್ನೆಲ್ಲ ಪ್ರಯೋಗಿಸಿ ಹೋರಾಡಿತು. ಗುತ್ತಿ ದೋಣಿಯ ಒಂದು ಪಕ್ಕದ ಮೇಲೆ ಎಡಗೈಯ್ಯೂರಿ ವಸ್ತ್ರದ ಒಂದು ತುದಿ ಹಿಡಿದುಕೊಂಡು ಇನ್ನೊಂದು ತುದಿಯನ್ನು ಹುಲಿಯನ ಮುಖದ ಕಡೆಗೆ ಬೀಸಿದನು....

ಹತ್ತಾರು ಭೀತವಾಣಿಗಳು ಕೂಗಿಕೊಂಡುವು: ದೋಣಿ ಅವನ ಭಾರಕ್ಕೂ ಚಿಮ್ಮಿದ ರಭಸಕ್ಕೂ ತುಯ್ದುಬಿಟ್ಟಿತು: "ತೆಗೆದಿದ್ದಲ್ಲೋ, ಲೌಡಿ ಮಗನೆ, ಕೂತುಗೂತೀಯೋ ಇಲ್ಲೋ ಸುಮ್ನೆ!" "ನಮ್ಮನ್ನೆಲ್ಲಾ ಹೊಳೀಗೆ ಹಾಕ್ತಾನಲ್ರೋ! ಹೊಡೆದು ಕೂರಿಸ್ರೋ ಹೊಲೆಸೂಳೆಮಗನ್ನ!" "ಏ ಹುಡುಗೀ ಅವನ ಹೆಡ್ತೀ, ಹಿಡಿದು ಕೂರ್ಸೇ ನಿನ್ನ ಗಂಡನ್ನಾ!" "ಅಯಸ್ಸು ಕಾಡಿದೋರ ಸಂಗಡ ದೋಣೀಗೆ ಹತ್ತಿದ್ರೆ ಆಳಿಗೊಂದು ಗುಟುಗು ನೀರಂತೆ! ಈ ಬೋಳಿಮಗನ್ನ ದೋಣಿ ಹತ್ತಿಸಿದ್ದೆ ತಪ್ಪಾಯ್ತು!" "ಅವನ ನಾಯೀ ಜೊತೇಗೇ ಅವನ್ನೂ ಕಳಿಸ್ರೋ!" "ಮುಂದೇಮಗನಿಗೆ ಹೆಂಡ್ತೀನೂ ಬ್ಯಾಡಾಗದೆ ಅಂತಾ ಕಾಣ್ತದೆ! ಬಿದ್ದು ಸಾಯ್ತಾನೆ, ನೀರಿಗೆ!"

ಆ ತುಮುಲ ಬೈಗುಳದ ಕೂಗಿಗೂ ದೋಣಿ ತುಯ್ದುದಕ್ಕೂ ಗುತ್ತಿ ಕಂಗಾಲಾದನು. ನಯಿ ವಸ್ತ್ರದ ತುದಿಯನ್ನು ನಿಜವಾಗಿಯೂ ಕಚ್ಚಿತೊ ಇಲ್ಲವೊ? ಆದರೆ ಗುತ್ತಿಗೆ ಅದು ವಸ್ತ್ರದ ತುದಿಯನ್ನು ಕಚ್ಚಿಕೊಂಡಂತೆ ಭಾಸವಾಗಿ ಅದನ್ನು ಎಳೆದುಕೊಂಡನು. ಆದರೆ ತಟಕ್ಕನೆ ಹುಲಿಯ ವಸ್ತ್ರದ ತುದಿಯನ್ನು ಬಿಟ್ಟಂತಾಗಿ ಗುತ್ತಿ ದೋಣಿಯೊಳಕ್ಕೆ ತಿಮ್ಮಿಯ ತೊಡೆಯ ಮೇಲೆ ಬಿದ್ದನು: ಬೇರೆ ಸಮಯವಾಗಿದ್ದರೆ ನಗೆಯ ಬುಗ್ಗೆ ಗೊಳ್ಳೆಂದು ಉಕ್ಕದೆ ಇರುತ್ತಿರಲಿಲ್ಲ. ಆದರೆ ಆಗ ದೋಣಿ ನದೀಪ್ರವಾಹದ ರಭಸದ ಕೇಂದ್ರದಲ್ಲಿ ಹೋರಾಡುತ್ತಿತ್ತು. ಕೊಚ್ಚಿ ಬರುತ್ತಿದ್ದ ಹೆಮ್ಮರ ಕೆಳಗೆ ತೇಲಿಹೋಗಿದ್ದರಿಂದ ಅಂಬಿಗರಿಬ್ಬರೂ ಉಗ್ರೋಗ್ರ ಸಾಹಸದಿಂದ ಹುಟ್ಟುಹಾಕತೊಡಗಿದ್ದರು.

ಗಾಳಿ ಜೋರಾಗಿ ಬೀಸಿತ್ತು. ಮಳೆಯೂ ಮುಗಿಲೇ ಹಿಸಿದು ಬೀಳುವಂತೆ ಸುರಿಯುತ್ತಿತ್ತು. ದೋಣಿಯನ್ನು ಪ್ರವಾಹಕ್ಕೆದುರಾಗಿ ಸ್ವಲ್ಪ ಮೇಲಕ್ಕೊಯ್ಯುವ ಅಂಬಿಗರ ಪ್ರಯತ್ನ ವಿಫಲವಾಗಿ ದೋಣಿ ಕೆಳಕ್ಕೇ ಹೋಗತೊಡಗಿತು.

ತಮ್ಮಯ್ಯಣ್ಣ ನೋಡುತ್ತಾನೆ: ಗೌಡರುಗಳು ಕುಳಿತಲ್ಲಿ ಕೊಡೆಗಳು ಸೂಡಿವೆ! ಅವನಿಗೆ ಗೊತ್ತಾಯ್ತು, ಕೊಡೆ ಸೂಡಿಕೊಂಡವರು ಗೌಡರುಗಳೆ ಎಂದು. ಆದರೆ ಸನ್ನಿವೇಶ ಉಗ್ರವಾಗಿತ್ತು: ಗಟ್ಟಿಯಾಗಿ ಅಬ್ಬರಿಸಿ ಗದರಿಸಿದನು: "ಯಾರ್ರೋ ಅದೂ? ಕೊಡೆ ಸೂಡಿದೋರು? ಸೀಡಿಸ್ತೀರೋ ಇಲ್ಲೋ! ಕಾಣಾದಿಲ್ಲೇ ಗಾಳಿ ಬೀಸಾದು?"

ಕೊಡೆಗಳೆಲ್ಲ ಮುಚ್ಚಿದ ಮೇಲೆ ದೋಣಿ ಮೇಲಕ್ಕೆ ಹೋಗಲಾರಂಭಿಸಿ ತಕ್ಕಮಟ್ಟಿಗೆ ಅಂಬಿಗರ ಹತೋಟಿಗೆ ಒಳಗಾಯಿತು.

ಸಪ್ಪೆ ಮೋರೆ ಹಾಕಿಕಕೊಂಡು ನದಿಯ ತುಮುಲ ತರಂಗಮಯ ಪ್ರವಾಹ ವಿಸ್ತಾರವನ್ನೆ ನೋಡುತ್ತಿದ್ದ ಗುತ್ತಿಗೆ, ದೋಣಿ ದಡ ಮುಟ್ಟುವ ವಿಚಾರದಲ್ಲಿ ಸ್ವಲ್ಪ ನಂಬಿಕೆ ಬಂದು ಧೈರ್ಯಗೊಂಡ ಒಬ್ಬ ವ್ಯಕ್ತಿ: "ಏನೋ, ಹೊಲೆಯಾ, ಯಾಕೆ ಸತ್ತೋರ ಮನೇಲಿ ಕೂತ್ಹಾಂಗೆ ತಲೆ ಮ್ಯಾಲೆ ಕೈ ಹೊತ್ತುಕೊಂಡು ಕೂತೀಯಾ? ನಿನ್ನ ನಯಿ ಹಿಂದಕ್ಕೆ ಹೋಗಿರಬೇಕೋ ಆಚೆ ದಡಕ್ಕೆ, ಮಕಾ ಅತ್ತಮಕಾನೆ ಹಾಕ್ಕೊಂಡು ಮೀಸ್ತಿತ್ತು ನಾ ನೋಡಿದಾಗ" ಎಂದನು ಸಮಾಧಾನ ಹೇಳುವವನಂತೆ.

"ನಂಗೂ ಹಾಂಗೆ ಕಂಡ್ತಪ್ಪಾ: ದೂರದಾಗೆ ತಲೆ ಕಂಡ್ಹಂಗೆ ಆಗ್ತಿತ್ತು! ಅದಕ್ಕೇನು ಧಾಡಿ? ದಿಂಡೆ ದುಣ್ಣದಾಂಡಿಗ ನಾಯಿ! ಈಜಿಕೊಂಡು ಹೋಯಿತು ಅಂತಾ ಕಾಣ್ತದೆ ಹಿಂದಕ್ಕೆ ಮನೀಗೆ!" ಸೇರಿತು ಮತ್ತೊಬ್ಬನ ಸಾಂತ್ವನ ವಾಣಿ.

"ನಿಂಗೇನು ಹುಚ್ಚೋ? ಬೆಪ್ಪೋ? ಈ ನೆರೇಲಿ ಅದು ಈಜಿ ದಡ ಸೇರಿಬಿಟ್ರೆ ನಾ ಮೂಗು ಕೊಯ್ಸಿಕೊತೀನಿ!" ಇನ್ನೊಬ್ಬ ತರುಣನ ಪಂಥಪಾಡು.

"ಕುಯ್ಸಿಕೋತೀಯೇನೋ ಬದ್ದೇಗೂ?….ಸುಳ್ಳಾ!" ಮತ್ತೊಬ್ಬ ಹುಡುಗನ ಸವಾಲು.

"ನಿನ್ನಪ್ಪಗೆ ಹೇಳು, ಸುಳ್ಳಾ ಅಂತಾ, ನಂಗೆ ಅಂದರೆ ಹಲ್ಲು ಉದುರ್ಸೇನು!"

ಆ ಹುಡುಗ ಆ ತರುಣನಿಗೆ ಉತ್ತರ ಕೊಡುವ ತಂಟೆಗೆ ಹೋಗಲಿಲ್ಲ. ಬದಲಾಗಿ ಗುತ್ತಿಯನ್ನು ಕುರಿತು, ಅವನ ನಾಯಿ ಆಚೆ ದಡ ಸೇರಿ ಬದುಕಿರುವುದರಲ್ಲಿ ಯಾವ ಸಂದೇಹವೂ ಬೇಡ ಎಂದುಕ ಆಶ್ವಾಸನೆ ನೀಡಿದನು: "ಅಂಥಾ ನಾಯಿ ಎಂದಾದ್ರೂ ಹೊಳೇಲಿ ಮುಳುಗಿ ಸಾಯ್ತದೇನೋ?"….

ದೋಣಿ ದಡ ಮುಟ್ಟಿ ನಿಂತಿತು. ಅಂಬಿಗ ತಮ್ಮಯ್ಯಣ್ಣ ಯಾವುದೋ ಸನ್ನಿಹಿತವಾಗಲಿದ್ದ ಮಹಾ ಅನಾಹುತದಿಂದ ಪಾರಾದವನಂತೆ ಉಸ್ಸಪ್ಪಾ ಎನ್ನುತ್ತಾ ಮರಳಿಗೆ ಹಾರಿ, ದೋಣಿಯ ಪಕ್ಕವನ್ನು ಹಿಡಿದೆಳೆದನು, ದಂಡೆಗೆ ಚಾಚಲೆಂದು, ಇಳಿಯುವ ಗೌಡರಿಗೆ ಅನುಕೂಲವಾಗುವಂತೆ. ಪ್ರಯಾಣಿಕರೆಲ್ಲ ಇಳಿದರು. ಹಾಗೆಯೆ ತೀರ್ಥಹಳ್ಳಿಯ ಕಡೆ ಹೋಗಲು ಕಾಯುತ್ತಿದ್ದವರು ಹತ್ತತೊಡಗಿದರು. ಅವರಿಗೆ ತಮ್ಮಯ್ಯಣ್ಣ ಹೇಳಿದನು ದಣಿದ ದನಿಯಲ್ಲಿ: "ಸೊಲೂಪ ತಡೀರಣ್ಣ. ಮಳೆ, ಗಾಳಿ ಒಂದೀಟು ಕಡಿಮೆಯಾದ ಮ್ಯಾಲೆ ಹೊಲ್ಡಾನ!"

ಗುತ್ತಿಯೂ ಹೊಯಿಗೆ ದಂಡೆಗೆ ಇಳಿದು ನಿಂತು, ತಿಮ್ಮಿಯನ್ನೂ ಕೈಹಿಡಿದು ಮೆಲ್ಲನೆ ಇಳಿಸಿದನು. ತಮ್ಮ ಸಾಮಾನಿನ ಗಂಟನ್ನು ಎತ್ತಿ ಕೊಟ್ಟನು ಅವಳ ಕೈಗೆ. ತನ್ನ ನಿರುದ್ವಿಗ್ನವಾದ ನಿತ್ಯಯಾತ್ರೆಯಲ್ಲಿ ಮಗ್ನವಾಗಿ ಮಹಾ ರಭಸದಿಂದ ಮುಂಬರಿಯುತ್ತಿದ್ದ ವರ್ಷಾಕಾಲದ ವಿಶಾಲ ನದೀಪ್ರವಾಹದತ್ತ ನಿರ್ನಿಮೇಷನಾಗಿ ದೃಷ್ಟಿ ಹಾಯಿಸಿದನು. ಎಲ್ಲಿಯೂ ಅವನ ಹುಲಿಯನ ಸುಳಿವಿರಲಿಲ್ಲ.

“ಏಯ್ ಕುಳ್ಳಸಣ್ಣ, ಈ ಸಮಾನು ಹೊತ್ತುಕೊಳ್ಳೊ.” ಚಂದ್ರಯ್ಯಗೌಡರು ಕರೆದಾಗಲೆ ಎಚ್ಚರಗೊಂಡಂತಾಗಿ ಅವರತ್ತ ತಿರುಗಿದನು ಗುತ್ತಿ:

“ಅಯ್ಯಾ, ಆ ನಾಯಿ ಇಲ್ಲೆಲ್ಲಾದ್ರೂ ಕೆಳಗೆ ದಡ ಹತ್ತಿದೆಯೇನು ನೋಡಿಕೊಂಡು ಬತ್ತೀನಿ....” ಎಂದನು ದುಃಖ ಧ್ವನಿಯಲ್ಲಿ.

“ನಿಂಗೇನು ಹುಚ್ಚೋ?ಬೆಪ್ಪೋ? ಈ ನೆರೇಲಿ ಅದು ದಡ ಸೇರೋದು ಹೌದೇನೊ? ಹೊಳೇಬುಡ ಸೇರಿದ್ದರೆ ಸೇರಿರಬೇಕು” ಎಂದರು ಸಿಂಗಪ್ಪಗೌಡರು. ಅವರ ಚಿತ್ತ ಸಂಗಲಿಪ್ತವಾಗಿರಲಿಲ್ಲ ಗುತ್ತಿಯ ಹೃದಯದಂತೆ.

“ಹೋಗಲಿ ಬಿಡಿ, ನೋಡಿಕೊಂಡೇ ಬರಲಿ” ಎಂದ ಶಾಮಯ್ಯಗೌಡರು, ಗುತ್ತಿ ಹೊಳೆಯ ದಂಡೆಯ ಗಿಡ ಮರ ಪೊದೆಗಳಲ್ಲಿ ನುಗ್ಗಿ ಕಣ್ಮರೆಯಾದ ಮೇಲೆ ಹೇಳಿದರು “ಪಾಪ! ಲೌಡಿಮಗ ಕಣ್ಣಲ್ಲಿ ನೀರು ಹಾಕ್ತಿದಾನೆ! ಬಹಳ ಪ್ರೀತಿಯಿಂದ ಸಾಕಿದ್ದ ಅಂತಾ ಕಾಣ್ತದೆ?”

ಚಂದ್ರಯ್ಯಗೌಡರು ದೂರದಲ್ಲಿ ತನ್ನ ಗಂಡ ಹೋದ ಅತ್ತಕಡೆ ಮುಖ ತಿರುಗಿಸಿಕೊಂಡು ನಿಂತಿದ್ದ ತಿಮ್ಮಿಗೆ “ಹೌದೇನೆ, ಹುಡುಗೀ? ಎಷ್ಟು ಕಾಲ ಆಗಿತ್ತೇ ಆ ನಾಯಿ ಅವನ ಹತ್ರ ಇರ್ತಾ?” ಎಂದರು.

ಅವಳು ಮಾತನಾಡಲೂ ಇಲ್ಲ; ಮುಖ ತಿರುಗಿಸಲೂ ಇಲ್ಲ.

ಸ್ವಲ್ಪ ಹೊತ್ತಾದ ಮೇಲೆ ಗುತ್ತಿ ಹಿಂತಿರುಗಿದನು, ಒಬ್ಬನೆಯೆ!

* * *

## ೫೭

ತೀರ್ಥಹಳ್ಳಿಯ ದೋಣಿಗಂಡಿಯಲ್ಲಿ ತುಂಗಾನದಿಯ ನೆರೆಯ ರಭಸಕ್ಕೆ ಸಿಕ್ಕಿ ಹುಲಿಯ ಕೊಚ್ಚಿಹೋದಂತೆ, ಮೇಗರವಳ್ಳಿ ಸೀಮೆಯ ಜನಮನದ ಹರಿಹೊನಲಿನಲ್ಲಿ ಕಂತಿ, ಗುತ್ತಿ ತಿಮ್ಮಿಯರ ನೆನಪೂ ಕೊಚ್ಚಿಹೋಯಿತು. ಯಾವುದು ನಡೆದಾಗ ತತ್ಸಮಯದಲ್ಲಿ ಬಹುಮುಖ್ಯವಾಗಿ ತೋರುತ್ತದೆಯೋ ಅದು ಸ್ವಲ್ಪಕಾಲ ಕಳೆಯುವುದರೊಳಗೆ ಅಮುಖ್ಯವಾಗಿ ತೋರತೊಡಗಿ ಕಡೆಗೆ ಮನದಿಂದಲೆ ಮಾಸಿಹೋಗುತ್ತದೆ. ಹಳೆಯ ನೀರು ಕೊಚ್ಚಿಹೋಗುವಂತೆ ಹೊಸ ನೀರು ನುಗ್ಗುತ್ತದೆ. ಇತರ ಘಟನೆಗಳು, ತತ್ಕಾಲದಲ್ಲಿ ಬಹಳ ಮುಖ್ಯವಾಗಿ ತೋರುವ ಸಂಗತಿಗಳು, ಹಳೆಯ ನೆನಪುಗಳನ್ನು ತಳ್ಳಿ ಅವು ಬಿಟ್ಟ ಜಾಗವನ್ನು ಆಕ್ರಮಿಸುತ್ತವೆ. ಹಾಗೆಯೆ ಗುತ್ತಿ ತಿಮ್ಮಿಯರ ಪರಾರಿಯ ಸಂಗತಿಯನ್ನು ತಳ್ಳಿ, ಹೂವಳ್ಳಿಯ ಮದುವೆಯಲ್ಲಿ ಹೆಣ್ಣು ಕಾಣೆಯಾದದ್ದು, ಮತ್ತು ಸಿಂಬಾವಿ ಭರಮೈಹೆಗ್ಗಡೆಯವರು ತಮ್ಮ ಬಾವ ಹಳೆಮನೆಯ ಹೆಂಚಿನಮನೆಯ ಶಂಕರ ಹೆಗ್ಗಡೆಯವರ ಮನೆಗೆ ಆ ರಾತ್ರಿಯೆ

ಮದುಮಗನ ವೇಷದಲ್ಲಿಯೇ ಹೆಂಡತಿ ಜಟ್ಟಮ್ಮನೊಡನೆ ಹೋಗಿದ್ದು, ಮತ್ತು ಮರುದಿನವೆ ಹಾಸಗೆ ಹಿಡಿದಿದ್ದ ಮುದುಕ ಹಳೆಮನೆ ಸುಬ್ಬಣ್ಣ ಹೆಗ್ಗಡೆಯವರೊಡನೆ ಪ್ರಸ್ತಾಪಿಸಿ, ತಿಮ್ಮಪ್ಪಹೆಗಗ್ಗಡೆಗೆ ತಮ್ಮ ತಂಗಿ ಲಕ್ಕಮ್ಮನನ್ನು ಕೊಡುವಂತೆಯೂ, ತಾವು ಅವನ ತಂಗಿ ಮಂಜಮ್ಮನನ್ನು ತಂದುಕೊಳ್ಳುವಂತೆಯೂ ನಿಶ್ಚಯ ಮಾಡಿದ್ದು, ಮೊದಲಾದ ಸಂಗತಿಗಳು ಜನಮನವನ್ನು ಕೆಲವು ಕಾಲ ಆಕ್ರಮಿಸಿದ್ದುವು. ಪಿಜಿಣನ ಆತ್ಮಹತ್ಯೆಯಂತಹ ಯಃಕಶ್ಚಿತ ವಿಷಯ ಸಣ್ಣ ಪುಟ್ಟ ಜನಗಳ ಮನಃಪ್ರಪಂಚದಲ್ಲಿ ಸ್ವಲ್ಪ ಕಲ್ಲೋಲಗಳನ್ನೆಬ್ಬಿಸಿದ್ದರೂ ದೊಡ್ಡವರಾರೂ ಅದನ್ನು ಅಷ್ಟಾಗಿ ಮನಸ್ಸಿಗೆ ಹಚ್ಚಿಕೊಂಡಿರಲಿಲ್ಲ. ಕೋಣೂರು ರಂಗಪ್ಪಗೌಡರಿಗೆ ಮಾತ್ರವೆ ಪಿಜಿಣನ ಸಾವು ಸ್ವಲ್ಪ ಆತಂಕಕರವಾಗಿತ್ತು. ಆದರೆ ಅವರು ಅವನ ಹೆಂಡತಿ ಅಕ್ಕಣಿಯನ್ನು ಮನೆಗೆ ಕರೆಯಿಸಿ, ಪಿಜಿಣನ ಸಾಲದ ಲೆಖ್ಖವನ್ನು ಹೇಳಿ, ಅದನ್ನು ದುಡಿದು ತೀರಿಸುವಂತೆ ತಾಕೀತು ಮಾಡಿ, ದೀನ ದುಃಖಿನಿಯಾಗಿದ್ದ ಅವಳಿಂದ ಧರ್ಮಸ್ಥಳದ ದೇವರ ಮೇಲೆ ಆಣೆ ಹಾಕಿಸಿಕೊಂಡು, ತಮ್ಮ ಹಣ ಮುಳುಗಿ ಹೋಗುವ ಭಯದಿಂದ ತಕ್ಕಮಟ್ಟಿಗೆ ಪಾರಾಗಿದ್ದರು.

ಮಳೆಗಾಲ ಹಿಡಿದಿದ್ದುದರಿಂದ ಬೇಸಾಯಗಾರರ ಗಮನವೆಲ್ಲ ಅಗೋಡಿಯ ಮೇಲೆಯೂ, ಉಳುವುದು ಬಿತ್ತುವುದು ಅಂಚು ಕಡಿಯುವುದು ಗೊಬ್ಬರ ಹರಗುವುದು ಬೇಲಿ ಕಟ್ಟುವುದು ಒಡ್ಡು ಹಾಕುವುದು ಇತ್ಯಾದಿ ರೈತ ಕರ್ತವ್ಯಗಳ ಮೇಲೆಯೂ, ಕೂಣಿ ತಯಾರಿಸುವುದು, ಕೂಣಿ ಹಾಕುವುದು, ಹಳ್ಳಕ್ಕೆ ಯಾಪೆ ಕಟ್ಟುವುದು, ಹತ್ತು ಮೀನು ಕಡಿಯುವುದು ಮೊದಲಾದ ಮೀನು ಬೇಟೆಯ ಮೃಗಯಾವ್ಯಸನದಲ್ಲಿಯೂ ಆಸಕ್ತವಾಗಿತ್ತು. ಮೈಬೆವರಿ ದುಡಿವ ಗೆಯ್ಮೆಯ ನಡುನಡುವೆ ತುಸು ವಿರಾಮ ದೊರೆತಾಗ ಮಾತ್ರ, ಊಟಕ್ಕೆ ಉಪ್ಪಿನಕಾಯಿ ಬಾಳೆಲೆಯ ಮೂಲೆಯಲ್ಲಿ ಇರುವ ಹಾಗೆ, ಪರಚರ್ಚೆ ಪರನಿಂದೆಗಳು ಇರುತ್ತಿದ್ದುವಷ್ಟೆ! ಕಿತಾಪತಿಯ ವ್ಯಾಪ್ತಿಗೆ ಜಿಹ್ವಾಚಪಲತೆಯ ವಲಯವನ್ನು ದಾಟಿ ಕರ್ಮರಂಗಕ್ಕಿಳಿಯುವಷ್ಟು ಪುರಸತ್ತೂ ಇರುತ್ತಿರಲಿಲ್ಲ!

ಹೂವಳ್ಳಿ ವೆಂಕಟಣ್ಣ ಮದುವೆಯಂತಹ ಮಂಗಳ ಕಾರ್ಯದ ಸಮಯದಲ್ಲಿ ಆಕಸ್ಮಿಕವೆಂಬಂತೆ ತೀರಿಕೊಂಡದ್ದು ವ್ಯಸನದ ವಿಷಯವಾಗಿದ್ದರೂ ಅವನ ಸಾವೆ ಅನೇಕ ಸಮಸ್ಯೆಗಳನ್ನು ಪರಿಹರಿಸಿತ್ತು; ಅಥವಾ ಅವನು ಬದುಕಿದ್ದರೆ ಉದ್ಭವಿಸುತ್ತಿದ್ದ ಅನೇಕ ಕಠಿನ ಸಮಸ್ಯೆಗಳ ಕಠೋರ ತೀಕ್ಷ್ಣತೆಯನ್ನು ಸೌಮ್ಯಗೊಳಿಸಿತ್ತು. ಅವನು ಸಾಯದಿದ್ದರೆ ಅವನೇ ಕಾರಣವಾಗಿ ಅವನಿಂದಲೆ ಹೊಮ್ಮುತ್ತಿದ್ದ ತೊಂದರೆಗಳು ಪರಿಹಾರವಾದದ್ದು ಸುವಿದಿತವಷ್ಟ! ಅವನು ಬದುಕಿದ್ದರೆ ಅವನಿಗೆ ಸಾಲ ಕೊಟ್ಟವರು, ಅವನಿಂದ ಜಮೀನು ಬರೆಸಿಕೊಂಡವರು, ಅವನು ಜಾಮೀನು ನಿಂತವರು, ಅವನಿಗೆ ಜಾಮೀನಾದವರು, ಆಚಾರ ಜಾತಿ ಕುಲ ಮತ ಮೊದಲಾದ ನಂಬಿಕೆಗಳ ಕಾರಣವಾಗಿ ಹುಟ್ಟಿಕೊಳ್ಳುತ್ತಿದ್ದ ಪೀಡನೆಗಳು- ಇವೆಲ್ಲ ಅವನ ಸುತ್ತ ಹೆಡರಯೆತ್ತಿ, ಅವನ ಮತ್ತು ಅವನ ಅಧೀನದಲ್ಲಿದ್ದು ಅವನನ್ನೆ ನಂಬಿದವರ ಬದುಕನ್ನು ಹಿಂಡದೆ ಬಿಡುತ್ತಿರಲಿಲ್ಲ. ಈಗ ಮ್ಖುತ್ಯು ಅದಕ್ಕೆಲ್ಲ ಒಂದು ರೀತಿಯಲ್ಲಿ ತಡೆ ಕಟ್ಟಿತ್ತು.

ಸಿಂಬಾವಿ ಭರಮೈಹೆಗ್ಗಡೆಯವರ ಹೆಂಡತಿ, ಜಟ್ಟಮ್ಮ, ಈ ಮದುವೆ ಹೇಗಾದರೂ ನಿಂತು, ತನು ಮುಂಡೆಯಾಗುವುದು ತಪ್ಪಿದರೆ ಸಾಕಲ್ಲಾ ಎಂದು ಹಾರೈಸುತ್ತಿದ್ದಳು; ಮತ್ತು, ತಿಮ್ಮಪ್ಪ ಹೆಗ್ಗಡೆಯೊಡನೆ, ಹೆಣ್ಣು ತಪ್ಪುವಂತೆ ಮಾಡುವ ಒಳಸಂಚಿಗೂ ಮೌನದ ಸಮ್ಮತಿ ನೀಡಿದ್ದಳು. ಆದ್ದರಿಂದಲೇ ಅವಳು ಮದುಮಗನಾಗಿದ್ದ ತನ್ನ ಗಂಡನಿಗೆ, ಮದುಮಗಳಾಗುವವಳು ಕಣ್ಮರೆಯಾಗಿದ್ದಾಳೆ ಎಂಬ ಸುದ್ದಿ ತಿಳಿಯುವುದಕ್ಕೆ ಮೊದಲೇ ಹೆಣ್ಣಿನ ತಂದೆಗೆ ವಿಪರೀತ ಕಾಯಿಲೆಯಾಗಿರುವುದರಿಂದ ಆವೊತ್ತಿನ ಮದುವೆ ನಿಲ್ಲಬೇಕಾಗುತ್ತದೆ ಎಂಬ ಶಾಸ್ತ್ರದ

ನಿಷೇಧವನ್ನು ಒತ್ತಿ ಹೇಳಿದ್ದಳು. ಅಷ್ಟರಲ್ಲಿ ವೆಂಕಟಣ್ಣ ತೀರಿಕೊಂಡನೆಂಬ ವಾರ್ತೆ ಬಂದೊಡನೆ ಸೂತಕದ ಮನೆಯಲ್ಲಿ ಮದುವಣಿಗ ನಿಲ್ಲಬಾರದೆಂಬ ಅಡ್ಡಿಯೊಡ್ಡಿ, ತನ್ನ ಗಂಡನನ್ನು ಹಳೆಮನೆಗೆ ತನ್ನ ಅಣ್ಣನಲ್ಲಿಗೆ ಸಾಗಿಸಿಕೊಂಡು ಹೋಗಿದ್ದಳು. ಅಲ್ಲಿ ತನು ಪೂರ್ವಭಾವಿಯಾಗಿ ಯೋಜಿಸಿದಂತೆ, ಹಿಂದಿನ ಕಹಿಯನ್ನೆಲ್ಲ ನುಂಗಿಕೊಂಡು, ಮಂಜಮ್ಮನನ್ನು ತನ್ನ ಗಂಡನಿಗೆ ತಂದುಕೊಂಡು ಲಕ್ಕಮ್ಮನನ್ನು ತಿಮ್ಮಪ್ಪಹೆಗ್ಗಡೆಗೆ ಕೊಡುವ ಏರ್ಪಾಡಿಗೆ ಎಲ್ಲರೂ ಒಪ್ಪುವಂತೆ ಮಾಡಿದ್ದಳು.

ಹಳೆಮನೆ ಮಂಜಮ್ಮನನ್ನು ತನಗೆ ಸವತಿಯಾಗಿ ತಂದುಕೊಳ್ಳಲು ಒಪ್ಪದೆ ಹೂವಳ್ಳಿ ವೆಂಕಪ್ಪನಾಯಕರ ಮಗಳು ಚಿನ್ನಮ್ಮನನ್ನು ಗೊತ್ತು ಮಾಡಿ ಒಪ್ಪಿಸಿ, ಮದುವೆಗೆ ಏರ್ಪಾಟು ಮಾಡಿದ ತನ್ನ ಹೆಂಡತಿಯೆ ತುದಿಯಲ್ಲಿ ಆ ಸಂಬಂಧ ಬೇಡ ಎಂದು ಹಟ ಹಿಡಿದುದರ ಅರ್ಥ ಭರಮೈಹೆಗ್ಗಡೆಯವರಿಗೆ ಮೊದ ಮೊದಲು ಬಗೆಹರಿಯಲಿಲ್ಲ. ಕೊನೆಗೆ ಗೊತ್ತಾಯಿತು, (ತಿಮ್ಮಪ್ಪ ಹೆಗ್ಗಡೆ ಜಟ್ಟಮ್ಮ ಹೆಗಡಿತಿಯವರ ಕಿವಿಯಲ್ಲಿ ಊದಿದ್ದ ಅಮಂಗಳ!) ಹೆಣ್ಣಿನ ಜಾತಕದಲ್ಲಿ ಅವಳು ಮದುವೆಯಾದ ಸ್ವಲ್ಪ ಕಾಲದಲ್ಲಿಯೆ ವೈಧವ್ಯ ಪ್ರಾಪ್ತಿ ಇದೆಯಂತೆ ಎಂದು. ಭರಮೈಹೆಗ್ಗಡೆಗೆ ಜೋತಿಷ್ಯ ಜಾತಕಾದಿಗಳಲ್ಲಿ ಜಟ್ಟಮ್ಮ ಹೆಗ್ಗಡಿತಿಗೆ ಇದ್ದಷ್ಟೆ ನಂಬಿಕೆ ಹೆದರಿಕೆ ಎಲ್ಲ ಇತ್ತು. ಕೆಟ್ಟ ಸುದ್ದಿ ಕಿವಿಗೆ ಬಿದ್ದಾಗ ತುಂಬ ಭಯವೂ ಅಯ್ತು. ಅದರಲ್ಲಿಯೂ ಮೂರು ಹೊತ್ತೂ ಅದೂ ಇದೂ ಕಾಯಿಲೆ ಕಸಾಲೆಯಿಂದ ನರಳುತ್ತಿದ್ದ ಅವರನ್ನು ಕೊಂಡೊಯ್ಯಲು ಮೃತ್ಯು ಗ್ರಹಗತಿಯನ್ನೇ ನಿರೀಕ್ಷಿಸಬೇಕಾಗಿಯೂ ಇರಲಿಲ್ಲ; ಪ್ರಕೃತಿ ವ್ಯಾಪಾರದ ವಿಧಾನವೆ ಯಥೇಚ್ಛವಾಗಿ ಸಾಗಿತ್ತು! ಆದರೆ ಏನು ಮಾಡುವುದು? ಕಲ್ಲೂರ ಸಾಹುಕಾರ ಮಂಜ ಭಟ್ಟರಲ್ಲಿದ್ದ ವೆಂಕಟಣ್ಣನ ಅಪಾರ ಸಾಲಕ್ಕೆ ತಾನು ಜಾಮೀನಾಗಿ ನಿಂತಾಗಿದೆ. ಮದುವೆ ಬೇಡ ಎಂದು ತಾನೆ ಹೇಳಿದರೆ ಹಣ್ಣು ತಪ್ಪುತ್ತದೆ, ಗಂಟೂ ಮುಳುಗುತ್ತದೆ ಆದ್ದರಿಂದ ವಿಶೇಷ ದಕ್ಷಿಣೆಯ ಪ್ರಭಾವದಿಂದ ಜೋಯಿಸರ ಆಶೀರ್ವಾದ ಪಡೆದು, ಜಾತಕದಲ್ಲಿರಬಹುದಾದ ಕಂಟಕಕ್ಕೆ ಶಾಂತಿ ಮಾಡಿಸಿ, ಚಿನ್ನಮ್ಮನನ್ನು ಕೈಹಿಡಿಯಲು ಮುಂದುವರಿದಿದ್ದರು.

ಚಿನ್ನಮ್ಮ ಆತ್ಮಹತ್ಯೆಯನ್ನೇ ಮಾಡಿಕೊಂಡಿದ್ದರೂ, ವೆಂಕಟಣ್ಣ ಬದುಕಿದ್ದರೆ, ಸಿಂಬಾವಿ ಹೆಗ್ಗಡೆಯವರು ಕಾನೂನು ಪ್ರಕಾರ ತಮ್ಮ ಹಣಕ್ಕೆ ಲೋಪ ಬರದಂತೆ ನೋಡಿಕೊಲ್ಳುತ್ತಿದ್ದರು. ಚಿನ್ನಮ್ಮ ತಮ್ಮನ್ನು ತಿರಸ್ಕರಿಸಿ, ಇನ್ನೊಬ್ಬನಿಗಾಗಿ ಓಡಿ ಹೋಗಿದ್ದರಿಂದಲೆ ಮದುವೆ ತಪ್ಪಿ, ವೆಂಕಟಣ್ಣ ಬದುಕಿದ್ದರಂತೂ ಹೇಳಲೆ ಬೇಕಾಗಿಲ್ಲ, ಹೆಗ್ಗಡೆ ತನ್ನ ಪ್ರತೀಕಾರದ ಪೀಡನಾ ಸಾಮರ್ಥ್ಯವನ್ನೆಲ್ಲ ನಾನಾ ಮುಖಗಳಿಂದ ಪ್ರಯೋಗಿಸದೆ ಬಿಡುತ್ತಿರಲಿಲ್ಲ. ಆದರೆ ಈಗ ಹೆಗ್ಗಡೆಗೆ ತಿಳಿದಿದ್ದಂತೆ, ಮದುವೆ ನಿಲ್ಲುವುದಕ್ಕೆ ಮುಖ್ಯ ಕಾರಣವಾದದ್ದು ವೆಂಕಟಣ್ಣನ ಮರಣದ ಅಶುಭವೆ! ಹೆಣ್ಣು ಓಡಿ ಹೋಗಿತ್ತು ಎಂಬ ಗುಸು ಗುಸು ಸುದ್ದಿಯೂ ಅವರ ಕಿವಿಗೆ ತರುವಾಯ ಮುಟ್ಟಿತ್ತು. ಆದರೆ ಅದೇ ಕಾರಣವಾಗಿ ಮದುವೆ ನಿಂತಿತು ಎಂದರೆ, ತಮ್ಮ ಗೌರವಕ್ಕೂ ಪ್ರತಿಷ್ಠೆಗೂ ಅತ್ಯಂತ ಹಾನಿ ಮತ್ತು ಅವಮಾನ ಒದಗಿದಂತಾಗಿ ತೇಜೋವಧೆಯಾಗುತ್ತದೆ ಎಂಬ ಅಂತಃಕಾರಣದಿಂದ ಆ ಸುದ್ದಿಗೆ ಅವರು ಬಹಿರಂಗಮಾನ್ಯತೆ ಕೊಡಲಿಲ್ಲ. ಅದನ್ನು ಗಮನಿಸದಂತೆಯೆ ಇರುವವರಂತೆ ನಟಿಸಿ, ಅದಕ್ಕೆ ತಿರಸ್ಕಾರದ ಸೋಗು ಹಾಕಿದ್ದರು. ಅಶುಭ ಘಟನೆ ಪ್ರಾಪ್ತವಾದುದರಿಂದ ತಾವೇ ಲಗ್ನವನ್ನು ಮುಂದುವರಿಸಲು ಒಪ್ಪದೆ, ಮುರಿದು, ಬೇರೆ ಸಂಬಂಧದ ಕಡೆ ತಿರುಗಿದ್ದೇವೆ ಎನ್ನುವಂತೆ ವರ್ತಿಸಿದ್ದರು. ಆದ್ದರಿಂದಲೆ ಚಿನ್ನಮ್ಮ ಓಡಿಹೋಗಿದ್ದ ಸಂಗತಿಯನ್ನಾಗಲಿ ಮುಕುಂದಯ್ಯನೆ ಆ ಎಲ್ಲ ವ್ಯೂಹದ ಹಿಂದಿದ್ದ ಸಂಚಾಲಕ ಶಕ್ತಿ ಎಂಬ ವಿಚಾರವನ್ನಾಗಲಿ ಅವರು ಪ್ರಸ್ತಾಪಿಸುವ ಗೋಜಿಗೆ ಹೋಗಿರಲಿಲ್ಲ; ಮಾತಿನಲ್ಲಿ ಮಾತ್ರವಲ್ಲದೆ ಮನಸ್ಸಿನಲ್ಲಿಯೂ ಅವರು ಆ ವಾರ್ತೆಗೆ ಮುಟ್ಟುಗೋಲು ಹಾಕಿಕೊಂಡಿದ್ದರು.

ಇನ್ನು ಅವರನ್ನು ಬಹುವಾಗಿ ಪೀಡಿಸುತ್ತಿದ್ದ ವಿಷಯವೆಂದರೆ, ವೆಂಕಟಣ್ಣನಿಂದ ತಮಗೆ ಬರಬೇಕಾಗಿದ್ದ ಸಾಲದ ಹಣ. ಹೆಣ್ಣು ಹೆಂಗಸರೆ ವಾರಸುದಾರರಾಗಿ ಉಳಿದುಕೊಂಡಿರುವ ಹೂವಳ್ಳಿಯ ಗದ್ದೆ ತೋಟ ಮನೆಗಳನ್ನೆಲ್ಲ ತಮಗೆ ಬರಬೇಕಾಗಿದ್ದ ಸಾಲಕ್ಕಾಗಿ ವಶಪಡಿಸಿಕೊಳ್ಳುವುದು ಸಾಧ್ಯವಿದ್ದರೂ ಹಾಗೆ ಮಾಡಲು ಹೊರಟರೆ ತಾವು ಮೂರು ಹೊತ್ತೂ ಹೊಕ್ಕು ಬಳಸಬೇಕಾಗಿದ್ದ ಹತ್ತಿರದ ನೆಂಟರಿಷ್ಟರ ವಿರೋಧ-ದ್ವೇಷ-ತಿರಸ್ಕಾರಗಳಿಗೆ ಒಳಗಾಗಬೇಕಾಗುತ್ತದೆ. ಆ ಮುಸುಗಿನ ಮುಜಗರ ಬಾಳನ್ನೆಲ್ಲ ಕಹಿಗೊಳಿಸದೆ ಬಿಡುವುದಿಲ್ಲ. ಇದನ್ನೆಲ್ಲ ದೀರ್ಘವಾಗಿ ಆಲೋಚಿಸಿದ ಭರಮೈಹೆಗ್ಗಡೆಗೆ ಹೊಳೆದಿದ್ದುದೆಂದರೆ-ಒಂದೇ ಉಪಾಯ: ಹೇಗಾದರೂ ಮಾಡಿ ತಮ್ಮ ಜಾಮೀನಿನಿಂದ ಬಿಡಿಸಿಕೊಂಡು, ಪುನಃ ಮಂಜಭಟ್ಟರೇ ಆ ಭಾರ ಹೊರುವಂತೆ ಮಾಡುವುದು! ಬ್ರಾಹ್ಮಣರಾದ ಅವರಿಗೆ ಒಕ್ಕಲಿಗರ ನೆಂಟರಿಷ್ಟರ ಹಂಗು ಇರುವುದಿಲ್ಲವಾದ್ದರಿಂದ ಅವರು ಹೂವಳ್ಳಿಯವರಿಂದ ಸಾಲ ವಸೂಲು ಲಮಾಡಲು ಯಾವ ಕ್ರಮವನ್ನು ಬೇಕಾದರೂ ತೆಗೆದುಕೊಳ್ಳಬಹುದಲ್ಲವೆ? ಬೇರೆ ಜಾತಿಯವರಾದ ಅವರಿಗೆ ಇವರ ಸಮಾಜದ ಹೊಣೆಗಾರಿಕೆ ಯಾವುದೂ ಇರುವುದಿಲ್ಲವಷ್ಟೆ! ಅಲ್ಲದೆ ಸಿರಿವಂತ ಹಾರುವರು ಮಾಡಿದ್ದನ್ನು ತಪ್ಪು ಎನ್ನುವ ಕೆಚ್ಚು ಉಳಿದವರಿಗೆಲ್ಲಿ?

ಆದರೆ ಭರಮೈಹೆಗ್ಗಡೆಗೆ ಗೊತ್ತಿರದೆ ಇದ್ದು, ಹೂವಳ್ಳಿ ವೆಂಕಟಪ್ಪನಾಯಕರು ಒಳಗೊಳಗೆ ಹಾಕಿಟ್ಟಿದ್ದ ಗಂಟಲು ಗಾಳವೊಂದು ಕಲ್ಲೂರು ಮಂಜಭಟ್ಟರಿಗೆ ಗೊತ್ತಾಗಿದ್ದುದರಿಂದಲೆ ಅವರು ಅಷ್ಟು ಸುಲಭವಾಗಿ, ತಮ್ಮ ಸಾಲಕ್ಕಿಂತಲೂ ಕಡಿಮೆ ಮೊತ್ತಕ್ಕೇ ಭರಮೈಹೆಗ್ಗಡೆಯವರ ಕೈಲಿ ಜಾಮೀನು ಪತ್ರ ಬರೆಯಿಸಿಕೊಂಡು, ತಮ್ಮ ಕೈ ತೊಳೆದುಕೊಂಡಿದ್ದರು ಎಂಬುದಿನ್ನೂ ಇವರಿಗೆ ತಿಳಿದಿರಲಿಲ್ಲ!

* * *

ಅಂದು ಅಪರಾಹ್ನದ ಹೊತ್ತಿಗೆ ವೆಂಕಟಣ್ಣನ ಕಳೇಬರದ ಅಗ್ನಿಸಂಸ್ಕಾರವನ್ನೆಲ್ಲ ಮುಗಿಸಿ ಎಲ್ಲರೂ ತಮ್ಮ ತಮ್ಮ ಮನೆಗಳಿಗೆ ಹೊರಟು ಹೋಗಿದ್ದರು. ಹೂವಳ್ಳಿ ಮನೆ 'ಗಾಳ್' ಎಂದು ಸುಡುಗಾಡಿನಂತೆ ಸದ್ದಿಲಿಯಾಗಿತ್ತು. ಸೋನೆಮಳೆ ಹಿಡಿದು ಹೊಡೆಯುತ್ತಿತ್ತು. ಬೆಟ್ಟಳ್ಳಿ ದೇವಯ್ಯಗೌಡರು ಮಾತ್ರ ತಿಮ್ಮಪ್ಪಹೆಗ್ಗಡೆಯ ಕೈಲಿ ಮುಕುಂದಯ್ಯ ಹೇಳಿಕಳುಹಿಸಿದ್ದರಿಂದ ದಾರಿ ಕಾಯುತ್ತಾ ಉಳಿದುಕೊಂಡಿದ್ದರು. ತಿಮ್ಮಪ್ಪಹೆಗ್ಗಡೆ ತಾನು ಬೈಗಿನ ಹೊತ್ತಿಗೆ, ಮುಕುಂದಯ್ಯ ಚಿನ್ನಮ್ಮನನ್ನು ಕರೆದುಕೊಂಡು ಬರುವಷ್ಟರಲ್ಲಿ, ಬಂದುಬಿಡುತ್ತೇನೆ ಎಂದು ಹೇಳಿ ಹಳೆಮನೆಗೆ ಹೋಗಿದ್ದನು, ತನ್ನ ಮತ್ತು ಜಟ್ಟಕ್ಕನ ಸಂಚು ಫಲಕಾರಿಯಾಗುವಂತೆ ಪಾತ್ರ ವಹಿಸಲಿಕ್ಕೆ.

ಬೈಗು ಚೆನ್ನಾಗಿಯೆ ಕಪ್ಪಾಗಿತ್ತು. ಇದುವರೆಗೂ ವೆಂಕಟಣ್ಣ ಕುಳಿತುಕೊಳ್ಳುತ್ತಿದ್ದೆಡೆ ಹೂವಳ್ಳಿಯ ಜಗಲಿಯಲ್ಲಿ ಕುಳಿತು ಮತ್ತೆ ಮತ್ತೆ ನಶ್ಯ ಹಾಕಿಕೊಳ್ಳುತ್ತಿದ್ದ ದೇವಯ್ಯನಿಗೆ ಕಾಣಿಸಿತು, ಕಂಬಳಿಕೊಪ್ಪೆ ಹಾಕಿಕೊಂಡಿದ್ದ ಇಬ್ಬರು ಬಸಿರಿಮರದ ಪಕ್ಕದ ದನ ಓಣಿಯ ಕೆಸರು ಹಾದಿಯಲ್ಲಿ ಮನೆಯ ಕಡೆ ಗುಡ್ಡದಿಂದ ಇಳಿದುಬರುತ್ತಿದ್ದುದು, ಅವನಿಗೆ ಗೊತ್ತಾಯಿತು ಮುಕುಂದಯ್ಯ ಚಿನ್ನಮ್ಮನನ್ನು ಕರೆತರುತ್ತಿರುವುದು. ಬೇಗನೆ ಕುಳಿತಲ್ಲಿಂದ ಎದ್ದು ಒಳಗೆ ಹೋದನು, ಚಿನ್ನಮ್ಮನ ಅಜ್ಜಿ ಮಲಗಿದ್ದ ಕೋಣೆಗೆ.

ಚೆನ್ನಮ್ಮ ಮುಕುಂದಯ್ಯನ ಹಿಂದೆ ಅಂಗಳವನ್ನು ದಾಟಿ, ಜಗಲಿಗೆ ಹತ್ತಲುಹಾಕಿದ್ದ ಕಲ್ಲು ಮೆಟ್ಟಿಲ ಮೇಲೆ ಅವನ ಹಿಂದೆಯೆ ನಿಂತಳು.ಮುಕುಂದಯ್ಯ ಕೆಸರು ಹಲಗೆಯ ಮೇಲೆ ತಮ್ರದ ಹಂಡೆಯಲ್ಲಿದ್ದ ನೀರನ್ನು ಹಿತ್ತಾಳೆಯ ತಂಬಿಗೆಯಲ್ಲಿ ಮೊಗೆದು ಮೊಗೆದು ಕಾಲು ತೊಳೆದುಕೊಳ್ಳುತ್ತಿರಲು, ಚೆನ್ನಮ್ಮ ತನಗೆ ಪರಿಚಿತವಾಗಿದ್ದ ಮನೆಯ ನಾಲ್ಕೂ ದಿಕ್ಕಿಗೆ ಆಗಂತುಕಳಂತೆ  ಕಣ್ಣುಹಾಯಿಸಿದಳು, ಅಪರಿಚಿತವೊ ಎಂಬಂತೆ:

ಮನೆ ನಿಃಶಬ್ದವಾಗಿತ್ತು. ಏನೋ ಹೆದರಿಕೆ ಹುಟ್ಟಿಸುವಂತೆ ನಿಃಶಬ್ದವಾಗಿತ್ತು. ಇನ್ನೂ ಜಗಲಿಗೆ ದೀಪ ಹಚ್ಚಿರಲಿಲ್ಲವಾದ್ದರಿಂದ ಮನೆಯನ್ನೆಲ್ಲ ದಟ್ಟಮಬ್ಬು ಕವಿದಿತ್ತು. ಮದುವೆಗೆಂದು ಕಟ್ಟಿದ್ದ ಚಪ್ಪರ, ಧಾರೆಯ ಮಂಟಪ ಮೊದಲಾದುವೆಲ್ಲ ಬಿಕೋ ಎನ್ನುತ್ತಿದ್ದುವು, ಅಲಂಕೃತವಾಗಿದ್ದ ಶವದಂತೆ. ನಿನ್ನೆ ತಾನೆ ನೂರಾರು ಜನದ ಸಂದಣಿಯಿಂದ ಗಿಜಿಬಿಜಿ ಎನ್ನುತ್ತಿದ್ದ ಮನೆ ಇಂದುಕ ಹಾಳು ಬಿದ್ದ ದೇಗುಲದಂತೆ ಭೀಷಣಭ್ರುಕುಟಿಯಾಗಿತ್ತು. ಅಂಗಳದ ನಡುವೆಯಿದ್ದ ತುಳಸಿಕಟ್ಟೆಯ ದೇವರೂ, ಚೆನ್ನಮ್ಮ ಮನೆಯನ್ನು ಪ್ರವೇಶಿಸುವಾಗ ಅಭ್ಯಾಸ ಬಲದಿಂದೆಂಬಂತೆ ಅದಕ್ಕೆ ಕೈ ಮುಗಿದಿದ್ದರೂ, ಕರುಣಪಾತ್ರವಾಗಿ ತೋರಿ ಚೆನ್ನಮನಿಗೆ ದುಃಖವುಕ್ಕಿಬಂದು, ಅದುವರೆಗೂ ತಡೆಹಿಡಿದಿದ್ದ ಕಣ್ಣೀರು ಧಾರಾಕಾರವಾಗಿ ಹರಿಯತೊಡಗಿತ್ತು.

ಮುಕುಂದಯ್ಯ ಕಾಲು ತೊಳೆದುಕೊಂಡು ಜಗಲಿಗೆ ಹೋಗಿ, ಕಂಬಳಿಕೊಪ್ಪೆಯನ್ನು ಕೊಡವಿ ಬದಿಗಿಟ್ಟು, ಕೆಸರುಹಲಗೆಯ ಮೇಲೆ ಹಾಕಿದ್ದ ಜಮಖಾನದ ಮೇಲೆ ಕುಳಿತನು. ಚೆನ್ನಮ್ಮನೂ ಕೆಸರು ಹೋಗುವಂತೆ ಚೆನ್ನಾಗಿ ಕೈಕಾಲು ಮುಖ ತೊಳೆದುಕೊಂಡು, ಮೈ ಭಾರವಾದಂತೆ ಮೆಲ್ಲನೆ ನಡೆದು ಒಳಗೆ ಹೋದಳು, ಕಂಬಳಿಕೊಪ್ಪೆಯನ್ನು ಅಂಗಳಕ್ಕೆ ಮಳೆ ನೀರಿಳಿಯುವಂತೆ ಕೊಡಹಿ, ಕೈಯಲ್ಲಿಯೆ ಹಿಡಿದುಕೊಂಡು. ಅವಳಿಗೆ ಕಾಲು ಸಣ್ಣಗೆ ನಡುಗ ತೊಡಗಿತ್ತು. ಕಲು ತೊಳೆದುಕೊಳ್ಳುತ್ತಿದ್ದಾಗ ಮದುಮಗಳಾಗಿ ಹಾಕಿಕೊಂಡಿದ್ದ ಸುತ್ತುಕಾಲುಂಗುರಗಳನ್ನು ಕಂಡು ಅವಳ ಹೃದಯಕ್ಕೆ ದುಃಖಸ್ಮೃತಿಯ ಮಿಂಚು ಮುಟ್ಟಿದಂತಾಗಿತ್ತು.

ಚೆನ್ನಮ್ಮ ಮನೆಯನ್ನು ಸಮೀಪಿಸುತ್ತಿದ್ದಾಗ ಇದ್ದಕ್ಕಿದ್ದ ಹಾಗೆ ತಂದೆಯ ಭಯದಿಂದ ನಡೆ ಕುಗ್ಗಿತ್ತು. ತನ್ನ ತಂದೆ ತೀರಿಕೊಂಡ ಸುದ್ದಿಯನ್ನು ಕೇಳಿದ್ದರೂ ಏಕೋ ಅವಳಿಗೆ ಫಕ್ಕನೆ ಆ ಸುದ್ದಿಯಲ್ಲಿ ನಂಬಿಕೆ ತಪ್ಪಿತ್ತು. ತಾನು ಪ್ರವೇಶಿಸುತ್ತಿದ್ದಂತೆ ಭಯಂಕರಾಕಾರದ ರೌದ್ರರೋಷದ 'ಅಪ್ಪಯ್ಯ' ತನ್ನನ್ನೂ ಮುಕುಂದ ಭಾವನನ್ನೂ ಒದ್ದು ಗುದ್ದಿ, ಉಗುಳಿ, ದೊಣ್ಣೆಯಿಂದ ಅಪ್ಪಳಿಸುವ ಚಿತ್ರವನ್ನು ಮುನ್ನೆನೆದು, ಸಣ್ಣಗೆ ಚೀರಿದ್ದಳು! ಅವಳ ಮುಂದೆ ನಡೆಯುತ್ತಿದ್ದ ಮುಕುಂದಯ್ಯ ನಿಂತು, ತಿರುಗಿ ನೋಡಿ, "ಏನಾಯ್ಎ? 'ಎಡವಿದೇನೆ? ಮುಳ್ಳು ಹೆಟ್ತೇನೆ?" ಎಂದು ಕೇಳಿದ್ದಕ್ಕೆ ಚೆನ್ನಮ್ಮ ಮುಖದ ಸುತ್ತ ಬಿಗಿದು ಹಿಡಿದಿದ್ದ ಕಂಬಳಿಕೊಪ್ಪೆಯೊಳಗಿಂದಲೆ ಸೋತದನಿಯಲ್ಲಿ "ಏನೂ ಇಲ್ಲ" ಎಂದಿದ್ದಳಷ್ಟೆ.

ಮನೆಯನ್ನು ಪ್ರವೇಶಿಸಿದೊಡನೆ ಆ ನಿಃಶಬ್ದತೆ, ಆ ನಿರ್ಜನತೆ, ಆ ನಿಶ್ಚಲತೆಯನ್ನು ಕಂಡು 'ಅಪ್ಪಯ್ಯ' ತೀರಿಕೊಂಡಿದ್ದ ವಿಷಯದಲ್ಲಿ ಅವಳಿಗೆ ಏನೂ ಸಂಶಯ ಉಳಿಯಲಿಲ್ಲ. ತಂದೆಯ ಸಾವಿಗಾಗಿ ನಿಜವಾಗಿಯೂ ದುಃಖ ಉಕ್ಕಿ ಬಂತು. ಅಪ್ಪಯ್ಯನ ಒರಟುತನ, ನಿಷ್ಠುರತೆ, ಕ್ರೌರ್ಯ, ಹಠಮಾರಿತನ, ದುಡುಕು, ದುಂದುಗಾರಿಕೆ, ಅದೂರದೃಷ್ಟಿ, ಅನೀತಿ ಜೀವನ ಮೊದಲಾದುವೆಲ್ಲ, ಬಹುಶಃ ಇನ್ನೆಂದೂ ಅವುಗಳಿಂದ ತನಗೆ ತೊಂದರೆ ಒದಗದೆಂಬ ಅಂತರ್ಮನಸ್ಸಿನ ಧೈರ್ಯದಿಂದಿರಬಹುದು, ಮರೆತುಹೋದಂತಾಗಿ ಅವನ ಪ್ರೀತಿ, ದಯೆ, ಮುದ್ದು ಇತ್ಯಾದಿ ಪಿತೃವಾತ್ಸಲ್ಯ ಜೀವಿತದ

ಶುಕ್ಲಪಕ್ಷವೆ ಅವಳ ಮನಸ್ಸಿಗೆ ಬಂದು, ತನ್ನ ತಾಯಿ ಹೋದಾಗ ಅಂದು ಅನುಭವಿಸಲಾರದಿದ್ದ ಸಂಕಟವನ್ನು ಚಿನ್ನಮ್ಮ ಇಂದು ಅನುಭವಿಸಿದ್ದಳು.

ಒಳಗೆ ಹೋಗಿದ್ದ ದೇವಯ್ಯ ಅರೆಗತ್ತಲೆ ಕವಿದಿದ್ದು ಚಿನ್ನಮ್ಮನ ಅಜ್ಜಿ ಮಲಗಿದ್ದ ಕೋಣೆಯ ಬಾಗಿಲೆಡೆ, ಒಳಹೊಕ್ಕು ನಿಂತು "ಅಜ್ಜೀ!ಅಜ್ಜೀ!" ಎಂದು ಹಲವು ಸಾರಿ ಕರೆದ ಮೇಲೆಯೆ ಅಜ್ಜಿ, ಎಚ್ಚರಗೊಂಡಂತೆ, ನರಳುತ್ತಿದ್ದ ದನಿಯಲ್ಲಿ ಕೇಳಿದಳು "ಯಾರೋ? ದೇವಯ್ಯನೇನೋ? ಮಗು ಬಂತೇನೋ?"

"ಬಂತು, ಅಜ್ಜೀ…." ಅಜ್ಜಿ ಏಳಲು ಪ್ರಯತ್ನಿಸುತ್ತಿದ್ದುದನ್ನು ಸದ್ದಿನಿಂದಲೆ ಊಹಿಸಿ ಮತ್ತೆ ಹೇಳಿದನು: "ನೀನು ಏಳಬೇಡ, ಇಲ್ಲಿಗೇ ಬರಾಕೆ ಹೇಳ್ತೀನಿ."

ಕಳೆದ ರಾತ್ರಿಯಿಂದಲೂ ಅಜ್ಜಿ ಅನುಭವಿಸುತ್ತಿದ್ದ ದುಃಖ, ದೈನ್ಯ, ಶೋಕ, ಸಮಖುಟ, ಶಂಕೆ, ಭೀತಿ, ಹತಾಶೆ ಮತ್ತು ಪ್ರತ್ಯಾಶೆಗಳ ಉರಿಯ ಶರಶಯ್ಯೆಯ ಶಿಕ್ಷೆಯನ್ನು ಪ್ರತ್ಯಕ್ಷ ನೋಡಿದ್ದ ದೇವಯ್ಯನಿಗೆ ಅಜ್ಜಿಯ ಉದ್ವಿಗ್ನ ಆತುರವು ಹೃದಯಸ್ಯಂದಿಯಾಗಿ ಅರ್ಥವಾಗಿತ್ತು. ಅಜ್ಜಿಯ ಜೀವ ಮೊಮ್ಮಗಳ ಆಗಮನದಿಂದ ಅಮೃತಮಯವಾಗುವುದನ್ನು ತಾನೇ ಅನುಭವಿಸುತ್ತಿದ್ದ ಆನಂದಕ್ಕೆ ಅಶ್ರುಲೋಚನನಾಗಿದ್ದನು.

ಕೋಣೆಯ ಅರೆಗತ್ತಲೆಯಿಂದ ಮಾಣಿಗೆಯ ಕಗ್ಗತ್ತಲೆಗೆ ಹಿಂದಾಟಿದ ದೇವಯ್ಯಗೆ ಬಳೆಯ ಸದ್ದು ಕೇಳಿಸಿತು. ಚಿನ್ನಮ್ಮ ಅಡುಗೆಮನೆಯ ಕಡೆಗೆ ಹೋಗುತ್ತಿದ್ದುದನ್ನು ಅರಿತು "ಇತ್ತ ಬಾ, ತಂಗಿ; ಅಜ್ಜಿ ಕೋಣೇಲಿ ಮಲಗ್ಯದೆ" ಎಂದು ಹೇಳಿ, ಆರ್ದ್ರ ನಯನಗಳನ್ನು ಒರಸಿಕೊಳ್ಳುತ್ತಾ ಜಗಲಿಗೆ ಹೋದನು, ಮುಕುಂದಯ್ಯನಿದ್ದಲ್ಲಿಗೆ.

ಮನೆಯ ಹೊರಗೆ ಬಿಕೋ ಇನ್ನುತ್ತಿದ್ದಂತೆಯೆ ಮನೆಯ ಒಳಗೂ ಗಾಳ್ ಎಂದು ಹಾಳು ಸುರಿಯುತ್ತಿದ್ದುದನ್ನು ಅನುಭವಿಸಿದ ಚಿನ್ನಮ್ಮಗೆ ಸೋಜಿಗವಾಯಿತು: ನಿನ್ನೆ ತನ್ನ ಮದುವೆಯ ಸಲುವಾಗಿ ನೆರೆದಿದ್ದ ಅಷ್ಟೊಂದು ಜನ ನಂಟರು ಗರತಿಯರಲ್ಲಿ ಒಬ್ಬಿಬ್ಬರಾದರೂ ಅಜ್ಜಿಯ ಸಂತೈಕೆಗಾಗಿ ಉಳಿಯದೆ ಹೊರಟುಹೋಗಿದ್ದಾರಲ್ಲಾ! ನಾಗಕ್ಕ ಇದ್ದಿದ್ದರೆ ತನ್ನನ್ನು ಅಂಗಳದಲ್ಲಿಯೆ ಎದುರುಗೊಂಡು ಉಪಚರಿಸದೆ ಇರುತ್ತಿದ್ದಳೆ? ಕಡೆಗೆ ಅವಳನ್ನೂ ಓಡಿಸಿಬಿಟ್ಟರೊ? 'ಅಯ್ಯೋ ನನ್ನ ದೆಸೆಯಿಂದ ಮನೆಯೆ ಮಸಣವಾಗಿದೆಯಲ್ಲಾ ದೇವರೇ!' ಅಷ್ಟರಲ್ಲಿ ದೇವಯ್ಯನ ದನಿ ಕೇಳಿಸಿತ್ತು. ಚಿನ್ನಮ್ಮ ನೇರವಾಗಿ ಧಾವಿಸಿದ್ದಳು, ಅಜ್ಜಿ ಮಲಗಿದ್ದ ಹಾಸಗೆಗೆ.

ಹಿಂದಿನ ರಾತ್ರಿ ಮೊಮ್ಮಗಳು ಕಣ್ಮರೆಯಾದ ಸುದ್ದಿ ಕಿವಿಗೆ ಬಿದ್ದಾಗ ಅಜ್ಜಿ ತತ್ತರಿಸಿ ಹೋಗಿದ್ದಳು. ಮಾತನಾಡುವ ಶಕ್ತಿಯೆ ಉಡುಗಿದಂತಾಗಿತ್ತು. ಏದ ತೊಡಗಿದ್ದಳು. ತಟಕ್ಕನೆ ತಲೆ ಕೆಟ್ಟಂತೆ ಹೊಂದಾಣಿಕೆಯಿಲ್ಲದ ಮಾತಿಗೆ ಶುರು ಮಾಡಿದ್ದಳು. ನಾಗಕ್ಕ ಅವಳನ್ನು ಕೈಹಿಡಿದೆತ್ತಿ ಕೋಣೆಗೆ ಕರೆದೊಯ್ದು ಹಾಸಗೆಯಲ್ಲಿ ಮಲಗುವಂತೆ ಮಾಡಿ, ಚಿನ್ನಮ್ಮ ಅವರು ಭಾವಿಸಿದಂತೆ ಆತ್ಮಹತ್ಯೆ ಮಾಡಿಕೊಂಡಿಲ್ಲವೆಂದೂ, ಮುಕುಂದಣ್ಣನ ಸಂಗಡ ಅಡಗಲು ಹೋಗಿದ್ದಾಳೆಂದೂ, ಇನ್ನೆರಡು ಮೂರು ದಿನಗಳಲ್ಲಿ ಗಲಾಟೆ ನಿಂತ ಮೇಲೆ ಬರುತ್ತಾಳೆಂದೂ, ಅದುವರೆಗೂ ಗುಟ್ಟಾಗಿರಬೇಕೆಂದೂ ಸಮಾಧಾನ ಹೇಳಿದ್ದಳು. ಅಜ್ಜಿ ಮತ್ತೆ ಹಾಸಿಗೆ ಬಿಟ್ಟು ಎದ್ದಿರಲಿಲ್ಲ. ವೆಂಕಟಣ್ಣನ ಶವಸಂಸ್ಕಾರಾನಂತರ ಹಿಂದಿರುಗಿದ್ದ ದೇವಯ್ಯನೂ ಅಜ್ಜಿಯ ಬಳಿಗೆ ಹೋಗಿ ಧೈರ್ಯ ಹೇಳಿದ್ದನು. ಅವನು

ತಿಳಿಸಿದ್ದು ಒಟ್ಟಿನಲ್ಲಿ ನಾಗಕ್ಕನ ಹೇಳಿಕೆಯಂತೆ ಇದ್ದಿತಾದರೂ ಒಂದು ಮುಖ್ಯ ವಿಚಾರದಲ್ಲಿ ಅರ್ಥಪೂರ್ಣವಾದ ವ್ಯತ್ಯಾಸವಿತ್ತು. ಅವನ ವರದಿಯ ಪ್ರಕಾರ ಅಜ್ಜಿಗೆ ತಿಳಿದಿದ್ದುದೆಂದರೆ: ಚಿನ್ನಮ್ಮಗೆ ಆ ಸಂಬಂಧ ಒಪ್ಪಿಗೆಯಾಗದೆ ಕೆರೆಗೆ ಹಾರಲು ಹೋಗಿದ್ದಳೆಂದೂ ಆ ದುರಂತದಿಂದ ಮುಕುಂದಯ್ಯ ಅವಳನ್ನು ಪಾರುಮಾಡಿ ರಕಷಿಸಿ, ಒಂದು ರಹಸ್ಯ ಸ್ಥಾನದಲ್ಲಿ ಸುರಕ್ಷಿತವಾಗಿ ಇಟ್ಟಿದ್ದಾನೆಂದೂ ಆಗಿತ್ತು. ಅದರಿಂದಾಗಿ ಅಜ್ಜಿಯ ಕೃತಜ್ಞತೆ ಮುಕುಂದಯ್ಯನ ಪಾದಾರವಿಂದವನ್ನೆ ಹಿಡಿದುಕೊಂಡಿತ್ತು. ಅಜ್ಜಿಯ ಪ್ರಜ್ಞೆಗೆ ಚಿನ್ನಮ್ಮನ ಮದುವೆ ನಿಂತುದರಿಂದ ಬರಬಹುದಾದ ಜನಾಪವಾದವಾಗಲಿ, ಅಳಿಯ ವೆಂಕಟಣ್ಣ ತೀರಿಕೊಂಡ ದುರಂತವಾಗಲಿ ಅಷ್ಟಾಗಿ ತಟ್ಟಿದಂತೆ ತೋರುತ್ತಿರಲಿಲ್ಲ. ಅವಳ ಸಮಸ್ತ ಚೈತನ್ಯವನ್ನೂ ಮರವಡುವಂತೆ ಅಪ್ಪಳಿಸಿಬಿಟ್ಟಿದ್ದುದೆಂದರೆ ಮೊಮ್ಮಗಳು ಕಾಣೆಯಾದದ್ದು! ಅಪವಾದ, ನಿಂದೆ, ಬಹಿಷ್ಕಾರ, ಸಾಮಾಜಿಕ ಪೀಡನೆ, ಅವಮಾನ ಯಾವುದೂ ಅವಳಿಗೆ ಲೆಕ್ಕಕ್ಕಿರಲಿಲ್ಲ. ಜಗತ್ತಿನಲ್ಲಿ ಆಗಿದ್ದ ಒಂದೇ ಒಂದು ಅಮಂಗಳ ಎಂದರೆ, ಅವಳ ಮೊಮ್ಮಗಳು ಕಾಣೆಯಾದದ್ದು: ಆ ಮೊಮ್ಮಗಳು ಮತ್ತೆ ತನಗೆ ಲಭಿಸಿದರೆ ಜಗತ್ತಿಗೆ ಸರ್ವಮಂಗಳವೂ ಹಿಂದಿರುಗುತ್ತದೆ!

ಆ ಮೊಮ್ಮಗಳು ಈಗ ತನ್ನಡೆಯೆ, ಹಾಸಗೆಯ ಮೇಲೆ, ತನ್ನ ಮೈಗೆ ಮೈ ಒತ್ತಿ ತನ್ನ ಕೈ ಆತು ಕುಳಿತಿದ್ದಾಳೆ! ಇನ್ನು ಈ ಜಗತ್ತಿನಲ್ಲಿ ಚಿಂತೆಗೆ ಏನೂ ಕಾರಣವಿಲ್ಲ!

ಆ ಕೋಣೆಯಲ್ಲಿ ಕವಿದಿದ್ದ ಕಪ್ಪಿನಲ್ಲಿ ಅಜ್ಜಿಗೆ ಚಿನ್ನಮ್ಮನ ಮುಖವಾಗಲಿ ಚಿನ್ನಮ್ಮಗೆ ಅಜ್ಜಿಯ ಮುಖವಾಗಲಿ ಕಾಣುತ್ತಿರಲಿಲ್ಲ. ಆದರೂ ಅವರಿಬ್ಬರೂ ವರ್ತಿಸುತ್ತಿದ್ದರು, ಒಬ್ಬರನ್ನೊಬ್ಬರು ಸ್ಪಷ್ಟವಾಗಿ ನೋಡುತ್ತಿರುವಂತೆ! ಶೋಕಾಶ್ರುಗಳೊ? ಆನಂದಬಾಷ್ಪಗಳೊ? ಇಬ್ಬರೂ ಮೌನವಾಗಿಯೆ ಅತ್ತರು. ಬಹಳ ಹೊತ್ತು ಅಜ್ಜಿಯ ಕೈ ಮೊಮ್ಮಗಳ ಗಲ್ಲ ಕೆನೆನೆಗಳನ್ನು ಮತ್ತೆ ತಮತ್ತೆ ತಡವುತ್ತಿತ್ತು!

ಬಹಳ ಹೊತ್ತಾದಮೇಲೆ, ದುಃಖ ಸ್ವಲ್ಪ ಸಮನವಾದ ಅನಂತರ, ಚಿನ್ನಮ್ಮ ತೊದಲಿ ತೊದಲಿ ಕೇಳಿದಳು: “ನಾಗಕ್ಕ ಎಲ್ಲಿ, ಅಜ್ಜೀ?”

“ನಿನ್ನಪ್ಪಯ್ಯ ಒದ್ದುದಕ್ಕೆ ಅದು ಬಿದ್ದು, ಸೊಂಟನೋವಾಗಿ, ಅಲ್ಲೆಲ್ಲೋ ಮಲಗ್ಯದೆ ಅಂತಾ ಕಾಣ್ತದೆ.... ಅಯ್ಯೋ, ಚಿನ್ನೂ, ಏನೇನಾಗಿಹೋಯ್ತೆ ನಮ್ಮ ಗಿರಾಚಾರಕ್ಕೇ?” ಅಜ್ಜಿ ನಿಡುನರಳಿ ಸುಯ್ದಳು.

ಅಷ್ಟರಲ್ಲಿ ಹಣತೆಯ ದೀಪ ಹೊತ್ತಿಸಿಕೊಂಡು ಯಾರೊ ಕೋಣೆಯೊಳಗೆ ಪ್ರವೇಶಿಸುತ್ತಿದ್ದದ್ದು ಕಾಣಿಸಿತು. ಆ ದೀಪದ ಮಂದಪ್ರಕಾಶದ ವಲಯದಲ್ಲಿ ನಾಗಕ್ಕನ ಮುಖಮಂಡಲವನ್ನು ಗುರುತಿಸಿದಳು ಚಿನ್ನಮ್ಮ!

* * *

ಜಗಲಿಗೆ ಹಿಂದಿರುಗಿದ ದೇವಯ್ಯ, ಮುಕುಂದಯ್ಯ ಕುಳಿತಿದ್ದಲ್ಲಿಗೆ ಬಂದು, ಅವನಿಗೆ ತುಂಬ ಸಮೀಪವಾಗಿ ಮುಂಡಿಗೆಗೆ ಒರಗಿ ಕುಳಿತನು. ಇಬ್ಬರೂ ಗುಸುಗುಸು ಮಾತನಾಡಿದರು, ಬಹಳ ಹೊತ್ತು. ಒಬ್ಬರ ಮುಖ ಮತ್ತೊಬ್ಬರಿಗೆ ಸ್ವಲ್ಪವೂ ಕಾಣಲಾಗದಷ್ಟು ಕತ್ತಲೆಯಾದ ಮೇಲೆ, ದೇವಯ್ಯನೆ ಎದ್ದು ಮದುವೆ ಮನೆಗಾಗಿ ಬೆಟ್ಟಳ್ಳಿಯಿಂದಲೆ ತಂದಿದ್ದ ಒಂದು ತೂಗುಲ್ಯಾಂಪನ್ನು ಹಚ್ಚಿದನು.

ರಾತ್ರಿ ಇನ್ನೂ ಸ್ವಲ್ಪ ಮುಂದುವರಿದಿತ್ತು. ಮಾತು ಕೊಟ್ಟಿದ್ದಂತೆ ತಿಮ್ಮಪ್ಪಹೆಗ್ಗಡೆ ಹಳೆಮನೆಯಿಂದ ಬಂದನು.

ಬಂದವನು ಕೈಕಾಲು ತೊಳೆದುಕೊಂಡು, ಜಗಲಿಯಲ್ಲಿ ಕೂರದೆ ನೇರವಾಗಿ ಒಳಗೆ ಹೋಗಿ ಅಜ್ಜಿಯನ್ನೂ ಚಿನ್ನಮ್ಮನನ್ನೂ ಮಾತಾಡಿಸಿಕೊಂಡು ಜಗಲಿಗೆ ಹಿಂತಿರುಗಿ, ದೇವಯ್ಯ ಮುಕುಂದಯ್ಯರು ಕುಳಿತಿದ್ದ ಜಮಖಾನದ ಒಂದು ತುದಿ ಸೆರಗಿನಲ್ಲಿ ಸ್ವಲ್ಪ ಸಂಕೋಚದಿಂದಲೆ ಕುಳಿತುಕೊಂಡನು. ಅವನಿಗೆ ಚಿಕ್ಕಂದಿನಿಂದಲೂ ತನಗಿಂತಲೂ ಹಿರಿಯನಾಗಿದ್ದ ದೇವಯ್ಯನನ್ನು ಕಂಡರೆ ಭಯಮಿಶ್ರಿತ ಗೌರವ. ತಮ್ಮಪ್ಪನ ಕೊಳಕಲು ನಡೆನುಡಿ ವೇಷಭೂಷಣ ಆಚಾರಗಳನ್ನು ಕಂಡಾಗಲೆಲ್ಲ ದೇವಯ್ಯ ಖಂಡಿಸುತ್ತಿದ್ದನು. ಆದರೆ ಇತ್ತೀಚೆಗೆ ತಿಮ್ಮಪ್ಪ ಹೆಗ್ಗಡೆ ಆ ಅನೇಕ ವಿಚಾರಗಳಲ್ಲಿ ಸುಧಾರಿಸಿದ್ದನು. ಈಗ ಅವನು ದೇವಯ್ಯನ ಖಂಡನೆಗೆ ಗುರಿಯಾಗುವ ಸಂಭವವಿಲ್ಲದಿದ್ದರೂ ಅವನನ್ನು ಕಂಡಾಗಲೆಲ್ಲ ಹಿಂದಿನ ಪ್ರತಿಕ್ರಿಯೆಯಿಂದ ಸಂಪೂರ್ಣವಾಗಿ ಬಿಡುಗಡೆ ಹೊಂದಲು ಇವನಿಂದ ಸಾಧ್ಯವಾಗಿರಲಿಲ್ಲ.

"ಏನೋ, ತಿಮ್ಮೂ, ನಿಮ್ಮ ಸಿಂಬಾವಿ ಬಾವ ಇನ್ನೂ ಅಲ್ಲೇ ಇದಾರೇನೋ?…." ದೇವಯ್ಯ ಮುಕುಂದಯ್ಯನೊಡನೆ ಮಾಡುತ್ತಿದ್ದ ಸಂವಾದವನ್ನು ತುಂಡುಗಡಿದು ಕೇಳಿದ್ದನು, ತಿಮ್ಮಪ್ಪನ ಕಡೆ ತಿರುಗಿ.

"ಹ್ಞೂ ಅದಾರೆ…"

"ಸುಮ್ಮನೆ ಇದಾನೆಯೇ? ಏನಾದರೂ ಕಿತಾಪತಿಗೆ ಸುರುವಾಗಿದೆಯೋ?…" ತಿಮ್ಮಪ್ಪ ಏನೂ ಉತ್ತರಕೊಡದೆ ಬರಿದೆ ಹುಸಿನಗೆ ನಗುತ್ತಿದ್ದುದನ್ನು ನೋಡಿ ದೇವಯ್ಯ ಏಕವಚನದಲ್ಲಿಯೆ ಮುಂದುವರಿಸಿದನು: "ಅವನೆಲ್ಲಿ ಸುಮ್ಮನೆ ಇರ್ತಾನೆ? ನಿನ್ನೆ ಇಲ್ಲಿಂದ ಹೊರಡುವಾಗಲೆ ಏನೇನೋ ಹೇಳ್ತಿದ್ದನಂತೆ: ತನಗೆ ಆದ ನಷ್ಟಾನೆಲ್ಲ ತುಂಬಿಕೊಡಬೇಕಂತೆ!…. ಸಾಲಕ್ಕೆ ಹೂವಳ್ಳಿ ಗದ್ದೆ ತೋಟ ಮನೆ ಎಲ್ಲ ಸ್ವಾಧೀನಕ್ಕೆ ತಗೊಳ್ತಾನಂತೆ!…. ಇದರಲ್ಲಿ ಸೇರ್ದೋರಿಗೆಲ್ಲ ಬಹಿಷ್ಕಾರ ಹಾಕಿಸ್ತಾನಂತೆ!….

'ಹುಡುಗೀನೆಲ್ಲೋ ಮುಚ್ಚಿಟ್ಟು, ಕೆರೆ ಹಾರಿದಳು ಅಂತಾ ಕತೆ ಹುಟ್ಟಿಸಿ, ನ್ನ ಕಣ್ಣಗೇ ಮಣ್ಣೆರಚ್ತಾರೆ' ಅಂತಿದ್ದನಂತೆ!…. ಅವನಿಗೆ ಹೇಳೂ, 'ಹೂವಳ್ಳಿ ಗದ್ದೆ ತೋಟ ಮನೆ ಎಲ್ಲಾ ಆ ಹಾರುವನ ಹೆಸರಿಗೆ ಬರಿಯೋಕೆ ಮೊದಲೆ ಬೆಟ್ಟಳ್ಳಿ ಗೌಡ್ರಿಗೆ ಬರೆದು ಕೊಟ್ಟಿದ್ದನಂತೆ ವೆಂಕಟಣ್ಣ' ಅಂತಾ…. ಗೊತ್ತಾಯ್ತೇನು?

"ನಮಗೂ ಬರಕೊಟ್ಟಾನಂತೆ, ಅಪ್ಪಯ್ಯ ಹೇಳ್ತಿದ್ರು!" ತಿಮ್ಮಪ್ಪ ತಾನು ಕೇಳಿದ್ದ ಸಂಗತಿಯನ್ನು, ಯಾವ ಉದ್ದೇಶವೂ ಇಲ್ಲದೆ, ಸುಮ್ಮನೆ ಹಾಗೆ ಹೇಳಿದ್ದನು.

ಆದರೆ ದೇವಯ್ಯನಿಗೆ ಅದರಲ್ಲಿ ಏನೋ ಬೇರೆಯ ಧ್ವನಿ ದ್ಯೋತಕವಾದಂತಾಗಿ ತುಸು ರೇಗಿದ ದನಿಯಲ್ಲಿ ಕೇಳಿದನು: "ಓಹೋ ಹಾಂಗಾದ್ರೆ ನೀನೂ ನಿನ್ನ ಬಾವನ ಜೊತೆ ಸೇರಿ ದಾವಾ ಹಾಕ್ತೀಯೇನು?"

"ಅಯ್ಯೋ ಮಾರಾಯ, ನಾನೆಲ್ಲಿ ಹಾಂಗೆ ಹೇಳಿದೆ?…." ಅಂಜಿದ ದನಿಯಲ್ಲಿಯೆ 'ತಪ್ಪಾಯ್ತು' ಎಂಬಂತೆ ಕೇಳಿದ್ದನು ತಿಮ್ಮಪ್ಪ.

ಆದರೆ ತಿಮ್ಮಪ್ಪ ತನ್ನ ತಂಗಿ ಮಂಜಮ್ಮನನ್ನು ಭರಮೈಹೆಗ್ಗಡೆಗೆ ಕೊಟ್ಟು, ತನಗೆ ಭರಮೈಹೆಗಗ್ಗಡೆಯ ತಂಗಿ ಲಕ್ಕಮ್ಮನನ್ನು ತರುವ ವಿಚಾರವಾಗಿ 'ಜಟ್ಟಕ್ಕನೆ ಅಪ್ಪಯ್ಯನ ಸಂಗಡ ಮಾತಾಡ್ತಿತ್ತು' ಎಂದು ತಿಳಿಸಿದಾಗ ದೇವಯ್ಯ ಮುಕುಂದಯ್ಯರಿಗೆ ತಮ್ಮ ತಲೆಯ ಮೇಲಿದ್ದ ದೊಡ್ಡ ಚಪ್ಪಡಿಯೆ ಇಳಿದಂತಾಗಿ ಒಬ್ಬರ ಕಣ್ಣನ್ನೊಬ್ಬರು ಇಂಗಿತವಾಗಿ ನಿಟ್ಟಿಸಿದ್ದರು.

"ಯಾವಾಗ ಇಡ್ತಾರಂತೋ ಮದುವೇನ? ದೊಡ್ಡಪ್ಪಯ್ಯನಿಗೆ ಹೇಳಿ ಆದಷ್ಟು ಬೇಗ ಪೂರೈಸಿಬಿಟ್ಟರೆ ಒಳ್ಳೇದಲ್ಲೇನೋ?" ದೇವಯ್ಯ ಸ್ವಲ್ಪ ಸರಸ ವಿನೋದ ಭಂಗಿಯಿಂದಲೆ ಮುಂಬರಿದು ಕೇಳಿದನು! "ಅಂದ್ರೇ.... ನಿನಗಿಷ್ಟ. ಇದೆಯೋ ಇಲ್ಲವೊ? ಯಾರಿಗೆ ಗೊತ್ತು?.... ಏನೋ, ತಿಮ್ಮೂ, ನಿನ್ನ ಮನಸ್ಸು ಹ್ಯಾಂಗದ್ಯೋ?"

ತಿಮ್ಮಪ್ಪಹೆಗ್ಗಡೆಯೂ ಸೇರಿ ಮೂವರೂ ಅರ್ಥಗರ್ಭಿತವಾಗಿ ನಕ್ಕರು.

"ನಮ್ಮ ಅಪ್ಪಯ್ಯನದೆ ತರಾತುರಿ ಆಗ್ಯದೆ. 'ನಾನು ಈ ಮಳೆಗಾಲ ಕಳೀತೀನೋ ಇಲ್ಲೋ? ಅಷ್ಟರೊಳಗೇ ಮಂಗಳಕಾರ್ಯ ಆಗಿ ಬಿಡಲಿ!' ಅಂತಿದಾನಂತೆ." ಸ್ವಲ್ಪ ಹೊತ್ತು ಆಲೋಚಿಸುವಂತಿದ್ದು ಹೇಳಿದ್ದನು ತಿಮ್ಮಪ್ಪ.

"ಸರಿಹೋಯ್ತು ಬಿಡುಃ ರೋಗಿ ಬಯಸಿದ್ದೂ ಹಾಲು ಅನ್ನ, ವೈದ್ಯ ಕೊಟ್ಟಿದ್ದೂ ಹಾಲು ಅನ್ನ. ರೊಟ್ಟಿ ಜಾರಿ ತುಪ್ಪಕ್ಕೆ ಬಿದ್ದಾಂಗಾಯ್ತು ನಿಂಗೆ?" ಮುಕುಂದಯ್ಯ ಪರಿಹಾಸ್ಯ ಮಾಡಿದನು ತಿಮ್ಮಪ್ಪಗೆ.

"ನಂಗೊಬ್ಬನಿಗೆ ಅಲ್ಲಾ, ನಿಂಗೂ!" ಸ್ವಲ್ಪ ರಾಗವಾಗಿ ಎಳೆದು ಹೇಳಿದ್ದ ತಿಮ್ಮಪ್ಪನ ಆ ಸಣ್ಣ ಉಕ್ತಿಯಲ್ಲಿ ಬಹು ದೊಡ್ಡ ಅರ್ಥ ಧ್ವನಿತವಾಗಿತ್ತುಃ ಇನ್ನು ಮುಕುಂದಯ್ಯ ಚಿನ್ನಮ್ಮನನ್ನು ಯಾವ ಅಡಚಣೆಯಾಗಲಿ ತೊಂದರೆಯಾಗಲಿ ಇಲ್ಲದೆ ಮದುವೆಯಾಗಬಹುದಲ್ಲಾ!

ತಿಮ್ಮಪ್ಪನ ಮನಸ್ಸಿನಲ್ಲಿ ಯಾವ ಕೊಂಕೂ ಇಲ್ಲದಿದ್ದರೂ ಅವನ ಮಾತಿನ ಹಿಂದೆ ಕೊಂಕನ್ನು ಊಹಿಸುವವರು ಊಹಿಸಬಹುದಾಗಿತ್ತುಃ ಅಡಚಣೆಗಳನ್ನು ತಂದೊಡ್ಡುತ್ತಿದ್ದ ವ್ಯಕ್ತಿಗಳಲ್ಲಿ ಪ್ರಧಾನವಾಗಿದ್ದ ಮಾವನನ್ನೆ ಮುಗಿಸಿಬಿಟ್ಟಿದ್ದರಿಂದ ಇನ್ನು ಮುಂದೆ ಮುಕುಂದಯ್ಯನಿಗೆ ಚಿನ್ನಮನ್ನು ಪಡೆದಯುವ ದಾರಿ ಸುಸೂತ್ರವಾಯಿತೆಂದೂ, ಹೂವಳ್ಳಿ ಮನೆಗೆ ಬೇರೆ ಯಾವ ಗಂಡೂ ದಿಕ್ಕಿಲ್ಲವಾದ್ದರಿಂದ ಮುಕುಂದಯ್ಯನೆ ಮನೆಯಳಿಯನಾಗಿ ಯಾಜಮಾನ್ಯ ವಹಿಸಬಹುದೆಂದೂ ವ್ಯಂಗ್ಯವಾಗಿ ವ್ಯಾಖ್ಯಾನ ಮಾಡಬಹುದಾಗಿತ್ತು! ಹಾಗೆ ಮಾಡಿದ ವ್ಯಾಖ್ಯಾನ ನಿಜಕ್ಕೆ ದೂರವಾಗುತ್ತಲೂ ಇರುವ ಸಂಭವವಿರಲಿಲ್ಲ.

ಅಂತಹ ಕುಹಕ ನಿಂದೆಗೆ ತನು ಪಕ್ಕಾಗಬಹುದೆಂಬ ಚಿಂತನೆ ತಟ್ಟನೆ ಮನಸ್ಸಿಗೆ ಹೊಳೆದುದರಿಂದಲೆ ಮುಕುಂದಯ್ಯ ಇದ್ದಕ್ಕಿದ್ದ ಹಾಗೆ ಚಿಂತಕುಲನಾದಂತೆ ತಲೆ ತಗ್ಗಿಸಿ ಮೌನವಾಗಿದ್ದುಬಿಟ್ಟನು. ಅವನ ಆ ಭಾವ ಉಳಿದಿಬ್ಬರ ಮೇಲೆ ಪ್ರಭಾವ ಬೀರಿದಂತಾಗಿ ಅವರೂ ಅವಾಕ್ಕಾಗಿ, ಅಂಗಳದಲ್ಲಿ ಕವಿದಿದ್ದ ಕಗ್ಗತ್ತಲೆಯ ಕಡೆಗೆ ನೋಡುತ್ತಾ, ಭೋರೆಂದು ಬೀಳುತ್ತಿದ್ದ ಮಳೆಯನ್ನು ಆಲೈಸುತ್ತಾ ಕುಳಿತುಬಿಟ್ಟರು.

ಮಳೆ ಬೀಳುತ್ತಿದ್ದ ಸದ್ದನ್ನು ಆಗಾಗ ಭಂಗಿಸುತ್ತಿದ್ದ ಸದ್ದು ಎಂದರೆ ಆ ಮೂವರೂ ತಮ್ಮನ್ನು ಕಚ್ಚುತ್ತಿದ್ದ ನುಸಿಗಳನ್ನು ರಪ್ಪನೆ ಹೊಡೆದುಕೊಳ್ಳುತ್ತಿದ್ದ ಸದ್ದು. ಹಾಗೆ ಹಡೆದುಕೊಳ್ಳುತ್ತಿದ್ದಾಗ ಒಂದು ಸಾರಿ ದೇವಯ್ಯ ಎಂದಿಗಿಂತಲೂ ರಭಸವಾಗಿ ಹೊಡೆದುಕೊಂಡುದರ ಪರಿಣಾಮವಾಗಿ, ದೊಡ್ಡಗೆ ಚಪ್ಪಾಳೆ ಹೊಡೆದಂತಾಗಿ, ಮೂವರೂ ತಮ್ಮ ತಮ್ಮ ಭಾವಪ್ರಪಂಚಗಳಿಂದ ಎಚ್ಚತ್ತು ಹೊರಗೆ ಬಂದು ಒಟ್ಟಿಗೆ ಗಟ್ಟಿಯಾಗಿ ನಗತೊಡಗಿದರು.

ದೇವಯ್ಯ ಹೇಳಿದನು: "ತಿಮ್ಮೂ, ಈ ಹಾಳು ನುಸಿಕಾಟ ಸಹಿಸಕ್ಕೆ ಆಗಾದಿಲ್ಲ. ಒಂದು ಅಗ್ಗಿಷ್ಟಿಕೆನಾರೂ ಹಚ್ತೆಯೇನೊ?"

ತಿಮ್ಮಪ್ಪಹೆಗ್ಗಡೆ ಅಗ್ಗಿಷ್ಟಿಕೆ ಹಚ್ಚಿಕೊಂಡು ಬರಲು ಒಳಗಡೆ ಹೋದನು. ಉಂಗುರಾನ ಯಾರೀಗಾದ್ರೂ ಕೊಟ್ಟಳೊ? ಇಲ್ಲಾ ಕಳದೇಹೋಯ್ತೊ? 'ಅಲ್ಲೆಲ್ಲೊ ಇಟ್ಟೇನಿ, ಇನ್ನೊಂದು ಸಾರಿ ಬರುವಷ್ಟರಲ್ಲಿ ಹುಡುಕಿಡುತ್ತೀನಿ.' ಅಂದಳಲ್ಲಾ ಕಾವೇರಿ? ಈ ಸೆಟ್ಟರ ಹುಡುಗೇರ ಹಣೇಬರಾನೆ ಹೀಂಗೆ. ಒಬ್ಬನ್ನ ನಂಬಿಕೊಂಡು ಇರೋ ಜಾತಿಯಲ್ಲ!.... ಅದರ ಅವ್ವನೂ ಹುಡುಗಿಯಾಗಿದ್ದಾಗ ಏನೇನೋ ಪುಕಾರಾಗಿತ್ತಂತೆ, ಹೀಂಗೇ!..."

ಮುಕುಂದಯ್ಯನೂ ತನ್ನ ಹಗಲುಗನಸನ್ನು ಮುಂದುವರಿಸಿದ್ದನು: "....ಪಾಲು ತಗೊಂಡು ಹೋಗು ಅಂದರೆ 'ಹ್ದೂ ಆಗಲಿ!' ಅಂದೇ ಬಿಡೋದಪ್ಪಾ! ಈ ಮನೆ ಗದ್ದೆ ತೋಟ ನೋಡಿಕೊಳ್ಳೊ ಹಾಂಗೇನೆ ಅದನ್ನೂ ನೋಡಿಕೊಂಡರಾಯ್ತು.... ನನ್ನವ್ವ ಏನು ಹೇಳ್ತದೆಯೊ ಏನೊ ಗೊತ್ತಿಲ್ಲಲ್ಲಾ....?"

* * *

## ೫೮

ಹಿರಿಯ ಮಗ ಮತ್ತು ಸೊಸೆ ಇಬ್ಬರೂ ತೀರಿಕೊಂಡ ರೀತಿ ಮತ್ತು ಸನ್ನಿವೇಶದಿಂದುಂಟಾಗಿದ್ದ ಹತಾಶೆ ಹಳೆಮನೆ ಸುಬ್ಬಣ್ಣ ಹೆಗ್ಗಡೆಯವರಲ್ಲಿ ಬದುಕಬೇಕು ಎಂಬ ಆಶೆಯ ಬೇರನ್ನೆ ಚಿವುಟಿಹಾಕಿತ್ತು. ತಿರುಪತಿಗೆ ಹೋದವನು ಹಿಂದಿರುಗುತ್ತಾನೆ ಎಂಬ ಪ್ರತ್ಯಾಶೆಯೆ ಅವರ ಬಾಳ್ವಿಗೆ ಅನೇಕ ವರ್ಷಗಳಿಂದಲೂ ಪ್ರೋತ್ಸಾಹ ನೀಡಿತ್ತು. ಅದು ಇನ್ನೇನು ಕೈಗೂಡುತ್ತದೆ ಎಂದು ಅವರ ಜೀವ ಒಂದು ಹಿರಿಯ ಹಿಗ್ಗಿನ ಉನ್ಮಾದ ಸದೃಶ ಶಿಖರವನ್ನೇರಿದ್ದಾಗಲೆ ಸಂಭವಿಸಿದ್ದ ರುದ್ರ ದುರಂತದಿಂದ ಅದು ಹತಾಶೆಯ ಕಮರಿಗೆ ಉರುಳಿಬಿದ್ದಿತ್ತು. ಕಿರಿಯ ಮಗ ತಿಮ್ಮಪ್ಪಹೆಗ್ಗಡೆಯ ಕ್ಷಣಿಕ ಭಾವೋದ್ರೇಕದಿಂದುಂಟಾಗಿದ್ದ ಅಪಘಾತವೂ ಆ ಹತಾಶೆ ಬೆಳೆದು, ಹಬ್ಬಿ, ಬದುಕನ್ನೆಲ್ಲ ಆಕ್ರಮಿಸಿ, ಅದನ್ನು ಲಯಗೊಳಿಸುವುದಕ್ಕೆ ಒಂದು ಅಡರ್ಪನ್ನೊದಗಿಸಿತ್ತಷ್ಟೆ! ಅವರಿಗೆ ತನು ಈ ಮಳೆಗಾಲ ಮುಗಿಯುವುದರೊಳಗೆ ಸಾಯುತ್ತೇನೆ ಎಂಬ ನಂಬುಗೆ ಬಂದು ಪ್ರಬಲವಾದ ಆಶೆಯೆ ಆಗುವಷ್ಟರಮಟ್ಟಿಗೆ ಬಲವಾಗಿತ್ತು. ಅದಕ್ಕಾಗಿಯೆ ಅವರು ಮಗಳು ಮಂಜಮ್ಮನ ಮತ್ತು ಮಗ ತಿಮ್ಮಪ್ಪನ ಮದುವೆಗಳೆರಡೂ ಒಟ್ಟಿಗೆ ಬೇಗನೆ ನಡೆಯುವಂತೆ ಮಾಡಿದ್ದರು.

ಆ ಮದುವೆಗೆ ಹೂವಳ್ಳಿಯಿಂದ ಯಾರೂ ಹೋಗಿರಲಿಲ್ಲ, ಸೂತಕದ ಮತ್ತು ಮನೆಯನ್ನೆಲ್ಲ ವ್ಯಾಪಿಸಿದ್ದ ಸಾವಿನ ದುಃಖದ ಕಾರಣಕ್ಕಾಗಿ. ಮದುಮಗನಾಗುವ ತಿಮ್ಮಪ್ಪನೆ ಬಂದು ಕರೆದು ಹೋಗಿದ್ದನು. ಆದರೆ ಸಿಂಬಾವಿಯವರು ಪಾಲುಗೊಳ್ಳುವ ಉತ್ಸವಕ್ಕೆ ಚಿನ್ನಮ್ಮ ಹೇಗೆ ಹೋದಾಳು? ಇನ್ನು ನಾಗಕ್ಕ? ಅವಳು ಕೂಡಿಕೆಯಾಗಿದ್ದ ಹೆಣ್ಣಾದರೂ ಎರಡನೆಯ ಸಾರಿ ವೈಧವ್ಯ ಪ್ರಾಪ್ತಿಯಾದವಳಲ್ಲವೆ? ದ್ವಿಗುಣಿತ ಅಮಂಗಳೆಯಾಗಿದ್ದ ಅವಳು ಎಲ್ಲಿಯಾದರೂ ಮದುವೆಯಂತಹ ಮಂಗಳದೆಡೆಗೆ ಹೋಗುವುದುಂಟೆ? ಇನ್ನು ಅಜ್ಜಿ? ಮನೆಯಿಂದ ಹೊರಗೆ ಓಡಿಯಾಡುವುದೂ ಅವಳಿಗೆ ಕಷ್ಟಕರವಾಗಿತ್ತು.

ಮುಕುಂದಯ್ಯ ತಿಮ್ಮಪ್ಪನ ಮದುವೆಗೆ ಗಂಡಿನ ಮನೆಗೆ ಮಾತ್ರ ಹೋಗಿ ಬಂದಿದ್ದನು. ಹೆಣ್ಣಿನ ಮದುವೆಗೆ ಹೋಗಿದ್ದವನು ಗಂಡಿನ ಮನೆಯಿಂದ ದಿಬ್ಬಣ ಬರುವಷ್ಟರಲ್ಲಿಯೆ ಹೊರಟುಬಂದಿದ್ದನು. ಬರುವಾಗ ಮದುಮಗಳು ಮಂಜಮ್ಮಗೂ ಹೇಳಿ, ಕ್ಷಮೆ ಕೇಳುವಂತೆ, ಏನೇನೊ ಸಬೂಬು ಹೇಳಿ ಬಂದಿದ್ದನು.

ಹಾಗೆ ಹಳೆಮನೆಯಿಂದ ಹೊರಟು ಬರುತ್ತಿದ್ದಾಗ ನಡೆದಿದ್ದ, ಬಹಳ ಸಮಾನ್ಯವೆಂದು ತೋರಬಹುದಾದ, ಒಂದು ಘಟನೆ ಮುಕುಂದಯ್ಯನ ಮನಸ್ಸಿನ ಮೇಲೆ ವಿಶೇಷ ಪರಿಣಾಮ ಉಂಟುಮಾಡಿತ್ತು:

ಮನೆಯಿಂದ ಕೆಳಗೆ ಅಡಕೆ ತೋಟದ ಕಲ್ಲು ಕಟ್ಟಣೆಯ ಪಕ್ಕದಲ್ಲಿಯೆ ಇಳಿದು ಗದ್ದೆ ಕೋಗಿನ ಕಡೆಗೆ ಹೋಗುತ್ತಿದ್ದ ಕಾಲುದಾರಿಯಲ್ಲಿ ಸುಮಾರು ಇಪ್ಪತ್ತು ಮೂವತ್ತು ಮಾರು ನಡೆದಿದ್ದನೋ ಇಲ್ಲವೋ ಯಾರೋ ಹಿಂದಿನಿಂದ ಕೂಗಿ ಕರೆದಂತಾಯಿತು. ತಿರುಗಿ ನೋಡಿದಾಗ ಯಾಗೂ ಗೋಚರಿಸಲಿಲ್ಲ. ಮತ್ತೆ ಎರಡು ಹೆಜ್ಜೆ ಹಾಕುವಷ್ಟರಲ್ಲಿ ಮತ್ತೆ ಅದೇ ಕೀಚಲು ದನಿ ಕೇಳಿಸಿತು: 'ಏ ಮುಕುಂದ ಮಾವ! ಏ ಮುಕುಂದ ಮಾವ!'

ದನಿಯಿಂದಲೆ ಗೊತ್ತಯಿತು ಕರೆಯುತ್ತಿದ್ದವನು ಧರ್ಮು ಎಂದು. ಆದರೆ ಸುತ್ತಲೂ ನೋಡಿದಾಗ ಅವನು ಎಲ್ಲಿಯೂ ಕಾಣಿಸಲಿಲ್ಲ. ಹುಡುಗ ಆಟಕ್ಕೆ ಎಲ್ಲಿಯೊ ಅಡಗಿಕೊಂಡು ಕರೆಯುತ್ತಿದ್ದಾನೆ ಎಂದು ಊಹಿಸಿ ಮುಕುಂದಯ್ಯ ಸರಸಕ್ಕೆ "ಏ ಪಟಿಂಗ್ರಾ, ಅಲ್ಲೇನ ಮಾಡ್ತಿರೋ? ಈಗ ನಿನ್ನ ಚಿಕ್ಕಪ್ಪಯ್ಯ ಬಂದ್ರೆ ಬೀಳ್ತವೆ ಕನಾತಿ!" ಎಂದು, ತನಗೆ ಏನೂ ಯಾರೂ ಕಾಣಿಸದಿದರೂ, ಧರ್ಮು ಒಬ್ಬನೆ ಇರಲಾರ, ಮದುವೆಗೆ ಬಂದ ನೆಂಟರ ಮಕ್ಕಳೂ ಎರಬಹುದೆಂದು ಸ್ವಾಭಾವಿಕವಾಗಿಯೆ ಊಹಿಸಿ, ಗದ್ದೆಯ ದಿಕ್ಕಿಗಿದ್ದ ಒಂದು ದಟ್ಟವಾಗಿ ಬೆಳೆದಿದ್ದ ಕರ್ಜಿಹಣ್ಣಿನ ಮಟ್ಟಿನ ಕಡೆ ನೋಡುತ್ತಾ ಗದರಿಸುವಂತೆ ನಟಿಸಿದನು.

ಆದರೆ ಹಲವು ಕೊರಳುಗಳು ಒಟ್ಟಿಗೆ ಗಟ್ಟಿಯಾಗಿ ನಕ್ಕ ಸದ್ದು ಬಂದದ್ದು ತನ್ನ ಬೆಂಗಡೆಯಿಂದ! ತಿರುಗಿ ನೋಡುತ್ತಾನೆ: ಕಟ್ಟಣೆಯಾಚೆ, ಅಡಕೆಯ ಬಾಳೆಯ ಮರಗಳ ನಡುವೆ, ತುಸು ಮರೆಯಾಗಿದ್ದ ಒಂದು ಪೇರಲ ಮರದಲ್ಲಿ ಮಂಗಗಳು ಕೂರುವಂಗತೆ ಹತ್ತಿ ಕೂತಿವೆ, ಹುಡುಗರ ಒಂದು ಹಿಂಡೆ!

"ಚಿಟ್ಟಬಿಲ್ಲು ತರಲಿಲ್ಲೇನು, ಮಾವಾ?" ಎಲ್ಲರಿಗಿಂತಲೂ ಮೇಲೆ ನೆತ್ತಿಯ ಹರೆಯಲ್ಲಿದ್ದ ಧರ್ಮು ಕೂಗಿದನು.

"ಹೂನೊ!ನೆಂಟರಮನೆಗೆ ಲಗ್ನಕ್ಕೆ ಬರೋರು ಚಿಟ್ಟೆಲ್ಲು ತರ್ತಾರೇನೋ, ಪಟಿಂಗಾ?"

“ಮತ್ತೇ…? ಲಗ್ನಕ್ಕೆ ಬಂದಾವ ಎತ್ತಲಾಗೋ ಹೋಗ್ತಿದ್ದೀಯಾ?” ಧರ್ಮು ಆಗಲೆ ಪೇರಲಮರದಿಂದಿಳಿದು ಕಟ್ಟಣೆ ಹತ್ತಿ ನೆಗೆಯುತ್ತಿದ್ದನು.

“ಕೆಲಸ ಇದೆ ಕಣೋ, ಮನೀಗೆ ಹೋಗ್ತೀನಿ.” ಹತ್ತಿರಕ್ಕೆ ಬಂದಿದ್ದ ಹುಡುಗನಿಗೆ ಮುಕುಂದಯ್ಯ ಮೆಲ್ಲಗೆ ಹೇಳಿದನು.

“ಅತ್ತೆಮ್ಮನ ಮನೀಗಾ?” ಧರ್ಮು ಕೋಣೂರನ್ನು ಕರೆಯುತ್ತಿದ್ದ ರೀತಿ ಮುಕುಂದಯ್ಯಗೆ ರೂಢಿಯಾಗಿತ್ತು.

“ಅಲ್ಲೋ…. ಹೂವಳ್ಳಿಗೆ.” ಬಳಿಗೆ ಬಂದು ಅಕ್ಕರೆಯಿಂದ ತನ್ನ ಬಲಗೈಯನ್ನು ಹಿಡಿದುಕೊಂಡಿದ್ದ ಹುಡುಗನಿಗೆ ಹೇಳಿದನು ಮುಕುಂದಯ್ಯ.

“ಅದನ್ನೇ…. ನಾನು ಹೇಳಿದ್ದೂ…. ಮತ್ತೆ! ಹೂವಳ್ಳಿಗೆ ಹೋಗ್ತಿಯೇನೂ ಅಂತಾ.”

“‘ಅತ್ತೆಮ್ಮನ ಮನೀಗಾ?’ ಅಂತಾ ಕೇಳ್ದೇ?….”

“ಹೌದು….‘ಹೂವಳ್ಳಿ ಚಿನ್ನಕ್ಕ ಇನ್ನುಮ್ಯಾಲೆ ನಿನ್ನ ಅತ್ತೆಮ್ಮ ಕಣೋ!’ ಅಂತಾ ಹೇಳಿದ್ರು!”

“ಯಾರೋ ಹೇಳಿದ್ದು?”

“ಮಂಜತ್ತೇ!….”

ಮುಂದೇನು ಸಮಂಜಸವಾಗಿ ಮಾತಾಡಬೇಕೋ ಅದು ಹೊಳೆಯಲಿಲ್ಲ ಮುಕುಂದಯ್ಯಗೆ. ಅಂತೂ ಧರ್ಮು ತನಗೆ ಪ್ರಿಯವಾದ್ದನ್ನೆ ಹೇಳಿದ್ದನು. ಆದರೆ ಇನ್ನೂ ಏನೇನು ಬಿದ್ದಿದೆಯೋ ಈ ಮಕ್ಕಳ ಕಿವಿಗೂ? ಮುಕುಂದಯ್ಯನಿಗೆ ಸೋಜಿಗವಾಯಿತು. ತನ್ನ ಪೆಚ್ಚನ್ನು ಮುಚ್ಚಿಕೊಳ್ಳುವುದಕ್ಕಾಗಿ, ಮಾತು ಮುಂಮುಂದುವರಿಸಬೇಕಲ್ಲಾ ಎಂದು, ಹೇಳಿದನು: “ನಿನ್ನ ಮಂಜತ್ತೆ, ಇವೊತ್ತು ರಾತ್ರಿ, ಮದೋಳ್ಗಿ ಆಗ್ತಾಳೋ! ನಾಳೆ ಗಂಡನ ಮನೆಗೆ ಸಿಂಬಾವಿಗೆ ಹೋದವಳು ಮತ್ತೆ ಬರಾದಿಲ್ಲ, ನಿಂಗೆ ಅಡಿಗೆ ಮಾಡಿ ಹಾಕೋಕೆ!….”

“ಲಕ್ಕ್ ಚಿಗಮ್ಮ ಬಂದದಲ್ಲಾ, ಸಿಂಬಾವಿಯಿಂದ ತಿಮ್ಮ ಚಿಗಪ್ಪಯ್ಯನ ಸಂಗಡ? ಅಡಿಗೆ ಮಾಡಿ ಹಾಕ್ತದೆ!” ಸ್ವಲ್ಪವೂ ಅಪ್ರತಿಭನಾಗದೆ ಉತ್ತರಕೊಟ್ಟಿದ್ದನು ಧರ್ಮು.

“ಹೋಗಲಿ ಬಿಡು: ಒಬ್ಬರು ಹೋದರೆ ಮತ್ತೊಬ್ಬರು ಬರ್ತಾರೆ!….ನಂಗೆ ಹೊತ್ತಾಗ್ತದೆಯೊ, ನಾ ಹೋಗ್ತಿನೋ.” ಎಂದು ಮುಂದಕ್ಕೆ ಕಾಲು ಹಾಕಲಿದ್ದ ಮುಕುಂದಯ್ಯಗೆ ಧರ್ಮುವ ಪಕ್ಕದಲ್ಲಿ, ಅವನ ಗಾತ್ರದಿಂದಲೆ ತನ್ನ ಗಾತ್ರ ಮರೆಯಾಗುವಷ್ಟರ ಮಟ್ಟಿನ ಕೃಶಗಾತ್ರನಾಗಿದ್ದ ರಾಮು, ತನ್ನ ಧರ್ಮಣ್ಣಯ್ಯನ ಹಸ್ತವನ್ನು ತನ್ನ ಕೃಶಹಸ್ತದಿಂದ ಹಿಡಿದು ನಿಂತಿದ್ದುದು ಕಣ್ಣಿಗೆ ಬಿತ್ತು.

“ಅಯ್ಯೋ,! ಇಂವ ಯಾವಾಗ ಬಂದನೋ ಇಲ್ಲಿಗೆ? ನಾ ನೋಡಲೇ ಇಲ್ಲ….” ಮುಕುಂದಯ್ಯ ರೂಢಿಯ ಮಟ್ಟದ ಅಚ್ಚರಿಯನ್ನು ಪ್ರದರ್ಶಿಸಿ, ಧರ್ಮು ಕಡೆಗೆ ತಿರುಗಿ, ಎಚ್ಚರಿಕೆ ಹೇಳಿದನು: “ಇಂವನ್ನ್ಯಾಕೆ ಕರಕೊಂಡು ಬತ್ರಿಯೊ, ಧರ್ಮೂ, ಈ ಮಳೇಲಿ, ಈ ಗಾಳೀಲಿ, ಈ ಕೆಸರಿನಾಗೆ? ಅವನಪ್ಪಯ್ಯ ಎಲ್ಲಾರೂ ಕಂಡರೆ ನಿಂಗೆ ಸಮಾ ಆಗ್ತದೆ!…. ಅವನಿಗೆ ಮೊದಲೇ ಒಡಲ ಜರ ಅಂತಿದ್ರು, ನೀನೀ ಮಳೇಲಿ-ಚಳೀಲಿ ಅವನ್ನ ತಿರುಗಿಸಿದ್ರೆ ಗತಿ? ಮನೀಗೆ ಕರಕೊಂಡು ಹೋಗು ಬೇಗ!….”

“ಮನೇಲಿ…. ಅವನೊಬ್ಬ್ನೇ ಅಂತಾ…. ಅವನವ್ವನೇ ನನ್ನ ಸಂಗಡ ಕಳಿಸ್ತು…. ಮತ್ತೆ…. ಮತ್ತೆ…. ಮತ್ತೆ…. ಮಾವಾ!….” ಹೇಳಲು ಹೆದರಿ ಹೆದರಿ, ಹೇಳಲೋ ಬಿಡಲೋ ಎಂಬಂತೆ ತಡೆದೂ ತಡೆದೂ ಧರ್ಮು ದುಃಖಧ್ವನಿಯಲ್ಲೆ ಶೋಕಮುಖಮುದ್ರೆಯಾಗಿ ಮುಂದುವರಿದನು: “ರಾಮು ತಮ್ಮ…. ಮೊನ್ನೆ…. ಆವೊತ್ತು ಜೋರಾಗಿ ಮಳೆ ಬೀಳ್ತಿತ್ತಲ್ಲಾ ಆವೊತ್ತು…. ಸತ್ತು ಹೋತಂತೆ!…. ನಾವು ಯಾರೂ ನೋಡಲೇ ಇಲ್ಲ! ರಾಮೂನು ನೋಡ್ಲಿಲ್ವಂತೆ…. ಸುಡುಗಾಡಿಗೆ ತಗೊಂಡುಹೋಗಿ ಮಣ್ಣು ಮಾಡಿಬಿಟ್ರಂತೆ!” ನೀರವವಾಗಿ ಅಳತೊಡಗಿದ್ದ ರಾಮುವ ಕಣ್ಣೊರಸುತ್ತಾ “ಛೆ ಪಾಪ! ರಾಮು ಅಳ್ತಾನೇ ಇರ್ತಾನೆ! ಅದಕ್ಕೇ ಅವನವ್ವ ‘ಧರ್ಮೂ, ನೀನಾರೂ ಕರಕೊಂಡು ಹೋಗಿ ಸುಮ್ಮನಿರಿಸಪ್ಪಾ’ ಅಂತಾ ಹೇಳಿ ಕಳಿಸ್ತು…. ಅದಕ್ಕೇ ಕರಕೊಂಡು ಬಂದೆ, ಮಾವಾ!….”

ಶಂಕರಹೆಗ್ಗಡೆಯ ಕೈಕೂಸು ತೀರಿಕೊಂಡ ಸುದ್ದಿ ಮುಕುಂದಯ್ಯನಿಗೂ ಮುಟ್ಟಿತ್ತು. ಆದರೆ ಅದು ಅನಿರೀಕ್ಷಿತವಾಗಿರಲಿಲ್ಲ. ಹಿಂದೆ ಬೆಟ್ಟಳ್ಳಿ ಗಾಡಿಯ ಜೊತೆಯಲ್ಲಿ ದೇವಯ್ಯನೊಡನೆ ಕಲ್ಲೂರು ಗಣಪತಿ ದೇವಸ್ಥಾನಕ್ಕೆ ಹೋಗುತ್ತಿದ್ದಾಗ, ಗಂಡನೊಡನೆ ನಡೆದುಕೊಂಡು ಬರುತ್ತಿದ್ದ ಸೀತಮ್ಮಹೆಗ್ಗಡಿತಿಯವರ ಕೌಂಕುಳಲ್ಲಿದ್ದ ಆ ಕೂಸನ್ನು ನೋಡಿದಾಗಲೆ ಅವನಿಗೆ ಗೊತ್ತಾಗಿತ್ತು, ಅದು ಈ ಮಳೆಗಾಲ ಕಳೆಯುವುದಿಲ್ಲ ಎಂದು. ದೊಡ್ಡವರ ಬದುಕಿನ ದೊಡ್ಡ ದೊಡ್ಡ ಘಟನೆಗಳ ನಡುವೆ ಆ ಚಿಕ್ಕ ಜೀವ ದಿವಂಗತವಾದದ್ದು ಯಃಕಶ್ಚಿತವಾಗಿದ್ದ ಅಪತ್ರಿಕಾವಾರ್ತೆಯಾಗಿತ್ತು. ಇತರರಿಗಿರಲಿ, ತಾಯಿ ತಂದೆಗಳಿಗೂ, ಆ ಜೀವ ತನು ಪಡುತ್ತಿದ್ದ ನಿತ್ಯಕ್ಲೇಶದಿಂದ ಪಾರಾದದ್ದು ಒಂದು ಹಿತಸಂಗತಿಯೆ ಆಗಿತ್ತು. ಆದರೆ ಆ ಶಿಶುಮರಣ ಘಟನೆಯ ನಿಜಮೌಲ್ಯ ಹೃದಯಸ್ಪಂದಿ ಯಾಗಿದ್ದುದು ಈ ಮಕ್ಕಳಿಗೆ ಮಾತ್ರ-ರಾಮುಗೆ ಮತ್ತು ಧರ್ಮುಗೆ!

‘ನಡೆಯುತ್ತಿರುತ್ತವೆ ಹೀಗೆ ಘಟನಾಪರಂಪರೆ. ಕೆಲವು ಕಣ್ಣಿಗೆ ಬೀಳುತ್ತವೆ; ಕೆಲವಂತೂ ಗಮನಕ್ಕೂ ಬರುವುದಿಲ್ಲ.’ ತನ್ನೊಳಗೆ ತಾನು ಹೇಳಿಕೊಳ್ಳುತ್ತಿದ್ದ ಮುಕುಂದಯ್ಯ, ಮಳೆ ಸಣ್ಣಗೆ ಶುರುವಾಗುತ್ತಿದ್ದುದನ್ನು ಗಮನಿಸಿ, ಕೈಲಿದ್ದ ಕೊಡೆಯನ್ನು ಬಿಚ್ಚುತ್ತಾ, ಮುದ್ದುಮಾಡುವ ದನಿಯಿಂದ ಹೇಳಿದನು: “ಮಳೆ ಬರಕ್ಕೆ ಸುರುವಾಯ್ತು…. ಅಳಬೇಡ, ರಾಮು…. ಬೇಗ ಮನೀಗೆ ಹೋಗಿ.”

ಧರ್ಮು ರಾಮುವನ್ನು ಕೈಹಿಡಿದುಕೊಂಡೆ ಕುಕ್ಕೋಟದಿಂದ ಮನೆಯ ಕಡೆಗೆ ಓಡಿದನು. ಸ್ವಲ್ಪಹೊತ್ತು ನಿಂತಿದ್ದ ಮದ್ದಳೆಯ ಮತ್ತು ವಾಲಗದ ಸದ್ದು ಮತ್ತೆ ಉಕ್ಕಿ ಕೇಳಿಬರತೊಡಗಿತ್ತು. ಮುಕುಂದಯ್ಯ ಸಸಿನೆಟ್ಟಿ ಮಾಡಿದ್ದ ಗದ್ದೆಕೋಗಿನಲ್ಲಿ ಅಂಚಿನಿಂದ ಅಂಚಿಗೆ ನಡೆಯುತ್ತಾ ಹೂವಳ್ಳಿಗೆ ಹೊರಟಿದ್ದನು….

ಹೂವಳ್ಳಿಯ ಮದುವೆ ನಿಂತುದಕ್ಕೂ ಚಿನ್ನಮ್ಮ ಕಾಣೆಯಾದುದಕ್ಕೂ ತನ್ನ ತಮ್ಮನೆ ಕಾರಣ ಎಂದು ಸ್ಪಷ್ಟವಾಗಿ ಗೊತ್ತಾದ ಮೇಲೆ, ಕೋಣೂರು ರಂಗಪ್ಪಗೌಡರು ಮುಕುಂದಯ್ಯ ತಮ್ಮ ಮನೆತನಕ್ಕೇ ಕೆಟ್ಟ ಹೆಸರು ತಂದಿಟ್ಟನೆಂದು ಕುಪಿತರಾದರು. ಹಾಗೆ ಹೆಣ್ಣನ್ನು ಹಾರಿಸಿಕೊಂಡು ಹೋಗುವುದು ಹೊಲೆಯರು ಗಟ್ಟದ ತಗ್ಗಿನವರು ಮೊದಲಾದ ಕೀಳು ಜನಕ್ಕೆ ಹೇಳಿಸಿದ್ದಲ್ಲದೆ ತಮ್ಮಂಥ ಉತ್ತಮ ಜಾತಿಯ ಶ್ರೇಷ್ಠ ಕುಲದವರಿಗೆ ಅತ್ಯಂತ ಅವಮಾನಕರವಾದ ಹೇಯಕಾರ್ಯ ಎಂಬುದು ಅವರ ಮತವಾಗಿತ್ತು. ಅದರಲ್ಲಿಯೂ ಹಾಗೆ ಮದುವೆಯಾಗುವ ಮುನ್ನ, ಮತ್ತೊಬ್ಬ ಗಂಡಸಿನೊಡನೆ ಓಡಿಹೋಗುವ ಹೆಂಗಸಂತೂ ಖಂಡಿತವಾಗಿಯೂ ಗರತಿಯಾಗಿರಲು ಯೋಗ್ಯಳೇ ಅಲ್ಲ: ಅಂಥವಳೊಡನೆ ಸಂಸಾರ ಮಾಡುವುದೂ ಒಂದೇ, ಸೂಳೆ ಕಟ್ಟಿಕೊಳ್ಳುವುದೂ ಒಂದೇ; ಎಂದು ಜಿಗುಪ್ಸೆಪಟ್ಟುಕೊಂಡಿತ್ತು. ಅವರ ಮನೆತನಸ್ತಿಕೆ! 'ತಮ್ಮ ಮನೆಗೆ ಆ ಹೆಣ್ಣನ್ನು ತಂದುಕೊಳ್ಳುವುದು ಎಂದಿಗೂ ಸಾಧ್ಯವಿಲ್ಲ' ಎಂದುಬಿಟ್ಟರು. 'ತಮ್ಮನೇನಾದರೂ ಹಟಹಿಡಿದು ಆ ಹೆಣ್ಣನ್ನೆ ಮದುವೆಯಾಗಬೇಕು ಎಂದರೆ, ಅವನು ತನ್ನ ಪಾಲು ತೆಗೆದುಕೊಂಡು ಬೇರೆ ಹೋಗಿ, ಆಮೇಲೆ ಏನೂ ಬೇಕಾದರೂ ಮಾಡಿ ಕೊಳ್ಳಲಿ!"

ಆದರೆ ಅವರ ತಯಿ, ಕಾಗಿನಹಳ್ಳಿ ಅಮ್ಮ ಎಂದು ಮಾತ್ರವೆ ಎಲ್ಲರಿಗೂ ಗೊತ್ತಿದ್ದ ದಾನಮ್ಮ ಹೆಗ್ಗಡಿತಿಯವರು, ತಮ್ಮ ಕಿರಿಯ ಮಗನ ಪರವಾಗಿ ಹಿರಿಯ ಮಗನೊಡನೆ ನಾನಾ ರೀತಿಯಿಂದ ವಾದಿಸಿ, ಮನೆ ಪಾಲಾಗುವುದನ್ನೂ ಮುಕುಂದಯ್ಯ ಬೇರೆ ಹೋಗುವುದನ್ನೂ ವಿರೋಧಿಸಿದ್ದರು. ಐಗಳು ಅನಂತಯ್ಯ ತಮ್ಮ ಮುದಿತಾಯನ್ನು ನೋಡಿಕೊಂಡು ಬರಲು ಗಟ್ಟದ ಕೆಳಗೆ ಹೋದವರು ಹಿಂದಿರುಗಿ ಬರುವವರೆಗೂ ಕೈಗೊಳ್ಳಬೇಕಾದ ಕಾರ್ಯಕ್ರಮಗಳನ್ನು ತಡೆಹಿಡಿಯಬೇಕೆಂದು ಸಂಬಂಧಪಟ್ಟ ಎಲ್ಲರ ನಡುವೆಯೂ ಒಂದು ಒಪ್ಪಂದವಾಯಿತು. ಏಕೆಂದರೆ, ಐಗಳು ಕೋಣೂರು ಮನೆಯ ಉಪ್ಪು ಅನ್ನ ತಿಂದು ಸಂಬಳ ತೆಗೆದುಕೊಳ್ಳುವ ಒಬ್ಬ ನೌಕರನ ಸ್ಥಾನದಲ್ಲಿದ್ದರೂ, ತಮ್ಮ ವಿಶ್ವಾಸಪೂರ್ವಕವಾದ ನಡತೆ, ನಿಷ್ಪಕ್ಷಪಾತ ವರ್ತನೆ, ಸರ್ವರ ಹಿತಚಿಂತನೆ, ಉಪಕಾರ ಬುದ್ಧಿ, ತಮ್ಮನ್ನೆ ನಿರ್ಲಕ್ಷಿಸಿಕೊಳ್ಳುವಷ್ಟರಮಟ್ಟಿನ ಪರಹಿತಾಸಕ್ತಿ, ಎಲ್ಲಕ್ಕಿಂತಲೂ ಹೆಚ್ಚಾಗಿ, ಭಾರತ ರಾಮಾಯಣ ಭಾಗವತಗಳನ್ನು ರಾಗವಾಗಿ ಓದಿ ಹೇಳಿ, ಮನರಂಜನೆಯ ವಿಧಾನದಿಂದಲೆ, ಧರ್ಮದಲ್ಲಿ ಪೂಜ್ಯಬುದ್ಧಿಯುಂತಾಗುವಂತೆ ಹೃದಯವನ್ನರಳಿಸಿ ಧ್ಯೇಯದತ್ತ ಆಕರ್ಷಿಸುವ ಒಂದು ಗುರೂಪದೇಶ ಸಾಮರ್ಥ್ಯ ಇವುಗಳಿಂದ ಅವರು ಮನೆಯವರೆಲ್ಲರ ಪ್ರೀತಿ, ಗೌರವ, ನಂಬುಗೆಗಳಿಗೆ ಪಾತ್ರರಾಗಿದ್ದರು.

ಆದರೆ ಐಗಳು ಕೋಣೂರಿಗೆ ಹಿಂತಿರುಗಿ ಬರುವ ತನಕ ಹೂವಳ್ಳಿಯ ಗದ್ದೆ ತೋಟಗಳ ಬೇಸಾಯ ತಡೆದಿರುವುದಕ್ಕಾಗುತ್ತದೆಯೇ? ಆಗಲಿ ಮಳೆಗಾಲ ಪ್ರಾರಂಭವಾಗಿ ಮುಂಬರಿದಿತ್ತು. ಇತರರ ಎಲ್ಲ ಗದ್ದೆಕೋಗುಗಳೂ ಹೊಸದಾಗಿ ನಟ್ಟಿ ಮಾಡಿದ ಬಿಳಿಚುಹಸುರು ಸಸಿಗಳಿಂದ ಶೋಭಿಸತೊಡಗಿದ್ದುವು; ನಟ್ಟಿ ಸ್ವಲ್ಪ ತಡವಾದ ಗದ್ದೆಗಳಲ್ಲಿಯೂ ಆ ಕೆಲಸದಲ್ಲಿ ತೊಡಗಿದ್ದ ಕಂಬಳಿಕೊಪ್ಪೆಗಳೂ ಗೊರಬುಗಳೂ ಸಶಬ್ದ ಸಂಭ್ರಮದಿಂದ ಸಚಲವಾಗಿದ್ದುವು.

ಮೊದಲೇ ಸಾಲದ ದವಡೆಯಲ್ಲಿದ್ದ ಹೂವಳ್ಳಿಯ ಆಸ್ತಿ, ಈ ವರ್ಷದ ಗದ್ದೆ ತೋಟಗಳ ಬೇಸಾಯವೂ ನಿಂತು ಹೋಗುವ ಪಕ್ಷದಲ್ಲಿ, ಮುಂದಿನ ವರ್ಷ ಏನೂ ಉಳಿಯದೆ ಕರಗುವುದರಲ್ಲಿ ಸಂದೇಹವಿರಲಿಲ್ಲ. ಕಡೆಗೆ ಮನೆಯವರಿಗೆ ಉಣ್ಣುವುದಕ್ಕಾದರೂ ಒಂದಷ್ಟು ಬತ್ತ ಬೆಳೆಯದಿದ್ದರೆ ಏನು ಗತಿ? ಚಿನ್ನಮ್ಮ ನಾಗಕ್ಕ ಇಬ್ಬರೂ

ಕೋಲುಗರಟ ಹಿಡಿಯಬೇಕಾಗುತ್ತದೆ, ಇಲ್ಲವೆ ಗಟ್ಟದ ತಗ್ಗಿನವರಂತೆ ಯಾರಾದರೂ ಮನೆಯ ಆಳಾಗಿ ಕೂಲಿ ಮಾಡಿ ಅಜ್ಜಿಗೂ ತಮಗೂ ಹೊಟ್ಟೆಬಟ್ಟೆಗೆ ಬೇಕಾಗುವಷ್ಟನ್ನಾದರೂ ಸಂಪಾದಿಸಬೇಕಾಗುತ್ತದೆ.

ಒಗತನದಲ್ಲಿ ಗಟ್ಟಿಗಿತ್ತಿಯಾಗಿದ್ದ ನಾಗಕ್ಕ ಇದನ್ನೆಲ್ಲ ಅಜ್ಜಿಯೊಡನೆ ಆಲೋಚಿಸಿ, ತಾನೇ ಹೊಣೆ ಹೊರಲು ಗಟ್ಟಿ ಮನಸ್ಸು ಮಾಡಿದಳು. ಸುಬ್ಬಿ ಬೈರ ಮೊದಲಾದ ಹೂಬಳ್ಳಿಯ ಜೀತದಾಳುಗಳ ಜೊತೆಗೆ ಹಳೆಮನೆ ಕೋಣೂರಿನಂತಹ ಹತ್ತಿರದ ಮನೆಗಳಲ್ಲಿರುವ ಕೂಲಿಯಾಳುಗಳನ್ನೂ ಸಹಾಯಕ್ಕೆ ಕರೆದುಕೊಳ್ಳುವ ಹಂಚಿಕೆ ಮಾಡಿದ್ದಳು.

ಮಲೆಯ ನೆತ್ತಿಯಿಂದ ಮನೆಗೆ ಹಿಂದಿರುಗಿದ್ದ ಮದುಮಗಳು ಚಿನ್ನಮ್ಮನ ಸ್ವಭಾವದಲ್ಲಿ ಕ್ರಾಂತಿಸ್ವರೂಪದ ಪರಿವರ್ತನೆಯಾಗಿತ್ತು. ಮಾತುಕತೆ ನಡತೆಗಳಲ್ಲಿ ಹಿಂದಿನ ಆಟಗುಳಿ ಹುಡುಗಿ ಕಾಣುತ್ತಿರಲಿಲ್ಲ. ಅಜ್ಜಿಯ ಸೇವಾ ಶುಶ್ರೂಷೆಗಳಲ್ಲಿ ಹಿಂದೆ ಇದ್ದಂತೆಯೆ ಪ್ರೀತ್ಯಾಸಕ್ತಿ ತೋರುತ್ತಿದ್ದಿತಾದರೂ ಅಂದಿನ ಮನೋಲಘುತ್ವ ಇರಲಿಲ್ಲ. ನಾಗಕ್ಕನ ಮೇಲಣ ಅಕ್ಕರೆ ಮೊದಲಿಗಿಂತಲೂ ಕಡಿಮೆಯಾಗಿರಲಿಲ್ಲ. ಆದರೆ ವ್ಯವಹಾರದಲ್ಲಿ ಎದ್ದು ಕಾಣತೊಡಗಿತ್ತು, ಚಿಂತಾ ಮಗ್ನತೆ ಮತ್ತು ಗಾಂಭೀರ್ಯ. ತನ್ನಿಂದಾಗಿ ತಮ್ಮ ಮನೆಗೂ ಮನೆತನಕ್ಕೂ ಒದಗಿದ ಆರ್ಥಿಕ, ಸಮಾಜಿಕ ಮತ್ತು ಲೌಕಿಕವಾದ ಪರಿಸ್ಥಿತಿ ಅವಳಿಗೆ ಪೂರ್ಣವಾಗಿ ಅರ್ಥವಾಗಿತ್ತು. ತನ್ನ ಸ್ವಂತ ಶೀಲದ ವಿಚಾರವಾಗಿಯೂ ಬಂಧು ಬಾಂಧವರಲ್ಲಿ ಮತ್ತು ಜನಸಾಮಾನ್ಯರಲ್ಲಿ ಎಂತಹ ಅನುದಾರಭಾವನೆಗಳು ಪ್ರಚಲಿತವಾಗಿದ್ದುವೆಂಬುದೂ ಅವಳಿಗೆ ತಿಳಿದಿತ್ತು. ತನ್ನ ವಿಷಯಕವಾದ ಅಪನಿಂದೆಗೆ ಅವಳು ನೊಂದುಕೊಂಡಿದ್ದುದಕ್ಕಿಂತಲೂ ಹೆಚ್ಚಾಗಿ ತನ್ನೊಡನೆ ಹೇಗೆ ಬೇಕಾದರೂ ಹಾಗೆ ವರ್ತಿಸಬಹುದಾಗಿದ್ದ ಸದವಕಾಶದಲ್ಲಿಯೂ ಅತ್ಯಂತ ಸಭ್ಯ ಸಹಜವಾದ ಲಜ್ಜಾಮರ್ಯಾದೆಗಳಿಂದ ದೂರದೂರವಾಗಿದ್ದುಕೊಂಡೆ ನಡೆದುಕೊಂಡಿದ್ದ ತನ್ನ ಮುಕುಂದಬಾವನ ಮೇಲೆ ಬಂದಿದ್ದ ಅಪವಾದಕ್ಕೆ ಅವಳು ಕುಗ್ಗಿಹೋಗಿದ್ದಳು. ಕೋಣೂರು ಮನೆಯಲ್ಲಿ ಅಣ್ಣ ತಮ್ಮಂದಿರೊಳಗೆ ನಡೆಯುತ್ತಿದ್ದ ಹಿಸ್ಸೆಯ ಗಲಿಬಿಲಿ, ಸಿಂಬಾವಿ ಭರಮೈಹೆಗ್ಗಡೆಯವರು ಹೇಳುತ್ತಿದ್ದರೆಂದು ಅವರಿವರು ಹೇಳುತ್ತಿದ್ದ ಪ್ರತೀಕಾರದ ಸುದ್ದಿ, ಸಿಂಬಾವಿ ಮತ್ತು ಹಳೆಮನೆಯ ಲಗ್ನಗಳು ಮಿಂಚಿನ ವೇಗದಲ್ಲಿ ನಡೆದಿದ್ದ ರೀತಿ ಮತ್ತು ಅದರಿಂದ ತನಗೂ ಮುಕುಂದ ಬಾವನಿಗೂ ಸಂಭವಿಸಬಹುದಾದ ಪರಿಣಾಮ ಇವುಗಳನ್ನು ನೆನೆದಾಗಲೆಲ್ಲ ಚಿನ್ನಮ್ಮನ ಹೃದಯದಲ್ಲಿ ಏನೋ ನಿರಕಾರವಾದ ದಿಗಿಲು ಸಂಚರಿಸುತ್ತಿತ್ತು.

ಮುಕುಂದಯ್ಯ ಹೂವಳ್ಳಿಗೆ ಮತ್ತೆ ಮತ್ತೆ ಬಂದು ವಿಚಾರಿಸಿಕೊಳ್ಳುತ್ತಿದ್ದುದು ಚಿನ್ನಮ್ಮನಿಗೆ ತುಂಬ ಹಿಗ್ಗಿನ ವಿಷಯವಾಗಿದ್ದರೂ ಯಾರು ಏನು ಅಂದುಕೊಳ್ಳುತ್ತಾರೊ? ಮತ್ತೆ ಏನನ್ನು ಹುಟ್ಟಿಸಿ ಹೇಳುತ್ತಾರೊ? ಎಂದು ಅವಳಿಗೆ ಅಂಜಿಕೆಯಾಗುತ್ತಿತ್ತು. ಅವಳ ಮನಸ್ಸಿನ ಫಜೀತಿಯನ್ನರಿತು ಮುಕುಂದಯ್ಯ ಎಲ್ಲಿಯಾದರೂ ಒಂದೆರಡು ದಿನ ಹೂವಳ್ಳಿಗೆ ಬರದೆ ನಿಂತು ಬಿಟ್ಟರಂತೂ ಚಿನ್ನಮ್ಮನ ಅಂಜಿಕೆ ವಿಷಮಸ್ಥಿತಿಗೇರುತ್ತಿತ್ತು, ಬಾವ ತನ್ನನ್ನೆಲ್ಲಿ ಮರೆತುಬಿಡುತ್ತಾರೊ ಎಂದು! ಮುಕುಂದಯ್ಯ ಗಂಡಸು; ಅವನ ಪೂರ್ವಚರಿತ್ರೆ ಏನೆ ಇರಲಿ ಅದನ್ನು ಸಮಾಜ ಲೆಕ್ಕಿಸುವುದಿಲ್ಲ; ಯಾರು ಬೇಕಾದರೂ ಹೆಣ್ಣು ಕೊಡುತ್ತಾರೆ. ಆದರೆ ತನು ಹೆಣ್ಣು; ತನ್ನನ್ನು ಮುಕುಂದಯ್ಯ ಕೈಬಿಡುವ ಪಕ್ಷದಲ್ಲಿ ಲೋಕವೆ ಕೈ ಬಿಟ್ಟಂತೆ; ತನಗಿನ್ನು ಬಾಳ್ವೆ ಎಂಬುದಿಲ್ಲ- ಈ ಭಾವನೆ ಅವಳಲ್ಲಿ ಆಲೋಚನಾ ಸ್ಪಷ್ಟವಾಗಿತ್ತೆಂದಲ್ಲ; ಅವಳ ಭೀತಿಯ ಅಂತರಾಳದಲ್ಲಿ ಅದಕ್ಕೆ ಆಧಾರಭೂತವಾಗಿತ್ತು!

ಒಂದು ಹಗಲು ಮಳೆ ಹೊಳವಾಗಿದ್ದಾಗ ಚೆನ್ನಮ್ಮ ಹೊರ ಅಂಗಳದ ಬಯಲಿನಲ್ಲಿ ಸುಬ್ಬಿಯೊಡನೆ ಯಾವುದೊ ಕೆಲಸದ ವಿಚಾರವಾಗಿ ಸಲಹೆ ಕೊಡುತ್ತಾ ನಿಂತಿದ್ದಾಗ ಮುಕುಂದಯ್ಯ ಎಂದಿನಂತೆ ಕೋಣೂರಿನಿಂದ ಹೂವಳ್ಳಿಗೆ ಬಂದನು. ಆ ಅಂಗಳದ ಬಯಲು ಬೆಳಕಿನಲ್ಲಿ ಚೆನ್ನಮ್ಮನನ್ನು ನೋಡಿ ಅವನಿಗೆ ಗಾಬರಿಯಾಯಿತು. ಹುಲಿಕಲ್ಲಿನ ನೆತ್ತಿಯಲ್ಲಿ ತಾನು ಕಂಡಿದ್ದ ಸುಪುಷ್ಟ, ಸುದೃಢ, ಸುಂದರ ಕಾಯದ ಹುಡುಗಿ ತುಂಬ ಕೃಶಳಾಗಿದ್ದಂತೆ ತೋರಿದಳು. ಉಟ್ಟಿದ್ದ ಸೀರೆಯ ಮಾಲಿನ್ಯದಂತೆಯೆ ಮುಖದ ಕಳೆಯೂ ಕೆಟ್ಟಿತ್ತು. ಅವಳನ್ನು ಇತ್ತೀಚೆಗೆ ಯಾವಾಗಲೂ ಮನೆಯ ಒಳಗಣ ಮಬ್ಬು ಬೆಳಕಿನಲ್ಲಿಯೆ ನೋಡುತ್ತಿದ್ದುದರಿಂದ ಅವಳಲ್ಲಿ ಉಂತಾಗಿದ್ದ ಈ ಶಾರೀರಕ ಪರಿವರ್ತನೆ ಮುಕುಂದಯ್ಯನಿಗೆ ದೃಗ್ಗೋಚರವಾಗಲು ಅವಕಾಶ ದೊರಕಿರಲಿಲ್ಲ. ಈಗ ಅದನ್ನು ಕಂಡು ಅವನಿಗೆ ದಿಗಿಲಾಯಿತು. ಯಾವುದೊ ಕೊರಗು ಮನಸ್ಸನ್ನು ಕೊರೆಯುತ್ತಿರುವುದರಿಂದಲೆ ಅವಳು ಹಾಗಾಗಿರಬೇಕು ಎಂದು ನಿಶ್ಚಯಿಸಿದ ಮುಕುಂದಯ್ಯ ನೇರವಾಗಿ ಅವಳನ್ನು ಸಮೀಪಿಸಿದನು. ಅವಳು ಅವನನ್ನು ಕಂಡು ಮುಗುಳುನಗೆಯಿಂದ ಸ್ವಾಗತಿಸಿದ್ದರೂ ಅವನು ಹತ್ತಿರ ಬಂದಾಗ ತಲೆಬಾಗಿ ನಿಂತಳು. ಅವನನ್ನು ತಲೆಯೆತ್ತಿ ನೋಡುವ ಆಶೆಯಿದ್ದರೂ ಅವಳಿಗೆ ಹಾಗೆ ಮಾಡಲಾಗಲಿಲ್ಲ. ಅದನ್ನರಿತ ಸುಬ್ಬಿ, ಚೆನ್ನಕ್ಕ ತನಗೆ ಹೇಳಿದ್ದ ಕೆಲಸಕ್ಕೆ ಹೋಗುವಂತೆ, ಬೇಗಬೇಗನೆ ಅಲ್ಲಿಂದ ಹೋದಳು:

“ಯಾಕೆ, ಚೆನ್ನೀ, ಹುಷಾರಿಲ್ಲೇನು? ಬಹಳ ಇಳಿದು ಹೋಗಿದ್ದೀಯಲ್ಲಾ!” ಪಿಸುಮಾತಿನ ಸಣ್ಣದನಿಯಲ್ಲಿತ್ತು ಆ ಪ್ರಶ್ನೆ.

ಮುಕುಂದಯ್ಯನ ಅಕ್ಕರೆಯ ಪ್ರಶ್ನೆಗೆ ಚೆನ್ನಮ್ಮ ಉತ್ತರ ಹೇಳಲೂ ಇಲ್ಲ; ತಲೆಯೆತ್ತಲೂ ಇಲ್ಲ. ಆದರೆ ಅವಳು ಜೋರಾಗಿ ಉಸಿರೆಳೆದುಕೊಳ್ಳುತ್ತಿದ್ದುದೂ ಗೊಬ್ಬೆ ಸೆರಗು ಬಿಗಿಯಾಗಿ ಕಟ್ಟಿದ್ದ ಅವಳ ಎದೆ ಏದುತ್ತಿರುವಂತೆ ಮೇಲಕ್ಕೂ ಕೆಳಕ್ಕೂ ಉಬ್ಬಿ ಇಳಿಯುತ್ತಿದ್ದುದೂ ಅವಳು ಪ್ರಬಲ ಭಾವವಶಳಾದುದನ್ನು ಘೋಷಿಸುವಂತಿತ್ತು. ಮುಕುಂದಯ್ಯ ನೋಡುತ್ತಿದ್ದ ಹಾಗೆಯೆ ತಲೆ ಬಾಗಿದ್ದ ಅವಳ ಕಣ್ಣುಗಳಿಂದ ಹನಿಗಳು ಬಳಬಳನೆ ನೇರವಾಗಿ ನೆಲಕ್ಕೇ ಬಿದ್ದುವು!

ತಾನೂ ಭಾವವಶನಾಗುತ್ತಿರುವಂತೆ ಅನುಭವವಾಯಿತು ಮುಕುಂದಯ್ಯಗೆ. ಸಮಭಾವ ಮಹಿಮೆಯಿಂದ ಐಕ್ಯಗೊಂಡ ಆ ಪ್ರಣಯಿ ಹೃದಯಗಳು ತಮ್ಮ ಅಂತಃಕರಣದ ಆಲೋಚನೆಗಳನ್ನೂ ಪರಸ್ಪರ ಅರ್ಥಮಾಡಿಕೊಂಡುವೊ ಏನೋ?

“ಚೆನ್ನೀ, ಒಳಗೆ ಹೋಗಾನ ಬಾ.” ಗದ್ಗದವಾಗುತ್ತಿದ್ದ ಕಂಠದಿಂದಲೆ ಹೇಳಿದನು ಮುಕುಂದಯ್ಯ “ನಿನ್ನೊಬ್ಬಳ ಹತ್ತಿರಾನೆ ಮಾತಾಡಬೇಕಾಗಿದೆ....”

ಸರಸರನೆ ಮನೆಯೊಳಗೆ ನಡೆದ ಮುಕುಂದಬಾವನನ್ನು ಸೂತ್ರಗೊಂಬೆಯಂತೆ ಅನುಸರಿಸಿದಳು ಚೆನ್ನಮ್ಮ.

“ಬಾವ ಏನೋ ಮಾತಾಡಬೇಕಂತೆ ನನ್ನ ಹತ್ರ.” ತನಗೆ ದಿರಾದ ನಾಗಕ್ಕಗೆ ಹೇಳಿ, ಚೆನ್ನಮ್ಮ ಕೋಣೆಯ ಬಾಗಿಲು ತೆರೆದಳು; ತನ್ನ ಹಿಂದೆ ನಿಂತಿದ್ದ ಮುಕುಂದಯ್ಯನನ್ನು ಕಣ್ಣಿಂದಲೆ ಕರೆಯುವಂತೆ ನೋಡಿ, ಒಳಕ್ಕೆ ದಾಟಿದಳು.

ನಾಗಕ್ಕಗೂ ಅದನ್ನು ಕೇಳಿ ತುಂಬ ಸಂತೋಷವಾಯಿತು; ಮನಸ್ಸಿಗೆ ಸಮಾಧಾನವಾಯಿತು. ಯಾವುದೋ ಚಿಂತೆಯಿಂದಲೋ? ಅಭ್ಯಾಸವಿಲ್ಲದ ಸಾಹಸ ಪ್ರಯಾಣವನ್ನು ಕೈಕೊಂಡ ಅತಿ ಅಯಾಸದ ಕಾರಣವಾಗಿಯೋ? ಅಥವಾ ಆ ಉದ್ಯಮದಲ್ಲಿಯೆ ಆಕೆ ಅನುಭವಿಸಿದ್ದ ಹೃದಯಕ್ಷೋಭೆ ಮತ್ತು ಚಿತ್ತೋದ್ವೇಗಗಳ ದೆಸೆಯಿಂದಲೋ? ಚಿನ್ನಮ್ಮ, ಅವಳ ತಂದೆಯ ಮರಣಾನಂತರ, ಹುಲಿಕಲ್ಲು ನೆತ್ತಿಗೆ ಏರಿದ ಮರುದಿನವೆ ಮತ್ತೆ ಇಳಿದು ಮನೆಗೆ ಮರಳಿದ ಮೇಲೆ, ದಿನ ಕ್ರಮೇಣ ಇಳಿದುಹೋಗುತ್ತಿದ್ದುದನ್ನೂ ಹೆಚ್ಚು ಹೆಚ್ಚು ಮೌನಿಯಾಗುತ್ತಿದ್ದುದನ್ನೂ ತಾನೊಬ್ಬಳೆ ಕುಳಿತು ಬಹಳ ಹೊತ್ತು ಧೇನಿಸುತ್ತಿದ್ದುನ್ನೂ ಗಮನಿಸಿ ನಾಗಕ್ಕ ಸಂಕಟಪಟ್ಟುಕೊಂಡಿದ್ದಳು. ಅದಕ್ಕೆ ಕಾರಣವನ್ನು ತಿಳಿಯಲೂ ಅದನ್ನು ಶಮನಗೊಳಿಸಲೂ ಅವಳು ಮಾಡಿದ್ದ ಪ್ರಯತ್ನ ಫಲಕಾರಿಯಾಗಲಿಲ್ಲ. ಅದನ್ನು ಕುರಿತು ಮುಕುಂದಯ್ಯ ನೊಡನೆಯೂ ಇಂಗಿತವಾಗಿ ಪ್ರಸ್ತಾಪಿಸಿ, ತನ್ನಂತಹ ಹೆಂಗಸು ಮರ್ಯಾದೆಯ ಮಟ್ಟದಲ್ಲಿ ಮಾನವಾಗಿ ಸೂಚಿಸಬಹುದಾದಷ್ಟನ್ನು ಪರಿಹಾರೋಪಾಯವಾಗಿ ಸೂಚಿಸಿದ್ದಳು. ಆದರೆ ಮುಕುಂದಯ್ಯನ ಸಂಪ್ರದಾಯ ನೀತಿಪ್ರಜ್ಞೆ ಅದನ್ನು ಒಪ್ಪಿಕೊಳ್ಳಲಿಲ್ಲವೋ? ಅಥವಾ ಅವನ ಗ್ರಾಮೀಣ ಸರಳಸ್ವಭಾವದ ಯೌವನಕ್ಕೆ ಅದು ಅರ್ಥವಾಗಲಿಲ್ಲವೋ? ಅಥವಾ ನಿರಾಧಾರವೂ ಅನ್ಯಾಯವೂ ಆಗಿದ್ದ, ತಮ್ಮಿಬ್ಬರ ಸಂಬಂಧ ವಿಚಾರವಾದ, ಕುತ್ಸಿತ ಜನಾಪವಾದಕ್ಕೆ ತಮ್ಮ ಶುಚಿ ವರ್ತನೆಯನ್ನೆ ತಿರಸ್ಕಾರದ ಸಮ್ಮಾರ್ಜನಿಯನ್ನಾಗಿ ಪ್ರಯೋಗಿಸಿ ತೋರಿಸಬೇಕೆಂಬ ಅವನ ಛಲಕ್ಕೆ ಹಿಡಿಸಲಿಲ್ಲವೋ? ಅಂತೂ ಅವಳ ಸೂಚನೆ ಅದುವರೆಗೂ ಸಫಲವಾಗಿರಲಿಲ್ಲ. ಈಗ ಚಿನ್ನಮ್ಮನೊಡನೆ ಮುಕುಂದಯ್ಯ ಏಕಾಂತವಾಗಿ ಮಾತನಾಡುವ ಸಂದರ್ಭದಲ್ಲಿಯಾದರೂ ತನ್ನ ಆ ಮನೋರಥ ಕೈಗೂಡಬಹುದೆಂದು ನಾಗಕ್ಕನ ಹೃದಯ ಹರ್ಷಿತವಾಯಿತು. ಆದ್ದರಿಂದಲೆ ಚಿನ್ನಮ್ಮನನ್ನು ಹಿಂಬಾಲಿಸಿದ್ದ ಮುಕುಂದಯ್ಯನ ಬೆನ್ನುಮರೆಯಾಗಿ, ಕೋಣೆಯ ಬಾಗಿಲು ಸಂಪೂರ್ಣವಾಗಿ ಮುಚ್ಚಿಕೊಂಡುದನ್ನು ಕಂಡು ಅವಳು, ಎದೆಸವಿಗೆ ಮಂದಸ್ಮಿತೆಯಾಗಿ ಅಡುಗೆಮನೆಗೆ ಹೋದಳು, ಏನಾದರೂ ಸಿಹಿ ತಯಾರಿಸಬೇಕೆಂದು ಸಂಕಲ್ಪಿಸಿ.

ನಾಗಕ್ಕನ ಮನೋರಥವೇನೋ ಕೈಗೂಡಿತು; ಆದರೆ ಅಳು ಊಹಿಸಿದ ಅಥವಾ ಅಪೇಕ್ಷಿಸಿದ ರೀತಿಯಿಂದ ಅದು ನಡೆಯಲಿಲ್ಲ.

ಮುಕುಂದಯ್ಯ ಮಂಚದ ಮೇಲೆ ಅವನ ರೂಢಿಯಂತೆ ತನಗೆ ದೂರವಾಗಿಯೆ ಕುಳಿತುಕೊಳ್ಳುತ್ತಾನೆಂದು ನಿರೀಕ್ಷಿಸಿ ಚಿನ್ನಮ್ಮ ಅದರ ತಲೆದಿಸಿ ಪಕ್ಕದಲ್ಲಿದ್ದ ಪಿಟಾರಿಯ ಬಳಿ ನಿಂತಳು. ಆದರೆ, ಎಂದಿನಂತಲ್ಲದೆ ಇಂದು, ಅವನು ಅವಳ ಬಳಿಗೇ ಬಂದು ಪಿಟಾರಿಯ ಮೇಲೆಯೇ ಕುಳಿತುಕೊಂಡುದನ್ನು ಕಂಡು, ಅವಳಿಗೆ ಅಚ್ಚರಿಯೊಡನೆ ಆನಂದವೂ ಆಯಿತು. ಆದರೂ ಸ್ವಾಭಾವಿಕ ಸಂಕೋಚದಿಂದ ದೂರ ಸರಿಯಲು ಪ್ರಯತ್ನಿಸಿದಾಗ ಅವಳಿಗೆ ಗೊತ್ತಾಯಿತು, ಹಾಗೆ ಸರಿಯಲು ಅಲ್ಲಿ ಜಾಗವೇ ಇರಲಿಲ್ಲ.

“ಎಲ್ಲಿಗೆ ಹೋಗ್ತಿಯ, ಚಿನ್ನಿ, ಎಲ್ಲೇ ಬಾ, ಕೂತುಕೋ.” ಮುಕುಂದಯ್ಯ ಪಿಟಾರಿಯ ಮೇಲೆ ತನ್ನ ಪಕ್ಕದಲ್ಲಿದ್ದ ಸ್ಥಳಕ್ಕೆ ಆಹ್ವಾನಿಸಿದನು.

ಚಿನ್ನಮ್ಮ ಬಾವನ ಆ ಆಹ್ವಾನಕ್ಕೆ ಅಪೂರ್ವ ಲಜ್ಜೆಯನ್ನು ಅನುಭವಿಸುತ್ತಾ, ನಿಂತಲ್ಲಿಂದ ಕದಲಲಿಲ್ಲ. ಅವಳಿಗೆ ಅದು ಸಂತೋಷಪ್ರದವಾಗಿದ್ದರೂ ನಂಬಲಾರದಷ್ಟು ವಿನೂತನವಾಗಿ ತೋರಿತ್ತು.

“ನೀನು ಯಾಕೆ ಇಷ್ಟು ಇಳಿದುಹೋಗಿದ್ದೀಯಲ್ಲಾ? ಏನೋ ಕೊರಗು ಹಚ್ಚಿಕೊಂಡಿದ್ದೀಯ ಮನಸ್ಸಿಗೆ!” ಮುಕುಂದಯ್ಯ ಪ್ರಾರಂಭಿಸಿದನು. ಅವಳನ್ನು ತನ್ನ ಪಕ್ಕದಲ್ಲಿ ಕೂರಲು ಬಲಾತ್ಕರಿಸಲಿಲ್ಲ.

ಮೊದಮೊದಲು ಚಿನ್ನಮ್ಮನ ಬಾಯಿಂದ ಮಾತೇ ಹೊರಡಲಿಲ್ಲ; ಬದಲಾಗಿ ಕಣ್ಣೀರುಗರೆಯುತ್ತಾ ಬಿಕ್ಕಿ ಬಿಕ್ಕಿ ಅಳತೊಡಗಿದಳು. ಆ ಕೋಣೆಯಲ್ಲಿ ಅಷ್ಟೇನೂ ಬೆಳಕಿರಲಿಲ್ಲ. ಇದ್ದ ಒಂದೇ ಒಂದು ಸಣ್ಣ ಬೆಳಕಂಡಿಯಿಂದ ಬರುತ್ತಿದ್ದ ಬೆಳಕೂ ಒಳಗೆ ಪ್ರವೇಶಿಸಿದೊಡನೆ ಅರಗತ್ತಲೆಯಾಗಿತ್ತು! ಆ ಮಬ್ಬಿನಲ್ಲಿಯೇ ಚಿನ್ನಮ್ಮನ ಮುಖದ ಮೇಲೆ ಮುದ್ರಿತವಾಗಿದ್ದ ದುಃಖವನ್ನು ಕಂಡು, ಹೃದಯ ಹಿಂಡಿದಂತಾಗಿ, ಮುಕುಂದಯ್ಯ ಪಿಟಾರಿಯಿಂದೆದ್ದನು. ಚಿನ್ನಮ್ಮನನ್ನು ಬಾಚಿ ತಬ್ಬಿಕೊಂಡು, ಮಂಚದ ಮೇಲೆ ಕುಳಿತು, ಒಂದು ಮಗುವನ್ನೆಂತೊ ಅಂತೆ ಅವಳನ್ನು ತನ್ನ ತೊಡೆಯ ಮೇಲೆಯೆ ಕೂರಿಸಿಕೊಂಡನು. ಪ್ರತಿಭಟನಾ ಶಕ್ತಿಯನ್ನೆಲ್ಲ ಸಂಪೂರ್ಣವಾಗಿ ಕಳೆದುಕೊಂಡವಳಂತೆ ಚಿನ್ನಮ್ಮ ತನ್ನ ಇನಿಯನ ಬಲಿಷ್ಠತೆಗೆ ಪೂರ್ಣ ಶರಣಾಗತಳಾಗಿ ಮುಕುಂದಯ್ಯನ ಗಾತ್ರವನ್ನು ತನ್ನೆರಡು ತೋಳುಗಳಿಂದಲೂ ತಬ್ಬಿ ಸೋತಳು. ಮುಕುಂದಯ್ಯ ಅವಳ ಅಶ್ರು ಆರ್ದ್ರ ಬೆಚ್ಚನೆಯ ಮೃದು ಕೆನ್ನೆಗಳಿಗೆ ತನ್ನ ತುಟಿಗಳನ್ನೊತ್ತಿ ಒತ್ತಿ ಸಂತೈಸಿದನು. ಮತ್ತೆ ಮತ್ತೆ ಅವಳ ಬೆಣ್ಣೆಮಿದು ಚೆಂದುಟಿಗಳಿಗೆ ತುಟಿಯೊತ್ತಿ ಒತ್ತಿ ಮುಂಡಾಡಿದನು. ಆ ಹೊಚ್ಚ ಹೊಸ ಅನುಭವದ ಸುಖಪ್ರಲಯಕ್ಕೆ ಸಿಕ್ಕಿ ಚಿನ್ನಮ್ಮನ ಚೇತನ ರಸಮೂರ್ಛೆಗದ್ದಿ ಮೈಮರೆಯಿತು. ‘ನನ್ನ ಮುಕುಂದ ಭಾವ ಇಷ್ಟು ಒಳ್ಳೆಯವರೆಂದು ಇದಕ್ಕೆ ಮೊದಲು ನನಗೆಂದೂ ಗೊತ್ತಾಗಿರಲಿಲ್ಲ; ಕನಸಿನಲ್ಲಿಯೂ ಊಹಿಸಲು ಸಾಧ್ಯವಿರಲಿಲ್ಲ!’ ಎಂಬುದು ತನಗಾದ ಸುಖಕ್ಕೆ ಆ ನಿರ್ವಚನೀಯ ಅನುಭವಕ್ಕೆ ಅವಳ ಗ್ರಾಮ್ಯ ಭಾಷಾಪ್ರಜ್ಞೆ ಮಾಡಿದ್ದ ಮೂಕ ವ್ಯಾಖ್ಯಾನವಾಗಿತ್ತು!

ಚಿನ್ನಮ್ಮಗೆ ಸರ್ವ ಸಂದೇಹಗಳೂ ಸರ್ವ ಸಂಕಟಗಳು ಪರಿಹಾರವಾಗಿ ಹೃದಯ ಹಗುರವಾಯಿತು. ತನ್ನ ಮುಕುಂದಬಾವ ತನ್ನನ್ನು ಎಂದಿಗೂ ಯಾವ ಕಾರಣಕ್ಕೂ ಕೈಬಿಡುವುದಿಲ್ಲ ಎಂಬ ಭಾವ ಅವಳ ಹೃದಯದಲ್ಲಿ ಬುಡಭದ್ರವಾಗಿ, ಮುನ್ನಿನ ಧೈರ್ಯ ನೆಲೆಸಿತು. ಎಷ್ಟು ಉಪದೇಶಿಸಿದ್ದರೂ ಎಷ್ಟು ವಾದಿಸಿದ್ದರೂ ಆಗದಿದ್ದ ಕೆಲಸ ನಡೆದು ಹೋಗಿತ್ತು, ಆ ಚುಂಬನಾಲಿಂಗನ ಮಹಿಮೆಯಿಂದ!

ಅವರಿಬ್ಬರೂ ಒಬ್ಬರನ್ನೊಬ್ಬರು ಬಿಗಿದಪ್ಪಿಕೊಂಡು ಹಾಗೆಯೆ ಬಹಳ ಹೊತ್ತು ಕುಳಿತು ಸುಖಸ್ರೋತದಲ್ಲಿ ತೇಲಾಡುತ್ತಿದ್ದರು.

ಇಬ್ಬರ ಮನಸ್ಸೂ ಸಾಮಾನ್ಯ ಸ್ಥಿತಿಗೆ ಬಂದ ಮೇಲೆ ಮುಕುಂದಯ್ಯ “ಚಿನ್ನೀ, ನಾನು ಇವೊತ್ತಿನಿಂದ ನಿನ್ನ ಮನೆಯಲ್ಲಿಯೇ ಇರೋಕೆ ಬಂದೀನಿ! ಆಗಬಹುದಾ?....”

ಹಠಾತ್ತನೆ ಉಕ್ಕಿದ ಆನಂದದ ಸೂಚಕವಾಗಿ, ಗಂಡನಾಗುವವನನ್ನು ಮತ್ತಷ್ಟು ಬಿಗಿದಪ್ಪುತ್ತಾ ಚಿನ್ನಮ್ಮ “ನನ್ನ ಮನೆಯೇನೂ ಅಲ್ಲ; ನಿಮ್ಮದೆ ಮನೆ!” ಎಂದು ಹುಸಿ ಸಿಡುಕಿನಿಂದ ಹೇಳಿ ಮುತ್ತೊತ್ತಿಸಿಕೊಂಡಳು.

“ನಾಳೆ ಬೆಳಿಗ್ಗೆಯಿಂದ ಐತ ಪೀಂಚಲು ಇಬ್ಬರೂ ಇಲ್ಲಿಗೇ ಬಂದು ಕೆಲಸಕ್ಕೆ ನಿಲ್ತಾರೆ. ಅವರಿಗೆ ಹಿತ್ತಲು ಕಡೆಯ ಸೌದೆ ಕೊಟ್ಟಿಗೇಲಿ ಬಿಡಾರಕ್ಕೆ ಜಾಗ ಕೊಡಿಸ್ತೀಯಾ, ನಿನ್ನಜ್ಜಿ ಹತ್ರ ಕೇಳಿ?”

ಮುಕುಂದಯ್ಯನ ಮಾತು ಕೇಳಿ ಸಿಟ್ಟುಗೊಂಡವಳಂತೆ ಅವನ ತೊಡೆಯ ಮೇಲಿಂದ ಇಳಿಯಲು ಪ್ರಯತ್ನಿಸಿ, ಆಗದೆ, "ನನ್ನೇನು ಕೇಳ್ತೀರಿ? ನಿಮ್ಮ ಮನೆ ಕೆಲಸಾ, ನೀವೇ ಹೇಳಿ ಮಾಡಿಸಿ!" ಎಂದಳು ಚಿನ್ನಮ್ಮ.

"ಏಳು. ಹಾಂಗಾದ್ರೆ, ಕೆಲಸಕ್ಕೆ ಹೊರಡ್ತೀನಿ!" ಮುಕುಂದಯ್ಯ ಅವಳನ್ನು ತೊಡೆಯಿಂದಿಳಿಸುವಂತೆ ನಟಿಸಿದನು. ಆದರೆ ತನ್ನ ಚಿನ್ನಿ ತನ್ನನ್ನು ಮತ್ತೂ ಬಿಗಿಯಾಗಿ ಅಪ್ಪಿದ್ದುದು ಅರಿವಾಗಿ, ಹಿಗ್ಗಿ ಹೇಳಿದನು: "ಎಲ್ಲರ ಮನೇಲ್ಲಿಯೂ ಸಸಿನೆಟ್ಟು ಪೂರೈಸ್ತಾ ಬಂದದೆ. ನಾವೂ ನಾಳೇನೇ ಸುರು ಮಾಡಬೇಕು, ಕೆಲಸಕ್ಕೆ.... ನೀನೂ ಬರ್ತೀಯಷ್ಟೆ, ನನ್ನ ಜೊತೆ ಗದ್ದೆ ಕೆಲಸಕ್ಕೆ?"

"ನಾವೇನು ಸುಮ್ಮನೆ ಕೂಳು ಕತ್ತರಿಸ್ತಾ ಕೂತೀಂವಿ ಅಂತ ಮಾಡೀರೇನು? ನಾಗಕ್ಕ ನಾಕು ಜನಕ್ಕೆ ಹೇಳಿ, ಸೊಲ್ಪ ಕೆಲಸ ಸುರುಮಾಡ್ಸದೆ. ನಾಗಕ್ಕನ ಜೊತೇಲಿ ನನೂ ಹೋಗ್ತಾನೆ ಇದ್ದೀನಿ ಕೆಲ್ಸಕ್ಕೆ."

"ಹಾಂಗಾದ್ರೆ 'ನನ್ನ' ಜೊತೇಲಿ ಬರಾದಿಲ್ಲ?...." ವಿನೋದವಾಡಿದನು ಮುಕುಂದಯ್ಯ.

"ನಿಮ್ಮ ಜೊತೇಲಿ ಬಂದು ನಾನೇನು ಅಂಚು ಕಡೀತೀನೇ? ಹೊಡ್ತೀನೇ?.... ಸಸಿ ನೆಡೋಕೆ, ಕಳೆ ಕೀಳೋಕೆ ನೀವೇನು ಗೊರಬು ಸೂಡಿಕೊಳ್ತೀರೇನೊ ನನ್ನಾಂಗೆ?.... ನನ್ನಿಂದಾಗದಿಲ್ಲಾಪ್ಪಾ, ಕಂಬಳಿಕೊಪ್ಪೆ ಹಾಕ್ಕೊಳ್ಳಾಕೆ. ಅದು ಗಂಡಸರಿಗೆ ಸೈ ಹೇಳ್ಸಿದ್ದು!"

"ಮತ್ತೆ ಆವೊತ್ತು, ಪೀಂಚಲು ಸಂಗಡ, ಆ ದನಗೋಳು ಮಳೇಲಿ ಹೊರಟಿದ್ದೆಯಲ್ಲಾ, ಹುಲಿಕಲ್ಲು ನೆತ್ತಿಗೆ, ಕಂಬಳಿ ಕೊಪ್ಪೇನೆ ಹಾಕ್ಕೊಂಡು?"

"ಪೀಂಚಲು ಸಂಗಡ ಏನಲ್ಲ; ನಿಮ್ಮ ಸಂಗಡ!.... ಮತ್ತೇನು ಗೊರಬು ಸೂಡಿಕೊಂಡು ಬರಬೇಕಾಗಿತ್ತೇನೊ, ಆ ಕಾಡಿನ ಗಿಜಿರಾಗೆ?...." ಹೇಳುತ್ತಿದ್ದ ಹಾಗೆಯೆ, ಏನೊ ದುಃಖದ ನೆನಪಾದಂತಾಗಿ, ಚಿನ್ನಮ್ಮ ಮುಕುಂದಯ್ಯನನ್ನು ಅಪ್ಪಿಕೊಂಡೆ ಅಳತೊಡಗಿಬಿಟ್ಟಳು.

"ತಮಾಷೆಗೆ ಹೇಳಿದ್ರೆ ಅಳ್ತೀಯಲ್ಲಾ, ಚಿನ್ನೀ? ನೀನು ಅತ್ತರೆ ನನಗೂ ಅಳೂ ಹಾಂಗೆ ಆಗ್ತದೆ!" ಮುಕುಂದಯ್ಯ ತನ್ನ ತೋಳಪ್ಪುಗೆಯನ್ನು ಮತ್ತಷ್ಟು ಬಲಿದು ಮುತ್ತಿಡುತ್ತಾ, ಸಂತೈಸಿದನು.

* * *

ಆ ರಾತ್ರಿ ಹೂವಳ್ಳಿಯ ಅಡುಗೆ ಮನೆಯಲ್ಲಿ ಮುಕುಂದಯ್ಯ ಊಟಕ್ಕೆ ಕುಳಿತಿದ್ದಾಗ ನಾಗಕ್ಕ ಬಡಿಸುತ್ತಿದ್ದಳು. ಅಜ್ಜಿ ಒಲೆಸರದ ಹತ್ತಿರ ಬೆಂಕಿಗೆ ಬೆನ್ನು ಮಾಡಿ ಸೊಂಟ ಕಾಯಿಸಿಕೊಳ್ಳುತ್ತಿದ್ದಳು, ಮಣೆಯ ಮೇಲೆ ಕೂತುಕೊಂಡು. ಚಿನ್ನಮ್ಮ ಅಜ್ಜಿಯ ಮರೆಗೆ ಕುಳಿತು, ಕುಟ್ಟೊರಳಿನಲ್ಲಿ ಅಜ್ಜಿಗಾಗಿ ಎಲೆ ಅಡಿಕೆ ಹೊಗೆಸೊಪ್ಪು ಸುಣ್ಣ ಎಲ್ಲ ಒಟ್ಟುಹಾಕಿ ಕುಟ್ಟುತ್ತಿದ್ದಳು. ಒಲೆಯ ಬಳಿಯ ಬೆಚ್ಚನೆಯ ಮೂಲೆಯಲ್ಲಿ ಮಲಗಿದ್ದ ಚಿನ್ನಮ್ಮನ ಮುದ್ದಿನ ಬೀರಿ ತನ್ನ ಮರಿಗಳಿಗೆ ಮೊಲೆಕೊಡುತ್ತಾ ಮಲಗಿತ್ತು.

ಬಡಿಸಿದ್ದ ಹೋಳಿಗೆಯನ್ನು ಸವಿಯುತ್ತಾ ಮುಕುಂದಯ್ಯ ಸೋಜಿಗಪಟ್ಟು ಕೊಂಡನು 'ಬಹುಶಃ ಮದುವೆಗೆಂದು ಮಾವ ಸಾಲ ಮಾಡಿ ಸಂಗ್ರಹಿಸಿದ್ದ ಸಾಮಗ್ರಿಯೊ ಏನೋ?'

ಮತ್ತೆ ಅಜ್ಜಿಯೊಡನೆ ಮಾತಾಡುತ್ತಾ ಕೋಣೂರು ವ್ಯವಹಾರವನ್ನೂ ಬೆಟ್ಟಳ್ಳಿ ದೇವಯ್ಯ ಮತ್ತು ಹಳೆಮನೆ ತಿಮ್ಮಪ್ಪ ಇವರ ಸಂಧಾನದಿಂದಾಗಿ ಸಿಂಬಾವಿಯವರಿಗೆ ಹೂವಳ್ಳಿಯಿಂದ ಸಲ್ಲಬೇಕಾದ ಹಣಕ್ಕೆ ಕಂತು ಗೊತ್ತಾದುದನ್ನೂ, ಕನ್ನಡ ಜಿಲ್ಲೆಗೆ ಹೋಗಿದ್ದ ಐಗಳು ಅನಂತಯ್ಯ ಹಿಂತಿರುಗಿದ ಅನಂತರ ತಮ್ಮ ಮನೆ ಹಿಸ್ಸೆಯಾಗುವುದನ್ನೂ ಕುರಿತು ವಿವರಿಸಿದನು, ಆಗಾಗ ಅಜ್ಜಿ ಕೇಳಿದ ಪ್ರಶ್ನೆಗಳಿಗೆ ಸಮಜಾಯಿಸಿ ಹೇಳುತ್ತಾ... ಹಾಗೆಯೆ ಇಂಗಿತವಾಗಿ ಚಿನ್ನಮ್ಮನ ಕಡೆ ನೋಡುತ್ತಾ, ಕಲ್ಲೂರು ಜೋಯಿಸರು ಈ ವರ್ಸದ ಗದ್ದೆಯ ಕೊಯ್ಲು ಪೂರೈಸಿದ ಮೇಲೆ ಲಗ್ನಕ್ಕೆ ಶುಭ ಮುಹೂರ್ತ ಇಟ್ಟುಕೊಡಲು ಒಪ್ಪಿದ್ದಾರೆ ಎಂಬ ಸಂಗತಿಯನ್ನೂ ತಿಳಿಸಲು ಮರೆಯಲಿಲ್ಲ.

ಮುಕುಂದಯ್ಯ ಅದನ್ನು ಹೇಳುತ್ತಿದ್ದಾಗ ಕುಟ್ಟೋರಳಿನ ಸದ್ದು ನಿಂತಿತ್ತು.

* * *

## ೫೯

ಎಂಟು ಹತ್ತು ದಿನಗಳಿಂದಲೂ ಸೂರ್ಯನ ಮುಖವನ್ನೆ ಯಾರೂ ಕಂಡಿರಲಿಲ್ಲ. ಆದರೂ ಹೊತ್ತು ಇನ್ನೂ ಮುಳುಗಿರಲಿಲ್ಲ ಎಂಬುದು ಕವಿದಿದ್ದ ಮೋಡದ ಮಬ್ಬಿನ ಹೊಳಪಿನಿಂದಲೆ ಗೊತ್ತಾಗುವಂತಿತ್ತು. ಏಕೆಂದರೆ ಆ ಹೊಳಪು ಹೂವಳ್ಳಿಯ ಗದ್ದೆಕೋಗಿನಲ್ಲಿ ಇನ್ನೇನು ಪೂರೈಸುತ್ತಾ ಬಂದಿದ್ದ ನೆಟ್ಟಿಯ ಸಸಿಗಳ ಮೇಲೆ ಬಿದ್ದು, ಕಾಡು ಅಂಚು ಕಟ್ಟಿದ್ದ ಗದ್ದೆಯ ಕೋಗನ್ನೆಲ್ಲಾ ವ್ಯಾಪಿಸಿತ್ತು. ಅಗೆಸಸಿಯ ಎಳೆಹಸರು ನಳನಳಿಸಿ ಸುಮನೋಹರವಾಗಿ ಕಂಗೊಳಿಸುತ್ತಿತ್ತು. ಸಸಿ ನಟ್ಟಿಯಾಗಿದ್ದ ಗದ್ದೆಗಳಲ್ಲಿ ಮೂರೊ ನಾಲ್ಕೊ ಕಣೆಯ ಒಂದೊಂದು ಬುಡದ ಸಸಿಗಳ ಲಕ್ಷಲಕ್ಷ ಬುಡಗಳನ್ನೆಲ್ಲ ಮುಚ್ಚಿ ಹರಡಿ ನಿಂತಿದ್ದ ನೀರು, ಸಸಿಗಳನ್ನೂ ಮೇಘಮಯವಾಗಿದ್ದ ಆಕಾಶವನ್ನೂ ಪ್ರತಿಬಿಂಬಿಸಿ, ಗಾಳಿ ಬೀಸಿದಂತೆಲ್ಲ ನವಿರು ನವಿರೆದ್ದು ವಿಕಂಪಿಸುತ್ತಿತ್ತು. ಹಗಲೆಲ್ಲ ಏಡಿ ಮಿನುಗಳನ್ನು ತಿನ್ನಲು ಅಲ್ಲಲ್ಲಿ ಗುಂಪು ಕುಳ್ಳಿರುತ್ತಿದ್ದ ಬೆಳ್ಳಕ್ಕ ಮತ್ತು ನೆರೆಬೆಳ್ಳಕ್ಕಿಗಳಲ್ಲಿ, ಕತ್ತಲಾಗುವ ಮುನ್ನ ಗೊತ್ತುಕೂರಲು ಹಾರಿಹೋಗಿ ಉಳಿದಿದ್ದ, ಕೆಲವು ಮಾತ್ರವೆ ಬೇಟೆಯಲ್ಲಿ ತೊಡಗಿದ್ದವು ಇನ್ನೂ.

ಹೂವಳ್ಳಿ ಮನೆಗೆ ದೂರವಾಗಿದ್ದ ಕೊಟ್ಟಕೊನೆಯ ಮೂಲೆಯ ಕಡೆಯಿಂದ ಸಸಿ ನೆಡಲು ಮೊದಲು ಮಾಡಿ, ಕೆಲವು ದಿನಗಳಲ್ಲಿಯೆ ಮನೆಯ ಹತ್ತಿರದ ಹಲಸಿನ ಮರದ ಮೂಲೆಯ ಗೆಣ್ಣಗಳವರೆಗೂ ಬಂದಿದ್ದರು. ಇನ್ನು ಬಾಕಿ ಇದ್ದುದೆಂದರೆ ಮನೆಯ ಬಳಿಯ ಅಡಕೆ ತೋಟಕ್ಕೆ ಮುಟ್ಟಿಕೊಂಡಂತಿದ್ದ ಮಕ್ಕೆಗದ್ದೆ. ಆ ಮಕ್ಕಿಗದ್ದೆಯೂ ಉತ್ತು, ಕೊರಡು ಹೊಡೆದು, ನೀರುಕಟ್ಟಿ ಸಸಿ ನಡೆಸಿಕೊಳ್ಳಲು ಸಿದ್ಧವಾಗಿ ನಿಂತಿತ್ತು.

ಆ ಮಕ್ಕಿಗದ್ದೆಗೆ ಕೆಳಗಿದ್ದು, ಆ ದಿನವೆ, ತುಸು ಹೊತ್ತಿಗೆ ಮುನ್ನ, ಸಸಿ ನೆಟ್ಟು ಪೂರೈಸಿದ್ದ ಒಂದು ಗದ್ದೆಯ ಅಂಚಿನ ಮೇಲೆ ಕಂಬಳಿಕೊಪ್ಪೆ ಹಾಸಿಕೊಂಡು, ಅದರ ಮೇಲೆ ಕುಳಿತಿದ್ದನು ಐತ, ಒಂದು ಕಾಲನ್ನು ಅಂಚಿನ ಕೆಳಗೆ ನೀರು ಮುಟ್ಟುವಂತೆ ಇಳಿ ಬಿಟ್ಟುಕೊಂಡು. ಅವನ ಸುತ್ತಮುತ್ತ ಇನ್ನೂ ಮೂರುನಾಲ್ಕು ಜನ ಗಂಡಾಳುಗಳು ಅವನಂತೆಯೆ ಕಂಬಳಿಕೊಪ್ಪೆ ಹಾಸಿಕೊಂಡು ಅಂಚಿನ ಮೇಲೆ ಕೂತಿದ್ದರು. ಅವರ ಗುಂಪಿಗೆ ಎಂಟು ಜತ್ತು ಮಾರು ದೂರದಲ್ಲಿ, ತನ್ನ ಗೊರಬನ್ನು ಪಕ್ಕದಲ್ಲಿ ನಿಲ್ಲಿಸಿಟ್ಟು, ಗದ್ದೆಯ ಅಂಚಿನೊಡನೆ ಐಕ್ಯವಾಗಿದ್ದಂತೆ ಎದ್ದಿದ್ದ ಹಾಸರೆಯ ಮೇಲೆ ಒಬ್ಬಳೆ ಕೂತಿದ್ದಳು ನಾಗಕ್ಕ. ಅವಳು ಸಸಿನೆಟ್ಟು  ಪೂರೈಸಿ ಕಂಗೊಳಿಸುತ್ತಿದ್ದ ಕೆಳಗಿನ ಗದ್ದೆಗಳ ಕಡೆಗೆ ನೋಡುತ್ತಿದ್ದಳು, ದುಡಿದು ದಣಿದು ಕೆಲಸ ಮುಗಿಸಿದವರ ತೃಪ್ತಿಯಿಂದ. ಅವಳ ಕಣ್ಣಿಗೆ ಇಡಿಯ ಗದ್ದೆಯ ಕೋಗು ಕಾನಿಸುತ್ತಿದ್ದಿತಾದರೂ ಅವಳ ಗಮನಕ್ಕೆ ಗುರಿಯಾಗಿದ್ದುದು ಬೇರೆ: ಎರಡು ಮೂರು ಗೆಣ್ಣಗಳ ಕೆಳಗಣ ಗದ್ದೆಯಲ್ಲಿ, ನೆಟ್ಟು ಪೂರೈಸಿದ್ದ ಸಸಿಗಳನ್ನು ಬುಡಮುಚ್ಚಿ ನಿಂತಿದ್ದ ನೀರಿನಲ್ಲಿ, ಮೆಲ್ಲಗೆ, ಬಹು ಮೆಲ್ಲಗೆ, ನಿಂತೆ ಬಿಟ್ಟಿವೆಯೊ ಎಂಬಂತೆ, ಚಲಿಸುತ್ತಿದ್ದ ಎರಡು ಗೊರಬುಗಳ ಕಡೆಗೆ ಕೇಂದ್ರೀಕೃತವಾಗಿತ್ತು. ಅವಳ ದೃಷ್ಟಿ. ಆ ಗೊರಬುಗಳು ನಾಗಕ್ಕ ಕೂತಿದ್ದ ಹಾಸರೆಯಿಂದಲೆ ಹೊರಟಿದ್ದವು, ಬೆಳ್ಳೇಡಿ ಹಿಡಿಯುವದಕ್ಕೆ!

ಮೊದಮೊದಲು ನಾಗಕ್ಕಗೆ ಆ ಗೊರಬು ಸೂಡಿದ್ದ ವ್ಯಕ್ತಿಗಳು ಕೆಸರಾಗದಂತೆ ಆದಷ್ಟು ಮೇಲಕ್ಕೆ ಮೊಳಕಾಲಿನವರೆಗೂ ಎತ್ತಿ ಕಟ್ಟಿಕೊಂಡಿದ್ದ ಸೀರೆಯ ತುದಿಯಂಚೂ, ಅದರ ಕೆಳಭಾಗದಲ್ಲಿ ಕೋಮಲ ಮತ್ತು ಶ್ಯಾಮಲ ವರ್ಣದ ಜಂಘಗಳೂ ಕಾಣಿಸುತ್ತಿದ್ದು, ಯಾವ ಗೊರಬು ಪೀಂಚಲುವನ್ನೊಳಗೊಂಡಿದೆ? ಮತ್ತಾವುದರಡಿ ಚಿನ್ನಮ್ಮ ಇದ್ದಾಳೆ? ಎಂಬುದು ಗೊತ್ತಾಗುವಂತಿತ್ತು. ಅವರ ಧ್ವನಿವ್ಯತ್ಯಾಸವೂ ಯಾರು ಏನು ಮಾಡುತ್ತಿದ್ದಾರೆ ಎಂಬುದನ್ನೂ ಸ್ಪಷ್ಟಪಡಿಸುವಂತಿತ್ತು. ಆದರೆ ಅವರು ಏಡಿ ಹಿಡಿಯುತ್ತಾ ಹಿಡಿಯುತ್ತಾ ಮುಂದು ಮುಂದುವರಿದಂತೆಲ್ಲ, ದೂರ ದೂರ ದೂರವಾಗಿ ಬರಿಯ ಎರಡು ಗೊರಬುಗಳಾಗಿ ಮಾತ್ರ ಕಾಣಿಸುತ್ತಿದ್ದರು. ಅವರು ಆಡಿಕೊಳ್ಳುತ್ತಿದ್ದ ಮಾತು ಇರಲಿ, ಗಟ್ಟಿಯಾಗಿ ನಕ್ಕಿದ್ದೂ ಕೇಳಿಸುತ್ತಿರಲಿಲ್ಲ; ಅಷ್ಟು ದೂರ ಹೋಗಿದ್ದರು. 'ಈ ಹುಡುಗಿಯರಿಗೆ ಇನ್ನೂ ಮನೆಕಡೆಗೆ ಹೊರಡಲು ಹೊತ್ತೇ ಆಗಿಲ್ಲವೇನೋ' ಎಂದುಕೊಂಡಳು ನಾಗಕ್ಕ, ಆ ಗೊರಬುಗಳ ಕಡೆಗೇ ನೋಡುತ್ತಾ.

ಎಳಬಸಿರಿಯಾಗಿದ್ದ ಪೀಂಚಲು, ಆ ದಿನದ ಸಸಿನೆಟ್ಟಿಯ ಕೆಲಸ ಪೂರೈಸಲು, ಬೆಳ್ಳೇಡಿ ಹಿಡಿಯಲು ಹೊರಟಿದ್ದಳು. ಬಸಿರಿಯಾಗಿದ್ದ ಅವಳ ನಾಲಗೆಗೆ ರಾತ್ರಿಯ ಗಂಜಿಯೂಟಕ್ಕೆ ನಂಚಿಕೊಳ್ಳಲು ಏಡಿಯ ಚಟ್ನಿ ಬಹಳ ಹಿತವಾಗಿರುತ್ತಿತ್ತು. ಅದಕ್ಕಾಗಿ ದಿನವೂ ಗದ್ದೆಯ ಕೆಲಸ ಮುಗಿದೊಡನೆ, ತಾನು ತಂದಿಟ್ಟಿರುತ್ತಿದ್ದ ಒಂದು ಸಣ್ಣ ಬಾಯಿಯ ಮೀನು ಬುಟ್ಟಿಯನ್ನು ಹಿಡಿದು ಕೊಂಡು, ಗದ್ದೆಗಿಳಿದು ಬೆಳ್ಳೇಡಿಗಳನ್ನು ಹಿಡಿದು, ಅವು ಬುಟ್ಟಿಯ ತುದಿಗೆ ಹತ್ತಿ ಮತ್ತೆ ಗದ್ದೆಗೆ ಹಾರದಂತೆ ಅವುಗಳ ಕೊಂಬು ಮತ್ತು ಚಕ್ಕಬೆರಳುಗಳನ್ನು ಮುರಿದು ಬುಟ್ಟಿಯೊಳಗೆ ಹಾಕಿಕೊಳ್ಳುತ್ತಿದ್ದಳು. ಅವಳ ಆ ಬೆಳ್ಳೇಡಿಬೇಟೆಯಲ್ಲಿ ಚಿನ್ನಮ್ಮನೂ, ಮೃಗಯಾವಿನೋದಕ್ಕಾಗಿಯೆ ಪಾಲುಗೊಂಡು, ನೆರವಾಗುತ್ತಿದ್ದಳು.

ಅಂತೆಯೆ ಇಂದೂ ಹುಡುಗಿಯರಿಬ್ಬರೂ ಏಡಿಯ ಬೇಟೆಯಲ್ಲಿ ತೊಡಗಿದ್ದರು. ಸ್ವಾರಸ್ಯ ಬರಿಯ ಏಡಿ ಹಿಡಿಯುವಷ್ಟರಲ್ಲಿ ಮಾತ್ರವೆ ಇರಲಿಲ್ಲ ಎಂಬ ಗೋಪ್ಯ ಇತರ ಯಾರಿಗೂ ತಿಳಿದಿರಲಿಲ್ಲ. ವಯಸ್ಸಿನಲ್ಲಿ ಅಂತಹ ಹೆಚ್ಚು ಅಂತರವಿರದಿದ್ದ ಅವರಿಬ್ಬರಲ್ಲಿ, ಚಿನ್ನಮ್ಮ ಯಾಜಮಾನ್ಯ ಸ್ಥಾನದಲ್ಲಿದ್ದು ಪೀಂಚಲು ಸೇವಕಸ್ಥಾನದಲ್ಲಿದ್ದರೂ, ಒಂದು

ಸರಳವಾದ ಸಲಿಗೆ ಬೆಳೆದಿತ್ತು. ಅದರಲ್ಲಿಯೂ ಮದುವೆಯ ದಿನ ಅವರಿಬ್ಬರೂ ಮನೆಯಿಂದ ಒಟ್ಟಿಗೆ ಕಾಡಿಗೆ ಓಡಿಹೋಗಿ, ಐತ ಮುಕುಂದಯ್ಯರನ್ನು ಕೂಡಿಕೊಂಡು, ಹುಲಿಕಲ್ಲು ನೆತ್ತಿಗೆ ಹತ್ತಿ, ಒಂದು ದಿನ ಒಟ್ಟಿಗಿದ್ದು ಹಿಂದಿರುಗಿದ ಮೇಲಂತೂ ಗೆಳೆತನದ ಬೆಸುಗೆ ಅವರಿಬ್ಬರ ಹೃದಯಗಳನ್ನೂ ಒಂದುಗೂಡಿಸಿತ್ತು. ಮೂರನೆಯ ಯಾರೊಡನೆಯೂ ಆಡದಿದ್ದಂತಹ ಮತ್ತು ಆಡಬಾರದಿದ್ದಂತಹ ಅತ್ಯಂತ ಆಪ್ತ ಮತ್ತು ಗೋಪ್ಯ ವಿಷಯಗಳನ್ನೂ ಒಬ್ಬೊರೊಡನೊಬ್ಬರು ಸ್ವಲ್ಪವೂ ಲಜ್ಜೆಯಿಲ್ಲದೆ ನಿರ್ಭೀತಿಯಿಂದ ಹೇಳಿಕೊಂಡು ಸವಿದು ನಗುತ್ತಿದ್ದರು. ತನಗಿಂತಲೂ ಪ್ರಣಯ ಮತ್ತು ದಾಂಪತ್ಯ ಜೀವನಗಳಲ್ಲಿ ಬಹುಪಾಲು ಮುಂದುವರೆದು ಅನುಭವಶಾಲಿಯಾಗಿದ್ದ ಪೀಂಚಲು ಹೇಳುತ್ತಿದ್ದ ಗಂಡಹೆಂಡಿರ ರಹಸ್ಯ ವ್ಯಾಪಾರಗಳನ್ನು ಕೇಳಿ ಚಿನ್ನಮ್ಮ ಒಮ್ಮೊಮ್ಮೆ ಅದರ ಸೋಜಿಗಕ್ಕೆ ಅಂಜಿ ಲಜ್ಜೆಪಟ್ಟು ಕೊಳ್ಳುತ್ತಿದ್ದರೂ ಅನೇಕ ವೇಳೆ ಅದರ ಸ್ವಾರಸ್ಯಕ್ಕೆ ಮಾರು ಹೋಗಿ ನಕ್ಕೂನಕ್ಕೂ ಸವಿಯುತ್ತಲೂ ಇದ್ದಳು. ಅಂತಹ ವಿಚಾರಗಳಲ್ಲಿ ಅವಳಿಗೆ ಅದುವರೆಗೂ ಇದ್ದ ಕನ್ಯಾಮುಗ್ದತೆ ಅಂದು ಮುಕುಂದಯ್ಯ ಕೋಣೆಯಲ್ಲೆಸಗಿದ್ದ ಶೃಂಗಾರ ಶುಶ್ರೂಷೆಯಿಂದ ಕಣ್ದೆರೆದು ಮೊಳಕೆಗೊಂಡು, ಆಗಾಗ್ಗೆ, ಈಗ ಒಂದೇ ಮನೆಯಲ್ಲಿ ಒಟ್ಟಿಗೆ ವಾಸಿಸುತ್ತಿದ್ದ ಅವರಿಬ್ಬರೊಡನೆ, ಪರಸ್ಪರ ನಡೆಯುತ್ತಿದ್ದ ಕಣ್ ಬೇಟದ ಮನ್ಮಥಚೇಷ್ಟೆಯಿಂದ ವಿದಗ್ಧತೆಯ ವೃಕ್ಷವಾಗಲು ಮೆಲ್ಲಗೆ ಸಸಿಯಾಗಿ ಬೆಳೆಯುತ್ತಿತ್ತು. ಪ್ರೌಢಾವಸ್ಥೆಗೆ ಕ್ರಮೇಣ ವಿಕಾಸವಾಗುತ್ತಿದ್ದ ಅವಳ ಹೃದಯರಸನೆಗೆ ಅಂತಹ ಮಾತುಕತೆ ಅಪ್ಯಾಯಮಾನವಾಗಿ ತೋರತೊಡಗಿತ್ತು. ನಾಜೋಕಿನ ಸಂಸ್ಕೃತಿಯ ನಯರುಚಿಗೆ ದೂರವಾಗಿದ್ದ ಗ್ರಾಮಿಣೆ ಪೀಂಚಲು ಏನನ್ನೇ ಹೇಳಿದರೂ ಅದೆಲ್ಲ ತನಗೂ ತನ್ನ ಗಂಡನಿಗೂ ಸಂಬಂಧಪಟ್ಟದ್ದೆ ಆಗಿರುತ್ತಿತ್ತು. ಚಿನ್ನಮ್ಮ ಏನು ಊಹಿಸಲು ಏನು ಭಾವಿಸಲು ಏನು ಆಶಿಸಲಿ ಅದೆಲ್ಲ ತನಗೂ ಮುಕುಂದಯ್ಯನಿಗೂ ಇನ್ನು ಕೆಲವೆ ತಿಂಗಳುಗಳಲ್ಲಿ ತನಗೆ ಶಾಸ್ತ್ರೋಕ್ತವಾಗಿಯೆ ಗಂಡನಾಗುವ ತನ್ನ ಮುಕುಂದಬಾವನಿಗೊ ಸಂಬಂಧಪಟ್ಟಂತೆಯೆ ಆಗಿರುತ್ತಿತ್ತು.

ಗೊರಬು ಸೂಡಿದ್ದ ಇಬ್ಬರೂ ಬಗ್ಗಿ ಬಗ್ಗಿ, ಸಸಿಯ ಬುಡಗಳಲ್ಲಿ ನೀರಿನಲ್ಲಿ ಅಡಗುತ್ತಿದ್ದ ಬೆಳ್ಳೇಡಿಗಳನ್ನು ಹಿಡಿದು ಹಿಡಿದು, ಪೀಂಚಲು ತನ್ನ ಎಡಗೈಯಲ್ಲಿ ಹಿಡಿದಿದ್ದ ಬುಟ್ಟಿಗೆ ಹಾಕುತ್ತಿದ್ದರು. ಚಿನ್ನಮ್ಮ ಹಿಡಿಯಲು ಪ್ರಯತ್ನಿಸುತ್ತಿದ್ದ ಒಂದು ಚಟುವಟಿಕೆಯ ಏಡಿ ಅವಳಿಗೆ ಕಣ್ಣುಮುಚ್ಚಾಲೆ ಆಡಿಸುತ್ತಿರಲು:

"ಅಕ್ಕಾ, ಅಕ್ಕಾ, ಅಲ್ಲಿಕಾಣಿ, ಅಲ್ಲಿಕಾಣಿ, ನಿಮ್ಮ ಕಾಲುಬುಡದಲ್ಲೇ ಕೂತಿದೆಯಲ್ಲಾ? ಹಿಹ್ಹಿಹ್ಹಿಹ್ಹಿ!" ಸುಟ್ಟಿದೋರಿದಳು ಪೀಂಚಲು.

ಚಿನ್ನಮ್ಮ ಆ ಏಡಿ ಹುದುಗಿದ್ದ ತಾಣವನ್ನು ಮೆಲ್ಲನೆ ಹುಡುಕಿ ಕಂಡುಹಿಡಿದು, ಎಡಗೈಯಲ್ಲಿ ಸೀರೆಯ ನೆರಿಗೆಯನ್ನು ತುಸು ಮೇಲಕ್ಕೆತ್ತಿ ಕೊಂಡು, ಬಲಗೈಯನ್ನು ಮುಂದಕ್ಕೆ ಚಾಚಿದ್ದಳು ಆಕ್ರಮಣಕ್ಕೆ! ಅವಳು ಸೀರೆಯನ್ನು ಮೇಲಕ್ಕೆ ಎತ್ತಿದಾಗ, ಅವಳ ಮೈಯ ಹೊಂಬಣ್ಣವನ್ನು ಕಂಡ ಪೀಂಚಲು, ನಟ್ಟಿದ್ದ ಕಣ್ಣನ್ನು ಹಿಂದೆಗೆಯಲಾರದೆ 'ಅಃ ಚಿನ್ನಕ್ಕ ಎಷ್ಟು ಚಂದಾಗಿದ್ದಾರೆ!' ಎಂದು ತನಗೆ ತಾನೆ ಮನಸ್ಸಿನಲ್ಲಿಯೆ ಅಂದುಕೊಂಡಳು.

ಚಿನ್ನಮ್ಮ ಏಡಿ ಹಿಡಿದು ಬುಟ್ಟಿಗೆ ಹಾಕುತ್ತಿದ್ದಾಗ ಅದು ಅವಳನ್ನು ಕಚ್ಚಿತು. ಕೈಯನ್ನು ಬುಟ್ಟಿಯೊಳಗೇ ಕೊಡಹಿದ್ದರಿಂದ ಪ್ರಾಣಿ ಹೊರತೆ ಬಿದ್ದು ತಪ್ಪಿಸಿಕೊಳ್ಳಲಾಗಲಿಲ್ಲ.

ಚೆನ್ನಮ್ಮ "ಹಾಳು ಏಡಿ! ಕಚ್ಚಿಬಿಡ್ತಲ್ಲೇ" ಎಂದಳು.

"ಹಾಂಗೆ ತುದಿ ಬೆರಳಲ್ಲಿ ನೀವು ಹಿಡಿದರೆ, ಮತ್ತೆ ಕಚ್ಚದೆ ಬಿಡುತ್ತದೆಯೆ? ಇಡೀ ಏಡಿಯನ್ನೇ ಹಿಡಿಯಬೇಕು, ಅಮರಿ; ಆದರ ಕೊಂಬು ಚಕ್ಕಬೆಳ್ಳು ಎಲ್ಲ ನಮ್ಮ ಮುಷ್ಟಿಯೊಳಗೇ ಸಿಕ್ಕಿ, ಅದಕ್ಕೆ ಅಲ್ಲಾಡುವುದಕ್ಕೇ ಆಗದಂತೆ!" ಎಂದವಳು ಚೆನ್ನಮ್ಮನ ಮುಖವನ್ನೇ ನೇರವಾಗಿ ನೋಡಿ ಮುಗುಳು ನಗುತ್ತಾ ಹೇಳಿದಳು "ಚೆನ್ನಕ್ಕಾ, ನೀವು ಎಷ್ಟು ಚೆಂದಾಗಿದ್ದೀರಿ?"

"ನೀನು ಎಷ್ಟು ಚೆಂದಾಗಿ ಆಗ್ತಿದ್ದೀಯೆ, ಇತ್ತಿತ್ತಲಾಗಿ!" ಚೆನ್ನಮ್ಮನೆಂದಳು.

ಸ್ವಲ್ಪ ಕಾಲದ ಹಿಂದೆ ಚೆನ್ನಮ್ಮ ಬಸುರು ಬೆಳೆದು ಹಿಗ್ಗುತ್ತಿದ್ದ ಪೀಂಚಲು ಹೊಟ್ಟೆಯನ್ನು ಒಂದು ಪಕ್ಕದಿಂದ ಕಂಡಾಗ ಜುಗುಪ್ಸೆಪಟ್ಟುಕೊಂಡು "ಇವಳ್ಯಾಕೆ ಹೀಂಗಾಗ್ತಿದ್ದಾಳೆ, ಮದುವೆಯಾಗೋಕೆ ಮುಂಚೆ ಅಷ್ಟು ಲಕ್ಷಣವಾಗಿದ್ದವಳು?" ಎಂದುಕೊಂಡಿದ್ದಳು. ಆದರೆ ಆಮೇಲೆ ಒಂದು ದಿನ ಅವಳ ಗಮನ ಹೊಟ್ಟೆಯ ಕಡೆಗೆ ಬೀಳದೆ ವಕ್ಷಸ್ಥಲ ಮುಖಮಂಡಳಗಳ ಮೇಲೆ ಮಾತ್ರ ಬಿದ್ದಾಗ ಅವಳಿಗೆ ಆಶ್ಚರ್ಯವಾಗಿತ್ತು: ಪೀಂಚಲು ಎಷ್ಟು ಚಂದ ಆಗುತ್ತಿದ್ದಾಳೆ?

ತನ್ನ ಚೆಲುವನ್ನು ಮೆಚ್ಚಿ ನುಡಿದ ಒಡತಿಗೆ ಕೃತಜ್ಞತೆಯಿಂದಲೆ ಶರಣಾಗಿಹೋದ ಪೀಂಚಲು: "ನಾನೆಂಥಾ ಚೆಂದ, ಚೆನ್ನಕ್ಕ? ಕರಿ ಮುಸುಳಿ! ನಿಮ್ಮ ಪಾದದ ಬಣ್ಣ ನನ್ನ ಮುಖಕ್ಕೆ ಬರಬೇಕಾದರೆ ನಾನೆಷ್ಟು ಪುಣ್ಯ ಮಾಡಬೇಕೋ? ಇನ್ನೆಷ್ಟು ಜಲ್ಮ ಎತ್ತಬೇಕೋ?" ಎಂದವಳು ಚೆನ್ನಮ್ಮನ ಕಣ್ಣನ್ನೇ ಇಂಗಿತವಾಗಿ ನೋಡುತ್ತಾ ನಗುಮೊಗವಾಗಿ ಸೇರಿಸಿದಳು: "ಅದಕ್ಕೇ ಮತ್ತೆ…. ಮುಕುಂದಣ್ಣ…. ನಿಮ್ಮ ಕಾಲಕೆಳಗೆ ಬೀಳಾಕೆ…. ಅಷ್ಟೊಂದು ದುಂಬಾಲು ಬಿದ್ದು, ಪಾಡು ಪಡ್ತಿರಾದು!".

"ಥೂ, ಪೀಂಚಲು! ನೀನೇನೆಲ್ಲ ಹೇಳ್ತಿರ್ತೀಯೇ! ನಿಂಗೆ ನಾಚಿಗೆ ಮರ್ಯಾದೆ ಒಂದೂ ಇಲ್ಲ! ಭಂಡೀ ಅಂದ್ರೆ ಭಂಡೀ!" ಚೆನ್ನಮ್ಮನೆಂದಳು, ಪೀಂಚಲು ಹೇಳಿದ್ದನ್ನು ಹೃತ್ಪೂರ್ವಕವಾಗಿ ಸವಿಯುತ್ತಾ. ಮತ್ತೆ ಕೇಳಿದಳು:

"ಐತ ನಿನಗೆ ಯಾವಾಗ್ಲೆ ಗಂಡ ಆಗಿದ್ದು?"

"ಯಾವಾಗ ಅಂದ್ರೆ? ಲಗ್ನ ಆದಮೇಲೆ!"

"ಅದಕ್ಕೆ ಮುಂಚೆ?"

"ಅದಕ್ಕೆ ಮುಂಚೆ ಗಂಡ ಆಗೋಕೆ?…." ತುಸು ತಡೆದು ತಡೆದು ವಿನೋದವಾಡಿದಳು ಪೀಂಚಲು: "ನಾ ಚೆನ್ನಕ್ಕನೂ ಅಲ್ಲ; ಐತ ಮುಕುಂದಣ್ಣೋರೂ ಅಲ್ಲ:….

"ನೀನು ಬಾ'ಳ ಕೆಟ್ಟೋಳೆ, ಪೀಂಚ್ಲೆ! ನಿನ್ನ ಹತ್ರ ನಾ ಮಾತು ಬಿಟ್ಟೆ, ಇವತ್ತಿನಿಂದ! ಏಡಿನಾದ್ರೂ ಹಿಡಿ; ಏನಾದ್ರೂ ಮಾಡು! ನಾ ಹೊಗ್ತೀನಿ, ನಾಗಕ್ಕ ಕಾಯ್ತದೆ…."

ಸಿಟ್ಟುಗೊಂಡಂತೆ ಗೊರಬಿನ ಬೆನ್ನನ್ನು ತನ್ನ ಕಡೆಗೆ ತಿರುಗಿಸಿದ ಚಿನ್ನಮ್ಮಗೆ ಪೀಂಚಲು: "ಇಲ್ಲ ಚಿನ್ನಕ್ಕಾ! ತಪ್ಪಾಯ್ತು! ದಮ್ಮಯ್ಯ ಅಂತೀನಿ! ನಿಮ್ಮ ಕಾಲಿಗೆ ಬೀಳ್ತೀನಿ? ಇನ್ನು ಖಂಡಿತಾ ಹಾಂಗೆಲ್ಲ ಮಾತಾಡಾದಿಲ್ಲ....!".

ಪೂರ್ತಿ ಕ್ಷಮಿಸಿದವಳಂತೆ ಚಿನ್ನಮ್ಮ ಮತ್ತೆ ತಿರುಗಿದಳು; ಹೇಳಿದಳು ಮರೆನಗುಮೊಗಳಾಗಿ: "ಖಂಡಿತಾ ಹಾಂಗೆಲ್ಲ ಮಾತಾಡದಿಲ್ಲ ಅಂತ ಎಷ್ಟು ಸಾರಿ ಹೇಳಿಲ್ಲ ನೀನು?....":

ಚಿನ್ನಮ್ಮನ ಮಾತಿಗೆ ಹೆಚ್ಚೇನೂ ಲಕ್ಷಕೊಡದೆ ಪೀಂಚಲು ಎದುರಿಗೇ ಕಾಣಿಸುತ್ತಿದ್ದು ಮೋಡ ಮುಚ್ಚಿಹೋಗಿದ್ದ ಹುಲಿಕಲ್ಲಿ ನೆತ್ತಿಯ ಕಾಡಿನ ಕಡೆಗೆ ಕೈತೋರಿ "ಅದೇ ಕಣ್ರೋ ಆ ಕಲ್ಲು ಮಂಟಪ!" ಎಂದಳು.

ಚಿನ್ನಮ್ಮ ಮಂತ್ರ ಮುಗ್ದೆಯಾದಂತೆ ಅತ್ತ ಕಡೆ ನೋಡಿದಳು:

ದಟ್ಟವಾದ ಕಾಡು ಬೆಳೆದ ಗುಡ್ಡ, ಅಲೆ ಅಲೆ ಅಲೆ ಏರಿ ಏರಿ ಏರಿ, ಹುಲಿಕಲ್ಲು ನೆತ್ತಿಯ ಮೋಡಗಳಲ್ಲಿ ಹಾದು, ಆಕಾಶದಲ್ಲಿ ಮರೆಯಾಗಿತ್ತು. ಕಲ್ಲು ಮಂಟಪವಿದ್ದ ಕುಲಿಕಲ್ಲು ತೆತ್ತಿಯನ್ನು ಅಪ್ಪಿ ಮುತ್ತಿದ್ದ ಮೋಡದ ಹಿಂಡು, ಕರಿಹೊಗೆಯ ಮುದ್ದೆಯಂತೆ, ಕಾಡಿನ ಕಡು ಹಸುರಿಗೆ ತಾರ ತಮ್ಯವಾಗಿ ಮಾತ್ರ ತನ್ನ ಬಿಳಿಯ ತನವನ್ನು ಪ್ರಕಟಿಸಿತ್ತು. ಕಾಡು, ಗುಡ್ಡದ ಗೋಡೆಗೆ ಮೆತ್ತಿದ್ದ ಹಸುರಿನ ಮಹಾಮುದ್ದೆಗಳಂತೆ, ಮುಗಿಲಿನವರೆಗೂ ಎದ್ದು ಆ ಭೀಮಔನ್ನತ್ಯದಿಂದ ಚಿನ್ನಮ್ಮ ಪೀಂಚಲು ನಿಂತಿದ್ದ ಹೂವಳ್ಳಿಯ ಗದ್ದೆಯ ಕೋಗನ್ನು ಮೇಲ್ವಾಯುವಂತೆ ಬಾಗಿ ದಿಟ್ಟಿಸುವಂತಿತ್ತು, ವ್ಯಾಘ್ರ ಭೀಷಣವಾಗಿ! ಅವರು ಸಂವಾದದಲ್ಲಿ ತೊಡಗಿದ್ದಾಗ ಗಮನಿಸದಿದ್ದ ಅನೇಕ ನಿಸರ್ಗ ನಿನಾದಗಳು ಈಗ ತೆಕ್ಕನೆ ಉಕ್ಕಿ ಕೇಳಿಸಿದಂತಾಗಿ ಹೆದರಿಕೆಯ ಮೇಲೆ ಹೆದರಿಕೆ ಹೇರಿದಂತಾಯ್ತು. ಸಾಯಂಕಾಲವಾಗುತ್ತಿದ್ದುರದಿಂದ ಜೀರುಂಡೆಗಳ ಕೂಗಿನ ಸರಮಾಲೆ, ಒಂದು ನಿಲ್ಲಿಸುವ ಮುನ್ನ ಮತ್ತೊಂದು, ಒಂದು ಬಿಟ್ಟರೆ ಇನ್ನು ಒಂದಲ್ಲ ಎರಡು, ನಿರಂತರವಾಗಿ ಸದ್ದಿನ ಗರಗಸ ಎಳೆದಂತೆ ಕರ್ಕಶವಾಗಿತ್ತು. ಜೊತೆಗೆ ಗದ್ದೆಯಲ್ಲಿದ್ದ ಕೋಟಿ ಕೋಟಿ ಕಪ್ಪೆ ಕೀಟ ಕ್ರಿಮಿಗಳೂ ಚಿತ್ರ ವಿಚಿತ್ರ ಕಂಠಸ್ವರಗಳಿಂದ ಟ್ರರ್ ಟ್ರರ್? ವಟಕ್ ವಟಕ್ ವಟಕ್ ವಟಕ್! ಗ್ರೀಂಗ್ರೀಂಗ್ರೀಂಗ್ರೀ! ಡೊಂಯ್ಕ್ ಡೊಯ್ಕ್ ಡೊಂಯ್ಕ್! ತಲೆಗೆ ಚಿಟ್ಟು ಹಿಡಿಸುವಂತೆ ಸದ್ದಿನ ಬಲೆಯನ್ನೇ ನೆಯ್ದುಬಿಟ್ಟವು, ಕೊನೆಯ ಇಲ್ಲವೆಂಬಂತೆ. ಹುಲಿಕಲ್ಲು ನೆತ್ತಿಯ ಕಡೆಗೆ ನೋಡುತ್ತಿದ್ದ ಚಿನ್ನಮ್ಮಗೆ - ತಾನು ಎಂದಾದರೂ ಆ ದುರ್ಗಮ ಪ್ರದೇಶಕ್ಕೆ ಹೋಗಿದ್ದುದು ನಿಜವೇ? ಅದೆಲ್ಲ ನಡೆದಿದ್ದು ನಿಜವೋ ಕನಸೋ? ನನ್ನಂಥವಳು ಅಂತಹ ಭಯಂಕರ ಕಾಡುಗುಡ್ಡ ಹತ್ತಿ ರಾತ್ರಿ ಹೋಗುವುದೆಂದರೇನು? ಛೇ! ಎಲ್ಲಿಯ ಮಾತು? ಹಾಗೆ ನಡೆದಿದ್ದು ನಿಜದಲ್ಲಿ ಅಲ್ಲವೆ ಅಲ್ಲ! ಸುಳ್ಳು! ಬರೀ ಸುಳ್ಳು! ಅನ್ನಿಸತೊಡಗಿನಿಡುಸುಯ್ದು ಕೇಳಿದಳು:

"ಹೌದೇನೆ, ಪೀಂಚಲು, ನಾವು ಅಲ್ಲಿಗೆ ಹೋಗಿದ್ದು?"

"ಮುಕುಂದಣ್ಣೋರನ್ನೆ ಕೇಳಿ, ಹೇಳ್ತಾರೆ: ಚಿನ್ನಕ್ಕ ಅನ್ನೋರನ್ನ ಹೊತ್ತು ಹಳ್ಳ ದಾಟಿಸಿದ್ದು ಹೌದೋ ಅಲ್ಲೋ ಅಂತಾ!".

ಆ ಅನುಭವ ಚಿನ್ನಮ್ಮ ಮರೆಯುವಂತಾದ್ದಾಗಿರಲಿಲ್ಲ. ಅದು ನಡೆದಾಗ ಅವಳು ವಿಶೇಷ ಭಾವೋದ್ವೇಗದ ಸನ್ನಿವೇಶದಲ್ಲಿ ಇದ್ದದ್ದರಿಂದ ಅದನ್ನು ಅಷ್ಟಾಗಿ ಗಮನಿಸುವುದಕ್ಕೆ ಆಗಿರಲಿಲ್ಲ. ಆದರೆ ಆಮೇಲೆ ಅದನ್ನು ಮತ್ತೆ ಮತ್ತೆ ಸ್ಮರಿಸಿ ಸವಿದಿದ್ದಳು. ಅಲ್ಲದೆ ಮುಕುಂದಬಾವ ತನ್ನನ್ನು ಹಿಡಿದೆತ್ತಿ ಹೊತ್ತುಕೊಳ್ಳುವಾಗ ಮುಟ್ಟಿದ್ದ ಮತ್ತು ಒತ್ತಿದ್ದ ತನ್ನ

ಮೃದುಲ ಅಂಗೋಪಾಂಗಗಳ ಸೋಂಕಿನ ವಿಚಾರದಲ್ಲಿ ಅವರು ಪೂರ್ತಿ ನಿರ್ಲಿಪ್ತರಾಗಿರಲಿಲ್ಲ ಎಂಬುದೂ ಅವಳಿಗೊಂದು ಸುಖಪ್ರದ ಸಂದೇಹವಾಗಿತ್ತು.

"ಹ್ಯಂಗೆ ಮಾತಾಡ್ತೀಯೆ ನೀನು, ಪೀಂಚ್ಲೆ? ನಿನ್ನ ನಾಲಗೇಲಿ ಕರೀಮಚ್ಚೆ ಇದೆ ಅಂತಾ ಕಾಣ್ತದ್ಯೆ!" ತಾನು ಹುಲಿಕಲ್ಲು ನೆತ್ತಿಗೆ ಕಲ್ಲು ಮಂಟಪಕ್ಕೆ ಹೋಗಿದ್ದ ವಿಷಯದಲ್ಲಿದ್ದ ಸಂದೇಹವೆಲ್ಲ ನಿವೃತ್ತವಾದಂತಾಗಿ ಕೊಂಕು ನುಡಿದಳು ಚಿನ್ನಮ್ಮ.

"ನಾಲಿಗೇಲಿ ಇಲ್ಲ, ಚಿನ್ನಕ್ಕಾ, ಇಲ್ಲಿ ಇತ್ತು ಅಂಬರು!" ತನ್ನ ನಿತಂಬದೆಡೆಗೆ ಕೈದೋರಿ ನಕ್ಕಳು ಪೀಂಚಲು.

"ಅಲ್ಲಿ ಇರಾದು ನಿಂಗೆ ಹೆಂಗೆ ಗೊತ್ತಾತೋ?" ಮೂದಲಿಸಿದಳು ಚಿನ್ನಮ್ಮ.

"ನಂಗೆ ಏನು ಗೊತ್ತು? ಅವರು ಹೇಳಿದ್ದು!".

"ಯಾರೇ ಹೇಳಿದ್ದು?" ದಿಗಿಲುಗೊಂಡಂತೆ ಕೇಳಿದಳು ಚಿನ್ನಮ್ಮ.

"ಮತ್ತೆ ಯಾರಾದರೂ ಹೇಳುವದಕ್ಕೆ ನಾನೇನು ಅಂಥವಳಲ್ಲ!"

"ಐತ ಹೇಳಿದ್ದೇನೇ?" ಒತ್ತಿ ಪ್ರಶ್ನಿಸಿದ್ದಳು ಮತ್ತೆ ಚಿನ್ನಮ್ಮ.

ನಾನು 'ಅವರು' ಎಂದು ಹೇಳಿದ್ದರಿಂದ ಚಿನ್ನಮ್ಮಗೆ ಸಂಶಯ ಉಂಟಾಯಿತೆಂದು ಊಹಿಸಿದಳು ಪೀಂಚಲು. ಏಕೆಂದರೆ, ತಾನು ತನ್ನ ಗಂಡನನ್ನು ಕುರಿತು ಹೆಚ್ಚಾಗಿ ಏಕವಚನದಲ್ಲಿಯೆ ಮಾತಾಡುತ್ತಿದ್ದುದು ರೂಢಿಯಾಗಿತ್ತು. ತನ್ನ ವಿನೋದ ವಿಷಾದಕ್ಕೆಲ್ಲಿ ಎಡೆಗೊಡುತ್ತದೆಯೆ ಎಂದು ಹೆದರಿಕೆಯಾಯ್ತು. ತನಗೂ ಮುಕುಂದ ಯ್ಯಗೂ ಏನೋ ದುಸ್ಸಂಬಂಧವಿದೆ ಎಂದು ಸುಳ್ಳು ಸುದ್ದಿ ಒಮ್ಮೆ ಹಬ್ಬಿದ್ದುದದರ ನೆನಪು ಬಂದು, ಆದಷ್ಟು ಶೀಘ್ರವಾಗಿ ತನ್ನ ಮಾತನ್ನು ಸರಸದ ಕಡೆಗೆ ತಿರುಗಿಸಬೇಕೆಂದು ಹವಣಿಸಿ ಪೀಂಚಲು: "ನೀವು ನಿಮ್ಮ ಗಂಡನ ಮಗ್ಗುಲಲ್ಲಿ ಮಲಗುತ್ತೀರಲ್ಲಾ, ಆವಾಗ ಹೇಳುತ್ತಾರೆ, ನಿಮಗೆ ಎಲ್ಲೆಲ್ಲಿ ಚಿಮಕಲು ಮಚ್ಚೆ ಇದೆ ಅಂತಾ!...."

"ಸೀರೆ ಉಟ್ಟುಕೊಂಡಿದ್ರೆ ಹೆಂಗೇ ಗೊತ್ತಾಗ್ತದೆ?" ಮುಗ್ಧೆ ಚಿನ್ನಮ್ಮನ ಪ್ರಶ್ನೆ.

ಪೀಂಚಲು ಕಿಸಕ್ಕನೆ ನಕ್ಕಳು. ಮತ್ತೆ ಹೇಳಿದಳೂ: "ಗಂಡನ ಮಗ್ಲಲ್ಲಿ ಮಲಗಿದ ಮ್ಯಾಲೆ ಎಲ್ಲ ಗೊತ್ತಾಗ್ತದೆ ಕಣ್ರೋ!"

"ನೀ ಗಂಡನ್ನ ಮಗ್ಲಲ್ಲೇ ಮಲಗಿಕೊಳ್ತೀಯೇನೇ? ಥೂ! ನಿನಗೆ ನಾಚಿಕೆ ಆಗೋದಿಲ್ಲೇನೇ?...."

"ನಾಚಿಕೆ ಮಾಡಿಕೊಂಡರೆ ಆಗ್ತದೇನು, ಚಿನ್ನಕ್ಕಾ? ನಾಚಿಕೆ ಮಾಡಿಕೊಂಡರೆ...." ತುಸು ಉಬ್ಬಿದ ತನ್ನ ಕಿಬ್ಬೊಟ್ಟೆಯ ಕಡೆ ಬೆರಳು ಮಾಡಿ ಕೇಳಿದಳು: "ಇದಾಗ್ತದೇನು?"

ಚೆನ್ನಮ್ಮ ಆಗತಾನೆ ಹಿಡಿದಿದ್ದ ಒಂದು ಏಡಿಯನ್ನು ಭದ್ರಮುಷ್ಟಿಯಲ್ಲಿ ಹಿಡಿದು ತಂದು, ಪೀಂಚಲು ಮುಂದಕ್ಕೊಡ್ಡಿದ್ದ ಬುಟ್ಟಿಗೆ ಹಾಕಲೆಂದು, ಅವಳಿಗೆ ತುಂಬ ಸಮೀಪ ಬಂದಿದ್ದಳು. ಏಡಿಯನ್ನು ಬುಟ್ಟಿಗೆ ಕೊಡಹುತ್ತಾ, ಪೀಂಚಲು ನಿರ್ದೇಶಿಸಿದ್ದ ಉದರ ಪ್ರದೇಶದ ಕಡೆಗೆ ಕಣ್ಣು ಹಾಯಿಸಿದಳು. ಮತ್ತೆ ಕೇಳಿದಳು: "ಅಲ್ಲಿ ಏನಾಗದೆಯೇ?"

"ಇನ್ನೊಂದು ನಾಲ್ಕೈದು ತಿಂಗಳು ತಡೀರಿ, ಆಮೇಲೆ ತೋರಿಸ್ತೀನೆ ಅಲ್ಲಿರೋದನ್ನ!

"ನಿಂಗೆ ಬಾಲೆ ಆಗ್ತದೇನೇ?"

"ನಾನು ಬಸಿರಿ ಕಣ್ರೋ!"

"ಹೆಂಗಾಯ್ತೇ"

"ಗಂಡನ ಮಗ್ಲಲ್ಲಿ ಬೆತ್ತಲೆ ಮಲಗಿದ್ರೆ...."

ಥೂ! ನೀ ಬೆತ್ತಲೆ ಮಲಗ್ತಿಯೇನೇ.... ದುರುದುಂಡೆಗೆ?"

"ಅಲ್ಲಾ, ಚೆನ್ನಕ್ಕಾ, ರಾತ್ರೆ ಗಂಡನ ಮಗ್ಲಲ್ಲಿ ಮಲಗಿಕೊಳ್ಳಾಗ, ಯಾರಾದ್ರೂ ಸೀರೆ ಉಟ್ಟುಕೊಂಡು ಮಲಗ್ತಾರೇನ್ರೋ?"

"ಹಂಗಾದ್ರೆ ನೀ ಸೀರೆ ಬಿಚ್ಚಿ ಹಾಕಿ ಬಿಡ್ತೀಯಾ?.... ದುರದುಂಡಗೆ?"

"ಹ್ಞೂ ಮತ್ತೆ? ಸೀರೆ ಬಿಚ್ಚಿ, ಮಡಚಿ, ತಲೆ ಅಡಿ ಇಟ್ಟು ಕೊಂಡು, ಐತನ ಕಂಬಳಿ ಒಳಗೇ ಹೊಕ್ಕೊಂಡು ಮಲಗ್ತೇನೆ! ನೀವು ಹೇಳೋ ಹಾಂಗೆ ದುರದುಂಡಗೆ ಹಿಹ್ಹಿಹ್ಹಿಹ್ಹಿ?.... ಅವನೂ ಹಾಂಗೇ ಮಲಗಾದು!...."

"ಅದಕ್ಕೆ ಮತ್ತೆ, ನಿನ್ನ ಮೈಯ್ಯಾಗ ಎಲ್ಲೆಲ್ಲಿದ್ದ ಮಚ್ಚೆ ಎಲ್ಲಾ ಕಾಣ್ಸಾದು!.... ನೀವು ಗಟ್ಟದ ತಗ್ಗಿನೋರೇ ಹಾಂಗೆ! ದುರದುಂಡಗೆ ಇರಾದೆ ನಿಮ್ಮ ಚಾಳಿ!"

"ಸುಮ್ಮನೆ ಮಲಗ್ತೀವಿ ಅಂತಾ ಮಾಡಿಕೊಂಡ್ರೇನು?" ಪೀಂಚಲು, ಹತ್ತಿರ ಬಂದಿದ್ದ ಚೆನ್ನಮ್ಮನ ಕಿವಿಯ ಹತ್ತಿರಕ್ಕೆ ಬಾಗಿ, ಇನ್ನೂ ಏನು ಏನನ್ನೋ ಹೇಳಿಬಿಟ್ಟಳು!

ಚೆನ್ನಮ್ಮನ ಕಿವಿ ಕೆನ್ನೆ ಗಲ್ಲ ಮುಖಮಂಡಲ ಎಲ್ಲ ಕೆಂಪಾಗಿ ಅವಳ ಹಣೆಗೆ ಬೆವರಿನ ತೇವವೇರಿತು! ಮುಖ ತಿರುಗಿಸಿ, ಸ್ವಲ್ಪ ದೂರಕ್ಕೆ ಹಿನ್ನೆಗೆದು ಸರಿದು, ಬೆನ್ನು ಮಾಡಿ ಗಟ್ಟಿಯಾಗಿಯೆ ಕೂಗಿಬಿಟ್ಟಳು: "ಥೂ!ಥೂ!ಥೂ! ಪೀಂಚ್ಲೇ, ನೀನು ಭಂಡಿ, ಜಗಭಂಡಿ!"

ಪೀಂಚಲು ಸ್ವಲ್ಪವೂ ಅಪ್ರತಿಭಳಾಗದೆ, ಚಿನ್ನಮ್ಮ ತಾನು ಹೇಳಿದ್ದನ್ನು ಒಳಗೊಳಗೆ ಸವಿಯುತ್ತಿದ್ದಾಳೆ ಎಂಬುದರಲ್ಲಿ ಲೇಶವೂ ಸಂಶಯವಿಲ್ಲದೆ, ನಗುತ್ತಾ ಹೇಳಿದಳು: "ಈಗ ಹೀಂಗ ಹೇಳ್ತೀರಿ. ನಾಳೆ ಮುಕುಂದಯ್ಯೋರೊ ನಿಮಗೂ ಹಾಂಗೇ ಮಾಡಿದಾಗ, ಅವರನ್ನು ಇನ್ನಷ್ಟು ಬಲವಾಗಿ ಅಪ್ಪಿಕೊಳ್ತೀರೋ ಇಲ್ಲೋ ನೋಡ್ತೀನಲ್ಲಾ? ನಿಮ್ಮ ಪಸ್ತ್ರ ಆದಮ್ಯಾಲಾದ್ರೂ, ನಂಗೆ ಹೇಳ್ತಿರಷ್ಟೆ?.... ಅವೊತ್ತಂತೂ ಹೊತಾರೆ ಮುಂಚೇನೆ ಬಂದು ಕೇಳೇಕೇಳ್ತೀನಲ್ಲ: 'ಚಿನ್ನಕ್ಕಾ, ಯಾರು ಭಂಡರು? ಹೇಳಿ ಈಗ!' ಅಂತಾ!"

ಅಂತಃಕರಣವೆಲ್ಲ ಓಕುಳಿಯಾಗಿ ಹೋಗಿದ್ದ. ಚಿನ್ನಮ್ಮ ಪೀಂಚಲು ಕಡೆಗೆ ತಿರುಗಲೂ ಇಲ್ಲ, ಮರುಮಾತಾಡಲೂ ಇಲ್ಲ. ನಾಚಿಕೆಯ ಸುಖರಸ ಅವಳನ್ನು ಮೂಕಗೈದಂತಿತ್ತು.

ಅದಕ್ಕೆ ಸರಿಯಾಗಿ, ಅವಳಿಗೆ ಅನುಕೂಲವಾಗಿಯೆ ಎಂಬಂತೆ, ದೂರದಲ್ಲಿ, ಗದ್ದೆಯ ಕೋಗಿನ ತುತ್ತತುದಿಯ ಅಂಚಿನ ಮೇಲೆ, ಕಾಡಿನ ಕಡೆಯಿಂದ ಯಾರೋ ಕೊಡೆ ಸೂಡಿಕೊಂಡು ಬರುತ್ತಿದ್ದುದು ಕಾಣಿಸಿತು. ಬರುತ್ತಿದ್ದವರು ಹೆಂಗಸರು ಎಂಬುದೂ ಗೊತ್ತಾಗುವಂತಿತ್ತು. ಕೊಡೆ ಸೂಡಿದ್ದ ಆ ಸ್ತ್ರೀ ವ್ಯಕ್ತಿಯ ಹಿಂದೆ ತುಸುದೂರದಲ್ಲಿ ಕಂಬಳಿ ಕೊಪ್ಪೆ ಹಾಕಿದ್ದ ಮತ್ತೊಂದು ವ್ಯಕ್ತಿ, ಅದು ಗಂಡಸೆಂಬುದೂ ಸುವ್ಯಕ್ತವಾಗಿತ್ತು, ನಡೆದುಬರುತ್ತಿದ್ದುದೂ ಕಾಣಿಸಿತು.

"ಅದು ಯಾರೇ ಅದು?...." ಚಿನ್ನಮ್ಮ ಕೇಳಿದಳು ಅತ್ತ ಕಡೆಯೇ ಕಣ್ಣಾಗಿ.

"ಕಮ್ಮಾರಸಾಲೆ ಪುಟ್ಟಾಚಾರ ತಂಗಿ ಇರಬೈದು".

"ಅವಳು ಕಂಬಳಿ ಬಿಟ್ಟು, ಕೊಡೆ ಹಿಡುಕೊಂಡು ಬರುತ್ತಾಳೇನೆ?"

"ಅಯ್ಯೋ, ನಿಮಗೆ ಗೊತ್ತಿಲ್ಲ, ಚಿನ್ನಕ್ಕಾ; ಅವಳ ಗಂಡ ಸತ್ತ ಮೇಲೆ ಅವಳ ಕತೇನೆ ಬ್ಯಾರೆ ಆಗ್ಯಾದಂತೆ!...."

"ಛೆ ಅಲ್ಲ ಕಣೆ, ನಮ್ಮೋರ ಉಡುಗೆ ಉಟ್ಟಹಾಂಗೆ ಕಾಣ್ತದೆ?"

"ನಾನು ಉಡಾದಿಲ್ಲೇನು ನಿಮ್ಮ ಉಡುಗೇನ?" ಎಂದು ಅತ್ತಲೇ ಕಣ್ಣು ಸುಕ್ಕಿಸಿ ನೋಡತೊಡಗಿದ್ದ ಪೀಂಚಲು "ಹೌದು ಕಣ್ರೋ, ನೀವು ಹೇಳಿದ್ದು. ಯಾರೋ ಹೆಗಡ್ತಮ್ಮೋರನ್ನ ಕಂಡ ಹಾಂಗೇ ಕಾಣ್ತದೆ...." ಎಂದು ಮತ್ತೆಯೂ ಸ್ವಲ್ಪ ಹೊತ್ತು ನೋಡುತ್ತಿದ್ದು, ಆ ವ್ಯಕ್ತಿ ಹೆಚ್ಚು ಹೆಚ್ಚು ಸಮೀಪವಾಗುತ್ತಿರಲು, ತೆಕ್ಕನೆ ನುಡಿದಳು ಗುರುತು ಹಿಡಿದಂತೆ: "ಬೆಟ್ಟಳ್ಳಿ ದೇವಮ್ಮ ಹೆಗ್ಗಡ್ತೇರು ಕಣ್ರೋ! ಮುಕುಂದಯ್ಯೋರಕ್ಕಯ್ಯ! ಅವರ ನಡಿಗೆ ನೋಡಿದ್ರೆ, ಎಷ್ಟು ದೂರ ಇರಲಿ, ಗುರುತು ಸಿಕ್ಕೇ ಸಿಗ್ತದೆ!...."

"ಹೋಗೆ ಹೋಗೆ! ಈ ಮಳೇಲಿ ಹೀಂಗೆ ಕೊಡೆ ಹಿಡುಕೊಂಡು, ಗತಿಗೆಟ್ಟೋರು ನಡಕೊಂಡು ಬಂದ್ಹಾಂಗೆ ಬರಾಕೆ, ಬೆಟ್ಟಳ್ಳಿ ಅತ್ತಿಗಮ್ಮಗೆ ಅಂಥಾ ಕಡಿಮೆ ಆಗಿದ್ದೇನು? ಬರಾದಾದ್ರೆ ಗಾಡಿ ಕಟ್ಟಿಸಿಕೊಂಡು ಬರುತ್ತಿದ್ದರು.... ಮನ್ನೆ ಮನ್ನೆ ಗಾಡಿದಾರಿ ಬ್ಯಾರೆ ಮಾಡಿಸಿದಾರೆ...."

ಹಾಗೆ ಹೇಳುತ್ತಿದ್ದ ಹಾಗೆಯೆ ಚೆನ್ನಮ್ಮ ತನ್ನ ಕಣ್ಣನ್ನೆ ನಂಬಲಾರದಾದಳು! ಹತ್ತಿರಹತ್ತಿರಕ್ಕೆ ಬರುತ್ತಿದ್ದ ಆ ವ್ಯಕ್ತಿಯ ಗುರುತು ಚೆನ್ನಾಗಿಯೆ ಆಯಿತು: ಕೊಡೆ ಸೊಡಿಕೊಂಡು ಮುಂದೆ ಬರುತ್ತಿದ್ದವಳು - ಬೆಟ್ಟಳ್ಳಿ ದೇವಯ್ಯಗೌಡರ ಹೆಂಡತಿ, ದೇವಮ್ಮ ಹೆಗ್ಗಡತಿ! ಕಂಬಳಿ ಕೊಪ್ಪೆ ಹಾಕಿಕೊಂಡು ತುಸು ಹಿಂದೆ ಬರುತ್ತಿದ್ದವನು ಅವರ ಗಾಡಿಯಾಳು-ಹೊಲೆಯರ ಬಚ್ಚ.

ಮತ್ತೂ ನೋಡುತ್ತಾಳೆ: ಚೆನ್ನಮ್ಮ ದಿಗ್‌ಭ್ರಾಂತೆಯಾದಳು! ಶ್ರೀಮಂತರ ಮನೆಯ ಆ ಕುಲೀನ ನಾರಿ ನೆಂಟರ ಮನೆಗೆ ಹೋಗುವಾಗ ಉಟ್ಟು ತೊಟ್ಟುಕೊಳ್ಳುವಂತೆ ಉತ್ತಮ ಸೀರೆ ಉಟ್ಟಿರಲಿಲ್ಲ; ವಲ್ಲಿ ಧರಿಸಿರಲಿಲ್ಲ; ಒಡವೆ ಹಾಕಿರಲಿಲ್ಲ. ಕಡೆಗೆ ತಲೆಯನ್ನೂ ಬಾಚಿಕೊಂಡಿರಲಿಲ್ಲ!

ಇನ್ನೂ ಗಮನಿಸುತ್ತಾಳೆ: ಅತ್ತಿಗೆಮ್ಮನವರ ಮುಖದಲ್ಲಿ ಯಾವಾಗಲೂ ಉಕ್ಕಿತೋರುತ್ತಿದ್ದ ಗೆಲವೂ ಇಲ್ಲ. ಅತ್ತೂ ಅತ್ತೂ ಆಗತಾನೆ ಅಳು ನಿಲ್ಲಿಸಿದವರ ದುಃಖ ಮುಖಮುದ್ರೆ, ಅವರ ದಮನಪ್ರಯತ್ನವನ್ನೂ ಮೀರಿ, ಎದ್ದುತೋರುತ್ತಿದೆ. “ಅಯ್ಯೋ ದೇವ್ರೇ ಏನು ಕಷ್ಟಾ ಬಂತಪ್ಪಾ ದೇವಣ್ಣಯ್ಯಗೆ? ಬಾಲೆ ಚೆಲುವಯ್ಯಗೆ ಏನಾದ್ರೂ….?” ತನ್ನೊಳಗೆ ತಾನೆಂದುಕೊಳ್ಳುತ್ತಿದ್ದ ಚೆನ್ನಮ್ಮಗೆ ಮುಂದೆ ಅಲೋಚನೆಯೆ ಹೊರಡಲಿಲ್ಲ. ಹೊಳವಾಗಿದ್ದರಿಂದ ಗೊರಬನ್ನು ತೆಗೆದು ತಾವು ಏಡಿ ಹಿಡಿಯುತ್ತಿದ್ದ ಗದ್ದೆಯ ಅಂಚಿನ ಮೇಲಿಟ್ಟು, ಪೂರಾ ಎತ್ತಿ ಕಟ್ಟಿಕೊಂಡಿದ್ದ ಸೀರೆಯನ್ನು ಸಡಿಲಿಸಿ ಕೆಳಗಿಳಿಸಿಕೊಂಡು, ತಳಾಲೆ ಸಹಿತವಾಗಿ ಅತ್ತಿಗಮ್ಮನನ್ನು ಇದಿರುಗೊಳ್ಳಲು ಓಡಿದಳು.

ಗದ್ದೆಯಂಚಿನ ಮೇಲೆ ತನ್ನ ಕಡೆಯೆ ಓಡಿ ಬರುತ್ತಿದ್ದ, ಹರ್ಷೋತ್ಸಾಹಗಳೆ ಮೂರ್ತಿಗೊಂಡಂತಿದ್ದ, ಸುಂದರ ತರುಣಿಯನ್ನು ಕಂಡೊಡನೆ ದೇವಮ್ಮನ ಮುಖದ ಮ್ಲಾನತೆ ನಾಚಿಯೆ ಹಿಂಜರಿಯಿತು. ಅಭ್ಯಾಸಬಲದ ಅರ್ಧಕೃತಕ ಮಂದಹಾಸವೊಂದು ತುಟಿಗಳಲ್ಲಿ ಮಲರಿತು: “ಏನೆ, ಚಿನ್ನೂ, ಇನ್ನೂ ಸಸಿ ನೆಟ್ಟು ಪೂರೈಸಲಿಲ್ಲೇನು?…. ಮನೇಲೆಲ್ಲ ಸುಖವಾಗಿದ್ದಾರಾ?…. ಅಜ್ಜಿ ಹ್ಯಾಂಗಿದ್ದಾರೆ?…. ತಮ್ಮಯ್ಯ (ಮುಕುಂದಯ್ಯನನ್ನು ಅವನ ಅಕ್ಕ ಕರೆಯುತ್ತಿದ್ದ ರೀತಿ) ಎಲಕ್ಕೂ ಕಾಣಾದಿಲ್ಲಲ್ಲಾ? ಗದ್ದೆಗೆ ಬರಲಿಲ್ಲೇನು ಇವೊತ್ತು? ಅವನ್ನೆ ಕಂಡು ಮಾತಾಡಿ, ಈಗಲೆ ಇಲ್ಲಿಂದಲೆ ಹಿಂದಕ್ಕೆ ಮನೀಗೆ ಹೋಗಾನ ಅಂತಾ ಬಂದೆ…. ಬಾಲೇನ ಅತ್ತೆಮ್ಮನ ಹತ್ರ ಬಿಟ್ಟು ಬಂದೀನಿ ಕಣೇ…. ಬ್ಯಾ ಗೋಗಬೇಕು…. ಅದಕ್ಕೇ ಬಚ್ಚನ್ನ ಕರಕೊಂಡು ಓಡ್ತಲೇ ಬಂದೆ…. ಯಾಕೆ ಹಿಂಗೆ ನೋಡ್ತೀಯ, ಬೆಚ್ಚಿಬಿದ್ದೋರ ಹಾಂಗೆ?….”ತಳಾಲೆ ಹಾಕಿಕೊಂಡೇ ತನಗೆ ಮುಟ್ಟಮುಟ್ಟ ನಿರುತ್ತರವಾಗಿ ನಿಂತಿದ್ದ ಚೆನ್ನಮ್ಮನ ತಲೆಗೆ ಕೈಹಾಕಿ ತಳಾಲೆಯನ್ನು ತೆಗೆಯುತ್ತಾ “ತಳಾಲೆ ತೆಗೆದುಬಿಡೆ; ನಿನ್ನ ಮುಖದ ಅಂದಾನೇ ಕೆಡಿಸ್ತದೆ….” ಕೆದರಿದ್ದ ಕೂದಲನ್ನು ನೀವಿ ಬೈತಲೆಯನ್ನು ಸರಿಗೊಳಿಸುತ್ತಾ…. “ನಿನ್ನಷ್ಟು ಚೆನ್ನಾಗಿ ಕಾಣೋರು ನಮ್ಮ ವಂಶದಲ್ಲೆ ಯಾರೂ ಇಲ್ಲ ಕಣೇ!…. ತಮ್ಮಯ್ಯ ಎಷ್ಟು ಪುಣ್ಯ ಮಾಡಿದ್ದನೋ….”

ಇನ್ನೂ ಏನೇನು ಹೇಳುತ್ತಿದ್ದಳೋ? ಕೇಳುತ್ತಿದ್ದಳೋ? ಆದರೆ ನೋಡುತ್ತಾಳೆ: ಚೆನ್ನಮ್ನ ಅಳತೊಡಗಿದ್ದಾಳೆ!

ಪ್ರಶ್ನೆಗಳ ಮೇಲೆ ಪ್ರಶ್ನೆ; ಉತ್ತರದ ನಿರೀಕ್ಷೆಯೆ ಇಲ್ಲ; ಒಂದು ವಿಷಯದಿಂದ ಮತ್ತೊಂದಕ್ಕೆ, ಅಸಂಬದ್ಧ ವಿಷಯಕ್ಕೆ, ಹಾರುತ್ತಿವೆ! ಗಂಭೀರ ಪ್ರವೃತ್ತಿಯ ಬೆಟ್ಟಳ್ಳಿ ಅತ್ತಿಗೆಮ್ಮ ಹಿಂದೆಂದೂ ಹಾಗೆ ವರ್ತಿಸಿದ್ದನ್ನು ಚೆನ್ನಮ್ಮ ಕಂಡಿರಲಿಲ್ಲ. ಭಾವಪರವಶರಾಗಿ ನಾಲಗೆ ಸಡಿಲಗೊಂಡವರು ಮಾತಾಡುವಂತೆ ಆಡುತ್ತಿದ್ದುದನ್ನು ಕಂಡು ಚೆನ್ನಮ್ಮಗೆ

ಮೊದಮೊದಲು ದಿಗಲಾಯ್ತು. ತನ್ನ ತಲೆಯ ತಳಾಲೆ ತೆಗೆದು, ಕೂದಲು ನೀವಿ, ಕೈ ಮುದ್ದು ಮಾಡಿ, ತನ್ನ ನಿರುಪಮ ಸೌಂದರ್ಯವನ್ನು ಕುರಿತು ಪ್ರಶಂಶಿಸಲು ತೊಡಗಿದೊಡನೆ ಅವಳಿಗೆ ತಡೆಯಲಾಗಲಿಲ್ಲ. ಏನೋ ಅನುಕಂಪೆಯ ಮರುಕ ಉಕ್ಕಿ ಬಂದಂತಾಗಿ, ತೊಟ್ಟಿಕ್ಕತೊಡಗಿದ್ದುವು ಕಣ್ಣೀರು!

“ಅಯ್ಯೋ ಹುಡುಗೀ, ಯಾಕೆ ಅಳ್ತೀಯೋ? ಬಾ ಹೋಗಾನ…. ಅಲ್ಲಿ ಯಾರು ಕೂತೋರು? ನಾಗಕ್ಕನಾ?” ಎನ್ನುತ್ತಾ ಚಿನ್ನಮ್ಮನೊಡನೆ ಮುಂದುವರಿದಳು ದೇವಮ್ಮ.

ಚಿನ್ನಮ್ಮಗೆ ಧೃತಿ ಬಂದಂತಾಗಿ, ತನ್ನ ತಲೆಗೆ ಆ ಕ್ಷಣದಲ್ಲಿ ಹೊಳೆದ, ದೇವಮ್ಮನ ಹಲವಾರು ಪ್ರಶ್ನೆಗಳಲ್ಲಿ ಒಂದು ಪ್ರಶ್ನೆಗೆಂಬಂತೆ ಉತ್ತರಿಸಿದಳು, ಹೆದಹೆದರಿ, ಮೆಲ್ಲಗೆ ಇಳಿದನಿಯಲ್ಲಿ: “ಅವರೂ…. ಗದ್ದೆಗೆ ಬಂದಿದ್ರು…. ಕೆಲಸ ಮುಗಿದಮ್ಯಾಲೆ, “ಮನೀಗೆ ಹೋಗಿಬರ್ತೀನಿ” ಅಂತಾ ಹೋದ್ರು”.

“ಮನೇಲಿದ್ದಾನಲ್ಲಾ? ಅಲ್ಲಿಗೇ ಹೋಗಾನ ಬಾ….”

“ಮನೇಲಿಲ್ಲ!”

“‘ಮತ್ತೆ ಮನೀಗೆ ಹೋಗಿಬರ್ತೀನಿ ಅಂತಾ ಹೋದ್ರು’ ಅಂದೆ?”

“ನಮ್ಮ ಮನೀಗಲ್ಲ, ಕೋಣೂರಿಗೆ?”

“ಇನ್ನು ಮ್ಯಾಲೆ ಕೋಣುರು ಹ್ಯಾಂಗೆ ಅವನ ಮನೆ ಆಗ್ತದ್ಯೇ? ಹೂವಳ್ಳೀನೆ ಅವನ ಮನೆ!…. ಅಲ್ಲೇನೇ?”.

ಚಿನ್ನಮ್ಮ ನಾಚಿಕೆಯಿಂದ ತಲೆಯೆತ್ತಲಿಲ್ಲ. ದೇವಮ್ಮ ಅವಳ ಗಲ್ಲವನ್ನು ಸವರುತ್ತಾ ಅಕ್ಕರೆಯ ದನಿಯಲ್ಲಿ ಹೇಳಿದಳು: “ಹೌದು!” ಅನ್ನು; ಯಾಕೆ ನಾಚಿಕೆ ಮಾಡಿಕೊಳ್ತೀಯ, ಚಿನ್ನೂ?”

ಅಂಚಿನ ಅರೆಕಲ್ಲಿನ ಮೇಲೆ ಹೊರಡಲನುವಾಗಿ ಎದ್ದುನಿಂತಿದ್ದ ನಾಗಕ್ಕನನ್ನು ಕೂಡಿಕೊಂಡು ಮೂವರೂ ಮನೆಯ ಕಡೆಗೆ ನಡೆದು ಕಣ್ಮರೆಯಾದ ತರುವಾಯವೆ ಪೀಂಚಲು, ಚಿನ್ನಮ್ಮ ಬಿಟ್ಟಿದ್ದ ಗೊರಬಿನ ಬಳಿಗೆ ಹೋಗಿ, ಅದನ್ನೂ ತನ್ನ ಗೊರಬಿನ ಜೊತೆಗೇ ಸೂಡಿಕೊಂಡು ಹೋಗುವ ಯೋಚನೆ ಮಾಡುತ್ತಿದ್ದಳು. ಅಷ್ಟರಲ್ಲಿ ಹರಟೆ ಹೊಡೆಯುತ್ತಿದ್ದ ಗಂಡಾಳುಗಳ ಗುಂಪೂ ಚೆದರಿ ತಮ್ಮ ತಮ್ಮ ಬಿಡಾರಗಳಿಗೆ ಹೊರಟಿದ್ದರು. ಐತ ಹೆಂಡತಿಯ ನೆರವಿಗೆ ಓಡಿ ಬಂದು ಚಿನ್ನಮ್ಮನ ಗೊರಬನ್ನು ತಾನೆ, ತನ್ನ ಕಂಬಳಿಕೊಪ್ಪೆಯ ಮೇಲೆಯೆ, ಸೂಡಿಕೊಂಡನು.

“ಬಚ್ಚ ಏನು ಹೇಳ್ತಿದ್ದನಲ್ಲಾ ನಿನ್ನ ಹತ್ರ?” ಪೀಂಚಲು ಕೇಳಿದಳು.

“ಗುತ್ತಿ ಎತ್ತಲಾಗಿ ಹೋದ?” ಅಂತಾ ಕೇಳ್ದ. “ನಂಗೇನು ಗೊತ್ತು?” ಅಂದೆ. “ಏನೇನು ಮಾಡ್ತೀರೊ ಮಾಡೀ ಮಾಡೀ. ನಾವೂ ನೋಡ್ತೀವಿ. ಬಡ್ಡೀಮಗ ಎಲ್ಲಿಗೆ ಹೋಗ್ತಾನೆ?” ಅಂತಾ ಹೇಳ್ತಾ ಹೋದ.

“ಆಗ ಯಾಕೆ ಅಷ್ಟೊಂದು ನಗ್ತಿದಲ್ಲಾ ನಿಮ್ಮ ಗುಂಪಿನಲ್ಲಿ? ನಮ್ಮ ಕಡೆನೇ ಕೈ ತೋರಿಸ್ತಿದ್ದ, ಯಾವನೋ ಒಬ್ಬ?” ಮನೆಯ ಕಡೆಗೆ ನಡೆಯುತ್ತಾ ಕೇಳಿದಳು ಪೀಂಚಲು.

“ಆ ಲೌಡೀಮಗ ತಿಮ್ಮ ಹುಡುಗ.... ತಮಾಸೆ ಅಂತಾ ಹೇಳ್ತಾನೆ: “ಐತಣ್ಣಗೆ ಇನ್ನೂ ಮೀಸೇನೆ ಬಂದಿಲ್ಲ; ಹುಡುಗ ಅಂತಾ ಮಾಡಿದ್ರೇ.... ಪರ್ವಾ ಇಲ್ಲ. ಕಸರತ್ತು ಮಾಡಿ, ಹುಡುಗೀಹೊಟ್ಟೇನ ಮುಂದಕ್ಕೆ ಬರಿಸೇಬಿಟ್ಟಾನೆ!” ಅಲ್ಲಿದ್ದೋರೆಲ್ಲ ನಗ್ತಾ ಇದ್ರು. ಮತ್ತೆ, ಇನ್ನೊಬ್ಬನ ಕಿವೀಲಿ ಹೇಳೋಹಾಂಗೆ, ನಂಗೂ ಕೇಳಿಸ್ಲಿ ಅಂತಾ ಹೇಳ್ತಾನೆ: ‘ಅವನೇ ಮಾಡಿದ್ದೋ?” ಇನ್ಯಾರು ಕೈ ಹಾಕಿದ್ರೋ? ಯಾರಿಗೆ ಗೊತ್ತು?’....”

“ಅವನ ಬಾಯಿಗೆ ನನ್ನ.... ಹಾಕ!.... ದೊಡ್ಡರೋಗ ಬಂದೇ ಸಾಯ್ತಾನೆ ನಾಯಿ ಮುಂಡೇದು!.... ಅವನು ಸಿಕ್ಕಲಿ ನನಗೆ? ಮುಖಕ್ಕೆ ಉಗಿದು ನೀರಿಳಿಸ್ದೆ ಇದ್ರೆ, ನಾನು ಐತನ ಹೇಂಡ್ತಿನೇ ಅಲ್ಲ!....”

“ನಾನೇನು ಸುಮ್ಮನೆ ಬಿಟ್ಟೆ ಅಂತಾ ಮಾಡ್ದೇನು? ಚೆನ್ನಾಗಿ ಅಂದು ಹೇಳ್ದೆ “ನೀನು ಇನ್ನೊಂದು ಸಾರಿ ಅಂಥಾ ಮಾತು ಆಡು, ನಿನ್ನ ರುಂಡಾ ಕತ್ತರಿಸದಿದ್ರೆ, ನಾನು ಪೀಂಚಲೂ ಅಲ್ಲ!....”

ಇಬ್ಬರೂ ಮನೆಗೆ ಸಮೀಪಿಸುತ್ತಿದ್ದಾಗ ಪೀಂಚಲು ಹೇಳಿದಳು ಐತನಿಗೆ “ಬೆಟ್ಟಳ್ಳಿ ಹೆಗ್ಗಡ್ತಮ್ಮೋರು ಯಾಕೋ ಒಂದು ತರಾ ಆಗಿದ್ರು. ಅವರು ಯಾವಾಗ಼್ೂ ಗಾಡೀಬಿಟ್ಟು ನೆಲಕ್ಕೆ ಕಾಲು ಮುಟ್ಟಿಸ್ದೋರೆ ಅಲ್ಲ, ಇವೊತ್ತು ನಡಕೊಂಡೇ ಬಂದು ಬಿಟ್ಟಾರೆ! ಒಂದು ಬಡ್ಡು ಸೀರೆ ಉಟ್ಟುಕೊಂಡು! ವಲ್ಲೀ ಕಟ್ಟಿಲ್ಲ! ತಲೇನೂ ಬಾಚಿಲ್ಲ! ಥೇ ಏನು ಕಷ್ಟ ಬಂದಿದೆಯೋ ಏನೋ?.... ನಮಗಂತೂ ಬಡೋರ ಕಷ್ಟ, ಇದ್ದೇ ಇರ್ತದೆ! ಈ ದೊಡ್ಡೋರಿಗೆ, ಪಾಪ, ಯಾಕೆ ಬರಬೇಕೋ ಕಷ್ಟ?”.

“ಅ ದೇವಯ್ಯಗೌಡ್ರು ಕಿಲಸ್ತರ ಜಾತಿಗೆ ಸೇರ್ತಾರೆ ಅಂತಿದ್ರು ಕಣೇ, ಅದರದ್ದೇ ಏನೋ ಇರಬೇಕು!.... ಅವರಿಗೆ ಏನು ಬಂದಿದೆಯೋ ಏನೋ ಆ ಹಾಳು ಜಾತಿಗೆ ಸೇರಾಕೆ? ಮುತ್ತಿನಂಥ ಹೆಂಡ್ತಿ ಮಕ್ಕಳು ಇರೋವಾಗ?”.

ಐತನ ಊಹೆ ಅವನು ಭಾವಿಸಿದುದಕ್ಕಿಂತಲೂ ಹೆಚ್ಚು ವಾಸ್ತವವಾಗಿತ್ತು.

ಅಜ್ಜಿಯೊಡನೆ ತನ್ನ ಕಷ್ಟ ಸಂಕಟಗಳೆಲ್ಲವನ್ನೂ ಹೇಳಿಕೊಳ್ಳುತ್ತಿದ್ದ ಬೆಟ್ಟಳ್ಳಿ ಅತ್ತಿಗೆಯ ಧಾರುಣ ದೈನ್ಯದ ಮಾತುಗಳನ್ನು, ಅಜ್ಜಿಯ ಸೆರಗು ಹಿಡಿದು ಅವಳ ಮೈಗೆ ಒತ್ತಿ ಹತ್ತೆ ಕುಳಿತು, ಆಲಿಸುತ್ತಿದ್ದ ಚಿನ್ನಮ್ಮನ ಹೃದಯ ಜಜ್ಜರಿತವಾಯಿತು. ತನ್ನ ಗಂಡನ ಇತರ ಎಲ್ಲ ಆಕ್ಷೇಪಣೀಯ ವರ್ತನೆಗಳನ್ನೂ, ಆಗಿನ ಕಾಲದ ಅವಿಭಕ್ತ ಕುಟುಂಬದ ಹಿಂದೂ ಸ್ತ್ರೀಗೆ ಸಹಜವಾಗಿದ್ದ ಅನಿವಾರ್ಯ ಮಹೌದಾರ್ಯದಿಂದ, ಕ್ಷಮಿಸಲು ಮಾತ್ರ ಅಲ್ಲದೆ ಒಪ್ಪಿಕೊಳ್ಳಲು ಸಿದ್ಧವಾಗಿದ್ದ ದೇವಮ್ಮ ಆತನು ಮತಾಂತರಗೋಳ್ಳುವದನ್ನು ಮಾತ್ರ ಸಹಿಸಲು ಸಿದ್ಧಲಾಗಿರಲಿಲ್ಲ. ಆರ್ಷೇಯ ಕಾಲದಿಂದಲೂ ಬಂದಿದ್ದ ತನ್ನ ಪೂರ್ವಿಕರ ದೇವರುಗಳನ್ನಾಗಲಿ, ಆಚಾರಗಳನ್ನಾಗಲಿ, ಶ್ರದ್ಧೆಯನ್ನಾಗಲಿ, ಪೂಜೆ ಪುನಸ್ಕಾರ ರೀತಿಗಳನ್ನಾಗಲಿ, ಸಾಮಾಜಿಕ ಬಂಧು ಬಾಂಧವರನ್ನಾಗಲಿ, ಸಂಪ್ರದಾಯ ಸಂಸ್ಕೃತಿಗಳನ್ನಾಗಲಿ ತ್ಯಜಿಸಿ, ಲಂಗರು ಕಡಿದ ಹಡಗಿನಂತೆ ಕಾಣದ ಕಡಲಿಗೆ ಕೊಚ್ಚಿ ಹೋಗುವದು ಅವಳ ಜೀವಕ್ಕೆ ಒಪ್ಪಿಗೆಯಾಗಿರಲಿಲ್ಲ.... ಸಿಂಧುವಳ್ಳಿಯ ಚಿನ್ನಪ್ಪ ಗೌಡರು ಕಿಲಸ್ತರಾದ ಮೇಲೆ ಅವರ ಹೆಂಡತಿಗೆ ಒದಗಿದ್ದ

ದುರಂತಗತಿಯ ವಿಚಾರವನ್ನು ಕೇಳಿದ್ದ ಅವಳಿಗೆ, ಗಂಡನನ್ನು ಮತಾಂತರ ಹೊಂದುವದಕ್ಕೆ ಬಿಡುವ ಮುನ್ನ ತಾನು ತನ್ನ ಶಿಶುವಿನೊಡನೆ ಮೃತ್ಯುವನ್ನಪ್ಪುವುದೆ ಶ್ರೇಯಸ್ಕರ ಎಂದು ತೋರಿತ್ತು. ತನ್ನ ಹಣೆಯ ಕುಂಕುಮದೊಡನೆ ತನ್ನ ಗಂಭೀರವಾದ ಹಿಂದೂ ಹೆಸರನ್ನೂ ಅಳಿಸಿ, ಕಿವಿಯಿಂದ ಕೇಳಬಾರದು ಅಂತಹ ಕುಲಗೆಟ್ಟ ಅಸಹ್ಯ ಹೆಸರನ್ನಿಡಿಸುವ ಆ ಮತಕ್ಕೆ ಸೇರುವುದರ ಬದಲು ಬೆಂಕಿಗೆ ಹಾರುವದೇ ಎಷ್ಟೋ ಸಹ್ಯವೊ ಸುಖಕರವೊ ಆಗಿ ಕಂಡಿತ್ತು. ತನ್ನ ಗಂಡನು ಪಾದ್ರಿಯ ಮಗಳೊಡನೆ ಸಂಬಂಧ ಬೆಳಸಿದ್ದಾನೆ ಎಂಬ ಗುಸುಗುಸು ಸುದ್ದಿ ಅವಳ ಕಿವಿಗೆ ಬಿದ್ದಿದ್ದಾಗ, ಗರತಿ ಹೆಣ್ಣು ಸಂಕಟಪಟ್ಟುಕೊಳ್ಳುವಂತೆ ದುಃಖಿಯಾಗಿದ್ದಳು. ಆದರೆ 'ಗಂಡಸರ ಹಣೆಯ ಬರಹವೇ ಹಾಗೆ. ನನ್ನ ಗಂಡ ಒಬ್ಬನನ್ನೆ ಬೇರೆಯ ರೀತಿಯಲ್ಲಿ ನಡೆ ಎಂದರೆ ನಡೆಯುತ್ತಾನೆಯೆ? ಭಗವಂತೆ ನನ್ನ ತಾಳಿ ಕಡದಂತೆ ಕಾಪಾಡಿದರೆ ಸಾಕು!' ಎಂದು ಸಮಾಧಾನ ತಂದು ಕೊಂಡಿದ್ದಳು. 'ಅಂತಕ್ಕನ ಮಗಳು ಕಾವೇರಿಯೊಡನೆ ದೇವಯ್ಯಗೌಡರು ಶೃಂಗಾರ ವ್ಯವಹಾರಕ್ಕೆ ಕೈಹಚ್ಚಿದ್ದಾರೆ! ನಾನೆ ಕಣ್ಣಾರೆ ಕಂಡೆ!' ಎಂಬರ್ಥದ ಮಾತನ್ನು ಅವರ ಗಾಡಿಯಾಳು ಬಚ್ಚನೆ ಅವಳಿಗೆ ಗುಟ್ಟಾಗಿ ಹೇಳಿ ಎಚ್ಚರಿಸಿದಾಗಲೂ ದುಃಖತಪ್ತೆ ದೇವಮ್ಮ ದೀನೆಯಾಗಿ "ದೇವರೆ, ಅವರು ತಮ್ಮ ಸಂತೋಷಕ್ಕೆ ಏನನ್ನಾದರೂ ಮಾಡಲಿ, ನನ್ನ ಮುತ್ತೈದೆತನ ಮಾತ್ರ ದೀರ್ಘಾಯುವಾಗುವಂತೆ ಕರುಣಿಸು" ಎಂದು ಗಂಡನ ಆರೋಗ್ಯ ಯೋಗಕ್ಷೇಮಗಳಿಗಾಗಿ ಕಾತರೆಯಾಗಿದ್ದಳಷ್ಟೆ! ಏಕೆಂದರೆ ಆಗಿನ ಕಾಲದಲ್ಲಿ, ಕನ್ನಡ ಜಿಲ್ಲೆಯಲ್ಲಿಯೂ ಮತ್ತು ಕನ್ನಡ ಜಿಲ್ಲೆಯ ಸಂಪರ್ಕವೆ ಹೆಚ್ಚಾಗಿರುತ್ತಿದ್ದ ಮಲೆನಾಡಿನಲ್ಲಿಯೂ, ಸಿರಿವಂತರಾದವರು ತಮ್ಮ ಪುರುಸೊತ್ತಿನ ಮತ್ತು ಕೊಬ್ಬಿನ ಸೋಮಾರಿತನದ ಬೇಸರವನ್ನು ಪರಿಹರಿಸಿ ಕೊಳ್ಳಲು, ತಾವು ಹೋದಲ್ಲೆಲ್ಲಾ, ರಾತ್ರಿ ತಂಗಬೇಕಾದ ಸ್ಥಳಗಳಲ್ಲಿ, ಅಂತಹ 'ಹಾಸಿಗೆ ಅನುಕೂಲ' ಕಲ್ಪಿಸಿಕೊಂಡು, ರಸಿಕ ಜೀವನ ನಡೆಸುತ್ತಿದ್ದದ್ದು ಸಮಾನಸ್ಕಂಧರ ಪ್ರಶಂಸೆಗೂ ಗೌರವಕ್ಕೂ ಪಾತ್ರವಾಗಿತ್ತು. ಅಷ್ಟೆ ಅಲ್ಲ; ಎಷ್ಟೆಷ್ಟು ಅಧಿಕ ಸಂಖ್ಯೆಯ ಶಯ್ಯಾನುಕೂಲಗಳನ್ನು ಇಟ್ಟುಕೊಂಡಿದ್ದರೆ ಅಷ್ಟಷ್ಟೂ ದೊಡ್ಡ ಮನುಷ್ಯರು ಎಂದು ಜನರು ಭಾವಿಸುತ್ತಿದ್ದ ಕಾಲವಾಗಿತ್ತು ಅದು! ಪರಿಸ್ಥಿತಿಯೆ ಹಾಗಿರುವಲ್ಲಿ ತನ್ನ ಗಂಡ, ಮೇಗರವಳ್ಳಿ ಅಂತಕ್ಕನ ಮಗಳು ಕಾವೇರಿಯನ್ನು, ಒಂದು ಹಾಸಗೆಯ ಅನುಕೂಲವಾಗಿ, ಇಟ್ಟುಕೊಂಡರೂ ಇಟ್ಟುಕೊಳ್ಳಲಿ! ಎಂದು ಆ ಕಹಿಸುದ್ದಿಯನ್ನು ನುಂಗಿಕೊಂಡಿದ್ದಳು ದೇವಮ್ಮ ಹೆಗ್ಗಡತಿ. ಆದರೆ ಈಗ ಪ್ರಸ್ತುತವಾಗಿದ್ದ ತನ್ನ ಗಂಡನ ಮತಾಂತರದ ವಾರ್ತೆ ತನ್ನ ಸಾವು ಬದುಕಿನ ಕಟ್ಟ ಕಡೆಯ ಗಂಡಾಂತರವಾಗಿದ್ದುದರಿಂದ ಅದನ್ನು ತನ್ನ ತಮ್ಮ ಮುಕುಂದಯ್ಯನಿಗೆ ತಿಳಿಸಿ, ತನ್ನ ಗಂಡನ ಅತ್ಯಂತ ಆಪ್ತಮಿತ್ರನಾಗಿದ್ದ ಅವನಿಂದಾದರೂ, ತನಗೆ ಒದಗಲಿದ್ದ ಮಹಾಘೋರ ಹಾನಿಯನ್ನು ತಡೆಗಟ್ಟಲೆಂದು ಹೂವಳ್ಳಿಗೆ ಧಾವಿಸಿ ಬಂದಿದ್ದಳು, ಉಟ್ಟ ಬಟ್ಟೆ ಬಿಟ್ಟ ಮಂಡೆಯಾಗಿ!

ಕತ್ತಲಾದ  ಮೇಲೆ ಚಿನ್ನಮ್ಮ ಮತ್ತೆ ಮತ್ತೆ ಮನೆಯ ಹೆಬ್ಬಾಗಿಲಿನ ಬಳಿಗೆ ಹೋಗಿ ಹಾದಿಯ ಕಡೆ ನೋಡಿ ನೋಡಿ ಬಂದಳು. ಕೋಣೂರಿಗೆ ಹೋಗಿದ್ದ ಮುಕುಂದಬಾವಗೆ, ಆತನು ಹಿಂತಿರುಗಿದೊಡನೆ ಬೆಟ್ಟಳ್ಳಿ ಅತ್ತಿಗೆಮ್ಮನ ಕಷ್ಟದ ಸುದ್ದಿಯನ್ನು ಆದಷ್ಟು ಬೇಗ ತಿಳಿಸಿ, ಅದಕ್ಕೆ ಪರಿಹಾರ ಒದಗಿಸಬೇಕೆಂಬುದೆ ಅವಳ ಉತ್ಕಟಾಕಾಂಕ್ಷೆಯಾಗಿತ್ತು. ಅವಳಿಗೆ ಅರ್ಥವೆ ಆಗಿರಲಿಲ್ಲ: ತಾನು ಕಂಡಿದ್ದ ಮತ್ತು ತಿಳಿದಿದ್ದ ದೇವಣ್ಣಯ್ಯ ಅತ್ತಿಗಮ್ಮನಂತಾ ತನ್ನ ಹೆಂಡತಿಗೆ ಹೇಗೆ ಅಂಥಾ ದುಃಖ ತಂದೊಡ್ಡಿ ಕಷ್ಟಕೊಡಬಲ್ಲನು?

ತುಂಬ ಕತ್ತಲೆಯಾದ ಮೇಲೆಯೂ ಮುಕುಂದಯ್ಯ ಬಾರದಿರಲು, ಅವಳಿಗೆ ಚಿಂತೆ ಹತ್ತಿತ್ತು: ಕೋಣೂರಿನಲ್ಲಿಯೆ ಉಳಿದುಬಿಡುತ್ತಾರೆಯೋ? ಇಲ್ಲವೆ, ದಾರಿಯಲ್ಲಿ ಏನಾದರೂ ತೊಂದರೆಗೆ ಸಿಕ್ಕೆ ಹೊತ್ತಾಗಿದೆಯೋ? ಅಥವಾ ಅಣ್ಣತಮ್ಮಂದಿರಲ್ಲಿ ಹಿಸ್ಸೆಯ ವಿಚಾರವಾಗಿ ಮಾತಿಗೆ ಮಾತು ಘರ್ಷಿಸಿ ಏನಾದರೂ ಆಗಿರಬಹುದೇ? 'ನಾನು

ಹೇಳಿದೆ, ಇಷ್ಟು ಬೈಗಾದ ಮೇಲೆ ಕೋಣೂರಿಗೆ ಹೋಗಾದ ಬ್ಯಾಡಾ; ಬರಾಗ ಕತ್ತಲಾಗಿಬಿಡ್ತದೆ' ಅಂತಾ. 'ಭರ್ದಂಡು ಹೋಗಿ ಬಂದುಬಿಡ್ತೀನಿ, ಒಂದು ಎಲೆ' ಡಕೆ ಹಾಕೋ ಹೊತ್ತಿನಲ್ಲಿ! ಐಗಳು ಬಂದರೋ ಏನೋ? ಯಾವಾಗ ಬರ್ತಾರೆ ಅಂತಾ ವಿಚಾರಿಸಿಕೊಂಡು ಬರ್ತಿನಿ.... ಅಲ್ಲದೆ, ಅವ್ವನ್ನ ನೋಡದೆ ಎರಡು ಮೂರು ದಿನಾನೇ ಆಯ್ತು!' ಅಂತಾ, ನನ್ನ ಮಾತನ್ನ ತಟ್ಟಿಹಾರಿಡಿ ಹೋದರಲ್ಲಾ? ಹಿಂಗೆ ದಿನಾ ಏನಾದರೂ ಒಂದು ಮಾಡ್ತಾನೆ ಇರ್ತಾರೆ! ಯಾರಿಗೆ ಹೇಳ್ಲಿ ನನ್ನ ಗೋಳನ್ನ? ಹೆಂಗೆ ಹೇಳಾದು, ನಾಚಿಕೆಬಿಟ್ಟು?

ಚಿನ್ನಮ್ಮ ಚಿಂತಿಸುತ್ತಿದ್ದಂತೆಯೆ ದೊಂದಿಯ ಬೆಳಕು ಹಿಂದಕ್ಕೂ ಮುಂದಕ್ಕೂ ಆಡುತ್ತಾ ಮನೆಯ ಕಡೆಗೆ ಬರುತ್ತಿದ್ದುದು ಕಾಣಿಸಿತು. ಚಿನ್ನಮ್ಮ ಓಡುತ್ತಲೆ ಹೋಗಿ ಬಾವನಿಗೆ ಕೈಕಾಲು ತೊಳೆದುಕೊಳ್ಳಲು ಬಿಸಿನೀರು ತಂದಿಟ್ಟಳು. ಗದ್ದೆಯ ಕೆಲಸದ ಕೆಸರು ಇನ್ನೂ ಅಲ್ಲಲ್ಲಿ ಮೈಗೆ ಮುಖಕ್ಕೆ ಅಂಟಿ ಕೊಂಡಿದ್ದ ಮುಕುಂದಯ್ಯ, ತನ್ನ ಮೋಹಿನಿಯ ವದನಾರವಿಂದದ ಕಡೆಗೆ ಆಗಾಗ ದೃಷ್ಟಿಪ್ರಸಾರಮಾಡುತ್ತಾ, ಮಳೆಗಾಲಿ ನೀರು ಕೆಸರುಗಳಲ್ಲಿ ದುಡಿದು ದಣಿದಿದ್ದ ಮೈಗೆ ಬಿಸಿನೀರಿನ ಬಿಸುಪು ನೀಡುತ್ತಿದ್ದ ಸುಖವನ್ನು ಆಸ್ವಾದಿಸುತ್ತಾ, ಕೈಕಾಲು ತೊಳೆದುಕೊಂಡು ಜಗಲಿಗೆ ಏರಿದನು.

ಎಂದಿನಂತೆ ಒಳಗೆ ಹೋಗದೆ, ತಾನು ಕೈಕಾಲು ಮುಖ ಒರಸಿಕೊಳ್ಳುತ್ತಿದ್ದುದನ್ನೆ ನೋಡುತ್ತಿರುವಂತೆ, ತನ್ನೆಡೆಯೆ ನಿಂತುಬಿಟ್ಟಿದ್ದ ಚಿನ್ನಮ್ಮನ ಕಡೆಗೆ ಪ್ರೇಮಮಯ ಪ್ರಶ್ನದೃಷ್ಟಿ ಬೀರಿದ ಮುಕುಂದಯ್ಯಗೆ:

"ಅತ್ತಿಗೆಮ್ಮ ಬಂದಾರೆ, ಬೆಟ್ಟಳ್ಳಿಯಿಂದ!" ಚಿನ್ನಮ್ಮನೆಂದಳು.

"ಆ್ಞ? ಏನು? ಯಾರು?" ಆಶ್ಚರ್ಯವಿತ್ತು ಬಾವನ ಪ್ರಶ್ನೆಗಳಲ್ಲಿ.

"ಬೆಟ್ಟಳ್ಳಿ ಅತ್ತಿಗೆಮ್ಮ ಬಂದಾರೆ!...." ಮತ್ತೆ ಹೇಳಿದಳು ಚಿನ್ನ.

"ಅಕ್ಕಯ್ಯನೇನೇ?"

"ಹ್ಞೂ!"

"ಮತ್ತೆ ಗಾಡಿ ಎಲ್ಲಿ? ಕಾಣಿಸಲಿಲ್ಲ?"

"ಗಾಡೀಲಿ ಬರಲಿಲ್ಲ; ನಡಕೊಂಡೇ ಬಂದ್ರು!"

"ಬಾವ ಬಂದಾರೇನು?"

"ಇಲ್ಲ!"

"ಮತ್ತೆ ಅಕ್ಕಯ್ಯ ಯಾರ ಸಂಗಡ ಬಂತೇ?"

“ಬಚ್ಚನ್ನ ಕರಕೊಂಡು ಬಂದಾರೆ.”

ಚಿನ್ನಮ್ಮನ ಕಣ್ಣಿನಲ್ಲಿದ್ದು ಧ್ವನಿಯಲ್ಲಿಯೂ ವ್ಯಕ್ತವಾಗುತ್ತಿದ್ದ ಏನೋ ದಿಗಿಲನ್ನು ಕಂಡು ಮುಕುಂದಯ್ಯನಿಗೂ ದಿಗಿಲಾಯ್ತು. ಅವನ ಐಹೆ ನಾನಾ ಭಯಾನಕ ಮಾರ್ಗಗಳಲ್ಲಿ ಮಿಂಚಿನಂತೆ ಸಂಚರಿಸಿತು: ಕಲ್ಲಯ್ಯ ಮಾವನಿಗೂ, ಅತ್ತೆಮ್ಮಗೊ, ದೇವಯ್ಯಗೊ ಅಥವಾ ಶಿಶು ಚೆಲುವಯ್ಯಗೂ? ಯಾರಿಗೆ ಏನು ಆಗಿದೆಯೋ? ಕೇಳಿದನು, ಬೇಗಬೇಗನೆ ಕಾಲೊರಸಿಕೊಂಡು:

“ಎಲ್ಲಿದೆಯೆ ಅಕ್ಕಯ್ಯ?”

“ಒಳಗೆ ಅಜ್ಜಿ ಹತ್ರ ಮಾತಾಡ್ತಿದ್ದಾರೆ.”

ಮುಕುಂದಯ್ಯ ಒಳಗೆ ಓಡುತ್ತಲೆ ಹೋದನು, ಚಿನ್ನಮ್ಮನನ್ನು ಹಿಂದೆ ಹಾಕಿ. ಅಕ್ಕನ ದುಃಖಕಾರಣವನ್ನೆಲ್ಲ ಆಲಿಸಿದ ಮೇಲೆ, ದುಃಖಿಸುವ ಅಕ್ಕನಿಗಾಗಿ ಅನುಕಂಪಿಸಿದರೂ, ಆ ದುಃಖದ ವಿಷಯದಲ್ಲಿ ಲಘು ಹೃದಯಿಯಾಗಿ ಆಕೆಯನ್ನು ಸಂತೈಸಿದನು:

“ನಿನಗೆ ಯಾರು ಈ ಸುಳ್ಳು ಸುಳ್ಳು ಸುದ್ದೀನೆಲ್ಲ ಹೇಳ್ದೋರು? ನಾವೆಲ್ಲ ಸತ್ತೇ ಹೋದೆವು ಅಂತಾ ಮಾಡಿಕೊಂಡೇನು, ಆ ಪಾದ್ರಿ ನಿನ್ನ ಗಂಡನ್ನ ಅವನ ಜಾತಿಗೆ ಸೇರಿಸಿಕೊಳ್ಳಾಕೆ?....”

“ಆ ಬಚ್ಚನ್ನೆ ಕೇಳು; ಎಲ್ಲ ಹೇಳ್ತಾನೆ, ಇಲ್ಲೇ ಇದಾನಲ್ಲಾ.”

“ಅವನ ಮುಂಡಾಮೋಚ್ತು! ಶನಿ ಸೂಳೇಮಗ! ಕಿತಾಪತಿ ತಂದು ಹಾಕೋದರಲ್ಲಿ ಎತ್ತಿದ ಕೈ ಅಂವ....”

“ನೀ ಸುಮ್ಮ ಸುಮ್ಮನೆ ಅವನ್ಯಾಕೆ ಅಂತೀಯೆ” ಮೊನ್ನೆ ಅವನ್ನೂ ತೀರ್ಥಹಳ್ಳಿಗೆ ಕರಕೊಂಡು ಹೋಗಿ ಕಿಲಸ್ತರ ಜಾತಿಗೆ ಸೇರಿಸಿದ್ರಂತಲ್ಲ, ತೀರ್ಥಕೊಡಿಸಿ!”

“ಎಲ್ಲಿದ್ದಾನೇ ಅಂವ?” ಮುಕುಂದಯ್ಯ ಚಿನ್ನಮ್ಮನ ಕಡೆ ನೋಡುತ್ತಾ ಕೇಳಿದನು. ಅವನಿಗೆ ನಿಜವಾಗಿಯೂ ಸುದ್ದಿ ಹೊಸದಾಗಿತ್ತು.

ದೂರದಲ್ಲಿದ್ದ ನಾಗಕ್ಕ “ಐತನ ಹತ್ರ ಮಾತಾಡ್ತಿದ್ದನಪ್ಪಾ, ಆಗ ಸೌದೆ ಕೊಟ್ಟಿಗೇಲಿ ಅವನ ಬಿಡಾರದ ಹತ್ರ....” ಎಂದಳು.

ಬಚ್ಚನಿಗೆ ಜಗಲಿ ಮುಂದಿನ ಕೆಳಗರಡಿಗೆ ಬರುವಂತೆ ಹೇಳಿ ಕಳಿಸಿ, ಮುಕುಂದಯ್ಯ ವಿಚಾರಿಸಿದನು:

“ಹೌದೇನೋ? ನೀನು ಕಿಲಸ್ತರ ಜಾತಿಗೆ ಸೇರಿದ್ದು?”

"ನಂಗೇನು ಗೊತ್ತಯ್ಯಾ, ಬರಾವು ಬರದ ಮೂಳಗೆ?" ತಲೆ ಕೆರೆದುಕೊಳ್ಳುತ್ತಾ ಮೈ ಮುದುಗಿಸಿ ನಿಂತಿದ್ದನು ಬಚ್ಚ.

"ಮತ್ತೆ ಅಕ್ಕಯ್ಯನ ಹತ್ರ ಬೊಗಳಿದಂತ್ಯಲ್ಲೋ?" ಬಚ್ಚನ ಅತಿ ವಿನಯದ ನಟನೆಯನ್ನು ಸಹಿಸಲಾಗದೆ ಸ್ವಲ್ಪ ಕಟುವಾಗಿಯೆ ಕೇಳಿದನು ಮುಕುಂದಯ್ಯ.

"ಆವೊತ್ತು ತೀರ್ಥೋಳ್ಳಿಗೆ ಗಾಡಿ ಹೊಡುಕೊಂಡು ಹೋಗಿದ್ದಾಗ, ಪಾದ್ರಿ ಮನೇಲಿ, ಸಣ್ಣಗೌಡ್ರು ಹೇಳಿದ್ರು, 'ತೀರ್ಥ ತಗಾ' ಅಂತಾ…. ಎಂಥದೋ ಉಂದಿಷ್ಟು ನೀರು ಹುಯದ್ರು ನನ್ನ ಕೈಗೆ ಆ ಪಾದ್ರಿ, ಪಸ್ತಗ ತಗೊಂಡು ಏನೇನೋ ಓದಿದ್ರು. 'ನೀನಿನ್ನು ಕಿಲಸ್ತ್ರ ಆದೆ' ಅಂದ್ರು. 'ನಿನ್ನ ಹೆಸರು ಜಕ್ರಪ್ಪೈಯ್ಯ' ಅಂದ್ರು. 'ನೀನಿನ್ನು ಹೊಲೇರಂವ ಅಲ್ಲ; ಬಿರಾಂಬ್ರ ಮನಿಗಾಗ್ಲಿ, ಗೌಡ್ರ ಮನಿಗಾಗ್ಲಿ ಹೋದ್ರೆ, ಅಂಗಳದಾಗೆ ನಿತ್ಗೊಬ್ಯಾಡ, ಜಗ್ಲೀಗ ಹೋಗಿ ಕೂತ್ಗಾ' ಅಂದ್ರು…. ಸಣ್ಣ ಗೌಡ್ರು ನಾ ತಗೊಂಡ ಮ್ಯಾಲೆ ತೀರ್ಥ ತಗೋತೀನಿ ಅಂದವ್ರೋ, ತಗೊಂಡ್ಲೇ ಇಲ್ಲ!…. ಅವರಿಗೆ ಮೇಗ್ರೊಳ್ಳಿ ಇಸ್ಕೂಲಿನಾಗೆ ತೀರ್ಥ ಕೊಡ್ತಾರಂತೆ, ದೊಡ್ಡಪಾದ್ರಿ ಅದಾರಲ್ಲಾ, ಆ ಬಿಳೀಪಾದ್ರಿ, ಅವರೇ ಸಿಮೊಗ್ಗಾದಿಂದ ಬಂದು, ಅವರನ್ನು ಜಾತೀಗೆ ಸೇರಿಸ್ಗೊತಾರಂತೆ…."

ಕೇಳಬೇಕಾದ ಪ್ರಶ್ನೆಗಳನ್ನೆಲ್ಲ ಕೇಳಿ ಬಚ್ಚನಿಂದ ಉತ್ತರ ಪಡೆದ ಮೇಲೆ ಮುಕುಂದಯ್ಯ ಆಜ್ಞೆ ಮಾಡಿದನು: "ನೀನಿಷ್ಟು ಈಗಲೇ ಉಂಡು ಕೊಂಡು, ಕೂಡ್ಲೆ ಬೆಟ್ಟಳ್ಳಿಗೆ ಹೋಗಿ, ನಾ ಹೇಳ್ದ ಅಂತಾ ಹೇಳಿ, ಗಾಡಿ ಕಟ್ಟಿಕೊಂಡು, ರಾತ್ರಾರಾತ್ರಿ ಬಂದು ಬಿಡಬೇಕು. ಕಮಾನುಗಾಡಿ! ಗೊತ್ತಾಯ್ತಾ ಸಣ್ಣಗೌಡ್ರಿಗೂ ಹೇಳು, ಬರಾಕೆ ಹೇಳಿದ್ರೂ ಅಂತಾ".

"ಅವರು ಮನೇಲಿ ಇರಲಿಲ್ಲಾ, ನಾವು ಬರಾಗ".

"ಗದ್ದೆಗೆ ಹೋಗಿದ್ರೇನೋ?"

"ಅಲ್ಲ ಮೇಗ್ರೊಳ್ಳಿಗೆ!" ಎಂದವನು ತಡೆದು ಮುಂದುವರಿದು "ಕಾವೇರಮ್ಮಗೆ…. ಆ ಕರ್ಮೀನಸಾಬ್ರು ತಮ್ಮ ಪುಡಿಸಾಬ್ರು, ಚೇಂಕ್ರ…." ಎಂದು ಅರ್ಧಕ್ಕೇ ಮಾತು ನಿಲ್ಲಿಸಿ, ಕೆಮ್ಮಿ, "ಏನೇನೋ ಹೇಳ್ತಿದ್ರಪ್ಪಾ! ನಂಗೆ ಸರಿಯಾಗಿ ಗೊತ್ತಿಲ್ಲರಯ್ಯಾ!" ಎಂದು ನಿಲ್ಲಿಸಿಯೆ ಬಿಟ್ಟನು.

ಆ ವಿಚಾರ ಅಲ್ಪಸ್ವಲ್ಪ ಮುಕುಂದಯ್ಯನ ಕಿವಿಗೂ ಬಿದ್ದಿತ್ತಾದ್ದರಿಂದ ಮುಂದೆ ಏನನ್ನೂ ಕೇಳು ಹೋಗದೆ, "ಅವರು ಮೇಗರೊಳ್ಳಿಯಿಂದ ಮನೀಗೆ ಬಂದಿದ್ದರೆ, ನಾ ಹೇಳಿದ್ದನ್ನು ಹೇಳು…. ನಡೀ ಈಗ…." ಎಂದನಷ್ಟೆ.

ತನ್ನ ಅಕ್ಕಯ್ಯನನ್ನು ಆದಷ್ಟು ಬೇಗನೆ ನೆಮ್ಮದಿಯಾಗಿ ಗಾಡಿಯ ಮೇಲೆ ಬೆಟ್ಟಲ್ಲಳಿಗೆ ಕರೆದುಕೊಂಡು ಹೋಗಿ ಬಿಟ್ಟು ಬರುವುದೆ ಮುಕುಂದಯ್ಯನ ಮೊದಲು ಉದ್ದೇಶವಾಗಿತ್ತು. ತಾಯಿಯನ್ನು ಎಂದೂ ಬಿಟ್ಟಿರದ ಶಿಶು ಚೆಲುವಯ್ಯನ ರೋದನ ಅವನ ಒಳಕಿವಿಗೆ ಕೇಳಿಸುತ್ತಿತ್ತೊ ಏನೊ!

ಪಾದ್ರಿಯ ಮಗಳೊಡನೆ ಬೆಟ್ಟಳ್ಳಿ ದೇವಯ್ಯ ಗೌಡರ ಪ್ರಣಯ ವ್ಯವಹಾರ ದೇಹ ಸಂಬಂಧದವರೆಗೂ ಮುಂದುವರಿದಿತ್ತು. ಅಂತಹ ಅನೇಕ ದೇಹ ಸಂಬಂಧಗಳಿದ್ದ ಸಿರಿವಂತ ಗೌಡರ ಆ ಯುವಕನಿಗೆ ಪಾದ್ರಿಯ ಮಗಳ

ಅಂತಹ ಸಂಬಂಧ ಹತ್ತರಲ್ಲಿ ಹನ್ನೊಂದಾಗಿತ್ತು, ಅಷ್ಟೆ. ಅದನ್ನೊಂದು ಗುರುವಿಷಯವೆಂದು ಅವನು ಮೊದಮೊದಲು ಭಾವಿಸಿರಲಿಲ್ಲ. ಆದರೆ ಕ್ರೈಸ್ತನಾಗಿದ್ದ ಉಪದೇಶಿ ಜೀವರತ್ನಯ್ಯ ತನ್ನ ಮಗಳ ಕನ್ಯಾತ್ವಹರಣವನ್ನು ಲಘುವಾಗಿ ಭಾವಿಸಲು ಸಿದ್ಧನಿರಲಿಲ್ಲ. ಜೊತೆಗೆ, ಆ ಘಟನೆ ಒಬ್ಬ ಮನೆ ತನಸ್ಥ ಯುವಕನನ್ನು ಕ್ರೈಸ್ತ ಮತಕ್ಕೆ ಸೆಳೆಯುವ ಅವಕಾಶ ಒದಗಿಸಲು, ಅದನ್ನು ಬಿಟ್ಟುಕೊಡುತ್ತಾನೆಯೆ? ತನ್ನ ಮತಕ್ಕೂ ವೃತ್ತಿಗೂ ಅಲ್ಲದೆ, ವೈಯಕ್ತಿಕವಾಗಿಯೂ ತನಗೂ ಮತ್ತು ತನ್ನ ಮಗಳಿಗೂ ಲಾಭಕರವಾಗಿರುವಾಗ, ಎರೆ ನುಂಗಿ ಗಾಳಕ್ಕೆ ಸಿಕ್ಕಿದ ಮೀನನ್ನು ದಡಕ್ಕೆಳೆಯದೆ ಬಿಡುವಷ್ಟು ಎಗ್ಗನಾಗಿರಲಿಲ್ಲ ಅವನು. ಜಾತಿಗೆ ಸೇರಿದರೆ ಮಾತ್ರ ಆ ಸಮಸ್ಯೆ ಹೆಚ್ಚು ತೊಂದರೆಯುಂಟುಮಾಡದೆ ಸುಸೂತ್ರವಾಗಿ ಪರಿಹಾರವಾಗುತ್ತದೆ ಎಂದು ದೇವಯ್ಯನನ್ನು ಬಲಾತ್ಕರಿಸತೊಡಗಿದ್ದನು. ನುಣ್ಣನೆಯ ಮಾತಿನ ಒಳಗೇ ಬೆದರಿಕೆಯನ್ನೂ ಹಾಕಿದ್ದನು.

ತಾನು ಎಂತಹ ಅಪಾಯಭೂಯಿಷ್ಠವಾದ ಕೆಂಜಿಗೆಯ ಹಿಂಡಲಿನೊಳಗೆ ನುಗ್ಗಿ ಸಿಕ್ಕಿಬೆದ್ದಿದ್ದೇನೆ ಎಂಬ ಅರಿವು ಉಂಟಾದೊಡನೆ ದೇವಯ್ಯ ಚಕಿತನಾದನು. ಆತ್ಮ ರಕ್ಷಣೆಗಾಗಿ ಸಭ್ಯಾಸಭ್ಯ ಭೇದವಿಲ್ಲದೆ ಸರ್ವೋಪಾಯಗಳನ್ನೂ ಕೈಗೊಳ್ಳಲು ಸಿದ್ಧನಾದನು. ಎಲ್ಲವನ್ನೂ ಗುಟ್ಟಾಗಿಟ್ಟಿರುವುದೇ ಆ ಕಾರ್ಯಕ್ರಮದ ಮೊದಲ ಹಂತವಾಗಿತ್ತು. ತನ್ನ ನಿಜವಾದ ಮನಸ್ಸು ಉಪದೇಶಿಗಾಗಲಿ ಅವನ ಮಗಳಿಗಾಲಿ ಒಂದಿನಿತೂ ಗೋಚರವಾಗದಂತೆ ವರ್ತಿಸತೊಡಗಿದನು. ತಾನು ಇಂದಲ್ಲ ನಾಳೆ ಜಾತಿಗೆ ಸೇರುವದು ನಿಶ್ಚಯ ಎಂಬಂತೆ ತೋರಿಸಿಕೊಂಡನು. ಅದಕ್ಕೆ ನಂಬಿಕೆಯ ಮುಂಗಡವಾಗಿ ಬಚ್ಚನನ್ನು ಮೊದಲು ಕ್ರೈಸ್ತನನ್ನಾಗಿ ಮಾಡುವ ವಂಚನೆಗೂ ಕೈಹಾಕಿದ್ದನು: "ನೀನು ನಾನು ಹೇಳಿದ ಹಾಗೆ ಮಾಡು. ನಿಮ್ಮ ಜಾತಿಯವರು ದಂಡ ಕೇಳಿದರೆ ನಾನೆ ಕೊಟ್ಟು ಶುದ್ಧಿ ಮಾಡಿ, ಹೊಲೆಯರ ಕುಲಕ್ಕೇ ಮತ್ತೆ ಸೇರಿಸಿಕೊಳ್ಳುವಂತೆ ಮಾಡುತ್ತೇನೆ!"

'ನನ್ನ ಹೆಂಡತಿ ಕ್ರೈಸ್ತಳಾಗಲು ಎಂದಿಗೂ ಒಪ್ಪುವುದಿಲ್ಲ; ಆದ್ದರಿಂದ ನಾನು ಹೇಗೆ ಕ್ರೈಸ್ತನಾಗಲಿ?' ಎಂದು ದೇವಯ್ಯ ಹೇಳಿದ್ದಕ್ಕೆ ಪಾದ್ರಿ 'ಕ್ರೈಸ್ತಮತ ಇಬ್ಬರು ಹೆಂಡಿರನ್ನು ಆಗಲು ಎಂದಿಗೂ ಸಮ್ಮತಿಸುವುದಿಲ್ಲ, ಆದರೆ ಮೊದಲ ಹೆಂಡತಿಯನ್ನು ಕಾನೂನುಬದ್ಧವಾಗಿ ಡೈವೋರ್ಸ ಮಾಡಬಹುದು' ಎಂದು ಸೂಚಿಸಿದ್ದನು.

ದೇವಯ್ಯ ಕಾಲವಂಚನೆ ಮಾಡಿ ತಪ್ಪಿಸಿಕೊಳ್ಳಬಹುದೆಂದು ಆಲೋಚಿಸಿ ಮೈಸೂರು ಸಂಸ್ಥಾನದಲ್ಲಿ ಆಗ ಇದ್ದ ಕಾನೂನೊಂದನ್ನು ಪಾದ್ರಿಯ ಗಮನಕ್ಕೆ ತಂದಿದ್ದನು. ಬ್ರಿಟಿಷರ ಆಳ್ವಿಕೆಯ ಪ್ರಾಂತಗಳಲ್ಲಿ ಹಿಂದೂ ಅವಿಭಕ್ತ ಕುಟುಂಬದ ಒಬ್ಬನು ಅನ್ಯ ಮತಾವಲಂಬಿಯಾದರೆ ಅವನಿಗೆ ತನ್ನ ಪಿತ್ರಾರ್ಜಿತ ಆಸ್ತಿಯ ಹಕ್ಕುದಕ್ಕುತ್ತಿದ್ದರೂ, ಮೈಸೂರು ಸಂಸ್ಥಾನದಲ್ಲಿ ಅನ್ಯಮತಾವಲಂಬಿಯಾದವನು ಆ ಹಕ್ಕನ್ನು ಕಳೆದುಕೊಳ್ಳಬೇಕಾಗಿತ್ತು. ಸಿಂಧುವಳ್ಳಿ ಚೆನ್ನಪ್ಪಗೌಡರು ಮತಾಂತರ ಹೊಂದುವಾಗ ಅವರೊಬ್ಬರೆ ಪಿತ್ರಾರ್ಜಿತ ಆಸ್ತಿಗೆ ಏಕಮಾತ್ರ ಹಕ್ಕುದಾರರಾಗಿದ್ದುದರಿಂದ ಆ ಆಸ್ತಿ ಅವರಿಗೆ ಪೂರ್ತಿಯಾಗಿ ದಕ್ಕಿತ್ತು. ಆದರೆ ತಂದೆ ಕಲ್ಲಯ್ಯ ಗೌಡರು ಇರುವವರೆಗೆ ಕ್ರೈಸ್ತನಾಗುವ ತನಗೆ ಆಸ್ತಿ ಬರುವುದಿಲ್ಲ. ಆದ್ದರಿಂದ ಅವರು ಪರಲೋಕಪ್ರಾಪ್ತಿಯನ್ನೈದಿದಮೇಲೆಯೆ ತಾನು ಮತಾಂತರ ಹೊಂದುತ್ತೇನೆ ಎಂದು ವಾದಿಸಿದ್ದನು ದೇವಯ್ಯ.

ಅದಕ್ಕೆ ಪಾದ್ರಿಯ ಸಮಾಧಾನ ಹೀಗಿತ್ತು: ಬ್ರಿಟಿಷ್ ಚಕ್ರವರ್ತಿನಿಯೂ ಪ್ರೋಟೆಸ್ಟೆಂಟ್ ಕ್ರೈಸ್ತ ಮತದವಳೆ. ಆದ್ದರಿಂದ ಇಂಡಿಯಾದಲ್ಲಿ ಬ್ರಿಟಿಷ್ ಸರ್ಕಾರವು ಪ್ರೋಟೆಸ್ಟೆಂಟ್ ಮಿಷನರಿಗಳಿಗೆ ನೇಟಿವ್ ಜನರನ್ನು

ಮತಾಂತರಗೊಳಿಸುವುದಕ್ಕೆ ಸರ್ವಾಧಿಕಾರವನ್ನೂ ಸರ್ವಸೌಲಭ್ಯಗಳನ್ನೂ ಕೊಡುತ್ತಾ ಇದೆ. ಮೈಸೂರು ಸಂಸ್ಥಾನವು ನೇಟಿವ್ ಸಂಸ್ಥಾನವಾದರೂ ಅದರ ರಾಜನು ಸಂಪೂರ್ಣವಾಗಿ ಬ್ರಿಟಿಷರ ಅಡಿಯಾಳು. ಬ್ರಟಿಷರ ಪ್ರತಿನಿಧಿ ರೆಸಿಡೆಂಟ್ ಸಾಹೇಬರು ಹೇಳಿದ ಹಾಗೆ ಅವನು ಕೇಳಬೇಕಾಗುತ್ತದೆ. ಇಲ್ಲದಿದ್ದರೆ ರಾಜ್ಯವನ್ನೇ ಕಳೆದುಕೊಳ್ಳುತ್ತಾನೆ. 'ನಮ್ಮ ದೊಡ್ಡ ಪಾದ್ರಿಗಳು ಲೇಕ್ ಹಿಲ್ ದೊರೆಗಳು, ರೆಸಿಡೆಂಟರ ಕಿವಿಯಲ್ಲಿ ಒಂದು ಪಿಸುಮಾತು ಉಸಿರಿದರೆ ಸಾಕು, ನಿಮ್ಮ ಪಿತ್ರಾರ್ಜಿತ ಆಸ್ತಿಗೆ ನಿಮ್ಮ ಅರ್ಧಾಂಗಿ ಆಗುವ ನನ್ನ ಮಗಳು ಹಕ್ಕುದಾರಳಾಗಿ ಬಿಡುತ್ತಾಳೆ!'.

ಆದ್ದರಿಂದಲೆ ದೇವಯ್ಯಗೌಡರ ಮತಾಂತರವನ್ನು ಸಾಕ್ಷಾತ್ ದೊಡ್ಡಪಾದ್ರಿಗಳಾದ ಲೇಕ್ಹಿಲ್ ದೊರೆಗಳೆ, ಕ್ರಿಸ್‌ಮಸ್‌ನಲ್ಲಿ, ಮೇಗರವಳ್ಳಿಯ ಮಿಶನ್ ಸ್ಕೂಲಿನ ಪ್ರಾರಂಭೋತ್ಸವ ನಡೆಸಲು ಬಂದಾಗ, ತಾವೆ ಖುದ್ದಾಗಿ ನಡೆಸಿಕೊಡುತ್ತಾರೆ ಎಂದು ನಿಶ್ಚಯವಾಗಿತ್ತು.

ಹೀಗಾಗಿ ಧರ್ಮ ಸಂಕಟಕ್ಕೆ ಸಿಕ್ಕಿಬಿದ್ದಿದ್ದ ದೇವಯ್ಯನಿಗೆ 'ಮ್ಲೇಚ್ಛ ಪಾಷಂಡಿ' ಗಳ ಆ ಚಕ್ರವ್ಯೂಹದಿಂದ ಪಾರಾಗಲು ಹೊಳೆದದ್ದು ಒಂದೇ ದಾರಿ: ಮುಕುಂದಯ್ಯನ ಅಭಿಮನ್ಯು ಪ್ರವೇಶ! ಅವರಿಬ್ಬರೂ ಅದನ್ನು ಸಾಂಗೋಪಾಂಗವಾಗಿ ಚರ್ಚಿಸಿ ನಿರ್ಣಯಿಸಿದ್ದರು. ಅದೇನೋ ಅಪ್ಪಟ ದಸ್ಯುದಾರಿಯೆ ಆಗಿತ್ತು. ಆದರೇನು ಮಾಡುವುದು?" ಬೇರೆ ಉಪಾಯವೆ ತೋರಲಿಲ್ಲವಾದ್ದರಿಂದ ಆ ಕಾಡು ಉಪಾಯವನ್ನೇ ಆಶ್ರಯಿಸಿದ್ದರು, ನೆಂಟ ಭಾವ ಇಬ್ಬರೂ!....

ಚೆನ್ನಮ್ಮ ಅವಳ ಹೊಸ ಸೀರೆಯುಡಿಸಿ, ಬಾಚಿ, ಕುಂಕುಮ ವಿಡಿಸಿ, ಹೂಮುಡಿಸಿದ್ದ ತನ್ನ ಅಕ್ಕಯ್ಯಗೆ ಅದನ್ನೆಲ್ಲ, ಹದಿಬದೆಗೆ ಮನನೋಯುವ ಅಂಶಗಳನ್ನು ಬಿಟ್ಟೋ ತೇಲಿಸಿಯೋ ಸಂಗ್ರಹವಾಗಿ ತಿಳಿಸಿ, ಯಾರೊಡನೆಯೂ ತುಟಿಪಿಟಕ್ಕೆನ್ನ ಬಾರದೆಂದೂ ಬುದ್ಧಿ ಹೇಳಿ, ಆ ರಾತ್ರಿಯೆ ಗಾಡಿ ಹತ್ತಿಸಿ ಬೆಟ್ಟಳ್ಳಿಗೆ ಕರೆದುಕೊಂಡು ಹೋಗಿ ಬಿಟ್ಟು ಬಂದಿದ್ದನು ಮುಕುಂದಯ್ಯ.

ಹಗಲಾದ ಮೇಲೆ ಹೆಚ್ಚು ಗುಲ್ಲಿಗೆ ಅವಕಾಶವಾಗುತ್ತದೆ ಎಂಬ ಕಾರಣಕ್ಕಾಗಿಯೂ.

* * *

## ೬೦

ಪಿಜಿಣನ ಆತ್ಮಹತ್ಯೆಯ ಅನಂತರ ಚೀಂಕ್ರ ಎಂದಿಗಿಂತಲೂ ಅತಿಶಯವಾಗಿ ಅಕ್ಕಣಿಯ ಯೋಗಕ್ಷೇಮದ ವಿಚಾರದಲ್ಲಿ ಆಸಕ್ತನಾದನು. ಅಕ್ಕಣಿ ಅವಳ ಗಂಡನ ಕಳೇಬರಕ್ಕೂ ಪ್ರೇತಕ್ಕೂ ಸಲ್ಲಿಸಬೇಕಾಗಿದ್ದ ಕ್ರಿಯೆಗಳಿಗೆಲ್ಲ ಚೀಂಕ್ರನೆ ಹೊಣೆಗಾರನಾಗಿ ನಿಂತು ಕೆಲಸ ಮಾಡಿದನು. ಅಕ್ಕಣಿಗೂ ಚೀಂಕ್ರ ಸೇರೆಗಾರನಿಗೂ ಇದ್ದಿಬಹುದಾದ ಗುಪ್ತಸಂಬಂಧವನ್ನು ಗುಟ್ಟಾಗಿಯೆ ಅರಿತಿದ್ದ ಅವರ ಜಾತಿಯವರಿಗೂ ಇತರರಿಗೂ ಚೀಂಕ್ರನ ಕರುಣೆಯ, ದಯೆಯ

ಮತ್ತು ಸೇವೆಯ ಅರ್ಥ ಸ್ಪಷ್ಟವಾಗಿಯೆ ಆಗಿತ್ತು: ಇನ್ನು ಅಕ್ಕಣಿ ಚೇಂಕ್ರವನ್ನು ಕೊಡುತ್ತಾಳೆ; ಅದೂ ಸರಿಯೆ; ಪ್ರಾಯದ ಹೆಂಗಸು ಗಂಡನಿಲ್ಲದೆ ಬದುಕು ಸಾಗಿಸುವುದು ಎಂದಿಗಾದರೂ ಸಾಧ್ಯವೆ? ಕಂಡ ಕಂಡ ಗಂಡಸರ ಕಾಟಕ್ಕೆ ಒಳಗಾಗಿ, ಮೂರು ಹೊತ್ತೂ ಮುಜುಗರದ ಜೀವನ ನಡೆಸುವುದಕ್ಕಿಂತ ಯಾವನಾದರೊಬ್ಬನನ್ನು ಕೂಡಿಕೆಯಾಗಿ, ಮತ್ತೆ ಗರತಿಬಾಲು ಮಾಡುವುದೇ ಯೋಗ್ಯ; ಅಲ್ಲದೆ ಹೆಂಡತಿ ಸತ್ತ ಮೇಲೆ ಕೆಟ್ಟು ಅಲೆಯುತ್ತಿರುವ ಚೇಂಕ್ರನಿಗೂ ಒಂದು ನೆಲೆ ಸಿಕ್ಕಿದ ಹಾಗಾಗುತ್ತದೆ; ಅವನ ಮಕ್ಕಳಿಗೂ ಒಂದು ತಾಯಿ ದಿಕ್ಕು, ಇದುವರೆಗೂ ಅತಂತ್ರವಾಗಿದ್ದುದ್ದು, ಸುತಂತ್ರವಾಗಿಯೂ ದೊರೆತಂತೆ ಆಗುತ್ತದೆ.

ಆದರೆ ಅಕ್ಕಣಿಯ ಮನಸ್ಸೇ ಬೇರೆಯಾಗಿತ್ತು. ಅವಳು ತನ್ನ ಗಂಡನು ಬದುಕಿದ್ದಾಗಲೆ ಸಮಯ ಸನ್ನಿವೇಶ ದಾಕ್ಷಿಣ್ಯಗಳಿಗೆ ತುತ್ತಾಗಿ ಕಾಲುಜಾರಿದ್ದಳು, ನಿಜ. ಆದರೆ ಸೇರೆಗಾರನಿಗೆ ಮನಸ್ಸು ಸೋತು ಒಡಲನ್ನು ಒಪ್ಪಿಸಿರಲಿಲ್ಲ. ತನ್ನ ರೋಗಿಷ್ಠ ತಂಡನ ಶುಶ್ರೂಷೆಗೆ ಸೇರೆಗಾರನಿಂದ ನೆರವಾಗುತ್ತಿದೆ ಎಂಬ ಕೃತಜ್ಞತಾ ಕಾರಣವೂ ಅವಳ 'ಪತನ'ಕ್ಕೊಂದು ಪ್ರಬಲ ಪ್ರಚೋದನೆಯಾಗಿತ್ತು. ಪಿಜಿಗಣ ದೊಡ್ಡತನದ ಮುಂದೆ ಚೇಂಕ್ರನ ನೀಚತ್ವ ಅವಳ ಕಣ್ಣಿಗೆ ಎದ್ದುಕಾಣುತ್ತಿತ್ತು. ಪಿಜಿಣನು ರೋಗವಶನಾಗಿ ಇಂದೊ ನಾಳೆಯೊ ಸಾಯುತ್ತಿದ್ದನು. ಅವನು ಹಾಗೆ ಸ್ವಾಭವಿಕವಾಗಿ ಸತ್ತಿದ್ದರೆ ಏನಾಗುತ್ತಿತ್ತೊ ಏನೋ? ಈಗ ಗಂಡನ ಆತ್ಮಹತ್ಯೆಗೆ ಚೇಂಕ್ರನ ಪ್ರಧಾನ ಕಾರಣ ಎಂಬ ಭಾವನೆ ಅಕ್ಕಣಿಯಲ್ಲಿ ಬೇರೂರಿತ್ತು: ಚೇಂಕ್ರ ತಂದು ಕೊಡುತ್ತಿದ್ದ ಔಷಧಗಳೂ, ಹೇಳುತ್ತಿದ್ದ ಪಥ್ಯಗಳೂ, ನೆವವೊಡ್ಡಿ ತಮ್ಮ ಬಿಡಾರದಲ್ಲಿಯ ಪಿಜಿಣನಿಗೆ ಕಾಣುವಂತೆ ಮತ್ತು ಎಟಕುವಂತೆ ತಂದು ಮುಚ್ಚಿಡುತ್ತಿದ್ದ ಸಾರಾಯಿಯಂತಹ ಅಗ್ನಿತುಲ್ಯ ಪಾನೀಯಗಳೂ ಪಿಜಿಣನ ರೋಗ ಉಲ್ಬಣಗೊಳ್ಳುವುದಕ್ಕೂ ಯಾತನೆ ಸಹಿಸಲಸಾಧ್ಯವಾಗುವಂತೆ ಏರಿ ಆತ್ಮಹತ್ಯೆಗೂ ಅವನನ್ನು ನೂಕಿದುದಕ್ಕೂ ಸಹಾಯವಾದುವಲ್ಲವೆ? ಜೊತೆಗೆ, ಕೊನೆಕೊನೆಯಲ್ಲಿ ತನ್ನ ಗಂಡನ ಉದಾರ ಹೃದಯದಲ್ಲಿಯೂ ಜುಗುಪ್ಸೆ ಹುಟ್ಟುವಂತೆ ತಾನು ವರ್ತಿಸಿದೆನೆಲ್ಲಾ ಎಂಬ ಆತ್ಮನಿಂದನೆಯ ಭಾವವೂ ಅವಳಲ್ಲಿ ಸದ್ಯಃ ಪಶ್ಚಾತಾಪವನ್ನು ಕೆರಳಿಸಿತ್ತು: ಯಾವುದಾದರೂ ಒಂದು ರೀತಿಯಲ್ಲಿ, ಹೇಗಾದರೂ, ತಾನು ಕಠೋರ ಪ್ರಾಯಶ್ಚಿತ್ತ ಮಾಡಿಕೊಳ್ಳಬೇಕು ಎಂಬ ಆತ್ಮ ಶುದ್ಧೀಕರಣದ ಧರ್ಮ ಬುದ್ಧಿ ಚೇತನಗ್ರಸ್ತವಾಗಿತ್ತು.

ಅವಳೀಗ ಚೇಂಕ್ರನ ಮಕ್ಕಳನ್ನು ಎಂದಿನಂತೆ ನೋಡಿಕೊಳ್ಳುತ್ತಿದ್ದರೂ ಅವನೊಡನೆ ಮಾತಿಗೆ ಹೋಗುತ್ತಿರಲಿಲ್ಲ. ತನ್ನ ಬಿಡಾರದಲ್ಲಿಯೇ ಮಕ್ಕಳನ್ನು ಮಲಗಿಸಿಕೊಂಡು ಮಲಗುತ್ತಿದ್ದಳು. ತನ್ನ ಬಿಡಾರಕ್ಕೆ ಚೇಂಕ್ರನನ್ನು ಸೇರಿಸುತ್ತಿರಲಿಲ್ಲ. ಪಿಜಣ ಆತ್ಮಹತ್ಯ ಮಾಡಿಕೊಂಡ ಜಾಗದಲ್ಲಿ ಮಲಗುವುದು ಒಳ್ಳೆಯದಲ್ಲ ಎಂದು ಕೆಲವರು ವಿವೇಕ ಹೇಳಿದಾಗ, ಅವಳು ಖಾಲಿಯಾಗಿದ್ದ ಐತನ ಬಿಡಾರದಲ್ಲಿಯೆ ಅವನ ಹೆಂಡತಿ ಪೀಂಚಲುವಿನ ಒಪ್ಪಿಗೆ ಪಡೆದು ಮಲಗಿಕೊಳ್ಳುತ್ತಿದ್ದಳು.

ಪ್ರವೀಣ ವಿಟಮನೋಧರ್ಮದ ಚೇಂಕ್ರ - ಗಂಡ ಸತ್ತ ಹೊಸದಲ್ಲಿ ಹೆಂಗಸಿಗೆ ಹಾಗೆನ್ನಿಸುತ್ತದೆ; ಕಾಲವೆ ದುಃಖವನ್ನು ಶಮನಗೊಳಿಸಿ, ಮೈಯನ್ನು ಪಳಗಿಸಿ, ಸುಖಾನುಭವಕ್ಕೆ ಅಳವಡಿಸುತ್ತದೆ; ಹುರಿದುಂಬಿಸುತ್ತದೆ; ಇವೊತ್ತಲ್ಲ ನಾಳೆ ಅಕ್ಕಣಿ ತನ್ನವಳಾಗಿಯೆ ಆಗುತ್ತಾಳೆ ಎಂದು ಸಮಯ ಕಾದನು.

ತನ್ನನ್ನು ಮದುವೆಯಾಗುವ ಸಲಹೆಯನ್ನು ಅವಳು ನಿರಾಕರಿಸಲು 'ಮದುವೆಯಾಗದಿದ್ದರೆ ಚಿಂತೆಯಿಲ್ಲ, ಮೊದಲಿನಂತೆಯೆ ಮೈಯ ಸಂಬಂಧವನ್ನು ಮುಂದುವರಿಸಿಕೊಂಡರಾಯಿತು' ಎಂದು ಸೂಚಿಸಿದನು. ಅದನ್ನೊ

ಅವಳು ತಿರಸ್ಕರಿಸಲು, ಹೆದರಿಸಿಯೊ ನೋಡಿದನು. ಪಿಜಿಣ ಮೇಗರವಳ್ಳಿ ಕರೀಮ ಸಾಬರ ಹತ್ತಿರ ಸಾಲಮಾಡಿದ್ದನಂತೆ; ಅದನ್ನು ತೀರಿಸುತ್ತೀಯೋ ಇಲ್ಲವೋ ಎಂದು ಕೇಳಲು ನಿನ್ನನ್ನು ಬರಹೇಳಿದ್ದಾರೆ ಎಂದನು. 'ಅಯ್ಯೋರ ಹತ್ರ ಗಂಡನ ಸಾಲಾನೆಲ್ಲ ತೀರಿಸ್ತೀನಿ ಅಂತಾ ಹೇಳಿದ್ದೀನಿ. ಸಾಬರ ಸಾಲ ಏನಿದ್ದರೂ ಅಯ್ಯೋರೆ ಕೊಡ್ತಾರೆ; ಅವರನ್ನೇ ಕೇಳಲಿ' ಎಂದಳು. ಅಕ್ಕಣಿ. 'ಆ ಸಾಲನೆಲ್ಲ ಎಂದಾದರೂ ತೀರಿಸುವುದಕ್ಕೆ ಆಗುತ್ತದೆಯೆ? ವರ್ಷವರ್ಷವೂ ಅದಕ್ಕೆ ಬಡ್ಡಿ ಚಕ್ರಬಡ್ಡಿ ಅಂತಾ ಏನೇನೊ ಸೇರಿಸಿ ಹೆಚ್ಚು ಮಾಡ್ತಾನೆ ಇರುತ್ತಾರೆ. ಅದನ್ನೆಲ್ಲ ಒಟ್ಟಿಗೆ ತೀರಿಸೋಕೆ ಇರೋದು ಒಂದೋ ಒಂದು ಉಪಾಯ. ನನ್ನ ಸಂಗಡ ಬಂದು ಬಿಡು; ಗಟ್ಟದ ಕೆಳಗೆ ಇಳಿದು ಬಿಡೋಣ; ಆಮೇಲೆ ನಮ್ಮನ್ನು ಯಾರು ಕೇಳ್ತಾರೆ?' ಎಂದು ಉಪಾಯ ಸೂಚಿಸಿದ ಚೇಂಕ್ರನಿಗೆ ಅಕ್ಕಣಿ 'ನಾನು ಧರ್ಮಸ್ಥಳದ ದೇವರಾಣೆ ಹಾಕಿ, ಅವರ ಸಾಲಾನೆಲ್ಲ ದುಡಿದು ತೀರಿಸ್ತೀನಿ ಅಂತಾ ಹೇಳಿದ್ದೀನಿ. ಅದಕ್ಕೆ ತಪ್ಪಿದರೆ ದೇವರು ಸುಮ್ಮನೆ ಬಿಟ್ಟಾನೆ ನನ್ನ?' ಎಂದು ಬಿಟ್ಟಳು. 'ತಪ್ಪು ಕಾಣಿಕೆ ಕಟ್ಟಿ ಅದನ್ನೆಲ್ಲ ಪರಿಹರಿಸಿಕೊಳ್ಳಬಹುದು. ಆ ಹೊಣೆ ನನ್ನದಾಗಿರಲಿ' ಎಂದು ಧೈರ್ಯ ಹೇಳಿದ ಚೇಂಕ್ರನಿಗೆ ಅಕ್ಕಣಿ 'ನನ್ನ ಗಂಡ ದಿನಾ ಕನಸಿನಾಗ ಬಂದು ಹೇಳುತ್ತಾರೆ, ಹಾಂಗೆಲ್ಲಾ ಮಾಡಬೇಡಾ ಅಂತಾ' ಎಂದು. ತನ್ನ ಗಂಡನ ಹೆಚ್ಚುಗಾರಿಕೆಯನ್ನೂ ಚೇಂಕ್ರನ ಅಲ್ಪತ್ವವನ್ನೂ ಒಟ್ಟಿಗೆ ಸೂಚಿಸಿ, ಕಡ್ಡಿ ಮುರಿದಂತೆ ಉತ್ತರ ಕೊಟ್ಟಿದ್ದಳು.

"ಅಕ್ಕವಣಿಯ ಮನಃಸ್ಥೈರ್ಯ ಮುರಿಯಲು ಚೇಂಕ್ರ ಮತ್ತೊಂದು ಕೊನೆಯ ಉಪಾಯ ಹೂಡಿದನು.

ಮಕ್ಕಳಿಲ್ಲದ ಅಕ್ಕಣಿಗೆ ದೇಯಿ ಸತ್ತುಹೋದ ಮೇಲೆ ಚೇಂಕ್ರನ ಮಕ್ಕಳೇ ತನ್ನ ಮಕ್ಕಳಾಗಿ ಹೋಗಿದ್ದರು.

ಒಂದು ಬೈಗು. ಆಗತಾನೆ ಕಪ್ಪಾಗಿತ್ತು. ಗೌಡರ ಮನೆಯ ಗದ್ದೆ ಕೆಲಸಕ್ಕೆ ಹೋಗಿ ಬಂದಿದ್ದ ಅಕ್ಕಣಿ ತನ್ನ ಬಿಡಾರದಲ್ಲಿ ಒಲೆ ಹೊತ್ತಿಸಿ ಗಂಜಿ ಬೇಯಿಸುವ ಕಾರ್ಯದಲ್ಲಿ ತೊಡಗಿದ್ದಳು. ಹಸಿದಿದ್ದ ಮೂವರು ಮಕ್ಕಳೂ, ಐತನದಾಗಿದ್ದ ಬಿಡಾರದಲ್ಲಿ, ಹಸಿವೆಯಿಂದಲೆ ಸೋತು ದಣಿದು, ಒಂದು ಮುದ್ದೆಗೊಂಡು ಹದುಗಿ ಮಲಗಿದ್ದುವು, ಅಕ್ಕಣಬ್ಬೆ ಗಂಜಿಯುಣ್ಣಲು ಕರೆಯುವುದನ್ನೆ ಇದಿರುನೋಡುತ್ತಾ.

ಇದ್ದಕ್ಕಿದ್ದ ಹಾಗೆ ಬಿಡಾರದ ಬಾಗಿಲಲ್ಲಿ ಚೇಂಕ್ರ ಕೆಮ್ಮುತ್ತಾ ನಿಂತಿದ್ದುದು ಅಕ್ಕಣಿಯ ಗಮನಕ್ಕೆ ಬಂದಿತು. ಇತ್ತೀಚೆಗೆ ಅವನು ಹಿಂದೆ ಬರುತ್ತಿದ್ದಂತೆ ತನ್ನ ಬಿಡಾರಕ್ಕೂ ಬರುವುದೇ ವಿರಳವಾಗಿತ್ತು. ಅಕ್ಕಣಿ ಒಮ್ಮೆ ತಿರುಗಿ ಅವನನ್ನು ಗುರುತಿಸಿದಳು. ಮತ್ತೆ ಆ ಕಡೆ ತಿರುಗಲಿಲ್ಲ. ಒಲೆಯ ಉರಿ ಆರದಂತೆ ಜಿಗ್ಗನ್ನು ಮುಂದಕ್ಕೆ ನೂಕುವುದರಲ್ಲಿ, ಗರಟದ ಸೌಟಿನಲ್ಲಿ ಗಂಜಿ ತಿರುಗಿಸುವುದರಲ್ಲಿ ಮಗ್ನೆಯಾದಂತೆ ಇದ್ದುಬಿಟ್ಟಳು. ಆದರೆ ಅವಳ ಹೃದಯ ಮಾತ್ರ ಯಾವುದೋ ಭಯಾಶಂಕೆಯಿಂದ ತಲ್ಲಣಗೊಂಡಿತ್ತು.

ಚೇಂಕ್ರ ತನ್ನ ಮಕ್ಕಳೆಲ್ಲಿವೆ ಎಂದು ಮಾತಿಗೆ ಮೊದಲು ಮಾಡಿದನು. ಅವನ ಧ್ವನಿಯನ್ನು ಆಲಿಸಿಯೆ ಅಕ್ಕಣಿಗೆ ಗೊತ್ತಾಯಿತು, ಸೇರೆಗಾರ ಎಂದಿಗಿಂತಲೂ ಹೆಚ್ಚಾಗಿಯೆ ಕುಡಿದಿದ್ದಾನೆ ಎಂದು. ಮತ್ತೊಂದು ಹೋರಾಟಕ್ಕೆ ಅನಿವಾರ್ಯವಾಗಿಯೆ ಸಿದ್ಧಳಾದಳು, ಮನಸ್ಸನ್ನು ಕಲ್ಲು ಮಾಡಿಕೊಂಡು.

"ಐತನ ಬಿಡಾರದಲ್ಲಿ ಮಲಗಿದಾವೆ" ಚೇಂಕ್ರನತ್ತ ಮೊಗದಿರುಗದೆ ಗಂಜಿ ಗಿರುಗಿಸುತ್ತಲೆ ಹೇಳಿದಳು ಅಕ್ಕಣಿ.

“ಸ್ವಲ್ಪ ಬಾ ನನ್ನ ಬಿಡಾರಕ್ಕೆ” ಅಪ್ಪಣೆ ಮಾಡುವಂತಿತ್ತು ಚೇಂಕ್ರನ ದನಿ.

“ಕಾಣಾದಿಲ್ಲೇನು? ಗಂಜಿ ಬೇಯಿಸ್ತಿದ್ದೀನಿ. ಮಕ್ಕಳು ಹಸಿದು ಕಾಯ್ತಾವೆ.”

“ಅವು ಸಾಯಲಿ! ಅವನ್ನ ಬಾವಿಗೆ ಹಕು!....ಬರ್ತಿಯೋ? ಇಲ್ಲೋ?” ಈ ಸಾರಿ ಸೇರೆಗಾರನ ಧ್ವನಿ ಕ್ರೂರವಾಗಿತ್ತು.

ದೈಹಿಕ ಶಕ್ತಿಯಲ್ಲಿ ಸೇರೆಗಾರನಿಗೆ ತಾನೇನೂ ಕಡಿಮೆ ಇಲ್ಲದಿದ್ದರೂ ಅಕ್ಕಣಿಗೆ ಹೆಣ್ಣಿನ ಸಹಜ ಅಂಜಿಕೆಯಾಗಿ, ಒಲೆಯ ಎಡೆ ಕುಳಿತು ಬಾಗಿ ಗಂಜಿ ಬೇಯಿಸುತ್ತಿದ್ದವಳು, ಎದ್ದುನಿಂತು, ಚೇಂಕ್ರನತ್ತ ದಿಟ್ಟಿಸಿದಳು. ಅವಳ ಬಲಗೈಯಲ್ಲಿ ಮರದ ಹಿಡಿ ಹಾಕಿದ್ದ ಕರಟದ ಚಿಪ್ಪಿನ ಸೌಟು ಇತ್ತು.

“ಏನು ಸೌಟು ತೋರ್ಸಿ ಹೆದರಿಸುತ್ತೀಯಾ, ಹಾದರದವಳೆ? ನನ್ನನ್ನು ಏನು ಅಂತಾ ತಿಳಿದಿದ್ದೀಯಾ? ಕೈಲಾಗದ ನಿನ್ನ ಗಂಡ ಪಿಜಿಣ ಅಂತಾ ಮಾಡಿದ್ದೀಯಾ?.... ಕತ್ತರಿಸಿ ಹಾಕಿಬಿಟ್ಟೇನು! ಗೊತ್ತಾಯ್ತೇನು?”

ತನ್ನ ಗಂಡನ ಹೆಸರ ಮೂದಲಿಕೆ ಮಂತ್ರೌಷಧಿಯಂತೆ ಕೆಲಸ ಮಾಡಿತು. ಆ ಬಿಡಾರದಲ್ಲಿಯೆ, ಸ್ವಲ್ಪ ಹೆಚ್ಚೂ ಕಡಿಮೆ ಈಗ ಅಕ್ಕಣಿ ನಿಂತಡೆಯಲ್ಲಿಯೆ, ನೇಣುಹಾಕಿಕೊಂಡಿದ್ದ ಪಿಜಿಣನ ಪ್ರೇತ ಅಲ್ಲಿಯೆ ಸುತ್ತುತ್ತಿದ್ದು, ಚೇಂಕ್ರನ ಮೂದಲಿಕೆಯನ್ನು ಕೇಳಿ ಕುಪಿತವಾಗಿ, ತನ್ನ ಹೆಂಡತಿಯ ಮೈಮೇಲೆ ಬಂದಿತೋ ಏನ ಎಂಬತಾಯ್ತು.

ನುಗ್ಗಿ ಬಂದು ತನ್ನ ಒಂದು ಎದೆಗೇ ಕೈಹಾಕಲು ಹವಣಿಸುತ್ತಿದ್ದ ಚೇಂಕ್ರನ ಮೋರೆಗೆ ಸೌಟಿನಿಂದಲೆ ಹೊಡೆದು ತಳ್ಳಿಬಿಟ್ಟಳು. ಅಮಲು ನೆತ್ತಿಗೇರಿದ್ದ ಅವನು ತತ್ತರಿಸುತ್ತಲೆ ಹಿಂದಕ್ಕೆ ಹೋಗಿ ಉರುಳಿಬಿದ್ದನು. ಅವನ ತಲೆ ಅಲ್ಲಿದ್ದ ಒಂದು ಗಡಿಗೆಗೆ ತಗುಲಿ ಅದು ಒಡೆಯಿತು. ಬಳಿಯಲ್ಲಿದ್ದ ಒಂದು ಕೆಲಸದ ಕತ್ತಿ ಅವನ ಕಣ್ಣಿಗೆ ಬಿತ್ತು. ತೆವಳಿಯೆ ಅದನ್ನು ಸಮೀಪಿಸಿ ಕೈಗೆ ತೆಗೆದುಕೊಳ್ಳಲು ಯತ್ನಿಸಿದನು. ಮೊದಲೇ ಕುಡಿದಿದ್ದ ಅವನಿಗೆ ಈಗ ಬಿದ್ದೂ ಸ್ವಾಧೀನ ತಪ್ಪಿತ್ತಾದ್ದರಿಂದ ಕತ್ತಿಯನ್ನು ಸುಲಭವಾಗಿ ತುಡುಕಲಾಗಲಿಲ್ಲ. ಅವನಿಗೆ ದೂರವಾಗಿದ್ದ ಅದರ ಹಿಡಿಪನ್ನು ಹಿಡಿಯುವುದಕ್ಕೆ ಬದಲಾಗಿ ಸಮೀಪವಾಗಿದ್ದ ಅದರ ಅಲಗನ್ನೆ ಹಿಡಿದುಕೊಂಡನು. ಅದನ್ನು ಕಂಡ ಅಕ್ಕಣಿ ಓಡಿ ಹೋಗಿ ಕತ್ತಿಯ ಹಿಡಿಯನ್ನು ತುಡುಕಿದಳು. ಚೇಂಕ್ರ ಅಲಗನ್ನೆ ಬಲವಾಗಿ ಹಿಡಿದನು. ಅಕ್ಕಣಿ ಎಳೆದ ಹೊಡೆತಕ್ಕೆ ಅವನ ಬೆರಳು ಅರೆ ಕತ್ತರಿಸಿ ರಕ್ತ ಹರಿಯಿತು. ಕತ್ತಿ ತನ್ನ ಕೈಗೇ ಬಂದಿದರೂ ನೆತ್ತರನ್ನು ಕಂಡು ಅಕ್ಕಣಿ ಕೂಗಿಕೊಂಡಳು: “ಅಯ್ಯೋ ಸತ್ತೇ; ಮಕ್ಕಳಿರಾ, ನಿಮ್ಮ ಅಪ್ಪ ಕೊಲ್ಲುತ್ತಿದ್ದಾನೆ!”

ಐತನ ಬಿಡಾರದಲ್ಲಿ ಅರೆ ನಿದ್ದೆಯಲ್ಲಿದ್ದ ಮಕ್ಕಳಿಗೆ ಎಚ್ಚರವಾಗಿ, ಅವೂ ಕೂಗಿಕೊಳ್ಳುತ್ತಲೆ ಓಡಿಬಂದವು. ಅಷ್ಟರಲ್ಲಿಯೆ ಎದ್ದು ನಿಂತಿದ್ದ ಚೇಂಕ್ರ, ತಲೆಗೆದರಿ, ಅಸ್ತವ್ಯಸ್ತವಸನನಾಗಿ, ಮುಂದಿನ ಭೀಷಣಕ್ರಮಕ್ಕೆ ತೂರಾಡುತ್ತಲೆ ಅನುವಾಗುತ್ತಿದ್ದನು. ಓಡಿಬಂದ ಮಕ್ಕಳಲ್ಲಿ ಹಿರಿಯದು ಅಪ್ಪನ ತೊಡೆಗೆ ತಬ್ಬುಹಾಕಿ “ಬೇಡ ಅಪ್ಪಾ! ಬೇಡ ಅಪ್ಪಾ!” ಎಂದು ರೋದಿಸಿತು. ಕೊನೆಯ ಚಿಕ್ಕಮಗು ಚೇಂಕ್ರನಿಗೂ ಅಕ್ಕಣಿಗೂ ನಡುವೆ ನಿಂತು ಒರಲುತ್ತಿತ್ತು. ಚೇಂಕ್ರ ಝಾಡಿಸಿ ಒದ್ದ ರಭಸಕ್ಕೆ ಆ ಮಗು ಬಿಡಾರದ ಗೋಡೆಗೆ ಢಿಕ್ಕಿ ಹೊಡೆದು ಸತ್ತಂತೆ ಬಿದ್ದು ಬಿಟ್ಟಿತು. ತೊಡೆಯನ್ನು ತಬ್ಬಿದ್ದ ಹುಡುಗನನ್ನು ಕೈ ಎಳೆದು ಬಿಡಿಸಿ ಮೂಲೆಗೆ ತಳ್ಳಿದನು. ಅಷ್ಟರಲ್ಲಿ ಆ ಅಬ್ಬರ ಕೇಳಿಸಿ ಓಡಿಬಂದಿದ್ದ ಬಾಗಿ, ಮೊಡಂಕಿಲ, ಕುದುಕ ಮೊದಲಾದವರು ಬಿಡಾರದ ಒಳಗೆ ನುಗ್ಗಿ ಚೇಂಕ್ರನನ್ನು ತಡೆದರು.

“ನನ್ನ ಮಕ್ಕಳನ್ನು ಕರೆದುಕೊಂಡು ಹೋಗುತ್ತೇನೆ, ಕಳಿಸಿಕೊಡು ಅಂದರೆ, ರಂಡೆ ನನ್ನನ್ನು ಕಡಿದೇ ಬಿಟ್ಟಳಲ್ಲಾ! ಬಿಡೀ ನೀವು ನನ್ನನ್ನು; ಅವಳಿಗೆ ಸಮಾ ಮಾಡುತ್ತೇನೆ....” ಎನ್ನುತ್ತಾ ಚೇಂಕ್ರ ರಕ್ತ ಹರಿಯುತ್ತಿದ್ದ ತನ್ನ ಕೈಯನ್ನು ಸಾಕ್ಷಿಯಾಗಿ ಎಲ್ಲರಿಗೂ ತೋರಿಸಿದನು.

ಚೇಂಕ್ರ ಹೇಳಿದುದಕ್ಕೆ ಸಾಕ್ಷಿಯಾಗಿ ಅಕ್ಕಣಿಯ ಕೈಯಲ್ಲಿ ಕತ್ತಿಯೂ ಇತ್ತು.

ನಿಜವಾದ ನಿಜ ಈ ಸುಳ್ಳಿಗಿಂತಲೂ ಹೆಣ್ಣಿಗೆ ಹೆಚ್ಚು ಅಸಹ್ಯತರವಾಗಿ ತೋರಿದುದರಿಂದ, ನಿಜ ಹೇಳಿ ಸುಳ್ಳನ್ನು ಬಯಲಿಗೆಳೆಯುವುದಕ್ಕೆ ಬದಲಾಗಿ, ಸುಳ್ಳನ್ನು ಮತ್ತೊಂದು ಸುಳ್ಳಿನಿಂದಲೆ ಮೀಟಿ ತೆಗೆದುಹಾಕಿದ್ದಳು ಅಕ್ಕಣಿ: ಕರ್ಮೀನುಸಾಬರ ಹತ್ತಿರ ಪಿಜಿಣ ಮಾಡಿದ್ದನೆಂದು ಹೇಳಲಾದ ಸಾಲವನ್ನು ತೀರಿಸಲು ತನ್ನ ಬಳಿಯಿರುವ ಚೂರುಪಾರು ಒಡವೆಗಳನ್ನೆಲ್ಲ ಕೊಡು ಎಂದು ಚೇಂಕ್ರ ಪೀಡಿಸಿದನೆಂದೂ, ತಾನು ನಿರಾಕರಿಸಲು ಕತ್ತಿಗೆ ಕೈಹಾಕಿದನೆಂದೂ, ಬಾಳೆಕಾಯಿ ಹೆಚ್ಚಲು ಹಿಡಿದುಕೊಂಡಿದ್ದ ಆ ಕತ್ತಿಯ ಬಾಯನ್ನು ಅವನೇ ಹಿಡಿದೆಳೆದುದರಿಂದ ಗಾಯವಾಯಿತೆಂದೂ ಹೇಳಿದಳು.

ಕಡೆಗೆ, ಮರುದಿನ ಚೇಂಕ್ರನು ತನ್ನ ಮಕ್ಕಳನ್ನು, ಅವನೇ ಹೇಳಿದಂತೆ, ಮೇಗರವಳ್ಳಿಯಲ್ಲಿ ಅವನು ಮಾಡಿದ್ದ ಹೊಸ ಬಿಡಾರಕ್ಕೆ ಕರೆದುಕೊಂಡು ಹೋಗಬಹುದೆಂದು ಇತ್ಯರ್ಥವಾಯಿತು. ಇತರರೊಡನೆ ಚೇಂಕ್ರನೂ ಹೊರಟು ಹೋದನು.

ಅಕ್ಕಣಿ ಸೀದುಹೋಗಿದ್ದ ಗಂಜಿಗೆ ಇಷ್ಟು ನೀರು ಹೊಯ್ದು ಪುನರ್ಪಾಕಮಾಡಿ ಇಳಿಸಿದಳು.

ಅಳುತ್ತಿದ್ದ ಮಕ್ಕಳಿಗೆ ಉಣ್ಣಿಸಿದಳು. ಆದರೆ ಚೇಂಕ್ರನು ಒದ್ದು ಕೆಡವಿದ್ದ ಕಿರಿಯ ಮಗು ಉಣಲಾರದೆ ಹೋಯಿತು. ಅದರ ಬಾಯಲ್ಲಿ ರಕ್ತ ಬರುತ್ತಿತ್ತು.

ತನ್ನ ಬಿಡಾರದ ತಟ್ಟಿಬಾಗಿಲಿಗೆ ಹಗ್ಗ ಬಿಗಿದು ಕಟ್ಟಿ, ಮಕ್ಕಳನ್ನೂ ಕರೆದುಕೊಂಡು ಐತನ ಬಿಡಾರಕ್ಕೆ ಹೋಗಿ ಅವರನ್ನು ಮಲಗಿಸಿದಳು. ತಾನೂ ನಿದ್ರಿಸಲು ಪ್ರಯತ್ನಿಸಿದಳು. ಆದರೆ ದುಃಖ ಉಕ್ಕಿ ಬಂದು, ಅಳುತ್ತಾ ಕುಳಿತುಬಿಟ್ಟಳು.

ಗುಡಿಸಲು ಒಳಗೆ ಕಗ್ಗತ್ತಲೆ. ಹೊರಗಡೆ ಕಪ್ಪೆ ಹುಳುಹುಪ್ಪಟೆಯ ರೇಜಿಗೆಯ ಸದ್ದು. ಆಗಾಗ್ಗೆ ಬರ್ರೆಂದು ಹೊಯ್ದು ಹೊಯ್ದು ನಿಲ್ಲುವ ಶ್ರಾವಣಮಾಸದ ಮಳೆ. ಬೃಹಜ್ಜಗತ್ತಿನಲ್ಲಿ ತಾನೂ ತಾನು ಸಾಕಿದ್ದ ಆ ಮೂರು ಮಕ್ಕಳೂ ದಿಕ್ಕುಕೆಟ್ಟ ಅನಾಥರಾಗಿ ತೋರಿತು: ನಾಳೆ ಆ ಮೂರು ಮಕ್ಕಳನ್ನೂ ಸೇರೆಗಾರ ಕರೆದೊಯ್ಯುತ್ತಾನೆ! ತನ್ನ ಬದುಕು ಭಯಂಕರ ಶೂನ್ಯವಾಗುತ್ತದೆ! ತಾನೊಬ್ಬಳೆ ಆಗುತ್ತೇನೆ! ತನ್ನ ಬದುಕನ್ನು, ತೊಂದರೆಯಿಂದಲಾದರೂ, ತುಂಬಿ, ಅದು ಬೆಕೋ ಎನ್ನದಂತೆ ಮಾಡಿ, ಸಂತೋಷಗೊಳಿಸುತ್ತಿದ್ದ ಮೂರು ಮಕ್ಕಳನ್ನೂ ಕರೆದೊಯ್ಯುತ್ತಾನೆ! ಅವನಿಗೆ ನಿಜವಾಗಿ ಮಕ್ಕಳ ಮೇಲೆ ಪ್ರೀತಿಯಿದೆಯೋ? ಇಲ್ಲ. ನಾಲ್ಕೇ ದಿನಗಳಲ್ಲಿ ಅವನ್ನು ಕೊಲ್ಲುತ್ತಾನೆ. ಹೊಟ್ಟೆಗಿಲ್ಲದೆ ಸಾಯಿಸುತ್ತಾನೆ. ಹೊಡೆದೇ ಸಾಯಿಸುತ್ತಾನೆ; ಆರೈಕೆಯಿಲ್ಲದೆ ಸಾಯಿಸುತ್ತಾನೆ; ಹಿರಿಯ ಹುಡುಗನನ್ನು ಯಾರೋ ಮನೆಯಲ್ಲಿ ಕೆಲಸಕ್ಕೆ ಬಿಡುತ್ತಾನಂತೆ! ಆ ಬಡಕಲು ಮಗು ಒಂದೇ ದಿನದಲ್ಲಿ ಸಾಯುತ್ತದೆ! ಇಲ್ಲ, ಇಲ್ಲ; ಅವನಿಗೆ

ಬೇಕಾದುದು ಮಕ್ಕಳಲ್ಲ; ನಾನು! ನಾನೂ ಅಲ್ಲ, ನನ್ನ ಒಡಲು! ನಾಯಿಗೆ ಬಾಡು ಬೇಕಾಗುವಂತೆ! ನನ್ನ ಮೇಲೆ ಮುಯ್ಯಿ ತೀರಿಸಿಕೊಳ್ಳಲೆಂದೇ ಮಕ್ಕಳನ್ನು ಕರೆದೊಯ್ಯುತ್ತಿದ್ದಾನೆ, ಅವನಿಚ್ಛೆಗೆ ನಾನು ಬರಲಿಲ್ಲ ಎಂದು! ಅಯ್ಯೋ ಏನು ಮಾಡಲಿ?

ಅಕ್ಕಣಿ ನಿಡುಸುಯ್ದಳು. ಹತಾಶೆ ಬಡಿದು, ಮತ್ತೂ ಅತ್ತಳು.

ಚೇಂಕ್ರ ಒದ್ದು ಕೆಡವಿದ್ದ ಮಗು ನರಳತೊಡಗಿತ್ತು. ಅಕ್ಕಣಿ ಕತ್ತಲಲ್ಲೆ ಅದರ ಮೈಮೇಲೆ ಕಂಬಳಿ ಹೊದಿಸಿದಳು.

ಕಿರಿಯ ಮಗುವನ್ನಾದರೂ ಬಿಟ್ಟು ಹೋಗು ಎಂದು ಕೇಳಿಕೊಳ್ಳುತ್ತೇನೆ. ಅದೂ ರಕ್ತ ಬೇರೆ ಕಾರುತ್ತಿದೆ! ಅದಕ್ಕೂ ಅವನು ಒಪ್ಪದಿದ್ದರೆ? ಇನ್ನೇನು ಮಾಡುವುದು? ನಾನೊಬ್ಬಳೆ ಹೀಗೆ ಬದುಕಿದ್ದು ಏನು ಆಗಬೇಕಾಗಿದೆ? ಮಕ್ಕಳ ಸಂಗಡ ನಾನೂ.... ಥೂ ಹಾಳು ಅನಿಷ್ಟ! ಅವನ ಸಹವಾಸ! ಧರ್ಮಸ್ಥಳದ ದೇವರಾಣೆ ಬೇರೆ ಹಾಕಿದ್ದೇನಲ್ಲಾ? ಹೌದು, ಗೌಡರಿಗೆ ಹೇಳಿ, ಏನಾದರೂ ಲಮಾಡಿ ಕಾಪಾಡಿ ಎಂದುಕೊಂಡರೆ? ಚೇಂಕ್ರ ಅವರಿಗೂ ಸಾಲ ಕೊಡುವುದಿದೆಯಂತೆ! ಅಕ್ಕಣಿಗೆ ಏನೋ ದೂರದ ಆಶಾಕಿರಣ ಹೊಳೆದಂತಾಯಿತು. ಬೆಳಿಗ್ಗೆ ಮುಂಚೆ ಎದ್ದು ಒಡೆಯರಲ್ಲಿ ಓಡಿ ಹೇಳಿಕೊಳ್ಳುತ್ತೇನೆ ಎಂದು ಮನಸ್ಸಿಗೆ ಧೈರ್ಯ ಮತ್ತು ಸಮಾಧಾನ ತಂದುಕೊಂಡು ಮಲಗಿದಳು.

ಆದರೆ ಬೆಳಿಗ್ಗೆ?

ತಾನು ಊಹಿಸಿದ್ದೆ ಒಂದಾಗಿತ್ತು; ವಿಧಿ ವ್ಯೂಹಿಸಿದ್ದು ಬೇರೊಂದಾಗಿತ್ತು.

ಅಕ್ಕಣಿ ತನ್ನ ಬಿಡಾರದಲ್ಲಿ ಗಂಜಿ ಬೇಯಿಸುತ್ತಿದ್ದಾಗ ಹಿರಿಯ ಮಕ್ಕಳಿಬ್ಬರೂ ಐತನ ಬಿಡಾರದಿಂದ ಓಡಿ ಬಂದರು. ಎಷ್ಟು ನೂಕಿದರೂ ಎಬ್ಬಿಸಿದರೂ ಕಿರಿಯ ಮಗು ಏಳುವುದಿಲ್ಲ ಎಂದು ಗಾಬರಿಯಿಂದಲೆ ಹೇಳಿದರು. ಅಕ್ಕಣಿ ದಿಗಿಲುಬಿದ್ದು ಓಡಿ ನೋಡಿದಾಗ ಅದು ಸತ್ತುಹೋಗಿತ್ತು.

ರೋದನದ ಬೊಬ್ಬೆ ಕೇಳಿ ನೆರೆಯ ಬಿಡಾರಗಳಿಂದ ಜನರು ಓಡಿ ಬಂದರು. ಚೇಂಕ್ರ ಒದ್ದ ಆಘಾತಕ್ಕೆ ಮಗು ಪ್ರಾಣ ಬಿಟ್ಟಿದೆ ಎಂದು ಅವನನ್ನು ಶಪಿಸಿದರು. ಕೋಣೂರು ಮನೆಗೆ ಹೋಗಿ ರಂಗಪ್ಪಗೌಡರಿಗೂ ಸುದ್ದಿಕೊಟ್ಟರು. ಅವರ ಹೇಳಿಕೆಯ ಮೇರೆಗೆ ಮಧ್ಯಾಹ್ನದವರೆಗೂ ಸೇರೆಗಾರನ ಆಗಮನವನ್ನು ನಿರೀಕ್ಷಿಸಿದರು. ಮರುದಿನ ಬೆಳಿಗ್ಗೆಯೆ ಬಂದು ಮಕ್ಕಳನ್ನು ಒಯ್ಯುತ್ತೇನೆ ಎಂದಿದ್ದ ಅವನು ಸಂಜೆಯವರೆಗೆ ಕಾದರೂ ಕಾಣಿಸಿಕೊಳ್ಳಲಿಲ್ಲ. ಅಕ್ಕಣಿ, ಬಾಗಿ ಮೊಡಂಕಿಲರ ಸಹಾಯದಿಂದ, ದೇಯಿಯನ್ನು ಹೂಳಿದ್ದ ಜಾಗದ ಪಕ್ಕದಲ್ಲಿಯೆ ಗುಂಡಿ ತೋಡಿ, ಮಗುವನ್ನು ಮಣ್ಣು ಮಾಡಿ ಬಂದಳು.

ಚೇಂಕ್ರನಂತೂ ಕೋಣೂರಿನ ಕಡೆಗೆ ಮುಖ ಹಾಕಲೆ ಇಲ್ಲ. ಅವನು ಮಕ್ಕಳನ್ನು ಕರೆದುಕೊಂಡು ಹೋಗುತ್ತಾನೆ ಎಂದು ಹೆದರಿದ್ದ ಅಕ್ಕಣಿಗೆ ಸ್ವಲ್ಪ ಧೈರ್ಯವಾಯಿತು. ಆದರೂ, ಇಂದಲ್ಲದಿದ್ದರೆ ನಾಳೆ, ಯಾವತ್ತಾದರೂ ಅವನಿಂದ ಪೀಡೆ ಒದಗಬಹುದೆಂದು ಆಶಂಕಿಸಿದ ಅಕ್ಕಣಿ, ತನ್ನ ಮೊದಲಿನ ಸಂಕಲ್ಪದಂತೆ, ಮನೆಗೆ ಹೋಗಿ ಕಾಗಿನಹಳ್ಳಿ ಅಮ್ಮನ ಹತ್ತಿರ ತನ್ನ ಗೋಳನ್ನು ತೋಡಿಕೊಂಡು, ಚೇಂಕ್ರನಿಂದ ತನ್ನನ್ನೂ ಮಕ್ಕಳನ್ನೂ ರಕ್ಷಿಸಬೇಕೆಂದು

ಬೇಡಿಕೊಂಡಳು. ದಾನಮ್ಮ ಹೆಗ್ಗಡಿತಿಯವರು ಮಗನಿಗೆ ನಡೆದ ಸಂಗತಿಯನ್ನೆಲ್ಲಾ ತಿಳಿಸಿ, ಅವಳನ್ನು ಮನೆಗೆಲಸಕ್ಕೆ ಹಾಕಿಕೊಂಡು ಸೆಗಣಿ ಬಾಚುವುದು, ಮುರು ಬೇಯಿಸಿ ಕರೆಯುವ ಎಮ್ಮೆ ದನಗಳಿಗೆ ಇಡುವುದು ಮೊದಲಾದ ಕೊಟ್ಟಿಗೆಯ ಮತ್ತು ಬಚ್ಚಲು ಕೊಟ್ಟಿಗೆಯ ಹೊರಗೆಲಸಕ್ಕೆ ನೇಮಿಸಿಕೊಳ್ಳಬಹುದೆಂದು ಸಲಹೆ ಮಾಡಿದರು. ಬಾಣಂತಿಯಾಗಿದ್ದ ಸೊಸೆ ತವರುಮನೆಗೆ ಹೋಗಿದ್ದು, ಅಲ್ಲಿಯ ಲಗ್ನ ತೀರಿಸಿಕೊಂಡು ಹಿಂತಿರುಗುವುದು ಬಹಳ ಕಾಲವಾಗಬಹುದಾದ್ದರಿಂದ ತನಗೂ ಕೆಲಸ ನಿರ್ವಹಿಸುವುದಕ್ಕೆ ಅನುಕೂಲವಾಗುತ್ತದೆ ಎಂಬುದು ಅವರ ಅಭಿಪ್ರಾಯವಾಗಿತ್ತು.

ರಂಗಪ್ಪಗೌಡರು ತಾಯಿಯ ಸಲಹೆಯನ್ನು ಒಪ್ಪಿಕೊಳ್ಳಲು ಮೊದಮೊದಲು ಸ್ವಲ್ಪ ಹಿಂದುಮುಂದು ನೋಡಿದರು, ಗದ್ದೆ ಕೆಲಸದ ಆಳುಗಳನ್ನು ಮನೆಗೆಲಸಕ್ಕೆ ಹಾಕಿಕೊಂಡರೆ ಮುಖ್ಯವಾಗಿ ಬೇಗನೆ ನಡೆಯಬೇಕಾಗಿದ್ದ ಆ ಕೆಲಸಕ್ಕೆ ತೊಂದರೆಯಾಗುತ್ತದೆ, ಈಗ ಮುಕುಂದನೂ ಹೂವಳ್ಳಿ ಸೇರಿ ಬಿಟ್ಟಿರುವುದರಿಂದ ಎಂದು. ಆದರೆ ಅವರು, ಎರಡು ಕೃಶಜೀವಿಗಳಾಗಿದ್ದ ಮಕ್ಕಳೊಡನೆ, ತಮ್ಮ ಮುಂದೆ ಅಂಗಲಾಚುತ್ತಾ ತುಸು ನಾಚುತ್ತಾ ನಿಂತಿದ್ದ ಪ್ರಾಯದ ಹೆಂಗಸನ್ನು ಹತ್ತಿರದಿಂದಲೆ ಕಂಡಮೇಲೆ, ಮನಸ್ಸು ಕರಗಿದಂತಾಗಿ, ಒಪ್ಪಿಕೊಂಡರು: 'ಹೌದು, ಅವ್ವ ಹೇಳಿದ್ದೂ ನಿಜವೆ. ನನ್ನ ಹೆಂಡತಿ ಅವಳ ತಮ್ಮ ಹಳೆಮನೆ ತಿಮ್ಮಪ್ಪ ಹೆಗ್ಗಡೆಯ ಮತ್ತು ಅವಳ ತಂಗಿ ಮಂಜಮ್ಮನ ಮದುವೆ ಮುಗಿಸಿಕೊಂಡು ತವರಿನಿಂದ ಹಿಂದಿರುಗುವುದು ಇನ್ನೆಷ್ಟು ತಿಂಗಳೋ? ಹೆಂಡತಿ ಹೆರುವುದಕ್ಕೆ ಮುಂಚೆಯೂ, ಹಲವು ತಿಂಗಳಿಂದ ದೂರವಾಗಿಯೆ ಇದ್ದಳು. ಏನೋ ಪಥ್ಯವಂತೆ! ಏನೋ ಕಾಯಿಲೆಯಂತೆ! ಈ ಹೆಂಗಸರದ್ದು ಯಾವಾಗಲೂ ಇದ್ದೇ ಇರುತ್ತದೆ. ಗಂಡಸಿನ ತೊಂದರೆ ಅವರಿಗೆ ಗೊತ್ತಾಗುವುದು ಹೇಗೆ? ಅದರಲ್ಲಿಯೂ ದೃಢಕಾಯನಾಗಿ ಯೌವನದಲ್ಲಿರುವ ನನ್ನಂಥ ಗಂಡಸಿನ ತೊಂದರೆ?….' ಅಕ್ಕಣಿಯನ್ನು ದಿಟ್ಟಿಸುತ್ತಾ 'ಇವಳು ಪವಾ ಇಲ್ಲ!' -ಗೌಡರ ಮನೆಗೆ ಹೆಗ್ಗಡಿ ತಮ್ಮನವರೆಡೆಗೆ ಹೋಗುತ್ತೇನಲ್ಲಾ ಎಂದು ಅಕ್ಕಣಿ ಎಂದು ಒಳ್ಳೆ ಸೀರೆ ಉಟ್ಟಿದ್ದಳು. ಅದನ್ನು ಗಮನಿಸುತ್ತಾ 'ಅಂಥ ಕಳಪೆಯಾಗಿ ಕಾಣುತ್ತಿಲ್ಲ! ಅದರಲ್ಲಿಯೂ ಗಂಡ ಸತ್ತವಳು. ಮೈ ತುಂಬಿಕೊಂಡು ಲಕ್ಷಣವಾಗಿಯೂ ಇದ್ದಾಳೆ…. ಆದರೆ…. ಅಂವ ಮೂಳ!…. ನನ್ನ ವಿಚಾರವೇ ಬೇರೆ! ನಾನು ಕರೆದರೆ ಎಂದಾದರೂ ಒಲ್ಲೆ ಎನ್ನುತ್ತಾಳೆಯೆ? ದಮ್ಮಯ್ಯ ಅಂತಾನೆ ಬರ್ತಾಳೆ!….' ರಂಗಪ್ಪಗೌಡರ ಮನಸ್ಸು ನಕ್ಷತ್ರವಿಹಾರಿಯಾಗಿತ್ತು.

ಮಗ ಏನೋ ವ್ಯಾವಹಾರಿಕವಾದ ಜಟಿಲವಾದ ದೀರ್ಘ ಆಲೋಚನೆಯಲ್ಲಿದ್ದಾನೆ, ತನ್ನ ನಿರ್ಣಯ ಹೇಳುವ ಮುನ್ನ, ಎಂದು ಭಾವಿಸಿ ಎದುರು ನಿಂತಿದ್ದು, ಅವನ ಮುಖವನ್ನೆ ನೋಡುತ್ತಿದ್ದ ತಾಯಿ ದಾನಮ್ಮ ಹೆಗ್ಗಡಿತಿಯವರಿಗೆ ರಂಗಪ್ಪಗೌಡರೆಂದರು: "ಆಗಲಿ, ಅವ್ವಾ. ಬಂದಿರಾಕೆ ಹೇಳು, ಮಕ್ಕಳ ಜೊತೇಲಿ…. ಆ ಉಂಡಾಡಿ ಲೌಡಿಮಗ ಚೇಂಕ್ರ ಬಂದ್ರೆ ನಾ ನೋಡಿಕೊಳ್ತಿನಿ. ಕೊಡಬೇಕಾದ ಸಾಲಾನೂ ತೀರಿಸದೆ, ಸಿಕ್ಕಿಸಿಕ್ಕಿದ ಹೆಂಗಸರ ಮೇಲೆಲ್ಲ ಕೈಮಾಡ್ತಾ ಸೊಕ್ಕಿ ಮೆರೀತಿದಾನೆ ಆ ಸೂಳೇಮಗ…. ಮತ್ತೆ ಹಿತ್ತಲ ಕಡೆಗೆಲ್ಲಾದ್ರೂ ಸೇರಿಸೀಯಾ ಈ ಹಸಲೋರ ಹೆಂಗಸ್ರನ್ನ?…. ಇಲ್ಲೇ ಮುಂಚೆಕಡೆ ಆ ಕೆಳಗರಡಿ ಮೂಲೇಲಿ, ಮುರಿನ ಒಲೆ ಹತ್ರ ಆಚೆ ಕಡೇಲಿ, ಮಲಗಾದೂ ಏಳಾದೂ ಮಾಡಿಕೊಂಡಿರ್ಲಿ. ಎಷ್ಟು ಸಾಮಾನು ಬೇಕೋ ಅಷ್ಟೇ ತಂದುಕೊಳ್ಳಲಿ. ಮತ್ತೆ ಬಿಡಾರಾನೆಲ್ಲ ಹೊತ್ತುಕೊಂಡು ಬಂದಾಳು?…."

ಗೌಡರು ಎಷ್ಟು ಒಳ್ಳೆಯವರು? ಏನು ದಯೆ? ಕಷ್ಟದಲ್ಲಿರುವವರನ್ನು ಕಂಡರೆ ಎಂಥಾ ಕರುಣೆ? ನಾನು ಬದುಕಿದೆ. ಮಕ್ಕಳೂ ಬದುಕಿದವು-ಎಂದುಕೊಂಡ ಅಕ್ಕಣಿಗೆ ರಂಗಪ್ಪಗೌಡರ ಹೊರ ಆಕಾರವೂ ಪೂಜ್ಯವಾಗಿ ತೋರಿ, ಕೃತಜ್ಞತೆಗೆ ಬಾಗಿಬಿಟ್ಟಳು, ಶರಣು ಹೋಗುವವರಂತೆ.

* * *

## ೬೧

ಕರ್ಮೀನ್‌ಸಾಬ್ರು ಚೇಂಕ್ರ ತನಗೆ ಸಿಕ್ಕಿದ್ದು ಎಂದು ಹೇಳಿ ತಂದು ಅಡವಿಟ್ಟಿದ್ದ ಹರಳುಂಗುರವನ್ನೇನೊ ಲಬಟಾಯಿಸಿಯೆ ಬಿಟ್ಟರು, ವಂಚನೆಗೆ ಸರಿದೂಗುವ ಚುರುಕು ಬುದ್ಧಿಯಿಲ್ಲದೆ ಬರಿಯ ಜಂಬಗಾರನಾಗಿದ್ದ ಸೇರೆಗಾರನಿಗೆ ಬ್ರಾಂದಿ, ಸ್ವಾರ್ಲುಮೀನು, ಉಪ್ಪು, ಹೊಗೆಸೊಪ್ಪು, ಮೆಣಸಿನಕಾಯಿ, ತೆಂಗಿನಕಾಯಿ, ಪಂಚೆ, ಭಂಗಿ ಇತ್ಯಾದಿ ಸುಳ್ಳು-ಪೊಳ್ಳು ಲೆಖ್ಖ ತೋರಿಸಿ! ತನಗೂ ಲೆಖ್ಖ ಬರುತ್ತದೆ ಎಂದು ತೋರಿಸಿಕೊಳ್ಳಲು ಚೇಂಕ್ರ ಸೇರೆಗಾರ ಕೇಳಿದ ಪ್ರಶ್ನೆಗಳಿಗೆ ಸಾಬ್ರು ಎಂಥೆಂಥ ಜಟಿಲ ಉತ್ತರ ಕೊಡುತ್ತಿದ್ದರು. ಎಂದರೆ ಅವುಗಳ ವಿದ್ವತ್ತಿಗೇ ಚೇಂಕ್ರ ತಗರುಬಿಗುರಾಗಿ, ಮಾರುಹೋಗಿ, ತನಗೆ ಅವು ಅರ್ಥವಾಗಲಿಲ್ಲ ಎಂದರೆ ತನ್ನ ಬೆಪ್ಪಲ್ಲಿ ಬಯಲಾಗುತ್ತದೆಯೋ ಎಂದು ಅಂಜಿ, ಬೆಪ್ಪು ನಗೆ ನಗುತ್ತಾ "ಬರಾಬರಿ, ಸಾಬ್ರೆ, ಬರಾಬರಿ!" ಎಂದು ತಾನು ಕೇಳಿದ್ದ ಯಾವುದೋ ವ್ಯಾಪಾರಗಾರರ ಮಾತಿನ ತನಗರ್ಥವಾಗದ ಪರಿಭಾಷೆಯನ್ನು ಪ್ರಯೋಗಿಸಿ ಒಪ್ಪಿಗೆ ಕೊಟಿದ್ದನು, ವಾಣಿಜ್ಯ ವಿಷಯದಲ್ಲಿಯೂ ಸಾಬರಿಗೆ ಬಿಟ್ಟುಕೊಡಲಿಲ್ಲ ಎಂದು ಹೆಮ್ಮೆಪಟ್ಟುಕೊಂಡು!.

ಆದರೂ, ಕರೀಂ ಸಾಬುಗೆ ಆ ಉಂಗುರ ಸೇರೆಗಾರನಿಂದ ದಕ್ಕಿದ್ದರೂ ಅದನ್ನು ದೈವದಿಂದ ದಕ್ಕಿಸಿಕೊಳ್ಳುವಷ್ಟು ಧೈರ್ಯವಿರಲಿಲ್ಲ. ಆ ಉಂಗುರ ತಾನೆ ಬೆಟ್ಟಳ್ಳಿ ಕಲ್ಲಯ್ಯಗೌಡರಿಗೆ ಮಾರಿದ್ದು ಎಂದು ಗುರುತಿಸಿದೊಡನೆ ಅವನಿಗೆ ಏನೋ ದುಃಶಕುನ ಭೀತಿಯುಂಟಾಗಿತ್ತು. ಆ ಉಂಗುರ ಯಾರದ್ದಾಗಿರುತ್ತದೆಯೆ ಅವರಿಗೆ ಕ್ಷೇಮವಿಲ್ಲ ಎಂಬ ಭಾವನೆ ಮೂಡಿತ್ತು. ಆ ಉಂಗುರವನ್ನು ತೊಟ್ಟಿದ್ದರಿಂದಲ್ಲವೆ ಅದನ್ನಿಟ್ಟು ಕೊಂಡಿದ್ದ ಅಕ್ಕಸಾಲಿ ದಂಪತಿಗಳು, ಒಬ್ಬನು ಖುನಿಯಾಗಿಯೂ ಒಬ್ಬಳು ಅಬ್ಬರಿಗೆ ಹಾರಿಯೂ, ದುರ್ಗತಿಯನ್ನಪ್ಪಿದ್ದು? ಆ ಉಂಗುರ ತನ್ನ ಕೈಸೇರಿದ್ದಾಗಲೆ ತನಗೂ ತನ್ನ ಸಂಸಾರಕ್ಕೂ ಒಂದಾದ ಮೇಲೊಂದು ಸಾವು ನೋವು ಕಷ್ಟ ಸಂಕಟ ರೋಗ ರುಜೆ ಉಂಟಾದದ್ದು? ಅದನ್ನು ಬೆಟ್ಟಳ್ಳಿ ಕಲ್ಲಯ್ಯಗೌಡರಿಗೆ ದಾಟಿಸಿದ ಮೇಲೆ ಅವರಿಗೂ ಮುಜುಗರ ಹಿಡಿದದ್ದು? ಅವರ ಮಗ ಪೋಲಿಬಿದ್ದುದ್ದು? ಕಿಲಸ್ತರ ಸಹವಾಸಕ್ಕೆ ಸಿಕ್ಕಿ ಜಾತಿ ಕೆಡಲು ಹವಣಿಸಿದ್ದು? ಅವರ ಸೊಸೆಯ ಅಕ್ಕನಿಗೆ, ಗಂಡ ತಿರುಪತಿಗೆ ಹೋದವನು ಹಿಂದಕ್ಕೆ ಬರದೆ, ಹುಚ್ಚು ಹಿಡಿದದ್ದು? ಕರೀಮ್ ಸಾಬಿ ಆಲೋಚಿಸಿದಂತೆಲ್ಲ ಅವನ ಸಿದ್ಧಾಂತಕ್ಕೆ ಹೆಚ್ಚು ಹೆಚ್ಚು ಪುಷ್ಟಿ ದೊರಕಿತು. ಆ ಉಂಗುರವನ್ನು ಬೇಗನೆ ಬೇರೆ ಯಾರಿಗಾದರೂ ಮಾರಿ, 'ಮಾರಿ-ದಾಟಿಸಿ' ಬಿಡಬೇಕೆಂದು ನಿಶ್ಚಯಿಸಿದನು. ಆ ಊಂಗುರ ಮತ್ತೆ ತನ್ನಲ್ಲಿಗೆ ಬಂದ ದಿನವೇ ಅಲ್ಲವೆ, ಸಿಂಬಾವಿಯಲ್ಲಿ ತನಗೆ ಕಷ್ಟ ಪ್ರಾರಂಭವಾದದ್ದು? ಗುತ್ತಿ ಯ ಕೈಲಿ ಇಜಾರದ ಸಾಬಿ ಕಡಿಸಿಕೊಂಡದ್ದು? ರಾತ್ರಾ ರಾತ್ರಿ ಆ ಮಳೆಯಲ್ಲಿ, ದುರ್ಗಮ, ಬೆಟ್ಟಗುಡ್ಡ ಕಾಡುಗಳಲ್ಲಿ, ರಕ್ತ ಸೋರುತ್ತಿದ್ದ ಇಜಾರದ ಸಾಬಿಯನ್ನು ಬಹುಕಷ್ಟದಿಂದ

ಕುದುರೆಯಮೇಲೆ ಸಾಗಿಸಿ ತಂದದ್ದು? ತೀರ್ಥಹಳ್ಳಿಯ ಆಸ್ಪತ್ರೆಗೆ ಸೇರಿಸಲು ಅವನನ್ನು ಕೊಂಡೊಯ್ಯುವುದೇ ಒಂದು ಹರಮಹಾಕಾಲವಾಯಿತಲ್ಲ? ಮತ್ತೆ, ಆ ಪೋಲೀಸಿನವರು, ಆ ಅಮಲ್ದಾರರು, ಆ ಇನಿಸ್ಪೆಕ್ಟರ್ ಇವರಿಂದ ಒದಗಿದ್ದ ಗೋಳೋ ಅಷ್ಟಿಷ್ಟಲ್ಲ! ಅಂತೂ ಆ ಪುಂಡುಮುಂಡೇಗೌಡ ಬದ್ಮಾಷ್ ಹೇಗೋ ಗುಣವಾಗಿ ಹೊನ್ನಾಳಿಗೆ ಅವನೂರಿಗೆ ತೊಲಗಿದ್ದೆ ನಾನು ಬಚವಾದೆ!…. ಈ ಉಂಗುರ ನನ್ನಲ್ಲಿದ್ದರೆ ನನಗೆ ಕೇಡು ತಪ್ಪಿದ್ದಲ್ಲ….ಮಾರುವುದಾದರೂ ಸರಿಯಾದ ಈಗಿನ ಬೆಲೆಗೇ ಮಾರಬೇಕು…. ಸಾಹುಕಾರ ಕಲ್ಲೂರು ಮಂಜಭಟ್ಟರು, ಹೇಲಿನಲ್ಲಿ ಕಾಸು ಹೆಕ್ಕುವವರು, ಅವರು ಅರ್ಥ ಬೆಲೆಗೂ ಕೊಳ್ಳುವುದಿಲ್ಲ; ಕೊಂಡರೆ ಕೊಳ್ಳಬೇಕು ಬೆಟ್ಟಳ್ಳಿ ಸಾಹುಕಾರರು. ಆದರೆ….ಮತ್ತೆ ನಾನೇ ಈ ಉಂಗುರವನ್ನು ಕಲ್ಲಯ್ಯಗೌಡರ ಹತ್ತಿರ ಕೊಂಡೊಯ್ದರೆ, ಗುರುತು ಸಿಕ್ಕಿ, ಮತ್ತೆ ಹೊಸ ಕಷ್ಟಕ್ಕೆ ಸಿಕ್ಕಿಕೊಳ್ಳುವುದೇ ನಿಜ! ಈ ಉಂಗುರದಿಂದ ಆಗುವ ಕೇಡನ್ನು ತಪ್ಪಿಸಿಕೊಳ್ಳುವುದಕ್ಕೆ ಹೋಗಿ, ಮತ್ತೊಂದು ತಿಗಲಿಗೆ ಖಂಡಿತಾ ಸಿಕ್ಕಿಕೊಳ್ಳುತ್ತೇನೆ…. ನಾನು ಹೋಗುವುದಿಲ್ಲ ನನ್ನ ತಮ್ಮ ಇದನ್ನೆಲ್ಲ ನಂಬುವುದಿಲ್ಲ. ಬಹಳ ಉಡಾಫಿ. ಅವನನ್ನೆ ಕಳಿಸುತ್ತೇನೆ….

ಕೆಂಪುಗೀಟಿನ ಲುಂಗಿಯುಟ್ಟು, ನೀಲಿ ಬಣ್ಣದ ಉದ್ದ ಬನೀನು ತೊಟ್ಟು, ತಲೆಗೆ ಬಣ್ಣದ ರೇಷ್ಮೆ ವಸ್ತ್ರ ಸುತ್ತಿದ್ದ ಕುಡಿ ಮೀಸೆಯ ಪುಡಿಸಾಬು ಬೆಟ್ಟಳ್ಳೀಗೆ ಹೋಗಿಕಲ್ಲಯ್ಯಗೌಡರನ್ನು ಕಂಡು ಸಾಲಾಮು ಮಾಡಿದಾಗ ಅವರು ಸ್ವಲ್ಪ ಡಂಗುಬಡಿದವರಾಗಿ, ಪಕ್ಕನೆ ಗುರುತುಹಿಡಿಯಲಾರದೆ, ಬಹುವಚನದಲ್ಲಿ ಗೌರವದಿಂದ ಸ್ವಾಗತಿಸಿದರು; “ಬನ್ನಿ ಸಾಹೇಬರೆ…. ಮೇಲಕ್ಕೆ ಬನ್ನಿ, ಪರ್ವಾ ಇಲ್ಲ;…. ಅಲ್ಲಿ ಯಾಕೆ ತಣೆಯ ಮೇಲೆ ಕೂರುತ್ತೀರಿ? ಜಗಲಿಗೇ ಬನ್ನಿ; ಪರ್ವಾ ಇಲ್ಲ.”

ಪುಡಿಸಾಬಿಗೆ ತಕ್ಷಣ ಗೊತ್ತಾಯ್ತು ವಯೋಧರ್ಮದಿಂದ ದೃಷ್ಟಿ ಮಂದವಾಗಿದ್ದ ಗೌಡರು ತನ್ನನ್ನು ಈ ಷೋಕಿಯ ವೇಷದಲ್ಲಿ ಗುರುತಿಸಲಾರದೆ ಹೋಗಿದ್ದಾರೆ ಎಂದು. ಅವರು ಮೇಲಕ್ಕೆ ಬರಹೇಳಿದರೂ ಅವನು ಜಗಲಿಗೆ ಹತ್ತಲಿಲ್ಲ.!

“ನಾನು, ಸ್ವಾಮಿ, ಮೇಗರವಳ್ಳಿ ಕರೀಮ್ ಸಾಬರ ತಮ್ಮ” ದೇಶಾವರದ ನಗೆ ನಕ್ಕನು.

“ಓಹೋ! ಪುಡಿ ಸಾಬನೇನೊ? ನನಗೆ ಗುರುತೇ ಸಿಗಲಿಲ್ಲ. ನನ್ನ ಕಣ್ಣು ಬೇರೆ ಇತ್ತಿತ್ತಲಾಗಿ ಮಬ್ಬಾಗ್ತಾ ಅದೆ…. ಕೂತುಗೋ, ಕೂತುಗೋ. ಏನು ಬಂದಿದ್ದು?” ಗುರುತಿಸಿದೊಡನೆ ಕರೀಮ್ ಸಾಬಿಯ ತಮ್ಮನಿಗೆ ಅರ್ಹವಾಗುವ ರೀತಿಯಲ್ಲಿ ತಮ್ಮ ಧ್ವನಿ ಬದಲಾಯಿಸಿದ್ದರು ಗೌಡರು….

ವಿಷಯ ತಿಳಿಸಿ, ಹರಳುಂಗುರವನ್ನು ಜೇಬಿನಿಂದ ತೆಗೆದು ತುಂಬ ಧೂರ್ತಸಹಜ ವಿನಯದಿಂದ ಬಾಗಿ, ತನ್ನ ಎಡಗೈಯನ್ನು ಬಲಗೈಯ ಕುಣಿಕೆಗೆ ಮುಟ್ಟಿಸಿಕೊಂಡು, ಬಲಗೈಯಲ್ಲಿ ಹಿಡಿದಿದ್ದ ಉಂಗುರವನ್ನು ಗೌಡರ ಕೈಗೆ ಇಳಿಬಿಟ್ಟನು.

ಕಲ್ಲಯ್ಯಗೌಡರು ಉಂಗುರವನ್ನು ಅತ್ತ ಇತ್ತ ತಿರುಗಿಸಿ, ಪರೀಕ್ಷಕನ ಗತ್ತಿನಿಂದ, ಸ್ವಲ್ಪ ಹೆಚ್ಚೆ ಎನ್ನಬಹುದಾದಷ್ಟು ಹೊತ್ತು ಪರಿಶೀಲಿಸಿದರು. ಪುಡಿಸಾಬಿಯ ಅಣ್ಣ ಕರ್ಮೀನ್ ಸಾಬಿ ಕೆಲವು ವರ್ಷಗಳ ಹಿಂದೆ ತಮಗೆ ಮಾರಿದ್ದ ಇಂಥಾದ್ದೆ ಒಂದು ಹರಳುಂಗುರದ ನೆನಪಾಗಿ, ಇದನ್ನೂ ಅದನ್ನೂ ಮನಸ್ಸಿನಲ್ಲಿಯೆ ಹೋಲಿಸುವಂತೆ ಮತ್ತೂ ಸ್ವಲ್ಪ

ಕಾಲ ಸಮೀಕ್ಷಿಸಿದರು, ಬೆಲೆ ವಿಚಾರಿಸಿದರು. ಪುಡಿಸಾಬಿ ಹೇಳುತ್ತಿರುವ ಬೆಲೆ ತುಂಬ ಹೆಚ್ಚಾಯ್ತು ಎಂದುಕೊಂಡರು. (ಪುಡಿಸಾಬಿ ತನ್ನ ಅಣ್ಣ ಮಾರಲು ಹೇಳಿದ್ದ ಕರೀದಿಗಿಂತಲೂ ಒಂದೂವರೆಯಷ್ಟು ಜಾಸ್ತಿ ಹೇಳಿದ್ದನು. ಅವನು ತನ್ನ ಖಾಸಗಿ ಖರ್ಚಿಗೆ ಹಣ ಸಂಪಾದನೆ ಮಾಡಬೇಡವೇ)

ಗೌಡರು ಇದ್ದಕ್ಕಿದ್ದ ಹಾಗೆ ತಮ್ಮ ಮಗನ ಹೆಸರು ಹಿಡಿದು ಕೂಡರು. ಬಳಿಗೆ ಬಂದು ನಿಂತ ದೇವಯ್ಯಗೆ ಒರೆಗಲ್ಲು ತರಲು ಹೇಳಿದರು. ಒರೆಗಲ್ಲಿಗೆ ಉಂಗುರವನ್ನು ತಿಕ್ಕಿ ಒರೆಹಚ್ಚಿದರು. “ಬರೀ ಬೆಟ್ಟೆ ಬಂಗಾರ ಕಂಡಂಗೆ ಕಾಣ್ತದೆ!” ಎಂದುಕೊಂಡು ಮಗನತ್ತ ತಿರುಗಿ “ಒಂದು ಕೆಲಸ ಮಾಡ್ತೀಯಾ, ದೇವು? ಇವನಣ್ಣ ಹಿಂದೆ ಒಂದು ಉಂಗುರ ಕೊಟ್ಟಿದ್ದನಲ್ಲಾ?…. ಅದೇ, ನಿನಗೆ ಕೊಟ್ಟ ಉಂಗರಾನೋ!….ಇಂಥಾದ್ದೇ ಹರಳುಂಗುರ! ಅದನ್ನ ತಗೊಂಡು ಬಾ, ಒರೆಹಚ್ಚಿ ನೋಡಾನ” ಎಂದರು.

ದೇವಯ್ಯ ಪಿತೃ ಆಜ್ಞಾ ಪರಿಪಾಲನಾ ಆತುರನೆಂಬಂತೆ ತನ್ನ ಮಲಗುವ ಕೋಣೆಯ ಕಡೆಗೆ ಬಿರುಬಿರನೆ ನಡೆದು ಕಣ್ಮರೆಯಾದನು. ಬಹಳ ಹೊತ್ತಾದರೂ ಹೊರಗೆ ಬರಲಿಲ್ಲ. “ಎಲ್ಲಿಯೋ ಮರೆತಿಟ್ಟು ಊಂಗುರವನ್ನು ಹುಡುಕುತ್ತಿದ್ದಾನೆ; ಈಗಿನ ಹುಡಗರ ಹಣೆಬರಹವೇ ಹೀಂಗೆ” ಎಂದುಕೊಂಡು ಗೌಡರು, ಪುಡಿಸಾಬಿಯೊಡನೆ ಇಜಾರದ ಸಾಬಿಯ ವಿಚಾರವಾಗಿಯೂ ಮಿಶನ್ ಇಸ್ಕೂಲಿನ ಕಟ್ಟದದ ವಿಚಾರವಾಗಿಯೂ ಇನ್ನೂ ಮನಸ್ಸಿಗೆ ಹೊಳೆಹೊಳೆದಂತೆ ಅನೇಕ ವಿಷಯಗಳನ್ನೂ ಕುರಿತು ಲೋಕಾಭಿರಾಮವಾಗಿ ಮಾತಾಡತೊಡಗಿದರು.

ತನ್ನ ಅಪ್ಪಯ್ಯ ಉಂಗುರದ ವಿಷಯ ಎತ್ತಿದೊಡನೆ ದೇವಯ್ಯನಿಗೆ ಎದೆ ಡವಗುಟ್ಟತೊಡಗಿತು. ಅದನ್ನು ತರಹೇಳಿದೊಡನೆ ಅವನಿಗೆ ಮೈಮೇಲೆ ಕುದಿನೀರು ಹೊಯ್ದಂತಾಗಿ, ತನ್ನ ಅಸ್ಥಿರತೆ ಗೋಚರವಾಗುವ ಮುನ್ನವೆ ಅಲ್ಲಿಂದ ಕಾಲು ಕಿತ್ತಿದ್ದನು. ತನ್ನ ಕೋಣೆಯಲ್ಲಿ ಮಂಚದ ಮೇಲೆ ಕುಳಿತುಕೊಂಡು ಚಿಂತಿಸತೊಡಗಿದನು.

ಹಾಳು ಆ ಉಂಗರ ತನ್ನಲ್ಲಿಯೂ ಇರಲಿಲ್ಲ, ತಾನು ಮೆಚ್ಚುಗೊಟ್ಟಿದ್ದ ಐಲು ಹುಡಗಿಯ ಕೈಯಲ್ಲಿಯೂ ಇದ್ದ ಹಾಗೆ ತೋರಲಿಲ್ಲ! ಎರಡು ಮೂರು ಸಾರಿ ಕಾವೇರಿಯನ್ನು ಸಂಧಿಸಿ, ಅವಳೊಡನೆ ಸರಸವಾಡಿ, ಉಂಗುರ ಎಲ್ಲಿ ಎಂದು ಕೇಳಿದಾಗಲೆಲ್ಲ ಏನಾದರೂ ಸಬೂಬು ಹೇಳಿ ತಪ್ಪಿಸಿಕೊಂಡಿದ್ದಳೂ. ಒಮ್ಮೆ ‘ಅಲ್ಲೆಲ್ಲಿಯೋ ಇಟ್ಟಿದ್ದೇನೆ, ಆಮೇಲೆ ತೋರಿಸುತ್ತೇನೆ.’ ಎಂದಿದ್ದಳು ಇನ್ನೊಮ್ಮೆ ‘ಅಬ್ಬೆ ಇಟ್ಟುಕೊಂಡಿದ್ದಾಳೆ. ನಾಳೆ ನಾಡಿದ್ದರ ಹಾಗೆ ಅವಳಿಂದ ಈಸಿಕೊಳ್ಳುತ್ತೇನೆ.’ ಎಂದಿದ್ದಳು ಮತ್ತೊಮ್ಮೆ ‘ಅಯ್ಯೋ ಮರತೇಹೊಯ್ತು. ಇನ್ನೊಂದು ಸಾರಿ ನೀವು ಬರುವಾಗ ಖಂಡಿತಾ ಹುಡುಕಿಟ್ಟಿರುತ್ತೇನೆ.’ ಎಂದು ಮೋಹಕವಾಗಿ ಕ್ಷಮೆ ಯಾಚಿಸಿದ್ದಳು. ದೇವಯ್ಯನಿಗೆ ಅವಳ ಮೇಲೆ ಸಂಶಯವೂ ಹುಟ್ಟಿತ್ತು. ಬೇರೆ ಇನ್ನಾರಿಗಾದರೂ ಕೊಟ್ಟಿರಬಹುದೇ ಎಂಬ ಸಂದೇಹಕ್ಕೆ ಒಳಗಾಗಿ, ಮಾತ್ಸರಕ್ಕೂ ತುತ್ತಾಗಿದ್ದನು. ಈಗ ಷೋಕಿಯಾಗಿ ಸುಪುಷ್ಟ ದೃಢ ಕಾಯನಾಗಿದ್ದ ಪುಡಿಸಬಿಯ ಕೈಯಲ್ಲಿದ್ದ ಹರಳುಂಗರ ಅದೇ ಆಗಿರಬಹುದೇ ಎಂಬ ಸಂಶಯವೂ ಅವನನ್ನು ಬಾಧಿಸತೊಡಗಿತ್ತು.

ತಂದೆ ಜಗಲಿಯಿಂದ ತನ್ನ ಹೆಸರು ಕೂಗಿದ್ದು ಕೇಳಿಸಿ, ದೇವಯ್ಯ ಸದ್ಯೋಪಾಯವೊಂದನ್ನು ನಿರ್ಣಯಿಸಿ, ತನ್ನ ಭಾವೋದ್ವೇಗದ ಕುರುಹು ಕಾಣಿಸದಂತೆ ಉಡುಗಿಸಲು ಪ್ರಯತ್ನಿಸುತ್ತಾ ಜಗಲಿಯ ನಡೆದನು. ಎಷ್ಟು ಹುಡುಕಿದರೂ ಸಿಕ್ಕಿರಲಿಲ್ಲವೆಂದೂ ತನ್ನ ಹೆಂಡತಿ ಹಳೆಮನೆಯ ಲಗ್ನಕ್ಕೆ ಹೋಗುವಾಗ ‘ಮೈಯಿಡಲು’ ಆ ಉಂಗುರವನ್ನು

ತೆಗೆದುಕೊಂಡು ಹೋಗಿರಬಹುದೆಂದೂ, ಅದಕ್ಕೆ ಬದಲಾಗಿ ಬೇರೆಯೊಂದನ್ನು ಏನಾದರೂ 'ಮೈಯಿಡಿಸಿ' ಅದನ್ನು ಹಿಂದಕ್ಕೆ ತರಿಸುತ್ತೇನೆಂದೂ ಹೇಳಿದನು. ಗೌಡರು "ಈಗಿನ ಕಾಲದ ಹುಡುಗರಿಗೆ ಹಿರಿಯರು, ಮನೆಯ ಯಜಮಾನರು ಅನ್ನುವುದೇನೂ ಇಲ್ಲ.... ಹೇಳುವುದಿಲ್ಲ, ಕೇಳುವುದಿಲ್ಲ, ಮನಸ್ಸಿಗೆ ಬಂದ ಹಾಗೆ ಮಾಡ್ತಾರೆ.... ನನಗೊಂದು ಮಾತು ತಿಳಿಸದೆ, ಅದನ್ನು ಮೈಯಿಡಾಕ ಕೊಟ್ಟೆ ಅಂತೀಯಲ್ಲಾ?" ಎಂದು ಗೊಣಗಿ, ಪುಡಿಸಾಬಿಗೆ "ಈಗ ಬ್ಯಾಡಕಣೋ, ತಂಗೊಂಡು ಹೋಗೋ. ಆ ಉಂಗುರ ಬಂದ ಮ್ಯಾಲೇ ನೋಡಾನ. ಭಾರಿ ದುಬಾರಿ ಬ್ಯಾರೆ ಕರೀದಿ ಹೇಳ್ತಿಯಾ. ಒರೇ ಹಚ್ಚಿದರೆ ಬರೀ ಬೆಟ್ಟೇ ಬಂಗಾರಧಾಂಗೆ ಕಾಣ್ತದೆ.... ಆ ಉಂಗುರ ಬರಲಿ; ಸರಿಯಾಗಿ ಓರೇ ಹಚ್ಚಿ ನೋಡಿ ಕರೀದಿ ಮಾಡಾದಾದ್ರೆ ಮಾಡನ." ಎಂದು ಹೇಳಿ ಕಳಿಸಿಬಿಟ್ಟರು.

ಪುಡಿಸಾಬಿ ಬೈಸಿಕಲ್ಲು ಹಕ್ಕಲನ್ನು ದಾಟಿ, (ದೇವಯ್ಯ ಉಪದೇಶಿ ಜೀವ ರತ್ನಯ್ಯನ ಗುರುತ್ವದಲ್ಲಿ ಬೈಸಿಕಲ್ಲಿನ ಅಭ್ಯಾಸಮಾಡಿದ್ದ ಆ ಸ್ಥಳಕ್ಕೆ ಜನ 'ಬೈಸಿಕಲ್ಲು ಹಕ್ಕಲು' ಎಂದೇ ನಾಮಕರಣ ಮಾಡಿದ್ದರು.) ಬೆಟ್ಟಳ್ಳಿಯ ಹೊಲೆಗೇರಿಗೆ ಅಗಚುತ್ತಿದ್ದ ಕಾಲು ದಾರಿಯ ಅರೆಕಲ್ಲಿನ ಕಾರೆಮಟ್ಟಿನ ಹತ್ತಿರಕ್ಕೆ ಬಂದಿದ್ದನು. (ಗುತ್ತಿ ಸಿಂಬಾವಿಯಿಂದ ಬೆಟ್ಟಳ್ಳಿ ಕೇರಿಯ ಅತ್ತೆಮನೆಗೆ ಬರುವಾಗಲೆಲ್ಲ ಅವನ ನಾಯಿ, ಹುಲಿಯ, ಕಾಲೆತ್ತಿ ಅಭಿಷೇಕ ಮಾಡುತ್ತಿದ್ದ ಕಾರೆಯ ಗುಜ್ಜುಪೊದೆ!) ಹಿಂದೆ ಬೈಸಿಕಲ್ಲು ಬೆಲ್ಲಿನ ಸದ್ದಾಯಿತು ಟೀ ಟ್ರೇಂ ಟ್ರೇಂ! ನಿಂತು ಹಿಂದಕ್ಕೆ ನೋಡುತ್ತಿದ್ದಂತೆ ದೇವಯ್ಯ ಬಳಿಸಾರಿ ಬೈಸಿಕಲ್ಲಿನಿಂದ ಇಳಿದನು.

ದೇವಯ್ಯ ಬೈಸಿಕಲ್ಲನ್ನು ಒಂದು ಮರಕ್ಕೆ ಒರಗಿಸಿಟ್ಟನು. 'ನಿನ್ನ ಹತ್ರ ಸ್ವಲ್ಪ ಮಾತಾಡುವುದಿದೆ.' ಎನ್ನುತ್ತಾ ಕಾರೆಮಟ್ಟಿನ ಬುಡದಲ್ಲಿ ಅರೆಕಲ್ಲಿನ ಮೇಲೆ ಕುಳಿತನು. ಪುಡಿಸಾಬಿಯೂ ತುಸುದೂರದಲ್ಲಿಯೆ ಗೌರವಪೂರ್ವಕವಾಗಿ ಕುಳಿತನು.

"ಎಲ್ಲಿ? ಆ ಉಂಗುರ ತೆಗೆ, ಸ್ವಲ್ಪ ನೋಡ್ತೀನಿ."

ದೇವಯ್ಯಗೌಡರು ತಮ್ಮ ತಂದೆಗೆ ತಿಳಿಯದಂತೆ ತಾವೇ ಉಂಗುರ ವಿಕ್ರಯ ಮಾಡಲು ಬಂದಿರಬೇಕು ಎಂದು ಭಾವಿಸಿ, ಕಳ್ಳವ್ಯಾಪಾರದಲ್ಲಿ ನಿಷ್ಣಾತನಾಗಿದ್ದ ಪುಡಿಸಾಬ ಉಂಗುರವನ್ನು ಹೊರತೆಗೆದು ದೇವಯ್ಯನ ಕೈಲಿಟ್ಟನು. ನೋಡುವುದೆ ತಡ, ದೇವಯ್ಯಗೆ ಆ ಉಂಗುರ ತಾನು ಕಾವೇರಿಯ ಬೆರಳಿಗೆ ತೊಡಿಸಿದ್ದುದೇ ಎಂಬುದು ಖಾತ್ರಿಯಾಯಿತು.

ಸದ್ಯಕ್ಕೆ ಇದು ನನ್ನ ಹತ್ತಿರ ಇರಲಿ, ಆಮೇಲೆ ಕೊಡುತ್ತೇನೆ. ದುಡ್ಡಾದರೆ ದುಡ್ಡು, ಉಂಗುರ ಆದರೆ ಉಂಗುರ. ದೇವಯ್ಯನೆಂದನು. ಭಾವತಿಶಯದಿಂದ ಲೆಂಬಂತೆ ಅವನು ಸ್ವಲ್ಪ ಜೋರಾಗಿಯೆ ಉಸಿರು ಎಳೆದು ಬಿಡತೊಡಗಿದ್ದನು.

"ಆಗುವುದಿಲ್ಲ, ಸ್ವಾಮಿ, ನನಗೆ ಕೊಟ್ಟವರು ನನ್ನನ್ನು ಸುಮ್ಮನೆ ಬಿಡುತ್ತಾರೆಯೆ?" ಕೈಮುಗಿದು ಹೇಳಿದನು ಪುಡಿಸಾಬು.

"ಯಾರು ಕೊಟ್ಟಿದ್ದೋ? ಎಲ್ಲಿತ್ತೋ ಇದು ನಿನಗೆ!" ದೇವಯ್ಯನ ದನಿ ಬಿಗಡಾಯಿಸಿತ್ತು.

"ಯಾರೊ ಕೊಟ್ಟರು. ಅದು ಯಾಕೆ ನಿಮಗೆ?" ಹುಸಿನಕ್ಕನು ಸಾಬಿ.

"ಗಂಡಸರೊ? ಹೆಂಗಸರೊ?"

"ಹೆಂಗಸರು ಅಂತಾನೆ ಇಟ್ಟುಕೊಳ್ಳಿ!" ಪುಡಿಸಾಬಿಗೆ ಚೇಂಕ್ರ ಅದು ತನಗೆ ಲಭಿಸಿದ್ದ ರೀತಿಯನ್ನು ಇಂಗಿತವಾಗಿ ತಿಳಿಸಿದ್ದನು. ಪುಸಿಸಾಬಿಗೂ ಗೊತ್ತಿತ್ತು. ದೇವಯ್ಯಗೌಡರು ಅಂತಕ್ಕನ ಮಗಳೊಡನೆ ಆಡುತ್ತಿದ್ದ ಸರಸದ ಸಂಗತಿ.

"ಇದೂ...ಕದ್ದ ಮಾಲು! ನೀನು ತೊಂದರೆಗೆ ಸಿಕ್ಕಿಕೊಳ್ಳುತ್ತೀಯ, ಪೋಲೀಸರ ಕೈಲಿ."

"ಪೋಲೀಸರು ನಮಗೂ ಗೊತ್ತು, ಸ್ವಾಮಿ, ನಿಮ್ಮೊಬ್ಬರಿಗೇ ಅಲ್ಲ...ಇದನ್ನು ನಾನೇನು ಕದ್ದು ತಂದದ್ದಲ್ಲ; ಇನಾಮು ಬಂದದ್ದು." ಹೇಳುತ್ತಾ ಇಂಗಿತವಾಗಿ ಹುಳಿನಗೆ ನಕ್ಕನು ಪುಡಿಸಾಬಿ, ದೇವಯ್ಯನ ಮುಖವನ್ನು ಮೂದಲಿಸುವಂತೆ ನೋಡುತ್ತಾ.

"ಯಾರೋ ನಿನಗೆ ಕೊಟ್ಟದ್ದು ಇನಾಮು? ಸುಳ್ಳು ಹೇಳ್ತಿಯಾ?"

"ಆಗಲೆ ಹೇಳಿದ್ದೇನಲ್ಲಾ!...."

ದೇವಯ್ಯ ತಟಕ್ಕನೆ ಮಾತು ನಿಲ್ಲಿಸಿ ಎದುರಿಗಿದ್ದ ಒಂದು ಮರಕ್ಕೆ ಅದರಲ್ಲಿ ಜೋಲಾಡುತ್ತದ್ದ ಹಸಿಕಾಯಿಯ ಬೀಜ ಬಿಡಿಸಿ ತಿನ್ನಲೆಂದು ಉಲಿಯುತ್ತಾ ಹಾರಿಬಂದು ಕುಳಿತು, ಎಲೆಹಸುರಿನಲ್ಲಿ ಮುಳುಗಿಹೋದ ಒಂದು ಗಿಣಿಹಿಂಡಿನ ಕಡೆಗೆ ಹುಡುಕಿನೋಡುವಂತೆ ಸ್ವಲ್ಪ ಹೊತ್ತು ನಿರ್ನಿಮೇಷನಾಗಿದ್ದನು. ಮತ್ತೆ ಉಂಗುರವನ್ನು ಸಾಬಿಯ ಕೈಗಿತ್ತು, ಸರಕ್ಕನೆ ಮರಕ್ಕೆ ಒರಗಿಸಿದ್ದ ಬೈಸಿಕಲ್ಲನ್ನು ಹಾದಿಗೆ ತಂದು, ಹತ್ತಿ ಹೊರಟೆ ಹೋದನು, ಗಿಡಮರ ಪೊದೆಯ ಕಾಡಿನಲ್ಲಿ ಮರೆಯಾಗಿ. ಆದರೆ ಸಾಬಿಯಲ್ಲಿ ಪ್ರಸುಪ್ತವಾಗಿದ್ದ ಪಶುರುಚಿಯೊಂದರ ಕೆರಳಿಕೆಗೆ ಕಾರಣವಾಗುವ ಆಲೋಚನಾ ತರಂಗಗಳನ್ನು ಎಬ್ಬಿಸಿ ಹೋಗಿದ್ದನಷ್ಟೆ!

ಪುಡಿಸಾಬಿ ಮೇಗರವಳ್ಳಿಗೆ ಹಿಂತಿರುಗಿದವನು ಆ ಉಂಗುರವನ್ನು ತನ್ನ ಅಣ್ಣನ ಕೈಗೆ ವಾಪಾಸು ಕೊಡಲಿಲ್ಲ. "ಉಂಗುರವನ್ನು ಕಲ್ಲಯ್ಯ ಗೌಡರು ತೆಗೆದುಕೊಂಡರು; ನಮಗೆ ಸಲ್ಲಬೇಕಾದ ಹಣವನ್ನು ನಮ್ಮ ಲೆಕ್ಕಕ್ಕೆ ಜಮಾ ಕಟ್ಟಿಕೊಳ್ಳುತ್ತಾರಂತೆ" ಎಂದು ಹೇಳಿದನು. ಆ ರೀತಿಯಲ್ಲಿಯೆ ಬೆಟ್ಟಳ್ಳಿ ಸಾಹುಕಾರರೊಡನೆ ಎಷ್ಟೋ ಲೇವಾದೇವಿ ನಡೆಸುತ್ತಿದ್ದ ಕರೀಂಸಾಬು ಅದನ್ನೊಂದು ವಿಶೇಷವೆಂದು ಗಮನಿಸಿದೆ ಸುಮ್ಮನಾದನು. ಒಂದು ಅಪಶಕುನದ ವಸ್ತು ಅಷ್ಟು ಸುಲಭದಲ್ಲಿ ಗಲಾಟೆಯಿಲ್ಲದೆ ಲಾಭಕರವಾಗಿ ತೊಲಗಿದುದೆ ಅವನಿಗೆ ಸಮಾಧಾನಕರವಾಗಿತ್ತು.

* * *

ಅಂತಕ್ಕನ ಅಡುಗೂಳುಮನೆ, ಅಥವಾ ಈಗ ಅನೇಕರು ಕರೆಯತೊಡಗಿದ್ದಂತೆ 'ಓಟ್ಲುಮನೆ', ಆ ಶ್ರಾವಣ ಸಂಧ್ಯೆಯಲ್ಲಿ ನಿಃಶಬ್ದವಾಗಿತ್ತು. ಕೋಳಿ, ನಾಯಿ, ಗುಬ್ಬಿ, ಹಕ್ಕಿಗಳ ಸದ್ದು ಸಂಚಲನೆಗಳನ್ಉು ಬಿಟ್ಟರೆ ಆ ಪ್ರದೇಶ

ನಿದ್ರಿಸುವಂತೆಯೆ ಕಾಣುತ್ತಿತ್ತು. ಮಳೆಗಾಲದಲ್ಲಿ ಕನ್ನಡ ಜಿಲ್ಲೆಗೂ ಮಲೆನಾಡಿಗೂ ನಡುವೆ ಇರುತ್ತಿದ್ದ ಸಂಚಾರವೆಲ್ಲ ಸ್ತಬ್ಧವಾಗುತ್ತಿದ್ದುದರಿಂದ ಆಗುಂಬೆ, ತೀರ್ಥಹಳ್ಳಿಯ ಹೆದ್ದಾರಿ ಸ್ವಲ್ಪ ಹೆಚ್ಚುಕಡಿಮೆ ಖಾಲಿಯಾಗಿಯೆ ಇರುತ್ತಿತ್ತು, ಸ್ಥಳೀಯರ ವಿರಳ ಸಂಚಾರ ವಿನಾ. ಆದ್ದರಿಂದ ಅಂತಕ್ಕನ ಊಟದ ಮನೆಗೆ ಆ ಸಮಯದಲ್ಲಿ ಅತಿಥಿಗಳು ಬರುತ್ತಿದ್ದುದು ಅತ್ಯಂತ ಅಪೂರ್ವ; ಇಲ್ಲವೆ ಇಲ್ಲ ಎಂದರೂ ಸುಳ್ಳಾಗುವುದಿಲ್ಲ, ಅಷ್ಟು ಅತ್ಯಂತ ಅಪೂರ್ವ.

ಮನೆಯ ಹಿಂಭಾಗದಲ್ಲಿ ಕೆಲಸದ ಹುಡುಗ ಕೊರಗನ ಕೈಯಲ್ಲಿ ಮದರಂಗಿ ಅರೆಸಿ, ಅದನ್ನು ತನ್ನ ಬೆರಳುಗುರುಗಳಿಗೆ ಮುಂಡಾಸು ಕಟ್ಟಿಸಿಕೊಳ್ಳುತ್ತಿದ್ದಳು ಕಾವೇರಿ. ರಾತ್ರಿ ಮಲಗಿ ಏಳುವಷ್ಟರಲ್ಲಿ ಆ ಉಗುರುಗಳೂ ಕೆಂಪಾಗಿ ರಂಜಿಸುತ್ತರುವುದನ್ನೇ ಭಾವಿಸಿ, ಪೂರ್ವಭಾವಿ ರಸಾಸ್ವಾದನೆಯಲ್ಲಿದ್ದಳು ಆ ತರಳೆ. ಅಂತಕ್ಕ ಏನೋ ಗೃಹಕೃತ್ಯದ ಮೇಲೆ ಅಂಗಡಿಗೊ ಎಲ್ಲಿಗೊ ಹೋಗಿದ್ದಳು.

ಮಾತಿನ ನಡುವೆ ಕೊರಗ ಹುಡುಗ ಹೇಳಿದ: “ಅಮ್ಮಾ, ನಿಮ್ಮ ಉಂಗುರ ಕಳೆದು ಹೋಯ್ತು ಅಂತಾ ಹೇಳುತ್ತಿದ್ದಿರಲ್ಲಾ ಅದು ಎಲ್ಲೋ ಒಂದು ಕಡೆ ಅದೆಯಂತೆ….”

ಬೇಸರ, ತಾಟಸ್ಥ್ಯ, ಔದಾಸೀನಗಳನ್ನೆಲ್ಲ ಒಟ್ಟಿಗೆ ಒಮ್ಮೆಗೆ ಕೊಡವಿ ಬಿಟ್ಟಂತಾಯ್ತು ಕಾವೇರಿಯ ಚೇತನಕ್ಕೆ, ಕುತೂಹಲ ನಿಮಿರಿ ಕೇಳಿದಳು: “ಎಲ್ಲಿಯೋ? ಯಾರ ಬಳಿಯೋ? ಯಾರು ಹೇಳಿದರೋ? ಯಾವಾಗ ಗೊತ್ತಾಯಿತೋ ನಿನಗೆ?….”

ಕಾವೇರಿಯ ಕುತೂಹಲದ ಪ್ರಶ್ನೆಗಳಿಗೆ, ತನ್ನ ತಿಳಿವಳಿಗೆಯ ಅಮೂಲ್ಯತೆಗೆ ತಾನೆ ಎಚ್ಚರಗೊಂಡಂತಾಗಿ ಅಚ್ಚರಿಪಡುತ್ತಾ, ಹಿಗ್ಗಿ ನಗುಮೊಗನಾಗಿ ಕೊರಗ ಹೇಳಿದನು: “ನನಗೆ ಸೇರೆಗಾರ ಹೇಳಿದ….‘ನೀನು ಯಾರಿಗೂ ಹೇಳಬೇಡ’ ಅಂದಿದ್ದಾನೆ. ತಲೆ ಹೋಗುವ ಯಾಪಾರವಂತೆ!…. ಅಂವನ್ನ ಉಪಚಾರಮಾಡಿ ಪುಸಲಾಯಿಸಿದರೆ ಸಿಕ್ಕರೂ ಸಿಕ್ಕಬೈದು!….”

ಉಂಗುರ ಕಳೆದು ಹೋದಾಗ ಕಾವೇರಿ ಅದನ್ನು ಹುಡುಕುವ ಪ್ರಯತ್ನವನ್ನೇನೂ ಮಾಡಿದ್ದಳು ಆದರೆ ಅದನ್ನು ಆದಷ್ಟು ಅಂತರಂಗವಾಗಿಯೆ ಇಟ್ಟಿದ್ದಳು, ಬಹಿರಂಗವಾಗುವುದರಿಂದ ದೇವಯ್ಯಗೌಡರ ಸಂಸಾರಿಕ ಜೀವನದಲ್ಲಿ ತೊಂದರೆ ಉಂಟಾಗಬಹುದೆಂದು ಹೆದರಿ, ಮತ್ತೂ ಅವರ ಸಾಮಾಜಿಕ ಗೌರವಕ್ಕೂ ಊನವಾಗದಿರಲಿ ಎಂದು. ಆದರೆ ದೇವಯ್ಯಗೌಡರು ಎರಡು ಮೂರು ಸಾರಿ ವಿಚಾರಿಸಿದಾಗಲೂ ಉಂಗುರ ಕಳೆದು ಹೋಯಿತು ಎಂದು ಹೇಳಲು ಅವಳಿಗೆ ಧೈರ್ಯವಾಗಲಿಲ್ಲ. ಏನೇನೊ ಸಬೂಬು ಹೇಳಿ, ಹುಡುಕುತ್ತಿರುವ ಭಾವನೆ ಕೊಟ್ಟಿದ್ದಳು. ನಿಜ ಹೇಳಿದರೆ ಗೌಡರು ನಂಬದಿದ್ದರೆ? ನಂಬದಿದ್ದರೂ ಚಿಂತೆ ಇರಲಿಲ್ಲ; ಆದರೆ ಇನ್ನೇನನ್ನೋ ನಂಬಿಬಿಟ್ಟರೆ? ಅದಕ್ಕೂ ಅವಕಾಶ ಇಲ್ಲದಿರಲ್ಲಿಲ್ಲ. ಏಕೆಂದರೆ ಕಾವೇರಿ ಅಣುಗುಅಣುಗಾಗಿ ಇತರರೊಡನೆ ಹುಡುಗಾಟವಾಡುತ್ತಿದ್ದುದೂ ಉಂಟು! ಆ ತೆರನಾದ ಸರಳವರ್ತನೆ ಮತ್ತು ಕುರುಡು ನಂಬಿಕೆಯೆ ಅವಳಿಗೆ ತರುವಾಯ ಒದಗಿದ್ದ ಅನಾಹುತಕ್ಕೂ ಕಾರಣವಾಯಿತು.

ಪುಡಿಸಾಬಿಯ ಕೈಯಲ್ಲಿ ಹರಳುಂಗುರವನ್ನು ಕಂಡ ಮಾರನೆಯ ದಿನ ದೇವಯ್ಯಗೌಡರು ಮೇಗರವಳ್ಳಿಯಲ್ಲಿ ಕಾಣಿಸಿಕೊಂಡಿದ್ದರು. ಅಲ್ಲಿ ಇಲ್ಲಿ ತಿರುಗಿ, ಅವರಿವರ ಹತ್ತಿರ ಕಿವಿಮಾತು ಆಡಿ, ಬೈಸಿಕಲ್ಲಿನ ಮೇಲೆ ತೀರ್ಥಹಳ್ಳಿಗೆ ನೆಟ್ಟಗೆ ಹೋಗಿದ್ದರು. ಆದರೆ ಹಿಂದೆಂದೂ ನಡೆಯದಿದ್ದುದು ಅಂದು ನಡೆದಿತ್ತು; ಅಂತಕ್ಕನ ಓಟ್ಲುಮನೆಗೆ ಅವರು ಊಟಕ್ಕೆ ಬಂದಿರಲಿಲ್ಲ. ಬೈಸಿಕಲ್ಲಿನ ಗಂಟೆ ಸದ್ದು ಕೇಳಿಸಿ, ಕಾವೇರಿ ಅಂಗಳಕ್ಕೆ ಓಡಿ ಬಂದು, ಉಣುಗೋಲಿನ ಗಳುಗಳನ್ನು ಒತ್ತರಿಸಿ, ಬೈಸಿಕಲ್ಲೇರಿದ್ದ ಗೌಡರನ್ನು ನೇರವಾಗಿ ಅಂಗಳಕ್ಕೆ ಆಹ್ವಾನಿಸಲು ಕಾದಿದ್ದಳು. ಆದರೆ ಗೌಡರನ್ನು ಹೊತ್ತ ಬೈಸಿಕಲ್ಲು, ಉಣಗೋಲಿನ ಆಚೆಯ ಹೆದ್ದಾರಿಯಲ್ಲಿ ನೇರವಾಗಿ ಮಿಶನ್ ಸ್ಕೂಲಿನ ಕಟ್ಟಡದ ಪಕ್ಕದಲ್ಲಿ ಹಾದು ತೀರ್ಥಹಳ್ಳಿಯ ದಿಕ್ಕಿಗೆ ಧಾವಿಸಿತ್ತು. ಅವರ ಕಣ್ಣಮೇಲೆಯೆ ಹಾಯುವಂತೆಯೆ ನಿಂತು ಮುಗುಳ ನಗುತ್ತಿದ್ದ ಕಾವೇರಿ ಕಡೆಗೆ ತಿರುಗಿಯೂ ನೋಡಿರಲಿಲ್ಲ. ಕಾವೇರಿ ಮನೆಯೊಳಗೆ ಹೋಗಿ, ತನ್ನ ಕೋಣೆಯ ಬಾಗಿಲು ಹಾಕಿಕೊಂಡು ಬಹಳ ಹೊತ್ತು ಅತ್ತಿದ್ದಳು. "ಏನೋ ಅವಸರದ ಸರಕಾರಿ ಕೆಲಸ ಇತ್ತು ಅಂತಾ ಕಾಣುತ್ತದೆ ಅವರಿಗೆ ನೀನು ಸುಕಾಸುಮ್ಮನೆ ಯಾಕೆ ಅಳುತ್ತೀ?" ಎಂದಿದ್ದಳು ಅವಳ ತಾಯಿ ಅಂತಕ್ಕ ಸೆಡ್ಡಿ.

ಅಂದಿನಿಂದ ಕಾವೇರಿಗೆ ತನ್ನ ಉಂಗುರ ಕಳೆದುಹೋದ ಅಥವಾ ಕಳವಾದ ವಿಚಾರವನ್ನು ಹಿಂದಿನಂತೆ ರಹಸ್ಯವಾಗಿಡಲು ಸಾಧ್ಯವಾಗಲಿಲ್ಲ. ಕೊರಗನೊಡನೆ, ಚೇಂಕ್ರನೊಡನೆ, ಅಜ್ಜೀಸಾಬು, ಲುಂಗೀಸಾಬು ಅಂತಹರು ತನ್ನ ತಾಯಿಯೊಡನೆ ಗೃಹಕೃತ್ಯದ ಬೇಹಾರ ಸಾಗಿಸಲು ಬಂದಾಗ ಸಮಯ ಸಿಕ್ಕರೆ ಅವರೊಡನೆ, ಕಡೆಗೆ ಮದ್ದು ಕೊಡಲು ಮನೆಗೆ ಬಂದ ಕಣ್ಣಾಪಂಡಿತರೊಡನೆಯೂ ಪ್ರಸ್ತಾಪಿಸತೊಡಗಿದಳು. ಅಂತೂ ಸುದ್ದಿ ಗುಸುಗುಸು ಹಬ್ಬಿತ್ತು.

ಕೊರಗ ಹುಡುಗ 'ಚೇಂಕ್ರ ಸೇರಿಗಾರನಿಗೆ ಉಂಗುರ ಎಲ್ಲಿದೆ ಅಂಬುದು ಗೊತ್ತಿದೆಯಂತೆ' ಎಂದು ಸೂಚಿಸಿ, 'ಅಂವನ್ನ ಉಪಚಾರಮಾಡಿ ಪುಸಲಾಯಿಸಿದರೆ ಸಿಕ್ಕರೂ ಸಿಗಬೈದು' ಎಂದು ಹೇಳಿದ ಮೇಲೆ, ಕಾವೇರಿ ಸೇರೆಗಾರನೊಡನೆ ಸ್ವಲ್ಪ ಸಲಿಗೆಯಿಂದ ವರ್ತಿಸತೊಡಗಿದ್ದಳು. ಆಗೊಮ್ಮೆ ಈಗೊಮ್ಮೆ ಕಳ್ಳು ಹೆಂಡ ಸ್ವಾರ್ಲುಮೀನು ಕೊಟ್ಟು ಸವಿಮಾತಾಡಿ ಪುಸಲಾಯಿಸಿದಳು. ಆದರೆ ಚೇಂಕ್ರ ಅದಕ್ಕೆ ವಿಪರೀತಾರ್ಥ ಕಲ್ಪನೆ ಮಾಡಿಕೊಂಡನಷ್ಟೆ!

ಕಾವೇರಿಯ ವರ್ತನೆಗೆ ಒಂದು ಸರಳ ಧೈರ್ಯವಿತ್ತು. ಚೇಂಕ್ರ ಕೀಳು ಜಾತಿಯವನು. ಹೆಚ್ಚುಕಡಮೆ ದಕ್ಷಿಣ ಕನ್ನಡ ಜಿಲ್ಲೆಯ ಹೊಲೆಯ; ಹಸಲರವನು. ಅವನು ತಮ್ಮ ಮನೆಯೊಳಗೆ ಕಾಲಿಡುವುದಿರಲಿ, ಜಗಲಿಯ ತೆಣೆಗೂ ಹತ್ತುತ್ತಿರಲಿಲ್ಲ. ಹಿಂದೆ ಗುತ್ತಿಯ ಮೈಕಟ್ಟನ್ನೂ ಬಣ್ಣವನ್ನೂ ರುಪವನ್ನೂ ತಾನೆಂದು ಮೆಚ್ಚಿನೋಡಿದ್ದಳೊ ಅಂತೆಯೆ ಚೇಂಕ್ರನನ್ನೂ ಒಂದು ಸ್ವಪ್ರಯೋಜನ ಸಾಧನೆಗಾಗಿ ಪುಸಲಾಯಿಸಿದ್ದಳು. ಅದರಲ್ಲಿ ಅಪಾರ್ಥಕ್ಕೆ ಯಾವ ಕಾರಣವೂ ಇರಲು ಸಾಧ್ಯವಿರಲಿಲ್ಲ.

ಆದರೆ ಚೇಂಕ್ರನ ಜಾರ ಹೃದಯದಲ್ಲಿ ಮೊದಲಿನಿಂದಲೂ ಕಾವೇರಿಯ ಪರವಾದ ಭಾವನೆ ಬೇರೆಯಾಗಿತ್ತು. ಅವನು ದೇಯ ಸತ್ತಮೇಲೆ, ಕೋಣೂರಿನಿಂದ ಮೇಗರೊಳ್ಳಿಗೆ ಮಿಶನ್ ಇಸ್ಕೂಲು ಕಟ್ಟುವ ಕೆಲಸಕ್ಕೆ ಬಂದಾಗಲೂ ಪ್ರಾಯಕ್ಕೆ ಬರುತ್ತಿದ್ದ ಆ ಮುಗ್ಧ ಹುಡುಗಿಯನ್ನು ನಾಯಿಗಣ್ಣಿನಿಂದಲೆ ನೋಡಿದ್ದನು. ಆದರೆ ಸಾಮಾಜಿಕವಾಗಿ ಬಹುದೂರದಲ್ಲಿ ಮತ್ತು ಎತ್ತರದ ಅಂತಸ್ತಿನಲ್ಲಿದ್ದ ಆ ಹೆಣ್ಣನ್ನು ಅವನ ನರಿಮನಸ್ಸು ನೋಡುತಿತ್ತೆ ಹೊರತು ಇನ್ನೇನು ಮಾಡಲೂ ಸಮರ್ಥವಾಗಿರಲಿಲ್ಲ. ಈಗ ಉಂಗುರದ ಪ್ರಸಂಗದಲ್ಲಿ ಅವನಿಗೊಂದು ಸಂದರ್ಭ ಒದಗಿತ್ತು. ಕಾವೇರಿಯ ಉಪಚಾರಕ್ಕೆ ಅಪಾರ್ಥ ಕಲ್ಪನೆ ಮಾಡುವುದು ಅವನಿಗೆ ಸುಸ್ವಾದುವಾಗಿದ್ದುದಲ್ಲದೆ, ಬಯಸಿದ ಹೆಣ್ಣಿನ

ಬಯಕೆಯನ್ನು ಈಡೇರಿಸುವನೆಂಬ ದುರ್ಬುದ್ಧಿ ಸಮರ್ಥನೀಯ ಭಾವನೆಯಿಂದ ಅದು ಸಾಧುವಾಗಿಯೂ ತೋರಿತು. ಆ ಸಾಹಸಕ್ಕೆ ತಾನೊಬ್ಬನೆ ಮುಂದುವರಿಯಲು ಅಂಜದ ಅವನ ಹೇಡಿಜೀವಕ್ಕೆ ಪುಡಿಸಾಬಿಯ ನೀಚಸೂಚನೆ ಹಾರುವ ಮಂಗಕ್ಕೆ ಏಣಿಹಾಕಿತ್ತು.

ಬೆಟ್ಟಳ್ಳಿಯಿಂದ ಉಂಗುರದೊಡನೆ ಹಿಂದಿರುಗುತ್ತಿದ್ದ ಪುಡಿಸಾಬಿಯನ್ನು ಬೈಸಿಕಲ್ಲು ಹಕ್ಕಲಿನ ಆಚೆಯ ಅರೆಕಲ್ಲಿನ ಕಾರಮಟ್ಟಿನೆಡೆ ದೇವಯ್ಯ ಸಂಧಿಸಿ, ಉಂಗುರದ ವಿಚಾರವಾಗಿ ಪ್ರಸ್ತಾಪಿಸಿ, ಪ್ರಶ್ನೆಕೇಳಿ, ಕಳವುಮಾಲು ಪೋಲೀಸುಗೀಲೀಸು ಎಂದೆಲ್ಲ ಕೆರಳು ಮಾತಾಡಿ, ಸಾಬಿಯ ಮನದ ಹುತ್ತದಲ್ಲಿ ಪ್ರಸುಪ್ತವಾಗಿದ್ದ ನೀಚರುಚಿಯ ದೌಷ್ಟ್ಯ ಸರ್ಪವನ್ನು ಮೆಟ್ಟಿ ಏಳಿಸದೆ ಇದ್ದಿದ್ದರೆ ಅದನ್ನು ಅವನು ತನ್ನ ಅಣ್ಣನಿಗೆ ಹಿಂತಿರುಗಿಸಿ ಸುಮ್ಮನಾಗುತ್ತಿದ್ದನು. ಆದರೆ ಯಾವಾಗ ಆ ಉಂಗುರವು ಶೃಂಗಾರ ಜೀವಿತಕ್ಕೆ ಸಂಬಂಧಪಟ್ಟಿದ್ದು ಎಂಬುದು ಗೊತ್ತಾಯಿಗೋ ಸಾಬಿಯ ಕಾಮವಿಕಾರವೂ ಶೃಂಗಾರಾಪೇಕ್ಷಿಯಾಗಿ ಸಾಹಸಲೀಲೆಗೆ ಹಾತೊರೆಯತೊಡಗಿತು. ಅವನಲ್ಲಿ ಕೆರಳಿದ್ದ ಪಶುರುಚಿಗೂ ಪ್ರಣಯ ಪ್ರೇಮ ಮೊದಲಾದ ಪದಗಳಿಗೂ ಯಾವ ಅರ್ಥಸಂಬಂಧವೂ ಇರಲಿಲ್ಲ: ಮನೆಯಲ್ಲಿ ಕಾಫಿಕುಡಿದು ಹೊರಟಿದ್ದರೂ ಕಂಡ ಕಂಡ ಕೆಫೆಗಳಲ್ಲಿ ಕುಳಿತು ಕಾಫಿ ಕುಡಿಯುವ ಕೆಲವು ಅಲಸ ಶ್ರೀಮಂತ ಯುವಕರ ಆಧುನಿಕ ಚಟದಂತಹ ಒಂದು ಚಟ ಮಾತ್ರವಾಗಿತ್ತು ಅದು. ಆ ಚಟಕ್ಕೆ ದೇವಯ್ಯ ಕೆರಳಿಸಿದ್ದ ಹಟದ ಸಾಣೆಯಿತ್ತಷ್ಟೆ!

ಸಾಬಿ ಚೇಂಕ್ರನೊಡನೆ ಆ ಮಾತೆತ್ತಿದೊಡನೆ, ಅವನಿಗೆ ರೊಟ್ಟಿ ಜಾರಿ ತುಪ್ಪಕ್ಕೆ ಬಿದ್ದ ಹಾಗಾಯ್ತು:

"ಕಾಣನಿ, ಕಾವೇರಮ್ಮ, ಇದನ್ನು ಮಾತ್ರ ನೀವು ಯಾರೊಬ್ರ ಸಂಗಡಾನೂ ಬಾಯಿ ಬಿಟ್ಟೇರಿ? ಉಂಗುರ ನಿಮ್ಮ ಕೈಗೆ ಬಂದಮ್ಯಾಲೆ ಬೇಕಾದರೆ ನಿಮ್ಮ ಅಬ್ಬೆ ಹತ್ರ ಹೇಳಿನಿ, ಅದಕ್ಕೆ ಮುಂಚೆ ತುಟಿ ಪಿಟಕ್ ಅನ್ನ ಬಾರದು…."

ಇಲ್ಲ ಮಾರಾಯನೆ, ನಾನು ಯಾಕೆ ಹೇಳಲಿಕ್ಕೆ ಹೋಗಲಿ, ನನಗೆ ಉಂಗುರ ಸಿಕ್ಕರೆ ಸಾಕು…."

"ಉಂಗುರ ಪುಡಿಸಾಬರ ಕೈಗೆ ಸಿಕ್ಕದೆ ನಿಮಗೆ ದೇವಯ್ಯ ಗೌಡರು ಕೊಟ್ಟದ್ದು ಅಂತಾ ನೀವು ಪಡ್ತಿರೋ ಪಾಡು ಕೇಳಿ ಅವರಿಗೆ "ಛೇ! ಪಾಪ! ಅನ್ನಿಸಿದೆ. ಅದನ್ನು…ನಿಮಗೇ ಕೊಡ್ತೀನಿ ಅಂತಾನೂ ನನ್ನ ಹತ್ರ ಹೇಳಿದಾರೆ…. ಆದರೆ ಅದೆಲ್ಲ ಯಾರಿಗೂ ಗೊತ್ತಾಗ್ದೆ ಇದ್ದಾಂಗೆ ಆಗಬೇಕಂತೆ….ಯಾಕೆ ಅಂತೀರೋ? ದೇವಯ್ಯಗೌಡರು ಮೊನ್ನೆ ತೀರ್ಥಳ್ಳಿಗೆ ಹೋಗಿ ಪೋಲೀಸರಿಗೆ ಫಿರ್ಯಾದು ಕೊಟ್ಟಾರೆ ಅಂತಾ ಸುದ್ದಿ…ಅದಕ್ಕೇ ಆದಷ್ಟು ಬ್ಯಾಗನೆ, ಪೋಲೀಸುಗೀಲೀಸು ಗಲಾಟೆ ಬರೋದರ ಒಳಗೆ, ಉಂಗುರ ದಾಟಿಸಿ ಬಿಡಾನ ಅಂತಾ ಅವರ ಮನಸ್ಸು….ಬಹಳ ಒಳ್ಳೇರು ಕಣ್ರೋ ಆ ಪುಡಿಸಾಬ್ರು! ನಿಮಗೇನು ಹೊಸಬರಲ್ಲ. ನೀವು ಎಷ್ಟೋ ಕಾಲದಿಂದ ನೋಡ್ತಾನೆ ಇದ್ದೀರಿ ಅಲ್ಲೇನು ಹೇಳಿ?"

ಚೇಂಕ್ರನ ಪ್ರಶ್ನೆಗೆ 'ಹೌದು' ಎಂದಳು ಕಾವೇರಿ. ಅವಳು ಪುಡಿಸಾಬುವನ್ನು ಇತರರನ್ನು ನೋಡುತ್ತಿದ್ದಂತೆಯೆ ನೋಡಿದ್ದಳು. ಅವನು ರೂಪದಲ್ಲಿ ಬಣ್ಣದಲ್ಲಿ ಬಟ್ಟೆ ಷೋಕಿಯಲ್ಲಿ ಇತರರಿಗಿಂತಲೂ ಜೋರಾಗಿರುತ್ತಿದ್ದುದರಿಂದ ಕಾವೇರಿ ಮನದಲ್ಲಿಯೆ ಪ್ರಶಂಸಿಸಿಯೂ ಇದ್ದಳು. ಆ ಪ್ರಶಂಸೆ ಬಾಲ್ಯಸಹಜ ಮುಗ್ಧತೆ ಮಾತ್ರ ಆಗಿತ್ತು. ಅದರಲ್ಲಿಯೂ ತುರುಕನಾಗಿದ್ದ ಅವನು ಜಾತಿಯ ದೃಷ್ಟಿಯಿಂದ ಹಸಲವರಿಗಿಂತಲೂ ಕೀಳಾಗಿದ್ದನಲ್ಲವೆ? ಊರು

ಮನೆಯವನಾಗಿದ್ದುದರಿಂದ ಕಾವೇರಿ ಅಂಗಡಿಗೆ ಹೋದಾಗಾಗಲಿ, ಅವನೇ ಕೆಲಸದ ನಿಮಿತ್ತ ಅಂತಕ್ಕನ ಮನೆಗೆ ಬಂದಾಗಲಾಗಲಿ, ಕಾವೇರಿಯನ್ನು ಸಲಿಗೆಯಿಂದ ವಿನೋದವಾಗಿಯೂ ಮಾತನಾಡಿಸಿಯೂ ಇದ್ದುದರಿಂದ ಕಾವೇರಿ ಅವನಲ್ಲಿ ಅಪನಂಬಿಕೆ ಪಡುವುದಕ್ಕೂ ಕಾರಣವಿರಲಿಲ್ಲ. ಅವಳೇನೋ ಗಾಳಿಸುದ್ದಿ ಕೇಳಿದ್ದಳು, ಸಾಬರುಗಳಲ್ಲಿ ಆಗುಂಬೆಘಾಟಿಯ ದಾರಿಯಲ್ಲಿ ತಲೆಯೊಡೆಯುವುದು ದೋಚುವುದು ಮಾಡುತ್ತಾರೆ ಎಂದು. ಆದರೆ ಅದು ಬಹುದೂರದ ಕಾಡಗಿಚ್ಚಿನಂತಿದ್ದು ಅದರ ಬಸಿ ಅವಳಿಗೆ ಮುಟ್ಟಿರಲಿಲ್ಲ.

"ಯಾರ ಕೈಲಿ ಕೊಡುಕ್ಕೂ ಅವರಿಗೆ ಮನಸ್ಸಿಲ್ಲ.... ನಿಮ್ಮ ಕೈಲೇ ಕೊಡ್ತೀನಿ ಅಂತಾರೆ. ನಿಮ್ಮನ್ನ ಕಂಡರೆ ಅವರಿಗೆ ಎಷ್ಟು ಪಿರೀತಿ ಅಂತೀರ! ನನ್ನ ಕೈಲಿ ಮೊನ್ನೆ ಹೇಳ್ತಾರೆ: 'ಅಷ್ಟು ಚೆಂದಾಗಿರೋರ್ನ ನಾ ಎಲ್ಲೂ ನೋಡಿಲ್ಲೋ, ಚೇಂಕ್ರ!' ಅಂತಾ...." ಮುಖದಲ್ಲಿ ಸಂಕೋಚ ಭಾವನೆ ಸೂಚಿಸಿದ ಕಾವೇರಿಯನ್ನು ನೋಡಿ ಚೇಂಕ್ರ ಪ್ರೋತ್ಸಾಹಕನಾಗಿ ಮುಂದುವರಿದನು: "ನಿಜ ಹೇಳಿದರೆ ಯಾಕೆ ನಾಚಿಕೆಮಾಡಿಕೊಳ್ತೀರಿ? ಪುಡಿ ಸಾಬ್ರು ನಿಜಾನೆ ಹೇಳಿದ್ರು. ನಿಮಗಿಂತ ಚೆಂದಾಗಿರೋರ್ನ ನಾನೂ ಎಲ್ಲೂ ನೋಡಿಲ್ಲಾ ಅಂತಾ ಯಾರ ಕೈಲಿ ಬೇಕಾದ್ರೂ ಬಾಜೂ ಕಟ್ತೇನಿ ನಾನು!...."

ತನ್ನ ಸೌಂದರ್ಯ ಪ್ರಶಂಸೆಗಿಂತಲೂ ಹೆಚ್ಚಿನ ಪ್ರಲೋಭನೆಯಾಗಲಿ ದೌರ್ಬಲ್ಯವಾಗಲಿ ಹೆಂಗಸಿಗೆ ಮತ್ತೊಂದು ಇರಲಾರದು. ಅದರಲ್ಲಿಯೂ ತಾರುಣ್ಯ ಪ್ರಾರಂಭದಲ್ಲಿರುವ ಕಾವೇರಿಯಂತಹ ಹುಡುಗಿಯರಿಗೆ ಅಂತಹ ಶ್ಲಾಘನೆ ಭಂಗಿ ತಿನ್ನಿಸಿದಂತಾಗುತ್ತದೆ. ಎಚ್ಚರಿಕೆ, ವಿವೇಕ, ಭೀರುತ್ವಗಳೆಲ್ಲ ಹಿಂಜರಿದು ಹಿಗ್ಗೊಂದೆ ಮುನ್ನುಗ್ಗುತ್ತದೆ.

ಪೂರ್ವಭಾವಿಯಾಗಿ ಗೊತ್ತುಮಾಡಿದ ಒಂದು ದಿನ, ಕತ್ತಲಾದಮೇಲೆ, ಕಾವೇರಿ ಯಾರಿಗೂ ತಿಳಿಯದಂತೆ ಚೇಂಕ್ರನೊಡನೆ ಹೋಗಿ ಪುಡಿಸಾಬಿಯಿಂದ ಉಂಗುರ ಪಡೆಯುವುದೆಂದು ಸಂಚು ಸಿದ್ಧವಾಯಿತು. ಎಲ್ಲಿ ಸಾಬಿಯನ್ನು ಸಂಧಿಸುವುದೆಂದು ಸ್ಥಳದ ವಿಚಾರ ಬಂದಾಗ, ಕಾವೇರಿ ತಾನು ಮನೆಯಿಂದ ಬಹಳಹೊತ್ತು ಹೊರಗಿರಲು ಸಾಧ್ಯವಿಲ್ಲವೆಂದೂ, ಸಿಕ್ಕಿಕೊಳ್ಳಬಹುದೆಂದೂ, ಸಂಶಯಕ್ಕೆ ಅವಕಾಶವಾಗುತ್ತದೆ ಎಂದೂ ಹೇಳಿದುದರಿಂದ ಅಂತಕ್ಕನ ಮನೆಗೆ ಸ್ವಲ್ಪ ಹೆಚ್ಚು ಕಡಿಮೆ ಕಾಣುವಂತೆಯೆ ಇದ್ದು ಅನತಿ ದೂರದಲ್ಲಿರುವ ಮಿಶನ್ ಸ್ಕೂಲಿನಲ್ಲಿ* ಸೇರಬಹುದೆಂದು ಸದ್ಯಕ್ಕೆ ನಿರ್ಣಯವಾಯಿತು.

---

* ಮಿಶನ್ ಸ್ಕೂಲ್ ಕಟ್ಟಡ ಸಿದ್ಧವಾಗಿತ್ತೆ ಹೊರತು ಇನ್ನೂ ಇಸ್ಕೂಲು ಪ್ರಾರಂಭವಾಗಿರಲಿಲ್ಲ. ಚಳಿಗಾಲದಲ್ಲಿ ಕ್ರೈಸ್ತರ ಹಬ್ಬದ ಕಾಲಕ್ಕೆ ಬಿಳಿಪಾದ್ರಿ ರೆವರೆಂಡರಿಂದ ಅದರ ಪ್ರಾರಂಭೋತ್ಸವ ನಡೆಯುವಂತೆಯೂ, ಅದರ ಹಿಂದಿನ ದಿನವೊ ಅಥವಾ ಆ ದಿನವೆ ಪ್ರಾತಃಕಾಲವೊ ದೇವಯ್ಯಗೌಡರ ಮತಾಂತರ ಧರ್ಮಕ್ರಿಯೆಯೂ ಅಲ್ಲಿಯೆ ಗಲಾಟೆಯಿಲ್ಲದೆ ನಡೆಯುವಂತೆಯೂ ಏರ್ಪಾಡಾಗಿತ್ತು.

* * *

ಗೌರಿ ಹಬ್ಬಕ್ಕೆ ಇನ್ನೂ ಮೂರು ದಿವಸವಿದೆ ಎನ್ನುವಾಗ, ಒಂದು ಸಂಜೆ ಮೇಗರವಳ್ಳಿಯ ಹೆದ್ದಾರಿಯಲ್ಲಿ ಆಗುಂಬೆಯ ಕಡೆಯಿಂದ ತೀರ್ಥಹಳ್ಳಿಯ ದಿಕ್ಕಿಗೆ ನಾಲ್ವರು ಪ್ರಯಾಣಿಕರು, ಅವರನ್ನು ನೋಡಿದರೆ ಬಹುದೂರದಿಂದ ಬಂದವರಂತೆ ಕಾಣುತ್ತಿದ್ದರು, ಸೋತು ಕಾಲುಹಾಕುತ್ತಿರುವಂತೆ ನಡೆದು ಬರುತ್ತಿದ್ದರು. ಮುಂದೆ ಬರುತ್ತಿದ್ದ ಇಬ್ಬರು ಕೊಡೆ ಹಿಡಿದಿದ್ದರು. ಹಿಂದೆ ಬರುತ್ತಿದ್ದವರು ಕಂಬಳಿ ಕೊಪ್ಪೆ ಹಾಕಿಕೊಂಡಿದ್ದರು. ಮಳೆಗೂ ಕೆಸರಿಗೂ ರಕ್ಷೆಯಾಗಿ ತಮ್ಮ ಕಚ್ಚೆ ಪಂಚೆಗಳನ್ನು ಮೊಳಕಾಲಿನವರೆಗೂ ಎತ್ತಿ ಕಟ್ಟಿಕೊಂಡಿದ್ದು ಮೈಮುಚ್ಚುವಂತೆ ಬಟ್ಟೆ ಹಾಕಿಕೊಂಡಿದ್ದ ಆಗ್ರೇಸರಿಬ್ಬರನ್ನು ಯಜಮಾನರೆಂದೂ, ಹಿಂದೆ ತಲೆಯಮೇಲೆ ಗಂಟು ಮೂಟೆ ಹೊತ್ತು ಅರಮೈ ಬಿಟ್ಟುಕೊಂಡಿದ್ದ ಇಬ್ಬರನ್ನು ಅವರು ಆಳುಗಳೆಂದೂ ಯಾರಾದರೂ ಗುರುತಿಸಬಹುದಿತ್ತು.

ಮಳೆ ಸೋನೆಯಾಗಿ ಬೀಳುತ್ತಿದ್ದುದರಿಂದ ಮೇಗರೊಳ್ಳಿ ಪೇಟೆಯ ಬೀದಿ ನಿರ್ಜನವಾಗಿತ್ತು. ಆದರೆ ತುಂಬ ವಿರಳವಾಗಿ ಆ ಕಡೆ ಈ ಕಡೆ ಹುದುಗಿದಂತಿದ್ದ ಹುಲ್ಲಿನ ಮತ್ತು ಓಡುಹೆಂಚಿನ ಮಣೆಗಳ ಮತ್ತು ಅಂಗಡಿ ಮಳಿಗೆಗಳ ಮುಂಭಾಗದ ತೆಣೆಗಳಲ್ಲಿ ಒಬ್ಬರು ಇಬ್ಬಸ್ರು ಮೂವರು ಕಲೆತು ಮಾತಾಡಿಕೊಳ್ಳುತ್ತಿದ್ದುದು ಕಣ್ಣಿಗೆ ಬೀಳಬಹುದಾಗಿತ್ತು. ಕೆಲವರು ಎಲೆಯಡಿಕೆ ಜಗಿಯುತ್ತಿದ್ದರೆ ಇನ್ನು ಕೆಲವರು-ಅವರು ಸಾಬರು ಎಂದು ಅನಿವಾರ್ಯವಾಗಿ ಹೇಳಬಹುದಿತ್ತು-ಬೀಡಿ ಸೇಯುತ್ತಿದ್ದರು. ಮತ್ತೆ ಕೆಲವರು ಮಂಗಳೂರು ನಶ್ಯ ಸೇಯುವುದೊ ಮಡ್ಡಿ ನಶ್ಯ ತಿಕ್ಕುವುದೋ ಅಂತಹ ವಿರಾಮಶೀಲ ಕಾರ್ಯಗಳಲ್ಲಿ ತೊಡಗಿದ್ದರು

ಕಣ್ಣಾ ಪಂಡಿತರ ಮನೆಯ ಮುಂದೆ ಕಂಬಳಿಕೊಪ್ಪೆ ಹಾಕಿಕೊಂಡು ನಿಂತಿದ್ದ ಒಬ್ಬನು ಹಾದಿಯಲ್ಲಿ ಮುಂದೆ ಬರುತ್ತಿದ್ದ ಪಯಣಿಗರಲ್ಲಿ ಒಬ್ಬರನ್ನು ಗುರುತಿಸಿ, ಬಗ್ಗಿ, ಎರಡೂ ಕೈ ಜೋಡಿಸಿ “ಅಡ್ಡಬಿದ್ದ, ಐಗಳಿಗೆ, ಸಿಂಬಾವಿ ಕರಸಿದ್ದ” ಎಂದನು.

“ಎಲ್ಲ ಸುಖವಾಗಿದ್ದಾರೇನೋ?.... ಗುತ್ತಿ ಮನೇಲಿ ಇದಾನಷ್ಟೆ?” ಎಂದು ಹೊಲೆಯನ ಯೋಗಕ್ಷೇಮ ವಿಚಾರಿಸಿದರು. ಅನಂತಯ್ಯ.

ಗುತ್ತಿಯ ಅಪ್ಪ ಸಿಂಬಾವಿ ಕರಸಿದ್ದ ಮೋರೆ ಸಣ್ಣಗೆ ಮಾಡಿಕೊಂಡು, ಮಗ ಸೊಸೆಯನ್ನು ಕಟ್ಟಿಕೊಂಡು ದೇಶಾಂತರ ಹೋದುದನ್ನು ಸಾವಧಾನವಾಗಿ ಹೇಳುತ್ತಾ ಸುಖ ದುಃಖ ತೋಡಿಕೊಂಡನು. ಅವನಿಗೆ ಎರಡು ಸಮಾಧಾನದ ಮಾತು ಹೇಳಿ, ಕನ್ನಡ ಜಿಲ್ಲೆಯಿಂದ ಅದೇ ತಾನೆ ಹಿಂತಿರುಗುತ್ತಿದ್ದ ಐಗಳು ಅನಂತಯ್ಯ ನಾಲ್ಕು ಹೆಜ್ಜೆ ಕನ್ನಡ ಜಿಲ್ಲೆಯಿಂದ ಅದೇ ತಾನೆ ಹಿಂತಿರುಗುತ್ತಿದ್ದ ಐಗಳು ಅನಂತಯ್ಯ ನಾಲ್ಕು ಹೆಜ್ಜೆ ಮುಂದುವರಿದಿದ್ದರು. ಕರೀಂಸಾಬರ ಮಳಿಗೆಯಲ್ಲಿದ್ದ ಗುಂಪು ಸಸಂಭ್ರಮವಾಗಿ ಕೂಗಿತು: “ಓಹೋಹೋ! ಊರಿಗೆ ಹೋಗಿದ್ದ ಐಗಳ ಸವಾರಿ ಈಗ ಬರ್ತಾ ಇರೋ ಹಾಂಗೆ ಕಾಣ್ತದಲ್ಲಾ?”

ಅನಂತಯ್ಯ ನೋಡಿದರು. ಬೀಡಿ ಸೇಯುತ್ತಿದ್ದ ಗುಂಪಿನಲ್ಲಿ ಪುಡಿಸಾಬಿ, ಲುಂಗಿಸಾಬಿ, ಅಜ್ಜೀಸಾಬಿ ಎಲ್ಲ ಇದ್ದರು. ತುಸು ಎತ್ತರದಲ್ಲಿ ವ್ಯಾಪಾರ ಕೊಡುವವನ ಕೂರುವ ಮಣೆಪೀಠದ ಮೇಲೆ ಕರ್ಮೀನ್ ಸಾಬರೂ ಮಂಡಿಸಿದ್ದರು.

ಸರಿಸಮಾನ ಸ್ಕಂಧನಂತೆ ಚೇಂಕ್ರ ಸೇರೆಗಾರನೂ ಅಲ್ಲಿಯೆ ಬಳಿ ಕೂತಿದ್ದುದೂ ಕಾಣಿಸಿತು: "ಎಲ್ಲಾ ಏನೋ ಒಂದು ಮಸಲತ್ತಿಗೆ ಸೇರಿಕೊಂಡಹಾಗೆ ಕಾಣ್ತದೆ, ನೋಡು" ಎಂದು ತಮ್ಮ ಪಕ್ಕದಲ್ಲಿ ಬರುತ್ತಿದ್ದ ಕಿಟ್ಟಯ್ಯ ಸೆಟ್ಟರಿಗೆ ಹೇಳಿ, ಮಳಿಗೆಯವರ ಸ್ವಾಗತಕ್ಕೆ ಮಂದಸ್ಮಿತ ಮಾತ್ರ ಉತ್ತರವನ್ನೀಯುತ್ತಾ ಮುಂದುವರಿದರು ಅನಂತಯ್ಯ.

ಅವರು ಅಂತಕ್ಕನ ಮನೆಯ ಹತ್ತಿರಕ್ಕೆ ಬರುವಷ್ಟರಲ್ಲಿ ಶ್ರಾವಣಬೈಗು ಮೋಡಗಪ್ಪಾಗತೊಡಗಿತ್ತು. ಸುಪರಿಚಿತ ಪ್ರದೇಶಕ್ಕೆ ಪ್ರವೇಶಿಸುವಂತೆ, ಉಣುಗೋಲಿನ ಪಕ್ಕದಲ್ಲಿದ್ದ ತಡಬೆಯನ್ನು ಹತ್ತಿ ದಾಟಿ, ಅನಂತಯ್ಯ ತಮ್ಮ ಹಿಂದೆಯೆ ತಡಬೆಯನ್ನು ಕಿಟ್ಟಯ್ಯ.... ತಡಬೆಮೇಲೆ ಜಾರಿ ಬಿದ್ದೀಯಾ?....ಮಳೇಲಿ ಮರದ ದಿಂಡಿನ ತುಂಬಾ ಹಾಸುಂಬೆ ಕಟ್ಟಿದೆ, ಹುಷಾರಾಗಿಳಿ...."

ಅವರ ಹಿಂದೆ ಸಾಮಾನು ಹೊತ್ತು ಬರುತ್ತಿದ್ದ ಗಟ್ಟದ ತಗ್ಗಿನ ಆಳುಗಳಿಬ್ಬರು ತಡಬೆ ಹತ್ತಿ ಇಳಿಯುವ ಗೋಜಿಗೆ ಹೋಗದೆ, ಉಣುಗೋಲಿನ ಗಳುಗಳನ್ನು ಸರಿಸಿ ನಾಯಿ ಬೊಗಳಿತು. ಕೊರಗನು ಬಂದ ಆಗಂತುಕರನ್ನು ಗುರುತಿಸುವ ಮೊದಲೆ ಒಳಗೆ ಓಡಿ ಸುದ್ದಿ ಕೊಟ್ಟನು. ಹೊರಗೆ ಜಗಲಿಗೆ ಬಂದ ಅಂತಕ್ಕ "ಅಂತೂ ಕಡೆಗೂ ಬಂದಿರಲ್ಲ?"

ಕಿಟ್ಟಯ್ಯ ವಯಸ್ಸಿನಲ್ಲಿ ಇನ್ನೂ ಇಪ್ಪತ್ತೈದನ್ನೂ ದಾಟಿರಲಿಲ್ಲ. ಅಷ್ಟರಲ್ಲಿಯೆ ಅವನಿಗೆ ಎರಡು ಮದುವೆಗಳಾಗಿ ಇಬ್ಬರು ಹೆಂಡಿರೂ ತೀರಿಕೊಂಡಿದ್ದರು. ಮೊದಲನೆಯ ಹೆರೆಗೆಯ ಅನಂತರವೆ ತೀರಿಕೊಂಡಿದ್ದಳು. ಎರಡನೆಯವಳಿಗೆ ಒಂದು ಹೆಣ್ಣೂ ಹುಟ್ಟಿದ ಒಂದೂವರೆ ವರ್ಷದೊಳಗಾಗಿ ಮತ್ತೊಂದು ಗಂಡು ಹುಟ್ಟಿ, ಬಾಲೆ ಬಾಣಂತಿಯರು ಅದನ್ನೆಲ್ಲ ತಿಳಿದಿದ್ದ ಅಂತಕ್ಕ, ಅನಂತಯ್ಯ ಊರಿಗೆ ಹೋಗುವಾಗ್ಸ, ಅವರೊಡನೆ ಹೇಳಿಕಳಿಸಿದ್ದಳು, ಕಿಟ್ಟಯ್ಯನನ್ನೂ ತಮ್ಮ ಜೊತೆಯಲ್ಲಿ ಕರೆತರಲು. ತಕ್ಕ ಮಟ್ಟಿಗೆ ಹೊಟ್ಟೆಬಟ್ಟೆಗೆ ಏನೂ ಕಡಿಮೆಯಿಲ್ಲದಷ್ಟು ಆಸ್ತಿವಂತನಾಗಿದ್ದ ಸೋದರಳಿಯನಿಗೆ ಕಾವೇರಿಯನ್ನು ಕೊಟ್ಟು ಮದುವೆಮಾಡಿ, ಜನರ ಬಾಯಿಗೆ ಬೀಳುವುದನ್ನು ತಪ್ಪಿಸಿಕೊಳ್ಳುವ ಉದ್ದೇಶ ಅಂತಕ್ಕಗೆ.

"ಅವಳೇನು ಸಣ್ಣ ಹುಡುಗಿಯೆ? ಮದುವೆ ಮಾಡಿದ್ದರೆ ಮೂರು ಮಕ್ಕಳ ತಾಯಿ ಆಗುತ್ತಿದ್ದಳು! ಆದರೂ ಸುಮ್ಮನೆ ಚೆಲ್ಲು ಹರಿಯುತ್ತಿರುತ್ತಾಳೆ.... ಪರಿಕಾರ ಹಾಕುತ್ತಿದ್ದಾಗ ಹೇಗೆ ಆಡುತ್ತಿದ್ದಳೊ ಹಾಗೆಯೆ ಆಡುತ್ತಿರುತ್ತಾಳೆ ಕಂಡಕಂಡವರೊಡನೆ... ತೆಳ್ಳಗೆ ಬೆಳ್ಳಗೆ ಚೆನ್ನಾಗಿ ಇದ್ದಾಳೆ ಎಂದು ಎಲ್ಲರೂ ಅವಳನ್ನು ಮುದ್ದುಮಾಡುವವರೆ ಆಗಿದ್ದಾರೆ.... ಏನ್ನಾದರೂ ಒಂದಾದರೆ ಕಿಸಾಕೊಳ್ಳಿ ಆವಾಗ ಗೊತ್ತಾಗುತ್ತದೆ, ಅಂತಕ್ಕಗೆ ಋತುವಾದ ಮೇಲೆ ಹೆಣ್ಣು ಮಕ್ಕಳನ್ನು ಮದುವೆ ಮಾಡದೆ ಇಷ್ಟು ದಿನ ಯಾರಾದರೂ ಮನೆಯಲ್ಲಿ ಇಟ್ಟುಕೊಳ್ಳೂತ್ತಾರೆಯೇ?...."ಹೀಗೆಲ್ಲ ಜನರು ಆಡಿಕೊಳ್ಳತೊಡಗಿದ್ದರು, ಕಾವೇರಿಯ ವಿಚಾರವಾಗಿ

ಆ ವಿಷಯದಲ್ಲಿ ತಾಯಿ ಮಗಳಿಗೆ ಸೂಕ್ಷ್ಮವಾಗಿ ಎಚ್ಚರಿಕೆ ಕೊಟ್ಟಿದ್ದಳು, ನಿಜ. ಆದರೆ ಒಡೆಯರೂ ಅನ್ನದಾತರೂ ಕಷ್ಟಕ್ಕೆ ಬೇಕಾದವರೂ ಆಗಿ, ಹಿಂದಿನಿಂದಲೂ ತನಗೂ ತನ್ನ ಬಾಳದೆ ಹೋದ ಗಂಡ ಸುಬ್ಬಣ್ಣ ಸೆಟ್ಟರಿಗೂ ಆಪ್ತರಾಗಿದ್ದ ಶ್ರೀಮಂತ ಮನೆತನದ ಗೌರವಸ್ಥ ಯುವಕರು, ಬೆಟ್ಟಳ್ಳಿ ಕಲ್ಲಯ್ಯಗೌಡರ ಮಗ ದೇವಯ್ಯನಂಥವರು, ಮನೆಗೆ ಬಂದರೆ ಬೇಡ ಅನ್ನುವುದಕ್ಕಾಗುತ್ತದೆಯೆ? ಬಹುಕಾಲದ ಪರಿಚಯದಿಂದ ಸ್ನೇಹಪೂರ್ವಕವಾಗಿ

ಮಾತಾಡಿಸಿದರೆ, ವರ್ತಿಸಿದರೆ, ಏನನ್ನಾದರೂ ಸ್ನೇಹಪೂರ್ವಕವಾಗಿ ಉಡುಗೋರೆ ತಂದಿದ್ದರೆ, ಬೇಡ ಎಂದು ನಿಷ್ಠುರವಾಗಿ ಹೇಳುವುದಕ್ಕಾಗುತ್ತದೆಯೇ? ಮಗಳ ಮೇಲೆ ಮೂರು ಹೊತ್ತು ಕಾವಲು ಕೂರುವುದಕ್ಕಾಗುತ್ತದೆಯೇ? ಎಷ್ಟಂದರೂ ಅವಳೂ ಪ್ರಾಯಕ್ಕೆ ಬರುತ್ತಿರುವ ಹುಡುಗಿ. ಪ್ರಾಯದ ಹುಡುಗರೊಡನೆ, ಒಂದೆರಡು ವಿನೋದದ ಮಾತಾಡಿ, ಕುಶಾಲು ಮಾಡುವುದು ಬೇಡ ಎಂದರೆ, ಮೇಲುಮೇಲಕ್ಕೆ ಹೂ ಅಂದರೂ, ನಿಜವಾಗಿಯೂ ಸುಮ್ಮನಿರುತ್ತಾಳೆಯೇ?.... ತನ್ನ ಪ್ರಾಯದ ಕಾಲದಲ್ಲಿ ಅಂತಹ ಅನುಭವಗಳಿಗೆ ಒಳಗಾಗಿದ್ದ ಅಂತಕ್ಕನ ಅಂತರಂಗ ಇನ್ನೂ ಮುಂದುವರಿದು ಹೇಳಿಕೊಂಡಿತ್ತು: ಸುಮ್ಮನಿರಲು ಖಾರ, ಉಪ್ಪು, ಹುಳಿ ತಿನ್ನುವ ಮನುಷ್ಯ ಮಾತ್ರದವರಿಗೆ ಸಾಧ್ಯವೇ?"

ಆವೊತ್ತು ರಾತ್ರಿ ಅಳಿಯನ ಉಪಚಾರಾರ್ಥವಾಗಿ ಔತಣದ ಊಟ ಸಿದ್ಧವಾಗುವುದೇ ಹೊತ್ತಾಯಿತು. ಅದರಲ್ಲಿ ಕಾವೇರಿ ತಾಯಿಗೂ ಕೊರಗನಿಗೂ ನೆರವಾದಳು. ಆದರೆ ಅದು ಮನಃಪೂರ್ವಕವಾಗಿ ಆಗಿರಲಿಲ್ಲ. ಮೊದಲನೆಯದಾಗಿ, ಅಂದಿನ ರಾತ್ರಿಯೆ ಮಿಶನ್ ಸ್ಕೂಲಿನಲ್ಲಿ ತನಗೆ ಪುಡಿಸಾಬರು ಉಂಗುರ ಕೊಡುವುದೆಂದು ಗೊತ್ತಾಗಿದೆ ಎಂಬುದನ್ನು ಚೇಂಕ್ರ ಮಧ್ಯಾಹ್ನವೆ ತಿಳಿಸಿಹೋಗಿದ್ದನು. ಅನಿರೀಕ್ಷಿತವಾಗಿ ಬಂದಿದ್ದ ಅತಿಥಿಗಳಿಂದ ಅದಕ್ಕೆಲ್ಲಿ ಭಂಗವುಂಟಾಗುತ್ತದೆಯೋ ಎಂಬ ಅಶಂಕೆ ಕಾಡತೊಡಗಿತ್ತು ಕಾವೇರಿಯನ್ನು. ಎರಡನೆಯದಾಗಿ, ತನಗೆ ಸ್ವಲ್ಪವೂ ಇಷ್ಟವಿಲ್ಲದ ಕಿಟ್ಟಯ್ಯಸೆಟ್ಟಿಯನ್ನು ತನ್ನ ಗಂಡನಾಗುವಂತೆ ಮಾಡಲು ಸಂಚು ಮಾಡಿದ್ದಾರಲ್ಲಾ ಎಂಬುದು. ಕಿಟ್ಟಯ್ಯನನ್ನು, ಅವನು ಮದುವೆಯಾಗುವ ಮುನ್ನ ಹುಡುಗನಾಗಿದ್ದಾಗ ನೋಡಿದ್ದಳು. ಅವನ ಉಬ್ಬು ಹಲ್ಲು, ಕೋಳಿಯ ಕುತ್ತಿಗೆಯಂತೆ ಉದ್ದವಾಗಿದ್ದ ಕುತ್ತಿಗೆ, ಗಳುವಿನಂತಿದ್ದ ಸಪುರ ಕಾಲು-ಇವೆಲ್ಲ ಅವಳಿಗೆ ಹಿಡಿಸಿರಲಿಲ್ಲ. ಅದರಲ್ಲಿಯೂ ದೇವಯ್ಯನಂಥವರ ಭದ್ರಾಕಾರ ಮತ್ತು ಸ್ಫುರದ್ರೂಪಗಳನ್ನು ನೋಡಿ ಮೆಚ್ಚಿದ ಅವಳಿಗೆ ಕಿಟ್ಟಯ್ಯ ಜಿಗುಪ್ಸೆಗೆ ಕಾರಣನಾಗಿದ್ದನು. ಆಗೊಮ್ಮೆ ವಿನೋದಕ್ಕಾಗಿ ಅವಳ ತಾಯಿ "ನಮ್ಮ ಕಿಟ್ಟಯ್ಯನನ್ನು ಮದುವೆಯಾಗ್ತಿಯೇನೆ?" ಎಂದು ಕೇಳಿದ್ದಕ್ಕೆ, "ಅವನ್ನ ಮದುವೆಯಾಗುವುದಕ್ಕಿಂತ ಹಾಳುಬಾವಿಗಾದ್ರೂ ಹಾರುತ್ತೀನಿ!" ಆಮೇಲೆ ಕಿಟ್ಟಯ್ಯ ಕನ್ನಡ ಜಿಲ್ಲೆಯಲ್ಲಿಯೆ ಮದುವೆಯಾಗುವ ಸುದ್ದಿ ಕೇಳಿ, ತನಗೆ ಶನಿ ತೊಲಗಿತಲ್ಲಾ ಎಂದು ಸಂತೋಷಪಟ್ಟಿದ್ದಳು. ಅವನ ಮೊದಲನೆ ಹೆಂಡತಿ ಹೆತ್ತು ಸತ್ತಾಗಲೂ ಕಾವೇರಿಗೆ ಹೆದರಿಕೆಯಾಗಿತ್ತು, ಮತ್ತೆ ಎಲ್ಲಿ ತನಗೆ ಶನಿ ತಗಲಿಕೊಳ್ಳುತ್ತದೆಯೆ ಎಂದು. ಆದರೆ ಶನಿ ಗಟ್ಟದ ಮೇಲಕ್ಕೆ ಹತ್ತದೆ, ಗಟ್ಟದ ಕೆಳಗೇ ಅವನಿಗೆ ಮತ್ತೊಂದು ಮದುವೆ ಮಾಡಿಸಿತ್ತು ಆ ಎರಡನೆಯ ಹೆಂಡತಿ ಸತ್ತು ಎರಡು ಮೂರು ವರ್ಷಗಳಾಗಿದ್ದರೂ ಅವನಿಗೆ ಹೆಣ್ಣು ಸಿಕ್ಕಿಲಿಲ್ಲ ಎಂಬ ಸುದ್ದಿ ಕಾವೇರಿಗೆ ಅನಿಷ್ಟಕರವಾಗಿತ್ತು. ಏಕೆಂದರೆ ಈಗ ಎಲ್ಲರೂ ತನ್ನನ್ನು ಮದುವೆಗೆ ಬಂದ ಹೆಣ್ಣು ಎಂಬ ಅರ್ಥದಲ್ಲಿಯೆ ಕಾಣತೊಡಗಿದ್ದರು. ಅದೂ ಒಂದು ಒಳಕಾರಣವಾಗಿತ್ತು, ಕಾವೇರಿ ಶ್ರೀಮಂತ ಪ್ರತಿಷ್ಠಾವಂತರ ಮನೆತನದವನಾಗಿದ್ದ ದೇವಯ್ಯನಿಗೆ ಹತ್ತಿರ ಹತ್ತಿರ ಸರಿಯುವುದಕ್ಕೆ, ತನ್ನ ಬದಕನ್ನು ಅವನ ಬದುಕಿನೊಡನೆ ಸಾವಿರಪಾಲು ಹರ್ಷದಾಯಕವಾಗಿತ್ತು ಅವಳಿಗೆ-ದೇವಯ್ಯಗೌಡರು ಇಟ್ಟುಕೊಂಡವಳಾಗಿರುವುದು! ಅದರಲ್ಲಿಯೂ ಬಂದ ನೆಂಟರಿಗಾಗಿ ಹರಿವಾಣದಲ್ಲಿ ಇಟ್ಟಿದ್ದ ಎಲೆಡಕೆ ಹಾಕಿಕೊಂಡು ಜಗಿಯುತ್ತಿದ್ದ ಕಿಟ್ಟಯ್ಯಸೆಟ್ಟಿಯ ಹುಳುಹಿಡಿದು ವಿಕಾರವಾಗಿ ಅಸ್ತವ್ಯಸ್ತ ಕಾವೇರಿಗೆ ಅಮೇಧ್ಯ ಮೆಟ್ಟಿದ್ದಕ್ಕಿಂತಲೂ ಅಸಹ್ಯಕರವಾಗಿ ತೋರಿತ್ತು ತಾಯಿಯ ಆ ಸೋದರಳಿಯನೊಡನೆ ಒಡಬಾಳು.

ರಾತ್ರಿ ಊಟವಾಗುವುದಕ್ಕೆ ಮೊದಲೂ ಆಮೇಲೆಯೂ ಅಂತಕ್ಕ ಅನಂತಯ್ಯ ಕಿಟ್ಟಯ್ಯರು ಲೋಕಜೀವನ, ಗೃಹಕೃತ್ಯ ಮತ್ತು ಬಂಧು ಬಾಂಧವರು, ಭೂತ ಮತ್ತು ಭವಿಷ್ಯತ್ತು-ಅನೇಕ ವಿಷಯ ಮಾತಾಡುತ್ತಿದ್ದರು. ತಾವು ತಮ್ಮ

ಮುದಿತಾಯಿಯನ್ನು ನೋಡಲು ಊರಿಗೆ ಹೋದಮೇಲೆ ಕೋಣುರು, ಹೂವಳ್ಳಿ, ಹಳೆಮನೆ, ಸಿಂಭಾವಿ, ಬೆಟ್ಟಳ್ಳೀ ಮತ್ತು ಮೇಗರವಳ್ಳಿಗಳಲ್ಲಿ ಜರುಗಿದ ಸಂಗತಿಗಳನ್ನೆಲ್ಲ ಕೇಳಿ ಕೇಳಿ, ಮತ್ತೆ ಮತ್ತೆ ಪ್ರಶ್ನೆಹಾಕಿ, ತಿಳಿದುಕೊಂಡರು. ಮುಕುಂದಯ್ಯ ಹೂವಳ್ಳಿಗೆ ಮನೆಅಳಿಯನಾಗಿ ಹೋಗಿ ನೆಲಸಿರುವುದನ್ನೂ, ಕೋಣುರು ಮನೆ ಜಮೀನುಗಳ ಹಿಸ್ಸೆ ತಮ್ಮ ಆಗಮನಕ್ಕಾಗಿಯೆ ಇದಿರು ನೋಡುತ್ತಿರುವ ವಿಚಾರವನ್ನು ಕೇಳಿದಾಗ ಅವರು ದೀರ್ಘಕಾಲ ಚಿಂತಾಮಗ್ನರಾಗಿದ್ದರು. ಅಂತಕ್ಕ ಅವರ ಮುದಿ ಅಬ್ಬೆಯ ಯೋಗಕ್ಷೇಮವನ್ನು ವಿಚಾರಿಸಿದಾಗ ಅವರು ಹೇಳಿದರು ಹನಿಗಣ್ಣಾಗಿ: 'ಅಂತೂ ಅದು ನಾನು ಹೋಗುವವರೆಗೆ ಕಾದಿದ್ದುದೇ ನನ್ನ ಪುಣ್ಯ. ನಾನು ಬರುವುದನ್ನೆ ಕಾಯುತ್ತಿತ್ತೆಂದು ತೋರುತ್ತದೆ ಅದರ ಜೀವ. ನಾನು ಹೋದ ಮರುದಿವಸವಲ್ಲ ಅದರ ಮರುದಿವಸವೆ ಅದರ ಪ್ರಾಣ ದೇವರ ಪಾದ ಸೇರಿತು! ಅದರದ್ದೇ ದಿನಾಗಿನ ಬಜ್ಜಗಿಜ್ಜ ಎಲ್ಲಾ ಪೂರೈಸಿ ಬರುವುದೇ ಇಷ್ಟು ತಡವಾಯಿತು. ರಂಗಪ್ಪಗೌಡರು ಏನು ತಿಳಿದುಕೊಂಡಿದಾರೆಯೋ?..."ಅನಂತಯ್ಯ ಕುಂಡೆಗೆ ಕಾಲು ಮುಟ್ಟಿಸಿಯೆ ಬಿಟ್ಟ!" ಎಂದು ಎಷ್ಟು ಜನರ ಕೈಲಿ ಆಗಲೆ ಹೇಳಿಬಿಟ್ಟಿದ್ದಾರೆಯೋ?"

ಆ ಮಾತುಕತೆಗಳಲ್ಲಿ ಬಹುಬಾಲು ಕಾವೇರಿಗೆ ನೀರಸವಾಗಿತ್ತು: ಕೆಲವು ಪಾಲು ಆಯಾ ಸಂದರ್ಭದ ಅಜ್ಞಾನದಿಂದಾಗಿ ಅರ್ಥವಾಗಿರಲಿಲ್ಲ. ಆದರೆ ಕಿಟ್ಟಯ್ಯಸೆಟ್ಟರನ್ನು ಮೇಗರವಳ್ಳಿಗೆ ಕರೆತಂದಿದ್ದ ಮುಖ್ಯಕಾರಣದ ವಿಷಯದಲ್ಲಿ ಮಾತ್ರ ಕಾವೇರಿ ಅನಾಸಕ್ತೆಯಾಗಿರಲು ಸಾಧ್ಯವಿರಲಿಲ್ಲ. ತನ್ನನ್ನು ಅವನಿಗೆ ಕೊಟ್ಟು ಲಗ್ನಮಾಡುವ ವಿಚಾರ, ಸ್ವಲ್ಪವೂ ಸಂದೇಹಕ್ಕೆ ಅವಕಾಶವಿಲ್ಲದೆ, ದೃಡವಾಗಿ ನಿರ್ಧರಿಸಲ್ಪಟ್ಟಿದೆ. ಎಂಬುದು ಅವಳಿಗೆ ಮರಣದಂಡನೆ ವಿಧಿಸಿದಷ್ಟು ಸುಸ್ಪಷ್ಟವಾಗಿತ್ತು. ಅವಳಿಗೆ ಏನು ಮಾಡುವುದು ತೋರಲಿಲ್ಲ. ಬೋನಿನೊಳಗೆ ಸಿಕ್ಕಿಬಿದ್ದ ಇಲಿಯಂತೆ ಅವಳ ಮನಸ್ಸು ಸುಮ್ಮನೆ ಅತ್ತಿಂದಿತ್ತ ಇತ್ತಿಂದತ್ತ ಪರಿದಾಡತೊಡಗಿತ್ತು. ಇದ್ದಕ್ಕಿದ್ದ ಹಾಗೆ ಅವಳಿಗೆ ಹೂವಳ್ಳಿ ಚಿನ್ನಕ್ಕನ ನೆನಪಾಯಿತು. ತನ್ನದಕ್ಕಿಂತಲೂ ಹೆಚ್ಚಿನ ಸಂಪ್ರದಾಯಬದ್ದವಾದ ಬೋನಿನಲ್ಲಿ ಸಿಕ್ಕಿಕೊಂಡಿದ್ದ ಅವರು ಮದುವೆ ನಿಶ್ಚಯವಾಗಿ ಇನ್ನೇನು ಲಗ್ನದ ಮುಹೂರ್ತವೂ ಹತ್ತಿರ ಬಂತು ಎನ್ನುವಾಗಲೂ, ಹೇಗೆ ಧೈರ್ಯಮಾಡಿ ಆ ಅನಾಹುತದಿಂದ ತಪ್ಪಿಸಿಕೊಂಡಿದ್ದರು ಎಂಬುದನ್ನು ನೆನೆದಳು. ಅವರಿಗಿಂತಲೂ ಹೆಚ್ಚು ಸ್ವತಂತ್ರ ವಾತಾವರಣದಲ್ಲಿ ಬೆಳೆದಿರುವ ತನಗೆ, ಒದಗಲಿರುವ, ಆದರೆ ಇನ್ನೂ ಸ್ವಲ್ಪ ದೂರವಾಗಿರುವ, ಅನಾಹುತದಿಂದ ಪಾರಾಗಲು ಏಕೆ ಸಾಧ್ಯವಿಲ್ಲ?.

ಹಿಂದೊಮ್ಮೆ ಹಳೆಮನೆ ಸುಬ್ಬಣ್ಣ ಹೆಗ್ಗಡೆಯವರು ಐಗಳು ಅನಂತಯ್ಯನವರೊಡನೆ ಹುಲಿಕಲ್ಲು ಗುಡ್ಡ ಹತ್ತಿ, ಪ್ರಜ್ಞೆತಪ್ಪಿ, ದೋಲಿಯಲ್ಲಿ ತಮ್ಮ ಮನೆಗೆ ಬಂದಿದ್ದಾಗ, ತನ್ನ ತಾಯಿಯೊಡನೆ ಮಾತಾಡುತ್ತಾ, ಚಿನ್ನಕ್ಕನ್ನನ್ನು ಸಿಂಬಾವಿ ಭರಮೈಹೆಗ್ಗಡೆಯವರಿಗೆ ಕೊಟ್ಟು ಲಗ್ನವಾಗುವ ವಿಷಯದ ಪ್ರಸ್ತಾಪ ಬಂದಾಗ, ಅಂತಕ್ಕ ಹೂವಳ್ಳಿ ಚಿನ್ನಮ್ಮಗೂ ಕೋಣುರು ಮುಕುಂದಯ್ಯನಿಗೂ ಬಾಲ್ಯದಿಂದಲೂ ಇರುವ ಪ್ರಣಯ ಸಂಬಂಧದ ನೆನಪು ಮಾಡಿದಾಗ, ಮುದುಕ ಹೆಗ್ಗಡೆಯವರು ಹೇಳಿದ್ದ ಮಾತೂ ಮಾತಿನ ರೀತಿಯೂ ನೆನಪೂ ಮಾಡಿದಾಗ, ಮುದಕ ಹೆಗ್ಗಡೆಯವರು ಹೇಳಿದ್ದ ಮಾತೂ ಮಾತಿನ ರೀತಿಯೂ ಕಾವೇರಿಯ ಮುಂದೆ ನಿನ್ನೆಯೊ ಮೊನ್ನೆಯೊ ನಡೆದಂತೆ ಬಂದಿತು! "ಈ ಹುಡುಗರ ಆಟಾನೆಲ್ಲ ಲೆಕ್ಕಕ್ಕೆ ತಂಗೊಂಡ್ರೆ ಅಂದಹಾಗೆ ಆಯ್ತು ಬಿಡು: ಏನು ಮನೇಲಿ ಹೇಳೋರು ಕೇಳೋರು ಹಿರೇರು ದೊಡ್ಡೋರು ಯಾರು ಇಲ್ಲೇನು? ಇವರಿವರೇ ಗೊತ್ತು ಮಾಡಿಕೊಳ್ಳಾಕೆ? ನಾವೇನು ಕಿಲಸ್ತರೆ?...

ಆಗ ಸುಬ್ಬಣ್ಣ ಹೆಗ್ಗಡೆಯವರು ತಾಯಿಯ ಬೆನ್ನ ಹಿಂದೆ ನಿಂತಿದ್ದ ತನ್ನನ್ನೆ ಆ ವಿಚಾರದಲ್ಲಿ ತನ್ನ ಅಭಿಪ್ರಾಯ ಏನು ಎಂದು ಬರಿಯ ವಿನೋದಕ್ಕಾಗಿಯೆ ಕೇಳಿದ್ದರು. ತಾನು ಏನೂ ಉತ್ತರ ಕೊಡದೆ ಮುಂಡಿಗೆಯ ಹಿಂದೆ ಅವಿತುಕೊಂಡಿದ್ದಳು. ಈಗ? ತನಗೇ ಅಂತಹ ಸಂಕಟ ಪ್ರಾಪ್ತಿಯಾದಾಗ? ಕಾವೇರಿ ಚಿಂತಿಸಿದಳು: ಯಾವ ಮುಂಡಿಗೆ ಹಿಂದೆ ಅವಿತುಕೊಳ್ಳುವುದು? ತನ್ನನ್ನು ಮರೆಹೊಗಿಸಿಕೊಳ್ಳುವ ಮುಂಡಿಗೆ ಎಲ್ಲಿದೆ? ಚಿನ್ನಕ್ಕಗಾದರೂ ಮುಕುಂದಯ್ಯ ಇದ್ದರು. ತನಗೆ? ದೇವಯ್ಯಗೌಡರೂ ಉಂಗುರದ ಅನುಮಾನದಿಂದ ವಿಮುಖರಾಗಿಬಿಟ್ಟಿದ್ದಾರೆ!.... ಚೀಂಕ್ರ ಎಲ್ಲರೂ ಮಲಗಿದ ಮೇಲೆ ಹಿತ್ತಲುಕಡೆ ದನದ ಕೊಟ್ಟಿಗೆಯ ಹತ್ತಿರಬಂದು, ದನದ ಕೋಡು ಕಂಬಕ್ಕೆ ಬಡಿದಂತೆ ಸದ್ದು ಮಾಡುತ್ತಾನಂತೆ....ಇವೊತ್ತು ಇವರೆಲ್ಲಾ ಎಷ್ಟು ಹೊತ್ತಿನ ಮೇಲೆ ಮಲಗುತ್ತಾರೋ? ನಾನೂ ಹೊತ್ತಾಗಿ ಮಲಗಿದರೆ? ಎಲ್ಲಿಯಾದರೂ ಚೀಂಕ್ರ ಬರುವ ಸಮಯಕ್ಕೆ ಸರಿಯಾಗಿಬ ನನಗೆ ಜೋರಾಗಿ ನಿದ್ದೆ ಬಂದುಬಿಟ್ಟರೆ? ಇಲ್ಲ, ಇವೊತ್ತು ಏನಾದರೂ ನಿದ್ದೆ ಮಾಡುವುದೆ ಇಲ್ಲ; ಎಚ್ಚರವಾಗಿಯೆ ಇರುತ್ತೇನೆ... ಆ ಸಾಬು ಏನಾದರೂ ಕೆಟ್ಟ ಮನಸ್ಸು ಇಟ್ಟಿದ್ದಾನೆಯೊ? ಏನಾದರೂ ಮಾಡಿಬಿಟ್ಟರೆ? ಏನು ಮಾಡಿಯಾನು ಮಹಾ? ಚೀಂಕ್ರ ಜೊತೆಗಿರುವುದಿಲ್ಲವೆ? ಹಾಗೇನಾದರೂ ಮಾಡಿದರೆ, ಕತ್ತಿಯಲ್ಲಿ ಕಡಿದೆ ಬಿಡುತ್ತಾನೆ ಸಾಬಿಯನ್ನು! ಒಂದು ವೇಳೆ ಸ್ವಲ್ಪ ಮೈಮುಟ್ಟಿ ಮುದ್ದಾಡಿದರೂ ಚಿಂತೆಯಿಲ್ಲ.... ಇತರರರೂ ಕೆಲವರು ಹಾಗೆ ನನ್ನನ್ನು ಪ್ರೀತಿಗಾಗಿ ಮುದ್ದಾಡಿಲ್ಲವೆ?.... ಏನಾದರೂ ಆಗಲಿ! ನನ್ನ ಬದಕು ಹಸನಾಗಬೇಕಾದರೆ ಆ ಉಂಗುರ ಮತ್ತೆ ನನ್ನ ಕೈ ಸೇರಬೇಕು. ಇಲ್ಲದಿದ್ದರೆ ಸಾಬಿ ಮಾಡಬಹುದಾದ ಕೇಡಿಗಿಂತಲೂ ಸಾಸಿರಮಡಿ ಕೇಡು ನನಗೆ ಕಟ್ಟಿಟ್ಟ ಬುತ್ತಿ....

ರಾತ್ರಿ ಅವರೆಲ್ಲ ಮಾತು ಮುಗಿಸಿ ಮಲಗುವುದು ತುಸು ಹೊತ್ತೇ ಆಗಿತ್ತು. ಇನ್ನೂ ಹೊತ್ತಾಗುತ್ತಿತ್ತೊ ಏನೊ? ಆದರೆ ಕಿಟ್ಟಯ್ಯಸೆಟ್ಟರು ಪದೇ ಪದೇ ಆಕಳಿಸತೊಡಗಿದ್ದರು. ಎಲಡಕೆ ಹಾಕಿದ್ದ ಕೆನ್ನಾಲಿಗೆಯನ್ನೂ ಹುಳುತಿಂದು ಅಸಹ್ಯವಾಗಿದ್ದ ದಂತಪಂಕ್ತಿಯನ್ನೂ ಪ್ರದರ್ಶಿಸುತ್ತ ಆಕಳಿಕೆಯಿಂದಲೆ ಉಕ್ಕಿದ್ದ ಕಣ್ಣೀರನ್ನು ಮತ್ತೆ ಮತ್ತೆ ಪಂಚೆಯ ಸೆರಗಿನಿಂದ ಒರೆಸಿಕೊಳ್ಳುತ್ತಿದ್ದರು, ರೋಮಮಯವಾಗಿದ್ದ ತಮ್ಮ ತೊಡೆ ಬುಡದವರೆಗೂ ಕಾಣುವುದನ್ನು ಒಂದಿನಿತೂ ಲೆಕ್ಕಿಸದೆ. ಅದನ್ನು ಕಂಡು ಅನಂತಯ್ಯ ಹೇಳಿದ್ದರು: “ಕಿಟ್ಟಯ್ಯಗೆ ಪೂರ್ತಿ ಸಾಕಾಗಿದೆ, ಹಾದಿ ನಡೆದು. ಅದರಲ್ಲಿಯೂ ಕೊನೆಕೊನೆಗೆ ಸ್ವಲ್ಪ ಓಡಿಓಡಿಯೆ ದೌಡು ಬರಬೇಕಾಯ್ತು, ಕತ್ತಲಾಗೋಕೆ ಮೊದಲೇ ಮನೆ ಸೇರುವ ಅಂತಾ. ಇವೊತ್ತು ಅಮಾಸೆ, ಕದ್ದಿಂಗಳು. ಪೂರಾ ಕೆಟ್ಟಕಾಲವಂತೆ! ರಾತ್ರಿ ಭೂತ ಪಿಶಾಚಿದೆಯ್ಯ ತಿರಗ್ತವೆ ಅಂತಾ ನಮ್ಮ ಕಿಟ್ಟಯ್ಯಗೆ ಪೂರಾ ಹೆದರಿಕೆ!....ನನಗೆ ಕಳ್ಳರ ಹೆದರಿಕೆ; ಇವನಿಗೆ ದೆವ್ವದ ಭಯ.... ಮೇಗರೊಳ್ಳಿಗೆ ಕಾಲಿಟ್ಟಮೇಲೆಯೇ ನಾವು ಮೆಲ್ಲಗೆ ಕಾಲು ಹಾಕಿದ್ದು....”

ಮನೆಯಲ್ಲಿ ನಿಃಶಬ್ದವಾಗಿತ್ತು; ಕಗ್ಗತ್ತಲೆ ಕವಿದಿತ್ತು. ಮಳೆಗಾಲದ ಅಮವಾಸ್ಯೆಯಾಗಿದ್ದರಿಂದ ಮನೆಯ ಹೊರಗೆ ಯಾವ ವಸ್ತುವನ್ನೂ ಗುರುತಿಸಲು ಅಸಾಧ್ಯವಾಗುವಂತೆ ಕಗ್ಗತ್ತಲೆ ಕವಿದಿರುವಾಗ ಇನ್ನು ಮನೆಯ ಒಳಗೆ ಕೇಳಬೇಕೆ? ಮಲಗಿದ್ದವರು ಉಸಿರೆಳೆದುಕೊಳ್ಳುವ ಸದ್ದೂ ಆ ನಿಃಶಬ್ದ ಕತ್ತಲೆಯ ಬುಸುಗುಟ್ಟುವಿಕೆಯೆಂಬಂತೆ ಭಯಾನಕವಾಗಿತ್ತು. ಕಗ್ಗತ್ತಲೆಯನ್ನೆ ನೋಡುತ್ತಾ ನಿಃಶಬ್ದತೆಯನ್ನೆ ಆಲಿಸುತ್ತಾ ಕಾವೇರಿ ನಿಶ್ಚಲವಾಗಿ ಮಲಗಿದ್ದಳು, ಹಿತ್ತಲುಕಡೆಯ ದನದ ಕೊಟ್ಟಿಗೆಯ ದಿಕ್ಕಿಗೆ ಕಿವಿಯಾಗಿ. ಒಮ್ಮೊಮ್ಮೆ ದನವೂ ಎಮ್ಮೆಯೋ ಸೀನಿದರೆ, ಅಥವಾ ಕೊಳಗಿನ ಸದ್ದು ಮಾಡಿದರೆ ಕಾವೇರಿಗೆ ಮೈಯೆಲ್ಲ ಬಿಸಿಯಾದಂತಾಗಿ, ಹೊದೆದಿದ್ದ ಶಾಲನ್ನು ಸರಿಸುತ್ತಿದ್ದಳು, ಮೈ ತಣ್ಣಗಾಗಲಿಕ್ಕೆ.

ನಿದ್ದೆ ಮಾಡದಿದ್ದರೆ ಅಥವಾ ನಿದ್ದೆ ಬರದಿದ್ದರೆ ಇರಳು ಅದೆಷ್ಟು ದೀರ್ಘವೋ? ಕಾಯುವ ನಿಮಿಷನಿಮಿಷವೂ ಕಾವೇರಿಗೆ ಯುಗದೀರ್ಘವಾಗಿತ್ತು!

ಬರಬರುತ್ತಾ ಮನಸ್ಸಿನ ನೆಲದಲ್ಲಿ ನಡೆದಾಡುತ್ತಿದ್ದ ಆಲೋಚನೆಗಳು ಕನಸಿನ ನೀರಿನಲ್ಲಿ ತೇಲತೊಡಗಿದವು. ಭವಗಳಿಗಿದ್ದ ಸ್ಥೂಲತೆ ತೊಲಗಿ, ಗರಿ ಹಗುರವಾಗಿ ಕ್ರಮ ತೃಪ್ತಿ ಹಾರಾಡತೊಡಗಿದುವು, ಗುರುಲಘು ಭೇದವಿಲ್ಲದೆ ಅಸ್ತವ್ಯಸ್ತವಾಗಿ ಅಡ್ಡಾಡುವಂತೆ:

ಒಡ್ಡಿಯಲ್ಲಿ ಕೋಳಿಯ ಹೇಟೆಯನ್ನು ಹಿಡಿದೆತ್ತಿಕೊಂಡು, ಆ ದಿನವೆ ಇಕ್ಕಲು ಮೊಟ್ಟೆ ಇದೆಯೋ ಇಲ್ಲವೋ ಎಂದು ಕಿರುಬೆರಳು ಹೆಟ್ಟಿ ನೋಡುತ್ತಿದ್ದಾಳೆ....

ಕೊರಗ ಹೇಳುತ್ತಿದ್ದಾನೆ "ಸುಳ್ಳು ಹೇಳೋ, ಸುಕ್ರ, ಅಂದರೆ "ವಾಟೆ ಕೊಳವೀಲಿ ಒಂಬತ್ತು ಆನೆ ಹೋಗಿ, ಮರಿ ಆನೆ ಬಾಲ ಸಿಕ್ಕೊಂಡ್ತು" ಅಂದನಂತೆ!" ಹಿ ಹ್ಹಿ ಹ್ಹಿ ಎಂದು ಥಕ್ಕನೆ ಕಣ್ಣು ಬಿಟ್ಟಳು ಕಾವೇರಿ.

'ಅಯ್ಯೋ! ನಿದ್ದೆಮಾಡಿಬಿಟ್ಟಿದ್ದೆನಲ್ಲಾ?' ಎಂದುಕೊಂಡು ಪಕ್ಕದಲ್ಲಿ ಅದೇ ಉದ್ದೇಶದಿಂದ ಇಟ್ಟುಕೊಂಡಿದ್ದ ತಾಮ್ರದ ಚೆಂಬಿನಿಂದ ನೀರು ತೆಗೆದು ಕಣ್ಣುಗಳನ್ನು ಒದ್ದೆ ಮಾಡಿಕೊಂಡಳು

ಮತ್ತೆ ಆಲೋಚನೆ: ಮೊದಮೊದಲು ಸಕ್ರಮ, ತರುವಾಯ ಅಕ್ರಮ:

ನಾಳೆ ಅಲ್ಲ, ನಾಡಿದ್ದಲ್ಲ, ಆಚೆ ನಾಡಿದ್ದು ಗೌರಿಹಬ್ಬಕ್ಕೆ ಮುಂಚೆ ದೇವಯ್ಯಗೌಡರು ಬಂದಾಗ ನನ್ನ ಕೈಲಿ ಉಂಗುರ ಕಂಡು ಬೆರಗಾಗ್ಬೇಕು!... ಬರದೆ ಇರ್ತಾರೆಯೆ? ಹೋದ ವರುಷವು ಗೌರಿ ಹಬ್ಬಕ್ಕೆ ಎರಡು ದಿನ ಇದೆ ಅನ್ನುವಾಗ ಬಂದು, ಈಗ ನಾನು ಹೊದ್ದುಕೊಂಡು ಇರೋ ಶಾಲನ್ನೆ ಕೊಟ್ಟು....ಏನೆಲ್ಲ ಮಾಡಿ ಹೋಗಿದ್ದರಲ್ಲಾ? (ಕಾವೇರಿ ಅದನ್ನು ನೆನೆದು ಪ್ರತ್ಯಕ್ಷವೆಂಬಂತೆ ಚಿತ್ರಿಸಿಕೊಂಡು ಸೊಗಸಿದಳು)....ದೇವಯ್ಯಗೌಡರು ಕಿಲಸ್ತರ ಜಾತಿಗೆ ಸೇರಿದರೆ ನಾನೂ ಸೇರುತ್ತೇನೆ. ಆ ಜಾತಿಯಲ್ಲಿ ಉಂಗುರ ತೊಡಿಸಿದ ಮೇಲೆ ಮದುವೆಯಾದಂತೆಯೆ ಲೆಕ್ಕವಂತೆ! ಪಾದ್ರಿ ಹೇಳಿದ್ದರಲ್ಲವೆ?.... ಪಾಪ, ಚೀಂಕ್ರನ ಮೇಲೆ ಏನೆಲ್ಲ ಹೇಳುತ್ತಿದ್ದರು? ಎಷ್ಟು ಒಳ್ಳೆಯವನು ಅಂವ? ಅವನ ಹೆಂಡತಿಯನ್ನು ಕುತ್ತಿಗೆ ಹಿಸುಕಿ ಕೊಂದ ಎಂದು ಸುದ್ದಿ ಹುಟ್ಟಿಸಿದ್ದರಲ್ಲಾ?....ಮೊನ್ನೆ ಅವನ ಕೈಬೆರಳನ್ನೆ ಕಡಿದಿದ್ದಳಲ್ಲಾ ಯಾವಳೋ ಹಿಡಿಂಬಿ? ಬೆರಳಿಗೆ ಬಟ್ಟೆ ಸುತ್ತಿಕೊಂಡು, ಅಳುತ್ತಾ ನನ್ನ ಹತ್ತಿರ ದುಃಖ ತೋಡಿಕೊಂಡನಲ್ಲಾ? ಪಾಪ, ಅವನ ಮಕ್ಕಳ ಗೋಳು ಬೇಡವಂತೆ!....ನನ್ನ ಹತ್ತಿರ ದೇವಯ್ಯ ಗೌಡರು ಕೊಟ್ಟ ದುಡ್ಡು ಇದೆಯಲ್ಲಾ ಅದನ್ನೆಲ್ಲ ಚೀಂಕ್ರನಿಗೆ ಕೊಟ್ಟುಬಿಡುತ್ತೇನೆ, ಅವನ ಅವನ ಉಪಕಾರಕ್ಕಾಗಿ.... ಏ ಈ ನಾಯಿಗೆ ಏನು ಕಲಿಯೆ? ಹೇಂಟೆ ಮೇಲೆ ಹತ್ತಕ್ಕೆ ಹೊಗ್ತದಲ್ಲಾ!.... ಯೇಸುಸ್ವಾಮಿ ಒಂದೇ ಮೀನನ್ನು ಐದು ಸಾವಿರ ಜನಕ್ಕೆ ಹೊಟ್ಟೆ ತುಂಬ ಹಂಚಿಕೊಟ್ಟನಂತಲ್ಲಾ!.... ತ್ಯೂ! ಬ್ಯಾಡ ಸುಮ್ಮನಿರಿ! ಅಲ್ಲಿಗೆಲ್ಲ ಕೈ ಹಾಕಬ್ಯಾಡಿ!.... ಅಲ್ಲಿಗೆ ಮುತ್ತುಕೊಡಾದು ಬ್ಯಾಡ; ನೀವು ಕಚ್ಚಿಬಿಡ್ತೀರಿ!....

ಕೋಣೆಯ ಮೂಲೆಯಲ್ಲಿ ಕೊಬ್ಬರಿ ಸುಟ್ಟು ಕಟ್ಟಿ ಇಟ್ಟಿದ್ದ ಇಲಿಕತ್ತರಿ ಸಿಡಿದ ಸದ್ದಾಗಿ ಕಾವೇರಿ ಕುಮುಟಿ ಎಚ್ಚೆತ್ತಳು. ಸಿಕ್ಕಿಕೊಂಡಿದ್ದ ಇಲಿ ಚ್ಚಿ ಚ್ಚಿ ಚ್ಚಿ ಎಂದು ಕೂಗಿತು. ಅಭ್ಯಾಸ ಬಲದಿಂದ ಛೇ ಪಾಪ! ಎಂದುಕೊಂಡಳು ಕಾವೇರಿ. ಆದರೆ ಅಷ್ಟರಲ್ಲೆ ಅದರ ಸದ್ದು ನಿಂತಿತ್ತು. ಅದು ಸತ್ತುಹೋಯಿತೆಂದು ಸುಮ್ಮನಾದಳು….

ಯಾಕೆ ಇನ್ನೂ ಚೀಂಕ್ರ ಬರಲಿಲ್ಲ? ಮಳೆ ಬಂದಿತೆಂದು ಸುಮ್ಮನಾಗಿ ಬಿಡುತ್ತಾನೊ? ಆಗ ಮಳೆ ಬಂದಿದ್ದರೇನಾಯ್ತು? ಈಗ ನಿಂತಿದೆಯಲ್ಲ!….ಮೆಲ್ಲಗೆ ಎದ್ದು ಹೋಗಿ ಹಿತ್ತಲು ಕಡೆಯ ಬಾಗಿಲು ತೆರೆದು ನೋಡಲೇ?…ಕಾವೇರಿಗೆ ಅನಂತಯ್ಯ ಹೇಳಿದ್ದು ನೆನಪಾಯಿತು: ಇವೊತ್ತು ಅಮವಾಸ್ಯೆ, ಕೆಟ್ಟಕಾಲ. ಭೂತ ಪಿಶಾಚಿ ತಿರುಗುತ್ತವೆ? ಒಬ್ಬಳೆ ಎದ್ದು ಹೋಗಿ ಬಾಗಿಲು ತೆರೆದಾಗ ಭೂತಗೀತ ಕಾಣಿಸಿಕೊಂಡರೆ?….ಈಗ ಬೇಡ, ಚೀಂಕ್ರ ಬಂದಮೇಲೆ ಹೋಗ್ತೀನಿ. ಆಗ ಧೈರ್ಯಕ್ಕೆ ಅಂವ ಇರ್ತಾನೆ!….

ದನದ ಕೋಡು ಕಂಬಕ್ಕೆ, ಅದು ಕುತ್ತಿಗೆ ತೀಡುವಾಗ ತಗುಲಿ, ಹೊಡೆದಂತೆ ಸದ್ದು ಕೇಳಿಸಿತು!

ಕಾವೇರಿ ಸರಕ್ಕನೆ ಹಾಸಗೆಯಲ್ಲಿ ಎದ್ದು ಕುಳಿತಳು. ಆಲಿಸಿದಳು. ಹೌದು, ಚೀಂಕ್ರನೆ ಇರಬೇಕು. ಎದೆ ಢವಢವನೆ ಹೊಡೆದುಕೊಂಡಿತು. ಉಸಿರಾಟ ಹೆಚ್ಚಿತು….ನಿಜವಾಗಿಯೂ ಬಂದೇ ಬಿಟ್ಟನೆ? ನಿಜವಾಗಿಯೂ ನಾನು ಅವನ ಸಂಗಡ ಒಬ್ಬಳೆ ಈ ರಾತ್ರಿ ಕಗ್ಗತ್ತಲೆಯಲ್ಲಿ ಹೋಗಿ ಸಾಬಿಯ ಕೈಲಿ ಉಂಗುರ ಹಾಕಿಸಿಕೊಂಡು ಬರಬೇಕೆ?….ಇದುವರೆಗೂ ಭಾವಮಾತ್ರವಾಗಿದ್ದು ಕಲ್ಪನಾ ಸ್ವಾರಸ್ಯದ ಸಾಹಸದಂತೆ ಆಕರ್ಷಣೀಯವಾಗಿದ್ದುದು ಈಗ ವಾಸ್ತವವಾಗಿ ನಡೆಯಲಿರುವ ಲೋಕಚರಿತವಾಗಿ ಇದಿರುನಿಂತಾಗ ತರಳೆ ಕಾವೇರಿಗೆ ಹೆದರಿಕೆಯಾಗತೊಡಗಿತು. ಪಕ್ಕದ ಕೋಣೆಯಲ್ಲಿ ಮಲಗಿದ್ದ ತಾಯಿಯನ್ನು ಎಬ್ಬಿಸಿದರೆ? ಏನು ಮಾಡುತ್ತಿದ್ದರೂ ತಾಯಿಯನ್ನೆ ಕೇಳಿ, ಕಾರ್ಯಾಚರಣೆ ಕೈಕೊಳ್ಳುವ ಸಮಯ ಬಂದಾಗ ದಿಕ್ಕು ತೋರದಂತಾಗಿ ಹಾಸಗೆಯ ಮೇಲೆ ಕುಳಿತೆ ಇದ್ದಳು, ಕಾಲು ಏಕೊ ಸೋತುಬಂದಂತಾಗಿತ್ತು…. ಆದರೆ? ತುಸು ನಿಂತಿದ್ದ ಆ ಕೋಡುಬಡಿಯುವ ಸದ್ದು ಮತ್ತೆ ಕೇಳಿಸಿತು….ಉಂಗುರ….ದೇವಯ್ಯಗೌಡರು…. ಕಿಟ್ಟಯ್ಯಸೆಟ್ಟಿ…. ಮದುವೆ…. ಹೂವಳ್ಳಿ ಚಿನ್ನಕ್ಕ….ತಲೆಯೊಳಗೆ ಏನೇನೋ ಸುತ್ತತೊಡಗಿತು…. ಈಗ ಹಿಂಜರಿದರೆ ನಾನು ಕೆಟ್ಟೆ. ನನ್ನ ಬಾಳೆಲ್ಲ ಹಾಳಾಗುತ್ತದೆ!….ಕಾವೇರಿ ದಿಟ್ಟಮನಸ್ಸಿನಿಂದ ಆವೇಶ ಬಂದವರಂತೆ ಹಾಸಗೆಯ ಮೇಲೆ ಎದ್ದುನಿಂತು, ಶಾಲನ್ನೆತ್ತಿ ಸುತ್ತಿ ಹೊದೆದುಕೊಂಡಳೂ.

ಅವಳು ಮಲಗುವಾಗ ದಿನನಿತ್ಯದ ರೂಢಿಯಂತೆ ಗಟ್ಟದ ತಗ್ಗಿನವರ ಉಡುಗೆಯಲ್ಲಿರಲಿಲ್ಲ; ಗಟ್ಟದ ಮೇಲಿನವರಂತೆ ಸೊಂಟಕ್ಕೆ ಸೀರೆ ಬಿಗಿದು ಸುತ್ತಿ, ಗೊಬ್ಬೆ ಸೆರಗು ಕಟ್ಟಿ, ಭದ್ರವಾಗಿ ಉಡುಗೆ ಉಟ್ಟಿದ್ದಳು. ಗಟ್ಟದ ತಗ್ಗಿನ ಉಡುಗೆ ತುಂಬ ಸಡಿಲ ಉಡುಗೆ ಎಂಬುದು ಅವಳ ನಂಬುಗೆ. ಯಾರಾದರೂ ತುಸು ಜಗ್ಗಿಸಿ ಎಳೆದರೂ ಬಿಚ್ಚಿಯೆ ಹೋಗುವ ಸಂಭವ ಹೆಚ್ಚು. ಗಟ್ಟದ ಮೇಲಿನದಾದರೋ, ದಂಡುಕಡಿಯಲು ಹೋಗುವವರ ಸಮವಸ್ತ್ರದಂತೆ, ಬಿಗಿಯಾಗಿ ಭದ್ರವಾಗಿದ್ದು, ಎಂತಹ ಹೋರಾಟದಲ್ಲಿಯೂ ಸಡಿಲವಾಗುವ ಸಂಭವ ಬಹಳ ಕಡಿಮೆ: ಬಿಚ್ಚಿಹೋಗುವುದಂತೂ ಸಾಧ್ಯವೆ ಇಲ್ಲ!….

ಕಾವೇರಿ ಸದ್ದುಮಾಡದೆ ತುದಿಗಾಲಿನಲ್ಲಿ ಮೆಲ್ಲನೆ ತಡವಿ ನಡೆದು, ತಾಳವನ್ನು ಅದಷ್ಟು ಎಚ್ಚರಿಕೆಯಿಂದ ಹಿಂದಕ್ಕೆ ಸರಿಸಿ, ಬಾಗಿಲನ್ನು ಕೀಲು ಸದ್ದಾಗದಂತೆ ತೆರೆದಳು. ಮಳೆಗಾಲದ ಚಳಿಗಾಳಿ ಸುಯ್ಯನೆ ಬೀಸಿತು. ಮತ್ತೆ ಬೇಗನೆ ಬಾಗಿಲು ಹಾಕಿಕೊಂಡು ಹೊರಗಣ ಚಿಲಕವಿಕ್ಕಿದಳು, ಬೀಸುವ ಚಳಿಗಾಳಿಯಿಂದ ಒಳಗೆ ಮಲಗಿರುವವರಿಗೆ ಎಚ್ಚರವಾಗದಿರಲಿಕ್ಕೆ….

ಮುತ್ತಿ ದಟ್ಟಯಿಸಿದ್ದ ಕತ್ತಲೆಯಲ್ಲಿ ವಸ್ತುಪ್ರತ್ಯೇಕತೆ ಕಾಣಿಸುತ್ತಿರಲಿಲ್ಲ. ಆದರೆ ಬಳಿಸಾರಿ ಪಿಸುದನಿಯಲ್ಲಿ ಮಾತನಾಡಿದ ಚೀಂಕ್ರನ ಗುರುತು ಹಿಡಿದು ಅವನ ಹಿಂದೆ ಹೊರಟಳು. ಸುಪರಿಚಿತ ಪ್ರದೇಶದಲ್ಲಿ ಮರ ಗಿಡ ಹುಳುವಿನ ನಡುವೆ, ಕಣ್ಣಿಗೇನೂ ಹಿಂದೆ ಬೇಗಬೇಗನೆ ನಡೆದು, ಅಡ್ಡಬಂದ ಆಗುಂಬೆ ತೀರ್ಥಹಳ್ಳೀ ಹೆದ್ದಾರಿಯನ್ನು ದಾಟಿ, ಮಿಷನ್ ಇಸ್ಕೂಲಿನ ಬಾವಿಯ ಹತ್ತಿರದಿಂದಾಗಿ ಅದರ ಕಟ್ಟಡದ ಮುಂಭಾಗದ ಬಾಗಿಲನ್ನು ಚೌಕಟ್ಟಿಗೆ ಕೈ ಆನಿಸಿ ಹೊಸ್ತಿಲ ಮೇಲೆ ನಿಂತು, ಒಳಗೆ ನೋಡಿದಳು:

ಕಗ್ಗತ್ತಲೇ! ಯಾರೂ ಏನೂ ಕಾಣಿಸುವಂತಿರಲಿಲ್ಲ. ಆದರೆ ಬೀಡಿಯ ವಾಸನೆ ಮತ್ತು ಹೊಗೆ ತುಂಬಿತ್ತು. ನೋಡುತ್ತಿದ್ದಂತೆ, ಸೇದುತ್ತಿದ್ದ ಬೀಡಿಯ ತುದಿಯ ಬೆಂಕಿಯ ಹುಂಡುಗಳು ಕೆಂಪಗೆ ಮಿರುಗಿದವು: ಒಂದಲ್ಲ, ಎರಡಲ್ಲ, ಮೂರು! ಕಾವೇರಿಗೆ ಕೈ ಕಾಲು ನಡುಗಿದಂತಾಗಿ ತುಂಬ ಹೆದರಿಕೆಯಾಯಿತು: ಕುಸಿದು ಬೀಳುತ್ತೇನೆಯೊ ಎಂಬಷ್ಟು ಭೀತಿ! ಅಷ್ಟರಲ್ಲಿ ಯಾರೊ ತನ್ನನ್ನು ಎಳೆದುಕೊಂಡರು. 'ಉಂಗುರ ಬೇಡವೆ? ಬಾ.  ಯಾಕೆ ಹೆದರಿಕೆ?' ಎಂದು ಹೇಳಿದಷ್ಟು ಮಾತ್ರ ಕೇಳಿಸಿತ್ತು. ಮುಂದೆ ಅವಳ ಕಿವಿಗೆ ಕೇಳಿಸುವ ಸಾಮರ್ಥ್ಯವೆ ಉಡುಗಿಹೋಗಿತ್ತು. ಮನಸ್ಸೂ ಮಂಜುಗಟ್ಟಿತ್ತು. ಚೀಂಕ್ರನನ್ನು ಕೂಗಿಕೊಂಡಳು. ಆದರೆ ಬಾಗಿಲು ಹಾಕಿತು. ಯಾವುದೋ ಬಲಿಷ್ಠ ಬಾಹು ತನ್ನನ್ನು ತೊಡೆಯ ನಡುವೆ ಅಪ್ಪಿ ಹಿಡಿದು, ಬೆರಳಿಗೆ ಉಂಗುರ ತೊಡಿಸುತ್ತಿದ್ದಂತೆಯೆ ಅವಳಿಗೆ ಪ್ರಜ್ಞೆ ತಪ್ಪಿತ್ತು: ಹಿಂದೆ ದೇವಯ್ಯ ತೊಡಿಸಿದ್ದಾಗ ಅದು ಸಡಿಲವಾಗಿದ್ದು ನುಣುಚಿ ಬಿದ್ದುಹೋಗಿತ್ತು; ಈವೊತ್ತು ಅದು ಭದ್ರವಾಗಿ ಬೆರಳನ್ನಪ್ಪಿ ಕೂತುಬಿಟ್ಟಿತು; ಜನರು ಆಡಿಕೊಳ್ಳುತ್ತಿದ್ದುದ್ದು ಸುಳ್ಳಲ್ಲ: ಹುಡುಗಿ ಈಚೆಚೀಗೆ ಎಷ್ಟು ಹುಲುಸಾಗಿ ಬಾಳೆದಿಂಡಿನಂತೆ ಬೆಳೆದು ನಿಂತಿದ್ದಾಳೆ!"….

* * *

ಬೆಳಗಿನ ಜಾವದ ಚಳಿಗಾಳಿ ಬೀಸಿ ಕಾವೇರಿಗೆ ಮೆಲ್ಲಗೆ ಪ್ರಜ್ಞೆ ಮರಳತೊಡಗಿತು. ಆದರೆ ಇನ್ನೂ ಎಚ್ಚರಾಗಿರಲಿಲ್ಲ. ಮೆಲ್ಲನೆ ನರಳಿದಳು. ಹೊರಳಲು ಯತ್ನಿಸಿದಾಗ ತುಂಬ ನೋವಾಗಿ. ಎಚ್ಚರವೂ ಆಯಿತು. "ಅಬ್ಬೇ! ಅಬ್ಬೇ!" ಕರೆದಳು. ಆದರೆ ದನಿ ಶಬ್ದರೂಪಕ್ಕೆ ತಿರುಗಲು ಸಮರ್ಥವಾಗಿರಲಿಲ್ಲ. ತಾನು ಮನೆಯಲ್ಲಿಯೆ ಮಲಗಿದ್ದೇನೆ ಎಂದೇ ಭಾವಿಸಿ, ಕಣ್ಣು ತೆರೆದು ಸಪ್ರಜ್ಞವಾಗಿ ಈಕ್ಷಿಸಿದಳು. ಬಾಗಿಲು ಪೂರ್ಣವಾಗಿ ತೆರೆದು ಬಿದ್ದಿದ್ದುದರಿಂದ ಬೆಳಗಿನ ಜಾವದ ಪೂರ್ವದ ಬೆಳಕಿನ ಛಾಯೆ ಒಂದಿನಿತು ನುಗ್ಗಿತ್ತು. ತಾನು ಮನೆಯಲ್ಲಿ ಮಲಗಲಿಲ್ಲ ಎಂಬ ಅರಿವು ಮರಳಿತು. ಒಡನೆಯೆ ನಡೆದ ಸತ್ಯಸಂಗತಿ ಸಿಡಿಲಿನಂತೆ ಮನದ ಮೇಲೆರಗಿತು: ಚೀಂಕ್ರನೊಡನೆ ಬಂದದ್ದು….ಉಂಗುರದ ನೆವದಿಂದ ತನ್ನನ್ನು ಸೆಳೆದು ಅಮಾನುಷವಾಗಿ ಪಶುಕ್ರೂರವಾಗಿ….ದ್ದು…ಮತ್ತೆ ಸ್ವಲ್ಪಹೊತ್ತು ಸೋತಂತೆ ಬಿದ್ದಿದ್ದಳು, ಕನ್ಯೆ!….ಮತ್ತೆ ಎಚ್ಚತ್ತು ಕಷ್ಟಪಟ್ಟು ಎದ್ದು ಕುಳಿತಾಗ ಇಸ್ಕೂಲಿನೊಳಕ್ಕೆ ಇನ್ನಷ್ಟು ಬೆಳಕು ನುಗ್ಗಿತ್ತು…ಇಸ್ಕೂಲು….ಅದೇ ಬೆಂಚಿನ ಮೇಲೆ ಕೂತಿದ್ದರಲ್ಲವೆ ಬೀಡಿ ಸೇದುತ್ತಿದ್ದವರು….ನೋಡುತ್ತಾಳೆ, ಕೊರಗ

ಹುಡುಗನು ತಮ್ಮ ದನ ಎಮ್ಮೆಗಳಿಗಾಗಿ ಹುಲ್ಲು ದಾಸ್ತಾನು ಮಾಡಿದ್ದ ಸ್ಥಳದಲ್ಲಿಯೆ ತನ್ನನ್ನು ಕೆಡವಿ ಅತ್ಯಾಚಾರ ನಡೆಸಿದ್ದರೆ! ಆ ಹುಲ್ಲನ್ನೆ ಹಾಸುಗೆಯಾಗಿ ಹಾಸಿಬಿಟ್ಟಿದ್ದಾರೆ. ಸೀರೆ ಹರಿದು ಹೋಗಿದೆ. ರಕ್ತದ ಕಲೆ ಹುಲ್ಲಿನ ಮೇಲೆ, ಬಟ್ಟೆಯ ಮೇಲೆ-ತೊಡೆಯಲ್ಲಾ ನೆತ್ತರು. ತುಟಿ ಹರಿದು ಊದಿವೆ. ಕೆನ್ನೆ ಗಾಯಗೊಂಡು ರಕ್ತಮಯ, ಸೆರಗೆಲ್ಲಾ ಚೂರು. ಅಯ್ಯೋ ಎದೆಗಳೂ....! ಅಯ್ಯೋ.... ಅಯ್ಯೋ....ಅಯ್ಯೋ!.... ಕಾವೇರಿಗೆ ತನ್ನ ಶರೀರ ತನ್ನ ಜೀವಕ್ಕೆ ಮೆತ್ತಿಕೊಂಡಿರುವ ಅಮೇಧ್ಯದಷ್ಟು ಅಸಹ್ಯಕರವಾಯಿತು. ಆ ಎಂಚಲನ್ನು ಹ್ಯಾಕ್ ಥೂ ಉಗುಳಿಬೆಡಬೇಕೆಂದು ಮನಸ್ಸು ಉರಿಯತೊಡಗಿತು. ಪಕ್ಕದಲ್ಲಿ ಬಿದ್ದಿದ್ದ ಶಾಲನ್ನು ಎತ್ತಿಕೊಂಡಳು. ಬಾಗಿಲಿಂದ ಹೊರಬಿದ್ದಳು; ಗಾಯ, ನೋವು, ಅವಮಾನ, ಆಯಾಸ ಒಂದೂ ಅವಳಿಗೆ ತಡೆಯಾಗಲಿಲ್ಲ....ಮನೆಯ ಕೋಳಿಹುಂಜದ ಕಡೆಯ ಜಾವದ ಕೂಗು ಕೇಳುತ್ತಿತ್ತು.... ಇನ್ನು ಅವಳು ಯಾರಿಗೂ ಸಿಕ್ಕುವುದಿಲ್ಲ. ದೇವಯ್ಯಗೌಡರಿಗೂ ದೂರ; ಕಿಟ್ಟಯ್ಯನಿಗೂ ದೂರ....ಸ್ಕೂಲಿನ ಬಾವಿಯ ಬಳಿಗೆ ಬಂದಳು... ಅನಂತಯ್ಯ ಹಸುರು ಕೋಲು ಹಿಡಿದು ತೋಡಿಸಿದ್ದ ಬಾವಿ! ಎಷ್ಟೋ ಸಾರಿ ಸಿಟ್ಟು ಬಂದಾಗ ತಾಯಿಗೆ ಹೆದರಿಸಿದ್ದಳು, "ನಾನು ಇಸ್ಕೂಲು ಬಾವಿಗೆ ಹಾರಿ ಬಿಡ್ತಿನೆ" ಎಂದು.... ಶಾಲನ್ನು ಬಾವಿಯ ಬಳಿ ಬಿಚ್ಚಿ ಬಿಸುಟು....

ತನ್ನ ಮೈಯನ್ನು ಕೆಡಿಸಿದ್ದ ಕಡುಪಾಪಿಗಳಲ್ಲಿ ಚೀಂಕ್ರನೂ ಸೇರಿದ್ದನೆಂಬುದು ಕಾವೇರಿಗೆ ಗೊತ್ತಾಗದಿದ್ದುದು ಒಂದು ಭಗವತ್ ಕೃಪೆಯೆ ಆಗಿತ್ತು. ಆದೇನಾದರೂ ಗೊತ್ತಾಗಿದ್ದರೆ ಭಗವಂತನೆ ಸತ್ತು ಹೋಗುತ್ತಿದ್ದನು! ಆತ್ಮಹತ್ಯೆಗೂ ಪ್ರಯೋಜನವಿರುತ್ತಿರಲಿಲ್ಲ. ಸಕಲ ಮೌಲ್ಯ ವಿನಾಶವಾದಮೇಲೆ ಸತ್ತಾದರೂ ಸೇರಿಕೊಳ್ಳಲು ಯಾವ ಪುರುಷಾರ್ಥರೂಪದ ಯಾವ ದೇವರು ತಾನೆ ಇರುತ್ತಿತ್ತು?

* * *

ಅಂತಕ್ಕನ ಮನೆ ನಿರುದ್ವಿಗ್ನವಾಗಿ ನಿಃಶಬ್ದವಾಗಿತ್ತು. ಬೆಳಕು ಬಿಡುತ್ತಿದ್ದ ಹಾಗೆ ಒಡ್ಡಿಯ ಕೋಳಿಗಳು ಹೊರಗೆ ಬರಲು ಒಂದರ ಮೇಲೊಂದು ಒಡ್ಡಿಯ ಬಾಗಿಲ ಬಳಿಗೆ ನುಗ್ಗಿ ಸದ್ದುಗೈಯತೊಅಡಗಿದ್ದವು. ಮುರುವನ್ನು ನಿರೀಕ್ಷಿಸಿ, ಹಸಿದ ದನವೊಂದು, ಕೊಟ್ಟಿಗೆಯಲ್ಲಿ ಅಂಬಾ ಎನ್ನುತ್ತಿತ್ತು. ಕೊರಗ ಹುಡುಗ ಎತ್ತು ಹಿತ್ತಲುಕಡೆಯ ಬಾಗಿಲನ್ನು ತೆರೆಯಲು ತಾಳಕ್ಕೆ ಕೈಹಾಕಿ ಹಿಂದಕ್ಕೆಳೆದನು. ತಾಳ ಸರಿಯಲ್ಲಿಲ್ಲ. ನೋಡುತ್ತಾನೆ ತಾಳ ಸರಿದೇ ಇತ್ತು. "ಅಯ್ಯೋ ದೇವರೆ, ರಾತ್ರಿ ತಾಳ ಹಾಕಿಯೆ ಇರಲಿಲ್ಲ?"ಎಂದುಕೊಂಡು ಬಾಗಿಲನ್ನು ಎಳೆದನು. ಬಾಗಿಲು ತೆರೆಯಲಿಲ್ಲ; ಹೊರಗಡೆಯಿಂದ ಚಿಲಕ ಹಾಕಿಬಿಟ್ಟಿದ್ದಾರಲ್ಲ?" ಎಂದುಕೊಂಡು ಮುಂಚೆಕಡೆಯ ಬಾಗಿಲಿಂದ ಹೊರಗೆ ಹೋಗಿ, ಹಿತ್ತಲುಕಡೆಯ ಬಾಗಿಲ ಚಿಲಕ ತೆಗೆದು, ತನ್ನ ದಿನನಿತ್ಯದ ಕೆಲಸಗಳಿ ಶುರು ಮಾಡಿದನು.

ಅಂತಕ್ಕ ಎದ್ದವಳು ಪದ್ಧತಿಯಂತೆ "ಕಾವೇರೀ" ಎಂದು ಕರೆದು ತನ್ನ ಕೆಲಸಕ್ಕೆ ಹೋದಳು.

ಸ್ವಲ್ಪ ಹೊತ್ತಾದ ಮೇಲೆ ತಾಯಿ ಅಡುಗೆಮನೆಯಿಂದಲೆ ಮಗಳನ್ನು ಮತ್ತೆ ಕೂಗಿ ಕರೆದಳು: 'ಕಾವೇರಿ! ಕಾವೇರೀ!'

ಉತ್ತರ ಬರದಿರಲು 'ಗಂಡನಾಗುವವನು ಬಂದಿದ್ದರೂ ಸ್ವಲ್ಪವೂ ಉತ್ಸಾಹ ತೋರಿಸದೆ ಉದಾಸೀನವಾಗಿ ಮಲಗಿಬ್ಬಿಟ್ಟಿದ್ದಾಳಲ್ಲಾ! ಏನು ಹಟದ ಹುಡುಗಿಯೋ ಇವಳು?' ತನ್ನಲ್ಲಿಯೆ ತಾನೆಂದುಕೊಂಡು ಅಂತಕ್ಕ ಮಗಳು

ಮಲಗಿದ್ದ ಕೋಣೆಗೆ ಹೋದಳು. ಬರಿದಾಗಿದ್ದ ಹಾಸಗೆಯನ್ನು ಕಂಡು ಮುಖ ತೊಳೆಯುವದಕ್ಕೋ ಬಯಲು ಕಡೆಗೋ ಹೋಗಿರಬೇಕೆಂದು ಭಾವಿಸಿ ಮತ್ತೆ ಅಡುಗೆ ಮನೆಗೆ ಹೋದಳು, ನೆಂಟರಿಗೆ ಬೆಳಗಿನ ಉಪಹಾರ ತಯಾರಿಸಲು.

ಕೊರಗ ಎಮ್ಮೆ ದನಗಳಿಗೆ ಮುರು ಇಡಲು ಸರಿಮಾಡಿ, ಹುಲ್ಲು ತರಲೆಂದು ಇಸ್ಕೂಲಿಗೆ ಓಡಿದನು. ಸ್ಕೂಲು ಕಟ್ಟಡದೊಳಗೆ ಎಮ್ಮೆ ದನ ಬಿಡಬೇಡ ಹುಲ್ಲು ಕೂಡಿಡಬೇಡ ಎಂದು ಪಾದ್ರಿ ಮೇಗರವಳ್ಳಿಗೆ ಬಂದಾಗಲೆಲ್ಲ ಹೇಳಿದ್ದರೂ ಕೊರಗ ಅತಿಕ್ರಮಿಸಿ ಹಾಗೆ ಮಾಡುತ್ತಲೆ ಬಂದಿದ್ದನು. ಜೀವರತ್ನಯ್ಯ ಬಾಗಿಲಿಗೆ ಬೀಗ ತಂದು ಹಾಕುವವರೆಗೂ ಇಸ್ಕೂಲನ್ನು ಹುಲ್ಲು ಕೊಡುವ ಜಾಗವನ್ನಾಗಿ ಬಳಸಲು ನಿಶ್ಚಯಿಸಿ ಬಿಟ್ಟಿದ್ದನು ಅವನು.

ಬಾವಿಯ ಬಳಿಗೆ ಬಂದಾಗ ಗುಲಾಬಿ ಬಣ್ಣದ ಶಾಲು ಬಿದ್ದಿದ್ದುದು ಕಾಣಿಸಿತು. ಕಾವೇರಿಯ ಹತ್ತಿರ ಅಂತಹ ಬಣ್ಣದ ಶಾಲು ಇದ್ದುದನ್ನು ಕಂಡಿದ್ದ, ಮತ್ತು ಮೆಚ್ಚಿ ಆಸೆಪಟ್ಟಿದ್ದ. ಅವನಿಗೆ 'ಇಲ್ಲಿಗೆ ಯಾಕೆ ಬಂದಿದ್ದಾರೆ ಅವರು? ಇಷ್ಟು ಬೆಳಿಗ್ಗೆ?' ಅನ್ನಿಸಿತು. 'ಬಹುಶಃ ಹೊಟ್ಟೆ ಸರಿಯಾಗಿಲ್ಲವೆನೋ?... ಅವರೇ ಇರಬೇಕು ಹೊರಕಡೆಗೆ ಹೋಗಲಿಕ್ಕಾಗಿ ಹಿತ್ತಲುಕಡೆಯ ಬಾಗಿಲು ತೆರೆದು, ಹೊರಚಿಲಕ ಹಾಕಿಕೊಂಡಿದ್ದು' ಎಂದುಕೊಂಡು ಸುತ್ತಲೂ ನೋಡಿದನು. ಯಾರೂ ಎಲ್ಲಿಯೂ ಇದ್ದ ಚಿಹ್ನೆ ಕಾಣಿಸಲಿಲ್ಲ. ಅವನಿಗೇ ತುಸು ಇಸ್ಸಿ ಅನ್ನಿಸಿತು, ಹಾಗೆ ನೋಡಿದುದ್ದಕ್ಕೆ: 'ಅವರು ಇಲ್ಲೆ ಎಲ್ಲಿಯಾದರೂ ಮಟ್ಟಿನ ಮರೆಯಲ್ಲಿ ಹೊರಕಡೆಗೆ ಕೂತಿದ್ದರೆ?' ಅಷ್ಟರಲ್ಲಿ ಕಾಡಿನಿಂದ ಒಂದು ಮೀಂಗುಲಿಗನ ಹಕ್ಕಿ ಕೂಗಿತು: ಮ್ಣೀ! ಮ್ಣೀ! ಮ್ಣೀ! ಮ್ಣೀ! 'ಹಾಳು ಅಪಶಕುನದಹಕ್ಕಿ! ಎನು ಕೇಡು ಕರೆಯಲು ಒರಲುತ್ತಿದಿಯೋ?' ಎಂದುಕೊಂಡ ಕೊರಗ ಹೊರಗೆ ಹುಲ್ಲು ತರಲು ಇಸ್ಕೂಲಿನ ಬಾಗಿಲಿಗೆ ಬಂದನು.

ನೋಡುತ್ತಾನೆ, ಬಾಗಿಲು ಆಈ ಎಂದು ಬಾಯಿ ತೆರೆದುಕೊಂಡಿದೆ 'ಹಾಳು ಸೂಳೆಮಕ್ಕಳು! ಹಾಕಿದ್ದ ಚಿಲಕ ತೆಗೆದು, ಬಾಗಿಲು ಹಾರು ಹೊಡೆದಿಟ್ಟಿದ್ದಾರಲ್ಲಾ? ಕಂಡವರ ದನ ನುಗ್ಗಿಸಿ ಹುಲ್ಲು ತಿನ್ನಿಸಿರಬೇಕು' ಎಂದು ಶಪಿಸುತ್ತಾ ಒಳಗೆ ದಾಟಿ ನೋಡುತ್ತಾನೆ.

ಹುಲ್ಲು ಕೆದರಿ ಬಿದ್ದಿದೆ. ಏನೇನೊ ವಾಸನೆ: ಬೀಡಿಯ ವಾಸನೆ, ಸಾರಾಯಿ ವಾಸನೆ, ಮಾಂಸದ ಮೇಲೋಗರದ ಕಂಪು! ನೋಡುತ್ತಾನೆ, ಒಂದು ಮೂಲೆಯಲ್ಲಿ ಲಾಟೀನು! ದೀಪ ಕಾಣಬಾರದಷ್ಟು ಸಣ್ಣಗೆ ಮಾಡಿದೆ! ಇನ್ನೂ ನೋಡುತ್ತಾನೆ, ಬಳೆ ಒಡೆದ ಓಡಿನ ಚೂರುಗಳು ಬಿದ್ದಿವೆ! ಮತ್ತೂ ನೋಡುತ್ತಾನೆ, ನೆತ್ತರು, ನೆಲದಮೇಲೆ ಮತ್ತು ಹಾಸಿದ್ದ ಹುಲ್ಲಿನ ಮೇಲೆ! ಕೊರಗನಿಗೆ ಪೂರಾ ದಿಗಿಲಾಯಿತು. ಏನೂ ಅರ್ಥವಾಗಲಿಲ್ಲ. ಹೊರಗೆ ಓಡಿ ಬಂದು, ಶಾಲನ್ನು ಸಮೀಪಿಸಿ, ಸುತ್ತಲೂ ನೋಡಿ 'ಕಾವೇರಮ್ಮಾ! ಕಾವೇರಮ್ಮಾ!' ಎಂದು ಕರೆದನು. ಸುತ್ತಣ ಕಾಡು, ಮಳೆಗಾಲದ ಕಡುಹಸರು ಕಾಡು, ಬದ್ಧಭ್ರುಕುಟಿ ಭೀಷಣ ನೀರವವಾಗಿತ್ತು. ದೆವ್ವಕಂಡವನಂತೆ ಶಾಲನ್ನು ಎತ್ತಿಕೊಂಡು ಮನೆಗೆ ಓಡಿ ಓಡಿ ಬಂದನು.

ಕೊರಗ ಹುಡುಗನು ಹೇಳಿದ್ದನ್ನು ಕೇಳಿ, ಅವನು ಕೊಟ್ಟ ಗುಲಾಬಿ ಬಣ್ಣದ ಶಾಲನ್ನು ನೋಡಿ, ಅಂತಕ್ಕಗೆ ದಿಗಿಲು ಬಡಿಯಿತು. ಹೌಹಾರಿ ಕಾವೇರಿಯ ಕೋಣೆಗೆ ಓಡಿದಳು. ಮಗಳ ಹೆಸರು ಹಿಡಿದು ಕೂಗುತ್ತಾ ಕರೆಯುತ್ತ ಮನೆಯಲ್ಲೆಲ್ಲ ಓಡಾಡಿದಳು ಹಿತ್ತಲು ಕಡೆಗೆ ಓಡಿ ಕೊಟ್ಟಿಗೆಯ ಹತ್ತಿರ ಕಾಡಿನ ಬಳಿ ನಿಂತು ಕರೆದಳು, ಮಗಳು

ದಿನವೂ ಬಯಲ ಕಡೆಗೆ ಹೋಗುತ್ತಿದ್ದತ್ತ ಮುಖಮಾಡಿ. ಅಂತಕ್ಕನ ರೋದನವನ್ನು ಕೇಳಿ ಅನಂತಯ್ಯ ಕಿಟ್ಟಯ್ಯರೂ ಗಾಬರಿಯಿಂದ ಓಡಿಬಂದರು. ಕೊರಗನಿಂದ ವಿಷಯವನ್ನೆಲ್ಲ ಕೇಳಿ ತಿಳಿದು ಬಾವಿಯ ಬಳಿಗೆ ಶಾಲು ಸಿಕ್ಕಿದ್ದ ಸ್ಥಳಕ್ಕೆ ಓಡಿದರು.

* * *

ಮಗಳ ಹೆಣವನ್ನು ಬಾವಿಯಿಂದೆತ್ತಿ ತಂದು ಮನೆಯಲ್ಲಿ ಮಲಗಿಸಿದಾಗ ಅಂತಕ್ಕನ ಗೋಳು ಹೇಳತೀರದಾಗಿತ್ತು. ದುಃಖ ಉನ್ಮಾದದ ಮಟ್ಟಕ್ಕೇರಿತ್ತು. ಮಗಳು ಕಿಟ್ಟಯ್ಯ ಸೆಟ್ಟಿಯನ್ನು ಮದುವೆಯಾಗಲು ಇಷ್ಟವಿಲ್ಲದೆ ಬಾವಿಗೆ ಹಾರಿ ಆತ್ಮಹತ್ಯೆ ಮಾಡಿಕೊಂಡಳೆಂದೇ ಅವಳು ನಿರ್ಣಯಿಸಿ ನಂಬಿಬಿಟ್ಟಿದ್ದಳೂ. ಆ ಸಂಕಟದ ಉರಿಯಲ್ಲಿ ಅವಳಿಗೆ ಉಚಿತ ಅನುಚಿತದ ಪರಿವೆಯಿರಲಿಲ್ಲ. ಮಗಳ ಸಾವಿಗೆ ಕಿಟ್ಟಯ್ಯಸೆಟ್ಟಿಯೆ ಕಾರಣವಾದನೆಂದು ಅವನನ್ನೂ ಶಪಿಸಿದಳು. ಆ ಶನಿಯನ್ನು ಮನೆಗೆ ಕರೆತಂದರು ಎಂದು ಅನಂತಯ್ಯನನ್ನು ಶಪಿಸಿದಳು. ಮಗಳ ಆ ಘೋರ ನಿರ್ಧಾರಕ್ಕೆ ಮೂಲಕಾರಣವಾದವನು ದೇವಯ್ಯನೇ ಎಂದು ಅತ್ತಕಡೆ ಬಹುದಿನಗಳಿಂದ ಸುಳಿಯದಿದ್ದ ಅವನನ್ನೂ ಹೀನಾಯವಾಗಿ ಬೈದಳು. ಅವರಿಗೆ ಯಾರು ಉಂಗುರ ತೊಡಿಸಲು ಅಪ್ಪಣೆ ಕೊಟ್ಟಿದ್ದರು? ಉಂಗುರ ಕಳೆದುಹೋಯಿತೆಂದು ಮಗಳ ಮನಸ್ಸನ್ನು ಆ ರೀತಿ ನೋಯಿಸಿ ಈ ಅಪಘಾತಕ್ಕೆ ಅವಳನ್ನೇಕೆ ನೂಕಬೇಕಿತ್ತು? ಎಂದೂ ಬಹಿರಂಗವಾಗಿಯೆ ಬೈದೂ ತಲೆ ಚಚ್ಚಿಕೊಂಡಳು.

ಹೆಣದ ಕೈಬೆರಳಲ್ಲಿ ಹರಳುಂಗುರ ಇದ್ದದ್ದನ್ನು ಗಮನಿಸಿದ್ದ ಅನಂತಯ್ಯ, ಕೊರಗನನ್ನು ವಿಚಾರಿಸಿ ನಡೆದ ಸಂಗತಿ ಏನು ಎಂಬುದನ್ನು ಅರಿತ ತರುವಾಯ, ಅಂತಕ್ಕ ರೋದಿಸಿ, ದುಃಖಿಸಿ, ಶಪಿಸಿ, ಎದೆ ಬಡಿದುಕೊಂಡೂ ತಲೆ ಚಚ್ಚಿಕೊಂಡೂ, ಅತ್ತೂ ಅತ್ತೂ ಸೋತುಸುಸ್ತಾಗಿ ತುಸು ತಣ್ಣಗಾದಮೇಲೆ, ಕಾವೇರಿಯ ಕಳೇಬರದ ಕೈಬೆರಳಿನಿಂದ ಹರಳುಂಗುರವನ್ನು ಕಳಚಿ ಅವಳಿಗೆ ನೀಡಿದರು. ಆಗ ಅವಳಿಗುಂಟಾಗಿದ್ದ ಬೆರಗಿಗೆ ಮೇರೆ ಇರಲಿಲ್ಲ., ಮಗಳ ಕೈಗೆ ಉಂಗುರ ಹೇಗೆ ಬಂತು ಎಂದು!

ಉಂಗುರ ಕಳೆದುಹೋಗಿ, ಎಲ್ಲಿ ಹುಡುಕಿದರೂ ಯಾರನ್ನು ಕೇಳಿದರೂ ಅದು ಪತ್ತೆಯಾಗದಿದ್ದಾಗ, ಅಂತಕ್ಕ ಧರ್ಮಸ್ಥಳಕ್ಕೆ ಆಣೆಯಿಟ್ಟುಕೊಂಡಿದ್ದಳು: 'ಅಣ್ಣಪ್ಪದೇವರಿಗೆ ಶಕ್ತಿ ಇದ್ದಲ್ಲಿ ಉಂಗುರ ಎಲ್ಲಿಗೆ ಹೋಗುತ್ತದೆ ನೋಡುವ!' ಎಂದು. ಅಣ್ಣಪ್ಪ ಭೂತರಾಯ ಇಂತಹ ಭಯಂಕರ ರೀತಿಯಲ್ಲಿ ಆ ಉಂಗುರವನ್ನು ತನಗೆ ಹಿಂತಿರುಗಿಸುತ್ತಾನೆ ಎಂದು ಆ ಭಕ್ತೆ ಸ್ವಪ್ನದಲ್ಲಿಯೂ ಭಾವಿಸಿರಲಿಲ್ಲ!.

ಅಂತಕ್ಕನ ಮಗಳು ಬಾವಿಗೆ ಬಿದ್ದು ಸತ್ತ ಸುದ್ದಿ ಹಬ್ಬಲು ತಡವಾಗಲಿಲ್ಲ. ಸಹಾನುಭೂತಿ ತೋರಿಸುವ; ದುಃಖದಲ್ಲಿ ಭಾಗಿಗಳಾಗುವ, ಸಮಾಧಾನ ಹೇಳಿ ಸಂತೈಸುವ ಸಲುವಾಗಿ ಮೇಗರವಳ್ಳಿಯ ಪರಿಚಿತರಲ್ಲಿ ಅನೇಕರು ಅಂತಕ್ಕನ ಮನೆಯಲ್ಲಿ ನೆರದಿದ್ದರು. ಅವರಲ್ಲಿ ಒಬ್ಬರಾಗಿದ್ದರು, ಕರೀಂಸಾಬರು. ಅನಂತಯ್ಯ ಹೆಣದ ಬೆರಳಿಂದ ಕಳಚಿದ ಹರಳುಂಗುರವನ್ನು ನೋಡಿ, ಗುರುತಿಸಿ, ಅವರು ಬೆಚ್ಚಿಬಿದ್ದಿದ್ದರು. ಆ ಅನಿಷ್ಟ ಉಂಗುರವನ್ನು ತನ್ನ ತಮ್ಮನ ಮುಖಾಂತರ ಬೆಟ್ಟಳ್ಳಿ ಕಲ್ಲಯ್ಯಗೌಡರಿಗೆ ಮಾರಿಬಿಟ್ಟೆನೆಂದು ತಿಳಿದಿದ್ದರು ಅವರು. ಮತ್ತೆ ಅದು ಕಾವೇರಿಯ ಬೆರಳಿಗೆ ಬಂದದ್ದು ಹೇಗೆ? ಅದು ಹೇಗೆಯೆ ಬಂದದ್ದಾಗಿರಲಿ, ಅದರ ಕೆಡಕು ಮಾಡುವ ಶಕ್ತಿಯ ಅವರ ಸಿದ್ಧಾಂತಕ್ಕೆ

ಮತ್ತೊಂದು ನಿದರ್ಶನ ದೊರಕಿದಂತಾಗಿತ್ತು. ಅವರು ಅನಂತಯ್ಯನ ಕಿವಿಗೆ ಪಿಸುಗುಟ್ಟಿದ್ದರು: "ಐಗಳೆ, ಆ ಶನಿ ಉಂಗುರ ಇದ್ದಲ್ಲಿ ಕೇಡು ತಪ್ಪುವುದಿಲ್ಲ. ಪಾಪ, ಅದು ಹೇಗೆ ಬಂದಿತೊ ಆ ಮಗುವಿನ ಕೈಗೆ? ಎಳೆದುಕೊಂಡು ಹೋಗಿ ಅವಳನ್ನು ಬಾವಿಯೊಳಗೆ ಹಾಕಿಬಿಟ್ಟಿತಲ್ಲಾ!"

ಅದನ್ನು ಆಲಿಸಿದ್ದ ಒಬ್ಬನು ಮತ್ತೊಬ್ಬನ ಕಿವಿಯಲ್ಲಿ "ಆ ಹುಡುಗಿಯ ಕೆಟ್ಟಚಾಳಿಯೆ ಮೊದಲಿನಿಂದಲೂ ಹಾಂಗಿರುವಾಗಳು, ಹೌದಾ, ಆ ಉಂಗುರ ಏನು ಮಾಡೀತು?" ಎಂದು ತನ್ನ ನೀತಿಪ್ರಜ್ಞೆಯನ್ನು ಮೆರೆದಿದ್ದನು.

ಕೊರಗ ಹುಡುಗನ ಹೇಳಿಕೆಗಳಿಂದಲೂ, ಇಸ್ಕೂಲಿನ ಒಳಗೆ ತಾವು ಕಂಡಿದ್ದ ದೃಶ್ಯದ ವಿವರಜ್ಞಾನದ ನೆರವಿನಿಂದಲೂ, ಅಲ್ಲಿಯೆ ಸಿಕ್ಕಿದ್ದು, ಬತ್ತಿ ಇಳಿಸಿ ದೀಪ ಸಣ್ಣಗೆ ಮಾಡಿದ್ದ ಲಾಟೀನಿನ ಸಾಕ್ಷಿಯಿಂದಲೂ ಅನಂತಯ್ಯ ಕಾವೇರಿಯ ಸಾವು ಆತ್ಮಹತ್ಯೆಯಲ್ಲ, ಅತ್ಯಾಚಾರದ ತರುವಾಯ ನಡೆದ ಘಟನೆ ಎಂದು ಶಂಕಿಸಿದರು. ಅತ್ಯಾಚಾರದ ಪರಿಣಾಮವಾಗಿ ಹುಡುಗಿ ಪ್ರಜ್ಞೆತಪ್ಪಲು ಅವಳು ಸತ್ತಳೆಂದು ಭಾವಿಸಿಯೋ, ಅಥವಾ ಅವಳು ವಾಸ್ತವವಾಗಿ ತತಪ್ರಾಣೆಯ ಆಗಿದ್ದರಿಂದಲೋ, ಅವಳು ಆತ್ಮಹತ್ಯೆ ಮಾಡಿಕೊಂಡಳು ಎಂಬ ಭಾವನೆ ಹುಟ್ಟಿಸಲು ಶರೀರವನ್ನು ಹೊತ್ತು ತಂದು ಬಾವಿಗೆ ಹಾಕಿರಬೇಕು ಎಂದು ನಿರ್ಧರಿಸಿದರು. ಅವರ ನಿರ್ಧಾರಕ್ಕೆ ಪೋಷಕವಾಗಿ ಮತ್ತೊಂದು ಸಾಕ್ಷಿಯೂ ದೊರೆಯಿತು. ಅಲ್ಲಿ ಸಿಕ್ಕಿದ್ದ ಲಾಟೀನು ಕರ್ಮೀನ್ ಸಾಬರದ್ದು ಎಂದು ಕೊರಗ ಹುಡುಗ ಗುರುತಿಸಿದ್ದು! ಆದರೆ ಕರೀಂಸಾಬರು ತಮ್ಮ ಭಾವೋದ್ವೇಗವನ್ನು ಒಂದಿನಿತು ಹೊರಗೆಡಹದೆ ತಣ್ಣಗೆ ಹೇಳಿದರು: "ಆ ಲಾಟೀನು ನನ್ನದೇನೋ ಹೌದು. ಆದರೆ ಅದನ್ನು ಚೀಂಕ್ರ ಸೇರೆಗಾರ ತೆಗೆದುಕೊಂಡು ಹೋಗಿದ್ದ."

ಆದರೆ ಅಲ್ಲಿ ನೆರದಿದ್ದ ಗುಂಪಿನಲ್ಲಾಗಲಿ, ಮೇಗರವಳ್ಳಿಯಲ್ಲೆ ಆಗಲಿ ಚೀಂಕ್ರಸೇರೆಗಾರನ ಸುಳಿವು ಎಲ್ಲಿ ಹುಡಕಿದರೂ ಕಾಣಲಿಲ್ಲ.

ಅಂತಕ್ಕ ಮಾತ್ರ, ಐಗಳು ಎಷ್ಟು ಸಕಾರಣವಾಗಿ ವಾದಿಸಿದರೂ, ತನ್ನ ಮಗಳು ಅತ್ಯಾಚಾರಕ್ಕೆ ಒಳಗಾದಳು ಎಂಬ ಅವಮಾನಕರವಾದ ಆಪಾದನೆಯನ್ನು ಸಂಪೂರ್ಣವಾಗಿ ತಿರಸ್ಕರಿಸಿಬಿಟ್ಟಳು. ಮಗಳ ಮೈಮೇಲೆ ಆಗಿದ್ದ ಗಾಯಗಳನ್ನೂ ಕೆನ್ನೆ ತುಟಿ ಕುಚಗಳಾದಿಯಾಗಿ ಅಂಗೋಪಾಂಗಗಳಲ್ಲಿದ್ದ ಕ್ಷತವಿಕ್ಷತಗಳನ್ನೂ, ಮಗಳು ಬಾವಿಗೆ ಹಾರಿದಾಗ ಬಾವಿಯ ಬುಡದವರೆಗೂ ಇದ್ದ ಸುತ್ತಣ ಕಲ್ಲು ಕಟ್ಟಣೆ ಬಡಿದೂ ಬಡಿದೂ ಆಗಿದ್ದ ಗಾಯಗಳೆಂದೇ ಸಮರ್ಥಿಸಿದಳು: ಮಗಳು ಎಂತಿದ್ದರೂ ಸತ್ತುಹೋಗಿದ್ದಾಳೆ. ಮತ್ತೆ ಬರುವುದಿಲ್ಲ. ಸತ್ತವಳ ಹೆಸರಿಗೆ ಕಳಂಕಾರೋಪಣೆ ಮಾಡಿ ಅವಮಾನಗೊಳಿಸುವುದನ್ನು ತಾಯಿಯ ಕರುಳು ಎಂದಾದರೂ ಸಹಿಸುತ್ತದೆಯೇ?

ಆದರೂ ಐಗಳು ಅನಂತಯ್ಯನವರು ತಮ್ಮ ಕರ್ತವ್ಯವನ್ನು ನೇರವೇರಿಸಿದರು ಅತ್ಯಾಚಾರದ ಮತ್ತು ಕೊಲೆಯ ಸಂಗತಿಗಳನ್ನು ಕಾನೂನಿನ ಸನ್ನಿಧಿಗೆ ಒಯ್ಯುವ ಕ್ರಮ ಜರುಗಿಸಿದರು. ಕಾನೂನಿನ ದೂತರು, ಬೆಟ್ಟಳ್ಳಿ ದೇವಯ್ಯಗೌಡರು ಈ ಮೊದಲೆ ಮೇಗರವಳ್ಳಿ ಸಾಬರಮೇಲೆ ಫಿರ್ಯಾದಿ ಕೊಟ್ಟಿದ್ದನ್ನು ಗಮನಿಸಿ, ತಮ್ಮ ಕರ್ತ್ಯವ್ಯ ನಿರ್ವಹಣೆಯ ಅಂಗವಾಗಿ ಬಂದು ತನಿಖೆ ನಡೆಸಿದಾಗ ಮುಖ್ಯ ಅಪಾದಿತನಾಗಿದ್ದ. ಚೀಂಕ್ರ ಎಲ್ಲಿಯೂ ಪತ್ತೆಯಾಗಲಿಲ್ಲ. ಘಟ್ಟದ ಕೆಳಕ್ಕೆ ಪರಾರಿಯಾಗಿದ್ದಾನೆಂದು ಬರೆದುಕೊಂಡರು. ಆ ಕಾಲದಲ್ಲಿ ಮೈಸೂರು ಸಂಸ್ಥಾನದಲ್ಲಿ ಅಪರಾಧವೆಸಗಿ ತಲೆ ತಪ್ಪಿಸಿಕೊಳ್ಳುವವರು ಬ್ರಿಟಿಷರ ಆಡಳಿತಕ್ಕೆ ಸೇರಿದ್ದ ಕನ್ನಡ ಜಿಲ್ಲೆಗೆ

ಓಡಿಹೋಗುವುದು ಒಂದು ರಾಜತಂತ್ರದ ರೂಢಿಯಾಗಿತ್ತು! ಪುಡಿಸಾಬಿಯನ್ನು ದಸ್ತಗಿರಿ ಮಾಡಲು ಹುಡುಕಿದಾಗ, ಕರೀಂಸಾಬರು ಹೇಳಿದರು "ನನ್ನ ತಮ್ಮನಿಗೂ ಅಂತಕ್ಕನ ಮಗಳ ಆತ್ಮಹತ್ಯೆಗೂ ಏನೂ ಸಂಬಂಧವಿಲ್ಲ. ಕಾವೇರಿ ಬಾವಿಗೆ ಹಾರಿಕೊಳ್ಳುವುದಕ್ಕೆ ಒಂದು ವಾರದ ಹಿಂದೆಯೇ ಅವನು ವ್ಯಾಪಾರದ ಕೆಲಸದ ನಿಮಿತ್ತವಾಗಿ ಕಾಸರಗೋಡಿನ ಕಡೆಗೆ ಹೋದವನು ಇನ್ನು ಬಂದಿಲ್ಲ." ತಮ್ಮ ಹೇಳಿಕೆಯ ಸತ್ಯತಾ ಸ್ಥಾಪನೆಗೆ ಬೆಂಬಲವಾಗಿ ಕಾನೂನಿನ ದೂತರ ಕೈ ಬೆಚ್ಚಗಾಗುವಂತೆ ತಕ್ಕ ವ್ಯವಸ್ಥೆಮಾಡಲು ಅವರು ಮರೆಯಲಿಲ್ಲ! ಅಂತಕ್ಕನಂತೂ ತನ್ನ ಮಗಳ ಪರಿಶುದ್ಧ ನಡತೆಯ ವಿರುದ್ಧವಾಗಿರುವ ಎಲ್ಲ ಆರೋಪಣೆಗಳನ್ನೂ ಅಲ್ಲಗಳೆದು ಅವಳ ಅತ್ಮಹತ್ಯೆಯನ್ನೆ ಸಮರ್ಥಿಸಿದಳು. ಪ್ರಬಲ ಸಾಕ್ಷಿಯ ವಸ್ತುವಾಗಿದ್ದ ಹರಳುಂಗರವನ್ನು ವಿಚಾರಿಸಲು, ಆ ಅನಿಷ್ಟ ವಸ್ತುವನ್ನು ಧರ್ಮಸ್ಥಳದ ದೇವರ ಪೆಟ್ಟಿಗೆಗೆ ಹಾಕಿಬಿಡಲು ಕಿಟ್ಟಯ್ಯಸೆಟ್ಟರ ಕೈಲಿ ಕಳುಹಿಸಿದನೆಂದು ಹೇಳಿದಳು. ಕಾನೂನಿನ ಕೈಯಿಂದ ತಲೆ ತಪ್ಪಿಸಿಕೊಳ್ಳಲು ಉಂಗುರವೂ ಘಟ್ಟದ ಕೆಳಕ್ಕೆ ಹಾರಿತ್ತು! ಧರ್ಮಸ್ಥಳದ ದೇವರ ಸನ್ನಿಧಿಯ ರಕ್ಷೆಗೆ! ಕಡೆಗೆ ಪೋಲೀಸರು ಬರಿ ಕೈಯಲ್ಲಿ ಹೇಗೆ ಹೋಗುವುದು ಎಂದು, ಕೇಡಿಗಳೆಂದು ಪ್ರಸಿದ್ಧರಾಗಿದ್ದ ಸಾಬಿಗಳ ಪಟ್ಟಿಯಲ್ಲಿದ್ದ ಅಜ್ಜೀಸಾಬಿ ಮತ್ತು ಲುಂಗೀಸಾಬಿ ಇಬ್ಬರನ್ನು ಕೋಳಹಾಕಿ ತೀರ್ಥಹಳ್ಳಿ ಲಾಕಪ್ಪಿಗೆ ಕರೆದುಕೊಂಡು ಹೋದರು.

* * *

## ೬೩

ತೀರ್ಥಹಳ್ಳಿ ತಾಲ್ಲೂಕಿನ ಮೇಗರವಳ್ಳಿ ಸೀಮೆಯ ಮಲೆನಾಡಿನ ಈ ಕ್ಷುದ್ರೋಕ್ಷುದ್ರವಾಗಿ ತೋರುವ, ಮತ್ತು ನಾಗರೀಕತೆಯ ಐತಿಹಾಸಿಕ ಪ್ರವಾಹದ ವೈಭವಪೂರ್ಣವಾದ ಮಧ್ಯಸ್ರೋತಕ್ಕೆ ಬಹುದೂರವಾಗಿ ಅದರ ಅಂಚಿನ ಅಜ್ಞಾತೋಪಮವಲಯದಲ್ಲಿ ಯಃಕಶ್ಚಿತವಾಗಿರುವ ಈ ಅರಣ್ಯಕ ಪ್ರಪಂಚದ ಶ್ರೀಸಾಮಾನ್ಯರ ಬದುಕು-ಕ್ಷುದ್ರ ಅಲ್ಪ ಜಟಿಲ ರಾಗದ್ವೇಷಮಯ ಜೀವನ ಜಾಲ-ಇಂತಿಂತಿಂತು ಸಾಗುತ್ತಿದ್ದ ಸಮಯದಲ್ಲಿಯೆ ಅತ್ತ ಸುವಿಶಾಲ ಜಗತ್ತಿನಲ್ಲಿ ಚಾರಿತ್ರಕ ಮಹದ್ ಘಟನೆಗಳೆಂದು ಪರಿಗಣಿತವಾಗಲಿರುವ ಲೋಕವಿಖ್ಯಾತ ವ್ಯಾಪಾರಗಳೂ ನಡೆಯುತ್ತಿದ್ದವಷ್ಟೆ; ಯುದ್ಧ, ಕೌಲು, ಕ್ಷಾಮ, ಕಲಾ ಸಾಹಿತ್ಯ ಸೃಷ್ಟಿ, ಮಹಾ ಕಾವ್ಯರಚನೆ, ತಪಸ್ಯೆ, ಸಾಕ್ಷಾತ್ಕಾರ, ವೈಜ್ಞಾನಿಕ ಸಂಶೋಧನೆ, ಇತಾದಿ ಇತ್ಯಾದಿ, ಇತ್ಯಾದಿ!

ಆಗ, ತತ್ಕಾಲದಲ್ಲಿ ಅಂತಹ ಮಹದ್ಘಟನೆ ಎಂದು ಭಾವಿತವಾಗದಿದ್ದರೂ ಲೋಕದಲ್ಲಿ ಆ ಕಾಲದಲ್ಲಿ ನಡೆಯುತ್ತಿದ್ದ ಯಾವ ಮಹದ್ ಘಟನೆಗೂ ದ್ವಿತೀಯವಲ್ಲದೆ ತತ್ಕಾಲ ಮಾತ್ರ ಅಖ್ಯಾತವಾಗಿದ್ದ ಒಂದು ವಿಭೂತಿ ಘಟನೆ ಜರುಗುತ್ತಿತ್ತು. ಅಮೇರಿಕ ಸಂಯುಕ್ತ ಸಂಸ್ಥಾನದ ಸೇಂಟ್ ಲಾರೆನ್ಸ್ ಮಹಾನದಿಯ ನಡುವೆಯಿರುವ ಸಹಸ್ರ ದ್ವೀಪೋದ್ಯಾನದಲ್ಲಿ.

ಕ್ರಿ.ಶ.೧೮೯೩ ರಲ್ಲಿ ಚಿಕಾಗೊದಲ್ಲಿ ನಡೆದ ಸರ್ವಧರ್ಮ ಸಮ್ಮೇಲನದಲ್ಲಿ ತಟಕ್ಕನೆ ಯಶೋಗೋಪುರದ ಶಿಖರಕ್ಕೇರಿ ಆಧ್ಯಾತ್ಮಿಕ ಜಗನ್ನಯನ ಕೇಂದ್ರ ಮೂರ್ತಿಯಾಗಿದ್ದ ಸ್ವಾಮಿ ವಿವೇಕಾನಂದರು ಎರಡು ವರ್ಷಗಳ ಕಾಲ ಅಮೇರಿಕಾದ ಅನೇಕ ನಗರಗಳಲ್ಲಿ ಸಂಚರಿಸಿ, ಕ್ರೈಸ್ತಮತ ಸಂಕುಚಿತ ವಲಯದಲ್ಲಿಯೆ ಬೆಳೆದು ಕುಬ್ಜದೃಷ್ಟಿಗಳಾಗಿದ್ದ ಪಾಶ್ಚಾತ್ಯರಿಗೆ ಅಭೂತಪೂರ್ವ ಧೀರೋದಾರ ದೃಷ್ಟ್ಯ ವೇದಾಂತದ ಸಂದೇಶವಿತ್ತು ಜಯಡಿಂಡಿಮವನ್ನು ಮೊಳಗಿಸಿದ್ದರಷ್ಟೆ. ತರುವಾಯ ಅವರು ವೇದಾಂತದ ಅಧ್ಯಾತ್ಮಿಕ ಯೋಗಸಾದನೆಯನ್ನು ಕೈಗೊಳ್ಳಲು ಹಂಬಲಿಸುತ್ತಿದ್ದ ಕೆಲವು ಶಿಷ್ಯ ಶಿಷ್ಯೆಯರೊಡನೆ ಸೆಂಟ್ ಲಾರೆನ್ಸ್ ಮಹಾನದಿಯ ಸುವಿಸ್ತೃತ ಜಲರಾಶಿಯ ಮಧ್ಯೆ ಅರಣ್ಯಾವೃತವಾಗಿದ್ದು ನಿಭೃತವಾಗಿದ್ದ ಸಹಸ್ರದ್ವೀಪೋದ್ಯಾನದ ಒಂದು ಕುಟೀರಕ್ಕೆ ಬಂದು ನಿಂತರು.

ಸ್ವಾಮೀಜಿ ಒಂದು ದಿನ ತಮ್ಮ ಶಿಷ್ಯರಲ್ಲಿ ಕೆಲವರಿಗೆ ಮಂತ್ರದೀಕ್ಷೆ ಕೊಡಲು ನಿರ್ಧರಿಸಿದ್ದರು. ಅವರು ಸಹೋದರಿ ಕ್ರಿಸ್ಟೈನ್ ಎಂಬ ಮಹಿಳೆಯನ್ನು ಎಕ್ಕಟಿ ಕರೆದು ಹೇಳಿದರು: “ನೀನು ದೀಕ್ಷೆ ತೆಗೆದುಕೊಳ್ಳಲು ಎಷ್ಟರಮಟ್ಟಿಗೆ ಅರ್ಹಳಾಗಿದ್ದೀಯೇ ಎಂಬುದನ್ನು ಅರಿಯಲು ಸಾಕಾಗುವಷ್ಟು ನಿನ್ನ ಪರಿಚಯ ನನಗಿನ್ನೂ ಆಗಿಲ್ಲ....ಆದರೆ ನನಗೆ ಒಂದು ಶಕ್ತಿ ಇದೆ. ಪರಮನಃಪ್ರವೇಶನ ಶಕ್ತಿ. ಅನ್ಯರ ಮನಸ್ಸನ್ನು ಹೊಕ್ಕು ಅದರ ರಹಸ್ಯಗಳನ್ನೆಲ್ಲ ಅರಿಯುವ ಶಕ್ತಿ. ನಾನು ಅದನ್ನು ಸಾಧಾರಣವಾಗಿ ಉಪಯೋಗಿಸುವದಿಲ್ಲ. ಅತ್ಯಂತ ಅಪೂರ್ವವಾಗಿ ಅವಶ್ಯ ಬಿದ್ದಾಗ ಮಾತ್ರ ಉಪಯೋಗಿಸಿಕೊಳ್ಳುತ್ತೇನೆ... ನೀನು ಅನುಮತಿತ್ತರೆ, ನಿನ್ನ ಮನಸ್ಸನ್ನು ಪ್ರವೇಶಿಸಿ ಅದನ್ನು ಓದಿಕೊಳ್ಳುವ ಇಚ್ಛೆ ಇದೆ; ಏಕೆಂದರೆ ಇತರರೊಂದಿಗೆ ನಿನಗೂ ನಾಳೆ ದೀಕ್ಷೆ ಕೊಡಬೇಕೆಂದಿದ್ದೇನೆ.”

ಆಕೆ ಸಂತೋಷದಿಂದಲೆ ಒಪ್ಪಿಗೆಕೊಟ್ಟಳು.

ಮರುದಿನ ಶಿಷ್ಯರೆಲ್ಲ ಮಂತ್ರದೀಕ್ಷಿತರಾದ ಮೇಲೆ ಸ್ವಾಮೀಜಿ, ಅದೂ ಇದೂ ಮಾತನಾಡುತ್ತಾ, ಸೂಕ್ಷ್ಮವಾಗಿ, ಶಿಷ್ಯರಲ್ಲಿ ಕೆಲವರ ಪೂರ್ವ ಜೀವನದ ಸಂಗತಿಗಳನ್ನು ಭವಿಷ್ಯಜೀವನದಲ್ಲಿ ಸಂಭವಿಸಲಿರುವ ಘಟನೆಗಳನ್ನೂ ಅವರವರಿಗೆ ಪ್ರತ್ಯೇಕವಾಗಿ ತಿಳಿಸಿದರು. ಕೆಲವಂತೂ ಅವರವರಿಗೇ ಮಾತ್ರ ಗೊತ್ತಿದ್ದ ಕಟ್ಟೇಕಾಂತ ವಿಷಯಗಳಾಗಿದ್ದವು. ಶಿಷ್ಯರ ಆಶ್ಚರ್ಯಕ್ಕೆ ಪಾರವೇ ಇರಲಿಲ್ಲ. ಆದರೆ ಸ್ವಾಮೀಜಿ ಆ ಶಕ್ತಿ ಅಂತಹ ಅದ್ಭುತ ಶಕ್ತಿಗಳ ಅಪೇಕ್ಷೆ ಹಾನಿಕರವೆಂದೂ ಎಚ್ಚರಿಸಿದರು.

ಸೋದರಿ ಕ್ರಿಸ್ಟೈನ್ ಸಂಗಡ ಮಾತನಾಡುತ್ತಾ, ಆಕೆಯ ಭೂತಭವಿಷ್ಯತ್ ಜೀವನದ ಮತ್ತು ಪೂರ್ವಸಂಸ್ಕಾರಗಳ ಸಂಸ್ಕೃಣದ ವಿಚಾರವಾಗಿ ತಿಳಿಸಿ ಹಿತೋಪದೇಶ ನೀಡುತ್ತಿದ್ದಾಗ, ಸ್ವಾಮೀಜಿ ಇದ್ದಕಿದ್ದ ಹಾಗೆ ಹೊಟ್ಟೆ ಹುಣ್ಣಾಗುವಂತೆ ನಗತೊಡಗಿದರು. ಏನನ್ನೊ ಕಂಡೂ ಕಂಡೂ ಮತ್ತೆ ನಕ್ಕರು. ಅಳ್ಳೆಹಿಡಿದುಕೊಂಡು ನಕ್ಕರು ಉಸಿರು ಕಟ್ಟಿ ಕಣ್ಣಲ್ಲಿ ನೀರುಕ್ಕುವಂತೆ ನಕ್ಕರು.

ಸಹೋದರಿಗೆ ಮೊದಮೊದಲು ಪರಿಹಾಸವಾಗಿದ್ದುದು ಬರಬರುತ್ತಾ ಸೋಜಿಗವಾಯಿತು. ಕಡೆಕಡೆಗೆ ಸ್ವಾಮಿಗಳಿಗೆ ಏನಾದರೂ ಮಾನಸಿಕ ವ್ಯಪರೀತ್ಯ ಉಂಟಾಯಿತೊ ಎಂದು ಶಂಕಿಸಿದಳು. ಆಕೆ ಭೀತೆಯಾದುದನ್ನು ನೋಡಿದ ಸ್ವಾಮೀಜಿ ತಮ್ಮ ನಗೆಯನ್ನು ಹತೋಟಿಗೆ ತಂದುಕೊಂಡು, ನಗುಮೊಗರಾಗಿಯೆ ಮೌನವಾಗಿ ಕುಳಿತುಬಿಟ್ಟರು. ಕುತೂಹಲಾವಿಷ್ಟೆಯಾದ ಕ್ರಿಸ್ಟೈನ್ ಎಷ್ಟು ಪ್ರಶ್ನೆ ಕೇಳಿದರೂ ಅವರು ಬಾಯಿಬಿಡಲಿಲ್ಲ.

ಹಿಂದಿನ ರಾತ್ರಿ, ದೀಕ್ಷೆ ತೆಗೆದುಕೊಳ್ಳಲಿರುವ ಶಿಷ್ಯರ ಈ ಜನ್ಮದ ಮತ್ತು ಪೂರ್ವಾಪರ ಜನ್ಮಗಳ ಸೂಕ್ಷ್ಮಭೂಮಿಕೆಗಳಲ್ಲಿ ಸಂಚರಿಸಿ, ಅವರ ಚೈತ್ಯದ ವಿಕಾಸನ ಸ್ಥಿತಿಯನ್ನು ಅರಿಯುವ ಕಾರ್ಯದಲ್ಲಿದ್ದಾಗ, ಸ್ವಾಮೀಜಿಯ ಸರ್ವಕಾಲ ಸರ್ವದೇಶ ವ್ಯಾಪ್ತಿಯಾಗಿಯೂ ಅತೀತವಾಗಿದ್ದ ಅತಿಮಾನಸಕ್ಕೆ ಗೋಚರವಾಗಿದ್ದ ಅಸಂಖ್ಯ ದೃಷ್ಯ ಪರಂಪರೆಗಳಲ್ಲಿ ಒಂದು ದೃಶ್ಯದ ನೆನಪು ಅವರ ಈ ವಿಕಟಾಟ್ಟಹಾಸಕ್ಕೆ ಕಾರಣವಾಗಿತ್ತು.

ಕಡೆಗೂ ಸ್ವಾಮೀಜಿ ಅದರ ವಿಚಾರವಾಗಿ ಸಹೋದರಿ ಕ್ರಿಸ್ಟೈನ್ ಗೆ ಯಾವ ವಿವರವನ್ನೂ ಕೊಡಲಿಲ್ಲ. ಆದರೆ ಇಷ್ಟನ್ನು ಮಾತ್ರ ಸೂಚ್ಯವಾಗಿ ಹೇಳಿದ್ದರು:

"ನೋಡು, ಸೋದರೀ, ನಾನು ಇಂಡಿಯಾದಿಂದ ಇಲ್ಲಿಗೆ ಬಂದು ನಿಮಗೆ ವೇದಾಂತ ಭೋಧನೆ ಮಾಡಿ, ಸರ್ವಧರ್ಮ ಸಮನ್ವಯ ದೃಷ್ಟಿಯನ್ನು ನೀಡಿ, ನಿಮ್ಮನ್ನು ಮತಾಂತರಗೊಳಿಸುವ ರೂಕ್ಷಬರ್ಬರವಾದ ಕಿರಾತನೀತಿಗೆ ಕೈಹಾಕದೆ, ಕ್ರೈಸ್ತರಿಗೆ, ಯೆಹೂದ್ಯರಿಗೆ, ಮೆಥಡಿಸ್ಟರಿಗೆ, ಪ್ಯೂರಿಟನ್ನರಿಗೆ, ಕ್ಯಾಥೋಲಿಕ್ಕರಿಗೆ, ಅವರವರ ಭಾವದಲ್ಲಿಯೆ, ಅವರವರ ಶ್ರದ್ಧೆಯಲ್ಲಿಯೆ, ಅವರವರು ಮುಂದುವರಿಯುವಂತೆ ಹೇಳಿ ದೀಕ್ಷೆಕೊಡುವ ಕೆಲಸದಲ್ಲಿದ್ದೇನೆ. ಸ್ವಲ್ಪ ಹೆಚ್ಚು ಕಡಮೆ, ಅದೇ ದಿನದಲ್ಲಿ, ಅದೇ ಸಮಯದಲ್ಲಿ, ನನ್ನ ಮಾತೃಭೂಮಿಯ ಒಂದು ಪರ್ವತಾರಣ್ಯ ಪ್ರದೇಶದ ಮೂಲೆಯಲ್ಲಿ, ಕ್ರೈಸ್ತಮತ ಪ್ರಚಾರಕರು ಬ್ರಿಟಿಷ್ ಸರ್ಕಾರದ ರಾಜಕೀಯ ಬಲ ಮತ್ತು ಪ್ರತಿಷ್ಠೆ ಮತ್ತು ಸೌಕರ್ಯ ಸೌಲಭ್ಯಗಳನ್ನು ಪಡೆದು, ವಿದ್ಯಾಭ್ಯಾಸದ ಮತ್ತು ವೈದ್ಯಕೀಯದ ನೆರವೀಯುವ ಬಲೆಯೊಡ್ಡಿ, ಅರಿಯದ ಅಜ್ಞಾನಿಗಳನ್ನು ತಮ್ಮ ಜಾತಿಗೆ ಸೇರಿಸಿಕೊಂಡು, ತಮ್ಮ ಸಂಖ್ಯಾ ಪ್ರಮಾಣವನ್ನು ಹೆಚ್ಚಿಸಿಕೊಳ್ಳುವ ವ್ಯಾಪಾರೀ ಉದ್ಯಮದಲ್ಲಿದ್ದಾರೆ. ಆದರೆ ಆ ಅಜ್ಞಾನೀ ಜನರಲ್ಲಿಯೂ ಒಂದು ಅಂಥವಾದ ಸ್ವಮತನಿಷ್ಠೆ ಇರುವುದರಿಂದ ಅವರೂ ಮಿಶನರಿಗಳ ಮತಾಂತರ ಕಾರ್ಯವನ್ನು ತಮ್ಮದೇ ಆದ ದಸ್ಯುವಿಧಾನದಿಂದ ವಿಫಲಗೊಳಿಸುತ್ತಿದ್ದಾರೆ. ಅಂತಹ ಒಂದು ದೃಶ್ಯವನ್ನು ಕಂಡಿದ್ದೆ, ನಿನ್ನೆಯ ಅತೀಂದ್ರಿಯ ಮನಃಪರ್ಯಟನದಲ್ಲಿ. ಅದರ ನೆನಪಾಗಿ, ಆ ಚಿತ್ರ ಕಣ್ಣಿಗೆ ಕಟ್ಟಿದಂತಾಗಿ ತಡೆಯಲಾರದೆ ನಕ್ಕುಬಿಟ್ಟೆ....ನಾನು ಕಂಡ ಅನೇಕ ದರ್ಶನ ಚಿತ್ರಗಳಲ್ಲಿ ಅದೇ ಏಕೆ ನೆನಪಿಗೆ ಬರಬೇಕೊ?....ಯಾರಿಗೆ ಗೊತ್ತು? ಬಹುಶಃ ನನಗೂ ನಾನು ಕೈಗೊಂಡಿರುವ ಶ್ರೀ ರಾಮಕೃಷ್ಣ ಲೋಕಸಂಗ್ರಹ ಕಾರ್ಯಕ್ಕೂ, ಅಲ್ಲಿ ನಾನು ಕಂಡ ದೃಶ್ಯದಲ್ಲಿ ಪಾತ್ರದಾರಿಗಳಾಗಿದ್ದವರಿಗೋ ಅಥವಾ ಅವರ ಮಕ್ಕಳಾಗಿ ಹುಟ್ಟಲಿರುವವರಿಗೋ ಅಥವಾ ಅವರ ಮೊಮ್ಮಕ್ಕಳು ಮರಿಮಕ್ಕಳಿಗೋ, ಏನಾದರೂ ಸಂಬಂಧ ಇರಬಾರದೇಕೆ?....ಇಲ್ಲವೆ, ಇಂದು ನನ್ನಿಂದ ದೀಕ್ಷಿತರಾದವರು ಮರಣಾನಂತರ ಮತ್ತೊಂದು ಜನ್ಮದಲ್ಲಿ ಅಲ್ಲಿಯೆ ಹುಟ್ಟಿಬಂದು ನನ್ನ ಕಾರ್ಯವನ್ನು ಮುಂದುವರಿಸುವ ಸೇವೆಗೆ ಪಾತ್ರಗಳಾಗಬಾರದೇಕೆ?...."

* * *

ಅಂದು ಬೆಳಿಗ್ಗೆ ಮುಂಚೆ, ಹೂವಳ್ಳಿ ಮನೆಯಲ್ಲಿ, ಕೋವಿಚೀಲವನ್ನು ಬಗಲಿಗೆ ಸಿಕ್ಕಿಸಿಕೊಂಡು, ಕೋವಿಗೆ ಈಡು ತುಂಬದೆ ಬರಿಯ ಕೇಪನ್ನು ಮಾತ್ರ ಹಾಕಿಕೊಂಡು ಹೊರಗೆ ಹೊರಡಲನುವಾಗುತ್ತಿದ್ದ ಮುಕುಂದಯ್ಯನಿಗೆ ತಾನು, ಸ್ವಾಮಿ ವಿವೇಕಾನಂದ್ರು ಅಮೇರಿಕಾದಲ್ಲಿ ಸಹೋದರಿ ಕ್ರಿಸ್ಟೈನ್ ಗೆ ಹೇಳಿದ್ದ. ಆ ಶ್ರೀರಾಮಕೃಷ್ಣ ಲೋಕ ಸಂಗ್ರಹ ಕಾರ್ಯದ ಸಫಲತೆಗಾಗಿ ವಿಧಿಯ ಕೈಯಲ್ಲಿ ಒಂದು ಉಪಾಂಗೋಪಕರಣವಾಗುತ್ತಿದ್ದೇನೆ ಎಂಬುದು ಹೇಗೆ ತಾನೆ

ಗೊತ್ತಾಗಬೇಕು. ಅವನು ತನ್ನ ಅಕ್ಕನಿಗೆ ಮಾತು ಕೊಟ್ಟಿದ್ದಂತೆಯೂ ತನ್ನ ಬೆಟ್ಟಳ್ಳಿ ದೇವಯ್ಯ ಬಾವನನ್ನು, ಅವನ ಅಪೇಕ್ಷೆಯಂತೆಯೆ, ಕಿಲಸ್ತರ ಜಾತಿಗೆ ಸೇರುವುದನ್ನು ತಪ್ಪಿಸುವ ಸಲುವಾಗಿಯೂ ಮೇಗರವಳ್ಳಿಯ ಮಿಶನ್ ಇಸ್ಕೂಲಿಗೆ ಹೊರಟಿದ್ದನು.

ಅವನು ಕೋವಿ ಮತ್ತು ಕೋವಿಚೀಲಗಳನ್ನು ತೆಗೆದುಕೊಂಡಿದ್ದರೂ, ಬೇಟೆಯ ಉಡುಪಿನಲ್ಲಿರದೆ, ನೆಂಟರ ಮನೆಗೆ ಹೋಗುವಾಗ ಹಾಕಿಕೊಳ್ಳುವಂತೆ ತೋಪಿ, ಅಂಗಿ, ಕಚ್ಚೆಪಂಚೆಗಳನ್ನು ತೊಟ್ಟುಕೊಂಡಿದ್ದನ್ನು ಕಂಡ ನಾಗಕ್ಕಗೆ ಏನೊ ಅನುಮಾನ ಬಂದು, ಅದನ್ನು ಚಿನ್ನಮ್ಮಗೆ ತಿಳಿಸಿದಳು.

ಭೀತಿ ಬಡಿದಂತಾಗಿ ಚಿನ್ನಮ್ಮ ಏದಿದಳು: "ನಾಗಕ್ಕಾ, ಅಜ್ಜೀಗಾದರೂ ಹೇಳೆ, ಅವರು ಹೋಗದಾಂಗೆ ಮಾಡೆ....ಅವರು ಷಿಕಾರಿಗೆ ಹೋಗ್ತಾ ಇಲ್ಲ ಕಣೇ. ಮೇಗ್ರೊಳ್ಳಿಗೆ ಹೋಗ್ತಾರಂತೆ, ಪಾದ್ರೀನ ಹೊಡೆದಾಕಾಕೆ! ನಂಗೆ ಮೊನ್ನೇನೆ ಹೇಳಿದ್ಲು ಪೀಂಚ್ಲು. ಸುಳ್ಳು ಅಂತಾ ಮಾಡಿದ್ದೆ. ಐತ ಹೇಳಿದ್ದನಂತೆ ಅವಳಿಗೆ. ಅಂವನ್ನೂ ಕರಕೊಂಡು ಹೋಗ್ತಾರಂತೆ!....ಅಯ್ಯಯ್ಯೋ, ಬ್ಯಾಗ ಹೋಗೋ!....

ನಾಗಕ್ಕ ಗಟ್ಟಿಯಾಗಿ ಕೂಗಿ ಹೇಳಿದ ಮೇಲೆ ಅಜ್ಜಿಗೆ ವಿಷಯವೇನೊ ಗೊತ್ತಾಯಿತು. ಆದರೆ ಅರ್ಥವಾಗಲಿಲ್ಲ. ಯಾರಾದರೂ ಮನುಷ್ಯರನ್ನು ಹೊಡೆಯುತ್ತಾರೆಯೆ ಕೋವಿಯಲ್ಲಿ? ಕೋವಿ ಇರುವುದು ಹಂದಿ, ಮಿಗ, ಕಾಡುಕುರಿ, ಕಾಡುಕೋಳಿ, ಹುಲಿ ಮೊದಲಾದ ಕಾಡುಪ್ರಾಣಿಗಳನ್ನು ಹೊಡೆಯುವುದಕ್ಕೆ: "ಏ ಹೋಗೆ! ಅವನಿಗೇನು ಹುಚ್ಚೇನೆ, ಮನುಷ್ಯನ್ನ ಹೊಡೆಯಾಕೆ?" ಎಂದು ನಾಗಕ್ಕನನ್ನು ಗದರಿಸಿದರೂ, ಸೊಂಟದ ಮೇಲೆ ಕೈಯಿಟ್ಟು ನಸುಬಾಗಿ ಬಾಗಿಲಿಗೆ ನಡೆದು ಬಂದು ಮುಕುಂದಯ್ಯನನ್ನು ವಿಚಾರಿಸಿದಳು.

"ಇವೊತ್ತು ಮೇಗ್ರೊಳ್ಳಿ ಮಿಶನ್ ಇಸ್ಕೂಲಿನ ಪ್ರಾರಂಭೋತ್ಸವವಂತೆ, ಅಜ್ಜೀ ಅದಕ್ಕೆ ಹೋಗ್ತಿದ್ದೀನಿ.... ಬರ್ತಾ ಎಂತಿದ್ರೂ ಕಂಡರೆ ಒಂದು ಈಡು ಹೊಡೆಯಾನ ಅಂತಾ ಕೋವಿ ತಗೊಂಡೀನಿ." ಎಂದು ಅಜ್ಜಿಗೆ ಸಮಾಧಾನ ಹೇಳಿ ಹೋರಟೇಬಿಟ್ಟನು. ಅಜ್ಜಿಗೆ ಕೇಳಿಯೆ ಮುಕುಂದಯ್ಯನ ಮೇಲೆ ಪ್ರೀತಿಪೂರ್ವಕವಾದ ಗೌರವವುಂಟಾಯಿತು. ಒಳಗೆ ಹೋಗಿ ನಾಗಕ್ಕ ಚಿನ್ನಮ್ಮ ಇಬ್ಬರಿಗೂ ಛೀಮಾರಿ ಮಾಡಿದಳು: "ಗಂಡಸರು ಏನಾದರೂ ದೊಡ್ಡ ಕೆಲಸಕ್ಕೆ ಹೊರಟು ನಿಂತಾಗ ಹೀಂಗೆಲ್ಲ ಅನಿಬಿರುಗು ಆಡಬಾರದು ಕಣೇ. ಅಪಶಕುನ ಆಗ್ತದೆ!"

ಮುಕುಂದಯ್ಯ ಮನೆಯಿಂದ ಸ್ವಲ್ಪದೂರ ಹೋಗುವುದರೊಳಗೆ, ಅವನ ಹಿಂದೆ ಸಂಗಡ ಹೊರಟಿದ್ದ ಐತ "ಅಯ್ಯಾ, ಚಿನ್ನಕ್ಕೋರು ಯಾಕೊ ಬಿರುಬಿರನೆ ಬರಾಹಾಂಗೆ ಕಾಣ್ತದೆ." ಎಂದು ಪಿಸುದನಿಯಲ್ಲಿ ಗುಟ್ಟಾಡುವಂತೆ ಹೇಳಿದನು.

ಐತನಿಗೆ ಮುಂದೆ ಹೋಗುತ್ತಿರುವಂತೆ ಹೇಳಿ. ಮುಕುಂದಯ್ಯ ನಿಂತನು.

ಚಿನ್ನಮ್ಮ ಏದುತ್ತಾ ಬಂದು ಹತ್ತಿರ ನಿಂತಳು. ಚಳಿಗಾಲದ ಬೆಳಗಿನ ಎಳಬಿಸಿಲಿನಲ್ಲಿ ಅವಳ ಬಾಯುಸಿರು ಹೊಗೆಹೊಗೆಯಾಗಿ ಮೇಲೇರುತ್ತಿತ್ತು. ಏನೋ ಕೆಲಸ ಮಾಡುತ್ತಿದ್ದವಳು ಹಾಗೆಯೆ ಎದ್ದು ಓಡಿ ಬಂದಿದ್ದಳಾದ್ದರಿಂದ ನೇಲುಬಿದ್ದಿದ್ದ ಗೊಬ್ಬೆಯ ಸೆರಗನ್ನೂ ಎತ್ತಿ ಕಟ್ಟಿರಲಿಲ್ಲ. ಸಾಮಾನ್ಯವಾಗಿ ರವಕೆ ಕುಪ್ಪಸ ಯಾವುದನ್ನೂ, ಅದರಲ್ಲಿಯೂ ಮನೆಯಲ್ಲಿರುವಾಗ, ತೊಟ್ಟುಕೊಳ್ಳುತ್ತಿರಲಿಲ್ಲವಾದ್ದರಿಂದ ಸೀರೆಯ ಮರೆಯಲ್ಲಿ ಅದನ್ನೊತ್ತಿಎತ್ತಿ

ತಳ್ಳುವಂತಿದ್ದ ಅವಳ ವಿಕಾಸಮಾನ ಕುಟ್ಮಲಜುಚಗಳು ಮೇಲಕ್ಕೂ ಕೆಳಕ್ಕೂ ಉಸಿರಾಡಿದಂತೆಲ್ಲ ಎದ್ದು ಬೀಳುತ್ತಿದ್ದವು. ಅವಳ ಆ ಉದ್ವೇಗದ ಪರಿಸ್ಥಿತಿಯಲ್ಲಿ ಅವಳಿಗೆ ಸರ್ವದಾ ಸಹಜವಾಗಿರುತ್ತಿದ್ದ ಲಜ್ಜೆಯೂ ಹಿಂಜೈದಂತಿತ್ತು. ಕಣ್ಣೀರು ಸುರಿಯುತ್ತಿತ್ತು. ಬಿಕ್ಕುತ್ತಿದ್ದುದರಿಂದ ಮೂಗುತಿ ಮತ್ತು ಎಸಳು ಬುಗುಡಿಗಳು ಲಯಬದ್ಧವಾಗಿ ಅಳ್ಳಾಡುತ್ತಿದ್ದಂತಿತ್ತು. ಅವಳು ತನ್ನೆದೆಯನ್ನು ಸಂತೈಸಲೆಂಬಂತೆ ಒತ್ತಿಕೊಂಡಿದ್ದು, ಮುಂಗೈಮೇಲೆ ಹಚ್ಚೆ ಜುಚ್ಚಿದ್ದ ಜೋಗಿ ಜಡೆಯ ಕರ್ನೀಲಿ ಬಣ್ಣವು ತಾರತಮ್ಯದಿಂದ ಅವಳ ಮೈ ಬಣ್ಣವನ್ನು ಮನೋಹರವಾಗಿ ಎತ್ತಿ ತೋರಿಸುತ್ತಿತ್ತು. ಮನೆಯೊಳಗಿನ ಬೆಳಕಿನಲ್ಲಿ ಕಾಣಿಸದೆ ಮರೆಯಾಗಿರುತ್ತಿದ್ದ ಅವಳ ಆ ಅಪ್ಸರ ಸೌಂದರ್ಯದ ಪ್ರಭಾವದಿಂದ ರುದ್ರಕಾರ್ಯಕ್ಕೆ ದೃಢಚಿತ್ತನಾಗಿ ಹೊರಟಿದ್ದ ಮುಕುಂದಯ್ಯಾ ಹೃದಯ ಆರ್ದ್ರವಾಯಿತು. ಇನ್ನು ಕೆಲವೇ ದಿನಗಳಲ್ಲಿ ತನ್ನ ಧರ್ಮಪತ್ನಿಯಾಗಲಿರುವ ಅವಳನ್ನು ಮನಸ್ಸಿನಿಂದಲೆ ಬಿಗಿದಪ್ಪಿ ಮುದ್ದಾಡಿತು ಅವನ ಚೇತನ ಸಮಸ್ತವೂ! ಅವಳಿಗೆ ಹೇಳದೆ ಬಂದದ್ದು ತಪ್ಪಾಯಿತು ಎನ್ನಿಸಿತವನಿಗೆ.

"ಯಾಕೆ, ಚೆನ್ನಿ?"

ಚೆನ್ನಮ್ಮ ಓಡಿ ಬಂದದ್ದು ಸಣ್ಣ ಕೆಲಸಕ್ಕಾಗಿರಲಿಲ್ಲ; ತನ್ನ ಐದೆತನವನ್ನು ಕಾಪಾಡಿಕೊಳ್ಳುವ, ಮಾಂಗಲ್ಯವನ್ನು ರಕ್ಷಿಸಿಕೊಳ್ಳುವ ಮಹತ್ಕಾರ್ಯಕ್ಕಾಗಿ ಧಾವಿಸಿ ಬಂದಿದ್ದಳು ಆ ಮಲೆಯ ಕನ್ಯೆ. ಅವಳಿನ್ನೂ ಅವನನ್ನು ಶಾಸ್ತ್ರೋಕ್ತವಾಗಿ ಮದುವೆಯಾಗಿರಲಿಲ್ಲ, ತಾಳಿ ಕಟ್ಟಿಸಿಕೊಂಡಿರಲಿಲ್ಲ, ನಿಜ. ಆದರೆ ಉಳಿದೆಲ್ಲ ರೀತಿಗಳಿಂದಲೂ ಅವಳು ಅವನ ಹೆಂಡತಿಯಾಗಿಬಿಟ್ಟಿದ್ದಳು. ತನ್ನ ಕನ್ನೆತನವೂ ಅವನಿಗೆ ಸಮರ್ಪಿತವಾಗಿಬಿಟ್ಟಿತ್ತು. ಅವನಿಗಾಗಿ ಮಲೆನಾಡಿನ ಮನೆತನದ ಹೆಣ್ಣು ಮಾಡಬಾರದ್ದನ್ನೆಲ್ಲ ಮಾಡಿದ್ದಳು. ಅವನನ್ನು ಬಿಟ್ಟು ತನಗಿನ್ನು ಇಹಜೀವನವಿರಲಿಲ್ಲ. ಅವನಿಗೇನಾದರೂ ಆಗಬಾರದ್ದು ಆದರೆ? ಅಯ್ಯೋ, ಅದನ್ನು ನೆನೆದರೇ ಅವಳಿಗೆ ಪ್ರಜ್ಞೆ ತಪ್ಪುವಂತಾಗುತ್ತಿತ್ತು! ಅವನೇನಾದರೂ ಅವಶನಾಗಿ ಗುಂಡು ಹಾರಿಸಿದರೆ, ನರಹತ್ಯೆ ನಡೆದರೆ, ನೆವ ಸಿಕ್ಕಿದರೆ ಸಾಕು ನೇಣು ಹಾಕುತ್ತಿದ್ದ ಆ ಕಾಲದಲ್ಲಿ,-ಅವನಿಗೆ ಗಲ್ಲಾಗುವುದೆ ಖಂಡಿತ! ಅಯ್ಯೋ ಆಮೇಲೆ? ನನ್ನ ಗತಿ? ಚೆನ್ನಮ್ಮ ನೆಲಕ್ಕೆ ದಿಂಡುರುಳಿ, ಮುಕುಂದಯ್ಯನ ಪಾದಗಳನ್ನು ಬಲವಾಗಿ ಹಿಡಿದುಕೊಂಡು, ಅವನ್ನು ಕಣ್ಣೀರಿನಿಂದ ತೋಯಿಸುತ್ತಾ ಬಿಕ್ಕಿ ಬಿಕ್ಕಿ ಅತ್ತಳು.

ಮುಕುಂದಯ್ಯ ಕೋವಿಯನ್ನು ನೆಲಕಿಟ್ಟು, ಬಗ್ಗಿ, ಎರಡೂ ಕೈಗಳಿಂದ ಅವಳನ್ನು ಎತ್ತುತ್ತಾ "ಯಾಕೆ, ಚೆನ್ನೀ?" ಎಂದನು ಮತ್ತೆ, ಸ್ತಂಭಿತನಾಗಿ.

"ನಂಗೊತ್ತು, ನೀವು ಯಾಕೆ ಹೋಗ್ತಿದ್ದೀರಿ ಅಂತಾ. ಬೆಟ್ಟಳ್ಳಿ ಅತ್ತಿಗೆಮ್ಮಗೆ ಕೊಟ್ಟಿದ್ದ ಮಾತನ್ನು ನಡೆಸಿಕೊಡುವುದಕ್ಕೆ! ಐತ ಹೇಳಿದನಂತೆ; ಪೀಂಚ್ಲು ಹೇಳಿತು ನಂಗೆ….ಖಂಡಿತಾ ಬೇಡ, ನೀವು ಕೋವಿ ತಗೊಂಡು ಹೋಗೋದು. ನಂಗೆ ಜೀವಾನೆ ಹಾರ್ತಿದೆ! ನೀವು ಯಾರನ್ನಾದ್ರೂ ಕೊಂದರೆ?….ನಾನು ಕೋಣೆಗೆ ಬರ್ಲಿಲ್ಲಾ ಅಂತಾ ನಿಮಗೆ ಸಿಟ್ಟಾಗಿದ್ರೆ, ನನ್ನ ಸರೂ ತಪ್ಪಾಯ್ತು! ಕಾಲಿಗೆ ಬೀಳ್ತೀನಿ…. ಇವೊತ್ತು ಬಂದೇ ಬರ್ತೀನಿ…. ಇನ್ನೊಂದು ತಿಂಗಳು ತಡೆದರೆ…. ಆಗೇ ಅಗ್ತದಲ್ಲಾ…. ಅಂತಾ….ಬರ್ಲಿಲ್ಲ!"

ನಡುನಡುವೆ ಬಿಕ್ಕಿಬಿಕ್ಕಿ, ನಿಲ್ಲಿಸಿ ನಿಲ್ಲಿಸಿ, ಅಳತ್ತಳುತ್ತಾ ಹೇಳುತ್ತಿದ್ದ ಚಿನ್ನಮ್ಮನ ಮಾತುಗಳನ್ನು ಕೇಳುತ್ತಿದ್ದ ಮುಕುಂದಯ್ಯಗೆ ಅವಳ ದುಃಖವನ್ನು ನೋಡಿ ಮನಸ್ಸು ನೊಂದಿತಾದರೂ ತುದಿತುದಿಗೆ ಅವಳಾಡಿದ ಮಾತುಗಳಿಗೆ ತಡೆಯಲಾರದೆ ನಕ್ಕುಬಿಟ್ಟನು.

"ಸುಮ್ಮಸುಮ್ಮನೆ ಏನೇನೋ ಊಹಿಸಿಕೊಂಡು ಹೀಂಗೆ ಅಳ್ತಿಯಲ್ಲಾ? ನಿಗೆ ಯಾರು ಹೇಳ್ದೋರು? ಆ ಹರಕಲು ಬಾಯಿ ಐತಾ ಹೇಳ್ದಾ ಅಂತಾ ಅದನ್ನೆಲ್ಲಾ ನಂಬ್ತೀಯಾ?...ನೋಡು, ಚಿನ್ನೀ, ನಾನೇನು ನೂನು ತಿಳಿದಕೊಂಡಷ್ಟು ಧೈರ್ಯಶಾಲೀನೂ ಅಲ್ಲ, ಮೂರ್ಖನೂ ಅಲ್ಲ. ನನಗೂ ನಿನ್ನಷ್ಟೇ ಆಸೆ ಇದೆ, ನಿನ್ನ ಮದುವೆಯಾಗಬೇಕೂ ಸುಖವಾಗಿ ಬಾಳಬೇಕೂ ಅಂತಾ. ಇಷ್ಟೆಲ್ಲ ಪಾಡುಪಟ್ಕೊಂದು, ನಿನ್ನೂ ದಣಿಸಿ, ನೆಂಟರು ಇಷ್ಟರು ಊರೋರ ಬಾಯಿಗೆಲ್ಲ ಬಂದು, ಈಗ ನಿನಗೆ ಅನ್ಯಾಯ ಆಗೋ ಹಾಂಗೆ ಮಾಡ್ತಿನಿ ಅಂತಾ ಖಂಡಿತ ತಿಳಿಕೊಳ್ಳಬ್ಯಾಡ....ನಾನು ಕೋವಿ ತಗೋಂಡು ಹೋಗ್ತೀನಿ ಅಂತಾ ನಿಂಗೆ ಹೆದರಿಕೇನೇ?" ಮುಕುಂದಯ್ಯ ಬಗ್ಗಿ ಕೆಳಗಿಟ್ಟಿದ್ದ ಕೋವಿಯನ್ನು ಕೈಗೆ ತೆಗೆದುಕೊಂಡನು. "ಇಲ್ಲಿ ನೋಡು, ಈ ಕೋವೀಲಿ ಏನು ಅದೆ ಅಂತಾ." ಚಿನ್ನಮ್ಮ ಬೆಚ್ಚುವಂತೆ ಅವಳ ಕಡೆಗೆ ಕೋವಿನಳಿಗೆ ತಿರುಗಿಸಿ ಹಿಡಿದು, ಕುದುರೆ ಎತ್ತಿ, ಬಿಲ್ಲೆಳೆದುಬಿಟ್ಟನು! ಛಾಟ್ ಎಂದು ಕೇಪು ಹೊಟ್ಟಿ ಹಾರಿತುಃ ಢಾಂ ಎಂದು ಈಡಾಗಲಿಲ್ಲ. ಹೆದರಿ ಬಿಳಿಚಿಕೊಂಡಿದ್ದಚಿನ್ನಮ್ಮ ಮುಕುಂದಯ್ಯನ ನಗೆಗೆ ಕಕ್ಕಾವಿಕ್ಕಿಯಾದಳು. "ನೋಡಿದೆಯಾ? ಕೋವಿಗೆ ಬರೀ ಕೇಪು ಹಾಕಿದ್ದೆ. ಈಡು ತುಂಬಿರಲಿಲ್ಲ. ಆದರಿಂದ ಯಾರಿಗೂ ಅಪಾಯಾಅಗುವುದಿಲ್ಲ.... ನಿನ್ನ 'ಗಂಡ' ಇವೊತ್ತು ರಾತ್ರಿ ಸುರಕ್ಷಿತವಾಗಿ ಬಂದೇ ಬರ್ತಾನೆ. ಗೊತ್ತಾಯ್ತೆ?...."ಗಂಡ ಅಂದದ್ದಕ್ಕೆ ಸಿಟ್ಟು ಮಾಡಿಕೊಳ್ಳೋದಿಲ್ಲಷ್ಟೆ? "ವರ" ಅಂತ ಬದಲಾಯಿಸಿಕೋ ಬೇಕಾದ್ರೆ...."

ಚಿನ್ನಮ್ಮ ಲಜ್ಜಾಭಂಗಿಯಿಂದ ನಿಂತಿದ್ದನ್ನು ನೋಡಿ "ಇವೊತ್ತು ರಾತ್ರಿ 'ಬಂದೇ ಬರ್ತೀನಿ' ಅಂತಾ ನೀನು ಹೇಳಿದ್ದು ಜ್ಞಾಪಕ ಇರಲಿ! ಮತ್ತೆಲ್ಲಾದರೂ ಮರೆತು ಬಿಟ್ಟೀಯಾ?.... ಏನು?.... ನೆಲ ನೋಡ್ತಾ ನಿಂತುಬಿಟ್ಟೆಲ್ಲಾ, ಚಿನ್ನೀ?.... ನೀನು ಬಂದ್ರೆ ಅಲ್ಲಿ ನಡೆಯೋ ಕತೇನೆಲ್ಲಾ ಸ್ವಾರಸ್ಯವಾಗಿ ಹೇಳ್ತೀನಿ, ಆಯ್ತಾ?" ಎಂದು ವಿನೋದವಾಡಿ, ತನ್ನ ಕಡೆಗೆ ಮುದ್ದು ನೋಟ ಬೀರಿ ಎವೆಯಿಕ್ಕದೆ ನೋಡುತ್ತಾ ನಿಂತಿದ್ದ ತನ್ನ ಪ್ರಾಣೇಶ್ವರನನ್ನು ನೇರವಾಗಿ ನೋಡುವುದರಿಂದಲೆ ಕಣ್ಣುತ್ತರವಿತ್ತು ಮನೆಯ ಕಡೆಗೆ ತಿರುಗಿದಳು "ವಧೂ" ಚಿನ್ನಮ್ಮ.

* * *

ಮೇಗರವಳ್ಳಿಯ ಮಿಶನ್ ಇಸ್ಕೂಲಿನ ಹೊಸ ಕಟ್ಟಡವು ಪ್ರಾರಂಭೋತ್ಸವಕ್ಕೆ ಸಜ್ಜಾಗಿತ್ತು ಒಳಗೂ ಹೊರಗೂ. ಒಳಗೆ ಬೆಂಚು, ಕುರ್ಚಿ, ಪಟಗಳುಃ ಹೊರಗೆ ಮಾವು ಹಲಸಿನ ತೋರಣ, ಬಗನಿ ಬಾಳೆಯ ಗಿಡಗಳನ್ನು ಕಟ್ಟಿ ಸಿಂಗರಿಸಿದ್ದ ಅಡಕೆ ಮರದ ಚಪ್ಪರ. ಪ್ರಾರಂಭೋತ್ಸವದ ಸಮಯ ಸಾಯಂಕಾಲವೆಂದು ಗೊತ್ತಾಗಿದ್ದರೂ ಆ ದಿನ ಪ್ರಾತಃಕಾಲವೆ ಒಂದು ಸಣ್ಣ ಗುಂಪು ಅಲ್ಲಿ ಸೇರಿತ್ತು. ಬೆಳಿಗ್ಗೆ ಅಲ್ಲಿ ನಡೆಯುವುದೆಂದು ಗೊತ್ತಾಗಿದ್ದ ಸಮಾರಂಭವು ಸಾರ್ವಜನಿಕ ಸ್ವರೂಪದ್ದಾಗಿರಲಿಲ್ಲ, ಖಾಸಗಿಯಾದಾಗಿತ್ತು. ಒಂದು ರೀತಿಯಲ್ಲಿ ಗೋಪ್ಯವಾದದ್ದೂ ಆಗಿತ್ತುಃ ಬೆಟ್ಟಳ್ಳಿ ದೇವಯ್ಯಗೌಡರ ಮತಾಂತರ ಸಮಾರಂಭ!

ಅಂತಹ ಮತಾಂತರಕಾರ್ಯ ಗುಟ್ಟಾಗಿ ನಡೆಯಬೇಕಾಗಿರಲಿಲ್ಲ. ಚರ್ಚಿನಂತಹ ಅಥವಾ ಚರ್ಚು ಇಲ್ಲದೆಡೆಗಳಲ್ಲಿ ಪ್ರಾರ್ಥನಾ ಮಂದಿರದಂತಹ ಪವಿತ್ರ ಸ್ಥಳಗಳಲ್ಲಿ ಸುಪ್ರಕಟವಾಗಿಯೆ ನಡೆಯುತ್ತಿದ್ದುದು ವಾಡಿಕೆಯಾಗಿತ್ತು. ಅಲ್ಲದೆ ಮಿಶನರಿಗಳಿಗೆ ಅಂತಹ ಪ್ರಕಟನೆ ಮತ್ತುಪ್ರಚಾರದ ಅವಶ್ಯಕತೆಯೂ ಇತ್ತು. ಆದರೆ ದೇವಯ್ಯಗೌಡರ ಸಕಾರಣವಾದ ಅಪೇಕ್ಷೆಯಂತೆ ಅವರ ಮತಾಂತರವನ್ನು ಸಧ್ಯಕ್ಕೆ ಅಂತರಂಗವಾಗಿಯೆ ನಡೆಯಿಸಲು ಒಪ್ಪಿಕೊಂಡಿದ್ದರು ರೆಬರೆಂಡ್ ಲೇಕ್ ಹಿಲ್ ಪಾದ್ರಿಗಳು."ದೇವಯ್ಯನವರ ಬಂಧುಬಾಂಧವರೆಲ್ಲ ಅವರ ಮತಾಂತರಕ್ಕೆ ವಿರೋಧವಾಗಿದ್ದಾರೆ. ದೇವಯ್ಯನವರು ಮಾತ್ರ ಪವಿತ್ರ ಬೈಬಲ್ಲಿನ ಉಪದೇಶಗಳಿಗೂ ದೇವರ ಕುಮಾರ ಯೇಸುಕ್ರಿಸ್ತನ ವ್ಯಕ್ತಿತ್ವಕ್ಕೂ ಮಾರುಹೋಗಿ, ಬ್ರಾಹ್ಮಣರ ಹಿಂದೂ ಧರ್ಮದ ಮೌಢ್ಯ ವಲಯದಿಂದ ಹೊರಬರಲು ಕಾತರರಾಗಿದ್ದಾರೆ. ಬ್ರಾಹ್ಮಣರ ಜಗದ್ ಗುರುಗಳೂ ಆವರ ಮಠಗಳೂ ಅವರ ಪುರೋಹಿತರು ನಾಮಧಾರಿ ಗೌಡರ ಜನಾಂಗವನ್ನು ಕೀಳುಭಾವನೆಯಿಂದ ಕಾಣುತ್ತಿರುವುದನ್ನೂ, ಅವರು ವಿದ್ಯೆ ಕಲಿತು ಮುಂದಕ್ಕೆ ಬರದಂತೆ ಮಾಡಲು ವರ್ಣಾಶ್ರಮಧರ್ಮ ಸ್ವಧರ್ಮಪರಿಪಾಲನೆ ಮೊದಲಾದ ತತ್ವಗಳನ್ನು ತಂದೊಡ್ಡಿ, ತಾವೇ ಬರೆದಿಟ್ಟಿರುವ ಸಂಸ್ಕೃತ ಶ್ಲೋಕಗಳನ್ನು ಉದ್ಧರಿಸಿ, ಆ ಶಾಸ್ತ್ರೋಕ್ತಿಯನ್ನು ಉಲ್ಲಂಘಿಸಿದರೆ ದೇವರ ಕೋಪಕ್ಕೂ ಬ್ರಾಹ್ಮಣರ ಶಾಪಕ್ಕೂ ಗುರಿಯಾಗಿ ನರಕಕ್ಕೆ ಹೋಗುತ್ತಾರೆಂದು ಹೆದರಿಸುವುದನ್ನೂ ಸಹಿಸಿ ಸಹಿಸಿ, ಅವರಿಗೆ ಸಾಕಾಗಿದೆ. ಆದ್ದರಿಂದ ಈ ಬ್ರಾಹ್ಮಣರ ಹಿಡಿತದಿಂದ ಹೊರಬಂದು ತಮ್ಮ ಜನಾಂಗದ ಉದ್ಧಾರವನ್ನು ಸಾಧಿಸಬೇಕೆಂಬುದೇ ಅವರ ಅಭಿಲಾಷೆ.... ಆದರೆ ಸದ್ಯದ ಸಾಮಾಜಿಕ ಪ್ರಸ್ಥಿತಿಯಲ್ಲಿ, ಸದ್ಯಕ್ಕಾದರೂ, ತಾವು ಬಹಿರಂಗವಾಗಿ ಕ್ರೈಸ್ತ ಮತಕ್ಕೆ ಸೇರುವುದರಿಂದ ತಮ್ಮ ಉದ್ದೇಶ ಸಾಧನೆಗೆ ಅನುಕೂಲವಾಗುವುದರ ಬದಲು ಪ್ರತಿಕೂಲವೆ ಹೆಚ್ಚಾಗ ಬಹುದಾದ್ದರಿಂದ ಅವರು ತಮ್ಮ ಮಾತಾಂತರವನ್ನು ಸದ್ಯಕ್ಕೆ ಗೋಪ್ಯವಾಗಿಡಲು ಬಯಸಿದ್ದಾರೆ." ಉಪದೇಶಿ ಜೀವರತ್ನಯ್ಯನ ಈ ವಾದ ರೆವರೆಂಡ್ ಅವರಿಗೆ ಸಾಧುವಾಗಿಯೂ ಸತರ್ಕವಾಗಿಯೂ ತೋರಿತ್ತು: ದೇವಯ್ಯಗೌಡರನ್ನು ಗಲಾಟೆಯಿಲ್ಲದೆ, ಗಲಾಟೆಗೆ ಅವಕಾಶವಾಗದಂತೆ, ಗುಟ್ಟಾಗಿ ಮತ್ತು ಸರಳವಾಗಿ ಖುದ್ದು ತಾವೆ ಮತಾಂತರಗೊಳಿಸಲು ಒಪ್ಪಿದ್ದರು. ಸಧ್ಯಕ್ಕೆ ಗೌಡರ ಹಿಂದೂ ಹೆಸರನು ಕ್ರೈಸ್ತ ಹೆಸರಿಗೆ ಬದಲಾಯಿಸಬಾರದೆಂದೂ ವಸನವೇಷಭೂಷಣಗಳಲ್ಲಿ ಬಾಹ್ಯಕವಾದ ಯಾವ ವ್ಯತ್ಯಾಸವೂ ಗೋಚರವಾಗದಂತಿರಬೇಕೆಂದೂ ತೀರ್ಮಾಣವಾಗಿತ್ತು.

ತೀರ್ಮಾನದ ಎರಡನೆಯ ಭಾಗಕ್ಕೆ ನಿಜವಾಗಿಯೂ ಅವಶ್ಯಕತೆ ಇರಲಿಲ್ಲ. ಆಗಬೇಕಾದ ಪರಿವರ್ತನೆಯಲ್ಲ ಮೊದಲೆ ಆಗಿಯೆಹೋಗಿತ್ತು. ಕ್ಯಾಥೋಲಿಕ್ಕರಂತೆ ಯಾವ ವಿಧವಾದ ಶಿಲುಬೆಯ ಲಾಂಛನವನ್ನೂ ಕೊರಳಲ್ಲಿ ಧರಿಸದ ಪ್ರೋಟೆಸ್ಟೆಂಟ್ ರಿಗೂ ನಾಮಧಾರಿಗಳಿಗೂ, ಜುಟ್ಟು ತ್ತೆಗೆದು ಕ್ರಾಪು ಬಿಡುವುದೊಂದನ್ನು ಬಿಟ್ಟರೆ, ಹೆಚ್ಚು ಬಾಹ್ಯಕವಾದ ಆಂಗಿಕ ವ್ಯತ್ಯಾಸ ಯಾವುದು ಇರಲಿಲ್ಲ. ದೇವಯ್ಯ ಎಂದೋ ಜುಟ್ಟು ಬೋಳಿಸಿ ಕ್ರಾಪು ಬಿಟ್ಟಾಗಿತ್ತು! ಇನ್ನು ಹಣೆಯ ಮೇಲೆ ನಾಮಗೀಮ ಧರಿಸುವುದು? ಅದನ್ನು ಅವನು ತಿರಸ್ಕರಿಸಿ ಎಷ್ಟೋ ಕಾಲವಾಗಿತ್ತು! ಸಾಮಾನ್ಯ ಜನದ ಮಟ್ಟಿಗೆ ಹೇಳುವುದಾದರೆ, ಅವರ ದೃಷ್ಟಿಯಲ್ಲಿ ದೇವಯ್ಯ ಥೇಟು ಕಿಲಸ್ತರವನೆ ಆಗಿದ್ದನು!

ಬಿಳಿಪಾದ್ರಿ ಕರಿಪಾದ್ರಿ ಇಬ್ಬರೂ ಬೈಸಿಕಲ್ಲುಗಳ ಮೇಲೆ ಬಂದಿದ್ದರು. ಇಷ್ಟಪಟ್ಟಿದ್ದರೆ ಲೇಕ್ ಹಿಲ್ ದೋರೆಸಾನಿಯೊಡನೆ ಕೋಚಿನಲ್ಲಿಯೆ ತೀರ್ಥಹಳ್ಳಿಯಿಂದ ಮೇಗರವಳ್ಳಿಗೆ ಬರಬಹುದಾಗಿತ್ತು. ಅವನು ಇಷ್ಟಪಟ್ಟಿದ್ದರೆ ತೀರ್ಥಹಳ್ಳಿಯ ಅಮಲ್ದಾರರೂ ಪೋಲೀಸು ಇನ್ಸಪೆಕ್ಟರೂ ರೆವರೆಂಡ್ ಸಾಹೇಬರಿಗೆ ಮೈಗಾವಲಾಗಿ ಪರಿವಾರ ಬರುತ್ತಿದ್ದರು. ಏಕೆಂದರೆ, ಆಳುವ ಬ್ರಿಟಿಷರ ಕ್ರೈಸ್ತಮತಕ್ಕೆ ಸೇರಿದ್ದು, ಕ್ರೈಸ್ತಮತ ಪ್ರಚಾರಕ ಗುರುವಾಗಿದ್ದ ಆತನಿಗೆ

ಸರಕಾರದ ಆಡಳಿತ ಯಂತ್ರವೆಲ್ಲ ಕಂ ಕಿಂ ಎನ್ನದೆ ಕೈಂಕರ್ಯ ಸಲ್ಲಿಸಬೇಕೆಂದು ಮೇಲಿಂದ ಕಟ್ಟಾಜ್ಞೆಯಿದ್ದಿತು. ಅಲಿಖಿತವಾಗಿ, ಆದರೂ ಕಟ್ಟು ನಿಟ್ಟಾಗಿ. ಆದರೆ ಇಂದು ಮತಾಂತರ ಕಾರ್ಯವು ಸಂಪ್ರದಾಯ ಸಮಾಜದ ಅಂಧರೋಷವನ್ನು ಕೆರಳಿಸದ ರೀತಿಯಲ್ಲಿ ಗಲಾಟೆಯಿಲ್ಲದೆ ನಡೆಯುವುದು ಬಹುಮುಖ್ಯವಾಗಿತ್ತು; ಜೊತೆಗೆ ಆಗತಾನೆ ತುದಿಮುಟ್ಟುತ್ತಿದ್ದ ಮಳೆಗಾಲದ ರಸ್ತೆಯೂ ತುಂಬ ಕೆಟ್ಟುಹೋಗಿತ್ತು?

ಸಧ್ಯಕ್ಕೆ ಐಗಳು ಅನಂತಯ್ಯನವರನ್ನೆ ಹೆಡ್ ಮಾಸ್ಟರ್ ಆಗಿ ನೇಮಿಸಿ ಕೊಂಡಿದ್ದರು. ಉಪದೇಶಿ ಜೀವರತ್ನಯ್ಯನ ಸಿಫಾರಸಿನ ಮೇಲೆ. ಅದಕ್ಕೆ ಅನಿವಾರ್ಯವಾದ ಕೆಲವು ಕಾರಣಗಳಿದ್ದವು: ಊರುಮನೆಯವರನ್ನೆ ನೇಮಿಸುವುದರಿಂದ ಸುತ್ತಮುತ್ತಣ ಹಳ್ಳಿಯ ಜನರು ತಮ್ಮ ಮಕ್ಕಳನ್ನು ಕಿಲಸ್ತರ 'ಇಸ್ಕೋಲ್ಮನೆ'ಗೆ ಸೇರಿಸಿದರೆ ಜಾತಿ ಕೆಡಸಿಬಿಡುತ್ತಾರೆ ಎಂಬ ಸಂಶಯದಿಂದ ಪಾರಾಗಿ ಸ್ಕೂಲಿನ ವಿದ್ಯಾರ್ಥಿಗಳ ಸಂಖ್ಯೆ ಹೆಚ್ಚುತ್ತದೆ ಎಂಬುದು ಒಂದು. ಎರಡನೆಯದಾಗಿ, ಕ್ರೈಸ್ತರಾಗಿದ್ದು ಅರ್ಹರಾಗಿರುವ ಉಪಧ್ಯಾಯರು ಯಾರೂ ಆ ಕೊಂಪೆಗೆ ಬರುವಂತಿರಲಿಲ್ಲ. ಮೂರನೆಯದು, ಮಿಶನರಿಗಳು ಕೊಡುತ್ತಿದ್ದ ಆ ಅತ್ಯಲ್ಪ ಸಂಬಳವು ಐಗಳಂಥವರಿಗೆ ಭಾರಿ ತಲುಬಾಗಿ ತೋರಿ ಆಕರ್ಷಣೀಯವಾಗಿರುತ್ತಿದ್ದದು. ನಾಲ್ಕನೆಯದಾಗಿ ಅಥವಾ ಮೂರನೆಯ ಒಂದು ಉಪಕಾರಣವಾಗಿ, ಕೋಣುರು ಮನೆಯ ಹಿಸ್ಸೆಯ ಅನಂತರ ಅನಂತಯ್ಯನವರಿಗೆ ಅಲ್ಲಿರಲು ಮನಸ್ಸು ಬರಲಿಲ್ಲ: ಅಕ್ಕಣಿಗೂ ಸೋತಿದ್ದ ರಂಗಪ್ಪಗೌಡರ ಸಡಿಲಕಚ್ಚೆ ಅವರಿಗೆ ಅತೀವ ಅಸಹ್ಯವಾಗಿತ್ತು! ಹೂವಳ್ಳಿಗೆ ಬಂದು ಇರುತ್ತೇನೆ ಎಂದು ಅವರು ಮುಕುಂದಯ್ಯನಿಗೆ ತಿಳಿಸಿದ್ದರು. ಮುಕುಂದಯ್ಯನಿಗೂ ಐಗಳಲ್ಲಿ, ತಾನು ಹುಡುಗನಾಗಿದ್ದಾಗಿನಿಂದಲೂ ಗೌರವ ಬುದ್ಧಿಯಿದ್ದು, ಅವರಿಂದ ಭಾರತ ರಾಮಾಯಣಾದಿಗಳನ್ನು ಓದಿ ಅರ್ಥಮಾಡಿಕೊಳ್ಳುವುದನ್ನು ಕಲಿತಿದ್ದನಾದ್ದರಿಂದ, ಒಂದು ಗುರು ಶಿಷ್ಯ ಸಂಬಂಧ ಬೆಳೆದುಬಿಟ್ಟಿತ್ತು; ಆದರೆ ಐಗಳನ್ನು ಮುಕುಂದಯ್ಯನೇ ಕೋಣುರಿನಿಂದ ಬಿಡಿಸಿ ಹೂವಳ್ಳಿಗೆ ಕರೆದೊಯ್ದು ತಾನು ಹುಟ್ಟಿ ಬೆಳೆದು ದೊಡ್ಡವನಾದ ಮನೆಯ ಕೆಲಸಕಾರ್ಯಗಳಿಗೆ ಅಡ್ಡಿ ತಮ್ದನೆಂದು ಅಪಖ್ಯಾತಿ ಬರುವುದನ್ನು ತಪ್ಪಿಸಿಕೊಳ್ಳುವ ಸಲುವಾಗಿ, ಸದ್ಯಕ್ಕೆ ಐಗಳು ಬೇರೆ ಇನ್ನೆಲ್ಲಿಯಾದರೂ ಕೆಲಸಕ್ಕೆ ಸೇರಿಕೊಳ್ಳುವುದು ಉತ್ತಮವೆಂದು ಸೂಚಿಸಿದ್ದನು. ಅಲ್ಲದೆ, ಎಲ್ಲಕ್ಕಿಂತಲೂ ಹೆಚ್ಚಾಗಿ, ಆಗ ತತ್ಕಾಲದಲ್ಲಿ ಅತಿ ಮುಖ್ಯವೆಂಬಂತೆ ತೋರುತಿದ್ದರೂ, ಮೇಗರವಳ್ಳುಯ ಮತ್ತು ಮಲೆನಾಡಿನ ಮತ್ತು ಕನ್ನಡನಾಡಿನ ಮತ್ತು ಭರತ ಭೂಮಿಯ ಭಾವೀ ಪ್ರಗತಿಯ ಮತ್ತು ಜಾಗ್ರತಿಯ ದೃಷ್ಠಿಯಿಂದ ನಿಜವಾಗಿಯೂ ಬಹು ಮುಖ್ಯವಾದದ್ದೆಂದು ಮುಂದೆ ಗೊತ್ತಾಗುವಂತಹ ಮತ್ತೊಂದು ದೈವಿಕ ಉದ್ದೇಶದ ಕಾರಣವೂ ಒಂದು ಇತ್ತು, ಅಗೋಈಚರವಾಗಿ ಅಂತರ್ಗತವಾಗಿ, ಗೂಢವಾಗಿ: ಹಳೆಮನೆ, ಕೋಣುರು, ಹೂವಳ್ಳೀ, ಬೆಟ್ಟಳ್ಳಿ, ಕಲ್ಲೂರು ಸಿಂಬಾವಿ ಮೊದಲಾದ ಸುತ್ತಮುತ್ತಣ ಹಳ್ಳಿಗಳಲ್ಲಿದ್ದು, ಓದು ಬರಹ ಕಲಿಯಲು ಇಷ್ಟಪಡುವ ಹುಡುಗರೆಲ್ಲ, ಅಂತಕ್ಕನ ಮನೆಯಲ್ಲಿದ್ದುಕೊಂಡು ಮಿಶನ್ ಇಸ್ಕೂಲಿನಲ್ಲಿ ವಿದ್ಯಾಭ್ಯಾಸ ಮಾಡುವುದೆಂದು ನಿರ್ಣಯವಾಗಿತ್ತು. ಅದುವರೆಗೂ 'ಓಟ್ಲುಮನೆ'ಯಾಗಿದ್ದ ಅಂತಕ್ಕನ ಮನೆ 'ವಿದ್ಯಾರ್ಥಿ ನಿಲಯ'ವಾಗಿ ಪರಿವರ್ತನೆಗೊಳ್ಳುವದನ್ನೆ ಇದಿರು ನೋಡುತ್ತಿತ್ತು. ಕೆಲವೆ ತಿಂಗಳ ಹಿಂದೆ ಮಗಳನ್ನು ದುರಂತವಾಗಿ ಕಳೆದುಕೊಂಡಿದ್ದು ಮುದುಕಿಯಾಗುತ್ತಿದ್ದ ಅಂತಕ್ಕನ ಬದುಕಿಗೂ, ಮಕ್ಕಳ ಸಹವಾಸದ ಮತ್ತು ಸೇವೆಯ ಅಕ್ಕರೆಯ ಆಪು ಸಿಕ್ಕಿ, ಪುನಶ್ಚೇತನಗೊಳ್ಳುವ ಸುಯೋಗ ಸಮೀಪಿಸಿತ್ತು.....

ಕೋವಿ ಹಿಡಿದಿದ್ದ ಮುಕುಂದಯ್ಯ, ಹಿಂಬಾಲಿಸಿದ್ದ ಐತನೊಡನೆ, ಅಂತಕ್ಕನ ಮನೆಯನ್ನು ದಾಟಿ ಇಸ್ಕೂಲಿನ ಹತ್ತಿರಕ್ಕೆ ಬಂದಾಗ, ಸ್ವಲ್ಪ ದೂರದಲ್ಲಿ ಕಾಡಿನ ಅಂಚಿನಲ್ಲಿ ಬಿದ್ದಿದ್ದ ಒಂದು ಮರದ ಮೇಲೆ ಕುಳಿತು ಸಂಭಾಷಣೆಯಲ್ಲಿ ತೊಡಗಿದ್ದ ಐಗಳು ಅನಂತಯ್ಯನವರನ್ನೂ ಕಣ್ಣಾ ಪಂಡಿತರನ್ನೂ ಕಂಡನು: ಅವರಿಬ್ಬರೂ ಮುಕುಂದಯ್ಯನ ಕಡೆ

ನೋಡಿ ಮುಗುಳು ನಕ್ಕರು, ಭಾಗವತರಾಟ ಪ್ರಾರಂಭವಾಗುವುದಕ್ಕೆ ರಂಗಸ್ಥಳ ಸಿದ್ಧವಾಗಿದೆ ಎಂಬಂತೆ! ತನಗೆ ಸಂಬಳ ಕೊಡುವ ಅಧಿಕಾರಿಯ ಆಜ್ಞೆಯಂತೆ ಬೆಳಿಗ್ಗೆಯ ಜರುಗಲಿದ್ದ ಮತಾಂತರ ಪವಿತ್ರ ಕ್ರಿಯೆಗೂ ಮತ್ತು ಸಂಜೆಗೆ ನಡೆಯುವುದೆಂದು ಗೊತ್ತಾಗಿದ್ದ ಸ್ಕೂಲಿನ ಪ್ರಾರಂಭೋತ್ಸವಕ್ಕೂ ಬೇಕಾದುದನ್ನೆಲ್ಲ ಅಣಿಗೊಳಿಸಿ, ಕಿಲಸ್ತರ ಜಾತಿ ವಿಷಯಕವಾದ ಕಾರ್ಯದಲ್ಲಿ ತಾನು ಪಾಲುಗೊಳ್ಳುವುದು ತನಗೆ ನಿಷಿದ್ಧವೆಂದು ಕ್ಷಮೆ ಕೇಳಿ, ಹೆಡ್ ಮಾಸ್ಟರ್ ಅನಂತಯ್ಯನವರು ಆ ಪ್ರಾತಃ ಕಾಲದ ಗೋಪ್ಯ ಸಮಾರಂಭದಿಂದ ದೂರ ಸರಿದಿದ್ದರು. ಆದರೆ ಅವರಿಗೆ ಗೊತ್ತಿತ್ತು, ಮುಂದೆ ಏನಾಗುತ್ತದೆ ಎಂಬುದು. ಅದನ್ನೆ ಕುರಿತು ಅವರು ಕಣ್ಣಾ ಪಂಡಿತರೊಡನೆ ಮಾತಾಡುತ್ತಿದ್ದುದು.

ಕೋವಿಯೊಡನೆ ಬಂದಿದ್ದ ಮುಕುಂದಯ್ಯನನ್ನು ಕಂಡು, ಅವನ ಧಾರ್ಮಿಕ ಸಾಹಸಕ್ಕೆ ತಮ್ಮ ಸಂಪೂರ್ಣ ಸಮ್ಮತಿ ಮತ್ತು ಬೆಂಬಲವನ್ನು ಸೂಚಿಸುವಂತೆ ಅವರಿಬ್ಬರೂ ಮುಗುಳುನಗೆಯಿಂದ ಅವನನ್ನು ಸ್ವಾಗತಿಸಿ ಹುರಿದುಂಬಿಸಿದ್ದರು....

ಮುಕುಂದಯ್ಯ ಐತನ ಕಿವಿಯಲ್ಲಿ ಏನನ್ನೊ ಪಿಸುಗುಟ್ಟಿ ಕಳಿಸಿದನು....

ಪೀಟಿಲು ಕೊಯ್ದು ಪ್ರಾರ್ಥನೆ ನಡೆಸುತ್ತಿದ್ದ ಉಪದೇಶಿ ಜೀವರತ್ನಯ್ಯನವರು ಬೆಳಕಂಡಿಯ ಕಡೆಗೆ ನೋಡುತ್ತಾರೆ. ಒಂದು ಕೋವಿಯ ನಳಿಗೆಯ ಬಾಯಿ ತಮ್ಮ ಕಡೆಗೇ ಗುರಿಯಿಟ್ಟು ಕಿಟಕಿಯ ಮರದ ಸರಳುಗಳ ಮಧ್ಯೆ ತೂರುತ್ತಿದೆ! ಯೇಸುಕ್ರಿಸ್ತ, ಬೈಬಲ್ಲು, ಕ್ರೈಸ್ತಮತ, ಧರ್ಮಪ್ರಚಾರ, ಉಪದೇಶಿತ್ವ, ಪಾದ್ರಿತ್ವ ಇತ್ಯಾದಿಯಾದೆಲ್ಲ ಮನುಷ್ಯತ್ವದ ಉಪಾಧಿಗಳೂ ತಟಕ್ಕನೆ ಕಳಚಿಬಿದ್ದು, ಅವರ ಜೀವ ತನ್ನ ಪ್ರಾಣಿತ್ವದ ಮೂಲೋಪಾದಿಯೊಂದನ್ನು ಮಾತ್ರ ಅವಲಂಬಿಸಿದೆ. ಬತ್ತಲೆ ನಿಂತಂತಾಯಿತು! ಬದುಕಿದರೆ ಬೆಲ್ಲ ತಿಂದೇನು ಎಂಬಂತೆ ಹೌಹಾರಿ, ಪೀಟಿಲನ್ನೂ ಸುವಾರ್ತೆಯನ್ನೂ ಹೊತ್ತುಹಾಕಿ, ಮರೆಯಾಗಿ ಅವಿತುಕೊಳ್ಳಲು ಒಂದು ಮೂಲೆಯ ಕಡೆಗೆ ಓಡಿದರು. ಅವರಿಗೆ ಏನು? ಯಾರು? ಏಕೆ? ಎಂಬುದೊಂದೂ ಅರ್ಥವಾಗದಿದ್ದರೂ ತನ್ನನ್ನು ಗುಂಡಿಕ್ಕಿ ಕೊಲೆಮಾಡಲು ಹವಣಿಸುತ್ತಿದ್ದಾರೆ ಎಂಬುದಂತೂ ಚೆನ್ನಾಗಿ ಅರ್ಥವಾಗಿತ್ತು. ಮೊನ್ನೆ ತಾನೆ ಬಯಲುಸೀಮೆಯ ಒಂದು ಹಳ್ಳಿಯಲ್ಲಿ, ಕಿಲಸ್ತರ ಜಾತಿಗೆ ತನ್ನ ಮಗನನ್ನು ಸೇರಿಸಲು ಹವಣಿಸುತ್ತಿದ್ದ ಒಬ್ಬ ಪಾದ್ರಿಯನ್ನು ರೈತನೊಬ್ಬನು ದೊಣ್ಣೆಯಿಂದ ಹೊಡೆದು ಕೊಂದಿದ್ದ ಸುದ್ದಿ ಬಂದಿದ್ದು, ಅದರ ನೆನಪಿನ್ನೂ ಹಸಿಗಾಯವಾಗಿಯೆ ಇತ್ತು, ಜೀವರತ್ನಯ್ಯನ ಮನಸ್ಸಿನಲ್ಲಿ.

ಆ ಮತಾಂತರದ ಯಜ್ಞದಲ್ಲಿ ಯೂಪಸ್ತಂಭಕ್ಕೆ ಕಟ್ಟುಗೊಂಡು ಬಲಿಪಶು ವಾಗಿದ್ದ ದೇವಯ್ಯ, ತನ್ನ ರಕ್ಷಣೆಗೆ ಬರುತ್ತೇನೆಂದು ಭಾಷೆಯಿತ್ತು ಮೋಸಮಾಡಿ ಬಿಟ್ಟನೇನೋ ಎಂದು ಕಳವಳಿಸುತ್ತಾ, ಮುಕುಂದಯ್ಯನ ಆಗಮನವನ್ನೇ ನಿರೀಕ್ಷಿಸುತ್ತಿದ್ದವನು, ಮರದ ಸರಳುಗಳ ನಡುವೆ ಬೆಳಕಂಡಿಯಲ್ಲಿ ತೂರಿದ ಕೋವಿಯ ನಳಿಗೆಯನ್ನು ಕಂಡು, ಸದ್ಯಕ್ಕೆ ಬದುಕಿದೆ! ಎಂದು ಕೊಂಡನು. ತಟಕ್ಕನೆ ತನ್ನ ನಾಟಕಾಭಿನಯವನ್ನು ಪ್ರಾರಂಭಿಸಿ ಬಿಳಿ ಪಾದ್ರಿ ರೆವರೆಂಡ್ ಲೇಕ್ ಹಿಲ್ಲರನ್ನು, ಪ್ರಾಣಾಪಾಯದಿಂದ ತಪ್ಪಿಸಲೆಂಬಂತೆ ತೋಳ್ವಿಡಿದು ಎಳೆದುಕೊಂಡೆ ಓಡೆದನು, ಕರಿ ಪಾದ್ರಿ ಅವಿತುಕೊಂಡಿದ್ದ ಮೂಲೆಗೆ!

ಅಷ್ಟರಲ್ಲಿ ಕಿಟಕಿಯ ಆಚೆಯಿಂದ ಮೊಳಗಿತು ಮುಕುಂದಯ್ಯನ ರುದ್ರವಾಣಿ: "ಪಾದ್ರಿಗಳೆ, ನನ್ನ ಬಾವನಿಗೆ ಜಾತಿ ಕೆಡಿಸುವ ಕೆಲಸ ಮಾಡುತ್ತಿದ್ದೀರಿ. ಬಾವಿಗೆ ಹಾರಲಿದ್ದ ನನ್ನ ಅಕ್ಕನನ್ನು ತಡೆದು ನಿಲ್ಲಿಸಿ ಬಂದಿದ್ದೇನೆ. ಒಳ್ಳೆಯ

ಮಾತಿಗೆ, ನನ್ನ ಭಾವವನ್ನು ಕಿಲಸ್ತರ ಜಾತಿಗೆ ಸೇರಿಸುವವುದಿಲ್ಲ ಎಂದು ನಿಮ್ಮ ದೇವರ ಮೇಲೆ ಆಣೆಯಿಟ್ಟು ಅವನನ್ನು ಬಿಟ್ಟುಕೊಡದಿದ್ದರೆ ನಿಮ್ಮನ್ನೆಲ್ಲ ಸುಟ್ಟುಬಿಡುತ್ತೇನೆ!"

"ದೇವಯ್ಯಗೌಡರೆ, ನಿಮ್ಮ ಭಾವನಿಗೆ ಬುದ್ಧಿ ಹೇಳಿ. ಅವರು ಮಾಡುತ್ತಿರುವುದು ಕ್ರಿಮಿನಲ್ ಕಾರ್ಯ. ಅದಕ್ಕೆ ತಕ್ಕ ಶಿಕ್ಷೆಯಾಗುತ್ತದೆ!" ಎಂದರು ರೆವರೆಂಡ್ ಲೇಕ್ ಹಿಲ್. ಅವರು ಉಪದೇಶಿ ಜೀವರತ್ನಯ್ಯನಂತೆ ದಿಗಿಲುಗೊಂಡಿರಲಿಲ್ಲ.

ಇಷ್ಟರಲ್ಲಿ ಉಪದೇಶಿ ಜೀವರತ್ನಯ್ಯನವರು ಸ್ಕೂಲಿಗೆ ಇದ್ದ ಏಕೈಕ ಬಾಗಿಲ ಬಳಿಗೆ ಧಾವಿಸಿ, ಅದನ್ನು ತೆರೆಯಲೆಂದು ಎಳೆದರು, ಬಾಗಿಲಿಗೆ ಹೊರಗಡೆಯಿದ್ದ ಸರಪಣಿಯ ಚಿಲಕವನ್ನು ಐತ, ಮುಕುಂದಯ್ಯನ ಅಪ್ಪಣೆಯಂತೆ, ಹಾಕಿಕೊಂಡು, ಅದರ ರಕ್ಷಣೆಗೆ ಕತ್ತಿಹಿಡಿದು ನಿಂತಿದ್ದನಾದ್ದರಿಂದ ಅದು ತೆರೆಯಲೊಲ್ಲದೆಹೋಯ್ತು!

ಮೇಲುಸಿರು ಕೀಳುಸಿರು ಬಿಡುತ್ತಾ ಉಪದೇಶಿ ಕೂಗಿದರು: "ದೇವಯ್ಯಗೌಡರೆ, ನೀವೇ ಹೊಣೆಯಾಗುತ್ತೀರಿ, ರೆವರೆಂಡ್ ಅವರಿಗೆ ಏನಾದರೂ ಆದರೆ! ಇಡೀ ಬ್ರಿಟಿಷ್ ಚಕ್ರಾಧಿಪತ್ಯವೆ ನಿಮ್ಮ ಮನೆಮಾರುಗಳನ್ನೆಲ್ಲಾ ಧ್ವಂಸಮಾಡಿಬಿಡುತ್ತದೆ! ನಮ್ಮನ್ನು ರಕ್ಷಿಸುವ ಭಾರ ನಿಮ್ಮದು!"

"ಹೆದರಬೇಡಿ, ಉಪದೇಶಿಗಳೇ! ನಾನು ಹೇಗಾದರೂ ಮಾಡಿ ನಿಮ್ಮನ್ನು ಉಳಿಸುತ್ತೇನೆ!" ನಾಟಕದ ಮಾತನಾಡಿ ದೇವಯ್ಯಗೌಡರು ಕಿಟಕಿಯ ಕಡೆಗೆ ನೋಡಿದಾಗ ಅಲ್ಲಿ ಕೋವಿಯ ನಳಿಗೆ ಕಾಣಿಸಲಿಲ್ಲ. ಆದರೆ ಅದು ಆ ಕಿಟಕಿಯ ಎದುರಿಗಿದ್ದ ಗೋಡೆಯ ಕಿಟಕಿಯಿಂದ ತೂರುತ್ತಿತ್ತು! ಈ ಕಿಟಕಿಗೆ ಮರೆಯಾಗಿ ಮೂಲೆಹಿಡಿದು ನಿಂತಿದ್ದವರೆಲ್ಲ ಆ ಕಿಟಕಿಗೆ ತೆರೆದಿಟ್ಟಂತೆ ಕಾಣಿಸುತ್ತಿದ್ದರು! ಯಾವಾಗ ಕೋವಿಯ ನಳಿಗೆ ತಮ್ಮ ಕಡೆಗೆ ಮುಖವಾಡಿತೋ ಅವಾಗ ಉಪದೇಶಿ ಅಲ್ಲಿದ್ದವರನ್ನೆಲ್ಲ ತಳ್ಳಿಕೊಂಡುಹೋಗಿ ಎದುರಿಗಿದ್ದ ಮತ್ತೊಂದು ಮೂಲೆಯಲ್ಲಿ ರಕ್ಷಣೆ ಪಡೆದು ನಿಂತರು!

ದೇವಯ್ಯ ಮಾತ್ರ ಕೈಮುಗಿದುಕೊಂಡು, ನೇರವಾಗಿ ಬೆಳಕಂಡಿಯ ಬಳಿಸಾರಿ, ಕೋವಿಯ ನಳಿಗೆಗೆ ಅಡ್ಡನಿಂತು ಬಿನ್ನಯ್ಸಿದನು: "ಭಾವ, ಮುಕುಂದಬಾವ, ಬೇಡ, ಖಂಡಿತಾ ಬೇಡ! ನನ್ನನ್ನವರು ಜಾತಿಗೆ ಸೇರಿಸಿಕೊಳ್ಳುವುದಿಲ್ಲ. ಬಾಗಿಲ ಚಿಲಕ ತೆಗಿ!"

"ಹಾಗೆಂದು ಉಪದೇಶಸಿಗಳೆ ಹೇಳಲಿ. ಇಲ್ಲದಿದ್ದರೆ ನಾನು ಬಿಡುವುದಿಲ್ಲ!" ಎಂದಿತು ಮುಕುಂದಯ್ಯನ ದೃಢಧ್ವನಿ.

ದೇವಯ್ಯ ಮೂಲೆಗೆ ಹಿಂತಿರುಗಿ, ತನ್ನ ಬಾವನಿಗೆ ಒಮ್ಮೊಮ್ಮೆ ಒಂದು ತರಹದ ಹುಚ್ಚು ಕೆರಳುತ್ತದೆಂದೂ, ಸದ್ಯಕ್ಕೆ ಅಪಾಯದಿಂದ ಪಾರಾಗಬೇಕಾದರೆ ಅವನು ಹೇಳಿದಂತೆ ಮಾಡುವುದೇ ಲೇಸೆಂದೂ ತಿಳಿಸಿದನು.

ರೆವರೆಂಡ್ ಲೇಕ್ ಹಿಲ್ ಹೇಳಿದರು: "ನಾವೇನೂ ನಿಮ್ಮನ್ನು ಬಲತ್ಕಾರವಾಗಿ ಕ್ರೈಸ್ತಮತಕ್ಕೆ ಸೇರಿಸುತ್ತಿಲ್ಲ. ನಿಮ್ಮ ಇಷ್ಟದ ಮೇರೆಗೆ ಹಾಗೆ ಮಾಡುತ್ತಿದ್ದೇವೆ. ನಿಮ್ಮ ಹೆಂಡತಿಯನ್ನು ನೀವು ಒಪ್ಪಿಸದಿದ್ದರೆ ಅದು ನಿಮ್ಮ ತಪ್ಪು. ಅದು ನನಗೆ ಮೊದಲೆ ಗೊತ್ತಾಗಿದ್ದರೆ ನಿಮ್ಮನ್ನು ಮತಾಂತರಗೊಳಿಸಲು ನಾನೇ ಒಪ್ಪುತ್ತಿರಲಿಲ್ಲ. ಕ್ರೈಸ್ತರಿಗೆ ನಿಮ್ಮ ಕುಟುಂಬವನ್ನು ನಾಶಗೊಳಿಸುವ ಉದ್ದೇಶ ಎಂದೂ ಇರುವುದಿಲ್ಲ" ಎಂದು ಕರಿಯ ಪಾದ್ರಿಯ ಕಡೆಗೆ ತಿರುಗಿ

ಮುಂದುವರಿದರು: "ಉಪದೇಶಿಗಳೇ, ನೀವು ಅದನ್ನೆಲ್ಲ ಮೊದಲೆ ಚೆನ್ನಾಗಿ ಅರಿಯಬೇಕಿತ್ತು. ಹೋಗಿ, ದೇವಯ್ಯ ಗೌಡರ ಬಾವನಿಗೆ ತಿಳಿಸಿ, ನಾವು ಯಾರನ್ನೂ ಬಲತ್ಕಾರವಾಗಿ ಕ್ರೈಸ್ತಮತಕ್ಕೆ ಸೇರಿಸಿಕೊಳ್ಳುವುದಿಲ್ಲ ಎಂಬುದಾಗಿ!"

ಪಾಪ, ರೆವರೆಂಡ್ ಸಾಹೇಬರಿಗೆ ಹೇಗೆ ತಾನೆ ಗೊತ್ತಾಗಬೇಕು, ಯೇಸುಕ್ರಿಸ್ತ, ಮತ, ಧರ್ಮ, ಪರಲೋಕ, ದೇವರು ಇವು ಯಾವುದಕ್ಕೂ ಸಂಬಂಧಪಡದ ಪಾದ್ರಿಯ, ಪಾದ್ರಿಯ ಮಗಳ ಮತ್ತು ದೇವಯ್ಯಗೌಡರ ಆಂತರಂಗಿಕವೂ ಶುದ್ಧ ಲೌಕಿಕವೂ ಆಗಿದ್ದ ಗುಪ್ತ ವ್ಯಾವಹಾರಿಕ ಜಟಿಲತೆ?

ಯಾವುದು ಬಹಿರಂಗವಾಗಬಾರದೋ ಅದು ಎಲ್ಲಿ ಹೊರಬಿದ್ದು, ತನಗೆ ಉನ್ನತತರಸ್ಥಾನ ಲಭಿಸುವುದಕ್ಕೆ ಬಲವಾಗಿ ಸ್ಥಾನಾವನತಿಯೆ ಉಂಟಾಗಿಬಿಡುತ್ತದೆಯೋ ಎಂದು ಹೆದರಿ, ಪಾದ್ರಿ ಜೀವರತ್ನಯ್ಯ ಮುಕುಂದಯ್ಯನಿಗೆ ಅವನ ಇಷ್ಟದಂತೆ ಆಶ್ವಾಸನೆಯಿತ್ತು. ಬಾಗಿಲು ಚಿಲಕ ತೆಗೆಸಿದನು.

"ನಿಮ್ಮ ಭಾವನವರೊಡನೆ ನಾನು ಮಾತನಾಡಬೇಕಾಗಿದೆ, ದಯವಿಟ್ಟು ಅವರನ್ನು ಒಳಗೆ ಕರೆದುಕೊಂಡು ಬನ್ನಿ," ರೆವರೆಂಡ್ ಅವರು ಕೇಳಿಕೊಳ್ಳಲು, ಮುಕುಂದಯ್ಯನನ್ನು ಕರೆತರಲು ದೇವಯ್ಯ ಹೊರಗೆ ಹೋದನು.

ಪಾದ್ರಿ ಜೀವರತ್ನಯ್ಯನವರು ಇಂಗ್ಲೀಷಿನಲ್ಲಿ ಮಾತನಾಡಲಾರಂಭಿಸಿ, ಲೇಕ್ ಹಿಲ್ ಅವರಿಗೆ ಸ್ಥಳೀಯ ವಿದ್ಯಮಾನಗಳ ವಿಚಾರವಾಗಿ ತಿಳಿವಳಿಕೆ ಉಂಟು ಮಾಡುವ ಉದ್ದೇಶದ ನೆವದಲ್ಲಿ ಅವರಿಗೆ ಮುನ್ನೆಚ್ಚರಿಕೆ ನೀಡಿದರು: "ಸ್ವಾಮಿ, ತಮಗೆ ಇಲ್ಲಿಯ ಜನರ ನೀತಿ, ರೀತಿ, ನಡೆ, ನುಡಿ ಯಾವುದರ ಪರಿಚಯವೂ ಇಲ್ಲ. ಇವರೊಡನೆ ನಾವು ತುಂಬ ಎಚ್ಚರಿಕೆಯಿಂದಿರಬೇಕು. ಈ ದೇವಯ್ಯಗೌಡರ ಬಾವ ಕೋಣೂರಿನವನು. ಮುಕುಂದಗೌಡ ಎಂದು ಹೆಸರು. ಅವನು ಕೇಡೆ ನಂಬರ ಒನ್. ಗುತ್ತಿ ಎಂಬ ಹೆಸರಿನ ಒಬ್ಬ ಹೊಲೆಯನ ಸಂಗಡ ಸೇರಿಕೊಂಡು, ಹುಡುಗಿಯನ್ನು ಅಪಹರಿಸುವುದು, ಮಾರಾಮಾರಿ ಮಾಡಿಸುವುದು, ಪುಂಡುಪೋಕರಿ ಮುಸಲ್ಮಾನರನ್ನು ಕೂಡಿಸಿ ಅತ್ಯಾಚಾರ, ಕೊಲೆ ಮಾಡಿಸುವುದು. ಹೀಗೆ ಈ ನಾಡಿಗೇ ಒಬ್ಬ ಭೀಕರ ವ್ಯಕ್ತಿಯಾಗಿದ್ದಾನೆ. ಒಂದೆರಡು ತಿಂಗಳ ಹಿಂದೆ, ಸಿಂಬಾವಿಯ ಒಬ್ಬ ಗೌರವಸ್ಥ ಹೆಗ್ಗಡೆಯವರ ಮದುವೆ ಗೊತ್ತಾಗಿದ್ದು, ಇನ್ನೇನು ಲಗ್ನದ ಮೂಹೂರ್ತ ಬಂದಿತು ಎನ್ನುವಷ್ಟರಲ್ಲಿ, ಈ ಮುಕುದಂಗೌಡ ಮದುಮಗಳಾಗುವ ಆ ಹುಡುಗಿಯನ್ನು ಅಪಹರಿಸಿ,ಯಾವುದೊ ಕಾಡಿನಬಲ್ಲಿ ಹುದುಗಿಸಿಟ್ಟನಂತೆ. ಅವಲ ತಂದೆಯನ್ನೂ ಅವನೆ ಕೊಲ್ಲಿಸಿದ ಎಂದು ಹೇಳುತ್ತಾರೆ. ಈಗ ಆ ಹುಡುಗಿಯ ಮನೆ ಆಸ್ತಿ-ಪಾಸ್ತಿಯನ್ನೆಲ್ಲ ಲಬಟಾಯಿಸಿ ಕೊಂಡು ಅವಳ ತಂದೆಗೆ ಆ ಹುಡುಗಿ ಒಬ್ಬಳೆ ಮಗಳಂತೆ ಅವಳ ಮನೆಯಲ್ಲಿಯೆ ಇದ್ದುಬಿಟ್ಟಿದ್ದಾನಂತೆ. ಇನ್ನೂ ಅವಳನ್ನು ಮದುವೆ ಮಾಡಿಕೊಂಡೂ ಇಲ್ಲ; ಮಾಡಿಕೊಳ್ಳುತ್ತೇನೆ ಮಾಡಿಕೊಳ್ಳುತ್ತೇನೆ ಎಂದು ಹೇಳುತ್ತಿದ್ದಾನಂತೆ. ಅಷ್ಟರಲ್ಲಿ, ಅವಳು ಗರ್ಭಿಣಿ ಆಗಿಬಿಟ್ಟಿದ್ದಾಳೆ ಎಂದೂ ವದಂತಿ! ಇನ್ನು, ಅವರ ಜಾತಿಯ ನೀತಿಯ ಪ್ರಕಾರ ಅವಳನ್ನು ಅಕ್ರಮ ಗರ್ಭಿಣಿ ಎಂದು ಸಾರಿ, ಬಹಿಷ್ಕಾರ ಹಾಕಿಸಿ ಹೊರಗಟ್ಟಿ, ಆಕೆಯ ಮನೆಮಾರನ್ನೆಲ್ಲ ತಮ್ಮ ಹೆಸರಿಗೆ ಮಾಡಿಸಿಕೊಳ್ಳಬೇಕೆಂದು, ಬಹುಶಃ ಅವನ ಒಳ ಇರಾದೆ ಇರಬೇಕು! ಬೆಟ್ಟಳ್ಳಿಯ ಹೊಲೆಯ ಬಚ್ಚ ಎಂಬಾತನನ್ನು ಕ್ರೈಸ್ತಮತಕ್ಕೆ ಸೇರಿಸಿಕೊಳ್ಳುತ್ತಾರೆಂದು ಸುದ್ದಿ ಹಬ್ಬಿಸಿ, ಅವನಿಗೆ ಗೊತ್ತಾಗಿದ್ದ ಹುಡುಗಿಯನ್ನು ಸಿಂಬಾವಿಯ ಹೊಲೆಯ ಗುತ್ತಿ ಎಂಬ ಹೆಸರಿನ ಕೇಡಿಯ ಮುಖಾಂತರ ಅಪಹರಿಸಿ, "ನಾವು ಅಂದೆಮ್ಮೊ ತೀರ್ಥಹಳ್ಳಿಯ ಹೊಳೆಯನ್ನು ದೋಣಿಯಲ್ಲಿ ದಾಟಿ ಹೋಗಿದ್ದೆವಲ್ಲಾ? ಸುಬ್ಬಯ್ಯಗೌಡರು ಚಂದ್ರಯ್ಯಗೌಡರು ಎಂಬ ಹೆಸರಿನ

ನಾಮಧಾರಿ ಯುವಕರ ಮನೆಗೆ? ಆ ಕಾನೂರು ಕಡೆಗೆ ಕಳಿಸಿದ್ದಾನಂತೆ ತಲೆತಪ್ಪಿಸಿಕೊಳ್ಳಲು, ಈ ಮುಕುಂದಗೌಡ!.... ಆ ಇಜಾರದ ಸಾಬಿ ಎಂಬ ಧೂರ್ತ ಪುಂಡ ಮುಸಲ್ಮಾನನ್ನು ಗುತ್ತಿಯ ಕೈಲಿ ಕಡಿಸಿದ್ದೂ ಇವನೇ ಅಂತೆ!... ಆ ಪುಂಡರೆ ಎಲ್ಲ ಸೇರಿ ಇದೆ ಸ್ಕೂಲಿನಲ್ಲಿ ಕಾವೇರಿ ಎಂಬ ಹುಡುಗಿಯ ಮೇಲೆ ಅತ್ಯಾಚಾರ ಮಾಡಿ ಅವಳನ್ನು ನಮ್ಮ ಇದೇ ಬಾವಿಗೆ ಹಾಕಿದ್ದರಂತೆ!... ಅವರಲ್ಲಿ ಒಬ್ಬ ಮುಸಲ್ಮಾನ ತಲೆತಪ್ಪಿಸಿಕೊಂಡು ಕನ್ನಡ ಜಿಲ್ಲೆಗೆ ಓಡಿದ್ದಾನಂತೆ. ಇನ್ನಿಬ್ಬರನ್ನೂ ದಸ್ತಗಿರಿ ಮಾಡಿ ವಿಚಾರಣೆಗಾಗಿ ಲಾಕಪ್ಪಿನಲ್ಲಿ ಇಟ್ಟಿದ್ದಾರೆ.... ನನ್ನ ಅಭಿಪ್ರಾಯ ಕೇಳುವುದಾದರೆ, ನಿಮ್ಮನ್ನು ಗುಂಡಿಕ್ಕಿ ಕೊಲ್ಲಲು ಪ್ರಯತ್ನಿಸಿರುವ ಇವನನ್ನು ಬಂಧಿಸಿ ಕಾನೂನು ರೀತ್ಯಾ ಶಿಕ್ಷೆಗೆ ಒಳಪಡಿಸುವುದೆ ಉತ್ತಮ. ಹಾಗೆ ಮಾಡಿದರೆ ಈ ಜನಕ್ಕೆ ಸ್ವಲ್ಪ ಹೆದರಿಕೆ ಹುಟ್ಟಿ, ನಮ್ಮ ಪವಿತ್ರ ಕ್ರಿಸ್ತನ ಸುವಾರ್ತೆಯನ್ನು ನಾವು ನಿರಾತಂಕವಾಗಿ ಬೋಧಿಸಲು ಅನುಕೂಲ ಸನ್ನಿವೇಶ ಕಲ್ಪಿತವಾಗುತ್ತದೆ, ಈ ಕಾಡು ಜನರನ್ನೂ ಪಳಗಿಸಿದಂತಾಗುತ್ತದೆ....!"

"ಉಪದೇಶಿಗಳೆ, ಕ್ರಿಸ್ತಸ್ವಾಮಿಯ ಸಂದೇಶವನ್ನು ಕ್ರೈಸ್ತೋಚಿತವಲ್ಲದ ವಿಧಾನಗಳಿಂದ ಪ್ರಚಾರಮಾಡಲು ನೀವು ಹೊರಟಿರಾದರೆ, ಜನರನ್ನು ಮೈಮೇಲೆ ಹಾಕಿಕೊಂಡು, ತದ್ವಿರುದ್ಧ ಪರಿಣಾಮಕ್ಕೆ ಭಾಜನರಾಗುತ್ತೀರಿ. ನಾವು ನಮ್ಮ ಸ್ವಾರ್ಥ ಉದ್ದೇಶಗಳನ್ನೆಲ್ಲ ತ್ಯಜಿಸಿ, ಸತ್ಯಮಾರ್ಗದಿಂದಲೆ ಮುಂದುವರಿದು, ಜನರ ನಂಬಿಕೆಗೆ ಪಾತ್ರರಾಗಬೇಕು. ಅವರ ವಿಶ್ವಾಸ ಲಭಿಸಿದ ತರುವಾಯವೆ ಅವರು ನಮ್ಮ ಉಪದೇಶಕ್ಕೆ ಕಿವಿಗೊಡುತ್ತಾರೆ. ಔಷಧೋಪಚಾರ, ವಿದ್ಯಾಭ್ಯಾಸ ಮೊದಲಾದ ಸಹಾಯಗಳ ಮೂಲಕ ಅವರ ಹೃದಯವನ್ನು ನಾವು ಗೆಲ್ಲಬೇಕು.ಅವರ ಮತೀಯ ಮೌಢ್ಯಗಳಿಂದ ಅವರಿಗಾಗುತ್ತಿರುವ ಅಪಾಯಗಳನ್ನು ಉಪಾಯವಾಗಿ ಅವರಿಗೆ ಮನದಟ್ಟಾಗುವಂತೆ ಮಾಡಬೇಕು... "ಅಷ್ಟರಲ್ಲಿ ಮುಕುಂದಯ್ಯನೊಡನೆ ಪ್ರವೇಶಿಸಿದ ದೇವಯ್ಯಗೌಡರನ್ನು ಕಂಡು ರೆವರೆಂಡ್ ಲೇಕ್ ಹಿಲ್ ಅವರು ಪಾದ್ರಿಯಿಂದ ಅತ್ತ ತಿರುಗಿದರು.

ಕೈಯಲ್ಲಿ ಕೋವಿ ಹಿಡಿದಿದ್ದ ಮುಕುಂದಯ್ಯ ಮುಗುಳು ನಗುತ್ತಾ "ನಮಸ್ಕಾರ, ಪಾದ್ರಿಗಳಿಗೆ" ಎಂದನು.

ರೆವರೆಂಡ್ ಅವರು ಪ್ರತಿನಮಸ್ಕಾರ ಮಾಡಿ, ಬೆಂಚಿನ ಕಡೆಗೆ ಕೈತೋರಿ ಅವರನ್ನೆಲ್ಲ ಕೂರಿಸಿ, ತಾವೂ ಒಂದು ಕುರ್ಚಿಯ ಮೇಲೆ ಎದುರಾಗಿ ಕುಳಿತುಕೊಂಡರು.

ಒಂದೆರಡು ನಿಮಿಷಗಳ ಕಾಲ ಮುಕುಂದಯ್ಯನನ್ನೇ ಗಮನಿಸುತ್ತಿದ್ದರು, ತಾವು ಏನು ಮಾತಾಡಬೇಡು ಎಂಬುದನ್ನು ಆಲೋಚಿಸುತ್ತಿದ್ದಂತೆ ತೋರಿದರು ಲೇಕ್ ಹಿಲ್. ಆದರೆ ಅವರು ಏನನ್ನೂ ಆಲೋಚಿಸುತ್ತಿರಲಿಲ್ಲ. ಮುಕುಂದಯ್ಯನ ವ್ಯಕ್ತಿತ್ವದ ಸ್ವರೂಪವನ್ನು ಗ್ರಹಿಸುವ ಕಾರ್ಯದಲ್ಲಿ ತೊಡಗಿದ್ದರು: ಮುಕುಂದಯ್ಯ ದೇವಯ್ಯನಂತೆ ಕ್ರಾಪು ಬಿಟ್ಟಿರಲಿಲ್ಲ; ಟೋಪಿಯ ಹಿಂದೆ ಕಟ್ಟಿದ್ದ ಜುಟ್ಟು ಕಾಣಿಸುತ್ತಿತ್ತು. ಹಣೆಯ ಮೇಲೆ ನಾಮವೂ ಇತ್ತು. ಕಿವಿಯಲ್ಲಿ ಒಂಟಿಗಳೂ ಇದ್ದುವು. ಆದರೆ ಅವನ ಮುಖದಲ್ಲಿ ಅಲ್ಲಿದ್ದವರಾರಲ್ಲಿಯೂ ಇಲ್ಲದಿದ್ದ ಒಂದು ಸತ್ವಪೂರ್ಣ ತೇಜಸ್ಸನ್ನೂ ಸರಳ ಸುಂದರ ಪ್ರಸನ್ನತೆಯನ್ನೂ ದರ್ಶಿಸಿದ ಲೇಕ್ ಹಿಲ್ ರಿಗೆ ಅವನ ವಿಷಯದಲ್ಲಿ ಒಂದು ಗೌರವಪೂರ್ವಕವಾದ ವಿಶ್ವಾಸ ಹುಟ್ಟಿ, ಅವರ ಮುಖದ ಮೇಲೆಯೂ ಸುಪ್ರಸನ್ನತೆ ಸುಳಿದಾಡಿದುದನ್ನು ಕಂಡು ಜೀವರತ್ನಯ್ಯಗೆ ಬೆರಗಾಯಿತು. ತಾನು ಮುಕುಂದಯ್ಯನ ಮೇಲೆ ಹೇಳಿದ್ದುದೆಲ್ಲ ವ್ಯರ್ಥವಾಯಿಯೋ ಏನೋ ಎಂದು ಕರಿಪಾದ್ರಿಗೆ ಮುಖಭಂಗವೂ ಆಯಿತು.

ಆದರೆ ಒಂದು ವಿಷಯ ಮಾತ್ರ ಆ ಘಟನೆಯ ರೂಪಣೆಯಲ್ಲಿ ಭಾಗಿಗಳಾಗಿದ್ದವರೆಲ್ಲರ ಪ್ರಜ್ಞಾಭೂಮಿಕೆಗೂ ಅತೀತವಾಗಿದ್ದು, ಅಗೋಚರವಾಗಿತ್ತು; ರೆವರೆಂಡ್ ಲೇಕ್ ಹಿಲ್ ಆಗಲಿ, ಉಪದೇಶಿ ಜೀವರತ್ನಯ್ಯನಾಗಲಿ, ಮುಕುಂದಯ್ಯನಾಗಲಿ, ಯಾವ ಇತ್ಯರ್ಥಗಳನ್ನು ತಾವೇ ಸ್ವತಂತ್ರವಾಗಿ ನಿರ್ಣಯಿಸುತ್ತಿದ್ದೇವೆ ಎಂದು ಭಾವಿಸಿ ವರ್ತಿಸುತ್ತಿದ್ದರೋ ಆ ಇತ್ಯರ್ಥಗಳಿಗೆಲ್ಲ ಅಂತರ್ಯಾಮಿ ಸೂತ್ರಧಾರಿಯಾಗಿತ್ತು, ಭಗವಂತನ ಅಡಿದಾವರೆವರೆಗೂ ನಿಡುಚಾಚಿ ಅದನ್ನು ತನ್ನ ಹೂವೆದೆಗೆ ಬಿಗಿದಪ್ಪಿದ ಒಬ್ಬಳು ಪ್ರಣಯಾರ್ಥಿ ತರುಣಿಯ ಪ್ರೇಮಮಯ ಮುಗ್ಧ ಹೃದಯದ ಆರ್ತ ಅಭೀಪ್ಸೆಯ ಪ್ರಾರ್ಥನಾಬಾಹು~

"ಮುಕುಂದಯ್ಯ ಗೌಡರೆ, ನೀವು ಎಂಥ ಭಯಂಕರ ಅಪರಾಧ ಕಾರ್ಯದಲ್ಲಿ ತೊಡಗಿದ್ದೀರಿ ಎಂಬುದು ನಿಮಗೆ ಅರ್ಥವಾಗಿದೆಯೇ?" ಗಂಭೀರ ಧ್ವನಿಯಲ್ಲಿ ಪ್ರಶ್ನಿಸಿದ್ದರು ರೆವರೆಂಡ್ ಲೇಕ್ ಹಿಲ್, "ಗುಂಡಿಕ್ಕಿ ಕೊಂದು ಕೊಲೆಮಾಡಿದವರಿಗೆ ಏನು ಶಿಕ್ಷೆ ಗೊತ್ತೆ?"

"ಗೊತ್ತು, ಸ್ವಾಮೀ, ನಾನೇನು ಕೊಲೆಮಾಡುವುದಕ್ಕೆ ಬಂದಿರಲಿಲ್ಲ. ನನ್ನ ಅಕ್ಕನಿಗೆ ಗಂಡನನ್ನು ಉಳಿಸಿಕೊಟ್ಟು, ಅವಳ ಪ್ರಾಣವನ್ನೂ ಮಾಂಗಲ್ಯವನ್ನೂ ರಕ್ಷಿಸಲು ಬಂದಿದ್ದೆ." ಸಾಹಿತ್ಯ ಭಾಷೆಯಲ್ಲಿ ಮಾತನಾಡುತ್ತಿದ್ದ ರೆವರೆಂಡರಿಗೆ ಆ ರೀತಿಯ ಭಾಷೆಯಲ್ಲಿಯೆ ಉತ್ತರವಿತ್ತನು ಮುಕುಂದಯ್ಯ.

"ಹಾಗಾದರೆ ಬಂದೂಕು ಏಕೆ ತಂದಿದ್ದೀರಿ?"

ಮುಕುಂದಯ್ಯ ಕೋವಿಯೆಡನೆ ಎದ್ದ, ಮುಂದಕ್ಕೆ ಬಾಗಿ ಅದನ್ನು ರೆವರೆಂಡರ ಮುಂದೆ ಮೇಜಿನ ಮೇಲೆ ಇಟ್ಟು, ನಗುತ್ತಲೆ ಹೇಳಿದನು: "ಇದು ಖಾಲಿ ಕೋವಿ, ಸ್ವಾಮಿ, ಅದರಿಂದ ಯಾರ ಕೊಲೆಯೂ ಸಾಧ್ಯವಿಲ್ಲ. ಅದಕ್ಕೆ ಈಡು ತುಂಬಿಲ್ಲ. ಕೇಪು ಇಟ್ಟಿಲ್ಲ. ತಾವೇ ಪರಾಂಬರಿಸಬಹುದು. ಬರಿಯ ತೋರಿಕೆಯ ಬೆದರಿಕೆಗೆ ತಂದಿದ್ದೆ. ಅಷ್ಟೇ..."

ಕ್ರೈಸ್ತ ಮಿಶನರಿಗಳ ವೈದ್ಯಕೀಯ ಸಹಾಯ, ವಿದ್ಯಾಭ್ಯಾಸ ಪ್ರಚಾರ ಇತ್ಯಾದಿ ಲೋಕೋಪಕಾರ ಕಾರ್ಯಗಳನ್ನು ಬಾಯಿತುಂಬ ಶ್ಲಾಘಿಸಿದ ಮುಕುಂದಯ್ಯ ಅವರ ಮತಾಂತರ ಚಟುವಟಿಕೆಗಳನ್ನು ಸಮಾಜದ ಅಡಿಪಾಯವನ್ನೇ ಬುಡಮೇಲು ಮಾಡುವ ಕೆಲಸ ಎಂದು ವರ್ಣಿಸಿ, ಕೆಲವು ನಿದರ್ಶನಗಳನ್ನು ಕೊಟ್ಟು, ಮಿಶನ್ ಸ್ಕೂಲು ಚೆನ್ನಾಗಿ ನಡೆಯುವಂತೆ ತಾನು ಸಹಕರಿಸುವುದಾಗಿಯೂ, ಇತರರನ್ನೂ ಸಹಕರಿಸುವಂತೆ ಮಾಡುವುದಾಗಿಯೂ ಭರವಸೆಯಿತ್ತನು.

"ನಿಮ್ಮ ಸಹಕಾರಕ್ಕಾಗಿ ನಿಮಗೆ ಅನೇಕ ವಂದನೆಗಳು." ಲೇಕ್ ಹಿಲ್ ಮುಂದುವರಿದರು: "ನಮ್ಮ ಮತಾಂತರ ಚಟುವಟಿಕೆಗಳನ್ನೇನೊ ನೀವು ಸಾಮಾಜಿಕ ಜೀವನವನ್ನು ಬುಡಮೇಲು ಮಾಡುವ ಕಾರ್ಯ ಎಂದು ವರ್ಣಿಸುತ್ತಿದ್ದೀರಿ. ಯಾರನ್ನೂ ಬಲಾತ್ಕಾರವಾಗಿ ಕ್ರೈಸ್ತರನ್ನಾಗಿ ಮಾಡುವ ಇಚ್ಛೆ ನಮಗಿಲ್ಲ. ನೀವು ನಮ್ಮ ಜಾತಿಗೆ ಸೇರದಿರಬಹುದು; ಸೇರದಿದ್ದರೆ ಚಿಂತೆಯಿಲ್ಲ... ಆದರೆ, ಗೌಡರೆ, ನಾನು ಹೇಳುವುದನ್ನು ದಯವಿಟ್ಟು ಗಮನಿಸಿ ಕೇಳಿ... ನಿಮ್ಮ ಜಾತಿಯವರು ಎಲ್ಲಿಯವರೆಗೆ ಬ್ರಾಹ್ಮಣರ ಪಾದ ತೊಳೆದು, ಅದನ್ನು ತೀರ್ಥವೆಂದು ಕುಡಿಯುವುದನ್ನೇ ತಮ್ಮ ಧರ್ಮಜೀವನ ಸರ್ವಸ್ವ ಎಂದು ಭಾವಿಸುವರೊ ಅಲ್ಲಿಯವರೆಗೆ ನಿಮಗೆ, ನಾಮಧಾರಿ

ಗೌಡರಿಗೆ ಮತ್ತು ಇತರ ಬ್ರಾಹ್ಮಣೇತರ ವರ್ಗದವರಿಗೆ, ಉದ್ಧಾರವಿಲ್ಲ; ಉಳಿಗತಿಯಿಲ್ಲ. ನಿಮ್ಮ ಮೂಢಾಚಾರಗಳು ಬ್ರಾಹ್ಮಣರ ಜೀವನೋಪಾಯಕ್ಕೆ, ಸಂಪಾದನೆಗೆ, ಬಂಡವಾಳ ಸ್ವರೂಪವಾಗಿವೆ. ನಿಮ್ಮನ್ನು ಅವರು ನಾಯಿಗಳನ್ನು ಕಂಡಹಾಗೆ ಕಾಣುತ್ತಾರೆ. ಮುಟ್ಟುವುದಿರಲಿ ಹತ್ತಿರ ಬಂದರೂ ಅವರಿಗೆ ಮೈಲಿಗೆ. ಬ್ರಾಹ್ಮಣರೆಲ್ಲ ಬ್ರಹ್ಮನ ಮುಖದಿಂದ ಬಂದವರೆಂದೂ ಶೂದ್ರು ಅವನ ಕಾಲಡಿಯಿಂದ ಬಿದ್ದವರೆಂದೂ ಕಟ್ಟುಕಥೆ ಕಟ್ಟಿದ್ದಾರೆ. ಅವರೇ ಅವರ ಅನುಕೂಲಕ್ಕಾಗಿ ಬರೆದುಕೊಂಡಿರುವ ಪುರಾಣ ಕಥೆಗಳನ್ನು, ನಿಜವಾಗಿ ನಡೆದವೆಂಬಂತೆ ನಿಮಗೆ ಹೇಳಿ, ನಿಮ್ಮನ್ನು ಮರುಳು ಮಾಡಿದ್ದಾರೆ. ಶೂದ್ರರು ವೇದ ಓದಬಾರದಂತೆ! ಓದುವುದಿರಲಿ, ಯಾರಾದರೂ ಓದುವುದನ್ನು ಆಲಿಸಿದರೂ ನರಕದಲ್ಲಿ ಶೂದ್ರನ ಕಿವಿಗೆ ಕಾಯಿಸಿದ ಕಬ್ಬಿಣವನ್ನು ಹೊಯ್ಯುತ್ತಾರಂತೆ! ಶತಶತಮಾನಗಳಿಂದಲೂ ನಿಮ್ಮನ್ನು ಈ ಮೂಢಸ್ಥಿತಿಯಲ್ಲಿ ಇಟ್ಟು, ನಿಮ್ಮಿಂದ ಸೇವೆ ಸಲ್ಲಿಸಿಕೊಂಡು, ಸುಖಜೀವನ ನಡೆಸುತ್ತಿದ್ದಾರೆ…. ಕ್ರೈಸ್ತ ಧರ್ಮದಲ್ಲಿ ಜಾತಿಭೇದವಿಲ್ಲ; ಎಲ್ಲರೂ ದೇವರ ಇದಿರಿನಲ್ಲಿ ಸಮನರು. ನಾನು ಕೇಳಿಕೊಳ್ಳುವುದಿಷ್ಟೇ: ನೀವು ಕ್ರಿಸ್ತಮತಕ್ಕೆ ಸೇರಿ, ಬಿಡಿ, ಅದು ಅಷ್ಟು ಮುಖ್ಯವಲ್ಲ; ಆದರೆ ಕ್ರೈಸ್ತ ಧರ್ಮದ ಉದಾರ ತತ್ತ್ವಗಳನ್ನೂ ಸೇವಾ ಮನೋಧರ್ಮವನ್ನೂ ಸರ್ವ ಸಮಾನತಾ ದೃಷ್ಟಿಯನ್ನೂ ಉನ್ನತ ಆದರ್ಶಗಳನ್ನೂ ನಿಮ್ಮ ಮಾರ್ಗದರ್ಶನ ಜ್ಯೋತಿಯನ್ನಾಗಿ ಮಾಡಿಕೊಂಡು, ಬ್ರಾಹ್ಮಣ್ಯದ ದುರ್ಮುಷ್ಟಿಯಿಂದ ಬಿಡಿಸಿಕೊಳ್ಳುವುದು ಮಾತ್ರ ನಿಮ್ಮ ಜನಾಂಗದ ಪ್ರಗತಿಗೆ ಅತ್ಯಂತ ಅವಶ್ಯಕವಾದ ಆತ್ಯ ಕರ್ತವ್ಯ ಕರ್ಮ! ಆ ದಾರಿಯಲ್ಲಿ ಮುಂದುವರಿಯುವುದಕ್ಕೆ ನಿಮ್ಮ ಜನಾಂಗದವರಿಗೆ ನಾವು ಸರ್ವ ಸಹಾಯ ನೀಡಲು ಸಿದ್ಧರಿದ್ದೇವೆ…. ಈ ಸಾಯಂಕಾಲ ನಡೆಯಲಿರುವ ಈ ಸ್ಕೂಲಿನ ಪ್ರಾರಂಭೋತ್ಸವ ಆ ದಿಕ್ಕಿನಲ್ಲಿ ನಿಮ್ಮ ಮಿಶನ್ ಇಟ್ಟಿರುವ ಮೊದಲ ಹೆಜ್ಜೆ. ನಿಮ್ಮ ಜನರೆಲ್ಲ, ಅದರಲ್ಲಿಯೂ ನಿಮ್ಮಂಥ ಮತ್ತು ದೇವಯ್ಯಗೌಡ ರಂಥ ಮುಂದಾಳುತನದ ಯುವಕರು, ಮುಂದೆ ಬಂದು ನಮ್ಮೊಡನೆ ಸಹಕರಿಸುತ್ತೀರೆಂದು ನಾನು ದೃಢವಾಗಿ ನಂಬಿದ್ದೇನೆ. ಸರಕಾರದಿಂದಾಗಲಿ, ವಿದ್ಯಾಭ್ಯಾಸದ ಇಲಾಖೆಯಿಂದಾಗಲಿ, ನಮ್ಮ ಮಿಶನ್ನಿನ ಕಡೆಯಿಂದಾಗಲಿ ನಿಮಗೆ ಬೇಕಾಗುವ ಎಲ್ಲ ನೆರವೂ ಒದಗುವಂತೆ ಮಾಡಲು ನಾನು ಪವಿತ್ರಾತ್ಮ ಯೇಸುಕ್ರಿಸ್ತನ ಹೆಸರಿನಲ್ಲಿ ಕಂಕಣ ಬದ್ಧನಾಗಿದ್ದೇನೆ…. ತಮಗೆಲ್ಲರಿಗೂ ನಮಸ್ಕಾರ…..”

ರೆವರೆಂಡರು ಕುರ್ಚಿಯಿಂದೆದ್ದು ನಿಂತು ಮುಕುಂದಯ್ಯನ ಕಡೆಗೆ ಕೈಚಾಚಿದರು. ಮುಕುಂದಯ್ಯ ಒಂದು ಅರೆನಿಮಿಷ ಹಳ್ಳಿಬೆಪ್ಪಾಗಿ ನಿಮತಿದ್ದನು. ಆದರೆ ಪಕ್ಕದಲ್ಲಿದ್ದ ದೇವಯ್ಯನ ಇಂಗಿತ ತಿವಿತದಿಂದ ಎಚ್ಚತ್ತುಕೊಂಡು, ಹಸ್ತಲಾಘವದ ಅರಿವು ತೋರಿ, ಹಲ್ಲುಬಿಡುತ್ತಾ ಕೈ ನೀಡಿದನು. ಲೇಕ್ ಹಿಲ್ ಅವರು ಮುಕುಂದಯ್ಯನಿಗಂತೂ ಅಂತೆಯೆ ಎಲ್ಲರಿಗೂ ಹಸ್ತಲಾಘವವಿತ್ತು, ಸಾಯಂಕಾಲದ ಪ್ರಾರಂಭೋತ್ಸವಕ್ಕೆ ಎಲ್ಲರನ್ನೂ ಆಹ್ವಾನಿಸಿ, ಜೀವರತ್ನಯ್ಯನಿಗೆ ಹಿಂಬಾಲಿಸಿ ಹೊರಡುವ ಸನ್ನೆ ಮಾಡಿ, ಬಾಗಿಲು ದಾಟಿದರು.

“ಕರೀ ಪಾದ್ರಿಯಂತಲ್ಲೊ; ನಿಜವಾಗಿಯೂ ದೊಡ್ಡ ಮನುಷ್ಯನೆ ಕಣೋ, ಈ ಬಿಳೀ ಪಾದ್ರಿ!” ಮುಕುಂದಯ್ಯ ದೇವಯ್ಯನ ಕಡೆ ತಿರುಗಿ ಶ್ಲಾಘಿಸಿದನು.

“ನಮ್ಮ ಕಾಡು, ನಿಮ್ಮ ತಿಮ್ಮು, ಹಳೆಮನೆ ಧರ್ಮು, ಹೆಂಚಿನಮನೆ ರಾಮು ಎಲ್ಲರನ್ನೂ, ಇಸ್ಕೂಲು ಸುರುವಾದ ಕೂಡ್ಲೆ, ಮೊದಲೂ ತಂದು ಸೇರಿಸಿಬಿಡಬೇಕು, ಓದಕ್ಕೆ!… ಏನಂತೀಯ?” ದೇವಯ್ಯ ಕೇಳಿದನು, ರೆವರೆಂಡರ ಭಾಷಣಕ್ಕೆ ತನ್ನ ಪ್ರಥಮ ಪ್ರತಿಕ್ರಿಯೆ ಎಂಬಂತೆ.

“ಸೇರಿಸದೆ ಮತ್ತೆ!” ಮುಕುಂದಯ್ಯ ಅನಂತಯ್ಯನ ಕಡೆ ತಿರುಗಿದನು. ಎಂತಿದ್ದರೂ ನಮ್ಮ ಐಗಳೆ ಹೆಡ್ ಮಾಸ್ಟರ್ ಆಗ್ಯಾರಲ್ಲಾ!…. ನೀವೇನ್ ಹೇಳ್ತೀರಿದ ಅನಂತೈಗಳೆ?”

“ಆಗಲೆ ಹುಡುಗರಿಗೆಲ್ಲಾ ಹೇಳಿಬಿಟ್ಟೇನಿ, ಬಟ್ಟೆ ಗಿಟ್ಟೆ ಒಕ್ಕೊಂಡು ಸಿದ್ಧವಾಗಿರಿ ಅಂತಾ….. ಅವರಿಗೂ ಖುಷಿಯೋ ಖುಷಿ! ಮಕ್ಕಳು ಬರ್ತಾರಲ್ಲಾ ಅಂತಾ ಅಂತಕ್ಕಗೂ ಪೂರಾ ಗೆಲುವಾಗಿ ಬಿಟ್ಟಿದೆ!” ಎಂದರು ಅನಂತಯ್ಯ.

* * *

## ೬೪

“ನಾನು ಹೇಳಿದ್ದು ಹೌದೋ ಅಲ್ಲವೊ? ಕಾಡಿನಲ್ಲಿ ಹೋಗುವಾಗ ಕೋವಿ ಖಾಲಿ ಇರಬಾರದಂತೆ!…. ಈಡು ತುಂಬಿಕೊಂಡು ಬಂದಿದ್ದರಿಂದ ಅಲ್ಲವೊ ಈ ಕೋಳಿ ಸಿಕ್ಕಿದ್ದು, ತಾನೆ ತನ್ನ ಕೈಯಲ್ಲಿ ಮ್ಯಾಣೆ ಹಿಡಿದುಕೊಂಡಿದ್ದ ಕಾಡುಕೋಳಿಯ ಕಡೆ ನೋಡುತ್ತಾ ಗಟ್ಟದ ತಗ್ಗಿನವರ ಕಾಕುದನಿಯಲ್ಲಿ ಐತ ಮುಂದುವರಿದನು ಹುಂಜ ಏನು ತೂಕ ಇದೆ ಅಂತೀರಿ?…. ಅಯ್ಯಾ, ನೀವೆ ನೋಡಿ!”

ಕೋವಿಗೆ ಮತ್ತೆ ಈಡು ತುಂಬುತ್ತಿದ್ದ ಮುಕುಂದಯ್ಯ ಐತನಿಗೆಂದನು, ಅವನು ನೀಡುತ್ತಿದ್ದ ಹುಂಜದ ಕಡೆ ಕಣ್ಣು ಹಾಯಿಸಿದೆ: “ನಿನ್ನ ಕೂಳು ಹೊತ್ತಿತ್ತು! ಒಂದು ಗಂಟೇನೆ ಆಯ್ತಲ್ಲಾ ಇಲ್ಲಿ, ಅದನ್ನು ಹುಡುಕಕ್ಕೆ! ಬೆಳಕು ಇರಾ ಹಾಂಗೆ ಮನೆ ಸೇರಾನ ಅಂತಿದ್ರೆ, ಮೇಗ್ರುಳ್ಳಿ ಬುಡದಲ್ಲೇ ಕತ್ತಲೆ ಆಗಾ ಹಾಂಗೆ ಮಾಡ್ದೆಲ್ಲ, ನೀನು?”

ಮಿಶನ್ ಸ್ಕೂಲಿನ ಪ್ರಾರಂಭೋತ್ಸವ ಮುಗಿಯುವಷ್ಟರಲ್ಲೆ ಬೈಗು ಕಪ್ಪಾಗಿ ಬಿಟ್ಟಿತ್ತು. ಇನ್ನೂ ಹೊತ್ತು ಮಾಡುತ್ತಿದ್ದರೋ ಏನೋ? ಆದರೆ ದೀಪಕ್ಕೆ ಏರ್ಪಾಡು ಮಾಡಿರಲಿಲ್ಲವಾದ್ದರಿಂದ ಬೆಳಕಿರುವಂತೆಯೆ ಆದಷ್ಟು ಬೇಗನೆ ಮುಗಿಸಿದ್ದರು.

ಅಂತಕ್ಕನ ಮನೆಗೆ ಅನಂತಯ್ಯನವರೊಡನೆ ಹೋಗಿ, ಸ್ಕೂಲಿಗೆ ಓದಲು ಬರುವ ತಮ್ಮ ಹುಡುಗರನ್ನು ಅಲ್ಲಿ ಊಟ ವಸತಿಗೆ ಬಿಡುವ ವಿಚಾರ ಮಾತನಾಡಿ, ಮುಕುಂದಯ್ಯ ಹೊರಡುವುದೆ ಕತ್ತಲುಕತ್ತಲಾಗಿತ್ತು. ಹೆದ್ದಾರಿಯಿಂದ ಹುಲಿಕಲ್ಲು ನೆತ್ತಿಯ ಕಡೆಗೆ ಅಗಚುವ ಕಾಲುದಾರಿ ಸಿಕ್ಕಲ್ಲಿಯೆ ಐತ ಕೋವಿಗೆ ಈಡು ತುಂಬಿಕೊಳ್ಳುವಂತೆ ಮುಕುಂದಯ್ಯನನ್ನು ಪ್ರೇರೇಪಿಸಿದ್ದು, ಅದರ ಪರಿಣಾಮವಾಗಿಯೆ, ಹತ್ತು ಮಾರು ಕಾಡಿನಲ್ಲಿ ಹೋಗುವುದರೊಳಗಾಗಿ ಹಿಂದೆ ಗುತ್ತಿ ಸಿಂಬಾವಿ ಭರಮೈಹೆಗ್ಗಡೆಯವರು ಹಳೆಮನೆ ಸುಬ್ಬಣ್ಣ ಹೆಗ್ಗಡೆಯವರಿಗೆ ಕೊಟ್ಟಿದ್ದ ಕಾಗದವನ್ನು ಹೊತ್ತು ತರುತ್ತಿದ್ದಾಗ ಹುಲಿಯ ಬೊಗಳಿ ಮೇಲೆ ಬಿದ್ದು ಎಬ್ಬಿಸಿದ್ದ ಹೆಚ್ಚಾವಿನ “ಬೆತ್ತದ ಸರ”ಕ್ಕೆ ಸಮೀಪದಲ್ಲಿ ಒಂದು ಕಾಡುಕೋಳಿ ಹುಂಜ, ಗೊತ್ತು ಕೂರಲೆಂದು, ನೆಲದ ಹಳುವಿನಿಂದ ಹಾರಿ ಒಂದು ದೊಡ್ಡ ಮರದ ಮೇಲೆ ಕೂತಿತು. ಅದು ಅಡಗಿದ್ದ ಕೊಂಬೆ ಎತ್ತರವಾಗಿದ್ದು ಸಂಧ್ಯಾ ಗಗನಕ್ಕೆ ಇದಿರಾಗಿದ್ದುದರಿಂದ ಬೈಗಿನ ಬಾನಿನ ಬಣ್ಣದ

ಹಿನ್ನೆಲೆಯಲ್ಲಿ ಮಷೀಚಿತ್ರದಂತೆ ಎದ್ದು ಕಾಣುತ್ತಿದ್ದು, ಸುಲಭವಾಗಿ ಸಿಕ್ಕಿತ್ತು ಮುಕುಂದಯ್ಯನ ಗುರಿಗೆ. ಆದರೆ ಕೋಳಿ, ಹೊಡೆದಲ್ಲಿಯೆ ಕೆಳಕ್ಕೆ ಬೀಳದೆ, ಸ್ವಲ್ಪ ದೂರ ಇಳಿಜಾರಾಗಿ ಹಾರಿ ಹೋಗುತ್ತಾ ನೆಲಕ್ಕೆರಗಿತ್ತು. ಅದು ದೊಪ್ಪನೆ ಬಿದ್ದ ಸದ್ದೂ ಆ ಸಂಧ್ಯಾ ನಿಃಶಬ್ದತೆಯಲ್ಲಿ ಚೆನ್ನಾಗಿ ಕೇಳಿಸಿತ್ತು. ಆದರೆ ಆಗಾಗಲೆ ಕತ್ತಲೆ ಕವಿಯುತ್ತಿದ್ದ ಹಳುವಿನಲ್ಲಿ ಅದನ್ನು ಹುಡುಕುವುದೆ ಕಷ್ಟವಾಯಿತು. ಸುಮಾರು ಹೊತ್ತು ಅವರಿಬ್ಬರೂ ಹಳುವಿನಲ್ಲಿ ಅದನ್ನು ತಡಕಿ ಹುಡುಕಿದ ಮೇಲೆಯೆ ಅದು ಪತ್ತೆಯಾಗಿತ್ತು. ಚೆನ್ನಮ್ಮಗೆ "ಕತ್ತಲಾಗುವುದರೊಳಗೆ ಮನೆಯಲ್ಲಿರುತ್ತೇನೆ" ಎಂದು ಧೈರ್ಯ ಹೇಳಿ, ಆಶ್ವಾಸನೆ ಕೊಟ್ಟು ಬಂದಿದ್ದ ಮುಕುಮದಯ್ಯಗೆ, ಮೇಗರವಳ್ಳಿ ಹತ್ತಿರದ "ಬೆತ್ತದ ಸರ"ದಲ್ಲಿಯೆ ಅಷ್ಟು ಕತ್ತಲೆಯಾಗಿದ್ದನ್ನು ಕಂಡು, ತುಂಬ ಅಸಮಾಧಾನವಾಗಿತ್ತು. ಅದಕ್ಕೇ ಅವನು ಹುಂಜವನ್ನು ಕೈಯಲ್ಲಿ ಹಿಡಿದಿದ್ದ ಐತನ ಮೃಗಯಾ ಉತ್ಸಾಹಕ್ಕೆ ತಣ್ಣೀರೆರಚುವಂತೆ ಮಾತನಾಡಿದ್ದು!

ಇಬ್ಬರೂ ಬೇಗಬೇಗನೆ ಕಾಲುಹಾಕಿ ಹುಲಿಕಲ್ಲುನೆತ್ತಿಗೆ ಏರಿ ಇಳಿದು ಕೋಣೂರಿನ ಗಟ್ಟದ ತಗ್ಗಿನವರ ಬಿಡಾರದ ಸಮೀಪಕ್ಕೆ ಬಂದಾಗ ಐತ "ಅಯ್ಯಾ, ಒಂದು ಚಣ ಹಿಡಿದುಕೊಂಡಿರಿ, ಈಗ ಬಂದೆ" ಎಂದು ಕಾಡುಕೋಳಿಯನ್ನು ಮುಕುಂದಯ್ಯನ ಕೈಗಿತ್ತು ಕತ್ತಲೆಯಲ್ಲಿ ಕಾಣದಾದನು. ದೇಹಬಾಧೆಗೆ ಅವಸರವಾಗಿರಬೇಕು ಎಂದು ಭಾವಿಸಿ, ಮುಕುಂದಯ್ಯ ಕೋಳಿ ಹಿಡಿದು ಕಾದನು.

ಜಲಬಾಧೆಗಿರಲಿ, ಮಲಬಾಧೆಗಾದರೂ ಇಷ್ಟು ಹೊತ್ತು ಬೇಕೇ? ಎಲ್ಲೆಲ್ಲಿಯೂ ನೀರು ಹರಿಯುತ್ತಿರುವ ಈ ಕಾಲದಲ್ಲಿ ನೀರು ಹುಡುಕಿಕೊಂಡಾದರೂ ಎಲ್ಲಿಗೆ ಹೋದನು ಇವನು?... ಅಥವಾ? ಹಾಳಾದವನು ಕುಡಿಯೋಕೆ ಗಿಡಿಯೋಕೆ ಸಿಗುತ್ತದೆ ಅಂತಾ ಯಾರ ಬಿಡಾರಕ್ಕಾದರೂ ನುಗ್ಗಿದನೋ?.... ಅವಳಿಗೆ ಬೇರೆ ಹೇಳಿ ಬಂದೀನಿ! ತುದಿಗಾಲ ಮೇಲೆ ಕಾಯ್ತಾ ಇರ್ತಾಳೆ, ಸೂಜಿ ಮೇಲೆ ನಿಂತ ಹಾಗೆ!..... ಕಡೆಗೆ, ನನಗೇನಾದುರೂ ಆಯ್ತೋ ಏನೋ ಅಂತಾ ಎದೆಗೆಟ್ಟು, ಏನಾದರೂ ಮಾಡಿಕೊಂಡರೂ ಮಾಡಿಕೊಂಡಳೆ! ಅದಕ್ಕೂ ಹೇಸುವವಳಲ್ಲ!.... ಇವತ್ತು ರಾತ್ರಿ ಬೇರೆ "ಬಂದೇ ಬರ್ತೀನಿ" ಅಂತಾ ಒಪ್ಪಿಯೂ ಬಿಟ್ಟಾಳೆ! ಮುಕುಂದಯ್ಯಗೆ ಮುಗುಳುನಗೆ ತಡೆಯಲಾಗಲಿಲ್ಲ. ಥೂ ಎಷ್ಟು ಹೊತ್ತಾಯ್ತು? ಎತ್ತ ಸತ್ತ ಈ ಬೋಳೀಮಗ?.... ನಾ ಹೋಗ್ತಾ ಇರ್ತೀನಿ. ಬರಲಿ ಹಾಳಾದವನು ಆಮೇಲೆ!....

ಮುಕುಂದಯ್ಯ ಕೋಳಿ ಕೋವಿ ಎರಡನ್ನೂ ಹೊತ್ತುಕೊಂಡು ಹೂವಳ್ಳಿಯ ಕಡೆಗೆ ಕತ್ತಲಲ್ಲಿಯೆ ಆದಷ್ಟು ಜೋರಾಗಿ ಕಾಲು ಹಾಕಿದನು. ಸ್ವಲ್ಪ ದೂರ ಹೋಗುವುದರಲ್ಲಿ ಹಿಂದುಗಡೆಯಿಂದ ಯಾರೊ ಓಡೋಡಿ ಬರುವ ಸದ್ದು ಕೇಳಿಸಿ ನಿಂತನು.

ಏದುತ್ತಾ ಹತ್ತಿರಕ್ಕೆ ದೌಡಾಯಿಸಿ ಬಂದು, ಕವಿದಿದ್ದ ಕುರುಡುಗತ್ತಲೆಯಲ್ಲಿ ಇನ್ನೇನು ಡಿಕ್ಕಿ ಹೊಡೆಯಬೇಕು ಅನ್ನುವಷ್ಟರಲ್ಲಿ ಮುಕುಂದಯ್ಯ ಕೂಗಿ ನಿಲ್ಲಿಸಿದನು:

"ಎತ್ತಲಾಗಿ ಸತ್ತಿದೆಯೊ, ಹಾಲಾದವನೆ?"

"ಅಕ್ಕಿಣಿ ಬಿಡಾರಕ್ಕೆ ಹೋಗಿ ಬಂದೆ."

"ಯಾರ ಉಚ್ಚೆ ಕುಡಿಯಾಕೋ?" ಸಿಟ್ಟುರಿದಿತ್ತು ಮುಕುಂದಯ್ಯಗೆ.

“ಇಲ್ಲಾ, ಅಯ್ಯಾ, ಪೀಂಚಲು ಏನೋ ಹೇಳಿದ್ಲು, ಬಸಿರೀಗೆ ಮದ್ದು ತರಾಕ್ಕೆ ಹೋಗಿದ್ದೆ” ಎಂದಿತು ಐತನ ದೀನವಾಣಿ.

ಮುಕುಂದಯ್ಯನ ಮನಸ್ಸು ಮೃದುವಾಯಿತು. ಕಾಡುಕೋಳಿಯನ್ನು ಮುಂಚಾಚಿ, ಕೇಳಿದನು: “ಅಕ್ಕಣಿ ಮನೇಲಿಲ್ಲೇನೊ ಈಗ?”

ಮುಕುಂದಯ್ಯ ಮುಂದಕ್ಕೆ ನೀಡಿದ್ದ ಕೋಳಿಯನ್ನು ಕೈಗೆ ತೆಗೆದುಕೊಳ್ಳುತ್ತಾ ಐತನೆಂದನು:

“ಇಲ್ಲಾ, ಅಯ್ಯಾ! ಮೊನ್ನೆಯಿಂದ ಮತ್ತೆ ಬಿಡಾರಕ್ಕೇ ಬಂದಾಳೆ” ತುಸು ತಡೆದು ಮತ್ತೆ ಸ್ವಾರಸ್ಯ ಚಾಪಲ್ಯಕ್ಕೆ ವಶವಾಗಿ ಮುಂದುವರಿಸಿದನು: “ಹಳೆಮನೆ ಅಮ್ಮ ಮನೆಗೆ ಬಂದಮ್ಯಾಲೆ ರಂಗಪ್ಪಯ್ಯೋರು “ಬಿಡಾರಕ್ಕೇ ಹೋಗು, ಚೇಂಕ್ರನಿಂದ ನಿಂಗೇನೂ ಆಗದೆ ಇದ್ದಾಂಗೆ ನಾ ನೋಡ್ಕೋತೀನಿ” ಅಂದರಂತೆ!”

“ಇನ್ನೆಲ್ಲಿ ಚೇಂಕ್ರ ಬರ್ತಾನೆ, ಗಟ್ಟದಮೇಲೆ? ಅವನ ಕಥೆ ಪೂರೈಸದ್ದಾಂಗೆ!” ಮನೆಕಡೆಗೆ ಬಿರುಬಿರನೆ ಕಾಲು ಹಾಕುತ್ತಲೆ ಗಂಟಲಲ್ಲಿಯೆ ನಕ್ಕು ಹೇಳಿದನು ಮುಕುಂದಯ್ಯ.

ಇಬ್ಬರೂ ಸ್ವಲ್ಪ ದೂರ ನೀರವವಾಗಿ ಮುಂದುವರಿದಿದ್ದರು.

ಹಿಂದುಗಡೆ ಬರುತ್ತಿದ್ದ ಐತ ಇದ್ದಕ್ಕಿದ್ದ ಹಾಗೆ ಕಿಸಕ್ಕನೆ ನಕ್ಕಿದ್ದು ಕೇಳಿಸಿ, ಮುಕುಂದಯ್ಯ ಕಾಲುಹಾಕುತ್ತಲೆ ಕೇಳಿದನು: “ಯಾಕೋ ಪೂರಾ ನಗ್ತೀಯಲ್ಲಾ?”

“ಯಾಕಿಲ್ಲಯ್ಯಾ…. “ ಎಂದನು ಐತ.

ಮತ್ತೆ ಇಬ್ಬರೂ ತಮ್ಮ ತಮ್ಮ ಆಲೋಚನೆಗಳಲ್ಲಿ ಮಗ್ನರಾಗಿಯೊ ಅಥವಾ ಕವಿದಿದ್ದ ಕತ್ತಲೆಯಲ್ಲಿ ಎಡವದಂತೆ ದಾರಿಗಾಣುವುದರಲ್ಲಿ ತಲ್ಲೀನರಾಗಿಯೊ ತುಸುದೂರ ಸಾಗಿದ್ದರು.

“ಅಯ್ಯಾ!” ಕರೆದನು ಐತ ಮತ್ತೆ.

“ಏನೋ?”

“ಅಕ್ಕಣಿ ಈಗ ಹೆಗ್ಗಡ್ತಮ್ಮ ಆಗಿಬಿಟ್ಟಾಳೆ! ನಿಮ್ಮೋರು ಉಟ್ಟಹಾಂಗೆ ಸೀರೆ ಉಟ್ಟುಕೊಂಡು ಗಡದ್ದಾಗಿದ್ದಾಳೆ!…. ಅವಳ ಬಿಡಾರಾನೂ…. ನನ್ನ ಬಿಡಾರ ಆಗಿತ್ತಲ್ಲಾ ಅದನ್ನೂ ಸೇರಿಸಿಯೆಬಿಟ್ಟಾರೆ!…. ಈಗ “ಮನೆ” ಆಗಿಬಿಟ್ಟದೆ…. “

“ಅದೆಲ್ಲಾ ನಿನಗ್ಯಾಕೋ? ಬಿಡಾರ ಬೀಳಿಸಿ “ಮನೇ”ನಾದ್ರೂ ಕಟ್ಟಲಿ, ಅರಮನೇನಾದ್ರೂ ಕಟ್ಟಲಿ!…. ನೀನೇನು ಹೋಗ್ತೀಯಾ ನಿನ್ನ ಬಿಡಾರಕ್ಕೆ ಮತ್ತೆ?…..”

“ನನ್ನ ಜೀಂವ ಹೋದ್ರೂ ನಾನು ಹೋಗುದಿಲ್ಲ, ಒಡೆಯಾ” ಎಂದು ಪ್ರತಿಜ್ಞೆ ಮಾಡಿದ ಐತ, ಏನೋ ರಹಸ್ಯ ಹೇಳುವ ಧ್ವನಿಯಲ್ಲಿ ಮುಂದುವರಿದನು ಮತ್ತೆ: “ಇವೊತ್ತೊಂದು ತಮಾಸೇನ ಆಯ್ತಲ್ಲಾ, ಒಡೆಯಾ? ನಾನು.... ಅಕ್ಕಣಿ ಬಿಡಾರದ ಹತ್ತೆ ಹೋದಾಗ,.... ಒಳಗೆ.... ಮಾತಾಡೋದು ಕೇಳಿಸ್ತು....  ಮನೇ ದೊಡ್ಡಯ್ಯೋರು ಒಳಗಿದ್ರು!....”

“ಹರಕು ಬಾಯಿ ಮುಟ್ಠಾಳ, ಬಾಯಿ ಮುಚ್ಚಿಕೊಂಡು ಸುಮ್ಮನಿರಬಾರದೇನೋ? ನಿನ್ನ ನಾಲಗೆ ಪೂರಾ ಉದ್ದ ಆಗ್ತಾ ಇದೆಯೋ, ಇತ್ತಿತ್ತಲಾಗಿ.... ಒಂದು ದಿನ ನೀನು ಯಾರ ಕೈಲಾದ್ರೂ ಹಲ್ಲು ಉದುರಿಸಿಕೊಳ್ತೀಯಾ, ನೋಡ್ತಿರು! ನಿನಗ್ಯಾಕೊ ದೊಡ್ಡೋರ ವಿಚಾರ?”

ಐತ ಮುಂದೆ ಮಾತೆತ್ತಲಿಲ್ಲ, ಹೂವಳ್ಳಿ ಮನೆ ಮುಟ್ಟುವವರೆಗೂ.

ಆಗಿನ ಕಾಲದ ಮಲೆನಾಡಿನಲ್ಲಿ, ಸಾಮಾನ್ಯ ದಿನಗಳಲ್ಲಿ, ಆ ಒಂದೊಂದೆ ದೊಡ್ಡ ಮನೆಯ ಹಳ್ಳಿಗಳಲ್ಲಿ, ದುಡಿದು ದಣಿದು ಜನರು ಕತ್ತಲಾಗಿ ದೀಪ ಹಚ್ಚಿದೊಡನೆ ಉಂಡು ಮುಗಿಸಿ, ಕೋಣೆ ಸೇರುತ್ತಿದ್ದುದು ಮಾಡಿಕೆ. ಆದರೆ ಅಂದು ಹೂವಳ್ಳಿ ಮನೆಯಲ್ಲಿ ರಾತ್ರಿ ಬಹಳ ಹೊತ್ತಾಗಿದ್ದರೂ ಜಗಲಿಯ ದೀಪ ಉರಿಯುತ್ತಲೆ ಇತ್ತು.

ಜಗಲಿಯ ಕೆಸರುಹಲಗೆಯ ಮೇಲೆ ಮುಂಡಿಗೆಗೆ ಒರಗಿ ಒಬ್ಬಳೆ ಕುಳಿತಿದ್ದ ನಾಗಕ್ಕ, ಎದುರಿಗೆ ಅಂಗಳದಲ್ಲಿದ್ದ ತುಳಸಿಕಟ್ಟೆಯ ಮೇಲೆ ದೇವರಿಗೆ ಹಚ್ಚಿಟ್ಟಿದ್ದ ನೀಲಾಂಜನಗಳ ನಾಟ್ಯಮಾನ ಸೊಡರುಗಳ ಕಡೆಗೆ ನೋಡುತ್ತಾ, ಗಂಭೀರ ಚಿಂತಾಮಗ್ನಳಾಗಿ ಕುಳಿತಿದ್ದಳು. ಅವಳು ತನ್ನ ವಿಫಲ ಜೀವನವನ್ನಾಗಲಿ ಅದರ ದುಃಖ ಮಯ ದುರಂತತೆಯನ್ನಾಗಲಿ ಕುರಿತು ಯೋಚಿಸುತ್ತಿರಲಿಲ್ಲ. ಚಿನ್ನಮ್ಮನ ಭವಿಷ್ಯ ಜ್ಜೀವನದ ಯೋಗಕ್ಷೇಮವೆ ಅವಳ ಧ್ಯಾನದ ವಿಷಯವಾಗಿತ್ತು. ತನ್ನ ಸ್ವಂತ ಸುಖ ಸಂತೋಷ ಎಂಬುದೆಲ್ಲ ಮಣ್ಣು ಪಾಲಾಗಿದ್ದ ಈ ಜನ್ಮದ ಬಾಳುವೆಯಲ್ಲಿ ಇನ್ನು ಅವಳಿಗೆ ಉಳಿದಿದ್ದ ಏಕಮಾತ್ರ ಪ್ರತ್ಯಾಶೆ ಎಂದರೆ ಚಿನ್ನಮ್ಮ ಸುಖಸಂತೋಷಗಳಿಂದ ಬದುಕಿ ಬಾಳುವುದೆ ಆಗಿತ್ತು. ಮುಕುಂದಯ್ಯನೊಡನೆ ಚಿನ್ನಮ್ಮನ ಲಗ್ನವೂ ಇನ್ನೊಂದು ತಿಂಗಳಿಗೆ ನಿಶ್ಚಯವಾಗಿಯೂ ಇತ್ತು. ಅದಕ್ಕೆ ಮನುಷ್ಯ ದೃಷ್ಟಿಗೆ ಗೋಚರವಾಗುವ ಯಾವ ವಿಘ್ನವೂ ಇರಲಿಲ್ಲ ನಿಜ. ಆ ಮಂಗಳಕರವಾದ ಸುದಿನವನ್ನೆ ಇದಿರು ನೋಡುತ್ತಾ ನಾಗಕ್ಕ, ಹರ್ಷಚಿತ್ತೆಯಾಗಿ ಆ ಪುಣ್ಯಮುಹೂರ್ತವನ್ನೆ ಉತ್ಕಟಾಭಿಲಾಷೆಯಿಂದ ನಿರೀಕ್ಷಿಸುವ ಉಲ್ಲಾಸೋತ್ಸಾಹಗಳಲ್ಲಿ ತೇಲಿ ಸಾಗುತ್ತಿದ್ದ ತರಳೆ ಚಿನ್ನಮ್ಮನ ದ್ವಿಗುಣಿತ - ತ್ರಿಗುಣಿತ - ಶತಗುಣಿತ ಆನಂದಸ್ರೋತದಲ್ಲಿ ಲೀನೆಯಾಗಿದ್ದಳು. ಆದರೆ ಆವೊತ್ತು ಬೆಳಿಗ್ಗೆ ಚಿನ್ನಮ್ಮ ಮನೆಯಿಂದ ತುಸುದೂರವಿದ್ದ ಕಾಡುದಾರಿಯಲ್ಲಿ ಕೋವಿಯೊಡನೆ ಮೇಗರವಳ್ಳಿಗೆ ಹೋಗುತ್ತಿದ್ದ ಮುಕುಂದಯ್ಯನನ್ನು ಬೀಳುಕೊಟ್ಟು, ಮನೆಗೆ ಹಿಂತಿರುಗಿ, ಅಂಗಳದ ತುಳಸೀ ದೇವರಿಗೆ ಸುತ್ತು ಬಂದು, ನಾಗಕ್ಕಗೆ ನಡೆದ ವಿಷಯವನ್ನೆಲ್ಲ ತಿಳಿಸಿದ ಮೇಲೆ, ಮನೆಯಲ್ಲಿ ಎಲ್ಲರ ಮನಸ್ಸಿಗೂ ಮುಗಿಲು ಕವಿದಂತಾಗಿತ್ತು. ಈಡು ತುಂಬದಿದ್ದ ಕೋವಿಯನ್ನು ತೆಗೆದುಕೊಂಡು ಹೋಗುತ್ತಿದ್ದುದಕ್ಕೆ ಯಾವ ದುರುದ್ದೇಶವೂ ಇಲ್ಲವೆಂದೂ, ನಿರಪಾಯವಾಗಿ ತಾನು ಸಾಯಂಕಾಲವೆ ಸುರಕ್ಷಿತವಾಗಿ ಹಿಂದಕ್ಕೆ ಬರುತ್ತೇನೆ ಎಂದೂ ಮುಕುಂದಯ್ಯ ಧೈರ್ಯ ಹೇಳಿದ್ದರೂ, ಹೆಂಗಸರ ಹೃದಯಗಳು ದಿನವೆಲ್ಲ ತಳಮಳಗೊಳ್ಳುತ್ತಲೆ ಇದ್ದುವು; ಇಷ್ಟವ್ಯಕ್ತಿಯ ಸುರಕ್ಷಿತಾಗಮನಕ್ಕೆ ಪ್ರಾರ್ಥನಾಭಂಗಿಯಲ್ಲಿ ಆನತವಾಗಿಯೆ ಇದ್ದುವು, ತಮ್ಮ ತಮ್ಮ ಭಾವಾನುರೂಪದ ಭಗವಚ್ಚರಣತಲದಲ್ಲಿ!

ಮನೆಯಲ್ಲಿಯೆ ಇದ್ದರೆ ಕೆಲಸವಿಲ್ಲದ ಮನಸ್ಸು ಕಳವಳವನ್ನೆ ಮೆಲುಕು ಹಾಕುತ್ತಾ ಇರುವುದನ್ನು ತಪ್ಪಿಸುವುದಕ್ಕಾಗಿಯೆ ನಾಗಕ್ಕ ಚಿನ್ನಮ್ಮನನ್ನೂ ಪೀಂಚಲು ವೊಡನೆ ಕರೆದುಕೊಂಡು ಮಧ್ಯಾಹ್ನ ಊಟವಾದ ಮೇಲೆ ತೋಟದ ಕೆಲಸಕ್ಕೆ ಹೋಗಿದ್ದಳು. ಚಿನ್ನಮ್ಮನೊಡನೆ ತಾನೊಬ್ಬಳೆ ಇರುವಾಗಲೆಲ್ಲ ಸಾಧಾರಣವಾಗಿ ಆಶ್ಲೀಲಾಂಚಿತವೂ ಆಗಿರುವ ಹಾಸ್ಯ ಪರಿಹಾಸ್ಯದ ಮಾತುಕತೆಯಲ್ಲಿ ತಡಗಿ ಮನೋರಂಜನೆ ಮಾಡುತ್ತಿದ್ದ ಪೀಂಚಲುವೂ ಆ ದಿನ ಸಂಮ್ಲಾನೆಯೂ ಗಂಭೀರೆಯೂ ಆಗಿಬಿಟ್ಟಿದ್ದಳು. ಇನ್ನು ಕೆಲವೇ ತಿಂಗಳಲ್ಲಿ ಕಂದನೊಬ್ಬನನ್ನು ಪಡೆಯುವ ಹೇರಾಸೆಯಿಂದಿದ್ದ ಆ ಚೊಚ್ಚಲು ಬಸಿರಿಗೆ, ತನ್ನ ಗಂಡನಿಗೂ ಏನಾದರೂ ಆದರೆ ತನ್ನ ಗತಿಯೇನು? ಎಂಬ ಚಿಂತೆ ಹತ್ತಿತ್ತು.

ಅವಳಿಗೆ ಹುಟ್ಟುವ ಮಗು ಹೆಣ್ಣೊ? ಗಂಡೋ? ಎಂಬ ವಿಷಯದಲ್ಲಿ ಚಿನ್ನಮ್ಮಗೂ ಪೀಂಚಲುವಿಗೂ ಎಷ್ಟೋ ಸಾರಿ ತರತರವಾದ ಪಂಥ ಪಾಡು ನಡೆಯುತ್ತಿತ್ತು. ಇವೊತ್ತು ಕೆಲಸದ ಮಧ್ಯೆ ವಿಶ್ರಾಂತಿಗಾಗಿ ನೆರಳಲ್ಲಿ ಮೂವರೂ ಕುಳಿತಿದ್ದಾಗ, ಅಡಕೆಯ ಮರದ ಪೊಟರೆಯಲ್ಲಿ ಗೂಡುಕಟ್ಟಿ ಮರಿಮಾಡಿದ್ದ ಕಾಮಳ್ಳಿ ದಂಪತಿ ತಮ್ಮ ಎರಡು ಮರಿಗಳನ್ನು ಆಗತಾನೆ ಹೊರಕ್ಕೆ ಹಾರಿಸಿ, ಅವಕ್ಕೆ ಗುಟುಕು ಕೊಡುತ್ತಿದ್ದುವು. ಆ ಮರಿಗಳಲ್ಲಿ ಒಂದು ಗಂಡು ಒಂದು ಹೆಣ್ಣೆಂದೂ, ಎರಡೂ ಹೆಣ್ಣಾಗಿರಬೇಕೆ ಎಂದೂ, ಎರಡೂ ಗಂಡೇ ಆಗಿರಬಾರದೆಕೆ ಎಂದೂ ವಾದವಿವಾದ ಪ್ರಾರಂಭವಾಗಿತ್ತು. ಆಗ ವಿನೋದಶೀಲೆ ಚಿನ್ನಮ್ಮ ತನ್ನ ಎರಡು ಕೈಬೆರಳುಗಳನ್ನು ಮುಂದಕ್ಕೆ ಚಾಚಿ, ಒಂದನ್ನು ಮುಟ್ಟುವಂತೆ ಪೀಂಚಲುಗೆ ಹೇಳಿದಳು. ಪೀಂಚಲು ಏನು? ಎಂತು? ಏತಕ್ಕೆ? ಒಂದೂ ಗೊತ್ತಾಗದೆ ಸುಮ್ಮನೆ ಒಂದು ಬೆರಳನ್ನು ಮುಟ್ಟಿದಳು.

"ನೀನೆ ಪುಣ್ಯವಂತೆ ಕಣೇ" ಎಂದು ಚಿನ್ನಮ್ಮ.

"ಯಾಕ್ರೋ?" ಹಿಗ್ಗಿ ರಾಗವಾಗಿ ಕೇಳಿದಳು ಪೀಂಚಲು. ಸುಳ್ಳಾಗಲಿ, ನಿಜವಾಗಲಿ, ಮಂಗಳ ಹೇಳಿದರೆ ಮಾರುಹೋಗದವರಾರು?

"ದೊಡ್ಡಬೆಳ್ರ್ಳ ಮುಟ್ಟಿದೆಲ್ಲಾ? ಅದಕ್ಕೇ!"

"ದೊಡ್ಡಬೆಳ್ರ್ಳ ಮುಟ್ಟದ್ರೆ? ಏನು?"

"ದೊಡ್ಡಬೆಳ್ರ್ಳ,- ಗಂಡು: ಸಣ್ಣ ಬೆಳ್ರ್ಳ,- ಹೆಣ್ಣು!…. ನಿಂಗೆ ಹುಟ್ಟೋ ಬಾಲೆ ಗಂಡೋ ಹೆಣ್ಣೋ ಅಂತಾ ಸಕುನ ನೋಡ್ದೆ ಕಣೇ."

"ತೋ ನಿಮ್ಮ!" ಚಿನ್ನಮ್ಮ ಮಾಡಿದುದಕ್ಕೂ ಹೇಳಿದುದಕ್ಕೂ ಒಳಗೊಳಗೆ ತುಂಬ ಹಿಗ್ಗಿದ್ದರೂ ಪೀಂಚಲು ಲಜ್ಜೆಗೊಂಡಂತೆ ನಗುನಗುತ್ತಾ ಹೇಳಿದಳು "ನಿಮಗೆ ಮಾಡೋಕೆ ಕಸುಬಿಲ್ಲ, ಚಿನ್ನಕ್ಕಾ."

ದೂರ ಕುಳಿತು ಅನಾಸಕ್ತಿಯಂತೆ ತೋಟದ ಕಡೆಗೆ ನೋಡುತ್ತಿದ್ದರೂ ಅತ್ಯಂತ ಆಸಕ್ತಿಯಿಂದ ಕಿವಿಗೊಟ್ಟು ಆಗಲಿಸುತ್ತಿದ್ದಳು ನಾಗಕ್ಕ. ಆ ಇಬ್ಬರು ಹುಡುಗಿಯರ ಅಣುಗು - ಬಿರುಗು ಸಂಭಾಷಣೆಯನ್ನು ಅವಳು ತನ್ನ ಬದುಕಿನ ಶೂನ್ಯತೆಯನ್ನೂ ಅನ್ಯರ ಬಾಳುವೆಯ ಸುಖಸಂತೋಷ ತೃಪ್ತಿಗಳಿಂದಲೆ ತುಂಬಿಕೊಳ್ಳಬೇಕಾಗಿತ್ತು.

ಹುಡುಗಿಯರಿಬ್ಬರ ಮುಗ್ಧ ಅಟ್ಟಹಾಸ ಸಹ್ಯಾದ್ರಿಯ ಮೂಲೆಯ ಆ ಅಡಕೆಯ ತೋಟಕ್ಕೆ ಚಕ್ಕಳಗುಳಿ ಇಡುತ್ತಿತ್ತು!

ಕಾಮಳ್ಳಿಯ ಮರಿಗಳು ಗಂಡೋ ಹೆಣ್ಣೋ ಎಂಬುದರಲ್ಲಿ ಪ್ರಾರಂಭವಾದ ಚಿತ್ರ ವೃತ್ತಿ, ಪೀಂಚಲುಗೆ ಹುಟ್ಟುವ ಮಗು ಗಂಡೋ ಹೆಣ್ಣೋ ಎಂದು ಶಕುನ ನೋಡುವುದರಲ್ಲಿ ವ್ಯವಹರಿಸಿತ್ತು. ಆದರೆ ಚಿನ್ನಮ್ಮನ ಚಿತ್ತವೃತ್ತಿಯ ತರಂಗ ಚಲನೆ ಅಲ್ಲಿಗೇ ನಿಲ್ಲಲಿಲ್ಲ. ಬೆಳಗಿನಿಂದಲೂ ಅವಳನ್ನು ಕಾಡುತ್ತಿದ್ದ ಒಂದು ಚಿಂತೆಯ ಕಡೆಗೆ ಒಲೆಯಿತು. ಮತ್ತೆ ಎರಡು ಬೆರಳು ಎತ್ತಿ ಹಿಡಿದಳು, ಪೀಂಚಲುವ ಮುಖದ ಮುಂದೆ. ಹೇಳಿದಳು:

"ಮುಟ್ಟೆ, ಇದರಲ್ಲಿ ಯಾವುದಾದ್ರೂ ಒಂದು ಬೆರ್ಳ್ನನ್ನ...."

ಈ ಸಾರಿ ಪೀಂಚಲು ಹಿಂದಿನ ಸಲದಂತೆ ಲಘುವಾಗಿಯಾಗಲಿ ಯಾಂತ್ರಿಕವಾಗಿಯಾಗಲಿ ವರ್ತಿಸಲಿಲ್ಲ. ತನ್ನ ಕಣ್ಣ ಮುಂದೆ ಕವಲಾಗಿ ನಿಂತಿದ್ದ ಚಿನ್ನಕ್ಕನ ಎರಡು ಬೆರಳುಗಳನ್ನೂ ತದೇಕಚಿತ್ತಳಾಗಿ ನೋಡತೊಡಗಿದಳು. ಯಾವ ಬೆರಳನ್ನು ಮುಟ್ಟಿದರೆ ಏನು ಶಕುನ ಬಂದುಬಿಡುತ್ತದೆಯೋ? ಕಂಡವರಾರು?

ಪೀಂಚಲು ಭಾವಿಸಿದ್ದಳು, ಚಿನ್ನಮ್ಮ ತನ್ನ ಸಲುವಾಗಿಯೆ ಕಣಿ ಹೇಳಲು ಬೆರಳೊಡ್ಡಿದ್ದಾಳೆ ಎಂದು. ಆದ್ದರಿಂದ ತನಗೆ ಶುಭವಾಗುವಂತೆ ಹೇಳುವ ಬೆರಳನ್ನೆ ಪತ್ತೆಹಚ್ಚಿ ಮುಟ್ಟಬೇಕೆಂದು ಅವಳ ಆಕಾಂಕ್ಷೆ. ತಪ್ಪಿ ಬೇರೆ ಮುಟ್ಟಿಬಿಟ್ಟರೆ ಏನು ಗತಿ?.... ಆವೊತ್ತು ತನ್ನ ಗಂಡ ಐತ, ನೆನೆದರೆ ಇವೊತ್ತಿಗೂ ಏನು ನಾಚಿಗೆಯೇರುತ್ತದೆ! ತನ್ನ ಬತ್ತಲೆಯೊಡನೆ ಅವನ ಬತ್ತಲೆಯನ್ನೂ ಸೇರಿಸಿ ಆಟವಾಡುತ್ತಿದ್ದಾಗ, ಹಾಲು ತುಂಬಿ ಉಬ್ಬುತ್ತಿರುವ ತನ್ನ ಪೆರ್ಮೊಲೆಗಳಿಗೆ ಮುತ್ತಿಟ್ಟು, "ಎಡವೊ? ಬಲವೊ? ಹೇಳು!" ಅಂದಾಗ ತಾನು ಫಕ್ಕನೆ "ಬಲ" ಅನ್ನಲು ಹಾಂಗಾದ್ರೆ ನೀನು ಹೆಣ್ಣು ಹಡೆಯುವುದೇ ನಿಶ್ಚಯ! ಎಂದು ಅಪಶಕುನ ಹೇಳಿದ್ದನಲ್ಲವೆ? ಹಾಂಗಾಗಬಾರದಲ್ಲಾ ಇಂದು?

ಚಿನ್ನಮ್ಮನ ಬೆರಳುಗಳನ್ನು ನೋಡುತ್ತಿದ್ದ ಪೀಂಚಲು ತನ್ನೊಳಗೇ "ಅಃ ಚಿನ್ನಕ್ಕನ ಕೈಬೆರಳು ಎಷ್ಟು ಬಿಳಿ! ಎಷ್ಟು ಸಪುರ! ಏನು ಚೆಂದ! ಮುದ್ದು ಮಾಡಬೇಕು ಅನ್ನಿಸುತ್ತದೆ!.... ನನಗೇ ಹೀಂಗಾದರೆ, ಇನ್ನು ಆ ಮುಕುಂದಯ್ಯೋರಿಗೆ ಹೆಂಗಾಗ ಬೇಕು?... ಅದಕ್ಕೇ ಮತ್ತೆ, ಆವೊತ್ತು ಸೊಪ್ಪು ತರಲು ಹಾಡ್ಯಕ್ಕೆ ಹೋಗಿದ್ದಾಗ... ಅವರು.... ಚಿನ್ನಕ್ಕನಿಗೆ... ಹಾಂಗೆ ಮಾಡಿಬಿಟ್ಟದ್ದು?" ಎಂದುಕೊಂಡು ಸಚಿತ್ರವಾಗಿ ನೆನೆಯುತ್ತಿದ್ದಂತೆಯೆ, ಅವಳ ಮುಖಮಂಡಲ ಭಾವಮಯವಾಗಿ ಕಾಂತಿಯುಕ್ತವಾಯಿತು.

ಅದನ್ನು ಗಮನಿಸಿ ಚಿನ್ನಮ್ಮ "ಏ ಯಾಕೇ, ಇಷ್ಟು ನಾಚಿಕೆ ನಿಂಗೆ? ಬೆರಳು ಮುಟ್ಟು ಅಂದ್ರೆ?" ಎಂದು ಅವಸರಪಡಿಸಿದಳು.

ಆಗ ಮಾಡಿದಂತೆ ಈಗಲೂ, ದೊಡ್ಡ ಬೆರಳೇ ಶುಭದ ನಿಧಿಯಾಗಿರಬೇಕು ಎಂದು ಭಾವಿಸಿ, ಪೀಂಚಲು ನೀಳವಾಗಿ ನಿಂತಿದ್ದ ಅದನ್ನೆ ಮುಟ್ಟಿದಳು. ಪಾಪ, ಅವಳಿಗೆ ಹೇಗೆ ಗೊತ್ತಾಗಬೇಕು, ಅದರ ಪರಿಣಾಮ ಅಷ್ಟೊಂದು ಭೀಕರವಾಗುತ್ತದೆ ಎಂದು?

ಶರತ್ಕಾಲದ ಸರೋವರದಂತೆ ಪ್ರಶಾಂತ ಸುಂದರವಾಗಿದ್ದ ಚಿನ್ನಮ್ಮನ ವದನರಂಗದಲ್ಲಿ ಇದ್ದಕ್ಕಿದ್ದಂತೆಯೆ ಭಯವಿಕಾರದ ತರಂಗಗಳೆದ್ದುವು. ಚಳಿಗಾಳವಾಗಿದ್ದೂ, ನೆರಳಿನಲ್ಲಿ ಕುಳಿತಿದ್ದೂ, ಕುಳಿರುಗಾಳಿ ಬೀಸುತ್ತಿದ್ದರೂ ಅವಳ ಹಣೆಯಲ್ಲಿ ಬೆವರಿನ ಹನಿ ಮೂಡಿದವು. ಉಸಿರು ಸುಯ್ಯುಸಿರಾಯಿತು, ಕಣ್ಣಲ್ಲಿ ಬಳಬಳನೆ ನೀರು ಉಕ್ಕಿ ಕೆನ್ನೆಗಳ ಮೇಲೆ ಹರಿದವು. ಹೆದರಿ ಕೂಗಿಕೊಂಡರೂ ದನಿ ಏಳಲಿಲ್ಲ. ಇನ್ನೇನು ಪ್ರಜ್ಞೆ ತಪ್ಪಿ ಬೀಳುತ್ತಾಳೆಯೊ ಏನೋ ಎಂಬಂತೆ ತತ್ತರಿಸುತ್ತಿದ್ದ ಅವಳನ್ನು ಕಂಡು, ಬೆಬ್ಬಳಿಸಿ “ಅಯ್ಯೋ ಚಿನ್ನಕ್ಕಾ, ಏನಾಯ್ತು? ಏನಾಯ್ತು?” ಎಂದು ಚೀತ್ಕರಿಸಿ, ದಿಗಿಲು ಬಡಿದಿದ್ದ ಪೀಂಚಲು ತನ್ನ ಗರ್ಭಸ್ಥೂಲತೆಯನ್ನೂ ಮರೆತು ಚಂಗನೆ ನೆಗೆದದ್ದು ಚಿನ್ನಮ್ಮನನ್ನು ಆತುಕೊಂಡಳು. ನಾಗಕ್ಕನೂ ಓಡಿಬಂದು ಹಿಡಿದುಕೊಂಡಳು.

ಪೀಂಚಲು ಪಕ್ಕದಲ್ಲಿಯೆ ಹರಿಯುತ್ತಿದ್ದ ತೋಟದ ಕಪ್ಪಿನ ನೀರನ್ನು ಬೊಗಸೆಯೆತ್ತಿ ತಂದು, ನಾಗಕ್ಕ ಹೇಳಿದಂತೆ ನೆತ್ತಿಗೂ ಹಣೆಗೂ ಚಿಮುಕಿಸಿದಳು. ಸೆರಗಿನಿಂದ ಗಾಳಿ ಬೀಸಿದಳು. ಅವರು ಕುಳಿತಿದ್ದ ಜಾಗದಲ್ಲಿ ಕಸಕಡ್ಡಿ ಜಿಗ್ಗು ಹಳು ತುಂಬಿದ್ದರಿಂದ ಆ ಸದೆಯಲ್ಲಿ ಎಲ್ಲಿಯಾದರೂ ಅಡಗಿದ್ದ ಹಾವು ಗೀವು ಕಚ್ಚಿತೋ ಎಂದು ಹುಡುಕಿ ನೋಡಿದರು.

ಸ್ವಲ್ಪ ಹೊತ್ತಿನ ಮೇಲೆ ಚಿನ್ನಮ್ಮ ಚೇತರಿಸಿಕೊಂಡಳು! ಆದರೆ ಯಾವ ಪ್ರಶ್ನೆಗೂ ಉತ್ತರ ಕೊಡಲಿಲ್ಲ. ಅಗಲವಾಗಿ ತೆರೆದಿದ್ದ ಕಣ್ಣುಗಳಲ್ಲಿಯೂ ಮುಖಭಂಗಿಯಲ್ಲಿಯೂ ತುಸು ಹೊತ್ತಿನ ಹಿಂದೆ ತಾಡಿತವಾಗಿದ್ದ ಭೀತಿಯ ಭಾವ ತನ್ನ ಮುದ್ರೆಯನ್ನೊತ್ತಿ ಬಿಟ್ಟಿತ್ತು. ಕಣ್ಣೀರು ಉಕ್ಕಿದಂತೆಲ್ಲ ಸೆರಗಿನಿಂದ ಒರಸಿಕೊಳ್ಳುತ್ತಿದ್ದಳು.

“ಐತ ಹೇಳುತ್ತಿದ್ದ, ಅಮ್ಮಾ: ಇಲ್ಲಿ ಹಗಲು ಹೊತ್ತಿನಲ್ಲಿ ಏನೋ ಒಂದು ತಿರುಗುತ್ತದೆಯಂತೆ!....” ಪ್ರಾರಂಭಿಸಿದಳು ಪೀಂಚಲು.

ರೇಗಿ ಅವಳ ಬಾಯಿ ಮುಚ್ಚಿಸಿದಳು ನಾಗಕ್ಕ: “ಸಾಕು ಸುಮ್ಮನಿರೆ!... ಎಷ್ಟು ಸಾರಿ ಹೇಳಬೇಕೆ ನಿನಗೆ ನಾನು? ಬೆರಳೂ ಗಿರಳೂ ಮುಟ್ಟಿ, ಸಕುನ ಗಿಕುನ ನೋಡೋ ಆಟ ಆಡಬಾರದು ಅಂತಾ?.... ಏಳಿ, ಹೋಗಾನ ಮನೆಗೆ.... ಸಾಕು ನೀವು ಕಡಿದಿದ್ದು, ಕೆಲಸ!”

“ಏನು? ಎಂತು?” ಎಂಬುದು ಹೊಳೆಯದಿದ್ದರೂ “ಏಕೆ?” ಎಂಬುದನ್ನು ಊಹಿಸಿದ್ದಳು ನಾಗಕ್ಕ. ತನ್ನ ಇನಿಯನಿಗೆ ಸಂಬಂಧಪಟ್ಟಹಾಗೆ ಏನನ್ನೊ ಸಂಕಲ್ಪಿಸಿ, ಬೆರಳು ಮುಟ್ಟಿಸಿದ್ದಳು ಚಿನ್ನಮ್ಮ. ಅದು ಶುಭಕ್ಕೆ ವ್ಯತಿರಿಕ್ತವಾಗಿ, ಕೇಡಿನ ಕಡೆಗೇ ಇತ್ಯರ್ಥ ಹೇಳಿದ್ದರಿಂದ ಅವಳ ಮೃದು ಮುಗ್ಧ ಆಶಾಪೂರ್ಣ ಚೇತನ ತತ್ತರಿಸಿ ಹೋಗಿತ್ತು.

ಮನೆಗೆ ಹಿಂತಿರುಗುತ್ತಾ ದಾರಿಯಲ್ಲಿ ನಾಗಕ್ಕ ಚಿನ್ನಮ್ಮಗೆ ಧೈರ್ಯ ಹೇಳಿದಳು: “ತಂಗೀ, ನಾ ಹೇಳೋ ಮಾತನ್ನ ಸೆರಗಿನಲ್ಲಿ ಗಂಟುಹಾಕಿ ಕೊಂಡಿರು: ಇವೊತ್ತಲ್ಲ ನಾಳೆ, ನಾಳೆ ಅಲ್ಲ ಮುಂದೆ: ನಿನ್ನ ಒಳ್ಳೆಯದಕ್ಕೇ ನಾ ಹೇಳ್ತಿದ್ದೀನಿ:

ನಿನ್ನ ಗಂಡನೇ ಆಗಲಿ, ನಂಟರಿಷ್ಟರು ಯಾರೇ ಆಗಲಿ, ಮನೆ ಬಿಟ್ಟು ಕೆಲಸಕ್ಕೆ ಹೊರಗೆ ಹೋದಾಗ, ನೀನು "ಕೆಟ್ಟದ್ದಾಗಿಬಿಟ್ಟರೆ ಏನು ಗತಿ?" ಅಂತಾ ಅಮಂಗಳಾನೇ ನೆನೆದು ಹೆದರ್ತಾ ಕೂತರೆ ಖಂಡಿತಾ ಒಳ್ಳೆದಲ್ಲ. ಅದಕ್ಕೆ ಬದಲಾಗಿ ಅವರಿಗೆ ಒಳ್ಳೇದಾಗ್ತದೆ; ಅವರು ಸುಖವಾಗಿ ಮನೆಗೆ ಬರ್ತಾರೆ" ಅಂತಾ ದೇವರನ್ನು ನೆನೀತಿದ್ರೆ, ಒಳ್ಳೇದು ಆಗೇಆಗ್ತದೆ.

ನಾಗಕ್ಕನ ಹಿತವಚನ ಚೆನ್ನಮ್ಮಗೆ ತನ್ನ ಮುಕುಂದ ಬಾವ ಜೈಮಿನಿ ಭಾರತ ಓದಿ ಕಥೆ ಹೇಳುತ್ತಿದ್ದಾಗ ಹೇಳಿದ್ದನ್ನೆ ನೆನಪಿಗೆ ತಂದಿತ್ತು. ತಾನು ಎಂಥಾ ತಪ್ಪು ಮಾಡುತ್ತುದ್ದೆ ಎಂದು ತನ್ನನ್ನು ತಾನೆ ಬೈದುಕೊಂಡಳು. ಈ ಅಮಂಗಳಾಶಂಕೆ ಆಕೆಯ ಬದುಕನ್ನೆ ಕೊರೆಯುತ್ತಿದ್ದ ಒಂದು ಕೆಟ್ಟ ಕೀಟಚಾಳಿಯಾಗಿತ್ತು. ಅವಳು ಹಗಲೆಲ್ಲ ತಾನು ಬಲ್ಲಂತೆ ಭಗವಂತನನ್ನು ನೆನೆಯುತ್ತಾ, ಮುಕುಂದ ಭಾವ ಯಾವ ಆಮಂಗಳ ಕಾರ್ಯವನ್ನೂ ಮಾಡದೆ, ಯಾವ ಅಮಂಗಳಕ್ಕೂ ಒಳಗಾಗದೆ, ಬೈಗಿಗೆ ಸುರಕ್ಷಿತವಾಗಿ ಮನೆಗೆ ಬರಲಿ ಎಂದು ಹಾರೈಸುತ್ತಾ ಇದ್ದು, ಮುಚ್ಚಂಜೆ ಕಪ್ಪಾಗಲು ಅಂಗಳದ ತುಳಸೀ ದೇವರಿಗೆ ದೀಪ ಹಚ್ಚಿಟ್ಟು, ಕೈಮುಗಿದು ಎರಡು ಸುತ್ತು ಬಂದು, ಅಡ್ಡಬಿದ್ದಳು.

ಅಡ್ಡಬಿದ್ದವಳು ಬಹಳ ಹೊತ್ತು ಮೇಲೇಳಲಿಲ್ಲ. ಅವಳ ಮನಸ್ಸಿಗೆ ತನ್ನ ಮೈಯಲ್ಲಿ ಏನೋ ಆಗುತ್ತಿರುವಂತೆ ಅನುಭವವಾಗಿ, ದೇವರ ಬಳಿಯ ತುಳಸಿಯ ಮುಂದೆ ಅದಾಗಿಬಿಟ್ಟರೆ ಮೈಲಿಗೆ ಆಗುತ್ತದೆಂದು ಹೆದರಿ, ಬೇಗಬೇಗನೆ ಜಗಲಿಗೇರಿ ಒಳಕ್ಕೆ ಹೋಗುವುದಕ್ಕೆ ಬದಲಾಗಿ, ಕೆಳಗರಡಿಯಲ್ಲಿದ್ದ ಮುರುವಿನ ಒಲೆಯ ಪಕ್ಕದಲ್ಲಿಟ್ಟಿದ್ದ ಅಕ್ಕಿಕಲಬಿಯ ಮರೆಗೆ ಹೋದಳು.

ಜಗಲಿಯ ಮೇಲಿದ್ದು, ಮೊಮ್ಮಗಳು ದೇವರಿಗೆ ಬಲಗೊಂಡು ಅಡ್ಡ ಬೀಳುತ್ತಿದ್ದ ದಿವ್ಯದೃಶ್ಯವನ್ನು ಆಶೀರ್ವಾದ ತುಂಬಿದ ಹೃದಯದಿಂದ ಕಣ್ಣುತೊಯ್ದು ನೋಡುತ್ತಿದ್ದ ಚೆನ್ನಮ್ಮನ ಅಜ್ಜಿ, ತನ್ನ ಪಕ್ಕದಲ್ಲಿ ನಿಂತಿದ್ದ ನಾಗಕ್ಕಗೆ "ಯಾಕೆ?... ಹುಡುಗಿ ಅತ್ತಲಾಕಡೆ ಹೋದ್ಲು?..." ಎಂದು ಸೋಜಿಗವೊರೆದಳು.

ನಾಗಕ್ಕ ಕರೆದಳು, ಚೆನ್ನಮ್ಮ ಓಕೊಂಡರೂ, ಜಗಲಿಗೆ ಬರಲಿಲ್ಲ.

ನಾಗಕ್ಕ ಕಲಬಿಯಿದ್ದ ಜಾಗಕ್ಕೆ ಇಳಿದುಹೋಗಿ, ತುಸು ಹೊತ್ತು ಪಿಸಿಪಿಸಿ ಮಾತನಾಡಿ ಹಿಂದಕ್ಕೆ ಬಂದವಳು ಅಜ್ಜಿಗೆ "ಏನೂ ಇಲ್ಲಂತೆ, ಅಜ್ಜಮ್ಮ.... ಚೆಂಬು, ಚಾಪೆ, ಕಂಬಳಿ ತಂದುಕೊಡಾಕೆ ಹೇಳ್ತು" ಎನ್ನುತ್ತಾ ಚೆನ್ನಮ್ಮ ಮಲಗುತ್ತಿದ್ದ ಅಜ್ಜಿಯಕೋಣೆಗೆ ನಡೆದಳು.

ಅಜ್ಜಿಗೆ ಅರ್ಥವಾಯ್ತು. ಆ ಮುರುವಿನ ಒಲೆಯ ಪಕ್ಕದಲ್ಲಿ, ಎತ್ತರವೂ ದೊಡ್ಡದೂ ಆಗಿದ್ದ ಅಕ್ಕಿಕಲಬಿಯಿಂದ ಮರೆಕಟ್ಟಿದಂತಿದ್ದ, ಕೆಳಗರಡಿಯ ಆ ಜಾಗದಲ್ಲಿ ಇಂದು ಚೆನ್ನಮ್ಮ ಮುಟ್ಟಾಗಿ, ಮೂರು ದಿನಗಳೂ, ಹಗಲೂ ರಾತ್ರಿಯೂ, ಕುಳಿತೂ ಎದ್ದೂ ಮಲಗಿಯೂ ಹರಟೆ ಹೊಡೆದೂ ಆಕಳಿಸಿಯೂ ನಿದ್ದೆಮಾಡಿಯೂ ಕಳೆಯಲಿರುವಂತೆ, ಚೆನ್ನಮ್ಮನ ತಾಯಿಯೂ ಚೆನ್ನಮ್ಮನ ಅಜ್ಜಿಯೂ ಚೆನ್ನಮ್ಮನ ಮುತ್ತಜ್ಜಿಯೂ, ಅವಳಜ್ಜಿಯ ಅಜ್ಜಿಯ ಅಜ್ಜಿಯೂ ನೂರಾರು ವರ್ಷಗಳಿಂದಲೂ, ಅವರು ಹೊರಗಾಗಿದ್ದಾಗಲೆಲ್ಲ, ಸಲಕ್ಕೆ ಮೂರು ಮೂರು ದಿನಗಳಂತೆ, ಬೀಡುಬಿಟ್ಟು

ಕಳೆದಿದ್ದರು! ಈಗಲೂ ವಯೋಧರ್ಮದಿಂದ ಅಜ್ಜಿಗೆ ಆ ತೊಂದರೆ ತಪ್ಪಿದ್ದರೂ ನಾಗಕ್ಕಗೆ ಇನ್ನೂ ತಪ್ಪಿರಲಿಲ್ಲವಷ್ಟೇ?….

ಕತ್ತಲಾಗುವವರೆಗೆ ತಕ್ಕಮಟ್ಟಿಗೆ ಧೈರ್ಯದಿಂದಲೆ ಇತ್ತು, ಚೆನ್ನಮ್ಮನ ಚೈತನ್ಯ. ಬೈಗುಕಪ್ಪಾಗುತ್ತಾ ಬಂದಂತೆಲ್ಲ ಅವಳ ಪ್ರತೀಕ್ಷೆ ತೀಕ್ಷ್ಣವಾಗತೊಡಗಿತು. ಮತ್ತೆ ಮತ್ತೆ ಹೆಬ್ಬಾಗಿಲಾಚೆಗೆ ಹೋಗಿ ಹಾದಿಯ ಕಡೆಗೆ ನೋಡುತ್ತಿದ್ದಳು. ಪೂರ್ತಿ ಕತ್ತಲು ಕವಿದ ಮೇಲೂ ಮುಕುಂದಯ್ಯ ಹಿಂತಿರುಗದಿದ್ದುದನ್ನು ನೋಡಿ, ಅವಳ ಅಮಂಗಳಾಶಂಕೆ ಬಿಸಿಯಾಗುತ್ತ ಬಂದು ಕುದಿಯತೊಡಗಿತು.

ಮನೆಗೆ ಅಂಟಿಕೊಂಡಂತಿದ್ದ ಕೊಟ್ಟಿಗೆಯ ಮೂಲೆಯ ತನ್ನ ಬಿಡಾರದಲ್ಲಿ ಅಡುಗೆಮಾಡಿಟ್ಟು, ತನ್ನ ಗಂಡ ಬಂದ ಮೇಲೆ ಅವನೊಡನೆಯೆ ಉಣ್ಣುವ ಆಶೇಯಿಂದ, ಬಿಡಾರದ ಬಾಗಿಲು ಮುಚ್ಚಿಕೊಂಡು ಪೀಂಚಲು ಮನೆಗೆ ಬಂದಿದ್ದಳು. ಐತನಿಲ್ಲದ ರಾತ್ರಿಗಳಲ್ಲಿ ಪೀಂಚಲು ತನ್ನ ಬಿಡಾರದಲ್ಲಿ ಒಬ್ಬಳೆ ಮಲಗಲು ಅಂಜಿಕೆಯಾಗಿ ಮನೆಗೇ ಬಂದು, ಮನೆಗೆಲಸದ ಮುದುಕಿ ಸುಬ್ಬಿ ಯಾವಾಗಲೂ ಮಲಗುತ್ತಿದ್ದ ಅಕ್ಕಿ ಕಲಬಿಯ ಮೂಲೆಯಲ್ಲಿಯೆ ಮಲಗುತ್ತಿದ್ದುದು ರೂಢಿ. ಇವತ್ತು ಚೆನ್ನಕ್ಕನೂ ಅಲ್ಲಿಯೆಮಲಗುವಂತಾಗಿದ್ದುದನ್ನು ಕೇಳಿ ಅವಳಿಗೆ ತುಂಬಾ ಸಂತೋಷವಾಯ್ತು, ವಿನೋದಕ್ಕೂ ಮಾತಿಗೂ ಹೆಚ್ಚು ಕಡಿಮೆ ಸಮಸಮ ವಯಸ್ಸಿನ ಸಂಗಾತಿಯ ಸಖೀಸಂಗ ದೊರೆತಿದ್ದಕ್ಕಾಗಿ.

ಆದರೆ ಇವೊತ್ತಿನ ಪರಿಸ್ಥಿತಿ ಬೇರೆಯಾಗಿತ್ತು. ಚೆನ್ನಮ್ಮನ ಮನಃಸ್ಥಿತಿ ವಿನೋದಕ್ಕಾಗಲಿ ಪಟ್ಟಂಗಕ್ಕಾಗಲಿ ಸ್ವಲ್ಪವೂ ಸಿದ್ಧವಾಗಿರಲಿಲ್ಲ. ಒಂದೆರಡು ಸಾರಿ ಪೀಂಚಲು ಮಾಡಿದ ಪ್ರಯತ್ನವೂ ವಿಫಲವಾಗಿತ್ತು. ಅದು ಅಷ್ಟಕ್ಕೇ ನಿಂತಿರಲೂ ಇಲ್ಲ. ಚೆನ್ನಮ್ಮ ತನ್ನ ಪ್ರಿಯತಮನ ಆಗಮನ ನಿರೀಕ್ಷೆಯಿಂದಲೂ ಅಮಂಗಳಾಶಂಕೆಯಿಂದಲೂ ಕುದಿಯುತ್ತಿದ್ದಾಳೆ ಎಂಬುದನ್ನು ಗ್ರಹಿಸಿದ ಅನಂತರ ಆ ಉದ್ವೇಗ ಪೀಂಚಲಿಗೂ ತಟ್ಟಲಾರಂಭಿಸಿತು. ಒಮ್ಮೆ ಚೆನ್ನಮ್ಮ ಹೆಬ್ಬಾಗಿಲಾಚೆ ಹೋಗಿ ಬಂದು ನಿಟ್ಟುಸಿರು ಬಿಟ್ಟು, ತನಗೆ ತಾನೆ ಎಂಬಂತೆ "ತಮಗೆ ಬರಾಕೆ ತಡಾಗ್ತದೆ ಅಂತಾ ಗೊತ್ತಾದಮೇಲೆ ಐತನ್ನಾದ್ರೂ ಕಳಿಸಬಾರ್ದಿತ್ತೇ? ಸುಖಾ ಸುಮ್ಮನೆ ನಮ್ಮ ಹೊಟ್ಟೆ ಉರಿಸಾಕೆ?" ಎಂದು ಸಿಡುಕಿಕೊಂಡದ್ದನ್ನು ಆಲಿಸಿದ ಪೀಂಚಲಿಗೂ ಯಾಕೋ ಹೆದರಿಕೆಯಾದಂತಾಗಿ, ಸುಯ್ದೇರಿ, ಕಣ್ಣು ಒದ್ದೆಯಾಗಿತ್ತು: ಅವಳ ಹೊಟ್ಟೆಯಲ್ಲಿದ್ದು ಆಗಲೆ ಅಲ್ಪಸ್ವಲ್ಪ ಚಲನೆಗೂ ಷುರು ಮಾಡಿದ್ದ ಐತನ ಕಂದಮ್ಮ ತನ್ನ ಅಸ್ತಿತ್ವವನ್ನು ಅಬ್ಬೆಗೆ ಸುಪ್ರಕಟವಾಗಿಯೆ ತಿಳಿಸುವಂತೆ ಒದ್ದಾಡಿಕೊಂಡಿತ್ತು, ಕುಮುಟಿತ್ತೆಂಬಂತೆ!….

ರಾತ್ರಿ ಊಟದ ಹೊತ್ತಾಗಲು ನಾಗಕ್ಕ ಹಿತ್ತಲುಕಡೆಗೆ ಬಾ ಎಂದು ಊಟಕ್ಕೆ ಎಬ್ಬಿಸಿದಾಗ ಚೆನ್ನಮ್ಮ ತನಗೆ ಹಸಿವಾಗುತ್ತಿಲ್ಲ ಎಂದು ಹೇಳಿ ಮುಸುಗುಹಾಕಿಕೊಂಡು ಮಲಗಿಬಿಟ್ಟಿದ್ದಳು. ಅವಳಿಗೆ ತುಸು ದೂರದಲ್ಲಿ ಮಲಗಿದ್ದ ಪೀಂಚಲು, ತನಗೆ ಹಸಿವಾಗಿದ್ದರೂ, ಚೆನ್ನಮ್ಮ "ಬಿಡಾರಕ್ಕೆ ಹೋಗಿ ಉಂಡುಕೊಂಡು ಬಾರೆ" ಎಂದು ಒಂದೆರಡು ಸಾರಿ ಹೇಳಿದ್ದರೂ, "ಅವರು ಬಂದಮ್ಯಾಲೇ ಹೋಗ್ತೀನಿ" ಎಂದು ಮಲಗಿದ್ದಳು. ಚೆನ್ನಮ್ಮಗೆ ಗೊತ್ತಿತ್ತು, ಚೊಚ್ಚಲು ಬಸಿರಿ ಪೀಂಚಲು ತನ್ನ ಹಾಗೆ ಹಸಿದುಕೊಂಡಿರಲಾರಳು ಮತ್ತು ಹಸಿದಿರಲೂ ಬಾರದು ಎಂದು. ಆದರೆ, ಯಾವಾಗಲೂ ಲಘುವಾಗಿ ವಿನೋದಶೀಲೆಯಾಗಿರುತ್ತಿದ್ದ ಪೀಂಚಲಿಗೂ ಚೆನ್ನಮ್ಮನ ಅಮಂಗಳಾ ಶಂಕೆಯ ಆವೇಗ ತಟ್ಟಿಬಿಟ್ಟಿತ್ತು.

ಅಜ್ಜಿ ಕಾದೂ ಕಾದೂ, ಉಣ್ಣುವ ಶಾಸ್ತ್ರ ಮುಗಿಸಿ, ಮಲಗುವ ಕೋಣೆಗೆ ಹೋಗಿದ್ದಳು. ನಾಗಕ್ಕಗೆ ಹಸಿವೆಯಾಗಿದ್ದರೂ ದುಡಿದು ದಣಿದಿದ್ದರೂ ಉಣ್ಣುವ ಮನಸ್ಸಾಗದೆ ಜಗಲಿಗೆ ಬಂದು, ಕೆಸರು ಹಲಗೆಯ ಮೇಲೆ ಮಂಡಿಗೆಗೆ ಒರಗಿ ಕುಳಿತು, ಅಂಗಳದ ತುಳಸಿಯ ದೇವರಿಗೆ ಹಚ್ಚಿಟ್ಟಿದ್ದ ನೀಲಾಂಜನಗಳಲ್ಲಿ ಡೋಲಾಯಮಾನವಾಗಿ ಉರಿಯುತ್ತಿದ್ದ ಕೆಂಜೊಡರುಗಳ ಕಡೆಗೆ ನೋಡುತ್ತಾ, ಆ ದಿನ ನಡೆದ ಸಂಗತಿಗಳನ್ನು ಮೆಲಕುಹಾಕುತ್ತಾ, ಮುಕುಂದಯ್ಯನ ಆಗಮನವನ್ನೇ ಕಾತರತೆಯಿಂದ ಪ್ರತೀಕ್ಷಿಸುತ್ತಾ ಕುಳಿತಿದ್ದಳು. ಹಗಲು ಅಡಕೆ ತೋಟದಲ್ಲಿ ಅವಳು ಚಿನ್ನಮ್ಮಗೆ ಬುದ್ಧಿ ಹೇಳಿ, ಕೊಟ್ಟಿದ್ದ ಧೈರ್ಯ ಈಗ ಅವಳಿಗೇ ಅಷ್ಟಾಗಿರಲಿಲ್ಲ: ಏನಾದರೂ ನಡೆಯಬಾರದ್ದು ನಡೆದಿದ್ದರೆ? ಆಗಬಾರದ್ದು ಆಗಿದ್ದರೆ? ಏನು ಗತಿ? ಯಾಕೆ ಇಷ್ಟು ರಾತ್ರಿಯಾದರೂ ಇನ್ನೂ ಬರಲಿಲ್ಲ.... ಅಷ್ಟರಲ್ಲಿ ಹೊರಗಡೆ ನಾಯಿ ಬೊಗಳಿದವು. ನಾಗಕ್ಕ "ಅಂತೂ ಬಂದರಲ್ಲಾ?" ಎಂದು ದೀರ್ಘವಾಗಿ ಉಸಿರೆಳೆದು ಎದ್ದು ನಿಂತಳು. ಹೆಬ್ಬಾಗಿಲು ತಟ್ಟಿದ ಸದ್ದಾಯಿತು. ಐತನ ದನಿ ಕೇಳಿಸಿತು.

"ಸುಬ್ಬೀ. ಬಾಗಿಲು ತೆಗಿಯೆ" ಕೂಗಿ ಹೇಳಿದಳು ನಾಗಕ್ಕ.

ಮುದುಕಿ ಸುಬ್ಬಿ ಉರಿಯುತ್ತಿದ್ದ ಮುರುವಿನೊಲೆಯ ಪಕ್ಕದಲ್ಲಿ ಹೆಬ್ಬಾಗಿಲಿಗೆ ಸಮೀಪವೆ ಮಲಗಿದ್ದಳು. ಅನುದ್ವಿಗ್ನ ಭಂಗಿಯಲ್ಲಿ, ನಿಧಾನವಾಗಿ ಎದ್ದು, ತಾಳ ತೆಗೆದು, ಬಾಗಿಲು ಎಳೆಯತೊಡಗಿದಳು. ಆದರೆ ದಿಮ್ಮಿಗಳಂತಹ ಹಲಗೆಗಳಿಗೆ ಕಬ್ಬಿಣದ ದಪ್ಪ ಪಟ್ಟಿಗಳನ್ನು ಜೋಡಿಸಿ ಮಾಡಿದ್ದ ಆ ಹೆಬ್ಬಾಗಿಲು ಮುದುಕಿಗೆ ಜಗ್ಗಲಿಲ್ಲ, ಅತ್ತ ಕಡೆಯಿಂದ ಐತ ನೂಕುತ್ತಿದ್ದರೂ! ಮುಕುಂದಯ್ಯನೂ ಐತನಿಗೆ ನೆರವಾಗಿ ಅತ್ತ ಕಡೆಯಿಂದ ನೂಕಿದ ಮೇಲೆಯೆ ಹೆಬ್ಬಾಗಿಲು ಕಿರೇಂದು ತೆರೆಯಿತು... ನಾಗಕ್ಕ ಅಡುಗೆ ಮನೆಗೆ ನಡೆದಳು.

"ಐತಾ, ಆ ಕೋಳೀನ ಅಕ್ಕಿ ಕಲಬಿಗೆ ಹಾಕಿಡೋ; ನಾಳೆ ಬೆಳಿಗ್ಗೆ ಸರಿಮಾಡಿ ಕೊಡಬಹುದು" ಎನ್ನುತ್ತಾ ಮುಕುಂದಯ್ಯ ಒಳಗೆ ಬಂದು, ಕೋವಿಯನ್ನು ಜಗಲಿಯ ಒಂದು ಮೂಲೆಗೆ ಒರಗಿಸಿಟ್ಟು, ಬಟ್ಟೆ ಬಿಚ್ಚಿಡತೊಡಗಿದನು.

ಮುಳ್ಳಿನ ಹಾಸಗೆಯ ಮೇಲೆ ಮಲಗಿದ್ದ ಚಿನ್ನಮ್ಮಗೆ ಸಂಪೂರ್ಣ ಎಚ್ಚರಿತ್ತು. ಅಳುತ್ತಿದ್ದ ಕಣ್ಣು ಒಂದು ಚಣವೂ ಮುಚ್ಚಿರಲಿಲ್ಲ. ನಾಯ ಕೂಗಿ, ಬಾಗಿಲು ತಟ್ಟಿ, ಐತನ ದನಿ ಕೇಳಿಸಿದಾಗಲೆ ಅವಳ ಎದೆಯ ಮೇಲಿದ್ದ ಭಾರವೆಲ್ಲ ತೊಲಗಿದಂತಾಗಿತ್ತು. ಮುಕುಂದಯ್ಯ ಒಳಗೆ ಬಂದು, ಐತನಿಗೆ ಕೋಳಿಯನ್ನು ಅಕ್ಕಿ ಕಲಬಿಯೊಳಗೆ ಇಡಲು ಹೇಳಿದ ಅವನ ಇಷ್ಟಪ್ರಿಯ ಕಂಠಧ್ವನಿ ಕಿವಿಗೆ ಬಿದ್ದೊಡನೆ ಚಿನ್ನಮ್ಮನ ಚೇತನ ಗರಿಹಗುರವಾಗಿ, ಹೆದೆ ತುಂಡಾದ ಬಿಲ್ಲಿನ ಸೆಟೆತವೆಲ್ಲ ತೊಲಗಿ ಅದರ ದಂಡವು ನೆಟ್ಟಗಾಗಿ ವಿರಾಮಭಂಗಿಯಲ್ಲಿ ಮಲಗುವಂತೆ, ಒಂದೆರಡು ನಿಮಿಷಗಳಲ್ಲಿಯೆ ಆನಂದ ಮೂರ್ಛೆಯೊ ಎಂಬಂತಹ ಗಾಢನಿದ್ರೆಗೆ ಮುಳುಗಿಬಿಟ್ಟಳು! ನರಕ ನಾಕಗಳಿಗೆ ಅದೆಷ್ಟು ಅಲ್ಪಾಂತರವೊ ವಿರಹ ಮಿಲನ ನಾಟಕದಲ್ಲಿ?

ಮುಕುಂದಯ್ಯ ಕೈಕಾಲು ತೊಳೆದುಕೊಂಡು, ತುಳಸಿಕಟ್ಟೆಗೆ ಬಲವಂದು ಅಡ್ಡಬಿದ್ದು, ಅಡುಗೆ ಮನೆಗೆ ಹೋಗಿ ಮಣೆಯ ಮೇಲೆ ಅಂಡೂರಿ ಕುಕ್ಕುರುಗಾಲಲ್ಲಿ ರೂಢಿಯಂತೆ ಊಟಕ್ಕೆ ಕುಳಿತನು. ನಾಗಕ್ಕ ಬಾಳೆ ಎಲೆ ಹಾಕಿ ಬಡಿಸಿದಳು. ಉಣ್ಣುತ್ತಾ ನಾಗಕ್ಕನೊಡನೆ ಮನೆ ಗೆದ್ದ ತೋಟಗಳಲ್ಲಿ ನಡೆದ ಆ ದಿನದ ಕೆಲಸಗಳ ವಿಚಾರವಾಗಿ ಆಗೊಂದು ಈಗೊಂದು ಪ್ರಶ್ನೆ ಹಾಕಿ ಮಾತನಾಡಿದನು. ಆದರೆ ಅವನು ಅತ್ತ ಇತ್ತ ಕಣ್ಣು ಹಾಯಿಸುತ್ತಿದ್ದ

ರೀತಿಯಿಂದಲೂ, ಮಾತಿನ ಮಧ್ಯೆ ನಿಲ್ಲಿಸಿ ನಿಲ್ಲಿಸಿ ಏನನ್ನೊ ಆಲಿಸಲೆಳಸಿ ಸುಮ್ಮನಾಗುತ್ತಿದ್ದ ಭಂಗಿಯಿಂದಲೂ, ಒಟ್ಟಿನಲ್ಲಿ ಅವನಲ್ಲಿ ತೋರುತ್ತಿದ್ದ ಅಸಮಾಧಾನ ಭಾವದಿಂದಲೂ, ಅವನು ಚಿನ್ನಮ್ಮ ಕಾಣಿಸದಿದ್ದುದಕ್ಕಾಗಿಯೆ ಚಡಪಡಿಸುತ್ತಿದ್ದಾನೆ ಎಂಬುದು ಇಂಗಿತಜ್ಞೆ ನಾಗಕ್ಕಗೆ ಹೊಳೆಯಿತು. ಅವಳಿಗೆ ಹೊರಗಾಗಿದೆ ಎಂದು ನಾಗಕ್ಕ ಹೇಗೆ ಹೇಳುತ್ತಾಳೆ? ಅವನೇ ವಿಚಾರಿಸಿದರೆ ಹೇಳುತ್ತೇನೆ ಎಂದು ಕೊಂಡು ಸುಮ್ಮನಾದಳು. ಆದರೆ ಮುಕುಂದಯ್ಯಗೆ ನಿಮಿಷ ನಿಮಿಷಕ್ಕೂ ಅಸಮಾಧಾನ ಹೆಚ್ಚಾಗುತ್ತಾ ಹೋಯಿತು.

ಸಾಧಾರಣವಾಗಿ ಮುಕುಂದಯ್ಯ ಎಷ್ಟೇ ಹೊತ್ತಾಗಿ ಮನೆಗೆ ಬಂದರೂ ಚಿನ್ನಮ್ಮನ ಸ್ವಾಗತ ಸೇವೆ ಶುಶ್ರೂಷೆ ಸಲ್ಲಾಪಗಳು ತಪ್ಪುತ್ತಿರಲಿಲ್ಲ. ಅದರಲ್ಲಿಯೂ ಇವೊತ್ತು, ಮುಕುಂದಯ್ಯ ಏನೋ ಒಂದು ಅಪಾಯವಾಗಬಹುದಾಗಿದ್ದ ಸನ್ನಿವೇಶದಲ್ಲಿ ಸಿಕ್ಕಿಯೂ ಉಪಾಯದಿಂದ ಗೆದ್ದುಬಂದಿರುವಾಗ, ಚಿನ್ನಮ್ಮ ತನ್ನ ಆಗಮನವನ್ನು ಪ್ರತೀಕ್ಷಿಸದೆ, ನಿರ್ಲಕ್ಷಿಸಿ ನಿದ್ದೆ ಮಾಡಿಬಿಡ ಬಹುದೇ? ಬಹುಶಃ ತಾನು ಕತ್ತಲಾಗುವುದರೊಳಗೆ ಬರಲಿಲ್ಲ ಎಂದು ಮುನಿಸಿಕೊಂಡು, ತನ್ನನ್ನು ಶಿಕ್ಷಿಸುವ ಸಲುವಾಗಿ ಹೀಗೆ ಮಾಡಿರಬೇಕು! ಮಾಡಿದರೆ ಮಾಡಲಿ! ನಾನೂ ಮುನಿಸಿಕೊಳ್ಳಬಲ್ಲೆ.... ಇನ್ನು ಒಂದು ತಿಂಗಳೂ, ನಮ್ಮ ಮದುವೆ ಆಗುವವರೆಗೂ, ನಾನೂ ಅವಳೊಡನೆ ಮಾತುಬಿಡುತ್ತೇನೆ! ಆಗ ಗೊತ್ತಾಗುತ್ತದೆ ಅವಳಿಗೆ! ಅವಳಿಗೆ ಯಾವಾಗಲೂ ದಿಮಾಕು! ನಾನೇ ಯಾವಾಗಲೂ ಸೋಲಬೇಕೇನು? ತೋರಿಸ್ತೀನಿ ಅವಳಿಗೆ! ನಂಗೂ ಗೊತ್ತು ಸಿಟ್ಟುಮಾಡಿಕೊಳ್ಳೋಕೆ!....

ಮುಕುಂದಯ್ಯ ತನ್ನ ಸಿಗ್ಗನ್ನು ಆದಷ್ಟು ಮಟ್ಟಿಗೆ ಮುಚ್ಚಿಟ್ಟು ಕೊಳ್ಳಲು ಪ್ರಯತ್ನಿಸುತ್ತಾ ಊಟ ಮುಗಿಸಿ, ಎಂದಿನ ಪದ್ಧತಿಯಂತೆ ಜಗಲಿಯಲ್ಲಿ ಕುಳಿತು ಸ್ವಲ್ಪ ಹೊತ್ತು ರಾಗವಾಗಿ ಕಾವ್ಯ ಓದುವುದನ್ನೂ ತಿರಸ್ಕರಿಸಿ, ನೆಟ್ಟಗೆ ಮಲಗುವ ಕೋಣೆಗೆ ಹೋಗಿ ಬಾಗಿಲು ಮುಚ್ಚಿ ತಾಳಹಾಕಿಕೊಂಡನು. ಅವನು ತನ್ನ ನಿತ್ಯದ ಅಭ್ಯಾಸದಂತೆ ಸ್ವಲ್ಪ ಹೊತ್ತಾದರೂ ಜಗಲಿಯಲ್ಲಿ ಕೂತಿದ್ದರೆ, ತನ್ನ ಗಂಡ ಐತನ ಸಂಗಡ ಬಿಡಾರಕ್ಕೆ ಹೋಗಿ ಅವನೊಡನೆ ಉಂಡು ಪೂರೈಸಿ, ಅವನನ್ನೂ ಸಂಗಡ ಕರೆದುಕೊಂಡು ಮನೆಗೆ ಹಿಂತಿರುಗಿದ್ದ ಪೀಂಚಲು, ಹೊರಗಾದವರು ಮಲಗುತ್ತಿದ್ದ ಕಲಬಿಯ ಪಕ್ಕದ ಜಾಗದಲ್ಲಿ ಮಲಗುತ್ತಿದ್ದುದನ್ನಾಗಲಿ, ಆ ಜಾಗದಿಂದ ಬಹುದೂರವಿದ್ದ ಜಗಲಿಯ ತೆಣೆಯ ಮೇಲೆ ಐತನೊಬ್ಬನ ಮಲಗುವ ಚಾಪೆ ಬಿಚ್ಚಿಕೊಳ್ಳುತ್ತಿದ್ದುದನ್ನಾಗಲಿ ಗಮನಿಸದೆ ಇರಲಾಗುತ್ತಿರಲಿಲ್ಲ. ಬಿಡಾರದಲ್ಲಿ ಮಲಗಿಕೊಳ್ಳದೆ ಮನೆಯಲ್ಲಿ ಏಕೆ ಮಲಗುತ್ತಿದ್ದಾನೆ? ಎಂಬ ಮುಕುಂದಯ್ಯನ ಪ್ರಶ್ನೆಗೆ ಐತ ಹೇಳಬಹುದಾಗಿದ್ದ ಉತ್ತರದಲ್ಲಿ ಮುಕುಂದಯ್ಯನ ಎದೆಯ ಕುದಿದಾಟವೆಲ್ಲ ತಣ್ಣಗಾಗುತ್ತಿತ್ತು, ಚಿನ್ನಮ್ಮನ ಮೇಲಣ ಮುನಿಸೆಲ್ಲ ಮಾಯವಾಗಿ, ಸಮಾಧಾನದಿಂದ ಉಂಟಾಗುವ ಪ್ರಶಾಂತ ಮನಃಸ್ಥಿತಿಯಲ್ಲಿ ರಾತ್ರಿ ಅವನು ಚೆನ್ನಾಗಿ ನಿದ್ದೆಮಾಡಬಹುದಿತ್ತು.

ಆದರೆ?

ಆವೊತ್ತು ಬೆಳಗಿನಿಂದಲೂ ಮುಕುಂದಯ್ಯ ಮಾನಸಿಕ ಮತ್ತು ದೈಹಿಕ ಶ್ರಮಗಳಿಂದ ದಣಿದಿದ್ದನು. ಆದರೂ ದುಗುಡಕ್ಕೆ ಸಿಲಿಕಿದ ಚೇತನಕ್ಕೆ ನಿದ್ದೆ ಬರುತ್ತದೆಯೆ?

ಬಾಗಿಲು ಮುಚ್ಚಿ, ತಾಳವಿಕ್ಕಿ, ಮಲಗಿಕೊಂಡವನು ಸ್ವಲ್ಪ ಹೊತ್ತಿನಲ್ಲಿಯೆ ಎದ್ದು ತಾಳ ತೆಗೆದು, ಮತ್ತೆ ಮಲಗಿದನು: ಪಾಪ! ಹುಡುಗಿ ನಾನು ಬಂದಮೇಲೆ ಏಳೋಣ ಎಂದು ಮಲಗಿದ್ದವಳು ಹಾಗೆಯೆ ನಿದ್ದೆ ಹೋಗಿರಬಹುದು. ಫಕ್ಕನೆ ಎಚ್ಚರವಾಗಿ, ನಾನು ಬಂದು ಮಲಗಿರಬಹುದೆಂದು ಎಲ್ಲಿಯಾದರೂ ಬಂದರೆ? ಬಾಗಿಲು ತಳ್ಳಿ, ತಾಳ ಹಾಕಿರುವುದನ್ನು ನೋಡಿ, ಹಿಂದಕ್ಕೆ ಹೋಗಬೇಕಾಗಿ ಬಂದರೆ? ಎಷ್ಟು ದುಃಖಪಟ್ಟುಕೊಳ್ಳುತ್ತಾಳೊ? ಪ್ರಿಯೆಯ ಪರವಾಗಿ ತುಂಬ ಮೃದುವಾಯಿತು ಮುಕುಂದಯ್ಯನ ಮನಸ್ಸು.... ತಾನು ತುಂಬ ದಣಿದಿದ್ದುದರಿಂದಲೆ ಮುಂಗೋಪದಿಂದ ವರ್ತಿಸಿಬಿಟ್ಟೆ. ವಿಚಾರಿಸಿದ್ದರೆ ನಾಗಕ್ಕ ನಿಜಸ್ಥಿತಿ ಹೇಳುತ್ತಿದ್ದಳು.... ಆಃ ನನ್ನ ಚಿನ್ನಿ ಎಂಥ ಹುಡುಗಿ? ಏನು ಚೆಲುವೆ? ಎಷ್ಟು ಬುದ್ಧಿವಂತೆ? ನನಗಾಗಿ ಎಂಥೆಂಥ ಸಾಹಸ ಮಾಡಿಬಿಟ್ಟಿದ್ದಾಳೆ? ನಾನೆಂಥ ಕೃತಘ್ನ! ಮುಕುಂದಯ್ಯ ಚಿನ್ನಿಯೊಡನೆ ಮನೆಯಲ್ಲಿ, ಗದ್ದೆಯಲ್ಲಿ, ತೋಟದಲ್ಲಿ, ಹಾಡ್ಯದಲ್ಲಿ, ಹಾಡ್ಯದ ಮಾರಿಗುಡಿಯಲ್ಲಿ ಆಡಿದ ಆಟಗಳನ್ನೆಲ್ಲ ಮೆಲುಕುಹಾಕುತ್ತಾ ಸವಿದನು.... ರಾತ್ರಿ ಬಹಳ ಮುಂದುವರಿದರೂ ಬಾಗಿಲು ತೆರೆಯಲಿಲ್ಲ.

ಬಾಗಿಲು ಮುಚ್ಚಿದ್ದನ್ನು ನೋಡಿ ಹಿಂದಕ್ಕೆ ಹೋಗಿಬಿಟ್ಟಳೊ? ಛೇ? ಎಂಥ ಕೆಲಸ ಮಾಡಿಬಿಟ್ಟೆ? ಮುಕುಂದಯ್ಯ ಮತ್ತೊಮ್ಮೆ ಎದ್ದು, ಬಾಗಿಲನ್ನು ಅರ್ಧ ತೆಗೆದಿಟ್ಟು, ಮಲಗಿಕೊಂಡನು. ಹೊರಗಡೆಯ ಗಾಳಿ ನುಗ್ಗಿ ಕೋಣೆ ತುಸು ತಣ್ಣಗಾಯಿತು.

ಇವೊತ್ತೆ ಅಮಾಸೆ, ಮುಂದಿನ ಅಮಾಸೆ ಕಳೆದು ಎರಡೊ ಮೂರೊ ದಿನಗಳಲ್ಲಿ ನಮ್ಮ ಮದುವೆ! ಜೋಯಿಸರು ಅಮೃತ ಮೂಹೂರ್ತ ಇಟ್ಟುಕೊಟ್ಟಿದ್ದೀನಿ ಅಂತಾ ಹೇಳಿದ್ದಾರೆ. ಬ್ರಾಹ್ಮಣರಲ್ಲದವರಿಗೆ ಸಾಧಾರಣವಾಗಿ ನಿಶಾಲಗ್ನವನ್ನೆ ಇಟ್ಟುಕೊಡುವುದು ವಾಡಿಕೆಯಾಗಿದ್ದರೂ ನಮ್ಮ ಮದುವೆಗೆ ದಿವಾಲಗ್ನವನ್ನೆ ಇಟ್ಟುಕೊಟ್ಟಿದ್ದಾರೆ... ಅವರೂ ಜನಾಜನ ನೋಡಿ ಪಂಚಾಂಗ ನೋಡ್ತಾರೆ!.... ಥೂ ಇವೊತ್ತು ಅವಳು ಬರುವ ತರಾ ಕಾಣಾದಿಲ್ಲ... ಬಂದಿದ್ದರೆ ಏನಾಗುತ್ತಿತ್ತೊ?.... ಏನಾದರೂ ಆಗಿದ್ದರೂ ಏನು ಮಹಾ? ಇನ್ನೊಂದು ತಿಂಗಳಲ್ಲಿ ನಾನು ಗಂಡ, ಅವಳು ಹೆಂಡತಿ! ಆಮೇಲೆ ನಮಗೆ ಯಾರ ಮುಲಾಜು?... ಮತ್ತೆ ಮುಕುಂದಯ್ಯನ ಮನಸ್ಸಿನಲ್ಲಿ ಸಿಗ್ಗು ಹೊಗೆಯಾಡತೊಡಗಿತು.... ಇರಲಿ, ನಾನೂ ತೋರಿಸ್ತೀನಿ ಅವಳಿಗೆ! ಇನ್ನು ಒಂದು ತಿಂಗಳು ನಾನು ಅವಳ ಹತ್ತಿರ ಮಾತನಾಡಿದರೆ ನಾನು ಗಂಡಸೇ ಅಲ್ಲ! ಅವಳ ಗಂಡನಾದ ಮೇಲೆಯೇ ನಾನು ಅವಳ ಸಂಗಡ ಮಾತಾಡುವುದು! ಅದಕ್ಕೆ ಮೊದಲು ತುಟಿ ಪಿಟಿಕ್ಕೆನ್ನುವುದಿಲ್ಲ!....

ಅಂತೂ ಮುಕುಂದಯ್ಯನಿಗೆ ನಿದ್ದೆ ಹತ್ತುವುದರಲ್ಲಿ ಮುಕ್ಕಾಲು ಇರುಳು ಮುಗಿದಿತ್ತು. ಹಾಸಗೆಯ ಮೇಲೆ ಹೊರಳೀ ಹೊರಳೀ ಸಾಕಾಗಿ, ಆಕಳಿಸೀ ಆಕಳಿಸೀ ನಿದ್ದೆ ಹೋಗಿದ್ದನು.

ಬೆಳ್ಳಿಗ್ಗೆ ಮುಕುಂದಯ್ಯ ಎದ್ದು, ಅರ್ಧ ತೆರೆದೆ ಇದ್ದ ಕೋಣೆಯ ಬಾಗಿಲಲ್ಲಿ ನಿಂತು, ಅಂಗಳದ ತುಳಸಿದೇವರಿಗೆ ಕೈಮುಗಿದು, ಜಗಲಿಗೆ ಬಂದಾಗ ತೆಣೆಯಲ್ಲಿ ಮಲಗಿದ್ದ ಐತನನ್ನು ಕಂಡು ಅಚ್ಚರಿಗೊಂಡು ವಿಚಾರಿಸಿದನು.

“ಇದೇನೋ? ಇಲ್ಲಿ ಮಲಗೀಯ?”

“ಅವಳು ಬಿಡಾರದಲ್ಲಿ ಮಲಗಲಿಲ್ಲ; ಇಲ್ಲಿಗೇ ಬಂದಳು; ಅದಕ್ಕೇ ನಾನೂ ಇಲ್ಲಿಗೇ ಬಂದುಬಿಟ್ಟೆ” ಎದ್ದು ಕುಳಿತು ಚಾಪೆ ಸುತ್ತುತ್ತಾ ಹೇಳಿದನು ಐತ.

“ಯಾಕೋ? ನಿನ್ನ ಹೆಂಡ್ತಿಗೆ ಹುಷಾರಿಲ್ಲೇನೋ?” ಮಾಗಿಯ ಚಳಿಗೆ ಶಾಲನ್ನು ಬಿಗಿಯಾಗಿ ಹೊದ್ದುಕೊಳ್ಳುತ್ತಾ ಕೇಳಿದನು ಮುಕುಂದಯ್ಯ.

“ಹುಷಾರಿದ್ದಾಳೆ... ಹು ಹು ಹು! ಏನು ಚಳಿ!”

“ಮತ್ತೆ?”

“ನಾವು ಬರುವ ಮುನ್ನ ಚಿನ್ನಕ್ಕನ ಹತ್ತಿರವೆ ಮಲಗಿದ್ದಳು. “ನಾನು ಚಿನ್ನಕ್ಕನ ಕೂಡೆ ಮಲಗುತ್ತೇನೆ, ನೀನು ಬೇಕಾದರೆ ಜಗಲಿಯ ತೆಣೆಯಮೇಲೆ ಮಲಗಿಕೊ!” ಎಂದು ಬಿಟ್ಟಳಲ್ದಾ?”

ಕೆಳಗರಡಿಯಲ್ಲಿದ್ದ ಅಕ್ಕಿಕಲಬಿಯ ಪಕ್ಕದಲ್ಲಿ, ಕವಿದಿದ್ದ ಅರೆಗತ್ತಲಲ್ಲಿ ಚಿನ್ನಮ್ಮ ಪೀಂಚಲು ಮಾತಾಡುತ್ತಿದ್ದದ್ದೂ ಕೇಳಿಸಿತು. ಹೆಬ್ಬಾಗಿಲನ್ನು ತೆರೆದಿಡುವ ನೆವಮಾಡಿಕೊಂಡು ಮುಕುಂದಯ್ಯ ಅಲ್ಲಿಗೆ ಹೋಗಿ, ಹರಟೆ ಹೊಡೆಯುತ್ತಿದ್ದ ಅವರಿಬ್ಬರೂ ಬಲವಾಗಿ ಹೊದ್ದುಕೊಂಡು ತಂತಮ್ಮ ಹಾಸಗೆಯಲ್ಲಿದ್ದುದನ್ನು ಕದ್ದುನೋಡಿ, ನಡೆದಿದ್ದ ಸಂಗತಿ ಏನು ಎಂಬುದನ್ನು ಪ್ರತ್ಯಕ್ಷ ಮನದಟ್ಟು ಮಾಡಿಕೊಂಡನು. ಅವನ ಅಂತಃಕರಣದ ಆಕಾಶದಲ್ಲಿ ಕವಿದಿದ್ದ ಕಾರ್ಮೋಡವೆಲ್ಲ ಇದ್ದಕ್ಕಿದ್ದ ಹಾಗೆ ತೂರಿಹೋಗಿ, ಚೇತನಸಮಸ್ತವೂ ಸುಪ್ರಸನ್ನವಾದಂತಾಯಿತು: “ಅಯ್ಯೋ ದೇವರೆ, ಮೊದಲೇ ಗೊತ್ತಾಗಿದ್ದರೆ ಇಷ್ಟೆಲ್ಲಾ ಪಾಡುಪಡುವುದು ತಪ್ಪುತ್ತಿತ್ತಲ್ಲಾ!” ಎಂದುಕೊಂಡನು.

ಅಷ್ಟರಲ್ಲಿ ಮುಕುಂದಯ್ಯ ತೆರೆದಿಟ್ಟಿದ್ದ ಹೆಬ್ಬಾಗಿಲಾಚೆಗೆ (ಬಹುಶಃ ಸಣ್ಣ ಕೆಲಸಕ್ಕಿರಬೇಕು?) ಹೋಗಿದ್ದ ಐತ ಹು ಹು ಹು ಹು ಹು ಎನ್ನುತ್ತಾ ಒಳಗೆ ನುಗ್ಗಿ ಬಂದು ಮುರುವಿನೊಲೆಯ ಬಳಿಗೆ ಓಡಿ, ಚಳಿಕಾಯಿಸುತ್ತಾ ಕುಳಿತುಃ “ಹು ಹು ಹು! ಏನು ಚಳಿ, ಅಯ್ಯಾ? ಹು ಹು ಹು! ಕವಣ ಹೆಂಗೆ ಕರೀತಾ ಅದೆ? ಸೊಲ್ಪ ನೋಡಿ! ಹು ಹು ಹು!” ಎನ್ನುತ್ತಾ ಬೆಂಕಿಯ ಉರಿಯ ಹತ್ತಿರಕ್ಕೆ ಕೈ ಚಾಚಿದನು.

ಮುಕುಂದಯ್ಯ ಹೆಬ್ಬಾಗಿಲಾಚೆಗೆ ಕಣ್ಣುಹಾಯಿಸಿದಾಗ, ದಟ್ಟವಾಗಿ ಬೀಳುತ್ತಿದ್ದ ಮಾಗಿಯ ಮಂಜು ಹೊರಗಡೆಯ ಲೋಕಸಮಸ್ತವನ್ನೂ ಆವರಿಸಿ ಆಚ್ಛಾದಿಸಿ ಆಕ್ರಮಿಸಿ ನುಂಗಿಬಿಟ್ಟಿತ್ತು! ಗಿಡ, ಮರ, ಗುಡ್ಡ, ಬೆಟ್ಟ, ಮಲೆ, ಕಾಡು, ಗದ್ದೆ, ತೋಟ, ನೆಲ, ಬಾನು ಒಂದೂ ಇರಲಿಲ್ಲ. ದಟ್ಟೈಸಿ ಸುರಿಯುತ್ತಿದ್ದ ಕಾವಣದ ಮಹಾಶ್ವೇತ ಜಲಪ್ರಲಯದಲ್ಲಿ ಜಗಲ್ಲಯವಾದಂತಿತ್ತು!

“ಐತಾ, ಕೊನೆ ತೆಗಿಯಾಕೆ ಯಾರನ್ನಾದರೂ ಕರಕೊಂಡು ಬರಬೇಕಲ್ಲೋ” ಎನ್ನುತ್ತಾ ಮುಕುಂದಯ್ಯನೂ ಮುರುವಿನ ಒಲೆಯ ಬಳಿಗೆ ಬಂದು ಚಳಿ ಕಾಯಿಸುತ್ತಾ ನಿಂತನು.

ಸುಮಾರು ಸೊಂಟೆತ್ತರ ಇದ್ದ 'ಮುರಿನೊಲೆ'ಗೆ ಕಚ್ಚಿದ್ದ ಆನೆಗಲು ದಪ್ಪದ ಹೆಗ್ಗುಂಟೆಗಳೂ ದಿಮ್ಮಿಗಳೂ ನಿಗಿನಿಗಿ ಕೆಂಗೆಂಡವಾಗಿ ಧಗಧಗಿಸಿ ಉರಿಯುತ್ತಿದ್ದುವು. ಹೇರೊಲೆಗೆ ಶಾಶ್ವತವಾಗಿ ಹೂಳಿಬಿಟ್ಟಿದ್ದ ಭಾರಿಯ ಹಂಡೆಯಲ್ಲಿ, ಬೆಳಿಗ್ಗೆ ಹಾಲು ಕರೆಯುವಾಗ ಎಮ್ಮೆ ಹಸುಗಳಿಗೆ ತಿಂಡಿಯಾಗಲಿರುವ ಮುರು, ತೊಕ ತೊಕ ತೊಕ ಸದ್ದು ಮಾಡಿ, ಆವಿಗಂಪು ಬೀರಿ ಕುದಿಯುತ್ತಿತ್ತು!

"ಪಿಜಿಣ ಇದ್ದಿದ್ರೆ ನಮಗೆ ಎಷ್ಟು ಅನುಕೂಲ ಆಗ್ತಿತ್ತು ಈಗ?.... ಅಡಕೆ ಮರ ಹತ್ತೋದ್ರಲ್ಲಿ ಅವನ್ನ ಬಿಟ್ಟರೆ ಇರಲಿಲ್ಲ, ಕೊಟ್ಟೆ ಕಟ್ಟೋಕ್ಕಾಗಲಿ, ಕೊನೆ ತೆಗೆಯೋಕ್ಕಾಗಲಿ!.... ಕುದುಕನ ಕಡೆಯೋರಿಗೆ ಹೇಳಿ, ಯಾರನ್ನಾದರೂ ಕರಕೊಂಡು ಬರ್ತೀನಯ್ಯಾ." ಎನ್ನುತ್ತಾ ಐತ ತುಸು ಅತ್ತತ್ತ ಸರಿದುಕೊಂಡನು, ಮುಕುಂದಯ್ಯನಿಗೆ ಕುಳಿತುಕೊಳ್ಳಲು ಜಾಗ ಬಿಡುವಂತೆ.

"ಗದ್ದೆ ಕೊಯ್ಲಿಗೂ ಜನಾ ಗೊತ್ತು ಮಾಡಬೇಕೋ.... ಸುಮ್ಮನೆ ಕೂತರೆ ಆಗಾದಿಲ್ಲ...." ಎನ್ನುತ್ತಾ ಮುಕುಂದಯ್ಯ ಬೆಂಕಿಗೆ ಬೆನ್ನು ಕಾಯಿಸುವಂತೆ ಕುಳಿತುಕೊಂಡನು.

ತನ್ನ ದನಿಕೇಳಿ ಸುಖಿಸುವವಳು ತನ್ನ ಮಾತನ್ನು ಆಲಿಸುತ್ತಿದ್ದಾಳೆ ಎಂಬ ಸುಖಾನುಭವಕ್ಕಾಗಿಯೆ ಅವನು ಮಾತಾಡುತ್ತಿದ್ದಂತಿತ್ತು.

ಚಿನ್ನಮ್ಮ ಪೀಂಚಲು ಇಬ್ಬರೂ ಮಾತು ನಿಲ್ಲಿಸಿ, ನಿದ್ದೆ ಮಾಡುವವರಂತೆ ನಟಿಸುತ್ತಾ, ಗಡದ್ದಾಗಿ ಹೊದ್ದುಕೊಂಡು ಬೆಚ್ಚಗೆ ಮಲಗಿದ್ದರು: ಮುಟ್ಟಾದ ಮೂರು ದಿನವಾದರೂ ಮಲೆನಾಡಿನ ಮಹಿಳೆಯರಿಗೆ ನಿವೃತ್ತಿಜೀವನದ ವಿರಾಮದ ಹಕ್ಕು ಇರುತ್ತಿತ್ತಷ್ಟೇ!

* * *